THE BOOK WAS DRENCHED

UNIVERSAL
LIBRARY
OU_200743
UNIVERSAL
LIBRARY

OSMANIA UNIVERSITY LIBRARY
Call No K294 11/V46R Accession No K. 5252
Author ಪೊಕಟರಾವ್, H P
Title ವಿಜ್ಞಾನದ ಬಿಂದುಗಳು 1954.
This book should be returned on or before the date last marked below
Volume - 2 1.



ಋಗ್ವೇದಸಂಹಿತಾ

ಭಾಗ ೨೭

ಏಳನೆಯ ಅಷ್ಟಕದ ೫-೮ ಅಧ್ಯಾಯಗಳು

ಒಂಭತ್ತನೆಯ ಮಂಡಲದ ಸೂಕ್ತಗಳು ೧೦೧-೧೧೪

ಹತ್ತನೆಯ ಮಂಡಲದ ಸೂಕ್ತಗಳು ೧-೪೦

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೨೭

RIG-VEDA

ಸಾಯಣಭಾಷ್ಯಸಮೇತಾ

ಋಗ್ವೇದ ಸಂಹಿತಾ

(ಕರ್ನಾಟಕ ಭಾಷಾರ್ಥಾನುವಾದವಿವರಣೆಗಳೊಡನೆ)

ಭಾಗ—೨೭

ಏಳನೆಯ ಅಷ್ಟಕದ ೫–೮ ಅಧ್ಯಾಯಗಳು

ಒಂಭತ್ತನೆಯ ಮಂಡಲದ ಸೂಕ್ತಗಳು—೧೦೧-೧೧೪

ಹತ್ತನೆಯ ಮಂಡಲದ ಸೂಕ್ತಗಳು ೧-೪೦

Translated with Exhaustive Critical Notes & Explanations

by

ASTHANA MAHAVIDWAN

H P VENKATA RAO

Editor

Printed at

SREE VINAYAK PRINTING WORKS, MYSORE

1951

Published by the gracious permission of

His Highness

Sri Jayachamarajendra Wadiyar Bahadur,

GCB, GCSI, Maharaja of Mysore



ಯದುವಂಶಯ ಪಾರಾವಾ ಸತ್ಸಂಪ್ರದಾಯಪ್ರತಿಪಾಲನಿಧ್ಯಾನಧುರಂ
ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್,
ಜಿ ಸಿ ಬಿ ಜಿ ಸಿ ಎಸ್.ಐ ರವರು

ವೇದಪ್ರಕಟನಕಾರ್ಯಕ್ಕಾಗಿ ನಿಯಮಿತವಾಗಿರುವ

ವೇದವಿಮರ್ಶನ ವಿದ್ವನ್ಮಂಡಲಿ

—o—

Translator & Editor

ಆಸ್ಥಾನ ಮಹಾವಿದ್ವಾನ್ H P ವೆಂಕಟರಾವ್

ಸಹಾಯಕ ವಿದ್ವನ್ಮಂಡಲಿ

1 **ಶ್ರೀ G N. ಚಕ್ರವರ್ತಿ, M A,**
Professor of Sanskrit, St. Philomina's College, Mysore

2 **ಬ್ರಹ್ಮಶ್ರೀ ಜಿ ವಿಷ್ಣುಮೂರ್ತಿಭಟ್ಟರು** ವ್ಯಾಕರಣವಿದ್ವಾನ್, ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆ, ಮೈಸೂರು

3 **ಆಸ್ಥಾನ ವಿದ್ವಾನ್ ಬ್ರಹ್ಮಶ್ರೀ H ಗಂಗಾಧರಶಾಸ್ತ್ರಿಗಳು,** ಜ್ಯೋತಿಷ್ಯವಿದ್ವಾನ್ ವೈದ್ಯ ಕರ್ಣಾಟಕ ಭಾಷಾಪಂಡಿತರು,

4 **ಬ್ರಹ್ಮಶ್ರೀ ಶ್ರೀನಿವಾಸಶಾಸ್ತ್ರಿಗಳು,** ಸಂಸ್ಕೃತ ವಿದ್ವಾಂಸರು

5 **ಬ್ರಹ್ಮಶ್ರೀ ಹಿಟ್ಟುವಳ್ಳಿ ಬೆಳಿಗಿರಿರಂಗಾಜೋಯಿಸರು,** ಶ್ರೌತ ವಿದ್ವಾನ್

6 **ಬ್ರಹ್ಮಶ್ರೀ ಹಿಟ್ಟುವಳ್ಳಿ ದೇವರಭಟ್ಟರು,** ಪೌರೋಹಿತ್ಯ ಪಂಡಿತರು

7 **ಬ್ರಹ್ಮಶ್ರೀ ವೆಂಕಟರಮಣಾಚಾರ್,** M A , B T , ಸಾಹಿತ್ಯವಿದ್ವಾನ್

8 **ಬ್ರಹ್ಮಶ್ರೀ S ರಂಗನಾಥನ್,** ಸಾಹಿತ್ಯವಿದ್ವಾನ್, ಆರಮೂ ಸರಸ್ವತೀ ಭಂಡಾರ

9 **ಬ್ರಹ್ಮಶ್ರೀ ಪುತ್ತೂರು ಅನಂತಕೃಷ್ಣಮಾಚಾರ್,** ಸಾಹಿತ್ಯ ವಿದ್ವಾನ್,
Govt Oriental Research Institute Mysore

10 **ಬ್ರಹ್ಮಶ್ರೀ S ಸೀತಾರಾಮಶಾಸ್ತ್ರಿಗಳು,** ಟೈಪಿಸ್ಟ್ ಪಂಡಿತರು
Govt Oriental Research Institute Mysore

ಪೀಠಿಕೆ.

ಋಗ್ವೇದದ ಈ ಭಾಗದಲ್ಲಿ ಒಂಭತ್ತನೆಯ ಮಂಡಲವು ಪೂರ್ತಿಯಾಗಿ ಹತ್ತನೆಯ ಮಂಡಲದಲ್ಲಿ ನಲವತ್ತು ಸೂಕ್ತಗಳು ಮುಗಿದಿವೆ ಒಂಭತ್ತನೆಯ ಮಂಡಲದ ಸೂಕ್ತಗಳೆಲ್ಲವೂ ಸೋಮದೇವತಾಕವಾದುದರಿಂದಲೂ, ಸೋಮದೇವತೆಯ ವಿಷಯವನ್ನೆಲ್ಲಾ ನಾವು ಹಿಂದಿನ ಭಾಗದಲ್ಲಿಯೇ ವಿಸ್ತಾರವಾಗಿ ವಿವರಿಸಿರುವುದರಿಂದಲೂ ಇಲ್ಲಿ ಆ ವಿಷಯವಾಗಿ ಹೆಚ್ಚಾಗಿ ಏನನ್ನೂ ಹೇಳಬಯಸುವುದಿಲ್ಲ ಆದರೆ ಹತ್ತನೇ ಮಂಡಲದ ಸೂಕ್ತಗಳಿಗೆ ನಾನಾದೃಷ್ಟಿಗಳಿಂದ ವಿಶೇಷ ವೈಶಿಷ್ಟ್ಯವಿದೆ ಇತರ ಮಂಡಲಗಳಲ್ಲಿರುವಂತೆ ಅಗ್ನಿ, ಇಂದ್ರ ಮೊದಲಾದ ಸಾಮಾನ್ಯದೇವತೆಗಳ ಸ್ತುತಿಗಳಿರುವುದಲ್ಲದೆ, ಋಗ್ವೇದದಲ್ಲಿ ಇನ್ನೆಲ್ಲಿಯೂ ಇಲ್ಲದ ಇತರ ದೇವತೆಗಳೂ, ಅಚೇತನ ವಸ್ತುಗಳ ಅಭಿಮಾನಿದೇವತೆಗಳೆಂದು (ಅಚೇತನವಸ್ತುಗಳೆಂದೇ) ಪ್ರಸಿದ್ಧರಾದ ವ್ಯಕ್ತಿಗಳೂ ವಿಚಿತ್ರ ಮತ್ತು ಸ್ವಾರಸ್ಯವಾದ ಸಂಭಾಷಣೆಗಳೂ, ಪೌರಾಣೇತಿಹಾಸಗಳೂ, ಉನ್ನತಮಟ್ಟದ ವೇದಾಂತತತ್ತ್ವಗಳೂ, ಶ್ರಾದ್ಧಸಾರ್ತಕರ್ಮಗಳಲ್ಲಿ ಉಪಯುಕ್ತವಾದ ನಾನಾಸೂಕ್ತಗಳೂ, ಇನ್ನೆಲ್ಲವೂ ಹತ್ತನೆಯ ಮಂಡಲದಲ್ಲಿವೆ ಈ ಮಂಡಲದ ಸೂಕ್ತಗಳು ಇತರ ಮಂಡಲಗಳ ಸೂಕ್ತಗಳಷ್ಟು ಪ್ರಾಚೀನವಾದವುಗಳಲ್ಲವೆಂಬ ಕಲವು ಪಾಶ್ಚಾತ್ಯಪಂಡಿತರ ವಾದವನ್ನು ಪೂರ್ತಿಯಾಗಿ ಒಪ್ಪುವುದಕ್ಕಾಗುವುದಿಲ್ಲ ಋಗ್ವೇದದ ಸೂಕ್ತಗಳು ಒಂದು ಕ್ರಮಬದ್ಧವಾದ ರೀತಿಯಲ್ಲಿ ವಿಂಗಡಿಸಲ್ಪಟ್ಟಿರುವುದೆಂದಲೂ ಈ ಮಂಡಲದ ಕಲವು ಸೂಕ್ತಗಳಲ್ಲಿ ಕೇವಲ ಸ್ತೋತ್ರಗಳೇ ಅಲ್ಲದೆ ಇತರ ವಿಷಯಗಳ ಪ್ರಸ್ತಾಪವಿರುವುದೆಂದಲೂ ಪಾಶ್ಚಾತ್ಯಪಂಡಿತರ ಈ ವಿಧವಾದ ಅಭಿಪ್ರಾಯಕ್ಕೆ ಎಡೆಗೊಟ್ಟಿರಬಹುದು

ಪ್ರಕೃತಭಾಗದಲ್ಲಿ ಉಕ್ತವಾಗಿರುವ ವಿಷಯಗಳಲ್ಲಿ ಪಿತೃದೇವತೆಗಳ ವಿಷಯವು ಮುಖ್ಯವಾದುದು ಪಿತೃಗಳೆಂದರೇನು, ಮನುಷ್ಯರ ಮರಣಾನಂತರ ಸ್ಥಿತಿಯೇನು, ಸ್ವರ್ಗ ನರಕಗಳು ಎಂದರೇ ಇಲ್ಲವೇ, ಇತ್ಯಾದಿ ವಿಷಯಗಳನ್ನು ಋಷಿಗಳು ಚರ್ಚಿಸಿದ್ದಾರೆ ಈ ಸಂದರ್ಭದಲ್ಲಿ ಯಮಸಿಗೂ ನಚಿಕೇತಸಂಬ ಋಷಿಗೂ ನಡೆದ ಸಂಭಾಷಣೆಯು ಸ್ವಾರಸ್ಯವಾಗಿದೆ ಇದು ಕಠೋಪನಿಷತ್ತಿನಲ್ಲಿ ಹೇಳಿರುವುದನ್ನು ನಾವು ಸಂಗ್ರಹವಾಗಿ ವಿವರಿಸಿದೇವು ಇದಲ್ಲದೆ ಅತಿ ಪ್ರಾಚೀನವಾದ ಆ ಕಾಲದಲ್ಲಿ ಸಾಮಾನ್ಯಜನರ ನಡನುಡಿಗಳೇನು, ಅಂತ್ಯಕ್ರಿಯೆಯು ಹೇಗೆ ನಡೆಯುತ್ತಿತ್ತು, ಸ್ತ್ರೀಯರು ಸಹಗಮನಮಾಡುತ್ತಿದ್ದರೇ ಇತ್ಯಾದಿ ನಾನಾವಿಧವಾದ ಸಾಮಾಜಿಕ ಸ್ಥಿತಿಗತಿಗಳನ್ನೂ ಈ ಸೂಕ್ತಗಳಿಂದ ತಿಳಿದುಕೊಳ್ಳಲವಕಾಶವಿದೆ

ಋಗ್ವೇದದಲ್ಲಿ ದೇವತೆಗಳನ್ನುದ್ದೇಶಿಸಿ ಮಾಡಿದ ಸ್ತೋತ್ರಗಳಿಗೆ ಪ್ರಾಧಾನ್ಯತೆ ಇದ್ದರೂ ಅಲ್ಲಲ್ಲಿ ಇತರ ವಿಷಯಗಳ ಪ್ರಸ್ತಾಪವೂ ಸಾಕಾದಷ್ಟಿದೆ ಯಮಸಿಗೂ ಅವನ ತಂಗಿಯಾದ ಯಮಿಗೂ ಸಂಭೋಗಾರ್ಥವಾಗಿ ನಡೆದ ಸಂಭಾಷಣೆಯು ಇವುಗಳಲ್ಲೊಂದು ಹಿಂದೆ ಅಗಸ್ತ್ಯಋಷಿಗೂ ಅವನ ಪತ್ನಿಯಾದ ಲೋಪಾಮುದ್ರೆಗೂ ಸಂಭೋಗಾರ್ಥವಾಗಿ ನಡೆದ ಸಂಭಾಷಣೆಯನ್ನು ನಾವು ಹಿಂದೆಯೇ ವಿವರಿಸಿದೇವೆ ಕಾಮಕಲೆಗೆ ಸಂಬಂಧಪಟ್ಟ ಇಂತಹ ಅನೇಕ ವಿಷಯಗಳ ವರ್ಣನೆಯು ಅಲ್ಲಲ್ಲಿ ಕಂಡುಬರುತ್ತವೆ

ಇಲೂಷಪುತ್ರನಾದ ಕವಷನೆಂಬುವನು ಶೂದ್ರಜಾತಿಯವನೂ, ಜೂಜುಗಾರನೂ ಆಗಿದ್ದನು ಒಂದಾನೊಂದು ಕಾಲದಲ್ಲಿ ಇವನು ಯಜ್ಞಮಾಡುತ್ತಿರುವ ಋಷಿಗಳ ಮಧ್ಯದಲ್ಲಿ ಬಂದುಕೂಳಿತಿದ್ದಾಗ ಋಷಿಗಳು ಇವನು ತಮ್ಮ

ಸಹವಾಸಕ್ಕೆ ಯೋಗ್ಯನಲ್ಲವೆಂದು ಅಟ್ಟಿಬಿಟ್ಟರು ಮತ್ತು ನೀರೂ ನೆರಳೂ ಇಲ್ಲದ ದೂರಪ್ರದೇಶವಾದ ಮರುಭೂಮಿಯಲ್ಲಿ ಇವನನ್ನು ಕೊಂಡೊಯ್ದು ಅಲ್ಲಿಯೇ ಮರಣವನ್ನು ಹೊಂದಲೆಂದು ಬಿಟ್ಟುಬಂದರು. ಇದರಿಂದ ಖತಿಗೊಂಡ ಕವಷನು ಸರಸ್ವತೀನದಿಯನ್ನೂ ಇತರ ದೇವತೆಗಳನ್ನೂ ಪ್ರಾರ್ಥಿಸಲು ಸರಸ್ವತೀನದಿಯು ಇವನಿದ್ದ ನೀರಿಲ್ಲದ ಮರಳು ಕಾಡಿನಲ್ಲಿ ಹರಿದುಹೋಗಿ ಇವನ ಸುತ್ತಲೂ ಜಲವಿರುವಂತೆ ಮಾಡಿದಳು ಇದನ್ನು ಕಂಡ ಋಷಿಗಳು ತಮ್ಮ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಅವನ ಬಳಿಗೆ ಹೋಗಿ ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡು ಅವನನ್ನು ಮುಂದಕ್ಕೆ ಕರೆತಂದು ತಮ್ಮ ಯಜ್ಞಾದಿಗಳಲ್ಲಿ ಭಾಗಿಯಾಗುವಂತೆ ಮಾಡಿದರು. ಇವನು ಋಗ್ವೇದ ೧೦ನೇ ಮಂಡಲದಲ್ಲಿ ೫ ಸೂಕ್ತಗಳಿಗೆ (೩೦-೩೪) ಋಷಿಯಾಗಿದಾನೆ. ಆದ್ದರಿಂದ ವೇದಕಾಲದ ಋಷಿಗಳು ಗುಣಕ್ಕೆ ಪ್ರಾಧಾನ್ಯವನ್ನು ಕೊಡುತ್ತಿದ್ದರೇ ಹೊರತು ಜಾತಿಗಲ್ಲ ಎಂಬುದು ಅನೇಕ ದೃಷ್ಟಾಂತಗಳಿಂದ ಸಮರ್ಥಿಸಬಹುದಾಗಿದೆ. ವೇದದ ಋಷಿಗಳಲ್ಲಿ ಕ್ಷತ್ರಿಯರೂ ಅಥವಾ ರಾಜರೂ, ವೈಶ್ಯರೂ, ಶೂದ್ರರೂ ಕೆಲವರಿದಾರೆ. ಇವರಿಗೂ ಋಷಿಗಳ ಮಧ್ಯದಲ್ಲಿ ಗಣ್ಯಸ್ಥಾನವಿರುವುದಲ್ಲದೆ ಇವರಿಂದ ದೃಷ್ಟವಾದ ಮಂತ್ರಗಳ ಪ್ರಯೋಗವು ಯಜ್ಞಯಾಗಾದಿಗಳಲ್ಲಿ ವಿಶೇಷವಾಗಿರುವುದು ಈ ಕವಷನೆಂಬ ಋಷಿಯು ಪಗಡೆಯಾಟದಲ್ಲಿ ಆಸಕ್ತನಾಗಿದ್ದನು. ಆದ್ದರಿಂದ ಇವನನ್ನು ಇವನ ತಂದೆತಾಯಿಗಳೂ, ಅಣ್ಣತಮ್ಮಂದಿರೂ, ಇತರ ಬಂಧುವರ್ಗದವರೂ ತ್ಯಜಿಸಿದ್ದರು. ಪಗಡೆಯಾಟವಾಡುವಾಗ ಗೆಲುವಿನಲ್ಲಿ ಉಂಟಾಗುವ ಹರ್ಷ, ಸೋಲಿನಲ್ಲಿ ಉಂಟಾಗುವ ದುಃಖ, ಆಟವಾಡುವಾಗ ಎಂದರೆ ದಾಳಗಳು ಉರುಳುತ್ತಿರುವಾಗ ಗೆಲ್ಲುತ್ತೇನೆಯೋ, ಸೋಲುತ್ತೇನೆಯೋ ಎಂಬ ಆಟಗಾರರಿಗುಂಟಾಗುವ ಕಳವಳ ಇವೆಲ್ಲವನ್ನೂ ಈ ಋಷಿಯು ಹೃದಯಂಗಮವಾಗಿ ವರ್ಣಿಸಿದಾನೆ ಇಂತಹ ಅನೇಕ ವಿಷಯಗಳ ವಿವರಣೆಯು ಋಗ್ವೇದದಲ್ಲಿ ಬೇಕಾದಷ್ಟಿವೆ

ಅತಿಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವವಾಸ್ತ್ರಗಳಿಗೂ, ಮೂಲಭೂತವೂ ಆದ ಇಂತಹ ಋಗ್ವೇದಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶನಾತ್ಮಕವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಕರ್ನಾಟಕಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ಪ್ರವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರಒಡೆಯರ್ ಬಹದ್ದೂರ್ ಜಿ.ಸಿ.ಬಿ, ಜಿ.ಸಿ.ಎಸ್.ಐ.** ಮಹಾಪ್ರಭುವರ್ಯರೂ ಅವರ ಸರ್ಕಾರದವರೂ ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ ಅವರ ಕುಟುಂಬಕ್ಕೂ ರಾಜಕುಮಾರಿಯರಿಗೂ, **ಶ್ರೀಕಂಠದತ್ತ ನೃಸಿಂಹರಾಜ ಒಡೆಯರ್,** ಎಂಬ ಶುಭನಾಮಾಂಕಿತರಾದ ರಾಜಕುಮಾರರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕ ಫಲಗಳಾದ ಆಯುರಾರೋಗ್ಯೈಶ್ವರ್ಯಾದಿ ಸಕಲಸಂಪತ್ತನ್ನೂ ಪಾರಮಾರ್ಥಿಕವಾದ ಅಧ್ಯಾತ್ಮಜ್ಞಾನವನ್ನೂ ಇತೋಽಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ-

ಮೈಸೂರು.
ವಿಜಯನಾಮ ಸಂ॥ ವೈಶಾಖ ಶುದ್ಧ ಪಂಚಮಿಗಳು ಶುಕ್ರವಾರ
ತಾ॥ 7-5-1954

ಅನುವಾದಕ
ಹೆಚ್. ಪಿ. ವೆಂಕಟರಾವ್,
ಆಸ್ಥಾನ ಮಹಾವಿದ್ವಾನ್

॥ ಶ್ರೀಃ ॥

ವಿಷಯಾನುಕ್ರಮಣಿಕೆ.

ಏಳನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು.
ಒಂಭತ್ತನೆಯ ಮಂಡಲದ ಸೂಕ್ತಗಳು.

		ಪುಟಸಂಖ್ಯೆ.
೧೦೧	ಪುರೋಜಿತೀ ವಃ ಎಂಬ ನೂರೊಂದನೆಯ ಸೂಕ್ತ	1
೧೦೨	ಕ್ರಾಣಾ ಶಿಶುಃ ಎಂಬ ನೂರಎರಡನೆಯ ಸೂಕ್ತ	15
೧೦೩	ಪ್ರ ಸುನ್ವಾನಾಯ ಎಂಬ ನೂರಮೂರನೆಯ ಸೂಕ್ತ	27
೧೦೪	ಸಖಾಯ ಆ ನಿಷೀದತ ಎಂಬ ನೂರನಾಲ್ಕನೆಯ ಸೂಕ್ತ	33
೧೦೫	ತಂ ವಃ ಸಖಾಯಃ ಎಂಬ ನೂರಐದನೆಯ ಸೂಕ್ತ	39
೧೦೬	ಇಂದ್ರಮಚ್ಛ ಸುತಾ ಎಂಬ ನೂರಆರನೆಯ ಸೂಕ್ತ	46
೧೦೭	ಪರೀತೋ ಷಿಂಚತಾ ಎಂಬ ನೂರಏಳನೆಯ ಸೂಕ್ತ	50
೧೦೮	ಪವಸ್ವ ಮಧುಮತ್ತಮ ಎಂಬ ನೂರಎಂಟನೆಯ ಸೂಕ್ತ	57
೧೦೯	ಪರಿ ಪ್ರ ಧನ್ವ ಎಂಬ ನೂರಒಂಭತ್ತನೆಯ ಸೂಕ್ತ	105
೧೧೦	ಪಯೋ ಷು ಎಂಬ ನೂರಹತ್ತನೆಯ ಸೂಕ್ತ—	121
	ಶರ್ಯಾಃ ಎಂಬ ಪದದ ನಿರ್ವಚನ ಮತ್ತು ಅರ್ಥವಿವರಣೆ	127
೧೧೧	ಆಯಾ ರುಚಾ ಎಂಬ ನೂರಹನ್ನೊಂದನೆಯ ಸೂಕ್ತ	135
೧೧೨	ನಾನಾನಂ ವೈ ಎಂಬ ನೂರಹನ್ನೆರಡನೆಯ ಸೂಕ್ತ—	140
	ಸೂಕ್ತದ್ರಷ್ಟೃವಾದ ಶಿರಃಋಷಿಯು ಪಾಪಪರಿಹಾರಾರ್ಥವಾಗಿ ತನ್ನ ಮತ್ತು ತನ್ನ ಮನೆಯವರ ಕಾರ್ಯಗಳನ್ನು ವಿವರಿಸುವುದು	144
೧೧೩	ಶರ್ಯಣಾವತಿ ಎಂಬ ನೂರಹದಿಮೂರನೆಯ ಸೂಕ್ತವು—	149
	ಸೋಮಲತೆಗಳನ್ನು ಗಂಧರ್ವನು ಅಪಹರಿಸಿದ ವಿಚಾರ ಮತ್ತು ಸೋಮವಿಕ್ರಯಣ	153
೧೧೪	ಯ ಇಂದೋಃ ಪವಮಾನಸ್ಯ ಎಂಬ ನೂರಹದಿನಾಲ್ಕನೆಯ ಸೂಕ್ತ—	160
	ಆದಿತ್ಯರ ವಿಷಯ ಮತ್ತು ಅವರ ಸಂಖ್ಯಾಪರಿಮಿತಿ ಇತ್ಯಾದಿ	161

ಪುಟಸಂಖ್ಯೆ

ಪ್ರಾತಸ್ಸವನಕಾಲದಲ್ಲಿ ಋತ್ವಿಕ್ಕುಗಳ ಪರಿಸಬೇಕಾದ ಮಂತ್ರಗಳು 168

ಮಾಧ್ಯಂದಿನ ಸವನದಲ್ಲಿ ಪರಿಸಬೇಕಾದ ಮಂತ್ರಗಳು 169

ತೃತೀಯಸವನದಲ್ಲಿ ಪರಿಸಬೇಕಾದ ಮಂತ್ರಗಳು 170

ಒಂಭತ್ತನೆಯ ಮಂಡಲದ **ಪರಿಶಿಷ್ಟಮಂತ್ರಗಳು** 171

ಹತ್ತನೆಯ ಮಂಡಲವು

೧ **ಅಗ್ನೇ ಬೃಹನ್** ಎಂಬ ಮೊದಲನೆಯ ಸೂಕ್ತವು— 177

ಮಂಡಲದ ಪೀಠಿಕೆ 177

ಹತ್ತನೆಯ ಮಂಡಲವ ಋಷಿಗಳು ಮತ್ತು ಅವರಿಂದ ದೃಷ್ಟವಾದ ಸೂಕ್ತಗಳ ವಿವರಣೆ 178

ತ್ರಿತ ಆಪ್ತ್ಯಃ ಎಂಬ ಋಷಿಯ ಪರಿಚಯ 188

ಅಗ್ನೇ ಬೃಹನ್ ಎಂಬ ಋಕ್ಕಿನ ವಿಶೇಷ ವಿವರಣೆ ಇತ್ಯಾದಿ 199

ಅಭ್ಯಸ್ತ (ಪುನರಾವೃತ್ತಿಉಕ್ತವಾದ) ಪದಗಳ ವಿಷಯ 207

ಯಜ್ಞವೇದಿಯೇ ವಿಶ್ವದ ನಾಭಿಸ್ಥಾನ ಎಂಬ ವಿಷಯ ಇತ್ಯಾದಿ 208

೨ **ಪಿಪ್ರೀಹಿ ದೇವಾನ್** ಎಂಬ ಎರಡನೆಯ ಸೂಕ್ತ— 216

ಮುಹೂರ್ತ ಶಬ್ದಾರ್ಥವಿಚಾರ 218

ದೇವತೆಗಳ ಋತ್ವಿಕ್ಕುಗಳು 219

ದ್ರವಿಣೋದಾಃ ಎಂಬ ಶಬ್ದದ ನಿರ್ವಚನ, ಅರ್ಥವಿವರಣೆ ಇತ್ಯಾದಿ 221

ದೇವಯಾನ ಮತ್ತು ಪಿತೃಯಾನಗಳ ವಿಷಯವಿಮರ್ಶೆ 232

೩ **ಇನೋ ರಾಜನ್ನರತಿಃ** ಎಂಬ ಮೂರನೆಯ ಸೂಕ್ತವು 233

ಹಗಲಿಗೆ ಆದಿತ್ಯನೂ ರಾತ್ರಿಗೆ ಅಗ್ನಿಯೂ ಅಧಿಪತಿಗಳೆಂಬ ವಿಷಯ 236

ಸುತುಕಃ, ಸುಕೇತುಭಿಃ ಎಂಬ ಶಬ್ದಗಳ ನಿರ್ವಚನ ಇತ್ಯಾದಿ 247

೪ **ಪ್ರ ತೇ ಯಕ್ಷಿ** ಎಂಬ ನಾಲ್ಕನೆಯ ಸೂಕ್ತ— 248

ವಾಹಿಷ್ಠಃ ಎಂಬ ಶಬ್ದದ ನಿರ್ವಚನ 251

ಅಮೂರ ಎಂಬ ಶಬ್ದದ ನಿರ್ವಚನ 251

ತನೂತ್ಯಜೇವ ಎಂಬ ಋಕ್ಕಿನ ನಿರುಕ್ತ 258

೫ **ಏಕಃ ಸಮುದ್ರಃ** ಎಂಬ ಐದನೆಯ ಸೂಕ್ತ— 260

ಸಮುದ್ರಶಬ್ದನಿರ್ವಚನ 262

ಸಪ್ತಮರ್ಯಾದಾಃ ಎಂಬ ಏಳುವಿಧ ಪಾಪಗಳ ವಿವರಣೆ 273

	ಪುಟಸಂಖ್ಯೆ
ಪಾವಮಾನೀಸೂಕ್ತಗಳನ್ನು ಅಧ್ಯಯನಮಾಡಿದವರಿಗೆ ಪರಿಹಾರವಾಗುವ ಪಾಪಗಳು	274
ಸತ್, ಅಸತ್ ಎಂಬ ತತ್ತ್ವಗಳ ವಿಷಯ	279

ಏಳನೆಯ ಅಷ್ಟಕದ ಐದನೆಯ ಅಧ್ಯಾಯವು ಸಮಾಪ್ತವು

ಆರನೆಯ ಅಧ್ಯಾಯವು

೬ ಅಯಂ ಸ ಯಸ್ಯ ಎಂಬ ಆರನೆಯ ಸೂಕ್ತ	281
೭ ಸ್ವಸ್ತಿ ನೋ ದಿವಃ ಎಂಬ ಏಳನೆಯ ಸೂಕ್ತ	290
೮ ಪ್ರತ್ಯಗ್ನೇತುನಾ ಎಂಬ ಎಂಟನೆಯ ಸೂಕ್ತ—	299
ಸೂಕ್ತದ ಪೀಠಿಕೆ	299
ತ್ರಿಶಿರಾಃ (ವಿಶ್ವರೂಪ) ಎಂಬುವನನ್ನು ಇಂದ್ರನು ಸಂಹಾರಮಾಡಿದ ವಿಷಯ ಇತ್ಯಾದಿ (ಋಗ್ವೇದದಲ್ಲಿರುವಂತೆ)	300
ಇದೇ ವಿಷಯ ತೈತ್ತಿರೀಯ ಸಂಹಿತೆಯಲ್ಲಿರುವಂತೆ	303
ಇಂದ್ರನಿಗೆ ಪ್ರಾಪ್ತವಾದ ಬ್ರಹ್ಮಹತ್ಯಾದೋಷದ ಪರಿಹಾರದ ವಿವರಣೆ	304
೯ ಆಪ್ತೋ ಹಿ ಷ್ಮ ಎಂಬ ಒಂಭತ್ತನೆಯ ಸೂಕ್ತ—	319
ಸೂಕ್ತದ ಪೀಠಿಕೆ	319
ಸೂಕ್ತದ ಜಪಮಾಡುವ ವಿಧಾನ ಮತ್ತು ಈ ಸೂಕ್ತದ ಜಪದಿಂದ ಇಂದ್ರನ ಬ್ರಹ್ಮಹತ್ಯಾದೋಷವು ಪರಿಹಾರವಾದ ಬಗೆ	320
ಆಪ್ತೋ ಹಿ ಎಂಬ ಋಕ್ಕಿನ ನಿರುಕ್ತ	323
೧೦ ಓಚಿತ್ಸಖಾಯಂ ಎಂಬ ಹತ್ತನೆಯ ಸೂಕ್ತ—	334
ಸೂಕ್ತದ ಪೀಠಿಕೆ	334
ಯಮುನ ಮಾಹಾತ್ಮ್ಯ	335
ಯಮುನ ಸ್ನಾನಮಾನಗಳು	336
ಯಮುನ ಮಾತಾಪಿತೃಗಳು	338
ಯಮುನ ಸ್ವರೂಪವರ್ಣನೆ	338
ಯಮುನ ದೂತರು, ಅವರ ಸ್ವರೂಪ	339
ಯಮು ಮತ್ತು ಯಮಿಾ	340
ಯಮುನ ವಿಷಯವಾಗಿ ಋಕ್ಕುಗಳಲ್ಲಿ ಕಂಡುಬರುವ ಕೆಲವು ವಿವರಣೆಗಳು	349

		ಪುಟಸಂಖ್ಯೆ.
	ಯಮುನಿಗೂ ಅವನ ಸಹೋದರಿಯಾದ ಯಮಿಗೂ ಸಂಭೋಗಾರ್ಥವಾಗಿ ನಡೆದ ಸಂಭಾಷಣೆಯು	353
	ಪ್ರಜಾಪತಿಯು ತನ್ನ ಪುತ್ರಿಯನ್ನು ಮೋಹಿಸಿದ ವಿಚಾರ	362
	ಮಾನುಷ ಎಂಬ ಶಬ್ದದ ರೂಪನಿಷ್ಪತ್ತಿಯ ವಿಚಾರ	364
	ಪ್ರಜಾಪತಿಯ ವೀರ್ಯದಿಂದ **ಆದಿತ್ಯ, ಭೃಗುಋಷಿ, ಅಂಗಿರಾಋಷಿಗಳು,** ಇವರ ಉತ್ಪತ್ತಿಕ್ರಮ ಇತ್ಯಾದಿ	365
	ಅಹನಃ ಎಂಬ ಶಬ್ದದ ನಿರ್ವಚನ ಇತ್ಯಾದಿ	372
	ಜಾಮಿ ಶಬ್ದಾರ್ಥವಿವರಣೆ	375
	ಬತಃ ಎಂಬ ಶಬ್ದದ ನಿರ್ವಚನ ಮತ್ತು **ಬತೋ ಬತಾಸಿ** ಎಂಬ ಋಕ್ಕಿನ ನಿರುಕ್ತ	380
	ಅನ್ಯಮೂ ಷು ತ್ವಂ ಎಂಬ ಋಕ್ಕಿನ ನಿರುಕ್ತ	382
೧೧	**ವೃಷಾ ವೃಷ್ಣೇ** ಎಂಬ ಹನ್ನೊಂದನೆಯ ಸೂಕ್ತ	383
೧೨	**ದ್ಯಾನಾ ಹ ಕ್ಷಾಮಾ** ಎಂಬ ಹನ್ನೆರಡನೆಯ ಸೂಕ್ತ	395
೧೩	**ಯುಜೇ ವಾಂ ಬ್ರಹ್ಮ** ಎಂಬ ಹದಿಮೂರನೆಯ ಸೂಕ್ತ—	407
	ಸೂಕ್ತದ ಪೀಠಿಕೆ—**ಹವಿರ್ಧಾನ ಶಕಟಗಳು**	407
	ತೈತ್ತಿರೀಯ ಸಂಹಿತೆಯಲ್ಲಿರುವಂತೆ ಹವಿರ್ಧಾನಸ್ತುತಿಯು	411
	ಐತರೇಯಬ್ರಾಹ್ಮಣದಲ್ಲಿ ವಿವರಿಸಿರುವ ಹವಿರ್ಧಾನಸ್ವರೂಪ	416
೧೪	**ಪರೇಯಿಂವಾಂಸಂ** ಎಂಬ ಹದಿನಾಲ್ಕನೆಯ ಸೂಕ್ತ	428
	ಸೂಕ್ತದ ಪೀಠಿಕೆ	428
	ಪಿತೃಗಳು, ಪಿತೃಲೋಕಗಳು ಇತ್ಯಾದಿ	429
	ಸಾರಮೇಯಗಳೆಂಬ ಯಮನ ಬಳಿಯಲ್ಲಿರುವ ಎರಡು ನಾಯಿಗಳ ವಿಷಯ	436
	ಪಾಪಿಷ್ಠರು, ಪುಣ್ಯವಂತರು, ಮತ್ತು ಅವರುಗಳಿಗೆ ಲಭಿಸುವ ಗತಿ	437
	ಪುನರುತ್ಪತ್ತಿ ಮತ್ತು ಜನ್ಮಾಂತರ	440
	ಪ್ರೇತಸಂಸ್ಕಾರ—**ಅಗ್ನಿದಗ್ಧಾಃ ಅನಗ್ನಿದಗ್ಧಾಃ** ಎಂಬ ಶಬ್ದಗಳ ವಿವರಣೆ.	441
	ಪಿತೃಶ್ರಾದ್ಧ— **ಪಿಂಡಪಿತೃಯಜ್ಞ, ಮಹಾಪಿತೃಯಜ್ಞ** ಇತ್ಯಾದಿ	446
	ಪಿತೃಗಳ ವಿಷಯದಲ್ಲಿ ಋಕ್ಕುಗಳಲ್ಲಿರುವ ಕೆಲವು ವಿವರಣೆ	451
	ಯಮನು ಯಾರು ಅವನ ಕರ್ತವ್ಯವೇನು ?	455
	ದೇವಲೋಕಕ್ಕೂ ಮನುಷ್ಯಲೋಕಕ್ಕೂ ಇರುವ ಸಂಬಂಧ	457
	ಪಿತೃಗಳಲ್ಲಿರುವ ಪ್ರಭೇದಗಳು—**ಅಂಗಿರಸಃ ಅಥರ್ವಾಣಃ, ಭೃಗವಃ** ಇತ್ಯಾದಿ	467
	ಸಾರಮೇಯಗಳೆಂಬ ಯಮನ ನಾಯಿಗಳು	474

		ಪುಟಸಂಖ್ಯೆ
೧೫	**ಉದೀರತಾಂ** ಎಂಬ ಹದಿನೈದನೆಯ ಸೂಕ್ತ—	484
	ಪೀಠಿಕೆ	484
	ಅಂತ್ಯಕ್ರಿಯೆ	485
	ಆತ್ಮ	486
	ಉದೀರತಾಂ ಎಂಬ ಋಕ್ಕಿನ ನಿರ್ವಚನ	490
	ಪಿತೃಗಳಲ್ಲಿ ಉತ್ತಮಾಃ ಮಧ್ಯಮಾಃ ಅಧಮಾಃ ಎಂಬ ಮೂರು ಪ್ರಭೇದಗಳು	490
	ಪಿತೃಗಳ ವಿವಿಧಸ್ವರೂಪ ಇತ್ಯಾದಿ	493
	ಶಂಯೋಃ ಎಂಬ ಶಬ್ದದ ನಿರ್ವಚನ	495
೧೬	**ಮೈನಮಗ್ನೇ** ಎಂಬ ಹದಿನಾರನೆಯ ಸೂಕ್ತ—	510
	ಸೂಕ್ತದ ಪೀಠಿಕೆ	510
	ಸ್ವರ್ಗ ಮತ್ತು **ಸ್ವರ್ಗವಾಸಿಗಳ** ವಿಷಯ	511
	ನರಕ	512
೧೭	**ತ್ವಷ್ಟಾ ದುಹಿತ್ರೇ** ಎಂಬ ಹದಿನೇಳನೆಯ ಸೂಕ್ತ—	531
	ಸೂಕ್ತದ ಪೀಠಿಕೆ—ಸರಣ್ಯೂ ಮತ್ತು ವಿವಸ್ವಾನ್	531
	ಸರಣ್ಯೂವನ್ನು ವಿವಸ್ವಂತನು ಮದುವೆಯಾದ ವಿಚಾರ	531
	ಸರಣ್ಯೂದೇವಿಯಲ್ಲಿ ಯಮ ಮತ್ತು ಯಮಿ ಎಂಬ ಇಬ್ಬರು ಅವಳೀ ಮಕ್ಕಳ ಉತ್ಪತ್ತಿ	533
	ಮನುವಿನ ಮತ್ತು **ಅಶ್ವಿನೀದೇವತೆಗಳ** ಉತ್ಪತ್ತಿ	534
	ವಿವಸ್ವಂತನು ಅದಿತಿಯಲ್ಲಿ ಹುಟ್ಟಿದ ಬಗೆ	535
	ತ್ವಷ್ಟಾ ದುಹಿತ್ರೇ ಎಂಬ ಋಕ್ಕಿನ ನಿರುಕ್ತವು	547
	ಅಪಾಗೂಹನ್ ಎಂಬ ಋಕ್ಕಿನ ನಿರುಕ್ತವು	549
	ಪೂಷಾ ಶ್ವೇತಶ್ಚಾಶ್ವಯತು ಎಂಬ ಋಕ್ಕಿನ ನಿರುಕ್ತವು	552
	ದ್ರಪ್ಸಃ ಎಂಬ ಶಬ್ದದ ನಾನಾರ್ಥಗಳು	555
	ದ್ರಪ್ಸಶ್ಚಸ್ಕಂದ ಎಂಬ ಋಕ್ಕಿಗೆ ಆದಿತ್ಯಪರವಾದ ಅರ್ಥ	565
	ವಷಟ್ಕಾರಸ್ವರೂಪ	567
೧೮	**ಪರಂ ಮೃತ್ಯೋ ಅನು** ಎಂಬ ಹದಿನೆಂಟನೆಯ ಸೂಕ್ತ—	577
	ಸೂಕ್ತದ ಪೀಠಿಕೆ	577
	ಈ ಸೂಕ್ತದ ವಿಷಯದಲ್ಲಿ ಬೃಹದ್ದೇವತಾಗ್ರಂಥದಲ್ಲಿ ಹೇಳಿರುವ ವಿವರಣೆ	577
	ಋಗ್ವಿಧಾನವೆಂಬ ಗ್ರಂಥದಲ್ಲಿ ಈ ಸೂಕ್ತದ ಜಪದ ವಿಷಯವಾಗಿ ಹೇಳಿರುವ ಅಂಶಗಳು	578
	ಈ ಸೂಕ್ತದ ವಿಷಯದಲ್ಲಿ ಶತಪಥ ಬ್ರಾಹ್ಮಣದಲ್ಲಿ ಹೇಳಿರುವ ಇತಿಹಾಸವು	580

ಪುಟಸಂಖ್ಯೆ

ಸೂರ್ಯನು ಯಾವಾಗಲೂ ಮಳುಗುವುದೇ ಇಲ್ಲ ಉದಯಿಸುವುದೂ ಇಲ್ಲ, ಎಂಬ ವಿಷಯದಲ್ಲಿ ಐತರೇಯ ಬ್ರಾಹ್ಮಣದ ವಿವರಣೆಯು 581

ಕತೋಷನಿಷತ್ತಿನ ಸೂಕ್ತ್ಯವಿವರಣೆ (ಯಮನಿಗೂ ನಚಿಕೇತ ಋಷಿಗೂ ನಡೆದ ಸಂಭಾಷಣೆ) 582

ಪರಂ ಮೃತ್ಯೋ ಎಂಬ ಋಕ್ಕಿನ ನಿರುಕ್ತವು 597

ಮೃತನ ಪತ್ನಿಯು **ಸಹಗಮನ** ಮಾಡುವುದನ್ನು ಅವಳ ಮೈದುನನು ತಡೆಯಬೇಕೆಂಬ ವಿಷಯ ಇತ್ಯಾದಿ 611

ಇಲ್ಲಿಗೆ ಏಳನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು ಸಮಾಪ್ತವು

ಏಳನೆಯ ಅಧ್ಯಾಯವು.

೧೯ **ನಿ ವರ್ತಧ್ವಂ** ಎಂಬ ಹತ್ತೊಂಭತ್ತನೆಯ ಸೂಕ್ತ 625

೨೦ **ಭದ್ರಂ ನಃ** ಎಂಬ ಇಪ್ಪತ್ತನೆಯ ಸೂಕ್ತ 635

೨೧ **ಅಗ್ನಿಂ ನ ಸ್ತವೃಕ್ತಿಭಿಃ** ಎಂಬ ಇಪ್ಪತ್ತೊಂದನೆಯ ಸೂಕ್ತವು 646

೨೨ **ಕುಹ ಶ್ರುತ** ಎಂಬ ಇಪ್ಪತ್ತೆರಡನೆಯ ಸೂಕ್ತ 656

೨೩ **ಯಜಾಮಹ ಇಂದ್ರಂ** ಎಂಬ ಇಪ್ಪತ್ತಮೂರನೆಯ ಸೂಕ್ತ 673

೨೪ **ಇಂದ್ರ ಸೋಮಮಿಮಂ** ಎಂಬ ಇಪ್ಪತ್ತನಾಲ್ಕನೆಯ ಸೂಕ್ತ 683

೨೫ **ಭದ್ರಂ ನೋ ಅಪಿ** ಎಂಬ ಇಪ್ಪತ್ತೈದನೆಯ ಸೂಕ್ತ 690

೨೬ **ಪ್ರ ಹ್ಯಚ್ಛಾ ಮನೀಷಾಃ** ಎಂಬ ಇಪ್ಪತ್ತಾರನೆಯ ಸೂಕ್ತ 701

೨೭ **ಅಸತ್ಸು ಮೇ ಜರಿತಃ** ಎಂಬ ಇಪ್ಪತ್ತೇಳನೆಯ ಸೂಕ್ತ 711

ಗೌಃ ಎಂಬ ಶಬ್ದದ ನಾನಾರ್ಥಗಳು 745

ದೇವಾನಾಂ ಮಾನೇ ಎಂಬ ಋಕ್ಕಿನ ನಿರುಕ್ತವು 751

ಪಾದುಃ ಎಂಬ ಶಬ್ದದ ನಿರ್ವಚನ ಇತ್ಯಾದಿ 755

೨೮ **ವಿಶ್ವೋ ಹ್ಯನ್ಯಃ** ಎಂಬ ಇಪ್ಪತ್ತೆಂಟನೆಯ ಸೂಕ್ತ 754

ಅಕ್ಷಾಃ ಎಂಬ ಶಬ್ದದ ನಿರ್ವಚನ ಮತ್ತು ಅರ್ಥ 760

೨೯ **ವನೇ ನ ವಾ** ಎಂಬ ಇಪ್ಪತ್ತೊಂಭತ್ತನೆಯ ಸೂಕ್ತ 770

ವನೇ ನ ವಾ ಎಂಬ ಋಕ್ಕಿನ ನಿರುಕ್ತ 773

೩೦ **ಪ್ರ ದೇವತ್ರಾ ಬ್ರಹ್ಮಣೇ** ಎಂಬ ಮೂವತ್ತನೆಯ ಸೂಕ್ತ 783

ಸೂಕ್ತದ ಪೀಠಿಕೆ 783

		ಪುಟಸಂಖ್ಯೆ
	ಸೂಕ್ತದ್ರಷ್ಟೃವಾದ **ಕವಷ ಐಲೂಷನ** ವಿಷಯ (ಇತರೇಯ ಬ್ರಾಹ್ಮಣದಲ್ಲಿರುವಂತೆ)	781
	ಕೌಷೀತಕೀ ಬ್ರಾಹ್ಮಣದ ವಿವರಣೆ	785
	ಅಪೋನಪ್ತ್ರೀಯ ಸೆಂಬ ಯಜ್ಞಾಂಗಕರ್ಮ	786
	ಆಪೋನಪ್ತ್ರೀಯಸೆಂಬ ಕರ್ಮದ ವಿವರಣೆ (ಇತರೇಯ ಬ್ರಾಹ್ಮಣದಲಿರುವಂತೆ)	787
	ಈ ಸೂಕ್ತದ ಋಕ್ಕುಗಳ ವಿಷಯದಲ್ಲಿರುವ ಪೂರ್ವೇತಿಹಾಸವು	789
	ಯೋ ಅನಿಧ್ಮೋ ಎಂಬ ಋಕ್ಕಿನ ನಿರುಕ್ತವು	799
	ಹಿನೋತಾ ನೋ ಅಧ್ವರಂ ಎಂಬ ಋಕ್ಕಿನ ನಿರುಕ್ತವು	808
೩೧	**ಆ ನೋ ದೇವಾನಾಂ** ಎಂಬ ಮೂವತ್ತೊಂದನೆಯ ಸೂಕ್ತ	811
೩೨	**ಪ್ರ ಸು ಗ್ಮಂತಾ** ಎಂಬ ಮೂವತ್ತೆರಡನೆಯ ಸೂಕ್ತ	829

ಇಲ್ಲಿಗೆ ಏಳನೆಯ ಅಷ್ಟಕದ ಏಳನೆಯ ಅಧ್ಯಾಯವು ಸಮಾಪ್ತವು

ಎಂಟನೆಯ ಅಧ್ಯಾಯವು

೩೩	**ಪ್ರ ಮಾ ಯುಯುಜ್ರೇ** ಎಂಬ ಮೂವತ್ತಮೂರನೆಯ ಸೂಕ್ತ	843
೩೪	**ಪ್ರಾವೇಪಾ ಮಾ** ಎಂಬ ಮೂವತ್ತನಾಲ್ಕನೆಯ ಸೂಕ್ತ	853
	ಪ್ರಾವೇಪಾ ಮಾ ಎಂಬ ಋಕ್ಕಿನ ನಿರುಕ್ತವು	856
	ಇರಿಣಂ, ಮುಂಜ, ಇಷೀಕಾ, ವಿಭೇದಕಾ ಇತ್ಯಾದಿ ಶಬ್ದಗಳ ನಿರ್ವಚನ ಮತ್ತು ಅರ್ಥವಿವರಣೆ ಇತ್ಯಾದಿ	857
೩೫	**ಅಬುಧ್ರಮು ತ್ಯ** ಎಂಬ ಮೂವತ್ತೈದನೆಯ ಸೂಕ್ತ	873
೩೬	**ಉಷಾಸಾನಕ್ತಾ ಬೃಹತೀ** ಎಂಬ ಮೂವತ್ತಾರನೆಯ ಸೂಕ್ತ	891
೩೭	**ನಮೋ ಮಿತ್ರಸ್ಯ ವರುಣಸ್ಯ** ಎಂಬ ಮೂವತ್ತೇಳನೆಯ ಸೂಕ್ತ	907
೩೮	**ಅಸ್ಮಿನ್ನ ಇಂದ್ರ** ಎಂಬ ಮೂವತ್ತೆಂಟನೆಯ ಸೂಕ್ತ	923
೩೯	**ಯೋ ವಾಂ ಪರಿಜ್ಮಾ** ಎಂಬ ಮೂವತ್ತೊಂಭತ್ತನೆಯ ಸೂಕ್ತ—	930
	ಸೂಕ್ತದ ಪೀಠಿಕೆ	930
	ಸೂಕ್ತದ್ರಷ್ಟೃವಾದ **ಘೋಷಾ** ಎಂಬ ಋಷಿಯ ಪರಿಚಯ	930
	ಅಶ್ವಿನೀದೇವತೆಗಳ ಉತ್ಪತ್ತಿ	931
	ಅಶ್ವಿನೀದೇವತೆಗಳ ರಥವರ್ಣನೆ ಇತ್ಯಾದಿ	934
	ಅಶ್ವಿನೀದೇವತೆಗಳು ನಾನಾಜನರಿಗೆ ಮಾಡಿದ ಸಹಾಯಗಳ ವಿವರಣೆ	936
	ಅಶ್ವಿನೀದೇವತೆಗಳು **ಚ್ಯವನ**ಋಷಿಗೆ ಯೌವನವನ್ನು ಬರುವಂತೆ ಮಾಡಿದ ವಿಚಾರ	946

ಪುಟಸಂಖ್ಯೆ

ತುಗ್ರಪುತ್ರನಾದ **ಭುಜ್ಯು**ವನ್ನು ಸಮುದ್ರಮಧ್ಯದಿಂದ ಎತ್ತಿ ರಕ್ಷಿಸಿದ ವಿಚಾರ 948
ವಿಮದಋಷಿಯ ಪತ್ನಿಯನ್ನು ಅವನ ಮನೆಗೆ ಕರೆದುಕೊಂಡುಹೋಗಿ ಬಿಟ್ಟವಿಚಾರ ಇತ್ಯಾದಿ 953
ವಧ್ರಿಮತೀ ಎಂಬ ಸ್ತ್ರೀಗೆ ಕತ್ತರಿಸಿಹೋದ ಹಸ್ತವನ್ನು ಸರಿಮಾಡಿ ಅವಳಿಗೆ ಹಿರಣ್ಯಹಸ್ತನೆಂಬ
ಪುತ್ರನನ್ನು ಅನುಗ್ರಹಿಸಿದ ವಿಚಾರ 954
ಕಲಿ ಎಂಬ ಋಷಿಗೆ ಕಳೆದುಹೋಗಿದ್ದ ಯೌವನವನ್ನು ಪುನಃ ಒದಗಿಸಿಕೊಟ್ಟ ವಿಚಾರ 956
ಅಸುರರಿಂದ ಭಾವಿಯಲ್ಲಿ ತಳ್ಳಲ್ಪಟ್ಟಿದ್ದ **ವಂದನ**ನೆಂಬ ಋಷಿಯನ್ನು ಕಾಪಾಡಿದ ವಿಚಾರ 956
ರೇಭನೆಂಬ ಋಷಿಯನ್ನು ರಕ್ಷಿಸಿದ ವಿಚಾರ 957
ವಿಶ್ಪಲಾ ಎಂಬ ಸ್ತ್ರೀಯ ಕತ್ತರಿಸಿಹೋಗಿದ್ದ ಕಾಲನ್ನು ಪುನಃ ಸರಿಮಾಡಿದ ವಿಚಾರ 958
ರೇಭ ಮತ್ತು **ಅತ್ರಿ** ಎಂಬ ಋಷಿಗಳನ್ನು ಕಾಪಾಡಿದ ವಿಚಾರ 960
ಪೇದು ಎಂಬ ರಾಜನಿಗೆ ಉತ್ತಮವಾದ ಒಂದು ಬಿಳೀಕುದುರೆಯನ್ನು ಕೊಟ್ಟ ವಿಚಾರ 962
ಶಯು ಎಂಬ ಋಷಿಯ ಬಂಜೆಯಾದ ಹಸುವನ್ನು ಹಾಲುಕೊಡುವಂತೆ ಮಾಡಿದ ವಿಚಾರ 967
ವೃಕಶಬ್ದದ ನಾನಾರ್ಥಗಳು, ಉದಾಹರಣೆಸಹಿತವಾಗಿ 967

೪೦ **ರಥಂ ಯಾಂತಂ** ಎಂಬ ನಲವತ್ತನೆಯ ಸೂಕ್ತ 970
ಕುಹ ಸ್ವಿದ್ದೋಷಾ ಎಂಬ ಋಕ್ಕಿನ ನಿರುಕ್ತವು 973
ದೇವರ ಶಬ್ದದ ನಿರ್ವಚನ 971
ವಿಧವಾ, ಮರ್ಯಃ ಯೋಷಾ ಎಂಬ ಶಬ್ದಗಳ ನಿರ್ವಚನ 974
ವಶನೆಂಬ ರಾಜನಿಗೆ ಸಹಾಯಮಾಡಿದ ವಿಚಾರ 981
ಸುಮತಿಃ ಎಂಬ ಶಬ್ದದ ಅರ್ಥ ಮತ್ತು ನಿರ್ವಚನ 988
ವಾಜಿನೀವಸೂ ಎಂಬ ಶಬ್ದದ ಅರ್ಥವಿವರಣೆ 988
ಮಿಥುನಾ ಎಂಬ ಶಬ್ದದ ನಿರ್ವಚನ, ರೂಪನಿಷ್ಪತ್ತಿ ಅರ್ಥವಿವರಣೆ ಇತ್ಯಾದಿ 989

ವಿಷಯಾನುಕ್ರಮಣಿಕೆ ಸಮಾಪ್ತವು

Printed by K. Venkatasubbiah. at Sri Vinayak Printing Works,
550, IInd Ramachandra Agrahar, Mysore.



॥ ಶ್ರೀ ॥

॥ ಶ್ರೀ ವಾಯುಗರ್ಭಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಮ ಸ್ತಂ ಸೀತಾಪತಿಂ ಭಜೇ ।
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮುನೀಶ್ವರಂ ॥
ಸೇಯಂ ವಿದ್ವತ್ಸಭೋದ್ದಾಮಕೀರ್ತಿರಾಧ್ಯಾಯಮಾ ಸದಾಶಿವಂ ।
ತೀರ್ಥಕೃದ್ಭಾರತೀಯೈಃ ಪದೈರ್ಯತಿವರಂ ಜಗೌ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

ಪ್ರಥಮೋ ಮಂಡಲಃ

ಅಥ ಸಪ್ತಮಾಷ್ಟಕೇ ಪಂಚಮೋಽಧ್ಯಾಯಃ
ಏಳನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು
ಒಂಭತ್ತನೆಯ ಮಂಡಲದ ಸೂಕ್ತಗಳು ೧೦೧-೧೧೫

ನೂರೊಂದನೆಯ ಸೂಕ್ತವು

ಪವಮಾನಕಃ.

ಸೋಮಮಾದನಕ್ರಿಯಾ ವಿಷಯಕಸ್ತ ಈ ಮಂಡಲದ ಇತರ ವಿಷಯಗಳಂತೆ ಸಾಧ್ಯ ಮಂಡಿಸಿದ ಭಾಗದಲ್ಲಿ ವಿವರಿಸಿರುವುದರಿಂದ ಇಲ್ಲಿ ಪುನಃ ವಿವರಿಸುವ ಆವಶ್ಯಕತೆಯಿಲ್ಲ. ಸಂಕ್ಷೇಪವಾಗಿ ಅರ್ಥವನ್ನು ತಿಳಿಸಲಾಗುವುದು.

ಋಷಿಃ ಕಣ್ವಃ

ತತ್ರ ಪುರೋಜಿತೀ ವ ಇತಿ ಷೋಡಶರ್ಚಮಷ್ಟಮಾಕಾಪೇಕ್ಷಯಾ ಪಂಚಮಂ ಸೂಕ್ತಂ । ಅದ್ಯಸ್ಯ ತೃಚಸ್ಯ ಶ್ಯಾವಾಶ್ವಪುತ್ರೋಽಂಧೀಗುರ್ನಾಮರ್ಷಿಃ । ದ್ವಿತೀಯಸ್ಯ ಸಹಪಸ್ಯ ರಾಜ್ಞಃ ಪುತ್ರೋ ಯಯಾತಿರ್ನಾಮ । ತೃತೀಯಸ್ಯ ಮನೋಶ್ಚ ಪುತ್ರ್ಯಾ ಸಹಪಸೋ ನಾಮ ರಾಜರ್ಷಿಃ । ಚತುರ್ಥಸ್ಯ

ಸಂವರಣಾಖ್ಯಸ್ಯ ರಾಜ್ಞಃ ಪುತ್ರೋ ಮನುಃ । ಏವಂ ದ್ವಾದಶ ಗತಾಃ । ತಿಷ್ಟುಭಸ್ಯ ಚತುರ್ಥಚರಣಸ್ಯ ವಾಚಃ ಪುತ್ರೋ ವೈಶ್ವಾಮಿತ್ರೋ ವಾ ಪ್ರಜಾಪತಿರ್ಋಷಿಃ । ದ್ವಿತೀಯಾತೃತೀಯೇ ಗಾಯತ್ರ್ಯೌ, ತಿಷ್ಠಾಶ್ಚತುರ್ಥಾನುಷ್ಟುಭಃ । ತಥಾ ಚಾನುಕ್ರಮ್ಯತೇ । ಪುರೋಜಿತೀ ಷೋಳಶ ಶ್ಯಾವಾಶ್ವಿರಂಧೀಗುರ್ಯಯಾತಿರ್ನಾಹುಷೋ ನಹುಷೋ ಮಾನವೋ ಮನುಃ ಸಾಂವರಣ ಇತಿ ತೃಚಾಃ ಶೇಷೇ ಪ್ರಜಾಪತಿರುಷಾದ್ಯೇ ಗಾಯತ್ರ್ಯಾವಿತಿ । ಗತಃ ಸೂಕ್ತವಿನಿಯೋಗಃ ॥

ಅನುವಾದವು—ಒಂಭತ್ತನೆಯ ಮಂಡಲದ ಆರನೆಯ ಅನುವಾಕದಲ್ಲಿ ಏಳು ಸೂಕ್ತಗಳಿರುವವು ಇವುಗಳಲ್ಲಿ ಮೊದಲಿನ ನಾಲ್ಕು ಸೂಕ್ತಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ ಈಗ ಪ್ರಾರಂಭಿಸುವ **ಪುರೋಜಿತೀ ವಃ** ಎಂಬ ಈ ಸೂಕ್ತವು ಈ ಆರನೆಯ ಅನುವಾಕದಲ್ಲಿ ಐದನೆಯ ಸೂಕ್ತವು ಇದರಲ್ಲಿ ಹದಿನಾರು ಋಕ್ಕುಗಳಿರುವವು ೧-೩ ಋಕ್ಕುಗಳಿಗೆ ಶ್ಯಾವಾಶ್ವಋಷಿಯ ಪುತ್ರನಾದ ಅಂಧೀಗುಃ ಎಂಬುವನು ಋಷಿಯು, ೪-೬ ಋಕ್ಕುಗಳಿಗೆ ನಹುಷನೆಂಬ ರಾಜನ ಪುತ್ರನಾದ ಯಯಾತಿಯೆಂಬುವನು ಋಷಿಯು, ೭-೯ ಋಕ್ಕುಗಳಿಗೆ ಮನುವಿನ ಪುತ್ರನಾದ ನಹುಷನೆಂಬ ರಾಜರ್ಷಿಯು ಋಷಿಯು, ೧೦-೧೫ ಋಕ್ಕುಗಳಿಗೆ ಸಂವರಣಪುತ್ರನಾದ ಮನುವು ಋಷಿಯು ; ಈ ರೀತಿ ೧೫ ಋಕ್ಕುಗಳಾದ ಬಳಿಕ ೧೫-೧೬ ವರೆಗೆ ಇರುವ ಉಳಿದ ನಾಲ್ಕು ಋಕ್ಕುಗಳಿಗೆ ವಿಶ್ವಾಮಿತ್ರ ಗೋತ್ರದ ವಾಚನೆಂಬುವನು ಅಥವಾ ಪ್ರಜಾಪತಿಯು ಋಷಿಯು, ಈ ಸೂಕ್ತದ ಎರಡು ಮತ್ತು ಮೂರನೇ ಋಕ್ಕುಗಳು ಗಾಯತ್ರೀಛಂದಸ್ಕವು ಉಳಿದ ಹದಿನಾಲ್ಕು ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಪುರೋಜಿತೀ ಷೋಳಶ ಶ್ಯಾವಾಶ್ವಿರಂಧೀಗುರ್ಯಯಾತಿರ್ನಾಹುಷೋ ಮಾನವೋ ಮನುಃ ಸಾಂವರಣ ಇತಿ ತೃಚಾಃ ಶೇಷೇ ಪ್ರಜಾಪತಿರುಷಾದ್ಯೇ ಗಾಯತ್ರ್ಯೌ** ಎಂದು ಹೇಳಿರುವುದು ಸೂಕ್ತದ ವಿನಿಯೋಗವನ್ನು ಮುಂದೆಯೇ ಹೇಳಲಾಗಿದೆ.

ಸೂಕ್ತ—೧೦೧

ಮಂಡಲ—೯ । ಅನುವಾಕ—೬ । ಸೂಕ್ತ—೧೦೧ ।
ಆಸ್ಪಕ—೭ । ಅಧ್ಯಾಯ—೫ ॥ ವರ್ಗ—೧, ೨, ೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೬ ।
ಋಷಿಃ—೧-೩ ಆಂಧೀಗುಃ ಶ್ಯಾವಾಶ್ವಿಃ । ೪-೬ ಯ ಯಾತಿರ್ನಾಹುಷಃ । ೭-೯. ನಹುಷೋ ಮಾನವಃ । ೧೦-೧೫ ಮನುಃ ಸಾಂವರಣಃ । ೧೬-೧೬. ಪ್ರಜಾಪತಿಃ ॥
ದೇವತಾ—ಪವಮಾನಃ ಸೋಮಃ ।
ಛಂದಸ್—೧. ೪-೧೬. ಅನುಷ್ಟುಪ್ । ೨, ೩ ಗಾಯತ್ರ್ಯೌ ।

। ಸಂಹಿತಾಪಾಠಃ ।

ಪುರೋ॑ಜಿತೀ ವ್ಓ॑ ಅಂಧ॒ಸಃ ಸು॒ತಾಯ॒ ಮಾದ॑ಯಿತ್ನವೇ ।
ಅಪ॒ ಶ್ವಾನಂ॑ ಶ್ನಥಿಷ್ಟನ॒ ಸಖಾ॑ಯೋ॒ ದೀರ್ಘ॑ಜಿಹ್ವ್ಯಂ ॥ ೧ ॥

। ಪದಪಾಠ ।

ಪುರಃ೨ಜಿತೀ । ವಃ । ಅಂಧಸಃ । ಸುತಾಯ । ಮಾದಯಿಷ್ನವೇ ।
ಅಪ । ಶ್ವಾನಂ । ಶ್ನಥಿಷ್ಟನ । ಸಖಾಯಃ । ದೀರ್ಘ೨ಜಿಹ್ವ್ಯಂ । ೧ ॥

॥ ಸಾಯಣಭಾಷ್ಯಂ ॥

ಹೇ ಸಖಾಯಃ ಸಖಿಭೂತಾಃ ಸಮಾನಖ್ಯಾನಾ ವಾ ಹೇ ಸ್ತೋತಾರಃ ವೋ ಯೂಯಂ ಪುರೋಜಿತೀ ॥ ಸಪ್ತಮ್ಯಃ ಪೂರ್ವಸವರ್ಣದೀರ್ಘಃ । ಪುರಃಸ್ಥಿತಜಯಸಾಂಧಸೋ೨ದನೀಯಸ್ಯ ಸೋಮಸ್ಯಭೂತಾಯ ಸುತಾಯಾಭಿಷುತಾಯ ಮಾದಯಿತ್ನವೇ೨ತ್ಯಂತಂ ಮದಕರಾಯ ರಸಾಯ ದೀರ್ಘಜಿಹ್ವ್ಯಂ ದೀರ್ಘಾ ಜಿಹ್ವಾ ಯಸ್ಯ ಸಃ ॥ ದೀರ್ಘಜಿಹ್ವೀ ಚ ಛಂದಸಿ। ಪಾ ೪-೧-೫೯। ಇತಿ ಜೀಷಂತತ್ವೇನ ನಿಪಾತಿತಃ ॥ ತಾದೃಶಂ ಶ್ವಾನಮುಪ ಶ್ನಥಿಷ್ಟನ । ಅಪಶ್ನಥಯತ । ಅಪಜಾಧಧ್ವಂ' ಯಥಾ ಶ್ವಾ ರಾಕ್ಷಸಾ ವಾ ಸುತಂ ಸೋಮಂ ನ ರಿಹಂತಿ ತಥಾ ಕುರುತೇತ್ಯರ್ಥಃ ।

। ಪ್ರತಿಪದಾರ್ಥ ।

ಸಖಾಯಃ—ಮಿತ್ರರಾದ ಎಲೈ ಸ್ತುತಿಕರ್ತರಿರಾ । ವ—ನೀವು । ಪುರೋಜಿತೀ—ನಿಮ್ಮ ಮುಂದ ಜಯವನ್ನು ಸ್ಥಾಪಿಸಿರುವವನೂ । ಅಂಧಸಃ—ಅನ್ನಾರ್ಹನೂ (ಭಕ್ಷಿಸಲು ಅರ್ಹನೂ) । ಸುತಾಯ—ಹಿಂಡಲ್ಪಟ್ಟವನೂ । ಮಾದಯಿಷ್ನವೇ—ಹರ್ಷಕಾರಕನಾದ ರಸವುಳ್ಳವನೂ ಆದ ನಿನಗೆ ಹರ್ಷಜನಕವಾಗಿ । ದೀರ್ಘಜಿಹ್ವ್ಯಂ—ಉದ್ದವಾದ ನಾಲಿಗೆಯುಳ್ಳ । ಶ್ವಾನಂ—ನಾಯಿಯನ್ನು । ಅಪಶ್ನಥಿಷ್ಟನ—ಹೊಡೆಯಿರಿ ಓಡಿಸಿ.

। ಭಾವಾರ್ಥ ॥

ಮಿತ್ರರಾದ ಎಲೈ ಸ್ತುತಿಕರ್ತರೇ, ನಿಮಗಾಗಿ ಜಯವನ್ನು ನಿಲ್ಲಿಸಿದವನೂ, ಭಕ್ಷಣಕ್ಕೆ ಅರ್ಹನೂ, ಹಿಂಡಲ್ಪಟ್ಟವನೂ, ಹರ್ಷಕಾರಕನೂ ಆದ ನಿಮ್ಮ ಸೋಮರಸದ ಸೇವನೆಗಾಗಿ, ಉದ್ದವಾದ ನಾಲಿಗೆಯುಳ್ಳ ಈ ನಾಯಿಯನ್ನು (ರಕ್ಷಸ್ಸು ಸೇರ್ದಿರುವುದರಿಂದ) ಬೆನ್ನಟ್ಟಿ ಓಡಿಸಿರಿ

English Translation

For (the drinking of) the effused exhilarating (juice) of the Soma who has placed victory before you, you friends destroy the long tongued dog

ವಿಶೇಷ ವಿಷಯಗಳು

ಋಗ್ವೇದದ ಸೂಕ್ತಗಳಲ್ಲಿ ಮುಂದಿನವನ್ನು ಬಿಟ್ಟು ಇತರ ಮಂತ್ರಗಳಲ್ಲಿ ಸೂಕ್ತಗಳನ್ನು ಋಷಿಕೃತವನ್ನಾಗಿ ವಿಂಗಡಿಸಿರುವುದರಿಂದ ಸಾಧಾರಣವಾಗಿ ಒಂದು ಸೂಕ್ತದಲ್ಲಿ ಒಬ್ಬ ಋಷಿಯ ಮಂತ್ರಗಳು ಕೆಲವು ಸಂದರ್ಭಗಳಲ್ಲಿ ಮಾತ್ರ ಇಬ್ಬರು ಮೂವರು ಋಷಿಗಳು ಇರುವುದೂ ಉಂಟು. ಉದಾಹರಣೆಗೆ ನಾವು ಇಲ್ಲಿ ಎಲ್ಲ ಸೂಕ್ತಗಳಿಗೂ ಒಂದೇ ಋಷಿಯ ಹೆಸರನ್ನು ಕೊಟ್ಟಿದ್ದೇವೆ. ಆದರೆ ಈ ಮುಂದಿನ ಸೂಕ್ತಗಳಿಗೆ ನಾನಾ ಋಷಿಗಳಿರುವುದು

ಸ್ವಾಭಾವಿಕವೂ ಅನಿವಾರ್ಯವೂ ಆಗಿದೆ. ಸಾಮಾನ್ಯವಾಗಿ ಒಂದು ಸೂಕ್ತಕ್ಕೆ ಒಬ್ಬನೇ ಋಷಿಯಂತೆ ಇದ್ದರೂ ಅನೇಕ ಋಷಿದೃಷ್ಟವಾದ ಋಕ್ಕುಗಳನ್ನು ಒಟ್ಟಾಗಿ ಸೇರಿಸಿ ಆ ಋಕ್ಕುಗಳನ್ನು ಒಂದೇ ಸೂಕ್ತವೆಂದು ಪರಿಗಣಿಸಿರುವುದು ಕೆಲವು ಸಂದರ್ಭಗಳಲ್ಲಿ ಕಂಡುಬಂದಿದೆ. ಅಂತಹ ಸೂಕ್ತಗಳಲ್ಲಿ ಈ ಮಂಡಲದ ೯೭, ೧೦೧, ೧೦೭, ೧೦೯ ನೆಯ ಸೂಕ್ತಗಳು ಮುಖ್ಯವಾದುವು ೯೭ ನೆಯ ಸೂಕ್ತದಲ್ಲಿ ವಸಿಷ್ಠ ಮತ್ತು ವಸಿಷ್ಠಗೋತ್ರದ ಕೆಲವು ಋಷಿಗಳಿರುವರು; ೧೦೧ ನೆಯ ಸೂಕ್ತದಲ್ಲಿ ಪ್ರಜಾಪತಿ, ಮನು ಮತ್ತು ಮನುವಂಶದ ನಹುಷ, ಯಯಾತಿ, ಅಂಧೀಗುಃ ಎಂಬ ಋಷಿಗಳಿರುವರು, ೧೦೭ ನೆಯ ಸೂಕ್ತದಲ್ಲಿ ಸಪ್ತರ್ಷಿಗಳಿರುವರು ಈ ಸಪ್ತರ್ಷಿಗಳು ಯಾರು ಎಂಬ ವಿಷಯವನ್ನು ನಾವು ಹಿಂದೆಯೇ ವಿವರಿಸಿದೇವೆ. ೧೦೯ ನೆಯ ಸೂಕ್ತದಲ್ಲಿ ವಸಿಷ್ಠವಂಶದ ಗೌರವೀತಿ ಮೊದಲಾದ ಏಳುಮಂದಿ ಋಷಿಗಳಿರುವರು. ಅನೇಕ ಮಂದಿ ಋಷಿದೃಷ್ಟವಾದ ಕೆಲವು ಸೂಕ್ತಗಳು ೧೦ ನೆಯ ಮಂಡಲದಲ್ಲಿಯೂ ಇರುವವು.

॥ ಸಂಹಿತಾಪಾಠಃ ॥

ಯೋ ಧಾರಯಾ ಪಾವಕಯಾ ಪರಿಪ್ರಸ್ಯಂದತೇ ಸುತಃ ।
ಇಂದುರಶ್ವೋ ನ ಕೃತ್ವ್ಯಃ ॥ ೨ ॥

॥ ಪದಪಾಠಃ ॥

ಯಃ । ಧಾರಯಾ । ಪಾವಕಯಾ । ಪರಿ । ಪ್ರಸ್ಯಂದತೇ । ಸುತಃ ।
ಇಂದುಃ । ಅಶ್ವಃ । ನ । ಕೃತ್ವ್ಯಃ ॥ ೨ ॥

॥ ಸಾಯಣಭಾಷ್ಯಂ ॥

ಪವಿತ್ರೇಷ್ವಾ್ಯಂ ದ್ವಿತೀಯಸ್ಯಾಜ್ಯಭಾಗಸ್ಯ ಯೋ ಧಾರಯೇತ್ಯೇಷಾನುವಾಕ್ಯಾ । ಸೂತ್ರಿತಂ ಚ। ಪಾವಕವಂತಾವಾಜ್ಯಭಾಗಾವಗ್ನೀ ರಕ್ಷಾಂಸಿ ಸೇಧತಿ ಯೋ ಧಾರಯಾ ಪಾವಕಯಾ । ಆ. ೨.೧೨ । ಇತಿ॥

ಸುತೋಽಭಿಷುತಃ ಕೃತ್ವ್ಯಃ । ಕೃತ್ವೀತಿ ಕರ್ಮನಾಮ। ಕರ್ಮಣಿ ಸಾಧುರ್ಯಃ ಇಂದುಃ ಸೋಮಃ ಪಾವಕಯಾ ಪಾಪಾನಾಂ ಶೋಧಕಯಾ ಧಾರಯಾ ಪರಿಪ್ರಸ್ಯಂದತೇ ಪರಿತಃ ಪ್ರಕ್ಷರತಿ । ಕಥಮಿವ । ಅಶ್ವೋ ನಾಶ್ವೋ ಯಥಾ ವೇಗೇನ ಪ್ರಗಚ್ಛತಿ ತದ್ವತ್ ॥

॥ ಪ್ರತಿಪದಾರ್ಥ ॥

ಯಃ—ಯಾರು । ಸುತಃ—ಹಿಂಡಲ್ಪಟ್ಟವನೂ । ಕೃತ್ವ್ಯಃ—ಕರ್ಮಾರ್ಹನೂ ಆಗಿರುವನೋ ಅಂತಹ । ಇಂದುಃ—ಸೋಮದೇವನು । ಪಾವಕಯಾ—ಶುದ್ಧಿಕಾರಕವಾದ । ಧಾರಯಾ—ಪ್ರವಾಹರೂಪದಿಂದ । ಅಶ್ವೋ ನ—ವೇಗಗಾಮಿಯಾದ ಅಶ್ವದಂತೆ । ಪರಿಪ್ರಸ್ಯಂದತೇ—ಪ್ರವಹಿಸುತ್ತದೆ.

॥ ಭಾವಾರ್ಥ ॥

ಹಿಂಡಲ್ಪಟ್ಟಿರುವವನೂ, ಕರ್ಮಾರ್ಹನೂ ಆದ ಸೋಮದೇವನು ಶುದ್ಧಿಕಾರಕವಾದ ಪ್ರವಾಹರೂಪದಿಂದ ವೇಗಗಾಮಿಯಾದ ಅಶ್ವದಂತೆ ಪ್ರವಹಿಸುತ್ತದೆ.

English Translation

The Indu good for sacred rites which when effused flows forth in a purifying stream, (swift) as a horse :

॥ ವಿಶೇಷವಿಷಯಗಳು ॥

ಪ್ರಏತ್ರೇಷ್ಟಿಯಲ್ಲಿ ಎರಡನೆಯ ಆಜ್ಯಭಾಗವನ್ನು ಹೋಮವಗಾಡುವಾಗ **ಯೋ ಧಾರಯಾ** ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪಾವಕವಂತಾವಾಜ್ಯ ಭಾಗಾವಗ್ನೀ ರಕ್ಷಾಂಸಿ ಸೇಧತಿ ಯೋ ಧಾರಯಾ ಪಾವಕಯಾ** ಎಂಬ ಸೂತ್ರದಿಂದ (೮. ೩-೧೨) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತಂ ದುರೋಷಮಭೀ ನರಃ ಸೋಮಂ ವಿಶ್ವಾಚ್ಯಾ ಧಿಯಾ ।
ಯಜ್ಞಂ ಹಿನ್ವಂತ್ಯದ್ರಿಭಿಃ ॥ ೩ ॥

॥ ಪದಪಾಠಃ ॥

ತಂ । ದುರೋಷಂ । ಅಭಿ । ನರಃ । ಸೋಮಂ । ವಿಶ್ವಾಚ್ಯಾ । ಧಿಯಾ ।
ಯಜ್ಞಂ । ಹಿನ್ವಂತಿ । ಅದ್ರಿಭಿಃ ॥ ೩ ॥

॥ ಸಾಯಣಭಾಷ್ಯಂ ॥

ನರಃ ಕರ್ಮನೇತಾರ ಋತ್ವಿಜೋ ದುರೋಷಂ ॥ ರೋಷತೇರ್ಹಿಂಸಾರ್ಥಸ್ಯ ರೇಫಲೋಪೇ ದೀರ್ಘಾಭಾವ ಓಷತೇರ್ದಾಹಾರ್ಥಸ್ಯ ವಾ ಖಲಿ ರೂಪಮಿತಿ ಸಂದೇಹಾದನವಗ್ರಹಃ ॥ ತಂ ದುರ್ದಹಂ ದುರ್ವಧಂ ವಾ ಯಜ್ಞಂ ಯಷ್ಟವ್ಯಂ ತಂ ಸೋಮಂ ವಿಶ್ವಾಚ್ಯಾ ಸರ್ವಾನ್ಯಾನಂಚಿತ್ಯಾ ಧಿಯಾ ಬುದ್ಧ್ಯಾದ್ರಿಭಿರ್ಗ್ರಾವಭಿರಭಿ ಹಿನ್ವಂತಿ । ಅಭಿಪ್ರೇರಯಂತಿ । ಅಭಿಷುಣ್ವಂತೀತಿ ಯಾವತ್ ॥

॥ ಪ್ರತಿಪದಾರ್ಥ ॥

ನರಃ—ಕರ್ಮನೇತೃಗಳಾದ ಋತ್ವಿಕ್ಕುಗಳು । **ದುರೋಷಂ**—ಅಹಿಂಸಿತನೂ । **ಯಜ್ಞಂ**—ಪೂಜಾರ್ಹನೂ ಆದ । **ತಂ ಸೋಮಂ**—ಆದೇ ಸೋಮನನ್ನು । **ವಿಶ್ವಾಚ್ಯಾ**—ಸರ್ವತ್ರ ಪ್ರಸರಿಸುವ । **ಧಿಯಾ**—ಬುದ್ಧಿಯೊಡಗೂಡಿ । **ಅದ್ರಿಭಿಃ**—ಹಿಂಡುವ ಕಲ್ಲುಗಳಿಂದ । **ಅಭಿ ಹಿನ್ವಂತಿ**—ಜಜ್ಜಿ ಹಿಂಡುತ್ತಾರೆ.

॥ ಭಾವಾರ್ಥ ॥

ಕರ್ಮನೇತೃಗಳಾದ ಋತ್ವಿಕ್ಕುಗಳು ಅಹಿಂಸಿತನೂ, ಪೂಜಾರ್ಹನೂ ಆದ ಸೋಮನನ್ನು ಸರ್ವತ್ರ ಪ್ರಸರಿಸುವ ಬುದ್ಧಿಯೊಡಗೂಡಿ ಹಿಂಡುವ ಕಲ್ಲುಗಳಿಂದ ಜಜ್ಜಿ ಹಿಂಡುತ್ತಾರೆ.

English Translation

Him, the Soma, unassailable, adorable, the priests, with all comprehending intelligence, express with the stones.

॥ ಸಂಹಿತಾಪಾಠಃ ॥

ಸುತಾಸೋ ಮಧುಮತ್ತಮಾಃ ಸೋಮಾ ಇಂದ್ರಾಯ ಮಂದಿನಃ।
ಪವಿತ್ರವಂತೋ ಅಕ್ಷರನ್ದೇವಾನ್ಗಚ್ಛಂತು ವೋ ಮದಾಃ ॥ ೪ ॥

॥ ಪದಪಾಠಃ ॥

ಸುತಾಸಃ । ಮಧುಮತ್ತಮಾಃ । ಸೋಮಾಃ । ಇಂದ್ರಾಯ । ಮಂದಿನಃ ।
ಪವಿತ್ರವಂತಃ । ಅಕ್ಷರನ್ । ದೇವಾನ್ । ಗಚ್ಛಂತು । ವಃ । ಮದಾಃ ॥ ೪ ॥

॥ ಸಾಯಣಭಾಷ್ಯಂ ॥

ಪೃಷ್ಠ್ಯಸ್ಯ ಷಷ್ಠೇಽಹನಿ ಬ್ರಾಹ್ಮಣಾಚ್ಛಂಸಿಶಸ್ತ್ರೇ ಸುತಾಸ ಇತಿ ತಿಸ್ರಃ । ಸೌತ್ರಿತಂ ಚ । ದಧಿಕ್ರಾವ್ಣೋಽಕಾರಿಷಮಿತ್ಯನುಷ್ಟುಪ್ ಸುತಾಸೋ ಮಧುಮತ್ತಮಾ ಇತಿ ಚ ತಿಸ್ರಃ । ಅ. ೮-೩ । ಇತಿ ॥

ಮಧುಮತ್ತಮಾ ಅತಿಶಯೇನ ಮಾಧುರ್ಯೋಪೇತಾಃ ಅತ ಏವ ಮಂದಿನೋ ಮದಕರಾಃ ಸುತಾಸೋಽಭಿಷುತಾಃ ಸೋಮಾಃ ಪವಿತ್ರವಂತಃ ಪವಿತ್ರೇ ವರ್ತಮಾನಾಃ ಸಂತ ಇಂದ್ರಾಯೇಂದ್ರಾರ್ಥಮಕ್ಷರನ್ । ಪಾತ್ರೇಷು ಕ್ಷರಂತಿ । ಅಥ ಪ್ರತ್ಯಕ್ಷಕೃತಃ । ವೋ ಯುಷ್ಮಾಕಂ ಮದಾ ಮದಹೇತವೋ ರಸಾ ದೇವಾನಿಂದ್ರಾದೀನ್ಗಚ್ಛಂತು ॥

॥ ಪ್ರತಿಪದಾರ್ಥ ॥

ಮಧುಮತ್ತಮಾಃ--ಅತ್ಯಂತ ಮಾಧುರ್ಯದಿಂದ ಕೂಡಿದವೂ । **ಮಂದಿನಃ**—ಹರ್ಷಕಾರಕಗಳೂ । **ಸುತಾಸಃ**—ಹಿಂಡಲ್ಪಟ್ಟಸ್ಸೂ ಆದ । **ಸೋಮಾಃ**—ಸೋಮರಸಗಳು । **ಪವಿತ್ರವಂತಃ**—ದಶಾಪವಿತ್ರದಲ್ಲಿದ್ದು । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಅಕ್ಷರನ್**--ಸ್ರವಿಸುತ್ತವೆ (ಎಲ್ಲಿ ಸೋಮರಸಗಳೋ) । **ವಃ**—ನಿಮ್ಮ । **ಮದಾಃ**—ಹರ್ಷಕಾರಕವಾದ ರಸಗಳು । **ದೇವಾನ್**—ದೇವತೆಗಳಲ್ಲಿಗೆ । **ಗಚ್ಛಂತು**—ಪ್ರವಹಿಸಿ ಹೋಗಲಿ.

॥ ಭಾವಾರ್ಥ ॥

ಅತ್ಯಂತ ಮಾಧುರ್ಯದಿಂದ ಕೂಡಿದವೂ ಹರ್ಷಕಾರಕಗಳೂ ಹಿಂಡಲ್ಪಟ್ಟಸ್ಸೂ ಆದ ಸೋಮರಸಗಳು ದಶಾಪವಿತ್ರದಲ್ಲಿದ್ದು ಇಂದ್ರನ ಪಾನಾರ್ಥವಾಗಿ ಸ್ರವಿಸುತ್ತವೆ. ಹರ್ಷಕಾರಕಗಳಾದ ಎಲ್ಲಿ ಸೋಮರಸಗಳೋ, ನೀವು ದೇವತೆಗಳಿಗೆ ಅಭಿಮುಖವಾಗಿ ಪ್ರವಹಿಸಿರಿ.

English Translation

The sweet-flavoured exhilarating Soma juices effused (and) filtered flow for Indra; you exhilarating (juices), proceed to the gods.

॥ ವಿಶೇಷವಿಷಯಗಳು ॥

ಪ್ರಷ್ಟಿ ಎಂಬ ಯಾಗದ ಆರನೆಯ ದಿನದ ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜನು ಪಠಿಸುವ ಶಸ್ತ್ರ ಮಂತ್ರಗಳಿಗಾಗಿ ಸುತಾಸಃ ಎಂದು ಪ್ರಾರಂಭವಾಗುವ ಈ ಸೂಕ್ತದ (೪-೬) ಮೂರು ಋಕ್ಕುಗಳನ್ನು ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ- -ದಧಿಕ್ರಾವ್ಣೋಽಕಾರಿಷಮಿತ್ಯನುಷ್ಟುಪ್ ಸುತಾಸೋ ಮಧುಮತ್ತಮಾ ಇತಿ ಚ ತಿಸ್ರಃ ಎಂಬ ಸೂತ್ರದಿಂದ (೪ ೨೨) ವಿಸ್ತರವಾಗಿರುವದು

॥ ಸಂಹಿತಾಪಾಠ ॥

ಇಂದುರಿಂದ್ರಾಯ ಪವತ ಇತಿ ದೇವಾಸೋ ಅಬ್ರುವನ ।
ವಾಚಸ್ಪತಿರ್ಮಖಸ್ಪತೇ ವಿಷ್ಣೋ ರರಾಟ ಓಜಸಾ ॥ ೫ ॥

ಪದ ॥

ಇಂದುಃ । ಇಂದ್ರಾಯ । ಪವತೇ । ಇತಿ । ದೇವಾಸಃ । ಅಬ್ರುವನ್ ।
ವಾಚಃ । ಪತಿಃ । ಮಖಸ್ಪತೇ । ವಿಷ್ಣೋ । ರರಾಟ । ಓಜಸಾ ॥

ಸಾಯಣಭಾಷ್ಯ ॥

ಇಂದುಃ ಸೋಮಃ ಇಂದ್ರಾಯೇಂದ್ರಾರ್ಥಂ ಪವತೇ ಕಲಶೇ ಕ್ಷರತೀತಿ ದೇವಾಸ ಸ್ತುತಿಕಾರಿಣ ಸ್ತೋತಾರೋಽಬ್ರುವನ್ । ವದಂತಿ । ಯದಾ ಸ್ತೋತಾರ ಏವಂ ವದಂತಿ ತದಾನೀಂ ವಾಚ ಸ್ತುತೇಃ ಪತಿಃ ಪಾಲಯಿತಾ । ಯದ್ವಾ । ಶಬ್ದ ಸ್ಯಾನುತ್ಕಂಠಂ ಶಬ್ದಯಮಾನ ಇತ್ಯರ್ಥಃ । ತಾದೃಶಃ ಸೋಮೋ ಮಖಸ್ಯತೇ । ಸ್ತುತಿಭಿಃ ಪೂಜಾಮಿಚ್ಛತಿ । ಲಾಲಸಾಯಾಂ ಸುಗಾಗಮಃ । ತಾದೃಶಃ ಓಜಸಾ ಬಲೇನ ವಿಷ್ಣೋಃ ಸರ್ವಸ್ಯೇಶಾನಃ ಪ್ರಭುಃ ॥

॥ ಪ್ರತಿಪದಾರ್ಥ ॥

ಇಂದುಃ—ಸೋಮದೇವನು । ಇಂದ್ರಾಯ—ಇಂದ್ರನ ಪ್ರಸಾರ್ಥವಾಗಿ । ಪವತೇ—ಸ್ರವಿಸುತ್ತಾನೆ । ಇತಿ—ಹೀಗೆಂದು । ದೇವಾಸಃ—ಸ್ತುತಿಕರ್ತರು । ಅಬ್ರುವನ್—ಪ್ರಾರ್ಥಿಸುತ್ತಾರೆ । ಓಜಸಾ—ಸ್ವಪ್ರಭಾವದಿಂದ । ವಿಷ್ಣೋಃ—ಸಕಲ ಜಗತ್ತಿಗೂ । ಈಶಾನಃ—ಪತಿಯೂ । ವಾಚಃ—ಸ್ತುತಿಗೆ । ಪತಿ—ಪಾಲಕನಾದ ಆ ಸೋಮದೇವನು । ಮಖಸ್ಯತೇ—ನಮ್ಮ ಸ್ತುತಿಯನ್ನು ಇಚ್ಛಿಸುತ್ತಾನೆ

॥ ಭಾವಾರ್ಥ ॥

' ಸೋಮದೇವನು ಇಂದ್ರನ ಪ್ರಾಪ್ತಾರ್ಥವಾಗಿ ಪ್ರವಹಿಸುತ್ತಾನೆ " ಎಂಬುದಾಗಿ ಸ್ತುತಿಕರ್ತರು ಶ್ಲಾಘಿಸುತ್ತಾರೆ. ಸ್ವಪ್ರಭಾವದಿಂದ ಸಕಲ ಜಗತ್ತಿಗೂ ಒಡೆಯನೂ, ಸ್ತುತಿಗಳಿಗೆಲ್ಲ ಪಾಲಕನೂ ಆದ ಸೋಮದೇವನು ನಮ್ಮ ಪೂಜೆಯನ್ನು ಇಚ್ಛಿಸುತ್ತಾನೆ.

English Translation

The devout (worshippers) say "Indu flows forth for Indra" the lord of speech (Soma) sovereign of all by his might desires (our) worship

॥ ಪದಪಾಠ ॥

ಸಹಸ್ರಧಾರಃ ಪವತೇ ಸಮುದ್ರ್ಯೋ ವಾಚೀಮಾಂಖಿಯಃ ।
ಸೋಮಃ ಪತೀ ರಯೀಣಾಂ ಸಖೇಂದ್ರಸ್ಯ ದಿವೇದಿವೇ ॥ ೬ ॥

॥ ಪದಪಾಠ ॥

ಸಹಸ್ರಧಾರಃ । ಪವತೇ । ಸಮುದ್ರ್ಯೇ । ವಾಚಂಯಮೀಂಖಿಯಃ ।
ಸೋಮಃ । ಪತಿಃ । ರಯೀಣಾಂ । ಸಖಾ । ಇಂದ್ರಸ್ಯ । ದಿವೇದಿವೇ । ೬ ।

॥ ಸಾಯಣಭಾಷ್ಯಂ ॥

ಸಹಸ್ರಧಾರೋ ಬಹುವಿಧಧಾರೋಪೇತಃ ಸೋಮಃ ಪವತೇ । ಕ್ಷರತಿ । ಕೇಭ್ಯಃ । ಸಮುದ್ರ್ಯಃ । ಯಸ್ಮಾತ್ಸಮುದ್ರ್ಯಃ ಪ್ರಪಂತಿ ರಸಾಃ । ಸರಸಾಸೀಯಂ ವಾಚಮಿಮಾಂಖಿಯಃ ॥ ಈಂಖಿತೇರ್ಣ್ಯಂತಸ್ಯ ಸುಪ್ಯುಪಪದೇ ಖಚ್ ಪ್ರತ್ಯಯಃ ॥ ಸ್ತುತೀನಾಂ ಪ್ರೇರಯಿತಾ ರಯೀಣಾಂ ಧನಾನಾಂ ಪತಿಃ ಪ್ರಭುಃ । ಯದ್ವಾ । ರಯೀಣಾಂ ಹವಿಷೋ ದಾತೃಣಾಂ ಯಜಮಾನಾನಾಂ ಪತಿಃ ಪಾಲಯಿತಾ । ದಿವೇದಿವೇ ಪ್ರತ್ಯಹಮಿಂದ್ರಸ್ಯ ಸಖಾ ಮಿತ್ರಭೂತಃ ಸೋಮಃ ಪವತೇ ॥

॥ ಕನ್ನಡಭಾಷ್ಯ ॥

ಸಹಸ್ರಧಾರಃ—ಅನೇಕ ರೂಪವಾದ ಪವಿತ್ರವನ್ನುಳ್ಳವನೂ । ಸಮುದ್ರ್ಯಃ—ರಸಗಳಿಗೆ ಆಶ್ರಯಸ್ಥಾನವೂ । ವಾಚಮಿಮಾಂಖಿಯಃ—ಸ್ತೋತ್ರಗಳಿಗೆ ಪ್ರೇರಕನೂ । ರಯೀಣಾಂ—ಧನಗಳಿಗೆ । ಪತಿಃ—ಪ್ರಭುವೂ । ಇಂದ್ರಸ್ಯ—ಇಂದ್ರನಿಗೆ । ಸಖಾ—ಮಿತ್ರಭೂತನೂ ಆದ । ಸೋಮಃ—ಸೋಮದೇವನು । ದಿವೇದಿವೇ—ಪ್ರತಿದಿನವೂ । ಪವತೇ—ಪ್ರವಹಿಸುತ್ತಾನೆ.

॥ ತಾತ್ಪರ್ಯ ॥

ಅನೇಕರೂಪವಾದ ಪ್ರವಾಹಗಳುಳ್ಳವನೂ, ರಸಗಳಿಗೆ ಆಶ್ರಯಸ್ಥಾನವೂ, ಸ್ತೋತ್ರಗಳಿಗೆ ಪ್ರೇರಕನೂ, ಧನಗಳಿಗೆ ಪ್ರಭುವೂ, ಇಂದ್ರನಿಗೆ ಮಿತ್ರಭೂತನೂ ಆದ ಸೋಮದೇವನು ಪ್ರತಿದಿನವೂ ಪ್ರವಹಿಸುತ್ತಾನೆ.

English Translation

The thousand streamed ocean, Soma the stimulator of praise, the lord of riches the friend of Indra flows onward by day

॥ ಸಂಹಿತಾ ॥

ಪವಮಾನಃ ಸೋಽವಿಚರ್ಷಣಿಃ ಸೋಮಃ ಪುನಾನೋ ಅರ್ಷತಿ ।
ಪತವಿರ್ವಿಶ್ವಸ್ಯ ಭೂಮನೋ ವ್ಯಾಖ್ಯದ್ರೋದಸೀ ಉಭೇ ॥ ೭ ॥

॥ ಪದಪಾಠಃ ॥

ಪವಮಾನಃ । ಸಃ । ಅವಿಚರ್ಷಣಿಃ । ಸೋಮಃ । ಪುನಾನಃ । ಅರ್ಷತಿ ।
ಪತಿಃ । ವಿಶ್ವಸ್ಯ । ಭೂಮನಃ । ವಿ । ಅಖ್ಯತ್ । ರೋದಸೀ ಇತಿ । ಉಭೇ ಇತಿ । ೭ ।

॥ ಭಾಷ್ಯಂ ॥

ಪೂಷಾ ಪ್ರೇರಕಃ ಸರ್ವೇಷಾಂ ಭಗೋ ಭಜನೀಯೋ ಯಜಮಾನಲೋಕಸ್ತದುಭಯಮಿಂದವಃ ಸೋಮಾಃ ಪುನಾನಾಃ ಪವಿತ್ರೇಣ ಸ್ರುವ್ಯಮಾಣಾಃ ಸನ್ನರ್ಷಂತಿ । ದಿವಶ್ಚಮೂಷ್ಣಿ ಧಿಷ್ಣಿಯೇ । ತದಾ ವಿಶ್ವಸ್ಯ ಸರ್ವಸ್ಯ ಭೂಮನೋ ಭೂತಜಾತಸ್ಯ ಪತಿಃ ಪಾಲಯಿತಾ ಸೋಮಃ ಉಭೇ ದ್ಯಾವಾಪೃಥಿವ್ಯೌ ವ್ಯಖ್ಯತ್ । ಸ್ವತೇಜಸಾ ವ್ಯಕಾಶಯತಿ । ಅನೇನ ಯೋಗೇನಾಯಮರ್ಥಃ ಸಂಪದ್ಯತೇ ।

॥ ಪ್ರತಿಪದಾರ್ಥಃ ॥

ಪೂಷಾ—ಸಕಲರಿಗೂ ಪ್ರೇರಕನೂ । ಭಗಃ—ಪೂಜ್ಯನೂ । ರಯಿಃ—ಧನವಾತ್ಸಲ್ಯವೂ ಆದ । ಅಯಂ ಸೋಮಃ—ಈ ಸೋಮವೆಂಬ ದೇವನು । ಪುನಾನಃ—ದಶಾಪವಿತ್ರದಲ್ಲಿ ಬಿದ್ದಿಗೊಂಡಿಸಲ್ಪಟ್ಟು । ಅರ್ಷತಿ—ಶಬ್ದಯುಕ್ತನಾಗಿ ಹರಿಯುತ್ತಾನೆ । ವಿಶ್ವಸ್ಯ—ಸಕಲವಾದ । ಭೂಮನಃ—ಭೂತಜಾತಕ್ಕೂ । ಪತಿಃ—ಪಾಲಕನಾದ ದೇವನು । ಉಭೇ ರೋದಸೀ—ದ್ಯಾವಾಪೃಥಿವಿಗಳೆರಡನ್ನೂ । ವ್ಯಖ್ಯತ್ ಪ್ರಕಾಶಿಸುವಂತೆ ಮಾಡುತ್ತಾನೆ ।

॥ ಭಾವಾರ್ಥ ॥

ಸಕಲರಿಗೂ ಪ್ರೇರಕನೂ, ಪೂಜ್ಯನೂ, ಧನವಾತ್ಸಲ್ಯವೂ ಆದ ಸೋಮದೇವನು ದಶಾಪವಿತ್ರದಲ್ಲಿ ಬಿದ್ದಿಗೊಂಡಿಸಲ್ಪಟ್ಟು ಕಲಶಾಭಿಮುಖವಾಗಿ ಹರಿಯುತ್ತಾನೆ ಸಕಲ ಭೂತಜಾತಕ್ಕೂ ಪಾಲಕನಾದ ಆ ದೇವನು ದ್ಯಾವಾಪೃಥಿವಿಗಳನ್ನು ಪ್ರಕಾಶಮಾನವಾಗಿ ಮಾಡಿದ್ದಾನೆ

English Translation

This Soma being purified hastens (to the pitcher) fostering, wealth giving, to be enjoyed (by all); the lord of all beings, he has illuminated both heaven and earth.

॥ संहितापाठः ॥

समु प्रियाऽ अनूषत गावो मदाय घृष्वयः ।
सोमासः कृण्वते पथः पवमानास इन्दवः ॥ ८ ॥

॥ पदपाठः ॥

सं । ऊं इति । प्रियासः । अनूषत । गावः । मदाय । घृष्वयः ।
सोमासः । कृण्वते । पथः । पवमानासः । इन्दवः ॥ ८ ॥

॥ सायणभाष्यम् ॥

प्रियासः प्रियतराः घृष्वयः घृष्वयो दीप्तयः । यद्वा । आहुः घृष्वयो घृष्वतः स्निग्धा इति । आहुः पुरस्तात्स्निग्धा इति । गावः स्तुतिलक्षणाः वाचः । सोमस्य मदार्थं समनूषत । संगच्छन्ते । ऊं इति प्रसिद्धौ । यद्वा । गावो दीप्तयः सोमस्य मदाय हर्षाय भवन्ति । किंच पवमानासः स्रूयमाणा इन्दवो दीप्तयः सोमासः सोमाः पथो मार्गान्कृण्वते । क्षरणार्थं गच्छन्ति ।

॥ पदार्थः ॥

प्रियासः—प्रीतिकारकाः । घृष्वयः—प्रकाशमानत्वादिगुणयुक्ताः । गावः—स्तुतिगणाः । समनूषत—सोमानन्दं प्रकाशयन्ति । पवमानासः—शुद्धियुक्ताः । इन्दवः—प्रवहिसोमरसाः । सोमासः—सोमरसगणाः । पथः—तस्य प्रवाहस्य मार्गगणान् । कृण्वते—कुर्वन्ति ।

॥ भावार्थः ॥

प्रीतिकारकैः प्रकाशमानादिगुणयुक्तैः स्तुतिवाक्यैर्गणाः सोमानन्दं प्रकाशयन्ति । शुद्धियुक्ताः प्रवहिसोमरसाः तस्य प्रवाहस्य मार्गगणान् कुर्वन्ति ।

English Translation

The affectionate emulous cows celebrate (Soma) for his exhilaration, the brilliant filtered (Soma) juices make paths (for themselves to flow)

॥ ಸಂಹಿತಾಪಾಠಃ ॥

ಯು ಪಿಜಿಷ್ಮಸ್ತವೂ ಭರ ಪವಮಾನ ಶ್ರವಾಯ್ಯಂ ।
ಯುಃ ಪಂಚ ಚರ್ಷಣೀರಭಿ ರಯಿಂ ಯೇನ ವನಾಮಹೈ ॥ ೯ ॥

॥ ಪದಪಾಠಃ ॥

ಯುಃ । ಪಿಜಿಷ್ಮಃ । ತಂ । ಆ । ಭರ । ಪವಮಾನ । ಶ್ರವಾಯ್ಯಂ ।
ಯುಃ । ಪಂಚ । ಚರ್ಷಣೀಃ । ಅಭಿ । ರಯಿಂ । ಯೇನ । ವನಾಮಹೈ ॥ ೯ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಪೂಯಮಾನ ಸೋಮ ಪಿಜಿಷ್ಮ ಪಿಜಸ್ತಿತರೋ ಯಸ್ತ್ವದೀಯೋ ರಸೋಽಸ್ತಿ ತಂ ಶ್ರವಾಯ್ಯಂ ಶ್ರವಣೀಯಂ ರಸಮಾ ಭರ । ಅಸ್ಮಭ್ಯಮಾಹರ । ಕಂ ಚ ಯೋ ರಸಃ ಪಂಚ ಚರ್ಷಣೀ ಪಂಚ ಜನಾನ್ನಿಷಾದಪಂಚಮಾಂಶ್ಚತುರೋ ವರ್ಣಾನಭಿ ತಿಷ್ಠತಿ । ಅಪಿ ಚ ಯೇನ ರಸೇನ ವಯಂ ರಯಿಂ ಧನಂ ಚ ವನಾಮಹೈ ಸಂಭಜಾಮಹೈ । ಯದ್ವಾ । ಯೇನ ತ್ವಾಂ ರಯಿಂ ಯಾಚಾಮಸ್ತೇ ತಮಾ ಭರ ।

॥ ಪ್ರತಿಪದಾರ್ಥ ॥

ಪವಮಾನ—ಶುದ್ಧಿಕಾರಕನಾದ ಎಲೈ ಸೋಮದೇವನೇ । **ಯುಃ**—ಯಾವ ನಿನ್ನ ರಸವು । **ಪಿಜಿಷ್ಮಃ**—ಅತ್ಯಂತ ವೀರ್ಯವತ್ತಾಗಿದೆಯೋ । **ಯುಃ**—ಯಾವ ರಸವು । **ಪಂಚ ಚರ್ಷಣೀಃ**—ನಿಷಾದಾದಿ ಪಂಚಜನರನ್ನು । **ಅಭಿ**—ಧರಿಸುವುದೋ । **ಯೇನ**—ಯಾವ ರಸದ ಪ್ರಭಾವದಿಂದ । **ರಯಿಂ**—ಧನವನ್ನು । **ವನಾಮಹೈ**—ನಾವು ಹೊಂದುವೆವೋ । **ತಂ**—ಅಂತಹ । **ಶ್ರವಾಯ್ಯಂ**—ಪ್ರಸಿದ್ಧವಾದ ರಸವನ್ನು । **ಆ ಭರ**—ನಮಗೆ ಒದಗಿಸು.

॥ ಭಾವಾರ್ಥ ॥

ಶುದ್ಧಿಕಾರಕನಾದ ಎಲೈ ಸೋಮದೇವನೇ, ಯಾವ ನಿನ್ನ ರಸವು ಅತ್ಯಂತ ವೀರ್ಯವತ್ತಾಗಿದೆಯೋ, ಯಾವ ನಿನ್ನ ರಸವು ನಿಷಾದಾದಿ ಪಂಚಜನರನ್ನೂ ಧರಿಸುವುದೋ, ಯಾವ ರಸದ ಪ್ರಭಾವದಿಂದ ನಾವು ಧನವನ್ನು ಹೊಂದುವೆವೋ ಅಂತಹ ಪ್ರಸಿದ್ಧವಾದ ರಸವನ್ನು ನಮಗೆ ಒದಗಿಸು.

English Translation

Bring to us, filtered (Soma), that celebrated (liquor) which is most potent, which (waits) upon the five orders of beings and by which we may obtain riches.

॥ ಸಂಹಿತಾಪಾಠಃ ॥

ಸೋ॒ಮಾಃ ಪ॑ವಂತ ಇಂ॒ದವೋ॒ಽಸ್ಮಭ್ಯಂ॑ ಗಾ॒ತುವಿ॑ತ್ತಮಾಃ ।
ಮಿ॒ತ್ರಾಃ ಸು॒ವಾನಾ॑ ಅರೇ॒ಪಸ॑ಃ ಸ್ವಾ॒ಧ್ಯಃ॑ ಸ್ವ॒ರ್ವಿದ॑ಃ ॥ ೧೦ ॥

॥ ಪದಪಾಠಃ ॥

ಸೋ॒ಮಾಃ । ಪ॒ವಂ॒ತೇ॒ । ಇಂ॒ದವ॑ಃ । ಅ॒ಸ್ಮಭ್ಯಂ॑ । ಗಾ॒ತುವಿ॑ತ್ತಮಾಃ ।
ಮಿ॒ತ್ರಾಃ । ಸು॒ವಾನಾಃ । ಅ॒ರೇ॒ಪಸ॑ಃ । ಸು॒ಽಆ॒ಧ್ಯಃ॑ । ಸ್ವ॒ಽರ್ವಿದ॑ಃ ॥ ೧೦ ॥

॥ ಸಾಯಣಭಾಷ್ಯಂ ॥

ಗಾತುವಿತ್ತಮಾ ಅತಿಶಯೇನ ಮಾರ್ಗಸ್ಯ ಲಂಭಕಾ ಇಂದವೋ ದೀಪ್ತಾಃ ಸೋಮಾಃ ಪವಂತೇಽಸ್ಮಭ್ಯಮಸ್ಮದರ್ಥಂ ಕ್ಷರಂತ್ಯಾಗಚ್ಛಂತಿ ವಾ । ಕೀದೃಶಾಃ । ಮಿತ್ರಾ ದೇವಾನಾಂ ಸಖಿಭೂತಾಃ ಸುವಾನಾ ಅಭಿಷೂಯಮಾಣಾ ಅರೇಪಸಃ ಪಾಪರಹಿತಾಃ ಅತ ಏವ ಸ್ವಾಧ್ಯಃ ಶೋಭನಧ್ಯಾನಾಃ ಸ್ವರ್ವಿದಃ ಸರ್ವಜ್ಞಾಃ ಸರ್ವಪ್ರಾಪಕಾ ವಾ ॥

॥ ಪ್ರತಿಪದಾರ್ಥ ॥

ಗಾತುವಿತ್ತಮಾಃ—ಉತ್ತಮವಾದ ಮಾರ್ಗಗಳನ್ನು ಅರಿತಿರುವವು । **ಇಂದವಃ**—ಪ್ರಕಾಶಮಾನವಾದವು । **ಮಿತ್ರಾಃ**—ದೇವತೆಗಳಿಗೆ ಸಖಭೂತವು । **ಸುವಾನಾಃ**—ಹಿಂಡಲ್ಪಡತಕ್ಕವು । **ಅರೇಪಸಃ**—ಪಾಪರಹಿತವು । **ಸ್ವಾಧ್ಯಃ**—ಉತ್ತಮವಾದ ಧ್ಯಾನವುಳ್ಳವು । **ಸ್ವರ್ವಿದಃ**—ಸ್ವರ್ಗಪ್ರಾಪಕವು ಆದ । **ಸೋಮಾಃ**—ಸೋಮರಸಗಳು । **ಅಸ್ಮಭ್ಯಂ**—ನಮಗಾಗಿ । **ಪವಂತೇ**—ಸ್ರವಿಸುತ್ತವೆ.

॥ ಭಾವಾರ್ಥ ॥

ಉತ್ತಮವಾದ ಮಾರ್ಗಗಳನ್ನು ಅರಿತಿರುವವು, ಪ್ರಕಾಶಮಾನವಾದವು, ದೇವತೆಗಳಿಗೆ ಸಖಭೂತವು, ಹಿಂಡಲ್ಪಡತಕ್ಕವು, ಪಾಪರಹಿತವು, ಉತ್ತಮವಾದ ಧ್ಯಾನವುಳ್ಳವು, ಸ್ವರ್ಗಪ್ರಾಪಕವು ಆದ ಸೋಮರಸಗಳು ನಮಗಾಗಿ ಪ್ರವಹಿಸುತ್ತವೆ

English Translation

The brilliant Soma juices flow for us knowing the right path, friendly (to the gods), effused, sinless, contemplative, all knowing.

॥ ಸಂಹಿತಾ ಪಾಠಃ ॥

ಸುಷ್ವಾಣಾಸೋ ವ್ಯದ್ರಿಭಿಶ್ಚಿತಾನಾ ಗೋರಧಿ ತ್ವಚಿ ।
ಇಷಮಸ್ಮಭ್ಯಮಭಿತಃ ಸಮಸ್ವರನ್ವಸುವಿದಃ ॥ ೧೧ ॥

॥ ಪದಪಾಠಃ ॥

ಸುಸ್ವಾನಾಸಃ । ವಿ । ಅದ್ರಿಭಿಃ । ಚಿತಾನಾಃ । ಗೋಃ । ಅಧಿ । ತ್ವಚಿ ।
ಇಷಂ । ಅಸ್ಮಭ್ಯಂ । ಅಭಿತಃ । ಸಂ । ಅಸ್ವರನ್ । ವಸುವಿದಃ ॥ ೧೧ ॥

॥ ಸಾಯಣಭಾಷ್ಯಂ ॥

ಗೋರನಡುಹೋಽಧಿ ತ್ವಚ್ಯಧಿಸವಣಚರ್ಮಣಿ ಚಿತಾನಾ ಜ್ಞಾಯಮಾನಾ ಅದ್ರಿಭಿರ್ಗ್ರಾ ವ್ಯವಿಧಂ ಸುಷ್ವಾಣಾಸಃ ಸೂಯಮಾನಾ ವಸುವಿದೋ ವಸುನೋ ಲಂಭಕಾ ಏತೇ ಸೋಮಾ ಅಸ್ಮ್ಯ ಮಿಷಮನ್ನಮಭಿತಃ ಸಮಸ್ವರನ್ । ಸಮ್ಯಕ್ ಶಬ್ದಯಂತಿ । ಪ್ರಯಚ್ಛಂತೀತಿ ಯಾವತ್ ॥

॥ ಪ್ರತಿಪದಾರ್ಥ ॥

ಗೋಃ—ಗೋವಿನ । **ಅಧಿ ತ್ವಚಿ**—ಚರ್ಮದ ಮೇಲಿರುವಾಗ । **ವಿ ಚಿತಾನಾಃ**—ಚೆನ್ನಾಗಿ ತಿಳಿಯಲ್ಪಡುವುದೂ । **ಅದ್ರಿಭಿಃ**—ಹಿಂಡುವ ಕಲ್ಲುಗಳಿಂದ । **ಸುಷ್ವಾಣಾಸಃ**—ಹಿಂಡಲ್ಪಡುವುದೂ । **ವಸುವಿದಃ**—ಧನವನ್ನು ಹೊಂದಿಸುವುದೂ ಆದ ಸೋಮರಸಗಳು । **ಅಸ್ಮಭ್ಯಂ**—ನಮಗೆ । **ಇಷಂ**—ಅನ್ನವನ್ನು । **ಅಭಿತಃ**—ಸರ್ವತ್ರ । **ಸಮಸ್ವರನ್**—ಒದಗಿಸುತ್ತವೆ.

॥ ಭಾವಾರ್ಥ ॥

ಗೋವಿನ ಚರ್ಮದ ಮೇಲಿರುವಾಗ ಚೆನ್ನಾಗಿ ತಿಳಿಯಲ್ಪಡುವುದೂ ಹಿಂಡುವ ಕಲ್ಲುಗಳಿಂದ ಹಿಂಡಲ್ಪಡುವುದೂ, ಧನವನ್ನು ಹೊಂದಿಸುವುದೂ ಆದ ಸೋಮರಸಗಳು ನಮಗೆ ಸರ್ವತ್ರ ಅನ್ನವನ್ನು ಒದಗಿಸುತ್ತವೆ

English Translation

Effused by the stones, recognized upon the cowhide, acquirers of wealth they bestow food upon us from all sides

॥ ಸಂಹಿತಾಪಾಠಃ ।

ಏತೇ ಪೂತಾ ವಿಪಶ್ಚಿತಃ ಸೋಮಾಸೋ ದಧ್ನಾ ಶಿರಃ ।
ಸೂರ್ಯಾಸೋ ನ ದರ್ಶತಾಸೋ ಜಿಗತ್ನವೋ ಧ್ರುವಾ ಘೃತೇ ॥

ಪದಪಾಠಃ

ಏತೇ । ಪೂತಾಃ । ವಿಪಶ್ಚಿತಃ । ಸೋಮಾಸಃ । ದಧ್ನಾ । ಆಶಿರ ।
ಸೂರ್ಯಾಸಃ । ನ । ದರ್ಶತಾಸಃ । ಜಿಗತ್ನವಃ । ಧ್ರುವಾಃ । ಘೃತೇ ॥ ೧೦ ॥

। ಸಾಯಣಭಾಷ್ಯಂ ।

ಪೂತಾಃ ಸವಿತ್ರೇಣ ಪರಿಪೂತಾ ವಿಪಶ್ಚಿತೋ ಮೇಧಾವಿನೋ ದಧ್ನಾ ದಧ್ನಾಮಿಶ್ರೇಣ ಶಿರೋ ಘೃತೇ ಸತಿ ಶೀತಲಂ ಯಥಾ ಭವತಿ ತಥಾ ಉದಕೇ ಜಿಗತ್ನವೋ ಗಮನಶೀಲಾ ಧ್ರುವಾಸ್ತತ್ರ ಸ್ಥೈರ್ಯೇಣ ವರ್ತಮಾನಾ ಏತೇ ಸೋಮಾಸಃ ಸೋಮಪಾ. ಸೂರ್ಯಾಸೋ ನ ಸೂರ್ಯಾ ಇವ ದರ್ಶತಾಸಃ ಪಾತ್ರೇಷು ಸರ್ವೈರ್ದರ್ಶನೀಯಾ ಭವಂತಿ ।

। ಪ್ರತಿಪದಾರ್ಥ ।

ಪೂತಾಃ—ದಶಾಪವಿತ್ರವನ್ನು ಬಡಿಸಲಾದವು । ವಿಪಶ್ಚಿತಃ—ಮೇಧಾವಿಗಳು । ದಧ್ನಾ ಶಿರ—ಮೊಸರಿನಿಂದ ಮಿಶ್ರವಾದವು । ಘೃತೇ—ತಣ್ಣಗಿರಲು । ಜಿಗತ್ನವಃ—ಸಂಚರಿಸುವುವು । ಧ್ರುವಾಃ—ಸ್ಥಿರವಾಗಿರುವ । ಏತೇ ಸೋಮಾಸಃ—ಈ ಸೋಮರಸಗಳು । ಸೂರ್ಯಾಸೋ ನ—ಆದಿತ್ಯರಂತೆ । ದರ್ಶತಾಸಃ—ಪ್ರಕಾಶಗೊಂಡವರಾಗುತ್ತವೆ.

। ಭಾವಾರ್ಥ ।

ದಶಾಪವಿತ್ರದಲ್ಲಿ ಬಡಿಸಲ್ಪಟ್ಟವು, ಮೇಧಾವಿಗಳು, ಮೊಸರಿನಿಂದ ಮಿಶ್ರವಾದವು, ತಣ್ಣಗಿರುವಾಗ ಸಂಚರಿಸುವ ಸ್ಥಿರವಾದ ಈ ಸೋಮರಸಗಳು ಆದಿತ್ಯರಂತೆ ಪ್ರಕಾಶಿಸುತ್ತಾ ಎಲ್ಲರಿಗೂ ಗೋಚರವಾಗುತ್ತವೆ.

English Translation

These Putured Soma juices, intelligent, mixed with curds, swift-moving firm in the water (are) brilliant as suns.

। ಸಂಹಿತಾಪಾಠಃ ।

ಪ್ರ ಸುನ್ವಾನಸ್ಯಾಂಧಸೋ ಮರ್ತೋ ನ ವೃತ ತದ್ವಚಃ ।
ಅಪ ಶ್ವಾನಮರಾಧಸಂ ಹತಾ ಮಖಂ ನ ಭೃಗವಃ ॥ ೧೧ ॥

॥ ಪದಪಾಠಃ ॥

ಪ್ರ । ಸುನ್ವಾನಸ್ಯ । ಅಂಧಸಃ । ಮರ್ತಃ । ನ । ವೃತ । ತತ್ । ಶಚೀಃ ।
ಅಪ । ತ್ವಾಂ । ಅರಾಧಸಂ । ಜನಃ । ಸುಮ್ನಂ । ನ । ಭೃಗವಃ ॥ ೧೩ ॥

॥ ಸಾಯಣಭಾಷ್ಯಂ ॥

ಸುನ್ವಾನಸ್ಯಾಭಿಷೂಯಮಾಣಸ್ಯಾಂಧಸೋಽನನೀಯಸ್ಯ ಸೋಮಸ್ಯ ತತ್ ಪ್ರಸಿದ್ಧಂ ತವ ಶಚೋ ವಚನಂ ಶೂಯತಾಂ ಮರ್ತೋ ಮಾರಯಿಷ್ಣುಃ ಕರ್ಮಫಲಸ್ಯೇತಾರೀತ್ಯಾ ನ ಸ್ಮ ವೃತ । ನ ಭಜತಾಂ । ನ ವೃಣೋತೀತಿ ಯಾವತ । ತಥಾ ಹೇ ಸ್ತೋತಾರಃ ಅರಾಧಸಂ ಸಂಸಾಧಕಕರ್ಮರಹಿತಂ ತಂ ತ್ವಾಮಪ ಹತ । ತತ್ರ ದೃಷ್ಟಾಂತಃ । ಮಖಂ ನ ಯಥಾ ಪುರಾಪರಾಪ್ತಂ ಮುನೀತನ್ನಾಮಾನಂ ಭೃಗವೋಽಪಹತವಂತಃ ತಥಾಪ ಹತೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಸುನ್ವಾನಸ್ಯ—ಹಿಂಡಲ್ಪಡುವ । ಅಂಧಸಃ—ಸೋಮರಸದ । ತತ್—ಪ್ರಸಿದ್ಧವಾದ । ಶಚೀಃ—ಪ್ರಜ್ಞೆಯನ್ನು । ಮರ್ತಃ—ಕರ್ಮಫಲಪ್ರಸ್ಥನಾದ ಮಾನವನು । ನ ಪ್ರ ವೃತ—ಬೇಡಲಿಲ್ಲ । ಭೃಗವಃ—ಭೃಗುಗಳು । ಮುಮುಂ ನ—ಹಿಂದೆ ಮುನಿಸಿಂಬುವನನ್ನು ಓಡಿಸಿದಂತೆ । ಅರಾಧಸಂ—ಕರ್ಮರಹಿತನಾದ । ತ್ವಾಮ್—ನಿನ್ನನ್ನು । ಅಪ ಹತ—ಹೊಡೆದೋಡಿಸಿರಿ.

॥ ಭಾವಾರ್ಥ ॥

ಮುಷ್ಟಿಕ್ಕಾಗಿ ಹಿಂಡಲ್ಪಡತಕ್ಕ ಸೋಮವನ್ನು ಪ್ರಶಂಸಿಸುವ ಸ್ತೋತೃನನ್ನು ಕರ್ಮಫಲಪ್ರಸ್ಥನಾದ ಮನುಷ್ಯನು ಬೇಡಬೇಕು. ಭೃಗುಗಳು ಹಿಂದೆ ಮುಮಿಸೆಂಬುವನನ್ನು ಓಡಿಸಿದಂತೆ ಕರ್ಮರಹಿತನಾದ ನಾಯುನ್ನು ಹೊಡೆದೋಡಿಸಿರಿ

English Translation

Let no mortal hear the sound of the effused Soma , drive off the dog that sacrifices not as the Bhrigus drove off Makha

॥ ಸಂಹಿತಾಪಾಠಃ ॥

ಆ ಜಾಮಿರತ್ಕೇ ಅವ್ಯತ ಭುಜೇ ನ ಪುತ್ರ ಓಣ್ಯೋಃ ।
ಸರಜ್ಜಾರೋ ನ ಯೋಷಣಾಂ ವರೋ ನ ಯೋನಿಮಾಸದಂ ॥

॥ ಪದಪಾಠಃ ॥

ಆ । ಜಾಮಿಃ । ಅತ್ಕೇ । ಅವ್ಯತ । ಭುಜೇ । ನ । ಪುತ್ರೇ । ಓಣ್ಯೋಃ ।
ಸರತ್ । ಜಾರಃ । ನ । ಯೋಷಣಾಂ । ವರಃ । ನ । ಯೋನಿಂ । ಆಸದಂ ॥ ೧೪ ॥

॥ ಸಾಯಣಭಾಷ್ಯಂ ॥

ಜಾಮಿರ್ಬಂಧುಭೂತೋ ದೇವಾನಾಂ ಸೋಮೋತ್ಯ ಆಚ್ಛಾದಕೇ ಪವಿತ್ರ ಅವ್ಯತ । ಅವ್ಯಯೋತಿ । ಸಂಬದ್ಧೋ ಭವತಿ । ತತ್ರ ದೃಷ್ಟಾಂತಃ । ಭುಜೇ ನ ಯಥೌಜ್ಯೋ ರಕ್ಷಕಯೋರ್ಮಾತಾಪಿತ್ರೋರ್ಭುಜೇ ಪುತ್ರ ಅವ್ಯಯೋತೀತಿ ತದ್ವತ್ । ತತಃ ಸೋಽಯಂ ಸೋಮೋ ಯೋನಿಂ ಸ್ವಸ್ಥಾನಭೂತಂ ಕಲಶಮಾಸದಮಾಸತ್ತುಂ ಸರತ್ । ಸರತಿ । ತತ್ರ ದೃಷ್ಟಾಂತದ್ವಯಂ । ಜಾರೋ ನ ಯಥಾ ಜಾರೋ ಯೋಷಣಾಮುಸತೀಂ ಸ್ತ್ರಿಯಂ ಪ್ರಾಪ್ತುಂ ಸರತಿ । ಯಥಾ ವಾ ವರಃ ಕನ್ಯಾಂ ಪ್ರಾಪ್ತುಂ ಗಚ್ಛತಿ ತದ್ವತ್ ॥

॥ ಪ್ರತಿಪದಾರ್ಥ ॥

ಓಜ್ಯೋಃ—ರಕ್ಷಕರಾದ ಮಾತಾಪಿತೃಗಳ । ಭುಜೇ—ಕೈಯಲ್ಲ । ಪುತ್ರಃ ನ—ಪುತ್ರನು ಸುಖವಾಗಿರುವಂತೆ । ಜಾಮಿಃ—ದೇವತೆಗಳಿಗೆ ಬಂಧುವಾದ ಸೋಮನು । ಅಚ್ಛೇ—ಆಚ್ಛಾದಕವಾದ ದಶಾಪವಿತ್ರದಲ್ಲಿ । ಅವ್ಯತ—ಆವೃತನಾಗಿದ್ದಾನೆ । ಯೋಷಣಾಂ—ಯುವತಿಯನ್ನು ಹುಡುಕಿಕೊಂಡು । ಜಾರಃ ನ—ಕಾಮುಕನು ಓಡುವಂತೆಯೂ । ವರಃ ನ—ವರನು ಕನ್ಯೆಯನ್ನು ಅರಸಿಕೊಂಡು ಹೋಗುವಂತೆಯೂ । (ಸೋಮಃ—ಸೋಮನು ದೇವನು) । ಯೋನಿಂ—ಸ್ವಸ್ಥಾನವಾದ ದ್ರೋಣಕಲಶಕ್ಕೆ । ಆಸದಂ—ಹೋಗಿ ಸೇರಲು । ಸರತ್—ಹರಿಯುತ್ತಾನೆ.

॥ ಭಾವಾರ್ಥ ॥

ರಕ್ಷಕರಾದ ಮಾತಾಪಿತೃಗಳ ಭುಜದಲ್ಲಿ ಪುತ್ರನು ಸುಖವಾಗಿರುವಂತೆ ದೇವತೆಗಳಿಗೆ ಬಂಧುವಾದ ಸೋಮನು ಆಚ್ಛಾದಕವಾದ ದಶಾಪವಿತ್ರದಲ್ಲಿ ಆವೃತನಾಗಿದ್ದಾನೆ ಯುವತಿಯನ್ನು ಹುಡುಕಿಕೊಂಡು ಕಾಮುಕನು ಹೋಗುವಂತೆಯೂ ಕನ್ಯೆಯನ್ನು ಅರಸಿಕೊಂಡು ವರನು ಹೋಗುವಂತೆಯೂ ಸೋಮದೇವನು ಸ್ವಸ್ಥಾನವಾದ ದ್ರೋಣಕಲಶಕ್ಕೆ ಹೋಗಿ ಸೇರಲು ಸ್ರವಿಸುತ್ತಾನೆ

English Translation

(Soma) the kinsman (of the gods) is enveloped in the investing filter like a child in the arms of its protecting parents ; he hastens like a gallant to a mistress, like a bridegroom (to the bride), to sit upon his station (the pitcher)

॥ ಸಂಹಿತಾಪಾಠಃ ॥

ಸ ವೀರೋ ದಕ್ಷಸಾಧನೋ ವಿ ಯಸ್ತಸ್ತಂಭ ರೋದಸೀ ।
ಹರಿಃ ಪವಿತ್ರೇ ಅವ್ಯತ ವೇಧಾ ನ ಯೋನಿಮಾಸದಂ ॥ ೧೫ ॥

॥ ಪದಪಾಠಃ ॥

ಸಃ । ವೀರಃ । ದಕ್ಷಸಾಧನಃ । ವಿ । ಯಃ । ತಸ್ತಂಭ । ರೋದಸೀ ಇತಿ ।
ಹರಿಃ । ಪವಿತ್ರೇ । ಅವ್ಯತ । ವೇಧಾಃ । ನ । ಯೋನಿಂ । ಆಽಸದಂ ॥ ೧೫ ॥

॥ ಸಾಯಣಭಾಷ್ಯಂ ॥

ದಕ್ಷಸಾಧನೋ ಬಲಸಾಧನಃ ಸ ಸೋಮೋ ವೀರಃ ಸಮರ್ಥೋ ಭವತಿ । ಯಃ ಸೋಮೋ ರೋದಸೀ ದ್ಯಾವಾಪೃಥಿವ್ಯೌ ವಿ ತಸ್ತಂಭ ಸ್ವತೇಜಸಾ ವ್ಯಸ್ತಭ್ನಾತ್ । ಅಚ್ಛಾದಯತೀತ್ಯರ್ಥಃ । ಕಂಚ ಹರಿರ್ಹರಿತವರ್ಣಃ ಸೋಮೋ ವೇಧಾ ನ ವಿಧಾತಾ ಯಜಮಾನೋ ಯಥಾ ಸ್ವಗೃಹಮಾಸೀದತಿ ತದ್ವದ್ರೋಣಿಂ ಸ್ವಸ್ಥಾನಂ ಕಲಶಮಾಸದಮಾಸತ್ತುಂ ಪವಿತ್ರೇಽವ್ಯತ । ಅವ್ಯತೇತಿ । ಸಂಬದ್ಧೋ ಭವತಿ ॥

॥ ಪ್ರತಿಪದಾರ್ಥ ॥

ಯಃ—ಯಾವ ಸೋಮನು । **ರೋದಸೀ**—ದ್ಯಾವಾಪೃಥಿವಿಗಳೆರಡನ್ನೂ । **ವಿ ತಸ್ತಂಭ**—ವಿಭಾಗಿಸಿ ಧರಿಸಿರುವನೋ । **ಯಃ**—ಯಾರು । **ದಕ್ಷಸಾಧನಃ**—ಶಕ್ತಿಸಾಧಕನೂ । **ವೀರಃ**—ಸಮರ್ಥನೂ ಆಗಿರುವನೋ । **ಹರಿಃ**—ಪಚ್ಚೆವರ್ಣವುಳ್ಳ । **ಸಃ**—ಆದೇ ಸೋಮನು । **ವೇಧಾ ನ**—ವಿಜಯಿಯಾದ ಮಾನವನು ತನ್ನ ಗೃಹದಲ್ಲಿ ಕುಳಿತುಕೊಳ್ಳುವಂತೆ । **ಯೋನಿಂ**—ಸ್ವಸ್ಥಾನವಾದ ದ್ರೋಣಕಲಶವನ್ನು । **ಆಸದಂ**—ಸೇರಿಸಿಕೊಳ್ಳುವುದಕ್ಕಾಗಿ । **ಪವಿತ್ರೇ**—ದಶಾಪವಿತ್ರದಲ್ಲಿ । **ಅವ್ಯತ**—ಸ್ಥಿತನಾಗಿದ್ದಾನೆ.

॥ ಭಾವಾರ್ಥ ॥

ದ್ಯಾವಾಪೃಥಿವಿಗಳೆರಡನ್ನೂ ವಿಭಾಗಿಸಿ ಎರಡನ್ನೂ ಧರಿಸಿರುವವನೂ ಶಕ್ತಿಸಾಧಕನೂ, ಸಮರ್ಥನೂ, ಪಚ್ಚೆವರ್ಣವುಳ್ಳವನೂ ಆದ ಸೋಮದೇವನು ವಿಜಯಿಯಾದ ಮಾನವನು ಸುಖದಿಂದ ತನ್ನ ಗೃಹದಲ್ಲಿ ಕುಳಿತುಕೊಳ್ಳುವಂತೆ ಸ್ವಸ್ಥಾನವಾದ ದ್ರೋಣಕಲಶವನ್ನು ಸೇರಿಕೊಳ್ಳುವುದಕ್ಕಾಗಿ ದಶಾಪವಿತ್ರದಲ್ಲಿ ಸ್ಥಿತನಾಗಿದ್ದಾನೆ.

English Translation

The green-tinted (Soma), the implement of strength, the hero, who has upheld heaven and earth, is enveloped in the filter like the sacrificer (in his house) to sit upon his station.

॥ ಸಂಹಿತಾಪಾಠ ॥

ಅವ್ಯೋ ವಾರೇಭಿಃ ಪವತೇ ಸೋಮೋ ಗವ್ಯೇ ಅಧಿ ತ್ವಚಿ ।
ಕನಿಕ್ರದದ್ವೃಷಾ ಹರಿರಿಂದ್ರಸ್ಯಾಭ್ಯೇತಿ ನಿಷ್ಕೃತಂ ॥ ೧೬ ॥

॥ ಪದಪಾಠ ॥

ಅವ್ಯೇ । ವಾರೇಭಿಃ । ಪವತೇ । ಸೋಮಃ । ಗವ್ಯೇ । ಅಧಿ । ತ್ವಚಿ ।
ಕನಿಕ್ರದತ್ । ವೃಷಾ । ಹರಿಃ । ಇಂದ್ರಸ್ಯ । ಅಭಿ । ಏತಿ । ನಿಃಕೃತಂ ॥ ೧೬ ॥

॥ ಸಾಯಣಭಾಷ್ಯಂ ॥

ಅಯಂ ಸೋಮೋ೨ವ್ಯೋ೨ವೇರ್ವಾರೇಭಿರ್ವಾರ್ಯೈಃ ಪವಿತ್ರೈಃ ತೇಭ್ಯಃ ಪವತೇ । ಕಲಶಂ ಪ್ರತಿ ಕ್ಷರತಿ । ಕಂಚ ಗವ್ಯ ಅಜಿಮುಹೇ೨ಧಿ ತ್ವಚಿ ಚರ್ಮಣಿ ಕನಿಕ್ರದಚ್ಛಬ್ದಾಯಮಾನೋ ವೃಷಾ ಕಾಮಾನಾಂ ವರ್ಷಕೋ ಹರಿರ್ಹರಿತವರ್ಣಃ ಸೋಮ ಇಂದ್ರಸ್ಯ ಸ್ವಭೂತಂ ನಿಷ್ಕೃತಂ ಸಂಸ್ಕೃತಂ ಸ್ಥಾನಮಭ್ಯೇತಿ । ಅಭಿಗಚ್ಛತಿ ॥

॥ ಪ್ರತಿಪದಾರ್ಥ ॥

ಸೋಮಃ—ಸೋಮದೇವನು । ಅವ್ಯಃ—ಉಣ್ಣೆಯಿದ ನಿರ್ಮಿತವಾದ । ವಾರೇಭಿಃ—ನೂಲುಗಳ ಮೂಲಕ । ಪವತೇ—ದ್ರೋಣಕಲಶಕ್ಕೆ ಹರಿಯುತ್ತಾನೆ ಗವ್ಯೇ—ಗೋವಿನ । ಅಧಿ ತ್ವಚಿ—ಚರ್ಮದ ಮೇಲೆ । ಕನಿಕ್ರದತ್—ಶಬ್ದಮಾಡುತ್ತ । ವೃಷಾ—ಕಾಮನವರ್ಷಕನೂ । ಹರಿಃ—ಪಚ್ಚೆವರ್ಣವುಳ್ಳವನೂ ಆದ ಸೋಮನು । ಇಂದ್ರಸ್ಯ—ಇಂದ್ರನ (ಸುಸಂಸ್ಕೃತವಾದ) । ನಿಷ್ಕೃತಃ—ಉತ್ತಮವಾದ ಸ್ಥಾನವನ್ನು । ಅಭ್ಯೇತಿ—ಹೋಗಿ ಸೇರುತ್ತಾನೆ.

॥ ಭಾವಾರ್ಥ ॥

ಸೋಮದೇವನು ಉಣ್ಣೆಯಿಂದ ನಿರ್ಮಿತವಾದ ನೂಲುಗಳ ಮೂಲಕ ದ್ರೋಣಕಲಶಕ್ಕೆ ಹರಿಯುತ್ತಾನೆ. ಗೋವಿನ ಚರ್ಮದ ಮೇಲೆ ಶಬ್ದಮಾಡುತ್ತ ಕಾಮನವರ್ಷಕನೂ, ಪಚ್ಚೆವರ್ಣವುಳ್ಳವನೂ ಆದ ಸೋಮನು ಇಂದ್ರನಿಗಾಗಿ ಸಂಸ್ಕೃತವಾದ ಸ್ಥಾನವನ್ನು ಹೋಗಿ ಸೇರುತ್ತಾನೆ.

English Translation

The Soma flows purified by the sheep's hairs; crying aloud upon the cowhide the showerer (of benefits), green-tinted he goes to Indra's prepared station

ನೂರ ಎರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಕ್ರಾಣಾ ಶಿಶುರಿತ್ಯಷ್ಟರ್ಚಂ ಷಷ್ಠಂ ಸೂಕ್ತಂ । ಆಪ್ತ್ಯಸ್ಯ ತ್ರಿತಸ್ಯಾರ್ಷಂ । ಇದಮುತ್ತರಾಣಿ ಚತ್ವಾರಿ ಸೂಕ್ತಾನ್ಯಾಷ್ಟಿಹಾನಿ । ಪವಮಾನಃ ಸೋಮೋ ದೇವತಾ । ತಥಾ ಚಾನುಕ್ರಮ್ಯತೇ । ಕ್ರಾಣಾಷ್ಟಾವಾಷ್ಟಿಹಂ ವಾ ಇತಿ ॥ ಗತೋ ವಿನಿಯೋಗಃ ॥

ಅನುವಾದವು—ಕ್ರಾಣಾ ಶಿಶುಃ ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ತ್ರಿತಃ ಆಪ್ತ್ಯಃ ಎಂಬುವನು ಋಷಿಯು; ಈ ಸೂಕ್ತದಿಂದ ಮುಂದಿನ ನಾಲ್ಕು ಸೂಕ್ತಗಳು ಉಷ್ಣಿಕ್ ಛಂದಸ್ಕವು. ಪವಮಾನಸೋಮನು ದೇವತೆಯು; ಅನುಕ್ರಮಣಿಕೆಯಲ್ಲಿ— ಕ್ರಾಣಾಷ್ಟಾವಾಷ್ಟಿಹಂ ವೈ ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

ಸೂಕ್ತ—೧೦೨

ಮಂಡಲ—೯ ॥ ಅನುವಾಕ—೬ ॥ ಸೂಕ್ತ—೧೦೨ ॥
ಅಷ್ಟಕ—೭ ॥ ಅಧ್ಯಾಯ—೫ ॥ ವರ್ಗ—೪, ೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿಃ—ತ್ರಿತಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಉಷ್ಣಿಕ್ ॥

। ಸಂಹಿತಾಪಾಠಃ ।

ಕ್ರಾಣಾ ಶಿಶುರ್ಮಹೀನಾಂ ಹಿನ್ವನ್ನೃತಸ್ಯ ದೀಧಿತಿಂ ।
ವಿಶ್ವಾ ಪರಿ ಪ್ರಿಯಾ ಭುವದಧ ದ್ವಿತಾ ॥ ೧ ॥

। ಪದಪಾಠಃ ॥

ಕ್ರಾಣಾ । ಶಿಶುಃ । ಮಹೀನಾಂ । ಹಿನ್ವನ್ । ಋತಸ್ಯ । ದೀಧಿತಿಂ ।
ವಿಶ್ವಾ । ಪರಿ । ಪ್ರಿಯಾ । ಭುವತ್ । ಅಧ । ದ್ವಿತಾ ॥ ೧ ॥

। ಸಾಯಣಭಾಷ್ಯಂ ।

ಕ್ರಾಣಾ ॥ ಕರೋತೇಃ ಶಾನಚಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ಸುಪಾಂ ಸುಲುಗಿತಿ ಸುಪ ಆಕಾರಾದೇಶಃ ॥ ಯಜ್ಞಂ ಕುರ್ವಾಣೋ ಮಹೀನಾಂ ಮಹತೀನಾಂ ಮಂಹನೀಯಾಂ ವಾಷ್ಣಾಂ ಶಿಶುಃ ಪುತ್ರಸ್ಥಾನೀಯಃ ಸೋಮ ಋತಸ್ಯ ಯಜ್ಞಸ್ಯ ದೀಧಿತಿಂ ಪ್ರಕಾಶಕಂ ಧಾರಕಂ ವಾ ಸ್ವೀಯಂ ರಸಂ ಹಿನ್ವನ್ ಪ್ರೇರಯನ್ವಿಶ್ವಾ ಸರ್ವಾಣಿ ಪ್ರಿಯಾ ಪ್ರಿಯಾಣಿ ಹವೀಂಷಿ ಪರಿ ಭುವತ್ । ಪರಿಭವತಿ । ವ್ಯಾಪ್ನೋತಿ । ಅಧಾಪಿ ಚ ದ್ವಿತಾ ದ್ವಿಧಾ ಭವತಿ । ದಿವಿ ಚ ಪೃಥಿವ್ಯಾಂ ಚ ವರ್ತತ ಇತ್ಯರ್ಥಃ ।

। ಕ್ರಿಯಾಪದಾರ್ಥ ।

ಕ್ರಾಣಾ—ಯಜ್ಞನಿರ್ವಾಹಕವೂ । ಮಹೀನಾಂ—ಮಹತ್ತ್ವವುಳ್ಳ ಉದಕಗಳಿಗೆ । ಶಿಶುಃ—ಪುತ್ರರೂಪವೂ ಆದ ಸೋಮವು । ಋತಸ್ಯ—ಯಜ್ಞದ । ದೀಧಿತಿಂ—ಪ್ರಕಾಶಕವಾದ ರಸವನ್ನು । ಹಿನ್ವನ್—ಪ್ರೇರಿಸುತ್ತ । ವಿಶ್ವಾ—ಸಮಸ್ತವೂ । ಪ್ರಿಯಾ—ಪ್ರೀತಿಕಾರಕವೂ ಆದ ಹವಿಸ್ಸುಗಳನ್ನು । ಪರಿ ಭುವತ್—ವ್ಯಾಪಿಸುತ್ತದೆ । ಅಧ—ಮತ್ತು । ದ್ವಿತಾ—ದ್ಯಾವಾಪೃಥಿವಿಗಳೆರಡರಲ್ಲೂ ವಿಭಕ್ತವಾಗಿ ಇರುತ್ತದೆ.

। ಭಾವಾರ್ಥ ।

ಯಜ್ಞನಿರ್ವಾಹಕವೂ, ಮಹತ್ತ್ವವುಳ್ಳ ಉದಕಗಳಿಗೆ ಪುತ್ರರೂಪವೂ ಆದ ಸೋಮವು ಯಜ್ಞದ ಪ್ರಕಾಶಕವಾದ ರಸವನ್ನು ಪ್ರೇರಿಸುತ್ತ ಪ್ರೀತಿಕಾರಕವಾದ ಸಮಸ್ತ ಹವಿಸ್ಸುಗಳನ್ನೂ ವ್ಯಾಪಿಸುತ್ತದೆ. ಮತ್ತು ದ್ಯಾವಾಪೃಥಿವಿಗಳೆರಡರಲ್ಲೂ ವಿಭಕ್ತವಾಗಿರುತ್ತದೆ.

English Translation

Performing (sacred rites) the child of the great (waters) sending forth the lustre of the sacrifice (Soma) produces all acceptable (oblations) and (abides) in the two worlds.

॥ ಸಂಹಿತಾಪಾಠಃ ॥

ಉಪ᳐ ತ್ರಿ᳐ತಸ್ಯ᳐ ಪಾ᳐ಷ್ನ್ಯೋ᳐ಽರಭ᳐ಕ್ತ ಯದ್ಗು᳐ಹಾ᳐ ಪ᳐ದಂ ।
ಯ᳐ಜ್ಞಸ್ಯ᳐ ಸ᳐ಪ್ತ ಧಾ᳐ಮಭಿರಧ᳐ ಪ್ರಿ᳐ಯಂ ॥ ೨ ॥

॥ ಪದಪಾಠಃ ॥

ಉಪ᳐ । ತ್ರಿ᳐ತಸ್ಯ᳐ । ಪಾ᳐ಷ್ನ್ಯೋಃ । ಅ᳐ರಭ᳐ಕ್ತ । ಯತ್ । ಗು᳐ಹಾ᳐ । ಪ᳐ದಂ ।
ಯ᳐ಜ್ಞಸ್ಯ᳐ । ಸ᳐ಪ್ತ । ಧಾ᳐ಮ್ನಭಿಃ । ಅಧ᳐ । ಪ್ರಿ᳐ಯಂ ॥ ೨ ॥

॥ ಸಾಯಣಭಾಷ್ಯಂ ॥

ತ್ರಿತಸ್ಯ ಮಮ ಯಜ್ಞೇ ಗುಹಾ ಗುಹಾಯಾಂ ಹವಿರ್ಧಾನೇ ವರ್ತಮಾನಯೋಃ ಪಾಷ್ಣ್ಯೋಃ ಪಾಷಾಣವದ್ದೃಢಯೋರಧಿಷವಣಫಲಕಯೋಃ ಪದಂ ಸ್ಥಾನಂ ಸೋಮೋ ಯದ್ಯದೋಷಾಭಕ್ತ ಸಮಭಜತ ಅಧಾನಂತರಂ ಯಜ್ಞಸ್ಯ ಧಾಮಭಿರ್ಧಾರಕೈಃ ಸಪ್ತ ಸಪ್ತಭಿಶ್ಛಂದೋಭಿರ್ಗಾಯತ್ರ್ಯಾದಿಭಿಃ ಪ್ರಿಯಂ ಪ್ರೀಣಯಿತಾರಂ ಸೋಮಮಭಿಷ್ಟುವಂತ್ಯೃತ್ವಿಜಃ । ಅಪಿ ವಾ । ಸಪ್ತ ಸರ್ಪಣಶೀಲೈರ್ವಸತೀವರ್ಯಾದಿಭಿರುದಕೈಃ ಸೋಮಮಭಿಷುಣ್ವಂತಿ ॥

॥ ಪ್ರತಿಪದಾರ್ಥ ॥

ತ್ರಿತಸ್ಯ—ತ್ರಿತಸಂಜ್ಞಕನಾದ ನನ್ನ ಯಜ್ಞದಲ್ಲಿ । **ಗುಹಾ**—ರಹಸ್ಯಪ್ರದೇಶದಲ್ಲಿರುವ (ಹವಿರ್ಧಾನ ಪ್ರದೇಶದಲ್ಲಿರುವ) **ಪಾಷ್ಣ್ಯೋಃ**—ದೃಢವಾದ ಅಭಿಷವದ ಹಲಗೆಗಳ । **ಪದಂ**—ಸ್ಥಾನವನ್ನು । **ಯತ್**—ಯಾವಾಗ । **ಉಪ ಅಭಕ್ತ**—ಸೋಮನು ಸೇರಿದನೋ । **ಅಧ**—ಆ ಒಡನೆಯೇ । **ಯಜ್ಞಸ್ಯ**—ಯಜ್ಞದ । **ಸಪ್ತ ಧಾಮಭಿಃ**—ಧಾರಕಗಳಾದ ಗಾಯತ್ರ್ಯಾದಿ ಸಪ್ತಚ್ಛಂದಸ್ಸುಗಳಿಂದಲೂ । **ಪ್ರಿಯಂ**—ಪ್ರೀತಿಕರನಾದ ಸೋಮನನ್ನು (ಋತ್ವಿಕ್ಕುಗಳು ಪ್ರಶಂಸಿಸುತ್ತಾರೆ).

॥ ಭಾವಾರ್ಥ ॥

ತ್ರಿತಸಂಜ್ಞಕನಾದ ನನ್ನ ಯಜ್ಞದಲ್ಲಿ ಹವಿರ್ಧಾನಪ್ರದೇಶದಲ್ಲಿರುವ ದೃಢವಾದ ಅಭಿಷವದ ಹಲಗೆಗಳ ಸ್ಥಾನವನ್ನು ಸೋಮನು ಯಾವಾಗ ಸೇರುವನೋ ಆ ಒಡನೆಯೇ ಋತ್ವಿಕ್ಕುಗಳು ಪ್ರೀತಿಕರನಾದ ಆ ಸೋಮನನ್ನು ಯಜ್ಞಕ್ಕೆ ಧಾರಕಗಳಾದ ಗಾಯತ್ರ್ಯಾದಿಸಪ್ತಚ್ಛಂದಸ್ಸುಗಳಿಂದಲೂ ಪ್ರಶಂಸಿಸುತ್ತಾರೆ.

English Translation

When the Soma has taken the secret station of the grinding stones (at the sacrifice) of Trita, then with the seven supports of the sacrifice (the priests praise) the conciliating (Soma).

॥ ಸಂಹಿತಾಪಾಠಃ ॥

ತ್ರೀಣಿ᳐ ತ್ರಿತಸ್ಯ ಧಾರ᳐ಯಾ ಪೃಷ್ಠೇಷ್ಠೇ᳐ರಯಾ ರ᳐ಯಿಂ ।

ಮಿಮಿ᳐ತೇ ಅಸ್ಯ ಯೋ᳐ಜನಾ ವಿ ಸು᳐ಕ್ರತುಃ ॥ ೩ ॥

॥ ಪದಪಾಠಃ ॥

ತ್ರೀಣಿ᳐ । ತ್ರಿತಸ್ಯ । ಧಾ᳐ರಯಾ । ಪೃಷ್ಠೇ᳐ಷು । ಆ । ಈ᳐ರಯ । ರ᳐ಯಿಂ ।

ಮಿಮಿ᳐ತೇ । ಅ᳐ಸ್ಯ । ಯೋ᳐ಜನಾ । ವಿ । ಸು᳐ಕ್ರತುಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ರಿತಸ್ಯ ಮಮ ಯಜ್ಞಸ್ಯ ಸ್ವಭೂತಾನಿ ತ್ರೀಣಿ ಸವನಾನಿ ಧಾರಯಾತ್ಮೀಯಯಾ ವಿಧಾರಯ । ಕಿಂಚ ಪೃಷ್ಠೇಷು ಸಾಮಸು ರಯಿಂ ದಾತಾರಮಿಂದ್ರಮೀರಯ । ಆಗಮಯ । ಸುಕ್ರತು ಸುಪ್ರಜ್ಞಃ ಸ್ತೋತಾಸ್ಯೇಂದ್ರಸ್ಯ ಯೋಜನಾ ಯೋಜನಾನಿ ಯೋಜಕಾರೀಣಿ ಸ್ತೋತ್ರಾಣಿ ವಿ ಮಿಮಿತೇ। ಕರೋತಿ । ಯಸ್ಮಾದೇವಂ ತಸ್ಮಾದಿಂದ್ರಂ ಸಾಮಸು ಪ್ರೇರಯೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ತ್ರಿತಸ್ಯ**—ತ್ರಿತಸಂಜ್ಞಕನಾದ ನನ್ನ। **ತ್ರೀಣಿ**-ಮೂರು ಸವನಗಳನ್ನು। **ಧಾರಯಾ**-ನಿನ್ನ ಧಾರೆಗಳಿಂದ ಧರಿಸು। **ಪೃಷ್ಠೇಷು**—ನನ್ನ ಸಾಮಗಳಲ್ಲಿ । **ರಯಿಂ**—ಧನಪ್ರದನಾದ ಇಂದ್ರನನ್ನು । **ಆ ಈರಯ**—ಬರಮಾಡಿ ಸ್ತುತಿಸು । **ಸುಕ್ರತುಃ**—ಉತ್ತಮ ಪ್ರಜ್ಞೆಯುಳ್ಳ ಸ್ತುತಿಕರ್ತನು। **ಅಸ್ಯ**—ಈ ಇಂದ್ರನನ್ನುದ್ದೇಶಿಸಿ । **ಯೋಜನಾ**—ತದ್ಯುಕ್ತವಾದ ಸ್ತುತಿಗಳನ್ನು । **ವಿ ಮಿಮಿತೇ**—ನಿರ್ಮಿಸುತ್ತಾನೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ತ್ರಿತಸಂಜ್ಞಕನಾದ ನನ್ನ ಮೂರು ಸವನಗಳನ್ನೂ ನಿನ್ನ ಧಾರೆಗಳಿಂದ ಧರಿಸು. ನನ್ನ ಸಾಮಗಳಲ್ಲಿ ಧನಪ್ರದನಾದ ಇಂದ್ರನನ್ನು ಬರಮಾಡಿ ಸ್ತುತಿಸು. ಉತ್ತಮವಾದ ಪ್ರಜ್ಞೆಯುಳ್ಳ ಸ್ತುತಿಕರ್ತನು ಈ ಇಂದ್ರನನ್ನುದ್ದೇಶಿಸಿ ತದ್ಯುಕ್ತವಾದ ಸ್ತುತಿಗಳನ್ನು ನಿರ್ಮಿಸುತ್ತಾನೆ.

English Translation

(Support, Soma,) with your stream Trita's three (oblations) ; cause the giver of riches (Indra) to come to the sacred songs. The intelligent (praiser) of this (Indra) measures out hymns.

॥ ಸಂಹಿತಾಪಾಠಃ ॥

ಜಜ್ಞಾನಂ ಸಪ್ತ ಮಾತರೋ ವೇಧಾಮಶಾಸತ ಶ್ರಿಯೇ ।
ಅಯಂ ಧ್ರುವೋ ರಯೀಣಾಂ ಚಿಕೇತ ಯತ್ ॥ ೪ ॥

॥ ಪದಪಾಠಃ ॥

ಜಜ್ಞಾನಂ । ಸಪ್ತ । ಮಾತರಃ । ವೇಧಾಂ । ಅಶಾಸತ । ಶ್ರಿಯೇ ।
ಅಯಂ । ಧ್ರುವಃ । ರಯೀಣಾಂ । ಚಿಕೇತ । ಯತ್ ॥ ೪ ॥

॥ ಸಾಯಣಭಾಷ್ಯಂ ॥

ಜಜ್ಞಾನಂ ಪ್ರಾದುರ್ಭೂತಂ ವೇಧಾಂ ಕರ್ಮಣೋ ವಿಧಾತಾರಂ ಸೋಮಂ ಸಪ್ತ ಸಪ್ತಸಂಖ್ಯಾಕಾ ಮಾತರೋ ಗಂಗಾದ್ಯಾ ನದ್ಯಃ ಸಪ್ತ ಚ್ಛಂದಾಂಸಿ ವಾ ಶ್ರಿಯೇ ಯಜಮಾನಾನಾಮ್ಯೈಶ್ವರ್ಯಾರ್ಥ-ಮಶಾಸತ । ಅನುಶಾಸಂತಿ । ಅನುಶಾಸನಂ ಕುರ್ವಂತಿ ॥ ಶಾಸ್ತೇರ್ಲಙಿ ವ್ಯತ್ಯಯೇನಾತ್ಮನೇಪದಂ ॥ ಯದ್ಯಸ್ಮಾದ್ಧ್ರುವೋಽಯಂ ಸೋಮೋ ರಯೀಣಾಂ ಧನಾನಿ ಚಿಕೇತ ಜಾನಾತಿ ತಸ್ಮಾದಸ್ಯಾನುಶಾಸನೇ ಕೃತೇ ಯಜಮಾನಾನಾಂ ಧನಾದಿಸಮೃದ್ಧಿರ್ಭವತಿ ॥

॥ ಪ್ರತಿಪದಾರ್ಥ ॥

ಯತ್—ಯಾವ ಪ್ರಭಾವದಿಂದ । ಧ್ರುವಃ—ಶಾಶ್ವತಸ್ಥಿತಿಯುಳ್ಳ । ಅಯಂ—ಈ ಸೋಮನು । ರಯೀಣಾಂ—ಧನಗಳ ರಹಸ್ಯವನ್ನು । ಚಿಕೇತ—ಅರಿತಿರುವನೋ ಆದುದರಿಂದಲೇ । ಜಜ್ಞಾನಂ—ಯಜ್ಞಕ್ಕಾಗಿ ಉತ್ಪನ್ನನಾದವನೂ । ವೇಧಾಂ—ಕರ್ಮನಿರ್ವಾಹಕನೂ ಆದ ಸೋಮನನ್ನು । ಸಪ್ತ—ಸಪ್ತಸಂಖ್ಯಾಕವಾದ । ಮಾತರಃ—ಗಂಗಾದಿನದಿಗಳೂ (ಅಥವಾ ಛಂದಸ್ಸುಗಳೂ) । ಶ್ರಿಯೇ—ಯಜಮಾನನ ಧನಲಾಭಕ್ಕಾಗಿ । ಅಶಾಸತ—ನಿರ್ದೇಶವನ್ನು ಕೊಡುತ್ತವೆ (ಪ್ರಶಂಸಿಸುತ್ತವೆ).

॥ ಭಾವಾರ್ಥ ॥

ಯಾವ ಪ್ರಭಾವದಿಂದ ಶಾಶ್ವತವಾದ ಸ್ಥಿತಿಯುಳ್ಳ ಈ ಸೋಮನು ಧನಗಳ ರಹಸ್ಯವನ್ನರಿತಿರುವನೋ, ಆದುದರಿಂದಲೇ, ಯಜ್ಞಕ್ಕಾಗಿ ಉತ್ಪನ್ನನಾದವನೂ, ಕರ್ಮನಿರ್ವಾಹಕನೂ ಆದ ಸೋಮದೇವನನ್ನು ಪಪ್ತ ಛಂದಸ್ಸುಗಳೂ ಕೂಡಿ ಯಜಮಾನನ ಧನಲಾಭಾರ್ಥವಾಗಿ ಪ್ರಶಂಸಿಸಿ ನಿರ್ದೇಶವನ್ನೀಯುತ್ತವೆ.

English Translation

The seven mothers instruct the (Soma) the institutor (of the sacrifice) when born for the prosperity (of the worshippers), so that this firm Soma is cognizant of riches

॥ ಸಂಹಿತಾಪಾಠಃ ॥

ಅ॒ಸ್ಯ ವ್ರ॒ತೇ ಸ॒ಜೋ॑ಷಸೋ॒ ವಿಶ್ವೇ॑ ದೇ॒ವಾಸೋ॑ ಅ॒ದ್ರು॑ಹಃ ।
ಸ್ವಾ॒ಹಾ ಭ॑ವಂತಿ ರಂ॒ತಯೋ॑ ಜು॒ಷಂ॒ತ॒ ಯತ್ ॥ ೫ ॥

॥ ಪದಪಾಠಃ ॥

ಅ॒ಸ್ಯ । ವ್ರ॒ತೇ । ಸ॒ಜೋ॑ಷಸಃ । ವಿಶ್ವೇ॑ । ದೇ॒ವಾಸ॑ । ಅ॒ದ್ರು॑ಹಃ ।
ಸ್ವಾ॒ಹಾ॒ಃ ॥ ಭ॒ವಂ॒ತಿ॒ । ರಂ॒ತಯ॑ । ಜು॒ಷಂ॒ತ॒ । ಯತ್ ॥ ೫ ॥

॥ ಸಾಯಣಭಾಷ್ಯಂ ॥

ಅದ್ರುಹೋ ದ್ರೋಹವರ್ಜಿತಾ ವಿಶ್ವೇ ಸರ್ವೇ ದೇವಾಸೋ ದೇವಾ ಅಸ್ಯ ಸೋಮಸ್ಯ ವ್ರತೇ ಕರ್ಮಣಿ ಸಜೋಷಸಃ ಸಂಗತಾಃ ಸಂತಃ ಸ್ವಾಹಾ॒ಃ ಸ್ಪೃಹಣೀಯಾ ಭವಂತಿ । ರಂತಯೋ ರಮಣಶೀಲಾ ದೇವಾಃ ಸುತಮೇನಂ ಸೋಮಂ ಯದ್ಯದಿ ಜುಷಂತ ಸೇವಂತೇ ತರ್ಹಿ ಸ್ಪೃಹಣೀಯಾ ಭವಂತಿ ॥

॥ ಪ್ರತಿಪದಾರ್ಥ ॥

ರಂತಯಃ—ಹರ್ಷಾಸಕ್ತರಾದ ದೇವತೆಗಳು । **ಯತ್**—ಯಾವಾಗ । **ಜುಷಂತ**—ಈ ಸೋಮನನ್ನು ಸೇವಿಸುವರೋ ಆಗ । **ಅದ್ರುಹಃ**—ದ್ರೋಹರಹಿತರಾದ । **ವಿಶ್ವೇ ದೇವಾಸಃ**—ಸಕಲ ದೇವತೆಗಳೂ । **ಅಸ್ಯ**—ಈ ಸೋಮನ । **ವ್ರತೇ**—ಕರ್ಮದಲ್ಲಿ । **ಸಜೋಷಸಃ**—ಒಟ್ಟುಗೂಡಿಕೊಂಡು । **ಸ್ವಾಹಾ॒ಃ ಭವಂತಿ**—ಆಕರ್ಷಕವಾದ ರೂಪವುಳ್ಳವರಾಗಿರುತ್ತಾರೆ.

॥ ಭಾವಾರ್ಥ ॥

ಹರ್ಷಾಸಕ್ತರಾದ ದೇವತೆಗಳು ಯಾವಾಗ ಈ ಸೋಮವನ್ನು ಸೇವಿಸುವರೋ ಆಗ ದ್ರೋಹರಹಿತರಾದ ಸಕಲ ದೇವತೆಗಳೂ ಈ ಸೋಮನ ಕರ್ಮದಲ್ಲಿ ಒಟ್ಟುಗೂಡಿಕೊಂಡು ಆಕರ್ಷಕವಾದ ರೂಪವುಳ್ಳವರಾಗಿರುತ್ತಾರೆ.

English Translation

The universal gods, devoid of malice, assembled together at his rite, are to be envied if being delighted they take pleasure (in the Soma)

। संहितापाठः ।

यमिमा गर्भमृतावृधो दृशे चारुमजीजनन् ।
कविं मंहिष्ठमध्वरे पुरुस्पृहं ॥ ६ ॥

॥ पदपाठः ।

यं । इमिति । गर्भं । ऋतऽवृधः । दृशे । चारुं । अजीजनन् ।
कविं । मंहिष्ठं । अध्वरे । पुरुऽस्पृहं ॥ ६ ॥

॥ सायणभाष्यं ॥

ऋतावृधो यज्ञस्य वर्धयित्र्यो वसतीवर्याख्या अपो गर्भं गर्भस्थानीयमिमानेनं यं सोममध्वरे यज्ञे दृशे दर्शनायाजीजनन् उदपादयन् । कीदृशं । चारुं सर्वेषां कल्याणरूपं कविं क्रान्तप्रज्ञं मंहिष्ठं पूज्यतमं दातृतमं वा अत एव पुरुस्पृहं बहुभिः स्पृहणीयं सोमं देवाः सेवन्त इति पूर्वेण समन्वयः ॥

॥ प्रतिपदार्थः ॥

चारुं—आकर्षकवाद रूपवुळ्ळवनू । कविं—मेधावियू । मंहिष्ठं—पूज्यनू । पुरुस्पृहं—अनेकरिंद अपेक्षितनू । गर्भं—गर्भरूपनू आद । यं इमं—यावा इदे सोमनन्नु । ऋतावृधः—यज्ञवर्धकवाद उदकगळु । अध्वरे—यज्ञदल्लि । दृशे—सकलर गोचरक्काग । अजीजनन्—उत्पन्नमाडिदवो (आ सोमनन्ने देवतेगळु सेविसुत्तारे).

॥ भावार्थ ॥

आकर्षकवाद रूपवुळ्ळवनू, मेधावियू, पूज्यनू, अनेकरिंद अपेक्षितनू, गर्भरूपनू, आद यावा इदे सोमनन्नु यज्ञवर्धकवाद उदकगळु यज्ञदल्लि सकलर गोचरक्काग उत्पन्नमाडिदवो आ सोमनन्ने देवतेगळु सेविसुत्तारे.

English Translation

The germ which the augmenters of the rite brought forth at the sacrifice lovely to look upon, intelligent, most adorable, desired by many,

॥ ಸಂಹಿತಾಪಾಠಃ ॥

ಸಮಿಾಚೀನೇ ಅಭಿ ತ್ಮನಾ ಯಹ್ವೀ ಋತಸ್ಯ ಮಾತರಾ ।
ತನ್ವಾನಾ ಯಜ್ಞಮಾನುಷಗ್ಯದಂಜತೇ ॥ ೭ ॥

॥ ಪದಪಾಠಃ ॥

ಸಮಿಾಚೀನೇ ಇತಿ ಸಂ೨ಈಚೀನೇ । ಅಭಿ । ತ್ಮನಾ । ಯಹ್ವೀ ಇತಿ । ಋತಸ್ಯ । ಮಾತರಾ ।
ತನ್ವಾನಾಃ । ಯಜ್ಞಂ । ಆನುಷಕ್ । ಯತ್ । ಅಂಜತೇ ॥ ೭ ॥

॥ ಸಾಯಣಭಾಷ್ಯಂ ॥

ಸ ಸೋಮಃ ಸಮಿಾಚೀನೇ ಪರಸ್ಪರಂ ಸಂಗತೇ ಯಹ್ವೀ ಮಹತ್ಯಾವೃತಸ್ಯ ಯಜ್ಞಸ್ಯ ಮಾತರಾ
ನಿರ್ಮಾತ್ರ್ಯೌ ದ್ಯಾವಾಪೃಥಿವ್ಯೌ ತ್ಮನಾತ್ಮನಾ ಸ್ವಯಮೇವ ತದಾಭಿಗಚ್ಛತಿ । ಯದ್ಯದಾ ಯಜ್ಞಂ
ತನ್ವಾನಾ ಅಧ್ವರ್ಯವ ಆನುಷಗನುಷಕ್ತಂ ವಸತೀವರೀಭಿರಂಜತೇ ಸೋಮಂ ಮಿಶ್ರಯಂತಿ ತದಾ
ಸ್ವಯಮುಭಿಗಚ್ಛತಿ ॥

॥ ಪ್ರತಿಪದಾರ್ಥ ॥

ಯಜ್ಞಂ—ಯಜ್ಞವನ್ನು । **ತನ್ವಾನಾಃ**—ವಿಸ್ತರಿಸತಕ್ಕ ಅಧ್ವರ್ಯುಗಳು । **ಯತ್**—ಯಾವಾಗ । **ಆನುಷಕ್**—ಯಥಾಕ್ರಮವಾಗಿ (ಸೋಮವನ್ನು) । **ಅಂಜತೇ**—ವಸತೀವರಿಯೊಂದಿಗೆ ಮಿಶ್ರಮಾಡುವರೋ (ಆಗ ಸೋಮನು) । **ಸಮಿಾಚೀನೇ**—ಪರಸ್ಪರ ಸೇರಿಕೊಂಡಿರುವುವೂ । **ಯಹ್ವೀ**—ಮಹತ್ಸ್ವರೂಪವುಳ್ಳವೂ । **ಋತಸ್ಯ**—ಯಜ್ಞಕ್ಕೆ । **ಮಾತರಾ**—ನಿರ್ಮಾತ್ರಿಯರೂ ಆದ ದ್ಯಾವಾಪೃಥಿವಿಗಳಿಗಭಿಮುಖವಾಗಿ । **ತ್ಮನಾ**—ಸ್ವಪ್ರೇರಣೆಯಿಂದಲೇ । **ಅಭಿ**—ಹೋಗಿ ಸೇರುತ್ತಾನೆ.

॥ ಭಾವಾರ್ಥ ॥

ಯಜ್ಞವನ್ನು ವಿಸ್ತರಿಸಿ ನಿರವೇರಿಸುವ ಅಧ್ವರ್ಯುಗಳು ಯಾವಾಗ ಯಥಾಕ್ರಮವಾಗಿ ಸೋಮವನ್ನು ವಸತೀವರಿಯೊಂದಿಗೆ ಮಿಶ್ರಮಾಡುವರೋ ಆಗ ಸೋಮನು ಪರಸ್ಪರ ಸೇರಿಕೊಂಡಿರುವುವೂ, ಮಹತ್ಸ್ವರೂಪವುಳ್ಳವೂ, ಯಜ್ಞ ನಿರ್ಮಾತ್ರಿಯರೂ ಆದ ದ್ಯಾವಾಪೃಥಿವಿಗಳಿಗಭಿಮುಖವಾಗಿ ಸ್ವಪ್ರೇರಣೆಯಿಂದಲೇ ಹೋಗಿ ಸೇರುತ್ತಾನೆ

English Translation

He of his own will approaches the great united parents of the sacrifice (heaven and earth) when (the priests) conducting the ceremony anoint him in due order (with the sacred waters).

॥ ಸಂಹಿತಾಪಾಠಃ ॥

ಕೃತ್ವಾ ಶುಕ್ರೇಭಿರಕ್ಷಭಿರ್ಯಣೋರಪ ವ್ರಜಂ ದಿವಃ ।
ಹಿನ್ವನ್ನೃತಸ್ಯ ದೀಧಿತಿಂ ಪ್ರಾಧ್ವರೇ ॥ ೮ ॥

॥ ಪದಪಾಠಃ ॥

ಕೃತ್ವಾ । ಶುಕ್ರೇಭಿಃ । ಅಕ್ಷಭಿಃ । ಯಣೋಃ । ಅಪ । ವ್ರಜಂ । ದಿವಃ ।
ಹಿನ್ವನ್ । ಋತಸ್ಯ । ದೀಧಿತಿಂ । ಪ್ರ । ಅಧ್ವರೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಕೃತ್ವಾ ಕರ್ಮಣಾ ಜ್ಞಾನೇನ ವಾ ಶುಕ್ರೇಭಿಃ ಶುಕ್ರೈರ್ದೀಪ್ಯಮಾನೈರಕ್ಷಭಿರಕ್ಷೈರಿಂದ್ರಿಯೈರಿವಾಶ್ನುವಾನೈಃ ಸ್ವತೇಜೋಭಿರ್ವ್ರಜನುಂಧಕಾರಸಮೂಹಂ ದಿವೋಽಂತರಿಕ್ಷಾದಪಗಮಯ । ವಿನಾಶಯ ॥ ಯಣು ಗತೌ ತಾನಾದಿಕಃ॥ ಕಂ ಕುರ್ವನ್ । ಅಧ್ವರೇ ಹಿಂಸಾರಹಿತೇ ಯಜ್ಞ ಋತಸ್ಯ ಯಜ್ಞಸ್ಯ ದೀಧಿತಿಂ ಧಾರಕಂ ಸ್ವೀಯಂ ರಸಂ ಪ್ರ ಹಿನ್ವನ್ ಪ್ರೇರಯನ್ । ಅನೇನ ಲೋಕದ್ವಯವರ್ತಿತ್ವಮುಭಿಹಿತಂ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ಅಧ್ವರೇ**—ಯಜ್ಞದಲ್ಲಿ । **ಋತಸ್ಯ**—ಯಜ್ಞದ । **ಧೀದಿತಿಂ**—ಧಾರಕನಾದ ರಸವನ್ನು । **ಪ್ರ ಹಿನ್ವನ್**—ಪ್ರೇರಿಸುತ್ತ । **ಕೃತ್ವಾ**—ನಿನ್ನ ಉತ್ತಮವಾದ ಕರ್ಮದಿಂದಲೂ । **ಶುಕ್ರೇಭಿಃ**—ಪ್ರಕಾಶಮಾನವಾದ । **ಅಕ್ಷಭಿಃ**—ತೇಜಸ್ಸುಗಳಿಂದಲೂ । **ವ್ರಜಂ**—ಅಂಧಕಾರಸಮೂಹವನ್ನು । **ದಿವಃ**—ಅಂತರಿಕ್ಷದಿಂದ । **ಅಪ ಯಣೋಃ**—ದೂರಕ್ಕೆ ಓಡಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಯಜ್ಞಧಾರಕವಾದ ರಸವನ್ನು ಯಜ್ಞದಲ್ಲಿ ಪ್ರೇರಿಸುತ್ತ ನಿನ್ನ ಉತ್ತಮವಾದ ಕರ್ಮದಿಂದಲೂ, ಪ್ರಕಾಶಮಾನವಾದ ತೇಜಸ್ಸುಗಳಿಂದಲೂ ಅಂಧಕಾರಸಮೂಹವನ್ನು ಅಂತರಿಕ್ಷದಿಂದ ದೂರಕ್ಕೆ ಓಡಿಸು.

English Translation

Soma, by your act drive away with your brilliant organs the darkness from the sky, effusing into the sacrifice (your juice) the lustre of the rite.

ನೂರ ಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಪುನಾನಾಯೇತಿ ಷಡೃಚಂ ಸಪ್ತಮಂ ಸೂಕ್ತಮಾಪ್ತ್ಯಸ್ಯ ದ್ವಿತಸ್ಯಾರ್ಷಂ । ಪೂರ್ವವಚ್ಛಂದೋದೇವತೇ । ತಥಾ ಚಾನುಕ್ರಮ್ಯತೇ । ಪ್ರ ಪುನಾನಾಯ ಷಡ್ದ್ವಿತ ಆಪ್ತ್ಯ ಇತಿ ॥ ಗತೋ ವಿನಿಯೋಗಃ ॥

ಅನುವಾದವು—ಪ್ರ ಪುನಾನಾಯ ಎಂಬ ಈ ಸೂಕ್ತವು ಆರನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ದ್ವಿತ ಆಪ್ತ್ಯಃ ಎಂಬುವನು ಋಷಿಯು, ಈ ಸೂಕ್ತದ ದೇವತಾ ಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇವೆ. ಅನುಕ್ರಮಣಿಕೆಯಲ್ಲಿ—ಪ್ರ ಪುನಾನಾಯ ಷಡ್ದ್ವಿತ ಆಪ್ತ್ಯಃ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೧೦೩

ಮಂಡಲ—೯ । ಅನುವಾಕ—೬ । ಸೂಕ್ತ—೧೦೩ ॥
ಅಷ್ಟಕ—೭ । ಅಧ್ಯಾಯ—೫ । ವರ್ಗ—೬ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ।
ಋಷಿಃ—ದ್ವಿತ ಆಪ್ತ್ಯಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಉಷ್ಣಿಕ್ ॥

॥ ಸಂಹಿತಾಪಾಠಃ ॥

ಪ್ರ ಪುನಾನಾಯ ವೇಧಸೇ ಸೋಮಾಯ ವಚ ಉದ್ಯತಂ ।
ಧೃತಿಂ ನ ಧರಾ ಮತಿಭಿರ್ಜುಜೋಷತೇ ॥ ೧ ॥

॥ ಪದಪಾಠಃ ॥

ಪ್ರ । ಪುನಾನಾಯ । ವೇಧಸೇ । ಸೋಮಾಯ । ವಚಃ । ಉತ್ಽಯತಂ ।
ಧೃತಿಂ । ನ । ಧರ । ಮತಿಽಭಿಃ । ಜುಜೋಷತೇ ॥ ೧ ॥

॥ ಸಾಯಣಭಾಷ್ಯಂ ॥

ದ್ವಿತೋ ನಾಮರ್ಷಿಃ ಸ್ವಾತ್ಮಾನಂ ಪ್ರತ್ಯಾಹ । ಪುನಾನಾಯ ಪವಿತ್ರೇಣ ಪೂಯಮಾನಾಯ ವೇಧಸೇ ಕರ್ಮಣೋ ವಿಧಾತ್ರೇ ಮತಿಭಿಃ ಸ್ತುತಿಭಿರ್ಜುಜೋಷತೇ ಪ್ರೀಯಮಾಣಾಯ ಯದ್ವಾ ಮತಿಭಿಃ ಸ್ತೋತೃಭಿಃ ಸಹ ಜುಜೋಷತೇ ಪ್ರೀಣಯಿತ್ರೇ ಸೋಮಾಯೋದ್ಯತಮುದ್ಯುಕ್ತಂ ವಚಃ

ಪ್ರ ಭರ । ಪ್ರಕರ್ಷೇಣ ಸಂಪಾದಯ । ಅಭಿಷ್ಟುಹೀತ್ಯರ್ಥಃ । ತತ್ರ ದೃಷ್ಟಾಂತಃ । ಭೃತಿಂ ನ ಯಥಾ ಭೃತಕಾ ಭೃತಿಂ ಸಂಪಾದಯಂತಿ ತದ್ವತ್ ॥

॥ ಪ್ರತಿಪದಾರ್ಥ ॥

ಭೃತಿಂ ನ—ಕರ್ಮಕಾರರಿಗೆ ಅವರವರ ವೇತನವನ್ನು ಅರ್ಪಿಸುವಂತೆ । **ಪುನಾನಾಯ**—ಶುದ್ಧಿಕಾರಕನೂ। **ವೇಧಸೇ**—ಕರ್ಮನಿರ್ವಾಹಕನೂ । **ಮತಿಭಿಃ**—ಸ್ತುತಿಗಳಿಂದ । **ಜುಜೋಷತೇ**—ತೃಪ್ತಿಯನ್ನು ಹೊಂದುವವನೂ ಆದ । **ಸೋಮಾಯ**—ಸೋಮವನ್ನುದ್ದೇಶಿಸಿ । **ಉದ್ಯತಂ**—ಮೇಲೆತ್ತಿ ಪರಿಸುವ । **ವಚಃ**—ಸ್ತುತಿಯನ್ನು । **ಪ್ರ ಭರ**—ನಿರ್ಮಿಸಿ ಅರ್ಪಿಸು.

॥ ಭಾವಾರ್ಥ ॥

ಕರ್ಮಕಾರರಿಗೆ ಅವರವರ ವೇತನವನ್ನು ಅರ್ಪಿಸುವಂತೆ ಶುದ್ಧಿಕಾರಕನೂ, ಕರ್ಮನಿರ್ವಾಹಕನೂ. ಸ್ತುತಿಗಳಿಂದ ತೃಪ್ತಿಯನ್ನು ಹೊಂದುವವನೂ ಆದ ಸೋಮವನ್ನು ಉದ್ದೇಶಿಸಿ ಪರಿಸತಕ್ಕ ಸ್ತುತಿಯನ್ನು ನಿರ್ಮಿಸಿ ಅರ್ಪಿಸು.

English Translation

ಸೋಮ—ಎಲೈ ಸೋಮದೇವನೇ । **ಸ್ವಾದು**—ರುಚಿಕರವಾದ ನೀನು । **ಇಂದ್ರಾಯ**—ಇಂದ್ರಾರ್ಥವಾಗಿಯೂ । **ಮಿತ್ರಾಯ**—ಮಿತ್ರನಿಗಾಗಿಯೂ । **ಪೂಷ್ಣೇ**—ಪೂಷನಿಗಾಗಿಯೂ । **ಭಗಾಯ**—ಭಗನನ್ನುದ್ದೇಶಿಸಿಯೂ । **ಪರಿ ಪ್ರ ಧನ್ವ**—ಸುತ್ತಲೂ ಪ್ರವಹಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ರುಚಿಕರನಾದ ನೀನು ಇಂದ್ರ, ಮಿತ್ರ, ಪೂಷ, ಭಗ ಈ ದೇವತೆಗಳ ಪಾನಾರ್ಥವಾಗಿ ಸುತ್ತಲೂ ಪ್ರವಹಿಸು.

English Translation

Flow, Soma, who are sweet-flavoured, for Indra, Mitra, Pushan and Bhaga.

॥ ಸಂಹಿತಾಪಾಠಃ ॥

ಇಂದ್ರಸ್ತೇ ಸೋಮ ಸುತಸ್ಯ ಪೇಯಾಃ ಕ್ರತ್ವೇ ದಕ್ಷಾಯ ವಿಶ್ವೇ ಚ ದೇವಾಃ॥

॥ ಪದಪಾಠ ॥

ಇಂದ್ರಃ । ತೇ । ಸೋಮ । ಸುತಸ್ಯ । ಪೇಯಾಃ । ಕ್ರತ್ವೇ । ದಕ್ಷಾಯ । ವಿಶ್ವೇ । ಚ । ದೇವಾಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ಸುತಸ್ಯಾಭಿಷುತಸ್ಯ ತೇ ತವ ಸ್ವಂ ಭಾಗಮಿಂದ್ರಃ ಪೇಯಾಃ । ಪೇಯಾಶ್ । ಪಿಬತು॥ ಪಾತೇರಾಶೀರ್ಲಿಙಃ ರೂಪಂ । ಪುರುಷವ್ಯತ್ಯಯಃ॥ ಕಮರ್ಥಂ । ಕ್ರತ್ವೇ ಕ್ರತವೇ ಪ್ರಜ್ಞಾನಾಯ ದಕ್ಷಾಯ ಬಲಾಯ ಚ । ಕಂಚಾಮೀ ಸರ್ವೇ ವಿಶ್ವೇ ದೇವಾಶ್ಚ ತ್ವದೀಯಮಂಶಂ ಪಿಬಂತು ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ಸುತಸ್ಯ**—ಹಿಂಡಲ್ಪಟ್ಟ । **ತೇ**—ನಿನ್ನ ಭಾಗವನ್ನು । **ಇಂದ್ರಃ**—ಇಂದ್ರನು । **ಕ್ರತ್ವೇ**—ಉತ್ತಮವಾದ ಜ್ಞಾನಸಂಪಾದನೆಗೂ । **ದಕ್ಷಾಯ**—ಶಕ್ತಿವೃದ್ಧಿಗಾಗಿಯೂ । **ಪೇಯಾಃ**—ಪಾನಮಾಡಲಿ । **ವಿಶ್ವೇ**—ಸಮಸ್ತವಾದ । **ದೇವಾಃ ಚ**—ದೇವತೆಗಳೂ ಪಾನಮಾಡಲಿ.

॥ ಭಾವಾರ್ಥ ॥

ಎಲೈ ಸೋಮದೇವನೇ, ಒಂಡಿ ಸಿದ್ಧವಾಗಿರುವ ನಿನ್ನ ಭಾಗವನ್ನು ಇಂದ್ರನು ಉತ್ತಮವಾದ ಜ್ಞಾನಸಂಪಾದನೆಗಾಗಿಯೂ ಶಕ್ತಿವೃದ್ಧಿಗಾಗಿಯೂ ಪಾನಮಾಡಲಿ. ಸಕಲ ದೇವತೆಗಳೂ ಪಾನಮಾಡಲಿ.

English Translation

Soma, let Indra and all the gods drink of you when effused for intelligence and strength.

॥ ಸಂಹಿತಾಪಾಠಃ ॥

ಏವಾಮೃತಾಯ ಮಹೇ ಕ್ಷಯಾಯ ಸ ಶುಕ್ರೋ ಅರ್ಷ ದಿವ್ಯಃ ಪೀಯೂಷಃ ॥ ೩ ॥

॥ ಪದಪಾಠಃ ॥

ಏವ । ಅಮೃತಾಯ । ಮಹೇ । ಕ್ಷಯಾಯ । ಸಃ । ಶುಕ್ರಃ । ಅರ್ಷ । ದಿವ್ಯಃ । ಪೀಯೂಷಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಸೋಮ ಶುಕ್ರೋ ದೀಪ್ತೋ ದಿವ್ಯೋ ದಿವಿ ಭವಃ ಪೀಯೂಷೋ ದೇವೈಃ ಪಾತವ್ಯಃ ಸ ತ್ವಮಮೃತಾಯಾಮರಣಾಯ ಮಹೇ ಮಹತೇ ಕ್ಷಯಾಯ ನಿವಾಸಾಯ ಚೈವಾರ್ಷ । ಏವಂ ಪವಸ್ವ । ಕ್ಷರ ॥

॥ ಪ್ರತಿಪದಾರ್ಥ ॥

(ಎಲೈ ನೋಮದೇವನೇ) **ಶುಕ್ರಃ**—ಪ್ರಕಾಶಮಾನನೂ । **ದಿವ್ಯಃ**—ದ್ಯುಲೋಕೋತ್ಪನ್ನನೂ । **ಪೀಯೂಷಃ**—ದೇವತೆಗಳ ಪಾನಕ್ಕೆ ಯೋಗ್ಯನೂ ಆದ । **ಸಃ**—ನೀನು । **ಅಮೃತಾಯ**—ಮರಣರಾಹಿತ್ಯಕ್ಕಾಗಿಯೂ । **ಮಹೇ**—ಮಹತ್ತಾದ । **ಕ್ಷಯಾಯ**—ನಿವಾಸಕ್ಕಾಗಿಯೂ । **ಏವ**—ಈ ಪ್ರಕಾರವಾಗಿ । **ಅರ್ಷ**—ಸ್ರವಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಪ್ರಕಾಶಮಾನನೂ, ದ್ಯುಲೋಕೋತ್ಪನ್ನನೂ, ದೇವತೆಗಳ ಪಾನಕ್ಕೆ ಯೋಗ್ಯನೂ ಆದ ನೀನು ಮರಣರಾಹಿತ್ಯಕ್ಕಾಗಿಯೂ, ಮಹತ್ತಾದ ನಿವಾಸಕ್ಕಾಗಿಯೂ ಈ ಪ್ರಕಾರವಾಗಿ ಸ್ರವಿಸು.

English Translation

So do you who are pure, divine, the beverage of all the gods, flow for immortality and a spacious abode.

। ಸಂಹಿತಾಪಾಠಃ ।

ಪವಸ್ವ ಸೋಮ ಮಹಾನ್ತ್ಸಮುದ್ರಃ ಪಿತಾ ದೇವಾನಾಂ ವಿಶ್ವಾಭಿ ಧಾಮ॥

॥ ಪದಪಾಠಃ ॥

ಪವಸ್ವ । ಸೋಮ । ಮಹಾನ್ । ಸಮುದ್ರಃ । ಪಿತಾ । ದೇವಾನಾಂ । ವಿಶ್ವಾ । ಅಭಿ । ಧಾಮ ॥ ೪ ॥

॥ ಸಾಯಣಭಾಷ್ಯಂ ॥

ಹೇ ಸೋಮ ಮಹಾನ್ ದೇವೋಭ್ಯೋ ದೀಯಮಾನತ್ವೇನ ಮಹತ್ತ್ವಯುಕ್ತಃ ಸಮುದ್ರಃ ಸಮುಂದನಃ । ಯಸ್ಮಾತ್ತ್ವಮುದ್ರವಂತಿ ರಸಾಸ್ತಾದೃಶಃ । ಪಿತಾ ಸರ್ವೇಷಾಂ ಪಾಲಯಿತಾ ತ್ವಂ ದೇವಾನಾಂ ವಿಶ್ವಾ ವಿಶ್ವಾನಿ ಸರ್ವಾಣಿ ಧಾಮ ಧಾಮಾನಿ ಶರೀರಾಣ್ಯಭಿಲಕ್ಷ್ಯ ಪವಸ್ವ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ಮಹಾನ್—ಮಹತ್ತ್ವರೂಪವುಳ್ಳವನೂ । ಸಮುದ್ರಃ—ಪ್ರವಾಹಾತ್ಮಕನೂ । ಪಿತಾ—ಸಕಲರ ಪಾಲಕನೂ ಆದ ನೀನು । ದೇವಾನಾಂ—ದೇವತೆಗಳ । ವಿಶ್ವಾ—ಸಮಸ್ತವಾದ । ಧಾಮ ಅಭಿ—ಗೃಹಗಳಿಗೆ ಅಭಿಮುಖವಾಗಿ । ಪವಸ್ವ—ಹರಿದು ಹೋಗು.

॥ ಭಾವಾರ್ಥ ॥

ಎಲೈ ಸೋಮದೇವನೇ, ಮಹತ್ತ್ವರೂಪವುಳ್ಳವನೂ, ಪ್ರವಾಹಾತ್ಮಕನೂ, ಸಕಲರ ಪಾಲಕನೂ ಆದ ನೀನು ದೇವತೆಗಳ ಸಕಲ ಗೃಹಗಳಿಗೂ ಅಭಿಮುಖವಾಗಿ ಹರಿದು ಹೋಗು.

English Translation

Flow, Soma, who are mighty, the shedder of juice, the parent of gods, towards all bodies.

॥ ಸಂಹಿತಾಪಾಠಃ ॥

ಶುಕ್ರಃ ಪವಸ್ವ ದೇವೇಭ್ಯಃ ಸೋಮ ದಿವೇ ಪೃಥಿವ್ಯೈ ಶಂ ಚ ಪ್ರಜಾಯೈ ॥

॥ ಪದಪಾಠಃ ॥

ಶುಕ್ರಃ । ಪವಸ್ವ । ದೇವೇಭ್ಯಃ । ಸೋಮ । ದಿವೇ । ಪೃಥಿವ್ಯೈ । ಶಂ । ಚ । ಪ್ರಜಾಯೈ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸೋಮ ಶುಕ್ರೋ ದೀಪ್ತಸ್ತ್ವಂ ದೇವೇಭ್ಯೋ ದೇವಾರ್ಥಂ ಪವಸ್ವ । ಕ್ಷರ । ಕಿಂಚ ದಿವೇ ಪೃಥಿವ್ಯೈ ಚ ದ್ಯಾವಾಪೃಥಿವೀಭ್ಯಾಂ ಚ ತತಃ ಪ್ರಜಾಯೈ ಪ್ರಜಾಭ್ಯಶ್ಚ ಶಂ ಸುಖಂ ಚ ಕುರು ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ಶುಕ್ರಃ**—ಪ್ರಭಾಯುತನಾದ ನೀನು । **ದೇವೇಭ್ಯಃ**—ದೇವತೆಗಳಿಗಾಗಿ । **ಪವಸ್ವ**—ಸ್ರವಿಸು । **ದಿವೇ**—ದ್ಯುಲೋಕರಕ್ಷಣೆಗಾಗಿಯೂ । **ಪೃಥಿವ್ಯೈ**—ಪೃಥಿವಿಗಾಗಿಯೂ । **ಪ್ರಜಾಯೈ**—ಸಕಲ ಪ್ರಜೆಗಳ ಹಿತಕ್ಕಾಗಿಯೂ । **ಶಂ ಚ**—ಸುಖವನ್ನು ಉಂಟುಮಾಡು.

। ಭಾವಾರ್ಥ ।

ಎಲೈ ಸೋಮದೇವನೇ, ಪ್ರಭಾಯುತನಾದ ನೀನು ದೇವತೆಗಳಿಗಾಗಿ ಸ್ರವಿಸು. ದ್ಯಾವಾಪೃಥಿವಿಗಳಿಗಾಗಿಯೂ ಸಕಲ ಪ್ರಜೆಗಳಿಗಾಗಿಯೂ ಸುಖವನ್ನುಂಟುಮಾಡು.

English Translation

Soma, who are brilliant, flow for the gods and (give) joy to heaven and earth and all creatures.

। ಸಂಹಿತಾಪಾಠಃ ।

ದಿವೋ ಧರ್ತಾಸಿ ಶುಕ್ರಃ ಪೀಯೂಷಃ ಸತ್ಯೋ ವಿಧರ್ಮನ್ವಾಜೀ ಪವಸ್ವ ॥೬॥

। ಪದಪಾಠಃ ॥

ದಿವಃ । ಧರ್ತಾ । ಅಸಿ । ಶುಕ್ರಃ । ಪೀಯೂಷಃ । ಸತ್ಯೋ । ವಿಽಧರ್ಮನ್ । ವಾಜೀ । ಪವಸ್ವ ॥ ೬ ॥

।। ಸಾಯಣಭಾಷ್ಯಂ।।

ಹೇ ಸೋಮ ಶುಕ್ರೋ ದೀಪ್ತಃ ಪೀಯೂಷಃ ಪಾತವ್ಯಸ್ತ್ವಂ ದಿವೋ ದ್ಯುಲೋಕಸ್ಯ ಧರ್ತಾ ಧಾರಕೋಽಸಿ । ವಾಜೀ ಬಲವಾನ್ ಸ ತ್ವಂ ಸತ್ಯೋ ಸತ್ಯಭೂತೋ ವಿಧರ್ಮನ್ ವಿಧರ್ಮಣಿ । ವಿವಿಧ-ಕರ್ಮಾಣ ಋತ್ವಿಜೋ ಯಸ್ಮಿನ್ । ಯದ್ವಾ । ವಿವಿಧಸೋಮಾದಿಹವಿಷಾಂ ಧಾರಕೇ । ಅಸ್ಮಿನ್ಯಜ್ಞೇ ಪವಸ್ವ । ಕ್ಷರ ॥

। ಪ್ರತಿಪದಾರ್ಥ ।

(ಎಲೈ ಸೋಮದೇವನೇ) **ಶುಕ್ರಃ**—ಪ್ರಭಾಯುತನೂ । **ಪೀಯೂಷಃ**—ದೇವತೆಗಳಿಗೆ ಪಾನಾರ್ಹನೂ ಆದ ನೀನು । **ದಿವಃ**—ದ್ಯುಲೋಕದ । **ಧರ್ತಾ**—ಧಾರಕನಾಗಿ । **ಅಸಿ**—ಆಗಿದ್ದೀಯೆ । **ವಾಜೀ**—ಬಲಯುತನಾದ ನೀನು । **ಸತ್ಯೋ**—ಸತ್ಯಾತ್ಮಕವೂ । **ವಿಧರ್ಮನ್**—ಸಕಲವನ್ನೂ ಧರಿಸತಕ್ಕದ್ದೂ ಆದ ಯಜ್ಞದಲ್ಲಿ । **ಪವಸ್ವ**—ಪ್ರವಹಿಸು

। ಭಾವಾರ್ಥ ।

ಎಲೈ ಸೋಮದೇವನೇ, ಪ್ರಭಾಯುತನೂ, ದೇವತೆಗಳ ಪಾನಕ್ಕೆ ಅರ್ಹನೂ ಆದ ನೀನು ದ್ಯುಲೋಕದ ಧಾರಕನಾಗಿದ್ದೀಯೆ. ಬಲಯುತನಾದ ನೀನು ಸತ್ಯಾತ್ಮಕವೂ, ಸಕಲ ಧಾರಕವೂ ಆದ ಯಜ್ಞದಲ್ಲಿ ಪ್ರವಹಿಸು.

English Translation

You are the upholder of heaven, radiant and good to drink; flow you who are strong, at the truthful sacrifice.

॥ ಸಂಹಿತಾಪಾಠಃ ॥

ಪವಸ್ವ ಸೋಮ ದ್ಯುಮ್ನೀ ಸುಧಾರೋ ಮಹಾಮವೀನಾಮನು ಪೂರ್ವ್ಯಃ ॥

॥ ಪದಪಾಠಃ ॥

ಪವಸ್ವ । ಸೋಮ । ದ್ಯುಮ್ನೀ । ಸುಽಧಾರಃ । ಮಹಾಂ । ಅವೀನಾಂ । ಅನು । ಪೂರ್ವ್ಯಃ ॥ ೭ ।

॥ ಸಾಯಣಭಾಷ್ಯಂ ॥

ಹೇ ಸೋಮ ದ್ಯುಮ್ನೀ । ದ್ಯುಮ್ನಂ ದ್ಯೋತತೇರ್ಯಶೋ ವಾನ್ನಂ ವೇತಿ ಯಾಸ್ಕಃ । ಅನ್ನವಾನ್ ಯಶಸ್ವೀ ವಾ ಸುಧಾರಃ ಶೋಭನಧಾರಾಯುಕ್ತಃ ಪೂರ್ವ್ಯಃ ಪುರಾತನಸ್ತ್ವಂ ಮಹಾಂ ಮಹತಾಮವೀನಾಂ ರೋಮ್ಣಾಂ ರೋಮಭ್ಯಃ ಸಕಾಶಾದನುಕ್ರಮೇಣ ಪವಸ್ವ । ಕ್ಷರ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ದ್ಯುಮ್ನೀ—ಅನ್ನವಂತನೂ । ಸುಧಾರಃ—ಉತ್ತಮವಾದ ಧಾರಯುಳ್ಳವನೂ । ಪೂರ್ವ್ಯಂ—ಪುರಾತನನೂ ಆದ ನೀನು । ಮಹಾಂ—ಮಹತ್ತಾದ । ಅವೀನಾಂ—ಉಣ್ಣೆಯ ನೂಲುಗಳ ಮೂಲಕ । ಅನು—ಯಥಾಕ್ರಮವಾಗಿ । ಪವಸ್ವ—ಪ್ರವಹಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಅನ್ನವಂತನೂ, ಉತ್ತಮವಾದ ಧಾರೆಯುಳ್ಳವನೂ, ಪುರಾತನನೂ ಆದ ನೀನು ಮಹತ್ತಾದ ಉಣ್ಣೆನೂಲುಗಳ ಮೂಲಕ ಯಥಾಕ್ರಮವಾಗಿ ಪ್ರವಹಿಸು

English Translation

Do you, Soma, who are possessed of food, who have a copious stream, flow through the great sheep's, hairs in due succession

॥ ಸಂಹಿತಾಪಾಠಃ ॥

ನೃಭಿರ್ಯೇಮಾನೋ ಜಜ್ಞಾನಃ ಪೂತಃ ಕ್ಷರದ್ವಿಶ್ವಾನಿ ಮಂದ್ರಃ ಸ್ವರ್ವಿತ್॥

॥ ಪದಪಾಠಃ ॥

ನೃಭಿಃ । ಯೇಮಾನಃ । ಜಜ್ಞಾನಃ । ಪೂತಃ । ಕ್ಷರತ್ । ವಿಶ್ವಾನಿ । ವಂದ್ರ್ಯಃ । ಸ್ವರ್ವಿತ್ ॥ ೪ ॥

॥ ಸಾಯಣಭಾಷ್ಯಂ ॥

ನೃಭಿಃ ಕರ್ಮನೇತೃಭಿರ್ಋತ್ವಿಗ್ಭಿರ್ಯೇಮಾನೋ ನಿಯಮ್ಯಮಾನೋ ಜಜ್ಞಾನೋ ಜಾಯಮಾನಃ ಪೂತಃ ಪವಿತ್ರೇಣ ಶೋಧಿತೋ ವಂದ್ರ್ಯೋ ಮೋದಮಾನಃ ಸ್ವರ್ವಿತ್ಸರ್ವಜ್ಞಃ ಏತಾದೃಶಃ ಸೋಮೋ ವಿಶ್ವಾನಿ ಸರ್ವಾಣಿ ಧನಾನ್ಯಸ್ಮಭ್ಯಂ ಕ್ಷರತ್ । ಕ್ಷರತು । ದದಾತು ॥

॥ ಪ್ರತಿಪದಾರ್ಥ ॥

ನೃಭಿಃ—ಋತ್ವಿಕ್ಕುಗಳಿಂದ । ಯೇಮಾನಃ—ನಿಯಮಿತನಾದವನೂ । ಜಜ್ಞಾನಃ—ಯಜ್ಞಾರ್ಥವಾಗಿ ಉತ್ಪನ್ನನೂ । ಪೂತಃ—ದರ್ಭಾಪವಿತ್ರದಿಂದ ಶೋಧಿಸಲ್ಪಟ್ಟವನೂ । ವಂದ್ರ್ಯಃ—ಹರ್ಷಯುತನೂ । ಸ್ವರ್ವಿತ್—ಸರ್ವಜ್ಞನೂ ಆದ ಸೋಮನು । ವಿಶ್ವಾನಿ—ಸಕಲ ಧನಗಳನ್ನೂ । ಕ್ಷರತ್—ನಮಗಾಗಿ ಒದಗಿಸಲಿ.

॥ ಭಾವಾರ್ಥ ॥

ಋತ್ವಿಕ್ಕುಗಳಿಂದ ನಿಯಮಿತನಾದವನೂ, ಯಜ್ಞಾರ್ಥವಾಗಿ ಉತ್ಪನ್ನನೂ, ದರ್ಭಾಪವಿತ್ರದಿಂದ ಶೋಧಿಸಲ್ಪಟ್ಟವನೂ, ಹರ್ಷಯುತನೂ, ಸರ್ವಜ್ಞನೂ ಆದ ಸೋಮನು ಸಕಲ ಧನಗಳನ್ನೂ ನಮಗಾಗಿ ಒದಗಿಸಲಿ.

English Translation

May the Soma regulated by the priests, engendered, purified, exhilarating, all-knowing, bring us all (riches).

॥ ಸಂಹಿತಾಪಾಠಃ ॥

ಇಂದುಃ ಪುನಾನಃ ಪ್ರಜಾಮುರಾಣಃ ಕರದ್ವಶ್ವಾನಿ ದ್ರವಿಣಾನಿ ನಃ ॥ ೯ ॥

॥ ಪದಪಾಠಃ ॥

ಇಂದುಃ । ಪುನಾನಃ । ಪ್ರಜಾಂ । ಉರಾಣಃ । ಕರತ್ । ವಿಶ್ವಾನಿ । ದ್ರವಿಣಾನಿ । ನಃ ॥ ೯ ॥

॥ ಸಾಯಣಭಾಷ್ಯಂ ॥

ಪುನಾನಃ ಪೂಯಮಾನ ಉರಾಣಃ । ಉರಾಣ ಉರು ಕುರ್ವಾಣಃ । ನಿ ೬-೧೭ ಇತಿ ಯಾಸ್ಕಃ ॥ ದೇವಾನ್ ಬಹು ಕುರ್ವಾಣ ಇಂದುಃ ಸೋಮೋ ನೋಽಸ್ಮಾಕಂ ಪ್ರಜಾಮುಪತ್ಯಾದಿಕಾಂ ವಿಶ್ವಾನಿ ವ್ಯಾಪ್ತಾನಿ ದ್ರವಿಣಾನಿ ಧನಾನಿ ಚ ಕರತ್ । ಕರೋತು ॥ ಕರೋತೇರ್ಲಙಿ ರೂಪಂ ॥

॥ ಪ್ರತಿಪದಾರ್ಥ ॥

ಪುನಾನಃ—ಶುದ್ಧಿಯನ್ನು ಹೊಂದಿದವನೂ । **ಉರಾಣಃ**—ದೇವತೆಗಳನ್ನು ಪುಷ್ಟಿಗೊಳಿಸುವವನೂ ಆದ । **ಇಂದುಃ**—ಸೋಮನು । **ನಃ**—ನಮಗೆ । **ಪ್ರಜಾಂ**—ಪುತ್ರಾದಿಗಳನ್ನೂ । **ವಿಶ್ವಾನಿ**-ವ್ಯಾಪಕವಾದ । **ದ್ರವಿಣಾನಿ**-ಧನಗಳನ್ನೂ । **ಕರತ್**—ಒದಗಿಸಿ ಕೊಡಲಿ.

॥ ಭಾವಾರ್ಥ ॥

ಶುದ್ಧಿಯನ್ನು ಹೊಂದಿದವನೂ, ದೇವತೆಗಳನ್ನು ಪುಷ್ಟಿಗೊಳಿಸುವವನೂ ಆದ ಸೋಮನು ನಮಗೆ ಪುತ್ರಾದಿಗಳನ್ನೂ ವ್ಯಾಪಕವಾದ ಧನಗಳನ್ನೂ ಒದಗಿಸಿಕೊಡಲಿ.

English Translation

May Indu, purified, extolling (the gods) bestow on us progeny and all kinds of wealth.

॥ ಸಂಹಿತಾಪಾಠಃ ॥

ಪವಸ್ವ ಸೋಮ ಕ್ರತ್ವೇ ದಕ್ಷಾಯಾಶ್ವೋ ನ ನಿಕ್ತೋ ವಾಜೀ ಧನಾಯ ॥

॥ ಪದಪಾಠಃ ॥

ಪವಸ್ವ । ಸೋಮ । ಕ್ರತ್ವೇ । ದಕ್ಷಾಯ । ಅಶ್ವಃ । ನ । ನಿಕ್ತಃ । ವಾಜೀ । ಧನಾಯ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಸೋಮ ಅಶ್ವೋ ನಾಶ್ವ ಇವ ನಿಕ್ತೋ ವಸತೀವರೀಭಿರದ್ಭಿರ್ನಿಕ್ತೋ ವಾಜೀ ವೇಗವಾಂಸ್ತ್ವಂ ಕ್ರತ್ವೇ ಕ್ರತವೇ ಪ್ರಜ್ಞಾನಾಯ ದಕ್ಷಾಯ ಬಲಾಯ ಧನಾಯ ಧನಾರ್ಥಂ ಚ ಪವಸ್ವ । ಕ್ಷರ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ನಿಕ್ತಃ**—ವಸತೀವರಿಗಳೊಡನೆ ಕೂಡಿದವನಾದ ನೀನು । **ಅಶ್ವೋ ನ**—ಅಶ್ವದಂತೆ । **ವಾಜೀ**—ಬಲಯುತನೂ ವೇಗವಂತನೂ ಆಗಿ । **ಕ್ರತ್ವೇ**—ಉತ್ತಮವಾದ ಜ್ಞಾನಕ್ಕೂ । **ದಕ್ಷಾಯ**—ಬಲಕ್ಕಾಗಿಯೂ । **ಧನಾಯ**—ಧನಕ್ಕಾಗಿಯೂ । **ಪವಸ್ವ**—ಸ್ರವಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ವಸತೀವರಿಗಳೊಡನೆ ಕೂಡಿದವನಾದ ನೀನು ಅಶ್ವದಂತೆ ಬಲಯುತನೂ, ವೇಗಯುತನೂ ಆಗಿ ಉತ್ತಮವಾದ ಜ್ಞಾನಕ್ಕೂ ಬಲಕ್ಕೂ ಧನಕ್ಕಾಗಿಯೂ ಸ್ರವಿಸು.

English Translation

Flow, Soma, for intelligence, for strength, for wealth, strong and cleansed like a horse.

॥ ಸಂಹಿತಾಪಾಠಃ ॥

ತಂ ತೇ ಸೋತಾರೋ ರಸಂ ಮದಾಯ ಪುನಂತಿ ಸೋಮಂ ಮಹೇ ದ್ಯುಮ್ನಾಯ । ೧೧ ॥

॥ ಪದಪಾಠಃ ॥

ತಂ । ತೇ । ಸೋತಾರಃ । ರಸಂ । ಮದಾಯ । ಪುನಂತಿ । ಸೋಮಂ । ಮಹೇ । ದ್ಯುಮ್ನಾಯ ॥ ೧೧ ।

॥ ಸಾಯಣಭಾಷ್ಯಂ ॥

ಸೋತಾರೋಽಭಿಷೋತಾರ ಋತ್ವಿಜೋ ಹೇ ಸೋಮ ತೇ ತವ ಸ್ವಭೂತಂ ರಸಂ ಮದಾಯ ಮದಾರ್ಥಂ ಪುನಂತಿ । ತದೇವೋಚ್ಯತೇ । ಮಹೇ ಮಹತೇ ದ್ಯುಮ್ನಾಯ । ದ್ಯುಮ್ನಂ ದ್ಯೋತತೇರ್ಯಶೋ ವಾನ್ನಂ ವಾ । ಅನ್ನಾಯ ಯಶಸೇ ವಾ ಸೋಮಂ ಪುನಂತಿ । ಶೋಧಯಂತಿ । ಯದ್ವಾ । ಸೋಮಮಭಿಷೂಯಮಾಣಂ ತಂ ರಸಂ ಪುನಂತೀತ್ಯೇಕವಾಕ್ಯತಯಾ ಯೋಜನೀಯಂ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) ಸೋತಾರಃ—ಋತ್ವಿಕ್ಕುಗಳು । ತೇ—ನಿನ್ನ । ತಂ ರಸಂ—ರಸವನ್ನು ಮದಾಯ—ಹರ್ಷಾರ್ಥವಾಗಿ । ಪುನಂತಿ—ಶುದ್ಧಿಗೊಳಿಸುತ್ತಾರೆ । ಮಹೇ—ಮಹತ್ತಾದ । ದ್ಯುಮ್ನಾಯ—ಅನ್ನಕ್ಕಾಗಿಯೂ । ಸೋಮಂ—ಸೋಮವನ್ನು (ಶುದ್ಧಿಗೊಳಿಸುತ್ತಾರೆ)

॥ ಭಾವಾರ್ಥ ॥

ಎಲೈ ಸೋಮದೇವನೇ, ಋತ್ವಿಕ್ಕುಗಳು ನಿನ್ನ ಪ್ರಸಿದ್ಧವಾದ ರಸವನ್ನು ಹರ್ಷಾರ್ಥವಾಗಿ ಶುದ್ಧಿಗೊಳಿಸುತ್ತಾರೆ. ಮಹತ್ತಾದ ಅನ್ನಕ್ಕಾಗಿಯೂ ಸೋಮವನ್ನು ಶುದ್ಧಿಗೊಳಿಸುತ್ತಾರೆ.

English Translation

(The priests) who press you purify your juice for exhilaration: (they purify) the Soma for abundant food.

॥ ಸಂಹಿತಾಪಾಠಃ ॥

ಶಿಶುಂ ಜಜ್ಞಾನಂ ಹರಿಂ ಮೃಜಂತಿ ಪವಿತ್ರೇ ಸೋಮಂ ದೇವೇಭ್ಯ ಇಂದುಂ ॥ ೧೨ ॥

॥ ಪದಪಾಠಃ ॥

ಶಿಶುಂ । ಜಜ್ಞಾನಂ । ಹರಿಂ । ಮೃಜಂತಿ । ಪವಿತ್ರೇ । ಸೋಮಂ । ದೇವೇಭ್ಯಃ । ಇಂದುಂ ॥ ೧೭ ॥

॥ ಸಾಯಣಭಾಷ್ಯಂ ॥

ಶಿಶುಮಪಾಂ ಪುತ್ರಭೂತಂ ಜಜ್ಞಾನಂ ಜಾಯಮಾನಂ ಹರಿಂ ಹರಿತವರ್ಣಮಿಂದುಂ ದೀಪ್ತಂ ಸೋಮಂ ದೇವೇಭ್ಯೋ ದೇವಾರ್ಥಂ ಪವಿತ್ರೇ ಮೃಜಂತಿ । ಋತ್ವಿಜೋ ಮಾರ್ಜಯಂತಿ ॥

॥ ಪ್ರತಿಪದಾರ್ಥಃ ॥

ಶಿಶುಂ—ಉದಕಗಳಿಗೆ ಪುತ್ರರೂಪನಾಗಿ । ಜಜ್ಞಾನಂ—ಉತ್ಪನ್ನನಾದವನೂ । ಹರಿಂ—ಪಚ್ಚೆವರ್ಣವುಳ್ಳವನೂ । ಇಂದುಂ—ಪ್ರಕಾಶಮಾನನೂ ಆದ । ಸೋಮಂ-ಸೋಮನನ್ನು । ದೇವೇಭ್ಯಃ—ದೇವತೆಗಳಿಗಾಗಿ । ಪವಿತ್ರೇ—ದಶಾಪವಿತ್ರದಲ್ಲಿ । ಮೃಜಂತಿ—ಋತ್ವಿಕ್ಕುಗಳು ಶೋಧಿಸುತ್ತಾರೆ.

॥ ಭಾವಾರ್ಥ ॥

ಉದಕಗಳಿಗೆ ಪುತ್ರರೂಪನಾಗಿ ಉತ್ಪನ್ನನಾದವನೂ, ಪಚ್ಚೆವರ್ಣವುಳ್ಳವನೂ, ಪ್ರಕಾಶಮಾನನೂ ಆದ ಸೋಮನನ್ನು ದೇವತೆಗಳಿಗಾಗಿ ದಶಾಪವಿತ್ರದಲ್ಲಿ ಋತ್ವಿಕ್ಕುಗಳು ಶೋಧಿಸುತ್ತಾರೆ.

English Translation

They cleanse the new-born infant, the green-tinted shining Soma, on the filter for the gods-

॥ ಸಂಹಿತಾಪಾಠಃ ॥

ಇಂದುಃ ಪವಿಷ್ಟ ಚಾರುರ್ಮದಾಯಾಪಾಮುಪಸ್ಥೇ ಕವಿರ್ಭಗಾಯ ॥೧೩॥

॥ ಪದಪಾಠಃ ॥

ಇಂದುಃ । ಪವಿಷ್ಟ । ಚಾರುಃ । ಮದಾಯ । ಅಪಾಂ । ಉಪಸ್ಥೇ । ಕವಿಃ । ಭಗಾಯ ॥ ೧೩ ॥

॥ ಸಾಯಣಭಾಷ್ಯಂ ॥

ಚಾರುಃ ಕಲ್ಯಾಣರೂಪಃ ಕವಿಃ ಕ್ರಾಂತಪ್ರಜ್ಞ ಇಂದುರಪಾಮುದಕಾನಾಮುಪಸ್ಥ ಉಪಸ್ಥಾನೇಽಂತರಿಕ್ಷೇ ಪವಿತ್ರೇ ವಾ ಮದಾಯ ಮದಾರ್ಥಂ ಭಗಾಯ ಭಜನೀಯೌಧನಾರ್ಥಂ ಚ ಪವಿಷ್ಟ । ಪವತೇ ॥

॥ ಪ್ರತಿಪದಾರ್ಥ ॥

ಚಾರುಃ—ಆಕರ್ಷಕವಾದ ರೂಪವುಳ್ಳವನೂ । **ಕವಿಃ**—ಕ್ರಾಂತಪ್ರಜ್ಞೆಯುಳ್ಳವನೂ ಆದ । **ಇಂದುಃ**—ಸೋಮದೇವನು । **ಅಪಾಂ**—ಉದಕಗಳಿಗೆ । **ಉಪಸ್ಥೇ**—ಆಶ್ರಯವಾದ ಅಂತರಿಕ್ಷದಲ್ಲಿ । **ಮದಾಯ**—ಹರ್ಷಾರ್ಥವಾಗಿಯೂ । **ಭಗಾಯ**—ಪೂಜ್ಯವಾದ ಧನಕ್ಕಾಗಿಯೂ । **ಪವಿಷ್ಟ**—ಪ್ರವಹಿಸುತ್ತಾನೆ.

॥ ಭಾವಾರ್ಥ ॥

ಆಕರ್ಷಕವಾದ ರೂಪವುಳ್ಳವನೂ, ಕ್ರಾಂತಪ್ರಜ್ಞೆಯುಳ್ಳವನೂ ಆದ ಸೋಮದೇವನು ಉದಕಗಳಿಗೆ ಆಶ್ರಯವಾದ ಅಂತರಿಕ್ಷದಲ್ಲಿ ಹರ್ಷಾರ್ಥವಾಗಿಯೂ ಪೂಜ್ಯವಾದ ಧನಕ್ಕಾಗಿಯೂ ಪ್ರವಹಿಸುತ್ತಾನೆ

English Translation

The auspicious sage Indu flows upon the lap of the waters for exhilaration and for wealth

॥ ಸಂಹಿತಾಪಾಠ ॥

ಬಿಭರ್ತಿ ಚಾರುರಿಂದ್ರಸ್ಯ ನಾಮ ಯೇನ ವಿಶ್ವಾನಿ ವೃತ್ರಾ ಜಘಾನ ॥ ೧೪ ॥

!! ಪದಪಾಠ !!

ಬಿಭರ್ತಿ । ಚಾರುಃ । ಇಂದ್ರಸ್ಯ । ನಾಮ । ಯೇನ । ವಿಶ್ವಾನಿ । ವೃತ್ರಾ । ಜಘಾನ ॥ ೧೪ ॥

॥ ಸಾಯಣಭಾಷ್ಯಂ ॥

ಸ ಸೋಮಶ್ಚಾರು ಕಲ್ಯಾಣಮಿಂದ್ರಸ್ಯ ನಾಮ ಶರೀರಂ ಬಿಭರ್ತಿ । ಧಾರಯತಿ । ಪೋಷಯತಿ । ಯೇನ ಶರೀರೇಣೇಂದ್ರೋ ವಿಶ್ವಾನಿ ಸರ್ವಾಣಿ ವೃತ್ರಾಣಿ ಪಾಪರೂಪಾಣಿ ರಕ್ಷಾಂಸಿ ಜಘಾನ ಹತವಾನ್ ।

॥ ಪ್ರತಿಪದಾರ್ಥ ॥

(**ಸೋಮಃ**—ಸೋಮದೇವನು) **ಇಂದ್ರಸ್ಯ**—ಇಂದ್ರನ । **ಚಾರು**—ಆಕರ್ಷಕವಾದ । **ನಾಮ**—ಶರೀರವನ್ನು । **ಬಿಭರ್ತಿ**—ಧರಿಸುತ್ತಾನೆ । **ಯೇನ**—ಯಾವ ಸೋಮಪೂರಿತವಾದ ಶರೀರದಿಂದ । **ವಿಶ್ವಾನಿ**—ಸಮಸ್ತವಾದ । **ವೃತ್ರಾ**—ಶತ್ರುಗಳನ್ನೂ । **ಜಘಾನ**—ಇಂದ್ರನು ನಾಶಮಾಡಿದನು.

॥ ಭಾವಾರ್ಥ ॥

ಸೋಮದೇವನು ಇಂದ್ರನ ಆಕರ್ಷಕವಾದ ಶರೀರವನ್ನು ಧರಿಸುತ್ತಾನೆ. ಯಾವ ಈ ಸೋಮಪೂರಿತನಾದ ಶರೀರದಿಂದ ಇಂದ್ರನು ಸಕಲ ಶತ್ರುಗಳನ್ನೂ ನಾಶಮಾಡಿದನು.

English Translation

The auspicious (Soma) sustains Indra's body by which he has slain all Rakshasas

। ಸಂಹಿತಾಪಾಠಃ ।

ಪಿಬಂತ್ಯಸ್ಯ ವಿಶ್ವೇ ದೇವಾಸೋ ಗೋಭಿಃ ಶ್ರೀತಸ್ಯ ನೃಭಿಃ ಸುತಸ್ಯ ॥ ೧೫ ॥

॥ ಪದಪಾಠಃ ॥

ಪಿಬಂತಿ । ಅಸ್ಯ । ವಿಶ್ವೇ । ದೇವಾಸಃ । ಗೋಭಿಃ । ಶ್ರೀತಸ್ಯ । ನೃಭಿಃ । ಸುತಸ್ಯ ॥ ೧೫ ॥

। ಸಾಯಣಭಾಷ್ಯಂ ॥

ವಿಶ್ವೇ ಸರ್ವೇ ದೇವಾಸೋ ದೇವಾ ಗೋಭಿರ್ಗೋವಿಕಾರೈಃ ಶ್ರೀತಸ್ಯ ಮಿಶ್ರಿತಂ ನೃಭಿಃ ಕರ್ಮ-ನೇತೃಭಿರ್ಋತ್ವಿಗ್ಭಿಃ ಸುತಾಸ್ಯಾಭಿಷುತಮಸ್ಯಾಮುಂ ಸೋಮಂ ಪಿಬಂತಿ । ದ್ವಿತೀಯಾರ್ಥೇ ಷಷ್ಠೀ ॥

। ಪ್ರತಿಪದಾರ್ಥ ।

ವಿಶ್ವೇ—ಸಮಸ್ತವಾದ । ದೇವಾಸಃ—ದೇವತೆಗಳೂ । ಗೋಭಿಃ—ಕ್ಷೀರಾದಿಗಳಿಂದ । ಶ್ರೀತಸ್ಯ—ಮಿಶ್ರಿತವಾದುದೂ । ನೃಭಿಃ—ಋತ್ವಿಕ್ಕುಗಳಿಂದ । ಸುತಸ್ಯ—ಹಿಂಡಲ್ಪಟ್ಟುದೂ ಆದ । ಅಸ್ಯ—ಈ ಸೋಮವನ್ನು । ಪಿಬಂತಿ—ಪಾನಮಾಡುತ್ತಾರೆ.

। ಭಾವಾರ್ಥ ।

ಸಕಲ ದೇವತೆಗಳೂ ಸಹ ಕ್ಷೀರಾದಿಗಳಿಂದ ಮಿಶ್ರಿತವಾದುದೂ, ಋತ್ವಿಕ್ಕುಗಳಿಂದ ಹಿಂಡಲ್ಪಟ್ಟುದೂ ಆದ ಈ ಸೋಮವನ್ನು ಪಾನಮಾಡುತ್ತಾರೆ.

English Translation

The universal gods drink of it, effused by the priests, mixed with the milk and curds.

। ಸಂಹಿತಾಪಾಠಃ ।

ಪ್ರ ಸುವಾನೋ ಅಕ್ಷ್ಣಃ ಸಹಸ್ರಧಾರಾಸ್ತಿರಃ ಪವಿತ್ರಂ ವಿ ವಾರಮವ್ಯಂ ॥

॥ ಪದಪಾಠಃ ॥

ಪ್ರ । ಸುವಾನಃ । ಅಕ್ಷ್ಣಾರಿತಿ । ಸಹಸ್ರಧಾರಃ । ತಿರಃ । ಪವಿತ್ರಂ । ವಿ । ವಾರಂ । ಅವ್ಯಂ ॥ ೧೬ ॥

। ಸಾಯಣಭಾಷ್ಯಂ ।

ಸುವಾನೋಽಭಿಷೂಯಮಾಣಃ ಅತ ಏವ ಸಹಸ್ರಧಾರೋ ಬಹುಧಾರಾಯುಕ್ತಃ ಸೋಮೋಽವ್ಯಮವಿಭವಂ ವಾರಂ ವಾಲಂ ಪವಿತ್ರಂ ತಿರೋ ವ್ಯವಧಾಯಕಂ ಕುರ್ವನ್ ಪ್ರಾಕ್ಷಾಃ । ವಿವಿಧಂ ಪ್ರಕ್ಷರತಿ ॥ ಕ್ಷರತೇರ್ಲುಙಿ ರೂಪಂ ॥

॥ ಪ್ರತಿಪದಾರ್ಥ ॥

ಸುವಾನಃ—ಹಿಂಡಲ್ಪಟ್ಟವನೂ । **ಸಹಸ್ರಧಾರಃ**—ಅನೇಕವಿಧವಾದ ಧಾರೆಯುಳ್ಳವನೂ ಆದ ಸೋಮನು । **ಅವ್ಯಂ**—ಉಣ್ಣೆಯ । **ವಾರಂ**—ನೂಲುಳ್ಳ । **ಪವಿತ್ರಂ**—ದಶಾಪವಿತ್ರವನ್ನು। **ತಿರಃ**— ದಾಟಿ । **ವಿ ಪ್ರ ಅಕ್ಷಾಃ**—ನಾನಾರೂಪದಲ್ಲಿ ಪ್ರವಹಿಸುತ್ತಾನೆ.

॥ ಭಾವಾರ್ಥ ॥

ಹಿಂಡಲ್ಪಟ್ಟವನೂ, ಅನೇಕ ವಿಧವಾದ ಧಾರೆಯುಳ್ಳವನೂ ಆದ ಸೋಮನು ಉಣ್ಣೆಯ ನೂಲುಳ್ಳ ದಶಾ ಪವಿತ್ರವನ್ನು ದಾಟಿ ನಾನಾರೂಪದಲ್ಲಿ (ಅನೇಕಧಾರೆಗಳಲ್ಲಿ) ಪ್ರವಹಿಸುತ್ತಾನೆ.

English Translation

Being effused the The Soma in a thousand streams flows through the sheep's-hair filter.

॥ ಸಂಹಿತಾಪಾಠಃ ॥

ಸ ವಾಜ್ಯಕ್ಷಾಃ ಸಹಸ್ರರೇತಾ ಅದ್ಭಿರ್ಮೃಜಾನೋ ಗೋಭಿಃ ಶ್ರೀಣಾನಃ ॥

॥ ಪದಪಾಠಃ ॥

ಸಃ । ವಾಜೀ । ಅಕ್ಷಾರೀತಿ । ಸಹಸ್ರರೇತಾಃ ಅತ್ಸಭಿಃ । ಮೃಜಾನಃ । ಗೋಭಿಃ । ಶ್ರೀಣಾನಃ ॥ ೧೭ ॥

॥ ಸಾಯಣಭಾಷ್ಯಂ ॥

ವಾಜೀ ವೇಗವಾನ್ಬಲವಾನ್ವಾ ಸ ಸೋಮೋಽಕ್ಷಾಃ । ಕ್ಷರತಿ । ಕೀದೃಶಃ । ಸಹಸ್ರರೇತಾ ಬಹು-ರೇತಸ್ಕೋ ಬಹೂದಕೋಽದ್ಭಿರ್ವಸತೀವರೀಭಿರ್ಮೃಜಾನೋ ಮೃಜ್ಯಮಾನೋ ಗೋಭಿರ್ಗೋವಿಕಾರೈ: ಕ್ಷೀರಾದಿಭಿಃ ಶ್ರೀಣಾನಃ ಶ್ರೀಯಮಾಣಃ ॥

॥ ಪ್ರತಿಪದಾರ್ಥ ॥

ಸಹಸ್ರರೇತಾಃ—ಪ್ರಭೂತವಾದ ರಸವುಳ್ಳವನೂ । **ಅದ್ಭಿಃ**—ವಸತೀವರ್ಯಾದಿಗಳೊಡನೆ । **ಮೃಜಾನಃ**—ಶುದ್ಧಿಯನ್ನು ಹೊಂದುವವನೂ । **ಗೋಭಿಃ**—ಕ್ಷೀರಾದಿಗಳೊಡನೆ । **ಶ್ರೀಣಾನಃ**—ಮಿಶ್ರವನ್ನು ಹೊಂದುವವನೂ । **ವಾಜೀ**—ವೇಗವಂತನೂ ಆದ । **ಸಃ**—ಅದೇ ಸೋಮನು । **ಅಕ್ಷಾಃ**—ಪ್ರವಹಿಸುತ್ತಾನೆ.

॥ ಭಾವಾರ್ಥ ॥

ಪ್ರಭೂತವಾದ ರಸವುಳ್ಳವನೂ, ವಸತೀವರ್ಯಾದಿಗಳೊಡನೆ ಶುದ್ಧಿಯನ್ನು ಹೊಂದುವವನೂ, ಕ್ಷೀರಾದಿಗಳೊಡನೆ ಮಿಶ್ರವನ್ನು ಹೊಂದುವವನೂ, ವೇಗವಂತನೂ ಆದ ಅದೇ ಸೋಮದೇವನು ಪ್ರವಹಿಸುತ್ತಾನೆ.

English Translation

The vigorous Soma flows in a thousand streams cleansed by the waters and mixing with the curds and milk,

॥ ಸಂಹಿತಾಪಾಠಃ ॥

ಪ್ರ ಸೋಮ ಯಾಹೀಂದ್ರಸ್ಯ ಕುಕ್ಷಾ ನೃಭಿರ್ಯೇಮಾನೋ ಅದ್ರಿಭಿಃ ಸುತಃ ॥ ೧೮ ॥

॥ ಪದಪಾಠಃ ॥

ಪ್ರ । ಸೋಮ । ಯಾಹಿ । ಇಂದ್ರಸ್ಯ । ಕುಕ್ಷಾ । ನೃಽಭಿಃ । ಯೇಮಾನಃ । ಅದ್ರಿಽಭಿಃ । ಸುತಃ ॥ ೧೮ ॥

॥ ಸಾಯಣಭಾಷ್ಯಂ ॥

ಹೇ ಸೋಮ ನೃಭಿರ್ಋತ್ವಿಗ್ಭಿರ್ಯೇಮಾನೋ ನಿಯಮ್ಯಮಾನೋಽದ್ರಿಭಿರ್ಗ್ರಾವಭಿಃ ಸುತೋಽಭಿಷುತಸ್ತ್ವಮಿಂದ್ರಸ್ಯ ಕುಕ್ಷಾ ॥ ಸಪ್ತಮ್ಯಾ ಡಾದೇಶಃ ॥ ಕುಕ್ಷಾವುದರಭೂತೇ ಕಲಶೇ ವಾ ಪ್ರ ಯಾಹಿ । ಪ್ರಕರ್ಷೇಣ ಗಚ್ಛ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ನೃಭಿಃ**—ಋತ್ವಿಕ್ಕುಗಳಿಂದ । **ಯೇಮಾನಃ**—ನಿಯಮಿತನೂ । **ಅದ್ರಿಭಿಃ**—ಹಿಂಡುವ ಕಲ್ಲುಗಳಿಂದ । **ಸುತಃ**—ಹಿಂಡಲ್ಪಟ್ಟವನೂ ಆದ ನೀನು । **ಇಂದ್ರಸ್ಯ**—ಇಂದ್ರನ । **ಕುಕ್ಷಾ**—ಉದರದೊಳಗೆ । **ಪ್ರ ಯಾಹಿ**—ಪ್ರವೇಶಿಸಿ ಹೋಗು.

॥ ಭಾವಾರ್ಥ ॥

ಎಲೈ ಸೋಮದೇವನೇ, ಋತ್ವಿಕ್ಕುಗಳಿಂದ ನಿಯಮಿತನೂ, ಹಿಂಡುವ ಕಲ್ಲುಗಳಿಂದ ಜಜ್ಜಿ ಹಿಂಡಲ್ಪಟ್ಟವನೂ ಆದ ನೀನು ಇಂದ್ರನ ಉದರದೊಳಗೆ ಪ್ರವೇಶಿಸಿ ಹೋಗು.

English Translation

Guided by the priests and effused with the stones go, Soma, to Indra's belly.

॥ ಸಂಹಿತಾಪಾಠಃ ॥

ಅಸರ್ಜಿ ವಾಜೀ ತಿರಃ ಪವಿತ್ರಮಿಂದ್ರಾಯ ಸೋಮಃ ಸಹಸ್ರಧಾರಃ ॥ ೧೯ ॥

॥ ಪದಪಾಠಃ ॥

ಅಸರ್ಜಿ । ವಾಜೀ । ತಿರಃ । ಪವಿತ್ರಂ । ಇಂದ್ರಾಯ । ಸೋಮಃ । ಸಹಸ್ರಽಧಾರಃ ॥ ೧೯ ॥

॥ ಸಾಯಣಭಾಷ್ಯಂ ॥

ವಾಜೀ ಬಲವಾನ್ವೇಗವಾನ್ವಾ ಪವಿತ್ರಂ ತಿರಸ್ಕುರ್ವನ್ ಸಹಸ್ರಧಾರೋ ಬಹುಧಾರಃ ಸೋಮ ಇಂದ್ರಾಯೇಂದ್ರಾರ್ಥಮಸರ್ಜಿ । ಸೃಜ್ಯತೇ ॥

॥ ಪ್ರತಿಪದಾರ್ಥ ॥

ವಾಜೀ—ಶಕ್ತಿಯುತನೂ । ಪವಿತ್ರಂ ತಿರಃ—ದಶಾಪವಿತ್ರವನ್ನು ದಾಟ । ಸಹಸ್ರಧಾರಃ—ಅನೇಕ ಧಾರೆಗಳಲ್ಲಿ ಪ್ರವಹಿಸುವವನೂ ಆದ । ಸೋಮಃ—ಸೋಮದೇವನು । ಇಂದ್ರಾಯ—ಇಂದ್ರಾರ್ಥವಾಗಿ (ಬಿಡಲ್ಪಟ್ಟಿದ್ದಾನೆ) । ಅಸೃಜಿ—ಪ್ರವಹಿಸುತ್ತಾನೆ

॥ ಭಾವಾರ್ಥ ॥

ಶಕ್ತಿಯುತನೂ, ದಶಾಪವಿತ್ರವನ್ನು ದಾಟಿ ಅನೇಕ ಧಾರೆಗಳಲ್ಲಿ ಪ್ರವಹಿಸುವವನೂ ಆದ ಸೋಮದೇವನು ಇಂದ್ರನ ಪಾನಾರ್ಥವಾಗಿ ಪ್ರವಹಿಸುತ್ತಾನೆ.

English Translation

The vigorous thousand-streamed Soma has been sent through the filter for Indra.

॥ ಸಂಹಿತಾಪಾಠಃ ॥

ಅಂಜಂತ್ಯೇನಂ ಮಧ್ವೋ ರಸೇನೇಂದ್ರಾಯ ವೃಷ್ಣ ಇಂದುಂ ಮದಾಯ ॥

॥ ಪದಪಾಠಃ ॥

ಅಂಜಂತಿ । ಏನಂ । ಮಧ್ವಃ । ರಸೇನ । ಇಂದ್ರಾಯ । ವೃಷ್ಣೇ । ಇಂದುಂ । ಮದಾಯ ॥ ೨೦ ॥

॥ ಸಾಯಣಭಾಷ್ಯಂ ॥

ವೃಷ್ಣೇ ಕಾಮಾನಾಂ ವರ್ಷಿತ್ರ ಇಂದ್ರಾಯೇಂದ್ರಸ್ಯ ಮದಾಯ ಮದಾರ್ಥಂ ಮಧ್ವೋ ಮಧುನೋ ರಸೇನ ಗವ್ಯೇನೈನಮಿಂದಂ ಸೋಮಮೃತ್ವಿಜೋಂಽಜಂತಿ । ಸಂಯೋಜಯಂತಿ ॥

॥ ಪ್ರತಿಪದಾರ್ಥ ॥

ವೃಷ್ಣೇ—ಇಷ್ಟಾರ್ಥಪ್ರದನಾದ । ಇಂದ್ರಾಯ—ಇಂದ್ರನ । ಮದಾಯ—ಹರ್ಷಕ್ಕಾಗಿ । ಮಧ್ವಃ—ಮಧುರವಾದ । ರಸೇನ—ರಸದೊಡನೆ । ಏನಂ ಇಂದುಂ—ಈ ಸೋಮನನ್ನು । ಅಂಜಂತಿ—ಋತ್ವಿಕ್ಕುಗಳು ಮಿಶ್ರಮಾಡುತ್ತಾರೆ.

॥ ಭಾವಾರ್ಥ ॥

ಇಷ್ಟಾರ್ಥಪ್ರದನಾದ ಇಂದ್ರನ ಹರ್ಷಕ್ಕಾಗಿ ಮಧುರವಾದ ರಸದೊಡನೆ ಋತ್ವಿಕ್ಕುಗಳು ಈ ಸೋಮನನ್ನು ಮಿಶ್ರಮಾಡುತ್ತಾರೆ.

English Translation

They mix the Soma with the liquid of the sweet (milk) for Indra, the showerer (of benefits) for his exhilaration.

। ಸಂಹಿತಾಪಾಠಃ ।

ದೇವೇಭ್ಯಸ್ತ್ವಾ ವೃಥಾ ಪಾಜಸೇಽಪೋ ವಸಾನಂ ಹರಿಂ ಮೃಜಂತಿ ॥ ೨೧ ॥

॥ ಪದಪಾಠಃ ॥

ದೇವೇಭ್ಯಃ । ತ್ವಾ । ವೃಥಾ । ಪಾಜಸೇ । ಅಪಃ । ವಸಾನಂ । ಹರಿಂ । ಮೃಜಂತಿ ॥ ೨೧ ॥

। ಸಾಯಣಭಾಷ್ಯಂ ॥

ಹೇ ಸೋಮ ಅಪ ಉದಕಾನಿ ವಸಾನಮಾಚ್ಛಾದಯಂತಂ ಹರಿಂ ಹರಿತವರ್ಣಂ ತ್ವಾ ತ್ವಾಂ ವೃಥಾನಾಯಾಸೇನತ್ವಿಜೋ ಮೃಜಂತಿ । ಶೋಧಯಂತಿ । ಕಿಮರ್ಥಂ । ದೇವೇಭ್ಯೋ ದೇವಾನಾಂ ಪಾನಾರ್ಥಂ ಪಾಜಸೇ ತೇಷಾಂ ಬಲಾರ್ಥಂ ॥

। ಶ್ರುತಿಪದಾರ್ಥ ॥

(ಎಲೈ ಸೋಮದೇವನೇ) ಅಪಃ—ಉದಕಗಳನ್ನು । ವಸಾನಂ—ಧರಿಸಿರುವವನೂ । ಹರಿಂ—ಪಚ್ಚೆ ವರ್ಣವುಳ್ಳವನೂ ಆದ । ತ್ವಾ—ನಿನ್ನನ್ನು । ವೃಥಾ—ಶ್ರಮವಿಲ್ಲದೇ । ದೇವೇಭ್ಯಃ—ದೇವತೆಗಳ । ಪಾಜಸೇ—ಬಲಾರ್ಥವಾಗಿ । ಮೃಜಂತಿ—ಋತ್ವಿಕ್ಕುಗಳು ಶೋಧಿಸುತ್ತಾರೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ಉದಕಗಳನ್ನು ಧರಿಸಿರುವವನೂ, (ವಿಸ್ತೀರ್ಣನಾದವನೂ) ಪಚ್ಚೆ ವರ್ಣವುಳ್ಳವನೂ ಆದ ನಿನ್ನನ್ನು ಋತ್ವಿಕ್ಕುಗಳು ಶ್ರಮವಿಲ್ಲದೆ ದೇವತೆಗಳ ಶಕ್ತ್ಯರ್ಥವಾಗಿ ಶೋಧಿಸುತ್ತಾರೆ.

English Translation

They cleanse you readily, clothed with water, green-tinted, for the invigoration of the gods

। ಸಂಹಿತಾಪಾಠಃ ।

ಇಂದುರಿಂದ್ರಾಯ ತೋಶತೇ ನಿ ತೋಶತೇ ಶ್ರೀಣನ್ನುಗ್ರೋ ರಿಣನ್ನಪಃ ॥

॥ ಪದಪಾಠಃ ॥

ಇಂದುಃ । ಇಂದ್ರಾಯ । ತೋಶತೇ । ನಿ । ತೋಶತೇ । ಶ್ರೀಣನ್ । ಉಗ್ರಃ । ರಿಣನ್ । ಅಪಃ ॥ ೨೨ ॥

॥ सायणभाष्यं ॥

इन्दुः सोमः इन्द्रायेन्द्रार्थं क्षोशते । हन्यते । अभिषूयते । नि क्षोशते । नितरामभिषूयते । क्षोशतिर्वधकर्मा । कीदृशः । श्रेणन् प्रेरयन् सोमोऽभिषूयते ॥

॥ प्रतिपदार्थ ॥

श्रेणन्—क्षीरादिगळोडने मिश्रितनागिरुववनू । उग्रः—अत्यधिकवाद बलवुळ्ळवनू । अपः—वसतीवर्यादिगळन्नु । रिणन्—प्रेरिसुववनू आद । इन्दुः—सोमनु । इन्द्राय—इन्द्रनपानार्थवागि । क्षोशते—हिण्डल्पडुत्तानॆ । नि क्षोशते—अतिशयवागि हिण्डल्पडुत्तानॆ.

॥ भाषार्थ ॥

क्षीरादिगळोडने मिश्रितनागिरुववनू, अत्यधिकवाद बलवुळ्ळवनू, वसतीवर्यादिगळन्नु प्रेरिसुवनवनू आद सोमनु इन्द्रनपानार्थवागि हिण्डल्पडुत्तानॆ. अतिशयवागि हिण्डल्पडुत्तानॆ.

English Translation

Indu is effused for Indra, is effused downwards—fierce, mixing (with the milk), flowing (into) the water.

नूर हत्तनेय सूक्तवु

॥ सायणभाष्यं ॥

पयोर ष्ठिति द्वादशर्चं सप्तमं सूक्तं । त्र्यरुणत्रसदस्यू राजर्षी अस्य सूक्तस्य द्रष्टारौ । आदितस्तिस्रः पिपीलिकमध्या अनुष्टुभो द्वादशकाष्पकद्वादशकवत्यः । ततः षडूर्ध्वबृहत्यो द्वादशकत्रयवत्यः । अथ दशम्यादास्तिस्रो विराजः । पवमानः सोमो देवता । तथा चानुक्रान्तं । पयोर षु दादश त्र्यरुणत्रसदस्यू तिस्रोऽनुष्टुभः पिपीलिकमध्याः षळूर्ध्वबृहत्यस्तिस्रश्च विराज इति ॥ गतो विनियोगः ॥

अनुवादवु—पयोर षु ऎंब ई सूक्तवु ऎळनेय अनुवाकदल्लि ऎळनेय सूक्तवु. इदरल्लि हन्नॆरडु ऋक्कुगळिरुववु. ई सूक्तक्के त्र्यरुण मत्तु त्रसदस्य ऎंबिब्बरु राजर्षिगळु सूक्तद्रष्टृगळु. ई सूक्तद मॊदलिन मूरु ऋक्कुगळु पिपीलिकमध्या अनुष्टुप् ऎंब छंदस्सिनवु ई छंदस्सिनल्लि मूरु पादगळिद्दु मॊदलनेय पाददल्लि हन्नॆरडु अक्षरगळू, ऎरडनेय पाददल्लि ऎंटक्षरगळू, मूरनेय पाददल्लि हन्नॆरडु अक्षरगळू इरुववु. इदु ई छंदस्सिन

ಲಕ್ಷಣವು. ನಾಲ್ಕನೆಯ ಋಕ್ಕಿನಿಂದ ಮುಂದಿನ ಆರು ಋಕ್ಕುಗಳು ಊರ್ಧ್ವಬೃಹತೀ ಎಂಬ ಛಂದಸ್ಸಿನವು. ಈ ಛಂದಸ್ಸಿನಲ್ಲಿ ಹನ್ನೆರಡು ಅಕ್ಷರಗಳ ಮೂರು ಪಾದಗಳಿರುವವು. ಇದು ಇದರ ಲಕ್ಷಣವು. ಹತ್ತನೆಯ ಋಕ್ಕಿನಿಂದ ಮುಂದಿನ ಮೂರು ಋಕ್ಕುಗಳು ವಿರಾಟ್ ಛಂದಸ್ಕವು. ಪವಮಾನಸೋಮನು ದೇವತೆಯು. ಅನುಕ್ರಮಣಿಕೆಯಲ್ಲಿ—**ಪಯೂ ಷು ದ್ವಾದಶ ತ್ರ್ಯರುಣತ್ರಸದಸ್ಯೂ ತಿಸ್ರೋಽನುಷ್ಟುಭಃ ಪಿಪೀಲಿಕಮಧ್ಯಾಃ ಷಳೂರ್ಧ್ವಬೃಹತ್ಯಸ್ತಿಸ್ರಶ್ಚ ವಿರಾಜಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೧೧೦

ಮಂಡಲ—೯ । ಅನುವಾಕ—೭ । ಸೂಕ್ತ—೧೧೦ ।
ಆರ್ಷೇಯ—೭ । ಅಧ್ಯಾಯ—೫ । ವರ್ಗ—೩೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ।
ಋಷಿಃ—ತ್ರ್ಯರುಣತ್ರಸದಸ್ಯೂ ॥
ದೇವತಾ—ಪವಮಾನಃ ಸೋಮಃ ।
ಛಂದಃ—೧-೩. ಅನುಷ್ಟುಪ್ಪಿಪೀಲಿಕಮಧ್ಯಾ । ೪-೯. ಊರ್ಧ್ವಬೃಹತೀ । ೧೦-೧೨ ವಿರಾಟ್ ॥

। ಸಂಹಿತಾಪಾಠಃ ।

ಪಯೂ ಷು ಪ್ರ ಧನ್ವ ವಾಜಸಾತಯೇ ಪರಿ ವೃತ್ರಾಣಿ ಸಕ್ಷಣಿಃ।
ದ್ವಿಷಸ್ತರಧ್ಯಾ ಋಣಯಾ ನ ಈಯಸೇ ॥ ೧ ॥

॥ ಪದಪಾಠಃ ॥

ಪರಿ । ಊಂ ಇತಿ । ಸು । ಪ್ರ । ಧನ್ವ । ವಾಜಸಾತಯೇ । ಪರಿ । ವೃತ್ರಾಣಿ । ಸಕ್ಷಣಿಃ ।
ದ್ವಿಷಃ । ತರಧ್ಯೈ । ಋಣಯಾಃ । ನಃ । ಈಯಸೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಸೋಮ ಸು ಸುಷ್ಠು ವಾಜಸಾತಯೇಽಸ್ಮಭ್ಯಮನ್ನದಾನಾಯೈವ ಪರಿ ಪ್ರ ಧನ್ವ । ಪರಿತಃ ಪ್ರಗಚ್ಛ । ಯದ್ವಾ । ವಾಜಸಾತಯೇಽನ್ನಲಾಭಾಯ ಸಂಗ್ರಾಮಂ ಪ್ರಗಚ್ಛ । ಕಂ ಚ ಸಕ್ಷಣಿಃ ಸಹಸಶೀಲಸ್ತ್ವಂ ವೃತ್ರಾಣಿ ಶತ್ರೂನ್ಪರಿ ಗಚ್ಛ । ತದೇವೋಚ್ಯತೇ । ನೋಽಸ್ಮಾಕಮೃಣಯಾ ಋಣಾನಾಂ ಯಾಪಯಿತಾ ತ್ವಂ ದ್ವಿಷಃ ಶತ್ರೂಂಸ್ತರಧ್ಯೈ ತರೀತುಂ ಹಂತುಮಿಯಸೇ । ಪರಿಗಚ್ಛಸಿ ॥

। ಪ್ರತಿಪದಾರ್ಥ ।

(ಎಲ್ಲಿ ಸೋಮದೇವನನ್ನೇ) **ಸು**—ಅತಿಶಯವಾಗಿ । **ವಾಜಸಾತಯೇ**—ನಮಗೆ ಅನ್ನಲಾಭಾರ್ಥವಾಗಿ । **ಪರಿ ಪ್ರ ಧನ್ವ**—ಸುತ್ತಲೂ ಪ್ರವಹಿಸು । **ಸಕ್ಷಣಿಃ**—ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳ ನೀನು । **ವೃತ್ರಾಣಿ**—

ಶತ್ರುಗಳನ್ನು । **ಪರಿ**—ಸುತ್ತುವರಿದು ಹೋಗು । **ನಃ**—ನಮ್ಮ । **ಋಣಯಾಃ**—ಋಣಗಳನ್ನು ತೀರಿಸತಕ್ಕ ನೀನು । **ದ್ವಿಷಃ**—ನಮ್ಮ ಶತ್ರುಗಳನ್ನು । **ತರಧ್ಯೈ**—ನಾಶಪಡಿಸು । **ಈಯಸೇ**—ಮುಂದುವರಿದು ಹೋಗು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಮ್ಮ ಅನ್ನಲಾಭಾರ್ಥವಾಗಿ ಸುತ್ತಲೂ ಪ್ರವಹಿಸು. ಶತ್ರುಗಳನ್ನು ಎದುರಿಸುವ ಶಕ್ತಿಯುಳ್ಳ ನೀನು ಶತ್ರುಗಳನ್ನು ಸುತ್ತುವರಿದು ಹೋಗು ನಮ್ಮ ಋಣಗಳನ್ನು ತೀರಿಸುವ ನೀನು ನಮ್ಮ ಶತ್ರುಗಳನ್ನು ನಾಶಪಡಿಸಲು ಮುಂದುವರಿದು ಹೋಗು.

English Translation

Hasten, Soma, to bring us sustenance; gifted with endurance (attack our) foes; the acquitter of our debts, you approach to disperse our enemies.

॥ ಸಂಹಿತಾಪಾಠ ॥

ಅನು ಹಿ ತ್ವಾ ಸುತಂ ಸೋಮ ಮದಾಮಸಿ ಮಹೇ ಸಮರ್ಯ-

ರಾಜ್ಯೇ ।

ವಾಜಾ ಅಭಿ ಪವಮಾನ ಪ್ರ ಗಾಹಸೇ ॥ ೨ ॥

॥ ಪದಪಾಠ ॥

ಅನು । ಹಿ । ತ್ವಾ । ಸುತಂ । ಸೋಮ । ಮದಾಮಸಿ । ಮಹೇ । ಸಮರ್ಯ್ಯರಾಜ್ಯೇ ।

ವಾಜಾನ್ । ಅಭಿ । ಪವಮಾನ । ಪ್ರ । ಗಾಹಸೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ಸುತಮಭಿಷುತಂ ತ್ವಾ ತ್ವಾಂ ವಯಮನು ಮದಾಮಸಿ ಹಿ । ಅನುಮದಾಮಃ । ಆನುಕೂಲ್ಯೇಣಾಭಿಷ್ಟುಮಃ ಖಲು । ಹೇ ಪವಮಾನ ಸೋಮ ಸ ತ್ವಂ ಮಹೇ ಮಹತಿ ಸಮರ್ಯ್ಯ-ರಾಜ್ಯೇ ಮಹತ್ಸಮನುಷ್ಯಂ ತ್ವದೀಯಂ ರಾಜ್ಯಮನುಪಾಲಯಿತಂ ವಾಜಾನ್ಸ್ವತ್ಪ್ರಬಲಾನ್ಸಕಲಶತ್ರೂನ್ ಪ್ರ ಗಾಹಸೇ । ಪ್ರಗಚ್ಛಸಿ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । **ಸುತಂ**—ಹಿಂಡಲ್ಪಟ್ಟಿರುವ । **ತ್ವಾ**—ನಿನ್ನನ್ನು । **ಅನುಮದಾಮಸಿ ಹಿ**—ಸ್ತುತಿಸುತ್ತೇವೆ । **ಪವಮಾನ**—ಪವಮಾನಸಂಜ್ಞೆಯಾದ ಎಲೈ ಸೋಮನೇ । **ಮಹೇ**—ಮಹತ್ತಾದ ।

ಸಮುರ್ಯೇ ರಾಜ್ಞೇ—ಮಾನವರಲ್ಲಿರುವ ನಿನ್ನ ಪ್ರಭುತ್ವವನ್ನು ರಕ್ಷಿಸಿಕೊಳ್ಳಲು । ವಾಜಾನ್ ಅಭಿ—ಶತ್ರುಬಲಗಳ ಗಭಿಮುಖವಾಗಿ । ಪ್ರ ಗಾಹಸೇ—ನೀನು ಮುನ್ನುಗ್ಗುತ್ತೀಯೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ಹಿಂಡಲ್ಪಟ್ಟಿರುವ ನಿನ್ನನ್ನು ಪ್ರಶಂಸಿಸುತ್ತೇವೆ. ಪವಮಾನಸಂಜ್ಞಕನಾದ ಎಲೈ ಸೋಮನೇ, ಮಾನವರಲ್ಲಿರುವ ನಿನ್ನ ಮಹತ್ತಾದ ಪ್ರಭುತ್ವವನ್ನು ರಕ್ಷಿಸಿಕೊಳ್ಳಲು ನೀನು ಶತ್ರುಬಲಗಳಿಗಭಿಮುಖವಾಗಿ ಮುನ್ನುಗ್ಗುತ್ತೀಯೆ.

English Translation

In turn we glorify you, Soma, when effused; you attack the (hostile) forces, O Pavamana, to (defend) your great sovereignty over men.

॥ ಸಂಹಿತಾಪಾಠಃ ॥

ಅಜೀಜನೋ ಹಿ ಪವಮಾನ ಸೂರ್ಯಂ ವಿಧಾರೇ ಶಕ್ಮನಾ ಪಯಃ ।
ಗೋಜೀರಯಾ ರಂಹಮಾಣಃ ಪುರಂಧ್ಯಾ ॥ ೩ ॥

॥ ಪದಪಾಠಃ ॥

ಅಜೀಜನಃ । ಹಿ । ಪವಮಾನ । ಸೂರ್ಯಂ । ವಿಧಾರೇ । ಶಕ್ಮನಾ । ಪಯಃ ।
ಗೋಽಜೀರಯಾ । ರಂಹಮಾಣಃ । ಪುರಂಽಧ್ಯಾ ॥ ೩ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ತ್ವಂ ಪಯಃ ಪಯಸ ಉದಕಸ್ಯ ವಿಧಾರೇ ವಿಧಾರಕೇಽಂತರಿಕ್ಷೇ ಶಕ್ಮನಾ ಸಮರ್ಥೇನ ಬಲೇನ ಸೂರ್ಯಮಜೀಜನೋ ಹಿ । ಉತ್ಪಾದಿತವಾನ್ಭವಸಿ ಖಲು । ಕೀದೃಶಃ । ಗೋಜೀರಯಾ ಸ್ತೋತೃಭ್ಯೋ ಗವಾಂ ಪ್ರೇರಕೇಣ । ಸ್ತೋತೄಣಾಂ ಪ್ರೇರಿತಪಶುಕೇನೇತ್ಯರ್ಥಃ । ತಾದೃಶೇನ ಪುರಂಧ್ಯಾ ಬಹುವಿಧಪ್ರಜ್ಞಾನೇನ ಯುಕ್ತೋ ರಂಹಮಾಣೋ ವೇಗಂ ಕುರ್ವಾಣಸ್ತ್ವಂ ಸೂರ್ಯಮಜೀಜನಃ ॥

॥ ಪ್ರತಿಪದಾರ್ಥ ॥

ಪವಮಾನ—ಪವಮಾನಸಂಜ್ಞಕನಾದ ಎಲೈ ಸೋಮದೇವನೇ । ಗೋಜೀರಯಾ—ಶತ್ರುಗಳಿಗೆ ಸೋವುಗಳನ್ನೊದಗಿಸುವ । ಪುರಂಧ್ಯಾ—ಪ್ರಜ್ಞೆಯಿಂದ ಕೂಡಿದವನೂ । ರಂಹಮಾಣಃ—ವೇಗಯುತನೂ ಆದ

ನೀನು । **ಪಯಃ**—ಉದಕಕ್ಕೆ । **ವಿಧಾರೇ**—ಧಾರಕವಾದ ಅಂತರಿಕ್ಷದಲ್ಲಿ । **ತಕ್ಮನಾ**—ನಿನ್ನ ಸಾಮರ್ಥ್ಯದಿಂದ । **ಸೂರ್ಯಂ**—ಸೂರ್ಯನನ್ನು । **ಅಜೀಜನೋ ಹಿ**—ಉತ್ಪನ್ನಮಾಡಿದ್ದೀಯಲ್ಲವೇ.

॥ ಭಾವಾರ್ಥ ॥

ಎಲೈ ಸೋಮವೇವನೇ, ಶತ್ರುಗಳಿಗೆ ಗೋವುಗಳನ್ನೊದಗಿಸುವ ಪ್ರಜ್ಞೆಯಿಂದ ಕೂಡಿದವನೂ, ವೇಗಯುತನೂ ಆದ ನೀನು ಉದಕಕ್ಕೆ ಧಾರಕವಾದ ಅಂತರಿಕ್ಷದಲ್ಲಿ ನಿನ್ನ ಸಾಮರ್ಥ್ಯದಿಂದ ಸೂರ್ಯನನ್ನು ಉತ್ಪನ್ನಮಾಡಿದ್ದೀಯೆ.

English Translation

Pavamana, by your might you have generated the sun in (the firmament), the support of the water, hastening on with abundant wisdom that procures cattle (for your worshippers),

॥ ಸಂಹಿತಾಪಾಠಃ ॥

अजीजनो अमृत मर्त्येष्वा ऋतस्य धर्मन्नमृतस्य चारुणः ।
सदासरो वाजमच्छा सनिष्यदत् ॥ ५ ॥

॥ ಪದಪಾಠಃ ॥

अजीजनः । अमृत । मर्त्येषु । आ । ऋतस्य । धर्मन् । अमृतस्य । चारुणः ।
सदा । असरः । वाजं । अच्छ । सनिस्यदत् ॥ ५ ॥

॥ ಸಾಯಣಭಾಷ್ಯಂ ॥

हे अमृत । मरणधर्मरहित सोम त्वमृतस्य सत्यभूतस्य चारुणः कल्याणस्यामृतस्योदकस्य धर्मन्धारके ऽन्तरिक्षे सूर्यमजीजनः । किमर्थं । मर्त्येष्वा मनुष्येष्वभिमुखीभवनाय । किंच सनिष्यदत् संभजन् स त्वं वाजमच्छ संग्रामं लक्ष्य सदासरः । सरसि । गच्छसि ॥

॥ ಪ್ರತಿಪದಾರ್ಥ ॥

अमृत—ಮರಣಧರ್ಮರಹಿತನಾದ ಎಲೈ ಸೋಮನೇ । **ऋतस्य**—ಸತ್ಯಾತ್ಮಕವೂ । **चारुणः**—ಕಲ್ಯಾಣಾತ್ಮಕವೂ । **अमृतस्य**—ನಿತ್ಯವೂ ಆದ ಉದಕಕ್ಕೆ । **धर्मन्**—ಧಾರಕವಾದ ಅಂತರಿಕ್ಷದಲ್ಲಿ ।

ಮರ್ತ್ಯೇಷು ಆ—ಮಾನವರಿಗೆ ಎದುರಾಗಿ ಕಾಣಿಸಲು । **ಅಜೀಜನಃ**—ಸೂರ್ಯನನ್ನು ಉತ್ಪನ್ನಮಾಡಿದೆ । **ಸನಿಷ್ಯದತ್**—ಗಂಭೀರವಾಗಿ ಪ್ರವಹಿಸುವ ನೀನು । **ವಾಜಂ ಅಚ್ಛ**—ಸಂಗ್ರಾಮಾಭಿಮುಖವಾಗಿ । **ಸದಾ** — ಸರ್ವದಾ । **ಅಸರಃ**—ಮುನ್ನುಗ್ಗುತ್ತೀಯೆ

॥ ಭಾವಾರ್ಥ ॥

ಮರಣಧರ್ಮರಹಿತನಾದ ಎಲೈ ಸೋಮನೇ, ಸತ್ಯಾತ್ಮಕವೂ, ಕಲ್ಯಾಣಾತ್ಮಕವೂ, ನಿತ್ಯವೂ ಆದ ಉದಕಕ್ಕೆ ಧಾರಕವಾದ ಅಂತರಿಕ್ಷದಲ್ಲಿ ಮೂನವರಿಗೆ ಎದುರಾಗಿ ಕಾಣಿಸಲು ಸೂರ್ಯನನ್ನು ಉತ್ಪನ್ನಮಾಡಿದೆ ಗಂಭೀರವಾಗಿ ಪ್ರವಹಿಸುವ ನೀನು ಸಂಗ್ರಾಮಾಭಿಮುಖವಾಗಿ ಸರ್ವದಾ ಮುನ್ನುಗ್ಗುತ್ತೀಯೆ.

English Translation

Immortal Soma, you have generated (the sun) among mortals in (the firmament), the support of the truthful auspicious ambrosia ; streaming forth you go to battle continually

॥ ಸಂಹಿತಾಪಾಠಃ ॥

ಅಭ್ಯಭಿ ಹಿ ಶ್ರವಸಾ ತತರ್ದಿಥೋತ್ಸಂ ನ ಕಂ ಚಿಜ್ಜನಪಾನ-
ಮುಕ್ಷಿತಂ ।
ಶಯ್ಯಾಭಿರ್ನ ಭರಮಾಣೋ ಗಭಸ್ತ್ಯೋಃ ॥ ೫ ॥

॥ ಪದಪಾಠಃ ।

ಅಭಿ೪ಅಭಿ । ಹಿ । ಶ್ರವಸಾ । ತತರ್ದಿಥ । ಉತ್ಸಂ । ನ । ಕಂ । ಚಿತ್ । ಜನ೪ಪಾನಂ ।
ಉಕ್ಷಿತಂ ।
ಶಯ್ಯಾಭಿಃ । ನ । ಭರಮಾಣಃ । ಗಭಸ್ತ್ಯೋಃ । ೫ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಶವಸಾನ್ನೇನ ಹೇತುನಾಭ್ಯಭಿ ತ್ರತರ್ದಿಥ ಹಿ । ಪವಿತ್ರಮಭಿತೃಣ್ಣವಾನಸಿ । ಛಿನ್ನವಾನಸಿ । ತತ್ರ ದೃಷ್ಟಾಂತದ್ವಯಂ । ಉತ್ಸಂ ನ ಯಥಾ ಕಶ್ಚಿಜ್ಜನಪಾನಂ । ಅಸ್ಮಿನ್ಹಿ ಸಾ ಉದಕಂ ಪಿಬಂತಿ । ತಮುಕ್ಷಿತಮುಕ್ಷಣಂ ಕಂ ಚಿತ್ ಕಂಚನೋತ್ಸಮುತ್ಸರಣಶೀಲಂ ವಾಸ್ಯಾದಿಕಮಭಿತೃಣತ್ತಿ

ಅಥವಾ ಕಶ್ಚಿದ್ಗಭಸ್ತ್ಯೋರ್ಬಾಹ್ವೋಃ ಶಯ್ಯಾಭಿರಂಗುಲೀಭಿರ್ಭರಮಾಣ ಉದಕಂ ಸಂಭರನ್ ಕಂಚಿದಭಿತೃಣತ್ತಿ ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ಜನಾಸಃ**—ಲೋಕದ ಜನರು ಪಾನಮಾಡಲು ಯೋಗ್ಯವಾದುದೂ। **ಅಕ್ಷಿತಂ**—ಅಸೋಪ್ಯವಾದುದೂ ಆದ। **ಕಂ ಚಿತ್ ಉತ್ಸಂ ನ**—ಒಂದು ನೀರಿನ ಬುಗ್ಗೆಯನ್ನು ಒಡೆಯುವಂತೆಯೂ। **ಭರಮಾಣಃ**—ಉದಕವನ್ನು ಸುರಿಸಿರುವವನು **ಗಭಸ್ತ್ಯೋಃ**—ತನ್ನ ಬಾಹುಗಳ। **ಶಯ್ಯಾಭಿಃ**—ಬೆರಳುಗಳಿಂದ ನೀರನ್ನು ಚಿಮ್ಮಿಸುವಂತೆಯೂ। **ಶ್ರವಸಾ**—ಅನ್ನಹೇತ್ವರ್ಥವಾಗಿ **ಅಭ್ಯಭಿ**—ಸಮಿತ್ರವನ್ನು ಸುತ್ತಲೂ। **ತತರ್ದಿಥ ಹಿ**—ಛಿನ್ನಮಾಡಿದ್ದೀಯೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ಲೋಕದ ಜನರು ಪಾನಮಾಡಲು ಯೋಗ್ಯವಾದುದೂ, ಅಕ್ಷೋಪ್ಯವಾದುದೂ ಆದ ಒಂದು ನೀರಿನ ಬುಗ್ಗೆಯನ್ನು ಜಲವನ್ನು ಮೇಲಕ್ಕೆ ಬರಮಾಡಲು ಒಡೆಯುವಂತೆಯೂ, ಉದಕವನ್ನು ಸುರಿಸಿರುವವನನ್ನು ತನ್ನ ಬಾಹುಗಳ ಬೆರಳುಗಳಿಂದ ನೀರನ್ನು ಚಿಮ್ಮಿಸುವಂತೆಯೂ ನೀನು ಅನ್ನದ ಹೇತ್ವರ್ಥವಾಗಿ ಸಮಿತ್ರವನ್ನು ಸುತ್ತಲೂ ಛಿನ್ನಮಾಡಿದ್ದೀಯೆ.

English Translation

You have burst open (the filter) with (your) food as (one bursts open) an inexhaustible fountain giving drink to the nation, like one taking up (water) with the fingers of his two hands.

॥ ವಿಶೇಷವಿಷಯಗಳು ॥

ಶಯ್ಯಾಃ—ಈ ಶಬ್ದದ ಅರ್ಥವನ್ನು ವಿವರಿಸುತ್ತಾ ಯಾಸ್ಕರು ತಮ್ಮ ನಿರುಕ್ತದಲ್ಲಿ ಈ ರೀತಿ ಹೇಳಿದಾರೆ—

> **ಶಯ್ಯಾಃ। ಶಯ್ಯಾ ಅಂಗುಲಯೋ ಭವಂತಿ। ಸೃಜಂತಿ ಕರ್ಮಾಣಿ। ಶಯ್ಯಾ ಇಷವಃ ಶರಮಯ್ಯಃ। ಶರಃ ಶೃಣಾತೇಃ। ಶಯ್ಯಾಭಿರ್ನ ಭರಮಾಣೋ ಗಭಸ್ತ್ಯೋಃ ಇತ್ಯಪಿ ನಿಗಮೋ ಭವತಿ** ॥
>
> (ನಿ. ೫-೪)

ಶಯ್ಯಾಃ ಎಂದರೆ ಅಂಗುಲಿಗಳು, ಬೆರಳುಗಳು ಎಂದರ್ಥವು. ಈ ಬೆರಳುಗಳ ಸಹಾಯದಿಂದ ಕೆಲಸ ಕಾರ್ಯಗಳನ್ನು ಮಾಡುವವರಾದ್ದರಿಂದ ಶಯ್ಯಾಃ ಎಂಬ ಶಬ್ದವು ಬೆರಳುಗಳು ಎಂಬರ್ಥವನ್ನು ಸೂಚಿಸುವುದು. ಮತ್ತು ಈ ಶಬ್ದಕ್ಕೆ ಬಾಣಗಳು ಎಂದು ಇನ್ನೊಂದು ಅರ್ಥವೂ ಇರುವುದು. ಶರಶಬ್ದವು ಶೀಳು ಎಂಬರ್ಥವಳ್ಳ **ಶೃ (ಶೃಣಾತಿ)** ಧಾತುವಿನಿಂದ ನಿಷ್ಪನ್ನವಾಗಿ ಶೀಳುವ, ಹಿಂಸಿಸುವ ಆಯುಧವು ಎಂಬರ್ಥವನ್ನು ಕೊಡುವುದು. ಶರ್ಯ ಶಬ್ದಕ್ಕೆ ಬೆರಳು ಎಂಬರ್ಥದಲ್ಲಿ **ಶಯ್ಯಾಭಿರ್ನ ಭರಮಾಣೋ ಗಭಸ್ತ್ಯೋಃ** ಎಂಬ ಪ್ರಕೃತ ಋಕ್ಕಿನ ಶ್ರುತಿವಾಕ್ಯವೇ ಉದಾಹರಣೆಯಾಗಿರುವುದು.

॥ ಸಂಹಿತಾಪಾಠಃ ॥

ಆದೀಂ ಕೇ ಚಿತ್ಪಶ್ಯಮಾನಾಸ ಆಪ್ಯಂ ವಸುರುಚೋ ದಿವ್ಯಾ
ಅಭ್ಯನೂಷತ ।
ವಾರಂ ನ ದೇವಃ ಸವಿತಾ ವ್ಯೂರ್ಣುತೇ ॥ ೬ ॥

॥ ಪದಪಾಠಃ ॥

ಆತ್ । ಈಂ । ಕೇ । ಚಿತ್ । ಪಶ್ಯಮಾನಾಸಃ । ಆಪ್ಯಂ । ವಸುರುಚಃ । ದಿವ್ಯಾಃ । ಅಭಿ ।
ಅನೂಷತ ।
ವಾರಂ । ನ । ದೇವಃ । ಸವಿತಾ । ವಿ । ಊರ್ಣುತೇ ॥ ೬ ॥

॥ ಸಾಯಣಭಾಷ್ಯಂ ॥

ಆದನಂತರಂ ಪಶ್ಯಮಾನಾಸ ಏನಂ ಪಶ್ಯಂತೋ ದಿವ್ಯಾ ದಿವಿ ಭವಾ ವಸುರುಚೋ ನಾಮ ಕೇ ಚಿದಾಪ್ಯಂ ಬಂಧುಂ ಸಾಧುಮಿಮಾಮೇನಂ ಸೋಮಮಭ್ಯನೂಷತ । ಅಭ್ಯಸ್ತುವನ್ । ಕಸ್ಮಾದನಂತರಮಿತಿ ಉಚ್ಯತೇ । ದೇವೋ ದ್ಯೋತಮಾನಃ ಸವಿತಾ ಸರ್ವಸ್ಯ ಪ್ರೇರಕಃ ಸೂರ್ಯೋ ವಾರಮಾವರಕಮಂಧಕಾರಂ ನ ವ್ಯೂರ್ಣುತೇ । ನಾಪಗಮಯತಿ । ತದೈನಮಸ್ತುವನ್ । ಸೂರ್ಯೋದಯಾತ್ಪ್ರಾಗೇವ ಹಿ ಸೋಮಂ ಸ್ತುವಂತಿ ಖಲು ॥

॥ ಪ್ರತಿಪದಾರ್ಥ ॥

ಆತ್—ಆ ಒಡನೆಯೇ । ದೇವಃ—ಪ್ರಕಾಶಮಾನನಾದ । ಸವಿತಾ—ಸೂರ್ಯನು । ವಾರಂ—ಆವರಕವಾದ ಕಗ್ಗತ್ತಲೆಯನ್ನು । ನ ವ್ಯೂರ್ಣುತೇ—ಹೋಗಲಾಡಿಸಲು ಮುಂಚಿತವಾಗಿಯೇ । ಪಶ್ಯಮಾನಾಸಃ—ಈ ಸೋಮವನ್ನು ನೋಡುತ್ತಿದ್ದವನೂ । ದಿವ್ಯಾಃ—ದ್ಯುಲೋಕೋತ್ಪನ್ನರೂ । ವಸುರುಚಃ—ವಸುರುಕ್ ಸಂಜ್ಞಕರೂ ಆದ ಕೇ ಚಿತ್—ಕೆಲವರು । ಆಪ್ಯಂ—ಬಂಧುರೂಪನಾದ । ಈಂ—ಈ ಸೋಮನನ್ನು । ಅಭ್ಯನೂಷತ—ಸ್ತುತಿಸಿದರು.

॥ ಭಾವಾರ್ಥ ॥

ಸೋಮನು ಕಾಣಿಸಿಗೂಂಡೂಡನೆಯೇ, ಈ ಸೋಮನನ್ನು ನೋಡುತ್ತಿದ್ದವರೂ, ದ್ಯುಲೋಕೋತ್ಪನ್ನರೂ, ವಸುರುಕ್ ಸಂಜ್ಞಕರೂ ಆದ ಕೆಲವರು ಪ್ರಕಾಶಮಾನನಾದ ಸೂರ್ಯನು ಉದಯಿಸಿ ಕಗ್ಗತ್ತಲೆಯನ್ನು ಹೋಗಲಾಡಿಸುವುದಕ್ಕೆ ಮುಂಚಿತವಾಗಿಯೇ ಬಂಧುರೂಪನಾದ ಈ ಸೋಮನನ್ನು ಪ್ರಶಂಸಿಸಿದರು.

English Translation

Beholding him certain celestial Varuruchas praise him as a kinsman before the shining Savitri drives away the obstructing (darkness).

॥ ಸಂಹಿತಾಪಾಠಃ ॥

ತ್ವೇ ಸೋಮ ಪ್ರಥಮಾ ವ್ಯಕ್ತಬರ್ಹಿಷೋ ಮಹೇ ವಾಜಾಯ ಶ್ರವಸೇ
ಧಿಯಂ ದಧುಃ ।
ಸ ತ್ವಂ ನೋ ವೀರ ವೀರ್ಯಾಯ ಚೋದಯ ॥ ೭ ॥

॥ ಪದಪಾಠಃ ॥

ತ್ವೇ ಇತಿ । ಸೋಮ । ಪ್ರಥಮಾಃ । ವ್ಯಕ್ತಬರ್ಹಿಷಃ । ಮಹೇ । ವಾಜಾಯ । ಶ್ರವಸೇ । ಧಿಯಂ ।
ದಧುಃ ।

ಸಃ । ತ್ವಂ । ನಃ । ವೀರ । ವೀರ್ಯಾಯ । ಚೋದಯ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೋಮ ಪ್ರಥಮಾಃ ಪುರಾತನಾಃ । ಯದ್ವಾ । ಯಜ್ಞಪ್ರತ್ವೇನ ಸರ್ವೇಷಾಂ ಜನಾನಾಂ ಮುಖ್ಯಾಃ । ವ್ಯಕ್ತಬರ್ಹಿಷಃ । ವ್ಯಕ್ತಂ ಛಿನ್ನಂ ಬರ್ಹಿರ್ಯೈರ್ಯಜ್ಞಾರ್ಥಮಿತಿ ವ್ಯಕ್ತಬರ್ಹಿಷೋ ಯಜಮಾನಾಃ । ಮಹೇ ಮಹತೇ । ವಾಜಾಯ ಬಲಾಯ ಶ್ರವಸೇಽನ್ನಾಯ ಚ ಧಿಯಂ ಬುದ್ಧಿಂ ತ್ವೇ ತ್ವಯಿ ದಧುಃ । ನಿಹಿತವಂತಃ । ತಸ್ಮಾತ್ ಹೇ ವೀರ ಸಮರ್ಥ ಸೋಮ ಸ ತಾದೃಶಸ್ತ್ವಂ ನೋಽಸ್ಮಾನಪಿ ಸಂಗ್ರಾಮೇ ವೀರ್ಯಾಯ ಸಾಮರ್ಥ್ಯಾಯ ಚೋದಯ । ಪ್ರೇರಯ । ಯದ್ವಾ । ವೀರ್ಯಾಯ ವೀರೇ ಪುತ್ರೇ ಭವಾಯ ಸುಖಾಯಾಸ್ಮಾನ್ಪ್ರೇರಯ ।

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ಪ್ರಥಮಾಃ—ಪುರಾತನರೂ ವ್ಯಕ್ತಬರ್ಹಿಷಃ—ಯಜ್ಞಕ್ಕಾಗಿ ಹರಡಿದ ದರ್ಭಾಸನವುಳ್ಳವರೂ ಆದ ಯಜಮಾನರು ಮಹೇ—ಮಹತ್ತಾದ । ವಾಜಾಯ—ಬಲಕ್ಕಾಗಿಯೂ । ಶ್ರವಸೇ—ಅನ್ನಕ್ಕಾಗಿಯೂ ಧಿಯಂ—ತಮ್ಮ ಧ್ಯಾನಾತ್ಮಕವಾದ ಬುದ್ಧಿಯನ್ನು । ತ್ವೇ—ನಿನ್ನಲ್ಲಿ । ದಧುಃ—ಸ್ಥಾಪಿಸಿದ್ದಾರೆ । ವೀರ—ಸಾಮರ್ಥ್ಯವುಳ್ಳ ಎಲೈ ಸೋಮದೇವನೇ । ಸಃ—ಪ್ರಸಿದ್ಧನಾದ ತ್ವಂ—ನೀನು । ನಃ—ನಮ್ಮನ್ನು । ವೀರ್ಯಾಯ—ಶಕ್ತಿಸಂಪಾದನೆಗಾಗಿ । ಚೋದಯ—ಪ್ರೇರಿಸು

॥ ಭಾವಾರ್ಥ ॥

ಎಲೈ ಸೋಮದೇವನೇ, ಪುರಾತನರೂ, ಯಜ್ಞಕ್ಕಾಗಿ ದರ್ಭಾಸನವನ್ನು ಹರಡಿರುವವರೂ ಆದ ಯಜಮಾನರು ಮಹತ್ತಾದ ಬಲಕ್ಕಾಗಿಯೂ, ಅನ್ನಕ್ಕಾಗಿಯೂ, ತನ್ನ ಧ್ಯಾನಾತ್ಮಕವಾದ ಬುದ್ಧಿಯನ್ನು ನಿನ್ನಲ್ಲಿ ಸ್ಥಾಪಿಸಿದ್ದಾರೆ. ಸಾಮರ್ಥ್ಯಯುತನಾದ ಎಲೈ ಸೋಮದೇವನೇ, ಪ್ರಸಿದ್ಧನಾದ ನೀನು ನಮ್ಮನ್ನೂ ಸಹ ಶಕ್ತಿಸಂಪಾದನೆಗಾಗಿ ಪ್ರೇರಿಸು

English Translation

The chief (of men) having cut the sacred grass have fixed their minds, Soma, on you for abundant strength and food; do you, O hero, excite us to heroism.

। ಸಂಹಿತಾಪಾಠಃ ।

ದಿವಃ ಪೀಯೂಷಂ ಪೂರ್ವ್ಯಂ ಯದುಕ್ಥ್ಯಂ ಮಹೋ ಗಾಹಾದ್ದಿವ ಆ ನಿರಧುಕ್ಷತ ।
ಇಂದ್ರಮಭಿ ಜಾಯಮಾನಂ ಸಮುಸ್ಸರನ್ ॥ ೮ ॥

। ಪದಪಾಠಃ ।

ದಿವಃ । ಪೀಯೂಷಂ । ಪೂರ್ವ್ಯಂ । ಯತ್ । ಉಕ್ಥ್ಯಂ । ಮಹಃ । ಗಾಹಾತ್ । ದಿವಃ । ಆ । ನಿಃ । ಅಧುಕ್ಷತ ।
ಇಂದ್ರಂ । ಅಭಿ । ಜಾಯಮಾನಂ । ಶಂ । ಅಸ್ತರನ್ ॥ ೮ ॥

। ಸಾಯಣಭಾಷ್ಯಂ ।

ದಿವೋ ದ್ಯುಲೋಕಾತ್ ತತ್ರ ಸ್ಥಿತೈರ್ದೇವೈಃ ಪೀಯೂಷಂ ಪಾತವ್ಯಂ ಪೂರ್ವ್ಯಂ ಪ್ರತ್ನಂ ಯತ್ಸೋಮರೂಪಮನ್ನಮುಕ್ಥ್ಯಂ ಪ್ರಶಸ್ಯಮಸ್ತಿ ತಂ ಸೋಮಂ ಮಹೋ ಮಹತೋ ಗಾಹಾದ್ಗಹನಾದ್ದಿವೋ ದ್ಯುಲೋಕಾನ್ನಿರಧುಕ್ಷತ । ಅಭಿಮುಖ್ಯೇನ ನಿರ್ದುಹಂತಿ । ತತೋ ದುಗ್ಧಮಿಂದ್ರಮಭಿಲಕ್ಷ್ಯ ಜಾಯಮಾನಂ ತಂ ಸೋಮಂ ಸಮುಸ್ಸರನ್ । ಸ್ತೋತಾರಃ ಸಂಸ್ತುವಂತಿ ॥

। ಪ್ರತಿಪದಾರ್ಥ ।

ದಿವಃ—ದ್ಯುಲೋಕಸ್ಥರಾದ ದೇವತೆಗಳಿಗೆ । ಪೀಯೂಷಂ—ಪಾನಾರ್ಹವಾದುದೂ । ಪೂರ್ವ್ಯಂ—ಪುರಾತನವಾದುದೂ ಆದ । ಯತ್—ಯಾವ ಸೋಮವು । ಉಕ್ಥ್ಯಂ—ಪ್ರಶಸ್ಯವಾಗಿರುವುದೋ ಆ ಸೋಮವನ್ನು । ಮಹಃ—ಪೂಜ್ಯತ್ವಾದುದೂ । ಗಾಹಾತ್—ಗಭೀರವಾದುದೂ ಆದ । ದಿವಃ—ದ್ಯುಲೋಕದಿಂದ । ಆ ನಿರಧುಕ್ಷತ—ಕರೆದಿದ್ದಾರೆ । ಇಂದ್ರಂ ಅಭಿ—ಇಂದ್ರನ ಪಾನಾರ್ಥವಾಗಿ । ಜಾಯಮಾನಂ—ಉತ್ಪನ್ನವಾದ ಆ ಸೋಮವನ್ನು । ಸಮುಸ್ಸರನ್—ಸ್ತೋತೃಗಳು ಸ್ತುತಿಸುತ್ತಾರೆ.

।। ಭಾವಾರ್ಥ ।।

ದ್ಯುಲೋಕಸ್ಥರಾದ ದೇವತೆಗಳಿಗೆ ಪಾನಾರ್ಹವಾದುದೂ, ಪುರಾತನವಾದುದೂ ಆದ ಯಾವ ಸೋಮವು ಪ್ರಶಸ್ಯವಾಗಿರುವುದೋ ಆ ಸೋಮವನ್ನು ಮಹತ್ತಾದುದೂ ಗಭೀರವಾದುದೂ ಆದ ದ್ಯುಲೋಕದಿಂದ ಕರೆದಿದ್ದಾರೆ. ಇಂದ್ರನ ಪಾನಾರ್ಥವಾಗಿ ಉತ್ಪನ್ನವಾದ ಆ ಸೋಮವನ್ನು ಸ್ತೋತೃಗಳು ಸ್ತುತಿಸುತ್ತಾರೆ.

English Translation

They have milked from heaven from the mighty deep the ancient Soma, the beverage (of the gods) of heaven, which is worthy of praise, they have praised it when generated for Indra.

॥ ಸಂಹಿತಾಪಾಠಃ ॥

ಅಧ್ವ ಯದಿಮೇ ಪವಮಾನ ರೋದಸೀ ಇಮಾ ಚ ವಿಶ್ವಾ ಭುವನಾಭಿ ಮಜ್ಮನಾ ।
ಯೂಥೇ ನ ನಿಷ್ಠಾ ವೃಷಭೋ ವಿ ತಿಷ್ಠಸೇ ॥ ೯ ॥

॥ ಪದಪಾಠಃ ॥

ಅಧ । ಯತ್ । ಇಮೇ ಇತಿ । ಪವಮಾನ । ರೋದಸೀ ಇತಿ । ಇಮಾ । ಚ । ವಿಶ್ವಾ । ಭುವನಾ । ಅಭಿ । ಮಜ್ಮನಾ ।
ಯೂಥೇ । ನ । ನಿಃಷ್ಠಾಃ । ವೃಷಭಃ । ವಿ । ತಿಷ್ಠಸೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ಅಧಾನಂತರಂ ಯದ್ಯಥೇಮೇ ರೋದಸೀ ದ್ಯಾವಾಪೃಥಿವ್ಯಾವಿಮೇ-ಮಾನಿ ವಿಶ್ವಾ ವಿಶ್ವಾನಿ ಭುವನಾ ಭೂತಜಾತಾನಿ ಚ ಮಜ್ಮನಾ ಬಲೇನಾಭಿ ತಿಷ್ಠಸಿ ಸತ್ವಂ ತಥಾ ಕುರ್ವನ್ ಭುವನೇಷು ವಿ ತಿಷ್ಠಸೇ । ತತ್ರ ದೃಷ್ಟಾಂತಃ । ಯೂಥೇ ನ ಯಥಾ ಕಶ್ಚಿದ್ವೃಷಭೋ ಗವಾಂ ಯೂಥೇ ವೃಂದೇ ನಿಷ್ಠಾ ನಿಃಷ್ಠಿತೋ ವರ್ತತೇ ತದ್ವದ್ಭೂತಸ್ಥಾನೀಯೇಷು ಭೂತಜಾತೇಷು ನಿಃಷ್ಠಿತೋ ಭವಸಿ ॥

॥ ಪ್ರತಿಪದಾರ್ಥಃ ॥

ಪವಮಾನ—ಎಲೈ ಸೋಮದೇವನೇ **ವೃಷಭಃ**—ಶಕ್ತಿಯುತವಾದ ವೃಷಭವು । **ಯೂಥೇ**—ಗೋವುಗಳ ಸಮೂಹದಲ್ಲಿ **ನಿಃಷ್ಠಾಃ ನ**—ಪ್ರಭುತ್ವವನ್ನು ಮಾಡುತ್ತ ಹೇಗೆ ನಿಂತಿರುವುದೋ ಹಾಗೆಯೇ । **ಅಧ**—ನೀನು ಉತ್ಪನ್ನನಾದೊಡನೆಯೇ । **ಯತ್**—ಯಾವ ರೀತಿ । **ಇಮೇ ರೋದಸೀ**—ಈ ದ್ಯಾವಾಪೃಥಿವಿ ಗಳೆರಡೂ । **ಇಮಾ ಚ ವಿಶ್ವಾ ಭುವನಾ**—ಈ ಜಗತ್ತುಗಳಲ್ಲೆಲ್ಲಾ । **ಮಜ್ಮನಾ**—ತಮ್ಮ ಶಕ್ತಿಯಿಂದ । **ಅಭಿ**—ವ್ಯಾಪಿಸಿ ನಿಲ್ಲುವಂತೆ ಮಾಡುವೆಯೋ ಆ ರೀತಿಯೂ । **ವಿ ತಿಷ್ಠಸೇ**—ಪ್ರಭುತ್ವವನ್ನು ಮಾಡುತ್ತ ನಿಂತಿರುವೆ ।

॥ ಭಾವಾರ್ಥ ॥

ಎಲೈ ಸೋಮದೇವನೇ, ಶಕ್ತಿಯುತವಾದ ವೃಷಭವು ಗೋವುಗಳ ಸಮೂಹದಲ್ಲಿ ಪ್ರಭುತ್ವವನ್ನು ಮಾಡುತ್ತ ಹೇಗೆ ನಿಂತಿರುವುದೋ ಹಾಗೆಯೇ, ನೀನು ಉತ್ಪನ್ನನಾದೊಡನೆಯೇ ಯಾವ ರೀತಿ ಈ ದ್ಯಾವಾಪೃಥಿವಿಗಳೆರಡೂ ಈ

ಜಗತ್ತುಗಳಲ್ಲೆಲ್ಲಾ ತಮ್ಮ ಶಕ್ತಿಯಿಂದ ವ್ಯಾಪಿಸಿ ನಿಲ್ಲುವಂತ ಮಾಡುವೆಯೋ ಆ ರೀತಿಯೂ ನೀನು ಪ್ರಭುತ್ವವನ್ನು ಮಾಡುತ್ತ ನಿಂತಿರುವೆ.

English Translation

Since, Pavamana, you by your might are chief over these two worlds and all these living beings, as a bull is ruler in a herd of cows.

॥ ಸಂಹಿತಾಪಾಠಃ ॥

ಸೋಮಃ ಪುನಾನೋ ಅವ್ಯಯೇ ವಾರೇ ಶಿಶುರ್ನ ಕ್ರೀಳನ್ಪವಮಾನೋ ಅಕ್ಷ್ಣಾಃ ।
ಸಹಸ್ರಧಾರಃ ಶತವಾಜ ಇಂದುಃ ॥ ೧೦ ॥

॥ ಪದಪಾಠಃ ॥

ಸೋಮಃ । ಪುನಾನಃ । ಅವ್ಯಯೇ । ವಾರೇ । ಶಿಶುಃ । ನ । ಕ್ರೀಳನ್ । ಪವಮಾನಃ । ಅಕ್ಷ್ಣಾಃ । ಸಹಸ್ರಧಾರಃ । ಶತವಾಜಃ । ಇಂದುಃ ॥ ೧೦ ॥

॥ ಸಾಯಣಭಾಷ್ಯಂ ॥

ಪುನಾನಃ ಪೂಯಮಾನಃ ಪವಮಾನಃ ಪೂತಃ ಸೋಮೋ೬ವ್ಯಯೇ೬ವಿಮಯೇ ವಾರೇ ವಾಲೇ ಪವಿತ್ರೇ ಶಿಶುರ್ನ ಶಿಶುರಿವ ಕ್ರೀಳನ್ನಿತಸ್ತತಃ ಸಂಕ್ರೀಡಮಾನಃ ಸನ್ನಕ್ಷ್ಣಾಃ । ಕ್ಷರತಿ । ಕೀದೃಶಃ । ಸಹಸ್ರಧಾತೋ ಬಹುಧಾರಾಯುಕ್ತಃ ಶತವಾಜೋ ಬಹುಬಲ ಇಂದುರ್ದೀಪ್ತಃ ॥

ಪ್ರತಿಪದಾರ್ಥ ।

ಪುನಾನಃ—ಶುದ್ಧಿಕಾರಕನೂ । ಪವಮಾನಃ—ಶುದ್ಧಿಯನ್ನು ಹೊಂದಿದವನೂ ಆದ । ಸೋಮಃ—ಸೋಮದೇವನು । ಸಹಸ್ರಧಾರಃ—ಅನೇಕಧಾರೆಯುಳ್ಳನಾಗಿಯೂ । ಶತವಾಜಃ—ಪ್ರಭೂತವಾದ ಬಲವುಳ್ಳವನಾಗಿಯೂ । ಇಂದುಃ—ಪ್ರಕಾಶಮಾನನಾಗಿಯೂ ಬೆಳಗುತ್ತ । ಶಿಶುಃ—ಎಳೆ ಮಗುವು। ಕ್ರೀಳನ್ ನ—ಆಟವಾಡುವಂತೆ । ಅವ್ಯಯೇ—ಉಣ್ಣೆಯ । ವಾರೇ—ನಾರುಗಳ ಮೂಲಕ । ಅಕ್ಷ್ಣಾಃ—ಸ್ರವಿಸುತ್ತಾನೆ.

॥ ಭಾವಾರ್ಥ ॥

ಶುದ್ಧಿಕಾರಕನೂ, ಶುದ್ಧಿಯನ್ನು ಹೊಂದಿದವನೂ ಆದ ಸೋಮದೇವನು ಅನೇಕ ಧಾರೆಯುಳ್ಳವನಾಗಿಯೂ ಪ್ರಭೂತವಾದ ಬಲವುಳ್ಳವನಾಗಿಯೂ, ಪ್ರಕಾಶಮಾನನಾಗಿಯೂ ಬೆಳಗುತ್ತ ಎಳೆ ಮಗುವು ಆಟವಾಡುವಂತೆ ಉಣ್ಣೆಯ ನಾರುಗಳ ಮೂಲಕ ಸ್ರವಿಸುತ್ತಾನೆ.

English Translation

Pavamana Soma sporting like a child drops filtered through the woollen fleece, thousand-streamed, having the might of a hundred, radiant.

॥ ಸಂಹಿತಾಪಾಠಃ ॥

ಏಷ ಪುನಾನೋ ಮಧುಮಾ೦ ಋತಾವೇಂದ್ರಾಯೇಂದುಃ ಪವತೇ ಸ್ವಾದು-
ರೂರ್ಮಿಃ ।
ವಾಜಸನಿರ್ವರಿವೋವಿದ್ವಯೋಧಾಃ ॥ ೧೧ ॥

॥ ಪದಪಾಠಃ ॥

ಏಷಃ । ಪುನಾನಃ । ಮಧುಮಾನ್ । ಋತವಾ । ಇಂದ್ರಾಯ । ಇಂದುಃ । ಪವತೇ । ಸ್ವಾದು
ಊರ್ಮಿಃ ।
ವಾಜಸನಿಃ । ವರಿವಃವಿತ್ । ವಯಃವಿಧಾಃ ॥ ೧೧ ॥

॥ ಸಾಯಣಭಾಷ್ಯಂ ॥

ಪುನಾನಃ ಪೂಯಮಾನೋ ಮಧುಮಾನ್ ಮಾಧುರ್ಯೋಪೇತ ಋತವರ್ತವಾನ್ ಯಜ್ಞವಾ-
ನಿಂದುಃ ಕ್ಷರಣಶೀಲಃ ಸ್ವಾದುಃ ಸ್ವಾದುಕರ ಊರ್ಮಿರೇಷ ರಸಧಾರಾಸಂಘ ಇಂದ್ರಾಯೇಂದ್ರಾರ್ಥಂ
ಪವತೇ । ಕ್ಷರತಿ । ಕೀದೃಶಃ । ವಾಜಸನಿರನ್ನಸ್ಯ ದಾತಾ ವರಿವೋವಿದ್ಧನಸ್ಯ ಲಂಭಕೋ ವಯೋಧಾ
ಆಯುಷೋ ದಾತಾ ॥

॥ ಪ್ರತಿಪದಾರ್ಥ ॥

ಪುನಾನಃ—ಶುದ್ಧಿಕಾರಕನೂ । **ಮಧುಮಾನ್**—ಮಾಧುರ್ಯೋಪೇತನೂ । **ಋತವಾ**—ಯಜ್ಞವಂತನೂ । **ಇಂದುಃ**—ಸ್ರವಣಶೀಲನೂ । **ಸ್ವಾದುಃ**—ರುಚಿಕರನೂ । **ಊರ್ಮಿಃ**—ಅಲೆಗಳನ್ನು ಹೊಂದಿರುವನೂ ಆದ । **ಏಷಃ**—ಈ ಸೋಮನು । **ವಾಜಸನಿಃ**—ಅನ್ನದಾತನಾಗಿಯೂ । **ವರಿವೋವಿತ್**—ಧನದಾತನಾಗಿಯೂ । **ವಯೋಧಾಃ**—ಆಯುರ್ದಾತನಾಗಿಯೂ । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಪವತೇ**—ಸ್ರವಿಸುತ್ತಾನೆ.

॥ ಭಾವಾರ್ಥ ॥

ಶುದ್ಧಿಕಾರಕನೂ, ಮಾಧುರ್ಯೋಪೇತನೂ, ಯಜ್ಞವಂತನೂ, ಸ್ರವಣಶೀಲನೂ, ರುಚಿಕರನೂ, ಅಲೆಗಳನ್ನು ಹೊಂದಿರುವವನೂ ಆದ ಈ ಸೋಮನು ಅನ್ನದಾತನಾಗಿಯೂ ಧನದಾತನಾಗಿಯೂ, ಆಯುರ್ದಾತನಾಗಿಯೂ ಇಂದ್ರನ ಪಾನಾರ್ಥವಾಗಿ ಸ್ರವಿಸುತ್ತಾನೆ

English Translation

This Soma juice undergoing purification, sweet-flavoured, holy, dropping, flows for Indra a sweet stream, bestowing food, dispensing wealth and life.

॥ ಸಂಹಿತಾಪಾಠಃ ॥

ಸ ಪವಸ್ವ ಸಹಮಾನಃ ಪೃತನ್ಯೂನ್ತ್ಸೇಧನ್ರಕ್ಷಾಂಸ್ಯಪ ದುರ್ಗಹಾಣಿ ।

ಸ್ವಾಯುಧಃ ಸಾಸಹ್ವಾನ್ತ್ಸೋಮ ಶತ್ರೂನ್ ॥ ೧೨ ॥

॥ ಪದಪಾಠಃ ॥

ಸಃ । ಪವಸ್ವ । ಸಹಮಾನಃ । ಪೃತನ್ಯೂನ್ । ಸೇಧನ್ । ರಕ್ಷಾಂಸಿ । ಅಪ । ದುಃಗಹಾನಿ ।

ಸುಽಆಯುಧಃ । ಸಸಹ್ವಾನ್ । ಸೋಮ । ಶತ್ರೂನ್ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ಸ ತಾದೃಶಸ್ತ್ವಂ ಪವಸ್ವ । ಕಂ ಕುರ್ವನ್ । ಪೃತನ್ಯೂನ್ ॥ ಕವ್ಯಧ್ವರಪೃತನಸ್ಯರ್ಚಿ ಲೋಪ ಇತಿ ಕ್ಯಚಿ ಪರತೋಽಕಾರಲೋಪಃ ॥ ಸಂಗ್ರಾಮಕಾಮಾನ್ಯುತ್ಪ್ರೂನ್ ಸಹಮಾನೋಽಭಿಭವನ್ ತಥಾ ದುರ್ಗಹಾಣಿ ಕೈಶ್ಚಿದಪಿ ದುರ್ಗಮಾಣಿ ರಕ್ಷಾಂಸ್ಯಪ ಸೇಧನ್ನಪಗಮಯನ್ ಹಿಂಸನ್ । ಕಂಚಿ ಸ್ವಾಯುಧಃ ಶೋಭನಾಯುಧಃ ಸನ್ಯುತ್ಪ್ರೂನ್ಸಾಸಹ್ವಾನಭಿಭವನ್ನಭಿಶಪನ್ ಪವಸ್ವ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ಸಃ—ಪ್ರಸಿದ್ಧನಾದ ನೀನು । ಪೃತನ್ಯೂನ್—ಯುದ್ಧಾಪೇಕ್ಷಿಗಳಾದ ಶತ್ರುಗಳನ್ನು । ಸಹಮಾನಃ—ಸೋಲಿಸುತ್ತಲೂ । ದುರ್ಗಹಾಣಿ—ಅಪ್ರತಿಹತವಾದ । ರಕ್ಷಾಂಸಿ—ರಾಕ್ಷಸರನ್ನು । ಅಪ ಸೇಧನ್—ನಾಶಪಡಿಸುತ್ತಲೂ । ಸ್ವಾಯುಧಃ—ಉತ್ತಮವಾದ ಆಯುಧವುಳ್ಳವನಾಗಿಯೂ । ಶತ್ರೂನ್—ಶತ್ರುಗಳನ್ನೆಲ್ಲ । ಸಾಸಹ್ವಾನ್—ಪೂರ್ಣವಾಗಿ ಸೋಲಿಸುತ್ತಲೂ । ಪವಸ್ವ—ಪ್ರವಹಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಪ್ರಸಿದ್ಧನಾದ ನೀನು ಯುದ್ಧಾಪೇಕ್ಷಿಗಳಾದ ಶತ್ರುಗಳನ್ನು ಸೋಲಿಸುತ್ತಲೂ, ಅಪ್ರತಿಹತರಾದ ರಾಕ್ಷಸರನ್ನು ನಾಶಪಡಿಸುತ್ತಲೂ, ಉತ್ತಮವಾದ ಆಯುಧವುಳ್ಳವನಾಗಿಯೂ, ಶತ್ರುಗಳನ್ನೆಲ್ಲ ಪೂರ್ಣವಾಗಿ ಸೋಲಿಸುತ್ತಲೂ ಪ್ರವಹಿಸು.

English Translation

Flow, Soma, overcoming (our) enemies, driving away the Rakshasas who are difficult to approach, well-armed, triumphing over foes.

ನೂರ ಹನ್ನೊಂದನೆಯ ಸೂಕ್ತವು

। ಸಾಯಣಭಾಷ್ಯಂ ।

ಅಯಾ ರುಚೇತಿ ತೃಚಮಸ್ಯಮುಂ ಸೂಕ್ತಂ ಪರುಚ್ಛೇಪಪುತ್ರಸ್ಯಾನಾನತಾಖ್ಯಸ್ಯಾರ್ಷಮನುಷ್ಟುಪ್ಛಂದಸ್ಯಂ । ಪವಮಾನಸೋಮದೇವತಾಕಂ । ತಥಾ ಚಾನುಕ್ರಮ್ಯತೇ । ಅಯಾ ರುಚಾ ತೃಚಮನಾನತಃ ಪಾರುಚ್ಛೇಪಿರಾತ್ಯಷ್ಟುಮಿತಿ ॥ ಗತೋ ವಿನಿಯೋಗಃ ॥

ಅನುವಾದವು—**ಅಯಾ ರುಚಾ** ಎಂಬ ಈ ಸೂಕ್ತವು ಏಳನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು-ಇದರಲ್ಲಿ ಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಪರುಚ್ಛೇಪ**ಋಷಿಯ ಪುತ್ರನಾದ **ಅನಾನತಃ** ಎಂಬುವನು ಋಷಿಯು ; **ಪವಮಾನಸೋಮ**ನು ದೇವತೆಯು ; **ಅತ್ಯಷ್ಟಿಃ** ಎಂಬುದು ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಯಾ ರುಚಾ ತೃಚಮನಾನತಃ ಪಾರುಚ್ಛೇಪಿರಾತ್ಯಷ್ಟುಂ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

ಸೂಕ್ತ—೧೧೧

ಮಂಡಲ—೯ ॥ ಅನುವಾಕ—೭ ॥ ಸೂಕ್ತ—೧೧೧ ॥
ಅಷ್ಟಕ—೭ ॥ ಅಧ್ಯಾಯ—೫ ॥ ವರ್ಗ—೨೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೩ ॥
ಋಷಿಃ—ಅನಾನತಃ ಪಾರುಚ್ಛೇಪಿಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಅತ್ಯಷ್ಟಿಃ ॥

। ಸಂಹಿತಾಪಾಠಃ ।

ಅಯಾ ರುಚಾ ಹರಿಣ್ಯಾ ಪುನಾನೋ ವಿಶ್ವಾ ದ್ವೇಷಾಂಸಿ ತರತಿ ಸ್ವಯುಗ್ವಭಿಃ ಸೂರೋ ನ ಸ್ವಯುಗ್ವಭಿಃ ।
ಧಾರಾ ಸುತಸ್ಯ ರೋಚತೇ ಪುನಾನೋ ಅರುಷೋ ಹರಿಃ ।
ವಿಶ್ವಾ ಯದ್ರೂಪಾ ಪರಿಯಾತ್ಯೃಕ್ವಭಿಃ ಸಪ್ತಾಸ್ಯೇಭಿರ್ಋಕ್ವಭಿಃ ॥ ೧ ॥

। ಪದಪಾಠಃ ।

ಅಯಾ । ರುಚಾ । ಹರಿಣ್ಯಾ । ಪುನಾನಃ । ವಿಶ್ವಾ । ದ್ವೇಷಾಂಸಿ । ತರತಿ । ಸ್ವಯುಗ್ವಭಿಃ । ಸೂರಃ । ನ । ಸ್ವಯುಗ್ವಭಿಃ ।
ಧಾರಾ । ಸುತಸ್ಯ । ರೋಚತೇ । ಪುನಾನಃ । ಅರುಷಃ । ಹರಿಃ ।
ವಿಶ್ವಾ । ಯತ್ । ರೂಪಾ । ಪರಿಯಾತಿ । ಋಕ್ವಭಿಃ । ಸಪ್ತ । ಅಸ್ಯೇಭಿಃ । ಋಕ್ವಭಿಃ ॥ ೧ ॥

॥ ಸಾಯಣಭಾಷ್ಯಂ ॥

ಪುನಾನಃ ಪೂಯಮಾನಃ ಸೋಮೋ ಹರಿಣ್ಯಾ ಹರಿತವರ್ಣಯಾಯಾನಯಾ ರುಚಾ ರೋಚ-ಮಾನಯಾ ಧಾರಯಾ ವಿಶ್ವಾ ಸರ್ವಾಣಿ ದ್ವೇಷಾಂಸಿ ದ್ವೇಷ್ಟೄಣಿ ರಕ್ಷಾಂಸಿ ತರತಿ । ವಿನಾಶಯತಿ । ತತ್ರ ದೃಷ್ಟಾಂತಃ । ಸೂರೋ ನ ಯಥಾ ಸೂರ್ಯಃ ಸ್ವಯುಗ್ಭಿಃ ಸ್ವಯಂ ಯುಕ್ತೈ ರಶ್ಮಿಭಿಸ್ತಮಾಂಸಿ ಹಿನಸ್ತಿ ತದ್ವತ್ । ಸ್ವಯುಗ್ಭಿರಿತಿ ದ್ವಿರುಚ್ಚಾರಾದರಾರ್ಥಾ । ಯದ್ವಾ । ಧಾರಯಾ ಯುಕ್ತಃ ಸೋಮಃ ಸ್ವೀಯೈರ್ಯುಕ್ತೈಸ್ತೇಜೋಭೀ ರಕ್ಷಾಂಸಿ ತರತಿ । ತಸ್ಯ ಸುತಸ್ಯಾಭಿಷುತಸ್ಯ ಸೋಮಸ್ಯ ಧಾರಾ ರೋಚತೇ । ದೀಪ್ಯತೇ । ಪುನಾನಃ ಪೂಯಮಾನೋ ಹರಿರ್ಹರಿತವರ್ಣಃ ಸೋಮೋಽರುಷ ಆರೋಚ-ಮಾನೋ ಭವತಿ । ಯದ್ಯಃ ಸೋಮಃ ಸಪ್ತಾಸ್ಯೇಭೀರಸಹರಣಶೀಲಾಸ್ಯೈರ್ಯುಕ್ತೈಭಿಃ ಸ್ತುತಿಮದ್ಭಿರ್ಯುಕ್ತೈಭಿಸ್ತೇಜೋಭಿರ್ವಿಶ್ವಾ ವಿಶ್ವಾನಿ ವ್ಯಾಪ್ತಾನಿ ರೂಪಾ ರೂಪಾಣಿ ನಕ್ಷತ್ರಾಣಿ ಪರಿಯಾತಿ ಗಚ್ಛತಿ ವ್ಯಾಪ್ನೋತಿ ॥

॥ ಪ್ರತಿಪದಾರ್ಥ ॥

ಸೂರಃ—ಸೂರ್ಯನು । **ಸ್ವಯುಗ್ಭಿಃ ನ**—ತನ್ನಿಂದ ಪ್ರಸೂತವಾದ ರಶ್ಮಿಗಳಿಂದ ತಮಸ್ಸನ್ನು ನಾಶ ಮಾಡುವಂತೆ । **ಪುನಾನಃ**—ಶುದ್ಧಿಯನ್ನು ಹೊಂದತಕ್ಕ ಸೋಮನು । **ಹರಿಣ್ಯಾ**—ಪಚ್ಚೆವರ್ಣವುಳ್ಳ । **ಅಯಾ ರುಚಾ**—ಈ ಪ್ರಭೆಯಿಂದ । **ವಿಶ್ವಾ**—ಸಮಸ್ತವಾದ । **ದ್ವೇಷಾಂಸಿ**—ಶತ್ರುಗಳನ್ನೂ । **ಸ್ವಯುಗ್ಭಿಃ**—ತನ್ನ ತೇಜಸ್ಸುಗಳಿಂದ । **ತರತಿ**—ನಾಶಪಡಿಸುತ್ತಾನೆ । **ಸುತಸ್ಯ**—ಹಿಂಡಲ್ಪಟ್ಟ ಸೋಮದ । **ಧಾರಾ**—ಪ್ರವಾಹವು । **ರೋಚತೇ**—ಪ್ರಕಾಶಿಸುತ್ತದೆ । **ಯತ್**—ಯಾವ ಸೋಮವು । **ಸಪ್ತಾಸ್ಯೇಭಿಃ**—ಸಪ್ತಸಂಖ್ಯಾಕವಾದ (ರಸಹರಣಶೀಲವಾದ) ಮುಖಗಳುಳ್ಳವೂ । **ಋಕ್ವಭಿಃ**—ಸ್ತುತಿಗಳೊಡನೆ ಕೂಡಿದವೂ ಆದ । **ಋಕ್ವಭಿಃ**—ತೇಜಸ್ಸುಗಳಿಂದ । **ವಿಶ್ವಾ**—ಸರ್ವವ್ಯಾಪಕಗಳಾದ । **ರೂಪಾ**—(ನಕ್ಷತ್ರಾದಿ) ರೂಪಗಳನ್ನೂ । **ಪರಿಯಾತಿ**—ಹೊಂದಿರುವುದೋ ಅಂತಹುದೂ । **ಪುನಾನಃ**—ಶುದ್ಧಿಯನ್ನು ಹೊಂದುವುದೂ । **ಹರಿಃ**—ಪಚ್ಚೆವರ್ಣವುಳ್ಳದ್ದೂ ಆದ ಸೋಮವು । **ಅರುಷಃ**—ಪ್ರಕಾಶಮಾನವಾಗಿ (ಹೊಂಬಣ್ಣವುಳ್ಳದ್ದಾಗಿ) ಇರುತ್ತದೆ.

॥ ಭಾವಾರ್ಥ ॥

ಸೂರ್ಯನು ತನ್ನಿಂದ ಪ್ರಸೂತವಾದ ರಶ್ಮಿಗಳಿಂದ ತಮಸ್ಸನ್ನು ನಾಶಮಾಡುವಂತೆ ಶುದ್ಧಿಯನ್ನು ಹೊಂದತಕ್ಕ ಸೋಮನು ಪಚ್ಚೆವರ್ಣವುಳ್ಳ ಈ ಪ್ರಭೆಯಿಂದ ಸಕಲ ಶತ್ರುಗಳನ್ನೂ ನಾಶಪಡಿಸುತ್ತಾನೆ. ಹಿಂಡಿರುವ ಸೋಮರಸದ ಪ್ರವಾಹವು ಪ್ರಕಾಶಿಸುತ್ತದೆ. ಯಾವ ಸೋಮವು ರಸವನ್ನು ಹೆರಿಸುವುದೂ, ಸಪ್ತಸಂಖ್ಯಾಕವಾದ ಮುಖಗಳುಳ್ಳವೂ ಸ್ತುತಿಗಳೊಡನೆ ಕೂಡಿದವೂ ಆದ ತೇಜಸ್ಸುಗಳಿಂದ ಸರ್ವವ್ಯಾಪಕಗಳಾದ ನಕ್ಷತ್ರಾದಿರೂಪಗಳನ್ನು ಹೊಂದಿರುವುದೋ ಅಂತಹುದೂ, ಶುದ್ಧಿಯನ್ನು ಹೊಂದುವುದೂ, ಪಚ್ಚೆವರ್ಣವುಳ್ಳದ್ದೂ ಆದ ಸೋಮವು ಪ್ರಕಾಶಮಾನವಾಗಿರುತ್ತದೆ.

English Translation

With this bright green-tinted stream Soma being filtered overcomes all enemies with the (juices) yoked to it, as the sun (overcomes the darkness) with the (rays) yoked to it ; the stream of the effused (Soma) shines,

the filtered green-tinted (Soma is) resplendent, which pervades all constellations, with the Rikvans, with the seven-mouthed Rikvans.

॥ ಸಂಹಿತಾಪಾಠಃ ।

ತ್ವಂ ತ್ಯತ್ಪಣೀನಾಂ ವಿದೋ ವಸು ಸಂ ಮಾತೃಭಿರ್ಮರ್ಜಯಸಿ ಸ್ವ ಆ
ದಮೇ ಯತಸ್ಯ ಧೀತಿಭಿರ್ದಮೇ
ಪರಾವತೋ ನ ಸಾ ಮ ತದ್ಯತ್ರಾ ರಣಂತಿ ಧೀತಯಃ ।
ತ್ರಿಧಾತುಭಿರರುಷೀಭಿರ್ವಯೋ ದಧೇ ರೋಚಮಾನೋ ವಯೋ ದಧೇ ॥

॥ ಪದಪಾಠಃ ॥

ತ್ವಂ । ತ್ಯತ್ । ಪಣೀನಾಂ । ವಿದಃ । ವಸು । ಸಂ । ಮಾತೃಭಿಃ । ಮರ್ಜಯಸಿ । ಸ್ವೇ । ಆ । ದಮೇ ।
ಯತಸ್ಯ । ಧೀತಿಭಿಃ । ದಮೇ ।
ಪರಾವತಃ । ನ । ಸಾಮ । ತತ್ । ಯತ್ರ । ರಣಂತಿ । ಧೀತಯಃ ।
ತ್ರಿಧಾತುಭಿಃ । ಅರುಷೀಭಿಃ । ವಯಃ । ದಧೇ । ರೋಚಮಾನಃ । ವಯಃ । ದಧೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ತ್ಯತ್ಪಣೀನಾಂ ವಸು ಪಣಿಭಿರಪಹೃತಂ ಗವಾತ್ಮಕಂ ಧನ ವಿದಃ । ಅಲಭಥಾಃ । ಅ ಅಪಿ ಚತರ್ಥಸ್ಯ ಯಜ್ಞಸ್ಯ ಧೀತಿಭಿರ್ಧಾತ್ರೀಭಿರ್ಮಾತೃಭಿರ್ವಸತೀವರೀಭಿಃ ಸ್ವ ಆತ್ಮೀಯೇ ದಮೇ ಗೃಹಭೂತೇ ದಮೇ ಯಜ್ಞೇ ಸಂ ಮರ್ಜಯಸಿ । ಸಪ್ಯುಕ್ ಶುದ್ಧೋ ಭವಸಿ । ಪರಾವತೋ ನ ದೂರಸ್ಥಾದ್ದೇಶಾದ್ಯಥಾ ಸಾಮ ಸಾಮಧ್ವನಿಃ ಶ್ರೂಯತೇ ತಥಾ ತವ ತತ್ಸಾಮಧ್ವನಿಃ ಸರ್ವೈಃ ಶ್ರೂಯತೇ । ಅಸೌ ಸೋಮಾಭಷವಾಭಿಷ್ಯಾಯೇನೋಕ್ತಃ । ಯತ್ರ ಯಸ್ಮಿಞ್ಶಬ್ದೇ ಧೀತಯಃ ಕರ್ಮಣಾಂ ಧರ್ತಾರೋ ಯಜಮಾನಾ ರಣಂತಿ ರಮಂತೇ । ರೋಚಮಾನಃ ಸೋಮಸ್ತ್ರಿಧಾತುಭಿಸ್ತ್ರಯಾಣಾಂ ಲೋಕಾನಾಂ ಧಾರಯಿತ್ರೀಭಿರ್ಮಾತೃಭಿರ್ವಸತೀವರೀಭಿರರುಷೀಭಿರಾರೋಚಮಾನಾಭಿರ್ದೀಪ್ತಿರ್ವಯೋಽನ್ನಂ ದಧೇ । ಸ್ತೋತೃಭ್ಯಃ ಪ್ರಯಚ್ಛತಿ । ಪುನರ್ವಯೋ ದಧ ಇತ್ಯಾದರಾರ್ಥಂ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) ತ್ವಂ—ನೀನು । ತ್ಯತ್—ಪ್ರಸಿದ್ಧವಾದ । ಪಣೀನಾಂ—ಪಣಿಗಳ (ಎಂಬ ರಾಕ್ಷಸರಿಂದ ಅಪಹೃತವಾದ) । ವಸು—ಗವಾತ್ಮಕವಾದ ಧನಗಳನ್ನು । ವಿದಃ—ಒಂದುನೆ । ಆ ಪುನ್ನು । ಯತಸ್ಯ—

ಯಜ್ಞದ । ಧೀತಿಭಿಃ—ಧಾರಕಗಳಾದ । ಮಾತೃಭಿಃ—ವಸತೀವರಿಗಳಿಂದ । ಸ್ವೇ—ನಿನ್ನ । ದಮೇ—ಗೃಹರೂಪವಾದ । ದಮೇ—ಯಜ್ಞದಲ್ಲಿ । ಸಂ ಮರ್ಜಯಸಿ—ಶೋಧಿಸಲ್ಪಡುತ್ತೀಯೆ । ಪರಾವತಃ—ಅತ್ಯಂತ ದೂರ ಪ್ರದೇಶದಿಂದಲೂ । ಸಾಮ ನ—ಸಾಮಗಾನದ ಧ್ವನಿಯು ಕೇಳಿಸುವಂತೆ । ಯತ್ರ—ಯಾವ ಅಭಿಷವಶಬ್ದದಲ್ಲಿ । ಧೀತಯಃ—ಕರ್ಮಧಾರಕರಾದ ಯಜಮಾನರು । ರಣಂತಿ—ರಮಿಸುತ್ತಾರೆಯೋ । ತತ್—ಆ ನಿನ್ನ ಶಬ್ದವು । ಎಲ್ಲರಿಂದಲೂ ಕೇಳಲ್ಪಡುತ್ತದೆ । ರೋಚಮಾನಃ—ಪ್ರಕಾಶಮಾನನಾದ ಸೋಮನು । ಅರುಷೀಭಿಃ—ಕಂಗೊಳಿಸುವುದೂ । ತ್ರಿಧಾತುಭಿಃ—ಮೂರು ಲೋಕಗಳನ್ನೂ ಧರಿಸುವುದೂ ಆದ ವಸತೀವರಿಗಳೊಡನೆ ಕೂಡಿ । ವಯಃ—ಅನ್ನವನ್ನು । ದಧೇ—ಕೊಡುತ್ತಾನೆ । ವಯಃ—ಅನ್ನವನು । ದಧೇ—ಒದಗಿಸುತ್ತಾನೆ.

। ಭಾವಾರ್ಥ ।

ಎಲ್ಲೆ ಸೋಮದೇವನೇ, ನೀನು ಪಣಿಗಳಿಂದ ಅಪಹೃತವಾದ, ಪ್ರಸಿದ್ಧವಾದ, ಗವಾತ್ಮಕವಾದ ಧನಗಳನ್ನು ಅಪಹರಿಸುವೆ. ಯಜ್ಞಕ್ಕೆ ಧಾರಕಗಳಾದ ವಸತೀವರಿಗಳಿಂದ ನಿನ್ನ ಗೃಹರೂಪವಾದ ಯಜ್ಞದಲ್ಲಿ ಶೋಧಿಸಲ್ಪಡುತ್ತೀಯೆ. ಅತ್ಯಂತ ದೂರಪ್ರದೇಶದಿಂದಲೂ ಸಾಮಗಾನದ ಧ್ವನಿಯು ಕೇಳಿಸಲ್ಪಡುವಂತೆ ಯಾವ ನಿನ್ನ ಅಭಿಷವ ಶಬ್ದದಲ್ಲಿ ಕರ್ಮಧಾರಕರಾದ ಯಜಮಾನರು ರಮಿಸುವರೋ ಆ ನಿನ್ನ ಶಬ್ದವು ಎಲ್ಲರಿಂದಲೂ ಕೇಳಲ್ಪಡುತ್ತದೆ. ಪ್ರಕಾಶಮಾನನಾದ ಸೋಮನು ಕಂಗೊಳಿಸುವುದೂ, ಮೂರು ಲೋಕಗಳನ್ನು ಧರಿಸುವುದೂ ಆದ ವಸತೀವರಿಗಳೊಡನೆ ಕೂಡಿ ಯಜಮಾನರಿಗೆ ಅನ್ನವನ್ನು ಕೊಡುತ್ತಾನೆ

English Translation

You did discover the wealth of the Panis, and are washed in your own house at the sacrifice by the mothers, the supporters of the sacrifice; as the hymn (is heard) from afar, so it (is heard by all, the hymn) in which the supporters (of the rite) rejoice, the shining (Soma) with its brilliant (waters), the supporters of the three (worlds), gives food (to the worshippers.

। ಸಂಹಿತಾಪಾಠ ।

ಪೂರ್ವಾಮನು ಪ್ರದಿಶಂ ಯಾತಿ ಚೇಕಿತತ್ಸಂ ರಶ್ಮಿಭಿರ್ಯತತೇ ದರ್ಶತೋ
ರಥೋ ದೈವ್ಯೋ ದರ್ಶತೋ ರಥಃ ।
ಅಗ್ನನ್ನುಕ್ಥಾನಿ ಪೌಂಸ್ಯೇಂದ್ರಂ ಜೈತ್ರಾಯ ಹರ್ಷಯನ್ ।
ವಜ್ರಶ್ಚ ಯದ್ಧವಥೋ ಅನಪಚ್ಯುತಾ ಸಮತ್ಸ್ವನಪಚ್ಯುತಾ ॥ ೩ ॥

ಪದಪಾಠಃ

ಪೂರ್ವಾಂ । ಅನು । ಪ್ರದಿಶಂ ಯಾತಿ । ಚೇಕಿತತ್ । ಸಂ । ರಶ್ಮಿಭಿಃ । ಯತತೇ । ದರ್ಶತಃ ।

ರಥಃ । ದೈವ್ಯಃ । ದರ್ಶತಃ । ರಥಃ ।

ಅಗ್ನೇನ್ । ಉಕ್ಥಾನಿ । ಪೌಂಸ್ಯಾ । ಇಂದ್ರಂ । ಜೈತ್ರಾಯ । ಹರ್ಷಯನ್ ।

ವಜ್ರಃ । ಚ । ಯತ್ . ಭವಥಃ । ಅನಪಚ್ಯುತಾ । ಸಮತ್ಸು । ಅನಪಚ್ಯುತಾ ॥ ೩ ॥

॥ ಸಾಯಣಭಾಷ್ಯಂ ॥

ಚೇಕಿತಜ್ಞಾನಾನಃ ಸೋಮಃ ಪೂರ್ವಾಂ ಪ್ರಾಚೀಂ ಪ್ರದಿಶಂ ಶ್ರೇಷ್ಠಾಂ ದಿಶಮನು ಯಾತಿ । ಅನುಗಚ್ಛತಿ । ಕಿಂಚ ದರ್ಶತಃ ಸರ್ವೈರ್ದರ್ಶನೀಯೋ ದೈವ್ಯೋ ದೇವೇಷು ಭವಸ್ತವ ರಥಃ ಸೂರ್ಯ-ರಶ್ಮಿಭಿಃ ಸಂ ಯತತೇ । ಸಂಗಚ್ಛತೇ । ಪುನರ್ದರ್ಶತೋ ರಥ ಇತ್ಯಾದರಾರ್ಥಂ । ತತಃ ಪೌಂಸ್ಯಾ ಪುಂಸ್ತ್ವಯುಕ್ತಾನ್ಯುಕ್ಥಾನಿ ಸ್ತೋತ್ರಾಣ್ಯಗ್ನೇನ್ । ಇಂದ್ರಂ ಗಚ್ಛಂತಿ । ತಥಾ ಜೈತ್ರಾಯ ಜಯಾರ್ಥಂ ತಾನಿ ಸ್ತೋತ್ರಾಣೀಂದ್ರಂ ಹರ್ಷಯನ್ । ಹರ್ಷಯಂತಿ । ತಥಾ ತಸ್ಯ ವಜ್ರಶ್ಚ ತಮಿಂದ್ರಂ ಗಚ್ಛತಿ । ಯದ್ಯದಾ ಸಮತ್ಸು ಸಂಗ್ರಾಮೇಷ್ವನಪಚ್ಯುತಾನಪಚ್ಯುತೌ ಶತ್ರುಭಿರಪರಾಜಿತೌ ಸೋಮೇಂದ್ರೌ ತ್ವಂ ಚೇಂದ್ರಶ್ಚ ಯುವಾಂ ಸಹ ಭವಥಃ ತದಾ ಸ್ತೋತ್ರಾಗಮನಾದೀನಿ ಭವಂತಿ । ಪುನರನಪಚ್ಯುತೇ-ತ್ಯಾದರಾರ್ಥಂ ॥

॥ ಪ್ರತಿಪದಾರ್ಥ ॥

ಚೇಕಿತತ್—ಪ್ರಾಜ್ಞನಾದ ಸೋಮನು । ಪೂರ್ವಾಂ ಪ್ರದಿಶಂ—ಉತ್ಕೃಷ್ಟವಾದ ಪೂರ್ವದಿಕ್ಕಿಗೆ । ಅನು ಯಾತಿ—ಹೋಗಿ ಸೇರುತ್ತಾನೆ । ದರ್ಶತಃ—ಎಲ್ಲರಿಗೂ ಗೋಚರವಾಗುವುದೂ । ದೈವ್ಯಂ—ದೇವತೆಗಳಲ್ಲಿ ಪ್ರಸಿದ್ಧವಾದುದೂ ಆದ । ರಥಃ ಸೋಮನ ರಥವು । ರಶ್ಮಿಭಿಃ—ಸೂರ್ಯರಶ್ಮಿಗಳೊಡನೆ ಸಂ ಯತತೇ—ಸೇರಿಕೊಳ್ಳುತ್ತದೆ । (ಎಲೈ ಸೋಮನೇ) ಯತ್—ಯಾವಾಗ । ಸಮತ್ಸು—ಸಂಗ್ರಾಮಗಳಲ್ಲಿ । ಅನಪಚ್ಯುತಾ ಭವಥಃ—ನೀನೂ ಮತ್ತು ಇಂದ್ರನೂ ಶತ್ರುಗಳಿಂದ ಅಪರಾಜಿತರಾಗುವಿರೋ ಆಗ । ಪೌಂಸ್ಯಾ—ಪುಂಶಕ್ತಿಯುತವಾದ । ಉಕ್ಥಾನಿ—ಸ್ತೋತ್ರಗಳು । ಅಗ್ನೇನ್—ಇಂದ್ರನನ್ನು ಸೇರಿಕೊಳ್ಳುತ್ತವೆ । ಜೈತ್ರಾಯ—ಜಯಸಂಪಾದನೆಗಾಗಿ । ಇಂದ್ರಂ—ಇಂದ್ರನನ್ನು । ಹರ್ಷಯನ್—ಹರ್ಷಗೊಳಿಸುತ್ತವೆ । ವಜ್ರಶ್ಚ—ವಜ್ರಾಯುಧವೂ ಇಂದ್ರನನ್ನು ಸೇರಿಕೊಳ್ಳುತ್ತದೆ.

॥ ಭಾವಾರ್ಥ ॥

ಪ್ರಾಜ್ಞನಾದ ಸೋಮನು ಉತ್ಕೃಷ್ಟವಾದ ಪೂರ್ವದಿಕ್ಕಿಗೆ ಹೋಗಿ ಸೇರುತ್ತಾನೆ. ಎಲ್ಲರಿಗೂ ಗೋಚರವಾಗುವುದೂ, ದೇವತೆಗಳಲ್ಲಿ ಪ್ರಸಿದ್ಧವಾದುದೂ ಆದ ಸೋಮನ ರಥವು ಸೂರ್ಯರಶ್ಮಿಗಳೊಡನೆ ಸೇರಿಕೊಳ್ಳುತ್ತದೆ. ಎಲೈ ಸೋಮನೇ, ಯಾವಾಗ ನೀನೂ ಮತ್ತು ಇಂದ್ರನೂ ಸಂಗ್ರಾಮಗಳಲ್ಲಿ ಶತ್ರುಗಳಿಂದ ಅಪರಾಜಿತರಾಗುವಿರೋ ಆಗ ಪುಂಶಕ್ತಿಯುತವಾದ ಸ್ತೋತ್ರಗಳು ಇಂದ್ರನನ್ನು ಸೇರಿಕೊಳ್ಳುತ್ತವೆ. ಜಯಸಂಪಾದನೆಗಾಗಿ ಇಂದ್ರನನ್ನು ಹರ್ಷಗೊಳಿಸುತ್ತವೆ. ವಜ್ರಾಯುಧವೂ ಇಂದ್ರನನ್ನು ಸೇರಿಕೊಳ್ಳುತ್ತದೆ.

English Translation

The intelligent Soma proceeds to the eastern quarter; (your) beautiful chariot, (your) celestial beautiful chariot meets the sun's rays; the manly praises advance to Indra and simulate him to victory: (his) thunderbolt too (advances to him); so that you are invincible, invincible in battle,

ನೂರ ಹನ್ನೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ॥

ನಾನಾನಮಿತಿ ಚತುರ್ಋಚಂ ನವಮಂ ಸೂಕ್ತಮಾಂಗಿರಸಸ್ಯ ಶಿಶುನಾಮ್ನ ಆರ್ಷಂ । ಪಂಚಪದಾ ಪಂಕ್ತಿಶ್ಛಂದಃ । ಪವಮಾನಃ ಸೋಮೋ ದೇವತಾ । ತಥಾ ಚಾನುಕ್ರಾಂತಂ । ನಾನಾನಂ ಚತುಷ್ಕಂ ಶಿಶುಃ ಪಾಂಕ್ತಂ ಹೀತಿ ॥ ಗತೋ ವಿನಿಯೋಗಃ ॥

ಅನುವಾದವು—**ನಾನಾನಂ** ಎಂಬ ಈ ಸೂಕ್ತವು ಏಳನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಶಿಶುಃ ಆಂಗಿರಸಃ** ಎಂಬುವನು ಋಷಿಯು; **ಪವಮಾನಸೋಮನು** ದೇವತೆಯು; **ಪಂಚಪದಾ ಪಂಕ್ತಿಃ** ಎಂಬುವ ಛಂದಸ್ಸು ಅನುಕ್ರಮಣಿಕೆಯಲ್ಲಿ—**ನಾನಾನಂ ಚತುಷ್ಕಂ ಶಿಶುಃ ಪಾಂಕ್ತಂ ಹಿ** ಎಂದು ಹೇಳಿರುವುದು. ವಿನಿಯೋಗವನ್ನು ಕೆಳಗೆಯೇ ಹೇಳಲಾಗಿದೆ.

ಸೂಕ್ತ—೧೧೭

ಮಂಡಲ—೯ । ಅನುವಾಕ—೭ । ಸೂಕ್ತ—೧೧೭ ॥
ಋಕ್ಕು—೪ । ಅಧ್ಯಾಯ—೫ । ವರ್ಗ—೨೫ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ।
ಋಷಿ—ಶಿಶುಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಪಂಕ್ತಿಃ ॥

॥ ಸಂಹಿತಾಪಾಠಃ ॥

ನಾನಾನಂ ವಾ ಉ ನೋ ಧಿಯೋ ವಿ ವ್ರತಾನಿ ಜನಾನಾಂ ।
ತಕ್ವಾ ರಿಷ್ಟಂ ರುತಂ ಭಿಷಗ್ಬ್ರಹ್ಮಾ ಸುನ್ವಂತಮಿಚ್ಛತೀಂದ್ರಾಯೇಂದೋ ಪರಿ ಸ್ರವ ॥ ೧ ॥

॥ ಪದಪಾಠಃ ॥

ನಾನಾನಂ । ವೈ । ಊಂ ಇತಿ । ನಃ । ಧಿಯಃ । ವಿ । ವ್ರತಾನಿ । ಜನಾನಾಂ ।
ತಕ್ಷಾ । ರಿಷ್ಟಂ । ರುತಂ । ಭಿಷಕ್ । ಬ್ರಹ್ಮಾ । ಸುನ್ವಂತಂ । ಇಚ್ಛತಿ । ಇಂದ್ರಾಯ । ಇಂದೋ ಇತಿ ।
ಪರಿ । ಸ್ರವ ॥ ೧ ॥

॥ ಸಾಯಣಭಾಷ್ಯಂ ॥

ಋಷಿರೇತದಾದಿಭಿಸ್ತ್ರಿಭಿಃ ಸೂಕ್ತೈರಪರಿಷವತಃ ಸೋಮಸ್ಯಾಜಾಮಿತ್ವಾಯ ಮನಸೋ ವಿನೋದನಂ ಕುರ್ವನ್ನಾಹ । ಹೇ ಸೋಮ ನೋಽಸ್ಮಾಕಂ ಧಿಯಃ ಕರ್ಮಾಣಿ ನಾನಾನಂ ನಾನಾಜಾತೀಯಕಾನಿ ಬಹೂನಿ ಭವಂತಿ । ವೈಶಬ್ದಃ ಪ್ರಸಿದ್ಧ್ಯರ್ಥೋ ನಿಶ್ಚಿತಾರ್ಥಃ । ಊ ಇತಿ ಪೂರಣಃ । ತಥಾನ್ಯೇಷಾಮಪಿ ಜನಾನಾಂ ವ್ರತಾನಿ ಕರ್ಮಾಣಿ ವಿವಿಧಾನಿ ಭವಂತಿ । ತಕ್ಷಾ ತ್ವಷ್ಟಾ ರಿಷ್ಟಂ ದಾರುತಕ್ಷಣಮಿಚ್ಛತಿ । ತಥಾ ಭಿಷಗ್ವೈದ್ಯಶ್ಚಿಕಿತ್ಸಕೋ ರುತಂ ರೋಗಮಿಚ್ಛತಿ । ಬ್ರಹ್ಮಾ ಬ್ರಾಹ್ಮಣಃ ಸುನ್ವಂತಂ ಸೋಮಾಭಿಷವಂ ಕುರ್ವಂತಂ ಯಜಮಾನಮಿಚ್ಛತಿ । ತಥಾಹಂ ತ್ವತ್ಪರಿಸ್ರವಣಮಿಚ್ಛಾಮಿ । ತಸ್ಮಾದ್ಧೇ ಇಂದೋ ಸೋಮೇಂದ್ರಾಯೇಂದ್ರಾರ್ಥಂ ಪರಿ ಸ್ರವ । ಪರಿತಃ ಕ್ಷರ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ನಃ**—ನಮ್ಮ । **ಧಿಯಃ**—ಕರ್ಮಗಳು । **ನಾನಾನಂ**—ಅನೇಕ ಬಗೆಯವಾಗಿವೆ । **ಜನಾನಾಂ**—ಮಾನವರ । **ವ್ರತಾನಿ**—ಕರ್ಮಗಳು । **ವಿ**—ಅನೇಕವಿಧವಾಗಿವೆ । **ತಕ್ಷಾ**—ಮರಗೆಲಸದವನು । **ರಿಷ್ಟಂ**—ಮರಗೆಲಸವನ್ನು । **ಇಚ್ಛತಿ**—ಅಪೇಕ್ಷಿಸುತ್ತಾನೆ । **ಭಿಷಕ್**—ವೈದ್ಯನು । **ರುತಂ**—ರೋಗವನ್ನಿಚ್ಛಿಸುತ್ತಾನೆ । **ಬ್ರಹ್ಮಾ**—ಬ್ರಾಹ್ಮಣನು । **ಸುನ್ವಂತಂ**—ಸೋಮವನ್ನು ಹಿಂಡತಕ್ಕ ಯಜ್ಞಕರ್ತೃವನ್ನು ಇಚ್ಛಿಸುತ್ತಾನೆ । **ಇಂದೋ**—ಎಲೈ ಸೋಮದೇವನೇ । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಪರಿ ಸ್ರವ**—ಪ್ರವಹಿಸು

॥ ಭಾವಾರ್ಥ ॥

ಎಲೈ ಸೋಮದೇವನೇ, ನಮ್ಮ ಕರ್ಮಗಳು ಅನೇಕಬಗೆಯವಾಗಿವೆ. ಮಾನವರ ಕರ್ಮಗಳು ಅನೇಕವಿಧವಾಗಿವೆ. ಮರಗೆಲಸದವನು ಮರಗೆಲಸವನ್ನು ಅಪೇಕ್ಷಿಸುತ್ತಾನೆ ವೈದ್ಯನು ರೋಗವನ್ನಿಚ್ಛಿಸುತ್ತಾನೆ. ಬ್ರಾಹ್ಮಣನು ಸೋಮವನ್ನು ಹಿಂಡತಕ್ಕವನನ್ನು ಇಚ್ಛಿಸುತ್ತಾನೆ. ಎಲೈ ಸೋಮದೇವನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Various are our acts, (various) are the occupations of men; the carpenter desires timber, the physician disease, the Brahman a worshipper who effuse Soma: flow, Indu, for Indra.

॥ ಸಂಹಿತಾಪಾಠಃ ॥

ಜರತೀಭಿರೋಷಧೀಭಿಃ ಪರ್ಣೇಭಿಃ ಶಕುನಾನಾಂ ।

ಕಾರ್ಮಾರೋ ಅಶ್ಮಭಿರ್ಯುಭಿರ್ಹಿರಣ್ಯವಂತಮಿಚ್ಛತೀಂದ್ರಾಯೇಂದೋ ಪರಿ
ಸ್ರವ ॥ ೨ ॥

॥ ಪದಪಾಠಃ ॥

ಜರತೀಭಿಃ । ಓಷಧೀಭಿಃ । ಪರ್ಣೇಭಿಃ । ಶಕುನಾನಾಂ ।

ಕಾರ್ಮಾರಃ । ಅಶ್ಮಭಿಃ । ದ್ಯುಭಿಃ । ಹಿರಣ್ಯವಂತಂ । ಇಚ್ಛತಿ । ಇಂದ್ರಾಯ । ಇಂದೋ ಇತಿ ।

ಪರಿ । ಸ್ರವ ॥ ೨ ॥

॥ ಸಾಯಣಭಾಷ್ಯಂ ॥

ಜರತೀಭಿರ್ಜೀರ್ಣಾಭಿರೋಷಧೀಭಿರಿಷವಃ ಕ್ರಿಯಂತೇ ತಥಾ ಶಕುನಾನಾಂ ಪರ್ಣೇಭಿರಿಷೂಣಾಂ ಪಕ್ಷಭೂತೈಃ ಪರ್ಣೈಶ್ಚ ಕ್ರಿಯಂತೇ ತಥಾ ದ್ಯುಭಿರ್ದೀಪ್ತಾಭಿರಿಷೂಣಾಂ ತೇಜನಾರ್ಥಾಭಿರಶ್ಮಭಿಃ ಶಿಲಾಭಿಶ್ಚ ಕ್ರಿಯಂತೇ । ಏತೈಃ ಕಾರ್ಮಾರೋಽಯಮಸ್ಮಾಕೋ ಹಿರಣ್ಯವಂತಮಾಢ್ಯಂ ಪುರುಷಮಿಚ್ಛತಿ । ತಥಾಹಂ ತ್ವತ್ಪರಿಸ್ರವಣಮಿಚ್ಛಾಮಿ । ತಸ್ಮಾದಿಂದೋ ಇಂದ್ರಾಯ ಪರಿ ಸ್ರವ ॥

॥ ಪ್ರತಿಪದಾರ್ಥ ॥

ಜರತೀಭಿಃ—ಜೀರ್ಣಗಳಾದ । ಓಷಧೀಭಿಃ—ಓಷಧಿಗಳಿಂದ । ಇಷವಃ—ಬಾಣಗಳು ನಿರ್ಮಿತವಾಗುತ್ತವೆ । ಶಕುನಾನಾಂ—ಪಕ್ಷಿಗಳ । ಪರ್ಣೇಭಿಃ—ಗರಿಗಳಿಂದ ಬಾಣಗಳ ಗರಿಗಳು ಮಾಡಲ್ಪಡುತ್ತವೆ । ದ್ಯುಭಿಃ—ಪ್ರಕಾಶಮಾನಗಳಾದ । ಅಶ್ಮಭಿಃ—ಶಿಲೆಗಳಿಂದಲೂ ಮಾಡಲ್ಪಡುತ್ತವೆ । ಕಾರ್ಮಾರಃ—ಅಕ್ಕಸಾಲೆಯು (ಅಥವಾ ಬಡಗಿಯು) । ಹಿರಣ್ಯವಂತಂ—ಐಶ್ವರ್ಯವಂತನನ್ನು । ಇಚ್ಛತಿ—ಅಪೇಕ್ಷಿಸುತ್ತಾನೆ । ಇಂದೋ—ಎಲೈ ಸೋಮದೇವನೇ । ಇಂದ್ರಾಯ—ಇಂದ್ರಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಕಾವಾರ್ಥ ॥

ಒಣಗಿದ ಕಡ್ಡಿಗಳಿಂದ ಬಾಣಗಳು ನಿರ್ಮಿತವಾಗುತ್ತವೆ. ಪಕ್ಷಿಗಳ ಗರಿಗಳಿಂದ ಬಾಣಗಳ ಗರಿಗಳು ಮಾಡಲ್ಪಡುತ್ತವೆ. ಪ್ರಕಾಶಮಾನಗಳಾದ ಶಿಲೆಗಳಿಂದಲೂ ಮಾಡಲ್ಪಡುತ್ತವೆ ಅಕ್ಕಸಾಲೆಯೂ ಮತ್ತು ಬಡಗಿಯೂ ಐಶ್ವರ್ಯವಂತನನ್ನು ಅಪೇಕ್ಷಿಸುತ್ತಾರೆ. ಎಲೈ ಸೋಮದೇವನೇ, ಇಂದ್ರಾರ್ಥವಾಗಿ ಪ್ರವಹಿಸು.

English Translation

With dried plants (are arrows made), with the feathers of birds (and) with glistening stones; the smith seeks a man who has gold: flow, Indu, for Indra.

॥ संहितापाठः ॥

कारुरहं ततो भिषगुपलप्रक्षिणी नना ।
नानाधियो वसूयवोऽनु गा इव तस्थिमेन्द्रायेन्दो
परि स्रव ॥ ९ ॥

॥ पदपाठः

कारुः । अहं । ततः । भिषक् । उपलऽप्रक्षिणी । नना ।
नानाऽधियः । वसुऽयवः । अनु । गाःऽइव । तस्थिम । इन्द्राय । इन्दो इति ।
परि । स्रव ॥ ९ ॥

॥ सायणभाष्यं ॥

ऋषिः प्रवृत्तसोमयागः सन् दशापवित्रात्सोमे क्षरति प्रतिबन्धकपापापनुत्तये पुरश्चरितानुकीर्तनपुरःसरमुद्घोषणां चकार । तावदयं कारुः स्तोमानां कर्तास्मि । ततः इति संतानेनामु । तनयतेरस्मादिति ततः पिता । तनयतेरसाविति वा ततः पुत्रः । भिषग्भेषजकृत् । यज्ञस्य ब्रह्मैतौ भिषजौ । सर्वं त्रय्या विद्यया भिषज्यतीति श्रुतेः । ततोपलप्रक्षिणी । उपलेषु वालुकासु प्रक्षिणोति ऽवान्निनस्ति भृज्जतीति । यद्वा । दृषदादिमूपलेषु भृष्वान्यवान्निनस्ति चूर्णयतीति । अथवा धानासक्तुकरंभादीनां कारिका वा । असौ नना माता दुहिता वा । नमनक्रियायोग्यत्वात् । माता ह्यपत्यं प्रति स्तनपानादिना नमनशीला भवति । दुहिता वा शुश्रूषार्थं । एवं सर्वेषां परिचरणेन नानाधियो नानाकर्मणो वसूयवो धनकामा वयमनु तस्थिम । लोकमन्वास्थिताः स्मः । तत्र दृष्टान्तः । गा इव ॥ छान्दसो ऽसः शसादेशः ॥ गावो यथा गोपतिमनुतिष्ठन्ति स्वपयःप्रदानेन परिचरन्ति वा एवं वयमपि परिचरामः । एतज्ज्ञात्वा हे इन्दो सोम इन्द्राय परि स्रव । दशापवित्रात् क्षर । एवमेषाध्येषणा सत्कारपूर्विका व्यापारणा । अत्र निरुक्तं । उपलप्रक्षिणीत्युपलेषु प्रक्षिप्यात्युपलप्रक्षेपिणी वा । कारुरहमस्मि कर्ता स्तोमानां ततो भिषक् तत इति संतानेनामु पितुर्वा पुत्रस्य वा । उपलप्रक्षिणी सक्तुकारिका ननना नमनशीलमाता वा दुहिता वा । नानाधियो नानाकर्मणो वसूयवो वसुकामा अन्वास्थिताः स्मो गाव इव लोकं । नि. ६.३३ । इति ॥

॥ ಸಂಹಿತಾಪಾಠಃ ॥

ಜರತೀಭಿರೋಷಧೀಭಿಃ ಪರ್ಣೇಭಿಃ ಶಕುನಾನಾಂ ।

ಕಾರ್ಮಾರೋ ಅಶ್ಮಭಿರ್ಯುಭಿರ್ಹಿರಣ್ಯವಂತಮಿಚ್ಛತೀಂದ್ರಾಯೇಂದೋ ಪರಿ ಸ್ರವ ॥ ೨ ॥

॥ ಪದಪಾಠಃ ॥

ಜರತೀಭಿಃ । ಓಷಧೀಭಿಃ । ಪರ್ಣೇಭಿಃ । ಶಕುನಾನಾಂ ।

ಕಾರ್ಮಾರಃ । ಅಶ್ಮಭಿಃ ದ್ಯುಭಿಃ । ಹಿರಣ್ಯವಂತಂ । ಇಚ್ಛತಿ । ಇಂದ್ರಾಯ । ಇಂದೋ ಇತಿ ।

ಪರಿ । ಸ್ರವ ॥ ೨ ॥

॥ ಸಾಯಣಭಾಷ್ಯಂ ॥

ಜರತೀಭಿರ್ಜೀರ್ಣಾಭಿರೋಷಧೀಭಿರಿಷವಃ ಕ್ರಿಯಂತೇ ತಥಾ ಶಕುನಾನಾಂ ಪರ್ಣೇಭಿರಿಷೂಣಾಂ ಪಕ್ಷಭೂತೈಃ ಪರ್ಣೈಶ್ಚ ಕ್ರಿಯಂತೇ ತಥಾ ದ್ಯುಭಿರ್ದೀಪ್ತಾಭಿರಿಷೂಣಾಂ ತೇಜನಾರ್ಥಾಭಿರಶ್ಮಭಿಃ ಶಿಲಾಭಿಶ್ಚ ಕ್ರಿಯಂತೇ । ಏತೈಃ ಕಾರ್ಮಾರೋಽಯಸ್ಕಾರೋ ಹಿರಣ್ಯವಂತಮಾಢ್ಯಂ ಪುರುಷಮಿಚ್ಛತಿ । ತಥಾಹಂ ತ್ವತ್ಪರಿಸ್ರವಣಮಿಚ್ಛಾಮಿ । ತಸ್ಮಾದಿಂದೋ ಇಂದ್ರಾಯ ಪರಿ ಸ್ರವ ॥

॥ ಪ್ರತಿಪದಾರ್ಥ ॥

ಜರತೀಭಿಃ—ಜೀರ್ಣಗಳಾದ । ಓಷಧೀಭಿಃ—ಓಷಧಿಗಳಿಂದ । ಇಷವಃ—ಬಾಣಗಳು ನಿರ್ಮಿತವಾಗುತ್ತವೆ । ಶಕುನಾನಾಂ—ಪಕ್ಷಿಗಳ । ಪರ್ಣೇಭಿಃ—ಗರಿಗಳಿಂದ ಬಾಣಗಳ ಗರಿಗಳು ಮಾಡಲ್ಪಡುತ್ತವೆ । ದ್ಯುಭಿಃ—ಪ್ರಕಾಶಮಾನಗಳಾದ । ಅಶ್ಮಭಿಃ—ಶಿಲೆಗಳಿಂದಲೂ ಮಾಡಲ್ಪಡುತ್ತವೆ । ಕಾರ್ಮಾರಃ—ಅಕ್ಕಸಾಲೆಯು (ಅಥವಾ ಬಡಗಿಯು) । ಹಿರಣ್ಯವಂತಂ—ಐಶ್ವರ್ಯವಂತನನ್ನು । ಇಚ್ಛತಿ—ಅಪೇಕ್ಷಿಸುತ್ತಾನೆ । ಇಂದೋ—ಎಲೈ ಸೋಮದೇವನೇ । ಇಂದ್ರಾಯ—ಇಂದ್ರಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಒಣಗಿದ ಕಡ್ಡಿಗಳಿಂದ ಬಾಣಗಳು ನಿರ್ಮಿತವಾಗುತ್ತವೆ. ಪಕ್ಷಿಗಳ ಗರಿಗಳಿಂದ ಬಾಣಗಳ ಗರಿಗಳು ಮಾಡಲ್ಪಡುತ್ತವೆ. ಪ್ರಕಾಶಮಾನಗಳಾದ ಶಿಲೆಗಳಿಂದಲೂ ಮಾಡಲ್ಪಡುತ್ತವೆ ಅಕ್ಕಸಾಲೆಯೂ ಮತ್ತು ಬಡಗಿಯೂ ಐಶ್ವರ್ಯವಂತನನ್ನು ಅಪೇಕ್ಷಿಸುತ್ತಾರೆ. ಎಲೈ ಸೋಮದೇವನೇ, ಇಂದ್ರಾರ್ಥವಾಗಿ ಪ್ರವಹಿಸು.

English Translation

With dried plants (are arrows made), with the feathers of birds (and) with glistening stones; the smith seeks a man who has gold: flow, Indu, for Indra.

॥ संहितापाठः ॥

कारुरहं ततो भिषगुपलप्रक्षिणी नना ।

नानाधियो वसूयवोऽनु गा इव तस्थिमेन्द्रायेन्दो

परि स्रव ॥ ३ ॥

॥ पदपाठः

कारुः । अहं । ततः । भिषक् । उपलऽप्रक्षिणी । नना ।

नानाऽधियः । वसुऽयवः । अनु । गाःऽइव । तस्थिम । इन्द्राय । इन्दो इति ।

परि । स्रव ॥ ३ ॥

॥ सायणभाष्यं ॥

ऋषिः प्रवृत्तसोमयागः सन् दशापवित्रात्सोमो क्षरति प्रतिबन्धकपापापनुत्तये पुरश्चरितानुकीर्तनपुरःसरमुद्घोषणां चकार । तावदहं कारुः स्तोमानां कर्तास्मि । ततः इति संतानसनामु । तनयतेऽस्मादिति ततः पिता । तनयतेरसाविति वा ततः पुत्रः । भिषग्भेषजकृत् । यज्ञस्य ब्रह्मैतौ ऋत्विजौ । सर्वं त्रय्या विद्यया भिषज्यतीति श्रुतेः । ततोपलप्रक्षिणी । उपलेषु वालुकासु प्रक्षिणोतीति युवान्हिनस्ति भृज्जतीति । यद्वा । दृषदादिरूपलेषु भृष्ट्वान्यवान्हिनस्ति चूर्णयतीति । अथवा धानासक्तुकरंभादीनां कारिका वा । असौ ननना माता दुहिता वा । ननमनक्रियायोगेनत्वात् । माता अल्पवयस्कं प्रति स्तनपानादिना ननमनशीला भवति । दुहिता वा शुश्रूषार्थं । एवं सर्वेषां परिचरणेन नानाधियो नानाकर्मणो वसूयवो धनकामा वयमनु तस्थिम । लोकमन्वास्थिताः स्मः । तत्र दृष्ट्वान्तः । गा इव ॥ छान्दसो लुप्तः शसादेशः ॥ गावो यथा गोपतिमनुतिष्ठन्ति स्वपयःप्रदानेन परिचरन्ति वा एवं वयमपि परिचरामः । एतज्ज्ञात्वा हे इन्दो सोम इन्द्राय परि स्रव । दशापवित्रात् क्षर । एवमेषाध्येषणा सत्कारपूर्विका व्यापारणा । अत्र निरुक्तं । उपलप्रक्षिणीत्युपलेषु प्रक्षिणात्युपलप्रक्षेपिणी वा । कारुरहमस्मि कर्ता स्तोमानां ततो भिषक् तत इति संतानसनामु पितुर्वा पुत्रस्य वा । उपलप्रक्षिणी सक्तुकारिका ननना नमतेर्माता वा दुहिता वा । नानाधियो नानाकर्मणो वसूयवो वसुकामा अन्वास्थिताः स्मो गाव इव लोकं । नि. ६.३३ । इति ॥

॥ ಪ್ರತಿಪದಾರ್ಥ ॥

ವೋಳ್ಹಾ—ಭಾರವನ್ನು ವಹಿಸಲು ಶಕ್ತಿಯುಳ್ಳ । ಅಶ್ವಃ—ಅಶ್ವವು । ಸುಖಂ—ಎಳೆಯಲು ಸುಖಕರವಾದ । ರಥಂ—ರಥವನ್ನು । ಇಚ್ಛತಿ—ಅಪೇಕ್ಷಿಸುತ್ತದೆ । ಉಪಮಂತ್ರಿಣಃ—ನರ್ಮಸಚಿವರು । ಹಸನಾಂ ಶೇಪಃ—ಹಾಸ್ಯಪೂರಿತವಾದ ವಾಕ್ಯನ್ನು ಇಚ್ಛಿಸುತ್ತಾರೆ । ಮಂಡೂಕಃ—ಕಪ್ಪೆಯು । ವಾಃ ಇತ್—ನೀರನ್ನೇ ಅಪೇಕ್ಷಿಸುತ್ತದೆ। ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಭಾರವನ್ನು ವಹಿಸಲು ಶಕ್ತಿಯುಳ್ಳ ಅಶ್ವವು ಎಳೆಯಲು ಸುಖಕರವಾದ ರಥವನ್ನು ಅಪೇಕ್ಷಿಸುತ್ತದೆ. ನರ್ಮಸಚಿವರು ಹಾಸ್ಯಪೂರಿತವಾದ ವಾಕ್ಯನ್ನು ಇಚ್ಛಿಸುತ್ತಾರೆ. ಕಪ್ಪೆಯು ನೀರನ್ನೇ ಅಪೇಕ್ಷಿಸುತ್ತದೆ. ಎಲೈ ಸೋಮನೇ ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

The draught horse (desires) a cart easy (to draw); those who invite guests (desire) merriment; the frog desires water: flow, Indu, for Indra.



ನೂರ ಹದಿವ್ಮೂರನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಶರ್ಯಣಾವತೀತ್ಯೇಕಾದಶರ್ಚಂ ದಶಮಂ ಸೂಕ್ತಂ ಮಾರೀಚಸ್ಯ ಕಶ್ಯಪಸ್ಯಾರ್ಷಂ । ಪೂರ್ವಸ್ಯ ಹೀತ್ಯುಕ್ತತ್ವಾದಿದಮುತ್ತರಂ ಚ ಪಾಂಕ್ತಂ । ಪವಮಾನಸೋಮದೇವತಾಕಂ । ತಥಾ ಚಾನುಕ್ರಮ್ಯತೇ । ಶರ್ಯಣಾವತ್ಯೇಕಾದಶ ಕಶ್ಯಪ ಇತಿ ॥ ಗತೋ ವಿನಿಯೋಗಃ ॥

ಅನುವಾದವು—ಶರ್ಯಾಣಾವತಿ ಎಂಬ ಈ ಸೂಕ್ತವು ಏಳನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಮರೀಚ ಋಷಿಯ ಪುತ್ರನಾದ ಕಶ್ಯನೆಂಬುವನು ಋಷಿಯು; ಈ ಸೂಕ್ತವೂ ಇದರ ಮುಂದಿನ ಸೂಕ್ತವೂ ಪಂಕ್ತಿಶ್ಛಂದಸ್ಕವು. ಪವಮಾನಸೋಮನು ದೇವತೆಯು. ಅನುಕ್ರಮಣಿಕೆಯಲ್ಲಿ—ಶರ್ಯಣಾವತ್ಯೇಕಾದಶ ಕಶ್ಯಪಃ ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೧೧೩

ಮಂಡಲ—೯ । ಅನುವಾಕ—೭ । ಸೂಕ್ತ—೧೧೩ ।
ಆಪ್ಟಕ—೭ । ಅಧ್ಯಾಯ—೫ । ವರ್ಗ—೨೩, ೨೭ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ।
ಋಷಿಃ—ಕಶ್ಯಪಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಪಂಕ್ತಿಃ ॥

। ಸಂಹಿತಾಪಾಠಃ ।

ಶರ್ಯಣಾವತಿ ಸೋಮಮಿಂದ್ರಃ ಪಿಬತು ವೃತ್ರಹಾ ।
ಬಲಂ ದಧಾನ ಆತ್ಮನಿ ಕರಿಷ್ಯನ್ವೀರ್ಯಂ ಮಹದಿಂದ್ರಾಯೇಂದೋ ಪರಿ
ಸ್ರವ ॥ ೧ ॥

। ಪದಪಾಠಃ ।

ಶರ್ಯಣಾವತಿ । ಸೋಮಂ । ಇಂದ್ರಃ । ಪಿಬತು । ವೃತ್ರಹಾ ।
ಬಲಂ । ದಧಾನಃ । ಆತ್ಮನಿ । ಕರಿಷ್ಯನ್ । ವೀರ್ಯಂ । ಮಹತ್ । ಇಂದ್ರಾಯ । ಇಂದೋ ಇತಿ ।
ಪರಿ । ಸ್ರವ ॥ ೧ ॥

॥ ಸಾಯಣಭಾಷ್ಯಂ ।

ಶರ್ಯಣಾವತಿ । ಶರ್ಯಣಾವನ್ನಾಮ ಕುರುಕ್ಷೇತ್ರಸ್ಯ ಜಘನಾರ್ಧೇ ಸರಃ । ತತ್ರ ಸ್ಥಿತಂ ಸೋಮಂ ವೃತ್ರಹೇಂದ್ರಃ ಪಿಬತು । ಕೀದೃಶಃ । ಆತ್ಮನಿ ಬಲಂ ದಧಾನೋ ಬಲಂ ನಿದಧಾನಃ ಅತ ಏವ ಮಹದ್ವೀರ್ಯಂ ಕರಿಷ್ಯನ್ಕೃತ್ಸ್ನ್ವ್ಯತಿ । ತಸ್ಮಾದಿಂದ್ರಾಯೇಂದೋ ಪರಿ ಸ್ರವ ॥

॥ ಪ್ರತಿಪದಾರ್ಥ ॥

ಆತ್ಮನಿ—ತನ್ನಲ್ಲಿ । ಬಲಂ—ಶಕ್ತಿಯನ್ನು । ದಧಾನಃ—ಧರಿಸಿರುವವನೂ । ಮಹತ್—ಪ್ರಭೂತವಾದ । ವೀರ್ಯಂ—ಪರಾಕ್ರಮವನ್ನು । ಕರಿಷ್ಯನ್—ಶತ್ರುಗಳ ಮುಂದೆ ತೋರ್ಪಡಿಸುವವನೂ । ವೃತ್ರಹಾ—ಶತ್ರು ನಾಶಕನೂ ಆದ । ಇಂದ್ರಃ—ಇಂದ್ರನು । ಶರ್ಯಣಾವತಿ—ಶರ್ಯಣಾವತ್ತೆಂಬ ಸರಸ್ಸಿನಲ್ಲಿ ಬೆಳೆದ । ಸೋಮಂ—ಸೋಮವನ್ನು । ಪಿಬತು—ಪಾನಮಾಡಲಿ । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

। ಭಾವಾರ್ಥ ।

ತನ್ನಲ್ಲಿ ಆತ್ಮಶಕ್ತಿಯನ್ನು ಹೊಂದಿರುವವನೂ, ಪ್ರಭೂತವಾದ ಪರಾಕ್ರಮವನ್ನು ಶತ್ರುಗಳಮುಂದೆ ಪ್ರದರ್ಶಿಸುವವನೂ, ಶತ್ರುನಾಶಕನೂ ಆದ ಇಂದ್ರನು ಶರ್ಯಣಾವತ್ತೆಂಬ ಸರಸ್ಸಿನಲ್ಲಿ ಬೆಳೆದ ಸೋಮವನ್ನು ಪಾನಮಾಡಲಿ ಎಲ್ಲೆ ಸೋಮನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Let Indra, the slayer of Vritra, quaff the Soma on the Sharyan avat infusing strength into himself, about to show great prowess : flow, Indu. for Indra

॥ ವಿಶೇಷವಿಷಯಗಳು ॥

ಶರ್ಯಣಾವತಿ—ಶರ್ಯಣಾವತ್ ಎಂಬುದು ಕುರುಕ್ಷೇತ್ರದ ಸಮೀಪದಲ್ಲಿರುವ ಒಂದು ಸರೋವರದ ಹೆಸರು. ಈ ಸರೋವರದ ಸಮೀಪಪ್ರದೇಶಗಳಲ್ಲಿ ಸೋಮಲತೆಗಳು ಯಥೇಷ್ಟವಾಗಿ ಬೆಳೆಯುತ್ತಿದ್ದವೆಂಬ ಪ್ರತೀತಿ ಇದೆ. ಈ ಸರೋವರದ ಸಮೀಪದಲ್ಲಿ ದಧ್ಯಂಚಋಷಿಯ ಕುದುರೆಯ ಆಕಾರದ ಶಿರಸ್ಸು ಬಿದ್ದಿತ್ತೆಂಬ ಒಂದು ಇತಿಹಾಸವೂ ಹಿಂದೆ ಉಕ್ತವಾಗಿದೆ

॥ ಸಂಹಿತಾಪಾಠಃ ॥

ಆ ಪವಸ್ವ ದಿಶಾಂ ಪತ ಆರ್ಜೀಕಾತ್ಸೋಮ ಮಾಧ್ವಃ ।
ಋತವಾಕೇನ ಸತ್ಯೇನ ಶ್ರದ್ಧಯಾ ತಪಸಾ ಸುತ ಇಂದ್ರಾಯೇಂದೋ ಪರಿ ಸ್ರವ ॥ ೨ ॥

॥ ಪದಪಾಠಃ ॥

ಆ । ಪವಸ್ವ । ದಿಶಾಂ । ಪತೇ । ಆರ್ಜೀಕಾತ್ । ಸೋಮ । ಮಾಧ್ವಃ ।
ಋತವಾಕೇನ । ಸತ್ಯೇನ । ಶ್ರದ್ಧಯಾ । ತಪಸಾ । ಸುತಃ । ಇಂದ್ರಾಯ । ಇಂದೋ ಇತಿ । ಪರಿ । ಸ್ರವ ॥

॥ ಸಾಯಣಭಾಷ್ಯಂ ॥

ಹೇ ದಿಶಾಂ ಪತೇ ಪ್ರಾಚ್ಯಾದೀನಾಂ ದಿಶಾಂ ಪ್ರಕಾಶಕತ್ವೇನ ಸ್ವಾಮಿನ್ ಹೇ ಮಾಧ್ವಃ ಕಾಮಾನಾಂ ಸೇಕ್ತರ್ಹೇ ಸೋಮ ಆರ್ಜೀಕಾತ್ । ಋಜೀಕಾಮುದೂರಭವ ಆರ್ಜೀಕೋ ಜನಪದಃ । ತಸ್ಮಾದಾ ಪವಸ್ವ । ಅಸ್ಮದ್ಯಜ್ಞಂ ಪ್ರತ್ಯಾಗಚ್ಛ । ಯದ್ವಾ । ಆರ್ಜೀಕಾದೃಜೋರಕುಟಿಲಾತ್ಪವಿತ್ರಾತ್-ಕ್ಷರ । ಕೀದೃಶಃ । ಋತವಾಕೇನರ್ತಸ್ಯ ವಚನೇನ ಸತ್ಯೇನ । ಸತ್ಯರ್ತಯೋರಲ್ಪೋ ಭೇದೋ ದ್ರಷ್ಟವ್ಯಃ । ಶ್ರದ್ಧಯಾ ತಪಸಾ ಯುಕ್ತೈರ್ದೀಕ್ಷಿತೈಃ ಸುತೋಽಭಿಷುತಸ್ತ್ವಂ ಪವಸ್ವ ॥

॥ ಪ್ರತಿಪದಾರ್ಥ ॥

ದಿಶಾಂ ಪತೇ—ಸಕಲ ದಿಕ್ಕುಗಳಿಗೂ ಪಾಲಕನೂ । ಮಾಧ್ವಃ—ಕಾಮವರ್ಷಕನೂ ಆದ । ಸೋಮ—ಎಲೈ ಸೋಮದೇವನೇ । ಸತ್ಯೇನ—ಸತ್ಯಾತ್ಮಕವಾದ । ಋತವಾಕೇನ—ಸ್ತುತಿವಾಕ್ಯಗಳೊಡನೆ । ಶ್ರದ್ಧಯಾ—ಶ್ರದ್ಧೆಯಿಂದಲೂ । ತಪಸಾ—ತಪಸ್ಸಿನಿಂದಲೂ । ಸುತಃ—ಹಿಂಡಲ್ಪಟ್ಟ ನೀನು । ಆರ್ಜೀಕಾತ್—ಆರ್ಜೀಕ ದೇಶದಿಂದ । ಆ ಪವಸ್ವ—ಪ್ರವಹಿಸು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಸಕಲದಿಕ್ಕುಗಳಿಗೂ ಪಾಲಕನೂ, ಕಾಮವರ್ಷಕನೂ ಆದ ಎಲೈ ಸೋಮದೇವನೇ, ಸತ್ಯಾತ್ಮಕವಾದ ಸ್ತುತಿವಾಕ್ಯಗಳೊಡನೆ ಶ್ರದ್ಧೆಯಿಂದಲೂ, ತಪಸ್ಸಿನಿಂದಲೂ ಹಿಂಡಲ್ಪಟ್ಟ ನೀನು ಆರ್ಜೀಕದೇಶದಿಂದ ಪ್ರವಹಿಸು. ಎಲೈ ಸೋಮನೇ, ನೀನು ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Soma, lord of the four regions, sprinkler (of benefits) flow from Arjika effused by a truthful (man) with faith and devotion : flow, Indu, for Indra

॥ ವಿಶೇಷವಿಷಯಗಳು ॥

ಅರ್ಜೀಕಾತ್—ಋಜೀಕಾನಾಮದೂರಭವ ಅರ್ಜೀಕೋ ಜನಪದಃ । ತಸ್ಮಾತ್ । ಋಜೀಕಾ ಎಂಬುದು ದೂರದಲ್ಲಿರುವ ಒಂದು ಜನಾಂಗದ ಹೆಸರು. ಆ ಜನರು ವಾಸಿಸುವ ಪ್ರದೇಶಕ್ಕೆ ಅರ್ಜೀಕ ವೆಂದು ಹೆಸರು. ಎಂದು ಭಾಷ್ಯಕಾರರ ವಿವರಣೆಯು. ಯಾಸ್ಕರು ನದಿಗಳ ವಿಷಯವನ್ನು ಚರ್ಚಿಸುವಾಗ **ಅರ್ಜೀಕೀಯೋಂ ವಿಪಾಡಿತ್ಕಾಹುಃ** (ನಿ. ೯-೩೬) **ಅರ್ಜೀಕೀ** ಎಂಬುದು ಒಂದು ನದಿಯ ಹೆಸರೆಂದೂ ಅದಕ್ಕೆ ವಿಪಾಟ್ ಎಂಬ ಇನ್ನೊಂದು ಹೆಸರಿರುವುದೆಂದೂ ಹೇಳಿರುವರು. ಋಜೀಕವೆಂಬುದು ಒಂದು ಪರ್ವತ. ಅದರಲ್ಲಿ ಹುಟ್ಟಿ ಹರಿಯುವ ನದಿಗೆ ಅರ್ಜೀಕಾ ಎಂಬ ಹೆಸರು ಎಂದು ವಿವರಣೆ ಇದೆ. ಪಂಚಜನರ ದೇಶಗಳಾದ **ಅರ್ಜೀಕಾ ಪಸ್ತ್ಯಾವತ, ತರ್ಯಣಾವತ್ ಸುಸೋಮಾ** ಎಂಬ ಸ್ಥಳಗಳಲ್ಲಿ ಬೆಳೆಯುವ ಸೋಮಲತೆಗಳು ಉತ್ತಮತರಹದ್ದೆಂದೂ ಯಥೇಷ್ಟವಾಗಿ ದೊರಕುವುದೆಂದೂ ಪ್ರಸಿದ್ಧಿ ಇದೆ.

। ಸಂಹಿತಾಪಾಠಃ ।

ಪರ್ಜನ್ಯವೃದ್ಧಂ ಮಹಿಷಂ ತಂ ಸೂರ್ಯಸ್ಯ ದುಹಿತಾಭರತ್ ।
ತಂ ಗಂಧರ್ವಾಃ ಪ್ರತಿಗೃಭ್ಣನ್ತಂ ಸೋಮೇ ರಸಮಾದಧುರಿಂದ್ರಾಯೇಂದೋ
ಪರಿ ಸ್ರವ ॥ ೩ ॥

। ಪದಪಾಠಃ ।

ಪರ್ಜನ್ಯವೃದ್ಧಂ । ಮಹಿಷಂ । ತಂ । ಸೂರ್ಯಸ್ಯ । ದುಹಿತಾ । ಅ । ಅಭರತ್ ।
ತಂ । ಗಂಧರ್ವಾಃ । ಪ್ರತಿ । ಅಗೃಭ್ಣನ್ । ತಂ । ಸೋಮೇ । ರಸಂ । ಅ । ಅದಧುಃ । ಇಂದ್ರಾಯ ।
ಇಂದೋ ಇತಿ । ಪರಿ । ಸ್ರವ ॥ ೩ ॥

। ಸಾಯಣಭಾಷ್ಯಂ ।

ಸೂರ್ಯಸ್ಯ ದುಹಿತಾ । ಶ್ರದ್ಧಾ ವೈ ಸೂರ್ಯಸ್ಯ ದುಹಿತೇತಿ ವಾಜಸನೇಯಕಂ । ತೈ. ೧೨-೭-೩-೧೧ । ಸಾ ಪರ್ಜನ್ಯವೃದ್ಧಂ ಪರ್ಜನ್ಯವತ್ಸಮರ್ಧಂ । ಯದ್ವಾ । ಪರ್ಜನ್ಯೇನ ತತ್ಕಾರ್ಯೇಣೋದಕೇನ ಪ್ರವೃದ್ಧಂ । ಮಹಿಷಂ ಮಹಾಂತಂ ಪೂಜ್ಯಂ ವಾ ತಂ ಸೋಮಮಾಭರತ್ । ಆಹರತ್ ।

ದ್ಯುಲೋಕಾದಾಹೃತವತೀ । ತಮಾಹ್ರಿಯಮಾಣಂ ಸೋಮಂ ಗಂಧರ್ವಾ ವಿಶ್ವಾವಸುಪ್ರಭೃತಯಃ ಪ್ರತ್ಯಗೃಭ್ಣನ್ । ಪ್ರತ್ಯಗೃಹ್ಣನ್ । ಪ್ರತಿಗೃಹೀತವಂತಃ ॥ ಹ್ಯಗ್ರಹೋಭ್ಯಃ ॥ ತತೋ ಗಂಧರ್ವಾಃ ಪ್ರತಿಗೃಹೀತಂ ರಸಂ ಸೋಮೇ ಪ್ರತ್ಯಕ್ಷಮಾಧಧುಃ ॥ ದಧಾತೇರ್ಲಙಿ ॥ ತಸ್ಮಾನ್ಪರಿ ಸ್ರವ ॥

॥ ಪ್ರತಿಪದಾರ್ಥ ॥

ಸೂರ್ಯಸ್ಯ—ಸೂರ್ಯನ । ದುಹಿತಾ—ಪುತ್ರಿಯಾದ ಶ್ರದ್ಧೆಯು । ಪರ್ಜನ್ಯವೃದ್ಧಂ—ಪರ್ಜನ್ಯನಂತೆ ಬಲಶಾಲಿಯೂ । ಮಹಿಷಂ—ಪೂಜ್ಯನೂ ಆದ । ತಂ—ಸೋಮನನ್ನು । ಅಭರತ್—ದ್ಯುಲೋಕದಿಂದ ತಂದಳು । ತಂ—ಆ ಸೋಮನನ್ನು । ಗಂಧರ್ವಾಃ—ಗಂಧರ್ವರು । ಪ್ರತ್ಯಗೃಭ್ಣನ್—ಸ್ವೀಕರಿಸಿದರು । ಸೋಮೇ—ಅದೇ ಸೋಮದಲ್ಲಿ । ರಸಂ—ರಸವನ್ನು । ಅದಧುಃ—ಸ್ಥಾಪಿಸಿದರು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಸೂರ್ಯಪುತ್ರಿಯಾದ ಶ್ರದ್ಧೆಯು ಪರ್ಜನ್ಯನಂತೆ ಬಲಶಾಲಿಯೂ, ಪೂಜ್ಯನೂ ಆದ ಸೋಮನನ್ನು ದ್ಯುಲೋಕದಿಂದ ತಂದಳು. ಆ ಸೋಮನನ್ನು ಗಂಧರ್ವರು ಸ್ವೀಕರಿಸಿದರು. ಅದೇ ಸೋಮದಲ್ಲಿ ರಸವನ್ನು ಸ್ಥಾಪಿಸಿದರು. ಎಲೈ ಸೋಮನೇ ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

The daughter of Surya brought the vast Soma large as a rain-cloud ; the Gandharvas seized upon it and placed the juice in the Soma : flow. Indu, for Indra.

॥ ವಿಶೇಷವಿಷಯಗಳು ॥

ಗಂಧರ್ವಾಃ ಪ್ರತ್ಯಗೃಭ್ಣನ್—ಈ ಋಕ್ಕಿನಲ್ಲಿ ಸೂರ್ಯಪುತ್ರಿಯಾದ ಶ್ರದ್ಧಾದೇವಿಯು ಸೋಮವನ್ನು ದ್ಯುಲೋಕದಿಂದ ತಂದಳೆಂದೂ ಅದನ್ನು ಗಂಧರ್ವರು ಸ್ವೀಕರಿಸಿದರೆಂದೂ ಹೇಳಿದೆ. ಈ ವಿಷಯವು ಸ್ವಲ್ಪ ವ್ಯತ್ಯಸ್ತವಾಗಿ ಶಾಖಾಂತರಗಳಲ್ಲಿ ಹೇಳಲ್ಪಟ್ಟಿದೆ. ಉದಾಹರಣೆಗೆ ಯಜುರ್ವೇದದ ತೈತ್ತಿರೀಯಸಂಹಿತೆಯಲ್ಲಿ—

ತಂ ಸೋಮಮಾಹ್ರಿಯಮಾಣಂ ಗಂಧರ್ವೋ ವಿಶ್ವಾವಸುಃ ಪರ್ಯಮುಷ್ಣಾತ್ಸ ತಿಸ್ರೋ ರಾತ್ರೀಃ ಪರಿಮುಷಿತೋಽವಸತ್ತಸ್ಮಾತ್ತಿಸ್ರೋ ರಾತ್ರೀಃ ಕ್ರೀತಃ ಸೋಮೋ ವಸತಿ ತೇ ದೇವಾ ಅಬ್ರುವನ್ಸ್ತ್ರೀಕಾಮಾ ವೈ ಗಂಧರ್ವಾಸ್ತ್ರಿಯಾ ನಿಷ್ಕ್ರೀಣಾನೇತಿ ತೇ ವಾಚಗ್ಂ ಸ್ತ್ರಿಯಮೇಕಹಾಯನೀಂ ಕೃತ್ವಾ ತಯಾ ನಿರಕ್ರೀಣನ್ತಾ ಸ್ಮೈ ರೋಹಿದ್ರೂಪಂ ಕೃತ್ವಾಽಗಂಧರ್ವೇಭ್ಯೋಽಪಕ್ರಮ್ಯಾತಿಷ್ಠತ್ ॥

(ತೈ. ಸಂ. ೬-೧ .೬--೫)

ಪೂರ್ವದಲ್ಲಿ ಸೋಮವು ಸ್ವರ್ಗದಲ್ಲಿದ್ದಿತು. ಅದನ್ನು ಭೂಮಿಗೆ ತರಲು ಯಾರಿಂದಲೂ ಸಾಧ್ಯವಾಗದೆ ಇರುವಾಗ ಗಾಯತ್ರಿಯು ಶ್ಯೇನಪಕ್ಷಿಯ ರೂಪದಿಂದ ಸ್ವರ್ಗಕ್ಕೆ ಹೋಗಿ ಅಲ್ಲಿ ಅದನ್ನು ಕಾಯುತ್ತಿದ್ದ ಸ್ವಾನ, ಭ್ರಾಜ, ಅಂಶುಮಾರಿ, ಬಂಭಾರಿ, ಹವಸ್ಯ, ಸುವವಸ್ಯ, ಕೃಶಾನು ಎಂಬ ಸೋಮಪಾಲಕರ ಪ್ರತಿಭಟನೆಯನ್ನು ತಿರಸ್ಕರಿಸಿ ಅದನ್ನು

ಭೂಮಿಗೆ ತಂದಿತು. ಅದನ್ನು ತರುತ್ತಿರುವಾಗ ದಾರಿಯಲ್ಲಿ ವಿಶ್ವಾವಸುವೆಂಬ ಗಂಧರ್ವನು ಆ ಸೋಮವನ್ನು ಅಪಹರಿಸಿ ತನ್ನಲ್ಲಿ ಮೂರು ದಿನಗಳವರೆಗೆ ಇಟ್ಟುಕೊಂಡಿದ್ದನು. ಅದನ್ನು ಅವನಿಂದ ತರುವ ಬಗೆ ಹೇಗೆಂದು ದೇವತೆಗಳು ಯೋಚಿಸಿ ಗಂಧರ್ವರು ಸ್ತ್ರೀಯರಲ್ಲಿ ಹೆಚ್ಚಾಗಿ ಆಸಕ್ತರಾಗಿ ಕಾಮಾಭಿಲಾಷೆಯುಳ್ಳವರಾದುದರಿಂದ ಅವರಿಗೆ ಸ್ತ್ರೀಯರ ಆಶೆಯನ್ನು ತೋರಿಸಿ ಸೋಮವನ್ನು ಹಿಂದಕ್ಕೆ ಪಡೆದು ತರಬೇಕೆಂದು ನಿಶ್ಚಯಿಸಿದರು. ಅದಕ್ಕಾಗಿ ಅವರು ವಾಗ್ದೇವತೆಯ ಸಮೀಪಕ್ಕೆ ಹೋಗಿ ವಿಷಯವನ್ನೆಲ್ಲಾ ತಿಳಿಸಿ ಅವಳ ಅನುಮತಿಯಂತೆ ವಾಗ್ದೇವತೆಯು ಸುಂದರ ಸ್ತ್ರೀಯಾಗ ವಂತೆಯೂ ಅವಳನ್ನು ಗಂಧರ್ವರಿಗೆ ಮಾರಿ ಅದಕ್ಕೆ ಬದಲಾಗಿ ಸೋಮವನ್ನು ತರುವಂತೆಯೂ, ನಿಷ್ಕರ್ಷೆಮಾಡಿ ದರು ಅದರಂತೆ ವಾಗ್ದೇವತೆಯು ಸುಂದರಸ್ತ್ರೀಯ ಆಕಾರವನ್ನು ಧರಿಸಲು ಅವಳನ್ನು ಗಂಧರ್ವರಿಗೆ ಕೊಟ್ಟು ಅವರು ಅಪ ಹರಿಸಿದ್ದ ಸೋಮವನ್ನು ಹಿಂದಕ್ಕೆ ತಂದರು. ಸೋಮವು ದೇವತೆಗಳ ವಶವಾದನೆಂಬೆ ಸುಂದರ ಸ್ತ್ರೀಯ ಆಕಾರದಲ್ಲದ್ದ ವಾಗ್ದೇವತೆಯು ಕಂಪು ಜಿಂಕೆಯ ರೂಪವನ್ನು ಧರಿಸಿ ಗಂಧರ್ವರಿಂದ ತಪ್ಪಿಸಿಕೊಂಡು ಓಡಿಬಂದು ದೇವತೆಗಳಲ್ಲಿಗೆ ಬಂದು ಸೇರಿದಳು. ಆದುದರಿಂದ ಆ ಕಾಲದಿಂದ ಯಜ್ಞಗಳಲ್ಲಿ ಉಪಯೋಗಿಸುವುದಕ್ಕಾಗಿ ಸೋಮಲತೆ ಗಳನ್ನು ಕೊಂಡು ತರುವುದು ರೂಢಿಗೆ ಬಂದಿತು. ಈ ಸೋಮವಿಕ್ರಯಣವೆಂಬ ಯಜ್ಞಾಂಗಕರ್ಮವು ಯಜ್ಞಗಳಲ್ಲಿ ಈಗಲೂ ನಡೆಯುವುದು. ಇದಲ್ಲದೆ ಉತ್ತಮವಾದ ಸೋಮಲತೆಗಳು ಎತ್ತರವಾದ ಪರ್ವತಪ್ರದೇಶಗಳಲ್ಲಿ ಬೆಳೆಯುವುದ ರಿಂದ (ಮೂಜವತವೆಂಬ ಪರ್ವತವು ಸೋಮಲತೆಗೆ ಪ್ರಸಿದ್ಧವಾದುದು) ಅದನ್ನು ತರಬೇಕಾದರೆ ಬಹಳ ಶ್ರಮವಾಗುವುದು. ಆದುದರಿಂದ ದ್ರವ್ಯದ ಆಶೆಗಾಗಿ ಶ್ರಮವನ್ನು ವಹಿಸಿ ಪರ್ವತಗಳಿಗೆ ಹೋಗಿ ಸೋಮವನ್ನು ತಂದವರಿಂದ ಅದಕ್ಕೆ ತಕ್ಕ ಬೆಲೆಯನ್ನು ಕೊಟ್ಟು ಕೊಂಡುಕೊಳ್ಳುವುದು ರೂಢಿಗೆ ಬಂದಂತೆ ತೋರು ತ್ತದೆ. ಹಿಂದೆ ಸೋಮವನ್ನು ಗಂಧರ್ವನು ಅಪಹರಿಸಿದಾಗ ಅದು ಅವನಲ್ಲಿ ಮೂರು ರಾತ್ರಿಗಳವರೆಗೆ ಇದ್ದುದರಿಂದ ಕ್ರಯಕ್ಕೆ ತೆಗೆದುಕೊಂಡ ಸೋಮವನ್ನು ಮೂರು ರಾತ್ರಿಗಳವರೆಗೆ ಇಟ್ಟಿರಬೇಕೆಂಬ ನಿಯಮವಿದೆ ಪ್ರಕೃತ ಋಕ್ಕಿನಲ್ಲಿ ಸೋಮಲತೆಯ ಈ ವಿಧವಾದ ಪ್ರಶಂಸೆಯು ಉಕ್ತವಾಗಿದೆ

॥ ಸಂಹಿತಾಪಾಠಃ ॥

ಋತಂ ವದನ್ನೃತದ್ಯುಮ್ನ ಸತ್ಯಂ ವದನ್ತ್ಸತ್ಯಕರ್ಮನ್ ।
ಶ್ರದ್ಧಾಂ ವದನ್ಸೋಮ ರಾಜನ್ಧಾತ್ರಾ ಸೋಮ ಪರಿಷ್ಕೃತ ಇಂದ್ರಾ-
ಯೇಂದೋ ಪರಿ ಸ್ರವ ॥ ೪ ॥

॥ ಪದಪಾಠಃ ॥

ಋತಂ । ವದನ್ । ಋತದ್ಯುಮ್ನ । ಸತ್ಯಂ । ವದನ್ । ಸತ್ಯಕರ್ಮನ್ ।
ಶ್ರದ್ಧಾಂ । ವದನ್ । ಸೋಮ । ರಾಜನ್ । ಧಾತ್ರಾ । ಸೋಮ । ಪರಿಷ್ಕೃತಃ । ಇಂದ್ರಾಯ । ಇಂದ್ಯೋ
ಇತಿ । ಪರಿ । ಸ್ರವ ॥ ೪ ॥

॥ ಸಾಯಣಭಾಷ್ಯಂ ॥

ಹೇ ಋತದ್ಯುಮ್ನತೀನ ದ್ಯೋತಮಾನ ಸತ್ಯಯಶಸ್ ವಾ ಸತ್ಯಕರ್ಮನ್ಯಥಾರ್ಥಕರ್ಮನ್ ಹೇ ಸೋಮಾಭಿಷೂಯಮಾಣ ರಾಜನ್ ಸರ್ವೇಷಾಂ ಯಜ್ಞನಿಷ್ಪಾದಕತ್ವೇನ ಸ್ವಾಮಿನ್ ಹೇ ಸೋಮ ಋತಂ ಯಜ್ಞಂ ವದನ್ ಸತ್ಯಂ ವದನ್ನುಚ್ಚಾರಯಞ್ಶ್ರದ್ಧಾಂ ಯಜಮಾನಾನಾಮಾತ್ಮನೋಪೇಕ್ಷಿತಾಂ ವದನ್ ಧಾತ್ರಾ ಕರ್ಮಣಾಂ ಧಾರಕೇಣ ದೇವಾನಾಂ ಪೋಷಕೇಣ ವಾ ಯಜಮಾನೇನ ಪರಿಷ್ಕೃತೋಽಲಂಕೃತಸ್ತ್ವಮಿಂದ್ರಾಯ ಪರಿ ಸ್ರವ ॥ ಸಂಪರ್ಯುಪೇಭ್ಯ ಇತಿ ಭೂಷಣಾರ್ಥೇ ಕರೋತೇಃ ಸುಟ್ ॥

॥ ಪ್ರತಿಪದಾರ್ಥ ॥

ಋತದ್ಯುಮ್ನ—ಸತ್ಯದಿಂದ ಪ್ರಕಾಶಿಸುವವನೂ । ಸತ್ಯಕರ್ಮನ್—ಸತ್ಯಾತ್ಮಕವಾದ ಕರ್ಮವುಳ್ಳವನೂ ಆದ । ಸೋಮ—ಎಲೈ ಸೋಮದೇವನೇ । ರಾಜನ್—ಸಕಲರಿಗೂ ಪ್ರಭುವಾದ । ಸೋಮ—ಎಲೈ ಸೋಮದೇವನೇ । ಋತಂ—ಯಜ್ಞವನ್ನು । ವದನ್—ಪ್ರಕಟಿಸುವವನಾಗಿಯೂ । ಸತ್ಯಂ—ಸತ್ಯವನ್ನು । ವದನ್—ಪಠಿಸುವವನಾಗಿಯೂ । ಶ್ರದ್ಧಾಂ—ಕರ್ಮಶ್ರದ್ಧೆಯನ್ನು । ವದನ್—ಪರಿಸುವವನಾಗಿಯೂ । ಧಾತ್ರಾ—ಕರ್ಮಧಾರಕನಾದ ಯಜಮಾನನಿಂದ । ಪರಿಷ್ಕೃತಃ—ಅಲಂಕರಿಸಲ್ಪಟ್ಟವನಾಗಿಯೂ ಇರುವ । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಸತ್ಯದಿಂದ ಪ್ರಕಾಶಿಸುವವನೂ, ಸತ್ಯಾತ್ಮಕವಾದ ಕರ್ಮವುಳ್ಳವನೂ, ಸಕಲರಿಗೂ ಪ್ರಭುವೂ ಆದ ಎಲೈ ಸೋಮನೇ ಯಜ್ಞವನ್ನು ಪ್ರಕಟಿಸುವವನಾಗಿಯೂ, ಸತ್ಯವನ್ನು ಉಚ್ಚರಿಸುವವನಾಗಿಯೂ, ಕರ್ಮ ಶ್ರದ್ಧೆಯನ್ನು ಪಠಿಸುವವನಾಗಿಯೂ, ಕರ್ಮಧಾರಕನಾದ ಯಜಮಾನನಿಂದ ಅಲಂಕರಿಸಲ್ಪಟ್ಟವನಾಗಿಯೂ ಇರುವ ಎಲೈ ಸೋಮನೆ, ಇಂದ್ರನಪಾನಾರ್ಥವಾಗಿ ಪ್ರವಹಿಸು.

English Translation

Soma, the utterer of truth, radiant with truth, truthspeaking, truthful in act, speaking faith, lord (of worshippers) you are decorated by the upholder (of the rite) : flow, Indu, for Indra.

॥ ಸಂಹಿತಾಪಾಠಃ ॥

ಸತ್ಯಮುಗ್ರಸ್ಯ ಬೃಹತಃ ಸಂ ಸ್ರವಂತಿ ಸಂಸ್ರವಾಃ ।
ಸಂ ಯಂತಿ ರಸಿನೋ ರಸಾಃ ಪುನಾನೋ ಬ್ರಹ್ಮಣಾ ಹರ ಇಂದ್ರಾ-
ಯೇಂದೋ ಪರಿ ಸ್ರವ ॥ ೫ ॥

। पदपाठः ।

सत्यꣳऽउग्रस्य । बृहतः । सं । स्रवन्ति । सꣳऽस्रवाः ।

सं । यन्ति । रसिनः । रसाः । पुनानः । ब्रह्मणा । हरे । इन्द्राय । इन्दो इति ।

परि । स्रव ॥ ५ ॥

॥ सायणभाष्यं ॥

सत्यमुग्रस्य संग्रामे सत्येन शत्रूणामुद्गूरयितुः । यद्वा । उद्गूर्ण-सत्यस्य । यद्वा । यथार्थभूतमुद्गूर्णं बलं यस्य तस्य ॥ पृषोदरादित्वा-द्रूपसिद्धिः ॥ बृहतोः महतः सोमस्य तव संस्रवाः समुत्स्रवणशीला धाराः सं स्रवन्ति । समुद्गच्छन्ति । किंच रसिनो रसवतस्तव स्वभूता रसाः सं यन्ति । संगच्छन्ते । तस्माद्धे हरे हरितवर्ण सोम ब्रह्मणा ब्राह्मणेन मन्त्रेण वा पुनानः पूयमानः स त्वमिन्द्रार्थं परि स्रव ॥

। प्रतिपदार्थ ।

सत्यमुग्रस्य—सत्यवागियू प्रकटिसुव बलवुळ्ळवनू । बृहतः—महात्मनू आद सोमन । संस्रवाः—प्रवहिसुव धारेगळु । सं स्रवन्ति—प्रवहिसुत्तवे । रसिनः—रसवत्ताद सोमद । रसाः—रसगळु । सं यन्ति—ऒट्टिगे प्रवहिसुत्तवे । हरे हरितवर्णवुळ्ळ । इन्दो—एलै सोमने । ब्रह्मणा—मन्त्रदिन्द । पुनानः—शुद्धियन्नु हॊन्दुव नीनु । इन्द्राय—इन्द्रन पानार्थवागि । परि स्रव—प्रवहिसु.

। भावार्थ ।

सत्यपराक्रमदिन्द बेळगुववनू, महात्मनू आद सोमन धारेगळु प्रवहिसुत्तवे. रसवत्ताद सोमद रसगळु ऒट्टिगे प्रवहिसुत्तवे हरितवर्णवुळ्ळ एलै सोमने, मन्त्रदिन्द अथवा ब्राह्मणनिन्द शुद्धियन्नु हॊन्दुव नीनु इन्द्रन पानार्थवागि प्रवहिसु.

English Translation

The united sereams of you who are vast and truly formidable flow united ; the juices of you the juicy one meet together ; green-tinted (Soma) purified by holy prayer, Indu, flow for Indra.

। संहितापाठः ।

यꣳत्रं ब्रह्मा पवमान छन्दस्यां ऋतं वाचं वदन् ।

ग्रावाणꣳ सोमं महीयते सोमेनानन्दं जनयन्निन्द्रा-

यꣳइन्दो परि स्रव ॥ ६ ॥

॥ ಪದಪಾಠಃ ॥

ಯತ್ರ । ಬ್ರಹ್ಮಾ । ಪವಮಾನ । ಛಂದಸ್ಯಾಂ । ವಾಚಂ । ವದನ್ ।

ಗ್ರಾವ್ಣಾ । ಸೋಮೇ । ಮಹೀಯತೇ । ಸೋಮೇನ । ಆನಂದಂ । ಜನಯನ್ । ಇಂದ್ರಾಯ ।

ಇಂದೋ ಇತಿ । ಪರಿ । ಸ್ರವ ॥ ೬ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಪೂಯಮಾನ ಸೋಮ ತ್ವದರ್ಥಂ ಛಂದಸ್ಯಾಂ ಸಪ್ತಛಂದೋಭಿಃ ಕೃತಾಂ ತೇಷು ಭವಾಂ ವಾಚಂ ಸ್ತುತಿಂ ವದನ್ಸುಚ್ಚಾರಯನ್ ಸೋಮೇ ಸೋಮಾಭಿಷವಾರ್ಥಂ ಗ್ರಾವ್ಣಾಭಿಷವಂ ಕುರ್ವತಾ ಯುಕ್ತ್ವಸ್ತೇನಾಭಿಷುತೇನ ಸೋಮೇನ ದೇವಾನಾಮಾನಂದಂ ಸಂತೋಷಂ ಜನಯನ್ನುತ್ಪಾದಯನ್ಬ್ರಹ್ಮಾ ಬ್ರಾಹ್ಮಣೋ ಯತ್ರ ಯಸ್ಮಿನ್ದೇಶೇ ಮಹೀಯತೇ ದೇವೈಃ ಪೂಜ್ಯತೇ ತತ್ರ ಹೇ ಸೋಮ ತ್ವಂ ಪರಿ ಸ್ರವ ॥

॥ ಪ್ರತಿಪದಾರ್ಥ ॥

ಪವಮಾನ—ಶುದ್ಧಿಯನ್ನು ಹೊಂದುವ ಎಲೈ ಸೋಮನೇ । **ಛಂದಸ್ಯಾಂ**—ಸಪ್ತಚ್ಛಂದಸ್ಸುಗಳಿಂದಲೂ ಕೂಡಿದ । **ವಾಚಂ**—ಸ್ತುತಿವಾಕ್ಯನ್ನು । **ವದನ್**—ಪಠಿಸುತ್ತಲೂ । **ಸೋಮೇ**—ಸೋಮಲಾಭಾರ್ಥವಾಗಿ । **ಗ್ರಾವ್ಣಾ**—ಹಿಂಡುವ ಕಲ್ಲುಗಳಿಂದ ಹಿಂಡಿದ । **ಸೋಮೇನ**—ಸೋಮರಸದಿಂದ । **ಆನಂದಂ**—ದೇವತೆಗಳಿಗೆ ಸಂತೋಷವನ್ನು । **ಜನಯನ್**—ಉಂಟುಮಾಡುತ್ತಲೂ ಇರುವ । **ಬ್ರಹ್ಮಾ**—ಬ್ರಾಹ್ಮಣನು । **ಯತ್ರ**—ಯಾವ ಪ್ರದೇಶದಲ್ಲಿ । **ಮಹೀಯತೇ**—ಪೂಜಿಸಲ್ಪಡುವನೋ ಆ ಸ್ಥಳದಲ್ಲಿ । **ಇಂದೋ**—ಎಲೈ ಸೋಮನೇ । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಪರಿ ಸ್ರವ**—ಪ್ರವಹಿಸು.

॥ ಭಾವಾರ್ಥ ॥

ಶುದ್ಧಿಯನ್ನು ಹೊಂದುವ ಎಲೈ ಸೋಮದೇವನೇ, ಸಪ್ತಚ್ಛಂದಸ್ಸುಗಳಿಂದಲೂ ಕೂಡಿದ ಸ್ತುತಿವಾಕ್ಯನ್ನು ಪಠಿಸುತ್ತಲೂ ಸೋಮಲಾಭಾರ್ಥವಾಗಿ ಹಿಂಡುವ ಕಲ್ಲುಗಳಿಂದ ಹಿಂಡಿದ ಸೋಮರಸದಿಂದ ದೇವತೆಗಳಿಗೆ ಸಂತೋಷವನ್ನುಂಟುಮಾಡುತ್ತಲೂ ಇರುವ ಬ್ರಾಹ್ಮಣನು ಯಾವ ಪ್ರದೇಶದಲ್ಲಿ ಪೂಜಿಸಲ್ಪಡುವನೋ ಆ ಸ್ಥಳದಲ್ಲಿ ಇಂದ್ರನ ಪಾನಾರ್ಥವಾಗಿ ಪ್ರವಹಿಸು

English Translation

Wherever the Brahman, O purified (Soma), reciting the holy rhythmical text, engendering the delight (of the gods) by the Soma (expressed) with the grinding-stone, is reverenced, flow, Indu, for Indra.

। ಸಂಹಿತಾಪಾಠಃ ।

ಯತ್ರ॒ ಜ್ಯೋತಿ॒ರಜ॑ಸ್ರಂ ಯಸ್ಮಿ॑ಲ್ಲೋ॒ಕೇ ಸ್ವ॑ರ್ಹಿ॒ತಂ ।
ತಸ್ಮಿ॒ನ್ಮಾಂ ಧೇ॑ಹಿ ಪವಮಾ॒ನಾಮೃ॒ತೇ ಲೋ॒ಕೇ ಅ॒ಕ್ಷಿ॑ತ॒ ಇಂದ್ರಾ॑ಯೇಂದೋ॒
ಪರಿ॑ ಸ್ರವ ॥ ೭ ॥

॥ ಪದಪಾಠಃ ॥

ಯತ್ರ॑ । ಜ್ಯೋತಿ॑ಃ । ಅಜ॑ಸ್ರಂ । ಯಸ್ಮಿ॑ನ್ । ಲೋ॒ಕೇ । ಸ್ವ॑ಃ । ಹಿ॒ತಂ ।
ತಸ್ಮಿ॑ನ್ । ಮಾಂ । ಧೇ॒ಹಿ॒ । ಪ॒ವ॒ಮಾ॒ನ॒ । ಅಮೃ॑ತೇ । ಲೋ॒ಕೇ । ಅ॒ಕ್ಷಿ॑ತೇ । ಇಂ॒ದ್ರಾ॒ಯ । ಇಂ॒ದೋ॒-
ಇತಿ॑ । ಪರಿ॑ । ಸ್ರ॒ವ॒ ॥ ೭ ॥

। ಸಾಯಣಭಾಷ್ಯಂ ।

ಹೇ ಪವಮಾನ ಯತ್ರ ಯಸ್ಮಿಲ್ಲೋಕೇ ಜ್ಯೋತಿಃ ಸರ್ವಂ ತೇಜೋಽಜಸ್ರಂ ಸರ್ವದಾ-ವಿನಶ್ವರಂ ವರ್ತತೇ । ಯಸ್ಮಿಂಶ್ಚ ಲೋಕೇ ಸ್ವರಾದಿತ್ಯಾಖ್ಯಂ ಜ್ಯೋತಿರ್ಹಿತಂ ನಿಹಿತಮಸ್ತಿ । ತಸ್ಮಿನ್ನಮೃತೇ ಮರಣಧರ್ಮರಹಿತೇ ಅತ ಏವಾಕ್ಷಿತೇಽಕ್ಷೀಣೇ ಲೋಕೇ ಮಾಂ ಸೋಮಾಭಿಷವಂ ಕುರ್ವಂತಂ ಧೇಹಿ । ನಿಧೇಹಿ । ತಸ್ಮಾನ್ಮಾಮುತ್ತಮಲೋಕಂ ಪ್ರಾಪಯಿತುಂ ತ್ವಮಿಂದ್ರಾಯ ಪರಿ ಸ್ರವ ॥

। ಪ್ರತಿಪದಾರ್ಥ ।

ಪವಮಾನ—ಎಲೈ ಸೋಮದೇವನೇ । ಯತ್ರ—ಯಾವ ಲೋಕದಲ್ಲಿ । ಜ್ಯೋತಿಃ—ಸಕಲ ತೇಜಸ್ಸೂ ಅಜಸ್ರಂ—ಶಾಶ್ವತವಾಗಿರುವುದೋ । ಯಸ್ಮಿನ್ ಲೋಕೇ—ಯಾವ ಲೋಕದಲ್ಲಿ । ಸ್ವಃ—ಆದಿತ್ಯನ ತೇಜಸ್ಸು । ಹಿತಂ—ಸ್ಥಾಪಿತವಾಗಿದೆಯೋ । ತಸ್ಮಿನ್—ಅಂತಹ । ಅಮೃತೇ—ಮರಣರಹಿತವಾದುದೂ । ಅಕ್ಷಿತೇ—ಕ್ಷಯರಹಿತವಾದುದೂ ಆದ । ಲೋಕೇ—ಲೋಕದಲ್ಲಿ । ಮಾಂ—ನನ್ನನ್ನು । ಧೇಹಿ—ಸ್ಥಾಪಿಸು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು

। ಭಾವಾರ್ಥ ।

ಎಲೈ ಸೋಮದೇವನೇ, ಯಾವ ಲೋಕದಲ್ಲಿ ಸಕಲ ತೇಜಸ್ಸೂ ಶಾಶ್ವತವಾಗಿರುವುದೋ ಯಾವ ಲೋಕದಲ್ಲಿ ಆದಿತ್ಯನ ತೇಜಸ್ಸು ಸ್ಥಾಪಿತವಾಗಿದೆಯೋ, ಅಂತಹ ಮರಣರಹಿತವಾದುದೂ, ಕ್ಷಯರಹಿತವಾದುದೂ ಆದ ಲೋಕದಲ್ಲಿ ನನ್ನನ್ನು ಸ್ಥಾಪಿಸು. ಎಲೈ ಸೋಮನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Where light is perpetual, in the world in which the sun is placed, in that immortal imperishable world place me, Pavamana; flow, Indu, for Indra.

॥ ಸಂಹಿತಾಪಾಠಃ ॥

ಯತ್ರ॑ ರಾ॒ಜಾ ವೈವ॒ಸ್ವತೋ॒ ಯತ್ರಾ॒ವರೋ॑ಧನಂ ದಿ॒ವಃ ।
ಯತ್ರಾ॒ಮೂರ್ಯ॑ಹ್ಯತೀ॒ರಾಪ॒ಸ್ತತ್ರ॑ ಮಾ॒ಮಮೃ॑ತಂ ಕೃ॒ಧೀಂದ್ರಾ॑ಯೇಂದ॒ೋ
ಪರಿ॑ ಸ್ರವ ॥ ೪ ॥

॥ ಪದಪಾಠಃ ॥

ಯತ್ರ॑ । ರಾ॒ಜಾ । ವೈವ॒ಸ್ವತಃ । ಯತ್ರ॑ । ಆ॒ವ॒ರೋ॑ಧನಂ । ದಿ॒ವಃ ।
ಯತ್ರ॑ । ಅ॒ಮೂಃ । ಯಹ್ವ॑ತೀಃ । ಆಪ॑ಃ । ತತ್ರ॑ । ಮಾ॒ಂ । ಅ॒ಮೃ॒ತಂ । ಕೃ॒ಧಿ॒ । ಇಂ॒ದ್ರಾ॒ಯ॒ । ಇಂ॒ದೋ॒
ಇತಿ॑ । ಪರಿ॑ । ಸ್ರ॒ವ॒ ॥ ೪ ॥

॥ ಸಾಯಣಭಾಷ್ಯಂ ॥

ಯತ್ರ ಯಸ್ಮಿ॑ಲ್ಲೋ॒ಕೇ ವೈವಸ್ವತೋ ವಿವಸ್ವತ್ಪುತ್ರೋ ರಾಜಾ ಭವತಿ । ಯತ್ರ ಚ ಲೋಕೇ ದಿವ ಆದಿತ್ಯಸ್ಯಾವರೋಧನಂ ಭೂತಾನಾಂ ಪ್ರವೇಶನಂ । ಕಿಂಚ ಯತ್ರ ಲೋಕೇ ಯಹ್ವತೀರ್ಮಹತ್ಯೋ॒ಽಮೂರಿಮಾ ಗಂಗಾದ್ಯಾ ಆಪಸ್ತಿಷ್ಠಂತಿ । ತತ್ರ ತಾದೃಶೇ ಲೋಕೇ ಮಾಮಮೃತಂ ಮರಣಧರ್ಮರಹಿತಂ ಕೃಧಿ । ಕುರು । ಮಮ ದೇವತ್ವಂ ಪ್ರಾಪಯೇತ್ಯರ್ಥಃ । ಕತಃ ಕಾರಣಾತ್ಪರಿ ಸ್ರವ ॥

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮದೇವನೇ । **ಯತ್ರ**—ಯಾವ ಲೋಕದಲ್ಲಿ । **ವೈವಸ್ವತಃ**—ವಿವಸ್ವಂತನ ಪುತ್ರನು । **ರಾಜಾ**—ಪ್ರಭುವಾಗಿದ್ದಾನೆಯೋ । **ಯತ್ರ**—ಯಾವ ಲೋಕದಲ್ಲಿ । **ದಿವಃ**—ಆದಿತ್ಯನ । **ಅವರೋಧನಂ**—ಅಂತಃಪ್ರವೇಶವಿರುವುದೋ । **ಯತ್ರ**—ಯಾವ ಲೋಕದಲ್ಲಿ । **ಯಹ್ವತೀಃ**—ಮಹತ್ಸ್ವರೂಪವುಳ್ಳ । **ಅಮೂಃ ಆಪಃ**—ಗಂಗಾದಿ ನದಿಗಳ ಪರಿಶುದ್ಧವಾದ ಉದಕಗಳು ಇವೆಯೋ। **ತತ್ರ**—ಅಂತಹ ಲೋಕದಲ್ಲಿ। **ಮಾಂ**—ನನ್ನನ್ನು। **ಅಮೃತಂ**—ಮರಣರಹಿತನನ್ನಾಗಿ । **ಕೃಧಿ**—ಮಾಡು (ಸ್ಥಾಪಿಸು) । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಪರಿ ಸ್ರವ**—ಪ್ರವಹಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಯಾವ ಲೋಕದಲ್ಲಿ ವಿವಸ್ವಂತನ ಪುತ್ರನು ಪ್ರಭುವಾಗಿದ್ದಾನೆಯೋ ಯಾವ ಲೋಕದಲ್ಲಿ ಆದಿತ್ಯನ ಅಂತಃಪ್ರವೇಶವಿರುವುದೋ, ಯಾವ ಲೋಕದಲ್ಲಿ ಮಹತ್ಸ್ವರೂಪವುಳ್ಳ ಗಂಗಾದಿನದಿಗಳ ಪರಿಶುದ್ಧವಾದ ಉದಕಗಳು ಇವೆಯೋ ಅಂತಹ ಲೋಕದಲ್ಲಿ ನನ್ನನ್ನು ಮರಣರಹಿತನನ್ನಾಗಿ ಮಾಡು. ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Where Vivaswat's son is king, where the inner chamber of the sun (is), where these great waters (are), there make me immortal; flow, Indu, for Indra.

॥ ವಿಶೇಷವಿಷಯಗಳು ॥

ಯತ್ರ ರಾಜಾ ವೈವಸ್ವತಃ—ವಿವಸ್ವಾನ್ ಎಂಬ ಪ್ರಸಿದ್ಧನಾದ ದೇವತೆಯ ಪುತ್ರನಾದ ರಾಜನಿಗೆ ವೈವಸ್ವತನೆಂದು ಹೆಸರು. ಇವನನ್ನು ಯಮನೆಂದೂ ಕರೆಯುವ ರೂಢಿ ಇದೆ ಇವನ ವಿಷಯವಾದ ವಿವರಣೆಗಳು ಇದೇ ಭಾಗದ ಮುಂದಿನ ಸೂಕ್ತಗಳಲ್ಲಿ (ಋ. ಸಂ. ೧೦--೧೦ ಇತ್ಯಾದಿ) ವಿಸ್ತಾರವಾಗಿ ವಿವರಿಸಲ್ಪಟ್ಟಿವೆ.

॥ ಸಂಹಿತಾಪಾಠಃ ॥

ಯತ್ರಾನುಕಾಮಂ ಚರಣಂ ತ್ರಿನಾಕೇ ತ್ರಿದಿವೇ ದಿವಃ ।
ಲೋಕಾ ಯತ್ರ ಜ್ಯೋತಿಷ್ಮಂತಸ್ತತ್ರ ಮಾಮೃತಂ ಕೃಧೀಂದ್ರಾಯೇಂದೋ
ಪರಿ ಸ್ರವ ॥ ೯ ॥

॥ ಪದಪಾಠಃ ॥

ಯತ್ರ । ಅನುಽಕಾಮಂ । ಚರಣಂ । ತ್ರಿಽನಾಕೇ । ತ್ರಿಽದಿವೇ । ದಿವಃ ।
ಲೋಕಾಃ । ಯತ್ರ । ಜ್ಯೋತಿಷ್ಮಂತಃ । ತತ್ರ । ಮಾಂ । ಅಮೃತಂ । ಕೃಧಿ । ಇಂದ್ರಾಯ । ಇಂದೋ
ಇತಿ । ಪರಿ । ಸ್ರವ ॥ ೯ ॥

॥ ಸಾಯಣಭಾಷ್ಯಂ ॥

ಯತ್ರ ತ್ರಿದಿವೇ ತೃತೀಯಸ್ಯಾಂ ದಿವಿ ದ್ಯುಲೋಕೇ ತ್ರಿನಾಕೇ । ತತ್ರಾಧರಮಧ್ಯನೋತ್ತಮ-ಭಾವೇನ ತ್ರೀಣಿ ಸ್ಥಾನಾನಿ ಸಂತಿ । ತತ್ರ ತೃತೀಯೇ ನಾಕ ಉತ್ತಮೇ ಸ್ಥಾನೇ ದಿವ ಆದಿತ್ಯಸ್ಯಾನು-ಕಾಮಂ ಕಾಮಾನುಗುಣಂ ಚರಣಮಸ್ತಿ । ಕಂಚ ಯತ್ರ ಯಸ್ಮಿಲ್ಲೋಕೇ ಲೋಕಾ ಜ್ಯೋತಿಷ್ಮಂತೋ ಜ್ಯೋತಿರ್ಯುಕ್ತಾಸ್ತಿಷ್ಠಂತಿ । ತತ್ರ ತಾದೃಶೇ ಲೋಕೇ ಮಾಮೃತಂ ಕೃಧಿ । ಯಥಾ ಮನೋತ್ತಮ-ಲೋಕೋ ಭವತಿ ತಥಾ ತ್ವಮಿಂದ್ರಾಯ ಪರಿ ಸ್ರವ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ತ್ರಿನಾಕೇ**—ಅಧರ, ಮಧ್ಯಮ ಮತ್ತು ಉತ್ತಮ ಎಂಬ ಮೂರು ಸ್ಥಾನಗಳೂ ಇರುವ । **ಯತ್ರ**—ಯಾವ । **ತ್ರಿದಿವೇ**—ಮೂರನೆಯ ದ್ಯುಲೋಕದಲ್ಲಿ । **ದಿವಃ**—ಆದಿತ್ಯನ । **ಅನುಕಾಮಂ**—

ಸ್ವತಂತ್ರವಾದ । ಚರಣಂ—ಸಂಚಾರವಿರುವುದೋ । ಯತ್ರ—ಎಲ್ಲಿ । ಲೋಕಾಃ—ಸಕಲ ಲೋಕಗಳೂ । ಜ್ಯೋತಿಷ್ಮಂತಃ—ತೇಜೋಯುತಗಳಾಗಿರುವುವೋ । ತತ್ರ—ಅಂತಹ ಉತ್ತಮವಾದ ಲೋಕದಲ್ಲಿ । ಮಾಂ—ನನ್ನನ್ನು । ಅಮೃತಂ—ಮರಣರಹಿತನನ್ನಾಗಿ । ಕೃಧಿ—ಮಾಡಿ ಸ್ಥಾಪಿಸು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಅಧರ, ಮಧ್ಯಮ ಮತ್ತು ಉತ್ತಮ ಎಂಬ ಮೂರು ಪ್ರಭೇದಗಳಿರುವ ಯಾಗ ಮೂರನೆಯ ದ್ಯುಲೋಕದಲ್ಲಿ ಆದಿತ್ಯನ ಸ್ವತಂತ್ರವಾದ ಸಂಚಾರವಿರುವುದೋ ಎಲ್ಲಿ ಎಲ್ಲ ಲೋಕಗಳೂ ತೇಜೋಯುತಗಳಾಗಿರುವುವೋ ಅಂತಹ ಉತ್ತಮವಾದ ಲೋಕದಲ್ಲಿ ನನ್ನನ್ನು ಮರಣರಹಿತನನ್ನಾಗಿ ಮಾಡಿ ಸ್ಥಾಪಿಸು. ಎಲೈ ಸೋಮನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Where in the third heaven, in the third sphere, the sun wanders at will, where the regions are filled with light, there make me immortal: flow, Indu, for Indra.

॥ ಸಂಹಿತಾಪಾಠಃ ॥

ಯತ್ರ ಕಾಮಾ ನಿಕಾಮಾಶ್ಚ ಯತ್ರ ಬ್ರಧ್ನಸ್ಯ ವಿಷ್ಟಪಂ ।
ಸ್ವಧಾ ಚ ಯತ್ರ ತೃಪ್ತಿಶ್ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ
ಪರಿ ಸ್ರವ ॥ ೧೦ ॥

॥ ಪದಪಾಠಃ ॥

ಯತ್ರ । ಕಾಮಾಃ । ನಿಕಾಮಾಃ । ಚ । ಯತ್ರ । ಬ್ರಧ್ನಸ್ಯ । ವಿಷ್ಟಪಂ ।
ಸ್ವಧಾ । ಚ । ಯತ್ರ । ತೃಪ್ತಿಃ । ಚ । ತತ್ರ । ಮಾಂ । ಅಮೃತಂ । ಕೃಧಿ । ಇಂದ್ರಾಯ । ಇಂದೋ
ಇತಿ । ಪರಿ । ಸ್ರವ ॥ ೧೦ ॥

॥ ಸಾಯಣಭಾಷ್ಯಂ ॥

ಯತ್ರ ಯಸ್ಮಿಲ್ಲೋಕೇ ಕಾಮಾಃ ಕಾಮ್ಯಮಾನಾ ದೇವಾ ನಿಕಾಮಾ ನಿತರಾಮುಪಕ್ಷಯಂ ಪ್ರಾರ್ಥ್ಯಮಾನಾ ಇಂದ್ರಾದಯಶ್ಚ ವಿದ್ಯಂತೇ । .... । ಯದ್ವಾ । ಸೂರ್ಯೋಣ ವಿನಾ ಕರ್ಮಾಣಿ ನ ಘಟಂತ ಇತಿ ಸರ್ವೇಷಾಂ ಕರ್ಮಣಾಂ ಮೂಲಭೂತಸ್ಯಾದಿತ್ಯಸ್ಯ ವಿಷ್ಟಪಂ ಸಹಸ್ಥಾನಂ

ಯತ್ರ ವಿದ್ಯತೇ ತತ್ರ ಲೋಕೇ। ಸ್ವಧಾನ್ನಂ ಸ್ವಧಾಕಾರೇಣ ವಾ ದತ್ತೇಮನ್ನಂ ತೃಪ್ತಿಸ್ತರ್ಪಣಂ ಹರ್ಷಣಂ ಹರ್ಷಶ್ಚ ಯತ್ರ ವಿದ್ಯತೇ ತತ್ರ ಲೋಕೇ ಮಾಮಮೃತಂ ಕೃಧಿ ॥

। ಪ್ರತಿಪದಾರ್ಥ ।

ಯತ್ರ—ಯಾವ ಲೋಕದಲ್ಲಿ । ಕಾಮಾಃ—ಅಭಿಲಾಷೆಗಳೂ । ನಿಕಾಮಾಃ ಚ—ಉತ್ತಮವಾದ ಧ್ಯೇಯಗಳೂ ಇರುವುವೋ । ಯತ್ರ—ಯಾವ ಲೋಕದಲ್ಲಿ । ಬ್ರಧ್ನಸ್ಯ—ಕರ್ಮಪ್ರೇರಕನಾದ ಆದಿತ್ಯನ । ವಿಷ್ಪಹಂ ಚ—ಸ್ಥಾನವಿರುವುದೋ । ಯತ್ರ—ಎಲ್ಲಿ । ಸ್ವಧಾ—ಅನ್ನವೂ । ತೃಪ್ತಿಃ ಚ—ತೃಪ್ತಿಯೂ ಇರುವುವೋ ತತ್ರ—ಅಲ್ಲಿ । ಮಾಂ—ನನ್ನನ್ನು । ಅಮೃತಂ—ಮರಣರಹಿತನನ್ನಾಗಿ । ಕೃಧಿ—ಮಾಡಿ ಸ್ಥಾಪಿಸು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಸ್ರವಿಸು

। ಭಾವಾರ್ಥ ।

ಯಾವ ಲೋಕದಲ್ಲಿ ಅಭಿಲಾಷೆಗಳೂ ಉತ್ತಮವಾದ ಧ್ಯೇಯಗಳೂ ಇರುವುವೋ ಯಾವ ಲೋಕದಲ್ಲಿ ಕರ್ಮಪ್ರೇರಕನಾದ ಆದಿತ್ಯನ ಸ್ಥಾನವಿರುವುದೋ, ಎಲ್ಲಿ ಅನ್ನವೂ ತೃಪ್ತಿಯೂ ಇರುವುವೋ ಅಲ್ಲಿ ನನ್ನನ್ನು ಮರಣರಹಿತನನ್ನಾಗಿ ಮಾಡಿ ಸ್ಥಾಪಿಸು. ಎಲೈ ಸೋಮನೇ, ಇಂದ್ರನ ಪಾನಾರ್ಥವಾಗಿ ಸ್ರವಿಸು.

English Translation

Where wishes and desires (are), where the region of the sun (is), where food and delight (are) found, there make me immortal; flow, Indu, for Indra.

। ಸಂಹಿತಾಪಾಠಃ ।

ಯತ್ರೈನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ।
ಕಾಮಸ್ಯ ಯಾತ್ರಾಪ್ತಾಃ ಕಾಮಾಸ್ತತ್ರ ಮಾಮಮೃತಂ ಕೃಧೀಂದ್ರಾ-
ಯೇಂದೋ ಪರಿ ಸ್ರವ ॥ ೧೧ ॥

। ಪದಪಾಠಃ ।

ಯತ್ರ । ಏನನ್ದಾಃ । ಚ । ಮೋದಾಃ । ಚ । ಮುದಃ । ಪ್ರಮುದಃ । ಆಸತೇ ।
ಕಾಮಸ್ಯ । ಯತ್ರ । ಆಪ್ತಾಃ । ಕಾಮಾಃ । ತತ್ರ । ಮಾಂ । ಅಮೃತಂ । ಕೃಧಿ । ಇಂದ್ರಾಯ ।
ಇಂದೋ ಇತಿ । ಪರಿ । ಸ್ರವ ॥ ೧೧ ॥

॥ ಸಾಯಣಭಾಷ್ಯಂ ॥

ಯತ್ರ ಯಸ್ಮಿಲ್ಲೋಕ ಆನಂದಾದಯ ಆಸತೇ । ತೇಷಾಮಲ್ಪೋ ಭೇದೋ ದ್ರಷ್ಟವ್ಯಃ ಯತ್ರ ಚ ಲೋಕೇ ಕಾಮುಸ್ಯ ಕಾಮ್ಯಮಾನಸ್ಯ ದೇವಸ್ಯ ಸರ್ವೇ ಕಾಮಾ ಆಪ್ತಾಃ ಪ್ರಾಪ್ತಾ ಭವಂತಿ ತತ್ರ ಮಾಮಮೃತಂ ಕೃಧಿ । ಏತತ್ತು ತ್ವಯಾ ವಿನಾ ನ ಘಟತ ಇತಿ ಹೇ ಸೋಮ ತ್ವಂ ಪರಿ ಸ್ರವ ॥

॥ ಪ್ರತಿಪದಾರ್ಥ ॥

ಯತ್ರ—ಯಾವ ಲೋಕದಲ್ಲಿ । **ಆನಂದಾಃ**—ಅತ್ಯತಿಶಯವಾದ ಬ್ರಹ್ಮಾನಂದವೂ । **ಮೋದಾಃ**—ಹರ್ಷಗಳೂ । **ಮುದಃ**—ಸುಖಸಾಧನಗಳೂ । **ಪ್ರಮುದಃ**—ಸುಖಾನುಭವಗಳೂ । **ಆಸತೇ**—ಇರುವುವೋ । **ಯತ್ರ**—ಎಲ್ಲ । **ಕಾಮಸ್ಯ**—ಸುಖಾಪೇಕ್ಷಿಯಾದವನ । **ಆಪ್ತಾಃ**—ಇಷ್ಟಗಳಾದ । **ಕಾಮಾಃ**—ಅಪೇಕ್ಷೆಗಳು ನೆರವೇರುವುವೋ । **ತತ್ರ**—ಅಲ್ಲಿ । **ಮಾಂ**—ನನ್ನನ್ನು । **ಅಮೃತಂ**—ಮರಣರಹಿತನನ್ನಾಗಿ । **ಕೃಧಿ**—ಮಾಡಿ ಸ್ಥಾಪಿಸು । **ಇಂದೋ**—ಎಲೈ ಸೋಮನೇ । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಪರಿ ಸ್ರವ**—ಪ್ರವಹಿಸು

॥ ಭಾವಾರ್ಥ ॥

ಯಾವ ಲೋಕದಲ್ಲಿ ಅತಿಶಯವಾದ ಬ್ರಹ್ಮಾನಂದವೂ, ಹರ್ಷಗಳೂ, ಸುಖಸಾಧನಗಳೂ, ಸುಖಾನುಭವಗಳೂ ಇರುವುವೋ ಎಲ್ಲ ಸುಖಾಪೇಕ್ಷಿಯಾದವನ ಆಪೇಕ್ಷೆಗಳು ಅವನ ಇಷ್ಟವನ್ನು ಪೂರೈಸುವಂತಿರುವುವೋ, ಅಲ್ಲಿ ನನ್ನನ್ನು ಮರಣರಹಿತನನ್ನಾಗಿಮಾಡಿ ಸ್ಥಾಪಿಸು. ಎಲೈ ಸೋಮನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Where there is happiness, pleasures, joy and enjoyment, where the wishes of the wisher are obtained, there make me immortal, flow, Indu, for Indra

॥ ವಿಶೇಷವಿಷಯಗಳು ॥

ಆನಂದಾಃ ಮೋದಾಃ ಮುದಃ ಪ್ರಮುದಃ—ಈ ಶಬ್ದಗಳೆಲ್ಲವೂ ಆನಂದವೆಂಬ ಒಂದೇ ವಿಧವಾದ ಅರ್ಥವನ್ನು ಸೂಚಿಸುವವು. ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ ಒಂದೇ ಅರ್ಥವನ್ನು ಸೂಚಿಸುವ ಈ ಶಬ್ದಗಳ ಪ್ರಯೋಗವು, **ಮೋದಃ ಪ್ರಮೋದ ಆನಂದಃ** ಇತ್ಯಾದಿ ಅನೇಕ ಶ್ರುತಿವಾಕ್ಯಗಳಲ್ಲಿ ಕಂಡುಬರುವುದು



ನೂರ ಹದಿನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಯ ಇಂದೋರಿತಿ ಚತುರ್ಚಮಸೋಕಾದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ತಥಾ ಚಾನುಕ್ರಮ್ಯತೇ । ಯ ಇಂದೋಶ್ಚತುಷ್ಕಮಿತಿ ॥ ಗತಃ ಸೂಕ್ತವಿನಿಯೋಗಃ ॥

ಅನುವಾದವು—ಯ ಇಂದೋಃ ಎಂಬ ಈ ಸೂಕ್ತವು ಏಳನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಹಿಂದಿನ ಸೂಕ್ತದಂತೆಯೇ ಋಷಿದೇವತಾಛಂದಸ್ಸುಗಳಿರುವವು. ಅನುಕ್ರಮಣಿಕೆಯಲ್ಲಿ—ಯ ಇಂದೋಶ್ಚತುಷ್ಕಂ ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೆ ಹೇಳಲಾಗಿದೆ.

ಸೂಕ್ತ—೧೧೪

ಮಂಡಲ—೯ ॥ ಅನುವಾಕ—೭ ॥ ಸೂಕ್ತ—೧೧೪ ॥
ಅಷ್ಟಕ—೭ ॥ ಅಧ್ಯಾಯ—೫ ॥ ವರ್ಗ—೨೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೪ ॥
ಋಷಿ—ಕಶ್ಯಪಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಕಂಕ್ತಿಃ ॥

॥ ಸಂಹಿತಾಪಾಠಃ ॥

ಯ ಇಂದ್ದೋಃ ಪವಮಾನಸ್ಯಾನು ಧಾವಮಾನಸ್ಯಾನು ಧಾವಮಾನಸ್ಯಾಕ್ರಮೀತ್ ।
ತಮಾಹುಃ ಸುಪ್ರಜಾ ಇತಿ ಯಸ್ತೇ ಸೋಮಾವಿಧನ್ಮನ ಇಂದ್ರಾಯೇಂದ್ದೋ
ಪರಿ ಸ್ರವ ॥ ೧ ॥

॥ ಪದಪಾಠಃ ॥

ಯಃ । ಇಂದೋಃ । ಪವಮಾನಸ್ಯ । ಅನು । ಧಾವಮಾನಸ್ಯ । ಅನು । ಧಾವಮಾನಸ್ಯ । ಅಕ್ರಮೀತ್ ।
ತಂ । ಆಹುಃ । ಸುಽಪ್ರಜಾಃ । ಇತಿ । ಯಃ । ತೇ । ಸೋಮ । ಅವಿಧತ್ । ಮನಃ । ಇಂದ್ರಾಯ ।
ಇಂದ್ದೋ ಇತಿ । ಪರಿ । ಸ್ರವ ॥ ೧ ॥

॥ ಸಾಯಣಭಾಷ್ಯಂ ॥

ಪವಮಾನಸ್ಯ ಪೂಯಮಾನಸ್ಯೇಂದೋಃ ಸೋಮಸ್ಯೇದಂದೋಃ ಸೋಮಸ್ಯ ಧಾವಮಾನಸ್ಥಾನಾನಿ ದ್ರೋಣಕಲಶಾದೀನಿ ಯದ್ವಾ ಧಾವಮಾನಾನಿ ತೇಜಾಂಸಿ ಯೋ ಬ್ರಾಹ್ಮಣೋಽಸ್ವಕ್ರಮೀತ್ ಅನುಕ್ರಾಮತಿ ಅನುಗಚ್ಛತಿ ತಂ ಜನಂ ಸುಪ್ರಜಾಃ ಶೋಭನಪ್ರಜನನಃ ಕಲ್ಯಾಣಪುತ್ರಾದಿಪ್ರಜಾಯುಕ್ತ ಇತ್ಯಾಹುಃ॥ ನಿತ್ಯನುಸಿಚ್ ಪ್ರಜಾಮೇಧಯೋರಿತ್ಯಸಿಚ್ ಸಮಾಸಾಂತಃ ॥ ಯಃ ಸೋಮುಮಭಿಷುಣೋತಿ ಸ ಪುತ್ರಾದಿಯುಕ್ತೋ ಭವತೀತ್ಯರ್ಥಃ । ಕಿಂಚ ಹೇ ಸೋಮ ಯೋ ಮನುಷ್ಯಸ್ತೇ ತ್ವದರ್ಥಂ ಮನೋಽವಿಧತ್ ಕರೋತಿ । ಯದ್ವಾ । ತೇ ತ್ವದೀಯಂ ಮನೋಽವಿಧತ್ ಪರಿಚರತಿ । ವಿಧತಿಃ ಪರಿಚರಣಕರ್ಮಾ । ತಮಪಿ ಕಲ್ಯಾಣ ಜನನಮಿತ್ಯಾಹುಃ । ತಸ್ಮಾತ್ತ್ವಂ ಪರಿ ಸ್ರವ ॥

। ಪ್ರತಿಪದಾರ್ಥ ।

ಪವಮಾನಸ್ಯ—ಶುದ್ಧಿಯನ್ನು ಹೊಂದುವ । ಇಂದೋಃ—ಸೋಮನ । ಧಾಮಾನಿ—ಸ್ಥಾನಗಳನ್ನು । ಯಃ—ಯಾವ ಬ್ರಾಹ್ಮಣನು । ಅಸು ಅಕ್ಷಮಿತ್—ಸೇವಿಸುವನೋ । ತಂ—ಆ ಬ್ರಾಹ್ಮಣನನ್ನು । ಸುಪ್ರಜಾಃ—ಉತ್ತಮವಾದ ಪುತ್ರಾದಿಗಳುಳ್ಳವನೆಂದು । ಅಹುಃ—ಜನರು ಹೇಳುತ್ತಾರೆ । ಸೋಮ—ಎಲೈ ಸೋಮನೇ । ಯಃ—ಯಾರು । ತೇ—ನಿನ್ನ ಸೇವೆಗಾಗಿ । ಮನಃ—ಮನಸ್ಸನ್ನು । ಅವಿಧತ್—ಸಂಕಲ್ಪಿಸುವನೋ ಅವನನ್ನು । ಇತಿ—ಸತ್ಪುತ್ರವಂತನೆಂದೇ ಹೇಳುವರು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

। ಭಾವಾರ್ಥ ।

ಶುದ್ಧಿಯನ್ನು ಹೊಂದುವ ಸೋಮನ ಸ್ಥಾನಗಳನ್ನು ಯಾವ ಬ್ರಾಹ್ಮಣನು ಸೇವಿಸುವನೋ ಆ ಬ್ರಾಹ್ಮಣನನ್ನು ಉತ್ತಮವಾದ ಪುತ್ರಾದಿಗಳನ್ನುಳ್ಳವನೆಂದು ಜನರು ಹೇಳುತ್ತಾರೆ. ಎಲೈ ಸೋಮನೇ, ಯಾರು ನಿನ್ನ ಸೇವೆಗಾಗಿ ಮನಸ್ಸನ್ನು ಸಂಕಲ್ಪಿಸುವನೋ ಅವನನ್ನೂ ಸತ್ಪುತ್ರವಂತನೆಂದೇ ಹೇಳುವರು. ಎಲೈ ಸೋಮನೇ ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

(The Brahman) who attends to the stations of the filtered Soma-juice—him men call rich in children, who applies his mind to you, Soma; flow, Indu, for Indra.

। ಸಂಹಿತಾಪಾಠಃ ।

ಋಷೇ᳖ ಮಂತ್ರಕೃತಾಂ ಸ್ತೋಮ್ಯೈಃ ಕಶ್ಯಪೋದ್ವರ್ಧಯನ್ಗಿ᳖ರಃ ।
ಸೋಮಂ ನಮಸ್ಯ ರಾಜಾ᳖ನಂ ಯೋ ಜಜ್ಞೇ ವೀರುಧಾಂ ಪತಿರಿಂದ್ರಾ᳖-
ಯೇಂದ್ಗೋ ಪರಿ ಸ್ರವ ॥ ೨ ॥

। ಪದಪಾಠಃ ।

ಋಷೇ᳖ । ಮಂತ್ರಽಕೃತಾಂ । ಸ್ತೋಮ್ಯೈಃ । ಕಶ್ಯಪ । ಉತ್ಽವರ್ಧಯನ್ । ಗಿ᳖ರಃ ।
ಸೋಮಂ᳖ । ನಮಸ್ಯ । ರಾಜಾ᳖ನಂ । ಯಃ । ಜಜ್ಞೇ । ವೀರುಧಾಂ᳖ । ಪತಿಃ । ಇಂದ್ರಾಯ । ಇಂದ್ಗೋ
ಇತಿ । ಪರಿ । ಸ್ರವ ॥ ೨ ॥

। ಸಾಯಣಭಾಷ್ಯಂ ।

ಋಷಿಃ ಸ್ವಾತ್ಮಾನಂ ಪ್ರತ್ಯಾಹ । ಹೇ ಋಷೇ ಸೂಕ್ತದ್ರಷ್ಟರ್ಹೇ ಕಶ್ಯಪಾತ್ಮನ್ ತ್ವಂ ಮಂತ್ರ-
ಕೃತಾಮೃಷೀಣಾಂ ಸ್ತೋಮ್ಯೈಃ ಸ್ತೋತ್ರೈರ್ಗಿರಃ ಸ್ತುತಿರೂಪಾ ವಾಚ ಉದ್ವರ್ಧಯನ್ನುಪರ್ಯುಪರಿ ವರ್ಧ-

ಯಸ್ಯಾಜ್ಞಾನಂ ಸರ್ವೇಷಾಂ ಸ್ವಾಮಿನಂ ತಂ ಸೋಮಂ ನಮಸ್ಯ । ಪೂಜಯ ॥ ನಮಸಃ ಪೂಜಾಯಾಂ ನಮೋವರಿವ ಇತಿ ಕ್ಯಚ್ ॥ ಯಃ ಸೋಮೋ ವೀರುಧಾಂ ವನಸ್ಪತೀನಾಂ ಪತಿಃ ಪಾಲಕೋ ಜಜ್ಞೇ ಜಾತಃ ತಂ ನಮಸ್ಯ ॥ ಹೇ ಸೋಮ ಯಥಾತ್ಮನಾ ಸುತೋ ಭವಸಿ ತಥಾ ಪರಿ ಸ್ರವ ॥

॥ ಪ್ರತಿಪದಾರ್ಥ ॥

ಕಶ್ಯಪ—ಕಶ್ಯಪಸಂಜ್ಞಕನಾದ । ಋಷೇ—ಎಲೈ ಋಷಿಯೇ । ಯಃ—ಯಾವ ಸೋಮನು । ವೀರುಧಾಂ—ಲತಾದಿಗಳಿಗೆಲ್ಲ । ಪತಿಃ—ಪಾಲಕನಾಗಿ । ಜಜ್ಞೇ—ಉತ್ಪನ್ನನಾಗಿರುವನೋ ಅಂತಹ । ರಾಜಾನಂ—ಸಕಲರಿಗೂ ಪ್ರಭುವಾದ । ಸೋಮಂ—ಸೋಮದೇವನನ್ನು । ಮಂತ್ರಕೃತಾಂ—ಸ್ತುತಿಕರ್ತರ । ಸ್ತೋಮೈಃ—ಸ್ತುತಿಗಳೊಡಗೂಡಿದ । ಗಿರಃ—ಸ್ತೋತ್ರವಾಕ್ಯಗಳನ್ನು । ಉದ್ವರ್ಧಯನ್—ವೃದ್ಧಿಗೊಳಿಸುತ್ತ । ನಮಸ್ಯ—ಪೂಜಿಸು ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಪ್ರವಹಿಸು.

॥ ಭಾವಾರ್ಥ ॥

ಕಶ್ಯಪಸಂಜ್ಞಕನಾದ ಎಲೈ ಋಷಿಯೇ, ಯಾವ ಸೋಮನು ಲತಾದಿಗಳಿಗೆಲ್ಲ ಪಾಲಕನಾಗಿರುವನೋ ಅಂತಹ ಸಕಲರಿಗೂ ಪ್ರಭುವಾದ ಸೋಮದೇವನನ್ನು ಸ್ತುತಿಕರ್ತರ ಸ್ತುತಿಗಳಿಂದ ಕೂಡಿದ ಸ್ತೋತ್ರಗಳನ್ನು ವೃದ್ಧಿಗೊಳಿಸುತ್ತ ಪೂಜಿಸು. ಎಲೈ ಸೋಮನೇ ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Rishi Kashyapa, raising your voice with the praises of the hymn-makers, adore the royal Soma who is born the lord of creeping plants flow, Indu, for Indra,

॥ ಸಂಹಿತಾಪಾಠಃ ॥

ಸಪ್ತ ದಿಶೋ ನಾನಾಸೂರ್ಯಾಃ ಸಪ್ತ ಹೋತಾರ ಋತ್ವಿಜಃ ।
ದೇವಾ ಆದಿತ್ಯಾ ಯೇ ಸಪ್ತ ತೇಭಿಃ ಸೋಮಾಭಿ ರಕ್ಷ ನ ಇಂದ್ರಾ-
ಯೇಂದೋ ಪರಿ ಸ್ರವ ॥ ೩ ॥

॥ ಪದಪಾಠಃ ॥

ಸಪ್ತ । ದಿಶಃ । ನಾನಾ॒ಸೂರ್ಯಾಃ॑ । ಸಪ್ತ । ಹೋತಾರಃ॑ । ಋತ್ವಿಜಃ ।
ದೇವಾಃ । ಆದಿತ್ಯಾಃ । ಯೇ । ಸಪ್ತ । ತೇಭಿಃ । ಸೋಮ । ಅ॒ಭಿ । ರಕ್ಷ । ನಃ । ಇಂದ್ರಾಯ । ಇಂದೋ
ಇತಿ । ಪರಿ । ಸ್ರವ ॥ ೩ ॥

॥ ಸಾಯಣಭಾಷ್ಯಂ ॥

ಸಪ್ತ ದಿಶಃ । ಸೋಮೋ ಯಸ್ಯಾಂ ದಿಶಿ ವರ್ತತೇ ತದ್ವ್ಯತಿರಿಕ್ತಾಃ ಸಪ್ತ ಭವಂತಿ । ತಾ ನಾನಾ-ಸೂರ್ಯಾ ನಾನಾವಿಧೈಃ ಸೂರ್ಯೈರಧಿಷ್ಠಿತಾ ಋತವೋ ಭವಂತಿ । ನಾಗಲಿಂಗತ್ವಾದ್ಬಹೂನಾಂ ನಾನಾ-ಸೂರ್ಯತ್ವಮಿತ್ಯಾಮ್ನಾನಾತ್ । ಯದ್ವಾ । ನಾನಾಸೂರ್ಯಾ ಇತಿ ದಿಗ್ವಿಶೇಷಣಂ । ತಥಾ ಹೋತಾರೋ ವಷಟ್ಕರ್ತಾರೋ ಹೋತ್ರಾದಯಃ ಸಪ್ತರ್ತ್ವಿಜೋ ಭವಂತಿ । ಕಂಚ ಸಪ್ತಾದಿತ್ಯಾ ಅದಿತೇಃ ಪುತ್ರಾ ಧಾತ್ರಾದಯೋ ಮಾರ್ತಂಡವರ್ಜಿತಾ ಯೇ ಸಪ್ತ ದೇವಾಃ ಸಂತಿ । ಏತತ್ತ್ವಷ್ಟೌ ಪುತ್ರಾಸೋ ಅದಿತೇಃ । ಋ. ೧೦-೭೨-೮ । ಇತ್ಯತ್ರ ಪ್ರಪಂಚಯಿಷ್ಯತೇ । ಹೇ ಸೋಮ ತೇಭಿಸ್ತ್ವೈರ್ದಿಗಾದಿಭಿಃ ಸರ್ವೈರ್ನೋಽಸ್ಮಾನಭಿ ರಕ್ಷ । ಏತತ್ತು ತ್ವಯಾ ವಿನಾ ನ ಘಟತ ಇತಿ ತಸ್ಮಾದಿಂದ್ರಾಯೇಂದೋ ಪರಿ ಸ್ರವ ॥

॥ ಪ್ರತಿಪದಾರ್ಥ ॥

ನಾನಾಸೂರ್ಯಾಃ—ಅನೇಕ ಸೂರ್ಯರಿಂದೊಡಗೂಡಿದ । ದಿಶಃ—ದಿಕ್ಕುಗಳು । ಸಪ್ತ—ಸಪ್ತಸಂಖ್ಯಾಕವಾಗಿವೆ । ಹೋತಾರಃ—ಹೋತೃರೂಪರಾದ । ಋತ್ವಿಜಃ—ಋತ್ವಿಕ್ಕುಗಳು । ಸಪ್ತ—ಸಪ್ತಸಂಖ್ಯಾಕರಾಗಿದ್ದಾರೆ । ಸೋಮ—ಎಲೈ ಸೋಮದೇವನೇ । ಸಪ್ತ—ಸಪ್ತಸಂಖ್ಯಾಕರಾದವರೂ । ಆದಿತ್ಯಾಃ—ಆದಿತ್ಯರೂಪರೂ ಆದ । ಯೇ ದೇವಾಃ—ಯಾವ ದೇವತೆಗಳಿದ್ದಾರೆಯೋ । ತೇಭಿಃ—ಅವರೆಲ್ಲರೊಡನೆಯೂ । ನಃ—ನಮ್ಮನ್ನು । ಅಭಿ ರಕ್ಷ—ರಕ್ಷಿಸು । ಇಂದೋ—ಎಲೈ ಸೋಮನೇ । ಇಂದ್ರಾಯ—ಇಂದ್ರನ ಪಾನಾರ್ಥವಾಗಿ । ಪರಿ ಸ್ರವ—ಸ್ರವಹಿಸು.

॥ ಭಾವಾರ್ಥ ॥

ನಾನಾಸೂರ್ಯರಿಂದೊಡಗೂಡಿದ ದಿಕ್ಕುಗಳು ಸಪ್ತಸಂಖ್ಯಾಕವಾಗಿವೆ. ಹೋತೃರೂಪವಾದ ಋತ್ವಿಕ್ಕುಗಳೂ ಸಪ್ತಸಂಖ್ಯಾಕರಾಗಿದ್ದಾರೆ. ಎಲೈ ಸೋಮದೇವನೇ, ಸಪ್ತಸಂಖ್ಯಾಕರೂ, ಆದಿತ್ಯರೂಪರೂ ಆದ ಯಾವ ದೇವತೆಗಳಿದ್ದಾರೆಯೋ ಅವರೆಲ್ಲರೊಡನೆಯೂ ನಮ್ಮನ್ನು ರಕ್ಷಿಸು. ಎಲೈ ಸೋಮನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Seven (are) the quarters of the world with different suns, seven (are) the ministrant priests, sevan are the divine Adityas—with these, Soma protect us: flow, Indu, for Indra,

॥ ವಿಶೇಷವಿಷಯಗಳು ॥

ಸಪ್ತ ದಿಶೋ ನಾನಾಸೂರ್ಯಾಃ—ಇಲ್ಲಿ ನಾಲ್ಕು ದಿಕ್ಕುಗಳೂ, ನಾಲ್ಕು ವಿದಿಕ್ಕುಗಳೂ ಸೇರಿ ಎಂಟು ದಿಕ್ಕುಗಳಾಗುವವು. **ಸೋಮೋ ಯಸ್ಯಾಂ ದಿಶಿ ವರ್ತತೇ ತದ್ವ್ಯತಿರಿಕ್ತಾ ಸಪ್ತ ಭವಂತಿ ।** ಸೋಮವು ಅಥವಾ ಸೋಮದೇವತೆಯು ಇರುವ ದಿಕ್ಕನ್ನು ಬಿಟ್ಟರೆ ಇನ್ನು ಉಳಿದಿರುವವು ಏಳು ದಿಕ್ಕುಗಳಾಗುವವು. ಆದ್ದರಿಂದ ಇಲ್ಲಿ **ಸಪ್ತ ದಿಶಃ** ಎಂದು ಹೇಳಿದೆ. ಈ ದಿಕ್ಕುಗಳಲ್ಲಿ ನಾನಾವಿಧ ಸೂರ್ಯರುಗಳಿಂದ ಅಧಿಷ್ಠಾತವಾದ ನಾನಾ ಋತುಗಳು ಇರುವವು. ಈ ವಿಷಯದಲ್ಲಿ— **ನಾನಾಲಿಂಗತ್ವಾದ್ಬಹೂನಾಂ ನಾನಾಸೂರ್ಯತ್ವಂ** ಎಂಬ ಶ್ರುತಿವಾಕ್ಯವನ್ನು ಭಾಷ್ಯಕಾರರು ಉದಾಹರಿಸಿರುವರು. ಸೂರ್ಯನು ಒಬ್ಬನೇ ಆದರೂ ಋತುಧರ್ಮಾನುಸಾರವಾಗಿ ಸೂರ್ಯನು

ಅವುಗಳಲ್ಲಿ ಅಧಿಷ್ಠಾತೃವಾಗಿರುವುದರಿಂದ ಎಂದರೆ ಋತುಗಳಿಗನುಸಾರವಾಗಿ ನಾನಾಗುಣವಿಶಿಷ್ಟವಾಗಿರುವುದರಿಂದ ಇಲ್ಲಿ ನಾನಾ ಸೂರ್ಯರೆಂದು ಬಹುವಚನಪ್ರಯೋಗವಿದೆ.

ದೇವಾ ಅದಿತ್ಯಾ ಯೇ ಸಪ್ತ—ಇದಲ್ಲದೆ ಸೂರ್ಯಶಬ್ದಕ್ಕೆ ಆದಿತ್ಯ ಎಂಬ (ಅದಿತಿಯ ಪುತ್ರ) ಎಂಬ ಅರ್ಥವನ್ನು ಉದ್ದೇಶಿಸಿದರೆ ಅದಿತಿಗೆ ಆರು, ಏಳು ಅಥವಾ ಎಂಟು ಮಂದಿ ಪುತ್ರರಿರುವರೆಂದೂ. ಅವರುಗಳು ಯಾರು ಎಂಬುದನ್ನು **ಅಷ್ಟೌ ಪುತ್ರಾಸೋ ಅದಿತೇಃ** (ಋ. ಸಂ. ೧೮-೭೨-೮) ಎಂಬ ಋಕ್ಕಿನಲ್ಲಿಯೂ ಇತರ ಶ್ರುತಿವಾಕ್ಯಗಳಲ್ಲಿಯೂ ನಿರ್ದೇಶಿಸಿರುವುದನ್ನು ಉದಾಹರಿಸಬಹುದು. ಈ ವಿಷಯದಲ್ಲಿ ಎಂದರೆ ಅದಿತಿಪುತ್ರರು ಅಥವಾ ಆದಿತ್ಯರು ಎಷ್ಟು ಮಂದಿ ಎಂಬ ವಿಷಯದಲ್ಲಿ ಸ್ವಲ್ಪ ವಿವರಣೆಯು ಅವಶ್ಯಕವು.

ಆದಿತ್ಯರೆಂಬ ದೇವತೆಗಳ ಸಂಖ್ಯಾಪರಿಮಿತಿಯೆಷ್ಟು ಎಂಬ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ಚರ್ಚಿಸುವುದು ಅವಶ್ಯಕವಾಗಿದೆ. ಯಾಸ್ಕರು ಉದಾಹರಣೆಗಾಗಿ ಕೊಟ್ಟಿರುವ **ಇಮಾ ಗಿರ ಆದಿತ್ಯೇಭ್ಯಃ** (ಋ. ಸಂ. ೨-೨೭-೧) ಎಂಬ ಋಕ್ಕಿನಲ್ಲಿ ಮಿತ್ರ ಆರ್ಯಮಾ, ಭಗಃ ವರುಣಃ ದಕ್ಷಃ ಅಂಶಃ ಎಂದು ಆರುಮಂದಿ ದೇವತೆಗಳ ಹೆಸರುಗಳಿವೆ, ಇವರೇ ಆದಿತ್ಯರೆಂದು ಹೇಳಲಾಗಿದೆ. ಆದರೆ **ತುವಿಜಾತಃ** ಎಂಬ ಶಬ್ದಕ್ಕೆ ನಿರುಕ್ತಕಾರರು **ಬಹುಜಾತಶ್ಚ ಧಾತಾ** (ನಿ. ೧೨-೩೬) ಧಾತಾ ಎಂದು ಅರ್ಥಮಾಡಿದಾರೆ. ಹೇಗೆಂದರೆ—**ತುವೀತಿ ಬಹುನಾಮ। ಸರ್ವವಿಧಾತೃತ್ವಾದ್ಬಹುಜನ್ಮಾ ಧಾತಾ ಯಾವದಧಿಕಾರಂ ಜನ್ಮೇತಿ।** ಎಂದು ನಿರುಕ್ತಕಾರರು ಅರ್ಥಮಾಡಿದಾರೆ. ತುವಿ ಶಬ್ದಕ್ಕೆ ಬಹು, ಅನೇಕ ಎಂದರ್ಥ. ಜನ್ಮವೆಂದರೆ ಅಧಿಕಾರ. ತುವಿಜಾತ ಎಂದರೆ ಅನೇಕ ವಿಧವಾದ ಅಧಿಕಾರಗಳುಳ್ಳ ಸರ್ವವಿಧಾತೃವಾದ ಧಾತಾ ಎಂದು ಅರ್ಥವು, ಎಂದು ತುವಿಜಾತಶಬ್ದಕ್ಕೆ ಅರ್ಥವಿವರಣೆಮಾಡಿರುವುದರಿಂದ ಈ ಋಕ್ಕಿನಲ್ಲಿ ಧಾತನೂ ಸೇರಿ ಏಳು ಮಂದಿ ಆಗಿತ್ಯರೆಂದು ಹೇಳಬೇಕು. **ಮತ್ತು ಸಪ್ತ ದಿತೋ ನಾನಾ ಸೂರ್ಯಾಃ** ಎಂಬ ಮಂತ್ರದಲ್ಲಿ ಅದಿತ್ಯರ ಸಂಖ್ಯೆಯು ಏಳು ಎಂದು ನಿರ್ದೇಶಿಸಿದೆ. (ಋ. ಸಂ. ೯.೧೧೪-೩) ಆದರೆ ನಾಮ ನಿರ್ದೇಶವಿಲ್ಲ. **ದೇವಾ ಅದಿತ್ಯಾ ಯೇ ಸಪ್ತ** ಎಂದು ಮಾತ್ರ ತಿಳಿಸಿದೆ. ಹಿಂದೆ ಅದಿತಿಯ ವಿಷಯವನ್ನು ತಿಳಿಸುವಾಗ ೧೦-೭೭-೪, ೯ ಈ ಮಂತ್ರಗಳಿನ್ನುದ್ಧರಿಸಿ ಅದಿತಿಗೆ ಎಂಟು ಜನ ಪುತ್ರರೆಂದೂ ಅವರಲ್ಲಿ ಏಳು ಜನರನ್ನೂ ದೇವತೆಗಳಿಗೆ ಅರ್ಪಿಸಿದಳೆಂದೂ ಮಾರ್ತಾಂಡನೆಂಬ ಎಂಟನೆಯವನನ್ನು ತಾನೇ ಇರಿಸಿಕೊಂಡು ಪೋಷಿಸಿದಳೆಂಬುದನ್ನೂ ವಿವರಿಸಿದೆ. ಇಲ್ಲಿಯೂ ಸಹ ಮಾರ್ತಾಂಡನನ್ನು ಬಿಟ್ಟು ಉಳಿದವರ ನಾಮನಿರ್ದೇಶವಿಲ್ಲ. (ಅ. ವೇ. ೮-೯-೨೧) ನೇ ಮಂತ್ರದಲ್ಲಿ ಅದಿತಿಗೆ ಎಂಟು ಪುತ್ರರೆಂದು ತಿಳಿಸಿದೆ. ೨-೨೭-೧ ನೇ ಮಂತ್ರದ ತಾತ್ಪರ್ಯವನ್ನು ವಿವರಿಸುವಾಗ ಸಾಯಣರು ಅವರ ಸಂಖ್ಯೆಯನ್ನು ತಿಳಿಸಲು ತೈತ್ತಿರೀಯಾರಣ್ಯಕದ ವಾಕ್ಯವನ್ನುದ್ಧರಿಸಿ **ಅಷ್ಟೌ ಪುತ್ರಾಸೋ ಅದಿತೇಃ..... ತಾನಸುಕ್ರಮಿ ಷ್ಯಾಮಃ। ಮಿತ್ರಶ್ಚ ವರುಣಶ್ಚ। ಧಾತಾ ಚಾರ್ಯಮಾ ಚ। ಅಗ್ಂಶಶ್ಚ ಭಗಶ್ಚ। ಇಂದ್ರಶ್ಚ ವಿವಸ್ವಾಗ್ಂಶ್ಚೇತ್ಯೇತೇ** (ತೈ ಆ. ೧-೧೩-೩) ಅಲ್ಲಿರುವಂತೆ, ದಿತಿಯ ಅಷ್ಟಪುತ್ರರನ್ನು ತಿಳಿಸಿದ್ದಾರೆ.

ಉದಗಾದಯಮಾದಿತ್ಯಃ (ಋ. ಸಂ. ೧.೫೦.೧೦), **ಉದಪಪ್ತದಸೌ ಸೂರ್ಯಃ** (ಋ. ಸಂ. ೧-೧೯೧-೧) ಇತ್ಯಾದಿ ಸ್ಥಳಗಳಲ್ಲಿ ಸೂರ್ಯನಿಗೂ ಆದಿತ್ಯನಿಗೂ ತಾದಾತ್ಮ್ಯವನ್ನು ತಿಳಿಸಿದೆ. ಆದಿತೇಯನಾದ (ಆದಿತಿಪುತ್ರನಾದ) ಅಗ್ನಿಯೇ ಅಂತರಿಕ್ಷದಲ್ಲಿ ಸೂರ್ಯರೂಪದಲ್ಲಿ ದೇವತೆಗಳಿಂದ ಸ್ಥಾಪಿತನಾಗಿದ್ದಾನೆ ಎಂದು ವರ್ಣಿತವಾಗಿರುವುದೂ ಉಂಟು.

ಯೆದೇದೇನಮದಧುರ್ಯಜ್ಞೇ ಯಾಸೋ ದಿವಿ ದೇವಾಃ ಸೂರ್ಯಮಾದಿತೇಯಂ (ಋ.ಸಂ ೧೧ ೨೪-೧೧) **ಅನರ್ವಾಣೋ ಹ್ಯೇಷಾಂ ಪಂಥಾ ಆದಿತ್ಯಾನಾಂ** (ಋ.ಸಂ. ೪-೧೫-೨)ಎಂದು ಆದಿತ್ಯರ ಪಥದ ಸ್ವರೂಪವನ್ನು

ತಿಳಿಸಿ ತಸ್ಸು ನಃ ಸವಿತಾ ಭಗೋ ವರುಣೋ ಮಿತ್ರೋ ಅರ್ಯಮಾ (ಋ ಸಂ ೪.೧೪-೩) ಎಂಬ ನಾಲ್ಕು ಆದಿತ್ಯರೊಂದಿಗೆ ಸವಿತೃವಿನ ನಾಮವು ಸೇರಿದೆ ಸೂರ್ಯ ಅಥವಾ ಸವಿತೃ ದೇವತೆಗೆ ಆದಿತ್ಯರಲ್ಲಿ ಏಳನೆಯ ಸ್ಥಾನವು. ಕೆಲವೆಡೆಗಳಲ್ಲಿ ನಿರ್ದಿಷ್ಟವಾಗಿದೆ. (ಅ ವೇ. ೪-೨-೯: ೩೭) ಕೆಲವೆಡೆಗಳಲ್ಲಿ ವರುಣನ ಜೊತೆಯಲ್ಲಿ ಇಂದ್ರನೂ ಆದಿತ್ಯನೆಂದು ಪರಿಗಣಿತನಾಗಿದ್ದಾನೆ. (ಋ. ಸಂ. ೭-೮೫ ೪).

ತತ್ರ ತ್ವಾದಿತ್ಯಾ ರಶ್ಮಯಸ್ತಾಂ ಸೂರ್ಯಾಚಂದ್ರಮಸಾವುಭೌ

(ಅ. ವೇ ೪-೨-೧೫)

ಎಂಬ ಸ್ಥಳಗಳಲ್ಲಿ ಸೂರ್ಯ ಮತ್ತು ಚಂದ್ರ ಇವರಿಬ್ಬರನ್ನೂ ಆದಿತ್ಯರ ಗುಂಪಿನಲ್ಲಿ ಸೇರಿಸಿದೆ.

ಮಾತಾಽದಿತ್ಯಾನಾಂ ದುಹಿತಾ ವಸೂನಾಂ . . . ಹಿರಣ್ಮವರ್ಣಾ ಮಧುಕಶಾ

(ಅ. ವೇ. ೯–೧-೪)

ಹಿರಣ್ಯವರ್ಣಾತ್ಮಳಾದ ಮಧುಕಶೆಯನ್ನು ಆದಿತ್ಯಮಾತೆಯೆಂದೂ, ವಸುಪುತ್ರಿಯೆಂದೂ ಕರೆದಿದೆ. ಹೀಗೆ ಒಂದೊಂದು ಸನ್ನಿವೇಶದಲ್ಲಿ ಒಂದೊಂದು ವಿಧವಾಗಿ ಅದಿತಿಗೂ ಆದಿತ್ಯರಿಗೂ ಇರುವ ಸಂಬಂಧವನ್ನು ತಿಳಿಸಿದೆ. ಇವರ ಸಂಬಂಧವನ್ನು ತೈತ್ತಿರೀಯಬ್ರಾಹ್ಮಣದಲ್ಲಿ ಈ ರೀತಿ ವಿವರಿಸಿದೆ.

ಅದಿತಿಃ ಪುತ್ರಕಾಮಾ । ಸಾಧ್ಯೇಭ್ಯೋ ವೇವೇಭ್ಯೋ ಬ್ರಹ್ಮೌದನಮಪಚತ್ । ತಸ್ಯಾ ಉಚ್ಛೇಷಣಮದದುಃ । ತಶ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯೈ ಧಾತಾ ಚಾರ್ಯಮಾ ಚಾ ಜಾಯೇತಾಂ । ಸಾ ದ್ವಿತೀಯಮಪಚತ್ । ತಸ್ಯಾ ಉಚ್ಛೇಷಣಮದದುಃ । ತಶ್ಪ್ರಾಶ್ನಾತ್ ॥ ಸಾ ರೇತೋಽಧತ್ತ । ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಂ । ಸಾ ತೃತೀಯಮಪಚತ್ । ತಸ್ಯಾ ಉಚ್ಛೇಷಣಮದದುಃ । ತಶ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯಾ ಅಗ್ಂಶಶ್ಚ ಭಗಶ್ಚಾಜಾಯೇತಾಂ । ಸಾ ಚತುರ್ಥಮಪಚತ್ । ತಸ್ಯಾ ಉಚ್ಛೇಷಣಮದದುಃ । ತಶ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯಾ ಇಂದ್ರಶ್ಚ ವಿವಸ್ವಾಗ್ಶ್ಚಾಜಾಯೇತಾಂ ॥

(ತೈ. ಬ್ರಾ. ೧-೧-೯ ೧,೨,೩)

ಆದಿತಿಯು ಪುತ್ರಕಾಮಳಾಗಿ ದೇವತೆಗಳನ್ನೂ ಸಾಧ್ಯರನ್ನೂ ಉದ್ದೇಶಿಸಿ ಬ್ರಹ್ಮೌದನರೂಪವಾದ ಹವಿಸ್ಸನ್ನು ಪಕ್ವ ಮಾಡಿದಳು ಅನಂತರ ತಾವು ಆ ಹವಿಸ್ಸನ್ನು ಭುಜಿಸಿ ಅದರಲ್ಲಿ ಉಳಿದ ಶೇಷವನ್ನು ಅವಳಿಗೆ ಕೊಟ್ಟರು. ಅವಳು ಅದನ್ನು ಭುಜಿಸಿದಾಗ ಅದರ ಪ್ರಭಾವದಿಂದ ಧಾತಾ ಅರ್ಯಮಾ ಎಂಬಿಬ್ಬರು ಪುತ್ರರು ಜನಿಸಿದರು ಇದೇ ಕ್ರಮವನ್ನು ಎರಡನೆಯಸಲ ಆಚರಿಸಿದಾಗ ಮಿತ್ರ ಮತ್ತು ವರುಣರೂ, ಮೂರನೆಯ ಸಲ ಅಂಶ ಮತ್ತು ಭಗರೂ, ನಾಲ್ಕನೆಯ ಸಲ ಇಂದ್ರ ಮತ್ತು ವಿವಸ್ವಂತರೂ ಉತ್ಪನ್ನರಾದರು. ಇವರೇ ಆದಿತ್ಯರು ಎಂದು ತೈತ್ತಿರೀಯಬ್ರಾಹ್ಮಣವು ವರ್ಣಿಸಿದೆ. ಇದೇ ವಿಷಯವನ್ನು ಶತಪಥಬ್ರಾಹ್ಮಣದಲ್ಲಿ ವಿವರಿಸುತ್ತಾ ಈ ರೀತಿ ತಿಳಿಸಿದೆ.

ಸ ಏಕಸಾ ಏವ ವಾಚಂ ಮಿಥುನಂ ಸಮಭವತ್ಸ ದ್ವಾದಶದ್ರಸ್ಸಾನ್ನಿರ್ಭ್ಯಭವತ್ । ತೇ ದ್ವಾದಶ ಆದಿತ್ಯಾ ಅಸೃಜ್ಯಂತ ತಾನ್ ದಿಕ್ಷೂಪಾದಧತ್ ॥

(ಶ. ಬ್ರಾ. ೬-೧-೨-೮)

(ಪ್ರಜಾಪತಿಯು) ವಾಕ್ಕಿನೊಡನೆ ತನ್ನ ಮಾನಸಿಕವಾದ ಸಂಬಂಧವನ್ನು ಹೊಂದಿದನು. ಆಗ ಹನ್ನೆರಡು ದ್ರಪ್ಸಾತ್ಮಕವಾದ ಗರ್ಭವನ್ನು ಹೊಂದಿದನು. ಅದರ ಫಲವೇ ದ್ವಾದಶಾದಿತ್ಯರ ಆವಿರ್ಭಾವವು. ಆಗ ಅವರನ್ನು ದಿಕ್ಕುಗಳ ಪಾಲಕರನ್ನಾಗಿ ಇರಿಸಿದನು ಎಂದಿದೆ. ಇದೇ ರೀತಿಯಲ್ಲಿ ಆದಿತ್ಯರ ವಿಷಯವನ್ನು ತಿಳಿಸತಕ್ಕ ಇತರ ಶ್ರುತಿವಾಕ್ಯಗಳನ್ನೂ ಪರಿಶೀಲಿಸಬಹುದು.

ಕತಮ ಆದಿತ್ಯಾ ಇತಿ । ದ್ವಾದಶ ವೈ ಮಾಸಾಃ । ಸಂವತ್ಸರಸ್ಯೈತ ಆದಿತ್ಯಾ ಏತೇ ಹೀದಂ ಸರ್ವಮಾದದಾನಾ ಯಂತಿ ತೇ ಯದಿದಂ ಸರ್ವಮಾದದಾನಾ ಯಂತಿ ತಸ್ಮಾದಾದಿತ್ಯಾ ಇತಿ ॥

(ಶ. ಬ್ರಾ. ೧೧-೬-೩-೮)

ಆದಿತ್ಯರು ಎಷ್ಟುಮಂದಿ ? ಆದಿತ್ಯರು ಹನ್ನೆರಡು ಸಂಖ್ಯೆಯುಳ್ಳವರು. ಸಂವತ್ಸರದಲ್ಲಿ ಹನ್ನೆರಡು ಮಾಸಗಳಿವೆ. ಇವುಗಳೇ ಆದಿತ್ಯರು. ಆ ಮಾಸಗಳೇ ಸಕಲವನ್ನೂ ಪರಿಗ್ರಹಿಸಿ ಮುಂದುವರಿಯುತ್ತಿರುವುದರಿಂದ ಅವುಗಳಿಗೆ ಆದಿತ್ಯರೆಂದು ಹೆಸರು ಎಂದಿದೆ. ಇದೇ ಆದಿತ್ಯರ ವಿಷಯಕವಾದ ಕಥೆಯು ತೈತ್ತಿರೀಯ ಬ್ರಾಹ್ಮಣದಲ್ಲಿ ಈ ರೀತಿ ಉಕ್ತವಾಗಿದೆ—

ಆದಿತ್ಯಾಶ್ಚಾಂಗಿರಸಶ್ಚ ಸುವರ್ಗೇ ಲೋಕೇ೨ಸ್ಪರ್ಧಂತ। ತೇ೨ಂಗಿರಸ ಆದಿತ್ಯೇಭ್ಯಃ। ಅಮುಮಾದಿತ್ಯಮುಶ್ವಗ್ಂ ಶ್ವೇತಂ ಭೂತಂ ದಕ್ಷಿಣಾಮನಯನ್ । ತೇ೨ಬ್ರುವನ್ । ಯನ್ನೋ೨ವೇಷ್ಟ । ಸ ವರ್ಯೋ೨ಭೂದಿತಿ। ತಸ್ಮಾದಶ್ವಗ್ಂ ಸವರ್ಯೇತ್ಯಾಹ್ವಯಂತಿ। ತಸ್ಮಾದ್ಯಜ್ಞೇ ವರೋ ದೀಯತೇ। ಯತ್ಪ್ರಜಾಪತಿರಾಲಬ್ಧೋ೨ಶ್ವೋ೨ಭವತ್ । ತಸ್ಮಾದಶ್ವೋ ನಾಮ । ಯಚ್ಛ್ವಯದರುರಾಸೀತ್ । ತಸ್ಮಾದರ್ವಾ ನಾಮ । ಯತ್ಸರ್ವೋ ವಾಜನ್ನ್ಸಮಜಯತ್ । ತಸ್ಮಾದ್ವಾಜೀ ನಾಮ । ಯದಸುಸಾರಾಣಾಂ ಲೋಕಾನಾದತ್ತ । ತಸ್ಮಾದಾದಿತ್ಯೋ ನಾಮ ॥

(ತೈ. ಬ್ರಾ. ೩-೯-೨೧-೧,೨)

ಸ್ವರ್ಗದಲ್ಲಿ ಆದಿತ್ಯರೂ, ಆಂಗಿರಸ್ಸುಗಳೂ ಪರಸ್ಪರ ಸ್ಪರ್ಧಿಸಿದರು. ಶ್ವೇತಾಶ್ವರೂಪನಾಗಿದ್ದ ಆದಿತ್ಯನನ್ನು ಆಂಗಿರಸ್ಸುಗಳು ಆದಿತ್ಯರಿಗೆ ದಕ್ಷಿಣಾರೂಪದಲ್ಲರ್ಪಿಸಿದರು. ಆಗ ಆದಿತ್ಯರು ಆಂಗಿರಸ್ಸುಗಳನ್ನು ಕುರಿತು 'ನೀವು ತಂದಿರುವ ಈ ಆದಿತ್ಯನು ಅತ್ಯಂತ ಶ್ರೇಷ್ಠರೂಪನಾಗಿದ್ದಾನೆ" ಎಂದರು. ಆದಿತ್ಯರು ಅಶ್ವರೂಪಿಯಾದ ಆದಿತ್ಯನನ್ನು **ಸ ವರ್ಯಃ** (ಅವನು ಶ್ರೇಷ್ಠನು) ಎಂದು ಹೇಳಿದ್ದರಿಂದಲೇ ಲೋಕದಲ್ಲೂ ಅಶ್ವವು **ಸವರ್ಯ** ವೆಂದೇ ಕರೆಯಲ್ಪಟ್ಟಿತು. ಆದುದರಿಂದ ಯಜ್ಞದಲ್ಲಿ ಒಂದು ವರವು ದತ್ತವಾಯಿತು. ಯಜ್ಞಾರ್ಪಿತನಾದ ಪ್ರಜಾಪತಿಯು ಸರ್ವವ್ಯಾಪಿಯಾದುದರಿಂದ **ಅಶ್ವ**ವೆಂದೂ ಮತ್ತು ಚಕ್ಷುರ್ವೇದನೆಯನ್ನನುಭವಿಸಿದುದರಿಂದ **ಅರ್ವ**ನೆಂದೂ ಸಂಪತ್ತುಗಳನ್ನೆಲ್ಲಾ ತನ್ನ ವಶಮಾಡಿಕೊಂಡುದರಿಂದ **ವಾಜಿ**ಯೆಂದೂ ಅಸುರರಿಂದ ಅವರ ಲೋಕಗಳನ್ನೆಲ್ಲಾ ಕಸಿದುಕೊಂಡುದರಿಂದ (ಅದತ್ತ) **ಆದಿತ್ಯ**ನೆಂದೂ ಪ್ರಸಿದ್ಧನಾಗಿದ್ದಾನೆ ಎಂದು ಆದಿತ್ಯಶಬ್ದದ ನಿರ್ವಚನವನ್ನು ತಿಳಿಸಿದೆ. ಇದೇ ನಿರ್ವಚನವನ್ನು ತೈತಿರೀಯಾರಣ್ಯಕದಲ್ಲು ವಿವರಿಸುತ್ತಾ,

ಯೋ೨ಸೌ ತಪನ್ನುದೇತಿ । ಸ ಸರ್ವೇಷಾಂ ಭೂತಾನಾಂ ಪ್ರಾಣಾನಾದಾಯೋದೇತಿ ।

(ತೈ. ಆ. ೧.೯೪-೧)

ಯಾವ ಈ ಸೂರ್ಯನು ಉದಯಿಸುವನೋ ಅವನು ಸಕಲ ಭೂತಗಳ ಪ್ರಾಣಗಳನ್ನೂ ಕಸಿದುಕೊಂಡು (ಆ+ದಾ) ಉದಯಿಸುತ್ತಾನೆ. ಆದುದರಿಂದಲೇ ಅವನು ಆದಿತ್ಯನು. ಹೀಗೆ ಆದಿತಿಪುತ್ರತ್ವದಿಂದಲೇ ಆದಿತ್ಯರೆಂಬುದೂ, ಅಥವಾ **ಆದಾನ** ಕ್ರಿಯಾವಿಶಿಷ್ಟರಾದುದರಿಂದಲೇ ಆದಿತ್ಯರೆಂಬುದೂ ಎರಡು ವಿಧವಾದ ಸನ್ನಿವೇಶವೂ ವರ್ಣಿತವಾಗಿದೆ. ಈ ಪದಕ್ಕೆ ನಿರುಕ್ತಕಾರರು ಈ ರೀತಿ ವಿವರಣೆಯನ್ನು ತಿಳಿಸಿದ್ದಾರೆ

ಅದಿತ್ಯಃ ಕಸ್ಮಾತ್ । ಅದತ್ತೇ ರಸಾನ್ । ಅದತ್ತೇ ಭಾಸಂ ಜ್ಯೋತಿಷಾಂ । ಅದೀಪ್ತೋ ಭಾಸೇತಿ ವಾ ಅದಿತೇಃ ಪುತ್ರ ಇತಿ ವಾ । .... ಸೂರ್ಯಮಾದಿತೇಯಂ । ವಿವಮನ್ಯಾಸಾಮಪಿ ದೇವತಾನಾಮಾದಿತ್ಯಪ್ರವಾದಾಃ ಸ್ತುತಯೋ ಭವಂತಿ । ತದ್ಯಥೈತತ್ । ಮಿತ್ರಸ್ಯ ವರುಣಸ್ಯಾರ್ಯಮ್ಣೋ ದಕ್ಷಸ್ಯ ಭಗಸ್ಯಾಂಶಸ್ಯೇತಿ ॥ (ನಿ. ೨.೧೩)

"ಸಹಸ್ರಗುಣಮುತ್ಸೃಷ್ಟಮಾದತ್ತೇ ಹಿ ರಸಂ ರವಿಃ" ಇತ್ಯಾದಿಯಾಗಿ ವರ್ಣಿತವಾಗಿರುವಂತೆ ರಸವನ್ನು ಆದಾನಮಾಡುವುದರಿಂದ ಆದಿತ್ಯನೆಂಬ ಹೆಸರು ಪ್ರಸಿದ್ಧವಾಗಿದೆ. ರಸವನ್ನೇ ಅಲ್ಲದೇ, ಸಕಲ ತೇಜಸ್ಸನ್ನೂ ಆದಾನಮಾಡುತ್ತಾನೆ. ಪ್ರಕಾಶದಿಂದ ಪ್ರದೀಪ್ತನಾಗುವುದರಿಂದಾಗಲಿ ಅಥವಾ ಅದಿತಿಪುತ್ರನಾದುದರಿಂದಾಗಲಿ ಈಹೆಸರು ಪ್ರಸಿದ್ಧವಾಗಿದೆ. ಆದರೆ ಋಕ್ಸಂಹಿತೆಯಲ್ಲಿ ಸೂರ್ಯನನ್ನು ಅದಿತಿಪುತ್ರನೆಂದು ಕರೆದಿರುವುದು ಒಂದೆರಡುಕಡೆಗಳಲ್ಲಿ ಮಾತ್ರ. "ದಿವಿ ದೇವಾಃ ಸೂರ್ಯ ಆದಿತೇಯಂ" (ಋ. ಸಂ. ೧೦-೪೪-೧೧) ಇತ್ಯಾದಿ ಸ್ಥಳಗಳಲ್ಲಿ ಈ ವಿವರಣರೂಪವಾದ ವರ್ಣನವಿದೆ. ಸೂರ್ಯನಲ್ಲದೇ ಮಿತ್ರ, ವರುಣ, ಅರ್ಯಮ, ದಕ್ಷ, ಭಗ, ಅಂಶ ಇವರನ್ನೂ ಆದಿತ್ಯರೆಂದೇ ನಿರ್ದೇಶಿಸಿದೆ.

ಹೀಗೆ ಆತ್ಮಗುಣವರ್ಣನವೇ ಆದಿತ್ಯಪದದ ತಾತ್ಪರ್ಯವಾದರೆ ಅದು ಸೂರ್ಯನಿಗೆ ಮಾತ್ರ ಅನ್ವಯಿಸುತ್ತದೆ. ಅದಿತಿಪುತ್ರತ್ವವನ್ನು ತೋರಿಸುವುದಾದರೆ, ಮಿತ್ರಾವರುಣಾದಿಗಳಿಗೂ ಅನ್ವಯಿಸುತ್ತದೆ. ಎರಡನೆಯ ಅರ್ಧವನ್ನು ಕೊಡುವುದಾದರೆ, ಆಗ ಅದಿತಿಪುತ್ರರೆಷ್ಟುಮಂದಿ ಎಂಬುದೂ ನಿಷ್ಕೃಷ್ಟವಾದ ವಿಷಯವಾಗಿದೆ. ಆರು, ಎಂಟು, ಹನ್ನೆರಡು ಇತ್ಯಾದಿಯಾಗಿ ಸಂಖ್ಯಾನಿರ್ದೇಶಗಳಿವೆ. ಈ ಸಂಖ್ಯೆಯನ್ನು ತೋರಿಸುವ ಕೆಲವು ಶ್ರುತಿವಾಕ್ಯಗಳನ್ನು ಮೇಲೆ ಉದಾಹರಿಸಿದೆ.

ಸಪ್ತ ಹೋತಾರ ಋತ್ವಿಜಃ-ಇಲ್ಲಿ ಸಪ್ತ ಹೋತೃಗಳೆಂದರೆ-**ಹೋತೃ, ಮೈತ್ರಾವರುಣ, ಬ್ರಾಹ್ಮಣಾಚ್ಛಂಸೀ, ಪೋತೃ, ನೇಷ್ಟೃ, ಅಚ್ಛಾವಾಕ ಮತ್ತು ಆಗ್ನೀಧ್ರ** ಎಂಬ ಏಳುಜನ ಋತ್ವಿಕ್ಕುಗಳು ಈ ಋತ್ವಿಕ್ಕುಗಳು ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನಗಳೆಂಬ ಮೂರು ಸವನಗಳಲ್ಲಿಯೂ (ಸೋಮರಸವನ್ನು ಹಿಂಡಿತೆಗೆದು ಅದನ್ನು ಅಗ್ನಿಯಲ್ಲಿ ವಿಧಿಪೂರ್ವಕವಾಗಿ ಹೋಮಮಾಡುವ ಕರ್ಮಕ್ಕೆ ಸವನವೆಂದು ಹೆಸರು) ಒಬ್ಬೊಬ್ಬರು ಒಂದೊಂದು ಋಕ್ಕನ್ನು ವಷಟ್ಕಾರಪೂರ್ವಕವಾಗಿ ಎಂದರೆ ಮಂತ್ರಾಂತ್ಯದಲ್ಲಿ **ವೌಷಟ್** ಎಂಬ ಪದವನ್ನು ಸೇರಿಸಿ ಸೋಮವನ್ನು ಅಗ್ನಿಯಲ್ಲಿ ಹೋಮಮಾಡುವರು. ಪ್ರಾತಸ್ಸವನಕಾಲದಲ್ಲಿ ಗಾಯತ್ರೀಛಂದಸ್ಸಿನ ಋಕ್ಕಿಗಳಿಂದಲೂ. ಮಾಧ್ಯಂದಿನಸವನಕಾಲದಲ್ಲಿ ತ್ರಿಷ್ಟುಪ್‌ಛಂದಸ್ಸಿನ ಋಕ್ಕುಗಳಿಂದಲೂ, ತೃತೀಯಸವನದಲ್ಲಿ ಜಗತೀಛಂದಸಿನ ಮಂತ್ರಗಳಿಂದಲೂ ಹೋಮಮಾಡಬೇಕೆಂಬ ವಿಧಿ ಇದೆ. ಆಯಾ ಸವನಕಾಲದಲ್ಲಿ ಆಯಾ ಋತ್ವಿಕ್ಕುಗಳು ಪಠಿಸುವ ಈ ಮಂತ್ರಗಳಿಗೆ ಪ್ರಸ್ಥಿತಯಾಜ್ಯಾನುವಾಕ್ಯಮಂತ್ರಗಳೆಂದು ಅಥವಾ **ಸಪ್ತಹೋತ್ರ**ಮಂತ್ರಗಳೆಂದು ಹೆಸರು. ಅವುಗಳನ್ನು ಇಲ್ಲಿ ವಿಶದವಾಗಿ ವಿವರಿಸಲಾಗಿದೆ—

॥ **ಪ್ರಾತರ್ಯವಸವನ** ॥

ಈ ಸವನದಲ್ಲಿ ಏಳು ಜನ ಋತ್ವಿಕ್ಕುಗಳೂ ಗಾಯತ್ರೀಛಂದಸ್ಸಿನ ಋಕ್ಕುಗಳನ್ನೇ ಪಠಿಸಬೇಕು.

೧. ಹೋತೃವು ಪಠಿಸಬೇಕಾದ ಮಂತ್ರವು—

ಇದಂ ತೇ ಸೋಮ್ಯಂ ಮಧ್ವಧಷ್ಟನ್ನದ್ರಿಭಿರ್ನರಃ ।
ಜುಷಾಣ ಇಂದ್ರ ತರ್ಪಿಬ ॥ (ಋ. ಸಂ. ೮-೬೫-೮)

೨. ಬ್ರಾಹ್ಮಣಾಚ್ಛಂಸೀ ಎಂಬ ಋತ್ವಿಜನು ಪಠಿಸಬೇಕಾದ ಮಂತ್ರ—

ಇಂದ್ರ ತ್ವಾ ವೃಷಭಂ ವಯಂ ಸುತೇ ಸೋಮೇ ಹವಾಮಹೇ ।
ಸ ಪಾಹಿ ಮಧ್ವೋ ಅಂಧಸಃ ॥
(ಋ ಸಂ. ೩-೪೦-೧)

೩. ಮಿತ್ರಾವರುಣನೆಂಬ ಋತ್ವಿಜನು ಪಠಿಸಬೇಕಾದ ಮಂತ್ರವು—

ಮಿತ್ರಂ ವಯಂ ಹವಾಮಹೇ ವರುಣಂ ಸೋಮಪೀತಯೇ ।
ಜಜ್ಞಾನಾ ಪೂತದಕ್ಷಸಾ ॥
(ಋ. ಸಂ ೧-೨೩-೪)

೪. ಪ್ರೋತೃವೆಂಬ ಋತ್ವಿಜನು ಪಠಿಸಬೇಕಾದ ಮಂತ್ರ- -

ಮರುತೋ ಯಸ್ಯ ಹಿ ಕ್ಷಯೇ ಪಾಥಾ ದಿವೋ ವಿಮಹಸಃ ।
ಸ ಸುಗೋಶಾತಮೋ ಜನಃ ॥
(ಋ. ಸಂ. ೧-೪೬-೧)

೫. ನೇಷ್ಟೃವೆಂಬ ಋತ್ವಿಜನು ಪಠಿಸಬೇಕಾದ ಮಂತ್ರ—

ಅಗ್ನೇ ಪತ್ನೀರಿಹಾ ವಹ ದೇವಾನಾಮುಶತೀರುಪ ।
ತ್ವಷ್ಟಾರಂ ಸೋಮಪೀತಯೇ ॥ (ಋ. ಸಂ ೧-೨೨-೯)

೬. ಆಗ್ನೀಧ್ರನೆಂಬ ಋತ್ವಿಜನು ಪಠಿಸಬೇಕಾದ ಮಂತ್ರ—

ಉಕ್ಷಾನ್ನಾಯ ವಶಾನ್ನಾಯ ಸೋಮಪೃಷ್ಠಾಯ ವೇಧಸೇ ।
ಸ್ತೋಮೈರ್ವಿಧೇಮಾಗ್ನಯೇ ॥
(ಋ ಸಂ ೮-೪೩-೧೧)

೭. ಆಚ್ಛಾವಾಕನೆಂಬ ಋತ್ವಿಜನು ಪಠಿಸಬೇಕಾದ ಮಂತ್ರ—

ಪ್ರಾತರ್ಯಾವಭಿರಾ ಗತಂ ದೇವೇಭಿರ್ದೇನ್ಯಾವಸೂ ।
ಇಂದ್ರಾಗ್ನೀ ಸೋಮಪೀತಯೇ ॥
(ಋ. ಸಂ. ೮-೩೮-೭)

॥ ಮಾಧ್ಯಂದಿನಸವನ ।'

ಈ ಸವನವಲ್ಲಿ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳನ್ನೇ ಪಠಿಸಬೇಕು. ಅವುಗಳಲ್ಲಿ

೮. ಹೋತೃವು ಪಠಿಸಬೇಕಾದ ಮಂತ್ರ—

ಪಿಬಾ ಸೋಮಮಭಿ ಯಮುಗ್ರ ತರ್ದ ಊರ್ವಂ ಗವ್ಯಂ ಮಹಿ ಗೃಣಾನ ಇಂದ್ರ ।
ವಿ ಯೋ ಧೃಷ್ಣೋ ವಧಿಷೋ ವಜ್ರಹಸ್ತ ವಿಶ್ವಾ ವೃತ್ರಮಮಿತ್ರಿಯಾ ತವೋಭಿಃ ॥
(ಋ. ಸಂ. ೬-೧೭-೧)

೨. ವೈತ್ರಾವರುಣ—

ಸ ಈಂ ಪಾಹಿ ಯ ಋಜೀಷೀ ತರುತ್ರೋ ಯಃ ಶಿಪ್ರವಾನ್ ವೃಷಭೋ ಯೋ ಮತೀನಾಂ ।
ಯೋ ಗೋತ್ರಭಿದ್ವಜ್ರಭಿದ್ಯೋ ಹರಿಷ್ಮಾಃ ಸ ಇಂದ್ರ ಚಿತ್ರಾ ಮಭಿ ತೃಂಧಿ ವಾಜಾನ್ ॥
(ಋ. ಸಂ. ೬.೧೭೭-೨)

೩. ಬ್ರಾಹ್ಮಣಾಚ್ಛಂಸೀ—

ಏವಾ ಪಾಹಿ ಪ್ರತ್ನಥಾ ಮಂದತು ತ್ವಾ ಶ್ರುಧಿ ಬ್ರಹ್ಮ ವಾವೃಧಸ್ವೋತ ಗೀರ್ಭಿಃ ।
ಅವಿಃ ಸೂರ್ಯಂ ಕೃಣುಹಿ ಪೀಪಿಹೀಷೋ ಜಹಿ ಶತ್ರೂಁರಭಿ ಗಾ ಇಂದ್ರ ತೃಂಧಿ ॥
(ಋ. ಸಂ. ೬-೧೭-೨)

೪. ಪ್ರೋತೃ—

ಅವಾರ್ಜೀಹಿ ಸೋಮಕಾಮಂ ತ್ವಾಹುರಯಂ ಸುತಸ್ತಸ್ಯ ಪಿಬಾ ಮದಾಯ ।
ಉರುವ್ಯಚಾ ಜಠರ ಆ ವೃಷಸ್ವ ಪಿತೇವ ನಃ ಶೃಣುಹಿ ಹೂಯಮಾನಃ ॥
(ಋ. ಸಂ. ೮-೧೦೪-೯)

೫. ನೇಷ್ಟೃ—

ತವಾಯಂ ಸೋಮಸ್ತ್ವಮೇಹ್ಯರ್ವಾಙ್ ಶಶ್ವತ್ತಮಂ ಸುಮನಾ ಅಸ್ಯ ಪಾಹಿ ।
ಅಸ್ಮಿನ್ ಯಜ್ಞೇ ಬರ್ಹಿಷ್ಯಾ ನಿಷದ್ಯಾ ದಧಿಷ್ವೇಮಂ ಜಠರ ಇಂದುಮಿಂದ್ರ ॥
(ಋ. ಸಂ. ೩.೩೫-೬)

೬ ಅಚ್ಛಾವಾಕ—

ಇಂದ್ರಾಯ ಸೋಮಾಃ ಪ್ರದಿವೋ ವಿದಾನಾ ಋಭುರ್ಯೇಭಿರ್ವೃಷಪರ್ವಾ ವಿಹಾಯಾಃ ।
ಪ್ರಯಸ್ವಂತಮಾನಾನ್ ಪ್ರತಿ ಹೂ ಗೃಭಾಯೇಂದ್ರ ಪಿಬ ವೃಷಧೂತಸ್ಯ ವೃಷ್ಣಃ ॥
(ಋ ಸಂ. ೩-೩೬-೨)

೭ ಆಗ್ನೀಧ್ರ—

ಆಪೂರ್ಣೋ ಅಸ್ಯ ಕಲಶಃ ಸ್ವಾಹಾ ಸೇಕ್ತೇವ ಕೋಶಂ ಸಿಸಿಚೇ ಪಿಬಧ್ಯೈ ।
ಸಮು ಪ್ರಿಯಾ ಆವವೃತ್ರನ್ ಮದಾಯ ಪ್ರದಕ್ಷಿಣಿದಭಿ ಸೋಮಾಸ ಇಂದ್ರಂ ॥
(ಋ. ಸಂ. ೩-೩೨-೧೫)

॥ ತೃತೀಯಸವನ ॥

ಈ ಸವನದಲ್ಲಿ ಪರಿಸಬೇಕಾದ ಮಂತ್ರಗಳೆಲ್ಲವೂ ಜಗತ್ತೀ ಛಂದಸ್ಸಿನಲ್ಲಿರುವುವು.

೧. ಹೋತೃವು—

ಇಂದ್ರ ಋಭುಭಿರ್ವಾಜವದ್ಭಿಃ ಸಮುಕ್ಷಿತಂ ಸುತಂ ಸೋಮಮಾ ವೃಷಸ್ವಾ ಗಭಸ್ತ್ಯೋಃ ।
ಧಿಯೇಷಿತೋ ಮಘವನ್ದಾಶುಷೋ ಗೃಹೇ ಸೌಧನ್ವನೇಭಿಃ ಸಹ ಮತ್ಸ್ವಾ ನೃಭಿಃ ॥
(ಋ. ಸಂ. ೩-೬೦-೫)

೨. ಮೈತ್ರಾವರುಣ—

ಇಂದ್ರಾವರುಣಾ ಸುತಪಾವಿಮಂ ಸುತಂ ಸೋಮಂ ಪಿಬತಂ ಮದ್ಯಂ ಧೃತವ್ರತಾ ।
ಯುವೋ ರಥೋ ಅಧ್ವರಂ ದೇವವೀತಯೇ ಪ್ರತಿ ಸ್ವಸರಮುಪ ಯಾತಿ ಸೀತಯೇ ॥
(ಋ. ಸಂ ೬-೬೮-೧೦)

೩. ಬ್ರಾಹ್ಮಣಾಚ್ಛಂಸೀ—

ಇಂದ್ರಶ್ಚ ಸೋಮಂ ಪಿಬತಂ ಬೃಹಸ್ಪತೇಽಸ್ಮನ್ಯಜ್ಞೇ ಮಂದಸಾನಾ ವೃಷಣ್ವಸೂ ।
ಆ ವಾಂ ವಿಶಂತ್ವಿಂದವಃ ಸ್ವಾಭುವೋಽಸ್ಮೇ ರಯಿಂ ಸರ್ವವೀರಂ ನಿ ಯಚ್ಛತಂ ॥
(ಋ. ಸಂ. ೪-೫೦-೫೦)

೪. ಪ್ರೋತೃ—

ಆ ವೋ ವಹಂತು ಸಪ್ತಯೋ ರಘುಷ್ಯದೋ ರಘುಪತ್ವಾನಃ ಪ್ರಜಿಗಾತ ಬಾಹುಭಿಃ ।
ಸೀದತಾ ಬರ್ಹಿರುರು ವಃ ಸದಸ್ಕೃತಂ ಮಾದಯಧ್ವಂ ಮರುತೋ ಮಧ್ವೋ ಅಂಧಸಃ ॥
(ಋ ಸಂ ೧-೮೫-೬)

೫. ನೇಷ್ಟೃ—

ಅಮೇವ ನಃ ಸಹವಾ ಆ ಹಿ ಗಂತನ ನಿ ಬರ್ಹಿಷಿ ಸದತನಾ ರಣೇಷ್ಟನ ।
ಅಥಾ ಮಂದಸ್ವ ಜುಜುಷಾಣೋ ಅಂಧಸಸ್ತ್ವಷ್ಟರ್ದೇವೇಭಿರ್ಜನಿಭಿಃ ಸುಮದ್ಗಣಃ ॥
(ಋ ಸಂ. ೨-೩೬ ೩)

೬. ಅಚ್ಛಾವಾಕ—

ಇಂದ್ರಾವಿಷ್ಣೂ ಪಿಬತಂ ಮಧ್ವೋ ಅಸ್ಯ ಸೋಮಸ್ಯ ದಸ್ರಾ ಜಠರಂ ಪೃಣೇಥಾಂ ।
ಆ ವಾಮಂಧಾಂಸಿ ಮದಿರಾಣ್ಯಗ್ಮನ್ನುಪ ಬ್ರಹ್ಮಾಣಿ ಶೃಣುತಂ ಹವಂ ಮೇ ॥
(ಋ. ಸಂ. ೬-೬೯-೭)

೭. ಆಗ್ನೀಧ್ರ—

ಇಮಂ ಸ್ತೋಮಮರ್ಹತೇ ಜಾತವೇದಸೇ ರಥಮಿವ ಸಂ ಮಹೇಮಾ ಮನೀಷಯಾ ।
ಭದ್ರಾ ಹಿ ನಃ ಪ್ರಮತಿರಸ್ಯ ಸಂಸದ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥
(ಋ. ಸಂ- ೧-೪೪-೧)

ಈ ರೀತಿ ಪ್ರತಿಸವನದಲ್ಲಿಯೂ ಈ ಏಳು ಜನ ಋತ್ವಿಕ್ಕುಗಳು ಪ್ರತಿಯೊಬ್ಬರೂ ಒಂದೊಂದು ಋಕ್ಕಿನಂತೆ ಏಳು-ಋಕ್ಕುಗಳನ್ನು ಪಠಿಸಿ ಹೋಮಮಾಡುವರು. ಹಿಂದೆ ಹೇಳಿದಂತೆ ಪ್ರಾತಃಸವನದಲ್ಲಿ ಗಾಯತ್ರೀಛಂದಸ್ಸಿನ ಮಂತ್ರಗಳಿಂದಲೂ, ಮಾಧ್ಯಂದಿನಸವನದಲ್ಲಿ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳಿಂದಲೂ ತೃತೀಯಸವನದಲ್ಲಿ ಜಗತೀಛಂದಸ್ಸಿನ ಮಂತ್ರಗಳಿಂದಲೂ ಹೋಮಮಾಡುವರು ಇದು ಸವನಕಾಲಗಳಲ್ಲಿ ಪರಿಸಬೇಕಾದ ಮಂತ್ರಗಳ ವಿವರಣೆಯು.

ಈ ವಿಷಯಕ್ಕೆ ಸಂಬಂಧಪಟ್ಟ ಸವನತ್ರಯಗಳಲ್ಲಿ ಪರಿಸಬೇಕಾದ ಉನ್ನೀಯಮಾನಸೂಕ್ತಗಳು, ಪ್ರಾತಸ್ಸವನ, ಮಾಧ್ಯಂದಿನಸವನ, ತೃತೀಯಸವನ ಇವುಗಳಲ್ಲಿ ಆಯಾ ಋತ್ವಿಕ್ಕುಗಳು ಪರಿಸಬೇಕಾದ ಮಂತ್ರಗಳು ಮುತ್ತು-

ಇತರ ವಿಸ್ತಾರವಾದ ವಿವರಣೆಗಳನ್ನು ಋ. ಸಂ. ಭಾಗ 15 ಪೇಜು 697-715ರಲ್ಲಿ ಐತರೇಯಬ್ರಾಹ್ಮಣಾನುಸಾರವಾಗಿ ವಿವರಿಸಿರುವುದನ್ನು ನೋಡಿ.

। ಸಂಹಿತಾಪಾಠಃ ।

ಯತ್ತೇ ರಾಜಞ್ಛೃತಂ ಹವಿಸ್ತೇನ ಸೋಮಾಭಿ ರಕ್ಷ ನಃ ।
ಅರಾತೀವಾ ಮಾ ನಸ್ತಾರೀನ್ಮೋ ಚ ನಃ ಕಂ ಚನಾಮಮದಿಂದ್ರಾ-
ಯೇಂದೋ ಪರಿ ಸ್ರವ ॥ ೪ ॥

। ಪದಪಾಠಃ ॥

ಯತ್ । ತೇ । ರಾಜನ್ । ಶೃತಂ । ಹವಿಃ । ತೇನ । ಸೋಮ । ಅಭಿ । ರಕ್ಷ । ನಃ ।
ಅರಾತಿಽವಾ । ಮಾ । ನಃ । ತಾರೀತ್ । ಮೋ ಇತಿ । ಚ । ನಃ । ಕಂ । ಚನ । ಅಮಮತ್ । ಇಂದ್ರಾಯ । ಇಂದೋ ಇತಿ । ಪರಿ । ಸ್ರವ ॥ ೪ ॥

।ಸಾಯಣಭಾಷ್ಯಂ ।

ಉಪಾಕರಣೋತ್ಪರ್ಜನಯೋರ್ಮಂಡಲಾದ್ಯಂತಹೋಮೇ ಯತ್ತೇ ರಾಜನ್ನಿತ್ಯೇಷಾ । ಸೂತ್ರಿತಂ ಚ । ಯತ್ತೇ ರಾಜಞ್ಛೃತಂ ಹವಿರಿತಿ ದ್ವ್ಯಚಾಃ ಸಮಾನೀ ವ ಆಕೂತಿರಿತ್ಯೇಷಾ । ಆ. ಗೃ- ೩-೫-೭ । ಇತಿ ॥

ಹೇ ರಾಜನ್ ಸರ್ವೇಷಾಂ ಕರ್ಮಸಾಧನತ್ವೇನ ಸ್ವಾಮಿನ್ ಹೇ ಸೋಮ ತೇ ತ್ವದರ್ಥಂ ಶೃತಂ ಪಕ್ವಂ ಯದ್ಧವಿರಸ್ತಿ ॥ ಶೃತಂ ಪಾಕೇ । ಪಾ. ೬-೧-೨೮ । ಇತಿ ನಿಷ್ಠಾಯಾಂ ನಿಪಾತಿತಃ ॥ ತೇನ ಹವಿಷಾ ನೋಽಸ್ಮಾನಭಿ ರಕ್ಷ । ಅಭಿಪಾಲಯ । ತಸ್ಮಾತ್ತ್ವತ್ಪರಿರಕ್ಷಿತಾನಸ್ಮಾನರಾತೀವಾರಾತಿವಾಖ್ಯಶ್ಚೋರೋಽಸ್ಮಾನ್ಮಾ ತಾರೀತ್ । ಮಾ ವಧೀತ್ । ಕಂ ಚ ನೋಽಸ್ಮಾಕಂ ಕಂ ಚನ ಕಿಂಚದಪಿ ಧನಾದಿಕಂ ತಸ್ಕರೋ ಮೋ ಅಮಮತ್ । ಮಾ ಹಿಂಸೀತ್ । ಯದೇತೈರೇತೈಃ ಸೂಕ್ತೈರುಕ್ತಂ ತದ್ಯಥಾಸ್ಮಾಕಂ ಭವತಿ ತಥಾ ಹೇ ಇಂದೋ ಇಂದ್ರಾಯ ಪರಿ ಸ್ರವ । ಏವಂ ಸ್ವಾದಿಷ್ಯಯೇತ್ಯಾದಿಭಿರೇತದಂತೈಃ ಸೂಕ್ತೈರ್ಬಹುವಿಧಂ ಸೋಮಮಾಹಾತ್ಮ್ಯಮಭ್ಯಧಾಯಿ । ತಸ್ಮಾದೈಹಿಕಾಮುಷ್ಮಿಕಫಲಸಿದ್ಧಯೇ ಸೋಮಯಾಗಃ ಕರಣೀಯ ಇತ್ಯುಕ್ತಂ ಭವತಿ ॥

। ಪ್ರತಿಪದಾರ್ಥ ।

ರಾಜನ್—ಸಕಲರಿಗೂ ಪ್ರಭುವಾದ । ಸೋಮ—ಎಲೈ ಸೋಮದೇವನೇ । ತೇ—ನಿನ್ನನ್ನುದ್ದೇಶಿಸಿ । ಶೃತಂ—ಪಕ್ವವಾದ । ಯತ್ ಹವಿಃ—ಯಾವ ಹವಿಸ್ಸು ಇರುವುದೋ । ತೇನ—ಅದಿರೊಂದಿಗೆ । ನಃ—ನಮ್ಮನ್ನು । ಅಭಿ ರಕ್ಷ—ಪೂರ್ಣವಾಗಿ ರಕ್ಷಿಸು । ಅರಾತೀವಾ—ನಮ್ಮ ಶತ್ರುಗಳು । ನಃ—ನಮ್ಮನ್ನು । ಮಾ

ತಾರೀತ್—ಹಿಂಸಿಸದಿರಲಿ । ನಃ—ನಮ್ಮ ಧನವನ್ನೂ । ಕಂ ಚನ—ಯಾವ ಶತ್ರುವೂ । ಮೋ ಅಮುಮತ್—ಹಿಂಸಿಸದಿರಲಿ । ಇಂದೋ—ಎಲೈ ಸೋಮನೇ । ಇಂದ್ರಾಯ-ಇಂದ್ರನ ಪಾನಾರ್ಥವಾಗಿ । ಪರಿ ಸ್ರವ-ಪ್ರವಹಿಸು.

॥ ಭಾವಾರ್ಥ ॥

ಸಕಲರಿಗೂ ಪ್ರಭುವಾದ ಎಲೈ ಸೋಮದೇವನೆ, ನಿನ್ನನ್ನುದ್ದೇಶಿಸಿ ಪಕ್ವಮಾಡಲ್ಪಟ್ಟ ಯಾವ ಹವಿಸ್ಸು ಇರುವುದೋ ಅದರೊಂದಿಗೆ ನಮ್ಮನ್ನು ಪೂರ್ಣವಾಗಿ ರಕ್ಷಿಸು. ನಮ್ಮ ಶತ್ರುಗಳು ನಮ್ಮನ್ನು ಹಿಂಸಿಸದಿರಲಿ. ನಮ್ಮ ಧನವನ್ನೂ ಯಾವ ಶತ್ರುವೂ ಅಪಹರಿಸದಿರಲಿ. ಎಲೈ ಸೋಮನೇ, ಇಂದ್ರನ ಪಾನಾರ್ಥವಾಗಿ ಪ್ರವಹಿಸು.

English Translation

Protect us, royal Soma, with the oblation which has been cooked for you; let no enemy assail us, or harm anything of ours; flow, Indu, for Indra.

॥ ವಿಶೇಷವಿಷಯಗಳು ॥

ಉಪಾಕರಣ ಮತ್ತು ಉತ್ಸರ್ಜನಕರ್ಮಗಳ ಪ್ರಾಧಾನಹೋನುದಲ್ಲಿ ಮಂಡಲಾಂತ್ಯಋಕ್ಕುಗಳಿಗಾಗಿ **ಯತ್ತೇ ರಾಜನ್** ಎಂಬ ಈ ಋಕ್ಕಿನ ವಿನಿಯೋಗವಿರುವುದೆಂದು ಆಶ್ವಲಾಯನ ಗೃಹ್ಯಸೂತ್ರದ-**ಯತ್ತೇ ರಾಜಞ್ಛೃತಂ ಹವಿರಿತಿ ದ್ವ್ಯೃಚಾಃ ಸಮಾನೀ ವ ಆಕೂತಿರಿತ್ಯೇಕಾ** ಎಂಬ ಸೂತ್ರದಿಂದ (ಆ. ಗೃ. ೩-೫-೭) ವಿವೃತವಾಗಿರುವುದು.

ಇತಿ ಸಾಯಣಾಚಾರ್ಯವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶೇ ದಾಶತಯ್ಯಾ ನವಮೇ ಮಂಡಲೇ ಸಪ್ತಮೋಽನುವಾಕಃ ಸಮಾಪ್ತಂ ಚ ನವಮಂ ಮಂಡಲಂ

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ ಋಗ್ವೇದಸಂಹಿತೆಯಲ್ಲಿ ಒಂಭತ್ತನೆಯ ಮಂಡಲವು ಸಮಾಪ್ತವು

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

ಒಂಭತ್ತನೆಯ ಮಂಡಲದ ಪರಿಶಿಷ್ಟ ಮಂತ್ರಗಳು.

೬೭ನೆಯ ಸೂಕ್ತದ ಕೊನೆಯಲ್ಲಿ ಪಠಿಸಬೇಕಾದ ಮಂತ್ರಗಳು—

ಪಾವಮಾನೀಃ ಸ್ವಸ್ತ್ಯಯನೀಃ ಸುದುಘಾ ಹಿ ಘೃತಶ್ಚುತಃ ।
ಋಷಿಭಿಃ ಸಂಭೃತೋ ರಸೋ ಬ್ರಾಹ್ಮಣೇಷ್ವಮೃತಂ ಹಿತಂ ॥ ೧ ॥

ಪಾವಮಾನಿರ್ದಿಶಂತು ನ ಇಮಂ ಲೋಕಮುತೋ ಅಮುಂ ।
ಕಾಮಾನ್ಸಮರ್ಧಯಂತು ನೋ ದೇವೀರ್ದೇವೈಃ ಸಮಾಹಿತಾಃ ॥ ೨ ॥

ಯೇನ ದೇವಾಃ ಪವಿತ್ರೇಣಾತ್ಮಾನಂ ಪುನತೇ ಸದಾ ।
ತೇನ ಸಹಸ್ರಧಾರೇಣ ಪಾವಮಾನ್ಯಃ ಪುನಂತು ಮಾಂ ॥ ೩ ॥

ಪ್ರಾಜಾಪತ್ಯಂ ಪವಿತ್ರಂ ತತೋದ್ಯಾವಂ ಹಿರಣ್ಮಯಂ ।
ತೇನ ಬ್ರಹ್ಮವಿದೋ ವಯಂ ಪೂತಂ ಬ್ರಹ್ಮ ಪುನೀಮಹೇ ॥ ೪ ॥

ಇಂದ್ರಃ ಪುನೀತೇ ಸಹ ಮಾ ಪುನಾತು ಸೋಮಃ ಸ್ವಸ್ತ್ಯಾ ವರುಣಃ ಸಮಾಭ್ಯಾ ।
ಯಮೋ ರಾಜಾ ಪ್ರಮೃಣಾಭಿಃ ಪುನಾತು ಮಾ ಜಾತವೇದಾ ಮುರ್ಜಯಂತ್ಯಾ ಪುನಾತು ॥

ಋಷಯಸ್ತು ತಪಸ್ತೇಪುಃ ಸರ್ವೇ ಸ್ವರ್ಗಜಿಗೀಷವಃ ।
ತಪಂತಸ್ತಪಸೋಗ್ರೇಣ ಪಾವಮಾನೀಋರ್ಚೋಽಬ್ರುವನ್ ॥ ೬ ॥

ಯನ್ಮೇ ಗರ್ಭೇ ವಸತಃ ಪಾಪಮುಗ್ರಂ ಯಜ್ಜಾಯಮಾನಸ್ಯ ಚ ಕಿಂಚಿದನ್ಯತ್ ।
ಜಾತಸ್ಯ ಚ ಯಚ್ಚಾಪಿ ಚ ವರ್ಧತೋ ಮೇ ತತ್ಪಾವಮಾನೀಭಿರಹಂ ಪುನಾಮಿ ॥ ೭ ॥

ಮಾತಾ ಪಿತ್ರೋರ್ಯನ್ನ ಕೃತಂ ವಚೋ ಮೇ ಯತ್ಸ್ಥಾವರಂ ಜಂಗಮಮಾಬಭೂವ।
ವಿಶ್ವಸ್ಯ ತತ್ಪ್ರಹೃಷಿತಂ ವಚೋ ಮೇ ತತ್ಪಾವಮಾನೀಭಿರಹಂ ಪುನಾಮಿ ॥ ೮ ॥

ಗೋಘ್ನಾತ್ತಸ್ಕರತ್ವಾತ್ ಸ್ತ್ರೀವಧಾದ್ಯಚ್ಚ ಕಿಲ್ಬಿಷಂ ।
ಪಾಪಕಂ ಚ ಚರಣೇಭ್ಯಸ್ತತ್ಪಾವಮಾನೀಭಿರಹಂ ಪುನಾಮಿ ॥ ೯ ॥

ಬ್ರಹ್ಮವಧಾತ್ಸುರಾಪಾನಾತ್ಸ್ವರ್ಣಸ್ತೇಯಾದ್ವೃಷಲಿಗಮನಮೈಥುನಸಂಗಮಾತ್ ।
ಗುರೋರ್ದಾರಾಧಿಗಮನಾಚ್ಚ ತತ್ಪಾವಮಾನೀಭಿರಹಂ ಪುನಾಮಿ ॥ ೧೦ ॥

ಬಾಲಘ್ನಾನ್ಮಾತೃಪಿತೃವಧಾದ್ಭೂಮಿತಸ್ಕರಾತ್ಸರ್ವವರ್ಣಗಮನಮೈಥುನಸಂಗಮಾತ್ ।
ಪಾಪೇಭ್ಯಶ್ಚ ಪ್ರತಿಗ್ರಹಾತ್ಸದ್ಯಃ ಪ್ರಹರತಿ ಸರ್ವದುಷ್ಕೃತಂ ತತ್ಪಾವಮಾನೀಭಿರಹಂ ಪುನಾಮಿ ॥

ಕ್ರಯವಿಕ್ರಯಾದ್ಯೋನಿದೋಷಾದ್ಭಕ್ಷಾದ್ಭೋಜ್ಯಾತ್ಪ್ರತಿಗ್ರಹಾತ್ ।
ಅಸಂಭೋಜನಾಚ್ಚಾಪಿ ನೃಶಂಸಂ ತತ್ಪಾವಮಾನೀಭಿರಹಂ ಪುನಾಮಿ । ೧೨ ॥

ದುರ್ಯಷ್ಟಂ ದುರಧೀತಂ ಪಾಪಂ ಯಚ್ಚಾಜ್ಞಾನತೋ ಕೃತಂ ।
ಅಯಾಜಿತಾಶ್ಚಾಸಂಯಾಜ್ಯಾಸ್ತತ್ಸರ್ವಮಾನೀಭಿರಹಂ ಪುನಾಮಿ ॥ ೧೩ ॥

ಅಮಂತ್ರಮನ್ನಂ ಯತ್ಕಿಂಚಿದ್ಭೂಯತೇ ಚ ಹುತಾಶನೇ ।
ಸಂವತ್ಸರಕೃತಂ ಪಾಪಂ ತತ್ಸರ್ವಮಾನೀಭಿರಹಂ ಪುನಾಮಿ ॥ ೧೪ ॥

ಋತಸ್ಯ ಯೋನಯೋಽಮೃತಸ್ಯ ಧಾಮ ವಿಶ್ವಾ ದೇವೇಭ್ಯಃ ಪುಣ್ಯಗಂಧಾಃ ।
ತಾ ನ ಆಪಃ ಪ್ರವಹಂತು ಪಾಪಂ ಶುದ್ಧಾಗಚ್ಛಾಮಿ ಸುಕೃತಾಮು ಲೋಕಂ ತತ್ಸರ್ವ-
ಮಾನೀಭಿರಹಂ ಪುನಾಮಿ ॥ ೧೫ ॥

ಪಾವಮಾನೀಃ ಸ್ವಸ್ತ್ಯಯನೀರ್ಯಾಭಿರ್ಗಚ್ಛತಿ ನಾಂದನಂ ।
ಪುಣ್ಯಾಂಶ್ಚ ಭಕ್ಷಾನ್ಭಕ್ಷಯತ್ಯಮೃತತ್ವಂ ಚ ಗಚ್ಛತಿ ॥ ೧೬ ॥

ಪಾವಮಾನೀಃ ಪಿತ್ರ್ಯಾ ವಾನ್ಯಾಯೀದ್ಯಕ್ಷ ಸಭಸ್ಪತೀಂ ।
ಪಿತ್ರ್ಯಾಂಸ್ತಸ್ಯೋಪ ವರ್ತೇತ ಕ್ಷೀರಂ ಸರ್ಪಿರ್ಮಧೂದಕಂ ॥ ೧೭ ॥

ಪಾವಮಾನಂ ಪರಂ ಬ್ರಹ್ಮ ಶುಕ್ರಂ ಜ್ಯೋತಿಃ ಸನಾತನಂ ।
ಋಷೀಂಸ್ತಸ್ಯೋಪ ತಿಷ್ಠೇತ ಕ್ಷೀರಂ ಸರ್ಪಿರ್ಮಧೂದಕಂ ॥ ೧೮ ॥

ಪಾವಮಾನಂ ಪರಂ ಬ್ರಹ್ಮ ಯೇ ಪಠಂತಿ ಮನೀಷಿಣಃ ।
ಸಪ್ತ ಜನ್ಮ ಭವೇದ್ವಿಪ್ರೋ ಧನಾಢ್ಯೋ ವೇದಪಾರಗಃ ॥ ೧೯ ॥

ದಶೋತ್ತರಾಣ್ಯೃಚಾಂ ಚೈವ ಪಾವಮಾನೀಃ ಶತಾನಿ ಷಟ್ ।
ಏತಜ್ಜುಹ್ವನ್ಜಪೇನ್ಮಂತ್ರಂ ಘೋರಮೃತ್ಯುಭಯಂ ಹರೇತ್ ॥ ೨೦ ॥

ಏತತ್ಪುಣ್ಯಂ ಪಾಪಹರಂ ರೋಗಮೃತ್ಯುಭಯಾಪಹಂ ।
ಪಠತಾಂ ಶೃಣ್ವತಾಂ ಚೈವ ದದಾತಿ ಪರಮಾಂ ಗತಿಂ ॥ ೨೧ ॥

೩ನೇ ಸೂಕ್ತದ ೫ನೇ ಋಕ್ಕಿನ ಅಂತ್ಯದಲ್ಲಿ ಪಠಿಸಬೇಕಾದ ಪರಿಶಿಷ್ಟಮಂತ್ರ—

ಇಳೈವ ವಾಮನು ವಸ್ತಾಂ ಘೃತೇನ ಯಸ್ಯಾಃ ಪದೇ ಪುನತೇ ದೇವಯಂತಃ ।
ಘೃತಪದೀ ಶಕ್ವರೀ ಸೋಮಪೃಷ್ಠೋಪ ಯಜ್ಞಮುಸ್ಥಿತ ವೈಶ್ವದೇವೀ ॥ ೧ ॥

ವೈಶ್ವದೇವೀ ಪುನತೀ ದೇವ್ಯಾಗಾದ್ಯಸ್ಯಾಮಿಮಾ ಬಹ್ವ್ಯಸ್ತನ್ವೋ ವೀತಪೃಷ್ಠಾಃ ।
ತಯಾ ಮದಂತಃ ಸಧಮಾದೇಷು ವಯಂ ಸ್ಯಾಮ ಪತಯೋ ರಯೀಣಾಂ ॥ ೨ ॥

ಒಂಭತ್ತನೆಯ ಮಂಡಲದ ಕೊನೆಯಲ್ಲಿ ಎಂದರೆ ೧೧೪ ನೇಯ ಸೂಕ್ತದ ಕೊನೆಯಲ್ಲಿ
ಪಠಿಸಬೇಕಾದ ಪರಿಶಿಷ್ಟಮಂತ್ರಗಳು—

ಯತ್ರ ತತ್ಪರಮಂ ಪದಂ ವಿಷ್ಣೋರ್ಲೋಕೇ ಮಹೀಯತೇ ।
ದೇವೈಃ ಸುಕೃತಕರ್ಮಭಿಸ್ತತ್ರ ನೋ ಮಮ್ಯತಂ ಕೃಧೀಂದ್ರಾಯೇಂದೋ ಪರಿ ಸ್ರವ ॥ ೧ ॥

ಯತ್ರ ತತ್ಪರಮಾಪ್ಯಂ ಭೂತಾನಾಮಧಿಪತಿಂ ।
ಭಾವಭಾವೀ ಚ ಯೋಗೀಕ್ಷ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥ ೧ ॥

ಯತ್ರ ಲೋಕಾಸ್ತನೂತ್ಯಜಃ ಶ್ರದ್ಧಯಾ ತಪಸಾ ಜಿತಾಃ ।
ತೇಜಶ್ಚ ಯತ್ರ ಬ್ರಹ್ಮ ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥ ೩ ॥

ಯತ್ರ ದೇವಾ ಮಹಾತ್ಮಾನಃ ಸೇಂದ್ರಾಶ್ಚ ಸಮರುದ್ಗಣಾಃ ।
ಬ್ರಹ್ಮಾ ಚ ಯತ್ರ ವಿಷ್ಣುಶ್ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥ ೪ ॥

ಯತ್ರ ಗಂಗಾ ಚ ಯಮುನಾ ಚ ಯತ್ರ ಪ್ರಾಚೀ ಸರಸ್ವತೀ ।
ಯತ್ರ ಸೋಮೇಶ್ವರೋ ದೇವಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥೫॥

ಯತ್ರ ತದ್ವಿಷ್ಣುರ್ಮಹೀಯತೇ ನರಾಣಾಮಧಿಪತಿಂ ।
ಯತ್ರ ಶಂಖಚಕ್ರಗದಾಧರಸ್ಮರಣಂ ಮುಕ್ತಿಶ್ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥ ೬ ॥




ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇಲ್ಲಿಗೆ ಒಂಭತ್ತನೆಯ ಮಂಡಲವು ಸಮಾಪ್ತವು.

॥ ಶುಭಂ ಭೂಯಾತ್ ॥

॥ ಮಂಗಳಂ ॥





॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಕಪ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

ಹತ್ತನೆಯ ಮಂಡಲವು.

ಪೀಠಿಕೆ.

ಋಗ್ವೇದದಲ್ಲಿ ಒಟ್ಟು ಹತ್ತು ಮಂಡಲಗಳಿವೆಯೆಂಬುದನ್ನು ಮುಂದೆಯೇ ಹೇಳಿದೆ ಪ್ರಥಮಮಂಡಲಕ್ಕೂ ಕೊನೆಯದಾದ ಹತ್ತನೆಯ ಮಂಡಲಕ್ಕೂ ಅನೇಕ ವಿಷಯಗಳಲ್ಲಿ ಸಾದೃಶ್ಯವಿದೆ. ಈ ಎರಡು ಮಂಡಲಗಳಲ್ಲಿಯೂ ನಾನಾ ಋಷಿಗಳಿದ್ದಾರೆ. ಆದ್ದರಿಂದ ಪ್ರಥಮಮಂಡಲ ಋಷಿಗಳು ಸುಮಾರು ನೂರು ಅಥವ ಹೆಚ್ಚು ಋಕ್ಕುಗಳಿಗೆ ದ್ರಷ್ಟೃಗಳಾಗಿರುವುದರಿಂದ ಆ ಮಂಡಲದ ಋಷಿಗಳು ಶತರ್ಚಿನರೆಂದು ಪ್ರಸಿದ್ಧರು. ಈ ಹತ್ತನೆಯ ಮಂಡಲದಲ್ಲಿ ಪ್ರಾರಂಭದಲ್ಲಿಯೂ ಅನಂತರವೂ ದೊಡ್ಡ ಸೂಕ್ತಗಳೂ ಅಂತ್ಯದಲ್ಲಿ ಸಣ್ಣ ಸಣ್ಣ ಸೂಕ್ತಗಳೂ ಇರುವುದರಿಂದ ಇದ. ಮಹಾಸೂಕ್ತ ಮತ್ತು ಕ್ಷುದ್ರಸೂಕ್ತಗಳ ಮಂಡಲವೆಂದು ಪ್ರಸಿದ್ಧಿಯಾಗಿದೆ. ಎರಡು ಮಂಡಲಗಳಲ್ಲಿಯೂ ಸೂಕ್ತ ಸಂಖ್ಯೆಯು ೧೯೧ ಆಗಿದೆ. ಎರಡರಲ್ಲಿಯೂ ನಾನಾದೇವತೆಗಳನ್ನು ಸ್ತುತಿಸಲಾಗಿದೆ. ಇತ್ಯಾದಿವಿಷಯಗಳಲ್ಲಿ ಎರಡ ಮಂಡಲಗಳಿಗೂ ಸಾದೃಶ್ಯವಿದೆ. ಆದರೆ ಈ ಹತ್ತನೆಯ ಮಂಡಲದಲ್ಲಿ ಶ್ರೌತಸ್ಮಾರ್ತಕರ್ಮಗಳಿಗೆ ಉಪಯುಕ್ತವಾದ ಅನೇಕ ಸೂಕ್ತಗಳಿರುವುದಲ್ಲದೆ ಗಹನವಾದ ತತ್ವವಿಚಾರವನ್ನು ತಿಳಿಸುವ ಸೂಕ್ತಗಳೂ ಅನೇಕವಿವೆ ಇಂತಹ ಸೂಕ್ತ

ಗಳಲ್ಲಿ ವಿಶ್ವ ಅಥವಾ ಪ್ರಪಂಚದ ಸೃಷ್ಟಿಯು ಹೇಗಾಯಿತು ? ಸೃಷ್ಟಿಗೆ ಪೂರ್ವದಲ್ಲಿದ್ದ ಸ್ಥಿತಿಯೇನು ? ಇತ್ಯಾದಿ ವಿಷಯಗಳನ್ನು ಆತ್ಮಾನಾತ್ಮವಿಚಾರ, ಪರಬ್ರಹ್ಮವಿಚಾರ, ಸ್ವರ್ಗನರಕವಿಚಾರ ಮುಂತಾದ ಗಹನವಿಷಯಗಳನ್ನು ಚರ್ಚಿಸುವ ಸೂಕ್ತಗಳೂ ಅನೇಕವಿವೆ. ಇದಲ್ಲದೆ ಜನರ ಆದರಕ್ಕೆ ಪಾತ್ರವಾಗಿ ವೇದಾಂತತತ್ವಗಳನ್ನೊಳಗೊಂಡ ಪುರುಷ ಸೂಕ್ತವೇ ಮೊದಲಾದ ಅನೇಕ ಸೂಕ್ತಗಳೂ ಈ ಮಂಡಲದಲ್ಲಿಯೇ ಇವೆ. ಆದ್ದರಿಂದ ಈ ಮಂಡಲದ ಶ್ರೇಷ್ಠತೆಯೂ ಉಪಯುಕ್ತತೆಯೂ ಸ್ಪಷ್ಟವಾಗಿದೆ.

ಈ ಮಂಡಲದ ಅತ್ಯಂತ ಸಣ್ಣ ಸಣ್ಣ ಸೂಕ್ತಗಳಲ್ಲಿ ಅಚೇತನವಸ್ತುಗಳನ್ನು ಅಲ್ಲಲ್ಲಿ ಸ್ತುತಿಸಿರುವುದು ಕಂಡು ಬರುವುದರಿಂದ ಕೆಲವು ಪಾಶ್ಚಾತ್ಯ ಪಂಡಿತರು ಈ ಮಂಡಲದ ಸೂಕ್ತಗಳು ಅಷ್ಟು ಪ್ರಾಚೀನವಲ್ಲವೆಂದೂ ಅಚೇತನವಸ್ತುಗಳನ್ನು ದೇವತೆಗಳೆಂಬ ಭಾವನೆಯಿಂದ ಸ್ತುತಿಸುವುದು ರೂಢಿಗೆ ಈಚೆಗೆ ಬಂದಿರುವುದೇ ಇದಕ್ಕೆ ನಿದರ್ಶನವೆಂದೂ ಅಭಿಪ್ರಾಯಪಡುವರು. ಈ ಅಭಿಪ್ರಾಯವು ಸಾಧುವಾದುದಲ್ಲ ಮತ್ತು ಇದಕ್ಕೆ ಸರಿಯಾದ ಸಮರ್ಥನೆಯೂ ಇರುವುದಿಲ್ಲ. ಋಗ್ವೇದದ ಸೂಕ್ತಗಳನ್ನೆಲ್ಲಾ ಒಂದು ಕ್ರಮದಲ್ಲಿ ವಿಂಗಡಿಸಿರುವುದರಿಂದ ಅಂತ್ಯದ ಕೆಲವು ಸೂಕ್ತಗಳಲ್ಲಿ ನಾನಾವಿಧ ವಿಷಯಪರ್ಣನೆ ಇರಬಹುದು. ಆದ ಮಾತ್ರಕ್ಕೆ ಈ ಮಂಡಲವು ಪ್ರಾಚೀನವಲ್ಲವೆಂದು ಹೇಳುವುದು ಸಮಂಜಸವಲ್ಲ.

ಹತ್ತನೆಯ ಮಂಡಲದಲ್ಲಿರುವ ಋಷಿಗಳು ಮತ್ತು ಅವರಿಂದ ದೃಷ್ಟವಾದ ಸೂಕ್ತ ಮತ್ತು ಋಕ್ಕುಗಳ ವಿವರಣೆ—

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
1	ತ್ರಿತ ಆಪ್ತ್ಯಃ	೧	೧೦೫	೧೯	
		೮	೪೭	೧೮	
		೯	೩೫	೬	
		,,	೩೪	೬	
		,,	೧೦೨	೮	
		೧೦	೧	೭	
		,,	೨	೨	
		,,	೩	೭	
		,,	೪	೭	
		,,	೫	೭	
		,,	೬	೭	
		,,	೭	೭	೧೦೬
2	ತ್ರಿಶಿರಾಸ್ತ್ವಾಷ್ಟ್ರಃ	೧೦	೮	೯	
	ತ್ರಿಶಿರಾಸ್ತ್ವಾಷ್ಟ್ರಃ ಸಿಂಧುದ್ವೀಪ ಅಂಬರೀಷೋ ವಾ	,,	೯	೯	೧೮
3	ಯಮಃ ವೈವಸ್ವತಃ	೧೦	೧೦	೮	(೨,೪,೬,೮,೯,೧೦,೧೨,೧೪)
		,,	೧೪	೧೬	೨೪

ನಂ	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
4	ಯಮೀ ವೈವಸ್ವತೀ	೧೦	೧೦	೬	(೧,೩,೫,೭,೧೧,೧೩)
		,,	೧೫೪	೫	೧೧
5	ಆಂಗಿರ್ಹವಿರ್ಧಾನಃ	೧೦	೧೧	೯	
		,,	೧೨	೯	
		,,	೧೩	೫	೨೩
6	ಶಂಖೋ ಯಾಮಾಯನಃ	೧೦	೧೫	೧೪	೧೪
7	ದಮನೋ ಯಾಮಾಯನಃ	೧೦	೧೬	೧೪	೧೪
8	ದೇವಶ್ರವಾ ಯಾಮಾಯನಃ	೧೦	೧೭	೧೪	೧೪
9	ಸಂಕುಸುಕೋ ಯಾಮಾಯನಃ	೧೦	೧೮	೧೪	೧೪
10	ಮುಧಿತೋ ಯಾಮಾಯನಃ	೧೦	೧೯	೪	೪
11	ಐಂದ್ರೋ ಋದಃ	೧೦	೨೦	೧೦	
		,,	೨೧	೪	
		,,	೨೨	೧೫	
		,,	೨೩	೭	
		,,	೨೪	೧೦	
		,,	೨೫	೧೧	
		,,	೨೬	೯	೬೬
12	ಐಂದ್ರೋ ವಸುಕ್ರಃ	೧೦	೨೭	೨೪	
		,,	೨೮	೬	(೩,೪,೫,೭,೯,೧೦)
		,,	೨೯	೪	೩೪
13	ವಸುಕ್ರಪತ್ನೀ ಇಂದ್ರಸ್ನುಷಾ (ಋಷಿಕಾ)	೧೦	೨೮	೧	೧
14	ಇಂದ್ರ ಋಷಿಃ	೧೦	೨೮	೫	(೨,೬,೪,೧೦,೧೨) ೫.
15	ಕವಷ ಐಲೂಷ	೧೦	೩೦	೧೫	
		,,	೩೧	೧೧	
		,,	೩೨	೯	
		,,	೩೩	೯	
	(ಅಕ್ಷೋ ಮೌಜವಾನ್ವಾ)	,,	೩೪	೧೪	೫೪
16	ಲುಶೋ ಧಾನಾಕಃ	೧೦	೩೫	೧೪	
		,,	೩೬	೧೪	೨೪

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
17	ಸೌರ್ಯೋ೭ಭಿತಪಾಃ	೧೦	೩೭	೧೨	೧೨
18	ಮುಷ್ಕವಾನಿಂದ್ರಃ	೧೦	೩೮	೫	೫
19	ಕಾಕ್ಷೀವತೀ ಘೋಷಾ (ಋಷಿಕಾ)	೧೦	೩೯	೧೪	
		,,	೪೦	೧೪	೨೮
20	ಸುಹಸ್ತ್ಯೋ ಘೌಷೇಯಃ	೧೦	೪೧	೩	೩
21	ಕೃಷ್ಣ ಆಂಗಿರಸಃ	೮	೪೫	೯	
		,,	೪೬	೫	
		,,	೪೭	೬	
		೧೦	೪೨	೧೧	
		,,	೪೩	೧೧	
		,,	೪೪	೧೧	೫೩
22	ವತ್ಸಪ್ರಿರ್ಭಾಲಂದನಃ	೯	೬೮	೧೦	
		೧೦	೪೫	೧೨	
		,,	೪೬	೧೦	೩೨
23	ಸಪ್ತಗುರಾಂಗಿರಸಃ	೧೦	೪೭	೮	೮
24	ವೈಕುಂಠ ಇಂದ್ರಃ	೧೦	೪೮	೧೧	
		,,	೪೯	೧೧	
		,,	೫೦	೭	೨೯
25	ಸೌಚೀಕೋ೭ಗ್ನಿಃ	೧೦	೫೧	೪	(೨,೪,೬,೮)
		,,	೫೨	೬	
		,,	೫೩	೨	(೪,೫)
	(ವೈಶ್ವಾನರೋ ವಾ)	,,	೭೯	೭	
	,,	,,	೮೦	೭	೨೬
26	ದೇವಾಃ	೧೦	೫೧	೫	(೧,೩,೫,೭,೯)
			೫೩	೯	(೧-೩, ೬-೧೧) ೧೪
27	ಬೃಹದುಕ್ಥಃ ವಾಮದೇವ್ಯಃ	೧೦	೫೪	೬	
		,,	೫೫	೮	
		,,	೫೬	೭	೩೧

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
28	ಬಂಧುಃಶ್ರುತಬಂಧುರ್ವಿಪ್ರಬಂಧುಗೌರ್ಪಾಯನಾಃ	೧೦	೫೭	೬	
		,,	೫೮	೧೨	
		,,	೫೯	೧೦	
		,,	೬೦	೧೨	೪೦
29	ನಾಭಾನೇದಿಷ್ಠೋ ಮಾನವಃ	೧೦	೬೧	೭೭	
		,,	೬೨	೧೧	೩೮
30	ಗಯಃ ಪ್ಲಾತಃ	೧೦	೬೩	೧೭	
		,,	೬೪	೧೭	೩೪
31	ವಸುಕರ್ಣೋ ವಾಸುಕ್ರಃ	೧೦	೬೫	೧೫	
		,,	೬೬	೧೫	೩೦
32	ಅಯಾಸ್ಯ ಆಂಗಿರಸಃ	೯	೪೪	೬	
		,,	೪೫	೬	
		,,	೪೬	೬	
		೧೦	೬೭	೧೨	
		,,	೬೮	೧೨	೪೨
33	ಸುಮಿತ್ರೋ ವಾಧ್ರ್ಯಶ್ವಃ	೧೦	೬೯	೧೨	
		,,	೭೦	೧೧	೨೩
34	ಬೃಹಸ್ಪತಿರಾಂಗಿರಸಃ	೯	೩೯	೬	
		,,	೪೦	೬	
		೧೦	೭೧	೧೮	
		,,	೭೨	೯	೩೯
35	ಬೃಹಸ್ಪತಿರ್ಭಾರ್ಗವಃ	೧೦	೭೨	೯	೯
36	ಗೌರವೀತಿಃ ಶಾಕ್ತ್ಯಃ	೫	೨೯	೧೫	
		೯	೧೦೪	೨ (೧,೨)	
		೧೦	೭೩	೧೧	
		,,	೭೪	೬	೩೪
37	ಸಿಂಧುಕ್ಷಿತ್ ಪ್ರೈಯಮೇಧಃ	೧೦	೭೫	೯	೯
38	ಸರ್ಪ ಐರಾವತೋ ಜರತ್ಕರ್ಣಃ	೧೦	೭೬	೮	೮

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
39	ಸ್ಯೂಮರಶ್ಮಿರ್ಭಾರ್ಗವಃ	೧೦	೭೭	೮	
		,,	೭೮	೮	೧೬
40	ವಿಶ್ವಕರ್ಮಾ ಭೌವನಃ	೧೦	೮೧	೭	
		,,	೮೨	೭	೧೪
41	ಮನ್ಯುಸ್ತಾಪಸಃ	೧೦	೮೩	೭	
		,,	೮೪	೭	೧೪
42	ಸಾವಿತ್ರೀ ಸೂರ್ಯಾ ಋಷಿಕಾ	೧೦	೮೫	೪೭	೪೭
43	ಇಂದ್ರಃ	೩	೧೬೫	೮	(೧,೨,೪,೬,೮, ೧೦-೧೨)
		,,	೧೭೦	೩	(೧,೩,೪)
		೪	೧೮	೧॥	(೧,೪ ರ ಉತ್ತರಾರ್ಧ)
		,,	೨೬	೩	(೧–೩)
		೮	೧೦೦	೨	(೪,೫)
		೧೦	೮೬	೯	(೧,೮,೧೧,೧೨,೧೪,೧೯-೨೨)೨೬॥
44	ಐಂದ್ರೋ ವೃಷಾಕಪಿಃ	೧೦	೮೬	೩	(೭,೧೩,೨೩) ೩.
45	ಇಂದ್ರಾಣೀ	೧೦	೮೬	೧೧	(೨-೬, ೯, ೧೦, ೧೫-೧೮)
		,,	೧೪೫	೬	೧೭
46	ಪಾಯುರ್ಭಾರದ್ವಾಜಃ	೬	೭೫	೧೯	
		೧೦	೮೭	೨೫	೪೪
47	ಆಂಗಿರಸೋ ಮೂರ್ಧನ್ವಾನ್ (ವಾಮದೇವ್ಯೋ ವಾ)	೧೦	೮೮	೧೯	೧೯
48	ರೇಣುರ್ವೈಶ್ವಾಮಿತ್ರಃ	೯	೭೦	೧೦	
		೧೦	೮೯	೧೮	೨೮
49	ನಾರಾಯಣಃ	೧೦	೯೦	೧೬	೧೬
50	ಅರುಣೋ ವೈತಹವ್ಯಃ	೧೦	೯೧	೧೫	೧೫
51	ಶಾರ್ಯಾತೋ ಮಾನವಃ	೧೦	೯೨	೧೫	೧೫
52	ತಾನ್ವಃ ಪಾರ್ಥ್ಯಃ	೧೦	೯೩	೧೫	೧೫
53	ಅರ್ಬುದಃ ಕಾದ್ರವೇಯಃ ಸರ್ಪಃ	೧೦	೯೪	೧೪	೧೪
54	ಐಲಃ ಪುರೂರವಾಃ	೧೦	೯೫	೯	(೧, ೩, ೬, ೮–೧೦, ೧೨, ೧೪, ೧೭) ೯

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೆ	ಒಟ್ಟು ಋಕ್ಸಂಖ್ಯೆ
55	ಉರ್ವಶೀ ಋಷಿಕಾ	೧೦	೯೫	೯	(೨, ೪, ೫, ೭, ೧೧, ೧೩, ೧೫, ೧೬, ೧೮) ೯
56	ಬರುರಾಂಗಿರಸಃ (ಸರ್ವಹರಿರ್ವಾ ಐಂದ್ರಃ)	೧೦	೯೬	೧೩	೧೩
57	ಭಿಷಕ್ ಆಥರ್ವಣಃ	೧೦	೯೭	೨೩	೨೩
58	ದೇವಾಪಿಃ ಆಷ್ಟಿಷೇಣಃ (ವೃಷ್ಟಿಕಾಮಃ)	೧೦	೯೮	೧೨	೧೨
59	ವಮ್ರೋ ವೈಖಾನಸಃ	೧೦	೯೯	೧೨	೧೨
60	ದುವಸ್ಯುರ್ವಾಂದನಃ	೧೦	೧೦೦	೧೨	೧೨
61	ಬುಧಃ ಸೌಮ್ಯಃ	೧೦	೧೦೧	೧೨	೧೨
62	ಮುದ್ಗಲೋ ಭಾರ್ಗ್ಯಶ್ವಃ	೧೦	೧೦೨	೧೨	೧೨
63	ಅಪ್ರತಿರಥ ಐಂದ್ರಃ	೧೦	೧೦೩	೧೩	೧೩
64	ಅಷ್ಟಕೋ ವೈಶ್ವಾಮಿತ್ರಃ	೧೦	೧೦೪		೧೧
65	ಕೌತ್ಸೋದುರ್ಮಿತ್ರಃ (ಸುಮಿತ್ರೋವಾ)	೧೦	೧೦೫	೧೧	೧೧
66	ಭೂತಾಂಶಃ ಕಾಶ್ಯಪಃ	೧೦	೧೦೬	೧೧	೧೧
67	ದಿವ್ಯ ಆಂಗಿರಸಃ (ದಕ್ಷಿಣಾ ವಾ ಪ್ರಾಜಾಪತ್ಯಾ)	೧೦	೧೦೭	೧೧	೧೧
68	ಪಣಯೋಽಸುರಾಃ	೧೦	೧೦೮	೫	(೧, ೬, ೫, ೭, ೯)
69	ಸರಮಾ ದೇವಶುನೀ (ಋಷಿಕಾ)	೧೦	೧೦೯	೬	(೨, ೪, ೬, ೮, ೧೦, ೧೧)
70	ಜುಹೂರ್ಬ್ರಹ್ಮಜಾಯಾ (ಬ್ರಾಹ್ಮಃ ಊರ್ಧ್ವನಾಭಾ ವಾ)	೧೦	೧೦೯	೭	೭
71	ಜಮದಗ್ನಿರ್ಭಾರ್ಗವಃ (ಜಾಮದಗ್ನ್ಯೋ ರಾಮೋ ವಾ)	೯	೧೦೧	೧೬	
		೯	೬೨	೩೦	
		,,	೬೫	೩೦	
		,,	೬೭	೩	(೧೬–೧೮)
		೧೦	೧೧೦	೧೧	೯೦
72	ಆಷ್ಟಾದಂಷ್ಟ್ರಃ ವೈರೂಪಃ	೧೦	೧೧೧	೧೦	೧೦
73	ನಭಃ ಪ್ರಭೇದನಃ ವೈರೂಪಃ	೧೦	೧೧೨	೧೦	೧೦
74	ಶತಪ್ರಭೇದನಃ ವೈರೂಪಃ	೧೦	೧೧೩	೧೦	೧೦
75	ಸಧ್ರಿಃ ವೈರೂಪಃ	೧೦	೧೧೪	೧೦	೧೦

ನಂ.	ಋಷಿಗಳ ಹಿಸರು	ಮಂಡಲ	ಸೂಕ್ತ	ಋಕ್ಸಂಖ್ಯೆ	ಒಟ್ಟು ಋಕ್ಸಂಖ್ಯೆ
76	ಉಪಸ್ತುತಃ ವಾಷ್ಟ್ರಿಹವ್ಯಃ	೧೦	೧೧೫	೯	೯
77	ಅಗ್ನಿಯುತಃ ಸ್ಥೌರಃ	೧೦	೧೧೬	೯	೯
78	ಭಿಕ್ಷುರಾಂಗಿರಸಃ	೧೦	೧೧೭	೯	೯
79	ಉರುಕ್ಷಯ ಆಮಹೀಯವಃ	೧೦	೧೧೮	೯	೯
80	ಲಬ ಐಂದ್ರಃ	೧೦	೧೧೯	೧೩	೧೩
81	ಬೃಹದ್ದಿವ ಆಥರ್ವಣಃ	೧೦	೧೨೦	೯	೯
82	ಹಿರಣ್ಯಗರ್ಭಃ ಪ್ರಾಜಾಪತ್ಯಃ	೧೦	೧೨೧	೧೦	೧೦
83	ಚಿತ್ರಮಹಾ ವಾಸಿಷ್ಠಃ	೧೦	೧೨೨	೮	೮
84	ವೇನೋ ಭಾರ್ಗವಃ	೯	೮೫	೧೨	
		೧೦	೧೨೩	೮	೨೦
85	ನಿಹವಃ ಅಗ್ನಿವರುಣಸೋಮಾನಾಂ	೧೦	೧೨೪	೬	(೧, ೫-೯)
86	ಅಗ್ನಿಃ	೧೦	೧೨೪	೩	(೨-೪)
87	ವಾಗಾಂಭೃಣೀ	೧೦	೧೨೫	೮	೮
88	ಕುಲ್ಮಲಬರ್ಹಿಷಃ ಶೈಲೂಷಿಃ (ವಾಮದೇವ್ಯೋಽಹೋಮುಗ್ವಾ)	೧೦	೧೨೬	೮	೮
89	ಕುಶಿಕಃ ಸೌಭರಃ	೧೦	೧೨೭	೮	೮
90	ವಿಹವ್ಯ ಆಂಗಿರಸಃ	೧೦	೧೨೮	೯	೯
91	ಪ್ರಜಾಪತಿಃ ಪರಮೇಷ್ಠೀ	೧೦	೧೨೯	೨	೨
92	ಯಜ್ಞಃ ಪ್ರಾಜಾಪತ್ಯಃ	೧೦	೧೩೦	೨	೨
93	ಸುಕೀರ್ತಿಃ ಕಾಕ್ಷೀವತಃ	೧೦	೧೩೧	೨	೨
94	ಶಕಪೂತೋ ನಾರ್ಮೇಧಃ	೧೦	೧೩೨	೨	೨
95	ಸುದಾಃ ಪೈಜವನಃ	೧೦	೧೩೩	೨	೨
96	ಮಾಂಧಾತಾ ಯೌವನಾಶ್ವಃ	೧೦	೧೩೪	೫॥	(೧-೫, ೬ ರಲ್ಲಿ ಪೂರ್ವಾರ್ಧ)
97	ಗೋಧಾ ಋಷಿಕಾ	೧೦	೧೩೪	೧॥	(೬ ರ ಉತ್ತರಾರ್ಧ, ೭)
98	ಕುಮಾರೋ ಯಾಮಾಯನಃ	೧೦	೧೩೫	೭	೭
99	ಮನಯೋ ವಾತರಶನಾಃ (೧. ಜೂತಿಃ । ೨. ವಾತಜೂತಿಃ । ೩. ವಿಪ್ರಜೂತಿಃ । ೪. ವೃಷಾಣಕಃ । ೫. ಕರಿಕ್ರತಃ । ೬. ಏತಶಃ । ೭. ಋಷ್ಯಶೃಂಗಃ)	೧೦	೧೩೬	೭	೭

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
100	ಸಪ್ತರ್ಷಯಃ	೧೦	೧೩೭	೭	೭
	(೧. ಭರದ್ವಾಜಃ ! ೨. ಕಶ್ಯಪಃ । ೩ ಗೋತಮಃ । ೪. ಅತ್ರಿಃ । ೫. ವಿಶ್ವಾಮಿತ್ರಃ । ೬. ಜಮದಗ್ನಿಃ । ೭. ವಸಿಷ್ಠಃ ।)				
101	ಅಂಗ ಔರವಃ	೧೦	೧೩೮	೬	೬
102	ದೇವಗಂಧರ್ವೋ ವಿಶ್ವಾವಸುಃ	೧೦	೧೩೯	೬	೬
103	ಅಗ್ನಿಃ ಪಾವಕಃ	೪	೧೦೨	೨೨	೬
		೧೦	೧೪೦	೬	೨೮
104	ಅಗ್ನಿಸ್ತಾಪಸಃ	೧೦	೧೪೧	೬	೬
105	ಶಾರ್ಙ್ಗಾಃ	೧೦	೧೪೨	೪	೪
	(೧-೨. ಜರಿತಾ । ೩-೪. ದ್ರೋಣಃ । ೫-೬. ಸಾರಿಸೃಕ್ವಃ।೭-೮. ಸ್ತಂಬಮಿತ್ರಃ)				
106	ಅತ್ರಿಃ ಸಾಂಖ್ಯಃ	೧೦	೧೪೩	೬	೬
107	ಸುಪರ್ಣಸ್ತಾರ್ಕ್ಷ್ಯಃ (ಯಾಮಾಯನ ಊಧರ್ವಕೃಶನೋ ವಾ)	೧೦	೧೪೪	೬	೬
108	ದೇವಮುನಿರ್ದೈರಂಮದಃ	೧೦	೧೪೬	೬	೬
109	ಸುವೇದಾಃ ಶೈರೀಷಿಃ	೧೦	೧೪೭	೫	೫
110	ಪೃಥುರ್ವೈನ್ಯಃ	೧೦	೧೪೮	೫	೫
111	ಅರ್ಚನ್ ಹೈರಣ್ಯಸ್ತೂಪಃ	೧೦	೧೪೯	೫	೫
112	ಮೃಳೀಕೋ ವಾಸಿಷ್ಠಃ	೪	೪೭	೩	(೨೫–೨೭)
		೧೦	೧೫೦	೫	೮
113	ಶ್ರದ್ಧಾ ಕಾಮಾಯನೀ	೧೦	೧೫೧	೫	೫
114	ಶಾಸೋ ಭಾರದ್ವಾಜಃ	೧೦	೧೫೨	೫	೫
115	ದೇವಜಾಮಯ ಇಂದ್ರಮಾತರಃ	೧೦	೧೫೩	೫	೫
116	ಯಮೀ ವೈವಸ್ವತೀ	೧೦	೧೦	೬	(೧, ೩, ೫, ೭, ೧೧, ೧೩)
			೧೫೪	೫	೧೧
117	ಶಿರಿಂಬಿರೋ ಭಾರದ್ವಾಜಃ	೧೦	೧೫೫	೫	೫
118	ಕೇತುರಾಗ್ನೇಯಃ	೧೦	೧೫೬	೫	೫
119	ಭುವನ ಆಪ್ತ್ಯಃ (ಸಾಧನೋ ವಾ ಭೌವನಃ)	೧೦	೧೫೭	೫	೫
120	ಚಕ್ಷುಃ ಸೌರ್ಯಃ	೧೦	೧೫೮	೫	೫

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
121	ಪೌಲೋಮೀ ಶಚೀ	೧೦	೧೫೯	೬	೬
122	ಪೂರಣೋ ವೈಶ್ವಾಮಿತ್ರಃ	೧೦	೧೬೦	೫	೫
123	ಯಕ್ಷ್ಮನಾಶನಃ ಪ್ರಾಜಾಪತ್ಯಃ	೧೦	೧೬೧	೫	೫
124	ಬ್ರಾಹ್ಮೋ ರಕ್ಷೋಹಾ	೧೦	೧೬೨	೬	೬
125	ವಿವೃಹಾ ಕಾಶ್ಯಪಃ	೧೦	೧೬೩	೬	೬
126	ಪ್ರಜೇತಾ ಆಂಗಿರಸಃ	೧೦	೧೬೪	೫	೫
127	ನೈರ್ಋತಃ ಕವ್ಯೋತಃ	೧೦	೧೬೫	೫	೫
128	ಋಷಭೋ ವೈರಾಜಃ (ಋಷಭಃ ಶಾಕ್ವರೋ ವಾ)	೧೦	೧೬೬	೫	೫
129	ವಿಶ್ವಾಮಿತ್ರಃ ಜಮದಗ್ನಿಶ್ಚ	೧೦	೧೬೭	೪	೪
130	ಅನಿಲೋ ವಾತಾಯನಃ	೧೦	೧೬೮	೪	೪
131	ಶಬರಃ ಕಾಕ್ಷೀವತಃ	೧೦	೧೬೯	೪	೪
132	ವಿಭ್ರಾಟ್ ಸೌರ್ಯಃ	೧೦	೧೭೦	೪	೪
133	ಇಟೋ ಭಾರ್ಗವಃ	೧೦	೧೭೧	೪	೪
134	ಸಂವರ್ತ ಆಂಗಿರಸಃ	೧೦	೧೭೨	೪	೪
135	ಧ್ರುವ ಆಂಗಿರಸಃ	೧೦	೧೭೩	೬	೬
136	ಅಭೀವರ್ತ ಆಂಗಿರಸಃ	೧೦	೧೭೪	೫	೫
137	ಊರ್ಧ್ವಗ್ರಾವಾ ಸರ್ಪ ಆರ್ಬುದಿಃ	೧೦	೧೭೫	೪	೪
138	ಸೂನುರಾರ್ಭವಃ	೧೦	೧೭೬	೪	೪
139	ಪತಂಗಃ ಪ್ರಾಜಾಪತ್ಯಃ	೧೦	೧೭೭	೩	೩
140	ಅರಿಷ್ಟನೇಮಿಸ್ತಾರ್ಕ್ಷ್ಯಃ	೧೦	೧೭೮	೩	೩
141	೧. ಶಿಬಿರೌಶೀನರಃ । ೨. ಪ್ರತರ್ದನಃ ಕಾಶಿರಾಜಃ । ೩. ವಸುಮನಾ ರೌಹಿದಶ್ವಃ ।	೧೦	೧೭೯	೩	೩
142	ಜಯ ಐಂದ್ರಃ	೧೦	೧೮೦	೩	೩
143	೧. ಪ್ರಥೋ ವಾಸಿಷ್ಠಃ । ಸಪ್ರಥೋ ಭಾರದ್ವಾಜಃ । ೩. ಘರ್ಮಃ ಸೌಯಃ ॥	೧೦	೧೮೧	೩	೩
144	ತಪುರ್ಮೂರ್ಧಾ ಬಾರ್ಹಸ್ಪತ್ಯಃ	೧೦	೧೮೨	೩	೩
145	ಪ್ರಜಾವಾನ್ ಪ್ರಾಜಾಪತ್ಯಃ	೧೦	೧೮೩	೩	೩
146	ತ್ವಷ್ಟಾ ಗರ್ಭಕರ್ತಾ (ವಿಷ್ಣುರ್ವಾ ಪ್ರಾಜಾಪತ್ಯಃ)	೧೦	೧೮೪	೩	೩
147	ಸತ್ಯಧೃತಿರ್ವಾರುಣಿಃ	೧೦	೧೮೫	೩	೩

ನಂ.	ಋಷಿಗಳ ಹೆಸರು	ಮಂಡಲ	ಸೂಕ್ತ	ಋಕ್ಸಂಖ್ಯೇ	ಒಟ್ಟು ಋಕ್ಸಂಖ್ಯೇ
148	ವಾತಾಯನ ಉಲಃ	೧೦	೧೪೬	೩	೩
149	ಅಗ್ನೇಯೋ ವತ್ಸಃ	೧೦	೧೪೭	೩	೩
150	ಆಗ್ನೇಯಃ ಶ್ಯೇನಃ	೧೦	೧೪೪	೩	೩
151	ಸಾರ್ಪರಾಜ್ಞೀ	೧೦	೧೪೯	೩	೩
152	ಮಾಧುಚ್ಛಂದಸೋಽಘಮರ್ಷಣಃ	೧೦	೧೯೦	೩	೩
153	ಸಂವನನ ಆಂಗಿರಸಃ	೧೦	೧೯೧	೪	೪

ಹತ್ತನೆಯ ಮಂಡಲದಲ್ಲಿ ಒಟ್ಟು ಹನ್ನೆರಡು ಅನುವಾಕಗಳೂ, ೧೯೧ ಸೂಕ್ತಗಳೂ, ೧೨೫೪ ಋಕ್ಕುಗಳೂ ಇರುವವು. ಈ ಕೆಳಗೆ ಕೊಟ್ಟಿರುವ ಪಟ್ಟಿಯು ಹತ್ತನೆಯ ಮಂಡಲದ ಅನುವಾಕ, ಸೂಕ್ತ ಮತ್ತು ಋಕ್ಸಂಖ್ಯೆಯನ್ನು ವಿಶದವಾಗಿ ತಿಳಿಸುವುದು.

ಅನುವಾಕ	ಅನುವಾಕದ ಪ್ರಾರಂಭಸೂಕ್ತ	ಯಾವ ಸೂಕ್ತದಿಂದ ಯಾವ ಸೂಕ್ತದವರೆಗೆ	ಅನುವಾಕದಲ್ಲಿರುವ ಒಟ್ಟು ಸೂಕ್ತಸಂಖ್ಯೆ	ಒಟ್ಟು ಋಕ್ಸಂಖ್ಯೆ
೧	ಅಗ್ನೇ ಬೃಹನ್	೧— ೬	೧೬	೧೪೮
೨	ತ್ವಷ್ಟಾ ದುಹಿತ್ರೇ	೧೭— ೨೯	೧೩	೧೪೬
೩	ಪ್ರ ದೇವತ್ರಾ	೩೦— ೪೨	೧೩	೧೪೫
೪	ಅಚ್ಛಾ ಮ	೪೩— ೬೦	೧೮	೧೬೮
೫	ಇದಮಿತ್ಥಾ	೬೧— ೬೮	೮	೧೨೬
೬	ಭದ್ರಾ ಅಗ್ನೇಃ	೬೯— ೮೪	೧೬	೧೩೫
೭	ಸತ್ಯೇನೋತ್ತಭಿತಾ	೮೫— ೯೦	೬	೧೪೨
೮	ಸಂ ಜಾಗೃವದ್ಭಿಃ	೯೧— ೯೯	೯	೧೪೩
೯	ಇಂದ್ರ ದೃಹ್ಯ	೧೦೦—೧೧೨	೧೩	೧೪೨
೧೦	ತಮಸ್ಯ ದ್ಯಾವಾ	೧೧೩—೧೨೮	೧೬	೧೪೬
೧೧	ನಾಸದಾಸೀನ್ನೋ	೧೨೯—೧೩೧	೩೩	೧೪೪
೧೨	ಶಾಸ ಇತ್ಥಾ	೧೩೨—೧೯೧	೪೦	೧೬೯
ಒಟ್ಟು ೧೨	—	೧೯೧	೧೯೧	೧೨೫೪

ಮೊದಲನೆಯ ಸೂಕ್ತವು.

ತ್ರಿತ ಆಪ್ತ್ಯಃ ಎಂಬ ಋಷಿಯ ಪರಿಚಯ

ಈ ಹತ್ತನೆಯ ಮಂಡಲದ ಮೊದಲ ೭ ಸೂಕ್ತಗಳಿಗೆ **ತ್ರಿತಃ ಆಪ್ತ್ಯಃ** ಎಂಬುವನು ಋಷಿಯು ಈ ಋಷಿಯ ವಿಷಯವಾಗಿ ಕೆಲವು ಸಂಗತಿಗಳನ್ನು ಹಿಂದೆ ಅಲ್ಲಲ್ಲಿ ಹೇಳಿದ್ದರೂ ಈಗ ಈ ಋಷಿಯ ಪರಿಚಯವನ್ನು ಸ್ವಲ್ಪ ವಿಶದವಾಗಿ ತಿಳಿಸುವುದು ಅವಶ್ಯಕವಾಗಿದೆ.

ತ್ರಿತನ ವಿಷಯವು ವಿಮರ್ಶಕರಿಗೆ ಒಂದು ಸಮಸ್ಯೆಯಾಗಿದೆ. ಈ ಹೆಸರು ಸೂಕ್ತದ್ರಷ್ಟೃವಾದ ಋಷಿಯ ಹೆಸರೇ ಅಥವಾ ತ್ರಿತನೆಂಬ ದೇವತೆಯುಂಟೇ ಎಂಬ ಪ್ರಶ್ನೆಗೂ ನಿಷ್ಕರ್ಷವಾದ ಉತ್ತರವನ್ನು ಹೇಳಲು ಸಾಧ್ಯವಿಲ್ಲ. ಕೆಲವೆಡಗಳಲ್ಲಿ ಇಂದ್ರ ಮತ್ತು ಅಗ್ನಿಗಳಿಗೆ **ತ್ರಿತನೆಂಬ** ಪದವು ವಿಶೇಷಣವಾಗಿ ಉಪಯೋಗಿಸಲ್ಪಟ್ಟಿದೆ. ಆದುದರಿಂದ ಋಕ್ಸಂಹಿತೆಯ ಮತ್ತು ಇತರ ಆಧಾರಗಳಿಂದ ತ್ರಿತನ ಸ್ವರೂಪವೇನೆಂಬುದನ್ನು ಸಾಧ್ಯವಾದಷ್ಟು ತಿಳಿಯಬಹುದಾದರೆ, ಯಾಸ್ಕಾದಿಪ್ಯೈದಿಕವಿಮರ್ಶಕರ ಅಭಿಪ್ರಾಗಳನ್ನು ಮೊದಲು ಗಮನಿಸಬೇಕು

ತ್ರಿತನ ಹೆಸರು ೨೯ ಸೂಕ್ತಗಳಲ್ಲಿ ಒಟ್ಟಿಗೆ ೪೦ ಸಲ ಉಪಯೋಗಿಸಲ್ಪಟ್ಟಿದೆ. ಆದರೆ **ತ್ರಿತನಿಗೆ** ಸಂಬಂಧಿಸಿದ (ಎಂದರೆ ತ್ರಿತನೆಂಬ ದೇವತೆಯನ್ನುದ್ದೇಶಿಸಿದ) ಪ್ರತ್ಯೇಕವಾದ ಸೂಕ್ತವಾವುದೂ ಇಲ್ಲ. ನಿಘಂಟುವಿನಲ್ಲಿ ಹೇಳಿರುವ ದೇವತೆಗಳ ಗುಂಪಿನಲ್ಲೆಯೂ ಈ ಹೆಸರು ಉಕ್ತವಾಗಿಲ್ಲ. ಯಾಸ್ಕರು ಮಾತ್ರ ಈ ಪದಕ್ಕೆ ಎರಡು ಕಡೆಗಳಲ್ಲಿ ನಿರ್ವಚನವನ್ನು ಮಾಡಿರುತ್ತಾರೆ. ಮೊದಲನೆಯದಾಗಿ ೧೦-೧೦೫ ನೇ ಸೂಕ್ತದ ೮ ನೇ ಋಕ್ಕನ್ನು ವಿವರಿಸುವಾಗ (ನಿ ೪-೬) **ತ್ರಿತಂ ಕೂಪೇ೬ವಹಿತಮೇತತ್ಸೂಕ್ತಂ ಪ್ರತಿಬಭೌ। ತತ್ರ ಬ್ರಹ್ಮೇತಿಹಾಸಮಿಶ್ರವ್ಯಜ್ಯಾಶ್ಲೋಕಂ ಗಾಥಾಮಿಶ್ರಂ ಭವತಿ। ತ್ರಿತಸ್ತೀರ್ಣತಮೋ ಮೇಧಯಾ ಬಭೂವ ಅಪಿ ವಾ ಸಂಖ್ಯಾನಾಮೈವಾಭಿಪ್ರೇತಂ ಸ್ಯಾದೇಕತೋ ದ್ವಿತಸ್ತ್ರಿತ ಇತಿ ತ್ರಯೋ ಬಭೂವುಃ।** ಭಾವಿಯಲ್ಲಿ ಬಿದ್ದಿದ್ದ ತ್ರಿತನಿಂದ ಈ ಸೂಕ್ತವು ದೃಷ್ಟವಾಯಿತು. ಇದು ಋಗಾತ್ಮಕವಾದುದೂ, ಗಾಥಾತ್ಮಕವಾದುದೂ (**ವಿತ್ತಂ ಮೇ ಅಸ್ಯ ರೋದಸೀ**) ಆದ ಕಥೆಯಿಂದ ಕೂಡಿದ ಪ್ರಾರ್ಥನೆಯಾಗಿದೆ. ಪ್ರಜ್ಞೆಯಲ್ಲೆ ಪ್ರಾವೀಣ್ಯವನ್ನು ಹೊಂದಿದುದರಿಂದ ಇವನಿಗೆ ತ್ರಿತನೆಂಬ ಹೆಸರು ಬಂದಿತು. ಅಥವಾ **ಏಕತ, ದ್ವಿತ, ತ್ರಿತ** ಈ ಮೂವರಲ್ಲಿ ಮೂರನೆಯವನಾದ್ದರಿಂದ **ತ್ರಿತನೆಂದು** ಹೆಸರು ಬಂದಿರಬಹುದು ಎಂದು ಮೊದಲನೆಯ ಸಲವೂ, ಎರಡನೆಯಸಲ ೧೦-೮೬೬-೧೦ ನೇ ಋಕ್ಕನ್ನು ವಿವರಿಸುವಾಗ **ತ್ರಿತಸ್ಥಾನ ಇಂದ್ರಃ** (ನಿ. ೯-೨೫) ಮೂರು ಪ್ರದೇಶಗಳನ್ನೂ ವ್ಯಾಪಿಸುವ ಇಂದ್ರನೆಂದು ಇಂದ್ರನಿಗೆ ವಿಶೇಷಣವಾಗಿಯೂ ವಿವರಿಸಿದ್ದಾರೆ.

ಋಕ್ಸಂಹಿತೆಯಲ್ಲಿ ಈ ಪದವು ಇಂದ್ರನ ಜೊತೆಯಲ್ಲಿ ಹದಿನಾರು ಸಲವೂ, ವೃತ್ರಹಂತಕನೆಂದು ಒಂದು ಸಲವೂ, ವಿಯದಶ್ವನೆಂದು ಒಂದು ಸಲವೂ, ಮರುತ್ತುಗಳಿಗೆ ವಿಶೇಷಣವಾಗಿ ನಾಲ್ಕು ಕಡೆಗಳಲ್ಲಿಯೂ, ಅಗ್ನಿಯೊಡನೆ ಏಳು ಕಡೆಯೂ, ವರುಣನ ಜೊತೆಯಲ್ಲಿ ಒಂದು ಕಡೆಯೂ, ಸೋಮನ ಜೊತೆಯಲ್ಲಿ ನಾಲ್ಕು ಸಲವೂ ದೂರಪ್ರದೇಶದಲ್ಲಿ ಅಡಗಿರುವ ವ್ಯಕ್ತಿಯೆಂದು ಆರು ಸಲವೂ ಹೇಳಿದೆ.

ಈ ಸ್ಥಳಗಳಲ್ಲಿ ಸಾಯಣರ ವಿವರಣೆಯು ಯಾಸ್ಕರ ನಿರ್ವಚನವನ್ನೇ ಅನುಸರಿಸಿದೆ. ಇವರು ತ್ರಿತ ಎಂಬ ಪದಕ್ಕೆ ೨೦ ಋಕ್ಕುಗಳಲ್ಲಿ ಮಂತ್ರದ್ರಷ್ಟೃವಾದ ಋಷಿಯ ಹೆಸರೆಂದು ಅಂಕಿತನಾಮವಾಗಿಯೂ, ಉಳಿದೆಡೆಗಳಲ್ಲಿ ಸಂದರ್ಭಕ್ಕನುಗುಣವಾಗಿ ವಾಯು, ವರುಣ, ಇಂದ್ರ ಮತ್ತು ಅಗ್ನಿ ಈ ದೇವತೆಗಳ ಸ್ವರೂಪವನ್ನು ತಿಳಿಸುವ ವಿಶೇಷಣವೆಂದೂ ಅರ್ಥಮಾಡಿದ್ದಾರೆ.

ಏಕತ, ದ್ವಿತ, ತ್ರಿತ ಎಂಬ ಮೂರು ಋಷಿಗಳಲ್ಲಿ ಮೂರನೆಯವನಾದ ತ್ರಿತನ ಕಥೆಯನ್ನು ೧೦೫ನೇ ಸೂಕ್ತದ ಮೊದಲನೇ ಋಕ್ಕಿನ ವಿಶೇಷವಿಷಯಗಳಲ್ಲಿ ತಿಳಿಸಿದೆ ಅದೇ ಸೂಕ್ತದ ೯ನೇ ಋಕ್ಕಿನಲ್ಲಿ ತ್ರಿತನಿಗೆ **ಆಪ್ತ್ಯ**ನೆಂಬ ವಿಶೇಷಣವಿದೆ. ಮತ್ತು ಅಗ್ನಿಯೊಡನೆ ತ್ರಿತನು ತನ್ನ ಸಂಬಂಧವಿರುವಿಕೆಯಿಂದಲೂ ಸೂಚಿಸಿದ್ದಾನೆ. ಇವನಿಗೆ **ಆಪ್ತ್ಯ**ನೆಂಬ ವಿಶೇಷಣವು ಹೇಗೆ ಬಂದಿತು ? ಅಗ್ನಿಯೊಡನೆ ಇರುವ ಸಂಬಂಧವು ಹೇಗೆ ಎಂಬುದನ್ನು ವಿವರಿಸಲು ಶತಪಥಬ್ರಾಹ್ಮಣದಲ್ಲಿ ಒಂದು ಕಥೆಯಿದೆ.

ಚತುರ್ಧಾವಿಹಿತೋ ಹ ವಾಗ್ರೇಽಗ್ನಿರಾಸ । ಸ ಯವಮಗ್ರೇಽಗ್ನಿಂ ಹೋತ್ರಾಯ ಪ್ರಾವೃಣತ ಸ ಪ್ರಾಧನ್ವದ್ಯಂ ದ್ವಿತೀಯಂ ಪ್ರಾವೃಣತ ಸ ಪ್ರೈವಾಧನ್ವದ್ಯಂ ತೃತೀಯಂ ಪ್ರಾವೃಣ ತಸ ಪ್ರೈಧನ್ವದಥ ಯೋಽಯಮೇತರ್ಹ್ಯಗ್ನಿಃ ಸ ಭೀಷಾ ನಿಲಿಲ್ಯೇ ಸೋಽಪಃ ಪ್ರವಿವೇತ ತಂ ದೇವಾ ಅನುವಿದ್ಯ ಸಪತ್ನೈವಾದ್ಧ್ಯ ಅನಿನ್ಯುಃ ಸೋಽಪೋಽಭಿಷ್ಠೇವಾವಷ್ಯೋತಾ ಸ್ಥ ಯಾ ಅಪ್ರಪದನಂ ಸ್ಥ ಯಾಭ್ಯೋ ವೋ ಮಾಮಕಾನು ಸಯಂತೀತಿ ತತ ಆಪ್ತ್ಯಃ ಸಂಬಭೂವುಸ್ತ್ರಿತೋ ದ್ವಿತ ಏಕತಃ ।

(ಶ ಬ್ರಾ ೧.೭.೩.೧)

ಅಗ್ನಿಯ ಮೂರು ಹಿರಿಯ ಸಹೋದರರೂ ದೇವತೆಗಳಿಗೆ ಹವಿಸ್ಸನ್ನು ಪಹಿಸುವ ಕಾರ್ಯದಲ್ಲಿ ದಣಿದು ಕೃಶರಾಗಲು ಅಗ್ನಿಯು ತನಗೂ ಇದೇ ಸ್ಥಿತಿ ಬರಬಹುದೆಂಬ ಭಯದಿಂದ ಓಡಿಹೋಗಿ ನೀರಿನಲ್ಲಿ ತಪಿತುಕೊಂಡನು. ಆಗ ದೇವತೆಗಳು ನೀರನ್ನೂ ಪ್ರಸೇವಿಸಿ ಅವನನ್ನು ಹಿಡಿದು ತರಲು ಅಗ್ನಿಯು ಸುರಕ್ಷಣೆಯನ್ನು ಕೊಡಲು ಈ ನೀರು ಯೋಗ್ಯವಲ್ಲದ ಪದಾರ್ಥವೆಂದು ಕೋಪದಿಂದ ನೀರಿನ ಮೇಲೆ ಉಗುಳಿದನು. ಆಗ ಏಕತ, ದ್ವಿತ, ತ್ರಿತ ಎಂಬ ಮೂರು **ಆಪ್ತ್ಯ** ದೇವತೆಗಳು ಉದ್ಭವಿಸಿದರು. ಇದು **ಆಪ್ತ್ಯ**ನೆಂಬ ವಿಶೇಷಣವು ಬರಲು ಒಂದು ಕಾರಣ.

ಎರಡನೆಯದಾಗಿ, ತ್ರಿತಾದಿಗಳು ಅಗ್ನಿಯಿಂದ ಉತ್ಪನ್ನರಾದವರು ಎಂಬುದಕ್ಕೆ ಸಾಯಣರು ತೈತ್ತಿರೀಯ ಬ್ರಾಹ್ಮಣವಾಕ್ಯದ ಆಧಾರದ ಮೇಲೆ ತ್ರಿತಶಬ್ದದ ನಿರ್ವಚನವನ್ನು ತೋರಿಸಿದ್ದಾರೆ. (ಋ. ಸಂ. ೧೦೫.೯ ಸಾ.ಭಾ.)

ದೇವಾನಾಂ ಹವಿರ್ಲೇಪನಿಘರ್ಷಣಾಯ ಅಗ್ನೇಃಸಕಾಶಾತ್ ಅಪ್ಸು ಏಕತೋ ದ್ವಿತಸ್ತ್ರಿತ ಇತಿ ತ್ರಯಃ ಪುರುಷಾ ಜಜ್ಞಿರೇ । ತಥಾ ಚ ತೈತ್ತಿರೀಯೈಃ ಸಮಾಮ್ನಾತಂ ॥ ಸೋಽಂಗಾರೇಣಾಪಃ ಅಭ್ಯಹಾತಯತ್ । ತತ ಏಕತೋಽಜಾಯತ । ಸ ದ್ವಿತೀಯಮಭ್ಯಹಾತಯತ್ । ತತೋ ದ್ವಿತೋಽಜಾಯತ । ಸ ತೃತೀಯಮಭ್ಯಹಾತಯತ್ । ತತಸ್ತ್ರಿತೋಽಜಾಯತ ।

(ತೈ. ಬ್ರಾ. ೩.೨.೮-೧೦)

ದೇವತೆಗಳ ದೋಷವನ್ನು ತೊಡೆಯುವುದಕ್ಕಾಗಿ ಅಗ್ನಿಯು ಉದಕದಲ್ಲಿ ಏಕತ, ದ್ವಿತ ಮತ್ತು ತ್ರಿತ ಎಂಬ ಮೂವರು ವ್ಯಕ್ತಿಗಳನ್ನು ಉತ್ಪನ್ನವಾಗುವಂತೆ ಮಾಡಿದನೆಂದು ಈ ಬ್ರಾಹ್ಮಣವಾಕ್ಯದ ತಾತ್ಪರ್ಯ. ಈ ಕಾರಣ ದಿಂದಲೇ, ತ್ರಿತನು.

ಅಗ್ನಿಂ ಮನ್ಯೇ ಪಿತರಮಗ್ನಿಮಾಪಿಮಗ್ನಿಂ ಭ್ರಾತರಂ ಸದಮಿತ್ಸಖಾಯಂ ।

(ಋ. ಸಂ. ೧೦-೭-೩)

ಇತ್ಯಾದಿ ಋಕ್ಸ್ತುಗಳಲ್ಲಿ ಅಗ್ನಿಯೇ ತನಗೆ ಪಿತೃವೆಂದೂ, ಭ್ರಾತೃವೆಂದೂ, ಸಖನೆಂದೂ ಹೇಳಿ ಅಂತಹ ಅಗ್ನಿಯನ್ನು ತಾನು ಆರಾಧಿಸುವುದಾಗಿಯೂ ಮತ್ತು ದ್ಯುಲೋಕಸ್ಥನೂ ಪೂಜ್ಯನೂ ಆದ ಸೂರ್ಯನನ್ನು ಹೆಚ್ಚು ಪ್ರಕಾಶವನ್ನು ಬೀರುವುದಕ್ಕೆ ಸಹಾಯಮಾಡುವುದಾಗಿಯೂ ಅಗ್ನಿಯನ್ನು ಸ್ತುತಿಸಿದ್ದಾನೆ.

ಹೀಗೆ **ತ್ರಿತನಿಗೂ ಅಗ್ನಿಗೂ** ಸಾಕ್ಷಾತ್ಸಂಬಂಧವಿರುವುದಾಗಿ **ತ್ರಿತನ** ವಾಕ್ಯವೇ ಇರುವುದರಿಂದ **ಇಂದ್ರ, ವಾಯು** ಇತ್ಯಾದಿ ದೇವತೆಗಳೊಡನೆ ತಾದಾತ್ಮ್ಯವನ್ನು ಹೇಳುವ ಪಂಡಿತರ ಅಭಿಪ್ರಾಯಗಳು **ತ್ರಿತನ** ಸರಿಯಾದ ಸ್ವರೂಪವನ್ನು ಹೇಳುವುದಿಲ್ಲವೆನ್ನಬಹುದು **ತ್ರಿತನು ವೈದ್ಯುತಾಗ್ನಿಯ** ಅಂಶವೆಂದು ಅನೇಕ ಆಧಾರಗಳಿಂದ ಹೇಳಬೇಕಾಗುತ್ತದೆ ಈ ಅಭಿಪ್ರಾಯವು ಸರಿಯೆಂದು ತೋರಿಸಲು ಸರಿಯಾದ ಕಾರಣಗಳನ್ನು ಕೊಟ್ಟು **ವೈದ್ಯುತಾಗ್ನಿಯೇ ತ್ರಿತನೆಂಬ** ಪರ್ಯಾಯವಾದ ಹೆಸರಿನಿಂದ ಕರೆಯಲ್ಪಟ್ಟಿದೆಯೆಂದು ನಿಷ್ಕರ್ಷವಾಗಿ ಹೇಳುವುದಕ್ಕೆ ಮೊದಲು, ಅತ್ಯಂತ ಆಸಕ್ತಿಯಿಂದಲೂ ರಾಷ್ಟ್ರೀಯವಾದ ಕ್ರಮದಿಂದಲೂ ವೈದಿಕವ್ಯಾಸಂಗವನ್ನು ನಡೆಸಿ ಇಂತಹ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಿರುವ ಆಂಗ್ಲಪಂಡಿತರ ಮತಗಳಲ್ಲಿ **ತ್ರಿತನ** ವಿಷಯವಾದ ಕೆಲವು ಅಭಿಪ್ರಾಯಗಳನ್ನ ಇಲ್ಲಿ ಉದಹರಿಸಿದರೆ ಅನುಚಿತವಾಗಲಾರದು. ಇವರಲ್ಲಿ Benfey ಎಂಬ ಪಂಡಿತನು,

"Trita is a mythical personage, to whom, as to Indra and other deities, is ascribed the destruction of the demons withholding the fertilising rain from the earth. In some passages, special mention is made of the fact, that Trita owes his strength for this deed to the sacred Soma draught, and in one passage, India is described as drinking Soma with him " ಎಂದೂ Bergaigne ಎಂಬುವನು, "In his warlike exploits he always preserves his part as a srcrificer, Trita, who was certainly a God, has none the less become a priest, favourite of Indra" ಎಂದೂ, Pischel ಎಂಬ ಪಂಡಿತನು " Trita was from the beginning a God of the sea and of the waters " ಎಂದೂ ಹೇಳಿದ್ದಾರೆ. Roth ಎಂಬ ಪಂಡಿತನು **ತ್ರಿತನಿಗೂ ವಾಯುವಿಗೂ** ತಾದಾತ್ಮ್ಯವನ್ನು ಹೇಳಿದ್ದಾನೆ. ಇದೇ ಮತವನ್ನು Ludwig ಎಂಬ ಪಂಡಿತನು ಅನುಮೋದಿಸಿದ್ದಾನೆ. Muir ಎಂಬುವನು **ತ್ರಿತ** ಎಂಬುದು ಇಂದ್ರನ ಪರ್ಯಾಯನಾಮವೆಂದು ತನ್ನ ಮತವನ್ನು ಹೇಳಿದ್ದಾನೆ. ಹೀಗೆ ಪಾಶ್ಚಾತ್ಯ ಪಂಡಿತರಲ್ಲಿ ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ಹೇಳಿರುವಂತೆ ವೈದಿಕಸಂಪ್ರದಾಯದವರೂ ಸಹ ಮತಭೇದವನ್ನು ಮುಂದೆ ಹೇಳಿರುವಂತೆ ತೋರಿಸಿದ್ದಾರೆ. ಆದರೆ, ಅಗ್ನಿಯಲ್ಲದೇ ಇತರ ದೇವತೆಗಳೊಡನೆ ತ್ರಿತನಿಗೆ ತಾದಾತ್ಮ್ಯವನ್ನು ಕಲ್ಪಿಸಲು ಸರಿಯಾದ ಆಧಾರಗಳೆಲ್ಲ **ತ್ರಿತನ** ಹೆಸರು **ಇಂದ್ರನೊಡನೆ**

ಹದಿನಾರು ಸಲ ಹೇಳಲ್ಪಟ್ಟಿದ್ದರೂ ಸಹ ೨-೧೧;೨೦, ೮-೭-೨೪; ೮-೫೨-೧, ೯-೩೨-೨; ೯-೩೮-೨ ಇತ್ಯಾದಿ ಋಕ್ಕುಗಳಲ್ಲೆಲ್ಲಾ ಇಂದ್ರನಿಗೆ ಸಹಾಯಕನಾದವನು, ತ್ರಿತನೆಂಬ ಇಂದ್ರನ ಸಖನಾದ ಋಷಿ ಹೀಗೆಂಬುದಾಗಿ ಇಂದ್ರನ ಜೊತೆಯಲ್ಲಿರುವ ಬೇರೆ ವ್ಯಕ್ತಿಯೆಂದು ಹೇಳಿರುವುದರಿಂದ **ತ್ರಿತ** ಎಂಬುದು ಇಂದ್ರನ ಪರ್ಯಾಯನಾಮವಲ್ಲ. ಹೀಗೆಯೇ,

ಇಮಂ ತ್ರಿತೋ ಭೂರ್ಮ್ಯವಿಂದದಿಚ್ಛನ್ನೃಭೂವಸೋ ಮೂರ್ಧನ್ಯಘ್ನ್ಯಾಯಾಃ ।

(ಋ. ಸಂ. ೧೦-೪೬-೩)

ಎಂಬ ಋಕ್ಕಿನಲ್ಲಿ **ಗೃಹಸಖನೆಂದು** ಹೇಳಿರುವುದು ಅಗ್ನಿಗೆ ಅನ್ವಯಿಸುವುದೇ ಹೊರತು ವಾಯುವು ಗೃಹಸಖನೆಂದು ಪ್ರಸಿದ್ಧನಾಗಿಲ್ಲ. ಇದರಂತೆ ೧೦.೪೬-೬ ನೇ ಋಕ್ಕೂ ಸಹ ಅಗ್ನಿಯನ್ನುದ್ದೇಶಿಸಿದ ಸ್ತುತಿಯಾಗಿದೆ. ಹೀಗೆ ಅನೇಕ ಆಧಾರಗಳಿಂದ ತ್ರಿತನೆಂಬುದು ಇತರ ದೇವತೆಗಳ ಪರ್ಯಾಯನಾಮವಾಗಿರದೆ **ಅಗ್ನಿಯ** ಅಂಶವೆಂದು ಧಾರಾಳವಾಗಿ ಹೇಳಬಹುದು. **ಅಪ್ತ್ಯವೆಂಬ** ಪದಕ್ಕೆ ೮-೪೭-೧೩ ರಿಂದ ೧೭ ನೇ ಋಕ್ಕುಗಳಲ್ಲಿ **ದೂರಸ್ಥನೂ ಮೇಘಾಂತರ್ಗಾಮಿಯೂ** ಆದವನು ಎಂಬ ವರ್ಣನೆಯಿರುವುದರಿಂದ ವೈದ್ಯುತಾಗ್ನಿಯ ರೂಪವೆಂದೂ ಹೇಳಬಹುದು. ಹೀಗೆ ಹೇಳಿದ್ದರೆ ಇಂದ್ರ, ಪುರುತ್ತು ಮುಂತಾದ ದೇವತೆಗಳಿಗೂ ತ್ರಿತನ ರೂಪದಲ್ಲಿರುವ ವೈದ್ಯುತಾಗ್ನಿಗೂ ಇರತಕ್ಕ ಸಾಹಚರ್ಯವು ಅರ್ಥವಾಗುವುದು.

ರೂಪನಿಷ್ಪತ್ತಿಯ ದೃಷ್ಟಿಯಿಂದಲೂ ಸಹ **ತ್ರಿತನಿಗೂ ರೂಪತ್ರಯದಲ್ಲಿರುವ** ಅಗ್ನಿಗೂ ತಾದಾತ್ಮ್ಯವನ್ನು ಹೇಳಲು ಸಾಧ್ಯವಾಗುತ್ತದೆ.

ಅಗ್ನೇ ತ್ರೀ ತೇ ವಾಜಿನಾ ತ್ರೀ ಷಧಸ್ಥಾ ತಿಸ್ರಸ್ತೇ ಜಿಹ್ವಾ ಋತಜಾತ ಪೂರ್ವೀಃ ।
ತಿಸ್ರ ಉ ತೇ ತನ್ವೋ ದೇವವಾತಾಸ್ತ್ರಿಭರ್ನಃ ಪಾಹಿ ಗಿರೋ ಅಪ್ರಯುಚ್ಛನ್ ॥

(ಋ ಸಂ. ೩-೨೦-೨)

ಅಗ್ನಿಗೆ ಶಕ್ತಿತ್ರಯವೂ, ಸ್ಥಾನತ್ರಯವೂ, ಜಿಹ್ವಾತ್ರಯವೂ ತನುತ್ರಯವೂ ಇರುವುದಾಗಿ ಈ ಋಕ್ಕಿನಲ್ಲಿ ವರ್ಣಿತವಾಗಿರುವಂತೆಯೇ, ತೇಜಸ್ತ್ರಯವೂ (೩-೨೬-೭), ಜ್ವಲನತ್ರಯವೂ (೩-೨-೯) ವರ್ಣಿತವಾಗಿವೆ. ಅಲ್ಲದೇ **ತ್ರಿರಸ್ಯ ತಾ ಪರಮಾ ಸಂತಿ ಸತ್ಯಾ ಸ್ವಾಹಾ ದೇವಸ್ಯ ಜನಿಮಾನ್ಯಗ್ನೇಃ ।** (ಋ ಸಂ ೪-೧-೭) ವೇನ, ನಾದ ಅಗ್ನಿಯ ಉತ್ಪತ್ತಿಸ್ಥಾನಗಳೂ ಮೂರು. ಅವು ಯಾವವೆಂದರೆ, **ಸ ಜಾಯಮಾನ ಪ್ರಥಮಃ ಪಸ್ತ್ಯಾಸು ಮಹೋ ಬುಧ್ನೇ ರಜಸೋ ಅಸ್ಯ ಯೋನೌ ।** (ಋ. ಸಂ. ೪-೧-೧೧) ಇತ್ಯಾದಿ ಋಕ್ಕುಗಳಲ್ಲಿ ವರ್ಣಿಸಿರುವಂತೆ ಪೃಥಿವೀ, ದ್ಯುಲೋಕ ಮತ್ತು ಅಂತರಿಕ್ಷ ಇದೇ ರೀತಿಯಲ್ಲಿ ಅಂತರಿಕ್ಷಸ್ಥನಾದ **ವೈದ್ಯುತಾಗ್ನಿಗೂ** ದೂರದಲ್ಲಿರುವ ಮೇಘಾಂತರ್ಗತನಾದ **ತ್ರಿತನಿಗೂ** ಇರತಕ್ಕ ಸಾಮಾನ್ಯಧರ್ಮವೂ ಅರ್ಥವಾಗುತ್ತದೆ. ಈ ಅಂಶವನ್ನು ತ್ರಿತನೇ ಸ್ಪಷ್ಟವಾಗಿ ಹೇಳಿದ್ದಾನೆ

ಅಮಿಾ ಯೇ ಸಪ್ತ ರಶ್ಮಯಸ್ತತ್ರಾ ಮೇ ನಾಭಿರಾತತಾ ।
ತ್ರಿತಸ್ತದ್ವೇದಾಪ್ತ್ಯಃ ಸ ಒಷಮಿತ್ಯಾಯ ರೇಭತಿ ವಿತ್ತಂ ಮೇ ಅಸ್ಯ ರೋದಸೀ ॥

(ಋ. ಸಂ ೧-೧೦೫-೯)

ಸಪ್ತಪ್ರಾಣರೂಪದಲ್ಲಿರುವ ಈ ಏಳು ಸೂರ್ಯಕಿರಣಗಳಲ್ಲಿ ನನ್ನ ನಾಭಿಯು ವಿಸ್ತೃತವಾಗಿ ಬೆಳೆಯಿತು. ಅಜ್ಞಾನವನ್ನು ದಾಟಿದವನೂ, ನೀರುಗಳ ಪುತ್ರನೂ ಆದ ತ್ರಿತನು ತನ್ನ ಹಿಂದಿನ ಚರಿತ್ರೆಯನ್ನು ತಿಳಿದಿದ್ದಾನೆ. ಈ ತಿಳಿವಳಿಕೆಯುಳ್ಳ ಋಷಿಯು ಬಾವಿಯಿಂದ ಹೊರಕ್ಕೆ ಬರುವುದಕ್ಕಾಗಿ ತನ್ನ ಸಂಬಂಧಿಗಳಾದ ಈ ರಶ್ಮಿಗಳನ್ನು ಕುರಿತು ಸೋತ್ರಮಾಡುತ್ತಾನೆ ಎಂದಿರುವುದರಿಂದಲೂ ; ಮತ್ತು **ಯದೀಮಹ ತ್ರಿತೋ ದಿವ್ಯಹ ಧ್ಮಾತೇವ ಧಮತಿ ಶಿಶೀತೇ ಧ್ಮಾತರೀ ಯಥಾ**। (೫-೯-೫) ಅಂತರಿಕ್ಷಸ್ಥನಾದ ತ್ರಿತನು ಈ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತಾನೆ **ಪ್ರ ಸಕ್ಷಣೋ ದಿವ್ಯಃ ಕಣ್ವಹೋತಾ ತ್ರಿತೋ ದಿವಃ ಸಜೋಷಾ ವಾತೋ ಅಗ್ನಿಃ** । (೫-೧೪-೪) ಅಂತರಿಕ್ಷಸ್ಥನಾದತ್ರಿತನು ಸೂರ್ಯಾದಿಗಳೊಡನೆ ಬರುತ್ತಾನೆ ಇತ್ಯಾದಿ ವಾಕ್ಯಗಳ ಆಧಾರದ ಮೇಲೆಯೂ **ವೈದ್ಯುತಾಗ್ನಿಯು ತ್ರಿತನೆಂಬ** ಪರ್ಯಾಯನಾಮದಿಂದ ಪ್ರತೀತನಾಗಿದ್ದಾನೆಂದು ಹೇಳಬಹುದು.

ಆಪ್ತ್ಯಃ (ಅಪಾಂ ಪುತ್ರಃ ೮-೧೦೫-೯) **ಆಪ್ತ್ಯೇ** ಇತ್ಯಾದಿ ವಿಶೇಷಣವು ಇರುವೆಡೆಗಳಲ್ಲೆಲ್ಲಾ ತ್ರಿತನ ಪರವಾಗಿಯೇ ಇದೆ. ಇದರಂತೆಯೇ **ಆಪಾಂ ನಪಾತ್** ಎಂಬ ವಿಶೇಷಣವು ಯಾವಾಗಲೂ ವೈದ್ಯುತಾಗ್ನಿಪರವಾಗಿಯೇ ಇದೆ. ಆದುದರಿಂದ ತ್ರಿತನೂ **ವೈದ್ಯುತಾಗ್ನಿಯೂ** ಮೂಲತಃ ಒಂದೇ ಎಂದು ಹೇಳಬಹುದು.

ಪ್ರಥಮಮಂಡಲದ ೧೦೫ನೇ ಸೂಕ್ತವು ಭಾವಿಯಲ್ಲಿ ಬಿದ್ದಿದ್ದ ತ್ರಿತನಿಂದ ದೃಷ್ಟವಾದದ್ದು ಈ ಸೂಕ್ತದಲ್ಲಿ ವಿಶ್ವೇದೇವತೆಗಳನ್ನು ಪ್ರಾರ್ಥಿಸಲಾಗಿದೆ. ಈ ಪ್ರಾರ್ಥನೆಗೆ ಹಿನ್ನೆಲೆಯಾದ ಒಂದು ಕಥೆಯಿದೆ. ಆದರೆ ಸಾಯಣಭಾಷ್ಯದ ಈ ಸೂಕ್ತಕ್ಕೆ ಉಪೋದ್ಘಾತದಲ್ಲಿರುವ ಕಥಾಕ್ರಮವೇ ಬೇರೆ, ಸ್ಕಂದಸ್ವಾಮಿಗಳ ಭಾಷ್ಯದಲ್ಲಿರುವ ಕ್ರಮವೇ ಬೇರೆ. ಸಾಯಣಭಾಷ್ಯದ ರೀತ್ಯಾ, (ಇದು ಶಾಕಟಾಯನ ಕ್ರಮವನ್ನನುಸರಿಸಿದೆ)—**ಏಕತೋ ದ್ವಿತ-ಸ್ತ್ರಿತ ಇತಿ ಪುರಾ ತ್ರಯ ಋಷಯೋ ಬಭೂವುಃ । ತೇ ಕದಾಚಿನ್ಮರುಭೂಮಾವರಣ್ಯೇ ವರ್ತಮಾನಾಃ ಪಿಪಾಸಯಾ ಸಂತಪ್ತಗಾತ್ರಾಃ ಸಂತ ಏಕಂ ಕೂಪಮಪಶ್ಯನ್ । ತತ್ರ ತ್ರಿತಾಖ್ಯ ಏಕೋ ಜಲಪಾನಾಯ ಕೂಪಂ ಪ್ರಾವಿಶತ್ । ಸ್ವಯಂ ಪೀತ್ವಾ ಇತರೇಭ್ಯೋಽಪಿ ಕೂಪಾದುದಕಮುದ್ಧೃತ್ಯ ಪ್ರಾದಾತ್ । ತೌ ತದುದಕಂ ಪೀತ್ವಾ ತ್ರಿತಂ ಕೂಪೇ ಪಾತಯಿತ್ವಾ ತದೀಯಂ ಧನಂ ಸರ್ವಮುಪಹೃತ್ಯ ಕೂಪಂ ಚ ರಥಚಕ್ರೇಣ ಪಿಧಾಯ ಪ್ರಾಸ್ಥಿಷಾತಾಂ । ತತಃ ಕೂಪೇ ಪತಿತಃ ಸ ತ್ರಿತಃ ಕೂಪಾದುತ್ತರೀತುಮಶಕ್ನುವನ್ ಸರ್ವೇ ದೇವಾ ಮಾಮುದ್ಧರಂತ್ವಿತಿ ಮನಸಾ ಸಸ್ಮಾರ । ತತಸ್ತೇಷಾಂ ಸ್ತಾವಕಮಿದಂ ಸೂಕ್ತಂ ದದರ್ಶ । ತತ್ರ ರಾತ್ರೌ ಕೂಪಸ್ಯಾಂತಶ್ಚಂದ್ರಮಸೋ ರಶ್ಮೀನ್ ಪಶ್ಯನ್ ಪರಿದೇವಯತೇ ।**

ಏಕತ, ದ್ವಿತ ಮತ್ತು ತ್ರಿತ ಎಂಬ ಮೂವರು ಋಷಿಗಳು ಇದ್ದರು. ಅವರು ಒಂದುಸಲ ಅರಣ್ಯಮಧ್ಯದಲ್ಲಿ ಮರುಭೂಮಿಯಲ್ಲಿ ಸಿಕ್ಕಿಕೊಂಡು ಅತ್ಯಂತ ಬಾಯಾರಿಕೆಯಿಂದ ಹಿಂಸಪಡುತ್ತಿರುವಾಗ ಅಕಸ್ಮಾತ್ತಾಗಿ ಒಂದು ಬಾವಿಯನ್ನು ನೋಡಿ ಅದರ ಹತ್ತಿರ ಬಂದರು. ಆಗ ತ್ರಿತನು ಜಲಪಾನಕ್ಕಾಗಿ ಬಾವಿಗೆ ಇಳಿದನು. ನಂತರ ತಾನು ನೀರನ್ನು ಕುಡಿದು ಉಳಿದಿಬ್ಬರಿಗೂ ಸಹ ಬಾವಿಯಿಂದ ನೀರನ್ನು ತೆಗೆದುಕೊಂಡು ಮೇಲಕ್ಕೆ ಬಂದನು. ಮೇಲಿದ್ದ ಏಕತ ಮತ್ತು ದ್ವಿತರು ಆ ನೀರನ್ನು ಕುಡಿದು ತ್ರಿತನ ಸರ್ವಧನವನ್ನೂ ಅಪಹರಿಸಬೇಕೆಂದು ಅವನನ್ನು ಬಾವಿಗೆ ತಳ್ಳಿ ರಥಚಕ್ರದಿಂದ ಬಾವಿಯನ್ನು ಮುಚ್ಚಿ ಅಲ್ಲಿಂದ ಹೊರಟುಹೋದರು. ಬಾವಿಯಲ್ಲಿ ಬಿದ್ದಿದ್ದ ತ್ರಿತನಿಗೆ ಮೇಲಕ್ಕೆ ಬರಲಾಗದೇ ನಿಂತಲ್ಲಿಯೇ **ವಿಶ್ವದೇವತೆಗಳ** ಪ್ರಾರ್ಥನೆಯನ್ನು ಮಾಡಿ ಅವರು ನನ್ನನ್ನುದ್ಧರಿಸಲಿ ಎಂದು ಮನಸ್ಸಿನಲ್ಲಿಯೇ ಸ್ಮರಿಸಿದನು. ಆಗ ಅವರನ್ನು ಸ್ತುತಿಸತಕ್ಕ ಈ ಸೂಕ್ತದ ದರ್ಶನವನ್ನು ಪಡೆದನು. ಆ ಕಾಡಿನಲ್ಲಿ ಬಾವಿ

ಯೊಳಕ್ಕೆ ಪ್ರಸರಿಸಿದ ಚಂದ್ರಕಿರಣಗಳನ್ನು ನೋಡಿ ತನ್ನ ವೇದನೆಯನ್ನು ಪ್ರಕಾಶಪಡಿಸುತ್ತಾ ಪ್ರಾರ್ಥಿಸುತ್ತಿದ್ದಾನೆಂದು ಸಾಯಣಭಾಷ್ಯದ ಕಥೆ. ಸ್ಕಂದಸ್ವಾಮಿಗಳ ಭಾಷ್ಯದಲ್ಲಿ ಕಥಾಕ್ರಮವು ಕೆಳಗೆ ಹೇಳುವ ರೀತಿಯಲ್ಲಿದೆ.

ಅತ್ರ ಸೂಕ್ತೇ ಇತಿಹಾಸಮಾಚಷ್ಟತೇ । ಆಪ್ತ್ಯಸ್ಯ ಋಷೇಃ ತ್ರಯಃ ಪುತ್ರಾ ಬಭೂವುಃ ಏಕತೋ ದ್ವಿತಸ್ತ್ರಿತ ಇತಿ । ತೇ ಯಷ್ಟುಕಾಮಾಃ ಸ್ವಾನ್ ಯಾಜ್ಯಾನ್ ಗಾ ಯಯಾಚಿರೇ । ತಾ ಆದಾಯ ಸರಸ್ವತ್ಯಾಸ್ತೀರೇಣ ಪಥಾ ಗಚ್ಛತಃ ತಾನ್ ಪರಸ್ಮಿನ್ ಕೂಲೇ ನಿಷಣ್ಣೋ ರಾತ್ರೌ ವೃಕೋ ದದರ್ಶ। ದೃಷ್ಟ್ವಾ ಚೋತ್ಥಾಯ ಅಭಿಮುಖಃ ಸಾರಸ್ವತೀರಪ ಉತ್ತರನ್ ತಾಂಸ್ತ್ರಾಸಯಾಮಾಸ । ತೇಷಾಂ ಪಶ್ಯತಾಂ ತ್ರಿತೋ ನಿರ್ಜಲೇ ಪಾಂಸುಭಿಃ ವೀರುದ್ಭಿಃ ತೃಣೈಶ್ಚಾವೃತೇ ಮಹತ್ಯಂಧಕೂಪೇ ಪಪಾತ । ಏಕತದ್ವಿತೌ ತು ಸಹ ಗೋಭಿಃ ಗೃಹಂ ಜಗ್ಮತುಃ । ಅಥ ಕೂಪಸ್ಥಸ್ಯ ಇಯಂ ಚಿಂತಾ ಬಭೂವ । ಅಕೃತಸೋಮಯಾಗಸ್ಯ ಮೃತ್ಯೋರ್ನ ಶ್ರೇಯಸೇ । ತತ್ ಕಃ ಉಪಾಯಃ ಸ್ಯಾತ್ ಯೇನಾಹಮಿಹಸ್ಥಃ ಸೋಮಂ ಪಿಬೇಯಮಿತಿ । ಚಿಂತಯನ್ನೇವ ಯದೃಚ್ಛಯಾ ತತ್ರ ಲಂಬಮಾನಾಂ ವೀರುಧಂ ದದರ್ಶ । ತಾಂ ಸೋಮ ಇತಿ ಸಂಕಲ್ಪ್ಯ ಯೋಗೈಶ್ವರ್ಯಾತ್ ಮನಸಾ ಶಿಷ್ಟಾನಿ ಅಗ್ನ್ಯಾದೀನಿ ಸಾಧನಾನಿ ಪರಿಸಂಕಲ್ಪ್ಯ ಶರ್ಕರಾ ಗ್ರಾವ್ಣಃ ಕೃತ್ವಾ ತಾಭಿಸ್ತಾಂ ವೀರುಧಮಭಿಷುತ್ಯ ಯಾಗಾರ್ಥಂ ದೇವಾನ್ ಅಜುಹಾವ । ತಾ ಆಹ್ವಾನಕಾರಣಮನವಬುಧ್ಯಮಾನಾ ಆವಿಗ್ನಾ ಬಭೂವುಃ । ಅಥ ತದಾಹ್ವಾನಂ ಬೃಹಸ್ಪತಿಃ ಶುಶ್ರಾವ । ಸ ದೇವಾನುವಾಚ । ತ್ರಿತಸ್ಯ ವರ್ತತೇ ಯಜ್ಞಸ್ತತ್ರ ಗಚ್ಛಾವ ಇತಿ । ಅಥ ತತ್ರ ಸರ್ವೇ ದೇವಾ ಜಗ್ಮುಃ । ತಾನಾಗತಾನ್ ಕೂಪಾದುತ್ತಾರಣಾರ್ಥೀ ತ್ರಿತಃ ಕ್ರಮೇಣ ತುಷ್ಟಾವ ಚಂದ್ರಮಾ ಇತ್ಯಾದಿನೇತಿ ।

ಆಪ್ತ್ಯಋಷಿಗೆ ಏಕತ, ದ್ವಿತ ಮತ್ತು ತ್ರಿತ ಎಂಬ ಮೂವರು ಪುತ್ರರಿದ್ದರು. ಅವರು ಯಜ್ಞಮಾಡಬೇಕೆಂಬ ಆಸೆಯಿಂದ ಯಜ್ಞಪಶುಗಳನ್ನು ಯಾಚನೆಮಾಡಿಕೊಂಡು ಅವುಗಳೊಂದಿಗೆ ಸರಸ್ವತೀ ನದಿಯ ತೀರದ ಮಾರ್ಗದಿಂದ ಬರುತ್ತಿರುವಾಗ ಆಚೆ ದಡದಲ್ಲಿದ್ದ ಒಂದು ತೋಳನು ಇವರನ್ನು ನೋಡಿತು. ಒಡನೇ ಅದು ಎದ್ದು ನದಿಯ ನೀರನ್ನು ದಾಟಿಕೊಂಡು ಬಂದು ಇವರನ್ನು ಗದರಿಸಿತು ಅವರೆಲ್ಲರೂ ಪ್ರಾಣಭೀತಿಯಿಂದ ಗಾಬರಿಗೊಂಡಾಗ ತ್ರಿತನು ಧೂಳುಗಳಿಂದಲೂ ಲತೆಗಳಿಂದಲೂ, ಜೊಂಡುಗಳಿಂದಲೂ ಆವೃತವಾದ ಒಂದು ಅಗಾಧವಾದ ಭಾವಿಯೊಳಕ್ಕೆ ಬಿದ್ದುಬಿಟ್ಟನು. ಏಕತ ಮತ್ತು ದ್ವಿತರು ಹೇಗೋ ತಪ್ಪಿಸಿಕೊಂಡು ಗೋವುಗಳನ್ನು ಓಟ್ಟಿಕೊಂಡು ಮನೆಗೆ ಹೊರಟು ಹೋದರು ಆಗ ಕಗ್ಗತ್ತಲಿನಿಂದ ಆವೃತವಾದ ಬಾವಿಯಲ್ಲಿ ಬಿದ್ದಿದ್ದ ತ್ರಿತನು, 'ಸೋಮಯಾಗವನ್ನು ನೆರವೇರಿಸದೇ ಸತ್ತರೆ ಮನುಷ್ಯನಿಗೆ ಶ್ರೇಯಸ್ಸಿಲ್ಲ. ಈಗ ಯಾವ ಉಪಾಯದಿಂದ ಯಜ್ಞಮಾಡಿ ಸೋಮರಸವನ್ನು ಪಾನಮಾಡಲು ಸಾಧ್ಯವಾದೀತು' ಎಂದು ಯೋಚನೆಮಾಡತೊಡಗಿದನು. ಹಾಗೆ ಆಲೋಚಿಸುತ್ತಿರುವಲ್ಲಿಯೇ ಆಕಸ್ಮಿಕವಾಗಿ ಅಲ್ಲಿ ನೇತಾಡುತ್ತಿದ್ದ ಒಂದು ಬಳ್ಳಿಯನ್ನು ನೋಡಿದನು ಆನಂತರ ಅದೇ ಸೋಮಲತೆಯೆಂದು ನಿಶ್ಚಯಿಸಿ ತನ್ನ ಆಂತರಿಕವಾದ ಯೋಗಸಂಪತ್ತಿನಿಂದ ಆಂತಸ್ಥವಾದ ಅಗ್ನಿಯನ್ನು ಸಿದ್ಧಮಾಡಿ, ಆ ಲತೆಯನ್ನೂ ಹಿಂಡಿ ಯಾಗಾರ್ಥವಾಗಿ ದೇವತೆಗಳನ್ನು ಕರೆದನು. ಅವರು ಈ ಆಹ್ವಾನಕಾರಣವನ್ನು ತಿಳಿಯದೆ ಚಿಂತಿಸತೊಡಗಿದರು ಆಗ ಬೃಹಸ್ಪತಿಯು ಆ ಆಹ್ವಾನವನ್ನು ಕೇಳಿ, ದೇವತೆಗಳನ್ನು ಕುರಿತು 'ತ್ರಿತನ ಯಜ್ಞವು ನೆರವೇರು

ತ್ತಿದೆ. ನಾವೆಲ್ಲರೂ ಅಲ್ಲಿಗೆ ಹೋಗೋಣ ' ಎಂದನು. ಅನಂತರ ಅಲ್ಲಿಗೆ ಎಲ್ಲರೂ ಹೋದರು. ಆಗ ತ್ರಿತನು ಬಾವಿಯಿಂದ ಮೇಲಕ್ಕೆ ಬರಬೇಕೆಂಬ ಆಸೆಯಿಂದ ಅಲ್ಲಿ ಬಂದಿದ್ದ ದೇವತೆಗಳನ್ನು ಒಬ್ಬೊಬ್ಬರನ್ನಾಗಿ ಸ್ತುತಿಸತೊಡ ಗಿದನು ಎಂದು ಸ್ಕಂದಸ್ವಾಮಿಗಳ ಭಾಷ್ಯದಲ್ಲಿರುವ ಕಥಾಕ್ರಮವು ಈ ರೀತಿಯಲ್ಲಿದೆ.

ಬೃಹದ್ದೇವತೆಯಲ್ಲಿಯೂ ಸಹ ಈ ಕಥೆಯು ಉಕ್ತವಾಗಿದೆ. ಅದರಲ್ಲೂ ಸಹ ತೋಳನ ಬೆದರಿಕೆಯಿಂದಲೇ ತ್ರಿತನು ಬಾವಿಗೆ ಬಿದ್ದನೆಂದೂ ಅನಂತರ ಅವನು ದೇವತಾಸ್ತುತಿಯನ್ನು ಮಾಡಿದನೆಂದೂ ಹೇಳಿದೆ.

ತ್ರಿತಂ ಗಾಸ್ತ್ವನುಗಚ್ಛಂತಂ ಕ್ರೂರಾಃ ಸಾಲಾವೃಕೀಸುತಾಃ ।
ಕೂಪೇ ಪ್ರಕ್ಷಿಪ್ಯ ಗಾಃ ಸರ್ವಾಸ್ತತ ಏವಾಪಜಹ್ರಿರೇ ॥

ಸ ತತ್ರ ಸುಷುವೇ ಸೋಮಂ ಮಂತ್ರವಿನ್ಮಂತ್ರವಿತ್ತಮಃ ।
ದೇವಾಂಶ್ಚಾವಾಹಯತ್ಸರ್ವಾಂಸ್ತಚ್ಚುಶ್ರಾವ ಬೃಹಸ್ಪತಿಃ ॥

ಅಗಚ್ಛತೋಽಥ ತಾನ್ದೃಷ್ಟ್ವಾ ಕ್ವ ವಸತ್ಯಸ್ಯ ತತ್ತ್ವತಃ ।
ಸರ್ವದೃಕ್ತ್ವಂ ಚ ವರುಣಸ್ಯಾರ್ಯಮ್ಣಶ್ಚೇತ್ಯುಪಾಲಭತ್ ॥

ಕೂಪೇಷ್ವಕಾಭಿರ್ವರ್ಣೇತಾನ್ಯಂಗಾನ್ಯೇವಾಭವನ್ಮಮ।
ದೃಷ್ಟ್ವಾ ಸರ್ವಾನಹಂ ಸ್ತೌಮಿ ಯದ್ಯಪ್ಯೇಕೋ ನ ಪಶ್ಯತಿ ॥

ಬೃಹಸ್ಪತಿಪ್ರಚೋದಿತಾ ವಿಶ್ವೇ ದೇವಗಣಾಸ್ತ್ರಯಃ ।
ಜಗ್ಮುಸ್ತ್ರಿತಸ್ಯ ತಂ ಯಜ್ಞಂ ಭಾಗಾಂಶ್ಚ ಜಗೃಹುಃ ಸಹ ॥

ಬೃಹಸ್ಪತಿಸ್ತ್ರಿತಸ್ಯೈತದ್ ಜ್ಞಾನಂ ವಿಜ್ಞಾನಮೇವ ಚ ।
ತೃಚೇನಾಂತ್ಯೇನ ಸೂಕ್ತಸ್ಯ ಜಗಾದರ್ಷಿರಸಾವಿತಿ ॥

(ಬೃ. ದೇ. ೩-೧೩೨ ರಿಂದ ೧೩೭)

ಕ್ರೂರಸ್ವಭಾವವುಳ್ಳ ಆ ತೋಳನ ಮರಿಗಳು ತ್ರಿತನನ್ನು ಬಾವಿಗೆ ತಳ್ಳಿ ಅವನ ಗೋವುಗಳನ್ನು ಅಲ್ಲಿಂದ ಕಸಿದುಕೊಂಡು ಹೊರಟುಹೋದವು. ಆಗ ಮಂತ್ರವಿತ್ತುಗಳಲ್ಲೆಲ್ಲಾ ಶ್ರೇಷ್ಠನಾದ ಮಂತ್ರವಿತ್ತಾದ ತ್ರಿತನು ಸೋಮರಸವನ್ನು ಹಿಂಡಿ ದೇವತೆಗಳನ್ನು ಕರೆದನು. ಬೃಹಸ್ಪತಿಯು ಈ ಆಹ್ವಾನವನ್ನು ಕೇಳಿ ಸಕಲ ದೇವತೆಗಳೊಡನೆಯೂ ಕೂಡಿಕೊಂಡು ಬಂದನು. ಅವರು ಬಂದೊಡನೆಯೇ ಒಂದು ವಿಧವಾದ ಅಸಮಾಧಾನದಿಂದ ಈ ವರುಣನ ಮತ್ತು ಆರ್ಯಮನ ಸರ್ವ ದೃಕ್ತ್ವ (ಎಲ್ಲವನ್ನೂ ನೋಡತಕ್ಕ ಶಕ್ತಿ) ಈಗೆಲ್ಲಿ ಹೋಯಿತು ? ಈ ಬಾವಿಯ ಇಟ್ಟಿಗೆಯಿಂದ ನನ್ನ ಅಂಗಗಳೆಲ್ಲವೂ ಗಾಯವಾಗಿವೆ. ನಾನು ಅವರನ್ನೆಲ್ಲಾ ನೋಡುತ್ತಾ ಸ್ತುತಿಸುತ್ತಿದ್ದರೂ ಸಹ ನನ್ನನ್ನು ಅವರಲ್ಲೊಬ್ಬರೂ ನೋಡು ವುದಿಲ್ಲವಲ್ಲಾ ಎಂಬ ಪರಿತಾಪದಿಂದ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದನು. ಆಗ ಬೃಹಸ್ಪತಿಯಿಂದ ಪ್ರಚೋದಿತ ರಾದ ಸರ್ವ ದೇವತೆಗಳೂ ಸಹ ಆ ಯಜ್ಞಕ್ಕೆ ಹೋಗಿ ತಮ್ಮ ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸಿದರು. ಅನಂತರ ಬೃಹಸ್ಪತಿಯು ತ್ರಿತನ ಜ್ಞಾನವನ್ನೂ ವಿಜ್ಞಾನವನ್ನೂ ಶ್ಲಾಘಿಸಿದನು. ಇದು ಬೃಹದ್ದೇವತೆಯಲ್ಲಿ ಉಕ್ತವಾಗಿರುವ ಕಥೆ.

ಹಿಂದೆ ಯಾಗಾರ್ಥವಾಗಿ ಸೋಮರಸವನ್ನು ಹಿಂಡುವಾಗಲೆಲ್ಲಾ ನಿಮಗೆ ಪ್ರೀತಿಕರವಾದ ಸ್ತೋತ್ರಗಳನ್ನು ಪಠಿ ಸುತ್ತಿದ್ದ ತ್ರಿತನೇ ನಾನು ಎಂದು ದೇವತೆಗಳಿಗೆ ತಾನು ಹಿಂದೆ ಅವರನ್ನು ಆರಾಧಿಸುತ್ತಿದ್ದುದನ್ನೂ ಅವರಿಗೆ ಹರ್ಷದಾ

ಯಕನಾಗಿದ್ದುದನ್ನೂ ಜ್ಞಾಪಿಸುತ್ತಾನೆ. ಸೋಮರಸವನ್ನು ಹಿಂಡುವುದರಲ್ಲಿಯೂ, ಸ್ತುತಿರೂಪವಾದ ಮಂತ್ರಗಳನ್ನು ಪರಿಸುವುದರಲ್ಲಿಯೂ ತ್ರಿತನು ಅತ್ಯಂತ ಪ್ರಸಿದ್ಧನೆಂದು ಅನೇಕ ಆಧಾರಗಳಿಂದ ತಿಳಿಯುತ್ತದೆ.

ಸ ತತ್ರ ಸುಷುವೇ ಸೋಮಂ ಮಂತ್ರವಿನ್ಮಂತ್ರವಿತ್ತಮಃ ।

(ಬೃ. ದೇ. ೩.೧೫೩)

ಮಂತ್ರವಿತ್ತುಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದ ತ್ರಿತನು ಸೋಮರಸವನ್ನು ಹಿಂಡಿ ಯಾಗಕ್ಕೆ ಸಿದ್ಧನಾದನೆಂದ ಬೃಹದ್ದೇವತೆಯಲ್ಲಿ ಅವನ ಮಹಿಮೆಯನ್ನು ವರ್ಣಿಸಿ, ಈ ಮಹತ್ತ್ವಪೂರಿತವಾದ ಯೋಗ್ಯತೆಯನ್ನು ಅವನು ಪ್ರಕಾ ಪಡಿಸಿದುದರಿಂದಲೇ ಬೃಹಸ್ಪತಿಯು ಅವನ ಪರಿದೇವನಾಕಾಲದಲ್ಲಿ.

ಬೃಹಸ್ಪತಿಸ್ತ್ರಿತಸ್ಯೈತದ್ ಜ್ಞಾನಂ ವಿಜ್ಞಾನಮೇವ ಚ ।
ತೃಚೇನಾಂತ್ಯೇನ ಸೂಕ್ತಸ್ಯ ಜಗಾದರ್ಷಿರಸಾವಿತಿ ।

(ಬೃ. ದೇ. ೨.೧೩೭)

ಜ್ಞಾನದಿಂದಲೂ ವಿಜ್ಞಾನಪ್ರಭಾವದಿಂದಲೂ ಪೂರಿತವಾದ ಅವನ ಸ್ತುತಿಯನ್ನು ಒಡನೆಯೇ ತಿಳಿದುಕೊಂಡು ಇತ ಋಷಿಗಳಿಗೂ ಆ ಋಷಿಯ ಮಹತ್ತ್ವಪೂರಿತವಾದುದೂ ಸ್ತುತಿಯಿಂದ ಕೂಡಿದುದೂ ಆದ ಮಾನಸಿಕವಾದ ಯಜ್ಞ ವಿಷಯವನ್ನು ತಿಳಿಸಿದನೆಂದು ಹೇಳಿದೆ. ಸ್ಕಂದಸ್ವಾಮಿಗಳ ಭಾಷ್ಯದಲ್ಲೂ ಸಹ ಅವನ **ಯೋಗೈಶ್ವರ್ಯದ** ಮಹಿಮೆ ಯನ್ನು ತಿಳಿಸಿದೆ. ಇಂತಹ ಶ್ರೇಷ್ಠವಾದ ಯೋಗ್ಯತೆಯುಳ್ಳ ತ್ರಿತನು ಒಂದೆಲ್ಲಾ ಸೋಮರಸವನ್ನು ಹಿಂಡಿ ಯಾ ಮಾಡಿದುದೂ, ಆ ಕಾಲದಲ್ಲಿ ಅತ್ಯತಿಶಯವಾದ ಸ್ತೋತ್ರಗಳನ್ನು ಪರಿಸಿದುದೂ ಋಕ್ಸಂಹಿತೆಯಲ್ಲಿಯೇ ವರ್ಣಿ ಲ್ಪಟ್ಟಿದೆ. ಉದಾಹರಣೆಗೆ—

ಆದೀಂ ತ್ರಿತಸ್ಯ ಯೋಷಣೋ ಹರಿಂ ಹಿನ್ವಂತ್ಯದ್ರಿಭಿಃ ।

(ಋ. ಸಂ. ೯-೩೨-೨)

ಭುವಸ್ತ್ರಿತಸ್ಯ ಮಜ್ಮ್ಯೋ ಭುವದಿಂದ್ರಾಯ ಮತ್ಸರಃ ।

(ಋ ಸಂ ೯-೩೪-೪)

ಇತ್ಯಾದಿ ಋಕ್ಕುಗಳಲ್ಲಿ ತ್ರಿತನು ಹಿಂಡಿದ ಸೋಮರಸವು ಇಂದ್ರನಿಗೆ ಹರ್ಷದಾಯಕವಾಗಿ ಅವನ ಪ್ರಭಾವವನ ಹೆಚ್ಚಿಸಿತೆಂದೂ,

ಸ ತ್ರಿತಸ್ಯಾಧಿ ಸಾನವಿ ಪವಮಾನೋ ಅಶೋಚಯತ್ । ಜಾಮಿಭಿಃ ಸೂರ್ಯಂ ಸಹ ॥

(ಋ ಸಂ. ೯-೩೭-೪)

ಇತ್ಯಾದಿ ಋಕ್ಕುಗಳಲ್ಲಿ ತ್ರಿತನ ಯಜ್ಞಕಾಲದಲ್ಲಿ ಹಿಂಡಿ ಪವಿತ್ರಗಳಾದ ಸೋಮಗಳು ಸೂರ್ಯನನ್ನು ಅತಿಶಯವಾ ಪ್ರಕಾಶಿಸುವಂತೆ ಮಾಡಿದವು ಎಂದೂ,

ಅಸ್ಯ ಸುವಾನಸ್ಯ ಮಂದಿನಸ್ತ್ರಿತಸ್ಯ ನ್ಯರ್ಬುದಂ ವಾವೃಧಾನೋ ಅಸ್ತಃ ।
ಅವರ್ತಯತ್ಸೂರ್ಯೋ ನ ಚಕ್ರಂ ಭಿನದ್ವಲಮಿಂದ್ರೋ ಅಂಗಿರಸ್ವಾನ್ ॥

(ಋ. ಸಂ. ೨-೧೧ ೨೦)

ಅನು ತ್ರಿತಸ್ಯ ಯುಧ್ಯತಃ ಶುಷ್ಮಮಾವನ್ವತ ಕ್ರತುಂ । ಅನ್ವಿಂದ್ರಂ ವೃತ್ರತೂರ್ಯೇ ॥
(ಋ. ಸಂ. ೮-೭-೨೪)

ಇತ್ಯಾದಿ ಋಕ್ಕುಗಳಲ್ಲಿ ತ್ರಿತನ ಸ್ತೋತ್ರದಿಂದಲೂ, ಅವನು ಅರ್ಪಿಸಿದ ಸೋಮರಸಪಾನದಿಂದಲೂ ಹರ್ಷಿತನಾದ ಇಂದ್ರನು ಅತಿಶಯವಾದ ಪ್ರಭಾವನ್ನು ಪಡೆದು ಅಸುರರನ್ನು ನಾಶಮಾಡಲು ಶಕ್ತನಾದನೆಂದೂ, ಮರುತ್ತುಗಳೂ, ಇಂದ್ರನೂ ಸಹ ತ್ರಿತನ ಶಕ್ತಿಯ ಸಹಾಯದಿಂದಲೇ ವೃತ್ರಾದಿ ವಧವನ್ನು ಮಾಡಲು ಶಕ್ತರಾದರೆಂದೂ ಸಹ ಬಹಳ ವಾಗಿ ವರ್ಣಿಸಿದೆ. ಹೀಗೆ ಹಿಂದೆಲ್ಲಾ ತಾನು ದೇವತೆಗಳಿಗೆ ತೃಪ್ತಿಪಡಿಸಿದುದನ್ನೂ ಅನೇಕ ವಿಧವಾಗಿ ಸಹಾಯ ಮಾಡಿದುದನ್ನೂ ಸಹ ಈಗ ಜ್ಞಾಪಿಸಿ ತಾನು ಕಷ್ಟಕ್ಕೆ ಸಿಕ್ಕಿಕೊಂಡಾಗ ತನಗೆ ಅವರು ಸಹಾಯಮಾಡಬೇಕೆಂದೂ ಪ್ರಾರ್ಥಿಸಿದ್ದಾನೆ.

ಋ. ಸಂ. ೧-೧೦೫-೮ ನೇ ಋಕ್ಕಿಗೆ ನಿರುಕ್ತಕಾರರು ಈ ರೀತಿ ವ್ಯಾಖ್ಯಾನಮಾಡಿದ್ದಾರೆ.

ಸಂತಪಂತಿ ಮಾಮಭಿತಃ ಸಪತ್ನ್ಯ ಇವೇಮಾಃ ಪರ್ಶವಃ ಕೂಪಪರ್ಶವೋ ಮೂಷಿಕಾ ಇವಾಸ್ನಾತಾನಿ ಸೂತ್ರಾಣಿ ವ್ಯದಂತಿ । ಸ್ತ್ಯಂಗಾಭಿಧಾನಂ ನಾ ಸ್ಯಾಚ್ಛಿಶ್ನಾನಿ ವ್ಯದಂತೀತಿ ವಾ ಸಂತಪಂತಿ ಮಾಧ್ಯಃಕಾಮಾಃ 'ಸ್ತೋತಾರಂ ತೇ ಶತಕ್ರತೋ', 'ವಿತ್ತಂ ಮೇ ಅಸ್ಯ ರೋದಸೀ' ಜಾನೀತಂ ಮೇऽಸ್ಯ ದ್ಯಾವಾಪೃಥಿವ್ಯಾವಿತಿ । ತ್ರಿತಂ ಕೂಪೇऽವಹಿತಮೇತ್ಸೂಕ್ತಂ ಪ್ರತಿಬಭೌ । ತತ್ರ ಬ್ರಹ್ಮೇತಿಹಾಸಮಿಶ್ರಮೃಜ್ಮಿಶ್ರಂ ಗಾಥಾಮಿಶ್ರಂ ಭವತಿ । ತ್ರಿತಸ್ತೀರ್ಣತನೋ ಮೇಧಯಾ ಬಭೂವ ಅಪಿ ವಾ ಸಂಖ್ಯಾನಾಮೈವಾಭಿಪ್ರೇತಂ ಸ್ಯಾದೇಕತೋ ದ್ವಿತಸ್ತ್ರಿತ ಇತಿ ತ್ರಯೋ ಬಭೂವುಃ । (ನಿ. ೪-೬).

ಸುತ್ತಲೂ ಸವತಿಯರು ಮುತ್ತುಕೊಂಡು ಗಂಡನನ್ನು ಪೀಡಿಸುವಂತೆಯೂ, ಇಲಿಗಳು ತೈಲದಲ್ಲಿ ಅದ್ದಿದ ನೂಲನ್ನು ಕಚ್ಚುವಂತೆಯೂ ಈ ಬಾವಿಯ ಗೋಡೆಗಳ ಇಟ್ಟಿಗೆಗಳು ನನ್ನನ್ನು ಸುತ್ತಲೂ ಮುತ್ತಿಕೊಂಡು ಹಿಂಸಿಸುತ್ತಿದೆ. ಅಥವಾ ಶಿಶ್ನವೆಂಬ ಶಬ್ದಕ್ಕೆ ತಮ್ಮ ಶಿಶ್ನವೆಂಬ ಅಂಗವೇ ಆದರೂ ಸಹ ಮೂಷಿಕಗಳು ಅವನ್ನೇ ಕಚ್ಚುವಂತೆ ನನ್ನ ಮನೋವ್ಯಾಧಿಗಳು ನನ್ನನ್ನು ಕಚ್ಚಿ ತಿನ್ನುತ್ತಿವೆ. ಎಲೈ ಶತಕ್ರತುವಾದ ಇಂದ್ರನೇ, ನಿನ್ನ ಸ್ತೋತೃವಾದ ನನ್ನನ್ನೂ ಸಹ ಈ ರೀತಿ ನನ್ನ ಮಾನಸಿಕವ್ಯಥೆಗಳು ಹಿಂಸಿಸುತ್ತಿವೆ ಎಲೈ ದ್ಯಾವಾಪೃಥಿವಿಗಳೇ, ನನ್ನ ಈ ವೇದನೆಯನ್ನು ತಿಳಿಯಿರಿ ಎಂದು ಈ ಋಕ್ಕನ್ನು ವಿವರಿಸಿ ಅನಂತರ ವಿಶೇಷವಿಷಯಗಳನ್ನು ತಿಳಿಸುತ್ತಾರೆ ಈ ಸೂಕ್ತವು ಬಾವಿಯಲ್ಲಿ ಬಿದ್ದಿದ್ದ ತ್ರಿತನಿಂದ ದೃಷ್ಟವಾಯಿತು. ಇದಕ್ಕೆ ಸಂಬಂಧಿಸಿದಂತೆ ಗಾಥೆಯಿಂದ ಕೂಡಿದುದೂ, ಋಕ್ಕಿನಿಂದ ಕೂಡಿದುದೂ ಆದ ಒಂದು ಇತಿಹಾಸವಿದೆ. ತ್ರಿತನು ವ್ರಾಜ್ಞರಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದವನು ಅಥವಾ ಕ್ರಮಕ್ರಮವಾಗಿ ಉತ್ಪನ್ನರಾದ ಏಕತ, ದ್ವಿತ ಮತ್ತು ತ್ರಿತ ಈ ಮೂವರಲ್ಲಿ ಕೊನೆಯವನನ್ನು ಸೂಚಿಸುವ ಸಂಖ್ಯಾವಾಚಕವಾಗಿರಲೂಬಹುದು, ಎಂದು ನಿರುಕ್ತಕಾರರು ವಿವರಿಸಿದ್ದಾರೆ. ಈ ಋಕ್ಕುಗಳು ಈ ಅಭಿಪ್ರಾಯವನ್ನೇ ಸೂಚಿಸುತ್ತವೆ —

ಸಂ ಮಾ ತಪಂತ್ಯಭಿತಃ ಸಪತ್ನೀರಿವ ಪರ್ಶವಃ ।
ನಿ ಬಾಧತೇ ಅಮತಿರ್ನಗ್ನತಾ ಜಸುರ್ವೇರ್ನ ವೇವೀಯತೇ ಮತಿಃ ॥
ಮೂಷೋ ನ ಶಿಶ್ನಾ ವ್ಯದಂತಿ ಮಾಧ್ಯಃ ಸ್ತೋತಾರಂ ತೇ ಶತಕ್ರತೋ ।
ಸಕೃತ್ಸು ನೋ ಮಘವನ್ನಿಂದ್ರ ಮೃಳಯಾಧಾ ಪಿತೇವ ನೋ ಭವ ॥
(ಋ. ಸಂ. ೧೦-೩೩-೨-೩)

ಹತ್ತನೆಯ ಮಂಡಲವು.

ಮೊದಲನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ದಶಮೇ ಮಂಡಲೇ ದ್ವಾದಶಾನುವಾಕಾಃ । ತತ್ರ ಪ್ರಥಮಾನುವಾಕೇ ಷೋಡಶ ಸೂಕ್ತಾನಿ ತತ್ರಾಗ್ನೇ ಬೃಹನ್ನಿತಿ ಸಪ್ತರ್ಚಂ ಪ್ರಥಮಂ ಸೂಕ್ತಂ । ಆಪ್ತ್ಯಸ್ಯ ತ್ರಿತಸ್ಯಾರ್ಷಂ । ಅನಾದೇಶಪರಿಭಾಷಯಾ ತ್ರಿಷ್ಟುಪ್ । ಮಂಡಲಾದಿಪರಿಭಾಷಯಾಗ್ನಿರ್ದೇವತಾ । ತಥಾ ಚಾನುಕ್ರಮ್ಯತೇ । ಅಗ್ನೇ ಸಪ್ತ ತ್ರಿತ ಇತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರಾಗ್ನೇಯೇ ಕ್ರತೌ ತ್ರೈಷ್ಟುಭೇ ಛಂದಸೀದಮಾದೀನ್ಯಷ್ಟ ಸೂಕ್ತಾನ್ಯಷ್ಟಮಸ್ಯಾಂತ್ಯಾಸ್ತಿಸ್ರೋ ವರ್ಜಯಿತ್ವಾ । ಸೂತ್ರ್ಯತೇ ಹಿ । ಅಗ್ನೇ ನಯಾಗ್ನೇ ಬೃಹನ್ನಿತ್ಯಷ್ಟಾನಾಮುತ್ತಮಾದುತ್ತಮಾಸ್ತಿಸ್ರ ಉದ್ಧರೇದಿತಿ ತ್ರೈಷ್ಟುಭಂ । ಆ. ೪.೧೩ । ಇತಿ । ಪ್ರಾತರನುವಾಕನ್ಯಾಯೇನ ತಸ್ಯೈವ ಸಮಾಮ್ನಾಯಸ್ಯ ಸಹಸ್ರಾವನುಮೋದೇತೋಃ ಶಂಸೇತ್ । ಆ. ೭-೫ । ಇತಿ ಚ ಹೋಮಾರ್ಥಂ ಪ್ರಣೀತ ಆಹವನೀಯೇ ಪ್ರಾಗ್ಪೋಮಾದುಪಶಾಂತೇ ಜ್ಯೋತಿಷ್ಮದ್ಭಣಕಾಗ್ನಿದೇವತಾಕಾಚಿದಿಷ್ಟಿಃ । ತತ್ರಾದ್ಯಾ ಯಾಜ್ಯಾ । ಸೂತ್ರಿತಂ ಚ । ಇಷ್ಟಿರಗ್ನಿರ್ಜ್ಯೋತಿಷ್ಮಾನ್ವರುಣ ಉದಗ್ನೇ ಶುಚಯಸ್ತ್ವಾಗ್ನೇ ಬೃಹನ್ನುಷಸಾಮೂರ್ಧ್ವೋ ಅಸ್ಥಾತ್ । ಆ. ೩-೧೨ । ಇತಿ ॥ ಉಪಾಕರಣೋತ್ಸರ್ಜನಯೋರ್ಮಂಡಲಾದಿಹೋಮೇಽಪ್ಯೇಷಾ । ಸೂತ್ರಮುದಾಹೃತಂ ॥

ಅನುವಾದವು—ಹತ್ತನೆಯ ಮಂಡಲದಲ್ಲಿ ಹನ್ನೆರಡು ಅನುವಾಕಗಳಿರುವವು. ಮೊದಲನೆಯ ಅನುವಾಕದ ಹದಿನಾರು ಸೂಕ್ತಗಳಿರುವವು. ಅವುಗಳಲ್ಲಿ **ಅಗ್ನೇ ಬೃಹನ್** ಎಂಬ ಈ ಸೂಕ್ತವು ಮೊದಲನೆಯದು. ಇದರ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ತ್ರಿತ ಆಪ್ತ್ಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಗ್ನೇ ಸಪ್ತ ತ್ರಿತಃ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠಕಾಲದಲ್ಲಿ ಅಗ್ನೇಯ ಕ್ರತುಸಂಬಂಧವಾದ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳಿಗಾಗಿ ಈ ಮಂಡಲದ ಮೊದಲಿನ ಎಂಟು ಸೂಕ್ತಗಳ—ಎಂಟನೆಯ ಸೂಕ್ತದ ಕೊನೆಯ ಮೂರು ಋಕ್ಕುಗಳನ್ನು ಬಿಟ್ಟು—ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ—**ಅಗ್ನೇ ನಯಾಗ್ನೇ ಬೃಹನ್ನಿತ್ಯಷ್ಟಾನಾಮುತ್ತಮಾದುತ್ತಮಾಸ್ತಿಸ್ರ ಉದ್ಧರೇದಿತಿ ತ್ರೈಷ್ಟುಭಂ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು ಮತ್ತು ಈ ವಿಷಯದಲ್ಲಿ—**ಪ್ರಾತರನುವಾಕನ್ಯಾಯೇನ ತಸ್ಯೈವ ಸಮಾಮ್ನಾಯಸ್ಯ ಸಹಸ್ರಾವನುಮೋದೇತೋಃ ಶಂಸೇತ್** ಎಂಬ ಆಶ್ವಲಾಯನ ಶ್ರೌತಸೂತ್ರವೂ (ಆ. ೭-೫) ಇರುವುದು. ಹೋಮಾರ್ಥವಾಗಿ ಆಹವನೀಯಾಗ್ನಿಯನ್ನು ತಂದು ಪ್ರತಿಷ್ಠಿಸಿದ ಮೊದಲ ಹೋಮಾನಂತರ ಜ್ಯೋತಿಷ್ಮದ್ಭಣಕಾಗ್ನಿ ಎಂಬ ದೇವತೆಯನ್ನುದ್ದೇಶಿಸಿ ಒಂದು ಇಷ್ಟಿಯನ್ನು ಮಾಡಬೇಕ ಆ ಇಷ್ಟಿಯಲ್ಲಿ ಈ ಸೂಕ್ತದ ಮೊದಲನೆಯ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಇಷ್ಟಿರಗ್ನಿರ್ಜ್ಯೋತಿಷ್ಮಾನ್ ವರುಣ ಉದಗ್ನೇ ಶುಚಯಸ್ತ್ವಾಗ್ನೇ ಬೃಹನ್ನುಷಸಾಮೂರ್ಧ್ವೋ ಅಸ್ಥಾತ್** ಎಂಬ ಸೂತ್ರದಿಂದ (ಆ. ೩-೧೨) ವಿವೃತವಾಗಿರುವುದು ಮತ್ತು ಉಪಾಕರಣ ಉತ್ಸರ್ಜನ ಕರ್ಮಗಳ ಪ್ರಧಾನ ಹೋಮಗಳಲ್ಲಿ ಮಂಡಲಾದಿ ಋಕ್ಕುಗಳಿಗಾಗಿ ಈ ಸೂಕ್ತಕ ಮೊದಲನೆಯ ಋಕ್ಕಿ ವಿನಿಯೋಗವಿರುವುದೆಂದು ಸೂತ್ರೋದಾಹರಣೆಯನ್ನು ಹಿಂದೆಯೇ ತಿಳಿಸಲಾಗಿದೆ.

सूक्त—१

मंडल—१० । अनुवाक—१ । सूक्त—१ ।
अष्टक—५ । अध्याय—४ । वर्ग—१९ ।
सूक्तदल्लिरुव ऋक्संख्ये—५ ।
ऋषिः—त्रितआप्त्यः ॥
देवता—अग्निः ।
छंदः—त्रिष्टुप् ॥

। संहितापाठः ।

अग्रे बृहन्नुषसामूर्ध्वो अस्थान्निर्जगन्वान्तमसो ज्योतिषागात् ।
अग्निर्भानुना रुशता स्वंग आ जातो विश्वा सदान्यप्राः ॥१॥

। पदपाठः ।

अग्रे । बृहन् । उषसाम् । ऊर्ध्वः । अस्थात् । निःऽजगन्वान् । तमसः । ज्योतिषा ।
आ । अगात् ।

अग्निः । भानुना । रुशता । स्वऽअंगः । आ । जातः । विश्वा । सदान्नि । अप्राः ॥ १ ॥

॥ सायणभाष्यं ॥

बृहन्महानेषोऽग्निरुषसामग्रे उषसामुपर्युषःकाल ऊर्ध्वः प्रज्वलितः सञ्ज्वालारूपेणास्थात् । तिष्ठति । ततस्तमसः । रात्रिनामैतत् । रात्रेर्निर्जगन्वान्निर्गतः ॥ गमेः क्वसावित्यभावे रूपम् ॥ निर्गतो निष्क्रान्तवान् सोऽग्निर्ज्योतिषा स्वीयेन तेजसा लक्षितः सन्नागात् । गार्हपत्यादिध्रियमाण आहवनीयं प्रत्यागच्छति । अनन्तरं स्वंगः शोभनज्वालावयवो जातः कर्मार्थं समुत्पन्न एषोऽग्नी रुशता ॥ रोचितेर्ज्वलतिकर्मण इदं रूपम् ॥ आरोचमानेन । यद्वा । रुशतिर्हिंसार्थः । तमसां हिंसकेन । भानुना तेजसा विश्वा सदान्नि सर्वाल्लोकान् यद्वा सदनानि यज्ञगृहाण्याप्राः । आपूरयति॥ प्रा पूरणे । तिभां तिजिरो भवंतीति तिपः सिबादेशः ॥ अत्र वाजसनेयकं । अग्रे बृहन्नुषसामूर्ध्वो अस्थादित्यग्रे ह्येष बृहन्नुषसामूर्ध्वस्तिष्ठति । निर्जगन्वान्तमसो ज्योतिषागादिति निर्जगन्वा-

ನ್ಯಾಶ್ರೇಸ್ತಮಸೋ ಜ್ಯೋತಿಷೈತಿ । ಅಗ್ನಿರ್ಭಾನುನಾ ರುಶತಾ ಸ್ವಂಗ ಇತ್ಯಗ್ನಿರ್ವಾ ಏಷ ಭಾನುನಾ ರುಶತಾ ಸ್ವಂಗ ಆ ಜಾತೋ ವಿಶ್ವಾ ಸದ್ಮಾನ್ಯಪ್ರಾ ಇತೀಮೇ ವೈ ಲೋಕಾ ವಿಶ್ವಾ ಸದ್ಮಾನಿ ತಾನೇಷ ಜಾತ ಆಪೂರಯತಿ । ಶತ. ೬-೭-೩-೧೦ । ಇತಿ ॥

॥ ಪ್ರತಿಪದಾರ್ಥ ॥

ಬೃಹನ್—ಮಹಾತ್ಮನಾದ ಅಗ್ನಿಯು । **ಉಷಸಾಂ ಅಗ್ರೇ**—ಉಷಸ್ಸುಗಳ ಆವಿರ್ಭಾವಕಾಲದಲ್ಲೇ । **ಊರ್ಧ್ವಃ ಅಸ್ಥಾತ್**—ಪ್ರಜ್ವಲಿತನಾಗಿ ಮೇಲೆದ್ದು ನಿಂತಿದ್ದಾನೆ । **ತಮಸಃ**—ಕತ್ತಲುಳ್ಳ ರಾತ್ರಿಯಿಂದ । **ನಿರ್ಜಗನ್ವಾನ್**—ಹೊರಕ್ಕೆ ಬಂದವನಾಗಿ । **ಜ್ಯೋತಿಷಾ**—ತನ್ನ ಕಾಂತಿಯಿಂದೊಡಗೂಡಿ । **ಅಗಾತ್**—ಹೊರಬಂದಿದ್ದಾನೆ । **ಸ್ವಂಗಃ**—ಉತ್ತಮವಾದ ಅವಯವಗಳುಳ್ಳವನೂ । **ಜಾತಃ**—ಯಜ್ಞಾರ್ಥವಾಗಿ ಉತ್ಪನ್ನನಾದವನೂ ಆದ । **ಅಗ್ನಿಃ**—ಅಗ್ನಿಯು । **ರುಶತಾ**—ಪ್ರಕಾಶಮಾನವಾದ । **ಭಾನುನಾ**—ತೇಜಸ್ಸಿನಿಂದ । **ವಿಶ್ವಾ ಸದ್ಮಾನಿ**—ಸಕಲ ಯಜ್ಞಗೃಹಗಳನ್ನೂ । **ಅಪ್ರಾಃ**—ತುಂಬುತ್ತಾನೆ.

॥ ಭಾವಾರ್ಥ ॥

ಮಹಾತ್ಮನಾದ ಅಗ್ನಿಯು ಉಷಸ್ಸುಗಳ ಆವಿರ್ಭಾವಕಾಲದಲ್ಲಿಯೇ ಪ್ರಜ್ವಲಿತನಾಗಿ ಮೇಲೆದ್ದು ನಿಂತಿದ್ದಾನೆ. ಕತ್ತಲುಳ್ಳ ರಾತ್ರಿಯಿಂದ ಹೊರಹೊರಟು ತನ್ನ ಕಾಂತಿಯಿಂದೊಡಗೂಡಿ ಹೊರಬಂದಿದ್ದಾನೆ. ಉತ್ತಮವಾದ ಅವಯವಗಳುಳ್ಳವನೂ ಯಜ್ಞಾರ್ಥವಾಗಿ ಉತ್ಪನ್ನನಾದವನೂ ಆದ ಅಗ್ನಿಯು ಪ್ರಕಾಶಮಾನವಾದ ತೇಜಸ್ಸಿನಿಂದ ಸಕಲ ಲೋಕಗಳನ್ನು ಅಥವಾ ಯಜ್ಞಗೃಹಗಳನ್ನೂ ತುಂಬುತ್ತಾನೆ.

English Translation

The great fire at the beginning of the dawn has sprung aloft, and issuing forth from the darkness has come with radiance Agni, the bright-bodied, as soon as born, fills all dwellings with shining light.

॥ ವಿಶೇಷವಿಷಯಗಳು ॥

ಬೃಹನ್ ಉಷಸಾಂ ಅಗ್ರೇ ಊರ್ಧ್ವಃ ಅಸ್ಥಾತ್—ಬೃಹತ್ ಶಬ್ದಕ್ಕೆ ಎರಡು ಅರ್ಥಗಳನ್ನು ಹೇಳಬಹುದು. ದೊಡ್ಡದಾದ ಆಕಾರದಿಂದ ಮೇಲೆಕ್ಕೆದ್ದು ಅನೇಕ ಜ್ವಾಲೆಗಳಿಂದ ಕೂಡಿ ಪ್ರಕಾಶಿಸುವವನು ಎಂದು ಒಂದು ವಿಧನಾದ ಅರ್ಥವು **ಬೃಹನ್** ಎಂದರೆ **ಮಹಾನ್**—ಮಹಾತ್ಮನಾದವನು, ಪೂಜ್ಯನು, ಅನೇಕ ಗುಣ ವಿಶಿಷ್ಟನು, ಸರ್ವದಿಂದಲೂ ಆದರಣೀಯನು ಎಂದು ಇನ್ನೊಂದು ಅರ್ಥವು. **ಉಷಸಾಂ ಅಗ್ರೇ**—ಉಷಸಾ-ಮುಷರ್ಬುಧಃಕಾಲೇ। ಉಷಃಕಾಲವು ಪ್ರಾದುರ್ಭಾವವಾದಕೂಡಲೇ; ಉಷಃ ಕಾಲನೆಂದರೆ ರಾತ್ರಿಯ ಕಗ್ಗತ್ತಲೆಯ ಕೊನೆಗೊಂಡು ಸೂರ್ಯನು ಉದಯಿಸುವುದಕ್ಕಿಂತ ಪೂರ್ವದಲ್ಲಿ ಬೆಳಕಾಗಿರುವ ಕಾಲ. ಈ ಉಷಃಕಾಲದ ಪ್ರಾರಂಭದಲ್ಲಿ ಎಂದರೆ ಕತ್ತಲೆಯು ಆಗತಾನೆ ಹೋಗುತ್ತಿರುವಾಗ ಸ್ವಲ್ಪ ಸ್ವಲ್ಪ ಬೆಳಕು ಉಂಟಾಗಿರುವ ಕಾಲ. ಇಂತಹ ಕಾಲದಲ್ಲಿ ಅಗ್ನಿಯು ತನ್ನ ಜ್ವಾಲೆಗಳಿಂದ ಊರ್ಧ್ವಮುಖವಾಗಿ ಮೇಲೆದ್ದು ಎಂದರೆ ದೊಡ್ಡದಾಗಿ ಉರಿಯುತ್ತಾ ಪ್ರಕಾಶಿಸುತ್ತಿರುವನೆಂದು ಅಭಿಪ್ರಾಯವು. ಯಜ್ಞವನ್ನು ಪ್ರಾತಃಕಾಲದಲ್ಲಿಯೇ ಪ್ರಾರಂಭಿಸುವುದರಿಂದಲೂ, ಯಜ್ಞಕ್ಕೆ ಮುಖ್ಯಸಾಧನರಾದ ಅಗ್ನಿಯನ್ನು ಪ್ರಾತಃಕಾಲದಲ್ಲಿಯೇ ಅರಣಿಗಳಿಂದ ಉತ್ಪನ್ನಮಾಡಿ ಜ್ವಲಿಸುವಂತೆ ಮಾಡುವುದರಿಂದಲೂ ಇಲ್ಲಿ ಅಗ್ನಿಯು ಉಷಃಕಾಲಾರಂಭವಲ್ಲಿ ಬೆಳಗುತ್ತಿರುವನೆಂದು ಋಷಿಯು ವರ್ಣಿಸಿದಾನೆ.

ತಮಸಃ ನಿರ್ಜಗನ್ವಾನ್ ಜ್ಯೋತಿಷಾ ಆ ಅಗಾತ್—ಉಷಃಕಾಲದ ಆವಿರ್ಭಾವದಲ್ಲಿ ಕತ್ತಲೆಯೂ ಹೊರಟುಹೋಗಿರುವುದು. ಆದ್ದರಿಂದ ಕತ್ತಲೆಯಿಂದ ಹೊರಹೊರಟ ಅಗ್ನಿಯು ತನ್ನ ಸ್ವಂತ ಪ್ರಕಾಶದಿಂದ ಬೆಳಗುತ್ತಾ ಗಾರ್ಹಪತ್ಯಾಗ್ನಿ ಕುಂಡದಿಂದ ಆಹವನೀಯಾಗ್ನಿಯ ಬಳಿಗೆ ಋತ್ವಿಕ್ಕುಗಳಿಂದ ಒಯ್ಯಲ್ಪಡುವನು ಅದನ್ನೇ ಇಲ್ಲಿ ಅಗ್ನಿಯು ಕತ್ತಲೆಯಿಂದ ಹೊರಟು ತನ್ನ ಸ್ವಪ್ರಕಾಶದಿಂದ ಬೆಳಗುತ್ತಾ ಆಹವನೀಯಾಗ್ನಿಯ ಬಳಿಗೆ ಬಂದನೆಂದು ವರ್ಣಿಸಿದೆ.

ಸ್ವಂಗಃ ಅಗ್ನಿಃ ಜಾತಃ ರುಶತಾ ಭಾನುನಾ ವಿಶ್ವಾ ಸದ್ಮಾನಿ ಆ ಅಪ್ರಾಃ—ಇಲ್ಲಿ ಸ್ವಂಗಃ ಎಂದರೆ ಶೋಭನಜ್ವಾಲಾವಯವಃ। ಉತ್ತಮವಾದ ಅಂಗಗಳುಳ್ಳವನು ಅಗ್ನಿಯ ಜ್ವಾಲೆಗಳೇ ಅವನ ಅಂಗಗಳು. ಆದ್ದರಿಂದ ಉತ್ತಮವಾದ ಜ್ವಾಲೆಗಳೆಂಬ ಅವಯವಗಳುಳ್ಳ ಅಗ್ನಿಯು ಜಾತಃ ಯಜ್ಞಾರ್ಥವಾಗಿ ಋತ್ವಿಗ್ಜನರಿಂದ ಅರಣಿಗಳಲ್ಲಿ ಕಡೆಯಲ್ಪಟ್ಟು ಉತ್ಪನ್ನನಾಗಿದ್ದಾನೆ. ಇಂತಹ ಅಗ್ನಿಯು ಸಮಸ್ತಲೋಕಗಳನ್ನು ಅಥವಾ ಯಜ್ಞಗೃಹಗಳನ್ನೆಲ್ಲಾ ತನ್ನ ಪ್ರಕಾಶದಿಂದ ತುಂಬುತ್ತಾನೆ. ಅಗ್ನಿಯ ಪ್ರಕಾಶದಿಂದ ಲೋಕವೆಲ್ಲಾ ಚೆನ್ನಾಗಿ ಬೆಳಗುವುದು ಅದರಲ್ಲಿಯೂ ಅಗ್ನಿಯು ಇರುವ ಭಾಗವಾದ ಯಜ್ಞಗೃಹವು ಅಗ್ನಿಯ ಮಹಾತೇಜಸ್ಸಿನಿಂದ ಬೆಳಗುತ್ತಿರುವುದು ಎಂದು ಋಷಿಯು ಅಗ್ನಿಯ ಪ್ರಕಾಶನಸಾಮರ್ಥ್ಯವನ್ನು ವರ್ಣಿಸಿದಾನೆ.

ಭಾಷ್ಯಕಾರರು ಈ ಋಕ್ಕಿನ ಅರ್ಥವನ್ನೂ ವಿಶದಪಡಿಸುವ ಶತಪಥ ಬ್ರಾಹ್ಮಣದ ವಾಕ್ಯವನ್ನು ಉದಾಹರಿಸಿದಾರೆ—

> ಅಗ್ನೇ ಬೃಹನ್ನುಷಸಾಮೂರ್ಧ್ವೋ ಅಸ್ಥಾದಿತ್ಯಗ್ನೇ ಹ್ಯೇಷ ಬೃಹನ್ನುಷಸಾಮೂರ್ಧ್ವಸ್ತಿಷ್ಠತಿ। ನಿರ್ಜಗನ್ವಾನ್ತಮಸೋ ಜ್ಯೋತಿರಾಗಾದಿತಿ ನಿರ್ಜಗನ್ವಾನ್ ರಾತ್ರೇಸ್ತಮಸೋ ಜ್ಯೋತಿಷೈತಿ। ಅಗ್ನಿರ್ಭಾನುನಾ ರುಶತಾ ಸ್ವಂಗ ಇತ್ಯಗ್ನಿರ್ವಾ ಏಷ ಭಾನುನಾ ರುಶತಾ ಸ್ವಂಗ ಆ ಜಾತೋ ವಿಶ್ವಾ ಸದ್ಮಾನ್ಯಪ್ರಾ ಇತೀಮೇ ವೈ ಲೋಕಾ ವಿಶ್ವಾ ಸದ್ಮಾನಿ ತಾನೇಷ ಜಾತ ಆಪೂರಯತಿ॥
>
> (ಶ. ಬ್ರಾ. ೬-೨-೩-೧೦)

ಈ ಶ್ರುತಿವಾಕ್ಯದ ಅರ್ಥವಿವರಣೆಯು ನಾವು ಮೇಲೆ ವಿವರಿಸಿರುವ ಅರ್ಥಾನುಸಾರವಾಗಿಯೇ ಇರುವುದರಿಂದ ಪುನಃ ವಿವರಿಸುವ ಅವಶ್ಯಕತೆ ಇರುವುದಿಲ್ಲ.

। ಸಂಹಿತಾಪಾಠಃ ।

ಸ ಜಾತೋ ಗರ್ಭೋ ಅಸಿ ರೋದಸ್ಯೋರಗ್ನೇ ಚಾರುರ್ವಿಭೃತ ಓಷಧೀಷು
ಚಿತ್ರಃ ಶಿಶುಃ ಪರಿ ತಮಾಂಸ್ಯಕ್ತೂನ್ಪ್ರ ಮಾತೃಭ್ಯೋ ಅಧಿ ಕನಿಕ್ರದದ್ಗಾಃ ॥

। ಪದಪಾಠಃ ।

ಸಃ । ಜಾತಃ । ಗರ್ಭಃ । ಅಸಿ । ರೋದಸ್ಯೋಃ । ಅಗ್ನೇ । ಚಾರುಃ । ವಿಽಭೃತಃ । ಓಷಧೀಷು ।
ಚಿತ್ರಃ । ಶಿಶುಃ । ಪರಿ । ತಮಾಂಸಿ । ಅಕ್ತೂನ್ । ಪ್ರ । ಮಾತೃಽಭ್ಯಃ । ಅಧಿ । ಕನಿಕ್ರದತ್ । ಗಾಃ ॥೨॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಜಾತ ಉತ್ಪನ್ನಶ್ಚಾರುಃ ಕಮನೀಯರೂಪ ಓಷಧೀಷ್ವೋಷಧಿವಿಕಾರೇಷ್ವರಣೀಷು ವಿಭೃತೋ ವಿಶೇಷೇಣ ಮಥಿತ ಆಹವನೀಯಾದ್ಯಾತ್ಮನಾ ವಿವಿಧಂ ಹ್ರಿಯಮಾಣ ಓಷಧೀಷು ವರ್ತಮಾನಃ ಸ ತ್ವಂ ರೋದಸ್ಯೋರ್ದ್ಯಾವಾಪೃಥಿವ್ಯೋರ್ಗರ್ಭೋ ಗರ್ಭರೂಪೋ ಽಸಿ । ಗರ್ಭೋ ಭವಸಿ । ಅಗ್ನಿರೂಪ ಆದಿತ್ಯರೂಪಶ್ಚೇತಿ । ಕಿಂ ಚ ಚಿತ್ರಶ್ಚಿತ್ರವರ್ಣಃ ಕಾಲೀ ಕರಾಲೀ ಚ ಮನೋಜವೇತ್ಯಾದಿಸಪ್ತಜಿಹ್ವಾಭಿರ್ನಾನಾರೂಪಃ ಯದ್ವಾ ಚಿತ್ರಶ್ಚಾಯನೀಯಃ ಶಿಶುರೋಷಧೀರನಾ ವಿಶೀರ್ಯಗ್ನಿಸ್ತ್ವಮಾಂಸ್ಯಕ್ತೂನ್ರಾತ್ರಿವಸ್ತ್ರಾಣ್ಯಾಸ್ಕೃಂತ್ಕ ಪರಿ ಭವಸಿ । ಸ್ವತೇಜಸಾಭಿಭವಸಿ । ಸ ತ್ವ ಮಾತೃಭ್ಯೋ ಮಾತೃಭೂತಾಭ್ಯ ಓಷಧೀಭ್ಯಃ । ಅಧಿಃ ಪಂಚಮ್ಯರ್ಥದ್ಯೋತಕಃ । ತಾಭ್ಯಃ ಕನಿಕ್ರದತ್ಪ್ರಕರ್ಷೇಣ ಶಬ್ದಂ ಕುರ್ವನ್ಪ್ರ ಗಾಃ । ಪ್ರಗಚ್ಛಸಿ । ಪ್ರಜಾಯಸೇ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ಜಾತಃ—ನೀನು ಉತ್ಪನ್ನನಾದಾಗ । ಚಾರುಃ—ಆಕರ್ಷಕನಾಗಿ । ಓಷಧೀಷು—ಓಷಧಿವಿಕಾರಗಳಾದ ಅರಣಿಗಳಲ್ಲಿ । ವಿಭೃತಃ—ಧರಿಸಲ್ಪಟ್ಟವನಾಗಿದ್ದೀಯೆ । ಸಃ—ಅಂತಹ ನೀನು । ರೋದಸ್ಯೋಃ—ದ್ಯಾವಾಪೃಥಿವಿಗಳಿಗೆ । ಗರ್ಭಃ ಅಸಿ—ಗರ್ಭರೂಪನಾಗಿದ್ದೀಯೆ । ಚಿತ್ರಃ—ಅನೇಕ ವಿಧವಾದ ವರ್ಣವುಳ್ಳವನೂ । ಶಿಶುಃ—ಲತಾದಿಗಳಿಗೆ ಪುತ್ರರೂಪನೂ ಆದ ನೀನು । ಅಕ್ತೂನ್—ಅಂಧಕಾರರೂಪರಾದ ಶತ್ರುಗಳನ್ನೂ । ತಮಾಂಸಿ—ರಾತ್ರಿಯ ಕಗ್ಗತ್ತಲೆಗಳನ್ನೂ । ಪರಿ (ಭವಸಿ)—ನಾಶಮಾಡುತ್ತೀಯೆ । ಮಾತೃಭ್ಯಃ ಆಧಿ- ಮಾತೃರೂಪಗಳಾದ ಓಷಧಿಗಳಿಂದ । ಕನಿಕ್ರದತ್ -ಶಬ್ದಮಾಡುತ್ತ । ಪ್ರ ಗಾಃ—ಹೊರಬರುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಉತ್ಪನ್ನನಾದಾಗ ಆಕರ್ಷಕನಾಗಿದ್ದ ಓಷಧಿವಿಕಾರಗಳಾದ ಅರಣಿಗಳಲ್ಲಿ ಧರಿಸಲ್ಪಟ್ಟವನಾಗಿದ್ದೀಯೆ. ಅಂತಹ ನೀನು ದ್ಯಾವಾಪೃಥಿವಿಗಳಿಗೆ ಗರ್ಭರೂಪನಾಗಿದ್ದೀಯೆ. ಅನೇಕವಿಧವಾದ ವರ್ಣವುಳ್ಳವನೂ, ಲತಾದಿಗಳಿಗೆ ಪುತ್ರರೂಪನೂ ಆದ ನೀನು ಅಂಧಕಾರರೂಪರಾದ ಶತ್ರುಗಳನ್ನೂ ರಾತ್ರಿಯ ಕಗ್ಗತ್ತಲೆಗಳನ್ನೂ ನಾಶಮಾಡುತ್ತೀಯೆ ಮಾತೃರೂಪಗಳಾದ ಓಷಧಿಗಳಿಂದ ಶಬ್ದಮಾಡುತ್ತ ಹೊರಬರುತ್ತೀಯೆ.

English Translation

When born, you, O Agni, are the embryo of heaven and earth, beautiful, borne about in the plants; variegated, infantine, you disperse the nocturnal glooms; you issue roaring loudly from the maternal (sources).

॥ ವಿಶೇಷವಿಷಯಗಳು ॥

ಓಷಧೀಷು ವಿಭೃತಃ—ಓಷಧೀಷು ಓಷಧಿವಿಕಾರೇಷ್ವರಣೀಷು ವಿಶೇಷೇಣ ಮಥಿತಃ । ಯದ್ವಾ ಆಹವನೀಯಾದ್ಯಾತ್ಮನಾ ವಿವಿಧಂ ಹ್ರಿಯಮಾಣ ಓಷಧೀಷು ವರ್ತಮಾನಃ । ಓಷಧಿಗಳೆಂದರೆ ದೊಡ್ಡದಾಗಿ ಬೆಳೆದಿರುವ ವೃಕ್ಷಾದಿಗಳಿಂದ ಮಾಡಿರುವ ಅರಣಿಗಳು. ಈ ಅರಣಿಗಳಲ್ಲಿ ವಿಶೇಷರೀತಿಯಿಂದ ಎಂದರೆ ವಿಧ್ಯುಕ್ತರೀತಿ

ಯಿಂದ ಕಡೆಯಲ್ಪಟ್ಟು ಉತ್ಪನ್ನನಾದ ಅಗ್ನಿಯು ಅಥವಾ ಆಹವನೀಯಾದಿ ಅಗ್ನಿಕುಂಡಗಳಲ್ಲಿ ಋತ್ವಿಗ್ಜನರಿಂದ ಸ್ಥಾಪಿತನಾಗಿ ಓಷಧಿಗಳಿಂದ ಎಂದರೆ ಕಾಷ್ಠಾದಿಗಳಿಂದ ಪ್ರವೃದ್ಧ ಮಾನನಾಗಿ ಬೆಳಗುತ್ತಿರುವ ಅಗ್ನಿಯು ಎಂದು ಎರಡು ವಿಧವಾದ ಅರ್ಥವನ್ನೂ ಹೇಳಬಹುದು.

ಗರ್ಭಃ ಅಸಿ ರೋದಸ್ಯೋಃ—ಎಲೈ ಅಗ್ನಿಯೇ, ನೀನು ದ್ಯಾವಾಪೃಥಿವಿಗಳಲ್ಲಿ ಗರ್ಭರೂಪದಿಂದ ಸ್ಥಾಪಿತನಾಗಿದ್ದೀಯೆ. ಎಂದರೆ ಪೃಥಿಯಲ್ಲಿ ಪಾರ್ಥವಾಗ್ನಿ ಅಥವಾ ಯಜ್ಞಾಗ್ನಿರೂಪದಿಂದಲೂ, ಸ್ವರ್ಗದಲ್ಲಿ ಆದಿತ್ಯರೂಪದಿಂದಲೂ ಇದ್ದು ಪ್ರಕಾಶಿಸುತ್ತಿರುವೆ ಎಂಬ ಅಭಿಪ್ರಾಯವು.

ಚಿತ್ರಃ ಶಿಶುಃ-ಚಿತ್ರವರ್ಣಃ ಕಾಲೀ ಕರಾಳೀ ಚ ಮನೋಜವಾ ಇತ್ಯಾದಿ ಸಪ್ತಜಿಹ್ವಾಭಿಃ ನಾನಾರೂಪಃ । ಯದ್ವಾ ಚಿತ್ರಶ್ಚಾಯನೀಯಃ ಓಷಧೀನಾಂ ಶಿಶುರಗ್ನಿಃ । ಅಗ್ನಿಗೆ ಸಪ್ತಜಿಹ್ವೆಗಳಿರುವವೆಂದು ಪ್ರಸಿದ್ಧವು—

ಕಾಲೀ ಕರಾಲೀ ಚ ಮನೋಜವಾ ಚ
ಸುಲೋಹಿತಾ ಯಾ ಚ ಸುಧೂಮ್ರವರ್ಣಾ ।
ಸ್ಫುಲಿಂಗಿನೀ ವಿಶ್ವರುಚೀ ಚ ದೇವೀ
ಲೇಲಾಯಮಾನಾ ಇತಿ ಸಪ್ತ ಜಿಹ್ವಾಃ ॥

(ಮುಂ. ಉ. ೧-೨-೪)

ಎಂದು ಮುಂಡಕೋಪನಿಷತ್ತಿನಲ್ಲಿ ಹೇಳಿದೆ. ಕಾಲೀ, ಕರಾಲೀ, ಮನೋಜವಾ, ಸುಲೋಹಿತಾ, ಸುಧೂಮ್ರವರ್ಣಾ, ಸ್ಫುಲಿಂಗಿನೀ, ವಿಶ್ವರುಚೀ ಎಂಬ ಸಪ್ತಜಿಹ್ವೆ ಅಥವಾ ಜ್ವಾಲೆಗಳಿಂದ ಬೆಳಗುತ್ತಿರುವ ವಿಚಿತ್ರವರ್ಣವುಳ್ಳ ಅಗ್ನಿಯು, ಅಥವಾ ಓಷಧ್ಯಾದಿಗಳಲ್ಲಿ (ವೃಕ್ಷ, ವನಸ್ಪತಿ) ಹುಟ್ಟುವುದರಿಂದ ಅಗ್ನಿಯನ್ನು ಓಷಧಿಗಳ ಶಿಶುವೆಂದೂ ಹೇಳಬಹುದು ಎಂದು ಎರಡು ವಿಧ ಅರ್ಥವನ್ನು ನಿವರಿಸಿದಾರೆ.

ತಮಾಂಸಿ ಅಕ್ತೂನ್—**ರಾತ್ರಿವತ್ ಕೃಷ್ಣಾನ್ ಶತ್ರೂಂಶ್ಚ ।** ಅಗ್ನಿಯು ಕತ್ತಲೆಯನ್ನು ನಾಶಪಡಿಸುವವನೂ ಅಥವಾ ರಾತ್ರಿಯಂತೆ ಕಪ್ಪುಬಣ್ಣವುಳ್ಳ ದಸ್ಯು ಜನರೇ ಮೊದಲಾದ ಶತ್ರುಗಳನ್ನು ನಾಶಮಾಡುವವನು.

ಪ್ರ ಮಾತೃಭ್ಯಃ ಅಧಿ ಕನಿಕ್ರದತ್ ಗಾಃ—ಇಲ್ಲಿ **ಮಾತೃಭ್ಯಃ** ಎಂದರೆ **ಮಾತೃಭೂತಾಭ್ಯ ಓಷಧೀಭ್ಯಃ** ತನಗೆ ಮಾತೃಪ್ರಾಯರಾದ ಓಷಧಿಗಳು ಎಂದರೆ ಕಾಷ್ಠಗಳು. ಅವುಗಳನ್ನು ದಹಿಸುವಾಗ ಚಟಪಟ ಎಂಬ ಶಬ್ದಗಳನ್ನು ಮಾಡುತ್ತಾ ಪ್ರಜ್ವಲಿಸುತ್ತೀಯೆ, ಎಂದಭಿಪ್ರಾಯವು.

। ಸಂಹಿತಾಪಾಠಃ ।

ವಿಷ್ಣುರಿತ್ಥಾ ಪರಮಮಸ್ಯ ವಿದ್ವಾಞ್ಛಿತೋ ಬೃಹನ್ಮಿಮಾತಿ ತೃತೀಯಂ ।
ಆಸಾ ಯದಸ್ಯ ಪಯೋ ಅಕ್ರತ ಸ್ವಂ ಸಚೇತಸೋ ಅಭ್ಯರ್ಚಂತ್ಯತ್ರ ॥ ೩ ॥

॥ ಪದಪಾಠಃ ॥

ವಿಷ್ಣುಃ । ಇತ್ಥಾ । ಪರಮಂ । ಅಸ್ಯ । ವಿದ್ವಾನ್ । ಜಾತಃ । ಬೃಹನ್ । ಅಭಿ । ಪಾತಿ । ತೃತೀಯಂ ।
ಅಸಾ । ಯತ್ । ಅಸ್ಯ । ಪಯಃ । ಅಕೃತ । ಸ್ವಂ । ಸಚೇತಸಃ । ಅಭಿ । ಅರ್ಚಂತಿ । ಅತ್ರ ॥ ೩ ॥

॥ ಸಾಯಣಭಾಷ್ಯಂ ॥

ವಿದ್ವಾಞ್ಜಾನಾನೋ ಜಾತಃ ಪ್ರಾದುರ್ಭೂತೋಽ ಬೃಹನ್ಮಹಾನ್ ವಿಷ್ಣುರಿತ್ಥಮನೇನ ಪ್ರಕಾರೇಣ ವಿಷ್ಣುರ್ವ್ಯಾಪನಶೀಲೋ ಜ್ಞಾನಾದಿಗುಣಯುಕ್ತೋಽಗ್ನಿರಸ್ಯ ಮೇ ತೃತೀಯಂ ತ್ರಯಾಣಾಂ ಪೂರಕಂ ತ್ರಿತಂ ಮಾಮಭಿ ಪಾತಿ । ಅಭಿರಕ್ಷತು । ಏಕತೋ ದ್ವಿತ್ರಾ ಇತಿ ಪ್ರದೋ ಬಭೂವನ್ನಿ । ನಿ. ೪.೬ । ಇತಿ ಯಾಸ್ಕೇನೋಕ್ತಂ । ಕಿಂಚಾಸ್ಯಾಗ್ನೇಃ ಸ್ವಮಾತ್ಮೀಯಂ ಪಯ ಉದಕಮಾಸಾಸ್ಯೇನ ಯದ್ಯದಾಕೃತ ಕುರ್ವಂತಿ ಯಜಮಾನಾ ಯಾಚಂತೇ ತದಾನೀಮುತಾಪ್ಯೇತ್ಲೋಕೇ ಸ್ಥಿತಾಃ ಸ್ತೋತಾರಃ ಸಚೇತಸಃ ಸಮಾನಮನಸ್ಕಾ ಭೂತ್ವೈನಮಭ್ಯರ್ಚಂತಿ । ಅಭಿಷ್ಟುವಂತಿ ॥

॥ ಪ್ರತಿಪದಾರ್ಥ ॥

ವಿದ್ವಾನ್ ಸರ್ವಜ್ಞನೂ । ಜಾತಃ—ಯಜ್ಞಾರ್ಥವಾಗಿ ಉತ್ಪನ್ನನೂ । ಬೃಹನ್—ಮಹತ್ಸ್ವರೂಪನೂ । ಇತ್ಥಾ ಪರಮಂ—ಹೀಗೆ ವಿಶೇಷರೀತಿಯಲ್ಲಿ । ವಿಷ್ಣುಃ—ವ್ಯಾಪಕನೂ ಆದ ಅಗ್ನಿಯು । ಅಸ್ಯ ತೃತೀಯಂ—ತ್ರಿತಸಂಜ್ಞಕನಾದ ನನ್ನನ್ನು । ಅಭಿ ಪಾತಿ—ರಕ್ಷಿಸಲಿ । ಅಸ್ಯ—ಈ ಅಗ್ನಿಯ । ಸ್ವಂ—ಸ್ವಕೀಯವಾದ । ಪಯಃ—ಉದಕವನ್ನು । ಅಸಾ—ಮುಖದಿಂದ (ಬೇಡುತ್ತ) । ಯತ್—ಯಾವಾಗ । ಅಕೃತ—ಯಾಚಿಸುವರೋ ಆಗ । ಅತ್ರ—ಈ ಲೋಕದ ಸ್ತೋತೃಗಳು । ಸಚೇತಸಃ—ಒಂದೇ ಮನಸ್ಸುಳ್ಳವರಾಗಿ । ಅಭ್ಯರ್ಚಂತಿ—ಅಗ್ನಿಯನ್ನು ಪ್ರಶಂಸಿಸುತ್ತಾರೆ.

॥ ಭಾವಾರ್ಥ ॥

ಸರ್ವಜ್ಞನೂ, ಯಜ್ಞಾರ್ಥವಾಗಿ ಉತ್ಪನ್ನನೂ, ವಿಶೇಷರೀತಿಯಲ್ಲಿ ವ್ಯಾಪಿಸುವವನೂ ಆದ ಅಗ್ನಿಯು ತ್ರಿತಸಂಜ್ಞಕನಾದ ನನ್ನನ್ನು ರಕ್ಷಿಸಲಿ. ಈ ಅಗ್ನಿಯ ಸ್ವಕೀಯವಾದ ಉದಕವನ್ನು ಯಜಮಾನರು ಮುಖತೆರೆದು ಬೇಡುವಾಗ ಈ ಲೋಕದ ಸ್ತೋತೃಗಳೆಲ್ಲರೂ ಒಂದೇ ಮನಸ್ಸಿನಿಂದ ಅಗ್ನಿಯನ್ನು ಪ್ರಶಂಸಿಸುತ್ತಾರೆ

English Translation

May he, who as soon as manifested is vast and wise, and thus (universally) pervading, defend (me), his third (manifestation); and when (the worshippers) ask with their mouths for his own water, animated by one purpose, they praise him in this world.

॥ ವಿಶೇಷವಿಷಯಗಳು ॥

ತೃತೀಯಂ ಅಭಿ ಪಾತಿ—ತೃತೀಯಂ ತ್ರಯಾಣಾಂ ಪೂರಕಂ ಮಾಂ ಅಭಿರಕ್ಷತು । ಏಕತ, ದ್ವಿತ, ತ್ರಿತ ಎಂಬುವರು ಮೂರುಮಂದಿ ಸಹೋದರರೆಂದೂ ಅವರಲ್ಲಿ ತ್ರಿತನು ಕೊನೆಯವನೆಂದೂ ಈ ಸೂಕ್ತದ ದೃಷ್ಟವಾದ ಋಷಿಯೆಂದೂ ಒಂದೆಯೇ ಹೇಳಿದೆ. ಆದ್ದರಿಂದ ಸಹೋದರರಲ್ಲಿ ಮೂರನೆಯವನಾದ (ಕೊನೆಯವನಾದ) ನನ್ನನ್ನು ಅಗ್ನಿಯು ರಕ್ಷಿಸಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ.

ಅಸಾ ಯತ್ ಅಸ್ಯ ಪಯಃ ಅಕ್ರತ ಸ್ವಂ—ಸ್ತೋತ್ರಮಾಡುವ ಋತ್ವಿಗ್ಜನರು ಈ ಅಗ್ನಿಯನ್ನು ವೃಷ್ಟ್ಯುದಕಕ್ಕಾಗಿ ತಮ್ಮ ಮುಖದಿಂದ ಎಂದರೆ ತಮ್ಮ (ಬಾಯಿಂದ) ಪಠಿಸುವ ಸ್ತೋತ್ರಾದಿಗಳಿಂದ ಪ್ರಾರ್ಥಿಸುತ್ತಾರೆ ಎಂದಭಿಪ್ರಾಯವು.

ಸಚೇತಸಃ ಅಭ್ಯರ್ಚಂತಿ—ಸಮಾನಮನಸ್ಕಾ ಭೂತ್ವೈನಂ ಅಧಿಷ್ಟುವಂತಿ । ಈ ಋತ್ವಿಕ್ಕುಗಳು ಒಂದೇ ಮನಸ್ಸುಳ್ಳವರಾಗಿ ಎಂದರೆ ತಮಗೆ ವೃಷ್ಟ್ಯುದಕವು ದೊರಕಬೇಕೆಂಬ ಒಂದೇ ವಿಧವಾದ ಅಶೋತ್ತರದಿಂದ ಅಗ್ನಿಯನ್ನು ಸ್ತೋತ್ರಮಾಡುತ್ತಾರೆ.

॥ ಸಂಹಿತಾಪಾಠಃ ॥

ಅತ॑ ಉ ತ್ವಾ ಪಿತು॒ಭೃತೋ॑ ಜನಿ॒ತ್ರೀರನ್ವಾವೃ॒ಧಂ ಪ್ರ॑ತಿ॒ ಚರ॑ಂತ್ಯ॒ನ್ನೈಃ॑ ।
ತಾ ಈಂ॑ ಪ್ರ॒ತ್ಯೇ॑ಷಿ॒ ಪುನ॑ರ॒ನ್ಯರೂ॑ಪಾ॒ ಅಸಿ॒ ತ್ವಂ ವಿ॒ಕ್ಷು ಮಾ॒ನು॒ಷೀ॒ಷು॒
ಹೋ॒ತಾ ॥ ೪ ॥

॥ ಪದಪಾಠಃ ॥

ಅತ॑ಃ । ಊಂ ಇ॒ತಿ॑ । ತ್ವಾ॒ । పి॒తు॒ऽభృ॒తః॑ । జ॒ని॒త్రీః॑ । అ॒న్ನ॒ऽవృ॒ధం । ప్ర॒తి॑ । చర॑ంతి । అ॒న్నైః॑ ।
తాః । ఈం॒ । ప్ర॒తి॑ । ఏ॒షి॒ । పున॑ఃర । అ॒న్య॒ऽరూ॒పాః॒ । అసి॑ । త్వం । వి॒క్షు । మా॒నుషీ॒షు ।
హో॒తా ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಅತಃ । ಉ ಇತ್ಯವಧಾರಣೇ । ಅಸ್ಮಾದೇವ ಕಾರಣಾತ್ ಪಿತುಭೃತಃ ಪಿತುನಾನ್ನೇನ ಸರ್ವಸ್ಯ ಜಗತೋ ಧಾರಯಿತ್ರ್ಯಃ ಪೋಷಯಿತ್ರ್ಯೋ ವಾ ಜನಿತ್ರೀರ್ಜನಯಿತ್ರ್ಯ ಓಷಧಯೋಽನ್ನಾವೃಧ-ಮನ್ನಸ್ಯ ವರ್ಧಕಂ ತ್ವಾ ತ್ವಾಮನ್ನೈರ್ಹೇತುಭಿಃ ಪ್ರತಿ ಚರಂತಿ । ಪರಿಚರಂತಿ । ಅಭಿಗಚ್ಛಂತಿ । ತತಸ್ತ್ವ-ಮಿಮಾಮೇನಾಸ್ತಾ ಓಷಧೀಃ ಪ್ರತ್ಯೇಷಿ । ಪ್ರತಿಗಚ್ಛಸಿ । ಪುನರಪ್ಯನ್ಯರೂಪಾ ಜೀರ್ಣಾ ಓಷಧೀರ್ದಾವ-ಭೂತಸ್ತ್ವಂ ಗಚ್ಛಸಿ । ಕಿಂಚ ಮಾನುಷೀಷು ಮನುಷ್ಯಜಾತಿಷು ವಿಕ್ಷು ಪ್ರಜಾಸು । ಯದ್ವಾ । ವಿಕ್ಷ್ವಗ್ನಿ-

ಹೋತ್ರಾದಿಕ್ರಿಯಾಸ್ವಭಿನಿವಿಶಂತೀಷು ಮಾನುಷೀಷು ಮನುಷ್ಯಜಾತಿಷು । ಹೋತಾ ದೇವಾನಾ-ಮಾಹ್ವಾತಾ ಹೋಮನಿಷ್ಪಾದಕೋ ವಾಸಿ । ಭವಸಿ । ಮನುಷ್ಯೇಷು ಸ್ಥಿತ ಇತ್ಯರ್ಥೇ ಬ್ರಾಹ್ಮಣಂ ದೇವೋ ಹ್ಯೇಷ ಮರ್ತ್ಯೇಷ್ವಿತಿ ॥

। ಪ್ರತಿಪದಾರ್ಥ ।

(ಎಲೈ ಅಗ್ನಿಯೇ) **ಅತಃ**—ಆದುದರಿಂದಲೇ । **ಪಿತುಭೃತಃ**—ಅನ್ನದಿಂದ ಸಕಲ ಜಗತ್ತನ್ನೂ ಪೋಷಿಸುವುವೂ । **ಜನಿತ್ರೀಃ**—ಅಗ್ನ್ಯುತ್ಪಾದಕಗಳೂ ಆದ ಓಷಧಿಗಳು । **ಅನ್ನವೃಧಂ**—ಅನ್ನವರ್ಧಕನಾದ । **ತ್ವಾ**—ನಿನ್ನನ್ನು । **ಅನ್ನೈಃ**— ಅನ್ನನಿಮಿತ್ತವಾಗಿ । **ಪ್ರತಿ ಚರಂತಿ**—ಉಪಚರಿಸುತ್ತವೆ । **ಅನ್ಯರೂಪಾಃ**—ಬೇರೆ ರೂಪಗಳನ್ನು ತಾಳಿದ । **ಈಂ ತಾಃ**—ಅದೇ ಓಷಧಿಗಳನ್ನು । **ಪ್ರತ್ಯೇಷಿ**—ಪುನಃ ಹೋಗಿ ಸೇರಿಕೊಳ್ಳುತ್ತೀಯೆ । **ಮಾನುಷೀಷು**—ಮನುಷ್ಯಸಂಬಂಧಿಗಳಾದ । **ವಿಕ್ಷು**—ಪ್ರಜೆಗಳಲ್ಲಿ । **ಹೋತಾ ಅಸಿ**—ಹೋತೃರೂಪನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಅನ್ನದಿಂದ ಸಕಲ ಜಗತ್ತನ್ನೂ ಪೋಷಿಸುವುವೂ, ಅಗ್ನ್ಯುತ್ಪಾದಕಗಳೂ ಆದ ಔಷಧಿಗಳು ಅನ್ನವರ್ಧಕನಾದ ನಿನ್ನನ್ನು ಅನ್ನನಿಮಿತ್ತವಾಗಿ ಉಪಚರಿಸುತ್ತವೆ. ಬೇರೆ ರೂಪಗಳನ್ನು ತಾಳಿದ ಅದೇ ಓಷಧಿಗಳನ್ನು ನೀನು ಪುನಃ ಹೋಗಿ ಸೇರಿಕೊಳ್ಳುತ್ತೀಯೆ ಮನುಷ್ಯಸಂಬಂಧಿಗಳಾದ ಪ್ರಜೆಗಳಲ್ಲಿ ನೀನು ಹೋತೃರೂಪನಾಗಿದ್ದೀಯೆ.

English Translation

Therefore the genetrices (of all things, the herbs), the cherishers (of all) with food, wait on you who are the augmenter of food, with (sactificial) viands; you visit them again, when they have assumed other forms, you are amongst human beings the invoker (of the gods).

॥ ವಿಶೇಷವಿಷಯಗಳು ॥

ಅನ್ಯರೂಪಾಃ—ಔಷಧಿಗಳಲ್ಲಿ ಎರಡು ವಿಧವು. ಬೆಳೆಯುತ್ತಿರುವ ವನಸ್ಪತಿಗಳು ಅನ್ನನಿಮಿತ್ತವಾಗಿ ಅಗ್ನಿಯನ್ನು ಉಪಚರಿಸುತ್ತವೆ ಎಂದರೆ ತಮಗೆ ಅನ್ನಸ್ವರೂಪವಾದ ವೃಷ್ಟ್ಯುದಕಲಾಭಾರ್ಥವಾಗಿ ಅಗ್ನಿಯನ್ನು ಪುಶ್ರೂಷೆ ಮಾಡುತ್ತವೆ ಎಂದು ಒಂದು ವಿಧವಾದ ಅರ್ಥವು. ಎರಡನೆಯ ಅರ್ಥವು—ಔಷಧಿಗಳಲ್ಲಿ ಒಣಗಿರುವ ಕಾಷ್ಠಾದಿಗಳನ್ನು ಅಗ್ನಿಯಾದ ನೀನು ದಹಿಸಿ ಪ್ರನೃದ್ಧನಾನನನಾಗುತ್ತೀಯೆ ಎಂದು ಎರಡು ವಿಧವಾದ ಅರ್ಥಗಳು ಇಲ್ಲಿ ಸೂಚಿತವಾಗಿವೆ.

। ಸಂಹಿತಾಪಾಠಃ ।

ಹೋತಾ॑ರಂ ಚಿತ್ರರ॑ಥಮಧ್ವ॒ರಸ್ಯ॑ ಯ॒ಜ್ಞಸ್ಯ॑ ಯ॒ಜ್ಞಸ್ಯ॑ ಕೇ॒ತುಂ ರು॑ಶಂ॒ತಂ ।
ಪ್ರತ್ಯ॑ರ್ಧಿಂ ದೇ॒ವಸ್ಯ॑ ದೇ॒ವಸ್ಯ॒ ಮಹ್ನಾ॒ ಶ್ರಿಯಾ॒ ತ್ವಗ॑ಗ್ನಿಮು॒ತಿಥಿಂ॑ ಜ॒ನಾನಾಂ॑ ॥

॥ ಪದಪಾಠಃ ॥

ಹೋತಾರಂ । ಚಿತ್ರ꣡ರಥಂ । ಅಧ್ವ꣡ರಸ್ಯ । ಯಜ್ಞ꣡ಸ್ಯ꣡ಯಜ್ಞ꣡ಸ್ಯ । ಕೇ꣡ತುಂ । ರುಶಂತಂ ।

ಪ್ರ꣡ತಿ꣡ಅಧ꣡ರ್ಮಿಂ । ದೇ꣡ವಸ್ಯ꣡ದೇ꣡ವಸ್ಯ । ಮ꣡ಹ್ನಾ । ಶ್ರಿ꣡ಯಾ । ತು । ಅ꣡ಗ್ನಿಂ । ಅ꣡ತಿಥಿಂ । ಜನಾ꣡ನಾಂ ॥ ೫ ॥

॥ ಸಾಯಣಭಾಷ್ಯಂ ॥

ಅತಿಥ್ಯಾಯಾಂ ಸ್ವಿಷ್ಟಕೃತೋ೭ನುವಾಕ್ಯಾ ಹೋತಾರಮಿತ್ಯೇಷಾ । ಸೂತ್ರಿತಂ ಚ । ಹೋತಾರಂ ಚಿತ್ರರಥಮಧ್ವರಸ್ಯ ಪ್ರಪ್ರಾಯಮಗ್ನಿರ್ಭರತಸ್ಯ ಶೃಣ್ವ ಇತಿ ಸಂಯೌಜ್ಯೇ । ಆ ೪-೫ । ಇತಿ ॥

ಅಧ್ವರಸ್ಯ ಯಜ್ಞಸ್ಯ ಹೋತಾರಮೇತನ್ನಾಮಾನಮೃತ್ವಿಜಂ ಯದ್ವಾ ಹೋತಾರಂ ದೇವಾನಾಮಾಹ್ವಾತಾರಂ ಚಿತ್ರರಥಂ ನಾನಾರೂಪರಥಮಧ್ವರಸ್ಯ ರಕ್ಷೋಭಿರಹಿಂಸಿತಸ್ಯ ಯಜ್ಞಸ್ಯ ಸರ್ವಸ್ಯ ಯಜ್ಞಸ್ಯ ಕೇತುಂ ಪ್ರಜ್ಞಾಪಕಂ ಪತಾಕಾಸ್ಥಾನೀಯಂ ವಾ ರುಶಂತಂ ಶ್ವೇತವರ್ಣಂ ಮಹ್ನಾ ಸ್ವಮಹತ್ತ್ವೇನ ದೇವಸ್ಯ ದೇವಸ್ಯ ಸರ್ವೇಷಾಂ ದೇವಾನಾಮರ್ಧಿಮಿಂದ್ರಂ ಪ್ರತಿ ಭವಂತಂ । ಯತ್ಸರ್ವೇಷಾಮರ್ಧಿಮಿಂದ್ರಂ ಪ್ರತೀತಿ ಬ್ರಾಹ್ಮಣಂ । ತಾಪಶಂ ಜನಾನಾಂ ಯಜಮಾನಾನಾಮತಿಥಿನಮೃತ್ವಿಜ್ಯಮಗ್ನಿಂ ತು ಕ್ಷಿಪ್ರಂ ಶ್ರಿಯಾ ಶ್ರಿಯೋರ್ಥಂ ವಯಂ ಸ್ತುಮಃ ॥

॥ ಪ್ರತಿಪದಾರ್ಥ ॥

ಅಧ್ವರಸ್ಯ—ಯಜ್ಞಕ್ಕೆ । ಹೋತಾರಂ—ಹೋತೃರೂಪನೂ । ಚಿತ್ರರಥಂ—ಅನೇಕ ರೂಪವಾದ ರಥವುಳ್ಳವನೂ । ಯಜ್ಞಸ್ಯಯಜ್ಞಸ್ಯ—ಯಜ್ಞಗಳಿಗೆಲ್ಲ । ಕೇತುಂ—ಪ್ರಜ್ಞಾಪಕನೂ । ರುಶಂತಂ—ಶ್ವೇತವರ್ಣವುಳ್ಳವನೂ । ಮಹ್ನಾ—ತನ್ನ ಮಹತ್ವದಿಂದ । ದೇವಸ್ಯದೇವಸ್ಯ—ಸಕಲ ದೇವತೆಗಳಿಗೂ । ಪ್ರತಿ ಅರ್ಧಿಂ—ಮಿಂಚಿದ ಶಕ್ತಿಯುಳ್ಳವನೂ । ಜನಾನಾಂ—ಯಜಮಾನರಿಗೆ । ಅತಿಥಿಂ—ಪೂಜ್ಯನೂ ಆದ । ಅಗ್ನಿಂ—ಅಗ್ನಿಯನ್ನು । ತು—ಕ್ಷಿಪ್ರವಾಗಿ । ಶ್ರಿಯಾ—ಸಂಪದರ್ಥವಾಗಿ ನಾವು ಪ್ರಶಂಸಿಸುತ್ತೇವೆ.

॥ ಭಾವಾರ್ಥ ॥

ಯಜ್ಞಕ್ಕೆ ಹೋತೃರೂಪನೂ, ಅನೇಕರೂಪವಾದ ರಥವುಳ್ಳವನೂ ಯಜ್ಞಕ್ಕೆ ಪ್ರಜ್ಞಾಪಕನೂ, ಶ್ವೇತವರ್ಣವುಳ್ಳವನೂ, ತನ್ನ ಮಹತ್ವದಿಂದ ಸಕಲ ದೇವತೆಗಳಿಗಿಂತಲೂ ಮಿಂಚಿದ ಶಕ್ತಿಯುಳ್ಳವದೂ ಯಜಮಾನರಿಗೆ ಪೂಜ್ಯನೂ ಆದ ಅಗ್ನಿಯನ್ನು ಕ್ಷಿಪ್ರವಾಗಿ ಸಂಪದರ್ಥವಾಗಿ ನಾವು ಪಶಂಸಿಸುತ್ತೇವೆ.

English Translation

(We worship) Agni for prosperity, you, who are the invoker of the gods, the many-coloured conveyance of the sacrifice, the brilliant banner of every offering, the surpasser of every other deity in might, the guest of men.

॥ ವಿಶೇಷವಿಷಯಗಳು ॥

ಆತಿಥ್ಯೇಷ್ಟಿಯಲ್ಲಿ ಸ್ವಿಷ್ಟಕೃದ್ಧೋಮ ಮಾಡುವಾಗ ಹೋತಾರಂ ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ ಹೋತಾರಂ ಚಿತ್ರರಥಮಧ್ವರಸ್ಯ ಪ್ರಪ್ರಾಯಮಗ್ನಿರ್ಭರತಸ್ಯ ಶೃಣ್ವ ಇತಿ ಸಂಯಾಜ್ಯೇ ಎಂಬ ಸೂತ್ರದಿಂದ (ಅ. ೪-೫) ವಿವೃತವಾಗಿರುವುದು.

ಯಜ್ಞಸ್ಯಯಜ್ಞಸ್ಯ, ದೇವಸ್ಯದೇವಸ್ಯ—ಇಂತಹ ಅಭ್ಯಸ್ತ ಪದಗಳಿಗೆ (ಪುನರಾವೃತ್ತಿ ಉಕ್ತವಾದ ಪದಗಳಿಗೆ) ಪ್ರತಿಯೊಂದು, ಅಥವಾ ಎಲ್ಲಾ ಎಂಬರ್ಥವಿರುವುದು. ಮೇಲಿನ ಶಬ್ದಗಳಿಗೆ ಪ್ರತಿಯಜ್ಞಕ್ಕೂ ಅಥವ ಎಲ್ಲಾ ಯಜ್ಞಗಳಿಗೂ, ಎಲ್ಲಾ ದೇವತೆಗಳಿಗೂ ಎಂದರ್ಥವು. ಇದರಂತೆ, ದಿನೇದಿನೇ, ಅಹರಹಃ ಮೊದಲಾದ ಅನೇಕ ಉದಾಹರಣೆಗಳನ್ನೂ ಕೊಡಬಹುದು.

। ಸಂಹಿತಾಪಾಠಃ ।

ಸ ತು ವಸ್ತ್ರಾಣ್ಯಧ ಪೇಶನಾನಿ ವಸಾನೋ ಅಗ್ನಿರ್ನಾಭಾ ಪೃಥಿವ್ಯಾಃ ।
ಅರುಷೋ ಜಾತಃ ಪದ ಇಳಾಯಾಃ ಪುರೋಹಿತೋ ರಾಜನ್ಯಕ್ಷೀಹ ದೇವಾನ್ ॥ ೬ ॥

॥ ಪದಪಾಠಃ ॥

ಸಃ । ತು । ವಸ್ತ್ರಾಣಿ । ಅಧ । ಪೇಶನಾನಿ । ವಸಾನಃ । ಅಗ್ನಿಃ । ನಾಭಾ । ಪೃಥಿವ್ಯಾಃ ।
ಅರುಷಃ । ಜಾತಃ । ಪದೇ । ಇಳಾಯಾಃ । ಪುರಃಽಹಿತಃ । ರಾಜನ್ । ಯಕ್ಷಿ । ಇಹ । ದೇವಾನ್ ॥೬॥

। ಸಾಯಣಭಾಷ್ಯಂ ।

ಹೇ ರಾಜನ್ದೀಪ್ಯಮಾನಾಗ್ನೇ ವಸ್ತ್ರಾಣ್ಯಾಚ್ಛಾದಕಾನಿ ತೇಜಾಂಸಿ ಅಧಾಪಿ ಚ ಪೇಶನಾನಿ ತೇಷಾಂ ತೇಜಸಾಂ ಕಾರ್ಷ್ಣ್ಯಶೌಕ್ಲ್ಯಾದೀನಿ ರೂಪಾಣಿ । ಯದ್ವಾ । ಅಧಾನಂತರಂ ಪೇಶನಾನಿ । ಪೇಶ ಇತಿ ಹಿರಣ್ಯನಾಮ । ಹಿರಣ್ಮಯದ್ಧಿರಣ್ಯಸದೃಶಾನಿ ಭಾಸ್ವರಾಣಿ ತೇಜಾಂಸಿ । ವಸಾನ ಆಚ್ಛಾದಯನ್ ಪೃಥಿವ್ಯಾ ನಾಭಾ ನಾಭೌ ನಾಭಿಸ್ಥಾನೀಯ ಇಳಾಯಾಸ್ಪದ ಉತ್ತರವೇದ್ಯಾಂ । ಏತದ್ವಾ ಇಳಾಯಾಸ್ಪದಂ ಯದುತ್ತರವೇದೀನಾಭಿಃ। ಏ. ಬ್ರಾ. ೧-೨೮ । ಇತ್ಯಾಮ್ನಾನಾತ್। ತಸ್ಯಾಂ ಜಾತಃ ಸಮುತ್ಪನ್ನೋಽರುಷ ಆರೋಚಮಾನೋ ಯೋಽಗ್ನಿರೇವಂವಿಧೋಽಸಿ ಸ ತ್ವಂ ಪುರೋಹಿತಃ ಪುರತೋ ನಿಹಿತಃ ಪೂರ್ವಸ್ಯಾಂ ದಿಶ್ಯಾಹವನೀಯಾಯತನೇ ಸ್ಥಾಪಿತಃ ಸನ್ನಿಹಾಸ್ಮಿನ್ಯಜ್ಞೇ ದೇವಾನಿಂದ್ರಾದೀನ್ಯಕ್ಷಿ । ಯಜ । ಪೂಜಯ ॥

॥ ಪ್ರತಿಪದಾರ್ಥ ॥

ಅಧ—ಮತ್ತು । ರಾಜನ್—ಪ್ರಭುವಾದ ಎಲೈ ಅಗ್ನಿಯೇ । ವಸ್ತ್ರಾಣಿ—ನಿನಗೆ ಆಚ್ಛಾದಕವಾದ । ಪೇಶನಾನಿ—ತೇಜೋರೂಪಗಳನ್ನು । ವಸಾನಃ—ಧರಿಸಿದವನಾಗಿಯೂ । ಪೃಥಿವ್ಯಾಃ—ಪೃಥ್ವಿಯ । ನಾಭಾ—

ನಾಭಿರೂಪವಾದ । **ಇಳಾಯಾಃ ಪದೇ**—ಉತ್ತರವೇದಿಸ್ಥಾನದಲ್ಲಿ । **ಜಾತಃ**—ಉತ್ಪನ್ನನಾಗಿಯೂ । **ಅರುಷಃ**—ಆರೋಚಮಾನನಾಗಿಯೂ । **ಅಗ್ನಿಃ**—ಪೂಜ್ಯನಾಗಿಯೂ । **ಪುರೋಹಿತಃ**—ಆಹವನೀಯಸ್ಥಾನದಲ್ಲಿ ಸ್ಥಾಪಿತನಾಗಿಯೂ ಇದ್ದು । **ಇಹ**—ಈ ಯಜ್ಞದಲ್ಲಿ । **ದೇವಾನ್**—ಇಂದ್ರಾದಿದೇವತೆಗಳನ್ನು । **ಯಕ್ಷಿ**—ಪೂಜಿಸು.

॥ ಭಾವಾರ್ಥ ॥

ಪ್ರಭುವಾದ ಎಲೈ ಅಗ್ನಿಯೇ, ನಿನಗೆ ವಸ್ತ್ರದಂತೆ ಆಚ್ಛಾದಕಗಳಾದ ತೇಜೋರೂಪಗಳನ್ನು ಧರಿಸಿದವನಾಗಿಯೂ ಪೃಥ್ವಿಯ ನಾಭಿರೂಪವಾದ ಉತ್ತರವೇದಿಸ್ಥಾನದಲ್ಲಿ ಉತ್ಪನ್ನನಾಗಿಯೂ, ಆರೋಚಮಾನನಾಗಿಯೂ ಪೂಜ್ಯನಾಗಿಯೂ ಆಹವನೀಯಸ್ಥಾನದಲ್ಲಿ ಸ್ಥಾಪಿತನಾಗಿಯೂ ಇದ್ದು ಈ ಯಜ್ಞದಲ್ಲಿ ಇಂದ್ರಾದಿದೇವತೆಗಳನ್ನು ಪೂಜಿಸು.

English Translation

Arrayed in splendid garments, that Agni (abides) on the navel of the earth, do you, royal (Agni), who are radiant, born on the foot-mark of Ila, offer worship here as purohita to the gods.

॥ ವಿಶೇಷವಿಷಯಗಳು ॥

ವಸ್ತ್ರಾಣಿ—ಇಲ್ಲಿ ಅಗ್ನಿಗೆ ತೇಜಸ್ಸೇ ಎಂದರೆ ಪ್ರಕಾಶವೇ ವಸ್ತ್ರವಾಗಿರುವುದು ಎಂದು ಹೇಳುವುದು ರೂಢಿಯಾಗಿದೆ.

ನಾಭಾ ಪೃಥಿವ್ಯಾಃ ಇಳಾಯಾಃ ಪದೇ—ಪೃಥ್ವಿಗೆ ನಾಭಿಸ್ಥಾನೀಯವಾದ ಯಜ್ಞದ ಉತ್ತರವೇದಿಯಲ್ಲಿ ಎಂದರ್ಥವು **ಇಳಾಯಾಃ ಪದೇ** ಎಂದರೆ ಉತ್ತರವೇದಿ ಎಂಬರ್ಥವನ್ನು ನಮರ್ಥನೆ ಮಾಡುವುದಕ್ಕಾಗಿ ಭಾಷ್ಯಕಾರರು—**ಏತದ್ವಾ ಇಳಾಯಾಸ್ಪದಂ ಯದುತ್ತರವೇದೀನಾಭಿಃ** ಎಂಬ ಐತರೇಯಬ್ರಾಹ್ಮಣವಾಕ್ಯವನ್ನು (ಐ. ಬ್ರಾ ೧ - ೭೮)ಉದಹರಿಸಿದಾರೆ. ಋಗ್ವೇದಸಂಹಿತೆಯಲ್ಲಿಯೂ ಉತ್ತರವೇದಿಯೆಂಬ ಅರ್ಥವಿರುವ ಕಡೆ **ಇಳಸ್ಪದೇ ಸಮಿಧ್ಯಸೇ ಸ ನೋ ವಸೂನ್ಯಾ ಭರ** (ಋ. ಸಂ. ೧೦.೧೯೧.೧) ಇತ್ಯಾದಿ ಋಕ್ಕುಗಳಲ್ಲಿ ಈ ಶಬ್ದ ಪ್ರಯೋಗವಿದೆ ಇನ್ನು **ನಾಭಾ ಪೃಥಿವ್ಯಾಃ** ಎಂಬ ಶಬ್ದಗಳಿಗೆ ಪೃಥಿವಿಯ ನಾಭಿಸ್ಥಾನವಾದ ಉತ್ತರವೇದಿ ಎಂಬರ್ಥವು ಸಹ ಋಗ್ವೇದದಲ್ಲಿಯೇ ಅನೇಕ ಕಡೆ ಉಕ್ತವಾಗಿದೆ. ಉಚಥ್ಯಪುತ್ರನಾದ ದೀರ್ಘತಮಾಃ ಎಂಬಪ್ರಸಿದ್ಧನಾದ ಋಷಿಯು.

ಪೃಚ್ಛಾಮಿ ತ್ವಾ ಪರಮಂತಂ ಪೃಥಿವ್ಯಾಃ ಪೃಚ್ಛಾಮಿ ತ್ವಾ ಭುವನಸ್ಯ ನಾಭಿಃ।

(ಋ. ಸಂ. ೧-೧೬೪-೩೪)

ಎಂದು ಪ್ರಶ್ನೆಮಾಡಿ ಅದಕ್ಕೆ ಉತ್ತರವನ್ನೂ—

ಇಯಂ ವೇದಿಃ ಪರೋ ಅಂತಃ ಪೃಥಿವ್ಯಾ ಅಯಂ ಯಜ್ಞೋ ಭುವನಸ್ಯ ನಾಭಿಃ ॥

(ಋ. ಸಂ. ೧-೧೬೪-೩೫)

ಎಂಬಲ್ಲಿಯೇ ಹೇಳಿದಾನೆ. ಉದಾಹರಣೆಯಾಗಿ ಕೊಟ್ಟಿರುವ ಈ ಎರಡು ಋಕ್ಕುಗಳೂ ಬ್ರಹ್ಮೋದ್ಯ ಎಂದರೆ ಬ್ರಹ್ಮತತ್ವವನ್ನು ವಿಮರ್ಶೆನಮಾಡುವ ಋಕ್ಕುಗಳು. ಎಂದರೆ ಅಶ್ವಮೇಧ ಯಜ್ಞದ ಮಧ್ಯದ ದಿನದಲ್ಲಿ ಹೋತೃವು ಯಜಮಾನ

ನನ್ನು ಪ್ರಶ್ನೆಮಾಡಲು ಅದಕ್ಕೆ ಯಜಮಾನನು ಎರಡನೆಯ ಋಕ್ಕಿನಿಂದ ಉತ್ತರವನ್ನು ಹೇಳುವನು. ಈ ವಿಧವಾದ ಬ್ರಹ್ಮವಿಮರ್ಶೆಯು ಮುಖ್ಯವಾದ ಯಜ್ಞಗಳಲ್ಲಿ ಹೋತೃವಿಗೂ ಬ್ರಹ್ಮನಿಗೂ ನಡೆಯುವುದು ರೂಢಿಯು. ಪ್ರಕೃತ ಋಕ್ಕಿನಲ್ಲಿ **ನಾಭಾ ಪೃಥಿವ್ಯಾಃ** ಎಂಬ ಶಬ್ದಗಳು ಉದಹೃತವಾಗಿರ ವ ಋಕ್ಕಿನಲ್ಲಿ **ಭುವನಸ್ಯ ನಾಭಿಃ** ಎಂಬ ಶಬ್ದಗಳಿಂದ ಪ್ರತಿಪಾದಿತವಾಗಿವೆ. ಆದ್ದರಿಂದ ಈ ಎರಡು ವಿಧ ಶಬ್ದಗಳಿಗೂ ಒಂದೇ ವಿಧವಾದ ಅರ್ಥವಿರುವುದು. ಭುವನಕ್ಕೆ ಯಜ್ಞವೇದಿಯು ಹೇಗೆ ನಾಭಿಸ್ಥಾನವು ಎಂಬ ವಿಷಯವನ್ನು ಇಲ್ಲಿ ಸೂಕ್ಷ್ಮವಾಗಿ ವಿಮರ್ಶೆಮಾಡುವುದು ಅವಶ್ಯಕವು.

ನಾಭಿಶಬ್ದಕ್ಕೆ, ವಾಸಸ್ಥಾನ, ವ್ಯಾಪಕಸಂಬಂಧ, ಸಂನಾಹಕ ಎಂದರೆ ರಕ್ಷಕ, ಬಂಧಕ, ಉತ್ಪತ್ತಿಸ್ಥಾನ ಇತ್ಯಾದಿಯಾಗಿ ಬೇರೆ ಬೇರೆ ಅರ್ಥಗಳಿರುವುದನ್ನು ಹಿಂದೆ ತಿಳಿಸಿದೆ. ಪ್ರಕೃತವಾದ ಋಕ್ಕಿನಲ್ಲಿ **ಯಜ್ಞವೇ ನಾಭಿ** ಯೆಂದು ಹೇಳಿದರೆ ಈ ಎಲ್ಲಾ ಅರ್ಥಗಳಲ್ಲೂ ಈ ಪದದ ಪ್ರಯೋಗವನ್ನು ತೋರಿಸಬಹುದು **ಪೃಚ್ಛಾಮಿ ಯತ್ರ ಭುವನಸ್ಯ ನಾಭಿಃ** ಎಂದು ಹಿಂದಿನ ಋಕ್ಕಿನಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರರೂಪವಾಗಿ ಈ ವಾಕ್ಯವಿದೆ ಯಜ್ಞವೇ ಸಕಲ ವಿಶ್ವಗಳ ಉತ್ಪತ್ತಿಗೂ, ಸ್ಥಿತಿಗೂ ಕಾರಣವಾಗಿ ದೇವಮಾನವಾದಿಸಕಲ ಭೂತಗಳಿಗೂ ಪರಸ್ಪರ ಸಂಬಂಧವನ್ನು ಬೆಳೆಸುವ ಬಂಧಕಸಾಧನವಾಗಿರುವುದರಿಂದ ಇದು ನಾಭಿರೂಪದಲ್ಲೆದೆಯೆಂದು ತಾತ್ಪರ್ಯ

ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥

(ಭ ಗೀ. ೩-೧೧)

ದೇವಾನ್ ಇಂದ್ರಾದೀನ್ ಭಾವಯತ ವರ್ಧಯತ ಅನೇನ ಯಜ್ಞೇನ । ತೇ ದೇವಾ ಭಾವಯಂತು ವೃಷ್ಟ್ಯಾದಿನಾ ಅಪ್ಯಾಯಯಂತು ವಃ ಯುಷ್ಮಾನ್ । ಏವಂ ಪರಸ್ಪರಂ ಅನೋನ್ಯಂ ಭಾವಯಂತಃ ಶ್ರೇಯಃ ಪರಂ ಬ್ರಹ್ಮವಿಜ್ಞಾನಸಾಪ್ತಿಂ ಕ್ರಮೇಣ ಅವಾಪ್ಸ್ಯಥ। ಸ್ವರ್ಗಂ ವಾ ಪರಂ ಶ್ರೇಯಃ ಅವಾಪ್ಸ್ಯಥ ।

(ಶಂ. ಭಾ.)

ಯಜ್ಞವೇ ದೇವತೆಗಳಿಗೆ ಅನ್ನರೂಪವೆಂದೂ, ಈ ಅನ್ನವನ್ನು ಮಾನವರು ಯಜ್ಞರೂಪದಿಂದ ಅರ್ಪಿಸಬೇಕೆಂದೂ, ಇದರಿಂದ ತೃಪ್ತರಾದ ದೇವತೆಗಳು ವೃಷ್ಟ್ಯಾದಿಗಳಿಂದ ಮಾನವರ ಸ್ಥಿತಿಗೂ, ವೃದ್ಧಿಗೂ ಕಾರಣರಾಗಬೇಕೆಂದೂ ಭಗವದ್ಗೀತೆಯಲ್ಲಿ ಉಪದೇಶವಿದೆ. ಇದರಿಂದ ಸಮಸ್ತವಾದ ಶ್ರೇಯಸ್ಸಿಗೂ ಯಜ್ಞವೇ ಸಾಧನವೆಂದಾಯಿತು. ಈ ಯಜ್ಞವು ಲೋಕಕ್ಕೆಲ್ಲಾ ಶ್ರೇಯಃಸಾಧನವು ಎಂಬ ತತ್ತ್ವವನ್ನರಿತು ಇದನ್ನು ಸೇವಾದೃಷ್ಟಿಯಿಂದಾಚರಿಸಿದರೆ ಇದು ಬ್ರಹ್ಮಜ್ಞಾನಕ್ಕೂ ಸಾಧನವಾಗುವುದೆಂದು ಶಂಕರಾದಿಗಳು ವಿವರಿಸಿದ್ದಾರೆ

ಈ ಯಜ್ಞತತ್ತ್ವವು ವಿಶ್ವದ ಐಕ್ಯವನ್ನೂ ಈ ಐಕ್ಯದ ನೆಲೆಯು ಪರಬ್ರಹ್ಮವೆಂಬ ತತ್ತ್ವವನ್ನೂ ತಿಳಿಸುತ್ತದೆ. ಉಪನಿಷದಾದಿಗಳಲ್ಲಿ ಯಾವ ಮೂಲತತ್ತ್ವವನ್ನು ಪರಬ್ರಹ್ಮನೆಂದು ಕರೆದಿದೆಯೋ ಅದನ್ನು ಸಂಹಿತಾ ಮತ್ತು ಬ್ರಾಹ್ಮಣಗಳಲ್ಲಿ ಪ್ರಜಾಪತಿಯೆಂದು ಕರೆದಿದೆ. ಮತ್ತು ಯಜ್ಞಕ್ಕೂ ಪ್ರಜಾಪತಿಗೂ ತಾದಾತ್ಮ್ಯವನ್ನು ಹೇಳಿದೆ. ವಿಶ್ವಸೃಷ್ಟಿಯು ಪ್ರಜಾಪತಿಯ ಯಜ್ಞದ ಮತ್ತು ತಪಸ್ಸಿನ ಫಲವು. ಜಗತ್ಕಾರಣನೂ, ಜಗತ್ಸೃಷ್ಟಿಗೆ ಪೂರ್ವಭಾವಿಯಾಗಿ ಅದ್ವಿತೀಯನಾಗಿಯೂ ಇದ್ದ ಪ್ರಜಾಪತಿಯು ಸೃಷ್ಟಿಸಾಧನವಾದ ಯಜ್ಞವನ್ನು ನಿರ್ವಹಿಸಬೇಕಾದರೆ ಅದಕ್ಕೆ ಆಹುತಿಯಾಗಿ ತನ್ನನ್ನೇ ಅರ್ಪಿಸಬೇಕಾಯಿತು

यो आत्मदा बलदा यस्य विश्व उपासते प्रशिषं यस्य देवाः ।
यस्य छायामृतं यस्य मृत्युः कस्मै देवाय हविषा विधेम ।

(ऋ. सं. १०-१२१-२)

इत्यादियागि वर्णितवागिरुवंतॆ तन्न विश्वयज्ञदल्लि तन्नन्नॆ अर्पिसि प्रजापतियु सृष्टिकार्यवन्नु निर्वहिसिदनु अवन आज्ञॆयन्नॆ देवादिगळॆल्लरू निर्वहिसुत्तारॆ. मृत्युवू, अमृतत्ववू अवन छायॆगळु. अंतहॆ विश्वहेतुवाद प्रजापतिगॆ नावू सह यज्ञादिकर्मगळन्नाचरिसि पुरोडाशादिगळिंद आराधिसोण एंदु यज्ञद प्राशस्त्यवन्नु स्तुतिसिदॆ. यज्ञवु सृष्टिय मूलवु; स्थितिगॆ हेतुवु मत्तु श्रेयस्सिगॆ साधकवु. ई विषयवन्नॆ शतपथब्राह्मणदल्लि ई रीति वर्णिसिदॆ.

अथ देवाः । असोन्यमस्मिन्नेव जुह्वतश्चेरुस्तेभ्यः प्रजापतिरात्मानं प्रददौ यज्ञो वै नेषामास यज्ञो हि देवनामन्नं ।

(श. ब्रा. ११-१-६-१)

देवतॆगळु यज्ञवन्नाचरिसि परस्परानुकूलिकवाद आहुतिगळन्नर्पिसिदरु. आग प्रजापतियु अवरिगॆ तन्नन्नॆ अर्पिसिदनु. आग यज्ञवे देवतॆगळ स्वत्तायितु. आदुदरिंदलॆ यज्ञवन्नु देवतॆगळ अन्नवॆंदु [एंदरॆ अन्नसाधनवॆंदु] करॆयुत्तारॆ. इदल्लदे,

स एतेन यज्ञेन । देवेभ्य आत्मानं निरक्रीणीत स यदाज्यमुपैति यथैव तत्प्रजापतिर्देवेभ्य आत्मानं प्रायच्छदेवमेवैष एतद्देवेभ्य आत्मानं प्रयच्छति तस्मादु संयत एवैतामग्निं रात्रिं चिचरिषेदथा हविषा चरेदेवमग्निं हविर्ह्येष देवानां भवति ॥

(श. ब्रा. ११-१-६-३)

देवतॆगळ यज्ञदिंद तृप्तनाद प्रजापतियु अवरिगॆ तन्नन्नॆ अर्पिसिदनंतर पुनः यज्ञप्रतिनिधियाद तन्न प्रतिरूपवन्नु सृष्टिसिदनु. ई रीति यज्ञार्थवागि तन्न प्रतिरूपवन्नु सृष्टिसि यज्ञवन्नु प्रतिबिंबिसिदुदरिंद तिळिदवरु प्रजापतियन्नॆ यज्ञवॆंब पर्यायनामदिंद करॆयुत्तारॆ.

अथ यदाज्यं तनुते । यज्ञेनैवैतद्देवेभ्य आत्मानं निष्क्रीणीते यथैव तत्प्रजापतिर्निरक्रीणीतैवं अथ यद्धविर्निर्वपति हविषैवैतद्यज्ञं निष्क्रीणाति हविरनुवाक्यानुवाक्यामवदानेनावदानं याज्यया याज्यां वषट्कारेण वषट्कारं.... ....॥

(श. ब्रा. ११-१-६-४)

प्रजापतिय मार्गवन्नॆ अनुसरिसि यावनु यज्ञकर्मवन्नाचरिसुत्तानॆयो मत्तु तन्न ऋणवन्नु तीरिसि आ देवऋणदिंद मुक्तनागुत्तानॆयो अवनु प्रजापतिय सृष्टिकार्यदल्लि सॆरवागुत्तानॆ एंदु शतपथदल्लि हेळिरुव अंशवन्नॆ भगवद्गीतॆयल्लू सह,

ಇಷ್ಟಾನ್ ಭೋಗಾನ್ ಹಿ ವೋ ದೇವಾ ದಾಸ್ಯಂತೇ ಯಜ್ಞಭಾವಿತಾಃ ।
ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥
ಯಜ್ಞಶಿಷ್ಟಾಶಿನಸ್ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ ।
ತೇ ತ್ವಘಂ ಭುಂಜತೇ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥

(ಭ. ಗೀ. ೩-೧೨-೧೩)

ಯಜ್ಞದಿಂದ ತೃಪ್ತರಾದ ದೇವತೆಗಳು ಮಾನವರಿಗೆ ಅದಕ್ಕೆ ಪ್ರತಿಯಾಗಿ ಅವರವರ ಇಷ್ಟಾರ್ಥಗಳನ್ನು ಕೊಡುತ್ತಾರೆ. ದೇವತೆಗಳಿಂದ ಅನ್ನಾದಿಸಂಪತ್ತುಗಳನ್ನು ಪಡೆದು ಪುನಃ ಅದಕ್ಕೆ ಪ್ರತಿಯಾಗಿ ದೇವತೆಗಳಿಗೆ ತೃಪ್ತಿಕರವಾದ ಯಜ್ಞಾಹುತಿಯನ್ನರ್ಪಿಸದಿದ್ದರೆ ಅವನು ಚೋರನಾಗುತ್ತಾನೆ. ಯಜ್ಞಕರ್ಮವನ್ನು ನೆರವೇರಿಸುವ ಸತ್ಪುರುಷರು ಕಿಲ್ಬಿಷದಿಂದ ಮುಕ್ತರಾಗುತ್ತಾರೆ ಅದಿಲ್ಲದವರು ಪಾಪಿಗಳಾಗಿ ಪಾಪಫಲವನ್ನನುಭವಿಸುತ್ತಾರೆ. ಏಕೆಂದರೆ ಈ ಯಜ್ಞವು ವಿಶ್ವಕ್ಕೆಲ್ಲಾ ಏಕಸಂಬಂಧವನ್ನು ತೋರಿಸತಕ್ಕ ತಂತುವಾಗಿದೆ ಇದನ್ನೇ ವಿಶ್ವಚಕ್ರವೆಂದೂ ಕರೆದಿದೆ ಉದಾಹರಣೆಗೆ—

ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ।
ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮಸಮುದ್ಭವಃ ॥
ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ ।
ತಸ್ಮಾತ್ಸರ್ವಗತಂ ಬ್ರಹ್ಮ ನಿತ್ಯಂ ಯಜ್ಞೇ ಪ್ರತಿಷ್ಠಿತಂ ॥
ಏವಂ ಪ್ರವರ್ತಿತಂ ಚಕ್ರಂ ನಾನುವರ್ತಯತೀಹ ಯಃ ।
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸ ಜೀವತಿ ॥

(ಭ ಗೀ. ೩-೧೪ ರಿಂದ ೧೬)

ಕರ್ಮರೂಪವಾದ ಯಜ್ಞದಿಂದ ಪರ್ಜನ್ಯವೂ (ವೃಷ್ಟಿಯೂ) ಪರ್ಜನ್ಯದಿಂದ ಅನ್ನವೂ ಅನ್ನದಿಂದ ಭೂತಗಳೂ ಉತ್ಪನ್ನವಾಗುವುವು. ಈ ಯಜ್ಞರೂಪವಾದ ಕರ್ಮವು ಬ್ರಹ್ಮನಿಂದ ಉತ್ಪನ್ನವಾಯಿತು ಆದುದರಿಂದ ವಿಶ್ವದ ಸೃಷ್ಟಿಯಿಂದ ಪ್ರಾರಂಭಿಸಿ ಸಕಲವಿಧವಾದ ವ್ಯವಹಾರಗಳಿಗೂ, ಪುನರಾವೃತ್ತಿರೂಪವಾದ ವಿಶ್ವಚಕ್ರಕ್ಕೂ ಸಹ ಮೂಲನಾದ ಪರಬ್ರಹ್ಮನೇ ಯಜ್ಞದಲ್ಲಿ ನಿತ್ಯವಾಗಿ ಪ್ರತಿಷ್ಠಿತನಾಗಿದ್ದಾನೆ ಯಾವ ವ್ಯಕ್ತಿಯು ಯಜ್ಞರೂಪವಾದ ಈ ವಿಶ್ವತತ್ತ್ವವನ್ನರಿಯದೆ, ಸೃಷ್ಟವಾದ ಈ ವಿಶ್ವಚಕ್ರದ ಹಾದಿಯನ್ನನುಸರಿಸದೆ, ಸ್ವೇಚ್ಛೆಯಾಗಿರುವನೋ ಅವನು ಪಾಪಿಷ್ಠನು ಇತ್ಯಾದಿಯಾಗಿ ಗೀತಾದಿಗಳಲ್ಲಿ ಶ್ರುತಿವಾಕ್ಯಪ್ರತಿಪಾದಿತವಾದ ಯಜ್ಞತತ್ತ್ವವು ವಿವರಿಸಲ್ಪಟ್ಟಿದೆ ' ನಾಭ ಪೃಥಿವ್ಯಾಃ ' ಎಂದು ಪ್ರಕೃತವಾದ ಋಕ್ಕಿನಲ್ಲಿ ವರ್ಣಿತವಾಗಿರುವ ಈ ಯಜ್ಞತತ್ತ್ವವನ್ನು ಋಕ್ಸಂಹಿತೆಯ ಬೇರೆ ಭಾಗಗಳಲ್ಲಿಯೂ ಇದೇ ರೀತಿ ಪ್ರಶಂಸಿಸಿದೆ ಉದಾಹರಣೆಗೆ—

ಯಜ್ಞೇನ ಯಜ್ಞಮಯಜಂತ ದೇವಾಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥

(ಋ. ಸಂ. ೧-೧೬೪-೫೦ ಮತ್ತು ೧೦-೯೦-೧೬)

ದೇವತೆಗಳು ತಮ್ಮ ಸಂಕಲ್ಪರೂಪವಾದುದೂ, ಧ್ಯಾನಾತ್ಮಕವಾದುದೂ ಆದ ಯಜ್ಞದಿಂದ ಯಜ್ಞಸ್ವರೂಪಿಯಾದ ಪ್ರಜಾಪತಿಯನ್ನು ಪೂಜಿಸಿದರು. ಪ್ರಾಪಂಚಿಕವಾದ ಧರ್ಮಗಳಿಗೆಲ್ಲಾ ಈ ವಿಧವಾದ ಯಜ್ಞವೇ ಮೂಲವಾಯಿತು

ಈ ಯಜ್ಞದ ಧರ್ಮಗಳೇ ಅಂತರಿಕ್ಷದಲ್ಲಿ ಸ್ಥಾಪಿತವಾಗಿ ದ್ಯುಲೋಕಸ್ಥರಾದ ದೇವತೆಗಳನ್ನು ಅವರವರ ಸ್ಥಾನಗಳಲ್ಲಿರಿಸುತ್ತವೆ ಯಜ್ಞದಿಂದಲೇ ಪ್ರಜಾಪತಿಯಿಂದ ಸೃಷ್ಟವಾದ ಸಕಲ ಭೂತಗಳೂ ತಮ್ಮ ಸ್ಥಿತಿಹೇತುವಾದ ಅನ್ನವನ್ನೂ, ಶಕ್ತಿಯನ್ನೂ ಪಡೆಯುತ್ತವೆ ಆದುದರಿಂದ ಯಜ್ಞದ ಆವಶ್ಯಕತೆಯನ್ನು ತಿಳಿಸುತ್ತಾ ತೈತ್ತಿರೀಯಸಂಹಿತೆಯಲ್ಲಿ,

ಪ್ರಜಾಪತಿಃ ಪ್ರಜಾ ಅಸೃಜತ ತಾಸ್ಸೃಷ್ಟಾಃ ಕ್ಷುಧಂ ನ್ಯಾಯಂತ್ಸ ಏತಂ ನವರಾತ್ರಮಪಶ್ಯತ್ತಮಾ-
ಹರತ್ತೇನಾಯಜತ ತತೋ ವೈ ಪ್ರಜಾಭ್ಯೋಕಲ್ಪತ ಯರ್ಹಿ ಪ್ರಜಾಃ ಕ್ಷುಧಂ ನಿಗಚ್ಛೇಯು-
ಸ್ತರ್ಹಿ ನವರಾತ್ರೇಣ ಯಜೇತೇಮೇ ಹಿ ವಾ ಏತಾಸಾಂ ಲೋಕಾ ಅಕ್ಲೃಪ್ತಾ ॥

(ತೈ. ಸಂ. ೭-೨-೪-೧)

ಪ್ರಜಾಪತಿಯು ಪ್ರಜೆಗಳನ್ನು ಸೃಷ್ಟಿಸಿದನಂತರ ಅವು ಹಸಿವಿನಿಂದ ಪೀಡಿತವಾದವು. ಅವುಗಳ ಕ್ಷುತ್ತಿನ ಶಮನಕ್ಕಾಗಿ ನವರಾತ್ರಾತ್ಮಕನಾದ ಯಜ್ಞವನ್ನು ವೀಕ್ಷಿಸಿ ಅದರಿಂದ ಯಜ್ಞವನ್ನು ನಿರ್ವಹಿಸಿದನು. ಅದರಿಂದ ಆ ಪ್ರಜೆಗಳ ಕ್ಷುತ್ತಿನ ಶಮನವಾಯಿತು. ಆದುದರಿಂದ ಕ್ಷುತ್ತಿನ ಶಮನಕ್ಕಾಗಿ ಯಜ್ಞವು ಆಚರಿಸಲ್ಪಡತಕ್ಕದ್ದು ನಿಯತವಾಗಿದೆ. ಆ ಯಜ್ಞನೇ ಮೂರು ಲೋಕಗಳನ್ನೂ ಒಂದು ಸ್ಥಿತಿಯಲ್ಲಿಯೂ ನಿಯಮನದಲ್ಲಿಯೂ ಇಡುತ್ತದೆ, ಹೇಗೆಂದರೆ,

ಕಲ್ಪಂತೇಽಸ್ಯಾ ಇಮೇ ಲೋಕಾ ಊರ್ಜಂ ಪ್ರಜಾಸು ದಧಾತಿ ತ್ರಿರಾತ್ರೇಣೈವೇಮಂ ಲೋಕಂ
ಕಲ್ಪಯತಿ ತ್ರಿರಾತ್ರೇಣಾಂತರಿಕ್ಷಂ ತ್ರಿರಾತ್ರೇಣಾಮುಂ ಯೋಽಯಂ ಯಥಾ ಗುಣೇ ಗುಣಮನ್ವಸ್ಯ-
ತ್ಯೇವಮೇವ ತಲ್ಲೋಕೇ ಲೋಕಮನ್ವಸ್ಯತಿ ಧೃತ್ಯಾ ಅಶಿಥಿಲಂ ಭಾವಾಯ.....॥

(ತೈ. ಸಂ, ೭-೨-೪-೨)

ನವರಾತ್ರಯುಕ್ತವಾದ ಈ ಯಜ್ಞದಿಂದ ಲೋಕತ್ರಯಕ್ಕೂ ಸ್ಥೈರ್ಯವು ಸೇರಿಯಿತು. ತ್ರಿರಾತ್ರದಿಂದ ಪೃಥ್ವಿಗೂ, ತ್ರಿರಾತ್ರದಿಂದ ಅಂತರಿಕ್ಷಕ್ಕೂ, ಉಳಿದ ತ್ರಿರಾತ್ರದಿಂದ ದ್ಯುಲೋಕಕ್ಕೂ ಪ್ರಜಾಪತಿಯು ಸ್ಥಿತಿಶಕ್ತಿಯನ್ನು ಈ ಯಜ್ಞದ ಶಕ್ತಿಯಿಂದ ಕಲ್ಪಿಸಿದನು. ಓತಪ್ರೋತರೂಪದಿಂದ ತಂತುಸಿನೊಡನೆ ತಂತುವನ್ನು ನೇಯಿಸಿ ಪಟವನ್ನು (ಬಟ್ಟೆಯನ್ನು) ನಿರ್ಮಿಸುವಂತೆ, ಶೈಥಿಲ್ಯವನ್ನು ತಪ್ಪಿಸುವುದಕ್ಕೂ ಪುನಃ ವಿಶ್ವಕ್ಕೆಲ್ಲಾ ಒಂದೇ ಸಂಬಂಧರೂಪವಾದ ಶಕ್ತಿಯನ್ನು ಉತ್ಪಾದನೆ ಮಾಡಿ ಮೂರು ಲೋಕಗಳೂ ಅವುಗಳ ನಿಯತವಾದ ಸ್ಥಿತಿಯಲ್ಲಿರುವುದಕ್ಕೂ ಈ ಯಜ್ಞದಿಂದ ಲೋಕತ್ರಯಕ್ಕೂ ಓತಪ್ರೋತರೂಪವಾದ ಸಂಬಂಧವನ್ನು ಕಲ್ಪಿಸಿದನು. ಈ ಯಜ್ಞವು ವಿಶ್ವಜೀವನದ ನಾಡಿಯಾಗಿದೆ. ಅದನ್ನು ಶತಪಥದಲ್ಲಿ ವರ್ಣಿಸುತ್ತಾ,

ಸರ್ವೇಷಾಂ ವಾ ಏಷ ಭೂತಾನಾಗಂ ಸರ್ವೇಷಾಂ ದೇವಾನಾಮಾತ್ಮಾ ಯದ್ಯಜ್ಞಸ್ತಸ್ಯ ಸಮೃದ್ಧಿ-
ಮನು ಯಜಮಾನಃ ಪ್ರಜಯಾ ಪಶುಭಿರ್ಯಧ್ಯತೇ ।

(ಶ ಬ್ರಾ. ೧೪-೩-೨-೧)

ಈ ಯಜ್ಞವು ಸಕಲ ಮಾನವರ ಮತ್ತು ಸಕಲ ದೇವತೆಗಳ ಆತ್ಮವೇ ಆಗಿದೆ. ಯಾವನು ಈ ಯಜ್ಞವನ್ನು ನಿರ್ವಹಿಸುತ್ತಾನೋ ಅವನು ಸತ್ಸಂತಾನವನ್ನೂ ಪಶುಸಂಪತ್ತನ್ನೂ ಪಡೆಯುತ್ತಾನೆ. ಮತ್ತು,

ಸ ಯದಗ್ನೌ ಜುಹೋತಿ । ತದ್ದೇವೇಷು ಜುಹೋತಿ ತಸ್ಮಾದ್ದೇವಾಃ ಸಂತೃಪ್ತಾ ಯತ್ಸದಸಿ ಭಕ್ಷಯಂತಿ ತನ್ಮನುಷ್ಯೇಷು ಜುಹೋತಿ ತಸ್ಮಾನ್ಮನುಷ್ಯಾಃ ಸಂತೃಪ್ತಾ ಯದ್ಧವಿರ್ಧಾನಯೋರ್ನಾರಾಶಗ್ಂಸಾಃ ಸೀದಂತಿ ತತ್ಪಿತೃಷು ಜುಹೋತಿ ತಸ್ಮಾತ್ಪಿತರಃ ಸಂತಿ ॥

(ಶ. ಬ್ರಾ. ೨-೨-೨-೨೫)

ಅಗ್ನಿಯಲ್ಲಿ ಹುತವಾದುದು ದೇವತೆಗಳಿಗೆ ಅರ್ಪಿತವಾಗುತ್ತದೆ. ಆದುದರಿಂದಲೇ ದೇವತೆಗಳು ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡಿದ್ದಾರೆ. ಸದಸ್ಸಿನಲ್ಲಿ ಹಂಚಲ್ಪಟ್ಟ (ಸೋಮ) ರಸದಿಂದ ಮಾನವರ ಸ್ಥಿತಿಯಿದೆ. ನಾರಾಶಂಸಪಾತ್ರೆಯಿಂದ ಅರ್ಪಿತವಾದ ಆಹುತಿಯು ಪಿತೃಗಳನ್ನು ತೃಪ್ತಿಪಡಿಸುತ್ತದೆ. ಆದುದರಿಂದ ಮಾನವನು ತನ್ನ ದೇವಋಣವನ್ನೂ ಪಿತೃಋಣವನ್ನು ಸಹ ಯಜ್ಞಕರ್ಮದಿಂದಲೇ ತೀರಿಸಬೇಕು. ಇದಿಲ್ಲದೇ ಇವನಿಗೆ ಋಣದಿಂದ ವಿಮೋಚನೆಯಿಲ್ಲ. ತೈತ್ತಿರೀಯ ಸಂಹಿತೆಯಿಂದ ಹಿಂದೆ ಉದಹರಿಸಿದ,

" ತಲ್ಲೋಕೇ ಹ ಲೋಕಮನ್ವಸ್ಯತಿ ಧೃತ್ಯಾ ಅಶಿಥಿಲಂ ಭಾವಾಯ " ।

(ತೈ. ಸಂ ೭-೨-೪-೨)

ಎಂಬ ವಾಕ್ಯದಲ್ಲಿ ವಿಶ್ವದ ಅಸ್ತಿತ್ವವು ಶಿಥಿಲವಾಗದೇ ಭದ್ರವಾಗಿರುವುದಕ್ಕಾಗಿಯೂ ಮತ್ತು ಮೂರು ಲೋಕಗಳ ಸಂಬಂಧವೂ ಓತಪ್ರೋತಗಳಂತೆ ಹೆಣೆದುಕೊಂಡಿರುವುದಕ್ಕಾಗಿಯೂ ಸಹ ಯಜ್ಞಕರ್ಮದ ಅವಶ್ಯಕತೆಯಿದೆಯೆಂದು ತಿಳಿಸಿದೆ. **ಋಣತ್ರಯದ** ವಿಷಯವನ್ನು ಹೇಳುವಾಗಲೂ ಸಹ ಈ ಪರಸ್ಪರ ಬಂಧನವು ವರ್ಣಿತವಾಗುತ್ತದೆ ಉದಾಹರಣೆಗೆ ಶತಪಥ ಬ್ರಾಹ್ಮಣದಲ್ಲಿ,

ಋಣಗ್ಂ ಹವೈ ಜಾಯತೇ ಯೋಽಸ್ತಿ ಸ ಜಾಯಮಾನ ಏವ ದೇವೇಭ್ಯ ಋಷಿಭ್ಯಃ ಪಿತೃಭ್ಯೋ ಮನುಷ್ಯೇಭ್ಯಃ ॥

(ಶ. ಬ್ರಾ ೧-೭-೨-೧)

ಪ್ರತಿಯೊಬ್ಬ ವ್ಯಕ್ತಿಯ ಸ್ಥಿತಿಯಕಾಲದಲ್ಲೂ ಸಹ ಅವನ ಜನ್ಮದಿಂದಲೇ ಪ್ರಾಪ್ತವಾದ ದೇವಋಣವೂ, ಋಷಿಋಣವೂ, ಪಿತೃಋಣವೂ ಅವನೆ ಮೇಲಿನ ಹೊರೆಯಾಗಿದ್ದೇ ಇರುತ್ತದೆ.

ಸ ಯದೇವ ಋಜೀತ । ತೇನ ದೇವೇಭ್ಯ ಋಣಂ ಜಾಯತೇ ತದೃಷಿಭ್ಯ ಏತತ್ಕರೋತಿ ಯದೇಭ್ಯೋ ಜುಹೋತಿ ॥

(ಶ. ಬ್ರಾ ೧-೭-೨-೨)

ಈ ಋಣದಿಂದ ಮುಕ್ತನಾಗಿ ವಿಶ್ವದ ಸ್ಥಿತಿಯಲ್ಲಿ ತಾನೂ ಸಹ ಭಾಗವಹಿಸುವಂತೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಬೇಕಾದರೆ ಪ್ರತಿಯೊಂದು ವ್ಯಕ್ತಿಯೂ ಯಜ್ಞಮಾಡಿ ದೇವಋಣವನ್ನು ತೀರಿಸಿ ಆ ಋಣದಿಂದ ಮುಕ್ತನಾಗಲೇಬೇಕು

ಜಾಯಮಾನೋ ವೈ ಬ್ರಾಹ್ಮಣಸ್ತ್ರಿಭಿರ್ಋಣವಾ ಜಾಯತೇ ಬ್ರಹ್ಮಚರ್ಯೇಣರ್ಷಿಭ್ಯೋ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯ ಏಷ ವಾ ಅನೃಣೋ ಯಃ ಪುತ್ರೀ ಯಜ್ವಾ ಬ್ರಹ್ಮಚಾರಿವಾಸೀ ॥

(ತೈ. ಸಂ. ೬-೩-೧೦-೫)

ಇದಲ್ಲದೆ ಬ್ರಾಹ್ಮಣನಾದವನು ! ಹುಟ್ಟುವಾಗಲೇ ಋಷಿಋಣ, ದೇವಋಣ, ಪಿತೃಋಣಗಳೆಂಬ ಮೂರು ವಿಧವಾದ ಋಣಗಳನ್ನು ಹೊತ್ತುಕೊಂಡೇ ಹುಟ್ಟುವನು. ಬ್ರಹ್ಮಚರ್ಯವ್ರತದಿಂದ ಗುರುಕುಲದಲ್ಲಿ ವಾಸಿಸುತ್ತಾ ನಿಯಮವಾಗಿ ಗುರುವಿನಿಂದ ಉಪದೇಶಪೂರ್ವಕವಾಗಿ ವೇದಾಧ್ಯಯನಮಾಡುವುದರಿಂದ ಋಷಿಋಣವು ತೀರುವುದು. ಯಜ್ಞಾದಿ ಗಳಿಂದ ದೇವತೆಗಳನ್ನು ಆರಾಧಿಸುವುದರಿಂದ ದೇವಋಣವು ತೀರುವುದು. ವಿವಾಹವಾದ ಪತ್ನಿಯಲ್ಲಿ ಧರ್ಮಪ್ರಜೋ ತ್ಪಾದನೆಮಾಡುವುದರಿಂದ ಪಿತೃಋಣವು ತೀರುವುದು ಎಂದು ತೈತ್ತರೀಯಸಂಹಿತೆ (ಯಜುರ್ವೇದ) ಯಲ್ಲಿಯೂಹೇಳಿದೆ ಇತ್ಯಾದಿಯಾಗಿ ವಿಶ್ವತತ್ತ್ವದಲ್ಲಿ ಪ್ರತಿವ್ಯಕ್ತಿಯೂ ಸಹ ತನ್ನ ಪ್ರಭಾವಪೂರಿತವಾದ ಅಸ್ತಿತ್ವವನ್ನು ಹೊಂದಬೇಕಾದರೆ ಯಜ್ಞವು ಈ ಸಾಮಾನ್ಯವಿಶೇಷಗಳಿಗೆ ಸಂಬಂಧವನ್ನು ಕಲ್ಪಿಸುವ ಸೂತ್ರವಾಗಿರುತ್ತದೆ. ಸೂತ್ರರೂಪವಾದ ಈ ಯಜ್ಞವು ಸಹ ವಿಶ್ವದ ವಿಕಾಸ ಮತ್ತು ಸಂಕೋಚಗಳೊಡನೆ ತಾನೂ ಸಹ ಒಂದು ಸಲ ಬೆಳೆಯುತ್ತದೆ. ಇನ್ನೊಂದು ಸಲ ಸಂಕುಚಿತವಾಗುತ್ತದೆ. ವಿಶ್ವಗತಿಯೊಡನೆ ತನ್ನ ಗತಿಯನ್ನು ಹೊಂದಿಸಿಕೊಳ್ಳುತ್ತದೆ ಈ ಅಂಶವನ್ನು ವಿವರಿ ಸುತ್ತಾ ಶತಪಥಬ್ರಾಹ್ಮಣದಲ್ಲಿ ಯಜ್ಞಶಬ್ದದ ನಿರ್ವಚನವನ್ನು ತಿಳಿಸಿದೆ.

ಅಥ ಯಸ್ಮಾದ್ಯಜ್ಞೋ ನಾಮ । ಫ್ನಂತಿ ವಾ ಏನಮೇತದ್ಯದಭಿಷುಣ್ವಂತಿ ತದ್ಯದೇನಂ ತನ್ವತೇ ತದೇನಂ ಜನಯಂತಿ ಸ ತಾಯಮಾನೋ ಜಾಯತೇ ಸ ಯನ್ ಜಾಯತೇ ತಸ್ಮಾದ್ಯಜ್ಞೋ ಯಜ್ಞೋ ಹ ವೈ ನಾಮೈತದ್ಯಜ್ಞ ಇತಿ ।

(ಶ. ಬ್ರಾ ೩-೯-೪-೨೩)

ಅಭಿಷವಕಾಲದಲ್ಲಿ ಸೋಮಲತೆಯನ್ನು ಜಜ್ಜಿ ಹೆಣೆಯಮಾಡುತ್ತಾರೆ. ಪುನಃ ಉತ್ಪನ್ನವಾಗುವಂತೆ ಮಾಡುತ್ತಾರೆ. ಪ್ರಸಾರರೂಪವಾದ ಗತಿಯೊಂದಿಗೆ ಉತ್ಪನ್ನವಾಗುವುದರಿಂದ **ಯಜ್ಞ** ವೆಂಬ ಹೆಸರು ಪ್ರಸಿದ್ಧವಾಯಿತು ಎಂದು ಅವಶ್ಯಕತೆಗಳಿಗೆ ತಕ್ಕಂತೆ ಸಂಕೋಚವಿಕಾಸಗಳೂ ಇವೆಯೆಂದು ತಿಳಿಸಿದೆ. ಮತ್ತು ವಿಶ್ವದ ಸ್ಥಿತಿಗತಿಗಳಿಗನುಗುಣ ವಾಗಿಯೇ ಇರುವುದರಿಂದ ವಿಶ್ವಕ್ಕೆ ಉಪಕಾರಕವಾಗಿದೆ. ಅದು ಹೇಗೆಂದರೆ,

ಭುಜ್ಯುಃ ಸುಪರ್ಣ ಇತಿ। ಯಜ್ಞೋ ವೈ ಭುಜ್ಯುಃ ಯಜ್ಞೋ ಹಿ ಸರ್ವಾಣಿ ಭೂನಕ್ತಿ ಯಜ್ಞೋ ಗಂಧರ್ವಃ ॥

(ಶ. ಬ್ರಾ. ೯-೪-೧-೧೧)

ಯಜ್ಞವು ಸಕಲ ಭೂತಗಳನ್ನೂ ತನ್ನ ಆಹುತಿಗಾಗಿ ಅಪೇಕ್ಷಿಸುತ್ತದೆ. ಪುನಃ ಸಕಲಭೂತಗಳ ಉಪಕಾರಕ್ಕಾಗಿ ಪ್ರಸರಿಸುತ್ತದೆ. ಇತ್ಯಾದಿಯಾಗಿ ವಿಶ್ವತತ್ತ್ವಕ್ಕೂ ಯಜ್ಞಕ್ಕೂ ಇರತಕ್ಕ ತಾದಾತ್ಮ್ಯಸಂಬಂಧವನ್ನು ತಿಳಿಸಿ ವ್ಯಾವ ಹಾರಿಕವಾದ ಸಮಸ್ತ ವಿಶ್ವವ್ಯವಹಾರಗಳಿಗೂ ಸಹ ಯಜ್ಞವು ಕಾರಣವು. ಅದೇ ರಕ್ಷಕವು ಮತ್ತು ಅದೇ ಸೂತ್ರ ರೂಪವಾದ ಸಂಬಂಧವು ಇತ್ಯಾದಿಯಾಗಿ ನಾನಾಶ್ರುತಿವಾಕ್ಯಗಳಲ್ಲಿ ವರ್ಣಿಸಿರುವ ಅಂಶವನ್ನು ಪ್ರಕೃತವಾದ ಋಕ್ಕಿ ನಲ್ಲಿ " **ನಾಭಾ ಪೃಥಿವ್ಯಾಃ** " ಎಂಬ ವಾಕ್ಯದಿಂದ ವರ್ಣಿತವಾಗಿದೆ. ಅದುದರಿಂದಲೇ ವಿಶ್ವನಾಭಿಯಾದ. ಈ ಯಜ್ಞವನ್ನು ನಿರ್ವಹಿಸಬೇಕಾದರೆ ದೇವಮಾನವಾದಿಗಳೆಲ್ಲರಿಗೂ ಸಮಾನವಾದ ಶ್ರದ್ಧೆಯು ಅತ್ಯವಶ್ಯವೆಂದು ತೋರಿಸಿದೆ.

ಯೋ ವೈ ಶ್ರದ್ಧಾಮನಾರಭ್ಯ ಯಜ್ಞೇನ ಯಜತೇ ನಾಸ್ಯೇಷ್ಟಾಯೈ ಶ್ರದ್ಧಾಯೈ ಪಶವಃ ಪ್ರಣಯಂತಿ ಶ್ರದ್ಧಾ ವಾ ಆಪಃ ಶ್ರದ್ಧಾಮೇವಾರಭ್ಯ ಯಜ್ಞೇನ ಯಜತ ಉಭಯೀಸ್ಯ ದೇವಮನುಷ್ಯಾ ಇಷ್ಟಾಯೈ ಶ್ರದ್ಧಾಯೈ ॥

(ತೈ. ಸಂ. ೧-೬-೮-೧)

ಶ್ರದ್ಧಾರಹಿತನಾಗಿ ಯಜ್ಞಮಾಡಿದವನ ಯಜ್ಞವು ಸಿದ್ಧಿಸುವುದಿಲ್ಲ. ಶ್ರದ್ಧಾರೂಪವಾದ ಆಪ್ಪನ್ನು (ನೀರನ್ನು) ಮುಂದಿಟ್ಟುಕೊಂಡು ಯಜ್ಞವನ್ನು ನೆರವೇರಿಸತಕ್ಕದ್ದು. ದೇವಮಾನವಾದಿ ಸಕಲರೂ ಸಹ ಶ್ರದ್ಧೆಯಿಂದಲೇ ಯಜ್ಞದಲ್ಲಿ ಭಾಗವಹಿಸುವರು ಎಂದು ಶ್ರದ್ಧೆಯ ಅವಶ್ಯಕತೆಯನ್ನೂ ತಿಳಿಸಿದೆ.

ಯಜ್ಞತತ್ತ್ವದಲ್ಲಿಡಬೇಕಾದ ಈ ಶ್ರದ್ಧೆಯು ಕೇವಲ ಅಂಧಶ್ರದ್ಧೆಯಲ್ಲ ಈ ಶ್ರದ್ಧೆಯು ಆಧ್ಯಾತ್ಮಿಕವಾದ ತತ್ತ್ವವನ್ನು ಗ್ರಹಣಮಾಡುವ ಶಕ್ತಿಯುಳ್ಳದ್ದಾಗಿರಬೇಕು ಇದು ಭುವನನಾಭಿಯಾದ ಯಜ್ಞಕ್ಕೂ ಬ್ರಹ್ಮತತ್ತ್ವಕ್ಕೂ ಇರುವ ಸಂಬಂಧವನ್ನರಿಯತಕ್ಕದ್ದು. ಆಧ್ಯಾತ್ಮಿಕಜ್ಞಾನದ ಆಧಾರದ ಮೇಲೆ ನಿಂತಿರುವ ಈ ಶ್ರದ್ಧೆಯುಳ್ಳ ಯಜಮಾನನು ತನಗೂ ಯಜ್ಞಕ್ಕೂ ತಾದಾತ್ಮ್ಯವನ್ನು ಕಲ್ಪಿಸಿಕೊಳ್ಳುತ್ತಾನೆ. ಅನಂತರ ಯಜ್ಞಕ್ಕೂ ಪ್ರಜಾಪತಿಗೂ ಇರುವ ತಾದಾತ್ಮ್ಯವನ್ನರಿಯುತ್ತಾನೆ. ಪ್ರಜಾಪತಿರೂಪಿಯಾದ ಪರಬ್ರಹ್ಮನ ವಿಶ್ವನ್ಯವಹಾರಗಳೆಲ್ಲವೂ ಈ ಯಜ್ಞತತ್ತ್ವದಲ್ಲಡಗಿರುತ್ತದೆಂದರಿಯುತ್ತಾನೆ. ಮತ್ತು ಆ ವಿಶ್ವಚಕ್ರದಲ್ಲಿ ತಾನೂ ಸಹ ಭಾಗವನ್ನು ವಹಿಸುತ್ತಾನೆ.

॥ ಸಂಹಿತಾಪಾಠಃ ॥

ಆ ಹಿ ದ್ಯಾವಾಪೃಥಿವೀ ಅಗ್ನ ಉಭೇ ಸದಾ ಪುತ್ರೋ ನ ಮಾತರಾ ತತಂಥ।
ಪ್ರ ಯಾಹ್ಯಚ್ಛೋಶತೋ ಯವಿಷ್ಠಾಥಾ ವಹ ಸಹಸ್ಯೇಹ ದೇವಾನ್ ॥ ೭ ॥

॥ ಪದಪಾಠಃ ॥

ಆ । ಹಿ । ದ್ಯಾವಾಪೃಥಿವೀ ಇತಿ । ಅಗ್ನೇ । ಉಭೇ ಇತಿ । ಸದಾ । ಪುತ್ರಃ । ನ । ಮಾತರಾ । ತತಂಥ ।
ಪ್ರ । ಯಾಹಿ । ಅಚ್ಛ । ಉಶತಃ । ಯವಿಷ್ಠ । ಅಥ । ಆ । ವಹ । ಸಹಸ್ಯ । ಇಹ । ದೇವಾನ್ ॥ ೭ ।

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಮುಭೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಸದಾ ಸರ್ವದಾ ತತಂಥ । ಆತೇನಿಥ । ಸ್ವತೇಜೋಭಿರ್ವಿಸ್ತಾರಯಸಿ ಖಲು ॥ ಬಭೂಥಾ ತತಂಥೇತಿ ಥಲಿ ನಿಪಾತಿತಃ ॥ ತತ್ರ ದೃಷ್ಟಾಂತಃ । ಪುತ್ರೋ ನ ಯಥಾ ಪುತ್ರೋ ಮಾತರಾ ಮಾತಾಪಿತರೌ ಕ್ಷೀಣೌ ಧನೈಸ್ತನೋತಿ ತದ್ವತ್ । ಕಿಂಚ ಹೇ ಯವಿಷ್ಠ ಯುವತಮ ಸ ತ್ವಮುಶತಃ ಕಾಮಯಮಾನಾನಚ್ಛಾಭಿಲಕ್ಷ್ಯ ಪ್ರ ಯಾಹಿ । ಪ್ರಕರ್ಷೇಣಾಗಚ್ಛ । ಅಥಾನಂತರಂ ಹೇ ಸಹಸ್ಯ ಸಹಸೋ ಬಲಸ್ಯ ಪುತ್ರ ಹೇ ಅಗ್ನೇ ತ್ವಮಿಹಾಸ್ಮದೀಯೇ ಯಜ್ಞೇ ದೇವಾನಿಂದ್ರಾದೀನಾ ವಹ । ಸ್ರಾಪಯ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಪುತ್ರಃ**—ಪುತ್ರನು । **ಮಾತರಾ ನ**—ತನ್ನ ಮಾತಾಪಿತೃಗಳನ್ನು ತನ್ನ ಸಂಪತ್ತಿನಿಂದ ಪುಷ್ಟಿಗೊಳಿಸುವಂತೆ (ಭರಿಸುವಂತೆ) । **(ತ್ವಂ**—ನೀನು) । **ಉಭೇ ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳೆರಡನ್ನೂ । **ಸದಾ**—ಯಾವಾಗಲೂ । **ಅ ತನಂಥ**—ವಿಸ್ತೃತವಾಗುವಂತೆ ಮಾಡಿದ್ದೀಯೆ । **ಯವಿಷ್ಠ**—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ಉಶತಃ ಅಚ್ಛ**—ನಿನ್ನನ್ನು ಅಪೇಕ್ಷಿಸುವ ಯಜಮಾನರಿಗಭಿಮುಖವಾಗಿ । **ಪ್ರ ಯಾಹಿ**—ಅತಿಶಯವಾಗಿ ಬಾ । **ಅಥ**—ಅನಂತರ । **ಸಹಸ್ಯ**—ಶಕ್ತಿಪುತ್ರನಾದ ಎಲೈ ಅಗ್ನಿಯೇ । **ಇಹ**—ನಮ್ಮ ಈ ಯಜ್ಞದಲ್ಲಿ । **ದೇವಾನ್**—ಇಂದ್ರಾದಿದೇವತೆಗಳನ್ನು । **ಆ ವಹ**—ಕರೆತಂದು ಸೇರಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪುತ್ರನು ತನ್ನ ಮಾತಾಪಿತೃಗಳನ್ನು ತನ್ನ ಸಂಪತ್ತಿನಿಂದ ಭರಿಸಿ ಪುಷ್ಟಿಗೊಳಿಸುವಂತೆ ನೀನು ದ್ಯಾವಾಪೃಥಿವಿಗಳೆರಡನ್ನೂ ಯಾವಾಗಲೂ ವಿಸ್ತೃತವಾಗುವಂತೆ ಮಾಡಿದ್ದೀಯೆ. ಅತ್ಯಂತ ಯುವಕನಾದ ಎಲೈ ಅಗ್ನಿಯೇ, ನಿನ್ನನ್ನು ಅಪೇಕ್ಷಿಸುವ ಯಜಮಾನರಿಗಭಿಮುಖವಾಗಿ ಅತಿಶಯವಾಗಿ ಬಾ. ಅನಂತರ ಶಕ್ತಿಪುತ್ರನಾದ ಎಲೈ ಅಗ್ನಿಯೇ, ನಮ್ಮ ಈ ಯಜ್ಞದಲ್ಲಿ ಇಂದ್ರಾದಿದೇವತೆಗಳನ್ನು ಕರೆತಂದು ಸೇರಿಸು.

English Translation

You have ever sustained, Agni, both heaven and earth, as a son (supports) his parents : come youngest (of the gods), to the presence of those desiring (you) ; Son of strength, bring hither the gods.

॥ ವಿಶೇಷವಿಷಯಗಳು ॥

ಪುತ್ರಃ ಮಾತರಾ ನ—ಇಲ್ಲಿ ಮಾತೃಶಬ್ದದ ದ್ವಿತೀಯಾದಿವಚನದ ಪ್ರಯೋಗವಿರುವುದರಿಂದ ಮಾತರಾ ಎಂಬ ಶಬ್ದಕ್ಕೆ **ಮಾತಾಪಿತರಾ** ತಾಯಿ ಮತ್ತು ತಂದೆಯು ಎಂಬರ್ಥವಿರುವುದು. ಪುತ್ರನು ತಾಯಿತಂದೆಗಳನ್ನು ಪೋಷಿಸುವಂತೆ ಎಂದರೆ ಇಲ್ಲಿ ವೃದ್ಧರಾಗಿ ಅಶಕ್ತರಾಗಿರುವ ತಂದೆತಾಯಿಗಳನ್ನು ಯುವಕನಾದ ಪುತ್ರನು ಆಹಾರಾದಿಗಳಿಂದ ಪೋಷಿಸುವಂತೆ ಎಂದರ್ಥವು. ತಂದೆತಾಯಿಗಳು ತಮ್ಮ ಪುತ್ರನನ್ನು ಬಾಲ್ಯಾವಸ್ಥೆಯಲ್ಲಿ ಕಾಪಾಡುವರು. ಕಾಲಕ್ರಮವಾಗಿ ತಂದೆತಾಯಿಗಳು ವೃದ್ಧರಾಗಿ ಕೆಲಸಕಾರ್ಯಗಳನ್ನು ಮಾಡಲು ಅಶಕ್ತರಾದಾಗ ಯುವಕನಾದ ಪುತ್ರನು ಅವರನ್ನು ಪೋಷಿಸಿ ಕಾಪಾಡುವುದು ಪುತ್ರನ ಕರ್ತವ್ಯವಾಗಿರುವುದು. ಈ ವಿಷಯವನ್ನೇ ಇಲ್ಲಿ **ಪುತ್ರೋ ನ ಮಾತರಾ** ಎಂಬ ದೃಷ್ಟಾಂತದಿಂದ ವಿವರಿಸಿದೆ.

ಎರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪಿಪ್ರೀಹೀತಿ ಸಪ್ತರ್ಚಂ ದ್ವಿತೀಯಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪಿಪ್ರೀಹೀತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ತಃ ಸೂಕ್ತವಿನಿಯೋಗಃ ॥ ದರ್ಶಪೂರ್ಣಮಾಸಯೋ-

ರಾದ್ಯಾ ಸ್ವಿಷ್ಟಕೃತೋಽನುವಾಕ್ಯಾ । ಸೂತ್ರಿತಂ ಚ । ಅಥ ಸ್ವಿಷ್ಟಕೃತಃ ಪಿಪ್ರೀಹಿ ದೇವಾಁ ಉಶತೋ ಯವಿಷ್ಠೇಽನುವಾಕ್ಯಾ । ಅ. ೧.೬ । ಇತಿ ॥

ಅನುವಾದವು—ಪಿಪ್ರೀಹಿ ಎಂಬ ಈ ಸೂಕ್ತವು ಹತ್ತನೆಯ ಮಂಡಲದ ಮೊದಲನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—ಪಿಪ್ರೀಹಿ ಎಂದು ಹೇಳಿರುವುದು. ಪ್ರಾತರನುವಾಕಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ. ಮತ್ತು ದರ್ಶಪೂರ್ಣಮಾಸ ಯಾಗಗಳಲ್ಲಿ ಈ ಸೂಕ್ತದ ಮೊದಲನೆಯ ಋಕ್ಕನ್ನು ಸ್ವಿಷ್ಟಕೃದ್ಧೋಮದಲ್ಲಿ ಅನುವಾಕ್ಯಾಮಂತ್ರವನ್ನಾಗಿ ಪರಿಸಬೇಕೆಂದು ಅಶ್ವಲಾಯನ ಶ್ರೌತಸೂತ್ರದ—ಅಥ ಸ್ವಿಷ್ಟಕೃತಃ ಪಿಪ್ರೀಹಿ ದೇವಾಁ ಉಶತೋ ಯವಿಷ್ಠೇಽನುವಾಕ್ಯಾ ಎಂಬ ಸೂತ್ರದಿಂದ (ಅ. ೧-೬) ವಿವೃತವಾಗಿರುವುದು.

ಸೂಕ್ತ—೨

ಮಂಡಲ—೧೦ ॥ ಅನುವಾಕ—೧ ॥ ಸೂಕ್ತ—೨ ।
ಅಷ್ಟಕ—೭ ॥ ಅಧ್ಯಾಯ—೫ ॥ ವರ್ಗ—೩೦ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿ—ತ್ರಿತ ಆಪ್ತ್ಯಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಪಿಪ್ರೀಹಿ ದೇವಾಁ ಉಶತೋ ಯವಿಷ್ಠ ವಿದ್ವಾ ಋತೂಁರ್ಋತುಪತೇ ಯಜೇಹ ।
ಯೇ ದೈವ್ಯಾ ಋತ್ವಿಜಸ್ತೇಭಿರಗ್ನೇ ತ್ವಂ ಹೋತೄಣಾಮಸ್ಯಾಯಜಿಷ್ಠಃ ॥

॥ ಪದಪಾಠಃ ॥

ಪಿಪ್ರೀಹಿ । ದೇವಾನ್ । ಉಶತಃ । ಯವಿಷ್ಠ । ವಿದ್ವಾನ್ । ಋತೂನ್ । ಋತುಽಪತೇ । ಯಜ । ಇಹ ।
ಯೇ । ದೈವ್ಯಾಃ । ಋತ್ವಿಜಃ । ತೇಭಿಃ । ಅಗ್ನೇ । ತ್ವಂ । ಹೋತೄಣಾಂ । ಅಸಿ । ಅಽಯಜಿಷ್ಠಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಯವಿಷ್ಠ ಯುವತಮಾಗ್ನೇ ಉಶತಃ ಸ್ತುತೀಃ ಕ್ರೋತುಂ ಕಾಮಯಮಾನಾನ್ದೇವಾನ್ಪಿ-ಪ್ರೀಹಿ । ಹವಿರ್ಭಿಃ ಪ್ರೀಣಯ । ಹೇ ಋತುಪತ ಋತೂನಾಂ ದೇವಯಾಗಕಾಲಾನಾಂ ಸ್ವಾಮಿನ್ನಗ್ನೇ

ಋತೂನ್ಯಾಗಕಾಲಾನ್ವಿದ್ವಾಞ್ಜಾನಾನಸ್ತ್ವಮಿಹಾಸ್ಮಿನ್ಯಜ್ಞೇ ತಾನ್ಯಜ । ಪೂಜಯ । ಕಂಚ ಹೇ ಅಗ್ನೇ ದೈವ್ಯಾ ದೇವೇಷು ಭವಾಃ ಅಗ್ನಿರ್ಹೋತಾಶ್ವಿನಾವಧ್ವರ್ಯೂ ತ್ವಷ್ಟಾಗ್ನೀನ್ಮಿತ್ರ ಉಪವಕ್ತಾ । ತೈ ಅ. ೩-೩ । ಇತ್ಯತ್ರೋಕ್ತಾ ಯ ಋತ್ವಿಜಃ ಸಂತಿ ತೇಭಿಸ್ತ್ವಃ ಸಹ ದೇವಾನ್ಯಜ । ಯದ್ವಾ । ದೈವ್ಯಾ ದೇವೇಷು ಭವಾ ಋತ್ವಿಜ ಆಶ್ವಲಾಯನೇನೋಕ್ತಾಶ್ಚಂದ್ರಮಾ ಬ್ರಹ್ಮಾದಿತ್ಯೋ೨ಧ್ವರ್ಯುಃ ಪರ್ಜನ್ಯ ಉದ್ಗಾತೇತಿ । ಆ ಗೃ. ೧.೧೩. ೪,೯ । ತೈಃ ಸಹ ಯಜ । ಯಸ್ಮಾತ್ತ್ವಂ ಹೋತ್ಯಾಣಾಂ ಮಧ್ಯ ಆಯ. ಜಿಷ್ಠ ಆಭಮುತ್ಕೃಷ್ಟೇನ ದೇವಾನಾಂ ಯಷ್ಟೃತಮೋ೨ಸಿ ಭವಸಿ ॥

॥ ಪ್ರತಿಪದಾರ್ಥ ॥

ಯವಿಷ್ಠ—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ಉಶತಃ**—ಪ್ರಶಂಸೆಗಳನ್ನಪೇಕ್ಷಿಸುವ । **ದೇವಾನ್**—ದೇವತೆಗಳನ್ನು । **ಪಿಪ್ರೀಹಿ**—ಹವಿಸ್ಸುಗಳಿಂದ ತೃಪ್ತಿಪಡಿಸು । **ಋತುಪತೇ**—ಯಜ್ಞಕಾಲಗಳಿಗೆ ಒಡೆಯನಾದ ಎಲೈ ಅಗ್ನಿಯೇ । **ಋತೂನ್**—ಯಜ್ಞಕಾಲಗಳನ್ನು । **ವಿದ್ವಾನ್**—ಅರಿತ ನೀನು । **ಇಹ**—ಈ ಯಜ್ಞದಲ್ಲಿ । **ಯಜ**—ಅವರನ್ನು ಪೂಜಿಸು । **ಅಗ್ನೇ**—ಎಲೈ ಅಗ್ನಿಯೇ । **ದೈವ್ಯಾಃ**—ದೇವಸಂಬಂಧಿಗಳಾದ । **ಯೇ ಋತ್ವಿಜಃ**—ಯಾವ ಋತ್ವಿಕ್ಕುಗಳಿರುವರೋ । **ತೇಭಿಃ**—ಅವರೊಡನೆ ದೇವತೆಗಳನ್ನು ಪೂಜಿಸು । **ತ್ವಂ**—ನೀನು । **ಹೋತ್ರಾಣಾಂ**—ಹೋತೃಗಳ ನಡುವೆ । **ಆ ಯಜಿಷ್ಠಃ**—ಅತ್ಯಂತ ಶ್ರೇಷ್ಠನಾದ ದೇವಪೂಜಕನಾಗಿ । **ಅಸಿ**—ಆಗಿದ್ದೀಯೆ

॥ ಭಾವಾರ್ಥ ॥

ಅತ್ಯಂತ ಯುವಕನಾದ ಎಲೈ ಅಗ್ನಿಯೇ, ಪ್ರಶಂಸೆಗಳನ್ನಪೇಕ್ಷಿಸುವ ದೇವತೆಗಳನ್ನು ಹವಿಸ್ಸುಗಳಿಂದ ತೃಪ್ತಿಪಡಿಸು. ಯಜ್ಞಕಾಲಗಳಿಗೆ ನಿಯಾಮಕನಾದ ಎಲೈ ಅಗ್ನಿಯೇ, ಯಜ್ಞಕಾಲಗಳನ್ನು ಅರಿತ ನೀನು ಈ ಯಜ್ಞದಲ್ಲಿ ಅವರನ್ನು ಪೂಜಿಸು. ಎಲೈ ಅಗ್ನಿಯೇ, ದೇವಸಂಬಂಧಿಗಳಾದ ಯಾವ ಋತ್ವಿಕ್ಕುಗಳಿರುವರೋ, ಅವರೊಡನೆ ದೇವತೆಗಳನ್ನು ಪೂಜಿಸು, ನೀನು ಹೋತೃಗಳ ನಡುವೆ ಅತ್ಯಂತ ಶ್ರೇಷ್ಠನಾದ ದೇವಪೂಜಕನಾಗಿ ಆಗಿದ್ದೀಯೆ.

English Translation

Agni, youngest (of the deities), propitiate the desiring gods; lord of seasons, cognizant of seasons, here offer worship; worship with those who are the priests of the celestials; among the ministrant priests you are the best offerer.

॥ ವಿಶೇಷವಿಷಯಗಳು ॥

ಋತುಪತೇ, ಋತೂನ್ ವಿದ್ವಾನ್—ಋತುಶಬ್ದಕ್ಕೆ ಕಾಲವೆಂಬ ಅರ್ಥವಿರುವುದೆಂದು ಯಾಸ್ಕರು ಹೇಳಿದ್ದಾರೆ. (ನಿ. ೮-೪ ಮತ್ತು ೧೨-೪೬) ಮತ್ತು ಋತುಶಬ್ದಕ್ಕೆ ಅರ್ಥವನ್ನೂ ರೂಪನಿಷ್ಪತ್ತಿಯನ್ನು ವಿವರಿಸುತ್ತಾ—

ಮುಹೂರ್ತೋ ಮುಹುರ್ಯತುಃ । ಋತುರರ್ತೇರ್ಗತಿಕರ್ಮಣಃ । ಮುಹುರ್ಮೂರ್ಹಶ ಇವ ಕಾಲೋ ಯಾವದಭೀಕ್ಷ್ಣಂ ಚೇತಿ । ಅಭೀಕ್ಷ್ಣ ಮುಭಿಕ್ಷಣಂ ಭವತಿ । ಕ್ಷಣಃ ಕ್ಷಣೋತೇಃ ಪ್ರಕ್ಷ್ಣುತಃ ಕಾಲಃ । ಕಾಲಃ ಕಾಲಯತೇರ್ಗತಿಕರ್ಮಣಃ ॥

(ನಿ. ೨-೨೫)

ಮುಹೂರ್ತವೆಂದರೆ **ಮುಹುಃ+ಋತುಃ** ಪುನಃ ಪುನಃ ಪ್ರಾಪ್ತವಾಗುವ ಕಾಲವು ಒಂದು ಕ್ಷಣವಾದಕೂಡಲೇ ಮತ್ತೊಂದು ಕ್ಷಣವು ಅದರ ಜತೆಗೆ ಸೇರಿಕೊಂಡೇ ಬರುವುದು. ಎಂದರೆ ಕಾಲವು ಅವಿಚ್ಛಿನ್ನವಾಗಿರುವುದು. ಋತು ಶಬ್ದವು ಹೋಗು, ಗತಿಸು, ಕಳೆದು ಹೋಗು ಇತ್ಯಾದ್ಯರ್ಥಗಳುಳ್ಳ **ಋು-ಗತೌ** ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಕಳೆದುಹೋಗುತ್ತಿರುವುದರಿಂದ ಋತುವಿಗೆ ಕಾಲವೆಂದು ಹೆಸರು. **ಕ್ಷಣ**ವೆಂದರೆ ಕಾಲದ ಬಹಳ ಸಣ್ಣ ವಿಭಾಗವು. ಈ ಶಬ್ದವು **ಕ್ಷಣ್**-ಹಿಂಸಿಸು, ಕತ್ತರಿಸು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಕ್ಷಣವೆಂದರೆ ಕಾಲದ (ಕತ್ತರಿಸಿದ) ಒಂದು ತುಂಡು. ಎಂದರೆ ಅತಿ ಸಣ್ಣ ವಿಭಾಗ. ಕಾಲಶಬ್ದವೂ ಸಹ ಹೋಗು ಎಂಬರ್ಥವುಳ್ಳ ಕಲ್ ಧಾತುವಿನಿಂದ ನಿಷ್ಪನ್ನವಾಗಿ ಕಳೆದುಹೋಗುತ್ತಿರುವ ಕಾಲ ಎಂದರ್ಥವಾಗುವುದು.

ಯಜ್ಞಯಾಗಾದಿಗಳನ್ನು ಮಾಡಬೇಕಾದರೆ, ಮಾಸ, ತಿಥಿ, ವಾರ, ನಕ್ಷತ್ರ ಮೊದಲಾದುವುಗಳಲ್ಲಿ ಪ್ರಶಸ್ತವಾಗಿರುವುದನ್ನು ನೋಡಿ ಆ ಕಾಲದಲ್ಲಿ ಮಾಡಬೇಕು. ಅಗ್ನಿಯು ಇಂತಹ ಕಾಲವಿಭಾಗಗಳನ್ನು, ಕಾಲಸ್ವರೂಪವನ್ನು ತಿಳಿದಿರುವನೆಂದು ವಿವರಿಸುವುದಕ್ಕಾಗಿ ಇಲ್ಲಿ **ಋತುಪತೇ** ಎಂಬ ಶಬ್ದದಿಂದ ಅಗ್ನಿಯನ್ನು ಸಂಬೋಧಿಸಲಾಗಿದೆ ಮತ್ತು **ಋತೂನ್ ವಿದ್ವಾನ್**—ಯಾವ ಕಾಲಗಳಲ್ಲಿ ಯಾವ ಯಜ್ಞಗಳನ್ನು ಮಾಡಬೇಕು ಯಾವ ಕಾಲಗಳಲ್ಲಿ ಬ್ರಾಹ್ಮಣಾದಿ ವರ್ಣಗಳು ಯಾವಯಾವ ಯಜ್ಞಗಳನ್ನು ಮಾಡಬೇಕು ಎಂಬ ವಿಷಯಪರಿಜ್ಞಾನವು ಅಗ್ನಿಗೆ [illegible] ಎಂದು ವಿವರಿಸುವುದಕ್ಕಾಗಿ **ಋತೂನ್ ವಿದ್ವಾನ್** ಕಾಲಸ್ವರೂಪವನ್ನು ತಿಳಿದವನು ಎಂದು ಅಗ್ನಿಯ ಗುಣವ ಮಾಡಿದೆ.

ಯೇ ದೈವ್ಯಾ ಋತ್ವಿಜಃ—ಮನುಷ್ಯರಲ್ಲಿ ಹೋತೃ, ಅಧ್ವರ್ಯು ಮೊದಲಾದ ಋತ್ವಿಕ್ಕುಗಳಿರುವಂ ದೇವತೆಗಳಲ್ಲಿಯೂ ಋತ್ವಿಕ್ಕುಗಳಿರುವದೆಂದು ಇಲ್ಲಿ ಹೇಳಿದೆ.

ಈ ವಿಷಯದಲ್ಲಿ ಭಾಷ್ಯಕಾರರು—

ಅಗ್ನಿರ್ಹೋತಾ । ಅಶ್ವಿನಾಧ್ವರ್ಯೂ । ತ್ವಷ್ಟಾಗ್ನೀತ್ ।

(ತೈ. ಆ. ೩-೩)

ಎಂಬ ತೈತ್ತಿರೀಯಾರಣ್ಯಕದ ಶ್ರುತಿವಾಕ್ಯವನ್ನು ಉದಾಹರಿಸಿದಾರೆ. ದೇವತೆಗಳಲ್ಲಿ ಅಗ್ನಿಯು ಹೋತೃವೆಂಬ ಜನು, ಅಶ್ವಿನೀದೇವತೆಗಳು ಅಧ್ವರ್ಯುಗಳು, ತ್ವಷ್ಟೃವು ಆಗ್ನೀಧ್ರನು ಇತ್ಯಾದಿ. ಆಶ್ವಲಾಯನ ಮಹರ್ಷಿಗಳು ಸಹ ತಮ್ಮ ಗೃಹ್ಯಸೂತ್ರದಲ್ಲಿ—**ಚಂದ್ರಮಾ ಬ್ರಹ್ಮಾದಿತ್ಯೋಽಧ್ವರ್ಯುಃ ಪರ್ಜನ್ಯ ಉದ್ಗಾತಾ**—ಎಂಬ ದೇವತೆಗಳಲ್ಲಿ ಚಂದ್ರನು ಬ್ರಹ್ಮನೆಂಬ ಋತ್ವಿಜನು, ಆದಿತ್ಯನು ಅಧ್ವರ್ಯುವು, ಪರ್ಜನ್ಯನು ಉದ್ಗಾತೃವೆಂಬ ಋತ್ವಿ ಎಂದು ವಿವರಿಸಿದಾರೆ. (ಆ. ಗೃ. ೧-೨೩-೮, ೯).

॥ ಸಂಹಿತಾಪಾಠಃ॥

ವೇಷಿ ಹೋತ್ರಮುತ ಪೋತ್ರಂ ಜನಾನಾಂ ಮಂಧಾತಾಸಿ ದ್ರವಿಣೋದಾ ಋತಾವಾ ।

ಸ್ವಾಹಾ ವಯಂ ಕೃಣವಾಮಾ ಹವೀಂಷಿ ದೇವೋ ದೇವಾನ್ಯಜತ್ವಗ್ನಿ-
ರರ್ಹನ್ ॥ ೨ ॥

। ಪದಪಾಠಃ ।

ವೇಷಿ । ಹೋತ್ರಂ । ಉತ । ಪೋತ್ರಂ । ಜನಾನಾಂ । ಮಂಧಾತಾ । ಅಸಿ । ದ್ರವಿಣಃದಾಃ । ಋತವಾ।
ಸ್ವಾಹಾ । ವಯಂ । ಕೃಣವಾಮ । ಹವೀಂಷಿ । ದೇವಃ । ದೇವಾನ್ । ಯಜತು । ಅಗ್ನಿಃ । ಅರ್ಹನ್ ॥

। ಸಾಯಣಭಾಷ್ಯಂ ।

ಹೇ ಅಗ್ನೇ ಜನಾನಾಂ ಯಜಮಾನಾರ್ಥಂ ಹೋತ್ರಂ ಹೋತುಃ ಕರ್ಮ ತೇನ ಕ್ರಿಯಮಾಣಂ ಸ್ತೋತ್ರಂ ವೇಷಿ । ಕಾಮಯಸೇ । ಉತಾಪಿ ಚ ಪೋತ್ರಂ ಪೋತುಃ ಕರ್ಮ ತೇನ ಕ್ರಿಯಮಾಣಾಂ ಸ್ತುತಿಂ ಕಾಮಯಸೇ । ಕಿಂಚ ಮಂಧಾತಾ ಮೇಧಾವ್ಯೃತವಾ ಸತ್ಯವಾಂಸ್ತ್ವಂ ದ್ರವಿಣೋದಾ ಅಸಿ । ಧನಸ್ಯ ಪ್ರದಾತಾ ಭವಸಿ । ಅಥ ಹರೋಪಷ್ಟಕೃತಃ । ವಯಂ ದೇವೇಭ್ಯೋ ಹವೀಂಷಿ ಸ್ವಾಹಾ ಕೃಣವಾಮ। ಸ್ವಾಹಾ ಕರವಾಮ । ಪ್ರಯಚ್ಛಾಮ । ತಥೋ ದೇವೋ ದೀಪ್ಯಮಾನೋಽರ್ಹನ್ ಪ್ರಶಂಸ್ಯೋ ಯಜಮಾನಯೋಗ್ಯೋ ವಾಗ್ನಿರ್ದೇವಾನ್ಯಜತು । ತೈರ್ಹವಿರ್ಭಿಃ ಪೂಜಯತು ॥

। ಪ್ರತಿಪದಾರ್ಥ ।

(ಎಲೈ ಅಗ್ನಿಯೇ), ಜನಾನಾಂ—ಯಜಮಾನಾರ್ಥವಾಗಿ । ಹೋತ್ರಂ—ಹೋತೃವಿನ ಸ್ತೋತ್ರವನ್ನು । ವೇಷಿ—ಒಂದು ವೇಳೆ ಅಪೇಕ್ಷಿಸಿದರೂ । ಉತ—ಅಥವಾ । ಪೋತ್ರಂ—ಪೋತೃವಿನ ಸ್ತುತಿಯನ್ನಪೇಕ್ಷಿಸಿದರೂ । ಮಂಧಾತಾ—ಮೇಧಾವಿಯೂ । ಋತವಾ—ಸತ್ಯವಂತನೂ ಆದ ನೀನು । ದ್ರವಿಣೋದಾಃ—ಧನದಾತೃವಾಗಿ । ಅಸಿ—ಆಗಿದ್ದೀಯೆ . ವಯಂ—ನಾವು । ಹವೀಂಷಿ—ಹವಿಸ್ಸುಗಳನ್ನು । ಸ್ವಾಹಾ ಕೃಣವಾಮ—ದೇವತೆಗಳಿಗೆ ಸ್ವಾಹಾಪೂರ್ವಕವಾಗಿ ಅರ್ಪಿಸೋಣ । ದೇವಃ—ಪ್ರಕಾಶಮಾನನೂ . ಅರ್ಹನ್—ಪ್ರಶಸ್ಯನೂ ಆದ । ಅಗ್ನಿಃ—ಅಗ್ನಿಯು । ದೇವಾನ್—ದೇವತೆಗಳನ್ನು । ಯಜತು—ಪೂಜಿಸಲಿ.

। ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಯಜಮಾನನಾಗಿ ಒಂದು ವೇಳೆ ಹೋತೃವಿನ ಸ್ತೋತ್ರವನ್ನಪೇಕ್ಷಿಸಿದರೂ ಅಥವಾ ಪೋತೃವಿನ ಸ್ತುತಿಯನ್ನು ಅಪೇಕ್ಷಿಸಿದರೂ, ಮೇಧಾವಿಯೂ, ಸತ್ಯವಂತನೂ, ಆದ ನೀನು ಧನಧಾತೃವಾಗಿ ಆಗಿದ್ದೀಯೆ. ನಾವು ಹವಿಸ್ಸುಗಳನ್ನು ದೇವತೆಗಳಿಗೆ ಸ್ವಾಹಾಪೂರ್ವಕವಾಗಿ ಅರ್ಪಿಸೋಣ ಪ್ರಕಾಶಮಾನನೂ, ಪ್ರಶಸ್ಯನೂ ಆದ ಅಗ್ನಿಯು ದೇವತೆಗಳನ್ನು ಪೂಜಿಸಲಿ

English Translation

Whether, Agni, you prefer the office of Hotri or Potri among men you are wise. the giver of wealth, the observer of truth; let us offer the

oblations with the (sacred) Swaha, and may the most excellent and divine Agni present them to the gods

॥ ವಿಶೇಷವಿಷಯಗಳು ॥

ದ್ರವಿಣೋದಾಃ—ಈ ಶಬ್ದಕ್ಕೆ ಯಾಸ್ಕರು ವಿಸ್ತಾರವಾದ ವಿವರಣೆಯನ್ನು ಬರೆದಿರುವರು—

ದ್ರವಿಣೋದಾಃ । ದ್ರವಿಣೋದಾಃ ಕಸ್ಮಾದ್ಧನಂ ದ್ರವಿಣಮುಚ್ಯತೇ । ಯದೇನಪದಭಿದ್ರವಂತಿ । ಬಲಂ ವಾ ದ್ರವಿಣಂ ಯದೇದೇನಾಭಿದ್ರವಂತಿ । ತಸ್ಯ ದಾತಾ ದ್ರವಿಣೋದಾಃ ॥ (ನಿ ೮-೧)

ಇಲ್ಲಿ ದ್ರವಿಣೋದಾಃ ಎಂಬ ಶಬ್ದದ ನಿಷ್ಪತ್ತಿಯು, **ದ್ರವಿಣಂ ದದಾತೀತಿ ದ್ರವಿಣೋದಾಃ** । ದ್ರವಿಣ ಶಬ್ದಕ್ಕೆ ಧನ, ಬಲ ಎಂದು ಎರಡು ಅರ್ಥಗಳಿರುವುವು. ಅದುದರಿಂದ ದ್ರವಿಣೋದಾಃ ಎಂದರೆ ಧನವನ್ನು ಅಥವಾ ಬಲವನ್ನು ಕೊಡುವನು ಎಂದರ್ಥವು ಇದು ಈ ಶಬ್ದದ ಅವಯವಾರ್ಥವು. ಇಷ್ಟರಿಂದ ಯಾಸ್ಕರು ದ್ರವಿಣೋದಾಃ ಎಂಬ ಋಕ್ಕಿಗೆ ನಿರ್ವಚನವನ್ನು ಹೀಗೆ ಹೇಳಿರುವರು—

ದ್ರವಿಣೋದಾ ಯಸ್ತ್ವಂ । ದ್ರವಿಣಸ ಇತಿ ದ್ರವಿಣಸಾದಿನ ಇತಿ ವಾ ದ್ರವಿಣಸಾನಿನ ಇತಿ ವಾ ದ್ರವಿಣಸಸ್ತತ್ಕರ್ತೃಕಾತ್ ಸಂಭಜತೀತಿ ವಾ । ಯಜ್ಞೇಷು ದೇವಪಿಹಾಳಕೇ । ಯಾಚಂತಿ ಸ್ತುವಂತಿ, ವರ್ಧಯಂತಿ ಪೂಜಯಂತೀತಿ ವಾ ।

ಎಂದರೆ ಧನ, ಬಲಸ್ಸು ಮುಂತಾದುವುಗಳನ್ನು ಅಪೇಕ್ಷಿಸುವ ಋತ್ವಿಜರು ದ್ರವಿಣೋದಾ ಎಂಬ ಸಿನ್ನನ್ನು ಯಜ್ಞಗಳಲ್ಲಿ ಸಂಭಾವನೆ ಮಾಡುವಂತೆ, ಪ್ರಾರ್ಥಿಸುತ್ತಾರೆ ಎಂದು ಮುಖ್ಯಾರ್ಥವು. ಇಲ್ಲಿ ದ್ರವಿಣೋದಾಃ ಎಂಬುದು ಪ್ರಥಮಾ ವಿಭಕ್ತ್ಯಂತ ಪದವಾಗಿದ್ದರೂ ದೇವಂ ಎಂಬ ದ್ವಿತೀಯೈಕವಚನಕ್ಕೆ ಯೇಗೆ ವಿಶೇಷಣವಾಯಿತೆಂದರೆ—ದ್ರವಿಣೋದಾ ಯಃ ದೇವಃ ತಂ ದೇವಂ, ಯಾವ ದೇವನು ಧನದಾತನೋ ತ ದೇವನನ್ನು ಎಂದು ಅನ್ವಯಾನುಸಾರವಾಗಿ ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ದ್ರವಿಣಸಃ ಎಂದರೆ ಧನ ಅಥವಾ ಹವಿಸ್ಸನ್ನು ದೇವತಾಯಜನಾರ್ಥವಾಗಿ ಯಾಚಿಸುತ್ತಾರೆ, ಸ್ತುತಿಮಾಡುತ್ತಾರೆ. ಪೂಜಿಸುತ್ತಾರೆ ಎಂಬ ಅನೇಕ ಅರ್ಥಗಳನ್ನು ಹೇಳಬಹುದು.

ಶಕ್ರೋ ದ್ರವಿಣೋದಾ ಇಂದ್ರ ಇತಿ ಕಾತ್ಸ್ನ್ಯೇನ । ಸ ಬಲಧನಯೋರ್ದಾತೃತಮಸ್ತಸ್ಯ ಚೈಷಾ ಸರ್ವಾ ಬಲಕೃತಿಃ ॥

ದ್ರವಿಣೋದಾಃ ಎಂಬ ಶಬ್ದದ ಅವಯವಾರ್ಥವನ್ನೇನೋ ಹೇಳಿದ್ದಾಯಿತು. ಆದರೆ ಈ ದ್ರವಿಣೋದಾಃ ಎಂಬ ದೇವತೆಯು ಯಾರು ? ಎಂದರೆ, ಇಂದ್ರನೇ ದ್ರವಿಣೋದಾಃ ಎಂಬುದಾಗಿ ಹೇಳಲ್ಪಡುವನು, ಏಕೆಂದರೆ ದ್ರವಿಣ ಶಬ್ದವು ಸೂಚಿಸುವ ಬಲ, ಧನ, ಇವುಗಳನ್ನು ಅತಿಶಯವಾಗಿ ಕೊಡುವವನು ಇಂದ್ರನೇ ಆದುದರಿಂದ ಇಂದ್ರನನ್ನೇ ದ್ರವಿಣೋದಾಃ ಎಂಬುದಾಗಿ ಹೇಳಬೇಕೆಂದು ಕಾತ್ಸ್ನ್ಯಕಿ ಎಂಬುವರ ಅಭಿಪ್ರಾಯವು.

ಅಥಾಪ್ಯಗ್ನಿಂ ದ್ರವಿಣೋದಸಮಾಹೈಷ ಪುನರೇತಸ್ಯಾಜ್ಞಾಯತೇ ।
ಯೋ ಅಶ್ಮನೋರಂತರಗ್ನಿಂ ಜಜಾನ ಇತ್ಯಪಿ ನಿಗಮೋ ಭವತಿ ॥

ಎತ್ತ ಇವರು ಈ ಶಬ್ದಕ್ಕೆ ಮತ್ತೊಂದು ಅರ್ಥವನ್ನು ಹೇಳುವರು. ಇಂದ್ರನು ದ್ಯಾವಾಪೃಥಿವಿಗಳನ್ನು ಸೃಷ್ಟಿಸಿದನು. ಈವುಗಳ ಮಧ್ಯದಲ್ಲಿ ಅಗ್ನಿಯನ್ನೂ ಸೃಷ್ಟಿಸಿದನು. ಆದುದರಿಂದ ದ್ರವಿಣೋದಾಃ ಎಂಬ ಶಬ್ದಕ್ಕೆ ಅಗ್ನಿಯೆಂದೂ ಹೇಳಬಹುದು ಎಂದು. ಈ ಅರ್ಥವನ್ನು ಸಮರ್ಥಿಸುವುದಕ್ಕಾಗಿ " ಅಶ್ಮನೋರಂತರಗ್ನಿಂ ಜಜ್ಞಾನ " ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟಿರುವರು.

ಅಥಾಪ್ಯೃತುಯಾಜೇಷು ದ್ರವಿಣೋದಸಾಃ ಪ್ರವಾದಾ ಭವಂತಿ । ತೇಷಾಂ ಪುನಃ ಪಾತ್ರಸ್ಯೇಂದ್ರ-ಪಾನಮಿತಿ ಭವತಿ ॥ ಅಥಾಪ್ಯೇನಂ ಸೋಮಪಾನೇನ ಸ್ತೌತಿ । ಅಥಾಪ್ಯಾಹ ದ್ರವಿಣೋದಾಃ ಪಿಬತು ದ್ರವಿಣೋದಸ ಇತಿ ॥

ಋತುಗಳನ್ನು ಉದ್ದೇಶಿಸಿ ಮಾಡುವ ಯಜ್ಞಗಳಲ್ಲಿ ಋತ್ವಿಜರ ಹಸ್ತದಲ್ಲಿರುವ ಪಾತ್ರೆಯಿಂದ ಇಂದ್ರನು ಸೋಮಪಾನ ಮಾಡುವನೆಂದು ಹೇಳಿರುವುದರಿಂದಲೂ ಇಂದ್ರನನ್ನು ಸೋಮಪಾನಸಂಬಂಧವಾದ ಮಂತ್ರಗಳಿಂದ ಸ್ತೋತ್ರಮಾಡು ವುದರಿಂದಲೂ, ಋತ್ವಿಜರನ್ನು ದ್ರವಿಣೋದಸರೆಂದು ಕರೆಯುವ ರೂಢಿ ಇದೆ. ಇದೆಲ್ಲವೂ ಕ್ರೌಷ್ಟುಕಿ ಎಂಬುವರ ಮತವು

ಅಯಮೇವಾಗ್ನಿರ್ದ್ರವಿಣೋದಾ ಇತಿ ಶಾಕಪೂಣಿಃ । ಅಗ್ನೇಯೇಷ್ವೇವ ಹಿ ಸೂಕ್ತೇಷು ದ್ರವಿಣೋದ ಸಾಃ ಪ್ರವಾದಾ ಭವಂತಿ ॥ ದೇವಾ ಅಗ್ನಿಂ ಧಾರಯನ್ದ್ರವಿಣೋದಾಮಿತ್ಯಪಿ ನಿಗಮೋ ಭವತಿ ॥

ಅಗ್ನಿಯೇ ದ್ರವಿಣೋದಾಃ ಎಂದು ಶಾಕಪೂರ್ಣಿಯವರ ಮತವು ; ಏಕೆಂದರೆ, ಅಗ್ನಿಸಂಬಂಧವಾದ ಸೂಕ್ತಗಳಲ್ಲಿ ಋತ್ವಿಜರು ಅಗ್ನಿಯನ್ನು ಸ್ತುತಿಸುವಾಗ ದ್ರವಿಣೋದಾಃ ಎಂಬ ಶಬ್ದವನ್ನು ಅಗ್ನಿಗೆ ವಿಶೇಷಣಪದವನ್ನಾಗಿ ಉಪ ಯೋಗಿಸುವರು.

ಯಥೋ ಏತತ್ಸ ಬಲಧನಯೋರ್ದಾತೃತಮು ಇತಿ ಸರ್ವಾಸು ದೇವತಾಸ್ವೈಶ್ವರ್ಯಂ ವಿದ್ಯತೇ । ಯಥೋ ಏತದೋಜಸೋ ಜಾತಮುತಮನ್ಯ ಏನಮಿತಿ ಚಾಹೈತ್ಯಯನುಷ್ಯಾಗ್ನೇ-ರೋಜಸಾ ಬಲೇನ ಮಥ್ಯಮಾನೋ ಜಾಯತೇ ತಸ್ಮಾದೇನಮಾಹ ಸಹಸಸ್ಪುತ್ರಂ ಸಹಸಃ ಸೂನುಂ ಸಹಸೋ ಯಹುಂ ॥

ಸಮಸ್ತ ದೇವತೆಗಳಲ್ಲಿಯೂ ಐಶ್ವರ್ಯವಿರುವುದು. ಆದುದರಿಂದ ಅಗ್ನಿಯೂ ಬಲ, ಧನ ಇವುಗಳನ್ನು ಕೊಡುವನು. ಬಲಧನವನ್ನು ಕೊಡುವುದರಿಂದ ಅಗ್ನಿಯನ್ನೂ ದ್ರವಿಣೋದಾಃ ಎಂದು ಹೇಳಬಹುದು. ಇದಲ್ಲದೆ ದ್ರವಿಣ ಶಬ್ದಕ್ಕೆ ಬಲವೆಂದು ಅರ್ಥವಿರುವುದರಿಂದ. ಅಗ್ನಿಯನ್ನು ಉತ್ಪತ್ತಿಮಾಡುವಾಗ ಬಲವನ್ನು ಉಪಯೋಗಿಸಿ (ಬಲವಾಗಿ) ಮಥನ ಮಾಡುವುದರಿಂದ ಅಗ್ನಿಯು ಬಲದಿಂದ ಹುಟ್ಟಿದನೆಂದು ಹೇಳುವ ಪ್ರತೀತಿ ಇದೆ. ಆದುದರಿಂದಲೇ ಅಗ್ನಿಯನ್ನು ಸಹಸಸ್ಪುತ್ರಂ. (ಸಹಸಃ–ಬಲದ, ಪುತ್ರಂ–ಪುತ್ರನಾದ ಅಗ್ನಿಯನ್ನು) ಸಹಸಃ ಸೂನುಂ, ಸಹಸೋ ಯಹುಂ ಎಂಬ ಶಬ್ದಗಳಿಂದ ಸ್ತುತಿಸುವರು—

ದ್ರವ್ಣಃ ಸರ್ಪಿರಾಸುತಿಃ ಪ್ರತ್ನೋ ಹೋತಾ ವರೇಣ್ಯಃ ।
ಸಹಸಸ್ಪುತ್ರೋ ಅದ್ಭುತಃ ॥ (ಋ. ಸಂ. ೨ ೭-೬)

ತ್ವಂ ಹ ಯದ್ಯವಿಷ್ಠ್ಯ ಸಹಸಃ ಸೂನವಾಹುತ ।
ಋತಾ ವಾ ಯಜ್ಞಿಯೋ ಭುವಃ ॥ (ಋ. ಸಂ ೮-೭೫-೩)

ಅಗ್ನೇ ವಾಜಸ್ಯ ಗೋಮತ ಈಶಾನಃ ಸಹಸೋ ಯಹೋ ।
ಅಸ್ಮೇ ಧೇಹಿ ಜಾತವೇದೋ ಮಹಿ ಶ್ರವಃ ॥ (ಋ. ಸಂ. ೧-೭೯-೪)

ಎಂಬ ಋಕ್ಕುಗಳಲ್ಲಿ ಕ್ರಮವಾಗಿ ಸಹಸಸ್ಪುತ್ರ-ಸಹಸಃ ಸೂನು, ಸಹಸೋ ಯಹು ಎಂಬ ಶಬ್ದಗಳು ಅಗ್ನಿಯನ್ನು ಸ್ತುತಿಸುವಾಗ ಉಪಯೋಗಿಸಲ್ಪಟ್ಟಿರುವುವು. ಅದುದರಿಂದ ಬಲಗಳನ್ನು ಇತರ ದೇವತೆಗಳು ಕೊಡುವವರಾದರೂ ಅಗ್ನಿಯೇ ವಿಶೇಷವಾಗಿ ದ್ರವಿಣೋದಾಃ ಎಂಬ ಶಬ್ದದಿಂದ ಪ್ರತಿಪಾದಿತನಾಗಿರುವನು.

ಇಲ್ಲಿ ಬೃಹದ್ದೇವತಾವಾಕ್ಯಗಳನ್ನುದಹರಿಸಿ ಈ ವಿಶೇಷಣವು ಮುಖ್ಯವಾಗಿ ಯಾವ ದೇವತೆಗೆ ಸಂಬಂಧಿಸಿದುದು, ಇದರಿಂದ ಆ ದೇವತೆಯ ಯಾವ ಯಾವ ಗುಣಗಳು ತಿಳಿಯುವುವು ಎಂದು ನೋಡೋಣ.

ಬೃಹದ್ದೇವತೆಯಲ್ಲಿ ಮೊದಲು **ಅಗ್ನಿ**ಯೆಂಬ ಶಬ್ದದ ನಿರ್ವಚನವನ್ನು ತಿಳಿಸಿ ಅನಂತರ **ದ್ರವಿಣೋದಾಃ** ಎಂಬ ವಿಶೇಷಣವು ಅಗ್ನಿಗೆ ಏತಕ್ಕಾಗಿ ಉಪಯೋಗಿಸಲ್ಪಟ್ಟಿದೆ ಎಂಬುದನ್ನು ನಿಷ್ಕರ್ಷಿಸಿದೆ.

ಜಾತೋ ಯದಗ್ರೇ ಭೂತಾನಾಂ ಅಗ್ರಣೀರಧ್ವರೇ ಚ ಯತ್ ।
ನಾಮ್ನಾ ಸಂನಯತೇ ವಾಂಗಂ ಸ್ತುತೋಽಗ್ನಿರಿತಿ ಸೂರಿಭಿಃ ॥
(ಬೃ. ದೇ. ೨.೨೪)

ಸಕಲ ಭೂತಗಳಿಗೂ ಪ್ರಥಮದಲ್ಲಿ ಉತ್ಪನ್ನನಾಗಿರುವುದರಿಂದಲೂ, ಯಜ್ಞಯಾಗಾದಿಗಳಲ್ಲಿ ನೇತೃವಾಗಿರುವುದರಿಂದಲೂ. ತಾನು ಯಾವ ವಸ್ತುಗಳಲ್ಲಿ ಪ್ರವೇಶಿಸಿದರೂ ಅದನ್ನು ತನ್ನಲ್ಲಿಯೇ ಲೀನವಾಗಿ ಮಾಡಿಕೊಳ್ಳುವುದರಿಂದಲೂ ಸಹ **ಅಗ್ನಿ**ಯೆಂದು ಋಷಿಗಳಿಂದ ಸ್ತುತನಾಗಿದ್ದಾನೆ. ಈ ನಿರ್ವಚನವು ನಿರುಕ್ತದಲ್ಲಿ ಹೇಳಿರುವ **ಅಗ್ರಣೀರ್ಭವತಿ ಅಗ್ರಂ ಯಜ್ಞೇಷು ಪ್ರಣೀಯತೇ, ಅಂಗಂ ನಯತಿ ಸನ್ನಮಮಾನಃ** । (ನಿ. ೭-೧೪)ಎಂಬ ನಿರ್ವಚನಗಳಿಗೆ ಅನುರೂಪವಾಗಿದೆ. ಅಗ್ನಿಶಬ್ದವನ್ನು ವಿವರಿಸಿದನಂತರ, ದ್ರವಿಣೋದಾಃ ಎಂಬ ಶಬ್ದದ ನಿರ್ವಚನವನ್ನು ತಿಳಿಸುತ್ತಾ—

ದ್ರವಿಣಂ ಧನಂ ಬಲಂ ವಾಪಿ ಪ್ರಾಯಚ್ಛದ್ಯೇನ ಕರ್ಮಣಾ ।
ತತ್ಕರ್ಮ ದೃಷ್ಟ್ವಾ ಕುತ್ಸಸ್ತು ಪ್ರಾಹೈನಂ ದ್ರವಿಣೋದಸಂ ॥
(ಬೃ. ದೇ. ೨-೨೫)

ಉದಾರವಾಗಿ ಧನವನ್ನೂ ಬಲವನ್ನು ಕೊಡತಕ್ಕ ಅಗ್ನಿಯ ಕರ್ಮಗಳನ್ನು ಕುತ್ಸಋಷಿಯು ಗ್ರಹಿಸಿ ಅಗ್ನಿಯನ್ನು ಧನದ ಅಥವಾ ಬಲದ ದಾತನಾದ **ದ್ರವಿಣೋದಾಃ** ಎಂದು ಸ್ತುತಿಸಿರುವನು.

ದ್ರವಿಣೋದಾ ದ್ರವಿಣಸಸ್ತುರಸ್ಯ ದ್ರವಿಣೋದಾಃ ಸನರಸ್ಯ ಪ್ರ ಯಂಸತ್ ।
ದ್ರವಿಣೋದಾ ವೀರವತೀಮಿಷಂ ನೋ ದ್ರವಿಣೋದಾ ರಾಸತೇ ದೀರ್ಘಮಾಯುಃ ॥
(ಋ. ಸಂ ೧-೯೬-೮)

ಎಂಬ ಋಕ್ಕಿನಲ್ಲಿರುವ ಕುತ್ಸಕೃತವಾದ ಅಗ್ನಿಪ್ರಶಂಸೆಯನ್ನು ಸೂಚಿಸಿ ಪುನಃ ಈ ಸೂಚನೆಯನ್ನು ಅಗ್ನಿದೇವತಾಕವಾದದ್ದೇ ಹೊರತು ಇತರ ದೇವತೆಗಳನ್ನು ಉದ್ದೇಶಿಸಿದುದಲ್ಲ ಎಂದು ಸಮರ್ಥಿಸಿದೆ.

ಅಯಂ ಹಿ ದ್ರವಿಣೋದೋಽಗ್ನಿರಯಂ ದಾತಾ ಬಲಸ್ಯ ಹಿ ।
ಜಾಯತೇ ಚ ಬಲೇನಾಯಂ ಮಹ್ಯಕೃತ್ಯೃಷಿಭಿರಧ್ವರೇ ॥
ದ್ರವಿಣೋದೋಽಗ್ನಿರೇವಾಯಂ ದ್ರವಿಣೋದಾಸ್ತದೋಚ್ಯತೇ ।
ಆಗ್ನೇಯೇಷ್ವೇವ ದೃಶ್ಯಂತೇ ಪ್ರಾಯಾ ದ್ರವಿಣೋದಸಃ ॥

(ಬೃ. ದೇ. ೩-೬೧ ; ೩-೬೫)

ಧನತಾತನೂ, ಬಲದಾತನೂ, ಬಲದಿಂದ ಉತ್ಪನ್ನನೂ ಆದುದರಿಂದಲೇ ಅಗ್ನಿಗೆ ದ್ರವಿಣೋದಾಃ ಎಂಬ ಪ್ರಶಂಸೆಯು ಸಲ್ಲುವುದು ಆದುದರಿಂದ ಈ ವಿಶೇಷಣವು ಅಗ್ನಿದೇವತಾಕವೇ ಆಗಿರುವುದು ಎಂದು ಬೃಹದ್ದೇವತಾಕಾರರು ಸಮರ್ಥಿಸಿರುವರು

॥ ಸಂಹಿತಾಪಾಠಃ ॥

ಆ ದೇವಾನಾಮಪಿ ಪಂಥಾಮಗನ್ಮ ಯಚ್ಛಕ್ನವಾಮ ತದನು ಪ್ರವೋಳ್ಹುಂ।
ಅಗ್ನಿರ್ವಿದ್ವಾನ್ಸ ಯಜಾತ್ಸೇದು ಹೋತಾ ಸೋ ಅಧ್ವರಾನ್ಸ ಋತೂನ್ಕಲ್ಪಯಾತಿ ॥ ೩ ॥

॥ ಪದಪಾಠಃ ॥

ಆ । ದೇವಾನಾಂ । ಅಪಿ । ಪಂಥಾಂ । ಅಗನ್ಮ । ಯತ್ । ಶಕ್ನವಾಮ । ತತ್ । ಅನು । ಪ್ರವೋಳ್ಹುಂ।
ಅಗ್ನಿಃ । ವಿದ್ವಾನ್ । ಸಃ । ಯಜಾತ್ । ಸಃ ।ಇತ್ । ಊಂ ಇತಿ । ಹೋತಾ । ಸಃ । ಅಧ್ವರಾನ್ । ಸಃ। ಋತೂನ್ । ಕಲ್ಪಯಾತಿ ॥ ೩ ॥

॥ ಸಾಯಣಭಾಷ್ಯಂ ॥

ದರ್ಶಪೂರ್ಣಮಾಸಾತಿಪತ್ತ್ಯಾದ್ಯೌ ನಿಮಿತ್ತೇ ಪಾಥಿಕೃತೇಷ್ಟಿಃ ಕರ್ತವ್ಯಾ । ತತ್ರಾ ದೇವಾನಾಮಿತ್ಯೇಷಾ ಯಾಜ್ಯಾ । ಸೂತ್ರಿತಂ ಚ । ವೇತ್ಥಾ ಹಿ ವೇಧೋ ಅಧ್ವನ ಆ ದೇವಾನಾಮುಪಿ ಪಂಥಾಮಗನ್ಮ। ಆ. ೩.೧೦। ಇತಿ॥ ಪ್ರಾಯಣೀಯಾಯಾಮುಷ್ಯೈವ ಯಾಜ್ಯೋದಯನೀಯಾಯಾಂ ಸೈವಾನುವಾಕ್ಯಾ। ಸೂತ್ರಿತಂ ಚ । ಅಗ್ನೇ ನಯ ಸುಪಥಾ ರಾಯೇ ಅಸ್ಮಾನಾ ದೇವಾನಾಮುಪಿ ಪಂಥಾಮಗನ್ಮ । ಆ. ೪-೩। ಇತಿ । ವಿಪರೀತಾಶ್ಚ ಯಾಜ್ಯಾನುವಾಕ್ಯಾ ಇತಿ ॥

ದೇವಾನಾಂ ದೇವಲೋಕಾದಿಗಮನಸಾಧನಂ ದೇವಾನಾಂ ಸ್ವಭೂತಂ ಪಂಥಾಂ ಪಂಥಾನಂ ತನುಪಿ ವೈದಿಕಮಾರ್ಗಂ ವಯಮಾಗನ್ಮ । ಆಗತವಂತೋ ಭವೇಮ । ಯೇನ ದೇವಾನ್ಪ್ರಾಪ್ನುಮಃ ।

तथा वयं यत्कर्मानुष्ठातुं शक्नवाम शक्नुमः समर्था भवामः तत्कर्मानुक्रमेण प्रयोक्ष्यं प्रकर्षेण वोढुं समाप्तिं प्रापयितुं समर्था भवेम! अनंतरं विद्वांस्तं पंथानं जानानः सोऽग्निर्यजात् । देवान्यजतु । सेदु स एव खलु होता मनुष्याणां होमनिष्पादकः । ततः स एवाग्निरध्वरान्यज्ञान् कंचतून् कालान्कल्पयाति । कल्पयतु । करोतु ॥

॥ ಪ್ರತಿಪದಾರ್ಥ ॥

देवानाम—ದೇವತೆಗಳ । **पंथाम अपि**—ಉತ್ತಮವಾದ ಮಾರ್ಗಗಳನ್ನು । **अ अगन्म**—ನಾವು ಅನುಸರಿಸೋಣ । **यत्**—ಯಾವ ಕರ್ಮವನ್ನಾಚರಿಸಲು । **शक्नवाम**—ನಾವು ಶಕ್ತರಾಗಿದ್ದೇವೆಯೋ । **तत्-अनु**—ಆ ಕರ್ಮವನ್ನು । **प्र वोळ्हुं**—ಉತ್ತಮವಾಗಿ ನಿರ್ವಹಿಸಲು ಶಕ್ತರಾಗೋಣ । **विद्वान्**—ಸನ್ಮಾರ್ಗವನ್ನರಿತ । **सः अग्निः**—ಅದೇ ಅಗ್ನಿಯು । **यजात्**—ದೇವತೆಗಳನ್ನು ಪೂಜಿಸಲಿ । **सः इत्**—ಅದೇ ಅಗ್ನಿಯು । **होता**—ಮಾನವರ ಯಜ್ಞಸಂಪಾದಕನು । **सः**—ಅದೇ ಅಗ್ನಿಯು । **अध्वरान्**-ಯಜ್ಞಗಳನ್ನೂ । **ऋतून्**—ಯಜ್ಞಕಾಲಗಳನ್ನೂ । **कल्पयाति**—ನಿಯಮಿಸಲಿ

॥ ಭಾವಾರ್ಥ ॥

ದೇವತೆಗಳ ಉತ್ತಮವಾದ ಮಾರ್ಗಗಳನ್ನು ನಾವು ಅನುಸರಿಸೋಣ. ಯಾವ ಕರ್ಮವನ್ನಾಚರಿಸಲು ನಾವು ಶಕ್ತರಾಗಿದ್ದೇವೆಯೋ, ಆ ಕರ್ಮವನ್ನು ಉತ್ತಮವಾಗಿ ನಿರ್ವಹಿಸಲು ಶಕ್ತರಾಗೋಣ. ಸನ್ಮಾರ್ಗವನ್ನರಿತ ಅದೇ ಅಗ್ನಿಯು ಮಾನವರ ಯಜ್ಞಸಂಪಾದಕನಾಗಿದ್ದಾನೆ. ಅದೇ ಅಗ್ನಿಯು ಯಜ್ಞಗಳನ್ನೂ ಯಜ್ಞಕಾಲಗಳನ್ನೂ ನಿಯಮಿಸಲಿ.

English Translation

May we pursue the path that leads to the gods to convey that (worship) which we may be able (to offer). May that wise Agni minister; for He verily is the ministrant priest, and let him prescribe the ceremonies and the seasons

॥ ವಿಶೇಷವಿಷಯಗಳು ॥

ದರ್ಶಪೂರ್ಣಮಾಸಯಾಗಗಳಲ್ಲಿ ಪಥಿಕೃದಿಷ್ಟಿಯನ್ನು ಮಾಡಬೇಕು. ಆಗ **ಆ ದೇವಾನಾಂ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**वेत्था हि वेधो अध्वन आ देवानामपि पंथामगन्न** ಎಂಬ ಸೂತ್ರದಿಂದ (ಅ. ೩ ೧೦) ವಿವೃತವಾಗಿರುವುದು ಮತ್ತು ಪ್ರಾಯಣೇಷ್ಟಿಯಲ್ಲಿ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಈ ಋಕ್ಕನ್ನೇ ಯಾಜ್ಯಾಮಂತ್ರವನ್ನಾಗಿಯೂ, ಉದಯನೀಯೇಷ್ಟಿಯಲ್ಲಿ ಅನುವಾಕ್ಯಾಮಂತ್ರವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**अग्ने नय सुपथा रायो अस्मान् देवानामपि पंथामगन्न** ಎಂಬ ಸೂತ್ರದಿಂದ (ಅ. ೪ ೩) ವಿವೃತ

ವಾಗಿರುವುದು. ಎಂದರೆ ಪ್ರಾಯುಣೀಯೋದಯನೇಷ್ಟಿಗಳಲ್ಲಿ ಈ ಮಂತ್ರವನ್ನು ವ್ಯತ್ಯಸ್ತಮಾಡಿ ಒಂದರಲ್ಲಿ ಯಾಜ್ಯಾ ಮಂತ್ರವನ್ನಾಗಿಯೂ ಮತ್ತೊಂದರಲ್ಲಿ ಅನುವಾಕ್ಯಾಮಂತ್ರವನ್ನಾಗಿಯೂ ಪಠಿಸಬೇಕು.

। ಸಂಹಿತಾಪಾಠಃ ।

ಯದ್ವೋ ವಯಂ ಪ್ರಮಿನಾಮ ವ್ರತಾನಿ ವಿದುಷಾಂ ದೇವಾ ಅವಿದುಷ್ಟರಾಸಃ ।
ಅಗ್ನಿಷ್ಟದ್ವಿಶ್ವಮಾ ಪೃಣಾತಿ ವಿದ್ವಾನ್ಯೇಭಿರ್ದೇವಾಁ ಋತುಭಿಃ ಕಲ್ಪಯಾತಿ ॥

। ಪದಪಾಠಃ ।

ಯತ್ । ವಃ । ವಯಂ । ಪ್ರಮಿನಾಮ । ವ್ರತಾನಿ । ವಿದುಷಾಂ । ದೇವಾಃ । ಅವಿದುಃಷ್ಟರಾಸಃ ।
ಅಗ್ನಿಃ । ತತ್ । ವಿಶ್ವಂ । ಆ । ಪೃಣಾತಿ । ವಿದ್ವಾನ್ । ಯೇಭಿಃ । ದೇವಾನ್ । ಋತುಃಭಿಃ ।
ಕಲ್ಪಯಾತಿ ॥ ೪ ॥

। ಸಾಯಣಭಾಷ್ಯಂ ।

ವ್ರತಾತಿಪತ್ತೌ ವ್ರಾತಪತೀಷ್ಟಿಃ ಕರ್ತವ್ಯಾ । ತತ್ರ ಯದ್ವೋ ವಯಮಿತ್ಯೇಷಾ ಯಾಜ್ಯಾ । ಸೂತ್ರಿತಂ ಚ । ತ್ವಮಗ್ನೇ ವ್ರತಪಾ ಅಸಿ ಯದ್ವೋ ವಯಂ ಪ್ರಮಿನಾಮ ವ್ರತಾನಿ । ಆ. ೩-೧೩ । ಇತಿ ॥

ಹೇ ದೇವಾಃ ಅವಿದುಷ್ಟರಾಸೋಽವಿದ್ವತ್ತರಾ ಅತ್ಯಂತಮಜಾನಂತೋ ವಯಂ ಯುಷ್ಮಾಕಂ ಯತ್ ಯತ್ಕಿಂಚಿದ್ವ್ರತಾನಿ ಕರ್ಮಾಣಿ ವಿದುಷಾಂ ಭವತಾಂ ಜಾನತಾಮೇವ ಪ್ರಮಿನಾಮ ಪ್ರಹಿಂಸಿತವಂತಃ । ಭವತ್ಸು ಜಾನತ್ಸು ನಿತ್ಯನೈಮಿತ್ತಿಕಕರ್ಮಾಣಿ ವಿಲೋಪಿತವಂತ ಇತ್ಯರ್ಥಃ । ವಿದ್ವಾನೇತತ್ಸರ್ವಂ ಜಾನಾನೋಽಗ್ನಿಃ ಸ್ವಿಷ್ಟಕೃತ್ತದ್ವಿಶ್ವಂ ಸರ್ವಂ ಕರ್ಮಜಾತಮಾ ಪೃಣಾತಿ । ಆಪೂರಯತು । ಫಲಸಹಿತಂ ಕರೋತ್ವಿತ್ಯರ್ಥಃ । ಕೇನಾಪೂರಯತು ತತ್ರಾಹ । ಯೇಭಿರ್ಯತುಭಿರ್ಯಾಗಯೋಗ್ಯೈಃ ಕಾಲೈರ್ದೇವಾನ್ಕಲ್ಪಯಾತಿ ಕಲ್ಪಯತಿ ಕರ್ಮಾಂಗಭಾವಾಯ ಸಮರ್ಥಯತಿ ತೈರಾಪೂರಯತು ॥

। ಪ್ರತಿಪದಾರ್ಥ ।

ದೇವಾಃ—ಎಲೈ ದೇವತೆಗಳೇ, । ಅವಿದುಷ್ಟರಾಸಃ—ಅಜ್ಞಾನದಿಂದ ಕೂಡಿದ । ವಯಂ—ನಾವು । ವಃ—ನಿಮ್ಮ ವಿಷಯದಲ್ಲಿ । ಯತ್ ವ್ರತಾನಿ—ಯಾವ ಕರ್ಮಗಳನ್ನೇ ಆಗಲಿ । ವಿದುಷಾಂ—ನಿಮ್ಮ ಗೋಚರಕ್ಕೆ ಬಂದಂತೆಯೇ । ಪ್ರಮಿನಾಮ—ಹಿಂಸಿಸುವೆವೋ (ಆಚರಿಸುವುದಿಲ್ಲವೋ) । ವಿದ್ವಾನ್—ಇವನ್ನು ತಿಳಿದವನಾದ । ಅಗ್ನಿಃ—ಅಗ್ನಿಯು । ಯೇಭಿಃ—ಯಾವ । ಋತುಭಿಃ—ಯಾಗಯೋಗ್ಯವಾದ ಕಾಲಗಳಿಂದ । ದೇವತಾನ್—ದೇವತೆಗಳನ್ನು । ಕಲ್ಪಯತಿ—ಕರ್ಮಭಾಗಿಗಳಾಗಿ ಮಾಡುವನೋ ।

ತತ್ ವಿಶ್ವಂ—ಆ ಎಲ್ಲ ಸಕಾಲಿಕವಾದ ಕರ್ಮಗಳನ್ನೂ । **ಆ ಪೃಣಾತಿ**—ನಿರ್ವಹಿಸಿ ಫಲಯೋಗ್ಯವಾಗುವಂತೆ ಮಾಡಲಿ.

॥ ಭಾವಾರ್ಥ ॥

ಎಲೈ ದೇವತೆಗಳೇ, ಅಜ್ಞಾನದಿಂದ ಕೂಡಿದ ನಾವು ನಿಮ್ಮ ವಿಷಯದಲ್ಲಿ ಯಾವ ಕರ್ಮಗಳನ್ನೇ ಆಗಲಿ ನಿಮ್ಮ ಮುಂದೆಯೇ ಆಚರಿಸದೇ ಬಿಟ್ಟುಬಿಡುವೆವೋ ಆ ಕರ್ಮಗಳನ್ನು ಅಗ್ನಿಯು ನಮ್ಮ ಅಜ್ಞಾನವನ್ನು ತಿಳಿದವನಾಗಿಯೂ, ಸಕಲ ಕರ್ಮರಹಸ್ಯವನ್ನು ಅರಿತವನಾಗಿಯೂ ಆಯಾ ಯೋಗ್ಯವಾದ ಕಾಲಕ್ಕನುಗುಣವಾಗಿ ದೇವತೆಗಳನ್ನು ಕರ್ಮಭಾಗಿಗಳನ್ನಾಗಿ ಮಾಡುತ್ತ ಸಕಲ ಕರ್ಮಗಳನ್ನೂ ಸಫಲವಾಗುವಂತೆ ಮಾಡಲಿ.

English Translation

O gods, when we who are most ignorant neglect the offices adderssed to you who are wise, may the wise Agni complete the whole by (appointing) those seasons by which he regulates the worship of the gods

॥ ವಿಶೇಷವಿಷಯಗಳು ॥

ವ್ರಾತಪತೀಷ್ಟಿಯಲ್ಲಿ **ಯದ್ದೋ ವಯಂ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ತ್ವಮಗ್ನೇ ವ್ರತಪಾ ಅಸಿ ಯದ್ದೋ ವಯಂ ಪ್ರಮಿನಾಮಿ ವ್ರತಾನಿ** ಎಂಬ ಸೂತ್ರದಿಂದ (ಆ. ೩-೧೩) ವಿವೃತವಾಗಿರುವುದು

ಯಜ್ಞದಲ್ಲಿ ಅಜ್ಞಾನದಿಂದ ಸಂಭವಿಸಬಹುವಾದ ಮಂತ್ರಲೋಪ, ಕ್ರಿಯಾಲೋಪ ಮೊದಲಾದ ದೋಷಗಳನ್ನು ಪರಿಹರಿಸಿ ಯಜ್ಞವನ್ನು ಸಾಂಗವಾಗಿ ನೆರವೇರುವಂತೆ ಮಾಡಬೇಕೆಂದು ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

। ಸಂಹಿತಾಪಾಠಃ ।

ಯತ್ಪಾಕತ್ರಾ ಮನಸಾ ದೀನದಕ್ಷಾ ನ ಯಜ್ಞಸ್ಯ ಮನ್ವತೇ ಮರ್ತ್ಯಾಸಃ ।
ಅಗ್ನಿಷ್ಟದ್ಧೋತಾ ಕ್ರತುವಿದ್ವಿಜಾನನ್ಯಜಿಷ್ಠೋ ದೇವಾ್ ಋತುಶೋ ಯಜಾತಿ ॥ ೫ ॥

। ಪದಪಾಠಃ ।

ಯತ್ । ಪಾಕತ್ರಾ । ಮನಸಾ । ದೀನದಕ್ಷಾಃ । ನ । ಯಜ್ಞಸ್ಯ । ಮನ್ವತೇ । ಮರ್ತ್ಯಾಸಃ ।
ಅಗ್ನಿಃ । ತತ್ । ಹೋತಾ । ಕ್ರತುವಿತ್ । ವಿಜಾನನ್ । ಯಜಿಷ್ಠಃ । ದೇವಾನ್ । ಋತುಶಃ ।
ಯಜಾತಿ ॥ ೫ ॥

॥ ಸಾಯಣಭಾಷ್ಯಂ ॥

ದೀನದಕ್ಷಾ ದೀನಬಲಾ ದಿನೋತ್ಸಾಹಾ ವಾ ಮರ್ತ್ಯಾಸೋ ಮರ್ತ್ಯಾ ಮನುಷ್ಯಾ ಋತ್ವಿಜಃ ಪಾಕತ್ರಾ ಪಾಕೇನ ॥ ಬಹುಲಗ್ರಹಣಾದಸ್ಮಾದಪಿ ತೃತೀಯಾರ್ಥೇ ತ್ರಾಪ್ರತ್ಯಯಃ ॥ ಪಾಕೇನ ಪಕ್ವೇನ ವಿಶಿಷ್ಟ-ಜ್ಞಾನರಹಿತೇನಾಲ್ಪೇನ ವಾ ಮನಸಾ ಯುಕ್ತಾಃ ಸಂತೋ ಯಜ್ಞಸಂಬಂಧಿ ಯತ್ಕರ್ಮ ನ ಮನ್ವತೇ ನ ಜಾನಂತಿ ತತ್ಕರ್ಮ ವಿಜಾನನ್ ಹೋತಾ ದೇವಾನಾಮಾಹ್ವಾತಾ ಹೋಮನಿಷ್ಪಾದಕೋ ವಾ ಕ್ರತುವಿತ್ ಕರ್ಮವಿದ್ಯಜಿಷ್ಠೋ ದೇವಾನಾಮತಿಶಯೇನ ಯಷ್ಟಾ ಸೋಽಗ್ನಿಃ ಸ್ವಿಷ್ಟಕೃದ್ಯತುಶಃ ಋತಾವೃತೌ ಸ್ವೇ ಸ್ವೇ ಯಾಗಯೋಗ್ಯೇ ಕಾಲೇ ದೇವಾನ್ಯಜಾತಿ । ಯಜತು । ಹವಿರ್ಭಿಃ ಪೂಜಯತು ॥

॥ ಪ್ರತಿಪದಾರ್ಥ ॥

ದೀನದಕ್ಷಾಃ—ಕೃಶವಾದ ಬಲವುಳ್ಳವರೂ । ಮರ್ತ್ಯಾಸಃ—ಮಾನವರೂ ಆದ ಋತ್ವಿಕ್ಕುಗಳು । ಪಾಕತ್ರಾ—ಪರಿಪಕ್ವವಿಲ್ಲದ । ಮನಸಾ—ಮನಸ್ಸಿನಿಂದ ಕೂಡಿದವರಾಗಿ । ಯಜ್ಞಸ್ಯ ಯತ್—ಮಾಡಬೇಕಾದ ಯಾವ ಯಾಗ ಕರ್ಮವನ್ನು । ನ ಮನ್ವತೇ—ಅರಿಯುವುದಿಲ್ಲವೋ । ತತ್—ಆಯಾ ಕರ್ಮವನ್ನು । ವಿಜಾನನ್—ಅರಿತವನಾಗಿ । ಹೋತಾ—ಹೋತೃರೂಪನೂ । ಕ್ರತುವಿತ್—ಕರ್ಮವನ್ನರಿತವನೂ । ಯಜಿಷ್ಠಃ—ಅತ್ಯಂತ ಪೂಜ್ಯನೂ ಆದ । ಅಗ್ನಿಃ—ಅಗ್ನಿಯು । ಋತುಶಃ—ಆಯಾ ಕಾಲಕ್ಕನುಸಾರವಾಗಿ । ದೇವಾನ್—ದೇವತೆಗಳನ್ನು । ಯಜಾತಿ—ಪೂಜಿಸಲಿ.

॥ ಭಾವಾರ್ಥ ॥

ಕೃಶವಾದ ಬಲವುಳ್ಳವರೂ, ಮಾನವರೂ ಆದ ಋತ್ವಿಕ್ಕುಗಳು ಪರಿಪಕ್ವವಿಲ್ಲದ ಮನಸ್ಸಿನಿಂದ ಕೂಡಿದವರಾಗಿ ಮಾಡಬೇಕಾದ ಯಾವ ಯಾಗಕರ್ಮವನ್ನು ಅರಿಯುವುದಿಲ್ಲವೋ ಆಯಾ ಕರ್ಮವನ್ನು ಅರಿತವನಾಗಿ ಹೋತೃರೂಪನೂ, ಕರ್ಮವನ್ನರಿತವನೂ, ಅತ್ಯಂತ ಪೂಜ್ಯನೂ ಆದ ಅಗ್ನಿಯು ಆಯಾ ಕಾಲಕ್ಕನುಸಾರವಾಗಿ ದೇವತೆಗಳನ್ನು ಪೂಜಿಸಲಿ.

English Translation

Since men of feeble energies, with mind yet immature, are unaquainted with (the ritual of) the sacrifice, may Agni, the invoker (of the gods), the skilled in rites, well knowing (what is to be done), the best offerer, offer worship according to the fit season to the gods.

॥ ಸಂಹಿತಾಪಾಠಃ ॥

ವಿಶ್ವೇಷಾಂ ಹ್ಯಧ್ವರಾಣಾಮನೀಕಂ ಚಿತ್ರಂ ಕೇತುಂ ಜನಿತಾ ತ್ವಾ ಜಜಾನ।
ಸ ಆ ಯಜಸ್ವ ನೃವತೀರನು ಕ್ಷಯಾಃ ಸ್ವಾಹಾ ಇಷಃ ಕ್ಷುಮತೀರ್ವಿಶ್ವ-
ಜನ್ಯಾಃ ॥ ೬ ॥

॥ ಪದಪಾಠಃ ॥

ವಿಶ್ವೇಷಾಂ । ಹಿ । ಅಧ್ವರಾಣಾಂ । ಅನೀಕಂ । ಚಿತ್ರಂ । କେତುಂ । ಜನಿತಾ । ತ್ವಾ । ಜಜಾನ ।
ಶಃ । ಅ । ಯಜಸ್ವ । ನೃವತೀಃ । ಅನು । ಕ್ಷಾಃ । ಸ್ವಾಹಾರ್ಹಾಃ । ಇಷಃ । ಸ್ತುವತೀಃ । ವಿಶ್ವಜನ್ಯಾಃ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವಿಶ್ವೇಷಾಂ ಸರ್ವೇಷಾಮಧ್ವರಾಣಾಂ ಯಜ್ಞಾನಾಮನೀಕಂ ಮುಖಂ ಪ್ರಧಾನಂ ಚಿತ್ರಂ ಚಾಯನೀಯಂ ನಾನಾರೂಪಂ କେತುಂ ಪ್ರಜ್ಞಾಪಕಂ ತಾ ತ್ವಾಂ ಜನಿತಾ ಜನಯಿತಾ ಪ್ರಜಾಪತಿರ್ಯಜಮಾನೋ ವಾ ಜನಾನ । ಜನಯಾಮಾಸ । ಉತ್ಪಾದಿತಃ ಸ ತ್ವಂ ನೃವತೀರ್ದಾಸಾದಿಯುಕ್ತಾಃ ಕ್ಷಾಃ । ಪೃಥಿವೀನಾಮೈತತ್ । ಕ್ಷಯಂತ್ಯತ್ರೇತಿ ಕ್ಷಾ ಭೂಮಿಃ । ಅನ್ವಾ ಯಜಸ್ವ । ಅನುಪ್ರಯಚ್ಛ । ಯದ್ವಾ । ನೃವತೀರ್ನೃಭಿಃ ಸಂಸ್ಕೃತಾನಿ ಕ್ಷಾ ಅನು ಪೃಥಿವೀಂ ವೇದಿಲಕ್ಷಣಾಮನುಗತಾನಿ ವೇದ್ಯಾವಾಸಾದಿತಾನಿ ಸ್ವಾಹಾರ್ಹಾಃ ಸ್ಪೃಹಣೀಯಾನಿ ಸ್ತುವತೀಃ ಸ್ತುತಿಮಂತ್ರಲಕ್ಷಣಶಬ್ದವಂತಿ ವಿಶ್ವಜನ್ಯಾಃ ಸರ್ವಜನಹಿತಾನಿ ವೃಷ್ಟ್ಯನ್ನಹೇತುತ್ವಾತ್ ನಾನೀಷೋಽನ್ನಾನಿ ಹವಿರ್ಲಕ್ಷಣಾನಿ ಯಜಸ್ವ । ದೇವೇಭ್ಯಃ ಪ್ರಯಚ್ಛ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) ವಿಶ್ವೇಷಾಂ ಹಿ—ಸಮಸ್ತವಾದ । ಅಧ್ವರಾಣಾಂ—ಯಾಗಗಳಿಗೂ । ಅನೀಕಂ—ಪ್ರಧಾನನೂ । ಚಿತ್ರಂ—ಆಕರ್ಷಕನೂ । କେತುಂ—ಪ್ರಜ್ಞಾಪಕನೂ ಆದ । ತ್ವಾ—ನಿನ್ನನ್ನು । ಜನಿತಾ—ಸೃಷ್ಟಿಕರ್ತನಾದ ಪ್ರಜಾಪತಿಯು । ಜಜಾನ—ಉತ್ಪನ್ನ ಮಾಡಿದನು । ಸಃ—ಅಂತಹ ನೀನು । ನೃವತೀಃ—ಪುತ್ರಾದಿಗಳಿಂದ ಕೂಡಿದ । ಕ್ಷಾಃ—ಭೂಮಿಯನ್ನು । ಅನು ಆ ಯಜಸ್ವ—ಒದಗಿಸಿಕೊಡು । ಸ್ವಾಹಾರ್ಹಾ-ಆಕರ್ಷಕವಾದವು । ಸ್ತುವತೀಃ—ಸ್ತುತಿರೂಪವಾದ ಶಬ್ದವುಳ್ಳವೂ । ವಿಶ್ವಜನ್ಯಾಃ—ಸಕಲ ಜನರಿಗೂ ಹಿತವಾದವೂ ಆದ । ಇಷಃ—ಅನ್ನಗಳನ್ನೂ ಒದಗಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಸಕಲ ಯಾಗಗಳಿಗೂ ಪ್ರಧಾನನೂ, ಆಕರ್ಷಕನೂ, ಪ್ರಜ್ಞಾಪಕನೂ ಆದ ನಿನ್ನನ್ನು ಸೃಷ್ಟಿಕರ್ತನಾದ ಪ್ರಜಾಪತಿಯು ಉತ್ಪನ್ನಮಾಡಿದನು. ಅಂತಹ ನೀನು ನಮಗೆ ಪುತ್ರಾದಿಗಳಿಂದ ಕೂಡಿದ ಭೂಮಿಯನ್ನು ಕೊಡು.. ಆಕರ್ಷಕವಾದವೂ, ಸ್ತುತಿರೂಪವಾದ ಶಬ್ದದಿಂದ ಕೂಡಿದವೂ ಸಕಲ ಜನರಿಗೂ ಹಿತವಾದವೂ ಆದ ಹವಿಸ್ಸುಗಳನ್ನು ದೇವತೆಗಳಿಗೆ ಒದಗಿಸು

English Translation

The progenitor has engendered you the chief of all sacrifices. variegated, illuminating (all); offer (to the gods) the desirable all-sustaining praise-accompanied viands growing upon man-occupied earth.

॥ ವಿಶೇಷವಿಷಯಗಳು ॥

ಜನಿತಾ ತ್ವಾ ಜಜಾನ—ಪ್ರಜಾಪತಿರ್ಯಜಮಾನೋ ವಾ ಜನಯಾಮಾಸ । ಅಗ್ನಿಯಾದ ನಿನ್ನನ್ನು ಪ್ರಜಾಪತಿಯು (ಬ್ರಹ್ಮನು) ಸೃಷ್ಟಿಸಿದನು ಅಥವಾ ಪಾರ್ಥಿವಾಗ್ನಿ (ಯಜ್ಞಾಗ್ನಿ) ರೂಪದಿಂದಿರುವ ನಿನ್ನನ್ನು ಯಜ್ಞ ಮಾಡುವ ಯಜಮಾನನು ಋತ್ವಿಕ್ಕುಗಳ ಸಹಾಯದಿಂದ ಅರಣಿಗಳಲ್ಲಿ ಕಡೆದು ಉತ್ಪನ್ನನಾಗುವಂತೆ ಮಾಡಿದನು ಎಂದಭಿಪ್ರಾಯವು.

ಸಃ ನೃವತೀಃ ಕ್ಷಾಃ ಅನು ಯಜಸ್ವ—ಸ ತ್ವಂ ದಾಸಾದಿಯುಕ್ತಾಃ ಭೂಮೀಃ ಅನುಪ್ರಯಚ್ಛ ಎಲೈ ಅಗ್ನಿಯೇ ನೀನು ನಮಗೆ ಭೃತ್ಯಾದಿಗಳನ್ನೂ ಭೂಮಿಯನ್ನೂ ಒದಗಿಸಿಕೊಡು ಅಥವಾ ಭೃತ್ಯಾದಿಗಳಿಂದ ಚೆನ್ನಾಗಿ ಸುಸಂಸ್ಕೃತವಾದ ಎಂದರೆ ಉತ್ತು, ಬಿತ್ತಿ ಹದಗೊಳಿಸಲ್ಪಟ್ಟ ಮತ್ತು ಸನ್ಯಾದಿಗಳಿಂದ ಸಮೃದ್ಧವಾದ ಭೂಮಿಯನ್ನು (ಹೊಲ, ಗದ್ದೆಗಳನ್ನು) ಒದಗಿಸಿಕೊಡು.

ಸ್ವಾಹಾ ಇಷಃ ಕ್ಷುಮತೀರ್ವಿಶ್ವಜನ್ಯಾಃ—ಸರ್ವಜನರಿಗೂ ಹಿತಕರವೂ ಅಪೇಕ್ಷಣೀಯವೂ ಆದ ಮತ್ತು ಸ್ತುತ್ಯಾದಿಗಳಿಂದ ಪ್ರಾರ್ಥಿತವಾದ ಅನ್ನಾದ್ಯಾಹಾರಗಳನ್ನು ಒದಗಿಸಿಕೊಡು ಎಂದಭಿಪ್ರಾಯವು

। ಸಂಹಿತಾಪಾಠಃ ।

ಯಂ ತ್ವಾ ದ್ಯಾವಾಪೃಥಿವೀ ಯಂ ತ್ವಾಪಸ್ತ್ವಷ್ಟಾ ಯಂ ತ್ವಾ ಸುಜನಿಮಾ ಜಜಾನ ।
ಪಂಥಾಮನು ಪ್ರವಿದ್ವಾನ್ಪಿತೄಯಾಣಂ ದ್ಯುಮದ್ಅಗ್ನೇ ಸಮಿಧಾನೋ ವಿ ಭಾಹಿ ॥ ೭ ॥

। ಪದಪಾಠಃ ।

ಯಂ । ತ್ವಾ । ದ್ಯಾವಾಪೃಥಿವೀ ಇತಿ । ಯಂ । ತ್ವಾ । ಆಪಃ । ತ್ವಷ್ಟಾ । ಯಂ । ತ್ವಾ । ಸುಽಜನಿಮಾ । ಜಜಾನ ।
ಪಂಥಾಂ । ಅನು । ಪ್ರಽವಿದ್ವಾನ್ । ಪಿತೃಽಯಾಣಂ । ದ್ಯುಽಮತ್ । ಅಗ್ನೇ । ಸಂಽಇಧಾನಃ । ವಿ । ಭಾಹಿ ॥ ೭ ॥

। ಸಾಯಣಭಾಷ್ಯಂ ।

ಹೇ ಅಗ್ನೇ ಯಂ ತ್ವಾ ತ್ವಾಂ ದ್ಯಾವಾಪೃಥಿವೀ ಜನಿತವತ್ಯೌ ಆದಿತ್ಯಾತ್ಮನಾಗ್ನ್ಯಾತ್ಮನಾ ವಾ । ತಥಾ ಯಂ ತ್ವಾನಾಪೋ ಮೇಘೋದರಗತಾ ವಿದ್ಯುದಾತ್ಮನಾ ಸ್ಥಿತಂ ಜನಿತವತ್ಯಃ । ಯದ್ವಾ । ಆಪ

ಇತ್ಯಂತರಿಕ್ಷನಾಮ । ದ್ಯಾವಾಪೃಥಿವೀ ಅಂತರಿಕ್ಷಂ ಚೇಮೇ ತ್ರಯೋ ಲೋಕಾ ಯಂ ತ್ವಮಜೀಜನನ್ । ಕಂಚ ಸುಜನಿಮಾ ಶೋಭನಜನನಸ್ತ್ವಷ್ಟಾ ಪ್ರಜಾಪತಿರ್ಯಂ ತ್ವಾಂ ಜಜಾನ ಜನಯಾಮಾಸ ಹೇ ಅಗ್ನೇ ಪಿತೃಯಾಣಂ ಪಿತರೋ ಯೇನ ಮಾರ್ಗೇಣ ಗಚ್ಛಂತಿ ತಂ ಪಂಥಾಂ ಹವಿರ್ವಹನಮಾರ್ಗಮನು ಪ್ರವಿದ್ವಾನ್ ಪ್ರಜಾನಂಸ್ತ್ವಂ ಸಮಿಧಾನಃ ಸಮಿಧ್ಯಮಾನಃ ಸನ್ ದ್ಯುಮದ್ದೀಪ್ತಿಯುಕ್ತಂ ಯಥಾ ಭವತಿ ತಥಾ ವಿ ಭಾಹಿ । ವಿಶೇಷೇಣ ದೀಪ್ಯಸೇ ॥

॥ ಪ್ರತಿಪದಾರ್ಥಃ

ಅಗ್ನೇ—ಎಲೈ ಅಗ್ನಿಯೇ । **ಯಂ ತ್ವಾ**—ಯಾವ ನಿನ್ನನ್ನು । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳು ಉತ್ಪನ್ನ ಮಾಡಿದರೋ । **ಯಂ ತ್ವಾ**—ಯಾವ ನಿನ್ನನ್ನು । **ಆಪಃ**—ಉದಕಗಳು ನಿರ್ಮಿಸಿದವೋ । **ಯಂ ತ್ವಾ**—ಯಾವ ನಿನ್ನನ್ನು । **ಸುಜನಿಮಾ**—ಉತ್ತಮವಾದ ಸೃಷ್ಟಿಕರ್ತನಾದ । **ತ್ವಷ್ಟಾ**—ಪ್ರಜಾಪತಿಯು। **ಜಜಾನ**—ಸೃಷ್ಟಿಸಿದನೋ ಅಂತಹ ನೀನು । **ಪಿತೃಯಾಣಂ**—ಪಿತೃಗಳು ಸಂಚರಿಸುವ । **ಪಂಥಾಂ**—ಉತ್ತಮ ಮಾರ್ಗವನ್ನು । **ಅನು ಪ್ರವಿದ್ವಾನ್**—ಪೂರ್ಣವಾಗಿ ಅರಿತವನಾಗಿಯೂ । **ಸಮಿಧಾನಃ**—ಪ್ರಜ್ವಲಿತನಾಗಿಯೂ । **ದ್ಯುಮತ್**—ಕಾಂತಿಯನ್ನು ಬೀರುತ್ತಾ । **ವಿ ಭಾಹಿ**—ಅತಿಶಯವಾಗಿ ಪ್ರಕಾಶಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ನಿನ್ನನ್ನು ದ್ಯಾವಾಪೃಥಿವಿಗಳೂ ಉದಕಗಳೂ, ಉತ್ತಮವಾದ ಸೃಷ್ಟಿಕರ್ತನಾದ ಪ್ರಜಾಪತಿಯೂ ಉತ್ಪನ್ನಮಾಡಿದರೋ ಅಂತಹ ನೀನು ಪಿತೃಗಳು ಸಂಚರಿಸುವ ಉತ್ತಮವಾದ ಮಾರ್ಗವನ್ನು ಪೂರ್ಣವಾಗಿ ಅರಿತವನಾಗಿಯೂ, ಪ್ರಜ್ವಲಿತನಾಗಿಯೂ ಕಾಂತಿಯನ್ನು ಬೀರುತ್ತಾ ಅತಿಶಯವಾಗಿ ಪ್ರಕಾಶಿಸು

English Translation

Do you, Agni, whom the earth and heaven, whom the waters, whom Twashtri, the glorious creator, engendered, who are cognizant of the path, the road of the Pitris, shine brilliantly, being kindled.

॥ ವಿಶೇಷವಿಷಯಗಳು ॥

ಈ ಋತ್ವಿಕ್ಕಿನ ಪೂರ್ವಾರ್ಧಕ್ಕೆ ಎರಡು ಮೂರು ವಿಧವಾಗಿ ಅರ್ಥಮಾಡಬಹುದೆಂದು ಭಾಷ್ಯಕಾರರು ತೋರಿಸಿದ್ದಾರೆ. **ದ್ಯಾವಾಪೃಥಿವೀ ಯಂ ತ್ವಾ ಜಜಾನ ಆಪಃ ಯಂ ತ್ವಾ ಜಜಾನ**—**ದ್ಯಾವಾಪೃಥಿವೀ ಆದಿತ್ಯಾತ್ಮನಾಗ್ನ್ಯಾತ್ಮನಾ ಯಂ ತ್ವಾ ಜನಿತವತ್ಯೌ ತಥಾ ಮೇಘೋದರಗತಾ ಆಪಃ ವಿದ್ಯುದಾತ್ಮನಾ ಸ್ಥಿತಂ ತ್ವಾಂ ಜನಿತವತ್ಯಃ** । ದ್ಯಾವಾಪೃಥಿವಿಗಳು ಎಂದರೆ ಸ್ವರ್ಗವು ಅಗ್ನಿಯಾದ ನಿನ್ನನ್ನು ಸ್ವರ್ಗದಲ್ಲಿ ಆದಿತ್ಯರೂಪದಿಂದಲೂ, ಪೃಥಿವಿಯು, ನಿನ್ನನ್ನು ಪಾರ್ಥಿವಾಗ್ನಿರೂಪದಿಂದಲೂ, ಮೇಘಗಳ ಮಧ್ಯದಲ್ಲಿರುವ ಉದಕಗಳು ನಿನ್ನನ್ನು ವಿದ್ಯುದಗ್ನಿ (ಮಿಂಚು) ರೂಪದಿಂದಲೂ ಉತ್ಪತ್ತಿ ಮಾಡಿದವು ಎಂದು ಒಂದುವಿಧವಾದ ಅರ್ಥವು.

ದ್ಯಾವಾಪೃಥಿವೀ ಅಪಃ ಯಂ ತ್ವಾಂ (ಜನಿತವತ್ಯಃ)—ಇಲ್ಲಿ **ಅಪಃ** ಎಂಬ ಶಬ್ದವು ಅಂತರಿಕ್ಷವಾಚಿಯು ಭೂಮ್ಯಂತರಿಕ್ಷ ಸ್ವರ್ಗಗಳೆಂಬ ಮೂರು ಲೋಕಗಳೂ ಅಗ್ನಿಯನ್ನು ತಮ್ಮ ತಮ್ಮ ಲೋಕಗಳಲ್ಲಿ ವಿವಿಧರೂಪದಿಂದ ಉತ್ಪನ್ನಮಾಡಿದವು ಎಂದು ಮತ್ತೊಂದುವಿಧವಾದ ಅರ್ಥವು.

ತ್ವಷ್ಟಾ ಯಂ ತ್ವಾ ಸುಜನಿಮಾ ಜಜಾನ—ದ್ಯಾವಾಪೃಥಿವಿಗಳು ಅಗ್ನಿಯನ್ನು ಉತ್ಪತ್ತಿಮಾಡಿದವು ಎಂದು ಮೇಲೆ ಹೇಳಿದ್ದರೂ ಅಗ್ನಿಯನ್ನು ಮೊದಲು ಸೃಷ್ಟಿಸಿದವನು ಪ್ರಜಾಪತಿಯೇ ಎಂದು ತಿಳಿಸುವುದಕ್ಕಾಗಿ ಈ ವಾಕ್ಯವನ್ನು ಋಷಿಯು ಹೇಳಿರುವನು. ಉತ್ತಮವಾದ ಜನ್ಮವುಳ್ಳ ಸೃಷ್ಟಿಕರ್ತನಾದ ಪ್ರಜಾಪತಿಯೇ ನಿನ್ನನ್ನು (ಅಗ್ನಿಯನ್ನು)ಉತ್ಪನ್ನ ಮಾಡಿದನು ಎಂದು ವಾಕ್ಯಾರ್ಥಪ್ರಾಯವು. ತ್ವಷ್ಟಾ ಎಂದರೆ ಇಲ್ಲಿ ಪ್ರಜಾಪತಿಯೆಂದೇ ಅರ್ಥಮಾಡಬೇಕು. ಏಕೆಂದರೆ ತೈತ್ತಿರೀಯ ಬ್ರಾಹ್ಮಣದಲ್ಲಿ—**ಪ್ರಜಾಪತಿರಗ್ನಿಮಸೃಜತ** (ತೈ. ಬ್ರಾ. ೨-೧-೨-೧) ಪ್ರಜಾಪತಿಯು ಅಗ್ನಿಯನ್ನು ಸೃಷ್ಟಿಸಿದನು ಎಂದು ಸ್ಪಷ್ಟವಾಗಿಯೇ ಹೇಳಿದೆ.

ಪಿತೃಯಾಣಂ—ಪಿತೃಗಳು ಸಂಚರಿಸುವ ಮಾರ್ಗ. ಈ ಶಬ್ದವು ಋಗ್ವೇದದಲ್ಲಿ ಪ್ರಕೃತಋಕ್ಕಿನಲ್ಲಿ ಮಾತ್ರ ಪಠಿತವಾಗಿದೆ. **ದೇವಯಾನಂ**—ದೇವತೆಗಳು ಸಂಚರಿಸುವ ಮಾರ್ಗ ಎಂಬ ಶಬ್ದವು ಅನೇಕ ಕಡೆಗಳಲ್ಲಿ ಪಠಿತವಾಗಿದೆ. ಈ ಎರಡುವಿಧ ಮಾರ್ಗಗಳ ಸ್ವರೂಪವೇನು ಇವುಗಳಿಗಿರುವ ವೈಶಿಷ್ಟ್ಯವೇನು ಎಂದು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಉಪನಿಷತ್ತುಗಳಲ್ಲಿ **ದೇವಯಾನ, ಪಿತೃಯಾನ** ಎಂಬ ಪದಗಳಿಗೆ ಪಾರಿಭಾಷಿಕವಾದ ಅರ್ಥವಿದೆ. ಆದರೆ ಋಕ್ಸಂಹಿತೆಯಲ್ಲಿ ಅನೇಕ ಕಡೆಗಳಲ್ಲಿ **ದೇವಯಾನವೆಂಬ** ಪದಕ್ಕೆ ದೇವತೆಗಳು ಸಂಚರಿಸುವ ಮಾರ್ಗವೆಂದೇ ಅರ್ಥವಾಗುತ್ತದೆ. ಕೆಲವೆಡೆಗಳಲ್ಲಿ ಮಾತ್ರ ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ ಆಧ್ಯಾತ್ಮಿಕವಾದ ತಾತ್ಪರ್ಯವೂ ಸೂಚಿತವಾಗಿದೆ

ಉಪನಿಷತ್ತುಗಳಲ್ಲಿ **ದೇವಯಾನ** ಮತ್ತು **ಪಿತೃಯಾನ** ಎಂಬ ಪದಗಳಿಂದ ಪುರುಷನ ಮರಣಾನಂತರ ಅವನ ದೇಹವು ಭಸ್ಮವಾಗಿ ನಿತ್ಯನಾಗಿರುವ ಆತ್ಮನು ಸಂಚರಿತಕ್ಕ ಮಾರ್ಗಗಳೆರಡು ಎಂದು ಪ್ರಸಿದ್ಧವಾಗಿದೆ. ಸತ್ಕರ್ಮಕ್ಕೆ ಫಲವನ್ನನುಭವಿಸಲು ಹೋಗತಕ್ಕ ಮಾರ್ಗಗಳಲ್ಲಿ ಒಂದು ದೇವಯಾನ ಇನ್ನೊಂದು ಪಿತೃಯಾನ. ಒಂದು ದೇವತೆಗಳ ಮಾರ್ಗ; ಮತ್ತೊಂದು ಪಿತೃಗಳ ಮಾರ್ಗ. **ಪಂಚಾಗ್ನಿವಿದ್ಯೆ**ಯನ್ನರಿತು ಸತ್ಯದಲ್ಲೇ ಶ್ರದ್ಧೆಯನ್ನಿಟ್ಟಿರುವವರು ದೇವಮಾರ್ಗದಲ್ಲಿ ಹೊರಟು ಪರಬ್ರಹ್ಮನನ್ನು ಸೇರುತ್ತಾರೆ. ಇವರ ಮರಣಾನಂತರ ಆತ್ಮನು ಜ್ವಾಲೆಯನ್ನು ಪ್ರವೇಶಿಸಿ ತನ್ಮೂಲಕ ಅಹಸ್ಸನ್ನೂ, ಶುಕ್ಲಪಕ್ಷವನ್ನೂ, ಉತ್ತರಾಯಣವನ್ನೂ, ಸಂವತ್ಸರವನ್ನೂ, ಆದಿತ್ಯನನ್ನೂ, ವಿದ್ಯುತ್ತನ್ನೂ ಪ್ರವೇಶಿಸಿ ತನ್ಮೂಲಕ ಅಮಾನವನಾದ ಪುರುಷನ ಸಹಾಯದಿಂದ ಪರಬ್ರಹ್ಮನನ್ನು ಪಡೆಯುತ್ತಾನೆ-ಎಂಬ ವಿಷಯವನ್ನು ಉಪನಿಷತ್ತುಗಳಲ್ಲಿ ವರ್ಣಿಸಿದೆ.

ಯಾರು ಕೇವಲ ಯಜ್ಞದಿಂದಲೂ ದಾನಾದಿಗಳಿಂದಲೂ ಲೋಕವನ್ನು ತೃಪ್ತಿಗೊಳಿಸುತ್ತಾರೆಯೋ ಎಂದರೆ ಪಂಚಾಗ್ನಿವಿದ್ಯೆಯನ್ನರಿಯದೇ ಕೇವಲ ಸತ್ಕರ್ಮನಿರತರಾಗಿರುವರೋ ಅಂತಹವರು ಮರಣಾನಂತರ ಬೇರೆ ಮಾರ್ಗದಲ್ಲಿ ಸಂಚರಿಸುತ್ತಾರೆ. ದೇಹವು ದಗ್ಧವಾದನಂತರ ಆತ್ಮನು ಧೂಮದೊಂದಿಗೆ ಸೇರಿ ಅನಂತರ ರಾತ್ರಿಯನ್ನೂ, ತನ್ಮೂಲಕ ಕೃಷ್ಣಪಕ್ಷವನ್ನೂ, ತದ್ದ್ವಾರಾ ದಕ್ಷಿಣಾಯನವನ್ನೂ ಅನಂತರ ಪಿತೃಲೋಕವನ್ನೂ ಕೊನೆಗೆ ಚಂದ್ರಲೋಕವನ್ನೂ

ಸೇರುತ್ತಾರೆ. ಅದೇ ಅವರ ಚರಮಸ್ಥಾನವು. ಈ ಲೋಕದಲ್ಲಿ ಅವರ ಸತ್ಕರ್ಮಗಳಿಗನುಗುಣವಾದ ಫಲಗಳನ್ನು ಪೂರ್ಣವಾಗಿ ಅನುಭವಿಸಿ, ಪಿತೃಗಳೊಂದಿಗಿದ್ದು, ತಮ್ಮ ಕರ್ಮದ ಸಂಸ್ಕಾರವು ಮುಗಿದೊಡನೆಯೇ ಪುನಃ ಅದೇ ಧೂಮಮಾರ್ಗವಾಗಿ ಪೃಥ್ವಿಗೆ ಹಿಂತಿರುಗುತ್ತಾರೆ. ಇದೇ ಉಪನಿಷತ್ತುಗಳಲ್ಲಿ ವರ್ಣಿಸಿರತಕ್ಕ **ದೇವಯಾನ** ಮತ್ತು **ಪಿತೃಯಾನ**ಗಳ ಸ್ವರೂಪಗಳು

ಪ್ರಕೃತದಲ್ಲಿ ನಾವು ಗಮನಿಸಬೇಕಾದುದೇನೆಂದರೆ, ಮೇಲೆ ವಿವರಿಸಿದಂತೆ ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ ಭಾವನೆಲ್ಲವೂ ಪೂರ್ಣವಾಗಿ ಋಕ್ಸಂಹಿತೆಯಲ್ಲಿ ಉಪಯೋಗಿಸುವ **ದೇವಯಾನ** ಪದದಿಂದ ಸೂಚಿತವಾಗುತ್ತದೆಯೇ ಅಥವಾ ಕೇವಲ ದೇವತೆಗಳು ಸಂಚರಿಸತತಕ್ಕ ಭೌತಿಕವಾದ ಮಾರ್ಗವೆಂದರ್ಥವಾಗುತ್ತದೆಯೇ ಎಂಬುದು. ಇದರಂತೆಯೇ ಉಪನಿಷತ್ತುಗಳಲ್ಲಿ ವರ್ಣಿತವಾಗಿರುವ **ಪಿತೃಯಾನ** ಶಬ್ದಕ್ಕೂ ಸಹ ಯಾವ ಅರ್ಥ ಎಂಬುದನ್ನೂ ಪ್ರಕೃತದಲ್ಲಿ ವಿಮರ್ಶಿಸಬೇಕಾಗಿದೆ

ಋಕ್ಸಂಹಿತೆಯಲ್ಲಿ **ದೇವಯಾನ** ಎಂಬ ಪದವು ಒಟ್ಟು ಹದಿಮೂರುಸಲ ಪ್ರಯೋಗಿಸಲ್ಪಟ್ಟಿದೆ. [೧-೭೨-೭ ; ೧-೧೬೨-೪ ; ೧-೧೮೩-೬, ೧-೧೮೪-೬ ೪-೫೭.೧ ; ೫-೪೩-೬ , ೭-೫೬ ೮ ೭-೭೬-೨ ; ೧೦-೧೪-೧ , ೧೦-೫೮-೨ , ೧೦-೫೮.೫ ; ೧೦-೯೪-೧೧, ೧೦-೯೮-೩] ಈ ಸಂದರ್ಭಗಳಲ್ಲೆಲ್ಲಾ ಸಾಯಣರು ಪ್ರಧಾನವಾಗಿ ಎರಡು ಅರ್ಥಗಳನ್ನು ಮಾತ್ರ ಹೇಳಿದ್ದಾರೆ ಅವರ ವಿವರಣೆಯ ಪ್ರಕಾರ ಮೊದಲನೆಯದಾಗಿ ಯಜ್ಞಕರ್ತರಂಥ ಮಾನವರು ತಮ್ಮ ಹವಿಸ್ಸುಗಳೊಂದಿಗೆ ದೇವತೆಗಳನ್ನು ಸಮೀಪಿಸಲು ಹೋಗತಕ್ಕ ಮಾರ್ಗವೆಂದೂ ಎರಡನೆಯದಾಗಿ ದೇವತೆಗಳು ತಮ್ಮ ಹವಿಸ್ಸಿನ ಸ್ವೀಕಾರಕ್ಕಾಗಿ ಪೃಥ್ವಿಗೆ ಬರತಕ್ಕ ಮಾರ್ಗವೆಂದೂ ಅರ್ಥವಾಗುತ್ತದೆ.

ಪಿತೃಯಾನವೆಂಬ ಪದವು ಋಕ್ಸಂಹಿತೆಯಲ್ಲಿ ಕೇವಲ ಒಂದು ಸಲ ಮಾತ್ರ ಪ್ರಯೋಗಿಸಲ್ಪಟ್ಟಿದೆ. ಆ ಪ್ರಯೋಗವು ಪ್ರಕೃತಋಕ್ಕಿನಲ್ಲಿ ಮಾತ್ರ—

ಯಂ ತ್ವಾ ದ್ಯಾವಾಪೃಥಿವೀ ಯಂ ತ್ವಾಪಸ್ತ್ವಷ್ಟಾ ಯಂ ತ್ವಾ ಸುಜನಿಮಾ ಜಜಾನ।
ಪಂಥಾಮನು ಪ್ರವಿದ್ವಾನ್ ಪಿತೃಯಾಣಂ ದ್ಯುಮದಗ್ನೇ ಸಮಿಧಾನೋ ವಿ ಭಾಹಿ ॥

(ಋ. ಸಂ ೧೦-೨-೭)

ಎಂಬ ಋಕ್ಕಿನಲ್ಲಿ ದ್ಯಾವಾಪೃಥಿವಿಗಳಿಂದಲೂ ಉದಕಗಳಿಂದಲೂ, ಸೃಷ್ಟಿಕರ್ತನಿಂದಲೂ, ತ್ವಷ್ಟೃವಿನಿಂದಲೂ, ಉತ್ಪನ್ನನಾಗಿ ಪ್ರಜ್ವಲಿತನಾದವನೂ ಮತ್ತು **ಪಿತೃಯಾಣದ** ಸ್ವರೂಪವನ್ನು ಪೂರ್ಣವಾಗಿ ಅರಿತವನೂ ಆದ ಅಗ್ನಿಯು ಪ್ರಜ್ವಲಿತನಾದೊಡನೆಯೇ ಪ್ರಕಾಶಿತನಾಗಲಿ ಎಂದು ಪ್ರಾರ್ಥಿಸಿದೆ. ಋಕ್ಕಿನಲ್ಲಿ ಮೂರನೇ ಪಾದದಲ್ಲಿರುವ ಈ ಪದಕ್ಕೆ ಸಾಯಣರ ವಿವರಣೆಯಂತೆ " **ಪಿತೃಯಾಣಂ ಪಿತರೋ ಯೇನ ಮಾರ್ಗೇಣ ಗಚ್ಛಂತಿ ತಂ** " ಪಿತೃಗಳು ಯಾವ ಮಾರ್ಗದಲ್ಲಿ ಸಂಚರಿಸುವರೋ ಆ ಮಾರ್ಗವೆಂದರ್ಥ.

ಮುಂದಿನ ಸೂಕ್ತವು.

॥ ಸಾಯಣಭಾಷ್ಯಂ ॥

ಇನೋ ರಾಜನ್ನಿತಿ ಸಪ್ತರ್ಚಂ ತೃತೀಯಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಇನ ಇತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ಥೋ ವಿನಿಯೋಗಃ ॥

ಅನುವಾದವು—ಇನೋ ರಾಜನ್ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವವು. ಅನುಕ್ರಮಣಿಕೆಯಲ್ಲಿ—ಇನಃ ಎಂದು ಹೇಳಿರುವುದು. ಪ್ರಾತರನುವಾಕಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ.

ಸೂಕ್ತ—೩

ಮಂಡಲ—೧೦ । ಅನುವಾಕ—೧ । ಸೂಕ್ತ—೩ ।
ಅಷ್ಟಕ—೭ । ಅಧ್ಯಾಯ—೫ ॥ ವರ್ಗ—೩೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿಃ—ತ್ರಿತ ಆಪ್ತ್ಯಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ಇನೋ ರಾಜನ್ನರತಿಃ ಸಮಿದ್ಧೋ ರೌದ್ರೋ ದಕ್ಷಾಯ ಸುಷುಮಾಁ ಅದರ್ಶಿ ।
ಚಿಕಿದ್ವಿ ಭಾತಿ ಭಾಸಾ ಬೃಹತಾಸಿಕ್ನೀಮೇತಿ ರುಶತೀಮಪಾಜನ್ ॥ ೧ ॥

॥ ಪದಪಾಠಃ ॥

ಇನಃ । ರಾಜನ್ । ಅರತಿಃ । ಸಂಽಇದ್ಧಃ । ರೌದ್ರಃ । ದಕ್ಷಾಯ । ಸುಷುಽಮಾನ್ । ಅದರ್ಶಿ ।
ಚಿಕಿತ್ । ವಿ । ಭಾತಿ । ಭಾಸಾ । ಬೃಹತಾ । ಅಸಿಕ್ನೀಂ । ಏತಿ । ರುಶತೀಂ । ಅಪಽಅಜನ್ ॥ ೧ ॥

॥ಸಾಯಣಭಾಷ್ಯಂ ।

ಹೇ ರಾಜನ್ವೀಪ್ಯಮಾನಾಗ್ನೇ ತ್ವಮಿನ ಈಶ್ವರಃ ಸರ್ವಸ್ಯ ಭವಸಿ । ಅಥ ಪರೋಕ್ಷಃ । ಅರತಿರ್ಹವಿರಾದಾಯ ದೇವಾನ್ಪ್ರತಿ ಗಂತಾ ಸಮಿದ್ಧಃ ಸಂದೀಪ್ತೋ ರೌದ್ರಃ ಶತ್ರೂಣಾಂ ಭಯಂಕರಃ ಸುಷುಮಾನ್ । ಓಷಧ್ಯಾತ್ಮನಾ ಸ್ಥಿತೋಽಂಶುಃ ಸುಷ್ಮ ಸೂಯತ ಇತಿ ಸುಷುಃ ಸೋಮಃ । ತೇನ ತದ್ವಾನ್ ಶೋಭನಪ್ರಸವೋ ವಾ ಸೋಽಗ್ನಿರ್ದಕ್ಷಾಯ ಯಜಮಾನಾನಾಂ ಧನಾನಿವೃದ್ಧ್ಯರ್ಥಮದರ್ಶಿ । ಸರ್ವೈರ್ದೃಶ್ಯತೇ । ಕಿಂಚ ಚಿಕಿತ್ ಸರ್ವಂ ಜಾನಾನೋಽಗ್ನಿರ್ವಿ ಭಾತಿ । ವಿಶೇಷೇಣ ದೀಪ್ಯತೇ । ತಥಾ ಬೃಹತಾ ಮಹತಾ ಭಾಸಾ ತೇಜಸಾ ಜ್ವಾಲಾಲಕ್ಷಣೇನಾಸಿಕ್ನೀಂ ರಾತ್ರಿಮೇತಿ । ಸಾಯಂಹೋಮಮಸಿದ್ಧ್ಯರ್ಥಮೇವ ಗಚ್ಛತಿ । ಕಿಂ ಕುರ್ವನ್ । ರುಶತೀಂ ಶ್ವೇತವರ್ಣಾಂ ದೀಪ್ತಿಮಪಾಜನ್ನಪಗಮಯನ್ರಾತ್ರಿಂ ಗಚ್ಛತಿ । ಸಾಮರ್ಥ್ಯಾತ್ರಾತ್ರಿಂ ಪರಿತ್ಯಜನ್ನುಷಸಂ ಪ್ರಾತರ್ಹೋಮಸಿದ್ಧ್ಯರ್ಥಂ ಗಚ್ಛತೀತ್ಯರ್ಥೋ ಲಕ್ಷ್ಯತೇ ॥

॥ ಪ್ರತಿಪದಾರ್ಥ ॥

ರಾಜನ್—ಪ್ರಭುವಾದ ಎಲೈ ಅಗ್ನಿಯೇ । **ಇನಃ**—ನೀನು ಸಕಲರಿಗೂ ಪ್ರಭುವಾಗಿದ್ದೀಯೆ । **ಅರತಿಃ**—ದೇವತೆಗಳಲ್ಲಿಗೆ ಹವಿಸ್ಸನ್ನು ತೆಗೆದುಕೊಂಡು ಹೋಗುವವನೂ । **ಸಮಿದ್ಧಃ**—ಪ್ರಜ್ವಲಿತನೂ । **ರೌದ್ರಃ**—ಶತ್ರುಗಳಿಗೆ ಭಯಂಕರನೂ । **ಸುಷುವಾನ್**—ಸೋಮವಂತನೂ ಆದ ಅಗ್ನಿಯು । **ದಕ್ಷಾಯ**—ಯಜಮಾನರಿಗೆ ಸಂಪದರ್ಥವಾಗಿ । **ಅದರ್ಶಿ**—ಎಲ್ಲರಿಂದಲೂ ಕಾಣಲ್ಪಡುತ್ತಾನೆ । **ಚಿಕಿತ್**—ಎಲ್ಲವನ್ನು ಅರಿತ ಅಗ್ನಿಯು । **ವಿ ಭಾತಿ**—ಅತಿಶಯವಾಗಿ ಪ್ರಕಾಶಿಸುತ್ತಾನೆ । **ಬೃಹತಾ**—ಅತ್ಯಧಿಕವಾದ । **ಭಾಸಾ**—ಕಾಂತಿಯಿಂದ । **ರುಶತೀಂ**—ಶ್ವೇತವರ್ಣವುಳ್ಳ ಪ್ರಭೆಯನ್ನು । **ಅಪಾಜನ್**—ಬೇರೆಮಾಡುತ್ತ । **ಅಸಿಕ್ನೀಂ**—ರಾತ್ರಿಯನ್ನು । **ಏತಿ**—ಪ್ರವೇಶಿಸುತ್ತಾನೆ.

॥ ಭಾವಾರ್ಥ ॥

ಪ್ರಭುವಾದ ಎಲೈ ಅಗ್ನಿಯೇ, ನೀನು ಸಕಲರಿಗೂ ಸ್ವಾಮಿಯಾಗಿದ್ದೀಯೆ. ದೇವತೆಗಳಲ್ಲಿಗೆ ಹೋಗುವವನೂ, ಪ್ರಜ್ವಲಿತನೂ, ಶತ್ರುಗಳಿಗೆ ಭಯಂಕರನೂ ಸೋಮವಂತನೂ ಆದ ಅಗ್ನಿಯು ಯಜಮಾನರ ಸಂಪದರ್ಥವಾಗಿ ಎಲ್ಲರಿಂದಲೂ ಕಾಣಲ್ಪಡುತ್ತಾನೆ. ಎಲ್ಲವನ್ನೂ ಅರಿತ ಅಗ್ನಿಯು ಅತಿಶಯವಾಗಿ ಪ್ರಕಾಶಿಸುತ್ತಾನೆ. ಅತ್ಯಧಿಕವಾದ ಕಾಂತಿಯಿಂದ ಶ್ವೇತವರ್ಣವುಳ್ಳ ಪ್ರಭೆಯನ್ನು ಬೇರೆಮಾಡುತ್ತ ರಾತ್ರಿಯನ್ನು ಪ್ರವೇಶಿಸುತ್ತಾನೆ.

English Translation

Royal Agni, (you are) the lord (of all) He who is the conveyer of the oblation, the radiant, the formidable, the recipient of the Soma, is manifested for the benefaction (of the worshipper) : all knowing, he shines forth with great lustre ; he proceeds, scattering the glimmering darkness.

॥ ವಿಶೇಷವಿಷಯಗಳು ॥

ಸುಷುವಾನ್ ದಕ್ಷಾಯ ಅದರ್ಶಿ—ಸುಷುವಾನ್ ಎಂಬ ಶಬ್ದಕ್ಕೆ ಭಾಷ್ಯಕಾರರು ಎರಡುವಿಧವಾದ ಅರ್ಥವನ್ನುಹೇಳಿದಾರೆ-**ಓಷಧ್ಯಾತ್ಮನಾ ಸ್ಥಿತೋऽಂಶುಃ ಸುಷ್ಮು ಸೂಯತ ಇತಿ ಸುಷುಃ ಸೋಮಃ ತೇನ ತದ್ವಾನ್ ಶೋಭನಪ್ರಸವೋ ವಾ ಸೋऽಗ್ನಿಃ** । ಓಷಧಿರೂಪದಲ್ಲಿರುವ ಸೋಮಲತೆಯನ್ನು ಚೆನ್ನಾಗಿ ಜಜ್ಜಿ ಹಿಂಡುವುದರಿಂದ ಉತ್ಪನ್ನವಾಗುವ ಸೋಮರಸಕ್ಕೆ ಸುಷುಃ ಎಂದು ಹೆಸರು ಸುಷುಮಾನ್ ಎಂದರೆ ಅಂತಹ ಸೋಮವನ್ನು ಹೊಂದಿರುವ ಎಂದರ್ಥವು. ಪರೋಕ್ಷಪ್ರಿಯರಾದ ದೇವತೆಗಳ ಪ್ರೀತ್ಯರ್ಥವಾಗಿ ಸೋಮರಸವನ್ನು ಅಗ್ನಿಯಲ್ಲಿ ಆಹುತಿರೂಪವಾಗಿ ಅರ್ಪಿಸುವುದರಿಂದ ಇಲ್ಲಿ ಅಗ್ನಿಯನ್ನು ಸುಷುಮಾನ್-ಸೋಮವಂತನೆಂದು ಸಂಬೋಧಿಸಲಾಗಿದೆ. ಇಂತಹ ಅಗ್ನಿಯು ಋತ್ವಿಗ್ಜನರಿಂದ ಚೆನ್ನಾಗಿ ಹೊತ್ತಿಸಲ್ಪಟ್ಟು ಕಾಷ್ಠಾದಿಗಳಿಂದ ಪ್ರಜ್ವಲಿತನಾಗಿ ಪ್ರಕಾಶಿಸುತ್ತಿರುವನು ಎಂದು ಒಂದು ವಿಧವಾದ ಅರ್ಥವು. ಯಜ್ಞದಲ್ಲಿ ಋತ್ವಿಗ್ಜನರು ಅಗ್ನಿಯನ್ನು ವಿಧ್ಯುಕ್ತವಾಗಿಯೂ ಮಂತ್ರಪುರಸ್ಸರವಾಗಿಯೂ ಅರಣಿಗಳಲ್ಲಿ ಕಡೆದು ಉತ್ಪತ್ತಿಮಾಡುವುದರಿಂದ ಅಗ್ನಿಯನ್ನು ಸುಷುಮಾನ್-ಶೋಭನಪ್ರಸವಃ ಉತ್ತಮನಾದ ಉತ್ಪತ್ತಿಯುಳ್ಳವನು ಎಂದು ವರ್ಣಿಸಿದೆ. ಇದು ಇನ್ನೊಂದು ವಿಧವಾದ ಅರ್ಥವು.

ಬೃಹತಾ ಭಾಸಾ ಅಸಿಕ್ನೀಂ ಏತಿ—**ಮಹತಾ ಜ್ವಾಲಾಲಕ್ಷಣೇನ ತೇಜಸಾ ರಾತ್ರೀಂ ಗಚ್ಛತಿ ಸಾಯಂಹೋಮಮಸಿದ್ಧ್ಯರ್ಥಂ** । ಅಗ್ನಿಯು ತನ್ನ ಮಹತ್ತಾದ ತೇಜಸ್ಸಿನಿಂದ ಬೆಳಗುತ್ತಾ ಸಾಯಂಕಾಲದ ಹೋಮ

ಗಳಲ್ಲಿ ಹವಿಸ್ಸನ್ನು ಸ್ವೀಕರಿಸುವುದಕ್ಕಾಗಿ ರಾತ್ರಿಯನ್ನು ಪ್ರವೇಶಮಾಡುತ್ತಾನೆ ಎಂದರೆ ಸವಿಾಪಿಸುತ್ತಾನೆ. ರಾತ್ರಿ ಕಾಲದಲ್ಲಿ ಸೂರ್ಯನ ಬೆಳಕಿಲ್ಲದೆ ಕತ್ತಲೆಯಾಗಿರುವುದರಿಂದ ಅಗ್ನಿಯ ಪ್ರಕಾಶವು ಹೆಚ್ಚಾಗಿ ಗೋಚರವಾಗುವುದು. ಮತ್ತು ಅಗ್ನಿಯೇ ರಾತ್ರಿಕಾಲದಲ್ಲಿ ಆಹುತಿಗಳನ್ನು ಸ್ವೀಕರಿಸುವ ಪ್ರಧಾನದೇವತೆಯು. ಸೂರ್ಯನಿಗೆ ಹಗಲಿನಲ್ಲಿ ಪೂತ್ರ ಆಹುತಿಯು ಅರ್ಪಿಸಲ್ಪಡುವುದು. ಈ ವಿಷಯದಲ್ಲಿ ಯಜುರ್ವೇದದ ತೈತ್ತಿರೀಯಬ್ರಾಹ್ಮಣದಲ್ಲಿ ಒಂದು ಇತಿಹಾಸವಿದೆ—

ಯದಗ್ನಿಹೋತ್ರಂ । ತಸ್ಮಾದಗ್ನಿಹೋತ್ರಮುಚ್ಯತೇ । ತದ್ಧೂಯಮಾನಮಾದಿತ್ಯೋ೭ಬ್ರವೀತ್ । ಮಾ ಹೌಷೀಃ । ಉಭಯೋರ್ವೈ ನಾವೇತದಿತಿ । ಸೋ೭ಗ್ನಿರಬ್ರವೀತ್ । ಕಥಂ ನೌ ಹೋಷ್ಯಂತೀತಿ । ಸಾಯಮೇವ ತುಭ್ಯಂ ಜುಹವನ್ । ಪ್ರಾತರ್ಮಹ್ಯಮಿತ್ಯಬ್ರವೀತ್ । ತಸ್ಮಾದಗ್ನಯೇ ಸಾಯಗ್ಂ ಹೂಯತೇ। ಸೂರ್ಯಾಯ ಪ್ರಾತಃ । ಅಗ್ನೇಯೀ ವೈ ರಾತ್ರಿಃ । ಐಂದ್ರಮಹಃ। ಯದನುದಿತೇ ಸೂರ್ಯೇ ಪ್ರಾತರ್ಜುಹುಯಾತ್ । ಉಭಯಮೇವಾಗ್ನೇಯಗ್ಂಸ್ಯಾತ್ । ಉದಿತೇ ಸೂರ್ಯೇ ಪ್ರಾತರ್ಜುಹೋತಿ । ತಥಾಗ್ನಯೇ ಸಾಯಗ್ಂ ಹೂಯತೇ . ಅಗ್ನಿಂ ವಾವಾದಿತ್ಯಸ್ಸಾಯಂ ಪ್ರವಿಶತಿ । ತಸ್ಮಾದಗ್ನಿರ್ದೂರಾನ್ನಕ್ತಂ ದದೃಶೇ । ಉಭೇ ಹಿ ತೇಜಸೀ ಸಂಪದ್ಯೇತೇ । ಉದ್ಯಂತಂ ವಾವಾದಿತ್ಯಮನ್ವಗ್ನಿರನು ಸಮಾರೋಹತಿ । ತಸ್ಮಾದ್ಧ್ರುವ ಏವಾಗ್ನೇರ್ದಿವಾ ದದೃಶೇ. ....ಅಗ್ನಿರ್ಜ್ಯೋತಿರ್ಜ್ಯೋತಿಸ್ಸೂರ್ಯಸ್ಸ್ವಾಹೇತ್ಯೇವ ಸಾಯಗ್ಂ ಹೋತವ್ಯಂ । ಸೋರ್ಯೋ ಜ್ಯೋತಿರ್ಜ್ಯೋತಿರಗ್ನಿಸ್ಸ್ವಾಹೇತಿ ಪ್ರಾತಃ । ತಥೋಭಾಭ್ಯಾಗ್ಂ ಸಾಯಗ್ಂ ಹೂಯತೇ । ಉಭಾಭ್ಯಾಂ ಪ್ರಾತಃ ।

(ತೈ. ಬ್ರಾ. ೨-೧-೨-೯ ರಿಂದ ೧೩)

ಪೂರ್ವದಲ್ಲಿ ಅಗ್ನಿಹೋತ್ರವೆಂಬ ಕರ್ಮದಲ್ಲಿ ಯಜಮಾನನು ಅಗ್ನಿಯಲ್ಲಿ ಹೋಮಮಾಡುತ್ತಿದ್ದನು. ಅಗ್ನಿಯಲ್ಲಿ ಹೋಮಮಾಡುತ್ತಿದ್ದುದರಿಂದ ಆ ಕರ್ಮಕ್ಕೆ ಅಗ್ನಿಹೋತ್ರವೆಂದು ಹೆಸರಾಯಿತು ಈ ರೀತಿ ಅಗ್ನಿಯಲ್ಲಿ ಅಗ್ನಿಯನ್ನುದ್ದೇಶಿಸಿ ಹೋಮಮಾಡುತ್ತಿರುವ ಯಜಮಾನನನ್ನು ಕುರಿತು ಸೂರ್ಯನು—ಅಗ್ನಿಯಲ್ಲಿ ಅಗ್ನಿಯನ್ನು ಮಾತ್ರ ಉದ್ದೇಶಿಸಿ ಹೋಮಮಾಡುತ್ತಿರುವೆ. ನೀನು ಅರ್ಪಿಸುವ ಆಹುತಿಯು ಅಗ್ನಿಗೂ ನನಗೂ ಇಬ್ಬರಿಗೂ ಸೇರಬೇಕು, ಅಗ್ನಿಗೆ ಒಬ್ಬನಿಗೇ ಅಲ್ಲ ಎಂದನು. ಆಗ ಅಗ್ನಿಯು ಅದು ಹೇಗೆ ಇಬ್ಬರಿಗೂ ಸೇರಬೇಕು ಎಂದು ಪ್ರಶ್ನಿಸಿದನು. ಅದಕ್ಕೆ ಸೂರ್ಯನು ಸಾಯಂಕಾಲದಲ್ಲಿ ಮಾಡುವ ಹೋಮವು ಅಗ್ನಿಗೆ (ನಿನಗೆ) ಸೇರಬೇಕು. ಪ್ರಾತಃಕಾಲದಲ್ಲಿ ಮಾಡುವ ಹೋಮವು ನನಗೆ (ಸೂರ್ಯನಿಗೆ) ಸೇರಬೇಕು ಎಂದನು. ಅಗ್ನಿಹೋತ್ರವನ್ನು ಸಾಯಂಕಾಲ ಪ್ರಾತಃಕಾಲಗಳಲ್ಲಿ ಮಾಡುವುದರಿಂದ ಅಗ್ನಿ ಮತ್ತು ಸೂರ್ಯ ಎಂಬಿಬ್ಬರಿಗೂ ಆಹುತಿಗಳು ಸೇರಬೇಕು. ಆದ್ದರಿಂದ ರಾತ್ರಿಕಾಲದಲ್ಲಿ ಅಗ್ನಿಯನ್ನುದ್ದೇಶಿಸಿ ಹೋಮಮಾಡುವರು. ಸೂರ್ಯನಿಗೆ ಪ್ರಾತಃಕಾಲದಲ್ಲಿ ಹೋಮಮಾಡುವರು ಆದ್ದರಿಂದ ರಾತ್ರಿಗೆ ಅಗ್ನಿಯೇ ಅಧಿದೇವತೆಯಾದನು. ರಾತ್ರಿಯಲ್ಲಿ ಮಾಡಿದ ಹೋಮ ವೆಲ್ಲಾ ಅಗ್ನಿಗೇ ಸೇರಬೇಕು. ಸೂರ್ಯಾಸ್ತಮಯದಿಂದ ಸೂರ್ಯೋದಯವಾಗುವ ಮಧ್ಯಕಾಲವು ರಾತ್ರಿಯೆನಿಸುವುದು. ಆದ್ದರಿಂದ ಸೂರ್ಯೋದಯಕ್ಕೆ ಮುಂಚಿತವಾಗಿ ಮಾಡುವ ಹೋಮವು (ಆ ಕಾಲವು ರಾತ್ರಿಯೆಂದು ಭಾವಿಸಲ್ಪಟ್ಟಿರುವುದರಿಂದ) ಅಗ್ನಿಗೇ ಸೇರುವುದು ಈ ಸಂದರ್ಭದಲ್ಲಿ ಸಾಯಂ ಪ್ರಾತರಾಹುತಿಗಳೆರಡೂ ಅಗ್ನಿಗೇ ಸೇರಿದಂತಾಯಿತು.

ಇದು ಇಬ್ಬರಿಗೂ ಸರಿಬೀಳಲಿಲ್ಲ. ಆದ್ದರಿಂದ ಸಾಯಂಕಾಲದಲ್ಲಿ ಅಗ್ನಿಯನ್ನು ಸೂರ್ಯನು ಪ್ರವೇಶಿಸಿ ಅದರಲ್ಲಿ ಅಂತರ್ಗತನಾಗಿರುವನು. ಅದರಂತೆ ಅಗ್ನಿಯು ಉದಯಿಸುವ ಸೂರ್ಯನಲ್ಲಿ ಪ್ರವೇಶಿಸಿ ಅಲ್ಲಿಯೇ ಹಗಲಿನಲ್ಲಿ ಅಂತರ್ಗತನಾಗಿರುವನು. ಈ ಕಾರಣದಿಂದ ಸಾಯಂಪ್ರಾತಃಕಾಲಗಳಲ್ಲಿ ಮಾಡುವ ಹೋಮಗಳು ಕಾಲವ್ಯತ್ಯಾಸವಿದ್ದರೂ ಉದ್ದಿಷ್ಟದೇವತೆಗಳಿಗೆ ಹೋಗಿ ಸೇರುವುದು. ಈ ರೀತಿ ಒಬ್ಬರು ಮತ್ತೊಬ್ಬರಲ್ಲಿ ಪ್ರವೇಶಿಸಿದ್ದರಿಂದ ಇಬ್ಬರಲ್ಲಿಯೂ ಇಬ್ಬರ ಗುಣಗಳೂ ಗೋಚರಿಸುವಂತಾಯಿತು. ರಾತ್ರಿಕಾಲದಲ್ಲಿ ಅಗ್ನಿಯು ಬಹಳ ಪ್ರಕಾಶಮಾನನಾಗಿ ಬಹಳ ದೂರದವರೆಗೂ ಕಾಣಿಸುವನು. ಹಗಲಿನಲ್ಲಿ ಅಗ್ನಿಯು ಉರಿಯುತ್ತಿದ್ದರೂ ದೂರದಲ್ಲಿ ಹೊಗೆಯು ಮಾತ್ರ ಕಾಣಿಸುವುದು. ಈ ರೀತಿ ಒಬ್ಬರಲ್ಲೊಬ್ಬರು ಅಂತಃಪ್ರವಿಷ್ಟರಾದ್ದರಿಂದ ಇವರನ್ನುದ್ದೇಶಿಸಿ ಮಂತ್ರಗಳನ್ನು ಪಠಿಸುವ ಕ್ರಮವೂ ವ್ಯತ್ಯಸ್ತವಾಗಿರುವುದು. ಸಾಯಂಪ್ರಾತಃಕಾಲಗಳೆರಡರಲ್ಲಿಯೂ ಇಬ್ಬರನ್ನೂ ಉದ್ದೇಶಿಸಿ ಹೋಮಮಾಡಬೇಕಾಗಿರುವುದು. ಆದರೆ ಸಾಯಂಕಾಲದಲ್ಲಿ ಅಗ್ನಿರ್ಜ್ಯೋತಿಃ ಎಂದು ಮೊದಲು ಅಗ್ನಿಯ ಹೆಸರನ್ನು ಉಚ್ಚರಿಸಿ ಅನಂತರ ಜ್ಯೋತಿಃ ಸೂರ್ಯಃ ಎಂದು ಮಂತ್ರವನ್ನು ಪಠಿಸಬೇಕು. ಪ್ರಾತಃಕಾಲದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಸೂರ್ಯೋ ಜ್ಯೋತಿಃ ಎಂದು ಮೊದಲು ಸೂರ್ಯನ ಹೆಸರನ್ನೂ ಅನಂತರ ಜ್ಯೋತಿರಗ್ನಿಃ ಎಂದು ಅಗ್ನಿಯ ಹೆಸರನ್ನೂ ಪಠಿಸಿ ಹೋಮಮಾಡಬೇಕು. ಈ ರೀತಿ ಮಾಡುವುದರಿಂದ ಸಾಯಂಪ್ರಾತಃಕಾಲಗಳೆರಡರಲ್ಲಿಯೂ ಇಬ್ಬರಿಗೂ ಪ್ರಾಧಾನ್ಯತೆಯನ್ನು ಕೊಟ್ಟಂತೆಯೂ ಅಗ್ನಿಯನ್ನು ಸಾಯಂಕಾಲದಲ್ಲಿಯೂ ಸೂರ್ಯನನ್ನು ಪ್ರಾತಃಕಾಲದಲ್ಲಿಯೂ ಪ್ರತ್ಯೇಕ ಪ್ರತ್ಯೇಕವಾಗಿಯೂ ನಿರ್ದೇಶಿ ಹೋಮಮಾಡಿದಂತೆಯೂ ಆಗುವುದು

॥ ಸಂಹಿತಾಪಾಠಃ ॥

ಕೃಷ್ಣಂ ಯದೇನೀಮಭಿ ವರ್ಪಸಾ ಭೂಜ್ಜನಯನ್ಯೋಷಾಂ ಬೃಹತಃ ಪಿತುರ್ಜಾಂ ।
ಊರ್ಧ್ವಂ ಭಾನುಂ ಸೂರ್ಯಸ್ಯ ಸ್ತಭಾಯನ್ ದಿವೋ ವಸುಭಿರರತಿರ್ವಿ ಭಾತಿ ॥ ೨ ॥

। ಪದಪಾಠಃ ।

ಕೃಷ್ಣಂ । ಯತ್ । ಏನೀಂ । ಅಭಿ । ವರ್ಪಸಾ । ಭೂತ್ । ಜನಯನ್ । ಯೋಷಾಂ । ಬೃಹತಃ । ಪಿತುಃ । ಜಾಂ ।
ಊರ್ಧ್ವಂ । ಭಾನುಂ । ಸೂರ್ಯಸ್ಯ । ಸ್ತಭಾಯನ್ । ದಿವಃ । ವಸುಭಿಃ । ಅರತಿಃ । ವಿ । ಭಾತಿ ॥ ೨ ॥

। ಸಾಯಣಭಾಷ್ಯಂ ।

ಸೋಽಗ್ನಿರ್ಯದ್ಯದಾ ಕೃಷ್ಣಾಂ ಕೃಷ್ಣವರ್ಣಾಮೇನೀಂ ಗಚ್ಛಂತೀಂ ರಾತ್ರಿಂ ವರ್ಪಸಾತ್ಮೀಯೇನ ಜ್ವಾಲಾಲಕ್ಷಣೇನ ರೂಪೇಣಾಭಿ ಭೂತ್ ಅಭಿಭವತಿ । ಕಿಂ ಕುರ್ವನ್ । ಬೃಹತೋ ಮಹತಃ ಪಿತುಃ

ಸರ್ವಸ್ಯ ಜಗತಃ ಪಾಲಯಿತುಃ ಪಿತೃಭೂತಾದ್ಪಾದಿತ್ಯಾಜ್ಜಾಂ ಜಾಯಮಾನಾಂ ಯೋಷಾಮುಷಸಂ ಜನಯನ್ನಭಿವ್ಯಂಜಯನ್ । ತದಾನೀಮುದಿತಿರ್ಗಮನಶೀಲೋಽಗ್ನಿರ್ದಿವೋ ದ್ಯುಲೋಕಸ್ಯ ವಸುಭಿರ್ವಾಸಯಿತೃಭಿರಾಚ್ಛಾದಕೈಃ ಸಂಧುಕ್ಷಣಸಮರ್ಥೈರಾತ್ಮೀಯೈಸ್ತೇಜೋಭಿಃ ಸೂರ್ಯಸ್ಯ ಭಾನುಂ ದೀಪ್ತಿಮೂರ್ಧ್ವಮುಪರಿಷ್ಟಾತ್ ಸ್ತಭಾಯನ್ ಸ್ತಂಭಯನ್ ವಿ ಭಾತಿ । ವಿಶೇಷೇಣ ದೀಪ್ಯತೇ ॥

॥ ಪ್ರತಿಪದಾರ್ಥ ॥

ಬೃಹತಃ—ಮಹಾತ್ಮನಾದ । **ಪಿತುಃ**—ಜಗತ್ಪಾಲಕನಿಂದ । **ಜಾಂ**—ಉತ್ಪನ್ನಳಾದ । **ಯೋಷಾಂ**—ಉಷಸ್ಸನ್ನು । **ಜನಯನ್**—ಪ್ರಕಟಮಾಡುತ್ತಾ । **ಯತ್**—ಯಾವಾಗ । **ಕೃಷ್ಣಾಂ**—ಕೃಷ್ಣವರ್ಣವುಳ್ಳ । **ನಿನೀಂ**—ರಾತ್ರಿಯನ್ನು । **ವರ್ಪಸಾ**—ತನ್ನ ಜ್ವಾಲೆಯಿಂದ । **ಅಭಿ ಭೂತ್**—ಆಕ್ರಮಿಸುವನೋ (ಆಗ) । **ಅರತಿಃ**—ಸಂಚಾರಶೀಲನಾದ ಅಗ್ನಿಯು । **ದಿವಃ**—ದ್ಯುಲೋಕದ । **ವಸುಭಿಃ**—ಆಚ್ಛಾದಕಗಳಾದ ತನ್ನ ತೇಜಸ್ಸುಗಳಿಂದ । **ಸೂರ್ಯಸ್ಯ**—ಸೂರ್ಯನ । **ಭಾನುಂ**—ಕಾಂತಿಯನ್ನು । **ಊರ್ಧ್ವಂ**—ಮೇಲ್ಭಾಗದಲ್ಲಿಯೇ । **ಸ್ತಭಾಯನ್**—ತಡೆದು ನಿಲ್ಲಿಸುತ್ತ । **ವಿ ಭಾತಿ**—ಅತಿಶಯವಾಗಿ ಪ್ರಕಾಶಿಸುತ್ತಾನೆ.

॥ ಭಾವಾರ್ಥ ॥

ಮಹಾತ್ಮನಾದ ಜಗತ್ಪಾಲಕನಿಂದ ಉತ್ಪನ್ನಳಾದ ಉಷಸ್ಸನ್ನು ಪ್ರಕಟಿಸುತ್ತಾ ಯಾವಾಗ ಕೃಷ್ಣವರ್ಣವುಳ್ಳ ರಾತ್ರಿಯನ್ನು ತನ್ನ ಜ್ವಾಲೆಯಿಂದ ಆಕ್ರಮಿಸುವನೋ ಆಗ ಸಂಚಾರಶೀಲನಾದ ಅಗ್ನಿಯು ದ್ಯುಲೋಕದ ಆಚ್ಛಾದಕಗಳಾದ ತನ್ನ ತೇಜಸ್ಸುಗಳಿಂದ ಸೂರ್ಯನ ಕಾಂತಿಯನ್ನು ಮೇಲ್ಭಾಗದಲ್ಲಿಯೇ ತಡೆದು ನಿಲ್ಲಿಸುತ್ತ ಅತಿಶಯವಾಗಿ ಪ್ರಕಾಶಿಸುತ್ತಾನೆ

English Translation

When he has overcome the dark departing (night) by his radiance, then, begetting the damsel, the daughter of the great father, he shines in his course with the treasures of heaven, establishing above the light of the sun.

॥ ವಿಶೇಷವಿಷಯಗಳು ॥

ಕೃಷ್ಣಾಂ ನಿನೀಂ ವರ್ಪಸಾ ಅಭಿ ಭೂತ್—ಈ ಅಗ್ನಿಯು ಕಳೆದು ಹೋಗುತ್ತಿರುವ ಕಗ್ಗತ್ತಲೆಯಿಂದ ಕೂಡಿದ ರಾತ್ರಿಯನ್ನು ತನ್ನ ಜ್ವಾಲಾರೂಪವಾದ ತೇಜಸ್ಸಿನಿಂದ ಸೋಲಿಸುತ್ತಾನೆ ಅಥವಾ ತಿರಸ್ಕರಿಸುತ್ತಾನೆ. ಇಲ್ಲಿ **ಕೃಷ್ಣಾಂ ನಿನೀಂ** ಎಂದರೆ ರಾತ್ರಿಯು ಸೂರ್ಯಾಸ್ತಮಯಾನಂತರ ಪ್ರಾರಂಭವಾಗುವುದು. ಕಾಲಕಳೆದಂತೆಲ್ಲಾ ಕತ್ತಲೆಯು ಹೆಚ್ಚುಹೆಚ್ಚಾಗಿ ಆವರಿಸಿ ಗಾಢಾಂಧಕಾರವು ಪ್ರಾಪ್ತವಾಗುವುದು. ಇಂತಹ ಕಾಲದಲ್ಲಿ ಬೆಳಕನ್ನುಂಟುಮಾಡಲು ಸೂರ್ಯನಿಲ್ಲದಿರುವುದರಿಂದ ಅಗ್ನಿಯೇ ತನ್ನ ಪ್ರಕಾಶಮಾನವಾಗಿ ಬೆಳಗುತ್ತಿರುವ ಜ್ವಾಲೆಗಳಿಂದ ಅಂಧಕಾರವನ್ನು ನಾಶಪಡಿಸಿ ಸರ್ವತ್ರ ಬೆಳಕನ್ನುಂಟುಮಾಡುವನು. ರಾತ್ರಿಯ ಗಾಢಾಂಧಕರವನ್ನು ತನ್ನ ಪ್ರಕಾಶದಿಂದ ನಾಶಮಾಡುವುದರಿಂದ ಅಗ್ನಿಯು ರಾತ್ರಿಯನ್ನು ಸೋಲಿಸಿದನೆಂದು ಇಲ್ಲಿ ಅಲಂಕಾರಿಕವಾಗಿ ಋಷಿಯು ವರ್ಣಿಸಿದಾನೆ.

ಬೃಹತಃ ಪಿತುಃ ಜಾಂ ಯೋಷಾಂ ಜನಯನ್—ಚರಾಚರಾತ್ಮಕವಾದ ಈ ದೊಡ್ಡ ಜಗತ್ತಿನ ಪಾಲಕನಾದ ಪ್ರಜಾಪತಿಯಿಂದ ಅಥವಾ ಆದಿತ್ಯನಿಂದ ಸೃಷ್ಟವಾದ ಉಷಃಕಾಲವನ್ನು ಪ್ರಕಟಿಸುತ್ತಾ ಎಂದರೆ ರಾತ್ರಿಕಾಲದಲ್ಲಿ ಅಗ್ನಿಯು ತನ್ನ ತೇಜಸ್ಸಿನಿಂದ ಪ್ರಕಾಶಿಸುತ್ತಿರಲಾಗಿ ಕ್ರಮಕ್ರಮವಾಗಿ ರಾತ್ರಿಯು ಕಳೆದುಹೋಗುತ್ತಾ ಉಷಃಕಾಲವು ಪ್ರಾಪ್ತವಾಗುವುದೆಂದಭಿಪ್ರಾಯವು. ಈ ಕಾರ್ಯವನ್ನು ಅಗ್ನಿಯು ಮಾಡುವನೆಂದು ಋಷಿಯು ಹೇಳಿದಾನೆ.

ಅರತಿಃ ದಿವಃ ವಸುಭಿಃ ಸೂರ್ಯಸ್ಯ ಭಾನುಂ ಊರ್ಧ್ವಂ ಸ್ತಭಾಯನ್ ಏ ಭಾತಿ—ರಾತ್ರಿಕಾಲದಲ್ಲಿ ಅಗ್ನಿಯು ಸರ್ವತ್ರ ವ್ಯಾಪಿಸಿರುವ ತನ್ನ ತೇಜಸ್ಸು (ಜ್ವಾಲೆ ಅಥವಾ ಕಿರಣ)ಗಳಿಂದ ಸ್ವರ್ಗ ಅಥವಾ ಅಂತರಿಕ್ಷದಲ್ಲಿ ಬಹುದೂರದವರೆಗೂ ಪ್ರಕಾಶವನ್ನುಂಟುಮಾಡುತ್ತಾ ಇರುವನು. ಆ ಕಾಲದಲ್ಲಿ ಕಗ್ಗತ್ತಲೆಯು ಕವಿದು ಸೂರ್ಯೋದಯಕಾಲವು ಪ್ರಾಪ್ತವಾಗಿರುವುದಿಲ್ಲವಾದ್ದರಿಂದ ಸೂರ್ಯನು ಉದಯಿಸದಂತೆ ಅಗ್ನಿಯು ತಡೆದು ತಾನು ವಿಶೇಷರೀತಿಯಿಂದ ಪ್ರಕಾಶಿಸುತ್ತಿರುವನೆಂದು ಔಪಚಾರಿಕವಾಗಿ ಋಷಿಯು ವರ್ಣಿಸಿದ್ದಾನೆ. ವಸ್ತುತಃ ಅಗ್ನಿಯ ಪ್ರಕಾಶದಿಂದ ಬೆಳಗುವುದಕ್ಕೂ, ಸೂರ್ಯನು ಉದಯಿಸುವುದಕ್ಕೂ ಏನೂ ಸಂಬಂಧವಿರುವುದಿಲ್ಲ. ಕಾಲಕ್ರಮದಲ್ಲ ಸೂರ್ಯನು ಉದಯಿಸಿಯೇ ಉದಯಿಸುತ್ತಾನೆ. ಅಲ್ಲಿಯವರೆಗೆ ಎಂದರೆ ಆ ಕಾಲದವರೆಗೆ ಸರ್ವತ್ರ ವ್ಯಾಪಿಸಿರುವ ಕಗ್ಗತ್ತಲೆಯಲ್ಲಿ ಅಗ್ನಿಯು ವಿಶೇಷವಾಗಿ ಪ್ರಕಾಶಿಸುತ್ತಾನೆ. ಈ ಸಂದರ್ಭದಲ್ಲಿ ಸೂರ್ಯೋದಯವು ತಡವಾಗುವುದನ್ನು ಅಗ್ನಿಯ ಮಾಹಾತ್ಮ್ಯದಿಂದಲೇ ಆಗಿದೆಯೆಂದು ಅಗ್ನಿಯ ಗುಣವರ್ಣನೆ ಮಾಡುವುದಕ್ಕಾಗಿ ಋಷಿಯು ಈ ವಿಧವಾಗಿ ವರ್ಣಿಸಿದಾನೆ.

॥ ಸಂಹಿತಾಪಾಠಃ ॥

ಭದ್ರೋ ಭದ್ರಯಾ ಸಚಮಾನ ಆಗಾತ್ಸ್ವಸಾರಂ ಜಾರೋ ಅಭ್ಯೇತಿ ಪಶ್ಚಾತ್।
ಸುಪ್ರಕೇತೈರ್ದ್ಯುಭಿರಗ್ನಿರ್ವಿತಿಷ್ಠನ್ರುಶದ್ಭಿರ್ವರ್ಣೈರಭಿ ರಾಮಮಸ್ಥಾತ್ ॥೩॥

॥ ಪದಪಾಠಃ ॥

ಭದ್ರಃ । ಭದ್ರಯಾ । ಸಚಮಾನಃ । ಆ । ಅಗಾತ್ । ಸ್ವಸಾರಂ । ಜಾರಃ । ಅಭಿ । ಏತಿ । ಪಶ್ಚಾತ್ ।
ಸುಽಪ್ರಕೇತೈಃ । ದ್ಯುಽಭಿಃ । ಅಗ್ನಿಃ । ವಿತಿಷ್ಠನ್ । ರುಶತ್ಽಭಿಃ । ವರ್ಣೈಃ । ಅಭಿ । ರಾಮಂ ।
ಅಸ್ಥಾತ್ ॥ ೩ ॥

॥ ಸಾಯಣಭಾಷ್ಯಂ ॥

ಭದ್ರೋ ಭಜನೀಯಃ ಕಲ್ಯಾಣೋ ಭದ್ರಯಾ ಭಜನೀಯಯಾ ದೀಪ್ತ್ಯೇಷಸಾ ವಾ ಸಚಮಾನಃ ಸೇವ್ಯಮಾನಃ ಸಂಗಚ್ಛಮಾನೋ ವಾಗ್ನಿರಾಗಾತ್। ಆಜಗಾಮ। ಗಾರ್ಹಪತ್ಯಾದಾಹವನೀಯಂ ತತಃ ಪಶ್ಚಾಜ್ಜಾರೋ ಜರಯಿತಾ ಶತ್ರೂಣಾಂ ಸೋಽಗ್ನಿಃ ಸ್ವಸಾರಂ ಸ್ವಯಂಸಾರಿಣೀಮಾಗಚ್ಛತಿ ಭಗಿನೀಂ ವಾಗತಾಮುಷಸಮಭ್ಯೇತಿ । ಅಭಿಗಚ್ಛತಿ । ತಥಾ ಸುಪ್ರಕೇತೈಃ ಸುಪ್ರಜ್ಞಾನೈರ್ದ್ಯುಭಿರ್ದೀಪ್ತೈಸ್ತೇಜೋಭಿಃ ಸಹ

ವಿತಿಷ್ಠನ್ ಸರ್ವತೋ ವರ್ತಮಾನಃ ಸೋ೭ಗ್ನೀ ರುಶದ್ಭಿಃ ಶ್ವೇತೈರ್ವರ್ಣೈರ್ವಾರಕೈರಾತ್ರೀಯೈಸ್ತೇಜೋಭೀ ರಾಮಂ ಕೃಷ್ಣಂ ಶಾರ್ವರಂ ತಮೋ೭ಭ್ಯಸ್ಥಾತ್ । ಸಾಯಂಹೋಮಕಾಲೇ೭ಭಿಭೂಯ ತಿಷ್ಠತಿ ॥

॥ ಪ್ರತಿಪದಾರ್ಥ ॥

ಭದ್ರಃ—ಕಲ್ಯಾಣಾತ್ಮಕನಾದ ಅಗ್ನಿಯು । **ಭದ್ರಯಾ**—ಮಂಗಳಕರವಾದ ತೇಜಸ್ಸಿನಿಂದ । **ಸಚಮಾನಃ**—ಸೇವಿಸಲ್ಪಟ್ಟವನಾಗಿ । **ಆಗಾತ್**—ಬಂದಿದ್ದಾನೆ । **ಪಶ್ಚಾತ್**—ಅನಂತರ । **ಚಾರಃ**—ಶತ್ರುನಾಶಕನಾದ **ಅಗ್ನಿಃ**—ಅಗ್ನಿಯು । **ಸ್ವಸಾರಂ**—ತನ್ನ ಭಗಿನಿಯಾದ ಉಷಸ್ಸನ್ನು । **ಅಭ್ಯೇತಿ**—ಸಮೀಪಿಸುತ್ತಾನೆ । **ಸುಪ್ರಕೇತೈಃ**—ಉತ್ತಮವಾದ ಪ್ರಜ್ಞಾಪಕಗಳಾದ । **ದ್ಯುಭಿಃ**-ಕಾಂತಿಗಳಿಂದ । **ವಿತಿಷ್ಠನ್**-ಸರ್ವತ್ರ ವ್ಯಾಪಿಸಿರುವ । **ಅಗ್ನಿಃ**—ಅಗ್ನಿಯು । **ರುಶದ್ಭಿಃ**—ಶ್ವೇತವರ್ಣಗಳುಳ್ಳ । **ವರ್ಣೈಃ**—ತೇಜಸ್ಸುಗಳಿಂದ । **ರಾಮಂ**—ರಾತ್ರಿಯ ಕತ್ತಲೆಯನ್ನು । **ಅಭಿ ಅಸ್ಥಾತ್**—ಆಕ್ರಮಿಸಿ ನಿಂತಿದ್ದಾನೆ

॥ ಭಾವಾರ್ಥ ॥

ಕಲ್ಯಾಣಾತ್ಮಕನಾದ ಅಗ್ನಿಯು ಮಂಗಳಕರವಾದ ತೇಜಸ್ಸಿನಿಂದ ಸೇವಿಸಲ್ಪಟ್ಟವನಾಗಿ ಬಂದಿದ್ದಾನೆ. ಅನಂತರ ಶತ್ರುನಾಶಕನಾದ ಅಗ್ನಿಯು ತನ್ನ ಭಗಿನಿಯಾದ ಉಷಸ್ಸನ್ನು ಸಮೀಪಿಸುತ್ತಾನೆ. ಉತ್ತಮವಾದ ಪ್ರಜ್ಞಾಪಕಗಳಾದ ಕಾಂತಿಗಳಿಂದ ಸರ್ವತ್ರ ವ್ಯಾಪಿಸಿರುವ ಅಗ್ನಿಯು ಶ್ವೇತವರ್ಣಗಳುಳ್ಳ ತೇಜಸ್ಸುಗಳಿಂದ ರಾತ್ರಿಯ ಕತ್ತಲೆಯನ್ನು ಆಕ್ರಮಿಸಿ ನಿಂತಿದ್ದಾನೆ

English Translation

He has come auspicious, waited on by the auspicious (light); he afterwards approaches his sister (dawn) like a gallant: Agni, spreading everywhere, with omniscient rays overpowers the dark (night) with brilliant beams

॥ ವಿಶೇಷವಿಷಯಗಳು ॥

ಸೇವಿಸಲ್ಪಡುವ ಮಂಗಳಕರನಾದ ಅಗ್ನಿಯು, ತನ್ನ ಮಂಗಳಕರವಾದ ತೇಜಸ್ಸಿನಿಂದ ಕೂಡಿ ತನ್ನ ಭಗಿನಿ (ಸೋದರಿ) ಯಾದ ಉಷಸ್ಸನ್ನು ಸಮೀಪಿಸುತ್ತಾನೆ. ಎಂದರೆ, ಅಗ್ನಿಯು ಸ್ವತೇಜಸ್ಸಿನಿಂದ ರಾತ್ರಿಯೆಲ್ಲಾ ಬೆಳಗುತ್ತಿರುವಾಗ ಕ್ರಮೇಣ ರಾತ್ರಿಯು ಕಳೆದುಹೋಗಿ ಉಷಃಕಾಲವು ಸಮೀಪಿಸುವಂತಾಯಿತು ಎಂಬುದನ್ನು ಸೂಚಿಸುವುದಕ್ಕಾಗಿ ಅಗ್ನಿಯು ಉಷಸ್ಸನ್ನು ಸಮೀಪಿಸುತ್ತಾನೆ ಎಂದು ಹೇಳಿದೆ. ಅಗ್ನಿಗೂ ರಾತ್ರಿಗೂ ಸಂಬಂಧವಿದೆ. **ಆಗ್ನೇಯಾ ವೈ ರಾತ್ರಿಃ** ಎಂಬ ಶ್ರುತಿವಾಕ್ಯವು ಇದನ್ನು ಸಮರ್ಥಿಸುತ್ತದೆ. ಅಗ್ನಿಯು ರಾತ್ರಿಕಾಲದಲ್ಲಿಯೇ ವಿಶೇಷವಾಗಿ ಪ್ರಕಾಶಿಸುವುದರಿಂದ ಅಗ್ನಿಗೂ ರಾತ್ರಿಗೂ ನಿಕಟಸಂಬಂಧವಿದ್ದಂತಾಯಿತು. ರಾತ್ರಿಯ ಅಂತ್ಯದಲ್ಲಿ ಉಷಃಕಾಲವು ಪ್ರಾದುರ್ಭಾವವಾಗುವುದರಿಂದ ರಾತ್ರಿಯಿಂದ ಉಷಃಕಾಲವು ಹುಟ್ಟಿದಂತಾಯಿತು ಈ ರೀತಿ ಅಗ್ನಿಯೂ, ಉಷಃಕಾಲವೂ ರಾತ್ರಿಗೆ ಸಂಬಂಧಪಟ್ಟಿರುವುದರಿಂದ ಎಂದರೆ ರಾತ್ರಿಕಾಲಗಳಲ್ಲಿ ಇವರ ಜನನ (ಉತ್ಪತ್ತಿ) ಯಾಗುವುದರಿಂದ ಉಷಃಕಾಲವು ಅಗ್ನಿಗೆ ಭಗಿನಿ (ತಂಗಿ) ಯೆಂದು ಹೇಳುವುದು ನ್ಯಾಯವಾಗಿದೆ. ಈ ರೀತಿ ರಾತ್ರಿಕಾಲದಲ್ಲಿ ಬೆಳಗುವ ಅಗ್ನಿಯು

ರಾತ್ರಿಯ ಕಗ್ಗತ್ತಲೆಯನ್ನು ನಾಶಮಾಡುತ್ತಾ ಬೆಳಕನ್ನು ಬೀರುವ ತನ್ನ ತೇಜಸ್ಸುಗಳಿಂದ ದೇದೀಪ್ಯಮಾನನಾಗಿ ಪ್ರಕಾಶಿಸುತ್ತಿರುವನು ಎಂದು ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠ ॥

ಅಸ್ಯ ಯಾವಾಸೋ ಬೃಹತೋ ನ ವಗ್ನೂನಿಂಧಾನಾ ಅಗ್ನೇಃ ಸಖ್ಯುಃ ಶಿವಸ್ಯ ।
ಈಡ್ಯಸ್ಯ ವೃಷ್ಣೋ ಬೃಹತಃ ಸ್ವಾಸೋ ಭಾವಾಸೋ ಯಾವನ್ನಕ್ತವಶ್ಚಿಕಿತ್ರೇ॥

॥ ಪದಪಾಠಃ ॥

ಅಸ್ಯ । ಯಾವಾಸಃ । ಬೃಹತಃ । ನ । ವಗ್ನೂನ್ । ಇಂಧಾನಾಃ । ಅಗ್ನೇಃ । ಸಖ್ಯುಃ । ಶಿವಸ್ಯ ।
ಈಡ್ಯಸ್ಯ । ವೃಷ್ಣಃ । ಬೃಹತಃ । ಸು॰ಆಸಃ । ಭಾವಾಸಃ । ಯಾವನ್ । ಅಕ್ತವಃ । ಚಿಕಿತ್ರೇ ॥ ೪ ॥

॥ ಸಾಯಣಭಾಷ್ಯಂ ॥

ಬೃಹತೋ ಮಹತೋಽಸ್ಯಾಗ್ನೇಃ ಸಂಬಂಧಿನ ಇಂಧಾನಾ ದೀಪ್ಯಮಾನಾ ಯಾವಾಸ॰ । ಯಾಂತಿ ಗಂಚ್ಛಂತೀತಿ ಯಾವಾ ರಶ್ಮಯಃ । ನ ವಗ್ನೂನ್ ಸ್ತುತಿಕಾರಿಣೋ ಜನಾನ್ನ ಬಾಧಂತೇ । ಕಂತು ಸಖ್ಯುಃ ಸ್ತುತ್ಯಸ್ತೋತೃತ್ವಯಷ್ಟೃಯಷ್ಟವ್ಯತ್ವಲಕ್ಷಣೇನ ಸಖ್ಯೇನ ಸಖಿಭೂತಸ್ಯ ಶಿವಸ್ಯ ಕಲ್ಯಾಣಸ್ಯ ಭಕ್ತಾನಾಂ ಸುಖಕರಸ್ಯೇಡ್ಯಸ್ಯ ಸ್ತೋತವ್ಯಸ್ಯ ವೃಷ್ಣಃ ಕಾಮಾನಾಂ ವರ್ಷಿತುರ್ಬೃಹತೋ ಮಹತಃ ಸ್ವಾಸಃ ಶೋಭನಾಸ್ಯಸ್ಯಾಗ್ನೇಃ ಸ್ವಭೂತಾ ಅಕ್ತವಸ್ತಮಾಂಸ್ಯಂಜಂತೋಽಪಗಮಯಂತ ಆಹುತಿಭಿಃ ಸಂಗತಾ ವಾ ಭಾವಾಸಃ ॥ ಭಾಮ ಕ್ರೋಧೇ ॥ ತೀಕ್ಷ್ಣಾ ಅಪ್ರಸಹ್ಯಾ ರಶ್ಮಯೋ ಯಾವನ್ . ಯಾತಿ ದೇವಾನ್ಪ್ರತಿ ತರ್ಪಣಾಯ ಯಾಂತಿ ದೇವಾ ಏತಂ ಪ್ರತ್ಯಂಗಭಾವಾಯೇತಿ ಯಾವಾ ಯಜ್ಞಃ । ತಸ್ಮಿಂಶ್ಚಿಕಿತ್ರೇ । ಸರ್ವತೋ ಜಜ್ಞಿರೇ । ಪ್ರಥಿತಾ ಅಭೂವನ್ ॥

॥ ಪ್ರತಿಪದಾರ್ಥ ॥

ಬೃಹತಃ—ಮಹಾತ್ಮನಾದ । **ಅಸ್ಯ ಅಗ್ನೇಃ**—ಈ ಅಗ್ನಿಯ । **ಇಂಧಾನಾಃ**—ಪ್ರಕಾಶಮಾನಗಳಾದ । **ಯಾವಾಸಃ**—ರಶ್ಮಿಗಳು । **ವಗ್ನೂನ್**—ಸ್ತುತಿಕರ್ತರನ್ನು । **ನ (ಬಾಧಂತೇ)**—ಹಿಂಸಿಸುವುದಿಲ್ಲ । **ಸಖ್ಯುಃ**—ಮಿತ್ರನೂ । **ಶಿವಸ್ಯ**—ಮಂಗಳಕರನೂ । **ಈಡ್ಯಸ್ಯ**—ಸ್ತುತ್ಯರ್ಹನೂ । **ವೃಷ್ಣಃ**—ಕಾಮವರ್ಷಕನೂ । **ಬೃಹತಃ**—ಮಹಾತ್ಮನೂ । **ಸ್ವಾಸಃ**—ಮಂಗಳಕರವಾದ ಮುಖವುಳ್ಳವನೂ ಆದ ಅಗ್ನಿಯ । **ಅಕ್ತವಃ**—ಆಹುತಿಗಳೊಡನೆ ಸೇರಿದ । **ಭಾವಾಸಃ**—ರಶ್ಮಿಗಳು । **ಯಾವನ್**—ಯಜ್ಞದಲ್ಲಿ । **ಚಿಕಿತ್ರೇ**—ಎಲ್ಲರಿಂದಲೂ ಅರಿಯಲ್ಪಡುತ್ತವೆ

॥ ಭಾವಾರ್ಥ ॥

ಮಹಾತ್ಮನಾದ ಈ ಅಗ್ನಿಯ ಪ್ರಕಾಶಮಾನಗಳಾದ ರಶ್ಮಿಗಳು ಸ್ತುತಿಕರ್ತರನ್ನು ಹಿಂಸಿಸುವುದಿಲ್ಲ ಮಿತ್ರನೂ ಮಂಗಳಕರನೂ, ಸ್ತುತ್ಯರ್ಹನೂ, ಕಾಮವರ್ಷಕನೂ, ಮಹಾತ್ಮನೂ, ಮಂಗಳಕರವಾದ ಮುಖವುಳ್ಳವನೂ ಆದ ಅಗ್ನಿಯ ಆಹುತಿಗಳೊಡನೆ ಸೇರಿದ ರಶ್ಮಿಗಳು ಯಜ್ಞದಲ್ಲಿ ಎಲ್ಲರಿಂದಲೂ ಅರಿಯಲ್ಪಡುತ್ತವೆ

English Translation

The blazing flames of that mighty Agni do not (deter) his adorers; the fierce flames of the friendly auspicious adorable (Agni), the showerer of (benefits), the vast, the strong-mouthed, are visible in the sacrifice.

॥ ವಿಶೇಷವಿಷಯಗಳು ॥

ಯಾವಮಾಸಃ—ಯಾಂತಿ ಗಚ್ಛಂತೀತಿ ಯಾವಾ ರಶ್ಮಯಃ | ಅಗ್ನಿಯಿಂದ ಹೊರಹೊರಟು ಸುತ್ತಲೂ ಪರಡುವ ಸ್ವಭಾವವುಳ್ಳದ್ದರಿಂದ **ಯಾವಾಃ** ಎಂದರೆ ರಶ್ಮಿಗಳು

ವಗ್ನೂನ್ ನ—ಸ್ತುತಿಕಾರಿಣೋ ಜನಾನ್ ನ ಬಾಧಂತೇ | ಅಗ್ನಿಯ ಪ್ರಚಂಡವಾದ ಕಿರಣಗಳು ಅಥವಾ ದಹಿಸುವ ಶಕ್ತಿಯು ಶತ್ರುಜನರಿಗೆ ಕೆಡಕನ್ನು ಮಾಡುವ ಸಾಮರ್ಥ್ಯವುಳ್ಳದ್ದಾಗಿದ್ದರೂ ಅಗ್ನಿಯನ್ನು ಸ್ತುತಿಸುತ್ತಿರುವ ಜನರಿಗೆ ಯಾವ ಬಾಧೆಯನ್ನೂ ಉಂಟುಮಾಡುವುದಿಲ್ಲ. ಏಕೆಂದರೆ ಅಗ್ನಿಗೂ ಸ್ತೋತ್ರಮಾಡುವ ಜನರಿಗೂ ಒಂದು ವಿಧವಾದ ಸಖ್ಯತ್ವ (ಸ್ನೇಹ)ವಿದೆಯೆಂದು ಋಷಿಯು ಹೇಳಿದಾನೆ

ಸಖ್ಯುಃ ಶಿವಸ್ಯ—ಅಗ್ನಿಗೂ ಜನರಿಗೂ ಸ್ನೇಹವೆಂದರೇನು ಎಂದರೆ, **ಸ್ತುತ್ಯಸ್ತೋತೃತ್ವಯುಷ್ಮದಸ್ಮದ್ಯುಷ್ಮದ್ವ್ಯತ್ವಲಕ್ಷಣೇನ ಸಖ್ಯೇನ |** ಅಗ್ನಿಗೂ ಜನರಿಗೂ ಒಂದು ವಿಧವಾದ ಸಂಬಂಧವಿರುವುದು. ಅಗ್ನಿಯು ಸ್ತುತಿಸಲ್ಪಡುವವನು, ಜನರು ಅಗ್ನಿಯನ್ನು ಸ್ತುತಿಸುವರು. ಈ ವಿಧವಾದ ಸಂಬಂಧಕ್ಕೆ **ಸ್ತುತ್ಯಸ್ತೋತೃತ್ವ**ವೆಂದು ಹೆಸರು. ಅದರಂತೆಯೇ ಅಗ್ನಿಯನ್ನು ಜನರು ಆಹುತ್ಯಾದಿಗಳನ್ನು ಅರ್ಪಿಸಿ ಆರಾಧಿಸುವುದರಿಂದ **ಯುಷ್ಮದ್ಯುಷ್ಮದ್ವ್ಯತ್ವ**ವೆಂಬ ಸಂಬಂಧವೂ ಇವೆ. ಈ ವಿಧವಾದ ಸಂಬಂಧವನ್ನೇ ಅಗ್ನಿಗೂ ಸ್ತುತಿಕರ್ತರಿಗೂ ಇರುವ ಸಖ್ಯತ್ವ ಅಥವಾ ಸ್ನೇಹವೆಂದು ಋಷಿಯು ವರ್ಣಿಸಿದಾನೆ.

ಭಾಮಾಸಃ—ಭಾಮ ಕ್ರೋಧೇ | ತೀಕ್ಷ್ಣಾ ಅಪ್ರಸಹ್ಯಾ ರಶ್ಮಯಃ | ಕ್ರೋಧರೂಪವಾದ ಎಂದರೆ ಸಹಿಸಲಶಕ್ಯವಾದ ತೀಕ್ಷ್ಣವಾದ ಕಿರಣಗಳು. ಅಗ್ನಿಯು ಮಹಾಜ್ವಾಲೆಗಳಿಂದ ಸಹಿತನಾಗಿ ಉರಿಯುತ್ತಿರುವಾಗ ಅದರ ಸಮೀಪಕ್ಕೆ ಹೋಗಲು ಯಾರಿಂದಲೂ ಸಾಧ್ಯವಿಲ್ಲ ಅಂತಹ ತೀಕ್ಷ್ಣವಾದ ಅಗ್ನಿಯ ರಶ್ಮಿಗಳು ಎಂದರ್ಥವು.

ಯಾವಮನ್-ಯಾತಿ ದೇವಾನ್ ಪ್ರತಿ ತರ್ಪಣಾಯ ಯಾಂತಿ ವಾ ದೇವಾ ಏತಂ ಪ್ರತ್ಯಂಗಭಾವಾಯೇತಿ ಯಾವಾ ಯಜ್ಞಃ | ದೇವತೆಗಳನ್ನು ಆಹುತ್ಯರ್ಪಣಗಳಿಂದ ತೃಪ್ತಿಪಡಿಸುವುದರಿಂದ **ಯಾವನ್** ಎಂದರೆ ಯಜ್ಞವು ಅಥವಾ ಈ ದೇವತೆಗಳೇ ತನ್ನ ಸಂತೋಷಾರ್ಥವಾಗಿ ಈ ಯಜ್ಞಭೂಮಿಗೆ ಆಹೂತರಾಗಿ ಹೋಗುವುದರಿಂದ ಯಾವನ್ ಎಂದರೆ ಯಜ್ಞವು ಎಂದು ಎರಡು ವಿಧವಾದ ಅರ್ಥವಿವರಣೆ ಮಾಡಿದಾರೆ.

। ಸಂಹಿತಾಪಾಠಃ ।

ಸ್ವನಾ ನ ಯಸ್ಯ ಭಾಮಾಸಃ ಪವಂತೇ ರೋಚಮಾನಸ್ಯ ಬೃಹತಃ ಸುದಿವಃ।
ಜ್ಯೇಷ್ಠೇಭಿರ್ಯಸ್ತೇಜಿಷ್ಠೈಃ ಕ್ರೀಳುಮದ್ಭಿರ್ವರ್ಷಿಷ್ಠೇಭಿರ್ಭಾನುಭಿರ್ನಕ್ಷತಿ
ದ್ಯಾಂ ॥ ೫ ॥

। ಪದಪಾಠಃ ।

ಸ್ವನಾಃ । ನ । ಯಸ್ಯ । ಭಾಮಾಸಃ । ಪವಂತೇ । ರೋಚಮಾನಸ್ಯ । ಬೃಹತಃ । ಸು॒ದಿವಃ।
ಜ್ಯೇಷ್ಠೇಭಃ । ಯಃ । ತೇಜಿಷ್ಠೈಃ । ಕ್ರೀಳುಮತ್॒ಭಿಃ । ವರ್ಷಿಷ್ಠೇಭಿಃ । ಭಾನು॒ಭಿಃ । ನಕ್ಷತಿ । ದ್ಯಾಂ।

॥ ಸಾಯಣಭಾಷ್ಯಂ ॥

ರೋಚಮಾನಸ್ಯ ದೀಪ್ಯಮಾನಸ್ಯ ಬೃಹತೋ ಮಹತಃ ಸುದಿವಃ ಶೋಭನದೀಪ್ತೇರ್ವಾ ಯಸ್ಯಾಗ್ನೇಃ ಸ್ವಭೂತಾ ಭಾಮಾಸಃ ॥ ಭಾ ದೀಪ್ತೌ ॥ ದೀಪ್ತಾ ರಶ್ಮಯಃ ಸ್ವನಾ ನ ಸ್ವನಂತೋ ಮರುತ ಇವ ಪವಂತೇ ಸರ್ವತಃ ಶಬ್ದಂ ಕುರ್ವಂತೋ ಗಚ್ಛಂತಿ। ಕಂಚ ಯೋ॒ಽಗ್ನಿರ್ಜ್ಯೇಷ್ಠೇಭಿರತ್ಯಂತಂ ಪ್ರಶಸ್ತೈ-ಸ್ತೇಜಿಷ್ಠೈಸ್ತೇಜಿಸ್ವಿತಮೈಃ ಕ್ರೀಳುಮದ್ಭಿಃ ಕ್ರೀಡನವದ್ಭಿರ್ವರ್ಷಿಷ್ಠೇಭಿರ್ವೃದ್ಧತಮೈರ್ಭಾನುಭಿರಾತ್ಮೀ-ಯೈಸ್ತೇಜೋಭಿರ್ದ್ಯಾಂ ದ್ಯುಲೋಕಂ ನಕ್ಷತಿ ವ್ಯಾಪ್ನೋತೀತಿ । ಸ ತ್ವಂ ದೇವಾನಾವಹೇತ್ಯುಕ್ತರೇಣ ಸಂಬಂಧಃ ॥

। ಪ್ರತಿಪದಾರ್ಥ ॥

ರೋಚಮಾನಸ್ಯ—ಕಾಂತಿಯುತನಾದವನೂ । **ಬೃಹತಃ**—ಮಹತ್ಸ್ವರೂಪವುಳ್ಳವನೂ । **ಸುದಿವಃ**—ಉತ್ತಮವಾದ ಪ್ರಭೆಯುಳ್ಳವನೂ ಆದ । **ಯಸ್ಯ**—ಯಾವ ಅಗ್ನಿಯ । **ಭಾಮಾಸಃ**—ರಶ್ಮಿಗಳು । **ಸ್ವನಾ ನ**—ಮರುತ್ತ್ತಗಳಂತೆ । **ಪವಂತೇ**—ಸರ್ವತ್ರ ಶಬ್ದಮಾಡಿಕೊಂಡು ಸಂಚರಿಸುವುವೋ । **ಯಃ**—ಯಾವ ಅಗ್ನಿಯು । **ಜ್ಯೇಷ್ಠೇಭಿಃ**—ಅತ್ಯಂತ ಪ್ರಶಸ್ಯವಾದವೂ । **ತೇಜಿಷ್ಠೈಃ**—ತೇಜೋಯುತವಾದವೂ । **ಕ್ರೀಳುಮದ್ಭಿಃ**—ಕ್ರೀಡೆಯಿಂದ ಕೂಡಿದವೂ । **ವರ್ಷಿಷ್ಠೇಭಿಃ**—ಅತ್ಯಂತ ಶ್ರೀಷ್ಮವಾದವೂ ಆದ । **ಭಾನುಭಿಃ**—ರಶ್ಮಿಗಳಿಂದ । **ದ್ಯಾಂ**—ದು ಲೋಕವನ್ನು । **ನಕ್ಷತಿ**—ವ್ಯಾಪಿಸುವನೋ (ಆ ಅಗ್ನಿಯು ದೇವತೆಗಳನ್ನು ಕರೆತರಲಿ).

॥ ಭಾವಾರ್ಥ ॥

ಕಾಂತಿಯುತನಾದವನೂ, ಮಹತ್ಸ್ವರೂಪವುಳ್ಳವನೂ, ಉತ್ತಮವಾದ ಪ್ರಭೆಯುಳ್ಳವನೂ ಆದ ಯಾವ ಅಗ್ನಿಯ ರಶ್ಮಿಗಳು ಮರುತ್ತುಗಳಂತೆ ಸರ್ವತ್ರ ಶಬ್ದಮಾಡಿಕೊಂಡು ಸಂಚರಿಸುವುವೋ, ಯಾವ ಅಗ್ನಿಯು ಅತ್ಯಂತ ಪ್ರಶಸ್ಯವಾದವೂ, ತೇಜೋಯುತವಾದವೂ, ಕ್ರೀಡೆಯಿಂದ ಕೂಡಿದವೂ, ಅತ್ಯಂತ ಪ್ರವರ್ಧಮಾನವಾದವೂ ಆದ ರಶ್ಮಿಗಳಿಂದ ದ್ಯುಲೋಕವನ್ನು ವ್ಯಾಪಿಸುವನೋ ಆ ಅಗ್ನಿಯು ದೇವತೆಗಳನ್ನು ಕರೆತರಲಿ.

English Translation

The flames of whom, radiant, vast, bright-shining, go roaring like the winds; who covers the sky with most excellent, most lustrous, most sportive, and most mighty rays ;—

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಅಗ್ನಿಯ ಗುಣವರ್ಣನೆ ಮಾತ್ರ ಇದ್ದು ಅರ್ಥ ಹೊಂದುವಂತೆ ವಾಕ್ಯವಿಲ್ಲದಿರುವುದರಿಂದ ಈ ಸೂಕ್ತದ ಏಳನೇ ಋಕ್ಕಿನಲ್ಲಿರುವ **ಸ ಆ ವಕ್ಷಿ ಮಹಿ ನಃ**—ಅಂತಹ ನೀನು ನಮ್ಮ ಯಜ್ಞಕ್ಕೆ ಮಹಾಮಹಿಮರಾದ ದೇವತೆಗಳನ್ನು ಕರೆದುಕೊಂಡು ಬಾ ಎಂಬ ವಾಕ್ಯಕ್ಕೆ ಸಮನ್ವಯಮಾಡಬೇಕು.

ಸ್ವನಾಃ ನ—**ಸ್ವನಂತೋ ಮರುತ ಇವ**। ಬೀಸುತ್ತಿರುವ ಗಾಳಿಯು ಶಬ್ದಮಾಡುವಂತೆ ಅಗ್ನಿಯು ಕಾಷ್ಠಾದಿಗಳನ್ನು ದಹಿಸುವಾಗ ಚಟಚಟ ಎಂದು ಒಂದು ವಿಧವಾಗಿ ಶಬ್ದಮಾಡುವುದನ್ನು ಇಲ್ಲಿ ವರ್ಣಿಸಿದೆ.

ಜೇಹಮೇಭಿಃ ಯಃ ತೇಜಿಷ್ಠೈಃ ಕ್ರೀಳುಮದ್ಭಿಃ ವರ್ಷಿಷ್ಠೇಭಿಃ ಭಾನುಭಿಃ ದ್ಯಾಂ ನಕ್ಷತಿ—ಸ್ವರ್ಗವೂ ನಭೋ ಮಂಡಲವೂ ಅತ್ಯಂತ ಎತ್ತರದಲ್ಲಿರುವುದೆಂದು ಪ್ರಸಿದ್ಧಿಯಷ್ಟೆ ಅಗ್ನಿಯು ಅತ್ಯಂತ ತೇಜೋಯುಕ್ತವಾದ ರಶ್ಮಿಗಳು ಅಥವಾ ಜ್ವಾಲೆಗಳು ಅತ್ಯಂತ ಎತ್ತರಕ್ಕೆ ಏಳುತ್ತಾ, ಆಟವಾಡುತ್ತಿರುವಂತೆ ತೋರುತ್ತಾ ಅತಿ ಎತ್ತರದಲ್ಲಿರುವ ಸ್ವರ್ಗವನ್ನೂ ಮುಟ್ಟುತ್ತವೆ ಎಂದರೆ ಅತಿ ಎತ್ತರಕ್ಕೆ ವ್ಯಾಪಿಸಿರುತ್ತವೆ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಅಸ್ಯ ಶುಷ್ಮಾಸೋ ದದೃಶಾನಪವೇರ್ಜೇಹಮಾನಸ್ಯ ಸ್ವನಯನ್ನಿಯುದ್ಭಿಃ ।
ಪ್ರತ್ನೇಭಿರ್ಯೋ ರುಶದ್ಭಿರ್ದೇವತಮೋ ವಿ ರೇಭದ್ಭಿರರತಿರ್ಭಾತಿ ವಿಭ್ವಾ ॥

॥ ಪದಪಾಠಃ ॥

ಅಸ್ಯ । ಶುಷ್ಮಾಸಃ । ದದೃಶಾನಪವೇಃ । ಜೇಹಮಾನಸ್ಯ । ಸ್ವನಯನ್ । ನಿಯುತ್ಭಿಃ ।
ಪ್ರತ್ನೇಭಿಃ । ಯಃ । ರುಶತ್ಭಿಃ । ದೇವತಮಃ । ವಿ । ರೇಭತ್ಭಿಃ । ಅರತಿಃ । ಭಾತಿ । ವಿಭ್ವಾ ॥

॥ ಸಾಯಣಭಾಷ್ಯಂ ॥

ದದೃಶಾನಪವೇರ್ದರ್ಶನೀಯಜ್ವಾಲಾಗ್ನೇಃ । ಯದ್ವಾ । ಪವಿರ್ವಜ್ರ ಆಯುಧಂ । ದೃಶ್ಯಮಾನಾಯುಧಸ್ಯ । ಜೇಹಮಾನಸ್ಯ । ಜೇಹತಿರ್ಗತಿಕರ್ಮಾ । ಹವಿರಾದಾಯ ದೇವಾನ್ಪ್ರತಿ ಗಚ್ಛತೋಽಸ್ಯಾಗ್ನೇಃ ಸ್ವಭೂತಾಃ ಶುಷ್ಮಾಸಃ ಶೋಷಕಾ ನಿಯುದ್ಭಿಃ । ನಿಯುತೋ ವಾಯೋರಿತಿ ವಾಯೋರಶ್ವಾ ನಿಯುತಃ । ತದ್ಯುಕ್ತೈರ್ವಾಯುಭಿಃ ಸಂಯುಕ್ತಾ ರಶ್ಮಯಃ ಸ್ವನಯನ್ । ಶಬ್ದಾಯಂತೇ । ಕಿಂಚ ದೇವತಮೋ

ದೇವಾನಾಂ ಮುಖ್ಯೋ೭ರತಿರ್ಗಂತಾ ವಿಭ್ವಾ ವಿಭವನಶೀಲೋ ಮಹಾನ್ ಯೋ೭ಗ್ನಿಃ ಪ್ರತ್ನೇಭಿಃ ಪುರಾನೈ ರುಶದ್ಭಿಃ ಶ್ವೇತವರ್ನೈ ರೇಭದ್ಭಿಃ ಶಬ್ದಾಯಮಾನೈಸ್ತೇಜೋಭಿರ್ವಿ ಭಾತಿ ವಿವಿಧಂ ದೀಪ್ಯತೇ ।

॥ ಪ್ರತಿಪದಾರ್ಥ ॥

ದದೃಶಾನಪವೇಃ—ಎಲ್ಲರಿಗೂ ಗೋಚರವಾಗುವ ಜ್ವಾಲೆಯುಳ್ಳವನೂ । **ಜೇಹಮಾನಸ್ಯ**—ಹವಿಸ್ಸನ್ನು ತೆಗೆದುಕೊಂಡು ದೇವತೆಗಳಲ್ಲಿಗೆ ಹೋಗುವವನೂ ಆದ । **ಅಸ್ಯ**—ಅಗ್ನಿಯ । **ಶುಷ್ಮಾಸಃ**—ಶೋಷಕಗಳಾದ ರಶ್ಮಿಗಳು । **ನಿಯುದ್ಭಿಃ**—ಅಶ್ವಗಳೊಡಗೂಡಿದ ವಾಯುಗಳೊಂದಿಗೆ । **ಸ್ವನಯನ್**—ಶಬ್ದಮಾಡುತ್ತಾ ಇವೆ । **ದೇವತಮಃ**—ದೇವತೆಗಳಲ್ಲಿಗೆಲ್ಲಾ ಮುಖ್ಯನೂ । **ಅರತಿಃ**—ಸಂಚಾರ ಶೀಲನೂ । **ವಿಭ್ವಾ**—ಮಹಾತ್ಮನೂ ಆದ । **ಯಃ**—ಯಾವ ಆದೇ ಅಗ್ನಿಯು । **ಪ್ರತ್ನೇಭಿಃ**—ಪುರಾತನವಾದವೂ । **ರುಶದ್ಭಿಃ**—ಶ್ವೇತವರ್ಣವುಳ್ಳವೂ । **ರೇಭದ್ಭಿಃ**—ಶಬ್ದಕಾರಕವೂ ಆದ ತೇಜಸ್ಸುಗಳೊಡನೆ । **ವಿ ಭಾತಿ**—ಅತಿಶಯವಾಗಿ ಪ್ರಕಾಶಿಸುತ್ತಾನೆ

॥ ಭಾವಾರ್ಥ ॥

ಎಲ್ಲರಿಗೂ ಗೋಚರವಾಗುವ ಜ್ವಾಲೆಯುಳ್ಳವನೂ, ಹವಿಸ್ಸನ್ನು ತೆಗೆದುಕೊಂಡು ದೇವತೆಗಳಲ್ಲಿಗೆ ಹೋಗುವವನೂ ಆದ ಅಗ್ನಿಯ ಶೋಷಕಗಳಾದ ರಶ್ಮಿಗಳು ಅಶ್ವಗಳೊಡಗೂಡಿದ ವಾಯುಗಳೊಂದಿಗೆ ಶಬ್ದಮಾಡುತ್ತವೆ. ದೇವತೆಗಳಿಗೆಲ್ಲ ಮುಖ್ಯನೂ ಮಹಾತ್ಮನೂ ಆದ ಯಾವ ಆದೇ ಅಗ್ನಿಯು ಪುರಾತನವಾದವೂ, ಶ್ವೇತವರ್ಣವುಳ್ಳವೂ ಶಬ್ದಕಾರಕವೂ ಆದ ತೇಜಸ್ಸುಗಳೊಡನೆ ಅತಿಶಯವಾಗಿ ಪ್ರಕಾಶಿಸುತ್ತಾನೆ

English Translation

Of him, bright blazing and hastening (toward the gods), the fierce-burning flames roar with the horses (of the Maruts) : who shines mighty in his course, most divine, with ancient, brilliant, and loud-sounding (flames).

॥ ವಿಶೇಷವಿಷಯಗಳು ॥

ದದೃಶಾನಪವೇಃ—**ದರ್ಶನೀಯಜ್ವಾಲಾಗ್ನೇಃ** । ಅಗ್ನಿಯ ಜ್ವಾಲೆಗಳು ಎಲ್ಲರಿಗೂ ಕಾಣಿಸುವಂತೆ ಪ್ರಕಾಶಮಾನವಾಗಿರುವುವು. ಇಂತಹ ಜ್ವಾಲೆಗಳಿಂದ ಯುಕ್ತನಾದ ಅಗ್ನಿಯು ಎಂದರ್ಥವು ಅಥವಾ **ಪವಿರ್ವಜ್ರ ಆಯುಧಂ ದೃಶ್ಯಮಾನಾಯುಧಸ್ಯ** । **ಪವಿ** ಎಂದರೆ ವಜ್ರಾಯುಧವು ಅಥವಾ ಆಯುಧವು. ಇಲ್ಲಿ ಅಗ್ನಿಯ ಆಯುಧವೆಂದರೆ ಜ್ವಾಲೆಗಳು. ಇದು ಎಲ್ಲರಿಗೂ ಕಾಣಿಸುತ್ತಿರುವುದು. ಒಟ್ಟಿನಲ್ಲಿ ಎರಡು ಅರ್ಥಗಳ ಅಭಿಪ್ರಾಯವೂ ಒಂದೇ ಆಗಿರುವುದು

ನಿಯುದ್ಭಿಃ ಸ್ವನಯನ್—ನಿಯುತ್ ಎಂದರೆ ವಾಯುವಿನ ಅಶ್ವವು. ಅಶ್ವಸಹಿತನಾದ ವಾಯುವಿನ ಎಂದರೆ ವೇಗವಾಗಿ ಬೀಸುತ್ತಿರುವ ವಾಯುವಿನಿಂದ ಕೂಡಿ ಶಬ್ದಮಾಡುತ್ತಿರುವ ಎಂದರ್ಥವು. ಗಾಳಿಯು ಬೀಸಿದಷ್ಟೂ ಅಗ್ನಿಯು ಹೆಚ್ಚುಹೆಚ್ಚಾಗಿ ಉರಿಯುವುದು ಎಂದಭಿಪ್ರಾಯವು.

। संहितापाठः ।

स आ वक्षि महि न आ च सत्सि दिवस्पृथिव्योररतिर्युवत्योः ।
अग्निः सुतुकः सुतुकेभिरश्वैः रभस्वद्भिः रभस्वाँ इह गम्याः ॥

। पदपाठः ।

सः । आ । वक्षि । महि । नः । आ । च । सत्सि । दिवःपृथिव्योः । अरतिः । युवत्योः ॥
अग्निः । सुऽतुकः । सुऽतुकेभिः । अश्वैः । रभस्वत्ऽभिः । रभस्वान् । आ । इह । गम्याः ॥

। सायणभाष्यं ।

हे अग्ने स तादृशस्त्वं नोऽस्मदीये यज्ञे महि महान् देवान्ना वक्षि । आवह । प्रापय । किंच युवत्योः परस्परं मिश्रितयोस्तरुण्योर्वा दिवस्पृथिव्योर्द्यावापृथिव्योर्मध्येऽरतिरग्निः सूर्यात्मना गंता त्वमा सत्सि । अस्माकं यज्ञमासीद । तथा सुतुकः । तुकिर्गत्यर्थः । सुगमुः स्तोतृभिर्यः प्रपृच्यते सुखेन प्राप्तव्यो रभस्वान्वेगवानग्निरंगनादिगुणयुक्तस्त्वं सुतुकेभिः सुगमैः रभस्वद्भिर्वेगवद्भिरश्वैः रोहिदाख्यैः सहेहास्मदीये यज्ञे आ गम्याः । आगच्छ ॥

। प्रतिपदार्थ ।

(ಎಲೈ ಅಗ್ನಿಯೇ) **सः**—ಪ್ರಸಿದ್ಧನಾದ ನೀನು । **नः**—ನಮ್ಮ ಯಜ್ಞಕ್ಕೆ । **महि**—ಮಹಾತ್ಮರಾದ ದೇವತೆಗಳನ್ನು । **आ वक्षि**—ಕರೆದುಕೊಂಡು ಬಾ । **युवत्योः**—ಪರಸ್ಪರ ಸೇರಿಕೊಂಡಿರುವ । **दिवस्पृथिव्योः**—ದ್ಯಾವಾಪೃಥಿವಿಗಳಲ್ಲೆಲ್ಲ । **अरतिः**—ಸೂರ್ಯರೂಪದಲ್ಲಿ ಸಂಚರಿಸುವ ನೀನು । **आ सत्सि**—ನಮ್ಮ ಯಜ್ಞಕ್ಕೆ ಬಾ । **सुतुकः**—ಸುಖವಾದ ಪ್ರವೇಶಕ್ಕೆ ಅರ್ಹನೂ । **रभस्वान्**—ವೇಗವಂತನೂ ಆದ । **अग्निः**—ಅಗ್ನಿಯು । **सुतुकेभिः**—ಉತ್ತಮವಾದ ಗಮನವುಳ್ಳವೂ । **रभस्वद्भिः**—ವೇಗವುಳ್ಳವೂ ಆದ । **अश्वैः**—ಅಶ್ವಗಳೊಡಗೂಡಿ । **इह**—ನಮ್ಮ ಯಜ್ಞಕ್ಕೆ । **आ गम्याः**—ಬರಲಿ.

। भावार्थ ।

ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ನಮ್ಮ ಯಜ್ಞಕ್ಕೆ ಮಹಾತ್ಮರಾದ ದೇವತೆಗಳನ್ನು ಕರೆದುಕೊಂಡು ಬಾ. ಪರಸ್ಪರ ಸೇರಿಕೊಂಡಿರುವ ದ್ಯಾವಾಪೃಥಿವಿಗಳಲ್ಲೆಲ್ಲ ಸೂರ್ಯರೂಪದಲ್ಲಿ ಸಂಚರಿಸುವ ನೀನು ನಮ್ಮ ಯಜ್ಞಕ್ಕೆ ಬಾ. ಸುಖವಾದ ಪ್ರವೇಶಕ್ಕೆ ಅರ್ಹನೂ, ವೇಗವಂತನೂ ಆದ ಅಗ್ನಿಯು ಉತ್ತಮವಾದ ಗಮನವುಳ್ಳವೂ, ವೇಗವುಳ್ಳವೂ ಆದ ಅಶ್ವಗಳೊಡಗೂಡಿ ನಮ್ಮ ಯಜ್ಞಕ್ಕೆ ಬರಲಿ.

English Translation

Great Agni, bring the gods to our (sacrifice). The messenger of the young heaven and earth, sit down (at our sacrifice). Agni, who are easily found, who are rapid in movement come with your docile and rapid steeds (to our rite).

ವಿಶೇಷವಿಷಯಗಳು ॥

युवतयोः दिवस्पृथिव्योः—ಪರಸ್ಪರಂ ಮಿಶ್ರಿತಯೋಃ ತರುಣ್ಯೋರ್ವಾ ದ್ಯಾವಾಪೃಥಿವ್ಯೋರ್ಮಧ್ಯೇ । ಒಂದಕ್ಕೊಂದು ಸೇರಿಕೊಂಡಂತಿರುವ ದ್ಯಾವಾಪೃಥಿವಿಗಳ ಮಧ್ಯದಲ್ಲಿ ; ಪೃಥಿವಿಯು ಕೆಳಭಾಗದಲ್ಲಿಯೂ ದ್ಯುಲೋಕವು ಮೇಲುಭಾಗದಲ್ಲಿಯೂ ಇರುವುದರಿಂದ ಪರಸ್ಪರ ಸಂಬಂಧವಿದ್ದಂತಾಯಿತು ಇವುಗಳ ಮಧ್ಯದಲ್ಲಿ ಸೂರ್ಯರೂಪದಲ್ಲಿರುವ ಅಗ್ನಿಯು ಸಂಚರಿಸುತ್ತಾನೆ ಎಂದು ವರ್ಣಿಸಿದೆ ಯುವತ್ಯೋಃ ಎಂಬ ಶಬ್ದಕ್ಕೆ ತರುಣ್ಯೋರ್ವಾ ಎಂದೂ ಅರ್ಥಮಾಡಿರುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ

सुतुकेभिः रभस्वद्भिः आशुभिः—ಉತ್ತಮವಾದ ಗಮನದ ಅಥವಾ ಪಾದವಿಕ್ಷೇಪ (ನಡಿಗೆ) ಯುಳ್ಳವು. ವೇಗವುಳ್ಳವು ಆದ ರೋಹಿತ್ ಎಂಬ ಅಶ್ವಗಳಿಂದ ಸಹಿತನಾಗಿ ಎಂದರ್ಥವು. ಯಾಸ್ಕರು ನಾನಾ ದೇವತೆಗಳ ವಾಹನ ಗಳನ್ನು ವಿವರಿಸುತ್ತಾ—

हरी इन्द्रस्य रोहितोऽग्नेः। हरिः आदित्यस्य। रासभानश्विनोः। अजा पूष्णः। पृषतोः मरुताम्। अरुणोः गाव उषसः। श्यावाः सवितुः। विश्वरूपाः बृहस्पतेः। नियुतोः वायोरिति दशादिशोऽपयोजनानि ॥

(ನಿ-೫೫೮)

ಎಂದು ಹೇಳಿರುವರು ಎಂದರೆ ಹರೀ ಎಂಬ ಹೆಸರಿನ ಎರಡು ಕುದುರೆಗಳು ಇಂದ್ರನ ವಾಹನವು ರೋಹಿತ ಎಂಬ ಕೆಂಪುಬಣ್ಣದ ಕುದುರೆಯು ಅಗ್ನಿಯ ವಾಹನವು ಹರಿಬಣ್ಣದ ಕುದುರೆಗಳು ಆದಿತ್ಯನ ವಾಹನವು, ಎರಡು ಕತ್ತೆಗಳು ಅಶ್ವಿನೀ ದೇವತೆಗಳ ವಾಹನವು. ಹೆಣ್ಣು ಆಡು ಪೂಷಣನ ವಾಹನವು, ಚುಕ್ಕೆಗಳುಳ್ಳ ಜಿಂಕೆಗಳು ಮರುದ್ದೇವತೆಗಳ ವಾಹನವು ; ಕೆಂಪುಬಣ್ಣದ ಗೋವುಗಳು ಉಷೋದೇವತೆಯ ವಾಹನವು ; ನಸುಗೆಂಪಿನ ಕುದುರೆ ಗಳು ಸವಿತೃದೇವನ ವಾಹನವು ; ನಾನಾ ಬಣ್ಣಗಳುಳ್ಳ ಕುದುರೆಗಳು ಬೃಹಸ್ಪತಿಯ ವಾಹನವು ; ನಿಯುತ್ ಎಂಬ ವೇಗಗಮನವುಳ್ಳ ಅಶ್ವಗಳು ವಾಯುವಿನ ವಾಹನವು ಎಂದು ಆಯಾ ದೇವತೆಗಳ ವಾಹನಗಳನ್ನು ವಿವರಿಸಿದಾರೆ. ಪ್ರಕೃತ ಋಕ್ಕಿನಲ್ಲಿ ಅಗ್ನಿಯ ವಾಹನಗಳಾದ ರೋಹಿತ್ ಎಂಬ ಅಶ್ವಗಳ ಪ್ರಸಕ್ತಿ ಇದೆ ಎಂದು ತಿಳಿಯಬೇಕು.

ಯಾಸ್ಕರು ಈ ಋಕ್ಕಿನಲ್ಲಿರುವ **सतुकः सुतुकेभिः** ಎಂಬ ಶಬ್ದಗಳಿಗೆ—

सुतुकः। अग्निः सुतुकः सुतुकनः सुतुकनैरिति वा सुप्रजाः सुप्रजोभिरिति वा ॥

(ನಿ. ೪-೧೮)

ಎಂದು ನಿರ್ವಚನವನ್ನು ಹೇಳಿದಾರೆ ಎಂದರೆ, ಸುತುಕಃ ಎಂದರೆ ವೇಗಶಾಲಿಯಾದ ಅಗ್ನಿಯು. ಅಗ್ನಿಯು ದಹಿಸುವ್ವ ದಕ್ಕೆ ಉಪಕ್ರಮಮಾಡಿದರೆ ಬಹುಬೇಗ ಎಲ್ಲವನ್ನೂ ವ್ಯಾಪಿಸಿ ದಹಿಸುತ್ತಾನೆ. ಆದ್ದರಿಂದ ಅತಿವೇಗವಾದ ಗಮನವುಳ್ಳ ನು. ಇವನ ಅಶ್ವಗಳು ಸಹ ವೇಗಗಮನವುಳ್ಳವು. ಅಥವಾ ಉತ್ತಮ ಜಾತಿಯಲ್ಲಿ ಹುಟ್ಟಿದವು ಎಂದರೆ ಒಳ್ಳೆಯ ಜಾತ್ಯಶ್ವಗಳು. ಇವು ವೇಗವಾಗಿ ಓಡುವುದರಲ್ಲಿ ಪ್ರಸಿದ್ಧಿಯು ಎಂದು ನಿರ್ವಚನಾಭಿಪ್ರಾಯವು,

ನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪ್ರ ತ ಇತಿ ಸಪ್ತರ್ಚಂ ಚತುರ್ಥಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪ್ರ ತ ಇತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ಥೋ ವಿನಿಯೋಗಃ ।

ಅನುವಾದವ್ಯ— ಪ್ರ ತೇ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತದ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ ಪ್ರ ತೇ ಎಂದು ಹೇಳಿರುವುದು. ಪ್ರಾತರನುವಾಕ ಸುತ್ತು ಆಶ್ವಿನಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಮುಂದೆಯೇ ಹೇಳಲಾಗಿದೆ

ಸೂಕ್ತ—೪

ಮಂಡಲ—೧೦ ॥ ಅನುವಾಕ—೧ ॥ ಸೂಕ್ತ—೪ ।
ಅಷ್ಟಕ—೭ ॥ ಅಧ್ಯಾಯ—೫ ॥ ವರ್ಗ ೩೦ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿ—ತ್ರಿತ ಆಪ್ತ್ಯಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠಃ ।

ಪ್ರ ತೇ॑ ಯಕ್ಷಿ ಪ್ರ ತ॑ ಇಯರ್ಮಿ ಮನ್ಮ॒ ಭುವೋ॒ ಯಥಾ॑ ವಂದ್ಯೋ॑ ನೋ ಹವೇ॑ಷು ।
ಧನ್ವ॒ನ್ನಿವ ಪ್ರಪಾ॑ ಅಸಿ ತ್ವ॑ಮಗ್ನ॒ ಇಯ॑ಕ್ಷವೇ॑ ಪೂರವೇ॑ ಪ್ರತ್ನ ರಾಜನ್ ॥ ೧ ॥

॥ ಪದಪಾಠಃ ॥

ಪ್ರ । ತೇ॒ । ಯ॒ಕ್ಷಿ॒ । ಪ್ರ । ತೇ॒ । ಇ॒ಯ॒ರ್ಮಿ॒ । ಮನ್ಮ॑ । ಭುವಃ॑ । ಯಥಾ॑ । ವಂದ್ಯಃ॑ । ನಃ॒ । ಹವೇ॑ಷು ॥
ಧನ್ವ॑ನ್ನಿ॒ವ । ಪ್ರಪಾ॑ । ಅಸಿ॒ । ತ್ವಂ । ಅ॒ಗ್ನೇ॒ । ಇ॒ಯ॒ಕ್ಷ॒ವೇ॒ । ಪೂ॒ರ॒ವೇ॒ । ಪ್ರ॒ತ್ನ॒ । ರಾ॒ಜ॒ನ್ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತೇ ತುಭ್ಯಂ ಹವಿಃ ಪ್ರ ಯಕ್ಷಿ । ಪ್ರಯಚ್ಛಾಮಿ । ಯಜಿರ್ದಾನಾರ್ಥಃ । ತಥಾ ಮನ ಮನನೀಯಾಂ ಸ್ತುತಿಂ ತೇ ತ್ವದರ್ಥಂ ಪ್ರೇಯವರ್ಮಿ । ಪ್ರೇರಯಾಮಿ । ಪ್ರೋಚ್ಚಾರಯಾಮಿ । ವಂದ್ಯಃ ಸರ್ವೈರ್ವಂದನೀಯಸ್ತ್ವಂ ನೋಽಸ್ಮದೀಯೇಷು ಹವೇಷು ದೇವಾಹ್ವಾನೇಷು ಯಥಾ ತ್ವಂ ಸಂನಿಹಿತೋ ಭುವಃ ಭವಸಿ ತಥಾ ಹವಿಃ ಪ್ರಯಚ್ಛಾಮಿ ಸ್ತೌಮಿ ಚ । ಹೇ ಪ್ರತ್ನ ಪುರಾಣ ರಾಜನ್ ಸರ್ವಸ್ಯ ಜಗತಃ ಸ್ವಾಮಿನ್ ಹೇ ಅಗ್ನೇ ಸ ತ್ವಮಿಯಕ್ಷವೇ ಯಷ್ಟುಮಿಚ್ಛತೇ ಪೂರವೇ ಪೂರುರಿತಿ ಮನುಷ್ಯನಾಮ । ಮನುಷ್ಯಾಯ ಯಜಮಾನಾಯ ಹವಿರ್ಭಿರ್ದೇವಾನ್ಪ್ರೀಣಯಿತ್ರೇ ಜನಾಯ ಧನ್ವನ್ನಿವ ಪ್ರಪಾಸಿ । ಯಥಾ ಧನ್ವನ್ ಧನ್ವನಿ ಮರೌ ನಿರುದಕಪ್ರದೇಶೇ ಪ್ರಪಾ । ಪ್ರಪಿಬಂತ್ಯತ್ರೇತಿ ಪ್ರಪಾ । ಸಾ ಯಥೋದಕಪ್ರದಾನೇನ ಜನೇಭ್ಯಃ ಸುಖದಾ ಭವತಿ ಏವಂ ತ್ವಂ ಧನದಾನೇನ ತಸ್ಮೈ ಸುಖದಾತಾ ಭವಸಿ ॥

॥ ಪ್ರತಿಪದಾರ್ಥ ॥

(ಎಲ್ಲಿ ಅಗ್ನಿಯೇ) **ಯಥಾ**—ಯಾವ ರೀತಿ । **ನಃ**—ನಮ್ಮ । **ಹವೇಷು**—ಹವಿಸ್ಸುಗಳಿರುವಲ್ಲಿ । **ವಂದ್ಯಃ**—ಸ್ತುತ್ಯನಾದ ನೀನು । **ಭುವಃ**—ನಮ್ಮ ಸವೀಪದಲ್ಲಿರುವೆಯೋ ಆ ರೀತಿ **ತೇ**—ನಿನ್ನನ್ನುದ್ದೇಶಿಸಿ । **ಪ್ರ ಯಕ್ಷಿ**—ಹವಿಸ್ಸನ್ನರ್ಪಿಸುತ್ತೇನೆ । **ಮನ್ಮ**—ಧ್ಯಾನಾತ್ಮಕವಾದ ಸ್ತುತಿಯನ್ನು । **ತೇ**—ನಿನ್ನನ್ನುದ್ದೇಶಿಸಿ । **ಪ್ರ ಇಯವರ್ಮಿ**—ಅರ್ಪಿಸುತ್ತೇನೆ । **ಪ್ರತ್ನ**—ಪುರಾತನನೂ । **ರಾಜನ್**—ಪ್ರಭುವೂ ಆದ । **ಅಗ್ನೇ**—ಎಲ್ಲೆ ಅಗ್ನಿಯೇ । **ತ್ವಂ**—ನೀನು । **ಇಯಕ್ಷವೇ**—ಯಜ್ಞಮಾಡಲಿಚ್ಛಿಸುವ । **ಪೂರವೇ**—ಯಜಮಾನನಿಗೆ । **ಧನ್ವನ್ (ಪ್ರಪಾ) ಇವ**—ಮರಳು ಕಾಡಿನಲ್ಲಿ ನೀರನ್ನೊದಗಿಸುವ ಬುಗ್ಗೆಯಂತೆ । **ಪ್ರಪಾ ಅಸಿ**—ಇಷ್ಟಾರ್ಥಗಳನ್ನು ಪೂರೈಸುವವನಾಗಿದ್ದೀಯೆ ।

॥ ಭಾವಾರ್ಥ ॥

ಎಲ್ಲೆ ಅಗ್ನಿಯೇ, ನಾವು ದೇವತೆಗಳನ್ನು ಯಜ್ಞಕ್ಕೆ ಕರೆಯುವ ಕಾಲದಲ್ಲಿ ನೀನು ಯಾವರೀತಿ ನಮ್ಮ ಸವೀಪದಲ್ಲಿರುವೆಯೋ ಆರೀತಿ ನಿನ್ನನ್ನುದ್ದೇಶಿಸಿ ಹವಿಸ್ಸನ್ನರ್ಪಿಸುತ್ತೇನೆ ಧ್ಯಾನಾತ್ಮಕವಾದ ಸ್ತುತಿಯನ್ನೂ ಅರ್ಪಿಸುತ್ತೇನೆ. ಪುರಾತನನೂ, ಪ್ರಭುವೂ ಆದ ಎಲ್ಲೆ ಅಗ್ನಿಯೇ, ಯಜ್ಞಮಾಡಲಿಚ್ಛಿಸುವ ಯಜಮಾನನಿಗೆ ನೀನು ಮರಳುಕಾಡಿನಲ್ಲಿ ನೀರನ್ನೊದಗಿಸುವ ಬುಗ್ಗೆಯಂತೆ ಇಷ್ಟಾರ್ಥಗಳನ್ನು ಪೂರೈಸುವವನಾಗಿದ್ದೀಯೆ.

English Translation

To you, Agni, I present the oblation : to you I repeat praise ; that you, who are deserving of laudation, may be present at our invocations : ancient sovereign, Agni, you are like a well in a desert, to the man desirous of offering sacrifice.

॥ ವಿಶೇಷವಿಷಯಗಳು ॥

ಧನ್ವನ್ನಿವ ಪ್ರಪಾ ಅಸಿ—ಯಥಾ ಮರೌ ನಿರುದಕಪ್ರದೇಶೇ ಪ್ರಪಾ ಪ್ರಪಿಬಂತ್ಯತ್ರೇತಿ ಪ್ರಪಾ । ಸಾ ಯಥೋದಕಪ್ರದಾನೇನ ಜನೇಭ್ಯಃ ಸುಖದಾ ಭವತಿ ಏವಂ ತ್ವಂ ಧನದಾನೇನ ತಸ್ಮೈ ಸುಖದಾತಾ

ಭವಸಿ । ಪ್ರಪಾ ಎಂದರೆ ನೀರನ್ನು ಕುಡಿಯಲು ಅನುಕೂಲವಾದ ಜಲಾಶಯ, ಭಾವಿ ಮುಂತಾದುವು. ಜಲರಹಿತವಾದ ಮರಳುಕಾಡಿನಲ್ಲಿ ಸಂಚರಿಸುವ ಪುರುಷನು ಬಾಯಾರಿಕೆಯಿಂದ ಬಳಲ ನೀರನ್ನು ಕುಡಿಯುವುದಕ್ಕೆ ಅನುಕೂಲವಾದ ಭಾವಿ ಮುಂತಾದ ಜಲಾಶಯವು ಸಿಕ್ಕಿದರೆ ಆಗ ಅವನಿಗೆ ಯಾವರೀತಿ ತೃಪ್ತಿಯುಂಟಾಗಿ ಸುಖವಾಗುವುದೋ ಆದರಂತೆ ಎಲೈ ಅಗ್ನಿಯೇ, ನೀನು ಯಜ್ಞಮಾಡುವ ಯಜಮಾನನಿಗೆ ಮರಳುಗಾಡಿನಲ್ಲಿರುವ ಜಲಾಶಯದಂತೆ ಸುಖವನ್ನುಂಟುಮಾಡುವವನಾಗು ಎಂದು ಪ್ರಪಾಶಬ್ದದ ದೃಷ್ಟಾಂತದಿಂದ ಅಗ್ನಿಯ ಗುಣವರ್ಣನೆಮಾಡಿದೆ

। ಸಂಹಿತಾಪಾಠಃ ।

ಯಂ ತ್ವಾ ಜನಾಸೋ ಅಭಿ ಸಂಚರಂತಿ ಗಾವ ಉಷ್ಣಮಿವ ವ್ರಜಂ ಯವಿಷ್ಠ ॥
ದೂತೋ ದೇವಾನಾಮಸಿ ಮರ್ತ್ಯಾನಾಮಂತರ್ಮಹಾಁಶ್ಚರಸಿ ರೋಚನೇನ ॥

। ಪದಪಾಠಃ ।

ಯಂ । ತ್ವಾ । ಜನಾಸಃ । ಅಭಿ । ಸಂ೨ಚರಂತಿ । ಗಾವಃ । ಉಷ್ಣಂ೨ಇವ । ವ್ರಜಂ । ಯವಿಷ್ಠ ॥
ದೂತಃ । ದೇವಾನಾಂ । ಅಸಿ । ಮರ್ತ್ಯಾನಾಂ । ಅಂತಃ । ಮಹಾನ್ । ಚರಸಿ । ರೋಚನೇನ ॥ ೨ ॥

। ಸಾಯಣಭಾಷ್ಯಂ ।

ಹೇ ಯವಿಷ್ಠ ಯುವತಮಾಗ್ನೇ ಯಂ ತ್ವಾ ತ್ವಾಂ ಜನಾಸೋ ಜನಾ ಯಜಮಾನಾಃ ಫಲಪ್ರಾಪ್ತ್ಯರ್ಥಮಭಿ ಸಂಚರಂತಿ ಅಭಿತಃ ಪರಿಚರಂತಿ ಸೇವಂತೇ । ತತ್ರ ದೃಷ್ಟಾಂತಃ । ಗಾವ ಉಷ್ಣಮಿವ ಯಥಾ ಗಾವಃ ಶೀತಾರ್ತಾ ಉಷ್ಣಂ ಶೀತಜನಿತದುಃಖಾಪನೋದನಾರ್ಥಮುಷ್ಣಂ ವ್ರಜಂ ಗೋಷ್ಠಮಭಿ ಗಚ್ಛಂತಿ ತದ್ವತ್ । ಸ ತ್ವಂ ದೇವಾನಾಮಿಂದ್ರಾದೀನಾಂ ಮರ್ತ್ಯಾನಾಂ ಮನುಷ್ಯಾಣಾಂ ಚ ದೂತೋ೨ಸಿ ಹವಿಷ್ಪ್ರಾಪಣದ್ವಾರಾ । ತತೋ ಮಹಾಂಸ್ತ್ವಮಂತರ್ದ್ಯಾವಾಪೃಥಿವ್ಯೋರ್ಮಧ್ಯೇ ಹವೀಂಷ್ಯಾದಾಯ ರೋಚನೇನಾಂತರಿಕ್ಷೇಣ ಲೋಕೇನ ಚರಸಿ । ಗಚ್ಛಸಿ । ತಂ ತ್ವಾಂ ಸ್ತುಮ ಇತಿ ಶೇಷಃ ॥

॥ ಪ್ರತಿಪದಾರ್ಥ ॥

ಯವಿಷ್ಠ—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ಗಾವಃ**—(ಶೈತ್ಯದಿಂದ ಹಿಂಸಿತವಾದ) ಗೋವುಗಳು । **ಉಷ್ಣಂ**—ಶಾಖದಿಂದ ಕೂಡಿದ । **ವ್ರಜಂ ಇವ**—ಕೊಟ್ಟಿಗೆಯನ್ನು ಆಶ್ರಯಿಸುವಂತೆ । **ಯಂ ತ್ವಾ**—ಪ್ರಸಿದ್ಧನಾದ ನಿನ್ನನ್ನು । **ಜನಾಸಃ**—ಯಜಮಾನರು । **ಅಭಿ ಸಂಚರಂತಿ**—ಸುತ್ತಲೂ ಸೇವಿಸುತ್ತಾರೆ । **ತ್ವಂ**—ನೀನು । **ದೇವಾನಾಂ**—ಇಂದ್ರಾದಿ ದೇವತೆಗಳಿಗೂ । **ಮರ್ತ್ಯಾನಾಂ**—ಮಾನವರಿಗೂ । **ದೂತಃ ಅಸಿ**—ದೂತನಾಗಿದ್ದೀಯೆ । **ಮಹಾನ್**—ಮಹಾತ್ಮನಾದ ನೀನು । **ಅಂತಃ**—ದ್ಯಾವಾಪೃಥಿವಿಗಳ ನಡುವೆ । **ರೋಚನೇನ**—ಪ್ರಭಾಯುತವಾದ ಲೋಕದಿಂದ । **ಚರಸಿ**—ಸಂಚರಿಸುತ್ತೀಯೆ ।

॥ ಭಾವಾರ್ಥ ॥

ಅತ್ಯಂತ ಯುವಕನಾದ ಎಲೈ ಅಗ್ನಿಯೇ, ಶೈತ್ಯದಿಂದ ಒಂಸಿತವಾದ ಗೋವುಗಳು ಶಾಖದಿಂದ ಕೂಡಿದ ಕೊಟ್ಟಿಗೆಯನ್ನು ಆಶ್ರಯಿಸುವಂತೆ ಪ್ರಸಿದ್ಧರಾದ ಯಜಮಾನರು ಸುತ್ತಲೂ ನಿನ್ನನ್ನೇ ಸೇವಿಸಿ ಆಶ್ರಯಿಸುತ್ತಾರೆ ನೀನು ದೇವಮಾನವಾದಿಗಳಿಗೆಲ್ಲ ದೂತನಾಗಿದ್ದೀಯೆ. ಮಹಾತ್ಮನಾದ ನೀನು ದ್ಯಾವಾಪೃಥಿವಿಗಳ ನಡುವೆ ಪ್ರಭಾಯುತವಾದ ಲೋಕದಿಂದ ಸಂಚರಿಸುತ್ತೀಯೆ.

English Translation

Men have recourse to you, Agni, youngest (of the gods), as cattle hasten to the warm stall You are the messenger of the gods and of the mortals ; mighty, you proceed by the firmament between (heaven and earth).

॥ ವಿಶೇಷವಿಷಯಗಳು ॥

ಯಾಸ್ಕರು **ವಾಹಿಷ್ಕೃತಿಃ** ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾ ಈ ಋಕ್ಕಿನಲ್ಲಿರುವ **ದೂತೋ ದೇವಾನಾಮಸಿ ಮರ್ತ್ಯಾನಾಂ** ಎಂಬ ಮೂರನೆಯ ಪಾದವನ್ನು ಉದಾಹರಣೆಗಾಗಿ ಕೊಟ್ಟಿದ್ದಾರೆ **ವಾಹಿಷ್ಕೃತಿಃ** ಎಂದರೆ **ವೋಢೃತಮಃ ದೂತಃ** (ನಿ. ೫-೧) ಎಂದರ್ಥಮಾಡಿದಾರೆ ಯಜಮಾನರು ಮಾಡುವ ಯಜ್ಞಗಳಲ್ಲಿ ದೇವತೆಗಳನ್ನು ಉದ್ದೇಶಿಸಿ ಅಗ್ನಿಯಲ್ಲಿ ಹೋಮಮಾಡುವ ಹವಿಸ್ಸನ್ನು ಸ್ವರ್ಗದಲ್ಲಿರುವ ದೇವತೆಗಳ ಬಳಿಗೆ ಒಯ್ದು ಅವರಿಗೆ ತಲುಪಿಸುವುದರಿಂದ ಅಗ್ನಿಯು ಯಜಮಾನರಿಗೂ, ದೇವತೆಗಳಿಗೂ ಮಧ್ಯ ಇರುವ ದೂತನೆಂದು ಹೇಳಲ್ಪಡುವನು ಎಂದು ಅರ್ಥನಿರ್ಣಯ ಮಾಡಿದಾರೆ. ಒಬ್ಬ ಮನುಷ್ಯನಿಂದ ಮತ್ತೊಬ್ಬನ ಬಳಿಗೆ ಮಾತನ್ನಾಗಲಿ, ಇತರ ವಸ್ತುವನ್ನಾಗಲಿ ಒಯ್ದು ತಲುಪಿಸುವ ಪುರುಷನಿಗೆ ದೂತನೆಂದು ಹೆಸರು. ಅಗ್ನಿಯು ಇಲ್ಲಿ ಆ ಕಾರ್ಯವನ್ನು ಮಾಡುತ್ತಿರುವುದರಿಂದ ಅಗ್ನಿಯನ್ನು ಈ ಋಕ್ಕಿನಲ್ಲಿ ದೂತನೆಂದು ವರ್ಣಿಸಲಾಗಿದೆ. **ದೂತೋ ದೇವಾನಾಮಸಿ ಮರ್ತ್ಯಾನಾಂ** ಎಂಬ ಶಬ್ದಗಳಿಗೆ ಮನುಷ್ಯರ ಹವಿರಾದಿಗಳನ್ನು ದೇವತೆಗಳ ಬಳಿಗೆ ಒಯ್ಯುವ ದೂತನು ಎಂದು ಈ ವಾಕ್ಯದ ಅರ್ಥವು. ಇನ್ನು ದೂತನೆಂಬ ಶಬ್ದಕ್ಕೆ ಯಾಸ್ಕರು **ದೂತೋ ಜವತೇರ್ವಾ ದ್ರವತೇರ್ವಾ ವಾರಯತೇರ್ವಾ** ಎಂದು ನಿರ್ವಚನವನ್ನು ಹೇಳಿದ್ದಾರೆ ಎಂದರೆ ದೂತಶಬ್ದವು ತ್ವರಿತಗೊಳಿಸು ಎಂಬರ್ಥವುಳ್ಳ **ಜು** ಧಾತುವಿನಿಂದಾಗಲಿ, ಓಡು ಎಂಬರ್ಥವುಳ್ಳ **ದ್ರು** ಧಾತುವಿನಿಂದಾಗಲಿ, ಅಥವಾ ಹಿಂದಿರುಗು ಎಂಬರ್ಥವುಳ್ಳ **ವೃ** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ದೂತನಾದವನು ತಾನು ಹೋಗುವ ಪ್ರದೇಶಕ್ಕೆ ತ್ವರಿತಗತಿಯಿಂದ ಎಂದರೆ ಬೇಗನೆ ಓಡುತ್ತಾ ಹೋಗಿ ಸೇರುವುದರಿಂದ ಮೇಲೆ ಹೇಳಿದ ಧಾತುಗಳಿಂದ ದೂತಶಬ್ದವು ನಿಷ್ಪನ್ನವಾಗಿದೆ ಎಂದಭಿಪ್ರಾಯವು

ಗಾವಃ ಉಷ್ಣಮಿವ ವ್ರಜಂ (ಸಂಚರಂತಿ)—ಹಿಂದಿನ ಋಕ್ಕಿನಲ್ಲಿ ಅಗ್ನಿಯನ್ನು ಮರಳುಗಾಡಿನಲ್ಲಿರುವ ಜಲಾಶಯಕ್ಕೆ ಹೋಲಿಸಿ ಈ ಋಕ್ಕಿನಲ್ಲಿ ಗೋವುಗಳನ್ನು ಕಟ್ಟುವ ಕೊಟ್ಟಿಗೆಗೆ ಹೋಲಿಸಿದೆ. ಚಳಿಗಾಲದಲ್ಲಿ ಏಪುಮೈಕೊರೆತದಿಂದ ಹೊರಗೆ ಮೇಯುತ್ತಿದ್ದ ಗೋವುಗಳು ಸಾಯಂಕಾಲದಲ್ಲಿ ಆಚ್ಛಾದನಾದಿಗಳಿಂದ ಕೂಡಿ ಶೀತವಾಯು ಸ್ಪರ್ಶವಿಲ್ಲದೆ ಬೆಚ್ಚಗಿರುವ ಕೊಟ್ಟಿಗೆಗಳಿಗೆ ಯಾವರೀತಿ ಸಂತೋಷದಿಂದ ಪ್ರವೇಶಿಸುತ್ತವೆಯೋ ಅದರಂತೆ ಜನರು ಅಗ್ನಿಯಾದ ನಿನ್ನನ್ನು ಸುಖಾರ್ಥವಾಗಿ ಸೇವಿಸುತ್ತಾರೆ ಎಂದು ದೃಷ್ಟಾಂತದ ಅಭಿಪ್ರಾಯವು.

॥ संहितापाठः ॥

शिशुं न त्वा जेन्यं वर्धयन्ती मातां बिभर्ति सचनस्यमाना ।

धनोरधि प्रवतां यासि हर्यन्जिगीषसे पशुरिवावसृष्टः ॥

॥ पदपाठः ॥

शिशुं । न । त्वा । जेन्यं । वर्धयन्ती । माता । बिभर्ति । सचनस्यमाना ।

धनोः । अधि । प्रऽवतां । यासि । हर्यन् । जिगीषसे । पशुःऽइव । अवऽसृष्टः ॥ ४ ॥

॥ सायणभाष्यं ॥

हे अग्ने जेन्यं जयशीलं त्वा त्वां शिशुं न पुत्रमिव वर्धयन्ती पोषयन्ती माता पृथिवी सचनस्यमाना संपर्कमिच्छन्ती सती बिभर्ति । धारयति । स त्वं हर्यन् कामयमानस्तस्मिँल्लोके धनोरधि । अधिः सप्तम्यर्थद्योतकः । अन्तरिक्षात्प्रवतां प्रवणेन वर्गेण यासि । यज्ञं प्रत्यागच्छसि । किंच त्वमवसृष्टो यस्मृभिर्ऋविरादाय जिगीषसे । देवान्प्रति गन्तुमिच्छसि । कथमिव । पशुरिव यथा विमुक्तः पशुर्गोष्ठं प्रत्यागच्छति तद्वत् ॥

॥ प्रतिपदार्थ ॥

(एतै अग्नियै) **जेन्यं**—जयशीलनाद । **त्वा**—निन्नन्नु । **शिशुं न वर्धयन्ती**—पुत्रनंत पोषिसुत्त (पुत्रनन्नु पोषिसुवंते) । **माता**—पृथ्वियु । **सचनस्यमाना**—निन्न संपर्कवन्नपेक्षिसुत्त । **बिभर्ति**—निन्नन्नु भरिसुत्ताळे । **हर्यन्**—य्ज्ञान्नपेक्षियाद नीनु । **धनोरधि**—अंतरिक्षदिंद । **प्रवता**—अधोनमुखवागि बरुव मार्गदिंद । **यासि**—यज्ञाभिमुखवागि बरुत्तीये । **अवसृष्टः**—निन्न हविस्सन्नु पडेदनंतर । **पशुः इव**—पोल्लन्नु मेद पशुवु पुनः कोट्टिगेगे होगिसुवंते । **जिगीषसे**—पुनः देवतेगळन्नु सेरलु अपेक्षिसुत्तीये.

॥ भावार्थ ॥

एलै अग्नियेः, पुत्रनन्नु मातेयु पोषिसुवंते जयशीलनाद निन्न संपर्कवन्नपेक्षिसुव पृथ्वियु निन्नन्नु भरिसुत्ताळे. यज्ञान्नपेक्षियाद नीनु अंतरिक्षदिंद अधोमुखवागि बरुव मार्गदिंद यज्ञाभिमुखवागि बरुत्तीये. निन्न हविस्सन्नु पडेद नंतर, हुल्लन्नु मेद पशुवु पुनः कोट्टिगेगे होगि सेरुवंते पुनः देवतगळन्नु सेरलु अपेक्षिसुत्तीये.

English Translation

Cherishing you, (Agni), the victorious, like a child, your mother (earth) desirous of your contact sustains you. You come, eager from above the firmament, by a downward path, and when released (after the oblation is offered), you desire to go back like cattle (to their stall).

॥ ಸಂಹಿತಾಪಾಠಃ ॥

ಮೂರಾ ಅಮೂರ ನ ವಯಂ ಚಿಕಿತ್ವೋ ಮಹಿತ್ವಮಗ್ನೇ ತ್ವಮಂಗ ವಿತ್ಸೇ ॥

ಶಯೇ ವವ್ರಿಶ್ಚರತಿ ಜಿಹ್ವಯಾದನ್ರೇರಿಹ್ಯತೇ ಯುವತಿಂ ವಿಶ್ಪತಿಃ ಸನ್ ॥ ೪ ॥

॥ ಪದಪಾಠಃ ॥

ಮೂರಾಃ । ಅಮೂರ । ನ । ವಯಂ । ಚಿಕಿತ್ವಃ । ಮಹಿತ್ವಂ । ಅಗ್ನೇ । ತ್ವಂ । ಅಂಗ । ವಿತ್ಸೇ ॥

ಶಯೇ । ವವ್ರಿಃ । ಚರತಿ । ಜಿಹ್ವಯಾ । ಅದನ್ । ರೇರಿಹ್ಯತೇ । ಯುವತಿಂ । ವಿಶ್ಪತಿಃ । ಸನ್ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಮೂರಾಮೂಢ ಅತ ಏವ ಚಿಕಿತ್ವಶ್ಚೇತನವನ್ ಹೇ ಅಗ್ನೇ ಮೂರಾ ಮೂಢಾ ವಯಂ ತವ ಮಹಾತ್ಮ್ಯಂ ನ ಜಾನೀಮಃ । ಕಂತು ಹೇ ಅಗ್ನೇ ತ್ವಮಂಗ । ಅಂಗೇತಿ ನಿಪಾತ ಏವಾರ್ಥೇ । ತ್ವಮೇವ ತವ ಮಹಿತ್ವಂ ಮಾಹಾತ್ಮ್ಯಂ ವಿತ್ಸೇ । ಜಾನಾಸಿ । ತ್ವತ್ತಃ ಕೋಽನ್ಯೋ ವೇದಿತುಮರ್ಹತಿ । ಕಂಚ ವವ್ರಿರ್ವರ್ಣಃ ಏಷಧೀಸಂಗತಃ ಶಯೇ । ಶೇತೇ । ತಿಷ್ಠತಿ । ಯದ್ವಾ । ವವ್ರಿರಿತಿ ರೂಪನಾಮ ಸಾಮರ್ಥ್ಯಾಚ್ಚಾಂತರ್ಹಿತಮತ್ಯರ್ಥಂ ದ್ರಷ್ಟವ್ಯಂ । ಆಹವನೀಯಾಖ್ಯೇನ ರೂಪೇಣ ರೂಪವಾನ್ಭೂಯೇ । ಚರತಿ । ಅಥ ಜಿಹ್ವಯಾ ಜ್ವಾಲಾಖ್ಯಯಾದನ್ಹವೀಂಷಿ ಭಕ್ಷಯಂಶ್ಚರತಿ ॥ ವಾಕ್ಯಭೇದಾದನಿಘಾತಃ ॥ ಕಂ ತ ವಿಶ್ಪತಿರ್ವಿಶಾಂ ಸ್ವಾಮೀ ಸನ್ನಗ್ನಿರ್ಯುವತಿಮಾತ್ಮನೋ ಮಿಶ್ರಯಿತ್ರೀಮಾಹುತಿಂ ದೀರ್ಘಪ್ರಸೃತಯಾ ಜ್ವಾಲಯಾ ಜಿಹ್ವಯಾ ರೇರಿಹ್ಯತೇ । ಅತ್ಯರ್ಥಂ ಲೇಢಿ । ಆಸ್ವಾದಯತಿ ॥ ಲಿಹ ಆಸ್ವಾದನೇ । ಯದ್ವಾ ರೂಪಂ ॥ ಯದ್ವಾ ಸೋಽಗ್ನಿರ್ಯುವತಿಂ ತರುಣೀಂ ಜೀರ್ಣೌಷಧಿಕಾಂ ಪೃಥಿವೀಮಾಸ್ವಾದಯತಿ ॥

॥ ಪ್ರತಿಪದಾರ್ಥ ॥

ಅಮೂರ—ಸೌಂದರ್ಯರಹಿತನೂ । ಚಿಕಿತ್ವಃ—ಉತ್ತಮವಾದ ಜ್ಞಾನವುಳ್ಳವನೂ ಆದ ಎಲೈ ಅಗ್ನಿಯೇ । ಮೂರಾಃ—ಮೂಢರಾದ । ವಯಂ—ನಾವು । ನ—ನಿನ್ನ ಮಹಾತ್ಮ್ಯವನ್ನರಿಯೆವು । ಅಗ್ನೇ—ಎಲೈ ಅಗ್ನಿಯೇ ।

ತ್ವಂ ಅಂಗ- -ನೀನು ಮಾತ್ರ । **ಮಹಿತ್ವಂ**—ನಿನ್ನ ಮಹಾತ್ಮ್ಯವನ್ನು । **ವಿತ್ಸೇ**—ಅರಿತ್ತಿದ್ದೀಯೇ । **ವಧ್ರಿಃ**—ಅ ಹವನೀಯಾಗ್ನಿರೂಪವನ್ನು ಧರಿಸಿ । **ಶಯೇ**—ಸ್ಥಿತನಾಗಿದ್ದೀಯೇ । **ಜಿಹ್ವಯಾ**—ನಾಲಿಗೆಯಿಂದ । **ಅದನ್**—ಹವಿಸ್ಸನ್ನು ಭಕ್ಷಿಸುತ್ತ । **ಚರತಿ**—ಅಗ್ನಿಯು ಸಂಚರಿಸುತ್ತಾನೆ । **ವಿಶ್ಪತಿಃ ಸನ್**—ಪ್ರಜಾಪಾಲಕನಾಗಿದ್ದುಕೊಂಡು । **ಯುವತಿಂ**—ತನ್ನೊಡನೆ ಸೇರುವ ಆಹುತಿಯನ್ನು । **ರೇರಿಹ್ಯತೇ**—ನೆಕ್ಕಿ ರುಚಿನೋಡುತ್ತಾನೆ ।

॥ ಭಾವಾರ್ಥ ॥

ಪೌಢ್ಯರಹಿತನೂ, ಉತ್ತಮವಾದ ಜ್ಞಾನವುಳ್ಳವನೂ ಆದ ಎಲೈ ಅಗ್ನಿಯೇ, ಮೂಢರಾದ ನಾವು ನಿನ್ನ ಮಹಾತ್ಮೆಯನ್ನು ಅರಿಯಲಾರೆವು. ನೀನು ಮಾತ್ರ ಅದನ್ನು ಅರಿತಿದ್ದೀಯೆ. ನಾಲಿಗೆಯಿಂದ ಹವಿಸ್ಸನ್ನು ಭಕ್ಷಿಸುತ್ತ ಅಗ್ನಿಯು ಸಂಚರಿಸುತ್ತಾನೆ ಪ್ರಜಾಪಾಲಕನಾಗಿದ್ದುಕೊಂಡು ತನ್ನೊಡನೆ ಸೇರುವ ಆಹುತಿಯನ್ನು ನೆಕ್ಕಿ ರುಚಿಯನ್ನು ನೋಡುತ್ತಾನೆ.

English Translation

We, who are perplexed, know not, O unperplexed, intelligent one, your greatness but you. Agni, verily know it. Wearing a form he reposes ; he moves about devouring (the offering) with his tongue (of flame) ; being lord of men, he licks up the mixed oblation

॥ ವಿಶೇಷವಿಷಯಗಳು ॥

ಅಮೂರಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾ ಯಾಸ್ಕರು—**ಮೂರಾ ಅಮೂರ ನ ವಯಂ ಚಿಕಿತ್ವೋ ಮಹಿತ್ವಮಗ್ನೇ ತ್ವಮಂಗ ವಿತ್ಸೇ** ಎಂಬ ವಾಕ್ಯಕ್ಕೆ **ಅಮೂರಃ। ಮೂಢಾ ವಯಂ ಸ್ಮೋ೬ಮೂಢಸ್ತ್ವಮಸಿ ನ ವಯಂ ವಿದ್ಮೋ ಮಹತ್ತ್ವಮಗ್ನೇ ತ್ವಂ ತು ವೇತ್ಥ ।**

(ನಿ. ೬-೮)

ಎಂದು ಅರ್ಥ ವಿವರಣೆಮಾಡಿದಾರೆ. ಮೂರ ಎಂದರೆ ಮೂಢ, ಅಮೂರ ಎಂದರೆ ಮೂಢನಲ್ಲದವನು, ವಿವೇಕಿಯು, ಬುದ್ಧಿವಂತನು ಎಂದರ್ಥವು ಪ್ರಕೃತವಾಕ್ಯದಲ್ಲಿ-ಮೂಢನಲ್ಲದ ಎಂದರೆ ವಿವೇಕಿಯಾವ ಎಲೈ ಅಗ್ನಿಯೇ, ಮೂಢರಾದ, ಎಂದರೆ ನಿರ್ವಿಚಾರಣಾಶಕ್ತಿರಹಿತರಾದ ನಾವು ನಿನ್ನ ಮಾಹಾತ್ಮ್ಯವನ್ನು ತಿಳಿಯಲಾರೆವು, ಆದರೆ ನೀನು ಮಾತ್ರ ತಿಳಿದಿರುವೆ ಎಂದು ನಿರ್ವಚನದ ಅಭಿಪ್ರಾಯವು.

ಜಿಹ್ವಯಾ ಅದನ್ ರೇರಿಹ್ಯತೇ ಯುವತಿಂ ವಿಶ್ಪತಿಃ ಸನ್—ಈ ವಾಕ್ಯದಲ್ಲಿ ಅಗ್ನಿಯ ಜಿಹ್ವೆ ಅಥವಾ ನಾಲಗೆಗಳೆಂದರೆ ಜ್ವಾಲೆಯು. ರೇರಿಹ್ಯತೇ ಎಂಬ ಪದದಲ್ಲಿರುವ ರಕಾರಕ್ಕೆಲಕಾರವು ಆದೇಶವಾಗಿ ಬರುವುದು ಎಂದರೆ ಲೇಲಿಹ್ಯತೇ ಎಂದಾಗುವುದು, ನೆಕ್ಕುವನು ಎಂದರ್ಥವು. ಋಗ್ವೇದದಲ್ಲಿ ಅನೇಕಕಡೆ ಲಕಾರಕ್ಕೆ ಬದಲಾಗಿ ರಕಾರವನ್ನು ಉಪಯೋಗಿಸುವ ರೂಢಿ ಇದೆ. ಉದಾಹರಣೆಗೆ ಲಘು ಎಂಬ ಶಬ್ದಕ್ಕೆ ಬದಲಾಗಿ ರಘು ಎಂಬ ಶಬ್ದವನ್ನು ಉಪಯೋಗಿಸಲಾಗಿದೆ. ಯುವತಿ ಶಬ್ದಕ್ಕೆ— **ಯು ಮಿಶ್ರಣೇ** ಎಂಬ ಧಾತುವಿಗೆ ಮಿಶ್ರಮಾಡು ಎಂದರ್ಥವಿರುವುದರಿಂದ ಆ ಧಾತುವಿನಿಂದ ನಿಷ್ಪನ್ನವಾದ ಯುವತಿಶಬ್ದಕ್ಕೆ ಆಜ್ಯ ಮೊದಲಾದ ವಸ್ತುಗಳೊಡನೆ ಮಿಶ್ರಮಾಡಿದ ಹವಿಸ್ಸು ಎಂದರ್ಥವು. ಆದ್ದರಿಂದ ಈ ವಾಕ್ಯಕ್ಕೆ-ಎಲೈ ಅಗ್ನಿಯೇ, ನೀನು ಸಕಲರಿಗೂ ಸ್ವಾಮಿಯಾಗಿ, ನಿನ್ನ ಜಿಹ್ವೆಯಂತಿರುವ ಜ್ವಾಲೆಯಿಂದ ಆಜ್ಯಮಿಶ್ರಿತವಾದ ಹವಿಸ್ಸನ್ನು ನೆಕ್ಕುತ್ತಾ ಭಕ್ಷಿಸುತ್ತಿರುವೆ ಎಂಬರ್ಥವು ಸೂಚಿತವಾಗಿರುವುದು

॥ ಸಂಹಿತಾಪಾಠಃ ॥

ಕೂಚಿಜ್ಜಾಯತೇ ಸನಯಾಸು ನವ್ಯೋ ವನೇ ತಸ್ಥೌ ಪಲಿತೋ ಧೂಮ-
ಕೇತುಃ ॥
ಅಸ್ನಾತಾಪೋ ವೃಷಭೋ ನ ಪ್ರ ವೇತಿ ಸಚೇತಸೋ ಯಂ ಪ್ರಣಯಂತ
ಮರ್ತಾಃ ॥ ೫ ॥

॥ ಪದಪಾಠಃ ॥

ಕೂ೭ಚಿತ್ । ಜಾಯತೇ । ಸನಯಾಸು । ನವ್ಯಃ । ವನೇ । ತಸ್ಥೌ । ಪಲಿತಃ । ಧೂಮ೭ಕೇತುಃ ॥
ಅಸ್ನಾತಾ । ಅಪಃ । ವೃಷಭಃ । ನ । ಪ್ರ । ವೇತಿ । ಸ೭ಚೇತಸಃ । ಯಂ । ಪ್ರ೭ಣಯಂತ । ಮರ್ತಾಃ ॥ ೫ ॥

॥ ಸಾಯಣಭಾಷ್ಯಂ ॥

ನವ್ಯೋ ನವತರಃ ಸ್ತುತ್ಯೋ ವಾಗ್ನಿಃ ಕೂಚಿತ್ ಕ್ವಚಿತ್ಪ್ರದೇಶೇ ಜಾಯತೇ । ಕುತ್ರ । ಸನಯಾಸು ಪುರಾಣೇಷು ಜೀರ್ಣಾಸ್ವೋಷಧೀಷ್ವರಣ್ಯೋಃ । ತಥಾ ಪಲಿತಃ ಪಾಲಯಿತಾ ಶ್ವೇತವರ್ಣೋ ಧೂಮಕೇತುರ್ಧೂಮಪ್ರಜ್ಞಾನೋ೭ಗ್ನಿರ್ವನೇ ಸರ್ವಸ್ಮಿನ್ನರಣ್ಯೇ ತಸ್ಥೌ । ತಿಷ್ಠತಿ । ಯದ್ವಾ । ವನೇ ಉದಕೇ ಮೇಘಗತೇ ವಿದ್ಯುದಾತ್ಮನಾ ತಿಷ್ಠತಿ ಚ । ಅಸ್ನಾತಾ ಸ್ನಾನಮಕುರ್ವನ್ನನಪೇಕ್ಷಿತಸ್ನಾನಃ ಸರ್ವದಾಶುದ್ಧಃ ಸೋ೭ಗ್ನಿರಾಪಃ ॥ ಸುಬ್ಲೋಪೇತಿ ಯಜಃ ॥ ಅಪ ಉದಕಾನಿ ಶಾಂತ್ಯರ್ಥಂ ಪ್ರ ಏತಿ । ಪ್ರಗಚ್ಛತಿ । ತತ್ರ ದೃಷ್ಟಾಂತಃ । ವೃಷಭೋ ನ ಯಥಾ ವೃಷಭಸ್ತೃಷ್ಣೋಪಶಮನಾರ್ಥಮರಣ್ಯಮಧ್ಯಸ್ಥಾನ್ಯುದಕಾನಿ ಪ್ರಗಚ್ಛತಿ ತದ್ವತ್ । ಮರ್ತಾ ಮನುಷ್ಯಾ ಋತ್ವಿಜಃ ಸಚೇತಸಃ ಸಮಾನಮನಸ್ಕಾ ಸಮಾನ-
ಪ್ರಜ್ಞಾನಾಃ ಸಂತೋ ಯಮಗ್ನಿಂ ಪ್ರಣಯಂತ ಹವಿರ್ಭಿಃ ಪ್ರೀಣಯಂತಿ ॥

॥ ಪ್ರತಿಪದಾರ್ಥಃ ॥

ನವ್ಯಃ—ನೂತನನಾದ ಅಗ್ನಿಯು । **ಕೂಚಿತ್**—ಯಾವ ಪ್ರದೇಶದಲ್ಲಿ । **ಜಾಯತೇ**—ಉತ್ಪನ್ನನಾಗುತ್ತಾನೆ ? । **ವನೇ**—ವನದಲ್ಲಿ । **ಸನಯಾಸು**—ಅರಣಿಗಳ ನಡುವೆ । **ಪಲಿತಃ**—ಶ್ವೇತವರ್ಣವುಳ್ಳವನೂ । **ಧೂಮಕೇತುಃ**—ಧೂಮವೇ ಧ್ವಜವಾಗಿ ಉಳ್ಳವನೂ ಆದ ಅಗ್ನಿಯು । **ತಸ್ಥೌ**—ಸ್ಥಿತನಾಗಿದ್ದಾನೆ । **ಅಸ್ನಾತಾ**—ಸ್ನಾನವನ್ನಪೇಕ್ಷಿಸದೆ (ಶುದ್ಧನಾಗಿ) **ವೃಷಭೋ ಅಪಃ ನ**—ವೃಷಭವು ನೀರನ್ನು ಆಶ್ರಯಿಸುವಂತೆ । **ಪ್ರ ವೇತಿ**—ಅಗ್ನಿಯೂ ಉದಕವನ್ನಾಶ್ರಯಿಸುತ್ತಾನೆ । **ಮರ್ತಾಃ**—ಋತ್ವಿಕ್ಕುಗಳು । **ಸಚೇತಸಃ**—ಒಂದೇ ಮನಸ್ಸುಳ್ಳವರಾಗಿ । **ಯಂ**—ಅವೇ ಅಗ್ನಿಯನ್ನು । **ಪ್ರಣಯಂತ**—ಪ್ರೀತಿಗೊಳಿಸುತ್ತಾರೆ ।

॥ ಭಾವಾರ್ಥ ॥

ಸೂತನನಾದ ಅಗ್ನಿಯು ಯಾವ ಪ್ರದೇಶದಲ್ಲಿ ಉತ್ಪನ್ನನಾಗುತ್ತಾನೆ? ವನದಲ್ಲಿ ಅರಣಿಗಳ ನಡುವೆ ಶ್ವೇತ ವರ್ಣವುಳ್ಳವನೂ ಧೂಮವೇ ಧ್ವಜವಾಗಿಉಳ್ಳವನೂ ಆದ ಅಗ್ನಿಯು ಸ್ಥಿತನಾಗಿದ್ದಾನೆ. ಪರಿಶುದ್ಧನಾದರೂ ಸಹ, ವೃಷಭವು ಉದಕವನ್ನು ಆಶ್ರಯಿಸುವಂತೆ ಅಗ್ನಿಯೂ ಉದಕವನ್ನಾಶ್ರಯಿಸುತ್ತಾನೆ. ಋತ್ವಿಕ್ಕುಗಳು ಒಂದೇ ಮನಸ್ಸುಳ್ಳವರಾಗಿ ಅಗ್ನಿಯನ್ನು ಪ್ರೀತಿಗೊಳಿಸುತ್ತಾರೆ.

English Translation

Where is the new (Agni) born ? he is present in the old (plants) and in the wood, grey-haired, smoke-bannered : though not needing ablution, he hastens to the water like a (thirsty) bull, he whom men with one consent propitiate

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಋಷಿಯು, ಅಗ್ನಿಯು ಯಾವಪ್ರದೇಶದಲ್ಲಿ ಉತ್ಪನ್ನನಾಗುತ್ತಾನ " ಎಂದು ಪ್ರಶ್ನೆಮಾಡಿ ಅದಕ್ಕೆ ಉತ್ತರವನ್ನೂ ತಾನೇ ಹೇಳಿದ್ದಾನೆ. ಹೇಗೆಂದರೆ—ವನದಲ್ಲಿ ಉತ್ಪನ್ನವಾಗುವ ಜೀರ್ಣವಾದ ವೃಕ್ಷಗಳಿಂದ ಎಂದರೆ ಮರದಿಂದ ಮಾಡಿದ ಅರಣಿಗಳಲ್ಲಿ ಕಡೆಯುವುದರಿಂದ ಅಗ್ನಿಯು ಉತ್ಪನ್ನನಾಗುತ್ತಾನೆ. ಹಾಗೆಯೇ ಅರಣ್ಯದಲ್ಲಿಯೂ ವೃಕ್ಷಗಳ ಸಂಘರ್ಷಣದಿಂದ ದಾವಾಗ್ನಿರೂಪದಲ್ಲಿ ಉತ್ಪನ್ನನಾಗುತ್ತಾನೆ. ಇದಲ್ಲದೆ ವನಶಬ್ದಕ್ಕೆ ಉದಕ ಎಂದೂ ಅರ್ಥವಿರುವುದರಿಂದ ಮೇಘಗಳ ಮಧ್ಯದಲ್ಲಿರುವ ಉದಕಗಳಲ್ಲಿ ವಿದ್ಯುದ್ರೂಪದಿಂದ (ಮಿಂಚು) ಲೂ ಉತ್ಪನ್ನನಾಗುತ್ತಾನೆ ಎಂದು ಮೂರುವಿಧವಾದ ಅಗ್ನಿಯ ಉತ್ಪತ್ತಿಸ್ಥಾನವನ್ನು ವರ್ಣಿಸಿದ್ದಾನೆ.

ಅಸ್ನಾತಾ ಅಹ: ವೃಷಭೋ ನ—ಈ ಅಗ್ನಿಯು ಯಾವಾಗಲೂ ಶುದ್ಧನಾಗಿಯೇ ಇರುವುದರಿಂದ ಇವನಿಗೆ ಮಲಾಪಹಾರಾರ್ಥವಾಗಿ ಸ್ನಾನದ ಅವಶ್ಯಕತೆ ಇರುವುದಿಲ್ಲ ಇಷ್ಟೇ ಅಲ್ಲ. ಈ ಅಗ್ನಿಯೇ ಇತರ ವಸ್ತುಗಳನ್ನು ಎಂದರೆ ಲೋಹಾದಿಗಳನ್ನು ತನ್ನ ಸ್ಪರ್ಶದಿಂದ ಶುದ್ಧಿಗೊಳಿಸುತ್ತಾನೆ ಆದರೂ ಅಗ್ನಿಯು ನೀರಿನಲ್ಲಿ ವಾಸಮಾಡುವನೆಂದು ಪ್ರತೀತಿಇರುವುದು ಎಂದರೆ ವನದಲ್ಲಿರುವ ಮದಿಸಿದ ವೃಷಭವು ತನಗೆ ಸ್ನಾನಾಪೇಕ್ಷೆಯಿಲ್ಲದ್ದಿದ್ದರೂ ಬಸಲಿನ ತಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಜಲವನ್ನು ಪ್ರವೇಶಿಸುವಂತ ಈ ಅಗ್ನಿಯು ತಾನು ಸ್ನಾನದ ಅವಶ್ಯಕತ ಇಲ್ಲದೆ ಸ್ವತ: ಶುದ್ಧನಾಗಿದ್ದರೂ ತನಗೆ ಇಷ್ಟಬಂದಾಗ ನೀರನ್ನು ಪ್ರವೇಶಿಸಿ ಅಲ್ಲಿರುವನೆಂದು ಋಷಿಯು ವರ್ಣಿಸಿದ್ದಾನೆ.

॥ ಸಂಹಿತಾಪಾಠ: ॥

ತನೂತೃಜೇವ ತಸ್ಕರಾ ವನರ್ಗೂ ರಶನಾಭಿರ್ದಶಭಿರಭ್ಯಧೀತಾಂ ॥

ಇಯಂ ತೇ ಅಗ್ನೇ ನವ್ಯಸೀ ಮನೀಷಾ ಯುಕ್ಷ್ವಾ ರಥಂ ನ ಶುಚಯದ್ವಿ-

ರಂಗ್ಯೇ: ॥ ೬ ॥

॥ ಪದಪಾಠಃ ॥

ತನೂತ್ಯಜೇವ । ತಸ್ಕರಾ । ವನಗರ್ಯೂ ಇತಿ । ರಶನಾಭಿಃ । ದಶಭಿಃ । ಅಭಿ । ಅಧೀತಾಂ ॥

ಇಯಂ । ತೇ । ಅಗ್ನೇ । ನವ್ಯಸೀ । ಮನೀಷಾ । ಯುಕ್ಷ್ವ । ರಥಂ । ನ । ಶುಚಯದ್ಭಿಃ । ಅಂಗ್ಯೈಃ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ವನಗರ್ಯೂ ವನಗಾಮಿನೌ ತನೂತ್ಯಜೌ ಚೌರ್ಯೇ ಮರ್ತುಂ ಕೃತನಿಶ್ಚಯೌ ಧೃಷ್ಣೂ ತಸ್ಕರೌ ತಸ್ಕರೌ ಯಥಾ ಪಥಿಕಂ ಮೋಷಣಾರ್ಥಂ ರಜ್ವಾ ಬದ್ಧ್ವಾ ಕೃಷ್ಯ ಚ ಕ್ವಚಿತ್ಪ್ರದೇಶೇ ಸ್ಥಾಪಯತೋ ತಪ್ಸತ್ । ತಥಾ ಯೌ ಸ್ಯಃ । ತನೂತ್ಯಕ್ ತನೂತ್ಯಕ್ತಾ ವನಗರ್ಯೂ ವನಗಾಮಿನಾವಗ್ನಿಮಂಥನೌ ಬಾಹೂ ತಸ್ಕರಾಭ್ಯಾಮುಪಮಿಮೀತೇ । ನಿ. ೩-೧೪ । ಇತ್ಯಾದಿ । ಅಧೀತಾಂ ದಧಾತೇರ್ಲುಙಿ ಸಿಚೋ ಲುಕಿ ಛುದಸ್ಮುಭಯಥೇತಿ ತಸ ಆರ್ಧಧಾ ತುಕಶ್ಚೇನ ಜಾತ್ವಾದ್ಧ್ವಮಾಸ್ಥೇತೀಕಾರಃ ॥ ತತೋ ಹೇ ಅಗ್ನೇ ತೇ ತ್ವದರ್ಥಂ ನವ್ಯಸೀ ನವತರೇಯಂ ಮನೀಷಾ ಸ್ತುತಿರ್ಮಯಾ ಕ್ರಿಯತೇ । ನಿತಜ್ಞಾತ್ವಾ ಶುಚಯದ್ಭಿಃ ಸರ್ವಂ ಪ್ರಕಾಶಯದ್ಭಿರಾತ್ಮೀಯೈರಂಗೈಸ್ತೇಜೋಭಿರಾತ್ಮನಾ ಮದೀಯಂ ಯಜ್ಞಂ ಪ್ರತಿ ಯುಕ್ಷ್ವ । ಯೋಜಯ । ಕಥಮಿವ । ರಥಂ ನ ಯಥಾ ರಥಮಶ್ವೈಃ ಸಂಯೋಜಯಂತಿ ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ವನಗರ್ಯೂ**—ಕಾಡಿನಲ್ಲಿ ಸಂಚರಿಸುವವರೂ । **ತನೂತ್ಯಜಾ**—ತಮ್ಮ ದೇಹವನ್ನೇ ತ್ಯಾಗಮಾಡುವ ಸಾಹಸವುಳ್ಳವರೂ ಆದ । **ತಸ್ಕರಾ**—ಇಬ್ಬರು ಚೋರರು । **ರಶನಾಭಿಃ**—ಹಗ್ಗಗಳಿಂದ ಜನರನ್ನು ಹಿಡಿಯುವಂತೆ । **ದಶಭಿಃ**—ಹತ್ತು ಅಂಗುಲಿಗಳಿಂದ । **ಅಭ್ಯಧೀತಾಂ**—ಬಾಹುಗಳು ನಿನ್ನನ್ನು ಹಿಡಿಯುತ್ತವೆ (ನಿನ್ನ ಅರಣಿಯನ್ನು) । **ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನ್ನನ್ನುದ್ದೇಶಿಸಿ । **ನವ್ಯಸೀ**—ನೂತನವಾದ । **ಇಯಂ ಮನೀಷಾ**—ಈ ಸ್ತುತಿಯು ನಿರ್ಮಿತವಾಗುತ್ತದೆ । **ರಥಂ ನ**—ರಥವು ಅಶ್ವಗಳೊಡನೆ ಸೇರಿಕೊಳ್ಳುವಂತೆ । **ಶುಚಯದ್ಭಿಃ**—ಪ್ರಕಾಶಗೊಳಿಸುವ । **ಅಂಗ್ಯೈಃ**—ನಿನ್ನ ತೇಜಸ್ಸುಗಳೊಡನೆ । **ಯುಕ್ಷ್ವ**—ಸೇರಿಕೊ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಕಾಡಿನಲ್ಲಿ ಸಂಚರಿಸುವವರೂ, ತಮ್ಮ ಪ್ರಾಣವನ್ನೇ ಬಿಡಲೂ ಸಿದ್ಧರಾಗಿರುವವರೂ ಆದ ಚೋರರು ಹಗ್ಗಗಳಿಂದ ಜನರನ್ನು ಹಿಡಿದು ಕಟ್ಟುವಂತೆ ಹತ್ತು ಅಂಗುಲಿಗಳಿಂದಲೂ ಬಾಹುಗಳು ನಿನ್ನ ಕಾಷ್ಠವನ್ನು (ಅರಣಿಯನ್ನು) ಹಿಡಿಯುತ್ತವೆ. ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿ ನೂತನವಾದ ಈ ಸ್ತುತಿಯು ನಿರ್ಮಿತವಾಗುತ್ತದೆ. ರಥವು ಅಶ್ವಗಳೊಡನೆ ಸೇರಿಕೊಳ್ಳುವಂತೆ ಜಗತ್ತನ್ನು ಪ್ರಕಾಶಗೊಳಿಸುವ ನಿನ್ನ ತೇಜಸ್ಸುಗಳೊಡನೆ ಸೇರಿಕೊ.

English Translation

As two daring robbers lurking in a forest seize (upon a traveller) with cords, (so the two hands seize upon the touchwood, with the ten

fingers). This new praise, Agni, is addressed to you : attach yourself (to my sacrifice) with your radiant members, as (they harness hosses) to a car.

॥ ವಿಶೇಷವಿಷಯಗಳು ॥

ಉಪಮಾರ್ಥವನ್ನು, ಅದರಲ್ಲಿಯೂ ಶ್ರೇಷ್ಠವಸ್ತುವಿನೊಡನೆ ಕನಿಷ್ಠವಸ್ತುವನ್ನು ಹೋಲಿಸಿ ಅರ್ಥವಿವರಣೆ ಮಾಡುವ ಸಂದರ್ಭದಲ್ಲಿ ಯಾಸ್ಕರು ಈ ಋಕ್ಕಿನ ಪೂರ್ವಾರ್ಧವನ್ನು ಉದಾಹರಣೆಗಾಗಿ ಕೊಟ್ಟು ಅದಕ್ಕೆ ನಿರ್ವಚನವನ್ನು ಹೇಳಿದಾರೆ—

ಅಥಾಪಿ ಕನೀಯಸಾ ಜ್ಯಾಯಾಂಸಂ । ತನೂತ್ಯಜೇವ ತಸ್ಕರಾ ವನರ್ಗೂರಶನಾಭಿರ್ದಶಭಿರಭ್ಯ-ಧೀತಾಂ । ತನೂತ್ಯಕ್ ತನೂತ್ಯತ್ತಾ । ವನರ್ಗೂ ವನಗಾಮಿನೌ । ಅಗ್ನಿಮಂಥನೌ ಬಾಹೂ ತಸ್ಕರಾಭ್ಯಾಮುಪನಿಮಿಮೀತೇ । ತಸ್ಕರಸ್ತತ್ಕರೋ ಭವತಿ । ಕರೋತಿ ಯತ್ಪಾಪಕಮಿತಿ ನೈರುಕ್ತಾಃ । ತನೋತೇರ್ವಾ ಸ್ಯಾತ್ ಸಂತತಕರ್ಮಾ ಭವತಿ । ಅಹೋರಾತ್ರಕರ್ಮಾ ವಾ । ರಶನಾಭಿರ್ದಶಭಿರಭ್ಯಧೀತಾಂ ಇತಿ ಆಭ್ಯಧಾತಾಂ । ಜ್ಯಾಯಾಂಸ್ತತ್ರ ಗುಣೋಽಭಿ-ಪ್ರೇತಃ ॥ (ನಿ ೩-೧೪)

ಈ ವಾಕ್ಯದಲ್ಲಿ ಅಗ್ನಿಮಥನಮಾಡುವಾಗ ಋತ್ವಿಗ್ಜನರ ಎರಡು ಕೈಗಳನ್ನು ಕಳ್ಳತನ ಮಾಡುವ ಇಬ್ಬರು ಚೋರರಿಗೆ ಹೋಲಿಸಲಾಗಿದೆ. ಇಲ್ಲಿ ಕಳ್ಳತನಮಾಡುವ ಚೋರರೆಂದರೆ ಸಾಮಾನ್ಯವಾಗಿ ರಾತ್ರೌಕಾಲದಲ್ಲಿ ಮನೆಗೆ ಯಾರೂ ಕಾಣದಂತೆ ನುಗ್ಗಿ ಛಿದ್ರವಾ ಪ್ರವೇಶಿಸಿ ಧನಾದಿಗಳನ್ನು ಅಪಹರಿಸುವವರೆಂದು ತಿಳಿಯಕೂಡದು ಈ ತರಹ ಕಳ್ಳರೂ ಕೆಲವರಿರುವರು ಆದರೆ ಇಲ್ಲಿ **ವನರ್ಗೂ** ಎಂದಿರುವುದರಿಂದ ಇವರು ಬೇರೆವಿಧವಾದ ಕಳ್ಳರು. ಈ ವಿಧವಾದ ಕಳ್ಳರು ಕಾಡಿನಲ್ಲಿ ವಾಸಿಸುತ್ತಾ ಊರಿಂದೂರಿಗೆ ಪ್ರಯಾಣಮಾಡುತ್ತಿರುವ ಮಾರ್ಗಸ್ಥರನ್ನು ಹಿಂಸಿಸಿ ಎಂದರೆ ಪೆಗ್ಗಗಳಿಂದ ಕಟ್ಟಿಹಾಕಿ ಅವರಲ್ಲಿರುವ ಸರ್ವಸ್ವವನ್ನೂ ದೋಚಿಕೊಂಡು ಹೋಗುವವರು ಎಂದು ತಿಳಿಯಬೇಕು ಈ ವಿಧವಾದ ಕಳ್ಳರು ಅನೇಕರೇಳಿ ತಮಗಿಂತಲೂ ಬಲಿಷ್ಠರಾದ ಮಾರ್ಗಸ್ಥರ ಗುಂಪನ್ನು ಎದುರಿಸುವಾಗ ತಮ್ಮ ಪ್ರಾಣಕ್ಕೆ ಅಪಾಯವಾಗುವ ಸಂಭವವುಂಟು ಆದ್ದರಿಂದಲೇ ಇಲ್ಲಿ **ತನೂತ್ಯಜೇವ**- ಕನಿಯುವಾಗ ತಮ್ಮ ಪ್ರಾಣದ ಆಸೆಯೂ ಆಶೆಯಿಲ್ಲದೆ ಹೋರಾಡುವವರು ಎಂದು ಸೂಚಿಸಿದೆ. ಮತ್ತು **ವನರ್ಗೂ** ಎಂಬ ಶಬ್ದವು ವನ ಅಥವಾ ಕಾಡಿನಲ್ಲಿ ಮಾರ್ಗಮಧ್ಯದಲ್ಲಿ ಹೊಂಚುಕಾಯುತ್ತಿರುವವರು, ದಾರಿಹೋಕರು ಎಂಬರ್ಥವನ್ನು ಸೂಚಿಸುವುದು. ಇಲ್ಲಿ **ತನೂತ್ಯಜಾ** ಮತ್ತು **ವನರ್ಗೂ** ಎಂಬ ಶಬ್ದಗಳು ದ್ವಿವಚನಾಂತಪದಗಳಾದ್ದರಿಂದ ಇಬ್ಬರು ಚೋರರು ಎಂದರ್ಥವು. **ರಶನಾಭಿಃ** ಎಂಬ ಶಬ್ದಕ್ಕೆ ಹಗ್ಗಗಳಿಂದ ಎಂದೂ ಬೆರಳುಗಳಿಂದ ಎಂದೂ ಎರಡರ್ಥವಿರುವುದು. ಚೋರರ ವಿಷಯದಲ್ಲಿ **ರಶನಾಭಿಃ** ಎಂಬ ಶಬ್ದಕ್ಕೆ ಹಗ್ಗಗಳಿಂದ ಎಂದೂ ಋತ್ವಿಗ್ಜನರ ಪರವಾಗಿ ಬೆರಳುಗಳೆಂದೂ ಅರ್ಥಮಾಡಬೇಕು. ಆದ್ದರಿಂದ ಕಾಡಿನಲ್ಲಿ ಮಾರ್ಗಸ್ಥರ ಧನವನ್ನು ಅಪಹರಿಸುವುದಕ್ಕಾಗಿ ಪ್ರಾಣದ ಮೇಲಿನ ಆಶೆಯನ್ನು ತೊರೆದು ದಾರಿಕಾಯುತ್ತಿರುವ ಇಬ್ಬರು ಕಳ್ಳರು ಯಾವ ರೀತಿ ಪಥಿಕರನ್ನು ಹಗ್ಗಗಳಿಂದಲೂ, ತಮ್ಮ ಬೆರಳುಗಳಿಂದಲೂ ಧನಾಪಹರಣಾರ್ಥವಾಗಿ ಕಟ್ಟಿಹಾಕುವರೋ ಅದರಂತೆ ಯಜ್ಞಕರ್ಮದಲ್ಲಿ ಅಧ್ವರ್ಯುವಿನ ಎರಡು ಬಾಹುಗಳು ಅರಣಿಗಳಲ್ಲಿ ಅಗ್ನಿಯನ್ನು ಕಡೆಯುವುದಕ್ಕಾಗಿ ಮೇಲಿನ ಅರಣಿಯನ್ನು ಹಗ್ಗದಿಂದ ಬಿಗಿದು ತನ್ನ ಕೈಯ್ಯ ಹತ್ತು ಬೆರಳುಗಳಿಂದಲೂ ಕಡೆದು ಅಗ್ನಿಯನ್ನು ಉತ್ಪಾದನೆ ಮಾಡುತ್ತಾನೆ ಎಂದು ನಿರ್ವಚನದ ಮುಖ್ಯಾಭಿಪ್ರಾಯವು.

ಇಲ್ಲಿ ತಸ್ಕರ ಎಂದರೆ ತಕ್ಕರಃ ಕರೋತಿ ಯತ್ಪಾಪಕಮಿತಿ ನೈರುಕ್ತಾಃ। ಯಾವುದು ಪಾಪಕೆಲಸವೋ ಅದನ್ನೇ ಮಾಡುವವನು ಎಂದು ತಸ್ಕರಶಬ್ದಕ್ಕೆ ನಿರುಕ್ತಕಾರರ ಅರ್ಥವಿರುವುದು ಅಥವಾ ತಸ್ಕರಶಬ್ದವು ತನು ವಿಸ್ತಾರೇ ಎಂಬ ಧಾತುವಿನಿಂದಲೂ ನಿಷ್ಪನ್ನವಾಗಬಹುದು. ಈ ಸಂದರ್ಭದಲ್ಲಿ ಯಾವಾಗಲೂ ಎಂದರೆ ರಾತ್ರಿಕಾಲದಲ್ಲಿಯೂ, ಹಗಲಿನಲ್ಲಿಯೂ ಕಳ್ಳತನವನ್ನು ಮಾಡುವವನು ಎಂದು ತಸ್ಕರಶಬ್ದಕ್ಕೆ ಅರ್ಥವನ್ನು ಹೇಳಬಹುದು. ಈ ದೃಷ್ಟಾಂತದಲ್ಲಿ ಉತ್ತಮಕಾರ್ಯವಾದ ಅಗ್ನಿಮಥನವನ್ನು ನೀಚಕಾರ್ಯವಾದ ತಸ್ಕರನ ವ್ಯಾಪಾರಕ್ಕೆ ಹೋಲಿಸಿ ಅರ್ಥವನ್ನು ವಿಶದಪಡಿಸಲಾಗಿದೆ ಎಂದು ಯಾಸ್ಕರು ವಿವರಿಸಿರುವರು.

॥ ಸಂಹಿತಾಪಾಠಃ ॥

ಬ್ರಹ್ಮ ಚ ತೇ ಜಾತವೇದೋ ನಮಶ್ಚೇಯಂ ಚ ಗೀಃ ಸದಮಿದ್ವರ್ಧನೀ ಭೂತ್ ॥

ರಕ್ಷಾ ನೋ ಅಗ್ನೇ ತನಯಾನಿ ತೋಕಾ ರಕ್ಷೋತ ನ ಸ್ತನ್ವೋ ಽ ಅಪ್ರಯುಚ್ಛನ್ ॥ ೭ ॥

ಪದಪಾಠಃ ॥

ಬ್ರಹ್ಮ। ಚ। ತೇ। ಜಾತವೇದಃ। ನಮಃ। ಚ। ಇಯಂ। ಚ। ಗೀಃ। ಸದಂ। ಇತ್। ವರ್ಧನೀ। ಭೂತ್

ರಕ್ಷ। ನಃ। ಅಗ್ನೇ। ತನಯಾನಿ। ತೋಕಾ। ರಕ್ಷ। ಉತ। ನಃ। ತನ್ವಃ। ಅಪ್ರಯುಚ್ಛನ್ ॥ ೭ ॥

॥ ಸಾಯಣಭಾಷ್ಯಂ ॥

ಉಷಾಸಂಧರಣೇಯೇಷ್ವವಗ್ನೇರ್ಬ್ರಹ್ಮಣ್ವತೋ ಯಾಜ್ಯಾ ಬ್ರಹ್ಮ ಚ ತ ಇತ್ಕೇಷಾ। ಸೂತ್ರಿತಂ ಚ। ಬ್ರಹ್ಮ ಚ ತೇ ಜಾತವೇದೋ ನಮಶ್ಚ ಪುರೂಣ್ಯಗ್ನೇ ಪುರುಧಾ ತ್ವಾಯಾ। ಆ. ೪.೧। ಇತಿ ॥

ಹೇ ಜಾತವೇದೋ ಜಾತಪ್ರಜ್ಞಾಗ್ನೇ ತೇ ತ್ವದರ್ಥಂ ಬ್ರಹ್ಮಾಸ್ಮಾಭಿರ್ದೀಯಮಾನಂ ಹವೀರೂಪಮನ್ನಂ ವರ್ಧನೀ ವರ್ಧನಂ ಭೂತ್। ಭವತು। ತಥಾ ನಮೋ ನಮಸ್ಕಾರಶ್ಚ ಕಂಚೀಯಮಿದಾನೀಂ ಕ್ರಿಯಮಾಣೈಷಾ ಸ್ತುತಿಃ ಸದಮಿತ್ ಸದೈವ ವರ್ಧನೀ ವರ್ಧಯಿತ್ರೀ ಭೂತ್। ಭವತು। ತಸ್ಮಾದ್ಧೇ ಅಗ್ನೇ ನೋಽಸ್ಮಾಕಂ ತನಯಾನಿ ಪುತ್ರಾಂಸ್ತೋಕಾ ಪೌತ್ರಾಂಶ್ಚ ರಕ್ಷ। ಪಾಲಯ। ಉತಾಪಿ ಚಾಪ್ರಯುಚ್ಛನ್ನಪ್ರಮಾದ್ಯಂಸ್ತ್ವಂ ನೋಽಸ್ಮಾಕಂ ತನ್ವೋಽಂಗಾನಿ ರಕ್ಷ ॥

॥ ಪ್ರತಿಪದಾರ್ಥ ॥

ಜಾತವೇದಃ— ಜಾತವೇದೋರೂಪನಾದ ಎಲೈ ಅಗ್ನಿಯೇ। ತೇ—ನಿನ್ನನ್ನುದ್ದೇಶಿಸಿದ। ಬ್ರಹ್ಮ ಚ—ಹವಿಸ್ಸು। ವರ್ಧನೀ ಭೂತ್—ಪುಷ್ಟಿಸಾಧಕವಾಗಲಿ। ನಮಃ—ನಮಸ್ಕಾರವೂ। ಇಯಂ ಚ—ಈ ಸ್ತೋತ್ರವೂ ಸದಮಿತ್—ಸರ್ವದಾ। ವರ್ಧನೀ ಭೂತ್—ಪುಷ್ಟಿಸಾಧಕವಾಗಲಿ। ಅಗ್ನೇ—ಎಲೈ ಅಗ್ನಿಯೇ।

ನಃ—ನಮ್ಮ । **ತನಯಾನಿ**—ಪುತ್ರರನ್ನೂ । **ತೋಕಾ**—ಪೌತ್ರರನ್ನೂ । **ರಕ್ಷ**—ರಕ್ಷಿಸು । **ಉತ**—ಮತ್ತು । **ಅಪ್ರಯುಚ್ಛನ್**—ಸರ್ವದಾ ಜಾಗರೂಕನಾದ ನೀನು । **ನಃ**—ನಮ್ಮ । **ತನ್ವಃ**—ಶರೀರಗಳನ್ನೂ । **ರಕ್ಷ**—ರಕ್ಷಿಸು.

॥ ಭಾವಾರ್ಥ ॥

ಜಾತವೇದೋರೂಪನಾದ ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿದ ಹವಿಸ್ಸು ಪುಷ್ಟಿಸಾಧಕವಾಗಲಿ. ನಮ್ಮ ನಮಸ್ಕಾರವೂ, ಈ ಸ್ತುತಿಯೂ ಸರ್ವದಾ ಪುಷ್ಟಿಸಾಧಕವಾಗಲಿ. ಎಲೈ ಅಗ್ನಿಯೇ, ನಮ್ಮ ಪುತ್ರರನ್ನೂ, ಪೌತ್ರರನ್ನೂ ರಕ್ಷಿಸು ಸರ್ವದಾ ಜಾಗರೂಕನಾದ ನೀನು ನಮ್ಮ ಶರೀರಗಳನ್ನು ರಕ್ಷಿಸು.

English Translation

May this oblation, Jatavedas, this reverence, this praise, ever magnify you. Protect, Agni, our sons, our grandsons, and diligently defend our persons.

॥ ವಿಶೇಷವಿಷಯಗಳು ॥

ಉಪಾಸಂಭರಣೇಷ್ಟಿಯಲ್ಲಿ **ಬ್ರಹ್ಮಣ್ವಾನ್ ಅಗ್ನಿಃ** ಎಂಬ ದೇವತೆಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಬ್ರಹ್ಮ ಚ ತೇ** ಎಂಬ ಈ ಋಕ್ಕನ್ನು ಯಾಜ್ಯಾನುವಾಕ್ಯಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಬ್ರಹ್ಮ ಚ ತೇ ಜಾತವೇದೋ ನಮಶ್ಚ ಪುರೂಣ್ಯಗ್ನೇ ಪುರುಧಾ ತ್ವಾಯಾ** ಎಂಬ ಸೂತ್ರದಿಂದ (೩. ೪-೧) ವಿಹಿತವಾಗಿರುವುದು

ಸೂಕ್ತದ ಉಪಸಂಹಾರರೂಪವಾದ ಈ ಕೊನೆಯ ಋಕ್ಕಿನಲ್ಲಿ ಅಗ್ನಿಗೆ ಸ್ತುತಿಯನ್ನರ್ಪಿಸಿ ನಮಗೆ ಪುಷ್ಟಿಯನ್ನುಂಟುಮಾಡಿ ಪುತ್ರರನ್ನು, ಪೌತ್ರರನ್ನೂ, ನಮ್ಮನ್ನೂ ರಕ್ಷಿಸಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

ಐದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಏಕಃ ಸಮುದ್ರ ಇತಿ ಸಪ್ತರ್ಚಂ ಪಂಚಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ವಿನಿಯೋಗಶ್ಚ । ಏಕ ಇತ್ಯನುಕ್ರಾಂತಂ ॥

ಅನುವಾದವು—**ಏಕಃ ಸಮುದ್ರಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ವಿನಿಯೋಗವೂ ಹಿಂದಿನಂತೆಯೇ. ಅನುಕ್ರಮಣಿಕೆಯಲ್ಲಿ—**ಏಕಃ** ಎಂದು ಮೊದಲಾಗಿ ಹೇಳಿರುವುದು.

ಸೂಕ್ತ—೫೫

ಮಂಡಲ—೧೦ । ಅನುವಾಕ—೧ । ಸೂಕ್ತ—೫೫ ।
ಋಕ್ಕು—೭ । ಅಧ್ಯಾಯ—೫ । ವರ್ಗ—೩೩ ।
ಸೂಕ್ತದಲ್ಲಿರುವ ಋಕ್ಕುಗಳ ಸಂಖ್ಯೆ—೭ ।
ಋಷಿ—ತ್ರಿತ ಆಪ್ತ್ಯಃ ॥
ದೇವತಾ—ಅಗ್ನಿಃ ।
ಛಂದಸ್—ತ್ರಿಷ್ಟುಪ್ ॥

। ಸಂಹಿತಾಪಾಠಃ ।

ಏಕಃ॑ ಸ॒ಮುದ್ರೋ॑ ಧ॒ರುಣೋ॑ ರ॒ಯೀಣಾ॒ಮಸ್ಮ॑ದ್ಧೃ॒ದೋ ಭೂರಿ॑ಜನ್ಮಾ॒ ವಿ
ಚ॑ಷ್ಟೇ ॥
ಸಿಷ॑ಕ್ತ್ಯೂ॒ಧರ್ನಿ॑ಓ॒ಃ ರು॒ಪ॒ಸ್ಥ ಉ॒ತ್ಸಸ್ಯ॒ ಮಧ್ಯೇ॒ ನಿಹಿ॑ತಂ॒ ಪದಂ॑ ವೇಃ ॥ ೧ ॥

। ಪದಪಾಠಃ ।

ಏಕಃ॑ । ಸ॒ಮುದ್ರಃ॑ । ಧ॒ರುಣಃ॑ । ರ॒ಯೀಣಾ॑ಂ । ಅಸ್ಮ॑ತ್ । ಹೃ॒ದಃ । ಭೂರಿ॑ಜನ್ಮಾ । ವಿ । ಚ॒ಷ್ಟೇ॒ ॥
ಸಿಸ॑ಕ್ತಿ । ಊ॒ಧರ್ನಿ॑ಓ॒ಃ । ರು॒ಪ॒ಸ್ಥೇ । ಉ॒ತ್ಸಸ್ಯ॑ । ಮ॒ಧ್ಯೇ॒ । ನಿಹಿ॑ತಂ । ಪದಂ॑ । ವೇ॒ರಿತಿ॑ ವೇಃ ॥ ೧॥

। ಸಾಯಣಭಾಷ್ಯಂ ।

ಸಮುದ್ರಃ ಯಸ್ಮಾದ್ಧನಾನ್ಯುದಕಾನಿ ವಾ ಸಮುದ್ರವಂತೀತಿ ತಾದೃಶೋ ರಯೀಣಾಂ ಧನಾನಾಂ ಧರುಣೋ ಧಾರಯಿತೈಕೋಽಸಹಾಯೋ ಭೂರಿಜನ್ಮಾ ಬಹುವಿಧಜನನೋ ನಾನಾಯಜ್ಞೇಷ್ವಾಹವನೀಯಾದಿಭಾವೇನ ಬಹುಜನನಃ ಸೋಽಗ್ನಿರಸ್ಮತ್ ॥ ಸುಪಾಂ ಸುಲುಗಿತಿ ಷಷ್ಠ್ಯಾ ಲುಕ್ ॥ ಅಸ್ಮಾಕಂ ಹೃದೋ ಹೃದಯಾನ್ಯಭಿಲಷಿತಾನಿ ವಿ ಚಷ್ಟೇ । ವಿಪಶ್ಯತಿ । ಜಾನಾತಿ । ಉಕ್ತಂ ಚ । ಮನೋ ವೈ ದೇವಾ ಮನುಷ್ಯಸ್ಯ ಜಾನಂತೀತಿ । ಕಂಚ ನಿಣ್ಯೋಃ । ಅಂತರ್ಹಿತನಾಮೈತತ್ । ಅಂತರ್ಹಿತಯೋರ್ದ್ಯಾವಾಪೃಥಿವ್ಯೋರ್ಮಧ್ಯೇ ಪ್ರಾತಃಸಾಯಂಕಾಲಯೋರುಪಸ್ಥ ಉಪಸ್ಥಾನೇ ಸಮೀಪೇ ವರ್ತಮಾನಮೂಧೋ ರಾತ್ರಿಂ ಸಿಷಕ್ತಿ । ಸೇವತೇ । ಉಪಜೀವತಿ । ಯದ್ವಾ । ನಿಣ್ಯೋರಂತರ್ಹಿತಸ್ಯಾಂತರಿಕ್ಷಸ್ಯ ಸಮೀಪೇ ವರ್ತಮಾನಮೂಧೋ ಮೇಘಂ ಸೇವತೇ । ಅಥ ಪ್ರತ್ಯಕ್ಷಃ । ಹೇ ಅಗ್ನೇ ಉತ್ಸಸ್ಯೋದಕಧಾರಕಸ್ಯ ಲೋಕಸ್ಯ ಮಧ್ಯೇ ಪದಮುಪಾಂ ಸ್ಥಾನಂ ನಿಹಿತಂ । ತನ್ಮಾಧ್ಯಮಿಕಾಂ ವಾಚಂ ವೇಃ । ಗಚ್ಛ । ಯದ್ವಾ । ಉತ್ಸಸ್ಯ ಮೇಘಸ್ಯ ಮಧ್ಯೇ ನಿಹಿತಂ ಪದಂ ನಿದ್ಯುದಾಖ್ಯಂ ತತ್ ಸ್ವಾತ್ಮತಯಾ ಗಚ್ಛ ॥ ವೇಃ । ವೀ ಗತ್ಯಾದಿಷು । ಲಜಿ ಸಿಪಿ ರೂಪಂ । ವಾಕ್ಯಭೇದಾದನಿಘಾತಃ ॥

॥ ಪ್ರತಿಪದಾರ್ಥ ॥

ಸಮುದ್ರಃ—ಸಮುದ್ರದಂತೆ । **ರಯೀಣಾಂ**—ನಮ್ಮ ಧನಗಳಿಗೆ । **ಏಳಃ ಧರುಣಃ**—ಅದ್ವಿತೀಯನಾದ ಧಾರಕನೂ । **ಭೂರಿಜನ್ಮಾ**- ಅನೇಕವಿಧವಾದ ಜನ್ಮವುಳ್ಳವನೂ ಆದ ಅಗ್ನಿಯು । **ಅಸ್ಮತ್**—ನಮ್ಮ । **ಹೃದಃ**—ಹೃದಯದಲ್ಲಿರುವ ಇಷ್ಟಾರ್ಥಗಳನ್ನು । **ವಿ ಚಷ್ಟೇ**—ಪೂರ್ಣವಾಗಿ ಅರಿಯುತ್ತಾನೆ । **ನಿಷ್ಕೋಃ**—ತಮಸ್ಸಿನಿಂದ ಆಚ್ಛಾದಿತಗಳಾದ ಪ್ರಾತಃಕಾಲ ಮತ್ತು ಸಾಯಂಕಾಲಗಳಿಗೆ । **ಉಪಸ್ಥೇ**—ಸಮೀಪದಲ್ಲಿರುವ । **ಊಧಃ**—ರಾತ್ರಿಯನ್ನು । **ಸಿಷಕ್ತಿ**—ಸೇವಿಸುತ್ತಾನೆ । **ಉತ್ಸಸ್ಯ**—ಉದಕಾಧಾರಕವಾದ ಲೋಕದ । **ಮಧ್ಯೇ**—ಮಧ್ಯದಲ್ಲಿ । **ನಿಹಿತಂ**—ಸ್ಥಾಪಿತವಾದ । **ಪದಂ**—ಸ್ಥಾನಕ್ಕೆ । **ವೇಃ**—ಹೋಗು

॥ ಭಾವಾರ್ಥ ॥

ಸಂಪತ್ತುಗಳಿಗೆ ಆಶ್ರಯವಾದ ಸಮುದ್ರದಂತೆ ನಮ್ಮ ಧನಗಳಿಗೆ ಅದ್ವಿತೀಯನಾದ ಧಾರಕನೂ, ಅನೇಕ ವಿಧವಾದ ಜನ್ಮವುಳ್ಳವನೂ ಆದ ಅಗ್ನಿಯು ನನ್ನ ಹೃದಯದಲ್ಲಿರುವ ಇಷ್ಟಾರ್ಥಗಳನ್ನು ಪೂರ್ಣವಾಗಿ ಅರಿಯುತ್ತಾನೆ. ತಮಸ್ಸಿನಿಂದ ಆಚ್ಛಾದಿತಗಳಾದ ಪ್ರಾತಃಕಾಲ ಮತ್ತು ಸಾಯಂಕಾಲಗಳಿಗೆ ಸಮೀಪದಲ್ಲಿರುವ ರಾತ್ರಿಯನ್ನು ಸೇವಿಸುತ್ತಾನೆ. ಎಲೈ ಅಗ್ನಿಯೇ, ಉದಕಧಾರಕವಾದ ಲೋಕದ ಮಧ್ಯದಲ್ಲಿ ಸ್ಥಾಪಿತವಾದ ಸ್ಥಾನಕ್ಕೆ ಹೋಗು

English Translation

Agni, the sole capacious ocean of riches, who is of many births, beholds our hearts ; he waits on the cloud in the neighbourhood of the hidden (firmament) ; go, Agni, to your appointed place in the midst of the waters.

॥ ವಿಶೇಷವಿಷಯಗಳು ॥

ಸಮುದ್ರಃ—**ಯಸ್ಮಾದ್ಧನಾನ್ಯುದಕಾನಿ ವಾ ಸಮುದ್ರವಂತೀತಿ ತಾದೃಶಃ** । ಧನವನ್ನಾಗಲಿ, ಉದಕವನ್ನಾಗಲಿ ಸ್ರವಿಸುವುದರಿಂದ ಸಮುದ್ರವೆಂಬ ಹೆಸರು ಎಂದು ಇಲ್ಲಿ ಅರ್ಥಮಾಡಿದಾರೆ. ಸಮುದ್ರಕ್ಕೂ, ಧನಕ್ಕೂ ಹೇಗೆ ಸಂಬಂಧ ಎಂದರೆ **ರತ್ನಾಕರೋ ಜಲನಿಧಿಃ** ಎಂಬ ಕೋಶದ ಅರ್ಥದಂತೆ ಸಮುದ್ರವು ನಾನಾವಿಧ ರತ್ನಗಳಿಗೆ ಆಶ್ರಯಸ್ಥಾನವು ಎಂದು ಪ್ರಸಿದ್ಧಿಯಾಗಿರುವುದು.

ಸಮುದ್ರ ಶಬ್ದವು ಋಕ್ಸಂಹಿತೆಯಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟಿರುವುದರಿಂದ ನಿರುಕ್ತಕಾರರು **ಸಮುದ್ರ** ಶಬ್ದವನ್ನು **ಅಂತರಿಕ್ಷ** ನಾಮಗಳಲ್ಲಿ ಸೇರಿಸಿರುವರು (ನಿ ೨-೧೦). ಅನಂತರ **ಪಾರ್ಥಿವವಾದ ಸಮುದ್ರಕ್ಕೂ ಅಂತರಿಕ್ಷ**ಪರ್ಯಾಯವಾದ **ಸಮುದ್ರ**ಕ್ಕೂ ವ್ಯತ್ಯಾಸವನ್ನು ತೋರಿಸಿದ್ದಾರೆ ಇವೆರಡಕ್ಕೂ ವ್ಯತ್ಯಾಸವನ್ನು ತಿಳಿಯದೇ ಸಂಶೇಹಕ್ಕವಕಾಶವನ್ನು ಕೊಡುವಂತೆ ಅರ್ಥಮಾಡುವವರನ್ನು ಕುರಿತು,

ತತ್ರ ಸಮುದ್ರ ಇತ್ಯೇತತ್ಪಾರ್ಥಿವೇನ ಸಮುದ್ರೇಣ ಸಂದಿಹ್ಯತೇ । ಅಂತರಿಕ್ಷ ಪರ್ಯಾಯವಾದ ಸಮುದ್ರವನ್ನು ಅನೇಕರು ಪಾರ್ಥಿವಸಮುದ್ರವೆಂದು ಭ್ರಮಿಸಿ ಅರ್ಥಮಾಡುತ್ತಾರೆ. (ಅದು ಸರಿಯಲ್ಲ) ಎಂದು ಸಮುದ್ರ ಶಬ್ದಕ್ಕೆ ನಿರ್ವಚನವನ್ನು ತೋರಿಸಿದ್ದಾರೆ.

ಸಮುದ್ರಃ ಕಸ್ಮಾತ್ಸಮುದ್ರವಂತ್ಯಸ್ಮಾದಾಪಃ ಸಮುಭಿದ್ರವಂತ್ಯೇನಮಾಪಃ ಸಂಮೋದಂತೇ೨ಸ್ಮಿನ್ ಭೂತಾನಿ ಸಮುದಕೋ ಭವತಿ ಸಮುಸತ್ತೀತಿ ವಾ । (ನಿ. ೨-೧೮)

ಮೊದಲನೆಯದಾಗಿ ಚಲಿಸು ಎಂದರ್ಥವನ್ನು ಕೊಡುವ ದ್ರು ಧಾತುವಿನೊಡನೆ **ಸಮ್**, ಉದ್ ಎಂಬ ಎರಡು ಉಪಸರ್ಗಗಳೂ ಸೇರಿ ಮೇಲಕ್ಕೆ ಉಕ್ಕಿ ಹರಿಯುತ್ತವೆ ಎಂದು ತಾತ್ಪರ್ಯವನ್ನು ಕೊಡುತ್ತಿರುವುದರಿಂದಲೂ, ಅಥವಾ ಎರಡನೆಯದಾಗಿ ಅದೇ ದ್ರು ಧಾತುವಿನೊಡನೆ **ಸಮ್**, **ಅಭಿ** ಎಂಬ ಉಪಸರ್ಗಗಳು ಸೇರಿಕೊಂಡು (ನದಿಯು) ನೀರುಗಳು ಇದಿರಕಡೆಗೆ ಹರಿದುಬರುತ್ತವೆಯೆಂಬ ಅರ್ಥವನ್ನು ಕೊಡುವುದರಿಂದಾಗಲಿ, ಅಥವಾ **ಸಂತೋಷಪಡು** ಎಂಬರ್ಥವನ್ನು ಕೊಡುವ **ಮುದ್** ಧಾತುವಿನೊಡನೆ **ಸಮ್** ಎಂಬ ಉಪಸರ್ಗವು ಸೇರಿ ಜಲಚರ ಪ್ರಾಣಿಗಳು ಇದರಲ್ಲಿ ಹರ್ಷವನ್ನನುಭವಿಸುತ್ತವೆ ಎಂಬರ್ಥವನ್ನು ಕೊಡುವುದರಿಂದಲಾಗಲಿ ಅಥವಾ ಉದಕಕ್ಕೆ ನಿಧಿಯಾಗಿರುವುದರಿಂದಲಾಗಲಿ ಅಥವಾ **ತೇವವಾಡು** ಎಂದರ್ಥವನ್ನು ಕೊಡುವ **ಉದ್** ಧಾತುವಿನೊಡನೆ **ಸಮ್** ಉಪಸರ್ಗವು ಸೇರಿ ನೆನೆಯಿಸು ಎಂದು ತಾತ್ಪರ್ಯವನ್ನು ಕೊಡುವುದರಿಂದಾಗಲಿ, **ಸಮುದ್ರ**ಎಂಬ ಪದವು ಸಿದ್ಧವಾಗುವುದೆಂದು ಆ ಪದದ ನಿರ್ವಚನವನ್ನು ತೋರಿಸಿದ್ದಾರೆ (ನಿ. ೨-೧೮) ಈ ಸಂದರ್ಭದಲ್ಲಿ ಅಂತರಿಕ್ಷವಾಚಿಯಾದ ಸಮುದ್ರ ಶಬ್ದಕ್ಕೂ ಸಾರ್ಥವಾದ ಸಮುದ್ರಕ್ಕೂ ವ್ಯತ್ಯಾಸವನ್ನು ತೋರಿಸುವುದಕ್ಕೆ ಬೃಹದ್ದೇವತೆಯು ಈ ಇತಿಹಾಸವನ್ನು ಉದಾಹರಿಸಿದ್ದಾರೆ

(ನಿ ೨-೧೮)

ತಯೋರ್ಮಧ್ಯಾಗಸ್ತ್ರೈತಿಹಾಸಮಾಚಕ್ಷತೇ । ದೇವಾಪಿಶ್ಚಾಷ್ಟಿಷೇಣಃ ಶಂತನುಶ್ಚ ಕೌರವ್ಯಾ ಭ್ರಾತರಾ ಬಭೂವತುಃ । ಸ ಶಂತನುಃ ಕನೀಯಾನಭಿಷೇಚಯಾಂಚಕ್ರೇ । ದೇವಾಪಿಸ್ತಪಃ ಪ್ರತಿಪೇದೇ । ತತಃ ಶಂತನೋ ರಾಜ್ಯೇ ದ್ವಾದಶ ವರ್ಷಾಣಿ ದೇವೋ ನ ವವರ್ಷ । ತಮೂಚುರ್ಬ್ರಾಹ್ಮಣಾ ಅಥರ್ವಸ್ವಯೋ ಚರಿತೋ ಜ್ಯೇಷ್ಠಂ ಭ್ರಾತರಮುತರಿತ್ಯಾಭಿಷೇಚಿತಂ ಪಸ್ಪಾತ್ತ್ವೇ ದೇವೋ ನ ವರ್ಷತೀತಿ । ಸ ಶಂತನುರ್ದೇವಾಪಿಂ ಶಿಷಿಕ್ಷ ರಾಜ್ಯೇನ । ತಮುವಾಚ ದೇವಾಪಿಃ ಪುರೋಹಿತಸ್ತ್ವೇ೨ಸಾನಿ ಯಾಜಯಾನಿ ಚ ತ್ವೇತಿ ತಸ್ಯೈತದ್ವರ್ಷಕಾಮಸೂಕ್ತಂತಸ್ಯೈಷಾ ಭವತಿ ॥

ಕೌರವಂಶಸ್ಥರೂ, ಋಷ್ಟಿಷೇಣ ಪುತ್ರರೂ ಆದ **ದೇವಾಪಿ** ಮತ್ತು **ಶಂತನು** ಎಂಬಿಬ್ಬರಲ್ಲಿ ಚಿಕ್ಕವನಾದ ಶಂತನುವು ತಾನೇ ಪಟ್ಟಾಭಿಷಿಕ್ತನಾಗಿ ಆ ರಾಜ್ಯಕ್ಕೆ ದೊರೆಯಾದನು. ದೇವಾಪಿಯು ತಪಶ್ಚರ್ಯೆಗಾಗಿ ಕಾಡಿಗೆ ಹೊರಟು ಹೋದನು. ಅಲ್ಲಿಂದ ಮೊದಲು ಹನ್ನೆರಡು ವರ್ಷಗಳಕಾಲ ಶಂತನುವಿನ ರಾಜ್ಯದಲ್ಲಿ ಮಳೆಯಾಗಲಿಲ್ಲ. ಆಗ ಬ್ರಾಹ್ಮಣರು ಶಂತನುವನ್ನು ಕುರಿತು, ನೀನು ದೊಡ್ಡವನಾದ ನಿನ್ನಣ್ಣನನ್ನು ಕಾಡಿಗೆ ಕಳುಹಿಸಿ ನೀನೇ ದೊರೆಯಾಗಿರುವುದರಿಂದ ನೀನು ಪಾಪಕೃತ್ಯವನ್ನು ಮಾಡಿದಂತಾಯಿತು. ಆದುದರಿಂದ ವೃಷ್ಟಿದೇವನು ನಿನ್ನ ರಾಜ್ಯದಲ್ಲಿ ಮಳೆಯನ್ನು ಸುರಿಸಿಲ್ಲ ಎಂದರು ಆಗ ಶಂತನುವು ದೇವಾಪಿಯನ್ನು ರಾಜ್ಯಾಭಿಷಿಕ್ತನನ್ನಾಗಿಮಾಡಲು ಪ್ರಯತ್ನಿಸಿದಾಗ ದೇವಾಪಿಯು ನಾನು ನಿನಗೆ ಪುರೋಹಿತನಾಗಿದ್ದುಕೊಂಡು ನಿನಗಾಗಿ ಯಜ್ಞವನ್ನು ನೆರವೇರಿಸುತ್ತೇನೆ ಎಂದು ವೃಷ್ಟ್ಯರ್ಥವಾಗಿ ಯಜ್ಞವನ್ನು ಮಾಡಿಸಿದನು ಅನಂತರ ಊರ್ಧ್ವಭಾಗದಲ್ಲಿರುವ **ಸಮುದ್ರದಿಂದ** ಅಧೋಭಾಗದಲ್ಲಿರುವ **ಸಮುದ್ರಕ್ಕೆ** ಮಳೆಯು ಸುರಿಯಿತು ಎಂದು ಎರಡು ಸಮುದ್ರಗಳಿಗೂ ವ್ಯತ್ಯಾಸವನ್ನು ತೋರಿಸುವ,

ಅಷ್ಟ್ರಿಷೇಣೋ ಹೋತ್ರವೃಷಿರ್ನಿಷೀದನ್ ದೇವಾಪಿರ್ದೇವಸುಮತಿಂ ಚಿಕಿತ್ವಾನ್ ।
ಸ ಉತ್ತರಸ್ಮಾದಧರಂ ಸಮುದ್ರಮಪೋ ದಿವ್ಯಾ ಅಸೃಜದ್ವರ್ಷ್ಯಾ ಅಭಿ ।

(ಋ. ಸಂ ೧೦-೯೮-೫)

ಈ ಋಕ್ಕನ್ನು ಉದಹರಿಸಿ ಇಲ್ಲಿರುವ **ಊರ್ಧ್ವಸಮುದ್ರ**ಕ್ಕೂ **ಅಧರಸಮುದ್ರ**ಕ್ಕೂ ವ್ಯತ್ಯಾಸವನ್ನು ತೋರಿಸಿದ್ದಾರೆ. ಇಲ್ಲಿ **ಉತ್ತರಸಮುದ್ರ**ನೆಂದರೆ ಅಂತರಿಕ್ಷವೆಂದೂ, **ಅಧರಸಮುದ್ರ**ವೆಂದರೆ ಪಾರ್ಥಿವಸಮುದ್ರವೆಂದೂ ಈರ್ಧ ಋಕ್ಸಂಹಿತೆಯಲ್ಲಿ **ಸಮುದ್ರ**ಶಬ್ದಕ್ಕೆ ಕೆಲವೆಡೆಗಳಲ್ಲಿ ನಿಸ್ಸಂಶಯವಾಗಿ ಪಾರ್ಥಿವಸಮುದ್ರವೆಂದೇ ಹೇಳಬಹುದು. ಅದರೆ,

ಯಥಾ ವಾತೋ ಯಥಾ ವನಂ ಯಥಾ ಸಮುದ್ರ ಏಜತಿ ।

(ಋ. ಸಂ ೫-೭೮-೫)

ಇತ್ಯಾದಿ ಋಕ್ಕುಗಳಲ್ಲಿ **ಆಂತರಿಕ್ಷ** ಸಮುದ್ರನೇ ಅಥವಾ **ಪಾರ್ಥಿವ** ಸಮುದ್ರನೇ ಎಂದು ಹೇಳಲು ಕಷ್ಟವಾಗುವುದು.

ಅಗ್ನಿಂ ವಿಶ್ವಾ ಅಭಿ ಪೃಕ್ಷಃ ಸಚಂತೇ ಸಮುದ್ರಂ ನ ಸ್ರವತಃ ಸಪ್ತ ಯಹ್ವೀಃ ।

(ಋ. ಸಂ ೧-೭೧-೬)

ಸಂ ಯಂ ಸ್ತುಭೋ೭ವನಯೋ ನ ಯಂತಿ ಸಮುದ್ರಂ ನ ಸ್ರವತೋ ರೋಧಚಕ್ರಾಃ ।

(ಋ ಸಂ. ೧೦-೯೦ ೬)

ಯಾ ಆಪೋ ದಿವ್ಯಾ ಉತ ವಾ ಸ್ರವಂತಿ ಖನಿತ್ರಿಮಾ ಉತ ವಾ ಯಾಃ ಸ್ವಯಂಜಾಃ ।
ಸಮುದ್ರಾರ್ಥಾ ಯಾಃ ಶುಚಯಃ ಪಾವಕಾಸ್ತಾ ಆಪೋ ದೇವೀರಿಹ ಮಾಮವಂತು ।

(ಋ ಸಂ ೭-೪೯-೨)

ಇತ್ಯಾದಿ ನಾನಾ ಋಕ್ಕುಗಳಲ್ಲಿ ಪಾರ್ಥಿವಸಮುದ್ರವೆಂದು ನಿಸ್ಸಂಶಯವಾಗಿ ಹೇಳಬಹುದು ಕೆಲವು ಕಡೆಗಳಲ್ಲಿ ಈ ಪದವು ವಿಶೇಷಣವಾಗಿ ಉಪಯೋಗಿಸಲ್ಪಟ್ಟು **ಸ್ರವಿಸತಕ್ಕ** ಎಂಬರ್ಥವನ್ನು ಕೊಡುತ್ತದೆ

ಅದ್ಭಿರ್ಯಾತಿ ವರುಣಃ ಸಮುದ್ರೈರ್ಯುಷ್ಮಾ ಇಚ್ಛಂತಃ ಶವಸೋ ನಪಾತಃ ।

(ಋ. ಸಂ. ೧೧೬೧ ೪)

ಎಂಬ ಋಕ್ಕಿನಲ್ಲಿ **ಸಮುದ್ರೈಃ** ಸಮುಂದನಸ್ವಭಾವೈಃ **ಅದ್ಭಿಃ** ಸ್ರವಿಸತಕ್ಕ ಸ್ವಭಾವವುಳ್ಳ ಉದಕಗಳಿಂದನೆ ಎಂದರ್ಥ. ಹೀಗೆಯೇ ಸಂದರ್ಭಾನುಸಾರವಾಗಿ ಅರ್ಥಮಾಡಬೇಕು

ಭೂರಿಜನ್ಮಾ---ಬಹುವಿಧಜನನೋ ನಾನಾಯಜ್ಞೇಷ್ವಾಹವನೀಯಾದಿಭಾವೇನ ಬಹುಜನನಃ **ಸೋ೭ಗ್ನಿಃ** । ಅನೇಕ ಜನ್ಮಗಳುಳ್ಳ ಅಗ್ನಿಯು ಏಂದರ್ಥವು. ಅನೇಕ ಯಜಮಾನರು ತಮ್ಮ ತಮ್ಮ ಅನೇಕವಾದ ಯಜ್ಞಗಳಲ್ಲಿ ಅರಣಿಗಳಲ್ಲಿ ಅಗ್ನಿಯನ್ನು ಬೇರೆಬೇರೆ ಕಡೆದು ಆಹವನೀಯಾದಿಸ್ಥಾನಗಳಲ್ಲಿ ಸ್ಥಾಪಿಸುವರು. ಅನೇಕ ಯಜ್ಞಗಳಲ್ಲಿ ಅಗ್ನಿಯನ್ನು ಕಡೆದು ಉತ್ಪತ್ತಿಮಾಡುವುದರಿಂದ ಅಗ್ನಿಯನ್ನು **ಭೂರಿಜನ್ಮಾ**---ಅನೇಕಜನ್ಮವುಳ್ಳವನೆಂದು ಕರೆಯುವುದು ಸಹಜವಾಗಿದೆ.

ಏಕಃ---ಅಸಹಾಯನು. ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸದೆ ಯಾವ ಕಾರ್ಯವನ್ನಾದರೂ ತಾನೊಬ್ಬನೇ ನಿರ್ವಹಿಸುವ ಸಾಮರ್ಥ್ಯವುಳ್ಳವನು.

ಅಸ್ಮತ್ ಹೃದಃ ವಿ ಚಷ್ಟೇ—ಅಸ್ಮಾಕಂ ಹೃದಯಾನ್ಯಭಿಲಷಿತಾನಿ ಜಾನಾತಿ । ಈ ಅಗ್ನಿಯು ಯಜ್ಞಮಾಡುವ ಅಥವಾ ಸ್ತೋತ್ರಮಾಡುವ ನಮ್ಮ ಹೃದಯದಲ್ಲಿ ಎಂದರೆ ಮನಸ್ಸಿನಲ್ಲಿರುವ ಅಭಿಲಾಷೆಗಳನ್ನು ತಿಳಿಯುವನು ಒಬ್ಬರ ಮನಸ್ಸಿನಲ್ಲಿರುವುದನ್ನು ಮತ್ತೊಬ್ಬರು ತಿಳಿಯಲು ಸಾಧ್ಯವಿಲ್ಲವಷ್ಟೆ. ಆದರೆ ಅಗ್ನಿಗೆ ಇನ್ನೊಬ್ಬರ ಮನಸ್ಸಿನಲ್ಲಿರುವುದನ್ನೂ ತಿಳಿಯುವ ಸಾಮರ್ಥ್ಯವಿರುವುದು

ನಿಷ್ಕೋಃ ಉಪಸ್ಥೇ ಊಧಃ ಸಿಷಕ್ತಿ—ಈ ವಾಕ್ಯಕ್ಕೆ ಎರಡುವಿಧವಾದ ಅರ್ಥವನ್ನು ನಿರೂಪಿಸಿರುವರು. ಸ್ತೋತ್ರಸ್ತೋತ್ರಿಗಳಲ್ಲಿ ಅವೃತವಾದ ಪ್ರಾತಃಸಾಯಂಕಾಲಗಳ ಸಮೀಪದಲ್ಲಿ ರಾತ್ರಿಯನ್ನು ಸೇವಿಸುತ್ತಾನೆ ಎಂದರೆ ಸಮೀಪಿಸುತ್ತಾನೆ. ಪ್ರಾತಃಕಾಲದಲ್ಲಿ ಬೆಳಕಿರುವುದು ಸಾಯಂಕಾಲದಲ್ಲಿ ಕತ್ತಲೆ ಇರುವುದು ರಾತ್ರಿಯು ಇವರಡಕ್ಕೂ ಸಂಬಂಧಿಸಿದಂತೆ ಇರುವುದು ಎಂದರೆ ರಾತ್ರಿಯ ಪ್ರಾರಂಭದಲ್ಲಿ ಕತ್ತಲೆಯಿಂದ ಕೂಡಿದ ಸಾಯಂಕಾಲವೂ ರಾತ್ರಿಯ ಕೊನೆಯಲ್ಲಿ ಬೆಳಕಿನಿಂದ ಕೂಡಿದ ಪ್ರಾತಃಕಾಲವೂ ಇರುವುದು ಆದ್ದರಿಂದ ಸಾಯಂ ಪ್ರಾತಃಕಾಲಗಳೆಂಬ ಸಂಬಂಧವುಳ್ಳ ರಾತ್ರಿಯಲ್ಲಿ ಅಗ್ನಿಯು ಬೆಳಗುತ್ತಾನೆ ಎಂದಭಿಪ್ರಾಯವು ಇದು ಒಂದುವಿಧವಾದ ಅರ್ಥವು **ನಿಷ್ಕೋಃ** ಎಂದರೆ ಅಂತರ್ಹಿತವಾದ ಅಂತರಿಕ್ಷವೆ ಎಂದರ್ಥವು ಈ ಅಂತರಿಕ್ಷದಲ್ಲಿರುವ ಮೇಘದಲ್ಲಿ ಅಗ್ನಿಯು ವಿದ್ಯುದ್ರೂಪದಿಂದ ಬೆಳಗುತ್ತಿರುವನು ಎಂದು ಇನ್ನೊಂದು ವಿಧವಾದ ಅರ್ಥವು.

ಉತ್ಸಸ್ಯ ಮಧ್ಯೇ ನಿಹಿತಂ ಪದಂ ವೇಃ—ಈ ವಾಕ್ಯಕ್ಕೂ ಎರಡುವಿಧವಾದ ಅರ್ಥಗಳನ್ನು ಹೇಳಬಹುದು. ಉದಕಕ್ಕೆ ಧಾರಕವಾದ ಲೋಕದ ಮಧ್ಯದಲ್ಲಿ ಉದಕದ ಅಥವಾ ಅಂತರಿಕ್ಷ ಸ್ಥಾನದಲ್ಲಿ ಇರುವ ಮಾಧ್ಯಮಿಕಾ ವಾಕ್ಕೆಂಬ ಸ್ಥಾನಕ್ಕೆ ಅಥವಾ ಉದಕದಿಂದ ಕೂಡಿದ ಮೇಘದ ಮಧ್ಯದಲ್ಲಿರುವ ನಿನ್ನ ಸ್ವರೂಪವೇ ಆದ ವಿದ್ಯುದಗ್ನಿಸ್ಥಾನಕ್ಕೆ ಹೋಗು ಎಂದಭಿಪ್ರಾಯವು

॥ ಸಂಹಿತಾಪಾಠಃ॥

ಸಮಾನಂ ನೀಳಂ ವೃಷಣೋ ವಸಾನಾಃ ಸಂ ಜಗ್ಮಿರೇ ಮಹಿಷಾ ಅರ್ವತೀಭಿಃ ॥

ಋತಸ್ಯ ಪದಂ ಕವಯೋ ನಿ ಪಾಂತಿ ಗುಹಾ ನಾಮಾನಿ ದಧಿರೇ ಪರಾಣಿ ॥

॥ ಪದಪಾಠಃ ॥

ಸಮಾನಂ । ನೀಳಂ । ವೃಷಣಃ । ವಸಾನಾಃ । ಸಂ । ಜಗ್ಮಿರೇ । ಮಹಿಷಾಃ । ಅರ್ವತೀಭಿಃ ॥

ಋತಸ್ಯ । ಪದಂ । ಕವಯಃ । ನಿ । ಪಾಂತಿ । ಗುಹಾ । ನಾಮಾನಿ । ದಧಿರೇ । ಪರಾಣಿ ॥ ೨ ॥

॥ ಸಾಯಣಭಾಷ್ಯಂ ॥

ವೃಷಣ ಆಪ್ತುತೀನಾಂ ಸೇಕ್ತಾರಃ ಸಮಾನಮೇಕಂ ನೀಳಂ ಸ್ಥಾನಮುಗ್ರಂ ವಸಾನಾ ಮಂತ್ರಿತ ಅಚ್ಛಾದಯಂತೋ ಮಹಿಷಾ ಮಹಾಂತೋ ಯಜಮಾನಾ ಅರ್ವತೀಭಿರ್ಹವಿರ್ಭಿಃ ಸಂ ಜಗ್ಮಿರೇ ।

ಸವುಗಚ್ಛಂತ । ಅಶ್ವವಂತೋಽಭೂವನ್ । ಯದ್ವಾ । ಅಗ್ನಿಮೇವಾತ್ಮೀಯಯಜ್ಞಂ ಪ್ರತ್ಯಾಗಂತುಂ ರೋಹಿದಾಖ್ಯಾಭಿರ್ವಡವಾಭಿಃ ಸಂಯೋಜಿತವಂತಃ । ತಥಾ ಕವಯೋ ಮೇಧಾವಿನ ಋತಸ್ಯೋದಕಸ್ಯ ಪದಮಾವಾಸಸ್ಥಾನಮಗ್ನಿಂ ನಿ ಪಾಂತಿ । ನಿತರಾಂ ರಕ್ಷಂತಿ । ಹವಿರ್ಭಿಃ ಸ್ತುತಿಭಿಶ್ಚಾರಾಧಯಂತೀತ್ಯರ್ಥಃ । ತತೋ ಗುಹಾ ಗುಹಾಯಾಮಂತರಿಕ್ಷೇ ಸ್ಥಿತಾನಿ ದಿವ್ಯಾನಿ ನಾಮಾನ್ಯುದಕಾನಿ ದಧಿರೇ । ಧಾರಯಂತಿ । ಯದ್ವಾ ಗುಹಾ ಗೂಢೇ ಸಂವೃತೇ ಹೃದಯೇ ಪರಾಣಿ ಪ್ರಧಾನಾನ್ಯಗ್ನಿರ್ಜಾತವೇದಾ ವೈಶ್ವಾನರ ಇತ್ಯಾದೀನಿ ನಾಮಾನಿ ದಧಿರೇ । ಕುರ್ವಂತಿ । ಸ್ತುವಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ವೃಷಣಃ—ಆಹುತಿಗಳನ್ನರ್ಪಿಸುವವರೂ । **ಸಮಾನಂ**—ಎಲ್ಲರಿಗೂ ಸಮಾನವಾದ । **ನೀಳಂ**—ಪೂಜಾಸ್ಥಾನವಾದ ಅಗ್ನಿಯನ್ನು । **ವಸಾನಾಃ**—ಮಂತ್ರಗಳಿಂದ ಆಚ್ಛಾದಿಸುವವರೂ । **ಮಹಿಷಾಃ**—ಮಹಾತ್ಮರೂ ಆದ ಯಜಮಾನರು । **ಅರ್ವತೀಭಿಃ**—ಅಶ್ವಗಳೊಂದಿಗೆ । **ಸಂ ಜಗ್ಮಿರೇ**—ಯೋಜಿಸಿದ್ದಾರೆ । **ಕವಯಃ**—ಮೇಧಾವಿಗಳು । **ಋತಸ್ಯ**—ಉದಕದ । **ಪದಂ**—ಸ್ಥಾನವನ್ನು । **ನಿ ಪಾಂತಿ**—ರಕ್ಷಿಸುತ್ತಾರೆ । **ಗುಹಾ**—ತಮ್ಮ ಗೂಢವಾದ ಹೃದಯದಲ್ಲಿ ಧ್ಯಾತನಾಗುವ । **ಪರಾಣಿ ನಾಮಾನಿ**—ಅಗ್ನಿಯ ಉತ್ಕೃಷ್ಟವಾದ ನಾಮಗಳನ್ನು । **ದಧಿರೇ**—ಧರಿಸಿದ್ದಾರೆ.

॥ ಭಾವಾರ್ಥ ॥

ಆಹುತಿಗಳನ್ನರ್ಪಿಸುವವರೂ, ಎಲ್ಲರಿಗೂ ಸಮಾನವಾದ ಪೂಜಾಸ್ಥಾನವಾದ ಅಗ್ನಿಯನ್ನು ಮಂತ್ರಗಳಿಂದ ಆಚ್ಛಾದಿಸುವವರೂ ಮಹಾತ್ಮರೂ ಆದ ಯಜಮಾನರು ಅಶ್ವಗಳೊಂದಿಗೆ ಅಗ್ನಿಯನ್ನು ತಮ್ಮ ಯಾಗಕ್ಕೆ ಬರಲು ಯೋಜಿಸಿದ್ದಾರೆ ಮೇಧಾವಿಗಳು ಉದಕದ ಸ್ಥಾನವನ್ನು ರಕ್ಷಿಸುತ್ತಾರೆ. ತಮ್ಮ ಗೂಢವಾದ ಹೃದಯದಲ್ಲಿ ಧ್ಯಾತನಾಗುವ ಅಗ್ನಿಯ ಉತ್ಕೃಷ್ಟವಾದ ನಾಮಗಳನ್ನು ಧರಿಸಿದ್ದಾರೆ.

English Translation

Great (worshippers), showerers (of oblations) enveloping with their hymns the common dark (fire), have associated (him) with his horses (to the sacrifice) Sages, preserve (by oblations) the place of the water and support the divine rains in the vault (of heaven)

॥ ವಿಶೇಷವಿಷಯಗಳು ॥

ವೃಷಣಃ ಸಮಾನಂ ನೀಳಂ ವಸಾನಾಃ ಮಹಿಷಾಃ ಅರ್ವತೀಭಿಃ ಸಂ ಜಗ್ಮಿರೇ—ಈ ವಾಕ್ಯಕ್ಕೆ ಭಾಷ್ಯಕಾರರು ಎರಡು ವಿಧ ಅರ್ಥವಿವರಣೆ ಮಾಡಿದಾರೆ. ಅಗ್ನಿಗೆ ಆಹುತಿಯನ್ನರ್ಪಿಸುವವರೂ ಅಗ್ನಿಯನ್ನು ಮಂತ್ರಗಳಿಂದ ಆಚ್ಛಾದಿಸುವವರೂ ಎಂದರೆ ಸ್ತುತಿಸುವವರೂ ಆದ ಶ್ರೇಷ್ಠರಾದ ಯಜಮಾನರು ಅಶ್ವಗಳಿಂದ ಯುಕ್ತರಾಗಿ ಆದರು ಎಂದರೆ ಅಗ್ನಿಯ ಅನುಗ್ರಹದಿಂದ ಅಶ್ವಗಳನ್ನು ಪಡೆದರು. ಅಥವಾ ಅಗ್ನಿಯು ತಮ್ಮ ಯಜ್ಞಭೂಮಿಗೆ ಬರುವುದಕ್ಕಾಗಿ ರೋಹಿತ ಎಂಬ ಅಗ್ನಿಯ ಅಶ್ವಗಳಿಂದ ಅಗ್ನಿಯ ರಥವನ್ನು ಹೂಡಿದರು ಎಂದೂ ಅರ್ಥವು.

ಋತಸ್ಯ ಪದಂ ಕವಯಃ ನಿ ಪಾಂತಿ—ಮೇಧಾವಿಗಳಾದ ಋತ್ವಿಗ್ಜನರು ಉದಕದ ಉಪಾಸನಸ್ಥಾನವಾಗಿರುವ ಎಂದರೆ ಉದಕದಲ್ಲಿ ಆಶ್ರಯವನ್ನು ಪಡೆದಿದ್ದ ಅಗ್ನಿಯನ್ನು ಜೀವ್ಯಾಗಿ ರಕ್ಷಿಸುತ್ತಾರೆ ಎಂದರೆ ಹವಿರರ್ಪಣೆಯಿಂದಲೂ ಸ್ತೋತ್ರಪರನಗಳಿಂದಲೂ ಅಗ್ನಿಯನ್ನು ವಿಶೇಷವಾಗಿ ಆರಾಧಿಸುತ್ತಾರೆ.

ಗುಹಾ ನಾಮಾನಿ ದಧಿರೇ ಪರಾಣಿ—ಅಂತರಿಕ್ಷದಲ್ಲಿ ಇರುವ ದಿವ್ಯವಾದ ಎಂದರೆ ಸ್ವರ್ಗಪ್ರಯವಾದ ಉದಕವನ್ನು ಧರಿಸುತ್ತಾರೆ. ಅಥವಾ ಗೂಢ ಪ್ರದೇಶವಾದ ಹೃದಯಾಂತರಾಳದಲ್ಲಿ ಅಗ್ನಿಯು ವಿವಿಧನಾಮಗಳಾದ ಜಾತವೇದಾಃ, ವೈಶ್ವಾನರ ಮೊದಲಾದ ಹೆಸರುಗಳನ್ನು ಧ್ಯಾನಿಸಿ ಸ್ತುತಿಸುತ್ತಾರೆ ಎಂದೂ ಅರ್ಥಮಾಡಬಹುದು.

॥ ಸಂಹಿತಾಪಾಠ ॥

ಋತಾಯಿನೀ ಮಾಯಿನೀ ಸಂ ದಧಾತೇ ಮಿತ್ವಾ ಶಿಶುಂ ಜಜ್ಞತುರ್ವರ್ಧ-
ಯಂತೀ ॥
ವಿಶ್ವಸ್ಯ ನಾಭಿಂ ಚರತೋ ಧ್ರುವಸ್ಯ ಕವೇಶ್ಚಿತ್ತಂತುಂ ಮನಸಾ ವಿಯಂತಃ ॥

॥ ಪದಪಾಠಃ ॥

ಋತಯಿನೀ ಇತ್ಯೃತ್ಕಯಿನೀ । ಮಾಯಿನೀ ಇತಿ । ಸಂ । ದಧಾತೇ ಇತಿ । ಮಿತ್ವಾ । ಶಿಶುಂ ।
ಜಜ್ಞತುಃ । ವರ್ಧಯಂತೀ ಇತಿ ॥
ವಿಶ್ವಸ್ಯ । ನಾಭಿಂ । ಚರತಃ । ಧ್ರುವಸ್ಯ । ಕವೇಃ । ಚಿತ್ । ತಂತುಂ । ಮನಸಾ । ವಿಯಂತಃ ॥ ೩ ॥

॥ ಸಾಯಣಭಾಷ್ಯಂ ॥

ಋತಾಯಿನೀ ಋತವತ್ಯೌ ಸತ್ಯವತ್ಯೌ ಅತ ಏವ ಮಾಯಿನೀ ಪ್ರಜ್ಞಾವತ್ಯೌ ಕರ್ಮಯುಕ್ತೇ ವಾ ದ್ಯಾವಾಪೃಥಿವ್ಯೌ ಯಜ್ಞಸಾಧನಭೂತೇ ಅರಣೀ ವೇಮಮಗ್ನಿಂ ಸಂ ದಧಾತೇ । ಸಮ್ಯಗ್ಧಾರಯತಃ । ಅಗ್ನಿಂ ಸೂರ್ಯಾತ್ಮನಾ ಕೇವಲಾಗ್ನ್ಯಾತ್ಮನಾ ವಾ ಸಂ ದಧಾತೇ । ಮಿತ್ವಾ ಕಾಲಪರಿಮಾಣಂ ಕೃತ್ವಾ ಯದ್ವಾ ಸಂಪರಿಚ್ಛಿದ್ಯ ಶಿಶುಂ ತಂಸನೀಯಂ ಬಾಲಮಗ್ನಿಂ ಜಜ್ಞತುಃ । ಜನಯತಃ । ವರ್ಧಯಂತೀ ವರ್ಧಯಂತ್ಯೌ ದ್ಯಾವಾಪೃಥಿವ್ಯೌ । ಲೋಕೇ ಯಥಾ ಪರಿಚ್ಛೇದಾಯ ಪುತ್ರಂ ಪಿತರೌ ಜನಯತಸ್ತದ್ವತ್ । ತತೋ ವಿಶ್ವಸ್ಯ ಸರ್ವಸ್ಯ ಚರತೋ ಜಂಗಮಸ್ಯ ಧ್ರುವಸ್ಯ ಸ್ಥಾವರಸ್ಯ ಚ ಜಗತೋ ನಾಭಿಂ ನಾಭಿಭೂತಂ ಮಧ್ಯಂ ಪ್ರಧಾನಭೂತಂ ವಾ ಕವೇರ್ಮೇಧಾವಿನೋಽಗ್ನೇಸ್ತಂತುಂ ತನಿತಾರಂ ವೈಶ್ವಾನರಾಖ್ಯಮಂಶ-
ಮೇವ ಮನಸಾ ವಿಯಂತೋ ವಿವಿಧಂ ಗಚ್ಛಂತೋ ಮನುಷ್ಯಾಃ ಸುಖೇನ ಯುಜ್ಯಂತ ಇತಿ ಶೇಷಃ । ತಂ ವಯಂ ಯಜಾಮ ಇತಿ ॥

॥ ಪ್ರತಿಪದಾರ್ಥ ॥

ಋತಾಯಿನೀ—ಸತ್ಯಾತ್ಮಕರೂ । **ಮಾಯಿನೀ**—ಪ್ರಜ್ಞಾಯುತರೂ ಆದ ದಾವಾಪೃಥಿವಿಗಳು । **ಸಂದಧಾತೇ**—ಅಗ್ನಿಯನ್ನು ಧರಿಸಿದ್ದಾರೆ । **ಮಿತ್ವಾ**—ಕಾಲಪರಿಚ್ಛೇದಕರಾಗಿ । **ಶಿಶುಂ**—ಪುತ್ರರೂಪನಾದ ಅಗ್ನಿಯನ್ನು । **ಜಜ್ಞತುಃ ವರ್ಧಯಂತೀ**—ಉತ್ಪನ್ನಮಾಡಿದ್ದಾರೆ ಮತ್ತು ಅವನನ್ನು ಪುಷ್ಟಿಗೊಳಿಸಿದ್ದಾರೆ (ಅಥವಾ ಅವನನ್ನು ಪುಷ್ಟಿಗೊಳಿಸಿ ಉತ್ಪನ್ನಮಾಡಿದ್ದಾರೆ) । **ವಿಶ್ವಸ್ಯ**—ಸಕಲವಾದ । **ಚರತಃ**—ಚರಾತ್ಮಕವಾದ ಜಗತ್ತಿಗೂ । **ಧ್ರುವಸ್ಯ ಚಿತ್**—ಸ್ಥಿರವಾದ ವಿಶ್ವಕ್ಕೂ । **ನಾಭಿಂ**—ನಾಭಿಭೂತನಾದ । **ಕವೇಃ**—ಮೇಧಾವಿಯಾದ ಅಗ್ನಿಯ । **ತಂತುಂ**—ಪೃಶ್ನಿಸರ ಸಂಜ್ಞಕನಾದ ಅಂಶವನ್ನು । **ಮನಸಾ**—ಮನಸ್ಸಿನಲ್ಲಿಯೇ । **ವಿಯಂತಃ**—ಧ್ಯಾನಿಸುತ್ತ (ಅವನನ್ನು ಪೂಜಿಸೋಣ) ।

॥ ಭಾವಾರ್ಥ ॥

ಸತ್ಯಾತ್ಮಕರೂ ಪ್ರಜ್ಞಾಯುತರೂ ಆದ ದ್ಯಾವಾಪೃಥಿವಿಗಳು ತಮ್ಮ ಸಹಾಯವಲ್ಲಿ ಅಗ್ನಿಯನ್ನು ಧರಿಸಿದ್ದಾರೆ. ಕಾಲಪರಿಚ್ಛೇದಕರಾದ ಅವರು ಪುತ್ರರೂಪನಾದ ಅಗ್ನಿಯನ್ನು ಉತ್ಪನ್ನಮಾಡಿ ಬೆಳೆಸಿದ್ದಾರೆ ಸಕಲ ಚರಾಚರಾತ್ಮಕ ಹಾಗೂ ಜಗತ್ತಿಗೆಲ್ಲ ನಾಭಿಭೂತನಾದ ಮೇಧಾವಿಯಾದ ಅಗ್ನಿಯ ಪೃಶ್ನಿಸರಸಂಜ್ಞಕನಾದ ಅಂಶವನ್ನು ಮನಸ್ಸಿನಲ್ಲಿಯೇ ಧ್ಯಾನಿಸುತ್ತ ಅವನನ್ನು ಪೂಜಿಸೋಣ.

English Translation

The two observers of the truth, the two possessors of wisdom, (heaven and earth) sustain (this Agni) ; measuring the time, they have brought forth and reared a son ; and (men), pondering in their minds on that navel of the universe, movable and immovable, the thread of the sage (Agni, are blessed with happiness)

॥ ಸಂಹಿತಾಪಾಠಃ ॥

ಋತಸ್ಯ ಹಿ ವರ್ತನಯಃ ಸುಜಾತಮಿಷೋ ವಾಜಾಯ ಪ್ರದಿವಃ ಸಚಂತೇ ॥
ಅಧೀವಾಸಂ ರೋದಸೀ ವಾವಸಾನೇ ಘೃತೈರನ್ನೈರ್ವಾವೃಧಾತೇ
ಮಧೂನಾಂ ॥ ೪ ॥

॥ ಪದಪಾಠಃ ॥

ಋತಸ್ಯ । ಹಿ । ವರ್ತನಯಃ । ಸುಜಾತಂ । ಇಷಃ । ವಾಜಾಯ । ಪ್ರದಿವಃ । ಸಚಂತೇ ॥
ಅಧೀವಾಸಂ । ರೋದಸೀ ಇತಿ । ವವಸಾನೇ ಇತಿ । ಘೃತೈಃ । ಅನ್ನೈಃ । ವವೃಧಾತೇ ಇತಿ । ಮಧೂನಾಂ ।

। ಸಾಯಣಭಾಷ್ಯಂ ।

ಋತಸ್ಯ ಯಜ್ಞಸ್ಯ ವರ್ತನಯಃ ಪ್ರವರ್ತಕಾ ಇಷೋಽಭಿಲಷಿತಾನೀಚ್ಛಂತಃ ಪ್ರದಿವಃ ಪುರಾತನಾ ಋತ್ವಿಗ್ಯಜಮಾನಾಃ ಸುಜಾತಮಾಧಾನಕಾಲೇ ಸುಷ್ಠೂತ್ಪನ್ನಮಗ್ನಿಂ ವಾಜಾಯ ಬಲಾರ್ಥಮನ್ನಾರ್ಥಂ ವಾ ಸಚಂತೇ ಹಿಂ । ಸೇವಂತೇ ಖಲು । ಅಪಿ ಚ ವಾವಸಾನೇ ಸರ್ವಸ್ಯ ಜಗತ ಆಚ್ಛಾದಯಿತ್ರ್ಯೌ ರೋದಸೀ ದ್ಯಾವಾಪೃಥಿವ್ಯಾವಧೀವಾಸಂ ಯೋಽಧಿಸಕ್ಷತ್ಯಾದ್ಯತ್ವನಾ ನಿವಸಂತಂ । ಯದ್ವಾ । ಅಧಿರುಪಯರ್ಥೇ । ತ್ರಯಾಣಾಂ ಲೋಕಾನಾಮುಪರ್ಯಗ್ನಿವಿದ್ಯುದಾದಿತ್ಯತ್ವನಾ ನಿವಸಂತಂ । ಅಗ್ನಿಂ ನುಧೂನಾಮುದಕಾನಾಂ ಜನಯಿತ್ರೇನ ಸಂಬಂಧಿಭಿರ್ಘೃತೈರನ್ನೈಃ ಪುರೋಡಾಶಾದಿಭಿಶ್ಚ ವಾವೃಧಾತೇ । ವರ್ಧಯಾಂ ಚಕ್ರತುಃ । ವರ್ಧಯತಃ । ತಸ್ಮಾದ್ಯಯಮಪಿ ತಮಗ್ನಿಮಭಿಷ್ಟುಮ ಇತ್ಯಭಿಪ್ರಾಯಃ ॥

। ಪ್ರತಿಪದಾರ್ಥ ।

ಋತಸ್ಯ—ಯಜ್ಞಕ್ಕೆ । **ವರ್ತನಯಃ**—ಪ್ರವರ್ತಕರೂ । **ಇಷಃ**—ಅನ್ನೇಚ್ಛುಗಳೂ । **ಪ್ರದಿವಃ**—ಪುರಾತನರೂ ಆದ ಋತ್ವಿಗ್ಯಜಮಾನರು । **ಸುಜಾತಂ**—ಉತ್ತಮವಾದ ಉತ್ಪನ್ನವುಳ್ಳ, ಜಾಠರಾಗ್ನಿ । **ವಾಜಾಯ**—ಅನ್ನಲಾಭಾರ್ಥವಾಗಿ । **ಸಚಂತೇ ಹಿ**—ಸೇವಿಸುತ್ತಾರೆ । **ವಾವಸಾನೇ**—ಸಕಲ ಜಗತ್ತನ್ನೂ ಆವರಿಸುವ । **ರೋದಸೀ**—ದ್ಯಾವಾಪೃಥಿವಿಗಳು । **ಅಧೀವಾಸಂ**—ಲೋಕತ್ರಯದಲ್ಲಿಯೂ ರೂಪಸ್ಥೈರ್ಯವನ್ನು ಸೂಚಿಸುವ ಅಗ್ನಿಯನ್ನು । **ನುಧೂನಾಂ**—ಉದಕಕ್ಕೆ ಕಾರಣವಾದ । **ಘೃತೈಃ**—ಆಜ್ಯಾಹುತಿಗಳಿಂದಲೂ । **ಅನ್ನೈಃ**—ಪುರೋಡಾಶಾದಿಗಳಿಂದಲೂ । **ವಾವೃಧಾತೇ**—ಬೆಳೆಸುತ್ತಾರೆ ।

। ಭಾವಾರ್ಥ ।

ಯಜ್ಞಕ್ಕೆ ಪ್ರವರ್ತಕರೂ, ಅನ್ನೇಚ್ಛುಗಳೂ, ಪುರಾತನರೂ ಆದ ಋತ್ವಿಗ್ಯಜಮಾನರು ಉತ್ತಮವಾದ ಜಾಠರಾಗ್ನಿಯನ್ನು ಅನ್ನಲಾಭಾರ್ಥವಾಗಿ ಸೇವಿಸುತ್ತಾರೆ ಸಕಲ ಜಗತ್ತನ್ನು ಆವರಿಸುವ ದ್ಯಾವಾಪೃಥಿವಿಗಳು ರೂಪಸ್ಥೈರ್ಯವಿಧ್ಯಂದ ಮೂರು ಲೋಕವನ್ನೂ ವ್ಯಾಪಿಸಿರುವ ಅಗ್ನಿಯನ್ನು ಉದಕಕ್ಕೆ ಕಾರಣವಾದ ಆಜ್ಯಾಹುತಿಗಳಿಂದಲೂ ಪುರೋಡಾಶಾದ್ಯನ್ನಗಳಿಂದಲೂ ಬೆಳೆಸುತ್ತಾರೆ

English Translation

The ancient celebrators of the rite desiring (boons) wait on (Agni) rightly born, for the sake of food : the all-comprising heaven and earth cherish him, who abides above the heavens, with the sacrificial butter and food (produced) from the water

। ಸಂಹಿತಾಪಾಠಃ ।

ಸಪ್ತ ಸ್ವಸ್ಾರ ಋಷೀರ್ವಾವಶಾನೋ ವಿದ್ಾನ್ಪದ್ಾ ಉಜ್ಜಭಾರಾ ದೃಶೇ ಕಂ ॥
ಅಂತರ್ಯೇಮೇ ಅಂತರಿಕ್ಷೇ ಪುರಾಜಾ ಇಚ್ಛನ್ವಿಶ್ವಮವಿದತ್ಪೂಷಣಸ್ಯ ॥

॥ ಪದಪಾಠಃ ॥

ಸಪ್ತ । ಸ್ವಸ್ಯಾಃ । ಅರುಷೀಃ । ವಾವಶಾನಃ । ವಿದ್ವಾನ್ । ಮಧ್ವಃ । ಉತ್ । ಜಭಾರ । ದೃಶೇ । ಕಂ ॥

ಅಂತಃ । ಯೇಮೇ । ಅಂತರಿಕ್ಷೇ । ಪುರುಜಾಃ । ಇಚ್ಛನ್ । ವವ್ರಿಂ । ಅವಿದತ್ । ಪೂಷಣಸ್ಯ ॥ ೫ ॥

॥ ಸಾಯಣಭಾಷ್ಯಂ ॥

ವಾವಶಾನಃ ಕಾಮಯಮಾನೋ ವಾಶ್ಯಮಾನಃ ಸ್ತೋತೃಭಿಃ ಸ್ತೂಯಮಾನೋ ವಾ ವಿದ್ವಾನ್ ಸರ್ವಂ ಜಾನಾನಃ ಸೋಽಗ್ನಿರರುಷೀರಾರೋಚಮಾನಾಃ ಸಪ್ತ ಸಪ್ತಸಂಖ್ಯಾಕಾಃ ಸ್ವಸ್ಯಾಃ ಸ್ವಯಂಸಾರಿಣೀಃ ಕಾಲೀ ಕರಾಲೀ ಚೇತ್ಯಾದಿಕಾಃ ಸಪ್ತ ಜಿಹ್ವಾ ಮಧ್ವೋ ಮುದಕರಾದ್ಯಜ್ಞಾದುಜ್ಜಭಾರ । ಉಜ್ಜಹಾರ । ಊರ್ಧ್ವಂ ಪೃತವಾನ್ । ಯಜ್ಞೇ ಸ್ವತೇಜಸಾ ಪ್ರಾದುರ್ಭೂತ ಇತ್ಯರ್ಥಃ । ಕಮುರ್ಥಂ ಕಂ ಸುಖೇನ ಪೃಶೇ ಸರ್ವೇಷಾಮೇವ ಪದಾರ್ಥಾನಾಂ ದರ್ಶನಾರ್ಥಂ । ಕಂಚ ಪುರಾಜಾಃ ಪುರಾಜಾತಃ ಸೋಽಗ್ನಿರ್ದ್ಯಾವಾಪೃಥಿವ್ಯೋರಂತರ್ಮಧ್ಯೇಽಂತರಿಕ್ಷೇ ಸ್ಥಿತಸ್ತಾ ಜಿಹ್ವಾ ಯೇಮೇ । ನಿಯಮಿತವಾನ್ । ಸರ್ವತ್ರ ತೇಜೋಯುಕ್ತೋ ವರ್ತತ ಇತ್ಯರ್ಥಃ । ಅಪಿ ಚೇಚ್ಛನ್ಯಜಮಾನಾನ್ಯಾಮಯಮಾನೋಽಗ್ನಿಃ ಪೂಷಣಸ್ಯ । ಪೂಷೇತಿ ಪೃಥಿವೀನಾಮ । ಪಾರ್ಥಿವಸ್ಯ ಲೋಕಸ್ಯ ವವ್ರಿಂ ರೂಪಂ ಪೃಶ್ನಿವರ್ಣಮವಿದತ್ । ಪ್ರಾಯಚ್ಛತ್ । ಯದ್ವಾ । ಮೂರ್ಧಾ ಭುವೋ ಭವತಿ ನಕ್ತಮಗ್ನಿಸ್ತತಃ ಸೂರ್ಯೋ ಜಾಯತೇ ಪ್ರಾತರುದ್ಯನ್ । ಋ. ೧೦-೮೮-೬ । ಇತಿ ಮಂತ್ರಾಂತರೇ ದರ್ಶನಾದಾದಿತ್ಯಾತ್ಮನಾಗ್ನಿಃ ಸ್ತೂಯತೇ । ಕಾಮಯಮಾನಃ ಸೂರ್ಯಾತ್ಮಾಗ್ನಿಃ ಸಪ್ತಸಂಖ್ಯಾಕಾನ್ ಸ್ವಸ್ಯಾ ರಶ್ಮೀನ್ ಮಧ್ವಃ ಸಮುದ್ರೋದಕಾದುದ್ಧೃತವಾನ್ । ಪ್ರಾಪ್ತಃ । ಅಂತರಿಕ್ಷೇ ವಿದ್ಯುದಾತ್ಮನಾ ಸ್ಥಿತ್ವಾ ವೃಷ್ಟಿಲಕ್ಷಣಂ ರೂಪಂ ಪೃಥಿವ್ಯಾಃ ಪ್ರಯಚ್ಛತಿ ॥

॥ ಪ್ರತಿಪದಾರ್ಥ ॥

ವಾವಶಾನಃ—ಸ್ತುತಿಕರ್ತರಿಂದ ಪ್ರಶಂಸಿತನೂ । ವಿದ್ವಾನ್—ಸಕಲವನ್ನೂ ತಿಳಿದವನೂ ಆದ ಅಗ್ನಿಯು। ಅರುಷೀಃ—ಆಕರ್ಷಕಗಳಾದವೂ । ಸಪ್ತ—ಸಪ್ತ ಸಂಖ್ಯಾಕಗಳೂ । ಸ್ವಸ್ಯಾಃ—ಸ್ವಯಂ ಪ್ರಸಾರಕಗಳೂ ಆದ ಜ್ವಾಲೆಗಳನ್ನು । ಮಧ್ವಃ—ಯಜ್ಞಶಾಲೆಯಿಂದ । ಕಂ—ಸುಖವಾಗಿ । ದೃಶೇ—ಎಲ್ಲರಿಗೂ ಗೋಚರವಾಗಲು । ಉಜ್ಜಭಾರ—ಮೇಲೆತ್ತಿ ಹರಡಿದ್ದಾನೆ । ಪುರಾಜಾಃ—ಪೂರ್ವೋತ್ಪನ್ನನಾದ ಅಗ್ನಿಯು । ಅಂತಃ—ದ್ಯಾವಾಪೃಥಿವಿಗಳ ಮಧ್ಯಭಾಗವಾದ । ಅಂತರಿಕ್ಷೇ—ಅಂತರಿಕ್ಷದಲ್ಲಿ ಸ್ಥಿತನಾಗಿ । ಯೇಮೇ—ತನ್ನ ಜ್ವಾಲೆಗಳನ್ನು ನಿಯಮಿಸಿದ್ದಾನೆ । ಇಚ್ಛನ್—ಯಜಮಾನರನ್ನು ಅನುಗ್ರಹಿಸಲಪೇಕ್ಷಿಸಿ । ಪೂಷಣಸ್ಯ—ಪಾರ್ಥಿವಲೋಕಕ್ಕೆ । ವವ್ರಿಂ—ಪೃಶ್ನಿವರ್ಣದ ರೂಪವನ್ನು । ಅವಿದತ್—ಕೊಟ್ಟಿದ್ದಾನೆ.

॥ ಭಾವಾರ್ಥ ॥

ಸ್ತುತಿಕರ್ತರಿಂದ ಪ್ರಶಂಸಿತನೂ, ಸಕಲವನ್ನೂ ತಿಳಿದವನೂ ಆದ ಅಗ್ನಿಯು ಆಕರ್ಷಕಗಳಾದವೂ, ಸಪ್ತ ಸಂಖ್ಯಾಕಗಳೂ, ಸ್ವಯಂಪ್ರಸರಿಸುವುವೂ ಆದ ಜ್ವಾಲೆಗಳನ್ನು ಎಲ್ಲರಿಗೂ ಸುಖವಾಗಿ ಕಾಣಿಸುವಂತೆ ಯಜ್ಞಶಾಲೆ

ಯಿಂದ ಮೇಲೆತ್ತಿ ಹರಡಿದ್ದಾನೆ. ಪೂರ್ವೋತ್ಪನ್ನನಾದ ಅಗ್ನಿಯು ದ್ಯಾವಾಪೃಥಿವಿಗಳ ಮಧ್ಯಭಾಗವಾದ ಅಂತರಿಕ್ಷದಲ್ಲಿ ಸ್ಥಿತನಾಗಿ ತನ್ನ ಜ್ವಾಲೆಗಳನ್ನು ನಿಯಮಿಸಿದ್ದಾನೆ ಯಜಮಾನರನ್ನು ಅನುಗ್ರಹಿಸಲಪೇಕ್ಷಿಸಿ ಪಾರ್ಥಿವಲೋಕಕ್ಕೆ ಪೃಶ್ನಿವರ್ಣದ (ನಾನಾವರ್ಣದ) ರೂಪವನ್ನು ಕೊಟ್ಟಿದ್ದಾನೆ.

English Translation

The wise Agni glorified (by his worshippers) has from the sacrifice raised aloft, for the ready manifestation of (all things), the seven radiant sisters (flames); which when formerly engendered he restrained in the firmament, until desirous of (adorers) he bestowed form upon the region of the earth.

॥ ವಿಶೇಷವಿಷಯಂಗಳು ॥

ನಾವಶಾನಃ—ಈ ಶಬ್ದಕ್ಕೆ ಯಾಸ್ಕರು **ನಾವಶಾನೋ ವಶ್ಚೇರ್ವಾ ನಾಶ್ಯತೇರ್ವಾ ಸಪ್ತ ಸ್ವಸ್ರಾ ರಾರುಷೀರ್ವಾನಶಾನಃ ಇತ್ಯಪಿ ನಿಗಮೋ ಭವತಿ** (ನಿ. ೫-೮) ಎಂದು ನಿರ್ವಚನವನ್ನು ಹೇಳಿದ್ದಾರೆ ನಾವಶಾನ ಎಂಬ ಶಬ್ದವು ಅಸೇಕ್ಷೆಸು ಎಂಬರ್ಥವುಳ್ಳ **ವಶ್** ಧಾತುವಿನಿಂದಾಗಲಿ, ಶಿಷ್ಟ ಯಾಗ ಶಬ್ದವಾಡು ಎಂಬರ್ಥವುಳ್ಳ **ನಾಶ್** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು ಆದ್ದರಿಂದ **ನಾವಶಾನ** ಎಂಬ ಶಬ್ದಕ್ಕೆ ಅಸೇಕ್ಷೆಸುವ ಎಂದಾಗಲಿ ಶಬ್ದಮಾಡುವ ಎಂದರ್ಥವು

॥ ಸಂಹಿತಾಪಾಠ ॥

ಸಪ್ತ ಮರ್ಯಾದಾಃ ಕವಯಸ್ತತಕ್ಷುಸ್ತಾಸಾಮೇಕಾಮಿದಭ್ಯಂಹುರೋ-
ಗಾತ್ ॥
ಆಯೋರ್ಹ ಸ್ಕಂಭ ಉಪಮಸ್ಯ ನೀಳೇ ಪಥಾಂ ವಿಸರ್ಗೇ ಧರುಣೇಷು
ತಸ್ಥೌ ॥ ೬ ॥

॥ ಪದಪಾಠ ॥

ಸಪ್ತ । ಮರ್ಯಾದಾಃ । ಕವಯಃ । ತತಕ್ಷುಃ । ತಾಸಾಂ । ಏಕಾಂ । ಇತ್ । ಅಭಿ । ಅಂಹುರಃ । ಗಾತ್ ॥
ಆಯೋಃ । ಹ । ಸ್ಕಂಭಃ । ಉಪಮಸ್ಯ । ನೀಳೇ । ಪಥಾಂ । ವಿಸರ್ಗೇ । ಧರುಣೇಷು । ತಸ್ಥೌ ॥ ೬ ॥

॥ ಸಾಯಣಭಾಷ್ಯಂ ॥

ಕವಯೋ ಮೇಧಾವಿನ ಋಷಯಃ ಸಪ್ತ ಮರ್ಯಾದಾಃ ಕಾಮಜೇಭ್ಯಃ ಕ್ರೋಧಜೇಭ್ಯಶ್ಚೋದ್ಧೃತಾಃ ಪಾನಮಕ್ಷಾಃ ಸ್ತ್ರಿಯೋ ಮೃಗಯಾ ದಂಡಃ ಪಾರುಷ್ಯಮನ್ಯದೂಷಣಮಿತಿ ಸಪ್ತ ಮರ್ಯಾದಾಃ । ಯದ್ವಾ । ಸ್ತೇಯಂ ಗುರುತಲ್ಪಾರೋಹಣಂ ಬ್ರಹ್ಮಹತ್ಯಾಂ ಸುರಾಪಾನಂ ದುಷ್ಕೃತೆ-

ಕರ್ಮಣಃ ಪುನಃಪುನಃಸೇವಾಂ ಪಾತಕೇಽನೃತೋದ್ಯಂ । ನಿ. ೬-೨೭ । ಇತಿ ನಿರುಕ್ತೇ ನಿರ್ದಿಷ್ಟಾಃ ಸಪ್ತ ಮರ್ಯಾದಾಃ । ಅವಸ್ಥಿತಾಸ್ತತಕ್ಷುಃ । ತಕ್ಷತಿಃ ಕರೋತಿಕರ್ಮಾ । ಸುಷ್ಠು ಲಂಘನೀಯಾಶ್ಚಕ್ರುಃ ತ್ಯಕ್ತವಂತ ಇತ್ಯರ್ಥಃ । ತಾಸಾಂ ಮರ್ಯಾದಾನಾಮೇಕಾಮಿದೇಕಾಮೇವಾಂಹುರಃ ಪಾಪವಾನ್ ಪುರುಷೋಽಭಿ ಗಾತ್ । ಅಭಿಗಚ್ಛತಿ ಯಸ್ತ್ವೇವಂ ಕರೋತಿ ಸ ಪಾಪವಾನ್ಭವತೀತ್ಯರ್ಥಃ । ಕಂಚಾ-ಯೋಸ್ತಸ್ಯ ಮನುಷ್ಯಸ್ಯ ಸ್ಕಂಭಃ ಸ್ಕಂಭಯಿತಾ ನಿರೋಧಕೋಽಗ್ನಿರುಪಮಸ್ಯ ಸಮೀಪಭೂತಸ್ಯಾಯೋ-ನೀಳೇ ಸ್ಥಾನೇ ಪಥಾಮಾದಿತ್ಯರೂಪಸ್ಯ ಸ್ವಸ್ಯ ರಶ್ಮೀನಾಂ ವಿಸರ್ಗೇ ವಿಸರ್ಜನಸ್ಥಾನೇಽಂತರಿಕ್ಷಮಧ್ಯೇ ವರ್ತಮಾನೇಷು ಧರುಣೇಷೂದಕೇಷು ತಸ್ಥೌ । ವಿದ್ಯುದಾತ್ಮನಾ ತಿಷ್ಠತಿ ಅನೇನ ಲೋಕತ್ರಯವರ್ತಿ-ತ್ವಮಿತಿ ॥

॥ ಪ್ರತಿಪದಾರ್ಥ ॥

ಕವಯಃ—ಮೇಧಾವಿಗಳಾದ ಋಷಿಗಳು । ಸಪ್ತ ಮರ್ಯಾದಾ —ಏಳುವಿಧವಾದ ನೀತಿನಿಯಮಗಳನ್ನು । ತತಕ್ಷುಃ—ನಿಯಮಿಸಿದ್ದಾರೆ (ಏಳುವಿಧವಾದ ಪಾಪಗಳನ್ನೂ ತೋರಿಸಿ ಅವನ್ನು ನಿರೋಧಿಸಿದ್ದಾರೆ) । ತಾಸಾಂ—ಅವುಗಳಲ್ಲಿ । ಏಕಾಂ ಇತ್—ಒಂದೊಂದನ್ನು ಮಾತ್ರ ಆಚರಿಸಿದರೂ । ಆಂಹುರ —ವುರುಷನು ಪಾಪಿಷ್ಠನಾಗಿ । ಅಭಿ ಗಾತ್—ಆಗುತ್ತಾನೆ । ಆಯೋ—ಮಾನವನಿಗೆ । ಸ್ಕಂಭಃ—ಆ ಪಾಪನಿರೋಧಕನಾದ ಅಗ್ನಿಯು । ಉಪಮಸ್ಯ—ಸಮೀಪಸ್ಥವಾದ । ನೀಳೇ— ಸ್ಥಾನದಲ್ಲಿಯೂ । ಪಥಾಂ—ಆದಿತ್ಯನ ರಶ್ಮಿಗಳಿಗೆ । ವಿಸರ್ಗೇ—ಪ್ರಸಾರಸ್ಥಾನವಾದ ಅಂತರಿಕ್ಷದಲ್ಲಿಯೂ । ಧರುಣೇಷು—ಉದಕಗಳಲ್ಲಿಯೂ । ತಸ್ಥೌ—ಸ್ಥಿತನಾಗಿದ್ದಾನೆ ।

॥ ಭಾವಾರ್ಥ ॥

ಮೇಧಾವಿಗಳಾದ ಋಷಿಗಳು ಸುರಾಪಾನ, ದ್ಯೂತ ಇತ್ಯಾದಿ ಏಳುವಿಧವಾದ ಪಾಪಗಳನ್ನೂ ನಿರ್ದೇಶಿಸಿ ಅವನ್ನು ನಿರೋಧಿಸುವ ನೀತಿಗಳನ್ನು ನಿಯಮಿಸಿದ್ದಾರೆ. ಅವುಗಳಲ್ಲಿ ಒಂದೊಂದನ್ನೇ ಮಾತ್ರ ಆಚರಿಸಿದರೂ ಮಾನವನು ಪಾಪಿಷ್ಠನಾಗಿ ಆಗುತ್ತಾನೆ. ಮಾನವನಿಗೆ ಆ ಪಾಪನಿರೋಧಕನಾದ ಅಗ್ನಿಯು ಸಮೀಪಸ್ಥವಾದ ಸ್ಥಾನದಲ್ಲಿಯೂ ಆದಿತ್ಯನ ರಶ್ಮಿಗಳಿಗೆ ಪ್ರಸಾರಸ್ಥಾನವಾದ ಅಂತರಿಕ್ಷದಲ್ಲಿಯೂ ಸ್ಥಿತನಾಗಿದ್ದಾನೆ.

English Translation

The wise have established seven rules of conduct ; he is a sinner who deviates from any one of them Agni is the obstructor of (that) man, he abides in the dwelling of his neighbour, in the region of the scattering of the rays, and in the recipient (waters).

॥ ವಿಶೇಷವಿಷಯಗಳು ॥

ಸಪ್ತಮರ್ಯಾದಾಃ—ಈ ಮಂತ್ರದಲ್ಲಿ ಮಾನವನು ಆಚರಿಸಬಹುದಾದ ಪಾಪದ ಸ್ವರೂಪವನ್ನೂ ಅದರ ಪ್ರಭೇದಗಳನ್ನೂ ತಿಳಿಸಿ ಇಂತಹ ಪಾಪವನ್ನು ತಡೆಗಟ್ಟುವ ಅಗ್ನಿಯ ಪ್ರಶಂಸೆಯಿರುತ್ತದೆ. ಆಧ್ಯಾತ್ಮಿಕತತ್ತ್ವಕ್ಕೂ ನೀತಿಯುತವಾದ ಮಾನವನ ಜೀವನಕ್ಕೂ ಸಂಬಂಧವನ್ನು ಸೂಚಿಸಿದೆ. ಸದಸದಾತ್ಮಕವಾದ ಸಕಲವಿಶ್ವಕ್ಕೂ ಮೂಲಭೂತನಾದ ಅಗ್ನಿಯು ಸೃಷ್ಟಿಗಿಂತಲೂ ಪೂರ್ವಭಾವಿಯೆಂದು ವರ್ಣಿಸಿ ಆ ಮೂಲತತ್ತ್ವದಿಂದಲೇ ಜಗತ್ತಿನ

ಸೃಷ್ಟಿಯೆಂದೂ, ಜಗತ್ತಿನ ವೈವಿಧ್ಯವೆಲ್ಲ ಆ ತತ್ತ್ವದ ಆವಿರ್ಭಾವವೇ ಎಂದೂ ವರ್ಣಿಸಿದೆ. ಈ ಮೂಲತತ್ತ್ವವು ಅಗ್ನಿರೂಪದಲ್ಲಿದ್ದು ಮಾನವನನ್ನು ಪಾಪವನ್ನಾಚರಿಸದಿರುವಂತೆ ತಡೆಯುತ್ತದೆಯೆಂದು ಅಗ್ನಿಯು ಪಾಪನಿರೋಧಕತ್ವವನ್ನು ಪ್ರಕೃತವಾದ ಮಂತ್ರದಲ್ಲಿ ಪ್ರಶಂಸಿಸಿದೆ.

ಸಪ್ತ ಮರ್ಯಾದಾಃ ಎಂಬುದರಿಂದ ಪಾಪದ ಪ್ರಭೇದಗಳನ್ನು ತಿಳಿಸಿದೆ. **ಮರ್ಯಾದಾಃ** ಎಂದರೆ **ಪಾಪ**ವೆಂದರ್ಥಮಾಡಿದೆ. ಸಾಧಾರಣವಾಗಿ, **ಮರ್ಯಾದಾ** ಎಂಬ ಪದಕ್ಕೆ **ಸೀಮಾ** ಎಲ್ಲೆ (Boundary) ಎಂದು ಲೌಕಿಕವಾದ ಪ್ರಯೋಗದಲ್ಲಿ ತಾತ್ಪರ್ಯವಿರುತ್ತದೆ **ಸೀತಿಯಸಿಯಮ ಅಧವಾ ಎಲ್ಲೆ** ಎಂದರ್ಥವಾಗುತ್ತದೆ. ಪ್ರಕೃತದಲ್ಲಿ ಪಾಪವೆಂದರ್ಥಮಾಡಿದರೆ **ಮರ್ಯ+ಅದ**—ಮಾನವನನ್ನು ತಿನ್ನತಕ್ಕದ್ದು ಎಂದು ತಾತ್ಪರ್ಯವಾಗುತ್ತದೆ.

ಈ ಪಾಪವು ಏಳುವಿಧವೆಂದು ತಿಳಿಸಿದೆ ಅವು ಯಾವುವೆಂದರೆ —

೧) **ಪಾನಂ**—ಮದ್ಯಾದಿ ನಿಷಿದ್ಧವಸ್ತುಗಳ ಪಾನವು.

೨) **ಅಕ್ಷಾ**—ಪಗಡೆ ಮುಂತಾದ ದ್ಯೂತಕೃತ್ಯ, ತದಂಗವಾದ ಪೋಸ

೩) **ಸ್ತ್ರಿಯಃ**—ಸ್ತ್ರೀ ವ್ಯಸನ, ತತ್ಪರಿಷ್ವಾಸುಗಳು

೪) **ಮೃಗಯಾ**—ಕಾಡಿನ ಜಂತುಗಳನ್ನು ಬೇಟೆಯಾಡಿ ಹಿಂಸಿಸುವುದು

೫) **ದಂಡಃ**—ಅನ್ಯಾಯವಾಗಿ ಇತರರನ್ನು ಶಿಕ್ಷಿಸುವುದು (ರಾಜದಂಡವಲ್ಲ)

೬) **ಪಾರುಷ್ಯಂ**—ಇತರರ ಮನಃಕ್ಲೇಶವಾಗುವಂತೆ ಕ್ರೂರಭಾಷಣ ಮತ್ತು ವ್ಯವಹಾರ.

೭) **ಅನೃದೂಷಣಂ**—ಇತರರನ್ನು ಅನ್ಯಾಯವಾಗಿ ದೂಷಿಸುವುದು.

ಸ್ತಸಮುತ್ಯದೆಗಳೆಂದು ಕರೆಯಲ್ಪಟ್ಟಿವೆ ಈ ಸಂಜ್ಞೆಗಳನ್ನು ವಿವರಿಸುತ್ತಾ ಸಾಯಣರು ಈ ಸಂದರ್ಭದಲ್ಲಿ ಉಕ್ತವಾಗಿರುವ ನಿರುಕ್ತಕಾರರ ವಾಕ್ಯವನ್ನೂ ಉದಹರಿಸಿದ್ದಾರೆ ಅಲ್ಲಿರುವ ಪರಿಸಂಖ್ಯಾನವು ಕೊಂಚ ವ್ಯತ್ಯಾಸವಾಗಿದೆ. ನಿರುಕ್ತವಾಕ್ಯದ ಪ್ರಕಾರ ಪಾಪಪ್ರಭೇದಗಳು ಈ ರೀತಿಯಲ್ಲಿರುತ್ತವೆ—

ಸಪ್ತೈವ ಮರ್ಯಾದಾಃ ಕವಯಶ್ಚಕ್ರುಸ್ತಾಸಾಮೇಕಾಮಪ್ಯಭಿಗಚ್ಛನ್ನಂಹಸ್ವಾನ್ ಭವತಿ । ಸ್ತೇಯಂತಲ್ಪಾ ರೋಹಣಂ ಬ್ರಹ್ಮಹತ್ಯಾಂ ಭ್ರೂಣಹತ್ಯಾಂ ಸುರಾಪಾನಂ ದುಷ್ಕೃತಸ್ಯ ಕರ್ಮಣಃ ಪುನಃಪುನಃಸೇವಾಂ ಪಾತಕೇಽನೃತೋದ್ಯಮಿತಿ ॥

(ನಿ ೬-೨೭)

೧) **ಸ್ತೇಯಂ**—ಕಳ್ಳತನವನ್ನು ಮಾಡುವುದು.

೨) **ತಲ್ಪಾರೋಹಣಂ**—ಗುರುಪತ್ನಿಯನ್ನು ಹೊಂದಿಸಿ ಅತಿಕ್ರಮ ಪ್ರವೇಶಮಾಡುವುದು.

೩) **ಬ್ರಹ್ಮಹತ್ಯಾ**—ಬ್ರಾಹ್ಮಣನನ್ನು ಕೊಲ್ಲುವುದು.

೪) **ಭ್ರೂಣಹತ್ಯಾ**—ಗರ್ಭಪಿಂಡವನ್ನು ನಾಶಮಾಡುವುದು

೫) **ಸುರಾಪಾನಂ**—ಮದ್ಯಾದಿ ನಿಷಿದ್ಧವಸ್ತುಗಳನ್ನು ಸೇವಿಸುವುದು.

೬) **ದುಷ್ಕೃತಸ್ಯ ಕರ್ಮಣಃ ಪುನಃಪುನಃಸೇವಾ**—ಕೆಟ್ಟಕೆಲಸವನ್ನು ಆಶ್ರಯಿಸಿ ಅದನ್ನು ಪದೇ ಪದೇ ಮಾಡುತ್ತಿರುವುದು.

೭) **ಅನೃತೋದ್ಯಂ**—ಪಾಪಕರ್ಮವನ್ನು ಸಮರ್ಥಿಸಲು ಸುಳ್ಳನ್ನು ಹೇಳುವುದು

ಈ ಏಳೂ ಮರ್ಯಾದೆಗಳೆಂದು ಕರೆಯಲ್ಪಟ್ಟವೆಯೆಂದು ನಿರುಕ್ತಕಾರರ ಮತ ಇವುಗಳಲ್ಲಿ ಒಂದೊಂದು ಪಾಪವನ್ನು ಮಾತ್ರ ಮಾಡಿದರೂ ಅವನು ಮಹಾ ಪಾತಕಿಯೆನಿಸುವನು.

ಛಾಂದೊಗ್ಯಾದಿಗಳಲ್ಲಿ ಪಾತಕವು ಐದುವಿಧವೆಂದು ನಿರ್ದೇಶಿಸಿದೆ. ಅವು ಯಾವುವೆಂದರೆ,

ಸ್ತೇನೋ ಹಿರಣ್ಯಸ್ಯ ಸುರಾಂ ಪಿಬಂಶ್ಚ ಗುರೋಸ್ತಲ್ಪಮಾವಸನ್ ಬ್ರಹ್ಮಹಾ (ಚೈತೇ ಪತಂತಿ ಚತ್ವಾರಃ) ಪಂಚಮಶ್ಚಾಚರಂಸ್ತೈಃ ಇತಿ ।

(ಛಾ. ಉ. ೫-೧೦-೯)

೧) ಚಿನ್ನವನ್ನು ಕದಿಯುವುದು, ೨) ಸುರಾಪಾನ ೩) ಗರುಪತ್ನಿಯೊಡನೆ ಅತಿಕ್ರಮಪ್ರವೇಶ ೪) ಬ್ರಹ್ಮ ಹತ್ಯೆ ಈ ನಾಲ್ಕು ಕರ್ಮವನ್ನು ಮಾಡುವವರು ಪತಿತರು. ಐದನೆಯದಾಗಿ, ೫) ಈ ನಾಲ್ಕು ಕರ್ಮಗಳನ್ನು ಮಾಡುವ ಪತಿತರೊಡನೆ ಸರ್ವದಾ ಸಂಪರ್ಕವನ್ನಿಟ್ಟುಕೊಂಡಿರುವುದು. ಈ ಐವರೂ ಪಾತಕಿಗಳು ಎಂದು ತಿಳಿಸಿದೆ. ಸಾಧಾರಣವಾಗಿ ಈ ಐದುವಿಧಗಳೇ ಧರ್ಮಶಾಸ್ತ್ರಾದಿಗಳಲ್ಲಿಯೂ ಪ್ರಸಿದ್ಧವಾಗಿವೆ ಧರ್ಮಶಾಸ್ತ್ರಾದಿಗಳಲ್ಲಿ ಈ ಪರಿಸಂಖ್ಯಾನಕ್ರಮಗಳನ್ನು ತಿಳಿಸುವುದು ಪ್ರಕೃತದಲ್ಲಿ ಅನುಚಿತವಾಗಲಾರದು.

ಮಹಾ ಪಾತಕಗಳು ಸಪ್ತವಿಧಗಳೆಂದು ಕೆಲವೆಡೆಗಳಲ್ಲಿಯೂ ಐದುವಿಧಗಳೆಂದು ಇನ್ನು ಕೆಲವೆಡೆಗಳಲ್ಲಿಯೂ ಪರಿಗಣಿತವಾಗಿವೆ. ಅವುಗಳಲ್ಲಿ **ಕಾಮಜ, ಕ್ರೋಧಜ** ಎಂದು ಎರಡು ಪ್ರಭೇದಗಳಿವೆಯೆಂದು ಸಾಯಣರ ವಾಕ್ಯವು ಸೂಚಿಸುತ್ತದೆ. ಧರ್ಮಶಾಸ್ತ್ರಾದಿಗಳಲ್ಲಿಯೂ ಸಹ ಈ ಎರಡು ವಿಧಗಳು ಸ್ಪಷ್ಟವಾಗಿ ತಿಳಿಸಲ್ಪಟ್ಟಿವೆ. ಅವುಗಳಲ್ಲಿ ಕಾಮಜವಾವುದು, ಕ್ರೋಧಜವಾವ್ರದು ಎಂಬುದರ ವಿಷಯವನ್ನು ಪರಿಶೀಲಿಸುತ್ತಾ ಯಾಜ್ಞವಲ್ಕ್ಯಸ್ಮೃತಿಯಲ್ಲಿ ಈ ರೀತಿ ತಿಳಿಸಿದೆ

ಮೇಲೆ ಹೇಳಿದಂತೆ ನಿರುಕ್ತದಲ್ಲಿಯೂ, ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿಯೂ ಮುಖ್ಯವಾದ ಪಾಪಕೃತ್ಯಗಳು ಏಳು ಎಂದು ಹೇಳಿದ್ದರೂ, ಪಾಪಗಳಲ್ಲಿ ಅನೇಕವಿಧವಿರುವುದನ್ನೂ ಪಾಪಮಾಡಿದವನು ಪವಮಾನಸೋಮದೇವತೆಯನ್ನು ಸ್ತುತಿಸುವ ೬೧೦ ಋಕ್ಕುಗಳನ್ನು ಎಂದರೆ ಋಗ್ವೇದ ಸಂಹಿತೆಯ ೯ ನೆಯ ಮಂಡಲದ ಪ್ರಾರಂಭದಲ್ಲಿರುವ ಗಾಯತ್ರೀ ಛಂದಸ್ಸಿನ ೬೧೦ ಋಕ್ಕುಗಳನ್ನೊಳಗೊಂಡಿರುವ ೧-೬೭ ಸೂಕ್ತಗಳನ್ನು ಗುರುಮುಖದಿಂದ ನಿಯಮವಾಗಿ ಅಧ್ಯಯನಮಾಡಿದಲ್ಲಿ ಅಂತಹ ಪುರುಷನ ನಾನಾವಿಧ ಪಾಪಗಳನ್ನು ಪರಿಹಾರಮಾಡಿ ಪರಿಶುದ್ಧನನ್ನಾಗಿ ಮಾಡುತ್ತೇನೆಂದು ವೇದಪುರುಷನೇ ಪರಿಶಿಷ್ಟಮಂತ್ರಗಳಲ್ಲಿ ಹೇಳಿದಾನೆ. ಅವುಗಳನ್ನು ಇಲ್ಲಿ ವಿವರಿಸಲಾಗಿದೆ.

ಋಷಯಸ್ತು ತಪಸ್ತೇಪುಃ ಸರ್ವೇ ಸ್ವರ್ಗಜಿಗೀಷವಃ ।
ತಪಂತಸ್ತಪಸೋಗ್ರೇಣ ಪಾವಮಾನೀರ್ಯಚೋಽಬ್ರುವನ್

(ಪರಿಶಿಷ್ಟ. ೧೪-೬)

ಪೂರ್ವದಲ್ಲಿ ಸ್ವರ್ಗವನ್ನು ಪಡೆಯಬೇಕೆಂಬ ಇಚ್ಛೆಯಿಂದ ಸಮಸ್ತ ಋಷಿಗಳೂ ಉಗ್ರವಾದ ತಪಸ್ಸನ್ನು ಮಾಡಿ ಈ ಪಾವಮಾನೀಋಕ್ಕುಗಳನ್ನು ಅಧ್ಯಯನಮಾಡಿ ಅವುಗಳ ಪಾಪಪರಿಹಾರಕವಾದ ಪ್ರಶಂಸೆಯನ್ನು ಈ ರೀತಿ ಮಾಡಿರುವರು.

ಯನ್ಮೇ ಗರ್ಭೇ ವಸತಃ ಪಾಪಮುಗ್ರಂ ಯಜ್ಜಾಯಮಾನಸ್ಯ ಚ ಕಿಂಚಿದನ್ಯತ್ ।
ಜಾತಸ್ಯ ಚ ಯಚ್ಚಾಪಿ ಚ ವರ್ಧತೋ ಮೇ ತತ್ಪಾವಮಾನೀಭಿರಹಂ ಪುನಾಮಿ ॥

(ಪರಿ. ೧೪-೬)

ಸರ್ವೇಶ್ವರನಾದ ವೇದಪುರುಷನು ಈ ರೀತಿ ಹೇಳುವನು—ಯಾವ ಪುರುಷನು ಗರ್ಭವಾಸದಲ್ಲಿರುವಾಗಲೂ, ಅನಂತರ ಹುಟ್ಟುವಾಗಲೂ, ಹುಟ್ಟಿದ ಮೇಲೆಯೂ ಬೆಳೆಯುತ್ತಿರುವಾಗಲೂ ಅತ್ಯುಗ್ರವಾದ ಪಾಪವನ್ನು ಮಾಡಿದ್ದರೂ ಅವನು ಪಾವಮಾನೀಮಂತ್ರಗಳನ್ನು ಅಧ್ಯಯನ ಮಾಡಿದಲ್ಲಿ ಅಂತಹ ಪಾಪಗಳೆಲ್ಲಾ ನಾಶಮಾಡಿ ಅವನನ್ನು ಪರಿಶುದ್ಧನನ್ನಾಗಿ ಮಾಡುತ್ತೇನೆ.

ಮಾತಾಪಿತ್ರೋರ್ಯನ್ನ ಕೃತಂ ವಚೋ ಮೇ ಯತ್ಸ್ಥಾವರಂ ಜಂಗಮಮಾಬಭೂವ ।
ವಿಶ್ವಸ್ಯ ತತ್ಪ್ರಹೃಷಿತಂ ವಚೋ ಮೇ ತತ್ಪಾವಮಾನೀಭಿರಹಂ ಪುನಾಮಿ ॥

(ಪರಿ. ೧೪-೮)

ತಂದೆತಾಯಿಗಳ ಮಾತನ್ನು ಮೀರಿದ ಪಾಪವನ್ನು ಸ್ಥಾವರ ಜಂಗಮಾತ್ಮಕವಾದ ಈ ಪ್ರಪಂಚದ ಯಾವ ಪ್ರಾಣಿಗೇ ಆಗಲಿ ಅಹಿತವನ್ನು ಬಯಸಿ ಆಡುವ ಮಾತಿನಿಂದ ಯಾವ ಪಾಪವು ಉಂಟಾಗುವುದೋ ಅಂತಹ ಪಾಪವನ್ನು ಪರಿಹರಿಸಿ ಪರಿಶುದ್ಧನನ್ನಾಗಿ ಮಾಡುತ್ತೇನೆ.

ಗೋಘ್ನಾತ್ ತಸ್ಕರತ್ವಾತ್ಸ್ತ್ರೀವಧಾದ್ಯಚ್ಚ ಕಿಲ್ಬಿಷಂ ।
ಪಾಪಕಂ ಚ ಚರಣೇಭ್ಯಸ್ತತ್ಪಾವಮಾನೀಭಿರಹಂ ಪುನಾಮಿ ॥

(ಪರಿ. ೧೪-೯)

ಗೋಹತ್ಯ, ಕಳ್ಳತನ, ಸ್ತ್ರೀಹತ್ಯ, ಕಾಲುಗಳಿಂದ ಪ್ರಾಣಿಗಳನ್ನು ತುಳಿದು ಹಿಂಸಿಸುವ ಕೃತ್ಯ ಇವುಗಳಿಂದ ಉಂಟಾಗ ಬಹುದಾದ ಪಾಪವನ್ನು ಪರಿಹರಿಸಿ ಶುದ್ಧನನ್ನಾಗಿ ಮಾಡುತ್ತೇನೆ.

ಬ್ರಹ್ಮವಧಾತ್ಸುರಾಪಾನಾತ್ಸ್ವರ್ಣಸ್ತೇಯಾದ್ವೃಷಲೀಗಮನಮೈಥುನಸಂಗಮಾತ್ ।
ಗುರೋರ್ದಾರಾಧಿಗಮನಾಚ್ಚ ತತ್ಪಾವಮಾನೀಭಿರಹಂ ಪುನಾಮಿ ॥

(ಪರಿ. ೧೪-೧೦)

ಬ್ರಹ್ಮಹತ್ಯ, ಮದ್ಯಪಾನ, ಚಿನ್ನವನ್ನು ಕದಿಯುವುದು, ತಂಗಿಗೆ ಮದುವೆಯಾಗಿದ್ದರೂ ತನಗೆ ಮದುವೆಯಾಗದಿರುವ ವೃಷಲಿ ಎಂಬ ಸ್ತ್ರೀಯನ್ನು ಸಂಗಮಾಡಿದ ಪಾಪ, ಗುರುವಿನ ಪತ್ನಿಯಲ್ಲಿ ಸಂಭೋಗಮಾಡಿದ ಪಾಪ ಇವುಗಳನ್ನೆಲ್ಲಾ ಪರಿಹರಿಸಿ ಶುದ್ಧನನ್ನಾಗಿಮಾಡುತ್ತೇನೆ.

ಬಾಲಘ್ನಾನ್ಮಾತೃಪಿತೃವಧಾದ್ಭೂಮಿತಸ್ಕರಾತ್ಸರ್ವವರ್ಣಗಮನಮೈಥುನಸಂಗಮಾತ್ ।
ಪಾಪೇಭ್ಯಶ್ಚ ಪ್ರತಿಗ್ರಹಾತ್ಪದ್ಯಃ ಪ್ರಹರತಿ ಸರ್ವದುಷ್ಕೃತಂ ತತ್ಸಾವಮಾನೀಭಿರಹಂ ಪುನಾಮಿ ॥

(ಸರಿ. ೧೮-೧೧)

ಬಾಲಕ್ಕಳನ್ನು ಕೊಲ್ಲುವುದು, ತಂದೆತಾಯಿಗಳನ್ನು ಕೊಲ್ಲುವುದು, ಹೊಲಗದ್ದೆ ಮೊದಲಾದ ಭೂಮಿಯನ್ನು ನೋಸದಿಂದ ಅಪಹರಿಸುವುದು. ಎಲ್ಲಾ ನೀಚಜಾತಿಯ ಸ್ತ್ರೀಯರೊಂದಿಗೆ ಸಂಗಮಾಡುವುದು, ದುರ್ದಾನವನ್ನು ಸ್ವೀಕರಿಸುವುದು, ಇತರ ಕೆಟ್ಟಕೆಲಸಗಳನ್ನು ಮಾಡುವುದು ಇವುಗಳಿಂದ ಯಾವಯಾವ ಪಾಪಗಳು ಸಂಭವಿಸುವವೋ ಆ ಪಾಪಗಳನ್ನೆಲ್ಲಾ ಪರಿಹರಿಸಿ ಪರಿಶುದ್ಧನನ್ನಾಗಿ ಮಾಡುತ್ತೇನೆ

ಕ್ರಯವಿಕ್ರಯಾದ್ಯೋನಿದೋಷಾದ್ಭಕ್ಷಾದ್ಭೋಜ್ಯಾತ್ಪ್ರತಿಗ್ರಹಾತ್ ।
ಅಸಂಭೋಜನಾಚ್ಚಾಪಿ ನೃಶಂಸಂ ತತ್ಸಾವಮಾನೀಭಿರಹಂ ಪುನಾಮಿ ।

(ಸರಿ ೧೮-೧೨)

ಅನ್ಯಾಯರೀತಿಯಿಂದ ಎಂದರೆ ಮೋಸದಿಂದ ಕೊಳ್ಳುವುದು, ಮಾರುವುದು, ಸಿಕ್ಕಿದ ಸ್ತ್ರೀಯರ ಸಂಗಮಾಡುವುದು, ತಿನ್ನಬಾರದ ಪದಾರ್ಥಗಳನ್ನು ತಿನ್ನುವುದು, ಸ್ವೀಕಾರಾರ್ಹವಲ್ಲದ ವಸ್ತುಗಳನ್ನು ಸ್ವೀಕರಿಸುವುದು, ಮನೆಗೆ ಬಂದ ಅತಿಥಿಯನ್ನು ಬಿಟ್ಟು ಭೋಜನಮಾಡುವುದು ಇವುಗಳಿಂದ ಸಂಭವಿಸುವ ಪಾಪಗಳನ್ನು ಪರಿಹರಿಸುತ್ತೇನೆ.

ದುರ್ಯಷ್ಟಂ ದುರಧೀತಂ ಪಾಪಂ ಯಚ್ಚಾಜ್ಞಾನತೋ ಕೃತಂ ।
ಅಯಾಜಿತಾಶ್ಚಾಸಂಯಾಜ್ಯಾಸ್ತತ್ಸಾವಮಾನೀಭಿರಹಂ ಪುನಾಮಿ ॥

(ಸರಿ. ೧೮-೧೩)

ಅಧ್ಯಯನಕ್ಕರ್ಹವಲ್ಲದ್ದನ್ನು ಓದಿ ಬೇರೆವಿಧವಾಗಿ ಯಜ್ಞಮಾಡುವುದು, ನಿಯಮರಹಿತವಾಗಿ ವೇದಾಧ್ಯಯನಮಾಡುವುದು ಅಜ್ಞಾನದಿಂದ ಮಾಡಿದ ಪಾಪ, ಯಜ್ಞವನ್ನು ಮಾಡಲು ಅರ್ಹರಲ್ಲದವರಿಗೆ ಯಜ್ಞಮಾಡಿಸುವುದು, ಯಜ್ಞಾರ್ಹರಿಗೆ ಮಾಡಿಸದಿರುವುದು ಈ ವಿಧವಾದ ದುಷ್ಕೃತ್ಯಗಳಿಂದ ಸಂಭವಿಸುವ ಪಾಪಗಳನ್ನು ಪರಿಹರಿಸಿ ಶುದ್ಧನನ್ನಾಗಿ ಮಾಡುತ್ತೇನೆ

ಅಮಂತ್ರಮನ್ನಂ ಯತ್ಕಿಂಚಿದ್ಭೂಯತೇ ಚ ಹುತಾಶನೇ ।
ಸಂವತ್ಸರಕೃತಂ ಪಾಪಂ ತತ್ಸಾವಮಾನೀಭಿರಹಂ ಪುನಾಮಿ ॥

(ಸರಿ. ೧೮-೧೪)

ಸಿಧ್ಮಕ್ಕಮಂತ್ರಪಠನಸಿಷ್ಟ ಅಥವಾ ತಪ್ಪುತಪ್ಪಾಗಿ ಮಂತ್ರವನ್ನು ಪಠಿಸುತ್ತಾ ಅಗ್ನಿಯಲ್ಲಿ ಹವಿಸ್ಸನ್ನು ಹೋಮ ಮಾಡುವುದರಿಂದ ಸಂಭವಿಸುವ ಪಾಪವನ್ನೂ, ಸಂವತ್ಸರದಲ್ಲಿ ಯಾವಯಾವ ಪಾಪಗಳನ್ನು ಮಾಡಿದ್ದರೂ ಅವೆಲ್ಲವನ್ನೂ ಪರಿಹಾರಮಾಡಿ ಅವನನ್ನು ಪರಿಶುದ್ಧನನ್ನಾಗಿ ಮಾಡುತ್ತೇನೆ.

ಋತಸ್ಯ ಯೋನಯೋಽಮೃತಸ್ಯ ಧಾಮ ವಿಶ್ವಾ ದೇವೇಭ್ಯಃ ಪುಣ್ಯಗಂಧಾಃ ।
ತಾ ನ ಆಪಃ ಪ್ರ ವಹಂತು ಪಾಪಂ ಶುದ್ಧಾ ಗಚ್ಛಾಮಿ ಸುಕೃತಾಮು ಲೋಕಂ ತತ್ಸಾವ-
ಮಾನೀಭಿರಹಂ ಪುನಾಮಿ ॥

(ಸರಿ. ೧೮-೧೫)

ಸತ್ಯ ಅಥವಾ ಯಜ್ಞಕ್ಕೆ ಮುಖ್ಯ ಆಧಾರಭೂತವೂ, ಶಾಶ್ವತವಾದ ಸ್ವರ್ಗದಲ್ಲಿ ನೆಲೆಸಿರುವವೂ, ದೇವತೆಗಳಿಗೆ ಪ್ರಿಯವನ್ನುಂಟುಮಾಡುವವೂ ಆದ ಸ್ವರ್ಗೀಯೋದಕಗಳು ನೀಲಿ ಹುಟ್ಟಿದ ಪಾಪಗಳನ್ನು ಕೊಚ್ಚಿಕೊಂಡು ಹೋಗಲಿ. ಆ ಪುರುಷನನ್ನು ಶುದ್ಧನನ್ನಾಗಿ ಮಾಡಿ ಉತ್ತಮ ಲೋಕವನ್ನು ಪಡೆಯುವಂತೆ ಮಾಡುವೆನು.

ನೀಲಿ ಹೇಳಿದ ಮಂತ್ರಗಳಲ್ಲಿ ನಾನಾವಿಧ ಪಾಪಗಳ ವರ್ಣನೆ ಇದೆ. ಪಾಪಗಳ ಸಂಖ್ಯೆಯು ಇಷ್ಟೇ ಇರಬಹುದೆಂದು ಯಾರೂ ಭಾವಿಸಬಾರದು. ಇನ್ನೂ ಎಷ್ಟೋ ವಿಧನಾದ ಪಾಪಗಳಿರುವವು. ಅವುಗಳನ್ನೆಲ್ಲ ಇಲ್ಲಿ ವಿವರಿಸುವುದು ಸಾಧ್ಯವಿಲ್ಲ ಮತ್ತು ಆವಶ್ಯಕತೆ ವಿವರಿಸುವುದು ಅಪ್ರಕೃತ. ಮುಖ್ಯವಾಗಿ ಎಲ್ಲಾವಿಧ ಪಾಪಗಳೂ ಮೇಲೆ ಹೇಳಿದ ಏಳು ವಿಧ ಪಾಪಗಳಲ್ಲಿಯೇ ಅಡಗಿರುವವು ಎಂದು ಭಾವಿಸಬೇಕು.

॥ ಸಂಹಿತಾಪಾಠಃ ॥

ಅಸಚ್ಚ॒ ಸಚ್ಚ॒ ಪರ॒ಮೇ ವ್ಯೋ॑ಮನ್ದ॒ಕ್ಷಸ್ಯ॒ ಜನ್ಮ॒ನ್ನದಿ॑ತೇ॒ರುಪ॒ಸ್ಥೇ ॥

ಅ॒ಗ್ನಿರ್ಹ॑ ನಃ ಪ್ರ॒ಥಮ॒ಜಾ ಋ॒ತಸ್ಯ॒ ಪೂರ್ವ॑ ಆ॒ಯುನಿ॑ ವೃ॒ಷಭ॑ಶ್ಚ ಧೇ॒ನುಃ ।

॥ ಪದಪಾಠಃ ॥

ಅಸ॑ತ್ । ಚ॒ । ಸತ್ । ಚ॒ । ಪರ॑ಮೇ । ವ್ಯೋ॑ಮನ್ । ದ॒ಕ್ಷಸ್ಯ॑ । ಜನ್ಮ॑ನ್ । ಅದಿ॑ತೇಃ । ಉ॒ಪ॒ಸ್ಥೇ ।

ಅ॒ಗ್ನಿಃ । ಹ॒ । ನ॒ಃ । ಪ್ರ॒ಥಮ॒ಜಾಃ । ಋ॒ತಸ್ಯ॑ । ಪೂರ್ವೇ॑ । ಆ॒ಯುನಿ॑ । ವೃ॒ಷಭ॑ಃ । ಚ॒ । ಧೇ॒ನುಃ ॥೨

॥ ಸಾಯಣಭಾಷ್ಯಂ ॥

ಅಸದವ್ಯಾಕೃತಂ ಸಚ್ಚ ವ್ಯಾಕೃತಂ । ಅಸದೇವೇದಮಗ್ರ ಆಸೀತ್ ತತ್ಸದಾಸೀತ ತತ್ಸಮಭವತ್ । ಛಾಂ. ಉ. ೩-೧೯-೧ ಇತಿ ಶ್ರುತೇಃ । ಸದಸದಾತ್ಮಕಂ ಜಗತ್ಸರ್ವಂ ಪರಮ ಉತ್ಕೃಷ್ಟೇ ಜ್ಞಾನಸಹಿತೇ ವ್ಯೋಮನ್ಪ್ರಕೃಷ್ಟೇ ವ್ಯೋಮನಿ ಕಾರಣಾತ್ಮನಿ ಜಾತಮಭೂತ್ಸದಾ । ಅದಿತೇಃ ಪೃಥಿವ್ಯಾ ಉಪಸ್ಥ ಉಪಸ್ಥಾನೇ ಸಮೀಪೇ ದಕ್ಷಸ್ಯ ಪ್ರಜಾಪತೇಃ । ಯದ್ವಾ । ದಕ್ಷಸ್ಯ । ಸ ತ್ರೇಧಾತ್ಮಾನಂ ವ್ಯಭಜತಾದಿತ್ಯಂ ತೃತೀಯಂ ವಾಯುಂ ತೃತೀಯಮಿತಿ ಶ್ರುತೇಃ । ತತೆ ೧೦-೬-೫-೩ । ತೃತೀಯಸ್ಯ ದ್ಯುಲೋಕಸ್ಯಾಧಿಷ್ಠಾತೃತ್ವಾದಾದಿತ್ಯಸ್ಯ ಜನ್ಮೋಚ್ಯತೇ । ತತ ಏವಂ ಸತಿ ಮನುಷ್ಯಸ್ಯ ಸೃಷ್ಟಿಕ್ರಮಾತ್ಪೂರ್ವಮಗ್ನಿರ್ಹಾಗ್ನಿರೇವತರ್ಷಸ್ಯ ಕರ್ಮಫಲಸ್ಯ ಭೋಕ್ತೃಣಾಂ ನೋಽಸ್ಮಾಕಂ ಪ್ರಥಮಜಾಃ ಪ್ರಥಮಜಾತಃ ಸನುತ್ಪನ್ನಃ । ತೇಜೋ ರಸೋ ನಿರವರ್ತತಾಗ್ನಿಃ । ತತೆ ೧೮-೬-೫-೨ । ಬೃ ಉ ೧-೧-೨-೨ । ಇತಿ ಶ್ರವಣಾತ್ । ಪಶ್ಚಾತ್ಸೃಷ್ಟ್ಯುತ್ಪಾದನೇ ತತೋ ಮನುಷ್ಯಾ ಅಜಾಯಂತೇತಿ ಪ್ರಥಮತ ಏವ ಮನುಷ್ಯಸೃಷ್ಟೇರಭಿಹಿತತ್ವಾತ್ ಅನಂತರಂ ಪೂರ್ವೇ । ಉತ್ತರ ಸೃಷ್ಟಿಮಪೇಕ್ಷ್ಯ ಪೂರ್ವತ್ವಂ । ಆಯುನಿ ಕಾಲೇಽಯಮಗ್ನಿರೇವ ವೃಷಭಶ್ಚಾಸೀತ್ ಧೇನುಶ್ಚಾಭವತ್ । ಸ್ತ್ರೀಪುಂಸವತ್ ಸ್ತ್ರೀಪುಂಸಾತ್ಮಕೋಽಭವದಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಅಸತ್—ಅವ್ಯಾಕೃತವಾದ ರೂಪವುಳ್ಳವನೂ । **ಸಚ್ಚ**—ವ್ಯಾಕೃತವಾದ ರೂಪವುಳ್ಳವನೂ ಆದ ಅಗ್ನಿಯು। **ಪರಮೇ**—ಅತ್ಯುತ್ತಮವಾದ । **ವ್ಯೋಮನ್**—ಅಂತರಿಕ್ಷದಲ್ಲಿಯೂ । **ಅದಿತೇಃ**—ಪೃಥ್ವಿಯ । **ಉಪಸ್ಥೇ**—ಮಧ್ಯಭಾಗದಲ್ಲಿಯೂ । **ದಕ್ಷಸ್ಯ**—ಪ್ರಜಾಪತಿಯ । **ಜನ್ಮನ್**—ಉತ್ಪತ್ತಿಸ್ಥಾನವಾದ ದ್ಯುಲೋಕದಲ್ಲಿಯೂ (ಅಸ್ತಿತ್ವವನ್ನು ಹೊಂದಿದ್ದಾನೆ) । **ಅಗ್ನಿರ್ಹ**—ಅಗ್ನಿಯೇ । **ಯತಸ್ಯ**—ಕರ್ಮಕಾರಕರಾದ । **ನಃ**—ನಮಗಿಂತಲೂ । **ಪ್ರಥಮಜಾಃ**—ಮೊದಲು ಉತ್ಪನ್ನನಾಗಿದ್ದಾನೆ । **ಪೂರ್ವೇ**—ಜಗತ್ತಿನ ಸೃಷ್ಟಿಗಿಂತಲೂ ಮೊದಲು ಇದ್ದ । **ಅಯುನಿ**—ಕಾಲದಲ್ಲಿ । **ವೃಷಭಶ್ಚ**—ಅಗ್ನಿಯೇ ವೃಷಭನಾಗಿಯೂ । **ಧೇನುಃ ಚ**—ಧೇನುವಾಗಿಯೂ ಇದ್ದನು.

॥ ಭಾವಾರ್ಥ ॥

ಅವ್ಯಾಕೃತವಾದ ರೂಪವುಳ್ಳವನೂ, ವ್ಯಾಕೃತವಾದ ರೂಪವುಳ್ಳವನೂ ಆದ ಅಗ್ನಿಯು ಅತ್ಯುತ್ತಮವಾದ ಅಂತರಿಕ್ಷದಲ್ಲಿಯೂ, ಪೃಥ್ವಿಯ ಮಧ್ಯಭಾಗದಲ್ಲಿಯೂ, ಪ್ರಜಾಪತಿಯ ಉತ್ಪತ್ತಿಸ್ಥಾನವಾದ ದ್ಯುಲೋಕದಲ್ಲಿಯೂ ಅಸ್ತಿತ್ವವನ್ನು ಹೊಂದಿದ್ದಾನೆ ಕರ್ಮಕಾರಕರಾದ ನಮಗಿಂತಲೂ ಅಗ್ನಿಯೇ ಮೊದಲು ಉತ್ಪನ್ನನಾಗಿದ್ದಾನೆ. ಜಗತ್ತಿನ ಸೃಷ್ಟಿಗಿಂತಲೂ ಪೂರ್ವದಲ್ಲಿ ಅಗ್ನಿಯೇ ಪುಂರೂಪನಾಗಿಯೂ ಸ್ತ್ರೀರೂಪನಾಗಿಯೂ ಇದ್ದನು

English Translation

Non-existent, and existent (is Agni) in the supreme heaven, in the birth-place of Daksha, and in the presence of Aditi : Agni is elder born to us (who enjoy the fruit) of the sacrifice ; in the olden time he was the bull and the cow.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಋಷಿಯು ಸದಸದಾತ್ಮಕ ಬ್ರಹ್ಮಸ್ವರೂಪವನ್ನು ತಿಳಿಸಿ ಅಗ್ನಿಯ ಮಹತ್ಸ್ವರೂಪವನ್ನು ಪ್ರಕಾರಾಂತರವಾಗಿ ವರ್ಣಿಸಿದಾನೆ.

ಅಸತ್ ಚ ಸತ್ ಚ ಪರಮೇ ವ್ಯೋಮನ್—ಪರಮೇ ವ್ಯೋಮನ್ ಎಂಬ ಶಬ್ದಗಳು ನಾಮರೂಪರಹಿತವಾದ ಅವ್ಯಕ್ತಬ್ರಹ್ಮಸ್ವರೂಪವನ್ನು ತಿಳಿಸುವ ಶಬ್ದಗಳು. ಪರಬ್ರಹ್ಮನ ಈ ವಿಧವಾದ ಅವ್ಯಕ್ತಸ್ವರೂಪವನ್ನು ಅಸದ್ವಾ ಇದಮಗ್ರ ಆಸೀತ್ । ತತೋ ವೈ ಸದಜಾಯತ । (ತೈ. ಉ. ೧-೮) ಅಸದೇವೇದಮಗ್ರ ಆಸೀತ್ ತತ್ಸದಾಸೀತ್ ತತ್ಸಮಭವತ್ (ಛಾ. ಉ ೩-೧೯-೧) ಇತ್ಯಾದಿ ಉಪನಿಷದ್ವಾಕ್ಯಗಳು ವರ್ಣಿಸುವುವು. ಎಂದರೆ ಸೃಷ್ಟಿಗೆ ಪೂರ್ವದಲ್ಲಿ ನಾಮರೂಪನಿರ್ದೇಶಗಳಿಲ್ಲದ ಬ್ರಹ್ಮ ಒಂದೇ ಇದ್ದಿತು. ಅದಕ್ಕೆ ಆಕಾರವಾಗಲೀ, ರೂಪವಾಗಲೀ ಇರಲಿಲ್ಲ. ಕೇವಲ ಜ್ಞಾನಮಯವೂ ಅನಂತವೂ ಆಗಿದ್ದಿತು. ಈ ಸ್ವರೂಪವನ್ನೇ **ಸತ್ಯಂ ಜ್ಞಾನಮನಂತಂ ಬ್ರಹ್ಮ** (ತೈ. ಉ ೨-೧-೧) ಎಂಬ ಉಪನಿಷದ್ವಾಕ್ಯವು ಪ್ರತಿಪಾದಿಸುವುದು. ಈ ದೆಶೆಯಲ್ಲಿರುವ ಅವ್ಯಕ್ತಸ್ವರೂಪಕ್ಕೆ ಅಸತ್ ಎಂದು ವೇದಾಂತ ಗ್ರಂಥಾದಿಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಹೇಳಿದೆ. ಈ ಶಬ್ದವು ಅಸ ಭುವಿ ಎಂಬ ಧಾತುವಿನಿಂದ ನಿಷ್ಪನ್ನವಾಗಿರುವ ಸತ್ ಎಂಬ ಶಬ್ದದ ನಿಷೇಧಾರ್ಥವನ್ನು ಸೂಚಿಸುವ ಶಬ್ದವು. ಸತ್ ಎಂದರೆ ಇರುವುದು,

ಗೋಚರಿಸುವುದು. ಅಸತ್ ಎಂದರೆ ನಾಮರೂಪಗಳಿಲ್ಲದ ಸ್ಥಿತಿಯು ಅದರ ಸ್ಥಿತಿಯನ್ನು ನೋಡಲಾಗುವುದಿಲ್ಲ, ಸಾಯಾಗಿ ತಿಳಿಯಲಾಗುವುದಿಲ್ಲ. ಆದರೂ ನಿರ್ಗುಣಸ್ವಭಾವವಿರುವ ಅಂತಹ ಪರಬ್ರಹ್ಮದಲ್ಲಿ ಸತ್ಯ ಜ್ಞಾನ ಅನಂತತ್ವವೆಂಬ ಗುಣಗಳಿದ್ದು ಆ ಗುಣಗಳ ಎಂದರೆ ಸತ್ತ್ವರಜಸ್ತಮೋಗುಣಗಳ ಅವಿರ್ಭಾವದಿಂದಲೇ ಆ ತತ್ತ್ವವು ಸೃಷ್ಟಿಕಾಲದಲ್ಲಿ ವ್ಯಕ್ತರೂಪವನ್ನು ಹೊಂದಿ ಎಲ್ಲರಿಗೂ ಗೋಚರಿಸುವ ಸ್ವಭಾವವುಳ್ಳದ್ದಾಯಿತು. ಇದನ್ನೇ ಸತ್ ಎಂಬ ಶಬ್ದದಿಂದ ಕರೆಯಲಾಗಿದೆ. ಈ ಸತ್ ಎಂಬ ಸ್ಥಿತಿಯು ಸೃಷ್ಟಿಕಾಲಗಳಲ್ಲಿ ಮಾತ್ರ ಇದ್ದು ಲಯಕಾಲದಲ್ಲಿ ಕ್ರಮಕ್ರಮವಾಗಿ ಬ್ರಹ್ಮವಸ್ತುವಿನಲ್ಲಿ ಐಕ್ಯವಾಗಿ ಅವ್ಯಕ್ತರೂಪದಿಂದ ಸೃಷ್ಟಿಗೆ ಮುಂಚಿನಂತೆ ಇರುವುದು. ಈ ವಿಷಯವು ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ವೇದಾಂತವಿಚಾರಕ್ಕೆ ಸಂಬಂಧಪಟ್ಟಿರುವುದರಿಂದ ಪ್ರಕೃತ ಋಕ್ಕಿನ ವಿವರಣೆಯಲ್ಲಿ ಈ ವಿಷಯವನ್ನು ವಿಸ್ತಾರವಾಗಿ ವಿವರಿಸುವುದು ಸಾಧ್ಯವಿಲ್ಲ. ಮುಖ್ಯಾಭಿಪ್ರಾಯವೇನೆಂದರೆ—ಗುಣರಹಿತವೂ ಆಕಾಶದಂತೆ ನಾಮರೂಪಗಳಿಲ್ಲದೆ ಅನಂತವಾಗಿರುವುದೂ ಆದ ಪರಬ್ರಹ್ಮದಿಂದ ಸದಸದಾತ್ಮಕವಾದ ಈ ಜಗತ್ತೆಲ್ಲವೂ ಆವಿರ್ಭೂತವಾಯಿತು ಎಂದು ಋಷಿಯು ಹೇಳಿದಾನೆ ಈ ವಿಷಯವನ್ನು ಮುಂದೆ ಬೇರೆ ಸಂದರ್ಭದಲ್ಲಿ ವಿಸ್ತಾರವಾಗಿ ವಿವರಿಸಲಾಗುವುದು

ದಕ್ಷಸ್ಯ ಜನ್ಮನ್ನದಿತೇಃ ಉಪಸ್ಥೇ—ಸೃಷ್ಟಿಕಾಲದಲ್ಲಿ ಪ್ರಜಾಪತಿಯು ಭೂಮಿಯ ಮೇಲೆ ಮೊದಲು ಅಗ್ನಿಯನ್ನು ಸೃಷ್ಟಿಸಿದನು ಎಂದು ಋಷಿಯು ಹೇಳಿದಾನೆ ಅಥವಾ **ಸ ತ್ರೇಧಾತ್ಮಾನಂ ವ್ಯಭಜತಾದಿತ್ಯಂ ತೃತೀಯಂ ವಾಯುಂ ತೃತೀಯಮ್** ಎಂಬ ಶತಪಥಬ್ರಾಹ್ಮಣವಾಕ್ಯದಂತೆ ಪ್ರಜಾಪತಿಯು ಸೃಷ್ಟಿಮಾಡಬೇಕೆಂದು ಅಪೇಕ್ಷಿಸಿ ತನ್ನನ್ನೇ ಮೂರುಭಾಗವಾಗಿ ವಿಭಾಗಿಸಿದನು. ಆ ವಿಭಾಗದಲ್ಲಿ ಆದಿತ್ಯನೊಬ್ಬನು ಅಗ್ನಿಯೇ ಸ್ವರ್ಗದಲ್ಲಿ ಆದಿತ್ಯರೂಪದಿಂದ ಇರುವನೆಂದು ಹೇಳಿರುವುದರಿಂದ ಆದಿತ್ಯನನ್ನೂ ಮೊದಲು ಸೃಷ್ಟಿಸಿದನು ಎಂದರೆ ಅಗ್ನಿಯನ್ನು ಸೃಷ್ಟಿಸಿದನು ಎಂದೇ ಅರ್ಥವು. ಸೃಷ್ಟಿಮಾಡುವಾಗ ಪ್ರಜಾಪತಿಯು **ತ್ರೇಧಾತ್ಮಾನಂ ವ್ಯಭಜತ**—ತನ್ನನ್ನೇ ಮೂರುಭಾಗವಾಗಿ ವಿಭಾಗಿಸಿಕೊಂಡನು ಎಂದು ಹೇಳಿರುವುದಕ್ಕೆ ಕಾರಣವೇನೆಂದರೆ, ಸೃಷ್ಟಿಗೆ ಪೂರ್ವದಲ್ಲಿ ಅವ್ಯಕ್ತಸ್ವರೂಪದಿಂದಿದ್ದ ಬ್ರಹ್ಮ (ಪ್ರಜಾಪತಿ) ಮಾತ್ರವೇ ಇದ್ದು ಸೃಷ್ಟಿಮಾಡಲು ಬೇರೆ ಯಾವ ವಸ್ತುವೂ ಇಲ್ಲದಿದ್ದುದರಿಂದ ತನ್ನನ್ನೇ ವಿಭಾಗಿಸಿಕೊಂಡನು ಎಂದು ಇಲ್ಲಿ ಹೇಳಿದೆ. ಹೀಗೆ ಹೇಳಿರುವುದರಿಂದ ಈಗ ಪ್ರಪಂಚದಲ್ಲಿ ಕಂಡುಬರುತ್ತಿರುವ ಸ್ಥಾವರಜಂಗಮಾತ್ಮಕವಾದ ವಸ್ತುಗಳೆಲ್ಲವೂ ಬ್ರಹ್ಮನ ಅಂಶವೇ ಆಗಿರುವುದೆಂದೂ, ಬ್ರಹ್ಮನನ್ನು ಬಿಟ್ಟು ಬೇರೆ ವಸ್ತುವೇ ಇಲ್ಲವೆಂದೂ ತಿಳಿಯಬೇಕು ಇದಲ್ಲದೆ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ—**ಸಹ ತೇಜೋರಸೋ ನಿರವರ್ತತಾಗ್ನಿ** (ಬೃ. ಉ. ೧.೧.೨.೬) ಸೃಷ್ಟಿಕಾಲದಲ್ಲಿ ಪರಬ್ರಹ್ಮನಿಂದ ರಸರೂಪವಾದ ತೇಜಸ್ಸು ಆವಿರ್ಭವಿಸಿತು ಎಂದರೆ ಹೊರಕ್ಕೆ ಬಂದಿತು ಎಂದಿದೆ ಈ ಶ್ರುತಿವಾಕ್ಯವೂ, ಅಗ್ನಿಯನ್ನೇ ಮೊದಲು ಸೃಷ್ಟಿಸಿದನೆಂಬ ವಿಷಯವನ್ನು ಸಮರ್ಥಿಸುವುದು

ಅಗ್ನಿಃ ಹ ನಃ ಪ್ರಥಮಜಾಃ ಋತಸ್ಯ ಪೂರ್ವೇ ಆಯುನಿ ವೃಷಭಶ್ಚ ಧೇನುಃ—ಮೇಲೆ ಹೇಳಿದಂತೆ ಪ್ರಜಾಪತಿಯು ಅಗ್ನಿಯನ್ನು ಸೃಷ್ಟಿಸಿದನಂತರ ಕರ್ಮಫಲವನ್ನು ಅನುಭವಿಸುವ ನಮ್ಮನ್ನು ಎಂದರೆ ಮನುಷ್ಯರನ್ನು ಸೃಷ್ಟಿಸಿದನು. ಎಂದರೆ ಮನುಷ್ಯರ ಸೃಷ್ಟಿಗೆ ಪೂರ್ವಭಾವಿಯಾಗಿಯೇ ಅಗ್ನಿಯ ಉತ್ಪತ್ತಿಯಾಯಿತು ಮತ್ತು ಆ ಕಾಲದಲ್ಲಿಯೇ ಎಂದರೆ ಅಗ್ನಿಯನ್ನು ಸೃಷ್ಟಿಮಾಡಿದಾಗಲೇ ಮುಂದೆ ಮನುಷ್ಯರ ಸೃಷ್ಟಿಯಾಗಬೇಕೆಂಬ ಅಪೇಕ್ಷೆಯಿಂದ ಅಗ್ನಿಯೇ **ವೃಷಭಃ ಧೇನುಃ ಚ** ಸ್ತ್ರೀಪುಂಸಾತ್ಮಕರೂಪವುಳ್ಳವನಾಗಿ ಆದನು. ಇಲ್ಲಿ ವೃಷಭಶಬ್ದವು ಪುರುಷನನ್ನೂ, ಧೇನುಶಬ್ದವು ಸ್ತ್ರೀಯನ್ನೂ ಸೂಚಿಸುವುದು. ಮನುಷ್ಯರಲ್ಲಿ ಪ್ರಜಾಭಿವೃದ್ಧಿಯನ್ನುಂಟುಮಾಡುವುದಕ್ಕಾಗಿ ಸ್ತ್ರೀ ಪುರುಷ ಭೇದಗಳನ್ನು ಪ್ರಜಾಪತಿಯು ಸೃಷ್ಟಿಸಿದನೆಂದಭಿಪ್ರಾಯವು.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ-
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ
ಋಕ್ಸಂಹಿತಾಭಾಷ್ಯೇ ಸಪ್ತಮಾಷ್ಟಕೇ ಪಂಚಮೋಽಧ್ಯಾಯಃ ಸಮಾಪ್ತಃ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯಲ್ಲಿ ಏಳನೆಯ ಅಷ್ಟಕದಲ್ಲಿ ಐದನೆಯ ಧ್ಯಾಯವು ಸಮಾಪ್ತವು.

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ।

।। ಶುಭಂ ಭೂಯಾತ್ ।।

।। ಮಂಗಳಂ ।।



*

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಕಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥
ಸಪ್ತಮಸ್ಯಾಷ್ಟಕಸ್ಯೇತ್ಥಂ ವ್ಯಾಖ್ಯಾಸೀತ್ಸಂಚಯಂ ಸುಧೀಃ ।
ಸಾಯಂಸಾಪ್ತಸ್ತುತಃ ಷಷ್ಠವ ಧ್ಯಾಯಂ ವ್ಯಾಚಿಕೀರ್ಷತಿ ।

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

ಅಥ ಸಪ್ತಮಾಷ್ಟಕೇ ಷಷ್ಠೋಽಧ್ಯಾಯಃ

ಏಳನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು.

ಹತ್ತನೆಯ ಮಂಡಲದಲ್ಲಿ ಆರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ದಶಮೇ ಮಂಡಲೇ ಪ್ರಥಮೇಽನುವಾಕೇ ಷೋಡಶಸೂಕ್ತಾನಿ । ತತ್ರಾಯಂ ಸ ಯಸ್ಯೇತಿ ಸಪ್ತರ್ಚಂ ಷಷ್ಠಂ ಸೂಕ್ತಂ । ಅಪ್ತ್ಯಸ್ಯ ತ್ರಿತಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ಅಯಮಿತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋರುಕ್ಥೋ ವಿನಿಯೋಗಃ ॥

ಅನುವಾದವು—ಋಗ್ವೇದಸಂಹಿತೆಯ ಹತ್ತನೆಯ ಮಂಡಲದಲ್ಲಿರುವ ಪ್ರಥಮಾನುವಾಕದಲ್ಲಿ ಹದಿನಾರು ಸೂಕ್ತಗಳಿರುವವು ಅವುಗಳಲ್ಲಿ **ಅಯಂ ಸ ಯಸ್ಯ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ತ್ರಿತಃ ಆಪ್ತ್ಯಃ ಎಂಬುವನು ಋಷಿಯು; ಅಗ್ನಿಯು ದೇವತೆಯು; ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಅಯಂ** ಎಂದು ಮೊದಲಾಗಿ ಹೇಳಿರುವುದು

ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳ ಪಠನಕ್ಕಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ.

ಸೂಕ್ತ—೬

ಮಂಡಲ—೧೦ ॥ ಅನುವಾಕ—೧ ॥ ಸೂಕ್ತ—೬ ।
ಅಷ್ಟಕ—೭ ॥ ಅಧ್ಯಾಯ—೬ ॥ ವರ್ಗ ೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿ—ತ್ರಿತ ಆಪ್ತ್ಯಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್ ॥

। ಸಂಹಿತಾಪಾಠಃ ।

ಅಯಂ ಸ ಯಸ್ಯ ಶರ್ಮನ್ನವೋಭಿರಗ್ನೇರೇಧತೇ ಜರಿತಾಭಿಷ್ಟೌ ।
ಜ್ಯೇಷ್ಠೇಭಿಯೋ ಭಾನುಭಿರ್ಯಷೂಣಾಂ ಪರ್ಯೇತಿ ಪರಿವೀತೋ ವಿಭಾವಾ ॥೧॥

। ಪದಪಾಠಃ ।

ಅಯಂ । ಸಃ । ಯಸ್ಯ । ಶರ್ಮನ್ । ಅವಃಽಭಿಃ । ಅಗ್ನೇಃ । ಏಧತೇ । ಜರಿತಾ । ಅಭಿಷ್ಟೌ ।
ಜ್ಯೇಷ್ಠೇಭಿಃ । ಯಃ । ಭಾನುಽಭಿಃ । ಋಷೂಣಾಂ । ಪರಿಽಏತಿ । ಪರಿಽವೀತಃ । ವಿಭಾಽವಾ ॥ ೧ ॥

। ಸಾಯಣಭಾಷ್ಯಂ ।

ಜರಿತಾ ಸ್ತೋತಾಭಿಷ್ಟೌ ಯಾಗೇ ಕೃತೇ ಯಸ್ಯಾಗ್ನೇರವೋಭಿಃ ಪಾಲನೈಃ ಶರ್ಮಞ್ಶರ್ಮಣಿ ಸ್ವಗೃಹ ಏಧತೇ ವರ್ಧತೇ ಸೋಽಯಮಗ್ನಿರ್ಯಾಗಾರ್ಥಮಸ್ಮಾಭಿರಾಹೂತ ಇತಿ ಶೇಷಃ । ವಿಭಾವಾ ದೀಪ್ತಿಮಾನ್ ಯೋಽಗ್ನಿರ್ಯಷೂಣಾಂ ಸೂರ್ಯರಶ್ಮೀನಾಂ ಜ್ಯೇಷ್ಠೇಭಿಃ ಪ್ರಶಸ್ತೈರ್ಭಾಸುಭಸ್ತೇಜೋಭಿಃ ಪರಿವೀತಃ ಪರಿವೃತಃ ಪರ್ಯೇತಿ ಸರ್ವತೋ ಗಚ್ಛತಿ । ಯತ್ರ ಯತ್ರ ಗಂತವ್ಯಂ ತತ್ರ ತತ್ರಾಪ್ರತಿಹತಗತಿರ್ಗಚ್ಛತೀತ್ಯರ್ಥಃ ॥

। ಪ್ರತಿಪದಾರ್ಥ ।

ಜರಿತಾ—ಸ್ತುತಿಕರ್ತನು । ಅಭಿಷ್ಟೌ—ತನ್ನ ಯಾಗಕಾಲದಲ್ಲಿ । ಯಸ್ಯ ಅಗ್ನೇಃ—ಯಾವ ಅಗ್ನಿಯ । ಅವೋಭಿಃ—ರಕ್ಷಣೆಗಳಿಂದ । ಶರ್ಮನ್—ಯಜ್ಞಗೃಹದಲ್ಲಿ । ಏಧತೇ—ವೃದ್ಧಿಯನ್ನು ಹೊಂದುವನೋ । ಸಃ ಅಯಂ—ಅವನೇ ಈ ಅಗ್ನಿಯು । ವಿಭಾವಾ—ಪ್ರಭಾಯುತನಾದ । ಯಃ—ಯಾವ ಆದೇ ಅಗ್ನಿಯು ।

ಋಷೂಣಾಂ—ಸೂರ್ಯರಶ್ಮಿಗಳ । ಜ್ಯೇಷ್ಠೈಭಃ—ಪ್ರಶಸ್ಯಗಳಾದ । ಭಾನುಭಿಃ—ತೇಜಸ್ಸುಗಳಿಂದ । ಪರಿವೀತಃ—ಸುತ್ತುವರಿಯಲ್ಪಟ್ಟವನಾಗಿ । ಪರ್ಯೇತಿ—ಸರ್ವತ್ರ ಸಂಚರಿಸುತ್ತಾನೆ ।

॥ ಭಾವಾರ್ಥ ॥

ಸ್ತುತಿಕರ್ತನು ತನ್ನ ಯಾಗಕಾಲದಲ್ಲಿ ಯಾವ ಅಗ್ನಿಯ ರಕ್ಷಣೆಗಳಿಂದ ಯಜ್ಞಗೃಹದಲ್ಲಿ ವೃದ್ಧಿಯನ್ನು ಹೊಂದುವನೋ ಅವನೇ ಈ ಅಗ್ನಿಯು. ಪ್ರಭಾಯುತನೂ, ಪ್ರಸಿದ್ಧನೂ ಆದ ಅಗ್ನಿಯು ಸೂರ್ಯರಶ್ಮಿಗಳ ಪ್ರಶಸ್ಯಗಳಾದ ತೇಜಸ್ಸುಗಳಿಂದ ಸುತ್ತುವರಿಯಲ್ಪಟ್ಟವನಾಗಿ ಸರ್ವತ್ರ ಸಂಚರಿಸುತ್ತಾನೆ.

English Translation

This is that Agni by whose protections the worshipper (diligent) in sacrifice prospers in his dwelling who radiant, travels everywhere invested with the excellent splendours of his rays.

॥ ಸಂಹಿತಾಪಾಠಃ ॥

ಯೋ ಭಾನುಭಿರ್ವಿಭಾವಾ ವಿಭಾತ್ಯಗ್ನಿರ್ದೇವೇಭಿರ್ಯುತವಾಜಸ್ರಃ ।
ಆ ಯೋ ವಿವಾಯ ಸಖ್ಯಾ ಸಖಿಭ್ಯೋಽಪರಿಹ್ವೃತೋ ಅತ್ಯೋ ನ ಸಪ್ತಿಃ ॥

॥ ಪದಪಾಠಃ ॥

ಯಃ । ಭಾನುಽಭಿಃ । ವಿಭಾಽವಾ । ವಿಽಭಾತಿ । ಅಗ್ನಿಃ । ದೇವೇಭಿಃ । ಯುತಽವಾ । ಅಜಸ್ರಃ ॥
ಆ । ಯಃ । ವಿವಾಯ । ಸಖ್ಯಾ । ಸಖಿಽಭ್ಯಃ । ಅಪರಿಽಹ್ವೃತಃ । ಅತ್ಯಃ । ನ । ಸಪ್ತಿಃ ॥ ೨ ॥

॥ ಸಾಯಣಭಾಷ್ಯಂ ॥

ಯುತವಾ ಸತ್ಯವಾನುದಕವಾನ್ಯಜ್ಞವಾನ್ವಾಜಸ್ರೋಽನುಪಕ್ಷೀಣೋಽಹಿಂಸಿತೋ ವಾ । ಕೇನಚಿದನಭಿಭೂತ ಇತ್ಯರ್ಥಃ । ವಿಭಾವಾ ದೀಪ್ತಿಮಾನ್ಯೋಽಗ್ನಿರ್ದೇವೇಭಿರ್ದೇವೈರ್ಯೋತವಮಾನೈರ್ಭಾನುಭಿಸ್ತೇಜೋಭಿರ್ವಿಭಾತಿ ವಿವಿಧಂ ದೀಪ್ಯತೇ ಕಂಚ ಯೋಽಗ್ನಿಃ ಸಖ್ಯಾ ಸಖ್ಯಾನಿ ಸಖಿಭಿಃ ಕರ್ತವ್ಯಾನಿ ಕರ್ಮಾಣಿ ಹವಿರಾದೀನಿ । ಕರ್ತುಮಿತಿ ಶೇಷಃ । ಸಖಿಭ್ಯಃ ಸಖಿಭೂತಾನಾಂ ಯಜಮಾನಾನಾಮರ್ಥಾಯಾಪರಿಹ್ವೃತೋಽಪರಿಹಿಂಸಿತಃ । ಅಪರಿಶ್ರಾಂತ ಇತ್ಯರ್ಥಃ । ಆ ವಿವಾಯ ಆಭಿಮುಖ್ಯೇನ ಗಚ್ಛತಿ । ತತ್ರ ದೃಷ್ಟಾಂತಃ । ಸಪ್ತಿಃ । ಸದಾಸರ್ಪಣ ಇತ್ಯರ್ಥಃ । ಅತ್ಯೋ ನ ಯಥಾ ಸತತಗಮನಸಮುದ್ಭೋಽಶ್ವೋಽಪರಿಶ್ರಾಂತೋ ಗಚ್ಛತಿ ತದ್ವತ್ । ಸೋಽಯಮಗ್ನಿರಸ್ಮಾಭಿರ್ಯಾಗಾರ್ಥಮಾಹೂತ ಇತಿ ಪೂರ್ವವದ್ಯೋಜ್ಯಂ ॥

॥ ಪ್ರತಿಪದಾರ್ಥ ॥

ಋತವಾ—ಸತ್ಯವಂತನೂ । **ಅಜಸ್ರಃ**—ಕ್ಷಯರಹಿತನೂ । **ವಿಭಾವಾ**—ಕಾಂತಿಯುತನೂ ಆದ । **ಯಃ ಅಗ್ನಿಃ**—ಯಾವ ಅಗ್ನಿಯು । **ದೇವೇಭಿಃ**—ಪ್ರಕಾಶಮಾನಗಳಾದ । **ಭಾನುಭಿಃ**—ತೇಜಸ್ಸುಗಳೊಡನೆ । **ವಿಭಾತಿ**—ಅತಿಶಯವಾಗಿ ಪ್ರಕಾಶಿಸುವನೋ । **ಯಃ**—ಯಾವ ಅಗ್ನಿಯು । **ಅಪರಿಹ್ವೃತಃ**—ಕೊಂಚವೂ ಆಲಸ್ಯವಿಲ್ಲದೇ । **ಸಪ್ತಿಃ**—ಸರ್ವದಾ ಸಂಚರಿಸುವ । **ಅತ್ಯೋ ನ**—ಅಶ್ವದಂತೆ । **ಆ ವಿವಾಯ**—ಯಜಮಾನರಲ್ಲಿಗೆ ಬರುವನೋ ಅವನು । **ಸಖಿಭ್ಯಃ**—ತನ್ನ ಮಿತ್ರರಾದ ಯಜಮಾನಾದಿಗಳಿಗೆ । **ಸಖ್ಯಾ**—ಆ ಮಿತ್ರರ ಹವಿರಾದಿಗಳನ್ನು ಸ್ವೀಕರಿಸಲು ಬರುತ್ತಾನೆ. (ಅವರನ್ನು ಅನುಗ್ರಹಿಸಲು ಬರುತ್ತಾನೆ) ।

॥ ಭಾವಾರ್ಥ ॥

ಸತ್ಯವಂತನೂ, ಕ್ಷಯರಹಿತನೂ, ಕಾಂತಿಯುತನೂ ಆದ ಯಾವ ಅಗ್ನಿಯು ಪ್ರಕಾಶಮಾನಗಳಾದ ತೇಜಸ್ಸುಗಳೊಡನೆ ಅತಿಶಯವಾಗಿ ಪ್ರಕಾಶಿಸುವನೋ, ಯಾವ ಅಗ್ನಿಯು ಕೊಂಚವೂ ಆಲಸ್ಯವಿಲ್ಲದೇ ಸರ್ವದಾ ಸಂಚರಿಸುವ ಅಶ್ವದಂತೆ ಯಜಮಾನರಲ್ಲಿಗೆ ಬರುವನೋ ಅವನು ತನ್ನ ಮಿತ್ರರಾದ ಯಜಮಾನಾದಿಗಳಿಗೆ ಆ ಮಿತ್ರರ ಹವಿರಾದಿಗಳನ್ನು ಸ್ವೀಕರಿಸಲು ಮತ್ತು ಅವರನ್ನು ಅನುಗ್ರಹಿಸಲು ಬರುತ್ತಾನೆ.

English Translation

Agni, the observer of truth, the eternal, who shines resplendent with celestial splendours, who comes untiring like a swift horse, (bringing) frendly gifts to his friends

॥ ಸಂಹಿತಾಪಾಠಃ ॥

ಈಶೇ ಯೋ ವಿಶ್ವಸ್ಯಾ ದೇವಯೀತೇರೀಶೇ ವಿಶ್ವಾಯುರುಷಸೋ ವ್ಯುಷ್ಟೌ ।
ಆ ಯಸ್ಮಿನ್ಮನಾ ಹವೀಂಷ್ಯಗ್ನಾವರಿಷ್ಟರಥಃ ಸ್ತಭ್ನಾತಿ ಶೂಷೈಃ ॥ ೨ ॥

॥ ಪದಪಾಠಃ ॥

ಈಶೇ । ಯಃ । ವಿಶ್ವಸ್ಯಾಃ । ದೇವಯೀತೇಃ । ಈಶೇ । ವಿಶ್ವಆಯುಃ । ಉಷಸಃ । ವಿಉಷ್ಟೌ ।
ಆ । ಯಸ್ಮಿನ್ । ಮನಾ । ಹವೀಂಷಿ । ಅಗ್ನೌ । ಅರಿಷ್ಟರಥಃ । ಸ್ತಭ್ನಾತಿ । ಶೂಷೈಃ ॥ ೩ ॥

॥ ಸಾಯಣಭಾಷ್ಯಂ ॥

ಯೋಽಗ್ನಿರ್ವಿಶ್ವಸ್ಯಾ ದೇವಯೀತೇಃ ಸರ್ವಸ್ಯ ಯಜ್ವನ್ಯೇಶೇ ಈಷ್ಟೇ । ಅಪಿ ಚ ವಿಶ್ವಾಯುಃ ಸರ್ವತ್ರಾಪ್ರತಿಹತಗಮನ ಉಷಸೋ ವ್ಯುಷ್ಟೌ ವಿವಾಸನ ಉದಯಕಾಲೇ ಹೋಮಾರ್ಥಂ ಯಜಮಾ-

ನಾನಾವಿಶೇ ಈಷ್ಟೇ। ಶೂಷ್ಯೈಃ ಶತ್ರುಬಲೈರರಿಷ್ಟರಥೋಽಹಿಂಸಿತಯಜ್ಞೋರಥಃ ಸರ್ವ ಏವ ಯಜಮಾನೋ ಯಸ್ಮಿನ್ನಗ್ನೌ ಮನಾ ಮನನೀಯಾನಿ ಹವೀಂಷ್ಯಾ ಸ್ಕಭ್ನಾತಿ ಆದರೇಣ ಪ್ರತಿಬಧ್ನಾತಿ ಪ್ರಕ್ಷಿಪತಿ। ಸೋಽಯಮಗ್ನಿರಸ್ಮಾಭಿರ್ಯಾಗಾರ್ಥಮಾಹೂತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ಯಃ—ಯಾವ ಅಗ್ನಿಯು। **ವಿಶ್ವಸ್ಯಾಃ**—ಸಮಸ್ತವಾದ **ದೇವಯೀತೇಃ**—ಯಜ್ಞಕ್ಕೂ। **ಈಶೇ**—ಪ್ರಭುವಾಗಿದ್ದಾನೆಯೋ। **ವಿಶ್ವಾಯುಃ**—ಸರ್ವತ್ರ ಸಂಚರಿಸಬಲ್ಲವನಾಗಿ। **ಉಷಸಃ**—ಉಷಸ್ಸಿನ। **ವ್ಯುಷ್ಟೌ**—ಉದಯಕಾಲದಲ್ಲಿ। **ಈಶೇ**—ಯಜಮಾನನಾಗಿದ್ದಾನೆಯೋ। **ಯಸ್ಮಿನ್**—ಯಾವ। **ಅಗ್ನೌ**—ಅಗ್ನಿಯಲ್ಲಿ। **ಶೂಷ್ಯೈಃ**—ಶತ್ರುಬಲಗಳಿಂದ। **ಅರಿಷ್ಟರಥಃ**—ಅಹಿಂಸಿತವಾದ ರಥವುಳ್ಳ ಯಜಮಾನನು। **ಮನಾ**—ಧ್ಯಾನಪೂರ್ವಕವಾದ। **ಹವೀಂಷಿ**—ಹವಿಸ್ಸುಗಳನ್ನು। **ಆ ಸ್ಕಭ್ನಾತಿ**—ಅರ್ಪಿಸುವನೋ ಆ ಅಗ್ನಿಯನ್ನು ನಾವು ಕರೆಯುತ್ತೇವೆ।

॥ ಭಾವಾರ್ಥ ॥

ಯಾವ ಅಗ್ನಿಯು ಸಕಲ ಯಜ್ಞಕ್ಕೂ ಪ್ರಭುವಾಗಿರುವನೋ, ಮತ್ತು ಸರ್ವತ್ರ ಸಂಚರಿಸಬಲ್ಲವನಾಗಿ ಉಷಸ್ಸಿನ ಉದಯಕಾಲದಲ್ಲೇ ಯಾಜಮಾನ್ಯವನ್ನು ವಹಿಸುವನೋ ತಿಳ್ಳದೇ. ಯಾವ ಅಗ್ನಿಯಲ್ಲಿ ಶತ್ರುಬಲಗಳಿಂದ ಅಹಿಂಸಿತವಾದ ರಥವುಳ್ಳ ಯಜಮಾನನು ಧ್ಯಾನಪೂರ್ವಕವಾದ ಹವಿಸ್ಸುಗಳನ್ನು ಅರ್ಪಿಸುವನೋ ಆ ಅಗ್ನಿಯನ್ನು ನಾವು ಕರೆಯುತ್ತೇವೆ.

English Translation

Who rules over every oblation to the gods, who all-pervading rules at the opening of the dawn, and in whom (the sacrificer), whose sacrifice is undisturbed by his foes, throws his choice oblations,—

॥ ಸಂಹಿತಾಪಾಠಃ ॥

ಶೂಷೇಭಿರ್ವೃಧೋ ಜುಷ್ಟಾನೋ ಅರ್ಕೈರ್ದೇವಾಁ ಅಚ್ಛಾ ರಘುಪತ್ವಾ ಜಿಗಾತಿ।

ಮಂದ್ರೋ ಹೋತಾ ಸ ಜುಹ್ವಾ ಯಜಿಷ್ಠಃ ಸಂಮಿಶ್ಲೋ ಅಗ್ನಿರಾ ಜಿಘರ್ತಿ ದೇವಾನ್ ॥ ೪ ॥

॥ ಪದಪಾಠಃ ॥

ಶೂಷೇಭಿಃ । ವೃಧಃ । ಜುಷ್ಟಾನಃ । ಅರ್ಕೈಃ । ದೇವಾನ್ । ಅಚ್ಛ । ರಘುಽಪತ್ವಾ । ಜಿಗಾತಿ ।

ಮಂದ್ರಃ । ಹೋತಾ । ಸಃ । ಜುಹ್ವಾ । ಯಜಿಷ್ಠಃ । ಸಂಽಮಿಶ್ಲಃ । ಅಗ್ನಿಃ ಅ । ಜಿಘರ್ತಿ । ದೇವಾನ್ ॥

॥ ಸಾಯಣಭಾಷ್ಯಂ ॥

ವೃಧೋ ವರ್ಧಿತೋಽಗ್ನಿಃ ಶೂಷೇಭಿರ್ಹವಿರ್ಲಕ್ಷಣೈರ್ಬಲೈಃ। ಬಲನಿಮಿತ್ತೈ ರ್ಹವಿರ್ಭಿರಿತ್ಯರ್ಥಃ। ಅರ್ಕೈಃ ಸ್ತೋತ್ರೈಶ್ಚ ಜುಷಾಣಃ ಸೇವ್ಯಮಾನಃ ಸನ್ ದೇವಾನಿಂದ್ರಾದೀನಚ್ಛಾಪ್ತುಂ ರಘುಪತ್ವಾ ಲಘುಪತನಃ ಶೀಘ್ರಗಾಮಿಾ ಜಿಗಾತಿ। ಗಚ್ಛತಿ। ಗತ್ವಾ ಚ ಮಂದ್ರಃ ಸ್ತುತ್ಯೋ ಹೋತಾ ದೇವಾನಾಮಾಹ್ವಾತಾ ಹೋಮನಿಷ್ಪಾದಕೋ ವಾ ಯಜಿಷ್ಠೋ ಯಷ್ಟೃತಮಃ ಸಂಮಿಶ್ಲಃ ಸ್ವಗುಣೈ-ರ್ದೇವೈರ್ವಾ ಸಂಪ್ರಯುಕ್ತಃ ಸೋಽಗ್ನಿರ್ದೇವಾನ್ಪ್ರತಿ ಹವಿರಾ ಜಿಘರ್ತಿ। ಆಹಾರಯತಿ। ದೇವೇಭ್ಯೋ ಹವಿರ್ದದಾತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ವೃಧಃ—ಪುಷ್ಟನಾದ ಅಗ್ನಿಯು। **ಶೂಷೇಭಿಃ**—ಶಕ್ತಿಕಾರಕವಾದ ಹವಿಸ್ಸುಗಳಿಂದಲೂ। **ಅರ್ಕೈಃ**—ಸ್ತೋತ್ರಗಳಿಂದಲೂ। **ಜುಷಾಣಃ**—ಸೇವಿಸಲ್ಪಟ್ಟವನಾಗಿ। **ದೇವಾನ್**—ಇಂದ್ರಾದಿ ದೇವತೆಗಳನ್ನು। **ಅಚ್ಛ**—ಹೋಗಿ ಸೇರಲು। **ರಘುಪತ್ವಾ**—ಶೀಘ್ರಗಾಮಿಯಾಗಿ। **ಜಿಗಾತಿ**—ಹೋಗುತ್ತಾನೆ। **ಮಂದ್ರಃ**—ಸ್ತುತಿಗೆ ಅರ್ಹನೂ। **ಹೋತಾ**—ಹೋತೃರೂಪನೂ। **ಯಜಿಷ್ಠಃ**—ಅತ್ಯಂತ ಪೂಜ್ಯನೂ। **ಸಂಮಿಶ್ಲಃ**—ದೇವಗಣಗಳಿಂದ ಕೂಡಿದವನೂ ಆದ। **ಸಃ ಅಗ್ನಿಃ**—ಅಪೇ ಅಗ್ನಿಯು। **ದೇವಾನ್**—ದೇವತೆಗಳಿಗೆ। **ಜುಹ್ವಾ**—ತನ್ನ। ಜ್ವಾಲೆಯ ಮೂಲಕ। **ಆ ಜಿಘರ್ತಿ**—ಹವಿರಾದಿಗಳನ್ನರ್ಪಿಸುತ್ತಾನೆ।

॥ ಭಾವಾರ್ಥ ॥

ಪುಷ್ಟನಾದ ಅಗ್ನಿಯು ಶಕ್ತಿಕಾರಕವಾದ ಹವಿಸ್ಸುಗಳಿಂದಲೂ, ಸ್ತೋತ್ರಗಳಿಂದಲೂ, ಸೇವಿಸಲ್ಪಟ್ಟವನಾಗಿ ಇಂದ್ರಾದಿ ದೇವತೆಗಳನ್ನು ಹೋಗಿ ಸೇರಲು ಶೀಘ್ರಗಾಮಿಯಾಗಿ ಹೋಗುತ್ತಾನೆ. ಸ್ತುತಿಗೆ ಅರ್ಹನೂ ಹೋತೃ ರೂಪನೂ, ಅತ್ಯಂತ ಪೂಜ್ಯನೂ ದೇವಗುಣಗಳಿಂದ ಕೂಡಿದವನೂ ಆದ ಅದೇ ಅಗ್ನಿಯು ದೇವತೆಗಳಿಗೆ ತನ್ನ ಜ್ವಾಲಾ ರೂಪವಾದ ಪಾತ್ರೆಯಿಂದ ಹವಿರಾದಿಗಳನ್ನರ್ಪಿಸುತ್ತಾನೆ.

English Translation

Magnified by our oblations, propitiated by our praises, swift-moving, he proceeds to the persence of the gods , the aborable invoker of the deites, most entitled to worship, associated (with the gods), Agni presents to them (the oblation) with the sacrificial ladle.

॥ ಸಂಹಿತಾಪಾಠ ॥

ತಮುಸ್ರಾಮಿಂದ್ರಂ ನ ರೇಜಮಾನಮುಗ್ನಿಂ ಗೀರ್ಭಿರ್ನಮೋಭಿ ರಾಕೃಣುಧ್ವಂ।

आ यं विप्रासो मतिभिर्गृणन्ति जातवेदसं जुह्वं सहानाम् ॥ ५ ॥

॥ पदपाठः ॥

तं । उस्राम् । इन्द्रं । न । रेजमानं । अग्निं । गीःऽभिः । नमःऽभिः । आ । कृणुध्वं ।
आ । यं । विप्रासः । मतिऽभिः । गृणन्ति । जातऽवेदसं । जुह्वं । सहानाम् ॥ ५ ॥

॥ सायणभाष्यं ॥

हे ऋत्विजः यूयमुस्राम् भोगानामुत्सर्जयितारं दातारं रेजमानं ज्वालात्मना कंपमानं तमग्निमिन्द्रं नेन्द्रमिव गीर्भिः स्तुतिभिर्नमोभिर्हविर्भिश्चाकृणुध्वं अस्मदभिमुखं कुरुत । विप्रासो मेधाविनः स्तोतारः सहानाम् शत्रुबलाभिभवित्र्याणां देवानाम् जुह्वमाह्वातारं जातवेदसं जातधनं जातप्रज्ञं वा यमग्निमा गृणन्ति आदरेण स्तुवन्ति । तमा कृणुध्वमिति पूर्वेण संबंधः ॥

॥ प्रतिपदार्थ ॥

(ऎलै ऋत्विक्कुगळे) विप्रासः—मेधाविगळाद स्तुतिकर्तरु । सहानाम्—शक्तियुतरादा देवतेगळिगे । जुह्वं—आह्वानवन्नु कॊडतक्कवनू । जातवेदसं—जातवेदोरूपनू आद । यं—यावा अग्नियन्नु । मतिभिः—स्तोत्रगळिंद । आ गृणन्ति—आदरदिंद स्तुतिसुवरो अंतह । उस्राम्—भोगप्रदनू । रेजमानं—ज्वालेयॊडनॆ कंपिसुववनू आद । तं अग्निं—आ अग्नियन्नु । इन्द्रं न—इन्द्रनन्नु करॆयुवंतॆ । गीर्भिः—स्तुतिगळिंदलू । नमोभिः—हवि स्सुगळिंदलू । आ कृणुध्वं—नमगभिमुखवागुवंतॆ माडिरि ।

॥ भावार्थ ॥

ऎलै ऋत्विक्कुगळे, मेधाविगळाद स्तुतिकर्तरु शक्तियुतरादा देवतेगळिगे आह्वानवन्नु कॊडतक्कवनू, जातवेदोरूपनू आद यावा अग्नियन्नु स्तोत्रगळिंद आदरपूर्वकवागि स्तुतिसुवरो अंतह भोगप्रदनू ज्वालेयॊडदॆ कंपिसुवनवनू आद अग्नियन्नु इंद्रनन्नु यज्ञक्कॆ करॆतरुवंतॆ स्तुतिगळिंदलू हविस्सुगळिंदलू नमगभिमुखनागुवंतॆ माडिरि.

English Translation

Bring before us with praises, and with adorations, the brilliant Agni, the bestower of enjoyments, as if he were Indra, him, whom wise wor-

shippers praise with hymns as Jatavedas, the sacrificer to the victorious Gods.

॥ संहितापाठः ॥

सं यस्मिन्विश्वा वसूनि जग्मुर्वाजे नाश्वाः सप्तीवन्त एवैः ।
अस्मे ऊतीरिन्द्रवाततमा अर्वाचीन अग्ने आ कृणुष्व ॥ ६ ॥

॥ पदपाठः ॥

सं । यस्मिन् । विश्वा । वसूनि । जग्मुः । वाजे । न । अश्वाः । सप्तिवन्तः । एवैः ।
अस्मे इति । ऊतीः । इन्द्रवाततमाः । अर्वाचीनाः । अग्ने । आ । कृणुष्व ॥ ६ ॥

॥ सायणभाष्यं ॥

हे अग्ने यस्मिंस्त्वयि विश्वानि वसूनि धनानि सं जग्मुः स्वत्वेन संगतानि भवंति । तत्र दृष्टांतः । एवैर्गमनैः सप्तीवंतः सपर्णवंतः शीघ्रगमनसमर्था अश्वा वाजे न यथा संग्रामे संगतास्तद्वत् । हे अग्ने स त्वमिंद्रवाततमा इंद्रेणाभिगता ऊतीः रक्षा अस्मे अस्मासु अर्वाचीना अभिमुखीरा कृणुष्व । आदरेण कुरु ॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । एवैः—ತಮ್ಮ ವೇಗಗಮನಗಳಿಂದ । सप्तीवंतः—ಶೀಘ್ರಗಾಮಿಗಳಾದ अश्वाः—ಅಶ್ವಗಳು । वाजे न—ಸಂಗ್ರಾಮದಲ್ಲಿ ಹೋಗಿ ಸೇರುವಂತೆ । यस्मिन्—ಯಾವ ನಿನ್ನಲ್ಲಿ । विश्वा वसूनि—ಸಕಲ ಧನಗಳೂ । सं जग्मुः—ಒಟ್ಟಿಗೆ ಸೇರಿಕೊಂಡಿರುವುವೋ ಅಂತಹ ನೀನು । इंद्रवाततमाः—ಇಂದ್ರನಿಗಿಂತಲೂ ಅತಿಶಯವಾಗಿ । ऊतीः—ರಕ್ಷಣೆಗಳನ್ನು । अस्मे—ನಮಗೆ । अर्वाचीनाः—ಅಭಿಮುಖವಾಗುವಂತೆ । आ कृणुष्व—ಮಾಡು.

॥ भावार्थ ॥

ಎಲೈ ಅಗ್ನಿಯೇ, ತಮ್ಮ ವೇಗಗಮನಗಳಿಂದ ಶೀಘ್ರಗಾಮಿಗಳಾದ ಅಶ್ವಗಳು ಸಂಗ್ರಾಮದಲ್ಲಿ ಹೋಗಿ ಸೇರುವಂತೆ ಯಾವ ನಿನ್ನಲ್ಲಿ ಸಕಲ ಧನಗಳೂ ಒಟ್ಟಿಗೆ ಸೇರಿಕೊಂಡಿರುವವೋ ಅಂತಹ ನೀನು ಇಂದ್ರನಿಗಿಂತಲೂ ಅತಿಶಯವಾಗಿ ನಮಗೆ ರಕ್ಷಣೆಗಳನ್ನು ನೀಡು.

English Translation

O Agni, in whom all treasures are brought together as fleet horses are brought together in battle : bestow upon us protections even more effective than those of Indra.

॥ ಸಂಹಿತಾಪಾಠಃ ॥

ಅಧಾ ಹ್ಯಗ್ನೇ ಮಹ್ನಾ ನಿಷದ್ಯಾ ಸದ್ಯೋ ಜಜ್ಞಾನೋ ಹವ್ಯೋ ಬಭೂಥ ।
ತಂ ತೇ ದೇವಾಸೋ ಅನು ಕೇತಮಾಯನ್ನಧಾವರ್ಧಂತ ಪ್ರಥಮಾಸ ಊಮಾಃ ॥ ೭ ॥

॥ ಪದಪಾಠಃ ॥

ಅಧ । ಹಿ । ಅಗ್ನೇ । ಮಹ್ನಾ । ನಿ೪ಸದ್ಯ । ಸದ್ಯಃ । ಜಜ್ಞಾನಃ । ಹವ್ಯಃ । ಬಭೂಥ ।
ತಂ । ತೇ । ದೇವಾಸ । ಅನು । ಕೇತಂ । ಆಯನ್ । ಅಧ । ಅವರ್ಧಂತ । ಪ್ರಥಮಾಸಃ । ಊಮಾಃ ॥

॥ ಸಾಯಣಭಾಷ್ಯಂ ॥

ಅಧಾನಂತರಂ ಹಿ ಯಸ್ಮಾದ್ಧೇ ಅಗ್ನೇ ತ್ವಂ ಮಹ್ನಾ ಮಹತ್ತ್ವೇನ ಜಜ್ಞಾನೋ ಜಾಯಮಾನೋ ಜ್ವಲನ್ನಿಷದ್ಯೋಪವಿಶ್ಯ ಸದ್ಯಸ್ತಸ್ಮಿನ್ಪ್ರಜನನಕಾಲ ಏವ ಹವ್ಯೋ ಹವನಾರ್ಹ ಆಹುತಿಪ್ರಕ್ಷೇಪಣಾರ್ಹೋ ಬಭೂಥ ಭವಸಿ ತಸ್ಮಾತ್ಕಾರಣಾದ್ದೇವಾಸೋ ಹವಿಷಾಂ ದಾತಾರ ಋತ್ವಿಗ್ಯಜಮಾನಾಸ್ತೇ ತವ ಸ್ವಭೂತಂ ತಂ ತಾದೃಶಂ ಕೇತಂ ಪ್ರಜ್ಞಾನಲಕ್ಷಣಮನ್ವಾಯನ್ । ಅನುಗಚ್ಛಂತಿ । ದೀಪ್ತೇ ತ್ವಯಿ ಹವೀಂಷಿ ಜುಹ್ವತೀತ್ಯರ್ಥಃ । ಅಧಾನಂತರಮೃತ್ವಿಗಾದಯಃ ಪ್ರಥಮಾಸಃ ಕ್ರಿಯಾಭಿಜನವಿದ್ಯಾಗುಣೈರುತ್ಕೃಷ್ಟಾ ಊನಾಸ್ತ್ವಯಾ ರಕ್ಷಿತಾಃ ಸಂತೋ೪ವರ್ಧಂತ । ವರ್ಧಂತೇ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ಹಿ—ಯಾವ ಕಾರಣದಿಂದ । ಮಹ್ನಾ—ನಿನ್ನ ಮಹತ್ವದ ಫಲವಾಗಿ । ಜಜ್ಞಾನಃ—ಉತ್ಪನ್ನನಾಗಿಯೂ । ನಿಷದ್ಯ—ಕುಳಿತವನಾಗಿಯೂ । ಸದ್ಯಃ—ಉತ್ಪನ್ನನಾದೊಡನೆಯೇ । ಹವ್ಯಃ—ಹವಿಸ್ಸನ್ನು ಸ್ವೀಕರಿಸಲು ಅರ್ಹನಾಗಿ । ಬಭೂಥ—ಆದೆಯೋ ಆ ಕಾರಣದಿಂದಲೇ । ದೇವಾಸಃ—ಹವಿಸ್ಸನ್ನು ಅರ್ಪಿಸುವ ಋತ್ವಿಗ್ಯಜಮಾನರು । ತೇ—ನಿನ್ನ । ತಂ ಕೇತಂ—ಪ್ರಸಿದ್ಧವಾದ ಚಿಹ್ನವನ್ನು । ಅನು ಆಯನ್—ಅನುಸರಿಸುತ್ತಾರೆ । ಅಧ—ಅನಂತರದಲ್ಲಿ । ಪ್ರಥಮಾಸಃ—ಅತ್ಯುತ್ಕೃಷ್ಟವಾದ ಗುಣಗಳುಳ್ಳವರಾಗಿಯೂ । ಊನಾಸಃ—ನಿನ್ನಿಂದ ರಕ್ಷಿತರಾಗಿಯೂ । ಅವರ್ಧಂತ—ವೃದ್ಧಿಯನ್ನು ಹೊಂದುತ್ತಾರೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಕಾರಣದಿಂದ ನಿನ್ನ ಮಹತ್ವದ ಫಲವಾಗಿ ನೀನು ಉತ್ಪನ್ನನಾಗಿಯೂ, ಕುಳಿತವನಾಗಿಯೂ, ಉತ್ಪನ್ನನಾದೊಡನೆಯೇ ಹವಿಸ್ಸನ್ನು ಸ್ವೀಕರಿಸಲು ಅರ್ಹನಾಗಿ ಆದೆಯೋ ಆ ಕಾರಣದಿಂದಲೇ, ಹವಿಸ್ಸನ್ನು ಅರ್ಪಿಸುವ ಋತ್ವಿಗ್ಯಜಮಾನರು ನಿನ್ನ ಪ್ರಸಿದ್ಧವಾದ ಚಿಹ್ನವನ್ನು ಅನುಸರಿಸುತ್ತಾರೆ. ಅನಂತರ, ಅತ್ಯುತ್ಕೃಷ್ಟವಾದ ಗುಣಗಳುಳ್ಳವರಾಗಿಯೂ, ನಿನ್ನಿಂದ ರಕ್ಷಿತರಾಗಿಯೂ ವೃದ್ಧಿಯನ್ನು ಹೊಂದುತ್ತಾರೆ.

English Translation

Since you, Agni, born in your glory, and having sat down (on the altar), are immediately entitled to the oblation : therefore the holy (priests) come to that your ensign and the most worthy (worshippers) prosper protected (by you).

ಏಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಸ್ವಸ್ತಿ ನ ಇತಿ ಸಪ್ತರ್ಚಂ ಸಪ್ತಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಸ್ವಸ್ತ್ಯಯನು-ಕ್ರಾಂತಂ ॥ ಉಕ್ತಃ ಸೂಕ್ತವಿನಿಯೋಗಃ ॥ ಸ್ವಸ್ತ್ಯಯನ್ಯಾಂ ಪ್ರಧಾನಸ್ಯ ಸ್ವಸ್ತಿ ನ ಇತ್ಯೇಷಾನುವಾಕ್ಯಾ । ಸೂತ್ರಿತಂ ಚ । ಅಗ್ನಿಃ ಸ್ವಸ್ತಿಮಾನ್ ಸ್ವಸ್ತಿ ನೋ ದಿವೋ ಅಗ್ನೇ ಪೃಥಿವ್ಯಾಃ । ಆ. ೨-೧೦ । ಇತಿ ॥

ಅನುವಾದವು—ಸ್ವಸ್ತಿ ನಃ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾ ಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ ಸ್ವಸ್ತಿ ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಸ್ವಸ್ತ್ಯಯನೀ ಎಂಬ ಇಷ್ಟಿಯ ಪ್ರಧಾನಹೋಮದಲ್ಲಿ ಸ್ವಸ್ತಿ ನಃ ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—ಅಗ್ನಿಃ ಸ್ವಸ್ತಿಮಾನ್ ಸ್ವಸ್ತಿ ನೋ ದಿವೋ ಅಗ್ನೇ ಪೃಥಿವ್ಯಾಃ ಎಂಬ ಸೂತ್ರದಿಂದ (ಆ. ೨.೧೦) ವಿವೃತವಾಗಿರುವುದು

ಸೂಕ್ತ—೭

ಮಂಡಲ—೧೦ । ಅನುವಾಕ—೧ । ಸೂಕ್ತ—೭ ।
ಅಷ್ಟಕ—೭ । ಅಧ್ಯಾಯ—೬ । ವರ್ಗ—೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿಃ—ತ್ರಿತ ಆಪ್ತ್ಯಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್ ॥

॥ ಸಂಹಿತಾಪಾಠ ॥

ಸ್ವಸ್ತಿ ನೋ ದಿವೋ ಅಗ್ನೇ ಪೃಥಿವ್ಯಾ ವಿಶ್ವಾಯುರ್ಧೇಹಿ ಯಜಥಾಯ ದೇವ ।
ಸಚೇಮಹಿ ತವ ದಸ್ಮ ಪ್ರಕೇತೈರುರುಷ್ಯಾ ಣ ಉರುಭಿರ್ದೇವ ಶಂಸ್ಯೈಃ ॥ ೧ ॥

॥ ಪದಪಾಠಃ ॥

ಸ್ವಸ್ತಿ । ನಃ । ದಿವಃ । ಅಗ್ನೇ । ಪೃಥಿವ್ಯಾಃ । ವಿಶ್ವಽಆಯುಃ । ಧೇಹಿ । ಯಜಥಾಯ । ದೇವ ।
ಸಚೇಮಹಿ । ತವ । ದಸ್ಮ । ಪ್ರಽಕೇತೈಃ । ಉರುಷ್ಯ । ನಃ । ಉರುಽಭಿಃ । ದೇವ । ಶಂಸ್ಯೈಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ದೇವ ದಾನಾದಿಗುಣವಿಶಿಷ್ಟಾಗ್ನೇ ತ್ವಂ ದಿವಃ ಪೃಥಿವ್ಯಾ ದ್ಯಾವಾಪೃಥಿವ್ಯೋಃ ಸಕಾಶಾನ್ನೋಽಸ್ಮಭ್ಯಂ ವಿಶ್ವಾಯುಃ ಸರ್ವಾನ್ನಂ ಸ್ವಸ್ತಿ ಪುತ್ರಾದಿ ಯಜಥಾಯ ದೇವಯಾಗಾರ್ಥಂ ಧೇಹಿ । ಪ್ರಯಚ್ಛ । ಸರ್ವೋಪದ್ರವರಹಿತಾಃ ಸರ್ವಾನ್ನಪುತ್ರಯುಕ್ತಾಶ್ಚ ಸಂತೋ ವಯಂ ಯಥಾ ಯಜ್ವಾನೋ ಭವೇಮ ತಥಾಸ್ಮಾನ್ಕುರ್ವಿತಿ ವಾಕ್ಯಶೇಷಃ । ಅಪಿ ಚ ವಯಂ ಸಚೇಮಹಿ । ಹೇ ದಸ್ಮ ದರ್ಶನೀಯ ದೇವಾಗ್ನೇ ಉರುಭಿರ್ಬಹುಭಿಃ ಶಂಸ್ಯೈಃ ಶಂಸನೀಯೈಸ್ತವ ಸಂಬಂಧಿಭಿಃ ಪ್ರಕೇತೈಃ ಪಾಲನೋಪಾಯಪ್ರಜ್ಞಾನೈರ್ನೋಽಸ್ಮಾನುರುಷ್ಯ । ರಕ್ಷ ॥

॥ ಪ್ರತಿಪದಾರ್ಥ ॥

ದೇವ—ದೇವತಾತ್ಮನಾದ । ಅಗ್ನೇ—ಎಲೈ ಅಗ್ನಿಯೇ । ದಿವಃ—ದ್ಯುಲೋಕದಿಂದಲೂ । ಪೃಥಿವ್ಯಾಃ—ಪೃಥ್ವಿಯಿಂದಲೂ । ನಃ—ನಮಗೆ । ವಿಶ್ವಾಯುಃ—ಸಕಲವಿಧವಾದ ಅನ್ನವನ್ನೂ । ಸ್ವಸ್ತಿ—ಪುತ್ರಾದಿ ಸಂಪತ್ತನ್ನೂ । ಯಜಥಾಯ—ದೇವಪೂಜಾರ್ಥವಾಗಿ । ಧೇಹಿ—ಒದಗಿಸಿಕೊಡು । ದಸ್ಮ—ಆಕರ್ಷಕವಾದ ರೂಪವುಳ್ಳವನೂ । ದೇವ—ದೇವತಾತ್ಮನೂ ಆದ ಎಲೈ ಅಗ್ನಿಯೇ । ಉರುಭಿಃ—ಪ್ರಭೂತವಾದವೂ । ಶಂಸ್ಯೈಃ—ಪ್ರಶಂಸನೀಯವಾದವೂ ಆದ । ತವ ಪ್ರಕೇತೈಃ—ನಿನ್ನ ಪಾಲನಾದಿ ಸಂಕೇತಗಳಿಂದ । ಸಚೇಮಹಿ—ನಾವು ಒಟ್ಟುಗೂಡಿರುವಂತಾಗಲಿ । ನಃ—ನಮ್ಮನ್ನು । ಉರುಷ್ಯ—ರಕ್ಷಿಸು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ದ್ಯುಲೋಕದಿಂದಲೂ ಪೃಥ್ವಿಯಿಂದಲೂ ನಮಗೆ ಸಕಲವಿಧವಾದ ಅನ್ನವನ್ನೂ ಪುತ್ರಾದಿಸಂಪತ್ತನ್ನೂ ದೇವಪೂಜಾರ್ಥವಾಗಿ ಒದಗಿಸಿಕೊಡು. ಆಕರ್ಷಕವಾದ ರೂಪವುಳ್ಳವನೂ ದೇತಾತ್ಮನೂ ಆದ ಎಲೈ ಅಗ್ನಿಯೇ, ಪ್ರಭೂತವಾದವೂ, ಪ್ರಶಂಸನೀಯವಾದವೂ ಆದ ಪಾಲನಾದಿ ನಿನ್ನ ಸಂಕೇತಗಳಿಂದ ನಾವು ಒಟ್ಟುಗೂಡಿರುವಂತಾಗಲಿ. ನಮ್ಮನ್ನು ರಕ್ಷಿಸು.

English Translation

Divine Agni, bestow upon us from earth and heaven prosperity and abundant food, that we may be able to offer sacrifices May we be associated beautiful (Agni), with your indications (of favour) : protect us, divine Agni on account of our many hymns.

॥ ಸಂಹಿತಾಪಾಠಃ ॥

ಇಮಾ ಅಗ್ನೇ ಮತಯಸ್ತುಭ್ಯಂ ಜಾತಾ ಗೋಭಿರಶ್ವೈರಭಿ ಗೃಣಂತಿ ರಾಧಃ ।
ಯದಾ ತೇ ಮರ್ತೋ ಅನು ಭೋಗಮಾನಡ್ವಸೋ ದಧಾನೋ ಮತಿಭಿಃ ಸುಜಾತ ॥ ೨ ॥

॥ ಪದಪಾಠಃ ॥

ಇಮಾಃ । ಅಗ್ನೇ । ಮತಯಃ । ತುಭ್ಯಂ । ಜಾತಾಃ । ಗೋಭಿಃ । ಅಶ್ವೈಃ । ಅಭಿ । ಗೃಣಂತಿ । ರಾಧಃ ।
ಯದಾ । ತೇ । ಮರ್ತಃ । ಅನು । ಭೋಗಂ । ಆನಟ್ । ವಸೋ ಇತಿ । ದಧಾನಃ । ಮತಿಽಭಿಃ ।
ಸುಽಜಾತ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಇಮಾ ಈದೃಶ್ಯೋ ಮತಯಃ ಸ್ತುತಯಸ್ತುಭ್ಯಂ ತ್ವದರ್ಥಂ ಜಾತಾ ಅಸ್ಮದಾದಿ-ಸ್ತೋತೃಮುಖಾದುತ್ಪನ್ನಾಃ । ಉಚ್ಚಾರಿತಾ ಇತ್ಯರ್ಥಃ । ಗೋಭಿರಶ್ವೈಶ್ಚ ಸಹಿತಂ ರಾಧಸ್ತ್ವಯಾ ದೀಯ-ಮಾನಂ ಹಿರಣ್ಯಾದಿಕಂ ಧನಮಭಿ ಗೃಣಂತಿ । ಅಭಿಷ್ಟುವಂತಿ । ಅಸ್ಮತ್ಸ್ತುತ್ಯನುರೂಪಾನ್ನಮಸ್ಮಭ್ಯಂ ತ್ವಯಾ ದತ್ತಮಿತಿ ಪ್ರಶಂಸಂತಿ । ಯದಾ ಮರ್ತೋಽಸ್ಮದಾದಿಕೋ ಮನುಷ್ಯಸ್ತೇ ತ್ವಯಾ ದೀಯ-ಮಾನಂ ಭೋಗಂ ಭೋಗಾರ್ಹಂ ಧನಮನ್ವಾನಟ್ ಪ್ರಾಪ್ನೋತಿ ಲಭತೇ ತದಾ ಹೇ ವಸೋ ಪ್ರಶಸ್ಯ-ವಸುಮನ್ । ಯದ್ವಾ । ಸ್ವೇನ ತೇಜಸಾ ಸರ್ವಸ್ಯಾಚ್ಛಾದಯಿತಃ । ಹೇ ಸುಜಾತ ಶೋಭನಕರ್ಮಾರ್ಥ-ಮುತ್ಪನ್ನಾಗ್ನೇ ತ್ವಂ ದಧಾನೋಽಸ್ಮಭ್ಯಂ ಧನಂ ಪ್ರಯಚ್ಛನ್ ಮತಿಭಿರಸ್ಮದೀಯಾಭಿಃ ಸ್ತೋತೃಸ ಇತಿ ಶೇಷಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ತುಭ್ಯಂ—ನಿನ್ನನ್ನುದ್ದೇಶಿಸಿ । ಜಾತಾಃ—ಉತ್ಪನ್ನವಾದ । ಇಮಾಃ ಮತಯಃ—ಈ ಸ್ತುತಿಗಳು । ಗೋಭಿಃ—ಗೋವುಗಳೊಡನೆಯೂ । ಅಶ್ವೈಃ—ಅಶ್ವಗಳೊಡನೆಯೂ ಕೂಡಿದ ।

ರಾಧಃ—ಧನವನ್ನು । ಅಭಿ ಗೃಣಂತಿ—ಸ್ತುತಿಸುತ್ತವೆ । ವಸೋ—ನಿನ್ನ ತೇಜಸ್ಸಿನಿಂದ ಎಲ್ಲವನ್ನೂ ಆವರಿಸುವವನೂ । ಸುಜಾತ—ಉತ್ತಮವಾದ ಉತ್ಪತ್ತಿಯುಳ್ಳವನೂ ಆದ ಎಲೈ ಅಗ್ನಿಯೇ । ಯದಾ—ಯಾವಾಗ । ಮರ್ತಃ—ಮಾನವನು । ತೇ—ನಿನ್ನಿಂದ ದತ್ತವಾದುದೂ । ಭೋಗಂ—ಭೋಗಾರ್ಹವಾದುದೂ ಆದ ಧನವನ್ನು । ಅನು ಆನಟ್—ಹೊಂದುವನೋ ಆಗ । ದಧಾನಃ—ನೀನು ನನಗೂ ಧನವನ್ನು ಕೊಡುತ್ತ । ಮತಿಭಿಃ—ನಮ್ಮ ಸ್ತುತಿಗಳಿಂದ ಪ್ರಶಂಸಿಸಲ್ಪಡುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿ ನಿರ್ಮಿತವಾದ ಈ ಸ್ತುತಿಗಳು ಗೋವುಗಳೊಡನೆಯೂ, ಅಶ್ವಗಳೊಡನೆಯೂ ಕೂಡಿದ ಧನವನ್ನು ಪ್ರಾರ್ಥಿಸುತ್ತವೆ. ಸ್ವತೇಜಸ್ಸಿನಿಂದ ಎಲ್ಲವನ್ನೂ ಆವರಿಸುವವನೂ ಉತ್ತಮವಾದ ಉತ್ಪತ್ತಿಯುಳ್ಳವನೂ ಆದ ಎಲೈ ಅಗ್ನಿಯೇ, ಯಾವಾಗ ಮಾನವನು ನಿನ್ನಿಂದ ದತ್ತವಾದುದೂ, ಭೋಗಾರ್ಹವಾದುದೂ ಆದ ಧನವನ್ನು ಹೊಂದುವನೋ ಆಗ ನೀನು ನಮಗೂ ಧನವನ್ನು ಕೊಡುತ್ತ ನಮ್ಮ ಸ್ತುತಿಗಳಿಂದ ಪ್ರಶಂಸಿಸಲ್ಪಡುತ್ತೀಯೆ

English Translation

These hymns, addressed, Agni, to you, praise you for wealth, together with cattle and horses when a mortal obtains the means of enjoyment from you, (then), opulent and well-born Agni, you, who are the granter of benefits, (are celebrated) by our praises

॥ ಸಂಹಿತಾಪಾಠಃ ॥

ಅಗ್ನಿಂ ಮನ್ಯೇ ಪಿತರಮಗ್ನಿಮಾಪಿಮಗ್ನಿಂ ಭ್ರಾತರಂ ಸದಮಿತ್ಸಖಾಯಂ ।
ಅಗ್ನೇರನೀಕಂ ಬೃಹತಃ ಸಪರ್ಯಂ ದಿವಿ ಶುಕ್ರಂ ಯಜತಂ ಸೂರ್ಯಸ್ಯ ॥

॥ ಪದಪಾಠಃ ॥

ಅಗ್ನಿಂ । ಮನ್ಯೇ । ಪಿತರಂ । ಅಗ್ನಿಂ । ಆಪಿಂ । ಅಗ್ನಿಂ । ಭ್ರಾತರಂ । ಸದಂ । ಇತ್ । ಸಖಾಯಂ ।
ಅಗ್ನೇಃ । ಅನೀಕಂ । ಬೃಹತಃ । ಸಪರ್ಯಂ । ದಿವಿ । ಶುಕ್ರಂ । ಯಜತಂ । ಸೂರ್ಯಸ್ಯ ॥ ೩ ॥

॥ ಸಾಯಣಭಾಷ್ಯಂ ॥

ಅಹಂ ಸ್ತೋತಾ ಪಿತರಮಗ್ನಿಮೇವ ಮನ್ಯೇ । ಜಾನೇ । ಆಪಿಂ ಬಂಧುಮಗ್ನಿಮೇವ ಮನ್ಯೇ । ಭ್ರಾತರಮಗ್ನಿಮೇವ ಮನ್ಯೇ । ಸದಮಿತ್ ಸದೈವಾವಿಸಂವಾದಿನಂ ಸಖಾಯಮಗ್ನಿಮೇವ ಜಾನಾಮಿ । ಬೃಹತೋ ಮಹತೋಽಗ್ನೇರನೀಕಮಾಹವನೀಯಾಖ್ಯಂ ಮುಖಂ ಸಪರ್ಯಂ । ಪರಿಚರಾಮಿ । ತತ್ರ ಲುಪ್ತೋಪಮಮೇತತ್ । ದಿವಿ ದ್ಯುಲೋಕೇ ಸ್ಥಿತಂ ಯಜತಂ ಯಷ್ಟವ್ಯಂ ಪೂಜನೀಯಂ ಸೂರ್ಯಸ್ಯ ಸಂಬಂಧಿ ಶುಕ್ರಂ ದೀಪ್ತಿಮನ್ಮಂಡಲಂ ಯಥಾ ಕಶ್ಚಿದಭಿಪ್ರೇತಾರ್ಥಸಿದ್ಧಯೇ ಆರಾಧಯತಿ ತದ್ವತ್ ॥

॥ ಪ್ರತಿಪದಾರ್ಥ ॥

ಅಹಂ—ನಾನು । ಅಗ್ನಿಂ—ಅಗ್ನಿಯನ್ನು । ಪಿತರಂ—ನನ್ನ ತಂದೆಯೆಂದು । ಮನ್ಯೇ—ತಿಳಿಯುತ್ತೇನೆ । ಅಗ್ನಿಂ—ಅಗ್ನಿಯನ್ನು । ಅಪಿಂ—ಬಂಧುವನ್ನಾಗಿ ತಿಳಿಯುತ್ತೇನೆ । ಅಗ್ನಿಂ—ಅಗ್ನಿಯನ್ನು । ಭ್ರಾತರಂ—ನನ್ನ ಹಿರಿಯ ಸಹೋದರನೆಂದೇ ಭಾವಿಸುತ್ತೇನೆ । ಸದಮಿತ್—ಸರ್ವದಾ । ಅಗ್ನಿಂ—ಅಗ್ನಿಯನ್ನೇ । ಸಖಾಯಂ—ನನ್ನ ಮಿತ್ರನೆಂದೇ ಅರಿಯುತ್ತೇನೆ । ಯಜತಂ—ಪೂಜಾರ್ಹವಾದುದೂ । ತುಕ್ರಂ—ಪ್ರಭಾಯುತವಾದೂ ಆದ । ಸೂರ್ಯಸ್ಯ—ಸೂರ್ಯಮಂಡಲವನ್ನು ಆರಾಧಿಸುವಂತೆ । ಬೃಹತಃ—ಮಹಾತ್ಮನಾದ । ಅಗ್ನೇಃ—ಅಗ್ನಿಯ । ಅನೀಕಂ—ಮುಖವನ್ನು । ಸಪರ್ಯಂ—ಪೂಜಿಸುತ್ತೇನೆ.

॥ ಭಾವಾರ್ಥ ॥

ನಾನು ಅಗ್ನಿಯನ್ನೇ ನನ್ನ ಪಿತೃವೆಂದರಿಯುತ್ತೇನೆ. ಅವನೇ ನನ್ನ ಬಂದುವೆಂದೂ, ಸಹೋದರನೆಂದೂ, ಆಪ್ತನಾದ ಮಿತ್ರನೆಂದೂ ತಿಳಿಯುತ್ತೇನೆ. ಪೂಜಾರ್ಹವಾದುದೂ, ಪ್ರಭಾಯುತವಾದುದೂ ಆದ ಸೂರ್ಯಮಂಡಲವನ್ನು ಆರಾಧಿಸುವಂತೆ ಮಹಾತ್ಮನಾದ ಅಗ್ನಿಯ ಮುಖವನ್ನು ನಾನು ಪೂಜಿಸುತ್ತೇನೆ

English Translation

I regard Agni as a father, as a kinsman, as a brother, as a constant friend. I reverence the face of the mighty Agni, radiant in heaven, adorable as the sun.

॥ ಸಂಹಿತಾಪಾಠಃ ॥

ಸಿಧ್ರಾ ಅಗ್ನೇ ಧಿಯೋ ಅಸ್ಮೇ ಸನುತ್ರೀರ್ಯಂ ತ್ರಾಯಸೇ ದಮ ಆ ನಿತ್ಯ-
ಹೋತಾ ।
ಋತಾವಾ ಸ ರೋಹಿದಶ್ವಃ ಪುರುಕ್ಷುರ್ದ್ಯುಭಿರಸ್ಮಾ ಅಹಭಿರ್ವಾಮಮಸ್ತು ॥

॥ ಪದಪಾಠಃ ॥

ಸಿಧ್ರಾಃ । ಅಗ್ನೇ । ಧಿಯಃ । ಅಸ್ಮೇ ಇತಿ । ಸನುತ್ರೀಃ । ಯಂ । ತ್ರಾಯಸೇ । ದಮೇ । ಆ । ನಿತ್ಯ-
ಹೋತಾ ।
ಋತವಾ । ಸಃ । ರೋಹಿತ್ಅಶ್ವಃ । ಪುರುಕ್ಷುಃ । ದ್ಯುಭಿಃ । ಅಸ್ಮೈ । ಅಹಭಿಃ । ವಾಮಂ । ಅಸ್ತು ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸನುತ್ರೀಃ ಸಂಭಕ್ತ್ರೀರಸ್ಮೇ ಅಸ್ಮಾಕಂ ಸಂಬಂಧಿನ್ಯೋ ಧಿಯಃ ಸ್ತುತಯಃ ಸಿಧ್ರಾಃ ಸಿದ್ಧಾ ನಿಷ್ಪನ್ನಾಃ । ತ್ವದರ್ಥಮಸ್ಮಾಭಿಃ ಕೃತಾ ಇತ್ಯರ್ಥಃ । ದಮ ಆ ಅಸ್ಮದ್ಗೃಹೇ ಮಯಾದತ-

ಯೋವಸ್ಥಿತಸ್ತ್ವಂ ನಿತ್ಯಹೋತಾ ಸತೇವೋ ಹೋವಯಿಷ್ಪಾದಕೋ ದೇವಾನಾಮಾಹ್ವಾತಾ ವಾ ಸನ್ ಯಂ ತ್ರಾಯಸೇ ಕರ್ಮವೈಗುಣ್ಯಾದ್ರಕ್ಷಸಿ ಸೋಽಹಂ ಶ್ವಶ್ವಸಾದಾತ್ತ್ವತ್ತ್ರಾಯುಜ್ಯಂ ಗತಃ ಸನ್ಕೃತವಾ ಯಜ್ಞವಾನ್ ಸತ್ಯವಾನ್ ವಾ ಸ್ಯಾಮಿತಿ ಶೇಷಃ । ರೋಹಿದಶ್ವೋ ರೋಹಿತ್ಸೇಜ್ಞಕಾಶ್ವಃ ಪುರುಕ್ಷುರ್ಬಹ್ವನ್ನಶ್ಚ ಸ್ಯಾಂ । ಕಂಚಾಸ್ಮಾ ಈದೃಗ್ಭೂತಾಯ ತುಭ್ಯಂ ದ್ಯುಭಿರ್ದೀಪ್ತೈರಹಭಿರಹಃಸು ದಿವಸೇಷು ವಾಮಂ ವನನೀಯಂ ಹವಿರಸ್ತು ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಸನುತ್ರೀಃ**—ಭಕ್ತಿಯುತವಾದ । **ಅಸ್ಮೇ ಧಿಯಃ**—ನಮ್ಮ ಸ್ತುತಿಗಳು । **ಸಿಧ್ರಾಃ**—ನಿನಗಾಗಿಯೇ ನಿರ್ಮಿತವಾಗಿವೆ । **ದಮು ಅ**—ನಮ್ಮ ಯಾಗಗೃಹದಲ್ಲಿ । **ನಿತ್ಯಹೋತಾ**—ಸರ್ವದಾ ಹೋತೃವಾಗಿರುವ ನೀನು । **ಯಂ**—ಯಾವ ನನ್ನನ್ನು । **ತ್ರಾಯಸೇ**—ರಕ್ಷಿಸುವೆಯೋ । **ಸಃ**—ಆ ನಾನು । **ಋತವಾ**—ಸರ್ವದಾ ಯಜ್ಞವಂತನಾಗಿರುವಂತಾಗಲಿ । **ರೋಹಿದಶ್ವಃ**—ಹೊಂಬಣ್ಣದ ಅಶ್ವವುಳ್ಳವನಾಗಿಯೂ । **ಪುರುಕ್ಷುಃ**—ಪ್ರಭೂತವಾದ ಅನ್ನವುಳ್ಳವನಾಗಿಯೂ ಆಗುವಂತಾಗಲಿ । **ಅಸ್ಮೈ**—ನಿನಗೆ । **ದ್ಯುಭಿಃ**—ಪ್ರಕಾಶಮಾನಗಳಾದ । **ಅಹಭಿಃ**—ದಿವಸಗಳಲ್ಲಿ । **ವಾಮಂ**—ಆಕರ್ಷಕವಾದ ಹವಿಸ್ಸು । **ಅಸ್ತು**—ಅರ್ಪಿತವಾಗಲಿ

॥ ಭಾವಾರ್ಥ ॥

ಎಲೈ ಅಗ್ನಿಯೇ, ಭಕ್ತಿಯುತವಾದ ನಮ್ಮ ಸ್ತುತಿಗಳು ನಿನಗಾಗಿಯೇ ನಿರ್ಮಿತವಾಗಿವೆ. ನಮ್ಮ ಯಾಗಗೃಹದಲ್ಲಿ ಸರ್ವದಾ ಹೋತೃವಾಗಿರುವ ನೀನು ಯಾವ ನನ್ನನ್ನು ರಕ್ಷಿಸುವೆಯೋ ಆ ನಾನು ಸರ್ವದಾ ಯಜ್ಞವಂತನಾಗಿರುವಂತಾಗಲಿ ಹೊಂಬಣ್ಣದ ಅಶ್ವವುಳ್ಳವನಾಗಿಯೂ, ಪ್ರಭೂತವಾದ ಅನ್ನವುಳ್ಳವನಾಗಿಯೂ ಆಗುವಂತಾಗಲಿ ನಿನಗೆ ಪ್ರಕಾಶಮಾನವಾದ ದಿವಸಗಳಲ್ಲಿ ಆಕರ್ಷಕವಾದ ಹವಿಸ್ಸು ಅರ್ಪಿತವಾಗಲಿ.

English Translation

Agni, our earnest praises have been composed for you. May he whom you, the perpetual invoker of the gods, protect in the sacrificial chamber, be rich in sacrifices, the master of red steeds, the possessor of abundant food ; may the desirable (oblation) be granted him on shining days.

॥ ಸಂಹಿತಾಪಾಠಃ ॥

ದ್ಯುಭಿರ್ಹಿತಂ ಮಿತ್ರಮಿವ ಪ್ರಯೋಗಂ ಪ್ರತ್ನಮೃತ್ವಿಜಮಧ್ವರಸ್ಯ ಜಾರಂ ।
ಬಾಹುಭ್ಯಾಮಗ್ನಿಮಾಯವೋಽಜನಂತ ವಿಕ್ಷು ಹೋತಾರಂ ನ್ಯಸಾದಯಂತ ॥

॥ ಪದಪಾಠಃ ॥

ದ್ಯುಭಿಃ । ಹಿತಂ । ಮಿತ್ರಂ ಽಇವ । ಪ್ರಯೋಗಂ । ಪ್ರತ್ನಂ । ಋತ್ವಿಜಂ । ಅಧ್ವರಸ್ಯ । ಜಾರಂ ।
ಬಾಹುಭ್ಯಾಂ । ಅಗ್ನಿಂ । ಆಯವಃ । ಅಜನಂತ । ವಿಕ್ಷು । ಹೋತಾರಂ । ನಿ । ಅಸಾದಯಂತ ॥ ೫ ॥

। ಸಾಯಣಭಾಷ್ಯಂ ।

ದ್ಯುಭಿರ್ಹಿತಂ ದೀಪ್ತೈರಾಹಿತಂ ಮಿತ್ರಮಿವ ಸ್ನಿಗ್ಧಮಿವ ಪ್ರಯೋಗಂ ಪ್ರಯೋಕ್ತವ್ಯಂ ಪ್ರತ್ನಂ ಪುರಾಣಮೃತ್ವಿಜಂ ಹೋತೃಸಂಜ್ಞಕಂ । ಅಗ್ನಿಮೀ ದೇವಾನಾಂ ಹೋತಾರೀದಿತಿ ಶ್ರುತೇಃ । ಅಧ್ವರಸ್ಯ ಜಾರಂ ಸಮಾಪಯಿತಾರಂ ಏವಂಭೂತಮಗ್ನಿಮಾಯವೋ ಯಜಮಾನಾ ಮನುಷ್ಯಾ ಬಾಹುಭ್ಯಾಮಜನಂತ । ಜನಿತವಂತಃ । ಕಂಚ ವಿಕ್ಷು ಮನುಷ್ಯೇಷು । ತದಾಕಾರೇಷು ದೇವೇಷ್ವಿತ್ಯರ್ಥಃ । ಹೋತಾರಮಾಹ್ವಾತಾರಂ ನ್ಯಸಾದಯಂತ । ನಿಯಮೇನ ಸಾದಿತವಂತಃ । ದೇವಾನಾಂ ಯಾಗಾರ್ಥಂ ನಿರೂಪಿತವಂತ ಇತ್ಯರ್ಥಃ ॥

। ಪ್ರತಿಪದಾರ್ಥ ।

ದ್ಯುಭಿಃ—ಪ್ರಭೆಗಳಿಂದ । **ಹಿತಂ**—ಆವೃತನೂ । **ಮಿತ್ರಮಿವ**—ಮಿತ್ರನಂತೆ । **ಪ್ರಯೋಗಂ**—ಉಪಕಾರಕನೂ । **ಪ್ರತ್ನಂ**—ಪುರಾತನನೂ । **ಋತ್ವಿಜಂ**—ಹೋತೃರೂಪನಾದ ಋತ್ವಿಕ್ಕೂ । **ಅಧ್ವರಸ್ಯ**—ಯಜ್ಞಕ್ಕೆ । **ಜಾರಂ**—ನಿರ್ವಾಹಕನೂ ಆದ । **ಅಗ್ನಿಂ**—ಅಗ್ನಿಯನ್ನು । **ಆಯವಃ**—ಮಾನವರು (ಯಜಮಾನರು) । **ಬಾಹುಭ್ಯಾಂ**—ತಮ್ಮ ತೋಳುಗಳಿಂದ । **ಅಜನಂತ**—ಉತ್ಪನ್ನ ಮಾಡಿದ್ದಾರೆ । **ವಿಕ್ಷು**—ಮಾನವರ ನಡುವೆ । **ಹೋತಾರಂ**—ಹೋತೃರೂಪನನ್ನಾಗಿ । **ನ್ಯಸಾದಯಂತ**—ಸ್ಥಾಪಿಸಿದ್ದಾರೆ.

। ಭಾವಾರ್ಥ ।

ಪ್ರಭೆಗಳಿಂದ ಆವೃತನೂ, ಮಿತ್ರನಂತೆ ಉಪಕಾರಕನೂ, ಪುರಾತನೂ, ಹೋತೃರೂಪನಾದ ಋತ್ವಿಕ್ಕೂ, ಯಜ್ಞಕ್ಕೆ ನಿರ್ವಾಹಕನೂ ಆದ ಅಗ್ನಿಯನ್ನು ಯಜಮಾನರು ತಮ್ಮ ತೋಳುಗಳಿಂದ ಕಡೆದು ಉತ್ಪನ್ನಮಾಡಿದ್ದಾರೆ. ಮಾನವರ ನಡುವೆ ಹೋತೃವನ್ನಾಗಿ ಸ್ಥಾಪಿಸಿದ್ದಾರೆ

English Translation

Men have generated with their arms Agni, who is decorated with rays of light, selected as a friend, the ancient priest, the accomplisher of the sacrifice, and they have appointed him amongst people, the invoker of the gods.

। ಸಂಹಿತಾಪಾಠಃ ।

ಸ್ವಯಂ ಯಜಸ್ವ ದಿವಿ ದೇವ ದೇವಾನ್ಹಿಂ ತೇ ಪಾಕಃ ಕೃಣವದಪ್ರಚೇತಾಃ ।

ಯಥಾಯಜ ಋತುಭಿರ್ದೇವ ದೇವನೇವಾ ಯಜಸ್ವ ತನ್ವಂ ಸುಜಾತ ॥ ೬ ॥

॥ ಪದಪಾಠಃ ॥

ಸ್ವಯಂ । ಯಜಸ್ವ । ದಿವಿ । ದೇವ । ದೇವಾನ್ । ಕಂ । ತೇ।ಪಾಕಃ । ಕೃಣವತ್ । ಅಪ್ರಜೇತಾಃ ।
ಯಥಾ । ಅಯಜಃ । ಋತುಽಭಿಃ । ದೇವ । ದೇವಾನ್ । ಏವ । ಯಜಸ್ವ । ತನ್ವಂ । ಸುಽಜಾತ ॥ ೬ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ತ್ವಂ ದಿವಿ ದ್ಯುಲೋಕೇ ಸ್ಥಿತಾನ್ದೇವಾನಿಂದ್ರಾದೀನ್ ಸ್ವಯಮಾತ್ಮನೈವ ಯಜಸ್ವ । ಪಾಕಃ ಪಕ್ತವ್ಯಪ್ರಜ್ಞೋಽಪ್ರಜೇತಾ ಅಪ್ರಕೃಷ್ಟಜ್ಞಾನೋ ಮನುಷ್ಯಸ್ತೇ ತವ ಕಂ ಕೃಣವತ್ । ಕಂ ಕರೋತಿ । ತ್ವಯಾನಧಿಷ್ಠಿತಃ ಕಂಚಿದಪಿ ನ ಜಾನಾತೀತ್ಯರ್ಥಃ । ಕಂಚ ಹೇ ದೇವ ತ್ವಮೃತುಭಿಃ ಕಾಲವಿಶೇಷೈರ್ದೇವಾನ್ಯಥಾಯಜಃ ಇಷ್ಟವಾನಸಿ ಏವೈವಮ ಹೇ ಸುಜಾತ ಶೋಭನಜನ್ಮನ್ನಗ್ನೇ ತನ್ವಮಾತ್ಮಾನಮಪಿ ಯಜಸ್ವ ॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನಾದ ಎಲೈ ಅಗ್ನಿಯೇ । ದಿವಿ—ದ್ಯುಲೋಕಸ್ಥರಾದ । ದೇವಾನ್—ದೇವತೆಗಳನ್ನು । ಸ್ವಯಂ—ನೀನಾಗಿಯೇ । ಯಜಸ್ವ—ಪೂಜಿಸು । ಪಾಕಃ—ಅಪರಿಪಕ್ವವಾದ ಬುದ್ಧಿಯುಳ್ಳವನೂ । ಅಪ್ರಜೇತಾಃ—ಉತ್ತಮವಾದ ಜ್ಞಾನವಿಲ್ಲದವನೂ ಆದ ಪುರುಷನು । ತೇ—ನಿನ್ನ ಮಹಿಮೆಯನ್ನರಿತು । ಕಂ ಕೃಣವತ್—ಯಾವರೀತಿ ಪೂಜಿಸಬಲ್ಲನು ? । ದೇವ—ಎಲೈ ಅಗ್ನಿಯೇ । ಋತುಭಿಃ—ಆಯಾ ಕಾಲಾನುಗುಣವಾಗಿ । ದೇವಾನ್—ದೇವತೆಗಳನ್ನು । ಯಥಾ ಅಯಜಃ—ಯಾವ ರೀತಿ ಪೂಜಿಸಿದ್ದೀಯೋ । ಏವ—ಅದೇ ರೀತಿ । ಸುಜಾತ—ಉತ್ತಮವಾದ ಉತ್ಪನ್ನವುಳ್ಳ ಎಲೈ ಅಗ್ನಿಯೇ । ತನ್ವಂ—ನಿನ್ನನ್ನೂ ಸಹ । ಯಜಸ್ವ—ಪೂಜಿಸಿಕೋ.

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಅಗ್ನಿಯೇ. ದ್ಯುಲೋಕಸ್ಥರಾದ ದೇವತೆಗಳನ್ನು ನೀನಾಗಿಯೇ ಪೂಜಿಸು. ಅಪರಿಪಕ್ವವಾದ ಬುದ್ಧಿಯುಳ್ಳವನೂ, ಉತ್ತಮವಾದ ಜ್ಞಾನವಿಲ್ಲದವನೂ ಆದ ಪುರುಷನು ನಿನ್ನ ಮಹಿಮೆಯನ್ನರಿಯದೇ ಇರುವುದರಿಂದ ನಿನ್ನನ್ನು ಉತ್ತಮವಾಗಿ ಪೂಜಿಸಲಾರನು. ಎಲೈ ಅಗ್ನಿಯೇ, ಆಯಾ ಕಾಲಾನುಗುಣವಾಗಿ ನೀನು ದೇವತೆಗಳನ್ನು ಯಾವ ರೀತಿ ಪೂಜಿಸಿದ್ದೀಯೋ ಅದೇ ರೀತಿ ಉತ್ತಮವಾದ ಉತ್ಪನ್ನವುಳ್ಳ ಎಲೈ ಅಗ್ನಿಯೇ, ನಿನ್ನನ್ನೂ ಸಹ ಪೂಜಿಸಿಕೋ

English Translation

Offer sacrifice yourself, divine (Agni), to the gods in heaven : what can one who is ignorant and of immature undestanding effect for you ? As in due seasons, divine (Agni), you have sacrificed to the gods, so you, well-engendered (Agni), sacrifice to your own person.

॥ ಸಂಹಿತಾಪಾಠಃ ॥

ಭವಾ ನೋ ಅಗ್ನೇಽವಿತೋತ ಗೋಪಾ ಭವಾ ವಯಸ್ಕೃದುತ ನೋ ವಯೋಧಾಃ ।

ರಾಸ್ವಾ ಚ ನಃ ಸುಮಹೋ ಹವ್ಯದಾತಿಂ ತ್ರಾಸ್ವೋತ ನಸ್ತನ್ವೋ ಽ ಅಪ್ರಯುಚ್ಛನ್ ॥ ೭ ॥

॥ ಪದಪಾಠಃ ॥

ಭವ । ನಃ । ಅಗ್ನೇ । ಅವಿತಾ । ಉತ । ಗೋಪಾಃ । ಭವ । ವಯಃಽಕೃತ್ । ಉತ । ನಃ । ವಯಃಽಧಾಃ ।

ರಾಸ್ವ । ಚ । ನಃ । ಸುಽಮಹಃ । ಹವ್ಯಽದಾತಿಂ । ತ್ರಾಸ್ವ । ಉತ । ನಃ । ತನ್ವಃ । ಅಪ್ರಽಯುಚ್ಛನ್ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ನೋಽಸ್ಮಾಕಮವಿತಾ ದೃಷ್ಟಭಯೇಭ್ಯೋ ರಕ್ಷಕೋ ಭವ । ಭೂಯಾಃ । ಉತಾಪಿ ಚ ಗೋಪಾ ಅದೃಷ್ಟಭಯೇಭ್ಯೋ ಗೋಪ್ತಾ ರಕ್ಷಕೋ ಭವ । ಉತಾಪಿ ಚ ವಯಸ್ಕೃದನ್ನಸ್ಯ ಕರ್ತಾ ಭವ । ವಯೋಧಾ ಅನ್ನಸ್ಯ ದಾತಾ ಭವ ! ಹೇ ಸುಮಹಃ ಸುಷ್ಠು ಪೂಜನೀಯಾಗ್ನೇ ತ್ವಂ ಸ್ವಭೂತಾಂ ಹವ್ಯದಾತಿಂ ಹವಿಷೋ ದಾತಿಂ ನೋಽಸ್ಮಭ್ಯಂ ರಾಸ್ವ ಚ । ಪ್ರಯುಚ್ಛ । ಉತಾಪಿ ಚ ನೋಽಸ್ಮಾಕಂ ಸ್ವಭೂತಾಸ್ತನ್ವಃ ಶರೀರಾಣ್ಯಪ್ರಯುಚ್ಛನ್ನಪ್ರಮಾದ್ಯಂಸ್ತ್ರಾಸ್ವ । ಪಾಲಯ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ನಃ**—ನಮಗೆ । **ಅವಿತಾ**—ರಕ್ಷಕನಾಗಿ । **ಭವ**—ಆಗು । **ಉತ**—ಮತ್ತು । **ಗೋಪಾಃ**—ನಮ್ಮ ರಕ್ಷಕನಾಗಿರು । **ಉತ**—ಮತ್ತು । **ವಯಸ್ಕೃತ್**—ನಮಗೆ ಅನ್ನವನ್ನು ಉತ್ಪನ್ನಮಾಡುವವನಾಗಿ । **ಭವ**—ಆಗಿರು । **ವಯೋಧಾಃ**—ಅನ್ನದಾತನಾಗಿರು । **ಸುಮಹಃ**—ಉತ್ತಮವಾದ ಪೂಜೆಗೆ ಅರ್ಹನಾದ ಎಲೈ ಅಗ್ನಿಯೇ । **ನಃ**—ನಮಗೆ । **ಹವ್ಯದಾತಿಂ**—ಹವಿರ್ದಾನಕ್ಕೆ ಅರ್ಹತೆಯನ್ನು । **ರಾಸ್ವ**—ಕೊಡು । **ಉತ**—ಮತ್ತು । **ನಃ**—ನಮ್ಮ । **ತನ್ವಃ**—ಶರೀರಗಳನ್ನು । **ಅಪ್ರಯುಚ್ಛನ್**—ಜಾಗರೂಕನಾಗಿ । **ತ್ರಾಸ್ವ**—ರಕ್ಷಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮಗೆ ರಕ್ಷಕನಾಗಿರು. ನಮ್ಮ ಎಲ್ಲಾ ಆಪತ್ತುಗಳನ್ನು ದೂರಮಾಡಿ ರಕ್ಷಿಸು. ನಮಗೆ ಅನ್ನವನ್ನು ಉತ್ಪನ್ನಮಾಡಿ ಅದನ್ನು ದಾನಮಾಡು. ಉತ್ತಮವಾದ ಪೂಜೆಗೆ ಅರ್ಹನಾದ ಎಲೈ ಅಗ್ನಿಯೇ, ನಮಗೆ ಹವಿರ್ದಾನಕ್ಕೆ ಅರ್ಹತೆಯನ್ನು ಕೊಡು. ನಮ್ಮ ಶರೀರಗಳನ್ನು ಜಾಗರೂಕನಾಗಿ ರಕ್ಷಿಸು.

English Translation

Be our protector, Agni, (in obvious peril) : be our presever (in un, seen danger), be the provider and giver of sustenance ; bestow upon us mighty Agni, the donation of oblations, and ever attentive, protect our persons.

॥ ವಿಶೇಷವಿಷಯಗಳು ॥

ಸೂಕ್ತದ ಉಪಸಂಹಾರರೂಪವಾದ ಈ ಋಕ್ಕಿನಲ್ಲಿ ರಕ್ಷಣೆಯನ್ನೂ ಅನ್ನಾದ್ಯಾಹಾರಗಳನ್ನೂ ಕೊಟ್ಟು ದೇವತೆಗಳಿಗೆ ಆಹುತ್ಯಾದಿಗಳನ್ನು ಅರ್ಪಿಸಲು ಅರ್ಹತೆಯನ್ನುಂಟುಮಾಡಿ ಸದಾಕಾಲದಲ್ಲಿಯೂ ರಕ್ಷಿಸಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ. ಇಲ್ಲಿ ರಕ್ಷಣೆಯೆಂದರೆ ಕಣ್ಣಿಗೆ ಕಾಣಿಸುವ ಶತ್ರುಗಳಿಂದಲೂ, ದುಷ್ಟಮೃಗಗಳಿಂದಲೂ ಕಾಪಾಡುವುದು ಒಂದುವಿಧ ರಕ್ಷಣೆಯೆಂದೂ, ಕಣ್ಣಿಗೆ ಕಾಣಿಸದಿರುವ ವ್ಯಾಧಿ ಮುಂತಾದವುಗಳಿಂದಲೂ, ಪಾಪಗಳಿಂದಲೂ ರಕ್ಷಿಸುವುದು ಇನ್ನೊಂದ ವಿಧವಾದ ರಕ್ಷಣೆಯೆಂದೂ ರಕ್ಷಣೆಯಲ್ಲಿ ಎತಡ ವಿಧಗಳನ್ನು ಭಾಷ್ಯಕಾರರು ನಿವರಿಸಿದ್ದಾರೆ.

ಎಂಟನೆಯ ಸೂಕ್ತವು

ಪೀಠಿಕೆ.

ಈ ಸೂಕ್ತಕ್ಕೂ ಇದರ ಮುಂದಿನ ಸೂಕ್ತಕ್ಕೂ ತ್ವಷ್ಟೃಪುತ್ರನಾದ ತ್ರಿಶಿರಾಃ ಎಂಬುವನು ಋಷಿಯು. ಈ ತ್ರಿಶಿರಾ ಎಂಬುವನು ಪೂರ್ವದಲ್ಲಿ ದೇವತೆಗಳಿಗೆ ಪುರೋಹಿತನಾಗಿದ್ದನು. ಇವನಿಗೆ ಅಸುರರ ಸಂಬಂಧವಿತ್ತು ಎಂದರೆ ಅಸುರರ ಕನ್ಯೆಯಲ್ಲಿ ಉತ್ಪನ್ನನಾಗಿದ್ದನು. ಆದ್ದರಿಂದ ಇವನಿಗೆ ಅಸುರರ ವಿಷಯದಲ್ಲಿಯೂ ಅಭಿಮಾನವಿತ್ತು. ಅಸುರಪಕ್ಷಪಾತಿಯಾದ ಇವನು ದೇವತೆಗಳಿಗೆ ಹೇಗಾದರೂ ಕೆಡಕುಮಾಡಬಹುದೆಂದು ಇಂದ್ರನು ಹೆದರಿ ಇವನನ್ನು ಸಂಹರಿಸಬೇಕೆಂದು ಇಷ್ಟಪಟ್ಟನು. ಈ ವಿಷಯದಲ್ಲಿ ತ್ರಿತನೂ (ತ್ರಿತ ಆಪ್ತ್ಯಃ ಎಂಬ ಋಷಿಯೂ) ಇವನಿಗೆ ಸಹಾಯಕನಾದನು. ಈ ತ್ರಿತನಿಗಾಗಿಯೇ ಎಂದರೆ ತ್ರಿತನನ್ನು ಸಂತೋಷಪಡಿಸುವುದಕ್ಕಾಗಿಯೇ ಇಂದ್ರನು ಇವನನ್ನು ಸಂಹರಿಸಿದನೆಂದು ಕೆಲವುಕಡೆ ಹೇಳಿದೆ.

ಅಸ್ಮಭ್ಯಂ ತತ್ತ್ವಷ್ಟರಂ ವಿಶ್ವರೂಪಮರಂಧಯಃ ಸಾಖ್ಯಸ್ಯ ತ್ರಿತಾಯ ॥

(ಋ. ಸಂ ೨-೧೧-೯)

ಎಂಬ ಋಕ್ಕಿನಲ್ಲಿ ತ್ರಿತನ ಮೇಲಿನ ಸ್ನೇಹಕ್ಕಾಗಿಯೇ ಇಂದ್ರನು ವಿಶ್ವರೂಪನನ್ನು ಸಂಹರಿಸಿದನೆಂದು ಹೇಳಿದೆ. ಬೃಹದ್ದೇವತೆಯಲ್ಲಿ (ಆರನೆಯ ಅಧ್ಯಾಯದಲ್ಲಿ) ಇವನ ವಿಷಯವಾಗಿ ಈ ರೀತಿ ಹೇಳಿದೆ—

ಪ್ರ ಕೇತುನೇತಿ ತ್ವಾಷ್ಟ್ರಸ್ತು ತ್ರಿಶಿರಾಃ ಸೂಕ್ತಮುತ್ತರಂ ॥ ೧೪೭ ॥
ಋಚಿಸ್ತ್ವಸ್ಯ ಷಳಾಗ್ನೇಯ್ಯಂ ತೃಚಸ್ತ್ವಸ್ಯೇತಿ ಯಃ ಪರಃ ।
ತೇನೇಂದ್ರಮಭಿತುಷ್ಟಾವ ಸ್ವಪ್ನಾಂತ ಇತಿ ನಃ ಶ್ರುತಿಃ ॥ ೧೪೮ ॥

ಪ್ರಕೇತುನಾ ಎಂಬ ಈ ಸೂಕ್ತಕ್ಕೆ ತ್ವಷ್ಟೃಪುತ್ರನಾದ ತ್ರಿಶಿರಾಃ ಎಂಬುವನು ಋಷಿಯು. ಈ ಸೂಕ್ತದ ಮೊದಲಿನ ಆರು ಋಕ್ಕುಗಳಲ್ಲಿ ಅಗ್ನಿಯನ್ನೂ, ಮುಂದಿನ ಮೂರು ಋಕ್ಕುಗಳಲ್ಲಿ ಇಂದ್ರನನ್ನೂ ಈ ಋಷಿಯು ಸ್ತುತಿಸಿರುವನು.

ಅಭವತ್ಸ ಹಿ ದೇವಾನಾಂ ಪುರೋಧಾಃ ಪ್ರಿಯಕಾಮ್ಯಯಾ ।
ಅಸುರಾಣಾಂ ಸ್ವಸುಃ ಪುತ್ರಸ್ತ್ರಿಶಿರಾ ವಿಶ್ವರೂಪಧೃಕ್ ॥ ೧೪೯ ॥
ತಮೃಷಿಂ ಪ್ರಹಿತಂ ತ್ವಿಂದ್ರೋ ದೇವೇಷು ಬುಬುಧೇ೨ಸುರೈಃ ।
ಸೋ೨ಸ್ಯ ವಜ್ರೇಣ ತಾನ್ಯಾಶು ಶಿರಾಂಸಿ ತ್ರೇಣ್ಯಥಾಚ್ಛಿದತ್ ॥ ೧೫೦ ॥

ಈ ತ್ರಿಶಿರಾಃ ಎಂಬ ಋಷಿಯು ಪೂರ್ವದಲ್ಲಿ ದೇವತೆಗಳ ಪುರೋಹಿತನಾಗಿದ್ದನು. ಇವನು ಅಸುರರಿಗೆ ಸೋದರಿಯ ಪುತ್ರನಾದ್ದರಿಂದ ಇವನು ಅಸುರರ ಪಕ್ಷಪಾತಿಯಾಗಿಯೇ ಇದ್ದನು. ದೇವತೆಗಳಿಗೆ ಈ ವಿಷಯವು ತಿಳಿದು ಅಸುರರೇ ತಮ್ಮ ಅನುಕೂಲಕ್ಕೋಸ್ಕರ ಇವನನ್ನು ದೇವತೆಗಳ ಗುಟ್ಟನ್ನು ತಿಳಿದುಕೊಳ್ಳುವುದಕ್ಕಾಗಿ ವಿಶ್ವರೂಪ ಎಂಬ ಹೆಸರಿನಿಂದ ಗೂಢಚಾರನಾಗಿರುವಂತೆ ದೇವತೆಗಳ ಮಧ್ಯದಲ್ಲಿ ಪುರೋಹಿತನನ್ನಾಗಿ ಸ್ಥಾಪಿಸಿರಬಹುದೆಂದು ದೇವತೆಗಳಿಗೆ ಅನುಮಾನ ಉಂಟಾಯಿತು. ಆದ್ದರಿಂದ ಇಂದ್ರನು ತನ್ನ ವಜ್ರಾಯುಧವನ್ನು ಹಿಡಿದುಕೊಂಡು ಈ ತ್ರಿಶಿರನ ಮೂರು ಶಿರಸ್ಸುಗಳನ್ನು ಕತ್ತರಿಸಿಹಾಕಿದನು

ತಸ್ಯ ಯತ್ಸೋಮಪಾನಂ ತು ಮುಖಂ ಸೋ೨ಭೂತ್ಕಪಿಂಜಲಃ ।
ಕಲವಿಂಕಃ ಸುರಾಪಾಣಂ ಅನ್ನಾದಂ ತಿತ್ತಿರಿಸ್ತ್ವಭೂತ್ ॥ ೧೫೧ ॥

ಆ ತ್ರಿಶಿರನ ಮೂರು ಶಿರಸ್ಸುಗಳಲ್ಲಿ ಸೋಮಪಾನಮಾಡುತ್ತಿದ್ದ ಮುಖವು ಕಪಿಂಜಲವೆಂಬ ಪಕ್ಷಿಯಾಯಿತು. ಸುರಾ ಪಾನಮಾಡುತ್ತಿದ್ದ ಮುಖವು ಕಲವಿಂಕ ಎಂಬ ಪಕ್ಷಿಯಾಯಿತು ಅನ್ನವನ್ನು ತಿನ್ನುತ್ತಿದ್ದ ಮುಖವು ತಿತ್ತಿರಿ ಎಂಬ ಪಕ್ಷಿಯಾಯಿತು.

ಶಂ ವಾಗಭ್ಯವದದ್ಬ್ರಹ್ಮೇ ಬ್ರಹ್ಮಹಾಸಿ ಶತಕ್ರತೋ ।
ಪ್ರಪನ್ನಂ ಹತವಾನ್ಯಸ್ಮಾದ್ವಿಶ್ವರೂಪಂ ಪರಾಙ್ಮುಖಂ ॥ ೧೫೨ ॥

ಆ ಕಾಲದಲ್ಲಿ ಒಂದು ಅಶರೀರವಾಣಿಯು ಕೇಳಿಸಿತು. ಅದು ಇಂದ್ರನನ್ನು ಕುರಿತು—ಎಲೈ ಇಂದ್ರನೇ, ನೀನು ಪರಾ ಙ್ಮುಖನಾಗಿದ್ದ ಎಂದರೆ ಎದುರಾಗಿಲ್ಲದೆ ಬೇರೆಕಡೆ ತಿರಿಗಿಕೊಂಡಿದ್ದ ವಿಶ್ವರೂಪನನ್ನು ಹಿಂಭಾಗದಿಂದ ಹೋಗಿ ಅವನನ್ನು ಕೊಂದಿರುವೆ. ಇವನು ಬಾಹ್ಮಣನಾದ್ದರಿಂದ ನಿನಗೆ ಬ್ರಹ್ಮಹತ್ಯಾದೋಷವು ಬಂದಿದೆ ಎಂದು ಹೇಳಿತು.

ತಮಭ್ಯಸಿಂಚತ್ಸೂಕ್ತೇನ ಋಷಿರಾಪ ಇತಿ ಸ್ವಯಂ ।
ಸಿಂಧುದ್ವೀಪೋ೨ಪಸುತ್ಯರ್ಥಂ ತಸ್ಯಾಶ್ಲೀಲಸ್ಯ ಪಾಪ್ಮನಃ ॥ ೧೫೩ ॥

(ಬೃ. ದೇ. ೬ನೇ ಅಧ್ಯಾಯ)

ಈ ಪಾಪಪರಿಹಾರಾರ್ಥವಾಗಿ ಇಂದ್ರನು ಮುಂದಿನ ಸೂಕ್ತದ ಋಷಿಯಾದ ಸಿಂಧುದ್ವೀಪ ಋಷಿಯನ್ನು ಪ್ರಾರ್ಥಿಸಲು ಆ ಋಷಿಯು ಆಪೋ ಹಿ ಷ್ಠಾ ಎಂಬ ಒಂಬತ್ತು ಋಕ್ಕಿನ ಸೂಕ್ತಪಠನದಿಂದ (ಋ. ಸಂ. ೧೦-೯ನೇ ಸೂಕ್ತ) ಉದಕ

ವನ್ನು ತೆಗೆದುಕೊಂಡು ಇಂದ್ರನಿಗೆ ಅಭಿಮಂತ್ರಿಸಿ ಸ್ನಾನಮಾಡಿಸಿದನು. ಆದರಿಂದ ಇಂದ್ರನ ಪಾಪವು ಪರಿಹಾರವಾಯಿತು ಎಂದು ಹೇಳಿದೆ ತೈತ್ತಿರೀಯಸಂಹಿತೆಯಲ್ಲಿ ಈ ವಿಷಯವು ಸ್ವಲ್ಪ ವ್ಯತ್ಯಸ್ತವಾಗಿ ವಿವರಿಸಲ್ಪಟ್ಟಿದೆ. ಆದನ್ನೂ ಮುಂದೆ ವಿವರಿಸುತ್ತೇವೆ.

ಈ ಸೂಕ್ತದಲ್ಲಿ ತ್ರಿತನೆಂಬ ರಾಜರ್ಷಿಗಾಗಿ ವಿಶ್ವರೂಪನೆಂಬ ತ್ವಷ್ಟೃವಿನ ಮಗನನ್ನು ಸಂಹರಿಸಿದೆ ಎಂದು ಋಷಿಯು ಇಂದ್ರನನ್ನು ಸ್ತುತಿಸಿರುವರು. ಈ ತ್ರಿತನು ಯಾರು, ಇವನ ವಿಷಯವೇನು ಎಂದು ಮುಂತಾದ ಇವನಿಗೆ ಸಂಬಂಧಿಸಿದ ಅನೇಕವಿಷಯಗಳನ್ನು ನಾವು ಹಿಂದೆಯೇ ಎಂದರೆ ಇದೇ ಭಾಗದ ಪುಟ 187 ಭಾಗ ೬ ಪುಟ. 113 ಮತ್ತು 473 ಇತ್ಯಾದಿ ಸ್ಥಳಗಳಲ್ಲಿ ವಿಸ್ತಾರವಾಗಿ ವಿವರಿಸಿದೇವೆ. ತ್ರಿತಶಬ್ದವು ಅನೇಕ ಋಕ್ಕುಗಳಲ್ಲಿರುವುದಾದರೂ ಇವನ ವಿಷಯವಾಗಿ ಅಧಿಕಾಂಶಗಳು ಏನೂ ತಿಳಿಯಬರುವಂತಿಲ್ಲ ಆಥವಾ ವೇದದಲ್ಲಿಯೂ ಐದಾರು ಸ್ಥಳಗಳಲ್ಲಿ ತ್ರಿತ ಎಂಬ ಶಬ್ದದ ಪ್ರಯೋಗವಿದ್ದರೂ ಅಲ್ಲಿಯೂ ಏನೂ ತಿಳಿಯಬರುವುದಿಲ್ಲ ಇವನಿಗೂ ಇಂದ್ರನಿಗೂ ಇರುವ ಸಾಹಚರ್ಯವು ಮಾತ್ರ ಅನೇಕಕಡೆಗಳಲ್ಲಿದೆ. ಎಲ್ಲ ಕಡೆಗಳಲ್ಲಿಯೂ ಹೇಳಿರುವಂತೆ ತ್ರಿತನು ಬಹಳದೂರದಲ್ಲಿರುವ ದೇವತೆ, ಅವನಲ್ಲಿಗೆ ಪುಷ ಅಥವಾ ದುಃಸ್ವಪ್ನಗಳು ಕಳುಹಿಸಲ್ಪಡುತ್ತವೆ, ಎಂದು ಮಾತ್ರ ತಿಳಿದುಬರುತ್ತದೆ. (೩ ವೇ. ೧-೧೩೧-೧, ೩, ೧೯-೫೫-೪) ತೈತ್ತಿರೀಯ ಸಂಹಿತೆಯಲ್ಲಿ ಇವನು ವೀರ್ಯವುಳ್ಳವನ್ನು ಕೂಡತಕ್ಕವನು ಎಂದಿದೆ (ತೈ ಸಂ. ೧-೮-೧೦-೨) ಇವನು ಅನುರತ್ವದಾಯಕವಾದ ಸೋಮರಸವನ್ನು ಸಿದ್ಧಪಡಿಸುವವನು. ತ್ರಿತನು ಏಕತ, ದ್ವಿತ ಮತ್ತು ತ್ರಿತರೆಂಬ ಮೂರುಮಂದಿ ಸಹೋದರರಲ್ಲೊಬ್ಬನು ಈ ಮೂವರೂ ಅಗ್ನಿಪುತ್ರರು, ತ್ರಿತನು ನೀರಿನಿಂದ ಉದ್ಭವಿಸಿದನು ಎಂದು ಶ ಬ್ರಾ. ೧-೨-೩-೧, ೨ ಮತ್ತು ತೈ ಬ್ರಾ ೩-೭-೪-೧೦, ೧೧ ಇತ್ಯಾದಿ ಬ್ರಾಹ್ಮಣಗಳಲ್ಲಿ ಹೇಳಿದೆ

ಋಗ್ವೇದದಲ್ಲಿ ಹೇಳಿರುವಂತೆ ೩-೪ ಸಂದರ್ಭಗಳಲ್ಲಿ ಇಂದ್ರ ಮತ್ತು ತ್ರಿತರು ಒಂದೇ ಕಾರ್ಯವನ್ನು (ರಾಕ್ಷಸ ವಧೆಯನ್ನು) ಮಾಡಿದಾರೆ. ಒಂದು ಸಲ ಇಂದ್ರನು ತ್ರಿತನಿಗೆ ಪ್ರಚೋದಕನಾಗಿದ್ದಾನೆ. ಮತ್ತೊಂದು ಕಡೆ ತ್ರಿತನಿಂದ ಇಂದ್ರನೇ ಪ್ರೋತ್ಸಾಹಿತನಾಗಿದ್ದಾನೆ ಎಂದು ಹೇಳಿದೆ. ಎರಡು ಸಲ ಇಂದ್ರನು ತ್ರಿತನಿಗಾಗಿ ಕಲಸ ಮಾಡಿದಾನೆ ವ್ಯಕ್ತವಾದ ಈ ಸೂಕ್ತದಲ್ಲಿ ಹೇಳಿರುವಂತೆ ತ್ರಿತನಿಗಾಗಿ ಇಂದ್ರನು ವಿಶ್ವರೂಪಸಂಬುವನನ್ನು, ಸಂಹರಿಸಿದ್ದಾನೆ. ತ್ರಿತನು ಅಗ್ನಿಯನ್ನು ಹುಡುಕುತ್ತಾನೆ, ಸ್ವರ್ಗದಲ್ಲಿ ಅಗ್ನಿಯನ್ನು ಜ್ವಲಗೊಳಿಸುತ್ತಾನೆ; ಮನುಷ್ಯರ ಗೃಹಗಳಲ್ಲಿ ಅಗ್ನಿಯು ಬದಲು ಮಾಸಿಸುತ್ತಾನೆ; ಅವನ ವಾಸಸ್ಥಳ ಬಹುದೂರದಲ್ಲಿ ಗುಪ್ತವಾಗಿದೆ; ಅಲ್ಲಿ ಸೋಮವೂ ಇದೆ ಇಂದ್ರನು ಸೋಮಪಾನಮಾಡುತ್ತಾನೆ. ಆದರೆ ತ್ರಿತನು ಸೋಮವನ್ನು ಸಿದ್ಧಮಾಡುತ್ತಾನೆ. ಇಂದ್ರತ್ರಿತರಿಗೆ ಈ ವ್ಯತ್ಯಾಸವಿದೆ

ಮೇಲೆ ಹೇಳಿದ ಅಂಶಗಳಿಂದ ತ್ರಿತನು ವಿದ್ಯುದ್ದೇವತೆ ಎಂದರೆ, ಅಗ್ನಿಯ ಅಂತರಿಕ್ಷದ ರೂಪವೆನ್ನಬಹುದು; ಅಗ್ನಿ, ವಾಯು, ಇಂದ್ರ ಮತ್ತು ಸೂರ್ಯರೆಂಬ ದೇವತೆಗಳಂತೆ ಇವನು ಮಧ್ಯಮದೇವತೆ. ಆದರೆ ಈ ದೇವತೆಯ ಕಾರ್ಯಗಳೆಲ್ಲವೂ ಇಂದ್ರನಿಂದಲೇ ಮಾಡಲ್ಪಟ್ಟಿನೆಯಾಗಿ ಋಗ್ವೇದದಲ್ಲಿ ಇವನು ಅಪ್ರಧಾನದೇವತೆಯಾಗಿದ್ದಾನೆ. ವಿದ್ಯುದ್ರೂಪನಾಗಿ ಸ್ವರ್ಗದಿಂದ ಸೋಮವನ್ನು ಭೂಮಿಗೆ ತಂದುದರಿಂದಲೇ ತ್ರಿತನಿಗೂ ಸೋಮನಿಗೂ ಸಂಬಂಧವು ಉಕ್ತವಾಗಿರಬಹುದು. ಆಧಾರಗಳು ಹೆಚ್ಚಾಗಿಲ್ಲದ್ದರಿಂದ ಇವನ ವಿಷಯದಲ್ಲಿ ಒಬ್ಬೊಬ್ಬ ಪಂಡಿತರು ಒಂದೊಂದು

ರೀತಿ ಅಭಿಪ್ರಾಯಪಟ್ಟಿದ್ದಾರೆ. ಕೆಲವನ್ನು ಮಾತ್ರ ಹೇಳುವುದಾದರೆ ರಾತ್ (Roth) ಎಂಬ ಪಂಡಿತನು ನೀರು ಮತ್ತು ಗಾಳಿಯ ದೇವತೆಯೆಂದೂ, ಹಿಲ್‌ಬ್ರಾಂಡ್ (Hillbratnd) ಎಂಬುವನು ಉದ್ದೀಪ್ತವಾದ ಆಕಾಶದದೇವತೆಯೆಂದೂ, ಪೆರಿ (Perry) ಎಂಬುವನು ಬಿರುಗಾಳಿಯ ದೇವತೆಯೆಂತಲೂ ಹೇಳಿರುತ್ತಾರೆ. ಪಿಶ್ಚೆಲ್ (Pischel) ಎಂಬ ಮತ್ತೊಬ್ಬ ಪಂಡಿತನು ಮೊದಲು ಸಮುದ್ರ ಮತ್ತು ನೀರಿನ ದೇವತೆ, ಅನಂತರ ಮನುಷ್ಯರಲ್ಲಿ ವೈದ್ಯ, ಆಮೇಲೆ ದೇವತ್ವವನ್ನು ಪಡೆದನೆಂದು ಹೇಳಿದ್ದಾನೆ. ಹಾರ್ಡಿ (Hardy) ಎಂಬುವನು ಚಂದ್ರದೇವತೆಯೆಂದಿದಾನೆ.

ಪ್ರಕೃತಸೂಕ್ತದಲ್ಲಿ ತ್ರಿತನು ಇಂದ್ರನ ಸ್ನೇಹಭಾವವನ್ನು ಹೊಂದಿರುವುದರಿಂದ ಅದಕ್ಕಾಗಿ ಇಂದ್ರನು ವಿಶ್ವರೂಪನೆಂಬ ತ್ವಷ್ಟೃಪುತ್ರನನ್ನು ಕೊಂದನೆಂದು ಹೇಳಿದೆ.

ವಿಶ್ವರೂಪನೆಂಬುವನನ್ನು ಇಂದ್ರನು ಸಂಹಾರಮಾಡಿದ ವಿಷಯವು ತೈತ್ತಿರೀಯ ಸಂಹಿತೆಯ ಎರಡನೇ ಕಾಂಡದಲ್ಲಿ ಐದನೆಯ ಪ್ರಪಾತಕದ ಪ್ರಾರಂಭಭಾಗದಲ್ಲಿ ಹೇಳಿದೆ. ಋಗ್ವೇದದಲ್ಲಿಯೂ ಈ ವಿಷಯವಾಗಿ-

ಭೂರೀದಿಂದ್ರ ಉದಿನಕ್ಷಂತಮೋಜೋ೨ವಾಭಿನತ್ಪಿತರ್ಮಾನಮಾನಂ ।
ತ್ವಾಷ್ಟ್ರಸ್ಯ ಚಿದ್ವಿಶ್ವರೂಪಸ್ಯ ಗೋನಾಮಾಚಕ್ರಾಣಸ್ತ್ರೀಣಿ ಶೀರ್ಷಾ ಪರಾ ವರ್ಕ್ ॥

(ಋ. ಸಂ. ೧೦-೮-೯)

ಎಂಬ ಋಕ್ಕಿನಲ್ಲಿ ಇಂದ್ರನು—ತ್ವಷ್ಟೃಪುತ್ರನಾದ ವಿಶ್ವರೂಪನೆಂಬುವನ ಮೂರು ತಲೆಗಳನ್ನು ಕತ್ತರಿಸಿಹಾಕಿದನು ಎಂದು ಹೇಳಿದೆ. ಈ ಕಾರ್ಯವನ್ನು ಇಂದ್ರನು ತ್ರಿತನಿಗಾಗಿ ಮಾಡಿದನೆಂದೂ ತ್ರಿತನು ಈ ವಿಷಯದಲ್ಲಿ ಇಂದ್ರನಿಗೆ ಸಹಾಯಮಾಡಿದನೆಂದೂ ಅದೇ ಸೂಕ್ತದ ಒನೆಯ ಋಕ್ಕಿನಲ್ಲಿ ಹೇಳಿದೆ—

ಅಸ್ಯ ತ್ರಿತಃ ಕ್ರತುನಾ ವವ್ರೇ ಅಂತರಿಚ್ಛನ್ ಧೀತಿಂ ಪಿತುರೇವೈಃ ಪರಸ್ಯ ।
ಸಚಸ್ಯಮಾನಃ ಪಿತ್ರೋರುಪಸ್ಥೇ ಜಾಮಿ ಬ್ರುವಾಣ ಆಯುಧಾನಿ ವೇತಿ ।
ಸ ಪಿತ್ರ್ಯಾಣ್ಯಾಯುಧಾನಿ ವಿದ್ವಾನಿಂದ್ರೇಷಿತ ಆಪ್ತ್ಯೋ ಅಭ್ಯಯುಧ್ಯತ್ ।
ತ್ರಿಶೀರ್ಷಾಣಂ ಸಪ್ತರಶ್ಮಿಂ ಜಘನ್ವಾನ್ ತ್ವಾಷ್ಟ್ರಸ್ಯ ಚಿನ್ನಿಃ ಸಸೃಜೇ ತ್ರಿತೋ ಗಾಃ ॥

(ಋ. ಸಂ. ೧೦-೮-೭, ೮)

ಈ ಋಕ್ಕುಗಳ ಭಾಷ್ಯದಲ್ಲಿ ಸಾಯಣರು ಒಂದು ಉಪಾಖ್ಯಾನವನ್ನೂ ಹೇಳಿದ್ದಾರೆ—ಇಂದ್ರನು ಮೂರು ಶಿರಸ್ಸುಗಳುಳ್ಳ ತ್ವಷ್ಟೃಪುತ್ರನಾದ ವಿಶ್ವರೂಪನನ್ನು ಕೊಲ್ಲಲು ತ್ರಿತನ ಸಹಾಯವನ್ನು ಕೋರಿದನು ಅದಕ್ಕೆ ತ್ರಿತನು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ತನಗೆ ಯಜ್ಞಗಳಲ್ಲಿ ಹವಿರ್ಭಾಗವನ್ನು ಕೊಡಬೇಕೆಂದು ವರವನ್ನು ಕೇಳಿದನು. ಇಂದ್ರನು ಅದಕ್ಕೊಪ್ಪಿ ಹಸ್ತಪ್ರಕ್ಷಾಳನಕ್ಕಾಗಿ ನೀರನ್ನೂ ಯಜ್ಞಭಾಗವನ್ನೂ ಕೊಟ್ಟನು ಬಳಿಕ ತ್ರಿತನು ತನ್ನ ತಂದೆಯ ಸಂಬಂಧವಾದ ಆಯುಧಗಳಿಂದ ಸಜ್ಜುಗೊಂಡು ಇಂದ್ರಪ್ರೇರಿತನಾಗಿ ತ್ವಷ್ಟೃಪುತ್ರನಾದ ವಿಶ್ವರೂಪನೆಂಬುವನ ಕೂಡ ಯುದ್ಧಮಾಡಿ ಅವನನ್ನು ತನ್ನ ಆಯುಧಗಳಿಂದ ಬಲವಾಗಿ ಹೊಡೆದು ಮೂರ್ಛೆಗೊಳಿಸಿದನು. ಅನಂತರ ಇಂದ್ರನು ಆ ವಿಶ್ವರೂಪನ ಮೂರು ತಲೆಗಳನ್ನು ಕತ್ತರಿಸಿಹಾಕಿದನು ಎಂದು ಮೇಲಿನ ಋಕ್ಕುಗಳಲ್ಲಿ ಹೇಳಿದೆ.

ಇದೇ ವಿಷಯವನ್ನೇ ವಿಸ್ತಾರವಾಗಿ ತೈತ್ತಿರೀಯ ಸಂಹಿತೆಯಲ್ಲಿ ಹೇಳಿದೆ. ತೈ. ಸಂ. (೨-೫-೧-೧) ಅದನ್ನೂ ಅರ್ಥಸಹಿತವಾಗಿ ಇಲ್ಲಿ ವಿವರಿಸಿದೆ—

ವಿಶ್ವರೂಪೋ ವೈ ತ್ವಾಷ್ಟ್ರಃ ಪುರೋಹಿತೋ ದೇವನಾಮಾಸೀತ್ ಸ್ವಸ್ರಿಯೋಽಸುರಾಣಾಂ ತಸ್ಯ ತ್ರೀಣಿ ಶೀರ್ಷಾಣ್ಯಾಸನ್ತ್ಸೋಮಪಾನಗ್ಂ ಸುರಾಪಾನಮನ್ನಾದನಗ್ಂ ಸ ಪ್ರತ್ಯಕ್ಷಂ ದೇವೇಭ್ಯೋ ಭಾಗಮವದತ್ ಪರೋಕ್ಷಮಸುರೇಭ್ಯಃ ॥

ಪೂರ್ವಕಾಲದಲ್ಲಿ ತ್ವಷ್ಟೃಪುತ್ರನಾದ ವಿಶ್ವರೂಪನೆಂಬುವನು ದೇವತೆಗಳಿಗೆ ಪುರೋಹಿತನಾಗಿದ್ದನು. ಇವನು ಅಸುರರ ತಂಗಿಯ ಮಗನಾದ್ದರಿಂದ ಅಸುರರಲ್ಲಿಯೂ ಇವನಿಗೆ ಅಭಿಮಾನವಿತ್ತು. ಈ ವಿಶ್ವರೂಪನಿಗೆ ಮೂರು ಶಿರಸ್ಸು (ತಲೆಗಳು) ಇದ್ದವು. ಆ ಮೂರು ತಲೆಗಳಲ್ಲಿ ಒಂದರಿಂದ ಸೋಮಪಾನಮಾಡುತ್ತಿದ್ದನು, ಮತ್ತೊಂದರಿಂದ ಸುರಾ (ಮದ್ಯ) ಪಾನಮಾಡುತ್ತಿದ್ದನು, ಮೂರನೆಯ ಶಿರಸ್ಸಿನಿಂದ ಅನ್ನಾದ್ಯಾಹಾರಗಳನ್ನು ತಿನ್ನುತ್ತಿದ್ದನು. ಹೀಗಿರುವಾಗ ಈ ವಿಶ್ವರೂಪನು ಯಜ್ಞದಲ್ಲಿ ದೇವತೆಗಳಿಗೆ ಹವಿರ್ಭಾಗವನ್ನು ದೊರಕಿಸಿಕೊಡುವುದಾಗಿ ಎಲ್ಲರೆದುರಿಗೂ ಹೇಳುತ್ತಿದ್ದನು. ಆದರೆ ಒಳಗೊಳಗೇ ಯಾರಿಗೂ ತಿಳಿಯದಂತೆ ಅಸುರರಿಗೆ ಸಹಾಯಮಾಡುತ್ತಿದ್ದನು.

ಸರ್ವಸ್ಮೈ ವೈ ಪ್ರತ್ಯಕ್ಷಂ ಭಾಗಂ ವದಂತಿ ಯಸ್ಮಾ ಏವ ಪರೋಕ್ಷಂ ವದಂತಿ ತಸ್ಯ ಭಾಗ ಉದಿತಸ್ತಸ್ಮಾದಿಂದ್ರೋಽಬಿಭೇದಿದೃಜ್ಯೈ ರಾಷ್ಟ್ರಂ ವಿಪರ್ಯೂವರ್ತಯತೀತಿ ತಸ್ಯ ವಜ್ರಮಾದಾಯ ಶೀರ್ಷಾಣ್ಯಚ್ಛಿನತ್ ॥

ಜನರು ಎಲ್ಲರಿಗೂ ಭಾಗವನ್ನು ಕೊಡುತ್ತೇವೆಂದು ಪ್ರತ್ಯಕ್ಷವಾಗಿ ಎಲ್ಲರೆದುರಿಗೂ ಮಾತುಕೊಡುವರು ಆದರೆ ಆ ಕೊಟ್ಟಮಾತನ್ನು ನೆರವೇರಿಸುವವರು ಅತಿವಿರಳ. ಭಾಗವನ್ನು ಕೊಡುತ್ತೇವೆಂದು (ಪರೋಕ್ಷವಾಗಿ) ರಹಸ್ಯವಾಗಿ (ಏಕಾಂತವಾಗಿ) ನಂಬಿಕೆಯಾಗುವಂತೆ ಮಾತುಕೊಟ್ಟಲ್ಲಿ ಆ ವಚನವನ್ನು ಖಂಡಿತವಾಗಿಯೂ ಪಾಲಿಸುತ್ತಾರೆ. ಆದುದರಿಂದ ವಿಶ್ವರೂಪನ ರಹಸ್ಯಸಂಧಾನವನ್ನು ಕಂಡು ಇಂದ್ರನು ಹೆದರಿದನು, ಇವನು ತನಗೆ ದ್ರೋಹವೆಸಗಿ ರಾಷ್ಟ್ರವನ್ನು ಬೇರೆಯವರ (ಅಸುರರ) ವಶಮಾಡುವನೆಂದು ಹೆದರಿ ತನ್ನ ವಜ್ರಾಯುಧವನ್ನು ತೆಗೆದುಕೊಂಡು ಆ ವಿಶ್ವರೂಪನ ಮೂರು ಶಿರಸ್ಸುಗಳನ್ನೂ ಕತ್ತರಿಸಿದನು

ಯತ್ಸೋಮಪಾನಮಾಸೀತ್ಸ ಕಪಿಂಜಲೋಽಭವದ್ಯತ್ಸುರಾಪಾನಗ್ಂ ಸ ಕಲವಿಂಕೋ ಯದನ್ನಾದನಗ್ಂ ಸ ತಿತ್ತಿರಿಸ್ತಸ್ಮಾಂಜಲಿನಾ ಬ್ರಹ್ಮಹತ್ಯಾಮುಪಾಗೃಹ್ಣಾತ್ತಾಗ್ಂ ಸಂವತ್ಸರಮುಬಿಭರ್ತ್ತಂ ಭೂತಾನ್ಯಭ್ಯಕ್ರೋಶನ್ ಬ್ರಹ್ಮಹನ್ನಿತಿ ॥

ಆಗ ಇಂದ್ರನು ಕತ್ತರಿದ ಮೂರುಶಿರಸ್ಸುಗಳಲ್ಲಿ ಸೋಮಪಾನ ಮಾಡುತ್ತಿದ್ದ ಶಿರಸು ಕಪಿಂಜಲವೆಂಬ (hazecock) ಪಕ್ಷಿಯಾಯಿತು, ಸುರಾಪಾನವನ್ನು ಮಾಡುತ್ತಿದ್ದ ಎರಡನೆಯ ಶಿರಸ್ಸು ಕಲವಿಂಕ ಎಂದರೆ ಗುಬ್ಬಚ್ಚಿ (sparrow) ಆಯಿತು; ಅನ್ನವನ್ನು ತಿನ್ನುತ್ತಿದ್ದ ಮೂರನೆಯ ಶಿರಸು ತಿತ್ತಿರಿಯೆಂಬ (partridge) ಪಕ್ಷಿಯಾಯಿತು. ಆಗ ಇಂದ್ರನು ಬ್ರಾಹ್ಮಣನಾದ ವಿಶ್ವರೂಪನನ್ನು ಕೊಂದದ್ದರಿಂದ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಲು ಅದನ್ನು ತನ್ನ ಕೈಯಿಂದಿಲೇ ಸ್ವೀಕರಿಸಬೇಕಾಯಿತು. ಅದರಂತೆ ಅವನು ಬ್ರಹ್ಮಹತ್ಯಾ ದೋಷವನ್ನು ಒಂದು ಸಂವತ್ಸರದವರೆಗೂ

ಥಂಸಿದ್ದನು. ಪ್ರಾಣಿಗಳೆಲ್ಲಾ ಅವನನ್ನು (ಇಂದ್ರನನ್ನು) ನೋಡಿ "ಎಲೈ ಇಂದ್ರನೇ, ನೀನು ಬ್ರಹ್ಮಹತ್ಯೆಯನ್ನು ಮಾಡಿದವನು" ಎಂದು ಕೂಗುತ್ತಿದ್ದವು

ಸ ಪೃಥಿವೀಮುಪಾಸೀದದಸ್ಯೈ ಬ್ರಹ್ಮಹತ್ಯಾಯೈ ತೃತೀಯಂ ಪ್ರತಿಗೃಹಾಣೇತಿ ಸಾಬ್ರವೀದ್ವರಂ ವೃಣೈ ಖಾತಾತ್ಪರಾಭವಿಷ್ಯಂತೀ ಮುಸ್ಯೇ ತತೋ ಮಾ ಪರಾಭೂವಮಿತಿ ಪುರಾ ತೇ ಸಂವತ್ಸರಾದಪಿರೋಹಾದಿತ್ಯಬ್ರವೀತ್ತಸ್ಮಾತ್ಪುರಾ ಸಂವತ್ಸರಾತ್ಪೃಥಿವ್ಯೈ ಖಾತಾಮುಪಿರೋಹತಿ ವಾರೇವೃತಗ್ಹ್ಯಸ್ಯೈ ತೃತೀಯಂ ಬ್ರಹ್ಮಹತ್ಯಾಯೈ ಪ್ರತ್ಯಗೃಹ್ಣಾತ್ತತ್ಪೃಥಿವ್ಯಾಂ ಕೃತಮಿರಿಣಮುಭವತ್ತಸ್ಮಾದಾಹಿತಾಗ್ನಿಃ ಶದ್ಧಾದೇವಃ ಸ್ವಕೃತ ಇರಿಣೇ ನಾವಸ್ಯೇದ್ಬ್ರಹ್ಮಹತ್ಯಾಯೈ ಹ್ಯೇಷ ವರ್ಣಃ ॥

ಇದನ್ನು ಕಂಡ ಇಂದ್ರನು (ಲಜ್ಜೆಗೊಂಡು) ಬ್ರಹ್ಮಹತ್ಯಾಪರಿಹಾರಕ್ಕಾಗಿ ಪೃಥಿವಿಯ (ಭೂಮಿಯ) ಬಳಿಗೆ ಹೋಗಿ ಎಲೈ ಭೂಮಿಯೇ, ನನಗೆ ಪ್ರಾಪ್ತವಾಗಿರುವ ಈ ಬ್ರಹ್ಮಹತ್ಯದಲ್ಲಿ ಮೂರನೇ ಒಂದು ಭಾಗವನ್ನು ನೀನು ತೆಗೆದುಕೊ ಎಂದು ಹೇಳಲು, ಅದಕ್ಕೆ ಭೂಮಿಯು ಹಾಗಾದರೆ ನಾನು ಒಂದು ವರವನ್ನು ಕೇಳುವೆನು—ಜನರು ಭೂಮಿಯನ್ನು ಅಗೆದು ಹಳ್ಳಮಾಡುವರು, ಅದರಿಂದ ನನಗೆ ಅಪಮಾನವಾಗಿರುವುದು. ಆರೀತಿ ಆಗದಂತೆ ವರವನ್ನು ಕೊಡಬೇಕು ಎಂದು ಕೇಳಿತು, ಇಂದ್ರನು ಹಾಗೆಯೇ ಆಗಲಿ. ಆರೀತಿ ಅಗೆದ ಹಳ್ಳವು ಯಾವ ಪ್ರಯತ್ನವೂ ಇಲ್ಲದೆ ಒಂದುವರ್ಷದೊಳಗಾಗಿ ತಾನಾಗಿಯೇ ಮುಚ್ಚಿಹೋಗಿ ಭೂಮಿಯು ಮುಂಚಿನಂತೆ ಸಮನಾಗಲಿ ಎಂದುವರವನ್ನು ಕೊಟ್ಟನು ಆದ್ದರಿಂದ ಭೂಮಿಯಲ್ಲಿ ಅಗೆದ ಹಳ್ಳ ಮುಂತಾದುವು ಒಂದುವರ್ಷ ಕಳೆಯುವುದರೊಳಗಾಗಿ ತಾನಾಗಿಯೇ ಮುಚ್ಚಿ ಹೋಗುವುದು ಇದನ್ನೇ ಭೂಮಿಯು ಕೇಳಿಕೊಂಡ ವರವು. ಈರೀತಿಯಾದ ವರವನ್ನು ಪಡೆದು ಭೂಮಿಯು ಇಂದ್ರನ ಬ್ರಹ್ಮಹತ್ಯಾದೋಷದ ಮೂರನೇ ಒಂದು ಭಾಗವನ್ನು ತೆಗೆದುಕೊಂಡಿತು. ಆ ಲಾಗಾಯಿತು ಭೂಮಿಗೆ ಅದು ಸ್ವಾಭಾವಿಕವಾಯಿತು. ಆದ್ದರಿಂದ ಅಗ್ನಿಹೋತ್ರ ಅಥವಾ ಯಜ್ಞಯಾಗಾದಿಗಳನ್ನು ಮಾಡಿದ ಮತ್ತು ದೀಕ್ಷೆಗಳಲ್ಲಿ ಶ್ರದ್ಧಾಭಕ್ತಿಗಳನ್ನಿಟ್ಟಿರುವ ಪುರುಷನು ಭೂಮಿಯಲ್ಲಿ ಅಗೆದು ಹಳ್ಳವಾಗಿರುವ ಭಾಗವನ್ನು ಯಜ್ಞಮಾಡಲು ಯಜ್ಞವೇದಿಯನ್ನಾಗಿ ಆರಿಸಿಕೊಳ್ಳಬಾರದು. ಏಕೆಂದರೆ ಅಂತಹ ಅಗೆದಿರುವ ಹಳ್ಳಪ್ರದೇಶವು ಭೂಮಿಯು ತಾನು ಪಡೆದುಕೊಂಡ ಬ್ರಹ್ಮಹತ್ಯದ ಸಂಕೇತ (ವರ್ಣ) ವಾಗಿರುವುದು.

ಸ ವನಸ್ಪತೀನುಪಾಸೀದದಸ್ಯೈ ಬ್ರಹ್ಮಹತ್ಯಾಯೈ ತೃತೀಯಂ ಪತಿಗೃಹ್ಣೀತೇತಿ ತೇಽಬ್ರುವನ್ವರಂ ವೃಣಾಮುಷ್ಯೈ ವೃಕ್ಷಾತ್ಪರಾಭವಿಷ್ಯಂತೋ ಮುನ್ಯಾಮುಷೇ ತತೋ ಮಾ ಪರಾಭೂವೇತ್ಯಾನ್ರಶ್ಚನಾದ್ವೋ ಭೂಯಾಗ್ಂಸ ಉತ್ತಿಷ್ಠಾನಿತ್ಯಬ್ರವೀತ್ತಸ್ಮಾದಾನ್ರಶ್ಚನಾದ್ವೃಕ್ಷಾಣಾಂ ಭೂಯಾಗ್ಂಸ ಉತ್ತಿಷ್ಠಂತಿ ವಾರೇವೃತಗ್ಹ್ಯೇಷಾಂ ತೃತೀಯಂ ಬ್ರಹ್ಮಹತ್ಯಾಯೈ ಪ್ರತ್ಯಗೃಹ್ಣನ್ತ್ಸ ನಿರ್ಯಾಸೋಽಭವತ್ತಸ್ಮಾನ್ನಿರ್ಯಾಸಸ್ಯ ನಾಶ್ಯಂ ಬ್ರಹ್ಮಹತ್ಯಾಯೈ ಹ್ಯೇಷ ವರ್ಣೋಽಥೋ ಖಲು ಯ ಏವ ಲೋಹಿತೋ ಯೋ ವಾನ್ರಶ್ಚನಾನ್ನಿರ್ಯೇಷತಿ ತಸ್ಯ ನಾಶ್ಯಂ ಕಾಮಮನ್ಯಸ್ಯ ॥

ಬಳಿಕ ಇಂದ್ರನು ವೃಕ್ಷಗಳ ಸಮೀಪಕ್ಕೆ ಹೋಗಿ—ಎಲೈ ವೃಕ್ಷಗಳೇ, ನನ್ನ ಬ್ರಹ್ಮಹತ್ಯಾದೋಷದಲ್ಲಿ ಮೂರನೇ ಒಂದು ಭಾಗವನ್ನು ನೀವು ತೆಗೆದುಕೊಳ್ಳಿ ಎನಲು, ಅದಕ್ಕೆ ವೃಕ್ಷಗಳು—ಹಾಗಾದರೆ ನಾವು ಒಂದು ವರವನ್ನು ಅಪೇಕ್ಷಿ

सुनेवु—जनरु वृक्षद कोंबे मोदलादवनन्नु कत्तरिसुवरु. अदरिंद नमगे अभिभववागुवुदु. अंतागदंते वरवन्नु कोडबेकेन्नलु, इंद्रनु-ओप्पिदु, हागे कत्तरिसिदाग कत्तरिसिद भागद सुत्तलू अधिकवाद कोनेगळु चिगरुवंतागलि एंदु वरवन्नु कोट्टनु. अद्दरिंद वृक्षगळु केळिकोंड वरदंते कोनेगळन्नु कत्तरिसिदाग अ भागदल्लि हेच्चु कोनेगळु चिगरुवुवु. बळिक वृक्षगळु तम्म मातिनंते इंद्रन ब्रह्महत्येयल्लि मूरनेय ऒंदु भागवन्नु स्वीकरिसिदवु. मरवन्नु कडिदाग होरडुव रसवे ई ब्रह्महत्येय चिह्नेयु अद्दरिंद ई मर कडियुवुदरिंद होरहोरडुव रसवन्नु यारू कुडियबारदु एकेंदरे अदु ब्रह्महत्येय वर्णवु अथवा वृक्षद कत्तरिसुविकेयिंद होरडुव रसवु कंपागि इद्दल्लि अदन्नु कुडियबारदु. हागिल्लदिद्दरे इष्टपट्टरे कुडियबहुदु.

स स्त्रीषगंसादमुपासीदददस्यै ब्रह्महत्यायै तृतीयं प्रतिगृह्णीतेति ता अब्रुवन्वरं वृणामहा ऋत्वियाꣳ प्रजां विंदामहै कामुमामाविजनितोः संभवामेति तस्माद्दृत्वियाꣳ स्त्रियः प्रजां विंदंतेः कामुमा विजनितोः संभवंति वारेवृतगꣳ ह्यासां तृतीयं ब्रह्महत्यायै प्रत्येगृह्णन्ता्स मुलवदासा अभवत् ॥

अनंतर इंद्रनु स्त्रीयर गुंपिगे होगि अवरन्नु कुरितु—एलॊ स्त्रीयरे, नन्न ब्रह्महत्यादोषद ल्लि उळिदिरुव मूरनेय ऒंदु भागवन्नु नीवु तेगेदुकॊळ्ळि एनलु अदक्के स्त्रीयरु-हागादरे नावु ऒंद वरवन्नपेक्षिसुवेवु-नावु मुट्टाददनंतर (ऋतुस्नानानंतर) नमगे मक्कळागबेकु. मत्तु प्रसववागुववरेगू (हेरिगेयागुववरेगू नावु इष्टपट्टल्लि संभोगदिंद कामतृप्तियन्नु हॊंदुवंतागबेकेंदु केळलु, इंद्रनु हागेये आगलेंदनु. अदुदरिंद स्त्रीयरु मुट्टाद नंतर संतानवन्नु पडेयुवरु मत्तु हेरिगेयागुववरेगू तप्पिस्पबंदाग संभोगिसुवरु. एकेंदरे इदन्नेनू अवरु केळिकॊंडिरुव वरवु. अनंतर आ स्त्रीयरु इंद्रन ब्रह्महत्यादोषद मूरनेय ऒंदु भागवन्नु वहिसिकॊंडरु. स्त्रीयरु मुट्टाददाग द्रविसुव रजस्से ई ब्रह्महत्यद चिह्नेयागिरुवुदु रजस्सु द्रविसुव कालदल्लि (मुट्टाददाग) स्त्रीयरु अपवित्ररु (अशुद्धरु).

तस्मान्नलवद्वासा न संवदेत न सहासीत नास्या अन्नमद्याद्ब्रह्महत्यायै ह्येषा वर्णं प्रतिमुह्यास्तेऽथो अलाहुरथ्यंजनं वाव स्त्रियाः अन्नमभ्यंजनमेव न प्रतिगृह्णं कामुमस्यदिति ॥

आदुदरिंद मुट्टागिरुव स्त्रीयॊडनॆ मातनाडबारदु, अवळु कॊट्ट अथवा मुट्टिद आहारवन्नु तिन्नबारदु. एकेंदरे ब्रह्महत्यादोषद चिह्नेयाद अशुद्धवाद रजोद्रववन्नु श्रविसुत्तिरुवळु.

ಮುಟ್ಟಾಗಿರುವ ಕಾಲದಲ್ಲಿ ತೈಲಾಭ್ಯಂಜನಾದಿಗಳನ್ನು ಮಾಡಬಾರದು ಅಥವಾ ಆ ಕಾಲದಲ್ಲಿ ಅವಳಿಂದ (ಅವಳು ಮುಟ್ಟಿದ) ಅನ್ನಾದಿಗಳನ್ನು ಯಾರೂ ಸ್ವೀಕರಿಸಬಾರದು.

ಯಾಂ ಮಲವದ್ವಾಸಸಗ್ಂ ಸಂಭವಂತಿ ಯಸ್ತತೋ ಜಾಯತೇ ಸೋ೭ಭಿಶಸ್ತೋ ಯಾಮರಣ್ಯೇ ತಸ್ಯೈ ಸ್ತೇನೋ ಯಾಂ ಪರಾಚೀಂ ತಸ್ಯೈ ಹ್ರೀತಮುಖ್ಯಪಗಲ್ಭೋ ಯಾ ಸ್ನಾತಿ ತಸ್ಯಾ ಅಪ್ಸು ಮಾರುಕೋ ಯಾಭ್ಯಂಕ್ತೇ ತಸ್ಯೈ ದುಶ್ಚರ್ಮಾ ಯಾ ಪ್ರಲಿಖತೇ ತಸ್ಯೈ ಖಲತಿರಪ– ಮಾರೀ ಯಾಂಕ್ತೇ ತಸ್ಯೈ ಕಾಣೋ ಯಾ ದತೋಧಾವತೇ ತಸ್ಯೈ ಶ್ಯಾವದನ್ ಯಾ ನಖಾನಿ ನಿಕೃತಂತೇ ತಸ್ಯೈ ಕುನಖೀ ಯಾ ಕೃಣತ್ತಿ ತಸ್ಯೈ ಕ್ಲೀಬೋ ಯಾ ರಜ್ಜುಗ್ಂ ಸೃಜತಿ ತಸ್ಯಾ ಉದ್ಬಂಧುಕೋ ಯಾ ಪರ್ಣೇನ ಪಿಬತಿ ತಸ್ಯಾ ಉನ್ಮಾದುಕೋ ಯಾ ಖರ್ವೇಣ ಪಿಬತಿ ತಸ್ಯೈ ಖರ್ವಸ್ತಿಸ್ತ್ರೋ ರಾತ್ರೀರ್ವ್ರತಂ ಚರೇದಂಜಲಿನಾ ವಾ ಪಿಬೇದಖರ್ವೇಣ ವಾ ಪಾತ್ರೇಣ ಪ್ರಜಾಯೈ ಗೋಪೀಥಾಯ ॥

(ತೈ. ಸಂ. ೨-೫-೧-೧ ರಿಂದ ೭)

ರಜಸ್ವಲೆಯಾಗಿರುವ ಕಾಲದಲ್ಲಿ (ಮುಟ್ಟಾಗಿರುವಾಗ) ಸಂಭೋಗಮಾಡಿದರೆ ಅದರಿಂದ ಹುಟ್ಟುವ ಪುತ್ರನು ಬಾಪಗ್ರಸ್ತನಾಗುವನು, ರಜಸ್ವಲೆಯಾದ ಸ್ತ್ರೀಯು ಅರಣ್ಯದಲ್ಲಿ ಸಂಭೋಗಿಸಿದರೆ ಅವಳಿಗೆ ಹುಟ್ಟುವ ಪುತ್ರನು ಕಳ್ಳನಾಗುವನು; ಮುಖವನ್ನು ಮುಚ್ಚಿಕೊಂಡು ಅಥವಾ ಬೇರೆಕಡೆ ತಿರುಗಿಸಿಕೊಂಡು ಸಂಭೋಗಮಾಡಿದರೆ ಹುಟ್ಟುವ ಮಗನು ನಾಚಿಕೆಯಿಂದ ಯಾರೊಡನೆಯೂ ಸರಿಯಾಗಿ ಮಾತನಾಡಲಾರದ ಮುಖೇಡಿಯಾಗುವನು: ಮುಟ್ಟಾದಕಾಲದಲ್ಲಿ ಸ್ನಾನಮಾಡುವ ಸ್ತ್ರೀಗೆ ಹುಟ್ಟುವ ಮಗನು ನೀರಿನಲ್ಲಿ ಮುಳುಗಿ ಸಾಯುವನು, ಅಭ್ಯಂಜನ ಮಾಡಿಕೊಳ್ಳುವ ಸ್ತ್ರೀಯ ಪುತ್ರನು ಚರ್ಮರೋಗದಿಂದ, (ಕುಷ್ಠ, ತೊನ್ನು) ಪೀಡಿತನಾಗುವನು, ತಲೆಯನ್ನು ಬಾಚಿಕೊಳ್ಳುವ ಸ್ತ್ರೀಗೆ ಹುಟ್ಟುವ ಮಗನು ತಲೆಯಲ್ಲಿ ಕೂದಲಿಲ್ಲದ ಬೋಳನಾಗುವನು ಮತ್ತು ಶಕ್ತಿಹೀನನಾಗುವನು. ಕಣ್ಣಿಗೆ ಕಪ್ಪನ್ನು ಹಚ್ಚಿಕೊಳ್ಳುವ ಸ್ತ್ರೀಗೆ ಹುಟ್ಟುವ ಪುತ್ರನು ಕುರುಡನಾಗುವನು, ಆಕಾಲದಲ್ಲಿ ಹೆಲ್ಲನ್ನುಜ್ಜಿಕೊಳ್ಳುವ ಸ್ತ್ರೀಗೆ ಹುಟ್ಟುವ ಪುತ್ರನಿಗೆ ಕೊಳಕಾದ ಹಲ್ಲುಗಳಿರುವವು; ಉಗುರನ್ನು ಕತ್ತರಿಸಿಕೋಳ್ಳುವ ಸ್ತ್ರೀಗೆ ಹುಟ್ಟುವ ಮಗನಿಗೆ ನೋಡುವುದಕ್ಕೆ ವಿಕಾರವಾದ ಕೆಟ್ಟ ಉಗುರುಗಳಿರುವವು, ಆ ಕಾಲದಲ್ಲಿ (ಚಾಪೆ ಮೊದಲಾದವನ್ನು) ಹೆಣೆಯುವ ಸ್ತ್ರೀಗೆ ಹುಟ್ಟುವ ಪುತ್ರನು ನಪುಂಸಕನಾಗುವನು, ಹಗ್ಗವನ್ನು ಹೊಸೆಯುವ ಸ್ತ್ರೀಗೆ ಹುಟ್ಟುವ ಪುತ್ರನು ಆತ್ಮಹತ್ಯೆಯಿಂದ ಮೃತನಾಗುವನು (ಪದ್ಮಪತ್ರಾದಿ) ಎಲೆಗಳಿಂದ ನೀರುಕುಡಿಯುವ ಸ್ತ್ರೀಗೆ ಹುಟ್ಟುವ ಪುತ್ರನು ಕುಡುಕನಾಗುವನು, ಮುರಿದುಹೋದ ಅಥವಾ ಒಡಕಾದ ಪಾತ್ರೆಯಿಂದ ನೀರುಕುಡಿಯುವ ಸ್ತ್ರೀಗೆ ಅಂಗಹೀನನಾದ ಅಥವಾ ಅಂಗವಿಕಾರವುಳ್ಳ ಪುತ್ರನಾಗುವನು. ಆದುದರಿಂದ ಸ್ತ್ರೀಯರು ಮುಟ್ಟಾಗಿರುವಾಗ ಮೂರು ರಾತ್ರಿಗಳು ಕಳೆಯುವವರೆಗೆ ಬಹಳ ಕಟ್ಟುನಿಟ್ಟಾಗಿ ವ್ರತವನ್ನು (ನಿಯಮವನ್ನು) ಪಾಲಿಸಬೇಕು. ಒಳ್ಳೆಯ ಸಂತತಿ ಪ್ರಾಪ್ತಿಗಾಗಿ ಸ್ತ್ರೀಯರು ಆಕಾಲದಲ್ಲಿ ನೀರುಕುಡಿಯುವಾಗ ಬೊಗಸೆಯಿಂದಾಗಲಿ ಅಥವಾ ಮುರಿಯದಿರುವ ಚೆನ್ನಾಗಿರುವ ಪಾತ್ರೆಯಿಂದಲೇ ನೀರುಕುಡಿಯಬೇಕು.

ಮೇಲೆ ಹೇಳಿದ ಮಂತ್ರಗಳಲ್ಲಿ ಇಂದ್ರನು ವಿಶ್ವರೂಪನನ್ನು ಸಂಹರಿಸಿದ ವಿಷಯವೂ ಅವನ ಸಂಹಾರದಿಂದ ಇಂದ್ರನಿಗೆ ಪ್ರಾಪ್ತವಾದ ಬ್ರಹ್ಮಹತ್ಯಾದೋಷವೂ, ಆ ದೋಷಪರಿಹಾರಕ್ಕಾಗಿ ಇಂದ್ರನು ಆಚರಿಸಿದ ಕೃತ್ಯಗಳೂ

ಅದರ ಪರಿಣಾಮವಾಗಿ ಸ್ತ್ರೀಯರು ರಜಸ್ವಲೆಯರಾಗಿರುವಾಗ ನಿಯಮವಾಗಿರಬೇಕೆಂಬ ವಿಷಯವೂ ಉಕ್ತವಾಗಿದೆ ಪ್ರಕೃತಸಂದರ್ಭದಲ್ಲಿ ವಿಶ್ವರೂಪನ ವಧೆಯ ವಿವರ ಸೂತ್ರ ಗ್ರಾಹ್ಯವಾಗಿದ್ದರೂ ಅದಕ್ಕೆ ಸಂಬಂಧಿಸಿದ ಮತ್ತು ಇದೇ ಅನುವಾಕದಲ್ಲಿರುವ ಇತರವಿಷಯಗಳ ಪ್ರಸ್ತಾಪವನ್ನೂ ಇಲ್ಲಿ ಮಾಡಲಾಗಿದೆ. ಏಕೆಂದರೆ ಪುರಾಣಾದಿಗಳಲ್ಲಿ ಇಂದ್ರನಿಗೆ ವೃತ್ರವಧೆಯಿಂದ ಬ್ರಹ್ಮಹತ್ಯಾದೋಷಪ್ರಾಪ್ತವಾಯಿತೆಂದೂ ಅವರ ಪರಿಹಾರಕ್ಕಾಗಿ ಇಂದ್ರನು ಮೇಲೆ ಹೇಳಿದಂತೆ ಪ್ರಯತ್ನಪಟ್ಟನೆಂದೂ ಹೇಳಿರುವುದರಿಂದ ವೇದ ಮತ್ತು ಪುರಾಣಾದಿಗಳ ವಿವರಗಳಿಗೆ ಇರುವ ವ್ಯತ್ಯಾಸವನ್ನು ತೋರಿಸುವುದಕ್ಕಾಗಿ ಈ ವಿವರಣೆಯು ಅವಶ್ಯಕವಾಯಿತು.

ಎಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಕೇತುನೇತಿ ನವರ್ಚಮಷ್ಟಮಂ ಸೂಕ್ತಂ ತ್ರೈಷ್ಟುಭಂ । ತ್ವಷ್ಟೃಪುತ್ರಸ್ತ್ರಿಶಿರಾ ನಾಮರ್ಷಿಃ । ಆದಿತಃ ಷಡಾಗ್ನೇಯ್ಯಸ್ತತಸ್ತಿಸ್ರ ಐಂದ್ರ್ಯಃ । ತಥಾ ಚಾನುಕ್ರಾಂತಂ । ಪ್ರ ಕೇತುನಾ ನವ ತ್ರಿಶಿರಾಸ್ತ್ವಾಷ್ಟ್ರಸ್ತ್ರಿಚೋಽಂತ್ಯ ಐಂದ್ರ ಇತಿ ॥ ಆದಿತಃ ಷಣ್ಣಾಂ ಪ್ರಾತರನುವಾಕಾಶ್ವಿನಶಸ್ತ್ರಯೋರಾಗ್ನೇಯಕ್ರತಾವುಕ್ತೋ ವಿನಿಯೋಗಃ ॥

ಅನುವಾದವು—ಪ್ರ ಕೇತುನಾ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ತ್ವಷ್ಟೃಪುತ್ರನಾದ ತ್ರಿಶಿರಾಃ ಎಂಬುವನು ಋಷಿಯು. ಈ ಸೂಕ್ತದ ಮೊದಲಿನ ಆರು ಋಕ್ಕುಗಳಿಗೆ ಅಗ್ನಿಯು ದೇವತೆಯು, ಕೊನೆಯ ಮೂರು ಋಕ್ಕುಗಳಿಗೆ ಇಂದ್ರನು ದೇವತೆಯು. ಅನುಕ್ರಮಣಿಯಲ್ಲಿ **ಪ್ರ ಕೇತುನಾ ನವ ತ್ರಿಶಿರಾಸ್ತ್ವಾಷ್ಟ್ರಸ್ತ್ರಿಚೋಽನ್ತ್ಯ ಐಂದ್ರ್ಯಃ** ಎಂದು ಹೇಳಿರುವುದು. ಈ ಸೂಕ್ತದ ಮೊದಲಿನ ಆರು ಋಕ್ಕುಗಳಿಗೆ ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರಮಂತ್ರಗಳಲ್ಲಿ ಆಗ್ನೇಯಕ್ರತಸಂಬಂಧವಾದ ತ್ರಿಷ್ಟುಪ್‌ಛಂದಸ್ಸಿನ ಮಂತ್ರಗಳಿಗಾಗಿ ವಿನಿಯೋಗವಿರುವುದೆಂದು ಹಿಂದೆಯೇ ಹೇಳಲಾಗಿದೆ

ಸೂಕ್ತ—೮

ಮಂಡಲ—೧೦ । ಅನುವಾಕ—೧ । ಸೂಕ್ತ—೮ ।
ಅಷ್ಟಕ—೭ । ಅಧ್ಯಾಯ—೬ । ವರ್ಗ—೩, ೪ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ।
ಋಷಿಃ—ತ್ರಿಶಿರಾಸ್ತ್ವಾಷ್ಟ್ರಃ ॥
ದೇವತಾ—೧-೬. ಅಗ್ನಿಃ । ೭-೯. ಇಂದ್ರಃ ।
ಛಂದಃ—ತ್ರಿಷ್ಟುಪ್ ॥

। ಸಂಹಿತಾಪಾಠಃ ।

ಪ್ರ ಕೇತುನಾ ಬೃಹತಾ ಯಾತ್ಯಗ್ನಿರಾ ರೋದಸೀ ವೃಷಭೋ ರೋರವೀತಿ ।
ದಿವಶ್ಚಿದಂತಾಁ ಉಪಮಾಁ ಉದಾನಳಪಾಮುಪಸ್ಥೇ ಮಹಿಷೋ ವವರ್ಧ ॥

। ಪದಪಾಠಃ ।

ಪ್ರ । ಕೇತುನಾ । ಬೃಹತಾ । ಯಾತಿ । ಅಗ್ನಿಃ । ಆ । ರೋದಸೀ ಇತಿ । ವೃಷಭಃ । ರೋರವೀತಿ ।
ದಿವಃ । ಚಿತ್ । ಅಂತಾನ್ । ಉಪಮಾನ್ । ಉತ್ । ಆನಟ್ । ಅಪಾಂ । ಉಪಸ್ಥೇ । ಮಹಿಷಃ ।
ವವರ್ಧ ॥ ೧ ॥

॥ ಸಾಯಣಭಾಷ್ಯಂ ।

ಅಗ್ನಿರ್ಬೃಹತಾ ಮಹತಾ ಕೇತುನಾ ಪ್ರಜ್ಞಾನೇನ ಯುಕ್ತಃ ಸನ್ನೇದಾನೀಂ ರೋದಸೀ ದ್ಯಾವಾಪೃಥಿವ್ಯೌ ಪ್ರ ಯಾತಿ । ಪ್ರಕರ್ಷೇಣ ಗಚ್ಛತಿ । ಕಿಂಚ ದೇವಾನಾಮಾಹ್ವಾನಕಾಲೇ ವೃಷಭ ಇವ ರೋರವೀತಿ । ಅತ್ಯರ್ಥಂ ಶಬ್ದಂ ಕರೋತಿ । ದಿವಶ್ಚಿದ್ದ್ಯುಲೋಕಸ್ಯಾಪ್ಯಂತಾನವಸಾನಾನುಪಮಾನ್ ಸಮೀಪಾಂಶ್ಚ ಪ್ರದೇಶಾನ್ ಜ್ವಲನಾತ್ಮನಾದಿತ್ಯಾತ್ಮನಾ ವಾ ಸ್ಥಿತ ಉದಾನಟ್ । ಊರ್ಧ್ವಂ ವ್ಯಾಪ್ನೋತಿ । ಅಪಾಂ ವೃಷ್ಟಿಲಕ್ಷಣಾನಾಮುದಕಾನಾಮುಪಸ್ಥ ಉಪಸ್ಥಾನೇಽಂತರಿಕ್ಷೇ ವೈದ್ಯುತಾತ್ಮನಾ ಮಹಿಷೋ ಮಹಾನ್ವವರ್ಧ । ವರ್ಧತೇ ॥

। ಪ್ರತಿಪದಾರ್ಥ ।

ಅಗ್ನಿಃ—ಅಗ್ನಿಯು । ಬೃಹತಾ—ಮಹತ್ತಾದ । ಕೇತುನಾ—ಪ್ರಜ್ಞಾಪಕಚಿಹ್ನೆಯಿಂದ ಕೂಡಿ । ಆ—ಈಗ । ರೋದಸೀ—ದ್ಯಾವಾಪೃಥಿವಿಗಳೆಲ್ಲೆಲ್ಲ । ಪ್ರ ಯಾತಿ—ಅತಿಶಯವಾಗಿ ಸಂಚರಿಸುತ್ತಾನೆ । ವೃಷಭಃ—ವೃಷಭದಂತೆ । ರೋರವೀತಿ—ಗರ್ಜನೆಮಾಡುತ್ತಾನೆ । ದಿವಶ್ಚಿತ್—ಅಂತರಿಕ್ಷ ಪ್ರದೇಶದ । ಅಂತಾನ್—ಕೊನೆಯ ಪ್ರದೇಶಗಳನ್ನೂ । ಉಪಮಾನ್—ಸಮೀಪ ಪ್ರದೇಶಗಳನ್ನೂ । ಉದಾನಟ್—ಆಕ್ರಮಿಸಿ ವ್ಯಾಪಿಸುತ್ತಾನೆ । ಅಪಾಂ—ವೃಷ್ಟಿರೂಪವಾದ ಉದಕಗಳ । ಉಪಸ್ಥೇ—ಆಶ್ರಯಸ್ಥಾನವಾದ ಅಂತರಿಕ್ಷದಲ್ಲಿ । ಮಹಿಷಃ—ಮಹಾತ್ಮನಾದ ಅಗ್ನಿಯು । ವವರ್ಧ—ವಿದ್ಯುದ್ರೂಪದಲ್ಲಿ ವೃದ್ಧಿಯನ್ನು ಹೊಂದುತ್ತಾನೆ.

। ಭಾವಾರ್ಥ ।

ಅಗ್ನಿಯು ಮಹತ್ತಾದ ಪ್ರಜ್ಞಾಪಕಚಿಹ್ನೆಯಿಂದ ಕೂಡಿ ಈಗ ದ್ಯಾವಾಪೃಥಿವಿಗಳೆಲ್ಲೆಲ್ಲ ಅತಿಶಯವಾಗಿ ಸಂಚರಿಸುತ್ತಾನೆ. ವೃಷಭದಂತೆ ಗರ್ಜನೆಮಾಡುತ್ತಾನೆ. ಅಂತರಿಕ್ಷ ಪ್ರದೇಶದ ಕೊನೆಯ ಭಾಗಗಳನ್ನೂ ಸಮೀಪಪ್ರದೇಶ

ಗಳನ್ನೂ ಆಕ್ರಮಿಸಿ ವ್ಯಾಪಿಸುತ್ತಾನೆ. ವೃಷ್ಟಿರೂಪವಾದ ಉದಕಗಳ ಆಶ್ರಯಸ್ಥಾನವಾದ ಅಂತರಿಕ್ಷದಲ್ಲಿ ಮಹಾತ್ಮನಾದ ಅಗ್ನಿಯು ವಿದ್ಯುದ್ರೂಪದಲ್ಲಿ ವೃದ್ಧಿಯನ್ನು ಹೊಂದುತ್ತಾನೆ.

English Translation

Agni traverses heaven and earth with a vast banner ; he roars (like) a bull ; he spreads aloft over the remote and proximate (regions) of the sky ; mighty, he increases in the lap of the water.

॥ ಸಂಹಿತಾಪಾಠಃ ॥

ಮುಮೋದ ಗರ್ಭೋ ವೃಷಭಃ ಕಕುದ್ಮಾನಸ್ರೇಮಾ ವತ್ಸಃ ಶಿಮಿವಾಁ ಅರಾವೀತ್ ।
ಸ ದೇವತಾತ್ಯುದ್ಯತಾನಿ ಕೃಣ್ವನ್ತ್ಸ್ರೇಷು ಕ್ಷಯೇಷು ಪ್ರಥಮೋ ಜಿಗಾತಿ ॥

॥ ಪದಪಾಠಃ ॥

ಮುಮೋದ । ಗರ್ಭಃ । ವೃಷಭಃ । ಕಕುತ್ಮಾನ್ । ಅಸ್ರೇಮಾ । ವತ್ಸಃ । ಶಿಮಿವಾನ್ । ಅರಾವೀತ್ ।
ಸಃ । ದೇವತಾತಿ । ಉತ್ಯತಾನಿ । ಕೃಣ್ವನ್ । ಸ್ರೇಷು । ಕ್ಷಯೇಷು । ಪ್ರಥಮಃ । ಜಿಗಾತಿ ॥ ೨ ॥

॥ ಸಾಯಣಭಾಷ್ಯಂ ॥

ಗರ್ಭೋ ದ್ಯಾವಾಪೃಥಿವ್ಯೋರಂತರ್ಗತೋ ವೃಷಭಃ ಕಾಮಾನಾಂ ವರ್ಷಿತಾಗ್ನಿಃ ಕಕುದ್ಮಾನುನ್ನತತೇಜಸ್ಕೋ ಮುಮೋದ । ಮೋದತೇ । ಕಂಚಾಸ್ರೇಮಾ । ಪ್ರಶಸ್ಯನಾಮೈತತ್ । ಪ್ರಶಸ್ತೋ ವತ್ಸೋ ನಕ್ತೋಷಸೋರ್ವತ್ಸಭೂತಃ ಸಾಯಂಪ್ರಾತರಾಹುತ್ಯುಪಜೀವನಾತ್ ಶಿಮಿವಾನ್ ಹವಿರ್ವಹನದೇವಾಹ್ವಾನಾದಿಕರ್ಮವಾನಗ್ನಿರರಾವೀತ್ । ದೇವಾಹ್ವಾನಾದಿಶಬ್ದಂ ಕರೋತಿ । ಸೋಽಗ್ನಿರ್ದೇವತಾತಿ ಯಜ್ಞ ಉದ್ಯತಾನ್ಯುದ್ಯಮಾನ್ಯುತ್ಸಾಹಕರ್ಮಾಣಿ ಕೃಣ್ವನ್ ಕುರ್ವನ್ ಸ್ರೇಷು ಕ್ಷಯೇಷ್ವಾತ್ಮೀಯೇಷ್ವಾಹವನೀಯಾದಿಸ್ಥಾನೇಷು ಸ್ಥಿತಃ ಪ್ರಥಮೋ ದೇವಾನಾಂ ಸ್ಥಾನೇಷು ಮುಮೋದೋ ಜಿಗಾತಿ । ಗಚ್ಛತಿ ॥

॥ ಪ್ರತಿಪದಾರ್ಥ ॥

ಗರ್ಭಃ—ದ್ಯಾವಾಪೃಥಿವಿಗಳಿಗೆ ಗರ್ಭಭೂತನೂ । ವೃಷಭಃ—ಕಾಮವರ್ಷಕನೂ । ಕಕುದ್ಮಾನ್—ಉನ್ನತವಾದ ತೇಜಸ್ಸುಳ್ಳವನೂ ಆದ ಅಗ್ನಿಯು । ಮುಮೋದ—ಹರ್ಷಗೊಳ್ಳುತ್ತಾನೆ । ಅಸ್ರೇಮಾ—ಪ್ರಶಂಸಾ

ಹರ್ನೂ । **ವತ್ಸಃ**—ಅಹೋರಾತ್ರಗಳ ಪುತ್ರರೂಪನೂ । **ಶಿಮೀವಾನ್**—ಹವಿರಾದಾನಕರ್ಮವುಳ್ಳವನೂ ಆದ ಅಗ್ನಿಯು । **ಅರಾವೀತ್**—ಶಬ್ದವನ್ನು ಮಾಡುತ್ತಾನೆ । **ಸಃ**—ಆದೇ ಅಗ್ನಿಯು । **ದೇವತಾತಿ**—ದೇವಪೂಜಕವಾದ ಯಜ್ಞದಲ್ಲಿ । **ಉದ್ಯತಾನಿ**—ಉತ್ಸಾಹಯುತವಾದ ಕರ್ಮಗಳನ್ನು । **ಕೃಣ್ವನ್**—ನೆರವೇರಿಸುತ್ತ । **ಸ್ವೇಷು**—ತನ್ನದೇ ಆದ । **ಕ್ಷಯೇಷು**—ಆಹವನೀಯಾದಿಸ್ಥಾನಗಳಲ್ಲಿದ್ದು । **ಪ್ರಥಮಃ**—ದೇವತೆಗಳಲ್ಲೆಲ್ಲ ಮುಖ್ಯನಾಗಿ । **ಜಿಗಾತಿ**—ಸಂಚರಿಸುತ್ತಾನೆ

॥ ಭಾವಾರ್ಥ ॥

ದ್ಯಾವಾಪೃಥಿವಿಗಳಿಗೆ ಗರ್ಭಭೂತನೂ, ಕಾಮವರ್ಷಕನೂ, ಉನ್ನತವಾದ ತೇಜಸ್ಸುಳ್ಳವನೂ ಆದ ಅಗ್ನಿಯು ಹರ್ಷಗೊಳ್ಳುತ್ತಾನೆ. ಪ್ರಶಂಸಾರ್ಹನೂ, ಅಹೋರಾತ್ರಗಳ ಪುತ್ರರೂಪನೂ, ಹವಿರಾದಾನಕರ್ಮವುಳ್ಳವನೂ ಆದ ಅಗ್ನಿಯು ಶಬ್ದವನ್ನು ಮಾಡುತ್ತಾನೆ. ಆದೇ ಅಗ್ನಿಯು ದೇವಪೂಜಕವಾದ ಯಜ್ಞದಲ್ಲಿ ಉತ್ಸಾಹಯುತವಾದ ಕರ್ಮಗಳನ್ನು ನೆರವೇರಿಸುತ್ತಾ ತನ್ನದೇ ಆದ ಆಹವನೀಯಾದಿಸ್ಥಾನಗಳಲ್ಲಿದ್ದು ದೇವತೆಗಳಲ್ಲೆಲ್ಲ ಮುಖ್ಯನಾಗಿ ಸಂಚರಿಸುತ್ತಾನೆ.

English Translation

The emoryo (of heaven and earth), the showerer (of benefits), the glorious, rejoices ; the excellent child (of morn and eve), the celebrator of holy rites calls aloud : assiduous in exertions at the worship of the gods, he moves chief in his own abodes.

॥ ಸಂಹಿತಾಪಾಠಃ ॥

ಆ ಯೋ ಮೂರ್ಧಾನಂ ಪಿತ್ರೋರರಬ್ಧ ನ್ಯಧ್ವರೇ ದಧಿರೇ ಸೂರೋ ಅರ್ಣಃ ।
ಅಸ್ಯ ಪತ್ಮನ್ನರುಷೀರಶ್ವಬುಧ್ನಾ ಋತಸ್ಯ ಯೋನೌ ತನ್ವೋ ಜುಷಂತ ॥ ೩ ॥

॥ ಪದಪಾಠಃ ॥

ಆ । ಯಃ । ಮೂರ್ಧಾನಂ । ಪಿತ್ರೋಃ । ಅರಬ್ಧ । ನಿ । ಅಧ್ವರೇ । ದಧಿರೇ । ಸೂರಃ । ಅರ್ಣಃ ।
ಅಸ್ಯ । ಪತ್ಮನ್ । ಅರುಷೀಃ । ಅಶ್ವಬುಧ್ನಾಃ । ಋತಸ್ಯ । ಯೋನೌ । ತನ್ವಃ । ಜುಷಂತ ॥ ೩ ॥

॥ ಸಾಯಣಭಾಷ್ಯಂ ॥

ಯೋಽಗ್ನಿಃ ಪಿತ್ರೋರ್ದ್ಯಾವಾಪೃಥಿವ್ಯೋರ್ಮೂರ್ಧಾನಮಾರಬ್ಧ ಸ್ವತೇಜೋಭಿರಾರಭತೇ । ಯದ್ವಾ । ಮಾತಾಪಿತೃಭೂತಯೋರರಣ್ಯೋರ್ಮೂರ್ಧಾನಂ ಶಿರೋನಪ್ಪ-

ಧಾನಭೂತಂ ಮುಂಥನಪ್ರದೇಶಂ । ಆ ಜುಷದರ್ಥೇ । ಅರಬ್ಧ ಈಷದ್ಧಿನಸ್ತಿ । ನಿರ್ಮಥನಕಾಲೇಽಪಿ ದಾಹೇನ ದಗ್ಧುಂ ಸಮರ್ಥಃ । ಸೂರಃ ಸುವೀರ್ಯಸ್ಯಾಗ್ನೇರಸ್ಯೇ ಗಮನಶೀಲಂ ತೇಜೋಽಧ್ವರೇ ಯಜ್ಞೇ ನಿ ದಧಿರೇ । ಯಜ್ಞಾರೋ ನಿಯಮೇನ ಧಾರಯಂತಿ । ಅಸ್ಯಾಗ್ನೇಃ ಪತ್ಮನ್ಪತನೇಽರುಷೀರಾರೋಚಮಾನಾ ಋತಸ್ಯ ಯಜ್ಞಸ್ಯ ಯೋನೌ ಸ್ಥಾನೇಽಶ್ವಬುಧ್ನಾ ವ್ಯಾಪ್ತಮೂಲಾ ಅಶನಬಂಧನಾ ವಾ । ಹವಿರಾಹಾರಾನ್ವಿತಾ ಇತ್ಯರ್ಥಃ । ತನ್ವಃ ತದೀಯಾಸ್ತನೂರ್ಜುಷಂತ । ಕವಯಃ ಮೇವಂತೇ ॥

। ಪ್ರತಿಪದಾರ್ಥ ।

ಯಃ—ಯಾವ ಅಗ್ನಿಯು । **ಪಿತ್ರೋಃ**—ತನ್ನ ಮಾತಾಪಿತೃಗಳಾದ ದ್ಯಾವಾಪೃಥಿವಿಗಳ । **ಮೂರ್ಧಾನಂ**—ಉನ್ನತಪ್ರದೇಶವನ್ನು । **ಆ ಅರಬ್ಧ**—ತನ್ನ ತೇಜಸ್ಸಿನಿಂದ ಆಕ್ರಮಿಸಿರುವನೋ । **ಸೂರಃ**—ವೀರ್ಯವಂತನಾದ ಅದೇ ಅಗ್ನಿಯ । **ಅರ್ಣಃ**—ಸಂಚಾರಶೀಲವಾದ ತೇಜಸ್ಸನ್ನು । **ಅಧ್ವರೇ**—ಯಜ್ಞದಲ್ಲಿ । **ನಿ ದಧಿರೇ**—ಋತ್ವಿಕ್ಕುಗಳು ಸ್ಥಾಪಿಸಿದ್ದಾರೆ । **ಅಸ್ಯ**—ಅಗ್ನಿಯ । **ಪತ್ಮನ್**—ಸಂಚಾರಕಾಲದಲ್ಲಿ । **ಅರುಷೀಃ**—ಆಕರ್ಷಕವಾದವೂ । **ಋತಸ್ಯ**—ಯಜ್ಞದ । **ಯೋನೌ**—ಸ್ಥಾನದಲ್ಲಿ । **ಅಶ್ವಬುಧ್ನಾಃ**—ಮೂಲಸ್ಥಾನವನ್ನೆಲ್ಲ ಆಕ್ರಮಿಸಿರುವುವೂ ಆದ । **ತನ್ವಃ**—ಅಗ್ನಿಯ ತೇಜೋರೂಪವಾದ ಶರೀರವನ್ನು । **ಜುಷಂತ**—ಅವರು ಸೇವಿಸುತ್ತಾರೆ

। ಭಾವಾರ್ಥ ।

ಯಾವ ಅಗ್ನಿಯು ತನ್ನ ಮಾತಾಪಿತೃಗಳಾದ ದ್ಯಾವಾಪೃಥಿವಿಗಳ ಉನ್ನತಪ್ರದೇಶವನ್ನು ತನ್ನ ತೇಜಸ್ಸಿನಿಂದ ಆಕ್ರಮಿಸಿರುವನೋ, ವೀರ್ಯವಂತನಾದ ಅದೇ ಅಗ್ನಿಯ ಸಂಚಾರಶೀಲವಾದ ತೇಜಸ್ಸನ್ನು ಯಜ್ಞದಲ್ಲಿ ಋತ್ವಿಕ್ಕುಗಳು ನಿಯಮಿಸಿ ಸ್ಥಾಪಿಸಿದ್ದಾರೆ. ಅಗ್ನಿಯ ಸಂಚಾರಕಾಲದಲ್ಲಿ ಆಕರ್ಷಕವಾದವೂ ಯಜ್ಞಸ್ಥಾನದಲ್ಲಿ ಮೂಲಪ್ರದೇಶವನ್ನೆಲ್ಲ ಆವರಿಸಿರುವುವೂ ಆದ ಅಗ್ನಿಯ ತೇಜೋರೂಪವಾದ ಶರೀರವನ್ನು ಅವರು ಸೇವಿಸುತ್ತಾರೆ.

English Translation

They have placed in the sacrifice the radiance of the powerful Agni, who seizes hold of the forehead of his parents, gratifying his cherished, radiant, and expanding limbs, in their course, in their chamber of sacrifice

। ಸಂಹಿತಾಪಾಠಃ ।

ಉಷಉಷೋ ಹಿ ವಸೋ ಅಗ್ರಮೇಷಿ ತ್ವಂ ಯಮಯೋರಭವೋ ವಿಭಾವಾ ।

ಋತಾಯ ಸಪ್ತ ದಧಿಷೇ ಪದಾನಿ ಜನಯನ್ಮಿತ್ರಂ ತನ್ವೇ ಸ್ವಾಯೈ ॥ ೪ ॥

। ಪದಪಾಠಃ।

ಉಷಃ।ಉಷಃ । ಹಿ । ವಸೋ ಇತಿ । ಅಗ್ರಂ । ಏಷಿ । ತ್ವಂ । ಯಮುಯೋಃ । ಅಭವಃ । ವಿಭಾ।ವಾ ।
ಋತಾಯ । ಸಪ್ತ । ದಧಿಷೇ । ಪದಾನಿ । ಜನಯನ್ । ಮಿತ್ರಂ । ತನ್ವೇ । ಸ್ವಾಯೈ ॥ ೪ ॥

। ಸಾಯಣಭಾಷ್ಯಂ ।

ಹೇ ವಸೋ ಸ್ವೇನ ತೇಜಸಾ ಸರ್ವಸ್ಯಾಚ್ಛಾದಯಿತರ್ವಸುಮನ್ವಾ ಪ್ರಶಸ್ಯ ವಾಗ್ನೇ ತ್ವಮುಷ ಉಷಃ ಸರ್ವಸ್ಯಾ ವಿವೋಷಸೋಽಗ್ರಂ ಪೂರ್ವಮೇಷಿ । ಪ್ರಾಪ್ನೋಷಿ । ಅಪಿ ಚ ಯಮುಯೋರ್ಯುಗ್ಮಯೋಃ ಪರಸ್ಪರಮವಿಯುಕ್ತಯೋರಹೋರಾತ್ರಯೋರ್ವಿಭಾವಾ ದೀಪ್ತಿಮಾನಭವಃ । ಭವಸಿ । ತನ್ವೇ ಸ್ವಾಯಾ ಆತ್ಮೀಯಾಚ್ಛರೀರಾನ್ನಿತ್ರಮಾದಿತ್ಯಂ ಜನಯನ್ನುತ್ಪಾದಯನ್ ಸಪ್ತ ಪದಾನಿ ಸಪ್ತಸಂಖ್ಯಾಕಾನಿ ಧಿಷ್ಣ್ಯಾದಿಸ್ಥಾನಾನ್ಯೃತಾಯ ಯಜ್ಞಾರ್ಥಂ ದಧಿಷೇ । ಧಾರಯಸಿ ॥

॥ ಪ್ರತಿಪದಾರ್ಥ ।

ವಸೋ—ನಿನ್ನ ತೇಜಸ್ಸಿನಿಂದ ಸಕಲವನ್ನೂ ವ್ಯಾಪಿಸುವ ಎಲೈ ಅಗ್ನಿಯೇ । ತ್ವಂ—ನೀನು । ಉಷ-ಉಷಃ—ಪ್ರತಿಯೊಂದು ಉಷಃಕಾಲದಲ್ಲಿಯೂ ಅಗ್ರಂ—ಪೂರ್ವಸ್ವಾನವನ್ನು । ಏಷಿ—ಪಡೆಯುತ್ತೀಯೆ । ಯಮುಯೋಃ—ಅಹೋರಾತ್ರಗಳೆರಡನ್ನೂ । ವಿಭಾವಾ—ಪ್ರಕಾಶಪಡಿಸುವವನಾಗಿ । ಅಭವಃ—ಆಗಿದ್ದೀಯೆ । ಸ್ವಾಯೈ—ನಿನ್ನ । ತನ್ವೇ—ಶರೀರದಿಂದ । ಮಿತ್ರಂ—ಆದಿತ್ಯನನ್ನು । ಜನಯನ್—ಉತ್ಪನ್ನಮಾಡುತ್ತ । ಸಪ್ತ ಪದಾನಿ—ಸಪ್ತಸಂಖ್ಯಾಕವಾದ ಸ್ವಾನವನ್ನು । ಋತಾಯ—ಯಜ್ಞಾರ್ಥವಾಗಿ । ದಧಿಷೇ—ಧರಿಸಿದ್ದೀಯೆ.

॥ ಭಾವಾರ್ಥ ॥

ಸ್ವತೇಜಸ್ಸಿನಿಂದ ಸಕಲವನ್ನೂ ವ್ಯಾಪಿಸತಕ್ಕ ಎಲೈ ಅಗ್ನಿಯೇ, ನೀನು ಪ್ರತಿಯೊಂದು ಉಷಃಕಾಲದಲ್ಲಿಯೂ ಪೂರ್ವಸ್ವಾನವನ್ನು ಪಡೆಯುತ್ತೀಯೆ. ಅಹೋರಾತ್ರಗಳೆರಡನ್ನೂ ಪ್ರಕಾಶಪಡಿಸುವವನಾಗಿ ಆಗಿದ್ದೀಯೆ. ನಿನ್ನ ಶರೀರದಿಂದಲೇ ಆದಿತ್ಯನನ್ನು ಉತ್ಪನ್ನಮಾಡುತ್ತ ಸಪ್ತಸಂಖ್ಯಾಕವಾದ ಸ್ಥಾನವನ್ನು ಯಜ್ಞಾರ್ಥವಾಗಿ ಧರಿಸಿದ್ದೀಯೆ.

English Translation

Opulent Agni, you precede dawn after dawn ! You are the illuminator of the twin (day and night) : engendering Mitra from your own preson, you retain seven places for sacrifice

। ಸಂಹಿತಾಪಾಠಃ ।

ಭುವಶ್ಚಕ್ಷುರ್ಮಹ ಋತಸ್ಯ ಗೋಪಾ ಭುವೋ ವರುಣೋ ಯದ್ಧತಾಯು
ವೇಷಿ ।

ಭುವೋ ಅಪಾಂ ನಪಾಜ್ಜಾತವೇದೋ ಭುವೋ ದೂತೋ ಯಸ್ಯ ಹವ್ಯಂ ಜುಜೋಷಃ ॥ ೫ ॥

॥ ಪದಪಾಠಃ ॥

ಭುವಃ । ಚಕ್ಷುಃ । ಮಹಃ । ಋತಸ್ಯ । ಗೋಪಾಃ । ಭುವಃ । ವರುಣಃ । ಯತ್ । ಋತಾಯ । ವೇಷಿ ॥
ಭುವಃ । ಅಪಾಂ । ನಪಾತ್ । ಜಾತವೇದಃ । ಭುವಃ । ದೂತಃ । ಯಸ್ಯ । ಹವ್ಯಂ । ಜುಜೋಷಃ ॥೫॥

॥ ಸಾಯಣಭಾಷ್ಯಂ ॥

ಮಹೋ ಮಹತ ಋತಸ್ಯ ಯಜ್ಞಸ್ಯ ಹೇ ಅಗ್ನೇ ತ್ವಂ ಚಕ್ಷುರಿವ ಪ್ರಕಾಶಕೋ ಭುವಃ । ಭವಸಿ । ಗೋಪಾ ಯಜ್ಞಸ್ಯ ರಕ್ಷಕಸ್ತ್ವಮೇವ ಭವಸಿ । ಯದ್ಯದರ್ಥಾಯ ಸೋಮರಸಲಕ್ಷಣಸ್ಯೋದಕಸ್ಯಾದಾನಾರ್ಥಂ ವರುಣ ಆದಿತ್ಯೋ ವೇಷಿ ಗಚ್ಛಸಿ ತದಾ ತ್ವಮೇವ ಭುವಃ । ಭವಸಿ । ಹೇ ಜಾತವೇದೋ ಜಾತಪ್ರಜ್ಞಾಗ್ನೇ ಅಪಾಂ ವೃಷ್ಟಿಲಕ್ಷಣಾನಾಮುದಕಾನಾಂ ನಪಾತ್ ಪೌತ್ರಸ್ತ್ವಮೇವ ಭುವಃ । ಭವಸಿ । ಅದ್ಭ್ಯೋ ಹಿ ಮೇಘೋ ಜಾಯತೇ ಮೇಘಾದಗ್ನಿರ್ವಿದ್ಯುದ್ರೂಪೋ ಜಾಯತ ಇತ್ಯಪಾಂ ಪೌತ್ರತ್ವಮುಚ್ಯತೇ । ಯಸ್ಯ ಯಜಮಾನಸ್ಯ ಹವ್ಯಂ ಹವಿರ್ಲಕ್ಷಣಮನ್ನಂ ಜುಜೋಷಃ ಸೇವಸೇ ತಸ್ಯ ದೂತೋ ಭುವಃ । ಭವಸಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ ನೀನು) **ಮಹಃ**—ಮಹತ್ತಾದ । **ಋತಸ್ಯ**—ಯಜ್ಞಕ್ಕೆ । **ಚಕ್ಷುಃ**—ಪ್ರಕಾಶಕನಾಗಿ । **ಭುವಃ**—ಆಗಿದ್ದೀಯೆ । **ಗೋಪಾಃ**—ಯಜ್ಞರಕ್ಷಕನಾಗಿದ್ದೀಯೆ । **ಯತ್**—ಯಾವಾಗ । **ಋತಾಯ**—ಉದಕಾರ್ಥವಾಗಿ । (ಯಜ್ಞಾರ್ಥವಾಗಿ) । **ವೇಷಿ**—ಹೋಗುವೆಯೋ ಆಗ । **ವರುಣಃ**—ವರುಣರೂಪನಾಗಿ । **ಭುವಃ**—ಆಗುತ್ತೀಯೆ । **ಜಾತವೇದಃ**—ಜಾತಪ್ರಜ್ಞನಾದ ಎಲೈ ಅಗ್ನಿಯೇ । **ಅಪಾಂ**—ವೃಷ್ಟ್ಯುದಕಗಳಿಗೆ । **ನಪಾತ್**—ಪೌತ್ರರೂಪನಾಗಿ । **ಭುವಃ**—ಆಗಿದ್ದೀಯೆ । **ಯಸ್ಯ**—ಯಾವ ಯಜಮಾನನ । **ಹವ್ಯಂ**—ಹವಿಸ್ಸನ್ನು । **ಜುಜೋಷಃ**—ಸೇವಿಸುವೆಯೋ । **ದೂತಃ**—ಅವನಿಗೆ ದೂತನಾಗಿ । **ಭುವಃ**—ಆಗಿದ್ದೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಯಜ್ಞಕ್ಕೆ ಪ್ರಕಾಶಕನಾಗಿದ್ದೀಯೆ. ಯಜ್ಞರಕ್ಷಕನಾಗಿದ್ದೀಯೆ. ಯಾವಾಗ ನೀನು ಯಜ್ಞಾರ್ಥವಾಗಿ ಹೋಗುವೆಯೋ ಆಗ ವರುಣರೂಪನಾಗಿದ್ದೀಯೆ. ಜಾತಪ್ರಜ್ಞನಾದ ಎಲೈ ಅಗ್ನಿಯೇ, ವೃಷ್ಟ್ಯುದಕಗಳಿಗೆ ಪೌತ್ರರೂಪನಾಗಿ ಆಗಿದ್ದೀಯೆ. ಯಾವ ಯಜಮಾನನ ಹವಿಸ್ಸನ್ನು ಸೇವಿಸುವೆಯೋ, ಅವನಿಗೆ ದೂತನಾಗಿ ಆಗಿದ್ದೀಯೆ.

English Translation

You are the eye, the protector of the great sacrifice : when you proceed to the rite, you are Varuna ; you are the grandson of the waters, Jatavedas ; you are the messenger (of him) whose oblation you enjoy.

। ಸಂಹಿತಾಪಾಠಃ ।

ಭುವೋ ಯಜ್ಞಸ್ಯ ರಜಸಶ್ಚ ನೇತಾ ಯತ್ರಾ ನಿಯುದ್ಭಿಃ ಸಚಸೇ ಶಿವಾಭಿಃ ।
ದಿವಿ ಮೂರ್ಧಾನಂ ದಧಿಷೇ ಸ್ವರ್ಷಾಂ ಜಿಹ್ವಾಮಗ್ನೇ ಚಕೃಷೇ ಹವ್ಯ-
ವಾಹಂ ॥ ೬ ॥

।। ಪದಪಾಠಃ ।।

ಭುವಃ । ಯಜ್ಞಸ್ಯ । ರಜಸಃ । ಚ । ನೇತಾ । ಯತ್ರ । ನಿಯುತ್ಭಿಃ । ಸಚಸೇ । ಶಿವಾಭಿಃ ।
ದಿವಿ । ಮೂರ್ಧಾನಂ । ದಧಿಷೇ । ಸ್ವಃಽಸಾಂ । ಜಿಹ್ವಾಂ । ಅಗ್ನೇ । ಚಕೃಷೇ । ಹವ್ಯಽವಾಹಂ ॥ ೬ ॥

। ಸಾಯಣಭಾಷ್ಯಂ ।

ದರ್ಶಪೂರ್ಣಮಾಸಯೋರಾಗ್ನೇಯಸ್ಯ ಯಾಜ್ಯಾ ಭುವೋ ಯಜ್ಞಸ್ಯೇತ್ಯೇಷಾ । ಸೂತ್ರಿತಂ ಚ । ತಾಸಾಂ ಯಾಜ್ಞ್ಯಾನುವಾಕ್ಯಾ ಅಗ್ನಿಮೂರ್ಧಾ ಭುವೋ ಯಜ್ಞಸ್ಯ । ೪-೧-೬ । ಇತಿ ॥ ಆಗ್ನೇಯೀ ಕಾಚಿತ್ಯಾನ್ಯೇಷ್ಟಿಃ । ತಸ್ಯಾಮೇಷೈವ ಯಾಜ್ಯಾ । ಸೂತ್ರಿತಂ ಚ । ಆಗ್ನೇಯ್ಯಾ ಉತ್ತರೇ ನಿತ್ಯೇ ಮೂರ್ಧ-ಸ್ವತಃ । ೪. ೨-೧೦ । ಇತಿ ॥

ಹೇ ಅಗ್ನೇ ತ್ವಂ ಯತ್ರ ಯಸ್ಮಿನ್ನಂತರಿಕ್ಷೇ ಶಿವಾಭಿಃ ಕಲ್ಯಾಣೀಭಿರ್ನಿಯುದ್ಭಿರ್ನಿಯುತ್ಸಂಜ್ಞ-ಕಾಭಿರಶ್ವಜಾತಿಭಿಃ ಸಂಬದ್ಧಂ ವಾಯುಂ ಸಚಸೇ ಸಂಗಚ್ಛಸೇ ತಸ್ಮಿನ್ನಂತರಿಕ್ಷೇ ಯಜ್ಞಸ್ಯ ರಜಸಶ್ಚೋದಕಸ್ಯ ಚ ನೇತಾ ಪ್ರಾಪಯಿತಾ ಭುವಃ । ಭವಸಿ । ಅಗ್ನಿರ್ವಾ ಇತೋ ವೃಷ್ಟಿಂ ಸಮೀರಯತೀತಿ ಶ್ರುತೇಃ । ಕಿಂಚ ದಿವಿ ದ್ಯುಲೋಕೇ ಮೂರ್ಧಾನಂ ಶಿರೋವತ್ಪ್ರಧಾನಭೂತಂ ಸ್ವರ್ಷಾಂ ಸರ್ವಸ್ಯ ಸಂಭಕ್ತಾರಮಾ-ದಿತ್ಯಂ ದಧಿಷೇ । ಹವಿರ್ವಹನದ್ವಾರೇಣ ಧಾರಯಸಿ । ಹೇ ಅಗ್ನೇ ತ್ವಂ ಜಿಹ್ವಾಂ ಜ್ವಾಲಾಂ ಹವ್ಯವಾಹಂ ಹವಿಷೋ ವೋಢ್ರೀಂ ಚಕೃಷೇ । ಕರೋಷಿ ॥

। ಪ್ರತಿಪದಾರ್ಥ ।

(ಎಲೈ ಅಗ್ನಿಯೇ) ಯತ್ರ—ಯಾವ ಅಂತರಿಕ್ಷದಲ್ಲಿ । ಶಿವಾಭಿಃ—ಮಂಗಳಕರಗಳಾದ । ನಿಯುದ್ಭಿಃ—ಅಶ್ವಗಳಿಂದ ಕೂಡಿದ ವಾಯುವನ್ನು । ಸಚಸೇ—ಸೇರಿಕೊಳ್ಳುವೆಯೋ ಅಲ್ಲಿ । ಯಜ್ಞಸ್ಯ—ಯಜ್ಞಾರ್ಥವಾದ ।

ರಜಸಃ—ಉದಕಕ್ಕೆ । **ನೇತಾ**—ಪ್ರಾಪಕನಾಗಿ । **ಭುವಃ**—ಆಗುತ್ತೀಯೆ । **ದಿವಿ**—ದ್ಯುಲೋಕದಲ್ಲಿ । **ಮೂರ್ಧಾ**—ನಂ—ಶಿರಸ್ಸಿನಂತೆ ಪ್ರಧಾನನಾದವನೂ । **ಸ್ವರ್ಷಾಂ**—ಸರ್ವತ್ರ ವ್ಯಾಪಿಸುವವನೂ ಆದ ಆದಿತ್ಯನನ್ನು । **ದಧಿಷೇ**—ಧರಿಸಿದ್ದೀಯೆ । **ಅಗ್ನೇ**—ಎಲೈ ಅಗ್ನಿಯೇ । **ಜಿಹ್ವಾಂ**—ನಿನ್ನ ಜ್ವಾಲಾರೂಪವಾದ ನಾಲಿಗೆಯನ್ನು । **ಹವ್ಯ-ವಾಹಂ**—ಹವಿಸ್ಸನ್ನು ವಹಿಸುವಂತೆ । **ಚಕೃಷೇ**—ಮಾಡುತ್ತೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಅಂತರಿಕ್ಷದಲ್ಲಿ ಮಂಗಳಕರಗಳಾದ ಅಶ್ವಗಳಿಂದ ಕೂಡಿದ ವಾಯುವನ್ನು ಸೇರಿಕೊಳ್ಳುವೆಯೋ, ಅಲ್ಲಿ ಯಜ್ಞಾರ್ಥವಾದ ಉದಕಕ್ಕೆ ನೀನು ಪ್ರಾಪಕನಾಗುತ್ತೀಯೆ. ದ್ಯುಲೋಕಕ್ಕೆ ಶಿರಸ್ಸಿನಂತೆ ಪ್ರಧಾನನಾದವನೂ, ಸರ್ವತ್ರ ವ್ಯಾಪಿಸುವವನೂ ಆದ ಆದಿತ್ಯನನ್ನು ಧರಿಸಿದ್ದೀಯೆ. ಎಲೈ ಅಗ್ನಿಯೇ, ನಿನ್ನ ಜ್ವಾಲಾರೂಪವಾದ ನಾಲಿಗೆಯನ್ನು ನೀನು ಹವಿರ್ವಾಹಕವಾಗುವಂತೆ ಮಾಡುತ್ತೀಯೆ.

English Translation

You are the leader of the sacrifice and sacrificial water to the place in which you are associated with the auspicious steeds of the wind . you sustain the all-enjoying (sun) as chief in heaven ; you, Agni, make your tongue the bearer of the oblation

॥ ವಿಶೇಷವಿಷಯಗಳು ॥

ದರ್ಶಪೂರ್ಣಮಾಸೇಷ್ಟಿಗಳಲ್ಲಿ ಅಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಭುವೋ ಯಜ್ಞಸ್ಯ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು **ಆಶ್ವಲಾಯನಶ್ರೌತಸೂತ್ರದ - ತಾಸಾಂ ಕ್ಷಿಯಾಜ್ಯಾನುವಾಕ್ಯಾ ಅಗ್ನಿಮೂರ್ಧಾ ಭುವೋ ಯಜ್ಞಸ್ಯ** ಎಂಬ ಸೂತ್ರದಿಂದ (ಆ. ೧-೬) ವಿವೃತವಾಗಿರುವುದು. ಮತ್ತು ಆಗ್ನೇಯಿಷ್ಟಿ ಎಂಬ ಒಂದು ಕಾಮ್ಯೇಷ್ಟಿಯಲ್ಲಿಯೂ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ-**ಆಗ್ನೇಯ್ಯಾ ಉತ್ತರೇ ನಿತ್ಯೇ ಮೂರ್ಧನ್ವತಃ** ಎಂಬ ಸೂತ್ರದಿಂದ (ಆ ೨ ೧೦) ವಿವೃತವಾಗಿರುವುದು-

॥ ಸಂಹಿತಾಪಾಠ ॥

ಅಸ್ಯ ತ್ರಿತಃ ಕ್ರತುನಾ ವವ್ರೇ ಅಂತರಿಚ್ಛನ್ಧೀತಿಂ ಪಿತುರೇವ್ಯೈಃ ಪರಸ್ಯ ।
ಸಚಸ್ಯಮಾನಃ ಪಿತ್ರೋರುಪಸ್ಥೇ ಜಾಮಿ ಬ್ರುವಾಣ ಆಯುಧಾನಿ ವೇತಿ ॥

॥ ಪದಪಾಠ ॥

ಅಸ್ಯ । ತ್ರಿತಃ । ಕ್ರತುನಾ । ವವ್ರೇ । ಅಂತಃ । ಇಚ್ಛನ್ । ಧೀತಿಂ । ಪಿತುಃ । ಏವ್ಯೈಃ । ಪರಸ್ಯ ।
ಸಚಸ್ಯಮಾನಃ । ಪಿತ್ರೋಃ । ಉಪಸ್ಥೇ । ಜಾಮಿ । ಬ್ರುವಾಣಃ । ಆಯುಧಾನಿ । ವೇತಿ ॥ ೭ ॥

॥ ಸಾಯಣಭಾಷ್ಯಂ ॥

ಅಸ್ಮಿಂಸ್ತೃಚ ಇಮಮರ್ಥಂ ಬ್ರವೀತಿ । ಹೇ ತ್ರಿತ ಸರ್ವೇಷಾಮಾಯುಧಾನಿ ವೇತ್ಥಾ ತ್ವಂ ತ್ವಷ್ಟೃಪುತ್ರಸ್ಯ ತ್ರಿಶಿರಸೋ ವಧಾರ್ಥಂ ಮಮ ಸಾಹಾಯ್ಯಂ ಕುರ್ವತೀಂದ್ರೇಣೈವಂ ಪೃಷ್ಟಸ್ತ್ರಿತಃ ಸ್ವವೀರ್ಯವೃದ್ಧ್ಯರ್ಥಂ ಯಜ್ಞಭಾಗಂ ವವ್ರೇ । ಸ ಚೇಂದ್ರಸ್ತಸ್ಮೈ ಪಾಣಿಪ್ರಕ್ಷಾಲನಾರ್ಥಂ ಚ ಜಲಂ ಯಜ್ಞಭಾಗಂ ಚ ದತ್ತವಾನ್ । ಅನೇನ ಯಜ್ಞಭಾಗೇನ ವೃದ್ಧವೀರ್ಯಸ್ತ್ರಿತ ಏತತ್ಸಂಜ್ಞಕ ಋಷಿರೇನೈ-ರಾತ್ಮನೋ ರಕ್ಷಣೈರ್ಯುಕ್ತೋ೭ಂತರ್ಯಜ್ಞಸ್ಯ ಮಧ್ಯೇ ಧೀತಿಂ ಭಾಗಮಿಚ್ಛನ್ ಪರಸ್ಯೋತ್ಕೃಷ್ಟಸ್ಯ ಪಿತುಃ ಸರ್ವಸ್ಯ ಜಗತಃ ಪಾಲಯಿತುರಸ್ಯೇಂದ್ರಸ್ಯ ಕ್ರತುನಾ ತ್ರಿಶಿರಸೋ ಮಮ ವಧಾರ್ಥಂ ಸಾಹಾಯ್ಯ-ಭೂತೇನ ಕರ್ಮಣಾ ನಿಮಿತ್ತೇನ ವವ್ರೇ । ಸಖಾಯಂ ವೃತವಾನ್ । ಕಿಂಚ ಪಿತ್ರೋರ್ಮಾತಾಪಿತೃಭೂತ-ಯೋರ್ದ್ಯಾವಾಪೃಥಿವ್ಯೋರುಪಸ್ಥೇ ಸಮೀಪಸ್ಥೇ ಯಜ್ಞೇ ಸಚಸ್ಯಮಾನ ಋತ್ವಿಗ್ಭಿಃ ಸೇವ್ಯಮಾನಸ್ತ್ರಿತೋ ಜಾಮಿ ಯೋಗ್ಯಮಿಂದ್ರಸ್ಯಾನುರೂಪಂ ಸ್ತೋತ್ರಂ ಬ್ರುವಾಣ ಇಂದ್ರಸ್ಯ ಬಲವೃದ್ಧ್ಯರ್ಥಮುಚ್ಚಾರಯ-ನ್ನಾಯುಧಾನಿ ಸ್ವಭೂತಾನಿ ವೇತಿ । ತ್ವಷ್ಟೃಪುತ್ರಸ್ಯ ಮಮ ವಧಾರ್ಥಮಾಗಚ್ಛತಿ ॥

॥ ಪ್ರತಿಪದಾರ್ಥ ॥

ತ್ರಿತಃ—ತ್ರಿತಸಂಜ್ಞಕನಾದ ಋಷಿಯ । ಏನೈಃ—ಆತ್ಮರಕ್ಷಣೆಗಳಿಂದ ಕೂಡಿ । ಆಂತಃ—ಯಜ್ಞಮಧ್ಯ-ದಲ್ಲಿ । ಧೀತಿಂ—ಭಾಗವನ್ನು । ಇಚ್ಛನ್—ಅಪೇಕ್ಷಿಸುತ್ತಾ । ಪರಸ್ಯ—ಉತ್ಕೃಷ್ಟನೂ । ಪಿತುಃ—ಪಾಲಕನೂ ಆದ । ಅಸ್ಯ—ಈ ಇಂದ್ರನ ಸಖ್ಯವನ್ನು । ಕ್ರತುನಾ—ಸಹಾಯ ಕರ್ಮನಿಮಿತ್ತವಾಗಿ । ವವ್ರೇ—ಬೇಡಿದನು । ಪಿತ್ರೋಃ—ಜಗತ್ಪಿತೃಗಳಾದ ದ್ಯಾವಾಪೃಥಿವಿಗಳ । ಉಪಸ್ಥೇ—ಸಮೀಪಸ್ಥವಾದ ಯಜ್ಞದಲ್ಲಿ । ಸಚಸ್ಯಮಾನಃ—ಋತ್ವಿಕ್ಕುಗಳಿಂದ ಸೇವಿಸಲ್ಪಟ್ಟವನಾಗಿಯೂ । ಜಾಮಿ—ಇಂದ್ರಪ್ರೀತಿಕರವಾದ ಸ್ತೋತ್ರವನ್ನು । ಬ್ರುವಾಣಃ—ಪಠಿಸುತ್ತಲೂ । ಆಯುಧಾನಿ—ತನ್ನ ಆಯುಧಗಳನ್ನು । ವೇತಿ—ಹಿಡಿಯುತ್ತಾನೆ ।

॥ ಭಾವಾರ್ಥ ॥

ತ್ರಿತಸಂಜ್ಞಕನಾದ ಋಷಿಯು ಆತ್ಮರಕ್ಷಣೆಗಳಿಂದ ಕೂಡಿ ಯಜ್ಞದಲ್ಲಿ ಭಾಗವನ್ನು ಅಪೇಕ್ಷಿಸುತ್ತ ಉತ್ಕೃಷ್ಟನೂ ಪಾಲಕನೂ ಆದ ಇಂದ್ರನ ಸಖ್ಯವನ್ನು ತ್ರಿಶಿರಸ್ಸಿನ ವಧಕ್ಕಾಗಿ ಸಹಾಯಾರ್ಥವಾಗಿ ಬೇಡಿದನು. ಜಗತ್ತಿಗೆ ಮಾತಾಪಿತೃಗಳಾದ ದ್ಯಾವಾಪೃಥಿವಿಗಳ ಸಮೀಪಸ್ಥವಾದ ಯಜ್ಞದಲ್ಲಿ ಋತ್ವಿಕ್ಕುಗಳಿಂದ ಸೇವಿಸಲ್ಪಟ್ಟವನಾಗಿಯೂ ಇಂದ್ರಪ್ರೀತಿಕರವಾದ ಸ್ತೋತ್ರವನ್ನು ಪಠಿಸುತ್ತಲೂ, ತನ್ನ ಆಯುಧವನ್ನು ಹಿಡಿಯುತ್ತಾನೆ.

English Translation

Trita by (his own) powers, desiring a share (of the sacrifice), for the sake of taking part in the exploit of the supreme protector (of the world), chose (Indra as his friend) ; attended (by the priests) in the proximity of the parental heaven and earth, and reciting appropriate praise, he takes up his weapons.

॥ संहितापाठः ॥

स पित्र्याणाऽयुधानि विद्वानिंद्रेषित आप्त्यो अभ्ययुध्यत् ।
त्रिशीर्षाणं सप्तरश्मिं जघन्वान् त्वाष्ट्रस्य चिन्निः ससृजे त्रितो
गाः ॥ ८ ॥

॥ पदपाठः ॥

सः । पित्र्याणि । अयुधानि । विद्वान् । इंद्रऽइषितः । आप्त्यः । अभि । अयुध्यत् ।
त्रिऽशीर्षाणं । सप्तऽरश्मिं । जघन्वान् । त्वाष्ट्रस्य । चित् । निः । ससृजे । त्रितः । गाः ।

॥ सायणभाष्यं ॥

आप्त्य आप्त्यस्य पुत्रोऽपां पुत्रो वा ॥ तकारोपजनश्छांदसः ॥ स त्रितः पित्र्याणि स्वपितृसंबंधीन्यायुधानि विद्वाञ्जानन्निंद्रेषितस्त्रिशिरसा मयो सह युद्धार्थमिंद्रेण प्रेषितः सन्नभ्ययुध्यत् । अभिमुख्येन युद्धवान् । तदनंतरं सप्तरश्मिं शत्रुनियमनार्थं सप्तप्रग्रहहस्तं । यद्वा । सप्तरश्मिरादित्यः । तत्संदृशं । त्रिशीर्षाणं त्रिशिरस्कं मां जघन्वान् । हतवान् । मूर्च्छितं कृतवानित्यर्थः । किंच त्रितस्त्वाष्ट्रस्य चित्त्वाष्ट्रपुत्रस्य मदमपि गाः पशून्निः ससृजे । विसृष्टवान् । अपहृतवानित्यर्थः ॥

॥ प्रतिपदार्थ ॥

आप्त्यः—उदकगळिगे पुत्रनाद । सः—त्रितनु । पित्र्याणि—तन्न पितृविगे सेरिद । आयुधानि—आयुधगळन्नु । विद्वान्—अरितवनागियू । इंद्रेषितः—इंद्रनिंद प्रेरितनागियू । अभ्ययुध्यत्—शत्रुविनॊंदिगे युद्धमाडिदनु । सप्तरश्मिं—एळुरश्मि (आयुध) गळुळ्ळवनू । त्रिशीर्षाणं—मूरु तलेयुळ्ळवेनू आद शत्रुवन्नु (नन्नन्नु) । जघन्वान्—कॊंदनु । त्रितः—त्रितनु । त्वाष्ट्रस्य चित्—त्वष्टृपुत्रन । गाः—पशुगळन्नु । निः ससृजे—बिडिसिदनु ।

॥ भावार्थ ॥

उदकगळिगे पुत्रनाद त्रितनु तन्न पितृविगे सेरिद आयुधगळन्नु अरितवनागियू, इंद्रनिंद प्रेरितनागियू शत्रुविनॊंदिगे युद्धमाडिदनु. एळु विधवाद आयुधगळुळ्ळवनू, मूरु तलेयुळ्ळवनू आद शत्रुवन्नु कॊंदनु. त्रितनु त्वष्टृपुत्रन पशुगळन्नु बिडिसिदनु.

English Translation

He, the son of the waters, incited by Indra, skilled in his paternal weapons, fought against (the enemy), and slew the seven-rayed, three-headed (Asura) : then Trita set free the cows of the son of Twashtri.

॥ ಸಂಹಿತಾಪಾಠಃ ॥

ಭೂರೀದಿಂದ್ರ ಉದಿನಕ್ಷಂತವೋಜೋಽವಾಭಿನತ್ಸತ್ಪತಿರ್ಮನ್ಯಮಾನಂ ॥
ತ್ವಾಷ್ಟ್ರಸ್ಯ ಚಿದ್ವಿಶ್ವರೂಪಸ್ಯ ಗೋನಾಮಾಚಕ್ರಾಣಸ್ತ್ರೀಣಿ ಶೀರ್ಷಾ ಪರಾವರ್ಕ್ ॥ ೯ ॥

ಪದಪಾಠಃ

ಭೂರಿ । ಇತ್ । ಇಂದ್ರಃ । ಉತ್ಽಇನಕ್ಷಂತಂ । ಓಜಃ । ಅವ । ಅಭಿನತ್ । ಸತ್ಽಪತಿಃ । ಮನ್ಯಮಾನಂ ।
ತ್ವಾಷ್ಟ್ರಸ್ಯ । ಚಿತ್ । ವಿಶ್ವಽರೂಪಸ್ಯ । ಗೋನಾಂ । ಆಽಚಕ್ರಾಣಃ । ತ್ರೀಣಿ । ಶೀರ್ಷಾ । ಪರಾ ।
ವರ್ಗಿತಿ ವರ್ಕ್ ॥ ೯ ॥

॥ ಸಾಯಣಭಾಷ್ಯಂ ॥

ಸತ್ಪತಿಃ ಸತಾಂ ಪಾಲಕ ಇಂದ್ರೋ ಭೂರೀದ್ಬಹ್ವೇವ ಪೂರ್ವತುಲ್ಯಮತಿರಿಕ್ತಂ ವೌಜೋ ಬಲಮುದಿನಕ್ಷಂತಂ ವ್ಯಾಪ್ನುವಂತಂ ಮನ್ಯಮಾನಂ ಶೂರಮಿತ್ಯಾತ್ಮಾನಂ ಚಿಂತಯಂತಂ । ಯದ್ವಾ । ಮನ್ಯತಿರ್ದೀಪ್ತಿಕರ್ಮಾ ಕ್ರೋಧಕರ್ಮಾ ವಾ । ದೀಪ್ಯಮಾನಂ ಕ್ರುಧ್ಯಂತಂ ವಾ । ತ್ವಷ್ಟೃಪುತ್ರಂ ಮಾಮವಾಭಿನತ್ । ವಜ್ರೇಣ ವಿದಾರಿತವಾನ್ । ವಿದಾರ್ಯ ತ್ವಾಷ್ಟ್ರಸ್ಯ ಚಿತ್ತ್ವಷ್ಟೃಪುತ್ರಸ್ಯಾಪಿ ಗೋನಾಂ ಗವಾಂ । ಸ್ವಾಮಿನ ಇತಿ ಶೇಷಃ । ವಿಶ್ವರೂಪಸ್ಯ ಮಮ ತ್ರೀಣಿ ಶೀರ್ಷಾ ಶೀರ್ಷಾಣ್ಯಾಚಕ್ರಾಣ ಆ ಸಮಂತಾಚ್ಛಬ್ದಂ ಕುರ್ವನ್ ಪರಾ ವರ್ಕ್ । ಪರಾಙ್ಮುಖಸ್ಯ ವೃಕ್ಣವಾನ್ । ಛಿನ್ನವಾನಿತ್ಯರ್ಥಃ । ಈದೃಶಂ ಭಾವಿ ವಸ್ತು ವಿಶ್ವರೂಪಃ ಸ್ವಪ್ನಾಂತೇಽನೇನ ತೃಚೇನ ದೃಷ್ಟವಾನ್ ॥

॥ ಪ್ರತಿಪದಾರ್ಥ ॥

ಸತ್ಪತಿಃ—ಸಜ್ಜನರ ಪಾಲಕನಾದ । ಇಂದ್ರಃ—ಇಂದ್ರನು । ಭೂರೀತ್—ಅತ್ಯಧಿಕವಾಗಿಯೇ । ಓಜಃ—ಬಲವನ್ನು । ಉದಿನಕ್ಷಂತಂ—ಹೊಂದಿದವನೂ । ಮನ್ಯಮಾನಂ—ತಾನೇ ಅಧಿಕನೆಂಬ ದುರಭಿಮಾನವಿದ್ದವನೂ ಆದ ತ್ವಷ್ಟೃಪುತ್ರನನ್ನು । ಅವಾಭಿನತ್—ಸೀಳಿಹಾಕಿದನು । ತ್ವಾಷ್ಟ್ರಸ್ಯ ಚಿತ್—ತ್ವಷ್ಟೃಪುತ್ರನೂ । ಗೋನಾಂ—ಗೋವುಗಳಿಗೆ ಒಡೆಯನೂ ಆದ । ವಿಶ್ವರೂಪಸ್ಯ—ವಿಶ್ವರೂಪನ । ತ್ರೀಣಿ ಶೀರ್ಷಾ—ಮೂರು ತಿರಸ್ಸುಗಳನ್ನೂ । ಆಚಕ್ರಾಣಃ—ಶಬ್ದಮಾಡುತ್ತ । ಪರಾ ವರ್ಕ್—ಸೀಳಿಹಾಕಿದನು.

ಭಾವಾರ್ಥ.

ಸಜ್ಜನರ ಪಾಲಕನಾದ ಇಂದ್ರನು ಅತ್ಯಧಿಕವಾಗಿಯೇ ಬಲವನ್ನು ಹೊಂದಿದವನೂ, ತಾನೇ ಅಧಿಕನೆಂಬ ದುರಭಿಮಾನವಿದ್ದವನೂ ಆದ ತ್ವಷ್ಟೃಪುತ್ರನನ್ನು ಸೀಳಿಹಾಕಿದನು. ತ್ವಷ್ಟೃಪುತ್ರನೂ, ಗೋವುಗಳಿಗೆ ಒಡೆಯನೂ ಆದ ವಿಶ್ವರೂಪನ ಮೂರು ಶಿರಸ್ಸುಗಳನ್ನು ಶಬ್ದಮಾಡುತ್ತಾ ಸೀಳಿಹಾಕಿದನು. (ಹೀಗೆಂದು ಈ ಸೂಕ್ತದ ಋಷಿಯಾದ ವಿಶ್ವರೂಪನು ತನ್ನ ಸ್ವಪ್ನದಲ್ಲಿ ಕಂಡನು).

English Translation

Indra, the protector of the virtuous, crushed the arrogant (foe), attaining vast strength ; shouting, he cut off the three heads of the multifom son of Twashtri (the lord) of cattle.

ಒಂಭತ್ತನೆಯ ಸೂಕ್ತವು.

ಪೀಠಿಕೆ.

ಈ ಸೂಕ್ತದಲ್ಲಿ ಉದಕಾಭಿಮಾನಿಗಳಾದ ಅಬ್ದೇವತೆಗಳನ್ನು ಸ್ತುತಿಸಲಾಗಿದೆ. ಈ ಸೂಕ್ತಕ್ಕೆ ತ್ರಿಶಿರಾಸ್ತ್ವಾಷ್ಟ್ರಃ ಎಂಬ ತ್ವಷ್ಟೃಪುತ್ರನಾದ ತ್ರಿಶಿರಾ ಎಂಬುವನು ಅಥವಾ ಸಿಂಧುದ್ವೀಪ ಆಂಬರೀಷಃ ಎಂಬುವನು ಋಷಿಯು. ಈ ಸೂಕ್ತದ ೬ನೇ ಋಕ್ಕು ಪ್ರಥಮ ಮಂಡಲದ ೩೩ನೇ ಸೂಕ್ತದ ೨೦ನೆಯ ಋಕ್ಕಿನಲ್ಲಿ ಪಠಿತವಾಗಿದೆ. ಆದರೆ ಅಲ್ಲಿರುವ **ಆಪ್ನಸ್ವಾ ಮೇ ಸೋಮಃ** ಎಂಬ ಈ ಋಕ್ಕು ನಾಲ್ಕು ಪಾದಗಳುಳ್ಳ ಅನುಷ್ಟುಪ್ ಛಂದಸ್ಕವಾಗಿದೆ ಪ್ರಕೃತ ಸೂಕ್ತದಲ್ಲಿರುವ ೬ನೆಯ ಋಕ್ಕಿನಲ್ಲಿ ಮೂರು ಪಾದಗಳು ಮಾತ್ರವಿದ್ದು ಗಾಯತ್ರೀ ಛಂದಸ್ಸಿನ ಮಂತ್ರವಾಗಿದೆ. ಕೊನೆಯ ಪಾದವಾದ **ಆಪಶ್ಚ ವಿಶ್ವಭೇಷಜೀಃ** ಎಂಬ ಪಾದವಿರುವುದಿಲ್ಲ ಪ್ರಥಮ ಮಂಡಲದ ೨೩ನೆಯ ಸೂಕ್ತಕ್ಕೆ ಕಣ್ವಪುತ್ರನಾದ ಮೇಧಾತಿಥಿ ಎಂಬುವನು ಋಷಿಯು. ಪ್ರಕೃತ ಸೂಕ್ತಕ್ಕೆ ಹಿಂದೆ ಹೇಳಿದಂತೆ ತ್ರಿಶಿರಾಸ್ತ್ವಾಷ್ಟ್ರಃ ಅಥವಾ ಸಿಂಧುದ್ವೀಪನು ಋಷಿಯು. ಇದರಂತೆ ಪ್ರಕೃತ ಸೂಕ್ತದ ೭, ೮, ೯ನೆಯ ಋಕ್ಕುಗಳೂ ಏನೂ ವ್ಯತ್ಯಾಸವಿಲ್ಲದ ೨೩ನೆ ಸೂಕ್ತದ ೨೧, ೨೨, ೨೩ನೇ ಋಕ್ಕುಗಳಾಗಿ ಪಠಿತವಾಗಿರುತ್ತವೆ. ಈ ಕಾರಣದಿಂದ ಎಂದರೆ ಪ್ರಕೃತಸೂಕ್ತದ ೭, ೭, ೮, ೯ ಎಂಬ ನಾಲ್ಕು ಋಕ್ಕುಗಳು ಹಿಂದೆಯೇ ಪ್ರಥಮ ಮಂಡಲದ ೨೩ನೇ ಸೂಕ್ತದಲ್ಲಿ ೨೦, ೨೧, ೨೨, ೨೩ನೇ ಋಕ್ಕುಗಳಾಗಿ ಪುನಃ ಪಠಿತವಾಗಿರುವುದರಿಂದ ಈ ಋಕ್ಕುಗಳ ಭಾಷ್ಯವನ್ನು ಭಾಷ್ಯಕಾರರು ಪುನಹ ಬರೆದು ಅರ್ಥ ವಿವರಣೆಮಾಡಿಲ್ಲ ಆದರೂ ಹಿಂದೆ ಮಾಡಿರುವ ಭಾಷ್ಯವನ್ನೂ ವಿವರಣೆಯನ್ನೂ ಮುಶ್ರಿ ಬರೆದಿರುತ್ತೇವೆ.

ಆಪಃ ಎಂಬ ಉದಕಾಭಿಮಾನಿದೇವತೆಗಳನ್ನು ಸ್ತುತಿಸುವ ಈ ಸೂಕ್ತಕ್ಕೆ ವಿಶೇಷ ಮಹತ್ವವಿದೆ. ಈ ಸೂಕ್ತ ಪಠನದಿಂದ ಅಭಿಮಂತ್ರಿತವಾದ ಉದಕಗಳಿಂದ ಸಿಂದುದ್ವೀಪಋಷಿಯು-ಇಂದ್ರನು ವಿಶ್ವರೂಪನೆಂಬ ತನ್ನ ಪುರೋಹಿತನನ್ನು ಸಂಹಾರಮಾಡಿದುದರಿಂದ ಪ್ರಾಪ್ತವಾದ ಬ್ರಹ್ಮಹತ್ಯಾದೋಷವನ್ನು ಪರಿಹಾರಮಾಡಿ ಪರಿಶುದ್ಧನನ್ನಾಗಿ

ಮಾಡಿದನೆಂದು ಬೃಹದ್ದೇವತೆಯಲ್ಲಿಯೂ ಋಗ್ವಿಧಾನದಲ್ಲಿಯೂ ಹೇಳಿದೆ. ಇದಲ್ಲದೆ ದ್ವಿಜರಾದವರು ಪ್ರತಿದಿನವೂ ತಾವು ಸಾಯಂಪ್ರಾತಃಕಾಲಗಳಲ್ಲಿ ಪಾಪಪರಿಹಾರಾರ್ಥವಾಗಿ ಆಚರಿಸುವ ಸಂಧ್ಯಾವಂದನಾದಿಗಳಲ್ಲಿ ಈ ಸೂಕ್ತವನ್ನು ಪರಿಸಿ ಅಭಿಮಂತ್ರಿತವಾದ ಉದಕದಿಂದ ಪ್ರೋಕ್ಷಣೆಮಾಡಿಕೊಳ್ಳುವರು. ಈ ಸೂಕ್ತದ ಮಹತ್ತ್ವವನ್ನೂ ಪಾಪಪರಿಹಾರಕ ಶಕ್ತಿಯನ್ನೂ ಋಗ್ವಿಧಾನವೆಂಬ ಗ್ರಂಥದಲ್ಲಿ ವಿವರಿಸಿರುವುದನ್ನು ಇಲ್ಲಿ ಹೇಳಿದೆ—

ಆಪೋ ಹಿ ಷ್ಠೇತಿ ನಿಯತಃ ಪ್ರಯುಂಜೀತ ಸದಾ ದ್ವಿಜಃ ।
ಸ್ನಾನಾರ್ಥಂ ಶುದ್ಧಿಕಾಮಸ್ತು ಜಪೇತ ತ್ರಿಃ ಸಮಾಹಿತಃ ॥

(ಋಗ್ವಿಧಾನ. ಅಧ್ಯಾಯ ೩ ಶ್ಲೋ ೨೮)

ಶರೀರಶುದ್ಧಿಯನ್ನಪೇಕ್ಷಿಸುವ ದ್ವಿಜನು ಸ್ನಾನಮಾಡುವಾಗ ಶುದ್ಧವಾದ ಮನಸ್ಸಿನಿಂದ **ಆಪೋ ಹಿ ಷ್ಠಾ** ಎಂಬ ಈ ಸೂಕ್ತವನ್ನು ಮೂರಾವರ್ತಿ ಪರಿಸಬೇಕು

ಆಪ್ಸು ಚೈವ ನಿಮಜ್ಜಿತ್ವಾ ತ್ರಿಃ ಪಠೇತ್ ಸುಸಮಾಹಿತಃ ॥೨೧॥

ಬ್ರಹ್ಮಹಾ ತು ಕಪಾಲೇನ ಖಟ್ವಾಂಗೀ ಚೀರಸಂವೃತಃ ।
ಚರೇದ್ದ್ವಾದಶ ವರ್ಷಾಣಿ ಸ್ವಕರ್ಮ ಪರಿಕೀರ್ತಯನ್ ॥೨೨॥

ಅಜಪನ್ ಮನಸೈವೈತದಾಪೋ ಹಿ ಷ್ಠೇತಿ ಸಂಸ್ಮರೇತ್ ।
ಊರ್ಧ್ವಂ ತು ಪಂಚಮಾದ್ವರ್ಷಾಜ್ಜಪೇದೇವ ಸಹಸ್ರಶಃ ॥೨೩॥

ಅಪರಸ್ತು ತ್ರಿಸಾಹಸ್ರೋ ಜಪಃ ಸ್ಯಾತ್ಪ್ರತ್ಯಹಂ ಸದಾ ।
ಪೂರ್ಣೇ ತು ದ್ವಾದಶೇ ವರ್ಷೇ ಬ್ರಹ್ಮಹಾ ವಿಪ್ರಮುಚ್ಯತೇ ॥೨೪॥

ಈ ಮಂತ್ರ ಜಪಮಾಡುವ ಕ್ರಮವು ಹೇಗೆಂದರೆ—ಸೊಂಟದವರೆಗೂ ಇರುವ ನೀರಿನಲ್ಲಿ ಇಳಿದು ಅಲ್ಲಿ ನಿಂತುಕೊಂಡು ಅನನ್ಯಮನಸ್ಕನಾಗಿ ಈ ಸೂಕ್ತವನ್ನು ಜಪಮಾಡಬೇಕು. ಬ್ರಹ್ಮಹತ್ಯಾಮಾಡಿದ ಪುರುಷನು ತನ್ನ ಪಾಪಪರಿಹಾರಾರ್ಥವಾಗಿ ನಾರುಬಟ್ಟೆಯನ್ನುಟ್ಟುಕೊಂಡು ಕಪಾಲಖಟ್ವಾಂಗಗಳನ್ನು ಕೈಯಲ್ಲಿ ಧರಿಸಿ ತಾನು ಮಾಡಿದ ಪಾಪಕೃತ್ಯವನ್ನು ಜನರಿಗೆ ಅಲ್ಲಲ್ಲಿ ತಿಳಿಸುತ್ತಾ ಹನ್ನೆರಡು ವರ್ಷಗಳವರೆಗೆ ಸಂಚರಿಸುತ್ತಿರಬೇಕು. ಪ್ರತಿದಿನವೂ ಸ್ನಾನಕಾಲದಲ್ಲಿ ಈ ಸೂಕ್ತವನ್ನು ಉಚ್ಚರಿಸುತ್ತಾ ಅಥವಾ ಮನಸ್ಸಿನಲ್ಲಿಯೇ ಜಪಿಸುತ್ತಾ ಸ್ನಾನಮಾಡಬೇಕು. ಐದನೆಯ ವರ್ಷದಿಂದ ಮುಂದಕ್ಕೆ ದಿನಕ್ಕೆ ಸಾವಿರಸಲದಂತೆ ಈ ಸೂಕ್ತವನ್ನು ಜಪಿಸಬೇಕು ಕೊನೆಕೊನೆಯಲ್ಲಿ ಪ್ರತಿದಿನವೂ ಮೂರುಸಾವಿರ ಜಪಮಾಡಬೇಕು. ಈರೀತಿ ಹನ್ನೆರಡುವರ್ಷ ಪರ್ಯಂತರ ಈ ಸೂಕ್ತವನ್ನು ಜಪಿಸುತ್ತಿದ್ದಲ್ಲಿ ಆ ಪುರುಷನ ಬ್ರಹ್ಮಹತ್ಯಾದೋಷವು ಪರಿಹಾರವಾಗಿ ಅವನು ಶುದ್ಧನಾಗುವನು

ಸಮೇತ್ಯ ಬ್ರಾಹ್ಮಣಾನ್ ಬ್ರೂಯುರಥ ತಂ ಚರಿತವ್ರತಂ ।
ಅಚರಿತಂ ಭವೇತ್ಕಿಂಚಿನ್ನಿಷ್ಠಾವಾದೀ ಪಠೇತ್ಪುನಃ ॥೨೫॥
ದಶಾವರಾನ್ ದಶ ಪರಾನ್ ಹನ್ಯಾತ್ತ್ವಮನೃತಂ ವದನ್ ।
ಓಂ ಭೋ ಇತಿ ವದೇದ್ದ್ವಿಪ್ರೈರನುಜ್ಞಾತಃ ಶುಚಿರ್ಜಪೇತ್ ॥೨೬॥

ಸ್ಥಾಲೀಪಾಕಂ ಚ ಕುರ್ವೀತ ಸೋಽಗ್ನಯೇ ವ್ರತಚಾರಿಣೇ ।
ಏವಂ ಸ ಮುಚ್ಯತೇ ಪಾಪಾತ್ಸಾವಿತ್ರೀಂ ಪ್ರತಿಪದ್ಯ ಚ ॥೨೭॥

ಈರೀತಿ ಹನ್ನೆರಡುವರ್ಷಗಳವರೆಗೆ ಜಪಮಾಡಿದನಂತರ ಬ್ರಾಹ್ಮಣರನ್ನು ಸಭೆಯಲ್ಲಿ ಸೇರಿಸಿ ಕೈಮುಗಿದುಕೊಂಡು ಈರೀತಿ ಹೇಳಬೇಕು—ಎಲೈ ಬ್ರಾಹ್ಮಣರೇ, ಈಗ ನಾನು ಹನ್ನೆರಡು ವರ್ಷಗಳವರೆಗೆ ವ್ರತವನ್ನಾಚರಿಸಿರುವೆನು. ಹಾಗೊಂದುವೇಳೆ ವ್ರತವನ್ನು ಆಚರಿಸದೆ ಸುಳ್ಳುಹೇಳಿದ ಪಕ್ಷದಲ್ಲಿ ನನಗೆ ಪುನಃ ಶಿಕ್ಷೆಯಾಗಲಿ. ಸುಳ್ಳುಹೇಳಿದ್ದಕ್ಕಾಗಿ ನನ್ನ ವಂಶದ ಹಿರಿಯರಲ್ಲಿ ಹಿಂದಿನ ಹತ್ತುಮಂದಿಯನ್ನು ಮುಂದಿನ ಹತ್ತುಜನರನ್ನೂ ಕೊಂದ ಪಾಪವು ನನಗೆ ಬರಲಿ ಎಂದು ಶಪಥಮಾಡಿ ಬ್ರಾಹ್ಮಣರಿಂದ ಅನುಜ್ಞಪ್ತನಾಗಿ ಶುಚಿರ್ಭೂತನಾಗಿ ಮತ್ತೊಂದಾವರ್ತಿ ಮಂತ್ರಜಪವನ್ನು ಮಾಡಬೇಕು ಬಳಿಕ **ಅಗ್ನೇ ವ್ರತಪತೇ** ಎಂದು ಅಗ್ನಿಯನ್ನುದ್ದೇಶಿಸಿ ಹೋಮಮಾಡುವುದಕ್ಕಾಗಿ ಸ್ಥಾಲೀಪಾಕ ಕ್ರಮದಿಂದ ಅಗ್ನಿಯಲ್ಲಿ ಆಹುತಿಯನ್ನರ್ಪಿಸಿ ಗಾಯತ್ರೀಮಂತ್ರಜಪವನ್ನು ಮಾಡಬೇಕು. ಈರೀತಿ ಮಾಡಿದರೆ ಅವನು ಮಾಡಿದ ಬ್ರಹ್ಮಹತ್ಯಾಪಾಪವು ಪರಿಹಾರವಾಗಿ ಶುದ್ಧನಾಗುವನು.

ಬ್ರಹ್ಮಹಾ ತು ಪುರಾ ಶಕ್ರಸ್ತ್ವಾಷ್ಟ್ರಂ ಹತ್ವಾ ತ್ವಷ್ಟೃಷಿಂ ಪ್ರಭುಂ ।
ಸಿಂಧುದ್ವೀಪಸ್ತಮೇತಾಭಿರಭಿಷಿಚ್ಯ ವ್ಯನೋಚಯತ್ ॥೨೮॥

ಹಿಂದೆ ಇಂದ್ರನು ತನಗೆ ಪುರೋಹಿತನಾಗಿದ್ದ ತ್ವಷ್ಟೃಪುತ್ರನಾದ ವಿಶ್ವರೂಪನನ್ನು ಕೊಂದದ್ದರಿಂದ ಅವನಿಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾಯಿತು. ಆಗ ಈ ಸೂಕ್ತದ ಋಷಿಯಾದ ಸಿಂಧುದ್ವೀಪಋಷಿಯು ಈ ಸೂಕ್ತದ ಮಂತ್ರಗಳನ್ನು ಪಠಿಸಿ ಮಂತ್ರಪೂತವಾದ ಜಲದಿಂದ ಇಂದ್ರನಿಗೆ ಸ್ನಾನಮಾಡಿಸಿ ಅವನನ್ನು ಬ್ರಹ್ಮಹತ್ಯಾಪಾಪದಿಂದ ಬಿಡುಗಡೆಮಾಡಿದನು.

ಬ್ರಹ್ಮಸ್ವಂ ಚ ಗುರೋರ್ದ್ರವ್ಯಂ ಸ್ತೇಯಂ ಕೃತ್ವಾ ಜಪನ್ನಿಮಾಃ ।
ಅನೇನೈವ ವಿಧಾನೇನ ಷಡ್ಭಿರ್ವರ್ಷೈಃ ಪ್ರಮುಚ್ಯತೇ ॥೨೯॥

ಬ್ರಹ್ಮಹಾ ಚ ಸುರಾಪಶ್ಚ ನಿಯಮೇನ ಜಪನ್ನಿಮಾಃ ।
ಅನೇನೈವೋಪಚಾರೇಣ ಬ್ರಹ್ಮಘ್ನ ಇವ ಮುಚ್ಯತೇ ॥೩೦॥

ಬ್ರಾಹ್ಮಣನ ಸ್ವತ್ತನ್ನು ಅಪಹರಿಸುವುದರಿಂದಲೂ ಗುರುವಿನ ವಿತ್ತಾಪಹಾರವನ್ನು ಮಾಡುವುದರಿಂದಲೂ ಸಂಭವಿಸುವ ಮಹಾಪಾಪವು, ಹಿಂದೆ ಹೇಳಿದ ಕ್ರಮದಂತೆ ಈ ಸೂಕ್ತವನ್ನು ಆರುವರ್ಷಗಳವರೆಗೆ ಜಪಮಾಡಿದಲ್ಲಿ ಪಾಪ ಪರಿಹಾರವಾಗಿ ಪರಿಶುದ್ಧನಾಗುವನು. ಇದಲ್ಲದೆ ಬ್ರಹ್ಮಹತ್ಯಮಾಡಿದವನು, ಮದ್ಯಪಾನಮಾಡಿದವನು ಸಹ ಈ ಸೂಕ್ತವನ್ನು ಹಿಂದೆ ಹೇಳಿದ ಕ್ರಮದಲ್ಲಿ ಜಪಿಸಿದಲ್ಲಿ ಅವನು ಮಾಡಿದ ಪಾಪಗಳಿಂದ ಮುಕ್ತನಾಗುವನು.

ಪ್ರಾತರುತ್ಥಾಯ ಸತತಂ ಕುರ್ಯಾನ್ಮಾರ್ಜನಮಾತ್ಮನಃ ।
ರಾತ್ರ್ಯಾ ಕೃತಸ್ಯ ಪಾಪಸ್ಯ ಅವಿಜ್ಞಾತಸ್ಯ ನಿಷ್ಕೃತಿಃ ॥೩೩॥

ಸಾಯಂ ಚ ನಿತ್ಯಮೇತಾಭಿಃ ಕುರ್ಯಾನ್ಮಾರ್ಜನಮಾತ್ಮನಃ ।
ದಿವಾ ಕೃತಸ್ಯ ಪಾಪಸ್ಯ ಅವಿಜ್ಞಾತಸ್ಯ ನಿಷ್ಕೃತಿಃ ॥೩೪॥

ಪ್ರಾತಃಕಾಲದಲೆದ್ದು ಸ್ನಾನಾದಿಗಳಿಂದ ಶುಚಿರ್ಭೂತನಾಗಿ ಈ ಸೂಕ್ತದ ಮಂತ್ರಗಳನ್ನು ಪಠಿಸುತ್ತಾ ತನ್ನ ಶರೀರವನ್ನು ನೀರಿನಿಂದ ಪ್ರೋಕ್ಷಿಸಿಕೊಳ್ಳಬೇಕು. ಪ್ರಾತಃಕಾಲದಲ್ಲಿ ಈರೀತಿ ಮಾಡುವ ಮಾರ್ಜನದಿಂದ ರಾತ್ರಿಕಾಲದಲ್ಲಿ ಕಾಣದೆ ಮಾಡಿದ ಪಾಪವು ಪರಿಹಾರವಾಗುವುದು. ಹಾಗೆಯೇ ಸಾಯಂಕಾಲದಲ್ಲಿ ಪ್ರೋಕ್ಷಣೆಮಾಡಿಕೊಳ್ಳುವುದರಿಂದ ಹಗಲಿನಲ್ಲಿ ಕಾಣದೆ ಮಾಡಿದ ಪಾಪಗಳು ಪರಿಹಾರವಾಗುವುವು ಎಂದು ಈ ಸೂಕ್ತದ ಪಾಪಪರಿಹಾರಕಶಕ್ತಿಯನ್ನು ಪ್ರಶಂಸಿಸಲಾಗಿದೆ.

॥ ಸಾಯಣಭಾಷ್ಯಂ ॥

ಆಪೋ ಹೀ ತಿ ನವರ್ಚಂ ನವಮಂ ಸೂಕ್ತಂ । ಅಂಬರೀಷಸ್ಯ ರಾಜ್ಞಃ ಪುತ್ರಃ ಸಿಂಧುದ್ವೀಪ ಋಷಿಸ್ತ್ವಷ್ಟೃಪುತ್ರಸ್ತ್ರಿಶಿರಾ ವಾ । ಇದಮಾಪ ಇತ್ಯಾದಿಕೇ ದ್ವೇ ಅನುಷ್ಟುಭೌ । ಈಶಾನಾ ಇತಿ ವರ್ಧಮಾನಾ । ಆಪಃ ಪೃಣೀತೇತಿ ಪ್ರತಿಷ್ಠಾ । ಶಿಷ್ಟಾ ಗಾಯತ್ರ್ಯಃ । ಆಪೋ ದೇವತಾ । ತಥಾ ಚಾನುಕ್ರಾಂತಂ । ಆಪೋ ಹಿ ಸಿಂಧುದ್ವೀಪೋ ವಾಂಬರೀಷ ಆಪಂ ಗಾಯತ್ರಂ ದ್ವ್ಯನುಷ್ಟುಬಂತಂ ಪಂಚಮಿಾ ವರ್ಧಮಾನಾ ಸಪ್ತಮಿಾ ಪ್ರತಿಷ್ಠೇತಿ ॥ ಗತಃ ಸೂಕ್ತವಿನಿಯೋಗಃ ॥ ಆಗ್ನಿಮಾರುತ ಆಪ್ರೋ ಹಿ ಷ್ಠೇತ್ಯಾದ್ಯಾಸ್ತಿಸ್ರಃ । ಸೂತ್ರಿತಂ ಚ । ಆಪೋ ಹಿ ಷ್ಠೇತಿ ತಿಸ್ರೋ ವಿಯತಮುಪ ಉಪಸ್ಪೃಶನ್ ಆ ೫-೨೮ । ಇತಿ ।

ಅನುವಾದವು—**ಆಪೋ ಹಿ ಷ್ಠಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಅಂಬರೀಷನೆಂಬ ರಾಜನ ಪುತ್ರನಾದ ಸಿಂಧುದ್ವೀಪ ಎಂಬುವನು ಋಷಿಯು ಅಥವಾ ತ್ವಷ್ಟೃಪುತ್ರನಾದ ತ್ರಿಶಿರಾಃ ಎಂಬುವನು ಋಷಿಯು. ಈ ಸೂಕ್ತದ **ಇದಮಾಪಃ** ಎಂದು ಮೊದಲಾಗುವ ಎರಡು ಋಕ್ಕುಗಳು (೮-೯ ಋಕ್ಕುಗಳು) ಅನುಷ್ಟುಪ್‌ಛಂದಸ್ಕವು. **ಈಶಾನಾ** ಎಂಬ ೫ನೆಯ ಋಕ್ಕು ವರ್ಧಮಾನಾ ಎಂಬ ಛಂದಸ್ಸಿನದು. **ಆಪಃ ಪೃಣೀತ** ಎಂಬ ೭ನೆಯ ಋಕ್ಕು ಪ್ರತಿಷ್ಠಾ ಎಂಬ ಛಂದಸ್ಸಿನದು. ಉಳಿದ ಋಕ್ಕುಗಳು ಗಾಯತ್ರೀಛಂದಸ್ಕವು. ಆಪಃ (ಉದಕಗಳು) ಎಂಬುದು ದೇವತೆಯು. ಅನುಕ್ರಮಣಿಕೆಯಲ್ಲಿ—**ಆಪೋ ಹಿ ಸಿಂಧುದ್ವೀಪೋ ವಾಂಬರೀಷ ಆಪಂ ಗಾಯತ್ರಂ ದ್ವ್ಯನುಷ್ಟುಬಂತಂ ಪಂಚಮಿಾ ವರ್ಧಮಾನಾ ಸಪ್ತಮಿಾ ಪ್ರತಿಷ್ಠಾ** ಎಂದು ಹೇಳಿರುವುದು ಸೂಕ್ತವಿನಿಯೋಗವನ್ನು ಹಿಂತಯೇ ಹೇಳಲಾಗಿದೆ. ಆಗ್ನಿಮಾರುತಶಸ್ತ್ರಮಂತ್ರಗಳಲ್ಲಿ **ಆಪೋ ಹಿ ಷ್ಠಾ** ಎಂಬ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಆಪೋ ಹಿ ಷ್ಠೇತಿ ತಿಸ್ರೋ ವಿಯತಮುಪ ಉಪಸ್ಪೃಶನ್** ಎಂಬ ಸೂತ್ರದಿಂದ (ಆ. ೫-೨೦) ವಿವೃತವಾಗಿರುವುದು.

ಸೂಕ್ತ—೯

ಮಂಡಲ—೧೦ । ಅನುವಾಕ—೧ । ಸೂಕ್ತ—೯ ।
ಆಷ್ಟಕ—೭ । ಅಧ್ಯಾಯ—೬ । ವರ್ಗ—೫ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ।
ಋಷಿಃ—ತ್ರಿಶಿರಾಸ್ತ್ವಾಷ್ಟ್ರಃ ಸಿಂಧುದ್ವೀಪೋ ವಾಂಬರೀಷಃ ॥
ದೇವತಾ—ಆಪಃ ।
ಛಂದಃ—೧-೪, ೬. ಗಾಯತ್ರೀ । ೫. ವರ್ಧಮಾನಾ । ೭. ಪ್ರತಿಷ್ಠಾ । ೮-೯. ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ ।
ಮಹೇ ರಣಾಯ ಚಕ್ಷಸೇ ॥ ೧ ॥

॥ ಪದಪಾಠಃ ॥

ಆಪಃ । ಹಿ । ಷ್ಠ । ಮಯಃಭುವಃ । ತಾಃ । ನ॑ । ಊರ್ಜೇ । ದಧಾತನ ।
ಮಹೇ । ರಣಾಯ । ಚಕ್ಷಸೇ ॥ ೧ ॥

॥ಸಾಯಣಭಾಷ್ಯಂ ॥

ಹಿ ಯಸ್ಮಾತ್ತಾ ರಣಾದಾಪೋ ಯಾ ಯೂಯಂ ಮಯೋಭುವಃ ಸುಖಸ್ಯ ಭಾವಯಿತ್ರ್ಯಃ ಷ್ಠ ಭವಥ ತಾಸ್ತಾದೃಶ್ಯೋ ಯೂಯಂ ನೋಽಸ್ಮಾನೂರ್ಜೇಽನ್ನಾಯ ದಧಾತನ । ಧತ್ತ । ಅನ್ನಪ್ರಾಪ್ತಿ-ಯೋಗ್ಯಾನಸ್ಮಾನ್ ಕುರುತ । ಅನ್ನಮಸ್ಮಭ್ಯಂ ದತ್ತೇತ್ಯರ್ಥಃ । ಮಹೇ ಮಹತೇ ರಣಾಯ ರಮಣೀ-ಯಾಯ ಚಕ್ಷಸೇ ದರ್ಶನಾಯ ಸಮ್ಯಗ್ಜ್ಞಾನಾಯ ಚ ಧತ್ತ । ಅಸ್ಮಾನ್ ಸಮ್ಯಗ್ಜ್ಞಾನಂ ಪ್ರತಿ ಯೋಗ್ಯಾನ್ಕುರುತೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಆಪಃ—ಎಲೈ ಅಬ್ದೇವತೆಗಳೇ । **ಹಿ**—ಯಾವ ನಿಮ್ಮ ಮಾಹಾತ್ಮ್ಯದಿಂದ । **ಮಯೋಭುವಃ**—ಸುಖ-ದಾತ್ರಿಯರಾಗಿ । **ಷ್ಠ**—ಆಗಿದ್ದೀರೋ । **ತಾಃ**—ಅಂತಹ ಮಾಹಾತ್ಮ್ಯವುಳ್ಳ ನೀವು । **ನಃ**—ನಮ್ಮನ್ನು । **ಊರ್ಜೇ**-ಅನ್ನಕ್ಕೆ ಪಾತ್ರರನ್ನಾಗಿ । **ದಧಾತನ**—ಮಾಡಿ । **ಮಹೇ**—ಮಹತ್ತಾದುದೂ । **ರಣಾಯ**—ರಮಣೀಯವಾದುದೂ ಆದ । **ಚಕ್ಷಸೇ**—ದರ್ಶನಕ್ಕೂ ಯೋಗ್ಯರನ್ನಾಗಿ ಮಾಡಿರಿ.

॥ ಭಾವಾರ್ಥ ॥

ಎಲೈ ಅಬ್ದೇವತೆಗಳೇ, ಯಾವ ನಿಮ್ಮ ಮಾಹಾತ್ಮ್ಯದಿಂದ ನೀವು ಸುಖದಾತ್ರಿಯರಾಗಿ ಆಗಿದ್ದೀರೋ, ಅಂತಹ ಮಾಹಾತ್ಮ್ಯವುಳ್ಳ ನೀವು ನಮ್ಮನ್ನು ಅನ್ನಕ್ಕೆ ಪಾತ್ರರನ್ನಾಗಿ ಮಾಡಿರಿ. ಮಹತ್ತಾದುದೂ, ರಮಣೀಯವಾದುದೂ ಆದ ದರ್ಶನಕ್ಕೂ ಯೋಗ್ಯರನ್ನಾಗಿ ಮಾಡಿರಿ.

English Translation

Since, Waters, you are the sources of happiness, grant to us to enjoy abundance, and great and delightful perception.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಈರೀತಿ ಬರೆದಿರುತ್ತಾರೆ—

ಆಪಃ । ಆಪ ಆಪ್ನೋತೇಃ । ತಾಸಾಮೇಷಾ ಭವತಿ । ಆಪೋ ಹಿ ಷ್ಠಾ ಮಯೋಭುವಸ್ತಾ ನ

ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ ॥ ಆಪೋ ಹಿ ಷ್ಠ ಸುಖಭುವಸ್ತಾ ನೋ೨ ನ್ನಾಯ ಧತ್ತ ಮಹತೇ ಚ ನೋ ರಣಾಯ ರಮಣೀಯಾಯ ಚ ದರ್ಶನಾಯ ॥

(ನಿ. ೯-೨೭)

ಆಪ್ಲೃ ವ್ಯಾಪ್ತೌ ಎಂಬ ಧಾತುವಿನಿಂದ **ಆಪಃ** ಎಂಬ ಶಬ್ದವು ನಿಷ್ಪನ್ನವಾಗಿದೆ. ಈ ಧಾತುವಿಗೆ ವ್ಯಾಪಿಸು ಹೊಂದಿಸಿಕೊಡು ಎಂದರ್ಥವಿರುವುದು. **ಆಪಃ** ಎಂದರೆ ಉದಕಗಳು ಹರಡಿಕೊಳ್ಳುವ ಸ್ವಭಾವವುಳ್ಳವು ಎಂದರೆ ಎಲ್ಲಾ ಕಡೆಯಲ್ಲಿಯೂ ವ್ಯಾಪಿಸುವವು ಮತ್ತು ಸುಖ, ಆರೋಗ್ಯ ಮೊದಲಾದವುಗಳನ್ನುಹೊಂದಿಸಿಕೊಡುವವು ಎಂದು **ಆಪಃ** ಎಂಬ ಶಬ್ದದ ಅರ್ಥವು. ಈ ಅರ್ಥವನ್ನು ವಿವರಿಸುವುದಕ್ಕಾಗಿ ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡು ಅರ್ಥವಿವರಣೆಮಾಡಿದಾರೆ—ಎಲೈ ಉದಕಾಭಿಮಾನಿ ದೇವತೆಗಳೇ, ನೀವು (ಸಕಲರಿಗೂ) ಸುಖವನ್ನುಂಟುಮಾಡುವವರು. ಇಂತಹ ಗುಣವಿಶಿಷ್ಟರಾದ ನೀವು ನಮಗೆ ಅನ್ನಾದ್ಯಾಹಾರಗಳನ್ನು ಒದಗಿಸಿಕೊಡಿ ಮತ್ತು ಶ್ರೇಷ್ಠವೂ ರಮಣೀಯವೂ ಆದ ಸುಖ (ಸ್ಥಿತಿಯನ್ನು) ವನ್ನೂ ನಾವು ನೋಡುವಂತೆ ಅನುಗ್ರಹಿಸಿ ಎಂದು ನಿರ್ವಚನಾಭಿಪ್ರಾಯವು.

॥ ಸಂಹಿತಾಪಾಠಃ ॥

ಯೋ ವ॑ಃ ಶಿ॒ವತ॑ಮೋ ರ॒ಸಸ್ತ॑ಸ್ಯ ಭಾಜಯತೇ॒ಹ ನ॑ಃ ।

ಉ॒ಶತೀ॑ರಿವ ಮಾ॒ತರ॑ಃ ॥ ೨ ॥

॥ ಪದಪಾಠಃ ॥

ಯಃ । ವ॒ಃ । ಶಿವ೨ತ॑ಮಃ । ರ॒ಸಃ । ತಸ್ಯ । ಭಾ॒ಜ॒ಯ॒ತ॒ । ಇ॒ಹ । ನ॒ಃ ।

ಉ॒ಶತೀ॑ಃ೨ಇ॑ವ । ಮಾ॒ತರ॑ಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಆಪಃ ವೋ ಯುಷ್ಮಾಕಂ ಸ್ವಭೂತೋ ಯೋ ರಸಃ ಶಿವತಮಃ ಸುಖತಮ ಇಹಾಸ್ಮಿಲ್ಲೋಕೇ ತಸ್ಯ ತಂ ರಸಂ ನೋ೨ಸ್ಮಾನ್ ಭಾಜಯತ । ಸೇವಯತ । ಉಪಯೋಜಯತೇತ್ಯರ್ಥಃ । ತತ್ರ ದೃಷ್ಟಾಂತಃ । ಉಶತೀರಿವೋಶತ್ಯ ಇವ ಪುತ್ರಸಮೃದ್ಧಿಂ ಕಾಮಯಮಾನಾ ಮಾತರಃ ಸ್ತನ್ಯಂ ರಸಂ ಯಥಾ ಭಾಜಯಂತಿ ಪ್ರಾಪಯಂತಿ ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಅಬ್ದೇವತೆಗಳೇ) **ವಃ**—ನಿಮ್ಮ । **ಯಃ**—ಯಾವ । **ರಸಃ**—ರಸವು । **ಶಿವತಮಃ**—ಅತ್ಯಂತ ಸುಖಕರವಾಗಿರುವುದೋ। **ತಸ್ಯ**—ಆ ರಸವನ್ನು । **ಉಶತೀಃ ಇವ**—ಪುತ್ರನ ಪುಷ್ಟಿಯನ್ನುಅಪೇಕ್ಷಿಸುವ । **ಮಾತರಃ**—ಮಾತೃಗಳಂತೆ । **ನಃ**—ನಮಗೆ (ನಮ್ಮಿಂದ) । **ಇಹ**—ಈ ಲೋಕದಲ್ಲಿ । **ಭಾಜಯತ**—ಪಾನಮಾಡುವಂತೆ ಮಾಡಿರಿ.

॥ ಭಾವಾರ್ಥ ॥

ಎಲೈ ಅಬ್ದೇವತೆಗಳೇ, ನಿಮ್ಮ ಯಾವ ರಸವು ಅತ್ಯಂತ ಸುಖಕರವಾಗಿರುವುದೋ, ಆ ರಸವನ್ನು ಪುತ್ರನ ಪುಷ್ಟಿಯನ್ನು ಅಪೇಕ್ಷಿಸುವ ಮಾತೃಗಳು ಮಕ್ಕಳಿಗೆ ಸ್ತನ್ಯಪಾನವನ್ನು ಮಾಡಿಸುವಂತೆ ನಮ್ಮಿಂದ ಪಾನಮಾಡಿಸಿರಿ.

English Translation

Give us to partake in this world of your most auspicious juice, like affectionate mothers.

॥ ಸಂಹಿತಾಪಾಠಃ ॥

ತಸ್ಯಾ ಅರಂ ಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ ।

ಆಪೋ ಜನಯಥಾ ಚ ನಃ ॥ ೩ ॥

॥ ಪದಪಾಠಃ ॥

ತಸ್ಯೈ । ಅರಂ । ಗಮಾಮ । ವಃ । ಯಸ್ಯ । ಕ್ಷಯಾಯ । ಜಿನ್ವಥ ।

ಆಪಃ । ಜನಯಥ । ಚ । ನಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಆಪಃ ಯೂಯಂ ಯಸ್ಯ ಪಾಪಸ್ಯ ಕ್ಷಯಾಯ ವಿನಾಶಾಯಾಸ್ಮಾಞ್ಜಿನ್ವಥ ಪ್ರೀಣಯಥ ತಸ್ಯೈ ತಾದೃಶಾಯ ಪಾಪಕ್ಷಯಾಯಾರಂ ಕ್ಷಿಪ್ರಂ ವೋ ಯುಷ್ಮಾನ್ ಗಮಾಮ । ಗಮಯಾಮ । ವಯಂ ಶಿರಸಿ ಪ್ರಕ್ಷಿಪಾಮೇತ್ಯರ್ಥಃ । ಯದ್ವಾ । ಯಸ್ಯಾನ್ನಸ್ಯ ಕ್ಷಯಾಯ ನಿವಾಸಾರ್ಥಂ ಯೂಯಮೋಷಧೀರ್ಜಿನ್ವಥ ತರ್ಪಯಥ ತಸ್ಯೈ ತದನ್ನಮುದ್ದಿಶ್ಯ ವಯಮುರನುಲಂ ಪರ್ಯಾಪ್ತಂ ಯಥಾ ಭವತಿ ತಥಾ ವೋ ಯುಷ್ಮಾನ್ಗಮಾಮ । ಗಚ್ಛಾಮ । ಕಿಂಚ ಹೇ ಆಪಃ ನೋಽಸ್ಮಾಞ್ಜನಯಥ ಚ । ಪುತ್ರಪೌತ್ರಾದಿಜನನೇ ಪ್ರಯೋಜಯತೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಬ್ದೇವತೆಗಳೇ) **ಯಸ್ಯ**—ಯಾವ ಪಾಪದ । **ಕ್ಷಯಾಯ**—ನಾಶಕ್ಕಾಗಿ । **ಜಿನ್ವಥ**—ನಮ್ಮನ್ನು ಪ್ರೀತಿಗೊಳಿಸುವಿರೋ । **ತಸ್ಯೈ**—ಅದಕ್ಕಾಗಿ । **ವಃ**—ನಿಮ್ಮನ್ನು । **ಅರಂ**—ಕ್ಷಿಪ್ರವಾಗಿ । **ಗಮಾಮ**—ಸಮೀಪಿಸಿ ಆಶ್ರಯಿಸುವೆವು । **ಆಪಃ**—ಎಲೈ ಅಬ್ದೇವತೆಗಳೇ । **ನಃ**—ನಮಗೆ । **ಜನಯಥ ಚ**—ಪುತ್ರಪೌತ್ರಾದಿಗಳು ಉತ್ಪನ್ನರಾಗುವಂತೆ ಅನುಗ್ರಹಿಸಿ.

॥ ಭಾವಾರ್ಥ ॥

ಎಲೈ ಅಬ್ದೇವತೆಗಳೇ, ಯಾವ ಪಾಪದ ನಾಶಕ್ಕಾಗಿ ನಮ್ಮನ್ನು ಪ್ರೀತಿಗೊಳಿಸುವಿರೋ ಅದಕ್ಕಾಗಿ ನಿಮ್ಮನ್ನು ಕ್ಷಿಪ್ರವಾಗಿ ಸಮೀಪಿಸಿ ಆಶ್ರಯಿಸುವೆವು, ನಮಗೆ ಪುತ್ರಪೌತ್ರಾದಿಗಳು ಉತ್ಪನ್ನವಾಗುವಂತೆ ಮಾಡಿರಿ.

English Translation

Let us quickly have recourse to you, for that your (faculty) of removing (sin) by which you gladden us: waters, bestow upon us progeny.

॥ ಸಂಹಿತಾಪಾಠಃ ॥

ಶಂ ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ ।
ಶಂ ಯೋರಭಿ ಸ್ರವಂತು ನಃ ॥ ೪ ॥

ಪದಪಾಠಃ ॥

ಶಂ । ನಃ । ದೇವೀಃ । ಅಭಿಷ್ಟಯೇ । ಆಪಃ । ಭವಂತು । ಪೀತಯೇ ।
ಶಂ । ಯೋಃ । ಅಭಿ । ಸ್ರವಂತು । ನಃ ॥ ೪ ॥

॥ ಸಾಯಣಭಾಷ್ಯಂ ॥

ನೋಽಸ್ಮಾಕಂ ಪಾಪಾಪನೋದದ್ವಾರೇಣ ಶಂ ಸುಖಂ ಭವಂತು ದೇವೀರ್ದೇವ್ಯ ಆಪಃ । ಅಭಿಷ್ಟಯೇಽಸ್ಮದ್ಯಜ್ಞಾಯ ಭವಂತು । ಯಜ್ಞಾಂಗಭಾವಾಯ ಚ ಭವಂತ್ವಿತ್ಯರ್ಥಃ । ಪೀತಯೇ ಪಾನಾಯ ಚ ಭವಂತು । ತಥಾ ಶಮುತ್ಪನ್ನಾನಾಂ ರೋಗಾಣಾಂ ಶಮನಂ ಯೋರ್ಯಾವನಮನುತ್ಪನ್ನಾನಾಂ ಪೃಥಕ್ಕರಣಂ ಚ ಕುರ್ವಂತು । ಅಪಿ ಚ ನೋಽಸ್ಮಾಕಮಭ್ಯುಪರಿ ಸ್ರವಂತು । ಶುದ್ಧ್ಯರ್ಥಂ ಸಿಂಚಂತು ॥

॥ ಪ್ರತಿಪದಾರ್ಥ ॥

ಆಪಃ—ಅಬ್ದೇವತೆಗಳು । ನಃ—ನಮಗೆ । ಶಂ—ಸುಖದಾಯಕರಾಗಿ । ಭವಂತು—ಆಗಿರಲಿ । ದೇವೀಃ—ದೇವತಾತ್ಮಗಳಾದ ಉದಕಗಳು । ಅಭಿಷ್ಟಯೇ—ನಮ್ಮ ಇಷ್ಟಾರ್ಥಸಿದ್ಧಿಕಾರಕಗಳಾಗಲಿ । ಪೀತಯೇ—ನಮಗೆ ಪಾನಯೋಗ್ಯಗಳಾಗಲಿ । ಶಂ—ರೋಗನಾಶಕವಾದ ಸುಖವನ್ನು । ಯೋಃ—ರೋಗಪರಿಹಾರವನ್ನೂ ಉಂಟುಮಾಡಲಿ । ನಃ ಅಭಿ—ನಮ್ಮ ಮೇಲೆ । ಸ್ರವಂತು—ಸೋಕಿಸಲಿ.

॥ ಭಾವಾರ್ಥ ॥

ಅಬ್ದೇವತೆಗಳು ನಮಗೆ ಸುಖದಾಯಕರಾಗಿ ಆಗಿರಲಿ. ದೇವತಾತ್ಮಗಳಾದ ಉದಕಗಳು ನಮ್ಮ ಇಷ್ಟಾರ್ಥಸಿದ್ಧಿಕಾರಕಗಳಾಗಲಿ. ನಮಗೆ ಪಾನಯೋಗ್ಯಗಳಾಗಲಿ. ರೋಗನಾಶಕವಾದ ಸುಖವನ್ನೂ ರೋಗಪರಿಹಾರವನ್ನೂ ಉಂಟುಮಾಡಲಿ. ನಮ್ಮ ಮೇಲೆ ಸೋಕಿಸಲಿ.

English Translation

May the divine waters be propitious to our worship, (may

they be good) for our drinking, may they flow round us, and be our health and safety.

॥ ಸಂಹಿತಾಪಾಠಃ ॥

ಈಶಾನಾ ವಾರ್ಯಾಣಾಂ ಕ್ಷಯಂತೀಶ್ಚರ್ಷಣೀನಾಂ ।

ಅಪೋ ಯಾಚಾಮಿ ಭೇಷಜಂ ॥ ೫ ॥

॥ ಪದಪಾಠಃ ॥

ಈಶಾನಾಃ । ವಾರ್ಯಾಣಾಂ । ಕ್ಷಯಂತೀಃ । ಚರ್ಷಣೀನಾಂ ।

ಅಪಃ । ಯಾಚಾಮಿ । ಭೇಷಜಂ ॥ ೫ ॥

॥ ಸಾಯಣಭಾಷ್ಯಂ ॥

ವಾರ್ಯಾಣಾಂ ವಾರಿಪ್ರಭವಾನಾಂ ವ್ರೀಹಿಯವಾದೀನಾಂ ಯದ್ವಾ ವರಣೀಯಾನಾಂ ಧನಾನಾಮಿಶಾನಾ ಈಶ್ವರಾಶ್ಚರ್ಷಣೀನಾಂ ಮನುಷ್ಯಾಣಾಂ ಕ್ಷಯಂತೀರ್ನಿವಾಸಯಿತ್ರೀರಪ ಉದಕಾನಿ ಭೇಷಜಂ । ಸುಖನಾಮೈತತ್ । ಪಾಪಾಪನೋದನಂ ಸುಖಂ ಯಾಚಾಮಿ । ಅಹಂ ಪ್ರಾರ್ಥಯೇ ॥

॥ ಪ್ರತಿಪದಾರ್ಥ ॥

ವಾರ್ಯಾಣಾಂ—ಉದಕದಿಂದ ಉತ್ಪನ್ನವಾಗತಕ್ಕ ವ್ರೀಹ್ಯಾದಿಗಳಿಗೆ । ಈಶಾನಾಃ—ಒಡೆಯರಾದವರೂ । ಚರ್ಷಣೀನಾಂ—ಮಾನವಾದಿಗಳಿಗೆ । ಕ್ಷಯಂತೀಃ—ವಸತಿದಾಯಕರೂ ಆದ । ಅಪಃ—ಅಬ್ದೇವತೆಗಳಿಂದ । ಭೇಷಜಂ—ಪಾಪನಾಶಕವಾದ ಸುಖವನ್ನು । ಯಾಚಾಮಿ—ಪ್ರಾರ್ಥಿಸುತ್ತೇನೆ

॥ ಭಾವಾರ್ಥ ॥

ಉದಕದಿಂದ ಉತ್ಪನ್ನವಾಗತಕ್ಕ ವ್ರೀಹ್ಯಾದಿಗಳಿಗೆ ಒಡೆಯರೂ, ಮಾನವಾದಿಗಳಿಗೆ ವಸತಿದಾಯಕರೂ ಆದ ಆಬ್ದೇವತೆಗಳಿಂದ ಪಾಪನಾಶಕವಾದ ಸುಖವನ್ನು ಪ್ರಾರ್ಥಿಸುತ್ತೇನೆ.

English Translation

Waters, sovereigns of precious (treasures), granters of habitations to men, I solicit of you medicine (for my infirmities).

॥ ಸಂಹಿತಾಪಾಠಃ ॥

ಅಪ್ಸು ಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಾ ।

ಅಗ್ನಿಂ ಚ ವಿಶ್ವಶಂಭುವಂ ॥ ೬ ॥

॥ पदपाठः ॥

अप्॰सु । मे । सोमः । अब्रवीत् । अन्तः । विश्वानि । भेषजा ।

अग्निं । च । विश्व॰शंभुवं ॥ ६ ॥

॥ सायणभाष्यं ॥

अप्सु जलेष्वन्तर्मध्ये विश्वानि भेषजा सर्वाण्यौषधानि संतीति मे मह्यं मन्त्रदर्शिने मुनयेऽग्निर्देवोऽब्रवीत् । तथा विश्वशंभुवं सर्वस्य जगतः सुखकरमेतन्नामकं चाग्निं चाप्सु वर्तमानं सोमोऽब्रवीत् । तथा च तैत्तिरीया अग्नेस्त्रयो ज्यायांस इत्यनुवाकेऽग्निरप्सु प्रविशदित्यग्नेरप्सु प्रवेशमामनन्ति । तै सं. १-६-६-८ । लतागुल्मवृक्षमूलादीनामौषधानां वृष्ट्युदकजन्यत्वेन जलवर्तित्वं प्रसिद्धं ।

॥ प्रतिपदार्थ ॥

अप्सु—उदकगळ । अन्तः—मध्यभागदल्लि । विश्वानि—सकलवाद । भेषजा—रोगनाशकवाद औषधिगळिरुवुवेंदू । अग्निं च—(उदक मध्यगतनाद) अग्नियन्नु । विश्वशंभुवं—विश्वक्केल्ल सुखकारकनेंदू । सोमः—सोमदेवनु । मे—ननगे । अब्रवीत्—हेळिदनु.

॥ भावार्थ ॥

सकल रोगगळन्नू नाशमाडतक्क औषधिगळू, विश्वक्केल्ला सुखकारकनाद अग्नियू उदकगळ मध्यवर्तिगळागिरुवरेंदु सोमदेवनु ननगे हेळिदनु.

English Translation

Soma has declared to me: all medicaments, as well as Agni, the benefector of the universe, are in the waters.

॥ विशेषविषयगळु ॥

ई ऋक्किन मुख्याभिप्रायवु-नीरिनल्लि समस्त जगत्तिगू सुखवन्नुंटुमाडुव अग्नियु विद्युद्रूपदिंदिरुवनु मत्तु प्राणिगळ व्याधिगळन्नु परिहार माडुव समस्त औषधिगळू नीरिनल्लियेय इरुवुवु एंदु सोमनेय ननगे हेळिरुवनु एंदु. नीरिनल्लि अग्नियु इरुवनेंब विचारदल्लि भाष्यकाररु (तै. सं. १-६-६६८) यल्लिरुव **अग्नेस्त्रयो ज्यायाग्ंसो भ्रातर असन्**

ಎಂಬ ಅನುವಾಕದಲ್ಲಿರುವ ' **ಸೋ೨ಪಃ ಪ್ರಾವಿಶತ್ತಂ ದೇವತಾಃ ಪ್ರೈಷಮೈಚ್ಛನ್** ' ಎಂಬ ವಾಕ್ಯವನ್ನು ಉದಹರಿಸಿರುವರು. ಇದರ ವಿವರಣೆಯನ್ನೂ ಋಗ್ವೇದದಲ್ಲಿ ಈ ವಿಷಯವಾಗಿ ಇರುವ ವಿವರಣೆಯನ್ನೂ ನಾವು ಮುಂದೆಯೇ ವಿವರಿಸಿದ್ದೇವೆ.

ಅಗ್ನಿಂ ಚ ವಿಶ್ವಶಂಭುವಂ—ಅಗ್ನಿಯಿಂದ ಸಮಸ್ತ ಜಗತ್ತಿಗೂ ಉಂಟಾಗುವ ಪ್ರಯೋಜನವನ್ನು ಹೆಚ್ಚಾಗಿ ವಿವರಿಸುವ ಅವಶ್ಯಕತೆಯಿಲ್ಲ. ಅಗ್ನಿಯು ನಮಗೆ ಚಳಿಯಾಗಿರುವಾಗ ಶಾಖವನ್ನು ಕೊಡುವುದಲ್ಲದೆ ಆಹಾರಾದಿಗಳನ್ನು ಬೇಯಿಸುವುದಕ್ಕೂ ಇನ್ನೂ ಅನೇಕ ಉಪಯೋಗವಾದ ಅಥವಾ ಅತ್ಯಾವಶ್ಯಕವಾದ ಕಾರ್ಯಗಳಲ್ಲಿ ನಾವು ಅಗ್ನಿಯನ್ನು ಉಪಯೋಗಿಸುತ್ತೇವೆ ಈ ವಿಷಯವು ಸರ್ವರ ಅನುಭವ ವೇದ್ಯವಾಗಿರುವುದರಿಂದ ಹೆಚ್ಚು ಹೇಳಬೇಕಾದ ಅವಶ್ಯಕತೆ ಇಲ್ಲ.

॥ ಸಂಹಿತಾಪಾಠಃ ॥

ಆ॑ಪಃ ಪೃ॒ಣೀ॒ತ ಭೇ॑ಷ॒ಜಂ ವರೂ॑ಥಂ ತ॒ನ್ವೇ॑ ಮ॒ಮ ।
ಜ್ಯೋಕ್ ಚ॑ ಸೂ॒ರ್ಯಂ॑ ದೃ॒ಶೇ ॥ ೭ ॥

॥ ಪದಪಾಠಃ ॥

ಆ॑ಪಃ । ಪೃ॒ಣೀ॒ತ । ಭೇ॒ಷ॒ಜಂ । ವರೂ॑ಥಂ । ತ॒ನ್ವೇ॑ । ಮ॒ಮ ।
ಜ್ಯೋಕ್ । ಚ॒ । ಸೂ॒ರ್ಯಂ॑ । ದೃ॒ಶೇ ॥ ೭ ॥

॥ ಸಾಯಣಭಾಷ್ಯಂ ॥

ಹೇ ಆಪೋ ಮಮ ತನ್ವೇ ಶರೀರಾರ್ಥಂ ವರೂಥಂ ರೋಗನಿವಾರಕಂ ಭೇಷಜಮೌಷಧಂ ಪೃಣೀತ। ಪೂರಯತ। ಕಂಚ ಜ್ಯೋಕ್ ಚಿರಂ ಸೂರ್ಯಂ ದೃಶೇ ದ್ರಷ್ಟುಂ ನಿರೋಗಾ ವಯಂ ಶಕ್ನುವಾಮೇತಿ ಶೇಷಃ॥ ಪೃಣೀತ। ಪೃ ಪಾಲನಪೂರಣಯೋಃ। ಲೋಣ್ಮಧ್ಯಮಬಹುವಚನಂ ಥ। ತಸ್ಯ ತಸ್ಥಸ್ಥಮಿಪಾಮಿತಿ ತಾದೇಶಃ। ಕ್ಯಾದಿಭ್ಯಃ ಶ್ನಾ। ಪ್ನಾದೀನಾಂ ಹ್ರಸ್ವ ಇತಿ ಹ್ರಸ್ವಃ। ಈಹಲ್ಯಘೋರಿತೀತ್ವಂ। ಋವರ್ಣಾಚ್ಛೇತಿ ಣತ್ವಂ। ಸತಿ ಶಿಷ್ಟಸ್ವರಬಲೀಯಸ್ತ್ವಮನ್ಯತ್ರ ವಿಕರಣೇಭ್ಯ ಇತಿ ತಿಙಃ ಸ್ವರಃ ಶಿಷ್ಯತೇ। ಆಪ ಇತ್ಯಸ್ಯಾಮಂತ್ರಿತಂ ಪೂರ್ವಮವಿದ್ಯಮಾನವದಿತ್ಯವಿದ್ಯಮಾನವತ್ತ್ವೇ ಪಾದಾದಿತ್ವಾನ್ನಿಘಾತಾಭಾವಃ। ವರೂಥಂ। ವೃಞ್ ವರಣೇ।'ಜ್ವೃವೃಞ್‌ಭ್ಯಾಮೂಥನ್। ಉ. ೨-೬। ನಿತ್ತ್ವಾದ್ಯುದಾತ್ತಃ। ತನ್ವೇ। ಜಸಿ ಹ್ರಸ್ವಶ್ಚ। ಪಾ. ೧-೪-೬। ಇತಿ ನದೀಸಂಜ್ಞಾ ಪಾಕ್ಷಿಕೇತ್ಯಾಡಾಗಮಾಭಾವಃ। ಉದಾತ್ತಯಣೋ ಹಲ್ಪೂರ್ವಾದಿತಿ ವಿಭಕ್ತ್ಯುದಾತ್ತತ್ವೇ ಪ್ರಾಪ್ತೇ ವ್ಯತ್ಯಯೇನೋದಾತ್ತಸ್ವರಿತಯೋರಿತಿ ಸ್ವರಿತತ್ವಂ। ದೃಶೇ। ದೃಶೇ ವೃಷ್ಯೇ ಚ। ಪಾ. ೩-೪-೧೧। ಇತಿ ತುಮರ್ಥೇ ಸೇಸೇನ್ನಿಪಾತ್ಯತೇ ॥

॥ ಪ್ರತಿಪದಾರ್ಥ ॥

ಅಪಃ—ಎಲೈ ಉದಕಗಳೇ, ಅಥವಾ ಉದಕಾಭಿಮಾನಿದೇವತಗಳೇ । **ಮಮ**—ನನ್ನ । **ತನ್ವೇ**—ಶರೀರಕ್ಕಾಗಿ । **ವರೂಥಂ**—ರೋಗನಿವಾರಕವಾದ । **ಭೇಷಜಂ**—ಔಷಧವನ್ನು । **ಪೃಣೀತ**—ಪೂರ್ಣಮಾಡಿ (ಎಂದರೆ ಶರೀರವು ರೋಗವಿಲ್ಲದಂತೆ ಪೂರ್ಣವಾಗಿರುವಂತೆ ಮಾಡಿರಿ) । (ಹೀಗೆ ಮಾಡುವುದರಿಂದ ನಾನು) **ಸೂರ್ಯಂ**—ಸೂರ್ಯನನ್ನು । **ಜ್ಯೋಕ್**—ಬಹಳಕಾಲದವರೆಗೆ । **ದೃಶೇ**—ನೋಡುವೆನು (ನೋಡಲು ಸಮರ್ಥನಾಗುವೆನು ಎಂದರೆ ಬಹುಕಾಲ ಜೀವಿಸಲು ಸಮರ್ಥನಾಗುವೆನು).

॥ ಭಾವಾರ್ಥ ॥

ಎಲೈ ಉದಕಗಳೇ (ಅಥವಾ ಉದಕಾಭಿಮಾನಿ ದೇವತೆಗಳೇ), ನನ್ನ ಶರೀರವು ರೋಗವಿಲ್ಲದಂತೆ ಇರುವುದಕ್ಕಾಗಿ ಉತ್ತಮವಾದ ಔಷಧವನ್ನು ಪೂರ್ಣಮಾಡಿ (ಸಿದ್ಧಪಡಿಸಿ) ಅದರಿಂದ ನಾನು ರೋಗರಹಿತನಾಗಿ ಬಹುಕಾಲ ಸೂರ್ಯನನ್ನು ನೋಡುವಂತಾಗಲಿ ಎಂದರೆ ಬಹುಕಾಲ ಜೀವಿಸುವಂತಾಗಲಿ.

English Translation

Waters, bring to perfection all disease-dispelling medicaments for the good of my body, that I may long behold the Sun.

॥ ವಿಶೇಷವಿಷಯಗಳು ॥

ಪೃಣೀತ—**ಪ್ಯಾಪಾಲನಪೂರಣಯೋಃ** ॥ ಪೂರ್ಣಮಾಡಿರಿ ಎಂದರೆ ಶರೀರದಲ್ಲಿ ರೋಗಾದಿಗಳಿಲ್ಲದಂತೆ, ಶರೀರವು ತನ್ನ ಕೆಲಸಗಳನ್ನು ಕ್ರಮವಾಗಿ ಮಾಡಲು ಶಕ್ತವಾಗುವಂತೆ ಮಾಡಿರಿ ಎಂದಭಿಪ್ರಾಯವು

ವರೂಥಂ—**ವರಣೀಯಂ, ರೋಗನಿವಾರಕಂ** ॥ ಅಪೇಕ್ಷಣೀಯವಾದ ಎಂದರೆ ರೋಗನಿವಾರಕವಾದ.

ಜ್ಯೋಕ್ ಚ ಸೂರ್ಯಂ ದೃಶೇ—ಸೂರ್ಯನನ್ನು ಬಹುಕಾಲ ನೋಡುತ್ತಿರುವುದು ಎಂದರೆ ಬಹುಕಾಲ ಜೀವಿಸಿರುವುದು ಎಂದರ್ಥವು. ಇದೇ ಅರ್ಥವನ್ನು ಸೂಚಿಸುವ ಕೆಲವು ಋಕ್ಕುಗಳು ಋಗ್ವೇದದಲ್ಲಿ ಕೆಲವಿವೆ —

ತಸ್ಮಾ ಅಗ್ನಿರ್ಭಾರತಃ ಶರ್ಮ ಯಂಸಜ್ಜ್ಯೋಕ್ ಪಶ್ಯಾತ್ಸೂರ್ಯಮುಚ್ಚರಂತಂ ।

(ಋ. ಸಂ. ೪-೨೫-೪.)

ತವ ಕ್ರತ್ವಾ ತವೋತಿಭಿರ್ಜ್ಯೋಕ್ ಪಶ್ಯೇಮ ಸೂರ್ಯಂ ॥

(ಋ. ಸಂ. ೯-೪-೬.)

ಶಂ ನಃ ಕ್ಷೇತ್ರಮುರು ಜ್ಯೋತೀಂಷಿ ಸೋಮ ಜ್ಯೋಙ್ನಃ ಸೂರ್ಯಂ ದೃಶಯೇ ರಿರೀಹಿ ॥

(ಋ. ಸಂ. ೯-೯೧-೬.)

ಉದ್ಯಂತಂ ತ್ವಾ ಮಿತ್ರಮಹೋ ದಿವೇದಿವೇ ಜ್ಯೋಗ್ಜೀವಾಃ ಪ್ರತಿ ಪಶ್ಯೇಮ ಸೂರ್ಯ ॥

(ಋ. ಸಂ. ೧೦-೩೭-೨)

ಜ್ಯೋಕ್ ಪಶ್ಯೇಮ ಸೂರ್ಯಮುಚ್ಚರಂತಮನುಮತೇ ಮೃಳಯಾ ನಃ ಸ್ವಸ್ತಿ ॥

(ಋ ಸಂ. ೧೦-೫೯-೬)

ಇವುಗಳಲ್ಲದೆ ಯಜುರ್ವೇದದಲ್ಲಿಯೂ—" ಪಶ್ಯೇಮ ಶರದಃ ಶತಂ ಜ್ಯೋಕ್ ಚ ಸೂರ್ಯಂ ದೃಶೇ " " ಜ್ಯೋಕ್ ಚ ಪಶ್ಯಾಮಿ ಸೂರ್ಯಂ " ಮೊದಲಾದ ಈ ಅಭಿಪ್ರಾಯವನ್ನು ಸೂಚಿಸುವ ಅನೇಕ ವಾಕ್ಯಗಳಿವೆ.

। ಸಂಹಿತಾಪಾಠಃ ।

ಇದಮಾಪಃ ಪ್ರ ವಹತ ಯತ್ಕಿಂ ಚ ದುರಿತಂ ಮಯಿ ।

ಯದ್ವಾಹಮಭಿದುದ್ರೋಹ ಯದ್ವಾ ಶೇಪ ಉತಾನೃತಂ ॥ ೬ ॥

। ಪದಪಾಠಃ ।

ಇದಂ । ಆಪಃ । ಪ್ರ । ವಹತ । ಯತ್ । ಕಂ । ಚ । ದುಃಇಶಂ । ಮಯಿ ।

ಯತ್ । ವಾ । ಅಹಂ । ಅಭಿಽದುದ್ರೋಹ । ಯತ್ । ವಾ । ಶೇಪೇ । ಉತ । ಅನೃತಂ ॥ ೬ ॥

। ಸಾಯಣಭಾಷ್ಯಂ ।

ಮಯಿ ಯಜಮಾನೇ ಯತ್ಕಿಂ ಚ ದುರಿತಮಜ್ಞಾನಾನ್ನಿಷ್ಪನ್ನಂ । ವಾಥವಾಹಂ ಯಜಮಾನೋಽಭಿದುದ್ರೋಹ ಸರ್ವತೋ ಬುದ್ಧಿಪೂರ್ವಕಂ ದ್ರೋಹಂ ಕೃತವಾನಸ್ಮಿ ವಾಥವಾ ಶೇಪೇ ಸಾಧುಜನಂ ಶಪ್ತವಾನಸ್ಮೀತಿ ಯದಸ್ತಿ । ಉತಾಪಿ ಚಾನೃತಮುಕ್ತವಾನಿತಿ ಯದಸ್ತಿ । ತದಿದಂ ಸರ್ವಮಪರಾಧಜಾತಂ ಪ್ರ ವಹತ । ಮತ್ತೋಽಪನೀಯ ಪ್ರವಾಹೇಣಾನ್ಯತೋ ನಯತ ॥ ಮಯಿ । ಮಪರ್ಯಂತಸ್ಯ ತ್ವಮಾನೇಕವಚನ ಇತಿ ಮಾದೇಶೇ ಕೃತೇಽತೋ ಗುಣ ಇತಿ ಪರರೂಪೇ ಚ ಸತಿ ಯೋಽಚೀತಿ ದಕಾರಸ್ಯ ಯಕಾರಾದೇಶಃ । ಏಕಾದೇಶಸ್ವರೇಣ ನುಕಾರಾತ್ಪರಸ್ಯಾಕಾರಸ್ಯೋದಾತ್ತತ್ವಂ । ದುದ್ರೋಹ । ದ್ರುಹ ಜಿಘಾಂಸಾಯಾಂ । ಣಲಿ ಗುಣೇ ದ್ವಿರ್ವಚನಪ್ರಸ್ವಹಲಾದಿಶೇಷಾಃ । ಲಿತೀತಿ ಪ್ರತ್ಯಯಾತ್ಪೂರ್ವಸ್ಯೋದಾತ್ತತ್ವಂ । ಯದ್ವೃತ್ತಯೋಗಾನ್ನಿಘಾತಾಭಾವಃ । ಶೇಪೇ । ಶಪ ಅಕ್ರೋಶೇ । ಲಿಟಿ ವ್ಯತ್ಯಯೇನ ತಜ್ । ಉತ್ತಮೈಕವಚನಮಿಟ್ । ಟೇರೇತ್ವಂ । ಅತ ಏಕಹಲ್ಮಧ್ಯೇ । ಪಾ. ೬-೪-೧೨೦ । ಇತ್ಯೇತ್ವಾಭ್ಯಾಸಲೋಪೌ । ಪ್ರತ್ಯಯಸ್ವರೇಣಾಂತೋದಾತ್ತತ್ವಂ । ಪೂರ್ವವನ್ನಿಘಾತಾಭಾವಃ ॥

। ಪ್ರತಿಪದಾರ್ಥ ॥

ಮಯಿ—ಯಜಮಾನನಾದ ನನ್ನಲ್ಲಿ । ಯತ್ಕಿಂಚಿತ್—ಯಾವುದಾದರೂ । ದುರಿತಂ—ಅಜ್ಞಾನದಿಂದ ಮಾಡಿದ ಪಾಪಗಳಿವೆಯೋ । ವಾ—ಅಥವಾ । ಅಹಂ—ನಾನು । ಯತ್ ಅಭಿದುದ್ರೋಹ—ಬುದ್ಧಿಪೂರ್ವಕವಾಗಿ (ಯಾರಿಗಾದರೂ) ದ್ರೋಹವೆಣಿಸಿದ್ದರೂ । ವಾ—ಅಥವಾ । ಯತ್ ಶೇಪೇ—ಯಾರ ವಿಚಾರವಾಗಿ ಕೆಟ್ಟ

ಮಾತನ್ನಾಡಿದ್ದರೂ । **ಉತ**—ಮತ್ತು । **ಅನೃತಂ**—ಸುಳ್ಳನ್ನು (ಹೇಳಿದ್ದರೂ) । **ಇದಂ**—ಅಂತಹ ಪಾಪವನ್ನು **ಆಪಃ**—ಉದಕಗಳು । **ಪ್ರವಹತ**—(ನನ್ನಿಂದ ಬೇರ್ಪಡಿಸಿ) ಪ್ರವಾಹರೂಪದಿಂದ ಕೊಚ್ಚಿಕೊಂಡು ಹೋಗಲಿ.

। ಭಾವಾರ್ಥ ।

ನನ್ನಲ್ಲಿರಬಹುದಾದ ಅಜ್ಞಾನವಶದಿಂದ ಮಾಡಿದ ಪಾಪಗಳು, ಅಥವಾ ನಾನು ಯಾರಿಗಾದರೂ ದ್ರೋಹ ವೆಣಿಸಿದ್ದರೂ, ಅಥವಾ ಕೆಟ್ಟಮಾತನ್ನಾಡಿದ್ದರೂ ಮತ್ತು ಸುಳ್ಳನ್ನು ಹೇಳಿದ್ದರೂ ಅಂತಹ ಪಾಪಗಳೆಲ್ಲವನ್ನೂ ಉದಕಗಳು (ಹರಿಯುವ ನೀರು) ಪ್ರವಾಹರೂಪದಲ್ಲಿ ಕೊಚ್ಚಿಕೊಂಡು ಹೋಗಲಿ.

English Translation

Waters, take away whatever sin has been (found) in me, whether I have (knowingly) done wrong, or have pronounced imprecations (against holy men), or have spoken untruth

। ವಿಶೇಷವಿಷಯಗಳು ॥

ದುರಿತಂ—ಅಜ್ಞಾನಾನ್ನಿಷ್ಪನ್ನಂ ಕಾಯಿಕಂ ಪಾಪಂ । ಅಜ್ಞಾನದಿಂದ ಅಥವಾ ಬುದ್ಧಿಪೂರ್ವಕವಾಗಿ ಮಾಡಿದ ಕಾರ್ಯರೂಪವಾದ ಪಾಪವು ಎಂದರೆ ಯಾರನ್ನಾದರೂ ಹೊಡೆಯುವುದು ಮೊದಲಾದ ಬಲಪ್ರಯೋಗಮಾಡಿ ಮಾಡುವ ಪಾಪಗಳು ಎಂದರ್ಥವು.

ಅಭಿದುದ್ರೋಹ—ಮನಸ್ಸಿನಿಂದ ಕೆಟ್ಟದ್ದನ್ನು ಯೋಚಿಸುವದಕ್ಕೆ ದ್ರೋಹವೆಂದು ಹೆಸರು ಇದು ಮಾನಸಿಕವಾದ ಪಾಪವು.

ಶೇಪೇ, ಅನೃತಂ—ಬೈಯ್ಯುವುದು ಮತ್ತು ಸುಳ್ಳು ಹೇಳುವುದು ಮೊದಲಾದವು ಮಾತಿನಿಂದ ಮಾಡುವ ಪಾಪವು. ಇದು ವಾಚಿಕವು ಈ ಮೂರು ವಿಧವಾದ ಪಾಪಗಳನ್ನು ಹರಿಯುವ ನೀರು ಕೊಚ್ಚಿಕೊಂಡು ಹೋಗಲೆಂದು ಪ್ರಾರ್ಥನೆಯು.

। ಸಂಹಿತಾಪಾಠಃ ।

ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ ॥

ಪಯಸ್ವಾನಗ್ನ ಆ ಗಹ್ಯಿತಂ ಮಾ ಸಂ ಸೃಜ ವರ್ಚಸಾ ॥ ೯ ॥

। ಪದಪಾಠಃ ॥

ಆಪಃ । ಅದ್ಯ । ಅನು । ಅಚಾರಿಷಂ । ರಸೇನ । ಸಂ । ಅಗಸ್ಮಹಿ ।

ಪಯಸ್ವಾನ್ । ಅಗ್ನೇ । ಆ । ಗಹಿ । ತಂ । ಮಾ । ಸಂ । ಸೃಜ । ವರ್ಚಸಾ ॥ ೯ ॥

॥ ಸಾಯಣಭಾಷ್ಯಂ ॥

ಅದ್ಯಾಸ್ಮಿನ್ನಿನೇ೬ವಭೃಥಾರ್ಧಮಾಪೋ೬ನ್ವಚಾರಿಷಂ । ಜಲಾನ್ಯನುಪ್ರವಿಷ್ಟೋ೬ಸ್ಮಿ । ಪ್ರವಿಶ್ಯ ಚ ರಸೇನ ಜಲಸಾರೇಣ ಸಮಗಸ್ಮಹಿ । ಸಂಗತಾಃ ಸ್ಮಃ । ಹೇ ಅಗ್ನೇ ಪಯಸ್ವಾನ್ ಜಲೇ ವರ್ತಮಾನತ್ವೇನ ಪಯೋಯುಕ್ತಸ್ತ್ವಮಾ ಗಹಿ । ಅಸ್ಮಿನ್ಕರ್ಮಣ್ಯಾಗಚ್ಛ । ತಂ ಮಾ ತಾದೃಶಂ ಸ್ನಾತಂ ಮಾಂ ವರ್ಚಸಾ ತೇಜಸಾ ಸಂ ಸೃಜ । ಸಂಯೋಜಯ ॥ ಅಪಃ । ಕರ್ಮಣಿ ಶಸಿ ಪ್ರಾಪ್ತೇ ವ್ಯತ್ಯಯೇನ ಜಸ್ । ಅಚಾರಿಷಂ । ಚರ ಗತ್ಯರ್ಥಃ । ಲುಙಿ ಚ್ಲೇಃ ಸಿಚ್ । ಆರ್ಧಧಾತುಕಸ್ಯೇಡ್ವಲಾದೇಃ । ಪಾ. ೭-೨-೫೫ । ಇತೀಟ್ । ನೇಟಿ । ಪಾ. ೭.೨-೪ । ಇತಿ ವೃದ್ಧಿಪ್ರತಿಷೇಧೇಪ್ಯಾಪ್ತೇ ತದಪವಾದತಯಾತೋ ಲ್ಲಾಂತಸ್ಯ । ಪಾ। ೭-೨-೨ । ಇತ್ಯುಪಧಾಯಾ ವೃದ್ಧಿಃ । ಅಗಸ್ಮಹಿ । ಸಮೋ ಗಮ್ಯೃಚ್ಛೀತ್ಯಾತ್ಮನೇಪದಂ । ಪಾ. ೧-೩-೨೯ । ಚ್ಲೇಃ ಸಿಚ್ । ಮುಂತ್ಸೇ ಘಸೇತ್ಯಾದಿನಾ ಚ್ಲೇರ್ಲುಗಭಾವಶ್ಛಂದಸಃ । ಏಕಾಚ ಉಪದೇಶೇ೬ನುದಾತ್ತಾದಿತೀಟ್ ಪ್ರತಿಷೇಧಃ । ವಾ ಗಮಃ । ಪಾ- ೭-೨-೧೩ । ಇತಿ ಸಿಚಃ ಕತ್ವಾದನುದಾತ್ತೋಪದೇಶೇತ್ಯಾದಿದಾನುನಾಸಿಕಲೋಪಃ । ಗಹಿ । ಲೋಟಿ ಗಮೇಃ ಸಿಪ್ಶೋ ಹಿಃ । ಅಪಿತ್ತ್ವೇನ ಙಿತ್ತ್ವಾದನುದಾತ್ತೋಪದೇಶೇತ್ಯಾದಿನಾನುನಾಸಿಕಲೋಪಃ । ಅತೋ ಹೇರಿತಿ ಲುಗ್ನ ಭವತಿ । ಅಸಿದ್ಧವದತ್ರಾಭಾದಿತಿ ಮುಲೋಪಸ್ಯಾಸಿದ್ಧತ್ವಾತ್ ॥

॥ ಪ್ರತಿಪದಾರ್ಥ ॥

ಅದ್ಯ—ಈಗ (ಈ ದಿನದಲ್ಲಿ) । **ಆಪಃ**—ಉದಕಗಳನ್ನು (ನೀರನ್ನು) । **ಅನ್ವಚಾರಿಷಂ**—(ಅವಭೃಥ ಸ್ನಾನಾರ್ಥವಾಗಿ) ಪ್ರವೇಶಿಸಿರುವೆನು । (ಬಳಿಕ) । **ರಸೇನ**—ಜಲದ ಸಾರದಿಂದ । **ಸಮಗಸ್ಮಹಿ**—ಕೂಡಿರುವೆವು । (ಹೇ) **ಅಗ್ನೇ**—ಎಲ್ಲೆ ಅಗ್ನಿಯೇ । **ಪಯಸ್ವಾನ್**—ನೀರಿನಿಂದ ಯುಕ್ತನಾದ ಎಂದರೆ ನೀರಿನಲ್ಲಿ ಇರುವ ನೀನು । **ಆ ಗಹಿ**—(ಈ ಸ್ನಾನಕರ್ಮದಲ್ಲಿ) ಬಾ । (ಮತ್ತು) **ತಂ ಮಾ**—(ಸ್ನಾನಮಾಡಿದ) ನನ್ನನ್ನು । **ವರ್ಚಸಾ**—ತೇಜಸ್ಸಿನಿಂದ । **ಸಂಸೃಜ**—ಸೇರಿಸು.

॥ ಭಾವಾರ್ಥ ॥

(ಅವಭೃಥ) ಸ್ನಾನಾರ್ಥವಾಗಿ ಈಗ ನೀರನ್ನು ಪ್ರವೇಶಿಸಿರುವೆನು. ನೀರಿನಲ್ಲಿರುವ ಸಾರವೆಲ್ಲವೂ ನನ್ನೊಡನೆ ಸೇರಲಿ. ಎಲ್ಲೆ ಅಗ್ನಿಯೇ ನೀನು ನೀರಿನಲ್ಲಿ ಇರುವವನಾದುದರಿಂದ ಈ ಸ್ನಾನಕರ್ಮಕ್ಕೆ ಬಂದು ಸ್ನಾನಮಾಡಿದ ನನ್ನನ್ನು ತೇಜಸ್ವಿಯನ್ನಾಗಿ ಮಾಡು

English Translation

I have this day entered into the waters : we have mingled with their essence. Agni abiding in the waters approach, and fill me (thus bathed) with vigour.

॥ ವಿಶೇಷವಿಷಯಗಳು ॥

ಆಪಃ—ದ್ವಿತೀಯಾರ್ಥೇ ಪ್ರಥಮಾ—ಎಂದು ಸ್ಕಂದಸ್ವಾಮಿಯು ಹೇಳಿರುವರು ಎಂದರೆ ಆಪಃ ಎಂಬ ಸ್ಥಳ್ಲಿವಿಭಕ್ತಿಯ ಶಬ್ದಕ್ಕೆ ಆಪಃ ಎಂಬ ದ್ವಿತೀಯಾವಿಭಕ್ತಿಯ ಅರ್ಥವನ್ನು ಹೇಳಬೇಕು.

ರಸೇನ—**ಜಲಸಾರೇಣ**, ಜಲಸಾರದಿಂದ, essence of water ಎಂದರೆ ಶುದ್ಧವಾದ ಜಲವು ನನ್ನ ಶರೀರದ ಅಂತರ್ಬಾಹ್ಯದೋಷಗಳನ್ನು (ಕೊಳೆಯನ್ನು) ಪರಿಹರಿಸಲಿ ಎಂದಭಿಪ್ರಾಯವು.

ಪಯಸ್ವಾನ್—**ಪಯಸಾ ಜಲೇನ ಯುಕ್ತಃ ಅಥವಾ ಪಯಸಿ ತಿಷ್ಠತೀತಿ ಪಯಸ್ವಾನ್** ನೀರಿನಲ್ಲಿ ಇರುವವನು. ಯಜುರ್ವೇದದಲ್ಲಿ ' **ಸೋ೭ಪಃ ಪ್ರಾವಿಶತ್** ' ಮೊದಲಾದ ವಾಕ್ಯಗಳು, ಅಗ್ನಿಯು ನೀರಿನಲ್ಲಿ ಅಡಗಿ ಕೊಂಡಿದ್ದನೆಂದು ಹೇಳುವವು. ಆದುದರಿಂದ ಅಗ್ನಿಯು ನೀರಿನಲ್ಲಿ ಇರುವನು ಎಂದು ಅನೇಕ ಸಂದರ್ಭಗಳಲ್ಲಿ ಹೇಳಿರುವುದು. ಈ ಋಕ್ಕಿನ ಉತ್ತರಾರ್ಧವು ಅಗ್ನಿದೇವತಾಕವಾಗಿರುವುದು.

ಈ ಸೂಕ್ತದ ಕೊನೆಯಲ್ಲಿ ಪಠಿಸಬೇಕಾದ ಪರಿಶಿಷ್ಟಮಂತ್ರವು—

ಸಸ್ರುಷೀಸ್ತದಪಸೋ ದಿವಾ ನಕ್ತಂ ಚ ಸಸ್ರುಷೀಃ ।

ವರೇಣ್ಯಕ್ರತೂರಹಮಾ ದೇವೀರವಸೇ ಹುವೇ ॥

ಹಗಲು ಮತ್ತು ರಾತ್ರಿಕಾಲದಲ್ಲಿಯೂ ಸಹ ಎಡಬಿಡದೆ ಪ್ರವಹಿಸುತ್ತಿರುವವೂ ತಮ್ಮ ಶ್ರೇಷ್ಠವಾದ ಕರ್ತವ್ಯವನ್ನು ನಿರ್ವಹಿಸುತ್ತಿರುವುವೂ, ಬುದ್ಧಿಯುಕ್ತವೂ ಆದ ಉದಕಗಳನ್ನು ಅಥವಾ ಉದಕಾಭಿಮಾನಿ ದೇವತೆಗಳನ್ನು ನನ್ನ ರಕ್ಷಣೆಗಾಗಿ ಪ್ರಾರ್ಥಿಸಿ ಕರೆಯುತ್ತೇನೆ ಎಂದು ಮಂತ್ರದ ಮುಖ್ಯಾರ್ಥವು.

ಹತ್ತನೆಯ ಸೂಕ್ತವು.

ಪೀಠಿಕೆ.

ಈ ಸೂಕ್ತದಲ್ಲಿಯೂ ಮುಂದಿನ ಕೆಲವು ಸೂಕ್ತಗಳಲ್ಲಿಯೂ ಯಮನ ಮತ್ತು ಪಿತೃಗಳ ವಿಷಯವು ಉಕ್ತವಾಗಿದೆ. ಈ ಸೂಕ್ತದಲ್ಲಿ ಯಮನಿಗೂ ಅವನ ಸಹೋದರಿಯಾದ ಯಮಿ ಎಂಬುವಳಿಗೂ ನಡೆದ ಸಂಭಾಷಣೆ ಇದೆ. ಆದ್ದರಿಂದ ಈ ಸೂಕ್ತದ ಪೀಠಿಕೆಯಲ್ಲಿ ಯಮನ ವಿಷಯವನ್ನೂ ಯಮಿಯೊಡನೆ ನಡೆದ ಸಂಭಾಷಣೆಯನ್ನೂ ಮಾತ್ರ ವಿವರಿಸಲಾಗಿದೆ. ಪಿತೃಗಳ ವಿಷಯವನ್ನು ಮುಂದಿನ ಸೂಕ್ತಗಳಲ್ಲಿ ವಿವರಿಸಲಾಗುವುದು. ಪಿತೃಗಳೆಂದರೆ ಇಲ್ಲಿ ಪರಲೋಕವಾಸಿಗಳಾದ ತಂದೆ ಮೊದಲಾದ ವಂಶದ ಹಿರಿಯರು, ಪೂರ್ವಜರು ಎಂದರ್ಥವು. ವಂಶದ ಹಿರಿಯರಲ್ಲಿ ಮೃತರಾದವರು ಪರಲೋಕದಲ್ಲಿ ಉತ್ತಮವಾದ ಸ್ಥಾನವನ್ನು ಪಡೆದು ಅಲ್ಲಿ ವಾಸಿಸುತ್ತಿರುವರೆಂದೂ ಈ ಪಿತೃಗಳಿಗೆ ಯಮನೇ ರಾಜನೆಂದೂ ಋಗ್ವೇದದಲ್ಲಿ ಹೇಳಿದೆ. ಆದ್ದರಿಂದ ಮುಂದಿನ ಕೆಲವು ಸೂಕ್ತಗಳಲ್ಲಿ ಯಮನಿಗೂ ಪಿತೃಗಳಿಗೂ ಇರುವ ನಿಕಟವಾದ ಸಂಬಂಧವನ್ನು ವಿವರಿಸಲಾಗಿದೆ.

ಯಮನ ಪ್ರಶಂಸೆ

೧. ಯಮನ ಮಾಹಾತ್ಮ್ಯ

ಯಮನ ಸ್ವರೂಪವನ್ನು ವಿವರಿಸುವಾಗ ಋಕ್ಸಂಹಿತೆಯಲ್ಲಿ ಅನೇಕ ವಿಧವಾದ ವರ್ಣನೆಗಳಿರುವುದರಿಂದ ಅವನ ಸ್ವರೂಪವನ್ನು ಹೀಗೆಯೇ ಸರಿ ಎಂದು ನಿಷ್ಕರ್ಷಿಸುವುದು ಪ್ರಯಾಸವಾಗುತ್ತದೆ ಈ ವಿಷಯದಲ್ಲಿ ವಾಶ್ಚಾತ್ಯ ವಿದ್ವಾಂಸರಲ್ಲಿ ಒಬ್ಬೊಬ್ಬರು ಒಂದೊಂದು ವಿಧವಾಗಿ ಕಲ್ಪನೆಯನ್ನು ಮಾಡಿರುತ್ತಾರೆ. ಯಮನು ಮಾನವವ್ಯಕ್ತಿಯೇ ಅಥವಾ ದೇವತೆಯೇ ಎಂಬ ವಿಷಯದಲ್ಲಿಯೂ ವಿಮರ್ಶೆ ಇದ್ದೇ ಇರುತ್ತದೆ. ಕೇವಲ ಆಧುನಿಕದೃಷ್ಟಿಯಿಂದಲೇ ವಿಮರ್ಶಿಸಿ ಈ ವಿಷಯದಲ್ಲಿ ಒಂದು ನಿಷ್ಕೃಷ್ಟವಾದ ಅಭಿಪ್ರಾಯವನ್ನು ಕೊಡುವುದು ತಪ್ಪಾಗುತ್ತದೆ. ಸಾಂಪ್ರದಾಯಿಕವಾದ ಸನ್ನಿವೇಶಗಳಿಗನುಗುಣವಾಗಿ ಶಾಸ್ತ್ರೀಯವಾದ ದೃಷ್ಟಿಯಿಂದ ವಿಮರ್ಶಿಸುವುದೇ ಉಚಿತವಾಗಿರುತ್ತದೆ

ಋಕ್ಸಂಹಿತೆಯಲ್ಲಿ ಯಮನ ಸ್ವರೂಪವನ್ನು ವಿವರಿಸುವ ಸನ್ನಿವೇಶಗಳನ್ನು ಪರಿಶೀಲಿಸಿದರೆ, ಕೇವಲ ಯಮನನ್ನೇ ಉದ್ದೇಶಿಸಿ ಪ್ರಶಂಸಿಸುವ ನಾಲ್ಕು ಸೂಕ್ತಗಳು ಮಾತ್ರ ಸರಿತವಾಗಿವೆ. ಪ್ರಾಯಃ ಮೊದಲನೆಯ ಮತ್ತು ಹತ್ತನೆಯ ಮಂಡಲಗಳಲ್ಲಿ ಮಾತ್ರ ಈ ದೇವತೆಯ ಪ್ರಶಂಸೆಯು ಅಧಿಕವಾಗಿರುತ್ತದೆ ಯಾವ ಮಂತ್ರದಲ್ಲಾಗಲಿ ಯಮನನ್ನು ದೇವತೆಯೆಂದು ನಿಷ್ಕೃಷ್ಟವಾಗಿ ತಿಳಿಸಿಲ್ಲವೆಂದು ಕೆಲವು ಪಾಶ್ಚಾತ್ಯವಿದ್ವಾಂಸರ ಮತ. ಆದರೆ ಇತರ ದೇವತೆಗಳೊಡನೆ ಯಮನ ಪ್ರಶಂಸೆಯೂ ಇರುವ ಸನ್ನಿವೇಶಗಳು ಬಹಳವಾಗಿರುತ್ತವೆ. ಉದಾಹರಣೆಗೆ—

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾ ವದಂತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥

(ಋ. ಸಂ. ೧-೧೬೪-೪೬)

ಒಬ್ಬನೇ ಆದ ಈಶ್ವರನನ್ನು ಇಂದ್ರನೆಂದೂ, ಮಿತ್ರನೆಂದೂ, ವರುಣನೆಂದೂ ಅಗ್ನಿಯೆಂದೂ ಕರೆಯುತ್ತಾರೆ ಅಲ್ಲದೇ ಇವನೇ ದಿವ್ಯಾತ್ಮನೂ, ಶ್ರೇಷ್ಠವಾದ ಪತನವುಳ್ಳವನೂ ಆದ ಗರುತ್ಮಂತನಾಗಿದ್ದಾನೆ. ಮೇಧಾವಿಗಳಾದ ವಿಪ್ರರು ಏಕಾತ್ಮನಾದ ಒಬ್ಬ ಈಶ್ವರನನ್ನೇ ಅಗ್ನಿಯೆಂದೂ, ಯಮನೆಂದೂ, ಮಾತರಿಶ್ವನೆಂದೂ, ನಾನಾವಿಧವಾಗಿ ಕರೆಯುತ್ತಾರೆ ಎಂದರೆ, **ಯಮನೂ** ಮೂಲತತ್ತ್ವದ ಒಂದಂಶವೆಂದಾಯಿತು. ವರುಣಾದಿಗಳಿಗೆ ಯಾವ ಮಹತ್ತ್ವವಿದೆಯೋ, **ಯಮನಿ**ಗೂ ಅದೇ ಮಹತ್ತ್ವವೆಂದು ಸ್ಪಷ್ಟವಾಗಿದೆ. ಅಲ್ಲದೇ,

ಯಸ್ಮಿನ್ವೃಕ್ಷೇ ಸುಪಲಾಶೇ ದೇವೈಃ ಸಂಪಿಬತೇ ಯಮಃ ।
ಅತ್ರಾ ನೋ ವಿಶ್ಪತಿಃ ಪಿತಾ ಪುರಾಣಾಂ ಅನು ವೇನತಿ ॥

(ಋ. ಸಂ. ೧೦-೧೩೫-೧)

ಯಾವ ಪಲಾಶಪೂರ್ಣವಾದ ವೃಕ್ಷದಲ್ಲಿ **ಯಮನು** ಇತರ ದೇವತೆಗಳೊಡನೆ ಕೂಡಿ ಸೋಮಪಾನಮಾಡುವನೋ, ಅಲ್ಲಿ ಪ್ರಜಾಪಾಲಕನೂ, ಪ್ರಭುವೂ ಆದ ಗೃಹಪತಿಯು ಹಿಂದಿನವರೊಂದಿಗೆ ಸೇರಿಕೊಳ್ಳಲು ನಮಗೆ ಆಹ್ವಾನವನ್ನು ಕೊಡುತ್ತಾನೆ ಎಂದೂ ವರ್ಣಿತವಾಗಿದೆ.

ವರುಣ (೧೦-೧೪-೭;) ಬೃಹಸ್ಪತಿ (೧೦-೧೭-೧೪) ಅಗ್ನಿ (೧೦-೨೧-೫) ಇತ್ಯಾದಿ ದೇವತೆಗಳೊಡನೆ ಯಮನನ್ನು ಅಧಿಕವಾಗಿ ಸ್ತುತಿಸಿದೆ. ಇದೂ ಅಲ್ಲದೇ, **ಮಹತ್ತದುಲ್ಬಂ ಸ್ಥವಿರಂ** (೧೦-೫೧-೧) ಎಂಬ ಮಂತ್ರದಲ್ಲಿ ಅಗ್ನಿಯು ಗೂಢವಾಗಿ ನೀರಿನಲ್ಲಿ ಅಡಗಿಕೊಂಡುದೂ, ಆಗ ಒಬ್ಬ ದೇವನು ಮಾತ್ರ ಈ ಅಗ್ನಿಯನ್ನು ಕಂಡುದೂ ತಿಳಿಸಿದೆ. ಆದರೆ, ಆ ದೇವತೆಯು ಯಾರೆಂದರೆ,

ಐಚ್ಛಾಮ ತ್ವಾ ಬಹುಧಾ ಜಾತವೇದಃ ಪ್ರವಿಷ್ಟಮಗ್ನೇ ಅಪ್ಸ್ವೋಷಧೀಷು ।
ತಂ ತ್ವಾ ಯಮೋ ಅಚಿಕೇಚ್ಚಿತ್ರಭಾನೋ ದಶಾಂತರುಷ್ಕಾದತಿರೋಚಮಾನಂ ॥

(ಋ. ಸಂ. ೧೦-೫೧-೩)

ಎಲೈ ಅಗ್ನಿಯೇ, ಪ್ರಭೂತವಾದ ಸಾರವುಳ್ಳ ನೀರಿನಲ್ಲಿ ಅಡಗಿಕೊಂಡಿದ್ದವನೂ, ಅನೇಕ ರೂಪಗಳಲ್ಲಿ ಓಷಧ್ಯಾದಿಗಳಲ್ಲಿ ಅಡಗಿದ್ದವನೂ, ಆದ ನಿನ್ನನ್ನು ನಾವು ಅನೇಕ ವಿಧದಲ್ಲಿ ಹುಡುಕಿದೆವು. ಆದರೆ ಮಹತ್ಪ್ರಕಾಶವನ್ನು ಹರಡುವ ಕಿರಣಗಳುಳ್ಳ ನಿನ್ನನ್ನು **ಯಮನು** ಮಾತ್ರ ಅರಿತನು ಎಂದಿದೆ. ೧೦-೫೧-೧ ನೇ ವಾಕ್ಯದಲ್ಲಿ ದೇವತೆಯು ಅಗ್ನಿಯನ್ನು ಹುಡುಕಿದನು ಎಂಬುದೂ, ಪ್ರಕೃತವಾದ ಈ ಮಂತ್ರದಲ್ಲಿ ಯಮನೇ ಅಗ್ನಿಯನ್ನು ಕಂಡನು ಎಂಬುದೂ ಯಮನು ದೇವತೆಯೆಂಬುದನ್ನು ನಿಷ್ಕೃಷ್ಟವಾಗಿ ತಿಳಿಸುತ್ತದೆ. ಈ ದೇವತೆಯೇ, ಪಿತೃಗಳಿಗೆಲ್ಲಾ ರಾಜನು.

ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವ್ಯೇಭಿರ್ಯತ್ರಾ ನಃ ಪೂರ್ವೇ ಪಿತರಃ ಪರೇಯುಃ ।
ಉಭಾ ರಾಜಾನಾ ಸ್ವಧಯಾ ಮದಂತಾ ಯಮಂ ಪಶ್ಯಾಸಿ ವರುಣಂ ಚ ದೇವಂ ॥

(ಋ. ಸಂ. ೧೦-೧೪.೭)

ಎಲೈ ಪ್ರೇತನೇ, ಹಿಂದಿನ ನಮ್ಮ ಪಿತೃಗಳೆಲ್ಲರೂ ಯಾವ ಮಾರ್ಗದಿಂದ ಹೋದರೋ, ಆ ಮಾರ್ಗದಲ್ಲಿ ನೀನೂ ಹೊರಡು. ಅಲ್ಲಿ ಸರ್ವಪಿತೃಗಳಿಗೂ ರಾಜನಾದ ಯಮನನ್ನು ಮತ್ತು ವರುಣನನ್ನು ನೀನು ಕಾಣುವೆ ಇತ್ಯಾದ್ಯನೇಕ ವಾಕ್ಯಗಳು ಯಮನನ್ನು ಪಿತೃಗಳೆಲ್ಲ ರಾಜನೆಂದು ವರ್ಣಿಸಿವೆ. ಅವನನ್ನು ಪ್ರಶಂಸಿಸುವ ವಾಕ್ಯಗಳಲ್ಲೆಲ್ಲ ಅವನಿಗೂ ಪಿತೃಗಳಿಗೂ ಇರುವ ನಿಕಟವಾದ ಸಂಬಂಧವನ್ನು ತಿಳಿಸಿದೆ ಅದರಲ್ಲೂ ಅಂಗಿರಸ್ಸುಗಳಿಗೂ ಯಮನಿಗೂ ಇರುವ ಸಂಬಂಧವು ಬಹಳ ನಿಕಟವಾದುದು. ಮೃತರಾದ ಮಾನವರಿಗೆಲ್ಲ ಅವನು ಆಶ್ರಯದಾತನೆಂದು ಸ್ತುತನಾಗಿದ್ದಾನೆ. (೧೦-೧೪-೯)

೨. ಯಮನ ಸ್ಥಾನ

ದ್ಯುಲೋಕದ ಅತ್ಯಂತ ಕೊನೆಯ ಪ್ರದೇಶವೇ ಯಮನ ಆವಾಸಸ್ಥಾನ ಎಂದು ವರ್ಣಿಸುವ—

ಯತ್ರ ರಾಜಾ ವೈವಸ್ವತಃ ಯತ್ರಾವರೋಧನಂ ದಿವಃ ॥

(ಋ ಸಂ. ೯-೧೧೩-೮)

ಇತ್ಯಾದಿ ವಾಕ್ಯಗಳು ಯಮನ ಆವಾಸಸ್ಥಾನವನ್ನೂ ಅವನ ಪ್ರಭುತ್ವವನ್ನೂ ವರ್ಣಿಸುತ್ತವೆ. ಅಲ್ಲದೇ, ದ್ಯುಲೋಕ ಪ್ರಭುತ್ವವು **ಯಮ** ಮತ್ತು **ಆದಿತ್ಯ** ಇವರಿಬ್ಬರಿಗೆ ಸೇರಿದುದು. ಅವುಗಳಲ್ಲಿ ಆದಿತ್ಯನ ಸ್ಥಾನವೂ ಯಮನಸ್ಥಾನವೂ ಪರಿಕ್ಲೃಪ್ತವಾಗಿವೆ. ಹೇಗೆಂದರೆ—

ತಿಸ್ರೋ ದ್ಯಾವಃ ಸವಿತುರ್ದ್ವಾ ಉಪಸ್ಥಾ ಏಕಾ ಯಮಸ್ಯ ಭುವನೇ ವಿರಾಷಾಟ್ ।
ಆಣಿಂ ನ ರಥ್ಯಮೃತಾಧಿ ತಸ್ಥುರಿಹ ಬ್ರವೀತು ಯ ಉ ತಚ್ಚಿಕೇತತ್ ॥

(ಋ ಸಂ ೧-೩೫-೬)

ಸ್ವರ್ಗೋಪಲಕ್ಷಿತವಾದ ಲೋಕಗಳು ಮೂರು. ಅವುಗಳಲ್ಲಿ ದ್ಯುಲೋಕ ಮತ್ತು ಭೂಲೋಕಗಳು ಅದಿತ್ಯನಿಂದ ಪ್ರಕಾಶಿತವಾಗತಕ್ಕವು. ಮಧ್ಯಮವಾದ ಅಂತರಿಕ್ಷ ಲೋಕವು ಯಮನಿಗೆ ಸೇರಿದುದು. ಮೃತಿಯನ್ನು ಹೊಂದಿ ಪ್ರೇತರೂಪವನ್ನು ಹೊಂದುವ ಜೀವಗಳು ಈ ಯಮನ ಲೋಕವಾದ ಅಂತರಿಕ್ಷದ ಮೂಲಕ ಸಂಚರಿಸತಕ್ಕವು ಎಂದು ಯಮನ ಸ್ಥಾನವನ್ನು ತಿಳಿಸಿದೆ. ಈ ದ್ಯುಲೋಕ ಮತ್ತು ಅಂತರಿಕ್ಷ ಲೋಕಗಳ ವಿಷಯದಲ್ಲಿ ನಿಷ್ಕೃಷ್ಟವಾದ ಅರ್ಥವನ್ನು ಹೇಳುವುದು ಶ್ರಮವಾಗುತ್ತದೆ. ಹೇಗೆಂದರೆ, ರೂಢಿಯಲ್ಲಿರುವ ನಂಬಿಕೆಯಂತೆ ದ್ಯುಲೋಕವು ಅಂತರಿಕ್ಷಕ್ಕಿಂತಲೂ ಮೇಲಿರತಕ್ಕದ್ದು ಮತ್ತು ಅದಕ್ಕಿಂತಲೂ ಉತ್ತಮವಾದುದು. ಯಮನ ಲೋಕವು ಅಂತರಿಕ್ಷವೇ ಆದರೆ ಅದು ದ್ಯುಲೋಕಕ್ಕಿಂತಲೂ ಉತ್ತಮವಾದುದಾಗುವುದಿಲ್ಲ ಆದರೆ, ಕೆಲವೆಡೆಗಳಲ್ಲಿ ಯಮನ ಲೋಕವೇ ಅತ್ಯುತ್ತಮವಾದುದೆಂದೂ ವರ್ಣಿತವಾಗಿದೆ. ಉದಾಹರಣೆಗೆ—

ಸಂಗಚ್ಛಸ್ವ ಪಿತೃಭಿಃ ಸಂ ಯಮೇನೇಷ್ಟಾಪೂರ್ತೇನ ಪರಮೇ ವ್ಯೋಮನ್ ॥

(ಋ. ಸಂ. ೧೦-೧೪-೮)

ಇತ್ಯಾದಿ ವಾಕ್ಯಗಳಲ್ಲಿ ಯಮನ ಲೋಕವು ಅತ್ಯುತ್ಕೃಷ್ಟವಾದುದೆಂದೇ ಹೇಳಿದೆ ಇಲ್ಲಿ ಶಾಶ್ವತವಾದ ಜ್ಯೋತಿಯು ಬೆಳಗುವುದು. (ಋ. ಸಂ. ೯-೧೧೩-೯). ಆದರೆ ಈ ಸ್ಥಾನವು ಸೂರ್ಯನ ಸ್ಥಾನವೆಂದೂ ವಿದಿತವಾಗಿದೆ ಹೇಗೆಂದರೆ,

ಯತ್ರಾನುಕಾಮಂ ಚರಣಂ ತ್ರಿನಾಕೇ ತ್ರಿದಿವೇ ದಿವಃ ।
ಲೋಕಾ ಯತ್ರ ಜ್ಯೋತಿಷ್ಮತಸ್ತತ್ರ ಮಾಮೃಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥

(ಋ. ಸಂ ೯-೧೧೩-೯)

ಎಂಬ ಪ್ರಾರ್ಥನೆಯಲ್ಲಿ ಈ ದ್ಯುಲೋಕವು ಶಾಶ್ವತವಾದ ಪ್ರಭೆಯುಳ್ಳದ್ದಾಗಿರುವುದೆಂದು ವರ್ಣಿತವಾಗಿದೆ. ಈ ದ್ಯುಲೋಕವು ಸೂರ್ಯಲೋಕವೆಂದು ಹಿಂದೆ ತಿಳಿಸಿದೆ. ಅಲ್ಲದೇ, ಅತ್ಯುತ್ತಮವಾದುದೂ ವಿಧ್ಯುಕ್ತವಾದ ಆಚರಣೆಯುಳ್ಳದ್ದೂ ಆದ ಜೀವವು ದೇಹದಿಂದ ಬೇರೆಯಾದೊಡನೆಯೇ ಸೂರ್ಯರಶ್ಮಿಯ ರೂಪವನ್ನು ಹೊಂದಿ ಸೂರ್ಯ ಲೋಕದಲ್ಲಿ ಚಿರವಾದ ಸ್ಥಾನವನ್ನು ಹೊಂದುತ್ತದೆಂದು ಅನೇಕ ಕಡೆಗಳಲ್ಲಿ ಪ್ರಶಂಸಿಸಿದೆ.

ಸಹಸ್ರಣೀಥಾಃ ಕವಯೋ ಯೇ ಗೋಪಾಯಂತಿ ಸೂರ್ಯಂ ।

(ಋ. ಸಂ. ೧೦.೧೫೪.೫)

ಎಲೈ ಯಮನೇ, ಸಹಸ್ರಾರು ಚಕ್ಷುಸ್ಸುಳ್ಳ ಯಾವ ಕವಿಗಳು ಸೂರ್ಯನನ್ನು ರಕ್ಷಿಸುವರೋ ಅಂತಹ ತಪೋಯುಕ್ತರಾದ ಋಷಿಗಳನ್ನು ನೀನು ಅನುಗ್ರಹಿಸು ಎಂಬಲ್ಲಿಯೂ ಈ ಅಂಶವು ಸ್ಪಷ್ಟವಾಗಿದೆ. ಆದಿತ್ಯನ ಸದನಕ್ಕೂ ಯಮನ ಸದನಕ್ಕೂ ತಾದಾತ್ಮ್ಯವನ್ನು ತೋರಿಸತಕ್ಕ ಇನ್ನೂ ಅನೇಕ ಸಂದರ್ಭಗಳು ವಿಶದವಾಗಿವೆ. ಉದಾಹರಣೆಗೆ—

ಇದಂ ಯಮಸ್ಯ ಸಾದನಂ ದೇವಮಾನಂ ಯದುಚ್ಯತೇ ।
ಇಯಮಸ್ಯ ಧನ್ಯತೇ ನಾಳೀರಯಂ ಗೀರ್ಭಿಃ ಪರಿಷ್ಕೃತಃ ॥
(ಋ. ಸಂ. ೧೦.೧೩೫.೭)

ಎಂಬಲ್ಲಿ **ಯಮಸ್ಯ** ಎಂಬ ಪದಕ್ಕೆ ಮೊದಲನೆಯದಾಗಿ ಲೋಕನಿಯಾಮಕನಾದ ಆದಿತ್ಯನೆಂದು ಮೊದಲು ಅರ್ಥವನ್ನು ತಿಳಿಸಿ ಅನಂತರ ಎರಡನೆಯದಾಗಿ ಯಮನೆಂದು ಅರ್ಥವನ್ನು ಹೇಳಿದೆ. ಈ ಯಮನ ಲೋಕವು ದೇವತೆಗಳಿಂದ ನಿರ್ಮಿತವಾದುದು. ಇಲ್ಲಿ ವೇಣುವಾದ್ಯವು ಶುದ್ಧವಾದ ಧ್ವನಿಯಿಂದ ಈ ಪ್ರದೇಶವನ್ನೆಲ್ಲಾ ಆವರಿಸಿದೆ. ಸುತ್ತಲೂ ಸ್ತುತಿಪಾಠಗಳು ಮೊಳಗುತ್ತಿವೆ. ಸಕಲ ಪ್ರದೇಶವೂ ಸುಸಂಸ್ಕೃತವಾಗಿದೆಯೆಂದು ವರ್ಣಿಸಿದೆ. ಮತ್ತು ಮುಂದಿನ ಮಂತ್ರದಲ್ಲಿ (ಋ- ಸಂ. ೧೦-೧೩೬-೧) **ಕೇಶೀದಂ ಜ್ಯೋತಿರುಚ್ಯತೇ** ಎಂಬ ಸಂದರ್ಭದಲ್ಲಿ ಆದಿತ್ಯಮಂಡಲದ ತೇಜೋರಾಶಿಯೆಂದರ್ಥಮಾಡಿದೆ. ಹೀಗೆ ಅನೇಕ ಕಡೆಗಳಲ್ಲಿ ಯಮನ ಸ್ಥಾನನಿರ್ದೇಶಕಾಲದಲ್ಲೆಲ್ಲ ಆದಿತ್ಯನಿಗೂ ಯಮನಿಗೂ ತಾದಾತ್ಮ್ಯವನ್ನು ತೋರಿಸಿದೆ.

೩. ಯಮನ ಮಾತಾಪಿತೃಗಳು

ಯಮನ ತಂದೆಯು ವಿವಸ್ವಾನ್ ಮತ್ತು ತಾಯಿಯು ಸರಣ್ಯೂ. ಸರಣ್ಯುವು ವಿವಸ್ವಂತನ ಪತ್ನೀ,

ತ್ವಷ್ಟಾ ದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ ।
ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ ನನಾಶ ॥
(ಋ. ಸಂ. ೧೦.೧೭-೧)

ತ್ವಷ್ಟೃ ನಾಮಕನಾದ ದೇವನು ತನ್ನ ಮಗಳಾದ ಸರಣ್ಯುವನ್ನು ವಿವಸ್ವಾನ್ ಎಂಬವನಿಗೆ ಕೊಟ್ಟು ವಿವಾಹವನ್ನು ಮಾಡಿದನು. ಈ ಸರಣ್ಯುವು ಯಮನಿಗೂ ಇವನ ಒಡಹುಟ್ಟಿದ ಯಮಿಗೂ ತಾಯಿಯು. ಈ ಸರಣ್ಯುವು **ಯಮ** ಮತ್ತು **ಯಮೀ** ಎಂಬಿಬ್ಬರನ್ನು ಹಡೆದಳು. (**ಅಜಹಾದು ದ್ವಾ ಮಿಥುನಾ ಸರಣ್ಯೂಃ** (ಋ ಸಂ.೧೦-೧೭-೨), ಈ ಯಮನು ಅನೇಕರಲ್ಲಿ **ವೈವಸ್ವತನೆಂದೇ** ನಿರ್ದಿಷ್ಟನಾಗಿದ್ದಾನೆ (ಋ ಸಂ ೧೦.೧೪.೧ ಇತ್ಯಾದಿ)

ಗಂಧರ್ವೋ ಅಪ್ಸ್ವಪ್ಯಾ ಚ ಯೋಷಾ ಸಾ ನೋ ನಾಭಿಃ ಪರಮಂ ಜಾಮಿ ತನ್ನೌ ॥
(ಋ ಸಂ ೧೦.೧೦ ೪)

ಎಂಬಲ್ಲಿ ಯಮಿಯು ಯಮನನ್ನು ಪ್ರಾರ್ಥಿಸುವಾಗ ತಾವಿಬ್ಬರೂ ಗಂಧರ್ವನ ಪುತ್ರ ಮತ್ತು ಪುತ್ರಿಯರೆಂದೂ, ಸಹೋದರ ಮತ್ತು ಸಹೋದರಿಯರೆಂದೂ ಹೇಳಿಕೊಳ್ಳುತ್ತಾಳೆ ಆದರೆ **ಯಮನು** ಆದಿತ್ಯ ಪರ್ಯಾಯನಾದರೆ ಆಗ **ಯಮಿ** ಶಬ್ದಾರ್ಥವೇನು ? ನಿರುಕ್ತಾದಿಗಳಲ್ಲಿ ಈ ಪದಗಳ ನಿಷ್ಕೃಷ್ಟಾರ್ಥವೇನು ಎಂಬುದನ್ನು ಅರಿಯಬೇಕು. ಆದುದರಿಂದ ಪ್ರಥಮತಃ, ಯಮನ ಸ್ವರೂಪ ವರ್ಣನವು ಋಕ್ಸಂಹಿತೆಯಲ್ಲಿ ಯಾವರೀತಿ ವಿವೃತವಾಗಿದೆಯೆಂದು ತಿಳಿದು ಆ ಆಧಾರದ ಮೇಲೆ **ಯಮ** ಶಬ್ದದ ಉಳಿದ ಅರ್ಥಗಳನ್ನು ಪರ್ಯಾಲೋಚಿಸಬಹುದು.

೪. ಯಮನ ಸ್ವರೂಪವರ್ಣನೆ

ಯಮನು ಪಿತೃಗಳಿಗೆಲ್ಲ ಅಧಿದೇವತೆಯೆಂದೂ ಪಿತೃಲೋಕದ ಪ್ರಭುವೆಂದೂ ವರ್ಣಿತನಾಗಿದ್ದಾನೆ. **ಯತ್ರ ರಾಜಾ ವೈವಸ್ವತಃ** । (ಋ ಸಂ ೧೦.೧೪.೭). **ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ**

ಹವಿಷಾ ದುವಸ್ಯ (ಋ. ಸಂ. ೧೦-೧೪-೧) **ಯಮರಾಜ್ಞೋ ಗಚ್ಛತು ರಿಪ್ರವಾಹಃ** (ಋ. ಸಂ ೧೦-೧೬-೯) ಇತ್ಯಾದಿ ಸ್ಥಳಗಳಲ್ಲಿ ಯಮನನ್ನು **ರಾಜ**ನೆಂದು ನಿರ್ದೇಶಿಸಿದೆ. ಯಮನೂ ಮತ್ತು ವರುಣನೂ ಪಿತೃಲೋಕದ ಪ್ರಭುಗಳೆಂದು ಒಟ್ಟಿಗೆ ವರ್ಣಿತವಾಗಿರುವ ಸನ್ನಿವೇಶಗಳೂ ಅನೇಕವಾಗಿವೆ. **ಉಭಾ ರಾಜಾನಾ ಸ್ವಧಯಾ ಮದಂತಾ ಯಮಂ ಪಶ್ಯಾಸಿ ವರುಣಂ ಚ ದೇವಂ** (೧೦-೧೪-೭). ಅವನ ಸ್ವರೂಪವು ಬಹಳ ಭೀಕರವಾದುದು. ಪಾಪಿಗಳನ್ನು ಶಿಕ್ಷಿಸುವ ವರುಣನ ಪಾಶದಂತೆಯೇ ಯಮನ ಪಾಶವೂ ಪಾಪಿಗಳನ್ನು ಶಿಕ್ಷಿಸತಕ್ಕದ್ದು.

ಮುಂಚಂತು ಮಾ ಶಪಥ್ಯಾ ಅ ದಥೋ ವರುಣ್ಯಾದುತ ।
ಅಥೋ ಯಮಸ್ಯ ಪದ್ವೀಶಾತ್ಸರ್ವಸ್ಮಾದ್ದೇವಕಿಲ್ಬಿಷಾತ್ ॥

(ಋ. ಸಂ. ೧೦.೫೭-೧೬)

ನನ್ನನ್ನು ಶಾಪಜನಿತವಾದ ಪಾಪಗಳಿಂದಲೂ, ವರುಣನ ನಿಗ್ರಹರೂಪವಾದ ಪಾಶದಿಂದಲೂ ಓಷಧಿಗಳು ಮುಕ್ತನನ್ನಾಗಿ ಮಾಡಲಿ ಎಂಬ ಪ್ರಾರ್ಥನೆಯಲ್ಲಿ ಯಮನ ಪಾಶವನ್ನು **ಪದ್ವೀಶ**ವೆಂದು ವರ್ಣಿಸಿದೆ. ಪಾದಗಳನ್ನು ಚಲಿಸಲಾಗದಂತೆ ಬಂಧಿಸುವ ಪಾಶವೆಂದರ್ಥ. ಹೀಗೆಯೇ ಇನ್ನೂ ಅನೇಕ ಸ್ಥಳಗಳಲ್ಲಿ ಯಮನ ಭೀಕರ ಸ್ವರೂಪವು ವರ್ಣಿತವಾಗಿದೆ. ಯಮನ ಕರ್ತವ್ಯವೇನೆಂಬುದನ್ನು ತಿಳಿದರೆ ಈ ಅಂಶವು ಇನ್ನೂ ವಿಶದವಾಗುತ್ತದೆ.

೫. ಯಮದೂತರು, ಅವರ ಸ್ವರೂಪ

ಯಮನು ಸತ್ಕರ್ಮಕರ್ತರನ್ನು ಆಯಾ ಕರ್ಮಾರ್ಹವಾದ ಉತ್ತಮ ಪ್ರದೇಶಗಳಿಗೆ ಮರಣಾನಂತರ ಕರೆದೊಯ್ಯುತ್ತಾನೆ. ಪಾಪಿಗಳನ್ನು ಅವರಿಗೆ ಅರ್ಹವಾದ ಸ್ಥಾನವನ್ನು ಕಲ್ಪಿಸುತ್ತಾನೆ. (ಋ ಸಂ. ೧೦-೧೪-೧). ಅಲ್ಲದೇ, ಈ ಯಮನೇ, ಮಾನವರಿಗೆ ಮರಣಕಾರಣವಾದ ಮೃತ್ಯುವು

ಯದುಲೂಕೋ ವದತಿ ಮೋಘಮೇತದ್ಯತ್ಕಪೋತಃ ಪದಮಗ್ನೌ ಕೃಣೋತಿ ।
ಯಸ್ಯ ದೂತಃ ಪ್ರಹಿತ ಏಷ ಏತತ್ತಸ್ಮೈ ಯಮಾಯ ನಮೋ ಅಸ್ತು ಮೃತ್ಯವೇ ॥

(ಋ. ಸಂ. ೧೦-೧೬೫-೪)

ಎಂಬಲ್ಲಿ, **ಗೂಬೆ, ಕಪೋತ** ಎಂಬ ಪಕ್ಷಿಗಳು **ಯಮನ** ದೂತರೆಂದು ಸೂಚಿತವಾಗಿವೆ. ಯಮನಿಗೂ ಮೃತ್ಯುವಿಗೂ ತಾದಾತ್ಮ್ಯವನ್ನು ಹೇಳಿದೆ. ಆದುದರಿಂದಲೇ **ಗೂಬೆಯ** ಕೂಗೂ ಮತ್ತು ದರ್ಶನವೂ ಅವಲಕ್ಷಣವೆಂಬ ನಂಬಿಕೆಯಿರುತ್ತದೆ. ಇದಲ್ಲದೇ, **"ಯೌ ತೇ ಶ್ವಾನೌ"** (೧೦-೧೪-೧೧) ಇತ್ಯಾದಿ ವಾಕ್ಯಗಳಿಂದ ಯಮನ ದೂತರಾದ ಎರಡು ಶ್ವಾನಗಳ ವರ್ಣನೆಗಳು ವಿವೃತವಾಗಿವೆ. (ಸಾರಮೇಯಸಂಜ್ಞಕಗಳಾದ ಈ ಶ್ವಾನಗಳ ಸ್ವರೂಪವನ್ನು ಮುಂದೆ ೧೦ನೇ ಮಂಡಲದ ೧೪ನೇ ಸೂಕ್ತದ ಪೀಠಿಕೆಯಲ್ಲಿ ತಿಳಿಸಲಾಗುತ್ತದೆ.) ಈ ಶ್ವಾನಗಳಿಗೆ ನಾಲ್ಕು ಕಣ್ಣುಗಳೂ, ವಿಸ್ತೃತವಾದ ಮೂಗುಗಳೂ ಇರುವುವು ಎಂಬ ವಿವರವು ಇವುಗಳ ವಿಕಾರರೂಪಗಳನ್ನು ತಿಳಿಸುತ್ತವೆ. ಆದರೆ, ಸತ್ಕರ್ಮಕರ್ತರು ಈ ಶ್ವಾನಗಳಿಗೆ ಭಯಪಡಬೇಕಾದುದಿಲ್ಲ. ಇವು ಮರಣಾನಂತರ ಅವರ ಮಾರ್ಗಗಳನ್ನು ರಕ್ಷಿಸುವುವಾಗಿವೆ

ಇದೇ ನಾಯಿಗಳನ್ನು ಅಥರ್ವವೇದದಲ್ಲೂ ವರ್ಣಿಸಿದೆ. ಇವುಗಳಲ್ಲಿ ಒಂದು ಶ್ಯಾವವರ್ಣವುಳ್ಳದ್ದೆಂದೂ ತಿಳಿಸಿದೆ. (ಅ. ವೇ. ೪.೧-೯ ರಲ್ಲು ಯಮದೂತರನ್ನು ಬಹುವಚನದಲ್ಲಿ ನಿರ್ದೇಶಿಸಿದೆ. ಆದರೆ ಅವುಗಳನ್ನು ಶ್ವಾನಗಳೆಂದು ತಿಳಿಸಿಲ್ಲ.

ವೈವಸ್ವತೇನ ಪ್ರಹಿತಾನ್ಯಮದೂತಾಂಶ್ಚರತೋಽಪಸೇಧಾಮಿ ಸರ್ವಾನ್ ।

(ಅ. ವೇ. ೪.೨೯.೧೧)

ವಿವಸ್ವತ್ಪುತ್ರನಾದ ಯಮನಿಂದ ಕಳುಹಲ್ಪಟ್ಟ ಸಕಲ ದೂತರನ್ನು ತಪ್ಪಿಸಿಕೊಳ್ಳುತ್ತೇನೆ ಎಂದಿರುತ್ತದೆ. ಈ ಯಮ ದೂತರು ಶ್ವಾನಗಳಾಗಲಿ ಅಥವಾ ಯಾರಾದರಾಗಲಿ ಅವರ ಭಯಜನಕತ್ವವು ಘೋರವಾಗಿಯೇ ಇರುತ್ತದೆ. ಯಮ ದೂತರಂತೆಯೇ ಯಮನ ಆಯುಧವೂ ಭಯಜನಕವಾಗಿರುತ್ತದೆ.

ಮಾ ನೋ ಹೇತಿರ್ವಿವಸ್ವತ ಅದಿತ್ಯಾಃ ಕೃತ್ರಿಮಾ ಶರುಃ ।
ಪುರಾ ನು ಜರಸೋ ವಧೀತ್ ॥

(ಋ ಸಂ. ೪-೬೭-೨೦)

ಎಲೈ ಆದಿತ್ಯರೇ, ಭೀತಿಜನಕವೂ, ಹಿಂಸಾಕಾರಕವೂ ಆದ ಯಮನ ಆಯುಧವು ನಮ್ಮನ್ನು ಹಿಂಸಿಸದಿರಲಿ. ಅದರ ಹಿಂಸೆಯ ಫಲವಾಗಿ ನಾವು ಕ್ಷಯವನ್ನು ಹೊಂದದಿರುವಂತಾಗಲಿ ಇತ್ಯಾದಿಯಾಗಿ ಪ್ರಾರ್ಥಿಸಿದೆ.

೬. ಯಮ ಮತ್ತು ಯಮಿ

ಯಮ ಶಬ್ದವು ' ಅವಳಿ ' (twin) ಎಂಬರ್ಥದಲ್ಲಿ ಅನೇಕ ಕಡೆಗಳಲ್ಲಿ ಪ್ರಯುಕ್ತವಾಗಿದೆ. **ಯಮ** ಶಬ್ದವೇ ಯಮ ಮತ್ತು ಯಮಿ ಎಂಬ ಎರಡರ್ಥಗಳನ್ನು ಸೂಚಿಸುವುದಾಗಿದೆ.

ದುರ್ಮನ್ಮತ್ರಾವೃತಸ್ಯ ನಾಮ ಸಲಕ್ಷ್ಮಾ ಯದ್ವಿಷುರೂಪಾ ಭವಾತಿ।

(ಋ. ಸಂ. ೧೦ ೧೭-೬)

ಈ ಯಮನ ರೂಪವನ್ನರಿಯುವುದು ಶ್ರಮ. ಅವನಿಗೆ ಒಂದೇ ವಿಧವಾದ ಚಿಹ್ನವಿದ್ದರೂ ಅವನು ಅನೇಕವಾದ ರೂಪವುಳ್ಳವನಾಗಿದ್ದಾನೆ ಎಂದಿದೆ. ಇಲ್ಲಿ **ಸಲಕ್ಷ್ಮಾ, ವಿಷುರೂಪಾ** ಎಂಬ ಎರಡು ವಿಶೇಷಣಗಳಿಗೂ ಒಟ್ಟಿಗೆ ಒಂದೇ ಸನ್ನಿವೇಶನಲ್ಲಿ ಅರ್ಥವನ್ನು ಹೇಳುವಾಗ ಯಮಯಮಿಯರ ತಾದಾತ್ಮ್ಯವೂ, ಐಕ್ಯದಲ್ಲಿ ಭಿನ್ನತೆಯೂ ತೋರುತ್ತದೆ ಅದನ್ನೇ, ಯಮನೂ ಸಹ ತನ್ನ ಪಾಕ್ಕಿನಿಂದಲೇ ಹೇಳುತ್ತಾನೆ.

ನ ತೇ ಸಖಾ ಸಖ್ಯಂ ವಷ್ಟ್ಯೇತತ್ಸಲಕ್ಷ್ಮಾ ಯದ್ವಿಷುರೂಪಾ ಭವಾತಿ

(ಋ. ಸಂ ೧೦-೧೦-೨)

ಆದರೆ, ಈ ವಿಶೇಷಣಗಳು ಸಂದರ್ಭಾನುಸಾರವಾಗಿ ವಿವರಿಸಲ್ಪಡಬೇಕಾಗಿರುತ್ತವೆ. ಋ. ಸಂ. ೧೦.೧೦-೧೦ ರಲ್ಲಿ ಯಮಯಮಿಯರನ್ನು ಜಾಮಿಗಳೆಂದು ಸ್ತುತಿಸಿದೆ. **ಜಾಮಿ** ಶಬ್ದಕ್ಕೆ ಕೇವಲ ಆಪ್ತಬಂಧುವೆಂದರ್ಥ. ಆಪ್ತಬಂಧತ್ವವು ದಂಪತಿಗಳಲ್ಲಿರಬಹುದು. ಸಹೋದರ ಮತ್ತು ಸಹೋದರಿಯರಲ್ಲಿರಬಹುದು. ಉದಾಹರಣೆಗೆ, **ದ್ಯಾವಾಪೃಥಿವಿ**

ಗಳನ್ನು, **ಜಾಮಿ, ಸ್ವಸಾರಾ, ದಂಪತೀ** ಇತ್ಯಾದಿ ವಿಶೇಷಣಗಳಿಂದ ಅನೇಕ ಕಡೆಗಳಲ್ಲಿ ಸ್ತುತಿಸಿದೆ. (ಋ. ಸಂ. ೩-೫೪-೭ ; ೧-೧೮೫.೫ ;). ಒಂದೇ ತತ್ತ್ವದ ಎರಡು ಸ್ವರೂಪಗಳೆಂದು ಹೇಳಬಹುದು.

ಸಾಮ ತತ್ತ್ವಕ್ಕೆ ಸಾಮ ಮತ್ತು ಋಕ್ ಎಂಬ (ಸಾ+ಅಮ) ಎರಡು ರೂಪಗಳಿರುವಂತೆಯೂ, ಪ್ರಜಾಪತಿತತ್ತ್ವವು **ಮನಸ್** ಮತ್ತು **ವಾಕ್** ಎಂಬ ಎರಡು ತತ್ತ್ವಗಳನ್ನು ಹೊಂದಿರುವಂತೆಯೂ, ಅಗ್ನಿಯು **ಬ್ರಹ್ಮ** ಮತ್ತು **ಕ್ಷತ್ತ್ರ** ಎಂಬ ಎರಡು ರೂಪಗಳನ್ನು ಹೊಂದಿರುವಂತೆಯೂ, **ಯಮ ತತ್ತ್ವವು ಯಮ** ಮತ್ತು **ಯಮೀ** ಎಂಬ ಪ್ರಭೇದಗಳನ್ನು ಒಳಗೊಂಡಿರುತ್ತದೆಯೆಂದು ಹೇಳಲು ಅವಕಾಶವಿರುತ್ತದೆ.

ಯಮೋ ಹಿ ಜಾತ ಇಂದ್ರೇಣ ಸಹ (ನಿ. ೧೦-೨೧) ಇತ್ಯಾದಿವಾಕ್ಯಗಳಿಂದ ಯಮನಿಗೂ ಅಗ್ನಿಗೂ ತಾದಾತ್ಮ್ಯವನ್ನು ತಿಳಿಸಿದೆ. ಇಂದ್ರಾಗ್ನಿಗಳು **ಯಮರೆಂದೂ** ಕೆಲವೆಡೆಗಳಲ್ಲಿ ವರ್ಣಿತವಾಗಿದೆ. ಇಂದ್ರನಿಗೂ ಪೃಥ್ವಿಗೂ ಸಹ ತಾದಾತ್ಮ್ಯವನ್ನು ಹೇಳಿರುವ ಪ್ರಕರಣಗಳೂ ಇವೆ. (ಐ. ಬ್ರಾ. ೩-೩೪). ಯಮನೇ ಅಗ್ನಿಯು, ಯಮಿಯೇ ಪೃಥ್ವಿಯು ಎಂದು ಶತಪಥಬ್ರಾಹ್ಮಣವು ತಿಳಿಸುತ್ತದೆ. (ಶ. ಬ್ರಾ. ೭-೨-೧-೧೦). **ವೃಹೇವ ರಥ್ಯೇವ ಚಕ್ರಾ**" ಎಂಬ ಯಮಿಯ ವಾಕ್ಯವು ಯಮಯಮಿಯರನ್ನು ರಥಚಕ್ರಗಳಿಗೆ ಹೋಲಿಸುತ್ತವೆ.

ನ್ಯ ೧ ಘ್ನ್ಯಸ್ಯ ಮೂರ್ಧನಿ ಚಕ್ರಂ ರಥಸ್ಯ ಯೇಮಥುಃ ।
ಪರಿ ದ್ಯಾಮನ್ಯದೀಯತೇ ।

(ಋ ಸಂ. ೧-೩೦-೧೯)

ಇತ್ಯಾದಿ ಸ್ಥಳಗಳಲ್ಲಿ ಯಾವ ಎರಡು ಚಕ್ರಗಳು ನಿರ್ದಿಷ್ಟವಾಗಿವೆಯೋ, ಅವು ವಿಶ್ವಧಾರಕವಾದ ಚಕ್ರಗಳು. ನಿರುಕ್ತಕಾರರು **ಅಶ್ವಿನೀ** ದೇವತೆಗಳ ಸ್ವರೂಪವನ್ನು ವಿವರಿಸುವಾಗ ಅಶ್ವಿನೀದ್ವಯವು ಅಹೋರಾತ್ರಗಳೆಂದು ಕೆಲವರೂ ದ್ಯಾವಾಪೃಥಿವಿಗಳೆಂದು ಕೆಲವರೂ ಹೀಗೆಯೇ ಇನ್ನೂ ಕೆಲವು ಪ್ರಸಿದ್ಧವಾದ ದೇವತಾದ್ವಯವನ್ನು ಸೂಚಿಸುವ ಪದವೆಂದು ಮತ್ತೆ ಕೆಲವರೂ ಹೇಳಿರುವ ಅಭಿಪ್ರಾಯ ಪ್ರಭೇದಗಳನ್ನು ತಿಳಿಸಿದ್ದಾರೆ. **ಅಶ್ವಿನೀ** ಪದವು ಹಾಗೆಯೆ **ಯಮ** ಮತ್ತು **ಯಮಿ**ಗಳ ಸಂಯೋಗವನ್ನೂ ಸೂಚಿಸಬಹುದೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಋ. ಸಂ. ೧೦-೨೪.೪ ಮತ್ತು ಐದನೆಯ ಮಂತ್ರಗಳಲ್ಲಿ ಯಾವ **ಸಮಿಾಚೀ** ಇತ್ಯಾದಿ ಪದಗಳಿಂದ ಅಶ್ವಿನಿಗಳ ಪ್ರಶಂಸೆಯಿರುತ್ತದೆಯೋ ಅದೇ ವಿಶೇಷಣದಿಂದ ದ್ಯಾವಾಪೃಥಿಗಳ ಅಥವಾ ಯಮಯಮಿಗಳ ಪ್ರಶಂಸೆಯಿರಬಹುದು. ಋ. ಸಂ. ೨-೩೯ ನೇ ಸೂಕ್ತದಲ್ಲಿ ಅಶ್ವಿನಿಗಳನ್ನು ವರ್ಣಿಸಲು ತೋರಿಸಿರುವ ಉಪಮಾನಗಳನ್ನು ಪರಿಶೀಲಿಸಿದರೆ ಅಶ್ವಿನಿಗಳು ಸ್ತ್ರೀಪುಮಾನ್‌ಗಳ ದ್ವನ್ದ್ವವೆಂಬುದೂ ಸಹ ಸೂಚಿತವಾಗುತ್ತದೆ. **ದಂಪತೀವ, ಚಕ್ರವಾಕೇವ** ಇತ್ಯಾದಿ ಉಪಮಾನಗಳು ಈ ಅಂಶವನ್ನು ತಿಳಿಸುತ್ತವೆ. (ಅಲ್ಲದೇ ಗ್ರಾವಾಣೇವ ಇತ್ಯಾದ್ಯುಪಮಾನಗಳೂ ಸಹ ಇವೆ). ಇವುಗಳ ಜೊತೆಯಲ್ಲಿ **ಓಷ್ಠಾವಿವ** ಎಂಬ ಉಪಮಾನವೂ ಇರುತ್ತದೆ. **ಓಷ್ಠಾ** ಎಂಬ ಪದವು ದ್ಯಾವಾಪೃಥಿವಿಗಳ ದ್ವನ್ದ್ವವನ್ನು ಅನೇಕ ಕಡೆಗಳಲ್ಲಿ ಸೂಚಿಸಿದೆ.

ಋ. ಸಂ. ೧-೧೦೯-೪ ರಲ್ಲಿ ಇಂದ್ರಾಗ್ನಿಗಳನ್ನು **ಅಶ್ವಿನಾ** ಎಂದು ಸಂಬೋಧಿಸಿದೆ.

,, ಅದೇ ಇಂದ್ರಾಗ್ನಿಗಳನ್ನು **ನಾಸತ್ಯಾ** ಎಂದು ನಿರ್ದೇಶಿಸಿದೆ.

,, ದ್ಯಾವಾಪೃಥಿವಿಗಳಿಗೂ ಅಶ್ವಿನಿಗಳಿಗೂ ತಾದಾತ್ಮ್ಯವನ್ನು ತಿಳಿಸಿದೆ.

ಹೀಗೆ **ಯಮು** ಶಬ್ದದಿಂದಲೇ ಯಾವ ದ್ವಯವು ಸೂಚಿತವಾಗಬಹುದೋ ಆ ದ್ವಯವು ಇಂದ್ರಾಗ್ನೀ, ಅಶ್ವಿನಾ ಇತ್ಯಾದಿ ದ್ವನ್ದ್ವಗಳನ್ನೂ ಸೂಚಿಸಬಹುದೆಂದು ಅನೇಕ ಕಡೆ ಸಾಯಣರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಅಶ್ವಿನಿಗಳ ಉತ್ಪತ್ತಿಕ್ರಮಕ್ಕೂ ಯಮನ ಉತ್ಪತ್ತಿಕ್ರಮಕ್ಕೂ ಸಾದೃಶ್ಯವನ್ನು ತೋರಿಸುವ ಸನ್ನಿವೇಶಗಳಿವೆಯೇ ಎಂಬುದನ್ನು ಪರಿಶೀಲಿಸಬಹುದಾಗಿದೆ.

ವಿವಸ್ವಾನ್ ಮತ್ತು ತ್ವಷ್ಟೃದುಹಿತೃವಾದ ಸರಣ್ಯೂ ಎಂಬ ದಂಪತಿಗಳಿಂದ ಯಮನ ಉತ್ಪತ್ತಿಯೆಂದು ಹಿಂದೆ ತಿಳಿಸಿದೆ. (ಋ ಸಂ. ೧೦-೧೦-೪; ೧೦.೧೭.೧) ಬೃಹದ್ದೇವತೆಯಲ್ಲಿ ಯಮನ ಉತ್ಪತ್ತಿಯನ್ನು ವಿವರಿಸುತ್ತಾ ಅದರ ಗೂಢಾರ್ಥವನ್ನು ಸಹ ವಿವರಿಸಿದೆ.

ತತಃ ಸರಣ್ಯಾಂ ಜಜ್ಞಾತೇ ಯಮುಯಮ್ಯೌ ವಿವಸ್ವತಃ ।
ತೌ ಜಾಪ್ಯುಭೌ ಯಮಾವೇವ ಜಾಯಾಂಸ್ತಾಭ್ಯಾಂ ತು ವೈ ಯಮಃ ॥

(ಬೃ. ದೇ. ೭-೧೬೩)

ಅನಂತರ ವಿವಸ್ವಂತನ ಪತ್ನಿಯಾದ ಸರಣ್ಯುವಿನಲ್ಲಿ **ಯಮು** ಮತ್ತು **ಯಮಿಾ** ಎಂಬ ಇಬ್ಬರು ಜನಿಸಿದರು. ಇಬ್ಬರೂ ಅವಳಿ ಮಕ್ಕಳು. ಆದರೆ ಇವರಿಬ್ಬರಲ್ಲಿ ಯಮನೇ ದೊಡ್ಡವನು ಎಂದಿದೆ. ಈ ಪ್ರಕರಣವು ಮೇಲೆ ಸೂಚಿಸಿದಂತೆ ಯಮಯಮಿಗಳಿಗೂ ಅಶ್ವಿನೀದ್ವಯಕ್ಕೂ ಇರುವ ತಾದಾತ್ಮ್ಯಬೋಧಕವಾದ ಅಂಶವನ್ನು ತಿಳಿಸುತ್ತದೆ. ಅಶ್ವಿನೀ ದೇವತೆಗಳು ಯಾವ ತತ್ತ್ವವನ್ನು ಪ್ರತಿಬಿಂಬಿಸುವರೆಂಬುದರಲ್ಲಿ ನಿರುಕ್ತಕಾರರೇ ನಿಸ್ಸ್ಪಷ್ಟವಾದ ಅಭಿಪ್ರಾಯವನ್ನು ತಿಳಿಸಲಾಗಲಿಲ್ಲ. ಅವರೇ **ಯಮು** ಮತ್ತು **ಯಮಿಾ** ಎಂದೂ ನಾಮಾಂಕಿತರಾಗಿರಬಹುದು ಎಂಬುದಕ್ಕೂ ಸಹ ಋಕ್ಸಂಹಿತೆಯಲ್ಲಿಯೇ ಅವಕಾಶವಿರುತ್ತದೆ. ಉದಾಹರಣೆಗೆ—

ಅಪಾಗೂಹನ್ನಮೃತಾಂ ಮರ್ತ್ಯೇಭ್ಯಃ ಕೃತ್ವೀ ಸವರ್ಣಾಮದದುರ್ವಿವಸ್ವತೇ ।
ಉತಾಶ್ವಿನಾವಭರದ್ಯತ್ತದಾಸೀದಜಹಾದು ದ್ವಾ ಮಿಥುನಾ ಸರಣ್ಯೂಃ ॥

(ಋ. ಸಂ. ೧೦-೧೭-೨)

ವಿವಸ್ವಂತನಿಗೆ ಪರಿಣಯಾರ್ಥವಾಗಿ ಅರ್ಪಿಸಿದ ಸರಣ್ಯುವು ಅದೃಶ್ಯಳಾಗಲು ಆಗ ಅದೇ ರೂಪವನ್ನು ಹೊಂದಿದ ಇನ್ನೊಂದು ಸ್ತ್ರೀಯನ್ನು ದೇವತೆಗಳು ವಿವಸ್ವಂತನಿಗೆ ಅರ್ಪಿಸಿದರು. ಅವಳು ಅಶ್ವರೂಪಿಣಿಯಾಗಿಯೂ ಇದ್ದುದರಿಂದ **ಅಶ್ವಿನೀ** ದೇವತೆಗಳನ್ನು ಹಡೆದಳು, ಎಂದಿದೆ. ಸಾಯಣರು ಈ ಪ್ರಕರಣವನ್ನು ವಿವರಿಸುವಾಗ **ಸಾಶ್ವರೂಪಿಣೀ ಸರಣ್ಯೂಸ್ತದಾ ಅಶ್ವಿನಾವಭರತ್ ।** ಆ ಅಶ್ವರೂಪಿಣಿಯಾದ ಸರಣ್ಯುವೇ ಅಶ್ವಿನಿಗಳನ್ನು ಹಡೆದಳು ಎಂದು ತಿಳಿಸಿದ್ದಾರೆ. **ಯಮಾಚಿದತ್ರ ಯಮುಸೂರಸೂತ** (ಋ. ಸಂ. ೩-೩೯-೩) ಎಂಬಲ್ಲಿಯೂ ಸಹ ಯಾವ **ಯಮುರ** ಉತ್ಪತ್ತಿವರ್ಣಸವಿದೆಯೋ ಅದನ್ನೂ ಸಹ ಈ ರೀತಿಯಲ್ಲಿಯೇ ವಿವರಿಸಬಹುದು.

ಹಿಂದೆ ಉದಾಹೃತವಾದ ಶತಪಥ ಬ್ರಾಹ್ಮಣದ ವಾಕ್ಯದಲ್ಲಿ (೭-೨-೧-೧೦) ಯಾವ ಯಮು ಮತ್ತು ಯಮಿ ಗಳನ್ನು ಅಗ್ನಿ ಮತ್ತು ಪೃಥ್ವೀ ಎಂದು ನಿರ್ದೇಶಿಸಿದೆಯೋ ಅವರು ಒಂದೇ ತತ್ತ್ವದ ಎರಡು ಅಂಶಗಳೆಂಬುದು ಅನೇಕ ಆಧಾರಗಳಿಂದ ತಿಳಿಯುತ್ತದೆ. ಇವು ಅಂಗದ್ವಯವನ್ನೂ ಅವುಗಳ ಸಾಪಚರ್ಯವನ್ನೂ ತೋರಿಸುವ ಸಂದರ್ಭದಲ್ಲಿ ವಿಶ್ವಸೃಷ್ಟಿಯ ಮೂಲವನ್ನೂ ಸೂಚಿಸುವುವಾಗಿವೆ.

ಸ ವೈ ನೈವ ರೇಮೇ ತಸ್ಮಾದೇಕಾಕೀ ನ ರಮತೇ ಸ ದ್ವಿತೀಯಮೈಚ್ಛತ್ । ಸ ಹೈತಾವಾನಾಸ ಯಥಾ ಸ್ತ್ರೀಪುಮಾಂಸೌ ಸಂಪರಿಷ್ವಕ್ತೌ ಸ ಇಮಮೇವಾತ್ಮಾನಂ ದ್ವೇಧಾಪಾತಯತ್ತತಃ ಪತಿಶ್ಚ ಪತ್ನೀ ಚಾಭವತಾಂ ತಸ್ಮಾದಿದಮರ್ಧಬೃಗಲಮಿವ ಸ್ವ ಇತಿ ಹ ಸ್ಮಾಹ ಯಾಜ್ಞವಲ್ಕ್ಯಸ್ತಸ್ಮಾದಯಮಾಕಾಶಃ ಸ್ತ್ರಿಯಾ ಪೂರ್ಯತ ಏವ ತಾಂ ಸಮಭವತ್ತತೋ ಮನುಷ್ಯಾ ಅಜಾಯಂತ ।

(ಬೃ. ಉ ೧-೪-೩)

ಆದಿಯಲ್ಲಿ ವಿಶ್ವಾತ್ಮರೂಪವಾದ ಏಕತತ್ತ್ವಮಾತ್ರವಿದ್ದಿತು. ಅದು ನಾನಾ ರೂಪವನ್ನು ಪಡೆದ ಹೊರತು ಹರ್ಷದ ಅನುಭವವು ಉಂಟಾಗಲಾರದೆಂದು ಯೋಚಿಸಿ ತನ್ನ ಸಾಹಚರ್ಯಕ್ಕಾಗಿ ಇನ್ನೊಂದು ವ್ಯಕ್ತಿಯನ್ನು ಸೃಷ್ಟಿಸಲು ಇಚ್ಛಿಸಿತು. ಈ ತತ್ತ್ವವು ಸ್ತ್ರೀಪುಂಗಳೆರಡರ ಐಕ್ಯವನ್ನು ಪಡೆಯುವ ಮಹತ್ತ್ವವನ್ನು ಹೊಂದಿದ್ದಿತು. ಆದುದರಿಂದ ಸ್ತ್ರೀರೂಪಿಯಾಗಿಯೂ, ಪುಂರೂಪಿಯಾಗಿಯೂ ವಿಭಕ್ತವಾಗುವಂತೆ ಮಾಡಿಕೊಂಡಿತು. ಆಗ ಪತ್ನೀ ಪತಿ ಎಂಬ ಎರಡು ವಿಭಾಗಗಳಾಗಿ ಅವೆರಡೂ ದಾಂಪತ್ಯಸಂಬಂಧವನ್ನು ಹೊಂದಿದವು. ಆದುದರಿಂದ, ಯಾಜ್ಞವಲ್ಕ್ಯ ಮಹರ್ಷಿಯು ಹೇಳಿದಂತೆ ಆಕಾಶರೂಪವಾದ ಜಗತ್ತು ಒಂದೇ ತತ್ತ್ವದಿಂದ ವ್ಯಾಪ್ತವಾಗಿದ್ದರೂ ಸ್ತ್ರೀಯೊಡನೆ ಸಂಬಂಧವನ್ನು ಹೊಂದಿದುದರ ಪರಿಣಾಮವಾಗಿ ಮಾನವರ ಉತ್ಪನ್ನವಾಯಿತು ಎಂದು ತಿಳಿಸಿದೆ.

ಆದುದರಿಂದ ವಿವಸ್ವತ್ ಮತ್ತು ಸರಣ್ಯೂ ಎಂಬ ಎರಡು ಹೆಸರುಗಳೂ ಈ ವಿಶ್ವೈಕ್ಯವನ್ನು ಹೊಂದಿರುವ ಆದಿತತ್ತ್ವದ ಎರಡು ಅಂಶಗಳೆಂದರೆ ತಪ್ಪಾಗಲಾರದು ಮಾನವನ ಉತ್ಪತ್ತಿಗೆ ಮೂಲವನ್ನು ತಿಳಿಸುವಾಗ ಇದೇ ವಿಷಯವನ್ನು ವಿವರಿಸುತ್ತ ಶತಪಥಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿದೆ.

ಯಮು ಹ ತದ್ವಿಚಕ್ರುಃ ಸ ವಿವಸ್ವಾನಾದಿತ್ಯಸ್ತಸ್ಯೇಮಾಃ ಪ್ರಜಾಃ ।

(ಶ. ಬ್ರಾ. ೩. ೧.೩-೪)

ವಿಶ್ವಸೃಷ್ಟಿಯ ಪೂರ್ವಭಾವಿಯಾಗಿ ನಿರ್ಮಿತವಾದ ಈ ಅಂಶವೇ **ವಿವಸ್ವಾನ್** ಎಂಬ ಸಂಜ್ಞೆಯಿಂದ ಪ್ರತೀತವಾದ ಆದಿತ್ಯತತ್ತ್ವವು. ಈ ವಿವಸ್ವತ್‌ಸಂಜ್ಞಕನಾದ ಆದಿತ್ಯನಿಂದಲೇ ಸಕಲ ಪ್ರಜೆಗಳ ಉತ್ಪತ್ತಿಯು ಇದನ್ನೇ ಋಕ್ಸಂಹಿತೆಯಲ್ಲಿಯೂ ಸಹ ವಿವರಿಸುತ್ತ

ಅಮೀ ಯೇ ಸಪ್ತ ರಶ್ಮಯಸ್ತತ್ರಾ ಮೇ ನಾಭಿರಾತತಾ ।

(ಋ. ಸಂ. ೧೦.೧೦೫-೯)

ಎಂದು ತಿಳಿಸಿದೆ ತೈತ್ತಿರೀಯಸಂಹಿತೆಯಲ್ಲಿಯೂ ಸಪ್ತ **ತತೋ ವಿವಸ್ವಾನಾದಿತ್ಯೋಽಜಾಯತ** (ತೈ. ಸಂ. ೬-೧-೬.೨) ಎಂದು ಪತಿಸಿದೆ (ಈ ವಿವರವನ್ನು ಮುಂದೆ ವಿಶ್ವಸೃಷ್ಟಿಯ ಕ್ರಮವನ್ನು ವಿವರಿಸುವ ಸೂಕ್ತಗಳನ್ನು ವಿಮರ್ಶಿಸುವಾಗ ತಿಳಿಸಲಾಗುತ್ತದೆ).

ಮೇಲೆ, **ಯಮುನ** ಸ್ಥಾನನಿರ್ದೇಶವನ್ನು ಸೂಚಿಸುವಾಗ ಆದಿತ್ಯನಿಗೂ ಯಮನಿಗೂ ತಾದಾತ್ಮ್ಯವನ್ನು ಹೇಳುವ ಸನ್ನಿವೇಶಗಳನ್ನು ವಿವರಿಸಲಾಗಿದೆ. ಪ್ರಕೃತದಲ್ಲಿ ವಿವಸ್ವಾನ್, ಆದಿತ್ಯ, ಯಮ ಈ ನಾಮಗಳೆಲ್ಲವೂ ಒಂದಲ್ಲ ಒಂದು ವಿಧದಲ್ಲಿ ಒಂದೇ ತತ್ತ್ವದ ಬೇರೆ ಬೇರೆ ನಾಮಗಳು ಅಥವಾ ಕಾರ್ಯಕಾರಣಸಂಬಂಧವನ್ನು ಹೊಂದಿದವು ಎಂದು

ಸಂಹಿತಾವಾಕ್ಯಗಳ ಆಧಾರದ ಮೇಲೆ ನಿಷ್ಕೃಷ್ಟವಾಗಿ ಹೇಳಬಹುದು. ಈ ಒಂದೇ ತತ್ತ್ವವನ್ನು ಋಕ್ಸಂಹಿತೆಯ ವಾಕ್ಯಗಳಲ್ಲಿ ಈ ರೀತಿ ತಿಳಿಸಿದೆ

ಯಮೇನ ದತ್ತಂ ತ್ರಿತ ಏನಮಾಯುನಗಿಂದ್ರ ಏಣಂ ಪೃಥಿವೋ ಅಧ್ಯತಿಷ್ಠತ್ ।
ಗಂಧರ್ವೋ ಅಸ್ಯ ರಶನಾಮಗೃಭ್ಣಾತ್ಸೂರಾದಶ್ವಂ ವಸವೋ ನಿರತಷ್ಟ ॥
ಅಸಿ ಯಮೋ ಅಸ್ಯಾದಿತ್ಯೋ ಅರ್ವನ್ನಸಿ ತ್ರಿತೋ ಗುಹ್ಯೇನ ವ್ರತೇನ ।
ಅಸಿ ಸೋಮೇನ ಸಮಯಾ ವಿಪೃಕ್ತ ಆಹುಸ್ತೇ ತ್ರೀಣಿ ದಿವಿ ಬಂಧನಾನಿ ॥

(ಋ. ಸಂ. ೧-೧೬೩-೨,೩)

ಯಮನಿಂದ ದತ್ತವಾದ ಈ ಅಶ್ವವನ್ನು ಪೃಥಿವ್ಯಾದಿ ಮೂರು ಸ್ಥಾನಗಳಲ್ಲಿ ಸಂಚರಿಸತಕ್ಕ ವಾಯುವು ರಥಕ್ಕೆ ಸೇರಿಸಿದನು. ಈ ಅಶ್ವವನ್ನು ಶ್ರೇಷ್ಠವಾದ ಇಂದ್ರನು ಹೆತ್ತಿ ಕುಳಿತನು. ಸೋಮರಾಜನು ಈ ಅಶ್ವದ ಲಗಾಮನ್ನು ಹಿಡಿದನು. ಸೂರ್ಯರಶ್ಮಿಗಳು ಅಥವಾ ಯಮಾದಿಗಳು ಈ ಅಶ್ವವನ್ನು ಆದಿತ್ಯನಿಂದ ಸಂಪಾದಿಸಿದರು. ಈ ಅಗ್ನಿಯೇ ಯಮರೂಪನು, ಆದಿತ್ಯರೂಪನು, ಅವನೇ ವ್ಯಾಯ್ವಾತ್ಮಕನು ಇತ್ಯಾದಿ ವರ್ಣನಗಳಲ್ಲಿ ಅಗ್ನಿಗೂ, ಯಮನಿಗೂ ತಾದಾತ್ಮ್ಯವನ್ನು ತಿಳಿಸಿದೆ.

ಯಮೋ ಯಚ್ಛತೀತಿ ಸತಃ । ಅಗ್ನಿರಪಿ ಯಮ ಉಚ್ಯತೇ । ನಿಯಮಿಸುವ ಸಾಮರ್ಥ್ಯವಿರುವುದರಿಂದ ಅಗ್ನಿಗೂ (ನಿ. ೧೦. ೧೯) ಯಮನೆಂದು ಪರ್ಯಾಯನಾಮವೆಂದು ನಿರುಕ್ತಕಾರರು ಅಭಿಪ್ರಾಯಪಟ್ಟಿದ್ದಾರೆ. **ಯಮೋ ಹ ಜಾತೋ ಯಮೋ ಜನಿತ್ವಂ** (ಋ. ಸಂ. ೧. ೬೬. ೮) ಎಂಬ ಋಕ್ಕನ್ನುದಾಹರಿಸಿ **ಯಮ** ಶಬ್ದವು ಅಗ್ನಿಪರ್ಯಾಯವೆಂದೂ ತೋರಿಸಿದ್ದಾರೆ. ಸಾಯಣರು ೧-೬೬-೮ ನೇ ಮಂತ್ರಕ್ಕೆ ತಾತ್ಪರ್ಯವನ್ನು ವಿವರಿಸುವಾಗ **ಯಮ** ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ತಿಳಿಸಿದ್ದಾರೆ. **ಯಚ್ಛತಿ ದದಾತಿ ಸ್ತೋತೃಭ್ಯಃ ಕಾಮಾನಿತಿ ಯಮೋಽಗ್ನಿರುಚ್ಯತೇ ॥** ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡಿಸಿ ಕೊಡುವುದರಿಂದ ಅಗ್ನಿಗೆ ಯಮನೆಂದು ಹೆಸರು ಎಂದು ಒಂದು ವಿಧವಾಗಿಯೂ, **ಇಂದ್ರಾಗ್ನ್ಯೋರ್ಯುಗಪದುತ್ಪನ್ನತ್ವಾದಗ್ನೇರ್ಯಮತ್ವಂ** ಇಂದ್ರನೂ ಅಗ್ನಿಯೂ ಒಟ್ಟಿಗೆ ಉತ್ಪನ್ನರಾದುದರಿಂದ ಅಗ್ನಿಗೆ **ಯಮ**ನೆಂದು ಹೆಸರೆಂದು ಇನ್ನೊಂದು ವಿಧವಾಗಿಯೂ ಅರ್ಥ ಮಾಡಿದ್ದಾರೆ **ಯಮೋ ಹ ಜಾತ ಇಂದ್ರೇಣ ಸಹ ಸಂಗತಃ** ಎಂಬ ನಿರುಕ್ತಕಾರರ ವಾಕ್ಯವು ಈ ಎರಡನೆಯ ಅರ್ಥವನ್ನು ಸಮರ್ಥಿಸುತ್ತದೆ.

ಬಳಿತ್ಥಾ ಮಹಿನಾ ವಾಮಿಂದ್ರಾಗ್ನೀ ಪನಿಷ್ಠ ಆ ।
ಸಮಾನೋ ವಾಂ ಜನಿತಾ ಭ್ರಾತರಾ ಯುವಂ ಯಮಾವಿಹೇಹ ಮಾತರಾ ।

(ಋ. ಸಂ. ೬-೫೯-೨)

ಎಂಬಲ್ಲಿ **ಯುವಂ ಯಮೌ** ನೀವಿಬ್ಬರೂ ಒಟ್ಟಿಗೆ ಪುಟ್ಟಿದವರು ಎಂದು ಇಂದ್ರಾಗ್ನಿಗಳ ಸಹಕಾಲೀನವಾದ ಉತ್ಪತ್ತಿಯನ್ನು ಹೇಳುವುದರಿಂದಲೂ ಸಹ ಎರಡನೆಯ ಅರ್ಥವನ್ನು ಹೇಳಬಹುದು.

ಮೇಲೆ ಉದಾಹೃತವಾಗಿರುವ ಬೃಹದಾರಣ್ಯಕೋಪನಿಷದ್ವಾಕ್ಯದಿಂದ ಯಾವ ಆದಿತತ್ತ್ವದ ಸ್ತ್ರೀಪುಂ ರೂಪವಾದ ಎರಡು ಅಂಶಗಳ ಸ್ವರೂಪವನ್ನು ವರ್ಣಿಸಿದೆಯೋ ಅದೇ ಅಂಶಗಳನ್ನು **ಯಮ** ಮತ್ತು **ಯಮೀ** ಎಂಬ ತತ್ತ್ವಗಳೂ ತಿಳಿಸುತ್ತವೆ.

ಹೀಗೆ ಪುಂಸ್ತ್ರೀರೂಪಗಳೆರಡನ್ನೂ **ಯಮಿ**ಶಬ್ದವು ಸೂಚಿಸುವುದಾದರೂ ಸಹ ಪ್ರಕೃತದಲ್ಲಿ ಪುಂರೂಪಿಯಾದ ಯಮನ ಸ್ವರೂಪ ಮತ್ತು ಪ್ರಭಾವಗಳೇನು ಎಂಬುದನ್ನು ಪರಿಶೀಲಿಸಬೇಕಾಗಿರುತ್ತದೆ.

ಯಮೋ ನೋ ಗಾತುಂ ಪ್ರಥಮೋ ವಿವೇದ (ಋ. ಸಂ. ೧೦ ೧೪-೨) ಇತ್ಯಾದಿ ವಾಕ್ಯಗಳಿಂದ ಯಮನೇ ಪಿತೃಮಾರ್ಗವನ್ನು ಪ್ರಥಮತಃ ಅರಿತವನು ಮತ್ತು ಮೃತರಾದ ಪಿತೃಗಳಿಗೆ ರಾಜನು ಎಂದು ಹೇಳಿರುತ್ತದೆ. ಯಾರಿಂದಲೂ ಉರುಳಿಸಲಾಗದ ಉತ್ತಮಸ್ಥಾನದಲ್ಲಿ ಯಮನು ಪಿತೃಗಳನ್ನು ಸ್ಥಾಪಿಸುತ್ತಾನೆ. ಆದುದರಿಂದ,

ಪಿತೃಭಿಶ್ಚಾಂಗಿರೋಭಿಶ್ಚ ಸಂಸ್ತುತೋ ದೃಶ್ಯತೇ ಯಮಃ ।
ಮಂತ್ರೇಷು ಬಹುಶಃ ಪಾದೇ ವಿವಸ್ವಂತಂ ಪಿತಾ ಹಿ ಸಃ ॥

(ಬೃ. ದೇ. ೬-೧೫೭)

ಯಮನು ಪಿತೃಗಳೊಡನೆಯೂ ಅಂಗಿರಸ್ಸುಗಳೊಡನೆಯೂ ಅನೇಕವಿಧವಾಗಿ ಸ್ತುತನಾಗಿದ್ದಾನೆ **ವಿವಸ್ವಂತಂ** ಎಂಬ ಮಂತ್ರದಲ್ಲಿ ಅವನೇ ಪಿತೃವೆಂದು ಪರಿಗಣಿತನಾಗಿದ್ದಾನೆ ಎಂದಿದೆ. ಮತ್ತು

ಸಂಸ್ಕಾರ್ಯಪ್ರೇತಸಂಯುಕ್ತೈಃ ಪಿತೃಭಿಸ್ತ್ವಯತೇ ಯಮಃ ।
ಪ್ರೇಹಿ ಪ್ರೇಹೀತಿ ತಿಸೃಷು ಪ್ರೇತಾಪಿಷ ಉದಾಹೃತಾಃ ॥
ಪಿತೄಣಾಂ ಹಿ ಪತಿರ್ದೇವೋ ಯಮಸ್ತಸ್ಮಾತ್ಸ ಸೂಕ್ತಭಾಕ್ ।

(ಬೃ. ದೇ. ೬-೧೫೮-೯)

ಪಿತೃಗಳೊಂದಿಗೆ ಸೇರಿದ ಯಮನು, ಪಿತೃಸಂಸ್ಕಾರಕ್ಕೆ ಅರ್ಹತೆಯನ್ನು ಹೊಂದಿದ ಮೃತನ ಜೊತೆಯಲ್ಲಿ ಪ್ರಶಂಸಿತನಾಗುತ್ತಾನೆ. ಈ ಪ್ರಶಂಸೆಯು **ಪ್ರೇಹಿ ಪ್ರೇಹಿ** ಎಂಬ ಮೂರು ಮಂತ್ರಗಳಲ್ಲಿರುತ್ತದೆ. (೧೦-೧೪-೭,೮,೯) ಇದೇ ಯಮನು ಪಿತೃಗಳಿಗೆಲ್ಲ ಪ್ರಭುವು. ಆದುದರಿಂದ ಯಮನು **ಸೂಕ್ತಭಾಕ್** ಎನ್ನಿಸಿಕೊಳ್ಳುವನು ಎಂದಿರುತ್ತದೆ. ಇಲ್ಲಿ **ಸೂಕ್ತಭಾಕ್** ಎಂಬ ವಿಶೇಷಣವು ಯಮನ ಯಾವ ಸ್ವರೂಪವನ್ನು ತಿಳಿಸುತ್ತಪಟ್ಟಿದೆಯೆಂದು ಸೂಕ್ಷ್ಮವಾಗಿ ಪರಿಶೀಲಿಸಬಹುದು.

ದೇವತೆಗಳನ್ನು ಪೃಥ್ವೀಸ್ಥರು, ಅಂತರಿಕ್ಷಸ್ಥರು ಮತ್ತು ದ್ಯುಲೋಕಸ್ಥರು ಎಂದು ನಿರುಕ್ತಕಾರರು ಮೂರು ವಿಭಾಗಮಾಡಿರುತ್ತಾರೆ. ಆದರೆ ಆ ವಿಭಾಗದಲ್ಲಿ ಕೆಲವು ನ್ಯೂನತೆಗಳಿರುತ್ತವೆ ಆ ವಿಷಯದ ಮೇಲೆ ಚರ್ಚೆಯು ಈ ಸಂದರ್ಭದಲ್ಲಿ ಅಪ್ರಕೃತ. ಈ ವಿಭಾಗದಂತೆಯೇ ದೇವತೆಗಳನ್ನು **ಹವಿರ್ಭಾಜಃ ಸೂಕ್ತಭಾಜಃ** ಎಂದು ಎರಡು ವಿಭಾಗಗಳನ್ನಾಗಿ ಮಾಡಬಹುದು. ಎಂದರೆ ಹವಿಸ್ಸುಗಳನ್ನು (ಅಥವಾ ಸೋಮವನ್ನು) ಸೇವಿಸತಕ್ಕವರೆಂದೂ ಮತ್ತು ಸೂಕ್ತಗಳನ್ನು ಸೇವಿಸತಕ್ಕವರೆಂದೂ ಅರ್ಥ.

ಮಾತಲೀ ಕವ್ಯೈರ್ಯಮೋ ಅಂಗಿರೋಭಿರ್ಬೃಹಸ್ಪತಿರ್ಋಕ್ವಭಿರ್ವಾವೃಧಾನಃ ।
ಯೇಷ್ಠಾ ದೇವಾ ವಾವೃಧುರ್ಯೇ ಚ ದೇವಾನ್ತ್ಸ್ವಹಾನ್ಯೇ ಸ್ವಧಯಾನ್ಯೇ ಮದಂತಿ ॥

(ಋ. ಸಂ.೧೦.೧೪-೩)

ಇತ್ಯಾದಿ ಮಂತ್ರಗಳಲ್ಲಿ—**ಕವ್ಯ, ಯಕ್, ಸ್ವಾಹಾ, ಸ್ವಧಾ** ಇತ್ಯಾದಿಗಳಿಂದ ತೃಪ್ತಿಯನ್ನು ಹೊಂದತಕ್ಕ ದೇವಗಣಗಳೂ ಪಿತೃಗಳೂ ನಿರ್ದಿಷ್ಟರಾಗಿದ್ದಾರೆ ಈ ವಿಭಾಗಗಳಿಗೆ ಸೇರಿದ ದೇವತಾಸಂಖ್ಯೆಯನ್ನೂ ಮತ್ತು ಪಿತೃಗಳ ಸಂಖ್ಯೆಯನ್ನೂ ಬೇರ ಕಡೆ ವಿಮರ್ಶಿಸಲಾಗುತ್ತದೆ. ಪ್ರಕೃತದಲ್ಲಿ **ಯಮನ** ಸ್ಥಾನವೇನು ಎಂಬುದನ್ನು ಮಾತ್ರ ತಿಳಿಯಬೇಕಾಗಿರುತ್ತದೆ. ಯಮನು ಪಿತೃಗಳ ಗುಂಪಿಗೆ ಸೇರಿದವನು, ಪಿತೃಗಳಿಗೆ ಪ್ರಭುವು ಎಂದು ವರ್ಣಿತನಾಗಿದಾನೆ. ಈ ಪಿತೃಗಳನ್ನೂ ಸಹ ಮೂರು ವಿಭಾಗಮಾಡಿರುತ್ತದೆ.

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ ।

(ಋ ಸಂ ೧೦ ೧೫.೧)

ಅವರಲೋಕದವರು, ಪರಲೋಕದವರು ಮತ್ತು ಮಧ್ಯಮಲೋಕದವರು ಎಂದು ಪಿತೃಗಳಲ್ಲಿ ಮೂರು ವಿಭಾಗಗಳಿರುತ್ತವೆ ಯಮನು ಅಂತರಿಕ್ಷಸ್ಥನೆಂದು ಪರಿಗಣಿತನಾಗಿರುತ್ತಾನೆ. ಮಧ್ಯಮಲೋಕದ ಪಿತೃಗಳಂತೆಯೇ ಅವನು **ಸ್ವಧೆ** ಯನ್ನು ಸ್ವೀಕರಿಸತಕ್ಕವನು. ಆದರೆ ನಿರುಕ್ತದ ವರ್ಗೀಕರಣದ ಪ್ರಕಾರ **ಯಮನು** ದ್ಯುಲೋಕಸ್ಥರಾದ ದೇವತೆಗಳ ಗುಂಪಿಗೆ ಸೇರಿದವನೂ ಮತ್ತು ಅಂತರಿಕ್ಷಲೋಕಕ್ಕೆ ಸೇರಿದವನೂ ಆಗಿರುತ್ತಾನೆ (ನಿರುಕ್ತದ ಪ್ರಕಾರ ಸೂಕ್ತಭಾಜಃ ಹವಿರ್ಭಾಜಃ ಮತ್ತು ನಿಪಾತಭಾಜಃ ಎಂಬ ವಿಭಾಗಗಳನ್ನು ಈ ಪೀಠಿಕೆಯ ಕೊನೆಯಲ್ಲಿ ಕೊಟ್ಟಿರುತ್ತೇವೆ.) ಆದರ ಒಬ್ಬನೇ ಯಮನು ಈ ಎರಡು ಗುಂಪಿಗೂ ಹೇಗೆ ಸೇರಬಲ್ಲನು ಎಂಬ ಪ್ರಶ್ನೆಯು ಏಳುವುದಾದರೆ, ಯಾಸ್ಕರೂ ಮತ್ತು ದುರ್ಗಾಚಾರ್ಯರೂ ಸಹ ಈ ರೀತಿ ವಿವರಿಸುತ್ತಾರೆ.

(ನಿರುಕ್ತ ೧೨-೨೯ ದುರ್ಗಾಚಾರ್ಯಾವಿವೃತಿ.)

ಅಂತರಿಕ್ಷಸ್ಥನಾದ ಎಂದರೆ ಮಧ್ಯಮ ಲೋಕದಲ್ಲಿ ಪ್ರಶಂಸಿತನಾಗುವ ಯಮನು ಪಿತೃಗಳಿಗೆ ಅಧಿದೇವನು ಮತ್ತು ದ್ಯುಲೋಕಸ್ಥನೆಂದ. ಪ್ರಶಂಸಿತನಾಗುವ ಯಮನು ಆದಿತ್ಯರೂಪನು. ಈ ರೀತಿ ವಿವರಣೆಯೂ ಸಹ ಒಂದೇ **ಯಮನ** ಎರಡು ವಿರುದ್ಧವಾದ ಅಂಶಗಳನ್ನು ತಿಳಿಸುತ್ತದೆ ಆದುದರಿಂದ ಇದು ಸಮರ್ಪಕವಾಗಿಲ್ಲ ಎಂದು ಹೇಳುವಂತಿಲ್ಲ. ಒಂದೇ ತತ್ತ್ವದ ಎರಡು ಅಂಶಗಳು ಎರಡು ಲೋಕಗಳಲ್ಲೂ ವ್ಯಾಪಿಸಿವೆಯೆಂದು ಧಾರಾಳವಾಗಿ ಹೇಳಬಹುದು. ಅದೂ ಅಲ್ಲದೇ ಪಿತೃಗಣಕ್ಕೆ ಸೇರಿದ ಯಮನು ಪಿತೃಗಳಿಗಿಂತಲೂ ಉತ್ಕೃಷ್ಟನು ಎಂದು ಹೇಳುವುದಕ್ಕೂ ಇದು ಆಧಾರವಾಗಿರುತ್ತದೆ. ಕೇವಲ ಮಧ್ಯಮಲೋಕಕ್ಕೇ ಸೇರಿದ ಪಿತೃಗಳಿಗಿಂತಲೂ ಯಮನು ಉತ್ತನುನೆಂದರ್ಥ. **ಸಂಗಮನಂ ಜನಾನಾಂ** ಇತ್ಯಾದಿ ವಿಶೇಷಣಗಳು ಈ ಅಂಶವನ್ನು ತಿಳಿಸುತ್ತವೆ

ಯಸ್ಮಿನ್ವೃಕ್ಷೇ ಸುಪಲಾಶೇ ದೇವೈಃ ಸಂಪಿಬತೇ ಯಮಃ

(ಋ. ಸಂ. ೧೦-೧೩೫-೧)

ಎಂದು ಹಿಂದೆ ಉದಾಹರಿಸಿರುವ ವಾಕ್ಯದಲ್ಲಿ ಯಮನು **ಸೋಮಪನು** ಎಂಬ ವಿಷಯವೂ ಇದನ್ನು ಸಮರ್ಥಿಸುತ್ತದೆ.

ಉಭಾ ರಾಜಾನಾ ಸ್ವಧಯಾ ಮದಂತಾ ಯಮಂ ಪಶ್ಯಾಸಿ ವರುಣಂ ಚ ದೇವಂ ।

(ಋ. ಸಂ ೧೦-೧೪-೭)

ಇತ್ಯಾದಿ ಸ್ಥಳಗಳಲ್ಲಿ ಯಮನೂ ಮತ್ತು ವರುಣನೂ ಸಮಾನವಾದ ಸಂತೋಷವನ್ನನುಭವಿಸುತ್ತಿರುವ ಪ್ರಭುಗಳು ಎಂದು ವರ್ಣಿಸಿರುವುದು ಯಮನ ದಿವ್ಯತ್ವವನ್ನು ತೋರಿಸುವುದಾಗಿದೆ ಯಮನಂತೆಯೇ ವರುಣನೂ ಸಹ ದ್ಯುಲೋಕ ಮತ್ತು ಅಂತರಿಕ್ಷಲೋಕ ಈ ಎರಡಕ್ಕೂ ಸೇರಿದವನು. ಆದರೆ, ದ್ಯುಲೋಕಸ್ಥನಾದ ಯಮನು ಸೋಮಪನು, ದ್ಯುಲೋಕದ ವರುಣನು ಸ್ತುತಿಗಳಿಗೆ ಅರ್ಹನು ಎಂದಿರುವುದರಿಂದ ವರುಣನ ಸ್ಥಾನವು ಯಮನ ಸ್ಥಾನಕ್ಕಿಂತಲೂ ಉತ್ತಮವಾದುದೆಂದು ತಿಳಿಯುತ್ತದೆ. ಆದರೆ, ಈ ರೀತಿಯ ಬೇರೆಬೇರೆ ಅಂಶಗಳನ್ನು ತೋರಿಸಿರುವ ವರ್ಣನೆಗಳು ಯಮನ ಬೇರೆ ಬೇರೆ ಶಕ್ತಿಗಳನ್ನು ನಿರ್ದೇಶಿಸುವುವು ಎಂದು ಹೇಳಬಹುದು.

ಯಮ ಎಂಬುದು ವಿಶ್ವನಿಯಾಮಕವಾದ ಶಕ್ತಿ. ಆ ಶಕ್ತಿಯು ಸಕಲಜಗತ್ತಿನ ನೀತಿಯನ್ನೂ ನಿಯಮಿಸುವುದಾಗಿದೆ ಈ ಶಕ್ತಿಯು ಮೂರು ಲೋಕಗಳನ್ನೂ ವ್ಯಾಪಿಸಿದೆ. ತ್ರಿಲೋಕವ್ಯಾಪಕವಾದ ಈ ಶಕ್ತಿಯನ್ನು ಆದಿತ್ಯನೆಂದಾಗಲಿ, ಅಗ್ನಿಯೆಂದಾಗಲೀ ಕರೆಯಬಹುದು. ಯಮನಿಗೂ, ವಿಶ್ವವ್ಯಾಪಕನಾದ ಆದಿತ್ಯನಿಗೂ ತಾದಾತ್ಮ್ಯವನ್ನು ತೋರಿಸಿರುವ ವಾಕ್ಯಗಳನ್ನು ಹಿಂದೆ ಉದಾಹರಿಸಿದೆ. **ಕೇಶೀದಂ ಜ್ಯೋತಿರುಚ್ಯತೇ** ಇತ್ಯಾದಿವಾಕ್ಯಗಳು ಆದಿತ್ಯರೂಪನಾದ ಯಮನ ಜ್ಯೋತೀರೂಪವನ್ನು ತಿಳಿಸುತ್ತವೆ. **ವಿವಸ್ವಾನ್** ಎಂಬ ಪದವೂ ಸಹ **ವಸ್** ಧಾತುವಿನಿಂದ ನಿಷ್ಪನ್ನವಾಗಿ, '**ಈಶಾವಾಸ್ಯಂ**' ಎಂಬ ವಾಕ್ಯವು ಯಾವ ವಿಶ್ವವ್ಯಾಪಕವನ್ನು ತಿಳಿಸುವುದೋ ಅದೇ ಶಕ್ತಿಯನ್ನು ತೋರಿಸುತ್ತದೆ. ಮೂರು ಲೋಕಗಳಲ್ಲೂ ವ್ಯಾಪಿಸಿರುವ ಅಗ್ನಿಯೂ ಸಹ ಈ ಯಮನ ರೂಪಾಂತರವಾಗಿರುತ್ತಾನೆ. ನಿರುಕ್ತಕಾರರು ಸಹ **ಅಗ್ನಿರಪಿ ಯಮ ಉಚ್ಯತೇ** (ನಿ. ೧೦,೨೦) ಎಂದಿರುವ ಅಂಶವನ್ನು ಬೃಹದ್ದೇವತಾಕಾರರೂ ಸಹ,

ಇಹ ಪ್ರಜಾಃ ಪ್ರಯಚ್ಛನ್ ಸ ಸಂಗೃಹೀತ್ವಾ ಪ್ರಯಾತಿ ಚ ।
ಋಷಿರ್ವಿವಸ್ವತಃ ಪುತ್ರಂ ತೇನಾಹ್ಯೇನಂ ಯವೋ ಯಮಂ ॥

(ಬೃ. ದೇ ೨-೪೪)

ಇಲ್ಲಿ ಪುತ್ರಾದಿಗಳನ್ನು ಕೊಡುತ್ತಲೂ ಇಲ್ಲಿಯ ಹವಿಸ್ಸುಗಳನ್ನು ಲೋಕಾಂತರಗಳಿಗೆ ಕೊಂಡುಹೋಗಿ ಹಂಚುತ್ತಲೂ ಇರುವುದರಿಂದ ಅಗ್ನಿಯನ್ನು ಸಹ **ಯಮ**ಸಂಜ್ಞೆಯಿಂದ ನಿರ್ದೇಶಿಸುತ್ತಾರೆಂದು ತಿಳಿಸಿದೆ. **ಯವೋ ಯಚ್ಛತೀತಿ ಸತಃ** (ನಿ. ೧೦-೧೯) ಕೊಡುವುದಾರಿಗೆ, ಎಲ್ಲೆಲ್ಲಿ ಎಂದರೆ, ಅಗ್ನಿರೂಪದಲ್ಲಿ ಪಿತೃಗಳಿಗೆ, ದೇವತೆಗಳಿಗೆ ಮತ್ತು ಅಸುರರಿಗೆ ಮೂರು ಲೋಕದಲ್ಲೂ ಹಂಚುತ್ತಾನೆ. ಅದು ಹೇಗೆಂದರೆ—

ಪಿತೃದೇವಾಸುರಾಣಾಂ ಚ ಆಭವನ್ನಗ್ನೇಯಸ್ತ್ರಯಃ ।
ಹವ್ಯಕವ್ಯವಹೌ ಚೋಭೌ ಸಹರಕ್ಷಾಶ್ಚ ನಾಮ ಯಃ ॥

(ಬೃ. ಪ್ರೇ. ೬-೧೬೦)

ಪಿತೃಗಳು, ದೇವತೆಗಳು ಮತ್ತು ಅಸುರರು ಈ ಮೂರು ಗುಂಪುಗಳಿಗೂ ಸಂಬಂಧಿಸಿದಂತೆ ಅಗ್ನಿಗೆ ಮೂರುರೂಪಗಳಿರುವುವು, ಹವ್ಯ ಮತ್ತು ಕವ್ಯಗಳನ್ನು ವಹಿಸುವ ಅಗ್ನಿ ಮತ್ತು **ಸಹರಕ್ಷಃ** ಎಂದು ಮೂರು ವಿಭಾಗ.

ಹೀಗೆ **ಯಮ**ಶಬ್ದಕ್ಕೆ **ಯಚ್ಛತಿ, ಯಮಯತಿ** ಇತ್ಯಾದ್ಯರ್ಥಗಳಿರುವುದರಿಂದಲೂ, **ಯಮ**ಶಬ್ದದಿಂದ ನಿರ್ದಿಷ್ಟವಾಗಿರುವ ತತ್ತ್ವವು ತನ್ನ ರೂಪಾಂತರಗಳಿಂದ ಈ ಎಲ್ಲ ಕಾರ್ಯಗಳನ್ನೂ ನಿರ್ವಹಿಸುವುದರಿಂದಲೂ ಈ ಹೆಸರು

ಪ್ರಸಿದ್ಧವಾಗಿದೆಯೆಂದು ಹೇಳಬಹುದು. ವಿಶ್ವದ ಸೃಷ್ಟಿಗೂ ಸ್ಥಿತಿಗೂ ಯಾವ **ಯಜ್ಞ**ವು ಮೂಲವೆಂದೂ ನಿಯಾಮಕವೆಂದೂ ಸಂಹಿತಾದಿಗಳಲ್ಲಿ ಪ್ರಸಿದ್ಧವಾಗಿದೆಯೋ ಆ ಯಜ್ಞವನ್ನು ಮೊದಲು ವಿಸ್ತರಿಸಿದವನೇ ಯಮನು. ಯಜ್ಞ ಮೂಲವೂ ಯಜ್ಞನಿರ್ವಾಹಕನೂ ಆದ ಅಗ್ನಿಯನ್ನು ಮೊದಲು ಸಾಕ್ಷಾತ್ಕರಿಸಿದವನೇ (೧೦-೫೧-೧-೪) ಯಮನೆಂದು ಮೇಲೆ ತಿಳಿಸಿದೆ. ದೇವಪಿತ್ರಾದಿಗಳ ಸ್ಥಿತಿಗತಿಗಳಿಗೆ ಅಗ್ನಿರೂಪನಾದ ಯಮನೇ ಕಾರಣನೆಂದೂ ಮೇಲೆ ತಿಳಿಸಿದ ಅದರಂತೆಯೇ, ಸಕಲ ವಿಶ್ವವ್ಯವಹಾರಗಳಿಗೂ ಮೂಲವೂ ಪ್ರಚೋದಕವೂ ಆದ ಯಜ್ಞದ ವಿಸ್ತೃತಿಗೂ ಯಮನೇ ಕಾರಣನು.

ತ ಇನ್ನಿಣ್ಯಂ ಹೃದಯಸ್ಯ ಪ್ರಕೇತೈಃ ಸಹಸ್ರವಲ್ಶಮಭಿ ಸಂ ಚರಂತಿ ।
ಯಮೇನ ತತಂ ಪರಿಧಿಂ ವಯಂತೋಽಪ್ಸರಸ ಉಪ ಸೇದುರ್ವನಿಷ್ಠಾಃ ॥

(ಋ ಸಂ. ೭.೩೩.೯)

ಇತ್ಯಾದಿ ವಾಕ್ಯಗಳಲ್ಲಿ ಈ ವಿಷಯವು ತಿಳಿಸಲ್ಪಟ್ಟಿದೆ. ಇಂತಹ ಸನ್ನಿವೇಶಗಳಲ್ಲಿ **ಯಮ**ಶಬ್ದಕ್ಕೆ ಸರ್ವನಿಯಂತೃವಾದನನೂ ವಿಶ್ವಕ್ಕೆಲ್ಲ ಕಾರಣಾತ್ಮನೂ ಆದ ಪರಮಾತ್ಮತತ್ತ್ವವೆಂದು ಸಾಯಣರು ವಿವರಿಸಿದ್ದಾರೆ (**ವಿಶ್ವನಿಯಂತ್ರಾ ಕಾರಣಾತ್ಮನಾ ವಿಸ್ತೃತಂ ಪರಿಧಿಂ । ಪರಿಧಿರಿತ್ಯನೇನ ಜನ್ಮಾದಿಪ್ರವಾಹೋ ವಿವಕ್ಷಿತಃ ।**) ಅಲ್ಲದೇ.

ತ್ರಿಕದ್ರುಕೇಭಿಃ ಪತತಿ ಷಳುರ್ವೀರೇಕಮಿದ್ಬೃಹತ್ ।
ತ್ರಿಷ್ಪುಬ್ಗಾಯತ್ರೀ ಛಂದಾಂಸಿ ಸರ್ವಾ ತಾ ಯಮು ಆಹಿತಾ ॥

(ಋ. ಸಂ ೧೦.೧೪-೧೬)

ಇತ್ಯಾದಿ ವಾಕ್ಯಗಳಿಂದ ಯಮನ ಯಜ್ಞಮೂಲತತ್ತ್ವವು ಪ್ರತಿಪಾದಿತವಾಗಿದೆ ಯಜ್ಞನಿರ್ವಹಣಕ್ಕೆ ಸಾಧಕವಾದ ಗಾಯತ್ರ್ಯಾದಿ ಸಪ್ತಚ್ಛಂದಸ್ಸುಗಳೂ ಯಮನಲ್ಲಿಯೇ ಸ್ಥಾಪಿತವಾಗಿವೆಯೆಂದು ಈ ಸನ್ನಿವೇಶಗಳಲ್ಲಿ ಪ್ರಶಂಸಿತವಾಗಿವೆ- ಇಂತಹ ಅನೇಕ ಸನ್ನಿವೇಶಗಳು ಯಮನ ಸರ್ವದೇವತಾನಿಯಾಮಕತ್ವವನ್ನೂ ಸಹ ತಿಳಿಸುತ್ತವೆ **ದೇವೇಭ್ಯಃ ಕಮವೃಣೀತ..... ಯಮುಸ್ತನ್ವಂ ಪ್ರಾರಿರೇಚೀತ್** (ಋ. ಸಂ. ೧೦-೧೩-೪) ಇತ್ಯಾದಿ ವಾಕ್ಯಗಳು ಯಮನ ವಿಶ್ವಶಕ್ತಿಯನ್ನೂ ವಿವರಿಸುತ್ತವೆ.

ಹೀಗೆ **ಯಮು** ಶಬ್ದದಿಂದ ಪ್ರತಿಪಾದಿತವಾಗತಕ್ಕ ತತ್ತ್ವವು ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಈ ಮೂರು ಅಂಶಗಳನ್ನೂ ನಿಯಮಿಸಿ ನಿರ್ವಹಿಸತಕ್ಕದ್ದು ಎಂದು ಸಂಹಿತಾವಾಕ್ಯಗಳೇ ಪ್ರತಿಪಾದಿಸುತ್ತವೆ. ಪುರಾಣಾದಿಗಳಲ್ಲಿ **ಯಮನು** ಕೇವಲ ಲಯಕಾರಕನೂ, ಮೃತರ ಕರ್ಮಕ್ಕನುಗುಣವಾದ ಫಲವನ್ನು ಕೊಡತಕ್ಕವನೂ, ಕ್ರೂರಿಗಳನ್ನು ಶಿಕ್ಷಿಸುವ ಭಯಂಕರನೂ ಆದ ದೇವತೆಯೆಂದು ಮಾತ್ರ ವರ್ಣಿತವಾಗಿದೆ. ಆದರೆ, ಋಕ್ಸಂಹಿತಾವಾಕ್ಯಗಳು **ಯಮನ** ಸರ್ವಶಕ್ತಿತ್ವವನ್ನೂ, ಸರ್ವನಿಯಾಮಕತ್ವವನ್ನೂ ಉಪನಿಷದ್ವಾಕ್ಯಗಳು ಈ ರೀತಿ ಸ್ತುತಿಸುತ್ತವೆ.

"..... ತಮುಂತರ್ಯಾಮಿಣಂ ಯ ಇಮಂ ಚ ಲೋಕಂ ಪರಂ ಚ ಲೋಕಂ ಸರ್ವಾಣಿ ಚ ಭೂತಾನಿ ಯೋಽಂತರೋ ಯಮುಯತೀತಿ ಸೋಽಬ್ರವೀತ್ಪತಂಜಲಃ ಕಾಪ್ಯೋ ನಾಹಂ ತಂ ಭಗವನ್ವೇದೇತಿ ಸೋಽಬ್ರವೀತ್ಪತಂಜಲಂ ಕಾಪ್ಯಂ ಯಾಜ್ಞಿಕಾಂಶ್ಚ ಯೋ ವೈ ತತ್ಕಾಪ್ಯ

ಸೂತ್ರಂ ವಿದ್ಯಾತ್ತಂ ಚಾಂತರ್ಯಾಮಿಣಮಿತಿ .. ವೇದ ವಾ ಅಹಂ ಶಸ್ಸೂತ್ರಂ ತಂ ಚಾಂತರ್ಯಾಮಿಣಮಿತಿ ..... ॥ "

(ಬೃ. ಉ. ೬-೭-೧)

ಸತಂಜಲ ಕಾಪ್ಯನ ಪತ್ನಿಯನ್ನು ಹಿಡಿದಿದ್ದ ಗಂಧರ್ವನು ಕಾಪ್ಯನ ಮನೆಯಲ್ಲಿ ನೆರೆದಿದ್ದ ಯಾಜ್ಞಿಕರಿಗೆ ಹಾಕಿದ ಪ್ರಶ್ನೆಯನ್ನು ಉದ್ದಾಲಕ ಆರುಣಿಯು ಯಾಜ್ಞವಲ್ಕ್ಯನಿಗೆ ತಿಳಿಸುತ್ತ ಆ ಪ್ರಶ್ನೆಗೆ ಯಾಜ್ಞವಲ್ಕ್ಯನಿಂದ ಉತ್ತರವನ್ನು ನಿರೀಕ್ಷಿಸುತ್ತಾನೆ. ಆ ಪ್ರಶ್ನೆಯೇನೆಂದರೆ, "ಎಲೈ ಯಾಜ್ಞಿಕರೇ, ಯಾವ ವಿಶ್ವನಿಯಾಮಕಶಕ್ತಿಯು ಈ ಲೋಕವನ್ನೂ, ಸಕಲ ಲೋಕಗಳನ್ನೂ, ಸಕಲ ಭೂತಗಳನ್ನೂ ನಿಯಮಿಸುವುದೋ, ಆ ನಿಯಾಮಕಶಕ್ತಿ ಯಾವುದು ? ಎಂದು ಗಂಧರ್ವನು ಕೇಳಿದುದನ್ನು ಯಾಜ್ಞವಲ್ಕ್ಯನಿಗೆ ತಿಳಿಸಿದಾಗ, ಯಾಜ್ಞವಲ್ಕ್ಯನು ಆ ಶಕ್ತಿಯ ಸ್ವರೂಪವನ್ನು ಈ ರೀತಿ ತಿಳಿಸುತ್ತಾನೆ.

ಈ ಶಕ್ತಿಯು ಅಧಿದೈವಿಕವಾದ ವಿಶ್ವವನ್ನೂ ಆಧ್ಯಾತ್ಮಿಕವಾದ ವಿಶ್ವವನ್ನು ನಿಯಮಿಸುವುದಾಗಿದೆ. ಹೇಗೆಂದರೆ—

ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ ... .. ಯಃ
ಪೃಥಿವೀಮಂತರೋ ಯಮಯತ್ಯೇಷ ತ ಆತ್ಮಾಂತರ್ಯಾಮ್ಯಮೃತಃ ॥೩॥
.... ಅಪೋಽಂತರೋ ಯಮಯತಿ .... ॥೪॥
ಯೋಽಗ್ನೌ ತಿಷ್ಠನ್ .....ಅಗ್ನಿಮಂತರೋ ಯಮಯತಿ ॥ ೫ ॥

(ಬೃ. ೩. ೭-೧೪)

ಈ ವಿಶ್ವನಿಯಾಮಕ ತತ್ತ್ವವು, ಪೃಥಿವೀ, ಅಪ್ಪು, ಅಗ್ನಿ, ಅಂತರಿಕ್ಷ, ವಾಯು, ದ್ಯುಲೋಕ, ಸೂರ್ಯ, ದಿಕ್ಕುಗಳು, ಚಂದ್ರ, ಆಕಾಶ, ಅಂಧಕಾರ, ತೇಜಸ್ಸು ಇತ್ಯಾದಿ ಸಕಲ ಜಗತ್ತಿನಲ್ಲಿಯೂ ವ್ಯಾಪಿಸಿರುತ್ತದೆ. ಅವುಗಳಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಅವುಗಳ ವ್ಯವಹಾರಗಳನ್ನು ನಿಯಮಿಸುತ್ತವೆ. ಇದೇ ವಿದ್ಯಾತ್ಮಾ ಎಂದು ಈ ನಿಯಾಮಕ ಶಕ್ತಿಯ ಅಧಿದೈವಿಕ ಶಕ್ತಿಯನ್ನು ತಿಳಿಸಿ, ನಂತರ,

ಯಃ ಸರ್ವೇಷು ಭೂತೇಷು ತಿಷ್ಠನ್ ಸರ್ವೇಭ್ಯೋ ಭೂತೇಭ್ಯೋ .... ಯಃ ಸರ್ವಾಣಿ ಭೂತಾನ್ಯಂತರೋ ಯಮಯತಿ .... ಏಷ ತ ಆತ್ಮಾಂತರ್ಯಾಮ್ಯಮೃತೋಽದೃಷ್ಟಃ .... ॥

(ಬೃ. ೩. ೭೩-೨೩)

ಹೀಗೆಯೇ ಈ ಶಕ್ತಿಯು, ಪ್ರಾಣ, ವಾಕ್, ಚಕ್ಷುಸ್, ಶ್ರೋತ್ರ, ಮನಸ್—ಇತ್ಯಾದ್ಯಾಧ್ಯಾತ್ಮಿಕ ಜಗತ್ತಿಗೆಲ್ಲಾ ಅಂತರ್ಯಾಮಿಯಾಗಿ ನಿಯಾಮಕಶಕ್ತಿಯಾಗಿರುತ್ತದೆ ಎಂದು ಯಾಜ್ಞವಲ್ಕ್ಯನು ವಿವರಿಸುತ್ತಾನೆ. "**ಇದಂ ಯಮಸ್ಯ ಸಾದನಂ**" (ಋ. ಸಂ. ೧೦-೧೩೫-೭) ಇತ್ಯಾದಿ ವಾಕ್ಯಗಳಿಂದ ಯಾವ ಅದಿತ್ಯರೂಪನಾದ ಯಮನ ಪ್ರಶಂಸೆಯಿರುವುದೋ ಅದೇ ಮಾಹಾತ್ಮ್ಯ ಪ್ರಶಂಸೆಯು ಈ ಉಪನಿಷದ್ವಾಕ್ಯಗಳಲ್ಲಿಯೂ ಇರುತ್ತವೆ.

ಯಮನ ವಿಷಯವಾಗಿ ಋಕ್ಕುಗಳಲ್ಲಿ ಕಂಡುಬರುವ ಕೆಲವು ವಿವರಣೆಗಳು

ಮೃತರಲ್ಲಿ ಪುಣ್ಯವಂತರಿಗೆಲ್ಲಾ ಯಮನು ಮುಖಂಡನು. ವೇದಗಳಲ್ಲಿ ಪರಲೋಕದ ವಿಷಯವೇ ಹೆಚ್ಚು ಪ್ರಸಕ್ತಿಯಿಲ್ಲದಿರುವುದರಿಂದ, ಯಮನನ್ನು ಸ್ತುತಿಸುವುದು ಮೂರೇ ಸೂಕ್ತಗಳಲ್ಲಿ (೧೦.೧೪, ೧೩೫;

೧೫೪). ಮತ್ತೊಂದರಲ್ಲಿ (೧೦.೧೦), ಯಮ ಮತ್ತು ಅವನ ಸೋದರಿ ಯಮಿಗೆ ನಡೆದ ಸಂವಾದವಿದೆ. ಯಮನ ಹೆಸರು ಸುಮಾರು ಐವತ್ತು ಸಲ, ಸಾಧಾರಣವಾಗಿ ಒಂದು ಮತ್ತು ಹತ್ತನೆಯ ಮಂಡಲಗಳಲ್ಲಿ, ಅದರಲ್ಲೂ ಹತ್ತನೆಯ ಮಂಡಲದಲ್ಲಿಯೇ ವಿಶೇಷವಾಗಿ ಬಂದಿದೆ.

ಅವನು ದೇವತೆಗಳೊಡನೆ ಕ್ರೀಡಾಮಗ್ನನಾಗಿರುತ್ತಾನೆ (೭.೭೬.೪; ೧೦.೧೩೫.೧). ವರುಣ (೧೦.೧೪--೭), ಬೃಹಸ್ಪತಿ (೧೦.೧೩.೪; ೧೦.೧೪.೩), ಮತ್ತು ವಿಶೇಷವಾಗಿ ಮೃತಾತ್ಮರನ್ನು ಬೇರೆ ಲೋಕಗಳಿಗೆ ಸಾಗಿಸುವ ಅಗ್ನಿ, ಇವರುಗಳೊಡನೆ ಉಕ್ತನಾಗಿದಾನೆ. ಅಗ್ನಿಯು ಯಮನ ಸ್ನೇಹಿತ (೧೦.೬೧.೫) ಮತ್ತು ಪುರೋಹಿತ (೧೦.೫೨.೩). ಒಬ್ಬ ದೇವತೆ ಮತ್ತು ಯಮ (ಇಬ್ಬರೂ ಒಂದೇ ಎಂದು ಸೂಚಿತವಾಗುತ್ತದೆ)ನೂ ಸೇರಿ, ನೀರಿನಲ್ಲಿ ಅಡಗಿಕೊಂಡಿದ್ದ ಅಗ್ನಿಯನ್ನು ಕಂಡುಹಿಡಿದರು (೧೦.೫೧.೩). ಅಗ್ನಿ, ಯಮ ಮತ್ತು ಮಾತರಿಶ ಇವು ಮೂರೂ ಒಬ್ಬನ ಹೆಸರುಗಳು (೧.೧೬೪.೧೬). ಅಗ್ನಿ ಮೊದಲಾದ ದೇವತೆಗಳ ಪಟ್ಟಿಯಲ್ಲಿ ಯಮನೂ ಸೇರಿದಾನೆ (೧೦.೬೪.೩, ೧೦.೯೨.೧೧).

ಈ ಮೇಲೆ ಹೇಳಿದ ವಾಕ್ಯಗಳಿಂದ ಯಮನೂ ಒಬ್ಬ ದೇವತೆಯೆಂದು ಊಹಿಸಬಹುದು. ದೇವತೆ ಎಂದು ಸ್ಪಷ್ಟವಾಗಿ ಕರೆದಿಲ್ಲ; ಮೃತರಾದವರಿಗೆ ರಾಜನೆಂದು ಹೇಳಿದೆ (ಯಮರಾಜ್ಞಃ ೧೦.೧೬೯). ಸತ್ತ ನಂತರ, ಜೀವನು ಕಾಣುವುದು ಯಮ ಮತ್ತು ವರುಣದೇವ, ಇವರಿಬ್ಬರನ್ನು (೧೦.೧೪.೭). ಒಂದು ಸೂಕ್ತ ಪೂರ್ತಿಯಾಗಿ (೧೦.೧೪), ಯಮ ಮತ್ತು ಪಿತೃಗಳಿಗಿರುವ ಸಂಬಂಧದಲ್ಲಿ ಅದರಲ್ಲಿಯೂ ಅಂಗಿರಸರಿಗೆ ಉಕ್ತವಾಗಿದೆ. ಯಮನು ಅವರೊಡನೆ ಯಾಗಕ್ಕೆ ಬರುತ್ತಾನೆ ಮತ್ತು ಸಂತೋಷಪಡುತ್ತಾನೆ (೧೦.೧೪.೩, ೪, ೧೦.೧೫.೪). ಬಂಗಾರದಂತೆ ಕಣ್ಣುಗಳೂ, ಕಬ್ಬಿಣದ ಗೊರಸೂ ಉಳ್ಳ ಅವನ ಅಶ್ವಗಳ ವಿಷಯವು ಪ್ರಸ್ತಾಪಿತವಾಗಿದೆ (ತೈ. ಆ. ೬.೫.೨; ಆಪ. ಶ್ರೌ. ಸೂ. ೧೬.೬). ಅವನು ಜನಗಳನ್ನೆಲ್ಲಾ ಒಂದುಗೂಡಿಸುವವನು (೧೦.೧೪.೧), ಮೃತರಾದರಿಗೆ ವಿಶ್ರಾಂತಿಸ್ಥಾನವನ್ನು ಕಲ್ಪಿಸುತ್ತಾನೆ (೧೦.೧೪.೯; ಅ. ವೇ. ೧೮.೨.೪೭,) ಮತ್ತು ಅವರಿಗೆ ಒಂದು ಪ್ರತ್ಯೇಕ ವಾಸಗೃಹವನ್ನು ಕಲ್ಪಿಸುತ್ತಾನೆ (೧೦.೧೪.೧೩).

ಯಮನ ಸ್ಥಾನವು ಆಕಾಶದ ಒಂದು ಮೂಲೆಯಲ್ಲಿದೆ (೯.೧೧೩.೪). ಮೂರು ಸ್ವರ್ಗಗಳಲ್ಲಿ, ಎರಡು ಸವಿತೃವಿಗೂ, ಒಂದು ಯಮನಿಗೂ ಸೇರಿದೆ (೧.೩೫.೬; ೧.೧೨೩.೬ನ್ನು ಹೋಲಿಸಿ), ಯಮನ ಲೋಕವೇ ಮೂರನೆಯದು ಮತ್ತು ಅತ್ಯುನ್ನತವಾದುದು. ವಾಜಸನೇಯ ಸಂಹಿತೆಯಲ್ಲಿ (೧೨.೬೩), ಯಮನು ಯಮಿಯೊಡಗೂಡಿ, ಈ ಅಂತ್ಯದ ಎತ್ತರದಲ್ಲಿ ಸ್ವರ್ಗದಲ್ಲಿ ವಾಸಿಸುತ್ತಾನೆ ಎಂದಿದೆ. ಅವನ ಈ ಸ್ಥಾನದಲ್ಲಿ— ಇದೇ ದೇವತೆಗಳ ಸ್ಥಾನವೂ ಹೌದು.—ಯಮನ ಸುತ್ತಲೂ ವೇಣುನಾದವೂ, ಗಾನವೂ ಕೇಳಿಬರುತ್ತವೆ (೧೦.೧೩೫.೭).

ಯಮನಿಗೋಸ್ಕರ ಸೋಮರಸವು ಸಿದ್ಧಪಡಿಸಲ್ಪಡುತ್ತದೆ, ಅವನಿಗೆ ಘೃತವು ಅರ್ಪಿತವಾಗುತ್ತವೆ (೧೦.೧೪.೧೩, ೧೪), ಮತ್ತು ಯಾಗಶಾಲೆಗೆ ಬಂದು, ಆಸನದಲ್ಲಿ ಆಸೀನನಾಗಬೇಕೆಂದು ಪ್ರಾರ್ಥನೆ (೧೦.೧೪.೪) ಇವೆ.

ವಿವಸ್ವಂತನು ಅವನ ಜನಕ (೧೦.೧೪.೫) ಮತ್ತು ಸರಣ್ಯು ಎಂಬುವಳು ತಾಯಿಯೆಂದು ಉಕ್ತವಾಗಿದೆ (೧೦.೧೭.೧). ಅನೇಕ ಸಲ ವೈವಸ್ವತನೆಂದು ಕರೆದಿದೆ (೧೦.೧೪.೧; ಇತ್ಯಾದಿ). ಅವನಿಗೆ ಅಧಿಕರಾರೂ ಇಲ್ಲದುದರಿಂದ, ಯಮನೇ ವಿವಸ್ವತನಿಗಿಂತ ಶ್ರೇಷ್ಠನು (ಅ. ವೇ. ೧೪.೨.೩೨; ೧೪.೩.೬೧, ೬೨ಗಳನ್ನು ಹೋಲಿಸಿ).

ಯಮ ಯಮಿಗಳ ಸಂವಾದದಲ್ಲಿ ತಾವಿಬ್ಬರೂ ಗಂಧರ್ವ ಮತ್ತು ಜಲದೇವತೆಯ (ಅಪ್ಸ್ಯಾ ಯೋಷಾ) ಮಕ್ಕಳೆಂದು ಹೇಳಿಕೊಂಡಿದಾರೆ (೧೦-೧೦.೪) ಯಮನೊಬ್ಬನೇ ಮರ್ತ್ಯನೆಂದು ಯಮಿಯು ಹೇಳುತ್ತಾಳೆ(೧೦-೧೦.೩) ಯಮನು ದೇಹವನ್ನು ತ್ಯಜಿಸಿ ಮೃತ್ಯುವನ್ನೇ ಅಪೇಕ್ಷಿಸಿದನೆಂದು ಇದೆ (೧೦-೧೩.೪). ಅವನು ಅನಂತರ ಬರುವ ಅನೇಕರಿಗೆ ದಾರಿಯನ್ನು ತೋರಿಸುತ್ತಾ, ಬೇರೆ ಲೋಕಕ್ಕೆ ಹೋದನು; ಇಲ್ಲಿಗೇ ಪುರಾತನರಾದ ಪಿತೃಗಳೂ ಹೋಗಿರುವುದು (೧೦-೧೪ ೧, ೨). ಅವನೇ ಮೃತರಾದ ಮರ್ತ್ಯರಿಗೆಲ್ಲಾ ಮೊದಲಿನವನು (ಅ ವೇ. ೧೮-೩-೧೩). ಇಲ್ಲಿ ಮರ್ತ್ಯರೆಂದರೆ ಮನುಷ್ಯರೇ ಇರಬೇಕು; ಆದರೆ, ಬೇರೆ ಕೆಲವು ಸಂದರ್ಭಗಳಲ್ಲಿ, ಮರ್ತಪದದಿಂದ ದೇವತೆಗಳೂ ಉದ್ದಿಷ್ಟರಾಗಿದ್ದಾರೆ. ಯಮನು ಸತ್ತವರಲ್ಲಿ ಮೊದಲನೆಯವನೂ, ಬಹಳ ಪುರಾತನನೂ ಆದುದರಿಂದ, ಅವರಿಗೆಲ್ಲಾ ಒಡೆಯನೆನಿಸಿಕೊಳ್ಳುವುದು ಸ್ವಾಭಾವಿಕವೇ. ಅವನಿಗ ವಿಶ್ಪತಿ (ನೆಲಸಿದವರಿಗೆಲ್ಲಾ ಒಡೆಯ), ನಮ್ಮ ತಂದೆ ಎಂಬ ವಿಶೇಷಣಗಳಿವೆ (೧೦-೧೩೫-೧) ಯಮನ ಮೂಲಕವೇ, ಮುಂದೆ ಮನುಷ್ಯರಿಗೆಲ್ಲಾ, ವಿವಸ್ವಾನ್ ಅದಿತ್ಯನ ವಂಶಜರೆಂಬ ನಾಮಧೇಯವು ಬಂದಿರುವುದು (ತೈ. ಸಂ ೬ ೫-೬-೨; ಶ. ಬ್ರಾ. ೩-೧-೩-೪ ಮತ್ತು ಋ. ಸಂ ೧೦೧೪ ಗಳನ್ನು ಹೋಲಿಸಿ). ಯಮನು ಸಂದ ದತ್ತನಾದ 'ಆಕಾಶದಲ್ಲಿ ಸಂಚರಿಸುವ ಅಶ್ವ'ವು, ಅಮರರಾಗತಕ್ಕವರಿಗೆ ಯಮನು ಕೂಡುವ ಸ್ಥಾನವೇ ಇರಬಹುದು (೧೦೬೪.೨, ೧೦೪೫-೫ನ್ನು ಹೋಲಿಸಿ), ಹೀಗೆಯೇ ಯಮನಿಗೂ ಆದಿತ್ಯಸಿಗೂ ಸಂಬಂಧವು ಋಗ್ವೇದದಲ್ಲಿಯೂ ಉಕ್ತವಾಗಿದೆಯೆನ್ನಬಹುದು.

ಮೃತ್ಯುವೇ ಯಮನ ಮಾರ್ಗ (೧-೩೮-೫) ಮತ್ತು ಒಂದು ಸಲ (೧೦೬೫.೪, ಸೈ. ಸಂ ೨-೫-೬ ಮತ್ತು ಅ. ವೇ. ೬-೨೮.೩೧ ಮತ್ತು ೬.೯೩-೧ ಗಳನ್ನು ಹೋಲಿಸಿ) ಅವನೇ ಮೃತ್ಯುವೆಂತಲೂ ಹೇಳಿದೆ. ಯಮನು ಉಪಯೋಗಿಸುವ ಶ್ಯೆಂಖಲೆಗಳು ವರುಣನ ಪಾಶಕ್ಕೆ ಉಪಮಿತವಾಗಿವೆ (೧೦-೬೮ ೬) ಇಂತಹ ವಾಕ್ಯಗಳು ಮತ್ತು ಅವನ ದೂತರ ಲಕ್ಷಣಗಳಿಂದ ಯಮನು ಭಯಂಕರನೆಂದು ತೋರಬಹುದು. ಅಥರ್ವ ವೇದದಲ್ಲಿ ಮತ್ತು ಇತರ ವೈದಿಕ ಇತಿಹಾಸಗಳಲ್ಲಿ, ಮರಣ ಮತ್ತು ಮರಣಾನಂತರದ ದುಃಖಾನುಭವಗಳು ಯಮಕರ್ತೃಕವಾದುವೆಂದು ಹೇಳಿರುವುದರಿಂದ, ಯಮನೇ ಮೃತ್ಯುದೇವತೆಯೆಂದು ಪರಿಗಣಿತನಾಗಿದಾನೆ. ಆದರೆ ಪುರಾಣಗಳಲ್ಲಿಯೂ ಕೂಡ, ನರಕಪ್ರಪಂಚದೇ ಯಮನ ರಾಜ್ಯವೆನ್ನಿಸಿಂದು ಸ್ಪಷ್ಟವಾಗಿದೆ ಇತರ ಸಂಹಿತೆ ಗಳಲ್ಲಿಯೂ, ತಂತಕ, ಮೃತ್ಯು, ನಿರ್ಋತಿ (ರೋಗ) ಇವರುಗಳ ಪಟ್ಟಿಯಲ್ಲಿ ಯಮನೂ ಒಬ್ಬನು (ವಾ. ಸಂ. ೩೯-೧೩; ಅ. ವೇ. ೬ ೨೯.೩, ಪೈ. ಸಂ. ೨-೫-೬) ಮತ್ತು ಮೃತ್ಯುವು ಅವನ ದೂತ (ಅ. ವೇ. ೫-೩೦೧೨; ೧೮.೩-೨೬; ಇತ್ಯಾದಿ). ಮೃತ್ಯುವು ಮನುಷ್ಯರಿಗೆ ಅಧಿಪತಿಯೆಂದೂ ಯಮನು ಪ್ರೇತಗಳಿಗೆ ಅಧಿಪತಿಯೆಂದೂ (ತೈ. ಸಂ ೫-೨೪-೧೩, ೧೪), ನಿದ್ರೆಯು (ನಿದ್ರಾಧಿದೇವತೆಯು) ಯಮನ ರಾಜ್ಯದಿಂದ ಬರುತ್ತಾಳೆಂದೂ (ತೈ. ಸಂ. ೧೯-೫೬-೧) ಹೇಳಿದೆ.

ಯಮ ಎಂಬ ಪದಕ್ಕೆ 'ಅವಳಿ' ಎಂಬರ್ಥದಲ್ಲಿಯೂ ಪ್ರಯೋಗವಿದೆ. ಸಾಧಾರಣವಾಗಿ ಪುಲ್ಲಿಂಗ ಅಥವಾ ಸ್ತ್ರೀಲಿಂಗ ದ್ವಿವಚನದಲ್ಲಿ—ಮತ್ತು ಲಗಾಮು ಅಥವಾ ಮಾರ್ಗದರ್ಶಕ ಎಂಬರ್ಥದಲ್ಲಿಯೂ ಈ ಶಬ್ದದ ಪ್ರಯೋಗಗಳಿವೆ. ಯಮ ಮತ್ತು ಯಮಿಗಳು ಯಮಳರೆಂಬೇ ಭಾವನೆ (೧೦-೧೦). ಇತರ ಗ್ರಂಥಗಳಲ್ಲಿ, ಯಮನನ್ನು ಮೃತ್ಯುದೇವತೆ, ದುಷ್ಪಶಿಕ್ಷಕ ಮೊದಲಾದ ರೀತಿಯಲ್ಲಿ ವರ್ಣಿಸುವಾಗ, ಈ ಪದವು ಯಮ್ (ಪತೋಟಿ ಯಲ್ಲಿಟ್ಟುಕೋ) ಧಾತುವಿನಿಂದ ನಿಷ್ಪನ್ನವಾದುದೆಂದು ಅಭಿಪ್ರಾಯವಿದ್ದರೂ, ಇದಕ್ಕೆ ವೇದಗಳಲ್ಲಿ ಆಧಾರವಿಲ್ಲವೇ ಇಲ್ಲವೆನ್ನಬಹುದು.

ನಿರುಕ್ತದ ವಿಭಾಗಕ್ರಮದಂತೆ ಸೂಕ್ತಭಾಜರೂ, ಹವಿರ್ಭಾಜರೂ ಮತ್ತು ನಿಪಾತಭಾಜರೂ ಆದ ದೇವತೆಗಳು

(೧) ಸೂಕ್ತಭಜರು

ಪೃಥ್ವೀಸ್ಥಾನದೇವತೆಗಳು

ಅಶ್ವಃ, ರಕುನಿಃ, ಮಂಡೂಕಾಃ, ಅಕ್ಷಾಃ, ಗ್ರಾವಾಣಃ, ನಾರಾಶಂಸಾಃ, ರಥಃ, ದುಂದುಭಿಃ, ಇಷುಧಿಃ, ಹಸ್ತಘ್ನಃ, ಅಭಿಷವಃ ಧನುಃ ಜ್ಯಾಃ, ಇಷುಃ, ಅಶ್ವಾಜನೀ, ಉಲೂಖಲಂ, ವೃಷಭಃ, ದ್ರುಘಣಃ, ಪಿತುಃ, ನದ್ಯಃ ಅಪಃ, ಓಷಧಯಃ, ರಾತ್ರಿಃ, ಅರಣ್ಯಾನೀ, ಶ್ರದ್ಧಾ, ಪೃಥಿವೀ, ಅಪ್ವಾ, ಉಲೂಖಲಮುಸಲೇ, ಹವಿರ್ಧಾನೇ, ದ್ಯಾವಾ ಪೃಥಿವೀ, ವಿಪಾಟ್ಶುತುದ್ರೀ, ಆರ್ಷ್ಣೀ, ಶುನಾಸೀರೌ. (೩೩).

ಮಧ್ಯಸ್ಥಾನದೇವತೆಗಳು

ವೇನಃ, ಅಸುನೀತಿಃ, ಋತಃ, ಇಂದುಃ, ಅಹಿಃ, ಅಹಿರ್ಬುಧ್ನ್ಯಃ, ಸುಪರ್ಣಃ, ಪುರೂರವಾಃ, ಸೋಮಃ ಚಂದ್ರಮಾಃ, ವೈಶ್ವಾನರಃ ಧಾತಾ, ಮರುತಃ, ರುದ್ರಾಃ, ಋಭವಃ, ಅಂಗಿರಸಃ, ಪಿತರಃ, ಅಥರ್ವಾಣಃ, ಭೃಗವಃ, ರಾಕಾ, ಯಮೀ, ಊರ್ವಶೀ, ಪೃಥಿವೀ, ಇಂದ್ರಾಣೀ, ಗೌರೀ, ಗೌಃ, ಧೇನುಃ, ಅಘ್ನ್ಯಾ, ಅದಿತಿಃ, ಪರಮಾ, ವಾಕ್, ಅನುಮತಿಃ ಪಥ್ಯಾ, ಸ್ವಸ್ತಿಃ, ಉಷಾಃ, ಇಳಾ, ರೋದಸಿ, (೩೭)

ಅಂತರಿಕ್ಷಸ್ಥಾನದೇವತೆಗಳು

ಉಷಾಃ, ಸೂರ್ಯಃ, ವೃಷಾಕಪಾಯೀ, ಸರಣ್ಯೂಃ, ಸವಿತಾ, ಭಗಃ, ಸೂರ್ಯಾ, ಪೂಷಾ, ವಿಷ್ಣುಃ, ವರುಣಃ ಕೇಶೀ, ಕೇಶಿನಃ ವೃಷಾಕಪಿಃ, ಸಪ್ತರ್ಷಯಃ, ದೇವಃ, ಸಾಧ್ಯಾಃ, ವಾಜಿನಃ, ದೇವಪತ್ನ್ಯಃ (೧೮).

(೨) ಹವಿರ್ಭಾಜರು

ಪೃಥ್ವೀಸ್ಥಾನದೇವತೆಗಳು

ಅಗ್ನಿಃ, ದ್ರವಿಣೋದಾಃ, ಇಧ್ಮಃ, ತನೂನಪಾತ್, ನರಾಶಂಸಃ, ಇಳಃ, ಬರ್ಹಿಃ, ದ್ವಾರಃ, ಉಷಾಸಾನಕ್ತಾ, ದೈವ್ಯಾಹೋತಾರಾ, ತಿಸ್ರೋದೇವೀಃ, ತ್ವಷ್ಟಾ, ವನಸ್ಪತಿಃ, ಸ್ವಾಹಾಕೃತಯಃ, ಅಗ್ನಾಯೀ, ದೇವೀಜೋಷ್ಟ್ರೀ, ದೇವೀ ಊರ್ಜಾಹುತೀ. (೧೭).

ಮಧ್ಯಸ್ಥಾನದೇವತೆಗಳು

ವಾಯುಃ, ವರುಣಃ, ರುದ್ರಃ, ಇಂದ್ರಃ, ಪರ್ಜನ್ಯಃ, ಬ್ರಹ್ಮಣಸ್ಪತಿಃ, ಕ್ಷೇತ್ರಸ್ಯ ಪತಿಃ, ವಾಸ್ತೋಷ್ಪತಿಃ, ವಾಚಸ್ಪತಿಃ, ಅಪಾಂನಪಾತ್, ಯಮಃ, ಮಿತ್ರಃ, ಕಃ, ಸರಸ್ವಾನ್, ವಿಶ್ವಕರ್ಮಾ, ತಾರ್ಕ್ಷ್ಯಃ, ಮನ್ಯುಃ, ದಧಿಕ್ರಾ, ಸವಿತಾ, ತ್ವಷ್ಟಾ, ವಾತಃ, ಅಗ್ನಿಃ, ಪ್ರಜಾಪತಿಃ, ಸರಸ್ವತೀ, ಸಿನೀವಾಲೀ, ಕುಹೂಃ, ಶ್ಯೇನ, ವೃತ್ರು, ಸೋಮ(೨೯).

ದ್ಯುಸ್ಥಾನದೇವತೆಗಳು

ಅಶ್ವಿನೌ, ಯಮಃ, ವಿಶ್ವೇದೇವಾಃ, ಆದಿತ್ಯಾಃ, ಹವಿಃ, ವಸವಃ.

(೩) ನಿಪಾತಭಾಜಃ

a) ಜಾತವೇದಾಃ, ವೈಶ್ವಾನರಃ.

b) ವಿಧಾತಾ, ಆಪ್ತ್ಯಃ,

c) ತ್ವಷ್ಟಾ, ನೈಶ್ವನರಃ, ಪೃಥಿವೀ, ಸಮುದ್ರಃ, ಅಥರ್ವಾ, ಮನುಃ, ದಧ್ಯಂಚ್, ಅಜ ಏಕಪಾತ್,

ಬೃಹದ್ದೇವತೆಯಲ್ಲಿ ಉಕ್ತಮುಂತ್ರರೆಂದೂ, ಹವಿರ್ಭಾಜರೆಂದೂ ಸಹ ದೇವತೆಗಳ ವಿಭಾಗವನ್ನು ತೋರಿಸುತ್ತ ಈ ರೀತಿ ತಿಳಿಸಿದೆ.

ಸಪ್ತರ್ಷಯೋ ವಸವಶ್ಚಾಪಿ ದೇವಾ ಅಥರ್ವಾಣೋ ಭೃಗವಃ ಸೋಮಸೂರ್ಯಾಃ ।
ಪಥ್ಯಾ ಸ್ವಸ್ತೀ ರೋದಸೀ ಚೋಕ್ತಮುಂತ್ರೇ ಕುಹೂರ್ಗುಂಗೂರದಿತಿರ್ಧೇನುರಘ್ನ್ಯಾ ॥
ಅಸುನೀತಿರಿಳಾ ಚಾಪ್ತ್ಯಾ ವಿಧಾತಾನುಮತಿರ್ಹ ಯಾ ।
ಅಂಗಿರೋಭಿಃ ಸಹೈತಾಃ ಸ್ಯುರುಕ್ತಮುಂತ್ರಾಶ್ಚ ದೇವತಾಃ ॥

(ಬೃ. ದೇ. ೪ ೧೨೫-೧೨೬)

ಎಂದರೆ, ಸಪ್ತರ್ಷಿಗಳು, ವಸುಗಳು, ದೇವತೆಗಳು, ಅಥರ್ವರು, ಭೃಗುಗಳು, ಸೋಮನು, ಸೂರ್ಯ, ಸೂರ್ಯಾ, ಪಥ್ಯಾ, ಸ್ವಸ್ತೀ, ರೋದಸೀ, ಕುಹೂಃ, ಗುಂಗೂಃ, ಅದಿತಿಃ, ಧೇನುಃ, ಅಘ್ನ್ಯಾ, ಅಸುನೀತಿ, ಇಳಾ, ಆಪ್ತ್ಯಾ, ಅನುಮತಿ ಮತ್ತು ಅಂಗಿರಸ್ಸುಗಳು.

ವೈಶ್ವಾನರೋ ಹಿ ಸುಪರ್ಣೋ ವಿವಸ್ವಾನ್ ಪ್ರಜಾಪತಿರ್ದ್ಯೌಃ ಸುಧನ್ವಾ ನಗೋಹ್ಯಃ ।
ಅಪಾಂನಪಾದರ್ಯಮಾ ವಾತಜೂತಿರಿಳಸ್ಪತಿಶ್ಚಾಪಿ ರಥಸ್ಪತಿಶ್ಚ ॥
ಋಭವಃ ಪರ್ಜನ್ಯಃ ಪರ್ವತಾ ಗ್ನಾಶ್ಚ ದಕ್ಷೋ ಭಗೋ ದೇವಪತ್ನೀರ್ದಿತಶ್ಚ ।
ಆದಿತ್ಯಾ ರುದ್ರಾಃ ಪಿತರೋಽಥ ಸಾಧ್ಯಾ ನಿಪಾತಿನೋ ವೈಶ್ವದೇವೇಷು ಸರ್ವೇ ॥

(ಬೃ. ದೇ, ೪. ೧೨೭-೧೩೪)

ವೈಶ್ವಾನರ, ಸುಪರ್ಣ, ವಿವಸ್ವಾನ್ ಇತ್ಯಾದಿಗಳು ಹವಿರ್ಭಾಜರು. ನಿಪಾತಭಾಜರೂ ಇಲ್ಲಿಯೇ ಅಂತರ್ಗತರಾಗಿದ್ದಾರೆ.

ಯಮನಿಗೂ ಯಮಿಗೂ ಸಂಭೋಗಾರ್ಥವಾಗಿ ನಡೆದ ಸಂಭಾಷಣೆಯು

ಈ ಸಂಭಾಷಣೆಯಲ್ಲಿ ಶಬ್ದಗಳ ಪ್ರತ್ಯೇಕವಿವರಣೆಯನ್ನೂ, ಅನ್ವಯಕ್ರಮವನ್ನೂ ಕ್ಲಿಷ್ಟವಾದ ಶಬ್ದಗಳಿಂದ ವಿವರಿಸದೆ ಸಂಭಾಷಣೆಯ ಮುಖ್ಯ ಸಾರಾಂಶವನ್ನು ಮಾತ್ರ ಕೊಟ್ಟಿದೆ—

(೧) ಯಮಿಯು ಯಮನನ್ನು ಕುರಿತು ಹೇಳುತ್ತಾಳೆ—ಎಲೈ ಯಮನೇ, ಸಮುದ್ರಮಧ್ಯದಲ್ಲಿರುವ ಈ ದ್ವೀಪವು ವಿಸ್ತಾರವಾಗಿದ್ದರೂ ನಿರ್ಜನಪ್ರದೇಶವಾಗಿರುವುದು ಎಂದರೆ ರಹಸ್ಯಸ್ಥಳವಾಗಿರುವುದು. ಗರ್ಭವಾಸದಿಂದಲೂ ಎಂದರೆ ನಾವಿಬ್ಬರೂ ಹುಟ್ಟಿದಾರಭ್ಯ ಜತೆಯಲ್ಲಿಯೇ ಬೆಳೆದು ಸ್ನೇಹಿತರಾಗಿರುವೆವು. ಆದ್ದರಿಂದ ಈಗ ನಾನು ಸ್ತ್ರೀ

ಸಹಜವಾದ ಲಜ್ಜೆಯನ್ನು ಬಿಟ್ಟು ನಿನ್ನೊಡನೆ ಸ್ತ್ರೀಪುರುಷರಿಗೆ ಸಹಜವಾದ ಸಂಪರ್ಕವನ್ನು ಎಂದರೆ ಸಂಭೋಗವನ್ನು ಮಾಡಲು ಅಪೇಕ್ಷಿಸುವೆನು. ಸಂಭೋಗದ ಪರಿಣಾಮವಾಗಿನಮ್ಮಿಬ್ಬರಿಗೂ ಜನಿಸುವ ಸರ್ವಗುಣೋಪೇತನಾದ ಪುತ್ರನು ನನ್ನ ಉದರದಲ್ಲಿ ಜನಿಸುವುದಕ್ಕಾಗಿ ಸೃಷ್ಟಿಕರ್ತನಾದ ಪ್ರಜಾಪ್ರತಿಯು ನನ್ನಲ್ಲಿ ಗರ್ಭವನ್ನು ಉಂಟುಮಾಡಲಿ.

(೨) ಯಮ—ಎಲೈ ಯಮಿಯೇ, ಗರ್ಭವಾಸದಿಂದ ನಾನು ನಿನ್ನ ಜತೆಯಲ್ಲಿಯೇ ಇದ್ದು ಬೆಳೆದು ನಿನ್ನೊಡನೆ ಸ್ನೇಹದಿಂದಿದ್ದರೂ, ಸ್ತ್ರೀಪುರುಷರಿಗೆ ಅರ್ಹವಾದ ಸಂಭೋಗವನ್ನು ನಿನ್ನೊಡನೆ ಇಚ್ಛಿಸುವುದಿಲ್ಲ. ನಾವಿಬ್ಬರೂ ಏಕೋದರರು ಎಂದರೆ ಒಂದೇ ತಾಯಿಯ ಗರ್ಭದಲ್ಲಿ ಹುಟ್ಟಿಬೆಳೆದವರು ಅನೇಕವಿಷಯಗಳಲ್ಲಿ ನಮ್ಮಿಬ್ಬರಲ್ಲಿಯೂ ಸಮಾನವಾದ ಗುಣಗಳಿವೆ. ಆದರೆ ನೀನು ನನಗೆ ಸಹೋದರಿಯಾದ್ದರಿಂದ ನಿನ್ನ ಸಂಗವನ್ನು ನಾನು ಅಪೇಕ್ಷಿಸುವುದಿಲ್ಲ. ಏಕೆಂದರೆ ಪ್ರಜಾಪತಿಯ ಅಥವಾ ಬ್ರಹ್ಮನ ಪುತ್ರರೂ ವೀರರೂ ದ್ಯುಲೋಕವಾಸಿಗಳೂ ಆದ ದೇವತೆಗಳು ಈ ಕಾರ್ಯವನ್ನು ಎಂದರೆ ಸಹೋದರ ಸಹೋದರಿಯರ ಪರಸ್ಪರ ಸಂಭೋಗವನ್ನುನಿಷಿದ್ಧವೆಂದು ಸಾರಿದ್ದಾರೆ.

(೩) ಯಮಿ—ಎಲೈ ಯಮನೇ, ನೀನು ಹಾಗೆಂದಿಗೂ ಭಾವಿಸಬೇಡ. ದೇವತೆಗಳೂ ಸಹ ಶಾಸ್ತ್ರಾದಿಗಳಲ್ಲಿ ನಿಷಿದ್ಧವೆಂದು ಹೇಳಲ್ಪಟ್ಟಿರುವ ಸಂಗಗಳಲ್ಲಿ ಅನುರಕ್ತರಾಗಿರುವ ಎಷ್ಟೋ ದೃಷ್ಟಾಂತಗಳಿವೆ ಸೃಷ್ಟಿಕರ್ತನಾದ ಪ್ರಜಾಪತಿಯೇ ತನ್ನ ಮಗಳಲ್ಲಿ ಅನುರಕ್ತನಾಗಿ ಅವಳೊಡನೆ ಕೂಡಿ ಸುಖಿಸಲಿಲ್ಲವೇ? ಇವೆಲ್ಲಕ್ಕೂ ನಮ್ಮ ಮನಸ್ಸೇ ಕಾರಣವು. ನಾನು ನಿನ್ನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತೇನೆ. ನೀನೂ ಸಹ ನನ್ನನ್ನು ಪ್ರೀತಿಸುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ ಹಿಂದೆ ಪ್ರಜಾಪತಿಯು ತನ್ನ ಪುತ್ರಿಯಲ್ಲಿ ಸಂಭೋಗಮಾಡಿದಂತೆ ನೀನೂ ನನ್ನಲ್ಲಿ ಪ್ರವೇಶಿಸಿ ಎಂದರೆ ನನ್ನ ಪತಿಯಂತೆ ನನ್ನಲ್ಲಿ ಸಂಭೋಗಮಾಡಿ ನನಗೆ ಸುಖವನ್ನುಂಟುಮಾಡು.

(೪) ಯಮ—ಎಲೈ ಯಮಿಯೇ, ಹಿಂದೆ ಸರ್ವಶಕ್ತನಾದ ಪ್ರಜಾಪತಿಯು ಮಾಡಿದಂತೆ ನಾವು ಈಗ ಮಾಡುವುದು ಸಾಧ್ಯವಿಲ್ಲ ಇದುವರೆಗೆ ನಾವಿಬ್ಬರೂ ಸತ್ಯವನ್ನೇ ನುಡಿಯುತ್ತಾ ನ್ಯಾಯಮಾರ್ಗದಲ್ಲಿಯೇ ಪ್ರವೃತ್ತರಾಗಿದ್ದೇವೆ. ಅಗಮ್ಯಾಗಮನ ಮೊದಲಾದ ಯಾವ ನಿಷಿದ್ಧಕರ್ಮಾಚರಣೆಯನ್ನೂ ಮಾಡಿಲ್ಲ. ಅಂತರಿಕ್ಷಸ್ಥನಾದ ಆದಿತ್ಯನೂ ಅವನ ಪತ್ನಿಯಾದ ಸರಣ್ಯೂದೇವಿಯು ನಮಗೆ ತಂದೆತಾಯಿಗಳು. ಅಂತಹ ಲೋಕಪೂಜ್ಯರಾದ ತಂದೆತಾಯಿಗಳ ಪುತ್ರರಾದ ನಾವು ಅಗಮ್ಯಾಗಮನವೆಂಬ ನಿಷಿದ್ಧಕಾರ್ಯವನ್ನು ಮಾಡಲಾದೀತೆ? ನಮ್ಮಿಬ್ಬರಿಗೂ ಇರುವ ಸಂಬಂಧವು ಸಹೋದರ ಸಹೋದರಿಯರಿಗಿರಬೇಕಾದ ಉತ್ಕೃಷ್ಟ ಸಂಬಂಧವು ಪತಿಪತ್ನಿಯರಿಗಿರಬೇಕಾದ ಅನುರಾಗ ಸಂಬಂಧವಲ್ಲ.

(೫-೭) ಯಮಿ—ಎಲೈ ಯಮನೇ, ಸಮಸ್ತಪ್ರಾಣಿವರ್ಗಕ್ಕೂ ಅವೆರವರಿಗೆ ಸಹಜವಾದ ರೂಪಾದಿಗಳನ್ನು ಕೊಟ್ಟು ನಿಯಮಿಸುವ ತ್ವಷ್ಟೃಪ್ರಜಾಪತಿಯೇ ನಮ್ಮಿಬ್ಬರನ್ನೂ ಒಂದೇ ಗರ್ಭದಲ್ಲಿ ಬೆಳೆಯುವಂತೆ ಮಾಡಿ ಗರ್ಭವಾಸದಿಂದಲೂ ನಾವಿಬ್ಬರೂ ದಂಪತಿಗಳಾಗಿರಬೇಕೆಂದು ನಿಯಮಿಸಿದ್ದಾನೆ. ಸರ್ವಶಕ್ತನಾದ ಈ ಪ್ರಜಾಪತಿಯ ನಿಯಮರೂಪವಾದ ಆಜ್ಞೋಲ್ಲಂಘನೆಯನ್ನು ಮಾಡಲು ಯಾರೂ ಶಕ್ತರಲ್ಲ. ಆದ್ದರಿಂದ ಪ್ರಜಾಪತಿಯ ನಿಯಮಕ್ಕೆ ಅನುಸಾರವಾಗಿಯೇ ನಾವು ದಂಪತಿಗಳಂತೆ ಇದ್ದು ಸಂಭೋಗದಿಂದ ಸುಖವನ್ನನುಭವಿಸೋಣ. ಮಾತೃಗರ್ಭದಿಂದ ನಮಗೆ ಉಂಟಾದ ಈ ದಂಪತಿಸಂಬಂಧವನ್ನು ಸಕಲ ಜಗತ್ತಿಗೂ ಮಾತಾಪಿತೃಗಳಾದ ದ್ಯಾವಾಪೃಥಿವಿಗಳೂ ತಿಳಿದೇ ಇರುವರು

(೬) ಈ ದಿನ ನಡೆಯುವ ಪ್ರಥಮ ದಿವಸದ ಸಮಾಗಮ ಸಂಬಂಧವು ಯಾರಿಗೆ ತಿಳಿಯುವುದು? ಇದು ರಹಸ್ಯಸ್ಥಳವು. ಇಲ್ಲಿ ಯಾರೂ ಇಲ್ಲ. ಇಲ್ಲಿ ನಡೆಯುವ ನಮ್ಮ ಸಂಭೋಗವನ್ನು ಯಾರು ನೋಡುವರು? ಮತ್ತು ಅದು ಇತರರಿಗೆ ಹೇಗೆ ಗೊತ್ತಾಗುವುದು? ಮಿತ್ರಾವರುಣರ ಸ್ಥಾನವಾದ ಅಹೋರಾತ್ರಗಳು (ಕಾಲವು) ಅತಿ ವಿಸ್ತಾರವಾಗಿದು ಆಗ ಮಾನವಾದಿಪ್ರಾಣಿಗಳು ಆಚರಿಸುವ ಪಾಪಪುಣ್ಯರೂಪವಾದ ಸರ್ವಕರ್ಮಗಳಿಗೂ ಅವರವರ ಕರ್ಮಕ್ಕನುಸಾರವಾಗಿ ನರಕವನ್ನೋ ಸ್ವರ್ಗವನ್ನೋ ಪಡೆಯುವಂತೆ ಅನುಗ್ರಹಿಸುವ ಶಕ್ತಿಯು ಯಮರಾಜನಾದ ನಿನಗೇ ಇದೆ. ಇಂತಪ ಶಕ್ತಿಯಿರುವ ನೀನು ಏಕೆ ಹೆದರಬೇಕು? ಈ ವಿಷಯದಲ್ಲಿ ನೀನು ಏನು ಹೇಳುವೆ?

(೭) ಎಲೈ ಯಮನೇ, ನನ್ನಲ್ಲಿ ನಿನಗೆ ಕಾಮಾಸಕ್ತಿಯು ಉಂಟಾಗಲಿ. ಒಂದೇ ಹಾಸಿಗೆಯಲ್ಲಿ ಇಬ್ಬರೂ ಜತೆಯಲ್ಲಿ ಒಟ್ಟಿಗೆ ಮಲಗಿ ಪತಿಪತ್ನಿಯರಂತೆ ಸಂಭೋಗಸುಖನ್ನು ಅನುಭವಿಸೋಣ. ಆನಂತರ ಪತ್ನಿಯು ಅನುಸರಿಸಬೇಕಾದ ಧರ್ಮದಂತೆ ರತಿಕ್ರಿಯೆಯಲ್ಲಿ ರತಿಕಾಮೋತ್ಸುಕಳಾದ ನಾನು ನನ್ನ ಶರೀರವನ್ನು ಅತ್ಯಂತ ಪ್ರೀತಿಯಿಂದ ನಿನಗೆ ಅರ್ಪಿಸುವೆನು. ಬಳಿಕ ನಾವಿಬ್ಬರೂ, ರಥದ ಎರಡು ಚಕ್ರಗಳು ಒಂದೇ ವಿಧವಾದ ಚಲನೆಯಿಂದ ರಥವನ್ನು ಒಯ್ಯುವಂತ ನಾವಿಬ್ಬರೂ ಪತಿಪತ್ನಿಯರಂತೆ ಸುಖಸಂತೋಷಗಳನ್ನು ಅನುಭವಿಸುತ್ತಾ ಧರ್ಮಾರ್ಥಕಾಮಗಳನ್ನು ನಿರ್ವಹಿಸೋಣ

(೮-೧೦) ಯಮ—ಎಲೈ ಯಮಿಯೇ, ಈ ಲೋಕದಲ್ಲಿಯೂ ಕೂಡ ದೇವತೆಗಳಿಂದ ನಿಯಮಿಸಲ್ಪಟ್ಟ ಗೂಢಚಾರರು ಸಮಸ್ತ ಪ್ರಾಣಿಗಳ ಶುಭಾಶುಭಕರ್ಮಗಳನ್ನು ಅಹೋರಾತ್ರಗಳಲ್ಲಿಯೂ ನೋಡುತ್ತಾ ಸಂಚರಿಸುತ್ತಾರೆ. ಅವರು ಒಂದು ಕ್ಷಣಕಾಲ ಮಾತ್ರವೂ ಸಪ ವಿಶ್ರಾಂತಿಯಿಲ್ಲದೆ ಸಂಚರಿಸುತ್ತಾರೆ. ಒಂದು ನಿಮಿಷವೂ ಅವರು ಕಣ್ಣನ್ನು ಮುಚ್ಚುವುದಿಲ್ಲ. ನಾವು ಮಾಡುವ ಶುಭಾಶುಭ ಕರ್ಮಗಳನ್ನು ಅವರು ನೋಡಿಯೇ ನೋಡುತ್ತಾರೆ. ಆದುದರಿಂದ ಎಲೈ ಪಾಪಕರ್ಮನಿರತಳಾದ ಸ್ತ್ರೀಯೇ, ನೀನು ಇನ್ನು ಮೇಲೆ ನಿನ್ನ ಅಸಹ್ಯಕರವಾದ ಸಂಭಾಷಣೆಯಿಂದ ನನ್ನನ್ನು ಪಿಂಸಿಸಬೇಡ. ದೂರ ಸರಿದು ಹೋಗು. ನಿನಗೆ ನಿನ್ನ ಪಾಪಕರ್ಮದಲ್ಲಿ ಸಹಾಯಕನಾದ ಬೇರೆ ಪುರುಷನೊಂದಿಗೆ ಸೇರಿ ನೀನು ಹೇಳುವಂತೆ ರಥಚಕ್ರಗಳಂತೆ ಧರ್ಮಾರ್ಥಕಾಮಗಳನ್ನು ನಿರ್ವಹಿಸು-

(೯) ರಾತ್ರಿಕಾಲದಲ್ಲಿಯೂ, ಹಗಲಿನಲ್ಲಿಯೂ ಯಜ್ಞಮಾಡುವ ಯಜಮಾನನು ಯಮನಿಗೆ ಯಜ್ಞದಲ್ಲಿ ಹವಿರ್ಭಾಗವನ್ನರ್ಪಿಸಲಿ. ಸೂರ್ಯನು ಪ್ರತಿದಿನವೂ ಯಮನ ತೃಪ್ತಿಗಾಗಿಯೇ ಉದಯಿಸಲಿ. ಪರಸ್ಪರ ಬಂಧು ಭೂತರಾದ ಅಹೋರಾತ್ರಿಗಳು ದ್ಯಾವಾಪೃಥಿವಿಗಳಿಂದ ಸಹಿತರಾಗಿ ಯಮನ ಸುಖಕ್ಕಾಗಿಯೇ ಸಹಕರಿಸಲಿ ಈ ಯಮಿಯು ತನಗೆ ಸೋದರನಲ್ಲದ ಮತ್ತೊಬ್ಬ ಪುರುಷನನ್ನು ವರಿಸಲಿ.

(೧೦) ಎಲೈ ಯಮಿಯೇ, ಸಹೋದರಿಯರು ತಮ್ಮ ಸಹೋದರರನ್ನೇ ವರಿಸಿ ತಮ್ಮ ಪತಿಗಳನ್ನಾಗಿ ಮಾಡಿಕೊಳ್ಳುವ ಕಾಲವು ಮುಂದೆ ಬರುತ್ತದೆ. ಎಲೈ ಸುಂದರಿಯೇ, ಆದುದರಿಂದ ನೀನು ನನ್ನನ್ನು ಕಾಮಿಸುವುದನ್ನು ಬಿಟ್ಟು ನನಗಿಂತಲೂ ಬೇರೆಯಾದ ಮತ್ತೋರ್ವ ಸುಂದರಪುರುಷನನ್ನು ಪತಿಯಾಗಿ ಸ್ವೀಕರಿಸು. ನಿನ್ನ ಕಾಮಾಭಿಲಾಷೆಯನ್ನು ಪೂರೈಸುವ ಆ ಪುರುಷನಿಗೆ ಶಯನಕಾಲದಲ್ಲಿ ನಿನ್ನ ಬಾಹು (ತೋಳು) ವನ್ನೇ ತಲೆದಿಂಬನ್ನಾಗಿ ಮಾಡಿ ಅವನೊಡನೆ ಯಥೇಚ್ಛವಾಗಿ ರಮಿಸು ಮತ್ತು ಅವನನ್ನು ಸುಖಪಡಿಸು.

(೧೧) ಯಮಿ—ಎಲೈ ಯಮನೇ, ಸಹೋದರನಿರುವಾಗ ಅವನ ಸಹೋದರಿಯು ಕಪ್ಪಕ್ಕೀಡಾಗಿ ಅನಾಥಳಂತೆ ಪ್ರಲಪಿಸುತ್ತಿರುವಾಗ ಅದನ್ನು ಲಕ್ಷಿಸದಿರುವ ಸಹೋದರನು ನಿಜವಾದ ಸಹೋದರನೆನಿಸುವನೇ? ಅದರಂತೆ

ಸಹೋದರಿಯಿದ್ದೂ ತನ್ನ ಸಹೋದರನ ದುಃಖಶಮನವನ್ನು ಮಾಡದಿರುವ ಸಹೋದರಿಯು ನಿಜವಾದ ಸಹೋದರಿಯೇ? ಎಂದಿಗೂ ಅಲ್ಲ. ಕಾಮುಪರವಶಳಾದ ನಾನು ಕಾಮದಿಂದ ಪೀಡಿತಳಾಗಿ ನಿನ್ನನ್ನು ಅನೇಕ ವಿಧಗಳಲ್ಲಿ ಕಾಮತೃಪ್ತಿಗಾಗಿ ಬೇಡಿಕೊಳ್ಳುತ್ತಿದ್ದೇನೆ. ನನ್ನ ಶರೀರದೊಂದಿಗೆ ನಿನ್ನ ಶರೀರವನ್ನು ಸೇರಿಸಿ ಸಂಭೋಗದಿಂದ ಸುಖವನ್ನನುಭವಿಸು.

(೧೨) ಯಮ—ಎಲೈ ಯಮಿಯೇ ನೀನು ಹೇಳುವಂತೆ ನಿನ್ನ ಶರೀರದೊಡನೆ ನನ್ನ ಶರೀರಸಂಪರ್ಕವನ್ನು ಮಾಡಿ ನಿನ್ನೊಡನೆ ಸಂಭೋಗಮಾಡಲು ನಾನು ಇಚ್ಛಿಸುವುದಿಲ್ಲ. ಸಹೋದರನಾದವನು ತನ್ನ ತಂಗಿಯಲ್ಲೀ ಅನು ರಕ್ತನಾಗಿ ಅವಳೊಡನೆ ಸಂಭೋಗಿಸಿದಲ್ಲಿ ಅವನನ್ನು ಮಹಾಪಾಪಿಷ್ಠನೆಂದು ಶಿಷ್ಟಾಚಾರವನ್ನು ತಿಳಿದ ಸಜ್ಜನರು ಹೇಳುವರು. ಆದ್ದರಿಂದ ಎಲೈ ಸುಂದರಿ, ನೀನು ನನ್ನನ್ನು ಬಿಟ್ಟು ನಿನಗೆ ಅರ್ಹನಾದ ಬೇರೊಬ್ಬ ಸುಂದರತರುಣನೊಡನೆ ಸಂಭೋಗಸಂಬಂಧವಾದ ಸುಖಸಂತೋಷಗಳನ್ನನುಭವಿಸು. ನಿನ್ನ ಸಹೋದರನಾದ ಈ ಯಮನು ನಿನ್ನೊಡನೆ ಸಂಭೋಗಿಸಲು ಇಚ್ಛಿಸುವುದಿಲ್ಲ.

(೧೩) ಯಮಾ—ಎಲೈ ಯಮನೇ, ನೀನು ತುಂಬಾ ದುರ್ಬಲನಾಗಿರುವೆ (ಮೂರ್ಖನಾಗಿರುವೆ) ಇದು ಬಹಳ ಕಷ್ಟವು. ನಿನ್ನ ಮನಸ್ಸನ್ನು ಮನಸ್ಸಿನಲ್ಲಿರುವುದನ್ನೂ ನಾವು ಯಾರೂ ತಿಳಿಯಲಾರೆವು. ತನ್ನನ್ನೇ ಕಟ್ಟಬಿಗಿದಿರುವ ಹಗ್ಗವನ್ನು ಅಶ್ವವು ಬಿಗಿದಪ್ಪುವಂತೆಯೂ ಬಳ್ಳಿಗಳು ವೃಕ್ಷವನ್ನು ಸುತ್ತುವರಿದು ಅಪ್ಪಿಕೊಳ್ಳುವಂತೆಯೂ ಸುಂದರನಾದ ನಿನ್ನನ್ನು ಬೇರೊಬ್ಬ ಸ್ತ್ರೀಯು ಅನುರಾಗದಿಂದ ಆಲಂಗಿಸಿಕೊಳ್ಳುವುದನ್ನು ನೋಡಿ ಹೇಗೆ ಸಹಿಸಲಿ ?

(೧೪) ಯಮ—ಎಲೈ ಯಮಿ, ನೀನು ನನ್ನನ್ನು ಬಿಟ್ಟು ಅನ್ಯಪುರುಷನನ್ನೇ ಆಲಂಗಿಸು. ಅವನೂ ಸಹ ನಿನ್ನನ್ನು ಆಲಂಗಿಸಲಿ. ಲತೆಯು ತನಗೆ ಆಶ್ರಯಭೂತವಾದ ವೃಕ್ಷವನ್ನು ಬಿಗಿದುಪ್ಪುವಂತೆ ನೀವಿಬ್ಬರೂ ಒಬ್ಬರನ್ನೊಬ್ಬರು ಆಲಂಗಿಸಿಕೊಂಡು ಸುಖವಾಗಿರಿ. ನೀನು ಆ ಪುರುಷನ ಮನೋಭಿಲಾಷೆಯಂತೆ ನಡೆದುಕೋ. ಆ ಪುರುಷನೂ ಸಹ ನಿನ್ನ ಮನಸ್ಸಿನಂತೆಯೇ ನಡೆಯುತ್ತಾ ಸುಂದರಾಂಗಿಯಾದ ನಿನ್ನೊಡನೆ ಸಂಭೋಗಸುಖವನ್ನನುಭವಿಸಲಿ.

ಈ ಸೂಕ್ತವನ್ನು ಜಪಮಾಡುವ ವಿಷಯದಲ್ಲಿ ಋಗ್ವಿಧಾನವೆಂಬ ಗ್ರಂಥದಲ್ಲಿ ಶೌನಕಮಹರ್ಷಿಯು ಈರೀತಿ ಹೇಳಿರುವರು—

ಉಪತಿಷ್ಠೇತ ರಾಜಾನಂ ಯಮಂ ಸೂಕ್ತೇನ ವೈ ದ್ವಿಜಃ ।
ಸ್ಥಾಲೀಪಾಕಂ ಚ ಕುರ್ವೀತ ಪಕ್ಷಯೋರ್ಯಮದೈವತಂ ॥ ೩೫ ॥
ಅಷ್ಟಮ್ಯಾಂ ಚ ಚತುರ್ದಶ್ಯಾಂ ಯಜೇತ ಹವಿಷಾ ಯಮಂ ॥

ದ್ವಿಜನಾದವನು ಯಮಧರ್ಮರಾಜನನ್ನು ಈ ಸೂಕ್ತವನ್ನು ಪಠಿಸುತ್ತಾ ಪ್ರಾರ್ಥಿಸಬೇಕು. ಅನಂತರ ಪೂರ್ವಾಪರ ಪಕ್ಷಗಳೆರಡರಲ್ಲಿಯೂ ಅಷ್ಟಮಿ ಮತ್ತು ಚತುರ್ದಶೀ ತಿಥಿಗಳಲ್ಲಿ ಸ್ಥಾಲೀಪಾಕವಿಧಾನದಿಂದ ಸಂಸ್ಕೃತಾಗ್ನಿಯಲ್ಲಿ ಯಮನನ್ನುದ್ದೇಶಿಸಿ ಮಂತ್ರಪೂರ್ವಕವಾಗಿ ಹೋಮಮಾಡಬೇಕು.

ಪಠೇಯುರಾಂಸಮೇತತ್ಸೂಕ್ತಮುತ್ರ ಪ್ರಯೋಜಯೇತ್ ॥ ೩೬ ॥
ಪುರಾಯುಷಃ ಪ್ರಮಿಯೇತ ನ ಜಾತು ಸ ಕಥಂಚನ ।
ಪ್ರೀಯತೇಽಸ್ಯ ಯಮೋ ರಾಜಾ ಸ್ಮೃತಿಂ ಚಾಂತೇ ಪ್ರಯಚ್ಛತಿ ॥ ೩೭ ॥

ಧರ್ಮರಾಜಾಯ ಸ್ವಾಹೇತಿ ಮುಂತ್ರಾಂತೇ ಜುಹಾಯದ್ಧವಿಃ ।
ವೈಶಾಖ್ಯಾಂ ಪೌರ್ಣಮಾಸ್ಯಾಂ ತು ಕರ್ಮ ನಿತ್ಯಂ ಪ್ರಯೋಜಯೇತ್ ॥ ೩೮ ॥

ಈ ಹೋಮಕಾಲದಲ್ಲಿ **ಪರೇಯಿವಾಂಸಂ** ಎಂಬ ಸೂಕ್ತದ (೧೦ನೇ ಮಂಡಲದ ೧೪ನೇ ಸೂಕ್ತದ ಮಂತ್ರಗಳನ್ನು ಪಠಿಸುತ್ತಾ ಹೋಮಮಾಡಬೇಕು. ಈರೀತಿ ಮಾಡಿದಲ್ಲಿ ಅವನ ಆಯುಃಪ್ರಮಾಣವು ಮುಗಿಯುವ ಮೊದಲೇ ಅವನಿಗೆ ಮರಣವು ಪ್ರಾಪ್ತವಾಗುವ ಸಂಭವವಿರುವುದಿಲ್ಲ. ಎಂದರೆ ಪುರುಷನ ಜೀವಿತಕಾಲವಾದ ನೂರುವರ್ಷಗಳವರೆಗೆ ಜೀವಿಸಿರುವನು. ಈ ವಿಧವಾದ ಹೋಮದಿಂದ ಯಮರಾಜನು ಸಂತುಷ್ಟನಾಗುವನು ಮತ್ತು ಆ ಪುರುಷನ ಮರಣ ಕಾಲದಲ್ಲಿ ಅವನಿಗೆ ಸ್ಮೃತಿರಾಹಿತ್ಯವಿಲ್ಲದೆ ಕೊನೆಯವರೆಗೂ ಜ್ಞಾನವುಳ್ಳವನಾಗಿಯೇ ಇರುವನು. ಪ್ರತಿ ಮಂತ್ರದ ಕೊನೆಯಲ್ಲಿಯೂ **ಧರ್ಮರಾಜಾಯ ಸ್ವಾಹಾ** ಎಂದು ಸೇರಿಸಿ ಹೋಮಮಾಡಬೇಕು. ವೈಶಾಖಮಾಸದ ಪೌರ್ಣಮಿಯಲ್ಲಿ ಈ ಹೋಮಕರ್ಮವನ್ನು ಮುಖ್ಯವಾಗಿ ಆಚರಿಸಬೇಕು.

ಅಯನೇ ಪರ್ವಸು ಸ್ನಾತ್ವಾ ಯಃ ಪ್ರದದ್ಯಾತ್ತಿಲೋದಕಂ ।
ಯಮಾಯ ಸಗಣಾಯೈವ ತದ್ಭಯಂ ನ ಸ ವಿಂದತೇ ॥ ೩೯ ॥
(ಋಗ್ವಿಧಾನ ೩ನೇ ಅಧ್ಯಾಯ)

ಉತ್ತರಾಯನ ದಕ್ಷಿಣಾಯನ ಕಾಲಗಳಲ್ಲಿಯೂ ಪರ್ವಕಾಲಗಳಲ್ಲಿಯೂ ಯಾವಪುರುಷನು ಸ್ನಾನಮಾಡಿ ಪರಿವಾರ ಸಹಿತನಾದ ಯಮರಾಜನನ್ನುದ್ದೇಶಿಸಿ ತಿಲೋದಕದಿಂದ (ಎಳ್ಳುನೀರು) ತರ್ಪಣವನ್ನು ಕೊಡುವನೋ ಅವನಿಗೆ ಯಮನಿಂದ ಯಾವವಿಧವಾದ ಭಯವೂ ಇರುವುದಿಲ್ಲ.

॥ ಸಾಯಣಭಾಷ್ಯಂ ॥

ಓ ಚಿದಿತಿ ಚತುರ್ದಶರ್ಚಂ ದಶಮಂ ಸೂಕ್ತಂ । ಅತ್ರಾನುಕ್ರಮ್ಯತೇ ॥ ಓ ಚಿತ್ಸಪೂರ್ನಾ ವೈವಸ್ವತಯೋರ್ಯಮಯಮ್ಯೋಃ ಸಂವಾದಃ ಷಷ್ಠ್ಯಯುಗ್ವಿರ್ಯಮೀ ಮಿಥುನಾರ್ಥಂ ಯಮಂ ಪ್ರೋವಾಚ ಸ ತಾಂ ನವಮೀಮಯುಗ್ವಿರನಿಚ್ಛನ್ ಪ್ರತ್ಯಾಚಷ್ಟ ಇತಿ । ತತಃ ಷಷ್ಠ್ಯಾಂ ಪ್ರಥಮಾತೃತೀಯಾದ್ಯಯುಕ್ಷು ವಿವಸ್ವತಃ ಪುತ್ರೀ ಯಮ್ಯೃಷಿರ್ಯಮೋ ದೇವತಾ । ಯಸ್ಯ ವಾಕ್ಯಂ ಸ ಋಷಿರ್ಯಾತೇನೋಚ್ಯತೇ ಸಾ ದೇವತೇತಿ ನ್ಯಾಯಾತ್ । ತಥಾ ನವಮ್ಯಾಂ ದ್ವಿತೀಯಾಚತುರ್ಥೀಪ್ರಭೃತಿಷು ಯುಕ್ಷು ವೈವಸ್ವತೋ ಯಮ ಋಷಿರ್ಯಮೀ ದೇವತಾ । ಅನಾದೇಶಪರಿಭಾಷಯಾ ತ್ರಿಷ್ಟುಪ್ ॥ ಗತೋ ವಿನಿಯೋಗಃ ॥

ಅನುವಾದವು—ಓ ಚಿತ್ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ **ಓ ಚಿತ್ ಸಪೂರ್ನಾ ವೈವಸ್ವತಯೋರ್ಯಮಯಮ್ಯೋಃ ಸಂವಾದಃ ಷಷ್ಠ್ಯಯುಗ್ವಿರ್ಯಮೀ ಮಿಥುನಾರ್ಥಂ ಯಮಂ ಪ್ರೋವಾಚ ಸ ತಾಂ ನವಮೀಮಯುಗ್ವಿರನಿಚ್ಛನ್ ಪ್ರತ್ಯಾಚಷ್ಟೇ** ಎಂದು ಹೇಳಿರುವುದು. ಈ ಸೂಕ್ತದಲ್ಲಿ ವಿವಸ್ವಂತನ ಪುತ್ರನಾದ

ಯಮನಿಗೂ, ಅವನ ಸಹೋದರಿಯಾದ ಯಮಿಾ ಎಂಬ ಸ್ತ್ರೀಗೂ ಪರಸ್ಪರ ಸಂಭೋಗಾರ್ಥವಾಗಿ ನಡೆದ ಸಂಭಾಷಣೆ ಇದೆ. ೧, ೩, ೫-೭, ೧೧, ೧೩ ನೇ ಋಕ್ಕುಗಳನ್ನು ಯಮಿಯೂ, ೨, ೪, ೮-೧೦, ೧೨, ೧೪ ನೇ ಋಕ್ಕುಗಳನ್ನು ಯಮನೂ ಪರಸ್ಪರ ಎಂದರೆ ಒಬ್ಬರನ್ನೊಬ್ಬರು ಉದ್ದೇಶಿಸಿ ಹೇಳಿದಾರೆ. ಆದ್ದರಿಂದ ಈ ಸೂಕ್ತದ ೧, ೩ ಮೊದಲಾದ ಅಸಮಸಂಖ್ಯೆಯ ಋಕ್ಕುಗಳಿಗೂ ಮತ್ತು ಆರನೆಯ ಋಕ್ಕಿಗೂ ವೈವಸ್ವತೀ ಯಮಿಾ ಎಂಬ ಸ್ತ್ರೀಯು ಋಷಿಯು, ಯಮನೇ ದೇವತೆಯು. **ಯಸ್ಯ ವಾಕ್ಯಂ ಸ ಋಷಿರ್ಯಾ ತೇನೋಚ್ಯತೇ ಸಾ ದೇವತಾ** ಎಂಬ ನ್ಯಾಯದಂತೆ ಋಕ್ಕಿನಲ್ಲಿರುವ ವಾಕ್ಯವನ್ನು ಯಾರು ಪರಿಸುವರೋ ಅವರೇ ಆ ಋಕ್ಕಿಗೆ ಋಷಿಯು. ವಾಕ್ಯದಲ್ಲಿ ಪ್ರತಿಪಾದಿತವಾಗಿರುವ ವಿಷಯವೇ ಆ ಋಕ್ಕಿಗೆ ದೇವತೆಯು ಎಂಬ ನ್ಯಾಯಾನುಸಾರವಾಗಿ ಮೇಲೆ ಹೇಳಿದ ೧, ೩ ಮೊದಲಾದ ಅಸಮ ಸಂಖ್ಯೆಯ (೯ನೇ ಋಕ್ಕನ್ನು ಬಿಟ್ಟು) ಮತ್ತು ಆರನೆಯ ಋಕ್ಕನ್ನು ಯಮಿ ಎಂಬ ಸ್ತ್ರೀಯು ಹೇಳಿರುವುದರಿಂದ ಆ ಋಕ್ಕುಗಳಿಗೆ ಯಮಿಯೇ ಋಷಿಯು; ಆ ಋಕ್ಕುಗಳಲ್ಲಿ ಯಮನ ವಿಷಯವು ಪ್ರತಿಪಾದಿತವಾಗಿರುವುದರಿಂದ ಆ ಋಕ್ಕುಗಳಿಗೆ ಯಮನೇ ದೇವತೆಯು. ಅದರಂತೆಯೇ ಈ ಸೂಕ್ತದ ೨, ೪ ಮೊದಲಾದ ಸಮಸಂಖ್ಯೆಯ (೬ನೇ ಋಕ್ಕನ್ನು ಬಿಟ್ಟು) ಋಕ್ಕುಗಳಿಗೂ ಅಸಮಸಂಖ್ಯೆಯಾದ ೯ನೇ ಋಕ್ಕಿಗೂ ವೈವಸ್ವತೋ ಯಮಃ ಎಂಬುವನು ಋಷಿಯು; ಯಮಿಯೇ ದೇವತೆಯು, ತ್ರಿಷ್ಟುಪ್ ಛಂದಸ್ಸು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೧೦

ಮಂಡಲ—೧೦ । ಅನುವಾಕ—೧ । ಸೂಕ್ತ—೧೦ ।
ಅಷ್ಟಕ—೭ । ಅಧ್ಯಾಯ—೬ । ವರ್ಗ—೬, ೭, ೮ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ।
ಋಷಿಃ—೧, ೩, ೫-೭, ೧೧, ೧೩. ಯಮಿಾ ವೈವಸ್ವತೀ । ೨, ೪, ೮-೧೦, ೧೨, ೧೪. ಯಮೋ ವೈವಸ್ವತಃ ॥
ದೇವತಾ—೧. ೩, ೫-೭, ೧೧, ೧೩. ಯಃಸೋ ವೈವಸ್ವತಃ । ೨, ೪, ೮-೧೦, ೧೨, ೧೪. ಯಮಿಾ ವೈವಸ್ವತೀ ।
ಛಂದಃ—ತ್ರಿಷ್ಟುಪ್ ॥

। ಸಂಹಿತಾಪಾಠಃ ।

ಓ ಚಿತ್ಸಖಾಯಂ ಸಖ್ಯಾ ವವೃತ್ಯಾಂ ತಿರಃ ಪುರೂ ಚಿದರ್ಣವಂ ಜಗನ್ವಾನ್।
ಪಿತುರ್ನಪಾತಮಾ ದಧೀತ ವೇಧಾ ಅಧಿ ಕ್ಷಮಿ ಪ್ರತರಂ ದೀಧ್ಯಾನಃ ॥ ೧ ॥

। ಪದಪಾಠಃ ।

ಓ ಇತ್ । ಚಿತ್ । ಸಖಾಯಂ । ಸಖ್ಯಾ । ವವೃತ್ಯಾಂ । ತಿರಃ । ಪುರು । ಚಿತ್ । ಅರ್ಣವಂ । ಜಗನ್ವಾನ್।
ಪಿತುಃ । ನಪಾತಂ । ಆ । ದಧೀತ । ವೇಧಾಃ । ಅಧಿ । ಕ್ಷಮಿ । ಪ್ರತರಂ । ದೀಧ್ಯಾನಃ ॥ ೧ ॥

॥ ಸಾಯಣಭಾಷ್ಯಂ ॥

ಅತ್ರಾಸ್ಮಿನ್ಸೂಕ್ತೇ ವೈವಸ್ವತಯೋರ್ಯಮಯಮ್ಯೋಃ ಸಂವಾದ ಉಚ್ಯತೇ । ಅಸ್ಯಾಮೃಚಿ ಯಮುಂ ಪ್ರತಿ ಯಮೀ ಪ್ರೋವಾಚ । ತಿರೋಽಂತರ್ಹಿತಮುಪ್ರಕಾಶಮಾನಂ । ನಿರ್ಜನಪ್ರದೇಶ ಮಿತ್ಯರ್ಥಃ ।ಪುರು ಚಿದ್ಪಹ್ವಪಿ ವಿಸ್ತೀರ್ಣಂ ಚಾರ್ಣವಂ ಸಮುದ್ರೈಕದೇಶಮವಾಂತರದ್ವೀಪಂ ಜಗನ್ವಾನ್ ಗತವತೀ ಯಮೀ । ಚಿದಿತಿ ಪೂಜಾರ್ಥೇ । ಪೂಜಿತಮಿಷ್ಟಂ । ಶ್ರೇಷ್ಠಮಿತ್ಯರ್ಥಃ । ಸಖಾಯಂ ಗರ್ಭ-ವಾಸಾದಾರಭ್ಯ ಸಖೀಭೂತಂ ಯಮುಂ ಸಖ್ಯಾ ಸಖ್ಯಾಯ ಸ್ತ್ರೀಪುರುಷಸಂಪರ್ಕಜನಿತಮಿತ್ರತ್ವಾಯ ಓ ವವೃತ್ಯಾಂ । ಆವರ್ತಯಾಮಿ । ಅಭಿಮುಖ್ಯೇನ ಸ್ಥಿತ್ವಾ ಲಜ್ಜಾಂ ಪರಿತ್ಯಜ್ಯ ತ್ವತ್ಸಂಭೋಗಂ ಕರೋ-ಮೀತ್ಯರ್ಥಃ । ಧರ್ಮಸ್ಯ ತ್ವರಿತಾ ಗತಿರಿತಿ ನ್ಯಾಯೇನ ಕಾಮಸ್ಯ ತ್ವರಿತತ್ವಾತ್ । ಅಪಿ ಚ ಪಿತುರಾವಯೋ-ರ್ಭರ್ತುರ್ವಿಷ್ಯತಃ ಪುತ್ರಸ್ಯ ಪಿತೃಭೂತಸ್ಯ ತವಾರ್ಥಾಯಾಧಿ ಷ್ಣ್ಯಧಿ ಪೃಥಿವ್ಯಾಂ । ಪೃಥಿವೀಸ್ಥಾನೀಯೇ ಮಮೋದರ ಇತ್ಯರ್ಥಃ । ಪ್ರತರಂ ಪ್ರಕೃಷ್ಟಂ । ಸರ್ವಗುಣೋಪೇತಮಿತ್ಯರ್ಥಃ । ನಪಾತಂ ಗರ್ಭಲಕ್ಷಣ-ಮಪತ್ಯಂ ವೇಧಾ ವಿಧಾತಾ ಪ್ರಜಾಪತಿರ್ದೀಧ್ಯಾನ ಆವಯೋರನುರೂಪಸ್ಯ ಪುತ್ರಸ್ಯ ಜನನಾರ್ಥ-ಮಾವಾಂ ಧ್ಯಾಯನ್ನಾ ದಧೀತ । ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ। ಋ. ೧೦-೧೮೪-೧. ಇತ್ಯುಕ್ತತ್ವಾತ್ ॥

॥ ಪ್ರತಿಪದಾರ್ಥ ॥

ತಿರಃ—ನಿರ್ಜನಪ್ರದೇಶವಾದುದೂ । ಪುರು ಚಿತ್—ಅತಿ ವಿಸ್ತೃತವಾದುದೂ । ಅರ್ಣವಂ—ಸಮುದ್ರ ಮಧ್ಯವರ್ತಿಯೂ ಆದ ಪ್ರದೇಶಕ್ಕೆ । ಜಗನ್ವಾನ್—ನಾನು ಬಂದಿದ್ದೇನೆ । ಚಿತ್—ಶ್ರೇಷ್ಠನೂ । ಸಖಾಯಂ—ಆಪ್ತನೂ ಆದ ಯಮನನ್ನು । ಸಖ್ಯಾ—ನಮ್ಮಿಬ್ಬರ ಪ್ರೇಮಸಂಪಾದನೆಗಾಗಿ । ಓ ವವೃತ್ಯಾಂ—ನನಗಭಿಮುಖ ನಾಗುವಂತೆ ಮಾಡುವೆನು। ವೇಧಾಃ—ಸೃಷ್ಟಿಕರ್ತನಾದ ಪ್ರಜಾಪತಿಯು । ದೀಧ್ಯಾನಃ—ಪೂರ್ಣವಾಗಿ ಆಲೋಚಿಸಿ ಪಿತುಃ—ನಮ್ಮ (ನನ್ನ ಮತ್ತು ಯಮನ) ಸಂಬಂಧದಿಂದ ಉತ್ಪನ್ನವಾಗುವ ಶಿಶುವಿಗೆ । ಅಧಿ ಷ್ಣ್ಯಾಂ—ಪೃಥ್ವೀಸ್ಥಾನೀಯವಾದ ನನ್ನಉದರದಲ್ಲಿ । ಪ್ರತರಂ—ಅತ್ಯುತ್ಕೃಷ್ಟವಾದ । ನಪಾತಂ—ಗರ್ಭವನ್ನು । ಆ ದಧೀತ-ಸ್ಥಾಪಿಸಲಿ

॥ ಭಾವಾರ್ಥ ॥

ನಿರ್ಜನಪ್ರದೇಶವಾದುದೂ, ಅತಿ ವಿಸ್ತೃತವಾದುದೂ, ಸಮುದ್ರ ಮಧ್ಯವರ್ತಿಯೂ ಆದ ಈ ದ್ವೀಪಕ್ಕೆ ನಾನು ಬಂದಿದ್ದೇನೆ. ಶ್ರೇಷ್ಠನೂ, ಆಪ್ತನೂ ಆದ ಯಮನನ್ನು ನಮ್ಮಿಬ್ಬರ ಪ್ರೇಮಸಂಪಾದನೆಗಾಗಿ ನನಗಭಿಮುಖ ನಾಗುವಂತೆ ಮಾಡುತ್ತೇನೆ ಸೃಷ್ಟಿಕರ್ತನಾದ ಪ್ರಜಾಪತಿಯು ಪೂರ್ಣವಾಗಿ ಆಲೋಚಿಸಿ ನನ್ನ ಮತ್ತು ಯಮನ ಸಂಬಂಧದಿಂದ ಉತ್ಪನ್ನವಾಗುವ ಶಿಶುವಿಗೆ ಪೃಥ್ವೀಸ್ಥಾನೀಯವಾದ ನನ್ನ ಉದರದಲ್ಲಿ ಅತ್ಯುತ್ಕೃಷ್ಟವಾದ ಗರ್ಭವನ್ನು ಸ್ಥಾಪಿಸಲಿ.

English Translation

(Yami speaks). I invite my friend to friendship, having come o'er vast and desert ocean; may Vedhas, after reflecting, place in my womb the offspring (of you) the father, endowed with excellent qualities.

॥ संहितापाठः ॥

न तेऽयमा सख्यं वष्ट्येतत्सलक्ष्मा यद्विषुरूपा भवाति ।
महस्पुत्रासो असुरस्य वीरा दिवो धर्तार उर्विया परि ख्यन् ॥ ७ ॥

॥ पदपाठः ॥

न । ते । सऽयमा । सख्यम् । वष्टि । एतत् । सऽलक्ष्मा । यत् । विषुऽरूपा । भवाति ।
महः । पुत्रासः । असुरस्य । वीराः । दिवः । धर्तारः । उर्विया । परि । ख्यन् ॥ ७ ॥

॥ सायणभाष्यं ॥

यमु आत्मानं परोक्षीकृत्य यमीमां प्रत्युवाच । हे यमि ते तव सखा गर्भवासलक्षणेन सखीभूतोऽयमु एतदीदृशं त्वयोक्तं स्त्रीपुरुषलक्षणं सख्यं न वष्टि । न कामयते । यद्यस्मात्कारणाद्यमी सलक्ष्मा समानयोनित्वलक्षणा विषुरूपा भगिनीत्वाद्विषमरूपा भवाति भवति । तस्मान्न वष्टीत्यर्थः । इदानीं तिरः पुरूचिदर्णवं जगन्वानित्यस्य प्रतिवचनमुच्यते । महो महतोऽसुरस्य प्राणवतः प्रज्ञावतो वा प्रजापतेः पुत्रासः पुत्रभूता वीराः । वीरो वीरयत्यमित्रान्वेतेवार्या स्याद्गतिकर्मणो वीरयतेवार्या । नि. ८-६ । इति निरुक्तं । शतक्रतूणां विविधमीरयितारो धर्तारो धारयितारो दिवो द्युलोकस्य । प्रदर्शनमेतत् । द्युप्रभृतीनां द्युलोकानामित्यर्थः ॥ .... ॥ [धर्तारः उर्विया उरवः मां परिचक्ष्यते न कर्तव्यमिति वदंति]

॥ प्रतिपदार्थ ॥

(ಎಲೈ ಯಮಿಯೇ) **यत्**—ಯಾವ ಕಾರಣದಿಂದ । **विषुरूपा**—ಸ್ತ್ರೀಯಾದುದರಿಂದ ನನಗಿಂತಲೂ ಭಿನ್ನರೂಪಳಾದ ನೀನು । **सलक्ष्मा भवाति**—ಒಂದೇ ಯೋನಿಯಲ್ಲಿ ಉತ್ಪನ್ನಳಾಗಿರುವೆಯೋ ಆದುದರಿಂದ । **ते**—ನಿನ್ನ । **सखा**—ಆಪ್ತನಾದ ನಾನು । **एतत्**—ನಿನ್ನಿಂದ ನಿರ್ದಿಷ್ಟವಾದ । **सख्यं**—ಸಂಬಂಧವನ್ನು । **न वष्टि**—ಅಪೇಕ್ಷಿಸುವುದಿಲ್ಲ । **महः**—ಮಹಾತ್ಮನಾದ । **असुरस्य**—ಪ್ರಜಾಪತಿಯ । **पुत्रासः**—ಪುತ್ರರೂ । **वीराः**—ಪರಾಕ್ರಮವುಳ್ಳವರೂ । **दिवः**—ದ್ಯುಲೋಕದ । **धर्तारः**—ಧಾರಕರೂ । **उर्विया**—ಅತ್ಯಧಿಕರೂ ಆದ ದೇವತೆಗಳು । **परि ख्यन्**—ಈ ಕಾರ್ಯವನ್ನು ನಿಷೇಧಿಸುವಂತೆ ಹೇಳುತ್ತಾರೆ.

॥ भावार्थ ॥

ಎಲೈ ಯಮಿಯೇ, ಯಾವ ಕಾರಣದಿಂದ ನನಗಿಂತಲೂ ಭಿನ್ನರೂಪಳಾದ ನೀನು (ಸ್ತ್ರೀರೂಪಳಾದರೂ), ಒಂದೇ ಯೋನಿಯಲ್ಲಿ ಉತ್ಪನ್ನಳಾಗಿರುವೆಯೋ, ಆದುದರಿಂದ ನಿನ್ನ ಆಪ್ತನಾದ ನಾನು ನಿನ್ನಿಂದ ನಿರ್ದಿಷ್ಟವಾದ

ಸಂಬಂಧವನ್ನು ಅಪೇಕ್ಷಿಸುವುದಿಲ್ಲ. ಮಹಾತ್ಮನಾದ ಪ್ರಜಾಪತಿಯ ಪುತ್ರರೂ ಪರಾಕ್ರಮವುಳ್ಳವರೂ, ದ್ಯುಲೋಕದ ಧಾರಕರೂ ಅತ್ಯಧಿಕರೂ ಆದ ದೇವತೆಗಳು ಈ ಕಾರ್ಯವನ್ನು ನಿಷೇಧಿಸುವಂತೆ ಹೇಳುತ್ತಾರೆ.

English Translation

(Yama speaks). Your friend desires not this friendship, for although of one origin, she is of different form; the hero sons of the great Asura (prajapati) the upholders of heaven, enjoying vast renown, do not permit this intercourse.

॥ ಸಂಹಿತಾಪಾಠಃ ॥

ಉಶಂತಿ ಘಾ ತೇ ಅಮೃತಾಸ ಏತದೇಕಸ್ಯ ಚಿತ್ತ್ಯಜಸಂ ಮರ್ತ್ಯಸ್ಯ ।
ನಿ ತೇ ಮನೋ ಮನಸಿ ಧಾಯ್ಯಸ್ಮೇ ಜನ್ಯುಃ ಪತಿಸ್ತನ್ವಂ ಮಾ ವಿವಿಶ್ಯಾಃ ॥

॥ ಪದಪಾಠಃ ॥

ಉಶಂತಿ । ಘ । ತೇ । ಅಮೃತಾಸಃ । ಏತತ್ । ಏಕಸ್ಯ । ಚಿತ್ । ತ್ಯಜಸಂ । ಮರ್ತ್ಯಸ್ಯ ।
ನಿ । ತೇ । ಮನಃ । ಮನಸಿ । ಧಾಯಿ । ಅಸ್ಮೇಇತಿ । ಜನ್ಯುಃ । ಪತಿಃ । ತನ್ವಂ । ಮ । ವಿವಿಶ್ಯಾಃ ॥ ೩ ॥

॥ ಸಾಯಣಭಾಷ್ಯಂ ॥

ಪುನರಪಿ ಯಮೀ ಯಮಂ ಪ್ರತ್ಯುವಾಚ । ಘೇತಿ ನಿಪಾತೋಽಪ್ಯರ್ಥೇ । ಹೇ ಯಮ ತೇ ಪ್ರಸಿದ್ಧಾ ಅಮೃತಾಸಃ ಪ್ರಜಾಪತ್ಯಾದಯೋಽಪಿ ದೇವಾ ಏತದೀದೃಶಂ ಶಾಸ್ತ್ರೇಷ್ವಾಗಮ್ಯತ್ವೇನೋಕ್ತಂ ತ್ಯಜಸಂ । ತ್ಯಜ್ಯತೇ ಪರಸ್ಮೈ ಪ್ರದೀಯತ ಇತಿ ತ್ಯಜಸಂ ದುಹಿತೃಭಗಿನ್ಯಾದಿಸ್ತ್ರೀಜಾತಂ । ಉಶಂತಿ । ಕಾಮಯಂತೇ । ಏಕಸ್ಯ ಚಿತ್ ಸರ್ವಸ್ಯ ಜಗತೋ ಮುಖ್ಯಸ್ಯಾಪಿ ಪ್ರಜಾಪತ್ಯಾದೇಃ ಸ್ವದುಹಿತೃಭಗಿನ್ಯಾದೀನಾಂ ಸಂಬಂಧೋಽಸ್ತೀತಿ ಶೇಷಃ । ಅತಃ ಕಾರಣಾತ್ತೇ ತವ ಮನಶ್ಚಿತ್ತಮಸ್ಮೇ ಅಸ್ಮಾಕಂ । ಮನೋತ್ಯರ್ಥಃ । ಮನಸಿ ಚಿತ್ತೇ ನಿ ಧಾಯಿ । ನಿಧೀಯತಾಂ । ಅಹಂ ತ್ವಾಂ ಕಾಮಯೇ ತ್ವಂ ಮಾಮಪಿ ಕಾಮಯಸ್ವೇತ್ಯರ್ಥಃ । ಅಪಿ ಚ । ಜನ್ಯುರಿತಿ ಲುಪ್ತೋಪಮಮೇತತ್ । ಜನ್ಯುರಿವ ಯಥಾ ಜನಯಿತಾ ಪ್ರಜಾಪತಿಃ ಪತಿರ್ಭರ್ತಾ ಭೂತ್ವಾ ಸ್ವದುಹಿತುಃ ಶರೀರಂ ಸಂಭೋಗೇನಾವಿಶ್ಯವಾನ್ ತಥಾ ತ್ವಮಪಿ ಮಮ ಪತಿರ್ಭೂತ್ವಾ ತನ್ವಂ ಮದೀಯಂ ಶರೀರಮಾ ವಿವಿಶ್ಯಾಃ । ಸಂಭೋಗೇನಾವಿಶ । ಯೋನೌ ಪ್ರಜನನಪ್ರಕ್ಷೇಪೋಪಗೂಹನಚುಂಬನಾದಿನಾ ಮಾಂ ಸಂಭುಂಕ್ಷ್ವೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಯಮನೇ) **ತೇ**—ಪ್ರಸಿದ್ಧರಾದ । **ಅಮೃತಾಸಃ**—ದೇವತೆಗಳೂ ಕೂಡ । **ಏತತ್**—ಇಂತಹ । **ತ್ಯಜಸಂ**—ತ್ಯಾಜ್ಯವಾದ ಭಗಿನ್ಯಾದಿಸಂಬಂಧವನ್ನೂ ಸಹ । **ಉಶಂತಿ**—ಅಪೇಕ್ಷಿಸುತ್ತಾರೆ । **ವಿಶ್ವಸ್ಯ ಚಿತ್**—ವಿಶ್ವಕ್ಕೆಲ್ಲ ಪ್ರಭುವಾದ ಪ್ರಜಾಪತಿಯ ವಿಷಯದಲ್ಲೂ ಇಂತಹ ಸಂಬಂಧವು ಪ್ರಸಿದ್ಧವಾಗಿದೆ । **ತೇ**—ನಿನ್ನ । **ಮನಃ**—ಮನಸ್ಸು । **ಅಸ್ಮೇ**—ನನ್ನ । **ಮನಸಿ**—ಮನಸ್ಸಿನೊಡನೆ । **ನಿ ಧಾಯಿ**—ಒಂದಾಗಿಸಲ್ಪಡಲಿ । **ಜನ್ಯಃ**—ಸರ್ವಜನಕನಾದ ಪ್ರಜಾಪತಿಯು ಹೇಗೆ ತನ್ನ ದುಹಿತೃವಿಗೆ ಪತಿಯಾಗಿ ಅವಳ ಶರೀರಕ್ಕೆ ಸೌಖ್ಯವನ್ನುಂಟುಮಾಡಿದನೋ ಅದರಂತೆ । **ತನ್ವಂ**—ನನ್ನ ಶರೀರವನ್ನು । **ಅ ವಿವಿಶ್ಯಾಃ**—ಪ್ರವೇಶಿಸಿ ಅದನ್ನು ಸುಖಯುಕ್ತವನ್ನಾಗಿ ಮಾಡು.

॥ ಭಾವಾರ್ಥ ॥

ಎಲೈ ಯಮನೇ, ಪ್ರಸಿದ್ಧರಾದ ದೇವತೆಗಳೂ ಕೂಡ ಇಂತಹ ತ್ಯಾಜ್ಯವಾದ ಭಗಿನ್ಯಾದಿಸಂಬಂಧವನ್ನು ಅಪೇಕ್ಷಿಸುತ್ತಾರೆ. ವಿಶ್ವಕ್ಕೆಲ್ಲ ಪ್ರಭುವಾದ ಪ್ರಜಾಪತಿಯ ವಿಷಯದಲ್ಲೂ ಇಂತಹ ಸಂಬಂಧವು ಪ್ರಸಿದ್ಧವಾಗಿದೆ. ನಿನ್ನ ಮನಸ್ಸು ನನ್ನ ಮನಸ್ಸಿನೊಡನೆ ಒಂದಾಗಲಿ. ಸರ್ವಜನಕನಾದ ಪ್ರಜಾಪತಿಯು ತನ್ನ ದುಹಿತೃವಿಗೆ ಪತಿಯಾಗಿ ಅವಳ ಶರೀರಕ್ಕೆ ಯಾವರೀತಿ ಸೌಖ್ಯವನ್ನುಂಟುಮಾಡಿದನೋ ಅದರಂತೆ ನನ್ನ ಶರೀರವನ್ನು ಪ್ರವೇಶಿಸಿ ಅದನ್ನು ಸುಖಯುಕ್ತವನ್ನಾಗಿ ಮಾಡು..

English Translation

(Yami speaks). Even the immortals take pleasure in (a union) like this which is forbidden to every mortal; let your mind then concur with mine, and as prajapati the progenitor (of all) was the husband (of his own daughter), so you enjoy my person.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲ ಯಮಿಯು ಯಮನನ್ನು ತನ್ನೊಡನೆ ಸಂಭೋಗಿಸುವಂತೆ ಪ್ರೇರಿಸುತ್ತಾ ಇರುವಾಗ ಯಮನು ಸಹೋದರಸಹೋದರಿಯರು ಪರಸ್ಪರ ಸಂಭೋಗಮಾಡುವುದು ನಿಷಿದ್ಧವೆಂದು ಹೇಳಲು ಅದಕ್ಕೆ ಪ್ರತಿಯಾಗಿ ಯಮಿಯು—ದೇವತೆಗಳೇ ಇಂತಹ ಅನೇಕ ನಿಷಿದ್ಧಕಾರ್ಯಗಳನ್ನು ಮಾಡಿರುವರು, ನಾವು ಏತಕ್ಕೆ ಮಾಡಬಾರದು ? ಅದರಿಂದ ದೋಷವೇನೂ ಇಲ್ಲ. ಪೂರ್ವದಲ್ಲಿ ಸೃಷ್ಟಿಕರ್ತನಾದ ಪ್ರಜಾಪತಿಯೇ ತನ್ನ ಮಗಳಲ್ಲಿ ಮೋಹಗೊಂಡು ಕ್ರೀಡಿಸಲಿಲ್ಲವೇ ? ಎಂದು ದೇವತೆಗಳು ಮಾಡಿದ ಅಕೃತ್ಯವನ್ನು ಉದಾಹರಣೆಯಾಗಿ ಹೇಳಿರುತ್ತಾಳೆ. ಆದ್ದರಿಂದ, ಪ್ರಜಾಪತಿಯು ತನ್ನ ಪುತ್ರಿಯಲ್ಲಿ ರಮಿಸಿದನೆಂದು ಹೇಳಿರುವ ವೃತ್ತಾಂತವನ್ನು ಇಲ್ಲಿ ಸೂಚಿಸುವುದು ಅವಶ್ಯಕವಾಗಿದೆ. ಈ ವಿಷಯವು ಐತರೇಯ ಬ್ರಾಹ್ಮಣದ ೧೩ ನೆಯ ಅಧ್ಯಾಯದ ಎಂಟನೆಯ ಖಂಡದಲ್ಲಿ ಉಕ್ತವಾಗಿರುವುದನ್ನು ಇಲ್ಲಿ ವಿವರಿಸುತ್ತೇವೆ—

ಪ್ರಜಾಪತಿರ್ವೈ ಸ್ವಾಂ ದುಹಿತರಮಭ್ಯಧ್ಯಾಯದ್ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ ತಾಮ್ಯ ಶ್ಯೋಭೂತ್ವಾ ರೋಹಿತಂ ಭೂತಾಮಭ್ಯೈತ್ತಂ ದೇವಾ ಅಪಶ್ಯನ್ನಕೃತಂ ವೈ ಪ್ರಜಾಪತಿಃ ಕರೋತೀತಿ ತೇ ತಮ್ಯೈಚ್ಛನ್ಯ ಏನಮಾರಿಷ್ಯತ್ಯೇತಮನ್ಯೋನ್ಯಸ್ಮಿನ್ನಾವಿಂದಂಸ್ತೇಷಾಂ ಯಾ

ಏವ ಘೋರತಮಾಸ್ತನ್ವ ಆಸಂಸ್ತಾ ಏಕಧಾ ಸಮಭರಂಸ್ತಾಃ ಸಂಭೃತಾ ಏಷ ದೇವೋಽಭ-
ವತ್ತದಸ್ಯೈತದ್ಭೂತವನ್ನಾಮ ಭವತಿ ಯೈ ಸ ಯೋಽಸ್ಯೈತದೇವಂ ನಾಮ ವೇದ ॥

(ಐ ಬ್ರಾ. ೧೫-೫೩)

ಪೂರ್ವದಲ್ಲಿ ಸೃಷ್ಟಿಕರ್ತನಾದ ಪ್ರಜಾಪತಿಯು ತನ್ನ ಸ್ವಂತ ಪುತ್ರಿಯನ್ನು ಕಾಮದೃಷ್ಟಿಯಿಂದ ನೋಡಿ ಅವಳಲ್ಲಿ ರಮಿಸ ಬೇಕೆಂದು ಮನಸ್ಸುಮಾಡಿದನು. ಈ ಪುತ್ರಿಯು ಯಾರು ಎಂಬ ವಿಷಯದಲ್ಲಿ ಮತಭೇದವಿದೆ. ಕೆಲವು ಋಷಿಗಳು– ಈ ಪುತ್ರಿಯು ದ್ಯುಲೋಕಾಭಿಮಾನಿದೇವತೆಯೆಂದೂ ಮತ್ತೆ ಕೆಲವರು ಉಷೋದೇವತೆಯೆಂದೂ ಹೇಳುವರು. ಅದು ಹೇಗಾದರೂ ಇರಲಿ. ಬಳಿಕ ಪ್ರಜಾಪತಿಯು ಋಶ್ಯವೆಂಬ ಚಿಕ್ಕೆಗಳುಳ್ಳ ಒಂದು ವಿಧವಾದ ಜಿಂಕೆಯ ರೂಪವನ್ನು ಧರಿಸಿದನು. ಪುತ್ರಿಯು ಕೆಂಪುಬಣ್ಣವುಳ್ಳ ಹೆಣ್ಣು ಜಿಂಕೆಯ ರೂಪವನ್ನು ತಾಳಿದಳು. ಆನಂತರ ಪ್ರಜಾಪತಿಯು ಅವಳಲ್ಲಿ ಸಂಭೋಗಕ್ರಿಯೆಯಿಂದ ಕ್ರೀಡಿಸಿದನು. ಈ ರೀತಿ ದುಷ್ಕೃತ್ಯದಲ್ಲಿ ನಿರತನಾಗಿದ್ದ ಪ್ರಜಾಪತಿಯನ್ನು ದೇವತೆ ಗಳು ನೋಡಿ ತಮ್ಮ ತಮ್ಮಲ್ಲಿ ಹೀಗೆ ಮಾತನಾಡಿಕೊಂಡರು—ಸೃಷ್ಟಿಕರ್ತನಾದ ಈ ಪ್ರಜಾಪತಿಯೇ ಇಂತಹ ಸರ್ವ ರಿಂದಲೂ ನಿಷಿದ್ಧವಾದ ಅಕೃತ್ಯವನ್ನು ಮಾಡುತ್ತಿರುವನು. ಇದನ್ನು ಮಾಡಬೇಡವೆಂದು ತಡೆದು ಅವನಿಗೆ ತಕ್ಕ ಶಿಕ್ಷೆ ಯನ್ನು ಮಾಡಬೇಕೆಂದು ನಿಶ್ಚಯಿಸಿ ತಮ್ಮಲ್ಲಿ ಈ ಕಾರ್ಯವನ್ನು ಧೈರ್ಯದಿಂದ ಮಾಡಲು ಸಮರ್ಥರಾದವರು ಯಾರೆಂದು ಪ್ರತಿಯೊಬ್ಬರನ್ನೂ ಪ್ರಶ್ನಿಸಲಾಗಿ ಅಂತಹ ಸಮರ್ಥರು ತಮ್ಮಲ್ಲಿ ಯಾರೂ ಇಲ್ಲವೆಂದು ತಿಳಿಯಬದಿಂತು. ಆದ್ದರಿಂದ ಅವರೆಲ್ಲರೂ ಸೇರಿ ಒಂದು ಉಪಾಯವನ್ನು ಮಾಡಿದರು. ದೇವತೆಗಳಲ್ಲಿ ಅತ್ಯುಗ್ರವಾದ ಎಂದರೆ ಘೋರ ರೂಪವುಳ್ಳವರಿಲ್ಲರೂ ತಮ್ಮ ತಮ್ಮ ಘೋರರೂಪಗಳನ್ನು ಒಂದಾಗಿ ಸೇರಿಸಿ ಒಂದು ಆಕೃತಿಯನ್ನಾಗಿ ಮಾಡಲು, ಅದು ಬಹಳ ಭಯಂಕರಾಕಾರವುಳ್ಳ ಪುರುಷನಾಗಿರುವುದನ್ನು ಕಂಡು ಅವನನ್ನು ರುದ್ರನೆಂದು ಕರೆದರು ಆ ರುದ್ರನ ಶರೀರಾ ಕೃತಿಯು ಭೂತಾಕಾರವಾಗಿ ಭಯಂಕರವಾಗಿದ್ದುದರಿಂದ ಅವನಿಗೆ ಭೂತವಾನ್ ಎಂದರೆ ಭೂತಪತಿ ಎಂದೂ ಹೆಸ ರಾಯಿತು ಈ ವಿಷಯವನ್ನು ತಿಳಿದವನು ಭೂತಿಮಾನ್ ಎಂದರೆ ಐಶ್ವರ್ಯವಂತನಾಗುವನು.

ತಂ ದೇವಾ ಅಬ್ರುವನ್ನಯಂ ವೈ ಪ್ರಜಾಪತಿರಕೃತಮಕರಿಷ್ಯದ್ಯಂ ವಿಥ್ಸೇತಿ ಸ ತಥೇತ್ಯಬ್ರವೀತ್ಸ ವೈ
ವೋ ವರಂ ವೃಣಾ ಇತಿ ವೃಣೀಷ್ವೇತಿ ಸ ಏಕಮೇವ ವರಮವೃಣೀತ ಪಶೂನಾಮಾಧಿಪತ್ಯಂ
ತದಸ್ಯೈತತ್ಪಶುಮನ್ನಾಮ ಪಶುಮಾನ್ಭವತಿ ಯೋಽಸ್ಯೈತದೇವಂ ನಾಮ ವೇದ ॥

ಬಳಿಕ ದೇವತೆಗಳು ಭಯಂಕರಾಕಾರದಿಂದಿದ್ದ ರುದ್ರನನ್ನು ನೋಡಿ–ಎಲೈ ರುದ್ರನೇ, ಪ್ರಜಾಪತಿಯು ತನ್ನ ಪುತ್ರಿ ಯಲ್ಲಿಯೇ ಅನುರಕ್ತನಾಗಿ ಲೋಕವಿರುದ್ಧವಾದ ಅಕರ್ಮಾಚರಣೆಯನ್ನು ಮಾಡಿರುವನು ಆದ್ದರಿಂದ ಇವನನ್ನು ಶಿಕ್ಷಿ ಸಲು ನಿನ್ನ ಬಾಣದಿಂದ ಇವನನ್ನು ಪ್ರಹರಿಸು ಎಂದು ಪ್ರಾರ್ಥಿಸಿದರು. ಆಗ ರುದ್ರನು—ಒಳ್ಳೆದು, ಹಾಗೆಯೇ ಮಾಡುವೆನು. ಆದರೆ ಈ ಕೆಲಸಮಾಡುವುದಕ್ಕಾಗಿ ನನಗೆ ಒಂದು ವರವನ್ನು ಕೊಡಬೇಕೆನಲು ದೇವತೆಗಳು ಅದ ಕ್ಕೊಪ್ಪಿ ನಿನಗೆ ಬೇಕಾದ ವರವನ್ನು ಕೇಳೆಂದರು ರುದ್ರನು— ನಾನು ಪಶುಗಳಿಗೆಲ್ಲಾ ಒಡೆಯನಾಗಬೇಕು. ಎಂದರೆ ಪಶುಗಳ ಅಧಿಪತ್ಯವನ್ನು ಪಡೆದು ಪಶುಪತಿ ಎಂಬ ಹೆಸರಿನಿಂದ ಪ್ರಸಿದ್ಧನಾಗಬೇಕು. ಇದೇ ನಾನು ಕೇಳುವ ವರವು ಎನ್ನಲು, ದೇವತೆಗಳು ಅದಕ್ಕೆ ಸಮ್ಮತಿಸಿ ಹಾಗೆಯೇ ಆಗಲೆಂದು ವರವನ್ನು ಕೊಟ್ಟರು. ಈ ವಿಷಯವನ್ನು ತಿಳಿದವನು ಗೋವುಗಳೇ ಮೊದಲಾದ ಪಶುಸಂಪತ್ತನ್ನು ಪಡೆದು ಸುಖಿಸುವನು.

ತಮುಧ್ಯಾಯತ್ಯಾವಿಧ್ಯತ್ಸ ನಿದ್ಧ ಊರ್ಧ್ವ ಉದಪ್ರಪತತ್ತಮೇತಂ ಮೃಗ ಇತ್ಯಾಚಕ್ಷತೇ ಯ ಉ
ಏವ ಮೃಗವ್ಯಾಧಃ ಸ ಉ ಏವ ಸ ಯಾ ರೋಹಿತ್ಸಾ ರೋಹಿಣೀ ಯೋ ಏವೇಷುಸ್ತ್ರಿಕಾಂಡಾ
ಸೋ ಏವೇಷುಸ್ತ್ರಿಕಾಂಡಾ ।

ಅನಂತರ ರುದ್ರನು ತನ್ನ ಧನುಸ್ಸಿನಲ್ಲಿ ಬಾಣವನ್ನು ಹೂಡಿ ಹೆದೆಯನ್ನು ಕಿವಿಯವರೆಗೂ ಎಳೆದು ಮೃಗರೂಪದಲ್ಲಿದ್ದ ಪ್ರಜಾಪತಿಯ ಕಡೆಗೆ ಗುರಿಯಿಟ್ಟು ಹೊಡೆದನು. ಆ ಬಾಣದಿಂದ ನೊಂದ ಪ್ರಜಾಪತಿಯು ಮೃಗರೂಪದಿಂದಲೇ ಊರ್ಧ್ವಾಭಿಮುಖವಾಗಿ ಆಕಾಶಕ್ಕೆ ನೆಗೆದನು. ಇದನ್ನು ನೋಡಿದ ಜನರೆಲ್ಲರೂ ಆಕಾಶದಲ್ಲಿ ಮೃಗರೂಪದಿಂದಿರುವ ಪ್ರಜಾಪತಿಯೇ ರೋಹಿಣೀ ಮತ್ತು ಆರ್ದಾನಕ್ಷತ್ರಗಳ ಮಧ್ಯದಲ್ಲಿ ಮೃಗಶೀರ್ಷಾ ನಕ್ಷತ್ರರೂಪದಿಂದ (stars in the Orion) ಪ್ರಕಾಶಿಸುತ್ತಿರುವನೆಂದು ಹೇಳುವರು. ಪ್ರಜಾಪತಿಯನ್ನು ಬಾಣದಿಂದ ಪ್ರಹರಿಸಿದ ರುದ್ರನು ಮೃಗವ್ಯಾಧನೆಂಬ ಹೆಸರಿನಿಂದ ಪ್ರಸಿದ್ಧನಾದನು. ಆಕಾಶದಲ್ಲಿ ನಕ್ಷತ್ರಗಳ ಮಧ್ಯದಲ್ಲಿ ಕಾಣುತ್ತಿರುವ ಲೋಕಪ್ರಸಿದ್ಧವಾದ ಮೃಗವ್ಯಾಧನೇ (name of star) ಇವನು ಎಂದು ಪ್ರಸಿದ್ಧಿಯಾಯಿತು. ಕೆಂಪುಜಿಂಕೆಯ ರೂಪದಿಂದಿದ್ದ ಪ್ರಜಾಪತಿಯ ಪುತ್ರಿಯು ಆಕಾಶದಲ್ಲಿ ರಕ್ತವರ್ಣದಿಂದ ಬೆಳಗುವ ರೋಹಿಣೀ ನಕ್ಷತ್ರವಾದಳು (constellation) ರುದ್ರನು ಬಿಟ್ಟ ಬಾಣದಲ್ಲಿ, ಕಾಂಡ, ಲೋಹ, ತುದಿ (shaft, steel and point) ಎಂಬ ಮೂರು ಭಾಗಗಳು ಈಗಲೂ ಜನರು ಉಪಯೋಗಿಸುವ ಬಾಣಗಳಲ್ಲಿ ಸೇರಿ ಉಪಯೋಗಿಸಲ್ಪಡುವವು.

ತದ್ವಾ ಇದಂ ಪ್ರಜಾಪತೇ ರೇತಃ ಸಿಕ್ತಮಧಾವತ್ತತ್ಸರೋಽಭವತ್ತೇ ದೇವಾ ಅಬ್ರುವನ್ಹೇದಂ ಪ್ರಜಾಪತೇ ರೇತೋ ದುಷದಿತಿ ಯದಬ್ರುವನ್ಹೇಧಂ ಪ್ರಜಾಪತೇ ರೇತೋ ದುಷದಿತಿ ತನ್ಮಾದುಷಮಭವತ್ತನ್ಮಾದುಷಸ್ಯ ಮಾದುಷತ್ವಂ ಮಾದುಷಂ ಹ ವೈ ನಾಮೈತದ್ಯನ್ಮಾನುಷಂ ಸನ್ಮಾನುಷಮಿತ್ಯಾಚಕ್ಷತೇ ಪರೋಕ್ಷೇಣ ಪರೋಕ್ಷಪ್ರಿಯಾ ಇವ ಹಿ ದೇವಾಃ ॥

(ಐ. ಬ್ರಾ ೧೩-೩೩)

ಮೃಗರೂಪದಲ್ಲಿದ್ದ ಪ್ರಜಾಪತಿಯು ಹೆಣ್ಣುಜಿಂಕೆಯ ರೂಪದಲ್ಲಿದ್ದ ತನ್ನ ಪುತ್ರಿಯಲ್ಲಿ ಸೇಚನ ಮಾಡಿದ ವೀರ್ಯವು ಬಹಳವಾಗಿದ್ದುದರಿಂದ ಭೂಮಿಯ ಮೇಲೆ ಬಿದ್ದು ಪ್ರವಾಹರೂಪದಿಂದ ಹರಿಯುತ್ತಾ ತಗ್ಗಾದ ಒಂದು ಪ್ರದೇಶದಲ್ಲಿ ನಿಂತಿತು. ಅದು ಒಂದು ದೊಡ್ಡ ಸರೋವರವಾಗಿ ಪರಿಣಮಿಸಿತು. ಇದನ್ನು ನೋಡಿದ ದೇವತೆಗಳು ಈ ಪ್ರಜಾಪತಿಯ ರೇತಸ್ಸು ದೂಷ್ಯವಾದದ್ದಲ್ಲ, ಅಸ್ಪೃಶ್ಯವೂ ಅಲ್ಲ, ಎಂದು ಇದನ್ನು ಪ್ರಶಂಸೆ ಮಾಡಿದುದರಿಂದ ಈ ವೀರ್ಯವು ಮಾದುಷಂ (ದೂಷ್ಯವಾದದ್ದಲ್ಲ) ಎಂಬ ಹೆಸರಿನಿಂದಲೇ ಪ್ರಸಿದ್ಧವಾಯಿತು. ವಸ್ತುತಃ ಈ ವೀರ್ಯವು ದೋಷರಹಿತವಾದದ್ದರಿಂದ ಇದನ್ನು ಮಾದುಷವೆಂದು ಕರೆಯುವುದೇ ನ್ಯಾಯವು. ಜನರು ಮಾತನ್ನಾಡುವಾಗ ಮಾದುಷ ಎಂಬ ಶಬ್ದದಲ್ಲಿರುವ ದು ಎಂಬ ಅಕ್ಷರಕ್ಕೆ ಬದಲಾಗಿ ನು ಎಂಬ ಅಕ್ಷರ ವ್ಯತ್ಯಯದಿಂದ ಮಾನುಷ ಎಂದು ಉಚ್ಚರಿಸುವರು. ಆದ್ದರಿಂದ ಪ್ರಜಾಪತಿಯ ವೀರ್ಯದಿಂದ ಉತ್ಪನ್ನರಾದ ಬ್ರಾಹ್ಮಣ ಕ್ಷತ್ರಿಯಾದಿ ಶರೀರಗಳು ಮಾನುಷವೆಂದೇ ಹೇಳಲ್ಪಡುವುವು. ಮನುಷ್ಯರಿಗೆ ಮಾನುಷ ಎಂದು ಹೆಸರು ಬರಲು ಇದೇ ಕಾರಣವು. ಆದರೆ ದೇವತೆಗಳ ವಿಷಯವು ಹಾಗಲ್ಲ. ಅವರು ಮಾದುಷಶಬ್ದದಲ್ಲಿ ವರ್ಣವ್ಯತ್ಯಯವನ್ನು ಮಾಡದೆ ಮಾದುಷವೆಂದೇ ವ್ಯವಹರಿಸುವರು. ಈ ಮಾದುಷ ಶಬ್ದವು ಸಾಧಾರಣವಾಗಿ ಬಳಕೆಯಲ್ಲಿರುವುದಿಲ್ಲ. ಏಕೆಂದರೆ ದೇವತೆಗಳು ಪರೋಕ್ಷಪ್ರಿಯರಾದ್ದರಿಂದ ಇದ್ದುದನ್ನು ಇದ್ದಂತೆಯೇ ಎಂದರೆ ಸ್ಪಷ್ಟವಾಗಿ ತಿಳಿಯುವಂತೆ ಹೇಳದೆ ಶಬ್ದಗಳನ್ನು ಗೂಢಾರ್ಥಯುಕ್ತವಾಗಿಯೇ ಉಪಯೋಗಿಸಲು ಇಚ್ಛಿಸುವರು.

ತದಗ್ನಿನಾ ಪರ್ಯಾದಧುಸ್ತನ್ಮರುತೋಽಧೂನ್ವಂಸ್ತದಗ್ನಿರ್ನ ಪ್ರಾಚ್ಯಾವಯತ್ತದಗ್ನಿನಾ ವೈಶ್ವಾನರೇಣ ಪರ್ಯಾದಧುಸ್ತನ್ಮರುತೋಽಧೂನ್ವಂಸ್ತದಗ್ನಿರ್ವೈಶ್ವಾನರಃ ಪ್ರಾಚ್ಯಾವಯತ್ತಸ್ಯ ಯದ್ರೇತಸಃ ಪ್ರಥಮಮುದದೀಪ್ಯತ ತದಸಾವಾದಿತ್ಯೋಽಭವದ್ದ್ವಿತೀಯಮಾಸೀತ್ತ-

ದ್ಭೃಗುರಭವತ್ತಂ ವರುಣೋ ನ್ಯಗೃಹ್ಣೀತ ತಸ್ಮಾತ್ಸ ಭೃಗುರ್ವಾರುಣೀರಥ ಯತ್ತೃತೀಯ-ಮುದೀದೇದಿವ ತ ಆದಿತ್ಯಾ ಅಭವನ್ಸೋ೭ಜ್ಜಾರಾ ಆಸಂಸ್ತೋ೭ಙ್ಗಿರಸೋ೭ಭವನ್ಯದಂಗಾರಾಃ ಪುನರವಶಾಂತಾ ಉದದೀಪ್ಯಂತ ತದ್ಬೃಹಸ್ಪತಿರಭವತ್ ।

(ಐ. ಬ್ರಾ. ೧೩-೩೪)

ಸರೋವರ ರೂಪದಲ್ಲಿ ನಿಂತಿದ್ದ ಪ್ರಜಾಪತಿಯ ರೇತಸ್ಸನ್ನು ದೇವತೆಗಳು ದೋಷರಹಿತವನ್ನಾಗಿ ಮಾಡಿದನಂತರ ಅದು ದ್ರವರೂಪದಲ್ಲಿಯೇ ಇದ್ದರೆ ಅದನ್ನು ಕಾಪಾಡುವುದು ಕಷ್ಟವೆಂದು ಯೋಚಿಸಿ ಅದರಲ್ಲಿರುವ ದ್ರವವನ್ನು (ನೀರಿನ ಭಾಗವನ್ನು) ಪ್ರತ್ಯೇಕಿಸಬೇಕೆಂದು ಉದ್ದೇಶಿಸಿ ಆ ರೇತಃಸರೋವರದ ಸುತ್ತಲೂ ಅಗ್ನಿಯನ್ನು ಸ್ಥಾಪಿಸಿ ಅದರ ಶಾಖ ದಿಂದ ರೇತಸ್ಸು ಕಾದು ದ್ರವೀಭಾವರಹಿತವಾಗಿ ಘನವಸ್ತುವಾದ ಪಿಂಡಗಳಾಗುವಂತೆ ಪ್ರಯತ್ನಿಸಿದರು. ಅಗ್ನಿಯು ಉರಿಯುತ್ತಿರುವಾಗ ಗಾಳಿಯು ಬೀಸುವುದು ಸಹಜವಷ್ಟೆ. ಮತ್ತು ಗಾಳಿಯಿಂದ ಸರೋವರದ ದ್ರವವು ಬತ್ತಿಹೋಗಲು ಸಹಾಯವಾಗುವುದೆಂದು ಯೋಚಿಸಿ ಅಗ್ನಿಯ ಜತೆಗೆ ದೇವತೆಗಳು ಗಾಳಿಯನ್ನು ಬೀಸುವಂತೆ ಮಾಡಿದರು. ಆದರೆ ಬೀಸುತ್ತಿರುವ ಪ್ರಬಲವಾದ ಗಾಳಿಯಿಂದ ಸರೋವರವು ಅಲ್ಲೋಲಕಲ್ಲೋಲವಾಗಿ ಅಗ್ನಿಯ ಶಾಖವು ಎಷ್ಟಿದ್ದರೂ ರೇತಸ್ಸು ಘನೀಭೂತವಾಗಲಿಲ್ಲ. ದ್ರವರೂಪದಲ್ಲಿಯೇ ಇದ್ದಿತು ಸರೋವರದಲ್ಲಿದ್ದ ರೇತಸ್ಸಿನಲ್ಲಿ ಬಹಳವಾದ ದ್ರವಾಂಶವಿದ್ದಿದ್ದರಿಂದ ಅದನ್ನು ಪಿಂಡಾಕಾರಕ್ಕೆ ಪರಿವರ್ತಿಸಲು ಅಗ್ನಿಗೆ ಅಶಕ್ಯವಾಯಿತು. ಅದನ್ನು ಕಂಡು ದೇವತೆಗಳು ಪುನಃ ಆಲೋಚಿಸಿ ವೈಶ್ವಾನರನೆಂಬ ಅಗ್ನಿವಿಶೇಷವನ್ನು ಹಿಂದಿನಂತೆ ಸರೋವರದಸುತ್ತಲೂ ಸ್ಥಾಪಿಸಿದರು. ವೈಶ್ವಾನರನೆಂಬುವುದು ಅಗ್ನಿಯ ಒಂದು ವಿಶೇಷರೂಪವು. ಈ ವೈಶ್ವಾನರಾಗ್ನಿಯೇ ಪ್ರಾಣಿಗಳ ಉದರದಲ್ಲಿ ಶಾಖರೂಪದಿಂದಿದ್ದು ಪ್ರಾಣಿಗಳು ಭುಜಿಸುವ ಆಹಾರಾದಿಗಳನ್ನು ಪಚನಮಾಡುವನು. ಈ ವಿಷಯದಲ್ಲಿ—

ಅಹಂ ವೈಶ್ವಾನರೋ ಭೂತ್ವಾಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ ॥

ಎಂದು ಭಗವಂತನೇ ಹೇಳಿದಾನೆ. ಎಂದರೆ ನಾನೇ (ಭಗವಂತನೇ) ವೈಶ್ವಾನರಾಗ್ನಿರೂಪದಿಂದ ಪ್ರಾಣಿಗಳ ದೇಹಗಳಲ್ಲಿ ಪ್ರಾಣ ಅಪಾನ ಎಂಬ ಪ್ರಾಣವಾಯುಗಳೊಡನೆ ಇದ್ದುಕೊಂಡು ಪ್ರಾಣಿಗಳು ಭುಜಿಸುವ ನಾಲ್ಕು ವಿಧವಾದ ಅನ್ನಾದ್ಯಾಹಾರಗಳನ್ನು ಪಚನಮಾಡುತ್ತೇನೆ ಎಂದು ಹೇಳಿರುವುದರಿಂದ ಸಾಮಾನ್ಯಾಗ್ನಿಗಿಂತ ವೈಶ್ವಾನರಾಗ್ನಿಗೆ ವಿಶೇಷ ಶಕ್ತಿ ಸಾಮರ್ಥ್ಯಗಳಿವೆಯೆಂದಾಯಿತು. ಅನಂತರ ಈ ವೈಶ್ವಾನರಾಗ್ನಿಯು ತನ್ನ ಸಾಮರ್ಥ್ಯದಿಂದ ಸರೋವರದಲ್ಲಿದ್ದ ದ್ರವೀಭೂತವಾದ ರೇತಸ್ಸನ್ನು ದ್ರವರಹಿತವನ್ನಾಗಿ ಮಾಡಿ ಘನೀಭೂತವನ್ನಾಗಿ ಅನೇಕ ಪಿಂಡ (ಉಂಡೆ) ಗಳಾಗುವಂತೆ ಪರಿವರ್ತಿಸಿದನು. ವೈಶ್ವನರಾಗ್ನಿಯ ಜ್ವಾಲೆಗಳ ಸಂಪರ್ಕದಿಂದ ಜಾಜ್ವಲ್ಯಮಾನವಾಗಿ ಉರಿಯುತ್ತಿರುವ ಒಂದು (ಮೊದಲನೆಯ) ಪಿಂಡದಿಂದ ಆದಿತ್ಯನ (ಸೂರ್ಯನ) ಆವಿರ್ಭಾವವಾಯಿತು ಎರಡನೇ ಪಿಂಡದಿಂದ ಭೃಗುಋಷಿಯು ಉತ್ಪನ್ನನಾದನು. ಈ ಭೃಗುಋಷಿಯನ್ನು ವರುಣನು ತನ್ನ ಪುತ್ರನನ್ನಾಗಿ ಪರಿಗ್ರಹಿಸಿದನು. ಆದ್ದರಿಂದಲೇ ತೈತ್ತಿರೀಯಶಾಖೆಯವರು (ಯಜುರ್ವೇದಾಧ್ಯಾಯಿಗಳು) **ಭೃಗುರ್ವೈ ವಾರುಣಿಃ। ವರುಣಂ ಪಿತರಮುಪಸಸಾರ** ಎಂದು ಪಠಿಸುವರು. ಎಂದರೆ ವರುಣದೇವನ ಪುತ್ರನಾದ ಭೃಗುಋಷಿಯು ತನ್ನ ತಂದೆಯಾದ ವರುಣನನ್ನು ಸವಿನಾಪಿಸಿ ಇಂತು ಪ್ರಶ್ನೆಗೈದನು ಎಂದು ಇದರ ಅರ್ಥವು. ಇದರಿಂದ ಭೃಗುವು ವರುಣನ ಪುತ್ರನೆಂದು ಪ್ರಸಿದ್ಧನಾದನು. ಬಳಿಕ ಉರಿಯುತ್ತಿರುವ ಮೂರನೆಯ ಪಿಂಡದಿಂದ ಆದಿತ್ಯರು ಎಂದರೆ ಅದಿತಿಪುತ್ರರು ಅಥವಾ ದ್ವಾದಶಾದಿತ್ಯರು ಉತ್ಪನ್ನರಾ

ದರು. ಪಿಂಡಗಳು ಉರಿದ ಬಳಿಕ ಅಲ್ಲಿ ನಿಲ್ಲುವ ಪ್ರಕಾಶಮಾನವಾದ ಕೆಂಡಗಳಿಂದ ಅಂಗಿರಾ ಎಂಬ ಹೆಸರಿನ ಋಷಿಗಳು ಹುಟ್ಟಿದರು. ಆರಹೋಗದೆ ಇನ್ನೂ ಸ್ವಲ್ಪ ಸ್ವಲ್ಪ ಉರಿಯುತ್ತಲೇ ಇದ್ದ ಕೆಂಡಗಳಿಂದ ಬೃಹಸ್ಪತಿಯ ಜನನವಾಯಿತು.

ಯಾನಿ ಪರಿಷ್ಟಾಣಾನ್ಯಾಸಂಸ್ತೇ ಕೃಷ್ಣಾಃ ಪಶವೋಽಭವನ್ಯಾ ಲೋಹಿನೀ ಮೃತ್ತಿಕಾ ತೇ ರೋಹಿತಾ ಅಥ ಯದ್ಭಸ್ಮಾಸೀತ್ತತ್ಪರುಷ್ಮಂ ವ್ಯಸರ್ಪದ್ಗೌರೋ ಗವಯ ಋಶ್ಯ ಉಷ್ಟ್ರೋ ಗರ್ದಭ ಇತಿ ಯೇ ಚೈತೇಽರುಣಾಃ ಪಶವಸ್ತೇ ಚ ॥

(ಐ ಬ್ರಾ. ೧೩[illegible])

ಕೆಂಡಗಳು ಆರಿಹೋಗಿ ಅದರಿಂದುಂಟಾದ ಕಪ್ಪುಬಣ್ಣದ ಇಜ್ಜಲುಗಳಿಂದ ಕಪ್ಪುಬಣ್ಣದ ಮೃಗಗಳು ಉತ್ಪನ್ನವಾದವು. ಅಗ್ನಿಯ ಕಾವಿನಿಂದ ಭೂಮಿಯು ಕೆಂಪಾಗಿ ಅದರಿಂದ ಕೆಂಪುಬಣ್ಣದ ಪಶುಗಳು ಉತ್ಪನ್ನವಾದವು ಬೆಂಕಿಯು. ಪೂರ್ತಿಯಾಗಿ ಉರಿದುಹೋದಮೇಲೆ ಕೆಳಗೆ ನಿಲ್ಲುವ ಬೂದಿಯಿಂದ ಒರಟು ಶರೀರಗಳುಳ್ಳ ವನ್ಯಮೃಗಗಳು ಎಂದರೆ ಕಾಡು ಮೃಗಗಳು ಉತ್ಪನ್ನವಾಗಿ ಅವುಗಳು ಅರಣ್ಯದಲ್ಲಿ ವಾಸಿಸಲು ಹೊರಟುಹೋದವು. ಕಾಡುಮೃಗಗಳೆಂದರೆ, ಜಿಂಕೆ, ಹುಲ್ಲೇಕರು, ಕಾಡುಕೋಣ, ಒಂಟೆ, ಕತ್ತೆ ಮತ್ತು ಇತರ ದುಷ್ಟಮೃಗಳೆಂದರ್ಥವು ಮತ್ತು ಮೇಲೆ ಹೇಳಿದ ಕೆಂಪು ಬಣ್ಣದ ಪಶುಗಳೂ ಸಹ ವಾಸಮಾಡಲು ಅರಣ್ಯಕ್ಕೇ ಹೊರಟುಹೋದವು.

ಈ ಉಪಾಖ್ಯಾನದಲ್ಲಿ ರುದ್ರನು ಪ್ರಜಾಪತಿಯನ್ನು ಪ್ರಹರಿಸಿ ಸಂಹರಿಸಲುದ್ಯುಕ್ತನಾದನೆಂದು ಹೇಳಿದೆಯಷ್ಟೆ. ಪ್ರಜಾಪತಿಯು ಸೃಷ್ಟಿಕರ್ತನೂ, ಸರ್ವಶಕ್ತನೂ, ಜಗನ್ನಿಯಾಮಕನೂ ಆಗಿರುವುದರಿಂದ ಅವನನ್ನು ಸಂಪರಿಸಲು ಅಥವಾ ಹಿಂಸಿಸಲು ಯಾರಿಂದಲೂ ಸಾಧ್ಯವಿಲ್ಲ ಆದ್ದರಿಂದ ಇಲ್ಲಿ ಹೇಳರುವ ವಿಷಯವು ಅಸಂಬದ್ಧವಲ್ಲವೇ ಎಂದು ಕೆಲವರು ಪ್ರಶ್ನಿಸುವರು. ಅದಕ್ಕೆ ಸಮಾಧಾನವಾಗಿ ಭಾಷ್ಯಕಾರರು ತನ್ನ ವಿವರಣೆಯಲ್ಲಿ ರುದ್ರನು ಸಂಹರಿಸಲುದ್ಯುಕ್ತನಾದದು ಪ್ರಜಾಪತಿಯನ್ನಲ್ಲ. ಪ್ರಜಾಪತಿಯು ಆಚರಿಸಿದ ದುಷ್ಕರ್ಮವನ್ನು ಎಂದರೆ ಆ ದುಷ್ಕರ್ಮವೇ ಪಾಪ್ಮನ್ ಎಂಬ ಹೆಸರಿನಿಂದ ಬೇರೊಂದು ರೂಪವನ್ನು ಹೊಂದಿ ಪ್ರಜಾಪತಿಯ ಸಮೀಪವರ್ತಿಯಾಗಿದ್ದಿತು. ಅದನ್ನೇ ರುದ್ರನು ಸಂಹರಿಸಿದನೆಂದು ಸಮಾಧಾನವನ್ನು ಹೇಳಿರುವರು.

॥ ಸಂಹಿತಾಪಾಠಃ ॥

ನ ಯತ್ಪುರಾ ಚಕ್ಕ್ಯಮಾ ಕದ್ಧ ನೂನಮೃತಾ ವದಂತೋ ಅನೃತಂ ರಪೇಮ।
ಗಂಧರ್ವೋ ಅಪ್ಸ್ವಪ್ಯಾ ಚ ಯೋಷಾ ಸಾ ನೋ ನಾಭಿಃ ಪರಮಂ ಜಾಮಿ ತನ್ನೌ ॥ ೪ ॥

॥ ಪದಪಾಠಃ ॥

ನ । ಯತ್ । ಪುರಾ । ಚಕ್ಕ್ಯಮಾ । ಕತ್ । ಹ । ನೂನಂ । ಋತಾ । ವದಂತಃ । ಅನೃತಂ । ರಪೇಮ ।
ಗಂಧರ್ವಃ । ಅಪ್ಸು । ಅಪ್ಯಾ । ಚ । ಯೋಷಾ । ಸಾ । ನಃ । ನಾಭಿಃ । ಪರಮಂ । ಜಾಮಿ । ತತ್ ।
ನೌ ॥ ೪ ॥

॥ ಸಾಯಣಭಾಷ್ಯಂ ॥

ಯಮೋ ಯಮಿಾಂ ಪುನರ್ಬ್ರೂತೇ । ಪುರಾ ಪೂರ್ವಂ ಪ್ರಜಾಪತೇರ್ಯದಗವ್ಯಾಗಮನಪರಿಮಿತೇಸಾಮರ್ಥ್ಯೇಪೇತತ್ವಾತ್ಕೃತಂ ತಥಾ ವಯಂ ನ ಚಕೃಮ । ನಾಕುರ್ಮ । ವಯಮೃತಾನಿ ಸತ್ಯಾನಿ ವದಂತೋ ಬ್ರುವಂತೋಽನೃತಮಸತ್ಯಂ ಕದ್ಧ ಕದಾ ಖಲು ನೂನಂ ನಿಶ್ಚಿತಂ ರಪೇಮ । ವದೇಮ । ನ ಕದಾಚಿದಪೀತ್ಯರ್ಥಃ । ಅಗವ್ಯಾಗಮನಂ ನ ಕುರ್ಮ ಇತಿ ಯಾವತ್ । ಅಪಿ ಚಾಪ್ಸು । ಅಂತರಿಕ್ಷನಾಮೈತತ್ । ಅಂತರಿಕ್ಷೇ ಸ್ಥಿತೋ ಗಂಧರ್ವೋ ಗವಾಂ ರಶ್ಮೀನಾಮುದಕಾನಾಂ ವಾ ಧಾರಯಿತಾದಿತ್ಯೋಽಸ್ಯಾಂತರಿಕ್ಷಸ್ಥಾ ಸಾ ಪ್ರಸಿದ್ಧಾ ಯೋಷಾದಿತ್ಯಸ್ಯ ಭಾರ್ಯಾಸರಣ್ಯೂಶ್ಚ ನೋ ನಾವಾವಯೋರ್ನಾಭಿರುತ್ಪತ್ತಿಸ್ಥಾನಂ । ಮಾತಾಪಿತರಾವಿತ್ಯರ್ಥಃ । ತತ್ತಸ್ಮಾತ್ಕಾರಣಾನ್ನಾವಾವಯೋರ್ಜಾಮಿ ಬಾಂಧವಮುತ್ಕೃಷ್ಟಂ । ಏವಂ ಸತ್ಯಾವಯೋರಗವ್ಯಾಗಮನರೂಪತ್ವಾತ್ಕರ್ತುಮಯುಕ್ತಂ ತಸ್ಮಾದೇತನ್ನ ಕರೋಮಿತ್ಯಭಿಪ್ರಾಯಃ ॥

॥ ಪ್ರತಿಪದಾರ್ಥ ॥

(ಎಲೈ ಯಮಿಯೇ) **ಪುರಾ**—ಪೂರ್ವದಲ್ಲಿ । **ಯತ್**—ಪ್ರಜಾಪತಿಯು ಯಾವ ಕಾರ್ಯವನ್ನು ಮಾಡಿದನೋ ಅದನ್ನು । **ನ ಚಕೃಮ**—ನಾನು ಮಾಡಲಾಗುವುದಿಲ್ಲ । **ಋತಾ**—ಸತ್ಯವಾಕ್ಯಗಳನ್ನು । **ವದಂತಃ**—ಹೇಳುತ್ತ । **ಅನೃತಂ**—ಅಸತ್ಯವನ್ನು । **ಕತ್ ಹ**—ಹೇಗೆ ತಾನೇ । **ನೂನಂ**—ನಿಶ್ಚಯವಾಗಿಯೂ । **ರಪೇಮ**—ಹೇಳಬಲ್ಲೆವು । **ಅಪ್ಸು**—ಅಂತರಿಕ್ಷಸ್ಥನಾದ । **ಗಂಧರ್ವಃ**—ಆದಿತ್ಯನೂ । **ಅಸ್ಯಾ ಸಾ**—ಪ್ರಸಿದ್ಧಳೂ ಅಂತರಿಕ್ಷಸ್ಥಳೂ ಆದ । **ಯೋಷಾ ಚ**—(ಆದಿತ್ಯಪತ್ನಿಯಾದ) ಸರಣ್ಯುವೂ । **ನಃ**—ನಮ್ಮಿಬ್ಬರಿಗೂ । **ನಾಭಿಃ**—ಉತ್ಪತ್ತಿಸ್ಥಾನರಾಗಿದ್ದಾರೆ । **ತತ್**—ಆದ್ದರಿಂದ । **ನೌ**—ನಮ್ಮಿಬ್ಬರಿಗೂ ಇರುವ । **ಜಾಮಿ**—ಬಂಧುತ್ವವು । **ಪರಮಂ**—ಅತ್ಯುತ್ಕೃಷ್ಟವಾಗಿದೆ.

॥ ಭಾವಾರ್ಥ ॥

ಎಲೈ ಯಮಿಯೇ, ಸರ್ವಶಕ್ತನಾದ ಪ್ರಜಾಪತಿಯು ಪೂರ್ವದಲ್ಲಿ ಯಾವ ಕಾರ್ಯವನ್ನು ಮಾಡಿದನೋ ಅದನ್ನು ನಾನು ಈಗ ಮಾಡಲಾಗುವುದಿಲ್ಲ. ಇಲ್ಲಿಯವರೆಗೆ ಸತ್ಯವಾಕ್ಯವನ್ನು ಹೇಳುತ್ತ ಈಗ ಅಸತ್ಯವನ್ನು ಹೇಗೆ ಹೇಳಬಲ್ಲೆವು? ಅಂತರಿಕ್ಷಸ್ಥನಾದ ಆದಿತ್ಯನೂ, ಅಂತರಿಕ್ಷಸ್ಥಳಾದ (ಆದಿತ್ಯಪತ್ನಿಯಾದ) ಸರಣ್ಯುವೂ ನಮ್ಮಿಬ್ಬರಿಗೂ ಸಮಾನವಾದ ಉತ್ಪತ್ತಿಸ್ಥಾನರಾಗಿದ್ದಾರೆ. ಆದುದರಿಂದ ನಮ್ಮಿಬ್ಬರಿಗೂ ಇರುವ ಸಹೋದರ ಸಹೋದರಿಯರೆಂಬ ಬಂಧುತ್ವವು ಅತ್ಯುತ್ಕೃಷ್ಟವಾಗಿದೆ. (ನಮ್ಮ ದಾಂಪತ್ಯ ಸಂಬಂಧವು ಸಾಧ್ಯವಿಲ್ಲ.)

English Translation

(Yama speaks). We connot do what was done formerly; for how can we who speak truth, utter now that which is untrûe? Gandharva (the sun) was in the watery (firmament), and the water was his bride She is our common parent, hence our near affinity.

॥ संहितापाठः ॥

गर्भे नु नौ जनिता दंपतीं कर्देवस्त्वष्टा सविता विश्वरूपः ।
नकिरस्य प्र मिनंति व्रतानि वेद नावस्य पृथिवी उत द्यौः ॥ ५ ॥

॥ पदपाठः ॥

गर्भे । नु । नौ । जनिता । दंपतीं इति दंऽपतीं । कः । देवः । त्वष्टा । सविता । विश्वऽ-
रूपः ।
नकिः । अस्य । प्र । मिनंति । व्रतानि । वेद । नौ । अस्य । पृथिवी । उत । द्यौः ॥ ५ ॥

॥ सायणभाष्यं ॥

त्वष्टा रूपाणां कर्ता सविता सर्वेषां शुभाशुभस्य प्रेरकोः विश्वरूपः सर्वात्मकोः देवोः दानादिगुणयुक्तोः जनिता जनयिता प्रजापतिर्गर्भे नु गर्भावस्थायामेव नावावां दंपती जायापती कः । कृतवान् । एकोदरे सहवासित्वात् । अस्य प्रजापतेर्व्रतानि कर्माणि नकिः प्र मिनंति । न केचित्हिंसंति । न लोपयंतीत्यर्थः । अतः कारणाद्गर्भावस्थायामेवावयोः प्रजापतिकृतेः दंपतित्वे सति संभोगं कुर्वित्यर्थः । अपि च नावावयोरस्येदं मातुरुदरे सहवासजनितं दंपतित्वं पृथिवी भूमिर्वेद । जानाति । उताप्ति च द्यौर्द्युलोकोऽपि जानाति ॥

॥ प्रतिपदार्थ ॥

त्वष्टा—जगत्तिन रूपनिर्मापकनू । सविता—सर्वप्रेरकनू । विश्वरूपः—सर्वात्मकनू । देवः—देवतात्मनू । जनिता—सर्वजनकनू आद प्रजापतियु । नौ—नम्मन्नु । गर्भे नु—नावु गर्भदल्लिरुवागले । दंपतीं—गंडहेंडिरन्नागि । कः—माडिद्दानें । अस्य—ई प्रजापतिय । व्रतानि—कर्मगळन्नु । नकिः—यारू कूड । प्र मिनंति—हिंसिसलाररु । नौ—नम्म । अस्य—ई दांपत्यसंबंधवन्नु । पृथिवी—भूमियु । वेद—अरितिद्दाळे । उत—मत्तु । द्यौः—द्युलोकवू अरितिदे.

॥ भावार्थ ॥

जगत्तिन रूपनिर्मापकनू, सर्वप्रेरकनू, सर्वात्मनू, देवतात्मनू, सर्वजनकनू आद प्रजापतियु नम्मन्नु नावु गर्भदल्लिरुवागले गंडहेंडिरन्नागि माडिद्दानें. ई प्रजापतिय कर्मगळन्नु यारू कूड हिंसिसलारारु. नम्मई दांपत्यसंबंधवन्नु द्यावापृथिविगळिब्बरू अरितिद्दारे.

English Translation

(Yami speaks). The divine omniform generator Twashtri, the progenitor, made us two husband and wife, even in the womb: none frustrate his undertaking; earth and heaven are conscious of this our (union)

॥ ಸಂಹಿತಾಪಾಠಃ ॥

ಕೋ ಅಸ್ಯ ವೇದ ಪ್ರಥಮಸ್ಯಾಹ್ನಃ ಕ ಈಂ ದದರ್ಶ ಕ ಇಹ ಪ್ರ ವೋಚತ್।
ಬೃಹನ್ಮಿತ್ರಸ್ಯ ವರುಣಸ್ಯ ಧಾಮ ಕದು ಬ್ರವ ಆಹನೋ ವೀಚ್ಯಾ ನ್ಯಾನ್ ॥೬॥

॥ ಪದಪಾಠಃ ॥

ಕಃ । ಅಸ್ಯ । ವೇದ । ಪ್ರಥಮಸ್ಯ । ಅಹ್ನಃ । ಕಃ । ಈಂ । ದದರ್ಶ । ಕಃ । ಇಹ । ಪ್ರ । ವೋಚತ್ ।
ಬೃಹತ್ । ಮಿತ್ರಸ್ಯ । ವರುಣಸ್ಯ । ಧಾಮ । ಕತ್ । ಊಂ ಇತಿ । ಬ್ರವಃ । ಆಹನಃ । ವೀಚ್ಯಾ । ನ್ಯಾನ್ ॥

॥ ಸಾಯಣಭಾಷ್ಯಂ ॥

ಪ್ರಥಮಸ್ಯಾಹ್ನಃ ಸಂಬಂಧ್ಯಸ್ಯೇದಮನ್ಯೋನ್ಯಸಂಗಮನಂ ಕೋ ವೇದ । ಜಾನಾತಿ । ಪ್ರಥಮೇऽಹನಿ ಯತ್ಕ್ರಿಯತೇ ತದನುಮಾನಮಾಶ್ರಿತ್ಯ ನ ಕಶ್ಚಿದಪಿ ಜ್ಞಾತುಂ ಶಕ್ನೋತೀತ್ಯರ್ಥಃ । ಇಹಾಸ್ಮಿನ್ಪ್ರದೇಶೇ ಪ್ರತ್ಯಕ್ಷತಃ ಕ ಈಮಿದಂ ಸಂಗಮನಂ ದದರ್ಶ । ಪಶ್ಯತಿ । ಕಃ ಪ್ರ ವೋಚತ್ । ಪ್ರಖ್ಯಾಪಯತಿ । ನ ಕೋऽಪೀತ್ಯರ್ಥಃ ॥ ಮಿತ್ರಸ್ಯ ವರುಣಸ್ಯ ಮಿತ್ರಾವರುಣಯೋರ್ಬೃಹತ್ಯಹದ್ಧಾಮ ಸ್ಥಾನಮಹೋರಾತ್ರಂ ಯದಸ್ತಿ ತತ್ರ ನ್ಯಾನ್ಮನುಷ್ಯಾನ್ ವೀಚ್ಯಾ ನರಕೇಣ ಹೇ ಆಹನ ಆಹಂತರ್ಮರ್ಯಾದಯಾ ಹಿಂಸಿತಃ । ಸ್ವಕೃತಶುಭಾಶುಭಕರ್ಮಾಪೇಕ್ಷಯಾ ಮನುಷ್ಯಾದಿಪ್ರಾಣಿನಾಂ ನರಕಪಾತೇನ ಸ್ವರ್ಗಪ್ರಾಪಣೇನ ನಿಗ್ರಹಾನುಗ್ರಹಯೋಃ ಕರ್ತರಿತ್ಯರ್ಥಃ । ಏವಂಭೂತ ಹೇ ಯಮು ತ್ವಂ ಕದು ಬ್ರವಃ । ಕಿಂ ವಾ ಬ್ರವೀಷಿ ॥

॥ ಪ್ರತಿಪದಾರ್ಥ ॥

ಪ್ರಥಮಸ್ಯ ಅಹ್ನಃ—ಮೊದಲನೆಯ ದಿವಸದ । **ಅಸ್ಯ**—ಈ ಅನ್ಯೋನ್ಯಸಂಭೋಗವನ್ನು । **ಕಃ ವೇದ**—ಯಾವನು ತಾನೇ ಅರಿಯುತ್ತಾನೆ । **ಇಹ**—ಈ ಪ್ರದೇಶದಲ್ಲಿ । **ಈಂ**—ಈ ಸಂಗಮನವನ್ನು । **ಕಃ ದದರ್ಶ**—ಯಾವನು ನೋಡುತ್ತಾನೆ । **ಕಃ ಪ್ರವೋಚತ್**—ಯಾವನು ಪ್ರಕಟಿಸಿ ಹೇಳಬಲ್ಲನು । **ಮಿತ್ರಸ್ಯ**—ಮಿತ್ರನಿಗೂ । **ವರುಣಸ್ಯ**—ವರುಣನಿಗೂ । **ಬೃಹತ್ ಧಾಮ**—ಮಹತ್ತಾದ ಸ್ಥಾನವಾದ ಅಹೋರಾತ್ರಗಳಲ್ಲಿ । **ನ್ಯಾನ್**—ಮಾನವರನ್ನು । **ವೀಚ್ಯಾ**—ನರಕದಿಂದ । **ಆಹನಃ**—ಹಿಂಸಿಸುವ ಎಲೈ ಯಮನೇ ! **ಕದು ಬ್ರವಃ**—ನೀನು ಈ ವಿಷಯದಲ್ಲಿ ಏನನ್ನು ಹೇಳುವೆ ?

। ಭಾವಾರ್ಥ ।

ಮೊದಲನೆಯ ದಿನದ ಈ ಅನ್ಯೋನ್ಯಸಂಗಮನವನ್ನು ಯಾವನು ತಾನೇ ಅರಿಯುತ್ತಾನೆ. ಈ ಪ್ರದೇಶದಲ್ಲಿ ಈ ಸಂಗಮನವನ್ನು ಯಾವನು ನೋಡಿದ್ದಾನೆ? ಯಾವನು ಇದನ್ನು ಪ್ರಕಟಿಸಿ ಹೇಳಬಲ್ಲನು? ಮಿತ್ರನಿಗೂ, ವರುಣನಿಗೂ, ಮಹತ್‌ಸ್ಥಾನವಾದ ಅಹೋರಾತ್ರಗಳಲ್ಲಿ ಮಾನವರನ್ನು ನರಕರೂಪದಿಂದ ಹಿಂಸಿಸುವ ಎಲೈ ಯಮನೇ, ನೀನು ಈ ವಿಷಯದಲ್ಲಿ ಏನನ್ನು ಹೇಳುವೆ?

English Translation

(Yami speaks). Who knows anything of this (his) first day (of intercourse)? Who will behold it? Who will here reveal it? The dwelling of Mitra and of Varuna is vast. What do you say, you who punish men with hell?

। ವಿಶೇಷವಿಷಯಗಳು ॥

ಆಹನಃ ಎಂಬ ಶಬ್ದದ ವಿಷಯದಲ್ಲಿ ಯಾಸ್ಕರು ಬರೆದಿರುವ ನಿರ್ವಚನವನ್ನೂ ಅರ್ಥವಿವರಣೆಯನ್ನೂ ಮುಂದಿನ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಲಾಗಿದೆ. (372ನೇ ಪೇಜು ನೋಡಿ).

। ಸಂಹಿತಾಪಾಠಃ ।

ಯ॒ಮ॑ಸ್ಯ ಮಾ ಯ॒ಮ್ಯಂ॑ ಕಾಮ॒ ಆಗ॑ನ್ತ್ಸ॒ಮಾ॒ನೇ ಯೋ॒ನೌ ಸ॒ಹಶೇ॒-

ಯ್ಯಾ॑ಯ ।

ಜಾ॒ಯೇ॒ವ॒ ಪ॒ತ್ಯೇ ತ॒ನ್ವಂ॑ ರಿರಿಚ್ಯಾಂ॒ ವಿ ಚಿ॑ದ್ವೃ॒ಹೇ॒ವ॒ ರ॒ಥ್ಯೇ॑ವ ಚ॒ಕ್ರಾ ॥ ೭ ॥

। ಪದಪಾಠಃ ।

ಯ॒ಮ॒ಸ್ಯ । ಮಾ । ಯ॒ಮ್ಯಂ॑ । ಕಾ॒ಮೇ॒ । ಆ । ಅಗ॑ನ್ । ಸ॒ಮಾ॒ನೇ । ಯೋ॒ನೌ । ಸ॒ಹ॒ಶೇ॒ಯ್ಯಾ॑ಯ ।

ಜಾ॒ಯಾ॑ಇ॒ವ । ಪ॒ತ್ಯೇ । ತ॒ನ್ವಂ॑ । ರಿ॒ರಿ॒ಚ್ಯಾ॒ಂ॒ । ವಿ । ಚಿ॒ತ್ । ವೃ॒ಹೇ॒ವ । ರ॒ಥ್ಯಾ॑ಇ॒ವ । ಚ॒ಕ್ರಾ ॥ ೭ ॥

। ಸಾಯಣಭಾಷ್ಯಂ ॥

ಯಮಸ್ಯ ತವ ಕಾಮೋಽಭಿಲಾಷೋ ಯಮ್ಯಂ ಯಮಿನಾಂ ಮಾಂ ಮಾಂ ಪ್ರತ್ಯಾಗನ್ । ಆಗಚ್ಛತು । ಮಮೋಪರಿ ತವ ಯಮಸ್ಯ ಸಂಭೋಗೇಚ್ಛಾ ಜಾಯತಾಮಿತ್ಯರ್ಥಃ । ಕಿಮರ್ಥಂ । ಸಮಾನೇ ಯೋನಾವೇಕಸ್ಮಿನ್ ಸ್ಥಾನೇ ಶಯ್ಯಾಖ್ಯೇ ಸಹಶೇಯ್ಯಾಯ ಸಹಶಯನಾರ್ಥಂ । ತದನಂತರಂ ಪೂರ್ಣಮನೋರಥಾ ಸತೀ ಜಾಯೇವ ಪತ್ಯೇ ಯಥಾ ಭಾರ್ಯಾ ಪತ್ಯುರರ್ಥಾಯ ಪರಯಾ ಪ್ರೀತ್ಯಾ

ವಿಶ್ವಸ್ತಾ ಸತೀ ರತಿಕಾಮಾ ಸ್ವಶರೀರಂ ಪ್ರಕಾಶಯತಿ ಏವಂ ತನ್ವಮಾತ್ಮೀಯಂ ಶರೀರಂ ರಿರಿಚ್ಯಾಂ ವಿವಿಚ್ಯಾಂ । ತ್ವದರ್ಥಂ ಪ್ರಕಾಶಯೇಯಮಿತ್ಯರ್ಥಃ । ಕಿಂಚ । ಚಿದಿತಿ ಪೂರಣಃ । ವಿವೃಹೇವ ॥ ವೃಹೂ ಉದ್ಯಮನೇ ॥ ಧರ್ಮಾರ್ಥಕಾಮಾನ್ವಿವಿಧಮುದ್ಯಚ್ಛಾವಃ । ತತ್ರ ದೃಷ್ಟಾಂತಃ । ರಥ್ಯೇವ ಚಕ್ರಾ ರಥಸ್ಯಾವಯವಭೂತೇ ಚಕ್ರೇ ಯಥಾ ರಥಮುದ್ಯಚ್ಛತಸ್ತದ್ವತ್ ॥

॥ ಪ್ರತಿಪದಾರ್ಥ ॥

ಸಮಾನೇ ಯೋನೌ—ಒಂದೇ ಹಾಸಿಗೆಯಲ್ಲಿ । **ಸಹಶೇಯ್ಯಾಯ**—ಒಟ್ಟಿಗೆ ಮಲಗಲು । **ಯಮಸ್ಯ**—ಯಮನಾದ ನಿನ್ನ । **ಕಾಮಃ**—ಅಭಿಲಾಷೆಯು । **ಯಮ್ಯಂ**—ಯಮಿಯಾ ಸಂಜ್ಞೆಕಳಾದ । **ಮಾ**—ನನ್ನನ್ನು (ಸೇರಬೇಕೆಂಬುದಾಗಿ) । **ಆಗನ್**—ಉಂಟಾಗಲಿ । **ಪತ್ಯೇ**—ತನ್ನ ಪತಿಗೆ । **ಜಾಯೇವ**—ಪತ್ನಿಯು ಶರೀರವನ್ನು ಪೂರ್ಣವಾಗಿ ಅರ್ಪಿಸುವಂತೆ । **ತನ್ವಂ**—ನನ್ನ ಶರೀರವನ್ನು । **ರಿರಿಚ್ಯಾಂ**—ನಾನು ನಿನಗೆ ಅರ್ಪಿಸುವೆನು । **ಚಕ್ರಾ**—ರಥದ ಚಕ್ರಗಳು । **ರಥ್ಯೇವ**—ರಥವನ್ನು ಒಟ್ಟಿಗೆ ವಹಿಸುವಂತೆ । **ವಿ ವೃಹೇವ**—ನಾವಿಬ್ಬರೂ ಒಟ್ಟಿಗೆ ಧರ್ಮಾರ್ಥ ಕಾಮಗಳನ್ನು ನಿರ್ವಹಿಸೋಣ ।

॥ ಭಾವಾರ್ಥ ॥

ಎಲ್ಲೆ ಯಮನೇ, ಒಂದೇ ಹಾಸಿಗೆಯಲ್ಲಿ ನಾವಿಬ್ಬರೂ ಒಟ್ಟಿಗೆ ಮಲಗುವುದಕ್ಕೋಸ್ಕರ ನನ್ನೊಡನೆ ಸಹಕರಿಸಬೇಕೆಂಬ ಅಭಿಲಾಷೆಯು ನಿನ್ನಲ್ಲಿ ಉಂಟಾಗಲಿ ಪತ್ನಿಯು ತನ್ನ ಪತಿಗೆ ತನ್ನ ದೇಹವನ್ನು ಪೂರ್ಣವಾಗಿ ಅರ್ಪಿಸುವಂತೆ ನಾನು ನಿನಗೆ ನನ್ನ ಶರೀರವನ್ನು ಅರ್ಪಿಸುವೆನು. ರಥದ ಚಕ್ರಗಳು ರಥವನ್ನು ಒಟ್ಟಿಗೆ ವಹಿಸುವಂತೆ ನಾವಿಬ್ಬರೂ ಒಟ್ಟಿಗೆ ಧರ್ಮಾರ್ಥಕಾಮಗಳನ್ನು ನಿರ್ವಹಿಸೋಣ

English Translation

(Yami speaks). O yama, the desire may come to you to lie with me in the same bed ; I will abandon my person to you as a wife to her husband ; let us exert ourselves in union like the two wheels of a waggon

॥ ಸಂಹಿತಾಪಾಠಃ ॥

ನ ತಿಷ್ಠಂತಿ ನ ನಿ ಮಿಷಂತ್ಯೇತೇ ದೇವಾನಾಂ ಸ್ಪಶ ಇಹ ಯೇ ಚರಂತಿ ।
ಅನ್ಯೇನ ಮದಾಹನೋ ಯಾಹಿ ತೂಯಂ ತೇನ ವಿ ವೃಹ ರಥ್ಯೇವ ಚಕ್ರಾ ॥

॥ ಪದಪಾಠಃ ॥

ನ । ತಿಷ್ಠಂತಿ । ನ । ನಿ । ಮಿಷಂತಿ । ಏತೇ । ದೇವಾನಾಂ । ಸ್ಪಶಃ । ಇಹ । ಯೇ । ಚರಂತಿ ।
ಅನ್ಯೇನ । ಮತ್ । ಆಹನಃ । ಯಾಹಿ । ತೂಯಂ । ತೇನ । ವಿ । ವೃಹ । ರಥ್ಯಾ ಇವ । ಚಕ್ರಾ ॥ ೮ ॥

॥ ಸಾಯಣಭಾಷ್ಯಂ ॥

ಯಮ್ಯಾ ಪ್ರಜ್ಞಾತೋ ಯಮಃ ಪುನರಾಹ । ಇಹಾಸ್ಮಿಲ್ಲೋಕೇ ದೇವಾನಾಂ ಸಂಬಂಧಿನೋ ಯೇ ಸ್ಪಶೋ೨ಹೋರಾತ್ರಾದಯಶ್ಚಾರಾಶ್ಚರಂತಿ ಸರ್ವೇಷಾಂ ಶುಭಾಶುಭಲಕ್ಷಣಕರ್ಮಪ್ರತ್ಯವೇಕ್ಷಣಾರ್ಥಂ ಪರಿಭ್ರಮಂತಿ ಏತೇ ಚಾರಾಃ ಕ್ಷಣಮಾತ್ರಮಪಿ ಚರಣವ್ಯಾಪಾರರಹಿತಾ ನ ತಿಷ್ಠಂತಿ । ನ ನಿಮಿಷಂತಿ । ನೇಷಣಂ ನ ಕುರ್ವಂತಿ । ಶುಭಮುಶುಭಂ ವಾ ಯಃ ಕರೋತಿ ತಂ ನಿರೀಕ್ಷಂತೇ ಚೇತ್ಯರ್ಥಃ। ಹೇ ಅಹನೋ ಮಮಾಪಹಂತ್ರ್ಯಸಹ್ಯಭಾಷಣೇನ ದುಃಖಯಿತ್ರಿ ತ್ವಂ ಮನ್ಮತ್ತೋ೨ನ್ಯೇನ ತ್ವತ್ಸದೃಶೇನ ಸಹ ತೂಯಂ ಕ್ಷಿಪ್ರಂ ಯಾಹಿ । ಸಂಗಚ್ಛ । ಗತ್ವಾ ಚ ತೇನ ಸಹ ವಿ ವೃಹ । ಧರ್ಮಾರ್ಥಕಾಮಾನುದ್ಯಚ್ಛ । ತತ್ರ ದೃಷ್ಟಾಂತಃ । ರಥ್ಯೇವ ಚಕ್ರಾ ಯಥಾ ರಥಾವಯವಭೂತೇ ಚಕ್ರೇ ರಥಮುದ್ಯಚ್ಛತಸ್ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಯಮಿಯೇ) **ದೇವಾನಾಂ**—ದೇವತೆಗಳಿಂದ ನಿಯಮಿತರಾದ। **ಯೇ ಸ್ಪಶಃ**—ಯಾವ ಗೂಢಚಾರರುಂಟೋ ಅವರು। **ಇಹ ಚರಂತಿ**—ಸರ್ವತ್ರ (ಇಲ್ಲೆಲ್ಲ) ಸಂಚರಿಸುತ್ತಾರೆ। **ಏತೇ**—ಅವರು। **ನ ತಿಷ್ಠಂತಿ**—ಕೊಂಚವೂ ವಿಶ್ರಾಂತರಾಗುವುದಿಲ್ಲ। **ನ ನಿಮಿಷಂತಿ**—ಕಣ್ಣಿವೆಯಿಕ್ಕದೆ ಎಲ್ಲವನ್ನೂ ಗಮನಿಸುತ್ತಾರೆ। **ಅಹನಃ**—ನಿನ್ನ ಪಾಪೇಚ್ಛೆಯಿಂದ ನನ್ನನ್ನು ಹಿಂಸಿಸುವ ಎಲೈ ಯಮಿಯೇ,। **ಮತ್**—ನನಗಿಂತಲೂ। **ಅನ್ಯೇನ**—ಬೇರೆಯಾದವರೊಡನೆ। **ತೂಯಂ**—ಕ್ಷಿಪ್ರವಾಗಿ। **ಯಾಹಿ**—ಸಂಬಂಧವನ್ನು ಹೊಂದು। **ಚಕ್ರಾ**—ರಥ ಚಕ್ರಗಳು। **ರಥ್ಯೇವ**—ಒಟ್ಟಿಗೆ ರಥವನ್ನು ವಹಿಸುವಂತೆ। **ತೇನ**—ಅವನೊಡನೆ ಕೂಡಿ। **ವಿ ವೃಹ**—ನೀವಿಬ್ಬರೂ ಒಟ್ಟಿಗೆ ನಿಮ್ಮ ಕಾರ್ಯಗಳನ್ನು ನಿರ್ವಹಿಸಿ

॥ ಭಾವಾರ್ಥ ॥

ಎಲೈ ಯಮಿಯೇ, ದೇವತೆಗಳಿಂದ ನಿಯಮಿತರಾದ ಯಾವ ಗೂಢಚಾರರುಂಟೋ ಅವರು ಇಲ್ಲೆಲ್ಲ (ಸರ್ವತ್ರ) ಸಂಚರಿಸುತ್ತಾರೆ ಅವರು ಕೊಂಚವೂ ವಿಶ್ರಾಂತರಾಗುವುದಿಲ್ಲ. ಕಣ್ಣನ್ನು ಮುಚ್ಚದೇ ಎಲ್ಲವನ್ನೂ ವೀಕ್ಷಿಸುತ್ತಾರೆ. ನಿನ್ನ ವಾಸೇಚ್ಛೆಯಿಂದ ನನ್ನನ್ನು ಹಿಂಸಿಸತಕ್ಕ ಎಲೈ ಯಮಿಯೇ, ನನಗಿಂತಲೂ ಬೇರೆಯಾದವನೊಡನೆ ಕ್ಷಿಪ್ರವಾಗಿ ಸಂಬಂಧವನ್ನು ಹೊಂದು. ರಥಚಕ್ರಗಳು ಒಟ್ಟಿಗೆ ರಥವನ್ನು ವಹಿಸುವಂತೆ ಅವನೊಡನೆ ಕೂಡಿ ನೀವಿಬ್ಬರೂ ಒಟ್ಟಿಗೆ ನಿಮ್ಮ ಕಾರ್ಯಗಳನ್ನು ನಿರ್ವಹಿಸಿ.

English Translation

(Yama Speaks)- The spies of the Gods who wander upon earth, never stop, never close their eyes. Associate quickly, destructress, with some other than with me, ond exert yourselves in union, like the two wheels of a waggon.

॥ ವಿಶೇಷವಿಷಯಗಳು ॥

ಅಹನಃ—ಈ ಶಬ್ದದ ತಾತ್ಪರ್ಯವನ್ನು ವಿವರಿಸುವುದಕ್ಕಾಗಿ ಯಾಸ್ಕರು ಈ ಋಕ್ಕಿನ ಉತ್ತರಾರ್ಧಕ್ಕೆ ನಿರ್ವಚನವನ್ನು ಹೇಳಿದಾರೆ—

ಅಹನಃ । ಅನ್ಯೇನ ಮದಾಹನೋ ಯಾಹಿ ತೂಯಂ । ಅನ್ಯೇನ ಮದಹನೋ ಗಚ್ಛ ಕ್ಷಿಪ್ರ-
ಮಾಹಂಸೀವ ಭಾಷಮಾಣೇತ್ಯಸಭ್ಯಭಾಷಣಾದಾಹನಾ ಇವ ಭವತ್ಯೇತಸ್ಮಾದಾಹನಃ ಸ್ಯಾತ್.

(ನಿ ೫-೨)

ಎಂದರೆ, ಎಲೈ ಅಸಭ್ಯಸ್ತ್ರೀಯೇ, ನನ್ನನ್ನು ಬಿಟ್ಟು ಅನ್ಯಕುಲದ ಬೇರೊಬ್ಬ ಪುರುಷನೊಡನೆ ಬೇಗನೆ ಹೋಗು. ಎಲೈ ಅಸಚ್ಚರಿತ್ರಳೇ, ನನ್ನನ್ನು ಬಿಟ್ಟು ಇತರ ಪುರುಷನೊಡನೆ ಬೇಗನೆ ಹೊರಟುಹೋಗು. ನೀನು ಈ ರೀತಿ ಮಾತನಾಡುತ್ತಿರುವುದು ನನಗೆ ಬಹಳ ಸಂಕಟವನ್ನುಂಟುಮಾಡುತ್ತದೆ. ಆಹನಾ ಎಂಬ ಶಬ್ದವು ಕೆಟ್ಟ ಮಾತನ್ನು ಎಂದರೆ ಅಸಭ್ಯವರ್ತನೆಯ ಸ್ತ್ರೀಯರು, ವ್ಯಭಿಚಾರಮಾಡುವ ಸ್ತ್ರೀಯರು ಆಡುವ ಮಾತಿನಂತೆ ಮಾತನಾಡುವವಳು ಆಹನಃ ಎಂಬುದು ಸಂಬುದ್ಧ್ಯೇಕವಚನಾಂತ ಶಬ್ದವು. ಇದಕ್ಕೂ ಸಹ ಮೇಲೆ ಹೇಳಿದ ಅರ್ಧವೇ ಅನ್ವಯಿಸುವುದು.

॥ ಸಂಹಿತಾಪಾಠ ॥

ರಾತ್ರೀಭಿರಸ್ಮಾ ಅಹಭಿರ್ದಶಸ್ಯೇತ್ಸೂರ್ಯಸ್ಯ ಚಕ್ಷುರ್ಮುಹುರುನ್ಮಿಮಾ-
ಯಾತ್ ।

ದಿವಾ ಪೃಥಿವ್ಯಾ ಮಿಥುನಾ ಸಬಂಧೂ ಯಮಿಮಾರ್ಯಮುಸ್ಯ ಬಿಭೃಯಾದ-
ಜಾಮಿ ॥ ೯ ॥

॥ ಪದಪಾಠಃ ॥

ರಾತ್ರೀಭಿಃ । ಅಸ್ಮೈ । ಅಹಃಽಭಿಃ । ದಶಸ್ಯೇತ್ । ಸೂರ್ಯಸ್ಯ । ಚಕ್ಷುಃ । ಮುಹುಃ । ಉತ್ । ಮಿಮೀ-
ಯಾತ್ ।

ದಿವಾ । ಪೃಥಿವ್ಯಾ । ಮಿಥುನಾ । ಸಬಂಧೂ ಇತಿ ಸ್ವಬಂಧೂ । ಯಮೀಃ । ಯಮುಸ್ಯ । ಬಿಭೃಯಾತ್ ।
ಅಜಾಮಿ ॥ ೯ ॥

॥ ಸಾಯಣಭಾಷ್ಯಂ ॥

ರಾತ್ರಿಭಿರಹಭಿರಹೋರಾತ್ರಯೋರಸ್ಮೈ ಯಮಾಯ ಕಲ್ಪಿತಂ ಭಾಗಂ ಸರ್ವೋ ಯಜಮಾನೋ
ದಶಸ್ಯೇತ್ । ಪ್ರಯಚ್ಛತು । ಸೂರ್ಯಸ್ಯ ಸಂಬಂಧಿ ಚಕ್ಷುಸ್ತೇಜೋ ಮುಹುರ್ಮುಹುರಸ್ಮೈ
ಯಮಾಯೋನ್ಮಿಮಾಯಾತ್ । ಉದೇತು । ದಿವಾ ಪೃಥಿವ್ಯಾ ದ್ಯಾವಾಪೃಥಿವೀಭ್ಯಾಂ ಸಹ ಮಿಥುನೌ
ಸಬಂಧೂ ಸಮಾನಬಂಧೂ ಅಹೋರಾತ್ರೇ ಅಸ್ಮೈ ಯಮಾಯ । ಏತಜ್ಜಾಯತ್ವೇಯಂ ಯಮೀರ್ಯ-
ಮುಸ್ಯಾಜಾಮ್ಯಭ್ರಾತರಂ ಬಿಭೃಯಾತ್ । ಧಾರಯತು । ಯತ್ನೇನ ಪರಿಗೃಹ್ಣಾತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಅಸ್ಮೈ—ಈ ಯಮನನ್ನುದ್ದೇಶಿಸಿ । **ರಾತ್ರಿಭಿಃ**—ರಾತ್ರಿಕಾಲಗಳಲ್ಲಿಯೂ । **ಅಹಭಿಃ**—ಅಹಸು ಗಳಲ್ಲಿಯೂ । **ದಶಸ್ಯೇತ್**—ಯಜಮಾನನು ಹವಿಸ್ಸನ್ನರ್ಪಿಸಲಿ । **ಸೂರ್ಯಸ್ಯ**—ಸೂರ್ಯನ । **ಚಕ್ಷುಃ**—ತೇಜಸ್ಸು । **ಮುಹುಃ**—ಅನೇಕವೇಳೆ । **ಉನ್ಮಿಮಾಯಾತ್**—ಈ ಯಮನಿಗಾಗಿ ಪ್ರಾದುರ್ಭವಿಸಲಿ । **ದಿವಾ ಪೃಥಿವ್ಯಾ**—ದ್ಯಾವಾಪೃಥಿವಿಗಳೊಡನೆ । **ಮಿಥನಾ**—ಒಟ್ಟುಗೂಡಿದವೂ । **ಸಬಂಧೂ**—ಸಮಾನವಾದ ಬಂಧುತ ವುಳ್ಳವೂ ಆದ ಅಹೋರಾತ್ರಗಳು ಯಮನ ತೃಪ್ತಿಗಾಗಿರಲಿ । **ಯಮೀಃ**—ಈ ಯಮಿಯು । **ಯಮಸ್ಯ**—ಯಮನೊಡನೆ । **ಅಜಾಮಿ**—ಅಭ್ರಾತೃಕವಾದ ಸಂಬಂಧವನ್ನು । **ಬಿಭೃಯಾತ್**—ಹೊಂದಲಿ.

॥ ಭಾವಾರ್ಥ ॥

ಆಹೋರಾತ್ರಗಳಲ್ಲೆಲ್ಲಾ ಯಜಮಾನರು ಈ ಯಮನನ್ನೇ ಉದ್ದೇಶಿಸಿ ಹವಿಸ್ಸನ್ನರ್ಪಿಸಲಿ. ಅನೇಕ ಕಾಲಗಳಲ್ಲಿ ಸೂರ್ಯನ ತೇಜಸ್ಸು ಈ ಯಮನಿಗಾಗಿಯೇ ಪ್ರಾದುರ್ಭವಿಸಲಿ. ದ್ಯಾವಾಪೃಥಿವಿಗಳೊಡನೆ ಒಟ್ಟುಗೂಡಿದವೂ ಸಮಾನವಾದ ಬಂಧುತ್ವವುಳ್ಳವೂ ಆದ ಅಹೋರಾತ್ರಗಳು ಯಮನ ತೃಪ್ತಿಗಾಗಿರಲಿ. ಯಮಿಯು ಯಮನೊಡನೆ ಅಭ್ರಾತೃಕವಾದ (ದಾಂಪತ್ಯ) ಸಂಬಂಧವನ್ನು ಹೊಂದಲಿ.

English Translation

(Yama speaks). To him (Yama) let every worshipper sacrifice both day and night, on him let the eyes of the Sun repeatedly rise; (for him may) the kindred pair (day and night unite) with heaven and earth. Yami will adhere to the non-affinity of Yama.

॥ ಸಂಹಿತಾಪಾಠಃ ॥

ಆ ಘಾ ತಾ ಗಚ್ಛಾನುತ್ತರಾ ಯುಗಾನಿ ಯತ್ರ ಜಾಮಯಃ ಕೃಣವನ್ನಜಾಮಿ ।
ಉಪ ಬರ್ಬೃಹಿ ವೃಷಭಾಯ ಬಾಹುಮನ್ಯಮಿಚ್ಛಸ್ವ ಸುಭಗೇ ಪತಿಂ ಮತ್ ॥ ೧೦ ॥

॥ ಪದಪಾಠಃ ॥

ಆ । ಘ । ತಾ । ಗಚ್ಛಾನ್ । ಉತ್ತರಾ । ಯುಗಾನಿ । ಯತ್ರ । ಜಾಮಯಃ । ಕೃಣವನ್ । ಅಜಾಮಿ ।
ಉಪ । ಬರ್ಬೃಹಿ । ವೃಷಭಾಯ । ಬಾಹುಂ । ಅನ್ಯಂ । ಇಚ್ಛಸ್ವ । ಸುಭಗೇ । ಪತಿಂ । ಮತ್ ॥ ೧೦ ॥

॥ ಸಾಯಣಭಾಷ್ಯಂ ॥

ಯತ್ರ ಯೇಷು ಕಾಲೇಷು ಜಾಮಯೋ ಭಗಿನ್ಯೋಽಜಾಮ್ಯಭ್ರಾತರಂ ಪತಿಂ ಕೃಣವನ್ ಕುರ್ವಂತಿ ತಾ ತಾನ್ಯುತ್ತರಾಣಿ ಯುಗಾನಿ ಕಾಲವಿಶೇಷಾ ಆ ಗಚ್ಛಾನ್ । ಆ ಗಮಿಷ್ಯಂತಿ । ಫೇತಿ ಪೂರಣಃ । ಯಸ್ಮಾದೇವಂ ತಸ್ಮಾದ್ಧೇ ಸುಭಗೇ ತ್ವಮಿದಾನೀಂ ಮನ್ಮತ್ತೋನ್ಯಂ ಪತಿಂ ಭರ್ತಾರಮಿಚ್ಛಸ್ವ। ಕಾಮಯಸ್ವ । ತದನಂತರಂ ವೃಷಭಾಯ ತವ ಯೇನೌ ರೇತಃ ಸೇಕ್ತ್ರೇ ಪುರುಷಾಯಾತ್ಮೀಯಂ ಬಾಹುಮುಪ ಬರ್ಬೃಹಿ । ಶಯನಕಾಲ ಉಪಬರ್ಹಣಂ ಕುರು ॥

॥ ಪ್ರತಿಪದಾರ್ಥ ॥

(ಎಲೈ ಯಮಿಯೇ) **ಯತ್ರ**—ಯಾವ ಕಾಲಗಳಲ್ಲಿ । **ಜಾಮಯಃ**—ಸಹೋದರಿಗಳು । **ಅಜಾಮಿ**—ಭ್ರಾತೃಗಳಲ್ಲದವರನ್ನು । **ಕೃಣವನ್**—ತಮ್ಮ ಪತಿಗಳನ್ನಾಗಿ ಮಾಡಿಕೊಳ್ಳುವರೋ । **ತಾ**—ಅಂತಹ । **ಉತ್ತರಾ**—ಮುಂದೆ ಬರತಕ್ಕ । **ಯುಗಾನಿ**—ಕಾಲವಿಶೇಷಗಳು । **ಆ ಅಗಚ್ಛಾನ್**—ಒದಗಿಬರುತ್ತವೆ. (ಆದುದರಿಂದ) । **ಸುಭಗೇ**—ಎಲೈ ಸುಂದರಿಯೇ, । **ಮತ್**—ನನಗಿಂತಲೂ । **ಅನ್ಯಂ**—ಬೇರೆಯಾದವನನ್ನು । **ಪತಿಂ**—ನಿನ್ನ ಪತಿಯನ್ನಾಗಿ । **ಇಚ್ಛಸ್ವ**—ಅಪೇಕ್ಷಿಸು । **ವೃಷಭಾಯ**—ಶಕ್ತಿಯುತನಾದ ಆ ಪುರುಷನಿಗೆ । **ಬಾಹುಂ**—ನಿನ್ನ ಬಾಹುವನ್ನು । **ಉಪಬರ್ಬೃಹಿ**—ತಲೆದಿಂಬನ್ನಾಗಿ ಮಾಡು ।

॥ ಭಾವಾರ್ಥ ॥

ಎಲೈ ಯಮಿಯೇ, ಯಾವ ಕಾಲಗಳಲ್ಲಿ ಸಹೋದರಿಗಳು ತಮ್ಮ ಭ್ರಾತೃಗಳಲ್ಲದವರನ್ನು ತಮ್ಮ ಪತಿಗಳನ್ನಾಗಿ ಮಾಡಿಕೊಳ್ಳುವರೋ, ಅಂತಹ ಕಾಲವಿಶೇಷಗಳು ಮುಂದೆ ಒದಗಿಬರುತ್ತವೆ. ಎಲೈ ಸುಂದರಿಯೇ, ಆದುದರಿಂದ ನೀನು ನನಗಿಂತಲೂ ಬೇರೆಯಾದವನನ್ನು ನಿನಗೆ ಪತಿಯನ್ನಾಗಿ ಅಪೇಕ್ಷಿಸಿ ವರಿಸು. ನಿನ್ನ ಕಾಮವನ್ನು ಪೂರೈಸುವ ಶಕ್ತಿಯುಳ್ಳ ಆ ಪುರುಷನಿಗೆ ನಿನ್ನ ಬಾಹುವನ್ನು ತಲೆದಿಂಬನ್ನಾಗಿ ಮಾಡಿ ಅವನನ್ನು ಸುಖಪಡಿಸು.

English Translation

(Yama speaks). The subsequent ages will come, when sisters will choose one who is not a brother (as a husband); therefore, auspicious one. choose another husband than me, and make your arm a pillow for your mate.

॥ ವಿಶೇಷವಿಷಯಗಳು ॥

ಜಾಮಿಃ ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾ ಯಾಸ್ಕರು ಈ ಋಕ್ಕಿಗೆ ನಿರ್ವಚನವನ್ನು ಈ ರೀತಿ ಹೇಳಿದ್ದಾರೆ

ಜಾಮಿಃ । ಆ ಘಾ ತಾ ಗಚ್ಛಾನುತ್ತರಾ ಯುಗಾನಿ ಯತ್ರ ಜಾಮಯಃ ಕೃಣವನ್ನಜಾಮಿ। ಉಪ ಬರ್ಬೃಹಿ ವೃಷಭಾಯ ಬಾಹುಮನ್ಯಮಿಚ್ಛಸ್ವ ಸುಭಗೇ ಪತಿಂ ಮತ್॥ ಅಗಮಿಷ್ಯತಿ ತಾನ್ಯು-ತ್ತರಾಣಿ ಯುಗಾನಿ ಯತ್ರ ಜಾಮಯಃ ಕರಿಷ್ಯಂತ್ಯಜಾಮಿಕರ್ಮಾಣಿ । ಜಾಮ್ಯತಿರೇಕನಾಮ।

ಬಾಲಿಶಸ್ಯ ವಾ । ಅಸಮಾನಜಾತೀಯಸ್ಯ ವೋಪಜನಃ । ಉಪಧೇಹಿ ವೃಷಭಾಯ ಬಾಹು-
ಮನ್ಯಮಿಚ್ಛಸ್ವ ಸುಭಗೇ ಪತಿಂ ಮದಿತಿ ವ್ಯಾಖ್ಯಾತಂ ॥

(ನಿ. ೪-೨೦)

ಜಾಮಿ ಶಬ್ದಕ್ಕೆ ಬಂಧುವೆಂಬ ಅರ್ಥವಿರುವುದು ಮತ್ತು ಭಗಿನೀ (ಸಹೋದರಿಯೆಂಬ) ಮೂರ್ಖ ಎಂಬ ಅರ್ಥವೂ ಇರುವುದು. ಅಜಾಮಿ ಎಂದರೆ ಬಂಧುಗಳಲ್ಲದವರು ಮಾಡುವ ಕಾರ್ಯ. ಪರಸ್ಪರ ಆಚರಿಸುವ ಕರ್ಮ. ಎಂದರೆ ವಿವಾಹಾತ್ಪೂರ್ವದಲ್ಲಿ ಪತಿಪತ್ನಿಯರಿಗೆ ಯಾವ ಸಂಬಂಧವೂ ಇರುವುದಿಲ್ಲ. ಕನ್ಯೆಯ ಕುಲವೇ ಬೇರೆ, ವರನ ಕುಲವೇ ಬೇರೆ. ಈ ರೀತಿ ಬೇರೆಬೇರೆ ಕುಲದವರು ಒಬ್ಬರನೊಬ್ಬರು ವರಿಸಿ ವಿವಾಹಮಾಡಿಕೊಳ್ಳುವುದು ಸಂಪ್ರದಾಯವು. ಈ ವಿಧವಾದ ಕರ್ಮಕ್ಕೂ ಜಾಮಿ ಎಂದು ಹೆಸರು. ಅಜಾಮಿ ಎಂದರೆ ಅದಕ್ಕೆ ವ್ಯತಿರೇಕವಾದ ಕರ್ಮ. ಎಂದರೆ ಕನ್ಯೆಯೂ ವರನೂ ಒಂದೇ ಕುಲದವರಾಗಿದ್ದು ಅದರಲ್ಲಿಯೂ ಸಹೋದರ ಸಹೋದರಿಯರಾಗಿದ್ದಲ್ಲಿ ಅವರ ವಿವಾಹವು ನಿಷಿದ್ಧವು. ಈ ರೀತಿಯಾದ ನಿಷಿದ್ಧಕರ್ಮಕ್ಕೆ ಅಜಾಮಿ ಎಂದು ಹೆಸರು. ಪ್ರಕೃತ ಋಕ್ಕಿನಲ್ಲಿ ಈ ನಿಷಿದ್ಧಕರ್ಮವಾದ ಸಂಭೋಗಕ್ರಿಯೆಯನ್ನು ಸಹೋದರ ಸಹೋದರಿಯರು ಮಾಡುವ ಕಾಲವು ಮುಂದೆ ಬರುತ್ತದೆಯೆಂದು ಸೂಚಿಸಲಾಗಿದ ಎಂದರೆ ಈಗ (ಋಷಿಯ ಕಾಲದಲ್ಲಿ) ಸಹೋದರ ಸಹೋದರಿಯರಿಗೆ ಪರಸ್ಪರ ಸಂಭೋಗ ಕರ್ಮವು ನಿಷಿದ್ಧವು ಉತ್ತರೋತ್ತರ ಎಂದರೆ ಮುಂಬೆ ಕಲಿಕಾಲದಲ್ಲಿ ಈ ವಿಧವಾದ ಸದ್ವರ್ತನೆಯನ್ನು ಜನರು ಬಿಟ್ಟು ಸ್ವೇಚ್ಛೆಯಾಗಿ ನಿಷಿದ್ಧಕಾರ್ಯವಾದ (ಸಹೋದರ ಸಹೋದರಿಯರಿಗೆ ಪರಸ್ಪರ ನಡೆಯುವ) ಸಂಭೋಗಕ್ರಿಯೆಯಲ್ಲಿ ಆಸಕ್ತರಾಗುವರು. ಅಂತಹ ಕಾಲವು ಮುಂದೆ ಬರುವುದು. ಆದ್ದರಿಂದ ಎಲೌ ಶೋಭನಾಂಗಿ, ನನ್ನನ್ನು ಬಿಟ್ಟು ನಿನ್ನನ್ನು ಕಾಮರತಿಯಿಂದ ತೃಪ್ತಿಪಡಿಸುವ ಬೇರೊಬ್ಬ ಪುರುಷನನ್ನು ಪತಿಯನ್ನಾಗಿ ವರಿಸಿ ನಿನ್ನ ಬಾಹುವೆಂಬ ದಿಂಬಿನಲ್ಲಿ ಅವನಿಗೆ ಆಶ್ರಯವನ್ನು ಕೊಟ್ಟು ಅವನೊಡನೆ ರತಿಸುಖವನ್ನನುಭವಿಸು ಎಂದು ಋಷಿಯು ವರ್ಣಿಸಿದ್ದಾನೆ.

। ಸಂಹಿತಾಪಾಠಃ ।

ಕಂ ಭ್ರಾತಾಸದ್ಯದನಾಥಂ ಭವಾತಿ ಕಮು ಸ್ವಸಾ ಯನ್ನಿರ್ಋತಿರ್ನಿ-
ಗಚ್ಛಾತ್ ।
ಕಾಮಮೂತಾ ಬ್ರಹ್ಮೇಷಿತದ್ರಪಾಮಿ ತನ್ವಾ ಮೇ ತನ್ವಂ೧ಸಂ ಪಿಪೃಗ್ಧಿ ॥

। ಪದಪಾಠಃ ।

ಕಂ । ಭ್ರಾತಾ । ಅಸತ್ । ಯತ್ । ಅನಾಥಂ । ಭವಾತಿ । ಕಂ । ಊಂ ಇತಿ । ಸ್ವಸಾ । ಯತ್ ।
ನಿಃಋತಿಃ । ನಿಽಗಚ್ಛಾತ್ ।
ಕಾಮ್ಯಮೂತಾ । ಬ್ರಹು । ಏಷತ್ । ರಪಾಮಿ । ತನ್ವಾ । ಮೇ । ತನ್ವಂ । ಸಂ । ಪಿಪೃಗ್ಧಿ ॥ ೧೧ ॥

॥ सायणभाष्यं ॥

यमिमा यमेन प्रत्याख्याता पुनराह । यद्यस्मिन्भ्रातरि सति स्वस्रादिकमनाथं नाथरहितं भवति स भ्राता किमुसत् । किं भवति । न भवतीत्यर्थः । किंच यस्यां भगिन्यां सत्यां भ्रातरं निर्ऋतिर्दुःखं निगच्छात् नियमेन गच्छति प्राप्नोति सा स्वसा किमु । किं वा भवति । भ्रातृभगिन्योश्च परस्परं प्रीतिर्यस्मिन केसचिदुपायेनावश्यं कार्येत्यभिप्रायः । साहं कामुमूता कामेन मूर्छिता सती बहु नानाप्रकारमेतदीदृशमुक्तं वक्ष्यमाणं च रपामि । प्रलपामि । एतज्जात्वा मे मम तन्वा शरीरेण तन्वं शरीरं सं पिपृग्धि । संपर्चय । संभोगेन संश्लेषय । मां सम्यग्घृंक्ष्वेत्यर्थः ॥

॥ प्रतिपदार्थ ॥

यत् असत्—यावं सहोदरनिरुवाग। **अनाथं भवाति**—सहोदरियु अनाथेयागिरु वळो । **भ्राता कं**—अवनु निजवागियू सहोदरनेन्निसिकोळ्ळुवनेे। **यत्**—यावं सहोदरियिरुवाग । **निर्ऋतिः**—दुःखवु । **निगच्छात्**—भ्रातृवन्नु सेरि पीडिसुवुदो । **स्वसा किमु**—अवळु निजवागियू सहोदरियेन्निसिकोळ्ळुवळे ? (एळै यमनेे) । **कामुभूता**—कामदिंद पीडितळागि। **बहु**—अनेक विधवाग । **एतत्**—ई प्रार्थनारूपदल्लि । **रपामि**—नानु बेडिकोळ्ळुत्तिद्देनेे । **मे**—नन्न । **तन्वा**—शरीरदोंदिगे । **तन्वं**—निन्न शरीरवन्नु । **सं पिपृग्धि**—सेरिसि सुखवन्ननुभविसु.

॥ भावार्थ ॥

एळै यमनेे, यावं सहोदरनिरुवाग सहोदरियु अनाथेयागिरुवळो, अवनु निजवागियू सहोदरनेन्निसिकोळ्ळुवनेे ? यावं सहोदरियिरुवाग भ्रातृवन्नु दुःखवु पीडिसुवुदो अवळु निजवागियू सहोदरियेन्निसिकोळ्ळुवळे ? कामदिंद पीडितळागि नानु अनेकविधदल्लि ई प्रार्थनारूपदल्लि बेडिकोळ्ळुत्तिद्देनेे. नन्न शरीरदोंदिगे निन्न शरीरवन्नु सेरिसि सुखवन्ननुभविसु.

English Translation

(Yami speaks). Is he a brother whose sister has no supporter in her brother ? Is she a sister who will allow (her brother) to approach misfortune? Overcome by desire, I strongly urge this one request ; unite your person with mine.

॥ संहितापाठः ॥

न वा ऊं ते तन्वा तन्वं ऽ सं पपृच्यां पापमाहुर्यः स्वसारं निगच्छात् ।

ಅನ್ಯೇನ ಮತ್ಪ್ರಮುದಃ ಕಲ್ಪಯಸ್ವ ನ ತೇ ಭ್ರಾತಾ ಸುಭಗೇ ವಷ್ಟ್ಯೇತತ್ ॥

॥ ಪದಪಾಠಃ ॥

ನ । ವೈ।ಊಂ ಇತಿ । ತೇ । ತನ್ವಾ । ತನ್ವಂ । ಸಂ । ಪಪೃಚ್ಯಾಂ । ಪಾಪಂ । ಆಹುಃ । ಯಃ । ಸ್ವಸಾರಂ।

ನಿಗಚ್ಛಾತ್ ।

ಅನ್ಯೇನ । ಮತ್ । ಪ್ರಮುದಃ । ಕಲ್ಪಯಸ್ವ । ನ । ತೇ । ಭ್ರಾತಾ । ಸುಭಗೇ । ವಷ್ಟಿ । ಏತತ್॥೧೦॥

॥ ಸಾಯಣಭಾಷ್ಯಂ ॥

ಯಮೋ ಯಮಿನಾಂ ಪ್ರತ್ಯುಕ್ತವಾನ್ । ಹೇ ಯಮಿ ತೇ ತವ ತನ್ವಾ ಶರೀರೇಣ ತನ್ವಮಾತ್ಮೀಯಂ ಶರೀರಂ ನ ವೈ ಸಂ ಪಪೃಚ್ಯಾಂ । ನೈವ ಸಂಪರ್ಚಯಾಮಿ। ನೈವಾಹಂ ತ್ವಾಂ ಸಂಭೋಕ್ತುಮಿಚ್ಛಾಮೀತ್ಯರ್ಥಃ। ಯೋ ಭ್ರಾತಾ ಸ್ವಸಾರಂ ಭಗಿನೀಂ ನಿಗಚ್ಛಾತ್ ನಿಯಮೇನೋಪಗಚ್ಛತಿ । ಸಂಭುಂಕ್ತೇ ಇತ್ಯರ್ಥಃ । ತಂ ಪಾಪಂ ಪಾಪಕಾರಿಣಮಾಹುಃ । ಶಿಷ್ಟಾ ವದಂತಿ । ಏತಜ್ಜ್ಞಾತ್ವಾ ಹೇ ಸುಭಗೇ ಸುಷ್ಠು ಭಜನೀಯೇ ಹೇ ಯಮಿ ತ್ವಂ ಮನ್ಮತ್ತೋಽನ್ಯೇನ ತ್ವದ್ಯೋಗ್ಯೇನ ಪುರುಷೇಣ ಸಹ ಪ್ರಮುದಃ ಸಂಭೋಗಲಕ್ಷಣಾನ್ಪ್ರಹರ್ಷಾನ್ಕಲ್ಪಯಸ್ವ । ಸಮರ್ಥಯ । ತೇ ತವ ಭ್ರಾತಾ ಯಮಃ ಏತದೀದೃಶಂ ತ್ವಯಾ ಸಹ ಮೈಥುನಂ ಕರ್ತುಂ ನ ವಷ್ಟಿ । ನ ಕಾಮಯತೇ । ನೇಚ್ಛತಿ ॥

॥ ಪ್ರತಿಪದಾರ್ಥ ॥

(ಎಲೈ ಯಮಿಯೇ) ತೇ—ನಿನ್ನ । ತನ್ವಾ—ಶರೀರದೊಂದಿಗೆ । ತನ್ವಂ—ನನ್ನ ಶರೀರವನ್ನು । ನ ವೈ ಸಂ ಪಪೃಚ್ಯಾಂ—ನಾನು ಖಂಡಿತ ಸೇರಿಸುವುದಿಲ್ಲ । ಯಃ—ಯಾವ ಸಹೋದರನು । ಸ್ವಸಾರಂ—ತನ್ನ ಸಹೋದರಿಯನ್ನು । ನಿಗಚ್ಛಾತ್—ಕೂಡುವನೋ (ಅವನನ್ನು) । ಪಾಪಂ—ಪಾಪಿಷ್ಠನೆಂದು । ಆಹುಃ—ತಿಳಿದವರು ಹೇಳುತ್ತಾರೆ । ಸುಭಗೇ—ಎಲೈ ಸುಂದರಿಯೇ । ಮತ್—ನನಗಿಂತಲೂ । ಅನ್ಯೇನ—ಬೇರೆ ಪುರುಷನೊಂದಿಗೆ ಸೇರಿ । ಪ್ರಮುದಃ-ಅನೇಕ ವಿಧವಾದ ಸುಖಗಳನ್ನು । ಕಲ್ಪಯಸ್ವ—ಹೊಂದಿಸಿಕೊ । ತೇ—ನಿನ್ನ । ಭ್ರಾತಾ—ಸಹೋದರನಾದ ನಾನು । ಏತತ್—ಈ ಸಂಬಂಧವನ್ನು । ನ ವಷ್ಟಿ—ಅಪೇಕ್ಷಿಸುವುದಿಲ್ಲ.

॥ ಭಾವಾರ್ಥ ॥

ಎಲೈ ಯಮಿಯೇ, ನಿನ್ನ ಶರೀರದೊಂದಿಗೆ ನನ್ನ ಶರೀರವನ್ನು ನಾನು ಖಂಡಿತ ಸೇರಿಸುವುದಿಲ್ಲ. ಯಾವ ಸಹೋದರನು ತನ್ನ ಸಹೋದರಿಯನ್ನು ಕೂಡುವನೋ, ಅವನನ್ನು ತಿಳಿದವರು ಪಾಪಿಷ್ಠನೆಂದು ಕರೆಯುತ್ತಾರೆ. ಎಲೈ ಸುಂದರಿಯೇ, ನನಗಿಂತಲೂ ಬೇರೆಯಾದ ಪುರುಷನೊಂದಿಗೆ ಸೇರಿ ಅನೇಕ ವಿಧವಾದ ಸುಖಗಳನ್ನು ಪಡೆ. ನಿನ್ನ ಸಹೋದರನಾದ ನಾನು ಈ ಸಂಬಂಧವನ್ನಪೇಕ್ಷಿಸುವುದಿಲ್ಲ.

English Translation

(Yama speaks). I will not unite my persons with yours; they call him who approaches a sister, a sinner Enjoy pleasure with some other than me; your brother, auspicious one, has no such desire

॥ ಸಂಹಿತಾಪಾಠಃ ॥

ಬತೋ ಬತಾಸಿ ಯಮು ನೈವ ತೇ ಮನೋ ಹೃದಯಂ ಚಾವಿದಾವ ।
ಅನ್ಯಾ ಕಿಲ ತ್ವಾಂ ಕಕ್ಷ್ಯೇವ ಯುಕ್ತಂ ಪರಿ ಷ್ವಜಾತೇ ಲಿಬುಜೇವ ವೃಕ್ಷಂ ॥

॥ ಪದಪಾಠಃ ॥

ಬತಃ । ಬತ । ಅಸಿ । ಯಮು । ನ । ಏವ । ತೇ । ಮನಃ । ಹೃದಯಂ । ಚ । ಅವಿದಾವ ।
ಅನ್ಯಾ । ಕಿಲ । ತ್ವಾಂ । ಕಕ್ಷ್ಯಾ ಇವ । ಯುಕ್ತಂ । ಪರಿ । ಸ್ವಜಾತೇ । ಲಿಬುಜಾ ಇವ । ವೃಕ್ಷಂ ॥ ೧೩ ॥

॥ ಸಾಯಣಭಾಷ್ಯಂ ॥

ಯಮೀ ಪ್ರತ್ಯುವಾಚ । ಹೇ ಯಮು ತ್ವಂ ಬತೋ ದುರ್ಬಲೋಽಸಿ । ಬತೇತಿ ನಿಪಾತಃ ಖೇದಾನುಕಂಪಯೋಃ । ಅನುಕಂಪ್ಯಶ್ಚಾಸಿ । ತೇ ತ್ವದೀಯಂ ಮನೋ ಮನೋಗತಂ ಸಂಕಲ್ಪಂ ಹೃದಯಂ ಚ ಬುದ್ಧಿಗತಮಧ್ಯವಸಾಯಂ ಚ ನೈವಾವಿದಾವ । ವಯಂ ನ ಜಾನೀಮ ಏವ । ಮತ್ತೋಽನ್ಯಾ ಕಾಚಿತ್ಸ್ತ್ರೀ ತ್ವಾಂ ಪರಿ ಷ್ವಜಾತೇ ಕಿಲ । ತತ್ರ ದೃಷ್ಟಾಂತದ್ವಯಮುಚ್ಯತೇ । ಕಕ್ಷ್ಯೇವ ಯುಕ್ತಂ ಯಥಾ ಕಕ್ಷ್ಯಾ ರಜ್ಜುರ್ಯುಕ್ತಮಾತ್ಮನಾ ಸಂಬದ್ಧಮಶ್ವಂ ಪರಿಷ್ವಜತೇ ತದ್ವತ್ । ಲಿಬುಜೇವ ವೃಕ್ಷಂ ಯಥಾ ಲಿಬುಜಾ ವ್ರತತಿರ್ಗಾಢಂ ವೃಕ್ಷಂ ಪರಿಷ್ವಜತೇ ತದ್ವಚ್ಚ । ಅನ್ಯಸ್ಯಾಂ ಸ್ತ್ರಿಯಾಮಾಸಕ್ತಸ್ತ್ವಂ ಮಾಂ ಪರಿಷ್ವಕ್ತುಂ ನೇಚ್ಛಸೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಯಮು—ಎಲೈ ಯಮನೇ । (ತ್ವಂ—ನೀನು) । ಬತ—ಖಂಡಿತವಾಗಿಯೂ । ಬತಃ—ದುರ್ಬಲನಾಗಿ । ಅಸಿ—ಆಗಿದ್ದೀಯೆ । ತೇ—ನಿನ್ನ । ಮನಃ—ಮನಸ್ಸನ್ನಾಗಲಿ । ಹೃದಯಂ ಚ—ಹೃದಯವನ್ನಾಗಲಿ । ನೈವ ಅವಿದಾವ—ನಾವು ಖಂಡಿತ ಅರಿಯಲಾರೆವು । ಕಕ್ಷ್ಯಾ ಇವ—ಹಗ್ಗವು । ಯುಕ್ತಂ—ತನ್ನನ್ನು ಹೊಂದಿಕೊಂಡಿರುವ ಅಶ್ವನನ್ನು ಕಟ್ಟಿಕೊಳ್ಳುವಂತೆಯೂ । ಲಿಬುಜಾ ಇವ—ಲತೆಯು । ವೃಕ್ಷಂ—ವೃಕ್ಷವನ್ನು ಅಪ್ಪಿಕೊಳ್ಳುವಂತೆಯೂ, । ಅನ್ಯಾ ಕಿಲ—ಬೇರೊಬ್ಬ ಸ್ತ್ರೀಯು । ತ್ವಾಂ—ನಿನ್ನನ್ನು । ಪರಿ ಷ್ವಜಾತೇ—ಅಪ್ಪಿಕೊಳ್ಳುತ್ತಾಳೆ.

॥ ಭಾವಾರ್ಥ ॥

ಎಲೈ ಯಮನೇ, ನೀನು ಖಂಡಿತವಾಗಿಯೂ ದುರ್ಬಲನಾಗಿ ಆಗಿದ್ದೀಯೆ. ನಿನ್ನ ಮನಸ್ಸನ್ನಾಗಲಿ, ನಿನ್ನ ಹೃದಯವನ್ನಾಗಲಿ ನಾವು ಖಂದಿತ ಅರಿಯಲಾರೆವು. ಹೆಗ್ಗವು ತನ್ನನ್ನು ಹೊಂದಿರುವ ಅಶ್ವವನ್ನು ಕಟ್ಟಿಕೊಳ್ಳುವಂತೆಯೂ, ಲತೆಯು ವೃಕ್ಷವನ್ನು ಅಪ್ಪಿಕೊಳ್ಳುವಂತೆಯೂ ಬೇರೊಬ್ಬ ಸ್ತ್ರೀಯು ನಿನ್ನನ್ನಪ್ಪಿಕೊಳ್ಳುತ್ತಾಳೆ.

English Translation

(Yami speaks). Alas, Yama, you are feeble; we understand not your mind or your heart. Some other female embraces you as a girth a horse, or as a creeper a tree.

॥ ವಿಶೇಷವಿಷಯಗಳು ॥

ಬತಃ ಎಂಬ ಶಬ್ದದ ಅರ್ಥವನ್ನು ವಿವರಿಸುತ್ತಾ ಯಾಸ್ಕರು ಪ್ರಕೃತ ಋಕ್ಕಿನ ನಿರ್ವಚನವನ್ನು ಹೇಳಿದಾರೆ—

ಬತಃ । ಬತ ಇತಿ ನಿಪಾತಃ ಖೇದಾನುಕಂಪಯೋಃ । ಬತೋ ಬತಾಸಿ ಯಮು ನೈವ ತೇ ಮನೋ ಹೃದಯಂ ಚಾವಿದಾಮ । ಅನ್ಯಾ ಕಿಲ ತ್ವಾಂ ಕಕ್ಷ್ಯೇವ ಯುಕ್ತಂ ಪರಿಷ್ವಜಾತೇ ಲಿಬುಜೇವ ವೃಕ್ಷಂ ॥ ಬತೋ ಬಲಾದದೀತೋ ಭವತಿ । ದುರ್ಬಲೋ ಬತಾಸಿ ಯಮು ನೈವ ತೇ ಮನೋ ಹೃದಯಂ ಚ ವಿಜಾನೀಮೋಽನ್ಯಾ ಕಿಲ ತ್ವಾಂ ಪರಿಷ್ವಂಕ್ಷ್ಕತೇ ಕಕ್ಷ್ಯೇವ ಯುಕ್ತಂ ಲಿಬುಜೇವ ವೃಕ್ಷಂ । ಲಿಬುಜಾ ವ್ರತತಿರ್ಭವತಿ ಲೀಯತೇ ವಿಭಜಂತೀತಿ । ವ್ರತತಿರ್ವರಣಾಚ್ಚ ಸಂಯಮನಾಚ್ಚ ತತನಾಚ್ಚ ॥

(ನಿ ೬-೨೮)

ಬತ ಎಂಬ ಶಬ್ದವು ಸಖೇದಾಶ್ಚರ್ಯಗಳನ್ನೂ ಅಥವಾ ವ್ಯಸನವನ್ನೂ ಮರುಕವನ್ನೂ ಸೂಚಿಸುವ ನಿಪಾತವು (ಅವ್ಯಯವು). ಎಲೈ ಯಮನೇ, ನಿನ್ನ ಮನಸ್ಸು ಧೈರ್ಯಯುಕ್ತವಾಗಿಲ್ಲ. ಅತಿ ದುರ್ಬಲವಾಗಿರುವುದು. ಎಂದರೆ ಮನಃಸ್ಥಿಮಿತಿಯಿಲ್ಲ. ನಿನ್ನ ಮನಸ್ಸನ್ನು ಹೀಗೆಯೇ ಸರಿ ಎಂದು ನಾವು ತಿಳಿಯಲಾರೆವು. ಆಹಾ ಕಷ್ಟ, ಕಷ್ಟ ! ಲತೆಯು ಸಮೀಪದಲ್ಲಿರುವ ವೃಕ್ಷವನ್ನು ಸುತ್ತಿಕೊಳ್ಳುವಂತೆ ಬೇರೊಬ್ಬ ಸ್ತ್ರೀಯು ನಿನ್ನನ್ನು ತನ್ನ ಬಾಹುಗಳಿಂದ ಬಿಗಿದಪ್ಪಿಕೊಳ್ಳುವಳು. ಇದನ್ನು ನೋಡಿ ಸಹಿಸುವುದು ಬಹುಕಷ್ಟವು. ಲಿಬುಜಾ ಎಂದರೆ ಒಂದುವಿಧ ಬಳ್ಳಿಯು ಇದು ತನ್ನ ಲತೆಯನ್ನು ವೃಕ್ಷದಲ್ಲೆಲ್ಲಾ ವ್ಯಾಪಿಸುವಂತೆ ಸುತ್ತಿಕೊಳ್ಳುವುದು. ಈ ರೀತಿ ವಿಭಾಗಿಸಿ ಅಥವಾ ವ್ಯಾಪಿಸಿ ವೃಕ್ಷದಲ್ಲೆಯೇ ಸೇರಿಕೊಳ್ಳುವುದರಿಂದ ಲಿಬುಜಾ ಎಂದರೆ ವ್ರತತಿ ಅಥವಾ ಬಳ್ಳಿಗೆ ಹೆಸರು. ಇದರಂತೆಯೇ ವ್ರತತಿಶಬ್ದವೂ ಸಪ ತನಗೆ ಬೇಕಾದ ವೃಕ್ಷವನ್ನು ಆರಿಸಿಕೊಳ್ಳು ಎಂಬರ್ಥವಿರುವ ವೃ ಧಾತುವಿನಿಂದಾಗಲಿ, ಅಥವಾ ಸುತ್ತಿಕೊಳ್ಳು ಎಂಬರ್ಥವಿರುವ ಸಿ ಧಾತುವಿನಿಂದಾಗಲಿ, ಸುತ್ತಲೂ ಹರಡು ಎಂಬರ್ಥವಿರುವ ತನು ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಈ ಶಬ್ದಕ್ಕೆ ಬಳ್ಳಿ, ಲತೆಯೆಂದೇ ಅರ್ಥವಿರುವುದು.

॥ ಸಂಹಿತಾಪಾಠಃ ॥

ಅನ್ಯಮೂ ಷು ತ್ವಂ ಯಮ್ಯನ್ಯ ಉ ತ್ವಾಂ ಪರಿ ಷ್ವಜಾತೇ ಲಿಬುಜೇವ ವೃಕ್ಷಂ।
ತಸ್ಯ ವಾ ತ್ವಂ ಮನ ಇಚ್ಛಾ ಸ ವಾ ತವಾಧಾ ಕೃಣುಷ್ವ ಸಂವಿದಂ
ಸುಭದ್ರಾಂ ॥ ೧೪ ॥

॥ ಪದಪಾಠಃ ॥

ಅನ್ಯಂ। ಊಂ ಇತಿ। ಸು। ತ್ವಂ। ಯಮಿ। ಅನ್ಯಃ। ಊಂ ಇತಿ। ತ್ವಾಂ। ಪರಿ। ಸ್ವಜಾತೇ। ಲಿಬುಜಾ-
ಇವ। ವೃಕ್ಷಂ।

ತಸ್ಯ। ವಾ। ತ್ವಂ। ಮನಃ। ಇಚ್ಛ। ಸಃ। ವಾ। ತವ। ಅಧ। ಕೃಣುಷ್ವ। ಸಂವಿದಂ। ಸುಭದ್ರಾಂ॥

॥ ಸಾಯಣಭಾಷ್ಯಂ ॥

ಯಮುಃ ಪುನರಪ್ಯಾಹ। ಹೇ ಯಮಿ ತ್ವಮನ್ಯಮು ಅನ್ಯಂ ಪುರುಷಮೇವ ಸು ಸುಷ್ಠು ಪರಿಷ್ವಜ। ಅನ್ಯ ಉ ಅನ್ಯೋಽಪಿ ಪುರುಷಸ್ತ್ವಾಂ ಪರಿಷ್ವಜಾತೇ। ತತ್ರ ದೃಷ್ಟಾಂತಃ। ಲಿಬುಜೇವ ವೃಕ್ಷಂ ಯಥಾ ವಲ್ಲೀ ಗಾಢಂ ವೃಕ್ಷಂ ಪರಿಷ್ವಜತೇ ತದ್ವತ್। ತಥಾ ಸತಿ। ವಾಶಬ್ದಃ ಸಮುಚ್ಚಯೇ। ತ್ವಂ ತಸ್ಯ ಚ ಪುರುಷಸ್ಯ ಮನ ಇಚ್ಛ। ಕಾಮಯಸ್ವ। ತಸ್ಯ ತ್ವಂ ವಶವರ್ತಿನೀ ಭವೇತ್ಯರ್ಥಃ। ಸ ಚ ಪುರುಷಸ್ತವ ಮನ ಇಚ್ಛತು। ಅಧಾಥ ಪರಸ್ಪರವಶವರ್ತಿತ್ವಾನಂತರಂ ತ್ವಂ ತೇನ ಸಹ ಸುಭದ್ರಾಂ ಸುಕಲ್ಯಾಣೀಂ ಸಂವಿದಂ ಪರಸ್ಪರಸಂಭೋಗಸುಖಸಂವಿತ್ತಿಂ ಕೃಣುಷ್ವ। ಕುರುಷ್ವ ॥

॥ ಪ್ರತಿಪದಾರ್ಥ ॥

ಯಮಿ—ಎಲೈ ಯಮಿಯೇ। **ತ್ವಂ**—ನೀನು। **ಅನ್ಯಮು**—ಬೇರೆ ಪುರುಷನನ್ನೇ। **ಸು**—ಅತಿಶಯವಾಗಿ ಆಲಂಗಿಸಿಕೊ। **ಅನ್ಯ ಉ**—ಬೇರೆ ಪುರುಷನು। **ಲಿಬುಜಾ**—ಲತೆಯು। **ವೃಕ್ಷಂ ಇವ**—ವೃಕ್ಷವನ್ನು ಅಪ್ಪಿಕೊಳ್ಳುವಂತೆ। **ತ್ವಾಂ**—ನಿನ್ನನ್ನು। **ಪರಿ ಷ್ವಜಾತೇ**—ಆಲಂಗಿಸಿಕೊಳ್ಳುತ್ತಾನೆ। **ತ್ವಂ**—ನೀನು। **ತಸ್ಯ**—ಆ ಪುರುಷನ। **ಮನಃ**—ಮನಸ್ಸನ್ನು। **ಇಚ್ಛ**—ಆಪೇಕ್ಷಿಸು। **ಸಃ**—ಅವನು। **ತವ**—ನಿನ್ನನ್ನಿಚ್ಛಿಸಲಿ (ಪ್ರೀತಿಸಲಿ)। **ಸುಭದ್ರಾಂ**—ಕಲ್ಯಾಣಾತ್ಮಕವಾದ। **ಸಂವಿದಂ**—ಸಂಬಂಧವನ್ನು। **ಕೃಣುಷ್ವ**—ಮಾಡಿಕೊ

॥ ಭಾವಾರ್ಥ ॥

ಎಲೈ ಯಮಿಯೇ, ನೀನು ಬೇರೆ ಪುರುಷನನ್ನು ಅತಿಶಯವಾಗಿ ಆಲಂಗಿಸಿಕೊ. ಬೇರೆ ಪುರುಷನು, ಲತೆಯು ವೃಕ್ಷವನ್ನು ಅಪ್ಪಿಕೊಳ್ಳುವಂತೆ ನಿನ್ನನ್ನು ಆಲಂಗಿಸಲಿ. ನೀನು ಅವನನ್ನು ಪ್ರೀತಿಸು. ಅವನು ನಿನ್ನನ್ನು ಗಾಢವಾಗಿ ಪ್ರೀತಿಸಲಿ. ಅವನೊಡನೆ ಕಲ್ಯಾಣಾತ್ಮಕವಾದ ಸಂಬಂಧವನ್ನು ಬೆಳೆಸು.

English Translation

(Yama speaks). You, Yami, embrace another; and let another embrace you as a creeper a tree: seek his affection, let him seek yours; and make a happy union.

॥ ವಿಶೇಷವಿಷಯಗಳು ॥

ಯಮೀ—ಎಂಬ ಶಬ್ದವನ್ನು ವಿವರಿಸುತ್ತಾ ಯಾಸ್ಕರು ಪ್ರಕೃತ ಋಕ್ಕಿಗೆ ಈ ರೀತಿ ನಿರ್ವಚನವನ್ನು ಹೇಳಿದ್ದಾರೆ—

ಯಮೀ । ಯಮೀ ನ್ಯಾಖ್ಯಾತಾ । ತಸ್ಯೈಷಾ ಭವತಿ। ಅನ್ಯಮೂ ಷು ತ್ವಂ ಯಮ್ಯನ್ಯ ಉ ತ್ವಾಂ ಪರಿ ಷ್ವಜಾತೇ ಲಿಬುಜೇವ ವೃಕ್ಷಂ । ತಸ್ಯ ವಾ ತ್ವಂ ಮನ ಇಚ್ಛಾ ಸ ವಾ ತವಾಧಾ ಕೃಣುಷ್ವ ಸಂವಿದಂ ಸುಭದ್ರಾಂ ॥ ಅನ್ಯಮೇವ ಹಿ ತ್ವಂ ಯಮ್ಯನ್ಯಸ್ತ್ವಾಂ ಪರಿಷ್ವಂಕ್ಷ್ಯತೇ ಲಿಬುಜೇವ ವೃಕ್ಷಂ ತಸ್ಯ ವಾ ತ್ವಂ ಮನ ಇಚ್ಛ ಸ ವಾ ತವಾಧಾನೇನ ಕುರುಷ್ವ ಸಂವಿದಂ ಸುಭದ್ರಾಂ ಕಲಾಣಭದ್ರಾಂ ॥ ಯಮೀ ಯಮಂ ಚಕಮೇ ತಾಂ ಪ್ರತ್ಯಾಚಷ್ಟೇತ್ಯಾಖ್ಯಾನಂ ॥

(ನಿ. ೧೧-೩೪)

ಯಮೀ ಎಂಬ ಶಬ್ದವನ್ನು ಹಿಂದೆಯೇ ವಿವರಿಸಲಾಗಿದೆ. ಮುಂದಿನ (ಪ್ರಕೃತ)ಋಕ್ಕು ಯಮೀ ಎಂಬ ಸ್ತ್ರೀಯನ್ನು ಸಂಭೋಧಿಸುವ ಮಂತ್ರವಾಗಿದೆ–ಎಲೈ ಯಮಿಯೇ, ನಿಜವಾಗಿಯೂ ನೀನು(ನಿನ್ನನ್ನು ಬಿಟ್ಟು)ಬೇರೊಬ್ಬ ಪುರುಷನನ್ನು, ಲತೆಯು ವೃಕ್ಷವನ್ನು ಸುತ್ತಿಕೊಳ್ಳುವಂತೆ, ಬಿಗಿದಪ್ಪಿ ಆಲಂಗಿಸಿಕೋ. ಅವನ ಮನಸ್ಸನ್ನು ನೀನೂ, ನಿನ್ನ ಮನಸ್ಸನ್ನು ಅವನೂ ಪರಸ್ಪರ ತಿಳಿದು ವರ್ತಿಸಿರಿ. ಎಲೌ ಯಮಿಯೇ ಅವನೊಡನೆ ಈ ವಿಧನಾದ ರತಿಸುಖದಿಂದ ಉತ್ತಮವಾದ ಸುಖಸಂತೋಷಗಳನ್ನು ಪಡೆದು ಆನಂದವಾಗಿರಿ. ಹಿಂದೆ ಯಮೀ ಎಂಬ ಸ್ತ್ರೀಯು ತನ್ನ ಅಣ್ಣನಾದ ಯಮನನ್ನೇ ಪ್ರೀತಿಸಿ ಅವನೊಡನೆ ಸಂಭೋಗೇಚ್ಛೆಯನ್ನು ಬಯಸಿದಾಗ ಯಮನು ಯಮಿಗೆ ಹೇಳಿದ ಮಾತಿದು.

ಹನ್ನೊಂದನೆಯ ಸೂಕ್ತವು

॥ ಸಾಯಣಭಾಷ್ಯಂ ॥

ವೃಷೇತಿ ನವರ್ಚಮೇಕಾದಶಂ ಸೂಕ್ತಮಾಂಗೇರ್ಹವಿರ್ಧಾನಸ್ಯಾರ್ಷವಮಾಗ್ನೇಯಂ । ಸಪ್ತಮ್ಯಾದ್ಯಾಸ್ತಿಸ್ರಸ್ತ್ರಿಷ್ಟುಭಃ ಶಿಷ್ಟಾ ಜಗತ್ಯಃ। ತಥಾ ಚಾನುಕ್ರಾಂತಂ । ವೃಷಾ ನವಾಂಗಿರ್ಹವಿರ್ಧಾನ ಆಗ್ನೇಯಂ ತು ತ್ರಿತ್ರಿಷ್ಟುಬಂತಮಿತಿ ॥ ಗತಃ ಸೂಕ್ತವಿನಿಯೋಗಃ ॥

ಅನುವಾದವು—**ವೃಷಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಹವಿರ್ಧಾನ ಆಂಗಿಃ ಎಂಬುವನು ಋಷಿಯು; ಅಗ್ನಿಯು ದೇವತೆಯು; ಈ ಸೂಕ್ತದ ಏಳನೆಯ ಋಕ್ಕಿನಿಂದ ಮುಂದಿನ ಮೂರು ಋಕ್ಕುಗಳು ತ್ರಿಷ್ಟುಪ್‌ಛಂದಸ್ಸವು. ಮಿಕ್ಕ

ಋಕ್ಕುಗಳು ಜಗತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ವೃಷಾ ನವಾಂಗಿರ್ಹವಿರ್ಧಾನ ಆಗ್ನೇಯಂ ತು ತ್ರಿತ್ರಿಷ್ಟುಬಂತಂ** ಎಂದು ಹೇಳಿರುವುದು ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೧೧

ಮಂಡಲ—೧೦ । ಅನುವಾಕ—೧ । ಸೂಕ್ತ—೧೧ ।
ಆಸ್ಪಕ—೭ । ಅಧ್ಯಾಯ—೬ । ವರ್ಗ—೯, ೧೦ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ।
ಋಷಿಃ—ಹವಿರ್ಧಾನ ಆಂಗಿಃ ।
ದೇವತಾ—ಅಗ್ನಿಃ ॥
ಛಂದಃ—೧-೬. ಜಗತೀ । ೭-೯. ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ವೃಷಾ ವೃಷ್ಣೇ ದುದುಹೇ ದೋಹಸಾ ದಿವಃ ಪಯಾಂಸಿ ಯಹ್ವೋ ಅದಿತೇರದಾಭ್ಯಃ ।
ವಿಶ್ವಂ ಸ ವೇದ ವರುಣೋ ಯಥಾ ಧಿಯಾ ಸ ಯಜ್ಞಿಯೋ ಯಜತು ಯಜ್ಞಿಯಾಁ ಋತೂನ್ ॥ ೧ ॥

॥ ಪದಪಾಠಃ ॥

ವೃಷಾ । ವೃಷ್ಣೇ । ದುದುಹೇ । ದೋಹಸಾ । ದಿವಃ । ಪಯಾಂಸಿ । ಯಹ್ವಃ । ಅದಿತೇಃ । ಅದಾಭ್ಯಃ ।
ವಿಶ್ವಂ । ಸಃ । ವೇದ । ವರುಣಃ । ಯಥಾ । ಧಿಯಾ । ಸಃ । ಯಜ್ಞಿಯಃ । ಯಜತು । ಯಜ್ಞಿಯಾನ್ । ಋತೂನ್ ॥ ೧ ॥

॥ ಸಾಯಣಭಾಷ್ಯಂ ॥

ವೃಷಾಹುತಿದ್ವಾರೇಣ ವೃಷ್ಟೇರ್ವರ್ಷಿತಾ ಯಹ್ವೋ ಮಹಾನದಾಭ್ಯಃ ಕೇನಾಪ್ಯಹಿಂಸ್ಯೋಽಗ್ನಿರದಿತೇರಕ್ಷೀಣಯಾಗಕ್ರಿಯಸ್ಯ ವೃಷ್ಣೇ ಯಜ್ಞದ್ವಾರೇಣ ಸ್ತುತೀನಾಂ ಹವಿಷಾಂ ವಾ ವರ್ಷಿತುರ್ಯಜಮಾನಸ್ಯಾರ್ಥಾಯ ದೋಹಸಾ ದೋಹನೇನ ಮಹತಾ ಪ್ರಸ್ಕಾರಣೇನ ದಿವಃ ಸಕಾಶಾತ್ಪಯಾಂಸಿ ವೃಷ್ಟಿಲಕ್ಷಣಾನ್ಯುದಕಾನಿ ದುದುಹೇ । ದೋಗ್ಧಿ । ಪ್ರಸ್ಕಾರಯತಿ । ಕಿಂಚ ಯಥಾ ವರುಣ ಆದಿತ್ಯೋ ಧಿಯಾತ್ಮಾನುರೂಪಯಾ ಪ್ರಜ್ಞಯಾ ವಿಶ್ವಂ ಸರ್ವಂ ವೇದ ಜಾನಾತಿ ತಥಾ ಸೋಽಯಮಗ್ನಿರ್ಜಾನಾತೀತ್ಯರ್ಥಃ । ಯಜ್ಞಿಯೋ ಯಜ್ಞಾರ್ಹೋ ಯಜ್ಞಿಯಾನ್ ಯಜ್ಞಾರ್ಹಾನೃತೂನ್ಯಜತು। ಪೂಜಯತು।

। ಪ್ರತಿಪದಾರ್ಥ ।

ವೃಷಾ—ಇಷ್ಟಾರ್ಥಪ್ರದನೂ । **ಯುಹ್ವಃ**—ಮಹಾತ್ಮನೂ । **ಅದಾಭ್ಯಃ**—ಅಹಿಂಸಿತನೂ ಆದ ಅಗ್ನಿಯು । **ಅಧಿತೇಃ**—ಕ್ಷಯರಹಿತವಾದ ಯಜ್ಞಕರ್ಮವುಳ್ಳವನೂ । **ವೃಷ್ಣಃ** — ಹವಿಸ್ಸುಗಳನ್ನರ್ಪಿಸುವವನೂ ಆದ ಯಜಮಾನನಿಗೆ । **ದೋಹಸಾ**—ಮೇಘವನ್ನು ಹಿಂಡಿ ಕರೆಯುವುದರಿಂದ । **ದಿವಃ**—ಅಂತರಿಕ್ಷದಿಂದ । **ಪಯಾಂಸಿ**—ವೃಷ್ಟ್ಯುದಕಗಳನ್ನು । **ದುದುಹೇ**—ಕರೆಯುತ್ತಾನೆ । **ಯಥಾ**—ಯಾವ ರೀತಿಯಲ್ಲಿ । **ವರುಣಃ**—ಆದಿತ್ಯನು । **ಧಿಯಾ**—ತನ್ನ ಪ್ರಜ್ಞೆಯಿಂದ। **ವಿಶ್ವಂ**—ಸಮಸ್ತವನ್ನೂ। **ವೇದ**—ಅರಿಯುತ್ತಾನೆಯೋ ಅದರಂತೆ। **ಸಃ**-ಅಗ್ನಿಯೂ ಸಹ ಅರಿಯುತ್ತಾನೆ । **ಯಜ್ಞಿಯಃ**—ಯಜ್ಞಾರ್ಹನಾದ । **ಸಃ**— ಅಗ್ನಿಯು । **ಯಜ್ಞಿಯಾನ್** — ಪೂಜಾರ್ಹವಾದ । **ಋತೂನ್**—ಯಜ್ಞಕಾಲಗಳನ್ನಾಶ್ರಯಿಸಿ । **ಯಜತು**—ಪೂಜಿಸಲಿ. ।

। ಭಾವಾರ್ಥ ।

ಇಷ್ಟಾರ್ಥಪ್ರದನೂ, ಮಹಾತ್ಮನೂ, ಅಹಿಂಸಿತನೂ ಆದ ಅಗ್ನಿಯು ಕ್ಷಯರಹಿತವಾದ ಯಜ್ಞಕರ್ಮವುಳ್ಳವನೂ, ಹವಿಸ್ಸುಗಳನ್ನರ್ಪಿಸುವವನೂ ಆದ ಯಜಮಾನನಿಗೋಸ್ಕರ ಮೇಘಗಳನ್ನು ಹಿಂಡಿ ವೃಷ್ಟಿಯನ್ನು ಸುರಿಸುತ್ತಾನೆ. ಯಾವ ರೀತಿ ಆದಿತ್ಯನು ತನ್ನ ಪ್ರಜ್ಞೆಯಿಂದ ಸಕಲವನ್ನೂ ಅರಿಯುವನೋ, ಅದರಂತೆ ಅಗ್ನಿಯೂ ಸಹ ಅರಿಯುತ್ತಾನೆ. ಯಜ್ಞಾರ್ಹನಾದ ಅಗ್ನಿಯು ಪೂಜಾರ್ಹವಾದ ಯಜ್ಞಕಾಲಗಳನ್ನಾಶ್ರಯಿಸಿ ಪೂಜಿಸಲಿ.

English Translation

The great, the unconquerable (Agni), the showerer, milks openly with a (great) milking the streams (of prosperity) from heaven for the unwearying sacrificer; like Vaurna, he knows everything by his understanding: may he who is skilled in sacrifice observe the sacrificirl seasons.

। ಸಂಹಿತಾಪಾಠಃ ।

ರಪದ್ಗಂಧರ್ವೀರಪ್ಯಾ ಚ ಯೋಷಣಾ ನದಸ್ಯ ನಾದೇ ಪರಿ ಪಾತು ಮೇ ಮನಃ ।
ಇಷ್ಟಸ್ಯ ಮಧ್ಯೇ ಅದಿತಿರ್ನಿಧಾತು ನೋ ಭ್ರಾತಾ ನೋ ಜ್ಯೇಷ್ಠಃ ಪ್ರಥಮೋ ವಿ ವೋಚತಿ ॥ ೨ ॥

।। ಪದಪಾಠಃ ।।

ರಪತ್ । ಗಂಧರ್ವೀಃ । ಅಪ್ಯಾ । ಚ । ಯೋಷಣಾ । ನದಸ್ಯ । ನಾದೇ । ಪರಿ । ಪಾತು । ಮೇ । ಮನಃ ।
ಇಷ್ಟಸ್ಯ । ಮಧ್ಯೇ । ಅದಿತಿಃ । ನಿ । ಧಾತು । ನಃ । ಭ್ರಾತಾ । ನಃ । ಜ್ಯೇಷ್ಠಃ । ಪ್ರಥಮಃ । ವಿ । ವೋಚತಿ ॥

॥ ಸಾಯಣಭಾಷ್ಯಂ ॥

ರಪದ್ರಪಿತವತ್ಯಗ್ನಿಗುಣಾನುಕ್ತವತೀ ಗಂಧರ್ವೀ ಗಂಧರ್ವಸ್ಯ ಸ್ತ್ರ್ಯಪ್ಸ್ಯಾಭ್ಯಃ ಸಂಸ್ಕೃತಾ ಯೋಷಣಾಹುತಿಲಕ್ಷಣಾ ಸ್ತ್ರೀ ಚ । ಅಗ್ನಿಂ ತರ್ಪಿತವತೀತಿ ಶೇಷಃ । ನದಸ್ಯ । ಸ್ತೋತೃನಾಮೈತತ್ । ಸ್ತೋತುರ್ಮೇ ಮನು ಸ್ವಭೂತಂ ಮನೋ ನಾದೇ ಸ್ತುತಿಲಕ್ಷಣೇ ಶಬ್ದೇ ಪರಿ ಪಾತು । ಅಗ್ನಿಃ ಸಮ್ಯಗ್ಗೃಹ್ಣತು । ಅಹಂ ಸಮಾಹಿತಮನಾ ಭೂತ್ವಾ ಸಮ್ಯಕ್ ಸ್ತುತಿಂ ಕರೋಮೀತ್ಯರ್ಥಃ । ಕಂಚಾದಿತಿರಂಖುಂಡನೀಯೋಽಗ್ನಿರ್ಯೋಽಸ್ಮಾನಿಷ್ಟಸ್ಯ ಯಾಗಸ್ಯ ಮಧ್ಯೇ ನಿ ಧಾತು । ನಿದಧಾತು । ನಿತರಾಂ ಸ್ಥಾಪಯತು । ಪ್ರಥಮಃ ಸರ್ವೇಷಾಂ ಯಜಮಾನಾನಾಂ ಮುಖ್ಯೋ ನೋಽಸ್ಮಾಕಂ ಜ್ಯೇಷ್ಠೋ ಭ್ರಾತಾ ವಿ ವೋಚತಿ । ವಿಶೇಶೇಣ ಬ್ರವೀತಿ । ಸ್ತೌತೀತ್ಯರ್ಥಃ । ನಾಹಮೇವ ಕೇವಲೋ ಯಜನಶೀಲಃ ಕಂತು ಸರ್ವ ಏವಾಸ್ಮತ್ಕುಲೀನೋ ದೇವಯಾಗಪ್ರಿಯ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ರಪತ್—ಅಗ್ನಿಗುಣಗಳನ್ನು ಪರಿಸತಕ್ಕ । **ಗಂಧರ್ವೀಃ**—ಗಂಧರ್ವಿಯೂ । **ಅಪ್ಸ್ಯಾ**—ಉದಕದಿಂದ ಸಂಸ್ಕೃತಳಾದವಳೂ । **ಯೋಷಣಾ ಚ**—ಆಹುತಿರೂಪವುಳ್ಳವಳೂ ಆದ ಸ್ತ್ರೀಯೂ । **ನದಸ್ಯ**—ಸ್ತುತಿಕರ್ತನಾದ । **ಮೇ**—ನನ್ನ । **ಮನಃ**—ಮನಸ್ಸನ್ನು । **ನಾದೇ**—ಸ್ತುತಿರೂಪವಾದ ಶಬ್ದದಲ್ಲಿ । **ಪರಿಪಾತು**—ಪೂರ್ಣವಾಗಿ ರಕ್ಷಿಸಲಿ । **ಅದಿತಿಃ**—ಪರಿಪೂರ್ಣನಾದ ಅಗ್ನಿಯು । **ನಃ**—ನಮ್ಮನ್ನು । **ಇಷ್ಟಸ್ಯ**—ಯಾಗದ । **ಮಧ್ಯೇ**—ಮಧ್ಯದಲ್ಲಿ । **ನಿ ಧಾತು**—ಸ್ಥಾಪಿಸಲಿ । **ಪ್ರಥಮಃ**—ಯಜ್ಞಕರ್ತರಲ್ಲೆಲ್ಲ ಮುಖ್ಯನೂ । **ನಃ**—ನಮ್ಮ । **ಜ್ಯೇಷ್ಠಃ ಭ್ರಾತಾ**—ಜ್ಯೇಷ್ಠಭ್ರಾತೃವೂ । **ವಿ ವೋಚತಿ**—ಸ್ತುತಿಪಾಠವನ್ನು ಪರಿಸುತ್ತಾನೆ. ।

॥ ಭಾವಾರ್ಥ ॥

ಅಗ್ನಿಗುಣಗಳನ್ನು ಪರಿಸತಕ್ಕ ಗಂಧರ್ವಿಯೂ, ಉದಕದಿಂದ ಸಂಸ್ಕೃತಳೂ, ಆಹುತಿರೂಪವುಳ್ಳವಳೂ ಆದ ಸ್ತ್ರೀಯೂ, ಸ್ತುತಿಕರ್ತನಾದ ನನ್ನ ಮನಸ್ಸನ್ನು ಸ್ತುತಿಕ್ರಿಯೆಯಲ್ಲಿಯೇ ನೆಲೆಸುವಂತೆ ಮಾಡಲಿ, ಪರಿಪೂರ್ಣನಾದ ಅಗ್ನಿಯು ನಮ್ಮನ್ನು ಯಾಗದ ಮಧ್ಯದಲ್ಲಿ ಸ್ಥಾಪಿಸಲಿ. ಯಜ್ಞಕರ್ತರಲ್ಲೆಲ್ಲ ಮುಖ್ಯನೂ, ನಮ್ಮ ಜ್ಯೇಷ್ಠಭ್ರಾತೃವೂ ಸಹ ಸ್ತುತಿಪಾಠವನ್ನು ಪರಿಸುತ್ತಾನೆ.

English Translation

The Gandharvi and the water-consecrated feminine oblation praise Agni: may He be favourable to the thought of me, raising my voice in his praise: may Agni place us in the midst of the sacrifice; the chief (of the worshippers), our elder brother, repeats his various laudations

॥ ಸಂಹಿತಾಪಾಠಃ ॥

ಸೋ ಚಿನ್ನು ಭದ್ರಾ ಕ್ರತುಮತೀ ಯಶಸ್ಯತ್ಯುಷಾ ಉವಾಸ ಮನವೇ ಸ್ವರ್ವತೀಃ।

ಯದೀಮುಶಂತಮುಶತಾಮನು ಕ್ರತುಮಗ್ನಿಂ ಹೋತಾರಂ ವಿದಥಾಯ ಜೀಜನತ್ ॥ ೩ ॥

। ಪದಪಾಠಃ ।

ಸೋ ಇತಿ । ಚಿತ್ । ನು । ಭದ್ರಾ । ಕ್ಷುಽಮತೀ । ಯಶಸ್ವತೀ ! ಉಷಾಃ । ಉವಾಸ । ಮನವೇ ।
ಸ್ವಃಽವತೀ ।
ಯತ್ । ಈಂ । ಉಶಂತಂ । ಉಶತಾಂ । ಅನು । ಕ್ರತುಂ । ಅಗ್ನಿಂ । ಹೋತಾರಂ । ವಿದಥಾಯ ।
ಜೀಜನತ್ ॥ ೩ ॥

। ಸಾಯಣಭಾಷ್ಯಂ ।

ಭದ್ರಾ ಭಜನೀಯಾ ಕ್ಷುಮತೀ ಶಬ್ದವತೀ ಯಶಸ್ವತ್ಯನ್ನವತೀ ಕೀರ್ತಿಮತೀ ವಾ ಸೋ ಚಿತ್ ಸೈವ ಪ್ರಸಿದ್ಧೋಷಾ ಮನವೇ ಮನುಷ್ಯಾಯ ಯಜಮಾನಾಯ ಸ್ವರ್ವತ್ಯಾದಿತ್ಯವತೀ ಸತೀ ನು ಕ್ಷಿಪ್ರಮುವಾಸ । ಉಷಿತವತೀ । ಉದಿತವತೀತ್ಯರ್ಥಃ । ಕದೋದಿತವತೀತಿ ಉಚ್ಯತೇ । ಯದ್ಯದೋ-ಶಂತಂ ಸ್ತುತಿಂ ಹವಿಶ್ಚ ಕಾಮಯಮಾನಮುಶತಾಂ ಯಷ್ಟುಂ ಕಾಮಯಮಾನಾನಾಂ ಸಂಬಂಧಿನಂ ಹೋತಾರಂ ದೇವಾನಾಮಾಹ್ವಾತಾರಂ ಹೋಮನಿಷ್ಪಾದಕಂ ವೇಮೇನಮನುಗ್ನಿಮನು ಕ್ರತುಂ ಸ್ತುತಿ-ಕರ್ಮಣಃ ಪಶ್ಚಾದ್ವಿದಥಾಯ ಯಜನೀಯಾಯ ಯಜ್ಞಾರ್ಥಂ ಜೀಜನನ್ । ಋತ್ವಿಗ್ಯಜಮಾನಾ ಜನಯಂತೀತ್ಯರ್ಥಃ । ತದೋದಿತವತೀತಿ ಸಂಬಂಧಃ ।

। ಪ್ರತಿಪದಾರ್ಥ ।

ಯತ್—ಯಾವಾಗ । **ಉಶಂತಂ**—ಹವಿಸ್ಸನ್ನು ಅಪೇಕ್ಷಿಸುವವನೂ । **ಉಶತಾಂ**—ಹವಿಸ್ಸನ್ನು ಅಪೇಕ್ಷಿಸುವ ದೇವತೆಗಳಿಗೆ । **ಹೋತಾರಂ**—ಆಹ್ವಾನವನ್ನು ಕೊಡತಕ್ಕವನೂ ಆದ । **ಈಂ ಅಗ್ನಿಂ**—ಈ ಅಗ್ನಿಯನ್ನು । **ಅನುಕ್ರತುಂ**—ಸ್ತುತಿಕರ್ಮವಾದನಂತರವೇ । **ವಿದಥಾಯ**—ಯಜ್ಞಾರ್ಥವಾಗಿ । **ಜೀಜನನ್**—ಋತ್ವಿಕ್ಕುಗಳು ಉತ್ಪನ್ನಮಾಡಿದರೋ ಆಗ । **ಭದ್ರಾ**—ಮಂಗಳಕಾರಕಳೂ । **ಕ್ಷುಮತೀ**—ಶಬ್ದಯುಕ್ತಳೂ । **ಯಶಸ್ವತೀ**—ಅನ್ನವಂತಳೂ । **ಸೋ ಚಿತ್ ಉಷಾಃ**—ಪ್ರಸಿದ್ಧಳೂ ಆದ ಅದೇ ಉಷೋದೇವಿಯು । **ಮನವೇ**—ಮಾನವನ ಹಿತಕ್ಕಾಗಿ । **ಸ್ವರ್ವತೀ**—ಆದಿತ್ಯನೊಡಗೂಡಿದವಳಾಗಿ । **ನು**—ಕ್ಷಿಪ್ರವಾಗಿ । **ಉವಾಸ**—ಉದಯಿಸಿದ್ದಾಳೆ.

। ಭಾವಾರ್ಥ ।

ಹವಿಸ್ಸನ್ನು ಸ್ವತಃ ಅಪೇಕ್ಷಿಸುವವನೂ, ಹವಿಸ್ಸನ್ನು ಅಪೇಕ್ಷಿಸುವ ದೇವತೆಗಳಿಗೆ ಆಹ್ವಾನವನ್ನು ಕೊಡತಕ್ಕವನೂ ಆದ ಈ ಅಗ್ನಿಯನ್ನು ಸ್ತುತಿಕರ್ಮವಾದನಂತರವೇ, ಯಜ್ಞಾರ್ಥವಾಗಿ ಋತ್ವಿಕ್ಕುಗಳು ಯಾವಾಗ ಉತ್ಪನ್ನಮಾಡಿದರೋ ಆಗಲೆ, ಮಂಗಳಕಾರಕಗಳೂ, ಶಬ್ದಯುಕ್ತಳೂ ಅನ್ನವಂತಳೂ, ಪ್ರಸಿದ್ಧಳೂ ಆದ ಅದೇ ಉಷೋದೇವಿಯು ಮಾನವನ ಹಿತಕ್ಕಾಗಿ ಆದಿತ್ಯನೊಡಗೂಡಿದವಳಾಗಿ ಕ್ಷಿಪ್ರವಾಗಿ ಉದಯಿಸಿದ್ದಾಳೆ.

English Translation

That very auspicious, resounding, famous Dawn, ascends bringing the sun to man ; when for the sacrifice after the worship they give birth to that Agni, the desirer, the invoker of the desiring (gods)

॥ संहितापाठः ॥

अध॒ त्यं द्र॒प्सं वि॒भ्वं॑ विच॒क्ष॒णं॒ विरा॒भर॑दिषि॒तः श्ये॒नो अ॑ध्व॒रे ।
यदी॒ विशो॒ वृण॑ते॒ दस्म॑मा॒र्या॒ अ॒ग्निं होता॑र॒मध॒ धीर॑-
जायत ॥ ४ ॥

॥ पदपाठः ॥

अ॒ध॒ । त्यं । द्र॒प्सं । वि॒ऽभ्वं॑ । वि॒ऽच॒क्ष॒णं । विः । आ । अ॒भर॑त् । इ॒षि॒तः । श्ये॒नः । अ॒ध्व॒रे
यदी॑ । विशः॑ । वृण॑ते । दस्म॑ं । आ॒र्याः॑ । अ॒ग्निं । होता॑रं । अध॑ । धीः । अ॒जा॒य॒त

॥ सायणभाष्यं ॥

अधाधानंतरं श्येनः श्येनाख्यो विः पक्ष्यध्वरे यागे इषितोऽग्निप्रेषितो विभ्वं महान्तं विचक्षणं सर्वस्य विशेषेण द्रष्टारं त्यं तं प्रसिद्धं द्रप्सं नात्यल्पं नातिबहुलं सोममाभरत् । अहृतवान् । अपि च यदि यदार्या अभिगमनीयं तं व्रजन्तीः विशो यजमाना मनुष्या दस्मं दर्शनीयं शत्रूणामुपक्षपयितारं वा होतारमग्निं वृणते प्रार्थयन्ते अध तदा धीर्यागादिक्रियाजायत । यज्वभिः प्रख्यायत इत्यर्थः ॥

॥ प्रतिपदार्थ ॥

अध—अनंतर । श्येनः—श्येनसंज्ञकपक्षी । विः—पक्षियु । अध्वरे—यागदल्लि । इषितः—अग्नियिंद प्रेरितनागि । विभ्वं—महात्मनू । विचक्षणं—सूक्ष्मदृष्टियुळ्ळवनू । त्यं—प्रसिद्धनू । द्रप्सं—स्रविसतक्कवनू आद सोमवन्नु । आभरत्—तंदितु । यदि—यावाग । आर्याः—अग्निपूजकरादा । विशः—यजमानरु । दस्मं—आकर्षकवाद रूपवुळ्ळवनू होतारं—होतृरूपनू आद । अग्निं—अग्नियन्नु । वृणते—प्रार्थिसुवरो । अध—आग । धीः—यागरूपवाद क्रियेयु । अजायत—प्रारंभवायितु. ।

॥ ಭಾವಾರ್ಥ ॥

ಶ್ಯೇನಸಂಜ್ಞಕವಾದ ಪಕ್ಷಿಯು ಯಾಗದಲ್ಲಿ ಅಗ್ನಿಯಿಂದ ಪ್ರೇತನಾಗಿ ಮಹಾತ್ಮನೂ, ಸೂಕ್ಷ್ಮದೃಷ್ಟಿಯುಳ್ಳವನೂ, ಪ್ರಸಿದ್ಧನೂ, ಸ್ರವಿಸತಕ್ಕವನೂ ಆದ ಸೋಮನನ್ನು ತಂದಿತು. ಯಾವಾಗ ಅಗ್ನಿಪೂಜಕರಾದ ಯಜಮಾನರು ಆಕರ್ಷಕವಾದ ರೂಪವುಳ್ಳವನೂ, ಹೋತೃರೂಪನೂ ಆದ ಅಗ್ನಿಯನ್ನು ಪ್ರಾರ್ಥಿಸುವರೋ, ಆಗ ಯಾಗರೂಪವಾದ ಕ್ರಿಯೆಯು ಪ್ರಾರಂಭಿಸಲ್ಪಟ್ಟಿತು

English Translation

The hawk sent (by Agni) to the sacrifice has brought the dripping copious all-seeing (soma) libration. When the Arya people choose the victorious Agni as the ministrant priest, then the sacred rite is celebrated.

॥ ಸಂಹಿತಾಪಾಠಃ ॥

ಸದಾಸಿ ರಣ್ವೋ ಯವಸೇವ ಪುಷ್ಯತೇ ಹೋತಾ್ರಭಿರಗ್ನೇ ಮನುಷಃ ಸ್ವಧ್ವರಃ।
ವಿಪ್ರಸ್ಯ ವಾ ಯಚ್ಛಶಮಾನ ಉಕ್ಥ್ಯಂ ೧ ವಾಜಂ ಸಸವಾँ ಉಪಯಾಸಿ
ಭೂರಿಭಿಃ ॥ ೫ ॥

ಪದಪಾಠಃ

ಸದಾ। ಅಸಿ। ರಣ್ವಃ। ಯವಸಾ೨ಇವ। ಪುಷ್ಯತೇ। ಹೋತ್ರಾಭಿಃ। ಅಗ್ನೇ। ಮನುಷಃ। ಸು೨ಅಧ್ವರಃ
ವಿಪ್ರಸ್ಯ। ವಾ। ಯತ್। ಶಶಮಾನಃ। ಉಕ್ಥ್ಯಂ। ವಾಜಂ। ಸಸ೨ವಾನ್। ಉಪ೨ಯಾಸಿ।
ಭೂರಿ೨ಭಿಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ಸದಾ ಸತತಂ ರಣ್ವೋ೨ಸಿ। ರಮಣೀಯೋ ಭವಸಿ। ತತ್ರ ದೃಷ್ಟಾಂತಃ। ಯವಸೇವ ಪುಷ್ಯತೇ ಯಥಾ ಯವಸಾನಿ ತೃಣಾನಿ ಚ ಪುಷ್ಟಿಂ ಕುರ್ವತೇ ಹಸ್ತ್ಯಶ್ವಗೋಮಹಿಷಾದಿ-ಚತುಷ್ಪದಾಯ ಸರ್ವದಾ ರಮಣೀಯಾನಿ ಭವಂತಿ ತದ್ವತ್। ಅಪಿ ಚ ಹೇ ಅಗ್ನೇ ಮನುಷೋ ಮನುಷ್ಯಸ್ಯ ಸ್ವಭೂತೈರ್ಹೋತ್ರಾಭಿಃ। ಹೋತ್ರೇತಿ ಯಜ್ಞನಾಮೈತತ್। ಯಜ್ಞೈಃ ಸ್ವಧ್ವರಃ ಶೋಭನಯಜ್ಞೋ ಭವೇತಿ ಶೇಷಃ। ವಿಪ್ರಸ್ಯ ವಾ ಸ್ತೋತುರ್ವಾ ಯದ್ಯಸ್ಯ ಯಜಮಾನಸ್ಯ ವಾ ಸ್ವಭೂತಮುಕ್ಥ್ಯಂ ಸ್ತೋತ್ರಂ ಶಶಮಾನಃ ಪ್ರಶಂಸನ್ ವಾಜಂ ಹವಿರ್ಲಕ್ಷಣಮನ್ನಂ ಸಸವಾನ್ ಸಂಭಜಮಾನಶ್ಚ ಭೂರಿಭಿರ್ಬಹುಭಿರ್ದೇವೈಃ ಸಹೋಪಯಾಸಿ ಉಪಗಚ್ಛಸಿ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ, । **ಪುಷ್ಯತೇ**—ತಮ್ಮ ಪುಷ್ಟಿಯನ್ನಪೇಕ್ಷಿಸತಕ್ಕ ಪಶ್ವಾದಿಗಳಿಗೆ । **ಯವಸೇವ**—ಹುಲ್ಲುಗಾವಲು ಆಕರ್ಷಕವಾಗಿರುವಂತೆ । **ತ್ವಂ**—ನೀನು । **ಸದಾ**—ಯಾವಾಗಲೂ । **ರಣ್ವಃ**—ಆಕರ್ಷಕನಾಗಿ । **ಅಸಿ**—ಆಗಿದ್ದೀಯೆ । **ಮನುಷಃ**—ಮಾನವನ । **ಹೋತ್ರಾಭಿಃ**—ಯಜ್ಞಗಳಿಂದ । **ಸ್ವಧ್ವರಃ**—ಶ್ರೇಷ್ಠರೀತಿಯಿಂದ ಪೂಜಿತನಾಗಿ ಆಗು । **ವಿಪ್ರಸ್ಯ**—ಸ್ತುತಿಕರ್ತನ । **ವಾ**—ಅಥವಾ । **ಯತ್**—ಯಾವುದೇ ಆಗಲಿ ಯಜಮಾನನ । **ಉಕ್ಥ್ಯಂ**—ಸ್ತೋತ್ರವನ್ನು । **ಶಶಮಾನಃ**—ಪ್ರಶಂಸಿಸುತ್ತಲೂ । **ವಾಜಂ**—ಹವಿಸ್ಸಿನ ರೂಪದ ಅನ್ನವನ್ನು । **ಸಸವಾನ್**—ಸೇವಿಸುತ್ತಲೂ । **ಭೂರಿಭಿಃ**—ಅಧಿಕವಾದ ದೇವತೆಗಳೊಡನೆ । **ಉಪಯಾಸಿ**—ಸಮೀಪಿಸಿ ಬಾ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ತಮ್ಮ ಪುಷ್ಟಿಯನ್ನಪೇಕ್ಷಿಸತಕ್ಕ ಪಶ್ವಾದಿಗಳಿಗೆ ಹುಲ್ಲುಗಾವಲು ಆಕರ್ಷಕವಾಗಿರುವಂತೆ ನೀನು ಯಾವಾಗಲೂ ನನಗೆ ಆಕರ್ಷಕನಾಗಿದ್ದೀಯೆ. ಮಾನವನ ಯಜ್ಞಗಳಿಂದ ಶ್ರೇಷ್ಠರೀತಿಯಿಂದ ಪೂಜಿತನಾಗು ಸ್ತುತಿಕರ್ತನ ಅಥವಾ ಯಜಮಾನನ ಸ್ತೋತ್ರವನ್ನು ಪ್ರಶಂಸಿಸುತ್ತಲೂ, ಹವಿಸ್ಸಿನ ರೂಪದ ಅನ್ನವನ್ನು ಸೇವಿಸುತ್ತಲೂ ಅಧಿಕವಾದ ದೇವತೆಗಳೊಡನೆ ನಮ್ಮ ಯಜ್ಞಕ್ಕೆ ಸಮೀಪಿಸಿ ಬಾ

English Translation

You, Agni, are ever pleasing (to your worshippers), as pasture satisfies (the herds) ; be well-worshipped with man's sacrifices ; if commending the praise of the wise, and partaking of the (sacrificial) food, you come with many (divinities to the rite).

॥ ಸಂಹಿತಾಪಾಠಃ ॥

ಉದೀರಯ ಪಿತರಾ ಜಾರ ಆ ಭಗಮಿಯಕ್ಷತಿ ಹರ್ಯತೋ ಹೃತ್ತ ಇಷ್ಯತಿ ।
ವಿವಕ್ತಿ ವಹ್ನಿಃ ಸ್ವಪಸ್ಯತೇ ಮುಖಸ್ತವಿಷ್ಯತೇ ಅಸುರೋ ವೇಪತೇ ಮತೀ ॥

॥ ಪದಪಾಠಃ ॥

ಉತ್ । ಈರಯ । ಪಿತರಾ । ಜಾರಃ । ಆ । ಭಗಂ । ಇಯಕ್ಷತಿ । ಹರ್ಯತಃ । ಹೃತ್ತಃ । ಇಷ್ಯತಿ ।
ವಿವಕ್ತಿ । ವಹ್ನಿಃ । ಸು ಅಪಸ್ಯತೇ । ಮುಖಃ । ತವಿಷ್ಯತೇ । ಅಸುರಃ । ವೇಪತೇ । ಮತೀ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವದೀಯಂ ಜ್ಯೋತಿಃ ಪಿತರಾ ಪಿತರೌ ಸರ್ವಪ್ರಾಣಿನಾಂ ಮಾತಾಪಿತೃಭೂತೇ ದ್ಯಾವಾಪೃಥಿವ್ಯೌ ಪ್ರತ್ಯುದ್ಗಮಯ। ತತ್ರ ದೃಷ್ಟಾಂತಃ। ಆಕಾರ ಉಪಮಾರ್ಥೇ। ರಾತ್ರೇರ್ನಕ್ಷತ್ರಾದಿ-ದೀಪ್ತೀನಾಂ ಚ ಜರಯಿತೃತ್ವಾಜ್ಜ್ವಾರ ಆದಿತ್ಯಃ। ಸ ಯಥಾ ದ್ಯಾವಾಪೃಥಿವ್ಯೌ ಪ್ರತಿ ಭಗಂ ಭಜನೀಯಂ ಜ್ಯೋತಿರುದ್ಗಮಯತಿ ತದ್ವತ್। ಹರ್ಯತೋ ಯಾಗಂ ಕಾಮಯಮಾನಾನ್ಪ್ರತೀಯಕ್ಷತಿ। ಯಜಮಾನೋ ಯಷ್ಟುಮಿಚ್ಛತಿ। ಹೃತ್ತೋ ಹೃದಯೇನ ಚೇಷ್ಯತಿ। ಇಷಿರಯಂ ಗತ್ಯರ್ಥಃ ಶುಷ್ಮೋಽಪ್ಯುಪಸರ್ಗಪೂರ್ವೋ ದ್ರಷ್ಟವ್ಯಃ। ಅಧೀಷ್ಯತಿ ದೇವಾನ್ಯಷ್ಟುಮಧಿಗಚ್ಛತಿ। ವಿವಕ್ತಿ। ವಿವಕ್ಷತಿ। ಶಸ್ತ್ರಲಕ್ಷಣಾಃ ಸ್ತುತೀರ್ವಕ್ತುಮಿಚ್ಛತಿ। ವಹ್ನಿರ್ಹೋಢಾ ಸ್ತುತೀನಾಂ ದೇವಾನ್ಪ್ರತಿ ಪ್ರಾಪಯಿತಾ ಹೋತಾ ಚ ಸ್ವಪಸ್ಯತೇ। ಶೋಭನಮಾತ್ಮೀಯಂ ಕರ್ಮ ಕರ್ತುಮಿಚ್ಛತಿ। ಮುಖಃ। ಯಜ್ಞಾನಾಮೈತತ್। ಅತ್ರ ತತ್ಪ್ರಯೋಕ್ತಾಧ್ವರ್ಯುರುಚ್ಯತೇ। ಸ ಚ ತವಿಷ್ಯತೇ। ತವಿಷಿರ್ವ್ಯದ್ಧ್ಯರ್ಥಃ। ಸ ಚಾತ್ರಾಂತರ್ಣೀತಶಸನರ್ಥಶ್ಚ ದ್ರಷ್ಟವ್ಯಃ। ತುತುವಿಷತಿ। ಸ್ತೋತ್ರಲಕ್ಷಣಾಃ ಸ್ತುತೀರ್ವರ್ಧಯಿತುಮಿಚ್ಛತೀತ್ಯರ್ಥಃ। ಅಸುರಃ ಪ್ರಾಣವಾನ್ ಪ್ರಜ್ಞಾವಾನ್ವಾ। ಬ್ರಹ್ಮೇತಿ ಶೇಷಃ। ಮತೀ ಮತ್ಯಾ ಬುದ್ಧ್ಯಾ ನೇಪತೇ। ಕರ್ಮನೈಗುಣ್ಯಾದ್ಭಿಭ್ಯತ್ಕಂಪತೇ। ಹೇ ಅಗ್ನೇ ಯತೋ ಯಜಮಾನಃ ಸರ್ವತ್ವಿಜಶ್ಚ ಸ್ವಸ್ವಕರ್ಮ ಕರ್ತುಂ ತ್ವಾಮಾಗಚ್ಛಂತಿ ಅತಸ್ತ್ವಂ ಶೀಘ್ರಮುದ್ಗಮಯೇತ್ಯರ್ಥಃ॥

॥ ಪ್ರತಿಪದಾರ್ಥ ॥

ಜಾರಃ—ಆದಿತ್ಯನು। ಭಗಂ—ಪೂಜ್ಯವಾದ ತನ್ನ ತೇಜಸ್ಸನ್ನು ಪ್ರಸರಿಸುವಂತೆ। ಪಿತರಾ—ದ್ಯಾವಾಪೃಥಿವಿಗಳಿಗಭಿಮುಖವಾಗಿ। ಉದೀರಯ—ನಿನ್ನ ತೇಜಸ್ಸನ್ನು ಪ್ರಸರಿಸು। ಹರ್ಯತಃ—ಯಜ್ಞಾಪೇಕ್ಷಿಗಳಾದ ದೇವತೆಗಳನ್ನು। ಆ ಇಯಕ್ಷತಿ—ಯಜಮಾನನು ಪೂಜಿಸಲಿಚ್ಛಿಸುತ್ತಾನೆ। ಹೃತ್ತಃ—ಮನಃಪೂರ್ವಕವಾಗಿ। ಇಷ್ಯತಿ—ಇಚ್ಛಿಸುತ್ತಾನೆ। ವಿವಕ್ತಿ—ಸ್ತುತಿಯನ್ನು ಪರಿಸಲಿಚ್ಛಿಸುತ್ತಾನೆ। ವಹ್ನಿಃ—ಹೋತೃವು। ಶಸ್ಪಸ್ಯತೇ—ಉತ್ತಮವಾದ ಕರ್ಮವಮಾಡಲಿಚ್ಛಿಸುತ್ತಾನೆ। ಮುಖಃ—ಅಧ್ವರ್ಯುವು। ತವಿಷ್ಯತೇ—ಸ್ತುತಿಯನ್ನು ಅಧಿಕಗೊಳಿಸಲಿಚ್ಛಿಸುತ್ತಾನೆ। ಅಸುರಃ—ಬ್ರಹ್ಮನು। ಮತೀ—ತನ್ನ ಬುದ್ಧಿಯೊಡಗೂಡಿ। ನೇಪತೇ—ಕರ್ಮನಿರತನಾಗುತ್ತಾನೆ.।

॥ ಭಾವಾರ್ಥ ॥

ಎಲೈ ಅಗ್ನಿಯೇ, ಆದಿತ್ಯನು ಪೂಜ್ಯವಾದ ತನ್ನ ತೇಜಸ್ಸನ್ನು ಪ್ರಸರಿಸುವಂತೆ, ದ್ಯಾವಾಪೃಥಿವಿಗಳಿಗಭಿಮುಖವಾಗಿ ನಿನ್ನ ತೇಜಸ್ಸನ್ನು ಪ್ರಸರಿಸು. ಯಜ್ಞಾಪೇಕ್ಷಿಗಳಾದ ದೇವತೆಗಳನ್ನು ಯಜಮಾನನು ಪೂಜಿಸಲಿಚ್ಛಿಸುತ್ತಾನೆ. ಮನಃಪೂರ್ವಕವಾಗಿ ಇಚ್ಛಿಸುತ್ತಾನೆ. ಸ್ತುತಿಯನ್ನು ಪರಿಸಲಿಚ್ಛಿಸುತ್ತಾನೆ. ಹೋತೃವು ಉತ್ತಮವಾದ ಕರ್ಮ ಮಾಡಲಿಚ್ಛಿಸುತ್ತಾನೆ, ಅಧ್ವರ್ಯುವು ಸ್ತುತಿಯನ್ನು ಅಧಿಕಗೊಳಿಸಲಿಚ್ಛಿಸುತ್ತಾನೆ. ಬ್ರಹ್ಮನು ತನ್ನ ಬುದ್ಧಿಯೊಡಗೂಡಿ ಕರ್ಮನಿರತನಾಗುತ್ತಾನೆ.

English Translation

Wake up the parents, as the Sun his splendour: (the worshipper) desires to offer worship to (the deities) who are pleased by it; with all his

heart he wishes (to do so); he desires to repeat (your praise); the bearer (of the oblation) is anxious to effect the good work; the sacrifice longs for augmentation, the prudent (sacrificer) trembles in his thoughts.

॥ ವಿಶೇಷವಿಷಯಗಳು ॥

ಈ ಋಕ್ಕನಲ್ಲಿರುವ ಆ ಎಂಬ ಶಬ್ದದ ಅನೇಕಾರ್ಥಗಳನ್ನು ವಿವರಿಸುವಾಗ ಯಾಸ್ಕರು ಆ ಎಂಬ ಶಬ್ದಕ್ಕೆ ಉಪಮಾರ್ಥವೂ ಇರುವುದೆಂದು ಹೇಳಿ ಆ ಸಂದರ್ಭದಲ್ಲಿ ಈ ಋಕ್ಕನ್ನು ಉದಾಹರಿಸಿದಾರೆ—

ಅಥಾಪ್ಯುಪಮಾರ್ಥೇ ದೃಶ್ಯತೇ । ಜಾರ ಆ ಭಗಂ । ಜಾರ ಇವ ಭಗಂ । ಆದಿತ್ಯೋಽತ್ರ ಜಾರ ಉಚ್ಯತೇ । ರಾತ್ರೇರ್ಜರಯಿತಾ । ಸ ಏವ ಭಾಸಾಂ ॥

(ನಿ. ೩-೧೬)

ಆ ಎಂಬ ಉಪಸರ್ಗಕ್ಕೆ ಉಪಮಾರ್ಥದಲ್ಲಿಯೂ ಎಂದರೆ ಹೋಲಿಕೆಯಲ್ಲಿಯೂ ಪ್ರಯೋಗವಿದೆ. ಪ್ರಕೃತಋಕ್ಕಿನಲ್ಲಿರುವ **ಜಾರ ಆ ಭಗಂ** ಎಂಬ ವಾಕ್ಯದಲ್ಲಿ ಆದಿತ್ಯನಂತೆ ಪೂಜ್ಯವಾದ ಎಂದು ಆ ಎಂಬ ಶಬ್ದಕ್ಕೆ ಅಂತೆ ಎಂದು ಉಪಮಾರ್ಥವಿರುವುದು. ಇಲ್ಲಿ ಜಾರ ಶಬ್ದಕ್ಕೆ ಆದಿತ್ಯನೆಂದರ್ಥವು **ರಾತ್ರೇರ್ಜರಯಿತಾ ತದುದಯೇ ಹಿ ರಾತ್ರಿರ್ಜೀರ್ಯತೇ ವಿಪರಿಣಮತೀತ್ಯರ್ಥಃ**—ಎಂದರೆ ರಾತ್ರಿಯನ್ನು ಕೊನೆಗಾಣಿಸುವವನಾದ್ದರಿಂದ ಆದಿತ್ಯನಿಗೆ ಜಾರನೆಂದು ಹೆಸರು ಸೂರ್ಯನು ಉದಯಿಸುವುದರಿಂದ ರಾತ್ರಿಕಾಲವು ಕೊನೆಗೊಳ್ಳುವುದು ಎಂದಭಿಪ್ರಾಯವು

॥ ಸಂಹಿತಾಪಾಠಃ ॥

ಯಸ್ತೇ ಅಗ್ನೇ ಸುಮತಿಂ ಮರ್ತೋ ಅಕ್ಷತ್ಸಹಸಃ ಸೂನೋ ಅತಿ ಸ ಪ್ರ ಶೃಣ್ವೇ ।
ಇಷಂ ದಧಾನೋ ವಹಮಾನೋ ಅಶ್ವೈರಾ ಸ ದ್ಯುಮಾಁ ಅಮವಾನ್ಭೂಷತಿ ದ್ಯೂನ್ ॥ ೭ ॥

॥ ಪದಪಾಠಃ ॥

ಯಃ । ತೇ । ಅಗ್ನೇ । ಸುಽಮತಿಂ । ಮರ್ತಃ । ಅಕ್ಷತ್ । ಸಹಸಃ । ಸೂನೋ ಇತಿ । ಅತಿ । ಸಃ । ಪ್ರ । ಶೃಣ್ವೇ ।

ಇಷಂ । ದಧಾನಃ । ವಹಮಾನಃ । ಅಶ್ವೈಃ । ಆ । ಸಃ । ದ್ಯುಽಮಾನ್ । ಅಮ್ಽವಾನ್ । ಭೂಷತಿ । ದ್ಯೂನ್ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸಹಸಃ ಸೂನೋ ಬಲಸ್ಯ ಪುತ್ರಾಗ್ನೇ ತ್ವದೀಯಾಂ ಸುಮತಿಂ ಶೋಭನಾಮನುಗ್ರಾಹಿಕಾಂ ಬುದ್ಧಿಂ ಯೋ ಮರ್ತೋ ಮನುಷ್ಯೋ ಯಜಮಾನೋಽಕ್ಷತ್ ಅಶ್ನುತೇ । ಅನುಗ್ರಹಶೀಲಂ ತ್ವಾಂ ಸ್ತುತಿಭಿರ್ಹವಿರ್ಭಿಶ್ಚ ಪರಿಚರತೀತ್ಯರ್ಥಃ । ಸ ಯಜಮಾನೋಽತಿ ಪ್ರ ಶೃಣ್ವೇ । ಸರ್ವಾಲ್ಲೋಕಾನತೀತ್ಯ ಪ್ರಕರ್ಷೇಣ ಶ್ರೂಯತೇ । ಪ್ರಖ್ಯಾತೋ ಭವತೀತ್ಯರ್ಥಃ । ಕೀದೃಶಃ । ಇಷಮನ್ನಂ ದಧಾನೋಽರ್ಥಿಭ್ಯಃ ಪ್ರಯಚ್ಛನ್ ಅಶ್ವೈರ್ವಹಮಾನಃ । ಕಂಚ ಸ ಏವ ದ್ಯುಮಾನ್ದೀಪ್ತಿಮಾನ್ ಶರೀರಪತನಾನಂತರಂ ದ್ಯುಸ್ಥಾನವಾನ್ವಾ ಅಮವಾನ್ಬಲವಾನಾ ದ್ಯೂನ್ । ದ್ಯುರಿತ್ಯಹನಾಮ ॥ ಕಾಲಾಧ್ವನೋರತ್ಯಂತಸಂಯೋಗ ಇತ್ಯೇಷಾ ದ್ವಿತೀಯಾ ॥ ಅದಿತ್ಯಕರ್ಮಕಾಣ್ಯಹಾನಿ । ಅಚಂದ್ರಾರ್ಕಮಿತ್ಯರ್ಥಃ । ಭೂಷತಿ । ಭವತಿ ॥

॥ ಪ್ರತಿಪದಾರ್ಥ ॥

ಸಹಸಃ ಸೂನೋ—ಶಕ್ತಿಪುತ್ರನಾದ । ಅಗ್ನೇ—ಎಲೈ ಅಗ್ನಿಯೇ। ತೇ—ನಿನ್ನ । ಸುಮತಿಂ—ಉತ್ತಮವಾದ ಅನುಗ್ರಹಬುದ್ಧಿಯನ್ನು । ಯಃ ಮರ್ತಃ—ಯಾವ ಯಜಮಾನನು । ಅಕ್ಷತ್—ಪಡೆಯುವನೋ । ಸಃ—ಆ ಯಜಮಾನನು । ಇಷಂ—ಅನ್ನವನ್ನು । ದಧಾನಃ—ಯಾಚಕರಿಗೆ ಕೊಡುತ್ತಲೂ । ಅಶ್ವೈಃ—ಅಶ್ವಗಳಿಂದ । ವಹಮಾನಃ—ವಹಿಸಲ್ಪಡುತ್ತಲೂ । ಅತಿ ಪ್ರ ಶೃಣ್ವೇ—ಅಧಿಕವಾಗಿ ಕೀರ್ತಿಯನ್ನು ಪಡೆಯುತ್ತಾನೆ । ಸಃ—ಅದೇ ಯಜಮಾನನು । ಆ ದ್ಯೂನ್—ಪ್ರತಿದಿನವೂ । ದ್ಯುಮಾನ್- -ಕಾಂತಿಯುತನಾಗಿಯೂ । ಅಮವಾನ್—ಶಕ್ತಿಯುತನಾಗಿಯೂ । ಭೂಷತಿ—ಆಗುತ್ತಾನೆ ।

॥ ಭಾವಾರ್ಥ ॥

ಶಕ್ತಿಪುತ್ರನಾದ ಎಲೈ ಅಗ್ನಿಯೇ, ನಿನ್ನ ಉತ್ತಮವಾದ ಅನುಗ್ರಹಬುದ್ಧಿಯನ್ನು ಯಾವ ಯಜಮಾನನು ಪಡೆಯುವನೋ ಆ ಯಜಮಾನನು ಅನ್ನವನ್ನು ಯಾಚಕರಿಗೆ ಕೊಡುತ್ತಲೂ ಅಶ್ವಗಳಿಂದ ವಹಿಸಲ್ಪಡುತ್ತಲೂ, ಅಧಿಕವಾಗಿ ಕೀರ್ತಿಯನ್ನು ಪಡೆಯುತ್ತಾನೆ. ಅದೇ ಯಜಮಾನನು ಪ್ರತಿದಿನವೂ ಕಾಂತಿಯುತನಾಗಿಯೂ, ಶಕ್ತಿಯುತನಾಗಿಯೂ ಆಗುತ್ತಾನೆ.

English Translation

Agni, son of strength, the mortal who obtains your fovaur is widely celebrated : possessing abundant food, and being conveyed by horses, illustrious and vigorous, he graces the days of his existence.

॥ ಸಂಹಿತಾಪಾಠಃ ॥

ಯದ॑ಗ್ನ ಏ॒ಷಾ ಸ॒ಮಿತಿ॒ರ್ಭವಾ॑ತಿ ದೇ॒ವೇದೇ॒ವೇಷು॑ ಯಜತಾ ಯ॑ಜತ್ರ ।
ರತ್ನಾ॑ ಚ ಯದ್ವಿ॒ಭಜಾ॑ಸಿ ಸ್ವ॒ಧಾವೋ॑ ಭಾ॒ಗಂ ನೋ॑ ಅತ್ರ ವಸು॒ಮಂತಂ
ವೀತಾತ್ ॥ ೮ ॥

॥ पदपाठः ॥

यत् । अग्ने । एषा । सम्ऽइतिः । भवाति । देवि । देवेषु । यजता । यजत्र ।
रत्ना । च । यत् । विऽभजासि । स्वधाऽवः । भागं । नः । अत्र । वसुऽमंतं । वीतात् ॥

॥ सायणभाष्यं ॥

महाव्रतेऽसंस्थितेऽमरुत्वतीयेऽयदग्न एषेत्यनयाऽचतुर्गृहीतमाज्यं जुहुयात् । तथैव वंशमारण्यकेऽसूत्रितं । यदग्न एषा समितिर्भवाति ॥ ऐ. आ. ३.८-८ । इति ॥

हे यजत्र यष्टव्याग्ने यद्यदैषा समितिरस्मत्कर्तृका स्तुतिसंहतिर्यजता यजतेषु यष्टव्येषु देवेषु मध्ये देवि द्योतमाना भवाति । यष्टव्या देवा अस्माभिः स्तूयंत इज्यंते चेत्यर्थः । हे स्वधावोऽ हविर्लक्षणान्नवन्नग्ने त्वं यद्यदा रत्ना च रत्नानि रमणीयानि धनानि स्तोतृभ्यो यष्टृभ्यश्च विभजासि विभजसि अत्र तदानीं तथा नोऽस्मभ्यं वसुमंतं धनवंतं नानाधननावयवभूतं भागमंशं वीतात् ॥ वी गत्यादिषु । सुतहोत्रात्तजाद्यशिष्यन्यतरस्याम् । पा-३-१-१३४ । इति हेः स्थाने तातङ् । अंतर्णीतण्यर्थश्चात्र द्रष्टव्यः ॥ वयंयं । अगमयं । अस्मभ्यं प्रयच्छेत्यर्थः ॥

॥ प्रतिपदार्थ ॥

स्वधावः—हविस्सिन रूपद अन्नवंतनू । यजत्र—पूज्यनू अद । अग्ने—एलै अग्नियें । यत्—यावाग । एषा समितिः—नम्म ई स्तुतिसमूहवु । यजता—पूजार्हरिंद । देवेषु—देवतेगळल्लि सेरि । देवि—प्रकाशमानवागि । भवाति—आगुवुदो । यत्—यावाग । रत्ना च-रमणीयवाद धनगळन्नु । विभजासि—नीनु स्तोतृगळिगे विभागमाडुवेयो । अत्र—आ कालदल्लि नः—नमगू । वसुमंतं—संपद्युक्तवाद । भागं—भागवन्नु । वीतात्—ओदगिसु. ।

॥ भावार्थ ॥

हविस्सिन रूपद अन्नवंतनू, पूज्यनू अद एलै अग्नियें, यावाग नम्म ई स्तुतिसमूहवु पूजार्हरादा देवतेगळल्लि सेरि प्रकाशमानवागि आगुवुदीतो, यावाग रमणीयवाद धनगळन्नु नीनु स्तोतृगळिगे विभागमाडिकोडुवेयो, आ कालदल्लि नमगू संपद्युक्तवाद भागवन्नु ओदगिसु.

English Translation

When, adorable Agni, this united praise is resplendent amongst the adorable gods, and when you, bearer of the oblation, apportion the precious (treasures), then allot to us a valuable share

ವಿಶೇಷವಿಷಯಗಳು ॥

ಮಹಾವ್ರತೇಷ್ಟಿಯು ನಡೆಯುತ್ತಿರುವಾಗ ಮರುತ್ವತೀಯಶಸ್ತ್ರಮಂತ್ರಗಳಲ್ಲಿ **ಯದಗ್ನ ಏಷಾ** ಎಂಬ ಈ ಋಕ್ಕಿನಿಂದ ಆಜ್ಯವನ್ನು ನಾಲ್ಕಾವರ್ತಿ ತೆಗೆದುಕೊಂಡು ಸ್ರುಕ್ಕಿನಲ್ಲಿ ಇಟ್ಟುಕೊಂಡು ಹೋಮಮಾಡಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದ—**ಯದಗ್ನ ಏಷಾ ಸಮಿತಿರ್ಭವಾತಿ** ಎಂಬ ವಾಕ್ಯದಿಂದ ನಿರ್ದಿಷ್ಟವಾಗಿರುವುದು.

। ಸಂಹಿತಾಪಾಠಃ ।

ಶ್ರುಧೀ ನೋ ಅಗ್ನೇ ಸದನೇ ಸಧಸ್ಥೇ ಯುಕ್ಷ್ವಾ ರಥಮಮೃತಸ್ಯ ದ್ರವಿತ್ನುಂ।
ಆ ನೋ ವಹ ರೋದಸೀ ದೇವಪುತ್ರೇ ಮಾಕಿರ್ದೇವಾನಾಮುಪ ಭೂರಿಹ ಸ್ಯಾಃ ॥ ೯ ॥

। ಪದಪಾಠಃ ।

ಶ್ರುಧಿ । ನಃ । ಅಗ್ನೇ । ಸದನೇ । ಸಧಽಸ್ಥೇ । ಯುಕ್ಷ್ವ । ರಥಂ । ಅಮೃತಸ್ಯ । ದ್ರವಿತ್ನುಂ ।
ಆ । ನಃ । ವಹ । ರೋದಸೀ ಇತಿ । ದೇವಪುತ್ರೇ ಇತಿ ದೇವಽಪುತ್ರೇ । ಮಾಕಿಃ । ದೇವಾನಾಂ । ಅಪ । ಭೂಃ । ಇಹ । ಸ್ಯಾಃ ॥ ೯ ॥

। ಸಾಯಣಭಾಷ್ಯಂ ॥

ಹೇ ಅಗ್ನೇ ಸಧಸ್ಥೇ ಸಹಸ್ಥಾನೇ ಸರ್ವದೇವತಾಸಾಧಾರಣೇ ಸದನೇ ಯಜ್ಞಗೃಹೇ ಸ್ಥಿತಃ ಸನ್ನೋಽಸ್ಮದೀಯಂ ವಚನಂ ಶ್ರುಧಿ । ಶೃಣು । ಕಂ ತದ್ವಚನಂ ಉಚ್ಯತೇ । ಅಮೃತಸ್ಯ ದೇವಪಾನಸ್ಯ ಮಧುನೋ ದ್ರವಿತ್ನುಂ ದ್ರಾವಕಂ ರಥಮಾತ್ಮೀಯಂ ಯುಕ್ಷ್ವ । ಆಹ್ವಾನಾರ್ಥಂ ದೇವಾನ್ಪ್ರತಿ ಗಮನಾಯಾಶ್ವಾಃ ಸಂಯುಕ್ಷ್ವ । ಸಂಯುಕ್ತೇನ ರಥೇನ ಗತ್ವಾ ನೋಽಸ್ಮಾಕಂ ಯಜ್ಞಂ ಪ್ರತಿ ದೇವಪುತ್ರೇ ದೇವಸ್ಯ ಪ್ರಜಾಪತೇರ್ದುಹಿತರೌ ಯದ್ವಾ ದೇವಾನಾಂ ಪುತ್ರಾ ಯಯೋಸ್ತೇ ರೋದಸೀ ದ್ಯಾವಾಪೃಥಿವ್ಯಾವಾ ವಹ । ಪ್ರಾಪಯ । ದೇವಾನಾಂ ಮಧ್ಯೇ ಕಶ್ಚಿದ್ದೇವೋಽಪ ಭೂರಪಭವಿತಾಸ್ಮದ್ಯಜ್ಞಾದಪಗಂತಾ ಮಾಕಿಃ ಸ್ಯಾತ್ । ಕ್ವಂ ಚೇಹಾಸ್ಮಿನ್ಯಜ್ಞೇ ಸ್ಯಾಃ । ಸಂನಿಹಿತೋ ಭವ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಸಧಸ್ಥೇ**—ದೇವತೆಗಳೆಲ್ಲರೂ ಒಟ್ಟುಗೂಡುವ । **ಸದನೇ**—ಯಜ್ಞಗೃಹದಲ್ಲಿದ್ದು । **ನಃ**—ನಮ್ಮ ಸ್ತುತಿಯನ್ನು । **ಶ್ರುಧಿ**—ಕೇಳು । **ಅಮೃತಸ್ಯ**—ಅಮೃತವನ್ನು । **ದ್ರವಿತ್ನುಂ**—ಸುರಿಸತಕ್ಕ । **ರಥಂ**—ರಥವನ್ನು । **ಯುಕ್ಷ್ವ**—ಯೋಜಿಸು । **ನಃ**—ನಮ್ಮ ಯಜ್ಞಕ್ಕೆ । **ದೇವಪುತ್ರೇ**—ಪ್ರಜಾಪತಿಯ ಪುತ್ರಿಯರಾದ । **ರೋದಸೀ**—ದ್ಯಾವಾಪೃಥಿವಿಗಳನ್ನು । **ಆ ವಹ**—ಕರೆದುಕೊಂಡು ಬಾ । **ದೇವಾನಾಂ**—ದೇವತೆಗಳ ನಡುವೆ । **ಮಾಕಿಃ ಅಪ ಭೂಃ**—ಯಾರೂ ತಪ್ಪಿಸಿಕೊಳ್ಳದಿರಲಿ । **ಇಹ**—ನಮ್ಮ ಯಜ್ಞದಲ್ಲಿ । **ಸ್ಯಾಃ**—ನೀನೂ ಸಮೀಪಸ್ಥನಾಗಿರು ।

॥ ಭಾವಾರ್ಥ ॥

ಎಲೈ ಅಗ್ನಿಯೇ, ದೇವತೆಗಳೆಲ್ಲರೂ ಒಟ್ಟುಗೂಡುವ ಯಜ್ಞಗೃಹದಲ್ಲಿದ್ದು ನಮ್ಮ ಸ್ತುತಿಯನ್ನು ಕೇಳು ಅಮೃತವನ್ನು ಸುರಿಸತಕ್ಕ ನಿನ್ನ ರಥವನ್ನು ಯೋಜಿಸು. ನಮ್ಮ ಯಜ್ಞಕ್ಕೆ ಪ್ರಜಾಪತಿಯ ಪುತ್ರಿಯರಾದ ದ್ಯಾವಾಪೃಥಿವಿಗಳನ್ನು ಕರೆದುಕೊಂಡು ಬಾ. ನಮ್ಮ ಯಜ್ಞಕ್ಕೆ ದೇವತೆಗಳ ನಡುವೆ ಯಾರೂ ತಪ್ಪಿಸಿಕೊಳ್ಳದಿರಲಿ. ನೀನೂ ನಮ್ಮ ಸಮೀಪಸ್ಥನಾಗಿರು

English Translation

Agni, present in the dwelling common (to the deities) hear us: harness your swift chariot of ambrosia: bring to us the heaven and earth, the daughters of the divine (Prajapati), let none of the gods be absent, and you youself be present.

ಹನ್ನೆರಡನೆಯ ಸೂಕ್ತವು

॥ ಸಾಯಣಭಾಷ್ಯಂ ॥

ದ್ಯಾವೇತಿ ನವರ್ಚಂ ದ್ವಾದಶಂ ಸೂಕ್ತಮಾಂಗೇರ್ಹವಿರ್ಧಾನಸ್ಯಾರ್ಷಂ ತ್ರೈಷ್ಟುಭಮಾಗ್ನೇಯಂ । ದ್ಯಾವೇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು—**ದ್ಯಾವಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಹವಿರ್ಧಾನ ಅಂಗಿಃ ಎಂಬುವನು ಋಷಿಯು. ಅಗ್ನಿಯು ದೇವತೆಯು; ತ್ರಿಷ್ಟುಪ್ ಛಂದಸ್ಸು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಿದೆ.

ಸೂಕ್ತ—೧೨

ಮಂಡಲ—೧೦ ॥ ಅನುವಾಕ—೧ ॥ ಸೂಕ್ತ—೧೨ ॥
ಅಷ್ಟಕ—೭ ॥ ಅಧ್ಯಾಯ—೬ ॥ ವರ್ಗ—೧೧, ೧೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಹವಿರ್ಧಾನ ಆಂಗಿಃ ॥
ದೇವತಾ—ಅಗ್ನಿಃ ।
ಛಂದಃ—ತ್ರಿಷ್ಟುಪ್॥

॥ ಸಂಹಿತಾಪಾಠಃ ॥

ದ್ಯಾವಾ ಹ ಕ್ಷಾಮಾ ಪ್ರಥಮೇ ಋತೇನಾಭಿಶ್ರಾವೇ ಭವತಃ ಸತ್ಯವಾಚಾ ।
ದೇವೋ ಯನ್ಮರ್ತಾನ್ಯಜಥಾಯ ಕೃಣ್ವನ್ ಸೀದದ್ಧೋತಾ ಪ್ರತ್ಯಙ್
ಸ್ವಮಸುಂ ಯನ್ ॥ ೧ ॥

॥ ಪದಪಾಠಃ ॥

ದ್ಯಾವಾ । ಹ । ಕ್ಷಾಮಾ । ಪ್ರಥಮೇ ಇತಿ । ಋತೇನ । ಅಭಿಶ್ರಾವೇ । ಭವತಃ । ಸತ್ಯವಾಚಾ ।
ದೇವಃ । ಯತ್ । ಮರ್ತಾನ್ । ಯಜಥಾಯ । ಕೃಣ್ವನ್ । ಸೀದತ್ । ಹೋತಾ । ಪ್ರತ್ಯಙ್ । ಸ್ವಂ ।
ಅಸುಂ । ಯನ್ ॥ ೧॥

॥ಸಾಯಣಭಾಷ್ಯಂ ॥

ಸತ್ಯವಾಚಾ ಸತ್ಯವಾಚೌ ಸತ್ಯವಾದಿನ್ಯೌ ಪ್ರಥಮೇ ಪ್ರಧಾನಭೂತೇ ದ್ಯಾವಾ ಕ್ಷಾಮಾ ದ್ಯುಕ್ಷಾಮೇ ದ್ಯಾವಾಪೃಥಿವ್ಯಾವೃತೇನ ಸತ್ಯಭೂತೇನ ದೇವಯಜನೇನ ಸಹಾಭಿಶ್ರಾವೇ । ಅಭಿಮುಖ್ಯೇನ ಶ್ರೂಯತ ಇತ್ಯಭಿಶ್ರಾವ ಆಹ್ವಾನಂ । ತಸ್ಮಿನ್ನಸ್ಮದ್ಯಜ್ಞನಿಮಿತ್ತೇ೨ಗ್ನೇಃ ಸಂಬಂಧಿನ್ಯಾಹ್ವಾನೇ ಭವತಃ ॥ ಲೋಡರ್ಥೇ ಲಟ್ ॥ ಭವತಾಂ । ಯದ್ಯದಾ ದೇವೋ ದ್ಯೋತಮಾನೋ೨ಗ್ನಿರ್ಯಜಥಾಯ ಯಜ್ಞಾಯ ಮರ್ತಾನ್ಮನುಷ್ಯಾನ್ ಕೃಣ್ವನ್ಪ್ರೇರಯನ್ ಪ್ರತ್ಯಜಾಹ್ವಾನಾರ್ಥಂ ದೇವಾನಾಂ ಪ್ರತ್ಯಂಚಿತಾ ಸ್ವಮಸುಮಾತ್ಮೀಯಂ ಜ್ವಾಲಾಲಕ್ಷಣಂ ಪ್ರಾಣಂ ಯನ್ ಪ್ರಾಪ್ನುವನ್ ಹೋತಾ ದೇವಾನಾಮಾಹ್ವಾತಾ ಸೀದತ್ ವೇದ್ಯಾಂ ನಿಷೀದತಿ । ತದಾಸ್ಮದ್ಯಜನಕಾಲೇ ದ್ಯಾವಾಪೃಥಿವೀ ಪ್ರಯುಜೋ೨ಗ್ನಿರಾಹ್ವಯತ್ವಿತ್ಯರ್ಥಃ ॥

॥ ಪ್ರತಿಪದಾರ್ಥ

ಯತ್—ಯಾವಾಗ । ದೇವಃ—ಪ್ರಕಾಶಮಾನನಾದ ಅಗ್ನಿಯು । ಯಜಥಾಯ—ಯಜ್ಞಾರ್ಥವಾಗಿ । ಮರ್ತಾನ್—ಮಾನವರನ್ನು । ಕೃಣ್ವನ್—ಪ್ರೇರಿಸುತ್ತಲೂ । ಪ್ರತ್ಯಙ್—ಇವರ ಮುಂಭಾಗದಲ್ಲಿ । ಸ್ವಂ

ಅಸುಂ—ತನ್ನ ಜ್ವಾಲೆಯನ್ನು । **ಯನ್**—ಹೊಂದುತ್ತಲೂ । **ಹೋತಾ**—ಹೋತೃರೂಪನಾಗಿ । **ಸೀದತ್**—ಕುಳಿತುಕೊಳ್ಳುವನೋ ಆಗ । **ಸತ್ಯವಾಚಾ**—ಸತ್ಯಾತ್ಮಕವಾದ ವಾಕ್ಕುಳ್ಳವರೂ । **ಪ್ರಥಮೇ**—ಪ್ರಧಾನಭೂತರೂ ಆದ । **ದ್ಯಾವಾ ಕ್ಷಾಮಾ**—ದ್ಯಾವಾಪೃಥಿವಿಗಳು । **ಋತೇನ**—ಸತ್ಯರೂಪರಾದ ದೇವಜನರೊಂದಿಗೆ । **ಅಭಿಶ್ರಾವೇ**—ಅಗ್ನಿಯ ಆಹ್ವಾನಕ್ಕೆ ಪಾತ್ರರಾಗಿ । **ಭವತಃ**—ಆಗಿರಲಿ.

॥ ಭಾವಾರ್ಥ ॥

ಪ್ರಕಾಶಮಾನನಾದ ಅಗ್ನಿಯು ಯಜ್ಞಾರ್ಥವಾಗಿ ಮಾನವರನ್ನು ಪ್ರೇರಿಸುತ್ತಲೂ, ಅವರ ಮುಂಭಾಗದಲ್ಲಿ ತನ್ನ ಜ್ವಾಲೆಯನ್ನು ಪ್ರಸರಿಸುತ್ತಲೂ, ಯಾವಾಗ ಹೋತೃವಿನ ಸ್ಥಾನದಲ್ಲಿ ಕುಳಿತುಕೊಳ್ಳುವನೋ, ಆಗ ಸತ್ಯಾತ್ಮಕವಾದ ವಾಕ್ಕುಳ್ಳವರೂ, ಪ್ರಧಾನಭೂತರೂ ಆದ ದ್ಯಾವಾಪೃಥಿಗಳು ಸತ್ಯರೂಪರಾದ ದೇವಜನರೊಂದಿಗೆ ಅಗ್ನಿಯು ಆಹ್ವಾನವನ್ನು ಸ್ವೀಕರಿಸಲಿ.

English Translation

Haven and earth, declarers of truth, principal (of things), be present at the invocation, associated with the rite, when the divine (Agni), exciting mortals to sacrifice, sits down in their presence as the invoker (of the gods) putting forth his flame.

॥ ಸಂಹಿತಾಪಾಠಃ ॥

ದೇವೋ ದೇವಾನ್ಪರಿಭೂರ್ಯತೇನ ವಹಾ ನೋ ಹವ್ಯಂ ಪ್ರಥಮಶ್ಚಿಕಿತ್ವಾನ್ ।
ಧೂಮಕೇತುಃ ಸಮಿಧಾ ಭಾರ್ಯಜೀಕೋ ಮಂದ್ರೋ ಹೋತಾ ನಿತ್ಯೋ ವಾಚಾ ಯಜೀಯಾನ್ ॥ ೨ ॥

॥ ಪದಪಾಠಃ ॥

ದೇವಃ । ದೇವಾನ್ । ಪರಿಭೂಃ । ಋತೇನ । ವಹ । ನಃ । ಹವ್ಯಂ । ಪ್ರಥಮಃ । ಚಿಕಿತ್ವಾನ್ ।
ಧೂಮಕೇತುಃ । ಸಂಇಧಾ । ಭಾಃಋಜೀಕಃ । ಮಂದ್ರಃ । ಹೋತಾ । ನಿತ್ಯಃ । ವಾಚಾ । ಯಜೀಯಾನ್ ॥ ೨ ॥

॥ ಸಾಯಣಭಾಷ್ಯಂ ॥

ದೇವೋ ದ್ಯೋತಮಾನೋಽಗ್ನಿಸ್ತ್ವಂ ದೇವಾನಿಂದ್ರಾದೀನ್ಪರಿಭೂರಾಹ್ವಾನಸರ್ವನಯನದ್ವಾರೇಣ ಪರಿಭೂಃ ಪರಿಗೃಹ್ಣನ್ಸ್ಯೃತೇನ ಯಜ್ಞೇನ ಸಹ ನೋಽಸ್ಮಾಕಂ ಹವ್ಯಂ ಹವಿರ್ವಹ । ಪ್ರಾಪಯ ।

ಕೀದೃಶಸ್ತ್ವಂ । ಪೃಥವೋ ದೇವಾನಾಂ ಮುಖ್ಯಃ ಚಿಕಿತ್ವಾನ್ ಸರ್ವಂ ಜಾನನ್ ಧೂಮಕೇತುರ್ಧೂಮಸ್ಯ ಕರ್ತಾ ವಾ ಧೂಮವ್ಯಜೋ ವಾ ಧೂಮಪ್ರಜ್ಞಾನೋ ವಾ ಸಮಿಧಾ ಸಮಿಂಧನೇನ ದೀಪನೇನ ಭಾಯು-ಜೀಕ ಯುಜುದೀಪ್ತಿಃ । ಊರ್ಧ್ವಜ್ವಲನ ಇತ್ಯರ್ಥಃ । ಮಂದ್ರಃ ಸ್ತುತ್ಯಃ ಹೋತಾಹ್ವಾತಾ ನಿತ್ಯೋ ಧ್ರುವೋ ವಾಚಾ ಯಜೀಯಾನತಿಶಯೇನ ಯಷ್ಟಾ ಚ ।

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಪೃಥವಃ**—ದೇವತೆಗಳಲ್ಲೆಲ್ಲ ಮುಖ್ಯನೂ । **ಚಿಕಿತ್ವಾನ್**—ಸಕಲವನ್ನೂ ಅರಿತವನೂ। **ಧೂಮಕೇತುಃ**—ಧೂಮರೂಪವಾದ ಧ್ವಜವುಳ್ಳವನೂ । **ಸಮಿಧಾ**—ಪ್ರಜ್ವಲನಕರ್ಮದಿಂದ। **ಭಾಯುಜೀಕಃ**—ಊರ್ಧ್ವಮುಖವಾದ ಜ್ವಲನವುಳ್ಳವನೂ । **ಮಂದ್ರಃ**—ಸ್ತುತ್ಯನೂ । **ಹೋತಾ**—ಹೋತೃರೂಪನೂ । **ನಿತ್ಯಃ**—ಶಾಶ್ವತನೂ । **ವಾಚಾ**—ಸ್ತುತಿಪೂರ್ವಕವಾಗಿ। **ಯಜೀಯಾನ್**—ದೇವತೆಗಳನ್ನು ಪೂಜಿಸುವವನೂ । **ದೇವಃ**—ಪ್ರಕಾಶಮಾನನೂ ಆದ ನೀನು । **ದೇವಾನ್**—ಇಂದ್ರಾದಿದೇವತೆಗಳನ್ನು। **ಪರಿಭೂಃ**—ಸುತ್ತುವರಿದು । **ಋತೇನ**—ಯಜ್ಞಪೂರ್ವಕವಾಗಿ । **ನಃ**—ನಮ್ಮ। **ಹವ್ಯಂ**—ಹವಿಸ್ಸನ್ನು । **ವಹ**—ಅವರಿಗೆ ವಹಿಸು

॥ ಭಾವಾರ್ಥ ॥

ಎಲೈ ಅಗ್ನಿಯೇ, ದೇವತೆಗಳಲ್ಲೆಲ್ಲ ಮುಖ್ಯನೂ, ಸಕಲವನ್ನೂ ಅರಿತವನೂ, ಧೂಮರೂಪವಾದ ಧ್ವಜವುಳ್ಳವನೂ, ಪ್ರಜ್ವಲನಕರ್ಮದಿಂದ ಊರ್ಧ್ವಮುಖವಾದ ಜ್ವಲನವುಳ್ಳವನೂ, ಸ್ತುತ್ಯನೂ, ಪ್ರಕಾಶಮಾನನೂ, ಆದ ನೀನು ಇಂದ್ರಾದಿದೇವತೆಗಳನ್ನು ಸುತ್ತುವರಿದು ಯಜ್ಞಪೂರ್ವಕವಾಗಿ ನಮ್ಮ ಹವಿಸ್ಸನ್ನು ಅವರಿಗೆ ವಹಿಸು

English Translation

You, bright (Agni), surrounding the gods, carry our oblation with due rites; you, who are the chief (of the deities), the wise, the smoke-bannered, fuel-kindled, straight-flaming, adorable, the invoker, the constant sacrificer with prayer.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ **ಭಾಯುಜೀಕಃ** ಎಂಬ ಶಬ್ದಕ್ಕೆ ಯಾಸ್ಕರು—**ಭಾಯುಜೀಕಃ ಪ್ರಸಿದ್ಧಭಾಃ । ಧೂಮಕೇತುಃ ಸಮಿಧಾ ಭಾಯುಜೀಕಃ ಇತ್ಯಪಿ ನಿಗಮೋ ಭವತಿ** (ನಿ. ೬-೪) ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ, ಭಾಯುಜೀಕಃ ಎಂಬ ಶಬ್ದಕ್ಕೆ ಪ್ರಸಿದ್ಧವಾದ ಕಾಂತಿಯುಳ್ಳ ಎಂದರ್ಥವು ಈ ವಿಷಯದಲ್ಲಿ ಪ್ರಕೃತ ಋಕ್ಕಿನ **ಧೂಮಕೇತುಃ ಸಮಿಧಾ ಭಾಯುಜೀಕಃ** ಎಂಬ ವಾಕ್ಯವೇ ಶ್ರುತ್ಯುದಾಹರಣೆಯೆಂದು ಹೇಳಿದಾರೆ.

॥ ಸಂಹಿತಾಪಾಠಃ ॥

ಸ್ಯಾ ವೃಗ್ಣೀವಸ್ಯಾ ಮೃತಂ ಯುದೀ ಗೋರತೋ ಜಾತಾಸೋ ಧಾರಯಂತ ಉರ್ವೀ ।

ವಿಶ್ವೇ ದೇವಾ ಅನು ತತ್ತೇ ಯಜುರ್ಗುರ್ದುಹೇ ಯದೇನೀ ದಿವ್ಯಂ ಘೃತಂ ವಾಃ ॥ ೩ ॥

। ಪದಪಾಠಃ ।

ಸ್ವಾವೃಕ್ । ದೇವಸ್ಯ । ಅಮೃತಂ । ಯದಿ । ಗೋಃ । ಅತಃ । ಜಾತಾಸಃ । ಧಾರಯಂತೇ । ಉರ್ವೀ ಇತಿ । ವಿಶ್ವೇ । ದೇವಾಃ । ಅನು । ತತ್ । ತೇ । ಯಜುಃ । ಗುಃ । ದುಹೇ । ಯತ್ । ಏನೀ । ದಿವ್ಯಂ । ಘೃತಂ । ವಾರಿತಿ ವಾಃ ॥ ೩ ॥

। ಸಾಯಣಭಾಷ್ಯಂ ॥

ದೇವಸ್ಯಾಗ್ನೇಃ ಸ್ವಾವೃಕ್ ಸ್ವಾರ್ಜನಮಮೃತಮುದಕಂ ಸ್ವತೇಜಸಃ ಸಕಾಶಾದ್ಯದಿ ಯದೋತ್ಪದ್ಯತೇ ತದಾತೋಽಸ್ಮಾದ್ಗೋರುದಕಾಜ್ಜಾತಾಸ ಉತ್ಪನ್ನಾ ಓಷಧಯ ಉರ್ವೀ ದ್ಯಾವಾಪೃಥಿವ್ಯೌ ಧಾರಯಂತಿ । ವಿಶ್ವೇ ದೇವಾಃ ಸರ್ವೇ ಸ್ತೋತಾರಸ್ತೇ ತವ ಸಂಬಂಧಿ ತದ್ಯಜುರುದಕಸ್ಯ ತದ್ದಾನಮನು ಗುಃ । ಅನುಗಾಯಂತಿ । ಏನೀ ಶ್ವೇತಾ ದೀಪ್ತಿರ್ದಿವ್ಯಂ ದಿವಿ ಭವಂ ಘೃತಂ ಕ್ಷರದ್ಯದ್ವಾ ವೃಷ್ಟಿಲಕ್ಷಣಂ ಯದುದಕಂ ದುಹೇ ದೋಗ್ಧಿ ॥

॥ ಪ್ರತಿಪದಾರ್ಥ ।

ದೇವಸ್ಯ—ದೇವತಾತ್ಮನಾದ ಅಗ್ನಿಯ । ಸ್ವಾವೃಕ್—ಸ್ವಯಂಸಂಘಟಿತವಾದ । ಅಮೃತಂ—ಉದಕವು । ಯದಿ—ಯಾವಾಗ ಉತ್ಪನ್ನವಾಗುವುದೋ ಆಗ । ಅತಃ ಗೋಃ—ಅದೇ ಉದಕದಿಂದ । ಜಾತಾಸಃ—ಉತ್ಪನ್ನಗಳಾದ ಓಷಧಿಗಳು । ಉರ್ವೀ—ದ್ಯಾವಾಪೃಥಿವಿಗಳನ್ನು ಧರಿಸುತ್ತವೆ । ಯತ್—ಯಾವಾಗ । ಏನೀ—ಪ್ರಕಾಶಮಾನಗಳಾದ ನಿನ್ನ ಜ್ವಾಲೆಗಳು । ದಿವ್ಯಂ—ದ್ಯುಲೋಕಸ್ಥವಾದುದೂ । ಘೃತಂ—ಸ್ರವಿಸುವುದೂ । ವಾಃ—ವೃಷ್ಟಿರೂಪದ್ದೂ ಆದ ಉದಕವನ್ನು । ದುಹೇ—ಕರೆಯುವುದೋ ಆಗ । ವಿಶ್ವೇ ದೇವಾಃ—ಸಕಲ ಸ್ತುತಿಕರ್ತರೂ । ತೇ—ನಿನ್ನಿಂದ ದತ್ತವಾದ । ತತ್ ಯಜುಃ—ಆ ಉದಕದಾನವನ್ನು । ಅನು ಗುಃ—ಪ್ರಶಂಸಿಸುತ್ತಾರೆ.

। ಭಾವಾರ್ಥ ।

ದೇವತಾತ್ಮನಾದ ಅಗ್ನಿಯ ಸ್ವಯಂಸಂಘಟಿತವಾದ ಉದಕವು ಯಾವಾಗ ಉತ್ಪನ್ನವಾಗುವುದೋ ಆಗ ಅದೇ ಉದಕದಿಂದ ಉತ್ಪನ್ನವಾದ ಓಷಧಿಗಳು ದ್ಯಾವಾಪೃಥಿವಿಗಳನ್ನು ಧರಿಸುತ್ತವೆ. ಎಲೈ ಅಗ್ನಿಯೇ, ಯಾವಾಗ ಪ್ರಕಾಶಮಾನಗಳಾದ ಜ್ವಾಲೆಗಳು ದ್ಯುಲೋಕಸ್ಥವಾದುದೂ, ಸ್ರವಿಸುವುದೂ, ವೃಷ್ಟಿರೂಪದ್ದೂ ಆದ ಉದಕವನ್ನು ಕರೆಯುವುದೋ ಆಗ ಸಕಲ ಸ್ತುತಿಕರ್ತರೂ ನಿನ್ನಿಂದ ದತ್ತವಾದ ಆ ಉದಕದಾನವನ್ನು ಪ್ರಶಂಸಿಸುತ್ತಾರೆ.

English Translation

When the self-aggregated ambrosia of the divine Agni is generated from his radiance, then the products from it sustain both heaven and earth,

all the worshippers glorify this your oblation, the celestial nutritious water which your white lustre milks forth.

॥ ಸಂಹಿತಾಪಾಠ ॥

ಅ॒ರ್ಚಾ॒ಮಿ ವಾ॒ಂ ವ॒ರ್ಧ॒ಯಾ॒ಪೋ॑ ಘೃ॒ತಸ್ನೂ॒ ದ್ಯಾವಾ॑ಭೂಮೀ॒ ಶೃ॒ಣು॒ತಂ
ರೋ॒ದ॒ಸೀ॒ ಮೇ ।
ಅ॒ಹಾ॒ ಯ॒ದ್ವಾ॒ಯ॒ವೋ॒ಽಸು॒ನೀ॒ತಿ॒ಮು॒ಯು॒ನ್ಮ॒ಧ್ವಾ ನೋ॒ ಅ॒ತ್ರ॒ ಪಿ॒ತ॒ರಾ॒ ಶಿ॒ಶೀ॒ತಾಂ ॥

॥ ಪದಪಾಠಃ ॥

ಅ॒ರ್ಚಾ॒ಮಿ । ವಾ॒ಂ । ವ॒ರ್ಧ॒ಯ । ಅಪಃ॑ । ಘೃ॒ತಸ್ನೂ॒ ಇತಿ॑ ಘೃ॒ತಽಸ್ನೂ॑ । ದ್ಯಾವಾ॑ಭೂಮೀ॒ ಇತಿ॑ ।
ಶೃ॒ಣು॒ತಂ । ರೋ॒ದ॒ಸೀ॒ ಇತಿ॑ । ಮೇ॒ ।
ಅ॒ಹಾ । ಯ॒ತ್ । ದ್ಯಾವಃ॑ । ಅ॒ಸು॒ಽನೀ॒ತಿಂ । ಅ॒ಯ॒ನ್ । ಮ॒ಧ್ವಾ । ನಃ॒ । ಅ॒ತ್ರ॒ । ಪಿ॒ತ॒ರಾ । ಶಿ॒ಶೀ॒ತಾಂ ॥೪॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಮಪೋ ಮದೀಯಂ ಯಜ್ಞರೂಪಂ ಕರ್ಮ ವರ್ಧಯ । ಪ್ರೋತ್ಸರ್ಪಿತೇ ಸತಿ ಹೇ ಘೃತಸ್ನೂ ವೃಷ್ಟ್ಯುದಕಸ್ಯ ಪ್ರಸವಿತ್ರ್ಯೌ ಹೇ ದ್ಯಾವಾಭೂಮೀ ದ್ಯಾವಾಪೃಥಿವ್ಯೌ ವಾಂ ಯುವಾಮರ್ಚಾಮಿ ॥ ಋಚ ಸ್ತುತೌ ॥ ಸ್ತೌಮಿ । ಹೇ ರೋದಸೀ ದ್ಯಾವಾಪೃಥಿವ್ಯೌ ಯುವಾಂ ಮೇ ಮದೀಯಂ ಸ್ತೋತ್ರಂ ಶೃಣುತಂ । ಯದ್ಯಸ್ಮಿನ್ನಹಾ । ಅಹಃಶಬ್ದಸಾಮರ್ಥ್ಯಾದಹೋರಾತ್ರಸಾಧ್ಯಂ ಕರ್ಮೋಚ್ಯತೇ ॥ ಸುಪಾಂ ಸುಲುಗಿತಿ ಸಪ್ತಮ್ಯೇಕವಚನಸ್ಯಾಜಾದೇಶಃ ॥ ಅಹನ್ಯಹೋರಾತ್ರೇಸಾಧ್ಯಕರ್ಮಣಿ ದ್ಯಾವಃ ಸ್ತೋತಾರೋಽಸುನೀತಿಂ । ಅಸುಃ ಪ್ರಜ್ಞಾ । ತಯಾ ನೀಯತ ಇತ್ಯಸುನೀತಿಃ ಸ್ತುತಿಃ । ತಾಮುಯುನ್ ಗಚ್ಛಂತಿ ಅತ್ರಾಸ್ಮಿನ್ಕರ್ಮಣಿ ಪಿತರಾ ಸರ್ವಸ್ಯ ಮಾತಾಪಿತೃಭೂತೇ ದ್ಯಾವಾಪೃಥಿವ್ಯೌ ನೋಽಸ್ಮಾನ್ವೃಷ್ಟ್ಯುದಕೇನ ಶಿಶೀತಾಂ । ಸ್ನಾನಪಾನಾದಿನಾ ಸಂಸ್ಕುರುತಾಂ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) ಅಪಃ—ನನ್ನ ಯಜ್ಞಕರ್ಮವನ್ನು । ವರ್ಧಯ—ಪುಷ್ಟಿಗೊಳಿಸು । ಘೃತಸ್ನೂ—ಉದಕವನ್ನು ಸುರಿಸತಕ್ಕ । ದ್ಯಾವಾಭೂಮೀ—ಎಲೈ ದ್ಯಾವಾಪೃಥಿವಿಗಳೇ । ವಾಂ—ನಿಮ್ಮನ್ನು । ಅರ್ಚಾಮಿ—ಸ್ತುತಿಸುತ್ತೇನೆ । ರೋದಸೀ—ಎಲೈ ದ್ಯಾವಾಪೃಥಿವಿಗಳೇ । ಮೇ—ನನ್ನ ಸ್ತೋತ್ರವನ್ನು । ಶೃಣುತಂ—ಕೇಳಿರಿ । ಅಹಾ—ಅಹೋರಾತ್ರಗಳಲ್ಲೂ ನೆರವೇರುವ । ಯತ್ —ಯಾವ ಕರ್ಮದಲ್ಲಿ । ದ್ಯಾವಃ—ಸ್ತುತಿಕರ್ತರು ।

ಅಸುನೀತಿಂ—ಸ್ತುತಿಯನ್ನು । ಅಯನ್—ನಿರ್ವಿಸುವರೋ । ಅತ್ರ—ಆ ಕರ್ಮದಲ್ಲಿ । ಪಿತರಾ—ಜಗತ್ತಿಗೆ ಮಾತಾಪಿತೃಗಳಾದ ದ್ಯಾವಾಪೃಥಿವಿಗಳು । ಮಧ್ವಾ—ವೃಷ್ಟ್ಯುದಕದಿಂದ । ನಃ—ನಮ್ಮನ್ನು । ಶಿಶೀತಾಂ—ಸಂಸ್ಕರಿಸಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನನ್ನ ಯಜ್ಞಕರ್ಮವನ್ನು ಪುಷ್ಟಿಗೊಳಿಸು. ಉದಕವನ್ನು ಸುರಿಸತಕ್ಕ ಎಲೈ ದ್ಯಾವಾಪೃಥಿವಿಗಳೇ, ನಿಮ್ಮನ್ನು ಸ್ತುತಿಸುತ್ತೇನೆ. ಎಲೈ ದ್ಯಾವಾಪೃಥಿವಿಗಳೇ, ನನ್ನ ಸ್ತೋತ್ರವನ್ನು ಕೇಳಿರಿ. ಅಹೋರಾತ್ರಗಳಲ್ಲೂ ನೆರವೇರುವ ಯಾವ ಕರ್ಮದಲ್ಲಿ ಸ್ತುತಿಕರ್ತರು ಸ್ತುತಿಯನ್ನು ನಿರ್ವಿಸುವರೋ, ಆ ಕರ್ಮದಲ್ಲಿ ಜಗತ್ತಿಗೆ ಮಾತಾಪಿತೃಗಳಾದ ದ್ಯಾವಾಪೃಥಿವಿಗಳು ವೃಷ್ಟ್ಯುದಕದಿಂದ ನಮ್ಮನ್ನು ಸಂಸ್ಕರಿಸಲಿ.

English Translation

I worship you, waters that pour forth ghee, and you, heaven and earth, for your increase ; hear me, you worlds , when worshippers at the daily or nightly rite proceed to their pious purpose, then may the parents (of all) sanctify us with ambrosia.

॥ ಸಂಹಿತಾಪಾಠಃ ॥

ಕಂ ಸ್ವಿನ್ನೋ ರಾಜಾ ಜಗೃಹೇ ಕದಸ್ಯಾತಿ ವ್ರತಂ ಚಕೃಮಾ ಕೋ ವಿ ವೇದ ।
ಮಿತ್ರಶ್ಚಿದ್ಧಿ ಷ್ಮಾ ಜುಹುರಾಣೋ ದೇವಾಞ್ಛ್ಲೋಕೋ ನ ಯಾತಾಮಪಿ ವಾಜೋ ಅಸ್ತಿ ॥ ೫ ॥

॥ ಪದಪಾಠಃ ॥

ಕಂ । ಸ್ವಿತ್ । ನಃ । ರಾಜಾ । ಜಗೃಹೇ । ಕತ್ । ಅಸ್ಯ । ಅತಿ । ವ್ರತಂ । ಚಕೃಮ । ಕಃ । ವಿ । ವೇದ ।
ಮಿತ್ರಃ । ಚಿತ್ । ಹಿ । ಷ್ಮ । ಜುಹುರಾಣಃ । ದೇವಾನ್ । ಶ್ಲೋಕಃ । ನ । ಯಾತಾಂ । ಅಪಿ । ವಾಜಃ ।
ಅಸ್ತಿ ॥ ೫ ॥

॥ ಸಾಯಣಭಾಷ್ಯಂ ॥

ಕಂಸ್ವಿಜ್ಜೆಬ್ದೋ ವಿತರ್ಕಾರ್ಥೇ । ಕಂವಾ ರಾಜಾ ದೀಪ್ಯಮಾನೋಽಗ್ನಿರ್ನೋಽಸ್ಮಾಕಂ ಸ್ವಭೂತಾನಿ ಹವೀಂಷಿ ಸ್ತುತೀಶ್ಚ ಜಗೃಹೇ ಪರಿಗೃಹ್ಣೀಯಾತ್ ಕಂವಾಸ್ಮಾಗ್ನೇರಿತಿ ವ್ರತಮುತಿಪೂಜಿತಂ ಪರಿಚರಣಾಖ್ಯಂ ಕರ್ಮ ಚಕೃಮ ವಯಂ ಕೃಯಾಸ್ಮ । ಕರ್ಮವೈಗುಣ್ಯಾದ್ಧೀತಸ್ಯ ಪೂರ್ವಾರ್ಧ ವಿತದ್ವಚನಮು-

ಕ್ತಂ । ಉತ್ತರಾರ್ಧ ಇದಾನೀಂ ತನ್ನಿರಾಕ್ರಿಯತೇ । ಹಿ ಸ್ಮೇತೀವಮೌ ಪೂರಣೌ । ಚಿದಿತ್ಯುಪಮಾರ್ಥೇ । ಜುಹುರಾಣಃ ಸ್ನಿಗ್ಧಮಾಹೂಯಮಾನೋ ಮಿತ್ರಃ ಸ್ನಿಗ್ಧೋ ಯಥಾ ಗಚ್ಛೇತ್ ತಥಾ । ನೇತಿ ಸಂಪ್ರತ್ಯರ್ಥೇ । ಶ್ಲೋಕೋಽಸ್ಮದೀಯಾ ಸ್ತುತಿಲಕ್ಷಣಾ ವಾಗ್ದೇವಾನಿಂದ್ರಾದೀನ್ಯಾತಾಂ । ಗಚ್ಛತು । ಅಪಿ ವಾಜೋ ಹವಿರಾಖ್ಯಂ ಬಾನ್ನಂ ಯದಸ್ತಿ ತದಪಿ ದೇವಾನ್ಪ್ರತಿ ಗಚ್ಛತು । ದೇವಾಃ ಸ್ತುತಿಂ ಹವಿಶ್ಚ ಪ್ರತಿಗೃಹ್ಣಂತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ।

ರಾಜಾ—ಪ್ರಕಾಶಮಾನನಾದ ಅಗ್ನಿಯು । **ನಃ**—ನಮ್ಮ ಹವಿಸ್ಸುಗಳನ್ನು । **ಕಂ ಸ್ವಿತ್ ಜಗೃಹೇ**—ನಿಜವಾಗಿಯೂ ಸ್ವೀಕರಿಸುವನೇ ?। **ಅಸ್ಯ**—ಅಗ್ನಿಯನ್ನುದ್ದೇಶಿಸಿದ । **ಅತಿವ್ರತಂ**—ಉಪಚಾರರೂಪವಾದ ಕರ್ಮವನ್ನು । **ತತ್ ಚಕೃಮ**—ನಾವು ನಿಜವಾಗಿಯೂ ಆಚರಿಸಿದ್ದೇವೆಯೆ ? । **ಕಃ ವಿ ವೇದ**—ಇದನ್ನು ಯಾರು ಅರಿತಿದ್ದಾರೆ । **ಜುಹುರಾಣಃ**—ವಿಶ್ವಾಸದಿಂದ ಕರೆಯಲ್ಪಡುವ । **ಮಿತ್ರಶ್ಚಿತ್**—ಮಿತ್ರನು ಪ್ರೀತಿಯಿಂದ ಹೋಗುವಂತೆ । **ಶ್ಲೋಕಃ**—ನಮ್ಮ ಸ್ತುತಿಯು । **ದೇವಾನ್**—ಇಂದ್ರಾದಿ ದೇವತೆಗಳಲ್ಲಿಗೆ । **ಯಾತಾಂ**—ಹೋಗಿ ಸೇರಲಿ। **ಅಪಿ**—ಮತ್ತು । **ವಾಜಃ ಅಸ್ತಿ**—ಯಾವ ಹವಿಸ್ಸಿನ ರೂಪದ ಅನ್ನವಿದೆಯೋ ಅದೂ ಹೋಗಿ ಸೇರಲಿ.

॥ ಭಾವಾರ್ಥ ।

ಪ್ರಕಾಶಮಾನನಾದ ಅಗ್ನಿಯು ನಮ್ಮ ಹವಿಸ್ಸುಗಳನ್ನು ನಿಜವಾಗಿಯೂ ಸ್ವೀಕರಿಸುವನೇ ? ಈ ಅಗ್ನಿಯನ್ನು ದ್ದೇಶಿಸಿದ ಉಪಚಾರರೂಪವಾದ ಕರ್ಮವನ್ನು ನಾವು ನಿಜವಾಗಿಯೂ ಆಚರಿಸಿದ್ದೇವೆಯೇ ? ಇದನ್ನು ಯಾರು ಅರಿತಿದ್ದಾರೆ ? ವಿಶ್ವಾಸದಿಂದ ಕರೆಯಲ್ಪಡುವ ಮಿತ್ರನು ಪ್ರೀತಿಯಿಂದ ಹೋಗುವಂತೆ, ನಮ್ಮ ಸ್ತುತಿಯು ಇಂದ್ರಾದಿದೇವತೆಗಳಲ್ಲಿಗೆ ಹೋಗಿ ಸೇರಲಿ. ನಮ್ಮಿಂದ ಅರ್ಪಿತವಾದ ಹವಿಸ್ಸೂ ಹೋಗಿ ಸೇರಲಿ.

English Translation

But will the royal Agni accept our oblations ? Have we duly performed our vows to him ? Who decides ? As a friend affectionately invited, so let our praise now proceed to the gods ; together with the sacrificial food that is left over.

॥ ಸಂಹಿತಾಪಾಠಃ ॥

ದುರ್ಮಂತ್ಯತ್ರಾಮೃತಸ್ಯ ನಾಮ ಸಲಕ್ಷ್ಮಾ ಯದ್ವಿಷುರೂಪಾ ಭವಾತಿ ।
ಯಮಸ್ಯ ಯೋ ಮನವತೇ ಸುವಂತ್ಯಗ್ನೇ ತಮ್ಮಿಷ್ಣ ಪ್ರಾಹ್ಯಪ್ರಯುಚ್ಛನ್ ॥

॥ ಪದಪಾಠಃ ॥

ದುಃಽಮಂತು । ಅತ್ರ । ಅಮೃತಸ್ಯ । ನಾಮ । ಸಽಲಕ್ಷ್ಮಾ । ಯತ್ । ವಿಷುಽರೂಪಾ । ಭವಾತಿ ।
ಯಮಸ್ಯ । ಯಃ । ಮನವತೇ । ಸುಽವಮಂತು । ಅಗ್ನೇ । ತಂ । ಇಷ್ಣ । ಪ್ರಾಹಿ । ಅಪ್ರಽಯುಚ್ಛನ್ ॥

। ಸಾಯಣಭಾಷ್ಯಂ ।

ಅತ್ರಾಸ್ಮಿನ್ಕರ್ಮಣಿ ಕೃತೇऽಮೃತಸ್ಯ ಯಮಸ್ಯ ನಾಮ ದುರ್ಮಂತು ದುರ್ವಚನಂ ಭವತಿ । ಯದ್ಯಸ್ಮೈ ಸಲಕ್ಷ್ಮಾ ವಿಷಮರೂಪಾ ಭಗಿನೀ ಭಾರ್ಯಾ ಭವತಿ । ತತ್ತು ನ ತಥಾ ಇತಿ ಯಮಂ ಯಂ ಸ್ತೌತಿ ಸುವಚನಮಸ್ಯ ನಾಮೇತಿ ತಂ ಸ್ತೋತಾರಂ ದರ್ಶನೀಯಾಗ್ನೇ ಅಪ್ರಯುಚ್ಛನ್ ಅಪ್ರಮಾದ್ಯನ್ ರಕ್ಷಃ ॥

ಯದ್ಯಸ್ಯ ಅಮೃತಸ್ಯ ಮರಣಧರ್ಮರಹಿತಸ್ಯ ಸೂರ್ಯಸ್ಯ । ಅಸ್ಯ ಮರಣಧರ್ಮರಾಹಿತ್ಯಂ ತು ಸೂರ್ಯೋ ವಿಷಮಾ ಸಜ್ಞಾಮಿತ್ಯಸ್ಯಾಂ ಋಚಿ ಪ್ರಸಿದ್ಧಂ । ತಾದೃಶಸ್ಯ ಸಂಬಧಿ ನಾಮ ನಾಮ ಕಮುದಕಂ ಅತ್ರ ಅಸ್ಯಾಂ ಪೃಥಿವ್ಯಾಂ ವಿಷುರೂಪಾ ನಾನಾರೂಪಂ ಭವಾತಿ ಭವತಿ । ಉದಕಸ್ಯ ನಾನಾರೂಪತ್ವಂ ಯಾ ಆಪೋ ದಿವ್ಯಾ ಇತಿ ಮಂತ್ರೇ ಸ್ಫುಟಮುಕ್ತಂ । ಕೀದೃಶಂ ತತ್ । ದುರ್ಮಂತು ಘಿರಪರಾಧಂ ಪ್ರಹ್ವಸ್ವಧಾವತ್ವಾತ್ । ಪುನಃ ಕೀದೃಶಂ । ಸಲಕ್ಷ್ಮಾ ಮಧುರರಸರೂಪಲಕ್ಷಣೋಪೇತಂ । ಕಿಂ ಚ ಯಃ ಸೂರ್ಯಃ ಯಮಸ್ಯ ಸಂಯಮಿನೀಪತೇಃ ಸುಮಂತು ಸುತರಾಮಪರಾಧಂ ಮಾತೃತಾಡನರೂಪಂ ಮನವತೇ ಅವಬುಧ್ಯತೇ ಸರ್ವಜ್ಞತ್ವಾತ್ । ಯದ್ವಾ ಧಾತೂನಾಮನೇಕಾರ್ಥತ್ವಾತ್ ಕ್ಷಮತ ಇತ್ಯರ್ಥಃ । ತಂ ತಾದೃಶಂ ಜಲಜನಕಂ ಸರ್ವಜ್ಞಂ ಕ್ಷಮಾಶೀಲಂ ಸೂರ್ಯಂ ಹೇ ಋಷ್ವ ಮಹನ್ನಗ್ನೇ ಅಪ್ರಯುಚ್ಛನ್ ಅಪ್ರಮಾದ್ಯನ್ ತ್ವಂ ಪಾಹಿ । ಆಹುತಿಪ್ರದಾನೇನ ರಕ್ಷಣದ್ವಾರಾತ್ಮರಕ್ಷಣಂ ಪ್ರಾರ್ಥಯತೇ ಋಷಿಃ ॥

। ಪ್ರತಿಪದಾರ್ಥ ।

ಅತ್ರ—ಈ ಕರ್ಮಕಾಲದಲ್ಲಿ । **ಯಮಸ್ಯ**—ಯಮನ । **ನಾಮ**—ಸ್ವರೂಪವು । **ದುರ್ಮಂತು**—ತಿಳಿಯಲು ಶ್ರಮವಾಗಿದೆ । **ಯತ್ ಸಲಕ್ಷ್ಮಾ**—ಒಂದೇ ವಿಧವಾದ ಚಿಹ್ನವಿದ್ದರೂ । **ವಿಷುರೂಪಾ**—ಅನೇಕವಿಧವಾದ ರೂಪವುಳ್ಳವನಾಗಿ । **ಭವಾತಿ**—ಆಗಿರುತ್ತಾನೆ । **ಸುಮಂತು**—ಅವನ ಸ್ವರೂಪವನ್ನು ಚೆನ್ನಾಗಿ ಅರಿತವನೂ । **ಋಷ್ವ**—ಮಹಾತ್ಮನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ಮನವತೇ**—ಮಾನವರಿಗೆ ಹಿತಕಾರಿಯಾದ । **ಯಮಸ್ಯ**—ಯಮನಿಗೆ । **ಯಃ**—ಯಾರು ಪೂಜೆಯನ್ನರ್ಪಿಸುವರೋ । **ತಂ**—ಅವನನ್ನು । **ಅಪ್ರಯುಚ್ಛನ್**—ಆಲಸ್ಯರಹಿತನಾಗಿ । **ಪಾಹಿ**—ರಕ್ಷಿಸು.

। ಭಾವಾರ್ಥ ।

ಈ ಕರ್ಮಕಾಲದಲ್ಲಿ ಯಮನ ಸ್ವರೂಪವನ್ನು ತಿಳಿಯಲು ಶ್ರಮವಾಗಿದೆ. ಅವನಿಗೆ ಒಂದೇ ವಿಧವಾದ ಚಿಹ್ನವಿದ್ದರೂ ಅವನು ಅನೇಕವಿಧವಾದ ರೂಪವುಳ್ಳವನಾಗಿರುತ್ತಾನೆ. ಅವನ ಸ್ವರೂಪವನ್ನು ಚೆನ್ನಾಗಿ ಅರಿತವನೂ, ಮಹಾತ್ಮನೂ ಆದ ಎಲೈ ಅಗ್ನಿಯೇ, ಮಾನವರಿಗೆ ಹಿತಕಾರಿಯಾದ ಯಮನಿಗೆ ಯಾರು ಪೂಜೆಯನ್ನರ್ಪಿಸುವರೋ, ಅವನನ್ನು ಆಲಸ್ಯರಹಿತನಾಗಿ ರಕ್ಷಿಸು.

English Translation

Hard to understand is the nature of the immortal, for although of one origin, she is of a different form ; cherish him delegently, great Agni, who understands Yama's nature easy to be understood.

॥ संहितापाठः ॥

यस्मिन्देवा विदथे मादयंते विवस्वतः सदने धारयंते ।
सूर्ये ज्योतिरददुर्मास्य क्तून्परि द्योतनिं चरतो
अजस्रा ॥ २ ॥

॥ पदपाठः ॥

यस्मिन् । देवाः । विदथे । मादयंते । विवस्वतः । सदने । धारयंते ।
सूर्ये । ज्योतिः । अददुः । मासि । अक्तून् । परि । द्योतनिं । चरतः । अजस्रा ।२॥

॥ सायणभाष्यं ॥

यस्मिन्नग्नौ यज्ञस्य प्रधानांशे सति देवा इंद्रादयो विदथे यज्ञे मादयंते हविष्मात्मानं तर्पयंति तृप्यंति वा । अपि च विवस्वतो मनुष्यस्य यजमानस्य स्वभूते सदने वेद्याख्ये स्थाने धारयंते । आत्मानं स्थापयंति च । किंच सूर्ये ज्योतिरहराख्यं तेजोऽददुः । स्थापितवंतः । मासि चंद्रमस्यक्तून्रात्रीः स्थापितवंतः । तदनंतरमुजस्रानुपक्षीणौ सूर्याचंद्रमसौ द्योतनिं दीप्तिं परि चरतः । परिगच्छतः । सर्वत्र प्राप्नुतः ॥

॥ प्रतिपदार्थ ॥

यस्मिन्—यावं अदे प्रख्यातनाद अग्नियल्लि आहुतियन्नु अर्पिसुवुदरिंद । **देवाः**—इंद्रादिदेवतेगळु । **विदथे**—यज्ञ गृहदल्लि । **मादयंते**—हर्षवन्नु हॊंदुत्तारे । **विवस्वतः**—यजमानन । **सदने**—यज्ञगृहदल्लि । **धारयंते**—तम्म अस्तित्ववन्नु स्थापिसुत्तारे (आद दरिंदलेये) **सूर्ये**—सूर्यनल्लि । **ज्योतिः**—तेजस्सन्नु । **अददुः**—स्थापिसिद्दारे । **मासि**—चंद्रनल्लि **अक्तून्**—रात्रिगळन्नु स्थापिसिद्दारे । **अजस्रा**—शाश्वतराद सूर्य मत्तु चंद्ररु । **द्योतनिं**—तम्म कांतियन्नु । **परि चरतः**—सुत्तलू हरडुत्तारे.

॥ भावार्थ ॥

प्रख्यातनाद अग्नियल्लि आहुतियन्नु अर्पिसुवुदरिंद इंद्रादिदेवतेगळु यज्ञ गृहदल्लि हर्षवन्नु हॊंदुत्तारे. यजमानन यज्ञ गृहदल्लि स्थापितरागुत्तारे. ई रीति हर्षवन्नु हॊंदिद कारणदिंदलेये, सूर्यनल्लि तेजस्सन्नु स्थापिसिद्दारे. चंद्रनल्लि रात्रियन्नु स्थापिसिद्दारे. शाश्वतराद सूर्य मत्तु चंद्ररु तम्म कांतियन्नु सुत्तलू हरडुत्तारे.

English Translation

In him the gods find pleasure at the sacrifice; they seat themselves on the altar of the sacrificer. They placed light in the sun; beams in the moon; and these untiring shed their light around.

। ಸಂಹಿತಾಪಾಠಃ ।

ಯಸ್ಮಿನ್ದೇವಾ ಮನ್ಮನಿ ಸಂಚರಂತ್ಯಪೀಚ್ಯೇ ನ ವಯಮಸ್ಯ ವಿದ್ಮ ।
ಮಿತ್ರೋ ನೋ ಅತ್ರಾದಿತಿರನಾಗಾನ್ತ್ಸವಿತಾ ದೇವೋ ವರುಣಾಯ ವೋಚತ್ ॥ ೮ ॥

॥ ಪದಪಾಠಃ ।

ಯಸ್ಮಿನ್ । ದೇವಾಃ । ಮನ್ಮನಿ । ಸಂಽಚರಂತಿ । ಅಪೀಚ್ಯೇ । ನ । ವಯಂ । ಅಸ್ಯ । ವಿದ್ಮ ।
ಮಿತ್ರಃ । ನಃ । ಅತ್ರ । ಅದಿತಿಃ । ಅನಾಗಾನ್ । ಸವಿತಾ । ದೇವಃ । ವರುಣಾಯ । ವೋಚತ್ ॥ ೮ ॥

। ಸಾಯಣಭಾಷ್ಯಂ ।

ದೇವಾ ಇಂದ್ರಾದಯೋ ಯಸ್ಮಿನ್ನಗ್ನೌ ಮನ್ಮನಿ ಜ್ಞಾನಭೂತೇ ಜ್ಞಾನವತ್ಸರ್ವಪ್ರಕಾಶಕೇ ಸತಿ ಸಂಚರಂತಿ ಸ್ವಾಧಿಕಾರೇ ಸಂಪ್ರವರ್ತಂತೇ ಅಪೀಚ್ಯೇಽಂತರ್ಹಿತೇ ಸ್ಥಿತಮಗ್ನೇಃ ಸ್ವರೂಪಂ ವಯಂ ನ ವಿದ್ಮ। ತತ್ತ್ವತೋ ನ ಜಾನೀಮಃ। ಅತ್ರಾಸ್ಮಿನ್ಯಜ್ಞೇಽಂಗಭಾವಾಯ ವರ್ತಮಾನೋ ಮಿತ್ರೋ ವರುಣಾಯ ಸರ್ವೇಷಾಂ ಪಾಪಾನಾಂ ನಿವಾರಯಿತ್ರೇಽಗ್ನಯೇ ನೋಽಸ್ಮಾನನಾಗಾನಪಾಪಾನ್ವೋಚತ್ । ಬ್ರವೀತು । ತಥಾದಿತಿರ್ದೇವಮಾತಾ ಸವಿತಾ ಸರ್ವಸ್ಯ ಪ್ರೇರಕೋ ದೇವಶ್ಚ ಬ್ರವೀತು ॥

। ಪ್ರತಿಪದಾರ್ಥ ।

ದೇವಾಃ—ಇಂದ್ರಾದಿ ದೇವತೆಗಳು । ಯಸ್ಮಿನ್—ಅದೇ ಅಗ್ನಿಯು । ಮನ್ಮನಿ—ನಮ್ಮ ಗೋಚರಕ್ಕೆ ಪ್ರಕಾಶಿತನಾಗಿರುವಾಗ । ಸಂಚರಂತಿ—ಸಂಚರಿಸುತ್ತಾರೆ । ಅಸ್ಯ—ಇವನ ಸ್ವರೂಪವನ್ನು । ಅಪೀಚ್ಯೇ—ಅಗ್ನಿಯು ಮರೆಯಾದಾಗ । ವಯಂ—ನಾವು। ನ ವಿದ್ಮ—ತಿಳಿಯಲಾಗುವುದಿಲ್ಲ । ಅತ್ರ-ಈ ಯಜ್ಞದಲ್ಲಿ ಭಾಗವನ್ನು ಹೊಂದುವ । ಮಿತ್ರಃ—ಮಿತ್ರದೇವನು । ವರುಣಾಯ—ಪಾಪನಿವಾರಕನಾದ ಅಗ್ನಿಯ ಮುಂದೆ । ನಃ-ನಮ್ಮನ್ನು । ಅನಾಗಾನ್—ಪಾಪರಹಿತರೆಂದು । ವೋಚತ್—ಪ್ರಕಟಿಸಲಿ । ಅದಿತಿಃ—ಅದಿತಿಯೂ । ದೇವಃ—ದೇವತಾತ್ಮನಾದ । ಸವಿತಾ—ಸವಿತೃವೂ ಪ್ರಕಟಿಸಿ ಹೇಳಲಿ.

॥ ಭಾವಾರ್ಥ ॥

ಈ ಅಗ್ನಿಯು ನಮಗೆಲ್ಲಾ ಗೋಚರನಾಗಿ ಜ್ಞಾನವಿಷಯನಾದಾಗ ಇಂದ್ರಾದಿದೇವತೆಗಳು ಇಲ್ಲಿ ಸಂಚರಿಸುತ್ತಾರೆ. ಅಗ್ನಿಯು ಮರೆಯಾದಾಗ ನಾವು ಅವನ ಸ್ವರೂಪವನ್ನು ತಿಳಿಯಲಾಗುವುದಿಲ್ಲ. ಈ ಯಜ್ಞದಲ್ಲಿ ಭಾಗವನ್ನು ಹೊಂದುವ ಮಿತ್ರದೇವನು ಪಾಪನಿವಾರಕನಾದ ಅಗ್ನಿಯ ಮುಂದೆ ನಮ್ಮನ್ನು ಪಾಪರಹಿತರೆಂದು ಪ್ರಕಟಿಸಲಿ. ಅದಿತಿಯೂ, ದೇವತಾತ್ಮನಾದ ಸವಿತೃವೂ ನಮ್ಮನ್ನು ಪಾಪರಹಿತರೆಂದು ಪ್ರಕಟಿಸಲಿ.

English Translation

When he, the all-illumining, is there, the gods assemble ; but when he concealed, we know not (his abode) ; so at this sacrifice let Mitra and Aditi and Savitri proclaim us to Varuna as free from sin.

॥ ಸಂಹಿತಾಪಾಠಃ ॥

ಶ್ರುಧೀ ನೋ ಅಗ್ನೇ ಸದನೇ ಸಧಸ್ಥೇ ಯುಕ್ಷ್ವಾ ರಥಮಮೃತಸ್ಯ ದ್ರವಿತ್ನುಂ।
ಆ ನೋ ವಹ ರೋದಸೀ ದೇವಪುತ್ರೇ ಮಾಕಿರ್ದೇವಾನಾಮುಪ ಭೂರಿಹ ಸ್ಯಾಃ ॥ ೯ ॥

॥ ಪದಪಾಠಃ ॥

ಶ್ರುಧಿ । ನಃ । ಅಗ್ನೇ । ಸದನೇ । ಸಧಽಸ್ಥೇ । ಯುಕ್ಷ್ವ । ರಥಂ । ಅಮೃತಸ್ಯ । ದ್ರವಿತ್ನುಂ ।
ಆ । ನಃ । ವಹ । ರೋದಸೀ ಇತಿ । ದೇವಪುತ್ರೇ ಇತಿ ದೇವಽಪುತ್ರೇ । ಮಾಕಿಃ । ದೇವಾನಾಂ । ಅಪ । ಭೂಃ । ಇಹ । ಸ್ಯಾಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಧಸ್ಥೇ ಸಹಸ್ಥಾನೇ ಸರ್ವದೇವತಾಸಾಧಾರಣೇ ಸದನೇ ಯಜ್ಞಗೃಹೇ ಸ್ಥಿತಃ ಸನ್ನೋಽಸ್ಮದೀಯಂ ವಚನಂ ಶ್ರುಧಿ । ಶೃಣು । ಕಂ ತದ್ವಚನಂ ಉಚ್ಯತೇ । ಅಮೃತಸ್ಯ ದೇವಪಾನಸ್ಯ ಮಧುನೋ ದ್ರವಿತ್ನುಂ ದ್ರಾವಕಂ ರಥಮಾತ್ಮೀಯಂ ಯುಕ್ಷ್ವ । ಆಹ್ವಾನಾರ್ಥಂ ದೇವಾನ್ಪ್ರತಿ ಗಮನಾಯಾಶ್ವೈಃ ಸಂಯುಕ್ಷ್ವ । ಸಂಯುಕ್ತೇನ ರಥೇನ ಗತ್ವಾ ನೋಽಸ್ಮಾಕಂ ಯಜ್ಞಂ ಪ್ರತಿ ದೇವಪುತ್ರೇ ದೇವಸ್ಯ ಪ್ರಜಾಪತೇರ್ದುಹಿತರೌ ಯದ್ವಾ ದೇವಾಃ ಪುತ್ರಾ ಯಯೋಸ್ತೇ ರೋದಸೀ ದ್ಯಾವಾಪೃಥಿವ್ಯಾವಾ ವಹ । ಪ್ರಾಪಯ । ದೇವಾನಾಂ ಮಧ್ಯೇ ಕಶ್ಚಿದ್ದೇವೋಽಪ ಭೂರಪಭವಿತಾಸ್ಮದ್ಯಜ್ಞಾದಪಗಂತಾ ಮಾಕಿಃ ಸ್ಯಾತ್ । ತ್ವಂ ಚೇಹಾಸ್ಮಿನ್ಯಜ್ಞೇ ಸ್ಯಾಃ । ಸಂನಿಹಿತೋ ಭವ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । **ಸಧಸ್ಥೇ**—ದೇವತೆಗಳೆಲ್ಲರೂ ಒಟ್ಟುಗೂಡುವ । **ಸದನೇ**—ಯಜ್ಞಗೃಹದಲ್ಲಿದ್ದು । **ನಃ**—ನಮ್ಮ ಸ್ತುತಿಯನ್ನು । **ಶ್ರುಧಿ**—ಕೇಳು । **ಅಮೃತಸ್ಯ**—ಅಮೃತವನ್ನು । **ದ್ರವಿತ್ನುಂ**—ಸುರಿಸತಕ್ಕ । **ರಥಂ**—ರಥವನ್ನು । **ಯುಕ್ಷ್ವ**—ಯೋಜಿಸು । **ನಃ**—ನಮ್ಮ ಯಜ್ಞಕ್ಕೆ । **ದೇವಪುತ್ರೇ**—ಪ್ರಜಾಪತಿಯ ಪುತ್ರಿಯರಾದ । **ರೋದಸೀ**—ದ್ಯಾವಾಪೃಥಿವಿಗಳನ್ನು । **ಆ ವಹ**—ಕರೆದುಕೊಂಡು ಬಾ । **ದೇವಾನಾಂ**—ದೇವತೆಗಳ ನಡುವೆ । **ಮಾಕಿಃ ಅಪ ಭೂಃ**—ಯಾರೂ ತಪ್ಪಿಸಿಕೊಳ್ಳದಿರಲಿ । **ಇಹ**—ನಮ್ಮ ಯಜ್ಞದಲ್ಲಿ । **ಸ್ಯಾಃ**—ನೀನೂ ಸಮೀಪಸ್ಥನಾಗಿರು. ।

॥ ಭಾವಾರ್ಥ ॥

ಎಲೈ ಅಗ್ನಿಯೇ, ದೇವತೆಗಳೆಲ್ಲರೂ ಒಟ್ಟುಗೂಡುವ ಯಜ್ಞಗೃಹದಲ್ಲಿದ್ದು ನಮ್ಮ ಸ್ತುತಿಯನ್ನು ಕೇಳು. ಅಮೃತವನ್ನು ಸುರಿಸತಕ್ಕ ನಿನ್ನ ರಥವನ್ನು ಯೋಜಿಸು. ನಮ್ಮ ಯಜ್ಞಕ್ಕೆ ಪ್ರಜಾಪತಿಯ ಪುತ್ರಿಯರಾದ ದ್ಯಾವಾಪೃಥಿವಿಗಳನ್ನು ಕರೆದುಕೊಂಡು ಬಾ. ನಮ್ಮ ಯಜ್ಞಕ್ಕೆ ದೇವತೆಗಳ ನಡುವೆ ಯಾರೂ ತಪ್ಪಿಸಿಕೊಳ್ಳದಿರಲಿ. ನೀನೂ ನಮ್ಮ ಸಮೀಪಸ್ಥನಾಗಿರು.

English Translation

Agni, present in the dwelling common (to the deities) hear us: harness your swift chariot of ambrosia: bring to us the heaven and earth, the daughters of the divine (Prajapati), let none of the gods be absent, and you yourself be present.

ಹದಿಮೂರನೆಯ ಸೂಕ್ತವು

ಪೀಠಿಕೆ.

ಹವಿರ್ಧಾನಶಕಟಗಳು

ಗಂಧರ್ವರಾಜನಾದ ಸೋಮನನ್ನು ಯಜ್ಞಭೂಮಿಗೆ ತರಲು ಸಾಧನವಾದ ಗಾಡಿಗಳಿಗೆ ಹವಿರ್ಧಾನ ಶಕಟಗಳೆಂದು ಹೆಸರು. ಯಾವ ರೀತಿ ಸೋಮನು ದೇವಮಾನವಾದಿಗಳಿಗೆಲ್ಲ ಪ್ರಭುವಾಗಿರುವನೋ, ಅದೇ ರೀತಿ ಅವನನ್ನು ಕರೆದೊಯ್ಯುವ ಈ ಶಕಟಗಳೂ ಸಹ ದೇವಮಾನವಾದಿಗಳಿಗೆಲ್ಲ ಪ್ರಭುರೂಪದಲ್ಲಿರುತ್ತವೆ.

ಸಪ್ತ ಕ್ಷರಂತಿ ಶಿಶವೇ ಮರುತ್ವತೇ ಪಿತ್ರೇ ಪುತ್ರಾಸೋ ಅಪ್ಯವೀವತನ್ನೃತಂ ।
ಉಭೇ ಇದಸ್ಯೋಭಯಸ್ಯ ರಾಜತ ಉಭೇ ಯತೇತೇ ಉಭಯಸ್ಯ ಪುಷ್ಯತಃ ॥

(ಋ. ಸಂ. ೧೦-೧೩-೫)

ಎಂಬಲ್ಲಿ ಸೋಮನನ್ನು ಹವಿರ್ಧಾನಶಕಟಗಳಿಗೆ ಪುತ್ರರೂಪನೆಂದು ಪ್ರಶಂಸಿಸಿ ಇಂತಹೆ ಪುತ್ರನನ್ನು ಹೊಂದಿರುವ ಪವಿರ್ಧಾನ ಶಕಟಗಳು ಸಕಲ ದೇವಮಾನಾದಿಗಳಿಗೂ ಪ್ರಭುಗಳೆಂದೂ, ದೇವಮಾನವಾದಿಗಳಿಗೆಲ್ಲ ಪೋಷಕಗಳೆಂದೂ ಸಹೆ ಸ್ತುತಿಸಿದೆ. ಜಗತ್ಪೋಷಕವೂ ಜಗದ್ಧಾರಕವೂ ಆದ ಯಜ್ಞಕ್ಕೆ ಸೋಮನು ಯಾವ ರೀತಿ ಅತ್ಯವಶ್ಯಕವಾದೆ ಸಾಧಕನೋ ಅದರಂತೆಯೇ ಆ ಸೋಮನನ್ನು ತರತಕ್ಕ ಶಕಟಗಳೂ ಸಾಧಕವಾಗಿರುತ್ತವೆ. ಸೋಮನು ಯಾವ ರೀತಿ ದಿವ್ಯಾಂಶ ಸಂಭೂತನೋ, ಅದೇ ರೀತಿ ಈ ಹವಿರ್ಧಾನ ಶಕಟಗಳೂ ಸಹ ದಿವ್ಯಾಂಶಸಂಭೂತವಾಗಿರುತ್ತವೆ. ಇವುಗಳ ಉತ್ಪತ್ತಿ ಕ್ರಮವನ್ನು ಐತರೇಯ ಬ್ರಾಹ್ಮಣದಲ್ಲಿ ಈ ರೀತಿ ತಿಳಿಸಿರುತ್ತೆ.

ದೇವಾಸುರಾ ವಾ ಏಷು ಲೋಕೇಷು ಸಮಯತಂತ ತೇ ವಾ ಅಸುರಾ ಇಮಾನೇವ ಲೋಕಾನ್ ಪುರೋಽಕುರ್ವತ ಯಥೌಜೀಯಾಂಸೋ ಬಲೀಯಾಂಸ ಏವಂ ತೇ ವಾ ಅಯಸ್ಮಯಾ-ಮೇವೇಮಾಮಕುರ್ವತ ರಜತಾಮಂತರಿಕ್ಷಂ ಹರಿಣೀಂ ದಿವಂ ತೇ ತಥೇಮಾನ್ ಲೋಕಾನ್ ಪುರೋಽಕುರ್ವತ ತೇ ದೇವಾ ಅಬ್ರುವನ್ ಪುರೋ ವಾ ಇಮೇಽಸುರಾ ಇಮಾನ್ ಲೋಕಾ-ನಕ್ರತ ಪುರ ಇಮಾನ್ ಲೋಕಾನ್ ಪ್ರತಿಕರವಾಮಹಾ ಇತಿ ತಥೇತಿ ತೇ ಸದ ಏವಾಸ್ಯಃ ಪ್ರತ್ಯಕುರ್ವತಾಗ್ನೀಧ್ರಮಂತರಿಕ್ಷಾದ್ಧವಿರ್ಧಾನೇ ದಿವಃ .... ॥

(ಐ. ಬ್ರಾ. ೧-೨೩)

ದೇವತೆಗಳೂ ಮತ್ತು ಅಸುರರೂ ಸಹ ಈ ಲೋಕಗಳನ್ನಾಕ್ರಮಿಸಲು ಸ್ಪರ್ಧಿಸಿದರು. ಆಗ ಅಸುರರು ಲೋಕಗಳನ್ನೆಲ್ಲ ದುರ್ಗಗಳನ್ನಾಗಿ ಮಾಡಿಕೊಂಡರು. ಪೃಥ್ವಿಯನ್ನು ಉಕ್ಕಿನ ಕೋಟೆಯನ್ನಾಗಿಯೂ, ಅಂತರಿಕ್ಷವನ್ನು ರಜತಮಯವನ್ನಾಗಿಯೂ ದ್ಯುಲೋಕವನ್ನು ಸುವರ್ಣಮಯವಾದ ಕೋಟೆಯನ್ನಾಗಿಯೂ ಮಾಡಿಕೊಂಡರು. ಆಗ ದೇವತೆಗಳೆಲ್ಲರೂ ಸೇರಿ " ಅಸುರರು ಈ ಲೋಕಗಳನ್ನು ಕೋಟೆಗಳನ್ನಾಗಿ ಮಾಡಿಕೊಂಡಿರುವರು. ನಾವೂ ಸಹ ತತ್ಪ್ರತಿಯಾಗಿ ಅದಕ್ಕಿಂತಲೂ ಅಧಿಕವಾದ ಶಕ್ತಿಯುಳ್ಳ ಕೋಟೆಗಳನ್ನು ಮಾಡಿಕೊಳ್ಳೋಣ " ಎಂದು ನಿರ್ಧರಿಸಿದರು. ಅದರಂತೆ ಪ್ರಯತ್ನಿಸಿ ಈ ಪೃಥ್ವಿಯಿಂದ ಸದಸ್ಸನ್ನೂ, ಅಂತರಿಕ್ಷದಿಂದ ಆಗ್ನೀಧ್ರವನ್ನೂ ದ್ಯುಲೋಕದಿಂದ ಹವಿರ್ಧಾನಗಳನ್ನೂ ನಿರ್ಮಿಸಿಕೊಂಡರು ಎಂದಿರುತ್ತದೆ. ಹವಿರ್ಧಾನಗಳು ಕೇವಲ ಜಗತ್ಪೋಷಕವೇ ಅಲ್ಲದೆ, ದೇವತೆಗಳಿಗೆ ರಕ್ಷಕವೂ ಆಗಿರುವುವು ಎಂದು ಇದರಿಂದ ತಿಳಿಯುತ್ತದೆ. ಅಲ್ಲದೇ ಹವಿರ್ಧಾನದ ಮಹಿಮೆಯನ್ನು ಶತಪಥ ಬ್ರಾಹ್ಮಣದಲ್ಲಿ ಅತಿಶಯವಾಗಿ ಸ್ತುತಿಸಿದೆ. ಹವಿರ್ಧಾನವೆಂದರೇನು ? ಹವಿರ್ಧಾನವೆಂಬ ಹೆಸರು ಏತಕ್ಕೆ ಬಂದಿತು? ಇದರ ಮಹತ್ತ್ವವೇನು ? ಎಂಬ ಈ ವಿಷಯಗಳನ್ನೂ ಕೆಳಗೆ ಉದಾಹರಿಸಿರುವ ವಾಕ್ಯಗಳಲ್ಲಿ ಈ ರೀತಿ ವರ್ಣಿಸಿರುತ್ತೆ.

ಪುರುಷೋ ವೈ ಯಜ್ಞಃ । ಪುರುಷಸ್ತೇನ ಯಜ್ಞೋ ಯದೇನಂ ಪುರುಷಸ್ಯ ಸುತಽ ಏಷ ವೈ ತಾಯಮಾನೋ ಯಾವಾನೇವ ಪುರುಷಸ್ತಾವಾನ್ವಿಧೀಯತೇ ತಸ್ಮಾತ್ಪುರುಷೋ ಯಜ್ಞಃ ॥

(ಶ. ಬ್ರಾ. ೩-೫-೩-೧)

ಯಜ್ಞವೇ ಪುರುಷರೂಪಿಯು, ಪುರುಷನು ಯಜ್ಞವನ್ನು ವಿಸ್ತರಿಸಿ ಹರಡುವುದರಿಂದಲೇ ಯಜ್ಞಕ್ಕೂ ಪುರುಷನಿಗೂ ತಾದಾತ್ಮ್ಯವಿರುತ್ತದೆ. ಇಂತಹ ವಿಸ್ತರಣದಿಂದ ಯಜ್ಞವೂ ಪುರುಷನಷ್ಟೇ ಪ್ರಮಾಣವನ್ನು ಹೊಂದುತ್ತದೆ. ಈ ಪ್ರಮಾಣಸಾದೃಶ್ಯದಿಂದಲೂ, ನಿರ್ಮಾತೃನಿರ್ಮಾಪಕಸಂಬಂಧದಿಂದಲೂ ಸಹ ಯಜ್ಞವು ಪುರುಷಸಂಜ್ಞಕವಾಗಿರುತ್ತದೆ.

ಶಿರ ಏವಾಸ್ಯ ಹವಿರ್ಧಾನಂ । ವೈಷ್ಣವಂ ದೇವತಯಾಧ ಯದಸ್ಮಿನ್ಪ್ಸ್ಯೇನೋ ಭವತಿ ಹವಿರ್ವೈ ದೇವಾನಾಗ್ಂ ಸೋಮಸ್ತಸ್ಮಾದ್ಧವಿರ್ಧಾನಂ ನಾಮ ॥

(ಶ. ಬ್ರಾ. ೩-೫-೩-೨)

ಈ ಯಜ್ಞಕ್ಕೆ ಹವಿರ್ಧಾನವೇ ಶಿರಸ್ಸು, ವಿಷ್ಣುವೇ ಈ ಹವಿರ್ಧಾನದ ದೇವತೆ. ಇದರಲ್ಲಿ ಸೋಮವು ತುಂಬಿರುತ್ತದೆ. ಸೋಮವು ದೇವತೆಗಳನ್ನು ದ್ದೇಶಿಸಿ ಅರ್ಪಿಸುವ ಪವಿಸ್ಸು. ಈ ಸೋಮವೊಡನೆ ತುಂಬಿರುವುದರಿಂದ ಈ ಶಕಟಕ್ಕೆ ಪವಿರ್ಧಾನವೆಂದು ಹೆಸರು.

ಉಭಯತೋದ್ವಾರಗ್ಂ ಹವಿರ್ಧಾನಂ ಭವತಿ । ಉಭಯತೋದ್ವಾರಗ್ಂ ಸದಸ್ತಸ್ಮಾದಯಂ ಪುರುಷ ಆಂತಗ್ಂ ಸಂತೃಣಃ ಪ್ರಣಿಕ್ತೇ ಹವಿರ್ಧಾನೇ ಉಪತಿಷ್ಠತೇ (ಶ ಬ್ರಾ. ೩-೫-೩-೭)

ಈ ಹವಿರ್ಧಾನಕ್ಕೆ ಎರಡು ಕಡೆಗಳಲ್ಲಿಯೂ ದ್ವಾರಗಳಿರುತ್ತವೆ. ಅದರಂತೆಯೇ ಸದಸ್ಸಿಗೂ ಎರಡು ಕಡೆಯೂ ದ್ವಾರಗಳಿರುತ್ತವೆ. ಆದುದರಿಂದ ಪುರುಷನಿಗೂ ಇವೇ ಸ್ಥಿತಿಯಿವೆ. ಪರಿಶುದ್ಧಿಯನ್ನು ಹೊಂದಿದನಂತರ ಅದರೊಳಕ್ಕೆ ಪ್ರವೇಶಿಸುತ್ತಾನೆ.

ಈ ಹವಿರ್ಧಾನವು ದಕ್ಷಿಣದಿಕ್ಕಿಗೊಂದು ಮತ್ತು ಉತ್ತರದಿಕ್ಕಿಗೊಂದೂ ಇರುತ್ತದೆ. ದಕ್ಷಿಣ ದಿಗ್ಭಾಗದ ಹವಿರ್ಧಾನವು ಎರಡರಲ್ಲಿ ದೊಡ್ಡದು. ಅದು ಅಧ್ವರ್ಯುವಿನ ನೇತೃತ್ವದಲ್ಲಿರುತ್ತದೆ. ಉತ್ತರದಿಗ್ಭಾಗದ್ದು ಅಧ್ವರ್ಯುವಿನ ಸಹಾಯಕನಾದ ಪ್ರತಿಪ್ರಸ್ಥಾತೃವಿನ ನೇತೃತ್ವದಲ್ಲಿರುತ್ತವೆ. ಇವರಿಬ್ಬರೂ ಸಹ ತಮ್ಮ ತಮ್ಮ ಹವಿರ್ಧಾನವನ್ನು ಪಶ್ಚಿಮದ ಕಡೆಗೆ ಒಯ್ಯುವರು. ನಂತರ ಪ್ರದಕ್ಷಿಣಪುರಃಸರವಾಗಿ ಇಬ್ಬರೂ ಯಜ್ಞವೇದಿಯ ಅಂತಃಪಾತದ ಸಮೀಪಕ್ಕೆ ಕರೆದೊಯ್ಯುತ್ತಾರೆ.

ತೇ ಸಮವರ್ತಯಂತಿ । ದಕ್ಷಿಣೇನೈವ ದಕ್ಷಿಣಮುತ್ತರೇಣೋತ್ತರಂ ಯದ್ವರ್ಷೀಯಸ್ತದ್ದಕ್ಷಿಣಂ ಸ್ಯಾತ್ ॥

(ಶ. ಬ್ರಾ ೩-೫-೩-೮)

ನಂತರ ಪ್ರದಕ್ಷಿಣಪುರಃಸರವಾಗಿ ದಕ್ಷಿಣ ಮತ್ತು ಉತ್ತರದಿಕ್ಕುಗಳಲ್ಲಿ ಆ ಎರಡು ಹವಿರ್ಧಾನಗಳನ್ನೂ ಒಯ್ಯುವರು. ದಕ್ಷಿಣ ದಿಕ್ಕಿನ ಹವಿರ್ಧಾನವೇ ಎರಡರಲ್ಲಿ ದೊಡ್ಡದು.

ತಯೋಃ ಸಮವವೃಕ್ತಯೋಃ। ಧದಿರಧಿನಿದಧತಿ । ಯದಿ ಧದಿರ್ನ ವಿಂದೇಯುಶ್ಶರ್ದಿಃ ಸಂಮಿತಾಂ ಭಿತ್ತಿಂ ಪ್ರತ್ಯಾಸಹ್ಯಂತಿ ರರಾಟ್ಯಾಂ ಪರಿಶ್ರಯಂತ್ಯುಚ್ಚಾಯಿಭ್ಯಾಂ ಧದಿಃ ಪಶ್ಚಾದಧಿನಿದಧತಿ ಧದಿಃ ಸಮ್ಮಿತಾಂ ವಾ ಭಿತ್ತಿಂ (ಶ. ಬ್ರಾ. ೩-೫-೩-೯)

ಪ್ರದಕ್ಷಿಣಾನಂತರ ಅವುಗಳನ್ನು ಯಜ್ಞವೇದಿಯಲ್ಲಿರಿಸಿ ಅವುಗಳ ಮೇಲೆ ಧದಿ ಸಂಜ್ಞಕವಾದ (ಅಥವಾ ದರ್ಭೆ ಹುಲ್ಲಿನಿಂದ ಮಾಡದ ಚಾಪೆ) ಹುಲ್ಲನ್ನು ಹೊದ್ದಿಸುವರು. ಅಥವಾ ಜೊಂಡು ಹುಲ್ಲಿನ ಚಾಪೆಯು ಸಿಕ್ಕದಿದ್ದರೆ, ತತ್ಸಮಾನವಾದ ಜೊಂಡಿನ ಚಾಪೆಯನ್ನು ಹಾಸಬಹುದು. ಮತ್ತು ನೇರವಾದ ಎರಡು ತಡಿಕೆಗಳ ಮಧ್ಯೆ ಸ್ಥಾಪಿಸುತ್ತಾರೆ. ಮತ್ತು ಮೊದಲನೆಯ ಚಾಪೆಯ ಹಿಂದೆ ಎರಡನೆಯ ಚಾಪೆಯನ್ನಿಟ್ಟು ಮುಚ್ಚುವರು.

ವಿಷ್ಣೋ ವಿಪ್ರಸ್ಯ ಬಹೃತೋ ವಿಪಶ್ಚಿತಃ । .... ಮಹೀ ದೇವಸ್ಯ ಸವಿತುಃ ಪರಿಷ್ಟುತಿಃ ಸ್ವಾಹೇತಿ ತಸ್ಮಾನ್ವಿಶ್ರಂ ಪ್ರಸವಾಯ ಜುಹೋತಿ (ಶ. ಬ್ರಾ. ೩-೫-೩-೧೨)

ಅನಂತರ ವಿಪ್ರರಲ್ಲಿ ಅತ್ಯಂತ ಮೇಧಾವಿಗಳೂ, ಶ್ರೇಷ್ಠವಾದ ಶ್ರದ್ಧೆ ಮತ್ತು ಜ್ಞಾನಗಳ ಪ್ರೇರಕರೂ ಆದ ಬ್ರಹ್ಮಜ್ಞಾನಿಗಳೇ ಋತ್ವಿಕ್ಕುಗಳು .... " ದೇವತಾತ್ಮನಾದ ಸವಿತೃವಿನ ಸ್ತುತಿಯು ಮಹತ್ತ್ವವುಳ್ಳದ್ದು " ಎಂಬ ಪ್ರಶಂಸಾವಾಕ್ಯಗಳೊಡನೆ ಸರ್ವಪ್ರೇರಕನಾದ ಸವಿತೃವಿಗೆ ಆಜ್ಯಾಹುತಿಯನ್ನು (ಅಧ್ವರ್ಯುವು) ಅರ್ಪಿಸುವರು.

ಅಥಾಪರಂ ಚತುರ್ಗೃಹೀತಮಾಜ್ಯಂ ಗೃಹೀತ್ವಾ । ಉಪನಿಷ್ಕ್ರಾಮತಿ ದಕ್ಷಿಣಯಾ ದ್ವಾರಾ ಪತ್ನೀಂ ನಿಷ್ಕ್ರಾಮಯಂತಿ ಸ ದಕ್ಷಿಣಸ್ಯ ಹವಿರ್ಧಾನಸ್ಯ ದಕ್ಷಿಣಾಯಾಂ ವರ್ತನ್ಯಾಗ್ಂ ಹಿರಣ್ಮಂ ನಿಧಾಯ ಜುಹೋತೀದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ । ಸಮೂಢಮಸ್ಯ ಪಾಗ್ಂ ಸುರೇ ಸ್ವಾಹೇತಿ ಸಗ್ ಸ್ರವಂ ಪತ್ನ್ಯೈ ಪಾಣಾವಾನಯತಿ ಸಾಕ್ಷಸ್ಯ ಸಂತಾಪಮುಪಾನಕ್ತಿ ದೇವಶ್ರುತಾ ದೇವೇಷ್ವಾಘೋಷತಮಿತಿ ಪ್ರಯಚ್ಛತಿ ಪ್ರತಿಪ್ರಸ್ಥಾತ್ರೇಸ್ರುಚಂ ಚಾಜ್ಯವಿಲಾಪನೀಂ ಚ ಪರ್ಯಾಣಯಂತಿ ಪತ್ನೀಮುಖೌ ಜಘನೇನಾಗ್ನೀ (ಶ.ಬ್ರಾ. ೩-೫-೩-೧೩)

ಯಜಮಾನನು ಚತುರ್ಗೃಹೀತವಾದ ಆಜ್ಯವನ್ನು ಹಿಡಿದು ಎರಡನೆಯ ಸಲ ಮುಂಭಾಗದ ಬಾಗಿಲಿನಿಂದ ಹೊರಕ್ಕೆ ಬರುತ್ತಾನೆ. ಅವನ ಪತ್ನಿಯು ದಕ್ಷಿಣಭಾಗದ ದ್ವಾರದಿಂದ ಹೊರಕ್ಕೆ ಒಯ್ಯಲ್ಪಡುತ್ತಾಳೆ. ಆಗ ಯಜಮಾನನು ದಕ್ಷಿಣದಿಕ್ಕಿನ ಹವಿರ್ಧಾನದ ಬಲಗಡೆಯ ಚಕ್ರಮಾರ್ಗದಲ್ಲಿ ಒಂದು ಸುವರ್ಣನಾಣ್ಯವನ್ನಿಟ್ಟು ಅನಂತರ **ಇದಂ ವಿಷ್ಣುರ್ವಿಚಕ್ರಮೇ ಸಮೂಢಂ ... . ವಿಷ್ಣುವು ಈ ಮೂರು ಲೋಕಗಳನ್ನು ಸಂಚರಿಸಿ** ಆಕ್ರಮಿಸಿದನು. ಮೂರು ಸಲದ ಅವನ ಪಾದಪ್ರಕ್ಷೇಪಣದಿಂದ ಉಂಟಾದ ಧೂಳಿನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಯಿತು " ಎಂಬ ವಿಷ್ಣುವಿನ ಪ್ರಶಂಸೆಯನ್ನು ಪಠಿಸಿ (ಋ. ಸಂ. ೧ ೨೨. ೧೭) ಆಜ್ಯವನ್ನರ್ಪಿಸುತ್ತಾನೆ. ಅದರಲ್ಲಿ ಉಳಿದ ಆಜ್ಯಭಾಗವನ್ನು ಪತ್ನಿಯ ಕೈಯಲ್ಲಿ ಸುರಿಯುತ್ತಾನೆ. ಆಗ ಅವಳು " ದೇವತೆಗಳಿಗೆ ಈ ಆಗಮನವನ್ನು ತಿಳಿಸಬೇಕು " ಎಂದು ಪ್ರಾರ್ಥಿಸುತ್ತ ಆ ರಥ (ಹವಿರ್ಧಾನ) ಚಕ್ರದ ಅಕ್ಷಕ್ಕೆ ಸಿಕ್ಕಿಸುವ ಆಣಿಯನ್ನು ಆ ಆಜ್ಯಭಾಗದಿಂದ ಲೇಪಿಸುತ್ತಾಳೆ. ಅನಂತರ ಯಜಮಾನನು ಆಜ್ಯಪಾತ್ರೆಯನ್ನೂ ಆ ಆಣಿಯನ್ನೂ (ಸಂತಾಪ) ತನ್ನ ಸಹಾಯಕನಲ್ಲಿ ರಿಸುತ್ತಾನೆ. ಆಗ ತತ್ಪತ್ನಿಯು ಹಿಂಭಾಗದ ದ್ವಾರದಿಂದ ಒಳಕ್ಕೆ ಹೋಗುತ್ತಾಳೆ.

ಚತುರ್ಗೃಹೀತಮಾಜ್ಯಂ ಗೃಹೀತ್ವಾ । ಪ್ರತಿಪ್ರಸ್ಥಾತೋತ್ತರಸ್ಯ ಹವಿರ್ಧಾನಸ್ಯ ದಕ್ಷಿಣಾಯಾಂ ವರ್ತನ್ಯಾಂ ಹಿರಣ್ಮಂ ನಿಧಾಯ ಜುಹೋತೀರಾವತೀ ಧೇನುಮತೀ ಹೀ ಭೂತಗ್ಂ ಸೂಯವಸಿನೀ ಮನವೇ ದಶಸ್ಯಾ । ವ್ಯಸ್ಕಭ್ನಾತ್ ರೋದಸೀ ವಿಷ್ಣುವೇತೇ ದಾಧರ್ಥ ಪೃಥಿವೀಮಭಿತೋ ಮಯೂಖೈಃ ಸ್ವಾಹೇತಿ ಸಗ್ ಸ್ರವಂ ಪತ್ನ್ಯೈ ಪಾಣಾವಾನಯತಿ ಸಾಕ್ಷಸ್ಯ ಸಂತಾಪಮುಪಾನಕ್ತಿ ದೇವಶ್ರುತಾ ದೇವೇಷ್ವಾಘೋಷತಮಿತಿ ತದ್ಯದೇವಂ ಜುಹೋತಿ

ಆಗ ಚತುರ್ಗೃಹೀತವಾದ ಆಜ್ಯವನ್ನು ಹಿಡಿದು, ಸಹಾಯಕನು ಉತ್ತರದಿಗ್ಭಾಗದ ರಥ (ಹವಿರ್ಧಾನ) ದ ಚಕ್ರಮಾರ್ಗದಲ್ಲಿ ಸುವರ್ಣನಾಣ್ಯವನ್ನಿಟ್ಟು " ಎಲೈ ವಿಷ್ಣುವೇ, ನೀನು ಗೋಸಂಪತ್ತಿನೊಡನೆಯೂ, ಅನ್ನಸಂಪತ್ತಿನೊಡನೆಯೂ ಕೂಡಿದವನಾಗಿ ಮಾನವನಿಗೆ (ಯಜಮಾನನಿಗೆ) ಉಪಕಾರಕನಾಗಿರು. ನೀನು ಈ ಎರಡು ಲೋಕಗಳನ್ನೂ ಜೋಡಿ ಮಾಡಿ ಸ್ಥಾಪಿಸಿದೆ. ನಿನ್ನ ತೇಜಸ್ಸಿನಿಂದ ಈ ಪೃಥ್ವಿಯನ್ನು ಸರ್ವತ್ರ ಧರಿಸಿದ್ದೀಯೆ" ಎಂದು ವಿಷ್ಣುವಿನ ಪ್ರಶಂಸೆ

ಯನ್ನು ಪಠಿಸಿ (ಋ. ಸಂ. ೭. ೯೯ ೩) ಸ್ವಾಹಾಕಾರಪೂರ್ವಕವಾಗಿ ಆಜ್ಯವನ್ನು ಅರ್ಪಿಸುತ್ತಾನೆ. ನಂತರ ಉಳಿದ ಭಾಗವನ್ನು ಪತ್ನಿಯ ಕೈಗೆ ಸುರಿಯುತ್ತಾನೆ. ಅವಳು ಹಿಂದಿನಂತೆಯೇ, "ದೇವತೆಗಳಿಗೆ ಈ ಆಗಮನವನ್ನು ತಿಳಿಸ ಬೇಕು" ಎಂದು ಪ್ರಾರ್ಥಿಸಿ ಆ ರಥಚಕ್ರದ ಅಕ್ಷಕ್ಕೆ ಸಿಕ್ಕಿಸುವ ಆಣಿಗೆ ಆಜ್ಯಲೇಪನವನ್ನು ಮಾಡುತ್ತಾಳೆ. ಈ ರೀತಿ ಆಜ್ಯಾಹುತಿಯನ್ನರ್ಪಿಸಿ, ಅಕ್ಷದ ಆಣಿಗೆ ಆಜ್ಯಲೇಪನವನ್ನು ಮಾಡುವ ಕಾರಣವೇನೆಂದರೆ, —

> ದೇವಾ ಹ ವೈ ಯಜ್ಞಂ ತನ್ವಾನಾಃ । ತೇऽಸುರ ರಕ್ಷಸೇಭ್ಯ ಆಸಂಗಾದ್ಬಿಭಯೂಂ ಚಕ್ರು-
> ರ್ವಜ್ರೋ ವಾ ಆಜ್ಯಂ ತ ಏತೇನ ವಜ್ರೇಣಾಜ್ಯೇನ ದಕ್ಷಿಣತೋ ನಾಷ್ಟ್ರಾ ರಕ್ಷಾಗ್ಂಸ್ಯವಾ-
> ಘ್ನಂಸ್ತಥೈಷಾಂ ನಿಯಾನಂ ನಾನ್ವವಾಯಂಸ್ತಥೋ ಏವೈಷ ಏತೇನ ವಜ್ರೇಣಾಜ್ಯೇನ ದಕ್ಷಿಣ-
> ತೋ ನಾಷ್ಟ್ರಾ ರಕ್ಷಾಗ್ಂಸ್ಯವಹಂತಿ ತಥಾಸ್ಯ ನಿಯಾನಂ ನಾನ್ವವಯಂತಿ ತದ್ಯದ್ವೈಷ್ಣವೀ-
> ಭ್ಯಾಮೃಗ್ಭ್ಯಾಂ ಜುಹೋತಿ ವೈಷ್ಣವಗ್ಂ ಹಿ ಹವಿರ್ಧಾನಂ (ಶ. ಬ್ರಾ. ೩-೫-೩-೧೫)

ಒಂದು ಸಲ ದೇವತೆಗಳು ಯಜ್ಞಕರ್ಮವನ್ನಾಚರಿಸುತ್ತಿದ್ದಾಗ, ಅಸುರರಾಕ್ಷಸರ ಆಕ್ರಮಣವುಂಟಾಗಬಹುದೆಂದು ಹೆದರಿದರು. ವಜ್ರಾಯುಧಕ್ಕೆ ಸಮಾನವಾದ ಆಜ್ಯದ ಸಹಾಯದಿಂದ ಅವರು ದಕ್ಷಿಣದಿಕ್ಕಿನಿಂದ ಸಂಭವಿಸಬಹು ದಾದ ಆಪತ್ತನ್ನು ನಿವಾರಿಸಿಕೊಂಡರು. ಹಾಗೆಯೇ ಈಗಲೂ ಸಹ ಹವಿರ್ಧಾನಕ್ಕೆ ಆಜ್ಯವನ್ನೂ ಅರ್ಪಿಸಿ ಅದರಿಂದ ಲೇಪಿಸುವುದರಿಂದ ಆ ದಿಕ್ಕಿನ ಆಪತ್ತು ತಪ್ಪುತ್ತದೆ. ಮತ್ತು ಹವಿರ್ಧಾನವು ವಿಷ್ಣುದೇವತೆಗೆ ಸಂಬಂಧಿಸಿದುದರಿಂದ ವಿಷ್ಣುವನ್ನು ಋಙ್ಮಂತ್ರಗಳಿಂದ ಪ್ರಶಂಸಿಸಿ ಪೂಜಿಸಬೇಕಾಗಿದೆ. ಯಜಮಾನನ ಪತ್ನಿಯೂ ಸಹ ಇದರಲ್ಲಿ ಭಾಗವಹಿಸುವುದರ ಅವಶ್ಯಕತೆಯೇನೆಂದರೆ, —

> ಅಥ ಯತ್ಪತ್ನ್ಯಕ್ಷ್ಣಸ್ಯ ಸಂತಾಪಮುಪಾನಕ್ತಿ । ಪ್ರಜನನಮೇವೈತತ್ಕ್ರಿಯತೇ ಯದಾ ವೈ
> ಸ್ತ್ರೀಯೈ ಚ ಪುಸಂಶ್ಚ ಸಂತಪ್ಯತೇऽಥ ರೇತಃ ಸಿಚ್ಯತೇ ತತ್ತತಃ ಪ್ರಜಾಯತೇ ಪರಾಗು-
> ಪಾನಕ್ತಿ ಪರಾಗ್ಘ್ಯೇವ ರೇತಃ ಸಿಚ್ಯತೇऽಥಾಹ ಹವಿರ್ಧಾನಾಭ್ಯಾಂ ಪ್ರವರ್ತ್ಯಮಾನಾಭ್ಯಾಮು-
> ನುಬ್ರೂಹೀತಿ (ಶ. ಬ್ರಾ. ೩-೫-೩-೧೬)

ಪತ್ನಿಯು ಸಂತಾಪಸಂಜ್ಞಕವಾದ ಆಣಿಗೆ ಆಜ್ಯಲೇಪನವನ್ನು ಮಾಡುವುದರಲ್ಲಿ ಗೂಢಾರ್ಥವಿರುತ್ತದೆ ಪತಿಪತ್ನಿಯರು ಸೇರಿ ಶ್ರಮವನ್ನು ವಹಿಸಿದಾಗ ರೇತಸ್ಸೇಚನವುಂಟಾಗಿ ಪ್ರಜೋತ್ಪತ್ತಿಯಾಗುತ್ತದೆ. ಅದರಂತೆಯೇ, ಈಗಲೂ ಇವರ ಸಾಹಚರ್ಯವೂ, ಯಜಮಾನನ ಜೊತೆಯಲ್ಲಿದ್ದು ಪತ್ನಿಯು ಆಣಿಗೆ ಆಜ್ಯಲೇಪನಮಾಡುವುದೂ ಉತ್ಪತ್ತಿಯ ಮೂಲ ವಾಗಿರುತ್ತದೆ. ಅವಳು ಲೇಪನಮಾಡಿದೊಡನೆಯೇ, ಅವನು ಹೋತೃವನ್ನು ಕುರಿತು "ಹವಿರ್ಧಾನಗಳು ಚಲಿಸು ವಾಗ ಅವುಗಳನ್ನು ಪ್ರಶಂಸಿಸುವ ವಾಕ್ಯಗಳನ್ನು ಪಠಿಸು" ಎಂದು ಸೂಚಿಸುತ್ತಾನೆ.

> ಅಥ ವಾಚಯತಿ । ಪ್ರಾಚೀ ಪ್ರೈತಮಧ್ವರಂ ಕಲ್ಪಯಂತೀ ಇತ್ಯಧ್ವರೋ ವೈ ಯಜ್ಞಃ ಪ್ರಾಚೀ
> ಪ್ರೈತಂ ಯಜ್ಞಂ ಕಲ್ಪಯಂತೀ ಇತ್ಯೇವೈತದಾಹೋರ್ಧ್ವಂ ಯಜ್ಞಂ ನಯತು ವಾ
> ಮಾ ಜೀಹ್ವೇರತಮಿತ್ಯೂರ್ಧ್ವಮಿಮಂ ಯಜ್ಞಂ ದೇವಲೋಕಂ ನಯತಮಿತ್ಯೇವೈತದಾಹ ಮಾ
> ಜೀಹ್ವೇರತಮಿತಿ ತದೇತಸ್ಯಾ ಅಹ್ವಲಾಮಾಶಾಸ್ತೇ ಸಮುದ್ಯಹ್ಯೇವ ಪ್ರವರ್ತಯೇಯುರ್ಯಥಾ
> ನೋತ್ಸರ್ಜೇತಾಮಸುರ್ಯಾ ವಾ ಏಷಾ ವಾಗ್ಯಾಕ್ಷೇ ನೇದಿಹಾಸುರ್ಯಾ ವಾಗ್ವದಾದಿತಿ
> ಯೆದ್ಯುತ್ಸರ್ಜೇತಾಂ (ಶ. ಬ್ರಾ. ೩-೫-೩ ೧೭)

ಎಲೈ ಹವಿರ್ಧಾನಗಳೇ, ನೀವು ಮುಂದುವರಿಯಿರಿ. ಯಜ್ಞಕಲ್ಪವನ್ನು ಮುಂದುವರಿಯುವಂತೆ ಮಾಡಿರಿ" ಪಠಿಸು ವಂತೆ ನಿರ್ದೇಶವನ್ನು ಕೊಡುತ್ತಾನೆ. ಈ ಪ್ರಾರ್ಥನೆಯಲ್ಲಿ ಯಜ್ಞವು ನ್ಯೂನತೆಯನ್ನು ಹೊಂದದೆ ದೇವತೆಗಳಲ್ಲಿಗೆ ಒಯ್ಯಲ್ಪಡಬೇಕು ಎಂಬುದೇ ಉದ್ದಿಶ್ಯ. "ಈ ಯಜ್ಞವು ಕುಂಠಿತವಾಗುವಂತೆ ಮಾಡಬೇಡಿರಿ" ಎಂಬ ಪ್ರಾರ್ಥನೆ ಯಿಂದ ಯಜ್ಞಕರ್ತನು ಕರ್ತವ್ಯಪರಾಙ್ಮುಖನಾಗದೆ ಪೂರ್ಣಕರ್ಮನಾಗಿರುವಂತೆ ಮಾಡಬೇಕೆಂದರ್ಥ. ಅಕ್ಷದಲ್ಲಿ ಉಂಟಾಗುವ ಶಬ್ದವು ಅಸುರ ಶಬ್ದವಾಗಿರುವುದರಿಂದ ರಥಚಕ್ರವು ರಥವನ್ನು ಕುಗ್ಗಿಸದೇ ಮುಂದುವರಿಸಲಿ. ಅಕ್ಷದ ಪ್ರದೇಶದಲ್ಲಿ ಉಂಟಾಗುವ ಕಿರುಗುಟ್ಟುವ ಶಬ್ದವು ಅಶುಭಸೂಚಕವಾಗುತ್ತದೆ. ಆದರೆ, ಒಂದು ವೇಳೆ ಅಸುರಸಂಬಂಧ ವಾದ ಆ ಕಿರುಗುಟ್ಟುವ ಶಬ್ದವುಂಟಾದರೆ ;—(ಇಲ್ಲಿ **ಆಸುರ್ಯಾ ವಾಕ್'** ಎಂಬುದನ್ನು ತೈತ್ತಿರೀಯ ಸಂಹಿತೆಯಲ್ಲಿ **ವಾರುಣೀ ದುರ್ವಾಕ್** ಎಂದು ವರ್ಣಿಸಿರುತ್ತೆ. ತೈತ್ತಿರೀಯ ಸಂಹಿತೆಯಲ್ಲಿರುವ ಹವಿರ್ಧಾನಸ್ತುತಿಯನ್ನು ಮುಂದೆ ವಿವರಿಸಲಾಗುತ್ತದೆ.)

ವಿತದ್ವಾಚಯೀತ್ । ಸ್ವಂ ಗೋಪತ್ಯಮಾವದತಂ ದೇವೀ ದುರ್ಯೇ ಆಯುರ್ಮಾ ನಿರ್ವಾದಿಷ್ಟಂ ಪ್ರಜಾಂ ಮಾ ನಿರ್ವಾದಿಷ್ಟಮಿತಿ ತಸ್ಯೋಹೈಷಾ ಪ್ರಾಯಶ್ಚಿತ್ತಿಃ ॥ ೧೪ ॥

ಆ ದುಷ್ಟಶಬ್ದದಿಂದ ಕೇಡುಂಟಾಗದಿರುವಂತೆ ಪ್ರಾರ್ಥಿಸಬೇಕು. "ಎಲೈ ದಿವ್ಯಾಶ್ರಯವುಳ್ಳವರೇ, ನಿಮ್ಮಷ್ಟಕ್ಕೆ ಮಾತ್ರ ಶಬ್ದಮಾಡಿಕೊಳ್ಳಿರಿ ನನ್ನ ಜೀವಘಾತವಾಗುವಂತೆಯೂ, ನನ್ನ ಸಂತತಿಚ್ಛೇದವಾಗುವಂತೆಯೂ ಮಾಡಬೇಡಿರಿ" ಎಂದು ಯಜಮಾನನಿಂದ ಪಠಿಸಲ್ಪಡಬೇಕು. ಇದೇ ಅದರ ಪರಿಹಾರಮಾರ್ಗ.

ತದಾಹುಃ । ಉತ್ತರವೇದೇಃ ಪ್ರತ್ಯಙ್ ಪ್ರಕ್ರಾಮೇತ್ತ್ರೀನ್ ವಿಕ್ರಮಾಂಸ್ತದ್ಧವಿರ್ಧಾನೇ ಸ್ಥಾಪ-ಯೇತ್ತಾ ಹವಿರ್ಧಾನಯೋರ್ಮಾತ್ರೇತಿ ನಾತ್ರೇಮಾತ್ರಾಪಿ ಯತ್ರೈವ ಸ್ವಯಂ ಮನಸಾ ಮನ್ಯೇತ ನಾಹೈವ ಸತ್ರಾತ್ಯಂತಿಕೇ ನೋ ದೂರೇ ತತ್ ಸ್ಥಾಪಯೇತ್ ॥ ೧೫ ॥

ಈ ಪ್ರಾಯಶ್ಚಿತ್ತಕರ್ಮವು ಸಫಲವಾಗಬೇಕಾದರೆ, ಉತ್ತರವೇದಿಯಿಂದ ಪಶ್ಚಿಮಾಭಿಮುಖವಾಗಿ ಮೂರು ಹೆಜ್ಜೆಗ ಳಷ್ಟು ದೂರ ಹೋಗಿ ಅಲ್ಲಿ ಹವಿರ್ಧಾನಗಳನ್ನು ನಿಲ್ಲಿಸಬೇಕು. ಇದೇ ಹವಿರ್ಧಾನಗಳ ಪರಿಮಿತಿಯು. ಆದರೆ, ಇದ ರಲ್ಲಿ ನಿಯಮಿತವಾದ ಪ್ರಮಾಣವೇನಿಲ್ಲ, ತನಗೆ ಯಾವ ಸ್ಥಾನವು ಅನುಕೂಲವಾಗಿ ತೋರುವುದೋ ಅಲ್ಲಿ ನಿಲ್ಲಿಸ ಬಹುದು. ಆದರೆ, ಆ ಸ್ಥಾನವು ಉತ್ತರವೇದಿಗೆ ಅತಿ ದೂರದಲ್ಲಾಗಲಿ ಅಥವಾ ಅತಿ ಪತ್ತಿರದಲ್ಲಾಗಲಿ ಇರಬಾರದು.

ತೇಽಭಿಮಂತ್ರಯತೇ । ಅತ್ರ ರಮೇಥಾಂ ವರ್ಷ್ಮನ್ ಪೃಥಿವ್ಯಾ ಇತಿ ವರ್ಷ್ಮ ಹ್ಯೇತತ್ಪೃಥಿವ್ಯೈ ಭವತಿ ದಿವಿ ಹ್ಯಸ್ಯಾಹವನೀಯೋ ಭವತಿ ನಭ್ಯಸ್ಯೇ ಕರೋತಿ ತದ್ಧಿ ಕ್ಷೇಮಸ್ಯ ರೂಪಂ

(ಶ. ಬ್ರಾ ೩-೫-೩ ೨೦)

"ಪೃಥ್ವಿಯ ಈ ಎತ್ತರವಾದ ಪ್ರದೇಶದಲ್ಲಿ ರಮಿಸಿರಿ" ಎಂದು ಪರಿಸಿ ಹವಿರ್ಧಾನಗಳಿಗೆ ವಂದಿಸತಕ್ಕದ್ದು. ಈ ವೇದಿಯೇ ಪೃಥ್ವಿಯಲ್ಲಿ ಅತ್ಯಂತ ಎತ್ತರವಾದ ಪ್ರದೇಶವಾಗಿರುವುದು (ಎತ್ತರವೆಂದರೆ ಶ್ರೇಷ್ಠವಾದ ಎಂದು ತಾತ್ಪರ್ಯ ವನ್ನಿಟ್ಟುಕೊಳ್ಳಬೇಕು) ಮತ್ತು ಆ ಹವಿರ್ಧಾನಗಳನ್ನು ಅವುಗಳ ನಾಭಿಯನ್ನಾಶ್ರಯಿಸಿ ನಿಲ್ಲುವಂತೆ ಮಾಡುತ್ತಾನೆ. ನಾಭಿಯೇ ಸುಸ್ಥಿತಿಗೆ ಆಧಾರವು.

ಅಥೋತ್ತರೇಣ ಪರ್ಯೇತ್ಯಾಧ್ವರ್ಯುಃ । ದಕ್ಷಿಣಗ್ಂ ಹವಿರ್ಧಾನಮುಪಸ್ತಭ್ನಾತಿ ವಿಷ್ಣೋರ್ನುಕಂ ವೀರ್ಯಾಣಿ ಪ್ರವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಗ್ಂಸಿ । ಯೋ ಅಸ್ಕಭಾಯದುತ್ತರಗ್ಂ ಸಧಸ್ಥಂ ವಿಚಕ್ರಮಾಣಸ್ತ್ರೇಧೋರುಗಾಯೋ ವಿಷ್ಣವೇ ತ್ವೇತಿ ಮೇಧೀಮುಪನಿಹಂತೀತರತ ಸ್ತತೋ ಯದು ಚ ಮಾನುಷೇ ॥೨೧॥ (ಶ ಬ್ರಾ ೩-೫-೩-೨೧)

ಅನಂತರ ಅಧ್ವರ್ಯುವು ಉತ್ತರದಿಕ್ಕಿನಿಂದ ಬಳಸಿ ಹೋಗಿ ದಕ್ಷಿಣದಿಕ್ಕಿನ ಹವಿರ್ಧಾನಕ್ಕೆ ಆಸರೆಯನ್ನು ಕೊಟ್ಟು ನಿಲ್ಲಿಸುತ್ತಾನೆ. ಅದು ಸುಸ್ಥಿರವಾಗಿ ನಿಲ್ಲಲು "ಪೃಥಿವ್ಯಾದಿ ಲೋಕಗಳನ್ನೆಲ್ಲಾ ವಿಶೇಷರೀತಿಯಿಂದ ನಿರ್ಮಿಸಿದವನೂ, ತಾನು ಸೃಷ್ಟಿಸಿದ ಲೋಕಗಳಲ್ಲಿ ವಿಧವಿಧವಾಗಿ ಸಂಚರಿಸುತ್ತಲೂ, ಅತಿ ವಿಸ್ತೃತವಾದ ಅಂತರಿಕ್ಷಲೋಕವನ್ನು ನಿರ್ಮಿಸಿ ಸಕಲಲೋಕಗಳನ್ನು ಸ್ಥಿರವಾಗಿ ಸ್ಥಾಪಿಸಿದವನೂ, ಸರ್ವವ್ಯಾಪಕನೂ ಆದ ವಿಷ್ಣುವಿನ ವೀರ್ಯಕರ್ಮಗಳನ್ನು ನಾನು ಪಠಿಸುತ್ತೇನೆ" ಎಂದು ಪಠಿಸಿ (೧. ೧೫೪. ೧) ಅದನ್ನು ಸ್ಥಿರವಾಗಿ ನಿಲ್ಲಿಸುತ್ತಾನೆ. ಸಾಧಾರಣವಾದ ಕಾಲದಲ್ಲಿ ಸ್ಥಾಪಿಸುವ ಕ್ರಮಕ್ಕಿಂತಲೂ ವಿಶೇಷರೀತಿಯಲ್ಲ ಅದನ್ನು ಸ್ಥಾಪಿಸಲಾಗುತ್ತದೆ. ವಿಷ್ಣುವನ್ನು ಉದ್ದೇಶಿಸಿಯೇ ಈ ಸ್ಥಾಪನೆಯು ಭದ್ರಪಡಿಸಲ್ಪಡುತ್ತದೆ

ಅಥ ಪ್ರತಿಪ್ರಸ್ಥಾತಾ । ಉತ್ತರಗ್ಂ ಹವಿರ್ಧಾನಮುಪಸ್ತಭ್ನಾತಿ । ದಿವೋ ವಾ ವಿಷ್ಣವುತ ವಾ ಪೃಥಿವ್ಯಾ ಮಹೋ ವಾ ವಿಷ್ಣವುರೋರಂತರಿಕ್ಷಾತ್ । ಉಭಾ ಪಿ ಹಸ್ತಾ ವಸುನಾ ಪೃಣಸ್ವಾ ಪ್ರಯಚ್ಛ ದಕ್ಷಿಣಾದೋತ ಸವ್ಯಾದ್ವಿಷ್ಣವೇ ತ್ವೇತಿ ಮೇಧೀಮುಪನಿಹಂತೀತರತಸ್ತತೋ ಯದು ಚ ಮಾನುಷೇ ತದ್ಯದ್ವೈಷ್ಣವೈರ್ಯಜುರ್ಭಿರುಪಚರಂತಿ ವೈಷ್ಣವಗ್ಂ ಹಿ ಹವಿರ್ಧಾನಂ ।

ಅನಂತರ ಅಧ್ವರ್ಯುವಿನ ಸಹಾಯಕನಾದ ಪ್ರತಿಪ್ರಸ್ಥಾತೃವು ಉತ್ತರದಿಕ್ಕಿನ ಹವಿರ್ಧಾನವನ್ನು ಸ್ಥಾಪಿಸುತ್ತಾನೆ "ಎಲೈ ವಿಷ್ಣುವೇ, ದ್ಯುಲೋಕದಿಂದಾಗಲಿ, ಪೃಥ್ವಿಯಿಂದಾಗಲೀ ಅಥವಾ ಅತ್ಯಂತ ವಿಸ್ತೃತವಾದ ಅಂತರಿಕ್ಷದಿಂದಾಗಲಿ ನಿನ್ನ ಎರಡು ಹಸ್ತಗಳನ್ನು ಸಂಪತ್ತಿನಿಂದ ತುಂಬಿಕೊಂಡು ಬಂದು ನಮ್ಮ ಎಡಬಲ ವಾರ್ಷ್ಣೇಯರಡುಕಡೆಗಳಲ್ಲಿಯೂ ನಮ್ಮನ್ನು ಸಂಪತ್ತಿನಿಂದ ಆವರಿಸುವಂತೆ ಮಾಡು" ಎಂದು ವಿಷ್ಣುವನ್ನು ಪ್ರಶಂಸಿಸಿ ಸಾಧಾರಣವಾದ ಕಾಲದಲ್ಲಿ ಸ್ಥಾಪಿಸುವುದಕ್ಕಿಂತಲೂ ಬೇರೆ ಸ್ಥಾನದಲ್ಲಿ ಅದನ್ನು ಸ್ಥಾಪಿಸುತ್ತಾನೆ. ಹವಿರ್ಧಾನವು ವಿಷ್ಣುಸಂಬಂಧಿಯಾದುದರಿಂದಲೇ ವಿಷ್ಣುವಿನ ಪ್ರಶಂಸೆಯು ಅತ್ಯವಶ್ಯವಾಗಿರುತ್ತದೆ.

ಅಥ ಮಧ್ಯಮಂ ಛದಿರುಪಸ್ಪೃಶ್ಯ ವಾಚಯತಿ । ಪ್ರತದ್ವಿಷ್ಣುಃ ಸ್ತವತೇ ವೀರ್ಯೇಣ ಮೃಗೋ ನ ಭೀಮಃ ಕುಚರೋ ಗಿರಿಷ್ಠಾಃ । ಯಸ್ಯೋರುಷು ತ್ರಿಷು ವಿಕ್ರಮಣೇಷ್ವಧಿಕ್ಷಿಯಂತಿ ಭುವನಾನಿ ವಿಶ್ವಾ । ಇತೀದಗ್ಂ ಹ್ಯೇವಾಸ್ಯೈತಚ್ಛೀರ್ಷಕಪಾಲಂ ಯದಿದಮುಪರಿಷ್ಟಾದಧೀವ ಹ್ಯೇತತ್ಕ್ಷಿಯಂತ್ಯನ್ಯಾನಿ ಶೀರ್ಷಕಪಾಲಾನಿ ತಸ್ಮಾದಾಹಾಧಿಕ್ಷಿಯಂತೀತಿ ॥

(ಶ ಬ್ರಾ. ೩-೫-೩-೨೩)

ಮಧ್ಯಭಾಗದಲ್ಲಿ ಹರಡಿರುವ ಜೊಂಡಿನ ಚಾಪೆಯನ್ನು ಮುಚ್ಚುತ್ತಾ "ಅತ್ಯಂತ ವಿಸ್ತೃತವಾದವೂ, ಮೂರು ಸಂಖ್ಯೆಗಳುಳ್ಳವೂ ಆದ ಯಾವ ವಿಷ್ಣುವಿನ ಪಾದಗಳ ಪ್ರಕ್ಷೇಪಗಳಲ್ಲಿ ಸಕಲ ಭೂತಗಳೂ ನೆಲೆಸಿ ನಿಂತಿವೆಯೋ ಮತ್ತು ಯಾವ ವಿಷ್ಣುವು ಸಿಂಹಾದಿ ವನಮೃಗಗಳಂತೆ ಶತ್ರುಗಳಿಗೆ ಭಯಂಕರನೂ, ಶತ್ರುಗಳನ್ನು ಅತಿಯಾಗಿ ಹಿಂಸಿಸುವವನೂ ಮತ್ತು

ರ್ವತಗಳ ಎತ್ತರವಾದ ಪ್ರದೇಶದಲ್ಲಿರುವವನೂ ಆಗಿರುವನೋ ಆ ವಿಷ್ಣುವು ತನ್ನ ವೀರ್ಯಕರ್ಮಗಳೊಡನೆ ವಿಶೇಷವಾಗಿ ಹೊಗಳಲ್ಪಡುತ್ತಾನೆ" (ಋ. ಸಂ. ೧-೧೫೪-೨) ಎಂಬ ವಿಷ್ಣುಪ್ರಶಂಸೆಯನ್ನು ಪರಿಸುತ್ತಾನೆ. ಈ ಜೊಂಡಿನ ಚಾಪೆಯೇ ಹವಿರ್ಧಾನದ (ವಿಷ್ಣುವಿನ) ಶೀರ್ಷದ ಕಪಾಲರೂಪಿಯಾಗಿರುತ್ತದೆ. ಉಳಿದ ಕಪಾಲಗಳೆಲ್ಲವೂ ಇದನ್ನೇ ಆಶ್ರಯಿಸಿರುತ್ತವೆ. ಆದುದರಿಂದಲೇ ಉತ್ತಮವಾದ ಪ್ರಶಂಸೆಯನ್ನು ಪರಿಸುತ್ತಾನೆ.

ಅಥ ರರಾಟ್ಯಾಮುಪಸ್ಪೃಶ್ಯ ವಾಚಯತಿ । ವಿಷ್ಣೋ ರರಾಟಮಸೀತಿ ಲಲಾಟಗ್ಂ ಹ್ಯೇವಾಸ್ಯೈತ-
ದಸ್ಯೋಚ್ಛ್ರಾಯ್ಯಾ ಉಪಸ್ಪೃಶ್ಯ ವಾಚಯತಿ ವಿಷ್ಣೋಃ ಶ್ನಪ್ತ್ರೇ ಸ್ಥ ಇತಿ ಸ್ರಕ್ವೇ ಹ್ಯೇವಾ
ಸ್ಯೈತೇऽಥ ಯದಿದಂ ಪಶ್ಚಾಚ್ಛ್ಚದಿರ್ಭವತೀದಂ .... ಯದಿ ಪಶ್ಚಾತ್ ॥

ಅನಂತರ ಮುಂಭಾಗದ ಬಂಧನವನ್ನು ಸ್ಪರ್ಶಿಸುತ್ತ, "ಎಲೈ ಬಂಧನವೇ, ನೀನು ವಿಷ್ಣುವಿನ ಅಲಂಕಾರರೂಪವಾದ ಶೀರ್ಷದ ಪಟ್ಟಿಯಾಗಿದ್ದೀಯೆ." ಎಂದು ಪ್ರಶಂಸಿಸುತ್ತಾನೆ. ಅನಂತರ, ನೇರವಾದ ಮೇಲ್ಪಟ್ಟುಗಳನ್ನು ಸ್ಪರ್ಶಿಸುತ್ತ "ನೀವು ವಿಷ್ಣುವಿನ ದವಡೆ ಪ್ರದೇಶಗಳಾಗಿದ್ದೀರಿ" ಎಂದು ಪ್ರಶಂಸಿಸುತ್ತಾನೆ. ಹಿಂಭಾಗದಲ್ಲಿರುವ ಛದಿಯು ಶೀರ್ಷಕಪಾಲವಾಗಿರುತ್ತದೆ.

ಅಥ ಲಸ್ಪೂಜನ್ಯಾ ಸ್ಪಂದ್ಯಯೋ ಪ್ರಸೀವ್ಯತಿ । ವಿಷ್ಣೋಃ ಸ್ಯೂರಸೀತ್ಯಥ ಗ್ರಂಥಿಂ ಕರೋತಿ
ವಿಷ್ಣೋರ್ಧ್ರುವೋऽಸೀತಿ ನೇದ್ಯವಪದ್ಯಾತಾ ಇತಿ ತಂ ಪ್ರಕೃತೇ ಕರ್ಮನ್ವಿಷ್ಯತಿ ತತೋ
ಹ್ಯಾಧ್ವರ್ಯುಂ ವಾ ಯಜಮಾನಂ ವಾ ಗ್ರಾಹೋ ನ ವಿಂದತಿ ತನ್ನಿಷ್ಕಿತಮಭಿಮೃಶತಿ ವೈಷ್ಣವ-
ಮಸೀತಿ ವೈಷ್ಣವಗ್ಂಹಿ ಹವಿರ್ಧಾನಂ ॥ (ಶ. ಬ್ರಾ. ೩-೫-೩-೨೫)

"ನೀನು ವಿಷ್ಣುವಿನ ತಂತುವಾಯನು" ಎಂದು ಸ್ತುತಿಸಿ ಸೂಜಿಯಲ್ಲಿ ನೂಲನ್ನು ಸೇರಿಸಿ ಮೇಲ್ಭಾಗದ ಕಟ್ಟನ್ನು ಹೊಲೆಯುತ್ತಾನೆ. ಅದು ಕೆಳಕ್ಕೆ ಬೀಳದಂತೆ ಒಂದು ಗ್ರಂಥಿಯಿಂದ ಅದನ್ನು ಬಿಗಿದು ಕಟ್ಟಿ "ನೀನು ವಿಷ್ಣುವಿನ ಸ್ಥಿರವಾದ ಗ್ರಂಥಿ" ಎಂದು ಸ್ತುತಿಸುತ್ತಾನೆ. ಕರ್ಮವು ಪರ್ಯವಸಾನವನ್ನು ಹೊಂದಿದೊಡನೆಯೇ ಆ ಗ್ರಂಥಿಯನ್ನು ಬಿಚ್ಚುತ್ತಾನೆ. ಈ ಕಾರಣದಿಂದ ಅಧ್ವರ್ಯುವನ್ನಾಗಲಿ ಯಜಮಾನನನ್ನಾಗಲಿ ಯಾವ ಆಲಸ್ಯವೂ ಮುಟ್ಟುವುದಿಲ್ಲ. ಹವಿರ್ಧಾನವೇ ವಿಷ್ಣುಸಂಬಂಧಿಯಾದುದರಿಂದ "ನೀನು ವಿಷ್ಣುವಿನ ಆತ್ಮಸಂಬಂಧಿಯಾಗಿದ್ದೀಯೆ" ಎಂದು ಅದನ್ನು ಪ್ರಶಂಸಿಸುತ್ತಾನೆ.

ಈ ಹವಿರ್ಧಾನಸ್ತುತಿಯೂ ವರ್ಣನವೂ ತೈತ್ತಿರೀಯ ಸಂಹಿತೆಯಲ್ಲಿಯೂ ಸಹ ಈ ಅಂಶಗಳನ್ನೇ ಪ್ರಶಂಸಿಸಿದ್ದರೂ ಸಹ ಅಲ್ಲಿಯ ವಿವರಣೆಯಲ್ಲಿ ಕೆಲವು ವ್ಯತ್ಯಾಸಗಳಿರುವುದರಿಂದ ಅಲ್ಲಿಯ ಭಾಗಗಳನ್ನು ಇಲ್ಲಿ ಉದಾಹರಿಸಿದೆ ತೈತ್ತಿರಿಯ ಸಂಹಿತೆಯಲ್ಲಿ ಹವಿರ್ಧಾನದ ಪ್ರಶಂಸೆಯು ಈ ರೀತಿಯಿರುತ್ತದೆ—

ಬದ್ವಮವ ಸ್ಯತಿ ವರುಣಪಾಶಾದೇವೈನೇ ಮುಂಚತಿ ಪ್ರಣೇನೇಕ್ತ ಮೇಧ್ಯೇ ಏವೈನೇ ಕರೋತಿ
ಸಾವಿತ್ರಿಯರ್ಚಾ ಹುತ್ವಾ ಹವಿರ್ಧಾನೇ ಪ್ರ ವರ್ತಯತಿ ಸವಿತೃಪ್ರಸೂತ ಏವೈನೇ ಪ್ರ ವರ್ತ
ಯತಿ ವರುಣೋ ವಾ ಏಷ ದುರ್ವಾಗುಭಯತೋ ಬದ್ಧೋ ಯದಪ್ಪಸ್ಸ ಯದುತ್ಪರ್ಜೇದ್ಯ-
ಜಮಾನಸ್ಯ ಗೃಹಾನಭ್ಯುತ್ಪರ್ಜೇತ್ಸುವಾಗ್ದೇವ ದುರ್ವಾಗ್ಂಅವದೇತ್ಯಾಹ ಗೃಹಾ ವೈ ದುರ್ವಾ-
ಶ್ಯಾಂತ್ಯೈ । ಪತ್ನೀ ಉಪಾನಕ್ತಿ ॥ (ತೈ. ಸಂ. ೬-೨-೯-೧)

ಬಂಧನವನ್ನು ಬಿಡಿಸಿದೊಡನೆಯೇ ವರುಣಪಾಶವನ್ನು ಬಿಡಿಸಿದಂತೆಯಾಗಿ ಹವಿರ್ಧಾನಗಳು ಯಜ್ಞಕ್ರಿಯೆಯಲ್ಲಿ ಭಾಗವನ್ನು ವಹಿಸಲು ಯೋಗ್ಯವಾಗುವುವು. ಸವಿತೃದೇವತೆಯನ್ನುದ್ದೇಶಿಸಿದ ಮಂತ್ರವನ್ನು ಪಠಿಸಿ ಆಹುತಿಯನ್ನರ್ಪಿಸಿದ ನಂತರ ಹವಿರ್ಧಾನಗಳನ್ನು ಮುಂದಕ್ಕೆ ತರುತ್ತಾನೆ. ಸವಿತೃವಿನ ಪ್ರೇರಣವೇ ಈ ರೀತಿ ಹವಿರ್ಧಾನಗಳನ್ನು ಮುಂದಕ್ಕೆ ತರಲು ಸಹಾಯಕವಾಗುತ್ತದೆ ಎರಡು ಕಡಗಳಲ್ಲಿಯೂ ಸೇರಿಕೊಂಡಿರುವ ಇರಚಿಪಟ್ಟಿಯು ವರುಣಸಂಬಂಧಿಯಾದುದು. ಅದು ಕಿರುಗುಟ್ಟುವ ದುಷ್ಟಶಬ್ದವನ್ನು ಮಾಡಬಾರದು ಒಂದು ವೇಳೆ ಆ ಶಬ್ದವನ್ನು ಮಾಡಿದರೆ ಯಜಮಾನನ ಗೃಹಕ್ಕೆ ತೊಂದರೆಯಾಗುತ್ತದೆ. ''ಗೃಹಾನ್ ಅಭಿಲಕ್ಷ್ಯ ಶಬ್ದಂ ಕರೋತಿ । ತೇಷ್ವರಿಷ್ಟಂ ಕರೋತಿ । ಯಜಮಾನನ ಗೃಹಗಳಿಗೆ ತೊಂದರೆಯುಂಟಾಗುವಂತೆ ಮಾಡುತ್ತವೆ ಎಲ್ಲಿ ಪಾಗ್ವೇವತೆಯೇ, ನಮ್ಮ ಗೃಹಗಳಿಗೆ ಒಳ್ಳೆಯದನ್ನು ಮಾಡಲು ಯೋಗ್ಯವಾದ ಉತ್ತಮವಾದ ಶಬ್ದವನ್ನು ಮಾಡು'' ಎಂದು ಪ್ರಾರ್ಥಿಸುತ್ತಾನೆ. ಆಗ ಅವನ ಪತ್ನಿಯು ಅವಕ್ಕೆ ಆಜ್ಯಲೇಪನವನ್ನು ಮಾಡುತ್ತಾಳೆ.

ಪತ್ನೀ ಹಿ ಸರ್ವಸ್ಯ ಮಿತ್ರಂ ಮಿತ್ರತ್ವಾಯ ಯದ್ವೈ ಪತ್ನೀ ಯಜ್ಞಸ್ಯ ಕರೋತಿ ಮಿಥುನಂ ತದಥೋ ಪತ್ನಿಯಾ ಏವೈಷ ಯಜ್ಞಸ್ಯಾನ್ವಾರಂಭೋನವಚ್ಛೈತ್ಯೈ ವರ್ತ್ಮನಾ ವಾ ಅನ್ವಿಷ್ಯ ಯಜ್ಞಗ್ಂರಕ್ಷಾಗ್ಂಸಿ ಜಿಘಾಗ್ಂಸಂತಿ ವೈಷ್ಣವೀಭ್ಯಾಮೃಗಭ್ಯಂ ವರ್ತ್ಮನೋರ್ಜುಹೋತಿ ಯಜ್ಞೋ ವೈ ವಿಷ್ಣುರ್ಯಜ್ಞಾದೇವ ರಕ್ಷಾಗ್ಂಸ್ಯಪಹಂತಿ ಯದಧ್ವರ್ಯುರನಗ್ನಾವಾಹುತಿಂ ಜುಹುಯಾದಂಧೋಽಧ್ವರ್ಯುಸ್ಯಾದ್ರಕ್ಷಾಗ್ಂಸಿ ಯಜ್ಞಗ್ಂಹನ್ಯುಃ ॥

ಯಜಮಾನಪತ್ನಿಯು ಯಜ್ಞಕರ್ಮದಲ್ಲಿ ಭಾಗವಹಿಸಿರುವ ಸಕಲರಿಗೂ ಮಿತ್ರಭೂತಳು. ಪತ್ನಿಯು ಭಾಗವಹಿಸುವುದರಿಂದಲೇ ಯಜ್ಞಕ್ಕೆ ಅನುಕೂಲವಾದ ಮಿಥುನತ್ವವು ಪ್ರಾಪ್ತವಾಗುತ್ತದೆ. 'ಯಜ್ಞಸ್ಯ ಸಂತತ್ಯೈ ಪತ್ನ್ಯನ್ವಾರಭತೇ' (ತೈ. ಸಂ. ೬-೨-೧-೧) ಇತ್ಯಾದಿ ವಾಕ್ಯಗಳಲ್ಲಿ ವರ್ಣಿತವಾಗಿರುವಂತೆ ಯಜ್ಞವು ನಿರ್ವಿಘ್ನವಾಗಿ ನೆರವೇರಲು ಅವಳು ಯಜ್ಞಸೂತ್ರವನ್ನು ಹಿಡಿದಿರುವಳು. ಪ್ರಕೃತದಲ್ಲಿ ಅವಳೇ ರಥದ ಇರಚಿಯ ಶಬ್ದವನ್ನು ಆಜ್ಯಲೇಪನದಿಂದ ನಿಲ್ಲಿಸುವವಳಾಗಿದ್ದಾಳೆ. ಅದಿಲ್ಲದಿದ್ದರೆ, ರಾಕ್ಷಸರು ಆ ಶಬ್ದವನ್ನನುಸರಿಸಿ ಬಂದು ಯಜ್ಞಕ್ಕೆ ವಿಘ್ನವನ್ನುಂಟುಮಾಡುತ್ತಿದ್ದರು. ಇದನ್ನು ತಪ್ಪಿಸಲು ಯಜಮಾನನು ಇನ್ನೂ ಒಂದು ಪರಿಹಾರಮಾರ್ಗವನ್ನನುಸರಿಸುತ್ತಾನೆ. ವಿಷ್ಣುಪ್ರಶಂಸಕವಾದ ಮಂತ್ರಗಳನ್ನು ಪಠಿಸಿ ಆಹುತಿಯನ್ನರ್ಪಿಸುವನು. ಯಜ್ಞವೇ ವಿಷ್ಣುರೂಪಿಯು. ಆದುದರಿಂದ ಈ ವಿಷ್ಣುಮಂತ್ರಪಠನದ ಸಹಾಯದಿಂದ ರಾಕ್ಷಸರನ್ನು ಓಡಿಸುತ್ತಾನೆ. ಅಧ್ವರ್ಯುವು ಅಗ್ನಿರಹಿತವಾದ ಸ್ಥಾನದಲ್ಲಿ ಆಹುತಿಯನ್ನರ್ಪಿಸಿದ್ದೇ ಆದರೆ ಆಗ ಅವನು ಅಂಧನಾಗುತ್ತಾನೆ. ಆಗಲೂ ಸಹ ರಾಕ್ಷಸರು ಬಂದು ಯಜ್ಞಕ್ಕೆ ಹಿಂಸೆಯನ್ನುಂಟುಮಾಡಬಹುದು ಆದುದರಿಂದ; —

ಹಿರಣ್ಮಯುಪಾಸ್ಯ ಜುಹೋತ್ಯಗ್ನಿವತ್ಯೇವ ಜುಹೋತಿ ನಾಂಧೋಧ್ವರ್ಯುರ್ಭವತಿ ನ ಯಜ್ಞಗ್ಂರಕ್ಷಾಗ್ಂಸಿ ಘ್ನಂತಿ ಪ್ರಾಚೀ ಪ್ರೇತಮಧ್ವರಂ ಕಲ್ಪಯಂತೀ ಇತ್ಯಾಹ ಸುವರ್ಗಮೇವೈನೇ ಲೋಕಂ ಗಮಯತ್ಯತ್ರ ರಮೇಥಾಂ ವರ್ಷ್ಮನ್ ಪೃಥಿವ್ಯಾ ಇತ್ಯಾಹ ವರ್ಷ್ಮ ಹ್ಯೇತತ್ಪೃಥಿವ್ಯಾ ಯದ್ದೇವಯಜನಗ್ಂ ಶಿರೋ ವಾ ಏತದ್ಯಜ್ಞಸ್ಯ ಯದ್ಧವಿರ್ಧಾನಂ ದಿವೋ ವಾ ವಿಷ್ಣವುತ ವಾ ಪೃಥಿವ್ಯಾ ಇತ್ಯಾಶೀರ್ಷದಯಚ್ಛಾ ದಕ್ಷಿಣಸ್ಯ ಹವಿರ್ಧಾನಸ್ಯ ವೇಧೀ ನಿ ಹಂತಿ ಶೀರ್ಷತ ಏವ ಯಜ್ಞಸ್ಯ ಯಜಮಾನ ಆತಿಷ್ಠೋಽವರುಂಧೇ ॥

ರಥಮಾರ್ಗದಲ್ಲಿ ಅಗ್ನಿಯನ್ನು ಪ್ರತಿಬಿಂಬಿಸಲು ಅಲ್ಲಿ ಆಹುತ್ಯರ್ಥಣಕ್ಕೆ ಮೊದಲು ಸುವರ್ಣನಾಣ್ಯವನ್ನು ಹಾಕುತ್ತಾನೆ. ಆಗ ಅವನ ಆಹುತಿಯು ಅಗ್ನಿಯಲ್ಲಿ ಅರ್ಪಿಸಿದಂತೆಯೇ ಆಗುತ್ತದೆ. ಅಧ್ವರ್ಯುವು ಅಂಧನೂ ಆಗುವುದಿಲ್ಲ. ಯಜ್ಞಕ್ಕೂ ರಾಕ್ಷಸರ ಹಿಂಸೆಯಿರುವುದಿಲ್ಲ. ಆಗ ಹವಿರ್ಧಾನಗಳನ್ನುದ್ದೇಶಿಸಿ " ನೀವು ಯಜ್ಞಾಭಿಮುಖವಾಗಿ ಮುಂದುವರೆಯಿರಿ." ಎಂದು ಪ್ರಾರ್ಥಿಸಿ ಅವು ಸ್ವರ್ಗಕ್ಕೆ ಹೋಗುವಂತೆ ಮಾಡುತ್ತಾನೆ. ಯಜ್ಞವೇದಿಯೇ ಅತಿ ಎತ್ತರವಾದ ಸ್ಥಾನವಾದುದರಿಂದ ಆ ಯಜ್ಞವೇದಿಯಲ್ಲಿ ಸ್ಥಾಪಿತವಾಗಿರುವ ಹವಿರ್ಧಾನಗಳನ್ನುದ್ದೇಶಿಸಿ " ಎತ್ತರವಾದ ಪ್ರದೇಶದಲ್ಲಿ ರಮಿಸಿರಿ " ಎಂದು ಪ್ರಾರ್ಥಿಸುತ್ತಾನೆ.

ಈ ಹವಿರ್ಧಾನವೇ ಯಜ್ಞಶಿರಸ್ಸು. " **ದಿವೋ ವಾ ವಿಷ್ಣೋ** " ಎಂಬ ಮಂತ್ರವನ್ನು ಪಠಿಸಿ ದಕ್ಷಿಣ ದಿಗ್ಭಾಗದ ಹವಿರ್ಧಾನವನ್ನು ಸ್ಥಾಪಿಸುತ್ತಾನೆ ಆದುದರಿಂದಲೇ ಯಜಮಾನನು ಯಜ್ಞಾರಂಭದಲ್ಲಿಯೇ ಆಶೀರ್ವಚನವನ್ನು ಪಡೆಯುತ್ತಾನೆ

> **ದಂಡೋ ವಾ ಔಪರಸ್ಪೃತೀಯಸ್ಯ ಹವಿರ್ಧಾನಸ್ಯ ವಷಟ್ಕಾರೇಣಾಕ್ಷಮಚ್ಛಿನದ್ಯತ್ತೃತೀಯಂ ಛದಿರ್ಹವಿರ್ಧಾನಯೋರುದಾಹ್ರಿಯತೇ ತೃತೀಯಸ್ಯ ಹವಿರ್ಧಾನಸ್ಯಾವರುಧ್ಯೈ ಶಿರೋ ವಾ ಏತದ್ಯಜ್ಞಸ್ಯ ಯದ್ಧವಿರ್ಧಾನಂ ವಿಷ್ಣೋ ರರಾಟಮಸಿ ವಿಷ್ಣೋಃ ಪೃಷ್ಠಮಸೀತ್ಯಾಹ ತಸ್ಮಾದೇತಾವದ್ಧಾ ಶಿರೋ ವಿಷ್ಯೂತಂ ವಿಷ್ಣೋಸ್ಯೂರಸಿ ವಿಷ್ಣೋರ್ಧ್ರುವಮಸೀತ್ಯಾಹ ವೈಷ್ಣವಗ್ಂಹಿ ದೇವತಯಾ ಹವಿರ್ಧಾನಂ ಯಂ ಪ್ರಥಮಂ ಗ್ರಂಥಿಂ ಗ್ರಥ್ನೀಯಾದ್ಯತ್ತಂ ನ ವಿಸ್ರಗ್ಂಸಯೇದಮೇಹೇನಾಥ್ವರ್ಯುಃ ಪ್ರ ಮೀಯೇತ ತಸ್ಮಾತ್ಸ ವಿಸ್ರಸ್ಯಃ ॥**
>
> (ತೈ. ಸಂ. ೬-೨-೬ ೬)

ವಷಟ್ಕಾರ ಪಠನದಿಂದ ಉಪರವಂಶಸ್ಥನಾದ ದಂಡನು ಮೂರನೆಯ ಹವಿರ್ಧಾನದ ಅಕ್ಷವನ್ನು ಮುರಿದನು ಆದುದರಿಂದ, ಪ್ರಕೃತದಲ್ಲಿ ಹವಿರ್ಧಾನದ ಮೇಲೆ ಹೊದ್ದಿಸಿರುವ ಮೂರನೆಯ ಹೊದ್ದಿಕೆಯೇ ಮೂರನೆಯ ಹವಿರ್ಧಾನದ ಪ್ರತಿನಿಧಿಯಾಗಿರುತ್ತದೆ. ಹವಿರ್ಧಾನವೇ ಯಜ್ಞದ ಶಿರಸ್ಸು ಎಲೈ ಹವಿರ್ಧಾನವೇ ನೀನೇ ವಿಷ್ಣುವಿನ ಲಲಾಟವು, ನೀನೇ ವಿಷ್ಣುವಿನ ಪೃಷ್ಠಭಾಗವು, ಎಂದು ಅದನ್ನು ಪ್ರಶಂಸಿಸುತ್ತಾನೆ. ಆದುದರಿಂದಲೇ ಈ ಶಿರಸ್ಸು ಅನೇಕ ಸಲ ವಿಭಕ್ತವಾಗುತ್ತವೆ ನೀನೇ ವಿಷ್ಣುವಿನ ತಂತುವಾಗಿರುವೆ. ನೀನೇ ವಿಷ್ಣುವಿನ ಶಾಶ್ವತವಾದ ಸ್ಥಿತಿಯೂ ಆಗಿರುವೆ, ಎಂದೂ ಸಹ ಪ್ರಶಂಸಿಸಲ್ಪಡುತ್ತದೆ. ಈ ಹವಿರ್ಧಾನವು ಪೂರ್ಣವಾಗಿ ವಿಷ್ಣುದೇವತಾಕವಾಗಿಯೇ ಇರುತ್ತದೆ. ಕೊನೆಯಲ್ಲಿ ಗ್ರಂಥಿ ವಿಸ್ರಂಸನವು. (ಬಿಚ್ಚುವುದು) ಮೊದಲು ಕಟ್ಟಿದ ಗ್ರಂಥಿಯನ್ನು ಬಿಚ್ಚದಿದ್ದರೆ, ಅಧ್ವರ್ಯುವಿಗೆ ಮೂತ್ರಕೋಶವು ಕಟ್ಟಿ ಅವನು ನಾಶವಾದಾನು. ಆದುದರಿಂದ ಈ ಗ್ರಂಥಿವಿಸ್ರಂಸನವು ಅತ್ಯವಶ್ಯವಾಗಿರುವುದು ಇತ್ಯಾದಿಯಾಗಿ ಹವಿರ್ಧಾನದ ಪ್ರಶಂಸೆಯಿರುತ್ತದೆ. ಇದೇ ಹವಿರ್ಧಾನ ಶಕಟಗಳ ನಿಜವಾದ ಸ್ವರೂಪವನ್ನೂ ಅವುಗಳ ಮಾಹಾತ್ಮ್ಯವನ್ನೂ ಸಹ ಐತರೇಯಬ್ರಾಹ್ಮಣದಲ್ಲಿ ಈರೀತಿ ವರ್ಣಿಸಿದೆ (ಐ.ಬ್ರಾ. ೧-೨೩). ಅದನ್ನು ಪ್ರಶಂಸಿಸುವ ಮಂತ್ರ ಪಠನ ಕ್ರಮವನ್ನು ನಿರ್ದೇಶಿಸಿದೆ.

ಹವಿರ್ಧಾನಾಭ್ಯಾಂ ಪ್ರೋಹ್ಯಮಾಣಾಭ್ಯಾಮನುಬ್ರೂಹೀತ್ಯಾಹಾಧ್ವರ್ಯುಃ ।

ಯಜ್ಞಭೂಮಿಗೆ ತರಲ್ಪಡಬೇಕಾದ ಹವಿರ್ಧಾನಗಳನ್ನುದ್ದೇಶಿಸಿ ಅವುಗಳ ಪ್ರಶಂಸಾತ್ಮಕವಾದ ಮಂತ್ರಗಳನ್ನು ಪಠಿಸುಎಂದು ಅಧ್ವರ್ಯುವು ಹೋತೃವಿಗೆ ತಿಳಿಸುತ್ತಾನೆ. ಅವುಗಳಲ್ಲಿ ಮೊದಲನೆಯದಾಗಿ,

ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿರಿತ್ಯಾಹ (ಐ ಬ್ರಾ. ೧-೨೯)

ಎಲೈ ಹವಿರ್ಧಾನಗಳೇ, ಅತ್ಯಂತ ಪ್ರಾಚೀನವಾದ ಮಂತ್ರಗಳನ್ನು ಪಠಿಸಿ ನಿಮ್ಮನ್ನು ಹವಿರಾದಿಗಳೊಡನ ಯೋಜಿಸುತ್ತೀನೆ ಎಂದು ಹೋತೃವು ಪ್ರಥಮತಃ ಈ ಮಂತ್ರವನ್ನು ಪಠಿಸುತ್ತಾನೆ. ಈ ಮಂತ್ರವನ್ನು ಏತಕ್ಕೆ ಪಠಿಸಬೇಕೆಂದರೆ ,—

ಬ್ರಹ್ಮಣಾ ವಾ ಏತೇ ದೇವಾ ಅಯುಂಜತ ಯದ್ಧವಿರ್ಧಾನೇ ಬ್ರಹ್ಮಣೈವೈನೇ ಏತದ್ಯುಂಕ್ತೇ ನ ವೈ ಬ್ರಹ್ಮಣ್ವದ್ರಿಷ್ಯತಿ ॥ (ಐ. ಬ್ರಾ ೧-೨೯)

ಪೂರ್ವದಲ್ಲಿ ದೇವತೆಗಳೂ ಸಹ ಈ ಮಂತ್ರದಿಂದಲೇ ಹವಿರ್ಧಾನಗಳನ್ನು ಯೋಜಿಸಿದರು. ಆದುದರಿಂದ ಈಗಲೂ ಸಹ ಅದೇ ನ್ಯಾಯವಾಗಿದೆ. ಈ ಮಂತ್ರಶಕ್ತಿಯನ್ನು ಹೊಂದಿದವನಿಗೆ ನಾಶವಿಲ್ಲವು. ಆದುದರಿಂದ ಪ್ರಥಮತಃ ಈ ಮಂತ್ರವನ್ನು ಪಠಿಸಿ ಅನಂತರ ದ್ಯಾವಾಪೃಥಿವಿಗಳನ್ನು ಪ್ರಶಂಸಿಸುವ ಮೂಲಮಂತ್ರಗಳನ್ನು ಪಠಿಸುತ್ತಾನೆ. ಅವು ಯಾವುವೆಂದರೆ ,—

ಪ್ರೇತಾಂ ಯಜ್ಞಸ್ಯ ಶಂಭುವೇತಿ ತೃಚಂ ದ್ಯಾವಾಪೃಥಿವೀಯಮನ್ವಾಹ ।

೧) ಪ್ರೇತಾಂ ಯಜ್ಞಸ್ಯ ಶಂಭುವಾ ; ೨) ದ್ಯಾವಾ ನಃ ಪೃಥಿವೀ ಇಮಂ ; ೩) ಆವಾಮುಪಸ್ಥಮದ್ಯುಹಾ (ಋ. ಸಂ. ೨, ೪೧. ೧೯-೨೧) ಎಂಬ ಈ ಮೂರು ಮಂತ್ರಗಳು ಈ ಮಂತ್ರಗಳನ್ನು ಪಠಿಸುವಾಗ ಇನ್ನೊಂದು ಶಂಕೆಗೆ ಅವಕಾಶವಿರುತ್ತದೆ. ಅದೇನೆಂದರೆ—

ತದಾಹುರ್ಯದ್ಧವಿರ್ಧಾನಾಭ್ಯಾಂ ಪ್ರೋಹ್ಯಮಾಣಾಭ್ಯಾಮನುವಾಚಾಹಾಥ ಕಸ್ಮಾತ್ತೃಚಂ ದ್ಯಾವಾಪೃಥಿವೀಯಮನ್ವಾಹೇತಿ ದ್ಯಾವಾಪೃಥಿವೀ ವೈ ದೇವಾನಾಂ ಹವಿರ್ಧಾನೇ ಆಸ್ತಾಂ ತೇ ಉ ಏವಾದ್ಯಾಪಿ ಹವಿರ್ಧಾನೇ ತೇ ಹೀದಮಂತರೇಣ ಸರ್ವಂ ಹವಿರ್ಯದಿದಂ ಕಂ ಚ ತಸ್ಮಾತ್ತೃಚಂ ದ್ಯಾವಾಪೃಥಿವೀಯ ಮನ್ವಾಹ ॥ (ಐ. ಬ್ರಾ. ೧-೨೯)

ಯಜ್ಞಭೂಮಿಗೆ ಒಯ್ಯಲ್ಪಡುವ ಹವಿರ್ಧಾನಗಳನ್ನುದ್ದೇಶಿಸಿ ಪ್ರಶಂಸಾತ್ಮಕವಾದ ಮಂತ್ರಗಳನ್ನು ಪಠಿಸಬೇಕೆಂದಿರುವಾಗ, ಪ್ರಕೃತದಲ್ಲಿ ದ್ಯಾವಾಪೃಥಿವಿಗಳನ್ನುದ್ದೇಶಿಸಿದ ಮಂತ್ರಪಠನದ ಆವಶ್ಯಕತೆಯೇನು ಎಂಬುದೇ ಶಂಕೆ. ಆದರೆ ಆ ಶಂಕೆಗೆ ಅವಕಾಶವಿಲ್ಲ. ಹೇಗೆಂದರೆ, ದ್ಯಾವಾಪೃಥಿವಿಗಳೆರಡೂ ದೇವತೆಗಳಿಗೆ ಹಿಂದೆ ಹವಿರ್ಧಾನಗಳಾಗಿದ್ದವು. ಈಗಲೂ ಅವೇ ದೇವತೆಗಳ ಹವಿರ್ಧಾನಗಳು. ಸಕಲ ಹವಿಸ್ಸುಗಳೂ ಮತ್ತು ಉಳಿದ ಸಕಲ ವಸ್ತುಗಳೂ ಸಹ ದ್ಯಾವಾಪೃಥಿವಿಗಳೊಳಗೇ ಅಂತರ್ಗತವಾಗಿರುವುದರಿಂದ ಅವುಗಳಿಗೆ ಹವಿರ್ಧಾನಗಳೆಂಬ ಹೆಸರು ಪ್ರಸಿದ್ಧವಾಗಿದೆ. ಆದುದರಿಂದಲೇ, ಅವುಗಳನ್ನುದ್ದೇಶಿಸಿದ ಮೂರು ಮಂತ್ರಗಳನ್ನು ಪಠಿಸತಕ್ಕದ್ದು. ಅನಂತರ,

ಯಮೇ ಇವ ಯತಮಾನೇ ಯದೈತಂ ಪ್ರ ವಾಂ ಭರನ್ಮಾನುಷಾ ದೇವಯಂತಃ ।
(ಋ. ಸಂ. ೧೦-೧೩-೨)

ಎಂಬ ಐದನೆಯ ಮಂತ್ರವನ್ನು ಪಠಿಸತಕ್ಕದ್ದು. ಈ ಮಂತ್ರದಲ್ಲಿ ಪ್ರಶಂಸಿಸುವ ಗುಣಗಳಾವುವೆಂದರೆ ,—

ಮೊದಲನೆಯ ಪಾದದಲ್ಲಿ ;—

೧) ಯಮೇ ಇವ ಹ್ಯೇತೇ ಯತಮಾನೇ ಪ್ರಬಾಹುಗಿತಃ । (ಐ. ಬ್ರಾ. ೧-೨೯)

ಲೋಕದಲ್ಲಿ ಒಂದೇ ಮಾತೃವಿನ ಉದರದಲ್ಲಿ ಒಟ್ಟಿಗೆ ಜನಿಸಿದ ಅವಳಿ ಕನ್ಯೆಯರು ಯಾವ ರೀತಿ ಒಟ್ಟಿಗೆ ಇರುವರೋ ಅದರಂತೆ ಈ ಶಕಟಗಳೂ ಸಹ ಜಗದುಪಕಾರಾರ್ಥವಾಗಿ ಯಾವಾಗಲೂ ಒಟ್ಟಾಗಿಯೇ ಇರುತ್ತವೆ. ಅವಳಿ ಕನ್ಯೆಯಂತೆ ಇವೆರಡೂ ಸಹ ಒಂದನ್ನೊಂದು ಹೋಲುತ್ತ ಇಬ್ಬರಿಗೂ ಸಮಾನವಾದ ಗುಣಗಳಿಂದ ಶೋಭಿಸುತ್ತಿರುತ್ತವೆ ಯಾದ್ದರಿಂದ ಯಮೇ ಇವ ಎಂಬ ಮಂತ್ರಪರನದಿಂದ ಪ್ರಶಂಸಿಸಲ್ಪಡಬೇಕು, ಎರಡನೆಯ ಪಾದದಲ್ಲಿ;—

೨. ಪ್ರವಾಂ ಭರನ್ಮಾನುಷಾ ದೇವಯಂತಃ ಇತಿ ದೇವಯಂತೋ ಹ್ಯೇನೇ ಮಾನುಷಾಃ ಪ್ರಭರಂತಿ ।

ಎಲೈ ಹವಿರ್ಧಾನಗಳೇ, ಯಾವ ನಿಮ್ಮ ಮಾಹಾತ್ಮ್ಯದಿಂದ ಪ್ರಾಣಿಗಳಿಗೆ ಉಪಕಾರಾರ್ಥವಾಗಿ ನೀವು ಪ್ರಯತ್ನಿಸುವಿರೋ, ಅದುದುರಿಂದಲೇ, ದೇವಪೂಜಾನಿರತರಾದ ಋತ್ವಿಗ್ಯಜಮಾನರು ನಿಮ್ಮನ್ನು ಅತಿಶಯವಾದ ಭಕ್ತಿಯಿಂದ ಕೂಡಿ ಯಜ್ಞಭೂಮಿಗೆ ಬರಮಾಡಿಕೊಳ್ಳುತ್ತಾರೆ ಎಂಬ ಹವಿರ್ಧಾನಗಳ ಜಗದುಪಕಾರಸ್ವರೂಪವು ಸೂಚಿತವಾಗುತ್ತದೆ. ಮೂರನೆಯದಾಗಿ (ಉತ್ತರಾರ್ಧದಲ್ಲಿ)

೩. ಆಸೀದತಂ ಸ್ವಮು ಲೋಕಂ ವಿದಾನೇ ಸ್ವಾಸಸ್ಥೇ ಭವತಮಿಂದವೇ ನಃ ಇತಿ ಸೋಮೋ ವೈ ರಾಜೇಂದುಃ ಸೋಮಾಯೈವೈನೇ ಏತದ್ರಾಜ್ಞ ಆಸದೇ೨ಚೀಕ್ಲೃಪತ್ ॥

ಎಲೈ ಹವಿರ್ಧಾನಗಳೇ, ನೀವು ಸೋಮರಾಜನಿಗೆ ಅತ್ಯುತ್ತಮವಾದ ಆಸನಗಳಾಗಿದ್ದೀರಿ. ಆದುದರಿಂದ ನೀವು ಯಜ್ಞಭೂಮಿಯಲ್ಲಿ ನಿಮ್ಮ ಸ್ಥಾನಗಳನ್ನರಿತು ಕುಳಿತುಕೊಳ್ಳಿರಿ ಎಂದು ಪ್ರಾರ್ಥಿಸಿದೆ. ಅನಂತರ ಆರನೆಯ ಮಂತ್ರದ ಪಠನವು. ಈ ಕಾಲದಲ್ಲಿ,

ಅಧಿ ದ್ವಯೋರದಧಾ ಉಕ್ಥ್ಯಂ ೧ ವಚ ಇತಿ ದ್ವಯೋರ್ಹ್ಯೇತತ್ತೃತೀಯಂ ಛದಿರಧಿ ನಿಧೀಯತೇ । (ಐ. ಬ್ರಾ. ೧-೨೯)

ಎಂಬ ಮಂತ್ರವನ್ನು ಪಠಿಸುತ್ತಾನೆ. ಇದು ಮೂರನೆಯ ಹವಿರ್ಧಾನದ ಪ್ರಶಂಸೆಯು. ಮೂರನೆಯ ಹವಿರ್ಧಾನವೆಂದರೆ, ತತ್ಪ್ರತಿನಿಧಿರೂಪವಾದ ಛದಿಯೆಂದರ್ಥ. ಹವಿರ್ಧಾನದ ಒಳಗಡೆ ಸೋಮನನ್ನು ಪ್ರತಿಷ್ಠಾಪಿಸಲು ಹರಡುವ ಹೊದ್ದಿಕೆಗೆ ಛದಿ ಯೆಂದು ಹೆಸರು. ಇಂತಹ ಎರಡು ಛದಿಗಳನ್ನು ಸಹ ಎರಡು ಹವಿರ್ಧಾನಗಳಲ್ಲಿಯೂ ಹರಡಿ ಅವುಗಳ ಮೇಲೆ ಮೂರನೆಯ ಛದಿಯನ್ನು ಹೊದ್ದಿಸಬೇಕು ಅದನ್ನೇ ಮೂರನೆಯ ಹವಿರ್ಧಾನವೆಂದೂ ಕರೆಯುವುದುಂಟು. ಇದನ್ನೇ ದಂಡೋ ವಾ ಔಪರಸ್ತೃತೀಯಸ್ಯೈ ಹವಿರ್ಧಾನಸ್ಯ ಎಂದು ತೈತ್ತರೀಯಸಂಹಿತೆಯಲ್ಲಿ ವರ್ಣಿಸಿರುತ್ತದೆ. ಈ ವಾಕ್ಯವನ್ನು ಮೇಲೆ ಉದಾಹರಿಸಿ ವಿವರಿಸಿರುತ್ತ. ದಂಡೋ ವಾ ಔದುಂಬರಃ ಎಂಬ ಪಾಠಾಂತರವೂ ಇರುತ್ತದೆ) ದ್ವಯೋರ್ಹ್ಯೇತತ್ತೃತೀಯಂ ಛದಿರದಿ ನಿಧೀಯತೇ । ಎಂದು ಐತರೇಯ ಬ್ರಾಹ್ಮಣವು ತಿಳಿಸುತ್ತದೆ.

ಉಕ್ಥ್ಯಂ ವಚ ಇತಿ ಯದಾಹ ಯಜ್ಞಿಯಂ ವೈ ಕರ್ಮೋಕ್ಥ್ಯಂ ವಚೋ ಯಜ್ಞಮೇವೈತೇನ ಸಮರ್ಧಯತಿ ।

ಎಂದರೆ, ಈ ಮಂತ್ರದ (೧. ೬೩. ೩) ತಾತ್ಪರ್ಯವು ಹೀಗಿರುತ್ತದೆ. ಯಾವ ರೀತಿ ಎರಡು ಪವಿರ್ಧಾನಗಳಿಗೂ ಸಮಾನವಾದ ಒಂದೇ ಛದಿಯು ಹೊದ್ದಿಸಲ್ಪಟ್ಟಿರುವುದೋ ಅದರಂತೆಯೇ, ಎರಡು ಹವಿರ್ಧಾನಗಳಿಗೂ ಸಂಬಂಧಿಸಿದಂತೆ ಒಂದೇ ಸ್ತುತಿಮಂತ್ರವು ಅರ್ಪಿತವಾಗುವುದೆಂದರ್ಥ. ಈ ಮಂತ್ರವು ಯಜ್ಞಕರ್ಮಕ್ಕೆ ಸಾಧನವು. ಈ ಸಾಧನದಿಂದಲೇ ಯಜ್ಞದ ವೃದ್ಧಿಯುಂಟಾಗುತ್ತದೆ.

ಯತಸ್ರುಚಾ ಮಿಥುನಾ ಯಾ ಸಪರ್ಯತಃ । ಅಸಂಯತ್ತೋ ವ್ರತೇ ತೇ ಕ್ಷೇತಿ ಪುಷ್ಯತೀತಿ ।

ವಿವಾಹಿತರಾದ ನೂತನ ದಂಪತಿಗಳು ಪೂಜಿತರಾಗುವಂತೆ ಸ್ರುಕ್ಪಾತ್ರೆಗಳಿಂದ ಸಿದ್ಧವಾದ ಈ ಹವಿರ್ಧಾನಗಳು ಪೂಜಿತವಾಗುತ್ತವೆ. ಇಂತಹ ಹವಿರ್ಧಾನಗಳನ್ನು ಯಜ್ಞಕ್ಕಾಗಿ ಸಿದ್ಧವಾಗಿಟ್ಟುಕೊಂಡಿರುವ ಅಧ್ವರ್ಯುವು ಶಾಂತಿಸಮೃದ್ಧನಾಗುತ್ತಾನೆ

ಯದೇವಾದಃ ಪೂರ್ವಂ ಯತ್ತವದ್ಪದಮಾಹ ತದೇವೈತೇನ ಶಾಂತ್ಯಾ ಶಮಯತಿ ॥

ಅಸಂಯತ್ತಃ ಎಂಬ ಯಾವ ಪದಪ್ರಯೋಗವಿರುವುದೋ ಅದು ಶಾಂತಿಸಮೃದ್ಧಿಯನ್ನು ಸೂಚಿಸುತ್ತದೆ. ಅದರಿಂದ ಯುದ್ಧರಹಿತನಾದವನಾಗಿ ಹೋತೃವೂ (ಯಜಮಾನನೂ, ಮತ್ತು ಅಧ್ವರ್ಯುವೂ) ಯಜ್ಞಕಾರ್ಯವನ್ನು ನಿರ್ವಹಿಸುತ್ತಾನೆಂದರ್ಥ.

ಛದ್ರಾ ಶಕ್ತಿರ್ಯಜಮಾನಾಯ ಸುನ್ವತ ಇತ್ಯಾಶಿಷಮಾಶಾಸ್ತೇ ॥

ಸೋಮಾಭಿಷವಕರ್ಮವನ್ನು ಮುಗಿಸಿ ಸೋಮರೂಪವಾದ ಹವಿಸ್ಸನ್ನು ಅರ್ಪಿಸತಕ್ಕ ಯಜಮಾನನಿಗೆ ಸಕಲ ಸನ್ಮಂಗಳಗಳೂ ಉಂಟಾಗಲಿ ಎಂದು ಆಶಂಸೆಯೂ ಈ ಮಂತ್ರದ ಕೊನೆಯ ಪಾದದಿಂದ ಪರಿತವಾಗುತ್ತದೆ ಅನಂತರ, ಏಳನೆಯದಾಗಿ,—

ವಿಶ್ವಾರೂಪಾಣಿ ಪ್ರತಿಮುಂಚತೇ ಕವಿರಿತಿ ವಿಶ್ವರೂಪಾಮನ್ವಾಹ ಸ ರರಾಟ್ಯಾಮಿಕ್ಷಮಾಣೋಽನುಬ್ರೂಯಾತ್ । ವಿಶ್ವಮಿವ ಹಿ ರೂಪಂ ರರಾಟ್ಯಾಃ ಶುಕ್ಲಮಿವ ಚ ಕೃಷ್ಣಮಿವ ಚ । ವಿಶ್ವಂ ರೂಪಮವರುಂಧ ಆತ್ಮನೇ ಚ ಯಜಮಾನಾಯ ಚ ಯತ್ರೈವಂ ವಿದ್ವಾನೇತಾಂ ರರಾಟ್ಯಾಮಿಕ್ಷಮಾಣೋಽನ್ವಾಹ ।

ಅನಂತರ ಹೋತೃವು **ವಿಶ್ವಾ ರೂಪಾಣಿ** ಎಂಬ ಮಂತ್ರವನ್ನು ಪಠಿಸುತ್ತಾನೆ. (ಋ. ಸಂ. ೫-೮೧-೨), ಈ ಮಂತ್ರವನ್ನು **ರರಾಟಿ**ಯನ್ನು ವೀಕ್ಷಿಸುತ್ತ ಪಠಿಸಬೇಕೆಂದು ಹೇಳಿದೆ. ಪವಿರ್ಧಾನಮಂಟಪದ ಪ್ರಾಗ್ಭಾಗದಲ್ಲಿ ಕಟ್ಟಲ್ಪಡಬೇಕಾದ ದರ್ಭಮಾಲೆಗೆ **ರರಾಟಿ** ಯೆಂದು ಹೆಸರು- ಈ ದರ್ಭಮಾಲೆಯು, ಶುಕ್ಲಕೃಷ್ಣ ಇತ್ಯಾದಿ ನಾನಾ ರೂಪಗಳನ್ನು ಪ್ರದರ್ಶಿಸುವುದರಿಂದ ವಿಶ್ವರೂಪವಿರುವ ಈ ಮಾಲೆಯನ್ನು ವೀಕ್ಷಿಸುತ್ತ ಈ ಮಂತ್ರವನ್ನು ಪಠಿಸಿದರೆ, ಪ್ರಜಾ, ಪಶು ಮತ್ತು ಇತರ ಸಂಪತ್ತುಗಳು ಹೀಗೆ ವಿಶ್ವರೂಪವನ್ನುಳ್ಳ ಸಂಪತ್ಸಮೃದ್ಧಿಯನ್ನು ತಾನೂ ಸಂಪಾದಿಸಿ ಯಜಮಾನನಿಗೂ ಒದಗಿಸುವನು. ಅದುದರಿಂದ ಈ ಕರ್ಮವು ವಿಹಿತವಾಗಿದೆ. ಕೊನೆಯಲ್ಲಿ ಎಂಟನೆಯ ಮಂತ್ರವು ಪಠಿತವಾಗುತ್ತದೆ.

ಪರಿ ತ್ವಾ ಗಿರ್ವಣೋ ಗಿರ ಇತ್ಯುತ್ತಮಯಾ ಪರಿದಧಾತಿ । ಸ ಯದೈವಂ ಹವಿರ್ಧಾನೇ ಸಂಪರಿಶ್ರಿತೇ ಮನ್ಯೇತಾಥ ಪರಿದಧ್ಯಾತ್ ।

ಪರಿ ತ್ವಾ (೧-೧೦-೧೨) ಎಂಬ ಮಂತ್ರದಿಂದ ಈ ಕರ್ಮವನ್ನು ಸಮಾಪ್ತಿಗೊಳಿಸುವನು " ಎಲೈ ಸ್ತುತಿಪ್ರಿಯನಾದ ದೇವನೇ, ನಾವು ಮಾಡುವ ಸ್ತುತಿರೂಪವಾದ ಈ ವಾಕ್ಯಗಳು ನಿನ್ನನ್ನು ಸುತ್ತಲೂ ಬಂದು ಸೇರಿ ನಿನಗೆ ಸಂತೋಷವನ್ನುಂಟುಮಾಡಲಿ. ಈ ವಾಕ್ಯಗಳು ನಿನಗೆ ಸಂತೋಷವನ್ನುಂಟು ಮಾಡುವುದರಿಂದ ನಿನ್ನ ಆಯುಸ್ಸನ್ನು ವೃದ್ಧಿಪಡಿಸಲಿ ತತ್ಫಲರಾಗಿ ನಮ್ಮ ಆಯುಸ್ಸೂ ವೃದ್ಧಿಯಾಗಿ ನನಗೂ ಸಂತೋಷವುಂಟಾಗಲಿ " ಎಂಬುದೇ ಈ ಮಂತ್ರದ ತಾತ್ಪರ್ಯ. ಹೋತೃವು ಯಾವಾಗ ಹವಿರ್ಧಾನಗಳನ್ನು ಛದಿಯಿಂದ ಪೂರ್ಣವಾಗಿ ಆಚ್ಛಾದನಮಾಡುವನೋ ಆಗ ಈ ಮಂತ್ರವನ್ನು ಪಠಿಸಬೇಕು.

ಅನಗ್ನಂಧಾವುಕಾ ಹ ಹೋತುಶ್ಚ ಯಜಮಾನಸ್ಯ ಚ ಭಾರ್ಯಾ ಭವಂತಿ ಯತ್ರೈವಂ ವಿದ್ವಾನೇತಯಾ ಹವಿರ್ಧಾನಯೋಃ ಸಂಪರಿಶ್ರಿತಯೋಃ ಪರಿದಧಾತಿ ॥

ಈ ತತ್ತ್ವವನ್ನರಿತ ಹೋತೃವು, ಹವಿರ್ಧಾನಗಳನ್ನು ಛದಿಯಿಂದ ಹೊದ್ದಿಸಿದ ನಂತರ ಈ ಮಂತ್ರವನ್ನು ಪಠಿಸಿದರೆ, ಅವನ ಮತ್ತು ಯಜಮಾನನ ಪತ್ನಿಯರೂ ಸಹ ನಗ್ನತ್ವವನ್ನನುಭವಿಸದೆ ಸಕಲ ವಿಧವಾದ ವಸ್ತ್ರಗಳಿಂದಲೂ ಆಚ್ಛಾದಿತರೂ ಅಲಂಕೃತರೂ ಆಗುತ್ತಾರೆ.

ಯಜುಷಾ ವಾ ಏತೇ ಸಂಪರಿಶ್ರಿಯೇತೇ ಯದ್ಧವಿರ್ಧಾನೇ ಯಜುಷೈವೇನೇ ಏತತ್ಪರಿಶ್ರಯಂತಿ। ತೌ ಯದೈವಾಧ್ವರ್ಯುಶ್ಚ ಪ್ರತಿಪ್ರಸ್ಥಾತಾ ಚೋಭಯತೋ ಮೇಥ್ಯೌ ನಿಹನ್ಯಾತಾಮಥ ಪರಿದಧ್ಯಾತ್ । ಅತ್ರ ಹಿ ತೇ ಸಂಪರಿಶ್ರಿತೇ ಭವತಃ ॥

ದಿವೋ ವಾ ವಿಷ್ಣವುತ (ತೈ. ಸಂ. ೧-೨.೧೩) ಎಂಬ ಯಜುರ್ಮಂತ್ರವನ್ನು ಪಠಿಸಿ ಹವಿರ್ಧಾನಗಳನ್ನು ಹೊದ್ದಿಸತಕ್ಕದ್ದು. ಹಾಗೆಯೇ, ಆ ಯಜುರ್ಮಂತ್ರವನ್ನೇ ಪಠಿಸಿ ಹೊದ್ದಿಸುತ್ತಾರೆ. ಮೇಲೆ ವಿವರಿಸಿರುವಂತೆ, ಯಾವಾಗ ಅಧ್ವರ್ಯುವೂ ಮತ್ತು ಪ್ರತಿಪ್ರಸ್ಥಾತೃವೂ ಸಹ ಎರಡು ಭಾಗಗಳ ಮೇಧಿಗಳನ್ನೂ (ಕರ್ಣರೂಪವಾದ ದ್ವಾರಸ್ತಂಭಗಳು) ಮುಟ್ಟುವರೋ ಆಗ ಈ ಆಚ್ಛಾದನ ಕರ್ಮವು ನೆರವೇರುತ್ತದೆ.

ತಾ ಏತಾ ಅಷ್ಟಾವನ್ವಾಹ ರೂಪಸಮೃದ್ಧಾ ಏತದ್ವೈ ಯಜ್ಞಸ್ಯ ಸಮೃದ್ಧಂ ಯದ್ರೂಪಸಮೃದ್ಧಂ ಯತ್ಕರ್ಮ ಕ್ರಿಯಮಾಣಮನೃಗಭಿವದತಿ ತಾಸಾಂ ತ್ರಿಃ ಪ್ರಥಮಾಮನ್ವಾಹ ತ್ರಿರುತ್ತಮಾಂ ತಾ ದ್ವಾದಶ ಸಂಪದ್ಯಂತೇ ದ್ವಾದಶ ವೈ ಮಾಸಾಃ ಸಂವತ್ಸರಃ ಸಂವತ್ಸರಃ ಪ್ರಜಾಪತಿಃ ಪ್ರಜಾಪತ್ಯಾಯತನಾಭಿರೇವಾಭೀ ರಾಧ್ನೋತಿ ಯ ಏವಂ ವೇದ ತ್ರಿಃ ಪ್ರಥಮಾಂ ತ್ರಿರುತ್ತಮಾಮನ್ವಾಹ ಯಜ್ಞಸ್ಯೈವ ತದ್ಪಸ್ರ್ಯಾ ನಹ್ಯತಿ ಸ್ಥೇಮ್ನೇ ಬಲಾಯಾವಿಸ್ರಂಸಾಯ ॥

(ಐ. ಬ್ರಾ. ೧. ೨೯)

ರೂಪಸಮೃದ್ಧಿಯಿಂದ ಕೂಡಿದ ಎಂಟು ಮಂತ್ರಗಳನ್ನು ಹೋತೃವು ಈ ಹವಿರ್ಧಾನ ಪೂಜಾಕಾಲದಲ್ಲಿ ಪಠಿಸುತ್ತಾನೆ. ರೂಪಸಮೃದ್ಧಿ ಎಂದರೆ ನೆರವೇರಿಸಲ್ಪಡುವ ಕರ್ಮಕ್ಕೆ ಅನುಸಾರವಾದ ಅರ್ಥವುಳ್ಳ ಮಂತ್ರಗಳನ್ನು ಪಠಿಸುವುದು ಎಂದರ್ಥವು. ಇಂತಹ ರೂಪಸಮೃದ್ಧಿಯಿಂದ ಆಚರಿಸಿದ ಕರ್ಮವು ಮಾತ್ರ ಸಂಪೂರ್ಣತೆಯನ್ನು ಪಡೆಯುತ್ತದೆ. ಈ ಎಂಟು ಮಂತ್ರಗಳಲ್ಲಿ ಮೊದಲನೆಯದನ್ನು ಮೂರು ಸಲವೂ ಕೊನೆಯದನ್ನು ಮೂರು ಸಲವೂ ಪಠಿಸುವನು. ಎಂದರೆ ಒಟ್ಟಿಗೆ ಹನ್ನೆರಡು ಸಂಖ್ಯೆಗಳುಳ್ಳವಾದವು. ಸಂವತ್ಸರವು ಮಾಸಾತ್ಮಕವಾದಹನ್ನೆರಡು ಅವಯವಗಳುಳ್ಳ

ವಾಗಿರುತ್ತವೆ. ಪ್ರಜಾಪತಿಯೇ ಈ ಸಂವತ್ಸರರೂಪನು. ಈ ತತ್ತ್ವವನ್ನರಿತವನು ಪ್ರಜಾಪತಿಯ ಉತ್ತಮವಾದ ಸಂವತ್ಸರಾತ್ಮಕವಾದವೂ ಮಾಸರೂಪವಾದವೂ ಆದ ಗೃಹಗಳಲ್ಲಿ ವಾಸಿಸುತ್ತಾನೆ. (ಸಕಲಕಾಲಗಳಲ್ಲಿಯೂ ಸುಖವನ್ನು ಹೊಂದುತ್ತಾನೆ). ಈ ರೀತಿ ಮೊದಲನೆಯ ಮಂತ್ರವನ್ನು ಮೂರು ಸಲವೂ ಕೊನೆಯ ಮಂತ್ರವನ್ನು ಮೂರು ಸಲವೂ ಪರಿಸುವುದರಿಂದ ಈ ಯಜ್ಞವನ್ನು ಬಿಚ್ಚಿಹೋಗದಂತೆ ಭದ್ರವಾಗಿ ಗಂಟುಹಾಕಿ ಕಟ್ಟಿದಂತಾಗುತ್ತದೆ ಈಭದ್ರವಾದ ಗಂಟು ಯಜಮಾನಾದಿಗಳ ಜೀವನದಲ್ಲಿ ಭದ್ರತೆಗೂ, ಸಂಪತ್ಸಮೃದ್ಧಿಗೂ, ಅಕುಂಠಿತವಾದ ಬೆಳೆವಣಿಗೆಗೂ ಸಹಾಯವಾಗುತ್ತದೆ.

। ಸಾಯಣಭಾಷ್ಯಂ ।

ಯುಜೇ ವಾಮಿತಿ ಪಂಚರ್ಚಂ ತ್ರಯೋದಶಂ ಸೂಕ್ತಂ । ಆದಿತೇಃ ಪುತ್ರಸ್ಯ ವಿವಸ್ವತ ಆರ್ಷಂ । ಹವಿರ್ಧಾನಾಖ್ಯೇ ಯೇ ದ್ವೇ ಶಕಟೇ ತದ್ದೇವತ್ಯಮಿದಂ । ಅಂತ್ಯಾ ಜಗತೀ ಶಿಷ್ಟಾಸ್ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ಯುಜೇ ಪಂಚ ವಿವಸ್ವಾನಾದಿತ್ಯೋ ಹಾವಿರ್ಧಾನಂ ಜಗತ್ಯಂತಮಿತಿ ॥ ಗತಃ ಸೂಕ್ತ-ವಿನಿಯೋಗಃ ॥ ಹವಿರ್ಧಾನಪ್ರವರ್ತನೇ ಯುಜೇ ವಾಮಿತ್ಯೇಕಾ । ಸೂತ್ರಿತಂ ಚ । ಅಂತರಾ ವರ್ತ್ಮ-ಪಾದಯೋರ್ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿಃ । ಆ. ೪-೯ ॥ ಇತಿ ॥

ಅನುವಾದವು—**ಯುಜೇ ವಾಂ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಪದಿಮೂರನೆಯ ಸೂಕ್ತವು. ಇದರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅದಿತಿಪುತ್ರನಾದ ವಿವಸ್ವಾನ್ ಎಂಬುವನು ಋಷಿಯು. ಹವಿರ್ಧಾನವೆಂದು ಪ್ರಸಿದ್ಧವಾದ ಯಜ್ಞಾದಿಗಳಲ್ಲಿ ಸೋಮಲತೆಗಳನ್ನು ತರುವ ಎರಡು ಗಾಡಿಗಳೇ ಈ ಸೂಕ್ತದ ದೇವತೆಯು, ಈ ಸೂಕ್ತದ ಕೊನೆಯ ಋಕ್ಕು ಜಗತೀಛಂದಸ್ಕವು. ಉಳಿದ ಋಕ್ಕುಗಳು ತ್ರಿಷ್ಟುಪ್ಛಂದಸ್ಕವು ಅನುಕ್ರಮಣಿಕೆಯಲ್ಲಿ-**ಯುಜೇ ಪಂಚ ವಿವಸ್ವಾನಾದಿತ್ಯೋ ಹಾವಿರ್ಧಾನಂ ಜಗತ್ಯಂತಂ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಹವಿರ್ಧಾನಪ್ರವರ್ತನಕರ್ಮದಲ್ಲಿ **ಯುಜೇ ವಾಂ** ಎಂಬ ಮೊದಲನೆಯ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಂತರಾ ವರ್ತ್ಮ ಪಾದಯೋ-ರ್ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿಃ** ಎಂಬ ಸೂತ್ರದಿಂದ (ಆ. ೪-೯) ವಿವೃತವಾಗಿರುವುದು.

ಸೂಕ್ತ—೧೩

ಮಂಡಲ—೧೦ । ಅನುವಾಕ—೧ । ಸೂಕ್ತ—೧೩ ।
ಅಷ್ಟಕ—೭ । ಅಧ್ಯಾಯ—೬ । ವರ್ಗ—೧೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ।
ಋಷಿಃ—ವಿವಸ್ವಾನಾದಿತ್ಯಃ ।
ದೇವತಾ—ಹವಿರ್ಧಾನೇ ॥
ಛಂದಃ—೧-೪. ತ್ರಿಷ್ಟುಪ್ । ೫. ಜಗತೀ ॥

। ಸಂಹಿತಾಪಾಠಃ ।

ಯುಜೇ ವಾಂ ಬ್ರಹ್ಮ ಪೂರ್ವ್ಯಂ ನಮೋಭಿರ್ವಿ ಶ್ಲೋಕ ಏತು ಪಥ್ಯೇವ ಸೂರೇಃ ।

ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾ ಆ ಯೇ ಧಾಮಾನಿ ದಿವ್ಯಾನಿ ತಸ್ಥುಃ ॥

॥ ಪದಪಾಠಃ ॥

ಯುಜೇ। ವಾಂ। ಬ್ರಹ್ಮ। ಪೂರ್ವ್ಯಂ। ನಮಃಽಭಿಃ। ವಿ। ಶ್ಲೋಕಃ। ಏತು। ಪಥ್ಯಾಽಇವ। ಸೂರೇಃ।
ಶೃಣ್ವಂತು। ವಿಶ್ವೇ। ಅಮೃತಸ್ಯ। ಪುತ್ರಾಃ। ಆ। ಯೇ। ಧಾಮಾನಿ। ದಿವ್ಯಾನಿ। ತಸ್ಥುಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಹವಿರ್ಧಾನಶಕಟೇ ವಾಂ ಯುವಾನುಹಂ ಪೂರ್ವ್ಯಂ ಪೂರ್ವಸ್ಮಿನ್ಕಾಲೇ ಭವಂ। ಅನಾದಿ-ಕಾಲಪ್ರವೃತ್ತಮಿತ್ಯರ್ಥಃ। ಏವಂಭೂತಂ ಬ್ರಹ್ಮ ಮಂತ್ರಂ। ಉಚ್ಚಾರ್ಯೋಗೀತಿ ಶೇಷಃ। ನಮೋಭಿಃ ಸೋಮಾದಿಹವಿರ್ಲಕ್ಷಣೈರನ್ನೈರ್ಯುಜೇ। ಯುನಜ್ಮಿ। ಯುವಯೋರುಪರಿ ಸೋಮಾದಿಕಮಾರೋಪ್ಯ ಪತ್ನೀಶಾಲಾತೋ ಹವಿರ್ಧಾನಂ ಪ್ರತಿ ಯುವಾಂ ನಯಾಮೀತ್ಯರ್ಥಃ। ಏವಂಭೂತಯೋರ್ಯುವಯೋಃ ಶ್ಲೋಕಃ ಶಬ್ದೋ ವ್ಯೇತು। ವಿಶ್ವಾನ್ದೇವಾನ್ಪ್ರತಿ ವಿವಿಧಂ ಗಚ್ಛತಾಂ। ತತ್ರ ದೃಷ್ಟಾಂತಃ। ಪಥ್ಯೇವ ಸೂರೇಃ ಯಥಾ ಸ್ತೋತುಃ ಸ್ವಭೂತಾ ಪಥ್ಯಾ ಪರಿಣಾಮಸುಖಾವಹಾಹುತಿರ್ವಿಶ್ವಾನ್ದೇವಾನ್ಪ್ರತಿ ವಿವಿಧಂ ಗಚ್ಛತಿ ತದ್ವತ್। ಅಮೃತಸ್ಯಾಮರಣಧರ್ಮಣಃ ಪ್ರಜಾಪತೇಃ ಪುತ್ರಾ ವಿಶ್ವೇ ದೇವಾ ಏವಂಭೂತಂ ಶಬ್ದಂ ಶೃಣ್ವಂತು ಯೇ ದೇವಾ ದಿವ್ಯಾನಿ ದಿವಿ ಭವಾನಿ ಧಾಮಾನಿ ಸ್ಥಾನಾನ್ಯಾ ತಸ್ಥುಃ ಅಧಿಷ್ಠಿತವಂತಃ। ತೇ ಶೃಣ್ವಂತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಶಕಟಗಳೇ) **ವಾಂ**—ನಿಮ್ಮನ್ನು ಉದ್ದೇಶಿಸಿ। **ಪೂರ್ವ್ಯಂ**—ಪುರಾತನವಾದ। **ಬ್ರಹ್ಮ**—ಸ್ತೋತ್ರವನ್ನು ಪಠಿಸುತ್ತ। **ನಮೋಭಿಃ**—ಹವಿಸ್ಸುಗಳಿಂದ। **ಯುಜೇ**—ನಿಮ್ಮನ್ನು ತುಂಬುತ್ತೇನೆ। **ಸೂರೇಃ**—ಋಷಿಯ। **ಪಥ್ಯೇವ**—ಸ್ತುತಿಯು ನಾನಾ ದಿಕ್ಕುಗಳನ್ನು ಆಶ್ರಯಿಸಿ ದೇವತೆಗಳಲ್ಲಿ ಸೇರುವಂತೆ। **ಶ್ಲೋಕಃ**—ನಿಮ್ಮ ಶಬ್ದವು। **ವಿ ಏತು**—ಸಕಲ ದೇವತೆಗಳಿಗೂ ಹೋಗಿ ಸೇರಲಿ। **ಯೇ**—ಯಾವ ದೇವತೆಗಳು। **ದಿವ್ಯಾನಿ**—ದ್ಯುಲೋಕ ಸಂಬಂಧಿಯಾದ। **ಧಾಮಾನಿ**—ಸ್ಥಾನಗಳನ್ನು। **ಆ ತಸ್ಥುಃ**—ಆಶ್ರಯಿಸಿದ್ದಾರೆಯೋ ಅಂತಹವರೂ। **ಅಮೃತಸ್ಯ**-ಮರಣಧರ್ಮರಹಿತನಾದ ಪ್ರಜಾಪತಿಯ। **ಪುತ್ರಾಃ**—ಪುತ್ರರೂ ಆದ। **ವಿಶ್ವೇ**—ಸಕಲ ದೇವತೆಗಳೂ। **ಶೃಣ್ವಂತು**—ನಿಮ್ಮ ಶಬ್ದಗಳನ್ನು ಕೇಳಲಿ.

॥ ಭಾವಾರ್ಥ ॥

ಎಲೈ ಶಕಟಗಳೇ, ನಿಮ್ಮನ್ನು ಉದ್ದೇಶಿಸಿ ಪುರಾತನವಾದ ಸ್ತೋತ್ರವನ್ನು ಪಠಿಸುತ್ತಾ ಹವಿಸ್ಸುಗಳಿಂದ ನಿಮ್ಮನ್ನು ತುಂಬುತ್ತೇನೆ. ಋಷಿಯ ಸ್ತುತಿಯು ನಾನಾ ದಿಕ್ಕುಗಳನ್ನೂ ಆಶ್ರಯಿಸಿ ದೇವತೆಗಳಲ್ಲಿ ಸೇರುವಂತೆ ನಿಮ್ಮ ಶಬ್ದವು ಸಕಲ ದೇವತೆಗಳಿಗೂ ಹೋಗಿ ಸೇರಲಿ. ಯಾವ ದೇವತೆಗಳು ದ್ಯುಲೋಕಸಂಬಂಧಿಯಾದ ಸ್ಥಾನಗಳನ್ನು ಆಶ್ರಯಿಸಿದ್ದಾರೆಯೋ ಅಂತಹವರೂ, ಮರಣಧರ್ಮರಹಿತನಾದ ಪ್ರಜಾಪತಿಯ ಪುತ್ರರೂ ಆದ ಸಕಲ ದೇವತೆಗಳೂ ನಿಮ್ಮ ಶಬ್ದಗಳನ್ನು ಕೇಳಲಿ.

English Translation

I load you two with sacred offerings, repeating an ancient prayer; may the sound (of your approach) reach (the gods) like the path of the worshipper, may all the sons of the immortal (Prajapati) who inhabit the celestial regions hear (the sound).

॥ संहितापाठः ॥

यमेव इव यतमाने यदैतं प्र वां भरन्मानुषा देवयंतः ।
आ सीदतं स्वमु लोकं विदाने स्वासस्थे भवतमिंदवे नः ॥ ७ ॥

॥ पदपाठः ॥

यमेवे इवेति यमेऽइव । यतमाने इति । यत् । ऐतं । प्र । वां । भरत् । मानुषाः । देवऽयंतः ।
आ । सीदतं । स्वं । ऊं इति । लोकं । विदाने इति । स्वासस्थे इति सुऽआसस्थे । भवतं ।
इंदवे । नः ॥ ७ ॥

॥ सायणभाष्यं ॥

अत्रैव हविर्धानप्रवर्तने यमेव इव इत्येषा । सूत्रितं च । यमेव इव यतमाने यदैतमधिद्वयोरददधा ऊर्क्त्र्यं वज इत्यर्धर्च अरमेत् । अ. ४-६ । इति॥

यमेव इव यथा सहोत्पन्ने अपत्ये संचरतः तथा यतमाने गमनहविर्धारणादिस्वाधिकारकर्मणि प्रवर्तमाने हविर्धानशकटे युवां यदैतं हविर्धानस्थानं प्रतिगच्छतः तदा देवयंतो देवकामा मानुषा यजमाना वां युवां प्र भरन् । प्रभरंति । किंच युवां स्वमु लोकमात्मीयमेव हविर्धानाख्यं स्थानं विदाने जानती आ सीदतं । ततो नोऽस्मभ्यमिंदवे सोमार्थं स्वासस्थे शोभननिवासस्थाने भवतं ॥

॥ ಪ್ರತಿಪದಾರ್ಥ ॥

ಯಮೇ ಇವ—ಒಟ್ಟಿಗೆ ಹುಟ್ಟಿದ ಅವಳಿಮಕ್ಕಳಂತೆ । **ಯತಮಾನೇ**—ಒಟ್ಟಿಗೆ ದೇವಕಾರ್ಯದಲ್ಲಿ ನಿರತರಾದ ಎಲೈ ಶಕಟಗಳೇ । **ಯತ್**—ಯಾವಾಗ । **ಐತಂ**—ನೀವು ಹವಿರ್ಧಾನಸ್ಥಾನಕ್ಕೆ ಬರುವಿರೋ ಆಗ । **ದೇವಯಂತಃ**—ದೇವಪೂಜಾನಿರತರಾದ । **ಮಾನುಷಾಃ**—ಯಜಮಾನರು । **ವಾಂ**—ನಿಮ್ಮನ್ನು । **ಪ್ರ ಭರನ್**—ಅತಿಶಯವಾಗಿ ಹೊಂದುತ್ತಾರೆ । **ಸ್ವ ಮು ಲೋಕಂ**—ನಿಮ್ಮದೇ ಆದ ಹವಿರ್ಧಾನಸ್ಥಾನವನ್ನು । **ವಿದಾನೇ**—ನಿರ್ಮಿಸಿಕೊಳ್ಳುತ್ತ । **ಆ ಸೀದತಂ**—ಅದನ್ನು ಆಶ್ರಯಿಸಿರಿ । **ನಃ**—ನಮ್ಮ । **ಇಂದವೇ**—ಸೋಮಕ್ಕೆ । **ಸ್ವಾಸಸ್ಥೇ**—ಉತ್ತಮವಾದ ನಿವಾಸಸ್ಥಾನವನ್ನು । **ಭವತಂ**—ಆಗಿರಿ.

॥ ಭಾವಾರ್ಥ ॥

ಒಟ್ಟಿಗೆ ಹುಟ್ಟಿದ ಅವಳಿಮಕ್ಕಳಂತೆ ಒಟ್ಟಿಗೆ ದೇವಕಾರ್ಯದಲ್ಲಿ ನಿರತರಾದ ಎಲೈ ಶಕಟಗಳೇ, ಯಾವಾಗ ನೀವು ಹವಿರ್ಧಾನಸ್ಥಾನಕ್ಕೆ ಬರುವಿರೋ ಆಗ ದೇವಪೂಜಾನಿರತರಾದ ಯಜಮಾತರು ನಿಮ್ಮನ್ನು ಅತಿಶಯವಾಗಿ ಬರಮಾಡಿಕೊಳ್ಳುತ್ತಾರೆ. ನೀವು ನಿಮ್ಮ ಸ್ವಂತವಾದ ಹವಿರ್ಧಾನಸ್ಥಾನವನ್ನು ಆಶ್ರಯಿಸಿರಿ. ನಿಮ್ಮ ಸೋಮಕ್ಕೆ ಉತ್ತಮವಾದ ನಿವಾಸಸ್ಥಾನವನ್ನುಂಟುಮಾಡುವವರಾಗಿರಿ.

English Translation

When you two came, like twins, busily engaged, then devout worshippers brought you forward: knowing your place there abide and be fair storehouses for our Soma.

॥ ವಿಶೇಷವಿಷಯಗಳು ॥

ಹವಿರ್ಧಾನಪ್ರವರ್ತನವೆಂಬ ಕರ್ಮದಲ್ಲಿ **ಯಮೇ ಇವ**—ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯಮೇ ಇವ ಯತಮಾನೇ ಯದೈತಮಧಿದ್ವಯೋರದಧಾ ಉಕ್ಥ್ಯಂ ವಚ ಇತ್ಯಧ್ವರ್ಚ ಆರಮೇತ್** ಎಂಬ ಸೂತ್ರದಿಂದ (ಅ ೪-೯) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಪಂಚ ಪದಾನಿ ರುಪೋ ಅನ್ವರೋಹಂ ಚತುಷ್ಪದೀಮನ್ವೇಮಿ ವ್ರತೇನ ।
ಅಕ್ಷರೇಣ ಪ್ರತಿ ಮಿಮ ಏತಾವ್ಯತಸ್ಯ ನಾಭಾವಧಿ ಸಂ ಪುನಾಮಿ ॥ ೩ ॥

ಪದಪಾಠಃ

ಪಂಚ । ಪದಾನಿ । ರುಪಃ । ಅನು । ಅರೋಹಂ । ಚತುಃಽಪದೀಂ । ಅನು । ಏಮಿ । ವ್ರತೇನ ।
ಅಕ್ಷರೇಣ । ಪ್ರತಿ । ಮಿಮೇ । ಏತಾಂ । ಋತಸ್ಯ । ನಾಭೌ । ಅಧಿ । ಸಂ । ಪುನಾಮಿ ॥ ೩ ॥

। ಸಾಯಣಭಾಷ್ಯಂ ।

ರುಪೋ ಯಜ್ಞಾನಾಂ ಸ್ವರ್ಗಮಾರೋಪಯಿತುರ್ಯಜ್ಞಸ್ಯಾಂಗತ್ವೇನ ಸಂಬಂಧೀನಿ ಪಂಚ-ಸಂಖ್ಯಾಕಾನಿ ಧಾನಾಸೋಮಪಶುಪುರೋಡಾಶಾಜ್ಯಾಖ್ಯಾನಿ ಪದಾನಿ ವೃಷ್ಟಿಹೇತುತ್ವೇನ ವೇಷ್ಟಾನ್ಪ್ರತಿ ಗಂತ್ರಾಣಿ ಹವೀಂಷ್ಯನ್ವತೋಹಂ । ಅನುರೋಹಾಮಿ । ಶಕಟಯೋಃ ಸ್ಥಾಪನವಹನಾನಂತರಂ ಕರಣಂ ಕರೋಮೀತ್ಯರ್ಥಃ । ಕಿಂಚ ಚತುಷ್ಪದೀಂ ಚತುರ್ಭಿಃ ಪಾದೈರ್ಯುಕ್ತಾಂ ತ್ರಿಷ್ಟುಬಾದಿಚ್ಛಂದಸಂ ಕ್ರಿಯಾಂ ವ್ರತೇನ ಪ್ರಯೋಗಕರ್ಮಣಾನ್ವೇಮಿ। ಅನುಗಚ್ಛಾಮಿ । ಯಥಾಕಾಲಂ ಪ್ರಯುನಜ್ಮೀತ್ಯರ್ಥಃ । ಅಕ್ಷರೇಣ ಪ್ರಣವಾಖ್ಯೇನೈತಾಮುಪಸ್ಥಿತಾಂ ಪ್ರತಿಗರಕ್ರಿಯಾಂ ಪ್ರತಿ ಮಿಮೇ । ನಿರ್ಮಿಮೇ । ಅಸ್ಮಿ ಚತರ್ಯಸ್ಯ ಯಜ್ಞಸ್ಯ । ಅಧೀತಿ ಸಪ್ತಮ್ಯರ್ಥಾನುವಾದೀ । ನಾಭೌ ನಾಭಿಭೂತೇ ವೇದ್ಯಾಖ್ಯೇ ಸ್ಥಾನೇ ಸಂ ಪುನಾಮಿ । ಸಂಶೋಧಯಾಮಿ । ದಶಾಪವಿತ್ರೇಣ ಸೋಮಂ ಸಂಸ್ಕರೋಮೀತ್ಯರ್ಥಃ ॥

॥ ಪ್ರತಿಪದಾರ್ಥ ।

(ಎಲೈ ಶಕಟಗಳೇ) **ರುಪಃ**—ಯಜ್ಞಸಂಬಂಧಿಗಳಾದ । **ಪಂಚ ಪದಾನಿ**—ಧಾನ, ಸೋಮ, ಪಶು, ಪುರೋಡಾಶ, ಆಜ್ಯ ಎಂಬ ಐದುವಿಧವಾದ ಹವಿಸ್ಸುಗಳನ್ನೂ। **ಅನ್ವರೋಹಮ್**—ನಿಮ್ಮಿಂದ ವಹಿಸುವಂತೆ ಮಾಡುತ್ತೇನೆ। **ಚತುಷ್ಪದೀಂ**—ನಾಲ್ಕು ಪಾದಗಳಿಂದ ಕೂಡಿದ (ಛಂದೋಯುಕ್ತವಾದ) ಸ್ತುತಿಗಳನ್ನೂ । **ವ್ರತೇನ**—ವಿಧ್ಯುಕ್ತವಾದ ಕರ್ಮಗಳೊಡನೆ । **ಅನ್ವೇಮಿ**—ಕಾಲಾನುಗುಣವಾಗಿ ಪ್ರಯೋಗಿಸುತ್ತೇನೆ । **ಅಕ್ಷರೇಣ**—ಪ್ರಣವರೂಪವಾದ್ಯ ಅಕ್ಷರದಿಂದ । **ಮಿತಾಂ**—ಈ ಪ್ರತಿಗರಸಂಜ್ಞಕವಾದ ಕ್ರಿಯೆಯನ್ನು । **ಪ್ರತಿ ಮಿಮೇ**—ನಿರ್ಮಿಸುತ್ತೇನೆ । **ಯಜ್ಞಸ ಅಧಿ**—ಯಜ್ಞದಲ್ಲಿ । **ನಾಭೌ**—ನಾಭಿರೂಪವಾದ ವೇದಿಯಲ್ಲಿ । **ಸಂ ಪುನಾಮಿ**—ಸೋಮವನ್ನು ಸಂಸ್ಕರಿಸುತ್ತೇನೆ.

। ಭಾವಾರ್ಥ ।

ಎಲೈ ಶಕಟಗಳೇ, ಯಜ್ಞಸಂಬಂಧಿಗಳಾದ ಧಾನ, ಸೋಮ, ಪಶು, ಪುರೋಡಾಶ, ಆಜ್ಯ ಎಂಬ ಐದು ವಿಧವಾದ ಹವಿಸ್ಸುಗಳನ್ನೂ ನಿಮ್ಮಿಂದ ವಹಿಸುವಂತೆ ಮಾಡುತ್ತೇನೆ. ನಾಲ್ಕು ಪಾದಗಳಿಂದ ಕೂಡಿದ (ಛಂದೋಬದ್ಧವಾದ ಸ್ತುತಿಗಳನ್ನೂ ವಿಧ್ಯುಕ್ತವಾದ ಕರ್ಮಗಳೊಡನೆ ಕಾಲಾನುಗುಣವಾಗಿ ಪ್ರಯೋಗಿಸುತ್ತೇನೆ. ಪ್ರಣವರೂಪವಾದ ಅಕ್ಷರದಿಂದ ಈ ಪ್ರತಿಗರಸಂಜ್ಞಕವಾದ ಕ್ರಿಯೆಯನ್ನು ನಿರ್ಮಿಸುತ್ತೇನೆ. ಯಜ್ಞದಲ್ಲಿ ನಾಭಿರೂಪವಾದ ವೇದಿಯಲ್ಲಿ ಸೋಮವನ್ನು ಸಂಸ್ಕರಿಸುತ್ತೇನೆ.

English Translation

I make the five stages of the sacrifice ascend; I take four steps by pious observances; with the sacred syllable, I perfect this (adoration); I purify (the Soma) on the navel of the sacrifice

। ಸಂಹಿತಾಪಾಠಃ ।

ದೇವೇಭ್ಯಃ ಕವಮುವೃಣೀತ ಮೃತ್ಯುಂ ಪ್ರಜಾಯೈ ಕವಮುಮೃತಂ ನಾವೃಣೀತ ।
ಬೃಹಸ್ಪತಿಂ ಯಜ್ಞವಮಕೃಣ್ವತ ಋಷಿಂ ಸ್ತ್ರಿಯಾಂ ಯವಮುಸ್ತನ್ನಂ ಗಾಂ ಪ್ರಾರಿರೇಚೀತ್ ॥ ೪ ॥

॥ ಪದಪಾಠಃ ॥

ದೇವೇಭ್ಯಃ । ಕಂ । ಅವೃಣೀತ । ಮೃತ್ಯುಂ । ಪ್ರಜಾಯೈ । ಕಂ । ಅಮೃತಂ । ನ । ಅವೃಣೀತ ।
ಬೃಹಸ್ಪತಿಂ । ಯಜ್ಞಂ । ಅಕೃಣ್ವತ । ಋಷಿಂ । ಪ್ರಿಯಾಂ । ಯಮಃ । ತನ್ವಂ । ಪ್ರ । ಆರಿರೇಚೀತ್ ॥೪॥

॥ ಸಾಯಣಭಾಷ್ಯಂ ॥

ದೇವೇಭ್ಯೋ ದೇವಾನಾಂ ಮೃತ್ಯುಂ ಮಾರಯಿತಾರಂ ಕಂ ಸ್ವಪುರುಷಮವೃಣೀತ । ಪ್ರಾರ್ಥಯತೇ । ಪ್ರಯುಂಕ್ತೇ । ಕಂಚ ಪ್ರಜಾಯೈ ದೇವವ್ಯತಿರಿಕ್ತಾಯಾ ಮನುಷ್ಯಾದಿಕಾಯಾಃ ಪ್ರಜಾಯಾ ಅಮೃತಮಮಾರಕಮವಿನಾಶಕಂ ಕಂ ವಾ ಸ್ವಪುರುಷಂ ನಾವೃಣೀತ । ನ ಪ್ರಯುಂಕ್ತೇ । ಹವಿರ್ಧಾರಣಕ್ರಿಯಾಯಾಂ ಪ್ರವೃತ್ತಾಯಾಂ ಸತ್ಯಾಂ ಪೂರ್ವೋಕ್ತಾನಾಂ ಸರ್ವೇಷಾಂ ಸ್ಥಿತೇರವಶ್ಯಂಭಾವಿತ್ವಾನ್ನ ಕಂಚಿದಪಿ ವಿನಾಶಕಂ ಸ್ವಪುರುಷಂ ಯಮೋ ನಿರೂಪಯತೀತ್ಯರ್ಥಃ । ಅಪಿ ಚ ಬೃಹಸ್ಪತಿಂ ಬೃಹತಾಂ ದೇವಾನಾಂ ಹವಿರ್ಧಾರಣೇ ಪಾಲಕಂ ಬೃಹತಾಂ ಮಂತ್ರಾಣಾಂ ಸ್ವಾಮಿನಂ ವರ್ಷಿಂ ಸರ್ವಸ್ಯ ದೃಷ್ಟಾದೃಷ್ಟಫಲಸ್ಯ ದ್ರಷ್ಟಾರಂ ಯಜ್ಞಮಕೃಣ್ವತ । ಋತ್ವಿಗ್ಯಜಮಾನಾಃ ಕುರ್ವಂತಿ । ಅಪಿ ಚ ಯಮಃ ಪ್ರಿಯಾಂ ತನ್ವಮಸ್ಮದೀಯಮಿಷ್ಟಂ ಶರೀರಂ ಪ್ರಾರಿರೇಚೀತ್ । ಧಾತೂನಾಮನೇಕಾರ್ಥತ್ವಾದ್ರಿಚಿರತ್ರ ಪರಿಹಾರಾರ್ಥೇ ವರ್ತತೇ । ಪ್ರರೇಚಯತಿ । ಮೃತ್ಯೋಃ ಸಕಾಶಾತ್ಪರಿಹರತಿ । ಕರ್ಮವೈಗುಣ್ಯಜನಿತದೋಷಭಾವಾದಸ್ಮಾಕಂ ಜೀವಿತಂ ನಾಪಹರತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ದೇವೇಭ್ಯಃ—ದೇವತೆಗಳಿಗೆ । ಮೃತ್ಯುಂ—ಮಾರಕನಾದ । ಕಂ—ಯಾವ ಪುರುಷನನ್ನು । ಅವೃಣೀತ—(ಯಮನು) ನಿಯೋಜಿಸಿದ್ದಾನೆ । ಪ್ರಜಾಯೈ—ಮಾನವರಿಗೆ । ಅಮೃತಂ—ನಾಶಕನಲ್ಲದವನನ್ನು । ಕಂ (ವಾ)—ಯಾರನ್ನು ತಾನೇ । ನಾವೃಣೀತ—ನಿಯೋಜಿಸಿಲ್ಲ । ಬೃಹಸ್ಪತಿಂ—ಬೃಹಸ್ಪತಿಸಂಜ್ಞಕನಾದ । ಋಷಿಂ—ಋಷಿಯನ್ನು । ಯಜ್ಞಂ—ಯಜ್ಞರೂಪನನ್ನಾಗಿ । ಅಕೃಣ್ವತ—ಋತ್ವಿಗ್ಯಜಮಾನರು ಕಲ್ಪಿಸಿದ್ದಾರೆ । ಯಮಃ—ಯಮದೇವನು । ಪ್ರಿಯಾಂ—ಪ್ರಿಯವಾದ । ತನ್ವಂ—ನಮ್ಮ ಶರೀರವನ್ನು । ಪ್ರಾರಿರೇಚೀತ್—ಸುರಕ್ಷಿತವಾಗಿಟ್ಟಿದ್ದಾನೆ.

॥ ಭಾವಾರ್ಥ ॥

ದೇವತೆಗಳಿಗೆ ಮಾರಕನಾದ ಯಾವ ಪುರುಷನನ್ನು ಯಮನು ನಿಯೋಜಿಸಿದ್ದಾನೆ? ಮಾನವರಿಗೆ ನಾಶಕನಲ್ಲದವನನ್ನು ಯಾರನ್ನು ತಾನೇ ನಿಯೋಜಿಸಿಲ್ಲ? ಬೃಹಸ್ಪತಿಸಂಜ್ಞಕನಾದ ಋಷಿಯನ್ನು ಯಜ್ಞರೂಪನನ್ನಾಗಿ ಋತ್ವಿಗ್ಯಜಮಾನರು ಕಲ್ಪಿಸಿದ್ದಾರೆ. ಯಮದೇವನು ನಮ್ಮ ಪ್ರಿಯವಾದ ಶರೀರವನ್ನು ಸುರಕ್ಷಿತವಾಗಿಟ್ಟಿದ್ದಾನೆ.

English Translation

Whom has he selected as the slayer of the gods? Whom has he not selected as non-slayer of the human race? They have made the Rishi Brihaspati the sacrifice, Yama preserves our loved bodies.

॥ ಸಂಹಿತಾಪಾಠಃ ॥

ಸಪ್ತ ಕ್ಷರಂತಿ ಶಿಶವೇ ಮರುತ್ವತೇ ಪಿತ್ರೇ ಪುತ್ರಾಸೋ ಅಪ್ಯವೀವತನ್ನೃತಂ।
ಉಭೇ ಇದಸ್ಯೋಭಯಸ್ಯ ರಾಜತ ಉಭೇ ಯತೇತೇ ಉಭಯಸ್ಯ
ಪುಷ್ಯತಃ ॥ ೫ ॥

॥ ಪದಪಾಠಃ ॥

ಸಪ್ತ । ಕ್ಷರಂತಿ । ಶಿಶವೇ । ಮರುತ್ವತೇ । ಪಿತ್ರೇ । ಪುತ್ರಾಸಃ । ಅಪಿ । ಅವೀವತನ್ । ಋತಂ ।
ಉಭೇ ಇತಿ । ಇತ್ । ಅಸ್ಯ । ಉಭಯಸ್ಯ । ರಾಜತಃ । ಉಭೇ ಇತಿ । ಯತೇತೇ ಇತಿ । ಉಭಯಸ್ಯ ।
ಪುಷ್ಯತಃ ॥ ೫ ॥

॥ ಸಾಯಣಭಾಷ್ಯಂ ॥

ಮರುತ್ವತೇ । ಮರುತಃ ಸ್ತೋತಾರಃ । ಸ್ತುತಿದ್ವಾರೇಣ ತದ್ವತೇ ಪಿತ್ರ ಋತ್ವಿಜಾಂ ಪಿತೃಭೂತಾಯ ಶಿಶವೇ ಶಂಸನೀಯಾಯ ಹವಿರ್ಧಾನಶಕಟಯೋಃ ಸುಖಾಸೀನಭೂತಾಯ ಸೋಮಾಯ ಸಪ್ತ ಚ್ಛಂದಾಂಸಿ ಕ್ಷರಂತಿ । ಸ್ತುತಿತ್ವೇನ ಗಚ್ಛಂತಿ । ಅಪಿ ಚ ಪುತ್ರಾಸೋಽಪಿ ಸೋಮಸ್ಯ ಪುತ್ರಭೂತಾ ಋತ್ವಿಜೋಽಪ್ಯೃತಂ ಸತ್ಯಭೂತಂ ಸ್ತೋತ್ರಮವೀವತನ್ । ಸಂಗಮಯಂತಿ । ಸದ್ಗುಣಗ್ರಾಹಿಣೀಂ ಸ್ತುತಿಂ ಕುರ್ವಂತೀತ್ಯರ್ಥಃ । ಉಭೇ ಇದ್ದ್ವೇ ಏವ ಹವಿರ್ಧಾನಶಕಟೇ ಅಸ್ಯೋಭಯಸ್ಯ ದೇವಜಾತಸ್ಯ ಮನುಷ್ಯಜಾತಸ್ಯ ಚ ರಾಜತಃ । ಈಶಾತೇ । ಉಭೇ ಏವ ಶಕಟೇ ಯತೇತೇ । ಕರ್ಮಾನುಷ್ಠಾನೇ ಪ್ರಯತ್ನಂ ಕುರುತಃ । ಉಭಯಸ್ಯ ದೇವಜಾತಸ್ಯ ಮನುಷ್ಯಜಾತಸ್ಯ ಚ ಪುಷ್ಯತಃ । ಹವಿರ್ಧಾರಣದ್ವಾರೇಣ ಪುಷ್ಟಿಂ ಕುರುತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ಮರುತ್ವತೇ—ಸ್ತುತಿಯುಕ್ತನೂ । ಪಿತ್ರೇ—ಋತ್ವಿಕ್ಕುಗಳಿಗೆ ಪಿತೃಭೂತನೂ । ಶಿಶವೇ—ಶಕಟಗಳಿಗೆ ಪುತ್ರರೂಪನೂ ಆದ ಸೋಮನಿಗಭಿಮುಖವಾಗಿ । ಸಪ್ತ—ಸಪ್ತಚ್ಛಂದಸ್ಸುಗಳೂ । ಕ್ಷರಂತಿ—ಸ್ತುತಿರೂಪದಲ್ಲಿ ಹರಿಯುತ್ತವೆ । ಪುತ್ರಾಸಃ ಅಪಿ—ಸೋಮನಿಗೆ ಪುತ್ರರೂಪರಾದ ಋತ್ವಿಕ್ಕುಗಳು । ಋತಂ—ಸತ್ಯಾತ್ಮಕವಾದ ಸ್ತುತಿಯನ್ನು । ಅವೀವತನ್—ಅರ್ಪಿಸುತ್ತಾರೆ । ಉಭೇ ಇತ್—ಈ ಶಕಟಗಳೆರಡೂ । ಅಸ್ಯ ಉಭಯಸ್ಯ—ದೇವಮಾನವಾದಿಗಳೆಲ್ಲ । ರಾಜತಃ—ಪ್ರಭುಗಳಾಗಿದ್ದಾರೆ । ಉಭೇ—ಈ ಎರಡು ಶಕಟಗಳೂ । ಯತೇತೇ—ಕರ್ಮಾರ್ಥವಾಗಿ ಪ್ರಯತ್ನಿಸುತ್ತವೆ । ಉಭಯಸ್ಯ—ದೇವಮಾನವಾದಿಗಳಿಗೆಲ್ಲ । ಪುಷ್ಯತಃ—ಪೋಷಕರಾಗಿದ್ದೀರಿ.

॥ ಭಾವಾರ್ಥ ॥

ಸ್ತುತಿಯುಕ್ತನೂ, ಋತ್ವಿಕ್ಕುಗಳಿಗೆ ಪಿತೃಭೂತನೂ, ಶಕಟಗಳಿಗೆ ಪುತ್ರರೂಪನೂ ಆದ ಸೋಮನಿಗಭಿಮುಖವಾಗಿ ಸಪ್ತಚ್ಛಂದಸ್ಸುಗಳೂ ಸ್ತುತಿರೂಪದಲ್ಲಿ ಹರಿಯುತ್ತವೆ. ಸೋಮನಿಗೆ ಪುತ್ರರೂಪರಾದ ಋತ್ವಿಕ್ಕುಗಳು ಸತ್ಯಾತ್ಮ

ಕವಾದ ಸ್ತುತಿಯನ್ನು ಅರ್ಪಿಸುತ್ತಾರೆ. ಈ ಶಕಟಗಳೆರಡೂ ದೇವಮಾನವಾದಿಗಳಿಗೆಲ್ಲ ಪ್ರಭುಗಳಾಗಿದ್ದಾರೆ. ಈ ಎರಡು ಶಕಟಗಳೂ ಕರ್ಮಾರ್ಥವಾಗಿ ಪ್ರಯತ್ನಿಸುತ್ತಾರೆ. ಎಲೈ ಶಕಟಗಳೇ, ನೀವು ದೇವಮಾನವಾದಿಗಳಿಗೆಲ್ಲ ಪೋಷಕರಾಗಿದ್ದೀರಿ.

English Translation

The seven (metres) offer laudation to the glorious, the adorable parent (the Soma), his sons (the priests) utter his true (praise); you both are lords of both (men and gods), you both exert yourselves and are the nourishers of both (men and gods).

ಹದಿನಾಲ್ಕನೆಯ ಸೂಕ್ತವು.

ಪೀಠಿಕೆ

ಈ ಸೂಕ್ತದಲ್ಲಿಯೂ ಮುಂದಿನ ಕೆಲವು ಸೂಕ್ತಗಳಲ್ಲಿಯೂ ಪಿತೃಗಳನ್ನೂ ಅವರಲ್ಲಿರುವ ಭೇದಪ್ರಭೇದಗಳನ್ನೂ ಅವರು ವಾಸಿಸುವ ಪ್ರದೇಶ ಅಥವಾ ಲೋಕಗಳನ್ನೂ ವಿವರಿಸುವ ಕೆಲವು ವರ್ಣನೆಗಳಿವೆ. ಪಿತೃಗಳು ಎಂದರೇನು? ಅವರು ಯಾರು, ಅವರ ಸ್ವರೂಪವೇನು ? ಎಂಬ ವಿಷಯವನ್ನೂ ಮೊದಲು ತಿಳಿದುಕೊಳ್ಳಬೇಕು. ಭೂಮಿಯ ಮೇಲೆ ವಾಸಿಸುವ ಮನುಷ್ಯರು ಮೃತರಾದನಂತರ ಅವರ ಪಾರ್ಥಿವಶರೀರವು ನಿಶ್ಚೇಷ್ಟಿತವಾಗಿ ಶರೀರದ ನಾನಾಭಾಗಗಳು ಪೃಥಿವ್ಯಾದಿ ಪಂಚಭೂತಗಳಲ್ಲಿ ಸೇರಿಹೋಗುವುವು ಪಂಚಭೂತಗಳೆಂದರೆ ಪೃಥಿವೀ, ನೀರು, ವಾಯು, ಅಗ್ನಿ ಆಕಾಶಗಳು. ಎಂದರೆ ಶರೀರದಲ್ಲಿರುವ ಮೂಳೆ ಮೊದಲಾದ ಘಟ್ಟಪದಾರ್ಥಗಳು ಪೃಥಿವಿಯಲ್ಲಿಯೂ, ದ್ರವರೂಪವಾದ ರಕ್ತಾದಿಗಳು ನೀರಿನಲ್ಲಿಯೂ, ಪ್ರಾಣವಾಯುಗಳು ವಾಯುವಿನಲ್ಲಿಯೂ, ದೇಹದಲ್ಲಿ ಶಾಖರೂಪದಲ್ಲಿರುವ ಅಗ್ನಿಯು ಅಗ್ನಿಯಲ್ಲಿಯೂ, ಉಳಿದಭಾಗವು ಆಕಾಶದಲ್ಲಿಯೂ ಕಾಲಕ್ರಮದಲ್ಲಿ ಬೆರತುಹೋಗುವುವು. ಆದರೆ ಈ ಪಂಚಭೂತಗಳಲ್ಲಿ ವಿಲೀನವಾಗದಿರುವ ಚೈತನ್ಯವೊಂದಿರುವುದು. ಅದರಿಂದಲೇ ಪುರುಷನು ಜೀವಿಸಿರುವಕಾಲದಲ್ಲಿ ಶರೀರದ ಸಮಸ್ತವ್ಯಾಪಾರಗಳೂ ನಡೆಯುವವು. ಅದು ಶರೀರದೊಂದಿಗೆ ನಾಶವಾಗುವುದಿಲ್ಲ ಅದು ಸೂಕ್ಷ್ಮರೂಪದಿಂದಿದ್ದು ತಾನು ಮಾಡಿದ ಕರ್ಮಗಳ ಫಲಾನುಸಾರವಾಗಿ ಸೂಕ್ಷ್ಮಲೋಕಗಳಾದ ಸ್ವರ್ಗಾದಿಗಳಲ್ಲಿ ಸುಖದುಃಖಾದಿಗಳನ್ನು ಅನುಭವಿಸುತ್ತ ಅನೇಕಕಾಲವಿರುವುದು ಈ ಚೈತನ್ಯವನ್ನೇ ಆತ್ಮ, ಜೀವ, ಮನಸ್ಸು, ಜ್ಯೋತಿ ಎಂಬ ಶಬ್ದಗಳಲ್ಲಿ ಋಗ್ವೇದದಲ್ಲಿ ವರ್ಣಿಸಿದೆ. ಈ ಆತ್ಮವು ಮೃತಶರೀರದಿಂದ ಬೇರೆಯಾದನಮೇಲೆ ಕೆಲವು ಕಾಲ ಪ್ರೇತಶರೀರದಲ್ಲಿದ್ದು ಅನಂತರ ಸ್ವರ್ಗಾದಿಗಳಿಗೆಹೋಗುವುದು. ಸ್ವರ್ಗಾದಿಗಳಲ್ಲಿರುವ ಮೃತರ ಆತ್ಮಗಳನ್ನೇ ಪಿತೃಗಳೆಂದು ಕರೆಯುವ ರೂಢಿ ಇದೆ. ಎಂದರೆ ನಮ್ಮ ಹಿರಿಯರಾಗಿದ್ದು ಪೂರ್ವದಲ್ಲಿ ಎಂದರೆ ನಾವು ಹುಟ್ಟುವುದಕ್ಕಿಂತ ಮೊದಲು ಈ ಭೂಮಿಯ ಮೇಲೆ ಬದುಕಿ ಬಾಳಿ ಮೃತರಾದನಂತರ ಸ್ವರ್ಗಾದಿ ಉತ್ತಮ ಲೋಕಗಳಲ್ಲಿ ಈಗಲೂ ಸುಖಸಂತೋಷಗಳನ್ನು ಅನುಭವಿಸುತ್ತಿರುವ ಸೂಕ್ಷ್ಮರೂಪದಿಂದಿರುವ ವ್ಯಕ್ತಿಗಳಿಗೆ ಪಿತೃಗಳೆಂದು ಹೆಸರು.

ಪಿತೃಗಳು, ಪಿತೃಲೋಕಗಳು ಮತ್ತು ಪಿತೃಪೂಜೆ.

ಪುರುಷನು ಯಜ್ಞಯಾಗಾದಿ ಸತ್ಕರ್ಮಗಳನ್ನಾಚರಿಸುವ ಫಲವಾಗಿ ಮರಣಾನಂತರ ಪಿತೃತ್ವಸ್ಥಾನವನ್ನು ಪಡೆದು ಆಯಾ ಕರ್ಮಕ್ಕನುಗುಣವಾದ ಲೋಕಕ್ಕೆ ಯಮರಾಜನಿಂದ ಒಯ್ಯಲ್ಪಡುವನೆಂದು ವೈದಿಕಸಂಹಿತೆಯ ವಾಕ್ಯಗಳು ಪಿತೃಗಳನ್ನೂ ಯಮನನ್ನೂ ಪ್ರಶಂಸಿಸುತ್ತವೆ.

ಪರೇಯಿವಾಂಸಂ ಪ್ರವತೋ ಮಹೀರನು ಬಹುಭ್ಯಃ ಪಂಥಾಮನುಪಸ್ಪಶಾನಂ ।
ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾ ದುವಸ್ಯ ॥

(ಋ. ಸಂ. ೧೦-೧೪-೧)

ಅತ್ಯುತ್ತಮವಾದ ಕರ್ಮಗಳನ್ನಾಚರಿಸಿದ ಸಜ್ಜನರನ್ನು ತಮ್ಮತಮ್ಮ ಕರ್ಮಾನುಗುಣವಾದ ಭೋಗಗಳನ್ನೊದಗಿಸುವ ಲೋಕಗಳಿಗೆ ಕರೆದೊಯ್ಯುವವನೂ ಪ್ರಭುವೂ ಆದ ಯಮನನ್ನು ಪೂಜಿಸು ಎಂದಿರುವ ಇಂತಹ ಮಂತ್ರಗಳು ಅನೇಕವಾಗಿವೆ. ಇಂತಹ ಮಂತ್ರಗಳು ಅನೇಕ ತತ್ತ್ವಾರ್ಥಗಳನ್ನು ತಿಳಿಸುವುವಾಗಿವೆ.

೧) ಮರಣಾನಂತರ, ದೇಹನಾಶವಾದ ಮೇಲೆ, ದೇಹಕ್ಕಿಂತಲೂ ಭಿನ್ನವಾದುದೂ ನಶ್ವರವಲ್ಲದುದೂ ಆದ ಅಂಶವು ತನ್ನ ಐಹಿಕವಾದ ಕರ್ಮಾನುಗುಣವಾಗಿ ನಿಯತವಾಗಿರತಕ್ಕ ಲೋಕವನ್ನು ಹೋಗಿ ಸೇರುತ್ತದೆಯೆಂದೂ,

೨) ಇಂತಹ ಲೋಕವು ತ್ರಿಸಂಖ್ಯಾಕವಾಗಿದ್ದು ಪಿತೃಲೋಕಗಳೆಂದೆನ್ನಿಸಿಕೊಳ್ಳುವುವೆಂದೂ,

೩) ಪಿತೃಗಳಿಗೆಲ್ಲ ರಾಜನಾದ ಯಮನೇ ಈ ಲೋಕಗಳಿಗೆಲ್ಲ ಪ್ರಭುವೆಂದೂ, ಇವುಗಳಲ್ಲಿ ಉತ್ತಮವಾದ ಲೋಕವು ಅತ್ಯಂತ ತೇಜೋಯುತವೆಂದೂ.

೪) ಈ ಲೋಕಸ್ಥರಾದ ಪಿತೃಗಳೂ ಸಹ ಜೀವಿಸಿರುವ ಪುತ್ರಾದಿಗಳಿಗೆ ದೇವತೆಗಳಂತೆಯೇ, ತಮ್ಮ ಅನುಗ್ರಹವನ್ನಿತ್ತು ಅವರುಗಳಿಂದ ಅರ್ಪಿತವಾಗುವ 'ಸ್ವಧಾ' ರೂಪವಾದ ಹವಿಸ್ಸನ್ನು ಸ್ವೀಕರಿಸುವವರೆಂದೂ ತಿಳಿಸಲಾಗಿದೆ.

ಉಪನಿಷದಾದಿಗಳಲ್ಲಿ **ಆತ್ಮಾ** ಎಂದು ಯಾವ ನಿತ್ಯತತ್ತ್ವವು ಪ್ರಶಂಸಿಸಲ್ಪಡುವುದೋ ಮತ್ತು ಆ ಆತ್ಮನು ನಿತ್ಯಸಾಯುಜ್ಯವನ್ನು ಪಡೆಯುವ ಸ್ವರೂಪಯೋಗ್ಯತೆಯುಳ್ಳದ್ದು ಎಂದು ಯಾವ ಆತ್ಮಶಕ್ತಿಯು ವರ್ಣಿತವಾಗಿರುವುದೋ, ಅದೇ **ಆತ್ಮನು** ಅದೇ ಪರಿಭಾಷೆಯಿಂದ ಋಕ್ಸಂಹಿತೆಯಲ್ಲಿ ತಿಳಿಸಲ್ಪಟ್ಟಿರುವುದೇ, ಅಥವಾ ಈ ಎರಡು ವರ್ಣನೆಗಳಿಗೂ ವ್ಯತ್ಯಾಸವಿರುತ್ತದೆಯೇ ಎಂಬ ವಿಷಯದಲ್ಲಿ ಅನೇಕ ಚರ್ಚೆಗಳಿರುತ್ತವೆ.

ಆ ಚರ್ಚೆಗೆ ಇಲ್ಲಿ ಅವಕಾಶವಿಲ್ಲ ಆ ಚರ್ಚೆಯ ಕ್ರಮವನ್ನು ಮುಂದೆ ಸಂದರ್ಭಾನುಸಾರವಾಗಿ ಅವಶ್ಯಕತೆಯಿದ್ದಲ್ಲಿ ತಿಳಿಸಲಾಗುತ್ತದೆ. ಪಿತೃಗಳು ಎಂದೆನ್ನಿಸಿಕೊಳ್ಳುವ ಅರ್ಹತೆಯು ಯಾವಾಗ? ಯಾರಿಗೆ; ಅವರ ಸ್ವರೂಪಗಳೇನು? ಮರಣಾನಂತರ ದೇಹಕ್ಕೆ ಯಾವ ವಿಧವಾದ ಸಂಸ್ಕಾರದಿಂದ ಮುಕ್ತಿ? ದೇಹಾನಂತರ ಉಳಿಯುವ ಅಂಶವು ಯಾವ ರೀತಿ ವರ್ಣಿತವಾಗಿದೆ? ಇದರ ಅಂತಿಮ ಸ್ಥಾನವೇನು? ಕರ್ಮವಾಸನೆಯು ದೇಹಾನಂತರವೂ ಅನುಸರಿಸುವುದೇ ಇತ್ಯಾದಿ ವಿಷಯಗಳನ್ನು ಪ್ರಕೃತದಲ್ಲಿ ಅತ್ಯವಶ್ಯವಾಗಿ ಚರ್ಚಿಸಬೇಕಾಗಿರುತ್ತದೆ. ಈ ಪ್ರಕರಣವನ್ನು ಕೆಳಗೆ ತಿಳಿಸುವಂತೆ ವಿಭಾಗಿಸಿ ಆಯಾ ಅಂಶಗಳನ್ನು ವೈದಿಕವಾಕ್ಯಗಳ ಆಧಾರದ ಮೇಲೆ ಪರಿತೀಲಿಸಬಹುದು.

೧) ಪಾರ್ಥಿವದೇಹಕ್ಕಿಂತಲೂ ಭಿನ್ನವಾದ (ಆತ್ಮ) ತತ್ತ್ವ.
೨) ಪಿತೃಗಣಗಳು ಮತ್ತು ಪಿತೃಲೋಕಗಳು
೩) ಪುನರುತ್ಪತ್ತಿ ಮತ್ತು ಜನ್ಮಾಂತರ.
೪) ಪ್ರೇತಸಂಸ್ಕಾರ.
೫) ಪಿತೃಶ್ರಾದ್ಧ.

1) ಪಾರ್ಥಿವದೇಹಕ್ಕಿಂತಲೂ ಭಿನ್ನವಾದ ತತ್ತ್ವ ಮತ್ತು ಅದರ ಸ್ವರೂಪಃ

ಆತ್ಮನ್, ಅಜೋಧಾಗ, ಜೀವ, ಪ್ರಾಣ, ಮನಸ್, ಸುವರ್ಣ, ಅಸು ಜ್ಯೋತಿ। ಈ ಪದಗಳು, ದೇಹಕ್ಕಿಂತಲೂ ಭಿನ್ನವಾದುದೂ, ನಶ್ವರವಲ್ಲದುದೂ, **ಉದ ಪುರುಷಾಂಶವನ್ನು** ಸೂಚಿಸತಕ್ಕ ಪದಗಳಾಗಿರುತ್ತವೆ. ಋಕ್ಸಂಹಿತೆಯಲ್ಲಿಯೂ ಇತರ ವೈದಿಕವಾಕ್ಯಗಳಲ್ಲಿಯೂ ಈ ದೇಹಾತಿರಿಕ್ತವಾದ ಪುರುಷಾಂಶವನ್ನು ಯಾವ ರೀತಿ ವರ್ಣಿಸಿದೆ, ಈ ಪದಗಳು ಆ ನಿತ್ಯವಸ್ತುವನ್ನು ಯಾವ ರೀತಿ ಪ್ರತಿಬಿಂಬಿಸುತ್ತವೆ ಇತ್ಯಾದಿ ವಿಷಯಗಳನ್ನು ಸದ್ಯ ಪರಿಶೀಲಿಸಬೇಕು.

ಜೀವಿಸು, ಉಸಿರಾಡು ಇತ್ಯಾದ್ಯರ್ಥಗಳನ್ನು ಕೊಡತಕ್ಕ **ಅನ್** ಧಾತುವಿನಿಂದ **ಆತ್ಮನ್** ಪದವು ನಿಷ್ಪನ್ನವಾಗಿರುತ್ತದೆ. ಈ **ಆತ್ಮನ್** ಎಂಬ ಪದವು ಋಕ್ಸಂಹಿತೆಯಲ್ಲಿ ಅನೇಕ ಸಂದರ್ಭಗಳಲ್ಲಿ ರೂಪಾಂತರವನ್ನು ಹೊಂದಿ ಪ್ರಯುಕ್ತವಾಗಿರುತ್ತದೆ. **ಆತ್ಮದಾಃ, ಆತ್ಮವತ್, ಆತ್ಮನ್ವತೀಭಿಃ, ಆತ್ಮಾಇವ, ಆತ್ಮನ್ವಂತಂ, ಶತಾತ್ಮಾ, ಶತಾತ್ಮಾನಂ**, ಇತ್ಯಾದಿ ಪ್ರಯೋಗಗಳು ದೇಹಾತಿರಿಕ್ತವಾದ ಅಂಶವನ್ನು ಸೂಚಿಸುತ್ತವೆ. ಇದರ ನಿಷ್ಕೃಷ್ಟವಾದ ಅರ್ಥವನ್ನು ಇದಮಿತ್ಥಂ ಎಂದು ಹೇಳುವಂತಿಲ್ಲ. ಒಂದೊಂದು ಕಡೆ ಒಂದೊಂದರ್ಥವು ಭಾಷ್ಯಗಳಲ್ಲಿ ಹೇಳಲ್ಪಟ್ಟಿದೆ ಉದಾಹರಣೆಗೆ

ಕೋ ದದರ್ಶ ಪ್ರಥಮಂ ಜಾಯಮಾನಮಸ್ಥನ್ವಂತಂ ಯದನಸ್ವಾ ಬಿಭರ್ತಿ।
ಭೂಮ್ಯಾ ಅಸುರಸೃಗಾತ್ಮಾ ಕ್ವ ಸ್ವಿತ್ಕೋ ವಿದ್ವಾಂಸಮುಪ ಗಾತ್ಪ್ರಷ್ಟುಮೇತತ್ ॥
(ಋ. ಸಂ ೧-೧೬೪-೪)

ಎಂಬಲ್ಲಿ **ಅಸುಃ ಆತ್ಮಾ** ಎಂಬ ಎರಡು ಪದಗಳೂ ಪ್ರಯೋಗಿಸಲ್ಪಟ್ಟಿವೆ. **ಭೂಮ್ಯಾಃ ಅಸುರಸೃಕ್** ಎಂಬುದರಿಂದ ಪಾರ್ಥಿವವಾದ ಸ್ಥೂಲಶರೀರವನ್ನು ವರ್ಣಿಸಿದೆ. **ಅಸುಃ ಪ್ರಾಣಃ ತದುಪಲಕ್ಷಿತಂ ಸೂಕ್ಷ್ಮಶರೀರಂ ಅಸೃಕ್ ಶೋಣಿತಂ** ಎಂದು ಸಾಯಣರು ವಿವರಿಸಿದ್ದಾರೆ. ಪ್ರಾಣವೂ ಚೈತನ್ಯರೂಪಿಯಾದರೂ ಸಹ ಪಾರ್ಥಿವವೇ ಆಗಿರುತ್ತದೆ. ಭೌತಿಕಶರೀರದಲ್ಲಿ **ಸ್ಥೂಲ ಸೂಕ್ಷ್ಮ** ಎಂಬ ಎರಡು ಭೇದಗಳನ್ನು ಮಾಡಿ ಪ್ರಾಣವು ಸೂಕ್ಷ್ಮಶರೀರವೆಂದೂ ಅಸೃಗಾದಿಗಳು ಸ್ಥೂಲಶರೀರವೆಂದೂ ವಿಭಾಗಿಸಲ್ಪಟ್ಟಿದೆ. ಪ್ರಾಣರೂಪವಾದ ಚೇತನಕ್ಕೂ ಆತ್ಮರೂಪವಾದ ಚೇತನಕ್ಕೂ ವ್ಯತ್ಯಾಸವಿದೆಯೆಂದೂ ಸಹ ಸಾಯಣರ ವಿವರಣೆಯು ತಿಳಿಸುತ್ತದೆ. **ಆತ್ಮನನ್ನು ಪಂಚಭೂತಾತ್ಮಕ ಶರೀರಸಂಬದ್ಧಚೇತನಃ** ಎಂದು ವರ್ಣಿಸುವಾಗ ಭೌತಿಕಶರೀರಕ್ಕೂ ಆತ್ಮನಿಗೂ ಇರುವ ವ್ಯತ್ಯಾಸವನ್ನು ತಿಳಿಸಿದೆ. ದೇಹದ ವ್ಯಾಪಾರಗಳಿಗೆ ನಿಯಾಮಕಶಕ್ತಿ ಎಂಬರ್ಥದಲ್ಲಿಯೂ ಸಹ ಈ ಪದದ ಪ್ರಯೋಗವಿರುತ್ತದೆ. **ಆತ್ಮಾ ತೇ ವಾತಃ** ಇತ್ಯಾದಿ ಸಂದರ್ಭಗಳಲ್ಲಿ (೭-೮೭-೨) ಜಗನ್ನಿಯಾಮಕ ಶಕ್ತಿಯೆಂದೂ ಅರ್ಥ. ಇದು ದೇಹಾತಿರಿಕ್ತವಾದುದು. ಈ ಅಂಶವನ್ನೇ ತಿಳಿಸುತ್ತ—

ಅಜೋ ಭಾಗಸ್ತಪಸಾ ತಂ ತಪಸ್ವ ತಂ ತೇ ಶೋಚಿಸ್ತಪತು ತಂ ತೇ ಅರ್ಚಿಃ ।
ಯಾಸ್ತೇ ಶಿವಾಸ್ತನ್ವೋ ಜಾತವೇದಸ್ತಾಭಿರ್ವಹೈನಂ ಸುಕೃತಾಮು ಲೋಕಂ ॥

(ಋ ಸಂ. ೧೦-೧೬-೪)

ಎಂಬಲ್ಲಿ ಸಾಯಣರು **ಅಜ** ಶಬ್ದದ ಅರ್ಥವನ್ನು ವಿವರಿಸುತ್ತ **ಅಜಃ ಜನನರಹಿತಃ ಶರೀರೇಂದ್ರಿಯಭಾಗವ್ಯತಿರಿಕ್ತಃ ಅಂತರಪುರುಷಲಕ್ಷಣೋ ಯೋ ಭಾಗೋಽಸ್ತಿ** ಎಂದು ತಿಳಿಸಿದ್ದಾರೆ. ಜನನರಹಿತವಾದುದೂ, ಶರೀರೇಂದ್ರಿಯಗಳಿಗೆ ಭಿನ್ನವಾದುದೂ, ಪುರುಷಶರೀರದ ಒಳಗೆ ಅಡಗಿರುವುದೂ ಆದ ಭಾಗವೆಂದರ್ಥ. ಈ ಭಾಗವನ್ನು ದಹಿಸಬೇಡ, ಅದು ನಾಶವಾಗುವಂತೆ ಮಾಡಬೇಡ ಎಂದೂ ಅದನ್ನು ಶಾಶ್ವತವಾದ ಸ್ಥಾನಕ್ಕೆ ತಲಪುವಂತೆ ಮಾಡು ಎಂದೂ ಅಗ್ನಿಯನ್ನು ಮೇಲಿನ ಮಂತ್ರದಲ್ಲಿ ಪ್ರಾರ್ಥಿಸಿದೆ.

ಇದರಂತೆಯೇ **ಜೀವ** ಎಂಬ ಪದದ ಪ್ರಯೋಗವೂ ಇರುತ್ತದೆ. ಈ ಪದವು ಅನೇಕಕಡೆಗಳಲ್ಲಿ ಪ್ರಯುಕ್ತವಾಗಿರುತ್ತದೆ. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ಒಂದೇ ಅರ್ಥವನ್ನು ಹೇಳಿಲ್ಲ. ಪ್ರತ್ಯೇಕವಾದ **ಆತ್ಮ** ಎಂಬರ್ಥದಲ್ಲಿ ಎರಡುಕಡೆ ಮಾತ್ರ ಪ್ರಯುಕ್ತವಾಗಿರುತ್ತದೆ.

ಉದೀರ್ಷ್ವಂ ಜೀವೋ ಅಸುನರ್ ಅಗಾದಪ ಪ್ರಾಗಾತ್ತಮು ಆ ಜ್ಯೋತಿರೇತಿ ॥

(ಋ ಸಂ ೧೦-೧೮೩-೧೬)

ಜೀವೋ ಮೃತಸ್ಯ ಚರತಿ ಸ್ವಧಾಭಿರಮರ್ತ್ಯೋ ಮರ್ತ್ಯೇನಾ ಸಯೋನಿಃ ॥

(ಋ. ಸಂ. ೧೦-೧೬೪-೩೦)

ಎಂಬೆರಡು ಸನ್ನಿವೇಶಗಳಲ್ಲಿ ಮಾತ್ರ ಸಾಯಣರು **ಜೀವಶಬ್ದಕ್ಕೆ ಜೀವಾತ್ಮ** ಎಂಬ ಅರ್ಥವನ್ನೂ ತಿಳಿಸಿದ್ದಾರೆ. ಮೃತವಾಗುವ ಶರೀರಕ್ಕೆ ಸಂಬಂಧಿಸಿದುದೆಂದೂ, ಮರಣಾರ್ಹರಾದ ಜೀವದೊಡನೆ ಸಮಾನಸ್ಥಾನವುಳ್ಳದ್ದೆಂದೂ ಇದರ ಸ್ವರೂಪವನ್ನು ತಿಳಿಸಿದ್ದಾರೆ. **ಜೀವಾಪೇತಂ ವಾವ ಕಿಲೇದಂ ಮ್ರಿಯತೇ, ನ ಜೀವೋ ಮ್ರಿಯತೇ** (ಛಾ. ಉ. ೬-೧೧-೩) ಎಂಬ ಉಪನಿಷದ್ವಾಕ್ಯವನ್ನು ಉದಾಹರಿಸಿ ಜೀವ ಮತ್ತು ದೇಹಗಳಿಗಿರುವ ವ್ಯತ್ಯಾಸವನ್ನು ವಿವರಿಸಿದ್ದಾರೆ. ಇದರಂತೆಯೇ, **ಪ್ರಾಣ, ಮನಸ್** ಎಂಬ ಪದಗಳೂ **ಚೇತನ** ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಅಲ್ಲದೇ,

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿ ಷಸ್ವಜಾತೇ ।

(೧-೧೬೪-೨೦)

ಎಂಬಲ್ಲಿ **ಸುಪರ್ಣ** ಶಬ್ದವು ಜೀವಾತ್ಮಪರ್ಯಾಯವೆಂದು ತಿಳಿಸಿದ್ದಾರೆ. ಹೀಗೆ ನಾನಾ ಪದಗಳ ಪ್ರಯೋಗಗಳು ಶರೀರ ಭಿನ್ನವಾದ **ನಿತ್ಯತತ್ತ್ವ**ವನ್ನು ತಿಳಿಸುವುವಾಗಿರುತ್ತವೆ. ಒಟ್ಟಿನಲ್ಲಿ ಋಕ್ಸಂಹಿತಾವಾಕ್ಯಗಳಲ್ಲಿ ಸೂಕ್ತದ್ರವ್ಯಗಳಾದ ಋಷಿಗಳು **ಆತ್ಮನ** ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತ,

೧) ಪುರುಷನಲ್ಲಿ ಅಚೇತನಕ್ಕಿಂತಲೂ ಭಿನ್ನವಾದ ಒಂದು ಚೈತನ್ಯಾಂಶವಿರುತ್ತದೆ.

೨) ಅದು ದೇಹಾತಿರಿಕ್ತವಾದುದು. ದೇಹವು ನಾಶವಾದ ಮೇಲೂ ಅದು ಉಳಿಯುತ್ತದೆ.

೩) ಅದು ಜನನಮರಣರಹಿತವೂ ಶಾಶ್ವತವೂ ಆದುದು.

೪) ಅದು ಐಹಿಕಜೀವನದಲ್ಲಿ ದೇಹದ ಸತ್ತ್ವವೂ ದೇಹವ್ಯಾಪಾರಗಳ ನಿಯಾಮಕವೂ ಆಗಿರುತ್ತದೆ.

೫) ಅದು ಪಾರ್ಥಿವ ಜೀವನದಲ್ಲಿ ದೇಪಸಂಪರ್ಕವನ್ನು ಹೊಂದಿರುವಾಗ ಯಾವ ಕರ್ಮವನ್ನು ಮಾಡುವುದೋ ಆ ಕರ್ಮದಫಲವನ್ನು ದೇಹದಿಂದ ಬೇರೆಯಾದಾಗಲೂಸಹ ಅನುಭವಿಸುತ್ತದೆ, ಇತ್ಯಾದ್ಯಂಶಗಳನ್ನು ವಿಶದಪಡಿಸಿದ್ದಾರೆ.

ಮೃತನಾದ ಪುರುಷನಿಗೆ ಅವನವನ ಕರ್ಮಾನುಸಾರವಾಗಿ ಹೋಗಲು ದೇವಯಾನ, ಪಿತೃಯಾನ ಮತ್ತು ನರಕಯಾನ ಎಂಬ ಮೂರು ಮಾರ್ಗಗಳಿಗೆ. (ಋಕ್ಸಂಹಿತೆಯಲ್ಲಿ ಮೊದಲನೆಯ ಎರಡು ಮಾರ್ಗಗಳೂ ಸ್ಪಷ್ಟವಾಗಿ ವರ್ಣಿತವಾಗಿವೆ. ಮೂರನೆಯದಾದ **ನರಕಯಾನವು** ಕೆಲವು ವಿವರಣೆಗಳಿಂದ ಕೇವಲ ಸೂಚಿತವಾಗಿದೆ) ಇಪ್ಪುಗಳಲ್ಲಿ ದೇವಯಾನ ಮತ್ತು ಪಿತೃಯಾನ ಎಂಬೆರಡು ಮಾರ್ಗಗಳ ವ್ಯತ್ಯಾಸವನ್ನು ಹಿಂದೆ ಸೂಕ್ಷ್ಮವಾಗಿ ತಿಳಿಸಿದೆ· ಪಿತೃಯಾನವಾವುದು, ಪಿತೃತ್ವವು ಯಾರಿಗೆ ಮತ್ತು ಪಿತೃಲೋಕದ ಸ್ವರೂಪವೇನು ಎಂಬುದನ್ನು ಮಾತ್ರ ಪ್ರಕೃತದಲ್ಲಿ ತಿಳಿಯಬೇಕಾದ ಅಂಶವಾಗಿರುತ್ತದೆ

2) ಪಿತೃಗಣಗಳು ; ಪಿತೃಲೋಕಗಳು

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ ।
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತು ಪಿತರೋ ಹವೇಷು ॥

(ಋ. ಸಂ. ೧೦-೧೫-೧)

ಎಂಬ ಮಂತ್ರದಲ್ಲಿ ಪಿತೃಲೋಕಗಳು ನಿರ್ದಿಷ್ಟವಾಗಿವೆ. **ತ್ರಿವಿಧಾಃ ಪಿತರಃ ಉತ್ತಮಾ ಮಧ್ಯಮಾ ಅಧಮಾಶ್ಚೇತಿ ।** ಉತ್ತಮರು, ಮಧ್ಯಮರು, ಅಧಮರು ಎಂದು ಮೂರು ವಿಧವಾದ ಪಿತೃಗಣಗಳಿವೆ. ಇವರೆಲ್ಲರೂ ಸಹ ಋತಜ್ಞರೆಂದು ವರ್ಣಿತರಾಗಿದ್ದಾರೆ. ಕರುಣೆಯಿಂದ ಎಲ್ಲರನ್ನೂ ರಕ್ಷಿಸಲಿ ಎಂದು ಪ್ರಾರ್ಥಿತರಾಗಿದ್ದಾರೆ. ಆದರೆ, ಇವರ ಪಿತೃತ್ವವು ಹೇಗೆ, ಇವರೆಲ್ಲರೂ ಮೊದಲು ಪೃಥ್ವಿಯಲ್ಲಿ ಮಾನವತ್ವವನ್ನು ಹೊಂದಿ ನಂತರ ಅವರವರ ಸತ್ಕರ್ಮಾನುಷ್ಠಾನದ ಫಲವಾಗಿ ಮರಣಾನಂತರ ಪಿತೃಲೋಕವನ್ನು ಸೇರಿದವರೇ ಅಥವಾ, ಅನಾದಿಕಾಲದಿಂದಲೂ ಈ ಲೋಕಗಳಲ್ಲಿರತಕ್ಕವರೇ, ಇವರಿಗೂ ದಿವ್ಯಾಂಶವಿದೆಯೇ ಇತ್ಯಾದಿ ವಿಷಯಗಳನ್ನು ನಿಷ್ಕೃಷ್ಟವಾಗಿ ಹೇಳಲು ಶ್ರಮವಾಗುತ್ತದೆ. ಅನೇಕರ್ಷಿ ದಿವ್ಯತ್ವವನ್ನು ಹೊಂದಿ ಅತ್ಯುತ್ತಮವಾದ ದಿವ್ಯಲೋಕದಲ್ಲಿ ವಾಸಿಸುತ್ತಿರುವರೆಂದು ವರ್ಣಿತರಾಗಿದ್ದಾರೆ. ಇದಲ್ಲದೇ;— ಮೂರು ಬಗೆಯ ಪಿತೃಗಳ ಗಣಗಳನ್ನು ವಿಭಾಗಿಸುತ್ತ ಈ ಗಣಗಳನ್ನು ಶತಪಥದಲ್ಲಿ ಈ ರೀತಿ ನಿರ್ದೇಶಿಸಿದೆ—

ತದ್ಯೇ ಸೋಮೇನೇಜಾನಾಃ। ತೇ ಪಿತರಃ ಸೋಮವಂತೋಽಥ ಯೇ ದತ್ತೇನ ಪಕ್ವೇನ ಲೋಕಂ ಜಯಂತಿ ತೇ ಪಿತರೋ ಬರ್ಹಿಷದೋಽಥ ಯೇ ತತೋ ನಾನ್ಯತರಚ್ಚನ ಯಾನಗ್ನಿರೇವ ದಹನ್ಸ್ತ್ರದಯತಿ ತೇ ಪಿತರೋಽಗ್ನಿಷ್ವಾತ್ತಾ ಏತ ಉ ಯೇ ತೇ ಪಿತರಃ ॥

(ಶ. ಬ್ರಾ. ೨.೬.೧-೭)

ಸೋಮವನ್ನರ್ಪಿಸಿ ಯಜ್ಞವನ್ನು ನೆರವೇರಿಸಿದ ಪಿತೃಗಳು **ಸೋಮವಂತರು.** ಪಕ್ವವಾದ ಪುರೋಡಾಶಾದಿಗಳಿಂದ ದೇವಲೋಕವನ್ನು ಗಳಿಸಿದವರು **ಬರ್ಹಿಷದರು.** ಇವೆರಡೂ ಇಲ್ಲದೇ, ಕೇವಲ ಅಗ್ನಿಯಿಂದ ಮಾತ್ರ ದಗ್ಧರಾದವರು

ಅಗ್ನಿಷ್ವಾತ್ತರು ಹೀಗೆ ಮೂರು ವಿಭಾಗಗಳಿಂದ ಪಿತೃಗಳು ನಿರ್ದಿಷ್ಟರಾಗಿದ್ದಾರೆ. ಈ ಹೆಸರುಗಳು ಅವರವರ ಕರ್ಮಾನುಸಾರವಾಗಿವೆ ಹೀಗೆ ಪಿತೃಗಣಗಳ ವಿಭಾಗಕ್ರಮವು ಎರಡು ಬಗೆಯುಳ್ಳವಾಗಿರುತ್ತವೆ. ಶ್ರಾದ್ಧಪ್ರಕರಣ ಮೊಲಲ ವಿಭಾಗವನ್ನು ಪರಿಶೀಲಿಸಿದರೆ, **ಪರಾಸಃ** ಎಂದು ವರ್ಣಿತರಾಗಿರುವ ಪಿತೃಗಳು ಅತ್ಯತಿಶಯವಾದ ದಿವ್ಯಸ್ವರೂಪವನ್ನು ಹೊಂದಿರುವವರಾಗಿದ್ದಾರೆ.

ಅಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ ॥

(ಋ ಸಂ ೧೦-೧೪-೭)

ಋಭುಗಳು, ಮರುತ್ತುಗಳು, ಅಂಗಿರಸ್ಸುಗಳು, ವಿರೂಪರು, ನವಗ್ವರು, ದಶಗ್ವರು, ಅಥರ್ವರು, ಭೃಗುಗಳು ಮತ್ತು ಕುಶಿಕರು ಇವರೆಲ್ಲರೂ ಈ ಗುಂಪಿಗೆ ಸೇರಿದವರು. ಇವರೆಲ್ಲರೂ ಸಹ ತಮ್ಮ ಅತ್ಯುತ್ತಮವಾದ ಕರ್ಮಗಳಿಂದ ದಿವ್ಯತ್ವವನ್ನು ಪಡೆದು ಅಮರ್ತ್ಯರಾಗಿ ದೇವತೆಗಳಂತೆಯೇ ಪೂಜ್ಯಾರ್ಹರಾದವರು.

ಇಂದ್ರಸ್ಯ ಸಖ್ಯಮೃಭವಃ ಸಮಾನಶುರ್ಮನೋರ್ನಪಾತೋ ಅಪಸೋ ದಧನ್ವಿರೇ ।
ಸುಧನ್ವನಾಸೋ ಅಮೃತತ್ವಮೇರಿರೇ ವಿಷ್ವೀ ಶಮೀಭಿಃ ಸುಕೃತಃ ಸುಕೃತ್ಯಯಾ ॥

(ಋ. ಸಂ ೩-೬೦-೩)

ಮಾನವರ ಗುಂಪಿಗೆ ಸೇರಿದವರೂ ಸುಧನ್ವನಪುತ್ರರೂ ಆದ ಋಭುಗಳು ಉತ್ತಮವಾದ ಯಜ್ಞಕರ್ಮವನ್ನಾಚರಿಸಿ ಇಂದ್ರನ ಸಖ್ಯವನ್ನು ಹೊಂದಿದರು. ಸುಧನ್ವಪುತ್ರರಾದ ಋಭುಗಳು ತಮ್ಮ ಉತ್ತಮವಾದ ಕರ್ಮದಿಂದ ದಿವ್ಯತ್ವವನ್ನೂ ಮರಣರಾಹಿತ್ಯವನ್ನೂ ಪಡೆದರು ಎಂಬ ಪ್ರಶಂಸೆಯು ಅನೇಕ ಸಂದರ್ಭಗಳಲ್ಲಿ ಬೇರೆಬೇರೆ ರೂಪದಲ್ಲಿ ಪುನರುಕ್ತವಾಗಿರುತ್ತದೆ. (೪-೩೫-೪ ಇತ್ಯಾದಿ)

ತೇ೨ವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು ಚಕ್ರಿರೇ ಸದಃ ।
ವಿಷ್ಣುರ್ಯದ್ಧಾವದ್ವೃಷಣಂ ಮದಚ್ಯುತಂ ವಯೋ ನ ಸೀದನ್ನಧಿ ಬರ್ಹಿಷಿ ಪ್ರಿಯೇ ॥

(ಋ. ಸಂ. ೧-೪೫-೭)

ಸ್ವಶಕ್ತಿಯಿಂದಲೇ ಸಂಚರಿಸಕ್ಕವರೂ ಅತ್ಯಧಿಕವಾದ ಮಾಹತ್ಮ್ಯವುಳ್ಳವರೂ ಆದ ಮರುತ್ತುಗಳು ಸ್ವರ್ಗಲೋಕವನ್ನು ಹತ್ತಿ ಅಲ್ಲಿ ವಾಸಿಸುವ ಅಧಿಕಾರವನ್ನು ಪಡೆದಿದ್ದಾರೆ. ಅಂತಹ ಮರುತ್ತುಗಳು ನಮ್ಮನ್ನು ಅನುಗ್ರಹಿಸಲಿ.

ಯೇ ಯಜ್ಞೇನ ದಕ್ಷಿಣಯಾ ಸಮಕ್ತಾ ಇಂದ್ರಸ್ಯ ಸಖ್ಯಮಮೃತತ್ವಮಾನಶ ।
ತೇಭ್ಯೋ ಭದ್ರಮಂಗಿರಸೋ ವೋ ಅಸ್ತು ಪ್ರತಿ ಗೃಭ್ಣೀತ ಮಾನವಂ ಸುಮೇಧಸಃ ॥

(ಋ. ಸಂ. ೧೦-೬೨-೯)

ಯಜ್ಞಾರ್ಹವಾದ ಹವಿಸ್ಸುಗಳಿಂದಲೂ ದಕ್ಷಿಣೆಗಳಿಂದಲೂ ಕೂಡಿ ದೇವಪೂಜೆಯನ್ನು ಮಾಡಿದ ಎಲೈ ಅಂಗಿರಸ್ಸುಗಳೇ, ನೀವು ನಿಮ್ಮ ಸತ್ಕರ್ಮಗಳಿಂದ ಇಂದ್ರನ ಸಖ್ಯವನ್ನು ಪಡೆದಿರಿ. ಆದುದರಿಂದಲೇ ನಿಮಗೆ ಮರಣರಾಹಿತ್ಯವೂ ಲಭಿಸಿತು. ಸತ್ಕರ್ಮಕಾರಿಗಳೂ, ಸದ್ಗತಿಯನ್ನು ಪಡೆದವರೂ ಆದ ಎಲೈ ಅಂಗಿರಸ್ಸುಗಳೇ, ನಮ್ಮನ್ನು ಅನುಗ್ರಹಿಸಿರಿ. ಇತ್ಯಾದಿಯಾಗಿ, ಋಭುಗಳು, ಮರುತ್ತುಗಳೂ, ಅಂಗಿರಸ್ಸುಗಳೂ ಸಹ ದಿವ್ಯತ್ವವನ್ನು ಪಡೆದ ಸನ್ನಿವೇಶಗಳನ್ನು ತಿಳಿಸಿವೆ ಇದರಂತೆಯೇ,

ಮುಷ್ಟೂ ಕನಾಯಾಃ ಸಖ್ಯಂ ನವಗ್ವಾ ಋತಂ ವದಂತ ಋತಯುಕ್ತಿಮುಗ್ಮನ್ ।

(೧೦-೬೧-೧೦)

ಇತ್ಯಾದಿ ವಾಕ್ಯಗಳಿಂದ ನವಗ್ವರು, ದಶಗ್ವರು, ಭೃಗುಗಳು ಇತ್ಯಾದಿ ಪಿತೃಗಣಕ್ಕೆ ಸೇರಿದ ಋಷಿಗಳ ಮಹಾತ್ಮ್ಯವನ್ನು ಸ್ತುತಿಸಿದೆ. ಪ್ರಾಯಶಃ ಇವರೆಲ್ಲರೂ ಸಹ ಆದಿತ್ಯನ ದಿವ್ಯತೇಜಸ್ಸನ್ನು ಹೊಂದಿದವರು ಎಂದೂ ಸೂರ್ಯಸಂಧಿಬಂಗಳಾದ ಪೂಷಾದಿದೇವತೆಗಳಿಂದ ರಕ್ಷಿತರಾದವರು ಎಂದೂ ವರ್ಣಿತರಾಗಿದ್ದಾರೆ. ಆ ಲೋಕಕ್ಕೆ ಹೋಗಿ ಸೇರತಕ್ಕ ಪ್ರೇತಗಳಿಗೂ ಪೂಷನೇ ರಕ್ಷಕನಾಗಿರು ಎಂದು ಪ್ರಾರ್ಥಿಸಿದೆ.

ಆಯುರ್ವಿಶ್ವಾಯುಃ ಪರಿ ಪಾಸತಿ ತ್ವಾ ಪೂಷಾ ತ್ವಾ ಪಾತು ಪ್ರಪಥೇ ಪುರಸ್ತಾತ್ ।
ಯತ್ರಾಸತೇ ಸುಕೃತೋ ಯತ್ರ ತೇ ಯಯುಸ್ತತ್ರ ತ್ವಾ ದೇವಃ ಸವಿತಾ ದಧಾತು ॥

(ಋ. ಸಂ ೧೦-೧೭-೪)

ಸರ್ವಾಂತರ್ಯಾಮಿಯಾದ ವಾಯುವು ನಿನ್ನನ್ನು ರಕ್ಷಿಸಲಿ. ಸ್ವರ್ಗದ ಉತ್ತಮವಾದ ಮಾರ್ಗದಲ್ಲಿ ಹೋಗುವ ನಿನ್ನನ್ನು ಪೂಷದೇವನು ರಕ್ಷಿಸಲಿ. ಹಿಂದೆ ತಮ್ಮ ದಿವ್ಯಕರ್ಮದಿಂದ ಉತ್ತಮವಾದ ಲೋಕವನ್ನು ಪಡೆದ ಯಾವ ಉತ್ತಮವಾದ ಪಿತೃಗಳು ಇರುವರೋ ಅಲ್ಲಿ ಸವಿತೃವು ನಿನ್ನನ್ನು ಸ್ಥಾಪಿಸಲಿ ಎಂದು ಈ ಪಿತೃಗಳ ಉತ್ತಮವಾದ ಲೋಕದಲ್ಲಿ ಸೂರ್ಯನ ಸಂಬಂಧವು ತಿಳಿಸಲ್ಪಟ್ಟಿದೆ. ಕೆಳಗೆ ಉದಾಹೃತವಾಗಿರುವ ಕೆಲವು ಮಂತ್ರಗಳು ಉತ್ತಮಗಣಕ್ಕೆ ಸೇರಿದ ಪಿತೃಗಳಿಗೂ, ಅತ್ಯುತ್ತಮವೂ ತೇಜೋಯುತವೂ ಆದ ಲೋಕಸ್ಥನಾದ ಆದಿತ್ಯನಿಗೂ ಇರುವ ಸಂಬಂಧವನ್ನು ತಿಳಿಸುತ್ತವೆ.

ಆ ಭರತಂ ಶಿಕ್ಷತಂ ವಜ್ರಬಾಹೂ ಅಸ್ಮಾ ಇದ್ಗ್ನೀ ಅವತಂ ಶಚೀಭಿಃ ।
ಇಮೇ ನು ತೇ ರಶ್ಮಯಃ ಸೂರ್ಯಸ್ಯ ಯೇಭಿಃ ಸಪಿತ್ವಂ ಪಿತರೋ ನ ಆಸನ್ ॥

(ಋ. ಸಂ. ೧೦೮೮-೨)

ಉಚ್ಚಾ ದಿವಿ ದಕ್ಷಿಣಾವಂತೋ ಅಸ್ಥುರ್ಯೇ ಅಶ್ವದಾಃ ಸಹ ತೇ ಸೂರ್ಯೇಣ ।
ಹಿರಣ್ಯದಾ ಅಮೃತತ್ವಂ ಭಜಂತೇ ವಾಸೋದಾಃ ಸೋಮ ಪ್ರತಿರಂತು ತಯುಃ ॥

(೧೦ ೧೦೭-೨)

ಸಹಸ್ರಣೀಥಾಃ ಕವಯೋ ಯೇ ಗೋಪಾಯಂತಿ ಸೂರ್ಯಂ ।
ಋಷೀನ್ ತಪಸ್ವತೋ ಯಮ ತಪೋಜಾಁ ಅಪಿ ಗಚ್ಛಾತ್ ॥

(೧೦-೧೫೪-೫)

ಯಾವ ಆದಿತ್ಯರಶ್ಮಿಗಳೊಡನೆ ಉತ್ತಮವಾದ ಕರ್ಮಕರ್ತರಾದ ನಮ್ಮ ಪಿತೃಗಳು ಐಕ್ಯವನ್ನು ಹೊಂದಿದರೋ ಮತ್ತು ಆ ರಶ್ಮಿಗಳೊಡನೆ ಬ್ರಹ್ಮಲೋಕವನ್ನು ಸೇರಿದರೋ, ಆ ರಶ್ಮಿಗಳು ನಮ್ಮನ್ನು ಅನುಗ್ರಹಿಸಲಿ. ಯಜ್ಞಕರ್ಮದಲ್ಲಿ ದಕ್ಷಿಣೆಯನ್ನು ಉದಾರವಾಗಿ ದಾನಮಾಡಿದವರು ಉತ್ತಮಲೋಕವನ್ನು ಸೇರಿದ್ದಾರೆ. ಅಶ್ವದಾನವನ್ನು ಮಾಡಿದವರು ಸೂರ್ಯಲೋಕವನ್ನು ಸೇರಿದ್ದಾರೆ. ಇಂತಹ ಉತ್ತಮವಾದ ಕರ್ಮವನ್ನು ಮಾಡಿದವರು ಆದಿತ್ಯನನ್ನೂ ಸಹ ರಕ್ಷಿಸಲು ಸಮರ್ಥರಾಗಿದ್ದಾರೆ. ಎಲೈ ಯಮನೇ, ಅಂತಹ ಉತ್ತಮವಾದ ಲೋಕಕ್ಕೆ ತಪೋಯುಕ್ತರಾದ ಋಷಿಗಳನ್ನು ಕರೆದುಕೊಂಡು ಹೋಗು ಇತ್ಯಾದಿಯಾಗಿ ಪ್ರಾರ್ಥಿತವಾಗಿದೆ.

ಪೃಥಿವ್ಯಾಃ ಸದಸ್ಕೇ ಅಂಗಿರಸ್ವತ್ಪೇಚುಸ್ತಾಭಿರೇವೈನಾನೇತತ್ಪಚತಿ ತಾನಿ ಹ ತಾನಿ ನಕ್ಷತ್ರಾ-ಣ್ಯೇವ ನಕ್ಷತ್ರಾಣಿ ವೈ ಜನಯೋ ಯೇ ಹಿ ಜನಾಃ ಪುಣ್ಯಕೃತಃ ಸ್ವರ್ಗಂ ಲೋಕಂ ಯಂತಿ ತೇಷಾಮೇತಾನಿ ಜ್ಯೋತೀಗ್ಂಷಿ ನಕ್ಷತ್ರೈರೇವೈನಾನೇತತ್ಪಚತಿ ॥

(ಶ. ಬ್ರಾ. ೬-೫ ೪.೮)

ಆ ದಿವ್ಯಸ್ತ್ರೀಯರು, ಆಂಗಿರಸ್ಸುಗಳಂತೆಯೇ, ಪೃಥ್ವಿಯ ಉತ್ಸಂಗದಲ್ಲಿ ಪಾಕಮಾಡಿದರು. ಅವರ ಸಹಾಯದಿಂದ ಅವನೂ ಸಹ ಈಗ ಪಾಕಮಾಡುತ್ತಿರುವನು. ಯಾವ ದಿವ್ಯಸ್ತ್ರೀಯರು ಹಿಂದೆ ತಮ್ಮ ಉತ್ತಮವಾದ ಕರ್ಮದಿಂದ ದೇವತೆಗಳನ್ನು ಪೂಜಿಸಿದರೋ ಅವರೇ ಈಗ ನಕ್ಷತ್ರರೂಪದಲ್ಲಿ ಪ್ರಕಾಶಿಸುತ್ತಿದ್ದಾರೆ. ಹಿಂದೆಲ್ಲ ದಿವ್ಯತ್ವವನ್ನು ಪಡೆದು ಅಂತರಿಕ್ಷವನ್ನು ಸೇರಿದ ಪಿತೃಗಳೇ ಈಗ ನಕ್ಷತ್ರರೂಪದಲ್ಲಿ ಪ್ರಕಾಶಿಸುತ್ತಿದ್ದಾರೆ. ಆ ನಕ್ಷತ್ರಗಳೇ ಈ ಯಜಮಾನನಿಗೂ ಸಹಾಯಮಾಡುತ್ತಿವೆಯೆಂದು ಪ್ರಶಂಸಿಸಿದೆ.

ಒಟ್ಟಿನಲ್ಲಿ, ಈ ದಿವ್ಯತ್ವವನ್ನು ಪಡೆದ ಪಿತೃಗಳ ವರ್ಣನೆಯೇ ಅತ್ಯಧಿಕವಾಗಿರುತ್ತದೆ. ಅವರ ಲೋಕವೆಂಬು ದನ್ನು ಸ್ಥೂಲವಾದ ದೃಷ್ಟಿಯಿಂದ ಯಮಲೋಕವೆನ್ನಬಹುದು. (ಆದರೆ, ಯಮನಿಗೂ ಆದಿತ್ಯನಿಗೂ ಅನೇಕ ಸನ್ನಿವೇಶಗಳಿಂದ ತಾದಾತ್ಮ್ಯವನ್ನು ತೋರಿಸಿ ಆದಿತ್ಯಲೋಕವೇ ಯಮಲೋಕವೆಂಬುದನ್ನೂ ಸಹ ಹಿಂದೆ ಯಮನ ವಿಷಯವನ್ನು ವಿವರಿಸುವಾಗ ತಿಳಿಸಿದೆ) ಈ ಅವರ (ಕೆಳಗಿನ) ಲೋಕವು ಸಾಧಾರಣವಾದ ಸತ್ಕರ್ಮವನ್ನು ಮಾಡಿದ ಪಿತೃಗಳ ಲೋಕಗಳಾಗಿರುತ್ತವೆ. ಆದರೆ, ಉಳಿದೆರಡು ಲೋಕಗಳೇ ಅಧಿಕವಾಗಿ ಪ್ರಶಂಸಿತಗಳಾಗಿರುತ್ತವೆ ಅತ್ಯುತ್ತಮವಾದ ಈ ಲೋಕಗಳ ವರ್ಣನವೂ ಪ್ರಶಂಸೆಯೂ ಈ ರೀತಿಯಲ್ಲಿರುತ್ತದೆ.

ಯತ್ರ ಜ್ಯೋತಿರಜಸ್ರಂ ಯಸ್ಮಿಂಲ್ಲೋಕೇ ಸ್ವರ್ಹಿತಂ ।

(ಋ. ಸಂ. ೯-೧೧೩.೭)

ಯತ್ರ ರಾಜಾ ವೈವಸ್ವತೋ ಯತ್ರಾವರೋಧನಂ ದಿವಃ ।
ಯತ್ರಾಮೂರ್ಯಹ್ವತೀರಾಪಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥
ಯತ್ರಾನುಕಾಮಂ ಚರಣಂ ತ್ರಿನಾಕೇ ತ್ರಿದಿವೇ ದಿವಃ ।
ಲೋಕಾ ಯತ್ರ ಜ್ಯೋತಿಷ್ಮಂತಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥
ಯತ್ರ ಕಾಮಾ ನಿಕಾಮಾಶ್ಚ ಯತ್ರ ಬ್ರಧ್ನಸ್ಯ ವಿಷ್ಟಪಂ ।
ಸ್ವಧಾ ಚ ಯತ್ರ ತೃಪ್ತಿಶ್ಚ ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥
ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ।
ಕಾಮಸ್ಯ ಯತ್ರಾಪ್ತಾಃ ಕಾಮಾಸ್ತತ್ರ ಮಾಮಮೃತಂ ಕೃಧೀಂದ್ರಾಯೇಂದೋ ಪರಿ ಸ್ರವ ॥

(ಋ. ಸಂ. ೯. ೧೧೩ ೯-೧೧)

ಯಾವ ಲೋಕದಲ್ಲಿ ಆದಿತ್ಯನು ಸ್ಥಾಪಿತನಾಗಿ ಅಲ್ಲಿ ದಿವ್ಯ ತೇಜಸ್ಸು ಶಾಶ್ವತವಾಗಿ ಪ್ರಕಾಶಿಸುವುದೋ, ಎಲ್ಲಿ ವಿವಸ್ವಂತನ ಪುತ್ರನಾದ ಯಮನು ಪ್ರಭುವಾಗಿರುವನೋ, ಎಲ್ಲಿ ಆದಿತ್ಯನ ಅಂತರ್ಗೃಹವಿರುವುದೋ, ಎಲ್ಲಿ ನಿತ್ಯವಾದ ಉದಕ ಪ್ರವಾಹಗಳಿರುವುವೋ, ಯಾವ ತೃತೀಯ ಸ್ಥಾನವಾದ ದ್ಯುಲೋಕದಲ್ಲಿ ಆದಿತ್ಯನು ಯಥಾಕಾಮನಾಗಿ ಸಂಚರಿಸುವನೋ, ಎಲ್ಲಿ ನಿತ್ಯವಾದ ಆನಂದವಿರುವುದೋ, ಎಲ್ಲಿ ಶ್ರೇಯಸ್ಸೂ ಕಾಮಸಂತೃಪ್ತಿಯೂ, ನಿತ್ಯವಾದ ಆನಂದವೂ ಇರು

ವುದೋ, ಅಲ್ಲಿ ನನ್ನನ್ನು ಅಮೃತನನ್ನಾಗಿ ಮಾಡು ಎಂದು ಪ್ರಾರ್ಥಿಸಿದೆ. ಅಂಗಿರಸ್ಸುಗಳು, ಋಭುಗಳು ಇತ್ಯಾದಿಗಳಿಗೆ ಆನಂದದಾಯಕವಾದ ಈ ಸ್ಥಾನವು ಅತ್ಯುತ್ತಮವಾದ ಪರಸ್ಥಾನವು. ಇಲ್ಲಿ ವಾಸಮಾಡುತ್ತಿರುವವರನ್ನೇ **ಪರಾಸಃ** ಎಂದು ನಿರ್ದೇಶಿಸಿದೆ. ಇವರು ಪೃಥ್ವಿಯನ್ನು ಆಶ್ರಯಿಸಿರುವ ದೇಹವನ್ನು ಬಿಟ್ಟೋಡನೆಯೇ ದಿವ್ಯಜ್ಯೋತಿಯ ಪಡೆದು ರಥದಲ್ಲಿಯೋ ಅಥವಾ ಪಕ್ಷ (ರೆಕ್ಕೆ) ಗಳ ಸಹಾಯದಿಂದಲೇ ಆ ಲೋಕಕ್ಕೆ ತೆರಳುವರು. (ಅ. ವೇ. ೧೧. ೧. ೩೭) ಒಂದೊಂದು ಸಲ ಮರುತ್ತುಗಳೂ ಇಂತಹ ಜೀತನಗಳನ್ನು ಒಯ್ಯುವುದುಂಟು. (ಅ. ವೇ. ೧೪. ೨. ೨೧–೬). **ಸಂ ಗಚ್ಛಸ್ವ ಪಿತೃಭಿಃ** (ಋ. ಸಂ. ೧೦-೧೪-೮) ಇತ್ಯಾದಿ ವಾಕ್ಯಗಳು ಪಿತೃಗಳಿಗೆ ರಾಜನಾದ ಯಮಲೋಕವೇ ಈ ಮೃತರ ಉದ್ದಿಷ್ಟಸ್ಥಾನವೆಂಬುದನ್ನು ತಿಳಿಸುತ್ತವೆ.

ಅನತಿಪ್ರಶ್ನ್ಯಂ ವಾ ದೇವತಾಮತ್ಯಪ್ರಾಕ್ಷೀಃ ಪುರೇತಿಥ್ಯೈ ಮರಿಷ್ಯಸಿ ನ ತೇಽಶ್ನೀನಿ ಚನ ಗೃಹಾನ್ ಪ್ರಾಪ್ಸ್ಯಂತೀತಿ ....

(ಶ. ಬ್ರಾ. ೧೧ ೬. ೩ ೧೧)

ಇತ್ಯಾದಿ ವಾಕ್ಯಗಳಿಂದ ಮೃತದೇಹವು ದಗ್ಧವಾಗುವುದಕ್ಕೂ ಮೃತಿಹೊಂದಿದ ಪ್ರೇತಗಳು ಯಮನ ದಿವ್ಯಲೋಕಕ್ಕೆ ಹೋಗುವುದಕ್ಕೂ ಸಂಬಂಧವಿರುವುದನ್ನು ತಿಳಿಸುತ್ತವೆ. ಈ ವಿವರಣೆಗಳು ಅತ್ಯುತ್ತಮವಾದ ಸತ್ಕರ್ಮಗಳನ್ನು ಮಾಡಿದ ಜೀತನಗಳಿಗೆ ಮಾತ್ರ ಅನ್ವಯಿಸುವುವು. ಆದರೆ, ಉಳಿದ ಜೀತನಗಳ ಗತಿಯೇನು ? ಅವುಗಳ ಮರಣಾಂತರ ಅವುಗಳ ಸಂಚಾರಮಾರ್ಗಗಳಾವುವು ? ಇತ್ಯಾದಿ ವಿಷಯಗಳನ್ನೂ ಸದ್ಯಃ ಪರಿಶೀಲಿಸಬೇಕಾಗಿರುತ್ತದೆ.

ಮೃತರಾದ ಪ್ರೇತಗಳು ಯಮಲೋಕಕ್ಕೆ ಹೋಗುವಾಗ ಅಲ್ಲಿ ನಾಲ್ಕು ಕಣ್ಣುಳ್ಳವೂ, ದೀರ್ಘವಾದ ನಾಸಿಕಗಳುಳ್ಳವೂ ಭಯಂಕರವಾದವೂ ಆದ ಸಾರಮೇಯಗಳನ್ನು (ನಾಯಿ) ದಾಟಿಹೋಗಬೇಕಾಗುತ್ತದೆ. ಭಯಂಕರವಾದ ಆ ಸಾರಮೇಯಗಳನ್ನು ದಾಟಿಕೊಂಡು ಶೀಘ್ರವಾಗಿ ಯಮನ ಸಾನ್ನಿಧ್ಯವನ್ನು ಸೇರಬೇಕೆಂದು ಪ್ರೇತನಿಗೆ ಸೂಚಿಸಲಾಗಿದೆ. ಅಲ್ಲದೆ, ಯಮನಲ್ಲಿಗೆ ಹೋಗಿ ಸೇರತಕ್ಕ ಪ್ರೇತಗಳನ್ನು ರಕ್ಷಿಸತಕ್ಕವೂ ಅವೇ ಎಂದು ತಿಳಿಸಲಾಗಿದೆ. **ಯಮಸಂಬಂಧಿನೌ ಶ್ವಾನೌ ಪ್ರೇತಸ್ಯ ಬಾಧಕೌ ತೌ ಪರಿತ್ಯಜ್ಯ ಸಮಿಾಚೀನೇನ ಮಾರ್ಗೇಣ ಪ್ರೇತಂ ನಯ** ಪ್ರೇತಗಳಿಗೆ ಹಿಂಸಕವಾದ ಯಮನ ಸಾರಮೇಯಗಳನ್ನು ದಾಟಿಸಿ ಯಮನಲ್ಲಿಗೆ ಕರೆದುಕೊಂಡು ಹೋಗು ಎಂದು ಅಗ್ನಿಯನ್ನು ಪ್ರಾರ್ಥಿಸಿದೆ. (ಋ. ಸಂ. ೧೦-೧೪-೧೦). ಮತ್ತು **ತಾಭ್ಯಾಮೇನಂ ಪರಿ ದೇಹಿ** (೧೦-೧೪-೧೧) ಈ ಪ್ರೇತಗಳ ರಕ್ಷಣಾರ್ಥವಾಗಿ ಇವನ್ನು ಆ ಶ್ವಾನಗಳಲ್ಲಿ ಒಪ್ಪಿಸು ಎಂದು ಯಮನನ್ನು ಪ್ರಾರ್ಥಿಸಿದೆ. ಅಲ್ಲದೇ—**ಉರೂಣಸಾವಸುಕೃಪಾ ಉದಂಬಲೌ ಯಮಸ್ಯ ದೂತೌ ಚರತೋ ಜನಾ ಅನು** (೧೦-೧೪-೧೨) ಪ್ರಾಣಿಗಳ ರಕ್ತವನ್ನುಹೀರಿಕೊಬ್ಬಿರುವ ಆ ಶ್ವಾನಗಳು ಪ್ರಾಣಿಗಳನ್ನೇ ಯಾವಾಗಲೂ ಲಕ್ಷಿಸಿ ಸಂಚರಿಸುವುವು ಎಂಬ ವರ್ಣನವೂ ಸಹ ಅವುಗಳ ಭಯಂಕರಸ್ವರೂಪವನ್ನು ತಿಳಿಸುತ್ತದೆ. ಈ ಎರಡು ಅಂಶಗಳನ್ನು ತಿಳಿಸಿರುವುದರಿಂದ ಸತ್ಕರ್ಮಕಾರರನ್ನು ಅವು ರಕ್ಷಿಸುವುವೆಂದೂ, ಅಸತ್ಕರ್ಮಕಾರರನ್ನು ಹಿಂಸಿಸುವುದೆಂದೂ ತಾತ್ಪರ್ಯವಾಗಬಹುದು. (ಆ ಸಾರಮೇಯಗಳ ನಿಜವಾದ ಸ್ವರೂಪವೇನಿರಬಹುದೆಂಬುದನ್ನು ಹಿಂದೆ ತಿಳಿಸಿದೆ).

ಆದರೆ, ಸತ್ಕರ್ಮಿಗಳಿಗೆ ಪ್ರಾಶಸ್ತ್ಯವೂ ಅಸತ್ಕರ್ಮಿಗಳಿಗೆ ಶಿಕ್ಷೆಯೂ ವಿಹಿತವಾಗಿರುವ ವಿಷಯವನ್ನು ಋಕ್ಸಂಹಿತೆಯಲ್ಲಿ ಎಲ್ಲೂ ನಿಷ್ಕೃಷ್ಟವಾಗಿ ತಿಳಿಸಿಲ್ಲ

ಯದ್ವಷ್ಟಿನೋ ವೇದ್ಯಂತಃ ಸ ಯತ್ಸಾಧು ಕರೋತಿ ತದಂತರ್ವೇದ್ಯಥ ಯದಸಾಧು (ಶ. ಬ್ರಾ. ೧೧-೨.೭-೩೩) ಇತ್ಯಾದಿ ಸ್ಥಳಗಳಲ್ಲಿ ಮಾತ್ರ ಈ ವ್ಯತ್ಯಾಸವು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಸಾಧುಗಳಿಗೆ ಲಭಿಸತಕ್ಕ ಸದ್ಗತಿ ಯಾವುದು, ಅಲ್ಲಿ ಅವರಿಗೆ ಯಾವ ಸೌಖ್ಯವಿರುತ್ತದೆ ಎಂಬುವುದನ್ನು ಮೇಲೆ ವಿವರಿಸಿದೆ. ಅಸತ್ಕರ್ಮಿಗಳಿಗೆ ಈ ಪದವಿ ಯಿಲ್ಲ. ಅವರಿಗೆ ಲಭಿಸತಕ್ಕ ಫಲಗಳೇನು ಎಂದರೆ, ನರಕಪ್ರಾಪ್ತಿ. ನರಕದ ಸ್ವರೂಪವನ್ನು ಪುರಾಣಾದಿಗಳಲ್ಲಿ ವರ್ಣಿ ಸಿರುವಂತೆ ಋಕ್ಸಂಹಿತೆಯಲ್ಲಿ ವಿವರಿಸಿಲ್ಲ. ಆದರೂ ಸಹ ಅವರಿಗೆ ಸದ್ಗತಿಯಿಲ್ಲ ಮತ್ತು ಅಂಧಕಾರರೂಪವಾದ ಅಧೋ ಲೋಕದಲ್ಲಿ ಅವರನ್ನು ತಳ್ಳತಕ್ಕದ್ದು ಎಂಬ ಸನ್ನಿವೇಶಗಳು ವರ್ಣಿತವಾಗಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಲಾಗುತ್ತದೆ.

ಅಭ್ರಾತರೋ ನ ಯೋಷಣೋ ವ್ಯಂತಃ ಪತಿರಿಪೋ ನ ಜನಯೋ ದುರೇವಾಃ ।
ಪಾಪಾಸಃ ಸಂತೋ ಅನೃತಾ ಅಸತ್ಯಾ ಇದಂ ಪದಮಜನತಾ ಗಭೀರಂ ॥
(ಋ. ಸಂ. ೪-೫-೫)

ಎಂಬಲ್ಲಿ ಪಾಪಿಷ್ಠರಿಗೆ ಲಭಿಸತಕ್ಕ ಲೋಕವನ್ನು ಗಭೀರವಾದ ಅಂಧಕಾರಲೋಕವೆಂದು ತಿಳಿಸಿದೆ. ಅದರ ಜೊತೆ ಯಲ್ಲಿ ಒದಗತಕ್ಕ ದುಃಖವೂ ವರ್ಣಿತವಾಗಿದೆ. ಅನೃತಾತ್ಮರೂ, ಅಸತ್ಯವಂತರೂ ಇತರ ವಿಧವಾದ ಪಾಪವನ್ನು ಆಚರಿಸಿದವರೂ ಆದ ಜನರಿಗೆ ಅತ್ಯಂತ ದುಃಖವು ಸಂಭವಿಸಲಿ. ರಕ್ಷಕರಿಲ್ಲದ ಅನಾಥೆಯಾದ ಸ್ತ್ರೀಯಂತೆಯೂ, ಪತಿ ಯಿಂದ ದ್ವೇಷಿಸಲ್ಪಟ್ಟ ಹೆಂಗಸಿನಂತೆಯೂ ಸಹ ಪಾಪಾತ್ಮರಾದ ಈ ಜೀತನಗಳು ದಿಕ್ಕಿಲ್ಲದೆ ಈ ಅಂಧಕಾರದಲ್ಲಿ ಅಲೆಯಲಿ.

ಇಂದ್ರಾ ಸೋಮಾ ದುಷ್ಕೃತೋ ವವ್ರೇ ಅಂತರನಾರಂಭಣೇ ತಮಸಿ ಪ್ರ ವಿಧ್ಯತಂ ।
ಯಥಾ ನಾತಃ ಪುನರೇಕಶ್ಚನೋದಯತ್ತದ್ವಾಮಸ್ತು ಸಹಸೇ ಮನ್ಯುಮಚ್ಛವಃ ॥
(ಋ. ಸಂ. ೭ ೧೦೪ ೩)

ಎಲೈ ಇಂದ್ರ ಮತ್ತು ಸೋಮ ದೇವತೆಗಳೇ, ದುಷ್ಕೃತ್ಯಜೀವನವನ್ನು ನಡೆಸಿದ ದುಷ್ಟರಾದ ರಾಕ್ಷಸರನ್ನು ತಳವಿಲ್ಲದ ಅಂಧ ಕಾರಲೋಕಕ್ಕೆ ತಳ್ಳಿರಿ. ಅವರಲ್ಲಿ ಒಬ್ಬರೂ ಮೇಲಕ್ಕೇಳದವರಾಗಲಿ, ಇತ್ಯಾದಿ ಪ್ರಾರ್ಥನೆಗಳಲ್ಲಿ ನರಕದ ಭಾವ ವಿದ್ದರೂ ಸಹ ಮೃತರಾದ ಪ್ರೇತಗಳಿಗೆ ಇದು ನಿಷ್ಕೃಷ್ಟವಾದ ಸ್ಥಾನವೆಂಬುದು ತಿಳಿದು ಬಂದಿಲ್ಲ.

ಋಕ್ಸಂಹಿತಾವಾಕ್ಯಗಳಲ್ಲಿ ವರ್ಣಿತವಾಗಿರುವಂತೆ, ಪಾಪಿಗಳಾರೆಂದರೆ, ಯಜ್ಞಕರ್ಮಗಳನ್ನು ಯಾರು ಆಚರಿಸುವುದಿಲ್ಲವೋ ಅವರೆಲ್ಲರೂ ಪಾಪಿಷ್ಠರು.

ಅದೇವಯುಃ—ವಿಧ್ಯುಕ್ತವಾಗಿರುವಂತೆ ದೇವಪೂಜಾದಿಗಳನ್ನು ಮಾಡದಿರುವವರು
ಬ್ರಹ್ಮದ್ವಿಷಃ—ಸ್ತುತಿಗಳನ್ನೂ ಸ್ತುತಿಕರ್ತರನ್ನೂ ನಿಂದಿಸುವವರು.
ಅವ್ರತಾಃ—ಯಾಗಾದಿ ಕರ್ಮರಹಿತರು.
ಅಸುನ್ವತಃ—
ಅಪೃಣತಃ— } ಸೋಮಾದಿ ಹವಿಸ್ಸುಗಳನ್ನು ಅರ್ಪಿಸದಿರುವವರು
ಅತಸಃ— } ಸ್ತುತಿಗಳನ್ನು ಪಠಿಸದಿರುವವರು

ಇವರೆಲ್ಲರೂ ಪಾಪಿಷ್ಠರೆಂದು ಪರಿಗಣಿತರಾಗಿದ್ದಾರೆ. ಇವರೆಲ್ಲರೂ ಮಾನವರ ಗುಂಪಿಗಾದರೂ ಸೇರಿರಬಹುದು ಅಥವಾ ಅಸುರಾದಿಗಳ ಗುಂಪಿಗಾದರೂ ಸೇರಿರಬಹುದು ಇವರಿಗೆಲ್ಲರಿಗೂ ಅನೇಕ

ವಿಧವಾದ ಶಿಕ್ಷೆಗಳನ್ನು ವಿಧಿಸಿದೆ. ಎಲೈ ಅಗ್ನಿಯೇ, ಕರ್ಮರಹಿತರನ್ನು ನೀನು ಅನುಗ್ರಹಿಸಬೇಡ. ಮತ್ತು ಅಂತಹವರನ್ನು ಶಿಕ್ಷಿಸು. ಇತ್ಯಾದಿಯಾಗಿ ಅಗ್ನ್ಯಾದಿ ಸಕಲ ದೇವತೆಗಳನ್ನೂ ಪ್ರಾರ್ಥಿಸಿದೆ. (೧. ೧೫೦. ೨; ೩. ೧೪. ೨; ೧೦. ೩೪. ೩ ಇತ್ಯಾದಿ). ಪುಣ್ಯಕರ್ಮಿಗಳಿಗೆ ಸುಖಸಾಧಕವಾದ ಯಾವ ಸ್ವಾತಂತ್ರ್ಯವು ವರ್ಣಿತವಾಗಿರುವುದೋ, ಪಾಪಿಷ್ಠರಿಗೆ ದುಃಖಸಾಧಕವಾದ ಬಂಧನವೂ ಅದೇ ರೀತಿ ವರ್ಣಿತವಾಗಿರುತ್ತದೆ. ಪಾಶ, ರಜ್ಜು, ಪ್ರಸಿತಿ, ಬಂಧ ಇತ್ಯಾದಿ ಪದಗಳು ಇಂತಹ ಬಂಧನವನ್ನು ನಿರ್ದೇಶಿಸುತ್ತವೆ. ಸುಖವೂ ಮತ್ತು ಸ್ವಾತಂತ್ರ್ಯವೂ ಹೇಗೆ ಸ್ವರ್ಗಾದಿಲೋಕಗಳಲ್ಲಿ ಸಾಧ್ಯವೋ ಅದರಂತೆ, ಈ ಬಂಧನವು ಇದಕ್ಕೆ ಅನುಗುಣವಾದ ಲೋಕದಲ್ಲಿ ಅನುಭವಿಸಲ್ಪಡಬೇಕು. ವವ್ರ, ಗಾಧ, ತಮಃ ಇತ್ಯಾದಿಪದಗಳು ಈ ಲೋಕದ ಸ್ವರೂಪವನ್ನು ಸೂಚಿಸುತ್ತವೆ. ವವ್ರ, ಗಭೀರ, ಎಂಬ ಪದಗಳ ಪ್ರಯೋಗಗಳನ್ನೂ ಅವುಗಳ ತಾತ್ಪರ್ಯಗಳನ್ನೂ ಮೇಲೆ ಉದಾಹೃತವಾಗಿರುವ ಮಂತ್ರಗಳಲ್ಲಿ ತಿಳಿಸಿದೆ. (ಋ.ಸಂ. ೪. ೫. ೫; ೭. ೧೦೪. ೩). ಕೇವಲ ಅಂಧಕಾರಮಯವಾದ ಲೋಕವೆಂದು ಮಾತ್ರ ಇವುಗಳಿಂದ ಸೂಚಿತವಾಗುತ್ತದೆ. ಸ್ವರ್ಗಲೋಕಕ್ಕೆ ವ್ಯತಿರಿಕ್ತವಾದುದು ನರಕ ಲೋಕವೆಂದು ಅಥರ್ವವೇದದಲ್ಲಿ ಮಾತ್ರ ನಿಷ್ಕೃಷ್ಟವಾಗಿ ಹೇಳಿರುತ್ತದೆ. (ಅ. ವೇ. ೧೨. ೪. ೩೬) ಈ ನರಕಲೋಕದ ವರ್ಣನವು ಋಕ್ಸಂಹಿತಾವಾಕ್ಯದಲ್ಲಿಯೂ ಸಹ ವಿಶದವಾಗಿರುತ್ತವೆ.

ವಿ ನ ಇಂದ್ರ ಮೃಧೋ ಜಹಿ ನೀಚಾ ಯಚ್ಛ ಪೃತನ್ಯತಃ ।
ಯೋ ಅಸ್ಮಾಁ ಅಭಿದಾಸತ್ಯಧರಂ ಗಮಯಾ ತಮಃ ॥

(೧೦. ೧೪೨. ೪)

ಎಲೈ ಇಂದ್ರನೇ, ನಮ್ಮ ಹಿಂಸಕರನ್ನು ನಾಶಪಡಿಸು. ನಮ್ಮೊಂದಿಗೆ ಯುದ್ಧಮಾಡಲಿಚ್ಛಿಸುವವರನ್ನು ಅಧೋಮುಖವಾಗಿ ತಳ್ಳು. ಯಾವ ಶತ್ರುವು ನಮ್ಮನ್ನು ಅತ್ಯಧಿಕವಾಗಿ ಹಿಂಸಿಸುವನೋ ಅವನನ್ನು ಅತ್ಯಂತ ಗಾಢವಾದ ಅಂಧಕಾರ ಕೂಪಕ್ಕೆ ತಳ್ಳು ಇತ್ಯಾದಿಯಾಗಿ ಇರುತ್ತದೆ. ಆದರೆ ನರಕಸಂಬಂಧವಾದ ಅಗ್ನಿಯ ಭಯಂಕರವಾದ, ವರ್ಣನೆವಾಗಲಿ, ಇತರ ಹಿಂಸೆಗಳ ವಿವರಣವಾಗಲಿ ಇಲ್ಲ.

ಕೆಲವು ಪಾಶ್ಚಾತ್ಯಪಂಡಿತರು ಈ ಅಂಶವನ್ನು ವಿವರಿಸುತ್ತ ವೀಚೀ ಎಂಬ ಪದವು ನರಕಪರ್ಯಾಯವಾಗಿರುತ್ತದೆಂದು ತಿಳಿಸುತ್ತಾರೆ.

ಬೃಹನ್ಮಿತ್ರಸ್ಯ ವರುಣಸ್ಯ ಧಾಮ ಕದು ಬ್ರವ ಆಹನೋ ವೀಚ್ಯಾ ನ್ಯಾನ್ ।

(೧೦.೧೦.೬)

ಎಂಬಲ್ಲಿ ವೀಚ್ಯಾ ಎಂಬುದಕ್ಕೆ ಸಾಯಣರೂ ಸಹ ನರಕೇಣ ಎಂದರ್ಥವನ್ನೇ ಮಾಡಿರುತ್ತಾರೆ. ನರಕದ ಚಿತ್ರಹಿಂಸೆಗಳನ್ನು ಶತಪಥ ಬ್ರಾಹ್ಮಣಲ್ಲಿ ವಿಶದವಾಗಿ ತಿಳಿಸಿದೆ.

ಭೃಗುವು ತನ್ನ ಪಿತೃವಾದ ವರುಣನ ನಿರ್ದೇಶದ ಪ್ರಕಾರವಾಗಿ ಕರ್ಮಯುಕ್ತವಾದ ಅನುಭವಗಳನ್ನು ಹೊಂದುವ ಪ್ರೇತಜೀತನಗಳನ್ನು ನೋಡುತ್ತ ನಾಲ್ಕು ದಿಕ್ಕುಗಳಲ್ಲೂ ಸಂಚರಿಸುವ ಕಾಲದಲ್ಲಿ ಅತೀವ ಬೀಭತ್ಸವಾದ ದರ್ಶನಗಳನ್ನೆಲ್ಲಾ ನೋಡುತ್ತಾನೆ. ಪುರುಷರು ಪುರುಷರನ್ನೇ ಕತ್ತರಿಸುವುದು. ಒಬ್ಬರನ್ನೊಬ್ಬರು ಕಿತ್ತು ತಿನ್ನುವುದು ಇತ್ಯಾದಿಯಾದ ದೃಶ್ಯಗಳು ವರ್ಣಿತವಾಗಿವೆ. ಇವೆಲ್ಲವೂ ನರಕಯಾತನೆಗಳು. ಜೈಮಿನೀಯಬ್ರಾಹ್ಮಣದಲ್ಲಿ

ಮೂರು ವಿಧವಾದ ಸ್ವರ್ಗಗಳೂ, ಮೂರು ವಿಧವಾದ ನರಕಗಳೂ ವಿವೃತವಾಗಿವೆ. (ಜೈ. ಬ್ರಾ. ೧-೪೨-೪೩-೪೪), ಸತ್ಕರ್ಮಕ್ಕೆ ಒಳ್ಳೆಯ ಫಲವೂ, ಅಸತ್ಕರ್ಮಕ್ಕೆ ಕೆಟ್ಟ ಅನುಭವವೂ ಸ್ವರ್ಗ ಮತ್ತು ನರಕಗಳಲ್ಲಿ ಸಿದ್ಧವೆಂದು ಶತಪಥ ಬ್ರಾಹ್ಮಣವು ವಿಶದಪಡಿಸುತ್ತದೆ. (ಶ. ಬ್ರಾ. ೬-೨.೨-೨೭ ಮತ್ತು ೧೦.೬.೩.೧ ಇತ್ಯಾದಿ).

ಸ್ವರ್ಗಾದಿಲೋಕಗಳನ್ನು ಸೇರಲು ಕೇವಲ ಪುರುಷನ ಕರ್ಮವೇ ಸಾಧಕವಲ್ಲ- ಮೃತದೇಹದ ಸಂಸ್ಕಾರವೂ ಸಹ ಈ ಸಾಧನಗಳಲ್ಲೊಂದಾಗಿರುತ್ತದೆ.

ಸ ಏವಂವಿದಾ ದಹ್ಯಮಾನಃ ಸಹೈವ ಧೂಮೇನ ಸ್ವರ್ಗಲೋಕಮೇತೀತಿ ವಿಜ್ಞಾಯತೇ ।

(ಆಶ್ವಲಾಯನಗೃಹ್ಯಸೂತ್ರ ೪-೪-೭)

ವಿಧ್ಯುಕ್ತವಾಗಿ ದಗ್ಧನಾದರೆ ಮಾತ್ರ ಆ ದೇಹಾಂತರ್ಗತನಾದ ಪುರುಷನು ಸ್ವರ್ಗಕ್ಕೆ ಹೋಗುತ್ತಾನೆ ಎಂದಿರುತ್ತದೆ. ಆದರೆ ಋಕ್ಸಂಹಿತೆಯಲ್ಲಿ ಈ ವಿಧವಾದ ನಿಯಮವು ಯಾವುದೂ ನಿರ್ದಿಷ್ಟವಾಗಿಲ್ಲ, ಅಗ್ನಿದಗ್ಧರಾಗಲಿ, ಅನಗ್ನಿದಗ್ಧರಾಗಲಿ ಅವರೆಲ್ಲರೂ ಸಹ ಸ್ವರ್ಗದಲ್ಲಿ ಕುಳಿತು ಸ್ವಧೆಯಿಂದ ತೃಪ್ತಿಯನ್ನು ಹೊಂದುತ್ತಾರೆ, ಎಂದು ವರ್ಣಿಸಿರುತ್ತದೆ (ಋ. ಸಂ. ೧೦-೧೫-೧೪). ಮೃತನ ದೇಹಕ್ಕೆ ಪೃಥ್ವಿಯೇ ಆಶ್ರಯವೆಂಬ ಅಭಿಪ್ರಾಯವೂ ಸಹ ಅನೇಕ ಕಡೆಗಳಲ್ಲಿ ಉಕ್ತವಾಗಿರುತ್ತದೆ,

ಪಿತೃಣಾಗ್ಂ ಸದನಮಸೀತಿ ಬರ್ಹಿರೇವ ಸ್ತೃಣಾತಿ ಪಿತೃದೇವತ್ಯಾ ಏ ಗ್ಸ್ ಹ್ಯೇತದ್ಯನ್ನಿಖಾತಂ

ತೈ- ಸಂ. ೬-೩-೪-೨)

ಶುಂಧಂತಾಂ ಲೋಕಾಃ ಪಿತೃಷದನಾ ಇತಿ ಪಿತೃದೇವತ್ಯೋ ವೈ ಕೂಪಃ ಖಾತಸ್ತಮೇವೈತನ್ಮೇಧ್ಯಂ ಕರೋತಿ ॥ (ಶ. ಬ್ರಾ. ೩ ೬-೧.೧೩)

ಯಜ್ಞವೇದಿಯ ಸಮೀಪದಲ್ಲಿ ಕರ್ಮಸಾಧಕವಾಗಿ ಅಗೆದಿರುವ ಗುಳಿಯು ಅತಿಶ್ರೇಷ್ಠವಾದುದು. ಈ ಗುಳಿಯು ಪಿತೃಗಳ ವಾಸಸ್ಥಾನವಾಗಿರುತ್ತದೆ ಇತ್ಯಾದಿಯಾಗಿ ಅನೇಕ ಕಡೆಗಳಲ್ಲಿ ವರ್ಣಿತವಾಗಿರುತ್ತದೆ. ಪ್ರೇತಗಳಿಗೆ ಅರ್ಪಿತವಾಗುವ ಪಿಂಡಾದಿಗಳನ್ನು ಸ್ವರ್ಗಕ್ಕೆ ಒಯ್ಯಲು ಅಗ್ನಿಯಲ್ಲಿ ಅರ್ಪಿಸುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಭೂಮಿಯನ್ನು ಅಗೆದು ಅವನ್ನು ಗುಳಿಯೊಳಕ್ಕೆ ಹಾಕುತ್ತಾರೆ. ಆದರೆ, ಶ್ರಾದ್ಧಕಾಲದಲ್ಲಿ ಅರ್ಪಿಸುವ ಪಿಂಡಗಳಿಗೂ, ಮೃತಿಯನ್ನು ಹೊಂದಿದ ಕೂಡಲೇ ಅರ್ಪಿಸುವ ಪಿಂಡಗಳಿಗೂ ವ್ಯತ್ಯಾಸವಿರುತ್ತದೆ ಪುರುಷನು ಮೃತಿಯನ್ನು ಹೊಂದಿದ ಕೂಡಲೇ ಸ್ವರ್ಗಕ್ಕೆ ಹೋಗಿ ಪಿತೃಲೋಕವನ್ನು ಸೇರುವುದಿಲ್ಲ. ಮೃತಿಯನ್ನು ಹೊಂದಿದ ಒಂದು ವರ್ಷದವರೆಗೆ ಮಾಡತಕ್ಕ ಶ್ರಾದ್ಧವೂ ಶ್ರಾದ್ಧಸಂಕಲ್ಪವೂ ಬೇರೆಯಾಗಿರುತ್ತದೆ. ಪಿತೃಪಿತಾಮಹಪ್ರಪಿತಾಮಹಾದಿಗಳಿಗೆ ಅರ್ಪಿತವಾಗುವ ಪಿಂಡಗಳಿಗೂ ಇದಕ್ಕೂ ವ್ಯತ್ಯಾಸವಿರುತ್ತದೆ. ಒಂದು ವರ್ಷದವರೆಗೆ ಮೃತನ ಪ್ರೇತವು ಪೃಥ್ವಿಯ ಸಮೀಪದಲ್ಲಿಯೇ ಇರುವುದೆಂಬ ಒಂದು ನಂಬಿಕೆಯಿರುತ್ತದೆ. ಆದರೆ, ಋಕ್ಸಂಹಿತೆಯಲ್ಲಿ ಈ ವ್ಯತ್ಯಾಸವನ್ನು ತಿಳಿಸಿಲ್ಲ- ಮೃತನಾದೊಡನೆಯೇ ಪುರುಷನು ಪೂರ್ವಪಿತೃಗಳೊಡನೆ ಖಂಡಿತ ಸೇರಿಕೊಳ್ಳುತ್ತಾನೆ. ಒಂದು ವೇಳೆ ಪಿತೃ ವಿಗೂ ಪ್ರೇತದ ಸ್ಥಿತಿಗೂ ವ್ಯತ್ಯಾಸವಿದ್ದರೂ ಸಹ, ಮೃತನು ಭೂತ (ಪಿಶಾಚಿ) ರೂಪದಲ್ಲಿ ತನ್ನ ಕಾಮಪೂರ್ತಿಗಾಗಿ ಪೃಥ್ವಿಯಲ್ಲಿ ಬಂದಿರುವನು ಎಂಬುದಕ್ಕೆ ಆಧಾರವಿಲ್ಲ, ಆದರೆ, ಶ್ರಾದ್ಧಾದಿಸ್ವೀಕಾರಕ್ಕಾಗಿ ಪಿತೃಗಳು ಪೃಥ್ವಿಗೆ ಬರುವರು ಎಂದು ಮಾತ್ರ ವರ್ಣಿತವಾಗಿದೆ.

ಇದಂ ಪಿತೃಭ್ಯೋ ನಮೋ ಅಸ್ತ್ವದ್ಯ ಯೇ ಪೂರ್ವಾಸೋ ಯ ಉಪರಾಸ ಈಯುಃ ।
ಯೇ ಪಾರ್ಥಿವೇ ರಜಸ್ಯಾ ನಿಷತ್ತಾ ಯೇ ವಾ ನೂನಂ ಸುವೃಜನಾಸು ವಿಕ್ಷು ॥

(ಋ. ಸಂ. ೧೦. ೧೫. ೨)

ಪಿತೃಲೋಕಕ್ಕೆ ಹೋಗಿ ಸೇರಿರುವ ಪಿತೃಗಳಿಗೆ ನಮ್ಮ ಪೂಜೆಯು ಅರ್ಪಿತವಾಗಲಿ. ಅವರು ಜನ್ಮತಃ ನಮಗಿಂತಲೂ ದೊಡ್ಡವರಾಗಿದ್ದರೂ ಸರಿ ಅಥವಾ ನಮಗಿಂತಲೂ ಚಿಕ್ಕವರಾಗಿದ್ದರೂ ಸರಿ, ಮೃತರಾದನಂತರ ಪಿತೃಲೋಕಕ್ಕೆ ಸೇರಿದ ಮೇಲೆ ನಮಗೆಲ್ಲ ಪೂಜ್ಯರು. ಅಂತಹ ಪಿತೃಗಳಿಗೂ, ಮತ್ತು ಪಾರ್ಥಿವಲೋಕದಲ್ಲಿ ನಮ್ಮ ಶ್ರಾದ್ಧಕಾಲದಲ್ಲಿ ಬಂದಿರ ತಕ್ಕ ಪಿತೃಗಳಿಗೂ ನಮ್ಮ ಪೂಜೆಯು ಅರ್ಪಿತವಾಗಲಿ ಎಂದು ಪೃಥ್ವಿಯಲ್ಲಿ ಬಂದಿರುವ ಪಿತೃಗಳನ್ನು ನಿರ್ದೇಶಿಸಿದೆ. ಅದಲ್ಲದೇ, ಕೆಲವು ಪಾಪಕರ್ಮವನ್ನಾಚರಿಸಿದರೆ, ಒಂದು ನಿರ್ದಿಷ್ಟಕಾಲದವರೆಗೆ ಪಿತೃಲೋಕಪ್ರಾಪ್ತಿಯೂ ಸಹ ಇರುವುದಿಲ್ಲ. ಉದಾಹರಣೆಗೆ.

ಇತಿ ಯೋಽಪಗುರಾತ್ಯೈ ಶತೇನ ಯಾತಯಾದ್ಯೋ ನಿಹನತ್ಸಹಸ್ರೇಣ ಯಾತಯಾದ್ಯೋ ಲೋಹಿತಂ ಕರವದ್ಯಾವತಃ ಪ್ರಸ್ಕಂದ್ಯ ಪಾಗ್ಂ ಸೂನ್ತ್ಯಂಗೃಹ್ಣಾತ್ತಾವತಸ್ಸಂವತ್ಸರಾನ್ ಪಿತೃ ಲೋಕಂ ನ ಪ್ರಜಾನಾದಿತಿ ॥

(ತೈ ಸಂ ೨. ೬. ೧೦. ೨)

ಯಾರು ಪೂಜ್ಯರನ್ನು ಹೊಡೆದು ಹಿಂಸಿಸಿ ಕೆಡಹುವರೋ ಅಂತಹವರು ಮೃತಿಯನ್ನು ಹೊಂದಿದರೆ ಅವರಿಗೆ ಕೂಡಲೆ- ಉತ್ತಮಲೋಕಪ್ರಾಪ್ತಿಯಿಲ್ಲ. ಕೆಳೆಕ್ಕೆ ಜಿಲ್ಲಿದ ರಕ್ತಕಣಗಳು ಎಷ್ಟು ಸಂಖ್ಯೆಯಲ್ಲಿ ಮರುಳುಕಣಗಳನ್ನು ಪಡೆದುಗೊಳಿ ಸುವುದೋ ಅಷ್ಟು ವರ್ಷಗಳು ಆ ಮೃತರ ಜೀವನಗಳು ಪಿತೃಲೋಕವನ್ನು ಸೇರಲಾಗುವುದಿಲ್ಲ- ಇವು ಪಾರ್ಥಿವಲೋಕ ದಲ್ಲೇ ಅಲೆದಾಡಬೇಕಾಗುತ್ತದೆ ಆದರೆ, ಪುರಾಣಾದಿಗಳಲ್ಲಿ ವರ್ಣಿತವಾಗುವಂತೆ ಇವುಗಳು ಪಿಶಾಚಿಗಳೆಂದೆನ್ನಿಸಿ ಕೊಳ್ಳಲಾರವು. ಪೈಶಾಚ ಶಬ್ದವು ವೈದಿಕವಾಕ್ಯಗಳಲ್ಲಿದ್ದರೂ ಸಹ ಅದು ರಾಕ್ಷಸಾದಿಗಳ ಗುಂಪಿಗ ಸೇರಿದ ದುಷ್ಟ ಶಕ್ತಿಯೆಂದರಿಯಬೇಕು.

3. ಪುನರುತ್ಪತ್ತಿ ಮತ್ತು ಜನ್ಮಾಂತರ

ಮೃತನಾದ ಪುರುಷನು ಪುನಃ ಪಾರ್ಥಿವದೇಹವನ್ನು ಧರಿಸಿ ಪೃಥ್ವಿಯಲ್ಲಿ ಹುಟ್ಟುವನು ಎಂಬುದಕ್ಕೆ ಋಕ್ಸಂಹಿತೆಯಲ್ಲಿ ಆಧಾರವಿಲ್ಲ ಎಂದು ಕೆಲವು ವಿದ್ವಾಂಸರುಗಳ ಅಭಿಪ್ರಾಯವಾಗಿದೆ ಪುನರುತ್ಪತ್ತಿಯೆಂಬುದು ಸ್ವತಃ ಸಿದ್ಧವಾದುದು ಎಂಬುದನ್ನು ಸೂಚಿಸುವ ವಾಕ್ಯಗಳೂ ಇವೆ ಎಂದು ಮತ್ತೆ ಕೆಲವರ ವಾದ ಪುರುಷನ ಕರ್ಮಾನುಸಾರವಾಗಿ ಸ್ವರ್ಗ ವನ್ನೋ ಅಥವಾ ನರಕವನ್ನೋ ಅವನ ಜೀವನವು ಸೇರಬೇಕು ಎಂಬ ನಿರ್ದೇಶಗಳಿರುವುದರ ಜೊತೆಗೆ, ಅವನವನ ಕರ್ಮಾನುಸಾರವಾಗಿ ಪೃಥ್ವಿಯಲ್ಲಿ ಪುನಃ ಅವನ ಜನ್ಮವು ವಿಹಿತವಾಗಿರುವ ವಾಕ್ಯಗಳು ಸಂಹಿತೆಗಳಲ್ಲಿವೆಯೇ ಎಂದು ಪ್ರಕೃತದಲ್ಲಿ ಪರಿಶೀಲಿಸಬೇಕಾದ ವಿಷಯವಾಗಿರುತ್ತದೆ.

ಸಂ ಗಚ್ಛಸ್ವ ಪಿತೃಭಿಃ ಸಂ ಯಮೇನೇಷ್ಟಾಪೂರ್ತೇನ ಪರಮೇ ವ್ಯೋಮನ್ ।
ಹಿತ್ವಾಯಾವದ್ಯಂ ಪುನರಸ್ತಮೇಹಿ ಸಂಗಚ್ಛಸ್ವ ತನ್ವಾ ಸುವರ್ಚಾಃ ॥

(ಋ. ಸಂ. ೧೦-೧೪-೮)

ಎಂಬಲ್ಲಿ ಪ್ರೇತವನ್ನು ಸಂಬೋಧಿಸಿದೆ. ಅದು ಪಿತೃಗಳೊಡನೆ ಸೇರಿ, ಅತ್ಯುತ್ತಮವಾದ ಲೋಕದಲ್ಲಿ ತತ್ಕರ್ಮಾನುರೋಧವಾದ ಫಲವನ್ನನುಭವಿಸಿ ಅದಕ್ಕೆ ತಕ್ಕ ಶರೀರವನ್ನು ಸೇರಿಕೊಳ್ಳಬೇಕೆಂದು ತಿಳಿಸಿದೆ. ಇಲ್ಲಿ **ತನ್ವಾ** ಎಂಬುದಕ್ಕೆ ಅರ್ಥವೇನು ? ದಿವ್ಯಶರೀರವೆಂದೇ, ಅಥವಾ ಪುನಃ ಪಾರ್ಥಿವಶರೀರವೆಂದೇ ಎಂಬುದರ ವಿಷಯದಲ್ಲಿ ಚರ್ಚೆಯಿರುತ್ತದೆ. ಏಹಿ ಎನ್ನುವುದಕ್ಕೆ **ಆಗಚ್ಛ** ಎಂದು ಸಾಯಣರು ಅರ್ಥಮಾಡಿದ್ದಾರೆ ಪುನಃ ಈ ಲೋಕಕ್ಕೆ ಬಾ ಎಂದು ಯಾರೂ ಕರೆಯಲಾರರು. ಆದುದರಿಂದ ಈ ವಾಕ್ಯದ ಆಧಾರದ ಮೇಲೆ ಪಾರ್ಥಿವಲೋಕದಲ್ಲಿ ಪುನರುತ್ಪತ್ತಿಯ ವಿಷಯದಲ್ಲಿ ನಿಸ್ಸಂದಿಗ್ಧವಾದ ಅಭಿಪ್ರಾಯವನ್ನು ತಿಳಿಸಲಾಗುವುದಿಲ್ಲ. ಮತ್ತು,

ಸೂರ್ಯಂ ಚಕ್ಷುರ್ಗಚ್ಛತು ವಾತಮಾತ್ಮಾ ದ್ಯಾಂ ಚ ಗಚ್ಛ ಪೃಥಿವೀಂ ಚ ಧರ್ಮಣಾ ।
ಅಪೋ ವಾ ಗಚ್ಛ ಯದಿ ತತ್ರ ತೇ ಹಿತಮೋಷಧೀಷು ಪ್ರತಿ ತಿಷ್ಠಾ ಶರೀರೈಃ ।

(ಋ. ಸಂ. ೧೦-೧೬-೩)

ಎಲೈ ಪ್ರೇತನೇ, ನಿನ್ನ ಚಕ್ಷುಸ್ಸು ಸೂರ್ಯನಲ್ಲಿ ಸೇರಲಿ. ಪ್ರಾಣವು ವಾಯುವನ್ನು ಸೇರಲಿ. ನೀನು ನಿನ್ನ ಕರ್ಮಫಲಾನುಸಾರವಾಗಿ ದ್ಯುಲೋಕವನ್ನಾದರೂ ಸೇರು, ಪೃಥ್ವಿಯನ್ನಾದರೂ ಸೇರು ಅಥವಾ ಅಂತರಿಕ್ಷವನ್ನಾದರೂ ಸೇರು. ನೀನು ಓಷಧಿರೂಪವಾದ ಅವಯವಗಳೊಂದಿಗೆ ಕೂಡಿಕೊಂಡಿರು ಇತ್ಯಾದಿ ವಾಕ್ಯಗಳು ಪುನಃ ಪಾರ್ಥಿವಲೋಕದ ಜನ್ಮವನ್ನು ತಿಳಿಸುತ್ತವೆ ಆದರೆ ಪುನರಾವೃತ್ತಿ, ಪುನರ್ಜನ್ಮ, ಇತ್ಯಾದ್ಯಭಿಪ್ರಾಯಗಳನ್ನು ನಿಸ್ಸಂದಿಗ್ಧವಾಗಿ ತಿಳಿಸಿಲ್ಲ. ಈ ಚರ್ಚೆಯೂ ಈ ಸಂದರ್ಭದಲ್ಲಿ ಅಷ್ಟು ಪ್ರಕೃತವಲ್ಲ. ಆನುಷಂಗಿಕವಾಗಿ ಪ್ರಾಪ್ತವಾದ ಈ ವಿಷಯವನ್ನು ಸ್ವಲ್ಪ ಮಟ್ಟಿಗೆ ಮಾತ್ರ ಸೂಚಿಸಿದೆ ಮುಂದೆ ಈ ಸಂದರ್ಭವು ಒದಗಿದರೆ, ಈ ವಿಷಯವನ್ನು ವಿವರ್ತಿಸಲಾಗುತ್ತದೆ.

4. ಪ್ರೇತಸಂಸ್ಕಾರ

ಪುರುಷನು ಮೃತನಾದನಂತರ ದೇಹವನ್ನು ಸುಡುವುದು ಅಥವಾ ಹೂಳುವುದು ಇವೆರಡರಲ್ಲಿ ಒಂದು ಸಂಸ್ಕಾರವನ್ನಾಚರಿಸಬೇಕು. **ಅಗ್ನಿದಗ್ಧಾಃ ಅನಗ್ನಿದಗ್ಧಾಃ** ಇತ್ಯಾದಿ ವಿವರಣೆಗಳಿಂದ (ಋ. ಸಂ. ೧೦-೧೫-೧೪) ಈ ಎರಡು ಕ್ರಮವೂ ಆಚರಣೆಯಲ್ಲಿದ್ದಿತೆಂದು ಕೆಲವರ ಮತ ಆದರೆ, **ಅನಗ್ನಿದಗ್ಧಾಃ** ಎಂದಿದ್ದ ಮಾತ್ರಕ್ಕೆ ಈ ಪದ್ಧತಿಯು ನಿಯತವಾಗಿ ಜಾರಿಯಲ್ಲಿದ್ದಿತೆಂಬುದನ್ನು ಹೇಳಲಾಗುವುದಿಲ್ಲ ಸಾಯಣರು ಈ ಪದಕ್ಕೆ **ಶ್ಮಶಾನಕರ್ಮರಹಿತಾಃ** ಎಂದರ್ಥ ಮಾಡಿದ್ದಾರೆ. ಎಲ್ಲಾದರೂ ಅನಾಹುತವು ಸಂಭವಿಸಿ ಯಾವ ಸಂಸ್ಕಾರಕ್ಕೂ ಅವಕಾಶವಿಲ್ಲದೇ ಇರತಕ್ಕ ಪ್ರೇತನಿಗೆ ಶ್ಮಶಾನಸಂಸ್ಕಾರವು ಇರುವುದಿಲ್ಲ. ಆದುದರಿಂದಲೇ ಈ ಪದ್ಧತಿಯೂ ನಾಡಿಕೆಯಲ್ಲಿದ್ದಿತು ಎಂದು ಈ ಆಧಾರಮಾತ್ರದಿಂದ ಹೇಳಲಾಗುವುದಿಲ್ಲ. ದಹನಕ್ರಿಯೆಯಂತೆಯೇ, ಭೂಮಿಯಲ್ಲಿ ಹೂಳುವ ಪದ್ಧತಿಯೂ ರೂಢಿಯಲ್ಲಿದ್ದಿತೇ ಎಂಬುದಕ್ಕೆ ಸಂಹಿತಾವಾಕ್ಯಗಳಲ್ಲಿ ಬೇರೆ ಯಾವುದಾದರೂ ಆಧಾರವಿದೆಯೇ ಎಂಬುದನ್ನು ಪರಿಶೀಲಿಸಬೇಕು.

ಉಪ ಸರ್ಪ ಮಾತರಂ ಭೂಮಿಮೇತಾಮುರುವ್ಯಚಸಂ ಪೃಥಿವೀಂ ಸುಶೇವಾಂ ।
ಊರ್ಣಮ್ರದಾ ಯುವತಿರ್ದಕ್ಷಿಣಾವತ ಏಷಾ ತ್ವಾ ಪಾತು ನಿರ್ಋತೇರುಪಸ್ಥಾತ್ ॥

(ಋ. ಸಂ. ೧೮ ೧೪-೧೦)

ಉತ್ತೇ ಸ್ತಭ್ನಾಮಿ ಪೃಥಿವೀಂ ತ್ವತ್ಪರೀಮಂ ಲೋಗಂ ನಿದಧನ್ಮೋ ಅಹಂ ರಿಷಂ ।
ಏತಾಂ ಸ್ಥೂಣಾಂ ಪಿತರೋ ಧಾರಯಂತು ತೇಽತ್ರಾ ಯಮಃ ಸಾದನಾತೇ ಮಿನೋತು ॥

(ಋ. ಸಂ. ೧೮-೧೪-೧೩)

ಎಲೈ ಮೃತದೇಹವೇ, ವಿಸ್ತೃತವಾದ ಈ ಪೃಥ್ವಿಯನ್ನು ಪ್ರವೇಶಿಸು. ಈ ಪೃಥ್ವಿಯು ಸುಖದಾಯಕಳಾಗಿದ್ದಾಳೆ. ಉಣ್ಣೆಯಂತೆ ಮೃದುವಾದ ಆಶ್ರಯವನ್ನೀಯುತ್ತಾಳೆ. ಉತ್ತಮವಾದ ಯಜ್ಞಕರ್ತನಿಗೆ ನಿರ್ಋತಿಯಿಂದ ರಕ್ಷಣೆಯನ್ನು ನೀಡುತ್ತಾಳೆ. ಆದುದರಿಂದ ಭೀತಿರಹಿತನಾಗಿ ಇದನ್ನು ಪ್ರವೇಶಿಸು.

ಎಲೈ ಮೃತದೇಹವೇ, ನಿನ್ನ ಸುತ್ತಲೂ ಮಣ್ಣಿನ ರಾಶಿಯನ್ನು ತಳ್ಳುತ್ತೇನೆ. ನಿನಗೆ ಯಾವ ಹಿಂಸೆಯೂ ಆಗದಿರಲಿ. ನನ್ನನ್ನೂ ಸಹ ಯಾವ ಶಕ್ತಿಯೂ ಹಿಂಸಿಸದಿರಲಿ. ಪಿತೃಗಳು ನಿನ್ನ ಧಾರಕರಾಗಿರಲಿ. ಯಮನು ನಿನಗೆ ಉತ್ತಮವಾದ ವಸತಿಯನ್ನು ಕಲ್ಪಿಸಲಿ ಇತ್ಯಾದಿಯಾಗಿ ಪೃಥ್ವಿಯಲ್ಲಿ ನಿಕ್ಷೇಪದಂತೆ ಇಡುವ ಸನ್ನಿವೇಶಗಳು ವಿಶದವಾಗಿ ವರ್ಣಿತವಾಗಿವೆ.

ಮಾತಾ ಪುತ್ರಂ ಯಥಾ ಸಿಚಾಭ್ಯೇನಂ ಭೂಮಿ ಊರ್ಣುಹಿ ।

(ಋ. ಸಂ ೧೦-೧೪-೧೧)

ಮಾತೆಯು ತನ್ನ ಶಿಶುವನ್ನು ಉತ್ತಮವಾದ ಹೊದ್ದಿಕೆಯಿಂದ ಹೊದ್ದಿಸುವಂತೆ ಈ ಭೂಮಾತೆಯು ಮೃತದೇಹಕ್ಕೆ ಹೊದ್ದಿಸಿ ರಕ್ಷಣೆಯನ್ನು ನೀಡುತ್ತದೆ ಎಂದು ಮೃತದೇಹಕ್ಕೆ ಇರುವ ಸುರಕ್ಷತೆಯನ್ನು ಪ್ರಶಂಸಿಸಿದೆ.

ಮೃತದೇಹವನ್ನು ದಹಿಸುವುದಾಗಲಿ ಅಥವಾ ಹೂಳುವುದಾಗಲಿ, ತತ್ಪೂರ್ವದಲ್ಲಿ ಮಾಡಬೇಕಾದ ಸಂಸ್ಕಾರಗಳೂ ಅನೇಕವಿರುತ್ತವೆ. ಮರಣಕ್ಕೆ ಮೊದಲು ಯಜಮಾನರು ಆಹಿತಾಗ್ನಿಯನ್ನು ಆರಾಧಿಸುತ್ತಿದ್ದರೆ ಆ ಮೃತದೇಹವನ್ನು ಆ ಅಗ್ನಿಯ ಸಮೀಪದಲ್ಲೇ ಇರಿಸಿ ಅದನ್ನು ಗೋಮಯದಿಂದ ಶುದ್ಧಿಮಾಡಿ ದರ್ಭಾಸನಗಳಿಂದ ಹೊದ್ದಿಸತಕ್ಕದ್ದು. ಇತ್ಯಾದಿಯಾಗಿ ಮುಂದಿನ ಗೃಹ್ಯಸೂತ್ರಾದಿಗಳಲ್ಲಿ ಯಾವ ರೀತಿಯಾದ ವಿಧಗಳಿರುವುದೋ ಹಿಂದಿನ ಸ್ಥಂಪ್ರದಾಯದಲ್ಲೂ ಅದೇ ರೀತಿ ವಿಧ್ಯುಕ್ತವಾದ ರೀತಿಯಲ್ಲಿ ಅದೇ ಸಂಸ್ಕಾರಗಳು ಆಚರಣೆಯಲ್ಲಿದ್ದವು ಎಂಬುದಕ್ಕೆ ಅನೇಕ ಆಧಾರಗಳಿವೆ (ಅವುಗಳ ವಿವರಣೆಯು ಸದ್ಯಃ ಅಪ್ರಕೃತ) **ಅಪೇತ ವೀತ ವಿ ಚ ಸರ್ಪತಾತಃ** ಇತ್ಯಾದಿ ಮಂತ್ರಗಳನ್ನು ಪಠಿಸುತ್ತ ಮೃತದೇಹದ ದಹನವು ಶ್ಮಶಾನಭೂಮಿಯವರೆಗೆ ತತ್ಸಂಬಂಧಿಗಳಿಂದ ಮಾಡಲ್ಪಡಬೇಕು. ಆದರೆ, ಮೃತದೇಹವನ್ನು ಹೂರುತ್ತಿದ್ದರೇ ಆಥವಾ ದಹನಾದಿಗಳಲ್ಲಿ ಒಯ್ಯುತ್ತಿದ್ದರೇ ಎಂಬುದನ್ನು ನಿಶ್ಚಯವಾಗಿ ಹೇಳಲು ಸಾಧ್ಯವಿಲ್ಲ. ಶ್ಮಶಾನಕ್ಕೆ ಹೋದನಂತರ ಅಗ್ನಿಚಿತಿಯಲ್ಲಿ ಅವನ ದೇಹವನ್ನರ್ಪಿಸತಕ್ಕದ್ದು. ಅವನು ಜೀವಿಸಿದ್ದಾಗ ಅಗ್ನಿತ್ರಯವನ್ನು ಆರಾಧಿಸುತ್ತಿದ್ದರೆ, ಶ್ಮಶಾನದಲ್ಲೆಯೂ ಸಹ ಗೃಹದ (ದಕ್ಷಿಣಾಗ್ನಿ, ಗಾರ್ಹಪತ್ಯ ಮತ್ತು ಆಹವನೀಯ ಎಂಬ) ಅಗ್ನಿಗಳ ಭಾಗಗಳಿಂದ ಪ್ರಜ್ವಲಿತವಾದ ಅಗ್ನಿಗಳ ಮಧ್ಯದಲ್ಲಿ ಚಿತಿಯಿರತಕ್ಕದ್ದು. ಶಾಸ್ತ್ರಕ್ಕಾಗಿ ಅವನ ಪಕ್ಕದಲ್ಲಿಯೇ ಅವನ ಪತ್ನಿಯನ್ನು ಮಲಗಿಸಿ ನಂತರ ಅವಳನ್ನು ಅಲ್ಲಿಂದ ಏಳುವಂತೆ ಸೂಚಿಸತಕ್ಕದ್ದು.

ಉದೀರ್ಷ್ವ ನಾರ್ಯಭಿ ಜೀವಲೋಕಂ ಗತಾಸುಮೇತಮುಪ ಶೇಷ ಏಹಿ ।
ಹಸ್ತಗ್ರಾಭಸ್ಯ ದಿಧಿಷೋಸ್ತವೇದಂ ಪತ್ಯುರ್ಜನಿತ್ವಮಭಿ ಸಂ ಬಭೂವ ॥

(ಋ. ಸಂ. ೧೦-೧೪-೮)

ಎಲೈ ಮೃತನ ಪತ್ನಿಯಾದ ನಾರಿಯೇ, ನಿನ್ನ ಪಾಣಿಗ್ರಹಣವನ್ನು ಮಾಡಿದ ಈ ಪತಿಯ ಸಾನ್ನಿಧ್ಯಶಯ್ಯೆಯನ್ನು ಸೇರಿ ಅನುಮರಣವನ್ನು ನಿಶ್ಚಯಿಸಿದ್ದೀಯೆ. ಆದರೆ ಇಲ್ಲಿಂದ ಎದ್ದು ಬಂದು ಜೀವಿಸಿರುವ ನಿನ್ನ ಪುತ್ರಾದಿಗಳ ಬಳಿಗೆ ಹೋಗಿ ಸೇರು ಎಂದು ನಿರ್ದಿಷ್ಟವಾಗುತ್ತಾಳೆ. ಅನಂತರ ಅಗ್ನಿಚಯನವು, ಇತ್ಯಾದಿಯಾದ ಸಂಪ್ರದಾಯಗಳಿರುತ್ತವೆ

ದಹನಕರ್ಮಕ್ಕಾಗಿ ಚಿತಿಯನ್ನು ಏರ್ಪಡಿಸುವಾಗಲೂ ಸಹ ಖನನಕರ್ಮವು ನೆರವೇರುತ್ತಿದ್ದಿತೆಂಬುದಕ್ಕೆ ಆಧಾರಗಳಿವೆ. ಹೇಗೆಂದರೆ ;—

ಅಥೈತಾಂ ದಿಶಮಗ್ನೀನ್ ನಯಂತಿ । (ಯಸ್ಯಾಂ ದಿಶಿ ಭೂಮಿಭಾಗಃ ಖಾನಿತಃ ತಾಂ ದಿಶಮಗ್ನೀನ್ ನಯಂತಿ)

(ಆ. ಗೃ. ಸೂ. ೪-೨.೧)

ಯಾವ ಭಾಗದಲ್ಲಿ ಅಗ್ನಿಚಿತಿಯನ್ನು ನಿರ್ಮಿಸಿದೆಯೋ ಆ ಭಾಗಕ್ಕೆ ಅಗ್ನಿಯನ್ನು ಕೊಂಡೊಯ್ಯುವುದು ಎಂದಿರುತ್ತದೆ. ಆ ಅಗ್ನಿಚಯನದಲ್ಲಿ ಬರ್ಹಿಯನ್ನು ಹರಡಿ ಅದಕ್ಕೆ ಉತ್ತರದಲ್ಲಿ ಪತ್ನಿಯನ್ನು ಕುಳ್ಳಿರಿಸಬೇಕು ಎಂದಿರುತ್ತದೆ.

ಉತ್ತರತಃ ಪತ್ನೀಂ (ಸಂವೇಶಯಂತಿ) (ಆ. ಗೃ. ಸೂ. ೪.೨-೧೩) ಮೇಲೆ ಹೇಳಿದಂತೆ ಆ ಪತ್ನಿಗೆ ನಿರ್ದೇಶವನ್ನು ಕೊಟ್ಟನಂತರ ಆಯಾ ವರ್ಣಕ್ಕನುಸಾರವಾದ ಕ್ರಿಯೆಗಳಿಂದ ಕೂಡಿ ಅಗ್ನಿಯನ್ನು ಅರ್ಪಿಸತಕ್ಕದ್ದು ಎಂದಿರುತ್ತದೆ. ಉಳಿದ ಕರ್ಮಗಳ ವಿವರಣವು ಸದ್ಯಃ ಅಪ್ರಕೃತವಾಗಿರುತ್ತದೆ. ಆದರೆ, ವೈದಿಕಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೆಲವು ಸಂಪ್ರದಾಯಗಳನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದು. ಈ ಕರ್ಮಕಾಲದಲ್ಲಿ ಪರಿಸತಕ್ಕ ಮಂತ್ರಗಳಿಂದ ಪ್ರೇತಸಂಸ್ಕಾರ ಕಾಲದಲ್ಲಿ ಮೃತಿಹೊಂದಿದ ಪ್ರೇತದ ರಕ್ಷಣೆಯು ಅತ್ಯವಶ್ಯವಾಗಿ ಅಗ್ನಿಗೆ ಒಪ್ಪಿಸತಕ್ಕದ್ದು. ಅಗ್ನಿಯು ಈ ಪ್ರೇತವನ್ನು ಹಿಂಸಿಸದೇ ಅದರ ನಿರ್ದಿಷ್ಟಸ್ಥಾನಕ್ಕೆ ಅಡನ್ನು ಒಯ್ಯತಕ್ಕದ್ದು ಎಂದು ಅಗ್ನಿಯನ್ನು ಪ್ರಾರ್ಥಿಸಿದೆ. ಆ ಪ್ರಾರ್ಥನೆಯ ಕ್ರಮವು ಈ ರೀತಿಯಿರುತ್ತದೆ.

ಮೈನಮಗ್ನೇ ವಿ ದಹೋ ಮಾಭಿ ಶೋಚೋ ಮಾಸ್ಯ ತ್ವಚಂ ಚಿಕ್ಷಿಪೋ ಮಾ ಶರೀರಂ ।
ಯದಾ ಶೃತಂ ಕೃಣವೋ ಜಾತವೇದೋಽಥೇಮೇನಂ ಪ್ರ ಹಿಣುತಾತ್ಪಿತೃಭ್ಯಃ ॥

(ಋ. ಸಂ. ೧೦-೧೬-೧)

ಎಲೈ ಅಗ್ನಿಯೇ, ಇವನನ್ನು ಸಂಪೂರ್ಣವಾಗಿ ದಹಿಸಬೇಡ. ಇವನನ್ನು ಹಿಂಸಿಸಬೇಡ. ಇವನ ದೇಹವು ಚದುರಿ ಹೋಗುವಂತೆ ಮಾಡಬೇಡ. ಇವನ ದೇಹವನ್ನು ಪೂರ್ಣವಾಗಿ ದಹಿಸಿದ ಮೇಲೆ ಇವನನ್ನು ಪಿತೃಗಳಲ್ಲಿಗೆ ಒಯ್ಯಬೇಕು. ಪೂರ್ಣವಾಗಿ ಪಕ್ವವಾದನಂತರ ಈ ಪ್ರೇತವು ದೇವತೆಗಳ ಸಂಕಲ್ಪಾನುಸಾರವಾಗಿ ಪಿತೃಲೋಕವನ್ನು ಸೇರುತ್ತದೆ. ಇದರ ಚಕ್ಷುಸ್ಸು ಸೂರ್ಯನನ್ನು ಸೇರಿಕೊಳ್ಳಲಿ. ಆತ್ಮನು ವಾಯುವನ್ನು ಸೇರಲಿ. ಎಲೈ ಪ್ರೇತವೇ, ನಿನ್ನ ಕರ್ಮಾನುಸಾರವಾಗಿ ನೀನು ದ್ಯುಲೋಕವನ್ನಾಗಲಿ ಅಥವಾ ಪೃಥ್ವಿಯನ್ನಾಗಲಿ ಸೇರು. ಅಥವಾ ಉದಕದಲ್ಲಾಗಲಿ ಅಥವಾ ಓಷಧ್ಯಾದಿಗಳಲ್ಲಾಗಲಿ ವಾಸಮಾಡು. ಎಲೈ ಅಗ್ನಿಯೇ, ದಗ್ಧವಾಗದೇ ಉಳಿಯುವ ದೇಹದ ಭಾಗಗಳನ್ನೆಲ್ಲ ದಹಿಸು. ನಿನ್ನ ತೇಜಸ್ಸು ಆ ಭಾಗಗಳನ್ನು ಪೂರ್ಣವಾಗಿ ದಹನಮಾಡಲಿ.

ಇಮುಮಗ್ನೇ ಚಮಸಂ ಮಾ ವಿ ಜಿಹ್ವರಃ ಪ್ರಿಯೋ ದೇವಾನುವುತ ಸೋಮ್ಯಾನಾಂ ।
ಏಷ ಯಶ್ಚಮಸೋ ದೇವಪಾನಸ್ತಸ್ಮಿನ್ದೇವಾ ಅಮೃತಾ ಮಾದಯಂತೇ ॥

(ಋ. ಸಂ. ೧೦-೧೬-೮)

ಎಲೈ ಅಗ್ನಿಯೇ, ಈ ಸೋಮಪ್ರಿಯರಾದ ಪಿತೃಗಳನ್ನೂ, ದೇವತೆಗಳನ್ನೂ ಉದ್ದೇಶಿಸಿ ಇಲ್ಲಿ ಅರ್ಪಿಸಿರುವ ಸೋಮ ಪೂರ್ಣವಾದ ಚಮಸಪಾತ್ರೆಯನ್ನು ಅಲುಗಾಡಿಸಬೇಡ. ಇದು ದೇವತೆಗಳ ಪಾನಕ್ಕೆ ಯೋಗ್ಯವಾದ ಪಾತ್ರೆಯು. ಇದರ ಪಾನದಿಂದ ಅಮರ್ತ್ಯರಾದ ದೇವತೆಗಳು ಸಂತೋಷವನ್ನು ಹೊಂದುತ್ತಾರೆ. ಇತ್ಯಾದಿಯಾಗಿ ಅಗ್ನಿಚಯನದ ಕಾಲದಲ್ಲಿ ಪ್ರೇತಹಿತಾರ್ಥವಾದ ಅನೇಕ ಪ್ರಾರ್ಥನೆಗಳು ಇರುತ್ತವೆ. ಕೊನೆಯದಾಗಿ ;—

ಅಸ್ಮಾತ್ತ್ವಮಧಿ ಜಾತೋಽಸಿ ತ್ವದಯಂ ಜಾಯತಾಂ ಪುನಃ । ಅಸೌ ಸ್ವರ್ಗಾಯ ಲೋಕಾಯ ಸ್ವಾಹಾ ॥

(ಶ. ಬ್ರಾ. ೧೨-೫-೨-೧೫)

ಎಲೈ ಅಗ್ನಿಯೇ, ಇವನಿಂದ ನೀನು (ಯಜ್ಞಾಗ್ನಿರೂಪದಲ್ಲಿ) ಉತ್ಪನ್ನನಾದೆ ಅಂತಹ ನಿನ್ನಿಂದ ಇವನು ಉತ್ತಮವಾದ ದಿವ್ಯಲೋಕದ ಜನ್ಮವನ್ನು ಹೊಂದಲಿ ಎಂಬ ಚರಮಪ್ರಾರ್ಥನೆಯಿರತ್ತದೆ

ಅಗ್ನಿಚಯನವಾದನಂತರ ಮೃತರ ಸಂಬಂಧಿಗಳು ಹಿಂತಿರುಗಿನೋಡದೆ ಆ ಸ್ಥಾನದಿಂದ ನಿವೃತ್ತರಾಗುತ್ತಾರೆ. (ಇತ್ಯನಪೇಕ್ಷಾಮೇತ್ಯಪ ಉಪಸ್ಪೃಶಂತಿ) (ಶ. ಬ್ರಾ. ೧೨ ೫-೨.೧೫). ಸ್ನಾನಾದಿಗಳನ್ನು ಮಾಡಿ ಉಳಿದ ಕರ್ಮಗಳನ್ನು ನೆರವೇರಿಸುತ್ತಾರೆ. (ಆ ವಿವರಣವೂ ಸದ್ಯಃ ಪ್ರಕೃತ). ಇಲ್ಲಿ ಇನ್ನೊಂದಂಶವು ಗಮನಾರ್ಹವಾದುದು. ಮೃತನು ಪ್ರೇತರೂಪದಲ್ಲಿ ಹತ್ತು ದಿನಗಳು ಮೃತನ ಸಂಬಂಧಿಗಳ ಸಮೀಪದಲ್ಲಿಯೇ ಅಲೆದಾಡುವುದು ಎಂಬ ಶ್ರದ್ಧೆಯು ವೈದಿಕಕಾಲದಿಂದಲೂ ಅನುಸ್ಯೂತವಾಗಿ ಬೆಳೆದು ಬಂದಿದೆಯೆಂಬುದಕ್ಕೆ ಅನೇಕ ಆಧಾರಗಳಿರುತ್ತವೆ. ಅಸ್ಥಿಸಂಚಯನವೂ ಉಳಿದ ಕರ್ಮಗಳೂ ನೆರವೇರಿದನಂತರವೇ ಶುದ್ಧಿ. ಅಲ್ಲಿಯವರೆಗೆ ಶುದ್ಧಿಯಿಲ್ಲ.

ಮೃತನ ಜ್ಞಾಪಕಾರ್ಥವಾಗಿ ನಿರ್ಮಿತವಾಗತಕ್ಕ ಸ್ಮಾರಕವೂ ಆ ಸ್ಮಾರಕದಲ್ಲಿ ನೆರವೇರಬೇಕಾದ ಕ್ರಿಯೆಗಳೂ ಸಹ ಮೃತನ ಆತ್ಮಕ್ಕೆ ತೃಪ್ತಿಯನ್ನುಂಟುಮಾಡತಕ್ಕವು ಎಂಬ ಶ್ರದ್ಧೆಯೂ ಸಹ ವೈದಿಕಸಂಪ್ರದಾಯದಲ್ಲಿ ಕಾಣುತ್ತದೆ.

ಅಥಾಸ್ಯೈ ಕಲ್ಯಾಣಂ ಕುರ್ವಂತಿ । ಅಥಾಸ್ಯೈ ಶ್ಮಶಾನಂ ಕುರ್ವಂತಿ । ಗೃಹಾನ್ ವಾ ಪ್ರಜ್ಞಾನಂ ವಾ ಯೋ ವೈ ಕಞ್ಚ ಮ್ರಿಯತೇ ಸ ಶವಸ್ತಸ್ಮಾ ಏತದನ್ನಂ ಕರೋತಿ .... ॥

(ಶ. ಬ್ರಾ. ೧೩-೮-೧-೧-).

ನಂತರ, ಮೃತನ ಬಂಧುಗಳು, ಮೃತನಾದ ಪ್ರೇತಕ್ಕೆ ಸದ್ಗತಿಯುಂಟಾಗಬೇಕಾದ ಪ್ರಯತ್ನಗಳನ್ನು ಮಾಡುತ್ತಾರೆ. ಅವನಿಗೆ ಒಂದು ಸ್ಮಾರಕವನ್ನು ನಿರ್ಮಿಸುತ್ತಾರೆ. ಮೃತನಿಗೆ ಅನ್ನವನ್ನು ಅರ್ಪಿಸುವ ಸ್ಥಾನವೇ ಇದು. ಶವಕ್ಕೆ ಅನ್ನವನ್ನು ಅರ್ಪಿಸುವ ಸ್ಥಾನವಾದ್ದರಿಂದ ಈ ಸ್ಥಾನಕ್ಕೆ ಶ್ಮಶಾನವೆಂದೂ ಹೆಸರು. ಅಥವಾ ಶ್ಮಶವೆಂಬುದು ಪಿತೃಪರ್ಯಾಯವಾಗಿಯೂ ಇರುತ್ತದೆ. ತದರ್ಥವಾಗಿ ನಿರ್ಮಿತವಾದ ಅನ್ನವು ಅರ್ಪಿತವಾಗುವುದರಿಂದಲೂ ಸಹ ಶ್ಮಶಾನವೆಂಬ ಹೆಸರು ಎಂದು ತಿಳಿಯುತ್ತದೆ. ನೃತ್ಯಕ್ರಿಯೆ, ವೇಣ್ವಾದಿ ವಾದ್ಯವಾದನ ಇತ್ಯಾದಿ ಕ್ರಿಯೆಗಳು ನೆರವೇರುತ್ತವೆ.

ಪೃಥ್ವಿಯಲ್ಲಿ ಜೀವಿಸುವ ಪುರುಷನಿಗೆ ಯಾವ ಯಾವ ವಸ್ತುಗಳು ಪ್ರಿಯಕಾರಕಗಳೋ ಅವೆಲ್ಲವೂ ಮೃತನಿಗೂ ಪ್ರಿಯಕಾರಕಗಳೆಂಬ ಶ್ರದ್ಧೆಯೂ ಅನಾದಿಯಾಗಿರುತ್ತದೆ. ಆದುದರಿಂದಲೇ ವಸ್ತ್ರ, ಭೂಷಣ, ಫಲ ಇತ್ಯಾದ್ಯನೇಕವಾದ ವಸ್ತುಗಳು ಪ್ರೇತತೃಪ್ತ್ಯರ್ಥವಾಗಿ ಅರ್ಪಿತವಾಗುತ್ತವೆ.

ಮೃತರೆಲ್ಲರಿಗೂ ಆಚರಿಸುವ ಸಾಧಾರಣಕ್ರಿಯೆಗಳ ಜೊತೆಗೆ ಉತ್ತಮವಾದ ಯಜ್ಞಕರ್ತರ ವಿಷಯದಲ್ಲಿ ಇನ್ನೂ ಅತ್ಯಧಿಕವಾದ ಕೆಲವು ವಿಶೇಷಕ್ರಿಯೆಗಳ ಆಚರಣಗಳೂ ವಿಹಿತವಾಗಿವೆ. ಅಗ್ನಿಹೋತ್ರವನ್ನಾಚರಿಸಿದವನೂ, ಬ್ರಹ್ಮಜ್ಞಾನಿಯೂ (ಬ್ರಹ್ಮಮೇಧವನ್ನಾಚರಿಸಿದವನೂ) ವಿಶೇಷಕ್ರಿಯೆಗಳಿಗೆ ಅರ್ಹರಾಗುತ್ತಾರೆ. ಗರ್ಭಿಣೀಸ್ತ್ರೀಯಶು ಮೃತರಾದರೆ ಅವರಿಗೂ ವಿಶೇಷಕ್ರಿಯೆಯು ವಿಹಿತವಾಗಿರುತ್ತದೆ. ಈಗಿನ ಸಂಪ್ರದಾಯದಲ್ಲಿರುವಂತೆ ಸನ್ಯಾಸಿಯು

ತಲೆಯನ್ನು ನಾಳಿಕೇರಫಲದಿಂದ ತೂತುಮಾಡಿ ಆ ಬ್ರಹ್ಮರಂಧ್ರದಿಂದ ಅವನ ಚೇತಸ್ಸು ಹೊರಹೊರಡುವಂತೆ ಮಾಡುವ ಕ್ರಮ ವೈದಿಕಸಂಪ್ರದಾಯದಲ್ಲಿದ್ದಂತೆ ಕಂಡುಬರುವುದಿಲ್ಲ

ಪ್ರೇತತೃಪ್ತಿಗಾಗಿ ಐಹಿಕವಾದ ಯಾವ ಕರ್ಮವನ್ನಾಚರಿಸಿದರೂ ಸಹ, ಪ್ರೇತದ ಕರ್ಮಾನುಸಾರವಾಗಿಯೇ ಆದರ ಸುಖದುಃಖಾನುಭವಗಳು ಸಿದ್ಧವಾಗಿವೆ. ಈ ಅಂಶವು **ಪಿತೃಯಾನ** ಮತ್ತು **ದೇವಯಾನ** ಎಂಬ ಮೃತನ ಚೇತನವು ಸಂಚರಿಸುವ ಮಾರ್ಗವಿಭೇದಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಜೀವಾತ್ಮನ ಕರ್ಮಾನುರೋಧವಾದ ಗತಿಯು ಎರಡು ವಿಧವಾಗಿರುತ್ತದೆ. ಉತ್ತಮವಾದ ಕರ್ಮವನ್ನು ಆಚರಿಸಿ ಸ್ವರ್ಗಾದಿಲೋಕವನ್ನು ಪಡೆಯುವಾಗ ಆ ಜೀವನು ಹೋಗುವ ಮಾರ್ಗಕ್ಕೆ **ದೇವಯಾನ**ವೆಂದೂ, ಉತ್ತಮವಾದ ಕರ್ಮವನ್ನಾಚರಿಸದೆ ಸ್ವಾರ್ಥಾದಿವ್ಯಾಪಾರಗಳಲ್ಲಿ ಉದ್ಯುಕ್ತನಾದವನು ಹೋಗತಕ್ಕ ಮಾರ್ಗಕ್ಕೆ **ಪಿತೃಯಾನ**ವೆಂದೂ ಕರೆದಿದೆ. ಋಕ್ಸಂಹಿತೆಯಲ್ಲಿಯೂ ಸಹ ದೇವಯಾನವೆಂಬ ಪದವು ಪ್ರಸಿದ್ಧವಾಗಿದೆ ಉದಾಹರಣೆಗೆ—

ಪರಂ ಮೃತ್ಯೋ ಅನು ಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್ ।
ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾ ನಃ ಪ್ರಜಾಂ ರೀರಿಷೋ ಮೋತ ವೀರಾನ್ ।

(ಋ ಸಂ. ೧೦-೧೪-೧)

ಇತ್ಯಾದಿಋಕ್ಕುಗಳಲ್ಲಿ ದೇವಯಾನವು ಮೃತ್ಯುರಹಿತವಾದ ಮಾರ್ಗವೆಂದು ಹೇಳಿದೆ. ಈ ಮಾರ್ಗದಲ್ಲಿ ಸವಿತೃವು ಸುಕೃತಿಗಳನ್ನು ಮರಣರಹಿತವಾದ ಪುಣ್ಯಲೋಕಕ್ಕೆ ಕರೆದುಕೊಂಡು ಹೋಗುವನು ಎಂದು ಪ್ರಸಿದ್ಧವಾಗಿದೆ.

ಯೇ ತೇ ಪಂಥಾಃ ಸವಿತಃ ಪೂರ್ವ್ಯಾಸೋಽರೇಣವಃ ಸುಕೃತಾ ಅಂತರಿಕ್ಷೇ ।
ತೇಭಿರ್ನೋ ಅದ್ಯ ಪಥಿಭಿಃ ಸುಗೇಭೀ ರಕ್ಷಾ ಚ ನೋ ಅಧಿ ಚ ಬ್ರೂಹಿ ದೇವ ।

(ಋ ಸಂ. ೧೦೩೫-೧೧)

ಯತ್ರಾಸತೇ ಸುಕೃತೋ ಯತ್ರ ತೇ ಯಯುಸ್ತತ್ರ ತ್ವಾ ದೇವಃ ಸವಿತಾ ದಧಾತು ।

(ಋ ಸಂ ೧೦-೧೪-೪)

ಇತ್ಯಾದಿಋಕ್ಕುಗಳಲ್ಲಿ ಸವಿತೃವು ಸತ್ಪಥದಲ್ಲಿ ಸುಕೃತಿಗಳನ್ನು ಕರೆದುಕೊಂಡುಹೋಗುವ ದೇವನಾದುದರಿಂದ ಯಜ್ಞಕರ್ತರಾದ ಸುಕೃತಿಗಳನ್ನು ಅದೇ ಶುದ್ಧವಾದುದೂ, ರಜೋರಹಿತವಾದುದೂ, ಮೃತ್ಯುರಹಿತವಾದುದೂ ಆದ ಮಾರ್ಗದಲ್ಲಿ ಕರೆದುಕೊಂಡು ಹೋಗಬೇಕೆಂದು ಪ್ರಾರ್ಥಿತನಾಗಿದ್ದಾನೆ. ಈ ಮಾರ್ಗವನ್ನು ಉಪನಿಷತ್ತುಗಳಲ್ಲಿ ಅರ್ಚಿರಾದಿ ಮಾರ್ಗವೆಂದು ಹೇಳಿದೆ. ಮರಣಾನಂತರ ಈ ಮಾರ್ಗದಲ್ಲಿ ಬ್ರಹ್ಮಲೋಕವನ್ನು ಸೇರಿದ ಸುಕೃತಿಗಳಿಗೆ ಪುನರಾವರ್ತಿಯಿಲ್ಲವೆಂದು ಈ ಮಾರ್ಗವನ್ನು ವರ್ಣಿಸಿದೆ,

ತತ್ಪುರುಷೋಽಮಾನವಃ ಸ ಏನಾನ್ಬ್ರಹ್ಮ ಗಮಯತ್ಯೇಷ ದೇವಪಥೋ ಬ್ರಹ್ಮಪಥ ಏತೇನ
ಪ್ರತಿಪದ್ಯಮಾನಾ ಇಮಂ ಮಾನವಮಾವರ್ತಂ ನಾವರ್ತಂತೇ ನಾವರ್ತಂತೇ ।

(ಛಾ. ಉ. ೪-೧೫--೫)

ವಿದ್ಯುದ್ರೂಪದ ಪುರುಷನು (ಅಮಾನವನು) ಈ ಸುಕೃತಿಯನ್ನು ಬ್ರಹ್ಮಲೋಕಕ್ಕೆ ಒಯ್ಯುತ್ತಾನೆ. ಇದೇ ಬ್ರಹ್ಮಲೋಕದ ಮಾರ್ಗವು. ಈ ಮಾರ್ಗದಿಂದ ಬ್ರಹ್ಮಲೋಕಕ್ಕೆ ಸೇರಿದವರು ಹಿಂತಿರುಗುವುದಿಲ್ಲ. ಇದು ಖಂಡಿತ, ಎಂದು

ಹೇಳಿದೆ. ಇದೇ ಅಭಿಪ್ರಾಯವನ್ನು ಇದೇ ರೀತಿಯಲ್ಲಿ ಮುಂಡಕೋಪನಿಷತ್ತಿನಲ್ಲಿಯೂ ವರ್ಣಿಸುತ್ತಾ ಪ್ರಕೃತವಾದ ಋಕ್ಕಿನಲ್ಲಿ ಹೇಳಿರುವಂತೆಯೇ ತಿಳಿಸಿದೆ. ಅದರಲ್ಲಿ.

ಸೂರ್ಯದ್ವಾರೇಣ ತೇ ವಿರಜಾಃ ಪ್ರಯಾಂತಿ ಯತ್ರಾಮೃತಃ ಸ ಪುರುಷೋ ಹ್ಯವ್ಯಯಾತ್ಮಾ ।
(ಮು ಉ. ೧.೧೧)

ಎಂಬ ಸೂರ್ಯದ್ವಾರವನ್ನು ವರ್ಣಿಸುವ ವಾಕ್ಯಗಳಲ್ಲಿ ಉಕ್ತವಾಗಿರುವುದು. ದೇವಯಾನದಿಂದ ಬ್ರಹ್ಮಲೋಕವನ್ನು ಸೇರುವವರಿಗೆ ಪುನರಾಗಮನವಿಲ್ಲ. ಆದರೆ, ಧೂಮಮಾರ್ಗದಿಂದ (ಪಿತೃಯಾನ) ಚಂದ್ರಲೋಕವನ್ನು ಸೇರುವ ವರೂ ಸಹ ಸುಕೃತಿಗಳಾದರೂ ಅವರು ಅಲ್ಲಿ ತಮ್ಮ ಸತ್ಕರ್ಮಗಳನ್ನನುಭವಿಸಿ ಅನಂತರ ಅದರ ಅಂತ್ಯವಾದ ಮೇಲೆ ಪುನಃ ಪೃಥ್ವಿಗೆ ಬರುತ್ತಾರೆ. ದೇವಯಾನ ಮತ್ತು ಪಿತೃಯಾಣಗಳ ವರ್ಣನೆಗಳಲ್ಲಿ ಅನೇಕ ವ್ಯತ್ಯಸ್ತವಾದ ಅಭಿಪ್ರಾಯಗಳಿವೆ. ಪ್ರಕೃತದಲ್ಲಿ ಅವು ಅಷ್ಟು ಅವಶ್ಯಕವಲ್ಲ. ಪ್ರಕೃತವಾದ ಋಕ್ಕಿನಲ್ಲಿ ದೇಹದೊಡನೆ ಸೇರಿ ತನ್ನ ಸಂಸ್ಕಾರಾನುಗುಣವಾದ ಕರ್ಮಗಳನ್ನು ಮಾಡುವವನಿಗೆ ಎರಡು ವಿಧವಾದ ಸಂಚಾರಗಳಿವೆಯೆಂದು ತಿಳಿಸಿದೆ ಅದನ್ನು ಬೃಹದಾರಣ್ಯಕದಲ್ಲಿ,

.... ವೇತ್ಥೋ ದೇವಯಾನಸ್ಯ ವಾ ಪಥಃ ಪ್ರತಿಪದಂ ಪಿತೃಯಾಣಸ್ಯ ವಾ ಯತ್ಕೃತಾ ದೇವಯಾನಂ ವಾ ಪಂಥಾನಂ ಪ್ರತಿಪದ್ಯಂತೇ ಪಿತೃಯಾಣಂ ವಾಪಿ ಋಷೇರ್ವರ್ಚಃ ಶ್ರುತಂ ದ್ವೇ ಸೃತೀ ಅಶೃಣವಂ ಪಿತೃಣಾಮಹಂ ದೇವಾನಾಮುತ ಮರ್ತ್ಯಾನಾಂ ತಾಭ್ಯಾಮಿದಂ ವಿಶ್ವಮೇಜತ್ಸಮೇತಿ ಯದಂತರಾ ಪಿತರಂ ಮಾತರಂ ಚ ಇತಿ ॥
(ಬ್ರ. ಉ. ೬-೨.೨)

ದೇವತೆಗಳ ಲೋಕಕ್ಕೆ ಕರೆದುಕೊಂಡುಹೋಗುವ ಮಾರ್ಗವು ನಿನಗೆ ಗೊತ್ತೆ ಅಥವಾ ಪಿತೃಗಳ ಲೋಕಕ್ಕೆ ಕರೆದುಕೊಂಡುಹೋಗುವ ಮಾರ್ಗವನ್ನು ನೀನು ಅರಿತಿರುವೆಯಾ ಎಂದು ಪ್ರವಾಹಣ ಜೈಬಲಿಯು ಶ್ವೇತಕೇತುವನ್ನು ಕೇಳಿದಾಗ ಅವನು ಇಲ್ಲವೆಂದನು. ಆಗ ಜೈಬಲಿಯು " ಪಿತೃಲೋಕಕ್ಕೆ ಒಯ್ಯುವ ಮಾರ್ಗವೊಂದಿದೆ ; ದೇವಲೋಕಕ್ಕೆ ಒಯ್ಯುವ ಮಾರ್ಗವೊಂದಿದೆ. ಇನೆರಡೂ ಮರ್ತ್ಯರು ಮರಣಾನಂತರ ಸಂಚರಿಸತಕ್ಕ ಮಾರ್ಗಗಳು. ದ್ಯಾವಾಪೃಥಿವಿಗಳ ಅನಂತರದಲ್ಲಿರತಕ್ಕ ಈ ಮಾರ್ಗಗಳಲ್ಲಿ ಜಂಗಮಾತ್ಮಕವಾದ ಸಕಲ ಭೂತಗಳೂ ಸಂಚರಿಸುತ್ತವೆ " ಎಂದು ಋಷಿವಾಕ್ಯವನ್ನು ಉಪದೇಶಿಸಿದನು.

5. ಪಿತೃಶ್ರಾದ್ಧ

ಯಜ್ಞಾಚರಣೆಯಿಂದ ದೇವತೆಗಳಿಗೆ ಹವಿಸ್ಸನ್ನರ್ಪಿಸಿ ಅವರಿಗೆ ಸಂತೃಪ್ತಿಯನ್ನುಂಟುಮಾಡಿ ಅವರಿಂದ ಅನುಗ್ರಹವನ್ನು ಪಡೆಯಲು ಪ್ರಯತ್ನಿಸುವಂತೆ, ಶ್ರಾದ್ಧಾದಿಗಳನ್ನಾಚರಿಸಿ, ಪಿತೃಗಳಿಗೆ ಪಿಂಡಾದಿಗಳನ್ನರ್ಪಿಸಿ ಅವರು ತೃಪ್ತರಾದಾಗ ಅವರಿಂದ ಅನುಗ್ರಹವನ್ನು ಸಂಪಾದಿಸುವುದು ಪಿತೃಪೂಜೆಯ ಉದ್ದೇಶಗಳೊಲ್ಲೊಂದಾಗಿರುತ್ತದೆ. ಐಹಿಕವಾದ ಸಂಪತ್ತುಗಳನ್ನು ಪಡೆಯಲು ದೇವತೆಗಳನ್ನು ಸಹಾಯಕ್ಕೆ ಕರೆಯುವಂತೆಯೇ, ಪಿತೃಗಳನ್ನೂ ಕರೆಯಲಾಗುತ್ತದೆ.

ಸ್ವಾದುಷಂಸದಃ ಪಿತರೋ ವಯೋಧಾಃ ಕೃಚ್ಛ್ರಶ್ರಿತಃ ಶಕ್ತೀವಂತೋ ಗಭೀರಾಃ ।
ಚಿತ್ರಸೇನಾ ಇಷುಬಲಾ ಅಮೃಧ್ರಾಃ ಸತೋವೀರಾ ಉರವೋ ವ್ರಾತಸಾಹಾಃ ॥
(ಋ. ಸಂ ೬. ೭೫. ೯)

ಬ್ರಾಹ್ಮಣಾಸಃ ಪಿತರಃ ಸೋವ್ಯಾಸಃ ಶಿವೇ ನೋ ದ್ಯಾವಾಪೃಥಿವೀ ಅನೇಹಸಾ ।

(ಋ ಸಂ. ೬. ೭೫. ೧೦)

ಎಂಬಲ್ಲಿ ಪಿತೃಗಳ ಅಸಾಧಾರಣವಾದ ಶಕ್ತಿಯೂ ಔದಾರ್ಯವೂ ತಿಳಿಸಲ್ಪಟ್ಟಿದೆ. ಪಾಲಕರಾದ ಪಿತೃಗಳು ಶತ್ರುಗಳನ್ನು ನಾಶಮಾಡಿ ಶತ್ರುಗಳ ಅನ್ನವನ್ನು ತಮ್ಮ ಪುತ್ರಾದಿಗಳಿಗೆ ಹಂಚುವವರಾಗಿದ್ದಾರೆ. ಶತ್ರುನಾಶಕ್ಕಾಗಿ ಸ್ಥಿರಸಂಕಲ್ಪವುಳ್ಳವರೂ ತೀಕ್ಷ್ಣವಾದ ಆಯುಧಗಳನ್ನು ಹೊಂದಿರುವವರೂ ಶತ್ರುನಾಶಕರೂ ಆದ ಪಿತೃಗಳು ನಮಗೆ ರಕ್ಷಕರಾಗಿರಲಿ. ನನುಗೆ ಮಂಗಳವನ್ನುಂಟುಮಾಡಲಿ ಎಂದು ಪ್ರಾರ್ಥಿಸಿದೆ. ಆದರೆ, ಇಂತಹ ಪ್ರಾರ್ಥನೆಗೆ ಪೂರ್ವಭಾವಿಯಾಗಿ ಅವರಿಗೆ ಪಿಂಡಾದಿಗಳನ್ನರ್ಪಿಸಿ ಅವರನ್ನು ತೃಪ್ತಿಗೊಳಿಸಬೇಕು. ಇಂತಹ ಸಂತೃಪ್ತಿಯು ಒಂದೊಂದು ಸಂದರ್ಭದಲ್ಲಿ ಒಂದೊಂದು ವಿಧವಾಗಿ ಒದಗುತ್ತದೆ. ಮರಣದಿನಗಳಲ್ಲಿ ಆಚರಿಸತಕ್ಕ ಶ್ರಾದ್ಧಾದಿಗಳು, ಪರ್ವಕಾಲಗಳಲ್ಲಿ ಅರ್ಪಿಸುವ ತರ್ಪಣಾದಿಗಳು, ಉಳಿದ ವಿಶೇಷ ದಿವಸಗಳಲ್ಲಿ ಅರ್ಪಿತವಾಗುವ ಪೂಜೆಗಳು, ಇವೇ ಅಲ್ಲದೇ, ವಿವಾಹಾದಿ ಕಲ್ಯಾಣ ದಿವಸಗಳಲ್ಲೂ ಸಹ ಪಿತೃಪೂಜೆಯು ನಿಯತವಾಗಿ ನೆರವೇರಲೇಬೇಕಾಗುತ್ತದೆ. ಆದರೆ, ಕೆಲವು ಸನ್ನಿವೇಶಗಳಲ್ಲಿ ಅಂಗಿರಸ್ಸೇ ಮುಂತಾದ ಪೂರ್ವಪಿತೃಗಳೊಡನೆ ಪಿತೃಪಿತಾಮಹಪ್ರಪಿತಾಮಹರಿಗೆ ಆಹ್ವಾನವಿರುತ್ತದೆ ಕಲ್ಯಾಣಕಾಲಗಳಲ್ಲಿ ಆಹ್ವಾನವನ್ನೀಯುವಾಗ ಪಿತೃಗಳನ್ನು **ನಾಂದೀಮುಖ**ವುಳ್ಳರೆಂದೂ ಸಂಬೋಧಿಸಲಾಗುತ್ತದೆ. ಸಂತೋಷದಿಂದ ಕೂಡಿದ ಮುಖವುಳ್ಳವರೆಂದರ್ಥ ಹೀಗೆ, **ಪಾರ್ವಣಶ್ರಾದ್ಧ, ನಾಂದೀ** ಶ್ರಾದ್ಧ(ವೃದ್ಧಿಶ್ರಾದ್ಧ), **ಪೂರ್ತ** ಶ್ರಾದ್ಧ ಇತ್ಯಾದಿಯಾದ ಅನೇಕ ಕರ್ಮಗಳಿಂದ ಪಿತೃಗಳ ಸಂತೃಪ್ತಿಯು ಸಂಭವಿಸುತ್ತದೆಯೆಂಬ ಶ್ರದ್ಧೆಯು ವೈದಿಕಕಾಲದಿಂದಲೂ ಇರುತ್ತದೆ. ಆದರೆ, ಕೆಲವು ಕರ್ಮಗಳು ಸಂಹಿತಾದಿಗಳಲ್ಲಿಯೇ ನಿರ್ದಿಷ್ಟವಾಗಿವೆ. ಇನ್ನು ಕೆಲವು ಅವುಗಳಲ್ಲಿ ಕೇವಲ ಸೂಚಿತವಾಗಿ, ಶ್ರೌತಸೂತ್ರಾದಿಗಳಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಅವುಗಳಲ್ಲಿ ಅತಿ ಮುಖ್ಯವಾದ ಕೆಲವು ಕರ್ಮಗಳನ್ನು ಮಾತ್ರ ಇಲ್ಲಿ ವಿವರಿಸಿ ಉಳಿದವನ್ನು ಸೂಕ್ಷ್ಮವಾಗಿ ತಿಳಿಸಲಾಗುತ್ತದೆ.

ಕೆಲವು ಮುಖ್ಯವಾದ ಶ್ರಾದ್ಧಗಳೂ **ಯಜ್ಞ**ಗಳೆಂದೇ ಪ್ರಸಿದ್ಧವಾಗಿವೆ. ಅವುಗಳಲ್ಲಿ **ಪಿಂಡಪಿತೃಯಜ್ಞ** ಮತ್ತು **ಮಹಾಪಿತೃಯಜ್ಞ** ಎಂಬಿವು ಅತಿ ಮುಖ್ಯವಾದವು. **ಪಿಂಡಪಿತೃಯಜ್ಞದ** ಪ್ರಭಾವವನ್ನು ವಿವರಿಸುತ್ತ ಶತಪಥ ಬ್ರಾಹ್ಮಣದಲ್ಲಿ ಒಂದು ಐತಿಹಾಸಿಕ ಸನ್ನಿವೇಶವು ಈ ರೀತಿ ವರ್ಣಿತವಾಗಿದೆ.

ಪ್ರಜಾಪತಿಂ ವೈ ಭೂತಾನ್ಯುಪಾಸೀದನ್ । ಪ್ರಜಾ ವೈ ಭೂತಾನಿ ವಿ ನೋ ಧೇಹಿ ಯಥಾ ಜೀವಾಮೇತಿ ತತೋ ದೇವಾ ಯಜ್ಞೋಪವೀತಿನೋ ಭೂತ್ವಾ ದಕ್ಷಿಣಂ ಜಾನ್ವಾಚ್ಯೋಪಾಸೀದಂಸ್ತಾನಬ್ರವೀದ್ಯಜ್ಞೋ ವೋಽನ್ನಮಮೃತತ್ವಂ ವ ಊರ್ಗ್ವಃ ಸೂರ್ಯೋ ವಾ ಜ್ಯೋತಿರಿತಿ ॥

(ಶ ಬ್ರಾ ೨. ೪. ೨. ೧)

ಒಂದು ಸಲ ಪ್ರಜಾಪತಿಯಿಂದ ಸೃಷ್ಟವಾದ ಸಕಲ ಭೂತಗಳೂ ಪ್ರಜಾಪತಿಯನ್ನು ಸಮೀಪಿಸಿ "ಎಲೈ ತಂದೆಯೇ, ನಾವು ಜೀವಿಸುವ ಕ್ರಮವನ್ನು ತಿಳಿಸಿ ಕೊಡು" ಎಂದು ಪ್ರಾರ್ಥಿಸಿದವು. ಅಲ್ಲಿ ದೇವತೆಗಳು, ಪಿತೃಗಳು, ಮಾನವರು, ಉಳಿದ ಪ್ರಾಣಿಗಳು ಇವೆಲ್ಲವೂ ಇದ್ದವು. ಅವುಗಳಲ್ಲಿ ದೇವತೆಗಳು ಪ್ರಥಮಧಃ ಯಜ್ಞೋಪವೀತವನ್ನು ಧರಿಸಿಕೊಂಡು ತಮ್ಮ ಬಲಗಡೆಯ ಮೊಣಕಾಲನ್ನು ನೆಲಕ್ಕೆ ಊರಿದವರಾಗಿ ಪ್ರಜಾಪತಿಯನ್ನು ಸಮೀಪಿಸಿದರು. ಆಗ ಪ್ರಜಾಪತಿಯು ದೇವತೆಗಳನ್ನುದ್ದೇಶಿಸಿ "ಯಜ್ಞವೇ ನಿಮಗೆ ಅನ್ನವು, ಅಮೃತತ್ವವೇ ನಿಮ್ಮ ರಸವು ಸೂರ್ಯನೇ ನಿಮ್ಮ ತೇಜಸ್ಸು" ಎಂದು ತಿಳಿಸಿದನು.

ಅಥೈನಂ ಪಿತರಃ । ಪ್ರಾಚೀನಾವೀತಿನಃ ಸವ್ಯಂ ಜಾನ್ವಾಚ್ಯೋಪಾಸೀದಂಸ್ತಾನಬ್ರವೀನ್ಮಾಸಿ-ಮಾಸಿ ವೋಶನಗ್ ಸ್ವಧಾ ವೋ ಮನೋಜವೋವಶ್ಚಂದ್ರಮಾ ವೋ ಜ್ಯೋತಿರಿತಿ ॥

(ಶ ಬ್ರಾ. ೨ ೪. ೨. ೨

ಆಗ ಪಿತೃಗಳು ಪ್ರಾಚೀನಾವೀತಿಯನ್ನು ಧರಿಸಿ (ಬಲಭುಜದ ಮೇಲೆ ಯಜ್ಞೋಪವೀತವನ್ನು ಧರಿಸಿದವರಾಗಿ) ತಮ್ಮ ಎಡಗಡೆಯ ಮೊಣಕಾಲನ್ನು ನೆಲದಮೇಲೂರಿಕೊಂಡು ಪ್ರಜಾಪತಿಯನ್ನು ಸಮೀಪಿಸಿದರು. ಆಗ ಪ್ರಜಾಪತಿಯು ಅವರನ್ನು ಸಂಬೋಧಿಸಿ ನಿಮಗೆ ಪ್ರತಿಮಾಸವೂ ಅನ್ನವು ಲಭಿಸಲಿ ನಿಮಗೆ ಅರ್ಪಿತವಾಗುವ **ಸ್ವಧಾ**ಸಂಜ್ಞಕವಾದ ಅನ್ನವೇ ನಿಮ್ಮ ಮನೋವೇಗದ ಮೂಲವಾಗಿರಲಿ. ಚಂದ್ರನೇ ನಿಮಗೆ ಜ್ಯೋತಿಯು ಎಂದು ಅನುಗ್ರಹಿಸಿ ಕಳುಹಿಸಿದನು. (ನಂತರ ಮಾನವಾದಿಗಳಿಗೂ ಸಹ ಅವರವರ ಸ್ವಭಾವಕ್ಕನುಗುಣವಾಗಿ ತಿಳಿಸಿ ಕಳುಹಿದನು).

ಹೀಗೆ ಪ್ರಜಾಪತಿಯಿಂದ ನಿರ್ದಿಷ್ಟವಾದಂತೆ, ಪಿತೃಗಳಿಗೆ ಪ್ರತಿಮಾಸದಲ್ಲೂ ಪರ್ವಕಾಲದಲ್ಲಿ **ಸ್ವಧಾ**ರೂಪದಲ್ಲಿ ಅನ್ನವನ್ನು ಅರ್ಪಿಸಲು ನೆರವೇರಿಸುವ ಕರ್ಮಕ್ಕೆ **ಪಿಂಡಪಿತೃಯಜ್ಞ**ವೆಂದು ಹೆಸರು. ಈ ಯಜ್ಞವು ದಕ್ಷಿಣಾಗ್ನಿಯಲ್ಲಿ ನೆರವೇರತಕ್ಕದ್ದು. ಯಜ್ಞೋಪವೀತದ ಕ್ರಮವು ಪ್ರಾಚೀನಾವೀತಿಯಲ್ಲಿರಬೇಕು ಪ್ರತಿಯೊಂದು ಕಾರ್ಯವನ್ನೂ ಅಪ್ರದಕ್ಷಿಣಕ್ರಮದಲ್ಲಿ ನೆರವೇರಿಸಬೇಕು ಪಿತೃಗಳೊಡನೆ ಸೋಮನೂ ಮತ್ತು ಕವ್ಯವಾಹನನಾದ ಅಗ್ನಿಯೂ ಉದ್ದಿಷ್ಟರಾಗುತ್ತಾರೆ. (ಉಳಿದ ಕಾರ್ಯಕಲಾಪಗಳ ವಿವರಣವು ಅಪ್ರಕೃತ). ಈ ಕರ್ಮದಲ್ಲಿ ಅರ್ಪಿತವಾಗುವ **ಸ್ವಧಾ**ರೂಪವಾದ ಹವಿಸ್ಸು ಪಿತೃಗಳಿಗೆ ಅತ್ಯಂತ ಶ್ರೇಷ್ಠವಾದ ತೃಪ್ತಿಯನ್ನು ಕೊಡುವುದೆಂದು ಶ್ರದ್ಧೆಯಿರುತ್ತದೆ ಇದರಂತೆಯೇ, **ಮಹಾಪಿತೃಯಜ್ಞ**ವೂ ಅತ್ಯಂತ ಶ್ರೇಷ್ಠವೂ ಪ್ರಭಾವಶಾಲಿಯೂ ಆದದ್ದು ಎಂದು ಅದರ ಮಹತ್ತ್ವವನ್ನು ಅನೇಕ ಕಡೆಗಳಲ್ಲಿ ಸ್ತುತಿಸಿದೆ. ಶತಪಥ ಬ್ರಾಹ್ಮಣದಲ್ಲಿ ಇದರ ಪ್ರಭಾವವನ್ನು ಈ ರೀತಿ ಪ್ರಶಂಸಿಸಿದೆ.

ಮಹಾಹವಿಷಾ ಹ ವೈ ದೇವಾ ವೃತ್ರಂ ಜಘ್ನುಃ । ತೇ ನೋ ಏವ ವ್ಯಜಯಂತ·ಯೇಯಮೇಷಾ ವಿಜಿತಿಸ್ತಾಮುಥ ಯಾನೇವೈಷಾಂ ತಸ್ಮಿನ್ತ್ಸಂಗ್ರಾಮೇ ಅಘ್ನಂಸ್ತಾನ್ಪಿತೃಯಜ್ಞೇನ ಸಮೈರಯಂತ ಪಿತರೋ ವೈ ತ ಆಸಂಸ್ತಸ್ಮಾತ್ಪಿತೃಯಜ್ಞೋ ನಾಮ ।

(ಶ. ಬ್ರಾ ೨ ೬. ೧. ೧

ಮಹಾಹವಿಸ್ಸಿನಿಂದ ದೇವತೆಗಳು ವೃತ್ರಾಸುರನನ್ನು ನಾಶಮಾಡಿದರು. ಈ ಹವಿಸ್ಪ್ರದಾನದಿಂದಲೇ, ಅವರು ತಮ್ಮ ಈಗಿನ ಪ್ರಭಾವಯುತವಾದ ಸ್ಥಾನವನ್ನು ಆಕ್ರಮಿಸಿದ್ದಾರೆ. ಅನಂತರ ಪಿತೃಯಜ್ಞವನ್ನಾಚರಿಸಿ ಯುದ್ಧದಲ್ಲಿ ಮೃತರಾಗಿದ್ದವರನ್ನೆಲ್ಲಾ ಪುನಃ ಬದುಕುವಂತೆ ಮಾಡಿದರು. ಅಲ್ಲಿ ಪುನಃ ಬದುಕಿದವರೇ ಪಿತೃಗಳು ಆದುದರಿಂದಲೇ ಈ ಯಜ್ಞಕ್ಕೆ **ಮಹಾಪಿತೃಯಜ್ಞ** ಎಂಬ ಹೆಸರು ಪ್ರಸಿದ್ಧವಾಗಿತೆ.

ವಸಂತೋ ಗ್ರೀಷ್ಮೋ ವರ್ಷಾಃ । ಏತೇ ತೇ ಯೇ ವ್ಯಜಯಂತ ಶರದ್ಧೇಮಂತಃ ಶಿಶಿರಸ್ತ ಉ ತೇ ಯಾನ್ಪುನಃ ಸಮೈರಯಂತ ॥

(ಶ. ಬಾ. ೨. ೬. ೧. ೨)

ವಸಂತ, ಗ್ರೀಷ್ಮ ಮತ್ತು ವರ್ಷರ್ತುಗಳು ವೃತ್ರಾಸುರನನ್ನು ನಾಶಮಾಡಿದ ಋತುಗಳು ಶರತ್, ಹೇಮಂತ ಮತ್ತು ಶಿಶಿರ ಋತುಗಳು ಮೃತರಾದವರನ್ನು ಪುನಃ ಬದುಕಿಸಿದ ಋತುಗಳು.

ಅಥ ಯದೇಷ ಏತೇನ ಯಜತೇ । ತನ್ನಾಹ ನ್ವೈವೈತಸ್ಯ ತಥಾ ಕಂಚನ ಘ್ನಂತೀತಿ ದೇವಾ ಅಕುರ್ವನ್ನಿತಿ ನ್ವೈವೈಷ ಏತತ್ಕರೋತಿ ಯಮುಚ್ಚೈವೈಭ್ಯೋ ದೇವಾ ಭಾಗಮಕಲ್ಪಯಂ. ಸ್ತಮು ಚ್ಚೈವೈಭ್ಯ ಏಷ ಯದ್ಭಾಗಂ ಕರೋತಿ ಯಾನು ಚ್ಚೈವ ದೇವಾಃ ಸಮ್ಯೌರಯಂತ ತಾನು ಚ್ಚೈವೈತದವತಿ ಸ್ವಾನು ಚ್ಚೈವೈತಪ್ಪ್ರೀತ್ಯಾನ್ ಶ್ರೇಯಾಗ್ಂ ಸ ಲೋಕಮುಪೋನ್ನಯತಿ ಯದು ಚ್ಚೈವಾಸ್ಯಾತ್ಕ್ಷತ್ಕಿನೋಽಚರಣೇನ ಹನ್ಯತೇ ವಾ ವಿಾಯತೇ ವಾ ತದುಚ್ಚೈವಾಸ್ಮೈತೇನ ಪುನರಾಪ್ಯಾಯತೇ ತಸ್ಮಾದ್ವಾ ಏಷ ಏತೇನ ಯಜತೇ ॥

(ಶ. ಬ್ರಾ. ೨. ೬. ೧. ೩.)

ಈ ಪಿತೃಯಜ್ಞವನ್ನಾಚರಿಸಲು ಎರಡು ಉದ್ದೇಶಗಳಿರುತ್ತವೆ. ಮೊದಲನೆಯದಾಗಿ, ಈ ಯಜ್ಞಾಚರಣೆಯಿಂದ ಅಸುರರು ಯಜಮಾನನಿಗೆ ಸೇರಿದ ಯಾವ ಜನರನ್ನೂ ಹಿಂಸಿಸಲಾಗುವುದಿಲ್ಲ ಮತ್ತು ಎರಡನೆಯದಾಗಿ, ದೇವತೆಗಳೂ ಸಹ ಈ ಯಜ್ಞವನ್ನಾಚರಿಸಿ ಪಿತೃಗಳನ್ನು ಪೂಜಿಸಿದ್ದಾರೆ. ಮತ್ತು ಈ ಯಜ್ಞವನ್ನಾಚರಿಸಿ ದೇವತೆಗಳು ಪಿತೃಗಳಿಗೆ ಯಾವ ಭಾಗವನ್ನು ನಿರ್ದೇಶಿಸಿ ಅರ್ಪಿಸಿದರೋ, ಅದೇ ಭಾಗವನ್ನು ಯಜಮಾನನೂ ಅರ್ಪಿಸಬೇಕು. ಹೀಗೆ ಮಾಡುವುದರಿಂದ ದೇವತೆಗಳಿಂದ ಪುನಃ ಬದುಕಿಸಲ್ಪಟ್ಟ ಪಿತೃಗಳಿಗೆ ತೃಪ್ತಿಯನ್ನುಂಟು ಮಾಡುವುದೇ ಅಲ್ಲದೇ, ಅವರಿಗೆ ಇನ್ನೂ ಉತ್ತಮವಾದ ಗತಿಯನ್ನು ಕಲ್ಪಿಸಿದಂತಾಗುತ್ತದೆ, ಮತ್ತು ತನ್ನ ಇತರ ಕರ್ಮಗಳಲ್ಲಿ ಯಾವ ನ್ಯೂನತೆಯಿದ್ದರೂ ಸಹ, ಈ ಕರ್ಮಾಚರಣೆಯಿಂದ ಅದು ಸರಿಹೋಗುತ್ತದೆ. ಈ ಎಲ್ಲಾ ಕಾರಣಗಳಿಂದಲೂ ಈ ಪಿತೃಯಜ್ಞವನ್ನು ಆಚರಿಸಬೇಕು.

ಸ ಪಿತೃಭ್ಯಃ ಸೋಮವದ್ಭ್ಯಃ । ಷಟ್ಕಪಾಲಂ ಪುರೋಡಾಶಂ ನಿರ್ವಪತಿ ಸೋಮಾಯ ವಾ ಪಿತೃಮತೇ ಷಡ್ವಾ ಋತವ ಋತವಃ ಪಿತರಸ್ತ ಸ್ಮಾತ್ ಷಟ್ಕಪಾಲೋ ಭವತಿ ॥

ಶ. ಬ್ರಾ. ೨-೬-೧-೪)

ಈ ಕರ್ಮಕಾಲದಲ್ಲಿ, ಸೋಮವಂತರಾದ ಪಿತೃಗಳಿಗೆ ಷಟ್ಕಪಾಲಯುತವಾದ ಪುರೋದಾಶವನ್ನು ಅರ್ಪಿಸುತ್ತಾನೆ. (ಪಿತೃಗಳೊಡಗೂಡಿದ ಸೋಮನನ್ನುದ್ದೇಶಿಸಿ ಎಂದಾಗಬಹುದು, ಅಥವಾ ಸೋಮಯುಕ್ತರಾದ ಪಿತೃಗಳನ್ನುದ್ದೇಶಿಸಿ ಎಂದೂ ಇರಬಹುದು). ಷಟ್ಕಪಾಲವೆಂಬ ಸಂಖ್ಯಾನಿರ್ದೇಶವೇತಕ್ಕೆಂದರೆ, ಪಿತೃಗಳೇ ಋತುರೂಪರಾಗಿರುತ್ತಾರೆ. ಋತುಗಳ ಸಂಖ್ಯೆಗಳು ಆರು. ಅದುದರಿಂದಲೇ ಈ ಸಂಖ್ಯಾನಿರ್ದೇಶ.

ಅಥ ಪಿತೃಭ್ಯೋ ಬರ್ಹಿಷದ್ಭ್ಯಃ । ಅನ್ವಾಹಾರ್ಯಪಚನೇ ಧಾನಾಃ ಕುರ್ವಂತಿ ತತೋಽರ್ಧಾಃ ಪಿಗ್ಂಸಂತ್ಯರ್ಧಾ ಇತ್ಯೇವ ಧಾನಾ ಅಪಿಷ್ಟಾ ಭವಂತಿ ತಾ ಧಾನಾಃ ಪಿತೃಭ್ಯೋ ಬರ್ಹಿಷದ್ಭ್ಯಃ ॥

(ಶ. ಬ್ರಾ. ೨-೬-೧.೫)

ಅನಂತರ ಅನ್ವಾಹಾರ್ಯ ಸಂಜ್ಞಕವಾದ ದಕ್ಷಿಣಾಗ್ನಿಯಲ್ಲಿ ಯವಧಾನ್ಯಗಳನ್ನು ವಿಧಿವತ್ತಾಗಿ ಹುರಿಯತಕ್ಕದ್ದು. ಇವುಗಳಲ್ಲಿ ಅರ್ಧಭಾಗವನ್ನು ಹಿಟ್ಟನ್ನಾಗಿ ಮಾಡಿ ಉಳಿದದ್ದನ್ನು ಹಾಗೆಯೇ ಇರಿಸುವುದು. ಇದು ಬರ್ಹಿಷದರಾದ ಪಿತೃಗಳಿಗೆ ಅರ್ಪಿಸುವ ಹವಿಸ್ಸು.

अथ पितृभ्योऽग्निष्वात्तेभ्यः । निदान्न्याय्यै दुग्धे सकृदुपसमुथित एकशलाकया मंथो भवति सकृदु ह्येव परांचः पितरस्तस्मात्सकृदुपसमुथितो भवत्येतानि हवीगंषि भवंति ॥

(श. ब्रा. ३. ६. ८. ६)

अनंतर करुवन्नु आदरदिंद नेक्कतक्क गोविनिंद करेद क्षीरदल्लि मिश्रितवादुदू गोधिहिट्टिनिंद निर्मितवादुदू अद हविस्सन्नु अग्निष्वात्तसंज्ञकरादा पितृगळिगे अर्पिसतक्कद्दु. इत्यादियागि महापितृयज्ञकालदल्लि अर्पितवागुव हविस्सुगळ विधानवन्नु तिळिसिदे. ई पितृगळन्नु सोमवंतः, बर्हिषदः मत्तु अग्निष्वात्ताः एंदु विभागिसिदे. ई विभागक्रमवन्नु मेले, तद्धैक सोमेनेजानाः (श. ब्रा. ३-६-८-६) एंब वाक्यवन्नुदाहरिसि तिळिसिदे. ई महापितृयज्ञद प्रभाववन्नु तिळिसुवाग इल्लि पूजितरागुव पितृगळ प्रभाववन्नू अतिशयवागि वर्णिसिदे. हीगे पितृ श्राद्धगळु अनेक रीतियल्लि विहितवागिवे. ओट्टिनल्लि, विधुक्तवाद ई श्राद्धादिगळ आचरणेयिंद पितृगळिगे संतृप्तियागि आदरिंद जीवंतरागिरुववरिगे ओळ्ळेयदागुवुदु एंब श्रद्धेयिरुत्तदे. श्रद्धेयिंद माडुवुदरिंदलेई कर्मक्के श्राद्धवेंब हेसरु प्रसिद्धवागिदे.

देवतास्वरूपवन्नु हॊंदिरुव पितृगळन्नु प्रशंसिसुव केलवु वाक्यगळन्नु मात्र उदाहरिसि ई प्रकरणवन्नु सद्यः समाप्तिगॊळिसलागुत्तदे

अंगिरोभिरा गहि यज्ञियेभिर्यम वैरूपैरिह मादयस्व ।
विवस्वंतं हुवे यः पिता तेऽस्मिन् यज्ञे बर्हिष्या निषद्य ॥

(ऋ सं. ८०-८४-४)

एळै यमराजनेऽ, नानारूपगळन्नु धरिसिदवरू, श्रेष्ठवाद पूजेगे योग्यरादवरू आंगिरासंज्ञकरू अद पितृगळॊडने नम्म ई पितृयज्ञक्के दयमाडु. निन्न पितृवाद विवस्वंतनन्नू ई यज्ञक्के दयमाडबेकेंदु प्रार्थिसुत्तेनॆ.

मातलीय कव्यैर्यमो अंगिरोभिर्बृहस्पतिर्ऋक्वभिर्वावृधानः ।
यांश्च देवा वावृधुर्ये च देवानान्त्स्वाहान्ये स्वधयान्ये मदंति ॥

(ऋ. सं. ८०-८४-३)

मातलियुक्तनाद इंद्रनु कव्यभागिगळाद पितृगळॊंदिगे पुष्टियन्नु हॊंदलि. यमनु अंगिरस्सुगळॊंदिगे पुष्टियन्नु हॊंदलि. बृहस्पतियु ऋक्वरॊंदिगे पुष्टियन्नु हॊंदलि. यावे इंद्राद्यादिगळन्नु पितृगळु पुष्टरागुवंते माडुवरो आ इंद्राद्यादिदेवतेगळु स्वाहाकारपूर्वकवागि अर्पिसिद हविस्सुगळिंद तृप्तरागुत्तारे. यावा पितृगळन्नु इंद्राद्यादिदेवतेगळु पुष्टिगॊळिसुवरो, आ पितृगळु श्रद्धारूपवाद हविस्सुगळिंद तृप्तियन्नु हॊंदुत्तारे.

ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ ಸದಃಸದಃ ಸದತ ಸುಪ್ರಣೀತಯಃ ।
ಅತ್ತಾ ಹವೀಂಷಿ ಪ್ರಯತಾನಿ ಬರ್ಹಿಷ್ಯಥಾ ರಯಿಂ ಸರ್ವವೀರಂ ದಧಾತನ ॥
(ಋ. ಸಂ. ೧೦-೧೫-೧೧)

ಅಗ್ನಿಷ್ವಾತ್ತಸಂಜ್ಞಕರಾದ ಎಲೈ ಪಿತೃಗಳೇ, ನಮ್ಮ ಈ ಪಿತೃಯಜ್ಞಕ್ಕೆ ದಯಮಾಡಿರಿ. ನಿಮ್ಮ ನಿಮ್ಮ ಕ್ಲಪ್ತವಾದ ಸ್ಥಾನದಲ್ಲಿ ಕುಳಿತುಕೊಳ್ಳಿರಿ. ದರ್ಭಾಸನದಲ್ಲಿ ಅರ್ಪಿತವಾದ ಹವಿಸ್ಸುಗಳನ್ನು ಸೇವಿಸಿರಿ. ನಮಗೆ ಸಕಲ ಸಂಪತ್ತು ಗಳನ್ನೂ ಒದಗಿಸಿ ನಮಗೆ ಶ್ರೇಯಸ್ಸನ್ನುಂಟುಮಾಡಿರಿ.

ಆಜ್ಯಾ ಜಾನು ದಕ್ಷಿಣತೋ ನಿಷದ್ಯೇಮಂ ಯಜ್ಞಮಭಿ ಗೃಣೀತ ವಿಶ್ವೇ ।
ಮಾ ಹಿಂಸಿಷ್ಟ ಪಿತರಃ ಕೇನ ಚಿನ್ನೋ ಯದ್ವ ಆಗಃ ಪುರುಷತಾ ಕರಾಮ ॥
(ಋ ಸಂ. ೧೦-೧೫-೬)

ಎಲೈ ಪಿತೃಗಳೇ, ಬಲಭಾಗದಲ್ಲಿ ನಿಮ್ಮ ಎಡಮೊಣಗಾಲುಗಳನ್ನು ಕೆಳಕ್ಕೆಮಾಡಿ ಕುಳಿತುಕೊಳ್ಳಿರಿ. ನಮ್ಮ ಈ ಯಜ್ಞ ವನ್ನು ಸೇವಿಸಿರಿ. ನಮಗೆ ಯಾವ ವಿಧವಾದ ಹಿಂಸೆಯನ್ನೂ ಮಾಡಬೇಡಿರಿ. ಮಾನವರಿಗೆ ಸಹಜವಾದ ಅಜ್ಞಾನದಿಂ ದಲೂ ಅಶಕ್ತಿಯಿಂದಲೂ ನಾವು ಯಾವುದಾದರೂ ಪಾಪಕರ್ಮವನ್ನಾಚರಿಸಿದ್ದರೆ ಅದನ್ನು ನಾಶಮಾಡಿ ನಮ್ಮನ್ನು ಕ್ಷಮಿಸಿರಿ. ನಮಗೆ ಸಕಲಶ್ರೇಯಸ್ಸೂ ಉಂಟಾಗುವಂತೆ ಅನುಗ್ರಹಿಸಿರಿ ಇತ್ಯಾದಿಯಾಗಿ ದಿವ್ಯತ್ವವನ್ನು ಪಡೆದ ಪಿತೃ ಗಳನ್ನು ಪ್ರಶಂಸಿಸಿ ಪ್ರಾರ್ಥಿಸಿದೆ

ಪಿತೃಗಳ ವಿಷಯದಲ್ಲಿ ಋಕ್ಕುಗಳಲ್ಲಿರುವ ಕೆಲವು ವಿವರಣೆಗಳು

ಮೃತರಾದವರಲ್ಲಿ ಪುಣ್ಯಶಾಲಿಗಳು ಮೂರನೆಯ ಸ್ವರ್ಗದಲ್ಲಿ ವಾಸಿಸುತ್ತಾರೆ, ಇವರಿಗೇ ಪಿತೃಗಳೆಂಬು ಹೆಸರು ಪುರಾತನವಾದ ಮಾರ್ಗಗಳನ್ನು ಅನುಸರಿಸಿದ, ಮೂಲಪುರುಷರೇ ಇವರು (೧೦-೧೫-೮, ೧೦), ಮೃತರಾದವರು, ಈ ಋಷಿಗಳು ಏರ್ಪಡಿಸಿದ ದಾರಿಯನ್ನೇ ಅನುಸರಿಸಿ, ಅವರ ಸಮೀಪಕ್ಕೇ ಹೋಗುತ್ತಾರೆ (೧೦-೧೪-೨, ೭, ೧೫). ವಿಷ್ಣುವಿನ ಮೂರನೆಯ ಪಾದಕ್ಕೆ ಸಂಬಂಧಿಸಿದ್ದಾರೆ. (೧೦-೧೫-೩ ; ೧-೧೫೪-೫ನ್ನು ಹೋಲಿಸಿ). ಎರಡು ಸೂಕ್ತಗಳು ಪಿತೃದೇವತಾಕವಾದವು. (೧೦-೧೫ ; ೧೦-೧೬).

ಪಿತೃಗಳಲ್ಲಿ, ನವಗ್ವರು, ವಿರೂಪರು, ಅಂಗಿರಸರು, ಅಥರ್ವರು, ಭೃಗುಗಳು ಮತ್ತು ವಸಿಷ್ಠರೆಂಬ (೧೦ ೧೪-೪ ರಿಂದ ೬ ; ೧೦-೧೫-೮) ಗಣಗಳಿವೆ ; ಇವುಗಳಲ್ಲಿ ಕಡೆಯ ನಾಲ್ಕು ಹೆಸರುಗಳು, ಅಥರ್ವವೇದ ಮತ್ತು ಋಗ್ವೇದದ ಎರಡನೆಯ ಮತ್ತು ಏಳನೆಯ ಮಂಡಲಗಳ ಋಷಿಗಳ ಹೆಸರುಗಳೇ ಆಗಿವೆ. ಇವರಲ್ಲಿ ಅಂಗಿರಸರಿಗೂ ಯಮನಿಗೂ ವಿಶೇಷ ಸಂಬಂಧವಿದೆ (೧೦.೧೪-೩,೫) ಪಿತೃಗಳಲ್ಲಿ ಅವರಾಃ (ಕೆಳ ದರ್ಜೆಯವರು), ಪರಾಃ (ಉತ್ತಮ ದರ್ಜೆಯವರು) ಮತ್ತು ಮಧ್ಯಮಾಃ (ಮಧ್ಯ ದರ್ಜೆಯವರು) ಎಂತಲೂ ವಿಭಾಗಗಳಿವೆ ; ಇವರೆಲ್ಲರೂ ಅವರ ವಂಶಜರಿಂದ ಜ್ಞಾತರಲ್ಲದಿದ್ದರೂ, ಅಗ್ನಿಗೆ ಇವರೆಲ್ಲರ ಪರಿಚಯವೂ ಇದೆ (೧೦-೧೫.೧, ೨, ೧೩)- ಉಷಸ್ಸುಗಳು, ನದಿಗಳು, ಪರ್ವತಗಳು, ಭೂಮ್ಯಾಕಾಶಗಳು, ಪೂಷಣ ಮತ್ತು ಋಭುಗಳು, ಇವರುಗಳ ಜೊತೆಯಲ್ಲಿ ಪಿತೃಗಳ ಅನುಗ್ರಹವೂ ಪ್ರಾರ್ಥಿತವಾಗಿದೆ (೬-೫೨-೪ , ೬-೭೫-೧೦ ; ೭-೩೫-೧೨ ೮-೧೦೬-೩)- ಅವರ ಕಟಾಕ್ಷವನ್ನು ಬೇಡುವ (೧೦.೧೪-೬) ಅವರ ವಂಶಜರಿಗೆ, ಸಂಪತ್ತು, ಸಂತಾನ ಮತ್ತು ದೀರ್ಘಾಯುಸ್ಸು ಗಳನ್ನು ಕೊಡಬೇಕೆಂದು ಪ್ರಾರ್ಥನೆ (೧೦.೧೫-೭, ೧೧, ಅ. ವೇ. ೧೪-೩-೧೪ ; ೧೪-೪-೬೨). ತಮ್ಮ ವಂಶೀ

ಕರಿಗೆ ಸಹಾಯಮಾಡಬೇಕೆಂದು ವಸಿಷ್ಠರನ್ನು ಪ್ರಾರ್ಥಿಸಿದೆ (೭-೩೩-೧ ; ೧೦-೧೫-೪ ನ್ನು ಹೋಲಿಸಿ) , ತುರ್ವಶ ಯದು ಮತ್ತು ಉಗ್ರದೇವ ಎಂಬುವರು ಒಂಟೆಯಾಗಿಯೂ ಸ್ತುತರಾಗಿದ್ದಾರೆ (೧-೩೬-೧೪).

ಪಿತೃಗಳೂ ಅಮರರು (ಅ. ವೇ. ೬-೬೧-೩) ; ದೇವತೆಗಳೆಂತಲೂ ಕರೆಯಲ್ಪಟ್ಟಿದ್ದಾರೆ (೧೦-೫೬-೪). ಆಂಗಿರಸರು ಮತ್ತು ಕೆಲವು ಗಣಗಳಲ್ಲಿ, ದೇವತ್ವದ ಜೊತೆಗೆ ಋತ್ವಿಜತ್ವವೂ ಸೇರಿದೆ. ಸೃಷ್ಟಿಕಾರ್ಯಗಳು ಕೆಲವು ಪಿತೃಗಳಿಗೂ ಉಕ್ತವಾಗಿವೆ ; ಆಕಾಶವನ್ನು ನಕ್ಷತ್ರರಂಜಿತವನ್ನಾಗಿ ಮಾಡಿದವರು ಇವರೇ ; ಹಗಲು ಹೊತ್ತಿನಲ್ಲಿ ಬೆಳಕೂ, ರಾತ್ರಿ ಕತ್ತಲೂ, ಅವರಿಂದಲೇ ಆಯಿತು (೧೦-೬೮-೧೧), ಅಡಗಿಕೊಂಡಿದ್ದ ಬೆಳಕನ್ನು ಕಂಡು ಹಿಡಿದು, ಉಷಸ್ಸನ್ನು ಉಂಟುಮಾಡಿದರು (೭-೭೬-೪ ; ೧೦-೧೦೭-೧ ನ್ನು ಹೋಲಿಸಿ) , ಮತ್ತು ಸೋಮನೊಡನೆ ಸೇರಿಕೊಂಡ, ಭೂಮ್ಯಾಕಾಶಗಳನ್ನು ವಿಸ್ತರಿಸಿದರು. (೮-೪೮-೧೩). ದೇವತೆಗಳಿಗೆ ಹೋಮದ್ರವ್ಯವನ್ನು ವಹಿಸುವ ಅಗ್ನಿಗೂ (ಹವ್ಯವಾಹ) ಮತ್ತು ಶವವನ್ನು ದಹಿಸುವ ಅಗ್ನಿಗೂ (ಕ್ರವ್ಯಾದ) ವ್ಯತ್ಯಾಸವಿರುವಂತೆ (೧೦-೧೬-೯), ದೇವಮಾರ್ಗ ಪಿತೃಮಾರ್ಗಗಳಿಗೂ ವ್ಯತಾಸವಿದೆ (೧೦-೨-೭ ; ೧೦-೧೪-೧ ; ೧೦-೪೪-೧೫ ನ್ನು ಹೋಲಿಸಿ). ಅದೇ ರೀತಿ, ಸ್ವರ್ಗಲೋಕಕ್ಕೂ ಪಿತೃಲೋಕಕ್ಕೂ ಭೇದವು ಉಕ್ತವಾಗಿದೆ ; ದೇವಲೋಕದ ದ್ವಾರವು ಈಶಾನ್ಯ ದಿಕ್ಕಿನಲ್ಲಿಯೂ (ಶ. ಬ್ರಾ. ೬.೬-೨-೯), ಪಿತೃಲೋಕ ದ್ವಾರವು ಆಗ್ನೇಯದಲ್ಲಿಯೂ (ಶ. ಬ್ರಾ. ೧೩.೪-೧-೫) ಇವೆಯೆಂದು ಉಕ್ತವಾಗಿದೆ. ಪಿತೃಗಳೂ ಮನುಷ್ಯರೂ ಬೇರೆ ಬೇರೆ ವರ್ಗದವರು ಮತ್ತು ಸೃಷ್ಟಿಯೂ ಬೇರೆ ಬೇರೆ (ತೈ. ಬ್ರಾ. ೨-೩-೪-೨). ಪಿತೃಗಳು ಭೂಮಿ, ಅಂತರಿಕ್ಷ ಮತ್ತು ಸ್ವರ್ಗವಾಸಿಗಳು (ಅ. ವೇ ೧೪-೨-೪೯ ; ಋ. ವೇ. ೧೦-೧೫೬ನ್ನು ಹೋಲಿಸಿ).

ಪುರಾತನ ಪಿತೃಗಳೇ ಒಂದು ಸಲ ಸೋಮಾಹುತಿಯನ್ನು ಅರ್ಪಿಸಿದರು (೧೦-೧೫-೪) ಅವರು ಯಮನೊಡನೆ ಸಂತೋಷದಿಂದ ಕಾಲಕಳೆಯುತ್ತಾರೆ (೧೦-೧೪-೧ ; ೧೦ ೧೩೫-೧ ಮತ್ತು ಅ. ವೇ. ೧೪-೪-೧೦ ೧ಳನ್ನು ಹೋಲಿಸಿ) ಮತ್ತು ದೇವತೆಗಳೊಡನೆ ಭೋಜನ ಮಾಡುತ್ತಾರೆ (೭-೭೬-೪). ದೇವತೆಗಳಿಗೆ ಸಮಾನರಾಗಿ ಜೀವಿಸುತ್ತಾ, ಒಂದೊಂದು ಸಲ ದೇವತೆಗಳಿಗೆ ಯೋಗ್ಯವಾದ ಪೂಜೆಗಳನ್ನೂ ಪಡೆಯುತ್ತಾರೆ. ಇಂದ್ರ ಮತ್ತು ದೇವತೆಗಳಿಗೆ ಯೋಗ್ಯವಾದ ಪೂಜೆಗಳನ್ನೂ ಪಡೆಯುತ್ತಾರೆ. ಇಂದ್ರ ಮತ್ತು ದೇವತೆಗಳ ರಥದಲ್ಲಿಯೇ ಅವರೂ ಬರುತ್ತಾರೆ (೧೦-೧೫-೧೦). ಅವರಿಗೂ ಸೋಮರಸದಲ್ಲಿ ಅಭಿಲಾಷೆ (೧೦-೧೫-೫, ೬) ; ದರ್ಭಾಸನದಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು, ಸುತವಾದ ಪಾನೀಯವನ್ನು ಪಾನಮಾಡುತ್ತಾರೆ (೧೦-೧೫-೫, ೬) ತಮಗೋಸ್ಕರ ಸಿದ್ಧವಾದ ಸೋಮರಸವನ್ನು ಪಾನಮಾಡಲು ಆತುರರಾಗಿದ್ದಾರೆ : ಯಮ ಅವನ ತಂದೆ ವಿವಸ್ವತ ಮತ್ತು ಅಗ್ನಿಗಳೊಡನೆ ಬಂದು ಅವರೊಡನೆಯೇ, ಹುತವಾದವುಗಳನ್ನು ಸ್ವೀಕರಿಸಬೇಕೆಂದು ಅವರಿಗೆ ಆಹ್ವಾನವಿದೆ (೧೦-೧೫-೮ ರಿಂದ ೧೧ , ೧೦-೧೪-೪, ೫). ಸಾವಿರಗಟ್ಟಲೆ ಬಂದು, ದರ್ಭಾಸನದಲ್ಲಿ ಕ್ರಮವಾಗಿ ಕುಳಿತುಕೊಳ್ಳುತ್ತಾರೆ. (೧೦.೧೫.೧೦, ೧೧). ಪಿತೃಗಳು ಯಾಗಶಾಲೆಗೆ ಬಂದಾಗ, ಕೆಲವು ಪಿಶಾಚಿಗಳೂ, ಅವರ ಸ್ನೇಹಿತರ ರೂಪದಲ್ಲಿ, ಅವರೊಡನೆ ಬೆರೆಯುವುದುಂಟು. (ಅ.ವೇ. ೧೪-೨-೨೮).

ದೇವತೆಗಳಿಗೆ ಆಹಾರವು ಅರ್ಪಿತವಾಗುವಾಗ ' ಸ್ವಾಹಾ ' ಎಂತಲೂ, ಪಿತೃಗಳಿಗೆ ಕೊಡುವಾಗ ' ಸ್ವಧಾ ' ಎಂತಲೂ (೧೦.೧೫-೩) ಹೇಳುತ್ತಾರೆ : ಎಲ್ಲಾ ಕರ್ಮಗಳಲ್ಲಿಯೂ ದೇವ ಮತ್ತು ಪಿತೃಭಾಗಗಳಿಗೆ ಈ ವ್ಯತ್ಯಾಸ ವಿದ್ದೇ ಇರಬೇಕು (ಶ. ಬ್ರಾ. ೪-೪-೨-೨). ಅವರಿಗೂ ಪೂಜೆಯುಂಟು ; ಅನುಯಾಯಿಗಳ ಪ್ರಾರ್ಥನೆಯನ್ನು ಲಾಲಿಸಿ, ಅವರ ಪಕ್ಷವನ್ನು ವಹಿಸಬೇಕು, ಸ್ವಾಭಾವಿಕವಾಗಿ ನಡೆದುಹೋಗುವ ಪ್ರಮಾದಗಳನ್ನು ಮನ್ನಿಸಬೇಕು ಇತ್ಯಾದಿ ಪ್ರಾರ್ಥನೆಗಳಿವೆ (೧೦-೧೫-೨, ೫, ೬ , ೩-೫೫-೨ನ್ನು ಹೋಲಿಸಿ).

॥ ಸಾಯಣಭಾಷ್ಯಂ ॥

ಪರೇಯಿವಾಂಸಮಿತಿ ಷೋಡಶರ್ಚಂ ಚತುರ್ದಶಂ ಸೂಕ್ತಂ ವಿವಸ್ವತಃ ಪುತ್ರಸ್ಯ ಯಮಸ್ಯಾರ್ಷಂ । ಅಂಗಿರಸೋ ನಃ ಪಿತರೋ ನವಗ್ವಾ ಇತಿ ಷಷ್ಠ್ಯಾ ಅಂಗಿರಃಪಿತೃಥರ್ವಭೃಗುಲಕ್ಷಣಾ ಲಿಂಗೋಕ್ತಾ ದೇವತಾಃ । ಪ್ರೇಹೀತ್ಯಾದ್ಯಾಸ್ತಿಸ್ರೋ ಲಿಂಗೋಕ್ತದೇವತಾಕಾಃ ಪಿತೃದೇವತಾಕಾ ವಾ । ಅತಿ ದ್ರವ ಸಾರಮೇಯಾವಿತ್ಯಾದಿಕಸ್ತೃಚಃ ಸರಮಾಪುತ್ರೌ ಯೌ ಶ್ವಾನೌ ಪರಲೋಕಮಾರ್ಗಮಭಿತಃ ಸ್ಥಿತೌ ತದ್ದೇವತಾಕಃ । ಶಿಷ್ಟಾ ಯಮದೇವತ್ಯಾಃ। ಯಮಾಯ ಸೋಮಮಿತಿ ತ್ರಯೋದಶ್ಯಾದ್ಯಾ ಅನುಷ್ಟುಭಃ। ಯಮಾಯ ಮಧುಮತ್ತಮಮಿತ್ಯೇಷಾ ಬೃಹತೀ । ಅದಿತೋ ದ್ವಾದಶ ತ್ರಿಷ್ಟುಭಃ । ತಥಾ ಚಾನುಕ್ರಾಂತಂ । ಪರೇಯಿವಾಂಸಂ ಷೋಳಶ ಯಮೋ ಯಾಮಂ ಷಷ್ಠೀ ಲಿಂಗೋಕ್ತದೇವತಾ ಪರಾಚ್ಯ ತಿಸ್ರಃ ಪಿತ್ರ್ಯಾ ವಾ ತೃಚಃ ಶ್ವಭ್ಯಾಂ ಪರಾ ಅನುಷ್ಟುಭೋ ಬೃಹತ್ಯಾಪಾಂತ್ಯೇತಿ ॥ ಗತಃ ಸೂಕ್ತವಿನಿಯೋಗಃ ॥ ಮಹಾಪಿತೃಯಜ್ಞೇ ಯಮಯಾಗಾದ್ಯಾ ಯಾಜ್ಯಾ । ಸೂತ್ರಿತಂ ಚ । ಇಮಂ ಯಮ ಪ್ರಸ್ತರಮಾ ಹಿ ಸೀದೇತಿ ದ್ವೇ ಪರೇಯಿವಾಂಸಂ ಪ್ರವತೋ ಮಹೀರನು । ಆ-೨-೧೯ । ಇತಿ ॥

ಅನುವಾದವು—ಪರೇಯಿವಾಂಸಂ ಎಂಬ ಈ ಸೂಕ್ತವು ನೊದಲನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಹದಿನಾರು ಋಕ್ಕುಗಳಿರುವುವು ಈ ಸೂಕ್ತಕ್ಕೆ ವಿವಸ್ವಂತನ ಪುತ್ರನಾದ ಯಮನ ಋಷಿಯು, **ಅಂಗಿರಸೋ ನಃ** ಎಂಬ ಆರನೆಯ ಋಕ್ಕಿಗೆ ಅಂಗಿರಃಪಿತೃಥರ್ವಭೃಗು ಎಂದು ಋಕ್ಕಿನಲ್ಲಿ ಹೇಳಿರುವ ಪಿತೃಗಳೇ ದೇವತೆಯು; **ಪ್ರೇಹಿ** ಎಂದು ಮೊದಲಾಗುವ ೭-೯ ಮೂರು ಋಕ್ಕುಗಳಿಗೆ ಋಕ್ಕಿನಲ್ಲಿ ಹೇಳಿರುವವರೇ ದೇವತೆಯು ಅಥವಾ ಪಿತೃಗಳೇ ದೇವತೆಯು; **ಅತಿ ದ್ರವ ಸಾರಮೇಯೌ** ಎಂಬ ೧೦-೧೨ ಋಕ್ಕುಗಳಿಗೆ ಪರಲೋಕ ಮಾರ್ಗದಲ್ಲಿರುವ ಸರಮಾ ಎಂಬ ದೇವಶುನಿಯ ಪುತ್ರರಾದ ಸಾರಮೇಯೌ ಎಂಬ ಎರಡು ನಾಯಿಗಳೇ ದೇವತೆಯು; ಉಳಿದ ಋಕ್ಕುಗಳು ಯಮದೇವತಾಕವು. **ಯಮಾಯ ಸೋಮಂ** ಎಂಬ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳು (೧೩-೧೬ ಋಕ್ಕುಗಳು) ಅನುಷ್ಟುವ್‌ಛಂದಸ್ಕವು, **ಯಮಾಯ ಮಧುಮತ್ತಮಂ** ಎಂಬ ೧೫ ನೆಯ ಋಕ್ಕು ಬೃಹತೀಛಂದಸ್ಕವು- ಈ ಸೂಕ್ತದ ಮೊದಲಿನ ಹನ್ನೆರಡು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಪರೇಯಿವಾಂಸಂ ಷೋಳಶ ಯಮೋ ಯಾಮಂ ಷಷ್ಠೀ ಲಿಂಗೋಕ್ತದೇವತಾ ಪರಾಚ್ಯ ತಿಸ್ರಃ ಪಿತ್ರ್ಯಾ ವಾ ತೃಚಃ ಶ್ವಭ್ಯಾಂ ಪರಾ ಅನುಷ್ಟುಭೋ ಬೃಹತ್ಯಾಪಾಂತ್ಯಾ** ಎಂದು ಹೇಳಿರುವುದು- ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಿದೆ. ಮಹಾಪಿತೃಯಜ್ಞವೆಂಬ ಕರ್ಮದ ಯಮಯಾಗದಲ್ಲಿ ಸೂಕ್ತದ ಮೊದಲನೆಯ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಇಮಂ ಯಮ ಪ್ರಸ್ತರಮಾ ಹಿ ಸೀದೇತಿ ದ್ವೇ ಪರೇಯಿವಾಂಸಂ ಪ್ರವತೋ ಮಹೀರನು** ಎಂಬ ಸೂತ್ರದಿಂದ (ಆ. ೨-೧೯) ವಿವೃತವಾಗಿರುವುದು.

ಸೂಕ್ತ—೧೪

ಮಂಡಲ—೧೦ । ಅನುವಾಕ—೧ । ಸೂಕ್ತ—೧೪ ।
ಅಸ್ಯಕ—೭ । ಅಧ್ಯಾಯ—೬ । ವರ್ಗ—೧೪, ೧೫, ೧೬ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೬ ।
ಋಷಿಃ—ಯಮಃ ।
ದೇವತಾ—೧-೫, ೧೩-೧೬. ಯಮಃ । ೬. ಲಿಂಗೋಕ್ತದೇವತಾಃ। ೭-೯. ಲಿಂಗೋಕ್ತ-ದೇವತಾಃ ಪಿತರೋ ವಾ । ೧೦-೧೨. ಶ್ವಾನೌ ॥
ಛಂದಃ—೧-೧೨. ತ್ರಿಷ್ಟುಪ್ । ೧೩, ೧೪, ೧೬. ಅನುಷ್ಟುಪ್ । ೧೫. ಬೃಹತೀ॥

। ಸಂಹಿತಾಪಾಠಃ ।

ಪರೇಯಿವಾಂಸಂ ಪ್ರವತೋ ಮಹೀರನು ಬಹುಭ್ಯಃ ಪಂಥಾಮನುಪಸ್ಪಶಾನಂ ।
ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾ ದುವಸ್ಯ ॥ ೧ ॥

। ಪದಪಾಠಃ ।

ಪರೇಯಿವಾಂಸಂ । ಪ್ರವತಃ । ಮಹೀಃ । ಅನು । ಬಹುಭ್ಯಃ । ಪಂಥಾಂ । ಅನುಪಸ್ಪಶಾನಂ ।
ವೈವಸ್ವತಂ । ಸಂಗಮನಂ । ಜನಾನಾಂ । ಯಮಂ । ರಾಜಾನಂ । ಹವಿಷಾ । ದುವಸ್ಯ ॥ ೧ ॥

। ಸಾಯಣಭಾಷ್ಯಂ ॥

ಹೇ ಮದೀಯಾಂತರಾತ್ಮನ್ ಯಜಮಾನ ವಾ ತ್ವಂ ರಾಜಾನಂ ಪಿತೃಣಾಂ ಸ್ವಾಮಿನಂ ಯಮಂ ಹವಿಷಾ ಪುರೋಡಾಶಾದಿನಾ ದುವಸ್ಯ । ಪರಿಚರ । ಕೀದೃಶಂ । ಪ್ರವತಃ ಪ್ರಕರ್ಷೇಣ ಕರ್ಮವತೋ ಭೂಲೋಕವರ್ತಿಭೋಗಸಾಧನಂ ಪುಣ್ಯಮನುಷ್ಠಿತವತಃ ಪುರುಷಾನ್ಮಹೀಸ್ತತ್ತದ್ಭೋಗೋಚಿತಭೂಪ್ರದೇಶವಿಶೇಷಾನನು ಪರೇಯಿವಾಂಸಂ ಕ್ರಮೇಣ ಮರಣಾದೂರ್ಧ್ವಂ ಪ್ರಾಪಿತವಂತಂ ತಥಾ ಬಹುಭ್ಯಃ ಸ್ವರ್ಗಾರ್ಥಿಭ್ಯಃ ಪುಣ್ಯಕೃದ್ಭ್ಯಃ ಪುಣ್ಯಕೃತಾರ್ಥೇ ಪಂಥಾಂ ಸ್ವರ್ಗಸ್ಯೋಚಿತಂ ಮಾರ್ಗಮನುಪಸ್ಪಶಾನಮನುಬಾಧಮಾನಂ । ಪಾಪಿನ ಏವ ಪುರುಷಾನ್ ಸ್ವರ್ಗಮಾರ್ಗಬಾಧೇನ ನರಕಂ ಪ್ರಾಪಯತಿ ನ ತು ಪುಣ್ಯಕೃತ ಇತ್ಯರ್ಥಃ । ವೈವಸ್ವತಂ ವಿವಸ್ವತಃ ಸೂರ್ಯಸ್ಯ ಪುತ್ರಂ ಜನಾನಾಂ ಪಾಪಿನಾಂ ಸಂಗಮನಂ ಗಂತವ್ಯಸ್ಥಾನರೂಪಂ ॥

। ಪ್ರತಿಪದಾರ್ಥ ।

(ಎಲೈ ಯಜಮಾನನೇ), ಪ್ರವತಃ—ಉತ್ಕೃಷ್ಟವಾದ ಕರ್ಮಗಳನ್ನಾಚರಿಸಿದ ಪುರುಷರನ್ನು । ಮಹೀಃ ಅನು—ಆಯಾ ಉತ್ತಮಪ್ರದೇಶಗಳಿಗೆ । ಪರೇಯಿವಾಂಸಂ—ಮರಣಾನಂತರ ಕರೆದೊಯ್ಯುವವನೂ । ಬಹುಭ್ಯಃ—ಅನೇಕ ಪುಣ್ಯಕರ್ಮಿಗಳಿಗೆ । ಪಂಥಾಂ—ಸ್ವರ್ಗಾದಿಮಾರ್ಗಗಳನ್ನು । ಅನುಪಸ್ಪಶಾನಂ—ಹಿಂಸೆಯಿಲ್ಲದೇ ಉಂಟು ಮಾಡತಕ್ಕವನೂ । ವೈವಸ್ವತಂ—ವಿವಸ್ವಂತನ ಪುತ್ರನೂ । ಜನಾನಾಂ—ಪಾಪಿಗಳಿಗೆ । ಸಂಗಮನಂ—ಅವರಿಗೆ ಯೋಗ್ಯವಾದ ಸ್ಥಾನಕ್ಕೆ ಸೇರಿಸುವವನೂ । ರಾಜಾನಂ—ಪಿತೃಗಳಿಗೆ ಪ್ರಭುವೂ ಆದ । ಯಮಂ—ಯಮನನ್ನು । ಹವಿಷಾ—ಹವಿಸ್ಸುಗಳಿಂದ । ದುವಸ್ಯ—ಉಪಚರಿಸು.

। ಭಾವಾರ್ಥ ।।

ಎಲೈ ಯಜಮಾನನೇ, ಉತ್ಕೃಷ್ಟವಾದ ಕರ್ಮಗಳನ್ನಾಚರಿಸಿದ ಪುರುಷರನ್ನು ಆಯಾ ಉತ್ತಮಪ್ರದೇಶಗಳಿಗೆ ಮರಣಾನಂತರ ಕರೆದೊಯ್ಯುವವನೂ, ಅನೇಕ ಪುಣ್ಯಕರ್ಮಿಗಳಿಗೆ ಸ್ವರ್ಗಾದಿಮಾರ್ಗಗಳನ್ನು ಹಿಂಸೆಯಿಲ್ಲದೇ ಉಂಟು

ಮಾಡತಕ್ಕವನೂ, ವಿವಸ್ವಂತನ ಪುತ್ರನೂ, ಪಾಪಿಗಳನ್ನು ಅವರಿಗೆ ಯೋಗ್ಯವಾದ ಸ್ಥಾನಕ್ಕೆ ಸೇರಿಸುವವನೂ, ಪಿತೃಗಳಿಗೆ ಪ್ರಭುವೂ ಆದ ಯಮನನ್ನು ಹವಿಸ್ಸುಗಳಿಂದ ಉಪಚರಿಸು.

English Translation

Worship with oblations Yama, king (of the Pitris), son of Vivaswat, the aggregation of mankind, who conducts those who are virtuous over the earth, and opens to many the path (of heaven).

॥ ವಿಶೇಷವಿಷಯಗಳು ॥

ಯಮಂ—ಯಮನು ಯಾರು, ಅವನ ಕರ್ತವ್ಯವೇನು ಎಂಬ ವಿಷಯವನ್ನು ನಾವು ಈ ಸೂಕ್ತದ ಪೀಠಿಕೆಯಲ್ಲಿ ವಿಸ್ತಾರವಾಗಿ ವಿವರಿಸಿದೇವೆ. ಯಾಸ್ಕರು ಯಮಶಬ್ದದ ಅರ್ಥವನ್ನು ವಿವರಿಸುತ್ತಾ—

ಯಮಃ । ಯಮೋ ಯಚ್ಛತೀತಿ ಸತಃ । ತಸ್ಯೈಷಾ ಭವತಿ ।

(ನಿ. ೧೦-೨೦)

ನಿಯಮಿಸು, ಹತೋಟಯಲ್ಲಿಡು ಎಂಬರ್ಥವುಳ್ಳ ಯಮ್ ಧಾತುವಿನಿಂದ ಯಮಶಬ್ದವು ನಿಷ್ಪನ್ನವಾಗಿದೆ. ಯಮನು ಪಿತೃಲೋಕಕ್ಕೆ ಪಾಲಕನಾಗಿ ತನಗೆ ಸೇರಿದ ಪಿತ್ರಾದಿಗಳನ್ನು ನಿಯಮಿಸಿ ಅಂಕೆಯಲ್ಲಿಟ್ಟುಕೊಳ್ಳುವವನು. ಆದ್ದರಿಂದ ಇವನಿಗೆ ಯಮನೆಂದು ಹೆಸರು ಎಂದು ನಿರ್ವಚನವನ್ನು ಹೇಳಿದಾರೆ. ಆದರೆ ನಿರುಕ್ತವ್ಯಾಖ್ಯಾಕಾರರಾದ ದುರ್ಗಾಚಾರ್ಯರು, ಯಮಶಬ್ದಕ್ಕೆ ಬೇರೆ ಅರ್ಥವನ್ನು ಮಾಡಿದಾರೆ—**ಯಮಃ । ಯಚ್ಛತಿ ಉಪರಮಯತಿ ಜೀವಿತಾತ್ ಸರ್ವಂ ಭೂತಗ್ರಾಮಮಿತಿ ಯಮಃ ।** ಭೂಮಿಯ ಮೇಲಿರುವ ಸರ್ವಪ್ರಾಣಿಗಳ ಜೀವಿತವನ್ನು ಕೊನೆಗಾಣಿಸುವವನಾದ್ದರಿಂದ ಎಂದರೆ ಅವರಿಗೆ ಮರಣವನ್ನುಂಟುಮಾಡುವವನಾದ್ದರಿಂದ ಇವನಿಗೆ ಯಮನೆಂದು ಹೆಸರು ಎಂದು ಅರ್ಥವಿವರಣೆಮಾಡಿದಾರೆ. ಈ ಯಮಶಬ್ದವಿರುವ ಋಕ್ಕನ್ನು ಉದಾಹರಣೆಗಾಗಿ ಕೊಡುವುದಕ್ಕಾಗಿ ಯಾಸ್ಕರು ಪ್ರಕೃತ ಋಕ್ಕನ್ನೇ ಆರಿಸಿಕೊಂಡು ಅದಕ್ಕೆ ನಿರ್ವಚನವನ್ನು ಹೇಳಿದಾರೆ—

ಪರೇಯಿವಾಂಸಂ ಪ್ರವತೋ ಮಹೀರನು ಬಹುಭ್ಯಃ ಪಂಥಾಮನುಪಸ್ಪಶಾನಂ ।
ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾ ದುವಸ್ಯ ॥

ಪರೇಯಿವಾಂಸಂ ಪರ್ಯಾಗತವಂತಂ ಪ್ರವತ ಉದ್ವತೋ ನಿವತ ಇತಿ । ಅವತಿರ್ಗತಿಕರ್ಮಾ । ಬಹುಭ್ಯಃ ಪಂಥಾನಮನುಪಸ್ಪಾಶಯಮಾನಂ ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾ ದುವಸ್ಯೇತಿ । ದುವಸ್ಯತೀ ರಾಧ್ನೋತಿಕರ್ಮಾ ॥

(ನಿ ೧೦-೨೦)

ಈ ಋಕ್ಕಿನಲ್ಲಿ ಋಷಿಯು ಯಜಮಾನನನ್ನು ಅಥವಾ ತನ್ನ ಅಂತರಾತ್ಮನನ್ನು ಉದ್ದೇಶಿಸಿ ಈ ರೀತಿ ಹೇಳುವನು—ಎಲೈ ಯಜಮಾನನೇ, ಯಮನನ್ನುದ್ದೇಶಿಸಿ ಹವಿಸ್ಸನ್ನರ್ಪಿಸಿ ಪರಿಚರಿಸು. ಈ ಯಮನು ಸುತ್ತಲೂ ಬರುವನು ಎಂದರೆ ಪ್ರಾಣಿಗಳು ಎಲ್ಲೇ ಇರಲಿ ಅಲ್ಲಿಗೆಲ್ಲಾ ಮರಣಕಾಲದಲ್ಲಿ ಬಂದೇ ಬರುವನು. ಮತ್ತು ಈ ಋಕ್ಕಿನಲ್ಲಿ **ಪ್ರವತಃ** ಎಂಬ

ಶಬ್ದವು ಮಾತ್ರ ಇರುವುದರಿಂದ ಇದಕ್ಕೆ ಸಂಬಂಧಿಸಿದಂತೆ **ಉದ್ವತಃ ನಿವತಃ** ಎಂಬ ಎರಡು ಶಬ್ದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಪ್ರವತಃ ಎಂದರೆ ಮನುಷ್ಯರು, ಉದ್ವತಃ ಎಂದರೆ ದೇವತೆಗಳು, ನಿವತಃ ಎಂದರೆ ತಿರ್ಯಗ್ಜಂತು ಗಳು ಈ ದೇವಮನುಷ್ಯ ತಿರ್ಯಗ್ಜಂತುಗಳನ್ನು ಅವರವರ ಕರ್ಮಾನುಸಾರವಾಗಿ ಅವರು ಹೊಂದಲು ಯೋಗ್ಯವಾದ ಸ್ಥಾನಗಳನ್ನು (ಲೋಕಗಳನ್ನು) ಸೇರಿಸುವುದಕ್ಕಾಗಿ ಮರಣಾನಂತರ ಅವರ ಪ್ರೇತಶರೀರಗಳನ್ನು ಕೊಂಡೊಯ್ಯುವನು. **ಅನುಪಸ್ಪಶಾನಂ** ಎಂದರೆ ಈ ಪ್ರಾಣಿಗಳು ಇಂತಹ ಕರ್ಮವನ್ನಾಚರಿಸಿರುವುದರಿಂದ ಇವರಿಗೆ ತಕ್ಕ ಫಲವನ್ನು ಕೊಡು ವುದಕ್ಕಾಗಿ ಅವರಿಗೆ ನಾನಾವಿಧ ರೋಗಾದಿಗಳ ಮೂಲಕ ಮರಣವನ್ನುಂಟುಮಾಡಿ ಮೃತರಾದ ಮೇಲೆ ಅವರ ಪ್ರೇತಶರೀರಗಳನ್ನು ಪಾಶದಿಂದ ಬಿಗಿದು ಪುಣ್ಯ ಮಾಡಿದರೆ ಸ್ವರ್ಗಾದಿ ಉತ್ತಮ ಲೋಕಗಳಿಗೂ, ಪಾಪ ಮಾಡಿದ್ದರೆ ನರಕಾದಿ ಸ್ಥಾನಗಳಿಗೂ ನಾನಾವಿಧ ಮಾರ್ಗಗಳಿಂದ ಒಯ್ಯುವನು ಎಂದರ್ಥವು. **ಸಂಗಮನಂ ಜನಾನಾಂ** ಎಂದರೆ ಜನರ ವಿಷಯದಲ್ಲಿ ಪಕ್ಷಪಾತಮಾಡದೆ ಅವರ ಕರ್ಮಾನುಗುಣವಾಗಿ ಅವರಿಗೆ ಫಲವನ್ನು ಕೊಡುವವನು. ಇಂತಹ **ಯಮಂ ರಾಜಾನಂ ಪಿತೃಗಳ** ರಾಜನಾದ ಯಮನನ್ನು ಹವಿರಾದಿಗಳಿಂದ ಉಪಚರಿಸಿ ಸೇವಿಸು ಎಂದು ನಿರ್ವಚನದ ಅಭಿಪ್ರಾಯವು.

ಅಗ್ನಿರಪಿ ಯಮ ಉಚ್ಯತೇ । ತಮೇತಾ ಋಚೋ೭ನುಪ್ರವದಂತಿ । (ನಿ. ೧೦-೭೦)

ಕೆಲವು ಸಂದರ್ಭಗಳಲ್ಲಿ ಅಗ್ನಿಯನ್ನು ಯಮನೆಂದು ಕರೆಯುವ ರೂಢಿ ಇದೆ. ಈ ವಿಷಯದಲ್ಲಿ ಈ ಕೆಳಗಿನ ಋಕ್ಕುಗಳು ಈ ಅಭಿಪ್ರಾಯವನ್ನು ಸ್ಪಷ್ಟಪಡಿಸುವವು ಎಂದು ಹೇಳಿ ಉದಾಹರಣೆಗಾಗಿ ಸೇನೇವ ಸೃಷ್ಟಾ ಎಂಬ ಋ ಸಂ. ೧-೬೬-೬ ಮತ್ತು ೪ ನೇ ಋಕ್ಕುಗಳನ್ನು ಕೊಟ್ಟು ಅವುಗಳಿಗೂ ನಿರ್ವಚನವನ್ನು ಹೇಳಿದಾರೆ.

ಪರೇಯಿವಾಂಸಂ—ಈ ಶಬ್ದಕ್ಕೆ ಯಾಸ್ಕರು ಮಾಡಿರುವ ಅರ್ಥವಿವರಣೆಗೂ ಭಾಷ್ಯಕಾರರು ಮಾಡಿರುವ ಅರ್ಥವಿವರಣೆಗೂ ಬಹಳ ವ್ಯತ್ಯಾಸವಿದೆ. ಯಾಸ್ಕರು ಮಾಡಿರುವ ಅರ್ಥವನ್ನು ಈ ಋಕ್ಕಿನ ನಿರುಕ್ತದಲ್ಲಿ ವಿವರಿಸ ಲಾಗಿದೆ. ಅಲ್ಲಿ **ಪರೇಯಿವಾಂಸಂ** ಎಂದರೆ **ಪರ್ಯಾಪ್ತವಂತಂ**—ಸುತ್ತಲೂ ಎಂದರೆ ಎಲ್ಲಿದ್ದರೆ ಅಲ್ಲಿಂದ ಕರೆದು ಕೊಂಡು ಹೋಗಿ ತಲಪಿಸುವ ಎಂಬರ್ಥವು ನಿರ್ವೃತವಾಗಿದೆ. ಆದರೆ ಭಾಷ್ಯಕಾರರು–**ಕ್ರಮೇಣ ಮರಣಾದೂರ್ಧ್ವಂ ಪ್ರಾಪಿತವಂತಂ** ಎಂದರೆ, ಮರಣಾನಂತರ ಮೃತಶರೀರದಿಂದ ಹೊರಟುಬರುವ ಪ್ರೇತವನ್ನು ಪರಲೋಕಕ್ಕೆ ಒಯ್ಯುವ ಎಂದು ಅರ್ಥ ವಿವರಣೆಮಾಡಿದಾರೆ.

ಇಲ್ಲಿ ಒಂದು ಸಂಶಯವು ತಲೆದೋರುವುದು. ಒಬ್ಬ ಪುರುಷನು ಮೃತನಾದ ಮೇಲೆ ಅವನನ್ನು ಪರಲೋಕಕ್ಕೆ ಕರೆದುಕೊಂಡು ಹೋಗುವುದೆಂದರೇನು? ಶರೀರವೇ ನಾಶವಾದಾಗ ಕರೆದುಕೊಂಡುಹೋಗುವುದು ಯಾರನ್ನು ಎಂಬ ಪ್ರಶ್ನೆ ಏಳುವುದು. ಅದಕ್ಕೆ ಸಮಾಧಾನವೇನೆಂದರೆ–ಪುರುಷನು ಅಥವಾ ಪ್ರಾಣಿಯು ಮೃತನಾದ ಮೇಲೆ ಅವನ ಶರೀರ ಕ್ರಿಯೆಗಳೆಲ್ಲಾ ನಿಂತುಹೋಗಿ ಶರೀರವು ನಿಶ್ಚೇಷ್ಟಿತವಾಗುವುದು. ಆದು ಕ್ರಮೇಣ ಪಂಚಭೂತಗಳಾದ ಪೃಥಿವ್ಯಾದಿ ಗಳಲ್ಲಿ ಸೇರಿಹೋಗುವುದು. ಎಂದರೆ ಪಂಚಭೂತಗಳ ಸಂಯೋಗದಿಂದಲೇ ಉಂಟಾದ ಶರೀರವು ಕೊನೆಗೆ ಪಂಚಭೂತ ಗಳಲ್ಲಿಯೇ ಸೇರಿಹೋಗಿ ಅಂತರ್ಗತವಾಗುವುದು. ಪಂಚಭೂತಗಳೆಂದರೆ ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶ ಇವುಗಳಿಗೆ ಕ್ರಮವಾಗಿ ಘಟ್ಟ ಪದಾರ್ಥ, ದ್ರವರೂಪವಾದ ವಸ್ತು, ಶಾಖ, ಗಾಳಿ, ಅವಕಾಶ ಎಂಬರ್ಥಗಳನ್ನು ಇಲ್ಲಿ ಹೊಂದಿಸಿಕೊಳ್ಳಬೇಕು. ಈ ಐದು ವಿಧವಾದ ವಸ್ತುಗಳು ದೇಹದಲ್ಲಿರುವುದು ಎಲ್ಲರಿಗೂ ತಿಳಿದೇ ಇದೆ. ಚರ್ಮ, ಮಾಂಸ, ಮೂಳೆ, ಉಗುರು ಮೊದಲಾದ ಘಟ್ಟ ಪದಾರ್ಥಗಳು ಪೃಥಿವಿಯ ಅಂಶಗಳು. ಮರಣಾನಂತರ ಅವು ಪ-ಣ್ಣಿ

ನಲ್ಲಿಯೇ ಸೇರಿ ಮಣ್ಣೇ ಆಗುವುವು. ರಕ್ತ, ಜೊಲ್ಲು ಮೊದಲಾದ ದ್ರವರೂಪದಲ್ಲಿರುವ ವಸ್ತುಗಳು ಅಪ್ಪಿನ (ಉದಕದ) ಅಂಶಗಳು ಅವುಗಳು ಜಲದಲ್ಲಿ ಲೀನವಾಗುವವು. ಶರೀರದಲ್ಲಿ ಮರಣಕಾಲದವರೆಗೂ ಇರುವ ಶಾಖವು (ಅಗ್ನಿಯು) ತೇಜಸ್ಸಿನಲ್ಲಿ ಅಥವಾ ಅಗ್ನಿಯಲ್ಲಿ ಬೆರೆತುಹೋಗುವುದು. ಆದ್ದರಿಂದ ಮೃತ ಶರೀರದಲ್ಲಿ ಶಾಖವಿರುವುದಿಲ್ಲ. ತಣ್ಣಗಿರುವುದು. ಮರಣಾನಂತರ ಉಚ್ಛ್ವಾಸ ನಿಃಶ್ವಾಸರೂಪವಾದ ವಾಯುಚಲನೆಯು ನಿಂತುಹೋಗಿ ಪ್ರಾಣಾದಿಪಂಚ ವಾಯುಗಳು ವಾಯುತತ್ತ್ವದಲ್ಲಿ ಎಂದರೆ ಬಾಹ್ಯವಾಯುವಿನಲ್ಲಿ ಸೇರಿಹೋಗುವವು. ಉಸಿರಾಡುವುದು ನಿಂತುಹೋಗಿರುವುದೇ ಮರಣಕ್ಕೆ ಮುಖ್ಯ ಚಿಹ್ನೆಯೆಂದು ಅನುಭವವೇದ್ಯವಾಗಿದೆ. ಇನ್ನು ಆಕಾಶ ಅಥವಾ ಅವಕಾಶವು ಕಣ್ಣಿಗೆ ಕಾಣುವ ವಸ್ತುವಲ್ಲವಾದ್ದರಿಂದ ಅದು ಬಾಹ್ಯಾಕಾಶದಲ್ಲಿ ಲೀನವಾಗುವುದು ಯಾರಿಗೂ ಗೋಚರವಾಗುವುದಿಲ್ಲ ಈ ರೀತಿ ಮೃತ ಶರೀರದ ಭಾಗಗಳೆಲ್ಲಾ ಆಯಾ ತತ್ತ್ವಗಳಲ್ಲಿ ಸೇರಿಹೋದ ಮೇಲೆ ಏನೂ ಉಳಿಯುವುದಿಲ್ಲವೇ ಎಂದರೆ, ಉಳಿಯುತ್ತದೆ. ಪ್ರಾಣಿಯು ಅಥವಾ ಪುರುಷನು ಜೀವಿಸುತ್ತಿದ್ದ ಕಾಲದಲ್ಲಿ ಅವನ ಕ್ರಿಯಾ ವ್ಯಾಪಾರಗಳನ್ನು ಪ್ರೇರಿಸುತ್ತಾ, ಚಕ್ಷುರಾದಿಜ್ಞಾನೇಂದ್ರಿಯಗಳ ವ್ಯಾಪಾರಾದಿಗಳನ್ನು ಗಮನಿಸುತ್ತಾ ಇದ್ದ ಚೇತನಾತ್ಮಕವಾದ ವಸ್ತುವೊಂದಿದ್ದಿತು. ವಸ್ತು ಎಂದರೆ ಇಲ್ಲಿ ಇಂದ್ರಿಯಗೋಚರವಾದ ಪಾರ್ಥಿವವಸ್ತುವಲ್ಲ. ಪಾರ್ಥಿವವಸ್ತುಗಳಿಗಿಂತ ಅತಿಸೂಕ್ಷ್ಮವಾಗಿ ಶರೀರವು ನಾಶವಾದರೂ ತಾನು ಮಾತ್ರ ನಾಶವಾಗದೇ ಇರುವುದು. ಇದನ್ನು ಆತ್ಮನೆಂದು ಕರೆಯುವರು, ಈ ಆತ್ಮನಿಗೆ ಪಾರ್ಥಿವಶರೀರನಾಶಾನಂತರ ಸೂಕ್ಷ್ಮವಾದ ಬೇರೊಂದು ಶರೀರವು ಪ್ರಾಪ್ತವಾಗುವುದು. ಪ್ರಾರಂಭ ದೆಶೆಯಲ್ಲಿ ಇವನ್ನು ಪ್ರೇತಶರೀರವೆಂದು ಕರೆಯುವರು. ಆದು ಅತಿಸೂಕ್ಷ್ಮವಾಗಿರುವುದರಿಂದ ಅದನ್ನು ಬಾಹ್ಯಚಕ್ಷುಸ್ಸಿನಿಂದ ನೋಡಲಾಗುವುದಿಲ್ಲ. ಈ ಸೂಕ್ಷ್ಮ ಶರೀರದಲ್ಲಿ ಕರ್ಮೇಂದ್ರಿಯಗಳಿಲ್ಲದಿದ್ದರೂ ಜ್ಞಾನೇಂದ್ರಿಯ ಅಂಶಗಳಿರುವವು. ಎಂದರೆ ಸುಖದುಃಖಾದಿಗಳ ಅನುಭವವಾಗುವುದು. ಭೂಮಿಯ ಮೇಲೆ ಜೀವಿಸಿದ್ದ ಕಾಲದಲ್ಲಿ ತಾನು ಅನುಭವಿಸಿದ ಸುಖದುಃಖಗಳ ಮತ್ತು ಬಂಧುಬಾಂಧವರ ವಿಷಯವಾದ ಪ್ರೀತಿದ್ವೇಷಗಳ ವಾಸನೆಯು (ವಾಸನೆಯೆಂದರೆ-ಸೂಕ್ಷ್ಮಾಂಶವು) ಈ ಶರೀರಕ್ಕೆ ಇದ್ದೇ ಇರುವುದು. ಆತ್ಮನು ಕೆಲವು ಕಾಲದವರೆಗೆ ಎಂದರೆ ಮೃತಶರೀರಕ್ಕೆ ಮಾಡುವ ಅಪರ ಕರ್ಮಾದಿಗಳು ಸಮಾಪ್ತಿಯಾಗುವವರೆಗೆ ಈ ಪ್ರೇತಶರೀರದಲ್ಲಿದ್ದು ಅನಂತರ ತನ್ನ ಕರ್ಮಾನುಸಾರವಾಗಿ ಬೇರೆ ಲೋಕಕ್ಕೆ ಹೋಗುವನು. ಆಗ ಈ ಪ್ರೇತಶರೀರಕ್ಕಿಂತಲೂ ಇನ್ನೂ ಸೂಕ್ಷ್ಮವಾದ ಶರೀರವು ಪ್ರಾಪ್ತಿಯಾಗುವುದು. ಆಯಾ ಲೋಕಗಳು ಯಾವರೀತಿ ಇರುವವೋ, ಅದರಲ್ಲಿ ವಾಸಿಸುವ ಪ್ರಾಣಿಗಳೂ ಅದೇ ವಿಧವಾದ ವಸ್ತುವಿನಿಂದ ನಿರ್ಮಿತವಾದ ಶರೀರವುಳ್ಳವುಗಳಾಗಿರುವವು. ಪೃಥಿವಿಯಲ್ಲಿರುವಾಗ ಪೃಥಿವೀ ಸಂಬಂಧವಾದ ಸ್ಥೂಲವಸ್ತುಮಯವಾದ ಶರೀರಗಳೇ ಪ್ರಾಣಿಗಳಿರುವವು. ಸ್ವರ್ಗನರಕಾದಿಗಳಲ್ಲಿಯೂ ಹಾಗೆಯೇ. ಸ್ವರ್ಗಲೋಕವು ಅತಿಸೂಕ್ಷ್ಮವಸ್ತು ನಿರ್ಮಿತವಾಗಿರುವುದರಿಂದ ಅಲ್ಲಿ ವಾಸಿಸುವ ದೇವಮನುಷ್ಯಾದಿಗಳಿಗೂ ಅತಿ ಸೂಕ್ಷ್ಮವಾದ ಶರೀರಾದಿಗಳಿರುವವು. ಭೂಮಿಯ ಮೇಲಿರುವ ಜನರು ಸ್ಥೂಲವಸ್ತುಗಳನ್ನು ಮಾತ್ರ ತಮ್ಮ ಕಣ್ಣುಗಳಿಂದ ನೋಡಬಲ್ಲವರಾದ್ದರಿಂದ ಸೂಕ್ಷ್ಮರೂಪದಿಂದಿರುವ ದೇವಲೋಕವನ್ನಾಗಲಿ, ದೇವತೆಗಳನ್ನಾಗಲಿ ನೋಡಲು ಸಾಧ್ಯವಿಲ್ಲ. ದೇವಲೋಕವು ಎಲ್ಲಿರುವುದು ಎಂದರೆ—**ಅಂತರ್ಹಿತೋ ಹಿ ದೇವಲೋಕೋ ಮನುಷ್ಯಲೋಕಾತ್** (ತೈ. ಸಂ. ೬.೧.೧.೨) ಎಂಬ ಶ್ರುತಿವಾಕ್ಯದಲ್ಲಿ ಹೇಳಿರುವಂತೆ ಈ ಮನುಷ್ಯಲೋಕಮೊಡನೆಯೇ ಓತಪ್ರೋತವಾಗಿ ಎಂದರೆ ಪರಸ್ಪರ ಅಂತರ್ಗತವಾಗಿರುವುದು. ಸ್ವರ್ಗದ ಕೆಲವು ಭಾಗವು ನಮ್ಮ ಸುತ್ತಮುತ್ತಲಿರುವ ವಾತಾವರಣದಲ್ಲಿದ್ದರೂ ನಾವು ಅದನ್ನು ನೋಡಿ ತಿಳಿಯಲಾಗುವುದಿಲ್ಲ. ಸೂಕ್ಷ್ಮರೂಪದಲ್ಲಿರುವ ವಿದ್ಯುತ್ಪ್ರವಾಹವು ತಂತಿಗಳಲ್ಲಿ ಪ್ರವಹಿಸುತ್ತಿದ್ದರೂ ಅದನ್ನು ನೋಡಲಾಗುವುದಿಲ್ಲವಷ್ಟೆ. ಅದರಂತೆ ನಮ್ಮ ಈ ಸ್ಥೂಲಶರೀರದ ಅವಯವಗಳಲ್ಲಿದ್ದು ಸೂಕ್ಷ್ಮರೂಪದಿಂದಿರುವ ಸ್ವರ್ಗವನ್ನೂ ಸ್ವರ್ಗ

ವಾಸಿಗಳನ್ನೂ ನೋಡಲಾರೆವು. ಆದರೆ ಸ್ವರ್ಗವಾಸಿಗಳು ಇಷ್ಟಬಂದರೆ ನಮ್ಮನ್ನು ನೋಡಬಲ್ಲರು. ಪ್ರಕೃತಸೂಕ್ತದಲ್ಲಿಯೂ ಮುಂದಿನ ಕೆಲವು ಸೂಕ್ತಗಳಲ್ಲಿಯೂ ಮೃತನಾದ ಪುರುಷನನ್ನುದ್ದೇಶಿಸಿ ಹೇಳುವ ವಾಕ್ಯಗಳು ಮರಣಾನಂತರ ಪ್ರಾಪ್ತವಾಗುವ ಪ್ರೇತಶರೀರದಲ್ಲಿರುವ ಜೀವನನ್ನುದ್ದೇಶಿಸಿ ಹೇಳಿರುವುದೆಂದು ತಿಳಿಯಬೇಕು.

ಪ್ರವತಃ—**ಪ್ರಕೃಷ್ಟಕರ್ಮವತೋ ಭೂಲೋಕವರ್ತಿಭೋಗಸಾಧನಂ ಪುಣ್ಯಮನುಷ್ಠಿತವತಃ ಪುರುಷಾನ್** । ಉತ್ತಮವಾದ ಯಜ್ಞಾದಿಕರ್ಮಗಳನ್ನು ಮಾಡಿ ಭೂಲೋಕದಲ್ಲಿ ಅನುಭವಿಸುವ ಭೋಗಗಳಿಗೆ ಸಾಧನಭೂತವಾದ ಪುಣ್ಯವನ್ನು ಗಳಿಸಿಕೊಂಡಿರುವ ಪುರುಷರನ್ನು ಎಂದು ಭಾಷ್ಯಕಾರರು ಅರ್ಥವಿವರಣೆ ಮಾಡಿದ್ದಾರೆ. ಎಂದರೆ ಪುಣ್ಯಪ್ರದವಾದ ಸತ್ಕರ್ಮಗಳನ್ನು ಮಾಡಿ ಮರಣಾನಂತರ ಆ ಸತ್ಕರ್ಮಗಳ ಫಲರೂಪವಾದ ಸ್ವರ್ಗಾದಿಗಳನ್ನು ಬಯಸುತ್ತಿರುವ ಪುರುಷರನ್ನು ಎಂದರ್ಥವು. ಯಾಸ್ಕರು ಈ ವಿಷಯದಲ್ಲಿ ಇನ್ನೂ ಮುಂದೆ ಹೋಗಿ **ಪ್ರವತಃ ಉದ್ವತಃ ನಿವತಃ** ಮನುಷ್ಯರು, ದೇವತೆಗಳು, ತಿರ್ಯಗ್ಜಂತುಗಳು ಎಂದು ಅರ್ಥವಿವರಣೆಮಾಡಿದ್ದಾರೆ. ಮನುಷ್ಯರಲ್ಲಿ ಎರಡುವಿಧ- ಸತ್ಕರ್ಮಾಚರಣೆಮಾಡಿದವರು, ಪಾಪಮಾಡಿದವರು ಎಂದು. ಇವರುಗಳಿಗೆ ಪ್ರಾಪ್ತವಾಗುವ ಲೋಕವೂ ಬೇರೆ ಬೇರೆಯಾಗಿರುವುದು.

ಬಹುಭ್ಯಃ ಪಂಥಾಂ ಅನುಪಸ್ಪಶಾನಂ—ಮೇಲೆ ಹೇಳಿದಂತೆ ಪರಲೋಕಗಳಿಗೆ ಹೋಗುವ ಮಾರ್ಗಗಳೂ ಬಹುವಾಗಿರುವುವು. ಎಂದರೆ ಸ್ವರ್ಗಾದಿಗಳಿಗೆ ಹೋಗುವ ಮಾರ್ಗವೇ ಬೇರೆ, ದುಷ್ಕರು ಅನುಭವಿಸುವ ತಿಕ್ಷೆಗೆ ಅರ್ಹವಾಗಿರುವ ಲೋಕಗಳ ಮಾರ್ಗವೇ ಬೇರೆ. ಇತ್ಯಾದಿ ಅವರವರ ಕರ್ಮಾನುಸಾರವಾದ ಲೋಕಗಳಿಗೆ ಇರುವ ಅನೇಕ ಮಾರ್ಗಗಳಿಂದ ಜೀವರುಗಳನ್ನು ಆಯಾಲೋಕಗಳಿಗೆ ಒಯ್ಯುವವನು ಎಂದರ್ಥವು.

ವೈವಸ್ವತಂ—ವಿವಸ್ವಂತನ ಪುತ್ರನಿಗೆ ವೈವಸ್ವತನೆಂದು ಹೆಸರು. ವಿವಸ್ವಂತನು ದೇವಮಾತೆಯಾದ ಅದಿತಿಯ ಪುತ್ರನು ಈ ವಿಷಯದಲ್ಲಿ—

ಅಷ್ಟೌ ಪುತ್ರಾಸೋ ಅದಿತೇಃ । .... ತಾನನುಕ್ರಮಿಷ್ಯಾಮಃ । ಮಿತ್ರಶ್ಚ ವರುಣಶ್ಚ ।
ಧಾತಾ ಚಾರ್ಯಮಾ ಚ । ಅಗ್ಂತಶ್ಚ ಭಗಶ್ಚ । ಇಂದ್ರಶ್ಚ ವಿವಸ್ವಾಗ್ಶ್ಚೇತ್ಕೇತೇ ॥

(ತೈ. ಆ. ೧-೧೩-೩)

ಎಂದು ತೈತ್ತಿರೀಯಾರಣ್ಯಕದಲ್ಲಿ ಹೇಳಿರುವಂತೆ ಅದಿತಿಗೆ ಎಂಟು ಮಂದಿ ಪುತ್ರರು. ಮಿತ್ರ, ವರುಣ, ಧಾತಾ, ಆರ್ಯಮಾ, ಅಂಶ, ಭಗ, ಇಂದ್ರ, ವಿವಸ್ವಾನ್ ಎಂಬುವರೇ ಆ ಎಂಟು ಮಂದಿ ಪುತ್ರರು ಎಂದು ಹೇಳಿದೆ. ಇಲ್ಲಿ ಎಂಟನೆಯವನಾದ ವಿವಸ್ವಾನ್ ಎಂಬುವನೂ ಇಂದ್ರನೂ ಇಬ್ಬರೂ ಅವಳೀಮುಕ್ಕಳು.

ಈ ವಿವಸ್ವಂತನ ಪುತ್ರನೇ ಯಮನು. ಇವನನ್ನು ರಾಜನೆಂದು ಕರೆಯುವ ರೂಢಿ ಇದೆ. ಪಿತೃಲೋಕಕ್ಕೆ ಯಮನು ಪ್ರಭುವಾದದ್ದರಿಂದಲೂ ವರುಣನೂ ಅಲ್ಲಿಯೇ ಇರುವನೆಂದು ವಿವರಣೆ ಇರುವುದರಿಂದಲೂ ಯಮನನ್ನೂ ವರುಣನನ್ನೂ ರಾಜರೆಂದು ಕರೆಯುವುದು ಬಳಕೆಯಲ್ಲಿದೆ.

ಸಂಗಮನಂ ಜನಾನಾಂ ಮೃತರಾದ ಜೀವರುಗಳನ್ನು ತನ್ನ ಲೋಕಕ್ಕೆ ಕೊಂಡೊಯ್ದು ಅವರನ್ನು ಅಲ್ಲಿ ಒಂದೆಡೆ ಸೇರಿಸಿ ಇರುವನನಾದ್ದರಿಂದ ಜನರನ್ನು ಒಂದೆಡೆ ಒಟ್ಟಗೆಸೇರಿಸಿಡುವವನೆಂಬ ಅರ್ಥವುಳ್ಳ **ಸಂಗಮನಂ ಜನಾನಾಂ**

ಎಂಬ ಶಬ್ದಗಳಿಂದ ಯಮನನ್ನು ವರ್ಣಿಸಲಾಗಿದೆ. ಸಂಗಮನಂ ಎಂದರೆ ಗಂತವ್ಯಸ್ಥಾನಂ-ಜೀವರು ಹೋಗಿ ಸೇರಬೇಕಾದ ಪ್ರದೇಶ. ಇದು ಸ್ವರ್ಗವಾದರೂ ಆಗಬಹುದು ನರಕವಾದರೂ ಆಗಬಹುದು. ಪುಣ್ಯವಂತರ ವಿಷಯದಲ್ಲಿ ಸ್ವರ್ಗವೂ ಪಾಪಿಷ್ಠರ ವಿಷಯದಲ್ಲಿ ನರಕವೂ ಎಂದು ತಿಳಿಯಬೇಕು.

॥ ಸಂಹಿತಾಪಾಠ ॥

ಯಮೋ ನೋ ಗಾತುಂ ಪ್ರಥಮೋ ವಿವೇದ ನೈಷಾ ಗವ್ಯೂತಿರಪಭರ್ತವಾ ಉ ।
ಯತ್ರಾ ನಃ ಪೂರ್ವೇ ಪಿತರಃ ಪರೇಯುರೇನಾ ಜಜ್ಞಾನಾಃ ಪಥ್ಯಾ ಅನು ಸ್ವಾಃ ॥ ೨ ॥

॥ ಪದಪಾಠಃ ॥

ಯಮಃ । ನಃ । ಗಾತುಂ । ಪ್ರಥಮಃ । ವಿವೇದ । ನ । ಏಷಾ । ಗವ್ಯೂತಿಃ । ಅಪಽಭರ್ತವೈ । ಊಂ ಇತಿ । ಯತ್ರ । ನಃ । ಪೂರ್ವೇ । ಪಿತರಃ । ಪರಾಽಈಯುಃ । ಏನಾ । ಜಜ್ಞಾನಾಃ । ಪಥ್ಯಾಃ । ಅನು । ಸ್ವಾಃ ॥

॥ ಸಾಯಣಭಾಷ್ಯಂ ॥

ಪ್ರಥಮಃ ಸರ್ವೇಷಾಂ ಮುಖ್ಯೋ ಯಮೋ ನೋಽಸ್ಮಾಕಂ ಪ್ರಜಾನಾಂ ಗಾತುಂ ಶುಭಾಶುಭನಿಮಿತ್ತಂ ವಿವೇದ । ಜಾನಾತಿ । ಏಷಾ ಗವ್ಯೂತಿರ್ನಾಪಭರ್ತವಾ ಉ । ಅತಿಶಯಜ್ಞಾನವಾನಾದ್ಯಮನ್ಯಸ್ಯ ನ ಕೇನಚಿದಪಹರ್ತುಮಪನೇತುಂ ಶಕ್ಯತ ಇತ್ಯರ್ಥಃ । ಯತ್ರ ಯಸ್ಮಿನ್ಮಾರ್ಗೇ ನೋಽಸ್ಮಾಕಂ ಪೂರ್ವೇ ಪಿತರಃ ಪರೇಯುಃ ಏನಾನೇನ ಮಾರ್ಗೇಣ ಗಚ್ಛಂತೋ ಜಜ್ಞಾನಾ ಜಾತಾಃ ಸರ್ವೇ ಸ್ವಾಃ ಸ್ವಭೂತಾಃ ಪಥ್ಯಾಃ ಸ್ವಕರ್ಮಮಾರ್ಗಭೂತಾ ಗತೀರನು ಗಚ್ಛಂತಿ ॥

॥ ಪ್ರತಿಪದಾರ್ಥ ॥

ಪ್ರಥಮಃ—ಸಕಲರಿಗೂ ಮುಖ್ಯನಾದ । ಯಮಃ—ಯಮನು । ನಃ—ನಮ್ಮ । ಗಾತುಂ—ಸಂಚಾರ ಮಾರ್ಗವನ್ನು । ವಿವೇದ—ಅರಿತಿದ್ದಾನೆ. ಏಷಾ ಗವ್ಯೂತಿಃ—ಫಲವತ್ತಾದ ಈ ಮಾರ್ಗವು । ನ ಅಪಭರ್ತವೈ—ಇತರರಿಂದ ಅಪಹರಿಸಲ್ಪಡತಕ್ಕದ್ದಲ್ಲ । ಯತ್ರ—ಯಾವ ಕರ್ಮಾನುಸಾರಿಯಾದ ಮಾರ್ಗದಲ್ಲಿ । ನಃ—ನಮ್ಮ । ಪೂರ್ವೇ ಪಿತರಃ—ಹಿಂದಿನ ಪಿತೃಗಳೆಲ್ಲರೂ । ಪರೇಯುಃ—ಮರಣಾನಂತರ ಹೋದರೋ । ಏನಾ—ಅಂತಹ ಮಾರ್ಗಗಳಲ್ಲಿಯೇ । ಜಜ್ಞಾನಾಃ—ಉತ್ಪನ್ನರಾದ ಸಕಲರೂ । ಸ್ವಾಃ—ತಮ್ಮ ತಮ್ಮ ವೈಯಕ್ತಿಕವಾದ । ಪಥ್ಯಾಃ—ಕರ್ಮಫಲವಾದ ಮಾರ್ಗಗಳನ್ನು । ಅನು—ಅನುಸರಿಸಿ ಹೋಗುತ್ತಾರೆ.

। ಭಾವಾರ್ಥ ।

ಸಕಲರಿಗೂ ಮುಖ್ಯನಾದ ಯಮನು ನಮ್ಮ ಸಂಚಾರಮಾರ್ಗಗಳನ್ನು ಅರಿತಿದ್ದಾನೆ. ಈ ಫಲವತ್ತಾದ ಮಾರ್ಗವು ಇತರರಿಂದ ಅಪಹರಿಸಲ್ಪಡತಕದ್ದಲ್ಲ. ಯಾವ ಕರ್ಮಕ್ಕನುಗುಣವಾದ ಮಾರ್ಗಗಳಲ್ಲಿ ನಮ್ಮ ಹಿಂದಿನ ಪಿತೃಗಳೆಲ್ಲರೂ ಮರಣಾನಂತರ ಹೋದರೋ, ಅಂತಹ ಮಾರ್ಗಗಳಲ್ಲಿಯೇ. ಉತ್ಪನ್ನರಾದ ಸಕಲರೂ ತಮ್ಮ ತಮ್ಮ ವೈಯಕ್ತಿಕವಾದ ಕರ್ಮಫಲಗಳನ್ನು ಅನುಸರಿಸಿ ಹೋಗುತ್ತಾರೆ.

English Translation

Yama, the chief (of all), knows our well-being : this pasture no one can take from us. By the road by which our forefathers have gone, all who are born (proceed) along the paths they have made for themselves.

ವಿಶೇಷವಿಷಯಗಳು ॥

ಯಮಃ ನಃ ಗಾತುಂ ಪ್ರಥಮಃ ವಿವೇದ—ಈ ವಾಕ್ಯದಲ್ಲಿರುವ ಪ್ರಥಮಃ ಎಂಬ ಶಬ್ದಕ್ಕೆ ಭಾಷ್ಯಕಾರರು ಯಾಸ್ಕರ ವಿವರಣೆಯನ್ನನುಸರಿಸಿ ಪ್ರಥಮಃ ಎಂದರೆ ಮುಖ್ಯವಾದವನು ಎಂದರ್ಥಮಾಡಿದಾರೆ. ಆದರೆ ಪಾಶ್ಚಾತ್ಯಪಂಡಿತರಾದ Muir ಮೊದಲಾದ ಪಂಡಿತರು ಪ್ರಥಮಃ ಎಂಬ ಶಬ್ದವನ್ನು ಅವ್ಯಯವೆಂದು ಭಾವಿಸಿ ಪಿತೃ ಲೋಕಕ್ಕೆ ಹೋಗುವ ದಾರಿಯನ್ನು ಮೊದಲು ಕಂಡುಹಿಡಿದವನು ಯಮನೆಂದು ಅರ್ಥಮಾಡಿದಾರೆ. Yama was the first who found for us the way. This home is not to be taken from us Those who are now born (follow) by their own paths to the place whither our ancient fathers departed ಎಂದು ಹೇಳಿದಾನೆ.

ಏಷಾ ಗವ್ಯೂತಿಃ ಅಪಹರ್ತವೈ ಉ—**ಅತಿಶಯಜ್ಞಾನಯೋಗಾತ್ ಯಮಸ್ಯ ನ ಕೇನಚಿದಪಹರ್ತುಂ ಶಕ್ಯತ ಇತ್ಯರ್ಥಃ ।** ಈ ವಾಕ್ಯದಲ್ಲಿರುವ ಗವ್ಯೂತಿಃ ಎಂಬ ಶಬ್ದಕ್ಕೆ ಭಾಷ್ಯಕಾರರು ಅರ್ಥವಿವರಣೆ ಮಾಡಿರುವುದಿಲ್ಲ. ಗವ್ಯೂತಿ ಎಂಬ ಶಬ್ದಕ್ಕೆ ಇತರ ಸ್ಥಳಗಳಲ್ಲಿ **ಅತಿವಿಸ್ತೃತಂ ಮಾರ್ಗಂ** ಎಂದು ಅರ್ಥಮಾಡಿದಾರೆ. ಇಲ್ಲಿ ಆ ಅರ್ಥವನ್ನು ಬೇಕಾದರೂ ಹೇಳಬಹುದು ಅಥವಾ ಯಮನ ಪ್ರಭುತ್ವಕ್ಕೆ ಒಳಪಟ್ಟಿರುವ ಉತ್ತಮವಾದ ಸ್ಥಾನವನ್ನು ಎಂದು ಬೇಕಾದರೂ ಅರ್ಥಮಾಡಬಹುದು.

। ಸಂಹಿತಾಪಾಠಃ ।

ಮಾತಲೀ ಕವ್ಯೈರ್ಯಮೋ ಅಂಗಿರೋಭಿರ್ಬೃಹಸ್ಪತಿರ್ಕ್ಟಭಿರ್ವಾವೃಧಾನಃ ।
ಯಾಂಶ್ಚ ದೇವಾ ವಾವೃಧುರ್ಯೇ ಚ ದೇವಾನ್ತಾꣳಹವಾನ್ಯೇ ಸ್ವಧಯಾನ್ಯೇ ಮದಂತಿ ॥ ೩ ॥

। ಪದಪಾಠಃ ।

ಮಾತಲೀ। ಕವ್ಯೈಃ । ಯಮಃ । ಅಂಗಿರಃऽಭಿಃ ।ಬೃಹಸ್ಪತಿಃ । ಋಕ್ವಽಭಿಃ । ವವೃಧಾನಃ ।

ಯಾನ್ । ಚ । ದೇವಾಃ । ವವೃಧುಃ । ಯೇ । ಚ । ದೇವಾನ್ । ಸ್ವಾಹಾ । ಅನ್ಯೇ । ಸ್ವಧಯಾ । ಅನ್ಯೇ। ಮದಂತಿ ॥ ೩ ॥

॥ ಸಾಯಣಭಾಷ್ಯಂ ।

ಅಗ್ನಿಮಾರುತೇ ಮಾತಲೀ ಕವ್ಯೈರಿತ್ಯೇಷಾ ಧಾಯ್ಯಾ । ಸೂತ್ರಿತಂ ಚ । ಇಮಂ ಯಮ ಪ್ರಸ್ತರಮಾ ಹಿ ಸೀದ ಮಾತಲೀ ಕವ್ಯೈರ್ಯಮೋ ಅಂಗಿರೋಭಿರುದೀರತಾಮವರ ಉತ್ಪರಾಸಃ । ಆ. ೫-೨೦ । ಇತಿ.

ಮಾತಲೀ । ಮಾತಲಿರಿಂದ್ರಸ್ಯ ಸಾರಥಿಃ । ತದ್ವಾನಿಂದ್ರೋ ಮಾತಲೀ । ಸ ಕವ್ಯೈಃ ಕವ್ಯಭಾಗ್ಭಿಃ ಪಿತೃಭಿಃ ಸಹ ವವೃಧಾನೋ ವರ್ಧಮಾನೋ ಭವತಿ । ಯಮಶ್ಚಾಂಗಿರೋಭಿಃ ಪಿತೃವಿಶೇಷೈಃ ಸಹ ವರ್ಧಮಾನೋ ಭವತಿ ।.....। ತತ್ರ ದೇವಾ ಇಂದ್ರಾದಯೋ ಯಾಂಶ್ಚ ಕವ್ಯಭಾಗಾದೀನ್ಪಿತೄನ್ವವೃಧುಃ ವರ್ಧಯಂತಿ ಯೇ ಚ ಕವ್ಯಭಾಗಾದಯಃ ಪಿತರೋ ದೇವಾನಿಂದ್ರಾದೀನ್ವರ್ಧಯಂತಿ ಶೇಷಾಂ ಮಧ್ಯೇऽನ್ಯ ಇಂದ್ರಾದಯಃ ಸ್ವಾಹಾ ಮದಂತಿ । ಸ್ವಾಹಾಕಾರೇಣ ಹೃಷ್ಯಂತಿ । ಅನ್ಯೇ ಪಿತರಃ ಸ್ವಧಯಾ ಸ್ವಧಾಕಾರೇಣ ಹೃಷ್ಯಂತಿ ॥

। ಪ್ರತಿಪದಾರ್ಥ ।

ಮಾತಲೀ—ಇಂದ್ರನು । ಕವ್ಯೈಃ—ಕವ್ಯಗಳಿಗೆ ಭಾಗಿಗಳಾದ ಪಿತೃಗಳೊಡನೆ । ವವೃಧಾನಃ—ಪುಷ್ಟಿಯನ್ನು ಹೊಂದುತ್ತಾನೆ । ಯಮಃ—ಯಮನು । ಅಂಗಿರೋಭಿಃ—ಅಂಗಿರಸ್ಸುಗಳೊಂದಿಗೆ ವೃದ್ಧಿಯನ್ನು ಹೊಂದುತ್ತಾನೆ । ಬೃಹಸ್ಪತಿಃ—ಬೃಹಸ್ಪತಿಯು । ಋಕ್ವಭಿಃ—ಸ್ತುತಿಕರ್ತರೊಂದಿಗೆ ಪುಷ್ಟಿಗೊಳ್ಳುತ್ತಾನೆ । ದೇವಾಃ—ಇಂದ್ರಾದಿದೇವತೆಗಳು । ಯಾಂಶ್ಚ—ಯಾವ ಪಿತೃಗಳನ್ನು । ವವೃಧುಃ—ಬೆಳಸುವರೋ । ಯೇ ಚ—ಯಾವ ಪಿತೃಗಳು । ದೇವಾನ್—ಇಂದ್ರಾದಿದೇವತೆಗಳನ್ನು ಬೆಳೆಸುವರೋ ಅವರಲ್ಲಿ । ಅನ್ಯೇ—ಒಂದು ಗುಂಪಾದ ದೇವತೆಗಳು । ಸ್ವಾಹಾ—'ಸ್ವಾಹಾ' ಪೂರ್ವಕವಾಗಿ ಅರ್ಪಿತವಾಗುವ ಹವಿಸ್ಸನ್ನು ಸೇವಿಸಿ । ಮದಂತಿ-ಹರ್ಷವನ್ನು ಹೊಂದುತ್ತಾರೆ । ಅನ್ಯೇ—ಇನ್ನೊಂದು ಗುಂಪಾದ ಪಿತೃಗಳು । ಸ್ವಧಯಾ—ಸ್ವಧಾರೂಪದಲ್ಲಿ ಅರ್ಪಿಸಿದ ಕವ್ಯಗಳಿಂದ ಹರ್ಷಗೊಳ್ಳುತ್ತಾರೆ.

। ಭಾವಾರ್ಥ ।

ಇಂದ್ರನು ಕವ್ಯಗಳಿಗೆ ಭಾಗಿಗಳಾದ ಪಿತೃಗಳೊಡನೆಯೂ- ಯಮನು ಅಂಗಿರಸ್ಸುಗಳೊಡನೆಯೂ, ಬೃಹಸ್ಪತಿಯು ಸ್ತುತಿಕರ್ತರೊಡನೆಯೂ ಕೂಡಿ ಪುಷ್ಟಿಯನ್ನು ಹೊಂದುತ್ತಾರೆ. ಇಂದ್ರಾದಿದೇವತೆಗಳು ಯಾವ ಪಿತೃಗಳನ್ನು ಬೆಳೆಸುವರೋ ಯಾವ ಪಿತೃಗಳು ಇಂದ್ರಾದಿದೇವತೆಗಳ ವೃದ್ಧಿಗೆ ಕಾರಣರೋ ಇವರುಗಳ ನಡುವೆ, ಒಂದು ಗುಂಪಾದ ದೇವತೆಗಳು "ಸ್ವಹಾ" ಪೂರ್ವಕವಾಗಿ ಅರ್ಪಿಸುವ ಹವಿಸ್ಸನ್ನು..ಸೇವಿಸಿ ಹರ್ಷವನ್ನು ಹೊಂದುತ್ತಾರೆ. ಇನ್ನೊಂದು ಗುಂಪಾದ ಪಿತೃಗಳು ಸ್ವಧಾರೂಪದಲ್ಲಿ ಅರ್ಪಿಸಿದ ಕಾರ್ಯಗಳಿಂದ ಹರ್ಷಗೊಳ್ಳುತ್ತಾರೆ

English Translation

Matalin prospers with the Kavyas, Yama with the Angirasas; Brihaspati with the Rikwans; they whom the gods augment, and they who augment the gods, these rejoice in Swaha, those in the Swadha.

। ವಿಶೇಷವಿಷಯಗಳು ॥

ಅಗ್ನಿಮೂರುತಶಸ್ತ್ರಮಂತ್ರಗಳಲ್ಲಿ **ಮಾತಲೀ ಕವ್ಯೈಃ** ಎಂಬ ಈ ಋಕ್ಕನ್ನು ಧಾಯ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಇಮಂ ಯಮ ಪ್ರಸ್ತರಮಾ ಹಿ ಸೀದ ಮಾತಲೀ ಕವ್ಯೈರ್ಯಮೋ ಅಂಗಿರೋಭಿರುದೀರತಾಮವರ ಉತ್ಪರಾಸಃ** ಎಂಬ ಸೂತ್ರದಿಂದ (ಅ. ೫-೨೦) ವಿನ್ಯತವಾಗಿರುವುದು.

ಮಾತಲೀ—**ಮಾತಲಿಃ** ಎಂಬವನು ಇಂದ್ರನ ಸಾರಥಿಯೆಂದು ಪ್ರಸಿದ್ಧವು. **ಮಾತಲೀ** ಎಂದರೆ ಮಾತಲ ಎಂಬ ಸಾರಥಿಯುಳ್ಳ ಇಂದ್ರನು ಎಂದರ್ಥವು.

ಕವ್ಯೈಃ—ಕವ್ಯವೆಂದರೆ ಪಿತೃಗಳಿಗೆ ಅರ್ಪಿಸುವ ಅನ್ನವು. ದೇವತೆಗಳಿಗೆ ಅರ್ಪಿಸುವ ಅನ್ನಕ್ಕೆ ಹವಿಃ ಹವ್ಯವೆಂದು ಹೆಸರು.

ಈ ಋಕ್ಕಿನಲ್ಲಿ ದೇವತೆಗಳು ಪಿತೃಗಳನ್ನೂ, ಪಿತೃಗಳು ದೇವತೆಗಳನ್ನೂ ವೃದ್ಧಿಪಡಿಸುವರು ಎಂದು ಹೇಳಿದಾರೆ ಮತ್ತು ಮೂರುವಿಧ ಪಿತೃಗಳನ್ನು ಇಲ್ಲಿ ನಿರ್ದೇಶಿಸಲಾಗಿದೆ. **ಕವ್ಯೈಃ ಕವ್ಯಭಾಗ್ಭಿಃ**-ಕವ್ಯಕ್ಕೆ ಅರ್ಹರಾದ ಅಥವಾ ಕವ್ಯವನ್ನು ಭುಜಿಸುವ ಪಿತೃಗಳು ಇಂದ್ರನೊಡಗೂಡಿ ವೃದ್ಧಿಯನ್ನು ಪಡೆಯುತ್ತಾರೆ. ಅಂಗಿರಸ್ಸುಗಳೆಂಬ ಪಿತೃಗಳು ಯಮನೊಡನೆ ವೃದ್ಧಿಯನ್ನು ಹೊಂದುತ್ತಾರೆ. ಋಕ್ವಗಳೆಂಬ (ಸ್ತೋತೃಗಳೆಂಬ) ಪಿತೃಗಳು ಬೃಹಸ್ಪತಿಯೊಡನೆ ಸೇರಿ ವರ್ಧಿತರಾಗುತ್ತಾರೆ ಎಂದು ಮೂರು ವಿಧ ಪಿತೃಗಳನ್ನು ನಿರ್ದೇಶಿಸಿ ಅನಂತರ ದೇವತೆಗಳಿಗೂ ಪಿತೃಗಳಿಗೂ ಹವ್ಯಕವ್ಯಗಳನ್ನು ಹೇಗೆ ಅರ್ಪಿಸಬೇಕೆಂಬ ವಿಧಿಯನ್ನು ಋಷಿಯು ತಿಳಿಸಿದಾನೆ—

ಸ್ವಾಹಾ ದೇವೇಭ್ಯಃ ಸ್ವಧಾ ಪಿತೃಭ್ಯ ಇತ್ಯಾಹ

ಎಂಬ ಶ್ರುತಿವಾಕ್ಯದಂತೆ ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವಾಗ ಸ್ವಾಹಾಕಾರಪೂರ್ವಕವಾಗಿಯೂ ಪಿತೃಗಳಿಗೆ ಕವ್ಯವನ್ನರ್ಪಿಸುವಾಗ ಸ್ವಧಾಶಬ್ದಪೂರ್ವವಾಗಿಯೂ ಅರ್ಪಿಸಿದಲ್ಲಿ ಅವರುಗಳು ಸಂತೋಷಪಡುತ್ತಾರೆ ಎಂದು ಋಷಿಯು ತಿಳಿಸಿದಾನೆ.

॥ ಸಂಹಿತಾಪಾಠಃ ॥

ಇಮಂ ಯಮ ಪ್ರಸ್ತರಮಾ ಹಿ ಸೀದಾಂಗಿರೋಭಿಃ ಪಿತೃಭಿಃ ಸಂವಿದಾನಃ ।
ಆ ತ್ವಾ ಮಂತ್ರಾಃ ಕವಿಶಸ್ತಾ ವಹಂತ್ವೇನಾ ರಾಜನ್ಹವಿಷಾ ಮಾದಯಸ್ವ ॥೪॥

॥ ಪದಪಾಠಃ ॥

ಇಮಂ । ಯಮ । ಪ್ರಸ್ತರಂ । ಆ । ಹಿ । ಸೀದ । ಅಂಗಿರಃಭಿಃ । ಪಿತೃಭಿಃ । ಸಂವಿದಾನಃ ।
ಆ । ತ್ವಾ । ಮಂತ್ರಾಃ । ಕವಿಶಸ್ತಾಃ । ವಹಂತು । ಏನಾ । ರಾಜನ್ । ಹವಿಷಾ । ಮಾದಯಸ್ವ ॥ ೪ ॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇ ಯಮಸ್ಯೇಮಂ ಯಮೇತ್ಯಾದಿಕೇ ದ್ವೇ ಅನುವಾಕ್ಯೇ । ಇಮಂ ಯಮ ಪ್ರಸ್ತರಮಾ ಹಿ ಸಿದೇತಿ ದ್ವೇ । ಆ. ೨-೧೯ । ಇತಿ ಹಿ ಸೂತ್ರಿತಂ ॥ ಸೈಷಾಗ್ನಿಮಾರುತೇಽಪಿ ಧಾಯ್ಯಾ । ಸೂತ್ರಂ ಪೂರ್ವಮೇವೋದಾಹೃತಂ ॥

ಹೇ ಯಮ ಅಂಗಿರೋಭಿರೇತನ್ನಾಮಕೈಃ ಪಿತೃಭಿಃ ಸಂವಿದಾನ ಐಕಮತ್ಯಂ ಗತಸ್ತ್ವಮಿಮಂ ಪ್ರಸ್ತರಂ ವಿಸ್ತೀರ್ಣಂ ಯಜ್ಞವಿಶೇಷಮಾ ಸೀದ । ಆಗತ್ಯೋಪವಿಶ ಹಿ ಯಸ್ಮಾದೇವಂ ತಸ್ಮಾತ್ಕವಿಶಸ್ತಾ ವಿದ್ವದ್ಭಿರ್ಋತ್ವಿಗ್ಭಿಃ ಪ್ರಯುಕ್ತಾ ಮಂತ್ರಾಸ್ತ್ವಾ ತ್ವಾಮಾ ವಹಂತು । ಹೇ ರಾಜನ್ ಏನೈತೇನ ಹವಿಷಾ ತುಷ್ಟೋ ಮಾದಯಸ್ವ । ಯಜಮಾನಂ ಹರ್ಷಯ ॥

॥ ಪ್ರತಿಪದಾರ್ಥ ॥

ಯಮ—ಎಲೈ ಯಮದೇವನನೇ । ಅಂಗಿರೋಭಿಃ—ಅಂಗಿರಾಸಂಜ್ಞಕರಾದ । ಪಿತೃಭಿಃ—ಪಿತೃಗಳೊಡನೆ । ಸಂವಿದಾನಃ—ಕೂಡಿಕೊಂಡವನಾಗಿ । ಪ್ರಸ್ತರಂ ಇಮಂ—ವಿಸ್ತೃತವಾಗಿ ಹರಡಿದ ಈ ಯಜ್ಞಾಸನದಲ್ಲಿ । ಆ ಸೀದ—ಕುಳಿತುಕೊ । ಹಿ—ಆದುದರಿಂದ । ಕವಿಶಸ್ತಾಃ—ಕವಿಗಳಿಂದ ಪರಿತಗಳಾದ । ಮಂತ್ರಾಃ—ಸ್ತುತಿಮಂತ್ರಗಳು । ತ್ವಾ—ನಿನ್ನನ್ನು । ಆ ವಹಂತು—ಇಲ್ಲಿಗೆ ಕರೆತರಲಿ । ರಾಜನ್—ಪ್ರಭುವಾದ ಯಮನೇ । ಏನಾ ಹವಿಷಾ—ಈ ಹವಿಸ್ಸುಗಳಿಂದ ತುಷ್ಟನಾಗಿ । ಮಾದಯಸ್ವ—ಯಜಮಾನನನ್ನೂ ಹರ್ಷಗೊಳಿಸು

॥ ಭಾವಾರ್ಥ ॥

ಎಲೈ ಯಮದೇವನನೇ, ಅಂಗಿರಾಸಂಜ್ಞಕರಾದ ಪಿತೃಗಳೊಡನೆ ಕೂಡಿದವನಾಗಿ ವಿಸ್ತೃತವಾಗಿ ಹರಡಿದ ಈ ಆಸನದಲ್ಲಿ ಕುಳಿತುಕೊ. ಕವಿಗಳಿಂದ ಪಠಿತವಾದ ಸ್ತುತಿಮಂತ್ರಗಳು ನಿನ್ನನ್ನು ಇಲ್ಲಿಗೆ ಕರೆತರಲಿ. ಪ್ರಭುವಾದ ಎಲೈ ಯಮನೇ, ಈ ಹವಿಸ್ಸುಗಳಿಂದ ತುಷ್ಟನಾಗಿ ಯಜಮಾನನನ್ನೂ ಹರ್ಷಗೊಳಿಸು.

English Translation

Yama, who are associated with the Angirasa Pitris, sit down at this Sacrifice; may the prayers recited by the priests bring you hither; be exhilarated, Sovereign (Yama), by this oblation.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ಯಮನನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಇಮಂ ಯಮ ಎಂಬ ಈ ಋಕ್ಕನ್ನೂ ಇದರ ಮುಂದಿನ ಋಕ್ಕನ್ನೂ ಆನುವಾಕ್ಯಾಮಂತ್ರಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಇಮಂ ಯಮ ಪ್ರಸ್ತರಮಾ ಹಿ ಸೀದೇತಿ ದ್ವೇ** ಎಂಬ ಸೂತ್ರದಿಂದ (ಅ. ೨-೧೯) ವಿವೃತವಾಗಿರುವುದು. ಈ ಮಂತ್ರವು ಅಗ್ನಿಮಾರುತಶಸ್ತ್ರಮಂತ್ರಗಳಲ್ಲಿಯೂ ಧಾಯ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಸೂತ್ರವಾಕ್ಯವನ್ನು ಹಿಂದೆಯೇ ಹೇಳಲಾಗಿದೆ.

ಪ್ರಸ್ತರಂ-ವಿಸ್ತೀರ್ಣಂ ಯಜ್ಞವಿಶೇಷಂ । ವಿಸ್ತಾರವಾಗಿ ನಡೆಯುತ್ತಿರುವ ಈ ಯಜ್ಞಕ್ಕೆ ಬಂದು ಕುಳಿತುಕೋ ಅಥವಾ ಈ ಯಜ್ಞದಲ್ಲಿ ಆಸನಾರ್ಥವಾಗಿ ಹರಡಿರುವ ಬರ್ಹಿ: ಎಂಬ ದರ್ಭೆಗಳ ಮೇಲೆ ಬಂದು ಕುಳಿತುಕೋ ಎಂದರ್ಥವು.

ಎಲೈ ಯಮನೇ, ಈಗ ನಿನ್ನನ್ನುದ್ದೇಶಿಸಿ ನಡೆಯುತ್ತಿರುವ ಈ ಯಜ್ಞದಲ್ಲಿ ಋತ್ವಿಕ್ಕುಗಳು ಮಂತ್ರಗಳನ್ನು ಪಠಿಸುತ್ತಾ ನಿನ್ನನ್ನು ಆಹ್ವಾನಮಾಡುತ್ತಿರುವರು. ಅವರ ಆಹ್ವಾನವನ್ನು ಕೇಳಿ ಅಂಗಿರಸ್ಸುಗಳೊಡನೆಯೂ, ಪಿತೃಗಳೊಡನೆಯೂ ಈ ನಮ್ಮ ಯಜ್ಞಕ್ಕೆ ದಯಮಾಡಿ ಇಲ್ಲಿ ಸಿದ್ಧಪಡಿಸಿರುವ ದರ್ಭಾಸನದ ಮೇಲೆ ಕುಳಿತುಕೊಂಡು ನಾವು ಅರ್ಪಿಸುವ ಹವಿಸ್ಸಿನಿಂದ ಸಂತುಷ್ಟನಾಗಿ ಯಜಮಾನನನ್ನೂ ಹರ್ಷಗೊಳಿಸು ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಅಂಗಿರೋಭಿರಾ ಗಹಿ ಯಜ್ಞಿಯೇಭಿರ್ಯಮ ವೈರೂಪೈರಿಹ ಮಾದಯಸ್ವ।
ವಿವಸ್ವಂತಂ ಹುವೇ ಯಃ ಪಿತಾ ತೇಽಸ್ಮಿನ್ಯಜ್ಞೇ ಬರ್ಹಿಷ್ಯಾ ನಿಷದ್ಯ ॥ ೫ ॥

॥ ಪದಪಾಠಃ ॥

ಅಂಗಿರಃಭಿಃ । ಆ । ಗಹಿ । ಯಜ್ಞಿಯೇಭಿಃ । ಯಮ । ವೈರೂಪೈಃ । ಇಹ । ಮಾದಯಸ್ವ ।
ವಿವಸ್ವಂತಂ । ಹುವೇ । ಯಃ । ಪಿತಾ । ತೇ । ಅಸ್ಮಿನ್ । ಯಜ್ಞೇ । ಬರ್ಹಿಷಿ । ಆ । ನಿಽಸದ್ಯ ॥ ೫ ॥

॥ ಸಾಯಣಭಾಷ್ಯಂ ॥

ಹೇ ಯಮ ವೈರೂಪೈರ್ವಿವಿಧರೂಪಯುಕ್ತೈರ್ವೈರೂಪಸಾಮಪ್ರಿಯೈರ್ವಾ ಯಜ್ಞಿಯೇಭಿರ್ಯಜ್ಞಯೋಗ್ಯೈರಂಗಿರೋಭಿಃ ಸಹಾ ಗಹಿ । ಅಗಚ್ಛ । ಅಗತ್ಯ ಚೇಹಾಸ್ಮಿನ್ಯಜ್ಞೇ ಮಾದಯಸ್ವ । ಯಜಮಾನಂ ಹರ್ಷಯ । ಯೋ ವಿವಸ್ವಾಂಸ್ತೇ ತವ ಪಿತಾಸ್ತಿ ಅಸ್ಮಿನ್ಯಜ್ಞೇ ತಂ ವಿವಸ್ವಂತಂ ಹುವೇ । ಆಹ್ವಯಾಮಿ । ಸ ಚಾಸ್ತೀರ್ಣೇ ಬರ್ಹಿಷ್ಯಾ ನಿಷದ್ಯೋಪವಿಶ್ಯ ಯಜಮಾನಂ ಹರ್ಷಯತು ॥

॥ ಪ್ರತಿಪದಾರ್ಥ ॥

ಯಮ—ಎಲೈ ಯಮದೇವನನೇ। **ವೈರೂಪೈಃ**—ಅನೇಕ ರೂಪಗಳುಳ್ಳವರೂ। **ಯಜ್ಞಿಯೇಭಿಃ**—ಪೂಜಾರ್ಹರೂ ಆದ। **ಅಂಗಿರೋಭಿಃ**—ಅಂಗಿರಸ್ಸುಗಳೊಡಗೂಡಿ। **ಆ ಗಹಿ**—ದಯಮಾಡು। **ಇಹ**—ಈ ಯಜ್ಞದಲ್ಲಿ। **ಮಾದಯಸ್ವ**—ಯಜಮಾನನ್ನು ಹರ್ಷಗೊಳಿಸು। **ಯಃ**—ಯಾವ ವಿವಸ್ವಂತನು। **ತೇ**—ನಿನಗೆ। **ಪಿತಾ**—ತಂದೆಯಾಗಿದ್ದಾನೆಯೋ। **ವಿವಸ್ವಂತಂ**—ಆ ವಿವಸ್ವಂತನನ್ನು। **ಅಸ್ಮಿನ್ ಯಜ್ಞೇ**—ಈ ಯಜ್ಞದಲ್ಲಿ। **ಹುವೇ**—ಕರೆಯುತ್ತೇನೆ। **ಬರ್ಹಿಷಿ**—ದರ್ಭಾಸನದ ಮೇಲೆ। **ಆ ನಿಷದ್ಯ**—ಕುಳಿತು ಅವನೂ ಯಜಮಾನನ್ನು ಹರ್ಷಗೊಳಿಸಲಿ.

॥ ಭಾವಾರ್ಥ ॥

ಎಲೈ ಯಮದೇವನನೇ, ಅನೇಕ ರೂಪಗಳುಳ್ಳವರೂ, ಪೂಜಾರ್ಹರೂ ಆದ ಅಂಗಿರಸ್ಸುಗಳೊಡಗೂಡಿ ದಯಮಾಡು ಈ ಯಜ್ಞದಲ್ಲಿ ಯಜಮಾನನ್ನು ಹರ್ಷಗೊಳಿಸು. ಯಾವ ವಿವಸ್ವಂತನು ನಿನಗೆ ಪಿತೃವಾಗಿದ್ದಾನೆಯೋ, ಆ ವಿವಸ್ವಂತನನ್ನು ಈ ಯಜ್ಞದಲ್ಲಿ ಕರೆಯುತ್ತೇನೆ. ದರ್ಭಾಸನದ ಮೇಲೆ ಅವನೂ ಕುಳಿತು ಯಜಮಾನನ್ನು ಹರ್ಷಗೊಳಿಸಲಿ.

English Translation

Come hither, Yama, with the venerable multiform Angirasas, and be exhilarated; I summon Yivaswat, who is your father, to this sacrifice; may he seated on the sacred grass (delight the sacrificer)

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಯಮನು ಅಂಗಿರಸ್ಸುಗಳೊಡನೆಯೂ ಇತರ ವಿವಿಧಾಕಾರವುಳ್ಳ ಪಿತೃಗಳೊಡನೆಯೂ ಈ ಯಜ್ಞಕ್ಕೆ ಬರಬೇಕೆಂದು ಪ್ರಾರ್ಥಿಸಲಾಗಿದೆ ಮತ್ತು ಯಮನ ತಂದೆಯಾದ ವಿವಸ್ವಂತನನ್ನು ಆಹ್ವಾನಿಸಲಾಗಿದೆ. **ವೈರೂಪೈಃ** ಎಂಬ ಶಬ್ದಕ್ಕೆ **ವಿವಿಧರೂಪಯುಕ್ತೈರ್ವೈರೂಪಸಾಮಪ್ರಿಯೈರ್ವಾ** ಎಂದು ಭಾಷ್ಯಕಾರರು ಅರ್ಥಮಾಡಿದಾರೆ ಎಂದರೆ ವಿಧವಿಧವಾದ ರೂಪವುಳ್ಳ ಪಿತೃಗಳು ಅಥವಾ **ವೈರೂಪಗಂ ಸಾಮ ಭವತಿ** ಎಂಬ ಶ್ರುತಿವಾಕ್ಯದಂತೆ ವೈರೂಪವೆಂಬ ಸಾಮಮಂತ್ರವಿಶೇಷದ ಗಾನವನ್ನು ಕೇಳುವುದರಲ್ಲಿ ಪ್ರೀತಿಯುಕ್ತರಾದ ಪಿತೃಗಳು ಎಂದರ್ಥವು.

॥ ಸಂಹಿತಾಪಾಠಃ ॥

ಅಂಗಿರಸೋ ನಃ ಪಿತರೋ ನವಗ್ವಾ ಅಥರ್ವಾಣೋ ಭೃಗವಃ ಸೋಮ್ಯಾಸಃ।
ತೇಷಾಂ ವಯಂ ಸುಮತೌ ಯಜ್ಞಿಯಾನಾಮಪಿ ಭದ್ರೇ ಸೌಮನಸೇ ಸ್ಯಾಮ ॥ ೬ ॥

xxvii 30

ಪದಪಾಠಃ

ಅಂಗಿರಸಃ । ನಃ । ಪಿತರಃ । ನವ್ಯಸ್ವಾಃ । ಅಥರ್ವಾಣಃ । ಭೃಗವಃ । ಸೋಮ್ಯಾಸಃ ।

ತೇಷಾಂ । ವಯಂ । ಸುಮತೌ । ಯಜ್ಞಿಯಾನಾಂ । ಅಪಿ । ಭದ್ರೇ । ಸೌಮನಸೇ । ಸ್ಯಾಮ ॥ ೬ ।

॥ ಸಾಯಣಭಾಷ್ಯಂ ॥

ಅಂಗಿರಸೋಽಂಗಿರೋನಾಮಕಾ ಅಥರ್ವಾಣೋಽಥರ್ವನಾಮಕಾ ಭೃಗವೋ ಭೃಗುನಾಮಕಾಶ್ಚ ನೋಽಸ್ಮಾಕಂ ಪಿತರೋ ನವಗ್ವಾ ಅಭಿನವಗಮನಯುಕ್ತಾಃ । ಯದ್ವಾ । ನೂತನವಶ್ಚೈತಿಜನಕಾ ಇತ್ಯರ್ಥಃ । ತೇ ಚ ಸೋಮ್ಯಾಸಃ ಸೋಮಮರ್ಹಂತೀತಿ ಸೋಮ್ಯಾಃ । ಯಜ್ಞಿಯಾನಾಂ ಯಜ್ಞಾರ್ಹಾಣಾಂ ತೇಷಾಂ ಸುಮತಾವನುಗ್ರಹಯುಕ್ತಾಯಾಂ ಬುದ್ಧೌ ವಯಂ ಸ್ಯಾಮ । ಸರ್ವದಾ ತಿಷ್ಠೇಮ । ಅಪಿ ಚ ಸೌಮನಸೇ ಭದ್ರೇ ಸೌಮನಸಸ್ಯ ಕಾರಣೇ ಕಲ್ಯಾಣೇ ಫಲೇ ಸ್ಯಾಮ । ಸರ್ವದಾ ತಿಷ್ಠೇಮ ॥

॥ ಪ್ರತಿಪದಾರ್ಥ ॥

ಅಂಗಿರಸಃ—ಅಂಗಿರಸ್ಸುಗಳೂ । **ಅಥರ್ವಾಣಃ**—ಅಥರ್ವಸಂಜ್ಞಕರಾದ ಋಷಿಗಳೂ । **ಭೃಗವಃ**—ಭೃಗುಗಳು । **ನವಗ್ವಾಃ**—ನೂತನವಾದ ಚೈತನ್ಯದಾಯಕರಾದ । **ನಃ**—ನಮ್ಮ । **ಪಿತರಃ**—ಪಿತೃಗಳೂ । **ಸೋಮ್ಯಾಸಃ**—ಸೋಮಾರ್ಪಣೆಗೆ ಅರ್ಹರಾಗಿದ್ದಾರೆ । **ಯಜ್ಞಿಯಾನಾಂ**—ಪೂಜಾರ್ಹರಾದ । **ತೇಷಾಂ**—ಅವರ । **ಸುಮತೌ**—ಅನುಗ್ರಹಬುದ್ಧಿಯಲ್ಲಿ । **ವಯಂ**—ನಾವು । **ಸ್ಯಾಮ**—ಇರುವಂತಾಗಲಿ । **ಅಪಿ**—ಮತ್ತು । **ಭದ್ರೇ**—ಕಲ್ಯಾಣಕಾರಕವಾದ । **ಸೌಮನಸೇ**—ಪ್ರೀತಿಗೆ ಪಾತ್ರರಾಗಿಯೂ ಇರುವಂತಾಗಲಿ.

॥ ಭಾವಾರ್ಥ ॥

ಅಂಗಿರಸ್ಸುಗಳೂ, ಅಥರ್ವಸಂಜ್ಞಕರಾದ ಋಷಿಗಳೂ, ಭೃಗುಗಳೂ ನೂತನವಾದ ಚೈತನ್ಯದಾಯಕರಾದ ನಮ್ಮ ಪಿತೃಗಳೂ ಸೋಮಾರ್ಪಣೆಗೆ ಅರ್ಹರಾಗಿದ್ದಾರೆ. ಪೂಜಾರ್ಹರಾದ ಅವರ ಕಲ್ಯಾಣಾತ್ಮಕವಾದ ಅನುಗ್ರಹಕ್ಕೂ ಪ್ರೀತಿಗೂ ನಾವು ಪಾತ್ರರಾಗೋಣ.

English Translation

The Angirasas, the Atharvas, the Bhrigus, who are entitled to the Soma, are our recent progenitors; may we ever have a place in the favour of these venerable (pitris); may we be ever held in their auspicious regard.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿರುವ ಅಂಗಿರಸಃ, ಪಿತರಃ, ಅಥರ್ವಾಣಃ, ಭೃಗವಃ ಎಂಬ ಶಬ್ದಗಳನ್ನು ವಿವರಿಸುವಾಗ ಯಾಸ್ಕರು ಪ್ರಕೃತಋಕ್ಕಿಗೆ ನಿರ್ವಚನವನ್ನು ಹೇಳಿದಾರೆ. ಮೇಲೆಹೇಳಿದ ಅಂಗಿರಸಃ ಮೊದಲಾದವರು ಪಿತೃದೇವತೆಗಳು.

ಅವರು ಮಾಧ್ಯಮಿಕರಾದ ಎಂದರೆ ಮಧ್ಯಮಸ್ಥಾನದಲ್ಲಿರುವ ಪಿತೃಗಳು, ಅವರುಗಳಿಗೆ ಯಮನು ರಾಜನು. ಆದ್ದರಿಂದ **ಮಾಧ್ಯಮಿಕೋ ಽಯಮು ಇತ್ಯಾಹುಃ । ತಸ್ಮಾನ್ಮಾಧ್ಯಮಿಕಾನ್ ಪಿತೄನ್ಯಂತೇ** (ನಿ.೧೧-೧೯) । ಯಮನೂ ಮಧ್ಯಮಸ್ಥಾನದೇವತೆಯು ಎಂದು ಹೇಳಿದಾರೆ.

ಅಂಗಿರಸಃ—ಅಂಗಾರೇಷ್ವಂಗಿರಾಃ । ಅಂಗಾರಾ ಅಂಗನಾಃ (ಅಂಚನಾಃ) ನಿ. ೩-೧೭ । ಅಂಗಿರಸರೆಂಬುವರು ಬಹಳ ಪ್ರಸಿದ್ಧರಾದ ಋಷಿಗಳು. ಪೂರ್ವದಲ್ಲಿ ಪ್ರಜಾಪತಿಯು ತನ್ನ ಪುತ್ರಿಯ ಸಂಗವನ್ನು ಮಾಡಿ ಆದರಿಂದ ಸ್ಖಲಿತವಾದ ರೇತಸ್ಸು ಭೂಮಿಯಮೇಲೆ ಬಿದ್ದು ಸರೋವರ ರೂಪದಲ್ಲಿ ನಿಂತಿತು. ಅದನ್ನು ದೇವತೆಗಳು ಇಂಗಿಸಬೇಕೆಂದು ಪ್ರಯತ್ನಿಸಿ ಅದರ ಸುತ್ತಲೂ ವೈಶ್ವಾನರಾಗ್ನಿಯನ್ನು ಸ್ಥಾಪಿಸಿದರು. ಆಗ ಆ ವೀರ್ಯವು ಅಗ್ನಿಯ ಶಾಖದಿಂದ ಪ್ರಜ್ವಲಿತವಾಗಿ ಉರಿಯುತ್ತಿರುವಾಗ ಅದರಿಂದ ಮೊದಲು ಆದಿತ್ಯನೂ, ಅಲ್ಲಿದ್ದ ಕೆಂಡಗಳಿಂದ ಅಂಗಿರಾ ಋಷಿಗಳೂ ಉತ್ಪನ್ನರಾದರೆಂದು ಐತರೇಯ ಬ್ರಾಹ್ಮಣದಲ್ಲಿ ಹೇಳಿರುವುದನ್ನು ನಾವು ಹಿಂದೆಯೇ ವಿವರಿಸಿದೇವೆ. ಈ ಅಂಗಿರಾಋಷಿಗಳು ಬಹಳ ಪ್ರಸಿದ್ಧರಾದ ಪಿತೃಗಳೆಂದು ಹೇಳುವ ರೂಢಿ ಇದೆ. ಅಂಗಾರಾಃ ಎಂದರೆ ಕೆಂಡಗಳು. ಇವುಗಳು ಆರಿಹೋದನಂತರ ಕಪ್ಪಾಗಿ ಮುಟ್ಟಿದರೆ ಕೈಯೆಲ್ಲಾ ಮಸಿಯಾಗುವುದು (ಅಂಚನಾಃ) ಆದ್ದರಿಂದ ಅಂಗಾರಾಃ ಎಂಬ ಹೆಸರು.

ಪಿತರಃ—ಪಿತಾ ಪಾತಾ ವಾ ಪಾಲಯಿತಾ ವಾ (ನಿ. ೪-೨೧) ಪಿತೃಶಬ್ದಕ್ಕೆ ಸಂರಕ್ಷಿಸುವವರು ಅಥವಾ ಕಾಪಾಡುವವರು ಎಂದರ್ಥವಿರುವುದು. ಪಿತೃಗಳು ಯಾರು ಇವರ ವಿಷಯವೇನು ಎಂಬುದನ್ನು ಈ ಸೂಕ್ತದ ಪೀಠಿಕೆಯಲ್ಲಿ ನಾವು ವಿಸ್ತಾರವಾಗಿ ವಿವರಿಸಿದೇವೆ.

ಅಥರ್ವಾಣಃ—ಥರ್ವ್ ಧಾತುವಿಗೆ ಚಲಿಸು ಎಂದರ್ಥವಿರುವುದು. **(ಥರ್ವತಿಃ ಚರತಿಕರ್ಮಾ)** ಆದರಿಂದ ನಿಷ್ಪನ್ನವಾದ ಥರ್ವಣಃ ಎಂಬ ಶಬ್ದಕ್ಕೆ ಚಲಿಸುವವರು ಎಂದರ್ಥವು. ಅಥರ್ವಾಣಃ ಎಂಬ ಶಬ್ದವು ಅದರ ಪ್ರತಿಷೇಧಾರ್ಥವನ್ನು ತಿಳಿಸುವುದು ಎಂದರೆ ಚಲಿಸದೆ ಸ್ಥಿರವಾಗಿ ಇರುವವರು ಸ್ಥಿರಪ್ರಕೃತಿಯುಳ್ಳವರು ಎಂದರ್ಥವು.

ಭೃಗವಃ—ಅರ್ಚಿಷಿ ಭೃಗುಃ ಸಂಬಭೂವ । ಭೃಗರ್ಭೃಜ್ಯಮಾನೋ ನ ದೇಹೇ (ನಿ. ೩-೧೭) ಮೇಲೆ ಹೇಳಿದಂತೆ ಪ್ರಜಾಪತಿಯ ವೀರ್ಯವನ್ನು ವೈಶ್ವಾನರಾಗ್ನಿಯಿಂದ ತಪ್ತಮಾಡುವಾಗ ಜ್ವಾಲೆಯಿಂದ ಭೃಗು ಋಷಿಯು ಉತ್ಪನ್ನನಾದನು ಎಂದು ಐತರೇಯ ಬ್ರಾಹ್ಮಣದಲ್ಲಿ ಹೇಳಿದೆ. ಜ್ವಾಲೆಯಂತೆ ಪ್ರಕಾಶಮಾನನಾದ್ದರಿಂದ ಭೃಗು ಎಂಬ ಹೆಸರಾಯಿತು. ಈ ಋಷಿಯ ವಂಶಸ್ಥರಿಗೆ ಭೃಗವಃ ಎಂದು ಹೆಸರು ಇವರು ಪ್ರಸಿದ್ಧರಾದ ಪಿತೃಗಣಗಳು. ಇನ್ನು ಪ್ರಕೃತಋಕ್ಕಿನ ನಿರ್ವಚನವನ್ನು ವಿವರಿಸೋಣ—

ಅಂಗಿರಸೋ ನಃ ಪಿತರೋ ನವಗತಯೋ ನವನೀತಗತಯೋ ವಾಥರ್ವಾಣೋ ಭೃಗವಃ ಸೋಮ್ಯಾಃ ಸೋಮಸಂಪಾದಿನಸ್ತೇಷಾಂ ವಯಂ ಸುಮತೌ ಕಲ್ಯಾಣ್ಯಾಂ ಮತೌ ಯಜ್ಞಿಯಾನಾಮಪಿ ಭದ್ರೇ ಭಂದನೀಯೇ ಭಾಜನವತಿ ವಾ ಕಲ್ಯಾಣೇ ಮನಸಿ ಸ್ಯಾಮೇತಿ ॥

(ನಿ. ೧೧-೧೯)

ಇಲ್ಲಿ ಅಂಗಿರಸಃ, ಪಿತರಃ, ಭೃಗವಃ, ಅಥರ್ವಾಣಃ ಎಂಬ ಪಿತೃದೇವತೆಗಳ ವಿಷಯವನ್ನು ಮೇಲೆ ವಿವರಿಸಿದೇವೆ. ಇನ್ನು ನವಗ್ವಾಃ ಎಂದರೆ ನವಗತಯೋ ನವನೀತಗತಯೋ ವಾ ನವಗ್ವಾಃ ಎಂದರೆ ಹೊಸಗತಿಯುಳ್ಳವರು ಎಂದರೆ

ಪ್ರತಿಮಾಸದಲ್ಲಿ ಅಥವಾ ಪ್ರತಿ ಸಂವತ್ಸರದಲ್ಲಿ ಆಚರಿಸಲ್ಪಡುವ ಪಿತೃಯಜ್ಞಾದಿಗಳಲ್ಲಿ (ಶ್ರದ್ಧಾದಿಗಳಲ್ಲಿ) ಕವ್ಯಸ್ವೀಕಾರಾರ್ಹವಾಗಿ ಬರುವವರು ಅಥವಾ ನವನೀತ ಎಂದರೆ ಬೆಣ್ಣೆಯಮೇಲೆ ಅತ್ಯಾಸೆಯಿಂದ ಬರುವವರು ಎಂದು ನವಗ್ವಾಃ ಎಂಬ ಶಬ್ದಕ್ಕೆ ಯಾಸ್ಕರು ಅರ್ಥವಿವರಣೆಮಾಡಿದ್ದಾರೆ. ಸೋಮ್ಯಾಃ-ಸೋಮಸಂಪಾದಿನಃ । ದೇವತೆಗಳಿಗೆ ಅರ್ಪಿಸುವುದಕ್ಕಾಗಿ ಸೋಮಲತೆಗಳನ್ನು ಜಜ್ಜಿ ಹಿಂಡಿ ಸೋಮರಸವನ್ನು ಸಿದ್ಧಪಡಿಸುವವರು. ಇವರು ಯಜ್ಞಮಾಡುತ್ತಿದ್ದ ಕಾಲದಲ್ಲಿ ಈರೀತಿ ಸೋಮರಸವನ್ನು ಸಿದ್ಧಪಡಿಸಿ ದೇವತೆಗಳಿಗೆ ಅರ್ಪಿಸಿ ಅದರಿಂದ ಉತ್ತಮಸ್ಥಾನವನ್ನು ಪಡೆದದ್ದರಿಂದ ಇವರಿಗೆ ಸೋಮ್ಯಾಸಃ ಎಂಬ ಹೆಸರು ಬಂದಿತು. ಮೇಲೆ ಹೇಳಿದ ಪೂಜಾರ್ಹರಾದ (ಅಥವಾ ಯಜ್ಞಾರ್ಹರಾದ) ಪಿತೃಗಳ ಉತ್ತಮವೂ ಪ್ರಶಸ್ಯವೂ ಕಲ್ಯಾಣಾತ್ಮಕವೂ ಆದ ಅನುಗ್ರಹಾತ್ಮಕವಾದ ಬುದ್ಧಿಯಲ್ಲಿ ನಾವು ಇರುವಂತಾಗಲಿ ಎಂದರೆ ಅವರ ಉತ್ತಮವಾದ ಅನುಗ್ರಹಕ್ಕೆ ನಾವು ಪಾತ್ರರಾಗೋಣ ಎಂದು ನಿರುಕ್ತವಚನದ ಮುಖ್ಯಾಭಿಪ್ರಾಯವು.

ಮಾಧ್ಯಮಿಕೋ ದೇವಗಣ ಇತಿ ನೈರುಕ್ತಾಃ । ಪಿತರ ಇತ್ಯಾಖ್ಯಾನಂ ॥ (ನಿ. ೧೧-೨೦)

ಮೇಲೆ ಹೇಳಿದ ಅಂಗಿರಸರೇ ಮೊದಲಾದವರು ಮಧ್ಯಮ (ಅಂತರಿಕ್ಷ) ಸ್ಥಾನೀಯರಾದ ದೇವಗಣಕ್ಕೆ ಸೇರಿದವರು ಎಂದು ನಿರುಕ್ತಕಾರರು ಹೇಳಿರುವರು ಇವರುಗಳೆಲ್ಲರೂ ಹಿಂದೆ ಋಷಿಗಳಾಗಿದ್ದು ತಮ್ಮ ಉತ್ತಮ ಕರ್ಮಗಳಿಂದ ಉತ್ತಮಸ್ಥಾನವನ್ನು ಪಡೆದಿರುವುದರಿಂದ ಇವರೆಲ್ಲರನ್ನೂ ಪಿತೃಗಳೆಂದು ಕರೆಯಬೇಕೆಂದು ಮತ್ತೆ ಕೆಲವರ ಅಭಿಪ್ರಾಯವು.

। ಸಂಹಿತಾಪಾಠಃ ।

ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವ್ಯೇಭಿರ್ಯತ್ರ ನಃ ಪೂರ್ವೇ ಪಿತರಃ ಪರೇಯುಃ ।

ಉಭಾ ರಾಜಾನಾ ಸ್ವಧಯಾ ಮದಂತಾ ಯಮಂ ಪಶ್ಯಾಸಿ ವರುಣಂ ಚ ದೇವಂ ॥ ೭ ॥

। ಪದಪಾಠಃ ।

ಪ್ರ । ಇಹಿ । ಪ್ರ । ಇಹಿ । ಪಥಿಭಿಃ । ಪೂರ್ವ್ಯೇಭಿಃ । ಯತ್ರ । ನಃ । ಪೂರ್ವೇ । ಪಿತರಃ । ಪರಾ-ಈಯುಃ ।

ಉಭಾ । ರಾಜಾನಾ । ಸ್ವಧಯಾ । ಮದಂತಾ । ಯಮಂ । ಪಶ್ಯಾಸಿ । ವರುಣಂ । ಚ । ದೇವಂ ॥ ೭ ॥

। ಸಾಯಣಭಾಷ್ಯಂ ।

ಸತ್ರಮಧ್ಯೇ ದೀಕ್ಷಿತಸ್ಯ ಮರಣೇ ಪ್ರೇಹೀತ್ಯಾದ್ಯಾಃ ಪಂಚರ್ಚಸ್ತೃತೀಯಾವರ್ಜಿತಾ ಹೋತ್ರಾ ತಂಸನೀಯಾಃ । ಸೂತ್ರಿತಂ ಚ । ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವ್ಯೇಭಿರಿತಿ ಪಂಚಾನಾಂ ತೃತೀಯಾಮುದ್ಧರೇತ್ । ಅ. ೬-೧೦ । ಇತಿ ॥

ಯತ್ರ ಯಸ್ಮಿನ್ಸ್ಥಾನೇ ನೋಽಸ್ಮಾಕಂ ಪೂರ್ವೇ ಪುರಾತನಾಃ ಪಿತರಃ ಪಿತಾಮಹಾದಯಃ ಪರೇಯುಃ ಪೂರ್ವ್ಯೇಭಿಃ ಪೂರ್ವಸ್ಮಿನ್ಕಾಲೇ ಭವೈಃ । ಅನಾದಿಕಾಲಪ್ರವೃತ್ತೈರಿತ್ಯರ್ಥಃ । ಪಥಿ-

ಭಿರ್ಮಾರ್ಗೈರ್ಹೀ ಮತ್ಪಿತಃ ತತ್ರಾನಂ ಪ್ರೇಹಿ । ಪ್ರಗಚ್ಛ । ಶೀಘ್ರಂ ಗಚ್ಛ । ಗತ್ವಾ ಚ ಸ್ವಧಯೋ-ಮೃತಾನ್ನೇನ ಮದಂತೌ ತೃಪ್ಯಂತೌ ರಾಜಾನಾ ರಾಜಾನಾವುಭೋಭೌ ಯಮುಂ ದೇವಂ ದ್ಯೋತಮಾನಂ ವರುಣಂ ಚ ಪಶ್ಯಾಸಿ । ಪಶ್ಯ ॥

॥ ಪ್ರತಿಪದಾರ್ಥ ॥

(ಎಲೈ ಪಿತೃನೇ) **ಯತ್ರ**—ಯಾವ ಮಾರ್ಗದಲ್ಲಿ । **ನಃ**—ನಮ್ಮ । **ಪೂರ್ವೇ**—ಪುರಾತನರಾದ । **ಪಿತರಃ**—ಪಿತಾಮಹಾದಿಗಳು । **ಪರೇಯುಃ**—ಮರಣಾನಂತರ ಹೋದರೋ । **ಪೂರ್ವ್ಯೇಭಿಃ**—ಅನಾದಿಗಳಾದ । **ಪಥಿಭಿಃ**—ಅದೇ ಮಾರ್ಗಗಳಿಂದ । **ಪ್ರೇಹಿ**—ಪ್ರಯಾಣಮಾಡು । **ಸ್ವಧಯಾ**—ಅಮೃತಾನ್ನದಿಂದ । **ಮದಂತಾ**—ತೃಪ್ತಿಯನ್ನು ಹೊಂದಿರುವವರೂ । **ರಾಜಾನಾ**—ಪ್ರಭುಗಳೂ ಆದ । **ಯಮಂ**—ಯಮನನ್ನೂ । **ದೇವಂ**—ಪ್ರಕಾಶಮಾನನಾದ । **ವರುಣಂ ಚ**—ವರುಣನನ್ನೂ । **ಉಭಾ**—ಈ ಇಬ್ಬರನ್ನೂ । **ಪಶ್ಯಾಸಿ**—ಅಲ್ಲಿ ನೋಡುವೆ

॥ ಭಾವಾರ್ಥ ॥

ಎಲೈ ಪಿತೃನೇ, ಯಾವ ಮಾರ್ಗದಲ್ಲಿ ನಮ್ಮ ಪುರಾತನರಾದ ಪಿತಾಮಹಾದಿಗಳು ಮರಣಾನಂತರ ಹೋದರೋ, ಅನಾದಿಯಾದ ಅದೇ ಮಾರ್ಗಗಳಿಂದ ಪ್ರಯಾಣಮಾಡು ಅಮೃತಾನ್ನದಿಂದ ತೃಪ್ತಿಯನ್ನು ಹೊಂದಿರುವವರೂ, ಪ್ರಭುಗಳೂ ಆದ ಯಮನನ್ನೂ, ಪ್ರಕಾಶಮಾನನಾದ ವರುಣನನ್ನೂ ಅಲ್ಲಿ ನೋಡುವೆ.

English Translation

Depart, depart, by the former paths by which our forefathers have departed, there should you behold the two monarchs Yama and the divine Varuna rejoicing in the Swadha.

॥ ವಿಶೇಷವಿಷಯಗಳು ॥

ಸತ್ರವೆಂಬ ದೀರ್ಘಕಾಲ ಮಾಡುವ ಯಾಗದಲ್ಲಿ ಯಾಗ ಸಮಾಪ್ತಿಯಾಗುವುದಕ್ಕೆ ಮೊದಲೇ ಯಜ್ಞದೀಕ್ಷಿತನಾದ ಯಜಮಾನನು ಮೃತನಾದಲ್ಲಿ **ಪ್ರೇಹಿ** ಎಂದು ಮೊದಲಾಗುವ ಮುಂದಿನ ಐದು ಋಕ್ಕುಗಳನ್ನು (೭-೧೧)-ಮೂರನೇ (೯ನೇ) ಋಕ್ಕನ್ನು ಬಿಟ್ಟು-ಹೋತೃವು ಪಠಿಸಬೇಕು. ಈ ವಿಷಯದಲ್ಲಿ ಆಶ್ವಲಾಯನ ಶ್ರೌತಸೂತ್ರದ-**ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವ್ಯೇಭಿರಿತಿ ಪಂಚಾನಾಂ ತೃತೀಯಾಮುದ್ಧರೇತ್** ಎಂಬ ಸೂತ್ರವು (ಆ. ೬-೧೦) ನಿರ್ದಿಷ್ಟವಾಗಿರುವುದು.

ಈ ಸೂಕ್ತದ ಋಷಿಯು ಮೃತನಾದ ತನ್ನ ತಂದೆಯ ಶರೀರವು (ಅಗ್ನಿಯಲ್ಲಿ ದಹಿಸುತ್ತಿರುವಾಗ) ಪಾರ್ಥಿವ ಶರೀರವನ್ನು ತ್ಯಜಿಸಿ ಪ್ರೇತರೂಪದಿಂದಿರುವ ಅವನನ್ನು ಸಂಬೋಧಿಸಿ ಈ ಋಕ್ಕನ್ನೂ ಮುಂದಿನ ಋಕ್ಕುಗಳನ್ನೂ ಪಠಿಸಿರುವನೆಂದು ತಿಳಿಯಬೇಕು. ಆದ್ದರಿಂದಲೇ ಪ್ರೇತಶರೀರವನ್ನು ಸಂಬೋಧಿಸಿ, ಎಲೈ ಪಿತೃನೇ, ನಮ್ಮ ಹಿರಿಯರೂ, ನಮ್ಮ ವಂಶದಲ್ಲಿ ಪ್ರಸಿದ್ಧರಾಗಿ ಮೃತರಾದವರೂ ಯಾವ ಮಾರ್ಗದಲ್ಲಿ ಪಿತೃಲೋಕಕ್ಕೆ ಹೋಗಿ ಸೇರಿದರೋ ಅಂತಹ ಪುರಾತನವಾದ ಮಾರ್ಗದಲ್ಲಿಯೇ ಪ್ರಯಾಣಮಾಡು ಎಂದು ಪ್ರಾರ್ಥಿಸಿರುವನು. ಪುರಾತನಮಾರ್ಗವೆಂದರೆ ಅನಾದಿ ಕಾಲ

दिंदलೂ ಇದುವರೆಗೂ ಮೃತರಾದ ಮತ್ತು ಅಸಂಖ್ಯಾತರಾದ ಪ್ರೇತಶರೀರಸ್ಥರಾದವರು ಹಿಂದೆ ಹೋಗಿ ಪಿತೃಲೋಕವನ್ನು ತಲುಪಿದ ಮಾರ್ಗವೆಂದಭಿಪ್ರಾಯವು. ಇಂತಹ ಮಾರ್ಗದಲ್ಲಿ ಹೋದರೆ ಪಿತೃಲೋಕಕ್ಕೆ ಹೋಗಿ ಅಲ್ಲಿ ಆ ಲೋಕಕ್ಕೆ ಪ್ರಭುಗಳಾದ ಯಮ ಮತ್ತು ವರುಣರನ್ನು ನೋಡುವೆ ಎಂದು ಋಷಿಯು ಹೇಳಿರುವನು. ಪಿತೃಲೋಕದಲ್ಲಿ ಯಮನಲ್ಲದೆ ವರುಣನೂ ಅಲ್ಲಿಯೇ ಇರುವನು ಎಂಬ ನಂಬಿಕೆಯು ಹಿಂದಿನ ಋಷಿಗಳಿಗಿದ್ದಿತು ಎಂದು ತಿಳಿಯಬೇಕು.

। संहितापाठः ।

सं ग॑च्छस्व पि॒तृभिः॒ सं य॒मेने॑ष्टापू॒र्तेन॑ पर॒मे व्यो॑मन्।
हि॒त्वाय॒ावद्यं॑ पुनर॒स्तमे॑हि॒ सं ग॑च्छस्व त॒न्वा॑ सु॒वर्चाः॑ ॥ ९ ॥

। पदपाठः ।

सं । ग॒च्छ॒स्व॒ । पि॒तृऽभिः॑ । सं । य॒मेन॑ । इ॒ष्टा॒पू॒र्तेन॑ । प॒र॒मे । विऽओ॑मन् ।
हि॒त्वाय॑ । अ॒व॒द्यं॑ । पुनः॑ । अ॒स्त॒म् । आ । इ॒हि॒ । सं । ग॒च्छ॒स्व॒ । त॒न्वा॑ । सु॒ऽव॒र्चाः॑ ॥ ९ ॥

। सायणभाष्यं ।

हे मदीये पितः तवेत्त्वं परमे उत्कृष्टे व्योमन्व्योमनि स्वर्गाख्ये स्थाने स्वभूतैः पितृभिः सह सं गच्छस्व । इष्टापूर्तेन श्रौतस्मार्तदानफलेन सं गच्छस्व । तव इष्टापूर्तेन सहागमय्यावद्यं पापं हित्वा परित्यज्यास्तं विप्रियमाणानाम्यं गृहमेहि । आगच्छ । ततः सुवर्चाः । तृतीयार्थे प्रथमा । सुवर्चसा शोभनदीप्तियुक्तेन तन्वा स्वशरीरेण सं गच्छस्व ॥

। प्रतिपदार्थ ।

(ಎಲೈ ಪಿತೃವೇ) परमे—ಅತ್ಯುತ್ಕೃಷ್ಟವಾದ । व्योमन्—ಸ್ವರ್ಗಸ್ಥಾನದಲ್ಲಿ । पितृभिः—ಪಿತೃಗಳೊಡನೆ । सं गच्छस्व—ಸೇರಿಕೊ । इष्टापूर्तेन—ನಿನ್ನ ಕಾಮಪೂರಕವಾದ ಫಲಗಳೊಡನೆ ಕೂಡಿರುವ । यमेन—ಯಮನೊಡನೆ । सं—ಸೇರಿಕೊ । अवद्यं—ಪಾಪಕ್ಕೆ ಮೂಲವಾದ ದೇಹವನ್ನು । हित्वाय—ತ್ಯಜಿಸಿ । अस्तं—ಉತ್ತಮವಾದ ಗೃಹಕ್ಕೆ । पुनः—ತಿರುಗಿಯೂ । एहि—ಬಂದು ಸೇರು । सुवर्चाः—ಉತ್ತಮವಾದ ಕಾಂತಿಯುಳ್ಳ । तन्वा—ದೇಹದೊಡನೆ । सं गच्छस्व—ಸೇರಿಕೊ.

। भावार्थ ।

ಎಲೈ ಪಿತೃವೇ, ಅತ್ಯುತ್ಕೃಷ್ಟವಾದ ಸ್ವರ್ಗಸ್ಥಾನದಲ್ಲಿ ಪಿತೃಗಳೊಡನೆ ಸೇರಿಕೊ. ನಿನ್ನ ಕಾಮವನ್ನು ತೃಪ್ತಿಗೊಳಿಸುವ ಯಮನೊಡನೆ ಸೇರು. ಪಾಪಕ್ಕೆ ಮೂಲವಾದ-ದೇಹವನ್ನು ತ್ಯಜಿಸಿ ಉತ್ತಮವಾದ ಗೃಹಕ್ಕೆ ಪುನಃ ಬಂದು ಸೇರು. ಉತ್ತಮವಾದ ಕಾಂತಿಯುಳ್ಳ ದೇಹದೊಡನೆ ಸೇರಿಕೊ.

English Translation

Be united with the Pitris, with Yama, and with the fulfilment of your wishes in the highest heaven; discarding iniquity, return to your abode. and unite yourself to a luminous body.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ ಹೇಳಿದಂತೆ ತನ್ನ ಪಿತೃವು (ಅಥವಾ ಪ್ರೇತಶರೀರದಲ್ಲಿರುವ ಪಿತೃವು) ಪುರಾತನವಾದ ಮಾರ್ಗದಿಂದ ಪಿತೃಲೋಕಕ್ಕೆ ಹೋದಬಳಿಕ ಏನು ಮಾಡಬೇಕು ಎಂಬ ವಿಷಯವನ್ನು ಋಷಿಯು ಈ ಋಕ್ಕಿನಲ್ಲಿ ಹೇಳಿದಾನೆ.

ಎಲೈ ಪಿತೃವೇ, ನೀನು ಪಿತೃಲೋಕಕ್ಕೆ (ಇದನ್ನು ಸ್ವರ್ಗವೆಂದು ಹೇಳಬಹುದು) ಹೋದಬಳಿಕ ಅಲ್ಲಿ ಹಿಂದಿನ ಎಂದರೆ ಪೂರ್ವಕಾಲದಲ್ಲಿ ಮೃತರಾದ ನಮ್ಮ ಹಿರಿಯರಾದ ಪಿತೃಗಳಿರುವರು ನೀನು ಅವರ ಜತೆಗೆ ಸೇರಿಕೋ, ಮತ್ತು ಯಮನನ್ನು ಸಂಧಿಸು ಬಳಿಕ ಆ ದಿವ್ಯವಾದ ಲೋಕದಲ್ಲಿ ನಿನಗೆ ಬೇಕಾದ ಇಷ್ಟಾರ್ಥಗಳನ್ನು ಅನುಭವಿಸು. ಎಂದರೆ ನೀನು ಭೂಮಿಯ ಮೇಲೆ ಜೀವಿಸಿದ್ದಾಗ ನೀನು ನೆರವೇರಿಸಿದ ಯಜ್ಞಾದಿಸತ್ಕರ್ಮಗಳಿಗೆ ಯಾವ ಫಲವು ಲಭಿಸಬೇಕಾಗಿದೆಯೋ ಆ ಫಲಗಳನ್ನು ಈಗ ಈ ದಿವ್ಯಲೋಕದಲ್ಲಿ ಅನುಭವಿಸು. ಇಲ್ಲಿ ಇಷ್ಟಾಪೂರ್ತೇನ ಎಂಬ ಇಷ್ಟ+ಅಪೂರ್ತೇನ ಎಂದು ಪದವಿಭಾಗಮಾಡಿದರೆ ಇದುವರೆಗೆ ನೀನು ಅಪೇಕ್ಷಿಸಿದ್ದರೂ ಇನ್ನೂ ಪೂರ್ತಿಯಾಗದಿರುವ ಶಬ್ದಕ್ಕೆ ಇಷ್ಟಗಳು ಎಂದರ್ಥವಾಗುವುದು. ಅಂತಹ ಇಷ್ಟಗಳನ್ನು ಭೂಮಿಯಲ್ಲಿ ಜೀವಿಸಿದ್ದಾಗ ಅನುಭವಿಸಲು ಸಾಧ್ಯವಿಲ್ಲದ್ದರಿಂದ ಈಗ ಈ ದಿವ್ಯಲೋಕದಲ್ಲಿ ಅವುಗಳನ್ನು ಅನುಭವಿಸು ಎಂದು ಋಷಿಯು ಹೇಳಿದಾನೆ. ಮತ್ತು ಈ ದಿವ್ಯ ಲೋಕಕ್ಕೆ ಬಂದಮೇಲೆ ನೀನು ಇದುವರೆಗೆ ಮಾಡಿರಬಹುದಾದ ಪಾಪಕರ್ಮಗಳನ್ನು ಮತ್ತು ಅವುಗಳ ಫಲರೂಪಕವಾದ ದುಃಖವನ್ನು ತ್ಯಜಿಸಿ ಈ ದಿವ್ಯಲೋಕದಲ್ಲಿ ಸುಖವಾಗಿರಲು ಉತ್ತಮವಾದ ಜ್ಯೋತೀರೂಪವಾದ ಎಂದರೆ ಪ್ರಕಾಶಮಾನವಾದ ದೇಹವನ್ನು ಪಡೆದು ಉತ್ತಮ ಗೃಹದಲ್ಲಿ ವಾಸಿಸು ಎಂದು ಪ್ರಾರ್ಥನೆಯನ್ನು ವ್ಯಕ್ತಪಡಿಸಿರುವನು.

। ಸಂಹಿತಾಪಾಠಃ ।

ಅಪೇತ ವೀತ ವಿ ಚ ಸರ್ಪತಾತೋಽಸ್ಮಾ ಏತಂ ಪಿತರೋ ಲೋಕಮಕ್ರನ್ ।
ಅಹೋಭಿರದ್ಭಿರಕ್ತುಭಿರ್ವ್ಯಕ್ತಂ ಯಮೋ ದದಾತ್ಯವಸಾನಮಸ್ಮೈ ॥ ೯ ॥

॥ ಪದಪಾಠಃ ,

ಅಪ । ಇತ । ವಿ । ಇತ । ವಿ । ಚ । ಸರ್ಪತ । ಅತಃ । ಅಸ್ಮೈ । ಏತಂ । ಪಿತರಃ । ಲೋಕಂ । ಅಕ್ರನ್ ।
ಅಹಃಽಭಿಃ । ಅದ್ಭಿಃ । ಅಕ್ತುಽಭಿಃ । ವಿಽಅಕ್ತಂ । ಯಮಃ । ದದಾತಿ । ಅವಽಸಾನಂ । ಅಸ್ಮೈ ॥೯॥

। ಸಾಯಣಭಾಷ್ಯಂ ।

ಪೈತೃಮೇಧಿಕೇ ಕರ್ಮಣಿ ಶ್ಮಶಾನಾಯತನಂ ಪ್ರೋಕ್ಷತ್ಯಪೇತ ವೀತೇತಿ । ಸೂತ್ರಿತಂ ಚ । ಗತ್ವೋದಕೇನ ಶಮೀಶಾಖಯಾ ತ್ರಿಃ ಪ್ರಸವ್ಯಮಾಯತನಂ ಪರಿವ್ರಜನ್ ಪ್ರೋಕ್ಷತ್ಯಪೇತ ವೀತ ವಿ ಚ ಸರ್ಪತಾತಃ । ಆ ಗೃ. ೪-೨-೧೮ । ಇತಿ ॥

ಶ್ಮಶಾನೇ ಪೂರ್ವಂ ಸ್ಥಿತಾ ಹೇ ಪಿಶಾಚಾದಯಃ ಅತೋಽಸ್ಮಾದ್ಮೃತಯಜಮಾನದಹನಸ್ಥಾನಾದಪೇತ । ಅಪಗಚ್ಛತ । ವೀತ । ವಿಶೇಷೇಣ ಗಚ್ಛತ । ವಿ ಸರ್ಪತ ಚ । ಇದಂ ಸ್ಥಾನಂ ಪರಿತ್ಯಜ್ಯ ನಾನಾಭಾವೇನ ದೂರತರಂ ದೇಶಂ ಗಚ್ಛತೇತ್ಯರ್ಥಃ । ಪಿತರೋಽಸ್ಮೈ ಮೃತಯಜಮಾನಸ್ಯಾರ್ಥಾಯೈತಂ ಲೋಕಮಿದಂ ದಹನಸ್ಥಾನಮಕ್ರನ್ । ಯಮಸ್ಯಾಜ್ಞಯಾನ್ವಕುರ್ವನ್ । ಯಮೋಽಪ್ಯಹೋಭಿರ್ದಿವಸೈರದ್ಭಿರಭ್ಯುಕ್ಷಣೋದಕೈರಕ್ತುಭೀ ರಾತ್ರಿಭಿರ್ವ್ಯಕ್ತಂ ಸಂಗತಂ । ಶುದ್ಧಿನಿಮಿತ್ತೈಃ ಕಾಲೋದಕಾದಿಭಿಃ ಶೋಧಿತಮಿತ್ಯರ್ಥಃ । ಅವಸಾನಂ ದಹನಸ್ಥಾನಮಸ್ಮೈ ಮೃತಯಜಮಾನಸ್ಯಾರ್ಥಾಯ ದದಾತಿ । ದತ್ತವಾನ್ ॥

। ಪ್ರತಿಪದಾರ್ಥ ।

(ಎಲೈ ಪಿಶಾಚಾದಿಗಳೇ) **ಅತಃ**- -ಈ ದಹನಪ್ರದೇಶದಿಂದ । **ಅಪೇತ**—ದೂರ ಸರಿಯಿರಿ । **ವೀತ**—ಬಹಳ ದೂರಕ್ಕೆ ಹೊರಟುಹೋಗಿರಿ । **ವಿ ಸರ್ಪತ ಚ**—ನಾನಾ ದಿಕ್ಕುಗಳಿಗೆ ಚದುರಿಹೋಗಿರಿ । **ಅಸ್ಮೈ**—ಈ ಮೃತನಿಗೆ । **ಪಿತರಃ**—ಪಿತೃಗಳು । **ಏತಂ ಲೋಕಂ**—ಈ ಸ್ಥಾನವನ್ನು । **ಅಕ್ರನ್**—ಸಿದ್ಧಪಡಿಸಿದ್ದಾರೆ । **ಯಮಃ**—ಯಮನೂ ಸಹ । **ಅಹೋಭಿಃ**—ಅಹಸ್ಸುಗಳೊಡನೆಯೂ । **ಅದ್ಭಿಃ**—ಉದಕಗಳೊಡನೆಯೂ । **ಅಕ್ತುಭಿಃ**—ರಾತ್ರಿಗಳೊಡನೆಯೂ । **ವ್ಯಕ್ತಂ**—ಸೇರಿಕೊಂಡಿರುವ । **ಅವಸಾನಂ**—ದಹನಸ್ಥಾನವನ್ನು । **ಅಸ್ಮೈ**—ಈ ಯಜಮಾನನಿಗೆ । **ದದಾತಿ**—ನಿಯತಮಾಡಿದ್ದಾನೆ.

। ಭಾವಾರ್ಥ ।

ಎಲೈ ಪಿಶಾಚಾದಿಗಳೇ, ಈ ದಹನಪ್ರದೇಶದಿಂದ ದೂರ ಸರಿಯಿರಿ. ಬಹಳ ದೂರದೇಶಕ್ಕೆ ಹೊರಟುಹೋಗಿರಿ. ನಾನಾ ದಿಕ್ಕುಗಳಿಗೆ ಚದುರಿಹೋಗಿರಿ. ಮೃತನಿಗೆ ಪಿತೃಗಳು ಈ ಸ್ಥಾನವನ್ನು ಸಿದ್ಧಪಡಿಸಿದ್ದಾರೆ ಯಮನೂ ಸಹ ಅಹಸ್ಸುಗಳೊಡನೆಯೂ, ಉದಕಗಳೊಡನೆಯೂ, ರಾತ್ರಿಗಳೊಡನೆಯೂ ಸೇರಿಕೊಂಡಿರುವ ಈ ದಹನ ಸ್ಥಾನವನ್ನು (ಮೃತನಿಗೆ) ಯಜಮಾನನಿಗೆ ಕೊಟ್ಟಿದ್ದಾನೆ.

English Translation

Depart from hence, begone, go far off, (evil spirits); the Pitris have assigned this place to him, Yama has given him a place of cremation consecrated by days, streams and nights.

॥ ವಿಶೇಷವಿಷಯಗಳು ॥

ಪಿತೃಕರ್ಮಾಂಗಭೂತವಾದ ಎಂದರೆ ಅಪರಕರ್ಮಗಳಲ್ಲಿ **ಅಪೇತ ವೀತ** ಎಂಬ ಈ ಋಕ್ಕನ್ನು ಪಠಿಸಿ ಶ್ಮಶಾನದಲ್ಲಿ ನಿರ್ದಿಷ್ಟವಾದ ಪ್ರದೇಶವನ್ನು ನೀರಿನಿಂದ ಪ್ರೋಕ್ಷಣಮಾಡಬೇಕೆಂದು ಆಶ್ವಲಾಯನ ಗೃಹ್ಯಸೂತ್ರದ-

ಗತೋರ್ದಕೇನ ಶಮಿಶಾಖಯಾ ತ್ರಿಃಪ್ರಸವ್ಯಮಾಯತನಂ ಪರಿವ್ರಜನ್ ಪ್ರೋಕ್ಷತ್ಯಪೇತ ವೀತ ವಿ ಚ ಸರ್ಪತಾತಃ ಎಂಬ ಸೂತ್ರದಿಂದ (ಆ. ಗೃ. ೪-೨-೧೦) ವಿವೃತವಾಗಿರುವುದು.

ಶ್ಮಶಾನದಲ್ಲಿ ಮೃತಶರೀರವನ್ನು ದಹನಮಾಡುವ ಸ್ಥಳದಲ್ಲಿ ಇರಬಹುದಾದ ಪಿಶಾಚಾದಿಗಳನ್ನು ಆ ಸ್ಥಳಬಿಟ್ಟು ದೂರಸರಿದು ಹೋಗಬೇಕೆಂದು ಋಷಿಯು ಈ ಋಕ್ಕಿನಲ್ಲಿ ಹೇಳಿದ್ದಾನೆ.

ಯಮೋ ದದಾತ್ಯವಸಾನಮಸ್ಮೈ—ಯಮನೇ ಈ ದಹನಸ್ಥಾನವನ್ನು ಮೃತರಾದ ಈ ಪುರುಷನಿಗೋಸ್ಕರ ಕೊಟ್ಟಿದ್ದಾನೆ, ಎಂದರೆ ಕಲ್ಪಿಸಿದಾನೆ ಪುರುಷನು ಮೃತನಾದನಂತರ ಅವನು ತನ್ನ ಲೋಕವಾದ ಪಿತೃಲೋಕಕ್ಕೆ ಬಂದೇ ಬರಬೇಕಾಗಿರುವುದರಿಂದ ಈ ವಿಷಯದಲ್ಲಿ ಯಮನು ಆಸಕ್ತಿಯನ್ನು ಬಹಿಸಿ ತನ್ನ ಲೋಕಕ್ಕೆ ಬರಲಿರುವ ಪುರುಷನ ಮೃತಶರೀರವು ದಹನನಮಾಡಲ್ಪಡುವ ಸ್ಥಾನವನ್ನು (ಶ್ಮಶಾನದಲ್ಲಿ) ಮೊದಲೇ ನಿಶ್ಚಯಿಸಿ ಕಲ್ಪಿಸಿರುವನು. ಆದ್ದರಿಂದ ಎಲೈ ಪಿಶಾಚಾದಿಗಳೇ, ನೀವು ಈ ಸ್ಥಾನವನ್ನು ಬಿಟ್ಟು ತೊಲಗಿಹೋಗಿ. ಈ ಪ್ರದೇಶವು ಮೃತನ ಸಂಸ್ಕಾರ ಕರ್ಮಕ್ಕಾಗಿ ಉದಕಾದಿಗಳಿಂದ ಶುದ್ಧಿಗೊಳಿಸಲ್ಪಟ್ಟಿದೆ. ಆದ್ದರಿಂದ ಈ ಪ್ರದೇಶವನ್ನು ಬಿಟ್ಟು ದೂರ ಸರಿದು ಹೋಗಿ ಎಂದು ಋಷಿಯು ವರ್ಣಿಸಿರುವನು. ಇಲ್ಲಿ ಅವಸಾನವೆಂದರೆ ದಹನಸ್ಥಾನ (Last resting place) ಮೃತದೇಹವನ್ನು ಅಗ್ನಿಯಿಂದ ದಹಿಸುವ ಸ್ಥಾನ. ಶ್ಮಶಾನದಲ್ಲಿ ಒಂದು ಸ್ಥಳವನ್ನು ನಿರ್ದೇಶಿಸಿ ಅದನ್ನು ಉದಕಪ್ರೋಕ್ಷಣಾದಿಗಳಿಂದ ಶುದ್ಧಿಗೊಳಿಸಿ ಅಲ್ಲಿ ದಹನಕ್ರಿಯೆಯು ನಡೆಯುವುದು. ಅದನ್ನೇ ಇಲ್ಲಿ **ಅವಸಾನಂ** ಎಂಬ ಶಬ್ದದಿಂದ ವರ್ಣಿಸಿದೆ.

॥ ಸಂಹಿತಾಪಾಠಃ ॥

ಅತಿ ದ್ರವ ಸಾರಮೇಯೌ ಶ್ವಾನೌ ಚತುರಕ್ಷೌ ಶಬಲೌ ಸಾಧುನಾ ಪಥಾ ।
ಅಥಾ ಪಿತ್ರಾನ್ಸುವಿದತ್ರಾಁ ಉಪೇಹಿ ಯಮೇನ ಯೇ ಸಧಮಾದಂ ಮದಂತಿ ॥ ೧೦ ॥

॥ ಪದಪಾಠಃ ॥

ಅತಿ । ದ್ರವ । ಸಾರಮೇಯೌ । ಶ್ವಾನೌ । ಚತುಃಅಕ್ಷೌ । ಶಬಲೌ । ಸಾಧುನಾ । ಪಥಾ ।
ಅಥ । ಪಿತ್ರಾನ್ । ಸುಽವಿದತ್ರಾನ್ । ಉಪ । ಇಹಿ । ಯಮೇನ । ಯೇ । ಸಧಽಮಾದಂ । ಮದಂತಿ ॥೧೦॥

॥ ಸಾಯಣಭಾಷ್ಯಂ ॥

ಅನುಷ್ಟರಣ್ಯಾ ವೃಕ್ಯೌ ಪಾರ್ಶ್ವಯೋರಾಮ್ರಫಲಾಕೃತೀ । ತಾವುದ್ಧೃತ್ಯ ಪ್ರೇತಸ್ಯ ಹಸ್ತಯೋರ್ನಿರ್ದಧಾತ್ಯತಿ ದ್ರವ ಸಾರಮೇಯಾವಿತಿ ದ್ವಾಭ್ಯಾಂ । ಸೂತ್ರಿತಂ ಚ । ವೃಕ್ಯಾವುದ್ಧೃತ್ಯ ಪಾಣ್ಯೋರಾದಧ್ಯಾದತಿ ದ್ರವ ಸಾರಮೇಯೌ ಶ್ವಾನೌ । ಆ. ಗೃ. ೪-೩-೨೦ । ಇತಿ ॥

ಹೇ ಅಗ್ನೇ ಸಾಧುನಾ ಪಥಾ ಸಮಿಾಚೀನೇನ ಮಾರ್ಗೇಣ ಶ್ವಾನಾವುಭಾವತಿ ದ್ರವ । ಅತಿಕ್ರಮ್ಯ ಗಚ್ಛ । ಯಮಸಂಬಂಧಿನೌ ಯೌ ಶ್ವಾನೌ ಪ್ರೇತಸ್ಯ ಬಾಧಕೌ ತೌ ಪರಿತ್ಯಜ್ಯ ಸಮಿಾಚೀನೇನ ಮಾರ್ಗೇಣ ಪ್ರೇತಂ ನಯೇತ್ಯರ್ಥಃ । ಕೀದೃಶೌ ಶ್ವಾನೌ । ಸಾರಮೇಯೌ । ಸರಮಾ ನಾಮ ಕಾಚಿತ್ಪ್ರಸಿದ್ಧಾ ದೇವಶುನೀ । ತಸ್ಯಾಃ ಪುತ್ರೌ ಚತುರಕ್ಷೌ ಉಪರಿಭಾಗೇ ಪುನರಪ್ಯಕ್ಷಿದ್ವಯಂ ಯಯೋಸ್ತಾದೃಶೌ । ಅಥ ಶೋಭನಮಾರ್ಗೇಣ ಗಮನಾನಂತರಂ ಯೇ ಪಿತರೋ ಯಮೇನ ಸಧಮಾದಂ ಸಹಹರ್ಷಂ ಮದಂತಿ ಹಾೃಷ್ಟವಂತಿ ತಾನ್ಸುವಿದತ್ರಾನ್ ಸುಷ್ಠ್ವಭಿಜ್ಞಾನ್ಪಿತೃನುಪೇಹಿ । ಉಪಗಚ್ಛ ।

॥ ಪ್ರತಿಪದಾರ್ಥ ॥

(ಎಲೈ ಪ್ರೇತವೇ) **ಸಾಧುನಾ ಪಥಾ**—ಅತ್ಯುತ್ತಮವಾದ ಮಾರ್ಗವನ್ನನುಸರಿಸಿ । **ಸಾರಮೇಯೌ**—ಸರಮೆಯಲ್ಲಿ ಉತ್ಪನ್ನವಾದವೂ । **ಶಬಲೌ**—ವರ್ಣವೈವಿಧ್ಯವುಳ್ಳವೂ । **ಚತುರಕ್ಷೌ**—ನಾಲ್ಕು ಕಣ್ಣುಗಳುಳ್ಳವೂ ಆದ । **ಶ್ವಾನೌ**—ಯಮದೂತರನ್ನು (ಶ್ವಾನಗಳನ್ನು) । **ಅತಿ ದ್ರವ**—ತಪ್ಪಿಸಿಕೊಂಡು ದಾಟಿಹೋಗು । **ಅಥ**—ಅನಂತರ । **ಯೇ**—ಯಾವ ಪಿತೃಗಳು । **ಯಮೇನ**—ಯಮನೊಡನೆ । **ಸಧಮಾದಂ**—ಒಟ್ಟಿಗೆ ಕೂಡಿಕೊಂಡು । **ಮದಂತಿ**—ಹರ್ಷವನ್ನು ಹೊಂದುತ್ತಾರೋ । **ಸುವಿದತ್ರಾನ್**—ಉತ್ತಮವಾದ ಜ್ಞಾನಿಗಳಾದ । **ಪಿತೄನ್**—ಆ ಪಿತೃಗಳೊಡನೆ । **ಉಪೇಹಿ**—ಸೇರಿಕೊ.

॥ ಭಾವಾರ್ಥ ॥

ಎಲೈ ಪ್ರೇತನೇ, ಉತ್ತಮವಾದ ಮಾರ್ಗವನ್ನನುಸರಿಸು. ಸರಮೆಯಲ್ಲಿ ಉತ್ಪನ್ನವಾದವೂ, ವರ್ಣವೈವಿಧ್ಯವುಳ್ಳವೂ, ನಾಲ್ಕು ಕಣ್ಣುಗಳುಳ್ಳವೂ ಆದ ಈ ಎರಡು ನಾಯಿಗಳನ್ನು ತಪ್ಪಿಸಿಕೊಂಡು ದಾಟಿಹೋಗು. ಅನಂತರ ಯಾವ ಪಿತೃಗಳು ಯಮನೊಡನೆ ಒಟ್ಟಿಗೆ ಕೂಡಿಕೊಂಡು ಹರ್ಷವನ್ನು ಹೊಂದುತ್ತಾರೆಯೋ, ಉತ್ತಮವಾದ ಜ್ಞಾನಿಗಳಾದ ಆ ಪಿತೃಗಳೊಡನೆ ಸೇರಿಕೊ.

English Translation

Pass by a secure path beyond the two spotted four-eyed dogs, the progeny of Sarama, and join the wise Pitris who rejoice joyfully with Yama.

॥ ವಿಶೇಷವಿಷಯಗಳು ॥

ಅಪರಕರ್ಮದಲ್ಲಿ ಶವದ ಕೈಗಳಲ್ಲಿ ಮಾವಿನಕಾಯಿನ ಪ್ರಮಾಣದ ಎರಡು ಹಿಟ್ಟಿನ ಪಿಂಡಗಳನ್ನು ಇಟ್ಟು **ಅತಿದ್ರವ ಸಾರಮೇಯೌ** ಎಂದು ಮೊದಲಾಗುವ ಎರಡು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಗೃಹ್ಯ ಸೂತ್ರದ—**ವ್ಯಕ್ತಾವುದ್ಧೃತ್ಯ ಪಾಣ್ಯೋರಾದಧ್ಯಾದತಿ ದ್ರವ ಸಾರಮೇಯೌ ಶ್ವಾನೌ** ಎಂಬ ಸೂತ್ರದಿಂದ (ಆ. ಗೃ. ೪-೩-೨೦) ವಿವೃತವಾಗಿರುವುದು

ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಸರಮಾ ಎಂಬ ದೇವಶುನಿಯ ಮರಿಗಳಾ ಸಾರಮೇಯ ಗಳೆಂಬ ಎರಡು ನಾಯಿಗಳ ವಿಷಯವನ್ನು ಪ್ರಸ್ತಾಪಿಸಲಾಗಿದೆ. ಸರಮಾ ಎಂಬ ದೇವಶುನಿಯು ಇಂದ್ರನ ಬಳಿಯಿದ್ದು ಪಣಿಗಳಿಂದ ಅಪಹೃತವಾದ ಗೋವುಗಳನ್ನು ಹುಡುಕುವ ವಿಷಯದಲ್ಲಿ ಅದು ದೇವತೆಗಳಿಗೆ ತುಂಬಾ ಸಹಾಯಮಾಡಿ

ರುವ ವಿಷಯವು ಈ ಮಂಡಲದ ೧೦ಲನೆಯ ಸೂಕ್ತದಲ್ಲಿ ವರ್ಣಿಸಲಾಗಿದೆ. ಆ ಸರಮೆಯು ಇಂದ್ರನ ಆಜ್ಞಾನುಸಾರವಾಗಿ ಗೋವುಗಳನ್ನು ಹುಡುಕುವುದಕ್ಕಾಗಿ ಹೊರಟು ಬಹುದೂರ ಪ್ರಯಾಣಮಾಡಿ ರಸಾ ಎಂಬ ಆಳವಾದ ಮತ್ತು ಬಹಳ ನೀರುಳ್ಳ ನದಿಯನ್ನು ದಾಟಿ ಪಣಿಗಳಿರುವ ಪ್ರದೇಶಕ್ಕೆ ಹೋಗಿ ಅಲ್ಲಿ ಅವರೊಡನೆ ಸಂಭಾಷಣೆ ನಡೆಸಿ ಅವರಿಗೆ ಇಂದ್ರನ ಮತ್ತು ದೇವತೆಗಳ ಶಕ್ತಿಯನ್ನು ವಿವರಿಸಿ ಗೋವುಗಳನ್ನು ಹಿಂದಕ್ಕೆ ಕೊಡಬೇಕೆಂದು ತಿಳಿಸಿದರೂ ಅವರು ಅದಕ್ಕೊಪ್ಪದಿರಲು ಅಲ್ಲಿಂದ ಹಿಂತಿರುಗಿ ಇಂದ್ರನಿಗೆ ನಡೆದ ಸಮಸ್ತವಿಷಯವನ್ನು ತಿಳಿಸಿ ಸಹಾಯಮಾಡಿದ ವಿಷಯವು ಆ ಸೂಕ್ತದಲ್ಲಿ ಉಕ್ತವಾಗಿದೆ. ಈ ಸರಮೆಯ ಮರಿಗಳಾದ ಸಾರಮೇಯೌ ಎಂಬ ಎರಡು ನಾಯಿಗಳು ಯಮನಬಳಿ ಅವನ ಸಂರಕ್ಷಕರಾಗಿದ್ದುಕೊಂಡು ಪಿತೃಲೋಕಕ್ಕೆ ಬರುವ ಜನರನ್ನು ಶಿಕ್ಷಿಸುತ್ತಿದ್ದವೆಂದೂ ಅದರಿ ಸತ್ಕರ್ಮಮಾಡಿದವರ ತಂಟಿಗೆ ಹೋಗುತ್ತಿರಲಿಲ್ಲವೆಂದೂ ಹೇಳಿದೆ. ಆದರೂ ಮೃತಶರೀರವನ್ನು ಬಿಟ್ಟು ಹೊರಟ ಪ್ರೇತವು ಪಿತೃಲೋಕಕ್ಕೆ ಹೋಗುವಾಗ ಈ ನಾಯಿಗಳು ತೊಂದರೆಕೊಡಬಹುದೆಂದು ಋಷಿಯು ಎಚ್ಚರಿಸಿರುವುದಲ್ಲದೆ, ೧೨ನೆಯ ಋಕ್ಕಿನಲ್ಲಿ ಅಗ್ನಿಯನ್ನು ಪ್ರಾರ್ಥಿಸುತ್ತಾ ಈ ನಾಯಿಗಳಿರುವ ಪ್ರದೇಶವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಬಳಸಿಕೊಂಡು ಪ್ರೇತವನ್ನು ಕರೆದುಕೊಂಡು ಹೋಗಬೇಕೆಂದು ಋಷಿಯು ವರ್ಣಿಸಿದಾನೆ.

ಪ್ರಕೃತ ಈ ಸೂಕ್ತದ ೧೦-೧೨ ನೆಯ ಋಕ್ಕುಗಳಲ್ಲಿ ವರ್ಣಿಸಿರುವ ವಿಷಯಗಳ ಆಧಾರದ ಮೇಲೆ–ಈ ಎರಡು ನಾಯಿಗಳು ಯಮನಬಳಿ ಇದ್ದು ಅವನ ಗೃಹಾದಿಗಳನ್ನು ರಕ್ಷಿಸುವುವು. ಇವುಗಳಿಗೆ ಪ್ರತಿಯೊಂದಕ್ಕೂ ನಾಲ್ಕು ಕಣ್ಣುಗಳಿರುವುವು. ಉದ್ದವಾದ ಮೂತಿ ಇರುವುದು. ಇವು ಯಾವಾಗಲೂ ಎಚ್ಚರವಾಗಿದ್ದು ಪಿತೃಗಳು ಸಂಚರಿಸುವ ಮಾರ್ಗವನ್ನು ಕಾಯುತ್ತಿರುವವು. ಇವು ಯಮನ ದೂತರೆಂದು ಪ್ರಸಿದ್ಧಿಯನ್ನು ಪಡೆದಿರುವವು ಎಂಬ ವಿಷಯಗಳು ವ್ಯಕ್ತಪಡುವವು.

॥ ಸಂಹಿತಾಪಾಠಃ ॥

ಯೌ ತೇ ಶ್ವಾನೌ ಯಮ ರಕ್ಷಿತಾರೌ ಚತುರಕ್ಷೌ ಪಥಿರಕ್ಷೀ ನೃಚಕ್ಷಸೌ ।
ತಾಭ್ಯಾಮೇನಂ ಪರಿ ದೇಹಿ ರಾಜನ್ತ್ಸ್ವಸ್ತಿ ಚಾಸ್ಮಾ ಅನಮೀವಂ ಚ ಧೇಹಿ ॥ ೧೧ ॥

॥ ಪದಪಾಠಃ ॥

ಯೌ । ತೇ । ಶ್ವಾನೌ । ಯಮ । ರಕ್ಷಿತಾರೌ । ಚತುಃಅಕ್ಷೌ । ಪಥಿರಕ್ಷೀ ಇತಿ ಪಥಿಃರಕ್ಷೀ । ನೃಚಕ್ಷಸೌ ।
ತಾಭ್ಯಾಂ । ಏನಂ । ಪರಿ । ದೇಹಿ । ರಾಜನ್ । ಸ್ವಸ್ತಿ । ಚ । ಅಸ್ಮೈ । ಅನಮೀವಂ । ಚ । ಧೇಹಿ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ರಾಜನ್ ಹೇ ಯಮ ತೇ ತ್ವದೀಯೌ ಯೌ ಶ್ವಾನೌ ವಿದ್ಯೇತೇ ತಾಭ್ಯಾಂ ಹೇ ರಾಜನ್ ಯಮ ಏನಂ ಪ್ರೇತಂ ಪರಿ ದೇಹಿ । ರಕ್ಷಾರ್ಥಂ ಪ್ರಯಚ್ಛ । ಕೀದೃಶೌ ಶ್ವಾನೌ । ರಕ್ಷಿತಾರೌ ಯಮು-

गृहस्य रक्षकौ चतुरक्षावक्षिचतुष्पथयुयुक्तौ पथिरक्षी मार्गस्य रक्षकौ नृचक्षसौ मनुष्यैः ख्याप्यमानौ । श्रुतिस्मृतिपुराणाभिज्ञैः पुरुषास्तौ प्रख्यापयंति । ताभ्यां श्वभ्यां दत्त्वास्मै प्रेतायं स्वस्ति च क्षेममनमीवं च रोगभावमपि धेहि । संपादयेत्यर्थः ॥

॥ प्रतिपदार्थ ॥

राजन्—प्रभुवाद । यमः—ऎलै यमदेवनेः । रक्षितारौ—निन्न गृहवन्नु रक्षिस बल्लवू । चतुरक्षौ—नाल्कु कण्णुगळुळ्ळवू । पथिरक्षी—मार्गगळन्नु रक्षिसुववू । नृचक्षसौ—पुरुषरिंद प्रशंसिसल्पडुवुदू आद । यौ ते श्वानौ—यावा निन्न श्वानगळिवेयो । ताभ्यां—अवुगळोडने (अवुगळिगे)। इमं—ई प्रेतवन्नु । पथि देहि—रक्षणार्थवागि अर्पिसु । अस्मै—ई प्रेतक्के । स्वस्ति च—कल्याणवन्नू । अनमीवं च—रोगराहित्यवन्नू । धेहि—उंटुमाडु ।

॥ भावार्थ ॥

प्रभुवाद ऎलै यमनेः, निन्न गृहवन्नु रक्षिसबल्लवू, नाल्कु कण्णुगळुळ्ळवू, मार्गगळन्नु रक्षिसुवुदू, पुरुषरिंद प्रशंसिसल्पडुवुदू आद यावा निन्न श्वानगळिवेयो अवुगळिगे ई प्रेतवन्नु रक्षणार्थवागि अर्पिसु. (ई प्रेतवु अवुगळिंद रक्षिसल्पडलि). ई प्रेतक्के कल्याणवन्नू रोग राहित्यवन्नू उंटुमाडु.

English Translation

Entrust him, O king, to your two dogs, which are your protectors, Yama, the four-eyed guardians of the road, renowned by men, and grant him prosperity and health.

॥ विशेषविषयगळु ॥

रक्षितारौ—ई शब्दवु श्वानौ ऎंब शब्दक्के विशेषणपदवागिदे. ई नायिगळु यमन मनॆयन्नु कायुत्तिरुवुवु. अथवा पितृलोकक्के हॊसदागि बरुव पितृगळन्नु रक्षिसुवुदु ऎंदु बेकादरू अर्थमाडबहुदु.

चतुरक्षौ—अक्षिचतुष्पथयुयुक्तौ ।साधारणवाद नायिगळिगे ऎरडु कण्णुगळु मात्रविरुवुवु. आदरे ई नायिगळिगे नाल्कु कण्णुगळिरुवुवु ऎंदरे ऒंदॊंदु पार्श्वदल्लि ऎरडेरडरंते ऒट्टु नाल्कु कण्णुगळिरुवुवु. ई नाल्कु कण्णुगळु मार्गवन्नू, गृहवन्नू जागरूकतॆयिंद कायुवुदक्के सहायकवागिरुववु

पथिरक्षी—मार्गस्य रक्षकौ । इवु यमन गृहवन्नल्लदे पितृगळु भूलोकदिंद यमन

ತಂಟೆಗೆ ಹೋಗದೆ ಪಾಪಮಾಡಿದವರನ್ನು ಮಾತ್ರ ಶಿಕ್ಷಿಸುವ ಕಾರ್ಯದಲ್ಲಿ ಉದ್ಯುಕ್ತವಾಗಿರುವವು ಎಂದಭಿಪ್ರಾಯವು. ಆದ್ದರಿಂದ ಈ ನಾಯಿಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕು ಎಂದು ಋಷಿಯು ಪ್ರೇತನನ್ನು ಎಚ್ಚರಿಸಿದಾನೆ ಮತ್ತು ಇವುಗಳ ಕಣ್ಣಿಗೆ ಬೀಳದಂತೆ ಸುತ್ತಾದ ಬೇರೆಮಾರ್ಗದಿಂದ ಪ್ರೇತನನ್ನು ಯಮನಬಳಿಗೆ ಕರೆದುಕೊಂಡು ಹೋಗಬೇಕೆಂದು ಅಗ್ನಿಯನ್ನು ಪ್ರಾರ್ಥಿಸಲಾಗಿದೆ.

ನೃಚಕ್ಷಸೌ—ಮನುಷ್ಯೈಃಖ್ಯಾಪ್ಯಮಾನೌ । ಶ್ರುತಿಸ್ಮೃತಿಪುರಾಣಾಭಿಜ್ಞಾಃ ಪುರುಷಾಸ್ತೌ ಪ್ರಖ್ಯಾಪಯಂತಿ । ಮನುಷ್ಯರಿಂದ ಪ್ರಶಂಸಿಸಲ್ಪಟ್ಟಿರುವವು. ಎಂದರೆ ಶ್ರುತಿಸ್ಮೃತಿಪುರಾಣಾದಿಗಳನ್ನು ತಿಳಿದಿರುವ ಸಜ್ಜನರು ಈ ನಾಯಿಗಳ ಸ್ತುತ್ಯಕಾರ್ಯವನ್ನು ಬಹಳವಾಗಿ ಹೊಗಳುತ್ತಿರುವರು. ಏಕೆಂದರೆ ಇವು ಸಜ್ಜನರ ತಂಟೆಗೆ ಹೋಗದೆ ಪಾಪಿಷ್ಠರನ್ನು ಮಾತ್ರ ಹಿಂಸಿಸುವವು ಎಂದು ಇವುಗಳ ಯುಕ್ತಾಯುಕ್ತವಿವೇಚನೆಯನ್ನು ಮುಕ್ತಕಂಠದಿಂದ ಹೊಗಳುತ್ತಾರೆ.

ಈ ಋಕ್ಕಿನ ಉತ್ತರಾರ್ಧದಲ್ಲಿ–ಯಮನಬಳಿಗೆ ಬರುವ ಪ್ರೇತಶರೀರಕ್ಕೆ ರೋಗಗಳ ಬಾಧೆಯಿಲ್ಲದಂತೆ ಚೆನ್ನಾಗಿ ಕಾಪಾಡಬೇಕೆಂದು ಯಮನನ್ನು ಪ್ರಾರ್ಥಿಸಲಾಗಿದೆ

॥ ಸಂಹಿತಾಪಾಠಃ ॥

ಉರೂಣಸಾವಸುತೃಪಾ ಉದುಂಬಲೌ ಯಮಸ್ಯ ದೂತೌ ಚರತೋ ಜನಾಁ
ಅನು ।
ತಾವಸ್ಮಭ್ಯಂ ದೃಶಯೇ ಸೂರ್ಯಾಯ ಪುನರ್ದಾತಾಮಸುಮದ್ಯೇಹ
ಭದ್ರಂ ॥ ೧೬ ॥

॥ ಪದಪಾಠಃ ॥

ಉರೂಣಸೌ । ಅಸುತೃಪೌ । ಉದುಂಬಲೌ । ಯಮಸ್ಯ । ದೂತೌ । ಚರತಃ । ಜನಾನ್ । ಅನು ।
ತೌ । ಅಸ್ಮಭ್ಯಂ । ದೃಶಯೇ । ಸೂರ್ಯಾಯ । ಪುನಃ । ದಾತಾಂ । ಅಸುಂ । ಅದ್ಯ । ಇಹ । ಭದ್ರಂ ॥೧೬॥

॥ ಸಾಯಣಭಾಷ್ಯಂ ॥

ಯಮಸ್ಯ ಸಂಬಂಧಿನೌ ದೂತೌ ಶ್ವಾನೌ ಜನಾಂ ಅನು ಪ್ರಾಣಿನೋ ಲಕ್ಷೀಕೃತ್ಯ ಸರ್ವತ್ರ ಚರತಃ । ಕೀದೃಶೌ । ಉರುಣಸೌ ದೀರ್ಘನಾಸಿಕಾಯುಕ್ತೌ ಅಸುತೃಪೌ ಪರಕೀಯಾನ್ಪ್ರಾಣಾನ್ ಸ್ವೀಕೃತ್ಯ ತೃಪ್ತಿಂ ಕುರ್ವಂತೌ ಉದುಂಬಲಾವುರುಬಲೌ ವಿಸ್ತೀರ್ಣಬಲೌ। ತಾವುಭೌ ದೂತೌ ಸೂರ್ಯಾಯ ದೃಶಯೇ ಸೂರ್ಯಸ್ಯ ದರ್ಶನಾರ್ಥಮದ್ಯ ದಿನ ಇಹ ಕರ್ಮಣಿ ಭದ್ರಮನುಷ್ಠಿತೇ ಸತಿ ನಿಮಿತ್ತೀಕೃತ್ಯ ಪ್ರಾಣಾ ಪುನರಸ್ಮಭ್ಯಂ ದಾತಾಂ । ಅದತ್ತಾಂ ॥

। ಪ್ರತಿಪದಾರ್ಥ ।

ಉರೂಣಸೌ—ದೀರ್ಘವಾದ ನಾಸಿಕವುಳ್ಳವೂ । **ಅಸುತೃಪೌ**—ಇತರರ ಪ್ರಾಣಗಳನ್ನು ಹೀರಿ ತೃಪ್ತಿಯನ್ನು ಪಡೆಯತಕ್ಕವೂ । **ಉದುಂಬಲೌ**—ಅತ್ಯಧಿಕವಾದ ಶಕ್ತಿಯುಳ್ಳವೂ । **ಯಮಸ್ಯ**—ಯಮನಿಗೆ । **ದೂತೌ**—ದೂತರೂ ಆದ ಈ ನಾಯಿಗಳು । **ಜನಾನ್ ಅನು**—ಪ್ರಾಣಿಗಳನ್ನು ಅರಸುತ್ತ । **ಚರತಃ**—ಸಂಚರಿಸುತ್ತವೆ । **ತೌ**—ಆ ಶ್ವಾನಗಳೆರಡೂ । **ಸೂರ್ಯಾಯ**—ಸೂರ್ಯನ । **ದೃತಯೇ**—ದರ್ಶನಾರ್ಥವಾಗಿ । **ಅದ್ಯ**—ಇಂದು । **ಇಹ**—ಈ ಯಾಗಕರ್ಮದಲ್ಲಿ । **ಭದ್ರಂ**—ಮಂಗಳಕರವಾದ । **ಅಸುಂ**—ಪ್ರಾಣವನ್ನು । **ಪುನಃ**—ತಿರುಗಿಯೂ । **ಅಸ್ಮಭ್ಯಂ**—ನಮಗೆ । **ದಾತಾಂ**—ಕೊಡಲಿ.

। ಭಾವಾರ್ಥ ।

ಉದ್ದವಾದ ಮೂತಿಯುಳ್ಳವೂ, ಇತರರ ಪ್ರಾಣಗಳನ್ನು ಹೀರಿ ತೃಪ್ತಿಯನ್ನು ಪಡೆಯತಕ್ಕವೂ, ಅತ್ಯಧಿಕವಾದ ಶಕ್ತಿಯುಳ್ಳವೂ, ಯಮನಿಗೆ ದೂತರೂ ಆದ ಸಾರಮೇಯಗಳು ಪ್ರಾಣಿಗಳನ್ನು ಅರಸುತ್ತ ಸಂಚರಿಸುತ್ತವೆ. ಆ ಶ್ವಾನಗಳೆರಡೂ ಸೂರ್ಯನ ದರ್ಶನಾರ್ಥವಾಗಿ ಇಂದು ಈ ಯಾಗ ಕರ್ಮದಲ್ಲಿ ಮಂಗಳಕರವಾದ ಪ್ರಾಣವನ್ನು ಪುನಃ ನಮಗೆ ಕೊಡಲಿ.

English Translation

The messengers of Yama, broad-nosed, and of exceeding strength, and satiating themselves with the life (of mortals), hunt mankind; may they allow us this day a prosperous existence here, that we may look upon the sun.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಯಮನ ನಾಯಿಗಳು ಜನರ ಮಧ್ಯೆ ಸಂಚರಿಸುತ್ತಿರುವವೆಂದು ಹೇಳಲಾಗಿದೆ. ಎಂದರೆ ಮರಣೋನ್ಮುಖರಾದ ಪ್ರಾಣಿಗಳನ್ನು ಯಮನಬಳಿಗೆ ಒಯ್ಯುವುದಕ್ಕಾಗಿ ಹುಡುಕುತ್ತಿರುತ್ತವೆ. ಅಥರ್ವವೇದದಲ್ಲಿಯೂ ಅನೇಕಕಡೆ ಈ ನಾಯಿಗಳ ವರ್ಣನೆ ಇದೆ. ಕೆಲವುಕಡೆ ಈ ನಾಯಿಗಳು ಎರಡೆಂದೂ ಇನ್ನು ಕೆಲವುಕಡೆ ಅನೇಕವೆಂದೂ ಇವುಗಳು ಪ್ರಾಣಿಗಳು ಮೃತರಾದನಂತರ ಅವರ ಪ್ರೇತಗಳನ್ನು ಯಮನಬಳಿಗೆ ಕೊಂಡೊಯ್ಯುವ ದೂತರೆಂದೂ ಹೇಳಲಾಗಿದೆ

ತಾವಸ್ಮಭ್ಯಂ.... .... ಭದ್ರಂ—ಎಂಬ ಈ ಋಕ್ಕಿನ ಉತ್ತರಾರ್ಧದಲ್ಲಿ-ಜನರ ಮಧ್ಯದಲ್ಲಿ ಸಂಚರಿಸುತ್ತಾ ಅವರ ಪ್ರಾಣಗಳನ್ನು ಕೊಂಡೊಯ್ಯುವ ಯಮನ ನಾಯಿಗಳು ನಮ್ಮ ತಂಟೆಗೆ ಬರದೆ ಎಂದರೆ ನಮ್ಮನ್ನು ಯಮನಬಳಿಗೆ ಕೊಂಡೊಯ್ಯದೆ ಇನ್ನು ಕೆಲವು ಕಾಲ ಈ ಭೂಮಿಯಮೇಲೆ ಸೂರ್ಯನನ್ನು ನೋಡುತ್ತಾ ಜೀವಿಸಿರುವಂತೆಯೂ ನಮಗೆ ಮಂಗಳವನ್ನುಂಟುಮಾಡುವಂತೆಯೂ ಇರಬೇಕೆಂದು ಪ್ರಾರ್ಥಿಸಲಾಗಿದೆ.

। ಸಂಹಿತಾಪಾಠಃ ।

ಯಮಾಯ ಸೋಮಂ ಸುನುತ ಯಮಾಯ ಜುಹುತಾ ಹವಿಃ ।

ಯಮಂ ಹ ಯಜ್ಞೋ ಗಚ್ಛತ್ಯಗ್ನಿದೂತೋ ಅರಂಕೃತಃ ॥ ೧೩ ॥

। ಪದಪಾಠ ।

ಯಮಾಯ । ಸೋಮಂ । ಸುನುತ । ಯಮಾಯ । ಜುಹುತ । ಹವಿಃ ।

ಯಮಂ । ಹ । ಯಜ್ಞಃ । ಗಚ್ಛತಿ । ಅಗ್ನಿಽದೂತಃ । ಅರಂಽಕೃತಃ ॥ ೧೬ ॥

। ಸಾಯಣಭಾಷ್ಯಂ ।

ಹೇ ಋತ್ವಿಜಃ ಯಮಾಯ ಯಮದೇವತಾರ್ಥಂ ಸೋಮಂ ಸುನುತ । ಲತಾತ್ಮಕಂ ಸೋಮ-ಮಭಿಷುಣುತ । ತಥಾ ಯಮಾರ್ಥಂ ಹವಿರ್ಜುಹುತ । ಅಗ್ನಿರ್ದೂತೋ ಯಸ್ಮಿನ್ಯಜ್ಞೇ ಸೋಽಯಮ-ಗ್ನಿರ್ದೂತಃ । ಅಗ್ನೇರ್ದೂತತ್ವಮನ್ಯತ್ರಾಪ್ಯಾತಂ । ಅಗ್ನಿರ್ದೇವಾನಾಂ ದೂತ ಆಸೀತ್ । ತೈ. ಸಂ. ೨-೫-೮-೫ । ಇತಿ । ಅರಂಕೃತೋ ಬಹುಭಿರ್ದ್ರವ್ಯೈರಲಂಕಾರರೂಪೈರ್ಯುಕ್ತಃ । ತಾದೃಶೋ ಯಜ್ಞೋ ಯಮಂ ಹ ಯಮಮೇವ ಗಚ್ಛತಿ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಯಮಾಯ**— ಯಮನನ್ನುದ್ದೇಶಿಸಿ । **ಸೋಮಂ**—ಸೋಮವನ್ನು । **ಸುನುತ**—ಹಿಂಡಿರಿ । **ಯಮಾಯ**—ಯಮನನ್ನುದ್ದೇಶಿಸಿ । **ಹವಿಃ**—ಹವಿಸ್ಸನ್ನು । **ಜುಹುತ**—ಅರ್ಪಿಸಿರಿ । **ಅಗ್ನಿದೂತಃ**—ಅಗ್ನಿಯನ್ನೇ ದೂತನನ್ನಾಗಿ ಉಳ್ಳದ್ದೂ । **ಅರಂಕೃತಃ**—ಅನೇಕ ದ್ರವ್ಯಗಳಿಂದ ಅಲಂಕೃತವಾದುದೂ ಆದ । **ಯಜ್ಞಃ**—ಈ ಯಜ್ಞವು । **ಯಮಂ ಹ**—ಯಮನನ್ನೇ । **ಗಚ್ಛತಿ**—ಸಮೀಪಿಸುತ್ತದೆ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಯಮನನ್ನುದ್ದೇಶಿಸಿ ಸೋಮವನ್ನು ಹಿಂಡಿರಿ. ಯಮನನ್ನುದ್ದೇಶಿಸಿ ಹವಿಸ್ಸನ್ನು ಅರ್ಪಿಸಿರಿ. ಅಗ್ನಿಯನ್ನೇ ದೂತನನ್ನಾಗಿ ಉಳ್ಳದ್ದೂ, ಅನೇಕ ದ್ರವ್ಯಗಳಿಂದ ಅಲಂಕೃತವಾದುದೂ, ಆದ ಈ ಯಜ್ಞವು ಯಮನನ್ನು ಸಮೀಪಿಸುತ್ತದೆ.

English Translation

Pour out the Soma for Yama; to Yama offer the oblation, the decorated sacrifice of which Agni is the messenger proceeds to Yama.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ಯಮನನ್ನುದ್ದೇಶಿಸಿ ಅಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸಬೇಕೆಂದು ಋತ್ವಿಗ್ಜನರನ್ನು ಋಷಿಯು ಪ್ರಾರ್ಥಿಸಿದಾನೆ. ಯಮನಾಗಲಿ, ಇತರ ದೇವತೆಗಳಾಗಲಿ ಯಜ್ಞ ಭೂಮಿಗೆ ಪ್ರತ್ಯಕ್ಷವಾಗಿ ಬಂದು ಆಹುತಿಯನ್ನು ಸ್ವೀಕರಿಸುವವಕ್ಷ್ಯವಾದ್ದರಿಂದ, ಅವರಿಗೆ ಅರ್ಪಿಸುವ ಹವಿರಾದಿಗಳನ್ನು ಸಂಸ್ಕೃತಾಗ್ನಿಯಲ್ಲಿಯೇ ಹೋಮಮಾಡಬೇಕಾಗಿರುವುದು. ಈ ಋಕ್ಕಿನಲ್ಲಿರುವ ಅರಂಕೃತಃ—ಅಲಂಕೃತಃ ಸಂಸ್ಕಾರ

ಮಾಡಿ ಅಲಂಕೃತವಾದ ಅಗ್ನಿಯು ಯಮನನ್ನುದ್ದೇಶಿಸಿ ತನ್ನಲ್ಲಿ ಅರ್ಪಿಸಿದ ಆಹುತಿಗಳನ್ನು ದೂತಭಾವದಿಂದ ಯಮನಲ್ಲಿಗೆ ಕೊಂಡೊಯ್ದು ಅವನಿಗೆ ಸೇರುವಂತೆ ಮಾಡಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

यमायꣳ घृतवद्ध॒विर्जु॑होत प्र च॑ तिष्ठत ।

स नो॑ देवेष्वा यमद्दी॒र्घमायुः॑ प्र जी॒वसे॑ ॥ ೧೪ ॥

॥ ಪದಪಾಠಃ ॥

यमायꣳ । घृतऽवत् । ह॒विः । जुहोत । प्र । च॒ । तिष्ठत ।

सः । नः॒ । दे॒वेषु॑ । आ । यमत् । दी॒र्घम् । आयुः॑ । प्र । जी॒वसे॑ ॥ ೧೪ ॥

॥ ಸಾಯಣಭಾಷ್ಯಂ ॥

हे ऋत्विजः यूयं यमायꣳ घृतवदाज्येन संयुक्तं हविः पुरोडाशादिकं जुहोत । प्र च तिष्ठत । यमं यूयमुपतिष्ठध्वं च । देवेषु मध्ये स यमो देवः प्र जीवसे प्रकृष्टजीवनार्थं नोऽस्माकं दीर्घमायुरा यमत् । प्रयच्छतु ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **यमायꣳ**—ಯಮನನ್ನುದ್ದೇಶಿಸಿ । **घृतवत्**—ಆಜ್ಯೋಪೇತವಾದ **हविः**—ಹವಿಸ್ಸನ್ನು । **जुहोत**—ಅರ್ಪಿಸಿರಿ । **प्र तिष्ठत च**—ಅವನನ್ನು ಸಮೀಪಿಸಿ ಪ್ರಾರ್ಥಿಸಿರಿ । **देवेषु**—ದೇವತೆಗಳ ನಡುವೆ । **सः**—ಪ್ರಸಿದ್ಧನಾದ ಯಮನು । **प्र जीवसे**—ಉತ್ತಮವಾದ ಜೀವನಕ್ಕಾಗಿ । **नः**—ನಮಗೆ । **दीर्घमायुः**—ದೀರ್ಘಾಯುಸ್ಸನ್ನು । **आ यमत्**—ಕೊಡಲಿ ।

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ. ಯಮನನ್ನುದ್ದೇಶಿಸಿ ಆಜ್ಯೋಪೇತವಾದ ಹವಿಸ್ಸನ್ನು ಅರ್ಪಿಸಿರಿ. ಅವನನ್ನು ಸಮೀಪಿಸಿ ಪ್ರಾರ್ಥಿಸಿರಿ. ದೇವತೆಗಳ ನಡುವೆ ಪ್ರಸಿದ್ಧನಾದ ಯಮನು ಉತ್ತಮವಾದ ಜೀವನಕ್ಕಾಗಿ ನಮಗೆ ದೀರ್ಘಾಯುಸ್ಸನ್ನು ಕೊಡಲಿ.

English Translation

Offer the oblation of clarified butter to Yama, and stand nigh (to the altar); It is he who among the gods gives us a long life to live

॥ ವಿಶೇಷವಿಷಯಗಳು ॥

ಎಲೈ ಋತ್ವಿಕ್ಕುಗಳೇ ನೀವು ಯಮನನ್ನುದ್ದೇಶಿಸಿ ಅಗ್ನಿಯಲ್ಲಿ ಆಜ್ಯ(ತುಪ್ಪ)ಮಿಶ್ರಿತವಾದ ಹವಿಸ್ಸನ್ನು ಮಂತ್ರಪೂರ್ವಕವಾಗಿ ಅರ್ಪಿಸಿರಿ. ಅದರಿಂದ ತೃಪ್ತಿಗೊಂಡ ದೇವತೆಗಳ ಮಧ್ಯದಲ್ಲಿರುವ ಯಮನು ನಾವು ಬಹುಕಾಲ ಜೀವಿಸಿರುವಂತೆ ದೀರ್ಘವಾದ ಆಯುಸ್ಸನ್ನು ಕೊಟ್ಟು ನಮ್ಮನ್ನು ಅನುಗ್ರಹಿಸಲಿ ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು

। ಸಂಹಿತಾಪಾಠಃ ।

यमाय मधुमत्तमं राज्ञे हव्यं जुहोतन ।
इदं नमऋषिभिः पूर्वजेभ्यः पूर्वेभ्यः पथिकृद्भ्यः ॥ ८५ ॥

। ಪದಪಾಠಃ ।

यमाय । मधुमत्ऽतमं । राज्ञे । हव्यं । जुहोतन ।
इदं । नमः । ऋषिऽभ्यः । पूर्वऽजेभ्यः । पूर्वेभ्यः । पथिकृत्ऽभ्यः ॥ ८५ ॥

॥ ಸಾಯಣಭಾಷ್ಯಂ ॥

हे ऋत्विजः यमाय राज्ञे मधुमत्तमं मधुमतिशयेन मधुरं हव्यं पुरोडाशादिकं हविर्जुहोतन । जुहुत । पूर्वजेभ्यः सृष्ट्यादावुत्पन्नेभ्यः अत एव पूर्वेभ्योऽस्मत्तः पूर्वभाविभ्यः पथिकृद्भ्यः शोभनमार्गकारिभ्य ऋषिभ्य इदं प्रत्यक्षं यथा भवति तथा नमोऽस्तु ॥

। ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) राज्ञे—ಪ್ರಭುವಾದ । यमाय— ಯಮನನ್ನುದ್ದೇಶಿಸಿ । मधुमत्तमं—ಅತ್ಯಂತ ಮಧುರವಾದ । हव्यं—ಹವಿಸ್ಸನ್ನು । जुहोतन—ಅರ್ಪಿಸಿರಿ । पूर्वजेभ्यः—ಹಿಂದೆ ಉತ್ಪನ್ನರಾದವರೂ । पूर्वेभ्यः—ಪ್ರಾಚೀನರೂ । पथिकृद्भ्यः—ಮಾರ್ಗದರ್ಶಕರೂ ಆದ ऋषिभ्यः—ಋಷಿಗಳಿಗೆ । इदं नमः—ನನ್ನ ಈ ನಮಸ್ಕಾರಗಳು ।

। ಭಾವಾರ್ಥ ।

ಎಲೈ ಋತ್ವಿಕ್ಕುಗಳೇ, ಪ್ರಭುವಾದ ಯಮನನ್ನುದ್ದೇಶಿಸಿ ಅತ್ಯಂತ ಮಧುರವಾದ ಹವಿಸ್ಸನ್ನು ಅರ್ಪಿಸಿರಿ ಹಿಂದೆ ಉತ್ಪನ್ನರಾದವರೂ, ಪ್ರಾಚೀನರೂ, ಮಾರ್ಗದರ್ಶಕರೂ ಆದ ಋಷಿಗಳಿಗೆ ನನ್ನ ಈ ನಮಸ್ಕಾರಗಳು.

English Translation

Offer to the royal Yama this most sweet oblation; (let) this our adoration (be addressed) to the ancient sages, the first followers of (virtuous) paths.

॥ ವಿಶೇಷವಿಷಯಗಳು ॥

ಯಮನನ್ನುದ್ದೇಶಿಸಿ ಅಗ್ನಿಯಲ್ಲಿ ಹವಿಸ್ಸನ್ನು ಆಹುತಿದ್ವಾರಾ ಅರ್ಪಿಸಬೇಕೆಂದು ಋತ್ವಿಗ್ಜನರನ್ನು ಋಷಿಯು ಪ್ರಾರ್ಥಿಸಿರುವುದಲ್ಲದೆ ಈ ಋಕ್ಕಿನ ಉತ್ತರಾರ್ಧದಲ್ಲಿ-ಹಿಂದೆ ಈ ಭೂಮಿಯಮೇಲೆ ಜೀವಿಸಿದ್ದು ಮೃತರಾಗಿ ಈಗ ಯಮನ ಬಳಿ ಪಿತೃಲೋಕದಲ್ಲಿ ವಾಸಿಸುತ್ತಿರುವ ಋಷಿಗಳಿಗೂ, ಮೃತರಾದ ನಮ್ಮ ಹಿರಿಯರಿಗೂ, ಯಮಲೋಕಕ್ಕೆ ಹೋಗುವ ದಾರಿಯನ್ನು ಸ್ಪಷ್ಟಪಡಿಸಿರುವ ಇತರ ಪಿತೃಗಳಿಗೂ ಇಗೋ ನಮಸ್ಕರಿಸುವೆನು ಎಂದು ಋಷಿಯು ತನ್ನ ಪಿತೃಗಳನ್ನು ವಂದಿಸಿರುವನು.

॥ ಸಂಹಿತಾಪಾಠಃ ॥

त्रिऽकद्रुकेभिः पतति षळुर्वीरेकमिद्बृहत् ।

त्रिष्टुब्गायत्री छंदांसि सर्वा ता यमु आहिता ॥ ೧೬ ॥

। ಪದಪಾಠಃ ।

त्रिऽकद्रुकेभिः । पतति । षट् । उर्वीः । एकं । इत् । बृहत् ।

त्रिऽस्तुप् । गायत्री । छंदांसि । सर्वा । ता । यमे । आऽहिता ॥ ೧೬ ॥

। ಸಾಯಣಭಾಷ್ಯಂ ।

त्रिकद्रुकेभिः । द्वितीयार्थे तृतीयैषा । त्रिकद्रुकान् । ज्योतिर्गौरायुरिति त्रयो यागविशेषास्त्रिकद्रुका उच्यंते । तान्प्रत्यंगभावाय संरक्षणार्थं च पतति । यमस्तान् प्राप्नोति । षट्संख्याका उर्वीर्भूमीः कृताकृतप्रत्यवेक्षणाय प्राप्नोति । ताश्चोर्व्यः शाखांतरमुंछे समाम्नाताः । षण्णामुर्वीरंतरिक्षस्यांतर्द्यौश्च पृथिवी चापश्चौषधयश्चोर्क्च सूनृता चेति । एकमिदेकमेव बृहद्महज्जगद्यमुश्च प्रतिपालनीयः प्राप्नोति । किंच यानि त्रिष्टुब्गायत्र्यादीनि छंदांसि संति सर्वाणि तानि छंदांसि यमु आहितानि । ऋत्विग्भिः स्तुतिश्चेनावस्थितानि ॥

। ಪ್ರತಿಪದಾರ್ಥ ।

त्रिकद्रुकेभिः—ಜ್ಯೋತಿಃ ಗೌಃ, ಆಯುಃ ಎಂಬ ಮೂರು ಯಾಗಗಳನ್ನೂ । पतति—ಯಮನು

ದ್ಯೂಪವುಳ್ಳ । ಏಕಮಿತ್— ಜಗತ್ತನ್ನೆಲ್ಲ ವ್ಯಾಪಿಸುತ್ತಾನೆ । ತ್ರಿಷ್ಟುಪ್—ತ್ರಿಷ್ಟುಪ್ ಸಂಜ್ಞಕವೂ । ಗಾಯತ್ರೀ— ಗಾಯತ್ರ್ಯಾದಿ ಸಂಜ್ಞಕವೂ ಆದ । ಛಂದಾಂಸಿ—ಯಾವ ಸಪ್ತಚ್ಛಂದಸ್ಸುಗಳು ಪ್ರಸಿದ್ಧವಾಗಿವೆಯೋ । ಸರ್ವಾ ತಾ—ಅವುಗಳೆಲ್ಲವೂ । ಯಮೇ—ಯಮನಲ್ಲಿ । ಆಹಿತಾ—ಸ್ಥಾಪಿತವಾಗಿವೆ ।

॥ ಭಾವಾರ್ಥ ॥

ಜ್ಯೋತಿಃ ಗೌಃ, ಆಯುಃ ಎಂಬ ಮೂರು ಯಾಗಗಳಲ್ಲೂ ಯಮನು ಭಾಗಿಯಾಗುತ್ತಾನೆ. ವಿಸ್ತೃತವಾದ ಆರು ಪೃಥ್ವಿಗಳನ್ನೂ ಆಕ್ರಮಿಸುತ್ತಾನೆ. ಮಹದ್ದ್ಯೂಪವುಳ್ಳ ಜಗತ್ತನ್ನೆಲ್ಲಾ ವ್ಯಾಪಿಸುತ್ತಾನೆ. ತ್ರಿಷ್ಟುಪ್, ಗಾಯತ್ರೀ ಮುಂತಾದ ಯಾವ ಸಪ್ತಚ್ಛಂದಸ್ಸುಗಳು ಪ್ರಸಿದ್ಧವಾಗಿವೆಯೋ ಅವೆಲ್ಲವೂ ಯಮನಲ್ಲಿ ಸ್ಥಾಪಿತವಾಗಿವೆ

English Translation

(Yama) acquires the three Trikadruka srcrifices; the six earths, the one great (moving world); the Trishtubh, Gayatri, all the sacred metres converge in Yama.

॥ ವಿಶೇಷವಿಷಯಗಳು ॥

ಷಟ್ ಉರ್ವೀಃ—ಆರು ವಿಧ ಭೂಮಿಗಳನ್ನು ಎಂದರೆ ಷಣ್ಣೋರ್ವೀರಂಹಸಸ್ಪಾಂತು ದ್ಯೌಶ್ಚ ಪೃಥಿವೀ ಚಾಪಶ್ಚೌಷಧಯಶ್ಚೋರ್ಕ್ ಚ ಸೂನೃತಾ ಚ । ಎಂದರೆ ಯಮನು ಜ್ಯೋತಿಃ ಗೌಃ ಆಯುಃ ಎಂಬ ಅಗ್ನಿ ಷ್ಟೋಮದ ಮೂರು ದಿನಗಳಲ್ಲಿ ನಡೆಯುವ ಕರ್ಮಗಳಲ್ಲಿ ಬಂದು ಭಾಗವಹಿಸುವುದಲ್ಲದೆ, ಆರು ವಿಧ ಭೂಮಿ ಎಂದರೆ ಅಂತರಿಕ್ಷ, ಭೂಮಿ, ಉದಕ, ಓಷಧಿವನಸ್ಪತಿಗಳು, ಊರ್ಕ್, ಸೂನೃತ ಎಂಬ ಪ್ರದೇಶಗಳಲ್ಲಿರಬಹುದಾದ ಸಮಸ್ತ ಪ್ರಾಣಿಗಳು ಮಾಡುವ ಚಲನವಲನಗಳನ್ನು ಎಂದರೆ ಸುಕೃತದುಷ್ಕೃತಗಳನ್ನು ವೀಕ್ಷಿಸುವಸಲುವಾಗಿ ಅಲ್ಲಿಗೆಲ್ಲಾ ಬರುತ್ತಾನೆ ಎಂಬ ವಿವರಣೆಯು ಇಲ್ಲಿ ಉಕ್ತವಾಗಿದೆ. ಎಂದರೆ ಯಮನು ಬರದಿರುವ ಸ್ಥಳವಿಲ್ಲ, ಎಲ್ಲಾ ಕಡೆಗೂ ಬಂದು ಪ್ರಾಣಿಗಳ ಕರ್ಮಾದಿಗಳನ್ನು ಯಾವಾಗಲೂ ನೋಡುತ್ತಿರುತ್ತಾನೆ. ಇಂತಹ ಯಮನನ್ನು ಋತ್ವಿಗ್ಜನರು ತ್ರಿಷ್ಟುಪ್, ಗಾಯತ್ರೀ, ಮೊದಲಾದ ಅನೇಕ (ಸಮಸ್ತ) ಛಂದಸ್ಸಿನ ಮಂತ್ರಗಳಿಂದಲೂ ಸ್ತುತಿಸುತ್ತಾರೆ ಎಂದು ಋಷಿಯು ಯಮನನ್ನು ಪ್ರಶಂಸೆಮಾಡಿರುವನು.

ಬೃಹದ್ದೇವತೆಯೆಂಬ ಗ್ರಂಥದಲ್ಲಿ ಈ ಸೂಕ್ತದ ವಿಷಯವಾಗಿ ಹೇಳಿರುವುದನ್ನು ಇಲ್ಲಿ ಕೊಟ್ಟಿದೆ—

ಪರೇಯಿವಾಂಸಮಿತ್ಯತ್ರ ಸ್ತೂಯತೇ ಮಧ್ಯಮೋ ಯಮಃ ।
ಅಥರ್ವಾಣೋಽಥ ಭೃಗವೋಽಙ್ಗಿರಸಃ ಪಿತರಃ ಸಹ ।
ಷಷ್ಠ್ಯಾಂ ದೇವಗಣಾಸ್ತತ್ರ ಸಂಸ್ತೂಯಂತೇ ದ್ಯುಭಕ್ತಯಃ ।
ಪಿತೃಭಿಶ್ಚಾಂಗಿರೋಭಿಶ್ಚ ಸಂಸ್ತುತೋ ದೃಶ್ಯತೇ ಯಮಃ ।
ಮಂತ್ರೇಷು ಬಹುಶಃ ಸಾದೇ ವಿವಸ್ವಂತಂ ಪಿತಾ ಹಿ ಸಃ ।
ಸಂಸ್ಕಾರ್ಯಪ್ರೇತಸಂಯುಕ್ತೈಃ ಪಿತೃಭಿಃ ಸ್ತೂಯತೇ ಯಮಃ ।
ಪ್ರೇಹಿ ಪ್ರೇಹೀತಿ ತಿಸೃಷು ಪ್ರೇತಾಶಿಸ ಉದಾಹೃತಾಃ ।

ಪಿತೄಣಾಂ ಹಿ ಪತಿರ್ದೇವೋ ಯಮಸ್ತಸ್ಮಾತ್ಸ ಸೂಕ್ತಭಾಕ್ ।
ಅತಿ ದ್ರವ ತೃಚೇ ಶ್ವಾನೌ ಪರಂ ಪಿತ್ರ್ಯಮುದೀರತಾಂ ।

(ಬೃ. ದೇ. ೭-೧೫೫ ರಿಂದ ೧೫೯)

ಮೇಲಿನ ಶ್ಲೋಕಗಳಲ್ಲಿ ಹೇಳಿರುವ ವಿವರಣೆಗಳನ್ನು ನಾವು ಈ ಸೂಕ್ತದ ಪೀಠಿಕೆಯಲ್ಲಿಯೂ ಋಕ್ಕುಗಳ ವಿಶೇಷ ವಿಷಯ ಗಳಲ್ಲಿಯೂ ವಿವರಿಸಿರುವುದರಿಂದ ಇಲ್ಲಿ ಪುನಃ ಅವುಗಳ ವಿವರಣೆಯು ಅವಶ್ಯಕವಿಲ್ಲ. ಅಪರಕರ್ಮಗಳಲ್ಲಿ ಮಾಡುವ ಪ್ರೇತಸಂಸ್ಕಾರಾದಿಗಳಲ್ಲಿ ಈ ಋಕ್ಕುಗಳ ವಿನಿಯೋಗವಿರುವುದು.

ಹದಿನೈದನೆಯ ಸೂಕ್ತವು.

ಪೀಠಿಕೆ

ಉದೀರತಾಂ ಎಂಬ ಈ ಸೂಕ್ತದ ಋಕ್ಕುಗಳನ್ನೂ ಮತ್ತು ಇದರ ಮುಂದಿನ ಸೂಕ್ತವಾದ ಮೈನಮಗ್ನೇ ಎಂಬ ಸೂಕ್ತದ ಋಕ್ಕುಗಳನ್ನೂ ಶ್ಮಶಾನದಲ್ಲಿ ಮಾಡುವ ಅಪರಕರ್ಮಗಳಲ್ಲಿ ಉಪಯೋಗಿಸುವರು ಎಂದು ಬೃಹದ್ದೇವತೆ ಯಲ್ಲಿ ಹೇಳಿದೆ—

. ... ಪರಂ ಪಿತ್ರ್ಯಮುದೀರತಾಂ ।
ಉತ್ತರೇಣ ತು ಸೂಕ್ತೇನ ಶ್ಮಶಾನೇ ಕರ್ಮ ಶಂಸತಿ ।
ಪಿತೃದೇವಾಸುರಾಣಾಂ ಚ ಅಭವನ್ನಗ್ನಯಸ್ತ್ರಯಃ ।
ಹವ್ಯಕವ್ಯವಹೌ ಚೋಭೌ ಸಹರಕ್ಷಾಶ್ಚ ನಾಮ ಯಃ ।
ತತ್ರ ಮೈನಮಿತಿ ಶ್ವೇತಕವ್ಯವಾಹನಸಂಸ್ತುತಿಃ ।
ಇತರಾಣಿ ತು ದೈವ್ಯಸ್ಯ ಸ್ತುತಿರ್ನಾಸ್ಯಾಸುರಸ್ಯ ಚ ।

(ಬೃ. ದೇ. ೭, ೧೫೯-೧೬೧)

ಉದೀರತಾಂ (೧೫ ನೆಯ ಸೂಕ್ತ) ಮತ್ತು ಮೈನಮಗ್ನೇ (೧೬ ನೆಯ ಸೂಕ್ತ) ಗಳಲ್ಲಿರುವ ಋಕ್ಕುಗಳು ಶ್ಮಶಾನ ದಲ್ಲಿ ನೆರವೇರಿಸುವ ಅಪರಕರ್ಮಗಳನ್ನು ವಿವರಿಸುವವು. ಈ ಅಪರಕರ್ಮದಲ್ಲಿ ಉಪಯೋಗಿಸುವ ಅಗ್ನಿಗೆ ಕವ್ಯವಾಹ ಎಂದು ಹೆಸರು ಕರ್ಮಗಳನ್ನನುಸರಿಸಿ ಆಯಾ ಕರ್ಮಗಳಲ್ಲಿ ಉಪಯೋಗಿಸುವ ಅಗ್ನಿಗಳು ಮೂರು ಎಂದು ಇಲ್ಲಿ ಹೇಳಿದೆ. ಯಜ್ಞಯಾಗಾದಿಗಳಲ್ಲಿ ದೇವತೆಗಳಿಗೆ ಹವಿಸ್ಸನ್ನು ಒಯ್ಯುವ ಅಗ್ನಿಗೆ ಹವ್ಯವಾಹನನೆಂದೂ, ಪಿತೃಕರ್ಮ ಗಳಲ್ಲಿ ಪಿತೃಗಳಿಗೆ ಕವ್ಯವನ್ನು ವಹಿಸುವ ಅಗ್ನಿಗೆ ಕವ್ಯವಾಹನನೆಂದೂ ರಾಕ್ಷಸಾದಿಗಳಿಂದ ಯಜ್ಞಕರ್ಮವನ್ನು ಕಾಪಾ ಡುವ ಅಗ್ನಿಗೆ ಸಹರಕ್ಷಾಃ ಎಂದೂ ಅಗ್ನಿಯಲ್ಲಿ ಮೂರು ಪ್ರಭೇದಗಳಿರುವವು. ಪ್ರಕೃತ ಸೂಕ್ತಗಳಲ್ಲಿ ಅಪರಕರ್ಮದ ವಿವರಣೆ ಇರುವುದರಿಂದ ಕವ್ಯವಾಹನನೆಂಬ ಅಗ್ನಿಯ ಸ್ತುತಿಯೇ ವಿಶೇಷವಾಗಿದೆ. ಇದಲ್ಲದೆ ಮೈನಮಗ್ನೇ ಎಂಬ ಸೂಕ್ತದಲ್ಲಿ ಕವ್ಯವಾಹನಾಗ್ನಿಯ ಸ್ತುತಿಯೂ ಇತರ ದೇವತೆಗಳ ಸ್ತುತಿಯೂ ಇರುವುದು. ಕೆಲವುಕಡೆ ಅಗ್ನಿಯನ್ನು ಕ್ರವ್ಯಾದ ಎಂಬ ಶಬ್ದದಿಂದ ಸ್ತುತಿಸಲಾಗಿರುವುದು. ಕ್ರವ್ಯ ಎಂದರೆ ಮಾಂಸವು, ಕ್ರವ್ಯಾದ ಎಂದರೆ ಮಾಂಸವನ್ನು

ಭಕ್ಷಿಸುವವನು ಎಂದರ್ಥವು. ಅಗ್ನಿಯು ಮಾಂಸವನ್ನು ಭಕ್ಷಿಸುವನೇ ಎಂದರೆ, ಮೃತಶರೀರವನ್ನು ಅಗ್ನಿಯಲ್ಲಿ ಸುಡುವುದರಿಂದ ಅಗ್ನಿಯು ಅದನ್ನು ದಹಿಸುವನು. ಆದ್ದರಿಂದ ವೈನಮಗ್ನೇ (ಋ. ಸಂ. ೧೦-೧೬-೧) ಶೃತಂ ಯದಾ (೧೦-೧೬-೨) ಕ್ರವ್ಯಾದಮಗ್ನಿ (೧೦-೧೬-೯) ಯೋ ಅಗ್ನಿಃ ಕ್ರವ್ಯವಾಹನಃ (೧೦-೧೬-೧೧) ಇತ್ಯಾದಿ ಋಕ್ಕುಗಳಲ್ಲಿ ಅಗ್ನಿಯನ್ನು ಕ್ರವ್ಯಾದನೆಂಬ ವಿಶೇಷಣದಿಂದ ಸ್ತುತಿಸಲಾಗಿದೆ

ಅಂತ್ಯಕ್ರಿಯೆ—ವೇದಗಳಲ್ಲಿ ಸಾವಿಗೆ ಸಂಬಂಧಿಸಿದ ವಾಕ್ಯಗಳೇ ಕಡಿಮೆ. ಅಪರೂಪವಾಗಿ ಪ್ರಸಕ್ತವಾದರೂ ಮರಣವು ಶತ್ರುಗಳಿಗೆ ಉಂಟಾಗಲೆಂದೂ, ತಮಗೆ ದೀರ್ಘಾಯುಸ್ಸು ಇರಲೆಂದೂ ಬೇಡುವುದಕ್ಕೆ ಮಾತ್ರ. ಶವಸಂಸ್ಕಾರಕಾಲದಲ್ಲಿ ಮಾತ್ರ ಅಮುಷ್ಮಿಕದ ಯೋಚನೆ ಬರುತ್ತದೆ. ಶವಗಳನ್ನು ಸುಡುವುದು ಮತ್ತು ಹೂಳುವುದು, ಎರಡೂ ರೂಢಿಯಲ್ಲಿದ್ದುವು. ೧೦-೧೬ರಲ್ಲಿ, ದಹನಸಂಸ್ಕಾರವೂ, ಮತ್ತೊಂದರಲ್ಲಿ (೧೦-೧೪-೧೦ರಿಂದ ೧೩) ಹೂಳುವುದೂ ಉಕ್ತವಾಗಿವೆ. 'ಮಣ್ಣಿನ ಮನೆಯೂ ಒಂದು ಕಡೆ ಉಕ್ತವಾಗಿದೆ. (೭-೪೯-೧). ಅಗ್ನಿಯಲ್ಲಿ ದಗ್ಧರಾದ ಪಿತೃಗಳು ಮತ್ತು ದಗ್ಧರಾಗದೇ ಇದ್ದವರು, ಎರಡು ತರಹವೂ ಕಂಡು ಬರುತ್ತದೆ (೧೦-೧೫-೧೪, ಅ. ವೇ, ೧೪-೨-೩೪) ಮೃತರು ಊರ್ಧ್ವಲೋಕಕ್ಕೆ ಹೋಗಲು ದಹನವೇ ಸರಿಯಾದ ಮಾರ್ಗ. ಕರ್ಮಗಳನ್ನು ವಿವರಿಸುವ ಗ್ರಂಥಗಳಲ್ಲಿ, ದಗ್ಧರಾದವರ ಭಸ್ಮ ಮತ್ತು ಅಸ್ಥಿ, ಶಿಶುಗಳು ಮತ್ತು ಸನ್ಯಾಸಿಗಳನ್ನು ಮಾತ್ರ ಹೂಳಬೇಕೆಂದು ವಿಧಿಯಿದೆ (ಆ. ಗೃ ಸೂ. ೪-೧೯ನ್ನು ಹೋಲಿಸಿ).

ಅಂತ್ಯಕ್ರಿಯೆಯೊಡನೆಯೇ, ಅಮುಷ್ಮಿಕಜೀವನದ ಇತಿಹಾಸವು ಸಂಬಂಧಿಸಿದೆ ಅಗ್ನಿಯು ಮೃತದೇಹವನ್ನು ಬೇರೆ ಲೋಕಕ್ಕೆ, ಪಿತೃಗಳ ಮತ್ತು ದೇವತೆಗಳ ಸಮೀಪಕ್ಕೆ ತೆಗೆದುಕೊಂಡು ಹೋಗುತ್ತಾನೆ (೧೦-೧೬-೧೫ರಿಂದ ೪, ೧೦-೧೭-೩). ಮರ್ತ್ಯನನ್ನು ಅತಿಶ್ರೇಷ್ಠವಾದ ಅಮೃತತ್ವದಲ್ಲಿ ಇಡುತ್ತಾನೆ (೧-೩೧-೭). ಪುರಾತನರೂ, ಆದಿಯಲ್ಲಿ ಜನಿಸಿದವರೂ ಆದ ಋಷಿಗಳು ಹೋಗಿರುವ, ಅತ್ಯುನ್ನತವಾದ ಸೂರ್ಯನ ಸ್ಥಾನಕ್ಕೆ, ಅತ್ಯಂತ ಎತ್ತರದಲ್ಲಿರುವ ಸ್ವರ್ಗಕ್ಕೆ, ಅಥವಾ ಸತ್ಪುರುಷರ ಲೋಕಕ್ಕೆ, ದೇವಲೋಕದ ಪಕ್ಷಿಯಾದ ಅಗ್ನಿಯು ಮೂಲಕ, ಮನುಷ್ಯರು ಹೋಗುತ್ತಾರೆ (ವಾ. ಸಂ. ೧೪-೫೯, ೫೨), ಗಾರ್ಹಪತ್ಯಾಗ್ನಿಯು ಮೃತರನ್ನು ಸತ್ಪುರುಷರ ಲೋಕಕ್ಕೆ ಒಯ್ಯುತ್ತಾನೆ (ಅ. ವೇ. ೧೮೨೦.೧) ಅಗ್ನಿಯು ಮೊದಲು ಮೃತನ ದೇಹವನ್ನು ದಹಿಸಿ ಅನಂತರ ಸಜ್ಜೀವಿಗಳ ಲೋಕದಲ್ಲಿ ಇಡುತ್ತಾನೆ (ಅ. ವೇ. ೧೪-೩-೨೧) ಶವಗಳನ್ನು ದಹಿಸುವ ಅಗ್ನಿಯು (ಕ್ರವ್ಯಾದ) ದೇವತೆಗಳಿಗೆ ಆಹುತಿಯನ್ನು ವಹಿಸುವ ಅಗ್ನಿಗಿಂತಲೂ ಭಿನ್ನನು (೧೦-೧೬-೯). ತನ್ನ ಭಾಗವಾದ ಅಜವನ್ನು ದಹಿಸಿ, ದೇಹವನ್ನು ಕಾಪಾಡಬೇಕೆಂದು ಅಗ್ನಿಗೆ ಪ್ರಾರ್ಥನೆ (೧೦-೧೬-೪). ಕರ್ಮಮಾಡುವಾಗ ಶವವನ್ನು ಕೃಷ್ಣವರ್ಣದ ಅಜದ ಚರ್ಮದ ಮೇಲಿಡುತ್ತಾರೆ ಮತ್ತು ಬಲಿಕೊಡುವ ಸಂದರ್ಭದಲ್ಲಿ ಮೃಗ ಅಥವಾ ಅಜವನ್ನು ಬಲಿಕೊಡುತ್ತಾರೆ. ದೇಹಕ್ಕೆ ಯಾವುದಾದರೂ ಪಕ್ಷಿ, ಮೃಗ, ಇರುವೆ, ಅಥವಾ ಹಾವಿನಿಂದ ಆಗಿರಬಹುದಾದ ಗಾಯಗಳನ್ನು ಗುಣಪಡಿಸಬೇಕೆಂದು ಅಗ್ನಿ ಮತ್ತು ಸೋಮರಿಗೆ ಕರ್ಮಕಾಲದಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ (೧೦.೧೬-೬).

ಮೃತಾತ್ಮನು ಧೂಮಜೊಡನೆ ಸ್ವರ್ಗಲೋಕಕ್ಕೆ ಹೋಗುತ್ತಾನೆಂದು ನಂಬಿಕೆ (ಆ. ಗೃ. ಸೂ. ೪.೪-೭). ಅದು ಬಹಳ ದೂರದ ದಾರಿ; ಅಲ್ಲಿ ಪೂಷಣನು ರಕ್ಷಕನು ಮತ್ತು ಸವಿತೃವು ದಾರಿ ತೋರಿಸು

ವನನು (೧೦.೧೬.೪). ಹುತವಾದ ಅಜವು ಪಿತೃಗಳ ಸವಿಾಪಕ್ಕೆ ಮುಂಚೆ ಹೋಗಿ, ಮೃತಾತ್ಮನ ಭಗದುನ ವನ್ನು ತಿಳಿಸುತ್ತದೆ; ಹೀಗೆ ಹೋಗುವಾಗ, ಮಾರ್ಗದಲ್ಲಿ ಕಗ್ಗತ್ತಲೆಯನ್ನು ಹಾದು, ಅನಂತರ, ಪಿತೃಗಳ ಸ್ಥಾನ ವಾದ ಸ್ವರ್ಗದ ಮೂರನೆಯ ಅಂತಸ್ತನ್ನು ಸೇರಬೇಕು (ಅ. ವೇ. ೯.೫-೧, ೩; ೪-೧-೪ನ್ನು ಹೋಲಿಸು)

ಆಮುಷ್ಮಿಕಜೀವನಕ್ಕೆ ಉಪಯೋಗವಾಗಲೆಂದು, ಮೃತಜೀವನಿಗೆ, ಆಭರಣಗಳು ಮತ್ತು ಪಸ್ತ್ರ ಗಳನ್ನು ಒದಗಿಸುತ್ತಾರೆ, ಈ ಪದ್ಧತಿಯು ಈಗಲೂ ರೂಢಿಯಲ್ಲಿದೆ (೧೪-೪-೩೧) ಅವನ ಪತ್ನಿ ಮತ್ತು ಆಯುಧಗಳನ್ನೂ ಶವದೊಡನೆ ದಹಿಸುತ್ತಿದ್ದರೆಂಬುದಕ್ಕೆ ಅಲ್ಲಲ್ಲಿ ಚಿಹ್ನೆಗಳಿವೆ (೧೦-೧೪-೪, ೯). ಶವಕ್ಕೆ ಒಂದು ಹೊರೆ ಕಟ್ಟಿಗೆಯನ್ನು ಕಟ್ಟುತ್ತಿದ್ದರು ಮೃತನ ಪ್ರೇತವು ಹಿಂದಕ್ಕೆ ಬರುವುದಕ್ಕೆ ದಾರಿ ತಿಳಿಯದಿರ ಲೆಂಬುದೇ ಇದರ ಉದ್ದೇಶ (ಅ. ವೇ. ೫-೧೯-೧೨; ಋ. ವೇ. ೧೦-೧೪-೨ ಮತ್ತು ೧೯-೯೭-೧೬ಗಳನ್ನು ಹೋಲಿಸು).

ಆತ್ಮ—ಅಗ್ನಿ ಅಥವಾ ಸಮಾಧಿಗಳು ದೇಹವನ್ನು ಮಾತ್ರ ಅಳಿಸುತ್ತವೆ; ಆದರೆ ಮೃತನ ವ್ಯಕ್ತಿತ್ವ ವನ್ನು ಅಳಿಸಲಾರವು. ಅಜ್ಞಾನಾವಸ್ಥೆಯಲ್ಲಿಯೂ ಜೀವನನ್ನು ದೇಹದಿಂದ ಬೇರ್ಪಡಿಸಬಹುದು ಮತ್ತು ದೇಹ ನಷ್ಟವಾದ ಮೇಲೂ ಜೀವವಿರುತ್ತದೆ ಎಂತಲೇ ನಂಬಿಕೆ. ೧೦-೫೮ನೆಯ ಸೂಕ್ತ ಪೂರ್ತಿಯಾಗಿ, ಸತ್ತವನಂತೆ ಬಿದ್ದಿರುವವನ ಜೀವವನ್ನು ಹಿಂದಕ್ಕೆ ಬಾರೆಂದು ಕರೆದಿದೆ. ಋಗ್ವೇದದಲ್ಲಿ ಜೀವನಿಗೆ ದೇಹಾಂತರ ಪ್ರಾಪ್ತಿ ಯುಂಟೆಂಬ ನಂಬಿಕೆಗೆ ಆಧಾರವಿದ್ದಂತೆ ತೋರುವುದಿಲ್ಲ; ಆದರೆ ಬ್ರಾಹ್ಮಣದಲ್ಲಿ ಯಾಗವನ್ನು ವಿಹಿತರೀತಿ ಯಲ್ಲಿ ಮಾಡದೇ ಇದ್ದವನು, ಮೃತನಾಗಿ ಪುನಃ ಜನ್ಮವೆತ್ತಿ ಮರಣಾಧೀನನಾಗುತ್ತಾನೆ ಎಂದು ಹೇಳಿದೆ (ಶ. ಬಾ. ೧೦-೪-೩-೧೦). ಪ್ರಾಣ, ಆತ್ಮಾ, ಅಸು (ದೇಹಶಕ್ತಿ, ೧-೧೧೩-೧೬; ೧-೧೪೦-೪), ಮನಸ್ಸು ಯೋಚನೆ ಮತ್ತು ಭಾವನೆಗಳಿಗೆ ಆಶ್ರಯ ಮತ್ತು ಹೃದಯದಲ್ಲಿರುವುದು, (೪-೪೯-೫), ಇವುಗಳೆಲ್ಲವೂ ಜೀವ ವಾಚಕಗಳು. ಅನೇಕ ವಾಕ್ಯಗಳು ಅಥರ್ವವೇದದಲ್ಲಿ ವಿಶೇಷವಾಗಿ—ಅಸು ಅಥವಾ ಮನಸ್ಸು ಇದ್ದರೆ ಬದುಕು, ಇಲ್ಲದಿದ್ದರೆ ಸಾವು ಎಂದು ಹೇಳುತ್ತವೆ. ಅಸುನೀತಿ ಅಥವಾ ಅಸುನೀತ ಎಂಬುದು, ಮೃತರ ಜೀವಗಳನ್ನು ಈ ಲೋಕದಿಂದ ಊರ್ಧ್ವಲೋಕಕ್ಕೆ ಕರೆದುಕೊಂಡು ಹೋಗುವ ದಾರಿಗೆ ಹೆಸರು (೧೦-೧೫-೪, ೧೦-೧೬-೨)॰ ಅಂತ್ಯಕ್ರಿಯೆಯಲ್ಲಿ ಪ್ರಯೋಗಿಸುವ ಮಂತ್ರಗಳಲ್ಲಿ ಅಸು ಅಥವಾ ಮನಸ್ ಎಂಬ ಶಬ್ದಗಳನ್ನು ಉಪಯೋಗಿಸು ವುದಿಲ್ಲ; ಪಿತೃ, ಮಾತೃ, ಮೊದಲಾದುವುಗಳನ್ನೇ ಉಪಯೋಗಿಸುತ್ತಾರೆ. ಆದುದರಿಂದ ಆತ್ಮವೆಂಬುದು ನೆರಳಿ ನಂತಲ್ಲ, ಅದಕ್ಕೂ ವ್ಯಕ್ತಿತ್ವವಿತ್ತೆ. ಮನುಷ್ಯರು ದೇಹವನ್ನು ತ್ಯಜಿಸಿದ ಮೇಲೆಯೇ, ಅವರಿಗೆ ಅಮರತ್ವ ಪ್ರಾಪ್ತಿ (ಶ. ಬ್ರಾ. ೧೦-೪-೩-೯) ಯಾದರೂ, ಸ್ವರ್ಗಾದಿ ಲೋಕಗಳೂ ಪ್ರಾಕೃತವೇ ಆದುದರಿಂದ, ಶವಕ್ಕೂ ಮುಖ್ಯಸ್ಥಾನವಿದೆ. ಬೇರೆ ಲೋಕಗಳ ಅಸ್ತಿತ್ವದಲ್ಲಿ ದೇಹಕ್ಕೂ ಭಾಗವಿದೆ (೧೦-೧೬-೫, ಅ. ವೇ. ೧೪-೨-೨೬). ದೋಷಗಳು ಯಾವುವೂ ಇಲ್ಲದ (ಅ. ವೇ. ೬.೧೨೦-೩) ದೇಹವನ್ನು ಸಾಧಾರಣವಾದ ಪಾರ್ಥಿವ ದೇಹವೆನ್ನುವುದು ಸಾಧುವಲ್ಲ, ಅಗ್ನಿಯ ಪ್ರಭಾವದಿಂದ ಪರಿಪೂತವಾದ (೧೦.೧೬-೬ನ್ನು ಹೋಲಿಸು) ದೇಹ ಅಥವಾ ಈಚಿನ ವೇದಾಂತಿಗಳ 'ಸೂಕ್ಷ್ಮದೇಹ' ವೆನ್ನಬಹುದು. ದಹನವಾದ ಮೇಲೆ ತೀಖರಿಸಬೇಕಾದ ಅಗ್ನಿ ಗಳು ನಾಶವಾದರೆ, ಅದೇ ಕಠಿಣವಾದ ಶಿಕ್ಷೆಯೆಂದು ಹೇಳಿದೆ (ಶ. ಬ್ರಾ. ೧೧-೬-೩-೧೧; ೧೪-೬-೯-೨೮); ಇವೆ ರಿಂದ ಶವದ ಸ್ಥಾನವು ಎಷ್ಟು ಮಹತ್ತರವಾಪುದೆಂದು ತಿಳಿಯಬಹುದು. ೧೦-೧೬-೩ರಲ್ಲಿ, ಮೃತನ ನೇತ್ರವನ್ನು ಸೂರ್ಯನ ಸವಿಾಪಕ್ಕೂ, ಶ್ವಾಸವನ್ನು ವಾಯುವಿನ ಹತ್ತಿರಕ್ಕೂ ಹೋಗೆಂದು ಹೇಳಿದೆ. ಅಗ್ನಿಯು ಮೃತನನ್ನು

ಪರಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ ಎಂದ ಮೇಲೆ, ಒಂದೊಂದು ಅಂಗವು ಒಂದೊಂದು ಕಡೆ ಹೋಗುತ್ತದೆ ಎಂಬುದು ಸೂಕ್ತವಾಗಿ ಕಾಣುವುದಿಲ್ಲ. ಪ್ರಾಯಶಃ ವಿರಾಟ್ಪುರುಷನ ವರ್ಣನೆಗನುಸಾರವಾಗಿ ಈ ರೀತಿ ಹೇಳಿರಬಹುದು. ಅದೇ ವಾಕ್ಯದಲ್ಲಿ (೧೦.೧೬.೩ ; ೧೦-೫೮-೭ರಲ್ಲಿಯೂ ಇದೆ), ಮೃತನ ಜೀವವು ನೀರು ಅಥವಾ ಸಸ್ಯಗಳನ್ನು ಪ್ರವೇಶಿಸುತ್ತದೆ ಎಂದಿದೆ ; ಪ್ರಾಯಶಃ ಇದು ದೇಹಾಂತರ ಪ್ರವೇಶದ ಪ್ರಾರಂಭದೆಶೆ.

ಪಿತೃಗಳು ಅನುಸರಿಸಿದ ಮಾರ್ಗದಲ್ಲೇ ಮುಂದುವರಿಯುತ್ತಾ (೧೦-೧೪-೭), ಮೃತರ ಜೀವವು ನಿತ್ಯ ತೇಜಸ್ಸಿನ ಲೋಕಕ್ಕೆ ಹೋಗುತ್ತದೆ (೯.೧೧೩.೭) ; ಆಗ ದೇವತೆಗಳಿಗೆ ಸಮವಾದ ಕಾಂತಿವಿಶಿಷ್ಟನಾಗಿ (ಅ. ವೇ. ೧೧-೧-೩೭) ರಥದಲ್ಲಿ ಅಥವಾ ರೆಕ್ಕೆಗಳ ಮೇಲೆ (ಅ. ವೇ. ೪.೩೪-೪) ಅಥವಾ ಭೂತಗಳನ್ನು ಕೊಲ್ಲುವಾಗ ಅಗ್ನಿಯು ಉಪಯೋಗಿಸುವ ರೆಕ್ಕೆಗಳ ಮೇಲೆ (ವಾ. ಸ. ೧೪-೫೨) ಹೋಗುತ್ತಾನೆ. ಮರುತದಿಂದ ಮೇಲಕ್ಕೆ ತೇಲಿಸಲ್ಪಟ್ಟು, ಹಿತವಾದ ವಾಯುವನ್ನು ಸೇವಿಸುತ್ತಾ ಮತ್ತು ಮಳೆ ಹನಿಗಳಿಂದ ತಂಪುಮಾಡಲ್ಪಟ್ಟು, ಜೀವನು ತನ್ನ ಪುರಾತನ ರೂಪವನ್ನು ಪುನಃ ಪಡೆಯುತ್ತಾನೆ (ಅ. ವೇ. ೧೪-೨-೨೧ರಿಂದ ೨೬) ಮತ್ತು ವೈಭವ ವಿಶಿಷ್ಟನಾಗಿ, ಯಮನ ಜೊತೆಯಲ್ಲಿ, ಪಿತೃಗಳು ಸಂತೋಷದಿಂದ ಕಾಲ ಕಳೆಯುತ್ತಿರುವ ಅತ್ಯುನ್ನತವಾದ ಸ್ವರ್ಗವನ್ನು ಸೇರುತ್ತಾನೆ (೧೦-೧೪-೪, ೧೦ ; ೧೦-೧೫೪-೪, ೫). ಈ ರೀತಿ ಸ್ವರ್ಗಪ್ರಾಪ್ತಿಗೆ ಮನೆಗೆ ವಾಪಸ್ಸು ಬರುವುದು ಎಂದು ಹೇಳಿದೆ (ಅಸ್ತಂ ; ೧೦-೧೪-೪). ಯಮನು ಈತನನ್ನು ಸ್ವಕೀಯನೆಂದು ತಿಳಿದು (ಅ. ವೇ. ೧೪-೨-೩೭),ಅವನಿಗೂ ಒಂದು ವಿಶ್ರಾಂತಿ ಸ್ಥಾನವನ್ನು ಕೊಡುತ್ತಾನೆ (೧೪-೧೪-೪).

ಶತಪಥಬ್ರಾಹ್ಮಣದ ಪ್ರಕಾರ, ಮೃತರು ಈ ಲೋಕವನ್ನು ಬಿಟ್ಟು ಹೊರಟು, ಎರಡು ಬೆಂಕಿಗಳ ಮಧ್ಯೆ ಹಾದುಹೋಗುತ್ತಾರೆ ; ಆ ಬೆಂಕಿಗಳು ಕೆಟ್ಟ ಜೀವವನ್ನು ಸುಡುತ್ತವೆ ; ಉತ್ತಮರಷ್ಟು ಮಾತ್ರ ಮುಂದಕ್ಕೆ ಹೋಗಲು ಬಿಡುತ್ತವೆ ಹೀಗೆ ಮುಂದೆ ಹೊರಟ ಉತ್ತಮ ಜೀವಗಳು ಪಿತೃಗಳ ಸಮಿಾಪಕ್ಕೆ ಹೋಗುವ ದಾರಿಯನ್ನೋ ಅಥವಾ ಸೂರ್ಯನ ಹತ್ತಿರ ಹೋಗುವ ದಾರಿಯನ್ನೋ ಹಿಡಿದು ಮುಂದೆ ಸಾಗುತ್ತಾರೆ (ಶ. ಬ್ರಾ. ೧೪-೯-೩.೨ ; ಇತ್ಯಾದಿ). ಉಪನಿಷತ್ತುಗಳಲ್ಲಿ ಬ್ರಹ್ಮಜ್ಞಾನ ಪಡೆದಿರುವವರಿಗೆ ಎರಡು ದಾರಿಗಳು ಉಕ್ತವಾಗಿವೆ. ಒಂದು (ಪರಿಪೂರ್ಣ ಜ್ಞಾನಿಗಳಿಗೆ) ' ಬ್ರಹ್ಮ 'ನಲ್ಲಿಗೆ ಹೋಗುವುದು- ಎರಡನೆಯದು ಸ್ವರ್ಗದ ದಾರಿ. ತಮ್ಮ ಪುಣ್ಯಕರ್ಮಗಳ ಫಲ ಮುಗಿದೊಡನೆಯೇ, ಈ ಸ್ವರ್ಗಲೋಕದಿಂದ ಬಂದು, ಪುನಃ ಭೂಮಿಯಲ್ಲಿ ಜನಿಸುತ್ತಾರೆ. 'ಆತ್ಮ 'ದ ಪರಿಚಯವೇ ಇಲ್ಲದವರು ದುರ್ದೇವತೆಗಳ ಅಥವಾ ಭೂತಪ್ರೇತಗಳ ಲೋಕಕ್ಕೆ ಹೋಗುತ್ತಾರೆ ಅಥವಾ ದುಷ್ಪರಾಗಿ, ಭೂಮಿಯಲ್ಲೆ ಪುನಃ ಜನ್ಮವೆತ್ತುತ್ತಾರೆ.

॥ ಸಾಯಣಭಾಷ್ಯಂ ॥

ಉದೀರತಾಮಿತಿ ಚತುರ್ದಶರ್ಚಂ ಪಂಚದಶಂ ಸೂಕ್ತಂ । ಅತ್ರಾನುಕ್ರಮ್ಯತೇ । ಉದೀರತಾಂ ಷಳೂನಾ ತಂಖಃ ಪಿತ್ರ್ಯಂ ಜಗತ್ಯೇಕಾದಶೀ । ಯಾಮಾಯನಾಃ ಪರೇ ಪಂಚೇತಿ ವಚನಾದ್ಯಮಪುತ್ರಃ ತಂಖಾಖ್ಯ ಋಷಿಃ । ಅಗ್ನಿಷ್ವಾತ್ತಾ ಇತ್ಯೇಷಾ ಜಗತೀ ತಿಷ್ಟಾಸ್ತ್ರಿಷ್ಟುಭಃ । ಪಿತರೋ ದೇವತಾ ॥ ಗತಃ ಸೂಕ್ತವಿನಿಯೋಗಃ ॥ ಅಷ್ಟಕಾಯಾಮುದೀರತಾಮವರ ಇತ್ಯಾದ್ಯಾ ಅಷ್ಟಾವೃಚೋ ಹೋಮಾರ್ಥಾಃ ॥ ಸೂತ್ರಿತಂ ಚ । ಉದೀರತಾಮವರ ಉತ್ಪರಾಸ ಇತ್ಯಷ್ಟಾಭಿರ್ಜುಹ್ವತ್ಯಾ । ಆ. ಗೃ ೨ ೪-೬ । ಇತಿ ॥

ಮಹಾಪಿತೃಯಜ್ಞೇ ಪಿತರಃ ಸೋಮವಂತ ಇತ್ಯಸ್ಯಾನುವಾಕ್ಯೋದೀರತಾಮಿತ್ಯೇಷಾ । ಸೂತ್ರಿತಂ ಚ । ಪಿತರೋಽಗ್ನಿಷ್ವಾತ್ತಾ ಯಮ ಉದೀರತಾಮವರ ಉತ್ಪರಾಸಃ । ಅ. ೨-೧೯ । ಇತಿ ॥ ಅಗ್ನಿಮಾರುತೇಽಪ್ಯೇಷಾ ಧಾಯ್ಯಾ । ಸೂತ್ರಿತಂ ಚ । ಮಾತಲೀ ಕವ್ಯೈರ್ಯಮೋ ಅಂಗಿರೋಭಿರುದೀರತಾಮವರ ಉತ್ಪರಾಸಃ । ಅ. ೫-೨೦ । ಇತಿ ॥

ಅನುವಾದವು—ಉದೀರತಾಂ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಉದೀರತಾಂ ಷಳೂನಾ ಶಂಖುಃ ಪಿತ್ರ್ಯಂ ಜಗತ್ಯೇಕಾದಶೀ** ಎಂದು ಹೇಳಿರುವುದು. **ಯಾಮಾಯನಃ ಪರೇ ಪಂಚ** ಎಂದು ಅನುಕ್ರಮಣಿಕೆಯಲ್ಲಿ ಹೇಳಿರುವುದರಿಂದ (ಮುಂದಿನ ಐದು ಸೂಕ್ತಗಳಿಗೆ ಯಮನ ಪುತ್ರನು ಋಷಿಯು) ಈ ಸೂಕ್ತಕ್ಕೆ ಯಮನ ಪುತ್ರನಾದ ಶಂಖು ಎಂಬುವನು ಋಷಿಯು. ಅಗ್ನಿಷ್ವಾತ್ತಾಃ ಎಂಬ ೧೧ನೆಯು ಋಕ್ಕು ಜಗತೀ ಛಂದಸ್ಕವು. ಉಳಿದ ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು ; ಪಿತೃಗಳು ದೇವತೆಯು ; ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಆಪ್ಯಕಾ ಎಂಬ ಕರ್ಮದಲ್ಲಿ **ಉದೀರತಾಮವರೇ** ಎಂದು ಮೊದಲಾಗುವ ಈ ಸೂಕ್ತದ ಮೊದಲಿನ ಎಂಟು ಋಕ್ಕುಗಳನ್ನು ಹೋಮಾರ್ಥವಾಗಿ ಉಪಯೋಗಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ-**ಉದೀರತಾಮವರ ಉತ್ಪರಾಸ ಇತ್ಯಷ್ಟಾಭಿರ್ಜುಹ್ವಾ** ಎಂಬ ಸೂತ್ರದಿಂದ (ಅ. ಗೃ. ೨-೪-೬) ವಿವೃತವಾಗಿರುವುದು. ಮಹಾಪಿತೃಯಜ್ಞದಲ್ಲಿ **ಪಿತರಃ ಸೋಮವಂತಃ** ಎಂಬ ವಿಶೇಷ ಪಿತೃಗಣವನ್ನುದ್ದೇಶಿಸಿ ಮಾಡುವ ಹೋಮದಲ್ಲಿ ಉದೀರತಾಂ ಎಂಬ ಮೊದಲನೆಯ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಪಿತರೋಗ್ನಿಷ್ವಾತ್ತಾ ಯಮ ಉದೀರತಾಮವರ ಉತ್ಪರಾಸಃ** ಎಂಬ ಸೂತ್ರದಿಂದ (ಅ. ೨-೧೯) ವಿವೃತವಾಗಿರುವುದು ಮತ್ತು ಅಗ್ನಿಮಾರುತಶಸ್ತ್ರ ಮಂತ್ರಗಳಲ್ಲಿ ಉದೀರತಾಂ ಎಂಬ ಈ ಋಕ್ಕನ್ನು ಧಾಯ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ-**ಮಾತಲೀ ಕವ್ಯೈರ್ಯಮೋ ಅಂಗಿರೋಭಿರುದೀರತಾಮವರ ಉತ್ಪರಾಸಃ** ಎಂಬ ಸೂತ್ರದಿಂದ (ಅ. ೫-೨೦) ವಿವೃತವಾಗಿರುವುದು.

ಸೂಕ್ತ—೧೫

ಮಂಡಲ—೧೦ ॥ ಅನುವಾಕ—೧। ಸೂಕ್ತ—೧೫ ॥
ಅಷ್ಟಕ—೭ ॥ ಅಧ್ಯಾಯ—೬ ॥ ವರ್ಗ—೧೭, ೧೮, ೧೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥
ಋಷಿಃ—ಶಂಖೋ ಯಾಮಾಯನಃ॥
ದೇವತಾ—ಪಿತರಃ ॥
ಛಂದಸ್—೧-೧೦, ೧೩-೧೪, ತ್ರಿಷ್ಟುಪ್ । ೧೧, ಜಗತೀ ॥

॥ ಸಂಹಿತಾಪಾಠಃ ॥

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ ।
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತು ಪಿತರೋ ಹವೇಷು ॥ ೧ ॥

। ಪದಪಾಠಃ ।

ಉತ್ । ಈರತಾಂ । ಅವರೇ । ಉತ್ । ಪರಾಸಃ । ಉತ್ । ಮಧ್ಯಮಾಃ । ಪಿತರಃ । ಸೋಮ್ಯಾಸಃ ।
ಅಸುಂ । ಯೇ । ಈಯುಃ । ಅವೃಕಾಃ । ಋತಜ್ಞಾಃ । ತೇ । ನಃ । ಅವಂತು । ಪಿತರಃ । ಹವೇಷು ॥

। ಸಾಯಣಭಾಷ್ಯಂ ।

ತ್ರಿವಿಧಾಃ ಪಿತರ ಉತ್ತಮಾ ಮಧ್ಯಮಾ ಅಧಮಾಶ್ಚೇತಿ । ಯಥಾವಿಧಂ ಶ್ರೌತಂ ಕರ್ಮಾನುಷ್ಠಾಯ ಪಿತೃತ್ವಂ ಪ್ರಾಪ್ತಾ ಉತ್ತಮಾಃ । ಸ್ಮಾರ್ತಕರ್ಮಮಾತ್ರಪರಾ ಮಧ್ಯಮಾಃ । ಅತ್ರಾಪಿ ಕೈಶ್ಚಿತ್ಸಂಸ್ಕಾರೈರ್ವಿಕಲಾ ಅಧಮಾಃ । ಏತದೇವಾಭಿಪ್ರೇತ್ಯ ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ ಇತ್ಯಾದಿಮಂತ್ರ ಅವ್ಯಾಖ್ಯಾತಃ । ತೇಷ್ವವರೇ ನಿಕೃಷ್ಟಾ ಉದೀರತಾಂ । ಉತ್ತಮಂ ಹವಿಃ ಪ್ರಾಪ್ನುವಂತು । ಪರಾಸ ಉತ್ತಮಾಃ ಪಿತರ ಉದೀರತಾಂ । ಮಧ್ಯಮಾಃ ಪಿತರಶ್ಚೋದೀರತಾಂ । ತೇ ಸರ್ವೇಽಪ್ಯಸ್ಮದ್ವಿಷಯೇ ಸೋಮ್ಯಾಸಃ ಸೋಮ್ಯಾ ಅನುಗ್ರಹಪರಾಃ ಸಂತು । ಯೇ ಪಿತರೋಽವೃಕಾ ವೃಕವದರಣ್ಯಶ್ವವದಸ್ಮಾಸು ಹಿಂಸಾಮಕುರ್ವಂತ ಋತಜ್ಞಾ ಅಸ್ಮದನುಷ್ಠಿತಂ ಯಜ್ಞಂ ಜಾನಂತೋಽಸುಮಸ್ಮತ್ಪ್ರಾಣವಿಷಯಂ ರಕ್ಷಿತುಂ ಪ್ರಾಪ್ತಾಃ ತೇ ಪಿತರೋ ಹವೇಷ್ವಸ್ಮದೀಯೇಷ್ವಾಹ್ವಾನೇಷು ನೋಽಸ್ಮಾನವಂತು । ರಕ್ಷಂತು ॥

। ಪ್ರತಿಪದಾರ್ಥ ।

ಅವರೇ—ಕೆಳಗಿನ ಪ್ರದೇಶದಲ್ಲಿರುವ ಪಿತೃಗಳು । ಉದೀರತಾಂ—ನಮ್ಮ ಹವಿಸ್ಸನ್ನು ಪಡೆಯಲಿ । ಪರಾಸಃ—ಉತ್ತಮ ಲೋಕದಲ್ಲಿರುವವರೂ । ಉತ್—ನಮ್ಮ ಹವಿಸ್ಸನ್ನು ಪಡೆಯಲಿ । ಮಧ್ಯಮಾಃ—ಮಧ್ಯಮ ಲೋಕದಲ್ಲಿರುವ । ಪಿತರಃ ಉತ್—ಪಿತೃಗಳೂ ಸ್ವೀಕರಿಸಲಿ । ಸೋಮ್ಯಾಸಃ—ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ । ಯೇ ಪಿತರಃ—ಯಾವ ಪಿತೃಗಳು । ಅವೃಕಾಃ—ತೋಳಗಳಂತೆ ಕ್ರೂರಿಗಳಲ್ಲದವರಾಗಿಯೂ । ಋತಜ್ಞಾಃ—ನಮ್ಮ ಯಜ್ಞಕರ್ಮಗಳನ್ನು ತಿಳಿದವರಾಗಿಯೂ । ಅಸುಂ—ನಮ್ಮ ಪ್ರಾಣವನ್ನು । ಈಯುಃ—ರಕ್ಷಿಸಲು ಬಂದಿರುವರೋ । ತೇ—ಅವರು । ನಃ—ನಮ್ಮನ್ನೂ । ಹವೇಷು—ನಮ್ಮ ಆಹ್ವಾನಕಾಲಗಳಲ್ಲಿ । ಅವಂತು—ರಕ್ಷಿಸಲಿ.

। ಭಾವಾರ್ಥ ।

ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ, ಮಧ್ಯಮಲೋಕದಲ್ಲಿರುವವರೂ ನಮ್ಮ ಹವಿಸ್ಸುಗಳನ್ನು ಸ್ವೀಕರಿಸಲಿ ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣವನ್ನು ರಕ್ಷಿಸಲು ಬಂದಿರುವವರೂ ಆದ ಆ ಪಿತೃಗಳು ನಮ್ಮ ಆಹ್ವಾನಕಾಲದಲ್ಲಿ ನಮ್ಮನ್ನು ರಕ್ಷಿಸಲಿ.

English Translation

Let the lower, the upper, the intermediate Pitris, rise up, accepting the Soma libation : may those progenitors who, unlike wolves, acknowle-

dging our offerings, have come to preserve our lives, protect us upon our invocations.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

ಉದೀರತಾಮವರ ಉದೀರತಾಂ ಪರ ಉದೀರತಾಂ ಮಧ್ಯಮಾಃ ಪಿತರಃ ಸೋಮ್ಯಾಃ ಸೋಮ-ಸಂಪಾದಿನಸ್ತೇಽಸುಂ ಪ್ರಾಣಮನ್ವೀಯುರವೃಕಾ ಅನಮಿತ್ರಾಃ ಸತ್ಯಜ್ಞಾ ವಾ ಯಜ್ಞಜ್ಞಾ ವಾ ತೇ ನ ಆಗಚ್ಛಂತು ಪಿತರೋ ಹ್ವಾನೇಷು ॥

(ನಿ. ೧೧-೧೯)

ಅವರೇ ಕೆಳಭಾಗದಲ್ಲಿ ಎಂದರೆ ಪೃಥ್ವಿಯಲ್ಲಿ ಅಥವಾ ಪಿತೃಲೋಕದ ಕೆಳಭಾಗದಲ್ಲಿರುವ ಪಿತೃಗಳೂ ಪರಾಸಃ ಡ್ಯುಲೋಕವಾಸಿಗಳಾದ ಪಿತೃಗಳೂ, ಮಧ್ಯಮಾಃ—ಮಧ್ಯಮಸ್ಥಾನರಾದ ಅಂತರಿಕ್ಷದಲ್ಲಿ ವಾಸಿಸುವ ಪಿತೃಗಳೂ ಸೋಮ್ಯಾಸಃ—ಹಿಂದೆ ಯಜ್ಞಗಳಲ್ಲಿ ದೇವತೆಗಳಿಗೆ ಅರ್ಪಿಸುವುದಕ್ಕಾಗಿ ಸೋಮವನ್ನು ಸಿದ್ಧಪಡಿಸಿ ಅರ್ಪಿಸಿದವರೂ, ಯಾರು ! ನಮ್ಮ ಪ್ರಾಣಗಳನ್ನು ರಕ್ಷಿಸಲು ಬಂದಿರುವರೋ ಅವರೂ, ಯಾರಿಗೂ ಯಾವವಿಧವಾದ ಹಿಂಸೆಯನ್ನು ಮಾಡದಿರುವವರೂ, ಶತ್ರುಗಳಲ್ಲದವರೂ ಎಂದರೆ ಕೇಡನ್ನು ಬಯಸದಿರುವವರೂ ಸತ್ಯ ಅಥವಾ ಯಜ್ಞಸ್ವರೂಪವನ್ನು ತಿಳಿದವರೂ ಆದ ಯಾವ ಯಾವ ಪಿತೃಗಳಿರುವರೋ ಅವರೆಲ್ಲರೂ ಈಗ ನಾವು ಮಾಡುತ್ತಿರುವ ಆಹ್ವಾನದಲ್ಲಿ ಎಂದರೆ ಆಹ್ವಾನದಿಂದ ನಮ್ಮಲ್ಲಿಗೆ ಬಂದು ನಮ್ಮನ್ನು ರಕ್ಷಿಸಲಿ.

ಅವೃಕಾಃ ಎಂಬ ಶಬ್ದಕ್ಕೆ—ವೃಕಃ ಎಂದರೆ ತೋಳವು. ತೋಳದ ಸ್ವಭಾವವು ಹಿಂಸೆಯನ್ನು ಮಾಡುವುದೇ ಆಗಿದೆ. ಈ ಶಬ್ದವನ್ನು ಮನುಷ್ಯರ ಪರವಾಗಿ ಉಪಯೋಗಿಸಿದಾಗ ಹಿಂಸೆಮಾಡುವವರು, ದುಷ್ಟರು ಎಂದರ್ಥವಾಗುವುದು. ಅವೃಕಾಃ ಎಂದರೆ ವೃಕರಲ್ಲದವರು, ಯಾರಿಗೂ ಹಿಂಸೆಯನ್ನು ಮಾಡದಿರುವವರು, ಸಜ್ಜನರು ಎಂದಭಿಪ್ರಾಯವು.

ಅನಮಿತ್ರಾಃ—ಮಿತ್ರನೆಂದರೆ, ಸ್ನೇಹಿತ, ಹಿತಕಾರಿ ಎಂದು. ಅಮಿತ್ರ ಎಂದರೆ ಮಿತ್ರವಲ್ಲದವನು, ಶತ್ರುವು ; ಅನಮಿತ್ರ ಎಂದರೆ ಶತ್ರುವಲ್ಲದವನು ಎಂದರೆ ಸ್ನೇಹಿತನು, ಹಿತಕಾರಿಯು ಎಂದೇ ಅರ್ಥವು ಆದ್ದರಿಂದ ಮಿತ್ರಶಬ್ದಕ್ಕೂ ಅನಮಿತ್ರ ಶಬ್ದಕ್ಕೂ ಒಂದೇ ಅರ್ಥವಿರುವುದು. ಈ ಶಬ್ದದಲ್ಲಿ ಎರಡಾವರ್ತಿ ನಿಷೇಧಾರ್ಥಸೂಚಕ ಉಪಸರ್ಗಗಳಿರುವುದರಿಂದ (Two negetives make one affirmative) ಶಬ್ದವು ಪೂರ್ವದ ಅರ್ಥವನ್ನೇ ಸೂಚಿಸುವುದು.

ಭಾಷ್ಯಕಾರರು ಪಿತೃಗಳಲ್ಲಿ ಮೂರು ವಿಧವೆಂದು ಹೇಳಿರುವರು—ಉತ್ತಮಾ ಮಧ್ಯಮಾ ಅಧಮಾಶ್ಚೇತಿ ! ಹೇಗೆಂದರೆ—

ಉತ್ತಮಾಃ—ಯಥಾವಿಧಂ ಶ್ರೌತಂ ಕರ್ಮಾನುಷ್ಠಾಯ ಪಿತೃತ್ವಂ ಪ್ರಾಪ್ತಾ ಉತ್ತಮಾಃ ! ಉತ್ತಮ ಕರ್ಮಗಳಾದ ಯಜ್ಞಯಾಗಾದಿಗಳನ್ನೂ ಯಥಾವಿಧಿಯಾಗಿ ಮಾಡಿ ಆ ಸತ್ಕರ್ಮಾನುಷ್ಠಾನದ ಫಲವಾಗಿ ಪಿತೃಸ್ಥಾನವನ್ನು ಪಡೆದವರು ಪಿತೃಗಳಲ್ಲಿ ಉತ್ತಮರೆಂದು ಪ್ರಸಿದ್ಧಿಯನ್ನು ಪಡೆದಿದಾರೆ.

ಮಧ್ಯಮಾಃ—ಸ್ಮಾರ್ತಕರ್ಮಪರಾ ಮಧ್ಯಮಾಃ ! ಸ್ಮೃತಿಪುರಾಣಾದಿಗಳಲ್ಲಿ ಹೇಳಿರುವಂತೆ ದೇವತೆಗಳನ್ನು ಆರಾಧಿಸಿ ಆ ಪುಣ್ಯದಿಂದ ಪಿತೃತ್ವವನ್ನು ಪಡೆದ ಪಿತೃಗಳು ಮಧ್ಯಮರು.

ಅಥವಾ—**ಅತ್ರಾಪಿ ಕೈಶ್ಚಿತ್ಸಂಸ್ಕಾರೈರ್ವಿಕಲಾ ಅಥವಾ**। ಮೇಲೆ ಹೇಳಿದ ಕರ್ಮಾದಿಗಳಲ್ಲಿ ಲೋಪದೋಷಗಳುಂಟಾಗಿ ಕರ್ಮವನ್ನು ಸಾಂಗವಾಗಿ ನೆರವೇರಿಸಲಸಮರ್ಥರಾದವರು ಪಿತೃಗಳಲ್ಲಿ ಅಧಮರೆನಿಸುವರು ಎಂದು ಉತ್ತಮ ಮಧ್ಯಮಾಧಮರೆಂಬ ಮೂರುವಿಧ ಪಿತೃಗಳ ಸ್ವರೂಪವನ್ನೂ ಅವರ ಸ್ಥಾನಮಾನಗಳನ್ನೂ ತಿಳಿಸಿದಾರೆ. ಇದನ್ನನುಸರಿಯೇ **ಯೇ ಅಗ್ನಿದಗ್ಧಾಃ** ಎಂಬ ಮಂತ್ರವೂ ಇರುವುದು. ಎಂದರೆ ಅಗ್ನಿಯಲ್ಲಿ ಯಾರ ಮೃತಶರೀರವು ಮಂತ್ರಪೂರ್ವಕವಾದ ಸಂಸ್ಕಾರಾದಿಗಳಿಂದ ದಹಿಸಲ್ಪಡುವುದೋ ಅವರು ಪಿತೃಗಳಲ್ಲಿ ಉತ್ತಮ ಸ್ಥಾನವನ್ನು ಗಳಿಸುವರು. ಇವರಿಗೆ ಅಗ್ನಿದಗ್ಧರೆಂದು ಹೆಸರು. ಹಾಗಿಲ್ಲದೆ, ಅಗ್ನಿಸಂಸ್ಕಾರಾದಿಗಳಿಲ್ಲದೆ ನೀರಿನಲ್ಲಿ ಮುಳುಗಿಹೋಗುವುದು, ಔಪರಕರ್ಮವನ್ನು ಮಾಡಲು ಕರ್ತೃವಿಲ್ಲದಿರುವುದು, ಅಥವಾ ಯಥಾವಿಧಿಯಾಗಿ ಕರ್ಮದಿಂದ ಸಂಸ್ಕೃತರಾಗದಿರುವವರು ಇವರೆಲ್ಲಾ ಅನಗ್ನಿದಗ್ಧರೆಂದು ಹೇಳಲ್ಪಡುವರು. ಇವರು ಪಿತೃಗಳಲ್ಲಿ ಮಧ್ಯಮಸ್ಥಾನವನ್ನೋ ಅಥವಾ ಅಧಮ ಸ್ಥಾನವನ್ನೋ ಪಡೆಯುವರು. ಈ ವಿಧವಾದ ಪಿತೃಗಳೆಲ್ಲರೂ, ಸೋಮಸಂಪಾದಿಗಳೂ, ಔಂಸಾರಹಿತರೂ, ಪ್ರಾಣವನ್ನು ರಕ್ಷಿಸುವರೂ, ಯಜ್ಞಾನುಷ್ಠಾನಕರ್ಮಗಳನ್ನು ತಿಳಿದವರೂ ಆದ ಯಾವ ಯಾವ ಪಿತೃಗಳಿರುವರೋ ಅವರೆಲ್ಲರೂ ನಮ್ಮ ಆಹ್ವಾನವನ್ನು ಮನ್ನಿಸಿ ನಮ್ಮನ್ನು ರಕ್ಷಿಸಲಿ ಎಂಬಭಿಪ್ರಾಯವು ಈ ಋಕ್ಕಿನಲ್ಲಿ ಉಕ್ತವಾಗಿದೆ.

। ಸಂಹಿತಾಪಾಠಃ ।

ಇದಂ ಪಿತೃಭ್ಯೋ ನಮೋ ಅಸ್ತ್ವದ್ಯ ಯೇ ಪೂರ್ವಾಸೋ ಯ ಉಪರಾಸ ಈಯುಃ ।
ಯೇ ಪಾರ್ಥಿವೇ ರಜಸ್ಯಾ ನಿಷತ್ತಾ ಯೇ ವಾ ನೂನಂ ಸುವೃಜನಾಸು ವಿಕ್ಷು ॥ ೨ ॥

। ಪದಪಾಠಃ ।

ಇದಂ । ಪಿತೃಭ್ಯಃ । ನಮಃ । ಅಸ್ತು । ಅದ್ಯ । ಯೇ । ಪೂರ್ವಾಸಃ । ಯೇ । ಉಪರಾಸಃ । ಈಯುಃ ।
ಯೇ । ಪಾರ್ಥಿವೇ । ರಜಸಿ । ಆ । ನಿಷತ್ತಾಃ । ಯೇ । ವಾ । ನೂನಂ । ಸುವೃಜನಾಸು । ವಿಕ್ಷು ॥೨।

। ಸಾಯಣಭಾಷ್ಯಂ ।

ಮಹಾಪಿತೃಯಜ್ಞೇ ಪಿತರೋ ಬರ್ಹಿಷದ ಇತ್ಯಸ್ಯೇದಂ ಪಿತೃಭ್ಯ ಇತಿ ದ್ವಿತೀಯಾನುವಾಕ್ಯಾ । ಸೂತ್ರಂ ತು ಪೂರ್ವಮೇವೋದಾಹೃತಂ । ಆ. ೨-೧೯ ॥ ಇದಂ ಪಿತೃಭ್ಯ ಇತ್ಯೇಷಾ ಧಾಯ್ಯಾ । ಸೂತ್ರಿತಂ ಚ । ಅಹಂ ಪಿತ್ವಾನ್ತ್ಸ್ವವಿದತ್ರಾ ಅವಿತ್ಸೀದಂ ಪಿತೃಭ್ಯೋ ನಮೋ ಅಸ್ತ್ವದ್ಯ ಸ್ವಾದುಷ್ಕಿಲಾಯಮಿತಿ ಚತಸ್ರಃ । ಆ. ೫-೨೦ । ಇತಿ ॥

ಪೂರ್ವಾಸೋ ಯಜಮಾನೋತ್ಪತ್ತೇಃ ಪೂರ್ವಮುತ್ಪನ್ನಾ ಜ್ಯೇಷ್ಠಭ್ರಾತೃಪಿತಾಮಹಾದಯೋ ಯ ಈಯುಃ ಪಿತೃಲೋಕಂ ಪ್ರಾಪ್ತಾಃ । ಯೇ ಚಾಸ್ಯ ಉಪರಾಸೋ ಯಜಮಾನಜನ್ಮನ ಉಪರಿಷ್ಟಾದ್ಯೇ

ತ್ಪನ್ನಾಃ ಕನಿಷ್ಠಭ್ರಾತೃಸ್ವಪುತ್ರಾದಯ ಈಯುಃ ಪಿತೃಲೋಕಂ ಪ್ರಾಪ್ತಾಃ । ಯೇಽಪ್ಯನ್ಯೇ ಪಾರ್ಥಿವೇ ಪೃಥಿವೀಸಂಬಂಧಿನಿ ರಜಸಿ ರಜೋಗುಣಕಾರ್ಯೇಽಸ್ಮಿನ್ಮರ್ತ್ಯಾ ನಿಷತ್ತಾ ಹವಿಃ ಸ್ವೀಕರ್ತುಮಾಗತ್ಯೋಪವಿಷ್ಟಾಃ । ಯೇ ವಾ ಕೇಚಿದನ್ಯೇ ಬಂಧುವರ್ಗರೂಪಾಃ ಪಿತರೋ ವಿಕ್ಷು ಬಂಧುರೂಪಾಸು ಪ್ರಜಾಸ್ವ ನಿಷತ್ತಾಃ ಶ್ರಾದ್ಧಾದಿಸ್ವೀಕಾರಾಯಾಗತ್ಯೋಪವಿಷ್ಟಾಃ । ಈದೃಶೀಷು ವಿಕ್ಷು । ಸುವ್ಯಜನಾಸು । ವ್ಯಜ್ಯತೇ ಪರಿತ್ಯಜ್ಯತೇ ದಾರಿದ್ರ್ಯಮನೇನೇತಿವ್ಯಜನಂ ಧನಂ । ಶೋಭನಂ ವ್ಯಜನಂ ಯಾಸಾಂ ತಾಃ ಸುವ್ಯಜನಾಃ । ತಾದೃಶೀಷು । ಧನಸಮೃದ್ಧಾಸ್ವ ಶ್ರಾದ್ಧಾದಿಕರ್ಮಪರಾಸ್ವಿತ್ಯರ್ಥಃ । ಸರ್ವೇಭ್ಯ ಉಕ್ತೇಭ್ಯಃ ಪಿತೃಭ್ಯೋಽದ್ಯಾಸ್ಮಿನ್ಕರ್ಮಣೀದಂ ನಮೋಽಸ್ತು । ಅಯಮಾಹುತಿಪ್ರದಾನಪೂರ್ವಕೋ ನಮಸ್ಕಾರೋ ಭವತು ॥

॥ ಪ್ರತಿಪದಾರ್ಥ ॥

ಪೂರ್ವ್ಯಾಸಃ—ನಮಗಿಂತಲೂ ಹಿರಿಯರಾದ ಪಿತೃಪಿತಾಮಹಾದಿಗಳಲ್ಲಿ । **ಯೇ**—ಯಾರು । **ಈಯುಃ**—ಪಿತೃಲೋಕವನ್ನು ಸೇರಿರುವರೋ । **ಉಪರಾಸಃ**—ನಮಗಿಂತ ಕಿರಿಯವರಲ್ಲಿ । **ಯೇ**—ಯಾರು ಮೃತಿಯನ್ನು ಹೊಂದಿರುವರೋ । **ಯೇ**—ಯಾರು । **ಪಾರ್ಥಿವೇ ರಜಸಿ**—ಪಾರ್ಥಿವಲೋಕದಲ್ಲಿ (ಹವಿಸ್ಸಿಗಾಗಿ ಬಂದು) । **ಅ ನಿಷತ್ತಾಃ**—ಕುಳಿತಿರುವರೋ । **ಯೇ ವಾ**—ಉಳಿದ ಯಾವ ಪಿತೃಗಳು। **ಸುವ್ಯಜನಾಸು**—ಉತ್ತಮವಾದ ಧನವಂತರಾದ । **ವಿಕ್ಷು**—ಪ್ರಜೆಗಳ ನಡುವೆ ಕುಳಿತಿರುವರೋ ಅಂತಹ । **ಪಿತೃಭ್ಯಃ**—ಸಕಲ ಪಿತೃಗಳಿಗೂ । **ಅದ್ಯ**—ಈ ಯಾಗಕಾಲದಲ್ಲಿ । **ಇದಂ ನಮಃ**—ಈ ನಮಸ್ಕಾರವು । **ಅಸ್ತು**—ಇರಲಿ.

॥ ಭಾವಾರ್ಥ ॥

ನಮಗಿಂತಲೂ ಹಿರಿಯರಾದ ಪಿತೃಪಿತಾಮಹಾದಿಗಳಲ್ಲಿ ಯಾರು ಪಿತೃಲೋಕವನ್ನು ಸೇರಿರುವರೋ, ನಮಗಿಂತ ಕಿರಿಯವರಲ್ಲಿ ಯಾರು ಮೃತಿಯನ್ನು ಹೊಂದಿರುವರೋ, ಯಾರು ಪಾರ್ಥಿವಲೋಕದಲ್ಲಿ ಹವಿಸ್ಸಿಗಾಗಿ ಬಂದು ಕುಳಿತಿರುವರೋ, ಉಳಿದ ಯಾವ ಪಿತೃಗಳು ಉತ್ತಮರಾದ ಧನವಂತರ ನಡುವೆ ಕುಳಿತಿರುವರೋ ಅಂತಹ ಸಕಲ ಪಿತೃಗಳನ್ನೂ ಈ ಯಾಗಕಾಲದಲ್ಲಿ ನಮಸ್ಕರಿಸುತ್ತೇನೆ.

English Translation

Let this our adoration be to-day addressed to those Pitris our predecessors, to those our successors, who have departed (to the world of the manes); to those who are seated in the terrestrial sphere, to those who are present among opulent people.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞವೆಂಬ ಇಷ್ಟಿಯಲ್ಲಿ **ಪಿತರೋ ಬರ್ಹಿಷದಃ** ಎಂಬ ಗುಂಪಿನ ಪಿತೃಗಳನ್ನುದ್ದೇಶಿಸಿ ಹೋಮ ಮಾಡುವಾಗ ಇದಂ ಪಿತೃಭ್ಯಃ ಎಂಬ ಈ ಋಕ್ಕನ್ನು ಎರಡನೆಯ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದಲ್ಲಿ ಹೇಳಿರುವುದನ್ನು ಹಿಂದೆಯೇ ಉದಾಹರಿಸಲಾಗಿದೆ (ಅ. ೨-೧೯) ಅಗ್ನಿಮಾರುತಶಸ್ತ್ರಮಂತ್ರಗಳಲ್ಲಿಯೂ ಇದಂ ಪಿತೃಭ್ಯಃ ಎಂಬ ಈ ಋಕ್ಕನ್ನು ಧಾಯ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆಹಂ ಪಿತೃನ್ತ್ಸುವಿದತ್ರಾ ಅವಿತ್ಸೀದಂ ಪಿತೃಭ್ಯೋ ನಮೋ ಅಸ್ತ್ವದ್ಯ ಸ್ವಾದುಷ್ಕಿಲಾಯಮಿತಿ ಜಪತಸ್ತ್ರಃ** ಎಂಬ ಸೂತ್ರದಿಂದ (ಅ. ೫-೨೦) ವಿವೃತವಾಗಿರುವುದು.

ಈ ಋಕ್ಕಿನಲ್ಲಿ ಋಷಿಯು ಕೆಲವು ಪಿತೃಗಳ ಬೇರೆ ಬೇರೆ ಸ್ವರೂಪಗಳನ್ನು ವಿವರಿಸಿದಾನೆ—

ಪೂರ್ವಾಸಃ ಯಜಮಾನೋತ್ಪತ್ತೇಃ ಪೂರ್ವಮುತ್ಪನ್ನಾ ಜ್ಯೇಷ್ಠಭ್ರಾತೃಪಿತಾಮಹಾದಯಃ । ಯಜಮಾನನು (ಅಥವ ಋಷಿಯು) ಹುಟ್ಟುವುದಕ್ಕಿಂತ ಮೊದಲೇ ಉತ್ಪನ್ನರಾಗಿದ್ದ ಎಂದರೆ ವಯಸ್ಸಿನಲ್ಲಿ ತನಗಿಂತ ಹಿರಿಯರಾದ ಜ್ಯೇಷ್ಠಸಹೋದರರು, ತಂದೆಯ ತಂದೆ ಮೊದಲಾದವರು ಮೃತರಾಗಿದ್ದು ಪಿತೃಸ್ಥಾನದಲ್ಲಿರುವವರು. ಎಂದರೆ ತನಗಿಂತ ಮೊದಲೇ ಉತ್ಪನ್ನರಾದವರು.

ಉಪರಾಸಃ—ಯಜಮಾನಜನ್ಮನ ಉಪರಿ ಉತ್ಪನ್ನಾಃ ಕನಿಷ್ಠಭ್ರಾತೃಪುತ್ರಾದಯಃ । ವಯಸ್ಸಿನಲ್ಲಿ ತನಗಿಂತ ಕಿರಿಯರಾದ ತಮ್ಮಂದಿರು, ಮಕ್ಕಳು ಮುಂತಾದವರು ಕಾರಣಾಂತರದಿಂದ ತನಗೆ ಮೊದಲೇ ಮೃತರಾಗಿ ಪಿತೃಲೋಕದಲ್ಲಿರುವವರು.

ಪಾರ್ಥಿವೇ ರಜಸಿ ಆ ನಿಷತ್ತಾಃ—ಪೃಥಿವೀಸಂಬಂಧವಾದ ಈ ಭೂಲೋಕದಲ್ಲಿ ಈಗ ನಡೆಯುತ್ತಿರುವ ಪಿತೃಯಜ್ಞದಲ್ಲಿ ಹವಿಃಸ್ವೀಕಾರಾರ್ಥವಾಗಿ ಇಲ್ಲಿಗೆ ಬಂದು ಕುಳಿತಿರುವವರು.

ಯೇ ವಾ ನೂನಂ ಸುವ್ರಜನಾಸು ವಿಕ್ಷು—ನೇರವಾಗಿ ನಮ್ಮ ವಂಶಕ್ಕೇ ಸೇರದಿದ್ದರೂ ನಮ್ಮ ಬಂಧುವರ್ಗಕ್ಕೆ ಸೇರಿ ಶ್ರಾದ್ಧಾದಿಗಳಲ್ಲಿ ಹವಿಃಸ್ವೀಕಾರಾರ್ಥವಾಗಿ ಬಂದು ಕುಳಿತಿರುವ ಇನ್ನು ಕೆಲವು ಪಿತೃಗಳು. ಈ ಮೇಲೆ ಹೇಳಿದ ವಿಧವಿಧವಾದ ಪಿತೃಗಳನ್ನು ನಮಸ್ಕರಿಸುವೆನು ಎಂದು ಋಷಿಯು ವರ್ಣಿಸಿದಾನೆ.

। ಸಂಹಿತಾಪಾಠಃ ।

ಆಹಂ ಪಿತ್ರಾನ್ತ್ಸುವಿದತ್ರಾಁ ಅವಿತ್ಸಿ ನಪಾತಂ ಚ ವಿಕ್ರಮಣಂ ಚ ವಿಷ್ಣೋಃ ।
ಬರ್ಹಿಷದೋ ಯೇ ಸ್ವಧಯಾ ಸುತಸ್ಯ ಭಜಂತ ಪಿತ್ವಸ್ತ ಇಹಾಗಮಿಷ್ಠಾಃ ॥

। ಪದಪಾಠಃ ।

ಆ । ಅಹಂ । ಪಿತ್ರಾನ್ । ಸುವಿದತ್ರಾನ್ । ಅವಿತ್ಸಿ । ನಪಾತಂ । ಚ । ವಿಕ್ರಮಣಂ । ಚ । ವಿಷ್ಣೋಃ ।
ಬರ್ಹಿಷದಃ । ಯೇ । ಸ್ವಧಯಾ । ಸುತಸ್ಯ । ಭಜಂತ । ಪಿತ್ವಃ । ತೇ । ಇಹ । ಆಗಮಿಷ್ಠಾಃ ॥ ೩ ॥

। ಸಾಯಣಭಾಷ್ಯಂ ।

ಅಹಂ ಯಜಮಾನಃ ಸುವಿದತ್ರಾನ್ ಮದೀಯಾಂ ಭಕ್ತಿಂ ಸುಷ್ಠು ಜಾನತಃ ಪಿತ್ರ್ಯಾನವಿತ್ಸಿ । ಅಭಿಮುಖ್ಯೇನ ಲಬ್ಧವಾನಸ್ಮಿ । ವಿಷ್ಣೋರ್ವ್ಯಾಪಿನೋ ಯಜ್ಞಸ್ಯ ನಪಾತಂ ಚ ವಿನಾಶಾಭಾವಂ ಚ ವಿಕ್ರಮಣಂ ಚ ವಿಶೇಷೇಣ ಪ್ರವೃತ್ತಿಂ ಚ ಲಬ್ಧವಾನಸ್ಮಿ । ಯೇ ಪಿತರೋ ಬರ್ಹಿಷದೋ ಬರ್ಹಿಷಿ ಸೀದಂತಿ ತ ಇಹಾಸ್ಮಿನ್ಮರ್ಮಾಣ್ಯಾಗಮಿಷ್ಠಾಃ । ಅತಿಶಯೇನಾಗತವಂತಃ । ಆದರಪೂರ್ವಂ ಸನೂಗತ್ಯ ಸ್ವಧಯಾ

ಪುರೋಡಾಶಾದ್ಯನ್ನೇನ ಸಹ ಸುತಸ್ಯಾಭಿಷುತಸ್ಯ ಸೋಮಲಕ್ಷಣಸ್ಯ ಪಿತ್ವಃ ಪಿತರೋಽನ್ನಸ್ಯ ಭಾಗಂ ಭಜಂತ । ಸೇವಂತೇ । ಉಪಯುಂಜತೇ ॥

॥ ಪ್ರತಿಪದಾರ್ಥ ॥

ಅಹಂ—ಯಜಮಾನನಾದ ನಾನು । ಸುವಿದತ್ರಾನ್—ನನ್ನ ಭಕ್ತಿಯನ್ನು ಅತಿಶಯವಾಗಿ ತಿಳಿದ । ಪಿತೄನ್—ಪಿತೃಗಳನ್ನು । ಅ ಅವಿತ್ಸಿ—ನನ್ನೆದುರಿಗೆ ಬರಮಾಡಿಕೊಂಡಿದ್ದೇನೆ । ವಿಷ್ಣೋಃ—ವ್ಯಾಪಕವಾದ ಯಜ್ಞದ । ನಪಾತಂ—ನಾಶರಾಹಿತ್ಯವನ್ನೂ । ವಿಕ್ರಮಣಂ ಚ—ಕ್ರಮವಾಗಿ ವಿಸ್ತೃತವಾಗುವಿಕೆಯನ್ನೂ ಹೊಂದಿದ್ದೇನೆ । ಯೇ—ಯಾವ ಪಿತೃಗಳು । ಬರ್ಹಿಷದಃ—ದರ್ಭಾಸನಗಳ ಮೇಲೆ ಕುಳಿತಿರುವರೋ । ತೇ—ಅವರು । ಇಹ—ನನ್ನ ಯಾಗಕರ್ಮದಲ್ಲಿ । ಆಗಮಿಷ್ಠಾಃ—ಬಂದಿದ್ದಾರೆ । ಸ್ವಧಯಾ—ಸ್ವಧಾಸಂಜ್ಞಕವಾದ ಅನ್ನದೊಡನೆ । ಸುತಸ್ಯ—ಹಿಂಡಲ್ಪಟ್ಟ । ಪಿತ್ವಃ—ಸೋಮರೂಪವಾದ ಅನ್ನವನ್ನು । ಭಜಂತ—ಸೇವಿಸುತ್ತಾರೆ.

। ಭಾವಾರ್ಥ ।

ಯಜಮಾನನಾದ ನಾನು ನನ್ನ ಭಕ್ತಿಯನ್ನು ಅತಿಶಯವಾಗಿ ತಿಳಿದ ಪಿತೃಗಳನ್ನು ನನ್ನೆದುರಿಗೆ ಬರಮಾಡಿಕೊಂಡಿದ್ದೇನೆ ವ್ಯಾಪಕವಾದ ಯಜ್ಞದ ನಶರಾಹಿತ್ಯವನ್ನೂ ಕ್ರಮವಾಗಿ ವಿಸ್ತೃತವಾಗುವಿಕೆಯನ್ನೂ ಹೊಂದಿದ್ದೇನೆ. ಯಾವ ಪಿತೃಗಳು ದರ್ಭಾಸನವನ್ನಾಶ್ರಯಿಸಿರುವರೋ ಅವರು ನನ್ನ ಯಾಗಕ್ಕೆ ಬಂದಿದ್ದಾರೆ. ಸ್ವಧಾಸಂಜ್ಞಕವಾದ ಅನ್ನದೊಡನೆ ಹಿಂಡಲ್ಪಟ್ಟ ಸೋಮವನ್ನು ಸೇವಿಸುತ್ತಾರೆ-

English Translation

I have brought to my presence the Pitris who are well cognizant (of my worship), the infallibility, and progressive advance of the sacrifice; (the Pitris) who sit on the sacred grass frequently coming hither worship the food of the effused (Soma) with the sacrificial cake.

। ಸಂಹಿತಾಪಾಠಃ ।

ಬರ್ಹಿಷದಃ ಪಿತರ ಊತ್ಯ ೧ ರ್ವಾಗಿಮಾ ವೋ ಹವ್ಯಾ ಚಕೃಮಾ ಜುಷಧ್ವಂ ।

ತ ಆ ಗತವಸಾ ಶಂತಮೇನಾಥಾ ನಃ ಶಂ ಯೋರರಪೋ ದಧಾತ ॥ ೪ ॥

। ಪದಪಾಠಃ ।

ಬರ್ಹಿಷದಃ । ಪಿತರಃ । ಊತೀ । ಅರ್ವಾಕ್ । ಇಮಾ । ವಃ । ಹವ್ಯಾ । ಚಕೃಮ । ಜುಷಧ್ವಂ ।

ತೇ । ಅ । ಗತ । ಅವಸಾ । ಶಂತಮೇನ । ಅಥ । ನಃ । ಶಂ । ಯೋಃ । ಅರಪಃ । ದಧಾತ ॥ ೪ ।

। सायणभाष्यं ।

हे बर्हिषदः । यज्ञेषु सीदन्तीति बर्हिषदः । अत्रापि ये वै यज्वानस्ते पितरो बर्हिषद इत्यत्र श्रुतत्वाद्यागं कृत्वा प्रेत्य पितृलोकं प्राप्ता बर्हिषदः । तादृशा हे पितरः अर्वागर्वाचीनानामस्माकमूतीः रक्षा भवद्भिः कर्तव्येति शेषः। वो युष्मदर्थमिमा हव्यानि हवींषि चकृम । अतस्तानि जुषध्वं । ते हविर्जुष्टवन्तो यूयं शंतमेन सुखतमेनावसा रक्षणेन निमित्तभूतेन। गत । अभिमुख्येनास्मान्प्राप्नुत । अथानन्तरं नोऽस्मभ्यं शं सुखं योरदुःखवियोगमुरुपः पापरहितं च दधात । दत्त ॥

। प्रतिपदार्थ ।

बर्हिषदः—यज्ञदल्लि कुळितिरुव । पितरः—एलै पितृगळे । अर्वाक्—निमगभिमुखवागि कुळितिरुव नमगे । ऊतीः—निम्म रक्षणेयु अवश्यवागिदे । वः—निम्मन्नुद्देशिसि । इमा हव्या—ई हविस्सुगळन्नु । चकृम—निर्मिसिद्देवे । जुषध्वं—अदन्नु सेविसिरि । ते—हविस्सन्नु सेविसिद नीवु । शंतमेन । अत्यंत सुखकारकवाद । अवसा—रक्षणेयोंदिगे । आ गत—नमगभिमुखवागि बन्निरि । अथ—अनंतर । नः—नमगे । शं—सुखवन्नू । योः—दुःखराहित्यवन्नू । अरपः—पापराहित्यवन्नू । दधात—उंटुमाडिरि.

। भावार्थ ।

यज्ञदल्लि कुळितिरुव एलै पितृगळे, निमगभिमुखवागि कुळितिरुव नमगे निम्म रक्षणेयु अत्यवश्यवागिदे. निम्मन्नुद्देशिसि ई हविस्सुगळन्नु निर्मिसिद्देवे. अदन्नु सेविसिरि. हविस्सन्नु सेविसिद नीवु अत्यंत सुखकारकवाद रक्षणेयोंदिगे नमगभिमुखवागि बन्निरि. अनंतर नमगे सुखवन्नू दुःखराहित्यगळन्नू पापराहित्यवन्नू उंटुमाडिरि.

English Translation

Pitris, Barhishads, protect (us who are) in your presence; we have made these oblations for you, accept them: come with your most felicitous protection, and bestow upon us health and happiness, and pardon from sin.

॥ विशेषविषयगळु ॥

ई ऋक्किनल्लिरुव शं योः एंब शब्दगळिगे यास्करु निर्वचनवन्नु हेळि अर्थ विवरणेमाडिदारे—

शंयोः । (शंयुः सुखंयुः) अथा नः शंयोरररपो दधात । रपो रिप्रमिति पापनामसु नि भवतः । शमनं रोगाणां यावनं च भयानाम ॥

(नि ४-३)-

ಶಂಯುಃ—ಎಂದರೆ, ಶಾಂತಿ ಅಥವಾ ಸುಖವನ್ನು ಅಪೇಕ್ಷಿಸುವುದು. ನಮಗೆ ಪಾಪರಹಿತವಾದ ಸುಖ ಶಾಂತಿಗಳನ್ನು ಅನುಗ್ರಹಿಸು ಎಂದು ಉದಾಹರಣವಾಕ್ಯದ ಅರ್ಥವು. ರಪಃ ರಿಪ್ರಂ ಎಂಬ ಎರಡು ಶಬ್ದಗಳೂ ಪಾಪವೆಂಬ ಅರ್ಥವನ್ನು ಸೂಚಿಸುವ ಪರ್ಯಾಯಪದಗಳು. ರೋಗಾದಿಗಳಿಂದ ಶಮನವನ್ನು ಎಂದರೆ ಬಿಡುಗಡೆಯನ್ನು ಭಯದಿಂದ ಪರಿಹಾರವನ್ನೂ ಕಲ್ಪಿಸು ಎಂದಭಿಪ್ರಾಯವು.

ಬರ್ಹಿಷದ ಪಿತರಃ—ಈ ವಿಧವಾದ ಪಿತೃಗಳು ಯಾರು ಎಂಬುವುದನ್ನು ಭಾಷ್ಯಕಾರರು ಈ ರೀತಿ ವಿವರಿಸಿದಾರೆ—ಬರ್ಹಿಷದಃ ಯಜ್ಞೇ ಸೀದಂತೀತಿ ಬರ್ಹಿಷದಃ। ಅತ್ರಾಪಿ-ಯೇ ವೈ ಯಜ್ವಾನಸ್ತೇ ಪಿತರೋ ಬರ್ಹಿಷದಃ (ತೈ. ಬ್ರಾ. ೧.೬.೯) ಇತ್ಯತ್ರ ಶ್ರುತತ್ವಾದ್ಯಾಗಂ ಕೃತ್ವಾ ಪ್ರೇತ್ಯ ಪಿತೃಲೋಕಂ ಪ್ರಾಪ್ತಾ ಬರ್ಹಿಷದಃ। ಬರ್ಹಿಷದಃ ಎಂಬ ಶಬ್ದಕ್ಕೆ-ಯಜ್ಞದಲ್ಲಿ ಆಸನಾರ್ಥವಾಗಿ ಹರಡಿರುವ ಬರ್ಹಿಃ ಎಂಬ ದರ್ಭೆಗಳ ಮೇಲೆ ಬಂದು ಕುಳಿತಿರುವವರು ಎಂದರ್ಥವು. ಆಹ್ವಾನಿತರಾದ ದೇವತೆಗಳು ಬಂದು ಕೂಡುವುದಕ್ಕಾಗಿಯೂ ಈ ವಿಧವಾದ ದರ್ಭಾಸನವನ್ನು ಯಜ್ಞಗಳಲ್ಲಿ ಸಿದ್ಧಪಡಿಸುವರು. ಪ್ರಕೃತ ಋಕ್ಕಿನಲ್ಲಿ ಹೇಳಿರುವ ಪಿತೃಗಳೆಂದರೆ-ಹಿಂದೆ ಯಜ್ಞಯಾಗಾದಿಗಳನ್ನು ವಿಧ್ಯುಕ್ತವಾಗಿ ಮಾಡಿ ಮೃತರಾದ ಮೇಲೆ ಪಿತೃಲೋಕಕ್ಕೆ ಹೋದವರಿಗೆ ಬರ್ಹಿಷದಃ ಎಂದು ಹೆಸರು ಎಂದು ಭಾಷ್ಯಕಾರರು ಈ ಶಬ್ದಕ್ಕೆ ಅರ್ಥವಿವರಣೆಮಾಡಿದಾರೆ.

॥ ಸಂಹಿತಾಪಾಠಃ ॥

ಉಪಹೂತಾಃ ಪಿತರಃ ಸೋಮ್ಯಾಸೋ ಬರ್ಹಿಷ್ಯೇಷು ನಿಧಿಷು ಪ್ರಿಯೇಷು।
ತ ಆ ಗಮಂತು ತ ಇಹ ಶ್ರುವಂತ್ವಧಿ ಬ್ರುವಂತು ತೇಽವಂತ್ವಸ್ಮಾನ್ ॥ ೫ ॥

॥ ಪದಪಾಠಃ ॥

ಉಪಽಹೂತಾಃ। ಪಿತರಃ। ಸೋಮ್ಯಾಸಃ। ಬರ್ಹಿಷ್ಯೇಷು। ನಿಽಧಿಷು। ಪ್ರಿಯೇಷು।
ತೇ। ಆ। ಗಮಂತು। ತೇ। ಇಹ। ಶ್ರುವಂತು। ಅಧಿ। ಬ್ರುವಂತು। ತೇ। ಅವಂತು। ಅಸ್ಮಾನ್ ॥೫॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇ ಪಿತರಃ ಸೋಮವಂತ ಇತ್ಯಸ್ಯ ಯಾಜ್ಯೋಪಹೂತಾಃ ಪಿತರ ಇತ್ಯೇಷಾ। ಸೂತ್ರಿತಂ ಚ। ಉಪಹೂತಾಃ ಪಿತರಃ ಸೋಮ್ಯಾಸಸ್ತ್ವಂ ಸೋಮು ಪ್ರ ಚಿಕಿತೋ ಮನೀಷಾ। ಆ. ೨-೧೯। ಇತಿ ॥

ಸೋಮ್ಯಾಸಃ ಸೋಮ್ಯಾ ಅಸ್ಮದನುಗ್ರಹಪರಾಃ ಸೋಮಸಂಪಾದಿನೋ ವಾ ಪಿತರೋ ಬರ್ಹಿಷ್ಯೇಷು ಯಾಗಾರ್ಹೇಷು ಪ್ರಿಯೇಷು ತೃಪ್ತಿಕರೇಷು ನಿಧಿಷು ನಿಧಿಸದೃಶೇಷು ಹವಿಃಷು ನಿಮಿತ್ತಭೂತೇಷು ಸತ್ಸೂಪಹೂತಾ ಅಸ್ಮಾಭಿರಾಹೂತಾಸ್ತೇ ಪಿತರ ಆ ಗಮಂತು। ಆಗಚ್ಛಂತು। ಆಗತ್ಯ ಚೇಹಾಸ್ಮಿ-

ನ್ಮರ್ಮಣ್ಯಸ್ಮಾಭಿಃ ಪ್ರಯುಕ್ತಾಃ ಸ್ತುತೀಃ ಶ್ರುವಂತು । ಶೃಣ್ವಂತು । ಶ್ರುತ್ವಾ ಚಾಧಿ ಬ್ರುವಂತು । ಸಾಧುರಯಂ ಯಜಮಾನ ಇತ್ಯಾದೆರೇಣ ಕಥಯಂತು । ತೇ ತಾದೃಶಾ ಪಿತರೋಽಸ್ಮಾನವಂತು । ರಕ್ಷಂತು ॥

। ಪ್ರತಿಪದಾರ್ಥ ।

(ಯಾರು) **(ಯೇ) ಸೋಮ್ಯಾಸಃ**—ನಮ್ಮಲ್ಲಿ ಅನುಗ್ರಹ ಬುದ್ಧಿಯುಳ್ಳವರೋ । **ತೇ ಪಿತರಃ**— ಆಪಿತೃಗಳು । **ಬರ್ಹಿಷ್ಯೇಷು**—ಯಾಗಾರ್ಹವಾದವೂ । **ಪ್ರಿಯೇಷು**—ಪ್ರೀತಿಕಾರಕವಾದವೂ ಆದ । **ನಿಧಿಷು**—ಹವಿಸ್ಸು ಗಳ ನಿಮಿತ್ತವಾಗಿ । **ಉಪಹೂತಾಃ**—ಕರೆಯಲ್ಪಟ್ಟವರಾಗಿ । **ಆ ಗಮಂತು**—ದಯಮಾಡಲಿ । **ಇಹ**—ನಮ್ಮ ಕರ್ಮಗಳಲ್ಲಿ । **ಶ್ರುವಂತು**—ನಮ್ಮ ಸ್ತುತಿಗಳನ್ನು ಕೇಳಲಿ । **ಅಧಿ ಬ್ರುವಂತು**—ನಮ್ಮ ಪ್ರಶಂಸೆಯನ್ನು ಮಾಡಲಿ । **ತೇ**—ಅವರು । **ಅಸ್ಮಾನ್**—ನಮ್ಮನ್ನು । **ಅವಂತು**—ರಕ್ಷಿಸಲಿ ।

। ಭಾವಾರ್ಥ ।

ಯಾಗಾರ್ಹವೂ, ಪ್ರೀತಿಕಾರಕವೂ ಆದ ಹವಿಸ್ಸುಗಳನ್ನು ಸ್ವೀಕರಿಸಲು ನಾವು ಯಾವ ಪಿತೃಗಳನ್ನು ಕರೆಯುತ್ತೇವೆಯೋ ಅಂತಹ ಪಿತೃಗಳು ನಮ್ಮಲ್ಲಿ ಅನುಗ್ರಹ ಬುದ್ಧಿಯನ್ನು ತೋರಿಸುತ್ತಾ ಬರಲಿ. ಈ ಕರ್ಮಕಾಲಗಳಲ್ಲಿ ಪಠಿತವಾಗುವ ನಮ್ಮ ಸ್ತುತಿಗಳನ್ನು ಕೇಳಲಿ. ನಮ್ಮ ವಿಷಯದಲ್ಲಿ ಪ್ರಶಂಸಾವಾಕ್ಯಗಳನ್ನು ಹೇಳಲಿ. ಅವರು ನಮ್ಮನ್ನು ರಕ್ಷಿಸಲಿ.

English Translation

May the Pitris who are entitled to the Soma come, when invoked by us, to the agreeable treasures connected with the sacred grass; let them here listen (to our praises), let them protect us

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ **ಪಿತರಃ ಸೋಮವಂತಃ** ಎಂಬ ಗಣದ ಪಿತೃದೇವತೆಗಳನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಉಪಹೂತಾಃ ಪಿತರಃ** ಎಂಬ ಈ ಋಕ್ಕನ್ನು ಯಾಜ್ಯಾನುವಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ-**ಉಪಹೂತಾಃ ಪಿತರಃ ಸೋಮ್ಯಾಸಸ್ತ್ವಂ ಸೋಮ ಪ್ರ ಚಿಕಿತೋ ಮನೀಷಾ** ಎಂಬ ಸೂತ್ರದಿಂದ (ಅ ೨.೧೯) ವಿವೃತವಾಗಿರುವುದು.

। ಸಂಹಿತಾಪಾಠಃ ।

ಆಚ್ಯಾ ಜಾನು ದಕ್ಷಿಣತೋ ನಿಷದ್ಯೇಮಂ ಯಜ್ಞಮಭಿ ಗೃಣೀತ ವಿಶ್ವೇ ।

ಮಾ ಹಿಂಸಿಷ್ಟ ಪಿತರಃ ಕೇನ ಚಿನ್ನೋ ಯದ್ವ ಆಗಃ ಪುರುಷತಾ ಕರಾಮ ॥

xxvii 32

। पदपाठः ।

आऽअ॒ज्म । जानु । द॒क्षि॒ण॒तः । नि॒ऽस॒द्य । इ॒मम् । य॒ज्ञ॒म् । अ॒भि । गृ॒णी॒त॒ । वि॒श्वे ।
मा । हिं॒सि॒ष्ट॒ । पि॒त॒रः॒ । केन॑ । चि॒त् । नः॒ । यत् । व॒ः । आग॑ः । पु॒रु॒ष॒ऽता । क॒रा॒म॒ ॥ ६

। सायणभाष्यं ।

पित्र्याणामयं स्वाभाविको धर्मः अथैनं पितरः प्राचीनावीतिनः सव्यं जानुमाच्य । शत-३-४-३-३ । इति वचनात् । हे पितरः विश्वे सर्वे यूयं जानुमाच्य भूमौ निपात्य दक्षिणतो दक्षिणपार्श्वे निषद्योपविश्येमममस्मदीयं यज्ञमभि गृणीत । अभिष्टुत । विशिष्टतृप्तियोगात्परया प्रीत्या सगुणोऽयं यज्ञ इति प्रशं. सतेत्यर्थः । अपि च वो युष्माकं यत्किंचित्कर्म नैर्गुण्यजनितमागोऽपराधं पुरुषता मनुष्यत्वेन हेतुना करामः वयं कृतवन्तः हे पितरः तेन केन चिदप्यपराधेन नोऽस्मान्मा हिंसिष्ट ॥

। प्रतिपदार्थ ।

पितरः—ಎಲೈ ಪಿತೃಗಳೇ । विश्वे—ನೀವೆಲ್ಲರೂ । जानु आच्य—ಮೊಳಕಾಲನ್ನೂರಿ ಕುಳಿತು । दक्षिणतः—ದಕ್ಷಿಣಪಾರ್ಶ್ವದಲ್ಲಿ । निषद्य—ಕುಳಿತು । इमं यज्ञं—ನಮ್ಮ ಈ ಯಾಗವನ್ನು । अभि गृणीत—ಪ್ರಶಂಸಿಸಿರಿ । वः—ನಿಮ್ಮ ವಿಷಯದಲ್ಲಿ । यत् आगः—ಯಾವುದೇ ಆದ ಪಾಪವನ್ನು । पुरुषता—ಮಾನವನಿಗೆ ಸಹಜವಾದ ಅಜ್ಞಾನದಿಂದ । करामः—ನಾವು ಮಾಡಿದ್ದೇ ಆದರೆ । केन चित्—ಆ ಯಾವ ವಿಧವಾದ ಪಾಪಕ್ಕಾಗಿಯೂ । नः—ನಮ್ಮನ್ನು । मा हिंसिष्ट—ಹಿಂಸಿಸಬೇಡಿರಿ ।

। भावार्थ ।

ಎಲೈ ಪಿತೃಗಳೇ, ನೀವೆಲ್ಲರೂ ಮೊಳಕಾಲನ್ನೂರಿ ದಕ್ಷಿಣ ಪಾರ್ಶ್ವದಲ್ಲಿ ಕುಳಿತು ನಮ್ಮ ಈ ಯಾಗವನ್ನು ಪ್ರಶಂಸಿಸಿರಿ. ನಿಮ್ಮ ವಿಷಯದಲ್ಲಿ ಯಾವುದೇ ಆದ ಪಾಪವನ್ನಾಗಲಿ, ಮಾನವನಿಗೆ ಸಹಜವಾದ ಅಜ್ಞಾನದಿಂದ ನಾವು ಮಾಡಿದ್ದೇ ಆದರೆ, ಆ ಯಾವ ವಿಧವಾದ ಪಾಪಕ್ಕಾಗಿಯೂ ನಮ್ಮನ್ನು ಹಿಂಸಿಸಬೇಡಿರಿ.

English Translation

Having sat down on the right side with bended knee, you all accept this sacrifice. Harm us not, Pitris, for any offence which through human (infirmity) we may have committed towards you.

॥ विशेषविषयगळु ॥

आच्य जानु दक्षिणतः निषद्य—पित्र्याणामयं स्वाभाविको धर्मः । अथैनं पितरः प्राचीनावीतिनः सव्यं जानुमाच्य (श.ब्रा.३-४-३-३) इति वचनात् । ಪಿತೃಗಳನ್ನು ಸಂಬೋ

ಧಿಸಿ ಋಷಿಯು ಈ ರೀತಿ ಹೇಳಿರುವನು—ಎಲೈ ಪಿತೃಗಳೇ, ನೀವು ನಿಮ್ಮ ಬಲಭಾಗದ ಮೊಣಕಾಲನ್ನೂರಿ ಯಜ್ಞೋಪವೀತವನ್ನು ಎಡಕ್ಕೆ ಹಾಕಿಕೊಂಡು ಈ ಯಜ್ಞವೇದಿಕೆಯಲ್ಲಿ ದಕ್ಷಿಣದಿಕ್ಕಿನಲ್ಲಿ ಸಿದ್ಧಪಡಿಸಿರುವ ಆಸನದಲ್ಲಿ ಬಂದು ಕುಳಿತುಕೊಳ್ಳಿ ಎಂದು. ಮೊಳಕಾಲನ್ನು ಊರಿ ದಕ್ಷಿಣಾಭಿಮುಖವಾಗಿ ಕುಳಿತುಕೊಳ್ಳುವುದು ಪಿತೃಗಳಿಗೆ ಉಕ್ತವಾಗಿರುವ ಸ್ವಾಭಾವಿಕ ಧರ್ಮವೆಂದು ಭಾಷ್ಯಕಾರರು ಹೇಳಿ ಇದನ್ನು ಸಮರ್ಥಿಸುವುದಕ್ಕಾಗಿ ಶತಪಥ ಬ್ರಾಹ್ಮಣದ ವಾಕ್ಯವನ್ನು ಉದಾಹರಣೆಯಾಗಿ ಕೊಟ್ಟಿರುವರು.

॥ ಸಂಹಿತಾಪಾಠಃ ॥

ಆಸೀನಾಸೋ ಅರುಣೀನಾಮುಪಸ್ಥೇ ರಯಿಂ ಧತ್ತ ದಾಶುಷೇ ಮರ್ತ್ಯಾಯ ।
ಪುತ್ರೇಭ್ಯಃ ಪಿತರಸ್ತಸ್ಯ ವಸ್ವಃ ಪ್ರ ಯಚ್ಛತ ತ ಇಹೋರ್ಜಂ ದಧಾತ ॥೭॥

॥ ಪದಪಾಠಃ ॥

ಆಸೀನಾಸಃ । ಅರುಣೀನಾಂ । ಉಪಸ್ಥೇ । ರಯಿಂ । ಧತ್ತ । ದಾಶುಷೇ । ಮರ್ತ್ಯಾಯ ।
ಪುತ್ರೇಭ್ಯಃ । ಪಿತರಃ । ತಸ್ಯ । ವಸ್ವಃ । ಪ್ರ । ಯಚ್ಛತ । ತೇ । ಇಹ । ಊರ್ಜಂ । ದಧಾತ ॥ ೭ ॥

॥ ಸಾಯಣಭಾಷ್ಯಂ ॥

ಅರುಣೀನಾಮಾರೋಚಮಾನಾನಾಂ ಜ್ವಾಲಾನಾಂ ವಾ ದೇವತಾನಾಂ ವೋಪಸ್ಥೇ ಸಮೀಪಸ್ಥಾನೇ ವೇದ್ಯಾಖ್ಯ ಆಸೀನಾಸ ಉಪವಿಷ್ಟಾಃ ಪಿತರಃ ಯೂಯಂ ದಾಶುಷೇ ಹವಿರ್ದದತ್ತವತೇ ಮರ್ತ್ಯಾಯ ಮನುಷ್ಯಾಯ ಯಜಮಾನಾಯ ರಯಿಂ ಧನಂ ಧತ್ತ । ದತ್ತ । ಹೇ ಪಿತರಃ ಯೂಯಂ ತಸ್ಯ ಯಜಮಾನಸ್ಯ ಪುತ್ರೇಭ್ಯೋ ವಸ್ವೋ ವಸು ಧನಂ ಪ್ರ ಯಚ್ಛತ । ತೇ ತಾದೃಶಾ ಯೂಯಮಿಹಾಸ್ಮಿನ್ನಸ್ಮದೀಯೇ ಕರ್ಮಣ್ಯೂರ್ಜಂ ಧನಂ ದಧಾತ । ನಿಧತ್ತ ॥

॥ ಪ್ರತಿಪದಾರ್ಥ ॥

ಪಿತರಃ—ಎಲೈ ಪಿತೃಗಳೇ । ಅರುಣೀನಾಂ—ಆಕರ್ಷಕವಾದ ಜ್ವಾಲೆಗಳ । ಉಪಸ್ಥೇ—ಸಮೀಪದಲ್ಲಿ । ಆಸೀನಾಸಃ—ಕುಳಿತಿರುವ ನೀವು । ದಾಶುಷೇ—ಹವಿಸ್ಸನ್ನು ಅರ್ಪಿಸಿದ । ಮರ್ತ್ಯಾಯ—ಯಜಮಾನನಿಗೆ । ರಯಿಂ—ಧನವನ್ನು । ಧತ್ತ—ಕೊಡಿರಿ । ತಸ್ಯ—ಆ ಯಜಮಾನನ । ಪುತ್ರೇಭ್ಯಃ—ಪುತ್ರರಿಗೆ । ವಸ್ವಃ—ಧನವನ್ನು । ಪ್ರ ಯಚ್ಛತ—ಕೊಡಿರಿ । ತೇ—ಪ್ರಸಿದ್ಧರಾದ ನೀವು । ಇಹ—ನಮ್ಮ ಈ ಯಾಗಕರ್ಮದಲ್ಲಿ । ಊರ್ಜಂ—ಧನವನ್ನು । ದಧಾತ—ಸ್ಥಾಪಿಸಿರಿ ।

॥ ಭಾವಾರ್ಥ ॥

ಎಲೈ ಪಿತೃಗಳೇ, ಆಕರ್ಷಕವಾದ ಜ್ವಾಲೆಗಳ ಸಮೀಪದಲ್ಲಿ ಕುಳಿತಿರುವ ನೀವು ಹವಿಸ್ಸನ್ನು ಅರ್ಪಿಸಿದ ಯಜಮಾನನಿಗೆ ಧನವನ್ನು ಕೊಡಿರಿ. ಆ ಯಜಮಾನನ ಪುತ್ರನಿಗೆ ಧನವನ್ನು ಒದಗಿಸಿರಿ ಪ್ರಸಿದ್ಧರಾದ ನೀವು ನಮ್ಮ ಈ ಯಾಗಕರ್ಮದಲ್ಲಿ ಧನವನ್ನು ಸ್ಥಾಪಿಸಿರಿ.

English Translation

Seated in the proximity of the radiant (flames of the altar), bestow riches on the mortal donor (of the oblation); give wealth, Pitris, to his sons; you are present, grant us vigour.

॥ ಸಂಹಿತಾಪಾಠಃ ॥

ಯೇ ನಃ ಪೂರ್ವೇ ಪಿತರಃ ಸೋವ್ಯಾಸೋಽನೂಹಿರೇ ಸೋಮಪೀಥಂ
ವಸಿಷ್ಠಾಃ ।
ತೇಭಿರ್ಯಮಃ ಸಂರರಾಣೋ ಹವೀಂಷ್ಯುಶನ್ನುಶದ್ಭಿಃ ಪ್ರತಿಕಾಮಮತ್ತು ॥

॥ ಪದಪಾಠಃ ॥

ಯೇ । ನಃ । ಪೂರ್ವೇ । ಪಿತರಃ । ಸೋವ್ಯಾಸಃ। ಅನು೽ಊಹಿರೇ । ಸೋಮು೽ಪೀಥಂ । ವಸಿಷ್ಠಾಃ ।
ತೇಭಿಃ । ಯಮಃ । ಸಂ೽ರರಾಣಃ । ಹವೀಂಷಿ । ಉಶನ್ । ಉಶದ್೽ಭಿಃ । ಪ್ರತಿ೽ಕಾಮಂ । ಅತ್ತು ॥೮॥

॥ ಸಾಯಣಭಾಷ್ಯಂ ॥

ಸೋವ್ಯಾಸಃ ಸೋಮಸಂಪಾದಿನೋ ವಸಿಷ್ಠಾ ವಸ್ತೃತಮಾಃ ಕೃತಾಚ್ಛಾದನಾ ಧನವತ್ತಮಾ ನಾ ನೋ೽ಸ್ಮಾಕಂ ಯೇ ಪೂರ್ವೇ ಪಿತರಃ ಸೋಮಪೀಥಂ ಸೋಮಪಾನಮನೂಹಿರೇ ಅನುಪೂರ್ವ್ಯೇಣ ದೇವೇಭ್ಯಶ್ಚ ಪಿತೃಭ್ಯಶ್ಚ ಪ್ರಾಪ್ನುವಂತಃ । ದತ್ತವಂತ ಇತ್ಯರ್ಥಃ । ಉಶನ್ ಪಿತೃಭಿಃ ಸಹ ಸಂಭೋಗಂ ಕಾಮಯಮಾನೋ ಯಮಃ ಪಿತೃಪತಿರುಶದ್ಭಿರ್ಯಮೇನ ಸಹ ಸಂಭೋಗಂ ಕಾಮಯಮಾನಾಸ್ತೇಭಿಸ್ತೈರಸ್ಮದೀಯೈಃ ಪಿತೃಭಿಃ ಸಹ ರರಾಣೋ ರಮಮಾಣೋ ಹವೀಂಷ್ಯಸ್ಮಾಭಿರ್ದತ್ತಾನಿ ಪ್ರತಿಕಾಮಂ ಕಾಮಂ ಕಾಮಂ ಪ್ರತ್ಯತ್ತು । ಯಾನಿ ಯಾನಿ ಹವೀಂಷಿ ಕಾಮಯತೇ ತಾನಿ ತಾನಿ ಭಕ್ಷಯತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

ನಃ—ನಮ್ಮ (ತಮ್ಮ) ಸೋವ್ಯಾಸಃ—ಸೋಮವನ್ನು ಯಥಾವಿಧಿಯಾಗಿ ಅರ್ಪಿಸಿದವರೂ । ವಸಿಷ್ಠಾಃ—ಅತ್ಯಂತ ಶ್ರೇಷ್ಠರೂ । ಪೂರ್ವೇ—ಪೂರ್ವಜರೂ ಆದ । ಯೇ ಪಿತರಃ—ಯಾವ ಪಿತೃಗಳು । ಸೋಮಪೀಥಂ—ಸೋಮಪಾನವನ್ನು । ಅನೂಹಿರೇ—ದೇವತೆಗಳಿಗೆ ಮಾಡಿಸಿದರೋ । ತೇಭಿಃ—ಅಂತಹವರೂ । ಉಶದ್ಭಿಃ—(ಯಮನೊಡನೆ ಸಂಬಂಧವನ್ನು) ಇಚ್ಛಿಸಿದವರೂ ಆದ ಪಿತೃಗಳೊಡನೆ । ರರಾಣಃ—ಹರ್ಷವನ್ನು ಹೊಂದುವವನೂ।

ಉತನ್—ನಮ್ಮ ಹವಿಸ್ಸುಗಳನ್ನು ಅಪೇಕ್ಷಿಸುವವನೂ ಆದ। ಯಮಃ—ಯಮನು। ಹವೀಂಷಿ—ನಮ್ಮಿಂದ ಅರ್ಪಿತವಾದ ಹವಿಸ್ಸುಗಳನ್ನು। ಪ್ರತಿಕಾಮಂ—ಯಥೇಚ್ಛವಾಗಿ। ಅತ್ತು—ಸ್ವೀಕರಿಸಲಿ।

॥ ಭಾವಾರ್ಥ ॥

ತಮ್ಮ ಸೋಮವನ್ನು ಯಥಾವಿಧಿಯಾಗಿ ಅರ್ಪಿಸಿದವರೂ ಅತ್ಯಂತ ಶ್ರೀಷ್ಠರೂ ಪೂರ್ವಜರೂ ಆದ ಯಾವ ಪಿತೃಗಳು ಸೋಮಪಾನವನ್ನು ದೇವತೆಗಳಿಗೆ ಮಾಡಿಸಿದರೋ ಅಂತಹವರೂ ಯಮನೊಡನೆ ಸಂಬಂಧವನ್ನು ಇಚ್ಛಿಸಿದವರೂ ಆದ ಪಿತೃಗಳೊಡನೆ ಹರ್ಷವನ್ನು ಹೊಂದುವವನೂ, ನಮ್ಮ ಹವಿಸ್ಸುಗಳನ್ನು ಅಪೇಕ್ಷಿಸುವವನೂ ಆದ ಯಮನು ನಮ್ಮಿಂದ ಅರ್ಪಿತವಾದ ಹವಿಸ್ಸುಗಳನ್ನು ಯಥೇಚ್ಛವಾಗಿ ಸ್ವೀಕರಿಸಲಿ.

English Translation

May yama, being propitiated, desirous (of the offering), partake at pleasure of the oblations along with those our ancient progenitors the Saumyas, the possessors of great wealth, who also desire it, and who conveyed the Soma beverage (to the gods and to the Pitris) in order.

॥ ಸಂಹಿತಾಪಾಠಃ ॥

ಯೇ ತಾತೃಷುರ್ದೇವತ್ರಾ ಜೇಹಮಾನಾ ಹೋತ್ರಾವಿದಃ ಸ್ತೋಮತಷ್ಟಾಸೋ ಅರ್ಕೈಃ।

ಆಗ್ನೇ ಯಾಹಿ ಸುವಿದತ್ರೇಭಿರರ್ವಾಙ್ ಸತ್ಯೈಃ ಕವ್ಯೈಃ ಪಿತೃಭಿರ್ಘರ್ಮಸದ್ಭಿಃ ॥ ೯ ॥

॥ ಪದಸಾರಃ ॥

ಯೇ। ತತೃಷುಃ। ದೇವತ್ರಾ। ಜೇಹಮಾನಾಃ। ಹೋತ್ರಾವಿದಃ। ಸ್ತೋಮತಷ್ಟಾಸಃ। ಅರ್ಕೈಃ।

ಅ। ಅಗ್ನೇ। ಯಾಹಿ। ಸುವಿದತ್ರೇಭಿಃ।ಅರ್ವಾಙ್। ಸತ್ಯೈಃ। ಕವ್ಯೈಃ। ಪಿತೃಭಿಃ। ಘರ್ಮಸದ್ಭಿಃ ॥ ೯ ॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇऽಗ್ನೇಃ ಕವ್ಯವಾಹನಸ್ಯ ಯೇ ತಾತೃಷುರಿತ್ಯೇಷಾ ಪ್ರಥಮಾನುವಾಕ್ಯಾ। ಸೂತ್ರಿತಂ ಚ। ಯೇ ತಾತೃಷುರ್ದೇವತ್ರಾ ಜೇಹಮಾನಾಸ್ತ್ವದಗ್ನೇ ಕಾನ್ಯಾ ತ್ವನ್ಮನೀಷಾಃ। ಆ. ೨ ೧೯। ಇತಿ ॥

ದೇವತ್ರಾ ದೇವಾಞ್ಜಿಹೇಹಮಾನಾಃ ಕ್ರಮೇಣ ಗಚ್ಛಂತಃ। ಕ್ರಮೇಣ ದೇವತ್ವಂ ಪ್ರಾಪ್ತಾ ಇತ್ಯರ್ಥಃ। ಹೋತ್ರಾವಿದೋ ಯಜ್ಞಾನ್ಸಮ್ಯಕ್ಕರ್ತುಂ ವೇದಿತಾರೋಽರ್ಕೈರರ್ಚನೀಯೈಃ ಸ್ತೋತ್ರೈಃ ಸ್ತೋಮತಷ್ಟಾಸಃ ಸ್ತೋಮಾನಾಂ ಚ ಸಮ್ಯಕ್ಕರ್ತಾರೋ ಯೇ ಪಿತರಸ್ತಾತೃಷುಃ ತೃಷ್ಯಂತಿ ಹೇ ಅಗ್ನೇ ತ್ವಂ ತೈಃ ಪಿತೃಭಿರರ್ವಾಙಸ್ಮದಭಿಮುಖ ಆ ಯಾಹಿ। ಆಗಚ್ಛ। ಕೀದೃಶೈಃ। ಸುವಿದತ್ರೇಭಿಃ ಸುವಿದತ್ರೈಃ ಸತ್ಯೈರವಿಸಂವಾದಿಭಿಃ ಕವ್ಯೈಃ। ಕವ್ಯಂ ನಾಮ ಪಿತೃದೇವತ್ಯಂ ಹವಿಃ। ತತ್ಸಂಬಂಧಿಭಿಃ। ಯದ್ವಾ। ಕವ್ಯೈಃ ಕವಿಭಿರ್ಮೇಧಾವಿಭಿಃ ॥ ಸ್ವಾರ್ಥಿಕೋ ಯತ್ ॥ ಘರ್ಮಸದ್ಭಿರ್ಯಜ್ಞಸಾದಿಭಿಃ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ। **ದೇವತ್ರಾ**—ದೇವತ್ವವನ್ನು। **ಜೇಹಮಾನಾಃ**—ಯಥಾಕ್ರಮವಾಗಿ ಹೊಂದಿದವರೂ। **ಹೋತ್ರಾವಿದಃ**—ಯಾಗಕ್ರಮವನ್ನು ಅರಿತವರೂ। **ಅರ್ಕೈಃ**—ಸ್ತುತಿಗಳಿಂದ। **ಸ್ತೋಮತಷ್ಟಾಸಃ**—ಸ್ತೋಮಗಳನ್ನು ಪರಿಷ್ಕರಿಸುವವರೂ ಆದ। **ಯೇ**—ಯಾವ ಪಿತೃಗಳು। **ತಾತೃಷುಃ**—ದೇವಸಂಬಂಧವನ್ನು ಇಚ್ಛಿಸುವರೋ ಅಂತಹ। **ಘರ್ಮಸದ್ಭಿಃ**—ಯಜ್ಞಕಾರಕರೂ। **ಸುವಿದತ್ರೇಭಿಃ**—ಉತ್ತಮಜ್ಞಾನವುಳ್ಳವರೂ। **ಸತ್ಯೈಃ**—ಸತ್ಯಾತ್ಮಕರೂ। **ಕವ್ಯೈಃ**— ಮೇಧಾವಿಗಳೂ ಆದ। **ಪಿತೃಭಿಃ**—ಪಿತೃಗಳೊಡನೆ। **ಅರ್ವಾಙ್**—ನಮಗಭಿಮುಖವಾಗಿ। **ಆ ಯಾಹಿ**—ದಯಮಾಡು।

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಥಾಕ್ರಮವಾಗಿ ದೇವತ್ವವನ್ನು ಹೊಂದಿದವರೂ, ಯಾಗಕ್ರಮವನ್ನು ಅರಿತವರೂ, ಸ್ತುತಿಗಳಿಂದ ಸ್ತೋಮಗಳನ್ನು ಪರಿಷ್ಕರಿಸುವವರೂ ಆದ ಯಾವ ಪಿತೃಗಳು ದೇವಸಂಬಂಧವನ್ನು ಇಚ್ಛಿಸುವರೋ ಅಂತಹ ಯಜ್ಞಕಾರಕರೂ, ಉತ್ತಮಜ್ಞಾನವುಳ್ಳವರೂ, ಸತ್ಯಾತ್ಮಕರೂ, ಮೇಧಾವಿಗಳೂ ಆದ ಪಿತೃಗಳೊಡನೆ ನಮಗಭಿಮುಖವಾಗಿ ದಯಮಾಡು.

English Translation

Come, Agni, to our presence with the Pitris, who are possessed of knowledge, who having attained a seat amongst the gods, thirst (for the Soma), skilled in sacrifices, reciters of praises with hymns, truth-speaking, seers, frequenters of sacrifices.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ಕವ್ಯವಾಹನಾಗ್ನಿಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಯೇ ತಾತೃಷುಃ** ಎಂಬ ಈ ಋಕ್ಕನ್ನು ನೊದಲನೆಯ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಯೇ ತಾತೃಷುರ್ದೇವತ್ರಾ ಜೇಹಮಾನಾಸ್ತ್ವದಗ್ನೇ ಕಾವ್ಯಾ ಪ್ಯನ್ಮನೀಷಾಃ** ಎಂಬ ಸೂತ್ರದಿಂದ (ಅ. ೨-೧೯) ವಿಸ್ತೃತವಾಗಿರುವುದು.

ಸುವಿದತ್ರೇಭಿಃ—ಈ ಶಬ್ದಕ್ಕೆ ಯಾಸ್ಕರು ಸುವಿದತ್ರಃ ಕಲ್ಯಾಣವಿದ್ಯಃ ಆಗ್ನೇಯಾಹಿ ಸುವಿದತ್ರೇಭಿರವಾಗ್ ಇತ್ಯಪಿ ನಿಗಮೋ ಭವತಿ ಎಂದು ನಿರ್ವಚನವನ್ನು ಹೇಳಿದಾರೆ. ಸುವಿದತ್ರಃ ಎಂದರೆ ಉಪಕಾರಬುದ್ಧಿ ಅಥವಾ ಉದಾರಬುದ್ಧಿ, ಔದಾರ್ಯ ಎಂದರ್ಥವು. ಈ ವಿಷಯದಲ್ಲಿ ಮೇಲೆ ಹೇಳಿದ ಶ್ರುತಿವಾಕ್ಯವೇ ಉದಾಹರಣೆಯು.

। ಸಂಹಿತಾಪಾಠಃ ।

ಯೇ ಸತ್ಯಾಸೋ ಹವಿರದೋ ಹವಿಷ್ಪಾ ಇಂದ್ರೇಣ ದೇವೈಃ ಸರಥಂ ದಧಾನಾಃ ।
ಆಗ್ನೇ ಯಾಹಿ ಸಹಸ್ರಂ ದೇವವಂದ್ಯೈಃ ಪರ್ಯೈಃ ಪೂರ್ವ್ಯೈಃ ಪಿತೃಭಿರ್ಘರ್ಮಸದ್ಭಿಃ ॥ ೧೦ ॥

। ಪದಪಾಠಃ ।

ಯೇ । ಸತ್ಯಾಸಃ । ಹವಿಃಽಅದಃ । ಹವಿಃಽಪಾಃ । ಇಂದ್ರೇಣ । ದೇವೈಃ । ಸ್ಸರಥಂ । ದಧಾನಾಃ ।
ಆ । ಅಗ್ನೇ । ಯಾಹಿ । ಸಹಸ್ರಂ । ದೇವವ್ವಂದ್ಯೈಃ । ಪರ್ಯೈಃ । ಪೂರ್ವ್ಯೈಃ । ಪಿತೃಽಭಿಃ । ಘರ್ಮಸತ್ಽಭಿಃ ॥

। ಸಾಯಣಭಾಷ್ಯಂ ।

ಸತ್ಯಾಸಃ ಸತ್ಯಾ ಯೇ ಪಿತರೋ ಹವಿರದೋ ಭಕ್ಷಣಯೋಗ್ಯಸ್ಯ ಹವಿಷೋಽತ್ತಾರೋ ಭಕ್ಷಯಿತಾರೋ ಹವಿಷ್ಪಾಃ ಪಾನಯೋಗ್ಯಸ್ಯ ಹವಿಷಃ ಪಾತಾರ ಇಂದ್ರೇಣ ದೇವೈಃ ಸರಥಂ ಸಮಾನಮೇಕಂ ತುಲ್ಯಂ ವಾ ರಥಂ ದಧಾನಾಃ ॥ ಲಡರ್ಥೇ ಶಾನಚ್ ॥ ಗಮನಾಯ ಸದಾ ಧಾರಯಂತಿ ಹೇ ಅಗ್ನೇ ತೈಃ ಪಿತೃಭಿಃ ಸಹಾ ಯಾಹಿ । ಆಗಚ್ಛ । ಕೀದೃಶಃ । ಸಹಸ್ರಂ । ತೃತೀಯಾರ್ಥೇ ಪ್ರಥಮಾ । ಸಹಸ್ರೇಣ । ಬಹುಭಿರಿತ್ಯರ್ಥಃ । ದೇವವಂದ್ಯೈರ್ದೇವಸಂಬಂಧಿಭಿಃ ಸ್ತೋತೃಭ್ಯೋರ್ಯುಕ್ತಃ । ಪರ್ಯೈಃ ಪರಕಾಲೀನೈಃ ಪೂರ್ವ್ಯೈಃ ಪೂರ್ವಕಾಲೀನೈರ್ಘರ್ಮಸದ್ಭಿರ್ಯಜ್ಞಸಾದಿಭಿರ್ಮಹಾವೀರಸಾದಿಭಿರಾದಿತ್ಯಸಾದಿಭಿರ್ವಾ ॥

। ಪ್ರತಿಪದಾರ್ಥ ।

ಆಗ್ನೇ—ಎಲೈ ಅಗ್ನಿಯೇ । ಸತ್ಯಾಸಃ—ಸತ್ಯಾತ್ಮಕರಾದ । ಯೇ—ಯಾವ ಪಿತೃಗಳು । ಹವಿರದಃ—ಹವಿಸ್ಸನ್ನು ಭಕ್ಷಿಸುವವರಾಗಿಯೂ । ಹವಿಷ್ಪಾಃ—ಸೋಮಾದಿ ಹವಿಸ್ಸುಗಳನ್ನು ಪಾನಮಾಡುವವರಾಗಿಯೂ । ಇಂದ್ರೇಣ—ಇಂದ್ರಾದಿಯಾದ । ದೇವೈಃ—ದೇವತೆಗಳೊಡನೆ । ಸರಥಂ—ಸಮಾನತ್ವವನ್ನು । ದಧಾನಾಃ—ಹೊಂದಿದವರಾಗಿಯೂ ಇರುವರೋ ಅಂತಹ । ಸಹಸ್ರಂ—ಸಹಸ್ರಸಂಖ್ಯಾಕರೂ । ದೇವವಂದ್ಯೈಃ—ದೇವತೆಗಳೊಡನೆ ಕೂಡಿದವರೂ । ಪರ್ಯೈಃ—ಪರಕಾಲಕ್ಕೆ ಸೇರಿದವರೂ । ಪೂರ್ವ್ಯೈಃ—ಹಿಂದಿನ ಕಾಲಕ್ಕೆ ಸೇರಿದವರೂ । ಘರ್ಮಸದ್ಭಿಃ—ಯಜ್ಞಕಾರಕರೂ ಆದ । ಪಿತೃಭಿಃ—ಪಿತೃಗಳೊಡನೆ । ಆ ಯಾಹಿ—ದಯಮಾಡು ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಸತ್ಯಾತ್ಮಕರಾದ ಯಾವ ಪಿತೃಗಳು ಹವಿಸ್ಸನ್ನು ಭಕ್ಷಿಸುವವರಾಗಿಯೂ, ಸೋಮಾದಿ ಹವಿಸ್ಸುಗಳನ್ನು ಪಾನಮಾಡುವವರಾಗಿಯೂ, ಇಂದ್ರಾದಿದೇವತೆಗಳೊಡನೆ ಸಮಾನತ್ವವನ್ನು ಹೊಂದಿದವರಾಗಿಯೂ ಇರುವರೋ ಅಂತಹ ಸಹಸ್ರ ಸಂಖ್ಯಾಕರೂ ದೇವತೆಗಳೊಡನೆ ಕೂಡಿದವರೂ, ಪರ ಮತ್ತು ಅಪರಕಾಲಕ್ಕೆ ಸೇರಿದವರೂ, ಯಜ್ಞಕಾರಕರೂ ಆದ ಪಿತೃಗಳೊಡನೆ ದಯಮಾಡು.

English Translation

Come, Agni, with thousands of Pitris, of both past and future (time), frequenters of sacrifices, eulogists of the gods ; those who are true, who feed on oblations, and drink oblations, possessing equality with Indra and the gods.

॥ ಸಂಹಿತಾಪಾಠಃ ॥

ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ ಸದಃಸದಃ ಸದತ ಸುಪ್ರಣೀತಯಃ ।
ಅತ್ತಾ ಹವೀಂಷಿ ಪ್ರಯತಾನಿ ಬರ್ಹಿಷ್ಯಥಾ ರಯಿಂ ಸರ್ವವೀರಂ ದಧಾತನ ॥ ೧೧ ॥

॥ ಪದಪಾಠಃ ॥

ಅಗ್ನಿಷ್ವಾತ್ತಾಃ । ಪಿತರಃ । ಆ । ಇಹ । ಗಚ್ಛತ । ಸದಃಸದಃ । ಸದತ । ಸುಪ್ರಣೀತಯಃ ।
ಅತ್ತ । ಹವೀಂಷಿ । ಪ್ರಯತಾನಿ । ಬರ್ಹಿಷಿ । ಅಥ । ರಯಿಂ । ಸರ್ವವೀರಂ । ದಧಾತನ ॥ ೧೧ ॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇ ಪಿತರೋಽಗ್ನಿಷ್ವಾತ್ತಾ ಇತ್ಯಸ್ಯಾಗ್ನಿಷ್ವಾತ್ತಾಃ ಪಿತರ ಇತ್ಯೇಷಾ ಪ್ರಥಮಾನುವಾಕ್ಯಾ । ಸೂತ್ರಿತಂ ಚ । ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ ಯೇ ಚೇಹ ಪಿತರೋ ಯೇ ಚ ನೇಹ । ಅ.೨-೧೯ । ಇತಿ ॥

ಅಗ್ನಿಷ್ವಾತ್ತಾ ಅಗ್ನಿನಾ ಸ್ವಾದಿತಾ ಏತನ್ನಾಮಕಾ ಪಿತರಃ ಯೂಯಮಿಹಾಸ್ಮಿನ್ಪಿತೃಕರ್ಮಣ್ಯಾಗಚ್ಛತ । ಆಗತ್ಯ ಚ ಹೇ ಸುಪ್ರಣೀತಯೋಽಭಿಪೂಜಿತಪ್ರಣಯನಾಃ ಯೂಯಂ ಸದಃ ಸದಸ್ತತ್ತ್ವಾನಂ ಸದತ । ಸೀದತ । ತಸ್ಮಿನ್ತಸ್ಮಿನ್ಸ್ಥಾನೇ ಯಥೇಷ್ಟಮುಪವಿಶತೇತ್ಯರ್ಥಃ । ಉಪವಿಶ್ಯ ಚ ಬರ್ಹಿಷ್ಯಾಸಾದಿತಾನಿ ಪ್ರಯತಾನಿ ಸ್ರುಚಿ ಹವೀಂಷ್ಯತ್ತ । ಭಕ್ಷಯತ । ಅಥಾನಂತರಂ ಸರ್ವವೀರಂ ಸರ್ವೈರ್ವೀರೈಃ ಪುತ್ರಪೌತ್ರೈರುಪೇತಂ ರಯಿಂ ಧನಂ ದಧಾತನ । ಅಸ್ಮಭ್ಯಂ ದತ್ತ ॥

। ಪ್ರತಿಪದಾರ್ಥ ।

ಅಗ್ನಿಷ್ವಾತ್ತಾಃ—ಅಗ್ನಿಷ್ವಾತ್ತ ಸಂಜ್ಞಕರಾದ । **ಪಿತರಃ**—ಎಲೈ ಪಿತೃಗಳೇ । **ಇಹ**—ನಮ್ಮ ಈ ಯಾಗ ಕರ್ಮಕ್ಕೆ। **ಆ ಗಚ್ಛತ**—ಬನ್ನಿರಿ । **ಸುಪ್ರಣೀತಯಃ**—ಉತ್ತಮವಾದ ಮಾರ್ಗದರ್ಶಕರಾದ ನೀವು । **ಸದಃ ಸದಃ**—ಆಯಾಸ್ಥಾನಗಳಲ್ಲಿ । **ಸದತ**—ಕುಳಿತುಕೊಳ್ಳಿರಿ । **ಬರ್ಹಿಷಿ**—ದರ್ಭಾಸನಗಳ ಮೇಲೆ । **ಪ್ರಯತಾನಿ**—ಇಡಲ್ಪಟ್ಟಿರುವ । **ಹವೀಂಷಿ**—ಹವಿಸ್ಸುಗಳನ್ನು । **ಅತ್ತ**—ಭಕ್ಷಿಸಿರಿ । **ಅಥ**-ಅನಂತರ । **ಸರ್ವವೀರಂ**-ಪುತ್ರಪೌತ್ರಾದಿಗಳಿಂದ ಕೂಡಿದ । **ರಯಿಂ**—ಧನವನ್ನು । **ದಧಾತನ**--ನಮಗೆ ಕೊಡಿರಿ ।

। ಭಾವಾರ್ಥ ।

ಅಗ್ನಿಷ್ವಾತ್ತಸಂಜ್ಞಕರಾದ ಎಲೈ ಪಿತೃಗಳೇ, ನಮ್ಮ ಈ ಯಾಗಕರ್ಮಕ್ಕೆ ಬನ್ನಿರಿ. ಉತ್ತಮವಾದ ಮಾರ್ಗದರ್ಶಕರಾದ ನೀವು ಆಯಾ ಸ್ಥಾನಗಳಲ್ಲಿ ಕುಳಿತುಕೊಳ್ಳಿರಿ. ದರ್ಭಾಸನಗಳ ಮೇಲೆ ಇಟ್ಟಿರುವ ಶುದ್ಧವಾದ ಹವಿಸ್ಸುಗಳನ್ನು ಭಕ್ಷಿಸಿರಿ. ಅನಂತರ ಪುತ್ರಪೌತ್ರಾದಿಗಳಿಂದ ಕೂಡಿದ ಧನವನ್ನು ನಮಗೆ ಕೊಡಿರಿ.

English Translation

Agnishwatta Pitris, come to this solemnity, sit down, directors in the right way, in your appropriate places: eat the oblations spread on the sacred grass and grant us riches and male posterity.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ಪಿತರೋಽಗ್ನಿಷ್ವಾತ್ತಾಃ ಎಂಬ ಪಿತೃಗಳನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಅಗ್ನಿಷ್ವಾತ್ತಾಃ ಪಿತರಃ** ಎಂಬ ಈ ಋಕ್ಕನ್ನು ಮೊದಲನೇ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅಗ್ನಿಷ್ವಾತ್ತಾಃ ಪಿತರ ಏಹ ಗಚ್ಛತ ಯೋ ವೋಹ ಪಿತರೋ ಯೋ ವ ನೇಹ** ಎಂಬ ಸೂತ್ರದಿಂದ (ಅ. ೨-೧೯) ವಿವೃತವಾಗಿರುವುದು.

। ಸಂಹಿತಾಪಾಠಃ ।

ತ್ವಮ॑ಗ್ನ ಈಳಿ॒ತೋ ಜಾ॑ತವೇದೋऽವಾ॑ಡ್ಢವ್ಯಾ॑ನಿ ಸುರ॒ಭೀಣಿ॑ ಕೃ॒ತ್ವೀ ।
ಪ್ರಾದಾ॑ಃ ಪಿ॒ತೃಭ್ಯಃ॑ ಸ್ವ॒ಧಯಾ॒ ತೇ ಅ॑ಕ್ಷ॒ನ್ನದ್ಧಿ ತ್ವಂ ದೇ॑ವ ಪ್ರ॒ಯತಾ॑
ಹ॒ವೀಂಷಿ ॥ ೧೨ ॥

। ಪದಪಾಠಃ ।

ತ್ವಂ । ಅ॒ಗ್ನೇ॒ । ಈ॒ಳಿ॒ತಃ । ಜಾ॒ತ॒ऽವೇ॒ದ॒ಃ । ಅವಾ॑ಟ್ । ಹ॒ವ್ಯಾ॑ನಿ । ಸು॒ರ॒ಭೀಣಿ॑ । ಕೃ॒ತ್ವೀ ಃ
ಪ್ರ । ಅ॒ದಾ॒ಃ॒ । ಪಿ॒ತೃऽಭ್ಯಃ॑ । ಸ್ವ॒ಧಯಾ॑ । ತೇ । ಅ॒ಕ್ಷ॒ನ್ । ಅ॒ದ್ಧಿ । ತ್ವಂ । ದೇ॒ವ॒ । ಪ್ರ॒ಽಯತಾ॑ । ಹ॒ವೀಂಷಿ॑ ॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇ ವಷಟ್ಕಾರಕ್ರಿಯಾಯಾಂ ತ್ವಮಗ್ನ ಈಳಿತ ಇತ್ಯೇಷಾಸ್ವಿಷ್ಟಕೃತೋ ಯಾಜ್ಯಾ । ಸೂತ್ರಿತಂ ಚ । ಯೋಽಗ್ನಿಃ ಕವ್ಯವಾಹನಸ್ತ್ವಮಗ್ನ ಈಳಿತೋ ಜಾತವೇದ ಇತಿ ಸಂಯಾಜ್ಯೇ । ಅ.೨-೧೯ । ಇತಿ ॥

ಹೇ ಜಾತವೇದಃ । ಜಾತಂ ಸರ್ವಂ ಜಗದ್ವೇತ್ತೀತಿ ಜಾತವೇದಾಃ । ತಥಾವಿಧ ಹೇ ಅಗ್ನೇ ಈಳಿತೋಽಸ್ಮಾಭಿಃ ಸ್ತುತಸ್ತ್ವಂ ಹವ್ಯಾನ್ಯಸ್ಮದೀಯಾನಿ ಹವೀಂಷಿ ಸುರಭೀಣಿ ಸುಗಂಧೀನಿ ಕೃತ್ವೀ ಕೃತ್ವಾವಾಟ್ । ವಹನಂ ಕೃತವಾನಸಿ । ಕೃತ್ವಾ ಚ ಪಿತೃಭ್ಯಃ ಪ್ರಾದಾಃ । ತೇ ಚ ಪಿತರಃ ಸ್ವಧಯಾ ಸ್ವಧಾಕಾರೇಣ ದತ್ತಂ ಹವಿರಕ್ಷನ್ । ಅದಂತು । ಹೇ ದೇವ ತ್ವಮಪಿ ಪ್ರಯತಾ । ಪ್ರಯತ್ನಸಂಪಾದಿತಾನಿ ಹವೀಂಷ್ಯದ್ಧಿ । ಭಕ್ಷಯ ॥

॥ಪ್ರತಿಪದಾರ್ಥ॥

ಜಾತವೇದಃ—ಜಾತವೇದೋರೂಪಿಯಾದ । **ಅಗ್ನೇ**—ಎಲೈ ಅಗ್ನಿಯೇ । **ಈಳಿತಃ**—ನಮ್ಮಿಂದ ಸ್ತುತನಾದ । **ತ್ವಂ**—ನೀನು । **ಹವ್ಯಾನಿ**—ನಮ್ಮ ಹವಿಸ್ಸುಗಳನ್ನು । **ಸುರಭೀಣಿ**—ಸುಗಂಧಯುಕ್ತವನ್ನಾಗಿ । **ಕೃತ್ವೀ**—ಮಾಡಿ । **ಅವಾಟ್**—ವಹಿಸಿದ್ದೀಯೆ । **ಪಿತೃಭ್ಯಃ**—ಪಿತೃಗಳಿಗೆ । **ಪ್ರಾದಾಃ**—ಅರ್ಪಿಸಿದ್ದೀಯೆ । **ತೇ**—ಆ ಪಿತೃಗಳು । **ಸ್ವಧಯಾ**—ಸ್ವಧಾಪೂರ್ವಕವಾಗಿ ಅರ್ಪಿಸಿದ ಹವಿಸ್ಸುಗಳನ್ನು । **ಅಕ್ಷನ್**—ಭಕ್ಷಿಸಲಿ । **ದೇವ**—ಎಲೈ ಅಗ್ನಿಯೇ । **ತ್ವಂ**—ನೀನೂ । **ಪ್ರಯತಾ**—ಉತ್ತಮವಾಗಿ ಸಂಪಾದಿಸಿದ । **ಹವೀಂಷಿ**—ಹವಿಸ್ಸುಗಳನ್ನು **ಅದ್ಧಿ**—ಭಕ್ಷಿಸು ।

॥ ಭಾವಾರ್ಥ ॥

ಜಾತವೇದೋರೂಪಿಯಾದ ಎಲೈ ಅಗ್ನಿಯೇ, ನಮ್ಮಿಂದ ಸ್ತುತನಾದ ನೀನು ನಮ್ಮ ಹವಿಸ್ಸುಗಳನ್ನು ಸುಗಂಧಯುಕ್ತವನ್ನಾಗಿ ಮಾಡಿ ಪಿತೃಗಳಿಗಾಗಿ ವಹಿಸಿದ್ದೀಯೆ. ಅವರಿಗೆ ಅರ್ಪಿಸಿದ್ದೀಯೆ ಆ ಪಿತೃಗಳು ಸ್ವಧಾಪೂರ್ವಕವಾಗಿ ಅರ್ಪಿಸಿದ ಹವಿಸ್ಸುಗಳನ್ನು ಭಕ್ಷಿಸಲಿ. ಎಲೈ ಅಗ್ನಿಯೇ, ನೀನೂ ಉತ್ತಮವಾಗಿ ಸಂಪಾದಿಸಿದ ಹವಿಸ್ಸುಗಳನ್ನು ಭಕ್ಷಿಸು.

English Translation

Agni Jatavedas, who are glorified (by us), having made our oblations fragrant, you have borne them off, and have presented them to the Pitris: may they partake of them with the Swadha; and you also, divine Agni feed upon the offered oblations

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ವಷಟ್ಕಾರಕ್ರಿಯಾಹೋಮದಲ್ಲಿ **ತ್ವಮಗ್ನ ಈಳಿತಃ** ಎಂಬ ಈ ಋಕ್ಕನ್ನು ಸ್ವಿಷ್ಟಕೃದ್ಹೋಮದ ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ-ಶ್ರೌತಸೂತ್ರದ-**ಯೋಽಗ್ನಿಃ ಕವ್ಯವಾಹನಸ್ತ್ವ-ಮಗ್ನ ಈಳಿತೋ ಜಾತವೇದ ಇತಿ ಸಂಯಾಜ್ಯೇ** ಎಂಬ ಸೂತ್ರದಿಂದ (ಅ. ೨-೧೯) ವಿವೃತವಾಗಿರುವುದು.

॥ संहितापाठः ॥

यो॑ चे॒ह पि॒तरो॒ यो च॒ नेह याꣳश्च॑ वि॒द्म यॉ उ॑ च॒ न प्र॑वि॒द्म ।
त्वं वे॑त्थ॒ यति॒ ते॑ जा॒तवे॑दः स्व॒धाभि॑र्य॒ज्ञं सु॑कृ॒तं जु॑षस्व ॥

॥ पदपाठः ॥

यो॑ । च॒ । इ॒ह । पि॒तर॑रः । यो॑ । च॒ । न । इ॒ह । यान् । च॒ । वि॒द्म । यान् । ऊॅ॒ इति॑ । च॒ । न । प्र॒ऽवि॒द्म ।
त्वं । वे॒त्थ॒ । यति॑ । ते॒ । जा॒तऽवे॑दः । स्व॒धाभिः॑ । य॒ज्ञं । सु॒ऽकृ॑तं । जु॒ष॒स्व ॥ ८८ ॥

॥ सायणभाष्यं ॥

महापितृयज्ञे यो चेहेति द्वितीयानुवाक्या । सूत्रेमुक्तं ॥

यो॑ च पितर इहास्मत्स्वमीपे वर्तंतो यो चेह न संति । यांश्च पित्र्यान्विद्म संनिकृष्टत्वाज्ज्ञानेमः यॉ उ च नापि च न प्रविद्म विप्रकृष्टत्वाद्वयं न विजानीमः । यति ते यावंतस्ते भवंति तान्सर्वान्मथोक्तान् हे जातवेद उशन्नसर्वज्ञस्त्वं । विषयज्ञानाग्ने त्वं वेत्थ । जानासि । स्वधाभिर्हविर्लक्षणैरन्नैः सुकृतं साधु कृतं यज्ञं जुषस्व । प्रीत्या गृहाण ॥

॥ प्रतिपदार्थ ॥

जातवेदः—जातवेदोरूपियाद एलै अग्नियो । यो॑ च पितरः—यावा पितृगळु । इह—नम्म समीपदल्लिरुवरो । यो॑ च—यारु । इह—नम्म समीपदल्लि । न—इरुवुदिल्लवो । यांश्च—यावा पितृगळन्नु । विद्म—नावु अरियुवेवो । यॉ उ च—यारन्नु । न प्रविद्म—नावु चेन्नागि अरितिल्लवो अवरन्नू । यति ते—अवर पूर्णवाद संख्येयन्नू । त्वं—नीनु । वेत्थ—अरितिद्दीयॆ । स्वधाभिः—स्वधारूपवाद हविस्सुगळिंद । सुकृतं—सुसंस्कृतवाद । यज्ञं—यज्ञवन्नु । जुषस्व—सेविसु ।

॥ भावार्थ ॥

जातवेदोरूपियाद एलै अग्नियो, यावा पितृगळु नम्म समीपदल्लिरुवरो, यारु नम्म समीपदल्लिरुवुदिल्लवो, यावा पितृगळन्नु नावु अरियुवेवो, यारन्नु नावु चेन्नागि अरि

ತಿಲ್ಲವೋ ಅವರನ್ನೂ, ಅವರ ಪೂರ್ಣವಾದ ಸಂಖ್ಯೆಯನ್ನೂ ನೀನು ಅರಿತಿದ್ದೀಯೆ. ಸ್ವಧಾರೂಪವಾದ ಹವಿಸ್ಸುಗಳಿಂದ ಸುಸಂಸ್ಕೃತವಾದ ಯಜ್ಞವನ್ನು ಸೇವಿಸು.

English Translation

You know, Jatavedas, those Pitris, how many they may be, who are not in this world, those who are not in this world, those whom we know, and those whom we do not fully know: enjoy this pious sacrifice offered together with Swadhas.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ಯೇ ಚೇಹ ಎಂಬ ಈ ಋಕ್ಕನ್ನು ಎರಡನೆಯ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದಲ್ಲಿ ಹೇಳಿರುವುದನ್ನು ಹಿಂದೆಯೇ ತಿಳಿಸಲಾಗಿದೆ

॥ ಸಂಹಿತಾಪಾಠಃ ॥

ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ ಮಧ್ಯೇ ದಿವಃ ಸ್ವಧಯಾ ಮಾದ-
ಯಂತೇ ।
ತೇಭಿಃ ಸ್ವರಾಳಸುನೀತಿಮೇತಾಂ ಯಥಾವಶಂ ತನ್ವಂ ಕಲ್ಪಯಸ್ವ ॥ ೧೪ ॥

॥ ಪದಪಾಠಃ ॥

ಯೇ । ಅಗ್ನಿದಗ್ಧಾಃ । ಯೇ । ಅನಗ್ನಿದಗ್ಧಾಃ । ಮಧ್ಯೇ । ದಿವಃ । ಸ್ವಧಯಾ । ಮಾದಯಂತೇ ।
ತೇಭಿಃ । ಸ್ವರಾಟ್ । ಅಸುನೀತಿಂ । ಏತಾಂ । ಯಥಾವಶಂ । ತನ್ವಂ । ಕಲ್ಪಯಸ್ವ ॥ ೧೪ ॥

॥ ಸಾಯಣಭಾಷ್ಯಂ ॥

ಪೂರ್ವೋಕ್ತ ಏವ ಯಾಗೇ ಯೇ ಅಗ್ನಿದಗ್ಧಾ ಇತ್ಯೇಷಾ ಯಾಜ್ಯಾ । ಸೂತ್ರಿತಂ ಚ । ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ ಇಮಂ ಯಮ ಪ್ರಸ್ತರಮಾ ಹಿ ಸೀದೇತಿ ದ್ವೇ । ಆ-೨-೧೯ । ಇತಿ ॥

ಯೇ ಪಿತರೋಽಗ್ನಿದಗ್ಧಾ ಅಗ್ನಿನಾ ಭಸ್ಮೀಕೃತಾಃ । ಶ್ಮಶಾನಂ ಪ್ರಾಪ್ತಾ ಇತ್ಯರ್ಥಃ । ಯೇ ಚ ಪಿತರೋಽನಗ್ನಿದಗ್ಧಾಃ ಶ್ಮಶಾನಕರ್ಮ ನ ಪ್ರಾಪ್ತಾ ಮಧ್ಯೇ ದಿವೋ ದ್ಯುಲೋಕಸ್ಯ ಮಧ್ಯೇ ಸ್ವಧಯಾ ಹವಿರ್ಲಕ್ಷಣೇನಾನ್ನೇನ ಮಾದಯಂತೇ ತೃಪ್ಯಂತಿ ಹೇ ಅಗ್ನೇ ಸ್ವರಾಟ್ ಸ್ವಕರ್ಮೋಪಭೋಗೇನ ದೀಪ್ಯಮಾನಸ್ತೇಭಿಸ್ತೈಃ ಪಿತೃಭಿಃ ಸಹಿತಃ ಸನ್ನಸುನೀತಿಂ ಪ್ರಾಣಾನಾಂ ವಿಷಯೇಷು ನೇತಾರಮಸ್ಮತ್ಪಿತ್ರಂತರಾ-

ತ್ಮಾನಮೇತಾಂ ತನ್ವಮೇತದ್ದೇವತಾಶರೀರಂ ಯಥಾವಶಂ ಯಥಾಕಾಮಂ ಕಲ್ಪಯಸ್ವ ಸಮರ್ಥಯಸ್ವ । ಗ್ರಾಸಯೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯೇ**—ಯಾವ ಪಿತೃಗಳು । **ಅಗ್ನಿದಗ್ಧಾಃ**—ಅಗ್ನಿಯಿಂದ ದಹಿಸಲ್ಪಟ್ಟವರಾಗಿಯೂ । **ಯೇ**—ಯಾರು । **ಅನಗ್ನಿದಗ್ಧಾಃ**—ಅಗ್ನಿಯಿಂದ ದಹಿಸಲ್ಪಡದೆಯೂ । **ಮಧ್ಯೇ ದಿವಃ**—ದ್ಯುಲೋಕದ ಮಧ್ಯದಲ್ಲಿರುವರೋ । **ಸ್ವಧಯಾ**—ಅವರೆಲ್ಲರೂ ಸ್ವಧಾರೂಪವಾದ ಹವಿಸ್ಸಿನೊಡನೆ । **ಮಾದಯಂತೇ**—ತೃಪ್ತಿಯನ್ನು ಹೊಂದಲಿ । **ತೇಭಿಃ**—ಅವರೊಡನೆ ಕೂಡಿ । **ಸ್ವರಾಟ್**—ಸ್ವಯಂ ಪ್ರಕಾಶಕನಾದ ನೀನು । **ಅಸುನೀತಿಂ**—ಪಿತೃ ಪ್ರಾಣರೂಪನಾದ (ಅದನ್ನೊಳಗೊಂಡ) । **ಏತಾಂ ತನ್ವಂ**—ದೇವತಾ ಶರೀರವನ್ನು । **ಯಥಾವಶಂ**—ನಿನ್ನ ಸಂಕಲ್ಪದಂತೆ । **ಕಲ್ಪಯಸ್ವ**—ನಿರ್ಮಿಸು ।

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಪಿತೃಗಳು ಅಗ್ನಿಯಿಂದ ದಹಿಸಲ್ಪಟ್ಟವರಾಗಿಯೂ, ಯಾರು ಅಗ್ನಿಯಿಂದ ದಹಿಸಲ್ಪಡದೆಯೂ ದ್ಯುಲೋಕದ ಮಧ್ಯದಲ್ಲಿರುವರೋ ಅವರೆಲ್ಲರೂ ಸ್ವಧಾರೂಪದ ಹವಿಸ್ಸಿನೊಡನೆ ತೃಪ್ತಿಯನ್ನು ಹೊಂದಲಿ. ಅವರೊಡನೆ ಕೂಡಿ ಸ್ವಯಂಪ್ರಕಾಶಕನಾದ ನೀನು ಪಿತೃಪ್ರಾಣನನ್ನೊಳಗೊಂಡ ದೇವತಾ ಶರೀರವನ್ನು ನಿನ್ನ ಸಂಕಲ್ಪದಂತೆ ನಿರ್ಮಿಸು.

English Translation

May those who are Agnidagdhas, and those who are not, be satisfied with Swadha in the midst of heaven; and you, supreme Lord, associated with them, construct at your pleasure that body that is endowed with breath.

॥ ವಿಶೇಷವಿಷಯಗಳು ॥

ಹಿಂದೆ ಹೇಳಿದ ಪುಷಾಪಿತೃಯಜ್ಞವೆಂಬ ಯಾಗದಲ್ಲಿ **ಯೇ ಅಗ್ನಿದಗ್ಧಾಃ** ಎಂಬ ಈ ಋಕ್ಕನ್ನು ಯಾಜ್ಯಾ ಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ **ಯೇ ಅಗ್ನಿದಗ್ಧಾ ಯೇ ಅನಗ್ನಿದಗ್ಧಾ ಇಮಂ ಯಮ ಪ್ರಸ್ತರಮಾ ಹಿ ಸೀದೇತಿ ದ್ವೇ** ಎಂಬ ಸೂತ್ರದಿಂದ (ಅ. ೨-೧೯) ವಿಸ್ತೃತವಾಗಿರುವುದು.

ಅಗ್ನಿದಗ್ಧಾಃ, ಅನಗ್ನಿದಗ್ಧಾಃ-ಮೃತರಾದಮೇಲೆ ಅವರ ಕರ್ಮಮಾಡುವಾಗ ಯಾರ ಮೃತ ಶರೀರಗಳನ್ನು ಅಗ್ನಿಯಲ್ಲಿ ಸುಟ್ಟು ವಿಧ್ಯುಕ್ತವಾದ ಮಂತ್ರಗಳಿಂದ ಸಂಸ್ಕರಿಸಲ್ಪಟ್ಟವರಿಗೆ ಅಗ್ನಿದಗ್ಧಾಃ ಪಿತರಃ-ಅಗ್ನಿದಗ್ಧರಾದ ಪಿತೃಗಳು ಎಂದು ಹೆಸರು. ಹಾಗಿಲ್ಲದೆ ಮೃತರಾದವರಿಗೆ ಅಗ್ನಿಸಂಸ್ಕಾರಮಾಡಲು ಕರ್ತರಾರೂ ಇಲ್ಲದೆ ಅಥವಾ ನೀರಿನಲ್ಲಿ ಮುಳಿಗಿ ಸಾಯುವುದೇ ಮೊದಲಾದ ಕಾರಣಗಳಿಂದಲೂ ಇತರ ವಿಧವಾದ ಅಪಮೃತ್ಯುವಿನಿಂದಲೂ ಮೃತರಾಗಿ ಅಗ್ನಿ ಸಂಸ್ಕಾರಕರ್ಮವು ಸಾಧ್ಯವಿಲ್ಲದೆ ತಮ್ಮ ಸುಕೃತದಿಂದಲೇ ಪಿತೃಲೋಕಕ್ಕೆ ಹೋಗಿ ಅಲ್ಲಿರುವವರಿಗೆ ಅನಗ್ನಿದಗ್ಧಾಃ ಪಿತರಃ ಅಗ್ನಿದಗ್ಧರಲ್ಲದ ಪಿತೃಗಳೆಂದೂ ಹೆಸರು.

ಹದಿನಾರನೆಯ ಸೂಕ್ತವು.

ಪೀಠಿಕೆ

ಈ ಸೂಕ್ತದಲ್ಲಿಯೂ ಮುಂದಿನ ಸೂಕ್ತದಲ್ಲಿಯೂ ಪಿತೃದೇವತೆಗಳ ಸಂಬಂಧವಾದ ಮತ್ತು ಅಪರಕರ್ಮದಲ್ಲಿ ನೆರವೇರಿಸುವ ಕ್ರಿಯೆಗಳಲ್ಲಿ ಉಪಯೋಗಿಸುವ ಮಂತ್ರಗಳಿರುವುವು. ಪಿತೃದೇವತೆಗಳ ವಿಷಯವನ್ನು ನಾವು ಹಿಂದಿನ ಸೂಕ್ತಗಳಲ್ಲಿ ವಿಸ್ತಾರವಾಗಿ ವಿವರಿಸಿದೇವೆ. ಆದರೂ ಋಗ್ವೇದದಲ್ಲಿಯೂ ಇತರ ವೇದಗಳಲ್ಲಿಯೂ ಕಂಡುಬರುವ ಸ್ವರ್ಗ ಮತ್ತು ನರಕಗಳ ಸ್ವರೂಪವನ್ನು ಸೂಕ್ಷ್ಮವಾಗಿ ವಿವರಿಸುವುದು ಅವಶ್ಯಕವು.

ಸ್ವರ್ಗ :—ಪಿತೃಗಳೂ ಮತ್ತು ಯಮನು ವಾಸಿಸುವ ಸ್ಥಾನವು ನಿತ್ಯವಾದ ತೇಜಸ್ಸಿಗೆ ನೆಲೆಯಾದ ಆಕಾಶದ ಮಧ್ಯದಲ್ಲಿ (೧೦-೧೫-೧೪), ಅತ್ಯಂತ ಎತ್ತರವಾದ ಸ್ವರ್ಗದಲ್ಲಿ (೧೦-೧೪-೮), ಮೂರನೆಯ ಸ್ವರ್ಗದಲ್ಲಿ, ಆಕಾಶದ ಅತ್ಯಂತ ಗಹನವಾದ ಪ್ರದೇಶಗಳಲ್ಲಿ, (೯-೧೧೩-೭ ರಿಂದ ೯) ಇದೆ. ಅಥರ್ವವೇದದಲ್ಲಿಯೂ ಇದೇ ರೀತಿ, ಉತ್ಕೃಷ್ಟವಾದ (ಅ. ವೇ. ೧೮-೪ ೧೧) ಮತ್ತು ತೇಜಃಪುಂಜವಾದ ಲೋಕ (೪.೩೪-೨). ಆಕಾಶದ ತುದಿ (೨ ವೇ. ೧೪ ೨.೪೭) ಮೂರನೆಯ ಆಕಾಶ (ಅ. ವೇ. ೯-೫-೧೦; ೧೪-೪-೩) ಮತ್ತು ಮೂರನೆಯ ಸ್ವರ್ಗ (ಅ ವೇ. ೧೪-೨-೪೪) ಇವುಗಳೇ ಪಿತೃಲೋಕಗಳ ಮತ್ತು ಯಮನ ಸ್ಥಾನವೆಂದು ಹೆಳಿದೆ. ನೈತ್ತಾಯಿಣೀ ಸಂಹಿತೆಯಲ್ಲಿ (ನೈ ಸಂ. ೧-೧೦-೧೪, ೨.೩.೯) ಪಿತೃಲೋಕವೇ ಮೂರನೆಯ ಲೋಕ ಪಿತೃಲೋಕವು ಸೂರ್ಯಮಂಡಲದ ಅತ್ಯಂತ ಎತ್ತರವಾದ ಪ್ರದೇಶ (೯.೧೧೩-೯). ಪಿತೃಗಳು ಸೂರ್ಯನೊಡನೆ ಸೇರಿಹೋಗಿದಾರೆ ಅಥವಾ ಸೂರ್ಯನನ್ನು ರಕ್ಷಿಸುತ್ತಾರೆ. (೧೦-೧೦೭-೨, ೧೦-೧೫೪-೫) ಅಥವಾ ಸೂರ್ಯರಶ್ಮಿಗಳೊಡನೆ ಸೇರಿದಾರೆ (೧-೧೦೯-೭, ಶ ಬ್ರಾ ೧-೯-೩-೧೦ ನ್ನು ಹೋಲಿಸಿ) ಮತ್ತು ಸೂರ್ಯನು ಅವರಿಗೋಸ್ಕರಲೇ ಪ್ರಕಾಶಿಸುತ್ತಾನೆ (೫-೧೫೫-೬), ವಿಷ್ಣುವಿನ ಪಾದಕ್ಕೂ ಇವರಿಗೂ ಸಂಬಂಧವಿದೆ (೧೦-೧೫-೩) ಮತ್ತು ಧರ್ಮಿಷ್ಠರಾದವರು ಆ ಪ್ರಿಯವಾದ ವಾಸಸ್ಥಳದಲ್ಲಿ ವಿಷ್ಣುವಿನ ಮೂರನೆಯ ಹೆಜ್ಜೆಯಲ್ಲಿ ಆನಂದಿಸುತ್ತಾರೆ (೧-೧೫೪-೫) ಎಂದಿದೆ. ದೇವತೆಗಳು ಆನಂದಿಸುವ ಪ್ರದೇಶಕ್ಕೆ ಮೂರು ಹೆಜ್ಜೆಗಳನ್ನು ವಿಷ್ಣುವು ಇಟ್ಟುಕೊಂಡು ಹೋದಂತೆ, ಸತ್ಪುರುಷರು ಆಹುತಿಯನ್ನು ಕೊಡುವ ಸ್ಥಳಕ್ಕೆ, ಸೂರ್ಯನೂ ಉಷಸ್ಸನ್ನು ಹಿಂಬಾಲಿಸಿಕೊಂಡು, ಹೋಗುತ್ತಾನೆ.

ಸ್ವರ್ಗಲೋಕಕ್ಕೆ ಹೋಗುತ್ತಿರುವ ಸತ್ಪುರುಷರ ತೇಜಸ್ಸುಗಳೇ ನಕ್ಷತ್ರಗಳು (ತೈ. ಸಂ. ೫.೪.೧೦-೩; ಶ. ಬ್ರಾ. ೬-೫-೪-೮) ಮತ್ತು ಪುರಾತನರಾದ ಏಳು ಜನ ಋಷಿಗಳು ನಕ್ಷತ್ರ ಮಂಡಲಕ್ಕೆ ಏರಿಸಲ್ಪಟ್ಟರು (ತೈ. ಆ. ೧-೯೧-೧-೨).

ಋಗ್ವೇದದಲ್ಲಿ ಒಂದು ವೃಕ್ಷದ ಪ್ರಸ್ತಾಪವಿದೆ. ಇದರ ಸಮೀಪದಲ್ಲಿ ಯಮನು ದೇವತೆಗಳೊಡನೆ ಕುಳಿತು ಪಾನಮಾಡುತ್ತಾನೆ (೧೦-೧೩೫-೧) ಅಥರ್ವವೇದದಲ್ಲಿ (ಅ. ವೇ. ೫.೪.೩), ಇದು ಒಂದು ಅತ್ತಿಯ ಮರವೆಂದು ಹೇಳಿದೆ.

ಪರಲೋಕಜೀವನದ ಪ್ರಸ್ತಾಪವು ವಿಶೇಷವಾಗಿ ಒಂಭತ್ತು ಮತ್ತು ಹತ್ತನೆಯ ಮಂಡಲಗಳಲ್ಲಿ ಹೆಚ್ಚಾಗಿಯೂ, ಮೊದಲನೆಯದರಲ್ಲಿ ಸಾಧಾರಣವಾಗಿಯೂ ಇದೆ. ಕಠಿಣ ತಪಸ್ಸನ್ನಾಚರಿಸುವವರಿಗೆ ಅವರ ತಪಸ್ಸಿನ

ಫಲವು ಸ್ವರ್ಗ. ಮತ್ತು ಯುದ್ಧದಲ್ಲಿ ಮೃತರಾದವರಿಗೂ ಇವೇ ಫಲ (೧೦-೧೫೪-೨ ರಿಂದ ೫) ಆದರೆ ಇವರೆಲ್ಲರಿಗಿಂತಲೂ ಹೆಚ್ಚಾಗಿ, ಉದಾರವಾಗಿ ಹೋಮದ್ರವ್ಯಗಳನ್ನರ್ಪಿಸುವವರಿಗೆ ಈ ಸ್ವರ್ಗವು ಫಲರೂಪವಾಗಿದೆ (೧೦-೧೫೪-೩ ; ೧-೧೨೫.೫, ೧೦-೧೦೭-೨). ಈ ಯಾಗಾದಿ ಕರ್ತೃಗಳಿಗೆ ದೊರಕುವ ಫಲಗಳ ವಿಷಯವನ್ನು ಅಥರ್ವವೇದದಲ್ಲಿ ಬಹಳ ಹೆಚ್ಚಾಗಿ ಹೇಳಿದೆ.

ಮೃತರಾದವರು ಸ್ವರ್ಗದಲ್ಲಿ, ಬಹಳ ಅಹ್ಲಾದಕರವಾದ ಜೀವನವನ್ನು ಅನುಭವಿಸುತ್ತಾರೆ (೧೦-೧೪-೮ ; ೧೦-೧೫.೧೪; ೧೦-೧೬-೨, ೫) ; ಇಲ್ಲಿ ಎಲ್ಲಾ ಇಷ್ಟಾರ್ಥಗಳೂ ಕೈಗೂಡುತ್ತವೆ. (೯-೧೧೩.೯, ೧೧), ದೇವತೆಗಳ ಮಧ್ಯದಲ್ಲಿ (೧೦-೧೪-೧೪), ಅದರಲ್ಲಿಯೂ ಯಮ ಮತ್ತು ವರುಣರ ಸನ್ನಿಧಿಯಲ್ಲಿ ಈರೀತಿ ಜೀವನ (೧೦-೧೪-೭). ವಾರ್ಧಕ್ಯವೆಂಬ ಮಾತೇ ಇಲ್ಲ (೧೦-೨೭-೨೧). ಸುಂದರವಾದ ದೇಹವಿಶಿಷ್ಟರಾಗಿ, ದೇವತೆಗಳಿಗೆ ಪ್ರಿಯರೂ, ಇಷ್ಟರೂ ಆಗುತ್ತಾರೆ. (೧೦-೧೪-೮, ೧೦-೧೬-೫, ೧೦-೫೬-೧). ಅಲ್ಲಿ ತಂದೆ, ತಾಯಿ, ಮಕ್ಕಳು ಮೊದಲಾದವರನ್ನು ನೋಡುತ್ತಾರೆ (ಅ. ವೇ. ೬-೧೨೦-೩) ಮತ್ತು ಪತ್ನೀಪುತ್ರಾದಿಗಳೊಡನೆ ಪುನಃ ಸಮಿಲಿತರಾಗುತ್ತಾರೆ (ಅ. ವೇ. ೧೨-೩-೧೭). ಜೀವನದಲ್ಲಿ ಲೋಪದೋಷಗಳ ಲವಲೇಶವೂ ಇಲ್ಲ, ಅದರಂತೆ ಶಾರೀರಕ ಕಷ್ಟಗಳೂ ಈಲ್ಲ (೧೦-೧೪-೮, ಅ ವೇ ೬-೧೨೦-೩). ರೋಗರುಜಿನಗಳೆಲ್ಲಾ ಭೂಮಿಯಲ್ಲೇ ಉಳಿದುಕೊಳ್ಳುತ್ತವೆ, ಕೈಕಾಲುಗಳು, ಸೊಟ್ಟ ಅಥವಾ ಕುಂಟು, ಇಂತಹ ದೋಷಗಳೇನೂ ಇಲ್ಲ (ಅ. ವೇ. ೩-೨೮-೫) ಆ ಲೋಕದಲ್ಲಿ ಸಂಪೂರ್ಣವಾದ ದೇಹದಿಂದ ಕೂಡಿರುತ್ತಾರೆ ಎಂದು ಅಥರ್ವವೇದ ಮತ್ತು ಶತಪಥ ಬ್ರಾಹ್ಮಣಗಳಲ್ಲಿ ಹೇಳಿದೆ.

ಮೃತರು ಸ್ವರ್ಗದಲ್ಲಿ ಸುಖವಾಗಿರುತ್ತಾರೆ, ಆನಂದಿಸುತ್ತಾರೆ (ಮದಂತಿ, ಮೋದಯಂತೇ, ೧೦ ೧೪-೧೦, ೧೨-೧೫.೧೪, ಇತ್ಯಾದಿ). ಸ್ವರ್ಗಜೀವನದ ಸೌಖ್ಯವು ಬಹಳ ವಿಶದವಾಗಿ ೯-೧೧೩-೭ ರಿಂದ ೧೧ ರಲ್ಲಿ ಕೊಟ್ಟಿವೆ. ಅಲ್ಲಿ ಬೆಳಕು ಸತತವಾಗಿರುತ್ತದೆ, ನೀರು ವೇಗವಾಗಿ ಹರಿಯುತ್ತದೆ, ಪ್ರವಾಹಕ್ಕೆ ಅಡ್ಡಿಯೇ ಇಲ್ಲ (ತೈ. ಬ್ರಾ. ೩-೧೨-೨.೯ ನ್ನು ಹೋಲಿಸಿ). ಅಲ್ಲಿ ಸ್ವಧಾರೂಪವಾದ (ಪಿತೃಗಳಿಗೆ ಅರ್ಪಿತವಾಗುವ ಆಹಾರ) ಆಹಾರವೂ, ತೃಪ್ತಿಯೂ ಉಂಟು, ಸಂತೋಷ, ಆನಂದ, ಇಷ್ಟಾರ್ಥಸಿದ್ಧಿ ಮೊದಲಾದುವುಗಳೆಲ್ಲವೂ ಇವೆ. ಅಸ್ಪಷ್ಟವಾಗಿ ಆನಂದ, ಸಂತೋಷ ಎಂದು ಹೇಳಿರುವುದನ್ನು ಮುಂಚೆ ವಿಷಯಸುಖವೆಂದು ವಿವರಿಸಿವ (ತೈ. ಬ್ರಾ. ೨-೪-೬ ೬, ಶ ಬ್ರಾ. ೨-೪-೪-೪, ಶ. ಬ್ರಾ. ೧೦-೪-೪-೪ ನ್ನು ಹೋಲಿಸಿ). ಅಥರ್ವವೇದದಲ್ಲಿ ವಿಷಯಸುಖವು ಯಥೇಚ್ಛವಾಗಿ ಸಿಗುತ್ತದೆ ಎಂದು ಹೇಳಿದೆ (ಅ ವೇ. ೪-೩೪-೨) ಭೂಮಿಯಲ್ಲಿ ಅನುಭವಿಸುವ ಅತ್ಯಂತ ಹೆಚ್ಚು ಸುಖಕ್ಕೆ ನೂರರಷ್ಟು ಹೆಚ್ಚು ಸುಖವು ಅಲ್ಲಿ ಅನುಭವಿಸಲ್ಪಡುತ್ತದೆ (ಶ. ಬ್ರಾ ೧೪-೭-೧-೩೨, ೩೩). ಪುಣ್ಯಶಾಲಿಗಳಿರುವ ಆ ಲೋಕದಲ್ಲಿ, ವೇಣು ನಾದವೂ ಮತ್ತು ಗಾನವೂ ಕೇಳಿಬರುತ್ತವೆ (೧೦-೧೩೫-೭), ಅವರಿಗೋಸ್ಕರ ಸೋಮರಸ, ಘೃತ ಮತ್ತು ಜೇನು ತುಪ್ಪಗಳು ಪ್ರವಹಿಸುತ್ತವೆ (ಅ. ವೇ. ೪-೩೪-೫-೬ ಶ. ಬ್ರಾ. ೧೧-೫-೬-೪). ಸ್ವಚ್ಛವೂ ನಾನಾ ವರ್ಣದವೂ ಇಷ್ಟಾರ್ಥಪ್ರದಗಳೂ ಆದ ಗೋವುಗಳು ಸರ್ವದಾ ಸಿದ್ಧವಾಗಿರುತ್ತವೆ (ಕಾಮದುಘಾಃ ಅ ವೇ ೪-೩೪-೮). ಅಲ್ಲಿ ಬಡವರು ಶ್ರೀಮಂತರು, ದೊಡ್ಡವರು ಚಿಕ್ಕವರು ಎಂಬ ಭೇದವಿಲ್ಲ (ಅ. ವೇ ೩-೨೯-೩). ಸಂಹಿತೆ ಮತ್ತು ಬ್ರಾಹ್ಮಣಗಳಲ್ಲಿ ವರ್ಣಿತವಾಗಿರುವ ಈ ಸ್ವರ್ಗಸುಖವು, ಉಪನಿಷತ್ತುಗಳಲ್ಲಿ, ಅಶಾಶ್ವತವೆಂದೂ ಉತ್ತಮವಲ್ಲವೆಂದೂ, ಅಮೃತದ ತತ್ವವನ್ನು ತಿಳಿದವರಿಗೆ ಮಾತ್ರ, ಬ್ರಹ್ಮೈಕ್ಯವೂ, ತಜ್ಜನ್ಯವಾದ ಶಾಶ್ವತ ಸುಖವೂ ದೊರಕುತ್ತವೆ ಎಂತಲೂ ಉಕ್ತವಾಗಿದೆ. ಆದುದರಿಂದ ಸತ್ಕರ್ಮ ಮಾಡಿದವರು ಮರಣಾನಂತರ, ಸ್ವರ್ಗಲೋಕದಲ್ಲಿ, ಸುಖಲೋಲುಪರಾಗಿ, ಸೋಮಾರಿಗಳಂತೆ ಕಾಲಕಳೆಯುತ್ತಾರೆ ಎಂದು ಭಾವನೆ.

ಸ್ವರ್ಗವು ಈ ಲೋಕಕ್ಕಿಂತಲೂ ಹೆಚ್ಚು ವೈಭವವಿಶಿಷ್ಟವಾದುದು ಮತ್ತು ವೈಷಯಿಕಸುಖಪೂರ್ಣವಾದುದು. ಅದು ಸತ್ಕರ್ಮಿಗಳ ಲೋಕ (೧೦-೧೬-೪,) ಇಲ್ಲಿ ಕರ್ಮಜ್ಞಾನವುಳ್ಳವರು ಆನಂದದಿಂದ ಕಾಲಕಳೆಯುತ್ತಾರೆ. ತಾವು ಮಾಡಿದ ಹೋಮಗಳ ಮತ್ತು ಮಾಡಿದ ದಾನಗಳ ಫಲವನ್ನನುಭವಿಸುತ್ತಾರೆ, ಅದರಲ್ಲಿಯೂ ಋತ್ವಿಜರು ಮೊದಲಾದವರಿಗೆ, ಎಷ್ಟು ಹೆಚ್ಚಾಗಿ ದಾನಮಾಡಿದರೆ, ಸುಖವೂ ಅಷ್ಟು ಹೆಚ್ಚುತ್ತದೆ (೧೦.೧೫೪-೩). ವಿಹಿತವಾದ ರೀತಿಯಲ್ಲಿ ಯಜ್ಞಕರ್ಮಾನುಷ್ಠಾನ ಮಾಡಿದವರು, ಆದಿತ್ಯ ಮತ್ತು ಅಗ್ನಿಲೋಕಗಳು ಮಾತ್ರವಲ್ಲದೆ, ವಾಯು, ಇಂದ್ರ, ವರುಣ ಬೃಹಸ್ಪತಿ, ಪ್ರಜಾಪತಿ, ಮತ್ತು ಬ್ರಹ್ಮ ಇವರುಗಳ ಲೋಕಗಳೊಡನೆ ಐಕ್ಯವನ್ನು ಪಡೆಯುತ್ತಾರೆ (ಶ. ಬ್ರಾ ೨-೬-೪-೮, ೧೧.೪–೪-೨೧. ೧೧-೬-೨-೩, ೩, ತೈ. ಬ್ರಾ ೩.೧೦.೧೧.೬). ಒಬ್ಬ ಋಷಿಯು ತನ್ನ ಜ್ಞಾನದ ಬಲದಿಂದ ಬಂಗಾರದ ಹಂಸರೂಪವನ್ನು ತಾಳಿ, ಸ್ವರ್ಗಲೋಕಕ್ಕೆ ಹೋಗಿ, ಸೂರ್ಯನೊಡನೆ ಐಕ್ಯವನ್ನು ಪಡೆದನೆಂದು (ತೈ. ಬ್ರಾ. ೩.೧೦-೯–೧೧) ಹೇಳಿದೆ. ತೈತ್ತಿರೀಯ ಸಂಹಿತೆಯಲ್ಲ—ಕೆಲವು ಕರ್ಮಗಳನ್ನು ಮಾಡಿದರೆ, ಮನುಷ್ಯನು ಈ ಭೌತಿಕ ದೇಹವಿಶಿಷ್ಟನಾಗಿಯೇ ಸ್ವರ್ಗವನ್ನು ಪಡೆಯಬಹುದೆಂಬ ಅಭಿಪ್ರಾಯವಿದೆ (ತೈ. ಬ್ರಾ. ೬-೬-೯-೨).

ವೇದವನ್ನು ವಿಹಿತವಾದ ವಿಧಾನದಲ್ಲಿ ಅಭ್ಯಾಸಮಾಡಿದವರು ಜನನ ಮರಣಗಳ ಭಯರಹಿತರಾಗಿ, ಬ್ರಹ್ಮನೊಡನೆ ಸಮತ್ವವನ್ನು ಪಡೆಯಬಹುದು. (ಶ. ಬ್ರಾ. ೧೦-೫-೬-೯). ಯಾವುದೋ ಒಂದು ರಹಸ್ಯ ವಿಷಯವನ್ನು ತಿಳಿದುದರ ಫಲವಾಗಿ, ಮನುಷ್ಯನು ಪುನಃ ಜನಿಸುತ್ತಾನೆ. (ಶ. ಬ್ರಾ. ೧-೫-೩-೧೪) ಇವುಗಳಲ್ಲಿ ಪಾಪಸ್ಖಲ ಮತ್ತು ದೇಹಾಂತರ ಪ್ರಾಪ್ತಿ ವಾದಗಳ ಪ್ರಾರಂಭವನ್ನು ಕಾಣಬಹುದು. ಛಾಂದೋಗ್ಯ, ಬೃಹದಾರಣ್ಯಕ, ಕಠ ಮೊದಲಾದ ಉಪನಿಷತ್ತುಗಳಲ್ಲ ಮತ್ತು ಸೂತ್ರಗಳಲ್ಲಿ ಇವುಗಳು ಸಂಪೂರ್ಣವಾಗಿ ಪ್ರತಿಪಾದಿತವಾಗಿವೆ. ಕಠೋಪನಿಷತ್ತಿನಲ್ಲಿ ನಚಿಕೇತನೆಂಬುವನ ಕಥೆಯಿದೆ, ಅದರಲ್ಲಿ ಮುಖ್ಯಭಾಗವು ನಚಿಕೇತ ಮತ್ತು ಯಮ ಇವರ ಸಂವಾದ. ಸ್ವರ್ಗ ಮತ್ತು ಮುಕ್ತಿಗಳಿಗೆ ಅರ್ಹತೆಯಿಲ್ಲದವರು ಪುನಃ ಮರಣಾಧೀನರಾಗಿ ಸಂಸಾರ ಚಕ್ರಕ್ಕೆ ಸಿಕ್ಕಿ, ದೇಹಧಾರಿಗಳಾಗಿ ಇಲ್ಲಿವೆ, ಜಡ ಪದಾರ್ಥವಾಗಿ ಭೂಮಿಯಲ್ಲಿ ಜನಿಸುತ್ತಾರೆ; ಆತ್ಮಸಂಯಮನ ಶಕ್ತಿಯುಳ್ಳವನು ವಿಷ್ಣುವಿನ ಲೋಕವನ್ನು ಸಾಧಿಸಬಲ್ಲನು; ಮುಕ್ತಿಯನ್ನು ಸಾಧಿಸಲು ಅಸಮರ್ಥರಾದವರಿಗೆ ನರಕವಿದೆ, ಎಂದು ಯಮನು ನಚಿಕೇತಸಿಗೆ ಉಪದೇಶ ಮಾಡಿದಾನೆ.

ನರಕ

ಸತ್ಪುರುಷರಿಗೆ ಆಮುಷ್ಮಿಕದಲ್ಲಿ ಸ್ವರ್ಗಾದಿ ಫಲವು ಲಭಿಸುತ್ತದೆ ಎಂದ ಮೇಲೆ, ಪಾಪಿಷ್ಠರಿಗೆ ಶಿಕ್ಷೆಗಳನ್ನು ವಿಧಿಸದಿದ್ದರೂ, ಅವರಿಗೆ ಪ್ರತ್ಯೇಕ ಸ್ಥಳವಿರಲೇಬೇಕು. ಅಥರ್ವವೇದ ಮತ್ತು ಕಠೋಪನಿಷತ್ತುಗಳಲ್ಲಿ ಇಂತಹವರು ನರಕದಲ್ಲಿ ತಮ್ಮ ಪಾಪಕರ್ಮಗಳ ಫಲವನ್ನನುಭವಿಸುತ್ತಾರೆ ಎಂದು ಸ್ಪಷ್ಟವಾಗಿ ಹೇಳಿದೆ. ಸ್ವರ್ಗಲೋಕಕ್ಕೆ ಪ್ರತಿಯಾಗಿ (ಅ. ವೇ. ೧೭-೪-೩೬) ಹೆಣ್ಣು ಪಿಶಾಚಗಳು ಮೊದಲಾದುವು ವಾಸಿಸುವ ನರಕಲೋಕ (ಅಧೋಲೋಕ) ವಿದೆ (ಅ. ವೇ. ೨-೧೪-೩, ೫-೧೯-೩), ಈ ಲೋಕದಲ್ಲೇ ಕೊಲೆಪಾತಕನು ಶಿಕ್ಷೆಯನ್ನನುಭವಿಸುವುದು (ವಾ. ಸಂ. ೩೦-೫) ಅತ್ಯಂತ ತಗ್ಗಾದ ಪ್ರದೇಶದಲ್ಲಿ ತಮಸ್ಸು (ಅ. ವೇ. ೪-೪-೨೪; ಇತ್ಯಾದಿ), ಅಂಧಕಾರಾವೃತವಾದ ತಮಸ್ಸು (ಋ, ವೇ. ೫-೩೦-೧೧), ಅಂಧತಮಸ್ಸು (ಅ. ವೇ. ೧೪-೩-೩) ಇತ್ಯಾದಿಯಾಗಿ ಈ ಲೋಕವು ವರ್ಣಿತವಾಗಿದೆ, ನರಕದ ದುಃಖಗಳು ಅ. ವೇ. ೫-೧೯ರಲ್ಲಿಯೂ, ಇನ್ನೂ ಹೆಚ್ಚು ವಿಶದವಾಗಿ ಶ. ಬ್ರಾ. ೧೧.೬-೧ರಲ್ಲಿಯೂ ವರ್ಣಿತವಾಗಿದೆ. ಅತೇ ಬ್ರಾಹ್ಮಣದಲ್ಲಿ ಹೀಗೆ ಹೇಳಿದೆ; ಪ್ರತಿಯೊಬ್ಬನ ಮರಣಾನಂತರ ಪುನಃ ಜನಿಸುತ್ತಾನೆ;

ಅವನ ಕರ್ಮಗಳನ್ನು ತಕ್ಕಡಿಯಲ್ಲಿ ತೂಕ ಮಾಡುತ್ತಾರೆ, ಸತ್ಕರ್ಮ ದುಷ್ಕರ್ಮಾನುಸಾರವಾಗಿ ಸುಖದುಃಖಗಳನ್ನು ಅನುಭವಿಸುತ್ತಾನೆ (ಶ. ಬ್ರಾ. ೧೧-೨-೭-೩೩, ೧೨-೯-೧-೧ನ್ನು ಹೋಲಿಸಿ). ಆದರೆ, ಋಗ್ವೇದದಲ್ಲಿಯೂ, ಇಂತಹದೊಂದು ದುಃಖಾನುಭವಪ್ರದೇಶವಿದೆಯೆಂಬುದಕ್ಕೆ ಆಧಾರವಿಲ್ಲವೇ ಇಲ್ಲ. (ಇದಂ ಗಭೀರಂ ಪದಂ) 'ಈ ಆಳವಾದ ಸ್ಥಾನವು ಪಾಪಿಷ್ಠರು, ಅನೃತವಾದಿಗಳು ಮತ್ತು ಅಸತ್ಯವಂತರಿಗೋಸ್ಕರ ಸೃಜಿಸಲ್ಪಟ್ಟಿದೆ (೪.೫.೫). ಪಾಪಿಷ್ಠರನ್ನು ಪಾತಾಳ ಲೋಕಕ್ಕೆ, ಅಗಾಧವಾದ ತಮಸ್ಸಿಗೆ, ಅವರಲ್ಲಿ ಒಬ್ಬರೂ ಮೇಲಕ್ಕೆ ಏಳದಂತೆ ಎಸೆಯಬೇಕೆಂದು ಇಂದ್ರಾಸೋಮರು ಪ್ರಾರ್ಥಿತರಾಗಿದ್ದಾರೆ (೭-೧೦೪ ೩), ಗೂಬೆಯಂತೆ, ಯಾರಿಗೂ ಕಾಣಿಸದ ರೀತಿಯಲ್ಲಿ ಸಂಚರಿಸುವ ರಾಕ್ಷಸಿಯೂ ತಮಸ್ಸಿನಲ್ಲಿ ಬೀಳಲಿ (೭.೧೦೪-೧೨), ದ್ವೇಷಿ ಮತ್ತು ದರೋಡೆಕೋರರೂ ಮೂರು ಪೃಥಿವಿಗಳಿಗೂ ಕೆಳಭಾಗದಲ್ಲಿ ಬೀಳಲಿ (೭-೧೦೪-೧೧) ಈ ವಾಕ್ಯಗಳು; ಭೂಮಿಗೆ ಕೆಳಭಾಗದಲ್ಲಿ ಒಂದು ಅಂಧಕಾರಾವೃತವಾದ ಪ್ರದೇಶವಿದೆಯೆಂದು ಮಾತ್ರ ತಿಳಿಸುತ್ತವೆ. ಭೂಲೋಕದ ಸುಖವೇ ಮುಖ್ಯ ಉದ್ದೇಶವೇ ಹೊರತು. ಮರಣಾನಂತರ ಸಖದುಃಖಗಳು ಅಷ್ಟಾಗಿ ಮುಖ್ಯವಲ್ಲ. ಬ್ರಾಹ್ಮಣಗಳಲ್ಲಿ, ಸತ್ಕರ್ಮಮಾಡಿದವರೂ ಮತ್ತು ದುಷ್ಕರ್ಮ ಮಾಡಿದವರೂ ಪುನಃ ಮತ್ತೊಂದು ಲೋಕದಲ್ಲಿ ಜನಿಸಿ, ತಮ್ಮ ತಮ್ಮ ಕರ್ಮಗಳ ಫಲಗಳನ್ನು ಅನುಭವಿಸುತ್ತಾರೆ (ತ ಬ್ರಾ. ೬-೨-೨-೨೭; ೧೦ ೬-೫-೧) ಎಂದು ಹೇಳಿದೆಯೇ ಹೊರತು, ಈ ಬಹುಮಾನ ಅಥವಾ ಶಿಕ್ಷೆಗಳ ಕಾಲಾವಧಿಯನ್ನು ಸೂಚಿಸಿಲ್ಲ. ಯಜ್ಞಾಂಗ ಕರ್ಮಗಳ ವಿಧಾನವನ್ನು ಸರಿಯಾಗಿ ತಿಳಿದು, ಆಚರಿಸದೇ ಇರುವವರು ಭೂಲೋಕದಲ್ಲಿ, ತಮಗೆ ನಿಯತವಾದ ಕಾಲಕ್ಕಿಂತ ಮುಂಚೆಯೇ ಬೇರೆ ಲೋಕಕ್ಕೆ ತೆರಳುತ್ತಾರೆ (ಶ. ಬ್ರಾ. ೧೧-೨-೭-೩೩) ಎಂಬುದೂ ಒಂದು ನಂಬಿಕೆ

ಮರಣಾನಂತರ, ಪ್ರತಿಯೊಬ್ಬನೂ ತನ್ನ ತನ್ನ ಕರ್ಮಾನುಸಾರವಾಗಿ ಒಳ್ಳೆಯವನು ಅಥವಾ ಕೆಟ್ಟವನೆಂಬ ತೀರ್ಪಿಗೆ ಒಳಗಾಗುತ್ತಾನೆ ಎಂಬ ನಂಬಿಕೆಗೆ ವೇದಗಳಲ್ಲಿ ಆಧಾರವಿಲ್ಲವೆನ್ನಬಹುದು. ಮೇಲೆ ಉದಹರಿಸಿರುವ ಒಂದೆರಡು ವಾಕ್ಯಗಳು ಸ್ಪಷ್ಟವಾಗಿಲ್ಲ. ತೈತ್ತಿರೀಯಾರಣ್ಯಕದಲ್ಲಿ (ತೈ. ಆ ೬-೫-೧೩), ಯಮನು ಸನ್ಮಾರ್ಗಗಾಮಿಗಳನ್ನೂ, ಅಸನ್ಮಾರ್ಗಗಾಮಿಗಳನ್ನೂ ವಿಂಗಡಿಸುತ್ತಾನೆ ಎಂದು ಹೇಳಿದೆಯೇ ಹೊರತು, ಅವನೇ ಈ ನಿರ್ಣಯ ಮಾಡುವುದಕ್ಕೆ ಪರಮಾಧಿಕಾರವುಳ್ಳವನೆಂದು ಹೇಳಿಲ್ಲ.

॥ ಸಾಯಣಭಾಷ್ಯಂ ॥

ಮೈನಮಿತಿ ಚತುರ್ದಶರ್ಚಂ ಸೋಡಶಂ ಸೂಕ್ತಂ । ಯಮಪುತ್ರಸ್ಯ ದಮನಸ್ಯಾರ್ಷಂ । ಅದಿತೋ ದಶ ತ್ರಿಷ್ಟುಭಃ ತತಶ್ಚತಸ್ರೋಽನುಷ್ಟುಭಃ । ಅಗ್ನಿರ್ದೇವತಾ । ತಥಾ ಚಾನುಕ್ರಾಂತಂ । ಮೈನಂ ದಮನ ಆಗ್ನೇಯೀ ಚತುರನುಷ್ಟುಬಂತಮಿತಿ ॥ ದೀಕ್ಷಿತಮರಣ ಆದ್ಯಾಃ ಷಡೃಚಃ ತಂಸನೀಯಾಃ । ಸೂತ್ರಿತಂ ಚ । ಮೈನಮಗ್ನೇ ವಿ ದಹೋ ಮಾಭಿ ಶೋಚ ಇತಿ ಷಟ್ ಪೂಷಾ ತ್ವೇತಶ್ಚ್ಯಾವಯತು ಪ್ರ ವಿದ್ವಾನ್ । ಆ. ೬-೧೦ । ಇತಿ ॥ ದಹ್ಯಮಾನಸ್ಯ ಪ್ರೇತಸ್ಯೋಪಸ್ಥಾನೇಽಷ್ಟೇತಾಃ ತಂಸನೀಯಾಃ ॥

ಅನುವಾದವು—ಮೈನಂ ಎಂಬ ಈ ಸೂಕ್ತವು ನೊದಲನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು ಇತರಲ್ಲಿ ಹದಿನಾಲ್ಕು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಯಮಪುತ್ರನಾದ ದಮನನೆಂಬುವನು ಋಷಿಯು ಈ

ಸೂಕ್ತದ ಮೊದಲಿನ ಹೆತ್ತು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಅಲ್ಲಿಂದ ಮುಂದಿನ ನಾಲ್ಕು ಋಕ್ಕುಗಳು ಅನುಷ್ಟುಪ್‌ಛಂದಸ್ಕವು; ಅಗ್ನಿಯು ದೇವತೆಯು. ಅನುಕ್ರಮಣಿಕೆಯಲ್ಲಿ—**ಮೈನಂ ದಮನ ಆಗ್ನೇಯಂ ಚತುರನುಷ್ಟುಬಂತಂ** ಎಂದು ಹೇಳಿರುವುದು ಯಜ್ಞಮಾಡುತ್ತಿರುವ ಯಜಮಾನನು ಯಜ್ಞದೀಕ್ಷೆಯನ್ನು ಕೈಗೊಂಡು ಯಜ್ಞಪರಿಸಮಾಪ್ತಿಯಾಗುವುದಕ್ಕೆ ಮುಂಚೆಯೇ ಮೃತನಾದಲ್ಲಿ ಆಗ ಈ ಸೂಕ್ತದ ಮೊದಲ ಆರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಮೈನಮಗ್ನೇ ವಿ ದಹೋ ಮಾಭಿ ಶೋಚ ಇತಿ ಷಟ್ ಪೂಷಾ ತ್ವೇತಶಶ್ಚಾಸ್ಯವಯತು ಪ್ರ ವಿದ್ವಾನ್** ಎಂಬ ಸೂತ್ರದಿಂದ (ಅ. ೬-೧೦) ವಿವೃತವಾಗಿರುವುದು. ಪ್ರೇತಸಂಸ್ಕಾರದಲ್ಲಿ ಮೃತಶರೀರವು ದಹಿಸಲ್ಪಡುತ್ತಿರುವಾಗ ಈ ಆರು ಋಕ್ಕುಗಳನ್ನು ಪಠಿಸಿ ಅಗ್ನಿಯನ್ನು ಉಪಸ್ಥಾನಮಾಡಬೇಕು ಎಂದು ಹೇಳಿದೆ.

ಸೂಕ್ತ—೧೬

ಮಂಡಲ—೧೦ ॥ ಅನುವಾಕ—೧॥ ಸೂಕ್ತ—೧೬ ॥
ಅಷ್ಟಕ—೭ ॥ ಅಧ್ಯಾಯ—೬ ॥ ವರ್ಗ—೨೦, ೨೧, ೨೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥
ಋಷಿಃ—ದಮನೋ ಯಾಮಾಯನಃ ॥
ದೇವತಾ—ಅಗ್ನಿಃ ।
ಛಂದಃ—೧-೧೦. ತ್ರಿಷ್ಟುಪ್ । ೧೧-೧೪, ಅನುಷ್ಟುಪ್ ॥

। ಸಂಹಿತಾಪಾಠಃ ।

ಮೈನಮಗ್ನೇ ವಿ ದಹೋ ಮಾಭಿ ಶೋಚೋ ಮಾಸ್ಯ ತ್ವಚಂ ಚಿಕ್ಷಿಪೋ ಮಾ ಶರೀರಂ ।
ಯದಾ ಶೃತಂ ಕೃಣವೋ ಜಾತವೇದೋಽಥೇಮೇನಂ ಪ್ರ ಹಿಣುತಾತ್ಪಿತೃಭ್ಯಃ ॥ ೧ ॥

। ಪದಪಾಠಃ ॥

ಮಾ । ಏನಂ । ಅಗ್ನೇ । ವಿ । ದಹಃ । ಮಾ । ಅಭಿ । ಶೋಚಃ । ಮಾ । ಅಸ್ಯ । ತ್ವಚಂ । ಚಿಕ್ಷಿಪಃ ।
ಮಾ । ಶರೀರಂ ।
ಯದಾ । ಶೃತಂ । ಕೃಣವಃ । ಜಾತವೇದಃ । ಅಥ । ಈಂ । ಏನಂ । ಪ್ರ । ಹಿಣುತಾತ್ । ಪಿತೃಭ್ಯಃ ॥

। ಸಾಯಣಭಾಷ್ಯಂ ।

ಹೇ ಅಗ್ನೇ ಏನಂ ಪ್ರೇತಂ ಮಾ ವಿ ದಹಃ । ವಿಶೇಷೇಣ ದಗ್ಧಂ ಭಸ್ಮೀಭೂತಂ ಮಾ ಕುರು । ಮಾಭಿ ಶೋಚಃ । ಅಭಿತಃ ಶೋಕೇನ ಸಂತಾಪೇನ ಯುಕ್ತಂ ಮಾ ಕುರು । ಅಸ್ಯ ತ್ವಚಂ ಮಾ ಚಿಕ್ಷಿಪಃ ।

ಇತಸ್ತತೋ ವಿಕ್ಷಿಪ್ತಂ ಮಾ ಕುರು । ಶರೀರಮಪಿ ವಿಕ್ಷಿಪ್ತಂ ಮಾ ಕುರು । ಹೇ ಜಾತವೇದೋಽಗ್ನೇ ಯದಾ ತ್ವಂ ಶೃತಂ ಪಕ್ವಂ ಸುದಗ್ಧಂ ಕೃಣವಃ ಕರಿಷ್ಯಸಿ ಅಥ ತದಾನೀಮಿಮಾಮೇನಂ ಪ್ರೇತಂ ಪಿತೃಭ್ಯಃ ಪ್ರ ಹಿಣುತಾತ್ । ಪಿತೃಸಮಿಮಾಪೇ ಪ್ರೇರಯೇ ॥

॥ ಪ್ರತಿಪದಾರ್ಥ ॥

ಅಗ್ನೇ —ಎಲೈ ಅಗ್ನಿಯೇ । ಏನಂ—ಈ ಪ್ರೇತವನ್ನು । ಮಾ ವಿ ದಹಃ—ಪೂರ್ಣವಾಗಿ ಸುಡಬೇಡ । ಅಸ್ಯ—ಈ ಪ್ರೇತದ । ತ್ವಚಂ—ಚರ್ಮವನ್ನು । ಮಾ ಚಿಕ್ಷಿಪಃ—ಚದುರಿಸಬೇಡ । ಶರೀರಂ—ಶರೀರವನ್ನೂ । ಮಾ—ಚದುರಿಸಬೇಡ । ಜಾತವೇದಃ—ಎಲೈ ಅಗ್ನಿಯೇ । ಯದಾ—ಯಾವಾಗ । ಶೃತಂ—ಪಕ್ವವಾಗುವಂತೆ । ಕೃಣವಃ—ಮಾಡುವೆಯೋ । ಅಥ—ಆ ಒಡನೆಯೇ । ಈಂ—ಈ ಪ್ರೇತವನ್ನು । ಪಿತೃಭ್ಯಃ—ಪಿತೃಗಳಲ್ಲಿಗೆ । ಪ್ರಹಿಣುತಾತ್—ಕಳುಹಿಸಿ ಕೊಡು

॥ ಭಾವಾರ್ಥ ॥

ಎಲೈ ಅಗ್ನೆಯೇ, ಈ ಪ್ರೇತವನ್ನು ಪೂರ್ಣವಾಗಿ ಸುಡಬೇಡ ಬಹುವಾಗಿ ಹಿಂಸಿಸಲೂ ಬೇಡ. ಈ ಪ್ರೇತದ ಚರ್ಮವನ್ನಾಗಲಿ ಶರೀರವನ್ನಾಗಲಿ ಚದುರಿಸಬೇಡ. ಎಲೈ ಅಗ್ನಿಯೇ, ಯಾವಾಗ ಇದನ್ನು ನೀನು ಪಕ್ವವಾಗುವಂತೆ ಮಾಡುವೆಯೋ ಆ ಒಡನೆಯೇ ಪಿತೃಲೋಕಕ್ಕೆ ಕಳುಹಿಸಿಕೊಡು

English Translation

Agni, consume him not entirely ; afflict him not ; scatter not (here and there) his skin nor his body ; when Jatavedas, you have rendered him mature, then send him to the Pitris

॥ ವಿಶೇಷವಿಷಯಗಳು ॥

ಅ ಎಂಬ ನಿಪಾತಕ್ಕೆ (ಅವ್ಯಯಪದಕ್ಕೆ) ಸಮುಚ್ಚಯಾರ್ಥವೂ (ಚ—ಮತ್ತು ಎಂಬ) ಇರುವುದೆಂದು ಹೇಳಿ ಅದರ ಸಮರ್ಥನೆಗಾಗಿ ಈ ಋಕ್ಕಿನ—ದೇವೇಭ್ಯಶ್ಚ ಪಿತೃಭ್ಯ ಆ ಎಂಬ ವಾಕ್ಯವನ್ನೇ (ಉದಾಹರಣೆಯಾಗಿ ತೆಗೆದಿರುವರು. ಈ ವಾಕ್ಯದಲ್ಲಿರುವ ಆ ಎಂಬ ಶಬ್ದಕ್ಕೆ ಚ (ಮತ್ತು) ಎಂಬರ್ಥವಿರುವುದು.

॥ ಸಂಹಿತಾಪಾಠಃ ॥

ಶೃತಂ ಯದಾ ಕರಸಿ ಜಾತವೇದೋಽಥೇಮೇನಂ ಪರಿ ದತ್ತಾತ್ಪಿತೃಭ್ಯಃ ।
ಯದಾ ಗಚ್ಛಾತ್ಯಸುನೀತಿಮೇತಾಮಥಾ ದೇವಾನಾಂ ವಶನೀರ್ಭವಾತಿ ॥೨॥

॥ ಪದಪಾಠಃ ॥

ಶೃತಂ । ಯದಾ । ಕರಸಿ । ಜಾತವೇದಃ । ಅಥ । ಈಂ । ಏನಂ । ಪರಿ । ದತ್ತಾತ್ । ಪಿತೃಭ್ಯಃ ।
ಯದಾ । ಗಚ್ಛಾತಿ । ಅಸುನೀತಿಂ । ಏತಾಂ । ಅಥ । ದೇವಾನಾಂ । ವಶನೀಃ । ಭವಾತಿ ॥ ೨ ॥

। ಸಾಯಣಭಾಷ್ಯಂ ।

ಹೇ ಜಾತವೇದಃ ಯದಾ ಪ್ರೇತಶರೀರಂ ಶೃತಂ ಪಕ್ವಂ ಕರಸಿ ಕರಿಷ್ಯಸಿ ಅಥೇಂ ತದಾನೀಮೇನೈನಂ ಪ್ರೇತಂ ಪಿತೃಭ್ಯಃ ಪರಿ ದತ್ತಾತ್ । ಪ್ರಯಚ್ಛ । ಯದಾಯಂ ಪ್ರೇತ ಏತಾವಗ್ನಿನಾ ಕೃತಾವಸುನೀತಿಂ ಪ್ರಾಣಸ್ಯ ನಯನಂ ಪ್ರಾಣಪ್ರೇರಣಂ ಗಚ್ಛಾತಿ ಪ್ರಾಪ್ನೋತಿ ಅಥ ತದಾನೀಮೇವ ದೇವಾನಾಂ ವಶನೀರ್ದೇವಾನಾಂ ವಶಂ ಪ್ರಾಪಿತೋ ಭವತಿ ॥

। ಪ್ರತಿಪದಾರ್ಥ ।

ಜಾತವೇದಃ—ಎಲೈ ಅಗ್ನಿಯೇ । ಯದಾ—ಯಾವಾಗ । ಶೃತಂ ಕರಸಿ—ಈ ಶರೀರವನ್ನು ಪಕ್ವವಾಗುವಂತೆ ಮಾಡುವೆಯೋ । ಅಥ ಈಂ—ಆ ಒಡನೆಯೇ । ಏನಂ—ಇದನ್ನು (ಈ ಪ್ರೇತವನ್ನು) । ಪಿತೃಭ್ಯಃ-ಪಿತೃಗಳ ವಶಕ್ಕೆ । ಪರಿ ದತ್ತಾತ್—ಕಳುಹಿಸಿ ಕೊಡು । ಯದಾ—ಯಾವಾಗ । ಏತಾಂ ಅಸುನೀತಿಂ—ದೇಹರಹಿತವಾದ ಪಿತೃತ್ವವನ್ನು । ಗಚ್ಛಾತಿ—ಹೊಂದುವುದೋ । ಅಥ—ಆ ಒಡನೆಯೇ । ದೇವಾನಾಂ—ದೇವತೆಗಳಿಗೆ । ವಶನೀಃ—ಅಧೀನವಾಗಿ । ಭವಾತಿ—ಆಗುತ್ತದೆ.

। ಭಾವಾರ್ಥ ।

ಎಲೈ ಅಗ್ನಿಯೇ, ಯಾವಾಗ ನೀನು ಈ ಪ್ರೇತವನ್ನು ಪಕ್ವವಾಗುವಂತೆ ಮಾಡುವೆಯೋ, ಆಗ ಇದನ್ನು ಪಿತೃಗಳ ಸಮೀಪಕ್ಕೆ ಕಳುಹಿಸಿಕೊಡು- ಇದು ದೇಹರಹಿತವಾದ ಪಿತೃತ್ವವನ್ನು ಹೊಂದಿದೊಡನೆಯೇ, ದೇವತೆಗಳಿಗೆ ಅಧೀನವಾಗುತ್ತದೆ.

English Translation

When you have rendered him mature, then give him up, Jatavedas, to the Pitris; when he proceeds to that world of spirits, then he becomes subject to the will of the gods.

। ಸಂಹಿತಾಪಾಠಃ ।

ಸೂರ್ಯಂ ಚಕ್ಷುರ್ಗಚ್ಛತು ವಾತಮಾತ್ಮಾ ದ್ಯಾಂ ಚ ಗಚ್ಛ ಪೃಥಿವೀಂ ಚ ಧರ್ಮಣಾ ।

ಅಪೋ ವಾ ಗಚ್ಛ ಯದಿ ತತ್ರ ತೇ ಹಿತಮೋಷಧೀಷು ಪ್ರತಿ ತಿಷ್ಠಾ ಶರೀರೈಃ ॥ ೫ ॥

॥ ಪದಪಾಠಃ ॥

ಸೂಯ್ಯಂ । ಚಕ್ಷುಃ । ಗಚ್ಛತು । ವಾತಂ । ಆತ್ಮಾ । ದ್ಯಾಂ । ಚ । ಗಚ್ಛ । ಪೃಥಿವೀಂ । ಚ । ಧರ್ಮಣಾ ।
ಅಪಃ । ವಾ । ಗಚ್ಛ । ಯದಿ । ತತ್ರ । ತೇ । ಹಿತಂ । ಓಷಧೀಷು । ಪ್ರತಿ । ತಿಷ್ಠ । ಶರೀರೈಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಪ್ರೇತ ತೇ ತ್ವದೀಯಂ ಚಕ್ಷುರಿಂದ್ರಿಯಂ ಸೂರ್ಯಂ ಗಚ್ಛತು । ಪ್ರಾಪ್ನೋತು । ಆತ್ಮಾ ಪ್ರಾಣೋ ವಾತಂ ವಾಹ್ಯಂ ವಾಯುಂ ಗಚ್ಛತು । ಅಪಿ ಚ ತ್ವಮಪಿ ಧರ್ಮಣಾ ಸುಕೃತೇನ ತತ್ಫಲಂ ಭೋಕ್ತುಂ ದ್ಯಾಂ ಚ । ಅತ್ರ ಚಕಬ್ವೋ ವಿಕಲ್ಪಾರ್ಥೇ । ದ್ಯುಲೋಕಂ ವಾ ಪೃಥಿವೀಂ ಚ ಪೃಥಿವೀಂ ವಾ ಗಚ್ಛ । ಪ್ರಾಪ್ನುಹಿ । ಅಪೋ ವಾಂತರಿಕ್ಷಲೋಕಂ ಗಚ್ಛ । ಪ್ರಾಪ್ನುಹಿ । ತತ್ರಾಂತರಿಕ್ಷೇ ಹಿತಂ ಸ್ಥಾಪಿತಂ ತೇ ತವ ಕರ್ಮಫಲಮೋಷಧೀಷು ಶರೀರೈಃ ಶರೀರಾವಯವೈಃ ಪ್ರತಿ ತಿಷ್ಠ ।

॥ ಪ್ರತಿಪದಾರ್ಥ ॥

(ಎಲೈ ಪ್ರೇತನೇ) ಚಕ್ಷುಃ—ನಿನ್ನ ಚಕ್ಷುರಿಂದ್ರಿಯವು . ಸೂರ್ಯಂ—ಸೂರ್ಯನಲ್ಲಿಗೆ । ಗಚ್ಛತು—ಹೋಗಿ ಸೇರಲಿ । ಆತ್ಮಾ—ನಿನ್ನ ಪ್ರಾಣವು । ವಾತಂ—ವಾಯುವನ್ನು ಸೇರಲಿ । ಧರ್ಮಣಾ—ನಿನ್ನ ಕರ್ಮಕ್ಕನುಸಾರವಾಗಿ । ದ್ಯಾಂ ಚ—ದ್ಯುಲೋಕಕ್ಕಾಗಲಿ । ಪೃಥಿವೀಂ ಚ—ಪೃಥಿವೀಲೋಕಕ್ಕಾಗಲಿ । ಗಚ್ಛ—ಹೋಗಿ ಸೇರು । ಯದಿ—ಒಂದು ವೇಳೆ । ತತ್ರ—ಅಲ್ಲಿ । ತೇ—ನಿನಗೆ । ಹಿತಂ—ಅನುಕೂಲವಾದರೆ । ಅಪ್ಸೋ ವಾ—ಅಂತರಿಕ್ಷಲೋಕಕ್ಕಾಗಲಿ । ಗಚ್ಛ—ಹೋಗಿ ಸೇರು । ಶರೀರೈಃ—ನಿನ್ನ ದೇಹಾವಯವಗಳಿಂದ । ಓಷಧೀಷು—ಓಷಧಿಗಳಲ್ಲಿ । ಪ್ರತಿ ತಿಷ್ಠ—ಸ್ಥಾಪಿತನಾಗು

॥ ಭಾವಾರ್ಥ ॥

ಎಲೈ ಪ್ರೇತನೇ, ನಿನ್ನ ಚಕ್ಷುರಿಂದ್ರಿಯವು ಸೂರ್ಯನಲ್ಲಿಗೆ ಹೋಗಿ ಸೇರಲಿ. ನಿನ್ನ ಪ್ರಾಣವು ವಾಯುವನ್ನು ಸೇರಲಿ. ನಿನ್ನ ಕರ್ಮಕ್ಕನುಸಾರವಾಗಿ ದ್ಯುಲೋಕಕ್ಕಾಗಿಲಿ, ಪೃಥಿವೀಲೋಕಕ್ಕಾಗಲಿ ಹೋಗಿ ಸೇರಲಿ. ಒಂದು ವೇಳೆ ನಿನಗೆ ಅನುಕೂಲವಾದರೆ, ಅಂತರಿಕ್ಷದಲ್ಲಿ ಸ್ಥಾಪಿತನಾಗು, ನಿನ್ನ ದೇಹಾವಯವಗಳು ಓಷಧಿಗಳಲ್ಲಿ ಸ್ಥಾಪಿತವಾಗಲಿ.

English Translation

Let the eye repair to the sun; the breath to the wind; go you to the heaven or to the earth, according to your merit; or go to the waters if it suits you (to be) there, or abide with your members in the plants

॥ ಸಂಹಿತಾಪಾಠಃ ॥

ಅಜೋ ಭಾಗಸ್ತಪಸಾ ತಂ ತಪಸ್ವ ತಂ ತೇ ಶೋಚಿಸ್ತಪತು ತಂ ತೇ ಅರ್ಚಿಃ ।
ಯಾಸ್ತೇ ತಿವಾಸ್ತನ್ವೋ ಜಾತವೇದಸ್ತಾಭಿರ್ವಹೈನಂ ಸುಕೃತಾಮು ಲೋಕಂ ॥

। ಪದಪಾಠಃ ।

ಅಜಃ । ಭಾಗಃ । ತಪಸಾ । ತಂ । ತಪಸ್ವ । ತಂ । ತೇ । ಶೋಚಿಃ । ತಪತು । ತಂ । ತೇ । ಅರ್ಚಿಃ ।

ಯಾಃ । ತೇ । ಶಿವಾಃ । ತನ್ವಃ । ಜಾತವೇದಃ । ತಾಭಿಃ । ವಹ । ಏನಂ । ಸುಕೃತಾಂ । ಊಂ ಇತಿ । ಲೋಕಂ ॥ ೪ ॥

। ಸಾಯಣಭಾಷ್ಯಂ ।

ಅಜೋ ಜನನರಹಿತಃ ಶರೀರೇಂದ್ರಿಯಾದಿಭಾಗವ್ಯತಿರಿಕ್ತೋಽಂತರಪುರುಷಲಕ್ಷಣೋ ಯೋ ಭಾಗೋಽಸ್ತಿ ಹೇ ಅಗ್ನೇ ತೇ ತ್ವದೀಯೇನ ತಪಸಾ ತಾಪನೇನ ತಂ ತಾದೃಶಂ ಭಾಗಂ ತಪಸ್ವ । ತಪ್ತಂ ಕುರು । ತಥಾ ತೇ ತವ ಶೋಚಿಃ ಶೋಕಹೇತುರ್ಜ್ವಾಲಾವಿಶೇಷಸ್ತಂ ಭಾಗಂ ತಪತು । ಸಂಸ್ಕರೋತು । ಅಪಿ ಚ ತೇ ತವಾರ್ಚಿರ್ಭಾಸಕೋ ಜ್ವಾಲಾವಿಶೇಷಸ್ತಂ ಭಾಗಂ ತಪತು । ಸಂಸ್ಕರೋತು । ತಪಃಶೋಚಿರರ್ಚಿಃಶಬ್ದಾನಾಂ ಸಂತಾಪತಾರತಮ್ಯೇನ ಭೇದಃ । ಹೇ ಜಾತವೇದಃ ತೇ ತವ ಯಾಸ್ತನ್ವೋ ಮೂರ್ತಯಃ ಶಿವಾಃ ಸುಖಹೇತವೋ ನ ತು ತಾಪಪ್ರದಾಃ ತಾಭಿರೇನಂ ತನೂಭಿಃ ಪ್ರೇತಂ ಸುಕೃತಾಂ ಶೋಭನಕರ್ಮಕಾರಿಣಾಂ ಲೋಕಂ ಸ್ಥಾನಂ ವಹ । ಪ್ರಾಪಯ । ಉಶಬ್ದಃ ಪೂರಣಃ ॥

। ಪ್ರತಿಪದಾರ್ಥ ।

(ಎಲೈ ಅಗ್ನಿಯೇ) ಅಜಃ—ಉತ್ಪನ್ನವಾಗದೇ ಇರತಕ್ಕ । ಭಾಗಃ—ಯಾವ ಭಾಗವಿರುವುದೋ । ತಂ—ಆ ಭಾಗವನ್ನು । ತಪಸಾ—ನಿನ್ನ ಜ್ವಾಲೆಯಿಂದ । ತಪಸ್ವ—ದಹಿಸು । ತೇ—ನಿನ್ನ । ಶೋಚಿಃ—ಜ್ವಾಲಾವಿಶೇಷವು । ತಂ—ಆ ಭಾಗವನ್ನು । ತಪತು—ಸಂಸ್ಕರಿಸಲಿ । ತೇ—ನಿನ್ನ । ಅರ್ಚಿಃ—ಪ್ರಭಾಯುತವಾದ ಜ್ವಾಲೆಯು ಸಂಸ್ಕರಿಸಲಿ । ಜಾತವೇದಃ—ಎಲೈ ಅಗ್ನಿಯೇ । ತೇ—ನಿನ್ನ । ಯಾಃ ತನ್ವಃ—ಯಾವ ಶರೀರಭಾಗವು । ಶಿವಾಃ—ಮಂಗಳಕರವಾಗಿರುವುವೋ । ತಾಭಿಃ—ಅವುಗಳಿಂದ । ಏನಂ—ಈ ಪ್ರೇತವನ್ನು । ಸುಕೃತಾಂ—ಸುಕೃತಿಗಳ । ಲೋಕಂ—ಸ್ಥಾನಕ್ಕೆ । ವಹ—ವಹಿಸು ।

। ಭಾವಾರ್ಥ ।

ಎಲೈ ಅಗ್ನಿಯೇ, ಉತ್ಪನ್ನವಾಗದೇ ಇರತಕ್ಕ ಯಾವ ಭಾಗವಿರುವುದೋ ಆ ಭಾಗವನ್ನು ನಿನ್ನ ಜ್ವಾಲೆಯಿಂದ ದಹಿಸು. ನಿನ್ನ ಶೋಚಿಯೂ ಅರ್ಚಿಯೂ (ಜ್ವಾಲಾ ವಿಶೇಷಗಳು) ಆ ಭಾಗವನ್ನು ಸಂಸ್ಕರಿಸಲಿ ಎಲೈ ಅಗ್ನಿಯೇ, ನಿನ್ನ ಯಾವ ಶರೀರಭಾಗವು ಮಂಗಳಕರವಾಗಿರುವುದೋ ಅವುಗಳಿಂದ ಈ ಪ್ರೇತವನ್ನು ಸುಕೃತಿಗಳ ಸ್ಥಾನಕ್ಕೆ ವಹಿಸು.

English Translation

The unborn portion ; burn that, Agni, with your heat ; let your flame, your splendour, consume it ; with those glorious members which you have given him, Jatavedas, bear him to the world (of the virtuous)

॥ ಸಂಹಿತಾಪಾಠಃ ॥

ಅವ॑ ಸೃಜ॒ ಪುನ॑ರಗ್ನೇ ಪಿತೃ॒ಭ್ಯೋ ಯಸ್ತ॒ ಆಹು॑ತಶ್ಚ॒ರತಿ॑ ಸ್ವ॒ಧಾಭಿಃ॑ ।
ಆಯು॑ರ್ವ॒ಸಾನ॒ ಉಪ॑ ವೇತು॒ ಶೇಷ॒ಃ ಸಂ ಗ॑ಚ್ಛತಾಂ ತ॒ನ್ವಾ॑ ಜಾತವೇದಃ ॥

॥ ಪದಪಾಠಃ ॥

ಅವ॑ । ಸೃ॒ಜ॒ । ಪುನ॑ಃ । ಅ॒ಗ್ನೇ॒ । ಪಿ॒ತೃ॒ಽಭ್ಯಃ॑ । ಯಃ । ತ॒ೇ॒ । ಆ॒ಽಹು॑ತಃ । ಚ॒ರತಿ॑ । ಸ್ವ॒ಧಾಭಿಃ॑ ।
ಆಯು॑ಃ । ವ॒ಸಾನ॑ಃ । ಉಪ॑ । ವೇ॒ತು॒ । ಶೇಷ॑ಃ । ಸಂ । ಗ॒ಚ್ಛ॒ತಾ॒ಂ । ತ॒ನ್ವಾ॑ । ಜಾ॒ತ॒ಽವೇ॒ದ॒ಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯ ಪ್ರೇತಃ ಪುನಾನಾಹುತಶ್ಚಿತೌ ಮುಂತ್ರೇಣ ಸಮರ್ಪಿತಃ ಸನ್ ಸ್ವಧಾಭಿಃ ಸ್ವಧಾ-ಕಾರಸಮರ್ಪಿತೈರುದಕಾದಿಭಿಃ ಸಹ ಚರತಿ ತಂ ಪ್ರೇತಂ ಪಿತೃಭ್ಯಃ ಪಿತೃಪ್ರಾಪ್ತ್ಯರ್ಥಂ ಪುನರವ ಸೃಜ । ಭೂಯಃ ಪ್ರೇರಯ । ಅಯಂ ಪ್ರೇತ ಆಯುರ್ಜೀವನಂ ವಸಾನ ಆಚ್ಛಾದಯನ್ । ಆಯುಷಾ ಯುಕ್ತ ಇತ್ಯರ್ಥಃ । ಶೇಷಃ ಶಿಷ್ಯಮಾಣಮಸ್ಥಿಲಕ್ಷಣಂ ಯಜನೀಯಂ ಶರೀರಮುಪ ವೇತು । ಉಪಗಚ್ಛತು । ಹೇ ಜಾತವೇದಃ ತವ ಪ್ರಸಾದಾತ್ತನ್ವಾ ಶರೀರೇಣ ಸಂ ಗಚ್ಛತಾಂ । ಸಂಗತೋ ಭವತು ॥

॥ ಪ್ರತಿಪದಾರ್ಥ ॥

ಜಾತವೇದಃ—ಜಾತಪ್ರಜ್ಞನಾದ । ಅಗ್ನೇ—ಎಲೈ ಅಗ್ನಿಯೇ । ಯಃ—ಯಾವ ಪ್ರೇತವು । ತೇ—ನಿನ್ನ । ಆಹುತಃ—ಚಿತೆಯಲ್ಲಿ ಅರ್ಪಿತವಾಗಿ । ಸ್ವಧಾಭಿಃ—ಸ್ವಧಾರೂಪವಾದ ಉದಕಾದಿಗಳೊಡನೆ । ಚರತಿ—ಸಂಚರಿಸುವುದೋ ಆ ಪ್ರೇತವನ್ನು । ಪಿತೃಭ್ಯಃ—ಪಿತೃಗಳ ಸಮೀಪಕ್ಕೆ । ಪುನಃ—ತಿರುಗಿಯೂ । ಅವ ಸೃಜ—ಕಳುಹಿಸಿಕೊಡು । ಆಯುಃ—ಪಿತೃಲೋಕದ ಆಯುಸ್ಸನ್ನು । ವಸಾನಃ—ಹೊಂದಿ । ಶೇಷಃ—ದಗ್ಧಾವಶೇಷವಾದನಂತರ ಉಳಿದ ಭಾಗವು । ಉಪವೇತು—ಪಿತೃಲೋಕವನ್ನು ಸಮೀಪಿಸಲಿ । ತನ್ವಾ- -ಆ ದೇಹದೊಡನೆ । ಸಂ ಗಚ್ಛತಾಂ—ಸೇರಿಕೊಳ್ಳಲಿ.

॥ ಭಾವಾರ್ಥ ॥

ಜಾತವೇದೋರೂಪಿಯಾದ ಎಲೈ ಅಗ್ನಿಯೇ, ಯಾವ ಪ್ರೇತವು ನಿನ್ನ ಚಿತೆಯಲ್ಲಿ ಅರ್ಪಿತವಾಗಿ ಸ್ವಧಾರೂಪವಾದ ಉದಕಾದಿಗಳೊಡನೆ ಸಂಚರಿಸುವುದೋ, ಆ ಪ್ರೇತವನ್ನು ಪಿತೃಗಳ ಸಮೀಪಕ್ಕೆ ತಿರುಗಿಯೂ ಕಳುಹಿಸಿಕೊಡು. ಅದು ಪಿತೃಲೋಕದ ಜೀವನವನ್ನು ಹೊಂದಿ, ದಗ್ಧಾವಶೇಷರೂಪಿಯಾಗಿ ಪಿತೃಲೋಕವನ್ನು ಸಮೀಪಿಸಲಿ ಆ ದೇಹದೊಡನೆ ಸೇರಿಕೊಳ್ಳಲಿ

English Translation

Dismiss again to the Pitris, Agni him who, offered on you, comes with the Swadhas: putting on (celestial) life, let the remains (of bodily life) depart: let him, Jatavedas, be associated with a body

ಸಂಹಿತಾಪಾಠಃ ।

ಯುತ್ತೇ ಕೃಷ್ಣಃ ಶಕುನ ಆತುತೋದ ಪಿಪೀಲಃ ಸರ್ಪ ಉತ ವಾ ಶ್ವಾಪದಃ।
ಅಗ್ನಿಷ್ಟ್ವಿಶ್ವಾದಗದಂ ಕೃಣೋತು ಸೋಮಶ್ಚ ಯೋ ಬ್ರಾಹ್ಮಣಾಁ ಆವಿವೇಶ ॥ ೬ ॥

। ಪದಪಾಠಃ ।

ಯತ್ । ತೇ । ಕೃಷ್ಣಃ । ಶಕುನಃ । ಆತುತೋದ । ಪಿಪೀಲಃ । ಸರ್ಪಃ । ಉತ । ವಾ । ಶ್ವಾಪದಃ ।
ಅಗ್ನಿಃ । ತತ್ । ವಿಶ್ವಅತ್ । ಅಗದಂ । ಕೃಣೋತು । ಸೋಮಃ । ಚ । ಯಃ । ಬ್ರಾಹ್ಮಣಾನ್ । ಆವಿವೇಶ ॥ ೬ ॥

। ಸಾಯಣಭಾಷ್ಯಂ ।

ಹೇ ಮೃತಶರೀರ ತೇ ತವ ಸಂಬಂಧಿ ಯದಂಗಂ ಕೃಷ್ಣಃ ಶಕುನಃ ಕಾಕಾಖ್ಯ ಆತುತೋದ । ಅಜುಃಪದರ್ಥೇ। ಈಷತ್ಕುನ್ನವಾನ್ । ತಥಾ ಪಿಪೀಲಃ ಪಿಪೀಲಿಕಾ ವಾ ಸರ್ಪೋ ವೋತ ವಾಪಿ ವಾ ಶ್ವಾಪದಶ್ಚ ಶೃಗಾಲಾದಿಃ । ವಿಕೇಷಾಮುನ್ಮತನೋ ಯದಿ ಕುನ್ನವಾನಿತ್ಯರ್ಥಃ। ವಿಶ್ವಾತ್ ಸರ್ವಸ್ಮಾತ್ತಾಗ್ನಿಸ್ತತ್ತಾದೃಶಮಂಗಮುಗದಂ ಕೃಣೋತು । ದೋಷರಹಿತಂ ಕರೋತು । ಸಂಸ್ಕರೋತ್ವಿತ್ಯರ್ಥಃ । ತಥಾ ಸೋಮಶ್ಚ ದೇವತಾರೂಪ ಓಷಧಿರೂಪೋ ವಾ ಸಂಸ್ಕರೋತು । ಯಃ ಸೋಮೋ ಬ್ರಾಹ್ಮಣಾನೃತ್ವಿಗಾದೀನಾವಿವೇಶ ಪ್ರವಿಷ್ಟವಾನ್ ॥

। ಪ್ರತಿಪದಾರ್ಥ ।

(ಎಲೈ ಮೃತಶರೀರನೇ) **ತೇ**—ನಿನ್ನ । **ಯತ್**—ಯಾವ ಅಂಗವನ್ನು । **ಕೃಷ್ಣಃ**—ಕೃಷ್ಣವರ್ಣವುಳ್ಳ । **ಶಕುನಃ**—ಕಾಗೆಯಾಗಲಿ । **ಆತುತೋದ**—ಹಿಂಸಿಸುವುದೋ, ಅಥವಾ । **ಪಿಪೀಲಃ**—ಇರುವೆಯಾಗಲಿ । **ಸರ್ಪಃ**—ಸರ್ಪವಾಗಲಿ । **ಉತ ವಾ**—ಅಥವಾ । **ಶ್ವಾಪದಃ**—ನಾಯಿನರಿಗಳಾಗಲಿ ಹಿಂಸಿಸುವುದೋ । **ತಂ**—ಆ ಭಾಗವನ್ನೆಲ್ಲ । **ವಿಶ್ವಾತ್**—ಸಕಲವನ್ನೂ ದಹಿಸತಕ್ಕ । **ಅಗ್ನಿಃ**—ಅಗ್ನಿಯು । **ಅಗದಂ**—ದೋಷರಹಿತವನ್ನಾಗಿ । **ಕೃಣೋತು**—ಮಾಡಲಿ । **ಯಃ**—ಯಾವ ಸೋಮವು । **ಬ್ರಾಹ್ಮಣಾನ್**—ಋತ್ವಿಗಾದಿಗಳನ್ನು । **ಆವಿವೇಶ**—ಪ್ರವೇಶಿಸುವುದೋ । **ಸೋಮಶ್ಚ**—ಆ ಸೋಮವೂ ಈ ಭಾಗವನ್ನು ಸಂಸ್ಕರಿಸಲಿ

। ಭಾವಾರ್ಥ ।

ಎಲೈ ಮೃತಶರೀರನೇ, ನಿನ್ನ ಯಾವ ಅಂಗವನ್ನು ಕೃಷ್ಣವರ್ಣವುಳ್ಳ ಕಾಗೆಯಾಗಲಿ, ಇರುವೆಯಾಗಲಿ, ಅಥವಾ ನಾಯಿನರಿಗಳಾಗಲಿ ಕಚ್ಚಿ ಹಿಂಸಿಸುವುದೋ ಆ ಭಾಗವನ್ನು ಸಕಲವನ್ನೂ ದಹಿಸತಕ್ಕ ಅಗ್ನಿಯು ದೋಷರಹಿತವನ್ನಾಗಿ ಮಾಡಲಿ- ಋತ್ವಿಗಾದಿಗಳ ದೇಹವನ್ನು ಪ್ರವೇಶಿಸಕ್ಕ ಸೋಮವೂ ಆ ಭಾಗವನ್ನು ಸಂಸ್ಕರಿಸಲಿ.

English Translation

Should the black crow, the ant, the snake, the wild beast, harm (a limb) of you, may Agni the all-devourer, and the Soma that has pervaded, the Brahmans, make it whole.

॥ संहितापाठः ॥

अग्नेर्वर्म्म परि गोभिर्व्ययस्व सं प्रोर्णुष्व पीवसा मेदसा च ।
नेत्त्वा धृष्णुर्हरसा जहृषाणो दधृग्विधक्षन्परिर्यंखयाते ॥ २ ॥

॥ पदपाठः ॥

अग्नेः । वर्म्म । परि । गोभिः । व्ययस्व । सं । प्र । ऊर्णुष्व । पीवसा । मेदसा । च ।
न । इत् । त्वा । धृष्णुः । हरसा । जहृषाणः । दधृक् । विऽधक्षन् । परिऽअंखयाते ॥

॥ सायणभाष्यं ॥

अनुस्तरण्या वपया प्रेतस्य मुखमुग्नेर्वर्मेत्यनया प्रोर्णुयात् । सूत्रितं च । अनुस्तरण्या वपामुत्खिद्य शिरोऽमुखं प्रच्छादयेदग्नेर्वर्म्म परि गोभिर्व्ययस्वेति । आ-गृ. ४-३-८४ । इति ॥

हे प्रेत अग्नेः स्वभूतं वर्म्म ज्वालालक्षणं कवचं गोभिरनुस्तरणीगोचर्मभिः परि व्ययस्व । परितः संवृणु । किंच पीवसा स्थूलेन मेदसा मांसेन सम्यक् प्रोर्णुष्व । आच्छादय । एवं कृते सति हरसा तेजसा धृष्णुर्धर्षणशीलोऽग्निर्जहृषाणोऽत्यर्थं हृष्यन् दधृग्धृष्टः प्रगल्भः ॥ ऋत्विगित्यादिना दधृक्शब्दो निपातितः ॥ विधक्षन् विविधं भस्मीकरिष्यन् एवंभूतोऽग्निस्त्वा त्वां नेत्परिर्यंखयाते । नैव सर्वतो विस्तारयति ॥ अहेर्गत्यर्थाल्लेटि डागमः ॥

॥ प्रतिपदार्थ ॥

(ಎಲೈ ಪ್ರೇತವೇ) अग्नेः—ಅಗ್ನಿಯ । वर्म्म—ಜ್ವಾಲಾರೂಪವಾದ ಕವಚವನ್ನು । गोभिः—ಗೋಚರ್ಮದಿಂದ । परिव्ययस्व—ಆವೃತವಾಗುವಂತೆ ಮಾಡು । पीवसा—ಸ್ಥೂಲವಾದ । मेदसा च—

ಮೇದಸ್ಸಿನಿಂದಲೂ । **ಸಂ ಪ್ರೋಣ್ವಸ್ವ**—ಸುತ್ತುವರಿಯುಂತೆ ಮಾಡು (ಆಗ) । **ಹರಸಾ**—ತೇಜಸ್ಸಿನಿಂದ । **ಧೃಷ್ಣುಃ**—ಶತ್ರುಧರ್ಷಕನೂ । **ಜಹರ್ಷಾಣಃ**—ಅಧಿಕವಾದ ಸಂತೋಷವುಳ್ಳವನೂ । **ದಧೃಕ್**—ಪ್ರಗಲ್ಭನೂ । **ವಿಧಕ್ಷ್ಯನ್**—ನಾನಾವಿಧವಾಗಿ ದಹಿಸತಕ್ಕವನೂ ಆದ ಅಗ್ನಿಯು । **ತ್ವಾ**—ನಿನ್ನನ್ನು । **ನ ಇತ್ ಪರ್ಯಂಖ. ಯಾತೇ**—ಸುತ್ತುವರಿದು ಹಿಂಸಿಸುವುದಿಲ್ಲ.

॥ ಭಾವಾರ್ಥ ।

ಎಲೈ ಪ್ರೇತವೇ, ಅಗ್ನಿಯು ಜ್ವಾಲಾರೂಪವಾದ ಕವಚವನ್ನು ಗೋಚರ್ಮದಿಂದ ಆವೃತವಾಗುವಂತೆ ಮಾಡು. ಸ್ಥೂಲವಾದ ಮೇದಸ್ಸಿನಿಂದಲೂ ಸುತ್ತುವರಿಯುವಂತೆ ಮಾಡು. ಆಗ ತೇಜಸ್ಸಿನಿಂದ ಶತ್ರುಧರ್ಷಕನೂ, ಅಧಿಕವಾದ ಸಂತೋಷವುಳ್ಳವನೂ, ಪ್ರಗಲ್ಭನೂ, ನಾನಾವಿಧವಾಗಿ ದಹಿಸತಕ್ಕವನೂ ಆದ ಅಗ್ನಿಯು ನಿನ್ನನ್ನು ಸುತ್ತುವರಿದು ಹಿಂಸಿಸುವುದಿಲ್ಲ.

English Translation

Enclose the mail of Agni with the (hide of the) cow; cover it with the fat and marrow. then will not (Agni), bold, exulting in his fierce heat, proud, embrace you roundabout to consume you (to ashes)

॥ ವಿಶೇಷವಿಷಯಗಳು ॥

ಪ್ರೇತಸಂಸ್ಕಾರಮಾಡುವಕಾಲದಲ್ಲಿ **ಅಗ್ನೇರ್ವರ್ಮ** ಎಂಬ ಈ ಋಕ್ಕನ್ನು ಪಠಿಸುತ್ತಾ ಮೃತಶರೀರದ ಮುಖವನ್ನು ಅನುಸ್ತರಣಿಯಿಂದ ಆಚ್ಛಾದನೆಮಾಡಬೇಕೆಂದು ಆಶ್ವಲಾಯನ ಗೃಹ್ಯಸೂತ್ರದ-**ಅನುಸ್ತರಣ್ಯಾ ವಸಾಮುಪ್ಯಪ್ಯ ಶಿರೋಮುಖಂ ಪ್ರಚ್ಛಾದಯೇದಗ್ನೇರ್ವರ್ಮ ಪರಿ ಗೋಭಿರ್ವ್ಯಯಸ್ವ** ಎಂಬ ಸೂತ್ರದಿಂದ (ಆ ಗೃ. ೪-೩-೧೯) ವಿವೃತವಾಗಿರುವುದು.

। ಸಂಹಿತಾಪಾಠಃ ।

ಇಮಮಗ್ನೇ ಚಮಸಂ ಮಾ ವಿ ಜಿಹ್ವರಃ ಪ್ರಿಯೋ ದೇವಾನಾಮುತ

ಸೋಮ್ಯಾನಾಂ ।

ಏಷ ಯಶ್ಚಮಸೋ ದೇವಪಾನಸ್ತಸ್ಮಿನ್ದೇವಾ ಅಮೃತಾ ಮಾದಯಂತೇ ।೯॥

। ಪದಪಾಠಃ ।

ಇಮಂ । ಅಗ್ನೇ । ಚಮಸಂ । ಮಾ । ವಿ । ಜಿಹ್ವರಃ । ಪ್ರಿಯಃ । ದೇವಾನಾಂ । ಉತ । ಸೋಮ್ಯಾನಾಂ ।

ಏಷಃ । ಯಃ । ಚಮಸಃ । ದೇವಪಾನಃ । ತಸ್ಮಿನ್ । ದೇವಾಃ । ಅಮೃತಾಃ । ಮಾದಯಂತೇ ॥ ೯ ॥

। ಸಾಯಣಭಾಷ್ಯಂ ।

ಇಮಮಗ್ನೇ ಚಮಸಮಿತ್ಯನಯಾ ಪ್ರಣೇತಾಪ್ರಣಯನಮನುಮಂತ್ರಯತೇ । ಸೂತ್ರಿತಂ ಚ । ಇಮಮಗ್ನೇ ಚಮಸಂ ಮಾ ವಿ ಜಿಹ್ವರ ಇತಿ ಪ್ರಣೇತಾಪ್ರಣಯನಮನುಮಂತ್ರಯತೇ । ಆ. ಗೃ. ೪-೩-೨೪ । ಇತಿ ॥

ಹೇ ಅಗ್ನೇ ಇಮಂ ಚಮಸಂ ಪ್ರಣೇತಾಪ್ರಣಯನಂ ಮಾ ವಿ ಜಿಹ್ವರಃ । ಮಾ ವಿಚಾಲೀಃ । ಯಶ್ಚಮಸೋ ದೇವಾನಾಮಿಂದ್ರಾದೀನಾಂ ಪ್ರಿಯ ಉತಾಪಿ ಚ ಸೋಮ್ಯಾನಾಂ ಸೋಮಾರ್ಹಾಣಾಂ ಪಿತೃಣಾಂ ಪ್ರಿಯಃ । ಕಿಂಚ ಯ ಏಷ ಚಮಸೋ ದೇವಪಾನಃ । ದೇವಾಃ ಪಿಬಂತ್ಯಸ್ಮಿನ್ನಿತಿ । ದೇವಪಾನ-ಸ್ಥಾನಿಯೋ ಭವತಿ ತಸ್ಮಿಂಶ್ಚಮಸೇऽಮೃತಾ ಮರಣವರ್ಜಿತಾ ದೇವಾಃ ಪಿತರಶ್ಚ ಮಾದಯಂತೇ । ಹರ್ಷಯಂತ್ಯೇವೈಷ್ಟ ಹೃಷ್ಟಾ ಭವಂತಿ ॥

। ಪ್ರತಿಪದಾರ್ಥ ।

ಅಗ್ನೇ—ಎಲೈ ಅಗ್ನಿಯೇ । ಇಮಂ ಚಮಸಂ—ಈ ಹವಿಸ್ಸಿನ ಪಾತ್ರೆಯನ್ನು । ಮಾ ವಿ ಜಿಹ್ವರಃ—ಅಲಗಿಸಬೇಡ (ಚಲಿಸುವಂತೆ ಮಾಡಬೇಡ) (ಈ ಪಾತ್ರೆಯು) । ದೇವಾನಾಂ—ದೇವತೆಗಳಿಗೆ । ಪ್ರಿಯಃ—ಪ್ರೀತಿಪಾತ್ರವಾದುದು । ಉತ—ಮತ್ತು । ಸೋಮ್ಯಾನಾಂ—ಸೋಮಾರ್ಹರಾದ ಪಿತೃಗಳಿಗೂ ಪ್ರಿಯವಾದುದು । ಯಃ ಏಷಃ ಚಮಸಃ—ಯಾವ ಈ ಚಮಸಪಾತ್ರೆಯು । ದೇವಪಾನಃ—ದೇವತೆಗಳಿಗೆ ಪಾನಸಾಧನವಾಗಿರುವುದೋ । ತಸ್ಮಿನ್—ಅದೇ ಪಾತ್ರೆಯಲ್ಲಿ । ಅಮೃತಾಃ—ಮರಣರಹಿತರಾದ । ದೇವಾಃ—ದೇವತೆಗಳು । ಮಾದಯಂತೇ—ಹರ್ಷವನ್ನು ಹೊಂದುತ್ತಾರೆ.

। ಭಾವಾರ್ಥ ।

ಎಲೈ ಅಗ್ನಿಯೇ, ಈ ಹವಿಸ್ಸಿನ ಪಾತ್ರೆಯನ್ನು ಚಲಿಸುವಂತೆ ಮಾಡಬೇಡ. ಈ ಪಾತ್ರೆಯು ದೇವತೆಗಳಿಗೆ ಪ್ರೀತಿಪಾತ್ರವಾದುದು. ಮತ್ತು ಸೋಮಾರ್ಹವಾದ ಪಿತೃಗಳಿಗೆ ಪ್ರಿಯವಾದುದು. ಯಾವ ಈ ಚಮಸಪಾತ್ರೆಯು ದೇವತೆಗಳಿಗೆ ಪಾನಸಾಧನವಾಗಿರುವುದೋ ಅದೇ ಪಾತ್ರೆಯಲ್ಲಿ ಮರಣರಹಿತರಾದ ದೇವತೆಗಳು ಹರ್ಷವನ್ನು ಹೊಂದುತ್ತಾರೆ

English Translation

Agni, shake not this ladle, for it is dear to the gods, and to the (Pitris) who are worthy of the Soma: this which is the drining ladle of the gods, in this the immortal gods delight.

॥ ವಿಶೇಷವಿಷಯಗಳು ॥

ಅಪರಕರ್ಮದಲ್ಲಿ ಪ್ರಣೇತಾಪಾತ್ರೆಯನ್ನು ಪ್ರಣಯನಮಾಡುವಾಗ **ಇಮಮಗ್ನೇ ಚಮಸಂ** ಎಂಬ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಇಮಮಗ್ನೇ ಚಮಸಂ ಮಾ ವಿ ಜಿಹ್ವರ ಇತಿ ಪ್ರಣೇತಾಪ್ರಣಯನಮನುಮಂತ್ರಯತೇ** ಎಂಬ ಸೂತ್ರದಿಂದ (ಆ ಗೃ. ೪-೩-೨೪) ವಿವೃತವಾಗಿರುವುದು.

॥ संहितापाठः ॥

क्रव्यादमग्निं प्रहिणोमि दूरं यमराज्ञो गच्छतु रिप्रवाहः ।

इहैवायमितरो जातवेदा देवेभ्यो हव्यं वहतु प्रजानन् ॥ ९ ॥

॥ पदपाठः ॥

क्रव्यऽअदं । अग्निं । प्र । हिनोमि । दूरः । यमऽराज्ञः । गच्छतु । रिप्रऽवाहः ।

इह । एव । अयं । इतरः । जातऽवेदाः । देवेभ्यः । हव्यं । वहतु । प्रऽजानन् ॥९॥

॥ सायणभाष्यं ॥

अहिताग्निमरण इतदादिके द्वे यजावौपासनसोद्वासनेऽनियुक्ते । तत्र प्रथमायाः पूर्वार्धेन दक्षिणस्यां दिशि चितुष्पथादावौपासनाग्निं निरस्यति । उत्तरेण शान्तिकर्मार्थमादत्ते । आ. गृ. ४-६ । क्रव्यादं । क्रव्यमामिषं । तस्यात्तारं तीव्रमग्निं दूरं विप्रकृष्टदेशे प्र हिनोमि । प्रगमयामि ॥ हि गतौ स्वादिः ॥ रिप्रवाहः । रिप्रं पापं । तस्य वोढा सोऽग्निर्यमराज्ञो यमो राजा येषां तान्यमराजकानन्यप्रदेशान्गच्छतु । प्रापयतु । अथ शान्तिकर्मार्थमुपासन इतरः क्रव्यादादन्यो जातवेदा जातानां वेदिता जातधनो वा प्रजानन् सर्वं विज्ञायमानोऽग्निरिहैव देशे देवेभ्यो देवार्थं हव्यं हवनयोग्यं हविर्वहतु । प्रापयतु ॥

॥ प्रतिपदार्थ ॥

क्रव्यादं—क्रव्य (मांस) वನ್ನು ಭಕ್ಷಿಸುವ । अग्निं—ಅಗ್ನಿಯನ್ನು । दूरं—ದೂರಕ್ಕೆ । प्र हिनोमि—ಕಳುಹುತ್ತೇನೆ । रिप्रवाहः—ಪಾಪನಾಶಕನಾದ ಅಗ್ನಿಯು । यमराज्ञः—ಯಮನ ಪ್ರಭುತ್ವದಲ್ಲಿರುವ ಪ್ರದೇಶಗಳಿಗೆ । गच्छतु—ಹೋಗಲಿ । इतरः—ಬೇರೆ ರೂಪವನ್ನು ಹೊಂದಿರುವ । अयं. जातवेदाः—ಜಾತವೇದೋ ರೂಪಿಯಾದ ಈ ಅಗ್ನಿಯು । प्रजानन्—ಎಲ್ಲರಿಗೂ ಗೋಚರನಾಗಿ । इहैव—ಇದೇ ಪ್ರದೇಶದಲ್ಲಿದ್ದು । देवेभ्यः—ದೇವತೆಗಳಿಗೆ । हव्यं—ಹವಿಸ್ಸನ್ನು । वहतु—ವಹಿಸಲಿ

॥ भावार्थ ॥

ಕ್ರವ್ಯಭಕ್ಷಕನಾದ ಅಗ್ನಿಯನ್ನು ದೂರಕ್ಕೆ ಕಳುಹುತ್ತೇನೆ. ಪಾಪನಾಶಕನಾದ ಅಗ್ನಿಯು ಯಮನ ಪ್ರಭುತ್ವ ದಲ್ಲಿರುವ ಪ್ರದೇಶಗಳಿಗೆ ಹೋಗಲಿ. ಬೇರೆ ರೂಪವನ್ನು ಹೊಂದಿರುವ ಜಾತವೇದೋರೂಪಿಯಾದ ಅಗ್ನಿಯು ಎಲ್ಲ ರಿಗೂ ಗೋಚರನಾಗಿ ಇದೇ ಪ್ರದೇಶದಲ್ಲಿದ್ದು ದೇವತೆಗಳಿಗೆ ಹವಿಸ್ಸನ್ನು ವಹಿಸಲಿ.

English Translation

I send the flesh-devouring Agni to a distance : let him bearing away sin repair to (the realm of) king Yama ; but let this other Jatavedas who is known (by all) convey the oblation to the gods.

॥ ಸಂಹಿತಾಪಾಠಃ ॥

ಯೋ ಅಗ್ನಿಃ ಕ್ರವ್ಯಾತ್ಪ್ರವಿವೇಶ ವೋ ಗೃಹಮಿಮಂ ಪಶ್ಯನ್ನಿತರಂ ಜಾತ-
ವೇದಸಂ ।
ತಂ ಹರಾಮಿ ಪಿತೃಯಜ್ಞಾಯ ದೇವಂ ಸ ಘರ್ಮಮಿನ್ನಾತ್ಪರಮೇ ಸಧಸ್ಥೇ॥

॥ ಪದಪಾಠಃ ॥

ಯಃ । ಅಗ್ನಿಂ । ಕ್ರವ್ಯಽಅತ್ । ಪ್ರಽವಿವೇಶ । ವಃ । ಗೃಹಂ । ಇಮಂ । ಪಶ್ಯನ್ । ಇತರಂ । ಜಾತಽ-
ವೇದಸಂ ।
ತಂ । ಹರಾಮಿ । ಪಿತೃಽಯಜ್ಞಾಯ । ದೇವಂ । ಸಃ । ಘರ್ಮಂ । ಇನ್ನಾತ್ । ಪರಮೇ । ಸಧಽಸ್ಥೇ॥೧೦॥

॥ ಸಾಯಣಭಾಷ್ಯಂ ॥

ಯಃ ಕ್ರವ್ಯಾದೋಽಗ್ನಿರ್ದೇವೋ ಯುಷ್ಮಾಕಂ ಗೃಹಿಣಾಂ ಗೃಹಂ ಪ್ರವಿವೇಶ ಪ್ರವಿಷ್ಟ
ವಾನ್ ತಂ ಕ್ರವ್ಯಾದಂ ದೇವಂ ಹರಾಮಿ । ಗೃಹಾದ್ಬಹಿರ್ನಿಷ್ಕ್ರಾಮಯಾಮೀತ್ಯರ್ಥಃ । ಕಿಮರ್ಥಂ ।
ಪಿತೃಯಜ್ಞಾಯ ತದರ್ಥಂ । ಕಂ ಕುರ್ವನ್ । ಇಮಮಿತರಂ ತಸ್ಮಾದನ್ಯಂ ಹವ್ಯವಾಹಂ ಜಾತವೇದಸಂ
ಪಶ್ಯನ್ ಪರ್ಯಾಲೋಚಯನ್ । ತಥಾ ಸತಿ ಕ್ರವ್ಯಾದಾತ್ಪರೋಽಗ್ನಿಃ ಪರಮ ಉತ್ಕೃಷ್ಟೇ ಸಧಸ್ಥೇ
ಸಹಸ್ಥಾನೇ ಘರ್ಮಂ ಯಜ್ಞಮಿನ್ನಾತ್ । ಪ್ರಾಪ್ನೋತು । ಪಿತೃಭಿರ್ಘರ್ಮಪೈಃ ಸಹೇತಿ ಶೇಷಃ ॥

॥ ಪ್ರತಿಪದಾರ್ಥ ॥

ಕ್ರವ್ಯಾತ್ ಯಃ ಅಗ್ನಿಃ—ಕ್ರವ್ಯಾತ್ಸಂಜ್ಞಕನಾದ ಯಾವ ಅಗ್ನಿಯು । ವಃ ಗೃಹಂ—ನಿಮ್ಮ ಗೃಹವನ್ನು । ಪ್ರವಿವೇಶ—ಪ್ರವೇಶಿಸಿರುವನೋ । ತಂ ದೇವಂ—ಆ ಅಗ್ನಿದೇವನನ್ನು । ಪಿತೃಯಜ್ಞಾಯ—ಪಿತೃಗಳ ಪೂಜಾ ರ್ಥವಾಗಿ । ಇಮಂ ಇತರಂ ಜಾತವೇದಸಂ—ಜಾತವೇದೋರೂಪಿಯಾದ ಈ ಬೇರೆ ಅಗ್ನಿಯನ್ನು । ಪಶ್ಯನ್—ಏಕ್ಷಿಸುತ್ತ । ಹರಾಮಿ—ಗೃಹದಿಂದ ಹೊರಕ್ಕೆ ವಹಿಸುತ್ತೇನೆ । ಸಃ—ಜಾತವೇದೋರೂಪಿಯಾದ ಅಗ್ನಿಯು । ಪರಮೇ—ಉತ್ಕೃಷ್ಟವಾದ । ಸಧಸ್ಥೇ—ಸ್ಥಾನದಲ್ಲಿ । ಘರ್ಮಂ—ಯಜ್ಞವನ್ನು । ಇನ್ನಾತ್—ವ್ಯಾಪಿಸಲಿ.

॥ ಭಾವಾರ್ಥ ॥

ಕ್ರವ್ಯಾತ್ಸಂಜ್ಞಕನಾದ ಯಾವ ಅಗ್ನಿಯು ನಿಮ್ಮ ಗೃಹವನ್ನು ಸ್ರದೇಶಿಸಿರುವನೋ ಆ ಅಗ್ನಿದೇವನನ್ನು ಪಿತೃಗಳ ಪೂಜಾರ್ಥವಾಗಿ ಜಾತವೇದೋರೂಪಿಯಾದ ಬೇರೆ ಅಗ್ನಿಯನ್ನು ವಿಕ್ಷಿಸುತ್ತ ಗೃಹದಿಂದ ಹೊರಕ್ಕೆ ವಹಿಸುತ್ತೇನೆ. ಜಾತವೇದೋರೂಪಿಯಾದ ಅಗ್ನಿಯು ಉತ್ಕೃಷ್ಟವಾದ ಸ್ಥಾನದಲ್ಲಿ ಯಜ್ಞವನ್ನು ವ್ಯಾಪಿಸಲಿ.

English Translation

The fleeh-devouring deity Agni, who has entered your dwelling, I turn him out, for the worship of the Pitris, upon beholding this other (Agni) Jatavedas; let him celebrate the sacrifice (to the Pitris) in the most excellent assembly.

॥ ಸಂಹಿತಾಪಾಠಃ ॥

ಯೋ ಅಗ್ನಿಃ ಕವ್ಯವಾಹನಃ ಪಿತ್ರ್ಯಾನ್ಯಕ್ಷದೃತಾವೃಧಃ ।
ಪ್ರೇದು ಹವ್ಯಾನಿ ವೋಚತಿ ದೇವೇಭ್ಯಶ್ಚ ಪಿತೃಭ್ಯ ಆ ॥ ೧೧ ॥

॥ ಪದಪಾಠಃ ॥

ಯಃ । ಅಗ್ನಿಃ । ಕವ್ಯವಾಹನಃ । ಪಿತ್ರ್ಯಾನ್ । ಯಕ್ಷತ್ । ಋತವೃಧಃ ।
ಪ್ರ । ಇತ್ । ಊಂ ಇತಿ । ಹವ್ಯಾನಿ । ವೋಚತಿ । ದೇವೇಭ್ಯಃ । ಚ । ಪಿತೃಭ್ಯಃ । ಆ ॥ ೧೧ ॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇ ವಷಟ್ಕಾರಕ್ರಿಯಾಯಾಂ ಯೋ ಅಗ್ನಿಃ ಕವ್ಯವಾಹನ ಇತ್ಯೇಷಾ ಸ್ವಿಷ್ಟಕೃತೋ ಯಾಜ್ಯಾ । ಸೂತ್ರಿತಂ ಚ । ಯೋ ಅಗ್ನಿಃ ಕವ್ಯವಾಹನಸ್ತ್ವಮಗ್ನ ಈಳಿತೋ ಜಾತವೇದ ಇತಿ ಸಂಯಾಜ್ಯೇ । ಆ. ೨-೧೯ । ಇತಿ ॥

ಕವ್ಯವಾಹನಃ ಕವ್ಯಸ್ಯ ಹವಿಷೋ ವೋಢಾ ಯೋಽಗ್ನಿಃ ಪಿತ್ರ್ಯಾನೃತಾವೃಧ ಋತಸ್ಯ ಯಜ್ಞಸ್ಯೋದಕಸ್ಯ ವಾ ವರ್ಧಯಿತ್ರ್ಯಾನ್ ಸತ್ಯೇನ ವೃದ್ಧಾನ್ವಾ ದೇವಾನ್। ಏತತ್ಪಿತೃವಿಶೇಷಣಂ ವಾಸ್ತು । ತಾನ್ಯಕ್ಷದ್ಯಜತಿ । ಯಜೇರ್ಲೇಟಿ ಸಿಬಡಾಗಮಃ ॥ ಸೋಽಗ್ನಿರ್ಹವ್ಯಾನಿ ಹವೀಂಷಿ ಪ್ರ ವೋಚತು । ಪಿತೃಯಜ್ಞೇ ಪ್ರಬ್ರವೀತು । ಯುಷ್ಮದರ್ಥಂ ಮಾಯಾನೀತಾನೀತಿ । ಇದೂ ಪೂರಣೌ । ಕೇಭ್ಯಃ । ದೇವೇಭ್ಯಶ್ಚ ಪಿತೃಭ್ಯಶ್ಚ । ಅಕಾರಃ ಸವನುಷ್ಟ್ಯರ್ಥೇ ॥

॥ ಪ್ರತಿಪದಾರ್ಥ ॥

ಕವ್ಯವಾಹನಃ—ಕವ್ಯಸಂಜ್ಞಕವಾದ ಹವಿಸ್ಸನ್ನು ವಹಿಸುವ । **ಯಃ ಅಗ್ನಿಃ**—ಯಾವ ಅಗ್ನಿಯು । **ಪಿತೄನ್**—ಪಿತೃಗಳನ್ನೂ । **ಋತಾವೃಧಃ**—ಸತ್ಯವರ್ಧಕರಾದ ದೇವತೆಗಳನ್ನೂ । **ಯಕ್ಷತ್**—ಪೂಜಿಸುವನೋ ಆ ಅಗ್ನಿಯು । **ದೇವೇಭ್ಯಃ**—ದೇವತೆಗಳಿಗೂ । **ಪಿತೃಭ್ಯಃ ಚ**—ಪಿತೃಗಳಿಗೂ ನಿರ್ದಿಷ್ಟವಾದ । **ಹವ್ಯಾನಿ**—ಹವಿಸ್ಸುಗಳನ್ನು । **ಪ್ರ ವೋಚತಿ**—ಬಿಡಿಸಿ ಹೇಳಿ ತಿಳಿಯಪಡಿಸಲಿ ।

॥ ಭಾವಾರ್ಥ ॥

ಕವ್ಯಸಂಜ್ಞಕವಾದ ಹವಿಸ್ಸನ್ನು ವಹಿಸುವ ಯಾವ ಅಗ್ನಿಯು ಪಿತೃಗಳನ್ನೂ ಸತ್ಯವರ್ಧಕರಾದ ದೇವತೆಗಳನ್ನು ಪೂಜಿಸುವನೋ ಆ ಅಗ್ನಿಯು ದೇವತೆಗಳಿಗೂ, ಪಿತೃಗಳಿಗೂ ನಿರ್ದಿಷ್ಟವಾದ ಹವಿಸ್ಸುಗಳನ್ನು ಅರ್ಪಿಸಿ ಅವರವರ ಭಾಗಗಳನ್ನು ತಿಳಿಸಲಿ.

English Translation

Let Agni the bearer of the Kavya worship the Pitris, who are magnified by truth, let him declare which are the offerings to the gods, which to the Pitris.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ವಷಟ್ಕಾರಸಹಿತವಾಗಿ ಸ್ವಿಷ್ಟಕೃದ್ಧೋಮವನ್ನಾಡುವಾಗ **ಯೋ ಅಗ್ನಿಃ ಕವ್ಯವಾಹನಃ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯೋ ಅಗ್ನಿಃ ಕವ್ಯವಾಹನಸ್ತ್ವಮಗ್ನ ಈಳಿತೋ ಜಾತವೇದೆ ಇತಿ ಸಾಯಾಜ್ಯೇ** ಎಂಬ ಸೂತ್ರದಿಂದ (ಆ ೨-೧೯) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಉಶಂತಸ್ತ್ವಾ ನಿ ಧೀಮಹ್ಯುಶಂತಃ ಸಮಿಧೀಮಹಿ ।
ಉಶನ್ನುಶತ ಆ ವಹ ಪಿತ್ರ್ಯನ್ಹವಿಷೇ ಅತ್ತವೇ ॥ ೧೨ ॥

॥ ಪದಪಾಠಃ ॥

ಉಶಂತಃ । ತ್ವಾ । ನಿ । ಧೀಮಹಿ । ಉಶಂತಃ । ಸಂ । ಇಧೀಮಹಿ ।
ಉಶನ್ । ಉಶತಃ । ಆ । ವಹ । ಪಿತ್ರ್ಯಾನ್ । ಹವಿಷೇ । ಅತ್ತವೇ ॥ ೧೨ ॥

॥ ಸಾಯಣಭಾಷ್ಯಂ ॥

ಮಹಾಪಿತೃಯಜ್ಞೇ ಉಶಂತಸ್ತ್ವೇತ್ಯೇಷಾ ಸಾಮಿಧೇನೀ । ಸೂತ್ರ್ಯತೇ ಹಿ । ಉಶಂತಸ್ತ್ವಾ ನಿ ಧೀಮಹೀತ್ಯೇತಾಂ ತ್ರಿರನವಾನಂ ತಾಃ ಸಾಮಿಧೇನ್ಯಃ । ಆ.೨.೧೯ । ಇತಿ ।

ಹೇ ಅಗ್ನೇ ಉಶಂತಃ ಕಾಮಯಮಾನಾ ವಯಂ ತ್ವಾ ತ್ವಾಂ ನಿ ಧೀಮಹಿ । ಕರ್ಮಾರ್ಥಂ ಸ್ಥಾಪಿತವಂತಃ । ಉಶಂತೋ ವಯಂ ಸಮಿಧೀಮಹಿ । ಸಂದೀಪಯಾಮಃ । ತ್ವಮುಶನ್ ಕಾಮಯಮಾನೋ ಹವಿರಾದಿಕಮುಶತ ಅಗಂತುಕಾಮಾನ್ಪಿತ್ರ್ಯಾನಸ್ಮಿನ್ಯಜ್ಞ ಆ ವಹ । ಹವಿಷೇಽಸ್ಮಾಭಿಃ ಪ್ರತ್ತಂ ಹವಿರತ್ತವೇಽತ್ತುಂ ॥ ಅದೇಸ್ತುಮರ್ಥೇ ತವೇನ್ಪ್ರತ್ಯಯಃ । ಕ್ರಿಯಾಗ್ರಹಣಂ ಕರ್ತವ್ಯಮಿತಿ ಕರ್ಮಣಃ ಸಂಪ್ರದಾನಸಂಜ್ಞಾ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) ಉಶಂತಃ—ನಿನ್ನ ಪೂಜೆಯನ್ನು ಅಪೇಕ್ಷಿಸುವ ನಾವು । ತ್ವಾ—ನಿನ್ನನ್ನು । ನಿ ಧೀಮಹಿ—ಕರ್ಮಾರ್ಥವಾಗಿ ಸ್ಥಾಪಿಸಿದ್ದೇವೆ । ಉಶಂತಃ—ನಿನ್ನನ್ನು ಅಪೇಕ್ಷಿಸುವ ನಾವು । ಸಮಿಧೀಮಹಿ—ನಿನ್ನನ್ನು ಪ್ರಜ್ವಲಿಸುವಂತೆ ಮಾಡಿದ್ದೇವೆ । ಉಶನ್—ನಮ್ಮ ಪೂಜೆಯನ್ನು ಅಪೇಕ್ಷಿಸುವ ನೀನು । ಉಶತಃ—ನಮ್ಮ ಹವಿಸ್ಸುಗಳನ್ನು ಇಚ್ಛಿಸುವ । ಪಿತೄನ್—ಪಿತೃಗಳನ್ನು । ಹವಿಷೇ—ನಮ್ಮ ಹವಿಸ್ಸುಗಳನ್ನು । ಅತ್ತವೇ—ಭಕ್ಷಿಸಲು । ಆ ವಹ—ಕರೆದುಕೊಂಡು ಬಾ ।

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನ ಪೂಜೆಯನ್ನು ಅಪೇಕ್ಷಿಸುವ ನಾವು ನಿನ್ನನ್ನು ಕರ್ಮಾರ್ಥವಾಗಿ ಸ್ಥಾಪಿಸಿದ್ದೇವೆ. ನಿನ್ನನ್ನು ಅಪೇಕ್ಷಿಸುವ ನಾವು ನಿನ್ನನ್ನು ಪ್ರಜ್ವಲಿಸುವಂತೆ ಮಾಡಿದ್ದೇವೆ. ನಮ್ಮ ಪೂಜೆಯನ್ನು ಅಪೇಕ್ಷಿಸುವ ನೀನು ನಮ್ಮ ಹವಿಸ್ಸುಗಳನ್ನು ಇಚ್ಛಿಸುವ ಪಿತೃಗಳನ್ನು ನಮ್ಮ ಹವಿಸ್ಸುಗಳನ್ನು ಭಕ್ಷಿಸಲು ಕರೆದುಕೊಂಡು ಬಾ.

English Translation

Longing we set you down, longing we kindle you ; do you longing bring the longing Pitris to eat of the (sacrificial) viands.

॥ ವಿಶೇಷವಿಷಯಗಳು ॥

ಮಹಾಪಿತೃಯಜ್ಞದಲ್ಲಿ ಉಶಂತಸ್ತ್ವಾ ಎಂಬ ಈ ಋಕ್ಕನ್ನು ಸಾಮಿಧೇನೀಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—ಉಶಂತಸ್ತ್ವಾ ನಿ ಧೀಮಹೀತ್ಯೇತಾಂ ತ್ರಿರನವಾನಂ ತಾಃ ಸಾಮಿಧೇನ್ಯಃ ಎಂಬ ಸೂತ್ರದಿಂದ (ಅ. ೨.೧೯) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಯಂ ತ್ವಮಗ್ನೇ ಸಮದಹಸ್ತಮು ನಿರ್ವಾಹಯಾ ಪುನಃ ॥

ಕಿಯಾಂಭ್ತ್ರ ರೋಹತು ಪಾಕದೂರ್ವಾ ವ್ಯಲ್ಕಶಾ ॥ ೧೩ ॥

॥ पदपाठः ॥

यं । त्वं । अग्ने । सꣳअदहः । तं । ऊं इति । निः । वापय । पुनरिति ।

कयाम्बु । अत्र । रोहतु । पाकꣳदूर्वा । विꣳअल्कशा ॥ २१ ॥

॥ सायणभाष्यं ॥

हे अग्ने त्वं पितृदहनकाले यं देशं समदहः पुरा सम्यग्दग्धवानसि ॥ तिजिः चोदात्तवतीति समो निघातः ॥ तमु तमेव पुनर्निर्वापय । अत्रास्मिन्देशे कयाम्बु कयत्प्रमाणमुदकं यस्मिन् तत्पुष्करिण्यादिकं रोहतु । उत्पद्यताम् । किंच व्यल्कशा विविधशाखा पाकदूर्वा परिपक्वदूर्वा चोत्पद्यताम् ॥

॥ प्रतिपदार्थ ॥

अग्ने—ಎಲೈ ಅಗ್ನಿಯೇ । त्वं—ನೀನು । यं—ಯಾವ ಪ್ರದೇಶವನ್ನು । समदहः—ಪಿತೃದಹನ ಕಾಲದಲ್ಲಿ ದಹಿಸಿದೆಯೋ । तमु—ಆ ಪ್ರದೇಶವನ್ನು । पुनः—ತಿರುಗಿಯೂ । निर्वापय—ತಣ್ಣಗಾಗುವಂತೆ ಮಾಡು । अत्र—ಈ ಪ್ರದೇಶದಲ್ಲಿ । कयाम्बु—ಕಿಂಚಿತ್ಪ್ರಮಾಣದ ನೀರಿನಲ್ಲಿ ಬೆಳೆಯುವ ಪುಷ್ಕರಿಣ್ಯಾದಿಗಳು । रोहतु—ಬೆಳೆಯಲಿ । व्यल्कशा—ಅನೇಕ ಶಾಖೆಗಳುಳ್ಳ । पाकदूर्वा—ಪಕ್ವವಾದ ದೂರ್ವಾಸಸಿಯು (ಹುಲ್ಲುಗರಿಕೆಗಳು) ಬೆಳೆಯಲಿ.

॥ भावार्थ ॥

ಎಲೈ ಅಗ್ನಿಯೇ, ಯಾವ ಪ್ರದೇಶವನ್ನು ನೀನು ಪಿತೃದಹನಕಾಲದಲ್ಲಿ ದಹಿಸಿದೆಯೋ, ಆ ಪ್ರದೇಶವನ್ನು ತಿರುಗಿಯೂ ತಣ್ಣಗಾಗುವಂತೆ ಮಾಡು. ಈ ಪ್ರದೇಶದಲ್ಲಿ ಕಿಂಚಿತ್ಪ್ರಮಾಣದ ನೀರಿನಲ್ಲಿ ಬೆಳೆಯುವ ಪುಷ್ಕರಿಣ್ಯಾದಿಗಳೂ ಅನೇಕ ಶಾಖೆಗಳುಳ್ಳ ದೂರ್ವಾಸಸಿಗಳೂ ಪುಷ್ಕಳವಾಗಿ (ಹುಲ್ಲುಗರಿಕೆಗಳು) ಬೆಳೆಯಲಿ.

English Translation

Cool again, Agni, the spot which you have burned, there let the water-lily grow, and the ripe Durva with its many stalks

॥ संहितापाठः ॥

शीतिके शीतिकावति ह्लादिके ह्लादिकावति ।

मण्डूक्या३ सु सं गमु इमꣳ स्व१ग्निं हर्षय ॥ २१ ॥

॥ ಪದಪಾಠಃ ।

ಶೀತಿಕೇ । ಶೀತಿಕಾವತಿ । ಹ್ಲಾದಿಕೇ । ಹ್ಲಾದಿಕಾವತಿ ।

ಮಂಡೂಕ್ಯಾ । ಸು । ಸಂ । ಗಮಃ । ಇಮಂ । ಸು । ಅಗ್ನಿಂ । ಹರ್ಷಯ ॥ ೧೪ ॥

। ಸಾಯಣಭಾಷ್ಯಂ ।

ಅಸ್ಥಿಸಂಚಯನೇ ಕ್ಷೀರೋದಕೇನ ಶಮೀಶಾಖಯಾ ಶ್ರಿಃ ಪ್ರಸವ್ಯಂ ಶ್ಮಶಾನಾಯತನಂ ಪ್ರೋಕ್ಷತಿ ಶೀತಿಕೇ ಶೀತಿಕಾವತೀತ್ಯನಯಾ । ಸೂತ್ರಿತಂ ಚ । ಕ್ಷೀರೋದಕೇನ ಶಮೀಶಾಖಯಾ ಶ್ರಿಃ ಪ್ರಸವ್ಯಂ ಪರಿವ್ರಜನ್ಪ್ರೋಕ್ಷತಿ ಶೀತಿಕೇ ಶೀತಿಕಾವತೀತಿ । ಆ. ಗೃ. ೪-೫-೩ । ಇತಿ ॥

ಹೇ ಶೀತಿಕೇ ಶೈತ್ಯಯುಕ್ತೇ ಹೇ ಶೀತಿಕಾವತಿ । ಶೀತಿಕಾಃ ಶೈತ್ಯಯುಕ್ತಾ ಓಷಧಯಃ । ತಾಭಿಸ್ತದ್ವತಿ ಹೇ ಹ್ಲಾದಿಕ ಆಹ್ಲಾದಯಿತ್ರಿ ಹೇ ಹ್ಲಾದಿಕಾವತ್ಯಾಹ್ಲಾದಕಫಲಯುಕ್ತೈರ್ವೃಷ್ಟ್ಯಾಸ್ತದ್ವತಿ ಹೇ ಪೃಥಿವಿ ಮಂಡೂಕ್ಯಾ ಮಂಡೂಕಸ್ತ್ರಿಯಾ ವೃಷ್ಟಿಪ್ರಿಯಯಾ ಸು ಸುಷ್ಠು ಸಂ ಗಮಃ। ಸಂಗಚ್ಛಸ್ವ ॥ ಗಮೇರ್ಲುಙಿ ವ್ಯತ್ಯಯೇನ ಪರಸ್ಮೈಪದಂ ॥ ತೇನ ಇಮಮಗ್ನಿಂ ಸು ಸುಷ್ಠು ಹರ್ಷಯ ॥

॥ ಪ್ರತಿಪದಾರ್ಥ ।

ಶೀತಿಕೇ—ಶೈತ್ಯದಿಂದ ಯುಕ್ತಳೂ । ಶೀತಿಕಾವತಿ—ತಣ್ಣಗಿರುವ ಓಷಧಿಗಳಿಂದ ಯುಕ್ತಳೂ । ಹ್ಲಾದಿಕೇ—ಸಂತೋಷಕಾರಕಳೂ। ಹ್ಲಾದಿಕಾವತಿ—ಆಹ್ಲಾದಕರವಾದ ವೃಕ್ಷಾದಿಗಳಿಂದ ಕೂಡಿದವಳೂ ಆದ ಎಲೈ ಪೃಥ್ವಿಯೇ । ಮಂಡೂಕ್ಯಾ—ವೃಷ್ಟಿಯಿಂದ ಬೆಳೆಯುವ ಮಂಡೂಕಗಳಿಂದ । ಸು—ಅತಿಶಯವಾಗಿ। ಸಂ ಗಮಃ—ಸೇರಿಕೊ । ಇಮಂ ಅಗ್ನಿಂ —ಈ ಅಗ್ನಿಯನ್ನು । ಸು—ಅತಿಶಯವಾಗಿ । ಹರ್ಷಯ—ಸಂತೋಷಗೊಳಿಸು.

। ಭಾವಾರ್ಥ ।

ಶೈತ್ಯಯುಕ್ತಳೂ, ತಣ್ಣಗಿರುವ ಓಷಧಿಗಳಿಂದ ಕೂಡಿದವಳೂ ಸಂತೋಷಕಾರಕಳೂ, ಆಹ್ಲಾದಕರವಾದ ವೃಕ್ಷಾದಿಗಳಿಂದ ಕೂಡಿದವಳೂ ಆದ ಎಲೈ ಪೃಥ್ವಿಯೇ, ವೃಷ್ಟಿಯಿಂದ ಬೆಳೆಯುವ ಮಂಡೂಕಗಳೊಡನೆ (ಕಪ್ಪೆಗಳೊಡನೆ) ಅತಿಶಯವಾಗಿ ಕೂಡಿಕೊ. ಈ ಅಗ್ನಿಯನ್ನು ಅತಿಶಯವಾಗಿ ಸಂತೋಷಗೊಳಿಸು

English Translation

(Oh earth), cool and filled with cool (herbs), gladsome and filled with gladsome (trees), be thronged with female frogs and give joy to this Agni.

॥ ವಿಶೇಷವಿಷಯಗಳು ॥

ಅಪರಕರ್ಮಾಂಗಭೂತವಾದ ಅಸ್ಥಿಸಂಚಯನಕರ್ಮದಲ್ಲಿ ಪ್ರೇತಶರೀರವನ್ನು ಸುಟ್ಟಿದ ಶ್ಮಶಾನ ಪ್ರದೇಶವನ್ನು ಶಮೀವೃಕ್ಷದ ಶಾಖೆಯಿಂದ ನೀರನ್ನು ಮತ್ತು ಹಾಲನ್ನದ್ದಿಕೊಂಡು ಮೂರಾವರ್ತಿ ಪ್ರದಕ್ಷಿಣಾಕಾರವಾಗಿ ಪ್ರೋಕ್ಷಿಸು

ವಾಗ ಶೀತಿಕೇ ಶೀತಿಕಾವತಿ ಎಂಬ ಈ ಋಕ್ಕನ್ನು ಪರಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—ಕ್ಷೀರೋದ. ಕೇನ ಶಮೀಶಾಖಯಾ ತ್ರಿಃ ಪ್ರಸವ್ಯಂ ಪರಿವ್ರಜನ್ ಪ್ರೋಕ್ಷತಿ ಶೀತಿಕೇ ಶೀತಿಕಾವತೀತಿ ಎಂಬ ಸೂತ್ರದಿಂದ (ಆ. ಗೃ. ೪-೫-೩) ವಿವೃತವಾಗಿರುವುದು.

ಹದಿನೇಳನೆಯ ಸೂಕ್ತವು

ಪೀಠಿಕೆ.

ಸರಣ್ಯೂ ಮತ್ತು ವಿವಸ್ವಾನ್

ಈ ಸೂಕ್ತದ ಪ್ರಾರಂಭದಲ್ಲಿ ತ್ವಷ್ಟೃಪುತ್ರಿಯಾದ ಸರಣ್ಯೂವು ಯಾರು, ಅವಳು ವಿವಸ್ವಂತನನ್ನು ಮದುವೆಯಾದ ವಿಚಾರ, ಅವರಲ್ಲಿ ಯಮಯಮಿಯರು, ಮನು, ಮತ್ತು ಅಶ್ವಿನೀದೇವತೆಗಳು ಜನಿಸಿದ ವಿಚಾರ ಮೊದಲಾದ ವಿವರಗಳನ್ನು ಈ ಪೀಠಿಕೆಯಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ ಮತ್ತು ಮುಂದೆ ಆಯಾಋಕ್ಕುಗಳಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಯಾಸ್ಕರ ನಿರುಕ್ತವನ್ನು ಅಲ್ಲಿರುವಂತೆ ವಿವರಿಸಿರುವುದಲ್ಲದೆ ಪೀಠಿಕೆಯ ಕೊನೆಯ ಭಾಗದಲ್ಲಿ ಸರಣ್ಯೂ ದೇವಿಯ ವಿಷಯವು ಶೌನಕೋಕ್ತವಾದ ಬೃಹದ್ದೇವತಾಗ್ರಂಥದಲ್ಲಿ ಹೇಳಿರುವಂತೆಯೂ ವಿವರಿಸಲಾಗಿದೆ.

ಸರಣ್ಯೂವಿನ ವಿಷಯವನ್ನು ತಿಳಿಸತಕ್ಕ ಈ ಮಂತ್ರಗಳನ್ನು (೧೦.೧೭.೧-೩) ಬ್ರಹ್ಮೋದ್ಯವೆಂದು ಪ್ರಸಿದ್ಧವಾದ ಮಂತ್ರಗಳ ಜೊತೆಯಲ್ಲಿ ಸೇರಿಸಬಹುದು. ಈ ಬ್ರಹ್ಮೋದ್ಯವೆಂಬ ಗುಂಪಿಗೆ ಸೇರಿದ ಮಂತ್ರಗಳು ಸಂಹಿತಾ ಮತ್ತು ಬ್ರಾಹ್ಮಣಾದಿಗಳಲ್ಲಿ ಅನೇಕ ಕಡೆಗಳಲ್ಲಿವೆ. ಉದಾಹರಣೆಗೆ.—(ಋ ಸಂ. ೧-೧೬೪ ; ಅ. ವೇ. ೯-೯,೧೦; ವಾ.ಸಂ. ೨೩-೯ ರಿಂದ ೧೨, ತೈ. ಸಂ. ೭-೪.೧೪ ; ಐ.ಬ್ರಾ ೫-೨೫ ; ಶ ಬ್ರಾ. ೧೩. ೨. ೬. ೯ ರಿಂದ ೧೬; ೫. ೨. ೧೧-೨೧ ಇತ್ಯಾದಿ). ರಚನೆಯಲ್ಲಿ ಒಂದಕ್ಕೊಂದಕ್ಕೆ ಸ್ವಲ್ಪ ವ್ಯತ್ಯಸ್ತವಾಗಿದೆ ಪ್ರಕೃತದಲ್ಲಿ, ತ್ವಷ್ಟಾ ದುಹಿತ್ರೇ ಎಂಬ ಮಂತ್ರವು ಈ ಗುಂಪಿಗೆ ಸೇರಿದೆ ಎಂಬುದಕ್ಕೆ ಏನು ಆಧಾರವೆಂಬುದನ್ನು ಪರಿಶೀಲಿಸಬೇಕು. ಸ್ಥೂಲತಃ ಮಂತ್ರದ ರಚನೆಯನ್ನೂ ಅದರ ತಾತ್ಪರ್ಯವನ್ನೂ ಪರಿಶೀಲಿಸಿದರೆ ಅನೇಕ ಅಂಶಗಳಲ್ಲಿ ಅವುಗಳನ್ನು ಗಮನಿಸಬಹುದು

ತ್ವಷ್ಟಾ ದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ ।
ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ ನನಾಶ ।

(ಋ. ಸಂ ೧೦-೧೭-೧)

ತ್ವಷ್ಟೃವು ತನ್ನ ದುಹಿತೃವಿಗೆ (ಮಗಳಿಗೆ) ವಿವಾಹವನ್ನು ನೆರವೇರಿಸುವ ನಿಮಿತ್ತವಾಗಿ ಸಕಲ ಭುವನವೂ (ಭೂತ ಜಾತಗಳೂ) ಒಂದಾಗಿ ಸೇರಿದವು. ಆದರೆ, ವಿವಸ್ವಂತನೊಂದಿಗೆ ಆಗತಾನೇ ಪತ್ನೀಸಂಬಂಧವನ್ನು ಬೆಳೆಸಿದ (ಸರಣ್ಯೂವು) ಯಮನ ಮಾತೆಯು ಅದೃಶ್ಯಳಾದಳು.

ಅಪಾಗೂಹನ್ನಮೃತಾಂ ಮರ್ತ್ಯೇಭ್ಯಃ ಕೃತ್ವೀ ಸವರ್ಣಾಮದದುರ್ವಿವಸ್ವತೇ ।
ಉತಾಶ್ವಿನಾವಭರದ್ಯತ್ತದಾಸೀದಜುಹಾದು ದ್ವಾ ಮಿಥುನಾ ಸರಣ್ಯೂಃ ॥

(ಋ. ಸಂ ೧೦-೧೭-೨)

सरण्यूवु मरेयादनंतर देवतेगळु मर्त्यरादा मानवरिगे तिळियदंते अमर्त्यळाद अवळन्नु मरेमाडि, अवळंतेये इन्नोंदु स्त्रीरूपवन्नु निर्मिसि विवस्वंतनिगे अर्पिसिदरु. अवळु अश्विनी देवतेगळिगे जन्मवन्नित्तळु. अनंतर सरण्यूवु इब्बरु मक्कळन्नु (यम-यमी) हडेदळु. एंदि रुत्तदे. ई विवरणेयल्लि ब्रह्मोद्यलक्षणवन्नु तोरिसुव अनेक अंशगळिरुत्तवे. आदरे, ब्रह्मोद्यदल्लि साधारणवागि प्रश्ने मत्तु उत्तर (यावुदादरू ऒंदु समस्ये, अदक्के उत्तर) इवेरडू ऒट्टिगिरबेकादुदु रूढियागिदे. उदाहरणेगे, **पृच्छामि त्वा** (८-८६४-३४) एंब प्रश्नेगे, **इयं वेदिः परो अंतः पृथिव्याः** (८-८६४-३४) एंब उत्तरवु सहजवागिरुत्तदे. आदरे, प्रकृत मंत्रदल्लि प्रश्नेयें इल्लवल्ल एंदरे, इल्लि प्रश्नेयू सह असंदिग्धवाद उत्तरदोडनेयें ऒळगोंडिरुत्तदे एंदु हेळबहुदु. ई संदर्भवु ऒंदु समस्येय निरूपण एंबुदरल्लि यावा संशयवू इरुवुदिल्ल. ई समस्येयल्लि मुख्य विषयवाद सरण्यूविन चित्रवु हेगिरुत्तदे एंबुदक्के इल्लि अवळन्नु वर्णिसुव एळु विशेषणगळन्नु गमनिसबेकागिरुत्तदे अवु यावुवेंदरे.—

१) **त्वष्टुः दुहिता**—त्वष्टृविन पुत्रियु.

२) **यमस्य मातरा**—यमनिगे (मत्तु यमिगे) मातेयु.

३) **विवस्वतः पत्नी**—विवस्वंतन पत्नियु.

४) **अमृता**—मरणरहितळु (नाशविल्लदवळु).

५) **तस्याः सवर्णा**—अवळिगे प्रतिनिधियाद अवळदे रूपवन्नु हॊंदिदवळु.

६) **अश्विन्योः मातरा** (?)—अश्विनीदेवतेगळ मातेयु (?).

७) **अजहादु द्वा मिथुना**—अवळि मक्कळन्नु त्यजिसिदवळु.

ई संदर्भदल्लि त्वष्टृविन दुहितॆ यारु ? यमन मातॆ यारु ? इत्यादियागि नावु प्रश्निसिदरे ऎल्ल प्रश्नेगळिगू सप सरण्यू एंब ऒंदे ऒंदु उत्तरवु मात्र बरुत्तदे. ई सरण्यूवु यारेंदरे मात्र, अदु रहस्य तत्त्ववागिरुत्तदे. आदरू ई गूढार्थदल्लि अत्यतिशयवाद तात्पर्य विद्दे इरुत्तदे. आदुदरिंदले ई सन्निवेशवन्नु पुराणेतिहासगळल्लि बहुवागि प्रस्तापिसि वर्णिसिरुत्तदे. यास्करू, शौनकरू (बृहद्देवता) इदर महत्त्ववन्नु तोरिसि ई सन्निवेशवन्नु विवरिसिदारे. मेलॆ उदाहरिसिरुव ऋक्संहितॆय मंत्रवन्नु ८०-८५ ३) विवरिसुत्ता यास्करु ई रीति तिळिसिदारे—

अहागूहन्नमृतां मर्त्येभ्यः । कृत्वी सवर्णामददुर्विवस्वतेऽप्यश्वान्-भरदत्तदासीदजहाद्द्वा मिथुनौ सरण्यूर्मध्यमं च माध्यमिकां च वाचमिति नैरुक्ताः । यमं च यमीं चेत्यैतिहासिकाः । तत्रैतिहासमाचक्षतॆ—

त्वाष्ट्री सरण्यूर्विवस्वत आदित्यादधत्त मिथुनौ जनयांचकार । सा सवर्णामन्यां प्रतिनिधायात्मं रूपं कृत्वा प्रददाव । स विवस्वानादित्य अश्व-

ಮೇವ ರೂಪಂ ಕೃತ್ವಾ ತಾನನುಕೃತ್ಯ ಸಂಬಭೂವ । ತತೋಽಶ್ವಿನೌ ಜಜ್ಞಾತೇ ಸವರ್ಣಾ-
ಯಾಂ ಮನುಃ । ತದಭಿವಾದಿನ್ಯೇವಗಚ್ಛತಿ ॥

(ನಿ. ೧೨-೧೦)

ಅನುರ್ತ್ಯಳಾದ ಆ ಸ್ತ್ರೀಯನ್ನು ದೇವತೆಗಳು ಮಾನವರಿಗೆ ತಿಳಿಯದಂತೆ ಮರೆಸಿದರು ಅವಳಂತೆಯೇ ಇನ್ನೊಂದು ಸ್ತ್ರೀಯನ್ನು ನಿರ್ಮಿಸಿ ವಿವಸ್ವಂತನಿಗೆ ಅರ್ಪಿಸಿದರು. ಸರಣ್ಯೂವು ಅಶ್ವಿನೀದೇವತೆಗಳನ್ನು ಹೆಡೆದು ಆ ಅವಳಿಗಳನ್ನು ಅಲ್ಲಿಯೇ ತ್ಯಜಿಸಿ ಹೊರಟುಹೋದಳು ಎಂದಿರುವಾಗ, **ಯಮು** ಶಬ್ದಕ್ಕೆ ಏನರ್ಥವೆಂಬುದನ್ನು ಸಹ ಚರ್ಚಿಸಿದ್ದಾರೆ. (೧) ಮಧ್ಯಲೋಕದ ಇಂದ್ರ ಮತ್ತು (೨) ಮಾಧ್ಯಮಿಕಾ ವಾಕ್ ಎಂದು ನಿರುಕ್ತಕಾರರೂ, **ಯಮು** ಮತ್ತು **ಯಮೀ** ಎಂದು ಐತಿಹಾಸಿಕಕಾರರೂ ತಿಳಿಸುತ್ತಾರೆಂದು ಎರಡು ಅಭಿಪ್ರಾಯಗಳನ್ನು ಹೇಳಿದೆ. ಈ ವಿಷಯದಲ್ಲಿ ಒಂದು ಇತಿಹಾಸವಿದೆಯೆಂದು ಹೇಳಿ ಅದನ್ನೂ ವಿವರಿಸಿದೆ. ಅದೇನೆಂದರೆ,

ತ್ವಷ್ಟೃಪುತ್ರಿಯೂ, ಆದಿತ್ಯರೂಪನಾದ ವಿವಸ್ವಂತನಿಗೆ ಪತ್ನಿಯೂ ಆದ ಸರಣ್ಯೂವು **ಯಮು** ಮತ್ತು **ಯಮಿ** ಎಂಬ ಎರಡು ಅವಳಿಮಕ್ಕಳನ್ನು ಹಡೆದಳು. ಅನಂತರ ಅವಳು ತನಗೆ ಪ್ರತಿನಿಧಿಯಾಗಿ ಇನ್ನೊಬ್ಬಳನು ಆ ಜಾಗದಲ್ಲಿರಿಸಿ ತಾನು ಅಶ್ವರೂಪವನ್ನು ಧರಿಸಿ ಅಲ್ಲಿಂದ ಓಡಿಹೋದಳು. ಆದಿತ್ಯರೂಪನಾದ ವಿವಸ್ವಂತನೂ ಸಹ ಪುರುಷಾಶ್ವರೂಪವನ್ನು ಹೊಂದಿ ಅವಳನ್ನು ಹಿಂಬಾಲಿಸಿ ಅವಳೊಂದಿಗೆ ಸೇರಿಕೊಂಡನು, ಅದರ ಫಲವಾಗಿ ಅಶ್ವಿನೀ ದೇವತೆಗಳು ಉತ್ಪನ್ನರಾದರು. ಸರಣ್ಯೂವಿಗೆ ಪ್ರತಿನಿಧಿಯಾಗಿರಿಸಿದ್ದ ಸ್ತ್ರೀಯಲ್ಲಿ **ಮನುವು** ಉತ್ಪನ್ನನಾದನು. ಅದನ್ನೇ, **ತ್ವಷ್ಟಾ ದುಹಿತ್ರೇ** ಎಂಬ ಮಂತ್ರದಲ್ಲಿ ತಿಳಿಸಿದೆಯೆಂದು ನಿರುಕ್ತಕಾರರು ವಿವರಿಸಿದ್ದಾರೆ. ಇದೇ ವಿಷಯವನ್ನು ಬೃಹದ್ದೇವತಾಕಾರರು ಈ ರೀತಿ ತಿಳಿಸಿದ್ದಾರೆ.

ಅಭವನ್ಮಿಥುನಂ ತ್ವಷ್ಟುಃ ಸರಣ್ಯೂಸ್ತ್ರಿಶಿರಾಃ ಸಹ ।
ಸ ವೈ ಸರಣ್ಯೂಂ ಪ್ರಾಯಚ್ಛತ್ ಸ್ವಯಮೇವ ವಿವಸ್ವತೇ ॥

(ಬೃ. ದೇ. ೬. ೧೬೨)

ತ್ವಷ್ಟೃವಿಗೆ ಸರಣ್ಯೂ ಎಂಬ ಕನ್ಯೆಯೂ ತ್ರಿಶಿರಸ್ಸೆಂಬ ಪುತ್ರನೂ ಇದ್ದರು. ಅವನು ತನ್ನ ದುಹಿತೆಯಾದ ಸರಣ್ಯೂವನ್ನು ವಿವಸ್ವಂತನಿಗೆ ವಿವಾಹ ಮಾಡಿಕೊಟ್ಟನು.

ತತಃ ಸರಣ್ಯ್ಯಾಂ ಜಜ್ಞಾತೇ ಯಮುಯಮ್ಯೌ ವಿವಸ್ವತಃ ।
ತೌ ಚಾಪ್ಯುಭೌ ಯಮಾವೇವ ಜ್ಯಾಯಾಂಸ್ತಾಭ್ಯಾಂ ತು ವೈ ಯಮಃ ॥

(ಬೃ. ದೇ, ೬. ೧೬೩)

ಅನಂತರ ವಿವಸ್ವಂತನಿಗೆ ಪತ್ನಿಯಾದ ಸರಣ್ಯೂವಿನಲ್ಲಿ ಯಮು ಮತ್ತು ಯಮಿ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಇವರಿಬ್ಬರೂ ಒಂದಿಗೆ ಹುಟ್ಟಿದ ಅವಳಿ ಮಕ್ಕಳು ಅವರಿಬ್ಬರಲ್ಲಿ ಯಮನೇ ಮೊದಲನೆಯವನು.

ಕೃತ್ವಾ ಭರ್ತುಃ ಪರೋಕ್ಷಂ ತು ಸರಣ್ಯೂಃ ಸದೃಶೀಂ ಸ್ತ್ರಿಯಂ ।
ನಿಕ್ಷಿಪ್ಯ ಮಿಥುನಂ ತಸ್ಯಾಂ ಅಶ್ವಾ ಭೂತ್ವಾಪಜಕ್ರಮೇ ॥

(ಬೃ. ದೇ. ೭-೧)

ತನ್ನ ಪತಿಯಾದ ವಿವಸ್ವಂತನು ಇಲ್ಲದಿರುವ ವೇಳೆಯಲ್ಲಿ ಸರಣ್ಯೂವು ತನ್ನನ್ನೇ ಹೋಲುವ ಮತ್ತೊಬ್ಬ ಸ್ತ್ರೀಯನ್ನು ನಿರ್ಮಿಸಿ ತನ್ನ ಅವಳಿ ಮಕ್ಕಳನ್ನು ಅವಳ ವಶಕ್ಕೆ ಒಪ್ಪಿಸಿ ತಾನು ಅಶ್ವರೂಪವನ್ನು ಹೊಂದಿ ಆ ಸ್ಥಾನವನ್ನು ಬಿಟ್ಟು, ವಿವಸ್ವಂತನಿಗೆ ತಿಳಿಯದಂತೆ ಬೇರೆ ಜಾಗಕ್ಕೆ ಹೋಗಿ ಅದೃಶ್ಯಳಾದಳು.

ಅವಿಜ್ಞಾನಾದ್ವಿವಸ್ವಾಂಸ್ತು ತಸ್ಯಾಮಜನಯನ್ಮನುಂ ।
ರಾಜರ್ಷಿರಭವತ್ಪೋಽಪಿ ವಿವಸ್ವಾನಿವ ತೇಜಸಾ ॥

(ಬೃ. ದೇ. ೭.೨).

ಆದರೆ ವಿವಸ್ವಂತನಿಗೆ ಇದರ ಅರಿವು ಇಲ್ಲದೇ, ಸರಣ್ಯೂವಿಗೆ ಪ್ರತಿನಿಧಿಯಾಗಿದ್ದ ಆ ಸ್ತ್ರೀವ್ಯಕ್ತಿಯೊಂದಿಗೆ ಸೇರಿದನು. ಅದರ ಫಲವಾಗಿ ಮನುವಿನ ಉತ್ಪತ್ತಿಯಾಯಿತು. ಮನುವೂ ಸಹ ತಂದೆಯಂತೆಯೇ ತೇಜಸ್ವಿಯಾಗಿ ದೊಡ್ಡ ರಾಜರ್ಷಿಯಾದನು. ಇವನ ಕೀರ್ತಿಯು ಸಕಲ ಲೋಕಗಳಲ್ಲಿಯೂ ಹರಡಿತು.

ಸ ವಿಜ್ಞಾಯ ತ್ವಪಕ್ರಾಂತಾಂ ಸರಣ್ಯೂಮಶ್ವರೂಪಿಣೀಂ ।
ತ್ವಾಷ್ಟ್ರೀಂ ಪ್ರತಿ ಜಗಾಮಾಶು ವಾಜೀ ಭೂತ್ವಾ ಸಲಕ್ಷಣಃ ॥

(ಬೃ. ದೇ. ೭.೩)

ಕೊನೆಯಲ್ಲಿ, ವಿವಸ್ವಂತನಿಗೆ ನಿಜವಾದ ಅರಿವುಂಟಾಯಿತು. ಸರಣ್ಯೂವು ಅಶ್ವರೂಪದಲ್ಲಿ ಹೊರಟು ಹೋಗಿದ್ದಾಳೆಂದು ತಿಳಿದನಂತರ ತಾನೂ ಸಹ ಪುರುಷಾಶ್ವರೂಪವನ್ನು ಹೊಂದಿ ತ್ವಷ್ಟೃವಿನ ಪುತ್ರಿಯು ಹೋದ ಸ್ಥಳಕ್ಕೆ ಅವಳನ್ನು ಹಿಂಬಾಲಿಸಿ ಹೊರಟು ಅವಳನ್ನು ಸೇರಲು ಪ್ರಯತ್ನಿಸಿದನು.

ಸರಣ್ಯೂಶ್ಚ ವಿವಸ್ವಂತಂ ವಿದಿತ್ವಾ ಹಯರೂಪಿಣಂ ।
ಮೈಥುನಾಯೋಪಚಕ್ರಾಮ ತಾಂ ಚ ತತ್ಸಾರುರೋಹ ಸಃ ॥

(ಬೃ. ದೇ. ೭.೪)

ತನ್ನನ್ನು ಹಿಂಬಾಲಿಸಿ ವಿವಸ್ವಂತನೂ ಅಶ್ವರೂಪನಾಗಿ ಬಂದುದನ್ನು ತಿಳಿದ ಸರಣ್ಯೂವು ಅವನೊಂದಿಗೆ ಸಂಭೋಗ ಸುಖವನ್ನಿಚ್ಛಿಸಿದಳು. ಆಗ ವಿವಸ್ವಂತನು ಅವಳ ಇಚ್ಛೆಯನ್ನು ನೆರವೇರಿಸಿದನು.

ತತಸ್ತಯೋಸ್ತು ವೇಗೇನ ಶುಕ್ರಂ ತದಪತದ್ಭುವಿ ।
ಉಪಾಜಿಘ್ರಚ್ಚ ಸಾ ತ್ವಶ್ವಾ ತಚ್ಚುಕ್ರಂ ಗರ್ಭಕಾಮ್ಯಯಾ ॥

(ಬೃ ದೇ ೭.೫)

ಅವರ ಪರಸ್ಪರವಾದ ಉತ್ಸಾಹಕಾಲದಲ್ಲಿ ವಿವಸ್ವಂತನ ಶುಕ್ರವು ಕೆಳಕ್ಕೆ ಬಿದ್ದಿತು. ಆಗ ಸರಣ್ಯೂವು ಗರ್ಭವನ್ನು ಹೊಂದಬೇಕೆಂಬಿಚ್ಛೆಯಿಂದ ಅದನ್ನು ಆಘ್ರಾಣಿಸಿದಳು

ಆಘ್ರಾತಮಾತ್ರಾಚ್ಚುಕ್ರಾತ್ತು ಕುಮಾರೌ ಸಂಬಭೂವತುಃ ।
ನಾಸತ್ಯಶ್ಚೈವ ದಸ್ರಶ್ಚ ಯೌ ಸ್ತುತಾವಶ್ವಿನಾವಿತಿ ॥

(ಬೃ. ದೇ. ೭-೬)

ಆ ಶುಕ್ರವನ್ನು ಆಘ್ರಾಣಿಸಿದೊಡನೆಯೇ ಅವಳಿಗೆ ಗರ್ಭೋತ್ಪತ್ತಿಯುಂಟಾಗಿ ಅದರಿಂದ ನಾಸತ್ಯ ಮತ್ತು ದಸ್ರ ಎಂಬ ಇಬ್ಬರು ಯುವಕರು ಉತ್ಪನ್ನರಾದರು. ಅನಂತರ ಅವರು ಅಶ್ವಿನೀದೇವತೆಗಳು ಎಂಬ ಹೆಸರಿನಿಂದ ಕರೆಯಲ್ಪಟ್ಟು ಇವರ ಮಹಿಮೆಯು ಲೋಕಗಳಲ್ಲೆಲ್ಲಾ ಹಬ್ಬಿತು.

ಇತಿಹಾಸಮಿಮಂ ಯಾಸ್ಕಃ ಸರಣ್ಯೂದೇವತೇಪ್ಸಿತೇ ದ್ವ್ಯಚೇ ।
ವಿವಸ್ವತಶ್ಚ ತ್ವಷ್ಟುಶ್ಚ ತ್ವಷ್ಟೇತಿ ಸಹ ಸಂಸ್ಮೃತೇ ॥ (ಬೃ. ದೇ. ೭-೭)

ಸರಣ್ಯೂದೇವತೆಯನ್ನುದ್ದೇಶಿಸಿ ನಿರ್ಮಿತವಾದ (೧೦-೧೭ ೧) ಮತ್ತು (೧೦.೧೭.೨) ಈ ಎರಡು ಮಂತ್ರಗಳನ್ನೂ ಸಹ ಯಾಸ್ಕರು ವಿವಸ್ವಾನ್ ಮತ್ತು ತ್ವಷ್ಟಾ ಇವರಿಬ್ಬರ ಇತಿಹಾಸವನ್ನು ವಿವರಿಸುವ ಸನ್ನಿವೇಶವೆಂದಭಿಪ್ರಾಯ ಪಟ್ಟಿದ್ದಾರೆ. ಯಾಸ್ಕರ ವಿವರಣೆಯನ್ನು ಮೇಲೆ ತಿಳಿಸಿದೆ. (ನಿ ೧೨-೧೦,೧೧),

ಪ್ರಕೃತದಲ್ಲಿ, ಈ ಸನ್ನಿವೇಶವನ್ನು ವಿವರಿಸುವ ಋಕ್ಸಂಹಿತಾಮಂತ್ರದಲ್ಲಿ ಬ್ರಹ್ಮೋದ್ಯದ ಲಕ್ಷಣವೇನಿಪ ಎಂಬುದನ್ನು ಪರಿಶೀಲಿಸಬೇಕು. ಮಾನವನಾದ ವಿವಸ್ವಂತನಿಗೆ ದಿವ್ಯಸ್ತ್ರೀಯಾದ ಸರಣ್ಯೂವನ್ನು ವಿವಾಹಾರ್ಥವಾಗಿ ಕೊಟ್ಟುದುದರಿಂದ ಉಂಟಾಗತಕ್ಕ ವೈಷಮ್ಯವೊಂದು ಕಡೆ ಮತ್ತು ಈ ವೈಷಮ್ಯವನ್ನು ಸರಿಪಡಿಸಲು ನಡೆಯುವ ಪ್ರಯತ್ನವಿನ್ನೊಂದು ಕಡೆ, ಹೀಗೆ ಈ ಪ್ರಕರಣದಲ್ಲಿ ತೋರಿಬರುವ ಸಮಸ್ಯೆ ಮತ್ತು ಇದರ ಪರಿಹಾರಪ್ರಯತ್ನವೇ ಮುಖ್ಯವಾದ ಅಂಶವಾಗಿರುತ್ತದೆ. ವಿವಸ್ವಂತನು ಆದಿತ್ಯರಲ್ಲೊಬ್ಬನಾಗಿರುವ ವಿಷಯವು ವೈದಿಕವಾಕ್ಯಗಳಲ್ಲೆಲ್ಲ ಪ್ರಖ್ಯಾತವಾಗಿರುತ್ತದೆ. ಆದರೆ, ಅಮರ್ತ್ಯನಾದ ದೇವತೆಯನ್ನು ಮರ್ತ್ಯನಾದ ಮಾನವನೆನ್ನುವುದು ಹೇಗೆ ಎಂಬ ಸಂಶಯವು ಬರುವುದು ಸಹಜವಾಗಿರುತ್ತದೆ. ಇವನು ಮರ್ತ್ಯನಾದ ಮಾನವನೆಂಬ ನಿರ್ದೇಶವು ವೈದಿಕವಾಕ್ಯಗಳಲ್ಲಿಯೇ ಸ್ಪಷ್ಟವಾಗಿರುತ್ತದೆ.

ಸರಣ್ಯೂವಿನ ವಿವಾಹಕಾಲದಲ್ಲಿ ದೇವತೆಗಳು ಮಾತ್ರವಲ್ಲದೇ, ಸಕಲ ಭುವನಗಳ ಪ್ರಜೆಗಳೂ ಬಂದು ಸೇರಿದರು ಎಂಬ ವಿಷಯವನ್ನು ಇದಂ ವಿಶ್ವಂ ಭುವನಂ ಸಮೇತಿ (ಋ. ಸಂ. ೧೦-೧೭-೧) ಎಂಬ ವಾಕ್ಯವು ತಿಳಿಸುತ್ತದೆ. ಪ್ರಾಯಚ್ಛತ್ ಸ್ವಯಮೇವ ವಿವಸ್ವತೇ (ಬೃ. ದೇ.) ತ್ವಷ್ಟೃವು ತಾನಾಗಿಯೇ ಸರಣ್ಯೂವನ್ನು ವಿವಸ್ವಂತನಾಮಕನಾದ ಮಾನವನಿಗೆ ಕೊಟ್ಟನು ಎಂದಿರುತ್ತದೆ. ಸ್ವಯಂವರರೂಪವಾದ ಈ ವಿವಾಹದಲ್ಲಿ ದೇವತೆಗಳೆಲ್ಲರೂ ಬಂದು ನೆರೆದಿದ್ದರೂ ಸಹ ತ್ವಷ್ಟೃವು ಸ್ವಯಂಪ್ರೇರಿತನಾಗಿ ವಿವಸ್ವಂತನಿಗೆ (ಮಾನವನಿಗೆ) ಕೊಟ್ಟನು ಎಂದಿರುವುದು ಸಮಸ್ಯಾತ್ಮಕವಾಗಿಯೇ ಇರುತ್ತದೆ. ಸರಣ್ಯೂವೂ ಸಹ ಈ ಸಂಬಂಧದಿಂದ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದಳು ಎಂಬ ಅಂಶವೂ ಸ್ಪಷ್ಟವಾಗಿ ಪ್ರತಿಪಾದಿತವಾಗಿರುತ್ತದೆ.

ವಿವಸ್ವಂತನು ಮರ್ತ್ಯನೆಂಬುವುದೇ ಈ ಸಮಸ್ಯೆಗೆ ಮೂಲವಿಷಯವಾಗಿರುತ್ತದೆ. ಬೃಹದ್ದೇವತೆಯಲ್ಲಿಯೂ ಮಹಾಭಾರತದಲ್ಲಿಯೂ ಸಹ ಈ ಅಂಶವು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

ತತೋ ವಿವಸ್ವಾನಾದಿತ್ಯೋಽಜಾಯತ, ತಸ್ಯ ವಾ ಇಯಂ ಪ್ರಜಾ ಯನ್ಮನುಷ್ಯಾಃ ।
(ತೈ. ಸಂ. ೬-೫-೬-೨)

ಆನಂತರ ಆದಿತ್ಯರಲ್ಲಿ ಒಬ್ಬನಾದ ವಿವಸ್ವಂತನು ಉತ್ಪನ್ನನಾದನು. ಮಾನವರೂಪಿಗಳಾದ ಸಕಲ ಪ್ರಜೆಗಳೂ ಸಹ ಈ ವಿವಸ್ವಂತನಿಂದ ಉತ್ಪನ್ನರಾದವರು ಎಂದು ತೈತ್ತಿರೀಯ ಸಂಹಿತೆಯು ಇದನ್ನು ಸಮರ್ಥಿಸುತ್ತದೆ ಇಷ್ಟೇ ಅಲ್ಲದೆ, ಇನ್ನೂ ಅನೇಕ ವೈದಿಕವಾಕ್ಯಗಳು ಇವನ ಮರ್ತ್ಯತ್ವವನ್ನು ಸ್ಪಷ್ಟಪಡಿಸುತ್ತವೆ. ಉದಾಹರಣೆಗೆ.—

ಸಪ್ತಭಿಃ ಪುತ್ರೈರದಿತಿರುಪಪ್ರೈತ್ಪೂರ್ವ್ಯಂ ಯುಗಂ ।
ಪ್ರಜಾಯೈ ಮೃತ್ಯವೇ ತ್ವತ್ಪುನರ್ಮಾರ್ತಾಂಡಮಾಭರತ್ ॥
(ಋ. ಸಂ. ೧೦-೭೨-೮)

ಅದಿತಿಗೆ ಅಷ್ಟಪುತ್ರರು. ಅವರಲ್ಲಿ ಏಳು ಜನರೊಂದಿಗೆ ಹೋಗಿ ದೇವತೆಗಳನ್ನು ಸೇರಿ ತನ್ನ ಹಿಂದಿನ ಸಂತತಿಯೊಡನೆ ಬೆರೆತಳು. ಆದರೆ, ಎಂಟನೆಯವನಾದ ಮಾರ್ತಾಂಡನನ್ನು ಮಾತ್ರ ಜನನಮರಣಾದಿರೂಪವಾದ ಸಂಸಾರಪ್ರವಾಹ ನಿಮಿತ್ತವಾಗಿ ಇಲ್ಲಿಯೇ ಇರಿಸಿದಳು ಎಂದಿದೆ. ಈ ಮಾರ್ತಾಂಡನಾರು ಎಂದರೆ,—

ಅಷ್ಟೌ ಹ ವೈ ಪುತ್ರಾ ಅದಿತೇಃ । ಯಾಂಸ್ತ್ರೀನದ್ದೇವಾ ಆದಿತ್ಯಾ ಇತ್ಯಾಚಕ್ಷತೇ ಸಪ್ತ ಹೈವ ತೇ೬ವಿಕೃತಗ್ಂ ಹಾಷ್ಟಮಂ ಜನಯಾಂಚಕಾರ ಮಾರ್ತಾಂಡಗ್ಂ ಸಂದೇಘೋ ಹೈವಾಸ ಯಾವಾನೇವೋರ್ಧ್ವಸ್ತಾವಾಂಸ್ತಿರ್ಯಙ್ ಪುರುಷಸಂಮಿತ ಇತ್ಯು ಹೈತ ಆಹುಃ ॥

(ಶ. ಬ್ರಾ. ೩-೧-೩-೩)

ಅದಿತಿಗೆ ಎಂಟು ಜನ ಮಕ್ಕಳು. ಆದರೆ ದೇವತಾಸಂಜ್ಞೆಯಿಂದ ಕರೆಯಲ್ಪಡತಕ್ಕ ಅದಿತಿಪುತ್ರರು ಏಳು ಜನ ಮಾತ್ರ. ಎಂಟನೆಯ ಮಾರ್ತಾಂಡನಿಗೆ ಪೂರ್ಣವಾದ ರೂಪವನ್ನು ಕೊಡಲಿಲ್ಲ. ಕೇವಲ ಅದರ ಎತ್ತರಕ್ಕೆ ಸಮಾನವಾದ ಸ್ಥೂಲತೆಯನ್ನು ಹೊಂದಿದ್ದ ಒಂದು ದೇಹದ ಮುದ್ದೆಯಾಗಿದ್ದಿತು ಅದು ಮಾನವನ ಪರಿಣಾಮಕ್ಕೆ ಸರಿಯಾಗಿದ್ದಿತೆಂದೂ ತಿಳಿದವರು ಹೇಳುತ್ತಾರೆ

ತ ಉ ಹೈತ ಊಚುಃ । ದೇವಾ ಆದಿತ್ಯಾ ಯದಸ್ಮಾನನ್ವಜನಿಷ್ಟ ತದಮುಯೈವ ಭೂದ್ಧಂ-ತೇಮಂ ವಿಕರವಾಮೇತಿ ತಂ ವಿಚಕ್ರುರ್ಯಥಾಯಂ ಪುರುಷೋ ವಿಕೃತಸ್ತಸ್ಯ ಯಾನಿ ಮಾಗ್ಂಸಾನಿ ಸಂಕೃತ್ಯ ಸಂನ್ಯಾಸುಸ್ತತೋ ಹಸ್ತೀ ಸಮಭವತ್ತಸ್ಮಾದುಹುರ್ನ ಹಸ್ತಿನಂ ಪ್ರತಿಗೃಹ್ಣೀಯಾತ್ಪುರುಷಾಜಾನೋ ಹಿ ಹಸ್ತೀತಿ ಯಮು ಹ ತದ್ವಿಚಕ್ರುಃ ಸ ವಿವಸ್ವಾನಾ-ದಿತ್ಯಸ್ತಸ್ಯೇಮಾಃ ಪ್ರಜಾಃ ॥

(ಶ. ಬ್ರಾ ೩-೧-೩-೪)

ಆಗ ದೇವತಾರೂಪವಾದ ಏಳು ಜನ ಅದಿತಿಪುತ್ರರೂ ಸೇರಿ "ಈ ಪಿಂಡವು ವ್ಯರ್ಥವಾಗಬಾರದು. ಇದಕ್ಕೆ ಒಂದು ರೂಪವನ್ನು ಕೊಡಬೇಕು" ಎಂದು ಸಂಕಲ್ಪಿಸಿ ಪುರುಷರೂಪದಲ್ಲಿ ಅದಕ್ಕೆ ಒಂದು ಅಸ್ತಿತ್ವವನ್ನು ನಿರ್ಮಿಸಿದರು ಆ ಪಿಂಡದಿಂದ ಪುರುಷನನ್ನು ನಿರ್ಮಿಸುವಾಗ ಅವಯವನಿರ್ಮಾಣಕಾಲದಲ್ಲಿ ಕತ್ತರಿಸಿ ಹಾಕಿದ ಮಾಂಸದ ಚೂರು ಗಳೇ ಆನೆರೂಪದಿಂದ ಕಾಣಿಸಿಕೊಂಡವು. ಆದುದರಿಂದಲೇ ಆನೆಯನ್ನು ದಾನವಾಗಿ ತೆಗೆದುಕೊಳ್ಳಬಾರದೆಂದು ಹೇಳು ತ್ತಾರೆ. ಪುರುಷರೂಪದಿಂದ ಸಂಸ್ಕೃತನಾದವನೇ ವಿವಸ್ವಂತನು. ಯಾರಿಂದ ಈ ಪ್ರಜಾಸಂತತಿಯುಂಟಾಯಿತೋ ಆ ಆದಿತ್ಯನೇ ಈ ವಿವಸ್ವಂತನು, ಎಂದಿರುತ್ತದೆ. ಇಲ್ಲದೇ, ವಿವಸ್ವಂತನ ಮರ್ತ್ಯತ್ವವನ್ನೂ ಮಾನವತ್ವವನ್ನೂ ತೋರಿಸುವ ಆಧಾರಗಳು ಇನ್ನೂ ಅನೇಕವಾಗಿವೆ

ಯಾವುಥವಾ ಮನುಷ್ಪಿತಾ ದಧ್ಯಙ್ ಧಿಯಮುತ್ನತ ।
ತಸ್ಮಿನ್ ಬ್ರಹ್ಮಾಣಿ ಪೂರ್ವಥೇಂದ್ರ ಉಕ್ಥಾ ಸಮಗ್ಮತಾರ್ಚನ್ನನು ಸ್ವರಾಜ್ಯಂ ॥

(ಋ ಸಂ. ೧-೮೦-೧೬)

ಇತ್ಯಾದಿ ಸ್ಥಳಗಳಲ್ಲಿ (ತೈ. ಸಂ. ೩-೧-೯-೪; ಶ. ಬ್ರಾ. ೧-೪-೧-೧ ಇತ್ಯಾದಿ) ಯಾವ ಮನುವನ್ನು ಮಾನವರಿಗೆ ಪಿತೃವೆಂದು ನಿರ್ದೇಶಿಸಿದೆಯೋ ಅದೇ ಮಾನವ ಪಿತೃವಾದ ಮನುವಿಗೆ ವಿವಸ್ವಂತನು ಪಿತೃವೆಂಬುದು ಪ್ರಸಿದ್ಧವಾಗಿದೆ.

ಯಥಾ ಮನೌ ವಿವಸ್ವತಿ ಸೋಮಂ ಶಕ್ರಾಪಿಬಃ ಸುತಂ ।
ಯಥಾ ತ್ರಿತೇ ಛಂದ ಇಂದ್ರ ಜುಜೋಷಸ್ಯಾಯೌ ಮಾದಯಸೇ ಸಚಾ ॥

(ಋ ಸಂ ೮-೪೨.೧)

ತತೋಽಶ್ವಿನೌ ಜಜ್ಞಾತೇ । ಸವರ್ಣಾಯಾಂ ಮನುಃ ।

(ನಿರುತ್ತ. ೧೨-೧೦)

ಮನುರ್ವೈವಸ್ವತೋ ರಾಜೇತ್ಯಾಹ । ತಸ್ಯ ಮನುಷ್ಯಾ ವಿಶಸ್ತ ಇಮಾ ಅಸತ ।

(ಶ ಬ್ರಾ ೧೩-೪-೩-೩)

ಇತ್ಯಾದ್ಯನೇಕ ಸ್ಥಳಗಳಲ್ಲಿ ಮನುವನ್ನು ವಿವಸ್ವಂತನ ಪುತ್ರನೆಂದು ಸ್ಪಷ್ಟವಾಗಿ ಕರೆದಿದೆ **ವಿವಸ್ವತಃ ಸದನೇ** (ಋ. ಸಂ. ೩-೩೪-೭,) ಇತ್ಯಾದಿ ವರ್ಣನೆಗಳು ವಿವಸ್ವಂತನನ್ನು ಉತ್ತಮವಾದ ಯಜಮಾನನೆಂದೂ ತಿಳಿಸುತ್ತವೆ. (೧-೫೩-೧ ; ೩-೫೧-೩ ; ೮೦-೧೨-೭ ಇತ್ಯಾದಿ)

ಇಂತಹ ಮಾನವನಿಗೆ ವಿವಾಹಿತಳಾದ ಸರಣ್ಯೂವು ಮೊದಲು ಅವನೊಂದಿಗೆ ಸೇರಿದರೂ, ಕ್ರಮವಾಗಿ ಅವಳಿಗೆ ತನ್ನ ಪತಿಯು ದಿವ್ಯತ್ವವನ್ನು ಪೂರ್ಣವಾಗಿ ಹೊಂದಿಲ್ಲವೆಂಬ ಅರಿವುಂಟಾಗಿರಬೇಕು ಈ ಅಂಶವನ್ನು ಹರಿವಂಶದಲ್ಲಿ ಸ್ಪಷ್ಟವಾಗಿ ತಿಳಿಸಿದೆ ಹೇಗೆಂದರೆ ,—

ಭರ್ತೃರೂಪೇಣ ನಾತುಷ್ಯದ್ರೂಪಯೌವನಶಾಲಿನೀ ।

(ಹರಿವಂಶ. ೫೪೭)

ಯೌವನ ಮತ್ತು ಸೌಂದರ್ಯಗಳಿಂದ ಕೂಡಿದ ಸರಣ್ಯೂವು ತನ್ನ ಪತಿಯ ರೂಪದಿಂದ ತೃಪ್ತಿಯನ್ನು ಹೊಂದಲಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿದೆ. ಇಂತಪ ಪತಿಯಿಂದ ಅತೃಪ್ತಿಯನ್ನು ಪಡೆದು ಅವಳು ಅಶ್ವರೂಪಕ್ಕೆ ಪರಿವರ್ತಿತಳಾದಳು ಎಂಬುದು ಸ್ಪಷ್ಟವಾಗಿ ಋಕ್ಸಂಹಿತೆಯಿಲ್ಲಿ ಹೇಳದಿದ್ದರೂ ಸಹ " ಅವಳು ಅಶ್ವಿನೀದೇವತೆಗಳನ್ನು ಹಡೆದಳು " ಎಂಬ ವಾಕ್ಯವು (ಋ. ಸಂ. ೧೦೧೭-೨) ಈ ವಿಷಯವನ್ನು ತಿಳಿಸುತ್ತದೆ.

ಅಶ್ವರೂಪವನ್ನು ಹೊಂದಿದ ಸರಣ್ಯೂವು ತನ್ನ ಸಹಜಬಂಧುಗಳಿಂದ ದೇವತೆಗಳೊಡನೆ ಸೇರಿಕೊಳ್ಳಲು ಅವರು ಅವಳನ್ನು ಮಾನವನಾದ ವಿವಸ್ವಂತನಿಂದಲೂ ಮತ್ತು ತತ್ಪುತ್ರರೂ ಮಾನವರೂಪರೂ ಆದ ಯಮ ಮತ್ತು ಯಮಿಗಳಿಂದಲೂ ಅವಳನ್ನು ಮರೆಸಿ ಇಟ್ಟರು, ಆದುದರಿಂದಲೇ,

ಅಪಾಗೂಹನ್ನಮೃತಾಂ ಮರ್ತ್ಯೇಭ್ಯಃ ಕೃತ್ವೀ ಸವರ್ಣಾಮದದುರ್ವಿವಸ್ವತೇ ।

(ಋ. ಸಂ ೧೦ ೧೭-೨)

ಮಾನವನಾದ ವಿವಸ್ವಾನ್ ಮತ್ತು ತತ್ಪುತ್ರರಿಂದ ಅವಳನ್ನು ಮರೆಸಿ, ಅವಳಂತೆಯೇ ರೂಪವುಳ್ಳ ಇನ್ನೊಬ್ಬಳನ್ನು ಸೃಷ್ಟಿಸಿ ಅವನಿಗೆ ಕೊಟ್ಟರು ಎಂಬುದು ವಿಶದವಾಗಿದೆ. **ಈ ಸವರ್ಣೆ** ಯಿಂದ ಉತ್ಪನ್ನನಾದ **ಮನುವೇ ಯಮುನಿಗೆ ಭ್ರಾತೃವಾದನು ಎಂಬುದನ್ನು ನಿರುಕ್ತ ಮತ್ತು ಬೃಹದ್ದೇವತಾವಾಕ್ಯಗಳಿಂದ ಸ್ಪಷ್ಟಪಡಿಸಿದೆ. ಇದಲ್ಲದೇ ಮನು ಮತ್ತು ಯಮರ ಭ್ರಾತೃತ್ವವನ್ನು** ಪ್ರಶಂಸಿಸುವ ವಾಕ್ಯವು ಋಕ್ಸಂಹಿತೆಯಲ್ಲಿ ಎಲ್ಲೂ ಇಲ್ಲ ಅಥರ್ವವೇದದಲ್ಲಿ ಮಾತ್ರ ಇದು ಸೂಚಿತವಾಗಿದೆ. ಹೇಗೆಂದರೆ :—

ತಸ್ಯ (ವಿರಾಜಃ) ಯಮೋ ರಾಜಾ ವತ್ಸ ಆಸೀತ್ । ತಸ್ಯ ಮನುರ್ವೈವಸ್ವತೋ ವತ್ಸ ಆಸೀತ್

(ಅ. ವೇ. ೮.೧೦.೨೩,೨೪)

ಆ ವಿರಾಟ್‌ಪುರುಷನಿಗೆ ಯಮನು ವತ್ಸರೂಪನಾಗಿದ್ದನು. ವಿವಸ್ವಂತನ ಪುತ್ರನಾದ ಮನುವೂ ವತ್ಸರೂಪನಾಗಿದ್ದನು ಎಂಬ ಈ ವಾಕ್ಯದಿಂದ ಅವರಿಬ್ಬರ ಭ್ರಾತೃತ್ವವು ಸೂಚಿತವಾಗಿದೆ. ಅಲ್ಲದೆ:—

ಮನುರ್ವೈವಸ್ವತೋ ರಾಜಾ ತಸ್ಯ ಮನುಷ್ಯಾ ವಿಶ್ವ .....ಯಮೋ ವೈವಸ್ವತೋ ರಾಜಾ ತಸ್ಯ ಪಿತರೋ ವಿಶಃ ॥

(ಶ ಬ್ರಾ ೧೩.೩.೩-೭.೫)

ವಿವಸ್ವಂತನ ಪುತ್ರನಾದ ಮನುವು ಮಾನವರಿಗೆಲ್ಲ ಪ್ರಭುವು ಮತ್ತು ವಿವಸ್ವಂತನ ಪುತ್ರನಾದ ಯಮನು ಪಿತೃಲೋಕಕ್ಕೆಲ್ಲ ಪ್ರಭುವು ಎಂದು ಇವರ ಭ್ರಾತೃತ್ವವು ಸೂಚಿತವಾಗಿದೆ ವಿವಸ್ವಂತನು ಮಾನವರಿಗೆಲ್ಲ ಮೂಲಪುರುಷನು ಮತ್ತು ಮಾನವತ್ವವನ್ನೂ ಮರ್ತ್ಯತ್ವವನ್ನು ಹೊಂದಿದವನು ಎಂಬುದನ್ನು ತಿಳಿಸುವ ಆಧಾರಗಳೇ ನಮಗೆ ಪ್ರಕೃತದಲ್ಲಿ ಬೇಕಾಗಿರತಕ್ಕವಾಗಿವೆ. ಇದೇ ಅಂಶವನ್ನು ತೈತ್ತಿರೀಯಸಂಹಿತೆಯಲ್ಲಿ ಈ ರೀತಿ ತಿಳಿಸಿದೆ.

ತತೋ ವಿವಸ್ವಾನಾದಿತ್ಯೋಽಜಾಯತ ತಸ್ಮೈ ವಾ ಇಯಂ ಪ್ರಜಾಯನ್ಮನುಷ್ಯಾಃ

(ತೈ ಸ ೬-೫.೬-೨)

ಆದಿತ್ಯರೂಪನಾದ ವಿವಸ್ವಂತನಿಗೆ ಮಾನವರೂಪರಾದ ಪ್ರಜೆಗಳಿದ್ದರು ಎಂದಿರುವುದರ ಜೊತೆಗೆ ಆದಿತ್ಯನಿಗೂ ಉಳಿದ ಆದಿತ್ಯರಿಗೂ ಇರುವ ವ್ಯತ್ಯಾಸವನ್ನು ಮೇಲೆ ವಿವರಿಸಿದೆ.

ಅಲ್ಲದೇ, **ಸವರ್ಣಾಮದದುರ್ವಿವಸ್ವತೇ** (ಋ. ಸಂ ೧೦.೧೭-೨) ಎಂಬಲ್ಲಿ **ಸವರ್ಣಾ** ಎಂಬ ಪದಕ್ಕೆ ಅರ್ಥವೇನು ಎಂಬುದೂ ಸಹ ನಿಷ್ಪನ್ನವಾಗಿಲ್ಲ. **ಸವರ್ಣಾ** ಎಂದರೆ, ಅದೃಶ್ಯಳಾದ **ಸರಣ್ಯೂ**ವಿಗೆ ಪ್ರತಿನಿಧಿಯಾಗಿ ಅವಳದೇ ರೂಪವನ್ನು ಹೋಲುವುದರಿಂದ ಅದೇ ವರ್ಣವುಳ್ಳವಳು ಎಂದರ್ಥವೇ ಅಥವಾ, **ಸವರ್ಣಾ** ಎಂಬುದು ಅಂಕಿತ ನಾಮವೇ ಎಂಬುದು ಸಂಶಯಕ್ಕೆ ಅವಕಾಶವನ್ನಿತ್ತಿದೆ. ಮನುವಿಗೆ **ಸಾವರ್ಣಿ** ಮತ್ತು **ಸಾವರ್ಣ್ಯ** ಎಂಬ ಎರಡು ವಿಶೇಷಣಗಳಿಂದಲೂ ನಿರ್ದೇಶವಿರುತ್ತದೆ. ಈ ವಿಶೇಷಣಗಳ ಸರಿಯಾದ ಅರ್ಥವನ್ನು ತಿಳಿಯಬೇಕಾದರೆ ಈ ಪ್ರಯೋಗಗಳಿರುವ ಸನ್ನಿವೇಶಗಳನ್ನು ಪರಿಶೀಲಿಸಬೇಕು.

ನ ತಮಶ್ನೋತಿ ಕಶ್ಚನ ದಿವ ಇವ ಸಾನ್ವಾರಭಂ ।
ಸಾವರ್ಣ್ಯಸ್ಯ ದಕ್ಷಿಣಾ ವಿ ಸಿಂಧುರಿವ ಪಪ್ರಥೇ ॥

(ಋ. ಸಂ. ೧೦-೬೨-೯)

ಸಾವರ್ಣ್ಯನೆಂದು ಪ್ರಸಿದ್ಧನಾದ ಮನುವಿನ ದಾನವು ಅತ್ಯತಿಶಯವಾದುದು. ಅದನ್ನು ಮೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಅವನ ದಾನವು ನದೀಪ್ರವಾಹದಂತೆ ವಿಸ್ತೃತವಾಗಿ ಹರಡಿ ಪ್ರಸರಿಸುತ್ತದೆ. . .

ಸಹಸ್ರದಾ ಗ್ರಾಮಣೀರ್ಮಾ ರಿಷನ್ಮನುಃ ಸೂರ್ಯೇಣಾಸ್ಯ ಯತಮಾನೈತು ದಕ್ಷಿಣಾ ।
ಸಾವರ್ಣೇರ್ದೇವಾಃ ಪ್ರ ತಿರನ್ತ್ವಾಯುರ್ಯಸ್ಮಿನ್ನಶ್ರಾಂತಾ ಅಸನಾಮ ವಾಜಂ ॥

(ಋ. ಸಂ. ೧೦-೬೨-೧೧)

ಸಹಸ್ರಾರು ಗೋವುಗಳ ದಾತನೂ, ಜನಪದದ ಪ್ರಭುವೂ ಆದ ಮನುವು ಯಾರಿಂದಲೂ ಹಿಂಸಿತನಾಗದಿರಲಿ, ಅವನ ದಾನವು ಆದಿತ್ಯನ ಪ್ರಭೆಯಂತೆ ವಿಸ್ತೃತವಾಗಿ ಬೆಳೆಯಲಿ. ಈ ಸಾವರ್ಣಿಯ ಆಯುಸ್ಸನ್ನು ದೇವತೆಗಳು ದೀರ್ಘವಾಗಿ ಬೆಳೆಯುವಂತೆ ಮಾಡಲಿ. ನಾವು ಅವನ ಸತತವಾದ ಶ್ರಮದಿಂದ ಲಬ್ಧವಾಗುವ ಅನ್ನವನ್ನೂ ಉಪಭೋಗಿಸೋಣ, ಎಂದಿರುತ್ತದೆ. ಈ ಸಂದರ್ಭಗಳಲ್ಲಿ ಸಾವರ್ಣ್ಯ ಮತ್ತು ಸಾವರ್ಣಿ ಎಂದರೆ, ಸವರ್ಣಾ ಎಂಬುವಳ ಪುತ್ರನೆಂದು ಭಾಷ್ಯದಲ್ಲಿ ವಿವರಣೆಯಿರುತ್ತದೆ. ಆದರೆ, ಮನುವಿನ ತಂದೆಯಾದ ಸವರ್ಣನೆಂಬ ಪುರುಷನು ಎಲ್ಲೂ ನಿರ್ದಿಷ್ಟನಾಗಿಲ್ಲ. ಮನುವಿಗೆ ಇದು ಮಾತೃನಾಮಕ್ಕೆ ಸಂಬಂಧಿಸಿದ ವಿಶೇಷಣವೇ ಆಗಿರಬೇಕು. ಈ ಸವರ್ಣಾ ಎಂಬ ಯಾವ ಯುವತಿಯು ವಿವಸ್ವಂತನಿಗೆ ಕೊಡಲ್ಪಟ್ಟಳೋ ಅವಳೇ ಈ ಮನುವಿನ ತಾಯಿಯೆಂದು ಧಾರಾಳವಾಗಿ ಹೇಳಬಹುದು

ವಿವಸ್ವಂತನ ಮಾನವತ್ವದಿಂದ ತೃಪ್ತಿಯನ್ನು ಹೊಂದದ ಸರಣ್ಯೂವು ಅದೃಶ್ಯಳಾದ ವಿಷಯವು ಇವನಿಗೆ ತಿಳಿದೊಡನೆಯೇ ಅವಳನ್ನು ಹಿಂಬಾಲಿಸುತ್ತಾನೆ. ಅವಳು ಅಶ್ವರೂಪವನ್ನು ಹೊಂದಿದುದನ್ನರಿತು ತಾನೂ ಸಹ ಪುರುಷಾಶ್ವ ರೂಪವನ್ನು ಹೊಂದುತ್ತಾನೆ. ಈ ರೂಪದಲ್ಲಿ ಅವಳನ್ನು ಹಿಂಬಾಲಿಸಿ ಅವಳನ್ನು ಸಮಾಪಿಸಿದ ಕೂಡಲೇ ಅವಳು ಇವನನ್ನು ಮೋಹಿಸಿ ಇವನೊಳನೆ ಸಂಭೋಗವನ್ನು ಇಚ್ಛಿಸುತ್ತಾಳೆ. ತತ್ಫಲವಾಗಿ ಅಶ್ವಿನೀದೇವತೆಗಳ ಉತ್ಪತ್ತಿಯೆಂಬುದು ವಿಶದವಾಗಿದೆ. ಪ್ರಕೃತದಲ್ಲಿ ಇನ್ನೊಂದು ಮುಖ್ಯವಾದ ಅಂಶವನ್ನು ಪರೀಲಿಸಬೇಕಾಗಿದೆ ಅದು ಯಾವುದೆಂದರೆ ,—

ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ ನನಾಶ ।

(ಋ. ಸಂ ೧೦-೧೭-೧)

ಯಮನ ಮಾತೆಯೂ ವಿವಸ್ವಂತನ ಪತ್ನಿಯೂ (ಆದ ಸರಣ್ಯೂವು) ಅದೃಶ್ಯಳಾದಳು ಎಂಬುದಕ್ಕೆ ನಿರುಕ್ತಕಾರರು ಹೇಳಿರುವ ತಾತ್ಪರ್ಯವು ಗಮನಾರ್ಹವಾದುದು.

ರಾತ್ರಿರಾದಿತ್ಯಸ್ಯಾದಿತ್ಯೋದಯೇಽಂತರ್ಧೀಯತೇ ।

(ನಿ. ೧೨-೧೧)

ಆದಿತ್ಯನ ಉದಯವಾದೊಡನೆಯೇ ರಾತ್ರಿಯು ಅಂತರ್ಧಾನವಾಗುತ್ತದೆಯೆಂದು ತಾತ್ಪರ್ಯವನ್ನು ಹೇಳಿದ್ದಾರೆ. ಈ ಅಂಶವನ್ನೇ ದುರ್ಗಾಚಾರ್ಯರು ಇನ್ನೂ ಮುಂದಕ್ಕೆ ವಿವರಿಸುತ್ತ.

ಯಮಸ್ಯ ಮಧ್ಯಮಸ್ಯ ಮಾತಾ ದೇವಧರ್ಮೇಣ । ಅಥವಾ ದ್ಯುಸ್ಥಾನಸ್ಯ ಯೈವ ಚಾಯಾ ಸಾ ಮಾತೇತಿ । ರಾತ್ರಿರಾದಿತ್ಯಸ್ಯ .... ಉಷಾ ಜಾಯಾ ಸಾ ಆದಿತ್ಯಸ್ಯೋದಯೇ ಅಂತರ್ಧೀಯತೇ ॥

(ದುರ್ಗಾಚಾರ್ಯವೃತ್ತಿ ೧೨-೧೧)

ದ್ಯುಲೋಕಾಧಿಪತಿಯಾದ ಆದಿತ್ಯನ ಪತ್ನಿಯೇ ಇಲ್ಲಿ ವಿವಕ್ಷಿತಾರ್ಥ. ಈ ಆದಿತ್ಯಪತ್ನಿಯು ಉಷಾ ಸಂಜ್ಞಾಳು, ಆದಿತ್ಯನ ಉದಯವಾದೊಡನೆಯೇ ಉಷಾದೇವಿಯು ಅದೃಶ್ಯಳಾಗುತ್ತಾಳೆ ಎಂದು ತಾತ್ಪರ್ಯವೆಂದು ತಿಳಿಸಿದ್ದಾರೆ. ಅದಿತ್ಯರಲ್ಲೊಬ್ಬನು ವಿವಸ್ವಂತನೆಂದು ಪ್ರಸಿದ್ಧನಾಗಿದ್ದಾನೆಂಬ ವಿಷಯವನ್ನು ಹಿಂದೆ ತಿಳಿಸಿದೆ. ಈ ಆದಿತ್ಯನ ಆವಿರ್ಭವವಾದೊಡನೆಯೇ ಚಲಿಸುವುದರಿಂದಲೇ ಉಷಸ್ಸಿಗೂ ಸರಣ್ಯೂ ಎಂಬ ನಾಮವಿರಬಹುದು. ಏತಕ್ಕೆಂದರೆ, ನಿರುಕ್ತಕಾರರು ಈ ಪದದ ನಿರ್ವಚನವನ್ನು ತೋರಿಸುತ್ತ.

ಸರಣ್ಯೂಃ ಸರಣಾತ್ ।

(ನಿ. ೧೨-೯)

ಚಲಿಸುವ ಸ್ವಭಾವವಿರುವುದರಿಂದ ಈ ಹೆಸರೆಂದು ತಿಳಿಸಿದ್ದಾರೆ; ಈ ನಿರ್ವಚನವನ್ನೂ, ಮೇಲಿನ ದುರ್ಗಾಚಾರ್ಯರ ವಿವರಣೆಯನ್ನೂ ಆಧಾರವಾಗಿ ಇಟ್ಟುಕೊಂಡರೆ ಆಗ ತ್ವಷ್ಟೃವು ಈ ಉಷೋ ದೇವಿಯನ್ನು ಉತ್ತಮವಾದ ವರನಿಗೆ ವಿವಾಹಾರ್ಥವಾಗಿ ಕೊಡಲು ಇಚ್ಛಿಸಿದನೆಂದು ತಾತ್ಪರ್ಯವಾಗುತ್ತದೆ. ಈ ರೀತಿ ತಾತ್ಪರ್ಯವನ್ನು ಹೇಳುವುದರಲ್ಲಿ ಯಾವ ಅನೌಚಿತ್ಯವೂ ಕಾಣುವುದಿಲ್ಲ. ಈ ಅಂಶವನ್ನು ತಿಳಿಸುವ ಸನ್ನಿವೇಶಗಳು ವೈದಿಕವಾಕ್ಯಗಳಲ್ಲಿ ಅನೇಕ ಕಡೆ ಪ್ರಸಿದ್ಧವಾಗಿದೆ. ಉದಾಹರಣೆಗೆ.—

ಪ್ರಜಾಪತಿರ್ವೈ ಸೋಮಾಯ ರಾಜ್ಞೇ ದುಹಿತರಂ ಪ್ರಾಯಚ್ಛತ್ಸೂರ್ಯಾಂ ।

(ಐ.ಬ್ರಾ ೪.೭)

ಪ್ರಜಾಪತಿಯು ತನ್ನ ಪುತ್ರಿಯಾದ ಸೂರ್ಯೆಯನ್ನು ಸೋಮರಾಜನಿಗೆ ವಿವಾಹಾರ್ಥವಾಗಿ ಕೊಟ್ಟನು ಎಂದಿರುತ್ತದೆ. ಆದರೆ, ಈ ಪುತ್ರಿಯು ಯಾರೆಂಬ ವಿಷಯದಲ್ಲಿ ಸಂಶಯವಿರುತ್ತದೆ. ಇಲ್ಲಿ ಉದಾಹೃತವಾಗಿರುವ ವಾಕ್ಯದಲ್ಲಿ ಸೂರ್ಯಾ ಎಂದಿದ್ದರೂ ಸಹ, ಇನ್ನು ಕೆಲವೆಡೆಗಳಲ್ಲಿ ಅರ್ಥವ್ಯತ್ಯಾಸಗಳೂ ಇರುತ್ತವೆ. ಉದಾಹರಣೆಗೆ.—

ಪ್ರಜಾಪತಿರ್ವೈ ಸ್ವಾಂ ದುಹಿತರಮುಭ್ಯಧ್ಯಾಯದ್ದಿವಮಿತ್ಯನ್ಯ ಆಹುರುಷಸಮಿತ್ಯನ್ಯೇ ತಾಮ್ಯ-
ಶ್ಯೋ ಭೂತ್ವಾ ರೋಹಿತಂ ಭೂತಾಂ ।

(ಐ ಬ್ರಾ ೩-೩೩)

ಪ್ರಜಾಪತಿಯು ತನ್ನ ಪುತ್ರಿಯನ್ನು ತಾನೇ ಮೋಹಿಸಿದನು ಅವಳು ದ್ಯುಲೋಕಾಧಿದೇವತೆಯೆಂದು ಕೆಲವರೂ, ಉಷಸ್ಸೆಂದು ಕೆಲವರೂ ಹೇಳುತ್ತಾರೆ ಮೃಗೀರೂಪಳಾದ ಆವಳನ್ನು ಪ್ರಜಾಪತಿಯು ಮೃಗರೂಪನಾಗಿ ಹಿಂಬಾಲಿಸಿದನು ಎಂದಿರುತ್ತದೆ. ಇದನ್ನೇ ಋಕ್ಸಂಹಿತೆಯಲ್ಲಿಯೂ ಸಹ ತಿಳಿಸುತ್ತ.

ಪಿತಾ ಯತ್ತ್ವಾಂ ದುಹಿತರಮಧಿಷ್ಕನ್ ಕೃತ್ಯಾ ರೇತಃ ಸಂಜಗ್ಮಾನೋ ನಿ ಷಿಂಚತ್ ।
ಸ್ವಾಧ್ಯೋ೭ಜನಯನ್ ಬ್ರಹ್ಮ ದೇವಾ ವಾಸ್ತೋಷ್ಪತಿಂ ವ್ರತಪಾಂ ನಿರತಕ್ಷನ್ ॥

(ಋ. ಸಂ. ೧೦.೬೧-೭)

ಪ್ರಜಾಪತಿಯು ತನ್ನ ದುಹಿತೃವಿನೊಡನೆ ಸಂಭೋಗಿಸಿದಾಗ ದೇವತೆಗಳು ಬ್ರಹ್ಮನನ್ನು ನಿರ್ಮಿಸಿದರು, ಯಜ್ಞಪಾಲಕನನ್ನೂ ನಿರ್ಮಿಸಿದರು ಎಂದಿರುವಾಗಲೂ ಸಹ ಈ ದುಹಿತೃವಾರು ಎಂದರೆ ಉಷಸ್ಸು ಅಥವಾ ದ್ಯುಲೋಕಾಧಿದೇವತೆ ಎಂದರ್ಥಮಾಡಿದ್ದಾರೆ. ಇಲ್ಲಿ ಉದಾಹೃತವಾಗಿರುವ ಸನ್ನಿವೇಶಗಳಲ್ಲಿ ಪ್ರಕೃತವಾದ ಉಷಸ್ಸೆಂದು ನಿರ್ದೇಶಿಸಿದೆಯೋ ಅದೇ ವ್ಯಕ್ತಿಯನ್ನು ಪ್ರಕೃತವಾದ ಸೂಕ್ತದಲ್ಲಿ (೧೦-೧೭) ಸರಣ್ಯೂ ಎಂದು ನಿರ್ದೇಶಿಸಿರಬಹುದು ಎಂಬುದಕ್ಕೆ ನಿರುಕ್ತಾದಿಗಳ ಆಧಾರವನ್ನೂ ತೋರಿಸಿದೆ. ಆದರೆ, ತ್ವಷ್ಟೃವು (ಪ್ರಜಾಪತಿಯು) ಬೇರೊಬ್ಬ ಪುರುಷನಿಗೆ ವಿವಾಹಾರ್ಥವಾಗಿ ಕೊಟ್ಟನು ಎಂಬುದೊಂದೇ ವಿಶೇಷ.

ಒಟ್ಟನಲ್ಲಿ, ಪ್ರಜಾಸೃಷ್ಟಿಗೆ ಪೂರ್ವಭಾವಿಯಾದ ಸ್ತ್ರೀಪುಂಶಕ್ತಿಗಳ ಸಂಯೋಗವನ್ನು ತಿಳಿಸುವ ಸನ್ನಿವೇಶಗಳಲ್ಲೆಲ್ಲ ಇಂತಹ ವರ್ಣನೆಗಳಿರುವುದು ಶ್ರುತಿಪ್ರಸಿದ್ಧವಾಗಿದೆ., ಅಶ್ವೆ—ಅಶ್ವೀ, ಮೃಗ—ಮೃಗೀ ಎಂಬ

ರೂಪಾಂತರಗಳೂ ಕೂಡ ಸಾಂಪ್ರದಾಯಿಕವಾದ ಸನ್ನಿವೇಶಗಳಲ್ಲೇ, ವರ್ಣಿತವಾಗಿವೆ. ಸೃಷ್ಟಿ ಸಂಕಲ್ಪವಾದಾಗ ನಡೆಯುವ ಪ್ರಯತ್ನಗಳಲ್ಲಿ ಇಂತಹ ರೂಪಾಂತರಗಳು ಸಹಜವಾಗಿವೆ. ಹೇಗೆಂದರೆ:

ಸ ವೈ ನೈವ ರೇನೇ ತಸ್ಮಾದೇಕಾಕೀ ನ ರಮತೇ ಸ ದ್ವಿತೀಯಮೈಚ್ಛತ್। ಸ ಹೈತಾವಾನಾಸ ಯಥಾ ಸ್ತ್ರೀಪುಮಾಂಸೌ ಸಂಪರಿಷ್ವಕ್ತೌ ಸ ಇಮಮೇವಾತ್ಮಾನಂ ದ್ವೇಧಾಪಾತಯತ್ತತಃ ಪತಿಶ್ಚ ಪತ್ನೀ ಚಾಭವತಾಂ ತಸ್ಮಾದಿದಮರ್ಧಬೃಗಲಮಿವ ಸ್ವ ಇತಿ ಹ ಸ್ಮಾಹ ಯಾಜ್ಞವಲ್ಕ್ಯಸ್ತಸ್ಮಾದಯಮಾಕಾಶಃ ಸ್ತ್ರಿಯಾ ಪೂರ್ಯತ ಏವ ತಾಂ ಸಮಭವತ್ತತೋ ಮನುಷ್ಯಾ ಅಜಾಯಂತ॥

(ಬೃ. ಉ- ೧-೪-೩)

ಸೃಷ್ಟಿಗೆ ಪೂರ್ವದಲ್ಲಿ ಬೇರೊಂದು ಜೊತೆಗಾರನಿಲ್ಲದ ಒಂದೇ ತತ್ತ್ವವು ಯಾವ ವಿಧವಾದ ಆನಂದವನ್ನೂ ಹೊಂದಲಾಗಲಿಲ್ಲ. ಆದುದರಿಂದ ಎರಡನೆಯ ತತ್ತ್ವವನ್ನು ಅದು ಅಪೇಕ್ಷಿಸಿತು. ಸ್ತ್ರೀ ಮತ್ತು ಪುಮಾನ್ ಇಬ್ಬರೂ ಸೇರಿ ಆಲಿಂಗನ ಕಾಲದಲ್ಲಿರುವ ಪ್ರಮಾಣದಷ್ಟು ಅದು ಬೆಳೆಯಿತು. ನಂತರ ಅದು ಎರಡು ಭಾಗವಾಗಿ ವಿಭಕ್ತವಾಯಿತು. ಆಗ ಅದು ಪತಿಪತ್ನೀರೂಪದಿಂದ ಕರೆಯಲ್ಪಟ್ಟಿತು. ಆದುದರಿಂದ ಪ್ರತಿವ್ಯಕ್ತಿಯೂ ಸಹ (ದಾಂಪತ್ಯಸಂಬಂಧವಿಲ್ಲದಿದ್ದರೆ) ಅರ್ಧವ್ಯಕ್ತಿಯೆಂದು ಮಾತ್ರ ಕರೆಯಲ್ಪಡುತ್ತದೆ. ಆಕಾಶವು ಸ್ತ್ರೀತತ್ತ್ವದಿಂದ ಕೂಡಿದ್ದು ಅದರೊಂದಿಗೆ ಪುರುಷತತ್ತ್ವವು ಸಂಯೋಗವನ್ನು ಹೊಂದಿದುದರಿಂದ ವಿಶ್ವದಲ್ಲಿ ಮಾನವನ ಸಂತತಿಯು ಹುಟ್ಟಿ ಬೆಳೆಯಿತು.

ಸೋ ಹೇಯಮೀಕ್ಷಾಂಚಕ್ರೇ। ಕಥಂ ನು ಮಾತ್ಮನ ಏವ ಜನಯಿತ್ವಾ ಸಂಭವತಿ ಹಂತ ತಿರೋಽಸಾನೀತಿ ಸಾ ಗೌರಭವತ್ ವೃಷಭ ಇತರಸ್ತಾಂ ಸಮೇವಾಭವತ್ತತೋ ಗಾವೋಽಜಾಯಂತ ವಡವೇತರಾಭವದಶ್ವವೃಷ ಇತರೋ ಗರ್ದಭೀತರಾ ಗರ್ದಭ ಇತರ ಸಾಂ ಸಮೇವಾಭವತ್ತತ ಏಕಶಫಮಜಾಯತಾಜೇತರಾಭವದ್ಬಸ್ತ ಇತರೋಽವಿರಿತರಾ ಮೇಷ ಇತರಸ್ತಾಂ ಸಮೇವಾಭವತ್ತತೋಽಜಾವಯೋಽಜಾಯಂತೈವಮೇವ ಯದಿದಂ ಕಿಂಚ ಮಿಥುನಮಾ ಪಿಪೀಲಿಕಾಭ್ಯಸ್ತತ್ಸರ್ವಮಸೃಜತ॥

(ಬೃ. ಉ. ೧-೪-೪)

ಆಗ ಆ ಸ್ತ್ರೀವ್ಯಕ್ತಿಯು ಈ ಆದಿತತ್ತ್ವದಿಂದಲೇ ನಾನು ಸೃಷ್ಟಳಾಗಿದ್ದೇನೆ, ಇದಕ್ಕೆ ಪುತ್ರೀಪ್ರಾಯವಾಯಿತು. ಹೇಗೆ ತಾನೇ ಇದು ತನಗೆ ಮಗಳಾದ ನನ್ನಲ್ಲಿ ಸಂಭೋಗವನ್ನು ಹೊಂದುತ್ತದೆ ಎಂದು ಅದಕ್ಕೆ ತಿಳಿಯದಂತೆ ಅವಿತು ಕೊಂಡಿತು. ಧೇನುರೂಪದಲ್ಲಿ ಪರಿವರ್ತಿತವಾಯಿತು. ಆಗ ಆ ಆದಿತತ್ತ್ವವು ವೃಷಭರೂಪವನ್ನು ಹೊಂದಿ ಅದರೊಂದಿಗೆ ಸಂಭೋಗಿಸಿತು. ತತ್ಫಲವಾಗಿ ಪಶುಗಳ ಉತ್ಪನ್ನವಾಯಿತು. ಅದು ಅಶ್ವಸ್ತ್ರೀರೂಪವನ್ನು ಹೊಂದಿತು. ಆದಿತತ್ತ್ವವು ಪುರುಷಾಶ್ವವಾಯಿತು. ಅದರ ಫಲವಾಗಿ ಗೊರಸುಗಳುಳ್ಳ ಪ್ರಾಣಿಗಳ ಉತ್ಪತ್ತಿಯುಂಟಾಯಿತು. ಅದು ಹೆಣ್ಣು ಆಡಾಯಿತು. ಆದಿತತ್ತ್ವವು ಗಂಡಾಡಾಯಿತು. ಹಾಗೆಯೇ ಹೆಣ್ಣು ಕುರಿ ಮತ್ತು ಗಂಡು ಕುರಿಗಳ ರೂಪವನ್ನೂ ಹೊಂದಿದರು. ಅದರ ಫಲವಾಗಿ ಆಡು, ಮೇಕೆ ಇವುಗಳ ಸಂತತಿಯು ಬೆಳೆಯಿತು. ಈ ರೀತಿಯಾಗಿ ದ್ವನ್ದ್ವಕ್ಕೆ ಯೋಗ್ಯವಾದ ಸಕಲ ವಿಧವಾದ ಪ್ರಾಣಿಜಾತಗಳನ್ನೂ ಉತ್ಪನ್ನಮಾಡಿದನು ಎಂದಿರುತ್ತದೆ

ಈ ರೀತಿ, ಸೃಷ್ಟಿಗೆ ಪೂರ್ವಭಾವಿಯಾದ ಈ ಸ್ತ್ರೀಪುರುಷರ ಸಂಬಂಧದಲ್ಲಿ ಪಿತೃದುಹಿತೃ ಸಂಬಂಧವಿರುವುದರಿಂದ ಈ ಸಂಬಂಧವು ನೀತಿಬಾಹಿರವೆಂದು ಒಂದಲ್ಲ ಒಂದು ವಿಧದಲ್ಲಿ ಈ ನ್ಯೂನತೆಯನ್ನು ತೋರಿಸಲಾಗಿರುತ್ತದೆ.

ಪ್ರಜಾಪತಿಯು ತನ್ನ ಪುತ್ರಿಯಾದ ಉಷಸ್ಸನ್ನು ಮೋಹಿಸಿದಾಗ ದೇವತೆಗಳು ಅಸಮಾಧಾನಪಟ್ಟರೆಂದು ಐತರೇಯ ಬ್ರಾಹ್ಮಣದಲ್ಲಿ ತಿಳಿಸಿದೆ. ಅದಿತತ್ತ್ವವು ತನ್ನಿಂದಲೇ ಸೃಷ್ಟವಾದ ಸ್ತ್ರೀವ್ಯಕ್ತಿಯನ್ನು ಮೋಹಿಸಬಾರದೆಂದು ಬೃಹದಾರಣ್ಯಕದಲ್ಲಿ ತಿಳಿಸಿ ಅದುದರಿಂದಲೇ ಅವನಿಂದ ಅದು ಅಂತರ್ಧಾನವನ್ನು ಹೊಂದಿತು. (ಮರೆಯಾಯಿತು). ಹಾಗೆಯೇ ಪ್ರಕೃತದಲ್ಲೆಯೂ ಸಹ (ಋ. ಸಂ. ೧೦.೧೭-೧, ೨) ಸರಣ್ಯೂವು ವಿವಸ್ವಂತನಲ್ಲಿ ಸಂಬಂಧವನ್ನು ಬೆಳೆಸಲು ಪೂರ್ಣವಾಗಿ ಇಚ್ಛಿಸದೆ ತನ್ನ ಅಸಂತೃಪ್ತಿಯನ್ನು ತೋರಿಸುತ್ತಾಳೆ ಎಂಬ ಸೂಚನೆಯಿರುತ್ತದೆ. ಒಟ್ಟಿನಲ್ಲಿ ಈ ಸಂದರ್ಭದ ಸಾರಾಂಶವನ್ನು ಈ ರೀತಿ ತಿಳಿಸಬಹುದು.

ತ್ವಷ್ಟೃವು ತನ್ನ ದುಹಿತೆಯಾದ ಸರಣ್ಯೂವನ್ನು ವಿವಾಹಾರ್ಥವಾಗಿ ಯಾರಿಗಾದರೂ ಅರ್ಪಿಸಬೇಕೆಂದಿರುವಾಗ ಸಕಲ ಲೋಕವೂ ಅಲ್ಲಿ ಬಂದು ಸೇರಿತು. ಅಷ್ಟರಲ್ಲಿಲ್ಲ ತ್ವಷ್ಟೃವಿಗೆ ವಿವಸ್ವಂತನ ಮೇಲೆ ಪೂರ್ಣವಾದ ಅಭಿಮಾನವು ಹುಟ್ಟಿತು. ಆದರೆ ಅವನು ಮರ್ತ್ಯನಾದ ಮಾನವನು. ಆದುದರಿಂದ ಸರಣ್ಯೂವು ವಿವಾಹವಾದೊಡನೆಯೇ, ಯಮ ಮತ್ತು ಯಮಿ ಎಂಬ ಜಗತ್ಪ್ರಸಿದ್ಧರಾದ ಅವಳಿಮಕ್ಕಳನ್ನು ಹಡೆದು ಅವರನ್ನು ವಿವಸ್ವಂತನಲ್ಲಿ ಬಿಟ್ಟು ಮರೆಯಾದಳು. ನಂತರ ಅವಳು ಅಶ್ವಸ್ತ್ರೀಯಾದಳು. ವಿವಸ್ವಂತನೂ ಅಶ್ವವಾದನು. ತತ್ಫಲವಾಗಿ ಅಶ್ವಿನೀ ದೇವತೆಗಳ ಜನನವಾಯಿತು. ಸರಣ್ಯೂವಿಗೆ ಪ್ರತಿನಿಧಿಯಾಗಿದ್ದ ಸವರ್ಣೆಯಲ್ಲಿ ಮನುವು ಉತ್ಪನ್ನನಾದನು. ವಿವಸ್ವತ್ಪುತ್ರರಾದ ಯಮನೂ ಮತ್ತು ಮನುವೂ ಸಹ ಮಾನವನ ಸಂತತಿಗೆ ಮೂಲಪುರಷರಾದರು.

ಈ ಸೂಕ್ತದ ವಿಷಯದಲ್ಲಿ ಶೌನಕಮಹರ್ಷಿಯು ಬೃಹದ್ದೇವತಾ ಎಂಬ ಗ್ರಂಥದಲ್ಲಿ ಈ ರೀತಿ ಹೇಳಿದಾರೆ—

ಅಭವನ್ಮಿಥುನಂ ತ್ವಷ್ಟುಃ ಸರಣ್ಯೂಸ್ತ್ರಿಶಿರಾಃ ಸಹ ।
ಸ ವೈ ಸರಣ್ಯೂಂ ಪ್ರಾಯಚ್ಛತ್ತ್ವಷ್ಟಾಯಮೇವ ವಿವಸ್ವತೇ ॥ ೧೬೨ ॥
ತತಃ ಸರಣ್ಯಾಂ ಜಜ್ಞಾತೇ ಯಮುಯಮ್ಯೌ ವಿವಸ್ವತಃ ।
ತೌ ಚಾಪ್ಯುಭೌ ಯಮಾವೇವ ಜ್ಯಾಯಾಂಸ್ತಾಭ್ಯಾಂ ತು ವೈ ಯಮಃ ॥ ೧೬೩ ॥

(ಬೃ. ದೇ. ಅಧ್ಯಾಯ. ೬-೧೬೨, ೧೬೩)

ತ್ವಷ್ಟೃ ಪ್ರಜಾಪತಿಗೆ ಈರ್ವರು ಅವಳೀಮಕ್ಕಳಿದ್ದರು. ಅವರಲ್ಲಿ ಸರಣ್ಯೂ ಎಂಬ ಪುತ್ರಿಯೂ, ತ್ರಿಶಿರಾಃ ಎಂಬ ಪುತ್ರನೂ ಇದ್ದರು. ಸರಣ್ಯೂ ಎಂಬ ತನ್ನ ಪುತ್ರಿಯನ್ನು ಅದಿತಿಯಪುತ್ರನಾದ ವಿವಸ್ವಂತನಿಗೆ ಮದುವೆಮಾಡಿಕೊಟ್ಟನು. ಆ ಸರಣ್ಯೂದೇವಿಯಲ್ಲಿ ಇಬ್ಬರು ಅವಳೀಮಕ್ಕಳು ಹುಟ್ಟಿದರು. ಅವರಲ್ಲಿ ಯಮ ಎಂಬುವನು ಜ್ಯೇಷ್ಠನು, ಯಮಿ ಎಂಬುವಳು ಕಿರಿಯವಳು.

ಸೃಷ್ಟ್ವಾ ಭರ್ತುಃ ಪರೋಕ್ಷಂ ತು ಸರಣ್ಯೂಃ ಸದೃಶೀಂ ಸ್ತ್ರಿಯಂ ।
ನಿಕ್ಷಿಪ್ಯ ಮಿಥುನಂ ತಸ್ಯಾಮಶ್ವಾ ಭೂತ್ವಾಪಜಕ್ರಮೇ ॥ ೧ ॥
ಅವಿಜ್ಞಾನಾದ್ವಿವಸ್ವಾಂಸ್ತು ತಸ್ಯಾಮಜನಯನ್ಸುತಂ ।
ರಾಜರ್ಷಿರಭವತ್ಪೋಽಪಿ ವಿವಸ್ವಾನಿವ ತೇಜಸಾ ॥ ೨ ॥

ಒಂದು ದಿವಸ ತ್ವಷ್ಟೃವಿನ ಪುತ್ರಿಯಾದ ಸರಣ್ಯೂದೇವಿಯು ತನ್ನ ಪತಿಯಾದ ವಿವಸ್ವಂತನಿಗೆ ತಿಳಿಯದಂತೆ ತನ್ನಂತೆ ರೂಪಲಾವಣ್ಯಗಳಿರುವ ಬೇರೊಬ್ಬ ಸ್ತ್ರೀಯನ್ನು ಸೃಷ್ಟಿಸಿ ಅವಳನ್ನೂ ತನ್ನ ಅವಳೀಮಕ್ಕಳಾದ ಯಮಯಮಿಯರನ್ನೂ

ತನ್ನ ಪರಿಯ ಮನೆಯಲ್ಲಿಯೇ ಇರಿಸಿ ತಾನು ಸ್ವೇಚ್ಛಾವಿಹಾರಮಾಡುವ ಉದ್ದಿಶ್ಯದಿಂದ ಅಶ್ವರೂಪವನ್ನು ಧರಿಸಿ ಹೊರಟುಹೋದನು. ಎಲ್ಲಿಯೋ ಹೋಗಿದ್ದು ಮನೆಗೆ ಬಂದ ವಿವಸ್ವಂತನು ತನ್ನ ಮನೆಯಲ್ಲಿ ತನ್ನ ಮಕ್ಕಳಾದ ಯಮ ಯಮಿಯರೊಂದಿಗಿದ್ದ (ಸರಣ್ಯೂ ಸೃಷ್ಟಿಸಿದ) ಸ್ತ್ರೀಯನ್ನು ತನ್ನ ಪತ್ನಿಯೆಂದೇ ತಿಳಿದು ಅವಳೊಡನೆ ರಮಿಸಿದನು. ಅದರಿಂದ ಆ ಸ್ತ್ರೀಯಲ್ಲಿ ಮನುವೆಂಬ ಓರ್ವ ಪುತ್ರನು ಹುಟ್ಟಿದನು ಅವನು ತಂದೆಯಾದ ವಿವಸ್ವಂತನಂತೆ ದಿವ್ಯ ತೇಜಸ್ಸಿನಿಂದ ಬೆಳಗುತ್ತಾ ಪ್ರವರ್ಧಮಾನನಾಗಿ ರಾಜರ್ಷಿಯೆಂದು ಪ್ರಸಿದ್ಧನಾದನು

ಸ ವಿಜ್ಞಾಯ ತ್ವಪಕ್ರಾಂತಾಂ ಸರಣ್ಯೂಮಶ್ವರೂಪಿಣೀಂ ।
ತ್ವಾಷ್ಟ್ರೀಂ ಪ್ರತಿ ಜಗಮಾಶು ವಾಜೀ ಭೂತ್ವಾ ಸಲಕ್ಷಣಃ ॥ ೩ ॥
ಸರಣ್ಯೂಶ್ಚ ವಿವಸ್ವಂತಂ ವಿದಿತ್ವಾ ಹಯರೂಪಿಣಂ ।
ಮೈಥುನಾಯೋಪಚಕ್ರಾಮ ತಾಂ ಚ ತತ್ರಾರುರೋಹ ಸಃ ॥ ೪ ॥

ಬಳಿಕ ತನ್ನ ಮನೆಯಲ್ಲಿದ್ದ ಮತ್ತು ತಾನು ರಮಿಸಿದ ಸ್ತ್ರೀಯು ತನ್ನ ಪತ್ನಿಯಲ್ಲವೆಂದೂ, ತನ್ನ ಪತ್ನಿಯಾದ ತ್ವಷ್ಟೃ ಪುತ್ರಿಯು ಅಶ್ವರೂಪಿಣಿಯಾಗಿ ಎಲ್ಲಿಗೋ ಹೋದಳೆಂದೂ ವಿವಸ್ವಂತನಿಗೆ ತಿಳಿಯಿತು. ಆದ್ದರಿಂದ ವಿವಸ್ವಂತನು ತಾನೂ ಒಂದು ಉತ್ತಮವಾದ ಅಶ್ವರೂಪವನ್ನು ಧರಿಸಿ ಸರಣ್ಯೂವನ್ನು ಪುಡುಕುತ್ತಾ ಅವಳ ಬಳಿಗೆ ಹೋದನು. ಸರಣ್ಯೂವು ಅಶ್ವರೂಪದಿಂದಿದ್ದ ವಿವಸ್ವಂತನನ್ನು ತನ್ನ ಪತಿಯೆಂದೇ ತಿಳಿದು ಅವನೊಡನೆ ಸಂಭೋಗಿಸಲು ಉದ್ಯುಕ್ತಳಾದಳು. ವಿವಸ್ವಂತನೂ ಅವಳೊಡನೆ ಕ್ರೀಡಿಸಿದನು.

ತತಸ್ತಯೋಸ್ತು ವೇಗೇನ ಶುಕ್ರಂ ತದಪತದ್ಭುವಿ ।
ಉಪಾಜಿಘ್ರಚ್ಚ ಸಾ ತ್ವಶ್ವಾ ತಚ್ಛುಕ್ರಂ ಗರ್ಭಕಾಮ್ಯಯಾ ॥ ೫ ॥
ಅಘ್ರಾತಮಾತ್ರಾಚ್ಛುಕ್ರಾತ್ತು ಕುಮಾರೌ ಸಂಬಭೂವತುಃ ।
ನಾಸತ್ಯಶ್ಚೈವ ದಸ್ರಶ್ಚ ಯೌ ಸ್ತುತಾವಶ್ವಿನಾವಿತಿ ॥ ೬ ॥

ಅಶ್ವರೂಪಗಳನ್ನು ಧರಿಸಿದ್ದ ಸರಣ್ಯೂ ಮತ್ತು ವಿವಸ್ವಂತರು ಕ್ರೀಡಿಸುತ್ತಿರುವಾಗ ವಿವಸ್ವಂತನ ವೀರ್ಯವು ಸ್ಖಲನವಾಗಿ ಭೂಮಿಯಮೇಲೆ ಬಿದ್ದಿತು. ಅಶ್ವರೂಪಿಣಿಯೂದ ಸರಣ್ಯೂವು ತನಗೆ ಗರ್ಭೋತ್ಪತ್ತಿಯಾಗಬೇಕೆಂಬ ಇಚ್ಛೆಯಿಂದ ಭೂಮಿಯಮೇಲೆ ಬಿದ್ದಿದ್ದ ಆ ವೀರ್ಯವನ್ನು ಮೂಸಿನೋಡಿದಳು. ಮೂಸಿನೋಡಿದ ಮಾತ್ರದಿಂದಲೇ ಅವಳಲ್ಲಿ ಈರ್ವರು ಅವಳೀಮಕ್ಕಳು ಜನಿಸಿದರು. ಅವರಲ್ಲಿ ಒಬ್ಬನು ನಾಸತ್ಯನೆಂದೂ ಇನ್ನೊಬ್ಬನು ದಸ್ರನೆಂದೂ ಪ್ರಸಿದ್ಧರಾಗಿ ಅಶ್ವಿನೀದೇವತೆಗಳೆಂದು ಜನರಿಂದ ಸ್ತುತಿಸಲ್ಪಡುತ್ತಿರುವರು.

ಇತಿಹಾಸಮಿಮಂ ಯಾಸ್ಕಃ ಸರಣ್ಯೂದೇವತೇ ದ್ವ್ಯಚೇ ।
ವಿವಸ್ವತಶ್ಚ ತ್ವಷ್ಟುಶ್ಚ ತ್ವಷ್ಟೇತಿ ಸಹ ಮನ್ಯತೇ ॥ ೭ ॥

ಮೇಲೆ ಹೇಳಿದ ಈ ಇತಿಹಾಸವನ್ನು ಯಾಸ್ಕರು ತಮ್ಮ ನಿರುಕ್ತದಲ್ಲಿ (ನಿ ೧೨-೧೧) ವಿವರಿಸಿರುವರು. ಅಲ್ಲಿ ತ್ವಷ್ಟಾ ದುಹಿತ್ರೇ ಎಂಬ ಸೂಕ್ತದ (ಋ. ಸಂ. ೧೦-೧೭) ಮೊದಲಿನ ಎರಡು ಋಕ್ಕುಗಳಲ್ಲಿ ವಿವಸ್ವಂತನಿಗೂ, ತ್ವಷ್ಟೃಪುತ್ರಿಯಾದ ಸರಣ್ಯೂದೇವಿಗೂ ಸಂಬಂಧಪಟ್ಟ ವಿಷಯವರ್ಣನೆ ಇದೆ.

ಪೂಷೇತಿ ಹಾದೌ ಸೌಷ್ಣಾ ದ್ವಾವಾಗ್ನೇಯಾವುತ್ತರೌ ತು ಯೌ ।
ಸ್ಯಾತ್ತೃತೀಯೋಽಪಿ ವಾ ಸೌಷ್ಣಂ ತಿಸ್ರಶ್ಚಾನ್ಯಾಃ ಪರಾಸ್ತು ಯಾಃ ॥ ೮ ॥

ಮೇಲೆ ಹೇಳಿದ ತ್ವಷ್ಟಾ ದುಹಿತ್ರೇ ಎಂಬ ಸೂಕ್ತದ ಮೂರನೆಯ ಋಕ್ಕಿನ ಪೂರ್ವಾರ್ಧದ ಎರಡು ಪಾದಗಳಿಗೆ ಪೂಷನು ದೇವತೆಯು; ಉತ್ತರಾರ್ಧದ ಎರಡು ಪಾದಗಳಿಗೆ ಅಗ್ನಿಯು ದೇವತೆಯು; ಅಥವಾ ಮೂರನೆಯ ಪಾದಕ್ಕೆ ಪೂಷನೇ ದೇವತೆಯಾಗಬಹುದು ಮತ್ತು ಅಲ್ಲಿಂದ ಮುಂದಿನ ಮೂರು ಋಕ್ಕುಗಳಿಗೂ (೪-೬ ಋಕ್ಕುಗಳು) ಪೂಷನೇ ದೇವತೆಯು

ಅಪಾಂ ಸ್ತುತಿಸ್ತ್ರಯೃಗತ್ರೈಕಾ ತೃಚಾತ್ಸಾರಸ್ವತಾತ್ಪರಾ ।
ಸ್ತುತಃ ಪರೋಕ್ಷಃ ಸೋಮಸ್ತು ದ್ರಪ್ಸ ಇತ್ಯುತ್ತರೇ ತೃಚೇ ॥ ೯ ॥
ಅಬ್ದೇವತಾತೀರ್ವಾದೋ ವಾ ಪಯಸ್ವತ್ಯುತ್ತರಾ ತು ಯಾ ।

(ಬೃ ದೇ. ಅಧ್ಯಾ. ೭-೧ ರಿಂದ ೯)

ಅಲ್ಲಿಂದ ಮುಂದಿನ (೭-೯ ಋಕ್ಕುಗಳು) ಸರಸ್ವತೀದೇವತಾಕವಾದ ಮೂರು ಋಕ್ಕುಗಳಾದನಂತರ ೧೦ ನೆಯ ಋಕ್ಕು ಅಬ್ದೇವತಾಸರವಾದುದು. ಅಲ್ಲಿಂದ ಮುಂದಿನ ಮೂರು ಋಕ್ಕುಗಳಲ್ಲಿ (೧೧-೧೩ ಋಕ್ಕುಗಳಲ್ಲಿ) ಅಬ್ದೇವತೆಯ ಸ್ತುತಿಯಿದ್ದರೂ ಪರೋಕ್ಷವಾಗಿ ಸೋಮದೇವತೆಯ ಸ್ತುತಿ ಇರುವುದು ಹದಿನಾಲ್ಕನೆಯ ಋಕ್ಕಾದ ಪಯಸ್ವತೀಃ ಎಂಬ ಕೊನೆಯ ಋಕ್ಕಿನಲ್ಲಿ ಅಬ್ದೇವತಾತೀರ್ವಾದವು ಉಕ್ತವಾಗಿರುವುದು, ಎಂಬ ವಿವರಣೆ ಇದೆ.

॥ ಸಾಯಣಭಾಷ್ಯಂ ॥

ದ್ವಿತೀಯೇಽನುವಾಕೇ ತ್ರಯೋದಶ ಸೂಕ್ತಾನಿ। ತತ್ರ ತ್ವಷ್ಟಾ ದುಹಿತ್ರ ಇತ್ಯೇತಜ್ಜಗತುರ್ದಶರ್ಚಂ ಪ್ರಥಮಂ ಸೂಕ್ತಂ। ಯಮಪುತ್ರೋ ದೇವಶ್ರವಾ ನಾಮರ್ಷಿಃ। ಆದಿತೋ ದ್ವಾದಶ ತ್ರಿಷ್ಟುಭಃ। ತ್ರಯೋದಶೀಚತುರ್ದಶ್ಯಾವನುಷ್ಟುಭೌ। ಯದ್ವಾ ತ್ರಯೋದಶೀ ಪುರಸ್ತಾದ್ಬೃಹತೀ। ಆದಿತೋ ದ್ವಯೋಃ ಸರಣ್ಯೂರ್ದೇವತಾ। ಪೂಷಾ ತ್ವೇತ ಇತ್ಯಾದ್ಯಾಶ್ಚತಸ್ರಃ ಪೂಷದೇವತ್ಯಾಃ। ಸರಸ್ವತೀಂ ದೇವಯಂತ ಇತ್ಯಾದ್ಯಾಸ್ತಿಸ್ರಃ ಸರಸ್ವತೀದೇವತಾಕಾಃ। ಆಪೋ ಅಸ್ಮಾನಿತ್ಯಾದ್ಯಾಃ ಪಂಚಚೋರ್ಽಬ್ದೇವತಾಕಾಃ। ತತ್ರ ದ್ರಪ್ಸಶ್ಚಸ್ಕಂದೇತ್ಯಾದ್ಯಾಸ್ತಿಸ್ರಃ ಸೋಮದೇವತ್ಯಾ ವಾ। ಅಥ ಚಾನುಕ್ರಾಂತಂ। ತ್ವಷ್ಟಾ ದೇವಶ್ರವಾ ದ್ವೇ ಸರಣ್ಯೂದೇವತೇ ಪೌಷ್ಣ್ಯಶ್ಚತಸ್ರಃ ಸಾರಸ್ವತ್ಯಸ್ತಿಸ್ರಃ ಪಂಚಾಪ್ಯೋ ದ್ರಪ್ಸಸ್ತಿಸ್ರಃ ಸೌಮ್ಯೋ ವಾಂತ್ಯೇ ಅನುಷ್ಟುಭಾವ್ಯಪಾಂತ್ಯಾ ಪುರಸ್ತಾದ್ಬೃಹತೀ ವೇತಿ। ಗತಃ ಸೂಕ್ತವಿನಿಯೋಗಃ॥ ಅತ್ರೇತಿಹಾಸಮಾಚಕ್ಷತೇ। ತ್ವಷ್ಟೃನಾಮಕಸ್ಯ ದೇವಸ್ಯ ಸರಣ್ಯೂಸ್ತ್ರಿಶಿರಾಶ್ಚೇತಿ ಸ್ತ್ರೀಪುಂಸಾತ್ಮಕಮುಪತ್ಯದ್ವಯಮುಭೂತ್। ತತಸ್ತ್ವಷ್ಟಾ ಸರಣ್ಯೂನಾಮಿಕಾಂ ಪುತ್ರೀಂ ವಿವಸ್ವತೇ ಪ್ರಾಯಚ್ಛತ್। ತತಸ್ತಸ್ಯಾಂ ವಿವಿಸ್ವತಃ ಸಕಾಶಾದ್ಯಮಯಮೌ ವಿಜಜ್ಞಾತೇ। ತತಃ ಕದಾಚಿದಾತ್ಮಸದೃಶ್ಯಾ ದೇವಜನಿತಾಯಾಃ ಸ್ತ್ರಿಯಃ ಸಮೀಪೇ ತದಪತ್ಯದ್ವಯಂ ನಿಧಾಯ ಸ್ವಯಮಾಶ್ವಂ ರೂಪಂ ಕೃತ್ವೋತ್ತರಾಸ್ಯುರೂನ್ಪ್ರತಿಜಗಾಮ। ಅಥ ವಿವಸ್ವಾನೇತಾಂ ಸ್ತ್ರಿಯಂ ಸರಣ್ಯೂಮಿತಿ ಮತ್ವಾ ತಾಮುರಂಸೀತ್। ತಸ್ಯಾಂ ಮನುನಾಮ ರಾಜರ್ಷಿರಜಾಯತ। ತತೋ ವಿವಸ್ವಾನೇಷಾ ಸರಣ್ಯೂರ್ನ ಭವತೀತಿ ವಿಜ್ಞಾಯ ಸ್ವಯಮಪ್ಯಶ್ವೋ ಭೂತ್ವಾ ತಾಮಶ್ವರೂಪಿಣೀಂ ಪ್ರಾಯಾಸೀತ್। ತತಃ ಸಂಕ್ರೀಡಮಾನಯೋಸ್ತಯೋಃ ಸ್ವಭೂತಂ ರೇತಃ ಪೃಥಿವ್ಯಾಂ ಪಪಾತ! ಅಥ ಸಾ ಗರ್ಭಕಾಮನಯಾ ತತ್ಪತಿತಂ ರೇತ ಅಜಘ್ರಾ। ತತಸ್ತ್ಯಾಃ ಸಕಾಶಾನ್ನಾಸತ್ಯೌ ದಸ್ರಶ್ಚೇತ್ಯುಭಾವಶ್ವಿನಾವಜಾಯೇತಾಮಿತಿ ॥

ಅನುವಾದವು—ಹತ್ತನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಹದಿಮೂರು ಸೂಕ್ತಗಳಿರುವುವು. ಅವುಗಳಲ್ಲಿ **ತ್ವಷ್ಟಾ ದುಹಿತ್ರೇ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವುವು. ಈ ಸೂಕ್ತಕ್ಕೆ ಯಮನ ಪುತ್ರನಾದ ದೇವಶ್ರವಾಃ ಎಂಬುವನು ಋಷಿಯು. ಆ ಸೂಕ್ತದ ಮೊದಲಿನ ಹನ್ನೆರಡು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. ಹದಿಮೂರು, ಹದಿನಾಲ್ಕನೆಯ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. ಅಥವಾ ಹದಿಮೂರನೆಯ ಋಕ್ಕು ಪುರಸ್ತಾದ್ಬೃಹತೀಛಂದಸ್ಕವು. ಈ ಸೂಕ್ತದ ಮೊದಲಿನ ಎರಡು ಋಕ್ಕುಗಳಿಗೆ ಸರಣ್ಯೂ ಎಂಬ ಸ್ತ್ರೀಯು ದೇವತೆಯು, **ಪೂಷಾ ಶ್ವೇತಃ** ಎಂಬ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳು (೩–೬ ಋಕ್ಕುಗಳ) ಪೂಷದೇವತಾಕವು, **ಸರಸ್ವತೀ ದೇವಯಂತಃ** ಎಂದು ಮೊದಲಾಗುವ ಮುಂದಿನ ಮೂರು ಋಕ್ಕುಗಳು (೭–೯ ಋಕ್ಕುಗಳು) ಸರಸ್ವತೀ ದೇವತಾಕವು; **ಆಪೋ ಅಸ್ಮಾನ್** ಎಂದು ಮೊದಲಾಗುವ ಮುಂದಿನ ಐದು ಋಕ್ಕುಗಳು (೧೦–೧೪ ಋಕ್ಕುಗಳು) ಅಬ್ದೇವತಾಕವು. ಅವುಗಳಲ್ಲಿ **ದ್ರಪ್ಸಶ್ಚಸ್ಕಂದ** ಎಂದು ಮೊದಲಾಗುವ ಮೂರು ಋಕ್ಕುಗಳು (೧೧-೧೩) ಋಕ್ಕುಗಳು ಅಬ್ದೇವತಾಕವು ಅಥವಾ ಸೋಮದೇವತಾಕವು. ಅನುಕ್ರಮಣಿಕೆಯಲ್ಲಿ—**ತ್ವಷ್ಟಾ ದೇವಶ್ರವಾ ದ್ವೇ ಸರಣ್ಯೂದೇವತೇ ಪೌಷ್ಣ್ಯಶ್ಚತಸ್ರಃ ಸಾರಸ್ವತ್ಯಸ್ತಿಸ್ರಃ ಪಂಚಾಪ್ಯೋ ದ್ರಪ್ಸಸ್ತಿಸ್ರಃ ಸೌಮ್ಯೋ ವಾಽತ್ಯೇ ಅನುಷ್ಟುಭಾವುಪಾಂತ್ಯಾ ಪುರಸ್ತಾದ್ಬೃಹತೀ ವಾ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಈ ಸೂಕ್ತದ ವಿಷಯದಲ್ಲಿ ಒಂದು ಇತಿಹಾಸವಿರುವುದು—ತ್ವಷ್ಟೃ ಎಂಬ ಹೆಸರಿನ ದೇವನಿಗೆ ಸರಣ್ಯೂ ಎಂಬ ಪುತ್ರಿಯೂ, ತ್ರಿಶಿರಾಃ ಎಂಬ ಮಗನೂ ಅಂತು ಇಬ್ಬರು ಮಕ್ಕಳಿದ್ದರು. ಹೀಗಿರುವಲ್ಲಿ ತ್ವಷ್ಟೃವು ಸರಣ್ಯೂ ಎಂಬ ತನ್ನ ಮಗಳನ್ನು ವಿವಸ್ವಂತನಿಗೆ ಮದುವೆಮಾಡಿಕೊಟ್ಟನು. ಈ ಸರಣ್ಯೂ ಮತ್ತು ವಿವಸ್ವಾನ್ ಎಂಬ ದಂಪತಿಗಳಿಗೆ ಇಬ್ಬರು ಅವಳೀ ಮಕ್ಕಳು ಎಂದರೆ ಯಮ ಎಂಬ ಪುತ್ರನೂ, ಯಮಿ ಎಂಬ ಪುತ್ರಿಯೂ ಹುಟ್ಟಿದರು. ಹೀಗಿರುವಲ್ಲಿ ಒಂದಾನೊಂದು ದಿವಸ ಸರಣ್ಯೂವು ತನ್ನಂತೆಯೇ ಇರುವ ಓರ್ವ ದೇವತಾಸ್ತ್ರೀಯ ಸಮೀಪದಲ್ಲಿ ಈ ಇಬ್ಬರು ಅವಳೀಮಕ್ಕಳನ್ನು ಇರಿಸಿ ತಾನು ಅಶ್ವರೂಪವನ್ನು ಧರಿಸಿ ಉತ್ತರಕುರು ದೇಶಕ್ಕೆ ಹೊರಟುಹೋದಳು. ಆ ಬಳಿಕ ವಿವಸ್ವಂತನು ಆ ದೇವತಾಸ್ತ್ರೀಯನ್ನೇ ತನ್ನ ಪತ್ನಿಯಾದ ಸರಣ್ಯೂದೇವಿಯೆಂದು ತಿಳಿದು ಅವಳಲ್ಲಿ ರಮಿಸಿದನು. ಆಗ ಆ ಸರಣ್ಯೂವಿನಲ್ಲಿ ಮನು ಎಂಬ ಹೆಸರಿನ ರಾಜರ್ಷಿಯು ಹುಟ್ಟಿದನು. ಅನಂತರ ವಿವಸ್ವಂತನಿಗೆ, ಈ ಸ್ತ್ರೀಯು ತನ್ನ ಪತ್ನಿಯಾದ ಸರಣ್ಯೂ ಅಲ್ಲವೆಂದು ತಿಳಿಯಿತು. ಆಗ ವಿವಸ್ವಂತನು ಅಶ್ವರೂಪವನ್ನು ಧರಿಸಿ ತನ್ನಂತೆಯೇ ಅಶ್ವರೂಪಿಣಿಯಾಗಿದ್ದ ಸರಣ್ಯೂವಿನ ಸಮೀಪಕ್ಕೆ ಹೋದನು. ಆಗ ಅಶ್ವರೂಪಿಗಳಾಗಿದ್ದ ಇವರಿಬ್ಬರೂ ರತಿಕ್ರೀಡೆಯಲ್ಲಿ ಆಸಕ್ತರಾಗಿದ್ದಾಗ ವಿವಸ್ವಂತನ ರೇತಸ್ಸು ಭೂಮಿಯಲ್ಲಿ ಬಿದ್ದಿತು. ಆಗ ಅಶ್ವರೂಪಿಣಿಯಾಗಿದ್ದ ಆ ಸ್ತ್ರೀಯು ತನಗೆ ಮಕ್ಕಳಾಗಬೇಕೆಂಬ ಆಸೆಯಿಂದ ಕೆಳಗೆ ಬಿದ್ದಿದ್ದ ಆ ರೇತಸ್ಸನ್ನು ಮೂಸಿನೋಡಿದಳು. ಅದರಿಂದ ಅವಳಲ್ಲಿ ನಾಸತ್ಯ, ದಸ್ರ ಎಂಬ ಇಬ್ಬರು ಅಶ್ವಿನೀದೇವತೆಗಳು ಉತ್ಪನ್ನರಾದರು ಎಂಬ ಕಥೆಯನ್ನು ಈ ಸಂದರ್ಭದಲ್ಲಿ ಭಾಷ್ಯಕಾರರು ಹೇಳಿದಾರೆ.

ಸೂಕ್ತ—೧೭

ಮಂಡಲ—೧೦ ॥ ಅನುವಾಕ—೨॥ ಸೂಕ್ತ—೧೭ ॥
ಅಷ್ಟಕ—೭ ॥ ಅಧ್ಯಾಯ—೬ ॥ ವರ್ಗ—೨೩, ೨೫, ೨೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥
ಋಷಿಃ—ದೇವಶ್ರವಾ ಯಾಮಾಯನಃ ॥
ದೇವತಾ—೧, ೨. ಸರಣ್ಯೂಃ । ೩-೬ ಪೂಷಾ। ೭-೯. ಸರಸ್ವತೀ । ೧೦-೧೪. ಅಪಃ । ೧೧-೧೩. ಅಪಃ ಸೋಮೋ ವಾ ॥
ಛಂದಃ—೧ ೧೨, ತ್ರಿಷ್ಟುಪ್ । ೧೩. ಅನುಷ್ಟುಪ್ಪುರಸ್ತಾದ್ಬೃಹತೀ ವಾ । ೧೪. ಅನುಷ್ಟುಪ್ ॥

॥ ಸಂಹಿತಾಪಾಠಃ ॥

ತ್ವಷ್ಟಾ ದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ ।
ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ
ನನಾಶ ॥ ೧ ॥

॥ ಪದಪಾಠಃ ॥

ತ್ವಷ್ಟಾ । ದುಹಿತ್ರೇ । ವಹತುಂ । ಕೃಣೋತಿ । ಇತಿ । ಇದಂ । ವಿಶ್ವಂ । ಭುವನಂ । ಸಂ । ಏತಿ ।
ಯಮಸ್ಯ । ಮಾತಾ । ಪರ್ಯುಹ್ಯಮಾನಾ । ಮಹಃ । ಜಾಯಾ । ವಿವಸ್ವತಃ । ನನಾಶ ॥ ೧ ॥

॥ ಸಾಯಣಭಾಷ್ಯಂ ॥

ತ್ವಷ್ಟೈತನ್ನಾಮಕೋ ದೇವೋ ದುಹಿತ್ರೇ । ಷಷ್ಠ್ಯರ್ಥೇ ಚತುರ್ಥೀ । ದುಹಿತುಃ ಸರಣ್ಯೂ-
ನಾಮಿಕಾಯಾ ವಹತುಂ ವಹನಂ ವಿವಾಹಂ ॥ ಏಧಿವಹ್ಯೋಶ್ಚತುಃ । ಉ. ೧-೭೯ । ಇತಿ ವಹೇಶ್ಚತು-
ಪ್ರತ್ಯಯಃ ॥ ತಂ ಕೃಣೋತಿ । ಕರೋತಿ । ಇತ್ಯೇತೇನ ಹೇತುನೇದಂ ವಿಶ್ವಂ ಸರ್ವಂ ಭುವನಂ
ಭೂತಜಾತಂ ಸಮೇತಿ । ತಂ ವಿವಾಹಂ ಸಮಾಗಮಂತ್ । ಪರ್ಯುಹ್ಯಮಾನಾ ವಿವಸ್ವತೋದ್ವೋಢವ್ಯಾ
ಯಮಸ್ಯ ಯಮ್ಯಾಶ್ಚ ಮಾತಾ ಮಹೋ ಮಹ ೋ ವಿವಸ್ವತೋ ಜಾಯಾ ಭಾರ್ಯಾ ಸರಣ್ಯೂರ್ನನಾಶ।
ಉತ್ತರಾನ್ಮರೂನ್ಪ್ರತಿ ನಷ್ಟಾ । ಅಗಚ್ಛದಿತ್ಯರ್ಥಃ ॥

॥ ಪ್ರತಿಪದಾರ್ಥ ॥

ತ್ವಷ್ಟಾ—ತ್ವಷ್ಟೃನಾಮಕನಾದ ದೇವನು । ದುಹಿತ್ರೇ—ತನ್ನ ಮಗಳಾದ ಸರಣ್ಯುವಿಗೆ । ವಹತುಂ—
ವಿವಾಹವನ್ನು । ಕೃಣೋತಿ—ನೆರವೇರಿಸುತ್ತಾನೆ । ಇತಿ—ಎಂಬ ನಿಮಿತ್ತವಾಗಿ । ಇದಂ ವಿಶ್ವಂ ಭುವನಂ—ಈ
ಸಕಲಭೂತಜಾತವೂ । ಸಮೇತಿ—ಒಂದುಗೂಡುತ್ತವೆ । ಪರ್ಯುಹ್ಯಮಾನಾ—ವಿವಸ್ವಂತನಿಂದ ಕೊಡಲ್ಪಡತಕ್ಕ
ವಳೂ । ಯಮಸ್ಯ—ಯಮನಿಗೆ । ಮಾತಾ—ಮಾತೆಯೂ । ಮಹಃ—ಮಹಾತ್ಮನಾದ । ವಿವಸ್ವತಃ—ವಿವ
ಸ್ವಂತನ । ಜಾಯಾ—ಭಾರ್ಯೆಯೂ ಆದ ಸರಣ್ಯುವು । ನನಾಶ—ಅದೃಶ್ಯಳಾದಳು.

॥ ಭಾವಾರ್ಥ ॥

ತ್ವಷ್ಟೃನಾಮಕನಾದ ದೇವನು ತನ್ನ ಮಗಳಾದ ಸರಣ್ಯುವಿಗೆ ವಿವಾಹವನ್ನು ನೆರವೇರಿಸುತ್ತಾನೆ ಎಂಬ
ಸಮಾಚಾರವನ್ನು ಕೇಳಿ ಸಕಲ ಭೂತಜಾತವೂ ಒಂದುಗೂಡಿದವು. ಆದರೆ, ವಿವಾಹಕ್ಕೆ ಸಿದ್ಧಳಾಗಬೇಕಾ
ದವಳೂ, ಯಮನಿಗೆ ಮಾತೆಯೂ, ಮಹಾತ್ಮನಾದ ವಿವಸ್ವಂತನ ಭಾರ್ಯೆಯೂ ಆದ ಸರಣ್ಯುವು ಅದೃಶ್ಯ
ಳಾದಳು.

English Translation

Twashtri celebrates the marriage of his daughter : therefore the whole world is assembled ; but the mother of Yama, the newly-married-wife of the mighty Vivaswat, disappeared

॥ ವಿಶೇಷವಿಷಯಗಳು ॥

ಯಾಸ್ಕರು ಈ ಋಕ್ಕಿಗೆ ನಿರುಕ್ತವನ್ನು ಹೇಳಿದಾರೆ—

ತ್ವಷ್ಟಾ ದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ ।
ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ ನನಾಶ॥

(ಋ. ಸಂ ೧೦-೧೭-೧)

ತ್ವಷ್ಟಾ ದುಹಿತುರ್ವಹನಂ ಕರೋತೀದಂ ವಿಶ್ವಂ ಭುವನಂ ಸಮೇತೀಮಾನಿ ಚ ಸರ್ವಾಣಿ ಭೂತಾನ್ಯಭಿಸಮಾಗಚ್ಛಂತಿ ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹತೋ ಜಾಯಾ ವಿವಸ್ವತೋ ನನಾಶ । ರಾತ್ರಿರಾದಿತ್ಯಸ್ಯಾದಿತ್ಯೋದಯೇಽನ್ತರ್ಧೀಯತೇ ॥

(ನಿ. ೧೨-೧೧)

ಈ ಋಕ್ಕಿಗೆ ಯಾಸ್ಕರು ತ್ವಷ್ಟೃಪಕ್ಷದಲ್ಲಿ ಮತ್ತು ಆದಿತ್ಯಪಕ್ಷದಲ್ಲಿ ಎಂದು ಎರಡುವಿಧ ಅರ್ಥವಿವರಣೆಮಾಡಿದಾರೆ. ತ್ವಷ್ಟೃಪಕ್ಷದಲ್ಲಿ—

ಇಲ್ಲಿ ತ್ವಷ್ಟೃವೆಂದರೆ ಸರ್ವವನ್ನೂ ಸೃಷ್ಟಿಮಾಡುವ ವಿಶ್ವಕರ್ಮನು, ಪ್ರಜಾಪತಿಯು ಎಂದು ಹೇಳಿದಾರೆ. ಈ ತ್ವಷ್ಟೃಪ್ರಜಾಪತಿಯು ತನ್ನ ಮಗಳಾದ ಸರಣ್ಯೂದೇವಿಯನ್ನು ವಿವಸ್ವಂತನಿಗೆ ಮದುವೆಮಾಡಿಕೊಡಬೇಕೆಂದು ಪ್ರಯತ್ನಿಸಿದಾಗ ಈ ಜಗತ್ತಿನಲ್ಲಿರುವ ಸಮಸ್ತ ಭೂತಜಾತಗಳೂ (ದೇವತೆಗಳು, ಮನುಷ್ಯರು, ಪ್ರಾಣಿಗಳು ಮೊದಲಾಗಿ ಸರ್ವರೂ ಸಹ) ಆ ವಿವಾಹವನ್ನು ನೋಡುವುದಕ್ಕಾಗಿ ಒಂದುಕಡೆ ಎಂದರೆ ವಿವಾಹಮಂಟಪದಲ್ಲಿ ಸೇರಿದರು. ವಿವಾಹಕಾಲದಲ್ಲಿ ಈರೀತಿ ಬಂಧುಬಾಂಧವರೂ, ಇತರರೂ ಸಂತೋಷಾರ್ಥವಾಗಿ ಒಟ್ಟಿಗೆ ಸೇರುವುದು ಸ್ವಭಾವವೇ ಆಗಿದೆ. ಆಗ ಎಂದರೆ ವಿವಾಹವಾದನಂತರ ಯಮನ ತಾಯಿಯೂ ಮಹನೀಯನಾದ ವಿವಸ್ವಂತದ ಭಾರ್ಯೆಯೂ ಆದ ಸರಣ್ಯೂದೇವಿಯು ಎಲ್ಲಿಯೋ ಅದೃಶ್ಯಳಾದಳು ಎಂದರೆ ತನ್ನ ಸ್ಥಳದಲ್ಲಿ ತನಗೆ ಬದಲಾಗಿ ಓರ್ವ ದೇವತಾ ಸ್ತ್ರೀಯನ್ನು ನಿರ್ಮಿಸಿ ಅಲ್ಲಿಟ್ಟು ತಾನು ಅಶ್ವರೂಪವನ್ನು ಧರಿಸಿ ಹೊರಟುಹೋದಳು ಎಂದಭಿಪ್ರಾಯವು.

ನೈರುಕ್ತಪಕ್ಷ ಅಥವಾ ಆದಿತ್ಯಪಕ್ಷದಲ್ಲಿ—ನಿರುಕ್ತವ್ಯಾಖ್ಯಾಕಾರರಾದ ದುರ್ಗಾಚಾರ್ಯರು ಈ ಋಕ್ಕಿಗೆ ಆದಿತ್ಯನ ಪರವಾಗಿ ಬರೆದಿರುವ ಭಾಷ್ಯವನ್ನೂ ವಿವರಣೆಯನ್ನೂ ಕೆಳಗೆ ವಿವರಿಸಿದೇವೆ—

ತ್ವಷ್ಟಾ ಮಧ್ಯಮಃ ತಮೋಭಾಗಸ್ಯ ಉಷಸಃ ದುಹಿತ್ರೇ ದುಹಿತುಃ ದೂರೇ ಹಿತಾಯಾಃ ಪ್ರಕಾಶರೂಪಾಯಾಃ ವಹತುಂ ವಹನಂ ವಿವಸ್ವತಃ ಕರೋತಿ । ಇದಂ ವಿಶ್ವಂ ಭುವನಂ ಸಮೇತಿ । ಪ್ರಭಾತಮಿತಿ ಮತ್ವಾ ಸರ್ವಾಣಿ ಭೂತಾನಿ ಸ್ವಾಸು ಸ್ವಾಸ್ವಿತಿ ಕರ್ತವ್ಯತಾಸು

ಅಭಿಸಮಾಗಚ್ಛಂತಿ । ಯಮಸ್ಯ ಮಾತಾ ಪರ್ಯುಹ್ಯಮಾನಾ–ಯಮಸ್ಯ ಮಧ್ಯಮಸ್ಯ ಮಾತಾ ದೇವಥರ್ಮೇಣ ಅಥವಾ ದ್ಯುಸ್ಥಾನಸ್ಯ ಯೈವ ಜಾಯಾ ಸಾ ಮಾತೇತಿ । ಜಾಯತೇಽಸ್ಯಾಂ ಪುತ್ರಶ್ಚೇನ ಪತಿಃ ಜಾಯಾ ಭಾರ್ಯಾ। ಮಹತೋ ವಿವಸ್ವತಃ ಪ್ರಕಾಶೇನ ಪ್ರೋತ್ಸಾರ್ಯಮಾಣಾ ನನಾಶ ನಶ್ಯತಿ । ಸಂಕ್ಷೇಪತೋ ಭಾಷ್ಯಕಾರೋಽರ್ಥಂ ನಿರಾಹ– ರಾತ್ರಿರಾದಿತ್ಯಸ್ಯ । ಉಷಾ ಜಾಯಾ ಸಾ ಆದಿತ್ಯಸ್ಯೋದಯೇಽಸ್ತಮೀಯತೇ ಇತಿ ॥

(ನಿ. ಭಾಷ್ಯ)

ಎಂದರೆ, ಇಲ್ಲಿ ತ್ವಷ್ಟಾ ಎಂದರೆ ಮಧ್ಯಸ್ಥಾನದೇವತೆ, ಸೂರ್ಯ ಅಥವಾ ಆದಿತ್ಯನು **ದೂಹಿತ್ರೇ ವಹತುಂ** ಎಂದರೆ ದೂರದಲ್ಲಿರುವ (ಸೂರ್ಯನು) ಪ್ರಕಾಶವನ್ನು ವಹಿಸುವುದಕ್ಕೆ ಅಥವಾ ಸುತ್ತಲೂ ಬೀರುವುದಕ್ಕೆ ; ರಾತ್ರಿಯು ಕೊನೆಯಭಾಗದಲ್ಲಿ ಉಷಃಕಾಲವು ಪ್ರಾರಂಭವಾಗುವಾಗ ಇರುವ ಕತ್ತಲೆಯನ್ನು ಹೋಗಲಾಡಿಸಲು ದೂರದಲ್ಲಿ ಸೂರ್ಯನು ಉದಯಿಸುತ್ತಿರುವುದನ್ನು ಲೋಕದಲ್ಲಿರುವ ಸಮಸ್ತ ಪ್ರಾಣಿಗಳೂ ನೋಡಿ, ಈಗ ಕತ್ತಲೆಯು ನಾಶವಾಗಿ ಪ್ರಾತಃಕಾಲವು ಆಗಿದೆಯೆಂದು ತಿಳಿದು ತಮ್ಮತಮ್ಮ ವ್ಯವಹಾರಗಳಲ್ಲಿ ತೊಡಗುವರು. **ಯಮಸ್ಯ ಮಾತಾ ಪರ್ಯುಹ್ಯಮಾನಾ**—ಯಮ ಅಥವಾ ಮಧ್ಯಮದೇವತೆಯಾದ ಆದಿತ್ಯನ ತಾಯಿಯಾದ ದ್ಯುಲೋಕವು (ಅಂತರಿಕ್ಷವು) ಅಥವಾ **ಆತ್ಮಾ ವೈ ಪುತ್ರನಾಮಾಸಿ** ಎಂಬ ಶ್ರುತಿವಾಕ್ಯದಲ್ಲಿ ಹೇಳಿರುವಂತೆ ತಾನೇ ತನ್ನ ಅಂಶರೂಪದಿಂದ ತನ್ನ ಪತ್ನಿಯಲ್ಲಿ ಪುತ್ರನಾಗಿ ಹುಟ್ಟುವುದರಿಂದ ಪತ್ನಿಗೆ ಜಾಯಾ ಎಂಬ ಹೆಸರು. ಆದ್ದರಿಂದ ರಾತ್ರಿಯೇ ಅಥವಾ ಉಷಸ್ಸೇ ಸೂರ್ಯನ ಪತ್ನಿಯು. ಆ ರಾತ್ರಿಯಿಂದ (ರಾತ್ರಿಯು ಕಳೆದನಂತರ) ಸೂರ್ಯನು ಅಂಶರೂಪದಿಂದ ಹುಟ್ಟುವುದರಿಂದ ರಾತ್ರಿಯು ಸೂರ್ಯನಿಗೆ ಪತ್ನಿಯಾಯಿತು ಎಂದರೆ ರಾತ್ರಿಯು ಅಥವಾ ಉಷೋದೇವಿಯು ಸೂರ್ಯನ ಪತ್ನಿಯೆಂದು ಹೇಳಲ್ಪಡುವಳು. **ಜಾಯಾ ವಿವಸ್ವತೋ ನನಾಶ** ಎಂದರೆ **ರಾತ್ರಿರಾದಿತ್ಯಸ್ಯಾದಿತ್ಯೋದಯೇಽಸ್ತಮೀಯತೇ** ಸೂರ್ಯನ ಪತ್ನಿಯಾದ ರಾತ್ರಿ ಅಥವಾ ಉಷಸ್ಸು ಸೂರ್ಯೋದಯಾನಂತರ ನಾಶವಾಗುವುದು ಎಂದರೆ ಅದೃಶ್ಯವಾಗುವುದು ಎಂದು ಆದಿತ್ಯಪಕ್ಷದ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಅಪಾಗೂಹನ್ನಮೃತಾಂ ಮರ್ತ್ಯೇಭ್ಯಃ ಕೃತ್ವೀ ಸವರ್ಣಾಮದದುರ್ವಿವಸ್ವತೇ।
ಉತಾಶ್ವಿನಾವಭರದ್ಯತ್ತದಾಸೀದಜಹಾದು ದ್ವಾ ಮಿಥುನಾ ಸರಣ್ಯೂಃ ॥ ೨ ॥

॥ ಪದಪಾಠಃ ॥

ಅಪ । ಅಗೂಹನ್ । ಅಮೃತಾಂ । ಮರ್ತ್ಯೇಭ್ಯಃ । ಕೃತ್ವೀ । ಸವರ್ಣಾಂ । ಅದದುಃ । ವಿವಸ್ವತೇ ।
ಉತ । ಅಶ್ವಿನೌ । ಅಭರತ್ । ಯತ್ । ತತ್ । ಆಸೀತ್ । ಅಜಹಾತ್ । ಊಂ ಇತಿ । ದ್ವಾ । ಮಿಥುನಾ ।
ಸರಣ್ಯೂಃ ॥ ೨ ॥

॥ ಸಾಯಣಭಾಷ್ಯಂ ॥

ಅಮೃತಾಂ ಮರಣಧರ್ಮರಹಿತಾಮೇತಾಂ ಸರಣ್ಯೂಂ ಮರ್ತ್ಯೇಭ್ಯೋ ಮನುಷ್ಯೇಭ್ಯಸ್ತದುಪ್ಪ-ತ್ಯರ್ಥಮುಪಾಗೂಹನ್ । ಅಪಗೂಹಿತವಂತಃ । ಸಂವೃತವಂತಃ । ದೇವಾ ಉಪನೀತವಂತಃ ಇತ್ಯರ್ಥಃ । ತಂಚ ಸವರ್ಣಾಂ ಸರಣ್ಯೂಸದೃಶೀಮನ್ಯಾಂ ಸ್ತ್ರಿಯಂ ಕೃತ್ವೀ ಕೃತ್ವಾ ತಸ್ಮೈ ವಿವಸ್ವತೇ ದೇವಾ ಅದದುಃ। ಪ್ರಾಯಚ್ಛನ್ । ಉತಾಪಿ ಚ ಸಾಶ್ವರೂಪಿಣೀ ಸರಣ್ಯೂಸ್ತದಾಶ್ವಿನಾವಭರತ್ । ಸ್ವೋದರೇ ಗರ್ಭಭೂತೌ ಧಾರಿತವತೀ । ಯದ್ಯದಾ ತಜ್ಜಾಯಾಪತಿಭ್ಯಾಮಶ್ವರೂಪಾತ್ಮನಾ ಸಂಭೋಗಕಾಲೇ ರೇತಃ ಪತಿತಮಾ-ಸೀತ್ ತದಾಶ್ವಿನೌ ಜನಯಾಮಾಸೇತ್ಯರ್ಥಃ । ತಥಾ ಸರಣ್ಯೂಃ ಸರಣವತ್ಯೇತನ್ನಾಮಿಕಾ ದ್ವಾ ಮಿಥುನಾ ದ್ವೌ ಮಿಥುನೌ ಯಮುಯಮ್ಯಾವಜಹಾತ್ । ತ್ಯಕ್ತವತೀ । ಜನಿತವತೀತ್ಯರ್ಥಃ । ಯದ್ವಾ । ಸರಣ್ಯೂ-ರೇತನ್ನಾಮಿಕಾ ಮಧ್ಯಮಸ್ಥಾನಾ ದೇವತಾ ಮಧ್ಯಮಮಗ್ನಿಂ ಮಾಧ್ಯಮಿಕಾಂ ವಾಚಂ ಚೋತ್ಪಾದಿತವತೀ॥

॥ ಪ್ರತಿಪದಾರ್ಥ ॥

ಅಮೃತಾಂ—ಮರಣಧರ್ಮರಹಿತಳಾದ ಸರಣ್ಯೂವನ್ನು । ಮರ್ತ್ಯೇಭ್ಯಃ—ಮಾನವರಿಂದ । ಅಪಾಗೂ-ಹನ್—ಮರೆಸಿ । ಸವರ್ಣಾಂ—ಅದೇ ರೂಪದ ಬೇರೊಂದು ಸ್ತ್ರೀಯನ್ನು । ಕೃತ್ವೀ—ಮಾಡಿ । ವಿವಸ್ವತೇ—ವಿವ ಸ್ವಂತನಿಗೆ । ಅದದುಃ—ದೇವತೆಗಳು ಕೊಟ್ಟರು । ಉತ—ಮತ್ತು । ಯತ್—ಯಾವಾಗ । ತತ್ ಅಸೀತ್—ಅಶ್ವರೂಪವಾದ ರೇತಃ ಪತನವಾಯಿತೋ ಆಗ । ಅಶ್ವಿನೌ—ಅಶ್ವಿನೀದೇವತೆಗಳನ್ನು । ಅಭರತ್—ಆ ಸ್ತ್ರೀಯು ಪಡೆದಳು । ಸರಣ್ಯೂಃ—ಸರಣ್ಯೂವು । ದ್ವಾ ಮಿಥುನಾ—ಯಮ ಮತ್ತು ಯಮಿಯನ್ನು । ಅಜಹಾತ್—ಪ್ರಸ ವಿಸಿದಳು.

॥ ಭಾವಾರ್ಥ ॥

ಮರಣರಹಿತಳಾದ ಸರಣ್ಯೂವನ್ನು ಮಾನವರಿಂದ ಮರೆಸಿ ಅದೇ ರೂಪದ ಬೇರೊಂದು ಸ್ತ್ರೀಯನ್ನು ಮಾಡಿ ವಿವಸ್ವಂತನಿಗೆ ದೇವತೆಗಳು ಕೊಟ್ಟರು. ಮತ್ತು ಯಾವಾಗ ಅಶ್ವರೂಪದ ರೇತಃ ಪತನವಾಯಿತೋ ಆಗ ಅಶ್ವಿನೀ ದೇವತೆಗಳನ್ನು ಆ ಸ್ತ್ರೀಯು ಪಡೆದಳು. ಸರಣ್ಯೂವು ಯಮ ಮತ್ತು ಯಮಿಯನ್ನು ಪಡೆದಳು

English Translation

The Gods concealing the immortal (Saranyu) for the sake of mortals and having formed a woman resembling her, gave her to Vivaswat. She bore the two Ashwins when this had happened, and then Saranyu gave birth to two twins.

॥ ವಿಶೇಷವಿಷಯಗಳು ॥

ಯಾಸ್ಕರು ಸರಣ್ಯೂಶಬ್ದದ ನಿರ್ವಚನವನ್ನು ವಿವರಿಸುವಾಗ ಈ ಋಕ್ಕಿಗೆ ನಿರುಕ್ತವನ್ನು ಹೇಳಿ ಸರಣ್ಯೂ ವಿಷಯವಾದ ಒಂದು ಇತಿಹಾಸವನ್ನು ಹೇಳಿದಾರೆ

ಸರಣ್ಯೂಃ । ಸರಣ್ಯೂಃ ಸರಣಾತ್ । ತಸ್ಯೈಷಾ ಭವತಿ । ಅಪಾಗೂಹನ್ನಮೃತಾಂ ಮರ್ತ್ಯೇಭ್ಯಃ ಕೃತ್ವೀ ಸವರ್ಣಾಮದದುರ್ವಿವಸ್ವತೇ । ಉತಾಶ್ವಿನಾವಭರದ್ಯತ್ತದಾಸೀದಜಹಾದು ದ್ವಾ

मिथुना सरण्यूः ॥ (ऋ. सं. १०-१२.३) । अप्यगूहन्नमृताम मर्त्येभ्यः कृत्वी सवर्णामददुर्विवस्वतेऽप्यश्विनावधरद्यत्तदासीदजहादद्वौ मिथुनौ सरण्यूर्मध्यमं च माध्यमिकां च वाचमिति नैरुक्ताः । यमं च यविष्ठां चैत्यैतिहासिकाः ॥

तत्रैतिहासमाचक्षतेऽश्वा ह्येषा सरण्यूर्विवस्वत आदित्यादग्नेौ मिथुनौ जनयांचकार । सा सवर्णामन्यां प्रतिनिधायाश्वं रूपं कृत्वा प्रदुद्राव । स विवस्वानादित्य अश्वमेव रूपं कृत्वा तामनुसृत्य संबभूव । ततोऽश्विनौ जज्ञाते सवर्णायां मनुः ॥

(नि. १२-१०)

ಚಲಿಸು ಎಂಬರ್ಥವುಳ್ಳ ಸೃ ಧಾತುವಿನಿಂದ ಸರಣ್ಯೂಶಬ್ದವು ನಿಷ್ಪನ್ನವಾಗಿದೆ. ಮುಂದುಮುಂದಕ್ಕೆ ಸರಿಯುವವಳು, ಚಲಿಸುತ್ತಿರುವವಳು ಎಂದು ಈ ಶಬ್ದದ ಅವಯವಾರ್ಥವು. ಈ ಶಬ್ದಪ್ರಯೋಗವಿರುವ **ಅಪಾಗೂಹನ್ನೆಂಬ** ಋಕ್ಕಿನ ನಿರ್ವಚನವು ಈರೀತಿ ಇದೆ— ಮರಣವಿಲ್ಲದ ಎಂದರೆ ನಾಶರಹಿತವಾದ ಆ ಸರಣ್ಯೂದೇವಿಯನ್ನು ಮನುಷ್ಯರ ಕಣ್ಣಿಗೆ ಕಾಣಿಸದಂತೆ ದೇವತೆಗಳು ಮರೆಮಾಡಿ ಅವಿಸಿಟ್ಟರು ಮತ್ತು ಅದೇ ರೂಪ ಮತ್ತು ಆಕಾರವುಳ್ಳ ಬೇರೊಬ್ಬ ಸ್ತ್ರೀಯನ್ನು ನಿರ್ಮಿಸಿ ಆದಿತ್ಯನಿಗೆ ಕೊಟ್ಟರು. ಈ ಕಾಲದಲ್ಲಿ ಎಂದರೆ ಸರಣ್ಯೂದೇವಿಯು ಅದೃಶ್ಯವಾದಾಗ (ಅಶ್ವರೂಪವನ್ನು ಧರಿಸಿ ಬೇರೆ ಪ್ರದೇಶದಲ್ಲಿದ್ದಾಗ ಅಶ್ವರೂಪಿಯಾದ ಆದಿತ್ಯನ (ವಿವಸ್ವಂತನ) ಸಂಭೋಗದ ಫಲವಾಗಿ) ಅಶ್ವಿನೀ ದೇವತೆಗಳನ್ನು ಪಡೆದಳು ಮತ್ತು ಹಿಂದೆ ತಾನು ಪಡೆದಿದ್ದ ಅವಳೀಮುಕ್ಕಳಾದ ಯಮಯಮಿಯರನ್ನು ತ್ಯಜಿಸಿದಳು. ಇಲ್ಲಿ **ಮಿಥುನೌ** ಎಂಬ ಶಬ್ದಕ್ಕೆ ಎರಡು ವಿಧ ಅರ್ಥಮಾಡಿದಾರೆ. ಮಧ್ಯಮಸ್ಥಾನ ಎಂದರೆ ಅಂತರಿಕ್ಷಸ್ಥನಾದ ಇಂದ್ರ ಮತ್ತು ಅಂತರಿಕ್ಷಸ್ಥವಾದ ವಾಗ್ದೇವತೆ ಎಂದು ನಿರುಕ್ತಕಾರರ ಮತವು. ಯಮ ಮತ್ತು ಯವಿಷ್ಠಾ ಎಂದು ಇತಿಹಾಸಕಾರರ ಮತವು

ಈ ವಿಷಯದಲ್ಲಿ ಒಂದು ಇತಿಹಾಸವಿರುವುದು— ತ್ವಷ್ಟೃಪುತ್ರಿಯಾದ ಸರಣ್ಯೂದೇವಿಯು ಆದಿತ್ಯನಿಂದ (ವಿವಸ್ವಂತನಿಂದ) ಯಮಯಮಿಯರೆಂಬ ಇಬ್ಬರು ಅವಳೀ ಮಕ್ಕಳನ್ನು ಪಡೆದಳು. ಅನಂತರ ಅವಳು ತನ್ನ ಹಾಗೆಯೇ ಇರುವ ಬೇರೊಬ್ಬ ದೇವತಾಸ್ತ್ರೀಯನ್ನು ತನ್ನ ಪ್ರತಿನಿಧಿಯಾಗಿ ಆದಿತ್ಯನ ಸಮೀಪದಲ್ಲಿರಿಸಿ ತಾನು ಅಶ್ವರೂಪದಿಂದ ಓಡಿಹೋದಳು. (ಈ ಸವರ್ಣರೂಪಿಯಾದ ದೇವತಾಸ್ತ್ರೀಯನ್ನು ಛಾಯಾ ಎಂಬ ಹೆಸರಿನಿಂದ ಕರೆಯುವುದು ರೂಢಿಯಾಗಿದೆ. ಮತ್ತು ಈ ಸ್ತ್ರೀಯಲ್ಲಿ ಆದಿತ್ಯನಿಂದ ಮನುವು ಹುಟ್ಟಿದನು. ಅನಂತರ ಆದಿತ್ಯನು ಈ ಸ್ತ್ರೀಯು ತನ್ನ ಪತ್ನಿಯಾದ ಸರಣ್ಯೂ ಅಲ್ಲವೆಂದು ತಿಳಿದು) ಅನಂತರ ತಾನೂ ಅಶ್ವರೂಪವನ್ನು ಧರಿಸಿ ಅಶ್ವರೂಪಿಣಿಯಾದ ಸರಣ್ಯುವನ್ನು ಅನುಸರಿಸಿ ಹೋಗಿ ಅವಳ ಸಮೀಪದಲ್ಲಿಯೇ ಇದ್ದನು. ಆಗ ಇವರಿಬ್ಬರ ಅನ್ಯೋನ್ಯಸಮಾಗಮದ ಫಲವಾಗಿ ಅಶ್ವಿನೀದೇವತೆಗಳು ಉತ್ಪನ್ನರಾದರು ಮತ್ತು ಸವರ್ಣರೂಪದ ಸ್ತ್ರೀಯಲ್ಲಿ ಮನುವು ಹುಟ್ಟಿದನು ಎಂದು ನಿರುಕ್ತವಚನದ ಅಭಿಪ್ರಾಯವು.

॥ संहितापाठः ॥

पूषा त्वेतश्च्यावयतु प्र विद्वाननष्टपशुर्भुवनस्य गोपाः।
स त्वैतेभ्यः परि ददत्पितृभ्योऽग्निर्देवेभ्यः सुविदत्रियेभ्यः ॥६॥

॥ पदपाठः ॥

पूषा । त्वा । इतः । च्यवयतु । प्र । विद्वान् । अनष्टऽपशुः । भुवनस्य । गोपाः ।
सः । त्वा । एतेभ्यः । परि । ददत् । पितृऽभ्यः । अग्निः । देवेभ्यः । सुऽविदत्रियेभ्यः ॥६॥

॥ सायणभाष्यं ॥

दीक्षितमरणे पूषा त्वेत इत्याद्याश्चतस्रः शंसनीयाः । सूत्रितं च । पूषा त्वेतश्च्यावयतु प्रविद्वानिति चतस्रः । आ. ६.८० । इति ॥

पूषा पोषयितैतन्नामकोः देवस्त्वा त्वामितोऽस्माद्देशाल्लोकात्प्रच्यावयतु । प्रकर्षेणोत्तमलोकं गमयतु । कीदृशः । विद्वाननष्टपशुरविनश्वरपशुयुक्तः । यस्मिन्सर्वे पशवस्तिष्ठन्ति न तु नश्यन्तीत्यर्थः । भुवनस्य भूतजातस्य गोपा गोपायिता । किंच प्रकृत्यमुष्य स पूषैतेभ्यः पितृभ्यस्त्वा त्वां परि ददत् । परिप्रयच्छतु । तथाग्निश्च सुविदत्रियेभ्यः । सुविदत्रं ज्ञानं धनं वा । तदर्हाः सुविदत्रियाः ॥ छान्दसोऽप्रत्ययः । शोभनज्ञानेभ्यः सुधनेभ्यो वा देवेभ्यस्त्वां प्रयच्छतु । तेषां लोके स्थापयित्वेत्यर्थः ॥

॥ प्रतिपदार्थ ॥

विद्वान्—सकलवन्नू तिळिदवनू । अनष्टपशुः—नष्टवागद पशुगळुळ्ळवनू । भुवनस्य—सकलभूतजातक्कू । गोपाः—रक्षकनू आद । पूषा—पूषदेवनु । त्वा—निन्नन्नु इतः—ई लोकदिंद । प्र च्यावयतु—उत्तमलोकक्के ऒय्यल । सः—अदे पूषदेवनु एतेभ्यः पितृभ्यः—ई पितृगळिगे । त्वा—निन्नन्नु । परि ददत्—ऒप्पिसलि । अग्निः—अग्नियु । सुविदत्रियेभ्यः—पूर्णवाद ज्ञानवुळ्ळ (अथवा धनवुळ्ळ) । देवेभ्यः—देवतेगळिगू ऒप्पिसलि.

॥ भावार्थ ॥

सकलवन्नू तिळिदवनू, नष्टवागद पशुगळुळ्ळवनू सकलभूत जातक्कू रक्षकनू आद पूष देवनु निन्नन्नु ई लोकदिंद उत्तमलोकक्के ऒय्यलि. अदे पूषदेवनु ई पितृगळिगे निन्नन्नु ऒप्पिसलि अग्नियु पूर्णज्ञानवुळ्ळ (अथवा धनवुळ्ळ) देवतेगळिगे ऒप्पिसलि.

English Translation

May the discriminating Pushan, whose cattle are never lost, the protector of all beings, transfer you hence (to a better world): may he give you to these Pitris: may Agni (give) you to the beneficent gods.

॥ ವಿಶೇಷವಿಷಯಗಳು ॥

ಒಂದೇ ಋಕ್ಕಿನಲ್ಲಿ ಇಬ್ಬರು ದೇವತೆಗಳು ಪ್ರತ್ಯೇಕಪ್ರತ್ಯೇಕವಾಗಿ ಸ್ತುತಿಸಿರುವುದನ್ನು ಉದಾಹರಣೆಯಾಗಿ ಸಮರ್ಥಿಸಲು ಈ ಋಕ್ಕಿನ ನಿರ್ವಚನವನ್ನು ಹೇಳಿದಾರೆ—

ಅಥಾಪ್ಯಾಗ್ನಾಪೌಷ್ಣಂ ಹವಿರ್ಭ ತು ಸಂಸ್ತವಃ। ತತ್ರೈತಾಂ ವಿಭಕ್ತಸ್ತುತಿಮೃಚಮುದಾಹರಂತಿ। ಪೂಷಾ ತ್ವೇತಶ್ಚ್ಯಾವಯತು ಪ್ರ ವಿದ್ವಾನನಷ್ಟಪಶುರ್ಭುವನಸ್ಯ ಗೋಪಾಃ। ಸ ತ್ವೈತೇಭ್ಯಃ ಪರಿದದತ್ಪಿತೃಭ್ಯೋಽಗ್ನಿರ್ದೇವೇಭ್ಯಃ ಸುವಿದತ್ರಿಯೇಭ್ಯಃ ॥ (ಋ. ಸಂ. ೧೦-೧೭-೩) । ಪೂಷಾ ತ್ವೇತಃ ಪ್ರಚ್ಯಾವಯತು ವಿದ್ವಾನನಷ್ಟಪಶುರ್ಭುವನಸ್ಯ ಗೋಪಾ ಇತ್ಯೇಷ ಹಿ ಸರ್ವೇಷಾಂ ಭೂತಾನಾಂ ಗೋಪಾಯಿತಾದಿತ್ಯಃ ಸ ತ್ವೈತೇಭ್ಯಃ ಪರಿದದತ್ ಪಿತೃಭ್ಯ ಇತಿ ಸಾಂಶಯಿಕೇ-ಸ್ತೃತೀಯಃ ಪಾದಃ। ಪೂಷಾ ಪುರಸ್ತಾತ್ತಸ್ಯಾನ್ವಾದೇಶ ಇತ್ಯೇಕಮಗ್ನಿರುಪರಿಷ್ಟಾತ್ತಸ್ಯ ಪ್ರಕೀರ್ತನೇತ್ಯಪರಂ। ಅಗ್ನಿರ್ದೇವೇಭ್ಯಃ ಸುವಿದತ್ರಿಯೇಭ್ಯಃ। ಸುವಿದತ್ರಂ ಧನಂ ಭವತಿ ವಿಂದತೇರ್ವೈಕೋಪಸರ್ಗಾದ್ದದಾತೇರ್ವಾ ಸ್ಯಾದ್ವ್ಯುಪಸರ್ಗಾತ್ ॥

(ನಿ. ೭-೯)

ಕೆಲವು ಋಕ್ಕುಗಳಲ್ಲಿ ಇಬ್ಬರು ದೇವತೆಗಳ ಸ್ತುತಿಯಿದ್ದರೂ ಅದು ಸಂಸ್ತವಸ್ತುತಿಯಾಗುವುದಿಲ್ಲ ಎಂದರೆ ಇಬ್ಬರನ್ನು ಒಟ್ಟಿಗೆ ಸ್ತುತಿಸಿದಂತಾಗುವುದಿಲ್ಲ. ಇಬ್ಬರ ಹೆಸರುಗಳಿದ್ದರೂ ಅವರಲ್ಲಿ ಪ್ರತಿಯೊಬ್ಬರ ಸ್ತುತಿಯು ಬೇರೆಬೇರೆಯಾಗಿರುವುದು. ಉದಾಹರಣೆಗೆ ಈ ಪ್ರಕೃತ ಋಕ್ಕಿನಲ್ಲಿ ಪೂಷ ಮತ್ತು ಅಗ್ನಿಯು ಸ್ತುತರಾಗಿದಾರೆ. ಆದರೂ ಇದು ಸಂಸ್ತವ ಸ್ತುತಿಯಲ್ಲ. ಇಬ್ಬರೂ ಬೇರೆಬೇರೆ ಸ್ತುತರಾಗಿದಾರೆ.

ಈ ಪೂಷದೇವನು ಎಲ್ಲವನ್ನೂ ತಿಳಿದವನು. ಆದ್ದರಿಂದಲೇ ಇವನ ಸ್ಮರಣೆ ಅಥವಾ ಜ್ಞಾನದಿಂದ ಪಶುಗಳು ತಪ್ಪಿಸಿಕೊಂಡು ಹೋಗುವುದಿಲ್ಲ. ಕಾರಣಾಂತರದಿಂದ ತಪ್ಪಿಸಿಕೊಂಡು ಹೋದ ಪಶುಗಳು ಪೂಷನ ಮಾರ್ಗಜ್ಞಾನದಿಂದ ಮತ್ತೆ ನಿಶ್ಚಯವಾಗಿ ಲಭಿಸುವುವು. ಆದ್ದರಿಂದ ಪೂಷನಿಗೆ ಅನಷ್ಟಪಶುಃ ಎಂದು ಇಲ್ಲಿ ಹೇಳಿದೆ. ಈ ದೇವನು ಸಕಲ ಜಗತ್ತನ್ನೂ ಸಂರಕ್ಷಿಸುವವನು. ಇಂತಹ ಆದಿತ್ಯರೂಪಿಯಾದ ಪೂಷದೇವನು ಪ್ರೇತಶರೀರಿಯಾದ ನಿನ್ನನ್ನು ಈ ಲೋಕದ ಮಾರ್ಗದಿಂದ ಬೇರ್ಪಡಿಸಿ ಪಿತೃಗಳ ವಶಕ್ಕೆ ಕೊಡಲಿ. ಮತ್ತು ಅಗ್ನಿಯು ಅಲ್ಲಿಂದ ನಿನ್ನನ್ನು ಧನದಾತರಾದ ದೇವತೆಗಳ ವಶಕ್ಕೆ ಒಪ್ಪಿಸಲಿ. ಈ ಋಕ್ಕಿನ ಮೂರನೆಯ ಪಾದದ ಅರ್ಥವಿಷಯದಲ್ಲಿ ಕೆಲವರು ಸಂಶಯವನ್ನು ವ್ಯಕ್ತಪಡಿಸಿರುವರು. ಈ ಪಾದದಲ್ಲಿ ಹೇಳಿರುವ–ಪೂಷದೇವನು ನಿನ್ನನ್ನು (ಪ್ರೇತವನ್ನು) ಪಿತೃಗಳಿಗೆ ಒಪ್ಪಿಸಲಿ ಎಂಬರ್ಥವು ಸಂಶಯಾಸ್ಪದವಾಗಿದೆ. ಏಕೆಂದರೆ ಪೂಷದೇವನು ಪಿತೃಗಳಿಗೆ ಒಪ್ಪಿಸುವನೆಂದು ಇಲ್ಲಿ ಹೇಳಿದೆ. ಅನಂತರ ಅಗ್ನಿಯು ಅವನನ್ನು ದೇವತೆಗಳಿಗೆ ಒಪ್ಪಿಸುವನೆಂದು ಹೇಳಿದೆ. ಈ ಮೂರನೇ ಪಾದಕ್ಕೆ ಪೂಷನು ದೇವತೆಯೆಂದು ಹೇಳಿರುವದಲ್ಲವೆ ಮೂರು ಮತ್ತು ನಾಲ್ಕನೆಯ ಪಾದಗಳೆರಡೂ ಅಗ್ನಿಗೆ ಸಂಬಂಧಪಟ್ಟವು ಎಂದು ಹೇಳಿರುವುದರಿಂದ ಈ ಪ್ರೇತಶರೀರವನ್ನು

ಪಿತೃಗಳಿಗೂ ಮತ್ತು ದೇವತೆಗಳಿಗೂ ಅಗ್ನಿಯೇ ಒಪ್ಪಿಸುವನೆಂಬ ಅರ್ಥವು ಇಲ್ಲಿ ವ್ಯಕ್ತವಾಗಿದೆ ಎಂದು ಮತ್ತೆ ಕೆಲವರ ಅಭಿಪ್ರಾಯವು.

ಈ ಋಕ್ಕಿನಲ್ಲಿರುವ **ಸುವಿದತ್ರಿಯೇಭ್ಯಃ** ಎಂಬ ಶಬ್ದದ ವಿಷಯದಲ್ಲಿ ಸುವಿದತ್ರವೆಂದರೆ ಧನವು. ಈ ಶಬ್ದವು ಸಂಪಾದಿಸು ಎಂಬರ್ಥವುಳ್ಳ (**ಸು** ಎಂಬ ಒಂದೇ ಉಪಸರ್ಗಗಹಿತವಾದ) **ವಿದ್** ಧಾತುವಿಂದಾಗಲಿ, ಅಥವಾ **ಸು** ಮತ್ತು **ವಿ** ಎಂಬ ಎರಡು ಉಪಸರ್ಗಸಹಿತವಾದ, ಕೊಡು ಎಂಬರ್ಥವುಳ್ಳ **ದಾ** ಎಂಬ ಧಾತುವಿನಿಂದಾಗಲೀ ನಿಷ್ಪನ್ನವಾಗಬಹುದು ಎಂದು ನಿರ್ವಚನಾಭಿಪ್ರಾಯವು.

ಯಜ್ಞದಲ್ಲಿ ಯಜ್ಞದೀಕ್ಷೆಯನ್ನು ವಹಿಸಿರುವ ಯಜಮಾನನು ಮೃತನಾದಲ್ಲಿ **ಪೂಷಾ ತ್ವೇತಃ** ಎಂದು ಮೊದಲಾಗುವ ನಾಲ್ಕು ಋಕ್ಕುಗಳನ್ನು (ಈ ಸೂಕ್ತದ ೩-೬ ಋಕ್ಕುಗಳನ್ನು) ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ- **ಪೂಷಾ ತ್ವೇತಶ್ಚಾ ೃವಯತು ಪ್ರ ವಿದ್ವಾನಿತಿ ಚತಸ್ರಃ** ಎಂಬ ಸೂತ್ರದಿಂದ (೮. ೬-೧೦) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಆಯುರ್ವಿಶ್ವಾಯುಃ ಪರಿ ಪಾಸತಿ ತ್ವಾ ಪೂಷಾ ತ್ವಾ ಪಾತು ಪ್ರಪಥೇ ಪುರಸ್ತಾತ್ ।
ಯತ್ರಾಸತೇ ಸುಕೃತೋ ಯತ್ರ ತೇ ಯಯುಸ್ತತ್ರ ತ್ವಾ ದೇವಃ ಸವಿತಾ ದಧಾತು ॥ ೪ ॥

॥ ಪದಪಾಠಃ ॥

ಆಯುಃ । ವಿಶ್ವಽಆಯುಃ । ಪರಿ । ಪಾಸತಿ । ತ್ವಾ । ಪೂಷಾ । ತ್ವಾ । ಪಾತು । ಪ್ರಽಪಥೇ । ಪುರಸ್ತಾತ್ ।
ಯತ್ರ । ಆಸತೇ । ಸುಽಕೃತಃ । ಯತ್ರ । ತೇ । ಯಯುಃ । ತತ್ರ । ತ್ವಾ । ದೇವಃ । ಸವಿತಾ । ದಧಾತು ॥

॥ ಸಾಯಣಭಾಷ್ಯಂ ॥

ವಿಶ್ವಾಯುಃ ಸರ್ವಾನ್ನಃ ಸರ್ವತ್ರ ಗಮನಶೀಲೋ ವಾಯುಃ ॥ ವಕಾರಲೋಪಶ್ಛಾಂದಸಃ ॥ ವಾಯುಃ । ಯದ್ವಾ । ಛಂದಸೀಣ ಇತ್ಯುಣ್ಪ್ರತ್ಯಯೇ ವೃದ್ಧೌ ಚ ಕೃತಾಯಾಂ ರೂಪಂ ॥ ಗಂತಾ ವಾಯುಃ । ತ್ವಾ ತ್ವಾಂ ಪರಿ ಪಾಸತಿ । ಪರಿಪಾತು । ಪೂಷಾನುಜ್ಞಯಾ ಪರಿತೋ ರಕ್ಷತು ॥ ಪಾ ರಕ್ಷಣೇ। ಲೇಟಿ ಸಿಪ್ಯಡಾಗಮಃ ॥ ಪ್ರಪಥೇ ಪ್ರಕೃಷ್ಟೇ ಮಾರ್ಗೇ ಸ್ವರ್ಗೇ ಪುರಸ್ತಾತ್ಸರ್ವೇಷಾಂ ಪ್ರಥಮಮೇವ ವರ್ತಮಾನಃ ಪೂಷಾ ಸ್ವಯಮೇವ ತ್ವಾ ತ್ವಾಂ ಪ್ರಮಿತಂ ಯಜಮಾನಂ ಪಾತು । ರಕ್ಷತು । ಸುಕೃತಃ ಪುಣ್ಯಕರ್ಮಾಣೋ ಯತ್ರ ಯಸ್ಮಿನ್ದೇಶ ಆಸತೇ ತಿಷ್ಠಂತಿ ಯತ್ರ ವಾ ತೇ ಸುಕೃತೋಃ ಯಯುಃ

ಪ್ರಾಪ್ತಾಃ ತತ್ರ ತಸ್ಮಿನ್ಸ್ಥಾನೇ ದೇವೋ ದೀಪ್ಯಮಾನಃ ಸವಿತಾ ಸರ್ವಸ್ಯ ಸ್ವಸ್ವಕರ್ಮಣಿ ಪ್ರೇರಕ ಏತನ್ನಾಮಕೋ ದೇವಸ್ತ್ವಾ ತ್ವಾಂ ದಧಾತು । ನಿದಧಾತು ॥

॥ ಪ್ರತಿಪದಾರ್ಥ ॥

ವಿಶ್ವಾಯುಃ—ಸರ್ವವ್ಯಾಪಕನಾದ । ಆಯುಃ—ವಾಯುವು । ತ್ವಾ—ನಿನ್ನನ್ನು । ಪರಿ ಪಾಸತಿ—ರಕ್ಷಿಸಲಿ । ಪ್ರಪಥೇ—ಅತ್ಯುತ್ಕೃಷ್ಟವಾದ ಸ್ವರ್ಗದಲ್ಲಿ । ಪುರಸ್ತಾತ್—ಎಲ್ಲರಿಗಿಂತಲೂ ಪ್ರಥಮತಃ ಇರುವ । ಪೂಷಾ—ಪೂಷದೇವನು । ತ್ವಾ—ಯಜಮಾನನಾದ ನಿನ್ನನ್ನು । ಪಾತು—ರಕ್ಷಿಸಲಿ । ಯತ್ರ—ಯಾವ ಪ್ರದೇಶದಲ್ಲಿ । ಸುಕೃತಃ—ಉತ್ತಮವಾದ ಕರ್ಮಕರ್ತರು । ಅಸತೇ—ಇರುವರೋ । ಯತ್ರ—ಎಲ್ಲಿ । ತೇ ಸುಕೃತಃ ಯಯುಃ—ಪುಣ್ಯಮಾಡುವ ಜನರು ಎಲ್ಲಿಗೆ ಹೋಗುವರೋ । ತತ್ರ—ಆ ಸ್ಥಾನದಲ್ಲಿ । ದೇವಃ—ಪ್ರಕಾಶಮಾನನಾದ । ಸವಿತಾ—ಸವಿತೃದೇವನು । ತ್ವಾ—ನಿನ್ನನ್ನು । ದಧಾತು—ಸ್ಥಾಪಿಸಲಿ.

॥ ಭಾವಾರ್ಥ ॥

ಸರ್ವವ್ಯಾಪಕನಾದ ವಾಯುವು ನಿನ್ನನ್ನು ರಕ್ಷಿಸಲಿ. ಅತ್ಯುತ್ಕೃಷ್ಟವಾದ ಸ್ವರ್ಗದಲ್ಲಿ ಎಲ್ಲರಿಗಿಂತಲೂ ಪ್ರಥಮತಃ ಇರುವ ಪೂಷದೇವನು ಯಜಮಾನನಾದ ನಿನ್ನನ್ನು ರಕ್ಷಿಸಲಿ. ಯಾವ ಪ್ರದೇಶದಲ್ಲಿ ಉತ್ತಮವಾದ ಕರ್ಮಕರ್ತರಿರುವರೋ, ಆ ಉತ್ತಮ ಕರ್ಮಕರ್ತರು ಎಲ್ಲಿಗೆ ಹೋಗುವರೋ ಆ ಸ್ಥಾನದಲ್ಲಿ ಪ್ರಕಾಶಮಾನನಾದ ಸವಿತೃದೇವನು ನಿನ್ನನ್ನು ಸ್ಥಾಪಿಸಲಿ.

English Translation

May the all-pervading, Vayu protect you, may Pushan (preserve) you, (going) first on the excellent path (to heaven) : may the divine Savitri place you, where the virtuous abide, whither they have gone.

॥ ಸಂಹಿತಾಪಾಠಃ ॥

ಪೂಷೇಮಾ ಆಶಾ ಅನು ವೇದ ಸರ್ವಾಃ ಸೋ ಅಸ್ಮೈ ಅಭಯತಮೇನ ನೇಷತ್ ॥

ಸ್ತಸ್ತಿದಾ ಆಘೃಣಿಃ ಸರ್ವವೀರೋಽಪ್ರಯುಚ್ಛನ್ಪುರ ಏತು ಪ್ರಜಾನನ್ ॥೫॥

॥ ಪದಪಾಠಃ ॥

ಪೂಷಾ । ಇಮಾಃ । ಆಶಾಃ । ಅನು । ವೇದ । ಸರ್ವಾಃ । ಸಃ । ಅಸ್ಮಾನ್ । ಅಭಯೇಽತಮೇನ । ನೇಷತ್ ।

ಸ್ತೇಽಸ್ತಿದಾಃ । ಆಘೃಣಿಃ । ಸರ್ವವೀರಃ । ಅಪ್ರಯುಚ್ಛನ್ । ಪುರಃ । ಏತು । ಪ್ರಜಾನನ್ ॥೫॥

॥ ಸಾಯಣಭಾಷ್ಯಂ ॥

ಏಕಾದಶಿನಸ್ಯ ಪೌಷ್ಣಸ್ಯ ಪಶೋರ್ಹವಿಷಃ ಪೂಷೇಮಾ ಇತ್ಯನುವಾಕ್ಯಾ । ಪೂಷೇಮಾ ಆಶಾ ಅನು ವೇದ ಸರ್ವಾಃ ಶುಕ್ರಂ ತೇ ಅನ್ಯದ್ಯಜತಂ ತೇ ಅನ್ಯತ್ । ಅ. ೩-೭ । ಇತಿ ಹಿ ಸೂತ್ರಿತಂ ॥

ಪೂಷಾ ದೇವ ಇಮಾ ಸರ್ವಾ ಆಶಾಃ ಪ್ರಾಚ್ಯಾದ್ಯಾ ದಿಶೋಽನು ವೇದ । ಅನುಪೂರ್ವೇಣ ಜಾನಾತಿ । ಇಮಾಃ ಸುಖೇನ ಗಂತವ್ಯಾ ಅಸುಖೇನೇತಿ ವೈವಮನುಕ್ರಮೇಣ ಜಾನಾತೀತ್ಯರ್ಥಃ । ಏವಂ ಸತ್ಯಸ್ಮಾನ್ । ಪ್ರಮಿತೇ ಯಜಮಾನೋ ಬ್ರವೀತಿ ಪುತ್ರಮುಖೇನ ಯಾಜಕಮುಖೇನ ವಾ । ಅಸ್ಮಾನ-ಭಯತಮೇನಾತ್ಯಂತಂ ಭಯರಹಿತೇನ ಮಾರ್ಗೇಣ ನೇಷತ್ । ನಯತು । ಕಥಂ । ಸ್ವಸ್ತಿದಾಃ ಕಲ್ಯಾಣಸ್ಯ ದಾತಾಘೃಣೇರಾಗತದೀಪ್ತಿಯುಕ್ತಃ ಸರ್ವವೀರಃ ಸರ್ವೈರ್ವೀರೈಃ ಕರ್ಮಣಿ ಸಮರ್ಥೈರ್ಯುಕ್ತಶ್ಚಿರುಪೇ-ತೋಽಪ್ರಯುಚ್ಛನ್ನಪ್ರಮಾದ್ಯನ್ ಪ್ರಜಾನನ್ನಸ್ಮಾಕಂ ಫಲಾಫಲೇ ವಿಜಾನಾನಃ ಸನ್ ಪುರ ಏತು । ಅಸ್ಮಾಕಂ ಪುರಸ್ತಾದ್ಗಚ್ಛತು । ಯಥಾಸ್ಮಾಕಂ ಭಯಂ ನ ಭವತಿ ತಥಾ ಗಚ್ಛತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಪೂಷಾ—ಪೂಷದೇವನು । ಸರ್ವಾಃ—ಸಮಸ್ತವಾದ । ಇಮಾ ಆಶಾಃ—ಈ ದಿಕ್ಕುಗಳನ್ನೆಲ್ಲ । ಅನು ವೇದ—ತಿಳಿದಿದ್ದಾನೆ । ಸಃ—ಅವನು । ಅಸ್ಮಾನ್—ನಮ್ಮನ್ನು । ಅಭಯತಮೇನ—ಕೊಂಚವೂ । ಭಯವಿಲ್ಲದಿರುವ ಮಾರ್ಗದಿಂದ । ನೇಷತ್—ಕರೆದೊಯ್ಯಲಿ । ಸ್ವಸ್ತಿದಾಃ—ಕಲ್ಯಾಣಪ್ರದನೂ । ಅಘೃಣಿಃ—ಅತ್ಯಂತ ಪ್ರಭಾಯುತನೂ । ಸರ್ವವೀರಃ—ಸಕಲವಾದ ಋತ್ವಿಕ್ಕುಗಳಿಂದ ಕೂಡಿದವನೂ ಆಗಿ । ಅಪ್ರಯುಚ್ಛನ್—ಕೊಂಚವೂ ಅಜಾಗರೂಕನಾಗಿರದಿಯೂ । ಪ್ರಜಾನನ್—ನಮ್ಮ ಒಳ್ಳೆಯದನ್ನು ಅರಿತವನಾಗಿಯೂ ಆಗಿ । ಪುರಃ—ನಮ್ಮ ಮುಂದೆ । ಏತು—ಸಂಚರಿಸಲಿ.

॥ ಭಾವಾರ್ಥ ॥

ಪೂಷದೇವನು ಸಕಲವಾದ ಈ ದಿಕ್ಕುಗಳನ್ನೆಲ್ಲ ಅರಿತಿದ್ದಾನೆ. ಅವನು ನಮ್ಮನ್ನು ಕೊಂಚವೂ ಭಯವಿಲ್ಲದಿರುವ ಮಾರ್ಗದಲ್ಲಿ ಕರೆದೊಯ್ಯಲಿ. ಕಲ್ಯಾಣ ಪ್ರದನೂ, ಅತ್ಯಂತ ಪ್ರಭಾಯುತನೂ, ಸಕಲವಾದ ಋತ್ವಿಕ್ಕುಗಳಿಂದ ಕೂಡಿದವನೂ ಆಗಿ ಕೊಂಚವೂ ಅಜಾಗರೂಕನಾಗಿರದಿಯೂ, ನಮ್ಮ ಕಲ್ಯಾಣವನ್ನು ಅರಿತವನಾಗಿಯೂ ಆಗಿ ನಮ್ಮ ಮುಂದೆ ಸಂಚರಿಸಲಿ.

English Translation

Pushan knows all these regions severally, let him conduct us by (the path) that is most free from peril: let him precede us, who is the giver of prosperity, endowed with radiance, accompanied by all pious men, ever vigilant, and knowing our (deserts).

॥ ವಿಶೇಷವಿಷಯಗಳು ॥

ಏಕಾದಶಿನ್ ಎಂಬ ಪೂಷನನ್ನುದ್ದೇಶಿಸಿ ಮಾಡುವ [illegible] ಹವಿಸ್ಸನ್ನು ಹೋಮಮಾಡುವಾಗ ಪೂಷೇಮಾ ಎಂಬ ಈ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—

ಪೂಷೇಮಾ ಆಶಾ ಅನು ವೇದ ಸರ್ವಾಃ ಶುಕ್ರಂ ತೇ ಅನ್ಯದ್ಯಜತಂ ತೇ ಅನ್ಯತ್ ಎಂಬ ಸೂತ್ರದಿಂದ (ಆ ೩-೭) ವಿನ್ಯತವಾತರುವುದು.

॥ ಸಂಹಿತಾಪಾಠಃ ॥

ಪ್ರ॒ಪ॒ಥೇ ಪ॒ಥಾಮ॒ಜನಿಷ್ಟ ಪೂಷಾ ಪ್ರ॒ಪ॒ಥೇ ದಿ॒ವಃ ಪ್ರ॒ಪ॒ಥೇ ಪೃ॒ಥಿ॒ವ್ಯಾಃ ।
ಉ॒ಭೇ ಅ॒ಭಿ ಪ್ರಿ॒ಯ॒ತ॒ಮೇ ಸ॒ಧ॒ಸ್ಥೇ ಆ ಚ॒ ಪ॒ರಾ ಚ॒ ಚ॒ರ॒ತಿ॒ ಪ್ರ॒ಜಾನ॑ನ್ ॥೬॥

॥ ಪದಪಾಠಃ ॥

ಪ್ರ॒ಽಪ॒ಥೇ । ಪ॒ಥಾಮ್ । ಅ॒ಜ॒ನಿ॒ಷ್ಟ॒ । ಪೂಷಾ । ಪ್ರ॒ಽಪ॒ಥೇ । ದಿ॒ವಃ । ಪ್ರ॒ಽಪ॒ಥೇ । ಪೃ॒ಥಿ॒ವ್ಯಾಃ ।
ಉ॒ಭೇ ಇತಿ । ಅ॒ಭಿ । ಪ್ರಿ॒ಯ॒ತ॒ಮೇ ಇತಿ ಪ್ರಿ॒ಯ॒ಽತ॒ಮೇ॒ । ಸ॒ಧ॒ಸ್ಥೇ ಇತಿ ಸ॒ಧ॒ಽಸ್ಥೇ॒ । ಆ । ಚ॒ । ಪ॒ರಾ ।
ಚ॒ । ಚ॒ರ॒ತಿ॒ । ಪ್ರ॒ಽಜಾನ॑ನ್ ॥ ೬ ॥

॥ ಸಾಯಣಭಾಷ್ಯಂ ॥

ಏಕಾದಶಿನಸ್ಯ ಪೌಷ್ಣಸ್ಯ ಪಶೋಃ ಪುರೋಡಾಶಸ್ಯ ಪ್ರಪಥೇ ಪಥಾಮಿತಿ ಯಾಜ್ಯಾ । ಸೂತ್ರಿತಂ ಚ । ಪ್ರಪಥೇ ಪಥಾಮಜನಿಷ್ಟ ಪೂಷಾ ಪಥಸ್ಪಥಃ ಪರಿಪತಿಂ ವಚಸ್ಯಾ । ಆ. ೩-೭ । ಇತಿ ॥

ಪಥಾಮಂತರಿಕ್ಷಗಮನಹೇತುಭೂತಾನಾಂ ಮಾರ್ಗಾಣಾಂ ಮಧ್ಯೇ ಪ್ರಪಥೇ ಯಃ ಪ್ರಕೃಷ್ಟಃ ಪಂಥಾಸ್ತಿ ತತ್ರ ಪೂಜಾಜನಿಷ್ಟ ।* ಪ್ರಾದುರಭೂತ್ । ಪುಣ್ಯಕರ್ಮಣಾಂ ಸುಗತಿಪ್ರಾಪಣಾರ್ಥಮವಸ್ಥಿತ ಇತಿ ಭಾವಃ । ತಥಾ ದಿವೋ ದ್ಯುಲೋಕಸ್ಯ ಚ ಮಾರ್ಗಾಣಾಂ ಮಧ್ಯೇ ಪ್ರಪಥೇ ಪ್ರಕೃಷ್ಟೇ ಮಾರ್ಗೇ ಜಾತಃ । ತಥಾ ಪೃಥಿವ್ಯಾಃ ಪ್ರಪಥೇ ಪ್ರಕೃಷ್ಟೇ ಮಾರ್ಗೇ ಮನುಷ್ಯಾಣಾಂ ತತ್ತತ್ಕರ್ಮಣಿ ಪ್ರವರ್ತನಾರ್ಥಂ ಪ್ರಾದುರ್ಭೂತ ಇತ್ಯರ್ಥಃ । ಸೋಽಯಂ ಪೂಷಾ ಪ್ರಿಯತಮೇ ಸರ್ವಸ್ಯೇಷ್ಟತಮೇ ಸಧಸ್ಥೇ ಸರ್ವೇಷಾಂ ಸಹಾವಸ್ಥಾನಭೂತೇ ಉಭೇ ದ್ಯಾವಾಪೃಥಿವ್ಯಾವಭಿಲಕ್ಷ್ಯ ಚರತಿ । ಅಭಿಮುಖ್ಯೇನ ಚರತಿ । ಸುಕೃತಿನಾಂ ಸುಕೃತಫಲಪ್ರದರ್ಶನಾಯಾನುಕೂಲಂ ಚರತೀತ್ಯರ್ಥಃ । ತಥಾ ಪರಾ ಚರತಿ । ದುಷ್ಕರ್ಮಣಾಂ ಪ್ರತಿಕೂಲಂ ಗಚ್ಛತಿ । ಕಂ ಕುರ್ವನ್ । ಪ್ರಜಾನನ್ ಅನೇನೇದಗ್ಂ ಕರ್ಮ ಕೃತಮಸ್ಯ ಕರ್ಮಣ ಇದಂ ಫಲಮಿತ್ಯವಿಶೇಷೇಣ ಜಾನಾನಃ ॥

॥ ಪ್ರತಿಪದಾರ್ಥ ॥

ಪಥಾಂ—ಮಾರ್ಗಗಳಲ್ಲೆಲ್ಲ । ಪ್ರಪಥೇ—ಅತ್ಯುತ್ಕೃಷ್ಟವಾದ ಮಾರ್ಗದಲ್ಲಿ । ಪೂಷಾ—ಪೂಷದೇವನು । ಅಜನಿಷ್ಟ—ಉತ್ಪನ್ನನಾಗಿದ್ದಾನೆ । ದಿವಃ—ದ್ಯುಲೋಕದ । ಪ್ರಪಥೇ—ಅತ್ಯುತ್ಕೃಷ್ಟವಾದ ಮಾರ್ಗದಲ್ಲಿಯೂ ಉತ್ಪನ್ನನಾಗಿದ್ದಾನೆ । ಪೃಥಿವ್ಯಾಃ—ಪೃಥ್ವಿಯ । ಪ್ರಪಥೇ—ಉತ್ಕೃಷ್ಟವಾದ ಮಾರ್ಗದಲ್ಲಿಯೂ ಉತ್ಪನ್ನನಾಗಿದ್ದಾನೆ (ಅದೇ ಪೂಷನು) । ಪ್ರಿಯತಮೇ—ಎಲ್ಲರಿಗೂ ಪ್ರಿಯವಾದುದೂ । ಸಧಸ್ಥೇ—ಸಕಲರಿಗೂ ಸಮಾನಸ್ಥಾನವಾದುದೂ ಆದ । ಉಭೇ—ದ್ಯಾವಾಪೃಥಿವಿಗಳೆರಡರ ನಡುವೆ । ಆ ಚರತಿ—ಸಂಚರಿಸುತ್ತಾನೆ । ಪ್ರಜಾನನ್—ಕರ್ಮವಂತರ ಇತಿಕೃತ್ಯಗಳನ್ನರಿತು । ಪರಾ (ಚರತಿ)—ಕರ್ಮಭ್ರಷ್ಟರಿಗೆ ಪ್ರತಿಮುಖನಾಗಿ ಸಂಚರಿಸುತ್ತಾನೆ.

॥ ಭಾವಾರ್ಥ ॥

ಪೂಷದೇವನು ಮಾರ್ಗಗಳಲ್ಲೆಲ್ಲ ಅತ್ಯುತ್ಕೃಷ್ಟವಾದ ಮಾರ್ಗದಲ್ಲಿ ಉತ್ಪನ್ನನಾಗಿದ್ದಾನೆ. ದ್ಯುಲೋಕದ ಅತ್ಯುತ್ಕೃಷ್ಟವಾದ ಮಾರ್ಗದಲ್ಲಿಯೂ ಪೃಥ್ವಿಯ ಉತ್ಕೃಷ್ಟವಾದ ಮಾರ್ಗದಲ್ಲಿಯೂ ಉತ್ಪನ್ನನಾಗಿದ್ದಾನೆ. ಅಪೇ ಪೂಷನು ಎಲ್ಲರಿಗೂ ಪ್ರಿಯವಾದುದೂ, ಸಕಲರಿಗೂ ಸಮಾನಸ್ಥಾನವಾದುದೂ ಆದ ದ್ಯಾವಾಪೃಥಿವಿಗಳೆರಡರ ನಡುವೆ ಸಂಚರಿಸುತ್ತಾನೆ. ಮೃತರಾದವರಲ್ಲಿ ಕರ್ಮವಂತರ ಮತ್ತು ಕರ್ಮಭ್ರಷ್ಟರ ವ್ಯತ್ಯಾಸಗಳನ್ನರಿತು ಕರ್ಮಭ್ರಷ್ಟರಿಗೆ ಪ್ರತಿಮುಖನಾಗಿಯೂ ಕರ್ಮವಂತರಿಗೆ ಅಭಿಮುಖನಾಗಿಯೂ ಸಂಚರಿಸುತ್ತಾನೆ.

English Translation

Pushan has been born on the best path of paths, on the best path of heaven, on the best path of earth, he goes forward and backward over both (worlds), the assemblies longed for by all, discriminating (the merits of the dead)

॥ ವಿಶೇಷವಿಷಯಗಳು ॥

ಏಕಾದಶಿನ್ ಎಂಬ ಪೌಷ್ಣಸಂಬಂಧವಾದ ಪಶುಹೋಮದಲ್ಲಿ ಪುರೋಡಾಶವನ್ನು ಹೋಮಮಾಡುವಾಗ **ಪ್ರಪಥೇ ಪಥಾಂ** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಪ್ರಪಥೇ ಪಥಾಮಜನಿಷ್ಟ ಪೂಷಾ ಪಥಸ್ಪತಿಃ ಪರಿಪತಿಂ ವಚಸ್ಯಾ** ಎಂಬ ಸೂತ್ರದಿಂದ (ಅ. ೩-೭) ವಿವೃತವಾಗಿರುವುದು.

। ಸಂಹಿತಾಪಾಠಃ ।

ಸರಸ್ವತೀಂ ದೇವಯಂತೋ ಹವಂತೇ ಸರಸ್ವತೀಮಧ್ವರೇ ತಾಯಮಾನೇ ।
ಸರಸ್ವತೀಂ ಸುಕೃತೋ ಅಹ್ವಯಂತ ಸರಸ್ವತೀ ದಾಶುಷೇ ವಾರ್ಯಂ ದಾತ್ ॥ ೭ ॥

। ಪದಪಾಠಃ ।

ಸರಸ್ವತೀಂ । ದೇವಯಂತಃ । ಹವಂತೇ । ಸರಸ್ವತೀಂ । ಅಧ್ವರೇ । ತಾಯಮಾನೇ ।
ಸರಸ್ವತೀಂ । ಸುಕೃತಃ । ಅಹ್ವಯಂತ । ಸರಸ್ವತೀ । ದಾಶುಷೇ । ವಾರ್ಯಂ । ದಾತ್ ॥ ೭ ॥

। ಸಾಯಣಭಾಷ್ಯಂ ।

ವ್ಯಾಖ್ಯಸ್ಯ ದಶರಾತ್ರಸ್ಯ ತೃತೀಯೇ ಛಂದೋಮೇ ಪ್ರಉಗಶಸ್ತ್ರೇ ಸಾರಸ್ವತಶ್ಯಚಸ್ಯ ಸರಸ್ವತೀಂ ದೇವಯಂತ ಇತ್ಯೇಷಾದ್ಯಾ । ಸೂತ್ರ್ಯತೇ ಹಿ । ಪ್ರ ಬ್ರಹ್ಮಾಣೋ ಅಂಗಿರಸೋ ನಕ್ಷಂತ ಸರಸ್ವತೀಂ ದೇವಯಂತೋ ಹವಂತೇ । ಅ. ೮-೧೧ । ಇತಿ ॥

ದೇವಯಂತೋ ದೇವಾನ್ಕಮ್ಯುಂ ಸ್ತೋತುಂ ಚ ಕಾಮಯಮಾನಾ ಯಜಮಾನಾಃ ಸರಸ್ವತೀ-ಮೇತನ್ನಾಮಿಕಾಂ ಮಧ್ಯಮಸ್ಥಾನದೇವತಾಂ ಹವಂತೇ । ಕರ್ಮಾವಯವತ್ವಾಯಾಹ್ವಯಂತಿ । ತಥಾ ತಾಯಮಾನೇ ಸ್ತುತಿಭಿರ್ಹವಿರ್ಭಿಶ್ಚ ವಿಸ್ತೀರ್ಯಮಾಣೇಽಧ್ವರೇ ಯಜ್ಞೇ ಸರಸ್ವತೀಂ ಯಜಂತೀತಿ ಶೇಷಃ । ಸುಕೃತಃ ಪುಣ್ಯಕರ್ಮಾಣಃ ಸರಸ್ವತೀಮಹ್ವಯಂತ । ಫಲಪ್ರದಾನಾಯ ಹ್ವಯಂತೇ । ಯತ ಏವಮತಃ ಕಾರಣಾತ್ಸರಸ್ವತೀ ದೇವೀ ದಾಶುಷೇ ಹವೀಂಷಿ ದತ್ತವತೇ ಯಜಮಾನಾಯ ವಾರ್ಯಂ ವರಣೀಯಂ ಕರ್ಮಫಲಂ ದಾತ್ । ಪ್ರಯಚ್ಛತು ॥

॥ ಪ್ರತಿಪದಾರ್ಥ ॥

ದೇವಯಂತಃ—ದೇವತೆಗಳನ್ನಪೇಕ್ಷಿಸುವವರು । **ಸರಸ್ವತೀಂ**—ಸರಸ್ವತೀದೇವಿಯನ್ನು । **ಹವಂತೇ**—ಪ್ರಾರ್ಥಿಸಿ ಕರೆಯುತ್ತಾರೆ । **ತಾಯಮಾನೇ**—ವಿಸ್ತೃತವಾಗಿ ನೆರವೇರುವ । **ಅಧ್ವರೇ**—ಯಜ್ಞದಲ್ಲಿ । **ಸರಸ್ವತೀಂ**—ಸರಸ್ವತಿಯನ್ನು ಪೂಜಿಸುತ್ತಾರೆ । **ಸುಕೃತಃ**—ಉತ್ತಮವಾದ ಕರ್ಮವಂತರು । **ಸರಸ್ವತೀಮ್**—ಸರಸ್ವತಿಯನ್ನು । **ಅಹ್ವಯಂತ**—ಫಲಪ್ರಾಪ್ತಿಗಾಗಿ ಕರೆಯುತ್ತಾರೆ । **ಸರಸ್ವತೀ**—ಸರಸ್ವತೀದೇವಿಯು । **ದಾಶುಷೇ**—ಹವಿಸ್ಸನ್ನು ಅರ್ಪಿಸಿದ ಯಜಮಾನನಿಗೆ । **ವಾರ್ಯಂ**—ಅಪೇಕ್ಷಿತವಾದ ಫಲವನ್ನು । **ದಾತ್**—ಕೊಡಲಿ.

॥ ಭಾವಾರ್ಥ ॥

ದೇವತೆಗಳನ್ನಪೇಕ್ಷಿಸುವವರು ಸರಸ್ವತೀದೇವಿಯನ್ನು ಪ್ರಾರ್ಥಿಸಿ ಕರೆಯುತ್ತಾರೆ. ವಿಸ್ತೃತವಾಗಿ ನೆರವೇರುವ ಯಜ್ಞದಲ್ಲಿ ಸರಸ್ವತಿಯನ್ನು ಪೂಜಿಸುತ್ತಾರೆ. ಉತ್ತಮವಾದ ಕರ್ಮವಂತರು ಸರಸ್ವತಿಯನ್ನು ಫಲಪ್ರಾಪ್ತಿಗಾಗಿ ಕರೆಯುತ್ತಾರೆ. ಸರಸ್ವತೀದೇವಿಯು ಹವಿಸ್ಸನ್ನು ಅರ್ಪಿಸಿದ ಯಜಮಾನನಿಗೆ ಅಪೇಕ್ಷಿತವಾದ ಫಲವನ್ನು ಕೊಡಲಿ.

English Translation

The devout invoke Saraswati; they worship Saraswati at the strewn sacrifice; the virtuous call upon Saraswati: may Saraswati bestow blessings upon the donor (of the oblation).

॥ ವಿಶೇಷವಿಷಯಗಳು ॥

ವ್ಯೂಳ್ಹವೆಂಬ ದಶರಾತ್ರಯಾಗದ ತೃತೀಯಛಂಧೋಮದಲ್ಲಿ ಪ್ರಉಗಶಸ್ತ್ರಮಂತ್ರಗಳನ್ನು ಪಠಿಸುವಾಗ **ಸರಸ್ವತೀಂ ದೇವಯಂತಃ** ಎಂಬ ಸರಸ್ವತೀದೇವತಾಕವಾದ ೭-೯ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ಬ್ರಹ್ಮಾಣೋ ಅಂಗಿರಸೋ ನಕ್ಷಂತ ಸರಸ್ವತೀಂ ದೇವಯಂತೋ ಹವಂತೇ** ಎಂಬ ಸೂತ್ರದಿಂದ (೮. ೪-೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಸರಸ್ವತಿ ಯಾ ಸರಥಂ ಯಯಾಥ ಸ್ವಧಾಭಿರ್ದೇವಿ ಪಿತೃಭಿರ್ಮದಂತೀ ।
ಆಸದ್ಯಾಸ್ಮಿನ್ಬರ್ಹಿಷಿ ಮಾದಯಸ್ವಾನಮೀವಾ ಇಷ ಆ ಧೇಹ್ಯಸ್ಮೇ ॥ ೮ ॥

॥ ಪದಪಾಠಃ ॥

ಸರಸ್ವತಿ । ಯಾ । ಸರಥಂ । ಯಯಾಥ । ಸ್ವಧಾಭಿಃ । ದೇವಿ । ಪಿತೃಭಿಃ । ಮದಂತೀ ।
ಆಸದ್ಯ । ಅಸ್ಮಿನ್ । ಬರ್ಹಿಷಿ । ಮಾದಯಸ್ವ । ಅನಮೀವಾಃ । ಇಷಃ । ಆ । ಧೇಹಿ । ಅಸ್ಮೇ ಇತಿ ॥೮॥

॥ ಸಾಯಣಭಾಷ್ಯಂ ॥

ಹೇ ಸರಸ್ವತಿ ಹೇ ದೇವಿ ಯಾ ತ್ವಂ ಸರಥಂ ಪಿತೃಭಿಃ ಸಹ ಸಮಾನೇನ ರಥೇನ ಯುಕ್ತಂ ಯಥಾ ಭವತಿ ತಥಾ ಯಯಾಥ । ಅಸ್ಮದೀಯಂ ಯಜ್ಞಂ ಪ್ರಾಪ್ತವತಿ । ಕಿಂ ಕುರ್ವತೀ । ಪಿತೃಭಿಃ ಸಹ ಸ್ವಧಾಭಿರ್ಹವಿರ್ಲಕ್ಷಣೈರನ್ನೈರ್ಮದಂತೀ ಮಾದ್ಯಂತೀ ಯಜ್ಞಂ ಗಚ್ಛಸೀತಿ ಸಂಬಂಧಃ । ಸಾ ತ್ವಂ ಬರ್ಹಿಷ್ಯಸ್ಮಿನ್ವೇದಿಸ್ತರಣೇ ಯಜ್ಞ ಆಸದ್ಯೋಪವಿಶ್ಯ ಮಾದಯಸ್ವ । ಹವಿರ್ಭಿಸ್ತೃಪ್ತಾ ಭವ । ಆತ್ಮಾನಂ ತರ್ಪಯ ವಾ । ತತಸ್ತೃಪ್ತಾ ಸತೀ ತ್ವಮನಮೀವಾಃ । ಅಮೀವಾ ರೋಗಃ ತದ್ವರ್ಜಿತಾನ್ಯರೋಗ್ಯಜನನಾನೀಷೋಽನ್ನಾನ್ಯಸ್ಮೇ ಅಸ್ಮಭ್ಯಮಾ ಧೇಹಿ । ಪರ್ಯಾಪ್ತಂ ಪ್ರಯಚ್ಛ ॥

॥ ಪ್ರತಿಪದಾರ್ಥ ॥

ದೇವಿ—ದೇವತಾತ್ಮಳಾದ । ಸರಸ್ವತಿ—ಎಲೈ ಸರಸ್ವತಿಯೇ । ಯಾ—ಯಾವ ನೀನು । ಪಿತೃಭಿಃ—ಪಿತೃಗಳೊಡನೆ ಕುಳಿತು । ಸ್ವಧಾಭಿಃ—ಸ್ವಧಾರೂಪವಾದ ಹವಿಸ್ಸುಗಳಿಂದ । ಮದಂತೀ—ಹರ್ಷವನ್ನು ಹೊಂದುತ್ತ । ಸರಥಂ—ಅವರೊಡನೆ ಒಂದೇ ರಥದಲ್ಲಿ ಕುಳಿತು । ಯಯಾಥ—ಹೋಗುವೆಯೋ ಅಂತಹ ನೀನು । ಅಸ್ಮಿನ್-ಬರ್ಹಿಷಿ—ಈ ದರ್ಭಾಸನದಲ್ಲಿ । ಆಸದ್ಯ—ಕುಳಿತು । ಮಾದಯಸ್ವ—ತೃಪ್ತಿಯನ್ನು ಹೊಂದು । ಅನಮೀವಾಃ—ರೋಗಾದಿರಹಿತವಾದ । ಇಷಃ—ಅನ್ನಗಳನ್ನು । ಅಸ್ಮೇ—ನಮಗೆ । ಆ ಧೇಹಿ—ಕೊಡು.

॥ ಭಾವಾರ್ಥ ॥

ದೇವತಾತ್ಮಳಾದ ಎಲೈ ಸರಸ್ವತಿಯೇ, ಯಾವ ನೀನು ಪಿತೃಗಳೊಡನೆ ಕುಳಿತು ಸ್ವಧಾರೂಪವಾದ ಹವಿಸ್ಸುಗಳಿಂದ ಹರ್ಷವನ್ನು ಹೊಂದುತ್ತ ಅವರೊಡರೆ ಒಂದೇ ರಥದಲ್ಲಿ ಕುಳಿತು ಹೋಗುವೆಯೋ ಅಂತಹ ನೀನು ಈ ದರ್ಭಾಸನದಲ್ಲಿ ಕುಳಿತು ತೃಪ್ತಿಯನ್ನು ಹೊಂದು. ರೋಗಾದಿರಹಿತವಾದ ಅನ್ನಗಳನ್ನು ನಮಗೆ ಕೊಡು.

English Translation

Divine Saraswati, who rides in the same chariot with the Pitris, and is delighted (along with them) by the (sacrificial) viands, seated on the sacred grass be gratified (by our offering), and grant us wholesome food.

॥ ಸಂಹಿತಾಪಾಠಃ ॥

ಸರಸ್ವತೀಂ ಯಾಂ ಪಿತರೋ ಹವಂತೇ ದಕ್ಷಿಣಾ ಯಜ್ಞಮಭಿನಕ್ಷಮಾಣಾಃ।
ಸಹಸ್ರಾರ್ಘಮಿಳೋ ಅತ್ರ ಭಾಗಂ ರಾಯಸ್ಪೋಷಂ ಯಜಮಾನೇಷು ಧೇಹಿ ॥ ೯ ॥

॥ ಪದಪಾಠಃ ॥

ಸರಸ್ವತೀಂ । ಯಾಂ । ಪಿತರಃ । ಹವಂತೇ । ದಕ್ಷಿಣಾ । ಯಜ್ಞಂ । ಅಭಿ ನಕ್ಷಮಾಣಾಃ ।
ಸಹಸ್ರ ಅರ್ಘಂ । ಇಳಃ । ಅತ್ರ । ಭಾಗಂ । ರಾಯಃ । ಪೋಷಂ । ಯಜಮಾನೇಷು । ಧೇಹಿ ॥ ೯ ॥

॥ ಸಾಯಣಭಾಷ್ಯಂ ॥

ಯಾಂ ತ್ವಾಂ ಸರಸ್ವತೀಂ ಪಿತರೋ ಹವಂತೇ ಆಹ್ವಯಂತಿ । ಕೀದೃಶಾಃ । ದಕ್ಷಿಣಾ ॥ ದಕ್ಷಿಣಾ-ದಾಜಿತ್ಯಾಚ್ಪ್ರತ್ಯಯಃ । ಪಾ. ೫-೩-೫೬ ॥ ದಕ್ಷಿಣತ ಆಗತ್ಯ ಯಜ್ಞಮಭಿನಕ್ಷಮಾಣಾ ಅಭಿತೋ ಗಚ್ಛಂತೋ ವ್ಯಾಪ್ನುವಂತಃ । ಅತ್ರಾಸ್ಮಿನ್ಯಜ್ಞೇ ಸಹಸ್ರಾರ್ಘಂ ಬಹುಭಿಃ ಪೂಜನೀಯಮುಪಯೋಜ್ಯಮಿಳೋಽನ್ನಸ್ಯ ಭಾಗಂ ರಾಯೋ ಧನಸ್ಯ ಪೋಷಂ ಪುಷ್ಟಿಂ ಚ ಯಜಮಾನೇಷು ತ್ವಂ ಧೇಹಿ । ಸ್ಥಾಪಯ ॥

॥ ಪ್ರತಿಪದಾರ್ಥ ॥

ದಕ್ಷಿಣಾ—ಪ್ರದಕ್ಷಿಣಾಕಾರವಾಗಿ । ಯಜ್ಞಂ—ಯಜ್ಞವನ್ನು । ಅಭಿನಕ್ಷಮಾಣಾಃ—ಸುತ್ತುತ್ತ ಇರುವ । ಪಿತರಃ—ಪಿತೃಗಳು । ಯಾಂ ಸರಸ್ವತೀಂ—ಯಾವ ಸರಸ್ವತಿಯನ್ನು । ಹವಂತೇ—ಕರೆಯುವರೋ ಆ ಸರಸ್ವತಿಯು । ಅತ್ರ—ಈ ಯಜ್ಞದಲ್ಲಿ । ಸಹಸ್ರಾರ್ಘಂ—ಅನೇಕರ ಸ್ತುತಿಗೂ ತೃಪ್ತಿಗೂ ಸಾಕಾಗುವ ಇಳಃ—ಅನ್ನದ । ಭಾಗಂ—ಭಾಗವನ್ನೂ । ರಾಯಃ—ಧನವನ್ನೂ । ಪೋಷಂ—ಪುಷ್ಟಿಯನ್ನೂ । ಯಜಮಾನೇಷು—ಯಜಮಾನರಲ್ಲಿ । ಧೇಹಿ—ಸ್ಥಾಪಿಸಲಿ.

॥ ಭಾವಾರ್ಥ ॥

ಪ್ರದಕ್ಷಿಣಪೂರ್ವಕವಾಗಿ ಯಜ್ಞವನ್ನು ಸುತ್ತುತ್ತ ಇರುವ ಪಿತೃಗಳು ಯಾವ ಸರಸ್ವತಿಯನ್ನು ಕರೆಯುವರೋ ಆ ಸರಸ್ವತಿಯು ಈ ಯಜ್ಞದಲ್ಲಿ ಅನೇಕರ ಸ್ತುತಿಗೂ ತೃಪ್ತಿಗೂ ಸಾಕಾಗುವ ಅನ್ನದ ಭಾಗವನ್ನೂ ಧನವನ್ನೂ ಪುಷ್ಟಿಯನ್ನೂ ಯಜಮಾನರಲ್ಲಿ ಸ್ಥಾಪಿಸಲಿ. (ಕೊಡಲಿ)

English Translation

Saraswati, whom the Pitris invoke when circumambulating the sacrifice on the right, bestow upon the worshippers at this sacrifice a portion of food fit for thousands, and increase of riches.

ಸಂಹಿತಾಪಾಠಃ

ಆಪೋ॑ అస్మా॒న్మాత॑రఃశుంధయంతు ఘృ॒తేన॑ నో ఘృ॒తప్వ॑ఃపునంతు ।
విశ్వం॒ హి రి॒ప్రం ప్ర॒వహం॑తి దే॒వీరుదిదా॑భ్యఃశుచి॒రా పూ॒త ఏ॑మి ॥

॥ పదపాఠః ॥

ఆప॑ఃఅస్మా॒న్మాత॑రఃశుంధయంతు ఘృ॒తేన॑ నఃఘృ॒తప్వ॑ఃపునంతు ।
విశ్వం॑ హి రి॒ప్రం ప్ర॒వహం॑తి దే॒వీరుత్ ఇ॑దా॒భ్యఃశుచి॑ఃఆ పూ॒తఃఏ॑మి ॥ ౧౦ ॥

। సాయణభాష్యం ।

అవభృథస్థాన ఆపో అస్మానిత్యేషా । సూత్రితం చ । తత ఆచమ్యాప్లవంత ఆపో అస్మాన్మాతరఃశుంధయంతు । అ ౬-౧౩ । ఇతి ॥ దశమేఽహని వపామార్జనేఽప్యేషా । సూత్రితం చ । ఇదమాపఃప్ర వహతేత్యేతస్యాఃస్థాన ఆపో అస్మాన్మాతరఃశుంధయంతు । అ. ౯-౧౭ । ఇతి ॥

మాతరో॑ జగతో॒ మాతృస్థానీయా అపోఽస్మాఞ్శుంధయంతు । ప్రోక్షణేన శోధయంతు । తథా ఘృతప్వఃఘృతమివోదకం । తేనాన్యాన్పునంతీతి । తాస్తథోక్తా ఆపఃయద్వా । ఘృతప్వఃఘృతం గవ్యం । తేన పునంతి । తథా బ్రాహ్మణం । ఘృతేన నో ఘృతప్వఃపునంతీతి తద్వై సుపూతం యద్ఘృతేన పూయత ఇతి । తా ఆపో ఘృతేన ప్రత్యక్షేణోదకేన నోఽస్మాన్పునంతు । హి యస్మాద్దేవీర్దేవ్యో దేవనశీలా ఆపో విశ్వం సర్వం రిప్రం పాపం ప్రవహంతి పురుషసకాశాత్ప్రగమయంతి । అపనయంతీతి యావత్ । అనంతరమాభ్యోఽధ్యా ఆ పూత అభిముఖ్యేన శుద్ధఃసన్ స్తోతాహముదేమి । ఉద్గచ్ఛామి । ఊర్ధ్వం స్వర్గం గచ్ఛామీత్యర్థః ॥

। ప్రతిపదార్థ ।

మాతరఃమాతృరూపిగళాద । ఆపఃఉదకగళు । అస్మాన్నమ్మన్ను । శుంధయంతుశుద్ధిగొళిసలి । ఘృతప్వఃశుద్ధిగొళిసువ ఉదకగళు । ఘృతేనతమ్మ ప్రవాహదింద ।

ನಃ—ನಮ್ಮನ್ನು । **ಪುನಂತು**—ಶುದ್ಧಿಗೊಳಿಸಲಿ । **ಹಿ**—ಏತಕ್ಕೆಂದರೆ । **ದೇವೀಃ**—ದೇವತಾತ್ಮರಾದ ಉದಕಗಳು । **ವಿಶ್ವಂ ಹಿ**—ಸಕಲವಾದ । **ರಿಪ್ರಂ**—ಪಾಪವನ್ನೂ । **ಪ್ರವಹಂತಿ**—ಕೊಚ್ಚಿ ನಾಶಪಡಿಸುತ್ತದೆ । **ಅಭ್ಯಃ**—ಈ ಉದಕಗಳಿಂದ । **ಆ ಪೂತಃ ಶುಚಿಃ**—ಶುದ್ಧಿಯನ್ನು ಹೊಂದಿದ ನಾನು । **ಉದೇಮಿ**—ಸ್ವರ್ಗಕ್ಕೆ ಹೆತ್ತಿಹೋಗುತ್ತೇನೆ.

। ಭಾವಾರ್ಥ ।

ಮಾತೃರೂಪಿಗಳಾದ ಉದಕಗಳು ನಮ್ಮನ್ನು ಶುದ್ಧಿಗೊಳಿಸಲಿ. ಶುದ್ಧಿಗೊಳಿಸುವ ಉದಕಗಳು ತಮ್ಮ ಪ್ರವಾಹದಿಂದ ನಮ್ಮನ್ನು ಪವಿತ್ರರನ್ನಾಗಿ ಮಾಡಲಿ. ದೇವತಾತ್ಮಗಳಾದ ಉದಕಗಳು ನಮ್ಮ ಸಕಲ ಪಾಪವನ್ನು ಕೊಚ್ಚಿ ನಾಶಪಡಿಸುತ್ತವೆ. ಈ ಉದಕಗಳಿಂದ ಶುದ್ಧಿಯನ್ನು ಹೊಂದಿದ ನಾನು ಸ್ವರ್ಗಕ್ಕೆ ಹೆತ್ತಿಹೋಗುತ್ತೇನೆ.

English Translation

May the maternal waters purify us; may the shedders of water purify us with the effusion; for the divine (waters) bear away all sin; I come away from them purified (to heaven).

॥ ವಿಶೇಷವಿಷಯಗಳು ॥

ಅನಭೃತಸ್ಥಾನದಲ್ಲಿ **ಆಪೋ ಅಸ್ಮಾನ್** ಎಂಬ ಈ ಋಕ್ಕನ್ನು ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ತತ ಆಚಮ್ಯಾಪ್ಲವಂತ ಆಪೋ ಅಸ್ಮಾನ್ ಮಾತರಃ ಶುಂಧಯಂತು** ಎಂಬ ಸೂತ್ರದಿಂದ (ಆ. ೬-೧೩) ವಿವೃತವಾಗಿರುವುದು. ಮತ್ತು ಹತ್ತನೆಯ ದಿವಸ ವಪಾಮಾರ್ಜನಕಾಲದಲ್ಲಿಯೂ ಈ ಋಕ್ಕನ್ನು ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಇದಮಾಪಃ ಪ್ರ ವಹತೇತ್ಯೇತಸ್ಯಾ ಸ್ಥಾನ ಆಪೋ ಅಸ್ಮಾನ್ಮಾತರಃ ಶುಂಧಯಂತು** ಎಂಬ ಸೂತ್ರದಿಂದ (ಆ. ೮-೧೨) ವಿವೃತವಾಗಿರುವುದು.

ಮಾತರಃ ಆಪಃ—ಇಲ್ಲಿ ಆಪಃ-ಉದಕಗಳನ್ನು ಅಥವಾ ಉದಕಾಭಿಮಾನಿದೇವತೆಗಳನ್ನು **ಮಾತರಃ** ಎಂಬ ಶಬ್ದದಿಂದ ವರ್ಣಿಸಲಾಗಿದೆ. ಏಕೆಂದರೆ ತಾಯಿಯರು ತಮ್ಮ ಮಕ್ಕಳನ್ನು ಸ್ತನ್ಯಾದಿಗಳಿಂದ ಪೋಷಿಸಿ ಬೆಳೆಸುವಂತೆ ಈ ಉದಕಗಳು ಸಸ್ಯಾದಿಗಳಿಂದ ಬೆಳೆಸಿ ಅವುಗಳಿಂದ ಲಬ್ದವಾಗುವ ಆಹಾರಾದಿಗಳಿಂದ ನಮ್ಮನ್ನು (ಸಮಸ್ತ ಪ್ರಾಣಿಗಳನ್ನು) ಪೋಷಿಸುತ್ತಿರುವುವು. ಆದ್ದರಿಂದ ಮಾತೃಗಳಂತೆ ಪೋಷಿಸುವ ಸ್ವಭಾವವುಳ್ಳ ಉದಕಗಳನ್ನು **ಮಾತರಃ** ಎಂದು ಗೌರವಸೂಚಕವಾದ ಶಬ್ದದಿಂದ ಕರೆಯುವುದು ಸಹಜವಾಗಿದೆ.

ಶುಂಧಯಂತು—**ಪ್ರೋಕ್ಷಣೇನ ಶೋಧಯಂತು** । ಉದಕಗಳು ಪ್ರೋಕ್ಷಣಾದಿಗಳಿಂದ ನಮ್ಮನ್ನು ಶುದ್ಧಿಮಾಡಲಿ ಎಂಬ ಆಶ್ವಾಸನೆಯು ಇಲ್ಲಿ ಉಕ್ತವಾಗಿದೆ. ನೀರು ಅಥವಾ ಉದಕಗಳು ಎಲ್ಲವನ್ನು ಶುದ್ಧಿಮಾಡುವವು ಎಂಬ ವಿಷಯವು ಅನುಭವವೇದ್ಯವೇ ಆಗಿದೆ. ಸ್ನಾನಾದಿಗಳಿಂದ ನಮ್ಮ ಶರೀರವನ್ನೂ, ಒಗೆಯುವುದರಿಂದ ನಮ್ಮ ವಸ್ತ್ರಾದಿಗಳನ್ನೂ, ಸಂಮಾರ್ಜನಾದಿಗಳಿಂದ ಗೃಹಾದಿಗಳನ್ನೂ, ತೊಳೆಯುವುದರಿಂದ ಪಾತ್ರಾದಿಗಳನ್ನೂ ನಾವು ಶುದ್ಧಿಮಾಡುತ್ತೇವೆ. ಎಂದರೆ ಯಾವುದನ್ನು ಶುದ್ಧಿಮಾಡಬೇಕಾದರೂ ನೀರು ಬೇಕೇಬೇಕು. ಈ ವಿಧವಾದ ಬಾಹ್ಯಶುದ್ಧಿಯಲ್ಲದೆ ಶರೀರದ ಒಳಭಾಗದಲ್ಲಿಯೂ ಆಚಮನಾದಿಗಳಿಂದ ಅಂತಃಶುದ್ಧಿಯಾಗುವುದೆಂದು—**ಅಪೋಽ-ಶ್ನಾತ್ಯಂತರತ ಏವ ಸೋಧ್ಯೋ ಭವತಿ** ಎಂಬ ತೈತ್ತಿರೀಯಶ್ರುತಿವಾಕ್ಯವು (ತೈ. ಸಂ. ೬.೧.೧.೩) ಸಾರುತ್ತಿದೆ.

घृतप्वः—ಈ ಶಬ್ದಕ್ಕೆ ಎರಡು ವಿಧ ಅರ್ಥವನ್ನು ಹೇಳಬಹುದು. **घृतमुदकं तेनात्मानं पुनंतीति । कास्तथोक्ता आपः ।** ಘೃತನೆಂದರೆ ಉದಕವು (ನಿ. ೨-೨೪) ಈ ಉದಕದಿಂದ ಇತರರನ್ನು ಅಥವಾ ಇತರ ವಸ್ತುಗಳನ್ನು ಶುದ್ಧಿಮಾಡುತ್ತಾರಾದ್ದರಿಂದ ಶುದ್ಧಿಕಾರಕವಾದ ಉದಕಗಳು ಎಂದು ಒಂದು ವಿಧವಾದ ಅರ್ಥವು. **यद्वा । घृतं गव्यं । तेन पुनंति । तथा ब्राह्मणं-घृतेन नो घृतप्वः पुनंतीति तद्वै सुपूतं यद्घृतेन पूयते** (ಶ. ಬ್ರಾ. ೩-೧-೨-೧೧) ಅಥವಾ ಘೃತವೆಂದರೆ ಗೋವಿಕಾರವಾದ ತುಪ್ಪವು ಅಥವಾ ಆಜ್ಯವು. ಇದನ್ನು ಸವರುವುದರಿಂದ ಶುದ್ಧಿಮಾಡುತ್ತಾರೆಂದು ಹೇಳಿದೆ. ಈ ವಿಷಯದಲ್ಲಿ ಯಾವ ವಸ್ತುವನ್ನು ಘೃತದಿಂದ (ಸವರುವುದು ಅಥವಾ ಮಿಶ್ರಣಮಾಡುವುದರಿಂದ) ಬೆರಸುವರೋ ಅದು ಶುದ್ಧವೆಂದು ಪರಿಗಣಿಸಲ್ಪಡುವುದು ಎಂಬರ್ಥವುಳ್ಳ ಶತಪಥಬ್ರಾಹ್ಮಣವಾಕ್ಯವನ್ನು ಭಾಷ್ಯಕಾರರು ಉದಾಹರಿಸಿದಾರೆ.

विश्वं हि रिप्रं प्रवहंति देवीः—ರಿಪ್ರವೆಂದರೆ ಪಾಪವು. ನಮ್ಮ ಸಮಸ್ತ ಪಾಪವನ್ನೂ ಉದಕಗಳು ಕೊಚ್ಚಿಕೊಂಡುಹೋಗಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದ. ಈ ವಿಷಯದಲ್ಲಿ **इदमापः प्रवहत यत्किंच दुरितं मयि** (ಋ. ಸಂ. ೧೦-೯-೮) ಎಂಬ ಶ್ರುತಿವಾಕ್ಯದ ಸಮರ್ಥನೆಯೂ ಇರುವುದು.

। ಸಂಹಿತಾಪಾಠಃ ।

द्रप्सश्चस्कंद पृथिवीमनु द्यूनिमं च योनिमनु यश्च पूर्वः ।
समानं योनिमनु संचरंतं द्रप्सं जुहोम्यनु सप्त होत्राः ॥ ११ ॥

॥ ಪದಪಾಠಃ ॥

द्रप्सः । चस्कंद । पृथिवीम् । अनु । द्यून् । इमं । च । योनिं । अनु । यः । च ।
पूर्वः ।
समानं । योनिं । अनु । संऽचरंतं। द्रप्सं । जुहोमि । अनु । सप्त । होत्राः॥

। ಸಾಯಣಭಾಷ್ಯಂ ।

सप्तेऽहनि द्रप्सश्चस्कंदेत्यादिके द्वे विप्रुड्होमार्थे । सौत्रितं च । द्रप्सश्च-स्कंदेति द्वाभ्यां विप्रुड्होमौ हुत्वा । अ. ५.१ । इति ॥ सप्तमेऽहनि विरभिमुर्धनेऽपि द्रप्स

इत्येषा । अहुतिर्बहिष्परिधि यदि स्कन्देत् तदानीमग्नीधोऽन्वारभ्य जुहुयात् । स्कन्नमभिमृशेदिति प्रकृत्य सूत्रितम् । द्रप्सश्चस्कन्देत्याहुतिशेषेऽपि बहिष्परिधावग्नीध्र एनां जुहुयात् । आ. ३-८३ । इति ॥

द्रप्सोऽभिसूयमानस्य सोमस्य रसः प्रथमान् पूर्वभाविनः पार्थिवाँल्लोकान् द्युन् दीप्यमानान्द्यूलोकांश्चानु लक्षीकृत्य चस्कन्द । स्कन्नवान् । गतवान् । तदेवाह । इमं परिदृश्यमानं योनिं स्थानभूतं लोकं च यश्चास्मात्पूर्वोऽस्ति तमनुगतवान् । समानं साधारणं योनिं द्यावापृथिवीलक्षणं स्थानमनु संचरन्तं सम्यग्गच्छन्तं द्रप्सं सोमरसं विप्रुड्लक्षणं सप्त होत्राः सप्तसंख्याकाः विप्रुडोमस्य कर्तारो होतृप्रभृतयो वयमन्वासपूर्वेण जुहोमि । जुहुयुः । यद्वा । होत्राः सप्तहोतृभिः क्रयेयमाणा यागक्रया होत्राः । ता अनु पश्चादध्वर्युरहं जुहोमि । यद्वा । द्युतगामित्वाद्द्रप्स अधित्य उच्यते । स अदित्यः पृथिवीं च दिवं च गच्छति समानं योनिमन्तरिक्षं लक्षीकृत्य । सम्यक्चरन्तं तं द्रप्समादित्यमुद्दिश्य सप्त होत्राः सप्तसंख्याकाः दिशः । यस्यां दिशि सूर्योऽस्तं वर्तते तद्व्यतिरिक्ताः सप्तसंख्याका दिशः । अनु पश्चाज्जुहोमि । यत्र यत्र वर्तते तां तां दिशं द्रव्यत्वेन प्रयच्छामि । प्रतिष्ठापयामीत्यर्थः । अत्र वाजसनेयकं । असौ वा आदित्योऽयं द्रप्सः स दिवं च पृथिवीं च स्कन्दतीमं च योनिमनु यश्च पूर्व इतीमं च लोकमनुं चेत्येतत् समानं योनिमनु संचरन्तमिति समानं ह्येष एतं योनिमनु संचरति द्रप्सं जुहोम्यनु सप्त होत्रा इत्यसौ वा आदित्योऽयं द्रप्सोऽयं दिशः सप्त होत्रा अमुं तदादित्यं दिक्षु प्रतिष्ठापयति । श. ३-४-१-३८ । इति ॥

॥ प्रतिपदार्थ ॥

द्रप्सः—ಹಿಂಡಿರುವ ಸೋಮರಸವು । प्रथमान्—ಪ್ರಥಮಪ್ರದೇಶವಾದ ಪಾರ್ಥಿವಲೋಕಗಳನ್ನೂ । द्यून् अनु—ದ್ಯುಲೋಕಗಳನ್ನೂ ಲಕ್ಷಿಸಿ । चस्कन्द—ಪ್ರವಹಿಸುತ್ತವೆ । इमं योनिं—ಇಲ್ಲಿ ಗೋಚರವಾಗುವ ಲೋಕಕ್ಕೂ (ಪೃಥ್ವಿ) । यः—ಯಾವುದು । पूर्वः—ಹಿಂದಿನಿಂದ ಇರುವುದೋ । तं अनु—ಅದನ್ನು ಲಕ್ಷಿಸಿ ಪ್ರವಹಿಸುತ್ತದೆ । समानं—ಸರ್ವ ಸಾಧಾರಣವಾದ । योनिं अनु संचरन्तं—ಲೋಕಗಳಲ್ಲೆಲ್ಲಾ ಪ್ರವಹಿಸುವ । द्रप्सं—ಸೋಮರಸವನ್ನು । सप्त होत्राः—ಸಪ್ತ ಹೋತೃಗಳಾದ ನಾವು । अनु जुहोमि—ಆಹುತಿರೂಪದಲ್ಲಿ ಅರ್ಪಿಸುತ್ತೇವೆ.

॥ भावार्थ ॥

ಹಿಂಡಿರುವ ಸೋಮರಸವು ಅನಾದಿಕಾಲದಿಂದ ಇರುವ ದ್ಯಾವಾಪೃಥಿವಿಗಳೆಲ್ಲೆಲ್ಲ ಪ್ರವಹಿಸುತ್ತವೆ. ನಮಗೆ ಗೋಚರವಾಗುವುದೂ, ಮತ್ತು ಹಿಂದಿನಿಂದ ಇರತಕ್ಕದ್ದೂ ಆದ ಲೋಕಗಳಲ್ಲೆಲ್ಲ ಪ್ರವಹಿಸುತ್ತವೆ. ಸಕಲ ಲೋಕಗಳಲ್ಲೂ ಪ್ರವಹಿಸುವ ಸೋಮರಸವನ್ನು ಸಪ್ತಹೋತೃಗಳಾದ ನಾವು ಆಹುತಿರೂಪದಲ್ಲಿ ಅರ್ಪಿಸುತ್ತೇವೆ.

English Translation

The juice of the Soma has risen to the earthly and heavenly (worlds), both this visible world, and that which (existed) before (it). I offer that juice flowing through the common region (of heaven and earth) after the sacrifices (offered by the) seven (officiating priests)

॥ ವಿಶೇಷವಿಷಯಗಳು ॥

ಯಜ್ಞದಲ್ಲಿ ಸೋಮರಸವನ್ನು ಹಿಂಡುವ ದಿವಸ ದ್ರಪ್ಸಶ್ಚಸ್ಕಂದ ಎಂಬ ಈ ಋಕ್ಕನ್ನೂ ಇದರ ಮುಂದಿನ ಋಕ್ಕನ್ನೂ ವಿಪ್ರುಡ್ಭೋಮಾರ್ಧವಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ದ್ರಪ್ಸಶ್ಚಸ್ಕಂದೇತಿ ದ್ವಾಭ್ಯಾಂ ವಿಪ್ರುಡ್ಭೋಮೌ ಹುತ್ವಾ** ಎಂಬ ಸೂತ್ರದಿಂದ (ಅ. ೫-೨) ವಿವೃತವಾಗಿರುವುದು. ಸ್ಕನ್ನಹವಿರಭಿ-ಮರ್ಶನದಲ್ಲಿಯೂ ಸಪ್ತ **ದ್ರಪ್ಸಃ** ಎಂಬ ಈ ಋಕ್ಕನ್ನು ಪರಿಸಬೇಕು. ಅಗ್ನಿಯ ನಾಲ್ಕು ಕಡೆಯೂ ಇಟ್ಟಿರುವ ಪರಿಧಿಗಳ ಹೊರಕ್ಕೆ ಆಹುತಿಯ ಹವಿಸ್ಸು ಚೆಲ್ಲಿಹೋಗಿದ್ದಲ್ಲಿ ಆಗ ಆಗ್ನೀಧ್ರನೆಂಬ ಋತ್ವಿಜನು ಈ ಋಕ್ಕಿನಿಂದ ಆಹುತಿಯನ್ನು ಅರ್ಪಿಸಿ ಚೆಲ್ಲಿಹೋದ ಹವಿಸ್ಸನ್ನು ಅಭಿಮರ್ಶನ (ಮುಟ್ಟುವುದು) ಮಾಡಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ದ್ರಪ್ಸಶ್ಚಸ್ಕಂದೇತ್ಯಾಹುತಿಶ್ಚೇದ್ಬಹಿಷ್ಪರಿಧ್ಯಾಗ್ನೀಧ್ರ ಏನಾಂ ಜುಹುಯಾತ್** ಎಂಬ ಸೂತ್ರದಿಂದ (ಅ. ೩.೧೩) ವಿವೃತವಾಗಿರುವುದು.

ದ್ರಪ್ಸಃ—ಈ ಶಬ್ದಕ್ಕೆ ಎರಡುವಿಧವಾದ ಅರ್ಥವಿರುವುದು. **ಅಭಿಷೂಯಮಾಣಸ್ಯ ಸೋಮಸ್ಯ ರಸಃ** । ಸೋಮಲತೆಗಳನ್ನು ಕಲ್ಲಿನಿಂದ ಜಜ್ಜಿ ಹಿಂಡಿ ತೆಗೆದಿರುವ ರಸಕ್ಕೆ **ದ್ರಪ್ಸಃ** ಎಂದು ಹೆಸರು. ಅಥವಾ **ದ್ರಪ್ಸಃ ದ್ರುತಗಾಮಿತ್ವಾದ್ವ್ರಪ್ಸ ಉಚ್ಯತೇ** । ಶೀಘ್ರವಾಗಿ ಸಂಚರಿಸುವ ಸ್ವಭಾವವುಳ್ಳವನಾದ್ದರಿಂದ **ದ್ರಪ್ಸಃ** ಎಂದರೆ ಆದಿತ್ಯನೆಂದೂ ಅರ್ಥವು.

ಈ ಋಕ್ಕಿಗೆ ಆದಿತ್ಯಪರವಾಗಿಯೂ ಅರ್ಥಮಾಡಬಹುದೆಂದು ಭಾಷ್ಯಕಾರರು ಹೇಳಿ ವಾಜಸನೇಯ (ಶುಕ್ಲ-ಯಜುರ್ವೇದ) ಬ್ರಾಹ್ಮಣವಾಕ್ಯವನ್ನೂ ಉದಾಹರಿಸಿದಾರೆ—

ಅಸೌ ವಾ ಆದಿತ್ಯೋ ದ್ರಪ್ಸಃ ಸ ದಿವಂ ಚಂ ಪೃಥಿವೀಂ ಚ ಸ್ಕಂದತೀಮಂ ಚ ಯೋನಿಮನು ಯಶ್ಚ ಪೂರ್ವ ಇತೀಮಂ ಚ ಲೋಕಮಮುಂ ಚೇತ್ಯೇತತ್ಸಮಾನಂ ಯೋನಿಮನು ಸಂಚ-ರಂತಮಿತಿ ಸಮಾನಂ ಹ್ಯೇಷ ಏತಂ ಯೋನಿಮನು ಸಂಚರತಿ ದ್ರಪ್ಸಂ ಜುಹೋಮ್ಯನು ಸಪ್ತ ಹೋತ್ರಾ ಇತ್ಯಸೌ ವಾ ಆದಿತ್ಯೋ ದ್ರಪ್ಸೋ ದಿಶಃ ಸಪ್ತ ಹೋತ್ರಾ ಅನುಂ ತದಾದಿತ್ಯಂ ದಿಕ್ಷು ಪ್ರತಿಷ್ಠಾಪಯತಿ ।

(ಶ. ಬ್ರಾ. ೭-೪-೧-೨೦)

ಯಶ್ಚ ದ್ರಪ್ಸಃ—ಶೀಘ್ರಗಾಮಿಯಾದ ಯಾವ ಆದಿತ್ಯನು । **ಪೂರ್ವಃ**—ಪೂರ್ವಾಭಿಮುಖವಾಗಿ ಉದಯಿಸಿ । **ಪೃಥಿವೀಮ್**—ಪೃಥಿವಿಯನ್ನೂ । **ದ್ಯೂನ್ ಇಮಂ**—ದ್ಯುಲೋಕವನ್ನೂ । **ಚಸ್ಕಂದ**—ಉದ್ದೇಶಿಸಿ ಹೋಗುವನೋ ಅಂತಹ । **ಸಮಾನಂ ಯೋನಿಂ**—ಸಮಾನಸ್ಥಾನವಾದ ಅಂತರಿಕ್ಷದಲ್ಲಿ । **ಅನು ಸಂಚರಂತಂ**—

ಸಂಚರಿಸುತ್ತಿರುವ । ದ್ರಪ್ಸಂ—ಆದಿತ್ಯನನ್ನುದ್ದೇಶಿಸಿಯೂ । ಅನು—ಅನಂತರ । ಸಪ್ತ ಹೋತ್ರಾಃ—ಏಪ್ಪ ದಿಕ್ಕುಗಳಲ್ಲಿ ಸೂರ್ಯನಿರುವ ದಿಕ್ಕನ್ನು ಬಿಟ್ಟು ಉಳಿದ ಏಳು ದಿಕ್ಕುಗಳನ್ನೂ ಉದ್ದೇಶಿಸಿ । ಜುಹೋಮಿ—ಹವಿಸ್ಸನ್ನರ್ಪಿಸುತ್ತೇನೆ (ಎಂದರೆ ಆದಿತ್ಯನನ್ನು ಅಲ್ಲಿ ಸ್ಥಾಪಿಸುತ್ತೇನೆ).

ಈ ಅರ್ಥವನ್ನೇ ಮೇಲೆ ಉದಾಹರಿಸಿರುವ ಶತಪಥಬ್ರಾಹ್ಮಣವಾಕ್ಯದಲ್ಲಿ ವಿವರಿಸಲಾಗಿದೆ.

॥ ಸಂಹಿತಾಪಾಠಃ ॥

ಯಸ್ತೇ ದ್ರಪ್ಸಃ ಸ್ಕಂದತಿ ಯಸ್ತೇ ಅಂಶುರ್ಬಾಹುಚ್ಯುತೋ ಧಿಷಣಾಯಾ
ಉಪಸ್ಥಾತ್ ।
ಅಧ್ವರ್ಯೋರ್ವಾ ಪರಿ ವಾ ಯಃ ಪವಿತ್ರಾತ್ತಂ ತೇ ಜುಹೋಮಿ ಮನಸಾ
ವಷಟ್ಕೃತಂ ॥ ೧೭ ॥

॥ ಪದಪಾಠಃ ॥

ಯಃ । ತೇ । ದ್ರಪ್ಸಃ । ಸ್ಕಂದತಿ । ಯಃ । ತೇ । ಅಂಶುಃ । ಬಾಹುಚ್ಯುತಃ । ಧಿಷಣಾಯಾಃ । ಉಪಸ್ಥಾತ್ ।
ಅಧ್ವರ್ಯೋಃ । ವಾ । ಪರಿ । ವಾ । ಯಃ । ಪವಿತ್ರಾತ್ । ತಂ । ತೇ । ಜುಹೋಮಿ । ಮನಸಾ ।
ವಷಟ್ಕೃತಂ ॥ ೧೭ ॥

॥ ಸಾಯಣಭಾಷ್ಯಂ ॥

ಹೇ ಸೋಮ ತೇ ತ್ವದೀಯೋ ಯೋ ದ್ರಪ್ಸೋ ರಸಃ ಸ್ಕಂದತಿ ಅಧಿಷವಣಚರ್ಮಣೋಽನ್ಯತ್ರ ಗಚ್ಛತಿ ! ಯಶ್ಚ ತೇ ತ್ವದೀಯೋಽಂಶೂ ರಸಾದಿತರಃ ಸನ್ ಸ್ಕಂದತಿ । ಬಾಹುಚ್ಯುತೋಽಧ್ವರ್ಯೋರ್ಬಾಹುಭ್ಯಾಂ ಪ್ರಚ್ಯುತಃ ಸನ್ ಸ್ಕಂದತಿ । ಯದ್ವಾ । ಬಾಹುವತ್ಸಾಧನಭೂತಾ ಗ್ರಾವಾಣಃ । ತೈಃ ಪ್ರಚ್ಯುತೋಽಭಿಷುತಃ ಸನ್ ಧಿಷಣಾಯಾಃ । ಧಿಷಣೇತ್ಯಧಿಷವಣಫಲಕನಾಮ । ಪ್ರತ್ಯೇಕವಿವಕ್ಷಯೈಕವಚನಂ । ಅಧಿಷವಣಫಲಕಯೋರುಪಸ್ಥಾತ್ಪ್ರದೇಶಾದನ್ಯತ್ರ ಗಚ್ಛತಿ । ತಥಾಧ್ವರ್ಯೋರ್ವಾಽಭಿಷುಣ್ವತೋಽಧ್ವರ್ಯೋರ್ಹಸ್ತಾತ್ಸ್ಕಂದತಿ । ವಾಪಿ ವಾ ಪವಿತ್ರಾದ್ದಶಾಪವಿತ್ರಾತ್ಪರಿಸ್ಕಂದತಿ । ತಂ ಸರ್ವಂ ದ್ರಪ್ಸಂ ತೇ ತ್ವದೀಯಂ ರಸಂ ಮನಸಾಂತಃಕರಣೇನ ಸ್ತೋತ್ರೇಣ ವಾ ಸಹ ವಷಟ್ಕೃತಂ ವಷಟ್ಕಾರೇಣ ಸ್ವಾಹಾಕಾರೇಣ ಕೃತಂ ಜುಹೋಮಿ । ಅಗ್ನೌ ಪ್ರಕ್ಷಿಪಾಮಿ ॥

॥ ಪ್ರತಿಪದಾರ್ಥ ॥

(ಎಲೈ ಸೋಮವೇ) ತೇ—ನಿನ್ನ । ಯಃ ದ್ರಪ್ಸಃ—ಯಾವ ರಸವು । ಸ್ಕಂದತಿ—ಅಧಿಸವಣಚರ್ಮದಿಂದ ಹೊರಟು ಪ್ರವಹಿಸುವುದೋ । ತೇ—ನಿನ್ನ । ಯಃ ಅಂಶುಃ—ಯಾವ ಲತಾದಿರೂಪದ ವಸ್ತುವು ।

ಬಾಹುಚ್ಯುತಃ—ಅಧ್ವರ್ಯುವಿನ ಬಾಹುವಿನಿಂದ ಹೊರಕ್ಕೆ ಹೊರಡುವುದೋ । **ಧಿಷಣಾಯಾಃ**—ಹಿಂಡುವ ಹಲಗೆಗಳಿಂದ ಹೊರಕ್ಕೆ । **ಉಪಸ್ಥಾತ್**—ಹೊರಹೊರಡುವುದೋ । **ಅಧ್ವರ್ಯ್ವೋರ್ವಾ**—ಅಧ್ವರ್ಯುವಿನಿಂದ ಅರ್ಪಿತವಾಗುವುದೋ । **ವಾ**—ಅಥವಾ । **ಪವಿತ್ರಾತ್**—ದಶಾಪವಿತ್ರದಿಂದ ಹೊರಹೊರಟು । **ಪರಿ**—ಸ್ರವಿಸುವುದೋ । **ತಂ**—ಅಂತಹ । **ತೇ**—ನಿನ್ನ ರಸವನ್ನು । **ಮನಸಾ**—ಸ್ತುತಿಪೂರ್ವಕವಾಗಿಯೂ । **ವಷಟ್‌ಕೃತಂ**—ವಷಟ್ಕಾರಪೂರ್ವಕವಾಗಿಯೂ । **ಜುಹೋಮಿ**—ಆಹುತಿರೂಪದಲ್ಲಿ ಅರ್ಪಿಸುತ್ತೇನೆ.

॥ ಭಾವಾರ್ಥ ॥

ಎಲೈ ಸೋಮವೇ, ನಿನ್ನ ಯಾವ ರಸವು ಅಧಿಷವಣಚರ್ಮದಿಂದ ಹೊರಟು ಪ್ರವಹಿಸುವುದೋ, ನಿನ ಯಾವ ಲತಾದಿರೂಪದ ವಸ್ತುವು ಅಧ್ವರ್ಯುವಿನ ಬಾಹುವಿನಿಂದ ಹೊರಕ್ಕೆ ಹೊರಡುವುದೋ ಹಿಂಡುವ ಹಲಗೆಗಳಿಂದ ಹೊರಕ್ಕೆ ಹೊರಡುವುದೋ, ಅಧ್ವರ್ಯುವಿನಿಂದ ಅರ್ಪಿತವಾಗುವುದೋ ಅಥವಾ ದಶಾಪವಿತ್ರದಿಂದ ಹೊರಹೊರಟು ಸ್ರವಿಸುವುದೋ ಅಂತಹ ನಿನ್ನ ರಸವನ್ನು ಸ್ತುತಿಪೂರ್ವಕವಾಗಿಯೂ, ವಷಟ್ಕಾರಪೂರ್ವಕವಾಗಿಯೂ ಆಹುತಿ ರೂಪದಲ್ಲಿ ಅರ್ಪಿಸುತ್ತೇನೆ

English Translation

Your juice, (Soma), which escapes (from the hide), your filaments which let fall from the hands (of the priest escape) from the vicinity of the planks (of the press), or (from the hand) of the Adhwaryu, or from the filter; I offer it all with my mind (to Agni) with the word vashat

॥ ವಿಶೇಷವಿಷಯಗಳು ॥

ಇಲ್ಲಿ ವಷಟ್ಕಾರವೆಂದರೇನು ? ಇದನ್ನು ಏತಕ್ಕಾಗಿ ಪರಿಸಬೇಕು ? ಇದರ ಸ್ವರೂಪ ಮತ್ತು ಸಂಕೇತಗಳೇನು ಇತ್ಯಾದಿ ವಿಷಯಗಳನ್ನು ಇಲ್ಲಿ ಸೂಕ್ಷ್ಮವಾಗಿ ವಿವರಿಸುವುದು ಅವಶ್ಯಕವಾಗಿದೆ. ಯಜ್ಞಾದಿಗಳಲ್ಲಿ ನಾನಾ ದೇವತೆಗಳಿಗೆ ಹವಿಸ್ಸನ್ನರ್ಪಿಸಬೇಕಾದರೆ—ಆ ದೇವತೆಗಳು ನಮಗೆ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲವಾದ್ದರಿಂದ—ಆಯಾ ದೇವತೆಗಳನ್ನುದ್ದೇಶಿಸಿ ಆ ದೇವತಾಕವಾದ ಮಂತ್ರಗಳನ್ನು ಪರಿಸಿ ಅಗ್ನಿಯಲ್ಲಿ ಹೋಮಮಾಡುವರು. ಆರೀತಿ ಹೋಮ ಮಾಡುವಾಗ ಮಂತ್ರದ ಕೊನೆಯಲ್ಲಿ **ಸ್ವಾಹಾ** ಅಥವಾ **ವೌಷಟ್** ಎಂಬ ಶಬ್ದವನ್ನು ಸೇರಿಸಿ ಪರಿಸುತ್ತಾ ಹೋಮ ಮಾಡುವರು. ಹೋಮಮಾಡುವುದಕ್ಕೆ ಪೂರ್ವಭಾವಿಯಾಗಿ ಕೆಲವು ನಿಯಮಗಳನ್ನನುಸರಿಸಬೇಕಾಗಿರುವುದು. ಹವಿಸ್ಸನ್ನರ್ಪಿಸಬೇಕಾಗಿರುವ ದೇವತೆಯನ್ನು ಮೊದಲು ದೇವತಾಕವಾದ ಸ್ತೋತ್ರಾದಿಗಳಿಂದ ಗುಣವರ್ಣನೆ ಮಾಡುವ ಮಂತ್ರಗಳನ್ನು ಪಠಿಸುವರು. ಈ ಗುಣವರ್ಣನೆ ಮಾಡುವ ಮಂತ್ರಗಳಿಗೆ ಶಸ್ತ್ರಮಂತ್ರ ಮತ್ತು ನಿವಿತ್ ಮಂತ್ರಗಳೆಂದು ಹೆಸರು. ನಿವಿನ್ಮಂತ್ರದಲ್ಲಿ ಆ ದೇವತೆಯ ವಿಶೇಷ ಗುಣವರ್ಣನೆ ಇರುವುದರಿಂದ ನಿವಿನ್ಮಂತ್ರವನ್ನು ಶಸ್ತ್ರ ಮಂತ್ರಗಳ ಮಧ್ಯದಲ್ಲಿ ಸೇರಿಸಿ ಪಠಿಸುವರು. ಈರೀತಿ ಉದ್ದಿಷ್ಟಗುಣವರ್ಣನೆಯಾದ ನಂತರ ಮತ್ತೊಂದು ಮಂತ್ರದಿಂದ ದೇವತೆಯನ್ನು ಯಜ್ಞಭೂಮಿಗೆ ಬರಬೇಕೆಂದು ಹೋತೃವೆಂಬ ಋತ್ವಿಜನು ಆಹ್ವಾನಮಾಡುವನು. ಈ ಆಹ್ವಾನಮಂತ್ರಕ್ಕೆ **ಅನುವಾಕ್ಯಾ** ಅಥವಾ **ಪುರೋನುವಾಕ್ಯಾ** ಮಂತ್ರವೆಂದು ಹೆಸರು. ಅನಂತರ ದೇವತೆಯು ಆಹ್ವಾನವನ್ನು ಮನ್ನಿಸಿ ಯಜ್ಞಭೂಮಿಗೆ ಬಂದು **ಬರ್ಹಿಃ** ಎಂಬ ದರ್ಭಾಸನದ ಮೇಲೆ ಕುಳಿತುಕೊಂಡಿರುವನೆಂದು

ಭಾವಿಸಿ ಮತ್ತೊಂದು ಮಂತ್ರದಿಂದ ಅಧ್ವರ್ಯುವೆಂಬ ಋತ್ವಿಜನು ಹವಿಸ್ಸನ್ನು ಅಗ್ನಿಯಲ್ಲಿ ಹೋಮಮಾಡುವನು. ಹೋಮಮಾಡುವಾಗ ಈ ಮಂತ್ರಕ್ಕೆ ಯಾಜ್ಯಾ ಎಂದು ಹೆಸರು. ಈ ಯಾಜ್ಯಾಮಂತ್ರದ ಕೊನೆಯಲ್ಲಿಯೇ ಸ್ವಾಹಾ ಅಥವಾ ವೌಷಟ್ ಎಂಬ ಶಬ್ದವನ್ನು ಸೇರಿಸಿ ಹೋಮಮಾಡುವರು. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ಉದಾಹರಣೆಯನ್ನು ಕೊಡುವೆವು. ಪ್ರಕೃತ ವಿಷ್ಣುವನ್ನೇ ಉದ್ದೇಶಿಸಿ ಹೋಮಮಾಡಬೇಕಾದ ಸಂದರ್ಭದಲ್ಲಿ ವಿಷ್ಣು ದೇವತಾಕವಾದ ನೂ ಮರ್ತೋದಯತೇ (೭ನೇ ಮಂಡಲದ ನೂರನೇ ಸೂಕ್ತ) ಎಂಬ ಸೂಕ್ತವನ್ನು ಅಚ್ಛಾವಾಕ ನೆಂಬ ಋತ್ವಿಜನು ಶಸ್ತ್ರಮಂತ್ರಗಳಿಗಾಗಿ ಪಠಿಸುವನು. ಈ ಮಂತ್ರಗಳ ಮಧ್ಯದಲ್ಲಿ ವಿಷ್ಣುವಿನ ಗುಣಗಾನವನ್ನು ಮಾಡುವ ಕೆಲವು ಮಂತ್ರಗಳನ್ನು ಎಂದರೆ ಪ್ರ ತತ್ತೇ ಅದ್ಯ ಎಂದು ಮೊದಲಾಗುವ (ಋ. ಸಂ. ೭-೧೦೦-೫ ರಿಂದ ೭-೧೦೦-೭ ರ ವರೆಗಿನ) ಮೂರು ಋಕ್ಕುಗಳನ್ನು ನಿವಿತ್ಸಂತ್ರಗಳನ್ನಾಗಿ ಸೇರಿಸಿ ಪಠಿಸುವನು. ಅನಂತರ ವಿಷ್ಣುವನ್ನು ಆಹ್ವಾನಮಾಡುವುದಕ್ಕಾಗಿ—

ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ ।
ಉದಸ್ತಭ್ನಾ ನಾಕಮೃಷ್ವಂ ಬೃಹಂತಂ ದಾದರ್ಹ ಪ್ರಾಚೀಂ ಕಕುಭಂ ಪೃಥಿವ್ಯಾಃ ॥
(ಋ. ಸಂ. ೭-೯೯-೨)

ಎಂಬ ಋಕ್ಕನ್ನು ಪಶುಹೋಮದಲ್ಲಿ ಅನುವಾಕ್ಯಾಮಂತ್ರವನ್ನಾಗಿ ಪಠಿಸಿ ವಿಷ್ಣುದೇವತೆಯನ್ನು ಹೋತೃವು ಆಹ್ವಾನ ಮಾಡುವನು. ಅನಂತರ,

ತ್ರಿರ್ದೇವಃ ಪೃಥಿವೀಮೇಷ ಏತಾಂ ವಿ ಚಕ್ರಮೇ ಶತರ್ಚಸಂ ಮಹಿತ್ವಾ ।
ಪ್ರ ವಿಷ್ಣುರಸ್ತು ತವಸಸ್ತವೀಯಾನ್ತ್ವೇಷಂ ಹ್ಯಸ್ಯ ಸ್ಥವಿರಸ್ಯ ನಾಮ ॥
(ಋ. ಸಂ. ೭-೧೦೦-೩)

ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸುವನು. ಈ ಮಂತ್ರದ ಕೊನೆಯಲ್ಲಿ ಇರುವ ಸ್ಥವಿರಸ್ಯ ನಾಮ ಎಂಬ ಶಬ್ದಗಳನಂತರ ವೌಷಟ್ ಎಂಬ ಶಬ್ದವನ್ನು ಸೇರಿಸಿ ಸ್ಥವಿರಸ್ಯ ನಾಮ ವೌಷಟ್ ಎಂದು ಪಠಿಸುತ್ತಾ ಪಶುವಿನ ವಪಾ ಎಂಬ ಅವಯವವನ್ನು ಅಗ್ನಿಯಲ್ಲಿ ಹೋಮಮಾಡುವನು. ಪ್ರತಿದೇವತೆಯನ್ನೂ ಉದ್ದೇಶಿಸಿ ಹೋಮಮಾಡುವಾಗಲೂ ಈ ಕ್ರಮವನ್ನನುಸರಿಸಬೇಕು. ಆದರೆ ಪ್ರತಿದೇವತೆಗೂ ಮಂತ್ರಗಳು ಬೇರೆಬೇರೆ. ಇದಲ್ಲದೆ ಹೋಮದ್ರವ್ಯವು ಆಜ್ಯ, ಹವಿಸ್ಸು, ಪುರೋಡಾಶ, ವಪಾ ಇತ್ಯಾದಿ ಅನೇಕವಿಧವಾಗಿರುವುದು. ಇದಕ್ಕನುಸಾರವಾಗಿ ಮಂತ್ರಗಳೂ ಬೇರೆಬೇರೆಯಾಗಿರುವವು. ಮೇಲೆ ಕೊಟ್ಟಿರುವ ಉದಾಹರಣೆಯಲ್ಲಿರುವ ಮಂತ್ರಗಳು ವಪಾಹೋಮಕ್ಕೆ ಮಾತ್ರ ಸಂಬಂಧಪಟ್ಟಿರುವ ಮಂತ್ರಗಳಾಗಿವೆ. ಇದರಂತೆ ಪುರೋಡಾಶಹೋಮಕ್ಕೂ ಹವಿಸ್ಸಿನ ಹೋಮಕ್ಕೂ ಪ್ರತ್ಯೇಕ ಮಂತ್ರಗಳಿರುವವು. ಮತ್ತು ಬೇರೆ ಬೇರೆ ಯಜ್ಞಗಳಲ್ಲಿಯೂ ಬೇರೆ ಬೇರೆ ಮಂತ್ರಗಳನ್ನು ಉಪಯೋಗಿಸಬೇಕಾಗಿರುವುದು

ಇನ್ನು ವಷಟ್ಕಾರದ ಸ್ವರೂಪ ಮತ್ತು ಸಂಕೇತವೇನು? ಇದನ್ನು ಮಂತ್ರದ ಕೊನೆಯಲ್ಲಿ ಏತಕ್ಕಾಗಿ ಉಪಯೋಗಿಸಬೇಕು ಎಂಬ ವಿಷಯವನ್ನು ಪರಿಶೀಲಿಸಬೇಕಾಗಿರುವುದು. ಈ ವಿಷಯದಲ್ಲಿ ಐತರೇಯಬ್ರಾಹ್ಮಣದಲ್ಲಿ ಹೇಳಿರುವ ವಿಸ್ತಾರವಾದ ವಿವರಣೆಯನ್ನೇ ಇಲ್ಲಿ ವಿವರಿಸಲಾಗಿದೆ —

ದೇವಪಾತ್ರಂ ವಾ ಏತತ್ಯದ್ವಷಟ್ಕಾರೋ ವಷಟ್ಕಾರೇಣ ದೇವಪಾತ್ರೇಣೈವ ತದ್ದೇವತಾಸ್ತರ್ಪಯತಿ ॥
(ಐ. ಬ್ರಾ. ೧೧ ೫)

ಈಗ ವಷಟ್ಕಾರ ಮತ್ತು ಅನುವಷಟ್ಕಾರಗಳ ಸ್ವರೂಪವನ್ನು ವಿವರಿಸಲಾಗುವುದು. ಹೋಮಮಾಡುವಾಗ ಮಂತ್ರಾಂತ್ಯದಲ್ಲಿ **ವೌಷಟ್** ಎಂದು ಪರಿಸುವ ಶಬ್ದಕ್ಕೆ ವಷಟ್ಕಾರವೆಂದು ಹೆಸರು. ದೇವತೆಗಳಿಗೆ ಹವಿಸ್ಸನ್ನು ಭಕ್ಷಣಾರ್ಥವಾಗಿ ಅರ್ಪಿಸುವಾಗ ಲೋಕವ್ಯವಹಾರದಲ್ಲಿ ರೂಢಿಯಾಗಿರುವಂತೆ ಒಂದು ಪಾತ್ರೆ ಅಥವಾ ತಟ್ಟೆಯಲ್ಲಿ ಇಟ್ಟು ಅರ್ಪಿಸಬೇಕಷ್ಟೆ. ಪಾತ್ರೆಯಲ್ಲಿಟ್ಟು ಅರ್ಪಿಸುವುದರಿಂದ ಅದನ್ನು ಭಕ್ಷಿಸಲು ಅನುಕೂಲವಾಗುವುದು. ಯಜ್ಞದಲ್ಲಿ ದೇವತೆಗಳು ಹವಿಸ್ಸನ್ನು ಭಕ್ಷಿಸುವಾಗ ಅವರು ಅಪ್ರತ್ಯಕ್ಷವಾಗಿರುವುದರಿಂದ ಹವಿಸ್ಸನ್ನು ಅಗ್ನಿಯಲ್ಲಿ ಹೋಮಮಾಡುವುದರ ಮೂಲಕ ದೇವತೆಗಳಿಗೆ ಹವಿಸ್ಸು ಅರ್ಪಿತವಾಗುವುದು ಎಂದರೆ ತನ್ನಲ್ಲಿ ದೇವತೆಗಳನ್ನು ದ್ದೇಶಿಸಿ ಹೋಮಮಾಡಿದ ಹವಿಸ್ಸನ್ನು ಅಗ್ನಿಯು ದೇವತೆಗಳಿಗೆ ತಲಪಿಸುವನು. ಹೋಮಮಾಡುವಾಗ ಹವಿಸ್ಸನ್ನಿಡುವ ಪಾತ್ರೆಯನ್ನು ದೇವತೆಗಳ ಮುಂದೆ ಇಡುವುದು ಹೇಗೆ ? ಇದು ಸಾಧ್ಯವಿಲ್ಲ. ಆದ್ದರಿಂದ ಪಾತ್ರೆಗೆ ಬದಲಾಗಿ ಮಂತ್ರವನ್ನೇ ಪರಿಸಿ ಅದನ್ನೇ ಪಾತ್ರೆಯೆಂದು ಭಾವಿಸಲಾಗಿರುವುದು. **ವೌಷಟ್** ಎಂಬ ಮಂತ್ರವೇ ಈ ಪಾತ್ರೆಯು. ಮಂತ್ರಾಂತ್ಯದಲ್ಲಿ **ವೌಷಟ್** ಎಂದು ಉಚ್ಚರಿಸಿದರೆ ಮಂತ್ರಪೂರ್ವಕವಾಗಿ ಅರ್ಪಿಸುವ ಹವಿಸ್ಸನ್ನು ಭಕ್ಷಿಸಲು ಅನುಕೂಲವಾಗುವಂತೆ ಪಾತ್ರೆಯಲ್ಲಿಟ್ಟು ಅರ್ಪಿಸಿದಂತಾಗುವುದು ಆದ್ದರಿಂದ **ವೌಷಟ್** ಎಂಬ ಶಬ್ದವು ದೇವತೆಗಳಿಗೆ ಪಾನ ಸಾಧನವಾದ ಪಾತ್ರೆಯು. ಈ ಕಾರಣಕ್ಕಾಗಿ ಎಂದರೆ ದೇವತೆಗಳಿಗೆ ಪಾತ್ರೆಯಲ್ಲಿಟ್ಟು ಹವಿಸ್ಸನ್ನು ಅರ್ಪಿಸಿ ತೃಪ್ತಿಪಡಿಸುವುದಕ್ಕಾಗಿಯೇ ಹೋತೃವು ಮಂತ್ರಾಂತ್ಯದಲ್ಲಿ **ವೌಷಟ್** ಎಂಬ ಶಬ್ದವನ್ನು ಸೇರಿಸಿ ಪರಿಸಿ ಹೋಮಮಾಡುವನು. ಇದೇ ವಷಟ್ಕಾರದ ಶಬ್ದಾರ್ಥವು. ಇನ್ನು ಅನುವಷಟ್ಕಾರದ ಅರ್ಥವನ್ನು ವಿವರಿಸುವರು—

> **ಅನುವಷಟ್ಕರೋತಿ ತದ್ಯಥಾऽದೋऽಶ್ವಾನ್ವಾ ಗಾ ವಾ ಪುನರಭ್ಯಾಕಾರಂ ತರ್ಪಯಂತ್ಯೇವ-ಮೇವೈತದ್ದೇವತಾಃ ಪುನರಭ್ಯಾಕಾರಂ ತರ್ಪಯಂತಿ ಯದನುವಷಟ್ಕರೋತಿ.. .....॥**
>
> (ಐ. ಬ್ರಾ. ೧೧-೫)

ಲೋಕವ್ಯವಹಾರದಲ್ಲಿ ಜನರು ಅಶ್ವಗಳಿಗೂ, ಗೋವುಗಳಿಗೂ ಇತರ ಪ್ರಾಣಿಗಳಿಗೂ ಹುಲ್ಲು ಮೊದಲಾದ ಆಹಾರವನ್ನು ಅವುಗಳ ಮುಂದಿಟ್ಟು ತಿನ್ನುವಂತೆ ಪ್ರಿಯಶಬ್ದಗಳಿಂದ ಲಾಲಿಸುವಂತೆ ದೇವತೆಗಳಿಗೆ ಅಗ್ನಿಯ ಮೂಲಕವೇ ಹವಿಸ್ಸನ್ನು ಅರ್ಪಿಸಬೇಕಾಗಿರುವುದರಿಂದ—

> **ಅಗ್ನೇ ವೀಹಿ ಪುರೋಳಾಶಮಾಹುತಂ ತಿರೋಅಹ್ನ್ಯಂ ।**
> **ಸಹಸಃ ಸೂನುರಸ್ಕೃಧ್ವರೇ ಹಿತಃ ॥**
>
> (ಋ ಸಂ. ೩-೨೮-೩)

ಅಥವಾ—

> **ಅಗ್ನೇ ವೀಹಿ ಹವಿಷಾ ಯಕ್ಷಿ ದೇವಾನ್ತ್ಸ್ರುಕ್ಸ್ರುವಾ ಕೃಣುಹಿ ಜಾತವೇದಃ ।**
>
> (ಋ. ಸಂ. ೩-೧೭-೩)

ಎಂಬ ಋಕ್ಕನ್ನು ಪಠಿಸಬೇಕು; ಎಲೈ ಅಗ್ನಿಯೇ, ಈ ಹವಿಸ್ಸನ್ನು ಅಥವಾ ಪುರೋಳಾಶವನ್ನು ಭಕ್ಷಿಸು ಅಥವಾ ಈ ಸೋಮರಸವನ್ನು ಪಾನಮಾಡು. ನಿನ್ನಲ್ಲಿ ಹೋಮಮೂಲಕವಾಗಿ ಅರ್ಪಿಸುವ ಈ ಹವಿಸ್ಸನ್ನು ದೇವತೆಗಳಿಗೆ ತಲಪಿಸು ಎಂಬರ್ಥವಿರುವ ಈ ಋಕ್ಕನ್ನು ದೇವತೆಗಳ ಪ್ರೀತ್ಯರ್ಥವಾಗಿ ಪಠಿಸಬೇಕು. ಇದಕ್ಕೆ ಅನುವಷಟ್ಕಾರವೆಂದು ಹೆಸರು.

ವಜ್ರೋ ವಾ ಏಷ ಯದ್ವಷಟ್ಕಾರೋ ಯಂ ದ್ವಿಷ್ಯಾತ್ತಂ ಧ್ಯಾಯೇದ್ವಷಟ್ಕರಿಷ್ಯಂಸ್ತಸ್ಮಿನ್ನೇವ ತಂ ವಜ್ರಮಾಸ್ಥಾಪಯತಿ ।

(ಐ. ಬ್ರಾ. ೧೧-೬)

ವಷಟ್ಕಾರವು ವಜ್ರಾಯುಧದಂತಿರುವ ಒಂದು ಪ್ರಬಲವಾದ ಆಯುಧವು. ಯಜ್ಞಮಾಡುವ ಯಜಮಾನನಿಗೆ ಶತ್ರು ವಿದ್ದು ಅವನನ್ನು ನಾಶಮಾಡಬೇಕೆಂಬ ಮನಸ್ಸಿದ್ದರೆ ಈ ವಷಟ್ಕಾರದಿಂದ ಆಹುತಿಯನ್ನರ್ಪಿಸುವಾಗ ಆ ಶತ್ರುವು ನಾಶವಾಗಲಿ ಎಂದು ಮನಸ್ಸಿನಲ್ಲಿ ಧ್ಯಾನಿಸುತ್ತಾ ಹೋಮಮಾಡಿದರೆ ವಷಟ್ಕಾರವು ಆ ಶತ್ರುವನ್ನು ವಜ್ರಾಯುಧದ ಪ್ರಹಾರದಂತೆ ಅವನನ್ನು ಸ್ರಹರಿಸಿ ಸಂಹರಿಸುವುದು.

ಷಳಿತಿ ವಷಟ್ಕರೋತಿ ಷಡ್ವಾ ಋತವಃ ಋತೂನೇವ ತತ್ಕಲ್ಪಯತ್ಯೃತೂನ್ಪ್ರೀಣಾತ್ಯೃತೂನ್ಪ್ರಿಣಾತ್ಯೃತೂನ್ವೈ ಪ್ರತಿತಿಷ್ಠತ ಇದಂ ಸರ್ವಮನು ಪ್ರತಿತಿಷ್ಠತಿ ಯದಿದಂ ಕಿಂಚ ॥

ವೌಷಟ್ ಎಂಬ ಶಬ್ದದಲ್ಲಿ ಷಟ್ ಎಂಬ ಪದವಿರುವುದಷ್ಟೆ. ಇಲ್ಲಿ ಷಟ್ ಎಂದರೆ ಆರು ಋತುಗಳು ಎಂದರ್ಥವು ಒಂದು ವರ್ಷದಲ್ಲಿ ಆರು ಋತುಗಳಿರುವವು. ಅದ್ದರಿಂದ ವಷಟ್ಕಾರದಿಂದ ಹವಿಸ್ಸನ್ನರ್ಪಿಸಿದರೆ ಅವನು ಆರು ಋತುಗಳನ್ನು ತೃಪ್ತಿಪಡಿಸಿದಂತಾಗುವುದು. ಇಷ್ಟೇ ಅಲ್ಲ, ಎಲ್ಲವನ್ನೂ ತೃಪ್ತಿಪಡಿಸಿದಂತಾಗುವುದರಿಂದ ಅವನು ಸಮಸ್ತ ಕಾರ್ಯಗಳಲ್ಲಿಯೂ ಜಯಶೀಲನಾಗುವನು. ಈ ವಿಷಯವನ್ನೇ ಮುಂದಿನ ವಾಕ್ಯದಲ್ಲಿ ವಿಸ್ತಾರವಾಗಿ ವಿವರಿಸುವರು

ಪ್ರತಿತಿಷ್ಠತಿ ಯ ಏವಂ ವೇದ ತದು ಹ ಸ್ಮಾಹ ಹಿರಣ್ಯದನ್ಪೈದ ಏತಾನಿ ವಾ ಏತೇನ ಷಟ್ ಪ್ರತಿಷ್ಠಾಪಯತಿ ದ್ಯೌರಂತರಿಕ್ಷೇ ಪ್ರತಿಷ್ಠಿತಾನ್ತರಿಕ್ಷಂ ಪೃಥಿವ್ಯಾಂ ಪೃಥಿವ್ಯಪ್ಸ್ವಪಃ ಸತ್ಯೇ ಸತ್ಯಂ ಬ್ರಹ್ಮಣಿ ಬ್ರಹ್ಮ ತಪಸೀತ್ಯೇತಾ ಏವ ತತ್ಪ್ರತಿಷ್ಠಾಃ ಪ್ರತಿತಿಷ್ಠಂತೀರಿದಂ ಸರ್ವಮನು ಪ್ರತಿತಿಷ್ಠತಿ ಯದಿದಂ ಕಿಂಚ ಪ್ರತಿತಿಷ್ಠತಿ ಯ ಏವಂ ವೇದ.....॥

(ಐ. ಬ್ರಾ. ೧೧-೬)

ಸುವರ್ಣಮಯವಾದ ದಂತಪಂಕ್ತಿಗಳುಳ್ಳ ಬಿದಋಷಿಯ ಪುತ್ರನು ಈ ವಿಷಯದಲ್ಲಿ ಈ ರೀತಿ ಹೇಳಿರುವನು—ಸ್ವರ್ಗಲೋಕವೇ ಮೊದಲಾದ ಬ್ರಹ್ಮದವರೆಗಿನ ಆರು ಸ್ಥಾನಗಳನ್ನು ವಷಟ್ಕಾರದಿಂದ ಹೋತೃವು ಪ್ರತಿಷ್ಠಿಸಿದಂತಾಗುವುದು. ಎಂದರೆ, ಸ್ವರ್ಗದ ಕೆಳಭಾಗದಲ್ಲಿ ಅಂತರಿಕ್ಷವಿರುವುದರಿಂದ ಅಂತರಿಕ್ಷದ ಮೇಲೆ ಸ್ವರ್ಗವಿದ್ದಂತಾಯಿತು. ಹಾಗೆಯೇ ಅಂತರಿಕ್ಷವು ಪೃಥಿವಿಯ ಮೇಲೆಯೂ, ಪೃಥಿವಿಯು ಕೆಳಭಾಗದಲ್ಲಿರುವ ನೀರಿನ ಮೇಲೆಯೂ, ನೀರು ಸತ್ಯದಮೇಲೆಯೂ ಪ್ರತಿಷ್ಠಿತವಾಗಿವೆ. ಜನರು ಸತ್ಯವಾದಿಗಳಾಗಿದ್ದಲ್ಲಿ ಕಾಲಕಾಲಕ್ಕೆ ಮಳೆಯಾಗುವುದು ಸಂಭವವು. ಅದ್ದರಿಂದ ಸತ್ಯದಲ್ಲಿ ನೀರು ಪ್ರತಿಷ್ಠಿತವಾಗಿದೆ ಎಂದು ಹೇಳಿದೆ. ಆ ಸತ್ಯವು ಬ್ರಹ್ಮನಲ್ಲಿ (ವೇದದಲ್ಲಿ)ಯೂ ಬ್ರಹ್ಮವು ವಷಟ್ಕಾರ ಮಂತ್ರರೂಪವಾದ ತಪಸ್ಸಿನಲ್ಲಿಯೂ ಪ್ರತಿಷ್ಠಿತವಾಗಿದೆ. ಅದ್ದರಿಂದ ವಷಟ್ಕಾರದಲ್ಲಿ ಸಮಸ್ತ ಜಗತ್ತೂ ನೆಲೆಸಿರುವುದೆಂದು ತಿಳಿಯಬೇಕು. ಈ ವಿಷಯವನ್ನು ಯಾವ ಪುರುಷನು ತಿಳಿದಿರುವನೋ ಅವನು ಸರ್ವವನ್ನೂ ಜಯಿಸಿದಂತಾಗುವುದು.

ವಷಟ್ಕಾರಗಳಲ್ಲಿ ಮೂರು ಪ್ರಭೇದಗಳಿರುವವು, ಅವುಗಳ ಸ್ವರೂಪವನ್ನು ವಿವರಿಸುವರು —

ತ್ರಯೋ ವೈ ವಷಟ್ಕಾರಾ ವಜ್ರೋ ಧಾಮಚ್ಛದ್ರಿಕ್ತಃ ।

(ಐ. ಬ್ರಾ. ೧೧-೭)

ವಷಟ್ಕಾರಗಳಲ್ಲಿ ವಜ್ರ, ಧಾಮಚ್ಛತ್, ರಿಕ್ತ ಎಂದು ಮೂರು ವಿಧವು.

ಸ ಯಮೇವೋಚ್ಚೈರ್ಬಲಿ ವಷಟ್ಕರೋತಿ ಸ ವಜ್ರಃ । ತಂ ತಂ ಪ್ರಹರತಿ ದ್ವಿಷತೇ ಭ್ರಾತೃವ್ಯಾಯ ವಧಂ ಯೋಽಸ್ಯ ಸ್ತೃತ್ಯಸ್ತಸ್ಮೈ ಸ್ತರ್ಹನೇ ತಸ್ಮಾತ್ಸ ಭ್ರಾತೃವ್ಯವತಾ ವಷಟ್ಕೃತ್ಯಃ ॥

ಈ ವಷಟ್ಕಾರವನ್ನು ಹೋತೃವು ಫಟ್ಟಯಾದ ಧ್ವನಿಯಲ್ಲಿ ಉಚ್ಚರಿಸುವುದರಿಂದ ಇದಕ್ಕೆ ವಜ್ರವೆಂಬ ಹೆಸರು ಬಂದಿರುವುದು. ಯಜ್ಞಮಾಡುವ ಯಜಮಾನನು ಯಾವಾಗ ತನಗೆ ಶತ್ರುಗಳಾದವರನ್ನು ಸಂಹಾರಮಾಡಬೇಕೆಂದು ಅಪೇಕ್ಷಿಸುವನೋ ಆಗ ಈ ವಷಟ್ಕಾರವನ್ನು ಪ್ರಯೋಗಿಸುವುದರಿಂದ ಅದು ವಜ್ರಾಯುಧರೂಪದಿಂದ ಯಜಮಾನನ ಶತ್ರುವನ್ನು ಪ್ರಹರಿಸಿ ನಾಶಮಾಡುವುದು. ಆದುದರಿಂದ ಶತ್ರುನಾಶವನ್ನು ಅಪೇಕ್ಷಿಸುವ ಯಜಮಾನನು ವಜ್ರರೂಪವಾದ ಈ ವಷಟ್ಕಾರವನ್ನು ಉಪಯೋಗಿಸಬೇಕು

ಅಥ ಯಃ ಸಮಃ ಸಂತತೋಽನಿರ್ಹಾಣಚರ್ಮಃ ಸ ಧಾಮಚ್ಛತ್ । ತಂ ತಂ ಪ್ರಜಾಶ್ಚ ಪಶವ-ಶ್ಚಾನೂಪತಿಷ್ಠಂತೇ ತಸ್ಮಾತ್ಸ ಪ್ರಜಾಕಾಮೇನ ಪಶುಕಾಮೇನ ವಷಟ್ಕೃತ್ಯಃ ॥

ಇಲ್ಲಿ ವಷಟ್ಕಾರವನ್ನು ಉಚ್ಚರಿಸುವ ವಿಧಾನದಲ್ಲಿ ವಿವರಣೆಯು ಅವಶ್ಯಕವು. ಯಾಜ್ಯಾಮಂತ್ರದ ಕೊನೆಯಲ್ಲಿ **ವೌಷಟ್** ಎಂಬ ಶಬ್ದವನ್ನು ಸೇರಿಸಿ ಪಠಿಸಬೇಕೆಂದು ಹಿಂದೆಯೇ ತಿಳಿಸಲಾಗಿದೆಯಷ್ಟೆ. ಈ ಸಂದರ್ಭದಲ್ಲಿ **ವೌಷಟ್** ಎಂಬ ವಷಟ್ಕಾರವನ್ನು ಉಚ್ಚರಿಸುವುದರಲ್ಲಿ ವಜ್ರ, ಧಾಮಚ್ಛತ್, ರಿಕ್ತ ಎಂಬ ವಷಟ್ಕಾರದ ಮೂರು ಪ್ರಭೇದಗಳಿಗನುಸಾರವಾಗಿ ಮೂರು ವಿಧವಾಗಿ ಉಚ್ಚರಿಸಬೇಕಾಗಿರುವುದು. ವಜ್ರವೆಂಬ ವಷಟ್ಕಾರವನ್ನು ಉಪಯೋಗಿಸುವಾಗ ಯಾಜ್ಯಾಮಂತ್ರವನ್ನು ಸಾಧಾರಣ ಧ್ವನಿಯಿಂದ ಉಚ್ಚರಿಸುತ್ತಾ ಕೊನೆಯಲ್ಲಿ **ವೌಷಟ್** ಎಂಬುದನ್ನು ಫಟ್ಟಯಾದ ಧ್ವನಿಯಲ್ಲಿ ಉಚ್ಚರಿಸಬೇಕು ಮತ್ತು ಯಾಜ್ಯಾಮಂತ್ರದ ಕೊನೆಯಲ್ಲಿ ಅಕ್ಷರಕ್ಕೆ ಓಂಕಾರವನ್ನು ಸೇರಿಸಿ ಎಂದರೆ ಕೊನೆಯ ಅಕ್ಷರವನ್ನು ಓಂಕಾರಸ್ವರೂಪದಿಂದ ಕೂಡಿರುವಂತೆ ಉಚ್ಚರಿಸಿ ಅನಂತರ **ವೌಷಟ್** ಎಂಬುದನ್ನು ಫಟ್ಟಯಾದ ಧ್ವನಿಯಿಂದ ಉಚ್ಚರಿಸಬೇಕು. ಹಿಂದೆ ಉದಾಹರಣೆಯಾಗಿ ಕೊಟ್ಟರುವ—

ತ್ರಿರ್ದೇವಃ ಪೃಥಿವೀಮೇಷ ಏತಾಂ ವಿ ಚಕ್ರಮೇ ಶತರ್ಚಸಂ ಮಹಿತ್ವಾ ।
ಪ್ರ ವಿಷ್ಣುರಸ್ತು ತವಸಸ್ತವೀಯಾನ್ತ್ವೇಷಂ ಹ್ಯಸ್ಯ ಸ್ಥವಿರಸ್ಯ ನಾಮ ॥

ಎಂಬ ಋಕ್ಕಿನಲ್ಲಿ ಕೊನೆಯ ಭಾಗವು **ಸ್ಥವಿರಸ್ಯ ನಾಮ** ಎಂದಿರುವುದು. ಇದಕ್ಕೆ ಓಂಕಾರವನ್ನು ಸೇರಿಸಿದರೆ **ಸ್ಥವಿರಸ್ಯ ನಾಮೋಂ** ಎಂದಾಗುವುದು. ಈ ರೀತಿ ಈ ಋಕ್ಕನ್ನು **ಸ್ಥವಿರಸ್ಯ ನಾಮೋಂ** ಎಂದು ಸಮಧ್ವನಿಯಿಂದ ಉಚ್ಚರಿಸಿ ಅನಂತರ **ವೌಷಟ್** ಎಂಬ ಶಬ್ದವನ್ನು ಫಟ್ಟಯಾದ ಧ್ವನಿಯಿಂದ ಉಚ್ಚರಿಸಬೇಕು. ಈ ಕ್ರಮವು ವಜ್ರವೆಂಬ ವಷಟ್ಕಾರವನ್ನು ಉಚ್ಚರಿಸುವ ವಿಧಾನವು. ಈಗ ಧಾಮಚ್ಛತ್ ಎಂಬ ವಷಟ್ಕಾರವನ್ನು ಉಚ್ಚರಿಸಬೇಕಾದರೆ ಯಾಜ್ಯಾಮಂತ್ರವನ್ನು ಯಾವ ವ್ಯತ್ಯಾಸವೂ ಇಲ್ಲದಂತೆ ಎಂದರೆ **ಸ್ಥವಿರಸ್ಯ ನಾಮ** ಎಂದು ಮಾತ್ರ ಉಚ್ಚರಿಸಿ (ಕೊನೆಯಲ್ಲಿ ಓಂಕಾರವಿಲ್ಲದೆ) ಅನಂತರ **ವೌಷಟ್** ಎಂಬ ಶಬ್ದವನ್ನು ಪಠಿಸಬೇಕು. ಇದು ಧಾಮಚ್ಛತ್ ಎಂಬ ವಷಟ್ಕಾರವನ್ನು ಉಚ್ಚರಿಸುವ ಕ್ರಮವು. ಪ್ರಜೆಗಳನ್ನೂ, ಪಶುಗಳನ್ನೂ ಅಪೇಕ್ಷಿಸುವ ಯಜಮಾನನು ಈ ವಿಧವಾದ ಧಾಮಚ್ಛತ್ ಎಂಬ ವಷಟ್ಕಾರವಿಧಾನದಿಂದ ಹೋಮಮಾಡಬೇಕು.

ಅಥ ಯೇನೈವ ಷಳವರಾಧ್ನೋತಿ ಸ ರಿಕ್ತಃ । ರಿಣಕ್ತ್ಯಾತ್ಮಾನಂ ರಿಣಕ್ತಿ ಯಜಮಾನಂ ಪಾಪೀಯಾನ್ಸ್ವಷಟ್ಕರ್ತಾ ಭವತಿ ಪಾಪೀಯಾನ್ಯಸ್ಮೈ ವಷಟ್ಕರೋತಿ ತಸ್ಮಾತ್ತಸ್ಯಾಶಾಂ ನೇಯಾತ್॥

ವೌಷಟ್ ಶಬ್ದವನ್ನು ಉಚ್ಚರಿಸುವಾಗ ಷಟ್ ಎಂಬ ಪದವನ್ನು ಮೆಲ್ಲಗೆ ಅಲ್ಪಧ್ವನಿಯಿಂದ ಉಚ್ಚರಿಸದರೆ ಆ ವಷಟ್ಕಾರವು ರಿಕ್ತನೆನಿಸುವುದು ರಿಕ್ತವೆಂದರೆ ಇಲ್ಲದಿರುವುದು ಎಂದರ್ಥವು. ಆದ್ದರಿಂದ ಈ ರಿಕ್ತವಷಟ್ಕಾರದಿಂದ ಹೋಮ ಮಾಡಿದರೆ ಯಜ್ಞ ಮಾಡುವ ಯಜಮಾನನಿಗೆ ಏನೂ ಇಲ್ಲದ ರಿಕ್ತದೆಶೆಯುಂಟಾಗುವುದಲ್ಲದೆ ಪಾಪವು ಸಂಭವಿಸುವುದು. ಹೋಮವನ್ನು ಮಾಡಿಸುವ ಋತ್ವಿಜನೂ ಪಾಪಿಷ್ಠನೇ ಆಗುವನು. ಆದ್ದರಿಂದ ಶ್ರೇಯಸ್ಸನ್ನು ಬಯಸುವ ಯಜಮಾನನಾಗಲಿ, ಋತ್ವಿಜನಾಗಲಿ ಈ ರಿಕ್ತವಷಟ್ಕಾರವನ್ನು ಯಾವಾಗಲೂ ಉಪಯೋಗಿಸಬಾರದು.

ಕಂ ಸ ಯಜಮಾನಸ್ಯ ಪಾಪಭದ್ರಮಾದ್ರಿಯೇತೇತಿ ಹ ಸ್ಮಾಹ ಯೋಽಸ್ಯ ಹೋತಾ ಸ್ಯಾದಿತ್ಯತ್ರೈವೈನಂ ಯಥಾ ಕಾಮಯೇತ ತಥಾ ಕುರ್ಯಾತ್ । ಯಂ ಕಾಮಯೇತ ಯಥೈವಾನೀಜಾನೋಽಭೂತ್ತಥೈವೇಜಾನಃ ಸ್ಯಾದಿತಿ ಯಥೈವಾಸ್ಯ ಋಚಂ ಬ್ರೂಯಾತ್ತಥೈವಾಸ್ಯ ವಷಟ್ಕುರ್ಯಾತ್ಸದೃಶಮೇವೈನಂ ತತ್ಕರೋತಿ ॥

ಯಜ್ಞಮಂಟಪದಲ್ಲಿ ಮುಖ್ಯಪಾತ್ರವನ್ನು ವಹಿಸುವ ಹೋತೃವೆಂಬ ಋತ್ವಿಜನು ಯಜ್ಞ ಮಾಡುವ ಯಜಮಾನನಿಗೆ ಶುಭವನ್ನಾಗಲಿ ಅಶುಭವನ್ನಾಗಲಿ ಮಾಡಬೇಕೆಂದು ಇಷ್ಟಪಟ್ಟರೆ ಆದರಂತೆ ಮಾಡಬಹುದು. ಹೋತೃವು ಯಾವರೀತಿ ಇಷ್ಟಪಟ್ಟರೆ ಆರೀತಿ ಮಾಡಬಹುದು. ಹೇಗೆಂದರೆ ಯಜಮಾನನಿಗೆ ಯಜ್ಞ ಮಾಡಿದ್ದಕ್ಕೆ ಸರಿಯಾದ ಫಲವು ಲಭಿಸಬಾರದೆಂದು ಹೋತೃವಿಗೆ ಇಷ್ಟವಿದ್ದರೆ ಆಗ ಹೋತೃವು ಯಾಜ್ಯಾಮಂತ್ರವನ್ನು ಸಾಧಾರಣರೀತಿಯಲ್ಲಿ ಉಚ್ಚರಿಸಿ ವಷಟ್ಕಾರವನ್ನು ಘಟ್ಟಿಯಾಗಿ ಉಚ್ಚರಿಸುವುದಕ್ಕೆ ಬದಲಾಗಿ ಯಾಜ್ಯಾ ಮತ್ತು ವಷಟ್ಕಾರಮಂತ್ರಗಳನ್ನು ಸಮನಾದ ಒಂದೇ ಧ್ವನಿಯಿಂದ ಉಚ್ಚರಿಸಿದರೆ ಯಜಮಾನನಿಗೆ ಯಜ್ಞ ಮಾಡಿದ ಫಲವು ಲಭಿಸುವುದಿಲ್ಲ.

ಯಂ ಕಾಮಯೇತ ಪಾಪೀಯಾನ್ಸ್ಯಾದಿತ್ಯುಚ್ಚೈಸ್ತರಾಮಸ್ಯ ಋಚಮುಕ್ತ್ವಾ ಶನೈಸ್ತರಾಂ ವಷಟ್ಕುರ್ಯಾತ್ಪಾಪೀಯಾಂಸಮೇವೈನಂ ತತ್ಕರೋತಿ

ಯಜಮಾನನಿಗೆ ಯಜ್ಞಫಲವು ಲಭಿಸದೆ ಪಾಪವು ಮಾತ್ರ ಸಂಭವಿಸಬೇಕೆಂದು ಹೋತೃವಿನ ಇಷ್ಟವಾದರೆ ಆಗ ಅವನು ಯಾಜ್ಯಾಮಂತ್ರದ ಋಕ್ಕನ್ನು ಘಟ್ಟಿಯಾದ ಧ್ವನಿಯಲ್ಲಿಯೂ ವಷಟ್ಕಾರವನ್ನು ಮೆತ್ತನೆಯ ಧ್ವನಿಯಲ್ಲಿಯೂ ಪರಿಸಬೇಕು. ಹೀಗೆ ಮಾಡಿದರೆ ಯಜಮಾನನಿಗೆ ಪಾಪವು ಸಂಭವಿಸುವುದು.

ಯಂ ಕಾಮಯೇತ ಶ್ರೇಯಾನ್ಸ್ಯಾದಿತಿ ಶನೈಸ್ತರಾಮಸ್ಯ ಋಚಮುಕ್ತ್ವೋಚ್ಚೈಸ್ತರಾಂ ವಷಟ್ಕುರ್ಯಾಚ್ಛ್ರೇಯ ಏವೈನಂ ತಚ್ಛ್ರೇಯಮಾದಧಾತಿ ।

ಹಾಗಲ್ಲದೆ ಯಜಮಾನನಿಗೆ ಶ್ರೇಯಸ್ಸುಂಟಾಗಬೇಕೆಂದು ಹೋತೃವು ಬಯಸಿದಲ್ಲಿ ಆಗ ಯಾಜ್ಯಾಮಂತ್ರವನ್ನು ಮೆತ್ತನೆಯ ಧ್ವನಿಯಲ್ಲಿಯೂ ವಷಟ್ಕಾರವನ್ನು ಘಟ್ಟಿಯಾದಧ್ವನಿಯಲ್ಲಿಯೂ ಉಚ್ಚರಿಸಬೇಕು. ಹೀಗೆ ಮಾಡಿದರೆ ಯಜಮಾನನಿಗೆ ಶ್ರೇಯಸ್ಸುಂಟಾಗುವುದು,

ಸಂತತೇನೃಚಾ ವಷಟ್ಕೃತ್ಯಂ ಸಂತತ್ಯೈ । ಸಂಧೀಯತೇ ಪ್ರಜಯಾ ಪಶುಭಿರ್ಯ ಏವಂ ವೇದ ॥
(ಐ. ಬ್ರಾ ೧೧-೭)

ಯಾಜ್ಯಾಮಂತ್ರವನ್ನೂ ವಷಟ್ಕಾರವನ್ನೂ ಉಚ್ಚರಿಸುವಾಗ ಮುಖ್ಯವಾದ ಒಂದು ವಿಷಯವನ್ನು ಗಮನಿಸಬೇಕು. ಯಾಜ್ಯಾಮಂತ್ರವನ್ನು ಕೊನೆಯವರೆಗೂ ಉಚ್ಚರಿಸಿ ಅನಂತರ ಸ್ವಲ್ಪವಿರಾಮವಾದಮೇಲೆ ವಷಟ್ಕಾರವನ್ನು ಉಚ್ಚರಿಸ ಕೂಡದು. ವಷಟ್ಕಾರವನ್ನು ಯಾಜ್ಯಾಮಂತ್ರದ ಒಂದು (ಕೊನೆಯ) ಭಾಗವೆಂದೇ ಭಾವಿಸಿ ಋಕ್ಕಿನ ಪ್ರಾರಂಭದಿಂದ ವೌಷಟ್ ಎನ್ನುವವರೆಗೂ ಮಧ್ಯೆ ಎಲ್ಲಿಯೂ ಸ್ವಲ್ಪವೂನಿಲ್ಲಿಸದೆ ಸಂತತಧಾರಾಕಾರವಾಗಿ ಉಚ್ಚರಿಸಬೇಕು. ಈ ವಿಷಯವನ್ನು ತಿಳಿದಿರುವವನು ಪ್ರಜೆಗಳನ್ನೂ ಪಶುಸಂಪತ್ತನ್ನೂ ಪಡೆದು ಸುಖಿಸುವನು

ಹೋತೃವು ವಷಟ್ಕಾರವನ್ನು ಪರಿಸುವಾಗ ಅನುಸರಿಸಬೇಕಾದ ಕೆಲವು ನಿಯಮಗಳಿರುವವ್ರು. ಅವುಗಳನ್ನು ತಪ್ಪದೆ ಪಾಲಿಸಬೇಕು. ಇಲ್ಲದಿದ್ದರೆ ಹಿರಿತವಾದ ಆಯುಧಪ್ರಯೋಗದಿಂದ ಅಪಾಯವು ಸಂಭವಿಸುವಂತೆ ವಷಟ್ಕಾರ ಪ್ರಯೋಗದಿಂದ ಅನಿಷ್ಟವು ಸಂಭವಿಸುವುದು—

ಯಸ್ಯೈ ದೇವತಾಯೈ ಹವಿರ್ಗೃಹೀತಂ ಸ್ಯಾತ್ತಾಂ ಧ್ಯಾಯೇದ್ವಷಟ್ಕರಿಷ್ಯನ್ಸಾಕ್ಷಾದೇವ ತದ್ದೇವತಾಂ ಪ್ರೀಣಾತಿ ಪ್ರತ್ಯಕ್ಷಾದ್ದೇವತಾಂ ಯಜತಿ ॥

(ಐ ಬ್ರ್ರ- ೧೧ ಲ)

ಹೋತೃವು ಯಾವ ದೇವತೆಯನ್ನುದ್ದೇಶಿಸಿ ವಷಟ್ಕಾರದಿಂದ ಹೋಮಮಾಡುವನೋ ಆ ದೇವತೆಯನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಮಂತ್ರೋಚ್ಚಾರಣೆಮಾಡಿ ವಷಟ್ಕಾರದಿಂದ ಹೋಮಮಾಡಬೇಕು. ಹೀಗೆ ಮಾಡಿದರೆ ದೇವತೆಯನ್ನು ಪ್ರತ್ಯಕ್ಷವಾಗುವಂತೆ ಸಾಕ್ಷಾತ್ಕರಿಸಿ ತೃಪ್ತಿಪಡಿಸಿದಂತಾಗುವುದು ದೇವತೆಗಳನ್ನು ಪ್ರತ್ಯಕ್ಷವಾಗಿ ನೋಡುವುದನ್ನು ಎಂದರೆ ಸಾಕ್ಷಾತ್ಕರಿಸುವುದು ಸಾಧ್ಯವೇ ಎಂದರೆ, ಪ್ರತ್ಯಕ್ಷವಾಗಿ ಕಣ್ಣುಗಳಿಂದ ನೋಡುವುದು ಸಾಧ್ಯವಿಲ್ಲ. ಆದರೆ ಮನಸ್ಸಿನಲ್ಲಿ ಧ್ಯಾನಿಸುವುದರಿಂದ ಆ ದೇವತೆಯು ತನ್ನ ಎದುರಿಗೆ ಪ್ರತ್ಯಕ್ಷವಾಗಿರುವಂತೆ ಮನಸ್ಸಿನಲ್ಲಿ ಭಾವಿಸಬಹುದು. ಇದನ್ನೇ ಪ್ರತ್ಯಕ್ಷವೆಂದು ಹೇಳಬಹುದು.

ವಜ್ರೋ ವೈ ವಷಟ್ಕಾರಃ ಸ ಏಷ ಪ್ರಹೃತೋಽಶಾಂತೋ ದೀದಾಯ ತಸ್ಯ ಹ್ಯೇತಸ್ಯ ನ ಸರ್ವ ಇವ ಶಾಂತಿಂ ವೇದ ನ ಪ್ರತಿಷ್ಠಾಂ ತಸ್ಮಾದ್ಧಾಪ್ಯೇತರ್ಹಿ ಭೂಯಾನಿವ ಮೃತ್ಯುಸ್ತಸ್ಯ ಹ್ಯೇಷೈವ ಶಾಂತಿರೇಷಾ ಪ್ರತಿಷ್ಠಾ ವಾಗಿತ್ಯೇವ ತಸ್ಯಾದ್ವಷಟ್ಕೃತ್ಯ ವಾಗಿತ್ಯನುಮಂತ್ರಯೇತ ಸ ಏನಂ ಶಾಂತೋ ನ ಹಿನಸ್ತಿ ॥

ವಷಟ್ಕಾರವು ವಜ್ರಾಯುಧದಂತೆ ತೀಕ್ಷ್ಣವಾದುದೆಂದೂ ಅದನ್ನು ಸರಿಯಾಗಿ ಉಪಯೋಗಿಸದಿದ್ದರೆ ಹಾನಿಯು ತಟ್ಟುವುದೆಂದೂ ಹಿಂದೆಯೇ ಹೇಳಿದೆಯಷ್ಟೆ. ಇದರ ಉಪಯೋಗವನ್ನು ಎಲ್ಲರೂ ತಿಳಿದಿರುವುದಿಲ್ಲ ಇದರ ಕ್ರಮವನ್ನು ತಿಳಿಯದೇ ಮನಸ್ವಿಯಾಗಿ ಉಪಯೋಗಿಸುವುದರಿಂದ ಯುದ್ಧಗಳಲ್ಲಿ ಅನೇಕರು ಮೃತ್ಯುವಶರಾಗುವಂತೆ ಇಲ್ಲಿಯೂ ವಷಟ್ಕಾರಮಂತ್ರದ ಅಪಪ್ರಯೋಗದಿಂದ ಅನೇಕರಿಗೆ ಹಾನಿಯು ತಟ್ಟಬಹುದು ಆದುದರಿಂದ ಇದರ ಶಾಂತ್ಯರ್ಥವಾಗಿ **ವಾಗೋಜಃ** ಎಂಬ ಮಂತ್ರವನ್ನು ಪಠಿಸಬೇಕು ಈ ಮಂತ್ರವನ್ನು ಉಚ್ಚರಿಸುವುದರಿಂದ ವಷಟ್ಕಾರದ ಅಪಪ್ರಯೋಗ ದಿಂದುಂಟಾಗಬಹುದಾದ ಅನಿಷ್ಟವು ಪರಿಹಾರವಾಗುವುದು. ಅನಿಷ್ಟಪರಿಹಾರಕ್ಕೆ ಇದಲ್ಲದೆ ಬೇರೆ ಉಪಾಯವಿಲ್ಲ. ಆದ್ದರಿಂದ ಯಜ್ಞಮಾಡುವಕಾಲದಲ್ಲಿ ಪ್ರತಿಯೊಂದುಸಲ ವಷಟ್ಕಾರಾನಂತರದಲ್ಲಿಯೂ **ವಾಗೋಜಃ** ಎಂಬ ಮಂತ್ರವನ್ನು ಉಚ್ಚರಿಸಬೇಕು. ಹೀಗೆ ಮಾಡುತ್ತಿದ್ದರೆ ವಜ್ರರೂಪವಾದ ವಷಟ್ಕಾರದಿಂದ ಯಾವ ಕೆಡಕೂ ಆಗುವುದಿಲ್ಲ. ಈ ರೀತಿ ಹೇಳುವುದು ಕೆಲವರ ಮತವು. ಇನ್ನು ಕೆಲವರು ಬೇರೆ ವಿಧವಾಗಿ ಹೇಳುವರು.

ವಷಟ್ಕಾರ ಮಾ ಮಾಂ ಪ್ರವೃಕ್ಷೋ ಮಾಹಂ ತ್ವಾಂ ಪ್ರವೃಕ್ಷಂ ಬೃಹತಾ ಮನ ಉಪಹ್ವಯೇ ವ್ಯಾನೇನ ಶರೀರಂ ಪ್ರತಿಷ್ಠಾಸಿ ಪ್ರತಿಷ್ಠಾಂ ಗಚ್ಛ ಪ್ರತಿಷ್ಠಾಂ ಮಾ ಗಮಯೇತಿ ವಷಟ್ಕಾರ-ಮನುಮಂತ್ರಯೇತ ॥

ಯಜ್ಞವಮಾಡುವ ಯಜಮಾನನು ಅನುಮಂತ್ರಣ (ಶಾಂತಿ)ವನ್ನು ಕುರಿತು ಈ ರೀತಿ ಹೇಳಬೇಕು—ಎಲೈ ವಷಟ್ಕಾರವೇ, ನೀನು ಯಜ್ಞವಮಾಡುತ್ತಿರುವ ನನ್ನನ್ನು ಆಜೆಗೆ ತಳ್ಳಿ ನಾಶಮಾಡಬೇಡ, ನಾನೂ ನಿನ್ನನ್ನು ನೂಕುವುದಿಲ್ಲ. ನಾನು ಈ ಮಹಾಯಜ್ಞಕರ್ಮದಿಂದ ನಿನ್ನ ಮನಸ್ಸನ್ನು ಒಲಿಸಿಕೊಳ್ಳುತ್ತೇನೆ ವ್ಯಾನಾದಿವಾಯುಗಳಂದ ನಿನ್ನ ಶರೀರವನ್ನು ವ್ಯಾಪಿಸಿ ನಿನ್ನೊಡನೆ ಸಹಕರಿಸುತ್ತೇನೆ. ನೀನು ಸಮಸ್ತ ಪ್ರಾಣಿಸಮೂಹಕ್ಕೂ ಆಶ್ರಯಭೂತನಾಗಿರುವೆ ಆದ್ದರಿಂದ ನೀನು ನಿನ್ನ ಶ್ರೇಷ್ಠವಾದ ಸ್ವಸ್ಥಾನಕ್ಕೆ ತೆರಳು. ನಾನೂ ಸಹ ನನ್ನ ಸ್ವಸ್ಥಾನಕ್ಕೆ ಹೋಗುವಂತೆ ಅನುಗ್ರಹಿಸು ಎಂದು ಯಜಮಾನನು ಪ್ರಾರ್ಥಿಸಬೇಕು.

ತದು ಹ ಸ್ಮಾಹ ದೀರ್ಘಮೇತತ್ಸದಪ್ರಭ್ವೋಜಃ ಸಹ ಓಜಃ । ಇತ್ಯೇವ ವಷಟ್ಕಾರಮನುಮಂತ್ರ-ಯೇತ । ಓಜಶ್ಚ ಹ ವೈ ಸಹಶ್ಚ ವಷಟ್ಕಾರಸ್ಯ ಪ್ರಿಯತನೌ ತನ್ವೌ ಪ್ರಿಯೇಣೈವೈನಂ ತದ್ಧಾತ್ಮನಾ ಸಮರ್ಧಯತಿ ಪ್ರಿಯೇಣ ಧಾಮ್ನಾ ಸಮೃಧ್ಯತೇ ಯ ಏವಂ ವೇದ ॥

ಬ್ರಹ್ಮವಾದಿಗಳಾದ ಕೆಲವರು, ಈ ಮಂತ್ರವು ಬಹುದೀರ್ಘವಾಗಿರುವುದು. ಆದ್ದರಿಂದ ಇದನ್ನು ಪರಿಸುವುದು ತುಂಬಾ ಶ್ರಮವು, ಅದಲ್ಲದೆ ಇದು ವಜ್ರರೂಪವಾದ ವಷಟ್ಕಾರವನ್ನು ಶಮನಗೊಳಿಸುವುದೋ ಇಲ್ಲವೋ ? ಆದ್ದರಿಂದ ಚಿಕ್ಕದಾಗಿಯೂ ವಷಟ್ಕಾರವನ್ನು ಶಮನಗೊಳಿಸುವುದೂ ಆದ **ಓಜಃ ಸಹ ಓಜ;** ಎಂಬ ಮಂತ್ರವನ್ನು ಪರಿಸಬಹುದು. ಈ ಮಂತ್ರದಲ್ಲಿ ಮೂರು ಶಬ್ದಗಳು ಮಾತ್ರ ಇರುವವು, **ಓಜಃ** ಎಂದರೆ ಸಾಮರ್ಥ್ಯವು **ಸಹಃ** ಎಂದರೆ ಬಲವು ಇವೆರಡೂ ವಷಟ್ಕಾರದ ಪ್ರಿಯಶರೀರಗಳೆಂದು ಹೇಳಲ್ಪಡುವವು. ಹೀಗೆ ವಷಟ್ಕಾರಕ್ಕೆ ಪ್ರೀತಿ ಪಾತ್ರವಾದ ಶರೀರಗಳನ್ನು ಉಚ್ಚರಿಸುವುದರಿಂದ ವಷಟ್ಕಾರಕ್ಕೆ ಮಂತ್ರನ್ಯೂನತೆ ಮೊದಲಾದವುಗಳಿಂದ ಸಂಭವಿಸುವ ಕೋಪಾದಿಗಳು ಶಮನವಾಗಿ ಯಜಮಾನನಿಗೆ ಹಿತವನ್ನುಂಟುಮಾಡುವುದು. ಮಂತ್ರದಲ್ಲಿರುವ ಮೂರನೇ ಪದವಾದ ಓಜಃ ಎಂಬ ಶಬ್ದವು ಆದರಾರ್ಥವಾಗಿ ಪುನಃಪ್ರಯುಕ್ತವಾಗಿದೆ. ಇದಕ್ಕೆ ಪ್ರತ್ಯೇಕ ಅರ್ಥವೇನೂ ಇರುವುದಿಲ್ಲ, ಈ ವಿಷಯವನ್ನು ಯಾವ ಪುರುಷನು ಅರಿತಿರುವನೋ ಅವನಿಗೆ ವಷಟ್ಕಾರವು ಸಮೃದ್ಧಿಯನ್ನುಂಟುಮಾಡುವುದು.

ವಾಕ್ಚ ವೈ ಪ್ರಾಣಾಪಾನೌ ಚ ವಷಟ್ಕಾರಸ್ಯ ಏತೇ ವಷಟ್ಕೃತೇ ವಷಟ್ಕೃತೇ ವ್ಯತ್ಕ್ರಾಮಂತಿ ತಾನನುಮಂತ್ರಯೇತ ವಾಗೋಜಃ ಸಹ ಓಜೋ ಮಯಿ ಪ್ರಾಣಾಪಾನಾವಿತ್ಯಾತ್ಮನ್ನೇವ ತದ್ಧೋತಾ ವಾಚಂ ಚ ಪ್ರಾಣಾಪಾನೌ ಚ ಪ್ರತಿಷ್ಠಾಪಯತಿ ಸರ್ವಾಯುಃ ಸರ್ವಾಯು-ತ್ವಾಯ ಸರ್ವಮಾಯುರೇತಿ ಯ ಏವಂ ವೇದ ॥

(ಐ. ಬ್ರಾ ೧೧.೪)

ವಾಕ್ಕು, ಪ್ರಾಣ (ಉಚ್ಛ್ವಾಸ), ಅಪಾನ (ನಿಃಶ್ವಾಸ) ಎಂಬವೇ ವಷಟ್ಕಾರದ ಸ್ವರೂಪವು. ಹೋತೃವು ಮಂತ್ರಾಂತ್ಯದಲ್ಲಿ ವಷಟ್ಕಾರವನ್ನು ಉಚ್ಚರಿಸಿದಾಗಲೆಲ್ಲಾ ಈ ವಾಕ್ಕು ಪ್ರಾಣ ಅಪಾನಗಳು ಹೋತೃವಿನ ಶರೀರದಿಂದ ಹೊರಕ್ಕೆ ಹೊರಟುಹೋಗುವವು. ಹಾಗೆ ಆಗದಿರುವುದಕ್ಕಾಗಿಯೇ ಇವುಗಳನ್ನು ಅನುಮಂತ್ರಣದಲ್ಲಿ ಸೇರಿಸಬೇಕು. **ವಾಗೋಜಃ ಸಹ ಓಜೋ ಮಯಿ ಪ್ರಾಣಾಪಾನೌ** ಎಂಬುದೇ ಆ ಅನುಮಂತ್ರಣವು. ಇದರ ಅರ್ಥವು–ಸಾಮರ್ಥ್ಯ

ಮತ್ತು ಬಲಗಳೆಂಬ ಎರಡು ಪ್ರಿಯಶರೀರಾತ್ಮಕವಾದ ಎಲೈ ವಷಟ್ಕಾರವೇ, ನಿನ್ನ ಅನುಗ್ರಹದಿಂದ ಸಾಮರ್ಥ್ಯ ಮತ್ತು ಬಲಗಳು ನನ್ನಲ್ಲಿ ನೆಲಸಿರಲಿ. ಮತ್ತು ವಾಕ್, ಪ್ರಾಣ, ಅಪಾನಗಳೂ ಸಹ ನನ್ನ ಶರೀರದಿಂದ ಹೊರಟು ಹೋಗದೆ ನನ್ನಲ್ಲಿ ಸ್ಥಿರವಾಗಿರಲಿ ಎಂಬ ಅರ್ಥವುಳ್ಳ ಈ ಮಂತ್ರವನ್ನು ಪಠಿಸುವುದರಿಂದ ಹೋತೃವು ವಾಕ್ಪ್ರಾಣಾಪಾನ ಗಳನ್ನು ಹೊರಕ್ಕೆ ಹೋಗದಂತೆ ತಡೆದು ತನ್ನಲ್ಲಿ ನಿಲ್ಲಿಸಿರಲು ಸಮರ್ಥನಾಗುವನು. ಮತ್ತು ಈ ಕಾರಣದಿಂದ ತನಗೆ ನಿರ್ದಿಷ್ಟವಾದ (ನೂರುವರ್ಷಗಳವರೆಗೆ) ಪೂರ್ಣಾಯುಸ್ಸನ್ನು ಪಡೆಯುವನು. ಈ ವಿಷಯವನ್ನು ಅರಿತಿರುವ ಪುರು ಷನೂ ಸಹ ಪೂರ್ಣಾಯುಸ್ಸನ್ನು ಪಡೆದು ಸುಖಿಸುವನು.

॥ ಸಂಹಿತಾಪಾಠಃ ॥

ಯಸ್ತೇ ದ್ರಪ್ಸಃ ಸ್ಕನ್ನೋ ಯಸ್ತೇ ಅಂಶುರವಶ್ಚ ಯಃ ಪರಃ ಸ್ರುಚಾ ॥

ಅಯಂ ದೇವೋ ಬೃಹಸ್ಪತಿಃ ಸಂ ತಂ ಸಿಂಚತು ರಾಧಸೇ ॥ ೧೩ ॥

॥ ಪದಪಾಠಃ ॥

ಯಃ । ತೇ । ದ್ರಪ್ಸಃ । ಸ್ಕನ್ನಃ । ಯಃ । ತೇ । ಅಂಶುಃ । ಅವಃ । ಚ । ಯಃ । ಪರಃ । ಸ್ರುಚಾ ।

ಅಯಂ । ದೇವಃ । ಬೃಹಸ್ಪತಿಃ । ಸಂ । ತಂ । ಸಿಂಚತು । ರಾಧಸೇ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಸೋಮ ತೇ ತ್ವದೀಯೋ ಯೋ ದ್ರಪ್ಸೋ ರಸೋಽನ್ಯತ್ರ ಸ್ಕನ್ನೋ ಗತೋ ಯಶ್ಚ ತ್ವದೀಯಸ್ಯೈವ ಕಾರಣಭೂತೋಽಂಶುರ್ಲತಾಖಂಡೋ ರಸಾದಿತರೋ ಭವತಿ ಸ್ರುಚಾ ಪಾತ್ರವಿಶೇಷೇಣ ಗೃಹೀತಃ ಸೋಮೋಽವೋಽವಸ್ತಾತ್ಸ್ಕಂದತೇ ಪರಃ ಪರಸ್ತಾದ್ವಾತಿರಿಕ್ತೋ ಭವತಿ ತಮಿಮಂ ಸೋಮಮಯಂ ಬೃಹಸ್ಪತಿರೇತನ್ನಾಮಕೋ ದೇವಃ ಸಂ ಸಿಂಚತು । ಸಮ್ಯಕ್ ಪ್ರಕ್ಷಾರಯತು । ಕಿಮರ್ಥಂ । ರಾಧಸೇಽಸ್ಮಾಕಂ ಧನಾರ್ಥಂ । ಸ್ಕನ್ನೇ ಹಿ ಸೋಮೇ ಪ್ರಜಾಪಶ್ವಾದಿಕಮಪಸ್ಕನ್ನಂ ಭವತಿ ಖಲು ॥

॥ ಪ್ರತಿಪದಾರ್ಥ ॥

(ಎಲೈ ಸೋಮವೇ) ತೇ—ನಿನ್ನ । ಯಃ ದ್ರಪ್ಸಃ—ಯಾವ ರಸವು । ಸ್ಕನ್ನಃ—ಸ್ರವಿಸುವುದೋ । ಯಃ ತೇ ಅಂಶುಃ—ಯಾವ ಲತೆಯು । ಸ್ರುಚಾ—ಸುಕ್ವಾತ್ರೆಯಿಂದ ಹಿಡಿಯಲ್ಪಟ್ಟು । ಅವಃ—ಕೆಳಭಾಗಕ್ಕೂ । ಯಃ ಪರಃ ಚ—ಇತರ ಭಾಗಗಳಿಗೂ ಚೆಲ್ಲಿಹೋಗುವುದೋ । ತಂ— ಅಂತಹ ರಸಪೂರ್ಣವಾದ ಸೋಮವನ್ನು । ದೇವಃ ಅಯಂ ಬೃಹಸ್ಪತಿಃ—ಈ ಬೃಹಸ್ಪತಿದೇವನು । ರಾಧಸೇ—ನಮಗೆ ಧನಲಾಭಾರ್ಥವಾಗಿ । ಸಂ ಸಿಂಚತು—ಸುತ್ತಲೂ ಸೇಕಿಸಲಿ.

॥ ಭಾವಾರ್ಥ ॥

ಎಲೈ ಸೋಮವೇ, ನಿನ್ನ ಯಾವ ರಸವು ಸ್ರವಿಸುವುದೋ ಯಾವ ಲತೆಯು ಸ್ರುಕ್ಪಾತ್ರೆಯಿಂದ ಓಡಿಯು ಲ್ಪಟ್ಟು ಕೆಳಭಾಗಕ್ಕೂ ಇತರ ಭಾಗಗಳಿಗೂ ಚೆಲ್ಲಿಹೋಗುವುದೋ ಅಂತಹ ರಸಪೂರ್ಣವಾದ ಸೋಮನನ್ನು ಈ ಬೃಹಸ್ಪತಿದೇವನು ನಮಗೆ ಧನಲಾಭಾರ್ಥವಾಗಿ ಸುತ್ತಲೂ ಸೇಕಿಸಲಿ. (ಅರ್ಪಿಸಲಿ)

English Translation

Your juice and your filaments, (Soma), which escape, and which fall from the ladle on this side or on that; may this divine Brihaspati sprinkle it for our enrichment.

॥ ಸಂಹಿತಾಪಾಠಃ ॥

ಪಯಸ್ವತೀರೋಷಧಯಃ ಪಯಸ್ವನ್ಮಾಮಕಂ ವಚಃ ।
ಅಪಾಂ ಪಯಸ್ವದಿತ್ಪಯಸ್ತೇನ ಮಾ ಸಹ ಶುಂಧತ ॥ ೧೪ ॥

॥ ಪದಪಾಠಃ ॥

ಪಯಸ್ವತೀಃ । ಓಷಧಯಃ । ಪಯಸ್ವತ್ । ನ್ಮಾಮಕಂ । ವಚಃ ।
ಅಪಾಂ । ಪಯಸ್ವತ್ । ಇತ್ । ಪಯಃ । ತೇನ । ಮಾ । ಸಹ । ಶುಂಧತ ॥ ೧೪ ॥

॥ ಸಾಯಣಭಾಷ್ಯಂ ॥

ಇಯಂ ಪ್ರತ್ಯಕ್ಷಕೃತಾ । ಹೇ ಆಪಃ ಓಷಧಯಃ ಪಯಸ್ವತೀಃ ಪಯಸ್ವತ್ಯೋ ವೃಷ್ಟಿಲಕ್ಷಣೇ-ನೋದಕೇನ ಸಾರವತ್ಯೋ ಭವಂತಿ । ಮಾಮಕಂ ಮದೀಯಂ ವಚೋ ವಚನಂ ವೃಷ್ಟಿಪ್ರಾರ್ಥನ-ವಚನಂ ಪಯಸ್ವತ್ಸಾರವದ್ಭವತಿ । ಕಂ ಬಹುನಾ । ಯಚ್ಚೇಹ ಕಿಂಚಿದಪಾಮುದಕಾನಾಂ ಪಯಃ ಕ್ಷೀರವತ್ಸಾರಭೂತಂ ಯದಸ್ತಿ ತತ್ಸರ್ವಂ ಪಯಸ್ವತ್ಸಾರವದೇವ । ತೇನೋದಕಸಾರೇಣ ಸಹ ಮಾ ಮಾಂ ಶುಂಧತ । ಯೂಯಂ ಶೋಧಯತ । ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ । ಋ. ೧.೨೩.೨೩ । ಇತಿ ನಿಗಮಾಂತರಂ ॥

॥ ಪ್ರತಿಪದಾರ್ಥ ॥

(ಎಲೈ ಆಬ್ದೇವತೆಗಳೇ) ಓಷಧಯಃ—ಓಷಧಿಗಳು । ಪಯಸ್ವತೀಃ—ಉದಕಗಳಿಂದ ಸಾರವುಳ್ಳವಾಗಿ ಆಗುತ್ತವೆ । ಮಾಮಕಂ—ನನ್ನ । ವಚಃ—ವೃಷ್ಟ್ಯರ್ಥವಾದ ಪ್ರಾರ್ಥನೆಯು । ಪಯಸ್ವತ್—ಸಾರವುಳ್ಳದ್ದಾಗಿ ಆಗುತ್ತದೆ । ಅಪಾಂ—ಉದಕಗಳ । ಪಯಃ ಪಯಸ್ವತ್—ರಸವೆಲ್ಲವೂ ಸಾರವುಳ್ಳದ್ದಾಗುತ್ತದೆ । ತೇನ ಸಹ—ಆ ಉದಕರಸದಿಂದ । ಮಾ—ನನ್ನನ್ನು । ಶುಂಧತ—ಶುದ್ಧನನ್ನಾಗಿ ಮಾಡಿರಿ.

। ಭಾವಾರ್ಥ ।

ಎಲೈ ಅಬ್ದೇವತೆಗಳೇ, ಓಷಧಿಗಳು ಉದಕಗಳಿಂದ ಸಾರವುಳ್ಳವಾಗಿ ಆಗುತ್ತವೆ ನನ್ನ ವೃಷ್ಟ್ಯರ್ಥವಾದ ಪ್ರಾರ್ಥನೆಯು ಸಾರವುಳ್ಳದ್ದಾಗಿ ಆಗುತ್ತದೆ. ಉದಕಗಳ ರಸಗಳೆಲ್ಲವೂ ಸಾರಭರಿತವಾಗಿವೆ ಆ ಉದಕರಸದಿಂದ ನನ್ನನ್ನು ಶುದ್ಧನನ್ನಾಗಿ ಮಾಡಿರಿ.

English Translation

(Waters)! the plants flourish by means of water, my prayer is effectual through water; the essence of water is vigorous through water; purify me with it

ಹದಿನೆಂಟನೆಯ ಸೂಕ್ತವು.

ಪೀಠಿಕೆ

ಈ ಸೂಕ್ತದಲ್ಲಿ ಮೃತ್ಯುದೇವತೆಯ ಸ್ತುತಿಯೂ ಪಿತೃಕರ್ಮಗಳಲ್ಲಿ ಉಪಯೋಗಿಸಲ್ಪಡುವ ಮಂತ್ರಗಳೂ ಉಕ್ತವಾಗಿವೆ. ಶೌನಕೋಕ್ತವಾದ ಬೃಹದ್ದೇವತಾಗ್ರಂಥದಲ್ಲಿ ಈ ಸೂಕ್ತದ ವಿಷಯವಾಗಿ ಹೀಗೆ ಹೇಳಿದೆ—

ಚತಸ್ರಶ್ಚಾ ಸ್ತುತಿರ್ಮೃತ್ಯೋರಂತ್ಯೇ ಕ್ಲೃಪ್ತಾಶ್ಚ ಕರ್ಮಣಿ ॥ ೧೦ ॥

ಮೃತಶಿಷ್ಟೇಭ್ಯ ಆಶಾಸ್ತೇ ಇಮೇ ಜ್ಯೋಗ್ಜೀವನಂ ಪುನಃ ।
ಇಮಂ ಜೀವೇಭ್ಯ ಆಶಾಸ್ತೇ ತೇಭ್ಯಃ ಪರಿಧಿಕರ್ಮಣಿ ॥ ೧೧ ॥

ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳು ಮೃತ್ಯುದೇವತೆಯನ್ನು ಸ್ತುತಿಸುವವು. ಈ ಮಂತ್ರಗಳು ಆಪರಕರ್ಮಗಳಲ್ಲಿ ಉಪಯೋಗಿಸಲ್ಪಡುವವು. ಇಮೇ ಜೀವಾ ಎಂಬ ಮೂರನೆಯ ಋಕ್ಕಿನಲ್ಲಿ ಮೃತರಾದವರ ಸಂಸಾರಕ್ಕೆ ಸೇರಿದವರ ಮತ್ತು ಇನ್ನೂ ಜೀವಂತರಾಗಿರುವವರ ವಿಷಯದಲ್ಲಿ ದೀರ್ಘಕಾಲ ಬದುಕಲೆಂಬ ಆಶಾಸನೆಯು ಉಕ್ತವಾಗಿದೆ. ಇಮಂ ಜೀವೇಭ್ಯಃ ಎಂಬ ನಾಲ್ಕನೆಯ ಋಕ್ಕನ್ನು-ಮೃತ್ಯುವಿನಿಂದ ಪಾರಾಗುವುದಕ್ಕಾಗಿ ಜೀವಂತರಾಗಿರುವವರ ಸುತ್ತಲೂ ಕಲ್ಲನ್ನು ಸ್ಥಾಪಿಸುವ ಕರ್ಮದಲ್ಲಿ ಪ್ರಯೋಗಿಸಲ್ಪಡುವುದು.

ಯಥಾ ಧಾತ್ರ್ಯುತ್ತರಾ ತ್ವಾಷ್ಟ್ರೀ ತತೋ ಯಾನ್ಯಾ ಇಮಾಸ್ತ್ರಿತಿ ।
ಸ್ತ್ರೀಣಾಮಾಶಿಷಮಾಶಾಸ್ತೇ ತಯೈವಾಂಜನಕರ್ಮಣಿ ॥ ೧೨ ॥

ಯಥಾಹಾನಿ, ಆರೋಹತೆ, ಇಮಾ ನಾರೀಃ ಎಂಬ ಈ ಸೂಕ್ತದ ೫, ೬, ೭ನೇ ಋಕ್ಕುಗಳನ್ನು ಮೃತರ ಸಂಸಾರಕ್ಕೆ ಸೇರಿದ ಸ್ತ್ರೀಯರು ಘೃತ ಅಥವಾ ಅಂಜನದಿಂದ (ಕಪ್ಪು) ತಮ್ಮ ನೇತ್ರಗಳನ್ನು ಸವರಿಕೊಳ್ಳುವಾಗ ಪಠಿಸಬೇಕು ಮತ್ತು ಈ ಋಕ್ಕುಗಳಲ್ಲಿ ಆ ಸ್ತ್ರೀಯರಿಗೆ ದೀರ್ಘಾಯುಸ್ಸುಲಭಿಸಲೆಂದು ಆಶ್ವಾಸನೆಯು ಇಲ್ಲಿ ಉಕ್ತವಾಗಿದೆ ಈ ಋಕ್ಕುಗಳಲ್ಲಿ ೫ನೆಯ ಋಕ್ಕಿಗೆ ಧಾತೃವೂ ೭ನೆಯ ಋಕ್ಕಿಗೆ ತ್ವಷ್ಟೃವೂ ದೇವತೆಗಳು.

ಉದ್ದೀರ್ಷ್ವನಾರೀತ್ಯನಯಾ ಮೃತಂ ಪತ್ನ್ಯಸುರೋಹತಿ ।
ಭ್ರಾತಾ ಕನೀಯಾನ್ಪ್ರೇತಸ್ಯ ನಿಗದ್ಯ ಪ್ರತಿಷೇಧತಿ ॥ ೧೩ ॥

ಕುರ್ಯಾದೇತತ್ಕರ್ಮ ಹೋತಾ ದೇವರೋ ನ ಭವೇದ್ಯದಿ ।
ಪ್ರೇತಾನುಗಮನಂ ನ ಸ್ಯಾದಿತಿ ಬ್ರಾಹ್ಮಣಶಾಸನಾತ್ ॥ ೧೪ ॥

ವರ್ಣಾನಾಮಿತರೇಷಾಂ ಚ ಸ್ತ್ರೀಧರ್ಮೋಽಯಂ ಭವೇನ್ನ ವಾ ॥

ಉದೀರ್ಷ್ವನಾರಿ ಎಂಬ ಋಕ್ಕನ್ನು ಪರಿಸುತ್ತಾ ಮೃತನ ಪತ್ನಿಯು ಚಿತೆಯನ್ನೇರಿ ತನ್ನ ಪತಿಯೊಡನೆ ಸಹಗಮನ ಮಾಡಲು ಉದ್ಯುಕ್ತಳಾಗುವಳು. ಆಗ ಪತಿಯ ತಮ್ಮನೂ ಪತ್ನಿಯ ವೈದನನೂ ಆದವನು ಆ ಸ್ತ್ರೀಯನ್ನು ಸಹಗಮನ ಮಾಡಬೇಡವೆಂದು ತಡೆಯುವನು. ಮೃತನಿಗೆ ತಮ್ಮನಿಲ್ಲದಿದ್ದರೆ ಆ ಕೆಲಸವನ್ನು ಪುರೋಹಿತನೇ ಮಾಡುವನು ಪ್ರೇತಶರೀರದ ಜತೆಯಲ್ಲಿ ಸಹಗಮನವನ್ನು ಮಾಡಬಾರದೆಂದು ಬ್ರಾಹ್ಮಣರ ಆಜ್ಞೆ ಇರುವುದು. ಬ್ರಾಹ್ಮಣರಿಗೂ ಇತರ ವರ್ಣದವರಿಗೂ ಮೃತರಾದವರ ಸ್ತ್ರೀಯರ ವಿಷಯದಲ್ಲಿ ಈ ಧರ್ಮವನ್ನೇ ಬೇಕಾದರೆ ಅನುಸರಿಸಬಹುದು. ಇಲ್ಲದಿದ್ದರೆ ಬಿಟ್ಟುಬಿಡಬಹುದು.

ಶಾಂತ್ಯರ್ಥಂ ಧನುರಾದಾನೇ ಪ್ರೇತಸ್ಯರ್ಚಂ ಧನುರ್ಜಪೇತ್ ।
ಯಸ್ಮಾದೇತಾಃ ಪ್ರಯುಜ್ಯಂತೇ ಶ್ಮಶಾನೇ ಚಾಂತ್ಯಕರ್ಮಣಿ ॥ ೧೫ ॥

ತಸ್ಮಾದ್ವದೇತ್ಪೃಚಸ್ಯಾಸ್ಯ ದೇವತಾಂ ಮೃತ್ಯುಮೇವ ತು ।

ಮೃತನಾದ ಪುರುಷನು ಕ್ಷತ್ರಿಯನಾಗಿದ್ದಲ್ಲಿ ಶಾಂತ್ಯರ್ಥವಾಗಿಯೂ, ಅವನು ಉಪಯೋಗಿಸುತ್ತಿದ್ದ ಧನುಸ್ಸನ್ನು ಮೃತಶರೀರದ ಬಳಿ ಇಡುವುದಕ್ಕಾಗಿ ಕೈಗೆ ತೆಗೆದುಕೊಳ್ಳುವಾಗ ಧನುರ್ಹಸ್ತಾತ್ ಎಂಬ ಈ ಋಕ್ಕನ್ನು ಪಠಿಸಬೇಕು. ಶ್ಮಶಾನದಲ್ಲಿ ಅಪರಕರ್ಮಗಳನ್ನು ಮಾಡುವಾಗ ಈ ಋಕ್ಕನ್ನೂ ಮುಂದಿನ ಋಕ್ಕುಗಳನ್ನೂ ಪರಿಸುವುದರಿಂದ ಈ ಋಕ್ಕುಗಳಿಗೆ ಮೃತ್ಯುವೇ ದೇವತೆಯೆಂದು ಹೇಳಲ್ಪಡುವುದು.

ಮುಂತ್ರೇಷು ಹ್ಯನಿರುಕ್ತೇಷು ದೇವತಾಂ ಕರ್ಮತೋ ವದೇತ್ ॥ ೧೬ ॥
ಮುಂತ್ರತಃ ಕರ್ಮತಶ್ಚೈವ ಪ್ರಜಾಪತಿರಸಂಭವೇ ।

ಈ ಸೂಕ್ತದ ಮುಂತ್ರಗಳಲ್ಲಿ ವಿನಿಯೋಗವನ್ನು ಅಥವಾ ದೇವತೆಯಾರೆಂಬುದನ್ನು ಹೇಳದೇ ಇರುವ ಸಂದರ್ಭದಲ್ಲಿ, ಮಾಡುವ ಕರ್ಮಾನುಸಾರವಾಗಿ ಆಯಾ ಮುಂತ್ರಗಳ ದೇವತೆಯನ್ನೂ ವಿನಿಯೋಗವನ್ನೂ ಹೇಳಬೇಕು. ಯಾವುದೂ ಸ್ಪಷ್ಟವಾಗಿಲ್ಲದಿರುವ ಸಂದರ್ಭದಲ್ಲಿ ಮುಂತ್ರದ ಅರ್ಥಕ್ಕೂ ಮಾಡುವ ಕರ್ಮಕ್ಕೂ ಅನುಸಾರವಾಗಿ ಆ ಮುಂತ್ರಗಳಿಗೆ ಪ್ರಜಾಪತಿಯು ದೇವತೆಯೆಂದು ಹೇಳಬಹುದು.

ಪರಾಚ್ಚತಸ್ರೋ ಯಾಸ್ತ್ವೃಚ ಉಪ ಸರ್ಪೇತಿ ಹಾರ್ತ್ವಿಜೇ ॥ ೧೭ ॥
ತಾಸಾಂ ಪ್ರಯೋಗಃ ಪ್ರೇತಸ್ಯಾಸ್ಥಿಸಂಚಯನೇ ಕರ್ಮಣಿ ॥

ಮುಂದಿನ ನಾಲ್ಕು ಋಕ್ಕುಗಳು ಎಂದರೆ ಉಪ ಸರ್ಪ ಎಂಬ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳು (೧೮-೨೩) ಅಪರಕರ್ಮಾಂಗಭೂತವಾದ ಅಸ್ಥಿಸಂಚಯನ (ಮೃತಶರೀರವು ಪಂಚಭೂತವಾದಮೇಲೆ ಅದರ ಅಸ್ಥಿ ಎಂದರೆ ಮೂಳೆಗಳನ್ನು

ನದ್ಯಾದಿಗಳಲ್ಲಿ ಹಾಕುವುದಕ್ಕಾಗಿ ಒಂದೆಡೆ ಸಂಗ್ರಹಿಸುವ ಕರ್ಮಕ್ಕೆ ಅಸ್ಥಿಸಂಚಯನವೆಂದು ಹೆಸರು)ವೆಂಬ ಕರ್ಮದಲ್ಲಿ ಪ್ರಯೋಗಿಸಲ್ಪಡುವವು

ಪ್ರತೀಚೀನೇ ಯಥಾಹಾನಿ ಅಪಹೃತ್ಯೇತರಾಣಿ ತು ॥ ೧೪ ॥
ಅಹಸ್ಸು ಪಿತರೋ ದಧುರಿತ್ಯಾಶಾಸ್ತೇಽನ್ತ್ಯಯಾತಿಥಃ ।
ಅಹಃಸ್ವಾಗಾಮಿಷು ಚ ಮಾಂ ಪ್ರಯತಂ ಸಮುಜೀವಯನ್ ॥ ೧೯ ॥

(ಬೃ. ದೇ. ೭-೧೦ ರಿಂದ ೧೯)

ಪ್ರತೀಚೀನೇ ಎಂಬ ಕೊನೆಯ ಋಕ್ಕಿನಲ್ಲಿ ಪಿತೃದೇವತೆಗಳು ಕರ್ಮಕರ್ತನಿಗೆ ಕರ್ಮವಾಡುವ ದಿವಸಗಳಲ್ಲಿಯೂ, ಆಯುರ್ವೃದ್ಧಿಯಾಗಲೆಂಬ ಆಶೀರ್ವಾದವನ್ನು ಮಾಡಿರುವ ವಿಷಯವು ಉಕ್ತವಾಗಿದೆ,

ಶೌನಕೋಕ್ತವಾದ ಋಗ್ವಿಧಾನವೆಂಬ ಗ್ರಂಥದಲ್ಲಿ ಈ ಸೂಕ್ತದ ವಿಷಯವಾಗಿ ಈರೀತಿ ಹೇಳಿರುವುದು—

ಮೃತ್ಯುಮೇವ ಪ್ರಪದ್ಯೇತ ಪರಂ ಮೃತ್ಯೋ ಜಪನ್ ದ್ವಿಜಃ ।
ನಕ್ತಭೋಜೀ ಮಿತಾಹಾರಃ ಪರಿಸಂವತ್ಸರಂ ಸದಾ ॥ ೪೦ ॥
ನೈನಂ ಪುರಾಯುಷೋ ಮೃತ್ಯುರ್ನಯತೇ ಸಸುತಪ್ರಜಂ ।

ದ್ವಿಜನಾದವನು ಪರಂ ಮೃತ್ಯೋ ಎಂಬ ಈ ಸೂಕ್ತವನ್ನು ಜಪಿಸಿದಲ್ಲಿ ಅವನಿಗೆ ಮೃತ್ಯುದೇವತೆಯು ಒಲಿದು ಪ್ರಸನ್ನವಾಗುವುದು. ಹೀಗೆ ಜಪಮಾಡುವ ಕಾಲದಲ್ಲಿ ಹಗಲು ಉಪವಾಸವಿದ್ದು ಜಪಮಾಡುತ್ತಾ ರಾತ್ರಿಕಾಲದಲ್ಲಿ ಮಾತ್ರ ಮಿತವಾದ ಆಹಾರವನ್ನು ಭುಂಜಿಸಬೇಕು. ಈ ರೀತಿ ಒಂದು ಸಂವತ್ಸರದವರೆಗೆ ಜಪಮಾಡಿದರೆ ಆ ಮೃತ್ಯು ದೇವತೆಯು ಅವನ ನಿಯಮಿತವಾದ ಆಯುಸ್ಸು ಪೂರ್ತಿಯಾಗುವುದಕ್ಕೆ ಮುಂಚೆ ಅವನನ್ನೂ ಅವನ ಪುತ್ರಾದಿಜನರನ್ನೂ ಕೊಂಡೊಯ್ಯುವುದಿಲ್ಲ

ಫಲಾಹಾರೋ ಜಯೇನ್ಮೃತ್ಯುಂ ತ್ರಿಭಿರ್ವರ್ಷೈರ್ಮಿತಾಶನಃ ।
ಷಷ್ಠೇ ಕಾಲೇ ತು ಭುಂಜೀತ ಫಲಂ ಮೂಲಮಥಾಪಿ ವಾ ॥

ಈ ಮೃತ್ಯುದೇವತೆಯನ್ನುದ್ದೇಶಿಸಿ ಜಪಮಾಡುವ ಕಾಲದಲ್ಲಿ ಕೆಲವು ನಿಯಮಗಳನ್ನನುಸರಿಸಬೇಕು. ಪ್ರತಿದಿನವೂ ಹಗಲು ಉಪವಾಸವಿದ್ದು ಆರನೆಯ ಯಾಮದಲ್ಲಿ ಎಂದರೆ ಸೂರ್ಯಾಸ್ತಮಾನಾನಂತರ ಎರಡನೇ ಯಾಮದಲ್ಲಿ ಕಂದಮೂಲ ಫಲಾದಿಗಳನ್ನು ಮಾತ್ರ ಭುಜಿಸಬೇಕು. ಈರೀತಿ ಮಿತಾಹಾರಕ್ರಮದಿಂದ ಮೂರು ವರ್ಷಗಳವರೆಗೆ ಜಪಮಾಡುವ ಪುರುಷನಿಗೆ ಮೃತ್ಯುವಿನ ಭಯವಿರುವುದಿಲ್ಲ.

ಸ್ಥಾನಾಸನಾಭ್ಯಾಂ ವಿಹರೇದುದಕೇ ಶಿಶಿರೇ ವಸೇತ್ ॥ ೪೨ ॥

ಗ್ರೀಷ್ಮೇ ಪಂಚತಪಾಸ್ತು ಸ್ಯಾದ್ವರ್ಷಾಸ್ವಭ್ರಾವಕಾಶಗಃ ।
ಏವಂ ಯುಕ್ತೋ ಜಯೇನ್ಮೃತ್ಯುಂ ರೋಗೇಭ್ಯಶ್ಚ ಪ್ರಮುಚ್ಯತೇ ॥ ೪೩ ॥

ಜಪಮಾಡುವ ಕಾಲದಲ್ಲಿ ಶಿಶಿರರ್ತುವಿನಲ್ಲಿ ಎಂದರೆ ಚಳಿಗಾಲದಲ್ಲಿ ನೀರಿನ ಮಧ್ಯದಲ್ಲಿ ನಿಂತು ಜಪಮಾಡಬೇಕು ಬೇಸಿಗೆಯಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ನಿಂತು ಜಪಮಾಡಬೇಕು. ಮಳೆಗಾಲದಲ್ಲಿ ಮನೆಯ ಹೊರಗಡೆ ನಿಂತು

ಮಳೆಯಲ್ಲಿ ನೆನೆಯುತ್ತಾ ಜಪಮಾಡಬೇಕು. ಈ ರೀತಿ ಜಪಮಾಡುವ ಪುರುಷನು ಮೃತ್ಯುಭಯವನ್ನು ಪರಿಹಾರ ಮಾಡಿಕೊಂಡು ರೋಗರಹಿತನಾಗಿ ಜೀವಿಸುವನು.

ಭ್ರಾತುರ್ಭಾರ್ಯಾಮಪುತ್ರಸ್ಯ ಸಂತಾನಾರ್ಥಂ ಮೃತೇ ಪತೌ ।
ದೇವರೋನ್ಯಾರುರುಕ್ಷಂತೀಮುದೀಷ್ವೇತಿ ನಿವರ್ತಯೇತ್ ॥ ೪೪ ॥

ಋತುಕಾಲೇ ತು ಸಂಪ್ರಾಪ್ತೇ ಘೃತಾಭ್ಯಕ್ತೋಽಥ ವಾಗ್ಯತಃ ।
ಏಕಮುತ್ಪಾದಯೇತ್ಪುತ್ರಂ ನ ದ್ವಿತೀಯಂ ಕಥಂಚನ ॥ ೪೫ ॥

(ಋಗ್ವಿಧಾನ ಅಧ್ಯಾಯ ೩)

ಜ್ಯೇಷ್ಠಸಹೋದರನು ಸಂತಾನರಹಿತನಾಗಿ ಮೃತನಾದಾಗ ಅವನ ಪತ್ನಿಯು ಮೃತಶರೀರದ ಜತೆಯಲ್ಲಿ ಚಿತೆಯಮೇಲೆ ಸಹಗಮನಮಾಡಲುದ್ಯುಕ್ತಳಾಗಿದ್ದರೆ ಆ ಸಂದರ್ಭದಲ್ಲಿ ಮೃತನ ತಮ್ಮನು ತನ್ನ ಅತ್ತಿಗೆಯಾದ ಅಣ್ಣನ ಪತ್ನಿಯನ್ನು ಸಹಗಮನಮಾಡಬೇಡವೆಂದು ತಡೆದು ಮನೆಗೆ ಹಿಂದಕ್ಕೆ ಕರೆತರಬೇಕು. ಬಳಿಕ ಆ ಸ್ತ್ರೀಯು ಋತುಸ್ನಾನಮಾಡಿದ ಮೇಲೆ ಘೃತಾಭ್ಯಕ್ತಾದಿಗಳಿಂದ ಶುದ್ಧನಾಗಿ ಆ ಸ್ತ್ರೀಯಲ್ಲಿ ಸಂಭೋಗಿಸಿ ಒಬ್ಬ ಪುತ್ರನನ್ನು ಮಾತ್ರ ಉತ್ಪತ್ತಿಮಾಡಬೇಕು. ಇನ್ನೊಬ್ಬ ಪುತ್ರನಾಗಬೇಕೆಂದು ಮುಂದೆ ಎಂತಹ ಸಂದರ್ಭದಲ್ಲಿಯೂ ಆ ಸ್ತ್ರೀಯಸಂಗವನ್ನು ಮತ್ತೆ ಮಾಡಬಾರದು.

ಈ ಸೂಕ್ತಕ್ಕೆ ದೇವತೆಯಾದ ಮೃತ್ಯುವಿನ ವಿಷಯದಲ್ಲಿ ಶತಪಥಬ್ರಾಹ್ಮಣದಲ್ಲಿ ಒಂದು ಇತಿಹಾಸವಿದೆ ಪೂರ್ವದಲ್ಲಿ ದೇವತೆಗಳೂ ಮನುಷ್ಯರೂ ಯಜ್ಞಯಾಗಾದಿಗಳನ್ನು ಮಾಡಿ ಅದರ ಫಲವಾಗಿ ಸ್ವರ್ಗಾದಿಲೋಕಗಳಿಗೆ ಸಶರೀರವಾಗಿಯೇ ಹೋಗುತ್ತಿದ್ದರು. ಹೀಗಿರುವಾಗ—

ಸ ಮೃತ್ಯುರ್ದೇವಾನಬ್ರವೀತ್ । ಅಥೈವ ಸರ್ವೇ ಮನುಷ್ಯಾ ಅಮೃತಾ ಭವಿಷ್ಯಂತ್ಯಥ ಕೋ ಮಹ್ಯಂ ಭಾಗೋ ಭವಿಷ್ಯತೀತಿ । ತೇ ಹೋಚುರ್ನಾತೋಽಪರಃ ಕಶ್ಚನ ಸಹ ಶರೀರೇಣಾಮೃತೋಽಸದ್ಯೈವ ತ್ವಮೇತಂ ಭಾಗಂ ಹರಾಸೈ । ಅಥ ವ್ಯಾವೃತ್ಯ ಶರೀರೇಣಾಮೃತೋಽಸದ್ವಿದ್ಯಯಾ ವಾ ಕರ್ಮಣಾ ವೇತಿ । ಯದ್ವೈ ತದಬ್ರುವನ್ ವಿದ್ಯಯಾ ವಾ ಕರ್ಮಣಾ ವೇತಿ । ಏಷ ಹ್ಯೇವ ಸಾ ವಿದ್ಯಾ ಯದಗ್ನಿರೇತದು ಹ್ಯೇವ ತತ್ಕರ್ಮ ಯದಗ್ನಿಃ । ತೇ ಯೇ ಏವಮೇತದ್ವಿದುರ್ಯೇಽನ್ಯೇತತ್ಕರ್ಮ ಕುರ್ವತೇ ಮೃತ್ವಾ ಪುನಸ್ಸಂಭವಂತಿ । ತೇ ತೇ ಸಂಭವಂತ ಏವ ಅಮೃತತ್ವಮಭಿಸಂಭವಂತಿ । ಅಥ ಯೇ ಏವಂ ನ ವಿದುರ್ಯೇ ವೈತತ್ಕರ್ಮ ನ ಕುರ್ವತೇ ಮೃತ್ವಾ ಪುನಸ್ಸಂಭವಂತಿ ತೇ ಏತಸ್ಯೈವಾನ್ನಂ ಪುನಃಪುನರ್ಭವಂತಿ ॥

(ಶ. ಬ್ರಾ. ೧೦-೪-೩-೯, ೧೦)

ಒಂದಾನೊಂದು ಕಾಲದಲ್ಲಿ ಮೃತ್ಯುವು ದೇವತೆಗಳನ್ನು ಕುರಿತು ಇಂತೆಂದಿತು—ಎಲೈ ದೇವತೆಗಳೇ, ನೀವು ಯಜ್ಞಾದಿ ಸತ್ಕರ್ಮಾಚರಣೆಯನ್ನು ಮಾಡಿ ಮರಣರಾಹಿತ್ಯ (ಅಮೃತತ್ವಮರಣವಿಲ್ಲದೆ ಯಾವಾಗಲೂ ಜೀವಿಸಿರುವುದು) ವನ್ನು ಪಡೆದಿದ್ದೀರಿ. ಇದರಂತೆಯೇ ಮನುಷ್ಯರೆಲ್ಲರೂ ಯಜ್ಞಾದಿಗಳನ್ನು ಮಾಡಿ ಅಮೃತತ್ವವನ್ನು (ಸ್ವರ್ಗದಲ್ಲಿ ಶಾಶ್ವತಸುಖವನ್ನು) ಪಡೆಯುವರು. ಆಗ ನನ್ನ ಕೆಲಸವೇನು ? ನಾನು ಏನು ಮಾಡಬೇಕು? ಯಾರೂ ಸಾಯುವುದೇ ಇಲ್ಲವಲ್ಲಾ

ಎನ್ನಲು, ಅದಕ್ಕೆ ದೇವತೆಗಳು—ಒಳ್ಳೆದು, ಹಾಗಾದರೆ ಇನ್ನು ಮೇಲೆ ಮನುಷ್ಯರು ಉತ್ತಮಕಾರ್ಯಗಳನ್ನು ಮಾಡಿ ಅಮೃತತ್ವ ಅಥವಾ ಸ್ವರ್ಗಸುಖಕ್ಕೆ ಅರ್ಹರಾಗಿದ್ದರೂ ಅವರು ತಮ್ಮ ಶರೀರಸಹಿತವಾಗಿ ಸ್ವರ್ಗಕ್ಕೆ ಹೋಗದಂತಾಗಲಿ. ನೀನು ಅವರ ಶರೀರವನ್ನು ಆಕ್ರಮಿಸು. ಅದರಿಂದ ಅವರು ಮೃತ್ಯುವಶರಾಗಿ ಪ್ರಾಣವನ್ನೂ ತಮ್ಮ ದೇಹವನ್ನೂ ಇಲ್ಲಿಯೇ ಬಿಟ್ಟು ಬೇರೆ ಶರೀರದಿಂದ ಸ್ವರ್ಗಕ್ಕೆ ಹೋಗುವಂತಾಗಲಿ ಎಂದರು. ಆದ್ದರಿಂದ ಅಲ್ಲಿಂದ ಮುಂದಕ್ಕೆ ಜ್ಞಾನವನ್ನು ಪಡೆದಾಗಲಿ, ಸತ್ಕರ್ಮಾಚರಣೆಯಿಂದಾಗಲಿ ಅಮೃತತ್ವಕ್ಕೆ ಅರ್ಹತೆಯನ್ನು ಪಡೆದ ಮನುಷ್ಯರು ಶರೀರವನ್ನು ಇಲ್ಲಿಯೇ ತ್ಯಜಿಸಿ ಮೃತರಾದನಂತರವೇ ಅಮೃತತ್ವವನ್ನು (ಸ್ವರ್ಗದ ಶಾಶ್ವತಸುಖ) ಪಡೆಯುತ್ತಾರೆ. ಇಲ್ಲಿ **ವಿದ್ಯಯಾ ಕರ್ಮಣಾ ವಾ** ಎಂದರೆ ಅಗ್ನಿಸಂಬಂಧವಾದ ಜ್ಞಾನ ಅಥವಾ ಕರ್ಮವೆಂದರ್ಥವು. ಇದನ್ನು ತಿಳಿದು ಕರ್ಮವನ್ನು ಮಾಡಿದವರು ಮೃತರಾದನಂತರ ಅಮೃತತ್ವವನ್ನು ಪಡೆಯುವರು. ಇದನ್ನು ತಿಳಿಯದವರು ಎಷ್ಟೇ ಕರ್ಮಮಾಡಲಿ ಅವರು ಮರಣಾನಂತರ ಪುನಃಪುನಃ ಜನ್ಮಗಳನ್ನು ಎತ್ತುತ್ತಾ ಪ್ರತಿಜನ್ಮದಲ್ಲಿಯೂ ಮರಣಕ್ಕೆ ವಶರಾಗುವರು ಎಂದು ಹೇಳಿದೆ.

ಐತರೇಯ ಬ್ರಾಹ್ಮಣದಲ್ಲಿ ಒಂದು ವಿಚಿತ್ರವಾದ ಸನ್ನಿವೇಶವು ಉಕ್ತವಾಗಿದೆ—

ಸ ವಾ ಏಷ ನ ಕದಾಚನಾಸ್ತಮೇತಿ ನೋದೇತಿ । ತಂ ಯದಸ್ತಮೇತೀತಿ ಮನ್ಯಂತೇಽಹ್ನ ಏವ ತದಂತಮಿತ್ವಾಥಾತ್ಮಾನಂ ವಿಪರ್ಯಸ್ಯತೇ ರಾತ್ರೀಮೇವಾಸ್ತಾತ್ಕುರುತೇಽಹಃ ಪರಸ್ತಾತ್ । ಅಥೋ ಯದೇನಂ ಪ್ರಾತರುದೇತೀತಿ ಮನ್ಯಂತೇ ರಾತ್ರೇರೇವ ತದಂತಮಿತ್ವಾಥಾತ್ಮಾನಂ ವಿಪರ್ಯಸ್ಯತೇಽಹರೇವಾವಸ್ತಾತ್ಕುರುತೇ ರಾತ್ರಿಂ ಪರಸ್ತಾತ್ । ಸ ವಾ ಏಷ ನ ಕದಾಚನ ನಿಮ್ರೋಚತಿ ! ನ ಹ ವೈ ಕದಾಚನ ನಿಮ್ರೋಚತ್ಯೇತಸ್ಯ ಹ ಸಾಯುಜ್ಯಂ ಸರೂಪತಾಂ ಸಲೋಕತಾಮಶ್ನುತೇ ಯ ಏವಂ ವೇದ ಯ ಏವಂ ವೇದ ॥

(ಐ ಬ್ರಾ ೧೪-೪೪)

ಸೂರ್ಯನು ಉದಯಿಸುವನು ಮತ್ತು ಅಸ್ತಮಾನನಾಗುವನು ಎಂದು ನಾವು ಲೋಕವ್ಯವಹಾರದಲ್ಲಿ ಹೇಳುತ್ತೇವಷ್ಟೆ. ಆದರೆ ಸೂರ್ಯನು ಇದ್ದಲ್ಲಿಯೇ ಇರುವನು, ಉದಯಿಸುವುದೂ ಇಲ್ಲ, ಮುಳುಗುವುದೂ ಇಲ್ಲ. ಸೂರ್ಯನು ಮುಳುಗುತ್ತಾನೆಂದು ಜನರು ಯೋಚಿಸುವಾಗ ವಾಸ್ತವವಾಗಿ ಸೂರ್ಯನು ಮುಳುಗುವುದಿಲ್ಲ. ದಿವಸಾಂತ್ಯದಲ್ಲಿ ಸೂರ್ಯನ ಎರಡು ಕಡೆಗಳಲ್ಲಿಯೂ ಇರುವ ಪ್ರದೇಶಗಳಿಗೆ ರಾತ್ರಿಯೂ, ಹಗಲೂ ಏಕಕಾಲದಲ್ಲಿ ಉಂಟಾಗುವವು. ಎಂದರೆ ಸೂರ್ಯನ ಎದರುಭಾಗದಲ್ಲಿ ಹಗಲಾಗಿರುವಾಗ ಇನ್ನೊಂದು ಭಾಗದಲ್ಲಿ ರಾತ್ರಿಯಾಗಿರುವುದು.

ಹಾಗೆಯೇ ಪ್ರಾತಃಕಾಲದಲ್ಲಿ ಸೂರ್ಯನು ಉದಯಿಸುತ್ತಾನೆಂದು ಹೇಳುವಾಗ ಅದೂ ವಾಸ್ತವಸಂಗತಿಯಲ್ಲ. ಎಂದರೆ ಸೂರ್ಯನ ಒಂದು ಭಾಗದಲ್ಲಿ ಕತ್ತಲಾಗಿರುವ ಎಂದರೆ ರಾತ್ರಿಯಾಗಿರುವ ಕಾಲದಲ್ಲಿಯೇ ಮತ್ತೊಂದು ಭಾಗದಲ್ಲಿ ಹಗಲಾಗುವುದು. ಆಗಲೂ ಸೂರ್ಯನ ಎರಡು ಪಾರ್ಶ್ವಗಳಲ್ಲಿ ಒಂದು ಪಾರ್ಶ್ವದಲ್ಲಿ ರಾತ್ರಿಯೂ ಮತ್ತೊಂದು ಪಾರ್ಶ್ವದಲ್ಲಿ ಹಗಲೂ ಏಕಕಾಲದಲ್ಲಿ ಗೋಚರವಾಗುವುದು. ಅಲ್ಲದೆ ಹಿಂದೆ ರಾತ್ರಿಯಾಗಿದ್ದ ಪ್ರದೇಶದಲ್ಲಿ ಈಗ ಹಗಲೂ, ಹಗಲಾಗಿದ್ದ ಪ್ರದೇಶದಲ್ಲಿ ರಾತ್ರಿಯೂ ಉಂಟಾಗುವುದು. ಇದು ಪರಿವರ್ತನೆಕ್ರಮದಿಂದ ಗೋಚರವಾಗುವುದೇ ಹೊರತು ಸೂರ್ಯನು ಯಾವಾಗಲೂ ಅಸ್ತಂಗತನಾಗುವುದಿಲ್ಲ ಎಂದರೆ ಮುಳುಗುವುದೇ ಇಲ್ಲ. ನಾವು ಮುಳುಗಿದಾನೆ ಎಂದು ತಿಳಿಯುವಾಗ ಅವನು ಇನ್ನೊಂದು ಪ್ರದೇಶದಲ್ಲಿ ಹಗಲನ್ನುಂಟುಮಾಡಿ ಅಲ್ಲಿ ಪ್ರಕಾಶಿಸುತ್ತಲೇ ಇರು

ತ್ತಾನೆ. ಈ ವಿಧವಾದ ಸೂರ್ಯನ ಗತಿಯನ್ನು ತಿಳಿದಿರುವ ಪುರುಷನು ಸೂರ್ಯಲೋಕವನ್ನು ಸೇರಿ ಸೂರ್ಯ ಸಾಯುಜ್ಯವನ್ನು ಪಡೆಯುವನು ಎಂದರೆ ಪ್ರಕಾಶಾತ್ಮಕವಾದ ದಿವ್ಯಶರೀರವನ್ನು ಪಡೆದು ಸೂರ್ಯರೂಪನಾದ ಭಗವಂತನಲ್ಲಿ ಅಂತರ್ಗತನಾಗಿ ಅಮೃತತ್ವವನ್ನು ಪಡೆಯುವನು. ಅವನಿಗೆ ಜರಾಮರಣಾದಿಗಳೂ ಪುನರ್ಜನ್ಮವೂ, ದುಃಖವೂ ಇರುವುದಿಲ್ಲ. ಯಾವಾಗಲೂ ಶಾಶ್ವತವಾದ ಆನಂದದಲ್ಲಿ ಮಗ್ನನಾಗಿರುವನು. ಎಂದು ಮರಣಾನಂತರ ಜೀವನ ಉತ್ತಮ ಸ್ಥಿತಿಯ ವರ್ಣನೆಯು ಉಕ್ತವಾಗಿದೆ.

ಮರಣಾನಂತರ ಪ್ರಾಪ್ತವಾಗುವ ಗತಿಯ ವಿಚಾರವಾಗಿ ಗೌತಮಗೋತ್ರದ ಓರ್ವ ಋಷಿಯ ಪುತ್ರನಾದ ನಚಿಕೇತನಿಗೂ ಮೃತ್ಯುದೇವತೆಗೂ ನಡೆದ ಸಂಭಾಷಣೆಯೂ ತತ್ತ್ವವಿಮರ್ಶೆಯೂ ತೈತ್ತಿರೀಯಬ್ರಾಹ್ಮಣದ ೩-೧೧-೮ ನೇ ಅನುವಾಕದಲ್ಲಿ ಸೂಕ್ಷ್ಮವಾಗಿ ತಿಳಿಸಿದೆ. ಅದನ್ನೇ ವಿಸ್ತಾರವಾಗಿಯೂ ವಿಮರ್ಶಾತ್ಮಕವಾಗಿಯೂ ಕಠೋಪನಿಷತ್ತಿನಲ್ಲಿ ವರ್ಣಿಸಲಾಗಿದೆ. ಆ ಕಠೋಪನಿಷತ್ತಿನಲ್ಲೆಲ್ಲಾ ಅವರ ಸಂವಾದವೇ ವಿಸ್ತಾರವಾಗಿರುವುದರಿಂದ ಇಲ್ಲಿ ಅದರ ಸಾರಾಂಶವನ್ನು ಮಾತ್ರ ತಿಳಿಸುತ್ತೇವೆ.

ಕಠೋಪನಿಷತ್ತಿನ ಸೂಕ್ಷ್ಮವಿವರಣೆಯು

ಪೂರ್ವದಲ್ಲಿ ಒಬ್ಬ ಋಷಿಯಿದ್ದನು. ಅವನಿಗೆ ನಚಿಕೇತನೆಂಬ ಒಬ್ಬ ಪುತ್ರನಿದ್ದನು. ಅವನು ಇನ್ನೂ ಬಾಲಕನು. ಆ ಸಮಯದಲ್ಲಿ ಋಷಿಯು ವಿಶ್ವಜಿತ್ ಎಂಬ ಯಜ್ಞವನ್ನು ಮಾಡಲುದ್ಯುಕ್ತನಾದನು. ಆ ಯಜ್ಞದಲ್ಲಿ ಯಜ್ಞಕರ್ತನು ತನಗಿರುವ ಸಕಲಸಂಪತ್ತನ್ನೂ ಬ್ರಾಹ್ಮಣರಿಗೆ ದಾನಮಾಡಬೇಕೆಂಬುದೇ ವಿಧಿಯು. ಅದರಂತೆ ನಿರ್ಗತಿಕನಾದ ಆ ಋಷಿಯು ಯಜ್ಞದಲ್ಲಿ ದಾನಮಾಡಲು ತನ್ನಲ್ಲಿ ಬೆಲೆಬಾಳುವ ಯಾವ ವಸ್ತುವೂ ಇಲ್ಲದಿದ್ದರಿಂದ ತನ್ನಲ್ಲಿ ಉಳಿದಿದ್ದ ಹಾಲನ್ನು ಕೊಡಲು ಸಾಮರ್ಥ್ಯವಿಲ್ಲದ ಮುದಿಯಾದ ಮತ್ತು ಬಡಕಲಾದ ಕೆಲವು ಕುಂಟ ಹಸುಗಳನ್ನು ದಾನಮಾಡಿದನು. ಇದನ್ನೆಲ್ಲಾ ನೋಡುತ್ತಿದ್ದ ಆ ಋಷಿಯ ಮಗನಾದ ನಚಿಕೇತನೆಂಬ ಬಾಲಕನು ಮನಸ್ಸಿನಲ್ಲಿ ಇಂತು ಯೋಚಿಸಿದನು- ನನ್ನ ತಂದೆಯು ಉತ್ತಮಲೋಕಪ್ರಾಪ್ತಿಗಾಗಿ ಈ ಶ್ರೇಷ್ಠವಾದ ಯಾಗವನ್ನು ಮಾಡಿ ಕಲ್ಪೋಕ್ತಪ್ರಕಾರವಾಗಿ ದಾನಾದಿಗಳನ್ನು ಕೊಟ್ಟರುವನು. ಆದರೆ ದಾನಕೂಡುವಾಗ ಉತ್ತಮವಸ್ತುಗಳನ್ನೇ ದಾನಕೊಡಬೇಕು. ಆ ದಾನವಸ್ತುಗಳು ಅವುಗಳನ್ನು ಸ್ವೀಕರಿಸಿದವರಿಗೆ ಸುಖಸಾಧನವಾಗಿರಬೇಕು. ಆದರಿಂದ ಅವರಿಗೆ ಉಪಯೋಗವಾಗಬೇಕು. ಉಪಯುಕ್ತವಸ್ತುಗಳನ್ನು ದಾನಮಾಡುವುದರಿಂದಲೇ ಶ್ರೇಯಸ್ಸುಂಟಾಗುವುದು. ಆದರೆ ನಮ್ಮ ತಂದೆಯು ದಾನವಾಗಿ ಕೊಟ್ಟರುವ ಬಡಕಲಾದ, ಹಾಲನ್ನು ಕೊಡಲು ಸಾಮರ್ಥ್ಯವಿಲ್ಲದ ಮುದಿಯಾದ ಈ ಗೋವುಗಳಿಂದ ದಾನಸ್ವೀಕಾರಮಾಡಿದ ಬ್ರಾಹ್ಮಣರಿಗೆ ಏನು ಪ್ರಯೋಜನವಾದಂತಾಯಿತು ? ಈ ರೀತಿಯಾದ ದಾನದಿಂದ ಪುಣ್ಯವು ಲಭಿಸಲಾರದು ಹೀಗೆಂದು ಆಲೋಚಿಸಿ, ತನ್ನ ತಂದೆಯನ್ನು ಕುರಿತು ಇಂತೆಂದನು—ಎಲೈ ತಂದೆಯೇ, ಈ ಯಜ್ಞದಲ್ಲಿ ನೀನು ನಿನ್ನ ಸರ್ವಸ್ವವನ್ನೂ ದಾನಮಾಡಿರುವುದಿಲ್ಲ. ಯಜ್ಞದ ಫಲವು ಪೂರ್ಣವಾಗಿ ಲಭಿಸಬೇಕಾದರೆ ನಿನ್ನಲ್ಲಿರುವ ಸಮಸ್ತವನ್ನೂ ದಾನಮಾಡಲೇಬೇಕು. ನಿನ್ನಲ್ಲಿ ಇನ್ನೂ ದಾನಮಾಡದಿರುವ ವಸ್ತುವು ಒಂದು ಮಾತ್ರವಿರುವುದು. ಅದು ಯಾವುದೆಂದರೆ-ನಿನಗೆ ಸೇರಿದವನೂ, ನಿನಗೆ ಪುತ್ರನೂ ಆದ ನಾನೇ ಆ ವಸ್ತುವು. ನನ್ನನ್ನು ಯಾರಿಗೆ ಕೊಡುವೆ ? ಎಂದನು. ತಂದೆಯು ಆ ಮಾತನ್ನು ಬಾಲಭಾಷೆಯೆಂದು ತಿಳಿದು ಅದಕ್ಕೆ ಉತ್ತರ ಕೊಡುವ ಹವ್ಯಾಸಕ್ಕೆ ಹೋಗಲಿಲ್ಲ. ಆದರೆ ನಚಿಕೇತನು ಪುನಃ ಅದೇ ಪ್ರಶ್ನೆಯನ್ನು ಕೇಳಿದನು. ಆಗಲೂ ತಂದೆಯು ಏನನ್ನೂ ಹೇಳಲಿಲ್ಲ. ಮೂರನೇಸಲ ನಚಿಕೇತನು ಅದೇ ಪ್ರಶ್ನೆಯನ್ನು ಬಲವಂತವಾಗಿ ಕೇಳಲು ತಂದೆಗೆ ಕೋಪ ಬಂದು ಕೋಪದ ಭರದಲ್ಲಿ—ನಿನ್ನನ್ನು ಮೃತ್ಯುವಿಗೆ (ಮೃತ್ಯುದೇವತೆಯಾದ ಯಮನಿಗೆ) ಕೊಡುವೆನು ಎಂದನು. ಅದರಿಂದ ಸಮಾಧಾನಗೊಂಡು ನಚಿಕೇತನು ತಂದೆಯ ಮಾತನ್ನು ನಡೆಸಬೇಕೆಂದು ನಿಶ್ಚಯಿಸಿ ಮೃತ್ಯುವಿನ ಬಳಿಗೆ

ಹೋಗಲು ಸಿದ್ಧನಾದನು. ಆದರೆ ತಂದೆಯು ಸಿಟ್ಟಿನಲ್ಲಿ ತಾನಾಡಿದ ಮಾತಿಗೆ ಪಶ್ಚಾತ್ತಾಪಪಟ್ಟು ಪುತ್ರನ ನಿಶ್ಚಯವನ್ನು ತಪ್ಪಿಸಲು ಸಮಾಧಾನೋಕ್ತಿಯಿಂದ ಪ್ರಯತ್ನಿಸಿದರೂ ನಚಿಕೇತನು ಪಿತೃವಿನ ಮಾತನ್ನು ಭಂಗಪಡಿಸಲು ಇಷ್ಟಪಡಲಿಲ್ಲ. ಆಗ ಒಂದು ಅಶರೀರವಾಣಿಯು ಕೇಳಿಸಿತು—ಎಲೈ ಬಾಲಕನೇ, ನೀನು ಮೃತ್ಯುವಿನ ಮನೆಗೆ ಹೋಗು ಅವನು ಮನೆಯಲ್ಲಿರುವ ಕಾಲವನ್ನು ತಿಳಿದುಕೋ. ನಿನ್ನ ಇಷ್ಟಾರ್ಥವು ಕೈಗೂಡುವುದು ಎನ್ನಲು, ಆ ಮಾತಿನಿಂದ ನಚಿಕೇತನು ಧೈರ್ಯವನ್ನು ತಾಳಿ ಮೃತ್ಯುವಿನ ಮನೆಗೆ ಹೋದನು. ಆದರೆ ಆಗ ಮೃತ್ಯುವು ಮನೆಯಲ್ಲಿರಲಿಲ್ಲ ಅವನು ಮನೆಗೆ ಬರುವುದು ಮೂರು ದಿವಸವಾಯಿತು. ಅಲ್ಲಿಯವರೆಗೂ ಮೂರುದಿವಸಗಳವರೆಗೆ ಅಲ್ಲಿ ಉಪವಾಸದಿಂದಲೇ ಇದ್ದು ಮೃತ್ಯುವು ಬರುವುದನ್ನೇ ಎದುರುನೋಡುತ್ತಿದ್ದನು ಅವನು ಬಂದ ನಂತರ ತನ್ನ ಮನೆಯಲ್ಲಿ ಮೂರುದಿವಸದಿಂದ ಉಪವಾಸದಿಂದಿದ್ದು ತನ್ನ ಆಗಮನವನ್ನೇ ಎದುರುನೋಡುತ್ತಿದ್ದ ಬಾಲಬ್ರಹ್ಮಚಾರಿಯಾದ ನಚಿಕೇತನನ್ನು ನೋಡಿ ಮೃತ್ಯುವು ಪಶ್ಚಾತ್ತಾಪದಿಂದ,—ಎಲೈ ಬಾಲಕನೇ, ನಿನಗೆ ನಮಸ್ಕಾರವು. ನೀನು ನನ್ನ ಮನೆಯಲ್ಲಿ ಮೂರುದಿವಸಗಳಿಂದ ಉಪವಾಸವಾಗಿದ್ದೆಯೆಂದು ತಿಳಿಯಿತು. ಅತಿಥಿಯು ಉಪವಾಸವಿದ್ದರೆ ಶ್ರೇಯಸ್ಸುಂಟಾಗುವುದಿಲ್ಲ. ಆದ್ದರಿಂದ ನೀನು ಉಪವಾಸದಿಂದಿದ್ದ ಮೂರುದಿನಗಳಿಗಾಗಿ ನಿನಗೆ ಬೇಕಾದ ಮೂರು ವರಗಳನ್ನು ಬೇಡಿಕೋ, ಅವುಗಳನ್ನು ಕೊಡುವೆನು ಎಂದನು. ಆದಕ್ಕೆ ಆ ಬಾಲಕನು ಇಂತು ವರವನ್ನು ಬೇಡಿದನು. ನನ್ನ ತಂದೆಯ ಕೋಪವು ಶಾಂತವಾಗಬೇಕು. ನಾನು ನಿನ್ನ ಬಳಿಯಿಂದ ಹಿಂತಿರುಗಿ ಹೋದಮೇಲೆ ತಂದೆಯು ನನ್ನ ಗುರ್ತು ಹಿಡಿದು ನನ್ನನ್ನು ಪ್ರೀತಿಯಿಂದ ಆದರಿಸಬೇಕು ತಂದೆಯ ಚಿಂತೆಯು ನಾಶವಾಗಿ ಅವನು ಶಾಂತಚಿತ್ತನಾಗಿರಬೇಕು. ಇದೇ ನಾನು ಕೇಳುವ ಮೊದಲನೆಯವರವು ಎಂದನು. ಯಮನು (ಮೃತ್ಯುವು) ಹಾಗೆಯೇ ಆಗಲೆಂದು ವರವನ್ನು ಕೊಟ್ಟು ನಿನ್ನ ಎರಡನೇವರವು ಯಾವುದು, ಅದನ್ನು ಕೇಳಿಕೋ ಎಂದನು.

ಅನಂತರ ನಚಿಕೇತನು ಸ್ವರ್ಗಸಾಧನವಾದ ಅಗ್ನಿಯನ್ನು ಉಪಾಸನೆಮಾಡುವ ಕ್ರಮವನ್ನೂ ಜ್ಞಾನವನ್ನೂ ಕರುಣಿಸಬೇಕೆಂದು ಬೇಡಲು, ಯಮನು ಅವನ ತೀಕ್ಷ್ಣಬುದ್ಧಿಗೆ ಮೆಚ್ಚಿ ಅದರಂತೆ ವರವನ್ನು ಕೊಟ್ಟು, ಈ ಯಾಗಾರ್ಹವಾದ ಅಗ್ನಿಯು ನಿನ್ನ ಹೆಸರಿನಿಂದಲೇ (ನಾಚಿಕೇತಮಗ್ನಿಂ) ಪ್ರಸಿದ್ಧವಾಗಲೆಂದೂ ವರವನ್ನು ಅನುಗ್ರಹಿಸಿದನು.

ಬಳಿಕ ನಚಿಕೇತನು ತನ್ನ ಮೂರನೆಯವರವನ್ನು ಕುರಿತು ಈರೀತಿ ಕೇಳಿದನು—ಮನುಷ್ಯರು ಮರಣಹೊಂದಿದ ಮೇಲೆ ಅವನ ಆತ್ಮವು ಇರುವುದೆಂದು ಕೆಲವರೂ, ಇರುವುದಿಲ್ಲವೆಂದು ಕೆಲವರೂ ಅನ್ನುವರು. ಈ ವಿಷಯದಲ್ಲಿ ನಿಶ್ಚಯವಾದ ವಿಷಯವನ್ನು ತಿಳಿಸಲು ನೀನೊಬ್ಬನೇ ಸಮರ್ಥನು. ನಿನ್ನಿಂದ ಈ ವಿಷಯವಾಗಿ ನಿಶ್ಚಯಜ್ಞಾನವನ್ನು ತಿಳಿದುಕೊಳ್ಳಬೇಕೆಂದು ಬಯಸುವೆನು. ಅದನ್ನು ನನಗೆ ವಿಶದವಾಗಿ ತಿಳಿಸು ಇದೇ ನಾನು ಕೇಳುವ ಮೂರನೆಯವರವು ಎಂದನು. ಅದನ್ನು ಕೇಳಿ—

ಯಮ—ಎಲೈ ಬಾಲಕನೇ, ಪೂರ್ವದಲ್ಲಿ ದೇವತೆಗಳು ಸಹ ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆಮಾಡಿರುವರು. ಇದನ್ನು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಇದು ಅತ್ಯಂತ ಸೂಕ್ಷ್ಮವಾದ ವಿಚಾರವು. ಎಲೈ ನಚಿಕೇತನೇ, ನೀನು ಹಟವನ್ನು ಹಿಡಿಯಬೇಡ, ನನ್ನನ್ನು ನಿರ್ಬಂಧಿಸಬೇಡ, ಬೇರೊಂದು ವರವನ್ನು ಕೇಳು ಕೊಡುವೆನು.

ನಚಿಕೇತ—ನಾನು ಕೇಳುವ ವಿಷಯವು ದೇವತೆಗಳಿಗೂ ತಿಳಿಯದೆಂದೂ ಅವರೂ ಬಹಳವಾಗಿ ಚರ್ಚೆಮಾಡಿರುವರೆಂದೂ ನೀನೇ ಹೇಳಿರುವೆ. ಈ ವಿಷಯವು ನಿನ್ನನ್ನು ಬಿಟ್ಟರೆ ಇತರರಿಗೆ ಯಾರಿಗೂ ಗೊತ್ತಿರುವುದಿಲ್ಲ.

ಅದನ್ನು ವಿವರಿಸಲು ನೀನು ಮಾತ್ರ ಸಮರ್ಥನು. ಇದಕ್ಕಿಂತ ಉತ್ತಮವಾದ ವರವು ಬೇರೊಂದಿಲ್ಲ. ದಯವಿಟ್ಟು ಇದನ್ನು ನನಗೆ ಅನುಗ್ರಹಿಸಬೇಕು.

ಯಮ—ಎಲೈ ಬಾಲಕನೇ, ನೂರು ವರ್ಷಗಳವರೆಗೆ ಜೀವಿಸಿರುವ ಪುತ್ರಪೌತ್ರಾದಿಗಳನ್ನು ಕೇಳು, ಆನೆ ಕುದುರೆಗಳನ್ನೂ ಗೋವು ಮೊದಲಾದ ಪಶುಸಂಪತ್ತನ್ನೂ, ಸುವರ್ಣವನ್ನೂ, ವಿಸ್ತಾರವಾದ ಹೊಲಗದ್ದೆಗಳನ್ನೂ ಬೇಕೆಂದು ಕೇಳು. ನಿನಗೆ ಎಷ್ಟು ವರ್ಷಬೇಕಾದರೂ ಆಯುಸ್ಸನ್ನು ಕೊಡುವೆನು. ಯಾವುದನ್ನು ಬೇಕಾದರೂ ಕೊಡುವೆನು. ಸಕಲಸಂಪತ್ತನ್ನೂ ಬೇಡು. ಭೂಲೋಕದಲ್ಲಿ ಅಲಭ್ಯವಾದ ಯಾವಯಾವ ಇಷ್ಟಾರ್ಥಗಳಿರುವವೋ ಅವನ್ನೆಲ್ಲಾ ಕೇಳು. ರಥಗಳು, ಮನೋಹರರಾದ ಸುಂದರ ಸ್ತ್ರೀಯರು ಮೊದಲಾದ ಇಷ್ಟಾರ್ಥಗಳೆಲ್ಲವನ್ನೂ ಕೊಡುವೆನು. ಆದರೆ ಮರಣದ ವಿಷಯದಲ್ಲಿ ಮಾತ್ರ ಪ್ರಶ್ನೆಯನ್ನು ಕೇಳಬೇಡ.

ನಚಿಕೇತ—ಎಲೈ ಯಮನೇ, ನೀನು ಕೊಡಬೇಕೆಂದಿರುವ ವಸ್ತುಗಳೆಲ್ಲಾ ಕ್ಷಣಿಕವು, ನಶ್ವರವಾದುವು. ಹೆಚ್ಚೇಕೆ ? ನಮ್ಮ ಜೀವಿತವೂ ಕೂಡ ಸ್ವಲ್ಪಕಾಲ ಮಾತ್ರವಿರುವುದು. ಮರಣಾನಂತರ ನೀನು ಕೊಡುವ ವಸ್ತುವಾಹನಾದಿಗಳಿಂದ ಏನು ಪ್ರಯೋಜನ ? ಎಲ್ಲವೂ ಮತ್ತೆ ನಿನ್ನದೇ ಆಗುವವು. ಎಷ್ಟೇ ಸಂಪತ್ತಿದ್ದರೂ ಅದರಿಂದ ಮನುಷ್ಯನಿಗೆ ತೃಪ್ತಿಯಾಗುವುದಿಲ್ಲ ನಿನ್ನ ಅನುಗ್ರಹವಿರುವವರೆಗೂ ನನ್ನ ಆಯುಷ್ಯಕ್ಕೆ ಯಾವ ತೊಂದರೆಯೂ ಇಲ್ಲ. ಜರಾಮರಣರಹಿತರಾದ ದೇವತೆಗಳಿರುವ ಲೋಕಕ್ಕೆ ಬಂದು ಮನುಷ್ಯನಾದವನು ಕ್ಷಣಿಕ ಸುಖಗಳನ್ನು ಬೇಡಬಹುದೇ ? ಎಲೈ ಮೃತ್ಯುದೇವನೇ, ಯಾವ ತತ್ತ್ವದ ವಿಷಯದಲ್ಲಿ ಬಹಳವಾದ ಚರ್ಚೆ ನಡೆದಿರುವುದೋ, ಯಾವುದು ಪರಲೋಕದಲ್ಲಿ ಮಹತ್ತ್ವವುಳ್ಳದ್ದೋ ಯಾವುದು ಗೂಢವಾಗಿರುವುದೋ ಅಂತಹ ಈ ವರವನ್ನು ಬಿಟ್ಟು ನಾನು ಬೇರೆ ಯಾವ ವರವನ್ನೂ ಅಪೇಕ್ಷಿಸುವವನಲ್ಲ.

ಯಮ—ಎಲೈ ಬಾಲಕನೇ, ನೀನು ಇಷ್ಟು ಕೇಳಿದವೇಲೆ ಹೇಳುವೆನು ಕೇಳು. ಲೋಕದಲ್ಲಿ ಶ್ರೇಯಸ್ಸು, ಪ್ರೇಯಸ್ಸು ಎಂದು ಎರಡು ವಿಧ ಮಾರ್ಗಗಳಿರುವವು. ಇವೆರಡೂ ಬೇರೆಬೇರೆ. ಇವೆರಡರ ಫಲಗಳೂ ಬೇರೆಬೇರೆ. ಪ್ರೇಯಸ್ಸಿನಲ್ಲಿ (ಎಂದರೆ ಐಹಿಕಸುಖಗಳಲ್ಲಿ) ಪ್ರೀತಿತನಾದ ಮನುಷ್ಯನು ಕರ್ಮದಲ್ಲಿ ಪ್ರವೃತ್ತನಾಗುವನು. ಅವನ ಪುರುಷಾರ್ಥವು ನಾಶಹೊಂದುವುದು. ಆದರೆ ಶ್ರೇಯಸ್ಸಿನ ಮಾರ್ಗವನ್ನು ಅನುಸರಿಸುವವನಿಗೆ ಸಮಸ್ತ ಕಲ್ಯಾಣಗಳೂ ಉಂಟಾಗುವವು. ಆದ್ದರಿಂದ ಪ್ರೇಯಸ್ಸು, ಶ್ರೇಯಸ್ಸು ಈ ಎರಡರಲ್ಲಿ ಶ್ರೇಯಸ್ಸೇ ಶ್ರೇಷ್ಠವೆಂದರಿತು ಬುದ್ಧಿವಂತನಾದ ಪುರುಷನು ಶ್ರೇಯಸ್ಸನ್ನೇ ಅಪೇಕ್ಷಿಸುವನು. ಮೂಢನಾದವನು ಇಹಲೋಕದ ವಿಷಯಗಳಿಗೆ ಮನಸೋತು ಪ್ರೇಯಸ್ಸನ್ನು ಬಯಸುವನು. ಎಲೈ ನಾಚಿಕೇತನೇ, ನೀನು ಅನೇಕ ಪ್ರಿಯವಸ್ತುಗಳನ್ನೂ ಇಹಲೋಕದ ಸುಖಗಳನ್ನೂ ವಿಚಾರಪೂರ್ವಕವಾಗಿ ತ್ಯಜಿಸಿರುವೆ. ಅನೇಕ ಜನರು ಧನಧಾನ್ಯಸಮೃದ್ಧವಾದ ಪ್ರೇಯಸ್ಸಿನ ಮಾರ್ಗವನ್ನೇ ಬಯಸುತ್ತಿದ್ದರೂ ನೀನು ಮಾತ್ರ ಅದನ್ನು ಇಚ್ಛಿಸಲಿಲ್ಲ. ಲೋಕದಲ್ಲಿ ಅವಿದ್ಯೆ, ವಿದ್ಯೆ ಎಂಬವು ತೀರಾ ಭಿನ್ನವಾದುವು. ನೀನು ವಿದ್ಯೆಯನ್ನೇ ಅಪೇಕ್ಷಿಸುವವನು. ಏಕೆಂದರೆ, ಕಾಮನೆಗಳಿಗೂ ವಿಷಯಸುಖಕ್ಕೂ ಇಹಲೋಕದ ಸುಖಸಂತೋಷಗಳಿಗೂ ನೀನು ಮೋಹಗೊಳ್ಳಲಿಲ್ಲ. ಅವಿದ್ಯೆ ಅಥವಾ ಅಜ್ಞಾನದಿಂದ ಆವೃತರಾದವರು ತಾವೇ ಅತ್ಯಂತ ಬುದ್ಧಿವಂತರೆಂದು ಭಾವಿಸಿ ಕುರುಡನನ್ನು ಅನುಸರಿಸಿ ಹೋಗುವ ಮತ್ತೊಬ್ಬ ಕುರುಡನಂತೆ ಅಡ್ಡದಾರಿಗೆ ಒಯ್ಯಲ್ಪಡುವರು. ಐಶ್ವರ್ಯಾದಿಗಳ ಮೋಹಕ್ಕೆ ಮನಸೋತು ಬಾಲಕರಂತೆ ಬುದ್ಧಿಹೀನನಾದ ಪುರುಷನಿಗೆ ಯುಕ್ತಾಯುಕ್ತ ವಿವೇಚನೆ ಇರುವುದಿಲ್ಲ. ನವ-ಗೆ ಕಾಣುತ್ತಿರುವ ಈ ಪ್ರಪಂಚವಲ್ಲದೆ, ಬೇರೆ ಪರಲೋಕವು ಇಲ್ಲವೇ ಇಲ್ಲ

ವೆಂದು ಈವನು ತಿಳಿಯುವನು. ಆದರಿಂದ ಅವನು ಪುನಃ ಪುನಃ ಜನ್ಮವೆತ್ತಿ ಆಯಾ ಜನ್ಮಗಳಲ್ಲಿ ನನಗೆ (ಮೃತ್ಯುವಿಗೆ) ವಶನಾಗುವನು. ಯಾವ ಜ್ಞಾನವು ಎಂದರೆ, ಆತ್ಮಜ್ಞಾನವು ಸರ್ವಶ್ರೇಷ್ಠವೆನಿಸುವುದೋ ಅಂತಹ ಆತ್ಮಜ್ಞಾನವನ್ನು (ಬ್ರಹ್ಮಜ್ಞಾನ) ಕೇಳಿ ತಿಳಿದುಕೊಳ್ಳುವ ಸುಸಂಧಿಯು ಅನೇಕರಿಗೆ ದೊರೆಯಲಾರದು ಅಂತಹ ಜ್ಞಾನವನ್ನು ಉಪದೇಶಿಸುವ ಗುರುವೂ ಸಿಕ್ಕುವುದು ದುರ್ಲಭವು. ಗುರುವು ಲಭಿಸಿದರೂ ಅದರಲ್ಲಿ ಆಸಕ್ತಿ ಹುಟ್ಟಿ ಆತ್ಮಜ್ಞಾನವನ್ನು ತಿಳಿದುಕೊಳ್ಳಬೇಕೆಂಬ ಬಯಕೆ ಹುಟ್ಟುವುದು ತೀರಾ ಆಶ್ಚರ್ಯವೆಂದೇ ಹೇಳಬೇಕು. ಈ ಆತ್ಮಜ್ಞಾನದ ವಿಷಯದಲ್ಲಿ ನಾನಾ ಬಗೆಯ ಭಿನ್ನಾಭಿಪ್ರಾಯಗಳಿರುವುದರಿಂದ ಸಾಮಾನ್ಯ ಮನುಷ್ಯನು ಇದನ್ನು ಹೇಳಿದರೆ ಅದು ಚೆನ್ನಾಗಿ ತಿಳಿಯುವುದಿಲ್ಲ. ಸರಿಯಾದ ಯೋಗ್ಯತೆಯುಳ್ಳ ಆತ್ಮಜ್ಞಾನಿಯೇ ಇದನ್ನು ಉಪದೇಶಿಸಬೇಕು. ಇಂತಹ ಗುರುವಿನಿಂದ ಉಪದಿಷ್ಟನಾದ ಶಿಷ್ಯನಿಗೆ ತಿಳಿಯದಿರುವುದೊಂದೂ ಇರುವುದಿಲ್ಲ. ಅವನು ಎಲ್ಲವನ್ನೂ ತಿಳಿದು ಸರ್ವಜ್ಞನೇ ಆಗುವನು. ಈ ಆತ್ಮಜ್ಞಾನವು ಕೇವಲ ತರ್ಕ ಅಥವಾ ಊಹೆಯಿಂದ ತಿಳಿದುಕೊಳ್ಳಲು ಸಾಧ್ಯವಿಲ್ಲ, ಜ್ಞಾನಿಯಾದ ಗುರುವಿನಿಂದಲೇ ತಿಳಿಯಲ್ಪಡಬೇಕು. ಎಲೈ ನಚಿಕೇತನೇ, ನಿನ್ನಂತೆ ಸತ್ಯಾನ್ವೇಷಿಯೂ, ಆತ್ಮಜ್ಞಾನವಿಷಯಲ್ಲಿ ಪ್ರಶ್ನೆಮಾಡಿ ಅದನ್ನು ತಿಳಿದುಕೊಳ್ಳಬೇಕೆಂಬ ಆಸಕ್ತಿಯೂ ಇರುವವನು ಬೇರೊಬ್ಬನಿಲ್ಲ. ಐಶ್ವರ್ಯಾದಿಗಳು ಅನಿತ್ಯವು. ಅನಿತ್ಯ ವಸ್ತುಗಳ ಸಹಾಯದಿಂದ ನಿತ್ಯವಸ್ತುವಾದ ಬ್ರಹ್ಮಜ್ಞಾನವು ಪ್ರಾಪ್ತವಾಗಲಾರದು. ಎಲೈ ನಾಚಿಕೇತನೇ, ನೀನು ಇತರ ಐಹಿಕವಾದ ಐಶ್ವರ್ಯಾದಿಗಳನ್ನು ತುಚ್ಛೀಕರಿಸಿ, ಸಮಸ್ತ ಇಷ್ಟಾರ್ಥಪ್ರದವೂ, ಪೂರ್ಣಸುಖಕ್ಕೆ ನೆಲೆಯೂ, ಅತ್ಯಂತ ವಿಸ್ತಾರವೂ ಆದ ಪರಮಪದವನ್ನು ಮಾತ್ರ ಬಯಸಿ ಇತರ ಸುಖಗಳನ್ನು ತ್ಯಜಿಸಿರುವೆ. ವಿವೇಕಿಯಾದ ಪುರುಷನು, ಸಾಕ್ಷಾತ್ಕರಿಸಲು ಕಷ್ಟಸಾಧ್ಯವಾದುದೂ ಹೃದಯವೆಂಬ ಗೂಢವಾದ ಗುಹೆಯಲ್ಲಿ ಸ್ಥಿತವಾದುದೂ ಶಾಶ್ವತವೂ, ತೇಜಸ್ಸಿನಿಂದ ಬೆಳಗುತ್ತಿರುವುದೂ ಆದ ಆತ್ಮನನ್ನು ಯೋಗದಿಂದ ಲಭ್ಯವಾಗುವ ಜ್ಞಾನದಿಂದ ಸಾಕ್ಷಾತ್ಕರಿಸಿ, ಹರ್ಷಶೋಕಗಳನ್ನು ದಾಟುವನು. ಇದನ್ನು ಕೇಳಿ ತಿಳಿದುಕೊಂಡ ಮನುಷ್ಯನು ಆತ್ಮನನ್ನು ಸಾಕ್ಷಾತ್ಕರಿಸಿ ಅದರಿಂದ ಲಭ್ಯವಾಗುವ ಆನಂದಕ್ಕೆ ನೆಲೆಯಾದ ಸ್ಥಾನವೇ ತನಗೆ ಲಭಿಸಿತೆಂದು ಆನಂದವನ್ನು ಅನುಭವಿಸುತ್ತಿರುವನು ಇಂತಹ ಆನಂದಸ್ಥಾನದ ಬಾಗಿಲು ನಚಿಕೇತನಾದ ನಿನಗೆ ತೆರೆದಿರುವುದೆಂದು ತಿಳಿಯುವೆನು.

ನಚಿಕೇತ—ಯಾವುದು (ಯಾವ ವಸ್ತುವು) ಧರ್ಮ, ಮತ್ತು ಅಧರ್ಮಗಳಿಂದ ಭಿನ್ನವೂ, ಕಾರ್ಯಕಾರಣಗಳಿಂದ ಬೇರೆಯಾದುದೂ, ಭೂತಭವಿಷ್ಯತ್ತುಗಳಿಂದಲೂ ಬೇರೆಯಾದುದೂ ಇರುವುದೆಂದು ನೀನು ತಿಳಿದಿರುವೆಯೋ ಅದನ್ನು ನನಗೆ ವಿಶದವಾಗಿ ಹೇಳು.

ಯಮ—ಸಕಲವೇದಗಳು ಯಾವ ಪರಮಪದವನ್ನು ಹೊಗಳುವವೋ ಯಾವ ಪರಮಪದದ ಪ್ರಾಪ್ತಿಗಾಗಿ ವಿವೇಕಶಾಲಿಗಳು ಬ್ರಹ್ಮಚರ್ಯವನ್ನು ಪಾಲಿಸುತ್ತಾ ಕಠಿಣತಪಸ್ಸನ್ನು ಮಾಡುವರೋ ಅಂತಹ ಪರಮಗತಿಯ ವಿಷಯವನ್ನು ನಾನು ಸಂಕ್ಷೇಪವಾಗಿ ಹೇಳುವೆನು. ಅದೇ ಓಂ ಎಂಬ ಪ್ರಣವವು ಇದೇ ಅಕ್ಷರಬ್ರಹ್ಮವು. ಇದೇ ಅಕ್ಷರವು ಎಂದರೆ ನಾಶರಹಿತವಾದುದು. ಈ ಅಕ್ಷರದ ಜ್ಞಾನವನ್ನು ಪಡೆದವನು ಯಾವ ಪರಮಪದವನ್ನು ಇಚ್ಛಿಸುವನೋ ಅದನ್ನು ಪಡೆಯುವನು. ಇದೇ ಎಲ್ಲಕ್ಕೂ ಶ್ರೇಷ್ಠವಾದ ಸಾಧನವು. ಈ ಸಾಧನವನ್ನರಿತವನು ಬ್ರಹ್ಮಲೋಕದಲ್ಲಿಯೂ ಗೌರವಿಸಲ್ಪಡುವನು. ಜ್ಞಾನಮಯವಾದ ಆತ್ಮನಿಗೆ ಜನ್ಮಮೃತ್ಯುಗಳಿಲ್ಲ ಆ ಆತ್ಮವು ಇನ್ನೊಂದು ವಸ್ತುವಿನಿಂದ ಉತ್ಪನ್ನವಾದುದಲ್ಲ. ಆದು ಉತ್ಪನ್ನವಾದುದೇ ಅಲ್ಲ. ಅದು ಅಜವು (ಉತ್ಪನ್ನರಹಿತವಾದುದು), ನಿತ್ಯವು, ಶಾಶ್ವತವು, ಸನಾತನವು. ಆದುದರಿಂದ ಶರೀರವು ಮೃತವಾದರೂ ಶರೀರದಲ್ಲಿ ನೆಲೆಸಿರುವ ಆತ್ಮಕ್ಕೆ ನಾಶವಿಲ್ಲ ನಾನು ಕೊಲ್ಲುವ

ವೆನು, ನಾನು ಕೊಲ್ಲಲ್ಪಡುವೆನು ಎಂದು ಹೇಳುವ ಪುರುಷರು ಅಜ್ಞಾನಿಗಳಲ್ಲದೆ ಮತ್ತೇನೂ ಅಲ್ಲ. ಏಕೆಂದರೆ ಆತ್ಮನು ಕೊಲ್ಲುವುದೂ ಇಲ್ಲ, ಕೊಲ್ಲಲ್ಪಡುವುದೂ ಇಲ್ಲ. ಪ್ರಾಣಿಗಳ ಹೃದಯವೆಂಬ ಗುಹೆಯಲ್ಲಿರುವ ಆತ್ಮವಸ್ತುವು ಅಣುವಿಗಿಂತಲೂ ಅಣುವಾಗಿರುವುದು ಎಂದರೆ ಅತ್ಯಂತ ಸೂಕ್ಷ್ಮವಾಗಿರುವುದು. ಇದು ಎಲ್ಲೆಲ್ಲಿಯೂ ವ್ಯಾಪಿಸಿರುವುದರಿಂದ ಮಹತ್ತಾದ (ದೊಡ್ಡದಾದ) ವಸ್ತುವಿಗಿಂತಲೂ ಮಹತ್ತಾದುದು ಕಾಮರಹಿತನಾದವನಿಗೆ ಮಾತ್ರ ಆತ್ಮನ ದರ್ಶನವಾಗುವುದು. ಶೋಕರಹಿತನಾದವನು ಪರಮಾತ್ಮನ ಅನುಗ್ರಹದಿಂದ ಆತ್ಮನ ಮಹಿಮೆಯನ್ನು ತಿಳಿದುಕೊಳ್ಳುವನು ಒಂದೇ ಸ್ಥಳದಲ್ಲಿ ಕುಳಿತಿದ್ದರೂ ಆತ್ಮನು ದೂರಹೋಗಬಲ್ಲದು. ಮಲಗಿದ್ದರೂ ಸರ್ವತ್ರ ಸಂಚರಿಸಬಲ್ಲದು. ಇಂತಹ ಗುಣವಿಶಿಷ್ಟನೂ ಆನಂದಯುಕ್ತನೂ ದುಃಖರಹಿತನೂ ಆದ ಆತ್ಮನನ್ನು ನನ್ನ ಹೊರತು ಯಾರು ಬಲ್ಲರು? ಶರೀರಗಳಲ್ಲಿದ್ದರೂ ಅಶರೀರನಾಗಿಯೂ (ಎಂದರೆ ಶರೀರಕ್ಕೆ ಸಂಬಂಧಪಟ್ಟ ಸುಖದುಃಖಾದಿಗಳಲ್ಲಿ ಭಾಗಿಯಾಗದಿರುವ) ಅನಿತ್ಯಗಳಲ್ಲಿ ನಿತ್ಯನಾಗಿಯೂ, ಇರುವ ಸರ್ವವ್ಯಾಪಿಯಾದ ಮತ್ತು ಶ್ರೇಷ್ಠನಾದ ಈ ಆತ್ಮನನ್ನು ಸಾಕ್ಷಾತ್ಕಾರಮಾಡಿಕೊಂಡ ವಿವೇಕಿಯಾದ ಪುರುಷನು ಶೋಕರಹಿತನಾಗುವನು ಎಂದರೆ ಅವನಿಗೆ ದುಃಖವೆಂಬುದೇ ಇಲ್ಲವು. ಈ ಆತ್ಮಜ್ಞಾನವನ್ನು ಪಡೆಯಬೇಕಾದರೆ ಇದು ಪ್ರವಚನದಿಂದ (ಶಾಸ್ತ್ರಾದಿಗಳನ್ನು ಓದಿ ಅಧ್ಯಯನಮಾಡುವುದರಿಂದ) ಲಭಿಸುವುದಿಲ್ಲ. ಬುದ್ಧಿಯಿಂದಲಾಗಲಿ, ಇತರರು ಹೇಳಿದ್ದನ್ನು ಕೇಳುವುದರಿಂದಲಾಗಲಿ ಲಭಿಸುವುದಿಲ್ಲ. ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದು ಯಾವನು ಬಯಸುವನೋ ಯಾವನಿಗೆ ಆತ್ಮನು ಅನುಗ್ರಹಮಾಡುವನೋ ಎಂದರೆ ಯಾವ ಪುರುಷನಿಗೆ ಆತ್ಮನು ಪ್ರಸನ್ನನಾಗುವನೋ ಅವನಿಗೆ ಮಾತ್ರ ಈ ಆತ್ಮನು ಲಭ್ಯನು. ಆತ್ಮನು ತನ್ನ ನಿಜಸ್ವರೂಪವನ್ನು ಅವನಿಗೆ ಪ್ರಕಟಮಾಡಿ ತೋರಿಸುವನು. ಯಾವ ಪುರುಷನು ದುಷ್ಕರ್ಮಗಳನ್ನು ಬಿಟ್ಟಿರುವುದಿಲ್ಲವೋ, ಯಾವನು ಅಶಾಂತನೋ ಯಾವನು ಏಕಾಗ್ರಚಿತ್ತವಿಲ್ಲದವನೋ, ಯಾವನ ಮನಸ್ಸಿನಲ್ಲಿ ಶಾಂತಿಯು ನೆಲೆಸಿರುವುದಿಲ್ಲವೋ ಅವನಿಗೆ ಎಷ್ಟೇ ಜ್ಞಾನವಿದ್ದರೂ ಆತ್ಮಸಾಕ್ಷಾತ್ಕಾರವಾಗಲಾರದು. ಬ್ರಾಹ್ಮಣ, ಕ್ಷತ್ರಿಯ ಮೊದಲಾದ ಸಮಸ್ತವರ್ಗದ ಜನರೂ ಅಷ್ಟೇಕೆ? ಮೃತ್ಯುವೂ ಸಹ ಯಾವ ಆತ್ಮನ ಆಹಾರವೋ (ಎಂದರೆ ಅಧೀನವೋ) ಅಂತಹ ಆತ್ಮನು ಎಲ್ಲಿರುವನೆಂಬುದನ್ನು ಸುಲಭವಾಗಿ ತಿಳಿದುಕೊಳ್ಳಲು ಸಾಧ್ಯವೇ?

ಯಮನು ತನ್ನ ವಿವರಣೆಯನ್ನು ಮುಂದುವರೆಸುತ್ತಾ ಇಂತೆಂದನು—ಪುರುಷನ ಹೃದಯಾಂತರಾಳವೆಂಬ ಗುಹೆಯಲ್ಲಿ ನೆಲೆಸಿದ್ದು ಕರ್ಮಫಲಗಳನ್ನನುಭವಿಸುತ್ತ ಜೀವಾತ್ಮ, ಪರಮಾತ್ಮಗಳೆಂಬ ಎರಡು ಆತ್ಮಗಳು ಛಾಯಾತಪಗಳಂತೆ ಎಂದರೆ ಬೆಳಕು ಮತ್ತು ಅದರ ನೆರಳಿನಂತೆ ಒಂದರ ಪಕ್ಕದಲ್ಲಿಯೇ ಮತ್ತೊಂದು ಸದಾ ಇರುವುದೆಂದು ಬ್ರಹ್ಮಜ್ಞಾನಿಗಳು ಹೇಳುವರು ಯಜ್ಞಾದಿಕರ್ಮಗಳನ್ನು ಮಾಡಿ ಬ್ರಹ್ಮೋಪಾಸನೆಮಾಡುವ ಸದ್ಭಕ್ತರಿಗೆ ಸಂಸಾರಸಾಗರವನ್ನು ದಾಟಿಸುವ ಸೇತುವೆಯಂತಿರುವ ನಚಿಕೇತನೆಂಬ ಅಗ್ನಿಯನ್ನೂ, ಸಂಸಾರಸಾಗರವನ್ನು ದಾಟಬೇಕೆಂದು ಬಯಸುವವರಿಗೆ ಅಭಯವನ್ನುಂಟುಮಾಡಿ ಅದನ್ನು ದಾಟಿಸುವ ಪರಬ್ರಹ್ಮನನ್ನೂ ನಾವು ಬಲ್ಲೆವು. ಈ ಶರೀರವೇ ಒಂದು ರಥ. ಆತ್ಮನು ಅದರಲ್ಲಿ ಕುಳಿತಿರುವ ರಥಿಕನು. ಬುದ್ಧಿಯೇ ಸಾರಥಿಯು. ಅಶ್ವಗಳನ್ನು ಹೆತ್ತೋಟಯಲ್ಲಿಡುವ ಕಡಿವಾಣವೇ ಮನಸ್ಸು; ಇಂದ್ರಿಯಗಳೇ ಕುದುರೆಗಳು. ಇಂದ್ರಿಯಗಳಿಗೆ ಸಂಬಂಧಪಡುವ ವಿಷಯಸುಖಗಳೇ ಮಾರ್ಗವು. ಇಂದ್ರಿಯ ಮತ್ತು ಮನಸ್ಸುಗಳಿಂದ ಯುಕ್ತನಾದ ಆತ್ಮನು ಸುಖದುಃಖಗಳನ್ನು ಅನುಭವಿಸುವವನೆಂದು ವಿವೇಕಿಗಳು ಹೇಳುವರು. ಮನಸ್ಸು ಯಾವಾಗಲೂ ಚಂಚಲಸ್ವಭಾವವುಳ್ಳದ್ದಾದುದರಿಂದ ಶುದ್ಧಜ್ಞಾನವಿಲ್ಲದವನ ಇಂದ್ರಿಯಗಳು, ದುಷ್ಟಕುದುರೆಗಳು ಸಾರಥಿಯ ವಶವರ್ತಿಯಾಗದಿರುವಂತೆ, ಸ್ವೇಚ್ಛಾಚಾರಿಗಳಾಗಿ ಅವನ ವಶದಲ್ಲಿರುವುದಿಲ್ಲ. ಎಂದರೆ ದುಷ್ಟಕುದುರೆಗಳು ಹೇಗೆ ಸಾರಥಿಯ ವಶವಾಗಿರುವುದಿಲ್ಲವೋ ಹಾಗೆಯೇ ಶುದ್ಧಜ್ಞಾನವಿಲ್ಲದವನ

ಇಂದ್ರಿಯಗಳು (ಮನಸ್ಸು, ಕಣ್ಣು, ಕಿವಿ ಮೊದಲಾದವು) ಅವನ ವಶದಲ್ಲಿರುವುದಿಲ್ಲ. ಆದರೆ ವಿಜ್ಞಾನವಂತನಾಗಿರುವ ಪುರುಷನ ಇಂದ್ರಿಯಗಳು ಒಳ್ಳೇ ಪಳುಗಿದ ಕುದುರೆಗಳು ಸಾರಥಿಯ ವಶದಲ್ಲಿರುವಂತೆ ಅವನ ವಶದಲ್ಲಿಯೇ ಇರುವವು. ಯಾವ ಪುರುಷನು ವಿಜ್ಞಾನರಹಿತನೋ ಯಾವನು ಚಂಚಲಚಿತ್ತವುಳ್ಳವನೋ ಯಾವನು ಸದಾ ಅಶುಚಿಯಾಗಿರುವನೋ ಅವನಿಗೆ ಪರಮಪದವು ದೊರೆಯಲಾರದು ಅವನಿಗೆ ಜನನಮರಣರೂಪವಾದ ಸಂಸಾರದ ತೊಡಕು ಇದ್ದೇ ಇರುವುದು ಎಂದರೆ ಅವನು ಹುಟ್ಟತ್ತಲೂ ಸಾಯುತ್ತಲೂ ಪುನಃ ಬೇರೊಂದು ಜನ್ಮದಲ್ಲಿ ಹುಟ್ಟುತ್ತಲೂ ಇರುವನು. ಆದರೆ ವಿಜ್ಞಾನವಂತನೂ, ಸ್ಥಿರಚಿತ್ತನೂ ಶುಚಿರ್ಭೂತನೂ ಆದ ಪುರುಷನಿಗೆ ಮಾತ್ರ ಪರಮಪದವು (ಮುಕ್ತಿಯು) ದೊರಕುವುದು. ಅವನು ಆ ಪರಮಪದದಿಂದ ಮತ್ತೆ ಹೊರಟು ಬರುವುದಿಲ್ಲ ಅವನಿಗೆ ಮತ್ತೆ ಹುಟ್ಟುಸಾವುಗಳೇ ಇಲ್ಲ. ಯಾವ ಮನುಷ್ಯನು ವಿಜ್ಞಾನವನ್ನೇ ತನ್ನ ಸಾರಥಿಯನ್ನಾಗಿ ಮಾಡಿಕೊಂಡು ತನ್ನ ಮನಸ್ಸನ್ನು ಸಂಯಮದಲ್ಲಿಟ್ಟುಕೊಳ್ಳುವನೋ ಅವನು ಸಂಸಾರಸಾಗರವನ್ನು ದಾಟಿ ಸರ್ವವ್ಯಾಪಿಯಾದ ಪರಮಪದವನ್ನು ಸೇರುವನು. ಆ ಶ್ರೇಷ್ಠವಾದ ಸ್ಥಾನವೇ (ಮುಕ್ತಿಯು) ವಿಷ್ಣುವಿನ ಪರಮಪದವೆಂದು ಹೇಳಲ್ಪಡುವುದು.

ಇಂದ್ರಿಯಗಳಾಚೆಗೆ ಎಂದರೆ ಇಂದ್ರಿಯಗಳಿಗಿಂತ ಸೂಕ್ಷ್ಮವಾಗಿರುವ ವಸ್ತುಗಳು ಅಥವಾ ತನ್ಮಾತ್ರೆಗಳು ಪಂಚಭೂತಗಳ ಸೂಕ್ಷ್ಮಸ್ವರೂಪಗಳಾಗಿರುವವು (ತನ್ಮಾತ್ರವೆಂದರೆ ಸೂಕ್ಷ್ಮರೂಪ) . ಪಂಚಭೂತಗಳ ತನ್ಮಾತ್ರೆಗಳನ್ನು ದಾಟಿದರೆ ಮನಸ್ಸು, ಮನಸ್ಸಿನ ಆಚೆಗೆ ಬುದ್ಧಿ, ಅದರಾಚೆಗೆ ಮಹದಾತ್ಮ, ಅದರಾಚೆಗೆ ಶ್ರೇಷ್ಠವಾದ ಅವ್ಯಕ್ತ, ಅದರಾಚೆಗೆ ಶ್ರೇಷ್ಠವಾದ ಪುರುಷ (ಪರಬ್ರಹ್ಮ) ಇರುವುದು. ಈ ಪುರುಷನಿಗಿಂತ ಶ್ರೇಷ್ಠವಸ್ತುವು ಯಾವುದೂ ಇಲ್ಲ. ಅವೇ ಕಟ್ಟಕಡೆಯ ಅತ್ಯಂತ ಶ್ರೇಷ್ಠವಾದ ಸ್ಥಾನವು (ಗತಿಯು)

ಈ ಶ್ರೇಷ್ಠನಾದ ಪರಮಪುರುಷನೇ ಸಮಸ್ತ ಭೂತಗಳ ಎಂದರೆ ಪ್ರಾಣಿಗಳ ಶರೀರಗಳಲ್ಲಿ ಗೂಢವಾಗಿ ನೆಲೆಸಿರುವ ಆತ್ಮನು. ಅವನನ್ನು ನೋಡುವುದಕ್ಕೂ ಬಾಹ್ಯಚಕ್ಷುಸ್ಸಿನಿಂದ ಸಾಧ್ಯವಿಲ್ಲ ಅವನನ್ನು ಯಾರೂ ನೋಡಲಾರರು. ಆದರೆ ಯೋಗಿಗಳೂ, ತಪಸ್ವಿಗಳೂ ಆದವರ ಸೂಕ್ಷ್ಮಬುದ್ಧಿಗೆ ಗೋಚರನಾಗುವನು. ಎಂದರೆ ಅತ್ಯಂತ ಸೂಕ್ಷ್ಮವಸ್ತುಗಳನ್ನು ಸಾಕ್ಷಾತ್ಕರಿಸಬಲ್ಲ ತಪಸ್ವಿಗಳ ಅಂತರ್ಮುಖವಾದ ತೀಕ್ಷ್ಣಬುದ್ಧಿಗೆ ಮಾತ್ರ ಗೋಚರವಾಗುವನು. ಬುದ್ಧಿವಂತನಾದ ಪುರುಷನು ತನ್ನ ವಾಕ್ಯಕ್ತಿಯನ್ನು ಅದಕ್ಕಿಂತ ಸೂಕ್ಷ್ಮೇಂದ್ರಿಯವಾದ ಮನಸ್ಸಿನಲ್ಲಿ ಲೀನಮಾಡಬೇಕು. ಅನಂತರ ಮನಸ್ಸನ್ನು ಮನಸ್ಸಿಗಿಂತ ಇನ್ನೂ ಸೂಕ್ಷ್ಮವಾದ ಜ್ಞಾನಮಯ ಅಥವಾ ಜೀವನಮಯ ಆತ್ಮನಲ್ಲಿ ಲೀನಮಾಡಬೇಕು. ಬಳಿಕ ಜೀವನಮಯ ಆತ್ಮನನ್ನು ಮಹದಾತ್ಮನಲ್ಲಿಯೂ, ಮಹದಾತ್ಮನನ್ನು ಶಾಂತಾತ್ಮನಲ್ಲಿಯೂ ಲೀನಮಾಡಬೇಕು. ಆದ್ದರಿಂದ ಎಲೈ ಜನಗಳೇ ಏಳಿರಿ. ಎದ್ದು ಕಾರ್ಯೋನ್ಮುಖರಾಗಿರಿ. ನಿಮಗಿಂತಲೂ ಶ್ರೇಷ್ಠರಾದ ಜ್ಞಾನಿಗಳ ಬಳಿಗೆ ಹೋಗಿ ಬಹ್ಮಜ್ಞಾನವನ್ನು ಕೇಳಿ ತಿಳಿದುಕೊಳ್ಳಿರಿ. ಈ ಬ್ರಹ್ಮಜ್ಞಾನವನ್ನು ಕಲಿಯುವುದಕ್ಕಾಗಿ ಪ್ರಯತ್ನಿಸುವುದು ಎಷ್ಟು ಕಷ್ಟವೆಂದರೆ—ಹರಿತವಾದ ಕತ್ತಿಯ ಅಲುಗಿನ ಮೇಲೆ ನಡೆಯುವುದು ಎಷ್ಟು ಕಷ್ಟವೋ ಈ ಮಾರ್ಗವೂ ಅಷ್ಟೇ ಕಷ್ಟಸಾಧ್ಯವೆಂದು ತತ್ತ್ವಜ್ಞಾನವೇತ್ತರಾದ ಕವಿಗಳು ಹೇಳುವರು. ಈ ಆತ್ಮನು ಶಬ್ದರಹಿತವು, ಸ್ಪರ್ಶರಹಿತವು, ಅವ್ಯಯವು, ರೂಪರಹಿತವು ಎಂದರೆ ಅದನ್ನು ಧ್ವನಿಮೂಲಕ ಕೇಳಿ ತಿಳಿಯಲಾಗುವುದಿಲ್ಲ. ಅದನ್ನು ಮುಟ್ಟಲೂ ಸಾಧ್ಯವಿಲ್ಲ. ಕಣ್ಣಿನಿಂದ ನೋಡಲೂ ಸಾಧ್ಯವಿಲ್ಲ. ಅದು ಯಾವಾಗಲೂ ನಾಶವಿಲ್ಲದೆ ಇರುವುದು. ಮತ್ತು ಅದು ರಸರಹಿತವು ಎಂದರೆ, ಬಾಯಿನಿಂದ ರುಚಿನೋಡಿ ತಿಳಿಯುವುದಕ್ಕಾಗುವುದಿಲ್ಲ. ಗಂಧರಹಿತವು ಎಂದರೆ ಮೂಸಿನೋಡಿ ಅದರ ಸ್ವರೂಪವನ್ನು ತಿಳಿಯುವುದೂ ಸಾಧ್ಯವಿಲ್ಲ. ಅದು ಅನಾದಿಯು, ಅನಂತವು,

ಎಂದರೆ ಅದಕ್ಕೆ ದೇಶಕಾಲಗಳ ಪರಿಮಿತಿಯೇ ಇಲ್ಲ. ಯಾವಾಗಲೂ ಇರುವುದರಿಂದ ಅನಾದಿಯು, ಎಲ್ಲೆಲ್ಲಿಯೂ ವ್ಯಾಪಿಸಿರುವುದರಿಂದ ಅನಂತವು. ಮಹತ್ತತ್ತ್ವದಿಂದಾಚೆಗೆ ಎಂದರೆ ಅದಕ್ಕಿಂತಲೂ ಸೂಕ್ಷ್ಮವಾಗಿ ಅದರ ಉತ್ಪತ್ತಿಗೂ ಕಾರಣವಾಗಿರುವ ಸತ್ಯಸ್ವರೂಪವಾದ ಆತ್ಮತತ್ತ್ವವನ್ನು ತಿಳಿದವನು ಮೃತ್ಯುಮುಖದಿಂದ ಪಾರಾಗುವನು ಎಂದರೆ ಅವನಿಗೆ ಮೃತ್ಯುಭಯವಿಲ್ಲ ಎಂದನು. ಮೃತ್ಯುದೇವನು ಅಥವಾ ಯಮನು ನಚಿಕೇತನಿಗೆ ಹೇಳಿದ ಈ ಉಪಾಖ್ಯಾನವನ್ನು ಹೇಳುವವನೂ, ಕೇಳುವವನೂ (ಶ್ರವಣಮಾಡುವವನೂ) ಬ್ರಹ್ಮಲೋಕದಲ್ಲಿ ಗೌರವಿಸಲ್ಪಟ್ಟು ಪೂಜ್ಯನಾಗುತ್ತಾನೆ. ಮತ್ತು ಪರಮರಹಸ್ಯವಾದ ಉಪಾಖ್ಯಾನವನ್ನು ಬ್ರಾಹ್ಮಣರ ಸಭೆಯಲ್ಲಾಗಲೀ, ಶ್ರಾದ್ಧಕಾಲದಲ್ಲಾಗಲೀ ಯಾವ ಪುರುಷನು ಇತರರಿಗೆ ಶ್ರವಣಮಾಡಿಸುವನೋ ಆ ಪುರುಷನು ಮಾಡುವ ಕರ್ಮವು ಅನಂತಾನಂತಫಲಪ್ರದವಾಗುವುದು.

ಮೃತ್ಯುದೇವನಾದ ಯಮನು ನಚಿಕೇತನೊಡನೆ ಸಂಭಾಷಣೆಯನ್ನು ಮುಂದುವರಿಸುತ್ತಾ ಮತ್ತಿಂತೆಂದನು—

ಯಮ—ಸ್ವಯಂಭುವಾದ ಪರಮಾತ್ಮನು ತನ್ನ ಶಕ್ತಿಗಳನ್ನು ಬಹಿರ್ಮುಖವಾಗಿ ಹರಿಯಬಿಟ್ಟನು ಆದ್ದರಿಂದ ಇಂದ್ರಿಯಗಳು ಬಾಹ್ಯವಸ್ತುವನ್ನು ಮಾತ್ರ ನೋಡಬಲ್ಲವು. ಅತ್ಯಂತಸೂಕ್ಷ್ಮರೂಪದ ಅಂತರಾತ್ಮನು ಅವುಗಳಿಗೆ ಗೋಚರವಾಗುವುದಿಲ್ಲ. ವಿವೇಕಿಯಾದ ಪುರುಷನು ಅಮೃತತ್ವವನ್ನು (ಮರಣರಾಹಿತ್ಯವನ್ನು ಎಂದರೆ ಮುಕ್ತಿಪದವಿಯನ್ನು) ಬಯಸಿದಲ್ಲಿ ಅವನು ಅಂತರ್ಮುಖನಾಗಿ (ತಪಸ್ಸಿನಿಂದಲೂ ಧ್ಯಾನದಿಂದಲೂ ಮಾತ್ರ) ಅಂತರಾತ್ಮನನ್ನು ಸಾಕ್ಷಾತ್ಕರಿಸುವನು. ಬಾಲಕರಂತೆ ಮಂದಬುದ್ಧಿಯುಳ್ಳವರು ಬಾಹ್ಯಸುಖಗಳಿಗೆ ಆಸೆಬಿದ್ದು ವಿಸ್ತೃತವಾದ ಮರಣಪಾಶದಲ್ಲಿ ಸಿಕ್ಕಿಬೀಳುವರು. ಎಂದರೆ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲದೆ ಜನ್ಮಮರಣರೂಪವಾದ ಸಂಸಾರಸಾಗರದಲ್ಲಿ ಸಿಕ್ಕಿ ದುಃಖಿಸುತ್ತಿರುವರು. ಆದರೆ ಬುದ್ಧಿವಂತರು (ಆತ್ಮಜ್ಞಾನಾಪೇಕ್ಷಿಗಳು) ಅಮೃತಪದವಿಯ ಸುಖವನ್ನರಿತು ಅದನ್ನು ಪಡೆಯುವುದಕ್ಕಾಗಿ ಈ ಲೋಕದ ಅನಿತ್ಯ ವಸ್ತುಗಳಿಗೆ ಆಶೆಪಡುವುದಿಲ್ಲ. ಈ ಅನಿತ್ಯ ವಸ್ತುಗಳನ್ನು ಪಡೆಯುವುದರಿಂದ ನಿತ್ಯವಸ್ತುವು ದೊರೆಯುವುದೆಂದು ಭಾವಿಸುವುದಿಲ್ಲ. ರೂಪ, ರಸ, ಗಂಧ, ಶಬ್ದ, ಸ್ಪರ್ಶ ವೆಂಬ ಐದು ವಿಧವಾದ ವಿಷಯಸುಖಗಳಿಂದಲೂ ಮೈಥುನ (ಸ್ತ್ರೀಸಂಭೋಗ) ದಿಂದಲೂ ಉಂಟಾಗುವ ಸುಖದ ಜ್ಞಾನವು ಈ ಆತ್ಮನಿಂದಲೇ ಆಗುವುದು. ಯಾವುದರಿಂದ ಈ ಸುಖದ ತಿಳುವಳಿಕೆಯುಂಟಾಗುವುದೋ ಅದೇ ಆತ್ಮವು. ಇನ್ನು ಉಳಿದದ್ದೇನು ? ಆತ್ಮವೊಂದೇ. ಸ್ವಪ್ನಸ್ಥಿತಿಯಲ್ಲಿಯೂ, ಜಾಗೃದವಸ್ಥೆಯಲ್ಲಿಯೂ ಆಗುವ ವ್ಯಾಪಾರಗಳು ಯಾವುದರ ಬಲದಿಂದ ತಿಳಿಯುತ್ತವೆಯೋ ಅಂತಹ ಶ್ರೇಷ್ಠವೂ ಸರ್ವವ್ಯಾಪಿಯೂ ಆದ ಆತ್ಮನನ್ನು ಸಾಕ್ಷಾತ್ಕರಿಸಿಕೊಂಡಮೇಲೆ ವಿವೇಕಿಯಾದವನು ಯಾವವಿಧವಾದ ಶೋಕಕ್ಕೂ ಆಸ್ಪದವೀಯುವುದಿಲ್ಲ. ಅವನಿಗೆ ದುಃಖಶೋಕಗಳೇ ಇಲ್ಲ. ದೇಹಸಂಬಂಧಿಯಾದ ಜೀವನ ಸಮಾಪದಲ್ಲಿದ್ದು ಫಲವನ್ನನುಭೋಗಿಸುವ ಮತ್ತು ಭೂತಭವಿಷ್ಯಗಳ ಗೊಡೆಯನಾದ ಆತ್ಮನನ್ನು ತಿಳಿದವನು ಭಯರಹಿತನಾಗುವನು. ಅವನಿಗೆ ಯಾವವಿಧವಾದ ಭಯವೂ, ಆತಂಕವೂ ಇಲ್ಲದೆ ನಿಶ್ಚಿಂತನಾಗಿರುವನು. ಯಾವುದು ತಪಸ್ಸಿಗಿಂತ ಪೂರ್ವದಲ್ಲಿ ಎಂದರೆ ಅನಾದಿಕಾಲದಿಂದ ಇದ್ದಿತೋ ಯಾವುದು ಉದಕ ಮುಂತಾದ ತತ್ತ್ವಗಳ ಸೃಷ್ಟಿಗಿಂತಲೂ ಪೂರ್ವದಲ್ಲಿ ಇದ್ದಿತೋ ಯಾವುದು ಹೃದಯದ ಗುಹೆಯಲ್ಲಿ (ಯಾರಿಗೂ ಕಾಣಿಸದಂತೆ) ಪ್ರವೇಶಿಸಿ ಪಂಚಭೂತಗಳೊಡನೆ (ಎಂದರೆ ಶರೀರದ ನಾನಾ ಅವಯವಗಳೊಡನೆ ಸಂಪರ್ಕದಿಂದ) ಇರುವುದನ್ನು ಜ್ಞಾನಿಗಳು ನೋಡಿ ತಿಳಿಯುವರೋ ಅದೇ ಈ ಆತ್ಮವು. ಸಕಲದೇವತಾತ್ಮಳಾದ ಅದಿತಿದೇವಿಯು ಯಾರಿಂದ (ಯಾವ ಆತ್ಮದಿಂದ) ಉತ್ಪನ್ನಳಾದಳೋ, ಯಾವುದು ಪ್ರಾಣಿಗಳ ಶರೀರದಲ್ಲಿ ಪಂಚಭೂತಗಳೊಡನೆ ಸಂಪರ್ಕದಿಂದ ಗೂಢವಾಗಿ ನೆಲಸಿರುವುದೋ ಅದೇ ಈ ಆತ್ಮವು. ಮತ್ತು ಸ್ತ್ರೀಯರ ಗರ್ಭದಲ್ಲಿರುವಂತೆ

ಗೋಪ್ಯನಾಗಿ ಎರಡು ಅರಣಿಗಳ ಮಧ್ಯದಲ್ಲಿರುವವನೂ, ಯಜ್ಞಾದಿಗಳಲ್ಲಿ ಯಜಮಾನರು ಅರ್ಪಿಸುವ ಹವಿರಾದಿಗಳನ್ನು ದೇವತೆಗಳ ಬಳಿಗೆ ಒಯ್ಯುವವನೂ, ಪ್ರತಿದಿನವೂ ಬಹಳ ಎಚ್ಚರಿಕೆಯಿಂದ ಪೂಜ್ಯನಾದವನೂ ಆದ ಯಾವ ಅಗ್ನಿಯಿರುವನೋ ಅವನೇ ಈ ಆತ್ಮನು. ಆತ್ಮನಿಂದಲೇ ಸೂರ್ಯನು ಉದಯಿಸುವನು. (ಉತ್ಪನ್ನನಾಗುವನು) ಸೂರ್ಯನು ಅಸ್ತನಾಗುವುದೂ ಆತ್ಮನಲ್ಲಿಯೇ. ಸಕಲದೇವತೆಗಳೂ ಆತ್ಮನಲ್ಲಿಯೇ ಜನಿಸಿ ಅಲ್ಲಿಯೇ ಲೀನರಾಗುವರು. ಇಂತಹ ಸರ್ವಶಕ್ತಿಸಾಮರ್ಥ್ಯವಿರುವುದೇ ಆತ್ಮವು. ಇಲ್ಲಿರುವಂತೆ ಅಲ್ಲಿಯೂ, ಅಲ್ಲಿರುವಂತೆ ಇಲ್ಲಿಯೂ ಇರುವುದು. ಆತ್ಮನಲ್ಲಿ ನಾನಾಭೇದಗಳಿರುವುದೆಂದು ತಿಳಿಯುವವನೂ, ನಾನೇ ಬೇರೆ, ಆತ್ಮನೇ ಬೇರೆ ಎಂಬ ಅಜ್ಞಾನದಿಂದ ಮೋಹಿತನಾದವನೂ ಪುನಃಪುನಃ ಜನ್ಮಮರಣಗಳಿಗೆ ಸಿಲುಕುವನು. ನಾನಾತ್ವವಿರುದೆಂದು ತಿಳಿಯುವುದು ಬರೀ ಮನಸ್ಸಿನ ಭ್ರಾಂತಿಯು. ಇಲ್ಲಿ (ಆತ್ಮನಲ್ಲಿ) ಯಾವ ನಾನಾತ್ವವೂ ಇಲ್ಲ. ನಾನಾತ್ವವಿರುವುದೆಂದು ಬಗೆಯುವವನು ಪುನಃಪುನಃ ಮರಣಕ್ಕೆ ಒಳಗಾಗುವನು. ಇಲ್ಲಿ ನಾನಾತ್ವವೆಂದರೇನೆಂಬುದನ್ನು ವಿವರಿಸುವುದವಶ್ಯಕವು. ಪ್ರಪಂಚದಲ್ಲಿ ಅನೇಕವೂ ನಾನಾವಿಧವೂ ಆದ ಜೀವರಾಶಿಗಳಿರುವವು. ಅವುಗಳಲ್ಲೆಲ್ಲಾ ಒಬ್ಬನೇ ಆದ ಆತ್ಮನು ಅಂತರಾತ್ಮನಾಗಿ ಎಂದರೆ ಹೃದಯದಲ್ಲಿ ಗೂಢವಾಗಿ ನೆಲೆಸಿರುವನು. ಆದ್ದರಿಂದ ಈ ವಿಧವಾದ ಜೀವರಾಶಿಗಳೂ ಅವುಗಳಲ್ಲಿರುವ ಆತ್ಮನೂ ಬೇರೆಬೇರೆ, ಈ ಪ್ರಾಣಿಯಲ್ಲಿರುವ ಆತ್ಮವು ಬೇರೆ, ಇನ್ನೊಂದು ಪ್ರಾಣಿಯಲ್ಲಿರುವ ಆತ್ಮನೇ ಬೇರೆ ಎಂದು ನಾನಾತ್ವವನ್ನು ಆರೋಪಿಸುವವನು ಮರಣಕ್ಕೆ ಪದೇಪದೇ ಈಡಾಗುವನು. ಅನೇಕ ಜೀವರಾಶಿಗಳಿದ್ದರೂ ಅವುಗಳಲ್ಲೆಲ್ಲಾ ನೆಲೆಸಿರುವ ಆತ್ಮನು ಒಬ್ಬನೇ ಆಗಿರುವನು, ಬೇರೆಬೇರೆಯಲ್ಲ. ಹೀಗೆ ಅನೇಕ ಪ್ರಾಣಿಗಳ ಶರೀರದಲ್ಲಿ ಏಕಕಾಲದಲ್ಲಿ ನೆಲಸಿರುವುದು ಆತ್ಮನ ವೈಶಿಷ್ಟ್ಯವು ಮತ್ತು ಅವನ ಮಹತ್ತ್ವವು- ಇದನ್ನು ತಿಳಿಯದೆ ನಾನಾ ಪ್ರಾಣಿಗಳ ಶರೀರದಲ್ಲಿರುವ ಆತ್ಮವು ಬೇರೆಬೇರೆ ಎಂದು ತಿಳಿಯುವುದು ಮೂಢತನವು. ಮನುಷ್ಯನ ಅಂತಃಕರಣದಲ್ಲಿ ಎಂದರೆ ಹೃದಯ ಮಧ್ಯದಲ್ಲಿ ನೆಲೆಸಿರುವ ಆತ್ಮನನ್ನು ಪುರುಷನೆಂದು ಹೇಳುವರು. ಈ ಪುರುಷನು ಅಂಗುಷ್ಠ ಎಂದರೆ ಒಂದು ಹೆಬ್ಬೆರಳಿನ ಗಾತ್ರ ಪ್ರಮಾಣದಲ್ಲಿರುವನು. ಎಂದರೆ ಆತ್ಮನು ಸರ್ವವ್ಯಾಪಿಯಾಗಿದ್ದರೂ, ಸಕಲ ವಿಶ್ವವನ್ನು ವ್ಯಾಪಿಸಿದ್ದರೂ ಪ್ರಾಣಿಗಳ ಹೃದಯದಲ್ಲಿ ಮಾತ್ರ ಹೆಬ್ಬೆಟ್ಟಿನ ಗಾತ್ರದ ಸಣ್ಣ ಆಕಾರದಷ್ಟೇ ಇರುವನು. ಹೀಗಿದ್ದರೂ ಈ ಪುರುಷನು (ಆತ್ಮನು) ಭೂತಭವಿಷ್ಯತ್ಕಾಲಗಳಿಗೆಲ್ಲಾ ಒಡೆಯನು, ನಿಯಾಮಕನು. ಇದನ್ನು ತಿಳಿದವನು ನಿರ್ಭಯನಾಗಿರುವನು. ಈ ಅಂಗುಷ್ಠಪರಿಮಿತಿಯಳ್ಳ ಪುರುಷನು ಧೂಮರಹಿತವಾದ (ಹೊಗೆಯಿಲ್ಲದ) ಅಗ್ನಿಯಂತೆ ಸ್ವಚ್ಛವಾಗಿ ಬೆಳಗುತ್ತಿರುವನು. ಭೂತಭವಿಷತ್ಕಾಲಗಳಿಗೆಲ್ಲಾ ಅವನೇ ಒಡೆಯನು. ಇವತ್ತಿರುವವನೂ ಅವನೇ. ನಾಳೆ ಇರುವವನೂ ಅವನೇ. ಅವನು ನಿತ್ಯನು. ಪರ್ವತದ ಶಿಖರಗಳ ಮೇಲೆ ಬೀಳುವ ಮಳೆಯು ಸುತ್ತಮುತ್ತಲಿರುವ ಪ್ರದೇಶಗಳಲ್ಲಿ ಬೇರೆ ಬೇರೆ ಪ್ರವಾಹರೂಪದಿಂದ ಹರಿಯುವುವು. ಬೇರೆಬೇರೆಯಾಗಿ ಹರಿಯುವ ಪ್ರವಾಹಗಳು ಒಂದೇ ವೃಷ್ಟಿಯಿಂದ ಬಿದ್ದವೆಂಬುದನ್ನು ತಿಳಿಯದ ಪ್ರವಾಹಗಳು ಬೇರೆಬೇರೆ ಎಂದು ತಿಳಿಯುವ ಅವಿವೇಕಿಯು, ಪ್ರಾಣಿಗಳ ನಾನಾ ಶರೀರಗಳೂ ಅವುಗಳಲ್ಲಿರುವ ಆತ್ಮವೂ ಬೇರೆಬೇರೆಯೆಂದು ತಿಳಿಯುವನು. ಆದ್ದರಿಂದ ಅವನು ನಾನಾ ಪ್ರಾಣಿಗಳಲ್ಲಿ ನಾನಾ ಜನ್ಮಗಳನ್ನು ಎತ್ತುವನು. ಆದ್ದರಿಂದ ಆತ್ಮನಲ್ಲಿ ಭಿನ್ನತ್ವವಿರುವುದೆಂದು ಭಾವಿಸಬಾರದು. ಎಲೈ ಗೌತಮನೇ (ಗೋತಮು ವಂಶದಲ್ಲಿ ಹುಟ್ಟಿದ ನಚಿಕೇತನೇ) ಶುದ್ಧೋದಕದಲ್ಲಿ ಬೇರೆ ಶುದ್ಧವಾದ ಉದಕವನ್ನು ಬೆರೆಸಿದರೆ ಅವೆರಡೂ ಒಂದಾಗಿ ಯಾವ ವ್ಯತ್ಯಾಸವೂ ಇಲ್ಲದಂತೆ ಏಕರೂಪವಾಗಿ ಆಗಿರುವುದೋ ಅದರಂತೆ ಬ್ರಹ್ಮಜ್ಞಾನಿಯಾದವನ ಆತ್ಮವು ಅದೇ ರೂಪದ ಎಂದರೆ ಬ್ರಹ್ಮರೂಪವಾದ ಆತ್ಮನಲ್ಲಿ ಒಂದಾಗಿ ಸೇರಿಹೋಗುವುದು. ಎಂದರೆ ಬ್ರಹ್ಮಜ್ಞಾನಿಯಾದವನು ಆತ್ಮನಲ್ಲಿ (ಬ್ರಹ್ಮನಲ್ಲಿ) ಐಕ್ಯನಾಗುವನು.

ಯಮ—ಯಮನು ಮತ್ತಿಂತೆಂದನು—ಈ ಶರೀರವನ್ನು ಒಂದು ಪಟ್ಟಣವೆನ್ನುವರು. ಇದಕ್ಕೆ ಹನ್ನೊಂದು ದ್ವಾರಗಳಿರುವುವು. ಶಿರಸ್ಸು, (ಬ್ರಹ್ಮರಂಧ್ರ) ನಾಭಿ, ಎರಡು ಕಣ್ಣುಗಳು, ಎರಡು ಕಿವಿಗಳು, ಎರಡು ನಾಸಿಕಾದ್ವಾರಗಳು, ಮುಖ, ಎರಡು ಅಧೋರಂಧ್ರಗಳು ಎಂದರೆ ಜಲಮಲದ್ವಾರಗಳು ಒಟ್ಟು ಹನ್ನೊಂದು ದ್ವಾರಗಳಿರುವವು ಇಂತಹ ಶರೀರವೆಂಬ ಪಟ್ಟಣದಲ್ಲಿ ಉತ್ಪತ್ತಿನಾಶರಹಿತನಾದ ಶುದ್ಧಚೈತನ್ಯಾತ್ಮನು ನೆಲಸಿರುವನು. ಇಂತಹ ಆತ್ಮನನ್ನು ಧ್ಯಾನಮಾಡುವವನು ಶೋಕರಹಿತನಾಗುವನು.. ಅವನು ಜೀವನ್ಮುಕ್ತನಾಗಿ ಮರಣಾನಂತರ ಪರಮಪದವೆಂಬ ಮುಕ್ತಿಯನ್ನು ಪಡೆಯುವನು. ಹಂಸವತೀ ಋಕ್ಕೆಂದು ಪ್ರಸಿದ್ಧವಾದ **ಹಂಸಃ ಶುಚಿಷತ್** ಎಂಬ ಮಂತ್ರವೊಂದಿರುವುದು. ಈ ಮಂತ್ರಕ್ಕೆ ಸೂರ್ಯನು ದೇವತೆಯಾಗಿದ್ದರೂ ಇಲ್ಲಿ ಆದಿತ್ಯರೂಪದಿಂದ ಜಗತ್ತನ್ನು ಬೆಳಗುತ್ತಿರುವ ಆತ್ಮನೇ ಸೂರ್ಯನು ಎಂದು ಹೇಳಿ ಅದರ ಅರ್ಥವನ್ನು ಇಲ್ಲಿ ವಿವರಿಸಲಾಗಿದೆ. ಈ ಆತ್ಮವು (ಆದಿತ್ಯರೂಪದಿಂದ ಇರುವ ಆತ್ಮವು) ಆಕಾಶದಲ್ಲಿ ಸೂರ್ಯರೂಪದಿಂದಲೂ, ಅಂತರಿಕ್ಷದಲ್ಲಿ ವಾಯುರೂಪದಿಂದಲೂ, ಯಜ್ಞವೇದಿಯಲ್ಲಿ ಅಗ್ನಿರೂಪದಿಂದಲೂ, ಯಜಮಾನನ ಮನೆಯಲ್ಲಿ ಪೂಜ್ಯನಾದ ಅತಿಥಿರೂಪದಿಂದಲೂ ವಾಸಿಸುತ್ತಿರುವುದು. ಅದು ಎಂದರೆ ಆ ಆತ್ಮವು ಮನುಷ್ಯರಲ್ಲಿಯೂ ಶ್ರೇಷ್ಠರಾದವರಲ್ಲಿಯೂ, ಸತ್ಯದಲ್ಲಿಯೂ, ಆಕಾಶದಲ್ಲಿಯೂ ವ್ಯಾಪಿಸಿರುವುದು ನೀರಿನಲ್ಲಿ ಹುಟ್ಟುವ ಜಲಚರಗಳೂ, ಭೂಮಿಯಲ್ಲಿ ಬೆಳೆಯುವ ಸಸ್ಯಾದಿಗಳೂ, ಪ್ರಾಣಿವರ್ಗವೂ, ಯಜ್ಞಾಂಗ ಕರ್ಮಗಳೂ, ಪರ್ವತಾದಿಗಳಲ್ಲಿ ಉದ್ಭವಿಸುವ ನದಿಯೇ ಮೊದಲಾದುವುಗಳೂ ಪ್ರಪಂಚದಲ್ಲಿ ಇನ್ನೂ ಯಾವ ಯಾವ ವಸ್ತುಗಳಿವೆಯೋ ಅವೆಲ್ಲವೂ ಈ ಆತ್ಮವೇ ಆಗಿರುವುದು ಎಂದರೆ ಆತ್ಮಸ್ವರೂಪವೇ (ಆತ್ಮನ ಅಂಶವೇ) ಆಗಿರುವುದು. ಇದು ಸತ್ಯಸ್ವರೂಪವುಳ್ಳದೂ ಅತ್ಯಂತ ವಿಸ್ತೃತವಾದುದೂ ಆಗಿರುವುದು. ಅದು ಶರೀರದಲ್ಲಿರುವ ಪ್ರಾಣವಾಯುವನ್ನು ಮೇಲಕ್ಕೆತ್ತುವುದು. ಅಪಾನವಾಯುವನ್ನು ಕೆಳಕ್ಕೆ ಒತ್ತುವುದು. ಶರೀರಮಧ್ಯದಲ್ಲಿ ಕುಳಿತಿರುವ ಇಂತಹ ಆತ್ಮನನ್ನು ಪೂಜ್ಯನೆಂದು ಎಲ್ಲಾ ದೇವತೆಗಳೂ ಉಪಾಸಿಸುವರು. ದೇಹವನ್ನು ಬಿಟ್ಟು ಹೊರಟುಹೋಗುವ (ಎಂದರೆ ಮೃತನಾಗುವ) ದೇಹಿಯು (ಪ್ರಾಣಿಯು) ಈ ಶರೀರವನ್ನು ಬಿಟ್ಟು ಹೊರಟುಹೋದಮೇಲೆ ಇಲ್ಲಿ ಏನು ಉಳಿಯುವುದು ? ಏನೂ ಇಲ್ಲ. ಎಂದರೆ ಮನುಷ್ಯನು ಮೃತನಾಗಿ ಮೃತಶರೀರವನ್ನು ಬಿಟ್ಟು ಹೊರಟುಹೋದಮೇಲೆ ಆ ಮೃತಶರೀರದಲ್ಲಿ ಆತ್ಮನು ವಾಸಿಸುವುದಿಲ್ಲ. ಮನುಷ್ಯರು ಜೀವಿಸುತ್ತಿರುವುದು ಪ್ರಾಣವಾಯುವಿನ ಶಕ್ತಿಯಿಂದಲೂ ಅಲ್ಲ, ಅಪಾನವಾಯುವಿನ ಬಲದಿಂದಲೂ ಅಲ್ಲ. ಇವೆರಡೂ ಯಾವ ಆತ್ಮನ ಆಶ್ರಯದಿಂದಿರುವವೋ ಆ ಆತ್ಮನ ಬಲದಿಂದಲೇ ಜನರು ಬದುಕಿರುವರು. ಎಂದರೆ ಆತ್ಮನು ಶರೀರದಲ್ಲಿರುವವರೆಗೆ ಮಾತ್ರ ಮನುಷ್ಯನು ಜೀವಿಸಿರುವನೆಂದು ಹೇಳುವರು. ಆತ್ಮನು ಶರೀರವನ್ನು ತ್ಯಜಿಸಿ ಹೊರಟುಹೋದಮೇಲೆ ಆ ಮೃತಶರೀರದಲ್ಲಿ ಪ್ರಾಣಾಪಾನವಾಯುಗಳೂ, ಚೈತನ್ಯವೂ, ಇರುವುದಿಲ್ಲ. ಅಲ್ಲಿ ಜಡಶರೀರವೊಂದೇ ಉಳಿದಿರುವುದು

ಎಲೈ ಗೌತಮನೇ, ನಿನಗೆ ಈ ಸನಾತನವಾದ ಬ್ರಹ್ಮದ ರಹಸ್ಯವನ್ನು ಹೇಳುವೆನು, ಕೇಳು. ಮರಣಾನಂತರ ಆತ್ಮನು ಯಾವಸ್ಥಿತಿಯಲ್ಲಿರುವನೆಂಬುದನ್ನೂ ಹೇಳುವೆನು, ಕೇಳು. ವಿವೇಕಿಯಾದ ಪುರುಷನು ಬ್ರಹ್ಮಜ್ಞಾನವನ್ನು ಪಡೆಯುವುದರಿಂದಲೇ ಈ ಸಂಸಾರದಿಂದ ಬಿಡುಗಡೆಯನ್ನು ಹೊಂದಿ ಮರಣಾನಂತರ ಶ್ರೇಷ್ಠವಾದ ಪರಮಪದವನ್ನು ಸೇರುವನು. ಅಲ್ಲಿಂದ ಮುಂದಕ್ಕೆ ಅವನಿಗೆ ಪುನರ್ಜನ್ಮಗಳೂ ಮರಣಗಳೂ ಇರುವುದಿಲ್ಲ. ಯಾವಾಗಲೂ ಶಾಶ್ವತವಾದ ಮತ್ತು ಆದಂದಮಯವಾದ ಪರಬ್ರಹ್ಮದಲ್ಲಿ ಐಕ್ಯನಾಗಿ ಸುಖದಿಂದಿರುವನು. ಆದರೆ, ಬ್ರಹ್ಮಜ್ಞಾನವಿಲ್ಲದ ಮೂಢನು ಮರಣಾನಂತರ ಪುನಃ ಜನ್ಮವನ್ನೂ ಪುನಃ ಮರಣವನ್ನೂ ಹೊಂದುತ್ತಾ ಸಂಸಾರಸಾಗರದಲ್ಲಿ ತೊಳಲುತ್ತಲಿರುವನು. ಮನುಷ್ಯರೇ ಮೊದಲಾದ ಪ್ರಾಣಿಗಳು ತಮ್ಮತಮ್ಮ ಕರ್ಮಗಳಿಗೂ, ಜ್ಞಾನಗಳಿಗೂ ಅನುಗುಣವಾಗಿ

ಎಂದರೆ ತಾವು ಈ ಜನ್ಮದಲ್ಲಿ ಮಾಡಿದ ಸುಕೃತದುಷ್ಕೃತಗಳ ಫಲರೂಪವಾಗಿ ಪ್ರಾಣಿಗಳೇ ಮೊದಲಾದ ನಾನಾ ಯೋನಿಗಳಲ್ಲಿ ಎಂದರೆ ಶರೀರಗಳಲ್ಲಿ ಜನ್ಮವನ್ನು ಹೊಂದುವವು. ಕೆಲವರು ಜಡರೂಪವನ್ನು ಹೊಂದುವರು. ಪ್ರಾಣಿಗಳು ನಿದ್ರೆಯಲ್ಲಿರುವಾಗಲೂ ಅವರ ಶರೀರಾಂತರ್ಗತನಾದ ಆತ್ಮನು ಯಾವಾಗಲೂ ಎಚ್ಚರವಾಗಿಯೇ ಇದ್ದು ಅವರವರ ಕಾಮುಗಳಿಗೆ ಅನುರೂಪವಾಗಿ ರೂಪಗಳನ್ನು (ಆಶೋತ್ತರಗಳನ್ನು) ನಿರ್ಮಿಸುತ್ತಿರುವನು. ಇವನೇ ಪವಿತ್ರನೂ, ಶುದ್ಧನೂ, ನಿತ್ಯನೂ, ಆದ ಬ್ರಹ್ಮನು. ಸಮಸ್ತ ಲೋಕಗಳೂ ಈ ಆತ್ಮನ (ಅಥವಾ ಬ್ರಹ್ಮನ) ಆಶ್ರಯದಿಂದಲೇ ಇರುವವು. ಯಾರೂ ಅದರಾಚೆಗೆ ಹೋಗಲಾರರು. ಎಂದರೆ ಬ್ರಹ್ಮವನ್ನು ಬಿಟ್ಟು ಬೇರೆ ವಸ್ತುವೇ ಇರುವುದಿಲ್ಲ. ಹಾಗಾದರೆ ಲೋಕವ್ಯವಹಾರದಲ್ಲಿ ಕೆಲವು ಪ್ರಾಣಿಗಳು ದೊಡ್ಡದಾಗಿಯೂ ಕೆಲವು ಚಿಕ್ಕದಾಗಿಯೂ, ಒಂದೊಂದು ಪ್ರಾಣಿಯ ಶರೀರವು ಒಂದೊಂದು ವಿಧವಾಗಿಯೂ ಇರುವುವಷ್ಟೆ. ಇವುಗಳಲ್ಲೆಲ್ಲಾ ಇರುವ ಆತ್ಮವೂ ನಾನಾವಿಧವಾಗಿ ಇರುವುದೇ ? ಹಾಗಿದ್ದರೆ ಆತ್ಮನಿಗೆ ನಾನಾತ್ವವನ್ನೂ ಭಿನ್ನತ್ವವನ್ನೂ ಹೇಳಬೇಕಾಗಿಲ್ಲವೇ ? ಎಂದರೆ, ಹಾಗಲ್ಲ. ಎಲ್ಲಾ ಪ್ರಾಣಿಗಳ ಶರೀರಗಳಲ್ಲಿರುವ ಆತ್ಮವೆಲ್ಲಾ ಒಂದೇ. ಅದು ಸಂದರ್ಭಾನುಸಾರವಾಗಿ, ಪ್ರಾಣಿಗಳ ಶರೀರಗಳಿಗನುಸಾರವಾಗಿ ಚಿಕ್ಕದಾಗಿಯೂ ದೊಡ್ಡದಾಗಿಯೂ ನಾನಾವಿಧವಾಗಿಯೂ ಇರುವ ಶರೀರಗಳಲ್ಲಿ ನೆಲಸಿದ್ದು ಆ ಪ್ರಾಣಿಗಳು ಮಾಡುವ ಕರ್ಮಾದಿಗಳಿಗೆ ಸಾಕ್ಷಿಭೂತವಾಗಿರುವುದು. ಒಂದು ಗೃಹದಲ್ಲಿ ಪ್ರವೇಶಿಸಿದ ಅಗ್ನಿಯು ಅಯಾ ವಸ್ತುಗಳಿಗನುರೂಪವಾದ (ಅಗ್ನಿಯು ಹೊತ್ತಿದಾಗ) ರೂಪಗಳನ್ನು ಧರಿಸುವಂತೆ ಸರ್ವಭೂತಗಳ ಅಂತರದಲ್ಲಿರುವ ಒಬ್ಬನೇ ಆತ್ಮನು ನಾನಾ ರೂಪಗಳನ್ನು ಧರಿಸಿ ವಸ್ತುಗಳ ಒಳಗೂ ಹೊರಗೂ ವ್ಯಾಪಿಸಿರುವನು. ಹಾಗೆಯೇ ಒಂದೇ ಆದ ವಾಯುವು ನಾನಾ ವಸ್ತುಗಳಲ್ಲಿ ಸೇರಿ ಆಯಾ ವಸ್ತುಗಳಿಗನುರೂಪವಾದ ರೂಪಗಳನ್ನು ಧರಿಸುವಂತೆ ಸರ್ವಭೂತಾಂತರಾತ್ಮನಾದ ಒಬ್ಬನೇ ಆತ್ಮನು ನಾನಾ ರೂಪಗಳನ್ನು ಧರಿಸಿ ಎಲ್ಲಾ ವಸ್ತುಗಳ ಒಳಗೂ ಹೊರಗೂ ವ್ಯಾಪಿಸಿರುವನು. ಮತ್ತು ಸಮುದ್ರದ ನೀರನ್ನು ನಾನಾ ಪಾತ್ರೆಗಳಲ್ಲಿ ತುಂಬಿಟ್ಟರೆ ಆ ನೀರು ಆಯಾ ಪಾತ್ರೆಗಳ ಆಕಾರ, ರೂಪ ಇವುಗಳಿಗನುಸಾರವಾಗಿ ನಾನಾ ರೂಪಗಳನ್ನು ಧರಿಸುವುದಷ್ಟೆ. ಅದರಂತೆ ಒಬ್ಬನೇ ಆದ ಆತ್ಮನು ನಾನಾವಿಧಪ್ರಾಣಿಗಳ ಶರೀರಗಳಲ್ಲಿ ಅವುಗಳ ಆಕಾರ, ರೂಪಗಳಿಗನುಸಾರವಾಗಿ ಒಳಗೂ ಹೊರಗೂ ವ್ಯಾಪಿಸಿರುವನು. ಹೀಗೆ ಪ್ರಾಣಿಗಳಲ್ಲಿರುವ ಆತ್ಮನಿಗೆ ಸುಖದುಃಖಗಳಿಲ್ಲವೇ ಎಂದರೆ, ಇಲ್ಲ. ಪ್ರಾಣಿಗಳ ಶರೀರಾದ್ಯವಯವಗಳಿಗೆ ಮಾತ್ರ ಸುಖದುಃಖಾದಿಗಳುಂಟು. ಅವುಗಳಲ್ಲಿ ಚೈತನ್ಯರೂಪದಿಂದಿರುವ ಆತ್ಮನಿಗೆ ಯಾವುದೂ ಇಲ್ಲ. ಅವನು ನಿರ್ಲಿಪ್ತನಾಗಿರುವನು. ಹೇಗೆಂದರೆ, ಸಮಸ್ತ ಲೋಕಗಳ ಕಣ್ಣಿನಂತಿರುವ ಸೂರ್ಯನು ಎಲ್ಲಾ ಕಡೆಯಲ್ಲಿಯೂ ಎಲ್ಲಾ ವಸ್ತುಗಳ ಮೇಲೆಯೂ ತನ್ನ ರಶ್ಮಿಗಳನ್ನು ಬೀರಿ ಪ್ರಕಾಶಿಸುತ್ತಿದ್ದರೂ ಆಯಾ ವಸ್ತುಗಳ ಸಂಪರ್ಕವು ಎಂದರೆ ಅವುಗಳ ಸುಖದುಃಖಾದಿಗಳು ಸೂರ್ಯನಿಗಿಲ್ಲದಿರುವಂತೆ, ಸರ್ವಭೂತಗಳಲ್ಲಿ ನೆಲಸಿರುವ ಒಬ್ಬನೇ ಆದ ಆತ್ಮನಿಗೆ ಆಯಾ ಭೂತಗಳ ಅಥವಾ ಪ್ರಾಣಿಗಳ ಸುಖದುಃಖಾದಿಗಳ ಸಂಪರ್ಕವಿರುವುದಿಲ್ಲ. ಲೋಕದ ದುಃಖದಿಂದ ಅವನು ನಿರ್ಲಿಪ್ತನಾಗಿರುವನು. ಅವನು ಲೋಕಬಾಹ್ಯನು. ಒಂದೇ ರೂಪವನ್ನು ನಾನಾರೂಪವಾಗಿ ಪ್ರಕಟಮಾಡುವ ಸರ್ವಭೂತಾಂತರಾತ್ಮನಾದ ಸರ್ವರಿಗೂ ಸ್ವಾಮಿಯಾದ ಆ ಆತ್ಮನನ್ನು (ಪರಮಾತ್ಮನನ್ನು) ಯಾವ ಬುದ್ಧಿವಂತರು ತಮ್ಮ ದೇಹಮಧ್ಯದಲ್ಲಿರುವ ಆತ್ಮನಲ್ಲಿ ನೋಡುವರೋ, ಎಂದರೆ ಸರ್ವಾಂತರ್ಯಾಮಿಯಾದ ಪರಮಾತ್ಮನೂ, ತನ್ನ ದೇಹದಲ್ಲಿ ಚೈತನ್ಯಸ್ವರೂಪದಿಂದ ನೆಲಸಿರುವ ಆತ್ಮನೂ ಒಬ್ಬನೇ ಎಂದು ಯಾರು ತಿಳಿಯುವರೋ ಅವರಿಗೆ ಅಕ್ಷಯವಾದ ಸುಖವು ದೊರೆಯುವುದು. ಇತರರಿಗೆ ಆ ಸುಖವು ದೊರೆಯಲಾರದು. ಇವು ವಸ್ತುಗಳೆಲ್ಲವೂ ಅನಿತ್ಯವು ಎಂದರೆ ಅಶಾಶ್ವತವು, ಕೆಲವು ಕಾಲವಿದ್ದು ನಾಶವನ್ನು ಹೊಂದುವವು. ಆದರೆ ಆತ್ಮನು ಹಾಗಲ್ಲ, ಅವನು ನಿತ್ಯನು. ಅವನಿಗೆ ಯಾವಃಗಲೂ

ನಾಶವೇ ಇಲ್ಲ. ಆದ್ದರಿಂದ ಅನಿತ್ಯ ವಸ್ತುಗಳಲ್ಲಿ ನಿತ್ಯನೂ, ಸರ್ವಚೇತನಗಳಲ್ಲಿದ್ದರೂ ಒಬ್ಬನೇ ಆದ ಚೈತನ್ಯನೂ, ಸಮಸ್ತಜನರ ಕಾಮನೆಗಳನ್ನು ಎಂದರೆ ಅಶೋತ್ತರಗಳನ್ನು ಪೂರೈಸುವವನೂ ಆದ ಪರಮಾತ್ಮನು ತಮ್ಮ ಆತ್ಮ ನಲ್ಲಿಯೇ ಇರುವನೆಂದು ಯಾವ ಬುದ್ಧಿವಂತರು ಅರಿಯುವರೋ ಅವರು ನಾಶರಹಿತವಾದ ಶಾಶ್ವತಸುಖವನ್ನನುಭವಿಸು ವರು. ಇತರರಿಗೆ ಆ ಶಾಶ್ವತಸುಖವಿಲ್ಲ. ಅನಿರ್ದೇಶ್ಯವಾದ ಎಂದರೆ ವರ್ಣಿಸಲಸಾಧ್ಯವಾದ ಪರಮಸುಖವು ಇದೇ ಎಂದು ಜನರು ತಿಳಿಯುವರು. ಆದನ್ನು ನಾನು ತಿಳಿದುಕೊಳ್ಳುವ ಬಗೆ ಹೇಗೆ ? ಅದು ಅನುಭವಕ್ಕೆ ಬರುವುದೋ ಇಲ್ಲವೋ ಯಾರು ಬಲ್ಲರು ? ಎಂದರೆ ಆ ಪರಮಪದವೆಂಬ ಶ್ರೇಷ್ಠಸ್ಥಾನದಲ್ಲಿ (ಮುಕ್ತಿಯಲ್ಲಿ ಅಥವಾ ನಿರ್ವಿಕಾರ ವಾದ ಆತ್ಮನಲ್ಲಿ) ಈ ಲೋಕದಲ್ಲಿರುವಂತೆ ಸೂರ್ಯನು ಪ್ರಕಾಶಿಸುವುದಿಲ್ಲ ಚಂದ್ರ, ನಕ್ಷತ್ರಾದಿಗಳ ಪ್ರಕಾಶವೂ ಅಲ್ಲಿರುವುದಿಲ್ಲ, ವಿದ್ಯುತ್ತು ಎಂದರೆ ಮಿಂಚಿನ ಪ್ರಕಾಶವೂ ಇರುವುದಿಲ್ಲ ಅಂದಮೇಲೆ ಅಗ್ನಿಯ ಪಾಡೇನು ? ಅಲ್ಲ ಅಗ್ನಿಯೂ ಇರುವುದಿಲ್ಲ. ಹಾಗಾದಲ್ಲಿ ಆ ಪರಮಪದದಲ್ಲಿ ಯಾವಾಗಲೂ ಗಾಢಾಂಧಕಾರವು ಆವರಿಸಿರುವುದೇ ? ಎಂದರೆ, ಹಾಗಲ್ಲ. ಆ ಆತ್ಮವು ಸ್ವಯಂಪ್ರಕಾಶಿಸುವ ಸ್ವಭಾವವುಳ್ಳದ್ದು. ಅಷ್ಟೇ ಅಲ್ಲ, ಅದು ಪ್ರಕಾಶಿಸಿದ ಮೇಲೆ ಅದರ ಪ್ರಕಾಶದಿಂದ ಎಲ್ಲವೂ ಪ್ರಕಾಶಿಸುವುದು. ಅದರ ಬೆಳಕಿನಿಂದ ಎಲ್ಲವೂ ಬೆಳಗುವುದು

ಪರಮಪದದ ವರ್ಣನೆಯನ್ನು ಬೇರೆ ವಿಧದಿಂದ ವರ್ಣಿಸಲಾಗುವುದು ಇದು ಎಂದರೆ ಜನನಮರಣ ಪ್ರವಾಹರೂಪವಾದ ಸಂಸಾರವೆಂಬುದೇ ಸನಾತನವಾದ ಅಶ್ವತ್ಥವೃಕ್ಷವು (ಅಶ್ವತ್ಥವೃಕ್ಷದಂತಿರುವುದು) ಇದರ ಬೇರು ಗಳು ಮೇಲೆ ಎಂದರೆ ಊರ್ಧ್ವಮುಖವಾಗಿ ಹರಡಿರುವವು. ಕೊಂಬೆಗಳು ಕೆಳಗೆ ಎಂದರೆ ಅಧೋಮುಖವಾಗಿ ಬೆಳೆದಿರು ವವು. ಆ ವೃಕ್ಷದ ಮೂಲವೇ (ಕಾರಣಭೂತವಾದುದೇ) ಶುದ್ಧವಸ್ತುವು, ಬ್ರಹ್ಮವು. ಎಂದರೆ ಶುದ್ಧವಸ್ತುವಾದ ಬ್ರಹ್ಮದಿಂದಲೇ ಈ ಸಂಸಾರವೂ ಬಾಹ್ಯಪ್ರಪಂಚವೂ ಆವಿರ್ಭವಿಸಿರುವುದು ಎಂದಭಿಪ್ರಾಯವು. ಈ ಶುದ್ಧಬ್ರಹ್ಮ ವನ್ನು ಅಮೃತವೆನ್ನುವರು (ಅಮೃತವೆಂದರೆ ನಾಶವಿಲ್ಲದ್ದು). ಸರ್ವಲೋಕಗಳೂ ಅದರ ಆಶ್ರಯದಿಂದಲೇ ಇರುವವು. ಅದರ ಆಚೆಗೆ ಯಾರೂ ಹೋಗಲಾರರು. ಈ ಬ್ರಹ್ಮವನ್ನು ಬಿಟ್ಟು ಬೇರೆ ವಸ್ತುವಿದ್ದರೆ ತಾನೇ ಅದನ್ನತಿಕ್ರಮಿಸಿ ಹೋಗುವ ಪ್ರಶ್ನೆ ಏಳುವುದು ? ಅದೇ ಅಂತಿಮಸ್ಥಾನವಾದ್ದರಿಂದ ಅದರ ಮುಂದಕ್ಕೆ ಅಥವಾ ಆಚೆಗೆ ಇನ್ನೇನೂ ಇಲ್ಲ.

ನಮ್ಮ ದೃಷ್ಟಿಗೆ ಗೋಚರವಾಗುವ ಈ ಸಕಲವಿಶ್ವವೂ ಪ್ರಾಣದಲ್ಲಿಯೇ ಎಂದರೆ ಪ್ರಾಣದಲ್ಲಿ ಚೈತನ್ಯರೂಪವೂ, ಸರ್ವವ್ಯಾಪಿಯೂ ಆದ ಬ್ರಹ್ಮದಲ್ಲಿಯೇ ಚಲಿಸುವುದು. ಎಂದರೆ ಈ ವಿಶ್ವದ ಉತ್ಪತ್ತಿಯೂ, ಲಯವೂ ಬ್ರಹ್ಮ ದಲ್ಲಿಯೇ ಆಗುವುದು. ವಿಶ್ವಕ್ಕೆ ಕಾರಣಭೂತವಾದ ಈ ಬ್ರಹ್ಮವು ಬಹಳ ದೊಡ್ಡದಾಗಿರುವುದು ಎಂದರೆ ಆದ್ಯಂತ ಗಳಿಲ್ಲದೆ ಅನಂತವಾಗಿರುವುದು ಈ ಅನಂತಸ್ವರೂಪವನ್ನು ಯೋಚಿಸುತ್ತಾ ಹೋದರೆ, ಅಬ್ಬಾ ! ಇದು ಎಷ್ಟು ದೊಡ್ಡದು ? ಈ ವಿಶ್ವವೂ ಇದರಲ್ಲಿರುವ ಪ್ರಾಣಿಗಳೂ ಎಷ್ಟು ಅಲ್ಪವು ಎಂಬ ಭಾವನೆಯು ಮೂಡಿ ಮನಸ್ಸಿಗೆ ಒಂದುವಿಧ ಭಯವನ್ನುಂಟುಮಾಡುವುದು. ಕೈಯಿಂದ ವಜ್ರಾಯುಧವನ್ನು ಹಿಡಿದು ಅದನ್ನು ಮೇಲಕ್ಕೆತ್ತಿ ಹೊಡೆಯುವು ದಕ್ಕೆ ಬಂದರೆ ಎಷ್ಟು ಭಯವಾಗುವುದೋ, ಈ ಅನಂತವಾದ ಬ್ರಹ್ಮದ ನಿಲುವನ್ನು ಯೋಚಿಸುವುದೂ ಅಷ್ಟೇ ಭಯಂ ಕರವಾದುದು. ಇದು ಮನುಷ್ಯನ ಬುದ್ಧಿಗೆ ನಿಲುಕುವುದಿಲ್ಲ. ಏಕೆಂದರೆ ಮನುಷ್ಯನ ಬುದ್ಧಿಗೆ ಒಂದು ಪರಿಮಿತಿಯುಂಟು. ಆದರೂ ಯೋಗಾದಿಸಾಧನೆಗಳಿಂದ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡ ತಪಸ್ವಿಗಳೂ ಜ್ಞಾನಿಗಳೂ ಇದನ್ನು ತಿಳಿದು ಅಮೃತರಾಗುವರು. ವಿಶ್ವದ ಉತ್ಪತ್ತಿಸ್ಥಿಲಯಗಳಿಗೆ ಕಾರಣಭೂತವಾದ ಈ ಪರಮಾತ್ಮ ಅಥವಾ ಬ್ರಹ್ಮದ ಭಯದಿಂದಲೇ (ಅಚ್ಛಿಯಿಂದಲೇ) ಅಗ್ನಿಯು ಸುಡುವುದು ಎಂದರೆ ಅಗ್ನಿಗೆ ಸುಡುವ ಶಕ್ತಿ ಇರುವುದು, ಸೂರ್ಯನು

ಬೆಳಗುವನು, ಇಂದ್ರನೂ, ವಾಯುವೂ, ಐದನೇಯವನಾದ ಯಮ ಅಥವಾ ಮೃತ್ಯುವೂ ಅವನ (ಬ್ರಹ್ಮದ) ಭಯದಿಂದಲೇ ತಮ್ಮತಮ್ಮ ಕರ್ತವ್ಯಗಳನ್ನು ಮಾಡುವರು.

ಈ ಶರೀರವು ಪತನವಾಗುವುದಕ್ಕೆ (ಮೃತವಾಗುವುದಕ್ಕೆ) ಮೊದಲೇ ಆತ್ಮಜ್ಞಾನವಾದರೆ ಒಳ್ಳೆಯದು ಇಲ್ಲದಿದ್ದರೆ ಸೃಷ್ಟಿಯಲ್ಲಿರುವ ಬೇರೆಬೇರೆ ಲೋಕಗಳಲ್ಲಿ ಜೀವನು ಜನ್ಮವೆತ್ತಬೇಕಾಗುವುದು. ಕನ್ನಡಿಯಲ್ಲಿ ತನ್ನ ಪ್ರತಿಬಿಂಬವು ಕಾಣಿಸುವಂತೆ ತನ್ನ ಆತ್ಮನಲ್ಲಿ ಸ್ಪಷ್ಟವಾಗಿ ಬ್ರಹ್ಮನದರ್ಶನವಾಗುವುದು. ಎಂದರೆ ಆತ್ಮಜ್ಞಾನಿಯಾದವನಿಗೆ ಬ್ರಹ್ಮ ಸಾಕ್ಷಾತ್ಕಾರವು ಕನ್ನಡಿಯಲ್ಲಿ ಮುಖವು ಕಾಣಿಸುವಂತೆ ಸ್ಪಷ್ಟವಾಗಿ ಕಾಣಿಸುವುದು. ಸ್ವಪ್ನದಲ್ಲಿ ಅಸ್ಪಷ್ಟವಾಗಿ ಕಾಣುವಂತೆ ಪಿತೃಲೋಕದಲ್ಲಿ ಅಸ್ಪಷ್ಟವಾಗಿ ಕಾಣಿಸುವುದು. ನೀರಿನಲ್ಲಿ ಪ್ರತಿಬಿಂಬವು ಅಸ್ಪಷ್ಟವಾಗಿ ಕಾಣಿಸುವಂತೆ ಗಂಧರ್ವಲೋಕದಲ್ಲಿಯೂ ಅಸ್ಪಷ್ಟವಾಗಿ ಕಾಣಿಸುವುದು. ಆದರೆ ಬೆಳಕು, (ಬಿಸಿಲು) ನೆರಳು ಸ್ಪಷ್ಟವಾಗಿ ಕಾಣಿಸುವಂತೆ ಬ್ರಹ್ಮಲೋಕದಲ್ಲಿ ಸ್ಪಷ್ಟವಾಗಿ ಬ್ರಹ್ಮದರ್ಶನವಾಗುವುದು.

ಬೇರೆಬೇರೆ ತನ್ಮಾತ್ರೆಗಳಿಂದ ಹುಟ್ಟುವ ಇಂದ್ರಿಯಗಳ ಭಿನ್ನಭಾವಗಳನ್ನೂ ಅವುಗಳ ಉತ್ಪತ್ತಿವಿನಾಶಗಳನ್ನೂ ಅರಿತುಕೊಳ್ಳುವ ಬುದ್ಧಿವಂತನು ಶೋಕರಹಿತನಾಗುವನು. ಎಂದರೆ ಪೃಥಿವ್ಯಾದಿಪಂಚಭೂತಗಳ ತನ್ಮಾತ್ರೆಗಳಿಂದ (ತನ್ಮಾತ್ರೆಯೆಂದರೆ ಸೂಕ್ಷ್ಮರೂಪ) ಉತ್ಪತ್ತಿಯಾದ ಚಕ್ಷುರಾದೀಂದ್ರಿಯಗಳು ತಮಗೆ ಉತ್ಪತ್ತಿಸ್ಥಾನವಾದ ಪಂಚಭೂತಗಳಲ್ಲಿಯೇ ಅಂತ್ಯದಲ್ಲಿ ಲಯ ಅಥವಾ ನಾಶವಾಗುವುವು. ಈ ಪಂಚಭೂತಗಳೂ ಇವುಗಳಿಂದ ಹುಟ್ಟುವ ಇಂದ್ರಿಯಾದಿಗಳೂ ಕೆಲವು ಕಾಲವಿದ್ದು ನಾಶವನ್ನೈದುವವು. ಆದರೆ ಆತ್ಮವಸ್ತುವಿಗೆ ಯಾವಾಗಲೂ ನಾಶವಿರುವುದಿಲ್ಲ ಎಂದು ತಿಳಿಯುವ ಪ್ರಜ್ಞಾನಿಗೆ ದುಃಖವೇ ಇರುವುದಿಲ್ಲ.

ಇಂದ್ರಿಯಗಳಿಗಿಂತಲೂ ಮನಸ್ಸು ಶ್ರೇಷ್ಠವಾದುದು ಅಥವಾ ಸೂಕ್ಷ್ಮವಾದುದು ಮನಸ್ಸಿಗಿಂತಲೂ ಶುದ್ಧ ಬುದ್ಧಿಯು ಹೆಚ್ಚಿನದು. ಬುದ್ಧಿಗಿಂತಲೂ ಶ್ರೇಷ್ಠವೂ ಸೂಕ್ಷ್ಮವೂ ಆದ ಮಹತತ್ತ್ವವಿರುವುದು ಅದರಾಚೆಗೆ ಎಂದರೆ ಅದಕ್ಕಿಂತಲೂ ಸೂಕ್ಷ್ಮವಾದ ಅವ್ಯಕ್ತವಿರುವುದು. ಅವ್ಯಕ್ತಕ್ಕಿಂತಲೂ ಪುರುಷನು (ಚಿತ್ ಅಥವಾ ಜ್ಞೈತನ್ಯ) ಶ್ರೇಷ್ಠನು. ಇವನೇ ಆತ್ಮನು. ಇವನು ಸರ್ವವ್ಯಾಪಕನು, ಸರ್ವಲಕ್ಷಣರಹಿತನು, ಸರ್ವಸಂಸಾರಧರ್ಮವರ್ಜಿತನು, ನಿರ್ಲಿಪ್ತನು. ಇಂತಹ ಆತ್ಮನನ್ನರಿತು ಪ್ರಾಣಿಯು ಮುಕ್ತನಾಗುವನು, ಅಮೃತತ್ವವನ್ನು ಪಡೆಯುವನು ಈ ಆತ್ಮನ ಸ್ವರೂಪವು ದೃಷ್ಟಿಗೆ (ಬಾಹ್ಯದೃಷ್ಟಿಗೆ) ಗೋಚರವಾಗುವುದಿಲ್ಲ. ಯಾರೂ ಅವನನ್ನು ಕಣ್ಣಿನಿಂದ ನೋಡಲು ಸಾಧ್ಯವಿಲ್ಲ. ಮನಸ್ಸಂಯಮವಿರುವ ಯೋಗಿಯ ಅಥವಾ ತಪಸ್ವಿಯ ಅಂತಃಕರದಲ್ಲಿ ಧ್ಯಾನದಿಂದ ಮಾತ್ರ ಅವನು ಗೋಚರನಾಗುವನು. ಈ ವಿಷಯವನ್ನು ತಿಳಿದವರೂ ಅಮೃತರಾಗುವರು.

ಯಾವನ ಪಂಚಜ್ಞಾನೇಂದ್ರಿಯಗಳೂ ಮನಸ್ಸೂ ಸ್ಥಿರವಾಗಿ ಬುದ್ಧಿಯು ನಿಶ್ಚಲವಾಗಿರುವುದೋ ಅವನಿಗೆ ಎಂದರೆ ವಿಷಯಾದಿ ಸುಖಗಳಲ್ಲಿ ತನ್ನ ಚಿತ್ತವೃತ್ತಿಗಳನ್ನು ಹೋಗಗೊಡಿಸದೆ ಮನಸ್ಥೈರ್ಯವನ್ನು ಪಡೆದಿರುವನೋ ಅಂತಹ ಪುರುಷನಿಗೆ ಪರಮಸ್ಥಿತಿಯು ಪ್ರಾಪ್ತವಾಯಿತೆನ್ನುವರು. ಈ ಸ್ಥಿರವಾದ ಇಂದ್ರಿಯಧಾರಣೆಯೇ ಯೋಗವೆಂದು ಹೇಳುವರು. ಯೋಗಿಯಾದವನು ಬಹಳ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಯೋಗಸ್ಥಿತಿಗೂ ಅನೇಕ ಪ್ರಮಾದಗಳು ಅಥವಾ ವಿಘ್ನಗಳಿರುವವು. ಅಪ್ರಮತ್ತನಾದವನಿಗೆ ಎಂದರೆ ಆಲಸ್ಯದಿಂದಿರುವವನಿಗೆ ಯೋಗವು ಸಿದ್ಧಿಸುವುದಿಲ್ಲ. ಆತ್ಮಜ್ಞಾನವು ವಾಕ್ಯಕ್ತಿಯಿಂದಾಗಲಿ (ಸಂಭಾಷಣಾದಿಗಳಿಂದ) ಮನಸ್ಸಿನಿಂದ ಯೋಚಿಸುವುದರಿಂದಾಗಲಿ, ಕಣ್ಣಿ

ಗಳಿಂದ ನೋಡುವುದರಿಂದಾಗಲಿ, ಪ್ರಾಪ್ತವಾಗುವಂತಹುದಲ್ಲ ಅದು (ಆತ್ಮವು) ಇದ್ದೇ ಇದೆ ಎಂಬ ದೃಢವಾದ ನಂಬಿಕೆಯುಳ್ಳವನಿಗೆ ಎಂದರೆ ಆಸ್ತಿಕ್ಯಬುದ್ಧಿಯುಳ್ಳವನಿಗೆ ಅಥವಾ ಶ್ರದ್ಧಾವಂತನಿಗೆ ಮಾತ್ರ ಲಭಿಸುವುದು. ಕಾರ್ಯಕಾರಣಗಳ ಸತ್ಯಜ್ಞಾನದಿಂದ ಅದನ್ನು ದೊರಕಿಸಿಕೊಳ್ಳಬೇಕು. ಅದು (ಆತ್ಮವು) ಇರುವುದೆಂಬ ಭಾವನೆಯು ಹುಟ್ಟಿತೆಂದರೆ ಸತ್ಯಜ್ಞಾನವು (ಬ್ರಹ್ಮಜ್ಞಾನವು) ಪ್ರಕಟವಾಗುವುದು ಎಂದರೆ ಮನಸ್ಸಿನಲ್ಲಿ ಆವಿರ್ಭವಿಸುವುದು. ಮನುಷ್ಯನ ಅಂತಃಕರಣದಲ್ಲಿರುವ ಎಲ್ಲ ಕಾಮನೆಗಳು ಎಂದರೆ ಸುಖಾದಿಗಳಲ್ಲಿ ಇಚ್ಛೆಯು ಅಳಿದುಹೋದರೆ ಅವನು ಅಮೃತನಾಗುವನು ಎಂದರೆ ಜೀವನ್ಮುಕ್ತನಾಗಿ ಬ್ರಹ್ಮಾನಂದವನ್ನು ಇಲ್ಲಿಯೇ ಅನುಭವಿಸುವನು. ಅಂತಃಕರಣದಲ್ಲಿ (ಮನಸ್ಸಿನಲ್ಲಿ) ಮನೆಮಾಡಿಕೊಂಡಿರುವ ಮಿಥ್ಯಾಬಂಧನಗಳು ನಷ್ಟವಾದವೆಂದರೆ ಆಗ ಮರ್ತ್ಯನಾದ ಮನುಷ್ಯನು ಅಮೃತನಾಗುವನು. ಎಂದರೆ ಶಾಶ್ವತವಾದ ಪರಮಪದವೆಂಬ ಮುಕ್ತಿಯನ್ನು ಪಡೆಯುವನು.

ಮನುಷ್ಯನ ಹೃದಯದಲ್ಲಿ ದೃಢವಾಗಿ ನೆಲೆಸಿರುವ ಅಜ್ಞಾನವೆಂಬ ಬಂಧನಗಳು ನಾಶವಾದೊಡನೆಯೇ ಮರ್ತ್ಯನಾಗಿದ್ದ ಮನುಷ್ಯನು ಅಮೃತನಾಗುವನು. ಹೃದಯದಲ್ಲಿ ನೂರ ಒಂದು ನಾಡಿಗಳಿರುವವು. ಅವುಗಳಲ್ಲಿ ಸುಷುಮ್ನಾ ಎಂಬ ಒಂದು ನಾಡಿಯು ಶಿರಸ್ಸಿನ ತುದಿಯಲ್ಲಿ ಬ್ರಹ್ಮರಂಧ್ರದವರೆಗೂ ಹೋಗಿರುವುದು. ಆ ನಾಡಿಯಲ್ಲಿ ಪ್ರಾಣವಾಯುವನ್ನು ಚಲಿಸುವಂತೆ ಮಾಡಿ ಬ್ರಹ್ಮರಂಧ್ರದ ಮೂಲಕ ಪ್ರಾಣವು ಹೊರಟುಹೋದರೆ ಆ ಮನುಷ್ಯನು ಅಮೃತತ್ವವನ್ನು ಪಡೆಯುವನು. ಇತರ ನಾಡಿಗಳ ಮೂಲಕ ಪ್ರಾಣವು ಹೋದರೆ ಅವನಿಗೆ ಮುಂದೆ ನ ನಾವಿಧ ಜನ್ಮಗಳು ಪ್ರಾಪ್ತವಾಗುವವು.

ಅಂಗುಷ್ಠಪರಿಮಾಣವುಳ್ಳ ಪುರುಷನು ಎಂದರೆ ಅಂತರಾತ್ಮನು ಯಾವಾಗಲೂ ಜನರ ಹೃದಯದಲ್ಲಿ ವಾಸಿಸುತ್ತಿರುವನು. ಆ ಅಂತರಾತ್ಮನನ್ನು ನೋಡಬೇಕಾದರೆ, ಸಿಪ್ಪೆಯನ್ನು ಸುಲಿದು ಒಳಗಿರುವ ವಸ್ತುವನ್ನು ತೆಗೆಯುವಂತೆ ಧೈರ್ಯದಿಂದ ಎಂದರೆ ಆತ್ಮಜ್ಞಾನದಿಂದ ಬೇರ್ಪಡಿಸಬೇಕು. ಆದೇ ದಿವ್ಯತೇಜಸ್ಸಿನಿಂದ ಬೆಳಗುತ್ತಿರುವ ಅಮೃತವಸ್ತುವು.

ಮೃತ್ಯುವು ಅಥವಾ ಯಮನು ಉಪದೇಶಿಸಿದ ಈ ಬ್ರಹ್ಮವಿದ್ಯೆಯನ್ನರಿತುಕೊಂಡು, ಅವನು ಕಲಿಸಿದ ಸಂಪೂರ್ಣ ಯೋಗವಿಧಾನವನ್ನು ತಿಳಿದುಕೊಂಡು ನಚಿಕೇತನು ಬ್ರಹ್ಮಪದವನ್ನು ಪಡೆದನು. ಅವನು ಪಾಪರಹಿತನೂ ಅಮೃತನೂ ಆದನು. ಇದರಲ್ಲಿ ಹೇಳಿರುವ ಈ ಅಧ್ಯಾತ್ಮಜ್ಞಾನವನ್ನು ತಿಳಿದುಕೊಳ್ಳುವ ಇತರ ಜನರೂ ಸಹ ನಚಿಕೇತನಂತೆ ಶಾಶ್ವತವಾದ ಮುಕ್ತಿಯನ್ನು ಪಡೆಯುವರು.

ಇಲ್ಲಿಗೆ ಕಠೋಪನಿಷತ್ತಿನ ಸೂಕ್ಷ್ಮವಿವರಣೆ ಸಮಾಪ್ತವು

ಇಸಾಯಣಭಾಷ್ಯಂ

ಪರಂ ಮೃತ್ಯೋ ಇತಿ ಚತುರ್ದಶರ್ಚಂ ದ್ವಿತೀಯಂ ಸೂಕ್ತಂ । ಯಮಪುತ್ರಸ್ಯ ಸಂಕುಸುಕಸ್ಯಾರ್ಷಂ । ವಿಕಾದಶೀ ಪ್ರಸ್ತಾರಪಂಕ್ತಿಃ । ಆದ್ಯೌ ಜಾಗತೌ ತತೋ ದ್ವೌ ಗಾಯತ್ರೌ । ಪ್ರಸ್ತಾರಪಂಕ್ತಿಃ ಪುರತಃ । ಪಿ ೩-೪೦ । ಇತಿ । ತ್ರಯೋದಶೀ ಜಗತೀ ಚತುರ್ದಶ್ಯನುಷ್ಟುಪ್ । ತಿಷ್ಠಾಸ್ತ್ರಿಷ್ಟುಭಃ । ತತ್ರಾದೌ ಚತಸ್ರೋ ಮೃತ್ಯುದೇವತ್ಯಾಃ । ಪಂಚಮೀ ಧಾತೃದೇವತಾಕಾ । ಷಷ್ಠೀ ತ್ವಷ್ಟೃದೇವತ್ಯಾ । ಸಪ್ತಮ್ಯಾದ್ಯಾಃ ತಿಸ್ರಾಃ ಪಿತೃಮೇಧಾಭಿಧಾಯಿನ್ಯಃ । ಅತಸ್ತದ್ದೇವತಾಕಾಃ । ಅಂತ್ಯಾ ತ್ವನಿರುಕ್ತತ್ವಾ-

ತ್ಯಾಜಾಪತ್ಯಾ ವಾ । ತಥಾ ಚಾನುಕ್ರಾಂತಂ । ಪರಂ ಮೃತ್ಯೋ ಸಂಕುಸುಕಶ್ಚತಸ್ರೋ ಮೃತ್ಯುದೇವತಾಃ ಪರಾ ಧಾತ್ರೀ ಪರಾ ತ್ವಾಷ್ಟ್ರೀ ಪರಾಃ ಪಿತೃಮೇಧಾ ಏಕಾದಶೀ ಪ್ರಸ್ತಾರಪಂಕ್ತಿರ್ಜಗತ್ಯನುಷ್ಟುಪಾಂತ್ಯಾಂತ್ಯಾ-ನುಷ್ಟುಪ್ ಪ್ರಾಜಾಪತ್ಯಾ ವಾ ಸಾನಿರುಕ್ತೇತಿ ॥

ಅನುವಾದವು— ಪರಂ ಮೃತ್ಯೋ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಯಮನ ಪುತ್ರನಾದ ಸಂಕುಸುಕನೆಂಬುವನು ಋಷಿಯು. ಈ ಸೂಕ್ತದ ಹನ್ನೊಂದನೆಯ ಋಕ್ಕು ಪ್ರಸ್ತಾರಪಂಕ್ತಿಚ್ಛಂದಸ್ಕವು; ಮೊದಲಿನ ಎರಡು ಋಕ್ಕುಗಳು ಜಗತೀ ಛಂದಸ್ಕವು, ಅಲ್ಲಿಂದ ಮುಂದಿನ ಎರಡು ಋಕ್ಕುಗಳು (೩-೪ ಋಕ್ಕುಗಳು) ಗಾಯತ್ರೀಛಂದಸ್ಕವು, ಹದಿಮೂರನೆಯ ಋಕ್ಕು ಜಗತೀಛಂದಸ್ಕವು, ಹದಿನಾಲ್ಕನೆಯ ಋಕ್ಕು ಅನುಷ್ಟುಪ್ ಛಂದಸ್ಕವು; ಉಳಿದ ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು. ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳಿಗೆ ಮೃತ್ಯುವು ದೇವತೆಯು, ಐದನೆಯ ಋಕ್ಕಿಗೆ ಧಾತೃವು ದೇವತೆಯು; ಆರನೆಯ ಋಕ್ಕಿಗೆ ತ್ವಷ್ಟೃವು ದೇವತೆಯು; ಏಳನೆಯ ಋಕ್ಕಿನಿಂದ ಮುಂದಿನ ಋಕ್ಕುಗಳೆಲ್ಲಾ ಪಿತೃಮೇಧಾಭಿಧಾಯಿನೀ ಎಂಬ ಅಪರಕರ್ಮದಲ್ಲಿ ಉಪಯೋಗಿಸುವ ಋಕ್ಕುಗಳು. ಆದ್ದರಿಂದ ಆ ಋಕ್ಕುಗಳಿಗೆ ಪಿತೃಮೊದಲಾದವರೇ ದೇವತೆಯು, ಕೊನೆಯ ಋಕ್ಕಿಗೆ ಯಾವ ದೇವತೆಯೆಂದು ನಿರ್ದೇಶಿಸಿಲ್ಲವಾದ್ದರಿಂದ ಪ್ರಜಾಪತಿಯೇ ದೇವತೆಯಾಗಬಹುದು. ಅನುಕ್ರಮಣಿಕೆಯಲ್ಲಿ— ಪರಂ ಮೃತ್ಯೋ ಸಂಕುಸುಕಶ್ಚತಸ್ರೋ ಮೃತ್ಯುದೇವತಾಃ ಪರಾ ಧಾತ್ರೀ ಪರಾ ತ್ವಾಷ್ಟ್ರೀ ಪರಾಃ ಪಿತೃಮೇಧಾ ಏಕಾದಶೀ ಪ್ರಸ್ತಾರಪಂಕ್ತಿರ್ಜಗತ್ಯನುಷ್ಟುಪ್ ಪ್ರಾಜಾಪತ್ಯಾ ವಾ ಸಾನಿರುಕ್ತಾ ಎಂದು ಹೇಳಿರುವುದು.

ಸೂಕ್ತ—೧೪

ಮಂಡಲ—೧೦ ॥ ಅನುವಾಕ—೨॥ ಸೂಕ್ತ—೧೪ ॥
ಅಷ್ಟಕ—೭ ॥ ಅಧ್ಯಾಯ—೬ ॥ ವರ್ಗ—೨೬, ೨೭, ೨೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥
ಋಷಿಃ—ಸಂಕುಸುಕೋ ಯಾಮಾಯನಃ ॥
ದೇವತಾ—೧-೪. ಮೃತ್ಯುಃ । ೫. ಧಾತಾ । ೬. ತ್ವಷ್ಟಾ । ೭-೧೩. ಪಿತೃಮೇಧಃ । ೧೪. ಪಿತೃಮೇಧಃ ಪ್ರಜಾಪತಿರ್ವಾ ॥
ಛಂದಃ—೧-೧೦,೧೨. ತ್ರಿಷ್ಟುಪ್ । ೧೧. ಪ್ರಸ್ತಾರಪಂಕ್ತಿಃ । ೧೩. ಜಗತೀ । ೧೪. ಅನುಷ್ಟುಪ್ ।

। ಸಂಹಿತಾಪಾಠಃ ।

ಪರಂ ಮೃತ್ಯೋ ಅನು ಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್ ।
ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾ ನಃ ಪ್ರಜಾಂ ರೀರಿಷೋ ಮೋತ ವೀರಾನ್ ॥ ೧ ॥

॥ पदपाठः ॥

पर॑म् । मृत्यो॒ इति॑ । अनु॑ । पर॑ । इ॒हि॒ । पन्था॑म् । यः । ते॒ । स्वः । इत॑रः । देव॑ऽयानात् ।
चक्षु॑ष्मते । शृ॒ण्वते॒ । ते॒ । ब्रवी॑मि । मा । नः॒ । प्र॒ऽजाम् । रीरिषः । मा । उत । वी॒रान् ॥ १ ॥

॥ सायणभाष्यं ॥

हे मृत्यो सर्वेषां मारकैतन्नामक देव परमुन्यं पन्थां पन्थानमनुन्या-नुपूर्व्येण परेहि । परागभ्युद्यतो गच्छ । यजमानानादिति शेषः । कोऽसौ पन्थाः । ते तव स्वः स्वभूतः देवयानात् । देवा अनेन मार्गेण गच्छन्तीति देवयानो देवमार्गः । तस्मादितरो यः पन्थास्तं प्रगच्छ । न केवलमयतः परागच्छ अपि तु चक्षुष्मते दर्शनवते शृण्वते सर्वम् । अप्रतिहतसर्वेन्द्रियविज्ञानायेत्यर्थः । ते तुभ्यं ब्रवीमि कथयामि । नोऽस्माकं प्रजां दुहितृदौहित्रात्मिकां मा रिरिषः । मा हिंसीः । उतापि च वीरान्पुत्रपौत्रादीन्मा हिंसीः । तत्परागमनेन रक्षेत्यर्थः ॥

॥ प्रतिपदार्थ ॥

मृत्यो—एलै मृत्युवे । परं पन्थां अनु—बेरे दारियन्नु हिडिदु । परेहि—परान्मुखनागि होगु । ते—निन्न । स्वः—स्वंतवादुदू । देवयानात्—देवतेगळ संचार मार्गक्किंतलू । इतरः—बेरेयादुदू आद । यः—यावा मार्गविदेयो आदन्नु अनुसरिसु. चक्षुष्मते—चक्षुस्सुळ्ळवनू। शृण्वते—किवियुळ्ळवनू आद । ते—निनगे । ब्रवीमि—हेळुत्तीनि. नः—नम्म । प्रजां—पुत्रादिगळन्नु । मा रिरिषः—हिंसिसबेड. उत—मत्तु । वीरान्—वीरपुत्रादिगळन्नु । मा—हिंसिसबेड.

॥ भावार्थ ॥

एलै मृत्युवे, बेरे दारियन्नु हिडिदु परान्मुखनागु. देवतेगळ मार्गक्किंतलू बेरेयाद निन्न स्वंत मार्गवन्ननुसरिसि होगु. चक्षुस्सुळ्ळवनू, किवियुळ्ळवनू आद निन्नन्नु प्रार्थिसुत्तीनि. नम्म पुत्रादिगळन्नु हिंसिसबेड. मत्तु वीरपुत्रादिगळन्नु हिंसिसबेड.

English Translation

Depart, Mrityu, by a different path: by that which is your own, and distinct from the path of the gods; I speak to you who have eyes, who have ears: do no harm to our offspring, nor to our male progeny.

॥ ವಿಶೇಷವಿಷಯಗಳು ॥

ಮೃತ್ಯುಶಬ್ದದ ಅರ್ಥವಿವರಣೆಮಾಡುತ್ತಾ ಯಾಸ್ಕರು ಈ ರೀತಿ ಹೇಳಿದ್ದಾರೆ—

ಮೃತ್ಯುಃ । ಮೃತ್ಯುರ್ಮಾರಯತೀತಿ ಸತಃ । ಮೃತಂ ಚ್ಯಾವಯತೀತಿ ವಾ ಶತಬಲಾಕ್ಷೋ ಮೌದ್ಗಲ್ಯಃ ॥ ತಸ್ಯೈಷಾ ಭವತಿ ॥

(ನಿ. ೧೧-೬)

ಪ್ರಾಣಿಗಳನ್ನು ಕೊಲ್ಲುವವನಾದ್ದರಿಂದ ಇವನಿಗೆ ಮೃತ್ಯುವೆಂದು ಹೆಸರು. ಅಥವಾ ಮೃತನಾದವನನ್ನು ಎಂದರೆ ಆತ್ಮವನ್ನು ಆ ಸ್ಥಳದಿಂದ ಪರಲೋಕಕ್ಕೆ ಸಾಗಿಸುವವನಾದ್ದರಿಂದ ಇವನಿಗೆ ಮೃತ್ಯುವೆಂದು ಹೆಸರು ಎಂದು ಮುದ್ಗಲ ಪುತ್ರನಾದ ಶತಬಲಾಕ್ಷನೆಂಬ ಋಷಿಯ ಅಭಿಪ್ರಾಯವು. ಈ ಶಬ್ದಯೋಗವಿರುವ ಋಕ್ಕನ್ನು ಇಲ್ಲಿ ಉದಾಹರಿಸಲಾಗಿದೆ—

ಪರಂ ಮೃತ್ಯೋ ಅನು ಪರೇಹಿ ಪಂಥಾಂ ಯಸ್ತೇ ಸ್ವ ಇತರೋ ದೇವಯಾನಾತ್ ।
ಚಕ್ಷುಷ್ಮತೇ ಶೃಣ್ವತೇ ತೇ ಬ್ರವೀಮಿ ಮಾ ನಃ ಪ್ರಜಾಂ ರೀರಿಷೋ ಮೋತ ವೀರಾನ್ ॥

ಪರಂ ಮೃತ್ಯೋ ಧ್ರುವಂ ಮೃತ್ಯೋ ಧ್ರುವಂ ಪರೇಹಿ ಮೃತ್ಯೋ ಕಥಿತಂ ತೇನ ಮೃತ್ಯೋ ಮೃತಂ ಚ್ಯಾವಯತೇ ಭವತಿ ಮೃತ್ಯೋ ಮದೇವಾ ಮುದೇವಾ ॥

(ನಿ. ೧೧-೭)

ಎಲೈ ಮೃತ್ಯುವೇ, ನೀನು ನಿಶ್ಚಯವಾಗಿಯೂ ಇಲ್ಲಿಂದ ಹೊರಡು, ಎಲೈ ಮೃತ್ಯುವೇ ಹೊರಡು, ಹೊರಡು. ಎಲೈ ಮೃತ್ಯುವೇ, ಯಾವ ಪುರುಷನನ್ನು ಮರಣಕ್ಕೆ ಈಡುಮಾಡಿದೆಯೋ ಆ ಪುರುಷನು ನಿನಗೇ ಸೇರಿದವನು. ಅವನನ್ನು ನೀನು ತೆಗೆದುಕೊಂಡು ನಿನ್ನದೇ ಆದ ಪಿತೃಯಾಣಮಾರ್ಗದಿಂದ ಹೊರಡು. ಇತರರು ದೇವಯಾನಮಾರ್ಗದಿಂದ ಪರಲೋಕಕ್ಕೆ ಹೋಗುವರು. ಎಲೈ ಮೃತ್ಯುದೇವನೇ, ನೋಡುವುದಕ್ಕೆ ನಿನಗೆ ಕಣ್ಣುಗಳಿವೆ, ಕೇಳುವುದಕ್ಕೆ ಕಿವಿಗಳಿವೆ. ಇಂತಹ ನಿನಗೆ ನಾನು ಹೇಳುವುದೇನೆಂದರೆ—ನಮ್ಮ ಸಂತತಿಯವರನ್ನು ಎಂದರೆ ಪುತ್ರಾದಿಗಳನ್ನು ಹಿಂಸಿಸಬೇಡ, ಮತ್ತು ವೀರರಾದ ನಮ್ಮ ಜನರನ್ನೂ ಹಿಂಸಿಸಬೇಡ. ಮೃತುಶಬ್ದವು ಮದ್ ಧಾತುವಿನಿಂದಾಗಲಿ, ಮುದ್ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು ಎಂದು ನಿರ್ವಚನಾಭಿಪ್ರಾಯವು.

ಈ ಋಕ್ಕಿನಲ್ಲಿ ಋಷಿಯು ಮೃತ್ಯುದೇವತೆಯನ್ನು ಸ್ತುತಿಸಿದಾನೆ. ಮೃತ್ಯುವೆಂದರೆ ಸಮಸ್ತಪ್ರಾಣಿಗಳನ್ನೂ ಸಂಹರಿಸುವವನು, ಕೊಲ್ಲುವವನು ಎಂದರ್ಥವು. ಮನುಷ್ಯರಿಗೂ ಇತರ ಪ್ರಾಣಿಗಳಿಗೂ ಅವರಿಗೆ ಕ್ಲಪ್ತವಾದ ಆಯುಃ ಪರಿಮಿತಿಯು ಮುಗಿದೊಡನೆಯೇ ರೋಗರುಜಿನಗಳು, ಅಪಘಾತಗಳು, ಮೊದಲಾದ ನಾನಾ ಕಾರಣಗಳಿಂದ ಅವರು ಮೃತರಾಗುವಂತೆ ಮಾಡುವನು. ಮೃತರಾದವರ ಪ್ರೇತಗಳು ಮೃತ್ಯುಲೋಕವನ್ನು ಹೋಗಿ ಸೇರುವುದಕ್ಕೇ ಪ್ರತ್ಯೇಕವಾದ ಮಾರ್ಗವಿದೆಯೆಂಬ ಅಂಶವನ್ನೂ ಋಷಿಯು ಇಲ್ಲಿ ಸೂಚಿಸಿದಾನೆ. ದೇವತೆಗಳು ಸಂಚಾರಮಾಡುವ ಮಾರ್ಗಕ್ಕೆ ದೇವಯಾನವೆಂದು ಹೆಸರು. ಈ ದೇವಯಾನವಲ್ಲದ ಬೇರೆ ಮಾರ್ಗವೆಂದರೆ ಪಿತೃಯಾನವು. ಪಿತೃಗಳು ಪರಲೋಕಕ್ಕೆ ಹೋಗುವ ಮಾರ್ಗವು. ಈ ಮಾರ್ಗವು ಮೃತ್ಯು (ಯಮನ) ವಿನ ಸ್ವಂತ ಮಾರ್ಗವೆಂದು ಋಷಿಯು ವರ್ಣಿಸಿದಾನೆ. ಏಕೆಂದರೆ ಈ ಮಾರ್ಗದಿಂದಲೇ ಪಿತೃಗಳೂ, ಮೃತರಾದವರ ಪ್ರೇತಗಳೂ

ಮೃತ್ಯುಲೋಕಕ್ಕೆ ಹೋಗಿ ಸೇರುವುದರಿಂದ ಇದು ಮೃತ್ಯುವಿನ ಸ್ವಂತಮಾರ್ಗವೆಂದು ಋಷಿಯು ಕರೆದಿದಾನೆ. ಇಂತಹ ಮಾರ್ಗದಿಂದಲೇ ನೀನು ಹೊರಡು, ನಮ್ಮನ್ನೂ ನಮಗೆ ಸೇರಿದ ಪುತ್ರ ಪೌತ್ರ ದುಹಿತೃ ದೌಹಿತ್ರಾದಿ ಬಂಧುವರ್ಗದವರನ್ನೂ ವೀರರಾದ ಭಟರನ್ನೂ ಹಿಂಸಿಸಬೇಡ ಎಂಬ ಪ್ರಾರ್ಥನೆಯೂ ಇಲ್ಲಿ ಉಕ್ತವಾಗಿದೆ. ಈ ಋಕ್ಕಿನಲ್ಲಿರುವ **ಚಕ್ಷುಷ್ಮತೇ ಶೃಣ್ವತೇ** ಎಂಬ ಶಬ್ದಗಳಿಗೆ ಭಾಷ್ಯಕಾರರು **ಅಪ್ರತಿಹತಸರ್ವೇಂದ್ರಿಯವಿಜ್ಞಾನಾಯ।** ಈ ಮೃತ್ಯುವಿನ ಕಣ್ಣು, ಕಿವಿ ಮೊದಲಾದ ಸರ್ವೇಂದ್ರಿಯಗಳಿಗೆ ಯಾರಿಂದಲೂ ತಡೆಯಲಾಗದ ಶಕ್ತಿಸಾಮರ್ಥ್ಯಗಳಿರುವವು ಎಂದರ್ಥವನ್ನು ವಿವರಿಸಿದಾರೆ. ಅದರಲ್ಲಿಯೂ **ಚಕ್ಷುಷ್ಮತೇ ಶೃಣ್ವತೇ** ಎಂಬ ಶಬ್ದಗಳ ಪ್ರಯೋಗವು ಒಂದು ವಿಧವಾದ ಗೂಢಾರ್ಥವನ್ನು ಸೂಚಿಸುವುದಾಗಿದೆ. ಲೋಕದಲ್ಲಿ ಯಾವ ಸ್ಥಳದಲ್ಲಿಯೇ ಆಗಲಿ ಯಾವ ಪ್ರಾಣಿಯು ಮೃತವಾದರೂ ಆ ವಿಷಯವನ್ನು ಮೃತ್ಯುವು ತಕ್ಷಣವೇ ನೋಡುವನು, ತಕ್ಷಣವೇ ಅದನ್ನು ತನ್ನ ಚಾರರ ಮೂಲಕ ಕೇಳಿ ತಿಳಿಯುವನು: ಎಂದರೆ ಮೃತರಾದವರ ವಿಷಯವು ತಕ್ಷಣವೇ ಇವನಿಗೆ ತಿಳಿಯುವುದು ಎಂಬರ್ಥವು ಈ ಶಬ್ದ ಪ್ರಯೋಗದಿಂದ ವಿವೃತವಾಗಿದೆಯೆಂದು ತಿಳಿಯಬೇಕು.

ಸಂಹಿತಾಪಾಠಃ

ಮೃತ್ಯೋಃ ಪದಂ ಯೋಪಯಂತೋ ಯದೈತ ದ್ರಾಘೀಯ ಆಯುಃ
ಪ್ರತರಂ ದಧಾನಾಃ ।
ಆಪ್ಯಾಯಮಾನಾಃ ಪ್ರಜಯಾ ಧನೇನ ಶುದ್ಧಾಃ ಪೂತಾ ಭವತ ಯಜ್ಞಿಯಾಸಃ ॥ ೨ ॥

॥ ಪದಪಾಠಃ ॥

ಮೃತ್ಯೋಃ । ಪದಂ । ಯೋಪಯಂತಃ । ಯತ್ । ಐತ । ದ್ರಾಘೀಯಃ । ಆಯುಃ । ಪ್ರತರಂ ।
ದಧಾನಾಃ ।
ಆಪ್ಯಾಯಮಾನಾಃ । ಪ್ರಜಯಾ । ಧನೇನ । ಶುದ್ಧಾಃ । ಪೂತಾಃ । ಭವತ । ಯಜ್ಞಿಯಾಸಃ ॥ ೨ ॥

। ಸಾಯಣಭಾಷ್ಯಂ ।

ಹೇ ಮೃತಸ್ಯ ಜ್ಞಾತಯಃ ಮೃತ್ಯೋಃ ಪರಾಗಚ್ಛತಸ್ತಸ್ಯ ಪದಂ ಪದ್ಯತೇಽಸ್ಮಿನ್ನಿತಿ ಪದಂ ಪಿತೃಯಾಣಃ । ತಂ ಯೋಪಯಂತೋ ವಿಮೋಹಯಂತಃ ಪರಿವರ್ಜಯಂತೋ ಯದ್ಯಸ್ಮಾದ್ಯೂಯಂ ದೇವಯಾನೀಯಪಥಾ ಗತವಂತಃ ತಸ್ಮಾದ್ರಾಘೀಯೋ ದೀರ್ಘತರಮಾಯುರ್ಜೀವನಂ ಪ್ರತರಂ ಪ್ರಕೃಷ್ಟತರಮುತ್ಕರ್ಷಂ ದಧಾನಾ ಧಾರಯಂತೋ ಭವಥ । ಕಿಂಚ ಹೇ ಯಜ್ಞಿಯಾಸೋ ಯಜ್ಞಾರ್ಹಾ ಯಜ್ಞಸಂಪಾದಿನೋ ಯಜಮಾನಾಃ ಪ್ರಜಯಾ ಪುತ್ರಪೌತ್ರಾದಿಕಯಾ ಧನೇನ ಗವಾಶ್ವಾದಿಕೇನ

ಜಾಪ್ಯಾಯಮಾನಾ ವರ್ಧಮಾನಾಃ ಸುಪ್ರಜಸಃ ಶುದ್ಧಾ ಜನ್ಮಾಂತರಸಂಚಿತದುರಿತಕ್ಷಯಾಚ್ಛುದ್ಧಾ ಭವತ । ಪೂತಾ ವರ್ತಮಾನಜನ್ಮೋಪಚಿತದುರಿತಕ್ಷಯಾಚ್ಚ ಪೂತಾ ಭವತ ॥

। ಪ್ರತಿಪದಾರ್ಥ ।

(ಎಲೈ ಮೃತನ ಸಂಬಂಧಿಗಳೇ) **ಮೃತ್ಯೋಃ**—ಮೃತ್ಯುವಿನ । **ಪದಂ**—ಸ್ಥಾನವನ್ನು । **ಯೋಪ.ಯಂತಃ**—ಪರಿತ್ಯಜಿಸಿ । **ಯತ್ ಯಸ್ಮಾತ್ ಏತ**—ಯಾವ ದೇವಯಾನಮಾರ್ಗದಿಂದಲೇ ಸಂಚರಿಸುವಿರೋ ಅದರ ಫಲವಾಗಿ । **ದ್ರಾಘೀಯಃ**—ದೀರ್ಘವಾದ । **ಆಯುಃ**—ಆಯುಸ್ಸನ್ನು । **ಪ್ರತರಂ**—ಅತ್ಯುತ್ಕೃಷ್ಟವಾಗಿ । **ದಧಾನಾಃ**—ಹೊಂದಿದವರಾಗುತ್ತೀರಿ । **ಯಜ್ಞಿಯಾಸಃ**—ಎಲೈ ಯಜ್ಞಕರ್ತರಾದ ಯಜಮಾನರೇ । **ಪ್ರಜ.ಯಾ**—ಪ್ರಜೆಗಳಿಂದಲೂ । **ಧನೇನ**—ಧನದಿಂದಲೂ ಕೂಡಿ । **ಆಪ್ಯಾಯಮಾನಾಃ**—ವೃದ್ಧಿಯನ್ನು ಹೊಂದಿದವರಾಗಿಯೂ । **ಶುದ್ಧಾಃ**—ಪಾಪರಹಿತರಾಗಿಯೂ । **ಪೂತಾಃ**—ನಿಷ್ಕಲ್ಮಷರಾಗಿಯೂ । **ಭವತ**—ಆಗುತ್ತೀರಿ.

।। ಭಾವಾರ್ಥ ।।

ಎಲೈ ಮೃತನ ಸಂಬಂಧಿಗಳೇ, ಮೃತ್ಯುವಿನ ಸ್ಥಾನವನ್ನು ನೀವು ಪರಿತ್ಯಜಿಸಿ ಯಾವ ದೇವಯಾನಮಾರ್ಗದಿಂದಲೇ ಸಂಚರಿಸುವಿರೋ ಅದರ ಫಲವಾಗಿ ದೀರ್ಘವಾದ ಆಯುಸ್ಸನ್ನು ಅತ್ಯುತ್ಕೃಷ್ಟವಾಗಿ ಹೊಂದಿದವರಾಗುತ್ತೀರಿ. ಎಲೈ ಯಜ್ಞಕರ್ತರಾದ ಯಜಮಾನರೇ, ಪ್ರಜೆಗಳಿಂದಲೂ, ಧನದಿಂದಲೂ ಕೂಡಿ ವೃದ್ಧಿಯನ್ನು ಹೊಂದಿದವರಾಗಿಯೂ, ಪಾಪರಹಿತರಾಗಿಯೂ, ನಿಷ್ಕಲ್ಮಷರಾಗಿಯೂ ಆಗುತ್ತೀರಿ.

English Translation

If, avoiding the path of death, you go (on the path of the gods), assuming a longer and better life, (my friends) then may you, (O, sacrificers), diligent in sacrifice, enriched with progeny and affluence, be cleansed and pure.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಋಷಿಯು ಮೃತನಾದವನ ಜ್ಞಾತಿಗಳನ್ನು ಎಂದರೆ ಬಂಧುಬಾಂಧವರನ್ನುದ್ದೇಶಿಸಿ ಹೇಳಿರುವನು ಈ ಋಕ್ಕಿನಲ್ಲಿಯೂ ಮುಂದಿನ ಕೆಲವು ಋಕ್ಕುಗಳಲ್ಲಿಯೂ ಮೃತನ ವಿಷಯದಲ್ಲಿ ಸಂತಾಪವನ್ನು ವ್ಯಕ್ತಪಡಿಸಿ ಮೃತನು ನಮ್ಮನ್ನು ಬಿಟ್ಟಗಲಿ ಈ ಲೋಕದಿಂದ ಹೊರಟುಹೋದನು. ಇನ್ನೂ ಜೀವಂತರಾಗಿ ಉಳಿದಿರುವ ನಾವು ಮೃತನಂತೆ ಮರಣಕ್ಕೀಡಾಗದೆ ಬಹುಕಾಲ ಜೀವಿಸುತ್ತಿದ್ದು ಪುತ್ರಪೌತ್ರಾದಿಗಳಿಂದಲೂ, ಧನಾದಿಗಳಿಂದಲೂ ವೃದ್ಧಿಯನ್ನೈದಿ ಬಾಳಿಬದುಕೋಣ ಎಂಬಭಿಪ್ರಾಯವನ್ನು ವ್ಯಕ್ತಪಡಿಸಿರುವನು. ಮೃತರಾದವರನ್ನು ನೋಡಿ ದುಃಖಪಡುತ್ತಾ ತಮಗೂ ಎಲ್ಲಿ ಈ ಗತಿಯು ಪ್ರಾಪ್ತವಾಗುವುದೋ ಎಂಬ ಭೀತಿಯಿಂದ ಚಿಂತಿಸುತ್ತಾ ಇನ್ನೂ ಜೀವಂತರಾಗಿರುವವರೆಲ್ಲರೂ ಮೃತ್ಯುವಶರಾಗದೆ ಬಹುಕಾಲ ಜೀವಿಸುವಂತಾಗಲಿ ಎಂಬ ಪ್ರಾರ್ಥನೆಯು ಈ ಋಕ್ಕಿನಲ್ಲಿಯೂ ಮುಂದಿನ ಮೂರು ಋಕ್ಕುಗಳಲ್ಲಿಯೂ ಉಕ್ತವಾಗಿದೆ

ಮೃತ್ಯೋಃ ಪದಂ ಯೋಪಯಂತಃ ಯತ್ ಐತ—ಎಲೈ ಮೃತನ ಜ್ಞಾತಿಗಳೇ, ಮೃತ್ಯುವು ನಿಮ್ಮ ಬಂಧುವನ್ನು ತನ್ನದೇ ಆದ ಪಿತೃಯಾಣಮಾರ್ಗದಿಂದ ತನ್ನ ಲೋಕಕ್ಕೆ ಕೊಂಡೊಯ್ದಿದಾನೆ. ಆದರೆ, ಜೀವಂತರಾಗಿರುವ ನೀವು ಮೃತ್ಯುವಿನ ಮಾರ್ಗವಾದ ಪಿತೃಯಾನದ ಕಡೆಗೆ ಹೋಗಬೇಡಿರಿ. ಆ ಮಾರ್ಗವು ಮೃತರಾದವರಿಗೆ ಮಾತ್ರ ನಿರ್ದಿಷ್ಟವಾಗಿದೆ. ನೀವು ಆ ಮಾರ್ಗವನ್ನು ಬಿಟ್ಟು ದೇವಯಾನಮಾರ್ಗವನ್ನು ಆಶ್ರಯಿಸಿ. ಏಕೆಂದರೆ,

ದ್ರಾಘೀಯ ಆಯುಃ ಪ್ರತರಂ ದಧಾನಾಃ—ನೀವು ಬಹುಕಾಲದವರೆಗೆ ಜೀವಿಸಲು ದೀರ್ಘಾಯುಸ್ಸನ್ನು ಪಡೆಯಿರಿ. ದೀರ್ಘಾಯುಗಳಾದ ನಿಮಗೆ ಮೃತರ ಮಾರ್ಗವಾದ ಪಿತೃಯಾನದ ಹವ್ಯಾಸವೇಕೆ ?

ಯಜ್ಞಿಯಾಸಃ ಪ್ರಜಯಾ ಧನೇನ ಆಪ್ಯಾಯಮಾನಾಃ ಶುದ್ಧಾಃ ಪೂತಾ ಭವತ—ಎಲೈ ಬಾಂಧವರೇ, ನೀವು ಯಜ್ಞಾದಿಗಳನ್ನು ಮಾಡುತ್ತಾ ಪುತ್ರಪೌತ್ರಾದಿಸಂತತಿಯಿಂದಲೂ, ಧನಾದಿಗಳಿಂದಲೂ ಪ್ರವೃದ್ಧ ಮಾನರಾಗಿ ಹಿಂದಿನ ಜನ್ಮಗಳಲ್ಲಿಯೂ, ಈ ಜನ್ಮದಲ್ಲಿಯೂ ಮಾಡಿರುವ ಸಮಸ್ತದುರಿತ (ಪಾಪ) ಗಳಿಂದ ವಿಮುಕ್ತರಾಗಿ, ಶುದ್ಧರೆನಿಸಿ ಬಾಳಿ ಬದುಕಿ ಎಂಬ ಆಶ್ವಾಸನೆಯು ಇಲ್ಲಿ ಉಕ್ತವಾಗಿದೆ.

ಒಬ್ಬ ಬಂಧುವು ಮೃತನಾದ ಮಾತ್ರಕ್ಕೆ ಅವನಿಗೆ ಸಂಬಂಧಪಟ್ಟ ಇತರ ಜ್ಞಾತಿಗಳು ದುಃಖದಿಂದ ಬಹುಕಾಲ ತಪ್ತರಾಗಬೇಕಾಗಿಲ್ಲ. ಮೃತನ ಕರ್ಮಫಲದಿಂದ ಅವನಿಗೆ ಮರಣವು ಸಂಭವಿಸಿತು. ಆದರೆ ಜೀವಂತರಾಗಿರುವ ನೀವು ಸುಮ್ಮನೆ ದುಃಖಪಟ್ಟು ಪ್ರಯೋಜನವೇನು ? ನೀವು ಬಹುಕಾಲ ಜೀವಿಸಿರಲು ಪ್ರಯತ್ನಮಾಡಿರಿ. ನಿಮ್ಮ ಆಯುಃಪ್ರಮಾಣವು ಹೆಚ್ಚಲಿ. ಯಜ್ಞಾದಿಗಳನ್ನು ಮಾಡುತ್ತಾ ಆ ಸತ್ಕರ್ಮಫಲರೂಪವಾಗಿ ನೀವು ಪುತ್ರಪೌತ್ರಾದಿಗಳಿಂದಲೂ, ಧನಾದಿಗಳಿಂದಲೂ ದಿನೇದಿನೇ ವೃದ್ಧಿಯನ್ನೈದುತ್ತಾ ನಿಮ್ಮ ಪಾಪಗಳನ್ನು ಕಳೆದುಕೊಂಡು ಸುಖವಾಗಿ ಬಾಳಿ ಬದುಕಿರಿ ಎಂದು ಈ ಋಕ್ಕಿನ ಮುಖ್ಯಾಭಿಪ್ರಾಯವು.

। ಸಂಹಿತಾಪಾಠಃ ।

ಇಮೇ ಜೀವಾ ವಿ ಮೃತೈರಾವವೃತ್ರನ್ನಭೂದ್ಭದ್ರಾ ದೇವಹೂತಿರ್ನೋ ಅದ್ಯ ।
ಪ್ರಾಂಚೋ ಅಗಾಮ ನೃತಯೇ ಹಸಾಯ ದ್ರಾಘೀಯ ಆಯುಃ ಪ್ರತರಂ ದಧಾನಾಃ ॥ ೩ ॥

। ಪದಪಾಠಃ ।

ಇಮೇ । ಜೀವಾಃ । ವಿ । ಮೃತೈಃ । ಆ । ಅವವೃತ್ರನ್ । ಅಭೂತ್ । ಭದ್ರಾ । ದೇವಹೂತಿಃ । ನಃ । ಅದ್ಯ ।
ಪ್ರಾಂಚಃ । ಅಗಾಮ । ನೃತಯೇ । ಹಸಾಯ । ದ್ರಾಘೀಯಃ । ಆಯುಃ । ಪ್ರತರಂ । ದಧಾನಾಃ ॥೩॥

॥ ಸಾಯಣಭಾಷ್ಯಂ ॥

ಪೈತೃಮೇಧಿಕೇ ಕರ್ಮಣ್ಯಮಾತ್ಯಾ ಇಮೇ ಜೀವಾ ವಿ ಮೃತೈರಿತಿ ಸವ್ಯಾವೃತೋ ವ್ರಜಂತಿ । ಸೂತ್ರಿತಂ ಚ । ಇಮೇ ಜೀವಾ ವಿ ಮೃತೈರಿತಿ ಸವ್ಯಾವೃತೋ ವ್ರಜಂತಿ । ಆ. ಗೃ. ೪-೪-೯ । ಇತಿ ॥

ಇಮೇ ಜೀವಾ ಜೀವಂತಃ ಪುರುಷಾ ಮೃತೈಃ ಪಿತ್ರಾದಿಭಿಃ । ತೇಭ್ಯ ಇತ್ಯರ್ಥಃ । ವ್ಯವವೃತ್ರನ್ । ವ್ಯಾವೃತ್ತಾ ಭವಂತು । ಏತೇ ನ ಮ್ರಿಯಂತಾಮಿತಿ ಭಾವಃ । ಕಂಚಾದ್ಯಾಸ್ಮಿನ್ದಿನೇ ನೋಽಸ್ಮಾಕಮು-ಶಾಜೇ ವಿಸೃಷ್ಟೇ ದೇವಹೂತಿಃ ದೇವಾನಾಮಾಹ್ವಾನಂ ಯತ್ರ ಸ ದೇವಹೂತಿಃ ಪಿತೃಮೇಧಾಖ್ಯೋ ಯಜ್ಞೋ ಭದ್ರಾ ಕಲ್ಯಾಣೋಽಭೂತ್ । ಭವತು । ತತ ಉತ್ತರಂ ವಯಂ ಪ್ರಾಂಚಃ ಪ್ರಾಙ್ಮುಖಾಂ-ಚನಾ ಅಗಾಮು । ಗಚ್ಛೇಮು । ಪ್ರತ್ಯಂಚ ಇತಿ ಭಾವಃ । ನೃತಯೇ ನರ್ತನಾಯ ಕರ್ಮಣಿ ಗಾತ್ರವಿಕ್ಷೇ-ಪಾಯ । ಸ್ವಕರ್ಮಾನುಷ್ಠಾನಾಯೇತಿ ಭಾವಃ । ಹಸಾಯ ಹಸನಾಯ ಪುತ್ರಾದಿಭಿಃ ಸಹ ಕ್ರೀಡನಾಯ । ಕೀದೃಶಾ ವಯಂ । ದ್ರಾಘೀಯ ಆಯುಃ ಪ್ರತರಂ ದಧಾನಾಃ ॥

॥ ಪ್ರತಿಪದಾರ್ಥ ॥

ಇಮೇ ಜೀವಾಃ—ಜೀವಿಸಿರುವ ಈ ಪುರುಷರು । ಮೃತೈಃ—ಮೃತರಾದ ಪಿತ್ರಾದಿಗಳಿಗಿಂತಲೂ । ವಿ ಆ ಅವವೃತ್ರನ್—ಬೇರೆಯಾಗಿ ಜೀವಿಸಲಿ । ಅದ್ಯ—ಈ ದಿನ । ನಃ—ನಮ್ಮ । ದೇವಹೂತಿಃ—ಪಿತೃಮೇಧ ವೆಂಬ ಯಜ್ಞವು । ಭದ್ರಾ—ಕಲ್ಯಾಣಕಾರವಾಗಿ । ಅಭೂತ್—ಆಗಲಿ । ಪ್ರಾಞ್ಚಃ—ಪೂರ್ವದಿಕ್ಕಿಗೆ ಅಭಿಮುಖ ರಾಗಿ । ಅಗಾಮು—ನಾವು ಹೋಗೋಣ । ನೃತಯೇ—ನರ್ತನಕ್ಕಾಗಿಯೂ । ಹಸಾಯ—ನಗುವುದಕ್ಕಾಗಿಯೂ । ದ್ರಾಘೀಯಃ—ಅತಿ ದೀರ್ಘವಾದ । ಆಯುಃ—ಆಯುಸ್ಸನ್ನು । ಪ್ರತರಂ—ಅತ್ಯುತ್ಕೃಷ್ಟವಾಗಿ । ದಧಾನಾಃ—ಹೊಂದಿದವರಾದ ನಾವು ಹೊರಡೋಣ.

॥ ಭಾವಾರ್ಥ ॥

ಜೀವಿಸಿರುವ ಈ ಪುರುಷರು ಮೃತರಾದ ಪಿತ್ರಾದಿಗಳಿಗಿಂತಲೂ ಬೇರೆಯಾಗಿ ಜೀವಿಸಲಿ. ಈ ದಿನ ನಮ್ಮ ಪಿತೃಮೇಧವೆಂಬ ಯಜ್ಞವು ಕಲ್ಯಾಣಕಾರಕವಾಗಿ ಆಗಲಿ. ನಾವು ಪೂರ್ವದಿಕ್ಕಿಗೆ ಅಭಿಮುಖರಾಗಿ ಹೋಗೋಣ. ನಾವು ನರ್ತನಕ್ಕಾಗಿಯೂ ಸಂತೋಷ ಜೀವನಕ್ಕಾಗಿಯೂ ಅತಿ ದೀರ್ಘವಾದ ಆಯುಸ್ಸನ್ನು ಅತ್ಯುತ್ಕೃಷ್ಟವಾಗಿ ಹೊಂದಿದವರಾಗಿ ಇರೋಣ

English Translation

May those who are living remain separate from the dead : may our invocation of the gods to-day be successful : let us go forward to dancing and laughter, assuming a longer and better life.

॥ ವಿಶೇಷವಿಷಯಗಳು ॥

ಪಿತೃಮೇಧವೆಂಬ ಅಪರಕರ್ಮದಲ್ಲಿ ಇಮೇ ಜೀವಾ ವಿ ಮೃತೈಃ ಎಂಬ ಈ ಋಕ್ಕನ್ನು ಪಠಿಸುತ್ತಾ ಬಂಧುಗಳು ಆ ಸ್ಥಳದಿಂದ ಹಿಂತಿರುಗುವರೆಂದು ಆಶ್ವಲಾಯನಶ್ರೌತಸೂತ್ರದ—ಇಮೇ ಜೀವಾ ವಿ ಮೃತೈರಿತಿ ಸವ್ಯಾವೃತೋ ವ್ರಜಂತಿ ಎಂಬ ಸೂತ್ರದಿಂದ (ಆ. ಗೃ. ೪-೪-೯) ವಿವೃತವಾಗಿರುವುದು.

ಈ ಋಕ್ಕಿನಲ್ಲಿಯೂ ಮೃತನನ್ನುದ್ದೇಶಿಸಿ ಅಪರಕರ್ಮವನ್ನು ಮಾಡುತ್ತಿರುವ ಬಂಧುಗಳ ಕರ್ತವ್ಯವನ್ನು ವಿವರಿಸಲಾಗಿದೆ.

ಇಮೇ ಜೀವಾಃ ಮೃತೈಃ ವಿ ಅವವೃತ್ರನ್—ಮೃತರಾದ ಪಿತ್ರಾದಿಗಳನ್ನುದ್ದೇಶಿಸಿ ಶ್ಮಶಾನಪ್ರದೇಶದಲ್ಲಿ ಅಂತ್ಯಕ್ರಿಯೆಗಳನ್ನು ಮಾಡಿ ಮುಗಿಸಿರುವುದರಿಂದ ಜೀವಂತರಾಗಿರುವ ಮೃತನ ಬಂಧುಗಳು ಈ ಶ್ಮಶಾನಪ್ರದೇಶವನ್ನು ಬಿಟ್ಟು ಹಿಂತಿರುಗಿ ತಮ್ಮ ಗೃಹಾಭಿಮುಖವಾಗಿ ಬರಲಿ.

ಅದ್ಯ ನಃ ದೇವಹೂತಿಃ ಭಕ್ತಾ ಅಭೂತ್—ಈ ದಿವಸ ನಾವು ಮಾಡುತ್ತಿರುವ ಅಪರಕರ್ಮವು ಕೊನೆಗೊಂಡಿರುವುದರಿಂದ ನಮಗೆ ಮೃತಾಶೌಚವು ಪರಿಹಾರವಾಗಿರುವುದು. ಆದ್ದರಿಂದ ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ನಾವು ಮಾಡುವ ಪಿತೃಮೇಧವೆಂಬ ಯಜ್ಞದಲ್ಲಿ ನಮಗೆ ಶುಭವುಂಟಾಗಲಿ.

ಪ್ರಾಂಚೋ ಅಗಾಮ ನೃತಯೇ ಹಸಾಯ—ಈ ಕರ್ಮವು ಮುಗಿದ ಬಳಿಕ ನಾವು ಮೃತನ ವಿಷಯಕವಾದ ದುಃಖದಿಂದ ಮುಕ್ತರಾಗಿ ಮುಂದೆ ನಮ್ಮ ನಮ್ಮ ಕರ್ಮಾನುಷ್ಠಾನಗಳಲ್ಲಿ ಉದ್ಯುಕ್ತರಾಗುವುದಕ್ಕೂ ಪುತ್ರಾದಿಗಳಿಂದ ಕೂಡಿ ಕ್ರೀಡಾದಿಗಳಿಂದಲೂ, ವಿನೋದದಿಂದಲೂ ಕಾಲಕಳೆಯುವುದಕ್ಕಾಗಿಯೂ ಈ ಶ್ಮಶಾನಪ್ರದೇಶದಿಂದ ಹಿಂತಿರುಗಿ ಪೂರ್ವಾಭಿಮುಖವಾಗಿ ನಮ್ಮ ಗೃಹಾದಿಗಳಿಗೆ ಹೋಗೋಣ.

ದ್ರಾಘೀಯಃ ಆಯುಃ ಪ್ರತರಂ ದಧಾನಾಃ—ದೀರ್ಘಾಯುಸ್ಸನ್ನು ಪಡೆದು ಬಹುಕಾಲ ಜೀವಿಸಿರುವುದಕ್ಕಾಗಿ ಈ ಪ್ರದೇಶದಿಂದ ಗೃಹಾಭಿಮುಖವಾಗಿ ಹೋಗೋಣ.

॥ संहितापाठ ॥

इमꣳ जीवेभ्यः परिधिं दधामि मैषाꣳ नु गादपरोऽ अर्थ-
मेतꣳ ।
शतं जीवन्तु शरदः पुरूचीरन्तर्मृत्युं दधतां पर्व-
तेन ॥ ४ ॥

॥ पदपाठः ॥

इमꣳ । जीवेभ्यः । परिधिं । दधामि । मा । एषां । नु । गात् । अपरः । अर्थं ।
एतं ।

शतं । जीवन्तु । शरदः । पुरूचीः । अन्तः । मृत्युं । दधतां । पर्वतेन ॥४॥

॥ सायणभाष्यं ॥

अनया जीवरक्षार्थꣳ पाषाणं परिधिरूपेण स्थापयन्ति । जीवेभ्यो जीवद्भ्यः पुत्रपौत्रादिभ्यस्तेषां रक्षणार्थमेवं परिधिं मृत्योः पिधानभूतं

ಪಾಷಾಣಂ ದಧಾಮಿ । ನಿದಧಾಮಿ । ತತ ಏಷಾಂ ಜೀವತಾಂ ಮಧ್ಯೇ೨ಪರೋ೨ನ್ಯ ಏತಮಿಮಮರ್ಥಂ ॥ ಅರ್ತೇರಿದಂ ರೂಪಂ ॥ ಗಂತವ್ಯಂ ಮರಣಾಖ್ಯಂ ಮಾರ್ಗಂ ನು ಕ್ಷಿಪ್ರಂ ಮಾ ಗಾತ್ । ಮಾ ಗಚ್ಛತು । ಏತದರ್ಥಂ ಪರಿಧಿಂ ಸ್ಥಾಪಯಾಮೀತಿ ಸಂಬಂಧಃ । ಕಂಚಿ ಪುರೂಚೀರ್ಬಹ್ವಂಚಿನಾ ಬಹುಗಮನಾಃ ಶತಂ ಶರದ ಏತತ್ಸಂಖ್ಯಾಕಾಸ್ತಷಾರ್ಜ್ಜೀವಂತು । ಸ್ವಸ್ವಪ್ರಾಣಾನ್ಧಾರಯಂತು । ತಥಾ ಪರ್ವತೇನ ಶಿಲೋಚ್ಚಯೇನ ಮೃತ್ಯುಂ ಸರ್ವೇಷಾಂ ಮಾರಕಮೇತನ್ನಾಮಕಮಂತರ್ದಧತಾಂ । ಅಂತರ್ಹಿತಂ ಕುರ್ವಂತು । ಯಥಾ ನಾಗಚ್ಛತಿ ತಥಾ ಕುರ್ವತಾಮಿತ್ಯರ್ಥಃ ॥

। ಪ್ರತಿಪದಾರ್ಥ ॥

ಜೀವೇಭ್ಯಃ—ಜೀವಿಸಿರುವವರ ರಕ್ಷಣೆಗಾಗಿ । ಇಮಂ ಪರಿಧಿಂ—ಪಾಷಾಣದ ಈ ವಲಯವನ್ನು । ದಧಾಮಿ—ನಾನು ನಿರ್ಮಿಸುತ್ತೇನೆ । ಏಷಾಂ—ಈ ಜೀವಂತರಾದ ಪುರುಷರಲ್ಲಿ । ಅಪರಃ—ಯಾರೂ ಕೂಡ । ಏತಂ ಅರ್ಥಂ—ಈ ಮೃತ್ಯುಮಾರ್ಗವನ್ನು । ನು—ಕ್ಷಿಪ್ರವಾಗಿ । ಮಾ ಗಾತ್—ಹೊಂದದಿರಲಿ । ಪುರೂಚೀಃ—ಅತಿ ದೀರ್ಘವಾದವೂ । ಶತಂ—ಶತಸಂಖ್ಯಾಕವಾದವೂ ಅದ । ಶರದಃ—ಶರತ್ಕಾಲಗಳವರೆಗೆ । ಜೀವಂತು—ಜೀವಿಸಲಿ । ಪರ್ವತೇನ—ಶಿಲಾ ಸಂಘಗಳಿಂದ । ಮೃತ್ಯುಂ—ಮೃತ್ಯುವನ್ನು । ಅಂತಃ ದಧತಾಂ—ಮರೆಸಿಡಲಿ.

। ಭಾವಾರ್ಥ ।

ಜೀವಿಸಿರುವವರ ರಕ್ಷಣೆಗಾಗಿ ಪಾಷಾಣದ ಈ ವಲಯವನ್ನು ನಾನು ನಿರ್ಮಿಸುತ್ತೇನೆ. ಈ ಜೀವಂತರಾದ ಪುರುಷರಲ್ಲಿ ಯಾರೂ ಕೂಡ ಈ ಮೃತ್ಯುಮಾರ್ಗವನ್ನು ಹೊಂದದಿರಲಿ. ಅತಿ ದೀರ್ಘವೂ ಶತಸಂಖ್ಯಾತವೂ ಆದ ಶರತ್ಕಾಲಗಳವರೆಗೆ (ನೂರುವರ್ಷಗಳವರೆಗೆ) ಜೀವಿಸಲಿ. ಶಿಲಾಸಂಘಗಳಿಂದ ಮೃತ್ಯುವನ್ನು ಮರೆಸಿಡಲಿ.

English Translation

I erect this circle (of stones) for (the protection of) the living, that none other of them may approach this path; may they live a hundred years, occupied by many holy works, and keep death hidden by this mound

॥ ವಿಶೇಷವಿಷಯಗಳು ॥

ಜೀವಂತರಾಗಿರುವ ಬಂಧುಬಾಂಧವರನ್ನು ಮೃತ್ಯುವು ಸಮೀಪಿಸದಿರುವುದಕ್ಕಾಗಿ ರಕ್ಷಾಬಂಧನಾರ್ಥವಾಗಿ ಸುತ್ತಲೂ ಸಣ್ಣ ಸಣ್ಣ ಕಲ್ಲುಗಳನ್ನು ಪರಿಧಿರೂಪದಿಂದ ಇಡುತ್ತಾ ಈ ಋಕ್ಕನ್ನು ಪಠಿಸುವುದು ರೂಢಿಯಾಗಿದೆ. ಲೋಕ ವ್ಯವಹಾರದಲ್ಲಿ ಒಂದು ಮನೆಯನ್ನಾಗಲಿ, ಗದ್ದೆಹೊಲಗಳನ್ನಾಗಲಿ ದುಷ್ಟಮೃಗಗಳಿಂದಲೂ ಇತರರಿಂದಲೂ ರಕ್ಷಿಸುವುದಕ್ಕಾಗಿ ಸುತ್ತಲೂ ಗೋಡೆಯನ್ನಾಗಲಿ ಬೇಲಿಯನ್ನಾಗಲಿ ಹಾಕುವುದು ರೂಢಿಯಲ್ಲಿದೆ. ಅದರಂತೆ ಮೃತ್ಯುದೇವತೆಯು ಬಂದು ಜೀವಂತರಾಗಿರುವವರಲ್ಲಿ ಮತ್ತೆ ಇತರರನ್ನು ಕೊಂಡೊಯ್ಯದಂತೆ ಮಾಡುವುದಕ್ಕಾಗಿ ಈ ರೀತಿ ಕಲ್ಲುಗಳಿಂದ ಸುತ್ತಲೂ ಆವರಣವನ್ನು ಕಲ್ಪಿಸುವುದು ರೂಢಿಯಲ್ಲಿ ಬಂದಿರಬಹುದೆಂದು ಕಂಡುಬರುತ್ತದೆ. ಮೃತ್ಯುವನ್ನು ಬರದಂತೆ ಈ ರೀತಿ ತಡೆಗಟ್ಟುವುದು ಸಾಧ್ಯವಲ್ಲದಿದ್ದರೂ, ಹಿಂದಿನ ಕಾಲದಲ್ಲಿ ಈ ವಿಧವಾದ ಮೂಢನಂಬಿಕೆಯು ಜನರಲ್ಲಿ ಇದ್ದಂತೆ

ತಿಳಿಯಬರುತ್ತದೆ. ಇಂತಹ ಅನೇಕ ಮುನ್ನೆಚ್ಚರಿಕೆಯ ಕ್ರಮಗಳೂ, ಸಂಪ್ರದಾಯಗಳೂ ಈಗಲೂ ಕೆಲವುದೇಶದ ಕಾಡುಜನರಲ್ಲಿ ಕಂಡುಬರುವುದು. ತಮ್ಮಲ್ಲಿ ಒಬ್ಬನು ಮರಣಕ್ಕೀಡಾದನಂತರ ಉಳಿದ ಜನರಲ್ಲಿ ಯಾರಿಗೂ ಈ ಗತಿಯು ಬಾರದಿರುವಂತೆ ಮುನ್ನೆಚ್ಚರಿಕೆಯ ಈ ಕ್ರಮವನ್ನು ಅನುಸರಿಸುವುದು ಸಹಜವೇ ಆಗಿದೆ.

ಇಮಂ ಜೀವೇಭ್ಯಃ ಪರಿಧಿಂ ದಧಾಮಿ—ಜೀವಂತರಾಗಿ ಉಳಿದಿರುವ ನಮ್ಮನ್ನೂ ನಮ್ಮ ಪುತ್ರಪೌತ್ರರಾದಿಯಾದ ಸ್ವಜನರನ್ನೂ ಮೃತ್ಯುವು ಸಮೀಪಿಸದಿರುವುದಕ್ಕಾಗಿಯೂ, ಅವರ ರಕ್ಷಣಾರ್ಥವಾಗಿಯೂ ಅವರ ಸುತ್ತಲೂ ಪಾಷಾಣರೂಪವಾದ ಈ ಪರಿಧಿಯನ್ನು ಎಂದರೆ ಸುತ್ತಲೂ ಒಂದು ವಿಧವಾದ ಆವರಣವನ್ನು ಕಲ್ಪಿಸುತ್ತೇನೆ. ಆದಕ್ಕಾಗಿ ಸುತ್ತಲೂ ಕಲ್ಲುಗಳನ್ನು ಇಟ್ಟು ಮೃತ್ಯುವು ಇಲ್ಲಿಗೆ ಬರದಂತೆ ತಡೆಗಟ್ಟುತ್ತೇನೆ.

ವಿಷಾಂ ಅಪರಃ ಏತಂ ಅರ್ಥಂ ನು ಮಾ ಗಾತ್—ಈಗ ನಮ್ಮಲ್ಲಿ ಒಬ್ಬ ಮನುಷ್ಯನು ಮೃತನಾಗಿರುವುದರಿಂದಲೇ ನಮಗೆ ಅತ್ಯಂತ ದುಃಖವಾಗಿದೆ. ಆದ್ದರಿಂದ ನಮ್ಮಲ್ಲಿ ಇನ್ನೂ ಯಾರಾದರೂ ಒಬ್ಬನು ಶೀಘ್ರವಾಗಿ ಮೃತ್ಯುವಿನ ಮಾರ್ಗವನ್ನು ಅನುಸರಿಸಿ ಹೋಗದಿರಲಿ ಎಂದರೆ ಮರಣಕ್ಕೆ ಈಡಾಗದಿರಲಿ. ಇದಕ್ಕಾಗಿ ಈ ವಿಧವಾದ ರಕ್ಷಣೆಯನ್ನು ನಿರ್ಮಿಸುವೆನು. ಈ ವಾಕ್ಯದಲ್ಲಿರುವ ಅರ್ಥಂ ಎಂಬ ಶಬ್ದಕ್ಕೆ-**ಅರ್ತೇರಿದಂ ರೂಪಂ ಗಂತವ್ಯಂ ಮರಣಾಖ್ಯಂ ಮಾರ್ಗಂ** । ಹೋಗು ಎಂಬರ್ಥವಿರುವ **ಋ ಗತೌ** ಎಂಬ ಧಾತುವಿನಿಂದ ನಿಷ್ಪನ್ನವಾದ **ಅರ್ಥಂ** ಎಂಬ ಶಬ್ದಕ್ಕೆ ಮಾರ್ಗವು ಎಂದರ್ಥವೆಂದು ಭಾಷ್ಯಕಾರರು ಅರ್ಥವಿವರಣೆಮಾಡಿದಾರೆ.

ಶತಂ ಜೀವಂತು ಶರದಃ ಪುರೂಚೀಃ—ಈಗ ಜೀವಂತರಾಗಿ ಉಳಿದಿರುವವರು ಗಟ್ಟಿಮುಟ್ಟಾಗಿ ತಿರುಗಾಡುತ್ತಲಿದ್ದು ನೂರುವರ್ಷಗಳವರೆಗೆ ಬದುಕಲಿ. ಇಲ್ಲಿ ಶರದಃ ಎಂಬ ಶಬ್ದವು ಸಂವತ್ಸರ ಎಂಬರ್ಥವನ್ನು ಸೂಚಿಸುವುದು. ಶರತ್ ಶಬ್ದಕ್ಕೆ ಶರದ್ಋತು ಅಥವಾ ಚಳಿಗಾಲವೆಂಬರ್ಥವು ಸಾಮಾನ್ಯವಾಗಿದ್ದರೂ, ಒಂದು ಸಂವತ್ಸರದಲ್ಲಿ ಶರತ್ಕಾಲವು ಒಂದಾವರ್ತಿಮಾತ್ರ ಬರುವುದರಿಂದ ಒಂದು ಸಂವತ್ಸರ ಪರಿಮಿತಿಯ ಕಾಲವನ್ನು ಸೂಚಿಸುವಾಗ ಶರತ್ಶಬ್ದವನ್ನು ಉಪಯೋಗಿಸುವುದು ವೇದಗಳಲ್ಲಿ ರೂಢಿಯಾಗಿದೆ. ಆದ್ದರಿಂದ ಇಲ್ಲಿ **ಶತಂ ಶರದಃ**-ನೂರು ವರ್ಷಗಳು ಎಂದು ಹೇಳಿದೆ. ಒಬ್ಬ ಪುರುಷನ ಜೀವಮಾನದ ಪೂರ್ಣವಾದ ಆಯುಃಪರಿಮಿತಿಯು ನೂರು ವರ್ಷಗಳೆಂದು ಹೇಳಲ್ಪಟ್ಟಿರುವುದರಿಂದ ನೂರುವರ್ಷಗಳವರೆಗೆ ಜೀವಿಸಲಿ ಎಂದು ಹೇಳುವಾಗ ಪುರುಷನು ತನ್ನ ಆಯುಃಪರಿಮಿತಿಯು ಪೂರ್ಣವಾಗುವವರೆಗೂ ಜೀವಿಸಲಿ ಎಂದಭಿಪ್ರಾಯವು,

ಪರ್ವತೇನ ಮೃತ್ಯುಂ ಅಂತಃ ದಧತಾಂ—ಪರ್ವತವೆಂದರೆ ಶಿಲೋಚ್ಚಯ, ಕಲ್ಲುಗಳ ಸಮೂಹ. ಅನೇಕ ಕಲ್ಲುಗಳನ್ನು ಉಪಯೋಗಿಸಿ ಮೃತ್ಯುವು ಅಲ್ಲಿಯೇ ಇದ್ದು ಹೊರಗೆ ಬರದಂತೆ ತಡೆಗಟ್ಟುವುದಕ್ಕಾಗಿ ಈ ಪರಿಧಿರೂಪವಾದ ಆವರಣವು ನಿರ್ಮಿತವಾಗಿದೆ ಎಂದಭಿಪ್ರಾಯವು.

। ಸಂಹಿತಾಪಾಠಃ ।

ಯಥಾಹಾನ್ಯನುಪೂರ್ವಂ ಭವಂತಿ ಯಥ ಋತವ ಋತುಭಿರ್ಯಂತಿ ಸಾಧು ।

ಯಥಾ ನ ಪೂರ್ವಮಪರೋ ಜಹಾತ್ಯೇವಾ ಧಾತರಾಯೂಂಷಿ ಕಲ್ಪ-
ಯೈಷಾಂ ॥ ೫ ॥

। ಪದಪಾಠಃ ।

ಯಥಾ । ಅಹಾನಿ । ಅನು೬ಪೂರ್ವಂ । ಭವಂತಿ । ಯಥಾ । ಋತವಃ । ಋತು೬ಭಿಃ । ಯಂತಿ । ಸಾಧು ।
ಯಥಾ । ನ । ಪೂರ್ವಂ । ಅಪರಃ । ಜಹಾತಿ । ಏವ । ಧಾತಃ । ಆಯೂಂಷಿ । ಕಲ್ಪಯ । ಏಷಾಂ ॥೫॥

। ಸಾಯಣಭಾಷ್ಯಂ ।

ಯಥಾ ಯೇನ ಪ್ರಕಾರೇಣಾಹಾನ್ಯಹೋರಾತ್ರಾತ್ಮಕಾನಿ ದಿನಾನ್ಯನುಪೂರ್ವಂ ಪೂರ್ವಂ-ಪೂರ್ವಮನುಕ್ರಮೇಣ ಭವಂತಿ ಪರಿವರ್ತಂತೇ । ಯಥಾ ಚರ್ತವೋ ವಸಂತಾದಯ ಋತುಭಿಃ ಸಹ ಸಾಧು ಶೋಭನಮವಿಪರ್ಯಾಸೇನ ಯಂತಿ ಗಚ್ಛಂತಿ । ಯಥಾ ಚ ಪೂರ್ವಂ ಪೂರ್ವಕಾಲೀನಂ ಪಿತರಮುಪರೋ೬ರ್ವಾಕ್ಕಾಲೀನಃ ಪುತ್ರೋ ನ ಜಹಾತಿ ನ ಪರಿತ್ಯಜತಿ ಪೂರ್ವಮರಣೇನ ॥ ಏವೈವಂ ತೇನೈವೋಕ್ತಪ್ರಕಾರೇಣ ಹೇ ಧಾತಃ ಸರ್ವೇಷಾಂ ಧಾರಯಿತರೇತನ್ನಾಮಕ ದೇವ ಏಷಾಮಸ್ಮತ್ಕುಲೀ-ನಾನಾಂ ಜೀವಾನಾಮಾಯೂಂಷಿ ಜೀವನಾನಿ ಕಲ್ಪಯ । ಸಮರ್ಥಯ । ಕುರ್ವಿತ್ಯರ್ಥಃ ॥

। ಪ್ರತಿಪದಾರ್ಥ ।

ಧಾತಃ—ಎಲೈ ಸೃಷ್ಟಿಕರ್ತನೇ । **ಯಥಾ**—ಯಾವ ಪ್ರಕಾರವಾಗಿ । **ಅಹಾನಿ**—ಅಹೋರಾತ್ರರೂಪವಾದ ದಿವಸಗಳು । **ಅನುಪೂರ್ವಂ ಭವಂತಿ**—ಒಂದೇ ರೀತಿಯಲ್ಲಿ ಪರಿವರ್ತನವನ್ನು ಹೊಂದುವುವೋ । **ಯಥಾ**—ಯಾವ ರೀತಿಯಲ್ಲಿ । **ಋತವಃ**—ವಸಂತಾದಿಋತುಗಳು । **ಋತುಭಿಃ**—ಇತರ ಋತುಗಳೊಡನೆ । **ಸಾಧು**—ಉತ್ತಮವಾದ ಪರಿವರ್ತವುಳ್ಳವಾಗಿ । **ಯಂತಿ**—ಸಂಚರಿಸುವುವೋ । **ಯಥಾ**—ಯಾವ ರೀತಿ । **ಪೂರ್ವಂ**—ಹಿಂದಿನ ಕಾಲದ ಪಿತೃವನ್ನು । **ಅಪರಃ**—ಮುಂದಿನ ಕಾಲದ ಪುತ್ರನು । **ನ ಜಹಾತಿ**—ಬಿಡದೇ ಅನುವರ್ತಿಸುವನೋ । **ಏವ**—ಅದೇ ರೀತಿಯಲ್ಲಿ । **ಏಷಾಂ**—ಇಲ್ಲಿ ಜೀವಿಸಿರುವವರ । **ಆಯೂಂಷಿ**—ಆಯುಸ್ಸುಗಳನ್ನು । **ಕಲ್ಪಯ**—ನಿರ್ಮಿಸು.

। ಭಾವಾರ್ಥ ।

ಎಲೈ ಸೃಷ್ಟಿಕರ್ತನೇ, ಯಾವ ಪ್ರಕಾರವಾಗಿ ಅಹೋರಾತ್ರರೂಪವಾದ ದಿವಸಗಳು ಒಂದೇ ರೀತಿಯಲ್ಲಿ ಪರಿವರ್ತನವನ್ನು ಹೊಂದುವುವೋ, ಯಾವ ರೀತಿಯಲ್ಲಿ ವಸಂತಾದಿಋತುಗಳು ಇತರ ಋತುಗಳೊಡನೆ ಉತ್ತಮವಾದ ಪರಿವರ್ತನವುಳ್ಳವಾಗಿ ಸಂಚರಿಸುವುವೋ, ಯಾವ ರೀತಿ ಹಿಂದಿನ ಕಾಲದ ಪಿತೃವನ್ನು ಮುಂದಿನ ಕಾಲದ ಪುತ್ರನು ಬಿಡದೇ ಅನುವರ್ತಿಸುವನೋ ಅದೇ ರೀತಿಯಲ್ಲಿ ಇಲ್ಲಿ ಜೀವಿಸಿರುವವರ ಆಯುಸ್ಸುಗಳನ್ನು ನಿರ್ಮಿಸು.

English Translation

As days pass along in succession; as seasons are duly followed by seasons, as the successor does not abandon his predecessor, so, Dhatri' support the lives of these (my kinsmen).

॥ ವಿಶೇಷವಿಷಯಗಳು ॥

ಯಥಾ ಅಹಾನಿ ಅನುಪೂರ್ವಂ ಭವಂತಿ ಯಥಾ ಋತವಃ ಋತುಭಿಃ ಯಂತಿ ಸಾಧು— ಒಂದು ದಿವಸ ಕಳೆದನಂತರ ಮತ್ತೊಂದು ದಿವಸವು ಬರುವುದು ಋತುಗಳೂ ಅದರಂತೆಯೇ ಬೇಸಗೆಯು ಕಳೆದ ನಂತರ ಮಳೆಗಾಲವೂ, ಮಳೆಗಾಲವು ಕಳೆದ ನಂತರ ಚಳಿಗಾಲವೂ ಒಂದಾಗುತ್ತಲೊಂದು ಪರಿವರ್ತನಕ್ರಮದಿಂದ ಬರುತ್ತಲಿರುವವು ಎಂದರೆ ಕಾಲವು ಅವಿಚ್ಛಿನ್ನವಾಗಿ, ಸತತವಾಗಿ ನಡೆದು ಬರುತ್ತಿರುವುದು. ನಾವು ಎಷ್ಟೇ ವರ್ಷ ಬದುಕಿದ್ದರೂ ನಮ್ಮ ಜೀವಮಾನ ಕಾಲದಲ್ಲೆ ದಿನಗಳ ಮತ್ತು ಋತುಗಳ ಪರಿವರ್ತನೆಯು ಸಾಗುತ್ತಲೇ ಇರುವುದು. ಇದು ಸ್ವಾಭಾವಿಕವು.

ಯಥಾ ಪೂರ್ವಂ ಅಪರಃ ನ ಜಹಾತಿ—ಒಂದು ಸಂಸಾರದ ಜನರಲ್ಲಿ ಹಿರಿಯರಾಗಿರುವವರು ವಯಸ್ಸಿನಲ್ಲಿ ದೊಡ್ಡವರು. ಕಿರಿಯರು ಚಿಕ್ಕವರು. ಬಹಳ ವಯಸ್ಸಾಗಿರುವವರು ಮೃತರಾಗುವುದು ಸ್ವಾಭಾವಿಕವು. ವಯಸ್ಸಿನಲ್ಲಿ ಇನ್ನೂ ಕಿರಿಯರಾದವರು ಬಹುಕಾಲ ಜೀವಿಸಿದ್ದು ಅನಂತರ ಮೃತರಾಗುವರು. ಇದೂ ಸ್ವಾಭಾವಿಕವು. ಹಾಗಲ್ಲದೆ ಹಿರಿಯರಾದವರು ಎಂದರೆ ತಂದೆ ಮುಂತಾದವರು ಇನ್ನೂ ಜೀವಿಸಿರುವಾಗಲೇ ಕಿರಿಯರಾದವರು ಎಂದರೆ ಪುತ್ರಪೌತ್ರಾದಿಗಳು (ಮಕ್ಕಳು ಮೊಮ್ಮಕ್ಕಳು ಮುಂತಾದವರು) ಮೃತರಾಗುವುದು ಸ್ವಾಭಾವಿಕವಲ್ಲ ಅದು ನಿಯಮಕ್ಕೆ ವಿರುದ್ಧವಾದುದು ಆದ್ದರಿಂದ ಲೋಕನಿಯಮಕ್ಕೆ ವಿರುದ್ಧವಾಗಿ ತಂದೆತಾಯಿಗಳು ಮೃತರಾಗುವುದಕ್ಕಿಂತ ಮುಂಚೆಯೇ ಪುತ್ರಾದಿಗಳು ಮೃತರಾಗದಿರಲಿ ಎಂಬ ಪ್ರಾರ್ಥನೆಯು ಇಲ್ಲಿ ಉಕ್ತವಾಗಿದೆ

ಏವ ಧಾತಃ ವಿಷಾಂ ಆಯೂಂಷಿ ಕಲ್ಪಯ—ಆದ್ದರಿಂದ ಎಲೈ ಧಾತೃವೇ, ಎಂದರೆ ವಿಶ್ವಸಿಯಾಮಕನೇ, ಈಗ ಜೀವಂತರಾಗಿರುವವರಲ್ಲಿ ಪುತ್ರಾದಿಗಳು ಪಿತ್ರಾದಿಗಳಿಗಿಂತ ಮುಂಚಿತವಾಗಿ ಮರಣಕ್ಕೀಡಾಗದಂತೆ ಅವರವರ ಆಯುಃಪರಿಮಾಣವನ್ನು ಕಲ್ಪಿಸು. ಲೋಕನಡವಳಿಕೆಗೆ ವಿರುದ್ಧವಾಗಿ ಕಿರಿಯರು ಹಿರಿಯರಿಗಿಂತ ಮುಂಚಿತವಾಗಿ ಮೃತರಾಗದಂತೆ ಜೀವಂತರಾಗಿರುವ ನಮ್ಮೆಲ್ಲರ ಆಯುಸ್ಸನ್ನು ನಮ್ಮ ವಯಸ್ಸಿಗನುಗುಣವಾಗಿ ಕಲ್ಪಿಸು ಎಂದು ಲೋಕನಿಯಾಮಕನಾದ ಧಾತೃವನ್ನು ಋಷಿಯು ಪ್ರಾರ್ಥಿಸಿದಾನೆ.

। ಸಂಹಿತಾಪಾಠಃ ।

ಆ ರೋಹತಾಯುರ್ಜರಸಂ ವೃಣಾನಾ ಅನುಪೂರ್ವಂ ಯತಮಾನಾ ಯತಿಷ್ಠ ।
ಇಹ ತ್ವಷ್ಟಾ ಸುಜನಿಮಾ ಸಜೋಷಾ ದೀರ್ಘಮಾಯುಃ ಕರತಿ ಜೀವಸೇ ವಃ ॥ ೬ ॥

॥ ಪದಪಾಠಃ ॥

ಆ । ರೋಹತ । ಆಯುಃ । ಜರಸಂ । ವೃಣಾನಾಃ । ಅನುಽಪೂರ್ವಂ । ಯತಮಾನಾಃ । ಯತಿ । ಸ್ಥ ।
ಇಹ । ತ್ವಷ್ಟಾ । ಸುಽಜನಿಮಾ । ಸಽಜೋಷಾಃ । ದೀರ್ಘಂ । ಆಯುಃ । ಕರತಿ । ಜೀವಸೇ । ವಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮೃತಸ್ಯ ಸ್ವಜನಾಃ ಪುತ್ರಪೌತ್ರಾದಯಃ ಜರಸಂ ಜರಾಂ ವೃಣಾನಾಃ ಸಂಭಜಮಾನಾ ಯೂಯಮಾಯುರ್ಜೀವನಮಾ ರೋಹತ। ಅಧಿತಿಷ್ಠತ । ಅನುಪೂರ್ವಮಾನುಪೂರ್ವ್ಯೇಣ । ಅವ್ಯಯೀಭಾವಃ । ಪೂರ್ವೋ ಜ್ಯೇಷ್ಠಃ । ಜ್ಯೇಷ್ಠಾನುಪೂರ್ವ್ಯಾ ಯತಮಾನಾಃ ಪ್ರಯತ್ನಂ ಕುರ್ವಂತೋ ಯೂಯಂ ಯತಿ ಸ್ಥ ಯತ್ಸಂಖ್ಯಾಕಾ ಭವಥ ॥ ಯಚ್ಛಬ್ದಾಚ್ಛಾಂದಸೋ ಡತಿಃ ॥ ಸುಜನಿಮಾ ಶೋಭನಜನನಸ್ತ್ವಷ್ಟೈತನ್ನಾಮಕೋ ದೇವಃ ಸಜೋಷಾ ಭವದ್ಭಿಃ ಸಂಗತಃ ಸನ್ನಿಹಾಸ್ಮಿನ್ಕರ್ಮಣಿ ಪ್ರವೃತ್ತಾನಾಂ ವೋ ಯೂಷ್ಮಾಕಂ ಜೀವಸೇ ಜೀವನಾಯ ದೀರ್ಘಂ ಪ್ರಭೂತಮಾಯುಃ ಕರತಿ । ಕರೋತು ॥

॥ ಪ್ರತಿಪದಾರ್ಥ ॥

(ಎಲೈ ಮೃತನ ಸಂಬಂಧಿಗಳೇ) ಯತಿ ಸ್ಥ—ನೀವು ಎಷ್ಟು ಜನರಿದ್ದರೂ ಸರಿ । ಜರಸಂ—ವಾರ್ಧಕ್ಯವನ್ನು । ವೃಣಾನಾಃ—ಹೊಂದುವವರೆಗೂ । ಆಯುಃ—ಜೀವನವನ್ನು । ಆ ರೋಹತ—ಆಶ್ರಯಿಸಿರಿ । ಅನುಪೂರ್ವಂ—ನಿಮ್ಮ ವಯಸ್ಸಿಗೆ ಅನುಗುಣವಾಗಿ । ಯತಮಾನಾಃ—ಕರ್ಮಪ್ರವರ್ತಕರಾಗಿರಿ । ಸುಜನಿಮಾ—ಉತ್ತಮವಾದ ಜನ್ಮವುಳ್ಳ । ತ್ವಷ್ಟಾ—ತ್ವಷ್ಟೃದೇವನು । ಸಜೋಷಾಃ—ನಿಮ್ಮೊಡನೆ ಕೂಡಿಕೊಂಡು । ಇಹ—ಈ ಕರ್ಮದಲ್ಲಿ । ವಃ—ನಿಮ್ಮ । ಜೀವಸೇ—ಜೀವನಕ್ಕಾಗಿ । ದೀರ್ಘಂ—ದೀರ್ಘವಾದ । ಆಯುಃ—ಆಯುಸ್ಸನ್ನು । ಕರತಿ—ಉಂಟುಮಾಡಲಿ.

॥ ಭಾವಾರ್ಥ ॥

ಎಲೈ ಮೃತನ ಸಂಬಂಧಿಗಳೇ, ನೀವು ಎಷ್ಟು ಜನರಿದ್ದರೂ ಸಹ ನೀವು ವಾರ್ಧಕ್ಯವನ್ನು ಹೊದುವವರೆಗೂ ಜೀವನವನ್ನು ಆಶ್ರಯಿಸಿರಿ. ನಿಮ್ಮ ವಯಸ್ಸಿಗೆ ಅನುಗುಣವಾಗಿ ಕರ್ಮಪ್ರವರ್ತಕರಾಗಿರಿ. ಉತ್ತಮವಾದ ಜನ್ಮವುಳ್ಳ ತ್ವಷ್ಟೃದೇವನು ನಿಮ್ಮೊಡನೆ ಕೂಡಿ ಈ ಕರ್ಮದಲ್ಲಿ ನಿಮ್ಮ ಜೀವನಕ್ಕಾಗಿ ದೀರ್ಘವಾದ ಆಯುಸ್ಸನ್ನು ಉಂಟುಮಾಡಲಿ

English Translation

(You kinsmen of the dead man), choosing old age, attain length of life, striving one after the other, how many yau may be: may Twashtri, the creator of good races of men, being at one (with you), grant you (busy) at this (sacrifice), a long life.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನ ಉತ್ತರಾರ್ಧದಲ್ಲಿ ಹೇಳಿರುವ ವಿಷಯವನ್ನೇ ಋಷಿಯು ಇಲ್ಲಿಯೂ ಪ್ರಕಾರಾಂತರದಿಂದ ವಿವರಿಸಿ ಪ್ರಾರ್ಥಿಸಿದಾನೆ. ಎಲೈ ಮೃತನ ಬಂದು ಬಾಂಧವರೇ, ಸ್ವಜನಗಳೇ ನೀವು,

ಆ ರೋಹತ ಆಯುಃ ಜರಸಂ ವೃಣಾನಾಃ—ಇಲ್ಲಿ ಆಯುಃ ಜರಸಂ ಎಂದರೆ ಶರೀರವು ಜೀರ್ಣವಾಗುವವರೆಗೂ ನಡೆದು ಬರುವ ಆಯುಃಪ್ರಮಾಣವು. ಅಲ್ಲಿಯವರೆಗೂ ನೀವು ನಿಮ್ಮ ಜೀವನವನ್ನು ನಡೆಸಿಕೊಂಡು ಬನ್ನಿ ಎಂದರೆ ಬಹುಕಾಲ ಜೀವಿಸಿರಿ

ಅನುಪೂರ್ವಂ ಯತಮಾನಾಃ ಯತಿ ಷ್ಠ—ಬಹುಕಾಲ ಜೀವಿಸುವುದರಲ್ಲಿ ಒಂದು ಕ್ರಮವಿದೆ. ಈಗ ಜೀವಂತರಾಗಿರುವವರಲ್ಲಿ ಎಂದರೆ ಮೃತನಾದವನ ಸ್ವಜನರಲ್ಲಿ ಅನೇಕರಿರುವರಷ್ಟೆ. ಅವರ ವಯಸ್ಸು ನಾನಾ ವಿಧವಾಗಿರುವುದು. ಕೆಲವರಿಗೆ ಅರವತ್ತು ಎಪ್ಪತ್ತು ವರ್ಷಗಳಾಗಿರಬಹುದು, ಇನ್ನೂ ಕೆಲವರಿಗೆ ನಲವತ್ತು ಐವತ್ತು ವರ್ಷಗಳಾಗಿರಬಹುದು, ಮತ್ತೆ ಕೆಲವರಿಗೆ ಇಪ್ಪತ್ತೂ ಮೂವತ್ತಾಗಿರಬಹುದು ಇನ್ನೂ ಕೆಲವರು ಕೇವಲ ಬಾಲಕರಾಗಿರಬಹುದು. ಈ ರೀತಿ ವಯಸ್ಸಿನಲ್ಲಿ ವ್ಯತ್ಯಾಸವಿರುವುದರಿಂದ ಲೋಕ ನಿಯಮಕ್ಕೆ ಅನುಸಾರವಾಗಿ ಎಲ್ಲರೂ ಬಹುಕಾಲ ಜೀವಿಸಿದರೂ ಆದರಲ್ಲಿ ಮೊದಲು ಹೆಚ್ಚು ವಯಸ್ಸಾದವರು ಮೃತರಾದ ಬಳಿಕ ಅವರಿಗಿಂತ ಕಿರಿಯವರು ತಾವೂ ತಮ್ಮ ಆಯುಃಪರಿಮಿತಿಯಕಾಲ ಜೀವಿಸಿದ್ದು ಅನಂತರ ಮೃತರಾಗಬೇಕು. ಎಂದರೆ ಮೊದಲು ಹಿರಿಯರು ಅನಂತರ ಕಿರಿಯರು ಮೃತರಾಗಬೇಕು ಈ ಕ್ರಮವನ್ನು ಬಿಟ್ಟು ಇದಕ್ಕೆ ವಿರುದ್ಧವಾಗಿ ಕಿರಿಯರಾದವರು ಹಿರಿಯರಿಗಿಂತ ಮುಂಚೆಯೇ ಮೃತರಾಗುವುದು ಅಸ್ವಾಭಾವಿಕವು ಆ ರೀತಿ ಆಗದಂತೆ ಲೋಕನಿಯಮಕ್ಕನುಸಾರವಾಗಿ ಬದುಕಿರಿ. ಈ ವಿಷಯದಲ್ಲಿ ತ್ವಷ್ಟೃದೇವನು (ಅಥವಾ ತ್ವಷ್ಟೃನೆಂದರೆ ಇಲ್ಲಿ ವಿಶ್ವನಿಯಾಮಕನೆಂದೇ ಭಾವಿಸಬಹುದು) ನಿಮ್ಮೊಂದಿಗೆ ಸಹಕರಿಸಿ ನೀವು ದೀರ್ಘಕಾಲ ಜೀವಿಸುವಂತೆ ನಿಮ್ಮ ಆಯುಃಪರಿಮಿತಿಯನ್ನು ಹೆಚ್ಚಿಸಲಿ ಎಂದು ಋಷಿಯು ಪ್ರಾರ್ಥಿಸಿದಾನೆ

॥ ಸಂಹಿತಾಪಾಠಃ ॥

ಇಮಾ ನಾರೀರವಿಧವಾಃ ಸುಪತ್ನೀರಾಂಜನೇನ ಸರ್ಪಿಷಾ ಸಂ ವಿಶಂತು ।
ಅನಶ್ರವೋಽನಮೀವಾಃ ಸುರತ್ನಾ ಆ ರೋಹಂತು ಜನಯೋ ಯೋನಿ-
ಮಗ್ರೇ ॥ ೭ ॥

॥ ಪದಪಾಠಃ ॥

ಇಮಾಃ । ನಾರೀಃ । ಅವಿಧವಾಃ । ಸುಽಪತ್ನೀಃ । ಆಽಅಂಜನೇನ । ಸರ್ಪಿಷಾ । ಸಂ । ವಿಶಂತು ।
ಅನಶ್ರವಃ । ಅನಮೀವಾಃ । ಸುಽರತ್ನಾಃ । ಆ । ರೋಹಂತು । ಜನಯಃ । ಯೋನಿಂ । ಅಗ್ರೇ ॥ ೭ ॥

॥ಸಾಯಣಭಾಷ್ಯಂ ॥

ಅವಿಧವಾಃ । ಧವಃ ಪತಿಃ । ಅವಿಗತಪತಿಕಾಃ । ಜೀವದ್ಭರ್ತೃಕಾ ಇತ್ಯರ್ಥಃ । ಸುಪತ್ನೀಃ ಶೋಭನಪತಿಕಾ ಇಮಾ ನಾರೀರ್ನಾರ್ಯಃ ಆಂಜನೇನ ಸರ್ವತೋಽಂಜನಸಾಧನೇನ ಸರ್ಪಿಷಾ ಘೃತೇನಾಕ್ತನೇತ್ರಾಃ ಸತ್ಯಃ ಸಂ ವಿಶಂತು । ಸ್ವಗೃಹಾನ್ಪ್ರವಿಶಂತು । ತಥಾನಶ್ರವೋಽಶ್ರುವರ್ಜಿತಾ ಅರುದತ್ಯೋಽನಮೀವಾಃ । ಅಮೀವಾ ರೋಗಃ । ತದ್ವರ್ಜಿತಾಃ ಮಾನಸದುಃಖವರ್ಜಿತಾ ಇತ್ಯರ್ಥಃ । ಸುರತ್ನಾಃ ಶೋಭನಧನಸಹಿತಾ ಜನಯಃ । ಜನಯಂತ್ಯಪತ್ಯಮಿತಿ ಜನಯೋ ಭಾರ್ಯಾಃ । ತಾ ಅಗ್ರೇ ಸರ್ವೇಷಾಂ ಪ್ರಥಮತ ಏವ ಯೋನಿಂ ಗೃಹಮಾ ರೋಹಂತು । ಅಗಚ್ಛಂತು ॥

॥ ಪ್ರತಿಪದಾರ್ಥ ॥

ಅವಿಧವಾಃ—ಮಾಂಗಲ್ಯವುಳ್ಳವರೂ । ಸುಪತ್ನೀಃ—ಉತ್ತಮವಾದ ಪತಿಗಳುಳ್ಳವರೂ ಆದ । ಇಮಾಃ ನಾರೀಃ—ಈ ಸ್ತ್ರೀಯರು । ಆಂಜನೇನ—ಅಂಜನಯುಕ್ತವಾದ । ಸರ್ಪಿಷಾ—ಕಾಡಿಗೆಗಳಿಂದ ಅಲಂಕರಿಸಿಕೊಂಡು । ಸಂ ವಿಶಂತು—ಗೃಹಗಳಿಗೆ ಪ್ರವೇಶಿಸಲಿ । ಅನಶ್ರವಃ—ಕಣ್ಣೀರಿಲ್ಲದವರಾಗಿಯೂ । ಅನಮೀವಾಃ—ರೋಗ ರಹಿತರಾಗಿಯೂ । ಸುರತ್ನಾಃ—ಉತ್ತಮವಾದ ಆಭರಣಗಳುಳ್ಳವರಾಗಿಯೂ ಇರುವ । ಜನಯಃ—ಪತ್ನಿಯರು । ಅಗ್ರೇ—ಎಲ್ಲರಿಗಿಂತಲೂ ಮೊದಲೇ । ಯೋನಿಂ—ಗೃಹವನ್ನು । ಆ ರೋಹಂತು—ಪ್ರವೇಶಿಸಲಿ

॥ ಭಾವಾರ್ಥ ॥

ಮಾಂಗಲ್ಯವುಳ್ಳವರೂ, ಉತ್ತಮವಾದ ಪತಿಗಳುಳ್ಳವರೂ ಆದ ಸ್ತ್ರೀಯರು ಅಂಜನದಿಂದ ಕೂಡಿದ ಕಾಡಿಗೆಗಳಿಂದ ಅಲಂಕರಿಸಿಕೊಂಡು ಗೃಹಗಳಿಗೆ ಪ್ರವೇಶಿಸಲಿ ಕಣ್ಣೀರಿಲ್ಲದವರಾಗಿಯೂ ರೋಗರಹಿತರಾಗಿಯೂ ಉತ್ತಮವಾದ ಆಭರಣಗಳುಳ್ಳವರಾಗಿಯೂ ಇರುವ ಪತ್ನಿಯರು ಎಲ್ಲರಿಗಿಂತಲೂ ಮೊದಲೇ ಗೃಹವನ್ನು ಪ್ರವೇಶಿಸಲಿ.

English Translation

Let these women who are not widows, who have good husbands, enter (anointed) with unguent and butter. Let women without tears, without sorrow, and decorated with jewels, first proceed to the house,

॥ ವಿಶೇಷವಿಷಯಗಳು ॥

ಇದುವರೆಗೂ ಮೃತನಾದವನ ಬಂಧು ಮಿತ್ರಾದಿಗಳ ವಿಷಯವನ್ನು ಸಾಮಾನ್ಯವಾಗಿ ತಿಳಿಸಿದ್ದರೂ ಈಗ ಈ ಋಕ್ಕಿನಲ್ಲಿ ಸ್ತ್ರೀಯರ ವಿಷಯವನ್ನು ಪ್ರಸ್ತಾಪಿಸಿ ಅವರು ಯಾವ ರೀತಿ ನಡೆದುಕೊಳ್ಳಬೇಕೆಂಬ ವಿಚಾರವನ್ನೂ ಮುಂದಿನ ಋಕ್ಕಿನಲ್ಲಿ ಮೃತನ ಪತ್ನಿಯ ವಿಚಾರವನ್ನೂ ಋಷಿಯು ಹೇಳಿದಾನೆ.

ಅವಿಧವಾಃ ಸುಪತ್ನೀಃ ಇಮಾಃ ನಾರೀಃ ಆಂಜನೇನ ಸರ್ಪಿಷಾ ಸಂ ವಿಶಂತು—ಧವಃ ಎಂದರೆ ಪತಿಯು ; ವಿಧವಾ ಎಂದರೆ ಪತಿಯಿಲ್ಲದಿರುವ ಎಂದರೆ ಪತಿಯು ಮೃತನಾಗಿ ಪತಿಯನ್ನು ಕಳೆದುಕೊಂಡಿರುವ ಸ್ತ್ರೀಯು

ಅವಿಧವಾಃ ಎಂದರೆ ಪತಿಯನ್ನು ಕಳೆದುಕೊಂಡ ಸ್ತ್ರೀಯಲ್ಲದವರು ಎಂದರೆ ಜೀವಿಸಿರುವ ಪುರುಷರ ಪತ್ನಿಯರು ಎಂದರ್ಥ. ಸುಪತ್ನೀಃ ಎಂದರೆ ಶೋಭನಪತಿಕಾಃ ಉತ್ತಮರಾದ ಪತಿಗಳನ್ನುಳ್ಳವರು, ಉತ್ತಮಪುರುಷ ಪತ್ನಿಯರು ಆದ್ದರಿಂದ ವಿಧವೆಯರಲ್ಲದವರೂ ಉತ್ತಮಪುರುಷರ ಪತ್ನಿಯರೂ ಆದ ಈ ಸ್ತ್ರೀಯರು ತಮ್ಮ ಸಂಬಂಧಿಯಾದ ಈ ಮೃತನಾದ ಪುರುಷನ ವಿಷಯದಲ್ಲಿ ದುಃಖಿಸುವುದನ್ನು ಬಿಟ್ಟು ಘೃತಾದಿ ಅಂಜನದ್ರವ್ಯ (ಕಾಡಿಗೆ, ಕಪ್ಪು) ಗಳಿಂದ ಅಲಂಕರಿಸಿಕೊಂಡು ತಮ್ಮ ತಮ್ಮ ಗೃಹಗಳನ್ನು ಪ್ರವೇಶಿಸಲಿ. ಎಂದು ಈ ವಾಕ್ಯದ ಅಭಿಪ್ರಾಯವು. ತಮ್ಮ ಸಂಬಂಧಿಯಾದ ಪುರುಷನ (ತಂದೆಯ ಅಥವಾ ಸಹೋದರ ಮುಂತಾದ ಬಂಧುವಿನ) ಮೃತಶರೀರವನ್ನು ಹಿಂಬಾಲಿಸಿ ಶ್ಮಶಾನಭೂಮಿಗೆ ಬಂದು ದುಃಖಿಸುತ್ತಿರುವ ಸ್ತ್ರೀಯರನ್ನು ಉದ್ದೇಶಿಸಿ ಋಷಿಯು ಈ ವಾಕ್ಯವನ್ನೂ, ಈ ಋಕ್ಕಿನ ಉತ್ತರಾರ್ಧದಲ್ಲಿರುವ ವಾಕ್ಯವನ್ನೂ ಹೇಳಿದಾನೆ.

ಅನಶ್ರವಃ ಅನಮೀವಾಃ ಸುರತ್ನಾಃ ಜನಯಃ ಯೋನಿಂ ಅಗ್ರೇ ಅ ರೋಹಂತು—ಈ ಸ್ತ್ರೀಯರು ಕಣ್ಣೀರಿಟ್ಟು ಅಳುತ್ತಿರುವುದನ್ನು ನಿಲ್ಲಿಸಿ, ಮನಸ್ಸಿನಲ್ಲಿರುವ ದುಃಖದ ಆವೇಶವನ್ನು ಕಮ್ಮಿಮಾಡಿ, ಎಂದರೆ ಸಾಧ್ಯವಾದ ಮಟ್ಟಿಗೂ ಮನಸ್ಸಿನ ದುಃಖವನ್ನು ತಡೆದುಕೊಂಡು ಬಳಿಕ ಉತ್ತಮವಾದ ವಡವೆಗಳಿಂದಲಂಕೃತರಾಗಿ ಅವರವರ ಮನೆಯನ್ನು ಪುರುಷರಿಗಿಂತ ಮೊದಲೇ ಪ್ರವೇಶಿಸಲಿ. ಎಂದರೆ ಶ್ಮಶಾನದಿಂದ ಹಿಂತಿರುಗಿ ಬಂದ ಬಂಧು ಬಾಂಧವರಲ್ಲಿ ಮೊದಲು ಸ್ತ್ರೀಯರು ಗೃಹವನ್ನು ಪ್ರವೇಶಿಸಲಿ, ಅನಂತರ ಪುರುಷರು ಪ್ರವೇಶಿಸಲಿ ಎಂದಭಿಪ್ರಾಯವು.

। ಸಂಹಿತಾಪಾಠಃ ।

ಉದೀರ್ಷ್ವ ನಾರ್ಯಭಿ ಜೀವಲೋಕಂ ಗತಾಸುಮೇತಮುಪ ಶೇಷ ಏಹಿ ।
ಹಸ್ತಗ್ರಾಭಸ್ಯ ದಿಧಿಷೋಸ್ತವೇದಂ ಪತ್ಯುರ್ಜನಿತ್ವಮಭಿ ಸಂ ಬಭೂಥ ॥ ೮ ॥

। ಪದಪಾಠಃ ।

ಉತ್ । ಈರ್ಷ್ವ । ನಾರಿ । ಅಭಿ । ಜೀವಲೋಕಂ । ಗತಾಸುಂ । ಏತಂ । ಉಪ । ಶೇಷೇ । ಅ । ಇಹಿ ।
ಹಸ್ತಗ್ರಾಭಸ್ಯ । ದಿಧಿಷೋಃ । ತವ । ಇದಂ । ಪತ್ಯುಃ । ಜನಿತ್ವಂ । ಅಭಿ । ಸಂ । ಬಭೂಥ ॥ ೮ ॥

। ಸಾಯಣಭಾಷ್ಯಂ ।

ದೇವರಾದಿಕಃ ಪ್ರೇತಪತ್ನೀಮುದೀರ್ಷ್ವ ನಾರೀತ್ಯನಯಾ ಭರ್ತೃಸಕಾಶಾದುತ್ಥಾಪಯೇತ್ । ಸೂತ್ರಿತಂ ಚ । ತಾಮುತ್ಥಾಪಯೇದ್ದೇವರಃ ಪತಿಸ್ತ್ವೀಯೋಂತೇವಾಸೀ ಜರದ್ವಾಸೋ ವೋದೀರ್ಷ್ವ ನಾರ್ಯಭಿ ಜೀವಲೋಕಂ । ಆ. ಗೃ- ೪-೨-೧೪ । ಇತಿ ॥

ಹೇ ನಾರಿ ಮೃತಸ್ಯ ಪತ್ನಿ ಜೀವಲೋಕಂ ಜೀವಾನಾಂ ಪುತ್ರಪೌತ್ರಾದೀನಾಂ ಲೋಕಂ ಸ್ಥಾನಂ ಗೃಹಮಭಿಲಕ್ಷ್ಯೋದೀರ್ಷ್ವ । ಅಸ್ಮಾತ್ಸ್ಥಾನಾದುತ್ತಿಷ್ಠ ॥ ಈರ ಗತೌ ಅದಾದಿಕಃ ॥ ಗತಾ-

ಸುವುಪಕಾಂ್ತಪ್ರಾಣಮೇತಂ ಪತಿವುಪ ಶೇಷೇ । ತಸ್ಯ ಸಮೀಪೇ ಸ್ವಪಿಷಿ । ತಸ್ಮಾತ್ತ್ವಮೇಹಿ । ಅಗಚ್ಛ । ಯಸ್ಮಾತ್ತ್ವಂ ಹಸ್ತಗ್ರಾಭಸ್ಯ ಪಾಣಿಗ್ರಾಹಂ ಕುರ್ವತೋ ದಿಧಿಷೋರ್ಗರ್ಭಸ್ಯ ನಿಧಾತುಸ್ತವಾಸ್ಯ ಪತ್ಯುಃ ಸಂಬಂಧಾದಾಗತಮಿದಂ ಜನಿತ್ವಂ ಜಾಯಾತ್ವಮುಭಿಲಕ್ಷ್ಯ ಸಂ ಬಭೂಥ ಸಂ ಭೂತಾಸಿ ಅನು-ಮರಣನಿಶ್ಚಯವುಕಾರ್ಷೀಃ ತಸ್ಮಾದಾಗಚ್ಛ ॥

॥ ಪ್ರತಿಪದಾರ್ಥ ।

ನಾರಿ—ಎಲೈ ಮೃತನ ಪತ್ನಿಯೇ । **ಜೀವಲೋಕಂ ಅಭಿ**—ನಿನ್ನ ಪುತ್ರಪೌತ್ರಾದಿಗಳ ಸ್ಥಾನವಾದ ಗೃಹಕ್ಕೆ । **ಉದೀರ್ಷ್ವ**—ಇಲ್ಲಿಂದ ಎದ್ದು ಹೊರಡು । **ಗತಾಸುಂ**—ಕಳೆದುಹೋದ ಜೀವವುಳ್ಳ । **ಏತಂ**—ಈ ಪತಿಯ ಹತ್ತಿರ । **ಉಪ ಶೇಷೇ**—ನೀನು ಮಲಗಿರುವೆ । **ಏಹಿ**—ಮನೆಗೆ ಬಾ । **ಹಸ್ತಗ್ರಾಭಸ್ಯ**—ನಿನ್ನ ಪಾಣಿಗ್ರಹಣವನ್ನು ಮಾಡಿದವನೂ । **ದಧಿಷೋಃ**—ಗರ್ಭಕಾರಕನೂ ಆದ । **ತವ ಪತ್ಯುಃ**—ನಿನ್ನ ಪತಿಯೊಡನೆ । **ಇದಂ ಜನಿತ್ವಂ ಅಭಿ**—ನಿನ್ನ ಪತ್ನೀತ್ವವನ್ನು ಗೌರವಿಸಿ । **ಸಂ ಬಭೂಥ**—ಅವನೊಡನೆ ಮರಣವನ್ನು ಹೊಂದಲು ನಿಶ್ಚಯಿಸಿರುವೆ (ಅದನ್ನು ಬಿಟ್ಟು ಗೃಹಕ್ಕೆ ಬಾ).

॥ ಭಾವಾರ್ಥ ।

ಎಲೈ ಮೃತನ ಪತ್ನಿಯೇ, ನಿನ್ನ ಪುತ್ರಪೌತ್ರಾದಿಗಳ ಸ್ಥಾನವಾದ ಗೃಹಕ್ಕೆ ಇಲ್ಲಿಂದ ಎದ್ದು ಹೊರಡು ಕಳೆದು ಹೋದ ಜೀವವುಳ್ಳ ಈ ಪತಿಯ ಹತ್ತಿರ ನೀನು ಮಲಗಿರುವೆ ಮನೆಗೆ ಬಾ. ನಿನ್ನ ಪಾಣಿಗ್ರಹಣವನ್ನು ಮಾಡಿದವನೂ, ಗರ್ಭಕಾರಕನೂ ಆದ ನಿನ್ನ ಪತಿಯೊಡನೆ ನಿನ್ನ ಪತ್ನೀತ್ವವನ್ನು ಗೌರವಿಸಿ ಅವನೊಡನೆ ಮರಣವನ್ನು ಹೊಂದಲು ನೀನು ನಿಶ್ಚಯಿಸಿರುವೆ ಅದನ್ನು ಒಟ್ಟು ಗೃಹಕ್ಕೆ ಬಾ.

English Translation

Rise, woman, (and go) the world of living beings: come, this man near whom you sleep is lifeless: you have enjoyed this state of being the wife of your husband, the suitor who took you by the hand.

॥ ವಿಶೇಷವಿಷಯಗಳು ॥

ಮೃತನಾದವನ ಪತ್ನಿಯ ಮೈದುನನೇ ಮೊದಲಾದವರು ಮೃತನ ಶರೀರವನ್ನು ಅಪ್ಪಿಕೊಂಡು ಸಹಗಮನ ಮಾಡಲುದ್ಯುಕ್ತಳಾಗಿರುವ ಅವನ ಪತ್ನಿಯನ್ನು **ಉದೀರ್ಷ್ವ ನಾರಿ** ಎಂಬ ಋಕ್ಕಿನಿಂದ ಆ ಮೃತಶರೀರದ ಸಮೀಪದಿಂದ ಬಿಡಿಸಿ (ಎಬ್ಬಿಸಿ) ಕರೆತರಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ತಾಮುತ್ಥಾಪಯೇದ್ದೇವರಃ ಪತಿಸ್ಥಾನೀಯೋಽನ್ಯೋವಾಸೀ ಜರದ್ಭಾಸೋ ಪೋದೀರ್ಷ್ವ ನಾರ್ಯಭಿ ಜೀವಲೋಕಂ** ಎಂಬ ಸೂತ್ರದಿಂದ (ಆ. ಗೃ. ೪-೨-೧೪) ವಿವೃತವಾಗಿರುವುದು.

ಹೇ ನಾರಿ ಜೀವಲೋಕಂ ಅಭಿ ಉತ್ ಈರ್ಷ್ವ—ಎಲೈ ಮೃತನಾದವನ ಪತ್ನಿಯೇ, ಶೋಕಿಸಬೇಡ, ಎದ್ದೇಳು. ಮೃತಶರೀರದಲ್ಲೇನಿದೆ ? ಆವನ ಆತ್ಮವು ಆ ಶರೀರವನ್ನು ಬಿಟ್ಟು ಪರಲೋಕಕ್ಕೆ ಹೊರಟುಹೋಗಿದೆ ಆದ್ದರಿಂದ ಆ ಮೃತ ಕಳೇಬರದ ಸಂಪರ್ಕವನ್ನು ಬಿಟ್ಟು ಇತ್ತ ಬಾ. ಜೀವಂತರಾಗಿರುವ ಬಂಧುಬಾಂಧವರು ವಾಸಿಸು

ತ್ತಿರುವ ಈ ಲೋಕವನ್ನು ಎಂದರೆ ನಿನ್ನ ಮನೆಗೆ ಹೊರಡಲುದ್ಯುಕ್ತಳಾಗು. ಜೀವಂತರಾಗಿರುವವರು, ಜೀವಂತರು ವಾಸಿಸುವ ಈ ಲೋಕದಲ್ಲಿ ತಮ್ಮ ಆಯುಸ್ಸಿರುವವರೆಗೆ ವಾಸಿಸಲು ಪ್ರಯತ್ನಿಸಬೇಕೇ ಹೊರತು ಪರಲೋಕಕ್ಕೆ ಹೊರಟು ಹೋದ ಬಳಿಕ ಇಲ್ಲಿ ಉಳಿದಿರುವ ಜಡಶರೀರದಲ್ಲಿ ಮಮತೆಯನ್ನಿಡುವುದು ಯುಕ್ತವಲ್ಲ. ಆದ್ದರಿಂದ ಈ ನಿನ್ನ ಪತಿಯ ಮೃತಶರೀರವನ್ನು ಅಲ್ಲಿಯೇ ಬಿಟ್ಟು ಎದ್ದು ಬಾ.

ಗತಾಸುಂ ಏತಂ ಉಪ ಶೇಷೇ, ಏಹಿ—ಎಲೈ ಸ್ತ್ರೀಯೇ, ನೀನು ಅಪ್ಪಿಕೊಂಡಿರುವ ಈ ನಿನ್ನ ಪತಿಯ ಶರೀರದಲ್ಲಿ ಪ್ರಾಣವಿರುವುದಿಲ್ಲ. ಅದು ಮೃತಕಳೇಬರವು, ಕೇವಲ ಜಡವಸ್ತುವು. ಅದರ ಸಮೀಪದಲ್ಲಿ ಏಕೆ ಮಲಗಿರುವೆ ? ಶರೀರದಿಂದ ಹೊರಟುಹೋದ ಪ್ರಾಣವು ಪುನಃ ಹಿಂದಕ್ಕೆ ಬರುವುದಿಲ್ಲ ಆದ್ದರಿಂದ ಆ ಶರೀರವನ್ನು ಬಿಟ್ಟು ಎದ್ದು ಬಾ.

ಮೃತನಾದವನ ಪತ್ನಿಯು ತನ್ನ ಪತಿಯ ಕಳೇಬರವನ್ನು ಬಿಟ್ಟಿರಲಾರದೆ ಅದನ್ನಪ್ಪಿಕೊಂಡು ದುಃಖಿಸುತ್ತಾ ಯಾರ ಮಾತನ್ನೂ ಕೇಳದೆ ಆ ಶರೀರದೊಡನೆ ಸಹಗಮನಮಾಡಬೇಕೆಂದು ಉದ್ಯುಕ್ತಳಾಗಿರುವಾಗ ಆ ಸ್ತ್ರೀಯನ್ನು ಆ ಪ್ರಯತ್ನದಿಂದ ತಪ್ಪಿಸಿ ಹಿಂದಕ್ಕೆ ಮನೆಗೆ ಕರೆತರುವುದಕ್ಕಾಗಿ ಆ ಸ್ತ್ರೀಯ ಮೈದುನನು ಎಂದರೆ ಮೃತನಾದವನ ತಮ್ಮನು ಪ್ರಯತ್ನಿಸುವನು. (ಪ್ರಯತ್ನಿಸಬೇಕು) । ಮೃತನಿಗೆ ತಮ್ಮನಿಲ್ಲದಿದ್ದರೆ ಆ ಕಾರ್ಯವನ್ನು ಎಂದರೆ ಮೃತನ ಪತ್ನಿಗೆ ಸಮಾಧಾನವನ್ನು ಮಾಡಿ ಹಿಂದಕ್ಕೆ ಕರೆತರುವ ಕಾರ್ಯವನ್ನು ಪುರೋಹಿತ, ಶಿಷ್ಯ ಅಥವಾ ಬಹಳಕಾಲದಿಂದಲೂ ಮೃತನ ಸೇವೆ ಮಾಡುತ್ತಿದ್ದ ಸೇವಕ ಇವರಲ್ಲಿ ಯಾರಾದರೂ ಆ ಕಾರ್ಯವನ್ನು ಮಾಡಬಹುದು. ಪ್ರಕೃತ ಋಕ್ಕಿನಲ್ಲಿ ಸ್ತ್ರೀಯ ಮೈದುನನು (ಮೃತನ ತಮ್ಮನು) ಅವಳನ್ನು ಉದ್ದೇಶಿಸಿ **ಉದೀರ್ಷ್ವ** ಎಂಬ ವಾಕ್ಯದಿಂದ ಸಂಬೋಧಿಸಿರುವನು.

ಹಸ್ತಗ್ರಾಭಸ್ಯ ದಿಧಿಷೋಃ ತವ ಪತ್ಯುಃ ಇದಂ ಜನಿತ್ವಂ ಅಭಿ ಸಂ ಬಭೂಥ—ಎಲೈ ಸ್ತ್ರೀಯೇ, ವಿವಾಹಕಾಲದಲ್ಲಿ ನಿನ್ನ ಪಾಣಿಗ್ರಹಣಮಾಡಿದವನೂ ಪುತ್ರಾರ್ಥವಾಗಿ ನೀನು ಗರ್ಭವನ್ನು ಧರಿಸುವಂತೆ ಮಾಡಲು ಸಮರ್ಥನಾಗಿಹ ಈ ನಿನ್ನ ಪತಿಯ ವಿಷಯದಲ್ಲಿ ಪತ್ನಿಯ ಧರ್ಮವನ್ನನುಸರಿಸಿ ಅವನ ಮೃತಶರೀರದೊಡನೆ ಸಹಗಮನ ಮಾಡಬೇಕೆಂದು ಮನಸ್ಸನ್ನು ಮಾಡಿರುವೆ. ಆದರೆ ಹಾಗೆ ಮಾಡಬೇಡ. ನಿನಗೆ ವಂಶಾಭಿವೃದ್ಧಿಕಾರಕನಾದ ಪುತ್ರನು ಜನಿಸಿಲ್ಲವಾದಕಾರಣ ಅಂತಹ ಪುತ್ರನನ್ನು ದೇವರನಿಂದ (ಮೈದುನನಿಂದ) ಪಡೆದು ನಿನ್ನ ಪತಿಗೆ ಪರಲೋಕದಲ್ಲಿ ಸದ್ಗತಿಯನ್ನುಂಟುಮಾಡುವುದಕ್ಕಾಗಿ ಈ ನಿನ್ನ ಕೃತನಿಶ್ಚಯವನ್ನು ತ್ಯಜಿಸಿ ಪತಿಯ ಶರೀರವನ್ನು ಬಿಟ್ಟು ಎದ್ದು ಬಾ ಎಂದು ದೇವರನು (ಪತ್ನಿಯ ಮೈದುನನು ಎಂದರೆ ಪತಿಯ ತಮ್ಮನು) ಈ ವಾಕ್ಯವನ್ನು ಆ ಸ್ತ್ರೀಯನ್ನುದ್ದೇಶಿಸಿ ಹೇಳಿರುವನು.

ಪೂರ್ವಕಾಲದಲ್ಲಿ ಎಂದರೆ ವೇದಗಳ ಕಾಲದಲ್ಲಿ ಪತಿಯು ಪುತ್ರರಹಿತನಾಗಿ ಮೃತನಾದರೆ ಅವನ ಪತ್ನಿಯು ಪುತ್ರಾರ್ಥವಾಗಿ ದೇವರನಿಂದ ಎಂದರೆ ತನ್ನ ಪತಿಯ ಸಹೋದರ (ಮೈದುನ) ನಿಂದ ಒಬ್ಬ ಪುತ್ರನನ್ನು ಮಾತ್ರ ಪಡೆಯುವ ಪದ್ಧತಿ ಇದ್ದಿತು. ಈ ಕಾರಣಕ್ಕಾಗಿ ಪ್ರಕೃತ ಋಕ್ಕಿನಲ್ಲಿ ಮೃತನ ಪತ್ನಿಯನ್ನು ಸಹಗಮನಮಾಡಬೇಕೆಂದು ಮೈದುನನು ತಡೆದು ಅವಳನ್ನು ಹಿಂದಕ್ಕೆ ಎಂದರೆ ತನ್ನ ಮನೆಗೆ ಕರೆತರುವ ವಿಷಯವು ಉಕ್ತವಾಗಿದೆ. ಮೈದುನನು ತನ್ನ ಅಣ್ಣನ ಪತ್ನಿಯಲ್ಲಿ ಸಂಭೋಗಿಸಬಹುದೇ, ಆ ಪದ್ಧತಿ ಇತ್ತೇ ಎಂಬ ವಿಷಯದಲ್ಲಿ ಯಾವ ಅನುಮಾನಕ್ಕೂ ಕಾರಣವಿಲ್ಲದಂತೆ ಋಗ್ವೇದದಲ್ಲಿಯೇ ಬೇರೊಂದು ಕಡೆ ಈ ವಿಷಯದ ಪ್ರಸ್ತಾಪವಿದೆ—

कुह स्थिद्दोषा कुह वस्तोरश्विना कुहाभिपित्वं करतुः कुहोषतुः ।
को वां शयुत्रा विधवेव देवरं मर्यं न योषा कृणुते सधस्थ आ ॥
(ऋ. सं. ८०-४०-३)

ईं ऋक्किन ऋषियादा घोषा एंब स्त्रीयु अश्विनी देवतेगळन्नुद्देशिसि ईं रीति हेळुवळु— एलॅ अश्वीनीदेवतेगळे, नीवु रात्रॅ एल्लिद्दिरि ? हगलु एल्लिद्दिरि ? ईं दिवस निम्म बिडारवु एल्लित्तु ? यज्ञमाडुव यावं यजमानन गृहदल्लि मलगिद्दिरि ? मृतनादवन पत्नियु रात्रिकालदल्लि संभोगक्काग तन्न मैदुनननन्नु (पतिय तम्मनन्नु) आश्रयिसुवंते यावं यजमानन गृहदल्लि रात्रियन्नु कळॅदिरि ? एंदु अश्वीनीदेवतेगळन्नु विधविधवागि प्रश्नॆमाडिदाळॆ. ईं ऋक्किनल्लि **विधवेव देवरं मर्यं न योषा कृणुते सधस्थ आ** एंब वाक्यवु प्रकृत विषयवन्नु स्पष्टवागि तिळिसुवुदु. तन्न पतियन्नु कळॅदुकॊंड विधवॆयाद पत्नियु मनुष्यसंबंधियाद (मनुष्यनाद) तन्न मैदुनन जतॆयल्लि ऒंदे हासिगॆयल्लि मलगि अभिमुख (एदुरु)ननागि माडि उपचरिसुवंते एंदु ईं वाक्यद अर्धवु. यास्करु ईं विषयवागि—

क्व वसथः । कॊ वां शयने विधवेव देवरं । देवरः कस्मात् । द्वितीयो वर उच्यते । विधवा विधातृका भवति । विधवनाद्वा ।
(नि. ३-२३)

एंदु निर्वचनवन्नु हेळिदारॆ. एंदरॆ—एलॅ अश्विनीदेवतेगळे, नीवु रात्रॅ एल्लि मलगिद्दिरि ? पतिहीनळाद विधवॆयु तन्न मैदुननॊडनॆ ऒंदे हासिगॆयल्लि मलगुवंते नीवु बेरॆ एल्लियादरू मलगि रात्रियन्नु कळॅदिरा ? इल्लि देवर शब्दक्कॆ एरडनॆय वर एंदर्थवु. मृतनाद पतियॆ आ स्त्रीगॆ मॊदलनॆय वरनु देवर एंदरॆ मैदुननु विधवॆगॆ एरडनेय वरनु. विधवा एंब शब्दक्कॆ तन्ननु पोषिसि कापाडुव पतियन्नु कळॅदुकॊंड स्त्रीयु, पतिहीनळाद स्त्रीयु अथवा पतियु मृतनाद मेलॆ इतरर बळगॆ (ऒडि) होगि अवरन्नु आश्रयिसुवळु एंदु देवरशब्दक्कू विधवाशब्दक्कू अवयवार्थवन्नु हेळिदारॆ—

स्मृत्यादिग्रंथगळल्लि ईरीति हेळिरुवुदु कंडुबरुत्तदॆ—

यस्या म्रियेत कन्यायाा वाचा सत्ये कृते पतिः ।
कामनेन विधानेन निजो विंदेत देवरः ॥

विवाहकालदल्लि वाङ्निश्चयकर्मवु मुगिदिद्दरू विवाहकर्मवु पूर्तियागि नॆरवेरुवुदक्कॆ मॊदलें निश्चितनागिद्द पतियु मृतनादरॆ आ पतिय तम्मनु एंदरॆ मैदुननु क्रमवागि आ स्त्रीयन्नु मदुवॆमाडिकॊळ्ळबेकु एंदु हेळिदॆ. ऒंदुवेळॆ मृतनाद पुरुषनिगॆ सहोदरनु

ಇಲ್ಲದಿದ್ದಪಕ್ಷದಲ್ಲಿ ಅವನ ಸಂಬಂಧದವರಲ್ಲಿ ಅರ್ಹರಾದವರು ಮೃತನ ಪತ್ನಿಯನ್ನು ಪರಿಗ್ರಹಿಸಬೇಕೆಂದು ಹೇಳಿದೆ. ಪರಾಶರಮಹರ್ಷಿಯು—

ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇ ಚ ಪತಿತೇ೨ಪತೌ ।
ಪಂಚಸ್ವಾಪತ್ಸು ನಾರೀಣಾಂ ಪತಿರನ್ಯೋ ವಿಧೀಯತೇ ॥

ಎಂದು ಹೇಳಿದಾರೆ ಎಂದರೆ, ತಾನು ವಿವಾಹಮಾಡಿಕೊಂಡ ಪತಿಯು ಮೃತನಾಗುವುದು ಅಥವಾ ಬಹುಕಾಲದವರೆಗೆ ದೇಶಾಂತರಕ್ಕೆ ಹೊರಟುಹೋಗಿ ಬರುವುದು ಅಥವಾ ಬದುಕಿರುವುದೇ ನಿಶ್ಚಯವಿಲ್ಲದಿರುವುದು, ಸಂಭೋಗಕ್ಕೆ ಅನರ್ಹನಾಗಿ ನಪುಂಸಕನಾಗಿರುವುದು, ಪತಿತ, ಎಂದರೆ ಅಸತ್ಯರ್ಮಾದಿಗಳಿಂದ ಜಾತಿಭ್ರಷ್ಟನಾಗಿರುವುದು, ಈ ಸಂದರ್ಭಗಳಲ್ಲಿ ಆ ಸ್ತ್ರೀಯು ಬೇರೊಬ್ಬ ಪತಿಯನ್ನು ವಿವಾಹವಾಗಬಹುದೆಂದು ಹೇಳಿದೆ. ಪತಿಯು ಮೃತನಾದರೆ ಅವನ ತಮ್ಮ ಅಥವಾ ಹತ್ತಿರದ ಸಂಬಂಧಿಯೋರ್ವನು ಆ ಸ್ತ್ರೀಯನ್ನು ಮದುವೆಮಾಡಿಕೊಳ್ಳುವ ಪದ್ಧತಿಯು ಇತರ ಅನೇಕ ದೇಶಗಳ ಕಾಡುಜನರಲ್ಲಿ ಈಗಲೂ ಕಂಡುಬರುತ್ತದೆ.

॥ ಸಂಹಿತಾಪಾಠಃ ॥

ಧನುರ್ಹಸ್ತಾದಾದದಾನೋ ಮೃತಸ್యాస్మೇ ಕ್ಷತ್ರಾಯ ವರ್ಚಸೇ ಬಲಾಯ ।
ಅತ್ರೈವ ತ್ವಮಿಹ ವಯಂ ಸುವೀರಾ ವಿಶ್ವಾಃ ಸ್ಪೃಧೋ ಅಭಿಮಾತೀರ್ಜಯೇಮ ॥ ೯ ॥

॥ ಪದಪಾಠಃ ॥

ಧನುಃ । ಹಸ್ತಾತ್ । ಆ೨ದದಾನಃ । ಮೃತಸ್ಯ । ಅಸ್ಮೈ ಇತಿ । ಕ್ಷತ್ರಾಯ । ವರ್ಚಸೇ । ಬಲಾಯ ।
ಅತ್ರ । ಏವ । ತ್ವಂ । ಇಹ । ವಯಂ । ಸು೨ವೀರಾಃ । ವಿಶ್ವಾಃ । ಸ್ಪೃಧಃ । ಅಭಿ೨ಮಾತೀಃ । ಜಯೇಮ ॥

॥ ಸಾಯಣಭಾಷ್ಯಂ ॥

ಕ್ಷತ್ರಿಯಸ್ಯ ಧನುರ್ಹಸ್ತಾದಿತ್ಯನಯಾ ಧನುಃ ಪ್ರಹರೇತ್ । ಸೂತ್ರಿತಂ ಚ । ಧನುರ್ಹಸ್ತಾದಾದದಾನೋ ಮೃತಸ್ಯೇತಿ ಧನುಃ । ಆ. ಗೃ. ೪-೨-೨೦ । ಇತಿ ॥

ಮೃತಸ್ಯ ಕ್ಷತ್ರಿಯಸ್ಯ ಹಸ್ತಾದ್ಧನುರಾದದಾನಃ । ಕಮರ್ಥಂ । ಅಸ್ಮೈ ಅಸ್ಮಾಕಂ ಕ್ಷತ್ರಾಯ ಪ್ರಜಾಪಾಲನಸಮರ್ಥಾಯ ಬಲಾಯ ವರ್ಚಸೇ ತೇಜಸೇ ಬಲಾಯ ಸೇನಾಲಕ್ಷಣಾಯ ಚ ಧನುರಾದದಾನೋ೨ಹಂ ಬ್ರವೀಮಿತಿ ಶೇಷಃ । ಕಮಿತಿ । ತ್ವಮತ್ರೈವಾಸ್ಮಿನ್ಸ್ಥಾನ ಏವ ಭವ ವಯಂ ಚೇಹಾಸ್ಮಿಲ್ಲೋಕೇ ಸುವೀರಾಃ ಸುಪುತ್ರಯುಕ್ತಾ ಭವಂತೋ ವಿಶ್ವಾಃ ಸರ್ವಾನಭಿಮಾತೀರಭಿಮನ್ಯಮಾನಾನ್ ಸ್ಪೃಧಃ ಸಂಘರ್ಷಯಿತ್ರೀನ್ಪಾಪಕಾನ್ಶತ್ರೂನ್ಜಯೇಮ । ಸಹೇಮಹಿ ॥

। ಪ್ರತಿಪದಾರ್ಥ ।

ಅಸ್ಮೈ—ನಮ್ಮ । **ಕ್ಷತ್ರಾಯ**—ಬಲಕ್ಕಾಗಿಯೂ । **ವರ್ಚಸೇ**—ತೇಜಸ್ಸಿಗಾಗಿಯೂ । **ಬಲಾಯ**—ವೀರ್ಯಕ್ಕಾಗಿಯೂ । **ಮೃತಸ್ಯ**—ಮೃತನಾದ ಈ ಕ್ಷತ್ರಿಯನ । **ಹಸ್ತಾತ್**—ಕೈಯಿನಿಂದ । **ಧನುಃ**—ಧನುಸ್ಸನ್ನು । **ಆದದಾನಃ**—ತೆಗೆದುಕೊಂಡು (ನಾನು ಹೀಗೆ ಹೇಳುತ್ತೇನೆ) । **ತ್ವಂ**—ನೀನು । **ಅತ್ರೈವ**—ಇಲ್ಲಿಯೇ ಇರು । **ವಯಂ**—ನಾವು । **ಇಹ**—ಈ ಲೋಕದಲ್ಲಿ । **ಸುವೀರಾಃ**—ಉತ್ತಮವಾದ ಪುತ್ರಪೌತ್ರಾದಿಗಳಿಂದ ಕೂಡಿ । **ಅಭಿಮಾತಿಷಃ**—ಎದುರುಬೀಳುವವರೂ । **ಸ್ಪೃಧಃ**—ಹಿಂಸಕರೂ ಆದ । **ವಿಶ್ವಾಃ**—ಸಕಲ ಶತ್ರುಗಳನ್ನೂ । **ಜಯೇಮ**—ಜಯಿಸುತ್ತೇವೆ.

। ಭಾವಾರ್ಥ ।

ಮೃತನಾದ ಈ ಕ್ಷತ್ರಿಯನ ಕೈಯಿನಿಂದ ನಮ್ಮ ಬಲಕ್ಕಾಗಿಯೂ, ತೇಜಸ್ಸಿಗಾಗಿಯೂ, ವೀರ್ಯಕ್ಕಾಗಿಯೂ ಧನುಸ್ಸನ್ನು ತೆಗೆದುಕೊಂಡು ನಾನು ಹೀಗೆ ಹೇಳುತ್ತೇನೆ. ಎಲೈ ಮೃತನೇ, ನೀನು ಇಲ್ಲಿಯೇ ಇರು. ನಾವು ಈ ಲೋಕದಲ್ಲಿ ಉತ್ತಮವಾದ ಪುತ್ರಪೌತ್ರಾದಿಗಳಿಂದ ಕೂಡಿ ನಮಗೆ ಎದುರುಬೀಳುವವರೂ, ಹಿಂಸಕರೂ ಆದ ಸಕಲ ಶತ್ರುಗಳನ್ನೂ ಜಯಿಸುತ್ತೇನೆ.

English Translation

Taking his bow from the hand of the dead man, for the sake of our vigour, energy and strength, (I say) you are there; may we (who are) here, blessed with male offspring, overcome all the enemies who assail us.

॥ ವಿಶೇಷವಿಷಯಗಳು ॥

ಮೃತನಾದ ಪುರುಷನು ಕ್ಷತ್ರಿಯನಾಗಿದ್ದರೆ ಆಗ ಅವನ ಕೈಯಲ್ಲಿದ್ದ ಧನುಸ್ಸನ್ನು ತೆಗೆದುಕೊಳ್ಳುವಾಗ **ಧನುರ್ಹಸ್ತಾತ್** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಧನುರ್ಹಸ್ತಾದಾದದಾನೋ ಮೃತಸ್ಯೇತಿ ಧನುಃ** ಎಂಬ ಸೂತ್ರದಿಂದ (ಆ. ಗೃ. ೪ ೨-೨೦) ವಿವೃತವಾಗಿರುವುದು.

। ಸಂಹಿತಾಪಾಠಃ ।

ಉಪ । ಸರ್ಪ । ಮಾತರಂ । ಭೂಮಿಂ । ಏತಾಂ । ಉರುವ್ಯಚಸಂ । ಪೃಥಿವೀಂ । ಸುಶೇವಾಂ ।

ಊರ್ಣಮ್ರದಾ । ಯುವತಿರ್ದಕ್ಷಿಣಾವತ । ಏಷಾ । ತ್ವಾ । ಪಾತು । ನಿರ್ಋತೇರುಪಸ್ಥಾತ್ ॥ ೧೦ ॥

॥ पदपाठः ॥

उप । सर्प । मातरं । भूमिं । एताम् । उरुऽव्यचसं । पृथिवीम् । सुऽशेवाम् ।
ऊर्णम्ऽरदाः । युवतिः । दक्षिणाऽवते । एषा । त्वा । पातु । निःऽऋतेः । उपऽस्थात् ॥ १० ॥

॥ सायणभाष्यं ॥

दीक्षितमरण उप सर्प मातरमित्याद्याश्चतस्रः शंसनीयाः । सूत्रितं च । उप सर्प मातरं भूमिमेतामिति चतस्रः सोमे एकेभ्यः । आ. ६-१० । इति ॥ उप सर्पेत्यनया संचितास्थिनि गर्ते निदधाति । आ. गृ. ४-४-४ ॥

मातरं मातृभूतां भूमिमुस्माभिर्भूमौ निधीयमानस्त्वमुप सर्प । उपगच्छ । अनुप्रवेशेत्यर्थः । एतां कीदृशीं । उरुव्यचसं बहुव्याप्तिकां पृथिवीं विस्तीर्णां सुशेवां सुसुखां । सर्वेषां सुखदात्रीमित्यर्थः । तामुपगच्छ । युवतिर्यौवनान्विता स्त्रीरूपेयं भूमिर्दक्षिणावते यज्ञियाय दीयमानेन धनवते यजमानायोर्णम्रदाः । ऊर्णेवोर्णास्तुक इव मृदुर्भवति । सुकुमारा भवति । न बाधयित्रीत्यर्थः । सैषा पृथिवी निर्ऋतेर्मृत्युदेवतायाः उपस्थात्समीपस्थानात्त्वा त्वामुस्थिरूपं यजमानं पातु । रक्षतु ॥

॥ प्रतिपदार्थ ॥

उरुव्यचसं—सर्वव्यापकवू । **पृथिवीं**—विस्तृतवागि हरडिरुवुदू । **सुशेवाम्**—सुखकारकवू । **मातरं**—मातृरूपवू आद । **एताम् भूमिम्**—ई भूमिगे । **उप सर्प**—प्रवेशिसु । **युवतिः**—स्त्रीस्वरूपवुळ्ळ ई पृथ्विय्यु । **दक्षिणावते**—उदारवागि दानमाडिद यजमाननिगे । **ऊर्णम्रदाः**—उण्णेयंते मेत्तगिरुत्तदे । **एषा**—ई पृथ्विय्यु । **निर्ऋतेः**—मृत्युदेवतेय । **उपस्थात्**—समीपस्थानदिंद । **त्वा**—निन्नन्नु । **पातु**—रक्षिसलि.

॥ भावार्थ ॥

सर्वव्यापकवू, विस्तृतवागि हरडिरुवुदू, मातृरूपवू सुखकारकवू आद ई भूमिगे प्रवेशिसु. स्त्रीस्वरूपवुळ्ळ ई पृथ्विय्यु उदारवागि दानमाडिद यजमाननिगे उण्णेयंते मेत्तगिरुत्तदे. ई पृथ्विय्यु मृत्युदेवतेय समीपस्थानदिंद निन्नन्नु रक्षिसलि.

English Translation

Go to this your mother-earth, the wide-spread, delightful earth, this virgin (earth is) as soft as wool, to the liberal (worshipper); may she protect you from the proximity of Nirriti.

॥ ವಿಶೇಷವಿಷಯಗಳು ॥

ಯಜ್ಞದಲ್ಲಿ ಯಜ್ಞದೀಕ್ಷೆಯನ್ನು ಕೈಗೊಂಡಿದ್ದ ಯಜಮಾನನು ಯಜ್ಞಸಮಾಪ್ತಿಯಾಗುವುದಕ್ಕೆ ಮೊದಲೇ ಮೃತನಾದಲ್ಲಿ **ಉಪ ಸರ್ಪ** ಎಂದು ಮೊದಲಾಗುವ ನಾಲ್ಕು ಋಕ್ಕುಗಳನ್ನು (೧೦-೧೩ ಋಕ್ಕುಗಳನ್ನು) ಪರಿಸ ಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಉಪ ಸರ್ಪ ಭೂಮಿಮೇತಾಮಿತಿ ಚತಸ್ರಃ ಸೋಮ ಏಕೇಭ್ಯಃ** ಎಂಬ ಸೂತ್ರದಿಂದ (ಅ. ೬-೧೦) ವಿವೃತವಾಗಿರುವುದು. ಮತ್ತು ಅಪರಕರ್ಮದಲ್ಲಿ ಶರೀರದ ದಹನಾನಂತರ ಅಸ್ಥಿ ಸಂಚಯನವನ್ನು ಮಾಡಿ ಆ ಅಸ್ಥಿಗಳನ್ನು ಒಂದು ಹಳ್ಳದಲ್ಲಿ (ಅಥವಾ ನದ್ಯಾದಿಜಲಾಶಯಗಳಲ್ಲಿ) ಹಾಕುವಾಗ ಈ ಮಂತ್ರವನ್ನು ಪರಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಉಪ ಸರ್ಪ ಇತ್ಯನಯಾ ಸಂಚಿತಾನ್ಯಸ್ಥೀನಿ ಗರ್ತೇ ನಿದಧ್ಯುಃ** ಎಂಬ ಸೂತ್ರದಿಂದ (ಆ ಗೃ. ೪ ೫-೫) ವಿವೃತವಾಗಿರುವುದು.

ಈ ಋಕ್ಕಿನಲ್ಲಿಯೂ ಮುಂದಿನ ಮೂರು ಋಕ್ಕುಗಳಲ್ಲಿಯೂ ಸಾಯಣರು ಮೃತನಾದವನ ಅಸ್ಥಿಗಳನ್ನು ಹೇಳುವಾಗ ಪರಿಸುವ ಮಂತ್ರಗಳು ಉಕ್ತವಾಗಿವೆಯೆಂದು ಹೇಳಿ ಅದರಂತೆ ಅರ್ಥವಿವರಣೆಮಾಡಿದಾರೆ. ಋಕ್ಕುಗಳಲ್ಲಿ ಅಸ್ಥಿ ಅಥವಾ ಆ ಅರ್ಥವನ್ನು ಸೂಚಿಸುವ ಯಾವ ಶಬ್ದವೂ ಇಲ್ಲದಿರುವುದರಿಂದ ಅನೇಕ ಪಾಶ್ಚಾತ್ಯಪಂಡಿತರು-ಈ ಋಕ್ಕುಗಳಲ್ಲಿ ಮೃತಶರೀರವನ್ನು ಭೂಮಿಯಲ್ಲಿ ಹೂಳುವ ಕ್ರಮವು ವಿವರಿಸಲ್ಪಟ್ಟಿದೆ. ಆದ್ದರಿಂದ ಆ ಕಾಲದಲ್ಲಿ ಶವವನ್ನು ಅಗ್ನಿಯಲ್ಲಿ ದಹಿಸುವ ಪದ್ಧತಿಯಲ್ಲದೆ ಭೂಮಿಯಲ್ಲಿ ಹೊಳುವುದೂ ರೂಢಿಯಲ್ಲಿತ್ತು ಎಂದು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯವು ಸರಿಯಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

॥ ಸಂಹಿತಾಪಾಠಃ ॥

ಉಚ್ಛ್ವಂಚಸ್ವ ಪೃಥಿವಿ ಮೂ ನಿ ಬಾಧಥಾಃ ಸೂಪಾಯನಾಸ್ಮೈ ಭವ ಸೂಪವಂಚನಾ ।
ಮಾತಾ ಪುತ್ರಂ ಯಥಾ ಸಿಚಾಭ್ಯೇನಂ ಭೂಮ ಊರ್ಣುಹಿ ॥ ೧೧ ॥

॥ ಪದಪಾಠಃ ॥

ಉತ್ । ಶ್ವಂಚಸ್ವ । ಪೃಥಿವಿ । ಮಾ । ನಿ । ಬಾಧಥಾಃ । ಸುಉಪಾಯನಾ । ಅಸ್ಮೈ । ಭವ । ಸುಉ-ಪವಂಚನಾ ।
ಮಾತಾ । ಪುತ್ರಂ । ಯಥಾ । ಸಿಚಾ । ಅಭಿ । ಏನಂ । ಭೂಮೇ । ಊರ್ಣುಹಿ ॥ ೧೧ ॥

॥ ಸಾಯಣಭಾಷ್ಯಂ ॥

ಉಚ್ಛ್ವಂಚಸ್ವೇತ್ಯೇತಯಾ ಪಾಂಸೂನವಕಿರೇತ್ । ಸೂತ್ರ್ಯತೇ ಹಿ । ಉತ್ತರಯಾ ಪಾಂಸೂನವಕಿರೇತ್ । ಆ. ಗೃ. ೪-೫-೬ । ಇತಿ ॥

ಹೇ ಪೃಥಿವಿ ಉಚ್ಛ್ವಂಚಸ್ವ । ಊರ್ಧ್ವಂಗತೋಚ್ಛ್ವಸನಮೇನಂ ಕುರು । ಅಧಸ್ತಾನ್ಮಾ ಕೃಥಾ ಇತ್ಯರ್ಥಃ । ಕಂಚಿ ಮಾ ನಿ ಬಾಧಥಾಃ । ಮಾ ಸಂಪೀಡಯ । ತಥಾಸ್ಮೈ ಯಜಮಾನಾಯಾರ್ಥಂ ಸೂಪಾಯನಾ ಶೋಭನೋಪಗಮನಾ ಸೂಪಚಾರಿಕಾ ಭವೇತ್ಯರ್ಥಃ । ಸೂಪವಂಚನಾ । ಉಪವಂಚನಂ ಪ್ರಲಂಭನಂ ಶೋಭನಪ್ರಲಂಭಾ ಸುಪ್ರತಿಷ್ಠಾ ಭವ । ಅಪಿ ಚ ಮಾತಾ ಪುತ್ರಮಾತ್ಮೀಯಂ ಬಾಲಕಂ ಸಿಚಾ ವಸ್ತ್ರಾಂತೇನ ಯಥಾಚ್ಛಾದಯತಿ ತದ್ವದ್ಧೇ ಭೂಮಿ ಏನಮಸ್ಥಿರೂಪಂ ಯಜಮಾನಂ ತ್ವಮಭ್ಯೂರ್ಣುಹಿ । ಅಭಿಮುಖ್ಯೇನಾಚ್ಛಾದಯ ॥

॥ ಪ್ರತಿಪದಾರ್ಥ ॥

ಪೃಥಿವಿ—ಎಲೈ ಪೃಥ್ವಿಯೇ । ಉಚ್ಛ್ವಂಚಸ್ವ—ಇವನನ್ನು ಮೇಲುಸಿರುಬಿಡುವಂತೆ ಮಾಡು । ಮಾ ನಿ ಬಾಧಥಾಃ—ಇವನನ್ನು ಹಿಂಸಿಸಬೇಡ । ಅಸ್ಮೈ—ಈ ಯಜಮಾನನಿಗೆ । ಸೂಪಾಯನಾ—ಶ್ರೇಷ್ಠವಾದ ಸುಖಕಾರಕಳಾಗು । ಸೂಪವಂಚನಾ ಭವ—ಉತ್ತಮವಾದ ಆಶ್ರಯದಾತಳಾಗು । ಮಾತಾ—ತಾಯಿಯು । ಪುತ್ರಂ—ಪುತ್ರನನ್ನು । ಸಿಚಾ—ತನ್ನ ಸೆರಗಿನಿಂದ । ಯಥಾ—ಯಾವ ರೀತಿ ಹೊದ್ದಿಸುವಳೋ ಹಾಗೆ । ಭೂಮೇ—ಎಲೈ ಪೃಥ್ವಿಯೇ । ಏನಂ—ಮೃತನಾದ ಈ ಯಜಮಾನನನ್ನು । ಅಭ್ಯೂರ್ಣುಹಿ—ಮರೆಮಾಡು.

॥ ಭಾವಾರ್ಥ ॥

ಎಲೈ ಪೃಥ್ವಿಯೇ, ಇವನನ್ನು ಮೇಲುಸಿರು ಬಿಡುವಂತೆ ಮಾಡು. ಇವನನ್ನು ಹಿಂಸಿಸಬೇಡ. ಈ ಯಜಮಾನನಿಗೆ ಶ್ರೇಷ್ಠವಾದ ಸುಖಕಾರಕಳಾಗು. ಉತ್ತಮವಾದ ಆಶ್ರಯದಾತಳಾಗು. ತಾಯಿಯು ಪುತ್ರನನ್ನು ತನ್ನ ಸೀರೆಯ ಸೆರಗಿನಿಂದ ಹೊದ್ದಿಸುವಂತೆ, ಎಲೈ ಭೂಮಿಯೇ, ಮೃತನಾದ ಈ ಯಜಮಾನನನ್ನು ಮರೆಮಾಡು.

English Translation

Earth, rise up above him; oppress him not; he attentive to him (and) comfortable; cover him up earth, as a mother covers her ehild with the sklrt of her garment.

॥ ವಿಶೇಷವಿಷಯಗಳು ॥

ಮೃತಶರೀರವನ್ನು ಅಥವಾ ಅಸ್ಥಿಕುಂಭವನ್ನು ಭೂಮಿಯಲ್ಲಿ ಹೂಳಿ ಆದರ ಮೇಲೆ ಮಣ್ಣನ್ನು ಹಾಕಿ ಮುಚ್ಚುವಾಗ **ಉಚ್ಛ್ವಂಚಸ್ವ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಉತ್ತರಯಾ ಪಾಂಸೂನವಕಿರೇತ್** ಎಂಬ ಸೂತ್ರದಿಂದ (ಆ. ಗೃ. ೪-೫-೬) ವಿವೃತವಾಗಿರುವುದು.

संहितापाठः ।

ऊ॒च्छ्व॒ञ्चमा॑ना पृथि॒वी सु ति॑ष्ठतु स॒हस्रं॑ मि॒त उप॒ हि श्र॑यंताम् ।
ते गृ॒हासो॑ घृ॒तश्चु॒तो॑ भवंतु वि॒श्वाहा॑स्मै॒ शर॑णाः सन्त्व॒त्र ॥

॥ पदपाठः ॥

ऊ॒त्स्व॒ञ्चमा॑नाः । पृ॒थि॒वी । सु । ति॒ष्ठ॒तु॒ । स॒हस्र॑म् । मि॒तः । उप॑ । हि । श्र॒यं॒ता॒म् ।
ते । गृ॒हासः॑ । घृ॒त॒ऽश्चु॒तः॑ । भ॒व॒न्तु॒ । वि॒श्वऽअ॑हा । अ॒स्मै॒ । शर॑णाः । स॒न्तु॒ । अ॒त्र ॥ ३१ ॥

। सायणभाष्यं ।

पांसुभिः प्रच्छाद्यैतां परंति । ऊच्छ्वञ्चमानास्किंचमवप्वभ्योर्ध्वं गच्छंतीं पृथिवी सु तिष्ठतु । प्रतिष्ठिता भवतु । किंच सहस्रं सहस्रसंख्याका मितः प्रक्षिप्ताः ॥ मिनोतेरौणादिके कर्मणि क्विपि तुगागमः । ततो जस् ॥ यद्वा । सहस्रं । तृतीयार्थे प्रथमा । मित इति निपातं रूपं । व्यत्ययेन बहुवचनस्यैकवचनं । स्वरो वृषादित्वाद्द्रप्स्वयः ॥ सहस्रेण संमिता बहुसंख्याकाः । पार्थिवाः पांसव उप श्रयंतां । एनमुपसेवंतां । तं सपरिवार्य तिष्ठंत्वित्यर्थः । हिरवधारणे । तथा ते पांसवोऽस्मै गृहासो गृहा भवंतो घृतश्चुतो घृतस्योदकस्य सर्पिषो वा क्षारयितारो भवंतु । अत्रास्मिंल्लोके विश्वाहा सर्वेष्वहःसु सर्वदास्मा अस्य शरणाः संतु । आश्रयभूता भवंतु ॥

। प्रतिपदार्थ ।

ऊच्छ्वञ्चमाना—मृतन मेले हरडिद । पृथिवी—पृथ्वियु । सु तिष्ठतु—भद्रवाद स्थानवन्नु हॊंदलि । मितः—अवन मेले इडल्पट्ट । सहस्रं—सहस्रसंख्याकवाद रेणुगळू । उप श्रयंतां—अवनन्नु सुत्तुवरिदिरलि । ते—ई रेणुगळु । गृहासः—मृतनिगे आश्रयस्थानगळागियू । घृतश्चुतः—उदकस्रावि गळागियू । भवंतु—आगिरलि । अत्र—ई स्थानदल्लि । विश्वाहा—सकलदिनगळल्लियू । अस्मै—ई यजमाननिगे । शरणाः संतु—आश्रयवन्नु कल्पिसलि.

। भावार्थ ।

मृतन शरीरद मेले हरडिद पृथ्वियु भद्रवाद स्थानवन्नु हॊंदलि. अवन मेले इडल्पट्ट सहस्रारु रेणुगळु अवनन्नु सुत्तुवरिदिरलि. ई रेणुगळु मृतनिगे आश्रयस्थानगळागियू,

ಉದಕಸ್ರಾವಿಗಳಾಗಿಯೂ ಆಗಿರಲಿ. ಈ ಸ್ಥಾನದಲ್ಲಿ ಸಕಲದಿನಗಳಲ್ಲಿಯೂ ಈ ಯಜಮಾನನಿಗೆ ಆಶ್ರಯವನ್ನು ಕಲ್ಪಿಸಲಿ.

English Translation

May the earth heaped over him lie light : may thousands of particles (of dust) envelope him ; may these mansions distil ghee (for him) ; may they every day be an asylum to him in this world.

॥ ಸಂಹಿತಾಪಾಠಃ ॥

ಉತ್ತೇ॑ స్తభ్నామి పృథి॒వీం త్వత్పరీ॒మం లో॒కం নি॒দধ॒న్మో॑ అ॒హం రి॑షం ।

ఏ॒తాం స్థూ॒ణాం పి॒తరో॑ ధారయంతు తే॑ఽత్రా॒ యమ॑నః సా॒దనా॑ తే మినోతు ॥ ౧౪ ॥

॥ ಪದಪಾಠಃ ॥

ఉత్ । తే॒ । స్త॒భ్నా॒మి॒ । పృ॒థి॒వీ॒మ్ । త్వత్ । పరి॑ । ఇ॒మమ్ । లో॒కమ్ । নি॒ऽద॒ధత్ । మో॒ ఇతి॑ । అ॒హమ్ । రి॒ష॒మ్ ।

ఏ॒తామ్ । స్థూ॒ణామ్ । పి॒తరః॑ । ధా॒ర॒య॒న్తు॒ । తే॒ । అత్ర॑ । య॒మన॑ । సదనా । తే॒ । మి॒నో॒తు॒ ॥

॥ ಸಾಯಣಭಾಷ್ಯಂ ॥

ఉత్తే॑ స్తభ్నామీతి కపాలేనాస్థీన్యపిదధ్యాత్ । సూత్రితం చ । ఉత్తే॑ స్తభ్నామీతి కపాలేనాపిధాయ । ఆ. గృ. ౪-౫.౮ । ఇతి ॥

హే అస్థికుంభ త్వత్పరి । పరిశబ్దయోగే పంచమీ । తవోపరి తే త్వదీయేన కపాలేన పృథివీమున్స్తభ్నామి । ప్రతిబధ్నామి । యథా పృథివీ తవోపరి మా గచ్ఛతి తథాపిదధామీత్యర్థః । ఇమం లోకం కపాలలక్షణం లోష్టం నిదధదుపరి స్థాపయన్నహం మో రిషం । మా హింసిషం । కంచిత్కాం మయా నిహితాం స్థూణాం తే త్వదీయాం పృథివ్యా ధారయిత్రీం కపాలలక్షణాం పితరో ధారయంతు । నిశ్చలాం కుర్వంతు । తతస్తే త్వదీయేఽస్మిన్స్థానే యమనః పితృపతిః సదనాని స్థానాని మినోతు । పరిచ్ఛినత్తు । కరోత్విత్యర్థః ॥

॥ ಪ್ರತಿಪದಾರ್ಥ ॥

(ಎಲೈ ಅಸ್ಥಿಕುಂಭವೇ) **ತ್ವತ್ಪರಿ**—ನಿನ್ನ ಮೇಲೆ । **ತೇ**—ನಿನ್ನ ಕಪಾಲದಿಂದಲೇ । **ಪೃಥಿವೀಂ**—ಮಣ್ಣನ್ನು । **ಉತ್ ಸ್ತಭ್ನಾಮಿ**—ಹರಡುತ್ತೇನೆ । **ಇಮಂ ಲೋಗಂ**—ಈ ಮಣ್ಣಿನ ಹೆಂಟಿಯನ್ನು । **ನಿದಧತ್**—ಇಡುವಾಗ । **ಅಹಂ**—ನಾನು । **ಮೋ ರಿಷಂ**—ನಿನ್ನನ್ನು ಹಿಂಸಿಸದಂತಿರಲಿ । **ಏತಾಂ**—ನನ್ನಿಂದ ನಿಕ್ಷಿಪ್ತವಾದ । **ತೇ**—ನಿನ್ನ । **ಸ್ಥೂಣಾಂ**—ಈ ಸ್ಮಾರಕಸ್ತಂಭವನ್ನು । **ಪಿತರಃ**—ಪಿತೃಗಳು । **ಧಾರಯಂತು**—ಸ್ಥಿರವಾಗಿರುವಂತೆ ಮಾಡಲಿ । **ಯಮಃ**—ಯಮನು। **ತೇ**—ನಿನಗೆ । **ಅತ್ರ**—ಇಲ್ಲಿ । **ಸದನಾ**—ವಾಸಸ್ಥಾನವನ್ನು । **ಮಿನೋತು**—ನಿರ್ಮಿಸಲಿ.

॥ ಭಾವಾರ್ಥ ॥

ಎಲೈ ಅಸ್ಥಿಕುಂಭವೇ, ನಿನ್ನ ಮೇಲೆ ಈ ಕಪಾಲದಿಂದ ಮಣ್ಣನ್ನು ತೆಗೆದು ಹರಡುತ್ತೇನೆ. ಈ ಮಣ್ಣಿನ ಹೆಂಟಿಯನ್ನು ಇಡುವಾಗ ನಾನು ನಿನ್ನನ್ನು ಹಿಂಸಿಸದಂತಿರಲಿ. ನನ್ನಿಂದ ನಿಕ್ಷಿಪ್ತವಾದ ನಿನ್ನ ಈ ಸ್ಮಾರಕಸ್ತಂಭವನ್ನು ಪಿತೃಗಳು ಸ್ಥಿರವಾಗಿರುವಂತೆ ಮಾಡಲಿ. ಯಮನು ನಿನಗೆ ಇಲ್ಲಿ ವಾಸಸ್ಥಾನವನ್ನು ನಿರ್ಮಿಸಲಿ.

English Translation

I heap up the earth around you, placing (upon you) this clod of earth: may I not be injured: may the Pitris sustain this your monument; may Yama make you a dwelling here

॥ ವಿಶೇಷವಿಷಯಗಳು ॥

ಉತ್ತೇ ಸ್ತಭ್ನಾಮಿ ಎಂಬ ಈ ಋಕ್ಕನ್ನು ಪರಿಸುತ್ತಾ ಅಸ್ಥಿಗಳನ್ನು ಭೂಮಿಯಲ್ಲಿ ಹೂಳಿ ಅದರ ಮೇಲೆ ಕಪಾಲದಿಂದ ಮಣ್ಣನ್ನು ಹೆರಡಿ ಮುಚ್ಚಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಉತ್ತೇ ಸ್ತಭ್ನಾಮಿತಿ ಕಪಾಲೇನಾಪಿಧಾಯ** ಎಂಬ ಸೂತ್ರದಿಂದ (ಆ. ಗೃ. ೪-೫-೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಪ್ರತೀಚೀನೇ ಮಾಮಹನೀಷ್ವಾಃ ಪರ್ಣಮಿವ ದಧುಃ ॥
ಪ್ರತೀಚೀಂ ಜಗ್ರಭಾ ವಾಚಮಶ್ವಂ ರಶನಯಾ ಯಥಾ ॥ ೧೪ ॥

॥ ಪದಪಾಠಃ ॥

ಪ್ರತೀಚೀನೇ । ಮಾಂ । ಅಹನಿ । ಇಷ್ವಾಃ । ಪರ್ಣಂ೭ಇವ । ಆ । ದಧುಃ ।
ಪ್ರತೀಚೀಂ । ಜಗ್ರಭ । ವಾಚಂ । ಅಶ್ವಂ । ರಶನಯಾ । ಯಥಾ ॥ ೧೪ ॥

॥ ಸಾಯಣಭಾಷ್ಯಂ ।

ಅನಯಾ ಪ್ರಜಾಪತಿಃ ಪ್ರಾರ್ಥ್ಯತೇ । ಹೇ ಪ್ರಜಾಪತೇ ಪ್ರತೀಚೀನೇ ಪ್ರತಿಪೂಜ್ಯೇ ಅಹನಿ ತದುಪಲಕ್ಷಿತೇ ಸಂವತ್ಸರಾತ್ಮಕೇ ಮಾಂ ಸಂಕುಸುಕಮೃಷಿಂ ಆ ದಧುಃ ನಿಹಿತವಂತಃ ಸರ್ವೇ ದೇವಾಃ । ಕಮಿವ । ಇಷ್ವಾಃ ಬಾಣಸ್ಯ ಪರ್ಣಮಿವ । ಪತ್ಪಮಿವ ಪತ್ಪಂ ಯಥಾ ಬಾಣಸ್ಯ ಮೂಲೇ ಸ್ಥಾಪಯಂತೇ ತದ್ವಜ್ಜಗನ್ಮೂಲೇ ತ್ವಯಿ ಮಾಂ ಸ್ಥಾಪಿತವಂತಃ । ಅತೋ ಮದೀಯಾಂ ಪ್ರತೀಚೀಂ ಪ್ರತಿಪೂಜ್ಯಾಂ ಪೂಜ್ಯಾಂ ವಾಚಂ ಸ್ತುತಿರೂಪಾಂ ಜಗ್ರಭ ಗೃಹಾಣ । ಕಥಮಿತ್ಯುಚ್ಯತೇ । ಅಶ್ವಂ ಆಶುಗಾಮಿನಂ ಹಯಂ ರಶನಯಾ ರಜ್ಜ್ವಾ ಯಥಾ ಗೃಹ್ಣಂತಿ ತದ್ವತ್ಕರ್ಣಾಭ್ಯಾಂ ಮತ್ಕೃತಾಂ ಸ್ತುತಿಂ ಗೃಹಾಣೇತ್ಯರ್ಥಃ ॥

। ಪ್ರತಿಪದಾರ್ಥ ।

(ಎಲೈ ಪ್ರಜಾಪತಿಯೇ) **ಪ್ರತೀಚೀನೇ**—ಕೊನೆಯ ಕಾಲವನ್ನು ಹೊಂದಿರುವ । **ಅಹನಿ**—ಈ ಸಂಧ್ಯಾಕಾಲದಲ್ಲಿ । **ಇಷ್ವಾಃ ಪರ್ಣಂ ಇವ**—ಪಕ್ಷಿಯ ರೆಕ್ಕೆಗಳು ಮುದುರಿ ಹೋಗುವಂತೆ । **ಮಾಂ**—ನನ್ನನ್ನು । **ಆ ದಧುಃ**—ಇಲ್ಲಿ ನಿಕ್ಷೇಪಮಾಡಿಟ್ಟಿದ್ದಾರೆ । **ಯಥಾ**—ಯಾವ ರೀತಿ । **ಅಶ್ವಂ**—ಅಶ್ವವನ್ನು । **ರಶನಯಾ**—ಕಡಿವಾಣದಿಂದ ಹಿಡಿಯುವರೋ ಹಾಗೆ । **ಪ್ರತೀಚೀಂ**—ನನ್ನ ಈ ಸ್ತುತಿಯನ್ನು । **ಜಗ್ರಭ**—ನಿನ್ನ ಕಿವಿಯಿಂದ ಆಲಿಸಿ ಕೇಳು.

। ಭಾವಾರ್ಥ ।

ಎಲ್ಲೈ ಪ್ರಜಾಪತಿಯೇ, ದಿನದ ಕೊನೆಯ ಕಾಲವಾದ ಈ ಸಂಧ್ಯಾಕಾಲದಲ್ಲಿ ಪಕ್ಷಿಯ ರೆಕ್ಕೆಗಳು ಮುದುರಿ ಕೊಳ್ಳುವಂತೆ ನನ್ನನ್ನು ಇಲ್ಲಿ ನಿಕ್ಷೇಪಮಾಡಿಟ್ಟಿದ್ದಾರೆ. ಯಾವ ರೀತಿ ಅಶ್ವವನ್ನು ಕಡಿವಾಣದಿಂದ ಹಿಡಿಯುವರೋ ಹಾಗೆ ನನ್ನ ಈ ಸ್ತುತಿಯನ್ನು ನಿನ್ನ ಕಿವಿಯಿಂದ ಆಲಿಸಿ ಕೇಳು

English Translation

At the decline of the day they have placed me (in the grave) like the feathers of an arrow ; I have restrained my declining voice as (they check) a horse with a bridle.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಪ್ರಜಾಪತಿಯನ್ನು ಪ್ರಾರ್ಥಿಸಲಾಗಿದೆ. ಈ ಋಕ್ಕಿಗೆ ಸಾಯಣಭಾಷ್ಯವು ಇಲ್ಲದಿರುವುದರಿಂದ ಪೂನಾನಗರದ ವೈದಿಕಸಂಶೋಧನ ಮಂಡಲಿಯಿಂದ ಪ್ರಕಾಶಿತವಾದ ಭಾಷ್ಯಸಹಿತವಾದ ಋಗ್ವೇದದ ನಾಲ್ಕನೇ ಭಾಗದ 33ನೇ ಪೇಜಿನ ಕೊನೆಯಲ್ಲಿ ಸಂಗ್ರಹಿಸಿ ಮುದ್ರಿತವಾಗಿರುವ ಈ ಋಕ್ಕಿನ ಭಾಷ್ಯವನ್ನು ಇಲ್ಲಿ ಬರೆದಿರುತ್ತೇನೆ ಇದು ಸಾಯಣಭಾಷ್ಯವಲ್ಲ. ಇದನ್ನು ಯಾರು ಬರೆದಿರುವರೆಂದು ಹೇಳುವುದಕ್ಕಾಗುವುದಿಲ್ಲ.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ-
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ
ಋಕ್ಸಂಹಿತಾಭಾಷ್ಯೇ ಸಪ್ತಮಾಷ್ಟಕೇ ಷಷ್ಠೋಧ್ಯಾಯಃ ಸಮಾಪ್ತಃ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ

ಋಗ್ವೇದಸಂಹಿತೆಯಲ್ಲಿ ಏಳನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು ಸಮಾಪ್ತವು.

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ।

॥ ಶುಭಂ ಭೂಯಾತ್ ॥

॥ ಮಂಗಳಂ ॥



*



॥ श्रीः ॥

॥ श्रीः महागणाधिपतयेः नमः ॥

वागीशाद्याः सुमनसः सर्वार्थानामुपक्रमे ।
यं नत्वा कृतकृत्याः स्युस्तं नमामि गजाननं ॥
यस्य निश्वसितं वेदा यो वेदेभ्योऽखिलं जगत् ।
निर्ममे तमहं वंदे विद्यातीर्थमहेश्वरं ॥
वेदः शिवः शिवो वेदो वेदाध्यायी सदाशिवः ।
तस्मात्सर्वप्रयत्नेन वेदमेव सदा जपेत् ॥
अष्टके सप्तमे सप्तं व्याख्याय श्रुतिकोविदः ।
सायणार्यस्ततोऽध्यायं सप्तमं व्याचिकीर्षति ॥

सायणभाष्यसहिता

ऋग्वेदसंहिता

अथ सप्तमाष्टके सप्तमोऽध्यायः

ಏಳನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯವು.

हत्तनेय मुंडलदल्लि हत्तोंभत्तनेय सूक्तवु.

॥ सायणभाष्यं ॥

अथ द्वादशानुवाकात्मकस्य दशममुंडलस्य द्वितीयेऽनुवाके त्रयोदश सूक्तानि । तत्र निवर्तध्वमित्यष्टर्चं तृतीयं सूक्तं । अस्य यमपुत्रो मथिताख्य ऋषिर्वरुणपुत्रो भृगुर्वाथवा धार्गवश्च्यवनः । षष्ठ्यां गायत्र्यां शिष्टा अनुष्टुभः । इदममुष्टेवताकं गोदेवताकं वा । अग्निहोत्रमा पुनर्वसू इत्यर्धर्चोऽग्नीषोमदेवताकः । तथा चानुक्रान्तं॥ नि वर्तध्वमिति मथितो भृगुर्वा वारुणिर्भार्गवश्च्यवनो वाऽपां गव्यं वानुष्टुभमग्नीषोमीयो द्वितीयोऽर्धर्चः षष्ठ्यां गायत्र्यामिति ॥ गतो विनियोगः ॥

ಅನುವಾದವು—ಹನ್ನೆರಡು ಅನುವಾಕಗಳಿರುವ ಈ ಹತ್ತನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಹದಿಮೂರು ಸೂಕ್ತಗಳಿರುವವು. ಅವುಗಳಲ್ಲಿ ಮೊದಲ ಎರಡು ಸೂಕ್ತಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈಗ ವಿವರಿಸುವ **ನಿ ವರ್ತಧ್ವಂ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಯಮಪುತ್ರನಾದ ಮಥಿತನೆಂಬುವನು ಋಷಿಯು, ಅಥವಾ ವರುಣ ಪುತ್ರನಾದ ಭೃಗುಋಷಿಯು ಅಥವಾ ಭೃಗುಪುತ್ರನಾದ ಚ್ಯವನನೂ ಋಷಿಯಾಗಬಹುದು. ಈ ಸೂಕ್ತದ ಆರನೆಯ ಋಕ್ಕು ಗಾಯತ್ರೀಛಂದಸ್ಸುವು. ಉಳಿದ ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಈ ಸೂಕ್ತಕ್ಕೆ ಅಪ್ಪುಗಳು (ಉದಕಗಳು) ಅಥವಾ ಗೋವುಗಳು ದೇವತೆಯು; ಅಗ್ನೀಷೋಮಾ ಪುನರ್ವಸೂ ಎಂಬ ಮೊದಲನೇ ಋಕ್ಕಿನ ಉತ್ತರಾರ್ಧಕ್ಕೆ ಅಗ್ನಿ ಮತ್ತು ಸೋಮ ಎಂಬುವರು ದೇವತೆಗಳು. ಅನುಕ್ರಮಣಿಕೆಯಲ್ಲಿ- **ನಿ ವರ್ತಧ್ವಮಷ್ಟೌ ಮಥಿತೋ ಭೃಗುರ್ವಾ ವಾರುಣಿರ್ಭಾರ್ಗವಶ್ಚ್ಯವನೋ ವಾಪಂ ಗವ್ಯಂ ವಾನುಷ್ಟುಭಮಗ್ನೀಷೋಮಾಯೋ ದ್ವಿತಿಯೋಽರ್ಧರ್ಚಃ ಷಷ್ಠೀ ಗಾಯತ್ರೀ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೧೯

ಮಂಡಲ—೧೦ । ಅನುವಾಕ—೨ । ಸೂಕ್ತ—೧೯ ।
ಅಷ್ಟಕ—೭ ಅಧ್ಯಾಯ—೭ । ವರ್ಗ—೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಮಥಿತೋ ಯಾಮಾಯಸೋ ಭೃಗುರ್ವಾ ವಾರುಣಶ್ಚ್ಯವನೋ ವಾ ಭಾರ್ಗವಃ ।
ದೇವತಾ—೧ರಲ್ಲಿ ಪೂರ್ವಾರ್ಧ, ೨-೮. ಅಪೋ ಗಾವೋ ವಾ । ೧ರಲ್ಲಿ ಉತ್ತರಾರ್ಧ. ಅಗ್ನೀಷೋಮೌ ।
ಛಂದಃ—೧-೫, ೭-೮. ಅನುಷ್ಟುಪ್ । ೬. ಗಾಯತ್ರೀ ।

। ಸಂಹಿತಾಪಾಠಃ ।

ನಿ ವ॑ರ್ತಧ್ವಂ ಮಾ॑ನು ಗಾತಾಸ್ಮಾ॑ನ್ಸಿಷಕ್ತ ರೇವತೀಃ ।
ಅಗ್ನೀ॑ಷೋಮಾ ಪುನರ್ವಸೂ ಅ॒ಸ್ಮೇ ಧಾ॑ರಯತಂ ರ॒ಯಿಂ ॥ ೧ ॥

। ಪದಪಾಠಃ ।

ನಿ । ವ॒ರ್ತ॒ಧ್ವ॒ಂ । ಮಾ । ಅನು॑ । ಗಾ॒ತ॒ । ಅ॒ಸ್ಮಾನ್ । ಸಿಸ॑ಕ್ತ । ರೇ॒ವ॒ತೀಃ ।
ಅಗ್ನೀ॑ಷೋಮಾ । ಪು॒ನ॒ರ್ವ॒ಸೂ ಇತಿ॑ ಪುನಃ॒ವ॒ಸೂ । ಅ॒ಸ್ಮೇ ಇತಿ॑ । ಧಾ॒ರ॒ಯ॒ತ॒ಂ । ರ॒ಯಿಂ ॥ ೧ ॥

। ಸಾಯಣಭಾಷ್ಯಂ ।

ಹೇ ಗಾವೋ ಹೇ ಅಪೋ ವಾ ಯೂಯಂ ನಿ ವರ್ತಧ್ವಂ । ಅಸ್ಮಾನ್ಪ್ರತ್ಯಾಗಚ್ಛತ । ಮಾನು ಗಾತ । ಅಸ್ಮದ್ವ್ಯತಿರಿಕ್ತಂ ಯಜಮಾನಂ ಮಾ ಗಚ್ಛತ । ಅಗಚ್ಛ ಚ ಹೇ ರೇವತೀ ರೇವತ್ಯೋ ಧನ-

वर्तयतं यूयमस्मान्निवर्तयत । सेचयत । अवगाहत । गोदोहनस्नानपानादिद्वारेण सेवध्वमित्यर्थः । हे पुनर्वसू । पुनःपुनर्वस्त्रादेः स्तोतॄणां यष्टॄणामाच्छादयितारावेतन्नामकौ देवौ युवामस्मे अस्मासु रयिं व्रीह्यादिलक्षणं धनं धारयतं । स्थापयतं ॥

। प्रतिपदार्थः ।

(एलै गोवुगळे) नि वर्तध्वं—हिंतिरुगि । मासु गात—बेरे यजमानन्नल्लिगे होग बेडि । रेवतीः—संपद्युक्तरादा नीवु । अस्मान्—नमगे । सिषक्त—क्षीरवन्नु सुरिसिरि । पुनर्वसू—पदे पदे यजमानरिगे वसतिदायकरादा । (अथवा वस्त्रादिगळिंद होदिसुववरादा) अग्निषोमा—एलै अग्नि मत्तु सोमदेवतेगळे । अस्मे—नम्मल्लि । रयिं—धनवन्नु । धारयतं – स्थापिसिरि.

। भावार्थ ।

एलै गोवुगळे, नम्मल्लिगे हिंतिरुगिरि. बेरे यजमानन्नल्लिगे होगबेडिरि. संपद्युक्तरादा नीवु नमगे क्षीरवन्नु सुरिसिरि. पदे पदे यजमानरिगे वस्त्रादिगळन्नु होद्दिसतक्क एलै अग्नि मत्तु सोमदेवतेगळे, नम्मल्लि धनवन्नु स्थापिसिरि.

English Translation

Come back: go not elsewhere; abounding in wealth, sprinkle us; Agni and Soma, you who clothe (your worshippers) again, bestow upon us riches.

॥ संहितापाठः ॥

पुनरेना नि वर्तय पुनरेना न्या कुरु ।
इन्द्र एना नि यच्छत्वग्निरेना उपाजतु ॥ ७ ॥

। पदपाठः ।

पुनः । एनाः । नि । वर्तय । पुनः । एनाः । नि । आ । कुरु ।
इन्द्रः । एनाः । नि । यच्छतु । अग्निः । एनाः । उप । अजतु ॥ ७ ॥

। सायणभाष्यं ।

अत्र मन्त्रेऽस्मान् स्वात्मानं प्रतिब्रूते । हे मदीयौ त्वं त्वमेना एता अस्मत्तोऽधिगन्त्रीर्गाः अपो वा पुनर्निवर्तय । पुनःपुनर्मदभिमुखीः कुरु ।

ತದನಂತರಮೇನಾ ಏತಾಃ ಪುನರ್ಭೂಯೋ ಭೂಯೋ ನ್ಯಾ ಕುರು । ನಿಯತಾ ಅತ್ಯಾಯತ್ತಾಃ ಕುರು । ಕಂಚೇಂದ್ರೋಽಪಿ ತವ ಸಹಾಯಭೂತಃ ಸನ್ನೇನಾ ಏತಾ ನಿ ಯಚ್ಛತು । ತ್ವದಾಯತ್ತಾಃ ಕರೋತು । ಅಗ್ನಿಶ್ಚೈನಾ ಏತಾ ಗಾ ಅಪೋ ವೋಷಾಜತು । ಉಪಗಮಯತು । ಉಪಕ್ಷಿಪತು ವಾ । ಉಪಯೋಗ್ಯಾಃ ಕರೋತ್ವಿತ್ಯರ್ಥಃ ॥

। ಪ್ರತಿಪದಾರ್ಥ ।

ಏನಾಃ—ಈ ಗೋವುಗಳನ್ನು । ಪುನಃ—ತಿರುಗಿಯೂ । ನಿ ವರ್ತಯ—ಹಿಂತಿರುಗುವಂತೆ ಮಾಡು । ಏನಾಃ—ಇವುಗಳನ್ನು । ಪುನಃ—ತಿರುಗಿಯೂ । ನ್ಯಾ ಕುರು—ಅಧೀನವಾಗಿರುವಂತೆ ಮಾಡು । ಇಂದ್ರಃ—ಇಂದ್ರನು । ಏನಾಃ—ಇವುಗಳನ್ನು । ನಿ ಯಚ್ಛತು—ನಮಗಧೀನವಾಗಿರುವಂತೆ ಮಾಡಲಿ । ಅಗ್ನಿಃ—ಅಗ್ನಿಯೂ ಕೂಡ । ಏನಾಃ—ಇವುಗಳನ್ನು । ಉಷಾಜತು—ನಮಗೆ ಉಪಯೋಗಕಾರಕವಾಗುವಂತೆ ಮಾಡಲಿ.

। ಭಾವಾರ್ಥ ।

दशानां दशसंख्याकानां पूर्वोक्तानामेवाङ्गिरसां मध्ये एकं मुख्यं कपिलमेतन्नामानं तं प्रसिद्धमृषिं । कीदृशं । समानं सदृशं । केन । सामर्थ्यात्प्रजापतिना । हिन्वन्ति । अवशिष्टा अङ्गिरसः प्रेरयन्ति। किमर्थं । क्रतवे यज्ञादिजगत्प्रवर्तनकर्मणे । यद्वा । सम्यग्ज्ञानलक्षणप्रज्ञानाय। कीदृशाय। पार्याय परिसमापयितव्याय । प्रणेतव्याय वा । यज्ञादिकर्मोपदेशनायेत्यर्थः । मातापृक्त्याख्या च वक्षणासु । वक्षणा इति नद्य उच्यन्ते । ताभिश्चात्रापो लक्ष्यन्ते । प्रकृतिस्थासु सूक्ष्मास्वप्सु सुधितं सुहितं । प्रजापतिना स्थापितमित्यर्थः । अवेनन्तं । वेनतिः कान्तिकर्मा । तत्र निवासमकामयमानं तादृशं प्रजापतेर्गर्भं तुषयन्ती शुष्यन्ती सम्यग्ज्ञानादुपदेप्टुं योग्योऽयमिति प्रीता सती बिभर्ति । प्रजापतेर्निर्योगाद्धारयति ।

। प्रतिपदार्थ ।

दशानाम्—हत्तु जन अंगिरस्सुगळ नडुवे । तं—प्रसिद्धनू । समानं—प्रजापतिगे समाननू आद । कपिलं—कपिलमुनियन्नु । मुख्यं—प्रधाननन्नागि । पार्याय—अवश्यवागि नेरवेरबेकाद । क्रतवे—यज्ञक्काग । हिन्वन्ति—प्रेरिसुत्तारे । मातृ—जगन्निर्मात्रियाद प्रकृतियु । वक्षणासु—सूक्ष्मरूपवाद उदकगळल्लि । सुधितं—उत्तमवागि स्थापितनू । अवेनन्तं—अल्लि वासिसलिच्छियिल्लदवनू आद । गर्भं—प्रजापतिय गर्भरूपनाद ईतनन्नु । तुषयन्ती—हर्षपट्टवळागि । बिभर्ति—धरिसुत्तारे.

। भावार्थ ।

हत्तुजन अंगिरस्सुगळ नडुवे प्रसिद्धनू, प्रजापतिगे समाननू आद कपिलमुनियन्नु अवश्यवागि नेरनेरबेकाद यज्ञक्काग प्रधाननन्नागि प्रेरिसुत्तारे. जगन्निर्मात्रियाद प्रकृतियु

ಸೂಕ್ಷ್ಮರೂಪವಾದ ಉದಕಗಳಲ್ಲಿ ಉತ್ತಮನಾಗಿ ಸ್ಥಾಪಿತನೂ ಅಲ್ಲಿ ವಾಸಿಸಲಿಚ್ಛೆಯಿಲ್ಲದವನೂ ಆದ ಪ್ರಜಾಪತಿಯ ಗರ್ಭರೂಪನಾದ ಈತನನ್ನು ಹರ್ಷಪಟ್ಟವಳಾಗಿ ಧರಿಸುತ್ತಾಳೆ

English Translation

(The other Angirasas) despatched one of the ten, Kapila, as equal (to the task) for the completion of the sacrifice; the gratified mother cherishes the embryo well deposited in the waters, and not desirous of an abiding place.

ಸಂಹಿತಾಪಾಠಃ ॥

ಪೀವಾನಂ ಮೇಷಮಪಚಂತ ವೀರಾ ನ್ಯುಪ್ತಾ ಅಕ್ವಾ ಅನು ದೀವ ಆಸನ್ ।
ದ್ವಾ ಧನುಂ ಬೃಹತೀಮಪ್ಸ್ವಂ೧ತಃ ಪವಿತ್ರವಂತಾ ಚರತಃ ಪುನಂತಾ॥೧೭॥

॥ ಪದಪಾಠಃ ॥

ಪೀವಾನಂ । ಮೇಷಂ । ಅಪಚಂತ । ವೀರಾಃ । ನ್ಯುಪ್ತಾಃ । ಅಕ್ವಾಃ । ಅನು । ದೀವೇ । ಆಸನ್ ।
ದ್ವಾ । ಧನುಂ । ಬೃಹತೀಂ । ಅಪ್ಸು । ಅಂತರಿತಿ । ಪವಿತ್ರವಂತಾ । ಚರತಃ । ಪುನಂತಾ ॥ ೧೭ ॥

॥ ಸಾಯಣಭಾಷ್ಯಂ ॥

ವೀರಾಃ ಪ್ರಜಾಪತೇಃ ಪುತ್ರಾ ಅಂಗಿರಸಃ ಪೀವಾನಂ ಸ್ಥೂಲಂ । ಮೇದೋಮಾಂಸಾದಿಯುಕ್ತ-ಮಿತ್ಯರ್ಥಃ । ಮೇಷಮಜಮಪಚಂತ । ಪ್ರಜಾಪತಿರೂಪಸ್ಯೇಂದ್ರಸ್ಯಾರ್ಥಾಯ ಪಕ್ವವಂತೋಽಭವನ್ । ಪಶುಯಾಗಂ ಕುರ್ವಂತ ಇತ್ಯರ್ಥಃ । ಕಂಚ । ಲುಪ್ತೋಪಮಮೇತತ್ । ಯಥಾ ದೇವಾನಾಮಕ್ವಾ ದೀವೇ ದೇವನೇ ರಮಣಸ್ಥಾನೇ ನ್ಯುಪ್ತಾ ನಿಕ್ಷಿಪ್ತಾಃ ಸಂತೋಽನ್ವಾಸನ್ ಸಂಕ್ರೀಡಮಾನಯೋರ್ದ್ಯ-ಯೋರೇಕತರಸ್ಯಾನುಗತಾ ಭವಂತಿ ತಥಾ ಸರ್ವೇಽಂಗಿರಸಃ ಪ್ರಜಾಪತೇರನುಗತಾ ಭವಂತಿ । ದ್ವಾಂಗಿರಸಾಂ ಮಧ್ಯೇ ದ್ವಾವಂಗಿರಸೌ ಧನುಂ । ಧನುಶಬ್ದೋಽತ್ರ ಧನುಃಶಬ್ದಪರ್ಯಾಯೋ ಧನಶಬ್ದಪರ್ಯಾಯೋ ವಾ । ಧನುರ್ಯಥಾ ವಧಸಾಧನಂ ತಥಾಜ್ಞಾನಾದಿವಧಸಾಧನಂ ಧನವತ್ಪ್ರೀತಿಕರಂ ವಾ । ಕಪಿಲಮಿತ್ಯರ್ಥಃ । ಬೃಹತೀಂ ಪ್ರಜಾಪತೇರಾಜ್ಞಯಾ ವರ್ಧಯಿತ್ರೀಂ ಪ್ರಕೃತಿಮಪ್ಸ್ವಂತಃ ಪ್ರಕೃತಿಸ್ಥಾನಾಂ ಸೂಕ್ಷ್ಮಾಣಾ-ಮುದಕಾನಾಂ ಮಧ್ಯೇ ಚರತಃ । ಪ್ರಜಾಪತ್ಯಾದೇಶಾದಾರಾಧಯತಃ । ಕೀದೃಶೌ । ಪವಿತ್ರವಂತಾ ಪವಿತ್ರವಂತೌ । ಮಂತ್ರಃ ಪವಿತ್ರಮುಚ್ಯತೇ । ಧ್ಯಾನಸಾಧನಪ್ರಣವಮಂತ್ರವಂತೌ ಪುನಂತಾ ಶುದ್ಧೌ । ಪ್ರಣವಧ್ಯಾನೇನಾತ್ಮಾನಂ ಸಂಸ್ಕುರ್ವಂತಾವಿತ್ಯರ್ಥಃ ॥

॥ ಪ್ರತಿಪದಾರ್ಥ ॥

ವೀರಾಃ—ಪ್ರಜಾಪತಿಯ ಪುತ್ರರಾದ ಅಂಗಿರಸ್ಸುಗಳು। **ಪೀವಾನಂ**—ದಪ್ಪನಾದ। **ಮೇಷಂ**-ಟಗರನ್ನು। **ಅಪಚಂತ**—ಇಂದ್ರಾರ್ಥವಾಗಿ ಬೇಯಿಸಿ ಪಕ್ವಮಾಡಿದರು। **ಅಕ್ಷಾಃ**-ಪಗಡೆದಾಳಗಳು। **ದೀವ್ಯೇ**-ಆಟದಕಾಲದಲ್ಲಿ। **ನ್ಯುಪ್ತಾಃ**—ಎಸೆಯಲ್ಪಟ್ಟವಾಗಿ। **ಅನು ಆಸನ್**—ಆಟಗಾರರ ಇಷ್ಟಾನುಸಾರವಾಗಿ ಹೇಗೆ ಬೀಳುವುವೋ ಹಾಗೆ ಅಂಗಿರಸ್ಸುಗಳು ಪ್ರಜಾಪತಿಯನ್ನು ಹಿಂಬಾಲಿಸಿದ್ದಾರೆ। **ಪವಿತ್ರವಂತಾ**—ಮಂತ್ರವುಳ್ಳವರೂ। **ಪುನಂತಾ**—ಪರಿಶುದ್ಧರೂ ಆದ। **ದ್ವಾ**—ಅಂಗಿರಸ್ಸುಗಳಲ್ಲಿ ಇಬ್ಬರು। **ಧನುಂ**—ಧನುಸ್ಸಿನಂತೆ (ಅಜ್ಞಾನಕ್ಕೆ) ವಧಸಾಧನನಾದ ಕಪಿಲನನ್ನೂ। **ಬೃಹತೀಂ**—ಮಹತ್ಸ್ವರೂಪವುಳ್ಳ ಪ್ರಕೃತಿಯನ್ನೂ। **ಅಪ್ಸ್ವಂತಃ**—ಉದಕಗಳ ಮಧ್ಯ ಭಾಗದಲ್ಲಿ। **ಚರತಃ**—ಆರಾಧಿಸುತ್ತಾರೆ.

॥ ಭಾವಾರ್ಥ ॥

ಪ್ರಜಾಪತಿಯ ಪುತ್ರರಾದ ಅಂಗಿರಸ್ಸುಗಳು ದಪ್ಪನಾದ ಟಗರನ್ನು ಇಂದ್ರಾರ್ಥವಾಗಿ ಪಕ್ವಮಾಡಿದರು. ಪಗಡೆದಾಳಗಳು ಆಟದಕಾಲದಲ್ಲಿ ಎಸೆಯಲ್ಪಟ್ಟವಾಗಿ ಆಟಗಾರರ ಇಷ್ಟಾನುಸಾರವಾಗಿ ಹೇಗೆ ಬಿಳುವುವೋ ಹಾಗೆ ಅಂಗಿರಸ್ಸುಗಳು ಪ್ರಜಾಪತಿಯನ್ನು ಹಿಂಬಾಲಿಸಿದ್ದಾರೆ. ಮಂತ್ರವುಳ್ಳವರೂ, ಪರಿಶುದ್ಧರೂ ಆದ ಅಗಿರಸ್ಸುಗಳಲ್ಲಿ ಇಬ್ಬರು ಧನುಸ್ಸಿನಂತೆ ಅಜ್ಞಾನಕ್ಕೆ ವಧಸಾಧನನಾದ ಕಪಿಲನನ್ನೂ, ಮಹತ್ಸ್ವರೂಪವುಳ್ಳ ಪ್ರಕೃತಿಯನ್ನೂ ಉದಕಗಳ ಮಧ್ಯಭಾಗದಲ್ಲಿ ಆರಾಧಿಸುತ್ತಾರೆ.

English Translation

The sages cooked a fat ram : they followed (Prajapati) in succession like dice thrown in gambling : two (of them), having the means of purifiication and becoming purified, proceed in the midst of the waters to (Prakriti) the augmenter, to (Kapila) the implement of destruction.

॥ ಸಂಹಿತಾಪಾಠಃ ॥

ವಿ ಕ್ರೋಶನಾಸೋ ವಿಷ್ವಂಚ ಆಯನ್ಪಚಾತಿ ನೇಮೋ ನಹಿ ಪಕ್ಷದರ್ಧಃ ।
ಅಯಂ ಮೇ ದೇವಃ ಸವಿತಾ ತದಾಹ ದ್ವ್ರನ್ನ ಇದ್ವನವತ್ಸರ್ಪಿರನ್ನಃ ॥೧೪॥

॥ ಪದಪಾಠಃ ॥

ವಿ । ಕ್ರೋಶನಾಸಃ । ವಿಷ್ವಂಚಃ । ಆಯನ್ । ಪಚಾತಿ । ನೇಮಃ । ನಹಿ । ಪಕ್ಷತ್ । ಅರ್ಧಃ ।
ಅಯಂ । ಮೇ । ದೇವಃ । ಸವಿತಾ । ತತ್ । ಆಹ । ದ್ವ್ರಃ ಅನ್ನಃ । ಇತ್ । ವನವತ್ । ಸರ್ಪಿಃ ಅನ್ನಃ ॥

। ಸಾಯಣಭಾಷ್ಯಂ ।

ವಿ ಕ್ರೋಶನಾಸೋ ವಿವಿಧಂ ಪ್ರಜಾಪತಿಂ ಪಿತರಮಾಹ್ವಯಂತೋ ವಿಷ್ವಂಚೋ ನಾನಾಗತಯೋ ನಾನಾಪೂಜನಾ ವಾ ಸರ್ವೇಽಂಗಿರಸ ಆಯನ್ । ಆಗಚ್ಛನ್ । ಪ್ರಜಾಪತೇಃ ಸಕಾಶಾದುತ್ಪನ್ನಾ ಇತ್ಯರ್ಥಃ । ಉತ್ಪದ್ಯಮಾನೋ ನೇಮೋಽರ್ಧೋಽಂಗಿರಸಾಂ ಮಧ್ಯ ಏಕೋ ಭಾಗಃ ಪಚಾತಿ । ಪ್ರಜಾಪತ್ಯರ್ಥಂ ಹವೀಂಷಿ ಪಚತಿ । ಅರ್ಧೋಽಪರೋ ಭಾಗೋ ನಹಿ ಪಕ್ಷತ್ । ನಹಿ ಪಚತಿ । ಏತತ್ಸರ್ವಂ ಕಥಮ-ಜ್ಞಾಯಿ ಉಚ್ಯತೇ । ಅಯಮಿಾದೃಶೋ ದೇವೋ ದ್ಯೋತಮಾನಃ ಸವಿತಾ ಸರ್ವಸ್ಯ ಪ್ರೇರಕ ಆದಿತ್ಯೋ ವಾ ಪ್ರಜಾಪತಿರ್ವಾ ಮೇ ಮಹ್ಯಂ ತತ್ಸರ್ವಂ ಯಥೋಕ್ತಮಾಹ । ಕಂಚಿ ಸರ್ಪಿರನ್ನೋ ಘೃತೌದನೋ ದ್ವನ್ನ ಇದ್ವಾವ್ಯೋದನೋಽಗ್ನಿರಪಿ ವನವತ್ । ಹವಿರ್ದ್ವಾರೇಣ ಪ್ರಜಾಪತಿಂ ವನುತೇ । ಸಂಭಜತೇ ॥

। ಪ್ರತಿಪದಾರ್ಥ ।

ವಿಕ್ರೋಶನಾಸಃ—ಪ್ರಜಾಪತಿಯನ್ನು ಅನೇಕವಿಧದಲ್ಲಿ ಕರೆಯುವವರೂ । ವಿಷ್ವಂಚಃ—ನಾನಾ ವಿಧವಾದ ಸಂಚಾರವುಳ್ಳವರೂ ಆದ ಅಂಗಿರಸ್ಸುಗಳು । ಆಯನ್—ಎಲ್ಲಾ ಪ್ರದೇಶಗಳಲ್ಲೂ ಸಂಚರಿಸುತ್ತಾರೆ । ನೇಮಃ—ಈ ಅಂಗಿರಸ್ಸುಗಳಲ್ಲಿ ಅರ್ಧಜನರು । ಪಚಾತಿ—ಹವಿಸ್ಸುಗಳನ್ನು ಪಕ್ವಮಾಡುತ್ತಾರೆ । ಅರ್ಧಃ—ಉಳಿದರ್ಧಭಾಗವು । ನಹಿ ಪಕ್ಷತ್—ಪಕ್ವಮಾಡುವುದಿಲ್ಲ । ದೇವಃ—ದೇವತಾತ್ಮನಾದ । ಅಯಂ ಸವಿತಾ—ಈ ಸವಿತೃದೇವನು । ಮೇ—ನನಗೆ । ತತ್ ಆಹ—ಈ ರೀತಿ ಹೇಳಿದ್ದಾನೆ । ಸರ್ಪಿರನ್ನಃ—ಹವಿಸ್ಸಿನ ರೂಪದ ಅನ್ನವುಳ್ಳವನೂ । ದ್ವನ್ನ ಇತ್—ಕಾಷ್ಠಾದಿರೂಪದ ಅನ್ನವುಳ್ಳವನೂ ಆದ ಅಗ್ನಿಯೂ ಸಹ । ವನವತ್—ಪ್ರಜಾಪತಿಯನ್ನು ಪೂಜಿಸುತ್ತಾನೆ.

। ಭಾವಾರ್ಥ ।

ಪ್ರಜಾಪತಿಯನ್ನು ಅನೇಕವಿಧದಲ್ಲಿ ಕರೆಯುವವರೂ, ನಾನಾ ವಿಧವಾದ ಸಂಚಾರವುಳ್ಳವರೂ ಆದ ಅಗಿರಸ್ಸುಗಳು ಎಲ್ಲಾ ಪ್ರದೇಶಗಳಲ್ಲೂ ಸಂಚರಿಸುತ್ತಾರೆ. ಈ ಅಂಗಿರಸ್ಸುಗಳಲ್ಲಿ ಅರ್ಧಜನರು ಹವಿಸ್ಸುಗಳನ್ನು ಪಕ್ವಮಾಡುತ್ತಾರೆ. ಉಳಿದರ್ಧಭಾಗವು ಪಕ್ವಮಾಡುವುದಿಲ್ಲ. ದೇವತಾತ್ಮನಾದ ಈ ಸವಿತೃದೇವನು ನನಗೆ ಈ ರೀತಿ ಹೇಳಿದ್ದಾನೆ. ಅದೇನೆಂದರೆ, " ಹವಿಸ್ಸನ್ನು ಭಕ್ಷಿಸುವವನೂ, ಕಾಷ್ಠಾದಿಗಳನ್ನು ಭಕ್ಷಿಸುವವನೂ ಆದ ಅಗ್ನಿಯೂ ಸಹ ಪ್ರಜಾಪತಿಯನ್ನು ಪೂಜಿಸುತ್ತಾನೆ " ಎಂದು

English Translation

They (the Angirasas) go in all directions calling (upon Prajapati), half of them cook (their oblations), the other half cook not ; this divine Savitri has told me this—(Agni), whose food is wood and ghee, serves (Prajapati by means of oblations).

। ಸಂಹಿತಾಪಾಠಃ ।

ಅಪಶ್ಯಂ ಗೋಪಾಮನಿಪದ್ಯಮಾನಮಾ ಚ ಪರಾ ಚ ಪಥಭಿಶ್ಚರಂತಂ । ಸ ಸಧ್ರೀಚೀಃ ಸ ವಿಷೂಚೀರ್ವಸಾನ ಆ ವರೀವರ್ತಿ ಭುವನೇಷ್ವಂತಃ ।

ಸಿಷಕ್ತ್ಯರ್ಯಃ ಪ್ರ ಯುಗಾ ಜನಾನಾಂ ಸದ್ಯಃ ಶಿಶ್ನಾ ಪ್ರಮಿನಾನೋ ನವೀ-
ಯಾನ್ ॥ ೧೯ ॥

॥ ಪದಪಾಠಃ ॥

ಅಪಶ್ಯಂ । ಗ್ರಾಮಂ । ವಹಮಾನಂ । ಅರಾತ್ । ಅಚಕ್ರಯಾ । ಸ್ವಧಯಾ । ವರ್ತಮಾನಂ ।
ಸಿಸಕ್ತಿ । ಅರ್ಯಃ । ಪ್ರ । ಯುಗಾ । ಜನಾನಾಂ । ಸದ್ಯಃ । ಶಿಶ್ನಾ । ಪ್ರಮಿನಾನಃ । ನವೀಯಾನ್ ।೧೯॥

॥ ಸಾಯಣಭಾಷ್ಯಂ ॥

ಅಪಶ್ಯಂ । ವಸುಕ್ರೋಽಹಂ ಪ್ರಜಾಪತಿರೂಪಮಿಂದ್ರಂ ಸಮ್ಯಗ್ಜ್ಞಾನೇನ ದೃಷ್ಟವಾನಸ್ಮಿ । ಕೀದೃಶಂ । ಗ್ರಾಮಂ ಗ್ರಾಮಭೂತಂ ಸಂಘಂ ವಹಮಾನಂ ವಾಹಯಂತಂ । ಸೃಜಂತಮಿತ್ಯರ್ಥಃ । ಕುತಃ । ಅರಾದ್ದೂರಾತ್ । ಉಪಾದಾನಕಾರಣಾತ್ಪ್ರಕೃತಿತ ಇತ್ಯರ್ಥಃ । ಅಚಕ್ರಯಾ ಚಕ್ರವರ್ಜಿತಯಾ ರಥಹೀನಯಾ ಸ್ವಧಯಾ ಸ್ವಯಮಾತ್ಮಾನಂ ಧಾರಯಂತ್ಯಾ ಸೇನಯಾ ವರ್ತಮಾನಮಾಗಚ್ಛಂತಂ । ಏವಂಭೂತಮಪಶ್ಯಮಿತ್ಯರ್ಥಃ । ಕಿಂಚಾರ್ಯಃ ಸರ್ವಸ್ಯ ಸ್ವಾಮೀಂದ್ರೋ ಜನಾನಾಂ ಯಜಮಾನಾನಾಂ ಕಾರ್ಯತ್ವೇನ ಸಂಬಂಧಿನೋ ಯುಗಾ ಯುಗಾನಿ ಯಜ್ಞಕಾಲವಿಶೇಷಾನ್ಪ್ರ ಸಿಷಕ್ತಿ । ಪ್ರಕರ್ಷೇಣ ಸೇವತೇ । ಕೀದೃಶಃ । ಸದ್ಯಸ್ತದಾನೀಮೇವ ಶಿಶ್ನಾ ಶಿಶ್ನಾನಿ । ಶಿಶ್ನಂ ಶ್ನಥತೇರಿತಿ ನಿರ್ವಚನಾತ್ । ನಿ. ೪.೧೯ । ಶ್ನಥಿತ್ವಾನಿ ತಾಡಯಿತ್ವಾನಿ ರಾಕ್ಷಸಾದಿವೃಂದಾನಿ ಪ್ರಮಿನಾನಃ ಪ್ರಕರ್ಷೇಣ ಹಿಂಸನ್ನವೀಯಾಞ್ಶರೀರೇಣ ಚ ಬಲಪೌರುಷನಯನಾದಿಭಿಶ್ಚ ನವತರಃ ॥

॥ ಪ್ರತಿಪದಾರ್ಥ ॥

ಗ್ರಾಮಂ—ಸಕಲಭೂತಸಂಘವನ್ನೂ । ವಹಮಾನಂ—ಉತ್ಪನ್ನಮಾಡತಕ್ಕವನೂ । ಅಚಕ್ರಯಾ—ಚಕ್ರರಹಿತವಾದುದೂ । ಸ್ವಧಯಾ—ತಮ್ಮನ್ನೆಲ್ಲಾ ವಹಿಸಬಲ್ಲುದೂ ಆದ ಸೇನೆಯೊಡನೆ । ವರ್ತಮಾನಂ—ಇರುತ್ತಿರುವವನೂ ಆದ ಇಂದ್ರನನ್ನು । ಅರಾತ್—ದೂರದಿಂದಲೇ । ಅಪಶ್ಯಂ—ನಾನು ನೋಡಿದೆನು । ಸದ್ಯಃ—ಒಡನೆಯೇ । ಶಿಶ್ನಾ—ರಾಕ್ಷಸಾದಿಗಳನ್ನು । ಪ್ರಮಿನಾನಃ—ಅಧಿಕವಾಗಿ ಹಿಂಸಿಸುವವನೂ । ನವೀಯಾನ್—ನೂತನಸ್ವರೂಪನೂ । ಅರ್ಯಃ—ಸ್ವಾಮಿಯೂ ಆದ ಇಂದ್ರನು । ಜನಾನಾಂ—ಯಜಮಾನರಿಗೆ । ಯುಗಾ—ಅಯನಾದಿ ಯಜ್ಞಕಾಲಗಳನ್ನು । ಪ್ರ ಸಿಷಕ್ತಿ—ನಿಯಮಿಸುತ್ತಾನೆ.

॥ ಭಾವಾರ್ಥ ॥

ಸಕಲಭೂತಸಂಘವನ್ನೂ ಉತ್ಪನ್ನಮಾಡತಕ್ಕವನೂ, ಚಕ್ರರಹಿತವಾದುದೂ, ತಮ್ಮನ್ನೆಲ್ಲ ವಹಿಸಬಲ್ಲದೂ ಆದ ಸೇನೆಯೊಡನೆ ಇರುತ್ತಿರುವವನೂ ಆದ ಇಂದ್ರನನ್ನು ನಾನು ದೂರದಿಂದಲೇ ನೋಡಿದೆನು. ಒಡನೆಯೇ ರಾಕ್ಷಸಾದಿಗಳನ್ನು ಅಧಿಕವಾಗಿ ಹಿಂಸುವವನೂ, ನೂತನಸ್ವರೂಪನೂ, ಸ್ವಾಮಿಯೂ ಆದ ಇಂದ್ರನು ಯಜಮಾನರಿಗೆ ಅಯನಾದಿ ಯಜ್ಞಕಾಲಗಳನ್ನು ನಿಯಮಿಸುತ್ತಾನೆ.

English Translation

I beheld the crowd coming from afar, moving of themselves without wheels : the lord of all, (Indra), regulates the seasons (for the worship of men), younger in vigour, destroying at once the herds of evil beings.

॥ ಸಂಹಿತಾಪಾಠಃ ॥

ಏತೌ ಮೇ ಗಾವೌ ಪ್ರಮರಸ್ಯ ಯುಕ್ತೌ ಮೋ ಷು ಪ್ರ ಸೇಧೀರ್ಮುಹುರಿನ್ಮಮಂಧಿ ।
ಆಪಶ್ಚಿದಸ್ಯ ವಿ ನಶಂತ್ಯರ್ಥಂ ಸೂರಶ್ಚ ಮರ್ಕ ಉಪರೋ ಬಭೂವಾನ್ ॥೨೦॥

॥ ಪದಪಾಠಃ ।

ಏತೌ । ಮೇ । ಗಾವೌ । ಪ್ರಮರಸ್ಯ । ಯುಕ್ತೌ । ಮೋ ಇತಿ । ಸು । ಪ್ರ । ಸೇಧೀಃ । ಮುಹುಃ । ಇತ್ । ಮಮಂಧಿ ।
ಆಪಃ । ಚಿತ್ । ಅಸ್ಯ । ವಿ । ನಶಂತಿ । ಅರ್ಥಂ । ಸೂರಃ । ಚ । ಮರ್ಕಃ । ಉಪರಃ । ಬಭೂವಾನ್ ॥

॥ಸಾಯಣಭಾಷ್ಯಂ ॥

ಕಾರ್ಯಕಾರಣಯೋರುಪಚಾರಾದಾತ್ಮಾ ವೈ ಪುತ್ರನಾಮಾಸೀತಿ ವಚನಾಚ್ಛೀಂದ್ರರೂಪೇಣಾವಸ್ಥಿತಸ್ಯ ಪ್ರಮರಸ್ಯ ಪ್ರಕರ್ಷೇಣ ಶತ್ರೂಣಾಂ ಮಾರಯಿತುರ್ಮೇ ಮಮ ಸ್ವಭೂತಾವೇತಾವೇತಾದೃಶೌ ಯುಕ್ತೌ ಸುಷ್ಠು ಪೂಜಿತೌ ಗಾವೌ ಶತ್ರೂನ್ಯಜ್ಞಾಂಶ್ಚ ಪ್ರತಿ ಗಂತಾರೌ ಹರೀ ಮೋ ಪ್ರ ಸೇಧೀಃ । ಸ್ತುತ್ಯುಪಸಂಹಾರಕರಣೇನಾಸ್ಮದ್ಯಜ್ಞಾನ್ನಾಪಗಮಯ । ಕಂ ತರ್ಹಿ ಮುಹುರಿನ್ಮುಹುರ್ಮುಹುರ್ಮಮಂಧಿ । ಪುನಃಪುನಃ ಸ್ತುಹಿ ಮಮಾಭಿಮುಖ್ಯಂ ಕುರ್ವಿತ್ಯರ್ಥಃ । ಆಪಶ್ಚಿದ್ವೃಷ್ಟಿಲಕ್ಷಣಾನ್ಯುದಕಾನ್ಯಪ್ಯಸ್ಯೇಂದ್ರಸ್ಯಾರ್ಥಂ ಗತಿಂ ವಿ ನಶಂತಿ । ವಿನಶತಿರ್ವ್ಯಾಪ್ತಿಕರ್ಮಾ । ವ್ಯಾಪ್ನುವಂತಿ । ತಥಾ ಸೂರಶ್ಚ ಸೂರ್ಯಶ್ಚ ವ್ಯಾಪ್ನೋತಿ । ಕೀದೃಶಃ । ಮರ್ಕೋ ಮರ್ಜಯಿತಾ ಸರ್ವಸ್ಯ ಶೋಧಯಿತೋಪರೋ ಮೇಘಸದೃಶೋ ಬಭೂವಾನ್ ಭವನ್ । ಮೇಘವಚ್ಛೀಘ್ರಗತಿಃ ಸನ್ನಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಪ್ರಮರಸ್ಯ—ಅತಿಶಯವಾಗಿ ಶತ್ರುವನ್ನು ನಾಶಮಾಡುವ । ಮೇ—ನನಗೆ ಸೇರಿದವೂ । ಯುಕ್ತಾ—ರಥಕ್ಕೆ ಯೋಜಿತವಾದವೂ । ಸು—ಅತಿಶಯವಾಗಿ ಪೂಜಿತವಾದವೂ । ಗಾವೌ—ಯಜ್ಞಾಭಿಮುಖವಾಗಿ ಹೋಗ

ತಕ್ಕವೂ ಆದ । ಏತೌ—(ನನ್ನ) ಈ ಅಶ್ವಗಳನ್ನು । ಮೋ ಪ್ರ ಸೇಧೀಃ—ಯಜ್ಞದಿಂದ ಹಿಂತಿರುಗುವಂತೆ ಮಾಡಬೇಡ । ಮುಹುರಿತ್—ಅನೇಕ ಸಲ । ಮಮಂಧಿ—ಪ್ರಶಂಸಿಸಿರಿ । ಅಪಶ್ಚಿತ್—ಉದಕಗಳು । ಅಸ್ಯ—ಇಂದ್ರನ । ಅರ್ಥಂ—ಉದ್ದೇಶವನ್ನು । ವಿ ನಶಂತಿ—ನೆರವೇರುವಂತೆ ಮಾಡುತ್ತವೆ । ಮರ್ಕಃ—ಶುದ್ಧಿಕಾರಕನೂ। ಉಪರಃ—ಮೇಘದಂತೆ । ಬಭೂವಾನ್—ಶೀಘ್ರಗಾಮಿಯೂ ಆದ। ಸೂರಃ ಚ—ಆದಿತ್ಯನೂ ಇಂದ್ರನ ಉದ್ದೇಶವು ನೆರವೇರುವಂತೆ ಮಾಡುತ್ತಾನೆ.

। ಭಾವಾರ್ಥ ।

ಶತ್ರುನಾಶಕನಾದ ನನಗೆ (ಇಂದ್ರನಿಗೆ) ಸೇರಿದವೂ, ರಥಕ್ಕೆ ಯೋಜಿತವಾದವೂ ಅತಿಶಯವಾಗಿ ಪೂಜಿತವಾದವೂ, ಯಜ್ಞಾಭಿಮುಖವಾಗಿ ಹೋಗತಕ್ಕವೂ ಆದ ನನ್ನ ಈ ಅಶ್ವಗಳನ್ನು ಯಜ್ಞದಿಂದ ಹಿಂತಿರುಗುವಂತೆ ಮಾಡಬೇಡ. ಮತ್ತು ಆ ಅಶ್ವಗಳನ್ನು ಪದೇಪದೇ ಪ್ರಶಂಸಿಸಿರಿ. ಉದಕಗಳು ಇಂದ್ರನ ಉದ್ದೇಶವನ್ನು ನೆರವೇರುವಂತೆ ಮಾಡುತ್ತವೆ. ಶುದ್ಧಿಕಾರಕನೂ ಮೇಘದಂತೆ ಶೀಘ್ರಗಾಮಿಯೂ ಆದ ಆದಿತ್ಯನೂ ಸಹ ಇಂದ್ರನ ಉದ್ದೇಶವನ್ನು ನೆರವೇರುವಂತೆ ಮಾಡುತ್ತಾನೆ.

English Translation

Turn not back, but repeatedly praise these two yoked (steeds) of me the destroyer, which advance (to the foe and to the sacrifice); the waters fulfil Indra's purpose, and (so does) the all-cleansing sun, being (swift as) a cloud.

। ಸಂಹಿತಾಪಾಠಃ ।

ಅಯಂ ಯೋ ವಜ್ರಃ ಪುರುಧಾ ವಿವೃತ್ತೋಽವಃ ಸೂರ್ಯಸ್ಯ ಬೃಹತಃ ಪುರೀಷಾತ್ ।
ಶ್ರವ ಇದೇನಾ ಪರೋ ಅನ್ಯದಸ್ತಿ ತದವ್ಯಥೀ ಜರಿಮಾಣಸ್ತರಂತಿ ॥ ೨೧ ॥

। ಪದಪಾಠಃ ।

ಅಯಂ । ಯಃ । ವಜ್ರಃ । ಪುರುಧಾ । ವಿಽವೃತ್ತಃ । ಅವಃ । ಸೂರ್ಯಸ್ಯ । ಬೃಹತಃ । ಪುರೀಷಾತ್ ।
ಶ್ರವಃ । ಇತ್ । ಏನಾ । ಪರಃ । ಅನ್ಯತ್ । ಅಸ್ತಿ । ತತ್ । ಅವ್ಯಥೀ । ಜರಿಮಾಣಃ । ತರಂತಿ ॥ ೨೧ ॥

। ಸಾಯಣಭಾಷ್ಯಂ ।

ಯೋಽಯಂ ವಜ್ರ ಇಂದ್ರಸ್ಯ ಸ್ವಭೂತಃ ಸೂರ್ಯಸ್ಯಾದಿತ್ಯಸ್ಯ ಬೃಹತೋ ಮಹತಃ ಪುರೀಷಾತ್ಪುರಸ್ತಾತ್ಸ್ಕಂದಲಾದವೋಽವಸ್ತಾದಧೋಭಾಗೇ ಸ್ಥಿತೇಷು ವಿವೃತ್ತೋ ವ್ಯಷ್ಟ್ಯಾತ್ಮಕಂ ಪ್ರವೃತ್ತಃ ಪತಿತಃ ।

ಇಚ್ಛಬ್ದೋ೭ಪ್ಯರ್ಥೇ । ತಚ್ಛಬ್ದಶ್ರುತೇರ್ಯಚ್ಛಬ್ದೋ೭ಧ್ಯಾಹಾರ್ಯಃ । ಪರಃ ಪರಸ್ತಾದಂತರಿಕ್ಷಲೋಕ. ಸ್ಯೋಪರಿ ಸ್ಥಿತೇ ಸೂರ್ಯಮಂಡಲೇ ಸ್ಥಿತನೋನ್ಯೈತತ್ । ಶ್ರವ ಇತ್ಯನ್ನನಾಮ । ತದ್ಧೇತುತ್ವಾದುದಕಂ ಶ್ರವ ಇತ್ಯುಚ್ಯತೇ । ಯದಪ್ಯುದಕಂ ಮೇಘೋದರಗತಾಮುದಕಾದನ್ಯದಪ್ಯಸ್ತಿ ಅನ್ಯಥೀ ವೃಥಾರಹಿತಾ ಜರಿಮಾಣಃ ಸ್ತೋತಾರೋ ಮರುದಾದಯಸ್ತತ್ತಾದೃಶಮುದಕಂ ತರಂತಿ । ಅಂತರಿಕ್ಷಲೋಕಂ ಪ್ರತ್ಯವತಾರಯಂತಿ ॥

। ಪ್ರತಿಪದಾರ್ಥ ।

ಯಃ—ಯಾವುದು । ಸೂರ್ಯಸ್ಯ—ಆದಿತ್ಯನ । ಬೃಹತಃ—ಮಹತ್ತಾದುದೂ । ಪರೀಷಾತ್—ಪೂರಕವಾದುದೂ ಆದ ಮಂಡಲಕ್ಕಿಂತ । ಅವಃ—ಕೆಳಭಾಗದ ಮೇಘಗಳ ಮೇಲೆ । ಪುರುಧಾ—ಅನೇಕಸಲ । ವಿವೃತ್ತಃ—ಪ್ರಯೋಗಿಸಲ್ಪಡುವುದೋ । ಅಯಂ—ಇದೇ । ವಜ್ರಃ—ಇಂದ್ರನ ವಜ್ರಾಯುಧವು । ಪರಃ—ಸೂರ್ಯಮಂಡಲದಲ್ಲಿರುವುದೂ । ಅನ್ಯತ್—ಮೇಘಸ್ಥವಾದ ಉದಕಕ್ಕಿಂತಲೂ ಬೇರೆಯಾದುದೂ ಆದ । ಏನಾ ಶ್ರವಃ—ಯಾವ ಈ ಉದಕವು । ಅಸ್ತಿ—ಇರುವುದೋ । ತತ್—ಅದನ್ನು । ಅನ್ಯಥೀ—ಶ್ರಮರಹಿತರಾದ । ಜರಿಮಾಣಃ—ಮರುದಾದಿಗಳು । ತರಂತಿ—ಅಂತರಿಕ್ಷಾಭಿಮುಖವಾಗಿ ಬೀಳುವಂತೆ ಮಾಡುತ್ತಾರೆ.

॥ ಭಾವಾರ್ಥ ॥

ಆದಿತ್ಯನ ಮಹತ್ತಾದ ಮಂಡಲಕ್ಕಿಂತ ಕೆಳಭಾಗದ ಮೇಘಗಳ ಮೇಲೆ ಯಾವ ಇಂದ್ರನ ಆಯುಧವು ಅನೇಕ ಬಾರಿ ಪ್ರಯೋಗಿಸಲ್ಪಡುವುದೋ ಅವೇ ಈ ವಜ್ರಾಯುಧವು, ಸೂರ್ಯಮಂಡಲದಲ್ಲಿರುವುದೂ, ಮೇಘಸ್ಥವಾದ ಉದಕಕ್ಕಿಂತಲೂ ಬೇರೆಯಾದುದೂ ಆದ ಯಾವ ಈ ಉದಕವು ಇರುವುದೋ ಆದನ್ನು ಶ್ರಮರಹಿತರಾದ ಮರುದಾದಿಗಳು ಅಂತರಿಕ್ಷಾಭಿಮುಖವಾಗಿ ಬೀಳುವಂತೆ ಮಾಡುತ್ತಾರೆ

English Translation

This is the thunderbolt which repeatedly falls (on those who are) below the orb of the vast sun, the worshippers easily cause this water (in the sun's orb) above which is different from that (in the clouds) to pass through (the firmament).

। ಸಂಹಿತಾಪಾಠಃ ।

ವೃಷ್ಣೇವೃಷ್ಣೇ ನಿಯತಾ ಮಿಮಯದ್ಗೋಸ್ತತೋ ವಯಃ ಪ್ರ ಪತಾನ್ಪೂರುಷಾದಃ ।
ಅಥೇದಂ ವಿಶ್ವಂ ಭುವನಂ ಭಯಾತ ಇಂದ್ರಾಯ ಸುನ್ವದೃಷಯೇ ಚ ಶಿಕ್ಷತ್ ॥ ೨೨ ॥

। ಪದಪಾಠಃ ।

ವೃಷ್ಟೇವೃಷ್ಟೇ । ನಿಽಯತಾ । ವಿಮಾಮಯತ್ । ಗೌಃ । ತತಃ । ವಯಃ । ಪ್ರ । ಪತಾನ್ । ಪುರುಷ್ಟ-
ಆದಃ ।
ಅಥ । ಇದಂ । ವಿಶ್ವಂ । ಭುವನಂ । ಭಯಾತೇ । ಇಂದ್ರಾಯ । ಸುನ್ವತ್ । ಋಷಯೇ । ಚ । ಶಿಕ್ಷತ್ ॥

। ಸಾಯಣಭಾಷ್ಯಂ ।

ವೃಷ್ಟೇ ವೃಷ್ಟೇ ಸರ್ವಸ್ಮಿನ್ವೃಷ್ಟಿಮಯೇ ಧನುಷಿ ನಿಯತಾ ಸಂಬದ್ಧಾ ಗೌರ್ಗೋಸಂಬಂಧಿನೀ ಸ್ನಾಯುಮತೀ ಮೌರ್ವೀ ವಿಮಾಮಯತ್ । ವಿಮಾಮಯತಿಃ ಶಬ್ದಕರ್ಮಾ। ಅಕೃಷ್ಯಮಾಣಾ ಸತೀ ಶಬ್ದಂ ಕರೋತಿ । ತತಸ್ತಸ್ಮಾದ್ಧನುಷಃ ಪುರುಷಾದಃ ಶತ್ರುಜನಾನಾಮತ್ತಾರಃ । ಮಾರಯಿತಾರ ಇತ್ಯರ್ಥಃ । ವಯಃ ಪಕ್ಷಿಸದೃಶಾ ಗಂತಾರೋ ವಾಣಾಃ ಪ್ರ ಪತಾನ್। ಶತ್ರೂನ್ಪ್ರತಿ ಪ್ರಪತಂತಿ । ಅಥ ತದಾನೀ-ಮಿಂದ್ರಾಯೇಂದ್ರಾರ್ಥಂ ಸುನ್ವತ್ಸೋಮಯಾಗಂ ಕುರ್ವದೃಷಯೇ ಚ ಶಿಕ್ಷತ್ಕರ್ಮಣಾಂ ದ್ರಷ್ಟೃ ಋತ್ವಿಜೇ ಚ ಸಂಪೂರ್ಣಾಂ ದಕ್ಷಿಣಾಂ ದದದಪೀದಮಿದೃಶಂ ವಿಶ್ವಂ ಸಮಸ್ತಂ ಭುವನಂ ಭೂತಜಾತಂ ಭಯಾತೇ । ಇಂದ್ರಾದ್ಬಿಭೇತಿ । ಅನ್ಯತ್ಕಿಮುತೇತ್ಯರ್ಥಃ ॥

। ಪ್ರತಿಪದಾರ್ಥ ।

ವೃಷ್ಟೇವೃಷ್ಟೇ—ವೃಷ್ಟಿಮಯವಾದ ಸಕಲ ಧನುಸ್ಸುಗಳಲ್ಲಿಯೂ । ನಿಯತಾ—ಸಂಬದ್ಧವಾದುದೂ । ಗೌಃ—ಗೋವಿನ ಸ್ನಾಯುವಿನಿಂದ ಮಾಡಿದುದೂ ಆದ । ಮೌರ್ವೀ—ಹೆದೆಯು । ವಿಮಾಮಯತ್—ಶಬ್ದ ಮಾಡುತ್ತದೆ । ತತಃ—ಅನಂತರ । ಪುರುಷಾದಃ—ಶತ್ರುಗಳನ್ನು ಕಬಳಿಸುವುವೂ । ವಯಃ—ಪಕ್ಷಿಸಮಾನವಾದವೂ ಆದ ಬಾಣಗಳು । ಪ್ರ ಪತಾನ್—ಶತ್ರುಗಳ ಮೇಲೆ ಬೀಳುತ್ತವೆ । ಅಥ—ಆ ಒಡನೆಯೇ । ಇಂದ್ರಾಯ—ಇಂದ್ರನನ್ನುದ್ದೇಶಿಸಿ । ಸುನ್ವತ್—ಸೋಮಯಾಗವನ್ನು ನೆರವೇರಿಸುವುದೂ । ಋಷಯೇ ಚ—ಋತ್ವಿಗಾದಿಗಳಿಗೆ। ಶಿಕ್ಷತ್—ದಕ್ಷಿಣೆಯನ್ನು ಕೊಡತಕ್ಕದ್ದೂ ಆದ । ಇದಂ ವಿಶ್ವಂ ಭುವನಂ—ಈ ಸಕಲ ಲೋಕವೂ । ಭಯಂತೇ—ಇಂದ್ರನಿಂದ ಭಯಗೊಳ್ಳುತ್ತವೆ.

। ಭಾವಾರ್ಥ ।

ವೃಷ್ಟಿಮಯವಾದ ಸಕಲ ಧನುಸ್ಸುಗಳಲ್ಲಿಯೂ ಸಂಬದ್ಧವಾದುದೂ, ಗೋವಿನ ಸ್ನಾಯುವಿನಿಂದ ಮಾಡಿದುದೂ ಆದ ಹೆದೆಯು ಶಬ್ದಮಾಡುತ್ತದೆ. ಅನಂತರ ಶತ್ರುಗಳನ್ನು ಕಬಳಿಸುವುವೂ, ಪಕ್ಷಿಸಮಾನವಾದವೂ ಆದ ಬಾಣಗಳು ಹೆದೆಗಳಿಂದ ಹೊರಹೊರಟು ಶತ್ರುಗಳ ಮೇಲೆ ಬೀಳುತ್ತವೆ. ಆ ಒಡನೆಯೇ, ಇಂದ್ರನನ್ನುದ್ದೇಶಿಸಿ ಸೋಮಯಾಗವನ್ನು ನೆರವೇರಿಸುವುದೂ, ಋತ್ವಿಗಾದಿಗಳಿಗೆ ದಕ್ಷಿಣೆಯನ್ನು ಕೊಡತಕ್ಕದ್ದೂ ಆದ ಈ ಸಕಲ ಲೋಕವೂ ಇಂದ್ರನ ಸಾಮರ್ಥ್ಯವನ್ನು ನೋಡಿ ಭಯಗೊಳ್ಳುತ್ತವೆ.

English Translation

The bowstring fixed to each bow clangs loudly; then the man-destroying (shafts like) birds fall upon (the foes): and the whole of this world is alarmed, presenting libations to Indra, and donations to the Rishi.

॥ ವಿಶೇಷವಿಷಯಗಳು ॥

ಗೌಃ ಎಂಬ ಶಬ್ದದ ನಾನಾರ್ಥಗಳನ್ನು ವಿವರಿಸುವಾಗ ಪ್ರಕೃತಋಕ್ಕನ್ನು ಯಾಸ್ಕರು ಉದಾಹರಣೆಗಾಗಿ ತೆಗೆದುಕೊಂಡು ಅದಕ್ಕೆ ಬಿಲ್ಲಿನ ಹೆದೆಗಾಗಿ ಉಪಯೋಗಿಸುವ ಸ್ನಾಯು ಎಂಬರ್ಥವನ್ನು ಹೇಳಿದಾರೆ. ಗೌಃ ಎಂಬ ಶಬ್ದಕ್ಕೆ ಯಾಸ್ಕರು ಹೇಳಿರುವ ನಾನಾರ್ಥಗಳನ್ನು ಇಲ್ಲಿ ವಿವರಿಸುವುದು ಅವಶ್ಯಕವಾಗಿದೆ.

(೧) ಗೌರಿತಿ ವೃಥಿವ್ಯಾ ನಾಮಧೇಯಂ । ಯತ್ ದೂರಂಗತಾ ಭವತಿ ।
ಯಚ್ಚಾಸ್ಯಾಂ ಭೂತಾನಿ ಗಚ್ಛಂತಿ । ಗೌತೇರ್ವಾಕಾರೋ ನಾಮಕರಣಃ ॥

(ನಿ. ೨-೫)

ಗೌಃ ಎಂಬ ಶಬ್ದವು ಪೃಥಿವಿಯನ್ನು ನಿರ್ದೇಶಿಸುವುದು. ಏಕೆಂದರೆ, ಇದು ಬಹುದೂರದವರೆಗೂ ವ್ಯಾಪಿಸಿರುವುದು ಅಥವಾ ಇದರ ಮೇಲೆ ಪ್ರಾಣಿಗಳು ಸಂಚರಿಸುವವು. ಆದ್ದರಿಂದ ಗೌಃ ಎಂದರೆ ಭೂಮಿಯು; ಗಾಙ್-ಗತೌ ಹೋಗು ಎಂಬರ್ಥವುಳ್ಳ ಧಾತುವಿನಿಂದ ನಿಷ್ಪನ್ನವಾಗಿ ಇದರ ಜತೆಗೆ ಓ ಎಂಬ ಅಕ್ಷರವು ಪ್ರತ್ಯಯವಾಗಿ ಸೇರಿ ಗೌಃ ಎಂಬ ಶಬ್ದವಾಗಿದೆ,

(೨) ಅಥಾಪಿ ಪಶುನಾಮೇಹ ಭವತ್ಯೇತಸ್ಮಾದೇವ ।

ಇದಲ್ಲದೆ ಮೇಲೆ ಹೇಳಿದ ಗಾಙ್ ಗತೌ ಎಂಬ ಧಾತುವಿನಿಂದಲೇ ನಿಷ್ಪನ್ನವಾದ ಗೌಃ ಎಂಬ ಶಬ್ದಕ್ಕೆ ಪಶು ಎಂದೂ ಹೆಸರು.

(೩) ಅಥಾಪ್ಯಸ್ಯಾಂ ತಾದ್ಧಿತೇನ ಕೃತ್ಸ್ನವನ್ತಿಗಮಾ ಭವಂತಿ । ಗೋಭಿಃ ಶ್ರೀಣೀತ ಮತ್ಸರಂ
ಇತಿ ಪಯಸಃ । ಮತ್ಸರಃ ಸೋಮೋ ಮಂದತೇಸ್ತೃಪ್ತಿಕರ್ಮಣಃ । ಮತ್ಸರ ಇತಿ
ಲೋಭನಾಮಾಭಿಮತ್ತ ಏನೇನ ಧನಂ ಭವತಿ । ಪಯಃ ಪಿಬತೇರ್ವಾ । ಕ್ಷೀರಂ
ಕ್ಷರತೇಃ । ಘಸೇರ್ವೀರೋ ನಾಮಕರಣ ಉಶೀರಮಿತಿ ಯಥಾ ॥

ಮೇಲೆ ಹೇಳಿದ ಪಶು ಎಂಬರ್ಥದಲ್ಲಿ ಪಶುವಿನಿಂದ ಉತ್ಪನ್ನವಾದ ಹಾಲು ಮೊದಲಾದ ದ್ರವ್ಯಗಳನ್ನು ಗೋಶಬ್ದದಿಂದ ನಿರ್ದೇಶಿಸಲಾಗುವುದು. ಹೇಗೆಂದರೆ—ಗೋಭಿಃ ಶ್ರೀಣೀತ ಮತ್ಸರಂ ಎಂಬ ಶ್ರುತಿವಾಕ್ಯದಲ್ಲಿ—ಗೋವಿಕಾರವಾದ ಹಾಲಿನಿಂದ ಸೋಮರಸವನ್ನು ವಿಶ್ರವಮಾಡಿ ಎಂಬರ್ಥವಿರುವುದು. ಗೋಭಿಃ ಎಂದರೆ ಗೋವಿಕಾರವಾದ ಎಂದರೆ ಗೋವಿನಿಂದ ಉತ್ಪನ್ನವಾದ ಹಾಲು, ಮೊಸರು ಮೊದಲಾದ ದ್ರವ್ಯಗಳು ಎಂದರ್ಥವು. ಮತ್ಸರಂ ಎಂದರೆ ಸೋಮವು ಪಾನಮಾಡುವುದರಿಂದ ತೃಪ್ತಿಯನ್ನುಂಟುಮಾಡುವ ಎಂಬರ್ಥವುಳ್ಳ ಮಂದ್ ಧಾತುವಿನಿಂದ ಮತ್ಸರಃ ಎಂಬ ಶಬ್ದವು ನಿಷ್ಪನ್ನವಾಗಿ ಸೋಮರಸವೆಂಬ ಅರ್ಥವನ್ನು ಸೂಚಿಸುವುದು. ಮತ್ಸರಶಬ್ದಕ್ಕೆ ಲೋಭ, ಅತಿ

ಎಂದೂ ಅರ್ಥವು. ಈ ಅರ್ಥವನ್ನು ಸೂಚಿಸುವಾಗ ಈ ಶಬ್ದಕ್ಕೆ ಧನವೆಂದೂ ಅರ್ಥವಾಗಬಹುದು. ಹಾಲು ಎಂಬರ್ಥವುಳ್ಳ **ಪಯಃ** ಎಂಬ ಶಬ್ದವು ಪಾನಮಾಡು ಎಂಬರ್ಥವುಳ್ಳ (ಪಾ) ಪಿಬತಿಧಾತುವಿನಿಂದಾಗಲಿ, ವೃದ್ಧಿಪಡಿಸು, ಪುಷ್ಟಿಯನ್ನು ಹೊಂದು ಎಂಬರ್ಥವುಳ್ಳ ಪ್ಯಾಯತಿಧಾತುವಿನಿಂದಾಗಲಿ, ನಿಷ್ಪನ್ನವಾಗಬಹುದು. **ಕ್ಷೀರಶಬ್ದಕ್ಕೆ** ಹಾಲೆಂದೇ ಅರ್ಥವು. ಈ ಕ್ಷೀರಶಬ್ದವು—ಅದ ಭಕ್ಷಣೇ ಎಂಬ ಧಾತುವಿಗೆ ಘಸ ಆದೇಶವಾಗಿ ಕ್ಷರ್-ಹರಿ, ಪ್ರವಹಿಸು ಎಂಬ ಧಾತುವು ಲಬ್ಧವಾಗಿ ಆ ಕ್ಷರ್ ಧಾತುವಿನಿಂದ ಕ್ಷೀರ ಎಂಬ ಶಬ್ದವು ನಿಷ್ಪನ್ನವಾಗಿರುವುದು. ಹರಿಯುವ ಸ್ವಭಾವವುಳ್ಳದ್ದರಿಂದ ಹಾಲು ಎಂದರ್ಥವು. ಕ್ಷರ್ ಧಾತುವಿಗೆ ಈರ ಪ್ರತ್ಯಯ ಸೇರಿ ಕ್ಷೀರ ಎಂಬ ಶಬ್ದವಾಗಿರುವುದು ವರ ಕಾಂತೌ ಎಂಬ ಧಾತುವಿಗೆ ಈರ ಪ್ರತ್ಯಯವು ಸೇರಿ ಉಶೀರ ಎಂಬ ಶಬ್ದವಾಗಿರುವಂತೆ ಎಂದು ಉಶೀರಶಬ್ದದ ಉದಾಹರಣೆಯನ್ನು ಕೊಟ್ಟಿರುವರು.

(೪) **ಅಂಶುಂ ದುಹಂತೋ ಅಧ್ಯಾಸತೇ ಗವಿ ಇತ್ಯಧಿಸವಣಚರ್ಮಣಃ । ಅಂಶುಃ ಶಮುಷ್ಪ-ಮಾತ್ರೋ ಭವತಿ । ಅನನಾಯ ಶಂಭವತೀತಿ ವಾ । ಚರ್ಮ ಚರತೇರ್ವೋಚ್ಚೃತಂ ಭವತೀತಿ ವಾ ॥**

(ನಿ. ೬-೫)

ಅಂಶುಂ ದುಹಂತೋ ಅಧ್ಯಾಸತೇ ಗವಿ ಎಂಬ ವಾಕ್ಯಕ್ಕೆ ಸೋಮರಸವನ್ನು ಹಿಂಡುವಾಗ ಗೋಚರ್ಮದಮೇಲೆ ಕುಳಿತುಕೊಳ್ಳುತ್ತಾರೆ ಎಂದರ್ಥವು ಈ ವಾಕ್ಯದಲ್ಲಿರುವ **ಗವಿ** ಎಂಬ ಶಬ್ದಕ್ಕೆ ಗೋಚರ್ಮದ ಮೇಲೆ ಎಂದರ್ಥವು. **ಅಂಶುಃ** ಎಂದರೆ ಸೋಮವು. ಏಕೆಂದರೆ ಸೋಮರಸವು ಶರೀರದೊಳಗೆ ಪ್ರವೇಶಿಸಿದ ಕೂಡಲೇ ಎಂದರೆ ವ್ಯಾಪಿಸಿದ ಕೂಡಲೇ ಸುಖವನ್ನು ಅಥವಾ ಸಂತೋಷವನ್ನುಂಟುಮಾಡುವುದು. ಅಥವಾ ಪ್ರಾಣಿಗಳ ಸುಖಜೀವನಕ್ಕೆ ಕಾರಣವಾಗಿರುವುದರಿಂದ ಸೋಮಕ್ಕೆ **ಅಂಶುಃ** ಎಂದು ಹೆಸರು **ಚರ್ಮ**ಶಬ್ದವು ಚರತಿಧಾತುವಿನಿಂದ ನಿಷ್ಪನ್ನವಾಗಿ ಪ್ರಾಣಿಗಳ ಶರೀರಕ್ಕೆ ಹೊದ್ದಿಕೆಯಂತಿರುವುದು ಅಥವಾ ಶರೀರದಿಂದ ಕತ್ತರಿಸಿ ಎಂದರೆ ಬೇರ್ಪಡಿಸಿ ತೆಗೆದಿರುವುದರಿಂದ ಚರ್ಮವೆಂದು ಹೆಸರು,

(೫) **ಅಥಾಪಿ ಚರ್ಮ ಚ ಶ್ಲೇಷ್ಮಾ ಚ । ಗೋಭಿಃ ಸನ್ನದ್ಧೋ ಅಸಿ ವೀಳಯಸ್ವ ಇತಿ ರಥಸ್ತುತೌ ॥**

ಗೌಃ ಎಂಬ ಶಬ್ದಕ್ಕೆ ಚರ್ಮ (ಹೊದಿಕೆ) ಮತ್ತು ಶ್ಲೇಷ್ಮ ಎಂಬರ್ಥವೂ ಇರುವುದು. **ಗೋಭಿಃ ಸನ್ನದ್ಧೋ ಅಸಿ ವೀಳಯಸ್ವ**—ಎಂಬ ರಥವನ್ನು ಸ್ತುತಿಸುವ ವಾಕ್ಯಕ್ಕೆ ಎಲೈ ರಥವೇ, ನೀನು ಗೋಚರ್ಮದಿಂದ ಆಚ್ಛಾದಿಸಲ್ಪಟ್ಟಿರುವೆ ಮತ್ತು ಅಂಟಿಸಲ್ಪಟ್ಟಿರುವೆ ಎಂದರ್ಥವು. ಈ ವಾಕ್ಯದಲ್ಲಿರುವ **ಗೋಭಿಃ** ಎಂಬ ಶಬ್ದಕ್ಕೆ ಗೋಚರ್ಮಗಳಿಂದ ಎಂಬರ್ಥವಿರುವುದು. ರಥವನ್ನು ನಿರ್ಮಿಸುವಾಗ ಅದರ ಆವರಣಕ್ಕಾಗಿ ಗೋಚರ್ಮವನ್ನು ಹೊದ್ದಿಸಿ ಅದನ್ನು ಒಂದು ವಿಧವಾದ ಅಂಟಿನಿಂದ (ಶ್ಲೇಷ್ಮ) ಅಂಟಿಸುವರು. ಅದನ್ನೇ ಈ ವಾಕ್ಯದಲ್ಲಿ ವಿವರಿಸಿ ರಥವನ್ನು ಸ್ತುತಿಸಲಾಗಿದೆ.

(೬) **ಅಥಾಪಿ ಸ್ನಾವ ಚ ಶ್ಲೇಷ್ಮಾ ಚ । ಗೋಭಿಃ ಸನ್ನದ್ಧಾ ಪತತಿ ಪ್ರಸೂತ ಇತೀಷುಸ್ತುತೌ ॥**

(ನಿ. ೬-೫)

ಗೋಶಬ್ದಕ್ಕೆ ಸ್ನಾಯು ಮತ್ತು ಶ್ಲೇಷ್ಮವೆಂಬ ಅರ್ಥವೂ ಇರುವುದು. **ಗೋಭಿಃ ಸನ್ನದ್ಧಾ ಪತತಿ ಪ್ರಸೂತ** ಎಂಬ ವಾಕ್ಯವು ಬಾಣವನ್ನು ಸ್ತುತಿಸುವುದು. ಬಾಣವನ್ನು ನಿರ್ಮಿಸುವಾಗ ಅವುಗಳಿಗೆ ಪಕ್ಷಿಗಳ ರೆಕ್ಕೆಗಳನ್ನು ಸ್ನಾಯು (ದಾರದಂತಿರುವ ನರಗಳ) ಗಳಿಂದ ಬಿಗಿದು ಅಂಟಿನಿಂದ ಅಂಟಿಸಿ ಸಿದ್ಧಪಡಿಸುವರು. ಅದನ್ನೇ ಈ ವಾಕ್ಯದಲ್ಲಿ ವಿವರಿಸಿದೆ.

(೭) **ಜ್ಯಾಪಿ ಗೌರುಚ್ಯತೇ ಗವ್ಯಾಚೇತ್ತಾದ್ಧಿತಮುಥ ಚೇನ್ನ ಗವ್ಯಾಗವಯತೀಷೂನಿತಿ ।**

ಧನುಸ್ಸಿನ ಹೆದೆಗೂ (ಎರಡು ತುದಿಗಳನ್ನು ಸೇರಿಸಿ ಕಟ್ಟುವದಾರ) ಗೌಃ ಎಂದು ಹೆಸರು. ಏಕೆಂದರೆ ಈ ಹೆದೆಯನ್ನು ಗೋಸ್ನಾಯುವಿನಿಂದ ನಿರ್ಮಿಸುವರು. ಗವ್ಯಾ ಎಂಬ ಶಬ್ದವು ಗೋಶಬ್ದದ ರೂಪಾಂತರವೇ ಆಗಿದೆ. ಇದರಿಂದ (ಹೆದೆಯಿಂದ) ಬಾಣಗಳು ಹೊರಹೊರಡುವುದರಿಂದ ಹೆದೆಗೆ ಗೌಃ ಎಂದು ಹೆಸರು. ಈ ಅರ್ಥವನ್ನು ವಿವರಿಸುವುದಕ್ಕಾಗಿ ಪ್ರಕೃತಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡಿರುವರು—

(೮) **ವೃಕ್ಷೇವೃಕ್ಷೇ ನಿಯತಾಮಿಮಾಮಯದ್ಧಾಸ್ತಕೋ ವಯಃ ಪ್ರಪತಾನ್ಪುರುಷಾದಃ ।**
ವೃಕ್ಷೇವೃಕ್ಷೇ ಧನುಷಿ ಧನುಷಿ । ವೃಕ್ಷೋ ವ್ರಶ್ಚನಾತ್ । ವೃತ್ವಾ ಕ್ಷಾಂ ತಿಷ್ಠತೀತಿ ವಾ । ಕ್ಷಾ ಕ್ಷಿಯತೇರ್ನಿವಾಸಕರ್ಮಣಃ । ನಿಯತಾಮಿಮಾಮಯದ್ಧಾಃ ಶಬ್ದಂ ಕರೋತಿ । ಮಿಮಯತಿಃ ಶಬ್ದಕರ್ಮಾ । ತತೋ ವಯಃ ಪ್ರಪತಂತಿ ಪುರುಷಾನದನಾಯ । ವಿರಿತಿ ಶಕುನಿನಾಮ । ವೇತೇರ್ಗತಿಕರ್ಮಣಃ । ಅಥಾಪೀಷುನಾಮೇಹ ಭವತ್ಯೇತಸ್ಮಾದೇವ ॥

(ನಿ. ೨-೬)

ಧನುಸ್ಸುಗಳನ್ನು ವೃಕ್ಷಗಳಿಂದ (ಮರದಿಂದ) ನಿರ್ಮಿಸುವುದರಿಂದ ಇಲ್ಲಿ ಧನುಸ್ಸೆಂಬ ಅರ್ಥವನ್ನು ಸೂಚಿಸುವುದಕ್ಕಾಗಿ ವೃಕ್ಷೇವೃಕ್ಷೇ ಎಂಬ ವೃಕ್ಷಶಬ್ದಪ್ರಯೋಗವಿದೆ. ಇಂದ್ರನು ಶತ್ರುಗಳೊಡನೆ ಯುದ್ಧಮಾಡುವಾಗ ಅನೇಕರೂಪಗಳನ್ನು ಧರಿಸಿ ಅನೇಕಬಾಹುಗಳಿಂದ ಅನೇಕ ಧನಸ್ಸುಗಳನ್ನು ಹಿಡಿಯುವನು. ಆದ್ದರಿಂದ ಇಲ್ಲಿ ಇಂದ್ರನು ತನ್ನ ಅನೇಕಬಾಹುಗಳಲ್ಲಿ ಹಿಡಿದಿರುವ ಪ್ರತಿಯೊಂದು ಧನುಸ್ಸಿನಲ್ಲಿಯೂ ಎಂದು ಹೇಳಿದೆ. ಪ್ರತಿಯೊಂದು ಧನುಸ್ಸಿನಲ್ಲಿಯೂ ಇರುವ ಹೆದೆಯು ಟಂಕಾರಶಬ್ದವನ್ನು ಮಾಡುತ್ತದೆ. ಆ ಹೆದೆಯಿಂದ ಹೊರಹೊರಟ ಬಾಣಗಳು ಶತ್ರುಪುರುಷರ ಪ್ರಾಣಗಳನ್ನು ತಿಂದು (ಶರೀರಗಳಿಗೆ ತಗಲಿ) ಧ್ವಂಸಮಾಡುತ್ತವೆ. ಬಾಣಗಳಿಗೆ ಪಕ್ಷಿಗಳಗರಿಗಳನ್ನು ಕಟ್ಟುವುದರಿಂದ ಇಲ್ಲಿ ಬಾಣವನ್ನು ಸೂಚಿಸುವುದಕ್ಕಾಗಿ ಪಕ್ಷಿ ಎಂಬರ್ಥವುಳ್ಳ ವಯಃ ಎಂಬ ಶಬ್ದವನ್ನೇ ಉಪಯೋಗಿಸಲಾಗಿದೆ. ಪ್ರತಿಯೊಂದು ಧನಸ್ಸಿನ ಹೆದೆಯಿಂದ ಹೊರಹೊರಟ ಪಕ್ಷಿಗಳ ರೆಕ್ಕೆಗಳಿಂದ ಕೂಡಿದ ಅನೇಕ ಬಾಣಗಳು ಶತ್ರುಗಳನ್ನು ತಾಗಿ ನಾಶ ಮಾಡುವವು ಕತ್ತರಿಸು ಎಂಬರ್ಥವುಳ್ಳ ವ್ರಶ್ಚ್ ಎಂಬ ಧಾತುವಿನಿಂದ ವೃಕ್ಷಶಬ್ದವು ನಿಷ್ಪನ್ನವಾಗಿದೆ ಏಕೆಂದರೆ ಸೌದೆಗಾಗಿಯೂ, ಇತರ ಮರದ ಪದಾರ್ಥಗಳನ್ನು ನಿರ್ಮಿಸುವುದಕ್ಕಾಗಿಯೂ ಇದನ್ನು ಕಡಿಯುವುದರಿಂದ ಇದಕ್ಕೆ ವೃಕ್ಷವೆಂದು ಹೆಸರು. ಅಥವಾ ವೃ ಎಂದರೆ ವ್ಯಾಪಿಸು, ಸೀಳು ಎಂದರ್ಥವು. ಕ್ಷಾ ಎಂದರೆ ಭೂಮಿಯು. ಈ ವೃಕ್ಷವು ಭೂಮಿಯನ್ನು ಶಿಲಿ ಬೇರುಗಳಿಂದ ಅಲ್ಲೆಲ್ಲಾ ವ್ಯಾಪಿಸುವುದರಿಂದ ವೃಕ್ಷವೆಂದೂ ಹೆಸರು. ಕ್ಷಾ-ಭೂಮಿ ಎಂಬ ಶಬ್ದವು ವಾಸಮಾಡು ಎಂಬರ್ಥವುಳ್ಳ ಕ್ಷಿ-ನಿವಾಸಗತ್ಯೋಃ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಜನರು ಇದರ (ಭೂಮಿಯ) ಮೇಲೆ ವಾಸಮಾಡುತ್ತಾರಾದರಿಂದ ಭೂಮಿಗೆ ಕ್ಷಾ ಎಂದು ಹೆಸರು. ನಿಯತಾಮಿಮಾಮಯದ್ಧಾಃ

ಎಂಬ ವಾಕ್ಯಕ್ಕೆ ಫಟ್ಟಯಾಗಿ ಠೇಂಕಾರಶಬ್ದವನ್ನು ಮಾಡುತ್ತದೆ ಎಂದರ್ಥವು. ಹೆದೆಯಲ್ಲಿ ಬಾಣವನ್ನು ಹೂಡಿ ಎಳೆದುಬಿಡುವಾಗ ಠೇಂಕಾರಶಬ್ದವನ್ನು ಮಾಡುತ್ತದೆ. ಮಿಾವಮ್ ಧಾತುವಿಗೆ ಶಬ್ದಮಾಡು ಎಂದರ್ಥವಿರುವುದು. ಅನಂತರ ಎಂದರೆ ಹೆದೆಯು ಶಬ್ದಮಾಡಿದನಂತರ ಅದರಿಂದ ಪಕ್ಷಿಗಳು ಎಂದರೆ ಪಕ್ಷಿಗಳ ರೆಕ್ಕೆಗಳನ್ನು ಕಟ್ಟಿರುವ ಬಾಣಗಳು ಶತ್ರುಗಳನ್ನು ತಿನ್ನುವುದಕ್ಕಾಗಿ (ನಾಶಮಾಡುವುದಕ್ಕಾಗಿ) ಹೊರಹೊರಡುತ್ತವೆ. ಹೋಗು, ಸಂಚರಿಸು ಎಂಬರ್ಥವುಳ್ಳ ವಿಧಾತುವಿನಿಂದ ವಿಃ-ಪಕ್ಷಿಯು ಎಂಬ ಶಬ್ದವು ನಿಷ್ಪನ್ನವಾಗಿದೆ. ಈ ಅರ್ಥದಲ್ಲಿಯೇ ಈ ಶಬ್ದಕ್ಕೆ ಬಾಣವು ಎಂಬರ್ಥವೂ ಇರುವುದು.

(೯) ಆದಿತ್ಯೋಽಪಿ ಗೌರುಚ್ಯತೇ । ಉತಾದಃ ಪರುಷೇ ಗವಿ । ಪರ್ವತೇ ಭಾಸ್ವತೀತ್ಯೌಪಮನ್ಯವಃ ।

ಗೌಃ ಎಂಬ ಶಬ್ದಕ್ಕೆ ಆದಿತ್ಯನೆಂಬ ಅರ್ಥವೂ ಇರುವುದು. ಉತಾದಃ ಪರುಷೇ ಗವಿ ಎಂಬ ಶ್ರುತಿವಾಕ್ಯದಲ್ಲಿ ಗವಿ ಎಂಬ ಶಬ್ದಕ್ಕೆ ಆದಿತ್ಯನಲ್ಲಿ ಎಂಬರ್ಥವಿರುವುದು. ಗುಂಪುಗುಂಪಾಗಿರುವ ರಶ್ಮಿಗಳ ಮಧ್ಯದಲ್ಲಿ ಎಂದರೆ ಪ್ರಭಾಮಂಡಲದಲ್ಲಿ ಬೆಳಗುತ್ತಿರುವವನು ಎಂದು ಔಪಮನ್ಯವ ಎಂಬ ಆಚಾರ್ಯರ ಅಭಿಪ್ರಾಯವು

(೧೦) ಅಥಾಪ್ಯಸ್ಯೈಕೋ ರಶ್ಮಿಶ್ಚಂದ್ರಮಸಂ ಪ್ರತಿ ದೀಪ್ಯತೇ ತದೇತೇನೋಪೇಕ್ಷಿತವ್ಯಂ । ಆದಿತ್ಯತೋಽಸ್ಯ ದೀಪ್ತಿರ್ಭವತೀತಿ । ಸುಷುಮ್ಣಃ ಸೂರ್ಯರಶ್ಮಿಶ್ಚಂದ್ರಮಾ ಗಂಧರ್ವಃ ಇತ್ಯಪಿ ನಿಗಮೋ ಭವತಿ ।

(ನಿ. ೨-೭)

ಸೂರ್ಯನ ಒಂದು ಕಿರಣವು ಚಂದ್ರನನ್ನು ಪ್ರಕಾಶಿಸುವಂತೆ ಮಾಡುವುದು. ಸೂರ್ಯನ ಕಿರಣದಿಂದ ಚಂದ್ರನು ಪ್ರಕಾಶಿಸುವನು ಎಂಬ ವಿಷಯವು, ಸುಷುಮ್ಣಃ ಸೂರ್ಯರಶ್ಮಿಶ್ಚಂದ್ರಮಾ ಗಂಧರ್ವಃ ಎಂಬ ಶ್ರುತಿವಾಕ್ಯದಿಂದ ಪ್ರತಿಪಾದಿಸಲ್ಪಟ್ಟಿರುವುದು. ಸುಷುಮ್ಣಾ ಎಂಬುದು ಸೂರ್ಯನ ಒಂದು ಕಿರಣವಿಶೇಷವು, ಚಂದ್ರನು ಅದನ್ನು ಸ್ವೀಕರಿಸಿ ಅದರಿಂದ ಬೆಳಗುವನು ಎಂದು ಶ್ರುತಿವಾಕ್ಯದ ಅಭಿಪ್ರಾಯವು.

(೧೧) ಸೋಽಪಿ ಗೌರುಚ್ಯತೇ । ಅತ್ರಾಹ ಗೋರಮನ್ವತ ಇತಿ । ತದುಪರಿಷ್ಟಾತ್ ವ್ಯಾಖ್ಯಾಸ್ಯಾಮಃ ।

ಆ ಸುಷುಮ್ನವೆಂಬ ರಶ್ಮಿಗೂ ಗೌಃ ಎಂದು ಹೆಸರು. ಈ ವಿಷಯದಲ್ಲಿ ಅತ್ರಾಹ ಗೋರಮನ್ವತ ಎಂದು ಶ್ರುತಿವಾಕ್ಯವಿರುವುದು. ಈ ವಿಷಯವನ್ನು ನಾವು ಮುಂದೆ ವಿವರಿಸುವೆವು.

(೧೨) ಸರ್ವೇಽಪಿ ರಶ್ಮಯೋ ಗಾವ ಉಚ್ಯಂತೇ । ತಾ ವಾಂ ವಾಸ್ತೂನ್ಯುಶ್ಮಸಿ ಗಮಧ್ಯೈ ಯತ್ರ ಗಾವೋ ಭೂರಿಶೃಂಗಾ ಅಯಾಸಃ । ಅತ್ರಾಹ ತದುರುಗಾಯಸ್ಯ ವೃಷ್ಣಃ ಪರಮಂ ಪದಮವಭಾತಿ ಭೂರಿ॥ತಾನಿ ವಾಂ ವಾಸ್ತೂನಿ ಕಾಮಯಾಮಹೇ ಗಮನಾಯೆ ಯತ್ರ ಗಾವೋ ಬಹುಶೃಂಗಾಃ । ಭೂರೀತಿ ಬಹುನೋ ನಾಮಧೇಯಂ ಪ್ರಭವತೀತಿ ಸತಃ । ಶೃಂಗಂ ಶ್ರಯತೇರ್ವಾ ಶೃಣಾತೇರ್ವಾ ಶವೃಾತೇರ್ವಾ ಶರಣಾಯೋದ್ಗತಮಿತಿ

ವಾ ಶಿರಸೋ ನಿರ್ಗತಮಿತಿ ವಾ । ಅಯಾಸೋಽಯನಾಃ । ತತ್ರ ತದುರುಗಾಯಸ್ಯ ವಿಷ್ಣೋರ್ಮಹಾಗತೇಃ ಪರಮಂ ಪದಂ ಪರಾರ್ಧ್ಯಸ್ಥಮವಭಾತಿ ಭೂರಿ । ಪಾದಃ ಪದ್ಯತೇಃ । ಸ್ತನ್ನಿಧಾನಾತ್ಪದಂ । ಪಶುಪಾದಪ್ರಕೃತಿಃ ಪ್ರಭಾಗಪಾದಃ । ಪ್ರಭಾಗಪಾದ-ಸಾಮಾನ್ಯಾದಿತರಾಣಿ ಪದಾನಿ ॥

(ನಿ ೨-೭)

ಇದಲ್ಲದೆ ಇತರ ಎಲ್ಲಾ ವಿಧವಾದ ರಶ್ಮಿಗಳನ್ನೂ ಗಾವಃ ಎಂಬ ಶಬ್ದದಿಂದಲೇ ನಿರ್ದೇಶಿಸಲಾಗುವುದು. ಈ ವಿಷಯದಲ್ಲಿ ಉದಾಹರಣೆಗಾಗಿ ಈ ಮುಂದಿನ ಋಕ್ಕನ್ನೂ ವಿವರಿಸುವೆವು. ಯಾವ ಸ್ಥಾನದಲ್ಲಿ ಬಹುಬೇಗ ಗಮನವುಳ್ಳ ಅನೇಕ ಕಿರಣಗಳು ಬೆಳಗುತ್ತಿರುವುವೋ ಅಂತಹ ವಿಷ್ಣುವಿನ ಪರಮಪದನೆಂಬ ದಿವ್ಯಾಸ್ಥಾನವನ್ನು ಸೇರಲು ನಾವು ಬಯಸ್ಸವೆವು ಭೂರಿ ಎಂದರೆ ಬಹು. ಏಕೆಂದರೆ ಬಹಳವನ್ನು ಉತ್ಪತ್ತಿಮಾಡುವುದರಿಂದ ಭೂರಿಶಬ್ದಕ್ಕೆ ಬಹು, ಬಹಳವಾದ ಎಂಬರ್ಥವಿರುವುದು. ಶೃಂಗಶಬ್ದವು ಆಶ್ರಯಿಸು ಎಂಬರ್ಥವುಳ್ಳ ಶ್ರಿ ಧಾತುವಿನಿಂದಾಗಲಿ (ತಾನು ಇರುವ ಶಿರಸ್ಸನ್ನು ಆಶ್ರಯಿಸಿರುವುದರಿಂದ), ಕೊಲ್ಲು ಎಂಬರ್ಥವುಳ್ಳ ಶೃ ಧಾತುವಿನಿಂದಾಗಲಿ, ನಾಶಮಾಡು ಎಂಬರ್ಥವುಳ್ಳ ಶವಸ್ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಈ ಕೊಂಬಿನಿಂದ ತನ್ನನ್ನು ರಕ್ಷಿಸಿಕೊಳ್ಳುವುದು ಎಂಬುದರಿಂದಾಗಲಿ, ಶಿರಸ್ಸಿನಿಂದ ಹೊರಹೊರಟಿರುವುದು ಎಂಬುದರಿಂದಾಗಲಿ ಶೃಂಗವೆಂಬ ಶಬ್ದಕ್ಕೆ ಕೊಂಬು ಎಂಬ ಅರ್ಥವು ಪ್ರಸಿದ್ಧವಾಗಿದೆ. ಅಯಾಸಃ ಎಂದರೆ ಒಂದುಕ್ಷಣಕಾಲವೂ, ಒಂದೆಡೆ ನಿಲ್ಲದೆ ಸರ್ವದಾ ಚಲಿಸುವ ಸ್ವಭಾವವುಳ್ಳದ್ದು. ಈ ವಿಷ್ಣುವಿನ ಪರಮಪದವೆಂಬ ಸ್ಥಾನವು ಬಹಳ ಪ್ರಕಾಶಮಾನವಾದ ಮಹಾಗಮನವುಳ್ಳ ಶ್ರೇಷ್ಠವಾದ ಸ್ಥಾನವೆಂದು ಪ್ರಸಿದ್ಧವಾಗಿರುವುದು. ಹೋಗು ಎಂಬರ್ಥವುಳ್ಳ ಪದ್ ಎಂಬ ಧಾತುವಿನಿಂದ ಪಾದಶಬ್ದವು ನಿಷ್ಪನ್ನವಾಗಿದೆ. ಅದರಿಂದಲೇ ಪದ—ಪಾದವಿಕ್ಷೇಪ ಎಂಬ ಶಬ್ದವೂ ನಿಷ್ಪನ್ನವಾಗಿದೆ ಪಾದ ಎಂದರೆ ಕಾಲು, ಪದ ಎಂದರೆ ಹೆಜ್ಜೆ, ಪಾದವಿಕ್ಷೇಪ ಎಂದರ್ಥವು ಪಶುಗಳಿಗೆ ನಾಲ್ಕು ಕಾಲುಗಳಿರುವುದರಿಂದ ನಾವು ನಾಲ್ಕರಲ್ಲಿ ಒಂದು ಭಾಗವನ್ನು ಸೂಚಿಸುವಾಗ ಪಾದ ಎಂಬ ಶಬ್ದವನ್ನು ಉಪಯೋಗಿಸುತ್ತೇವೆ. ಆದ್ದರಿಂದ ಸಾಮಾನ್ಯಸಂದರ್ಭಗಳಲ್ಲಿ ನಾಲ್ಕನೇ ಒಂದು ಭಾಗ ಅಥವಾ ಯಾವುದಾದರೂ ಒಂದು ಭಾಗವನ್ನು ಸೂಚಿಸುವಾಗಲೂ ಪಾದ ಎಂಬ ಶಬ್ದವನ್ನೇ ಉಪಯೋಗಿಸುವುದು ರೂಢಿಯಾಗಿದೆ.

ಏವಮನ್ಯೇಷಾಮಪಿ ಸತ್ತ್ವನಾಂ ಸಂದೇಹಾ ವಿದ್ಯಂತೇ ತಾನಿ ಚೇತ್ ಸಮಾನಕರ್ಮಾಣಿ ಸಮಾನನಿರ್ವಚನಾನಿ ನಾನಾಕರ್ಮಾಣಿ ಚೇನ್ನಾನಾ ನಿರ್ವಚನಾನಿ ಯಥಾರ್ಥಂ ನಿರ್ವಕ್ತವ್ಯಾನೀತಿ ॥ (ನಿ. ೨-೭)

ಇದೇ ರೀತಿ ಇನ್ನೂ ಅನೇಕ ಪದಗಳ ಅರ್ಥವಿಷಯದಲ್ಲಿ ಸಂಶಯಗಳು ಉಂಟಾಗಬಹುದು. ಅಂತಹ ಸಂದರ್ಭದಲ್ಲಿ ಸಾಮಾನ್ಯವಾದ ವಿಧಿಯೇನೆಂದರೆ—ಶಬ್ದಗಳಿಗೆ ಒಂದೇ ವಿಧವಾದ ಅರ್ಥವಿರುವುದಾದರೆ ಅವುಗಳ ರೂಪನಿಷ್ಪತ್ತಿಯನ್ನೂ, ನಿರ್ವಚನವನ್ನೂ ಒಂದೇ ವಿಧವಾಗಿ ಹೇಳಬೇಕು. ಹಾಗಲ್ಲದೆ ಶಬ್ದಗಳಿಗೆ ನಾನಾರ್ಥಗಳಿದ್ದಲ್ಲಿ ಆಯಾ ಅರ್ಥಾನುಸಾರವಾಗಿ ರೂಪನಿಷ್ಪತ್ತಿಯನ್ನೂ, ನಿರ್ವಚನವನ್ನೂ, ವಿವರಣೆಯನ್ನೂ ಹೇಳಬೇಕಾಗಬಹುದು.

संहितापाठः

देवानां मानें प्रथमा अतिष्कन्कृंतत्रादेषामुपरा उदायन् ।
त्रयस्तपंति पृथिवीमनूषा द्वा बृबूकं वहतः पुरीषं ॥

। पदपाठः ।

देवानां । मानें । प्रथमाः । अतिष्कन् । कृंतत्रात् । एषां । उपराः । उत् । आयन् ।
त्रयः । तपंति । पृथिवीं । अनूषाः । द्वा । बृबूकं । वहतः । पुरीषं ॥ २१ ॥

॥ सायणभाष्यं ॥

देवानां सर्वेषां मानें निर्माणे । सृष्टिकाल इत्यर्थः । जगत्स्थितिहेतु-भूतरसानुप्रदानकर्मणि सप्तव्यश्वेन प्रथमा अतिष्कन् । इन्द्राद्देशादेते पूर्वे स्थिताः । क एते । मेघाः । कुत एतदवगम्यते । परस्मिन्त्वादे तेषामनुकथनात् । उक्तं हि । मेघा एव मरुद्गणा इति । नि-१-११ । एषामेवंभूतानां मेघानां कृंतत्राच्छेदनादुपराः । मेघनामैतत् । तत्रस्था आप उच्यंते । मेघस्था आप उदायन् । उत्पन्नाः । वृष्टिभावेन भूमौ निपातिता इत्यर्थः । पातितास्वप्सिन्द्रस्याज्ञया पर्जन्यो वायुरादित्य इत्येते त्रयो देवाः पृथिवीं भूमिं । तत्रस्था ओषधीरित्यर्थः । तपंति । वृष्टिशैत्योष्ण्यैः संतापयंति । पाचयं-तीत्यर्थः । कीदृशाः । अनूषा वर्षादीनामानुपूर्व्येण वर्षितारः प्रभावयितारः । प्रक्षेप्तार इत्यर्थः । द्वा द्वौ वायव्यादित्यौ पाचितास्वोषधीषु स्थितं पुरीषं सर्वस्य प्रीणयित्रे वा बृबूकमुदकमादित्यमंडलं प्रति वहतः । वायुः शोषयन् आदित्यो रश्मिभिरादत्त इत्यर्थः ॥

। प्रतिपदार्थ ॥

देवानां—सकलदेवतेगळ । मानें—निर्माणकालदल्लि । प्रथमा—मोदलनेयदागि । अतिष्कन्—मेघगळु सृष्टिसल्पट्टवु। एषां—ई मेघगळ। कृंतत्रात्—छेदिंद। उपराः—वृष्ट्युदकगळु । उदायेन्—उत्पन्नवादवु । त्रयः—पर्जन्य, वायु मत्तु आदित्य ई मूरु

ದೇವತೆಗಳೂ । **ಅನೂಷಾಃ**—ಯಥಾಕ್ರಮವಾಗಿ ಬೀಜವನ್ನು ಬಿತ್ತುವವರಾಗಿ । **ಪೃಥಿವೀಂ**—ಭೂಮಿಯನ್ನು । **ತಪಂತಿ**—ಶುದ್ಧಿಗೊಳಿಸುತ್ತಾರೆ । **ದ್ವಾ**—ಅವರಲ್ಲಿ ವಾಯು ಮತ್ತು ಪರ್ಜನ್ಯರು । **ಪುರೀಷಂ**—ತೃಪ್ತಿಕಾರಕವಾದ । **ಬೃಬೂಕಂ**—ಉದಕವನ್ನು । **ವಹತಃ**—ಆದಿತ್ಯಮಂಡಲಕ್ಕೆ ಒಯ್ಯುತ್ತಾರೆ.

। ಭಾವಾರ್ಥ ।

ದೇವತೆಗಳ ನಿರ್ಮಾಣಕಾಲದಲ್ಲಿ ಮೊದಲನೆಯದಾಗಿ ಮೇಘಗಳು ಸ್ಥಿತವಾದವು. ಈ ಮೇಘಗಳ ಛೇದದಿಂದ ವೃಷ್ಟ್ಯುದಕಗಳು ಉತ್ಪನ್ನವಾದವು. ಪರ್ಜನ್ಯ, ವಾಯು ಮತ್ತು ಆದಿತ್ಯ ಈ ಮೂರು ದೇವತೆಗಳೂ ಯಥಾಕ್ರಮವಾಗಿ ಬೀಜವನ್ನು ಬಿತ್ತುವವರಾಗಿ ಭೂಮಿಯನ್ನು ಶುದ್ಧಿಗೊಳಿಸುತ್ತಾರೆ. ಅವರಲ್ಲಿ ವಾಯು ಮತ್ತು ಪರ್ಜನ್ಯರು ತೃಪ್ತಿಕಾರಕವಾದ ಉದಕವನ್ನು ಆದಿತ್ಯಮಂಡಲಕ್ಕೆ ಒಯ್ಯುತ್ತಾರೆ.

English Translation

At the creation of the gods, the (clouds) stood first; from their division, the waters (of the rain) came forth: the three divinities (Parjanya Vayu and Aditya), sowing in succession, warm the earth. two of them (Vayu and Aditya) convey all-delighting water (to the sun's sphere).

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

ದೇವಾನಾಂ ನಿರ್ಮಾಣೇ ಪ್ರಥಮಾ ಅತಿಷ್ಠನ್ಮಧ್ಯಮಿಕಾ ದೇವಗಣಾಃ । ಪ್ರಥಮ ಇತಿ ಮುಖ್ಯ-ನಾಮ ಪ್ರತಮೋ ಭವತಿ । ಕೃಂತತ್ರಮಂತರಿಕ್ಷಂ ವಿಕರ್ತನಂ ಮೇಘಾನಾಂ ವಿಕರ್ತನೇನ ಮೇಘಾನಾಮುದಕಂ ಜಾಯತೇ. ತ್ರಯಸ್ತಪಂತಿ ಪೃಥಿವೀಮನೂಷಾಃ । ಪರ್ಜನ್ಯೋ ವಾಯುರಾದಿತ್ಯಃ ಶೀತೋಷ್ಣವರ್ಷೈರೋಷಧೀಃ ಪಾಚಯಂತಿ ಅನೂಷಾ ಅನುವಪಂತಿ ಲೋಕಾನ್ ಸ್ವೇನ ಸ್ವೇನ ಕರ್ಮಣಾ ॥ ಅಯನಿಮಾಕರೋ೭ನೂಪ ಏಕಸ್ಮಾದೇವಾನೂಪ್ಯತ ಉದಕೇನ । ಅಪಿ ವಾನ್ಯಾಬಿತಿ ಸ್ಯಾದ್ಯಥಾ ಪ್ರಾಗಿತಿ । ತಸ್ಯಾನೂಪ ಇತಿ ಸ್ಯಾದ್ಯಥಾ ಪ್ರಾಚೀ-ನವಿತಿ । ದ್ವಾ ಬೃಬೂಕಂ ವಹತಃ ಪುರೀಷಂ ವಾಯ್ವಾದಿತ್ಯಾ ಉದಕಂ । ಬೃಬೂಕಮಿತ್ಯುದ-ಕನಾಮ ಬ್ರವೀತೇರ್ವಾ ಶಬ್ದಕರ್ಮಣೋ ಭ್ರಂಶತೇರ್ವಾ । ಪುರೀಷಂ ಪೃಣಾತೇಃ ಪೂರಯತೇರ್ವಾ ॥

(ನಿ. ೨ ೨೨)

ಪ್ರಜಾಪತಿಯಿಂದ ದೇವತೆಗಳು ಸೃಷ್ಟಿಮಾಡಲ್ಪಟ್ಟಾಗ ಮಧ್ಯಮಸ್ಥಾನದ (ಅಂತರಿಕ್ಷಸ್ಥರಾದ) ದೇವತೆಗಳಿಗೆ(ಮೇಘಗಳಿಗೆ) ಮುಖ್ಯಸ್ಥಾನವು ಲಭಿಸಿತು. ಎಂದರೆ ಎಲ್ಲಾ ದೇವತೆಗಳಲ್ಲಿಯೂ ಅವರಿಗೆ ಪ್ರಾಧ್ಯಾನವು ಲಭಿಸಿತು. ಇಲ್ಲಿ ಪ್ರಥಮಶಬ್ದಕ್ಕೆ ಮುಖ್ಯವೆಂದು ಅರ್ಥವು. ಅಂತರಿಕ್ಷದಲ್ಲಿರುವ ಮೇಘಗಳನ್ನು ಸೀಳುವುದರಿಂದ ಮೇಘಗಳು ಉದಕರೂಪವಾದ ವೃಷ್ಟಿಯನ್ನು ಸುರಿಸುವವು. ಪರ್ಜನ್ಯ ವಾಯು ಆದಿತ್ಯರೆಂಬ ಮೂರು ದೇವತೆಗಳು ಸೇರಿ ಓಷಧಿಸಸ್ಯಾದಿಗಳನ್ನು ಬೆಳೆಸಿ

ವೃದ್ಧಿಪಡಿಸುವರು. ಎಂದರೆ ಪರ್ಜನ್ಯನು ವೃಷ್ಟಿಯನ್ನು ಸುರಿಸುವನು, ವಾಯುವು ಸಹಾಯಕನಾಗಿ ಬೀಸುವನು, ಆದಿತ್ಯನು ತನ್ನ ರಶ್ಮಿಗಳಿಂದ ಸಸ್ಯಾದಿಗಳ ಬೆಳವಣಿಗೆಗೆ ಸಹಾಯಮಾಡುವನು. ಇವರುಗಳ ಸಹಕಾರದಿಂದ ಓಷಧಿ ವನಸ್ಪತಿಗಳು ಬೆಳೆದು ವೃದ್ಧಿಯನ್ನೈದುವವು. ಇವರು ಮಾಡುವ ಈ ಕೆಲಸಕ್ಕೆ ಅನೂಪವೆಂದು ಹೆಸರು. ಅನೂಪ ವೆಂದರೆ ನದಿಯ ದಡವೆಂಬ ಇನ್ನೊಂದು ಅರ್ಥವೂ ಇರುವುದು. ಈ ಅರ್ಥಕ್ಕೆ ಈ ರೂಪನಿಷ್ಪತ್ತಿಯೇ ಅನ್ವಯಿಸುವುದು. ಏಕೆಂದರೆ ಇಲ್ಲಿಯೂ ಉದಕದ ಪ್ರಾಧಾನ್ಯತೆಯೇ ಕಂಡುಬರುವುದು. ಹೇಗೆಂದರೆ ಪ್ರಾಕ್‌ಶಬ್ದದಿಂದ ಪ್ರಾಚೀನಶಬ್ದವು ನಿಷ್ಪನ್ನವಾಗಿರುವಂದೆ ಅನ್ವಾಪ್‌ಶಬ್ದದಿಂದ ಅನೂಪಶಬ್ದವು ನಿಷ್ಪನ್ನವಾಗಿರುವುದು. ಈ ಎರಡೂ ಎಂದರೆ ವೃಷ್ಟಿಯೂ, ನದಿಯ ದಡವೂ ಫಲವತ್ತಾದ ಉದಕಕಣಗಳಿಂದ ತುಂಬಿರುವುದು. ಗಾಳಿಯೂ ಸೂರ್ಯನೂ ಆವಿಯರೂಪದ ಉದಕಕಣಗಳನ್ನು ಧರಿಸಿ ಸಸ್ಯಾದಿಗಳ ಅಭಿವೃದ್ಧಿಗೆ ಕಾರಣವಾಗಿರುವರು. ಬೃಬೂಕಂ ಎಂದರೆ ಉದಕವು (ಅವೆಯ ಅಥವಾ ತೀವದ ರೂಪದಲ್ಲಿರುವ ಉದಕವು) ಈ ಶಬ್ದವು ಶಬ್ದಮಾಡು ಎಂಬರ್ಥವುಳ್ಳ ಬ್ರು ಎಂಬ ಧಾತುವಿನಿಂದಾಗಲಿ, (ವೃಷ್ಟಿರೂಪದಿಂದ) ಕೆಳಕ್ಕೆ ಬೀಳು ಎಂಬರ್ಥವುಳ್ಳ ಭ್ರಃಶ್ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು. ಪುರೀಷಂ ಎಂದರೆ ಫಲವತ್ತಾದುದು ಎಂದರ್ಥವು. ಈ ಶಬ್ದವು ತುಂಬು ಎಂಬರ್ಥವುಳ್ಳ ಪೃ ಧಾತುವಿನಿಂದಾಗಲಿ ತುಂಬುವಂತೆ ಮಾಡು ಎಂಬರ್ಥವುಳ್ಳ ಪ್ಯಾ ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು, ಎಂದು ನಿರ್ವಚನಾಭಿಪ್ರಾಯವು

॥ ಸಂಹಿತಾಪಾಠಃ ॥

ಸಾ ತೇ ಜೀವಾತುರುತ ತಸ್ಯ ವಿದ್ಧಿ ಮಾ ಸ್ಮೈತಾದೃಗಪ ಗೂಹಃ ಸಮುರ್ಯೇ ।

ಆವಿಃ ಸ್ವಃ ಕೃಣುತೇ ಗೂಹತೇ ಬುಸಂ ಸ ಪ್ರಾದುರಸ್ಯ ನಿರ್ಜೋ ನ ಮುಚ್ಯತೇ ॥ ೨೪ ॥

॥ ಪದಪಾಠಃ ॥

ಸಾ । ತೇ । ಜೀವಾತುಃ । ಉತ । ತಸ್ಯ । ವಿದ್ಧಿ । ಮಾ । ಸ್ಮ । ಏತಾದೃಕ್ । ಅಪ । ಗೂಹಃ । ಸಮುರ್ಯೇ ।

ಆವಿಃ । ಸ್ವ ೧ ರಿತಿ ಸ್ವಃ । ಕೃಣುತೇ । ಗೂಹತೇ । ಬುಸಂ । ಸಃ । ಪ್ರಾದುಃ । ಅಸ್ಯ । ನಿಃ ನಿರ್ಜಃ । ನ । ಮುಚ್ಯತೇ ॥ ೨೪ ॥

॥ ಸಾಯಣಭಾಷ್ಯಂ ॥

ಅತ್ರಾಂತರಾತ್ಮನೇಂದ್ರಃ ಸ್ತೂಯತೇ । ಹೇ ಅಂತರಾತ್ಮನ್ ತೇ ತವ ಸಾ ತಾದೃಶ್ಯಾದಿತ್ಯಾತ್ಮಿಕಾ ದೇವತಾ ಜೀವಾತುರ್ಜೀವಿಕಾ ಜೀವನಹೇತುಃ । ಉತಾಪಿ ಚ ತಸ್ಯಾದಿತ್ಯಸ್ಯೈತಾದೃಗೀದೃಶಂ ಸ್ವರೂಪಂ ಸಮುರ್ಯೇ । ಸಂಗ್ರಾಮವಾಚೀ ಸಮುರ್ಯಶಬ್ದೋಽತ್ರ ಯಜ್ಞವಾಚೀ । ಯಜ್ಞೇ ವಿದ್ಧಿ । ಜಾನೀಹಿ ।

ಸ್ತುತ್ಯತ್ವೇನೇತಿ ಶೇಷಃ । ಮಾ ಸ್ಮಾಪ ಗೂಹಃ । ಮಾ ಖಲ್ವಪವೃಣೋಃ । ಕಂಚ ನಿರ್ಣಿಜಃ ಸರ್ವಸ್ಯ ಶೋಧಯಿತುರಾದಿತ್ಯಸ್ಯ ಸ ಪಾದುಸ್ತಚ್ಛ ಪಾದನಂ ಗಮನಂ ರಶ್ಮಿದ್ವಾರೇಣ ಗತ್ವಾ ಸ್ವಃ ಸರ್ವಂ ತ್ರೈಲೋಕ್ಯಮಾವಿಷ್ಕೃಣುತೇ । ಪ್ರಕಾಶೀಕರೋತಿ । ಬುಸಮುದಕಂ ಗೂಹತೇ । ಸಂವೃಣೋತಿ । ಆದತ್ತ ಇತ್ಯರ್ಥಃ । ಅಸ್ಯ ಪ್ರಯೋಜನದ್ವಯಾಯಾದಿತ್ಯೇನ ನಿರ್ವೇದನಾಚ್ಛ್ರಮೇಣ ವಾ ಗಮನಂ ನ ಮುಚ್ಯತೇ । ನ ಕದಾಚಿತ್ಪರಿತ್ಯಜ್ಯತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಂತರಾತ್ಮನೇ) ತೇ—ನಿನ್ನ । ಸಾ—ಆದಿತ್ಯಾತ್ಮಕವಾದ ಸ್ವರೂಪವು । ಜೀವಾತುಃ—ಜೀವನಕ್ಕೆ ಕಾರಣಭೂತವಾಗಿದೆ । ಉತ—ಮತ್ತು । ತಸ್ಯ—ಆದೇ ಆದಿತ್ಯನ । ವಿತಾದೃಕ್—ಇಂತಹ ಸ್ವರೂಪವು । ಸಮರ್ಯೇ—ಯಜ್ಞಕಾಲದಲ್ಲಿ ಪೂಜ್ಯವಾದುದೆಂದು । ವಿದ್ಧಿ—ತಿಳಿ । ಮಾ ಸ್ಮ ಅಪ ಗೂಹಃ—ಯಾವುದನ್ನೂ ಮರೆಸಬೇಡ । ನಿರ್ಣಿಜಃ ಅಸ್ಯ—ಶುದ್ಧಿಕಾರಕನಾದ ಆದಿತ್ಯನ । ಸ ಪಾದುಃ—ರಶ್ಮಿರೂಪವಾದ ಸಂಚಾರವೇ । ಸ್ವಃ— ಮೂರು ಲೋಕಗಳನ್ನೂ । ಆವಿಃ ಕೃಣುತೇ—ಪ್ರಕಾಶಪಡಿಸುತ್ತದೆ । ಬುಸಂ—ಉದಕವನ್ನು । ಗೂಹತೇ. ಮರೆಸುತ್ತದೆ । ನ ಮುಚ್ಯತೇ—ಅದು ಯಾವಾಗಲೂ ನಿಲ್ಲುವುದಿಲ್ಲ.

॥ ಭಾವಾರ್ಥ ॥

ಎಲೈ ಅಂತರಾತ್ಮನೇ, ನಿನ್ನ ಆದಿತ್ಯಾತ್ಮಕವಾದ ಸ್ವರೂಪವು ಜೀವನಕ್ಕೆ ಕಾರಣಭೂತವಾಗಿದೆ ಮತ್ತು ಆದೇ ಆದಿತ್ಯನ ಇಂತಹ ಸ್ವರೂಪವು ಯಜ್ಞಕಾಲದಲ್ಲಿ ಪೂಜ್ಯವಾದುದೆಂದು ತಿಳಿಯುವುದನ್ನೂ ಮರೆಸಬೇಡ. ಶುದ್ಧಿಕಾರಕನಾದ ಆದಿತ್ಯನ ರಶ್ಮಿರೂಪವಾದ ಸಂಚಾರವೇ, ಮೂರು ಲೋಕಗಳನ್ನೂ ಪ್ರಕಾಶಪಡಿಸುತ್ತದೆ. ಉದಕವನ್ನು ಮರೆಸುತ್ತದೆ ಅದು ಯಾವಾಗಲೂ ನಿಲ್ಲುವುದಿಲ್ಲ.

English Translation

That your (divine) nature identified with the (sun) is the cause of life: and know such (solar form) of his (to be worthy of adoration) at the sacrtfice, conceal nothing: that motion of him the all-cleansing (sun) makes manifest the universe; it absorbs the moisture; it is never discontinued.

॥ ವಿಶೇಷವಿಷಯಗಳು ॥

ಪಾದುಃ—ಈ ಶಬ್ದಕ್ಕೆ ಅರ್ಧವಿವರಣೆಮಾಡುತ್ತಾ ಯಾಸ್ಕರು—

ಪಾದುಃ। ಪಾದುಃ ಪದ್ಯತೇಃ । ಆವಿಃ ಸ್ವಃ ಕೃಣುತೇ ಗೂಹತೇ ಬುಸಂ ಸ ಪಾದುರಸ್ಯ ನಿರ್ಣಿಜೋ ನ ಮುಚ್ಯತೇ ಆವಿಷ್ಕರುತೇ ಭಾಸಮಾದಿತ್ಯೋ ಗೂಹತೇ ಬುಸಂ । ಬುಸಮಿತ್ಯುದಕನಾಮ ಬ್ರವೀತೇಃ ಶಬ್ದಕರ್ಮಣಃ । ಭೃಂಶತೇರ್ವಾ । ಯದ್ವರ್ಷನ್ನಾತೆಯತ್ಯುದಕಂ ರಶ್ಮಿಭಿಸ್ತತ್ಪ್ರತ್ಯಾದತ್ತೇ ॥ (ನಿ. ೫-೧೯)

ನಡಿ, ಹೋಗು ಎಂಬರ್ಥವುಳ್ಳ ಪದ್ ಧಾತುವಿನಿಂದ ಪಾದುಃ ಎಂಬ ಶಬ್ದವು ನಿಷ್ಪನ್ನವಾಗಿದೆ. ಪಾದ ಅಥವಾ ಕಾಲು ಎಂದರ್ಥವು. ಈ ವಿಷಯದಲ್ಲಿ ಪ್ರಕೃತಯುಕ್ಕೇ ಉದಾಹರಣೆಯಾಗಿರುವುದು. ಇಲ್ಲಿರುವ ಬುಸವೆಂಬ ಶಬ್ದಕ್ಕೆ ಉದಕವೆಂದರ್ಥವು. ಸೂರ್ಯನು ಬೆಳಕನ್ನು ಪ್ರಕಾಶಪಡಿಸುತ್ತಾನೆ ಮತ್ತು ಉದಕವನ್ನು ಬಚ್ಚಿಡುತ್ತಾನೆ. ಶಬ್ದ ಮಾಡು ಎಂಬ ಬ್ರು ಧಾತುವಿನಿಂದಾಗಲಿ, ಕೆಳಕ್ಕೆ ಬೀಳು ಎಂಬರ್ಥವುಳ್ಳ ಭ್ರಂಶ್ ಧಾತುವಿನಿಂದಾಗಲಿ ಬುಸಶಬ್ದವು ನಿಷ್ಪನ್ನವಾಗಿದೆ. ಉದಕವೆಂದರ್ಥವು. ಮೇಘದಿಂದ ಉದಕವು ವೃಷ್ಟಿರೂಪದಲ್ಲಿ ಶಬ್ದಮಾಡುತ್ತಾ ಬೀಳುವುದೆಂದದಭಿಪ್ರಾಯವು. ಈ ರೀತಿ ವೃಷ್ಟಿದ್ವಾರಾ ಭೂಮಿಯ ಮೇಲೆ ಬೀಳುವ ಉದಕವನ್ನು ಸೂರ್ಯನು (ಆದಿತ್ಯನು) ರಶ್ಮಿಗಳ ಮೂಲಕ ಹಿಂದಕ್ಕೆ ಹೀರಿ ಎಳೆದುಕೊಳ್ಳುತ್ತಾನೆ. ಎಂದರೆ ಸೂರ್ಯನ ರಶ್ಮಿಗಳ ತಾಪದಿಂದ ಕಾದ ಜಲಾಶಯಗಳ ಉದಕವನ್ನು ಆವಿಯ ಮೂಲಕ ಸೂರ್ಯನಿಗಭಿಮುಖವಾಗಿ ಅಂತರಿಕ್ಷದಲ್ಲಿ ಶೇಖರಿಸಲ್ಪಡುವುದೆಂದಭಿಪ್ರಾಯವು.

ಇಪ್ಪತ್ತೈಂಟನೆಯ ಸೂಕ್ತವು

॥ सायणभाष्यं ॥

विश्वो॑ हीति द्वादशर्चं द्वादशं सूक्तं त्रैष्टुभं । इन्द्रवसुक्रयोः पिता-पुत्रयोः संवादोऽत्र क्रियते । पुरा वसुक्रे यज्ञं कुर्वाणे सतीन्द्रः प्रच्छन्न-रूप आजगामु । तं वसुक्रपत्नीन्द्रागमनाकाङ्क्षिणी विप्रकृष्टमिवाद्ययास्तौत् । अत-स्तस्याः सप्तिः इन्द्रो देवता । अथ तस्याः प्रीत्यै वसुक्रेण सहेन्द्रः संवाद-मकरोत् । द्वितीयादियुजश्चतुर्ऋचोरहिताः पंचर्च इन्द्रवाक्यानि । अतस्तासां स ऋषिः । यद्यप्यासु वसुक्रः संबोध्यत्वात्प्रेवता तथापि ता ऋच ऐन्द्रे कर्मणि विनियोक्तव्या इन्द्रलिंगसद्भावात् । चतुर्ऋचसहिताः शिष्टास्तृतीयाद्या वसुक्रवा-क्यानि । अतः स ऋषिस्तासां इन्द्रो देवता । तथा चानुक्रान्तं । विश्वो हि द्वाद-शेन्द्रवसुक्रयोः संवाद ऐन्द्रः सूक्तस्य प्रथमयेन्द्रस्य स्नुषा परोक्षवदिन्द्र-माहेन्द्रस्य युजः शेषा ऋषेश्चतुर्ऋचे चेति ॥ गतो विनियोगः ॥

ಅನುವಾದವು—ವಿಶ್ವೋ ಹಿ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ತ್ರಿಷ್ಟುಪ್ ಛಂದಸ್ಸು. ಈ ಸೂಕ್ತದಲ್ಲಿ ತಂದೆಯಾದ ಇಂದ್ರನಿಗೂ ಪುತ್ರ ನಾದ ವಸುಕ್ರನೆಂಬ ಋಷಿಗೂ ನಡೆದ ಸಂಭಾಷಣೆ ಇದೆ. ಪೂರ್ವದಲ್ಲಿ ವಸುಕ್ರಋಷಿಯು ಯಜ್ಞವನ್ನಾಡುತ್ತಿರುವಾಗ ಇಂದ್ರನು ವೇಷವನ್ನು ಮರೆಸಿಕೊಂಡು ಅಲ್ಲಿಗೆ ಬಂದನು. ಆಗ ವಸುಕ್ರಋಷಿಯ ಪತ್ನಿಯು ಇಂದ್ರನ ಆಗಮನವನ್ನು ಬಯಸುತ್ತಾ ಇಂದ್ರನು ಇಲ್ಲದಿರುವುದನ್ನು ಸೂಚಿಸುತ್ತಾ ಮೊದಲನೆಯ ಋಕ್ಕಿನಿಂದ ಅವನನ್ನು ಸ್ತೋತ್ರಮಾಡಿದಳು. ಆದ್ದರಿಂದ ಮೊದಲನೆಯ ಋಕ್ಕಿಗೆ ವಸುಕ್ರಪತ್ನಿಯೇ ಋಷಿಯು; ಇಂದ್ರನು ದೇವತೆಯು. ಬಳಿಕ ಆ ವಸುಕ್ರ ಪತ್ನಿಯ ಪ್ರೀತ್ಯರ್ಥವಾಗಿ ಇಂದ್ರನು ವಸುಕ್ರನೊಡನೆ ಸಂಭಾಷಣೆಮಾಡಿದನು. ಆದ್ದರಿಂದ ನಾಲ್ಕನೆಯ ಋಕ್ಕನ್ನು ಬಿಟ್ಟು ಉಳಿದ ಸಮಸಂಖ್ಯೆಯ ಐದು ಋಕ್ಕುಗಳೂ ಇಂದ್ರನ ವಾಕ್ಯಗಳು. ಆದ್ದರಿಂದ ಆ ಋಕ್ಕುಗಳಿಗೆ ಇಂದ್ರನೇ

ಋಷಿಯು; ಒಂದುವೇಳೆ ಆ ಋಕ್ಕುಗಳಲ್ಲಿ ವಸುಕ್ರಋಷಿಯು ಸಂಬೋಧಿಸಲ್ಪಟ್ಟಿದ್ದರೂ ಅವುಗಳಲ್ಲಿ ಸ್ತುತವಾಗಿರುವ ಕರ್ಮಗಳು ಇಂದ್ರನಿಗೆ ಸಂಬಂಧಪಟ್ಟಿರುವುದರಿಂದ ಆ ಋಕ್ಕುಗಳನ್ನು ಇಂದ್ರದೇವತಾಕವೆಂದೇ ಹೇಳಬೇಕು. ಈ ಸೂಕ್ತದ ನಾಲ್ಕನೆಯ ಋಕ್ಕು ಮತ್ತು ಮೂರನೆಯ ಋಕ್ಕಿನಿಂದ ಮುಂದಕ್ಕೆ ಅಸಮಸಂಖ್ಯೆಯ ಋಕ್ಕುಗಳಲ್ಲಿ ವಸುಕ್ರಋಷಿಯ ವಾಕ್ಯಗಳಿರುವವು. ಆದ್ದರಿಂದ ಆ ಋಕ್ಕುಗಳಿಗೆ ವಸುಕ್ರನು ಋಷಿಯು, ಇಂದ್ರನು ದೇವತೆಯು. ಅನುಕ್ರಮಣಿಕೆಯಲ್ಲಿ—ವಿಶ್ವೋ ಹಿ ದ್ವಾದಶೇಂದ್ರವಸುಕ್ರಯೋಃ ಸಂವಾದ ಐಂದ್ರಃ ಸೂಕ್ತಸ್ಯ ಪ್ರಥಮ-ಯೇಂದ್ರಸ್ಯ ಸ್ನುಷಾ ಪರೋಕ್ಷವದಿಂದ್ರಮಾಹೇಂದ್ರಸ್ಯ ಯುಜಃ ಶೇಷಾ ಋಷೇಶ್ಚತುರ್ಥೀ ಚ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೨೮

ಮಂಡಲ—೧೦ । ಅನುವಾಕ—೨ । ಸೂಕ್ತ—೨೮ ॥
ಅಷ್ಟಕ—೭ ಅಧ್ಯಾಯ—೭ । ವರ್ಗ—೨೦, ೨೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ಇಂದ್ರವಸುಕ್ರಯೋಃ ಸಂವಾದ ಐಂದ್ರಃ । ೧. ಇಂದ್ರಸ್ನುಷಾ ವಸುಕ್ರ-ತ್ನೀಋಷಿಕಾ। ೨,೬,೮, ೧೦, ೧೨.ಇಂದ್ರ ಋಷಿಃ । ೩, ೪.೫, ೭, ೯, ೧೧ ಐಂದ್ರೋ ವಸುಕ್ರಋಷಿಃ ॥
ದೇವತಾ—೨, ೬, ೮, ೧೦, ೧೨. ಐಂದ್ರೋ ವಸುಕ್ರೋ ದೇವತಾ । ೧, ೩, ೪, ೫, ೭, ೯, ೧೧. ಇಂದ್ರೋ ದೇವತಾ ॥
ಛಂದಃ—ತ್ರಿಷ್ಟುಪ್ ।

॥ ಸಂಹಿತಾಪಾಠಃ ॥

ವಿಶ್ವೋ ಹ್ಯ ಅನ್ಯೋ ಅರಿರಾಜಗಾಮ ಮಮೇದಹ ಶ್ವಶುರೋ ನಾ ಜಗಾಮ।
ಜಕ್ಷೀಯಾದ್ಧಾನಾ ಉತ ಸೋಮಂ ಪಪೀಯಾತ್ಸ್ವಾಶಿತಃ ಪುನರಸ್ತಂ ಜಗಾಯಾತ್ ॥ ೧ ॥

॥ ಪದಪಾಠಃ ॥

ವಿಶ್ವಃ । ಹಿ । ಅನ್ಯಃ। ಅರಿಃ । ಆ॒ಜಗಾಮ । ಮಮ । ಇತ್ । ಅಹ । ಶ್ವಶುರಃ । ನ । ಆ । ಜಗಾಮ ।
ಜಕ್ಷೀಯಾತ್ । ಧಾನಾಃ । ಉತ । ಸೋಮಂ । ಪಪೀಯಾತ್ । ಸು॒ಆಶಿತಃ । ಪುನಃ । ಅಸ್ತಂ । ಜಗಾ-ಯಾತ್ ॥ ೧ ॥

॥ ಸಾಯಣಭಾಷ್ಯಂ ॥

ಅನಯಾ ವಸುಕ್ರಪತ್ನೀಂದ್ರಂ ಸ್ತೌತಿ । ಅಸ್ಯ ಇಂದ್ರವ್ಯತಿರಿಕ್ತೋ॒ಽರಿರನ್ಯ ಈಶ್ವರೋ ವಿಶ್ವೋ ಹಿ ಸರ್ವ ಏವ ದೇವಗಣ ಆಜಗಾಮ । ಅಸ್ಮದ್ಯಜ್ಞಂ ಪ್ರತ್ಯಾಯಯೌ । ಇದಿತ್ಯವಧಾರಣೇ । ಅಹೇತ್ಯ-

ದ್ಭುತೇ। ಸರ್ವದೇವಗಣ ಆಗತೇ ಸತಿ ಮಮೈವ ಶ್ವಶುರ ಇಂದ್ರೋ ನಾ ಜಗಾಮು ! ಸ ಇಂದ್ರೋ ಯದ್ಯಾ-ಗಚ್ಛೇತ್ ತರ್ಹಿ ಧಾನಾ ಭೃಷ್ಟಯವಾಞ್ಚಕ್ಷೀಯಾತ್ । ಭಕ್ಷಯೀತ್ । ಉತಾಪಿ ಚ ಸೋಮಮುಭಿಷುತಂ ಪಪೀಯಾತ್ । ಪಿಬೇತ್ । ತತಃ ಸ್ವಾಶಿತಃ ಸುಷ್ಠು ಭುಕ್ತಸ್ತೃಪ್ತಃ ಸನ್ ಪುನರ್ಭೂಯೋಽಸ್ತಂ ಸ್ವಗೃಹಂ ಪ್ರತಿ ಜಗಾಯಾತ್ । ಗಚ್ಛೇತ್ ॥

। ಪ್ರತಿಪದಾರ್ಥ ।

ಅನ್ಯಃ—ಇಂದ್ರನಿಗಿಂತಲೂ ಬೇರೆಯಾದ । ವಿಶ್ವೇ ಹಿ ಅನ್ಯಃ—ಇತರ ದೇವಗಣವೆಲ್ಲ। ಅಜಗಾಮು—ನಮ್ಮ ಯಜ್ಞಕ್ಕೆ ಬಂದಿದಾರೆ । ಮಮು ಇತ್—ನನ್ನ । ಶ್ವಶುರಃ—ಮಾವನಾದ ಇಂದ್ರನು ಮಾತ್ರ । ನಾಜಗಾಮು—ಬಂದಿಲ್ಲ (ಇಂದ್ರನು ಬಂದು) । ಧಾನಾಃ—ಯವ ಧಾನ್ಯಗಳನ್ನು । ಜಕ್ಷೀಯಾತ್—ಭಕ್ಷಿಸಲಿ । ಉತ—ಮತ್ತು । ಸೋಮಂ—ಹಿಂಡಿರುವ ಸೋಮವನ್ನು । ಪಪೀಯಾತ್—ಪಾನಮಾಡಲಿ । ಸ್ವಾಶಿತಃ—ತೃಪ್ತಿಯನ್ನು ಹೊಂದುವಷ್ಟು ಭಕ್ಷಿಸಿ । ಪುನಃ—ತಿರುಗಿಯೂ । ಅಸ್ತಂ—ತನ್ನ ಗೃಹಕ್ಕೆ । ಜಗಾಯಾತ್—ಹೋಗಲಿ.

। ಭಾವಾರ್ಥ ।

ವಸುಕ್ರಋಷಿಯ ಪತ್ನಿ—ಇಂದ್ರನಿಗಿಂತಲೂ ಬೇರೆಯಾದ ಉಳಿದ ದೇವತೆಗಳೆಲ್ಲರೂ ಯಜ್ಞಕ್ಕೆ ಬಂದಿದ್ದಾರೆ. ನನ್ನ ಮಾವನಾದ ಇಂದ್ರನು ಮಾತ್ರ ಬಂದಿಲ್ಲ. ಇಂದ್ರನು ಬಂದು ಯವ ಧಾನ್ಯವನ್ನು ಭಕ್ಷಿಸಲಿ. ಹಿಂಡಿರುವ ಸೋಮವನ್ನು ಪಾನಮಾಡಲಿ. ತೃಪ್ತಿಯನ್ನು ಹೊಂದುವಷ್ಟು ಭಕ್ಷಿಸಿ ತಿರುಗಿಯೂ ತನ್ನ ಗೃಹಕ್ಕೆ ಹೋಗಲಿ.

English Translation

(The wife of Vasukra speaks :) Every other (divine) lord has come, but my father-in-law has not come : may he eat the parched grain : and drink the Soma ; when he is well satisfied, may he return home.

। ಸಂಹಿತಾಪಾಠಃ ।

ಸ ರೋರುವದ್ವೃಷಭಸ್ತಿಗ್ಮಶೃಂಗೋ ವರ್ಷ್ಮನ್ತಸ್ಥೌ ವರಿಮನ್ನಾ ಪೃಥಿವ್ಯಾಃ।
ವಿಶ್ವೇಷ್ಮೇನಂ ವ್ರಜನೇಷು ಪಾಮಿ ಯೋ ಮೇ ಕುಕ್ಷೀ ಸುತಸೋಮಃ
ಪೃಣಾತಿ ॥ ೨ ॥

। ಪದಪಾಠಃ ।

ಸಃ । ರೋರುವತ್ । ವೃಷಭಃ । ತಿಗ್ಮಶೃಂಗಃ । ವರ್ಷ್ಮನ್ । ತಸ್ಥೌ । ವರಿಮನ್ । ಆ । ಪೃಥಿವ್ಯಾಃ ।
ವಿಶ್ವೇಷು । ಏನಂ । ವ್ರಜನೇಷು । ಪಾಮಿ । ಯಃ । ಮೇ । ಕುಕ್ಷೀ ಇತಿ । ಸುತಸೋಮಃ । ಪೃಣಾತಿ ॥

। ಸಾಯಣಭಾಷ್ಯಂ ।

ವೃಷಭಃ ಕಾಮಾನಾಂ ವರ್ಷಿತಾ ತಿಗ್ಮಶೃಂಗಸ್ತೀಕ್ಷ್ಣರಶ್ಮಿಃ ಸ ಇಂದ್ರೋಽಹಂ ಪೃಥಿವ್ಯಾ ಅಂತರಿಕ್ಷಸ್ಯ ವರ್ಷ್ಮನ್ ವರ್ಷ್ಮಣಿ । ವರ್ಷ್ಮೇತ್ಯುಭ ಉನ್ನತವಚನಃ ಸ್ಥಿರವಚನೋ ವಾ । ಏವಂಭೂತೇ ವರಿಮನ್ ವಿಸ್ತೀರ್ಣೇ ಪ್ರದೇಶೇ ರೋರುವದ್ಭೃಶಂ ಶಬ್ದಾಯಮಾನಃ ಸನ್ನಾ ತಸ್ಥೌ । ಆತಿಷ್ಠಾಮಿ । ಏವಂಭೂತೋಽಹಂ ವಿಶ್ವೇಷು ಸರ್ವೇಷು ವೃಜನೇಷು ಸಂಗ್ರಾಮೇಷ್ವೇನಮಿಮಾದೃಶಂ ವಸುಕ್ರಂ ಯಜಮಾನಂ ಪಾಮಿ । ರಕ್ಷಾಮಿ । ಯೋ ಯಜಮಾನಃ ಸುತಸೋಮೋಽಭಿಷುತಸೋಮೋ ಮೇ ಮಮ ಕುಕ್ಷೀ ಉಭೌ ಪಾರ್ಶ್ವೌ ಪೃಣಾತಿ ಸೋಮರಸಪೂರೋಡಾಶಾದಿಹವಿರ್ಭಿಃ ಪೂರಯತಿ । ಈದೃಶಂ ರಕ್ಷಾಮೀತಿ ಸಂಬಂಧಃ ॥

॥ ಪ್ರತಿಪದಾರ್ಥ ।

ವೃಷಭಃ—ಕಾಮವರ್ಷಕನೂ । **ತಿಗ್ಮಶೃಂಗಃ**—ತೀಕ್ಷ್ಣವಾದ ರಶ್ಮಿಯುಳ್ಳವನೂ । **ಸಃ**—ಪ್ರಸಿದ್ಧನೂ ಆದ ನಾನು (ಇಂದ್ರನು) । **ಪೃಥಿವ್ಯಾಃ**—ಅಂತರಿಕ್ಷದ । **ವರ್ಷ್ಮನ್**—ಉನ್ನತವಾದದೂ । **ವರಿಮನ್**—ವಿಸ್ತೃತವಾದುದೂ ಆದ ಪ್ರದೇಶದಲ್ಲಿ । **ರೋರುವತ್**—ಶಬ್ದವನ್ನು ಮಾಡುತ್ತ । **ಆ ತಸ್ಥೌ**—ಸ್ಥಾಪಿತನಾಗಿದ್ದೇನೆ । **ಯಃ**—ಯಾವ ಯಜಮಾನನು । **ಸುತಸೋಮಃ**—ಹಿಂಡಿದ ಸೋಮವುಳ್ಳವನಾಗಿ । **ಮೇ**—ನನ್ನ । **ಕುಕ್ಷೀ**—ಉದರದ ಎರಡು ಪಾರ್ಶ್ವಗಳನ್ನೂ । **ಪೃಣಾತಿ**—ತುಂಬುವನೋ । **ಏನಂ**—ಅಂತಹ ಯಜಮಾನನನ್ನು । **ವಿಶ್ವೇಷು ವೃಜನೇಷು**—ಸಕಲ ಯುದ್ಧಗಳಲ್ಲಿಯೂ । **ಪಾಮಿ**—ರಕ್ಷಿಸುತ್ತೇನೆ

॥ ಭಾವಾರ್ಥ ॥

ಇಂದ್ರ—ಕಾಮವರ್ಷಕನೂ, ತೀಕ್ಷ್ಣವಾದ ರಶ್ಮಿಯುಳ್ಳವನೂ, ಪ್ರಸಿದ್ಧನೂ ಆದ ನಾನು ಅಂತರಿಕ್ಷದ ಉನ್ನತವಾದುದೂ, ವಿಸ್ತೃತವಾದುದೂ ಆದ ಪ್ರದೇಶದಲ್ಲಿ ಶಬ್ದಮಾಡುತ್ತ ಸ್ಥಾಪಿತನಾಗಿದ್ದೇನೆ. ಯಾವ ಯಜಮಾನನು ಹಿಂಡಿದ ಸೋಮವುಳ್ಳವನಾಗಿ ನನ್ನ ಉದರದ ಎರಡು ಪಾರ್ಶ್ವಗಳನ್ನೂ ತುಂಬುವನೋ ಅಂತಹ ಯಜಮಾನನನ್ನು ಸಕಲ ಯುದ್ಧಗಳಲ್ಲಿಯೂ ರಕ್ಷಿಸುತ್ತೇನೆ.

English Translatian

(Indra speaks :) (Indra) the showerer (of blessings), having hot rays, abides roaring in the resounding expanse of the firmament : in all conflicts I defend him, (Vasukra), who, having effused the libation, fills my flanks.

। ಸಂಹಿತಾಪಾಠಃ ।

ಅದ್ರಿಣಾ ತೇ ಮಂದಿನ ಇಂದ್ರ ತೂಯಾನ್ತ್ಸುನ್ವಂತಿ ಸೋಮಾನ್ಪಿಬಸಿ ತ್ವಮೇಷಾಂ ।

ಪಚಂತಿ ತೇ ವೃಷಭಾಁ ಅತ್ಸಿ ತೇಷಾಂ ಪೃಕ್ಷೇಣ ಯನ್ಮಘವನ್ಹೂಯೇ-
ಮಾನಃ ॥ ೩ ॥

। ಪದಪಾಠಃ ॥

ಅದ್ರಿಣಾ । ತೇ । ಮಂದಿನಃ । ಇಂದ್ರ । ತೂಯಾನ್ । ಸುನ್ವಂತಿ । ಸೋಮಾನ್ । ಪಿಬಸಿ । ತ್ವಂ । ಏಷಾಂ ।
ಪಚಂತಿ । ತೇ । ವೃಷಭಾನ್ । ಅತ್ಸಿ । ತೇಷಾಂ । ಪೃಕ್ಷೇಣ । ಯತ್ । ಮಘವನ್ । ಹೂಯೇ-
ಮಾನಃ ॥ ೩ ॥

। ಸಾಯಣಭಾಷ್ಯಂ ।

ಹೇ ಇಂದ್ರ ತೇ ತ್ವದರ್ಥಂ ಮಂದಿನೋ ಮಾದಯಿತ್ರ್ಯಂಸ್ತೂಯಾನವಿಲಂಬಿತಾನ್ಸೋಮಾನದ್ರಿ-
ಣಾಭಿಷವಗ್ರಾವ್ಣಾ ಸುನ್ವಂತಿ। ಯಜಮಾನಾ ಅಭಿಷುಣ್ವಂತಿ।ಏಷಾಮಸ್ಮದಾದಿಯಜಮಾನಾನಾಂ ಸಂಬಂ-
ಧಿನಃ ಸೋಮಾಂಸ್ತ್ವಂ ಪಿಬಸಿ । ಕಂಚ ತ್ವದರ್ಥಂ ವೃಷಭಾನ್ಪಶೂನ್ಯೇ ಚ ಯಜಮಾನಾಃ ಪಚಂತಿ
ತೇಷಾಂ ಸಂಬಂಧಿನೋ ಹವಿರ್ಭೂತಾನ್ಪಶೂನತ್ಸಿ । ಭಕ್ಷಯಸಿ । ಹೇ ಮಘವನ್ಧನವನ್ನಿಂದ್ರ ತ್ವಂ
ಯದಾ ಪೃಕ್ಷೇಣ ಹವಿರ್ಭೂತೇನಾನ್ನೇನ ನಿಮಿತ್ತೇನ ಹೂಯಮಾನಃ ಯಜಮಾನೈರ್ಹೂಯಸೇ ತದೇತಿ
ಪೂರ್ವೇಣ ಸಂಬಂಧಃ ॥

। ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ । ತೇ—ನಿನ್ನನ್ನುದ್ದೇಶಿಸಿ । ಮಂದಿನಃ—ಮದನಕಾರಕವಾದವೂ ।
ತೂಯಾನ್—ವೇಗವಾಗಿ ಪ್ರವಹಿಸುವುವೂ ಆದ ಸೋಮರಸಗಳನ್ನು । ಅದ್ರಿಣಾ—ಹಿಂಡುವ ಕಲ್ಲುಗಳಿಂದ ।
ಸುನ್ವಂತಿ—ಯಜಮಾನರು ಹಿಂಡುತ್ತಾರೆ । ಏಷಾಂ—ಈ ಯಜಮಾನರಿಂದ ದತ್ತವಾದ । ಸೋಮಾನ್—
ಸೋಮರಸಗಳನ್ನು । ತ್ವಂ—ನೀನು । ಪಿಬಸಿ—ಪಾನಮಾಡುತ್ತೀಯೆ । ವೃಷಭಾನ್—ವೃಷಭಗಳನ್ನು । ತೇ
ಪಚಂತಿ—ಯಜಮಾನರು ನಿನಗಾಗಿ ಪಕ್ವಮಾಡುತ್ತಾರೆ । ಮಘವನ್—ಧನವಂತನಾದ ಎಲೈ ಇಂದ್ರನೇ ।
ಪೃಕ್ಷೇಣ—ಹವಿಸ್ಸಿನ ನಿಮಿತ್ತವಾಗಿ । ಯತ್ ಹೂಯಮಾನಃ—ಯಾವಾಗ ಕರೆಯಲ್ಪಡುವೆಯೋ ಆಗ ।
ತೇಷಾಂ—ಯಜಮಾನರಿಂದ ಅರ್ಪಿತವಾದ ಹವಿಸ್ಸುಗಳನ್ನು । ಅತ್ಸಿ—ಭಕ್ಷಿಸುತ್ತೀಯೆ.

। ಭಾವಾರ್ಥ ।

ವಸಿಷ್ಠ (೩,೪ ೫ ಋಕ್ಕುಗಳು)—ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಮದಕಾಕರವಾದವೂ, ವೇಗವಾಗಿ
ಪ್ರವಹಿಸುವುವೂ ಆದ ಸೋಮರಸಗಳನ್ನು ಹಿಂಡುವ ಕಲ್ಲುಗಳಿಂದ ಯಜಮಾನರು ಹಿಂಡುತ್ತಾರೆ. ಈ ಯಜಮಾನ
ರಿಂದ ದತ್ತವಾದ ಸೋಮರಸಗಳನ್ನು ನೀನು ಪಾನಮಾಡುತ್ತೀಯೆ. ವೃಷಭಗಳನ್ನು ಯಜಮಾನರು ನಿನಗಾಗಿ ಪಕ್ವ
ಮಾಡುತ್ತಾರೆ. ಧನವಂತನಾದ ಎಲೈ ಇಂದ್ರನೇ, ಹವಿಸ್ಸಿನ ನಿಮಿತ್ತವಾಗಿ ನೀನು ಯಾವಾಗ ಕರೆಯಲ್ಪಡುವೆಯೋ
ಆಗ ಯಜಮಾನರಿಂದ ಅರ್ಪಿತವಾದ ಹವಿಸ್ಸುಗಳನ್ನು ಭಕ್ಷಿಸುತ್ತೀಯೆ.

English Translation

(Vasukra speaks:) Your worshippers express with the stone fast flowing exhilarating Soma-juices for you, you drink them; they roast bulls for you, you eat them, when you are invoked, Maghavan, to the sacrificial food.

। ಸಂಹಿತಾಪಾಠಃ ।

ಇದಂ ಸು ಮೇ ಜರಿತರಾ ಚಿಕಿದ್ಧಿ ಪ್ರತೀಪಂ ಶಾಪಂ ನದ್ಯೋ ವಹಂತಿ ।
ಲೋಪಾಶಃ ಸಿಂಹಂ ಪ್ರತ್ಯಂಚಮತ್ಸಾಃ ಕ್ರೋಷ್ಟಾ ವರಾಹಂ ನಿರತಕ್ತ ಕಕ್ಷಾತ್ ॥ ೪ ॥

। ಪದಪಾಠಃ ।

ಇದಂ । ಸು । ಮೇ । ಜರಿತಃ । ಆ । ಚಿಕಿದ್ಧಿ । ಪ್ರತೀ3ಈಪಂ । ಶಾಪಂ । ನದ್ಯಃ । ವಹಂತಿ ।
ಲೋಪಾಶಃ । ಸಿಂಹಂ । ಪ್ರತ್ಯಂಚಂ । ಅತ್ಸಾರಿತಿ । ಕ್ರೋಷ್ಟಾ । ವರಾಹಂ । ನಿಃ । ಅತಕ್ತ । ಕಕ್ಷಾತ್ ॥೪॥

। ಸಾಯಣಭಾಷ್ಯಂ ।

ಹೇ ಜರಿತಃ ಶತ್ರೂಣಾಂ ಜರಯಿತರಿಂದ್ರ ತ್ವಂ ಮೇ ಮಮ ಸು ಶೋಭನಮಮೀದವಿಮಾದೃಶಂ ರೂಪಂ ಸಾಮರ್ಥ್ಯಮಾ ಚಿಕಿದ್ಧಿ । ಆ ಸಮಂತಾಜ್ಜಾನೀಹಿ । ಕೀದೃಶಂ । ನದ್ಯೋ ಗಂಗಾದ್ಯಾಃ ಸರಿತಃ ಪ್ರತೀಪಂ ಪ್ರತಿಕೂಲಂ ಶಾಪಮುದಕಂ ವಹಂತಿ । ಅಪಿ ಚ ಲೋಪಾಶಃ । ಲುಪ್ಯಮಾನಂ ತೃಣಮಶ್ನಾತೀತಿ ಲೋಪಾಶೋ ಮೃಗಃ । ಮಯಾ ಪ್ರೇಷಿತಃ ಸನ್ ಪ್ರತ್ಯಂಚಮಾತ್ಮಾನಂ ಪ್ರತಿ ಗಚ್ಛಂತಂ ಸಿಂಹಮತ್ಸಾಃ । ಅತ್ಸಾರೀತ್ । ಅಭಿಮುಖ್ಯೇನ ಗಚ್ಛತಿ । ತಥಾ ಕ್ರೋಷ್ಟಾ ಶೃಗಾಲೋ ವರಾಹಂ ಬಲವಂತಮಪಿ ಸೂಕರಂ ಕಕ್ಷಾದತಿಗಹನದೇಶಾನ್ನಿರತಕ್ತ । ನಿರ್ಗಮಯತಿ । ಏತದಪಿ ಸರ್ವಂ ಸಾಮರ್ಥ್ಯಂ ತ್ವತ್ಪುತ್ರೇ ಮಯಿ ತ್ವತ್ಪ್ರಸಾದಾಲ್ಲಬ್ಧಮಪಿ ಜಾನೀಹೀತ್ಯರ್ಥಃ ॥

। ಪ್ರತಿಪದಾರ್ಥ ।

ಜರಿತಃ—ಶತ್ರುನಾಶಕನಾದ ಎಲೈ ಇಂದ್ರನೇ (ಯಾವ ನನ್ನ ಸಾಮರ್ಥ್ಯದಿಂದ) । ನದ್ಯಃ—ಗಂಗಾದಿ ನದಿಗಳೂ । ಶಾಪಂ—ಉದಕವನ್ನು । ಪ್ರತೀಪಂ—ಹಿಂದಕ್ಕೆ ತಿರುಗಿದ ಪ್ರವಾಹವುಳ್ಳದ್ದಾಗಿ । ವಹಂತಿ—ವಹಿಸುವುವೋ । ಲೋಪಾಶಃ—ತೃಣವನ್ನು ಭಕ್ಷಿಸುವ ಮೃಗವು । ಪ್ರತ್ಯಂಚಂ—ತನ್ನ ಮೇಲೆ ಬೀಳುವ । ಸಿಂಹಂ—ಸಿಂಹವನ್ನು । ಅತ್ಸಾಃ—ಓಡಿಸಬಲ್ಲದೋ (ಮತ್ತು) । ಕ್ರೋಷ್ಟಾ—ನರಿಯು । ವರಾಹಂ—ಶಕ್ತಿಯುತವಾದ ಕಾಡುಹಂದಿಯನ್ನು । ಕಕ್ಷಾತ್—ಅದರ್ಮವೊದೆಯಿಂದ । ನಿರತಕ್ತ—ಹೊರಕ್ಕೆ ಓಡಿಸಬಲ್ಲುದೋ ಅಂತಹ । ಮೇ—ನನ್ನ । ಸು—ಶ್ರೇಷ್ಠವಾದ । ಇದಂ—ಈ ಸಾಮರ್ಥ್ಯವನ್ನು । ಆ ಚಿಕಿದ್ಧಿ—ತಿಳಿ.

। ಭಾವಾರ್ಥ ।

ವಸುಕ್ರ—ಶತ್ರುನಾಶಕನಾದ ಎಲೈ ಇಂದ್ರನೇ, ನಿನ್ನ ಪ್ರಸಾದದಿಂದ ಲಬ್ಧವಾದ ಯಾವ ನನ್ನ ಸಾಮರ್ಥ್ಯದ ಫಲವಾಗಿ ಗಂಗಾದಿನದಿಗಳೂ ತಮ್ಮ ಪ್ರವಾಹವನ್ನು ಹಿಂದಕ್ಕೆ ಹರಿಯುವಂತೆ ಮಾಡುವುವೋ, ಯಾವ ನನ್ನ ಸಾಮರ್ಥ್ಯದಿಂದ ತೃಣವನ್ನು ಭಕ್ಷಿಸುವ ವ್ಯಗವು ತನ್ನ ಮೇಲೆ ಬೀಳುವ ಸಿಂಹವನ್ನು ಓಡಿಸಬಲ್ಲುದೋ, ನರಿಯು ಶಕ್ತಿಯುತವಾದ ಕಾಡುಹಂದಿಯನ್ನು ದಟ್ಟವಾದ ಪೊದೆಯಿಂದ ಹೊರಕ್ಕೆ ಓಡಿಸಬಲ್ಲುದೋ ಆ ಶ್ರೇಷ್ಠವಾದ ನನ್ನ ಈ ಸಾಮರ್ಥ್ಯವನ್ನು ತಿಳಿ.

English Translation

Overcomer of foes, (Indra) be cognizant of this my (power, whereby) rivers bear their water backwards, and the eater of cut (grass) confronts the lion, the jackal dries the wild boar from his lair

॥ ವಿಶೇಷವಿಷಯಗಳು ॥

ಸೋಮೋ ಅಕ್ಷಾಃ—ಅಕ್ಷಾಃ ಎಂಬ ಶಬ್ದದ ನಿರ್ವಚನವನ್ನು ಯಾಸ್ಕರು ಎರಡು ಉದಾಹರಣೆಗಳ ಮೂಲಕ ವಿವರಿಸಿದಾರೆ—

ಸೋಮೋ ಅಕ್ಷಾಃ । ನ ಯೆಸ್ಯ ದ್ಯಾವಾಪೃಥಿವೀ ನ ಧನ್ವ ನಾಂತರಿಕ್ಷಂ ನಾದ್ರಯಃ ಸೊಮೋ ಅಕ್ಷಾಃ । ಅಶ್ನೋತೇರಿತ್ಯೇವಮೇಕೇ । ಅನೂಪೇಗೋಮಾನ್ಗೋಭಿರಕ್ಷಾಃ । ಸೋಮೋ ದುಗ್ಧಾಭಿ ರಕ್ಷಾಃ । ಲೋಪಾಶಃ ಸಿಂಹಂ ಪ್ರತ್ಯಂಚ ಮರ್ಷಾಃ । ಕ್ಷಿಯತಿನಿಗಮಃ ಪೂರ್ವಃ ಕ್ಷರತಿನಿಗಮ ಉತ್ತರ ಇತ್ಯೇಕೇ ಅನೂಪೇ ಗೋಮಾನ್ಗೋಭಿರ್ಯದಾ ಕ್ಷಿಯಂತ್ಯೆಥ ಸೋಮೋ ದುಗ್ಧಾಭ್ಯಃ ಕ್ಷರತಿ ಸರ್ವೇ ಕ್ಷಿಯತಿನಿಗಮಾ ಇತಿ ಶಾಕಪೂಣಿಃ ॥ (ನಿ. ೫.೩)

ಕ್ಷಿ ವಾಸಮಾಡು ಎಂಬರ್ಥವುಳ್ಳ ಧಾತುವಿನಿಂದ ಅಕ್ಷಾಃ ಎಂಬ ಶಬ್ದವು ನಿಷ್ಪನ್ನವಾಗಿದೆ. ಕೆಲವರು ಹೋಗು ವ್ಯಾಪಿಸು ಎಂಬರ್ಥವುಳ್ಳ ಅಶ್ ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ಹೇಳುತ್ತಾರೆ. ಇಲ್ಲಿ ಎರಡು ಶ್ರುತಿವಾಕ್ಯಗಳನ್ನು ಉದಾಹರಣೆಯಾಗಿಕೊಟ್ಟಿದೆ. ಮೊದಲನೆಯವಾಕ್ಯದಲ್ಲಿ ಅಕ್ಷಾಃ ಎಂಬ ಶಬ್ದಕ್ಕೆ ವಾಸಮಾಡುವುದೂ ಎಂಬರ್ಥವೂ ಎರಡನೆಯ ಉದಾಹರಣೆಯಲ್ಲಿ ಹರಿದುಹೋಗುವುದು ಎಂದರ್ಥವೂ ಸೂಚಿತವಾಗಿದೆ. ಈ ಎರಡು ಉದಾಹರಣೆಗಳಲ್ಲಿಯೂ ಅಕ್ಷಾಃ ಎಂಬ ಶಬ್ದಕ್ಕೆ ವಾಸಮಾಡು ಎಂಬರ್ಥವೇ ಸೂಚಿತವಾಗುವುದು ಎಂದು ಶಾಕಪೂಣಿ ಎಂಬ ಆಚಾರ್ಯರ ಮತವು.

। ಸಂಹಿತಾಪಾಠಃ ।

ಕ್ಥಾ ಶ ಏತದ್ದಹಮಾ ಚಿಕೇತಂ ಗೃತ್ಸಸ್ಯ ಸಾಕಸ್ತವಸೋ ಮನೀಷಾಂ ।
ಷ್ಠಂ ನೋ ವಿದ್ವಾ ಋತುಥಾ ವಿ ವೋಚೋ ಯಮರ್ಧಂ ತೇ ಮಘವನ್ನೃಜ್ಮೀಯಾ ಧೂಃ ॥ ೫ ॥

॥ पदपाठः ॥

कथा । ते । एतत् । अहं । आ । चिकेतं । गृत्सस्य । पाकः । तवसः । मनीषां ।

त्वं । नः । विद्वान् । ऋतुथा । वि । वोचः । यं । अर्धं । ते । मघवन्नवद्यं ।

क्षेम्याः । धूः ॥ ५ ॥

॥ सायणभाष्यं ॥

हे इन्द्र पाकः पक्वबुद्ध्यहं गृत्सस्य मेधाविनस्तवसो वृद्धस्य ते तव मनीषां स्तुतिं । कर्तुमिति शेषः । एतदीदृशं त्वदीयं सामर्थ्यं कथा कथं केन प्रकारेणा चिकेतं । आ समंताज्ज्ञानामि । त्वदुपदेशं विना न जानामीत्यर्थः । तस्मात्कारणाद्विद्वान् सर्वज्ञस्त्वमेव नोऽस्मभ्यमृतुथा काले काले वि वोचः । विशेषेण ब्रूहि । हे मघवन्धनवन्निंद्र ते तवार्धं यं स्तुत्यवयवं कुर्मः सा स्तुतिर्धूः क्षेम्या क्षेमे भवा क्लेशरहिता वोढुं शक्यास्ति । यस्मात्तव स्तुत्यवयवमेव वयमुक्लेशेन कर्तुं न शक्नुमोऽस्माकं मुंदबुद्धित्वात् तस्मात्त्वमेवास्मभ्यं स्वसमार्थ्यं स्तुतिप्रकारं च पुनरपि कथयीत्यर्थः ॥

॥ प्रतिपदार्थ ॥

(ऐलै इंद्रनेे) पाकः—परिपक्वविल्लद बुद्धियुळ्ळ । अहं—नानु । गृत्सस्य—मेधावियू । तवसः—प्रवृद्धनू आद । ते—निन्नन्नुद्देशिसिद । मनीषां—स्तुतियन्नु अर्पिसलु । एतत्—निन्न सामर्थ्यवन्नु । कथा—यावा प्रकारदिंद । आ चिकेतं—अरियुबल्लेनु ? । विद्वान्—सर्वज्ञनाद । त्वं—नीनु । नः—नमगे । ऋतुथा—आयाा कालक्के सरियागि । वि वोचः—विवेकवन्नु हेळिकोडु । मघवन्—धनवंतनाद ऐलै इंद्रनेे । यं अर्धं—यावा स्तुतिभागवन्नु । ते—निनगे अर्पिसुवेवो । धूः—अदर भारवु । क्षेम्याः—वहिसलु कष्टविल्लदे इरुत्तदे.

॥ भावार्थ ॥

वसुक्र—ऐलै इंद्रनेे, परिपक्वविल्लद बुद्धियुळ्ळ नानु मेधावियू, प्रवृद्धनू आद निन्नन्नुद्देशिसिद स्तुतियन्नु अर्पिसलु निन्न सामर्थ्यवन्नु यावा प्रकारदिंद अरियुबल्लेनु ? सर्वज्ञनाद नीनु नमगे आयाा कालक्के सरियागि विवेकवन्नु हेळिकोडु. धनवंतनाद ऐलै इंद्रनेे, यावा स्तुतिभागवन्नु निनगे अर्पिसुवेवो अदर भारवु निन्निंद वहिसल्पडलु कष्टविल्लदे इरुत्तदे.

English Translation

How Indra, should I, yet immature (in understanding), be capable of comprehending this (your power, so as to render fitting) praise to you who are wise and powerful? Therefore you who are all-knowing instruct us in fit season, the portion of your (praise), O Maghavan, which (we offer) is a burden easy to be borne.

॥ ಸಂಹಿತಾಪಾಠಃ ॥

ಏವಾ ಹಿ ಮಾಂ ತವಸಂ ವರ್ಧಯಂತಿ ದಿವಶ್ಚಿನ್ಮೇ ಬೃಹತ ಉತ್ತರಾ ಧೂಃ ।
ಪುರೂ ಸಹಸ್ರಾ ನಿ ಶಿಶಾಮಿ ಸಾಕಮಶತ್ರುಂ ಹಿ ಮಾ ಜನಿತಾ ಜಜಾನ ॥

॥ ಪದಪಾಠಃ ॥

ಏವ । ಹಿ । ಮಾಂ । ತವಸಂ । ವರ್ಧಯಂತಿ । ದಿವಃ । ಚಿತ್ । ಮೇ । ಬೃಹತಃ । ಉತ್ತರಾ ।
ಧೂಃ ।

ಪುರು । ಸಹಸ್ರಾ । ನಿ । ಶಿಶಾಮಿ । ಸಾಕಂ । ಅಶತ್ರುಂ । ಹಿ । ಮಾ । ಜನಿತಾ । ಜಜಾನ ॥ ೬ ॥

॥ ಸಾಯಣಭಾಷ್ಯಂ ॥

ಹಿ ಯಸ್ಮಾತ್ಕಾರಣಾದೇವೈವಮುಕ್ತಪ್ರಕಾರೇಣ ತವಸಂ ಪ್ರವೃದ್ಧಂ ಮಾಂ ಸ್ತೋತಾರಃ ಸ್ತುತಿಭಿಃ ಸ್ತುವಂತೋ ವೀರ್ಯೇಣ ವರ್ಧಯಂತಿ ತಸ್ಮಾತ್ಕಾರಣಾತ್ಪೃಹತೋ ಮಹತೋ ಮೇ ಮಮೇಂದ್ರಸ್ಯ ದಿವಶ್ಚಿದ್ದ್ಯುಲೋಕಾದಪಿ ಧೂಃ ಸ್ತುತಿರುತ್ತರೋದ್ಗತತರಾಧಿಕತರಾ । ಕಿಂಚ ಪುರು ಪುರೂಣಿ ಬಹೂನಿ ಸಹಸ್ರಾ ಶತ್ರೂಣಾಂ ಸಹಸ್ರಾಣಿ ಸಾಕಂ ಯುಗಪನ್ನಿ ಶಿಶಾಮಿ । ತನೂಕರೋಮಿ । ಹಿನಸ್ಮೀತ್ಯರ್ಥಃ । ಹಿ ಯಸ್ಮಾತ್ಕಾರಣಾಜ್ಜನಿತಾ ಸರ್ವಸ್ಯ ಜನಯಿತಾ ಪ್ರಜಾಪತಿರ್ಮಾ ಮಾಮಿಂದ್ರಮಶತ್ರುಮವಿದ್ಯಮಾನಶತ್ರುಂ ಜಜಾನ ಜನಿತವಾನ್ ॥

॥ ಪ್ರತಿಪದಾರ್ಥಃ ॥

ಹಿ—ಯಾವ ಕಾರಣದಿಂದ । ಏವ—ಹೀಗೆ । ತವಸಂ—ಪ್ರವೃದ್ಧನಾದ । ಮಾಂ—ನನ್ನನ್ನು । ವರ್ಧಯಂತಿ—ಸ್ತುತಿಕರ್ತರು ಪ್ರಶಂಸಿಸಿ ಪುಷ್ಟಿಗೊಳಿಸುವರೋ ಆ ಕಾರಣದಿಂದಲೇ । ಬೃಹತಃ—ಮಹತ್ಸ್ವರೂಪವುಳ್ಳ । ಮೇ—ನನ್ನನ್ನುದ್ದೇಶಿಸಿದ । ಧೂಃ—ಸ್ತುತಿಯು । ದಿವಶ್ಚಿತ್—ದ್ಯುಲೋಕಕ್ಕಿಂತಲೂ । ಉತ್ತರಾ—ಉನ್ನತತರವಾಗಿರುತ್ತದೆ । ಹಿ—ಯಾವ ಪ್ರಭಾವದಿಂದ । ಜನಿತಾ—ಉತ್ಪಾದಕನಾದ ಪ್ರಜಾಪತಿಯು । ಮಾ—

ನನ್ನನ್ನು । **ಅಶತ್ರುಂ**—ಶತ್ರುರಹಿತನನ್ನಾಗಿ । **ಜಜಾನ**—ಉತ್ಪನ್ನಮಾಡಿದ್ದಾನೆಯೋ ಆದುದರಿಂದಲೇ । **ಪುರು**—ಬಹುವಾದ । **ಸಹಸ್ರಾ**—ಸಹಸ್ರಸಂಖ್ಯೆಯುಳ್ಳ ಶತ್ರುಗಳನ್ನು । **ಸಾಕಂ**—ಒಟ್ಟಿಗೆ । **ನಿ ಶಿಶಾಮಿ**—ನಾಶಮಾಡುತ್ತೇನೆ.

। ಭಾವಾರ್ಥ ।

ಇಂದ್ರ—ಯಾವ ನನ್ನ ಮಹತ್ವಕ್ಕಾಗಿ ಪ್ರವೃದ್ಧನಾದ ನನ್ನನ್ನು ಸ್ತುತಿಕರ್ತರು ಪ್ರಶಂಸಿಸಿ ಪುಷ್ಟಿಗೊಳಿಸುವರೋ ಆ ಕಾರಣದಿಂದಲೇ ಮಹತ್ಸ್ವರೂಪವುಳ್ಳ ನನ್ನನ್ನು ದ್ದೇಶಿಸಿದ ಸ್ತುತಿಯು ದ್ಯುಲೋಕಕ್ಕಿಂತಲೂ ಉನ್ನತತರವಾಗಿರುತ್ತದೆ. ಯಾವ ಪ್ರಭಾವದಿಂದ ಜಗದುತ್ಪಾದಕನಾದ ಪ್ರಜಾಪತಿಯು ನನ್ನನ್ನು ಶತ್ರುರಹಿತನನ್ನಾಗಿ ಉತ್ಪನ್ನಮಾಡಿದ್ದಾನೆಯೋ ಆದುದರಿಂದಲೇ, ಅನೇಕ ಸಹಸ್ರಸಂಖ್ಯೆಯುಳ್ಳ ಶತ್ರುಗಳನ್ನು ಒಟ್ಟಿಗೆ ನಾಶಮಾಡುತ್ತೇನೆ.

English Translation

(Indra speaks :) Since (your laudations) thus increase my strength, (let) the praise of me who am mighty, (rise) even higher than the heavens. I destroy at once many thousands (of foes), for the generator (of all) has engendered me without an enemy.

। ಸಂಹಿತಾಪಾಠಃ ।

ಏವಾ ಹಿ ಮಾಂ ತವಸಂ ಜಜ್ಞುರುಗ್ರಂ ಕರ್ಮನ್ಕರ್ಮನ್ವೃಷಣಮಿಂದ್ರ ದೇವಾಃ ।
ವಧೀಂ ವೃತ್ರಂ ವಜ್ರೇಣ ಮಂದಸಾನೋಽಪ ವ್ರಜಂ ಮಹಿನಾ ದಾಶುಷೇ ವಂ ॥ ೭ ॥

। ಪದಪಾಠಃ ।

ಏವ । ಹಿ । ಮಾಂ । ತವಸಂ । ಜಜ್ಞುಃ । ಉಗ್ರಂ । ಕರ್ಮನ್ಕರ್ಮನ್ । ವೃಷಣಂ । ಇಂದ್ರ । ದೇವಾಃ ।
ವಧೀಂ । ವೃತ್ರಂ । ವಜ್ರೇಣ । ಮಂದಸಾನಃ । ಅಪ । ವ್ರಜಂ । ಮಹಿನಾ । ದಾಶುಷೇ । ವಂ ॥ ೭ ॥

। ಸಾಯಣಭಾಷ್ಯಂ ।

ಹಿ ಯಸ್ಮಾತ್ಕಾರಣಾದೇವೈವಮನೇನೋಕ್ತಪ್ರಕಾರೇಣ ಹೇ ಇಂದ್ರ ದೇವಾ ಮರುದಾದಯ ಋತ್ವಿಗ್ಯಜಮಾನಾ ವಾ ತವಸಂ ಮಹಾಂತಂ ತ್ವತ್ಪತ್ರಂ ತ್ವದ್ಭೋಜನಾವಸ್ಥಿತಂ ಸಂತಂ ವಸುತ್ವಂ ಮಾಂ

ಕರ್ಮನ್ಕರ್ಮನ್ ವೃತ್ರವಧಾಗ್ನಿಹೋತ್ರಾದೌ ಸರ್ವಸ್ಮಿನ್ಕರ್ಮಣ್ಯುಗ್ರಂ ಶೂರಮಸಹ್ಯಂ ವಾ ವೃಷಣಂ ವರ್ಷಿತಾರಂ ಹವಿಷಾಂ ದಾತಾರಂ ಜಜ್ಞುಃ ಜಾನಂತಿ ಅತೋ ಮಂದಸಾನೋ ಮೋದಮಾನೋಽಹಂ ವಜ್ರೇಣಾಯುಧೇನ ವೃತ್ರಂ ಮೇಘಾಸುರಂ ವಧೀಂ । ಅವಧಿಷಂ । ಕಂಚ ದಾಶುಷೇ ಹವಿರ್ದತ್ತವತೇ ಯಜಮಾನಾಯ ವೃಷ್ಟಿಪ್ರದಾನಾರ್ಥಂ ಮಹಿನಾ ಮಹತ್ತ್ವೇನ ವ್ರಜಂ ಮೇಘಸಮೂಹಮಪ ವಂ । ಅಪಾವಂ । ಅಪವೃಣೋಮಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಹಿ—ಯಾವ ಕಾರಣದಿಂದ । ಏವ—ಹೀಗೆ । ದೇವಾಃ—ದೇವತೆಗಳು । ತವಸಂ—ಶಕ್ತಿಯುತನಾದ । ಮಾಂ—ನನ್ನನ್ನು । ಕರ್ಮನ್ ಕರ್ಮನ್—ಪ್ರತಿಯೊಂದು ಕರ್ಮದಲ್ಲಿಯೂ । ಉಗ್ರಂ—ಪ್ರಬಲನಾದ । ವೃಷಣಂ—ಹವಿರ್ದಾತನೆಂದು । ಜಜ್ಞುಃ—ಅರಿತಿರುವರೋ ಆದುದರಿಂದಲೇ । ಮಂದಸಾನಃ—ಹರ್ಷಯುಕ್ತನಾದ ನಾನು । ವಜ್ರೇಣ—ವಜ್ರಾಯುಧದಿಂದ । ವೃತ್ರಂ—ವೃತ್ರಾಸುರನನ್ನು । ವಧೀಂ—ನಾಶಮಾಡಿದ್ದೇನೆ । ದಾಶುಷೇ—ಯಜಮಾನನಿಗಾಗಿ । ಮಹಿನಾ—ಮಹತ್ವದಿಂದ । ವ್ರಜಂ—ಮೇಘಸಮೂಹವನ್ನು । ಅಪ ವಂ—ಸೀಳಿದ್ದೇನೆ.

॥ ಭಾವಾರ್ಥ ॥

ವಸುಕ್ರ—ಎಲೈ ಇಂದ್ರನೇ, ಯಾವ ಕಾರಣದಿಂದ ಹೀಗೆ ದೇವತೆಗಳು ಶಕ್ತಿಯುತನಾದ ನನ್ನನ್ನು ಪ್ರತಿಯೊಂದು ಕರ್ಮದಲ್ಲಿಯೂ ಪ್ರಬಲನಾದ ಹವಿರ್ದಾತನೆಂದು ಅರಿಯುವರೋ ಆದುದರಿಂದಲೇ, ಹರ್ಷಯುಕ್ತನಾದ ನಾನು ವಜ್ರಾಯುಧದಿಂದ ವೃತ್ರಾಸುರನನ್ನು ನಾಶಮಾಡಿದ್ದೇನೆ. ಯಜಮಾನನಿಗಾಗಿ ಮಹತ್ವದಿಂದ ಮೇಘಸಮೂಹವನ್ನು ಸೀಳಿದ್ದೇನೆ

English Translation

Since, Indra, the gods have known me to be powerful, fierce in every act, the showerer (of oblations): exulting I have slain Vritra with your thunderbolt, and by my might have opened the clouds for the donor (of oblations).

॥ ಸಂಹಿತಾಪಾಠ ॥

ದೇವಾಸ ಆಯನ್ಪರಶೂರಭಿಭ್ರನ್ವನಾ ವೃಶ್ಚಂತೋ ಅಭಿ ವಿಡ್ಭಿರಾಯನ್ ।
ನಿ ಸುದ್ರ್ವಂಗದಧತೋ ವಕ್ಷಣಾಸು ಯತ್ರಾ ಕೃಪೀಟಮನು ತದ್ದಹಂತಿ ॥೮॥

॥ ಪದಪಾಠಃ ॥

ದೇವಾಸಃ । ಆಯನ್ । ಪರಶೂನ್ । ಅಭಿಭ್ರನ್ । ವನಾ । ವೃಶ್ಚಂತಃ । ಅಭಿ । ವಿಟ್ಭಿಃ । ಆಯನ್ ।
ನಿ । ಸುದ್ರ್ವಂ । ದಧತಃ । ವಕ್ಷಣಾಸು । ಯತ್ರ । ಕೃಪೀಟಂ । ಅನು । ತತ್ । ದಹಂತಿ ॥ ೮ ॥

॥ ಸಾಯಣಭಾಷ್ಯಂ ॥

ದೇವಾಸೋ ದೇವಾ ಇಂದ್ರೇಣ ಚೋದಿತಾಃ ಸಂತ ಆಯನ್ । ಗಚ್ಛಂತಿ । ಮೇಘವಧಾರ್ಥಂ ಪರಶೂನ್ವಜ್ರಾನಬಿಭ್ರನ್ । ಧಾರಯಂತಿ ಚ । ತದನಂತರಂ ವಿಡ್ಭಿರ್ಮರುದಾದಿಪ್ರಜಾಭಿಃ ಸಹಿತಾ ವೃಷ್ಣಂತೋ ಮೇಘಾಂಶ್ಚಿಂದಂತೋ ವನಾ ವನಾನಿ ವೃಷ್ಟಿಲಕ್ಷಣಾನ್ಯುದಕಾನ್ಯಭ್ಯಾಯನ್ । ಅಭಿಮುಖ್ಯೇನ ಗಚ್ಛಂತಿ । ತತಃ ಸುದ್ರ್ವಂ ಶೋಭನದ್ರವಣಂ ವೃಷ್ಟ್ಯುದಕಂ ವಕ್ಷಣಾಸು ನದೀಷು ನಿ ದಧತೋ ನಿಯಮೇನ ಸ್ಥಾಪಯಂತೋ ಯತ್ರ ಯಸ್ಮಿನ್ಮೇಘಜಾತೇ ಕೃಪೀಟಂ । ಉದಕನಾಮೈತತ್ । ನಿಗೂಢಮುದಕಂ ತಿಷ್ಠತಿ ತ ಇಮೇ ದೇವಾಸ್ತನ್ಮೇಘಜಾತಮನು ಲಕ್ಷೀಕೃತ್ಯ ದಹಂತಿ । ಉದಕನಿರ್ಗಮನಾರ್ಥಂ ಶೋಷಯಂತಿ ॥

॥ ಪ್ರತಿಪದಾರ್ಥ ॥

ದೇವಾಸಃ—ದೇವತೆಗಳು । ಆಯನ್—ಬಂದಿದ್ದಾರೆ । ಪರಶೂನ್—ತಮ್ಮ ಆಯುಧಗಳನ್ನು । ಅಬಿಭ್ರನ್—ಧರಿಸಿದ್ದಾರೆ । ವಿಡ್ಭಿಃ—ಮರುದಾದಿ ಪ್ರಜೆಗಳೊಂದಿಗೆ ಕೂಡಿ । ವೃಷ್ಣಂತಃ—ಮೇಘಗಳನ್ನು ಸೀಳುತ್ತ । ವನಾ—ಉದಕಗಳನ್ನು । ಅಭ್ಯಾಯನ್—ಎದುರುಗೊಳ್ಳುತ್ತಾರೆ (ಸುರಿಸುತ್ತಾರೆ) । ಸುದ್ರ್ವಂ—ಉತ್ತಮವಾದ ಉದಕವನ್ನು । ವಕ್ಷಣಾಸು—ನದಿಗಳಲ್ಲಿ । ನಿ ದಧತಃ—ಸ್ಥಾಪಿಸಿದ್ದಾರೆ । ಯತ್ರ—ಯಾವ ಮೇಘಗಳ ಗುಂಪಿನಲ್ಲಿ । ಕೃಪೀಟಂ—ಉದಕವಿರುವುದೋ । ತತ್ ಅನು—ಅದನ್ನು ಲಕ್ಷ್ಯದಲ್ಲಿಟ್ಟು । ದಹಂತಿ—ಉದಕಾರ್ಥವಾಗಿ ಶೋಷಿಸುತ್ತಾರೆ.

॥ ಭಾವಾರ್ಥ ॥

ಇಂದ್ರ- -ನನ್ನ ಪ್ರೇರಣೆಯಿಂದ ದೇವತೆಗಳು ಬಂದಿದ್ದಾರೆ. ತಮ್ಮ ಆಯುಧಗಳನ್ನು ಧರಿಸಿದ್ದಾರೆ. ಮರುದಾದಿ ಪ್ರಜೆಗಳೊಂದಿಗೆ ಕೂಡಿ ಮೇಘಗಳನ್ನು ಸೀಳುತ್ತಾ ಉದಕಗಳನ್ನು ಎದುರುಗೊಳ್ಳುತ್ತಾರೆ. ಉತ್ತಮವಾದ ಉದಕಗಳನ್ನು ನದಿಗಳಲ್ಲಿ ಸ್ಥಾಪಿಸಿದ್ದಾರೆ. ಯಾವ ಮೇಘಗಳ ಗುಂಪಿನಲ್ಲಿ ಉದಕವಿರುವುದೋ, ಅದನ್ನು ಲಕ್ಷ್ಯದಲ್ಲಿಟ್ಟು ಉದಕಾರ್ಥವಾಗಿ ಶೋಷಿಸುತ್ತಾರೆ.

English Translation

The gods came, they bare their axes; clearing the woods, they came with men in front of the waters: depositing (the tree) of good wood in the belly (of the river), where the underwood (is), they burnt it up.

॥ ಸಂಹಿತಾಪಾಠಃ ॥

ಶಶಃ ಕ್ಷುರಂ ಪ್ರತ್ಯಂಚಂ ಜಗಾರಾದ್ರಿಂ ಲೋಗೇನ ವ್ಯಭೇದಮ್ಮಾರಾತ್ ।
ಬೃಹಂತಂ ಚಿದ್ಬರ್ಹತೇ ರಂಧಯೋನಿ ವಯದ್ದತ್ಸೋ ವೃಷಭಂ ಶೂಶುವಾನಃ ॥

। ಪದಪಾಠಃ ।

ಶಶಃ । ಕ್ಷುರಂ । ಪ್ರತ್ಯಂಚಂ । ಜಗಾರ । ಅದ್ರಿಂ । ಲೋಗೇನ । ವಿ । ಅಭೇದಂ । ಆರಾತ್ ।

ಬೃಹಂತಂ । ಚಿತ್ । ಋಹತೇ । ರಂಧಯಾನಿ । ವಯತ್ । ವತ್ಸಃ । ವೃಷಭಂ । ಶೂಶುವಾನಃ ॥ ೯ ॥

। ಸಾಯಣಭಾಷ್ಯಂ ।

ವಸುಕ್ರ ಇಂದ್ರಂ ಪ್ರತಿಬ್ರೂತೇ । ಶಶ ಏತತ್ಸಂಜ್ಞಿತೋ ಮಯಾ ಪ್ರೇರಿತೋ ಮೃಗವಿಶೇಷಃ ಪ್ರತ್ಯಂಚಂ ವಧಾಯಾತ್ಮಾನಂ ಪ್ರತಿ ಗಚ್ಛಂತಂ ಕ್ಷುರಂ ಕ್ಷುರವಂತಂ ದೃಢದೀರ್ಘತೀಕ್ಷ್ಣನಖಂ ಸಿಂಹ-ವ್ಯಾಘ್ರಾದಿಕಂ । ಬಲವತ್ಕ್ರೂರಮೃಗಮಿತ್ಯರ್ಥಃ । ಜಗಾರ । ಗಿರತಿ ಗೃಹ್ಣಾತಿ ವಾ । ಕಿಂಚ ಲೋಗೇನ ಲೋಷ್ಟೇನಾದ್ರಿಂ ಹಿಮವದಾದಿಕಂ ಪರ್ವತಮಾರಾದ್ದೂರೇ ಸ್ಥಿತಮಪಿ ವ್ಯಭೇದಂ । ಅಹಂ ಭಿನದ್ಮಿ । ಬೃಹಂತಂ ಚಿನ್ಮಹಾಂತಮಪಿ ಹಸ್ತ್ಯಾದಿಕಮೃಹತೇ ಹ್ರಸ್ವಕಾಯಾಲ್ಪಾಯ ಶಶಕಾದಿಕಾಯ ರಂಧಯಾನಿ । ವಶಂ ಗಮಯಾನಿ । ಶೂಶುವಾನೋ ವೀರ್ಯೇಣ ವರ್ಧಮಾನೋ ವತ್ಸೋ ವೃಷಭಂ ಮಹೋಕ್ಷಂ ವಯೆತ್ । ಯುದ್ಧಾಯ ಗಚ್ಛತಿ । ಹೇ ಇಂದ್ರ ಏತದಪಿ ಸರ್ವಂ ತ್ವತ್ಪ್ರಸಾದಾದಹಂ ಕರೋಮೀತ್ಯರ್ಥಃ ॥

। ಪ್ರತಿಪದಾರ್ಥ ।

ಶಶಃ—ಮೊಲವು । ಪ್ರತ್ಯಂಚಂ—ತನ್ನೆದುರುಬೀಳುವ । ಕ್ಷುರಂ—ತೀಕ್ಷ್ಣನಖಗಳುಳ್ಳ ಸಿಂಹಾದಿಗಳನ್ನು । ಜಗಾರ—ಹಿಡಿಯುತ್ತದೆ । ಆರಾತ್—ದೂರದಲ್ಲಿದ್ದರೂ । ಅದ್ರಿಂ—ಪರ್ವತವನ್ನು । ಲೋಗೇನ—ಲೋಷ್ಟದಿಂದಲೇ (ಮಣ್ಣಿನಹೆಂಟೆಯಿಂದಲೇ) । ವ್ಯಭೇದಂ—ನಾನು ಸೀಳಬಲ್ಲೆ। ಬೃಹಂತಂ ಚಿತ್—ದೊಡ್ಡ ಆಕಾರವುಳ್ಳ ಪ್ರಾಣಿಯನ್ನು । ಋಹತೇ—ಅಲ್ಪಾಕಾರವುಳ್ಳ ಪ್ರಾಣಿಗೆ । ರಂಧಯಾನಿ—ವಶವಾಗುವಂತೆ ಮಾಡಬಲ್ಲೆನು । ಶೂಶುವಾನಃ—ವೀರ್ಯದಿಂದ ಪುಷ್ಟವಾದ। ವತ್ಸಃ—ಚಿಕ್ಕ ಕರುವು । ವೃಷಭಂ—ದೊಡ್ಡ ಎತ್ತನ್ನು । ವಯತ್—ಎದುರಿಸಿ ಹೋರಾಡಬಲ್ಲದು.

।। ಭಾವಾರ್ಥ ।।

ವಸುಕ್ರ—(ಇಂದ್ರನ ಪ್ರಸಾದವೊಂದಿದ್ದರೆ) ಮೊಲವು ತನ್ನೆದುರು ಬಿಳುವ ತೀಕ್ಷ್ಣನಖಗಳುಳ್ಳ ಸಿಂಹಾದಿಗಳನ್ನು ಹಿಡಿಯಬಲ್ಲದು. ದೂರದಲ್ಲಿದ್ದರೂ ಪರ್ವತವನ್ನು ಸಣ್ಣ ಮಣ್ಣಿನಹೆಂಟೆಯಿಂದ ನಾನು ಸೀಳುಬಲ್ಲೆ. ದೊಡ್ಡ ಆಕಾರವುಳ್ಳ ಪ್ರಾಣಿಯನ್ನು ಅಲ್ಪಾಕಾರವುಳ್ಳ ಪ್ರಾಣಿಗೆ ವಶವಾಗುವಂತೆ ಮಾಡಬಲ್ಲೆನು ವೀರ್ಯದಿಂದ ಪುಷ್ಟವಾದ ಚಿಕ್ಕಕರುವು ದೊಡ್ಡ ಎತ್ತನ್ನು ಎದುರಿಸಿ ಹೊಡೆಯಬಲ್ಲದು. (ಹೋರಾಡಬಲ್ಲುದು)

English Translation

(Vasukra speaks:) The hare grasps the assailing beast of prey: with a clod of clay I cleave the distant (mountain): I can compel the great to submit to the small: swelling (with courage) the calf attacks the bull.

॥ ಸಂಹಿತಾಪಾಠಃ ॥

ಸುಪರ್ಣ ಇತ್ಥಾ ನಖಮಾ ಸಿಷಾಯಾವರುದ್ಧಃ ಪರಿಪದಂ ನ ಸಿಂಹಃ ।
ನಿರುದ್ಧಶ್ಚಿನ್ಮಹಿಷಸ್ತಷ್ಟ್ರ್ಯಾವಾನ್ಗೋಧಾ ತಸ್ಮಾ ಅಯಥಂ ಕರ್ಷದೇತತ್ ॥

॥ ಪದಪಾಠಃ ।

ಸುಽಪರ್ಣಃ । ಇತ್ಥಾ । ನಖಂ । ಆ । ಸಿಷಾಯ । ಅವಽರುದ್ಧಃ । ಪರಿಽಪದಂ । ನ । ಸಿಂಹಃ ।
ನಿಽರುದ್ಧಃ । ಚಿತ್ । ಮಹಿಷಃ । ತಷ್ಟ್ರ್ಯಾವಾನ್ । ಗೋಧಾ । ತಸ್ಮೈ । ಅಯಥಂ । ಕರ್ಷತ್ ।
ಏತತ್ ॥ ೧೦ ॥

॥ ಸಾಯಣಭಾಷ್ಯಂ ॥

ಸುಪರ್ಣಃ ಪಕ್ಷಿರೂಪಾ ಗಾಯತ್ರೀತ್ಥಾಮುತ್ರ ದ್ಯುಲೋಕೇ ನಖಮಾತ್ಮೀಯಮಾ ಸಿಷಾಯ । ಸೋಮಾಹರಣಕಾಲ ಇಂದ್ರಾರ್ಥಮಾಬಬಂಧ । ಇಂದ್ರಸ್ಯ ಪ್ರಸಾದಾದ್ದಿವಿ ಪದಂ ನ್ಯಸ್ತವತೀತ್ಯರ್ಥಃ । ತತ್ರ ದೃಷ್ಟಾಂತಃ । ಅವರುದ್ಧಃ ಪಂಜರೇಣಾವೃತಃ ಪರಿವೇಷ್ಟಿತಃ ಸಿಂಹಃ ಪರಿಪದಂ ನ । ಯಥಾ ಕರಸ್ಯೋಪರಿ ಸರ್ವತಃ ಪಾದಮವಬಧ್ನಾತಿ । ಕಿಂಚ । ಚಿದಿತ್ಯುಪಮಾರ್ಥೇ । ಯಥಾ ಕೇನಾಪಿ ಬದ್ಧಪಾದೋ ನಿರುದ್ಧೋ ಮಹಿಷಸ್ತಷ್ಟ್ರ್ಯಾವಾನುದಕಾಭಾವೇ ತೃಷಾವಾನ್ಭವತಿ ಏವಮಿಂದ್ರಃ ಸೋಮಾಹರಣಾತ್ಪೂರ್ವಂ ಸೋಮಾಭಾವೇ ತೃಷಿತವಾನಭೂದಿತಿ ಶೇಷಃ । ತಸ್ಮೈ । ತಾದರ್ಥ್ಯೇ ಚತುರ್ಥೀ । ತಾದೃಶಸ್ಯ ತೃಷಿತಸ್ಯೇಂದ್ರಸ್ಯಾರ್ಥಂ ಗೋಧಾ । ಗಮಯತಿ ವರ್ಣಾನಿತಿ ಗೌರ್ವಾಕ್ ತತ್ರ ನಿಧೀಯಮಾನತ್ವಾದ್ಗಾಯತ್ರೀ ಗೋಧಾ । ಯದ್ವಾ । ಗುಧಿರ್ನಿಹ್ನುತಿಕರ್ಮಾ । ನಿಹ್ನುತ್ಯಸೋಮಾಹರಣಾದ್ಗೋಧಾ ಗಾಯತ್ರೀ । ಅಯಥಮಯತ್ನೇನ । ಲೀಲಯೇತ್ಯರ್ಥಃ । ಏತತ್ಸೋಮಜಾತಂ ಕರ್ಷತ್ । ಆಕೃಷ್ಟವತೀ । ದಿವಃ ಸಕಾಶಾದಾಹೃತವತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಅವರುದ್ಧಃ—ಪಂಜರದಲ್ಲಿ ಬಂಧಿತವಾದ । ಸಿಂಹಃ ನ ಪರಿಪದಂ—ಸಿಂಹವು ಒಂದು ಕಾಲಿನಮೇಲೆ ಇನ್ನೊಂದು ಕಾಲನ್ನು ಇಟ್ಟುಕೊಳ್ಳುವಂತೆ । ಸುಪರ್ಣಃ—ಪಕ್ಷಿಯು (ಗಾಯತ್ರಿಯು) । ಇತ್ಥಾ—ದ್ಯುಲೋಕದಲ್ಲಿ । ನಖಂ—ತನ್ನ ನಖವನ್ನು । ಆ ಸಿಷಾಯ—ಇಟ್ಟಿತು । ನಿರುದ್ಧಃ—ಕಟ್ಟಹಾಕಿದ । ಮಹಿಷಃ—ಎಮ್ಮೆಯು । ತಷ್ಟ್ರ್ಯಾವಾನ್—ಬಾಯಾರಿಕೆಯಿಂದ ಬಳಲುವಂತೆ (ಇಂದ್ರನು ಸೋಮಾಭಾವದಿಂದ ಬಳಲಿದನು) । ತಸ್ಮೈ—ಆ ಇಂದ್ರಾರ್ಥವಾಗಿ । ಗೋಧಾ—ಗಾಯತ್ರಿಯು । ಅಯಥಂ—ಶ್ರಮವಿಲ್ಲದೇ । ಏತತ್—ಈ ಸೋಮವನ್ನು । ಕರ್ಷತ್—ಅಪಹರಿಸಿಕೊಂಡು ಬಂದಿತು.

॥ ಭಾವಾರ್ಥ ॥

ಇಂದ್ರ—ಪಂಜರದಲ್ಲಿ ಬಂಧಿತವಾದ ಸಿಂಹವು ಒಂದು ಕಾಲಿನ ಮೇಲೆ ಇನ್ನೊಂದು ಕಾಲನ್ನು ಇಟ್ಟುಕೊಳ್ಳುವಂತೆ ಪಕ್ಷಿರೂಪವಾದ ಗಾಯತ್ರಿಯು ದ್ಯುಲೋಕದಲ್ಲಿ ತನ್ನ ನಖವನ್ನು ಇಟ್ಟಿತು. ಕಟ್ಟಹಾಕಿದ ಎಮ್ಮೆಯು

ಬಾಯಾರಿಕೆಯಿಂದ ಬಳಲುವಂತೆ ಇಂದ್ರನು ಸೋಮಾಭಾವದಿಂದ ಬಳಲಿದನು. ಆ ಇಂದ್ರಾರ್ಥವಾಗಿ ಗಾಯತ್ರಿಯು ಶ್ರಮವಿಲ್ಲದೇ ಈ ಸೋಮವನ್ನು ಅಪಹರಿಸಿಕೊಂಡು ಬಂದಿತು.

English Translation

The hawk has fastened her claw in heaven : as a lion confined (in a cage) places one foot over the other. As a captivc buffalo (is) thirsty, (so) Indra thirsted for the Soma, Gayatri brought it to him easily (from heaven)

॥ ಸಂಹಿತಾಪಾಠಃ ॥

ತೇಭ್ಯೋ ಗೋಧಾ ಅಯಥಂ ಕರ್ಷದೇತದ್ಯೇ ಬ್ರಹ್ಮಣಃ ಪ್ರತಿಪೀಯಂತ್ಯನ್ನೈಃ ।
ಸಿಮ ಉಕ್ಷ್ಣೋಽವಸೃಷ್ಟಾ ಅದಂತಿ ಸ್ವಯಂ ಬಲಾನಿ ತನ್ವಃ ಶೃಣಾನಾಃ ॥೧೧॥

॥ ಪದಪಾಠಃ ॥

ತೇಭ್ಯಃ । ಗೋಧಾ । ಅಯಥಂ । ಕರ್ಷತ್ । ಏತತ್ । ಯೇ । ಬ್ರಹ್ಮಣಃ । ಪ್ರತಿಽಪೀಯಂತಿ । ಅನ್ನೈಃ ।
ಸಿಮಃ । ಉಕ್ಷ್ಣಃ । ಅವಽಸೃಷ್ಟಾನ್ । ಅದಂತಿ । ಸ್ವಯಂ । ಬಲಾನಿ । ತನ್ವಃ । ಶೃಣಾನಾಃ ॥ ೧೧ ॥

॥ ಸಾಯಣಭಾಷ್ಯಂ ॥

ಯೇ ಮರುದಾದಿದೇವಗಣಾ ಬ್ರಹ್ಮಣಃ ಪರಿವೃಢಸ್ಯೇಂದ್ರಸ್ಯ ಸ್ವಭೂತೈರನ್ನೈಃ ಸೋಮಾಖ್ಯೈಃ । ತೃಪ್ತಾಃ ಸಂತ ಇತಿ ಶೇಷಃ । ಪ್ರತಿಪೀಯಂತಿ । ಪೀಯತಿರ್ಹಿಂಸಾಕರ್ಮಾ । ಇಂದ್ರಾದೇಶಾದ್ಧಿಂಸಕಾನ್ಪ್ರತಿಹಿಂಸಂತಿ ತೇಭ್ಯಸ್ತೇಷಾಂ ದೇವಗಣಾನಾಮರ್ಥಾಯ ಗೋಧಾಃ ಪೂರ್ವೋಕ್ತಾ ಗಾಯತ್ರ್ಯಯಥಮನಾಯಾಸೇನೈತತ್ಸೋಮಜಾತಂ ಕರ್ಷತ್ । ಆಕೃಷ್ಟವತೀ । ಕಂಚಿ ಸಿಮಃ ಸಿಮಾಞ್ಶ್ಲೇಷ್ಮಾನ್ । ಯದ್ವಾ । ಸಿಮಶಬ್ದಃ ಸರ್ವಶಬ್ದಪರ್ಯಾಯಃ । ಸರ್ವಾನ್ । ಉಕ್ಷ್ಣಃ ಸಿಂಚತೋಽವಸೃಷ್ಟಾನಿಂದ್ರೇಣ ನಿಸೃಷ್ಟಾನನುಜ್ಞಾತಾನ್ಹವಿರ್ಭೂತಾನ್ಸೋಮಾನ್ಯಜ್ಞೇಷ್ವದಂತಿ । ಭಕ್ಷಯಂತಿ । ಕಂ ಕುರ್ವಂತಃ । ಸ್ವಯಮಾತ್ಮನೈವ ಬಲಾನಿ ಶತ್ರೂಣಾಂ ಸೈನ್ಯಾನಿ ತನ್ವಃ ಶರೀರಾಣಿ ಚ ಶೃಣಾನಾ ಹಿಂಸಂತಃ । ಗಾಯತ್ರೀಂದ್ರಾದೇಶಾದ್ದೇವೇಭ್ಯಃ ಸೋಮಮಾಹೃತವತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಯೇ—ಯಾವ ಮರುದಾದಿದೇವತೆಗಳು । ಬ್ರಹ್ಮಣಃ—ಪುಷ್ಟನಾದ ಇಂದ್ರನ । ಅನ್ನೈಃ—ಸೋಮರೂಪವಾದ ಅನ್ನಗಳಿಂದ ತುಪ್ತರಾಗಿ । ಪ್ರತಿಪೀಯಂತಿ—ಶತ್ರುಗಳನ್ನು ಹಿಂಸಿಸಬಲ್ಲರೋ । ತೇಭ್ಯಃ—ಅವರಿಗಾಗಿ ।

ಗೋಧಾಃ—ಗಾಯತ್ರಿಯು । ಅಯಕ್ಷಂ—ಶ್ರಮವಿಲ್ಲದೆ । ಏತತ್—ಈ ಸೋಮವನ್ನು । ಕರ್ಷತ್—ಅಪಹರಿಸಿ ಕೊಂಡು ಬಂದಿತು । ಸ್ವಯಂ—ಸ್ವಶಕ್ತಿಯಿಂದಲೇ । ಬಲಾನಿ—ಶತ್ರುಸೈನ್ಯಗಳನ್ನೂ । ತನ್ವಃ—ಶತ್ರುಜನರ ಶರೀರಗಳನ್ನೂ । ಶೃಣಾನಾಃ—ಹಿಂಸಿಸುತ್ತ । ಅವಸೃಷ್ಟಾನ್—ಇಂದ್ರನು ಪಾನಮಾಡಿದನಂತರ ಉಳಿಯುವುವೂ । ಉಕ್ಷ್ಣಃ—ಪ್ರವಹಿಸುವುವೂ ಆದ । ಸಿನ್ವಃ—ಎಲ್ಲ ಸೋಮರಸಗಳನ್ನೂ । ಅದಂತಿ—ಭಕ್ಷಿಸುತ್ತಾರೆ.

। ಭಾವಾರ್ಥ ।

ವಸುಕ್ರ—ಯಾವ ಮರುದಾದಿದೇವತೆಗಳು ಪುಷ್ಟನಾದ ಇಂದ್ರನ ಸೋಮರೂಪವಾದ ಅನ್ನಗಳಿಂದ ತುಷ್ಟರಾಗಿ ಶತ್ರುಗಳನ್ನು ಹಿಂಸಿಸಬಲ್ಲರೋ, ಅವರಿಗಾಗಿ ಗಾಯತ್ರಿಯು ಶ್ರಮವಿಲ್ಲದೇ ಈ ಸೋಮವನ್ನು ಅಪಹರಿಸಿ ಕೊಂಡು ಬಂದಿತು. ಸ್ವಶಕ್ತಿಯಿಂದಲೇ ಶತ್ರುಸೈನ್ಯಗಳನ್ನೂ, ಶತ್ರುಜನರ ಶರೀರಗಳನ್ನೂ ಹಿಂಸಿಸುತ್ತ (ಇಂದ್ರನು ಪಾನಮಾಡಿದನಂತರ) ಉಳಿಯುವುವೂ, ಪ್ರವಹಿಸುವುವೂ ಆದ ಎಲ್ಲ ಸೋಮರಸಗಳನ್ನು ಪಾನಮಾಡುತ್ತಾರೆ.

English Translation

Gayatri drew it away without difficulty, for the good of those (gods) who, (satisfied) with the viands of Indra, retaliate the injuries (of the enemies of the gods): they devour all the sprinkling (Soma libations) left (by Indra), spontaneously destroying the armies and bodies (of the enemy).

। ಸಂಹಿತಾಪಾಠಃ ।

ಏತೇ ಶಮೀಭಿಃ ಸುಶಮೀ ಅಭೂವನ್ಯೇ ಹಿನ್ವಿರೇ ತನ್ವಃ ಸೋಮ ಉಕ್ಥೈಃ।
ನ್ಯವದ್ವದನ್ನುಪ ನೋ ಮಾಹಿ ವಾಜಾನ್ದಿವಿ ಶ್ರವೋ ದಧಿಷೇ ನಾಮ ವೀರಃ ॥ ೧೨ ॥

। ಪದಪಾಠಃ ।

ಏತೇ । ಶಮೀಭಿಃ । ಸುಽಶಮೀ । ಅಭೂವನ್ । ಯೇ । ಹಿನ್ವಿರೇ । ತನ್ವಃ । ಸೋಮೇ । ಉಕ್ಥೈಃ ।
ನ್ಯಽವತ್ । ವದನ್ । ಉಪ । ನಃ । ಮಾಹಿ । ವಾಜಾನ್ । ದಿವಿ । ಶ್ರವಃ । ದಧಿಷೇ । ನಾಮ ।
ವೀರಃ ॥ ೧೨ ॥

। ಸಾಯಣಭಾಷ್ಯಂ ।

ಯೇ ದೇವಪತ್ನ್ಯಾದಯಸ್ತನ್ವಃ ಶರೀರಾಣಿ ಸೋಮೇ ಸೋಮಯಾಗ ಉಕ್ಥೈಃ ಶಸ್ತ್ರೈರ್ಹಿನ್ವಿರೇ ವರ್ಧಯಂತಿ ಏತೇ ದೇವಾದಯ ಇಂದ್ರಾದೇಶಾತ್ಸೋಮ ಆಹೃತೇ ಸತಿ ಶಮೀಭಿಃ ಸೋಮಯಾಗ-

ಕರ್ಮಭಿಃ ಸುಶಮಿಾ ಸುಕರ್ಮಾಣೋ೨ಭೂವನ್ । ನೃವನ್ನೃಷ್ಯವದ್ವದನ್ ಇದಂ ಯುಷ್ಮಭ್ಯಂ ಮಯಾ ದತ್ತಮಿತಿ ವ್ಯಕ್ತಾಂ ವಾಚಮುಚ್ಚಾರಯನ್ ನೋ೨ಸ್ಮಭ್ಯಮುಪ ಮಾಹಿ । ಉಪಗಮ್ಯ ವಾಜಾನನ್ನಾನಿ ಬಲಾನಿ ವಾ ಹೇ ಇಂದ್ರ ತ್ವಂ ದೇಹೀತಿ ಶೇಷಃ । ಅತಃ ಕಾರಣಾದ್ವೀರೋ ದಾನಶೂರಸ್ತ್ವಂ ದಿವಿ ದ್ಯುಲೋಕೇ ಶ್ರವೋ ದಾನಪತಿರಿತಿ ಕೀರ್ತಿತಂ ನಾಮ ನಾಮಧೇಯಂ ದಧಿಷೇ । ಧಾರಯಸಿ ॥

॥ ಪ್ರತಿಪದಾರ್ಥ ॥

ಯೇ—ಯಾರು । ತನ್ವಃ—ತಮ್ಮ ಶರೀರಗಳನ್ನು । ಸೋಮೇ—ಸೋಮಯಾಗದಲ್ಲಿ । ಉಕ್ಥೈಃ—ಶಸ್ತ್ರಮಂತ್ರಗಳಿಂದ । ಹಿನ್ವಿರೇ—ಪುಷ್ಟಿಗೊಳಿಸುವರೋ । ಏತೇ—ಅವರೆಲ್ಲರೂ । ಶಮಿಾಭಿಃ-ಸೋಮಯಾಗಕರ್ಮಗಳಿಂದ । ಸುಶಮಾ—ಉತ್ತಮವಾದ ಕರ್ಮವುಳ್ಳವರಾಗಿ । ಅಭೂವನ್—ಆದರು (ಎಲೈ ಇಂದ್ರನೇ) । ನೃವತ್—ಮಾನವರಂತೆ । ವದನ್—ಮಾತನಾಡುತ್ತ । ನಃ—ನಮ್ಮನ್ನು । ಉಪ ಮಾಹಿ—ಸಮೀಪಿಸಿ । ವಾಜಾನ್—ಅನ್ನಗಳನ್ನು ಕೊಡು । ವೀರಃ—ಶೂರನಾದ ನೀನು । ದಿವಿ—ದ್ಯುಲೋಕದಲ್ಲಿ । ಶ್ರವಃ—ಕೀರ್ತಿಯುತವಾದ । ನಾಮ—ಹೆಸರನ್ನು । ದಧಿಷೇ—ಧರಿಸಿದ್ದೀಯೆ

॥ ಭಾವಾರ್ಥ ॥

ಇಂದ್ರ—ಯಾವ ಯಜ್ಞಕರ್ತರು ತಮ್ಮ ಶರೀರಗಳನ್ನು ಸೋಮಯಾಗದಲ್ಲಿ ಶಸ್ತ್ರಮಂತ್ರಗಳಿಂದ ಪುಷ್ಟಿಗೊಳಿಸುವರೋ ಅವರೆಲ್ಲರೂ ಸೋಮಯಾಗಕರ್ಮಗಳಿಂದ ಉತ್ತಮವಾದ ಕರ್ಮವುಳ್ಳವರಾಗಿ ಆದರು. ಎಲೈ ಇಂದ್ರನೇ, ನೀನು ಮಾನವರಂತೆ ಮಾತನಾಡುತ್ತ ನಮ್ಮನ್ನು ಸಮೀಪಿಸಿ ಅನ್ನಗಳನ್ನುಕೊಡು. ಶೂರನಾದ ನೀನು ದ್ಯುಲೋಕದಲ್ಲಿ ಕೀರ್ತಿಯುತವಾದ ಹೆಸರನ್ನು ಧರಿಸಿದ್ದೀಯೆ.

English Translation

They have been sanctified by holy rites, who have fostered their bodies with prayers, at the Soma (sacrifice): speaking like a man, grant us food, you possess in heaven name and fame as a hero.

ಇಪ್ಪತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ವನೇ ನ ವೇತ್ಯಷ್ಟರ್ಚಂ ತ್ರಯೋದಶಂ ಸೂಕ್ತಂ ವಸುಕ್ರಸ್ಯಾರ್ಷಂ ತ್ರೈಷ್ಟುಭಮೈಂದ್ರಂ । ಅನುಕ್ರಾಂತಂ ಚ । ವನೇ ನಾಷ್ಟಾವಿತಿ ॥ ಚತುರ್ಥೇ೨ಹನಿ ಸ್ತೋಮವೃದ್ಧಾ ಬ್ರಾಹ್ಮಣಾಚ್ಛಂಸಿನ ಏತತ್ಸೂಕ್ತಮಾವಾಪಾರ್ಷಂ । ಸೂತ್ರಿತಂ ಚ । ಸ್ತೋಮೇ ಪರ್ಯಮಾನೇ ಕೋ ಅಸ್ಯ ನಯೋ ವನೇ ನ ವಾ ಯಃ । ಅ. ೭–೧೨ । ಇತಿ ॥ ಮಹಾವ್ರತೇ ನಿಷ್ಕೇವಲ್ಯ ಏತತ್ಸೂಕ್ತಂ । ಸೂತ್ರಿತಂ ಚ । ಪ್ರ ವೋ

ಮಹೇ ಮಂದಮಾನಾಯಾಂಧಸ ಇತಿ ನಿವಿದ್ಧಾನಂ ವನೇ ನ ವಾ ಯೋ ನ್ಯಧಾಯಿ ಚಾಕನ್ । ಐ. ಆ. ೫-೩-೧ । ಇತಿ ॥

ಅನುವಾದವು—ವನೇ ನ ವಾ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಸುಕ್ರನು ಋಷಿಯು; ಇಂದ್ರನು ದೇವತೆಯು, ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—ವನೇ ನಾಷ್ಟೌ ಎಂದು ಹೇಳಿರುವುದು. ಯಾಗದ ನಾಲ್ಕನೆಯ ದಿನ ಸೋತ್ರವುವೃದ್ಧಿಗಾಗಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಈ ಸೂಕ್ತವನ್ನು ಆವಾಪಾರ್ಥವಾಗಿ ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—ಸ್ತೋಮೇ ವರ್ಧಮಾನೇ ಕೋ ಅದ್ಯ ನರ್ಯೋ ವನೇ ನ ವಾಯಃ ಎಂಬ ಸೂತ್ರದಿಂದ (ಆ ೭.೧೨) ವಿನಿಯೋಗವಿರುವುದು. ಮಹಾವ್ರತೇಷ್ಟಿಯಲ್ಲಿಯೂ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ—ಪ್ರ ವೋ ಮಹೇ ಮಂದಮಾನಾಯಾಂಧಸ ಇತಿ ನಿವಿದ್ಧಾನಂ ವನೇ ನ ವಾ ಯೋ ನ್ಯಧಾಯಿ ಚಾಕನ್ ಎಂಬ ವಾಕ್ಯದಿಂದ (ಐ ಆ. ೫-೩-೧) ನಿರ್ದಿಷ್ಟವಾಗಿರುವುದು.

ಸೂಕ್ತ—೨೯

ಮಂಡಲ—೧೦ ॥ ಅನುವಾಕ—೨ ॥ ಸೂಕ್ತ—೨೯ ।
ಅಷ್ಟಕ—೭ ॥ ಅಧ್ಯಾಯ—೭ ॥ ವರ್ಗ ೨೨, ೨೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ।
ಋಷಿಃ—ವಸುಕ್ರಃ ॥
ದೇವತಾ—ಇಂದ್ರಃ ।
ಛಂದಃ—ತ್ರಿಷ್ಟುಪ್ ।

। ಸಂಹಿತಾಪಾಠಃ ।

ವನೇ ನ ವಾ ಯೋ ನ್ಯಧಾಯಿ ಚಾಕಞ್ಛುಚಿರ್ವಾಂ ಸ್ತೋಮೋ ಭುರಣಾ-
ವಜೀಗಃ ।
ಯಸ್ಯೇದಿಂದ್ರಃ ಪುರುದಿನೇಷು ಹೋತಾ ನೃಣಾಂ ನರ್ಯೋ ನೃತಮಃ
ಕ್ಷಪಾವಾನ್ ॥ ೧ ॥

। ಪದಪಾಠಃ ॥

ವನೇ । ನ । ವಾ । ಯಃ । ನಿ । ಅಧಾಯಿ । ಚಾಕನ್ । ಶುಚಿಃ । ವಾಂ । ಸ್ತೋಮಃ । ಭುರಣಾ ।
ಅಜೀಗರಿತಿ ।
ಯಸ್ಯ । ಇತ್ । ಇಂದ್ರಃ । ಪುರುದಿನೇಷು । ಹೋತಾ । ನೃಣಾಂ । ನರ್ಯಃ । ನೃತಮಃ । ಕ್ಷಪಾ-
ವಾನ್ ॥ ೧ ॥

। सायणभाष्यं ।

वनेे न वायोे न्यधायीति । वनेे न वन इव वृक्ष इव शकुनिः स्वे नीडे वायु-
मान्क्षीयं पुत्रं न्यधायि निदधाति शिशुकमजातपक्षं । स यथा तत्र निहितश्शाकपूश्शकुन्
भयाद्दिशो निरीक्षमाण आसीत् । अथवा । कामुयमानस्तदुत्सुकमना आसीत् ।
एवमयमस्मासु वृक्षस्य नीडभूतेषु शकुनिपुत्रभूतः शुचिर्व्यपगतसर्वदोषोे
युवयोः स्वभूतः स्तोमः हे भुरण्यौ भर्तारावश्विनौ शीघ्रौ वा । भुरण्युरिति
क्षिप्रनामेति । किंच यस्य स्तोमस्य पुरुदिनेषु बहुष्वहःस्विंद्रो होतेंद्रोऽस्या-
ह्वाता भवति ममायं स्तोमः स्यादिति । कल्लक्षणः पुनरिंद्र आह्वाता । योे नृणां
मनुष्याणां नृकमः मनुष्याणामपि मनुष्यतमः । शूराणामपि मध्ये शूरतम
इत्यर्थः । नर्यश्च नृभ्यो हितोे यः क्षपावांश्च रात्रिपर्यायेषु सोमभागः ।
एवंगुणयुक्तेन यः स्तोमः इंद्रेणापि प्रार्थ्यतेऽस्मासु वर्तमानः स युवां
प्रत्यजीगः । नित्यकालमेव गच्छतीत्यर्थः । एतावदेतामृचमाश्विनमिति कृत्वा
व्याचक्षते । तदसाधु । ऐंद्रे हि सूक्ते प्रथमैवेयं भवति । तच्च पुनः पृष्ठ्यस्य
षष्ठेऽहनि स्तोमे वर्धमाने माध्यंदिने सवने ब्राह्मणाच्छंसिनः शस्त्रे विनियुज्यते ।
हे भुरण्यौ भर्तारौ देवानां पतीे य एष स्तोमोऽस्मासु निहितः शुचिर्व्यपगत-
दोषः शकुनिपुत्र इव वनेे वनावयवे वृक्षे चाकन्पश्यन्निव कामुयमान इव
वेंद्रमास्ते । यस्य स्तोमस्य किमिति । यस्येंद्रः पुरुदिनेषु बहुष्वहःस्वाह्वाता-
भूत् अपि नामु मामुनेन स्तोमेन स्तुयुरिति । कल्लक्षणः पुनराह्वाता ।
यस्येदिंद्र इति नृणां नृतमो नर्यश्च क्षपावांश्च सवनानमेत्पूर्वेणार्धर्चेन ।
युवमेवमिंद्रः प्रार्थयतेे स एष स्तोमस्तं प्रत्यजीगः । गच्छतीत्यर्थः । अथवा
स एष स्तोमोऽस्माभिरुदीर्यमाणस्तस्येंद्रस्य गुणान्गृह्णातीति स्यात् । जिगर्ति-
र्गृह्णातिकर्मेति ह्युक्तं । नि. ६-७ । एवमत्र चाकन्नित्यस्य चायन्निति वा कामुयमान
इति वेत्येतौ विपरिणामावुपपद्येते शब्दसारूप्यादर्थाविरोधाच्च । एतस्मिन्निगमे
पदविधागतः कश्चिद्विचारोऽस्ति । तमाह भाष्यकारः । वेति च य इति च
चकार शाकल्य इति । नेति य इति च पदे चकार शाकल्यः पदकारः । तदेतद्विचार्य-
माणं न साधु भवति । किं कारणं । उदात्तं क्षैप्रमाख्यातमुभविष्यत् । एवमेत-
स्मिन्पदद्वयेे सति यदेतदाख्यातं न्यधायीति तदुदात्तमुभविष्यत् । यद्धृत्वात्परस्य
नित्यमाख्यातस्य निघातोे न भवतीति लक्षणविधेः मन्यंते । न चेदमुदात्तं तस्माद्ध
इति नेदं यद्धृत्वं किं तर्हि वाय इत्येकमेव पदं । किंच । असुसमाप्तश्चार्थः कि
अपुष्कलः । एवमेव तस्मिन्पदद्वयेे सति मंत्रस्यार्थोऽसुसमाप्तो भवति ॥

। ಪ್ರತಿಪದಾರ್ಥ ।

ಭುರಣೌ—ಜಗತ್ತಿಗೆ ಭರ್ತೃಗಳಾದ ಎಲೈ ಅಶ್ವಿನೀದೇವತೆಗಳೇ । **ನೃಣಾಂ**—ಮಾನವರಲ್ಲೆಲ್ಲ । **ನೃತಮಃ**—ಅತ್ಯಂತ ಉತ್ತಮನೂ । **ನರ್ಯಃ**—ಮಾನವರಿಗೆ ಹಿತಕಾರಿಯೂ । **ಕ್ಷಪಾವಾನ್**—ರಾತ್ರಿಯ ವೇಳೆ ಅರ್ಪಿತವಾದ ಸೋಮವುಳ್ಳವನೂ ಆದ । **ಇಂದ್ರಃ**—ಇಂದ್ರನು । **ಪುರುದಿನೇಷು**—ಅನೇಕ ದಿನಗಳಲ್ಲಿ । **ಯಸ್ಯ**—ಯಾವ ಸ್ತೋಮವನ್ನು ಪಡೆಯುವುದಕ್ಕಾಗಿ । **ಹೋತಾ**—ಪ್ರಾರ್ಥಿಸುವವನಾಗಿರುವನೋ ಅಂತಹುದೂ । **ಶುಚಿಃ**—ಪರಿಶುದ್ಧವಾದುದೂ ಆದ । **ಯಃ ಸ್ತೋಮಃ**—ಯಾವ ಸ್ತೋಮವು । **ನೃಧಾಯಿ**—ನಮ್ಮಲ್ಲಿ ನಿಹಿತವಾಗಿರುವುದೋ ಅದು । **ವನೇ**—ಪಕ್ಷಿಯು ವೃಕ್ಷದಲ್ಲಿ ಮೊಟ್ಟೆಯನ್ನಿಟ್ಟು । **ಚಾಕನ್ ನ**—ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ । **ವಾಂ**—ನಿಮ್ಮನ್ನು । **ಅಜೀಗಃ**—ಎಚ್ಚರಿಕೆಯಿಂದ ನೋಡಿಕೊಳ್ಳುತ್ತದೆ.

॥ ಭಾವಾರ್ಥ ॥

ಜಗತ್ತಿಗೆ ಭರ್ತೃಗಳಾದ ಎಲೈ ಅಶ್ವಿನೀದೇವತೆಗಳೇ, ಮಾನವರಲ್ಲೆಲ್ಲ ಅತ್ಯುತ್ತಮನಾದ ಮಾನವನೂ ಮಾನವರಿಗೆ ಹಿತಕಾರಿಯೂ, ರಾತ್ರಿಯವೇಳೆ ಅರ್ಪಿತವಾದ ಸೋಮವುಳ್ಳವನೂ ಆದ ಇಂದ್ರನು ಅನೇಕ ದಿನಗಳಲ್ಲಿ ಯಾವ ಸ್ತೋಮವನ್ನು ಪಡೆಯುವುದಕ್ಕಾಗಿ ಪಾರ್ಥಿಸುವವನಾಗಿರುವನೋ ಅಂತಹುದೂ, ಪರಿಶುದ್ಧವಾದುದೂ ಆದ ಯಾವ ಸ್ತೋಮವು ನಮ್ಮಲ್ಲಿ ನಿಹಿತವಾಗಿರುವುದೋ ಅದು ಪಕ್ಷಿಯು ವೃಕ್ಷದಲ್ಲಿ ಮೊಟ್ಟೆಯನ್ನಿಟ್ಟು (ಮರಿಯನ್ನಿಟ್ಟು) ಎಚ್ಚರಿಕೆಯಿಂದ ನೋಡಿಕೊಳ್ಳುವಂತೆ ನಿಮ್ಮನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತದೆ.

English Translation

As (the bird) who deposits its young (in its nest) in the tree (is) eagerly looking around, so you bearers (Aswins) your pure praise (ever) keeps you awake: (that praise) of which Indra has for many days been the invoker, (Indra) the friend of man, the manliest of men, (to whom the soma is offered) at night.

॥ ವಿಶೇಷವಿಷಯಗಳು ॥

ಚಾಕನ್—ಈ ಶಬ್ದದ ನಿರ್ವಚನವನ್ನು ಹೇಳುತ್ತಾ ಯಾಸ್ಕರು ಈ ಋಕ್ಕಿಗೆ ನಿರುಕ್ತವನ್ನು ಈರೀತಿ ಹೇಳಿದಾರೆ—

ಚಾಕನ್ । ವನೇನ ವಾಯೋ ನೃಧಾಯಿ ಚಾಕನ್ । ವನ ಇವ ವಾಯೋ ವೇಃ ಪುತ್ರಶ್ಚಾಯನ್ನಿತಿ ವಾ ಕಾಮಯಮಾನ ಇತಿ ವಾ । ನೇತಿ ಚ ಯ ಇತಿ ಚ ಚಕಾರ ಶಾಕಲ್ಯ ಉದಾತ್ತಂ ತ್ವೇವಮಾಖ್ಯಾತಮನುಭವಿಷ್ಯದಸುಸಮಾಪ್ತಶ್ಚಾರ್ಥಃ ॥

(ನಿ. ೬-೨೮)

ಇಲ್ಲಿ ವನಶಬ್ದಕ್ಕೆ ವೃಕ್ಷವೆಂದರ್ಥವು. ವೃಕ್ಷದಲ್ಲಿ ಕುಳಿತಿರುವ ಪಕ್ಷಿಯು ತನ್ನ ಎಳೆಯ ಮರಿಯನ್ನು ಎಂದರೆ ಇನ್ನೂ ರೆಕ್ಕೆಯು ಹುಟ್ಟದಿರುವ ಸಣ್ಣ ಮರಿಯನ್ನು ವೃಕ್ಷದಲ್ಲಿಟ್ಟು ಅದು ಹಾರುವುದಕ್ಕೆ ಬರದೇ ಇರುವುದರಿಂದ ಕೆಳಕ್ಕೆ ಎಲ್ಲಿ

ಬಿದ್ದುಹೋಗುವುದೋ ಎಂಬ ಉತ್ಸುಕತೆಯಿಂದ ನೋಡುತ್ತಿರುವಂತೆ ಎಂದು ಈ ವಾಕ್ಯದ ಅಭಿಪ್ರಾಯವು. ಈ ವಾಕ್ಯದಲ್ಲಿರುವ ವಾಯಃ ಎಂಬ ಶಬ್ದವನ್ನು ಶಾಕಲ್ಯಋಷಿಯು ವಾ ಯಃ ಎಂದು ಎರಡು ಪದಗಳನ್ನಾಗಿ ಪದ ವಿಭಾಗ ಮಾಡಿರುವರು. ಹಾಗೆ ಮಾಡಿದಲ್ಲಿ ವಾಕ್ಯದ ಕ್ರಿಯಾಪದಕ್ಕೆ ಉದಾತ್ತವಿರಬೇಕಾಗುತ್ತಿತ್ತು ಮತ್ತು ವಾಕ್ಯದ ಅರ್ಥವು ಅಪೂರ್ಣವಾಗುತ್ತಿತ್ತು, ಎಂದು ನಿರುಕ್ತಕಾರರು ತಮ್ಮ ಅಭಿಪ್ರಾಯವನ್ನು ಸೂಚಿಸಿದಾರೆ.

ಇಲ್ಲಿ ವಾಯಃ ಎಂದು ಒಂದೇ ಪದವೆಂದು ಭಾವಿಸಿದರೆ-ವಿ ಎಂದರೆ ಪಕ್ಷಿಯು, ವಾಯಃ ಎಂದರೆ ಪಕ್ಷಿಸಂಬಂಧವಾದ ಎಂದರೆ ಪಕ್ಷಿಯಿಂದ ಹುಟ್ಟಿದ ಪಕ್ಷಿಯ ಮರಿಯು ಎಂದರ್ಥವು. ಈ ಅರ್ಥವೇ ಸಮಂಜವಾಗಿರುವುದು. ಆದರೆ ಪದಪಾಠಕಾರರಾದ ಶಾಕಲ್ಯಋಷಿಯು ವಾ ಯಃ ಎಂದು ಬೇರೆಬೇರೆ ಪದಚ್ಛೇದಮಾಡಿರುವರು. ಈ ರೀತಿ ಪದವಿಭಾಗಮಾಡಿದರೆ ಮುಖ್ಯ ಕ್ರಿಯಾಪದವಾದ ನ್ಯಧಾಯಿ ಶಬ್ದವು ಆದ್ಯುದಾತ್ತವಾಗಬೇಕಾಗುತ್ತಿತ್ತು ಮತ್ತು ವಾಕ್ಯದ ಅರ್ಥವು ಸಂಪೂರ್ಣವಾಗುತ್ತಿರಲಿಲ್ಲ. ಆದ್ದರಿಂದ ವಾಯಃ ಎಂಬ ಶಬ್ದವು ಒಂದೇ ಪದವೆಂದು ಭಾವಿಸುವುದೇ ಪರಿಗ್ರಾಹ್ಯವು ಎಂದು ಭಾಷ್ಯಕಾರರು ನಿರುಕ್ತಕಾರರ ಅಭಿಪ್ರಾಯವನ್ನು ಸಮರ್ಥಿಸಿದ್ದಾರೆ.

ಸಂಹಿತಾಪಾಠಃ ।

ಪ್ರ ತೇ ಅಸ್ಯಾ ಉಷಸಃ ಪ್ರಾಪರಸ್ಯಾ ನೃತೌ ಸ್ಯಾಮ ನೃತಮುಸ್ಯ ನೃಣಾಂ ।
ಅನು ತ್ರಿಶೋಕಃ ಶತಮಾವಹನ್ನ್ಯಾನ್ಕುತ್ಸೇನ ರಥೋ ಯೋ ಅಸತ್ಸಸವಾನ್॥

। ಪದಪಾಠಃ ।

ಪ್ರ । ತೇ । ಅಸ್ಯಾಃ । ಉಷಸಃ । ಪ್ರ । ಅಪರಸ್ಯಾಃ । ನೃತೌ । ಸ್ಯಾಮ । ನೃತಮಸ್ಯ । ನೃಣಾಂ ।
ಅನು । ತ್ರಿಶೋಕಃ । ಶತಂ । ಆ । ಅವಹತ್ । ನ್ಯಾನ್ । ಕುತ್ಸೇನ । ರಥಃ । ಯಃ । ಅಸತ್ । ಸಸವಾನ್ ॥ ೨ ॥

। ಸಾಯಣಭಾಷ್ಯಂ ।

ಅಸ್ಯಾ ವರ್ತಮಾನಾಯಾ ಈದೃಶ್ಯಾ ಉಷಸೋ ನೃತೌ ॥ ನೃ ನಯೇ ॥ ನಯನೇ ಪ್ರಾಪಣೇ । ಉದಯಕಾಲ ಇತ್ಯರ್ಥಃ । ನೃಣಾಂ ನೇತೃಣಾಂ ಮಧ್ಯೇ ನೃತಮಸ್ಯಾತಿಶಯೇನ ನೇತುಸ್ತೇ ತವೇಂದ್ರಸ್ಯ ಸ್ತುತ್ಯಾ ಯಾಗೇನ ಚ ಪ್ರ ಸ್ಯಾಮ । ವಯಂ ಪ್ರಕೃಷ್ಟಾ ಭವೇಮ । ತಥಾ ಹೇ ಇಂದ್ರ ಅಪರಸ್ಯಾ ಆಗಾಮಿನ್ಯಾಶ್ಚೋಷಸೋ ನೃತೌ ಪ್ರಾಪಣೇ ತವ ಸ್ತುತ್ಯಾ ಯಾಗೇನ ಚ ವಯಂ ಪ್ರಕೃಷ್ಟಾ ಭವೇಮೇತ್ಯಾಶಾಸ್ಮಹೇ । ಕಂಚ ತ್ರಿಶೋಕೋ ನಾಮರ್ಷಿರ್ಹೇ ಇಂದ್ರ ತ್ವಾಮಾರಾಧ್ಯ ತ್ವತ್ಪ್ರಸಾದಾಚ್ಛತಂ ಬಹೂನಪ್ಯನುಚರಭೂತಾನ್ನ್ಯಾನ್ಮನುಷ್ಯಾನಾವಹತ್ । ಪ್ರಾಪಿತವಾನ್ । ಲಬ್ಧವಾನಿತ್ಯರ್ಥಃ । ತಥಾ ತವ ಕುತ್ಸಸ್ಯ ಚ ಸಸವಾನ್ ಸನಿತಾ ಯುಗಪದೇವ ಸಂಭಕ್ತಾ ಯೋ ರಥೋಽಸತ್ ಅಸ್ತಿ ಸ ರಥಃ ಕುತ್ಸೇನ । ಕುತ್ಸೋ ಲಬ್ಧವಾನಿತಿ ಶೇಷಃ । ತಥಾ ಚ ಮಂತ್ರಾಂತರೇ ಶ್ರೂಯತೇ । ಯಾಸಿ ಕುತ್ಸೇನ ಸರಥಮವಸ್ಯುಃ । ಋ ೪-೧೬-೧೧ । ಇತಿ । ಯಸ್ಮಾದೇವಂ ತಸ್ಮಾತ್ತ್ವತ್ಪ್ರಸಾದಾದ್ವಯಂ ಪ್ರಕೃಷ್ಟಾ ಭವೇಮೇತ್ಯರ್ಥಃ ।

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಅಸ್ಯಾಃ**—ವರ್ತಮಾನಕಾಲದ । **ಉಷಸಃ**—ಉಷಸ್ಸಿನ । **ನೃತೌ**—ಉದಯಕಾಲದಲ್ಲಿ । **ನೃಣಾಂ**—ಮಾನವರಲ್ಲೆಲ್ಲಾ । **ನೃತಮಸ್ಯ**—ಉತ್ತಮನಾದ । **ತೇ**—ನಿನ್ನ ಪೂಜೆಯಿಂದ । **ಪ್ರ ಸ್ಯಾಮ**—ನಾವು ಸುಖವಂತರಾಗಿರುವೆವು । **ಅಪರಸ್ಯಾಃ**—ಮುಂದಿನ ಉಷಃಕಾಲಗಳಲ್ಲೂ ಹೀಗೆಯೇ ಇರುವಂತಾಗಲಿ **ತ್ರಿಶೋಕಃ**—ತ್ರಿಶೋಕನೆಂಬ ಋಷಿಯು । **ಶತಂ**—ಅನೇಕ ಸಂಖ್ಯೆಯುಳ್ಳ । **ಅನು ತ್ವಾನ್**—ಅನುಚರಜನರನ್ನು । **ಅವಹತ್**—ನಿನ್ನ ಅನುಗ್ರಹದಿಂದ ಹೊಂದಿದ್ದಾನೆ । **ಸಸವಾನ್**—ಸಂಪದ್ಯುಕ್ತವಾದ । **ಯಃ ರಥಃ**—ಯಾವ ರಥವು । **ಅಸತ್**—ಇರುವುದೋ ಅದು । **ಕುತ್ಸೇನ**—ಕುತ್ಸನಿಂದ (ನಿನ್ನ ಅನುಗ್ರಹದ ಫಲವಾಗಿ) ಹೊಂದಲ್ಪಟ್ಟಿತು

॥ ಭಾವಾರ್ಥ ॥

ಎಲೈ ಇಂದ್ರನೇ, ವರ್ತಮಾನಕಾಲದ ಉಷಸ್ಸಿನ ಉದಯಕಾಲದಲ್ಲಿ ಮಾನವರಲ್ಲೆಲ್ಲ ಉತ್ತಮನಾದ ನಿನ್ನ ಪೂಜೆಯಿಂದ ನಾವು ಸುಖವಂತರಾಗಿರುವೆವು. ಮುಂದಿನ ಉಷಃಕಾಲಗಳಲ್ಲೂ ನಾವು ಹೀಗೆಯೇ ಇರುವಂತಾಗಲಿ, ತ್ರಿಶೋಕನೆಂಬ ಋಷಿಯು ಅನೇಕ ಸಂಖ್ಯೆಯುಳ್ಳ ಅನುಚರರನ್ನು ನಿನ್ನ ಅನುಗ್ರಹದಿಂದ ಹೊಂದಿದ್ದಾನೆ ಸಂಪದ್ಯುಕ್ತವಾದ ರಥವನ್ನು ಕುತ್ಸನು ನಿನ್ನ ಅನುಗ್ರದಿಂದ ಹೊಂದಿದ್ದಾನೆ.

English Translation

May we be prosperous at the coming of the present or of any future dawn, (through the adoration) of you, the chief leader of men: through your favour Trishoka obtained a hundred followers, the chariot which was common to him and you was acquired by Kutsa.

॥ ಸಂಹಿತಾಪಾಠಃ ॥

ಕಸ್ತೇ ಮದ ಇಂದ್ರ ರಂತ್ಯೋ ಭೂದ್ದುರೋ ಗಿರೋ ಅಭ್ಯುಗ್ರೋ ವಿ ಧಾವ ।
ಕದ್ಧಾಹೋ ಅರ್ವಾಗುಪ ಮಾ ಮನೀಷಾ ಆ ತ್ವಾ ಶಕ್ಯಾಮುಪಮಂ ರಾಧೋ ಅನ್ನೈಃ ॥ ೩ ॥

॥ ಪದಪಾಠಃ ॥

ಕಃ । ತೇ । ಮದಃ । ಇಂದ್ರ । ರಂತ್ಯಃ । ಭೂತ್ । ದುರಃ । ಗಿರಃ । ಅಭಿ । ಉಗ್ರಃ । ವಿ । ಧಾವ ।
ಕತ್ । ವಾಹಃ । ಅರ್ವಾಕ್ । ಉಪ । ಮಾ । ಮನೀಷಾ । ಆ । ತ್ವಾ । ಶಕ್ಯಾಂ । ಉಪಕ್ಷಮಂ । ರಾಧಃ ।
ಅನ್ನೈಃ ॥ ೩ ॥

। ಸಾಯಣಭಾಷ್ಯಂ ।

ಹೇ ಇಂದ್ರ ತೇ ತವೇಷನ್ಮಧ್ಯಮೋತ್ತಮಾನಾಂ ಸೋಮಜನ್ಯಾನಾಂ ಮದಾನಾಂ ಮಧ್ಯೇ ಕೋ ಮದೋ ರಂತ್ಯೋ ರಮಯಿತಾ ಪ್ರೀತಿಕರೋ ಭೂತ್ । ಭವತಿ । ತ್ವತ್ಪ್ರೀತಿಕರಮದಯೋಗ್ಯ-ಸೋಮದಾನಾಭಿಪ್ರಾಯೇಣಾಯಂ ಪ್ರಶ್ನಃ । ಉಗ್ರ ಓಜಸ್ವೀ ತ್ವಂ ದುರೋ ಯಜ್ಞಗೃಹದ್ವಾರಾಣಿ ಗಿರಃ ಸ್ತುತಿಲಕ್ಷಣಾ ವಾಚಶ್ಚಾಭಿ ವಿ ಧಾವ । ಅಭ್ಯಾಗಚ್ಛ । ಕಂಚ ಕತ್ ಕದಾ ವಾಹಃ । ಇಂದ್ರಂ ಪ್ರತ್ಯುದ್ಯತ ಇತಿ ವಾಹಃ ಸೋಮ ಉಚ್ಯತೇ । ಏವಂಭೂತೋಽರ್ವಾಕ್ ತ್ವತ್ಪ್ರಸಾದಾತ್ಫಲದಾನಾಯಾಸ್ಮದಭಿಮುಖೋ ಭವಿಷ್ಯತೀತಿ ಶೇಷಃ । ಅಪಿ ಚ ಕದಾ ಮನೀಷಾ ಸರ್ವಾರ್ಥದರ್ಶನಾ ಪ್ರಜ್ಞಾ ಸರ್ವಗುಣಗ್ರಾಹಿಣೀ ಸ್ತುತಿರ್ವಾ ಮಾ ಮಾಂ ತ್ವತ್ಪ್ರಸಾದಾದುಪಗಮಿಷ್ಯತೀತಿ ಶೇಷಃ । ಕದಾ ಹೇ ಇಂದ್ರ ತ್ವಾ ತ್ವಾಂ । ಆ ಇತ್ಯುಪಸರ್ಗಶ್ರುತೇರ್ಯೋಗ್ಯಪದಾಧ್ಯಾಹಾರಃ । ಆರಾಧ್ಯ ವಯಮನ್ನೈಃ ಸಹ ರಾಧೋ ಧನಮುಪಮಂ ಮತ್ಸಮೀಪಂ ಶಕ್ಯಾಂ । ಶಕೇರತ್ರ ಗತ್ಯರ್ಥೋಽಂತರ್ಭಾವಿತಣ್ಯರ್ಥಃ । ಸಂಗಮಯೇಯಂ ॥

। ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ । ತೇ—ನಿನಗೆ । ಕಃ ಮದಃ—ಯಾವ ರೀತಿಯ ಹರ್ಷವು । ರಂತ್ಯಃ—ತೃಪ್ತಿಕರವಾಗಿ । ಭೂತ್—ಇರುತ್ತದೆ । ಉಗ್ರಃ—ಅಧಿಕಶಕ್ತಿಯುಳ್ಳ ನೀನು । ದುರಃ—ಯಜ್ಞಗೃಹದ ದ್ವಾರಕ್ಕೂ । ಗಿರಃ ಅಭಿ—ಸ್ತುತಿಗಭಿಮುಖವಾಗಿಯೂ । ವಿ ಧಾವ—ಓಡಿ ಬಾ । ಕತ್—ಯಾವಾಗ । ವಾಹಃ—ಸೋಮವು । ಅರ್ವಾಕ್—ನನಗಭಿಮುಖವಾಗಿರುತ್ತದೆ । ಮನೀಷಾ—ನಿನ್ನನ್ನು ಸ್ತುತಿಸುವ ಬುದ್ಧಿಯು । ಮಾ—ನನ್ನನ್ನು । ಉಪ—ಯಾವಾಗ ಬಂದು ಸೇರುತ್ತದೆ । ತ್ವಾ—ನಿನ್ನನ್ನು । ಆ—ಆರಾಧಿಸಿ । ಅನ್ನೈಃ—ಅನ್ನಗಳೊಡಗೂಡಿದ । ರಾಧಃ—ಧನವನ್ನು (ಯಾವಾಗ) । ಉಪಮಂ—ನಮ್ಮ ಸಮೀಪಕ್ಕೆ । ಶಕ್ಯಾಂ—ಪಡೆಯಲು ಶಕ್ತರಾಗುತ್ತೇವೆ.

। ಭಾವಾರ್ಥ ।

ಎಲೈ ಇಂದ್ರನೇ, ನಿನಗೆ ಯಾವ ರೀತಿಯ ಹರ್ಷವು ತೃಪ್ತಿಕರವಾಗಿರುತ್ತದೆ ? ಅಧಿಕವಾದ ಶಕ್ತಿಯುಳ್ಳ ನೀನು ಯಜ್ಞಗೃಹದ ದ್ವಾರಕ್ಕೂ ಸ್ತುತಿಗಭಿಮುಖವಾಗಿಯೂ ಓಡಿ ಬಾ. ಸೋಮವು ನನಗೆ ಅಭಿಮುಖವಾಗಿ ಯಾವಾಗ ಇರುತ್ತದೆ ? ನಿನ್ನನ್ನು ಸ್ತುತಿಸುವ ಬುದ್ಧಿಯು ನನ್ನನ್ನು ಯಾವಾಗ ಬಂದು ಸೇರುತ್ತದೆ ? ನಿನ್ನನ್ನು ಆರಾಧಿಸಿ ಅನ್ನಗಳೊಡಗೂಡಿದ ಧನವನ್ನು ಯಾವಾಗ ನಮ್ಮಲ್ಲಿಗೆ ಪಡೆಯಲು ಶಕ್ತರಾಗುತ್ತೇವೆ ?

English Translation

What sort of exhilaration, Indra, is agreeable to you ? You who are powerful hasten to the doors (of the sacrificial chamber) to our praises : when will the Soma be present ? (when will) intelligence (come) to me ? when, having propitiated you, may I acquire wealth and food ?

॥ ಸಂಹಿತಾಪಾಠಃ ॥

ಕದು ದ್ಯುಮ್ನಮಿಂದ್ರ ತ್ವಾವತೋ ನ್ಯಾನ್ಕಯಾ ಧಿಯಾ ಕರಸೇ ಕನ್ನ ಆಗನ್।
ಮಿತ್ರೋ ನ ಸತ್ಯ ಉರುಗಾಯ ಭೃತ್ಯಾ ಅನ್ನೇ ಸಮುಸ್ಯ ಯದಸನ್ಮನೀಷಾಃ ॥

॥ ಪದಪಾಠಃ ॥

ಕತ್ । ಊಂ ಇತಿ । ದ್ಯುಮ್ನಂ । ಇಂದ್ರ । ತ್ವಾವತಃ । ನ್ಯಾನ್ । ಕಯಾ । ಧಿಯಾ । ಕರಸೇ । ಕತ್ । ನಃ । ಆ । ಆಗನ್ ।

ಮಿತ್ರಃ । ನ । ಸತ್ಯಃ । ಉರುಽಗಾಯ। ಭೃತ್ಯೈ । ಅನ್ನೇ । ಸಮುಸ್ಯ । ಯತ್ । ಅಸನ್ । ಮನೀಷಾಃ॥೪॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಕದು ಕದಾ ವಾ ದ್ಯುಮ್ನಂ ಹವಿರ್ಲಕ್ಷಣಮಸ್ಮದೀಯಮನ್ನಂ ಭುಕ್ತ್ವೇತಿ ಶೇಷಃ । ಕಯಾ ಧಿಯಾ ಕೇನ ಕರ್ಮಣಾ ನ್ಯಾನ್ನೇತ್ಯಾನಸ್ಮಾಂಸ್ತ್ವಾವತಸ್ತ್ವತ್ಸದೃಶಾನ್ಕರಸೇ । ಕರಿಷ್ಯಸಿ । ಕತ್ ಕದಾ ನೋಽಸ್ಮಾನ್ಪ್ರತ್ಯಾಗನ್ । ಆಗಮಿಷ್ಯಸಿ । ಸತ್ಯಃ । ಅನವದ್ಯ ಇತ್ಯರ್ಥಃ । ಮಿತ್ರೋ ನ ಸಖೇವ ತಥಾ । ಹೇ ಉರುಗಾಯ ಬಹುಕರ್ತರ್ ಇಂದ್ರ ತ್ವಂ ಭೃತ್ಯೈ ಭರಣಾಯ ಪೋಷಣಾಯ ಭವಸೀತಿ ಶೇಷಃ । ಯದ್ಯದಾ ಸಮುಸ್ಯಾಸ್ಮದಾದಿಕಸ್ಯ ಸರ್ವಸ್ಯ ಜಗತೋಽನ್ನೇ ಜಗತ್ಸ್ಥಿತಿನಿಮಿತ್ತ ಆಹಾರೇ ಮನೀಷಾ ಅನ್ನಾಭಿಲಕ್ಷಣಾ ಬುದ್ಧಯೋಽಸನ್ ಭವೇಯುಃ । ತದಾ ಸರ್ವಸ್ಯ ಪೋಷಣಾಯ ತ್ವಂ ಭವಸೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಕದು—ಯಾವಾಗ । ದ್ಯುಮ್ನಂ—ಹವಿಸ್ಸನ್ನು ಭಕ್ಷಿಸಿ । ಕಯಾ ಧಿಯಾ—ಯಾವ ವಿಧವಾದ ಕರ್ಮದಿಂದ । ನ್ಯಾನ್—ಯಜಮಾನರಾದ ನಮ್ಮನ್ನು । ತ್ವಾವತಃ—ನಿನಗೆ ಸಮಾನರನ್ನಾಗಿ । ಕರಸೇ—ಮಾಡುತ್ತೀಯೆ । ನಃ—ನಮ್ಮಲ್ಲಿಗೆ । ಕತ್—ಯಾವಾಗ । ಆಗನ್ —ಬರುತ್ತೀಯೆ । ಉರುಗಾಯ—ಅನೇಕ ವಿಧವಾಗಿ ಸ್ತುತಿಸಲ್ಪಡುವ ಎಲೈ ಇಂದ್ರನೇ । ಯತ್—ಯಾವಾಗ । ಸಮುಸ್ಯ—ಸಕಲವಾದ ಜಗತ್ತಿನ । ಅನ್ನೇ—ಅನ್ನನಿಮಿತ್ತವಾಗಿ । ಮನೀಷಾಃ—ನಮ್ಮ ಸ್ತುತಿಗಳು । ಅಸನ್—ನಿನ್ನನ್ನು ಸಮಿಾಪಿಸುವುವೋ ಆಗ । ಸತ್ಯಃ—ಶುದ್ಧನಾದ । ಮಿತ್ರೋ ನ—ಮಿತ್ರನಂತೆ । ಭೃತ್ಯೈ—ಎಲ್ಲರ ಪೋಷಣೆಗೂ ಸಿದ್ಧನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಯಾವಾಗ ಹವಿಸ್ಸನ್ನು ಭಕ್ಷಿಸಿ ಯಾವ ವಿಧವಾದ ಕರ್ಮದಿಂದ ಯಜಮಾನರಾದ ನಮ್ಮನ್ನು ನಿನಗೆ ಸಮಾನರನ್ನಾಗಿ ಮಾಡುತ್ತೀಯೆ? ನಮ್ಮಲ್ಲಿಗೆ ಯಾವಾಗ ಬರುತ್ತೀಯೆ? ಅನೇಕ ವಿಧವಾಗಿ

ಸ್ತುತಿಸಲ್ಪಡುವ ಎಲೈ ಇಂದ್ರನೇ, ಯಾವಾಗ ಸಕಲ ಜಗತ್ತಿನ ಅನ್ನದ ನಿಮಿತ್ತವಾಗಿ ನಮ್ಮ ಸ್ತುತಿಗಳು ನಿನ್ನನ್ನು ಸಮೀಪಿಸುವುವೋ ಆಗ ಶುದ್ಧನಾದ ಸ್ನೇಹಿತನಂತೆ ನೀನು ಎಲ್ಲರ ಪೋಷಣೆಗೂ ಸಿದ್ಧನಾಗಿರುತ್ತೀಯೆ.

English Translation

When, Indra, (having partaken of) our oblation, and by what sacred rite, will you render men resembling you? when will you bring them to us? you, who are widely renowned, are to us like a true friend, (attentive) for our support, when the minds of all were (anxious) for food.

। ಸಂಹಿತಾಪಾಠಃ ।

ಪ್ರೇರಯ ಸೂರೋ ಅರ್ಥಂ ನ ಪಾರಂ ಯೇ ಅಸ್ಯ ಕಾಮಂ ಜನಿಧಾ ಇವ ಗ್ಮನ್ ।
ಗಿರಶ್ಚ ಯೇ ತೇ ತುವಿಜಾತ ಪೂರ್ವೀರ್ನರ ಇಂದ್ರ ಪ್ರತಿಶಿಕ್ಷಂತ್ಯನ್ನೈಃ ॥೫॥

। ಪದಪಾಠಃ ।

ಪ್ರ । ಈರಯ । ಸೂರಃ । ಅರ್ಥಂ । ನ । ಪಾರಂ । ಯೇ । ಅಸ್ಯ । ಕಾಮಂ । ಜನಿಧಾಃ । ಇವ । ಗ್ಮನ್ ।
ಗಿರಃ । ಚ । ಯೇ । ತೇ । ತುವಿಜಾತ । ಪೂರ್ವೀಃ । ನರಃ । ಇಂದ್ರ । ಪ್ರತಿಶಿಕ್ಷಂತಿ । ಅನ್ನೈಃ ॥ ೫ ॥

। ಸಾಯಣಭಾಷ್ಯಂ ।

ಸೂರಃ ಸೂಯೋಽರ್ಥಂ ನ ಯಥಾರ್ತಾರಂ ಗಂತಾರಂ ಯೋಗಿನಮನುಗೃಹ್ಣನ್ ಪಾರಂ ಸಂಸಾರಸ್ಯಾಂತಮುಪವರ್ಗಂ ಗಮಯತಿ ತಥಾ ಹೇ ಇಂದ್ರ ತ್ವಂ ಯಜಮಾನಾನ್ಸಂಸಾರಸ್ಯಾಂತಂ ಪ್ರೇರಯ । ಗಮಯ। ಯೇಽಸ್ಮದಾದಯೋ ಯಜಮಾನಾ ಅಸ್ಯ ತವೇಂದ್ರಸ್ಯ ಕಾಮಂ ಸೋಮಪಾನೇಚ್ಛಾಂ ಗ್ಮನ್ । ಗಮಿರತ್ರ ವಿಪೂರ್ವೋಽಂತರ್ಧಾವಿತಣ್ಯರ್ಥಶ್ಚ ದ್ರಷ್ಟವ್ಯಃ । ವಿಗಮಯಂತಿ ಮುಹುರಾ ಸೋಮಪಾನೇನಾಪನಯಂತಿ । ತತ್ರ ದೃಷ್ಟಾಂತಃ । ಜನಿಧಾ ಇವ ಜನೀನಾಂ ಜಾಯಾನಾಂ ಸಂಭೋಗಕಾಲೇ ಶಯ್ಯಾಸು ಧಾರಯಿತಾರಃ ಪತಯೋ ಯಥಾ ಪ್ರಭೂತಸಂಭೋಗಪ್ರದಾನೇನ ಮೈಥುನೇಚ್ಛಾಮುಪನಯಂತಿ ತದ್ವತ್ । ಕಿಂಚ ನರೋ ನೇತಾರೋಽಸ್ಮದಾದಯೋ ಯೇ ಯಜಮಾನಾ ಹೇ ತುವಿಜಾತ ಬಹುರೂಪ । ರೂಪಂರೂಪಂ ಪ್ರತಿರೂಪೋ ಬಭೂವ । ಋ. ೬-೪೭-೧೮ । ಇತಿ ವಚನಾತ್ । ಸರ್ವಾತ್ಮನ್ನಿಂದ್ರ ತೇ ತುಭ್ಯಂ ಪೂರ್ವೀರನಾದಿಕಾಲಪ್ರವೃತ್ತಾ ಗಿರಶ್ಚ ಸ್ತುತಿಲಕ್ಷಣಾ ವಾಚಶ್ಚಾನ್ನೈಃ ಪುರೋಡಾಶಾದಿಹವಿರ್ಭಿಃ ಸಹ ಪ್ರತಿಶಿಕ್ಷಂತಿ ಪ್ರತಿಕಾಲಂ ಪ್ರಯಚ್ಛಂತಿ ತಾನಸ್ಮದೀಯಾನ್ಯಜಮಾನಾನ್ಪಾರಂ ಗಮಯೇತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಜನಿಧಾ ಇವ**—ಪತಿಗಳು ಪತ್ನಿಯರ ಇಚ್ಛೆಯನ್ನು ಪೂರ್ಣಗೊಳಿಸುವಂತೆ । **ಯೇ**—ಯಾವ ಯಜಮಾನರು । **ಅಸ್ಯ**—ನಿನ್ನ । **ಕಾಮಂ**—ಸೋಮಪಾನೇಚ್ಛೆಯನ್ನು । **ಗ್ಮನ್**—ಪೂರ್ಣಗೊಳಿಸ್ಯವರೋ ಅಂತಹ ಯಜಮಾನರನ್ನು । **ಸೂರಃ ಅರ್ಥಂ ನ**—ಸೂರ್ಯನು ಯೋಗಿಗಳನ್ನು ಸಂಸಾರದಿಂದ ದಾಟಿಸುವಂತೆ । **ಪಾರಂ**—ಸಂಸಾರದ ಕೊನೆಯ ದಡಕ್ಕೆ । **ಪ್ರೇರಯ**—ಸೇರಿಸು । **ತುವಿಜಾತ**—ಅನೇಕವಿಧವಾದ ರೂಪದಿಂದ ಉತ್ಪನ್ನನಾದ । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನನ್ನುದ್ದೇಶಿಸಿ । **ನರಃ**—ನೇತೃಗಳಾದ । **ಯೇ**—ಯಾವ ಯಜಮಾನರು । **ಪೂರ್ವೀಃ**—ಹಿಂದಿನಿಂದ ಅನುಸರಿಸಿ ಬಂದ । **ಗಿರಃ ಚ**—ಸ್ತುತಿಗಳನ್ನು । **ಅನ್ನೈಃ**—ಹವಿಸ್ಸುಗಳೊಡನೆ । **ಪ್ರತಿಶಿಕ್ಷಂತಿ**—ಅರ್ಪಿಸುವರೋ ಅವರನ್ನು ಸಂಸಾರದಿಂದ ದಾಟಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಪತಿಯರು ಪತ್ನಿಯರ ಇಚ್ಛೆಯನ್ನು ಪೂರ್ಣಗೊಳಿಸುವಂತೆ ಯಾವ ಯಜಮಾನರು ನಿನ್ನ ಸೋಮಪಾನೇಚ್ಛೆಯನ್ನು ಪೂರ್ಣಗೊಳಿಸುವರೋ ಅಂತಹ ಯಜಮಾನರನ್ನು ಸೂರ್ಯನು ಯೋಗಿಗಳನ್ನು ಸಂಸಾರದಿಂದ ದಾಟಿಸುವಂತೆ ನೀನೂ ಸಂಸಾರದ ಕೊನೆಯ ದಡಕ್ಕೆ ಸೇರಿಸು. ಅನೇಕ ವಿಧವಾದ ರೂಪದಿಂದ ಉತ್ಪನ್ನನಾದ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನೇತೃಗಳಾದ ಯಾವ ಯಜಮಾನರು ಹಿಂದಿನಿಂದ ಅನುಸರಿಸಿಬಂದ ಸ್ತುತಿಗಳನ್ನು ಹವಿಸ್ಸುಗಳೊಡನೆ ಅರ್ಪಿಸುವರೋ ಅವರನ್ನು ಸಂಸಾರದಿಂದ ದಾಟಿಸು.

English Translation

As the sun (brings) the ascetic, you bring to the end (of existence) (your worshippers), who satisfy your desire (for the Soma), as husbands (the desire of their wives); and who (being) leaders of rites, multiform Indra, offer to you ancient praises with (sacrificial) viands.

॥ ಸಂಹಿತಾಪಾಠಃ ॥

ಮಾತ್ರೇ ನು ತೇ ಸುಮಿತೇ ಇಂದ್ರ ಪೂರ್ವೀ ದ್ಯೌರ್ಮಜ್ಮನಾ ಪೃಥಿವೀ ಕಾವ್ಯೇನ।

ವರಾಯ ತೇ ಘೃತವಂತಃ ಸುತಾಸಃ ಸ್ಯಾದ್ಗವ್ಯವಂತು ಪೀತಯೇ ಮಧೂನಿ ॥ ೬ ॥

॥ ಪದಪಾಠಃ ॥

ಮಾತ್ರೇ೨ಇತಿ । ನು । ತೇ । ಸುಮಿತೇ ಇತಿ ಸು೨ಮಿತೇ । ಇಂದ್ರ । ಪೂರ್ವೀ ಇತಿ । ದ್ಯಾಃ । ವ್ರಜ್ಮನಾ ।

ಪೃಥಿವೀ । ಕಾವ್ಯೇನ ।

ವರಾಯ । ತೇ । ಘೃತವಂತಃ । ಸುತಾಸಃ । ಸ್ವಾದ್ಮನ್ । ಭವಂತು । ಪೀತಯೇ । ಮಧೂನಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ಸ್ವಭೂತೇನ ವಜ್ರ್ಮನಾ ಶತ್ರೂಣಾಂ ವರ್ಜ್ಜಕೇನ ಕಾವ್ಯೇನ ಕರ್ಮಣಾ ದ್ಯಾಃ ಪೃಥಿವೀ ದ್ಯಾವಾಪೃಥಿವ್ಯೌ ನು ಕ್ಷಿಪ್ರಂ ಸುಮಿತೇ । ನಿರ್ಮಿತೇ । ಕೀದೃಶ್ಯೌ ಮಾತ್ರೇ ನಿರ್ಮಾತ್ರ್ಯೌ ಪೂರ್ವೀ ಪೂರ್ವ್ಯೌ ಮಹತ್ಯೌ । ಯಸ್ಮಾದೀದೃಶೇನ ಮಹತ್ತ್ವೇನ ಯುಕ್ತಃ ತಸ್ಮಾದ್ಘೃತವಂತೋ೨ಗ್ನಿ-ಮುಖತ್ವಾತ್ ತ್ವಾಂ ಕ್ಷರಂತೋ ದೀಪ್ತಿಮಂತೋ ವಾ ಸುಸಂಸ್ಕೃತತ್ವಾತ್ ಯದ್ವಾಜ್ಯಸಂಯುಕ್ತಾಃ ಸುತಾಸೋ೨ಭಿಷುತಾಃ ಸೋಮಾ ವರಾಯ ಶ್ರೇಷ್ಠಾಯ ತುಭ್ಯಮಿಂದ್ರಾಯ ಸ್ವಾದ್ಮನ್ ಭವಂತು । ಆಸ್ವಾದಿತಾಃ ಸಂತು । ಕಿಮರ್ಥಂ । ಪೀತಯೇ ಪಾನಾಯ । ಮಧೂನಿ ಮಧುರರಸಾತ್ಮಕಾನಿ ಪುರೋ-ಡಾಶಾದೀನ್ಯನ್ನಾನಿ ಹವೀಂಷಿ ಭಕ್ಷಣಾರ್ಥಂ ದತ್ತಾನಿ ಭವಂತು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತೇ—ನಿನ್ನ । ವಜ್ರ್ಮನಾ—ಶಕ್ತಿಯಿಂದ ಕೂಡಿದ । ಕಾವ್ಯೇನ—ಕರ್ಮದಿಂದ । ಮಾತ್ರೇ—ಜಗನ್ನಿರ್ಮಾಪಕಿಯರೂ । ಪೂರ್ವೀ—ಮಹದ್ರೂಪವುಳ್ಳವರೂ ಆದ । ದ್ಯಾಃ ಪೃಥಿವೀ—ದ್ಯಾವಾಪೃಥಿವಿಗಳಿಬ್ಬರೂ । ನು—ಕ್ಷಿಪ್ರವಾಗಿ । ಸುಮಿತೇ—ನಿರ್ಮಿತರಾಗಿದ್ದಾರೆ । ಘೃತವಂತಃ—ಆಜ್ಯದಿಂದ ಕೂಡಿದವೂ । ಸುತಾಸಃ—ಹಿಂಡಲ್ಪಟ್ಟವೂ ಆದ ಸೋಮರಸಗಳು । ವರಾಯ ತೇ—ಶ್ರೇಷ್ಠನಾದ ನಿನಗೆ । ಪೀತಯೇ—ಪಾನಾರ್ಥವಾಗಿ । ಸ್ವಾದ್ಮನ್ ಭವಂತು—ರುಚಿಕರವಾಗಿ ಅರ್ಪಿತವಾಗಲಿ । ಮಧೂನಿ—ಮಧುರವಾದ ಹವಿಸ್ಸುಗಳೂ ಅರ್ಪಿತವಾಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಶಕ್ತಿಯುತವಾದ ಕರ್ಮದಿಂದ ಜಗನ್ನಿರ್ಮಾಪಕಿಯರೂ, ಮಹದ್ರೂಪವುಳ್ಳವರೂ ಆದ ದ್ಯಾವಾಪೃಥಿವಿಗಳಿಬ್ಬರೂ ಕ್ಷಿಪ್ರವಾಗಿ ನಿರ್ಮಿತರಾಗಿದ್ದಾರೆ. ಆಜ್ಯದಿಂದ ಕೂಡಿದವೂ ಹಿಂಡಲ್ಪಟ್ಟವೂ ಆದ ಸೋಮರಸಗಳು ಶ್ರೇಷ್ಠನಾದ ನಿನಗೆ ಪಾನಾರ್ಥವಾಗಿ ರುಚಿಕರವಾಗಿ ಅರ್ಪಿತವಾಗಲಿ. ಮಧುರವಾದ ಹವಿಸ್ಸುಗಳೂ ಅರ್ಪಿತವಾಲಿ.

English Translation

By your overwhelming energy, Indra, the vast heaven and earth, the measurers (of all), have been quickly constructed: may the Soma-

libations mixed wiht ghee be acceptable to (you) who are most excellent : (may the oblations be) sweet for your drinking.

। ಸಂಹಿತಾಪಾಠಃ ।

ಆ ಮಧ್ವೋ॑ ಅಸ್ಮಾ ಅಸಿಚ॒ನ್ನಮ॑ತ್ರಮಿಂದ್ರಾ॒ಯ ಪೂರ್ಣಂ॑ ಸ ಹಿ ಸತ್ಯ-
ರಾ॑ಧಾಃ ।
ಸ ವಾ॑ವೃಧೇ ವರಿ॒ಮನ್ನಾ ಪೃ॑ಥಿ॒ವ್ಯಾ ಅ॒ಭಿ ಕ್ರತ್ವಾ॒ ನರ್ಯಃ॑ ಪೌಂಸ್ಯೈ॒ಶ್ಚ ॥೭॥

। ಪದಪಾಠಃ ।

ಆ । ಮಧ್ವಃ॑ । ಅ॒ಸ್ಮೈ॒ । ಅ॒ಸಿ॒ಚ॒ನ್ । ಅಮ॑ತ್ರಂ । ಇಂ॒ದ್ರಾ॒ಯ । ಪೂರ್ಣಂ॑ । ಸಃ । ಹಿ । ಸತ್ಯ॑ಽರಾಧಾಃ ।
ಸಃ । ವ॒ವೃ॒ಧೇ॒ । ವ॒ರಿ॒ಮನ್ । ಆ । ಪೃ॒ಥಿ॒ವ್ಯಾಃ । ಅ॒ಭಿ । ಕ್ರತ್ವಾ॑ । ನರ್ಯಃ॑ । ಪೌಂಸ್ಯೈ॑ಃ । ಚ ॥ ೭ ॥

। ಸಾಯಣಭಾಷ್ಯಂ ।

ಅಸ್ಮಾ ಇಂದ್ರಾಯೇಂದ್ರಾರ್ಥಂ ಮಧ್ವೋ ಮಧುರರಸಸ್ಯ ಸೋಮಸ್ಯ ಪೂರ್ಣಮಮತ್ರಂ ಗ್ರಹಚಮಸಾದಿಕಂ ಪಾತ್ರಮಾಸಿಚನ್ । ಅಭಿಮುಖ್ಯೇನ ಸ್ಥಿತ್ವಾ ಪರಯಾ ಭಕ್ತ್ಯಾ ಸ್ವದೀಯಾ ಋತ್ವಿಜಃ ಸಿಕ್ತವಂತಃ । ಅಗ್ನೌ ಪ್ರಕ್ಷಿಪ್ತವಂತಃ । ಹಿ ಯಸ್ಮಾತ್ಕಾರಣಾತ್ಸ ಇಂದ್ರಃ ಸತ್ಯರಾಧಾಃ ಸತ್ಯಧನಃ । ಯಜಮಾನೇಭ್ಯೋ ದಾತವ್ಯತ್ವೇನಾವಿಸಂವಾದಿಧನ ಇತ್ಯರ್ಥಃ। ತಸ್ಮಾದಸಿಚನ್ನಿತಿ ಸಂಬಂಧಃ। ಅಗ್ನಾವಾಸಿಕ್ತೇನ ತೇನ ಪಾತ್ರೇಣ ತೃಪ್ತಃ ಸ ಇಂದ್ರಃ ಪೃಥಿವ್ಯಾ ಅಂತರಿಕ್ಷಸ್ಯ ವರಿಮನ್ನತಿಶಯೇನ ವಿಸ್ತೀರ್ಣೇ ಸ್ಥಾನ ಆಗತ್ಯಾಭಿ ವವೃಧೇ। ಅಭಿವರ್ಧತೇ। ಕೀದೃಶ ಇಂದ್ರಃ। ನರ್ಯೋ ನೃಭ್ಯೋ ಹಿತಃ । ಕ್ರತ್ವಾ ವೃತ್ರವಧಾದಿಕರ್ಮಣಾ ಪ್ರಜ್ಞಾನೇನ ವಾ ಪೌಂಸ್ಯೈಶ್ಚ ಯುಕ್ತ ಇತಿ ಶೇಷಃ ॥

। ಪ್ರತಿಪದಾರ್ಥ ।

ಹಿ—ಯಾವ ಪ್ರಭಾವದಿಂದ । ಸಃ—ಇಂದ್ರನು । ಸತ್ಯರಾಧಾಃ—ಸತ್ಯಾತ್ಮಕವಾದ ಧನವುಳ್ಳವನಾಗಿರುವನೋ ಆದುದರಿಂದಲೇ । ಅಸ್ಮೈ ಇಂದ್ರಾಯ—ಈ ಇಂದ್ರನನ್ನುದ್ದೇಶಿಸಿ । ಮಧ್ವಃ—ಮಧುರವಾದ ಸೋಮರಸದಿಂದ । ಪೂರ್ಣಂ—ತುಂಬಿದ । ಅಮತ್ರಂ—ಪಾತ್ರೆಯನ್ನು । ಅಸಿಚನ್—ಅರ್ಪಿಸುತ್ತಾರೆ । ನರ್ಯಃ—ಮಾನವರಿಗೆ ಹಿತಕಾರಿಯೂ । ಕ್ರತ್ವಾ—ಉತ್ತಮವಾದ ಕರ್ಮದಿಂದಲೂ । ಪೌಂಸ್ಯೈಶ್ಚ—ಪರಾಕ್ರಮದಿಂದಲೂ ಕೂಡಿದ । ಸಃ—ಇಂದ್ರನು । ಆ ಪೃಥಿವ್ಯಾಃ—ಅಂತರಿಕ್ಷದ । ವರಿಮನ್—ವಿಸ್ತೃತವಾದ ಪ್ರದೇಶದಲ್ಲಿ । ಅಭಿ ವವೃಧೇ—ವೃದ್ಧಿಯನ್ನು ಹೊಂದುತ್ತಾನೆ.

॥ ಭಾವಾರ್ಥ ॥

ಯಾವ ಪ್ರಭಾವದಿಂದ ಇಂದ್ರನು ಸತ್ಯಾತ್ಮಕವಾದ ಧನವುಳ್ಳವನಾಗಿರುವನೋ ಆದುದರಿಂದಲೇ ಈ ಇಂದ್ರನನ್ನುದ್ದೇಶಿಸಿ ಮಧುರವಾದ ಸೋಮರಸದಿಂದ ತುಂಬಿದ ಪಾತ್ರೆಯನ್ನು ಅರ್ಪಿಸುತ್ತಾರೆ. ಮಾನವರಿಗೆ ಹಿತಕಾರಿಯೂ, ಉತ್ತಮವಾದ ಕರ್ಮದಿಂದಲೂ ಪರಾಕ್ರಮದಿಂದಲೂ ಕೂಡಿದ ಇಂದ್ರನು ಅಂತರಿಕ್ಷದ ವಿಸ್ತೃತವಾದ ಪ್ರದೇಶದಲ್ಲಿ ವೃದ್ಧಿಯನ್ನು ಹೊಂದುತ್ತಾನೆ.

English Translation

(The worshipper) have poured out the vessel full of the sweet (Soma) (into the fire) for that Indra, for he is true (to his promises) of wealth: Indra, the friend of man, (distinguished) by his actions, and his prowess, is magnified throughout the expanse of the firmament.

॥ ಸಂಹಿತಾಪಾಠಃ ॥

ವ್ಯಾನಳಿಂದ್ರಃ ಪೃತನಾಃ ಸ್ವೋಜಾ ಆಸ್ಮೈ ಯತಂತೇ ಸಖ್ಯಾಯ ಪೂರ್ವೀಃ।
ಆ ಸ್ಮಾ ರಥಂ ನ ಪೃತನಾಸು ತಿಷ್ಠ ಯಂ ಭದ್ರಯಾ ಸುಮತ್ಯಾ ಚೋದಯಾಸೇ ॥ ೮ ॥

॥ ಪದಪಾಠಃ ॥

ವಿ । ಆನಟ್ । ಇಂದ್ರಃ । ಪೃತನಾಃ । ಸುಓಜಾಃ । ಆ । ಅಸ್ಮೈ । ಯತಂತೇ । ಸಖ್ಯಾಯ । ಪೂರ್ವೀಃ।
ಆ । ಸ್ಮ । ರಥಂ । ನ । ಪೃತನಾಸು । ತಿಷ್ಠ । ಯಂ । ಭದ್ರಯಾ । ಸುಓಮತ್ಯಾ । ಚೋದಯಾಸೇ ॥ ೮ ॥

॥ ಸಾಯಣಭಾಷ್ಯಂ ॥

ಸ್ವೋಜಾ ಶೋಭನಬಲ ಇಂದ್ರಃ ಪೃತನಾಃ ಶತ್ರುಸೇನಾ ವ್ಯಾನಟ್। ವ್ಯಾಪ್ನೋತಿ । ಸ ಇಂದ್ರಃ ಸಂಗ್ರಾಮೇಷು ಕೇನಾಪ್ಯಪ್ರತಿಹನ್ಯಮಾನಃ ಸಞ್ಜಾತ್ರೂಞ್ಜಯತೀತ್ಯರ್ಥಃ । ಕಿಂಚ ಪೂರ್ವೀಃ । ಅತ್ರ ಪೂರ್ವಶಬ್ದ ಉತ್ಕೃಷ್ಟವಾಚೀ । ಉತ್ಕೃಷ್ಟಾಃ ಶತ್ರುಸೇನಾ ಅಪ್ರಭವಂತ್ಯಃ ಸತ್ಯೋಽಸ್ಮಾ ಅಸ್ಯೇಂದ್ರಸ್ಯ ಸಖ್ಯಾಯ ಸಂಧಿತ್ವಲಕ್ಷಣಾಯ ಸಖಿತ್ವಾಯಾ ಯತಂತೇ । ಸಂಧಿಂ ಕರ್ತುಮಿಚ್ಛಂತೀತ್ಯರ್ಥಃ । ಅಪರೋಽರ್ಥರ್ಚಃ ಪ್ರತ್ಯಕ್ಷಕೃತತ್ವಾದ್ಭಿನ್ನಂ ವಾಕ್ಯಂ । ಹೇ ಇಂದ್ರ ತ್ವಂ ಯಂ ಸ್ವೀಯಂ ರಥಂ ಭದ್ರಯಾ ಕಲ್ಯಾಣ್ಯಾ ಸುಮತ್ಯಾ ಶೋಭನಯಾ ಪರಾನುಗ್ರಹಯಾ ಬುದ್ಧ್ಯಾ ಚೋದಯಾಸೇ ಯಜ್ಞಾಸ್ಪತಿ

ಪ್ರೇರಯಸಿ ತಂ ರಥಮಸ್ಮದ್ಯಜ್ಞಂ ಪ್ರತ್ಯಾಗಂತಂ ಮಹತಾದರೇಣಾ ತಿಷ್ಠ। ಆರೋಹ। ತಶ್ಚೈದಸ್ಯಾಂತಃ। ಪೃತನಾಸು ಸಂಗ್ರಾಮೇಷು ರಥಂ ನ ಯಥಾ ಸ್ವರಥಂ ಮಹತಾದರೇಣಾತಿಷ್ಠಸಿ ತದ್ವತ್। ಸ್ತೋತಿ ಪದಪೂರಣಃ ॥

। ಪ್ರತಿಪದಾರ್ಥ ।

ಸ್ತೋಜಾಃ—ಉತ್ತಮವಾದ ವೀರ್ಯವುಳ್ಳ । **ಇಂದ್ರಃ**—ಇಂದ್ರನು । **ಪೃತನಾಃ**—ಶತ್ರುಸೈನ್ಯಗಳನ್ನು । **ವ್ಯಾನಟ್**—ವ್ಯಾಪಿಸುತ್ತಾನೆ । **ಪೂರ್ವೀಃ**—ಉತ್ಕೃಷ್ಟವಾದ ಶತ್ರುಸೈನ್ಯಗಳು । **ಅಸ್ಮೈ**—ಈ ಇಂದ್ರನೊಡನೆ । **ಸಖ್ಯಾಯ**—ಸಂಧಿಗಾಗಿ । **ಆ ಯತಂತೇ**—ಪ್ರಯತ್ನಿಸುತ್ತವೆ । (ಎಲೈ ಇಂದ್ರನೇ) **ಪೃತನಾಸು**—ಯುದ್ಧಗಳಲ್ಲಿ। **ರಥಂ ನ**—ನಿನ್ನ ಉತ್ತಮವಾದ ರಥವನ್ನು ಹತ್ತುವಂತೆ । **ಯಂ**—ಯಾವ ರಥವನ್ನು । **ಭದ್ರಯಾ**—ಕಲ್ಯಾಣಾತ್ಮಕವಾದುದೂ । **ಸುಮತ್ಯಾ**—ಅನುಗ್ರಹಾತ್ಮಕವಾದುದೂ ಆದ ಬುದ್ಧಿಯಿಂದ । **ಚೋದಯಾಸೇ**-ಪ್ರೇರಿಸುವೆಯೋ । ರಥಂ—ಅದೇ ರಥವನ್ನು । **ಆ ತಿಷ್ಠ**—ನಮ್ಮ ಯಜ್ಞಕ್ಕೆ ಬರಲು ಹತ್ತು.

। ಭಾವಾರ್ಥ ।

ಉತ್ತಮವಾದ ವೀರ್ಯವುಳ್ಳ ಇಂದ್ರನು ಶತ್ರುಸೈನ್ಯಗಳನ್ನು ವ್ಯಾಪಿಸುತ್ತಾನೆ. ಉತ್ಕೃಷ್ಟವಾದ ಶತ್ರುಸೈನ್ಯಗಳು ಈ ಇಂದ್ರನೊಡನೆ ಸಂಧಿಗಾಗಿ ಪ್ರಯತ್ನಿಸುತ್ತವೆ, ಎಲೈ ಇಂದ್ರನೇ, ಯುದ್ಧಗಳಲ್ಲಿ ನಿನ್ನ ಉತ್ತಮವಾದ ರಥವನ್ನು ಹತ್ತುವಂತೆ ಯಾವ ರಥವನ್ನು ಕಲ್ಯಾಣಾತ್ಮಕವಾದುದೂ, ಅನುಗ್ರಹಾತ್ಮಕವಾದುದೂ ಆದ ಬುದ್ಧಿಯಿಂದ ಪ್ರೇರಿಸುವೆಯೋ ಅದೇ ರಥವನ್ನು ನಮ್ಮ ಯಜ್ಞಕ್ಕೆ ಬರಲು ಹತ್ತಿ ಕುಳಿತುಕೊ.

English Translation

The powerful Indra reaches the hosts (of the enemy), the mightiest (hosts) exert themselves to obtain his friendship: ascend, Indra, that chariot which you direct with favourable intent (to our sacrifice), as a chariot (which you mount) against the armies (of the foe).



ಮೂವತ್ತನೆಯ ಸೂಕ್ತವು.

ಪೀಠಿಕೆ

ಈ ಸೂಕ್ತದಿಂದ ಮುಂದಿನ ಐದು ಸೂಕ್ತಗಳಿಗೆ ಇಲೂಷ ಎಂಬುವನ ಪುತ್ರನಾದ ಕವಷನೆಂಬುವನು ಋಷಿಯು. ಇವನು ಶೂದ್ರಜಾತಿಯ ದಾಸಿಯಲ್ಲಿ ಉತ್ಪನ್ನನಾದ್ದರಿಂದ ಇವನು ಶೂದ್ರನೂ ದಾಸಿಯ ಪುತ್ರನೂ ಆಗಿರುವನೆಂದು ಋಷಿಗಳೇ ಮೊದಲಾದ ಬ್ರಾಹ್ಮಣರು ಇವನೊಡನೆ ಸಾಮಾಜಿಕ ವ್ಯವಹಾರವನ್ನಿಟ್ಟುಕೊಂಡಿರಲಿಲ್ಲ. ಯಜ್ಞಶಾಲೆಗೆ ಇವನಿಗೆ ಪ್ರವೇಶವಿರಲಿಲ್ಲ. ಐತರೇಯಬ್ರಾಹ್ಮಣದಲ್ಲಿಯೂ ಕೌಷೀತಕೀ ಬ್ರಾಹ್ಮಣದಲ್ಲಿಯೂ ಒಂದು ಪೂರ್ವೇತಿಹಾಸವಿದೆ. ಅದನ್ನು ಇಲ್ಲಿ ವಿವರಿಸಿದೇನೆ—

ಐತರೇಯಬ್ರಾಹ್ಮಣದಲ್ಲಿರುವ ವಿವರಣೆ

ಋಷಯೋ ವೈ ಸರಸ್ವತ್ಯಾಂ ಸತ್ರಮಾಸತ ತೇ ಕವಷಮೈಲೂಷಂ ಸೋಮಾದನಯನ್ದಾಸ್ಯಾಂ ಪುತ್ರಃ ಕಿತವೋಽಬ್ರಾಹ್ಮಣಃ ಕಥಂ ನೋ ಮಧ್ಯೇಽದೀಕ್ಷಿಷ್ಟೇತಿ ತಂ ಬಹಿರ್ಧನ್ವೋದವಹನ್ನ-ತ್ಯೈನಂ ಪಿಪಾಸಾ ಹಂತು ಸರಸ್ವತ್ಯಾ ಉದಕಂ ಮಾ ಪಾದಿತಿ ಸ ಬಹಿರ್ಧನ್ವೋದೂಹ್ಯಳಃ ಪಿಪಾಸಯಾ ವಿತ್ತ ಏತದಪೋನಪ್ತ್ರೀಯಮುಪಶೃತ್ಪ ದೇವತ್ರಾ ಬ್ರಹ್ಮಣೇ ಗಾತುರೇತ್ವಿತಿ ತೇನಾಪಾಂ ಪ್ರಿಯಂ ಧಾಮೋಪಾಗಚ್ಛತ್ತಮಾಪೋಽನೂದಾಯಂಸ್ತಂ ಸರಸ್ವತೀ ಸಮುಂತಂ ಪರ್ಯಧಾವತ್ ॥ (ಐ. ಬ್ರಾ. ೮-೧೯)

ಪೂರ್ವದಲ್ಲಿ ಭೃಗುಗಳು, ಅಂಗಿರಸರು ಮೊದಲಾದ್ದಕೆಲವು ಋಷಿಗಳು ಸರಸ್ವತೀನದಿಯ ತೀರದಲ್ಲಿ ಸತ್ರಯಾಗವನ್ನು ಮಾಡುತ್ತಿದ್ದರು. ಸತ್ರಯಾಗವೆಂದರೆ ಹನ್ನೆರಡು ದಿನಗಳಿಗೆ ಕಮ್ಮಿ ಇಲ್ಲದೆ ಹದಿಮೂರು ಹದಿನಾಲ್ಕು ಇತ್ಯಾದಿ ಹೆಚ್ಚು ದಿನಗಳವರೆಗೆ ನಡೆಯುವ ಯಾಗವಿಶೇಷವು. ಈ ವಿಧವಾದ ಯಾಗದಲ್ಲಿ ಅನೇಕ ಯಜಮಾನರಿರುವರು ಎಂದರೆ ಅನೇಕರು ಒಟ್ಟಾಗಿ ಸೇರಿ ಈ ಯಾಗವನ್ನು ಮಾಡುವರು. ಆ ಯಜ್ಞವೇದಿಯಲ್ಲಿ ಭೃಗುಗಳು, ಅಂಗಿರಸರು ಮೊದಲಾದ ಅನೇಕ ಋಷಿಗಳು ಸೇರಿದ್ದರು. ಅವರ ಮಧ್ಯದಲ್ಲಿ ಇಲೂಷನೆಂಬುವನ ಪುತ್ರನಾದ ಕವಷನೆಂಬುವನೂ ಕೂತಿದ್ದನು. ಇವನು ಜಾತಿಯಲ್ಲಿ ಶೂದ್ರನು ಮತ್ತು ದಾಸಿಯ ಪುತ್ರನು. ಇವನು ತಮ್ಮ ಮಧ್ಯದಲ್ಲಿ ಬಂದು ಕುಳಿತಿರುವುದನ್ನು ಋಷಿಗಳು ನೋಡಿ—ಇದೇನು, ದಾಸಿಯ ಪುತ್ರನೂ ಜೂಜುಗಾರನೂ ಆದ ಈ ಕವಷನು ಇಲ್ಲಿಗೆ ಬಂದು ನಮ್ಮ ಮಧ್ಯದಲ್ಲಿ ಕುಳಿತುಕೊಳ್ಳುವುದೆಂದರೇನು? ಇವನು ಬ್ರಾಹ್ಮಣನಲ್ಲ. ಬ್ರಾಹ್ಮಣನಲ್ಲದವನು ಶಿಷ್ಟಾಚಾರಸಂಪನ್ನರಾದ ಋಷಿಗಳ ಮಧ್ಯದಲ್ಲಿ ಬಂದು ಕುಳಿತು ಯಜ್ಞಯಾಗಾದಿಗಳ, ವಿಧಿನಿಯಮಾದಿಗಳ ರಹಸ್ಯವನ್ನು ಅರಿಯುವುದುಂಟೇ? ಇದು ಲೋಕವಿರುದ್ಧವು ಎಂದು ಹೇಳಿ ಆ ಕವಷನನ್ನು ಬಲವಂತದಿಂದ ಯಜ್ಞಶಾಲೆಯಿಂದಾಚೆಗೆ ಹೋಗುವಂತೆ ಹೊಡೆದಟ್ಟಿದರು. ಮತ್ತು ಪವಿತ್ರವಾದ ಈ ಸರಸ್ವತೀನದಿಯ ಜಲವನ್ನು ಪಾನಮಾಡಲು ಈ ಪಾಪಿಷ್ಠನು ಅರ್ಹನಲ್ಲವೆಂದು ಬಗೆದು ಅವನನ್ನು ಸರಸ್ವತೀನದಿಯಿಂದ ಬಹುದೂರ ಪ್ರದೇಶದಲ್ಲಿರುವ ನೀರೂ, ನೆರಳಿಲ್ಲದ ಒಂದು ಮರಳು ಕಾಡಿಗೆ ಬಲವಂತದಿಂದ ಕೊಂಡೊಯ್ದು ಅಲ್ಲಿ ಬಾಯಾರಿಕೆಯಿಂದ ಇವನು ಸಾಯಲಿ ಎಂದು ಅವನನ್ನು ಅಲ್ಲಿ ಬಿಟ್ಟು ಬಂದರು. ನೀರೂ ನೆರಳೂ ಇಲ್ಲದ ಆ ಮರಳ್ಗಾಡಿನಲ್ಲಿ ಕವಷನು ಬಾಯಾರಿಕೆಯಿಂದ ಒಳಲಿ ಬೆಂಡಾಗಿ ವ್ಯಥೆಪಡುತ್ತಿದ್ದಾಗ **ಪ್ರ ದೇವತ್ರಾ ಬ್ರಹ್ಮಣೇ** (ಋ. ಸಂ. ೧೦-೩೦) ಎಂಬ ಸೂಕ್ತವು ಇವನಿಗೆ ಗೋಚರಿಸಿತು. ಆಗ ಅವನು ಆ ಮಂತ್ರವನ್ನು ಜಪಮಾಡಲಾಗಿ ಜಲಾಭಿಮಾನಿದೇವತೆಗಳ ಅನುಗ್ರಹದಿಂದ ಜಲಸಮೃದ್ಧಿಯಿಂದಕೂಡಿದ ಒಂದು ಪ್ರದೇಶವು ಇವನಿಗೆ ಗೋಚರವಾಯಿತು. ಅಲ್ಲಿಗೆ ಇವನು ಹೋದಕೂಡಲೇ ಜಲಾಭಿಮಾನಿದೇವತೆಗಳೂ ಸರಸ್ವತೀನದಿಯೂ ಇವನನ್ನು ಅನುಗ್ರಹಾತ್ಮಕದೃಷ್ಟಿಯಿಂದ ಸ್ವಾಗತಿಸಿ ಇವನ ಸುತ್ತಲೂ ಪ್ರವಾಹೋದಕದಿಂದ ವ್ಯಾಪಿಸಿದರು.

ತಸ್ಮಾದ್ಧಾಪ್ಯೇತರ್ಹಿ ಪರಿಸಾರಕಮಿತ್ಯಾಚಕ್ಷತೇ ಯದೇನಂ ಸರಸ್ವತೀ ಸಮುಂತಂ ಪರಿಸಸಾರ ।

ಈ ರೀತಿ ಸರಸ್ವತೀನದಿಯು ತನ್ನ ಪ್ರವಾಹದಿಂದ ಈ ಕವಷನನ್ನು ಸುತ್ತುವರೆದ ಪ್ರದೇಶವನ್ನು ಪರಿಸಾರಕವೆಂಬ ಶ್ರೇಷ್ಠವಾದ ತೀರ್ಥವಿಶೇಷವೆಂದು ಪುರಾಣಾಭಿಜ್ಞರು ಹೇಳುವರು. ಏಕೆಂದರೆ, ಈ ಕವಷನ ಸುತ್ತಲೂ ಸರಸ್ವತಿಯು ವ್ಯಾಪಿಸಿದ್ದರಿಂದ (ಏನಂ ಪರಿಸಸಾರ) ಈ ಸ್ಥಾನಕ್ಕೆ ಪರಿಸಾರಕವೆಂಬ ಹೆಸರು ಅನ್ವರ್ಥನಾಮವಾಯಿತು ಎಂದಭಿಪ್ರಾಯವು.

ತೇ ವಾ ಋಷಯೋ೭ಬ್ರುವನ್ವಿದುರ್ವಾ ಇಮಂ ದೇವಾ ಉಪೇಮಂ ಹ್ವಯಾಮಹಾ ಇತಿ ತಥೇತಿ ತಮುಪಾಹ್ವಯಂತ ತಮುಹೂಯೈತದಪೋನಪ್ತ್ರೀಯಮಕುರ್ವತ ಪ್ರ ದೇವತ್ರಾ ಬ್ರಹ್ಮಣೇ ಗಾತುರೇತ್ಯಿತಿ ತೇನಾಪಾಂ ಪ್ರಿಯಂ ಧಾಮೋಪಾಗಚ್ಛನ್ನುಪದೇವಾನಾಂ ।

ಸರಸ್ವತೀನದಿಯು ತನ್ನ ಪ್ರವಾಹದಿಂದ ಕವಷನನ್ನು ಸುತ್ತುಗಟ್ಟಿ ಅವನಿಗೆ ಅನುಗ್ರಹಮಾಡಿದುದನ್ನು ಋಷಿಗಳು ನೋಡಿ ತಮ್ಮತಮ್ಮಲ್ಲಿ ಇಂತೆಂದರು ಈ ಕವಷನು ಸರಸ್ವತಿಯೇ ಮೊದಲಾದ ಜಲಾಭಿಮಾನಿ ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿರುವನು. ಇವನಲ್ಲಿ ಜೂಜುಗಾರನ ದೋಷಗಳಾವುವೂ ಇದ್ದಂತೆ ಕಾಣುವುದಿಲ್ಲ. ಅವನನ್ನು ನಮ್ಮ ಬಳಿಗೆ ಬರುವಂತೆ ಹಿಂದಕ್ಕೆ ಕರೆಯೋಣ ಎಂದು ನಿಶ್ಚಯಿಸಿ ಆ ಕವಷನನ್ನು ಹಿಂದಕ್ಕೆ ಬರುವಂತೆ ಕರೆದರು. ಮತ್ತು ಅವನಿಂದ ದೃಷ್ಟವಾದ ಪ್ರ ದೇವತ್ರಾ ಬ್ರಹ್ಮಣೇ ಎಂಬ ಸೂಕ್ತವನ್ನೂ ಅಪೋನಪ್ತ್ರೀಯವೆಂಬ ಕರ್ಮವನ್ನೂ ಸಾಂಗ ಗೊಳಿಸಿ ಜಲದೇವತೆಗಳ ಮತ್ತು ಇತರ ದೇವತೆಗಳ ಪ್ರಿಯಸ್ಥಾನವನ್ನು ಎಂದರೆ ಅನುಗ್ರಹವನ್ನು ಸಂಪಾದಿಸಿದರು.

ಉಪಾಪಾಂ ಪ್ರಿಯಂ ಧಾಮ ಗಚ್ಛತ್ಯುಪ ದೇವಾನಾಂ ಜಯತಿ ಪರಮುಂ ಲೋಕಂ ಯ ಏವಂ ವೇದ ಯಶ್ಚೈವಂ ವಿದ್ವಾನೇತದಪೋನಪ್ತ್ರೀಯಂ ಕುರುತೇ ।

(ಐ. ಬ್ರಾ. ೪-೧೯)

ಯಾವ ಪುರುಷನು ಮೇಲೆ ಹೇಳಿದ ವಿಷಯಗಳನ್ನು ತಿಳಿದುಕೊಂಡು ಅಪೋನಪ್ತ್ರೀಯವೆಂಬ ಕರ್ಮವನ್ನು ಸಾಂಗ ಗೊಳಿಸುವನೋ ಆ ಪುರುಷನು ದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿ ಉತ್ತಮವಾದ ಲೋಕವನ್ನು ಸೇರೆಯುವನು.

ಕೌಷೀತಕೀಬ್ರಾಹ್ಮಣದಲ್ಲಿಯೂ ಈ ಕವಷನ ವಿಷಯವು ವರ್ಣಿತವಾಗಿರುವುದನ್ನು ಇಲ್ಲಿ ಸೂಕ್ಷ್ಮವಾಗಿ ವಿವರಿಸಿದೇವೆ—

(ಕೌಷೀತಕೀಬ್ರಾಹ್ಮಣದ ವಿವರಣೆ)

ಮಾಧ್ಯಮಾಃ ಸರಸ್ವತ್ಯಾಂ ಸತ್ರಮಾಸತ ತದ್ಧಾಪಿ ಕವಷೋ ಮಧ್ಯೇ ನಿಷಸಾದ । ತಂ ಹೇಮ ಉಪೋದುರ್ದಾಸ್ಯಾ ವೈ ತ್ವಂ ಪುತ್ರೋ೭ಸಿ ನ ವಯಂ ತ್ವಯಾ ಸಹ ಭಕ್ಷಯಿಷ್ಯಾಮ ಇತಿ ಸಹ ಕ್ರುದ್ಧಃ ಪ್ರದ್ರವನ್ತ್ಸರಸ್ವತೀಮೇತೇನ ಸೂಕ್ತೇನ ತುಷ್ಟಾವ । ತಂ ಹೇಯಮನ್ವೇಯಾಯ ತ ಉ ಹೇಮೇ ನಿರಾಗಾ ಇವ ನೇನಿರೇ ತಂ ಹಾನ್ವಾವೃತ್ಯೋಚುರ್ಯಜೇ ನಮಸ್ತೇ ಅಸ್ತು ಮಾ ನೋ ಹಿಂಸೀಸ್ತ್ವಂ ವೈ ನಃ ಶ್ರೇಷ್ಠೋ೭ಸಿ ಯಂ ತ್ವೇಯಮನ್ವೇತೀತಿ । ತಂ ಹ ಯಜ್ಞಪಯಾಂ ಚಕ್ರುಸ್ತಸ್ಯ ಹ ಕ್ರೋಧಂ ವಿನಿನ್ಯುಃ । ಸ ಏಷ ಕವಷಸ್ಯೈಷ ಮಹಿಮಾ ಸೂಕ್ತಸ್ಯ ಚಾನುವೇದಿತಾ ॥ (ಕೌ. ಬ್ರಾ. ೧೨ ೩)

ಪೂರ್ವದಲ್ಲಿ ಮಾಧ್ಯಮರೆಂಬ ಋಷಿಗಳು ಸರಸ್ವತೀನದಿಯ ದಡದಲ್ಲಿ ಸತ್ರಯಾಗವನ್ನು ಮಾಡುತ್ತಿದ್ದರು. ಇಲ್ಲಿ ಮಾಧ್ಯಮರು ಎಂದರೆ ಋಗ್ವೇದದಲ್ಲಿರುವ ೧೦ ಮಂಡಲಗಳಲ್ಲಿ ಮೊದಲನೆಯ ಮಂಡಲವನ್ನೂ, ಕೊನೆಯ ೯, ೧೦ನೇ ಮಂಡಲಗಳನ್ನು ಬಿಟ್ಟರಿ ಮಧ್ಯದಲ್ಲಿರುವ ೭ ಮಂಡಲಗಳಲ್ಲಿರುವ ಸೂಕ್ತಗಳಿಗೆ ದ್ರಷ್ಟೃಗಳಾದ ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭರದ್ವಾಜ, ವಸಿಷ್ಠ ಎಂಬ ಋಷಿಗಳು ಮತ್ತು ಅವರ ವಂಶಜರಾದ ಋಷಿಗಳು ಎಂದರ್ಥವು ಈ ಋಷಿಗಳು ಸರಸ್ವತೀನದೀತೀರದಲ್ಲಿ ಯಜ್ಞಮಾಡುತ್ತಿದ್ದಾಗ ಅವರ ಮಧ್ಯದಲ್ಲಿ ಕವಷನೆಂಬವನು ಬಂದು

ಕುಳಿತಿದ್ದನು. ಅವನನ್ನು ನೋಡಿ ಋಷಿಗಳು ಕೋಪದಿಂದ—ಎಲೈ ಕವಷನೇ, ನೀನು ದಾಸಿಯ ಪುತ್ರನು, ಬ್ರಾಹ್ಮಣನಲ್ಲ. ನಿನ್ನ ಜತೆಯಲ್ಲಿ ಕುಳಿತು ನಾವು ಏನನ್ನೂ ತಿನ್ನುವುದಿಲ್ಲ ಮತ್ತು ಪಾನಮಾಡುವುದಿಲ್ಲ. ಆದ್ದರಿಂದ ನೀನು ಈ ಪ್ರದೇಶವನ್ನು ಬಿಟ್ಟು ಹೊರಟುಹೋಗು ಎಂದು ಗದರಿಸಿದರು ಆ ಮಾತನ್ನು ಕೇಳಿ ಕವಷನು ಕೋಪದಿಂದ ಆ ಸ್ಥಳವನ್ನು ಬಿಟ್ಟಿದ್ದು ಸರಸ್ವತೀನದಿಯ ಬಳಿಗೆ ಓಡಿಹೋಗಿ ಆ ದೇವತೆಯನ್ನು ಪ್ರ ದೇವತ್ರಾ ಬ್ರಹ್ಮಣೇ ಎಂಬ ಈ ಸೂಕ್ತದಿಂದ ಸ್ತುತಿಸಿ ಆ ದೇವತೆಯ ಅನುಗ್ರಹವನ್ನು ಪಡೆದನು. ಸರಸ್ವತಿಯು ಅವನ ಸ್ತುತಿಯಿಂದ ಸಂತುಷ್ಟಳಾಗಿ ಅವನು ಹೋದ ಕಡೆಯಲ್ಲೆಲ್ಲಾ ಅವನನ್ನೇ ಅನುಸರಿಸಿ ಹೋಗುತ್ತಿದ್ದಳು. ಇದನ್ನು ನೋಡಿ ಋಷಿಗಳು—ಇವನು ದೋಷಯುಕ್ತನಲ್ಲ, ಆದ್ದರಿಂದ ಇವನನ್ನು ಹಿಂದಕ್ಕೆ ಕರೆಯೋಣ ಎಂದು ಯೋಚಿಸಿ ಅವನ ಬಳಿಗೆ ಹೋಗಿ ಎಲೈ ಕವಷನೇ, ಇಗೋ ನಿನಗೆ ನಮಸ್ಕಾರವು, ನೀನು ಋಷಿಗಳಾದ ನಮ್ಮಲ್ಲಿ ಶ್ರೇಷ್ಠನಾಗಿರುವೆ. ನಾವು ಮಾಡಿದ ಅಪರಾಧವನ್ನು ಕ್ಷಮಿಸು, ನಮ್ಮನ್ನು ಹಿಂಸಿಸಬೇಡ ಸರಸ್ವತೀನದಿಯೂ ನಿನ್ನನ್ನು ಹಿಂಬಾಲಿಸುತ್ತಿರುವಳು. ನಿನ್ನಲ್ಲಿ ಯಾವ ದೋಷವೂ ಇಲ್ಲ. ಎಂದು ನಾನಾವಿಧವಾಗಿ ಪ್ರಾರ್ಥಿಸಿ ಅವನನ್ನು ತಮ್ಮ ಯಜ್ಞಾದಲ್ಲಿ ನೇತೃವನ್ನಾಗಿಮಾಡಿ ಅವನ ಕೋಪವನ್ನು ಸಮಾಧಾನಮಾಡಿದರು. ಇವೇ ಕವಷಋಷಿಯ ಮಾಹಾತ್ಮ್ಯಯು ಮತ್ತು ಈ ಋಷಿಯಿಂದಲೇ ಈ ಪ್ರ ದೇವತ್ರಾ ಬ್ರಹ್ಮಣೇ ಎಂಬ ಈ ಸೂಕ್ತವು ದೃಷ್ಟವಾಗಿ ಪ್ರಸಿದ್ಧವಾಗಿರುವುದು.

ಈ ಕವಷಋಷಿಗೆ ಈ ಸೂಕ್ತವು ಹೇಗೆ ಗೋಚರಿಸಿತೆಂಬ ವಿಷಯದಲ್ಲಿ ಕೌಷೀತಕೀಬ್ರಾಹ್ಮಣವಲ್ಲಿಯೇ ಹೀಗೆ ಹೇಳಿದೆ—

> ತದ್ಧ ಸ್ಮ ಪುರಾ ಯಜ್ಞಮುಖೋ ರಕ್ಷಾಂಸಿ ತೀರ್ಥೇಷ್ವಪೋ ಗೋಪಾಯಂತಿ । ತದೇಕೇऽಪೋऽಜ್ಞ ಜಗ್ಮುಸ್ತತ ಏವ ತಾನ್ ಸರ್ವಾನ್ ಜಘ್ನುಸ್ತ ಏವ ತತ್ ಕವಷಃ ಸೂಕ್ತಮುಪಶ್ಯತ್ಪಂಚದಶರ್ಚಂ ಪ್ರ ದೇವತ್ರಾ ಬ್ರಹ್ಮಣೇ ಗಾತುರೇತ್ಯಿತಿ ತದನ್ವಬ್ರವೀತ್ತೇನ ಯಜ್ಞಮುಖೋ ರಕ್ಷಾಂಸಿ ತೀರ್ಥೇಭ್ಯೋऽಪಾಹನ್ ॥

ಪೂರ್ವದಲ್ಲಿ ರಾಕ್ಷಸರು ಯಜ್ಞಾದಿಗಳಿಗೆ ವಿಘ್ನವನ್ನುಂಟುಮಾಡುತ್ತಾ, ಸ್ನಾನಾರ್ಥವಾಗಿ ನದಿಗಳಿಗೆ ಹೋಗುವ ಜನರನ್ನು ಕೊಲ್ಲುತ್ತಿದ್ದರು. ಮಂತ್ರದ್ರಷ್ಟೃವಾದ ಕವಷನು ಈ ಸೂಕ್ತವನ್ನು ತನ್ನ ಜ್ಞಾನದೃಷ್ಟಿಯಿಂದ ಕಂಡು ಅವನ್ನು ಪಠಿಸಿದನು. ಆ ಮಂತ್ರಪಠನದಿಂದ ನದಿಯ ಸಮೀಪದಲ್ಲಿದ್ದ ರಾಕ್ಷಸರನ್ನು ಅಲ್ಲಿಂದ ಓಡಿಸಿ ಅವರನ್ನು ನಾಶಮಾಡಿದನು. ಎಂದು ಹೇಳಿದೆ.

ಅಪೋನಪ್ತ್ರೀಯವೆಂಬ ಕರ್ಮ

ಈ ಸೂಕ್ತದ ಋಕ್ಕುಗಳನ್ನು ಪಯೋಗಿಸಿ ಅಪೋನಪ್ತ್ರೀಯವೆಂಬ ಯಜ್ಞಾಂಗಕರ್ಮವನ್ನು ಆಚರಿಸುವರು. ಅಪೋನಪ್ತ್ರೀಯವೆಂದರೆ ವಸತೀವರೀ ಎಂಬ ಪಾತ್ರೆಯಲ್ಲಿರುವ ನೀರನ್ನೂ ಏಕಧನಾ ಎಂಬ ಮತ್ತೊಂದು ಪಾತ್ರೆಯಲ್ಲಿರುವ ನೀರನ್ನು ವಿಧ್ಯುಕ್ತವಾಗಿಯೂ ಮಂತ್ರಪೂರ್ವಕವಾಗಿಯೂ ಸೇರಿಸುವುದು.

ಹೋತೃವು ಪ್ರಾತರನುವಾಕಮಂತ್ರಗಳನ್ನು ಪಠಿಸಿದನಂತರ ಅಧ್ವರ್ಯುವು ಹೋತೃವನ್ನುದ್ದೇಶಿಸಿ—ಪರಿಹಿತೇऽಪ ಇಷ್ಯ ಹೋತಃ ಎಂಬ ಪ್ರೈಷಮಂತ್ರದಿಂದ ನಿರ್ದೇಶಿಸುವನು. ಅದಕ್ಕೆ ಪ್ರತ್ಯುತ್ತರವಾಗಿ ಹೋತೃವು—ಅಪೋನಪ್ತ್ರೀಯಾ ಅನ್ವಾಹ ಎಂದು ಹೇಳುವನು. ಅನಂತರ ಅಧ್ವರ್ಯುವು ಪ್ರೈಷಮಂತ್ರಗಳ ಮೂಲಕ

ಚಮಸಾಧ್ವರ್ಯು, ಮೈತ್ರಾವರುಣ, ಏಕಧನಾಪಾತ್ರೀಯನ್ನು ಧರಿಸಿರುವವರು ಇವರನ್ನು ಬರುವಂತೆ ಹೇಳುವನು. ಯಜಮಾನನ ಪತ್ನಿಯನ್ನು ಕರೆತರುವಂತೆ ನೇಷ್ಟೃವಿಗೆ ನಿರ್ದೇಶಿಸುವನು. ಎಲೈ ಆಗ್ನಿಧ್ರನೇ, ಹೋತೃವಿನ ಚಮಸವನ್ನೂ ಪಸತೀವರೀಕಲಶವನ್ನೂ ಚಾತ್ವಾಲದಲ್ಲಿ ಪರಸ್ಪರಾಭಮುಖವಾಗುವಂತೆ ಇರಿಸು ಎಂದು ಹೇಳುವನು. ಅನಂತರ ಚಮಸಾಧ್ವರ್ಯುವು ಚಮಸವನ್ನು ತರುವನು. ಏಕಧನಾಪಾತ್ರೀಯನ್ನು ಹಿಡಿದಿರುವವರು ಮೂರು ಪಾತ್ರೆಗಳನ್ನು ತರುವರು. ಅನಂತರ ಅಧ್ವರ್ಯುವು ಆ ಮೂರು ಪಾತ್ರೆಗಳಲ್ಲಿಯೂ ಒಂದೊಂದು ದರ್ಭೆಯನ್ನು ಹಾಕಿ ಶುದ್ಧಿಗೊಳಿಸುವನು. ನೇಷ್ಟೃವು ಯಜಮಾನನ ಪತ್ನಿಯನ್ನು ಕರೆತರುವನು. ಆಕೆಯು ತನ್ನ ಕೈಯಲ್ಲಿ ಒಂದು ಪಾತ್ರೆಯನ್ನು ಹಿಡಿದುಕೊಳ್ಳುವಳು. ಅನಂತರ ಅಧ್ವರ್ಯುವು ಎಲ್ಲಾ ಪಾತ್ರೆಗಳಲ್ಲಿಯೂ ಒಂದೊಂದು ಕುಶವನ್ನಿಟ್ಟು **ದೇವೀರಾಪ** ಎಂಬ ಮಂತ್ರವನ್ನು ಪಠಿಸಿ ನಾಲ್ಕು ಸ್ರುವಗಳ ತುಂಬ ಆಜ್ಯವನ್ನು ಸುರಿದು ಹೋಮಮಾಡುವನು. ಬಳಿಕ ಅಧ್ವರ್ಯುವು ಹೋತೃ ಮತ್ತು ಮೈತ್ರಾವರುಣರ ಚಮಸಗಳನ್ನು ಏಕಧನಾಪಾತ್ರೀಯ ಉದಕಸಹಿತವಾಗಿ ವಸತೀವರೀ ಕಲಶದ ಸಮೀಪಕ್ಕೆ ತಂದು ಅದರ ನೀರನ್ನು ಹೋತೃವಿನ ಚಮಸಪಾತ್ರೆಗೂ ಅದರಿಂದ ಮೈತ್ರಾವರುಣನ ಪಾತ್ರೆಗೂ ಪುನಃ ಮೈತ್ರಾವರುಣರ ಪಾತ್ರೆಯಿಂದ ಹೋತೃವಿನ ಚಮಸಕ್ಕೂ ಸುರಿಯುವನು. ಹೋತೃವಿನ ಚಮಸಕ್ಕೆ ನೀರನ್ನು ಸುರಿಯುವಾಗ ಹೋತೃವು ಅಧ್ವರ್ಯವನ್ನುದ್ದೇಶಿಸಿ **ಅವೇರಾಪೋ೨ಧ್ವರ್ಯೋ ಽ ಉ** ಎಂದು ಮೂರಾವರ್ತಿ ಕೇಳುವನು. ಅದಕ್ಕೆ ಅಧ್ವರ್ಯುವು **ಉತೇಮುನನ್ನಮುಃ (ಉತೇಮಾಃ ಪಶ್ಯ)** ಎಂದು ಪ್ರತ್ಯುತ್ತರವನ್ನು ಹೇಳುವನು. ಅನಂತರ ಹೋತೃವು ಆ ಉದಕಗಳನ್ನುದ್ದೇಶಿಸಿ ಪ್ರತ್ಯುತ್ಥಾಪನಪನ್ನು ಮಾಡುವನು

ಈ ಅಪೋನಪ್ತ್ರೀಯವೆಂಬ ಕರ್ಮವಿಧಾನವು ಐತರೇಯಬ್ರಾಹ್ಮಣದಲ್ಲಿಯೂ, ತೈತ್ತಿರೀಯಸಂಹಿತೆಯಲ್ಲಿಯೂ ಪ್ರತ್ಯೇಕವಾಗಿ ಹೇಳಲ್ಪಟ್ಟಿರುವುದು. ತೈತ್ತಿರೀಯಸಂಹಿತೆಯಲ್ಲಿ ಅಧ್ವರ್ಯುವು ಆಚರಿಸಬೇಕಾದ ಕ್ರಮವೂ, ಐತರೇಯ ಬ್ರಾಹ್ಮಣದಲ್ಲಿ ಹೋತೃವು ಪರಿಸಬೇಕಾದ ಮಂತ್ರಗಳೂ ಹೇಳಲ್ಪಟ್ಟಿರುವವು ಹೋತೃವು ಪರಿಸಬೇಕಾದ ಮಂತ್ರಗಳೆಲ್ಲ ಋಗ್ವೇದಕ್ಕೆ ಸಂಬಂಧಪಟ್ಟಿರುವುದರಿಂದ ಇಲ್ಲಿ ಐತರೇಯಬ್ರಾಹ್ಮಣದಲ್ಲಿ ಹೇಳಿರುವ ಕ್ರಮವನ್ನು ಮಾತ್ರ ವಿವರಿಸುತ್ತೇವೆ

ಅಪೋನಪ್ತ್ರೀಯವೆಂಬ ಕರ್ಮದ ವಿವರಣೆ

(ಐತರೇಯಬ್ರಾಹ್ಮಣದಲ್ಲಿರುವಂತೆ)

ಪ್ರಾತರನುವಾಕಪಠನಾನಂತರ ಅಧ್ವರ್ಯುವು ಹೋತೃವನ್ನುದ್ದೇಶಿಸಿ ಪ್ರೈಷಮಂತ್ರದಿಂದ ನಿರ್ದೇಶಿಸಿದ ಕೂಡಲೆ ಹೋತೃವು ಅಪೋನಪ್ತ್ರೀಯಸಂಬಂಧವಾದ ಮಂತ್ರಗಳನ್ನು ಪರಿಸುವನು. ಈ ಮಂತ್ರಪಠನದಲ್ಲಿ ಒಂದು ಕ್ರಮವನ್ನು ಅನುಸರಿಸಬೇಕು. ಅದನ್ನು ಇಲ್ಲಿ ಹೇಳಲಾಗಿದೆ.

ತತ್ಸಂತತಮನುಬ್ರೂಯಾತ್ । ಸಂತತವರ್ಷೀಹ ಪ್ರಜಾಭ್ಯಃ ಪರ್ಜನ್ಯಾ ಭವತಿ ಯತ್ರೈವಂ ವಿದ್ವಾನೇತತ್ಸಂತತಮನ್ವಾಹ ಯದವಗ್ರಾಹಮನುಬ್ರೂಯಾಜ್ಜೀವನೂತವರ್ಷೀಹ ಪ್ರಜಾಭ್ಯಃ ಪರ್ಜನ್ಯಃ ಸ್ಯಾತ್ತತ್ಸಾತ್ಸಂತತಮೇವಾನೂಚ್ಯಂ । ತಸ್ಯ ತ್ರಿಃ ಪ್ರಥಮಾಂ ಸಂತತಮನ್ವಾಹ ತೇನೈವ ತತ್ಸರ್ವಂ ಸಂತತಮನೂಕ್ತಂ ಭವತಿ ॥ (ಐ. ಬ್ರಾ ೪ ೧೯)

ಆಪೋನಪ್ತ್ರೀಯವೆಂಬ ಈ ಕರ್ಮದಲ್ಲಿ ಪಠಿಸಬೇಕಾದ **ಪ್ರ ದೇವತ್ರಾ ಬ್ರಹ್ಮಣೇ** ಎಂಬ ಸೂಕ್ತದ ಮಂತ್ರಗಳನ್ನು ಪಠಿಸುವಾಗ ಎಲ್ಲಿಯೂ ಮಧ್ಯದಲ್ಲಿ ನಿಲ್ಲಿಸದೆ ಒಂದೇಸಮನೆ ಧಾರಾಕಾರವಾಗಿ ಪಠಿಸಬೇಕು. ಹೀಗೆ ಪಠಿಸಿದರೆ ಪರ್ಜನ್ಯ

ದೇವನು ಸಂತತವಾಗಿ ಪ್ರಜೆಗಳಿಗೆ ಉಪಕಾರವಾಗುವಂತೆ ವೃಷ್ಟಿಯನ್ನು ಸುರಿಸುವನು. ಹಾಗಲ್ಲದೆ ಋಕ್ಕುಗಳನ್ನು ಪಾದಗಳಲ್ಲಿ ಅಥವಾ ಅರ್ಧಋಕ್ಕುಗಳಲ್ಲಿ, ಅಥವಾ ಋಕ್ಕುಗಳ ಅಂತ್ಯದಲ್ಲಿ ನಿಲ್ಲಿಸಿ ನಿಲ್ಲಿಸಿ ಪಠಿಸಿದರೆ ಪರ್ಜನ್ಯನು ವೃಷ್ಟಿಯನ್ನು ಯಾರಿಗೂ ಉಪಯೋಗವಿಲ್ಲದಂತೆ ಪರ್ವತಾದಿಗಳ್ಮೇಲೆ ಸುರಿಸುವನು. ಸಸ್ಯಾದಿಗಳ ಮೇಲೆ ಸುರಿಸುವುದಿಲ್ಲ. ಆದ್ದರಿಂದ ಈ ಸೂಕ್ತವನ್ನು ಮಧ್ಯೆ ಎಲ್ಲಿಯೂ, ನಿಲ್ಲಿಸದೆ ಕೊನೆಯವರೆಗೂ ಒಂದೇಸಮನಾಗಿ ಪಠಿಸಬೇಕು. ಆದರೆ ಈ ಸೂಕ್ತದಲ್ಲಿರುವ ಎಲ್ಲಾ ಋಕ್ಕುಗಳನ್ನು ಮಧ್ಯದಲ್ಲಿ ನಿಲ್ಲಿಸುವಂತೆ ಪಠಿಸುವುದು ಅಸಾಧ್ಯವಲ್ಲವೇ ಎಂದರೆ, ಆರೀತಿ ಮಾಡುವುದಕ್ಕೆ ಬದಲಾಗಿ ಈ ಸೂಕ್ತದ ಮೊದಲನೆಯ ಋಕ್ಕನ್ನು ಸ್ವಲ್ಪವೂ ನಿಲ್ಲಿಸದಂತೆ ಮೂರಾವರ್ತಿ ಪಠಿಸಿದಲ್ಲಿ ಸೂಕ್ತವನ್ನೇ ನಿಲ್ಲಿಸದೆ ಪಠಿಸಿದಂತಾಗುವುದು.

ತಾ ಏತಾ ನವಾನಂತರಾಯಮುನ್ವಾಹ । ಹಿನೋತಾ ನೋ ಅಧ್ವರಂ ದೇವಯಜ್ಯೇತಿ ದಶಮಿಾಂ । ಅನವರ್ಮತೀರಧ ನು ದ್ವಿಧಾರಾ ಇತ್ಯಾವೃತ್ತಾಸ್ವೇಕಧನಾಸು ।

(ಐ ಬ್ರಾ. ೪.೩೦)

ಶ್ರದೇವತ್ಯಾ ಎಂಬ ಸೂಕ್ತದ ಮಂತ್ರಗಳನ್ನು ಪಠಿಸುವಾಗ ಒಂದು ವಿಶೇಷಕ್ರಮವಿರುವುದು. ಸೂಕ್ತದ ಮೊದಲನೆಯ ಋಕ್ಕಾದ **ಪ್ರ ದೇವತ್ರಾ ಬ್ರಹ್ಮಣೇ** ಎಂಬ ಮಂತ್ರವನ್ನಾರಂಭಿಸಿ ಒಂಬತ್ತನೆಯ ಋಕ್ಕಿನ ಸಮಾಪ್ತಿವರೆಗೂ ಪಠಿಸಿ ಅನಂತರ ೧೧ನೆಯ ಋಕ್ಕಾದ **ಹಿನೋತಾ ನೋ ಅಧ್ವರಂ** (೧೦-೩೦-೧೧) ಎಂಬ ಋಕ್ಕನ್ನು ಪಠಿಸಬೇಕು. ಅನಂತರ **ಅನವರ್ಮತೀರಧ** ಎಂಬ ೧೦ನೇ ಋಕ್ಕನ್ನು ಪಠಿಸಬೇಕು.

ಇಲ್ಲಿ ಪ್ರಯೋಗಕ್ರಮವನ್ನು ಸೂಕ್ಷ್ಮವಾಗಿ ವಿವರಿಸುವುದು ಅವಶ್ಯಕವಾಗಿದೆ. ಸುತ್ಯಾದಿನದ ಎಂದರೆ ಸೋಮರಸವನ್ನು ಹಿಂಡುವ ಹಿಂದಿನ ದಿನ ಅಗ್ನಿಷ್ಟೋಮಿಾಯಸಂಸ್ಕಾರಾನಂತರ ವಸತೀವರೀಸಂಜ್ಞಕವಾದ ಉದಕಗಳನ್ನು ಸೋಮಾಭಿಷವಕಾಲದಲ್ಲಿ ಉಪಯೋಗಿಸುವುದಕ್ಕಾಗಿ ಯಜ್ಞವೇದಿಯಲ್ಲಿ ಸ್ಥಾಪಿಸಬೇಕು. ಮಧ್ಯರಾತ್ರಿಯು ಕಳೆದನಂತರ ನಿದ್ರೆಯನ್ನು ತ್ಯಜಿಸಿ ಎದ್ದು ಅಗ್ನೀಧ್ರಧಿಷ್ಣಿಯಾದಿಗಳನ್ನು ಆಯಾಮಂತ್ರಗಳಿಂದ ಅಭಿಮರ್ಶನೆಮಾಡಿ ಸೋಮಾಭಿಷವಕ್ಕಾಗಿ ಬೇಕಾಗುವ ಪಾತ್ರೆಗಳನ್ನು ಆಸಾದನೆಮಾಡಿ ಪ್ರಾತರನುವಾಕಮಂತ್ರಪಠನಕ್ಕಾಗಿ ಹೋತೃವನ್ನು ಪ್ರೈಷಮಂತ್ರದಿಂದ ನಿರ್ದೇಶಿಸಬೇಕು. ಪ್ರಾತರನುವಾಕಪಠನಾನಂತರ **ಶೃಣೋತ್ವಗ್ನಿಃ** ಎಂಬ ಮಂತ್ರದಿಂದ ಆಹುತಿಯನ್ನರ್ಪಿಸಿ ಏಕಧನಾಪಾತ್ರೆಗಳಲ್ಲಿ ನೀರನ್ನು ತರುವುದಕ್ಕಾಗಿ ಹೋಗುವಾಗ ಅಪೋನಪ್ತ್ರೀಯಸೂಕ್ತಪಠನಕ್ಕಾಗಿ ಹೋತೃವನ್ನುದ್ದೇಶಿಸಿ ಪ್ರೈಷಮಂತ್ರದಿಂದ **ಏಕಧನಾ ಅಪ ಅನಯ** ಎಂದು ನಿರ್ದೇಶಿಸಬೇಕು. ಈ ಕ್ರಮಗಳೆಲ್ಲಾ ಅಧ್ವರ್ಯುಪ್ರಯೋಗದಲ್ಲಿ ವಿವರಿಸಲಾಗಿರುವುದು. ಈ ವಿಷಯದಲ್ಲಿ ಆಪಸ್ತಂಬ ಮಹರ್ಷಿಯು **ಯತ್ರಾಭಿಜಾನಾತ್ಯಭೂದುಷಾ** ಇತ್ಯಾದಿ ಸೂತ್ರವಾಕ್ಯಗಳಿಂದ ಕಾರ್ಯಕ್ರಮವನ್ನು ನಿರ್ದೇಶಿಸಿರುವರು. ಆಶ್ವಲಾಯನಮಹರ್ಷಿಯೂ ಸಹ ಹೋತೃಸಂಬಂಧವಾದ ಮಂತ್ರಾದಿಗಳ ಪಠನವಿಷಯದಲ್ಲಿ **ಪರಿಹಿತೇಽಪ ಇಷ್ಯ ಹೋತಃ** ಇತ್ಯಾದಿ ವಾಕ್ಯಗಳಿಂದ ಕ್ರಮವನ್ನು ನಿರ್ದೇಶಿಸಿರುವರು. ಅನಂತರ ಸೂಕ್ತದ ಹತ್ತು ಋಕ್ಕುಗಳ (೯-೧೧) ಪಠನಾನಂತರ ಏಕಧನಾಪಾತ್ರೆಗಳಲ್ಲಿ ನೀರನ್ನು ತರುವುದಕ್ಕಾಗಿ ಹೊರಟ ಪುರುಷರು ತಮ್ಮತಮ್ಮ ಪಾತ್ರೆಗಳಲ್ಲಿ ನೀರನ್ನು ತುಂಬಿಕೊಂಡು ನದಿಯಿಂದ ಹಿಂತಿರುಗುವಾಗ ಹೋತೃವು ಸೂಕ್ತದ ಹತ್ತನೆಯ ಋಕ್ಕಾದ **ಅನವರ್ಮತೀರಧ** ಎಂಬ (೧೦-೩೦-೧೦) ಹತ್ತನೆಯ ಋಕ್ಕನ್ನು ಪಠಿಸುವನು.

प्रति यदापोऽअदृश्रमायतीरिति प्रतिदृश्यमानासु । आ धेनवः पयसा तूर्ण्यर्था इत्युपायतीषु । समुन्या यन्त्युप यन्त्यन्या इति समायतीषु ।

नीरन्नु एकधनापात्रेगळल्लि तुंबिकोंडु नदीतीरदिंद हिंतिरुगि होरटु बरुवाग नीरिनिंद तुंबिद आ एकधनापात्रेगळन्नु पुरुषरु होत्तुकोंडु बरुत्तिरुवुदन्नु होतृवु नोडिदाग प्रति यदापः (८०-३०.८३) एंब मंत्रवन्नु पठिसुवनु- आ एकधनापात्रेगळल्लिरुव उदकगळु चात्वाल प्रदेशवन्नु (यज्ञवेदियल्लिरुव ऒंदु हळ्ळ, गुंडि) आ धेनवः पयसा (३.५३-३) एंब मंत्रवन्नु पठिसुवनु.

इल्लि विवरणेयु अवश्यकवु. उन्नेतहोर्होतृचमसेन वसतीवरीभिश्च चात्वालं प्रत्यास्य एंदु अध्वर्युवु प्रैषमंत्रदिंद निर्देशिसिद कूडलेय उन्नेतृवेंब ऋत्विजनु होतृ संबंधवाद चमसवन्नु वसतीवरी एंब पात्रेयल्लि हिंदिनदिनवे इट्टिद्द नीरन्नु चात्वालद समीपक्के ऒय्युवनु. अनंतर मैत्रावरुणस्य चमसाध्वर्यवाद्रव एंब प्रैषमंत्रदंते मैत्रावरुणनेंब ऋत्विजन परिचारकनाद चमसाध्वर्युवु मैत्रावरुण चमसवन्नू चात्वालद समीपक्के तरुवनु. इल्लि होतृचमसवेंदरे वसतीवरीपात्रेयल्लिरुव उदकगळु एंदू, मैत्रावरुण चमसवेंदरे एकधना पात्रेगळल्लिरुव उदकगळु एंदू तिळियबेकु अनंतर वसतीवर्युदकसहितवाद होतृचमसदल्लि मैत्रावरुणचमसगळल्लिरुव एकधनापात्रेगळ उदकगळन्नु अध्वर्युवु ऒंदरल्लोंदन्नु परस्पर) सेरिसि मिश्रमाडुवनु. मिश्रमाडुव कालदल्लि होतृवु समुन्या यन्त्युप (७.३३-३) एंब ऋक्कन्नु पठिसुवनु. ई विषयवन्नु आपस्तंब महर्षियु—होतृ चमसेन वसतीवरीभ्यो एंदु मोदलागुव सूत्रदिंद स्पष्टवागि विवरिसिरुवरु.

ई ऋक्कुगळ विषयदल्लि ऒंदु पूर्वेतिहासविरुवुदु. अदन्नु इल्लि विवरिसलागिदे.

आपो वा अस्पर्धन्त वयं पूर्वं यज्ञं वक्ष्यामो वयमिति याश्चैवमाः पूर्वेद्युर्वसतीवर्योगृह्यन्ते याश्च प्रातरेकधनास्ता भृगुरपश्यदापो वै स्पर्धन्त इति ता एतयर्चा समज्जपयत्समुन्या यन्त्युप यन्त्यन्या इति ताः समजानत संजानाना हास्याप्यो यज्ञं वहन्ति य एवं वेद ॥

सोमाभिषवणक्के हिंदिन दिनवे तंद नीरन्नु वसतीवरी एंब पात्रेयल्लि शेखरिसिट्टिरुवरु. सोमाभिषवणद (सोमवन्नु हिंडुव) दिनवे एंदरे आदिन प्रातःकालदल्लि नदियिंद होसदागि आगतान्ने नीरन्नु एकधना एंब पात्रेगळल्लि तंदिट्टिरुवरु. ई एरडुविध पात्रेगळल्लिद्द उदकगळु पूर्वदल्लि यज्ञनिर्वहणेय विषयदल्लि परस्पर असूयेयिंद स्पर्धिसिदवु. एंदरे नावे यज्ञ निर्वहणेमाडलु शक्तरेंबु वसतीवर्युदकगळु (अथवा उदकाभिमानिदेवतेगळू)।नमगे हेच्चिन शक्ति इरुवुदेंदु एकधनापात्रेगळल्लिरुव उदकगळू परस्पर स्पर्धेयिंद होराडुत्तिद्दुदनु

ಭೃಗುಋಷಿಯು ನೋಡಿ ಸಮುನ್ಯಾ ಯಂತಿ (೨-೩೫ ೩) ಋಕ್ಕನ್ನು ಪಠಿಸಿ ಆ ಎರಡು ವಿಧವಾದ ಉದಕಗಳಿಗಿದ್ದ ಪರಸ್ಪರ ವೈಷಮ್ಯವನ್ನು ಪರಿಹರಿಸಿ ಅವುಗಳನ್ನು ಸಾಂತ್ವವಚನಗಳಿಂದ ಸಮಾಧಾನಮಾಡಿ ಅವುಗಳಿಗೆ ಪರಸ್ಪರ ಐಕಮತ್ಯವನ್ನುಂಟುಮಾಡಿದನು ಆ ಮಂತ್ರಸಾಮರ್ಥ್ಯದಿಂದ ಆ ಉಭಯವಿಧ ಉದಕಗಳು ತಮ್ಮ್ಮ ತಮ್ಮ್ಮ ವಿವಾದಗಳನ್ನು ಬದಿಗೊತ್ತಿ ಯಜ್ಞನಿರ್ವಹಣಕಾರ್ಯದಲ್ಲಿ ಐಕ್ಯಮತ್ಯದಿಂದ ಪ್ರವರ್ತಿಸತೊಡಗಿದವು. ಈ ವಿಷಯವನ್ನು ತಿಳಿದಿರುವ ಯಜಮಾನನು ತನ್ನ ಯಜ್ಞಕಾರ್ಯಗಳನ್ನು ವಿವಾದಾದಿಗಳಿಲ್ಲದೆ ಪರಸ್ಪರ ಐಕಮತ್ಯದಿಂದ ನಿರ್ವಿಘ್ನವಾಗಿ ನೆರವೇರಿಸಲು ಸಮರ್ಥನಾಗುವನು.

ಆಪೋ ನ ದೇವೀರುಪಯಂತಿ ಹೋತ್ರಿಯಮಿತಿ ಹೋತೃಚಮಸೇ ಸಮುವನೀಯಮಾನಾಸ್ವ-
ನ್ವಾಹ ವಸತೀವರೀಷ್ವೇಕಧನಾಸು ಚ ।

ವಸತೀವರೀ ಮತ್ತು ಏಕಧನಾ ಪಾತ್ರೆಗಳಲ್ಲಿದ್ದ ಉಭಯವಿಧ ಉದಕಗಳನ್ನು ಹೋತೃಚಮಸದಲ್ಲಿ ಸುರಿದಮೇಲೆ ಹೋತೃವು ಆಪೋ ನ ದೇವೀರುಪಯಂತಿ (೧-೮೩-೨) ಎಂಬ ಮಂತ್ರವನ್ನು ಪಠಿಸುವನು.

ಅವೇರಪೋಽಧ್ವರ್ಯೂ ಇತಿ ಹೋತಾಧ್ವರ್ಯುಂ ಪೃಚ್ಛತಿ । ಆಪೋ ವೈ ಯಜ್ಞೋಽ
ವಿದೋ ಯಜ್ಞಮಿತ್ಯೇವ ತದಾಹ । ಉತೇಮನ್ನಮುರಿತ್ಯಧ್ವರ್ಯುಃ ಪ್ರತ್ಯಾಹ ।
ಉತೇಮಾಃ ಪಶ್ಯೇತ್ಯೇವ ತದಾಹ ।

ಅನಂತರ ಹೋತೃವು ಒಂದು ಯಜುರ್ಮಂತ್ರವನ್ನು ಪಠಿಸಿ ಅಧ್ವರ್ಯುವನ್ನು ಕುರಿತು—ಎಲೈ ಅಧ್ವರ್ಯುವೇ, ಈಗ ನೀನು ಎರಡು ವಿಧವಾದ ಉದಕಗಳನ್ನು ಪಡೆದಿದ್ದೀಯಲ್ಲವೇ ? ಎಂದು ಪ್ರಶ್ನಿಸುವನು. ಎರಡುವಿಧ ಉದಕಗಳೆಂದರೆ ಹಿಂದೆ ಹೇಳಿದಂತೆ ವಸತೀವರೀ ಮತ್ತು ಏಕಧನಾ ಪಾತ್ರೆಗಳಲ್ಲಿರುವ ಉದಕಗಳು. ಈ ಉದಕಗಳು ಸೋಮಾಭಿಷವಣ-ಕಾಲದಲ್ಲಿ ಯಜ್ಞನಿರ್ವಹಣೆಗಾಗಿ ಉಪಯೋಗಿಸಲ್ಪಡುವವು. ಆದ್ದರಿಂದ ಯಜ್ಞವು ಅಬ್ರೂಪ ಉದಕದ ಸ್ವರೂಪವೆಂದು ಹೇಳಲ್ಪಡುವುದು. ಆ ಪ್ರಶ್ನೆಗೆ ಅಧ್ವರ್ಯುವು ಉತ್ತರವೀಯುತ್ತಾ—ಎಲೈ ಹೋತೃವೇ ನೀನು ಕೇಳಿದ ಎರಡುವಿಧ ಉದಕಗಳನ್ನು ಯಜ್ಞನಿರ್ವಹಣಾರ್ಥವಾಗಿ ನಾನು ಪಡೆದಿರುವೆನು. ನೋಡು ಎಂದು ಹೇಳುವನು.

ತಾಸ್ವಧ್ವರ್ಯೋ ಇಂದ್ರಾಯ ಸೋಮಂ ಸೋತಾ ಮಧುಮಂತಂ ವೃಷ್ಟಿವನಿಂ ತೀವ್ರಾಂತಂ
ಬಹುರಮಧ್ಯಂ ವಸುಮತೇ ರುದ್ರವತ ಆದಿತ್ಯವತ ಋಭುಮತೇ ವಿಭುಮತೇ ವಾಜವತೇ
ಬೃಹಸ್ಪತಿವತೇ ವಿಶ್ವದೇವ್ಯಾವತೇ । ಯಸ್ಯೇಂದ್ರಃ ಪೀತ್ವಾ ವೃತ್ರಾಣಿ ಜಂಘನತ್ಸ ಜನ್ಯಾನಿ
ತಾರಿಷೋಽಮಿತಿ ಪ್ರತ್ಯುತ್ತಿಷ್ಠತಿ ॥

ಈ ಮೇಲಿನ ಮಂತ್ರವನ್ನು ಪಠಿಸಿ ಹೋತೃವು ಉದಕಾಭಿಮಾನಿದೇವತೆಗಳನ್ನುದ್ದೇಶಿಸಿ ಪ್ರತ್ಯುತ್ಥಾನವನ್ನು ಮಾಡಬೇಕು ಎಂದರೆ ಎದ್ದುನಿಂತುಕೊಂಡು ಪ್ರಾರ್ಥಿಸಬೇಕು. ಎಲೈ ಅಧ್ವರ್ಯುವೇ, ಈಗ ನೀನು ಪಡೆದಿರುವ ವಸತೀವರೀ ಮತ್ತು ಏಕಧನಾ ಎಂಬ ಎರಡುವಿಧ ಉದಕಗಳ ಸಹಾಯದಿಂದ ಸೋಮಾಭಿಷವವನ್ನು ಮಾಡು ಎಂದರೆ ಸೋಮಲತೆಗಳನ್ನು ಜಜ್ಜಿ ರಸವನ್ನು ತೆಗೆದು ಹಿಂಡಿ ಇಂದ್ರನ ಪಾನಾರ್ಥವಾಗಿ ಸಿದ್ಧಪಡಿಸು. ಸೋಮರಸವು ಹೇಗಿರಬೇಕೆಂದರೆ–ಮಧುರರಸದಿಂದ ಯುಕ್ತವಾಗಿ ಸಿಹಿಯಾಗಿಯೂ ವೃಷ್ಟಿ (ಮಳೆ)ಯನ್ನುಂಟುಮಾಡುವುದಾಗಿಯೂ, ಬೇಗನೆ ಫಲವನ್ನು ಕೊಡುವುದಾಗಿಯೂ ಅನೇಕವಿಧವಾದ ಕರ್ಮಾಂಗಯುಕ್ತವಾಗಿಯೂ ಇರಬೇಕು. ಇಲ್ಲಿ ಮಧುಮಂತಂ ಎಂಬ

ಶಬ್ದಕ್ಕೆ-ಸೋಮರಸವು ಜೇನುತುಪ್ಪದಂತೆ ಸಿಹಿಯಾಗಿರಬೇಕು ಅಥವಾ ರುಚಿಕರವಾಗಿರಬೇಕು. ವೃಷ್ಟಿವನಿಂ—ವೃಷ್ಟಿಪ್ರದವಾದುದು ಎಂದರೆ ಈ ಸೋಮಪಾನದಿಂದ ಇಂದ್ರನು ತೃಪ್ತನಾಗಿ ಆ ಹರ್ಷದಿಂದ ಮೇಘಗಳನ್ನು ಸೀಳಿ ವೃಷ್ಟಿಯನ್ನು ಸುರಿಸುವಂತೆ ಮಾಡುವನು. ತೀವ್ರಾಂತಂ—ವಿಘ್ನರಹಿತವಾಗಿ ಯಜ್ಞವು ಸಮಾಪ್ತಿಯಾಗಿ ಅದರ ಫಲವು ಬೇಗನೆ ಪ್ರಾಪ್ತವಾಗುವುದು. ಬಹುರ (ಲ) ಮಧ್ಯಂ—ಯಜ್ಞದಲ್ಲಿ ಅನೇಕವಿಧವಾದ ಉಪಕರ್ಮಗಳಿರುವುವು ಋತ್ವಿಗ್ವರಣದಿಂದ ಪ್ರಾರಂಭವಾಗಿ ಸಮಾಪ್ತಿಯವರೆಗೆ ಅನೇಕವಿಧ ಯಜ್ಞಾಂಗಕರ್ಮಗಳಿರುವವು. ಆದ್ದರಿಂದ ಈ ಅನೇಕ ಕರ್ಮಗಳ ನಿರ್ವಹಣೆಗೆ ಸಾಧನವಾದ ಸೋಮರಸವು ಈ ವಿಧಗುಣಗಳುಳ್ಳ ಸೋಮರಸವನ್ನು ಇಂದ್ರನಿಗಾಗಿ ಹಿಂಡಿ ಸಿದ್ಧಪಡಿಸು ಎಂದಭಿಪ್ರಾಯವು. ಈ ಸೋಮರಸವು ಇಂದ್ರನಿಗೊಬ್ಬನಿಗೆ ಮಾತ್ರವೇ ಎಂದರೆ ಇಂದ್ರನಿಗೂ ಇಂದ್ರನೊಡನಿರುವ ಇತರ ದೇವತೆಗಳಿಗೂ ಪಾನಾರ್ಥವಾಗಿ ಎಂದರ್ಥವು. ಆ ದೇವತೆಗಳು ಯಾರಾರೆಂದರೆ—ವಸು ಮತೀ ರುದ್ರವತೀ ಆದಿತ್ಯವತೀ ವಿಶ್ವದೇವ್ಯಾವತೀ । ಎಂದರೆ ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಋಭು, ವಿಭು, ವಾಜ ಎಂಬ ಮೂರುಮಂದಿ ಋಭುಗಳು, ಬೃಹಸ್ಪತಿ, ವಿಶ್ವೇದೇವತೆಗಳು ಈ ಮೊದಲಾದ ದೇವತ ಗಳಿಂದ ಸಹಿತನಾದ ಇಂದ್ರನ ಪಾನಾರ್ಥನಾಗಿ ಸೋಮರಸವನ್ನು ಹಿಂಡಿ ಸಿದ್ಧಪಡಿಸು ಎಂದಭಿಪ್ರಾಯವು. ಇಂತಹ ಸೋಮರಸವನ್ನು ಪಾನಮಾಡಿ ಇಂದ್ರನು ಶತ್ರುಗಳನ್ನೂ, ಯಜ್ಞಮಾಡುವ ಯಜಮಾನನ ಪಾಪಗಳನ್ನೂ ನಾಶ ಮಾಡಲು ಸಮರ್ಥನಾಗುವನು. ಅಂತಹ ಸೋಮರಸವನ್ನು ಎಲೈ ಅಧ್ವರ್ಯುವೇ, ನೀನು ಸಿದ್ಧಪಡಿಸು ಎಂದು ಮಂತ್ರಾಭಿಪ್ರಾಯವು. ಈ ಮಂತ್ರವನ್ನು ಪಠಿಸಿ ಕೊನೆಯಲ್ಲಿ ಓಂ ಎಂಬ ಪ್ರಣವಮಂತ್ರವನ್ನು ಪಠಿಸಿ ಹೋತೃವು ಎದ್ದುನಿಂತುಕೊಂಡು ಪ್ರಾರ್ಥಿಸುವನು.

ಪ್ರತ್ಯುಷ್ಟೇಯಾ ವಾ ಆಪಃ ಪ್ರತಿ ವೈ ಶ್ರೇಯಾಂಸಮಾಯಂತಮುತ್ತಿಷ್ಠಂತಿ ತಸ್ಮಾತ್ಪ್ರತ್ಯು-ಷ್ಟೇಯಾಃ । ಅನು ಪರ್ಯಾವೃತ್ಯಾಃ ಅನು ವೈ ಶ್ರೇಯಾಂಸಂ ಪರ್ಯಾವರ್ತಂತೇ ತಸ್ಮಾದನು-ಪರ್ಯಾವೃತ್ಯಾ ಅನುಬ್ರುವತೈವಾನುಪ್ರಪತ್ತವ್ಯಂ ।

ಈ ಎರಡು ವಿಧ ಉದಕಗಳಿಗೆ ಗೌರವವನ್ನು ಸೂಚಿಸುವುದಕ್ಕಾಗಿ ಎದ್ದು ನಿಲ್ಲಬೇಕು ಲೋಕವ್ಯವಹಾರದಲ್ಲೆ ಯಾರಾದರೂ ದೊಡ್ಡವರು ಬಂದರೆ, ಎಂದರೆ ಗುರುಗಳು, ಹಿರಿಯರು, ತಂದೆ ಮೊದಲಾದವರು ಬಂದರೆ ಅವರಿಗೆ ಗೌರವ ವನ್ನು ಸೂಚಿಸುವುದಕ್ಕಾಗಿ ಶಿಷ್ಯ ಪುತ್ರ ಮೊದಲಾದವರು ಎದ್ದು ನಿಲ್ಲುವುದು ರೂಢಿಯಷ್ಟೆ. ಅದರಂತೆ ಇಲ್ಲಿಯೂ ಪೂಜಾರ್ಹವಾದ ಯಜ್ಞಕರ್ಮಗಳಿಗೆ ಅತ್ಯವಶ್ಯಕಗಳಾದ ಈ ಎರಡು ವಿಧ ಉದಕಗಳಿಗೆ ಗೌರವನ್ನು ಸೂಚಿಸುವುದ ಕ್ಕಾಗಿ ಋತ್ವಿಗಾದಿಗಳು ಎದ್ದು ನಿಲ್ಲಬೇಕು. ಅಷ್ಟೇ ಅಲ್ಲ. ಗೌರವಾರ್ಹರಾದವರು ಅತ್ತಿತ್ತ ಸಂಚರಿಸುವಾಗ ಅವರನ್ನು ಅನುಸರಿಸಿ ಅವರ ಹಿಂದೆ ಇದ್ದು ವಿನಯದಿಂದ ಪರ್ಯಾದೆಮಾಡುವುದೂ ಸಹಜವಾಗಿದೆ. ಅದರಂತೆ ಇಲ್ಲಿಯೂ ಮಾಡಬೇಕೆಂದಭಿಪ್ರಾಯವು.

ಈಶ್ವರೋ ಹ ಯದ್ಯಪ್ಯನ್ಯೋ ಯಜೇತಾಥ್ಸಹೋತಾರಂ ಯಶೋಽತ್ಕೋಸ್ತಸ್ಮಾದನು-ಬ್ರುವತೈವಾನುಪ್ರಪತ್ತವ್ಯಂ ।

ಒಂದು ವೇಳೆ ಹೋತೃವು ಯಜ್ಞದಲ್ಲಿ ಭಾಗವಹಿಸುವವನಲ್ಲವಾದರೂ ಮಂತ್ರವನ್ನು ಪಠಿಸುವ ಹೋತೃವು ಈ ಉದಕ ಗಳಿಗೆ ಗೌರವವನ್ನು ಸೂಚಿಸಿ ಅವುಗಳನ್ನು ಅನುಸರಿಸಿಹೋದಲ್ಲಿ ಅವನಿಗೆ ಕೀರ್ತಿಯೂ ಪ್ರಾಧಾನ್ಯತೆಯೂ ಲಭಿಸುವುದು

ಆದ್ದರಿಂದ ಮಂತ್ರಪಠನಮಾಡುವವರು ಅವಶ್ಯಕವಾಗಿ ಆ ಉದಕಗಳನ್ನು ಹಿಂಬಾಲಿಸಿಹೋಗಬೇಕು. ಹೀಗೆ ಅನುಸರಿಸಿ ಹೋಗುವಕಾಲದಲ್ಲಿ ಈ ಕರ್ಮದಲ್ಲಿ ಇನ್ನೂ ಪರಿಸದಿರುವ,

ಅಂಬಯೋ ಯಂತ್ಯಧ್ವಭಿರಿತ್ಯೇತಾಮನುಬ್ರುವನ್ನನು ಪ್ರಪದ್ಯೇತ ।

ಅಂಬಯೋ ಯಂತಿ (೧೦-೨೩-೧೬) ಎಂಬ ಮಂತ್ರವನ್ನು ಪಠಿಸಬೇಕು—

ಜಾಮಯೊ ಅಧ್ವರೀಯತಾಂ । ಪ್ರಂಚತೀರ್ಮಧುನಾ ಪಯ ಇತಿ ಯೋಽಮಧ್ವೋ ಯಶೋಽತೋರ್ಬ್ರಭೂಷೇತ್ ।

ಈ ಋಕ್ಕಿನ ಅರ್ಧವನ್ನು ವಿವರಿಸುವರು-ಅಂಬ ಎಂಬ ಶಬ್ದವು ಗೌರವವನ್ನು ಸೂಚಿಸುವ ಮಾತೃವಾಚಕವಾಗಿದೆ. ಅಂಬಯಃ ಎಂದರೆ ತಾಯಿಯರಂತೆ ಗೌರವಾನ್ವಿತರಾದ ಈ ಉದಕಗಳು ಎಂದರ್ಥವು. ಮಾತೃಸಮಾನರಾದ ಈ ಎಡೆಬಿಡುವಿಲ್ಲದ ಉದಕಗಳು ನಾನಾವಿಧಮಾರ್ಗಗಳಿಂದ ಹೋಗುತ್ತಾರೆ. ಇವರು ಯಜ್ಞವನ್ನು ನೆರವೇರಿಸಬೇಕೆಂದು ಬಯಸುವ ಯಜಮಾನನಿಗೆ ಭಗಿನಿ ಎಂದರೆ ಸಹೋದರಿಯರಂತೆ ಹಿತವನ್ನು ಬಯಸುವವರು ಮತ್ತು ಮಧುರವಾದ ತಮ್ಮ ಉದಕಗಳಿಂದ ಎಲ್ಲರನ್ನೂ ತೃಪ್ತಿಗೊಳಿಸುವವರು. ಯಾವ ಪುರುಷನು ಇದುವರಿಗೆ ಸೋಮರಸದ ರುಚಿಯನ್ನು ಕಂಡರಿಯನೋ ಮತ್ತು ಸೋಮಯಾಗವನ್ನು ಮಾಡಿ ಕೀರ್ತಿಸಂಪಾದಿಸಬೇಕೆಂದು ಅಪೇಕ್ಷಿಸುವನೋ ಅಂತಹ ಪುರುಷನು ಮಂತ್ರಪಠನಪೂರ್ವಕವಾಗಿ ಈ ಉದಕಗಳಿಗೆ ಗೌರವವನ್ನು ಸೂಚಿಸಿ ಅವುಗಳನ್ನು ಅನುಸರಿಸಿಹೋದರೆ ಅವನ ಇಷ್ಟಾರ್ಥವು ಸಿದ್ಧಿಸುವುದು.

ಅಮೂರ್ಯಾ ಉಪ ಸೂರ್ಯೇ ಯಾಭಿರ್ವಾ ಸೂರ್ಯಃ ಸಹೇತಿ ತೇಜಸ್ಕಾಮೋ ಬ್ರಹ್ಮವರ್ಚಸಕಾಮಃ ।

ಮುಂದಿನ ಋಕ್ಕಿನಲ್ಲಿ ಫಲಾಂತರಗಳನ್ನು ಹೇಳುವರು—**ಅಮೂರ್ಯಾ ಉಪ ಸೂರ್ಯೇ** ಎಂಬ (೧೦-೩೩-೧೭) ಋಕ್ಕನ್ನು ಪರಿಸಿದಲ್ಲಿ ಅಧ್ಯಯನಸಂಪತ್ತಿನಿಂದ ತೇಜಸ್ವಿಯೂ ಬ್ರಹ್ಮವರ್ಚಸ್ವಿಯೂ ಆಗುವನು.

ಅಪೋ ದೇವೀರುಪಹ್ವಯೇ ಯತ್ರ ಗಾವಃ ಪಿಬಂತಿ ನ ಇತಿ ಪಶುಕಾಮಃ ॥

ಪಶುಸಂಪತ್ತನ್ನು ಅಪೇಕ್ಷಿಸುವ ಪುರುಷನು—**ಅಪೋ ದೇವೀರುಪ ಹ್ವಯೇ** (೧೧-೨೩-೧೪) ಎಂಬ ಋಕ್ಕನ್ನು ಪಠಿಸಬೇಕು.

ತಾ ಏತಾಃ ಸರ್ವಾ ಏವಾನುಬ್ರುವನ್ನನುಪ್ರಪದ್ಯೇತೈತೇಷಾಂ ಕಾಮಾನಾಮವರುಧ್ಯೈ । ಏತಾನ್ಯಮಾನವರುಂಧೇ ಯ ಏವಂ ವೇದ ॥

ತನ್ನ ಸಮಸ್ತ ಇಷ್ಟಾರ್ಥಗಳನ್ನೂ ಪಡೆಯಲಿಚ್ಛಿಸುವವನು ಮೇಲೆ ಹೇಳಿದ ಮೂರು ಋಕ್ಕುಗಳನ್ನೂ ಪಠಿಸಬೇಕು. ಈ ವಿಷಯವನ್ನು ತಿಳಿದಿರುವ ಪುರುಷನು ತನ್ನ ಸಮಸ್ತ ಇಷ್ಟಾರ್ಥಗಳನ್ನೂ ಪಡೆದು ಸುಖಿಸುವನು.

ಏಮಾ ಅಗ್ಮನ್ರೇವತೀರ್ಜೀವಧನ್ಯಾ ಇತಿ ಸಾದ್ಯಮಾನಾಸ್ವನ್ವಾಹ ವಸತೀವರೀಸ್ಯೇಕಧನಾಸು ಚ । ಅಗ್ಮನ್ನಾಪ ಉಶತೀರ್ಬರ್ಹಿರೇದಮಿತಿ ಸನ್ನಾಸು ಸ ಏತಯಾ ಪರಿದಧಾತಿ ॥

(ಐ. ಬ್ರಾ. ೮-೨೦)

ಮೇಲೆ ಹೇಳಿದ ಎರಡುವಿಧ ಉದಕಗಳು ಎಂದರೆ ವಸತೀವರೀ ಮತ್ತು ಏಕಧನಾಪಾತ್ರೆಗಳ ಉದಕಗಳು ಉತ್ತರ ವೇದಿಯ ಸಮೀಪಕ್ಕೆ ಒಯ್ಯಲ್ಪಡುವಾಗ ಹೋತೃವು-**ಏಮಾ ಅಗ್ಮನ್ರೇವತೀಃ** (೧೦-೩೦-೧೪) ಎಂಬ ಋಕ್ಕನ್ನು ಪರಿಸಬೇಕು ಮತ್ತು ಆ ಉಭಯವಿಧ ಉದಕಗಳು ವೇದಿಯಲ್ಲಿ ಸ್ಥಾಪಿತವಾದ (ಇಡಲ್ಪಟ್ಟ) ನಂತರ ಹೋತೃವು **ಅಗ್ಮನ್ನಾಪಃ** (೧೦-೩೦-೧೫) ಎಂಬ ಋಕ್ಕನ್ನು ಈ ಅಪೋನಪ್ತ್ರೀಯ ಕರ್ಮದಲ್ಲಿ ಕೊನೆಯ ಋಕ್ಕನ್ನಾಗಿ ಪರಿಸಿ ಈ ಕರ್ಮವನ್ನು ಸಮಾಪ್ತಿಗೊಳಿಸಬೇಕು.

ಇಲ್ಲಿಗೆ ಅಪೋನಪ್ತ್ರೀಯವೆಂಬ ಕರ್ಮದ ವಿವರಣೆಯು ಸಮಾಪ್ತವು.

॥ ಸಾಯಣಭಾಷ್ಯಂ ॥

ತೃತೀಯೇಽನುವಾಕೇ ತ್ರಯೋದಶ ಸೂಕ್ತಾನಿ । ತತ್ರ ಪ್ರ ದೇವತ್ರೇತಿ ಪಂಚದಶರ್ಚಂ ಪ್ರಥಮಂ ಸೂಕ್ತಂ । ಇಲೂಷಪುತ್ರಸ್ಯ ಕವಷಸ್ಯಾರ್ಷಂ ತ್ರೈಷ್ಟುಭಮಾದ್ಯೇವತ್ಯಮಪಾಂನಪಾದ್ದೇವತಾಕಂ ವಾ । ತಥಾ ಚಾನುಕ್ರಾಂತಂ । ಪ್ರ ದೇವತ್ರಾ ಪಂಚೋನಾ ಕವಷ ಐಲೂಷ ಆಪಮಪೋನಪ್ತ್ರೀಯಂ ವೇತಿ॥ ಅಪಯಿಷ್ಯ ಹೋತರಿತ್ಯುಕ್ತಃ ಸನ್ ಹೋತಾ ಪ್ರ ದೇವತ್ರೇತ್ಯಾದ್ಯಾ ನವರ್ಚೋಽನುಬ್ರೂಯಾತ್। ಸೂತ್ರಿತಂ ಚ । ಪ್ರ ದೇವತ್ರಾ ಬ್ರಹ್ಮಣೇ ಗಾತುರೇತ್ಯಿತಿ ನವ ಹಿನೋತಾ ನೋ ಅಧ್ವರಂ ದೇವಯಜ್ಯೇತಿ ದಶಮ್ಯಾಂ । ಆ. ೫-೧ । ಇತಿ ॥

ಅನುವಾದವು—ಹತ್ತನೆಯ ಮಂಡಲದ ಮೂರನೆಯ ಅನುವಾಕದಲ್ಲಿ ಹದಿಮೂರು ಸೂಕ್ತಗಳಿರುವವು. ಅವುಗಳಲ್ಲಿ **ಪ್ರ ದೇವತ್ರಾ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಇಲೂಷನೆಂಬುವನ ಪುತ್ರನಾದ ಕವಷನೆಂಬುವನು ಋಷಿಯು. ಅಬ್ದೇವತಾಕವು ಅಥವಾ ಅಪಾಂನಪಾದ್ದೇವತಾಕವು. ತ್ರಿಷ್ಟುಪ್ ಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ದೇವತ್ರಾ ಪಂಚೋನಾ ಕವಷ ಐಲೂಷ ಆಪಮಪೋನಪ್ತ್ರೀಯಂ ವಾ** ಎಂದು ಹೇಳಿರುವುದು. **ಅಪ ಇಷ್ಯ ಹೋತಃ** ಎಂದು ಅಧ್ವರ್ಯುವು ಹೋತೃವನ್ನುದ್ದೇಶಿಸಿ ಪ್ರೈಷಮಂತ್ರವನ್ನು ಪರಿಸಿದಕೂಡಲೇ ಹೋತೃವು **ಪ್ರ ದೇವತ್ರಾ** ಎಂದು ಮೊದಲಾಗುವ ಈ ಸೂಕ್ತದ ಮೊದಲಿನ ಒಂಭತ್ತು ಋಕ್ಕುಗಳನ್ನು ಪರಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ದೇವತ್ರಾ ಬ್ರಹ್ಮಣೇ ಗಾತುರೇತ್ಯಿತಿ ನವ ಹಿನೋತಾ ನೋ ಅಧ್ವರಂ ದೇವಯಜ್ಯೇತಿ ದಶಮ್ಯಾಂ** ಎಂಬ ಸೂತ್ರದಿಂದ (ಆ. ೫-೧) ವಿವೃತವಾಗಿರುವುದು.

ಸೂಕ್ತ—೩೦

ಮಂಡಲ—೧೦ ॥ ಅನುವಾಕ—೩॥ ಸೂಕ್ತ—೩೦ ।
ಅಷ್ಟಕ—೭ ॥ ಅಧ್ಯಾಯ—೭ ॥ ವರ್ಗ—೨೪, ೨೫, ೨೬॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಕವಷ ಐಲೂಷಃ ।
ದೇವತಾ—ಅಪ ಅಪಾಂನಪಾದ್ವಾ ॥
ಛಂದಃ—ತ್ರಿಷ್ಟುಪ್ ।

। ಸಂಹಿತಾಪಾಠಃ ।

ಪ್ರ ದೇವತ್ರಾ ಬ್ರಹ್ಮಣೇ ಗಾತುರೇತ್ತ್ವಪೋ ಅಚ್ಛಾ ಮನಸೋ ನ ಪ್ರಯುಕ್ತಿ।
ಮಹೀಂ ಮಿತ್ರಸ್ಯ ವರುಣಸ್ಯ ಧಾಸಿಂ ಪೃಥುಜ್ರಯಸೇ ರೀರಧಾ ಸುವೃಕ್ತಿಂ ॥

। ಪದಪಾಠಃ ।

ಪ್ರ । ದೇವತ್ರಾ । ಬ್ರಹ್ಮಣೇ । ಗಾತುಃ । ಏತು । ಅಪಃ । ಅಚ್ಛ । ಮನಸಃ । ನ । ಪ್ರಯುಕ್ತಿ ।
ಮಹೀಂ । ಮಿತ್ರಸ್ಯ । ವರುಣಸ್ಯ । ಧಾಸಿಂ । ಪೃಥುಽಜ್ರಯಸೇ । ರೀರಧ । ಸುಽವೃಕ್ತಿಂ ॥ ೧ ॥

। ಸಾಯಣಭಾಷ್ಯಂ ।

ಬ್ರಹ್ಮಣೇ । ತೃತೀಯಾರ್ಥೇ ಚತುರ್ಥೀ । ಬ್ರಹ್ಮಣಾ ಸ್ತೋತ್ರೇಣ । ಸ್ತೂಯಮಾನ ಇತಿ ಶೇಷಃ। ಗಾತುರ್ದೇವಾನಪೋ ವಾ ಪ್ರತಿಗಮನಶೀಲಃ ಸೋಮೋ ದೇವತ್ರಾ ದೇವೀರ್ದ್ಯೋತಮಾನಾ ಅಪೋ ವಸತೀವರ್ಯೋದಕಧನಾಲಕ್ಷಣಾನ್ಯುದಕಾನ್ಯಚ್ಛಾಭಿ ಪ್ರೈತು । ಪ್ರಕರ್ಷೇಣ ಗಚ್ಛತು। ತತ್ರ ದೃಷ್ಟಾಂತಃ। ಮನಸೋ ನ ಪ್ರಯುಕ್ತಿ ಯಥಾ ಮನಸಃ ಪ್ರಯುಕ್ತಿಃ ಪ್ರಯೋಗ ಉದ್ಯೋಗಃ ಶೀಘ್ರಂ ಗಚ್ಛತಿ ತದ್ವತ್ । ಏವಂ ಸೋಮೋಽಪಃ ಪ್ರತಿಗತೇ ಸತಿ ಹೇ ಮದೀಯಾತ್ಮನ್ ಅಧ್ವರ್ಯೋ ವಾ ಮಹೀಂ ಧಾಸಿಂ ಮಹತ್ಸೋಮಲಕ್ಷಣಮನ್ನಂ ಮಿತ್ರಸ್ಯ ವರುಣಸ್ಯ ಚಾರ್ಥಾಯ ಪೃಥುಜ್ರಯಯಸೇ ವಿಸ್ತೀರ್ಣ-ಜವಾಯ । ಮಹಾಗತೇರಿಂದ್ರಸ್ಯ ಚಾರ್ಥಾಯೇತ್ಯರ್ಥಃ । ರೀರಧ । ಸಂಸಾಧಯ । ಸಂಸ್ಕುರು । ದಾನ-ಯೋಗ್ಯಂ ಕುರು । ಸುವೃಕ್ತಿಂ ಸುಷ್ಠು ದೋಷೈರ್ವರ್ಜಿತಾಂ ಸ್ತುತಿಂ ಚ ಕುರು ॥

। ಪ್ರತಿಪದಾರ್ಥ ।

ಮನಸಃ—ಮನಸ್ಸಿನ । ಪ್ರಯುಕ್ತಿ ನ—ವ್ಯಾಪಾರದಂತೆ ವೇಗವಾಗಿ । ಬ್ರಹ್ಮಣೇ—ಸ್ತುತಿಯಿಂದ ಪ್ರಶಂಸಿತವೂ । ಗಾತುಃ—ಗಮನಶೀಲವಾದುದೂ ಆದ ಸೋಮವು । ದೇವತ್ರಾ—ಪ್ರಕಾಶಮಾನಗಳಾದ । ಅಪಃ ಅಚ್ಛ—ವಸತೀವರ್ಯಾದ್ಯುದಕಗಳಿಗಭಿಮುಖವಾಗಿ । ಪ್ರ ಏತು—ಹರಿದು ಹೋಗಲಿ । ಮಿತ್ರಸ್ಯ—ಮಿತ್ರನಿಗೂ । ವರುಣಸ್ಯ—ವರುಣನಿಗೂ । ಪೃಥುಜ್ರಯಸೇ—ಅಧಿಕವಾದ ವೇಗವುಳ್ಳ ಇಂದ್ರನಿಗೂ । ಮಹೀಂ—ಮಹತ್ತಾದ । ಧಾಸಿಂ—ಸೋಮರೂಪವಾದ ಅನ್ನವನ್ನು । ರೀರಧ—ಸಂಸ್ಕರಿಸಿ ಅರ್ಪಿಸು । ಸುವೃಕ್ತಿಂ—ದೋಷರಹಿತವಾದ ಸ್ತುತಿಯನ್ನೂ ಅರ್ಪಿಸು.

। ಭಾವಾರ್ಥ ।

ಮನಸ್ಸಿನ ವ್ಯಾಪಾರದಂತೆ ವೇಗವಾಗಿ ಸ್ತುತಿಯಿಂದ ಪ್ರಶಂಸಿತವೂ, ಗಮನಶೀಲವಾದುದೂ ಆದ ಸೋಮವು ಪ್ರಕಾಶಮಾನಗಳಾದ ವಸತೀವರ್ಯಾದ್ಯುದಕಗಳಿಗಭಿಮುಖವಾಗಿ ಹರಿದುಹೋಗಲಿ. ಮಿತ್ರನಿಗೂ ವರುಣನಿಗೂ, ಅಧಿಕವಾದ ವೇಗವುಳ್ಳ ಇಂದ್ರನಿಗೂ ಮಹತ್ತಾದ ಸೋಮರೂಪವಾದ ಅನ್ನವನ್ನು ಸಂಸ್ಕರಿಸಿ ಅರ್ಪಿಸು. ದೋಷರಹಿತವಾದ ಸ್ತುತಿಯನ್ನು ಅರ್ಪಿಸು.

English Translatian

(Honoured) by adoration, let the advancing Soma approach the celestial waters like the celerity of the mind : offer abundant (sacrificial) food, and perfect praise for the sake of Mitra and Varuna, and for (Indra) the rapid mover.

। ಸಂಹಿತಾಪಾಠಃ ।

ಅಧ್ವರ್ಯವೋ ಹವಿಷ್ಮಂತೋ ಹಿ ಭೂತಾಚ್ಛಾಪ ಇತೋಶತೀರುಶಂತಃ ।
ಅವ ಯಾಶ್ಚಷ್ಟೇ ಅರುಣಃ ಸುಪರ್ಣಸ್ತಮಾಸ್ಯಧ್ವಮೂರ್ಮಿಮದ್ಯಾ
ಸುಹಸ್ತಾಃ ॥ ೨ ॥

। ಪದಪಾಠಃ ।

ಅಧ್ವರ್ಯವಃ । ಹವಿಷ್ಮಂತಃ । ಹಿ । ಭೂತ । ಅಚ್ಛ । ಅಪಃ । ಇತ । ಉಶತೀಃ । ಉಶಂತಃ ।
ಅವ । ಯಾಃ । ಚಷ್ಟೇ । ಅರುಣಃ । ಸುಪರ್ಣಃ । ತಂ । ಅ । ಅಸ್ಯಧ್ವಂ । ಊರ್ಮಿಂ । ಅದ್ಯ ।
ಸುಹಸ್ತಾಃ ॥ ೨ ॥

। ಸಾಯಣಭಾಷ್ಯಂ ।

ಹೇ ಅಧ್ವರ್ಯವಃ ಯೂಯಂ ಹವಿಷ್ಮಂತೋ ಹ್ಯಭಿಷೋತವ್ಯೇನ ಸೋಮಲಕ್ಷಣೇನ ಹವಿಷಾ ಯುಕ್ತಾಃ ಖಲು ಭೂತ । ಭವತ । ಕಂ ಚ ಹೇ ಉಶಂತಃ ಸೋಮಾಭಿಷವಂ ಕರ್ತುಂ ಕಾಮಯಮಾನಾ ಅಧ್ವರ್ಯವಃ ಯೂಯಮುಶತೀಃ ಸೋಮಾಭಿಷವಾಂಗಭಾವಮಭಿಲಷಂತೀರೇಕಧನಾಲಕ್ಷಣಾ ಅಪೋಽಚ್ಛಾಭಿಮುಖ್ಯೇನೇತ । ಗಚ್ಛತ । ಅರುಣೋ ರಕ್ತವರ್ಣಃ ಸುಪರ್ಣಃ ಸುಪತನಃ ಸೋಮೋಽವಾಧಸ್ತಾದಂತರಿಕ್ಷೇ ಯಾ ಮೇಘೋದರಗತಾ ಅಪಶ್ಚಷ್ಟೇ ಪಶ್ಯತಿ ಹೇ ಸುಹಸ್ತಾಃ ಸೋಮಾಭಿಷವಾದಿಶೋಭನಕರ್ಮಕಾರಿತ್ವಾತ್ ಸುಮರ್ಣಮಯಪವಿತ್ರಾದ್ಯಲಂಕೃತಾಃ । ಯುದ್ಯಾ । ಶೋಭನಹಸ್ತಾಃ । ಏತೇಽಧ್ವರ್ಯವಃ ಯೂಯಮದ್ಯೇದಾನೀಂ ತಂ ತಾದೃಶಮೂರ್ಮಿಂ ಸೋಮಸಂಘಾತಂ ತಾಭಿರದ್ಭಿಃ ಸಹಾಸ್ಯಧ್ವಂ । ಅಭಿಮುಖ್ಯೇನ ಸ್ಥಿತ್ವಾ ಮಹತಾದರೇಣ ದಶಾಪವಿತ್ರೇ ಶೋಧನಾರ್ಥಂ ಪ್ರಕ್ಷಿಪತ ॥

। ಪ್ರತಿಪದಾರ್ಥ ।

ಅಧ್ವರ್ಯವಃ—ಎಲೈ ಅಧ್ವರ್ಯುಗಳೇ । ಹವಿಷ್ಮಂತಃ ಹಿ—ನೀವು ಹವಿಸ್ಸುಗಳಿಂದ ಕೂಡಿದವರಾಗಿ । ಭೂತ—ಆಗಿದ್ದೀರಿ । ಉಶಂತಃ—ಸೋಮವನ್ನು ಹಿಂಡಲು ಇಚ್ಛೆಯುಳ್ಳ ನೀವು । ಉಶತೀಃ—ಅದನ್ನೇ ಅಪೇಕ್ಷಿಸುವುದೂ ಮತ್ತು । ಅರುಣಃ—ಕೆಂಪುಬಣ್ಣವುಳ್ಳವನೂ । ಸುಪರ್ಣಃ—ಉತ್ತಮವಾದ ಪತನವುಳ್ಳವನೂ

ಆದ ಸೋಮನು । ಅವ—ಅಂತರಿಕ್ಷದ ಅಧೋಭಾಗದಲ್ಲಿ । ಯೋಃ—ಮೇಘಸ್ಥವಾದ ಯಾವ ಉದಕಗಳನ್ನು । ಚಕ್ಷ್ಯೇ—ನೋಡುವನೋ ಅಂತಹುದೂ ಆದ । ಅಪಃ ಅಚ್ಛ—ಉದಕಗಳಿಗಭಿಮುಖವಾಗಿ । ಇತ—ಸರಿಯಿರಿ । ಸುಹಸ್ತಾಃ—ಉತ್ತಮವಾದ ಹಸ್ತಗಳುಳ್ಳ ಎಲೈ ಅಧ್ವರ್ಯುಗಳೇ । ಅದ್ಯ—ಈಗ । ತಂ ಊರ್ಮಿಂ—ಅಲೆಗಳಂತಿರುವ ಆ ಸೋಮಸಂಘಾತವನ್ನು । ಆಸ್ಯಧ್ವಂ—ಉದಕಗಳೊಂದಿಗೆ ಸೇರಿಸಿರಿ.

॥ ಭಾವಾರ್ಥ ॥

ಎಲೈ ಅಧ್ವರ್ಯುಗಳೇ, ನೀವು ಹವಿಸ್ಸುಗಳಿಂದ ಕೂಡಿದವರಾಗಿ ಆಗಿದ್ದೀರಿ. ಸೋಮವನ್ನು ಹಿಂಡಲು ಇಚ್ಛೆಯುಳ್ಳ ನೀವು ಅದನ್ನೇ ಅಪೇಕ್ಷಿಸುವುದೂ, ಮತ್ತು ಕೆಂಪುಬಣ್ಣವುಳ್ಳವನೂ, ಉತ್ತಮವಾದ ಪತನವುಳ್ಳವನೂ ಆದ ಸೋಮನು ಅಂತರಿಕ್ಷದ ಅಧೋಭಾಗದಲ್ಲಿ ಮೇಘಸ್ಥವಾದ ಯಾವ ಉದಕಗಳನ್ನು ನೋಡುವನೋ ಅಂತಹುದೂ ಆದ ಉದಕಗಳಿಗಭಿಮುಖವಾಗಿ ಸರಿಯಿರಿ. ಉತ್ತಮವಾದ ಹಸ್ತಗಳುಳ್ಳ ಎಲೈ ಅಧ್ವರ್ಯುಗಳೇ, ಈಗ ಅಲೆಗಳಂತಿರುವ ಆ ಸೋಮಸಂಘಾತವನ್ನು ವಸತೀವರ್ಯಾದಿ ಉದಕಗಳೊಂದಿಗೆ ಸೇರಿಸಿರಿ.

English Translation

ಧಿಯಸಾನಸ್ಯ—ಇಂದ್ರನನ್ನೇ ಧ್ಯಾನಿಸುವ ಯಜಮಾನನ । **ಸಕ್ಷಣಿ**—ಯಜ್ಞನಿಮಿತ್ತವಾಗಿ । **ಗ್ಮಂತಾ**—ಹೋಗತಕ್ಕ ಅಶ್ವಗಳನ್ನು । **ಪ್ರ ಸು**—(ಇಂದ್ರನು) ಪ್ರೇರಿಸಿ ಕಳುಹಲಿ । **ವರೇಭಿಃ**—ಉತ್ತಮವಾದ ಮಾರ್ಗಗಳಿಂದ । **ಪ್ರಸೀದತಃ**—ಇಂದ್ರನನ್ನು ಪೂಜಿಸುವ ಯಜಮಾನನ । **ವರಾನ್ ಅಭಿ**—ಉತ್ಕೃಷ್ಟವಾದ ಸ್ತುತಿಗಳಿಗಭಿಮುಖವಾಗಿ । **ಸು**—ಇಂದ್ರನು ಬರಲಿ । **ಯತ್**—ಯಾವಾಗ । **ಸೋಮಸ್ಯ**—ಸೋಮವಂತನಾದ ನನ್ನ । **ಅಂಧಸಃ**—ಹವಿಸ್ಸನ್ನು । **ಬುಭೋಧತಿ**—ಅರಿತು ರುಚಿನೋಡುವನೋ ಆಗ । **ಇಂದ್ರಃ**—ಇಂದ್ರನು । **ಅಸ್ಮಾಕಂ**—ನಮ್ಮಿಂದ ಅರ್ಪಿತವಾದ । **ಉಭಯಂ**—ಹವಿಸ್ಸು ಮತ್ತು ಸ್ತುತಿಗಳೆರಡನ್ನೂ । **ಜುಜೋಷತಿ**—ಸೇವಿಸುತ್ತಾನೆ.

। ಭಾವಾರ್ಥ ।

ಇಂದ್ರನನ್ನೇ ಧ್ಯಾನಿಸುವ ಯಜಮಾನನ ಯಜ್ಞನಿಮಿತ್ತವಾಗಿ ಹೋಗತಕ್ಕ ಅಶ್ವಗಳನ್ನು ಇಂದ್ರನು ಪ್ರೇರಿಸಿ ಕಳುಹಲಿ ಉತ್ತಮವಾದ ಮಾರ್ಗಗಳಿಂದ ಇಂದ್ರನನ್ನು ಪೂಜಿಸುವ ಯಜಮಾನನ ಉತ್ಕೃಷ್ಟವಾದ ಸ್ತುತಿಗಳಿಗಭಿಮುಖವಾಗಿ ಇಂದ್ರನು ಬರಲಿ. ಯಾವಾಗ ಇಂದ್ರನು ಸೋಮವಂತನಾದ ನನ್ನ ಹವಿಸ್ಸನ್ನು ಅರಿತು ರುಚಿನೋಡುವನೋ ಆಗ ಇಂದ್ರನು ನಮ್ಮಿಂದ ಅರ್ಪಿತವಾದ ಹವಿಸ್ಸು ಮತ್ತು ಸ್ತುತಿಗಳೆರಡನ್ನೂ ಸೇವಿಸುತ್ತಾನೆ.

English Translation

Indra sends his quick-going horses to the service of the (worshipper) expectant (of his arrival): may he come to the excellent (adorations) of the (worshipper), propitiating him by suitable means; Indra is gratified by both our (oblations and praises), when he recognizes (the taste) of the food presented by the offerer of the Soma.

। ಸಂಹಿತಾಪಾಠಃ ।

ವೀಂದ್ರ ಯಾಸಿ ದಿವ್ಯಾನಿ ರೋಚನಾ ವಿ ಪಾರ್ಥಿವಾನಿ ರಜಸಾ ಪುರುಷ್ಟುತ।
ಯೇ ತ್ವಾ ವಹಂತಿ ಮುಹುರದ್ರಯೋ ಉಪ ತೇ ಸು ವನ್ವಂತು ವಗ್ವನಾ
ಅರಾಧಸಃ ॥ ೨ ॥

॥ पदपाठः ॥

वि । इन्द्र । यासि । दिव्यानि । रोचना । वि । पार्थिवानि । रजसा । पुरुऽस्तुत ।
यो । त्वा । वहन्ति । मुहुः । अध्वरान् । उप । ते । सु । वन्वन्तु । वग्वनाः
अराधसः ॥ ३ ॥

॥ सायणभाष्यं ॥

हे इन्द्र दिव्यानि दिवि भवानि रोचना रोचनानि दीप्तिस्वभावकानि ज्योतीं
यद्वा दिव्यालोकान्वियासि । व्याप्नोषि । हे पुरुहूत बहुभिः स्तुतेन्द्र पार्थिवा
पृथिव्यां भवानि रजसात्मीयेन ज्योतिषा विद्युल्लक्षणेन । यद्वा ॥ रजःशब्दाच्छ
अकारः ॥ पार्थिवालोकान् । व्याप्नोषि । ये ते त्वदीया अश्वा मुहुः पुनःपुनरध्वरं
नस्मदीयान्यज्ञान्प्रति त्वा त्वामुप वहन्ति समीपे प्रापयन्ति तेऽश्वा वग्वनाः
नेन स्तुत्या संभक्तारोऽराधसो धनरहितानस्मान् सु सुष्ठु वन्वन्तु । धनप्रदानाभ्यां
संभजन्तां ॥

॥ प्रतिपदार्थ ॥

इन्द्र—ऐश्वर्यवन्त इन्द्रनेऽ । दिव्यानि—द्युलोकस्थवाद । रोचना—तेजस्सुगळन्नु
वि यासि—नीनु व्याप्तिसुत्तीयेऽ । पुरुहूत—अनेकरिंद स्तुतिसल्पडुव ऐश्वर्यवन्त इन्द्रनेऽ
रजसा—निन्न तेजस्सिनिंद । पार्थिवानि—पृथ्विस्थवाद ज्योतिगळन्नू । वि—व्याप्तिसुत्तीयेऽ
ये—यावव निन्न अश्वगळु । मुहुः—अनेक वेळे । अध्वरान्—नम्म यागक्के । त्वा—निन्नन्नु
उप वहन्ति—करेतरुवुवो । ते—आ अश्वगळु । वग्वनाः—स्तुतियुक्तरादवरू । अराधसः
धनरहितरू आद नम्मन्नु । सु—अधिकवागि । वन्वन्तु—धनयोजितरन्नागि माडलि.

॥ भावार्थ ॥

ऐश्वर्यवन्त इन्द्रनेऽ, नीनु द्युलोकस्थवाद तेजस्सुगळन्नु व्याप्तिसुत्तीयेऽ. अनेकरिं
स्तुतिसल्पडुव ऐश्वर्यवन्त इन्द्रनेऽ, निन्न तेजस्सिनिंद पृथ्विस्थवाद ज्योतिगळन्नु नीनु व्याप्तिसुत्तीयेऽ
यावव निन्न अश्वगळु अनेकवेळे नम्म यागक्के निन्नन्नु करेतरुवुवो आ अश्वगळु स्तुतियुक्तरा
वरू धनरहितरू, आद नम्मन्नु अधिकवागि धनवंतरन्नागि माडलि.

English Translation

Indra, you are praised by many, you pervade the luminaries
heaven and earth with your lustre; may the horses that repeatedly brin
you to our sacrifices, pleased by our praise, bring affluence to us who ar
poor.

॥ ಸಂಹಿತಾಪಾಠಃ ॥

ತದಿನ್ಮೇ ಛಂತ್ಸದ್ವಪುಷೋ ವಪುಷ್ಟರಂ ಪುತ್ರೋ ಯಜ್ಜಾನಂ ಪಿತ್ರೋರಧೀಯತಿ ।
ಜಾಯಾ ಪತಿಂ ವಹತಿ ವಗ್ನುನಾ ಸುಮತ್ಪುಂಸ ಇದ್ಭದ್ರೋ ವಹತುಃ ಪರಿಷ್ಕೃತಃ ॥ ೩ ॥

॥ ಪದಪಾಠಃ ॥

ತತ್ । ಇತ್ । ಮೇ । ಛಂತ್ಸತ್ । ವಪುಷಃ । ವಪುಃತರಂ । ಪುತ್ರಃ । ಯತ್ । ಜಾನಂ । ಪಿತ್ರೋಃ ।
ಅಧಿಇಯತಿ ।
ಜಾಯಾ । ಪತಿಂ । ವಹತಿ । ವಗ್ನುನಾ । ಸುಮತ್ । ಪುಂಸಃ । ಇತ್ । ಭದ್ರಃ । ವಹತುಃ । ಪರಿಕೃತ ।

॥ ಸಾಯಣಭಾಷ್ಯಂ ॥

ವಪುಷಃ । ವಪೂ ರೂಪಂ । ತದ್ವಾಲ್ಲಕ್ಷ್ಯತೇ । ವಪುಷ್ಮತೋಽಪಿ ವಪುಷ್ಟರಂ ರೂಪವತ್ತರಮತ್ಯಂತಂ ಸುರೂಪಂ ತದ್ಯಜ್ಞಕರ್ಮ ಮೇ ಮಹ್ಯಂ ಛಂತ್ಸತ್ । ಇಂದ್ರಃ ಕಾಮಯತಾಂ । ಯದ್ಯದಾ ಪುತ್ರೋ ಜಾನಂ ಜನ್ಮಾತ್ಮನ ಉತ್ಪತ್ತಿಂ ಪಿತ್ರೋರ್ಮಾತಾಪಿತ್ರೋಃ ಸಕಾಶಾದಧೀಯತಿ ಸಂಕೀರ್ತನದ್ವಾರೇಣಾಧಿಗಚ್ಛತಿ । ಸುಬ್ರಹ್ಮಣ್ಯಾಹ್ವಾನಕಾಲೇಽಮುಕಶರ್ಮಣಃ ಪುತ್ರೋ ಯಜತ ಇತ್ಯಾತ್ಮನೋ ಜನ್ಮ ಸಂಕೀರ್ತಯತಿ । ಯದ್ವಾ । ಯಜ್ಞನಾದಾಗತಂ ಧನಂ ಪಿತ್ರೋಃ ಸಕಾಶಾತ್ಪುತ್ರೋಽಧಿಗಚ್ಛತಿ ತದೇವ ಮಹ್ಯಮಿಚ್ಛತು । ಜಾಯಾ ಪತ್ನೀ ಪತಿಂ ಯಜಮಾನಂ ಸುಮತ್ಕಲ್ಯಾಣೇನ ವಗ್ನುನಾ ವಾಗ್ರೂಪೇಣ ಶಬ್ದೇನ ವಹತಿ । ಆತ್ಮಸಮೀಪಂ ಪ್ರಾಪಯತಿ । ಭದ್ರೋ ಭಜನೀಯಃ ಪರಿಷ್ಕೃತಃ ಸುಸಂಸ್ಕೃತಃ ಪುಂಸ ಇತ್ । ಪತ್ಯುರೇವೇತ್ಯರ್ಥಃ । ವಹತುರ್ಜಾಯಾಯೈ ಪ್ರದಾತವ್ಯಃ । ತದುಕ್ತಂ । ಸುಭದ್ರಮಯರ್ಯ ಭೋಜನಂ ಬಿಭರ್ಷಿ । ಋ ೮-೧-೩೪ । ಇತಿ । ಯದ್ವಾ । ಪುಂಸೋಽತಿಶೂರಸ್ಯೇಂದ್ರಸ್ಯಾರ್ಥಾಯ ಭದ್ರೋ ಭಜನೀಯೋ ವಹತುರ್ವಹನಶೀಲೋ ದೇವಾನ್ಪ್ರತಿ ಸ ಸೋಮಃ ಪರಿಷ್ಕೃತಃ ಸಂಸ್ಕೃತೋ ಭವತಿ । ತದೇಂದ್ರಃ ಕಾಮಯತಾಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಯತ್—ಯಾವಾಗ । ಪುತ್ರಃ—ಪುತ್ರನು । ಜಾನಂ—ತನ್ನ ಜನ್ಮವನ್ನು । ಪಿತ್ರೋಃ—ಮಾತಾಪಿತಗಳಿಂದ । ಅಧೀಯತಿ—ಹೊಂದಿ ತನ್ನ ಜನ್ಮವನ್ನು ಪ್ರಕಟಿಸುವನೋ ಆಗ । ವಪುಷಃ—ಅತ್ಯಂತ ಸುಂದರವಾದುದ

ಕ್ಕಿಂತಲೂ । ವಪುಷ್ಟರಂ—ಅಧಿಕವಾಗಿ ಸುಂದರವಾದ । ತತ್—ಯಜ್ಞಕರ್ಮವನ್ನು । ಮೇ—ನನಗಾಗಿ । ಛಂತ್ಸತ್—ಇಂದ್ರನು ಅಪೇಕ್ಷಿಸಲಿ । ಜಾಯಾ—ಪತ್ನಿಯು । ಪತಿಂ—ಯಜಮಾನನನ್ನು । ಸುಮತ್—ಆಕರ್ಷಕವಾದ । ವಗ್ನುನಾ—ಮಾತುಗಳಿಂದ । ವಹತಿ—ತನ್ನಲ್ಲಿಗೆ ಬರಮಾಡಿಕೊಳ್ಳುತ್ತಾಳೆ । ಪುಂಸಃ—ಪತಿಯ । ಭದ್ರಃ—ಕಲ್ಯಾಣಾತ್ಮಕವಾದ । ಪರಿಷ್ಕೃತಃ—ಸುಸಂಸ್ಕೃತಿಯು । ವಹತುಃ—ಪತ್ನ್ಯರ್ಥವಾಗಿಯೇ ಇರುತ್ತದೆ.

। ಭಾವಾರ್ಥ ।

ಯಾವಾಗ ಮಾತಾಪಿತೃಗಳಿಂದ ಪುತ್ರನು ತನ್ನ ಜನ್ಮವನ್ನು ಹೊಂದಿ ಇದನ್ನು ಪ್ರಕಾಶಪಡಿಸುವನೋ ಆಗ ಅತ್ಯಂತ ಸುಂದರವಾದುದಕ್ಕಿಂತಲೂ ಅಧಿಕವಾಗಿ ಸುಂದರವಾದ ಯಜ್ಞಕರ್ಮನನ್ನು ನನಗಾಗಿ ಇಂದ್ರನು ಅಪೇಕ್ಷಿಸಲಿ. ಪತ್ನಿಯು ಯಜಮಾನನನ್ನು ಆಕರ್ಷಕವಾದ ಮಾತುಗಳಿಂದ ತನ್ನಲ್ಲಿಗೆ ಬರಮಾಡಿಕೊಳ್ಳುತ್ತಾಳೆ. ಪತಿಯ ಕಲ್ಯಾಣಾತ್ಮಕವಾದ ಸುಸಂಸ್ಕೃತಿಯು ಪತ್ನ್ಯರ್ಥವಾಗಿಯೇ ಇರುತ್ತದೆ

English Translation

May (Indra) desire for me this (act of sacrifice), the most beautiful of beautiful things, (as) when a son proclaims his birth from his parents. The wife brings her husband (to her side) with gentle words: the good fortune of the husband is perfected only as marriage

। ಸಂಹಿತಾಪಾಠಃ ।

ತದಿತ್ಸಧಸ್ಥಮಭಿ ಚಾರು ಧೀಧಯು ಗಾವೋ ಯಚ್ಛಾಸನ್ನಹತುಂ ನ ಧೇನವಃ ।

ಮಾತಾ ಯನ್ಮಂತುರ್ಯೂಥಸ್ಯ ಪೂರ್ವ್ಯಾಭಿ ವಾಣಸ್ಯ ಸಪ್ತಧಾತುರಿಜ್ಜನಃ ॥ ೪ ॥

। ಪದಪಾಠ ।

ತತ್ । ಇತ್ । ಸಧಸ್ಥಂ । ಅಭಿ । ಚಾರು । ಧೀಧಯು । ಗಾವಃ । ಯತ್ । ಶಾಸನ್ । ವಹತುಂ । ನ । ಧೇನವಃ ।

ಮಾತಾ । ಯತ್ । ಮಂತುಃ । ಯೂಥಸ್ಯ । ಪೂರ್ವ್ಯಾ । ಅಭಿ । ವಾಣಸ್ಯ । ಸಪ್ತಧಾತುಃ । ಇತ್ । ಜನಃ ॥ ೪ ॥

॥ ಸಾಯಣಭಾಷ್ಯಂ ॥

ತದಿತ್ತದೇವ ಸಧಸ್ಥಂ। ಸಹ ತಿಷ್ಠಂತ್ಯತ್ರೇತಿ ಸಧಸ್ಥಂ ಸ್ಥಾನಂ ಯಜ್ಞಾಖ್ಯಂ। ಚಾರು ಶೋಭನಮಭಿ ದೀಧಯ। ಹೇ ಇಂದ್ರ ಅಭಿತೋ ದೀಪ್ಯಸ್ವ। ಯದ್ಯದಾ ಗಾವಃ ಸ್ತುತಿಲಕ್ಷಣಾ ವಾಚ ಇಂದ್ರ ಆಗಚ್ಛ ಹರಿವ ಆಗಚ್ಛೇತ್ಯೇವಮಾದ್ಯಾಃ ಶಾಸನ್ ಅಸ್ಮದ್ಯಜ್ಞಂ ಪ್ರತಿ ತ್ವದಾಗಮನಮಾಶಾಸತೇ। ತತ್ರ ದೃಷ್ಟಾಂತಃ। ವಹತುಂ ನ ಧೇನವಃ ಯಥಾ ಧೇನವೋ ನವಪ್ರಸೂತಾ ಗಾವಃ ಸ್ವಾಪಣಸಾಧನಂ ಗೃಹಮಾಶಾಸತೇ ತದ್ವತ್। ಯತ ಆಗಚ್ಛೇತ್ಯಪ್ರಕಾಶಸ್ತತೋಽತ್ರ ಕಾರಣಮಾಹ। ಯದ್ಯಸ್ಮಾನ್ಮಂತುಃ। ಮನ್ಯತಿರರ್ಚತಿಕರ್ಮಾ। ಅರ್ಚಕಸ್ಯ ಮನು ಸ್ವಭೂತಾ ಮಾತಾ ದೇವತಾಗುಣಾನಾಂ ನಿಷ್ಪಾದಯಿತ್ರೀ ಸ್ತುತಿರ್ಯೂಥಸ್ಯ ಯಷ್ಟೃಸ್ತೋತೃಗಣಸ್ಯ ಪೂರ್ವ್ಯಾ ಪ್ರಥಮಭಾವಿನೀ ಖಲು। ಯಸ್ಮಾಚ್ಚ ಸಪ್ತಧಾತುಃ। ಧಾರ್ಯಂತೇ ಕ್ರಿಯಂತೇ ಕರ್ಮಾಣ್ಯೇಷ್ವಿತಿ ಧಾತವಶ್ಛಂದಾಂಸ್ಯುತವೋ ವಾ। ಸಪ್ತಚ್ಛಂದಸ್ಕಃ ಸಪ್ತರ್ಚಕಃ ಸಪ್ತಹೋತ್ರಾತ್ಮಕೋ ವಾಯಂ ಜನೋ ವಾಣಸ್ಯ ಸ್ತುತಿಶಬ್ದಸ್ಯಾಭಿಖಲು। ತಸ್ಮಾಚ್ಚೇಫ್ಯಮಾಗಚ್ಛೇತಿ ಭಾವಃ। ಯದ್ವಾ। ಯತ್ಕಲ್ಯಾಣಂ ತದೇವ ಸ್ಥಾನಮಸ್ಮಾಕಮಭಿಕರ್ತಾ ಧಾರಯ। ಪ್ರಯಚ್ಛ। ಯಸ್ಮಿನ್ಸ್ಥಾನೇ ಧೇನವಃ ಪಯಃಪ್ರದಾನೇನ ಪ್ರೀಣಯಿತ್ರ್ಯೋ ಗಾವೋ ವಹತುಂ। ಉಹ್ಯತೇ ಪುರುಷೋಽನೇನೇತಿ ವಹತುರನ್ನಂ। ಪಯೋಘೃತಾದ್ಯನುಶಾಸತಿ। ನ ಸಂಪ್ರತ್ಯರ್ಥೇ। ಇದಾನೀಂ ಪ್ರಯಚ್ಛಂತಿ। ತಥಾ ಯಸ್ಮಿನ್ಮಂತುರ್ಮಂತವ್ಯಾ ಪೂಜನೀಯಾ ಪುತ್ರಸಮೂಹಸ್ಯ ಮಾತಾಭಿಗಚ್ಛತಿ ವಾಣಸ್ಯ ವಾದ್ಯಸ್ಯ ಸಪ್ತಧಾತುರ್ನಿಷಾದಾದಿಸಪ್ತಸ್ವರೋಪೇತೋ ಜನೋಽಭಿಗಚ್ಛತಿ ತದ್ವತ್ತದ್ವಜ್ಜನೋಪೇತಂ ಪ್ರಯಚ್ಛೇತಿ ಭಾವಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಯತ್**–ಯಾವ ಕಾರಣದಿಂದ। **ಮಂತುಃ**–ದೇವಪೂಜಕನಾದ ಯಜಮಾನನ। **ಮಾತಾ**–ಸ್ತುತಿಯು। **ಯೂಥಸ್ಯ**—ಇತರ ಸ್ತುತಿಕರ್ತರ ಸ್ತುತಿಗಿಂತಲೂ। **ಪೂರ್ವ್ಯಾ**—ಪ್ರಥಮಭಾವಿನಿಯಾಗಿರುವುದೋ। (**ಯತ್**—ಯಾವ ಕಾರಣದಿಂದ) । **ಸಪ್ತಧಾತುಃ**—ಸಪ್ತಚ್ಛಂದಸ್ಸುಗಳಿಂದ ಕೂಡಿದ। **ಜನಃ**—ಯಜಮಾನನು। **ವಾಣಸ್ಯ ಅಭಿ**—ಸ್ತುತಿನಿರ್ಮಾಪಕನಾಗಿರುವನೋ ಆದುದರಿಂದಲೇ। **ಧೇನವಃ**—ಧೇನುಗಳು। **ವಹತುಂ ನ**—ತಮ್ಮ ಕೊಟ್ಟಿಗೆಗಳನ್ನು ಸೇರಲಿಚ್ಛಿಸುವಂತೆ । **ಯತ್**—ಎಲ್ಲಿ (ಯಾವಾಗ) । **ಗಾವಃ**—ಸ್ತುತಿರೂಪವಾದ ವಾಕ್ಯಗಳು। **ಶಾಸನ್**—ನಿನ್ನ ಆಗಮನವನ್ನು ನಿರೀಕ್ಷಿಸುವುವೋ। **ತದಿತ್**—ಆ ಒಡನೆಯೇ । **ಸಧಸ್ಥಂ ಅಭಿ**—ನಮ್ಮ ಯಜ್ಞಸ್ಥಾನಾಭಿಮುಖವಾಗಿ। **ಚಾರು**—ಆಕರ್ಷಕವಾಗಿ। **ದೀಧಯ**—ಪ್ರಕಾಶಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಕಾರಣದಿಂದ ದೇವಪೂಜಕನಾದ ಯಜಮಾನನ ಸ್ತುತಿಯು ಇತರ ಪೂಜಕರ ಸ್ತುತಿಗಿಂತಲೂ ಪ್ರಥಮಭಾವಿನಿಯಾಗಿರುವುದೋ, ಯಾವ ಕಾರಣಗಳಿಂದ ಸಪ್ತಚ್ಛಂದಸ್ಸುಗಳಿಂದ ಕೂಡಿದ ಯಜಮಾನನು ಸ್ತುತಿನಿರ್ಮಾಪಕನಾಗಿರುವನೋ ಆದುದರಿಂದಲೇ, ಧೇನುಗಳು ತಮ್ಮ ಕೊಟ್ಟಿಗೆಗಳನ್ನು ಸೇರಲಿಚ್ಛಿಸುವಂತೆ, ಯಾವಾಗ ಸ್ತುತಿರೂಪವಾದ ವಾಕ್ಯಗಳು ನಿನ್ನ ಆಗಮನವನ್ನು ನಿರೀಕ್ಷಿಸುವುವೋ ಆ ಒಡನೆಯೇ, ನಮ್ಮ ಯಜ್ಞಸ್ಥಾನದಲ್ಲಿ ಆಕರ್ಷಕವಾಗಿ ಪ್ರಕಾಶಿಸು

English Translation

Shine, Indra, upon this elegant chamber of sacrifice when our praises desire (your approach) as milch cows (desire) their stalls; since the praise of (me) the worshipper precedes (the adoration) of the company, and this person accompanied by the seven officiating priests is (the offerer) of praise.

॥ ವಿಶೇಷವಿಷಯಗಳು ॥

ಸಪ್ತಧಾತುಃ—ಈ ಶಬ್ದಕ್ಕೆ ಸಪ್ತಚ್ಛಂದಸ್ಸುಗಳು, ಅಧಿಕಮಾಸವೂ ಸೇರಿ ಆಗುವ ಏಳು ಋತುಗಳು ಅಥವಾ ಸಪ್ತಹೋತೃಗಳು ಅಥವಾ ಋತ್ವಿಕ್ಕುಗಳು ಎಂದು ಮೂರುವಿಧವಾದ ಅರ್ಥವನ್ನು ಭಾಷ್ಯಕಾರರು ಹೇಳಿದಾರೆ.

। ಸಂಹಿತಾಪಾಠಃ ।

ಪ್ರ ವೋಽಚ್ಛಾ ರಿರಿಚೇ ದೇವಯುಷ್ಪದಮೇಕೋ ರುದ್ರೇಭಿರ್ಯಾತಿ ತುರ್ವಣಿಃ ।
ಜರಾ ವಾ ಯೇಷ್ವಮೃತೇಷು ದಾವನೇ ಪರಿ ವ ಊಮೇಭ್ಯಃ ಸಿಂಚತಾ ಮಧು ॥ ೫ ॥

। ಪದಪಾಠಃ ।

ಪ್ರ । ವಃ । ಅಚ್ಛ । ರಿರಿಚೇ । ದೇವಯುಃ । ಪದಂ । ಏಕಃ । ರುದ್ರೇಭಿಃ । ಯಾತಿ । ತುರ್ವಣಿಃ ।
ಜರಾ । ವಾ । ಯೇಷು । ಅಮೃತೇಷು । ದಾವನೇ । ಪರಿ । ವಃ । ಊಮೇಭ್ಯಃ । ಸಿಂಚತ । ಮಧು ॥

। ಸಾಯಣಭಾಷ್ಯಂ ।

ಹೇ ಯಜಮಾನಾಃ ದೇವಯುರ್ದೇವಾನ್ಕಾಮಯಮಾನೋ ಹೋತಾ ವೋ ಯುಷ್ಮಾಕಂ ಪದಮುಚ್ಚ ಸ್ಥಾನಂ ಪ್ರತಿ ಪ್ರ ರಿರಿಚೇ । ಪ್ರರಿಕ್ತೋಽಭೂತ್ । ಅಥ ಹೋತೃಭ್ಯಃ ಸಕಾಶಾದೇಕೋ ಮುಖ್ಯ ಇಂದ್ರೋ ರುದ್ರೇಭೀ ರುದ್ರಪುತ್ರೈರ್ಮರುದ್ಭಿಃ ಸಹ ತುರ್ವಣಿಃ ಕ್ಷಿಪ್ರಗಾಮಿನಾ ಸನ್ಯಾತಿ । ಗಚ್ಛತಿ ಯುಷ್ಮದೀಯಂ ಯಜ್ಞಂ । ಜರಾ ವಾ । ವಾಶಬ್ದೋಽಪ್ಯರ್ಥೇ । ಸ್ತುತಿರಪಿ ಯೇಷ್ವಮೃತೇಷು ಮರಣಧರ್ಮರಹಿತೇಷು ದೇವೇಷು ದಾವನೇ ಧನಪ್ರದಾನಾಯ ಸಮರ್ಥಾ ಭವತಿ । ತಸ್ಮಾದ್ಯೂಯಂ ॥ ಛಾಂದಸೋ ವಸಾದೇಶಃ ॥ ಊಮೇಭ್ಯೋ ರಕ್ಷಿತೃಭ್ಯೋ ದೇವೇಭ್ಯೋ ಮಧು ಮದಕರಂ । ಸೋಮಮುದ್ಭಿಃ ಪರಿ ಸಿಂಚತ ॥

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) ದೇವಯುಃ—ದೇವಪೂಜೆಯನ್ನಿಚ್ಛಿಸುವ ಹೋತೃವು । **ವಃ**—ನಿಮ್ಮ । **ಪದಂ ಅಚ್ಛ**—ಯಜ್ಞಸ್ಥಾನಾಭಿಮುಖವಾಗಿ । **ಪ್ರ ರಿರಿಚೇ**—ಅತಿಶಯವಾಗಿ ಬರುತ್ತಾನೆ । **ವಿಕಂ**—ಹೋತೃಗಳಲ್ಲಿ ಶ್ರೇಷ್ಠನಾದ ಇಂದ್ರನು । **ರುದ್ರೇಭಿಃ**—ಮರುತ್ತುಗಳೊಡಗೂಡಿ । **ತುರ್ವಣಿಃ**—ಕ್ಷಿಪ್ರಗಾಮಿಯಾಗಿ । **ಯಾತಿ**—ಬರುತ್ತಾನೆ । **ಜರಾ ವಾ**—ಸ್ತುತಿಯೂ ಸಹ । **ಯೇಷು ಅಮೃತೇಷು**—ಮರಣಧರ್ಮರಹಿತರಾದ ಯಾವ ದೇವತೆಗಳನ್ನು ಸೇರುವುದರಿಂದ । **ದಾವನೇ**—ಧನದಾನಕ್ಕೆ ಸಮರ್ಥವಾಗುವುದೋ । **ಊಮೇಭ್ಯಃ**—ರಕ್ಷಕರಾದ ಅದೇ ದೇವತೆಗಳಿಗೋಸ್ಕರ । **ಮಧು**—ರುಚಿಕರವಾದ ಸೋಮವನ್ನು । **ಪರಿ ಷಿಂಚತ**—ಉದಕಗಳೊಂದಿಗೆ ಸೇರಿಸಿರಿ.

॥ ಭಾವಾರ್ಥ ॥

ಎಲೈ ಯಜಮಾನರೇ, ದೇವಪೂಜೆಯನ್ನಿಚ್ಛಿಸುವ ಹೋತೃವು ನಿಮ್ಮ ಯಜ್ಞಸ್ಥಾನಾಭಿಮುಖವಾಗಿ ಅತಿಶಯವಾಗಿ ಬರುತ್ತಾನೆ. ಹೋತೃಗಳಲ್ಲಿ ಶ್ರೇಷ್ಠನಾದ ಇಂದ್ರನು ಮರುತ್ತುಗಳೊಡಗೂಡಿ ಕ್ಷಿಪ್ರಗಾಮಿಯಾಗಿ ಬರುತ್ತಾನೆ ಸ್ತುತಿಯೂ ಸಹ ಮರಣಧರ್ಮರಹಿತರಾದ ಯಾವ ದೇವತೆಗಳನ್ನು ಸೇರುವುದರಿಂದ ಧನಧಾನಕ್ಕೆ ಸಮರ್ಥವಾಗುವುದೋ, ರಕ್ಷಕರಾದ ಅದೇ ದೇವತೆಗಳಿಗೋಸ್ಕರವಾಗಿ ರುಚಿಕರವಾದ ಸೋಮವನ್ನು ಉದಕಗಳೊಂದಿಗೆ ಸೇರಿಸಿರಿ.

English Translation

The devout (priest) excels (going) towards your place of worship: the quick-moving (Indra), the chief (of the priests), proceeds with the Rudras, (the Maruts); sprinkle the exhilarating (Soma with water) for the protecting (deities), the immortals amongst whom praise is (able) to procure wealth.

॥ ಸಂಹಿತಾಪಾಠಃ ॥

ನಿಧೀಯಮಾನಮಪಗೂಳ್ಹಮಪ್ಸು ಪ್ರ ಮೇ ದೇವಾನಾಂ ವ್ರತಪಾ ಉವಾಚ।
ಇಂದ್ರೋ ವಿದ್ವಾ ಅನು ಹಿತ್ವಾ ಚಚಕ್ಷ ತೇನಾಹಮಗ್ನೇ ಅನುಶಿಷ್ಟ ಆಗಾಂ ॥ ೬ ॥

॥ ಪದಪಾಠಃ ॥

ನಿಽಧೀಯಮಾನಂ । ಅಪಽಗೂಳ್ಹಂ । ಅಪ್ಽಸು । ಪ್ರ । ಮೇ । ದೇವಾನಾಂ । ವ್ರತಽಪಾಃ । ಉವಾಚ।
ಇಂದ್ರಃ । ವಿದ್ವಾನ್ । ಅನು । ತ್ವಾ । ಚಚಕ್ಷ । ತೇನ । ಅಹಂ । ಅಗ್ನೇ । ಅನುಽಶಿಷ್ಟಃ । ಆ । ಅಗಾಂ ॥

। सायणभाष्यं ।

कुरुश्रवणस्य यज्ञे निधीयमानोऽग्निरभिधीयते । निधीयमानमध्वर्युर्-णाहवनीयेऽग्नावप्सु मातृभूतास्वपगूळ्हमुंतर्हितं देवानां व्रतपाः कर्मणो रक्षक इंद्रो मे मह्यं प्रोवाच । स्रावादीत् । हे अग्ने विद्वान्ज्ञानेन इंद्रः स्वाधिकारमस्मद्भक्तां वा त्वा त्वामनु हि चचक्ष । अनुगतः पश्चाद्ददर्श । तेनेंद्रे-णानुशिष्टोऽहमनेन पथा त्वया स्वर्गे गंतव्य इत्येवमुपदिष्टः सन्नागां अभिमुख्येन स्वर्गं गच्छेयं ॥

॥ प्रतिपदार्थ ॥

(एलै अग्नियೇ) निधीयमानं—ಆಹವನೀಯಾಗ್ನಿಯಲ್ಲಿ ನಿಕ್ಷಿಪ್ತನೂ । अप्सु—ಉದಕಗಳಲ್ಲಿ अपगूळ्हं—ಅಡಗಿಕೊಂಡಿರುವವನೂ ಆದ ನಿನ್ನ ವಿಷಯವನ್ನು । देवानां—ದೇವತೆಗಳ । व्रतपा—ಕರ್ಮಗಳಿಗೆ ಪಾಲಕನಾದ ಇಂದ್ರನು । मे—ನನಗೆ । प्र उवाच—ಹೇಳಿದನು । अग्ने—ಎಲೈ ಅಗ್ನಿಯೇ । विद्वान्—ಎಲ್ಲವನ್ನು ತಿಳಿದ । इंद्रः—ಇಂದ್ರನು । त्वा—ನಿನ್ನನ್ನು । अनु चचक्ष—ಒಡನೆಯೇ ಪ್ರತ್ಯಕ್ಷವಾಗಿ ನೋಡಿದ್ದಾನೆ । तेन—ಆ ಇಂದ್ರನಿಂದ । अनुशिष्टः—ಉಪದೇಶಿಸಲ್ಪಟ್ಟವನಾಗಿ । अहं—ನಾನು । अगां—ಸ್ವರ್ಗಾಭಿಮುಖವಾಗಿ ಹೋಗುವಂತೆ ಆಗಲಿ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಆಹವನೀಯಾಗ್ನಿಯಲ್ಲಿ ನಿಕ್ಷಿಪ್ತನೂ ಉದಕಗಳಲ್ಲಿ ಅಡಗಿಕೊಂಡಿರುವವನೂ ಆದ ನಿನ್ನ ವಿಷಯವನ್ನು ದೇವತೆಗಳ ಕರ್ಮಗಳಿಗೆ ಪಾಲಕನಾದ ಇಂದ್ರನು ನನಗೆ ಹೇಳಿದನು ಎಲೈ ಅಗ್ನಿಯೇ, ಎಲ್ಲವನ್ನು ತಿಳಿದ ಇಂದ್ರನು ನಿನ್ನನ್ನು ಒಡನೆಯೇ ಪ್ರತ್ಯಕ್ಷವಾಗಿ ನೋಡಿದ್ದಾನೆ. ಆ ಇಂದ್ರನಿಂದ ಉಪದೇಶಿಸಲ್ಪಟ್ಟವನಾಗಿ ನಾನು ಸ್ವರ್ಗಾಭಿಮುಖವಾಗಿ ಹೋಗುವಂತೆ ಆಗಲಿ.

English Translation

The guardian of the sacred rites of the gods, Indra, said to me, (Agni), who had been deposited in the waters; the sagacious Indra, following you, Agni, has discovered you, therefore admonished by him may I, Agni, proceed to heaven.

। संहितापाठः ।

अक्षेत्रवित्क्षेत्रविदं ह्यप्राट्स प्रैति क्षेत्रविदानुशिष्टः ।

एतद्वै भद्रमनुशासनस्योत स्तुतिं विंदत्यंजसीनाम् ॥ ८ ॥

॥ पदपाठः ॥

अक्षेत्रऽवित् । क्षेत्रऽविदं । हि । अप्राट् । सः । प्र । इति । क्षेत्रऽविदा । अनुऽशिष्टः ।
एतत् । वै । भद्रं । अनुऽशासनस्य । उत । स्मृतिं । विन्दते । आंजसीनाम् ॥ ६ ॥

॥ सायणभाष्यं ॥

सेयमनुशासनस्तुतिः प्रासंगिकी । अक्षेत्रवित् ॥ क्षि निवासगत्योः ॥ क्षेयते गम्यतेनेनेति क्षेत्रं पंथाः । पंथानमजानन् पुरुषः क्षेत्रविदं क्षेत्रज्ञं पुरुषमप्राट् । पृष्टवान् । स क्षेत्रविदा पृष्टिज्ञेन तेनानुशिष्टः प्रदर्शितमार्गः सन् प्रैति । स्वाभिलषितं देशं गच्छति । अनुशासनस्य मार्गोपदेशरूपस्यैतदा एतत्खलु भद्रं भजनीयं कल्याणकरं । किं तत् । उताऽपि चाऽऽंजसीनामृजूनां मार्गेण गंतव्यानामापां स्तुतिं मार्गं पिपासितः सन् विंदति । लभते । यदा । आंजसीनामिति स्तुतेर्विशेषणं । ऋजुमकुटिलमप्रयासेन गंतव्यं मार्गं लभते ऋलु ॥

॥ प्रतिपदार्थ ॥

अक्षेत्रवित्—ಉತ್ತಮವಾದ ಮಾರ್ಗವನ್ನು ತಿಳಿಯದಿರುವವನು । **क्षेत्रविदं**—ಮಾರ್ಗವನ್ನು ತಿಳಿದ ಪುರುಷನನ್ನು । **अप्राट्**—ಪ್ರಶ್ನಿಸಿ ಕೇಳುತ್ತಾನೆ । **सः**—ಅವನು । **क्षेत्रविदा**—ಮಾರ್ಗವನ್ನು ಅರಿತವನಿಂದ । **अनुशिष्टः**—ಉಪದೇಶಿಸಲ್ಪಟ್ಟು । **प्रैति**—ತಾನು ಇಷ್ಟಪಟ್ಟ ಪ್ರದೇಶಕ್ಕೆ ಹೋಗುತ್ತಾನೆ । **एतद्वै**—ಈ ಗುರಿಯನ್ನು ಮುಟ್ಟುವುದೇ । **अनुशासनस्य**—ಈ ಮಾರ್ಗೋಪದೇಶಕ್ಕೆ । **भद्रं**—ಕಲ್ಯಾಣಾತ್ಮಕವಾದ ಸಿದ್ಧಿಯಾಗಿರುತ್ತದೆ । **उत**—ಮತ್ತು । **आंजसीनां**—ನೇರವಾಗಿ ಹರಿಯುವ ಉದಕಗಳ । **स्मृतिं**—ಮಾರ್ಗವನ್ನು । **विन्दते**—(ಬಳಲಿದವನು) ಪಡೆಯುತ್ತಾನೆ.

॥ भावार्थ ॥

ಉತ್ತಮವಾದ ಮಾರ್ಗವನ್ನು ತಿಳಿದ ಪುರುಷನನ್ನು ತಿಳಿಯದಿರುವವನು ಪ್ರಶ್ನಿಸಿ ಕೇಳುತ್ತಾನೆ. ಮಾರ್ಗೋಪದೇಶವಾದನಂತರ ತಾನು ಇಷ್ಟಪಟ್ಟ ಪ್ರದೇಶಕ್ಕೆ ಹೋಗುತ್ತಾನೆ. ಈ ಗುರಿಯನ್ನು ಮುಟ್ಟುವುದೇ ಮಾರ್ಗೋಪದೇಶದ ಕಲ್ಯಾಣಾತ್ಮಕವಾದ ಸಿದ್ಧಿಯಾಗಿರುತ್ತದೆ. ನೇರವಾಗಿ ಹರಿಯುವ ಉದಕಗಳ ಮಾರ್ಗವನ್ನು ಬಳಲಿದವನು ಈ ಉಪದೇಶದಿಂದ ಪಡೆಯುತ್ತಾನೆ.

English Translation

One who knows not the road inquires it of one who knows it, and directed by him who knows the way proceeds (to his destination): such verily is the good of instruction, and (thereby) one finds the path of the things that are to be reached by a straight path.

। ಸಂಹಿತಾಪಾಠಃ ।

ಅದ್ಯೇದು ಪ್ರಾಣೀದಮನುನ್ನಿಮಾಹಾಪೀವೃತೋ ಅಧಯನ್ಮಾತುರೂಧಃ ।
ಏನೇನಮಾಪ ಜರಿಮಾ ಯುವಾನಮಹೇಳನ್ವಸುಃ ಸುಮನಾ ಬಭೂವ ॥

। ಪದಪಾಠಃ ।

ಅದ್ಯ । ಇತ್ । ಊಂ ಇತಿ । ಪ್ರ । ಅನೀತ್ । ಅಮನುನ್ । ಇಮಾ । ಅಹಾ । ಅಪೀವೃತಃ ।
ಅಧಯತ್ । ಮಾತುಃ । ಊಧಃ ।
ಅ । ಈಂ । ಏನಂ । ಆಪ । ಜರಿಮಾ । ಯುವಾನಂ । ಅಹೇಳನ್ । ವಸುಃ । ಸುಮನಾಃ । ಬಭೂವ ॥

। ಸಾಯಣಭಾಷ್ಯಂ ।

ಅಯಮಗ್ನಿರದ್ಯೇದದ್ಯೈವಾಸ್ಮಿನ್ದಿನೇ ಪ್ರಾಣೀತ್ । ಮಥನೇನ ಚೇಷ್ಟಿತೋಽಭವತ್ । ಶ್ವಸ ಪ್ರಾಣನೇ ಅನ ಚೇತಿ ಧಾತುಃ ॥ ತದಾನೀಮೇವೇಮೇಮಾನ್ಯಹಾಹಾನಿ ಸೌಮಿಕಾನ್ಯಮನುನ್ । ನೇತುಮಮನ್ಯತ ॥ ಮನ ಜ್ಞಾನೇ । ವೃತ್ಯಯೇನ ಶ್ಲುಃ । ತಿಙುತ್ತರತ್ವಾದನಿಘಾತಃ॥ ಅಪಿ ಚಾಪೀವೃತೋಽಸ್ತೇಜೋಭಿಃ ಪರಿವೃತಃ ಸನ್ ಮಾತುಃ ಪೃಥಿವ್ಯಾ ಊಧಃ ಸಾರಭೂತಂ ಸೋಮಾದಿಕಂ ಹವಿರಧಯತ್ । ಪಿಬತಿ । ತಥಾ ಯುವಾನಾಂ ನಿತ್ಯತರುಣಂ ದೇವಾನಾಂ ಹವಿಷಾ ಮಿಶ್ರಯಂತಂ ವೈನಮಗ್ನಿಂ ಜರಿಮಾ ॥ ಜರತಿಃ ಸ್ತುತಿಕರ್ಮಾ । ತಸ್ಮಾದೌಣಾದಿಕ ಇಮನಿಚ್ ॥ ಸ್ತೋತೃಭಿಃ ಕ್ರಿಯಮಾಣಾ ಸ್ತುತಿರಾಹ । ಅಭಿಮುಖ್ಯೇನ ವ್ಯಾಪ್ನೋತಿ । ಈಮಿತಿ ಪೂರಣಃ । ತತೋಽಹೇಳನ್ನಕ್ರುಧ್ಯನ್ ಸ್ತೋತೄನ್ಪ್ರತಿ ವಸುರ್ವಾಸಯಿತಾ ಸರ್ವೇಷಾಂ ಧನದಾನೇನಾಚ್ಛಾದಯಿತಾ ತೇಜೋಭಿಃ ಶತ್ರೂಣಾಂ ವಾ ವಸುಮಾನ್ವಾಗ್ನಿಃ ಸುಮನಾಃ ಶೋಭನಮನಸ್ಕೋ ಬಭೂವ ॥

। ಪ್ರತಿಪದಾರ್ಥ ।

ಅದ್ಯೇತ್—ಇದೇ ದಿನ । ಪ್ರಾಣೀತ್—ಮಥಿಸಲ್ಪಟ್ಟು ಅಗ್ನಿಯು ಚೈತನ್ಯಯುಕ್ತನಾದನು । ಇಮಾ ಅಹಾ—ಈ ಸೋಮಯಾಗದ ದಿನಗಳನ್ನು । ಅಮನುನ್—ನೆರವೇರಿಸಬೇಕೆಂದು ತಿಳಿದನು । ಅಪೀವೃತಃ—ತೇಜಸ್ಸುಗಳಿಂದ ಕೂಡಿದವನಾಗಿ । ಮಾತುಃ—ಪೃಥ್ವಿಗೆ ಸೇರಿದ । ಊಧಃ—ಸಾರಭೂತವಾದ ಹವಿಸ್ಸನ್ನು । ಅಧಯತ್—ಪಾನಮಾಡುತ್ತಾನೆ । ಯುವಾನಂ—ನಿತ್ಯತರುಣನಾದ । ಈಂ ಏನಂ—ಈ ಅಗ್ನಿಯನ್ನು । ಜರಿಮಾ—ಸ್ತುತಿಯು । ಆಪ—ವ್ಯಾಪಿಸುತ್ತದೆ । ವಸುಃ—ವಸತಿದಾಯಕನಾದ ಅಗ್ನಿಯು । ಅಹೇಳನ್—ಕ್ರೋಧರಹಿತನಾಗಿ । ಸುಮನಾಃ—ಅನುಗ್ರಹಬುದ್ಧಿಯುಳ್ಳವನಾಗಿ । ಬಭೂವ—ಆಗಿದ್ದಾನೆ.

। ಭಾವಾರ್ಥ ॥

ಇದೇ ದಿನ ಮಥಿಸಲ್ಪಟ್ಟು ಅಗ್ನಿಯು ಚೈತನ್ಯಯುಕ್ತನಾದನು. ಈ ಸೋಮಯಾಗದ ದಿನಗಳನ್ನು ನೆರವೇರಿಸಬೇಕೆಂದು ತಿಳಿದನು. ತೇಜಸ್ಸುಗಳಿಂದ ಕೂಡಿದವನಾಗಿ ಪೃಥ್ವಿಗೆ ಸೇರಿದ ಸಾರಭೂತವಾದ ಹವಿಸ್ಸನ್ನು

ಪಾನಮಾಡುತ್ತಾನೆ. ನಿತ್ಯತರುಣನಾದ ಅಗ್ನಿಯನ್ನು ಸ್ತುತಿಯು ವ್ಯಾಪಿಸುತ್ತದೆ. ವಸತಿದಾಯಕನಾದ ಅಗ್ನಿಯು ಕ್ರೋಧರಹಿತನಾಗಿ ಅನುಗ್ರಹಬುದ್ಧಿಯುಳ್ಳವನಾಗಿ ಆಗಿದ್ದಾನೆ.

English Translation

To-day (Agni) breathed: he purposed (to conduct) these days surrounded (by lustre), and drank the sap of his mother (earth): the praise of his (worshippers) reaches the ever-youthful (Agni), and he has become gentle, generous, and well-disposed.

। ಸಂಹಿತಾಪಾಠಃ ।

ಏತಾನಿ ಭದ್ರಾ ಕಲಶ ಕ್ರಿಯಾಮು ಕುರುಶ್ರವಣ ದದತೋ ಮಘಾನಿ ।
ದಾನ ಇದ್ಸೋ ಮಘವಾನಃ ಸೋ ಅಸ್ತ್ವಯಂ ಚ ಸೋವೋ ಹೃದಿಯಂ
ಬಿಭರ್ಮಿ ॥ ೯ ॥

। ಪದಪಾಠಃ ।

ಏತಾನಿ । ಭದ್ರಾ । ಕಲಶ । ಕ್ರಿಯಾಮು । ಕುರುಽಶ್ರವಣ । ದದತಃ । ಮಘಾನಿ ।
ದಾನಃ । ಇತ್ । ವಃ । ಮಘಽವಾನಃ । ಸಃ । ಅಸ್ತು । ಅಯಂ । ಚ । ಸೋವಮಃ । ಹೃದಿ । ಯಂ ।
ಬಿಭರ್ಮಿ ॥ ೯ ॥

॥ ಸಾಯಣಭಾಷ್ಯಂ ॥

ಹೇ ಕಲಶ ಸರ್ವಕಲಾಪರಿಪೂರ್ಣ । ಯದ್ವಾ । ಲುಪ್ತಮತ್ವರ್ಥೀಯಃ । ದ್ರೋಣಕಲಶವನ್ । ಹೇ ಕುರುಶ್ರವಣ । ಕುರವ ಋತ್ವಿಜಃ । ತೇಷಾಂ ಸ್ವಭೂತಾನಾಂ ಸ್ತುತೀನಾಂ ಶ್ರೋತರ್ಹೇ ಇಂದ್ರ ಮಘಾನಿ ಧನಾನಿ ಸ್ತೋತೃಭ್ಯೋ ಯಷ್ಟೃಭ್ಯಶ್ಚ ದದತಃ ಪ್ರಯಚ್ಛತಸ್ತವೇಂದ್ರಸ್ಯಾರ್ಥಮೇತಾನಿ ಭದ್ರಾ ಭಜನೀಯಾನಿ ಹವೀಂಷಿ ಸ್ತೋತ್ರಾಣಿ ಚ ಕ್ರಿಯಾಮು । ವಿಧೇಯಾಸ್ಮ ॥ ಕರೋತೇರಾಶೀರ್ಲಿಜಿ ರಿಜ್ ಶಯುಗ್ಲಿಂಕ್ಷು । ಪಾ ೭ ೪.೭೮ । ಇತಿ ರಿಜಾದೇಶಃ ॥ ಅಥ ಸ್ತೋತ್ಯಾನ್ಪ್ರತ್ಯಾಹ । ಹೇ ಮಘವಾನೋ ಮಹನೀಯಸ್ತೋತ್ರರೂಪಧನವಂತಃ ವೋ ಯುಷ್ಮಾಕಂ ಸ ಇಂದ್ರೋ ದಾನ ಇದ್ಧನಾದೇರ್ದಾತೈವಾಸ್ತು । ಭವತು । ಅಯಂ ಚ ಯಜ್ಞೇ ಸ್ಥಿತಃ ಸೋವೋ ದಾತಾಸ್ತು ಹೃದಯ ಆತ್ಮೀಯೇ ಯಂ ಪೀತಂ ಸೋಮಂ ಬಿಭರ್ಮಿ ಧಾರಯಾಮಿ॥ ಡುಭೃಞ್ ಧಾರಣಪೂಷಣಯೋಃ। ಜುಹೋತ್ಯಾದಿಕಃ। ಭೃಞಾಮಿತಿತ್ಕಿತ್ಯಾಸಸ್ಯೇತ್ವಂ । ಯದ್ವೋಗಾದನಿಘಾತಃ ॥ ಯದ್ವಾ । ಹೇ ಕಲಶಕುಲಜಾತ ಹೇ ಕುರುಶ್ರವಣೈತನ್ನಾಮಕ ತ್ರಸದಸ್ಯೋಃ ಪುತ್ರ ರಾಜನ್ ಋತ್ವಿಗ್ಭ್ಯೋ ಧನಾನಿ ಪ್ರಯಚ್ಛತಸ್ತವಾರ್ಥಂ ವಯಂ ಕರ್ಮಾಣಿ ಕ್ರಿಯಾಮು । ಮಘವಾನಃ ಕುರುಶ್ರವಣಾಃ । ಪೂಜಾಯಾಂ ಬಹುವಚನಮಿದಂ । ಯಾಗಕರ್ಮ ಕುರ್ವಾಣಸ್ಯ ತವೇಂದ್ರೋ ದಾತಾ ಭವತು । ಅಯಂ ಸೋಮಶ್ಚ ಧನಾನಿ ಪ್ರಯಚ್ಛತು ॥

॥ ಪ್ರತಿಪದಾರ್ಥ ॥

ಕಲಶ—ದ್ರೋಣಕಲಶವನ್ನು ಹೊಂದಿರುವವನೂ । **ಕುರುಶ್ರವಣ**—ಋತ್ವಿಕ್ಕುಗಳ ಸ್ತೋತ್ರಗಳನ್ನು ಕೇಳುವವನೂ ಆದ ಎಲೈ ಇಂದ್ರನೇ । **ಮಘಾನಿ**—ದ್ರವ್ಯಗಳನ್ನು । **ದದತಃ**—ಕೊಡತಕ್ಕ ನಿನಗಾಗಿ । **ಏತಾನಿ ಭದ್ರಾ**—ಮಂಗಳಕರಗಳಾದ ಈ ಹವಿಸ್ಸುಗಳನ್ನು । **ಕ್ರಿಯಾಮ**—ಅರ್ಪಿಸುತ್ತೇವೆ । **ಮಘವಾನಃ**—ಪೂಜ್ಯವಾದ ಸ್ತುತಿಗಳುಳ್ಳ ಎಲೈ ಸ್ತುತಿಕರ್ತರೇ । **ವಃ**—ನಿಮಗೆ । **ಸಃ**—ಇಂದ್ರನು । **ದಾನ ಇತ್**—ದಾನದಾತನಾಗಿಯೇ । **ಅಸ್ತು**—ಆಗಿರಲಿ । **ಯಂ**—ಯಾವ ಸೋಮವನ್ನು । **ಹೃದಿ**—ಹೃದಯದಲ್ಲಿ । **ಬಿಭರ್ಮಿ**—ನಾನು ಧರಿಸುವೆನೋ (ಎಂದರೆ ಪಾನಮಾಡುವೆನೋ) ಅಂತಹ । **ಅಯಂ ಸೋಮಃ**—ಈ ಸೋಮವು ಸಹ ಧನವನ್ನು ಕೊಡಲಿ.

॥ ಭಾವಾರ್ಥ ॥

ದ್ರೋಣಕಲಶವನ್ನು ಹೊಂದಿರುವವನೂ, ಋತ್ವಿಕ್ಕುಗಳ ಸ್ತೋತ್ರಗಳನ್ನು ಕೇಳುವವನೂ ಆದ ಎಲೈ ಇಂದ್ರನೇ, ದ್ರವ್ಯಗಳನ್ನು ಕೊಡತಕ್ಕ ನಿನಗಾಗಿ ಮಂಗಳಕರಗಳಾದ ಈ ಹವಿಸ್ಸುಗಳನ್ನು ಅರ್ಪಿಸುತ್ತೇವೆ. ಪೂಜ್ಯವಾದ ಸ್ತುತಿಗಳುಳ್ಳ ಎಲೈ ಸ್ತುತಿಕರ್ತರೇ, ನಿಮಗೆ ಇಂದ್ರನೂ, ನಾವು ಧ್ಯಾನಿಸತಕ್ಕ ಈ ಸೋಮವೂ ಸಹ ಧನವನ್ನು ಪ್ರಭೂತವಾಗಿ ಕೊಡಲಿ.

English Translation

(Indra), the possessor of the pitchers, the bearer of the praises of the Kurus, let us celebrate these auspicious adorations of you, the giver of riches: may he, (Indra), be the donor (of affluence) to you who are opulent, (in pious offering), and (so may) this Soma which I cherish in my heart.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ-ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ ಋಕ್ಸಂಹಿತಾಭಾಷ್ಯೇ ಸಪ್ತಮಾಷ್ಟಕೇ ಸಪ್ತಮೋಽಧ್ಯಾಯಃ ಸಮಾಪ್ತಃ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯಲ್ಲಿ ಏಳನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯವು ಸಮಾಪ್ತವು

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ।

॥ ಶುಭಂ ಭೂಯಾತ್ ॥

॥ ಮಂಗಳಂ ॥



॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥
ಸಪ್ತಮೇ ಸಪ್ತಮಂ ತ್ವದ್ಯ ವ್ಯಾಖ್ಯಾಯ ಶ್ರುತಿಕೋವಿದಃ ।
ಸಾಯಣಾರ್ಯಸ್ತತೋಽಧ್ಯಾಯಮಷ್ಟಮಂ ವ್ಯಾಚಿಕೀರ್ಷತಿ ॥

ಸಾಯಣಭಾಷ್ಯಸಹಿತಾ

ಋಗ್ವೇದಸಂಹಿತಾ

ಅಥ ಸಪ್ತಮಾಷ್ಟಕೇಽಷ್ಟಮೋಽಧ್ಯಾಯಃ

ಏಳನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು.

ಹತ್ತನೆಯ ಮಂಡಲದಲ್ಲಿ ಮೂವತ್ತಮೂರನೆಯ ಸೂಕ್ತವು.

॥ಸಾಯಣಭಾಷ್ಯಂ॥

ಅಥಾಷ್ಟಮೋಽಧ್ಯಾಯ ಆರಭ್ಯತೇ । ತತ್ರ ಪ್ರ ಮೇತಿ ನವರ್ಚಂ ಚತುರ್ಥಂ ಸೂಕ್ತಂ । ಐಲೂಷಸ್ಯ ಕವಷಸ್ಯಾರ್ಷಂ । ಆದ್ಯಾ ತ್ರಿಷ್ಟುಪ್ ಸಾ ಚ ವೈಶ್ವದೇವೀ । ದ್ವಿತೀಯಾತೃತೀಯೇ ಬೃಹತೀಸತೋಬೃಹತ್ಯಾವೈಂದ್ರ್ಯೌ । ಪರಾಃ ಷಡ್ಜಾಗತ್ರ್ಯಃ । ಕುರುಶ್ರವಣಮಾವೃಣೇತಿ ದ್ವಾಭ್ಯಾಂ ತತ್ಸದಸ್ಯಪುತ್ರಸ್ಯ ಕುರುಶ್ರವಣನಾಮ್ನೋ ರಾಜ್ಞೋ ದಾನಂ ತುಷ್ಟಾವ । ಅತಸ್ತದ್ದೇವತಾಕೇ । ಅಥ ಯಸ್ಯ ಪ್ರಸ್ವಾದಸ ಇತ್ಯಾದಿಭಿರ್ಷಡೃತ್ವಿಗ್ಭಿರ್ಮಾತ್ರಾತಿಥಿನಾಮ್ನಿ ರಾಜ್ಞಿ ಪರಲೋಕಂ ಗತೇ ಶೋಕಾಭಿಭೂತಂ ತಸ್ಯ ಪುತ್ರಮುಪಶ್ರವೋನಾಮಾನಂ ಕವಷ ಋಷಿಃ ಸ್ನೇಹವಶಾದಭಿಗತ್ಯ ವಿಗತಶೋಕಮಕರೋತ್ । ಅತಸ್ತಾಸಾಂ

ತದ್ದೇವತಾತ್ವಂ । ತಥಾ ಚಾನುಕ್ರಾಂತಂ । ಪ್ರ ಮಾದ್ಯಾ ವೈಶ್ವದೇವ್ಯೈಂದ್ರಃ ಪ್ರಗಾಥಃ ಪರಾ ಗಾಯತ್ಯೃಕ್ ದ್ವೇ ಕುರುಶ್ರವಣಸ್ಯ ತ್ರಾಸದಸ್ಯವಸ್ಯ ದಾನಸ್ತುತಿಃ ಪರಾಭಿರ್ಮೃತೇ ಮಿತ್ರಾತಿಥೌ ರಾಜ್ಞಿ ತಸ್ಮೈ ಸ್ನೇಹಾದೃಷಿರುಪಮಶ್ರವಸಂ ಪುತ್ರಮಸ್ಯ ವ್ಯಶೋಕಯದಿತಿ ॥ ಗತೋ ವಿನಿಯೋಗಃ ॥

ಅನುವಾದವು—ಈಗ ಏಳನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯದ ವ್ಯಾಖ್ಯಾನವು ಆರಂಭಿಸಲ್ಪಡುವುದು. ಈ ಅಧ್ಯಾಯದ ಮೊದಲನೆಯ ಸೂಕ್ತವಾದ **ಪ್ರ ಮಾ ಯುಯುಜ್ರೇ** ಎಂಬ ಈ ಸೂಕ್ತವು ಹತ್ತನೆಯ ಮಂಡಲದ ಮೂರನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಇಲೂಷಪುತ್ರನಾದ ಕವಷನೆಂಬುವನು ಋಷಿಯು. ಈ ಸೂಕ್ತದ ಮೊದಲನೆಯ ಋಕ್ಕು ತ್ರಿಷ್ಟುಪ್ ಛಂದಸ್ಕವು. ಮತ್ತು ವಿಶ್ವೇದೇವತಾಕವು. ಎರಡು ಮತ್ತು ಮೂರನೆಯ ಋಕ್ಕುಗಳು ಬೃಹತೀ ಮತ್ತು ಸತೋಬೃಹತೀಛಂದಸ್ಕವು ಮತ್ತು ಇವುಗಳಿಗೆ ಇಂದ್ರನು ದೇವತೆಯು; ಅಲ್ಲಿಂದ ಮುಂದಿನ ಆರು ಋಕ್ಕುಗಳು ಗಾಯತ್ರೀಛಂದಸ್ಕವು. **ಕುರು-ಶ್ರವಣಮಾವೃಣೀ** ಎಂದು ಮೊದಲಾಗುವ ಎರಡು ಋಕ್ಕುಗಳಿಂದ (೪-೫ ಋಕ್ಕುಗಳು) ಋಷಿಯು ತ್ರಸದಸ್ಯುಪುತ್ರನಾದ ಕುರುಶ್ರವಣನೆಂಬ ರಾಜನ ದಾನವನ್ನು ಪ್ರಶಂಸೆಮಾಡಿರುವನು ಆದ್ದರಿಂದ ಆ ಋಕ್ಕುಗಳಿಗೆ ದಾನಸ್ತುತಿಯೇ ದೇವತೆಯು, **ಯಸ್ಯ ಪ್ರಸ್ಥಾದಸಃ** ಎಂದು ಮೊದಲಾಗುವ ನಾಲ್ಕು ಋಕ್ಕುಗಳಿಂದ (೬-೯ ಋಕ್ಕುಗಳು) ಋಷಿಯು, ಮಿತ್ರಾತಿಥಿ ಎಂಬ ರಾಜನು ಮೃತನಾದಾಗ ಅವನ ಪುತ್ರನಾದ ಉಪಶ್ರವನೆಂಬುವವನನ್ನು ತನಗೆ ಅವನಲ್ಲಿರುವ ಸ್ನೇಹ ಭಾವದಿಂದ ಸಮಾಧಾನಮಾಡಿ ಶೋಕಪರಿಹಾರಮಾಡಿರುವ ವಿಷಯವನ್ನು ಪ್ರಸ್ತಾಪಿಸಿರುವನು. ಆದ್ದರಿಂದ ಆ ಋಕ್ಕುಗಳಿಗೆ ಉಪಶ್ರವನ ಶೋಕಪರಿಹಾರವೇ ದೇವತೆಯು. ಅನುಕ್ರಮಣಿಕೆಯಲ್ಲಿ—**ಪ್ರ ಮಾದ್ಯಾ ವೈಶ್ವದೇ-ವ್ಯೈಂದ್ರಃ ಪ್ರಗಾಥಃ ಪರಾ ಗಾಯತ್ಯೃಕ್ ದ್ವೇ ಕುರುಶ್ರವಣಸ್ಯ ತ್ರಾಸದಸ್ಯವಸ್ಯ ದಾನಸ್ತುತಿಃ ಪರಾ-ಭಿರ್ಮೃತೇ ಮಿತ್ರಾತಿಥೌ ರಾಜ್ಞಿ ತಸ್ಮೈ ಸ್ನೇಹಾದೃಷಿರುಪಮಶ್ರವಸಂ ಪುತ್ರಮಸ್ಯ ವ್ಯಶೋಕಯತ್** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

ಸೂಕ್ತ—೩೩

ಮಂಡಲ—೧೦ । ಅನುವಾಕ—೩ । ಸೂಕ್ತ—೩೩ ।
ಅಷ್ಟಕ—೭ ಅಧ್ಯಾಯ—೮ । ವರ್ಗ—೧, ೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಕವಷ ಐಲೂಷಃ ।
ದೇವತಾ—೧. ವಿಶ್ವೇದೇವಾಃ । ೨-೩ ಇಂದ್ರಃ । ೪-೫. ಕುರುಶ್ರವಣಸ್ಯ ತ್ರಾಸದಸ್ಯ-ವಸ್ಯದಾನಸ್ತುತಿಃ । ೬-೯. ಉಪಮಶ್ರವಾ ಮಿತ್ರಾತಿಥಿಪುತ್ರಃ ॥
ಛಂದಃ—೧ ತ್ರಿಷ್ಟುಪ್ । ೨. ಬೃಹತೀ । ೩. ಸತೋಬೃಹತೀ । ೪-೯ ಗಾಯತ್ರೀ ।

। ಸಂಹಿತಾಪಾಠಃ ।

ಪ್ರ ಮಾ ಯುಯುಜ್ರೇ ಪ್ರಯುಜೋ ಜನಾನಾಂ ವಹಾಮಿ ಸ್ಮ ಪೂಷಣ-ಮಂತರೇಣ ।

ವಿಶ್ವೇ ದೇವಾಸೋ ಅಧ ಮಾಮರಕ್ಷನ್ದುಃಶಾಸುರಾಗಾದಿತಿ ಘೋಷ ಆಸೀತ್ ॥ ೧ ॥

॥ ಪದಪಾಠಃ ॥

ಪ್ರ । ಮಾ । ಯುಯುಜ್ರೇ । ಪ್ರಯುಜಃ । ಜನಾನಾಂ । ವಹಾಮಿ । ಸ್ಮ । ಪೂಷಣಂ । ಅಂತರೇಣ ।
ವಿಶ್ವೇ । ದೇವಾಸಃ । ಅಧ । ಮಾಂ । ಅರಕ್ಷನ್ । ದುಃಶಾಸುಃ । ಆ । ಅಗಾತ್ । ಇತಿ । ಘೋಷಃ ।
ಆಸೀತ್ ॥ ೧ ॥

॥ ಸಾಯಣಭಾಷ್ಯಂ ॥

ಜನಾನಾಂ ಯಜಮಾನಾನಾಂ ಪ್ರಯುಜಃ ಪ್ರಯೋಕ್ತಾರೋ ದೇವಾ ಮಾ ಮಾಂ ಕವಷಮೃಷಿಂ ಪ್ರ ಯುಯುಯುಜ್ರೇ । ಕುರುಶ್ರವಣಂ ಪ್ರತಿ ಯುಕ್ತವಂತಃ । ಅಂತರೇಣ ಮಾರ್ಗೇ ಪೂಷಣಂ ದೇವಮಧ್ವನಾಂ ಪತಿಂ ಸಖಾಯಮಹಂ ವಹಾಮಿ ಸ್ಮ । ಊಢವಾನಸ್ಮಿ । ತಥಾ ಶ್ರೂಯತೇ । ಐಂದ್ರಾಗ್ನಮೇಕಾದಶಕಪಾಲಂ ನಿರ್ವಪೇಜ್ಜನತಾಮೇಷ್ಯನ್ನಿತ್ಯುಪಕ್ರಮ್ಯ ಪೌಷ್ಣಂ ಚರುಮನು ನಿರ್ವಪೇತ್ । ತೈ. ಸ. ೨.೨.೧.೪ । ಇತಿ । ಅಥಾಥ ಮಾರ್ಗೇ ವಿಶ್ವೇ ದೇವಾ ಮಾಂ ಕವಷಮರಕ್ಷನ್ । ರಕ್ಷಿತವಂತಃ । ದುಃಶಾಸುಃ ಕೇನಾಪಿ ದುಃಶಾಸನೋಽಯಮೃಷಿರಾಗಾತ್ ಆಗಚ್ಛತೀತಿ ಘೋಷಃ ಶಬ್ದಶ್ಚ ಮಾರ್ಗ ಆಸೀತ್ । ಅಭೂತ್ ॥

॥ ಪ್ರತಿಪದಾರ್ಥ ॥

ಜನಾನಾಂ—ಯಜಮಾನರಿಗೆ । ಪ್ರಯುಜಃ—ಪ್ರೇರಕರಾದ ದೇವತೆಗಳು । ಮಾ—ನನ್ನನ್ನು । ಪ್ರ ಯುಯುಯುಜ್ರೇ—ಕುರುಶ್ರವಣನಲ್ಲಿಗೆ ಕಾರ್ಯಾರ್ಥವಾಗಿ ನಿಯೋಜಿಸಿದರು । ಅಂತರೇಣ—ಮಧ್ಯಮಾರ್ಗದಲ್ಲಿ । ಪೂಷಣಂ—ಪೂಷದೇವನನ್ನು । ವಹಾಮಿ ಸ್ಮ—ಸಹಾಯಕ್ಕಾಗಿ ವಹಿಸಿದ್ದೇನೆ । ಅಧ—ಮಾರ್ಗಪ್ರಯಾಣ ಕಾಲದಲ್ಲಿ । ವಿಶ್ವೇ ದೇವಾಸಃ—ಸಕಲ ದೇವತೆಗಳೂ । ಮಾಂ—ನನ್ನನ್ನು । ಅರಕ್ಷನ್—ರಕ್ಷಿಸಿದರು । ದುಃಶಾಸುಃ—ಅಪ್ರತಿಹತನಾದ ಕವಷಋಷಿಯು । ಆಗಾತ್—ಬರುತ್ತಿದ್ದಾನೆ । ಇತಿ—ಎಂಬುದಾಗಿ । ಘೋಷಃ—ಪ್ರಕಟನಶಬ್ದವು । ಆಸೀತ್—ಕೇಳಿಬರುತ್ತಿದ್ದಿತು.

॥ ಭಾವಾರ್ಥ ॥

ಯಜ್ಞಕರ್ತರಿಗೆ ಪ್ರೇರಕರಾದ ದೇವತೆಗಳು ನನ್ನನ್ನು ಕುರುಶ್ರವಣನಲ್ಲಿಗೆ ಕಾರ್ಯಾರ್ಥವಾಗಿ ನಿಯೋಗಿಸಿದರು. ಮಧ್ಯಮಾರ್ಗದಲ್ಲಿ ನಾನು ಮಾರ್ಗದರ್ಶಕನಾದ ಪೂಷದೇವನನ್ನು ಸಹಾಯಕ್ಕಾಗಿ ಆಶ್ರಯಿಸಿದ್ದೇನೆ. ಪ್ರಯಾಣ ಕಾಲದಲ್ಲಿ ಸಕಲದೇವತೆಗಳೂ ನನ್ನನ್ನು ರಕ್ಷಿಸಿದರು "ಅಪ್ರತಿಹತನಾದ ಕವಷಋಷಿಯು ಬರುತ್ತಿದ್ದಾನೆ" ಎಂಬ ಘೋಷವು ಕೇಳಿಬರುತ್ತಿತ್ತು.

English Translation

The (divinities, the) appointers of men, have appointed me to Kurushravana : I have borne Pushan on the way : the universal gods are my protectors : the cry is " Duhshasu comes."

ಸಂಹಿತಾಪಾಠಃ ॥

ಸಂ ಮಾ ತಪಂತ್ಯಭಿತಃ ಸಪತ್ನೀರಿವ ಪರ್ಶವಃ ।

ನಿ ಬಾಧತೇ ಅಮತಿರ್ನಗ್ನತಾ ಜಸುರ್ವೇರ್ನ ವೇವೀಯತೇ ಮತಿಃ ॥೨॥

॥ ಪದಪಾಠಃ ॥

ಸಂ । ಮಾ । ತಪಂತಿ । ಅಭಿತಃ । ಸಪತ್ನೀಃಇವ । ಪರ್ಶವಃ ।

ನಿ । ಬಾಧತೇ। ಅಮತಿಃ। ನಗ್ನತಾ । ಜಸುಃ । ವೇಃ । ನ । ವೇವೀಯತೇ । ಮತಿಃ ॥ ೨ ॥

॥ ಸಾಯಣಭಾಷ್ಯಂ ॥

ಮಾ ಮಾಂ ದೇವತಾಪ್ರಸಾದರಹಿತಂ ಕವಷಂ ಪರ್ಶವಃ ಪಾರ್ಶ್ವಾಸ್ಥೀನ್ಯನ್ನಾಭಾವಾದ್ದೌರ್ಬಲ್ಯಾತ್ಕುಶಯನಾಚ್ಚ ಸಪತ್ನೀರಿವ ಯಥಾ ಸಪತ್ನ್ಯಸ್ತದ್ವದಭಿತ ಉಭಯತಃ ಸಂ ತಪಂತಿ । ದುಃಖಯಂತೀತ್ಯರ್ಥಃ । ಕಂಚಾಮತಿರ್ದಾರಿದ್ರ್ಯಾದಾಗತಾ ದುರ್ಮತಿಃ ಸರ್ವಾರ್ಥವಿಷಯಾ ಸಾ ಮಾಂ ನಿ ಬಾಧತೇ । ಮಾಂ ಪೀಡಯತಿ । ವಸ್ತ್ರಾಭಾವಾದಾಗತಾ ನಗ್ನತಾ ಚ ಮಾಂ ನಿ ಬಾಧತೇ । ಜಸುರಶನಾಭಾವಾದಾಗತ ಉಪಕ್ಷಯೋಽಪಿ ಮಾಂ ನಿ ಬಾಧತೇ । ಕಂಚ ವೇರ್ನ ಯಥಾ ಪಕ್ಷಿಣೋ ಮತಿಃ ಶಾಕುನಿಕವ್ಯಾಧಭಯಾತ್ಕಂಪಯತೇ ತಥಾ ಮೇ ಮತಿಃ ಶತ್ರೋರ್ಮೇವೀಯತೇ । ಭೃಶಂ ಕಂಪಯತೇ ॥

॥ ಪ್ರತಿಪದಾರ್ಥ ॥

ಮಾ—ನನ್ನನ್ನು । ಪರ್ಶವಃ—ಎರಡುಕಡೆಯ ಎಲುಬುಗಳೂ । ಸಪತ್ನೀರಿವ—ಸವತಿಯರಂತೆ । ಅಭಿತಃ—ಎರಡು ಕಡೆಗಳಲ್ಲಿಯೂ । ಸಂ ತಪಂತಿ—ಹಿಂಸೆಗೊಳಿಸುತ್ತವೆ । ಅಮತಿಃ—ದಾರಿದ್ರ್ಯದ ಫಲವಾದ ದುರ್ಮತಿಯು । ನಿ ಬಾಧತೇ—ಹಿಂಸೆಗೊಳಿಸುತ್ತದೆ । ನಗ್ನತಾ—ವಸ್ತ್ರರಹಿತವಾದ ನನ್ನ ಅವಸ್ಥೆಯೂ । ಜಸುಃ—ಹಸಿವೂ ಸಹ ನನ್ನನ್ನು ಹಿಂಸಿಸುತ್ತವೆ । ವೇಃ ನ—ಬೇಡನ ಭಯದಿಂದ ಪಕ್ಷಿಯು ನಡಗುವಂತೆ । ಮತಿಃ—ಶತ್ರು ಭಯದಿಂದ ಕೂಡಿದ ನನ್ನ ಮನಸ್ಸು । ವೇವೀಯತೇ—ಅಧಿಕವಾಗಿ ನಡಗುತ್ತದೆ.

॥ ಭಾವಾರ್ಥಃ ॥

ಸವತಿಯರು ಎರಡು ಕಡೆಗಳಿಂದಲೂ ಹಿಂಸಿಸುವಂತೆ ನನ್ನ ಎರಡು ಕಡೆಯ ಎಲುಬುಗಳೂ ನನ್ನನ್ನು ಅತಿಯಾಗಿ ಹಿಂಸಿಸುತ್ತವೆ. ದಾರಿದ್ರ್ಯದ ಫಲವಾದ ದುರ್ಬುದ್ಧಿಯೂ, ನಗ್ನತೆಯೂ, ಹಸಿವೂ ಸಹ ನನ್ನನ್ನು ಹಿಂಸಿಸುತ್ತಿವೆ. ಬೇಡನ ಭಯದಿಂದ ಪಕ್ಷಿಯು ನಡಗುವಂತೆ, ಶತ್ರುಭಯದಿಂದ ಕೂಡಿದ ನನ್ನ ಮನಸ್ಸು ಅಧಿಕವಾಗಿ ನಡಗುತ್ತದೆ.

English Translation

My ribs pain me on both sides, like rival wives · disease, nakedness, hunger, afflict me · my mind flutters like a bird.

॥ ಸಂಹಿತಾಪಾಠಃ ॥

ಮೂಷೋ ನ ಶಿಶ್ನಾ ವ್ಯದಂತಿ ಮಾಧ್ಯಃ ಸ್ತೋತಾರಂ ತೇ ಶತಕ್ರತೋ ।
ಸಕೃತ್ಸು ನೋ ಮಘವನ್ನಿಂದ್ರ ಮೃಳಯಾಧಾ ಪಿತೇವ ನೋ ಭವ ॥ ೩ ॥

॥ ಪದಪಾಠಃ ॥

ಮೂಷಃ । ನ । ಶಿಶ್ನಾ । ವಿ । ಅದಂತಿ । ಮಾ । ಆಽಧ್ಯಃ । ಸ್ತೋತಾರಂ । ತೇ । ಶತಕ್ರತೋ ಇತಿ ಶತಽಕ್ರತೋ ।
ಸಕೃತ್ । ಸು । ನಃ । ಮಘಽವನ್ । ಇಂದ್ರ । ಮೃಳಯ । ಅಧ । ಪಿತಾಽಇವ । ನಃ । ಭವ ॥ ೩ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಕರ್ಮನ್ ಮಘವನ್ ಧನವಂಶ್ಚೇಂದ್ರ ತೇ ತವ ಸ್ತೋತಾರಂ ಮಾ ಮಾಂ ಕವಷಮಾಧ್ಯ ಆಧಯೋ ಮೂಷೋ ನ ಯಥಾ ಮೂಷಿಕಾಃ ಶಿಶ್ನಾಸ್ನಾತಾನಿ ಸೂತ್ರಾಣ್ಯಶ್ನಂತಿ ತಥಾ ವ್ಯದಂತಿ । ವಿನಿಧನುದಂತಿ । ತಥಾ ಚ ಯಾಸ್ಕಃ । ಸಂತಪಂತಿ ಮಾಮಭಿತಃ ಸಪತ್ನ್ಯಃ ಇವೇಮಾಃ ಪರ್ಶವಃ ಕೂಪಪರ್ಶವೋ ಮೂಷಿಕಾ ಇವಾಸ್ನಾತಾನಿ ಸೂತ್ರಾಣಿ ವ್ಯದಂತಿ ಸ್ವಾಂಗಾಭಿಧಾನಂ ವಾ ಸ್ಯಾಚ್ಛಿಶ್ನಾನಿ ವ್ಯದಂತೀತಿ ಸಂತಪಂತಿ ಮಾಧ್ಯಃ ಕಾಮಾಃ । ನಿ. ೪-೬ । ಇತಿ । ತಥಾ ಚ ಸತಿ ನೋಽಸ್ಮಾನ್ಸಕೃತ್ಸು ಮೃಳಯ । ಅಭೀಷ್ಟಪ್ರದಾನೇನ ಸಮ್ಯಕ್ ಸುಖಯ । ಅಧಾಥ ನೋಽಸ್ಮಾಕಂ ಪಿತೇವ ಯಥಾ ಪಿತಾ ಕೆದ್ವದ್ರಕ್ಷಿತಾ ಭವ ॥

॥ ಪ್ರತಿಪದಾರ್ಥ ॥

ಶತಕ್ರತೋ—ಅನೇಕ ಕರ್ಮಕರ್ತನೂ । ಮಘವನ್—ಧನವಂತನೂ ಆದ । ಇಂದ್ರ—ಎಲೈ ಇಂದ್ರನೇ । ಶಿಶ್ನಾ—ಬಚ್ಚೆಯ ನೂಲುಗಳನ್ನು । ಮೂಷೋ ನ—ಇಲಿಯು ತಿಂದುಹಾಕುವಂತೆ । ತೇ—ನಿನ್ನ ।

ಸ್ತೋತಾರಂ—ಸ್ತುತಿಕರ್ತನಾದ । ಮಾ—ನನ್ನನ್ನು । ಆಧ್ಯಃ—ವ್ಯಾಧಿಗಳು । ವ್ಯದಂತಿ—ನಾನಾವಿಧವಾಗಿ ತಿನ್ನುತ್ತವೆ । ನಃ—ನಮ್ಮನ್ನು । ಸಕೃತ್—ಅಧಿಕವಾಗಿ । ಸು ಮೃಳಯ—ಸುಖಪಡಿಸು । ಅಧ—ಆದುದರಿಂದ। ನಃ—ನಮಗೆ । ಪಿತೇವ—ತಂದೆಯಂತೆ । ಭವ—ಆಗಿರು.

। ಭಾವಾರ್ಥ ।

ಅನೇಕ ಕರ್ಮಕರ್ತನೂ, ಧನವಂತನೂ ಆದ ಎಲೈ ಇಂದ್ರನೇ, ಇಲಿಯು ನೂತ ನೂಲುಗಳನ್ನು ತಿಂದು ಹಾಕುವಂತೆ, ನಿನ್ನ ಸ್ತುತಿಕರ್ತನಾದ ನನ್ನನ್ನು ವ್ಯಾಧಿಗಳು ನಾನಾವಿಧವಾಗಿ ತಿನ್ನುತ್ತವೆ. (ಹಿಂಸಿಸುತ್ತವೆ) ನೀನು ಆ ತೊಂದರೆಯಿಂದ ನಮ್ಮನ್ನು ತಪ್ಪಿಸಿ ನಮ್ಮನ್ನು ಸುಖಪಡಿಸು. ನಮಗೆ ತಂದೆಯಂತೆ ಆಗಿರು.

English Translation

Afflictions consume me, your worshipper Shatakratu, as mice (eat) threads, for once, Indra, possessor of opulence, grant us felicity; be to us as a father.

। ಸಂಹಿತಾಪಾಠಃ ।

ಕುರುಶ್ರವಣಮಾವೃಣೆ ರಾಜಾನಂ ತ್ರಾಸದಸ್ಯವಂ ।
ಮಂಹಿಷ್ಠಂ ವಾಘತಾಮೃಷಿಃ ॥ ೪ ॥

। ಪದಪಾಠಃ ।

ಕುರುಽಶ್ರವಣಂ । ಆವೃಣೆ । ರಾಜಾನಂ । ತ್ರಾಸದಸ್ಯವಂ ।
ಮಂಹಿಷ್ಠಂ । ವಾಘತಾಂ । ಋಷಿಃ ॥ ೪ ॥

। ಸಾಯಣಭಾಷ್ಯಂ ।

ಋಷಿರತೀಂದ್ರಿಯಪದಾರ್ಥದ್ರಷ್ಟಾ ಕವಷೋಽಹಂ ತ್ರಾಸದಸ್ಯವಂ ತ್ರಸದಸ್ಯೋಃ ಪುತ್ರಂ ಮಂಹಿಷ್ಠಂ ಧನಾನಾಮತಿಶಯೇನ ದಾತಾರಂ ಕುರುಶ್ರವಣಂ । ಕುರವ ಋತ್ವಿಜಃ । ತದೀಯಾನಾಂ ಸ್ತುತೀನಾಂ ಶ್ರೋತಾರಂ ಕುರುಶ್ರವಣಂ ತನ್ನಾಮಕಂ ರಾಜಾನಂ ವಾಘತಾಮೃತ್ವಿಜಾಮರ್ಥಾಯಾವೃಣೆ। ಧನಾನಿ ಪ್ರಾರ್ಥಯೇ ॥

। ಪ್ರತಿಪದಾರ್ಥ ।

ಋಷಿಃ—ಕವಷಸಂಜ್ಞಕನಾದ ನಾನು । ತ್ರಾಸದಸ್ಯವಃ—ತ್ರಸದಸ್ಯುಪುತ್ರನೂ । ಮಂಹಿಷ್ಠಂ—ಅತಿಶಯವಾಗಿ ದಾನಮಾಡುವವನೂ ಆದ । ಕುರುಶ್ರವಣಂ—ಕುರುಶ್ರವಣನೆಂಬ । ರಾಜಾನಂ—ರಾಜನಿಂದ । ವಾಘತಾಂ—ಋತ್ವಿಕ್ಕುಗಳಿಗೋಸ್ಕರ । ಆವೃಣೆ—ಧನವನ್ನು ಯಾಚಿಸುತ್ತೇನೆ.

। ಭಾವಾರ್ಥ ।

ಕವಷಸಂಜ್ಞಕನಾದ ನಾನು ತ್ರಸದಸ್ಯುಪುತ್ರನೂ, ಅತಿಶಯವಾಗಿ ದಾನಮಾಡುವವನೂ ಆದ ಕುರುಶ್ರವಣನೆಂಬ ರಾಜನಿಂದ ಋತ್ವಿಕ್ಕುಗಳಿಗೋಸ್ಕರ ಧನವನ್ನು ಯಾಚಿಸುತ್ತೇನೆ.

English Translation

I, the Rishi, solicit (wealth) of the munificent prince Kurushravana, the son of Trasadasyu for the priests.

। ಸಂಹಿತಾಪಾಠಃ ।

यस्य मा हरितो रथे तिस्रो वहन्ति साधुया ।

स्तवै सहस्रदक्षिणे ॥ ५ ॥

। ಪದಪಾಠಃ ।

यस्य । मा । हरितः । रथे । तिस्रः । वहन्ति । साधुऽया ।

स्तवै । सहस्रऽदक्षिणे ॥ ५ ॥

। ಸಾಯಣಭಾಷ್ಯಂ ।

यस्य कुरुश्रवणाख्यस्य राज्ञः स्वभूतास्तिस्रो हरितस्त्र्योऽश्वा रथे प्रस्थितं मा मां कवषं साधुया साधु वहन्ति कुरुश्रवणं राजानमहं सहस्रदक्षिणेऽस्मिन्नाग्नेये स्तवै । स्तौमि । प्रस्थिवाहिनं रथं परिगृह्यर्षिराशास्ते ॥

। ಪ್ರತಿಪದಾರ್ಥ ।

ಯಸ್ಯ—ಅದೇ ಕುರುಶ್ರವಣನ । ತಿಸ್ರಃ ಹರಿತಃ—ಮೂರು ಕುದುರೆಗಳೂ । ರಥೇ—ರಥದಲ್ಲಿ ಕುಳಿತಿರುವ । ಮಾ—ನನ್ನನ್ನು । ಸಾಧುಯಾ—ಸುಖಕರವಾಗಿ । ವಹಂತಿ—ವಹಿಸುತ್ತವೆ । ಸಹಸ್ರದಕ್ಷಿಣೇ—ಯಾಗದಲ್ಲಿ ಅಪರಿಮಿತವಾಗಿ ದಾನಮಾಡುವ ಅದೇ ರಾಜನನ್ನು । ಸ್ತವೈ—ನಾನು ಪ್ರಶಂಸಿಸುತ್ತೇನೆ.

॥ ಭಾವಾರ್ಥ ॥

ಕುರುಶ್ರವಣನಲ್ಲಿಗೆ ನಾನು ರಥದಲ್ಲಿ ಹೋಗುವ ಕಾಲದಲ್ಲಿ ಅವನ ಮೂರು ಕುದುರೆಗಳೂ ಸಹ ನನ್ನನ್ನು ಸುಖಕರವಾಗುವಂತೆ ವಹಿಸುತ್ತವೆ. ಯಾಗದಲ್ಲಿ ಅಪರಿಮಿತವಾಗಿ ದಾನಮಾಡುವ ಆ ರಾಜನನ್ನು ನಾನು ಪ್ರಶಂಸಿಸುತ್ತೇನೆ.

English Translation

Whose three horses bear me pleasantly in the chariot; I praise him at the ceremony in which he presents thousands.

॥ ಸಂಹಿತಾಪಾಠಃ ॥

ಯಸ್ಯ ಪ್ರಸ್ವಾದಸೋ ಗಿರ ಉಪಮಶ್ರವಸಃ ಪಿತುಃ ।
ಕ್ಷೇತ್ರಂ ನ ರಣ್ವಮೂಚುಷೇ ॥ ೬ ॥

॥ ಪದಪಾಠಃ ॥

ಯಸ್ಯ । ಪ್ರಸ್ವಾದಸಃ । ಗಿರಃ । ಉಪಮಶ್ರವಸಃ । ಪಿತುಃ ।
ಕ್ಷೇತ್ರಂ । ನ । ರಣ್ವಂ । ಊಚುಷೇ ॥ ೬ ॥

॥ ಸಾಯಣಭಾಷ್ಯಂ ॥

ಅತಃ ಪರಂ ಯಸ್ಯೇತ್ಯಾದಿಕೇನ ಸೂಕ್ತಶೇಷೇಣ ಮಿತ್ರಾತಿಥೌ ರಾಜ್ಞಿ ಮೃತೇ ತತ್ಪುತ್ರಸ್ಯೋಪಮಶ್ರವಸಃ ಸಮೀಪಮಾಗತ್ಯ ಕವಷಃ ಸ್ನೇಹಾಚ್ಛೋಕಂ ನಿವಾರಯತಿ ॥

ಹೇ ರಾಜನ್ ಉಪಮಶ್ರವಸಸ್ತವ ಪಿತುರ್ಯಸ್ಯ ಮಿತ್ರಾತಿಥೇರ್ಗಿರೋ ವಾಚಃ ಪ್ರಸ್ವಾದಸಃ ಪ್ರಕರ್ಷೇಣ ಸ್ವಾದಯಿತ್ರ್ಯಃ । ತತ್ರ ದೃಷ್ಟಾಂತಃ । ಊಚುಷೇ ಸೇವಮಾನಾಯ ದರಿದ್ರಾಯ ದಾನಾರ್ಥಂ ಪ್ರಕಲ್ಪಿತಂ ರಣ್ವಂ ರಮಣೀಯಂ ಕ್ಷೇತ್ರಂ ನ ಯಥಾ ಕ್ಷೇತ್ರಂ ಸ್ವಾದಯಿತೃ ತದ್ವದಿತ್ಯರ್ಥಃ । ಉತ್ತರತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

(ಎಲೈ ರಾಜನೇ), ಊಚುಷೇ—ದರಿದ್ರನಾದವನಿಗೆ । ರಣ್ವಂ—ರಮಣೀಯವಾದ । ಕ್ಷೇತ್ರಂ ನ—ಸಾಗುವಳಿಯ ನೆಲವು ಹಿತಕರವಾಗಿರುವಂತೆ । ಉಪಮಶ್ರವಸಃ—ಅತ್ಯಂತ ಪ್ರಸಿದ್ಧನಾದ । ಯಸ್ಯ—ಯಾವ ನಿನ್ನ । ಪಿತುಃ—ತಂದೆಯಾದ ಮಿತ್ರಾತಿಥಿಯ । ಗಿರಃ—ವಾಕ್ಯಗಳು । ಪ್ರಸ್ವಾದಸಃ—ಅತ್ಯಂತ ಹಿತಕರವಾಗಿದ್ದವು.

॥ ಭಾವಾರ್ಥ ॥

ಎಲೈ ರಾಜನೇ, ದರಿದ್ರನಾದವನಿಗೆ ದಾನಮಾಡಿದ ಸಾಗುವಳಿಯ ನೆಲವು ಸಂತೋಷಜನಕವಾಗಿರುವಂತೆ, ಅತ್ಯಂತ ಪ್ರಸಿದ್ಧನಾದ ನಿನ್ನ ತಂದೆಯಾದ ಮಿತ್ರಾತಿಥಿಯ ವಾಕ್ಯಗಳು ನನಗೆ ಅತ್ಯಂತ ಹಿತಕರವಾಗಿದ್ದವು.

English Translation

Upamashravas, the words of whose father were sweet, like a pleasant field given to a beggar.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿಯೂ ಇದರ ಮುಂದಿನ ಮೂರು ಋಕ್ಕುಗಳಲ್ಲಿಯೂ ಮಿತ್ರಾತಿಥಿ ಎಂಬ ರಾಜನು ಮೃತನಾದಾಗ ಅವನ ಪುತ್ರನಾದ ಉಪಮಶ್ರವಾಃ ಎಂಬುವನು ಶೋಕಸಂತಪ್ತನಾಗಿರಲು, ಋಷಿಯು ಅವನಲ್ಲಿ ತನಗಿದ್ದ ಸ್ನೇಹಭಾವದಿಂದ ಅವನ ಶೋಕವನ್ನು ಪರಿಹಾರಮಾಡಿ ಸಮಾಧಾನಪಡಿಸಿದನು ಎಂಬ ವಿಷಯವು ಉಕ್ತವಾಗಿದೆ.

। ಸಂಹಿತಾಪಾಠಃ ।

ಅಧಿ॑ ಪುತ್ರೋಪಮಶ್ರವೋ ನಪಾ॑ನ್ಮಿತ್ರಾತಿಥೇರಿಹಿ ।

ಪಿತುಸ್ತೇ॑ ಅಸ್ಮಿ ವಂದಿತಾ ॥ ೭ ॥

॥ ಪದಪಾಠಃ ।

ಅಧಿ॑ । ಪುತ್ರ । ಉಪಮಶ್ರವಃ । ನಪಾ॑ತ್ । ಮಿತ್ರಾತಿಥೇಃ । ಇಹಿ ।

ಪಿತುಃ । ತೇ । ಅಸ್ಮಿ । ವಂದಿತಾ ॥ ೭ ॥

। ಸಾಯಣಭಾಷ್ಯಂ ।

ಹೇ ಪುತ್ರೋಪಮಶ್ರವೋ ಮಿತ್ರಾತಿಥೇರ್ನಪಾತ್ಪುತ್ರ ತ್ವಮಧೀಹಿ । ಮತ್ಸಮೀಪಮಾಗಚ್ಛ । ತೇ ತವ ಪಿತುಸ್ತಸ್ಯ ಮಿತ್ರಾತಿಥೇರಹಂ ವಂದಿತಾ ಸ್ತೋತಾಸ್ಮಿ । ವಿತಜ್ಯಾತ್ಮಾನಂ ಶೋಕಂ ಮಾ ಕುರು । ಯದ್ದೇಯಂ ದ್ರವ್ಯಮುಸ್ತಿ ತೆನ್ಸರ್ವಂ ಮಹ್ಯಂ ದೇಹಿ ॥

। ಪ್ರತಿಪದಾರ್ಥ ।

ಪುತ್ರ—ಪುತ್ರರೂಪನೂ । ಮಿತ್ರಾತಿಥೇಃ—ಮಿತ್ರಾತಿಥಿಗೆ । ನಪಾತ್—ಪುತ್ರನೂ । ಉಪಮಶ್ರವಃ—ಅತ್ಯಂತ ಪ್ರಸಿದ್ಧನೂ ಆದ ಎಲೈ ಉಪಮಶ್ರವಃ ಎಂಬ ರಾಜನೇ । ಅಧಿ ಇಹಿ—ನನ್ನಲ್ಲಿಗೆ ಬಾ । ತೇ—ನಿನ್ನ । ಪಿತುಃ—ತಂದೆಯ । ವಂದಿತಾ—ಪ್ರಶಂಸಕನಾಗಿ । ಅಸ್ಮಿ—ನಾನಿದ್ದೇನೆ.

। ಭಾವಾರ್ಥ ।

ಮಿತ್ರಾತಿಥಿಯ ಪುತ್ರನೂ, ಅತ್ಯಂತ ಪ್ರಸಿದ್ಧನೂ ಆದ ಎಲೈ ರಾಜನೇ, ನಿನಗೆ ತಂದೆಯಂತೆ ಪೂಜ್ಯನಾದ ನನ್ನಲ್ಲಿಗೆ ಬಾ. ನಾನು ನಿನ್ನ ತಂದೆಯ ಗುಣಪ್ರಶಂಸೆಯನ್ನು ಮಾಡುವವನಾಗಿದ್ದೇನೆ.

English Translation

Come to me, my son, grandson of Mitratithi; I am the eulogist of your father.

। संहितापाठः ।

यदीशीयामृतानामुत वा मर्त्यानां ।

जीवेदिन्मघवा मम ॥ ९ ॥

। पदपाठः ।

यत् । ईशीय । अमृतानाम् । उत । वा । मर्त्यानाम् ।

जीवेत् । इत् । मघऽवा । मम ॥ ९ ॥

। सायणभाष्यं ।

उताऽपि च यदि अमृतानां देवानां मर्त्यानां मनुष्याणां वा मरणहेतोर्नानाविधेषु अहमीश्वरः स्यां तर्हि मम कृपणस्य याचकस्य मघवा धनवान्दात्रातिथिः राजा जीवेत् । प्राणान्धारयेत् । तथा च नाहं मरणहेतोरीश्वरः तस्मादयं राजा मृत इत्यर्थः ॥

। प्रतिपदार्थ ।

उत—मत्तु । यत्—ಒಂದುವೇಳೆ । अमृतानाम्—ದೇವತೆಗಳಿಗೂ । मर्त्यानाम् वा—ಮಾನವರಿಗೂ । ईशीय—ನಾನು ಪ್ರಭುವೇ ಆಗಿದ್ದರೆ । मम—ನನಗೆ । मघवा—ಧನಪ್ರದನಾದ ರಾಜನು (ಮಿತ್ರಾತಿಥಿಯು) । जीवेत् इत्—ಜೀವಂತನಾಗಿರಬೇಕಾಗಿದ್ದಿತು.

। भावार्थ ।

ಒಂದು ವೇಳೆ ನಾನು ದೇವಮಾನವಾದಿಗಳಿಗೆಲ್ಲ ಪ್ರಭುವೇ ಆಗಿದ್ದರೆ, ಆಗ ನನಗೆ ಧನಪ್ರದನಾದ ರಾಜನು ಜೀವವಂತನೇ ಆಗಿರಬೇಕಾಗಿದ್ದಿತು.

English Translation

If I were lord over immortals and mortals, then should my munificent (benefactor) live.

। संहितापाठः ।

न देवानामति व्रतं शतात्मा चन जीवति ।

तथा युजा वि वावृतः ॥

। ಪದಪಾಠಃ ।

ನ । ದೇವಾನಾಂ । ಅತಿ । ವ್ರತಂ । ಶತಶ್ಚಾತ್ಮಾ । ಚನ । ಜೀವತಿ ।

ತಥಾ । ಯುಜಾ । ವಿ । ವವೃತೇ ॥ ೯ ॥

। ಸಾಯಣಭಾಷ್ಯಂ ।

ದೇವಾನಾಂ ಬ್ರಹ್ಮಾದೀನಾಂ ವ್ರತಂ ಮರ್ಯಾದಾಲಕ್ಷಣಂ ಕರ್ಮಾತ್ಯತಿಕ್ರಮ್ಯ ಶತಾತ್ಮಾ ಚನ ಶತಸಂವತ್ಸರಃ ಕಶ್ಚನ ಜೀವತಿ । ತಥಾ ಯುಜಾ ಸಹಾಯಾದಿನಾ ವಿ ವವೃತೇ । ವಿವರ್ತತೇ । ವಿಯುಕ್ತೋ ಭವತೀತಿ ಜ್ಞಾತ್ವಾ ಶೋಕಂ ಮಾ ಕುರ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

ದೇವಾನಾಂ—ಬ್ರಹ್ಮಾದಿದೇವತೆಗಳ । ವ್ರತಂ—ನಿಯಮನರೂಪವಾದ ಕರ್ಮವನ್ನು । ಅತಿ—ಉಲ್ಲಂಘಿಸಿ । ಶತಾತ್ಮಾ ಚನ—ನೂರು ವರ್ಷಗಳ ಕಾಲ । ನ ಜೀವತಿ—ಯಾರೂ ಬದುಕಲಾರರು । ತಥಾ—ಹಾಗೆಯೇ । ಯುಜಾ—ಒಡನಾಡಿಗಳಿಂದ । ವಿ ವವೃತೇ—ಬೇರೆಯಾಗಲೇಬೇಕು.

। ಭಾವಾರ್ಥ ॥

ಬ್ರಹ್ಮಾದಿದೇವತೆಗಳ ನಿಯಮನರೂಪವಾದ ಕರ್ಮವನ್ನು ಉಲ್ಲಂಘಿಸಿ ನೂರು ವರ್ಷಗಳ ಕಾಲ ಯಾರೂ ಬದುಕಲಾರರು. ಹಾಗೆಯೇ, ಒಡನಾಡಿಗಳಿಂದಲೂ ಬೇರೆಯಾಗಲೇಬೇಕು. ಇದು ಈಶ್ವರಸಂಕಲ್ಪವು.

English Translation

No one lives a hundred years passing the limit fixed by the gods; so he is separated from his friends.

ಮೂವತ್ತನಾಲ್ಕನೆಯ ಸೂಕ್ತವು

। ಸಾಯಣಭಾಷ್ಯಂ ।

ಪ್ರಾವೇಪಾ ಇತಿ ಚತುರ್ದಶರ್ಚಂ ಪಂಚಮಂ ಸೂಕ್ತಮೈಲೂಷಸ್ಯ ಕವಷಸ್ಯಾರ್ಷಂ ಮುಜವತಃ ಪುತ್ರಸ್ಯಾಕ್ಷಾಖ್ಯಸ್ಯ ವಾ । ಸಪ್ತಮಿಾ ಜಗತೀ ಶಿಷ್ಟಾಸ್ತ್ರಯೋದಶ ತ್ರಿಷ್ಟುಭಃ । ಅತ್ರೈ ದ್ವಾದಶ್ಯಕ್ಷಾನ್ಸ್ತುತಿ ನವಮ್ಯಾದ್ಯಾ ಚ ಸಪ್ತಮಿಾ । ಅತಸ್ತಾಸ್ತದ್ದೇವತ್ಯಾಃ । ತ್ರಯೋದಶೀ ಕೃಷಿಂ ಸ್ತೌತಿ । ಅತಸ್ತಸ್ಯಾಃ ಸಾ ದೇವತಾ । ಏವಂ ಪಂಚ ಗತಾಃ । ಶಿಷ್ಟಾಭಿರ್ನವಭಿಃ ಕತವೋಽಕ್ಷಾಶ್ಚ ನಿಂದ್ಯಂತೇ । ಅತಸ್ತಾ ಅಪಿ ತದ್ದೇವತ್ಯಾಃ । ತಥಾ ಚಾನುಕ್ರಾಂತಂ । ಪ್ರಾವೇಪಾಃ ಷಳೂನಾ ಮೌಜವಾನ್ವಾಕ್ಷೋಽಕ್ಷಕೃಷಿಪ್ರಶಂಸಾ ಚಾಕ್ಷಕತವನಿಂದಾ ಚ ಸಪ್ತಮಿಾ ಜಗತೀತಿ ॥ ಗತೋ ವಿನಿಯೋಗಃ ॥

ಅನುವಾದವು—ಪ್ರಾವೇಪಾಃ ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಇಲೂಷಪುತ್ರನಾದ ಕವಷನೆಂಬುವನು ಋಷಿಯು. ಅಥವಾ ಮುಜವಾನ್ ಎಂಬುವನ ಪುತ್ರನಾದ ಅಕ್ಷನೆಂಬುವನು ಋಷಿಯು ಈ ಸೂಕ್ತದ ಏಳನೆಯ ಋಕ್ಕು ಜಗತೀಛಂದಸ್ಕವು. ಉಳಿದ ಹದಿಮೂರು ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು ಈ ಸೂಕ್ತದಲ್ಲಿ ಒಂದು, ಏಳು, ಒಂಭತ್ತು ಮತ್ತು ಹನ್ನೆರಡನೆಯ ಋಕ್ಕುಗಳಲ್ಲಿ ಆಟವಾಡುವ (ಪಗಡೆ) ದಾಳಗಳ ಸ್ತುತಿಯಿರುವುದು. ಆದ್ದರಿಂದ ಆ ಋಕ್ಕುಗಳಿಗೆ ಅವುಗಳೇ ದೇವತೆಯು. ಹದಿಮೂರನೆಯ ಋಕ್ಕಿನಲ್ಲಿ ಭೂಮಿಯ ವ್ಯವಸಾಯವನ್ನು ಪ್ರಶಂಸೆ ಮಾಡಿರುವುದರಿಂದ ಆ ಋಕ್ಕಿಗೆ ಅದೇ ದೇವತೆಯು. ಈ ರೀತಿ ಐದು ಋಕ್ಕುಗಳಿಗೆ ದೇವತೆಗಳನ್ನು ಹೇಳಿದ ನಂತರ ಉಳಿದ ಒಂಭತ್ತು ಋಕ್ಕುಗಳಲ್ಲಿ ಜೂಜುಗಾರರ ಮತ್ತು ಪಗಡೆ ಆಟದ ಪ್ರಸಕ್ತಿಯೂ ಅವುಗಳ ನಿಂದೆಯೂ ಇರುವುದರಿಂದ ಆ ಋಕ್ಕುಗಳಿಗೆ ಆ ವಿಷಯವೇ ದೇವತೆಯು. ಅನುಕ್ರಮಣಿಕೆಯಲ್ಲಿ—ಪ್ರಾವೇಪಾಃ ಷಳೂನಾ ಮೌಜವಾನ್ಯಾಕ್ಷೋಽಕ್ಷಕೃಷಿಪ್ರಶಂಸಾ ಚಾಕ್ಷಕಿತವನಿಂದಾ ಚ ಸಪ್ತಮ್ಯಾ ಜಗತೀ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

ಸೂಕ್ತ—೩೪

ಮಂಡಲ—೧೦ । ಅನುವಾಕ—೩ । ಸೂಕ್ತ—೩೪ ।
ಆಷ್ಟಕ—೭ ಅಧ್ಯಾಯ—೮ । ವರ್ಗ—೩, ೪, ೫ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥
ಋಷಿಃ—ಕವಷ ಐಲೂಷೋ ಅಕ್ಷೋ ವಾ ಮೌಜವಾನ್ ।
ದೇವತಾ—೧, ೭, ೯, ೧೨, ೧೩. ಅಕ್ಷಕೃಷಿಪ್ರಶಂಸಾ । ೨-೬, ೮, ೧೦, ೧೧, ೧೪. ಅಕ್ಷಕಿತವನಿಂದಾ ॥
ಛಂದಃ—೧-೬, ೮-೧೪. ತ್ರಿಷ್ಟುಪ್ । ೭. ಜಗತೀ ।

। ಸಂಹಿತಾಪಾಠಃ ।

ಪ್ರಾವೇಪಾ ಮಾ ಬೃಹತೋ ಮಾದಯಂತಿ ಪ್ರವಾತೇಜಾ ಇರಿಜ್ಞೇ ವರ್ಷ್ಯತಾನಾಃ ।
ಸೋಮಸ್ಯೇವ ಮೌಜವತಸ್ಯ ಭಕ್ಷೋ ವಿಭೀದಕೋ ಜಾಗೃವಿರ್ಮಹ್ಯಮಚ್ಛಾನ್ ॥ ೧ ॥

। ಪದಪಾಠಃ ।

ಪ್ರಾವೇಪಾಃ । ಮಾ । ಬೃಹತಃ । ಮಾದಯಂತಿ । ಪ್ರವಾತೇಜಾಃ । ಇರಿಜ್ಞೇ । ವರ್ಷ್ಯತಾನಾಃ ।
ಸೋಮಸ್ಯೇವ । ಮೌಜವತಸ್ಯ । ಭಕ್ಷಃ । ವಿಭೀದಕಃ । ಜಾಗೃವಿಃ । ಮಹ್ಯಂ । ಅಚ್ಛಾನ್ ॥ ೧ ॥

। ಸಾಯಣಭಾಷ್ಯಂ ।

ಬೃಹತೋ ಮಹತೋ ವಿಭೀತಕಸ್ಯ ಫಲತ್ವೇನ ಸಂಬಂಧಿನಃ ಪ್ರವಾತೇಜಾಃ ಪ್ರವಣೇ ದೇಶೇ ಜಾತಾ ಇರಿಣ ಅಸ್ಫಾರೇ ವರ್ತಮಾನಾಃ ಪ್ರವರ್ತಮಾನಾಃ ಪ್ರಾವೇಪಾಃ ಪ್ರವೇಪಿಣಃ ಕಂಪನಶೀಲಾ ಅಕ್ಷಾ ಮಾ ಮಾಂ ಮಾದಯಂತಿ । ಹರ್ಷಯಂತಿ । ಕಂಚ ಜಾಗೃವಿರ್ಜಯಪರಾಜಯಯೋರ್ಹರ್ಷ-ಶೋಕಾಭ್ಯಾಂ ಕಿತವಾನಾಂ ಜಾಗರಣಸ್ಯ ಕರ್ತಾ ವಿಭೀದಕೋ ವಿಭೀತಕವಿಕಾರೋಽಕ್ಷೋ ಮಹ್ಯಂ ಮಾಮಚ್ಛಾನ್ । ಅಚೆಚ್ಛದತ್ । ಅತ್ಯರ್ಥಂ ಮಾದಯತಿ । ತತ್ರ ದೃಷ್ಟಾಂತಃ । ಸೋಮಸ್ಯೇವ ಯಥಾ ಸೋಮಸ್ಯ ಮೌಜವತಸ್ಯ । ಮುಜವತಿ ಪರ್ವತೇ ಜಾತೋ ಮೌಜವತಃ । ತಸ್ಯ । ತತ್ರ ಹ್ಯುತ್ತಮಃ ಸೋಮೋ ಜಾಯತೇ । ಭಕ್ಷಃ ಪಾನಂ ಯಜಮಾನಾನ್ದೇವಾಂಶ್ಚ ಮಾದಯತಿ ತದ್ವದಿತ್ಯರ್ಥಃ । ತಥಾ ಚ ಯಾಸ್ಕಃ । ಪ್ರವೇಪಿಣೋ ಮಾ ಮಹತೋ ವಿಭೀತಕಸ್ಯ ಫಲಾನಿ ಮಾದಯಂತಿ । ಪ್ರವಾತೇಜಾಃ ಪ್ರವಣೇಜಾ ಇರಿಣೇ ವರ್ತಮಾನಾ ಇರಿಣಂ ನಿರ್ಯಾಣಮ್ಯಾತೇರಪಾಣ್ಮಂ ಭವತ್ಯಪರತಾ ಅಸ್ಮಾದೋ-ಷಧಯ ಇತಿ ವಾ ಸೋಮಸ್ಯೇವ ಮೌಜವತಸ್ಯ ಭಕ್ಷೋ ಮೌಜವತೋ ಮುಜವತಿ ಜಾತೋ ಮುಜವಾ-ನ್ಪರ್ವತೋ ಮುಂಜವಾನ್ಮುಂಜೋ ವಿಮುಚ್ಯತೇ ಇಷೀಕಯೇಷೀಕೇಷತೇರ್ಗತಿಕರ್ಮಣ ಇಯೇಮುಪೀ-ತರೇಷೀಕೈತಸ್ಮಾದೇವ ವಿಭೀದಕೋ ವಿಭೀದನಾಜ್ಜಾಗೃವಿರ್ಜಾಗರಣಾನ್ಮಹ್ಯಮುಚಚ್ಛದತ್ । ನಿ. ೯-೪ । ಇತಿ ॥

। ಪ್ರತಿಪದಾರ್ಥ ।

ಇರಿಣೇ—ಗುಡ್ಡದ ಪ್ರದೇಶದಲ್ಲಿ । ಬೃಹತಃ—ಮಹತ್ಪರಿಮಾಣವುಳ್ಳದ್ದೂ । ಪ್ರವಾತೇಜಾಃ—ಕಡಿದಾದ ಪ್ರದೇಶದಲ್ಲಿ ಹರಿಯುವುದೂ ಆದ ಝರಿಯಂತೆ । (ಇರಿಣೇ—ಹಾಸಿನ ಮೇಲೆ) । ವರ್ಧಮಾನಾಃ—ಹೊರಳಾಡು ವುವೂ । ಪ್ರಾವೇಪಾಃ—ಕಂಪಿಸುವುವೂ ಆದ ದಳಗಳು । ಮಾ—ನನ್ನನ್ನು । ಮಾದಯಂತಿ—ಸಂತೋಷಗೊಳಿಸು ತ್ತವೆ । ಮೌಜವತಃ—ಮುಜವತ್ಪರ್ವತದಲ್ಲಿ ಹುಟ್ಟಿದ । ಸೋಮಸ್ಯ—ಸೋಮದ । ಭಕ್ಷಃ ಇವ—ರಸದ ಪಾನವು ದೇವತೆಗಳಿಗೆ ಹರ್ಷವನ್ನುಂಟುಮಾಡುವಂತೆ । ಜಾಗೃವಿಃ—ಜೂಜುಕಾರರಿಗೆ ಯಾವಾಗಲೂ ಎಚ್ಚರಿಕೆ ಯನ್ನುಂಟುಮಾಡುತ್ತಿರುವ । ವಿಭೀದಕಃ—ಪಗಡೆ ದಾಳವು । ಮಹ್ಯಂ—ನನಗೆ । ಅಚ್ಛಾನ್—ಅತಿಶಯವಾದ ಸಂತೋಷವನ್ನು ಕೊಡುತ್ತದೆ.

। ಭಾವಾರ್ಥ ।

ಮಹತ್ಪರಿಮಾಣವುಳ್ಳದ್ದೂ, ಗುಡ್ಡದ ಕಡಿದಾದ ಪ್ರದೇಶದಲ್ಲಿ ಹರಿಯುವುದೂ ಆದ ಝರಿಯಂತೆ ಹಾಸಿನ ಮೇಲೆ ಹೊರಳಾಡುವುವೂ, ಕಂಪಿಸುವುವೂ ಆದ ಪಗಡೆದಾಳಗಳು ನನ್ನನ್ನು ಸಂತೋಷಗೊಳಿಸುತ್ತವೆ. ಮುಜವತ್ಪ ರ್ವತದಲ್ಲಿ ಹುಟ್ಟಿದ ಸೋಮದ ರಸದ ಪಾನವು ದೇವತೆಗಳಿಗೆ ಹರ್ಷವನ್ನುಂಟುಮಾಡುವಂತೆ ಜೂಜುಕಾರರಿಗೆ ಯಾವಾ ಗಲೂ ಎಚ್ಚರಿಕೆಯನ್ನುಂಟುಮಾಡುತ್ತಿರುವ ಪಗಡೆದಾಳವು ನನಗೆ ಅತಿಶಯವಾದ ಸಂತೋಷವನ್ನುಂಟುಮಾಡುತ್ತದೆ.

English Translation

The large rattling dice exhilarate me a torrents borne on a precipice flowing in a desert : the exciting dice animate me as the taste of the Soma of Maujavat (delights the gods).

॥ ವಿಶೇಷವಿಷಯಗಳು ॥

ಅಕ್ಷಶಬ್ದದ ನಿರ್ವಚನ ಮತ್ತು ಉದಾಹರಣೆಗಾಗಿ ಯಾಸ್ಕರು ಈ ಋಕ್ಕಿಗೆ ನಿರುಕ್ತವನ್ನು ಹೇಳಿದಾರೆ—

ಅಕ್ಷಾಃ । ಅಕ್ಷಾ ಅಶ್ನುವತ ಏನಾನಿತಿ ವಾಭ್ಯಶ್ನುವತ ಏಭಿರಿತಿ ವಾ ॥

(ನಿ. ೯-೭)

ಅಕ್ಷಶಬ್ದವು ಹೊಂದು, ಸಂಪಾದಿಸು ಎಂಬರ್ಥವುಳ್ಳ ಅಶ್ ಧಾತುವಿನಿಂದ ನಿಷ್ಪನ್ನವಾಗಿ ಪಗಡೆದಾಳವು ಎಂಬರ್ಥವನ್ನು ಸೂಚಿಸುವುದಾಗಿದೆ. ಜೂಜುಆಡುವವರಿಂದ ಈ ಪಗಡೆದಾಳವು ಹೊಂದಲ್ಪಟ್ಟಿರುತ್ತದೆ ಎಂದರೆ ಅವರ ಬಳಿಯಲ್ಲಿ ಈ ದಾಳಗಳು ಇರುತ್ತವೆ ಎಂದರ್ಥವು. ಅಥವಾ ಈ ದಾಳಗಳು ಜೂಜುಗಾರರಿಗೆ ಧನಾದಿಗಳನ್ನು (ಆಟಗಳಲ್ಲಿ) ಸಂಪಾದಿಸಿಕೊಡುವುದಾದ್ದರಿಂದ ಇವುಗಳಿಗೆ **ಅಕ್ಷಾಃ** ಎಂಬ ಹೆಸರು ಬಂದಿದೆಯೆಂದು ನಿರ್ವಚನಾಭಿಪ್ರಾಯವು. ಈ **ಅಕ್ಷಾಃ** ಎಂಬ ಶಬ್ದಪ್ರಯೋಗವಿರುವ ಋಕ್ಕಿನ ಉದಾಹರಣೆಗಾಗಿ ಪ್ರಕೃತಋಕ್ಕನ್ನೇ ಯಾಸ್ಕರು ತೆಗೆದುಕೊಂಡು ಅದಕ್ಕೂ ನಿರುಕ್ತವನ್ನು ಹೇಳಿದಾರೆ—

ತೇಷಾಮೇಷಾ ಭವತಿ । ಪ್ರಾವೇಪಾ ಮಾ ಬೃಹತೋ ಮಾದಯಂತಿ ಪ್ರವಾತೇಜಾ ಇರಿಣೇ ವರ್ವೃತಾನಾಃ । ಸೋಮಸ್ಯೇವ ಮೌಂಜವತಸ್ಯ ಭಕ್ಷೋ ವಿಭೀದಕೋ ಜಾಗೃವಿರ್ಮಹ್ಯಮಚ್ಛಾನ್ ॥ ಪ್ರವೇಪಿನೋ ಮಾ ಮಹತೋ ವಿಭೀದಕಸ್ಯ ಫಲಾನಿ ಮಾದಯಂತಿ । ಪ್ರವಾತೇಜಾಃ ಪ್ರವನೇಜಾಃ । ಇರಿಣೇ ವರ್ತಮಾನಾನಾಃ । ಇರಿಣಂ ನಿರ್ಯಾಣಂ ಋಣಾತೇರಪಾರ್ಣಂ ಭವತಿ ಅಪರತಾ ಅಸ್ಮಾದೋಷಧಯ ಇತಿ ವಾ । ಸೋಮಸ್ಯೇವ ಮೌಂಜವತಸ್ಯ ಭಕ್ಷಃ । ಮೌಂಜವತೋ ಮೂಜವತಿ ಜಾತಃ । ಮೂಜವಾನ್ ಪರ್ವತೋ ಮುಂಜವಾನ್ । ಮುಂಜೋ ವಿಮುಚ್ಯತ ಇಷೀಕಯಾ । ಇಷೀಕೇಷತೇರ್ಗತಿಕರ್ಮಣಃ । ಇಯಮುಪೀತರೇಷೀಕೈತಸ್ಮಾದೇವ । ವಿಭೀದಕೋ ವಿಭದನಾತ್ । ಜಾಗೃವಿರ್ಜಾಗರಣಾತ್ । ಮಹ್ಯಮುಚಚ್ಛದತ್ ಪ್ರಶಂಸಕ್ರೀನಾನ್ ಪ್ರಥಮಯಾ ನಿಂದತ್ಯುತ್ತರಾಭಿಋಷೇರಕ್ಷಪರಿದ್ಯೂನಸ್ಯೈತದಾರ್ಷಂ ವೇದಯಂತೇ ॥

(ನಿ. ೯-೮)

ಕೌಷೀತಕೀ ಬ್ರಾಹ್ಮಣದಲ್ಲಿ ಹೇಳಿರುವಂತೆ ಈ ಸೂಕ್ತದ ಋಷಿಯಾದ ಕವಷನು ಜೂಜುಗಾರನೆಂದೂ, ಪಗಡೆ ಆಡುವುದರಲ್ಲಿ ಆಸಕ್ತಿಯುಳ್ಳವನೆಂದೂ ಪ್ರಸಿದ್ಧಿಯಾಗಿದಾನೆ. ಆದ್ದರಿಂದಲೇ ಪಗಡೆ ಆಟದಲ್ಲಿ ಜೂಜುಗಾರರಿಗೆ ಗೆದ್ದಾಗ ಉಂಟಾಗುವ ಸಂತೋಷಾತಿಶಯವನ್ನೂ, ಸೋತಾಗ ಉಂಟಾಗುವ ಹೃದಯವೇದನೆಯನ್ನೂ ಹೃದಯಂಗಮವಾಗಿಯೂ ಅನುಭವಪೂರ್ವಕವಾಗಿಯೂ ಬಹು ಚೆನ್ನಾಗಿ ವಿವರಿಸಿದಾನೆ. ಪಗಡೆದಾಳಗಳನ್ನು ಕೈಯಲ್ಲಿ ಕುಲುಕಿ ಎಸೆಯುವಾಗ ಅವು ನೀರಿನ ಝರಿಯಂತೆ ಉರುಳುತ್ತಾ ಕೊನೆಗೆ ನಿಲ್ಲುವಾಗ ತನಗೆ ಗೆಲ್ಲುವಂತೆ ಮಾಡುವವೋ ಅಥವಾ ಸೋಲುವಂತೆ ಮಾಡುವವೋ ಎಂಬ ಕಳವಳವನ್ನುಂಟುಮಾಡುತ್ತವೆ. ಇದು ಜೂಜುಗಾರರಿಗೆ ಅನುಭವ ವೇದ್ಯವಾಗಿರುವುದು. ಸಂತೋಷವನ್ನುಂಟುಮಾಡುವ ಸಂದರ್ಭದಲ್ಲಿ ಇಲ್ಲಿ ಒಂದು ದೃಷ್ಟಾಂತವನ್ನು ಕೊಡಲಾಗಿದೆ **ಮೂಜವಾನ್** ಎಂಬುದು ಒಂದು ಎತ್ತರವಾದ ಪರ್ವತವು. ಎತ್ತರವಾದ ಪರ್ವತಪ್ರದೇಶದಲ್ಲಿ ಬೆಳೆಯುವ ಸೋಮುಲತೆಗಳಲ್ಲಿ ದೊರಕುವ ರಸವು ಹೆಚ್ಚಾಗಿಯೂ, ಮದಕರವಾಗಿಯೂ ಸಂತೋಷವನ್ನುಂಟುಮಾಡುವುದಾಗಿಯೂ ಇರು

ವುದು. ಆದ್ದರಿಂದ ಇಂತಹ ಮೂಜವತ್ಪರ್ವತದ ಮೇಲೆ ಬೆಳೆಯುವ ಸೋಮಲತೆಗಳಿಂದ ಹಿಂಡಿ ತೆಗೆದ ಸೋಮರಸವು ಅದನ್ನು ಪಾನಮಾಡುವವರಿಗೆ ಯಾವರೀತಿ ಅತ್ಯಂತ ಸಂತೋಷವನ್ನುಂಟುಮಾಡುವುದೋ ಅದರಂತೆ ಈ ಪಗಡೆದಾಳಗಳು ಆಟವಾಡುವ ಜೂಜುಗಾರರಿಗೆ ಗೆದ್ದಾಗ ಅತ್ಯಂತ ಸಂತೋಷವನ್ನುಂಟುಮಾಡುತ್ತವೆ ಎಂಬ ಸೋಮರಸದ ಉಪಮಾನವನ್ನು ಇಲ್ಲಿ ಕೊಟ್ಟಿದೆ.

ಈ ಸಂಬಂಧದಲ್ಲಿ ಈ ಋಕ್ಕಿನಲ್ಲಿ ಇರುವ ಕೆಲವು ಶಬ್ದಗಳಿಗೆ ನಿರ್ವಚನವನ್ನೂ, ಅರ್ಥವಿವರಣೆಯನ್ನೂ ಮಾಡಿದಾರೆ. **ವಿಭೀದಕ** ಎಂದರೆ ಒಂದು ವಿಧವಾದ ವೃಕ್ಷವಿಶೇಷವು. ಈ ಮರದಿಂದ ಆಟವಾಡುವ ಪಗಡೆದಾಳಗಳನ್ನು ಮಾಡಿ ಉಪಯೋಗಿಸುವುದರಿಂದ ದಾಳಗಳನ್ನು ಸೂಚಿಸುವುದಕ್ಕಾಗಿ ವಿಭೀದಕಶಬ್ದವನ್ನೇ ಋಷಿಯು ಉಪಯೋಗಿಸಿರುವನು.

ಇರಿಣಂ ಎಂದರೆ ಪಗಡೆ ಆಡುವ ಹಾಸು (ಬಟ್ಟೆ) ಅಥವಾ ಹಲಗೆಯು ಇದರಲ್ಲಿ ಪಗಡೆಮನೆಗಳನ್ನು ಬರೆದಿರುವುದು. **ಇರಿಣಂ** ಎಂಬ ಶಬ್ದಕ್ಕೆ ನಿರ್ಜಣಂ ಎಂದು ಅರ್ಥವು. ಎಂದರೆ ಸಾಲವಿಲ್ಲದಿರುವ ಎಂದಭಿಪ್ರಾಯವು. ಆಟದಲ್ಲಿ ಪಣವಾಗಿಡುವ ಹಣವು ನಗದಾಗಿಯೇ ಇರಬೇಕು. ಸಾಲವಾಗಿ ಪಣವನ್ನು ಒಡ್ಡುವುದಿಲ್ಲ. ಆದ್ದರಿಂದ ಜೂಜು ಆಡುವಾಗ ಸಾಲದ ವಿಷಯವೇ ಇಲ್ಲದಿರುವುದರಿಂದ ಆಟಕ್ಕೆ ಮುಖ್ಯವಾದ ಪಾಸೆಂಬ ವಸ್ತುವನ್ನು **ಇರಿಣಂ** ಎಂಬ ಶಬ್ದದಿಂದ ಕರೆಯುವುದು ರೂಢಿಯಾಗಿದೆ. ಈ ಶಬ್ದವು ಹೋಗು ಎಂಬರ್ಥವುಳ್ಳ **ಋ ಗತೌ** ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ ಅಥವಾ **ಇರಿಣಂ** ಎಂದರೆ ಪರ್ವತಪ್ರದೇಶಕ್ಕೆ ಹೆಸರು. ಏಕೆಂದರೆ ಈ ಪರ್ವತಪ್ರದೇಶದಿಂದ ಓಷಧಿವನಸ್ಪತಿಗಳನ್ನು ತೆಗೆದುಕೊಂಡುಹೋಗುವರು. ಆದ್ದರಿಂದಲೂ **ಅಪಾರ್ಣಂ** ಅಥವಾ **ಇರಿಣಂ** ಎಂದು ಹೆಸರು.

ಮೌಜವತಸ್ಯ ಭಕ್ಷಃ—ಮೂಜವಾನ್ ಎಂಬುದು ಒಂದು ಪರ್ವತದ ಹೆಸರು. ಈ ಪರ್ವತದಲ್ಲಿ ಬೆಳೆಯುವ ಓಷಧ್ಯಾದಿಗಳಿಗೆ, ವಿಶೇಷವಾಗಿ ಸೋಮಲತೆಗೆ **ಮೌಜವತ** (ಮೂಜವಾನ್ ಎಂಬ ಪರ್ವತದಲ್ಲಿ ಬೆಳೆದದ್ದು) ಎಂದು ಹೆಸರು. ಈ ಪರ್ವತಕ್ಕೆ ಈ ಹೆಸರು ಬರಲು ಕಾರಣವೇನೆಂದರೆ ಇಲ್ಲಿ **ಮುಂಜ** ಎಂಬ ಒಂದು ವಿಧವಾದ ಶರ ಅಥವಾ ದರ್ಭವಿಶೇಷವು ಬೆಳೆಯುವುದರಿಂದ ಇದಕ್ಕೆ **ಮೂಜವಾನ್** (ಮುಂಜವೆಂಬ ಹುಲ್ಲು ಬೆಳೆಯುವ) ಎಂದು ಹೆಸರು ಬಂದಿದೆ.

ಮುಂಜ ಎಂದರೆ ಒಂದು ವಿಧವಾದ ಹುಲ್ಲು ಅಥವಾ ದರ್ಭೆಯು. ಈ ಶಬ್ದವು ಮುಚ್ ಧಾತುವಿನಿಂದ ನಿಷ್ಪನ್ನವಾಗಿದೆ. ಎಂದರೆ **ಇಷೀಕವೆಂಬ** ಮತ್ತೊಂದು ಬಗೆಯ ಹುಲ್ಲಿನಿಂದ ಪ್ರತ್ಯೇಕಿಸಲ್ಪಟ್ಟಿರುವುದರಿಂದ (**ಇಷೀಕಯಾ ವಿಮುಚ್ಯತ ಇತಿ ಮುಂಜಃ**) ಇದಕ್ಕೆ **ಮುಂಜ**ವೆಂದು ಹೆಸರು.

ಇಷೀಕಾ ಎಂಬ ಶಬ್ದವು ಹೋಗು ಎಂಬರ್ಥವುಳ್ಳ ಇಷತಿಧಾತುವಿನಿಂದ ನಿಷ್ಪನ್ನವಾಗಿದೆ. ಈ ಶಬ್ದಕ್ಕೆ ಒಂದು ವಿಧವಾದ ಹುಲ್ಲು ಎಂತಲೂ (ಧನುಸ್ಸಿನಿಂದ ಹೊರಹೊರಡುವುದರಿಂದ) ಬಾಣವೆಂತಲೂ ಎರಡು ವಿಧವಾದ ಅರ್ಥಗಳಿರುವವು.

ವಿಭೀದಕ—ಎಂದರೆ ಕೊರೆಯುವುದು ಎಂದರ್ಥವು. ಈ ಮರದಿಂದ ದಾಳಗಳನ್ನು ಕೊರೆದು (ಕೆತ್ತಿ) ಮಾಡುವುದರಿಂದ ದಾಳಕ್ಕೆ ವಿಭೀದಕವೆಂದು ಹೆಸರು.

ಜಾಗೃವಿಃ—ಎಂದರೆ ನಿದ್ರೆಮಾಡದೆ ಎಚ್ಚರದಿಂದಿರುವುದು. ರಾತ್ರೆಕಾಲದಲ್ಲಿ ಜೂಜಾಡುವಾಗ ನಿದ್ರೆಯನ್ನು ಬಿಟ್ಟು ಎಷ್ಟು ಹೊತ್ತಾದರೂ ಎಚ್ಚರವಾಗಿರುವುದು ರೂಢಿಯು.

ಈ ಋಕ್ಕಿನಲ್ಲಿ ಋಷಿಯು ಪಗಡೆಆಟದಿಂದ ತನಗೆ (ಗೆಲ್ಲುವಾಗ) ಉಂಟಾಗುವ ಸಂತೋಷವನ್ನು ಪ್ರಶಂಸೆ ಮಾಡಿರುವನು. ಮುಂದಿನ ಋಕ್ಕುಗಳಲ್ಲಿ (ಪ್ರಾಯಶಃ ತನಗೆ ಸೋಲಾದ್ದರಿಂದ) ಪಗಡೆದಾಳಗಳನ್ನೂ, ಜೂಜನ್ನೂ ನಿಂದಿಸಿ ಆದರಿಂದ ಜೂಜಾಡುವ ಜನರಿಗೆ ಉಂಟಾಗುವ ಮನೋವ್ಯಥೆಯನ್ನೂ, ದುಃಖವನ್ನೂ, ಕಷ್ಟಗಳನ್ನೂ ವಿವರಿಸಿ ಜೂಜಾಡುವುದನ್ನು ಅನುಭವಪೂರ್ವಕವಾಗಿ ನಿಂದಿಸಿರುವನು.

॥ ಸಂಹಿತಾಪಾಠಃ ॥

ನ ಮಾ ಮಿಮೇಥ ನ ಜಿಹೀಳ ಏಷಾ ಶಿವಾ ಸಖಿಭ್ಯ ಉತ ಮಹ್ಯಮಾಸೀತ್ ।
ಅಕ್ಷಸ್ಯಾಹಮೇಕಪರಸ್ಯ ಹೇತೋರನುವ್ರತಾಮುಪ ಜಾಯಾಮರೋಧಂ ॥೨॥

॥ ಪದಪಾಠಃ ॥

ನ । ಮಾ । ಮಿಮೇಥ । ನ । ಜಿಹೀಳೇ । ಏಷಾ । ಶಿವಾ । ಸಖಿಭ್ಯಃ । ಉತ । ಮಹ್ಯಂ । ಅಸೀತ್ ।
ಅಕ್ಷಸ್ಯ । ಅಹಂ । ಏಕಪರಸ್ಯ । ಹೇತೋಃ । ಅನುವ್ರತಾಂ । ಅಪ । ಜಾಯಾಂ । ಅರೋಧಂ ॥ ೨ ॥

॥ ಸಾಯಣಭಾಷ್ಯಂ ॥

ಏಷಾಽಸ್ಮದೀಯಾ ಜಾಯಾ ಮಾ ಮಾಂ ಕಿತವಂ ನ ಮಿಮೇಥ ನ ಚ ಚುಕ್ರೋಧ ನ ಜಿಹೀಳೇ ನ ಚ ಲಜ್ಜಿತವತೀ । ಸಖಿಭ್ಯೋಽಸ್ಮದೀಯೇಭ್ಯಃ ಕಿತವೇಭ್ಯಃ ಶಿವಾ ಸುಖಕರ್ಯಾಸೀತ್ । ಅಭೂತ್ । ಉತಾಪಿ ಚ ಮಹ್ಯಂ ಶಿವಾಸೀತ್ । ಇತ್ಥಮನುವ್ರತಾಮನುಕೂಲಾಂ ಜಾಯಾಮೇಕಪರಸ್ಯೈಕಃ ಪರಃ ಪ್ರಧಾನಂ ಯಸ್ಯ ತಸ್ಯಾಕ್ಷಸ್ಯ ಹೇತೋಃ ಕಾರಣಾದಹಮುಪಾರೋಧಂ । ಪರಿತ್ಯಕ್ತವಾನಸ್ಮೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಏಷಾ—ಈ ನನ್ನ ಪತ್ನಿಯು । ಮಾ—ನನ್ನ ಮೇಲೆ । ನ ಮಿಮೇಥ—ಕೋಪಗೊಂಡಿಲ್ಲ। ನ ಜಿಹೀಳೇ—ನನ್ನ ಅಪರಾಧಕ್ಕಾಗಿ ನಾಚಿಕೆಯನ್ನು ತೋರಿಸಿಲ್ಲ । ಸಖಿಭ್ಯಃ—ನನ್ನ ಮಿತ್ರರಿಗೆ । ಶಿವಾ—ಆದರವನ್ನು ತೋರಿಸುವವಳಾಗಿ । ಅಸೀತ್—ಇದ್ದಳು । ಉತ—ಮತ್ತು । ಮಹ್ಯಂ—ನನಗೂ ಹಿತಕರಳಾಗಿದ್ದಳು (ಆದರೂ ಸಹ) । ಅನುವ್ರತಾಂ—ನನಗೆ ಉಪಕಾರಕಳಾಗಿದ್ದ । ಜಾಯಾಂ—ಆ ಪತ್ನಿಯನ್ನು । ಏಕಪರಸ್ಯ—ಜೂಜುಗಾರರಲ್ಲಿ ಒಬ್ಬನಿಗೆ ಮಾತ್ರ ಹಿತಕಾರಿಯಾಗಿದ್ದ । ಅಕ್ಷಸ್ಯ ಹೇತೋಃ—ಈ ಪಗಡೆಯ ಕಾರಣಕ್ಕಾಗಿ । ಅಹಂ—ನಾನು । ಅಪಾರೋಧಂ—ತ್ಯಜಿಸಿಬಿಟ್ಟೆನು.

॥ ಭಾವಾರ್ಥ ॥

ನಾನು ಜೂಜುಗಾರನಾಗಿದ್ದರೂ ನನ್ನ ಪತ್ನಿಯು ನನ್ನ ಮೇಲೆ ಕೋಪಗೊಂಡಿಲ್ಲ. ನನ್ನ ಚರ್ಯೆಗಾಗಿ ನಾಚಿಕೆಯನ್ನೂ ತೋರಿಸಿಲ್ಲ. ನನ್ನ ಮಿತ್ರರಿಗೆ ಆದರವನ್ನು ತೋರಿಸಿ ನನಗೆ ಬಹಳ ಹಿತಕಾರಿಣಿಯಾಗಿದ್ದಳು ನನಗೆ ಹೀಗೆ ಉಪಕಾರಿಣಿಯಾಗಿದ್ದರೂ ಸಹ ಅಂತಹ ನನ್ನ ಪತ್ನಿಯನ್ನು ಜೂಜುಗಾರರಲ್ಲಿ ಒಂದು ಪಕ್ಷಕ್ಕೆ ಜಯವನ್ನು ಕೊಡತಕ್ಕ ಈ ಪಗಡೆಯ ಕಾರಣಕ್ಕಾಗಿ ನಾನು ತ್ಯಜಿಸಿಬಿಟ್ಟಿನು.

English Translation

This (my wife) has not been angry (with me), nor was she overcome with shame; kind was she to me and to my friends; yet for the sake of one or other die, I have deserted this affectionate spouse.

॥ ಸಂಹಿತಾಪಾಠಃ ॥

ದ್ವೇಷ್ಟಿ ಶ್ವಶ್ರೂರಪ ಜಾಯಾ ರುಣದ್ಧಿ ನ ನಾಥಿತೋ ವಿಂದತೇ ಮರ್ಡಿತಾರಂ ।
ಅಶ್ವಸ್ಯೇವ ಜರತೋ ವಸ್ನ್ಯಸ್ಯ ನಾಹಂ ವಿಂದಾಮಿ ಕಿತವಸ್ಯ ಭೋಗಂ ॥೩॥

॥ ಪದಪಾಠಃ ॥

ದ್ವೇಷ್ಟಿ । ಶ್ವಶ್ರೂಃ । ಅಪ । ಜಾಯಾ । ರುಣದ್ಧಿ । ನ । ನಾಥಿತಃ । ವಿಂದತೇ । ಮರ್ಡಿತಾರಂ ।
ಅಶ್ವಸ್ಯ ಇವ । ಜರತಃ । ವಸ್ನ್ಯಸ್ಯ । ನ । ಅಹಂ । ವಿಂದಾಮಿ । ಕಿತವಸ್ಯ । ಭೋಗಂ ॥೩॥

॥ ಸಾಯಣಭಾಷ್ಯಂ ॥

ಶ್ವಶ್ರೂರ್ಜಾಯಾಯಾ ಮಾತಾ ಗೃಹಗತಂ ಕಿತವಂ ದ್ವೇಷ್ಟಿ । ನಿಂದತೀತ್ಯರ್ಥಃ । ಕಿಂಚ ಜಾಯಾ ಭಾರ್ಯಾಪ ರುಣದ್ಧಿ । ನಿರುಣದ್ಧಿ । ಅಪಿ ಚ ನಾಥಿತೋ ಯಾಚಮಾನಃ ಕಿತವೋ ಧನಂ ಮರ್ಡಿತಾರಂ ಧನದಾನೇನ ಸುಖಯಿತಾರಂ ನ ವಿಂದತೇ । ನ ಲಭತೇ । ಇತ್ಥಂ ಬುದ್ಧ್ಯಾ ವಿಮೃಶನ್ನಹಂ ಜರತೋ ವೃದ್ಧಸ್ಯ ವಸ್ನ್ಯಸ್ಯ । ವಸ್ನಂ ಮೂಲ್ಯಂ । ತದರ್ಹಸ್ಯಾಶ್ವಸ್ಯೇವ ಕಿತವಸ್ಯ ಭೋಗಂ ನ ವಿಂದಾಮಿ । ನ ಲಭೇ ॥

॥ ಪ್ರತಿಪದಾರ್ಥ ॥

ಶ್ವಶ್ರೂಃ—ನನ್ನ ಪತ್ನಿಯ ತಾಯಿಯು (ಅತ್ತೆಯು) । ದ್ವೇಷ್ಟಿ—ನನ್ನನ್ನು ದೂಷಿಸುತ್ತಾಳೆ । ಜಾಯಾ—ನನ್ನ ಪತ್ನಿಯು । ಅಪ ರುಣದ್ಧಿ-ನನ್ನನ್ನು ತಡೆಯುತ್ತಾಳೆ। ನಾಥಿತಃ-ಯಾಚನೆಯನ್ನು ಮಾಡುವ ಜೂಜುಗಾರನು। ಮರ್ಡಿತಾರಂ—ಇವನಿಗೆ ತೃಪ್ತಿಯನ್ನುಂಟುಮಾಡುವ ದಾತೃವನ್ನು । ನ ವಿಂದತೇ—ಖಂಡಿತ ಹೊಂದುವುದಿಲ್ಲ ।

ವಸ್ಕೃಷ್ಯ—ಬೆಲೆಬಾಳತಕ್ಕದ್ದಾದರೂ ಸಹ । ಜರತೇಃ—ಮುದಿಯಾದ । ಅಶ್ವಸ್ಯೇವ—ಕುದುರೆಯಂತೆ । ಅಹಂ—ನಾನು । ಕಿತವಸ್ಯ—ಜೂಜುಗಾರನ । ಭೋಗಂ—ಸುಖವನ್ನು । ನ ವಿಂದಾಮಿ—ಹೊಂದುವುದಿಲ್ಲ.

। ಭಾವಾರ್ಥ ।

ನನ್ನ ಅತ್ತೆಯು ನನ್ನನ್ನು ನಿಂದಿಸುತ್ತಾಳೆ. ನನ್ನ ಪತ್ನಿಯು ಯಾವಾಗಲೂ ನನ್ನನ್ನು ತಡೆಯುತ್ತಾಳೆ. ಜೂಜುಗಾರನಾದವನು ಯಾರನ್ನು ಯಾಚಿಸಿದರೂ ಇವನಿಗೆ ತೃಪ್ತಿಯನ್ನು ಕೊಡುವ ಉದಾರಿಯೂ ಇರುವುದಿಲ್ಲ. ಕುದುರೆಯು ಬಹಳ ಬೆಲೆಬಾಳುವುದಾದರೂ ಸಹ ಮುದಿಯಾದಾಗ ಅದಕ್ಕೆ ಸುಖವು ಸಿಕ್ಕದಿರುವಂತೆ, ನಾನು ಯೋಗ್ಯನಾದರೂ, ಜೂಜುಗಾರನಾದುದರಿಂದ ನನಗೆ ಖಂಡಿತ ಸುಖವಿಲ್ಲ.

English Translation

My mother-in-law reviles me, my wife opposes me; the beggar meets no compassionate (benefactor): I do not realize the enjoyment of the gamester any more than that of a valuable horse grown old.

। ಸಂಹಿತಾಪಾಠಃ ।

ಅನ್ಯೇ ಜಾಯಾಂ ಪರಿ ಮೃಶಂತ್ಯಸ್ಯ ಯಸ್ಯಾಗೃಧದ್ವೇದನೇ ವಾಜ್ಯಕ್ಷಃ ।
ಪಿತಾ ಮಾತಾ ಭ್ರಾತರ ಏನಮಾಹುರ್ನ ಜಾನೀಮೋ ನಯತಾ ಬದ್ಧಮೇತಂ ॥೪॥

॥ ಪದಪಾಠಃ ॥

ಅನ್ಯೇ । ಜಾಯಾಂ । ಪರಿ । ಮೃಶಂತಿ । ಅಸ್ಯ । ಯಸ್ಯ । ಅಗೃಧತ್ । ವೇದನೇ । ವಾಜೀ । ಅಕ್ಷಃ ।
ಪಿತಾ । ಮಾತಾ । ಭ್ರಾತರಃ । ಏನಂ । ಆಹುಃ । ನ । ಜಾನೀಮಃ । ನಯತ । ಬದ್ಧಂ । ಏತಂ ॥ ೪ ॥

। ಸಾಯಣಭಾಷ್ಯಂ ।

ಯಸ್ಯ ಕಿತವಸ್ಯ ವೇದನೇ ಧನೇ ವಾಜೀ ಬಲವಾನಕ್ಷೋ ದೇವೋಽಗೃಧತ್-ಅಭಿಕಾಂಕ್ಷಾಂ ಕರೋತಿ ತಸ್ಯಾಸ್ಯ ಕಿತವಸ್ಯ ಜಾಯಾಂ ಭಾರ್ಯಾಮನ್ಯೇ ಪ್ರತಿಕಿತವಾಃ ಪರಿ ಮೃಶಂತಿ । ವಸ್ತ್ರಕೇಶಾದ್ಯಾಕರ್ಷಣೇನ ಸಂಸ್ಪೃಶಂತಿ । ಕಿಂಚ । ಪಿತಾ ಜನನೀ ಚ ಭ್ರಾತರಃ ಸಹೋದರಾಶ್ಚೈನಂ ಕಿತವಮಾಹುಃ । ವದಂತಿ । ನ ವಯಮಸ್ಮದೀಯಮೇನಂ ಜಾನೀಮಃ । ರಜ್ಜ್ವಾ ಬದ್ಧಮೇತಂ ಕಿತವಂ ಹೇ ಕಿತವಾಃ ಯೂಯಂ ನಯತ । ಯಥೇಷ್ಟದೇಶಂ ಪ್ರಾಪಯತೇತಿ ॥

। ಪ್ರತಿಪದಾರ್ಥ ।

ಯಸ್ಯ—ಯಾವ ಜೂಜುಗಾರನ । **ವೇದನೇ**—ಧನದಲ್ಲಿ । **ವಾಜೀ**—ಶಕ್ತಿಯುತವಾದ । **ಅಕ್ಷಃ**—ಪಗಡೆದಾಳವು । **ಅಗೃಧತ್**—ಅಪಹರಿಸುವ ಆಸೆಯನ್ನು ತೋರಿಸುವುದೋ । **ಅಸ್ಯ**—ಅಂತಹ ಜೂಜುಗಾರನ । **ಜಾಯಾಂ**—ಪತ್ನಿಯನ್ನು । **ಅನ್ಯೇ**—ಇವನ ಪ್ರತಿಕಕ್ಷಿಗಳು । **ಪರಿ ಮೃಶಂತಿ**—ಹಿಡಿದೆಳೆದು ಅವಮಾನಪಡಿಸುತ್ತಾರೆ । **ನ ಜಾನೀವಃ**—ಇವನು ಯಾರೋ ನಮಗೆ ಗೊತ್ತಿಲ್ಲ । **ಬದ್ಧಂ**—ಹಗ್ಗದಿಂದ ಬಂಧಿತನಾದ । **ಏತಂ**—ಇವನನ್ನು । **ನಯತ**—ನಿಮ್ಮಿಷ್ಟಬಂದತ್ತ ಜಾಗಕ್ಕೆ ಕರೆದೊಯ್ಯಿರಿ ಎಂಬುದಾಗಿ । **ಪಿತಾ**—ಇವನ ತಂದೆಯೂ । **ಮಾತಾ**—ತಾಯಿಯೂ । **ಭ್ರಾತರಃ**—ಸಹೋದರರೂ । **ಏನಂ**—ಇವನ ವಿಷಯದಲ್ಲಿ । **ಅಹುಃ**—ಹೇಳುತ್ತಾರೆ.

।। ಭಾವಾರ್ಥ ।।

ಯಾವ ಜೂಜುಗಾರನ ಧನವನ್ನು ಶಕ್ತಿಯುತವಾದ ಪಗಡೆದಾಳವು ಇಚ್ಛಿಸಿ ಅಪಹರಿಸುವುದೋ, ಅಂತಹ ಜೂಜುಗಾರನ ಪತ್ನಿಯನ್ನು ಇವನ ಪ್ರತಿಕಕ್ಷಿಗಳು ಹಿಡಿದೆಳೆದು ಅವಮಾನಪಡಿಸುತ್ತಾರೆ. "ಇವನ ವಿಷಯವು ನಮಗೆ ಸಂಬಂಧಿಸಿದುದಲ್ಲ. ಇವನನ್ನು ಕಟ್ಟಿ ಎಲ್ಲಿಗೆ ಬೇಕಾದರೂ ಕರೆದೊಯ್ಯಿರಿ" ಎಂಬುದಾಗಿ ಇವನ ಮಾತಾಪಿತೃಗಳೂ, ಸಹೋದರರೂ ಇವನ ವಿಷಯದಲ್ಲಿ ಹೇಳುತ್ತಾರೆ.

English Translation

Others touch the wife of him whose wealth the potent dice covet: his mother, father, brothers say, "We know him not, take him away bound (wherever you will)".

। ಸಂಹಿತಾಪಾಠಃ ।

ಯದ್ದಾದೀಧ್ಯೇ ನ ದವಿಷಾಣ್ಯೇಭಿಃ ಪರಾಯದ್ಭ್ಯೋಽವ ಹೀಯೇ ಸಖಿಭ್ಯಃ।
ನ್ಯೃಪ್ತಾಶ್ಚ ಬಭ್ರವೋ ವಾಚಮಕ್ರತೇ ಏಮಾದೇಷಾಂ ನಿಷ್ಕೃತಂ ಜಾರಿ-
ಣೇವ ॥ ೫ ॥

। ಪದಪಾಠಃ ।

ಯತ್ । ಆದೀಧ್ಯೇ । ನ । ದವಿಷಾಣಿ । ಏಭಿಃ । ಪರಾಯತ್ಭ್ಯಃ । ಅವ । ಹೀಯೇ । ಸಖಿಭ್ಯಃ ।
ನಿಽಊಪ್ತಾಃ । ಚ । ಬಭ್ರವಃ । ವಾಚಂ । ಅಕ್ರತ । ಏಮಿ । ಇತ್ । ಏಷಾಂ । ನಿಽಕೃತಂ । ಜಾರಿಣೇಽ-
ಇವ ॥ ೫ ॥

। ಸಾಯಣಭಾಷ್ಯಂ ।

ಯದ್ಯದಾಹಮಾದೀಧ್ಯೇ ಧ್ಯಾಯಾಮಿ ತದಾನೀಮೇಭಿರಕ್ಷೈರ್ನ ದವಿಷಾಣಿ । ನ ದೂಷಯೇ । ನ ಪರಿತಪಾಮಿ । ಯದ್ವಾ । ನ ದವಿಷಾಣಿ । ನ ದೇವಿಷ್ಯಾಮೀತ್ಯರ್ಥಃ । ಪರಾಯದ್ಭ್ಯಃ ಸ್ವಯಮೇವ

परागच्छे द्ध्यः सभिभ्यः सभिभूतेभ्यः कितवेभ्योऽव हीयेऽ । अवहितोऽ भवामि । नाहं प्रथमनुष्टावि स्यजामीति । कंज बभ्रवो बभ्रुवर्णा अक्षा न्युप्ताः कितवैरवक्षिप्ताः संतो वाजमुक्रत । शब्दं कुर्वन्ति । तदा संकल्पं परित्यजाक्षव्यसनेनाभिभूयमाना-नोऽहमेषामुष्टाक्षाणां निष्कृतं स्थानं जारिणेव यथा कामुव्यसनेनाभिभूयमानास्त्रैरिणे संकेतस्थानं याति तद्वदेवाम्। गच्छाम्येव ॥

॥ प्रतिपदार्थः ॥

यत्—यावाग । अदीध्ये—ನನ್ನ ಚರ್ಯೆಯ ವಿಷಯದಲ್ಲಿ ಯೋಚಿಸುವೆನೋ ಆಗ । अभिः—ಈ ದಾಳಗಳೊಂದಿಗೆ । न दविषाणि—ಆಡುವುದೇ ಇಲ್ಲವೆಂದು । परायद्भ्यः—ನನ್ನನ್ನು ಬಿಟ್ಟು ಓಡುವ । सभिभ्यः—ಮಿತ್ರರೊಡನೆ । अव हीये—ಎಚ್ಚರಿಕೆಯಿಂದ ಪ್ರತಿಜ್ಞೆಮಾಡುತ್ತೇನೆ (ಆದರೆ) । बभ्रवः—ಹೊಂಬಣ್ಣದ ದಾಳಗಳು । न्युप्ताः—ಜೂಜುಗಾರರಿಂದ ಎಸೆಯಲ್ಪಟ್ಟು । वाजं अक्रत—ಶಬ್ದವನ್ನು ಮಾಡುವುದನ್ನು ಕೇಳಿದಾಗ । जारिणेव—ಕಾಮುಕಳಾದ ಸ್ತ್ರೀಯು ಸಂಕೇತಸ್ಥಾನಕ್ಕೆ ಅವಸರದಿಂದ ಓಡುವಂತೆ । अविषाम्—ಈ ದಾಳಗಳ । निष्कृतं—ಸ್ಥಾನಕ್ಕೆ । अविमीत्—ಖಂಡಿತ ಹೋಗಿ ಸೇರುತ್ತೇನೆ.

॥ भावार्थः ॥

ನಾನು ನನ್ನ ಚರ್ಯೆಯ ವಿಷಯದಲ್ಲಿ ಯೋಚಿಸತೊಡಗಿದಾಗ " ಈ ದಾಳಗಳೊಂದಿಗೆ ಇನ್ನು ಆಡುವುದೇ ಇಲ್ಲ " ಎಂದು ನನ್ನನ್ನೂ ತ್ಯಜಿಸಿ ಹೋಗುವ ನನ್ನ ಮಿತ್ರರ ಮುಂದೆ (ಇತರ ಜೂಜುಕಾರರೊಂದಿಗೆ) ಪ್ರತಿಜ್ಞೆಯನ್ನು ಮಾಡುತ್ತೇನೆ. ಆದರೆ, ಯಾವಾಗ ಹೊಂಬಣ್ಣದ ದಾಳಗಳು ಜೂಜಾಟದ ಕಾಲದಲ್ಲಿ ಎಸೆಯಲ್ಪಟ್ಟು ಆಕರ್ಷಕವಾದ ಶಬ್ದವನ್ನು ಮಾಡುವುವೋ, ಆ ಒಡನೆಯೇ ಕಾಮುಕಳಾದ ಸ್ತ್ರೀಯು ಸಂಕೇತಸ್ಥಾನಕ್ಕೆ ಅವಸರವಾಗಿ ಓಡಿಹೋಗಿ ಸೇರುವಂತೆ, ನಾನೂ ಆ ದಾಳಗಳ ಸ್ಥಾನಕ್ಕೆ ಖಂಡಿತ ಹೋಗಿ ಸೇರುತ್ತೇನೆ.

English Translation

When I reflect, (then I say), "I will play no more with them", I pay attention to my friends who desert (me); and the tawny dice rattle as they are thrown: I hasten to their accustomed place as a harlot (to an assignation).

॥ संहितापाठः ॥

सभामेति कितवः पृच्छमानो जेष्यामीति तन्वा शूशुजानः ।
अक्षासो अस्य वि तिरन्ति कामं प्रतिदीव्ने ददत आ कृतानि ॥६॥

। ಪದಪಾಠಃ ।

ಸಭಾಂ । ಏತಿ । ಕಿತವಃ । ಪೃಚ್ಛಮಾನಃ । ಜೇಷ್ಯಾಮಿ । ಇತಿ । ತನ್ವಾ । ಶೂಶುಜಾನಃ ।
ಅಕ್ಷಾಸಃ । ಅಸ್ಯ । ವಿ । ತಿರಂತಿ । ಕಾಮುಂ । ಪ್ರತಿದೀವ್ನೇ । ದಧತಃ । ಆ । ಕೃತಾನಿ ॥೬॥

। ಸಾಯಣಭಾಷ್ಯಂ ।

ತನ್ವಾ ಶರೀರೇಣ ಶೂಶುಜಾನಃ ಶೋಶುಜಾನೋ ದೀಪ್ಯಮಾನಃ ಕಿತವಃ ಕೋಽತ್ರಾಸ್ತಿ ಧನಿಕಸ್ತಂ ಜೇಷ್ಯಾಮೀತಿ ಪೃಚ್ಛಮಾನಃ ಪೃಚ್ಛನ್ ಸಭಾಂ ಕಿತವಸಂಬಂಧಿನೀಮೇತಿ । ಗಚ್ಛತಿ । ತಸ್ಯ ಪ್ರತಿದೀವ್ನೇ ಪ್ರತಿದೇವಿತ್ರೇ ಕಿತವಾಯ ಕೃತಾನಿ ದೇವನೋಪಯುಕ್ತಾನಿ ಕರ್ಮಾಣ್ಯಾ ದಧತೋ ಜಯಾರ್ಥಮಾಭಿಮುಖ್ಯೇನ ನುರ್ಯಾದಯಾ ವಾ ದಧತೋಽಸ್ಯ ಕಿತವಸ್ಯ ಕಾಮುಮಿಚ್ಛಾಮುಷ್ಣಾಸೋಽಕ್ಷಾ ವಿತರಂತಿ । ವರ್ಧಯಂತಿ ॥

। ಪ್ರತಿಪದಾರ್ಥ ।

ತನ್ವಾ—ತನ್ನ ಶರೀರಕಾಂತಿಯಿಂದ । ಶೂಶುಜಾನಃ—ಪ್ರಕಾಶಿಸುವ । ಕಿತವಃ—ಜೂಜುಗಾರನು (ಇಲ್ಲಿ ಯಾವನಿರುವನೋ ಅವನನ್ನು) । ಜೇಷ್ಯಾಮಿ—ಜಯಿಸಬಲ್ಲೆನೇ । ಇತಿ—ಎಂಬುದಾಗಿ । ಪೃಚ್ಛಮಾನಃ—ತನ್ನಲ್ಲೇ ಪ್ರಶ್ನಿಸುತ್ತ । ಸಭಾಂ—ದ್ಯೂತದ ಕಟ್ಟೆಯನ್ನು । ಏತಿ—ಪ್ರವೇಶಿಸುತ್ತಾನೆ । ಪ್ರತಿದೀವ್ನೇ—ತನ್ನ ಪ್ರತಿಕಕ್ಷಿಗೆ ತೋರಿಸುವ । ಕೃತಾನಿ—ಸವಾಲಿನ ಕಾರ್ಯಗಳನ್ನು । ಆದಧತಃ—ಚಮತ್ಕಾರದಿಂದ ತೋರಿಸಿಕೊಡುವ । ಅಸ್ಯ—ಈ ದ್ಯೂತಕಾರನ । ಕಾಮುಂ—ಇಚ್ಛೆಯನ್ನು । ಅಕ್ಷಾಸಃ—ದಾಳಗಳು । ವಿ ತಿರಂತಿ—ಹೆಚ್ಚಾಗುವಂತೆ ಮಾಡುತ್ತವೆ.

। ಭಾವಾರ್ಥ ।

ತನ್ನ ಶರೀರಕಾಂತಿಯಿಂದ ಪ್ರಕಾಶಿಸುವ ಜೂಜುಗಾರನು ಇಲ್ಲಿ ಯಾವನಿರುವನೋ ಅವನನ್ನು ಜಯಿಸ ಬಲ್ಲೆನೇ ಎಂಬುದಾಗಿ ತನ್ನಲ್ಲೇ ಪ್ರಶ್ನಿಸುತ್ತ ಜೂಜಿನ ಕಟ್ಟೆಯನ್ನು ಪ್ರವೇಶಿಸುತ್ತಾನೆ. ತನ್ನ ಪ್ರತಿಕಕ್ಷಿಗೆ ತನ್ನ ಸವಾಲಿನ ರೂಪದ ಚಮತ್ಕಾರಕಾರ್ಯಗಳನ್ನು ತೋರಿಸುವಾಗ ದಾಳಗಳು ಇವನ ದ್ಯೂತೇಚ್ಛೆಯನ್ನು ಇನ್ನೂ ಅಧಿಕವಾಗುವಂತೆ ಮಾಡುತ್ತವೆ.

English Translation

The gamester goes to the gaming table, radiant in person, and asking himself, " Shall I win ? " The dice increase his passion for play as he practises the arts of (gambling) with his adversary.

। ಸಂಹಿತಾಪಾಠಃ ।

ಅಕ್ಷಾಸ ಇದಂಕುಶಿನೋ ನಿತೋದಿನೋ ನಿಕೃತ್ವಾನಸ್ತಪನಾಸ್ತಾಪಯಿಷ್ಣವಃ।
ಕುಮಾರದೇಷ್ಣಾ ಜಯತಃ ಪುನರ್ಹಣೋ ಮಧ್ವಾ ಸಂಪೃಕ್ತಾಃ ಕಿತವಸ್ಯ
ಬರ್ಹಣಾ ॥ ೭ ॥

॥ ಪದಪಾಠಃ ॥

ಅಕ್ಷಾಸಃ । ಇತ್ । ಅಂಕುಶಿನಃ । ನಿಕೃತೋದಿನಃ । ನಿಕೃತ್ವಾನಃ । ತಪನಾಃ । ತಾಪಯಿಷ್ಣವಃ ।

ಕುಮಾರದೇಷ್ಣಾಃ । ಜಯತಃ । ಪುನಃಹನಃ । ಮಧ್ವಾ । ಸಂಪೃಕ್ತಾಃ । ಕಿತವಸ್ಯ । ಬರ್ಹಣಾ ॥೭॥

॥ ಸಾಯಣಭಾಷ್ಯಂ ॥

ಅಕ್ಷಾಸ ಇದಕ್ಷಾ ಏವಾಂಕುಶಿನೋಽಂಕುಶವಂತೋ ನಿತೋದಿನೋ ನಿತೋದಿತವಂತಶ್ಚ ನಿಕೃತ್ವಾನಃ ಪರಾಜಯೇ ನಿಕರ್ತನಶೀಲಾಶ್ಚೇತ್ತಾರೋ ವಾ ತಪನಾಃ ಪರಾಜಯೇ ಕಿತವಸ್ಯ ಸಂತಾಪಕಾಸ್ತಾಪಯಿಷ್ಣವಃ ಸರ್ವಸ್ವಹಾರಕತ್ವೇನ ಕುಟುಂಬಸ್ಯ ಸಂತಾಪನಶೀಲಾಶ್ಚ ಭವಂತಿ । ಕಿಂಚ ಜಯತಃ ಕಿತವಸ್ಯ ಕುಮಾರದೇಷ್ಣಾ ಧನದಾನೇನ ಧಾನ್ಯತಾಂ ಲಂಭಯಂತಃ ಕುಮಾರಾಣಾಂ ದಾತಾರೋ ಭವಂತಿ। ಅಪಿ ಚ ಮಧ್ವಾ ಮಧುನಾ ಸಂಪೃಕ್ತಾಃ ಪ್ರತಿಕಿತವೇನ ಬರ್ಹಣಾ ಪರಿವೃದ್ಧೇನ ಸರ್ವಸ್ವಹರಣೇನ ಕಿತವಸ್ಯ ಪುನರ್ಹಣಃ ಪುನರ್ಹಂತಾರೋ ಭವಂತಿ ॥

॥ ಪ್ರತಿಪದಾರ್ಥ ॥

ಅಕ್ಷಾಸಃ ಇತ್—ಪಗಡೆದಾಳಗಳೇ । **ಅಂಕುಶಿನಃ**—ಅಂಕುಶವನ್ನು ಹೊಂದಿರುವವಾಗಿಯೂ । **ನಿತೋದಿನಃ**—ಇಕ್ಕಳಗಳನ್ನು ಹೊಂದಿರುವುವಾಗಿಯೂ । **ನಿಕೃತ್ವಾನಃ**—ಕತ್ತರಿಸುವ ಶಕ್ತಿಯುಳ್ಳವಾಗಿಯೂ । **ತಪನಾಃ** ದುಃಖಕಾರಕಗಳಾಗಿಯೂ । **ತಾಪಯಿಷ್ಣವಃ**—ಸಂಸಾರಕ್ಕೆಲ್ಲಾ ದುಃಖದಾಯಕವಾಗಿಯೂ ಇರುತ್ತವೆ । **ಜಯತಃ**—ಜಯವನ್ನು ಹೊಂದುವ । **ಕಿತವಸ್ಯ**—ದ್ಯೂತಕಾರನಿಗೆ । **ಕುಮಾರದೇಷ್ಣಾಃ**—ಸಂತಾನವನ್ನು ಕೊಡತಕ್ಕವಾಗಿವೆ । **ಮಧ್ವಾ**—ಮಧುವಿನಿಂದ । **ಸಂಪೃಕ್ತಾಃ**—ಕೂಡಿರತಕ್ಕ ದಾಳಗಳು । **ಬರ್ಹಣಾ**—ಸರ್ವಸ್ವವನ್ನು ಅಪಹರಿಸುವುದರ ಮೂಲಕ (ಸೋತವನಿಗೆ) । **ಪುನರ್ಹಣಃ**—ತಿರುಗಿಯೂ ಸಾಯಿಸತಕ್ಕವಾಗಿರುತ್ತವೆ.

॥ ಭಾವಾರ್ಥ ॥

ಪಗಡೆದಾಳಗಳು ಅಂಕುಶಗಳಂತೆಯೂ, ಇಕ್ಕಳಗಳಂತೆಯೂ ಕತ್ತರಿಸುತ್ತ ದ್ಯೂತಕಾರನಿಗೂ ಅವನ ಸಂಸಾರಕ್ಕೂ ಪೂರ್ಣವಾಗಿ ದುಃಖವನ್ನು ಕೊಡತಕ್ಕವಾಗಿರುತ್ತವೆ. ಮಧುಯುಕ್ತವಾದ ಈ ದಾಳಗಳು ಜಯವನ್ನು ಹೊಂದುವವನಿಗೆ ಸಂತಾನದಾಯಕಗಳಾಗಿಯೂ, ಸೋತವನಿಗೆ ಸರ್ವಸ್ವವನ್ನೂ ಅಪಹರಿಸುವುದರ ಮೂಲಕ ಹತ್ಯಾಕಾರಿಯಾಗಿಯೂ ಇರುತ್ತವೆ.

English Translation

Dice verily are armed with hooks, with goads, pricking, paining and torturing (the gamester): to the winning (player) they are the givers of sons, they are tipped with honey; slaying him in return by taking away the gambler's (all).

। संहितापाठः ।

ತ್ವಷ್ಟೃವಿಗೆ ಸರಣ್ಯೂ ಎಂಬ ಕನ್ಯೆಯೂ ತ್ರಿಶಿರಸ್ಸೆಂಬ ಪುತ್ರನೂ ಇದ್ದರು. ಅವನು ತನ್ನ ಮಗಳಾದ ಸರಣ್ಯೂವನ್ನು ವಿವಸ್ವಂತನಿಗೆ ವಿವಾಹಮಾಡಿಕೊಟ್ಟನು. ಅನಂತರ ವಿವಸ್ವಂತನಿಗೆ ಪತ್ನಿಯಾದ ಸರಣ್ಯೂವಿನಲ್ಲಿ ಯಮ ಮತ್ತು ಯಮಿ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಇವರಿಬ್ಬರೂ ಒಂದಿಗೆ ಹುಟ್ಟಿದ ಅವಳಿ ಮಕ್ಕಳು. ಅವರಲ್ಲಿ ಯಮನೇ ಹಿರಿಯವನು. ಒಂದು ದಿನ ಪತಿಯಾದ ವಿವಸ್ವಂತನು ಇಲ್ಲದಿರುವ ವೇಳೆಯಲ್ಲಿ ಸರಣ್ಯೂವು ತನ್ನನ್ನೇ ಹೋಲುವ ಮತ್ತೊರ್ವ ಸ್ತ್ರೀಯನ್ನು ನಿರ್ಮಿಸಿ ತನ್ನ ಅವಳಿಮಕ್ಕಳನ್ನು ಅವಳ ವಶಕ್ಕೆ ಒಪ್ಪಿಸಿ ತಾನು ಅಶ್ವರೂಪವನ್ನು ಧರಿಸಿ ಆ ಸ್ಥಾನವನ್ನು ಬಿಟ್ಟು ವಿವಸ್ವಂತನಿಗೆ ತಿಳಿಯದಂತೆ ಬೇರೆ ಜಾಗಕ್ಕೆ ಹೋಗಿ ಅದೃಶ್ಯಳಾಗಿದ್ದಳು. ಆದರೆ ವಿವಸ್ವಂತನಿಗೆ ಇದರ ಅರಿವು ಇಲ್ಲದೆ ಸರಣ್ಯೂವಿಗೆ ಪ್ರತಿನಿಧಿಯಾಗಿದ್ದ ಆ ಸ್ತ್ರೀವ್ಯಕ್ತಿಯೊಂದಿಗೆ ಸೇರಿದನು. ಅದರ ಫಲವಾಗಿ ಮನುವಿನ ಉತ್ಪತ್ತಿಯಾಯಿತು. ಮನುವೂ ಸಹ ತಂದೆಯಂತೆಯೇ ತೇಜಸ್ವಿಯಾಗಿ ದೊಡ್ಡ ರಾಜರ್ಷಿಯಾದನು. ಇವನ ಕೀರ್ತಿಯು ಸಕಲ ಲೋಕಗಳಲ್ಲೆಯೂ ಪಸರಿಸಿತು. ಕೆಲವು ಕಾಲದ ನಂತರ ವಿವಸ್ವಂತನಿಗೆ ನಿಜವಾದ ಅರಿವುಂಟಾಯಿತು. ಸರಣ್ಯೂವು ಅಶ್ವರೂಪದಲ್ಲಿ ಹೊರಟುಹೋಗಿದ್ದಾಳೆಂದು ತಿಳಿದನಂತರ ತಾನೂ ಸಹ ಪುರುಷಾಶ್ವರೂಪವನ್ನು ಹೊಂದಿ ತ್ವಷ್ಟೃವಿನ ಪುತ್ರಿಯು ಹೋದಸ್ಥಳಕ್ಕೆ ಅವಳನ್ನು ಹಿಂಬಾಲಿಸಿ ಹೊರಟು ಅವಳನ್ನು ಸೇರಲು ಪ್ರಯತ್ನಿಸಿದನು. ತನ್ನನ್ನು ಹಿಂಬಾಲಿಸಿ ವಿವಸ್ವಂತನೂ ಅಶ್ವರೂಪನಾಗಿ ಬಂದುದನ್ನು ತಿಳಿದ ಸರಣ್ಯೂವು ಅವನೊಂದಿಗೆ ಸಂಭೋಗಸುಖವನ್ನಿಚ್ಛಿಸಿದಳು ಆಗ ವಿವಸ್ವಂತನು ಅವಳ ಇಚ್ಛೆಯನ್ನು ನೆರವೇರಿಸಿದನು. ಅವರ ಪರಸ್ಪರವಾದ ಉತ್ಸಾಹಕಾಲದಲ್ಲಿ ವಿವಸ್ವಂತನ ವೀರ್ಯವು ನೆಲದಮೇಲೆ ಬಿದ್ದಿತು. ಆಗ ಸರಣ್ಯೂವು ಗರ್ಭಧಾರಣೇಚ್ಛೆಯಿಂದ ಅದನ್ನು ಆಘ್ರಾಣಿಸಿದಳು. ಆ ಶುಕ್ರವನ್ನು (ರೇತಸ್ಸನ್ನು) ಮೂಸಿ ನೋಡಿದೊಡನೆಯೇ ಅವಳಿಗೆ ಗರ್ಭೋತ್ಪತ್ತಿಯುಂಟಾಗಿ ಅದರಿಂದ ನಾಸತ್ಯ, ದಸ್ರ ಎಂಬ ಇಬ್ಬರು ಯುವಕರು ಉತ್ಪನ್ನರಾದರು. ಅನಂತರ ಅವರು ಅಶ್ವಿನೀದೇವತೆಗಳು ಎಂಬ ಹೆಸರಿನಿಂದ ಕರೆಯಲ್ಪಟ್ಟು ಇವರ ಮಹಿಮೆಯು ಲೋಕಗಳಲ್ಲೆಲ್ಲಾ ಹರಡಿತು ಎಂದಿದೆ.

ಅಶ್ವಿನೀದೇವತೆಗಳ ರಥವರ್ಣನೆ ಇತ್ಯಾದಿ

ಅಶ್ವಿನೀದೇವತೆಗಳ ರಥವು ಸುವರ್ಣಮಯವಾದುದು ಮತ್ತು ಚಕ್ರ, ಅಚ್ಚು ಮೊದಲಾದ ಭಾಗಗಳೆಲ್ಲವೂ ಚಿನ್ನದಿಂದ ಮಾಡಿದುದು (ಋ. ಸಂ. ೪-೪೪.೪; ೧-೧೮೦-೧, ೪-೫೫-೨೯, ೪-೨೨-೫ ಇತ್ಯಾದಿ) ಅದು ಒಂದು ವಿಲಕ್ಷಣವಾದ ರಥ. ಅದಕ್ಕೆ ಮೂರು ಚಕ್ರ, ಮೂರು ನೇಮಿ ಮತ್ತು ಬೇರೆ ಕೆಲವು ಭಾಗಗಳೂ ಮೂರು ಮೂರು ಇರುವುವು. ಅದು ಮನೋವೇಗವುಳ್ಳದ್ದು. ಮೂರು ಚಕ್ರದ ರಥವೆಂದರೆ ಅವರೊಬ್ಬರದೇ.

ಯದಯಾತಂ ಶುಭಸ್ಪತೀ ವರೇಯಂ ಸೂರ್ಯಾಮುಪ ।
ಕ್ವೈಕಂ ಚಕ್ರಂ ವಾಮಾಸೀತ್ ಕ್ವ ದೇಷ್ಟ್ರಾಯ ತಸ್ಥತುಃ ॥

(ಋ ಸಂ. ೧೦-೮೫-೧೫)

ಎಂಬಲ್ಲಿ ಸೂರ್ಯಾದೇವಿಯ ವಿವಾಹಕ್ಕೆ ಹೋದಾಗ ರಥದ ಒಂದು ಚಕ್ರವು ಹಾಳಾಗಿ ಹೋಯಿತೆಂದು ಹೇಳಿದೆ ಈ ವಿಷಯದಲ್ಲಿ ಐತರೇಯಬ್ರಾಹ್ಮಣರಲ್ಲಿ ಒಂದು ಇತಿಹಾಸವಿದೆ—

ಪ್ರಜಾಪತಿಃ ಸವಿತುಃ ದುಹಿತರಂ ಸೂರ್ಯಾಂ ಸೋಮಾಯ ರಾಜ್ಞೇ ಪ್ರಾಯಚ್ಛತ್ । ಯೇ ತ್ವನ್ಯೇ ದೇವಾಃ ತಾಂ ವರಯಿತುಮಾಗಚ್ಛನ್ । ತೇಭ್ಯೋ ವಿವಾಹಾದನಂತರಮೃಕ್ಸಹಸ್ರಮುದದಾತ್। ಯದೇತದಾಶ್ವಿನಂ ನಾಮ ತಸ್ಮಿನ್ದೇವಾ ವಿವಾದಮಕುರ್ವನ್ । ಮನೋದಮಸ್ತು ಮನೋದಮಸ್ತ್ವಿತಿ । ತೇಽಬ್ರುವನ್ । ಅಜಿಂ ಧಾವಾಮ । ಯೋ ನೋ ಜೇಷ್ಯತಿ ತಸ್ಯೇದಂ ಭವಿಷ್ಯತೀತಿ । ತೇಽಗ್ನೇರ್ಗೃಹಪತೇರುಪರ್ಯಾದಿತ್ಯಂ ಕಾಷ್ಠಾಂ ಕೃತ್ವಾಽಧಿಧಾವನ್ । ಕಾಷ್ಠಾ ಅಜ್ಯಂತ ಉಚ್ಯತೇ । ಅಶ್ವತರೀರಥೇನಾಗ್ನಿರಾಜಿಮಧಾವತ್ । ಗೋಭಿರುಷ್ಟ್ರೈರುಷಾಃ । ಹರಿರಥೇನೇಂದ್ರಃ । ಗರ್ದಭರಥೇನಾಶ್ವಿನೌ । ತತ್ರಾಶ್ವಿನಾವಜಯತಾಂ ॥

ಬ್ರಹ್ಮನು ಸವಿತೃದೇವನ ಸೂರ್ಯಾ ಎಂಬ ಹೆಸರುಳ್ಳ ಮಗಳನ್ನು ರಾಜನಾದ ಸೋಮನಿಗೆ ವಿವಾಹಮಾಡಿಕೊಟ್ಟನು ಆಗ ಇತರ ದೇವತೆಗಳು ಅವಳನ್ನು ವರಿಸುವುದಕ್ಕಾಗಿ ಬಂದರು. ವಿವಾಹವಾದನಂತರ ಅವನು ಅವರಿಗೆ ಒಂದು ಸಾವಿರ ಋಕ್ಕುಗಳನ್ನು ಕೊಟ್ಟನು. ಈ ಋಕ್ಕುಗಳಿಗೆ ಆಶ್ವಿನಋಕ್ಕುಗಳೆಂಬ ಹೆಸರು ಪ್ರಸಿದ್ಧವಾಯಿತು. ಈ ಋಕ್ಕುಗಳನ್ನು ಅಲ್ಲಿಗೆ ಬಂದಿದ್ದ ದೇವತೆಗಳು ನನಗೆ ಬೇಕು, ತನಗೆ ಬೇಕು ಎಂದು ಪರಸ್ಪರ ವಿವಾದಮಾಡಿದರು. ಅನಂತರ ಅವರು ಒಂದು ಸ್ಪರ್ಧೆಯನ್ನು ಏರ್ಪಡಿಸಿ ಅದರಲ್ಲಿ ಗೆದ್ದವರು ಈ ಋಕ್ಕುಗಳನ್ನು ಪಡೆಯಬಹುದೆಂದು ತಮ್ಮ ಲ್ಲಿಯೇ ನಿರ್ಣಯಮಾಡಿಕೊಂಡರು. ಅನಂತರ ಅವರು ಗೃಹಪತಿಯಾದ ಅಗ್ನಿಯ ಬಳಿಯಿಂದ ಆದಿತ್ಯನವರೆಗೆ ಹೋಗುವುದೇ ಸ್ಪರ್ಧೆಯೆಂದೂ ಅದರಲ್ಲಿ ಯಾರು ಮೊದಲು ಹೋಗಿ ಸೇರುವರೋ ಅವರೇ ಗೆದ್ದವರೆಂದು ನಿಷ್ಕರ್ಷಿಸಲಾಗುವುದೆಂದೂ ನಿಷ್ಕರ್ಷಿಸಿದರು ಆಗ ಅಗ್ನಿಯು ಹೇಸರಕತ್ತೆಯನ್ನು ಕಟ್ಟಿದ ರಥದಿಂದ ಓಡಲು ಸಿದ್ಧನಾದನು. ಉಷೋದೇವಿಯು ಕೆಂಪುಬಣ್ಣದ ಗೋವುಗಳನ್ನು ಕಟ್ಟಿದ ರಥದಲ್ಲಿ ಕುಳಿತು ಬಂದಳು. ಇಂದ್ರನು ತನ್ನ ಹರೀ ಎಂಬ ಕುದುರೆಗಳನ್ನು ಕಟ್ಟಿದ ರಥವನ್ನು ಹತ್ತಿ ಬಂದನು. ಆಶ್ವಿನೀದೇವತೆಗಳು ರಾಸಭಾ ಎಂಬ ಕತ್ತೆಗಳನ್ನು ಕಟ್ಟಿದ ತಮ್ಮ ರಥವನ್ನು ಹತ್ತಿ ಅಲ್ಲಿಗೆ ಬಂದರು. ಅನಂತರ ಅವರೆಲ್ಲರೂ ತಮ್ಮ ತಮ್ಮ ತಮ್ಮ ವಾಹನಗಳನ್ನೇರಿ ನಿರ್ದಿಷ್ಟಸ್ಥಳವನ್ನು ಸೇರುವುದಕ್ಕಾಗಿ ಓಡುವಾಗ ಆಶ್ವಿನೀದೇವತೆಗಳಿಗೆ ಜಯವು ಲಭಿಸಿತು. ಪಣವಾದ ಒಂದು ಸಾವಿರ ಋಕ್ಕುಗಳು ಅವರಿಗೇ ಸೇರಿತವು ಆದ್ದರಿಂದಲೇ ಆ ಋಕ್ಕುಗಳಿಗೆ ಆಶ್ವಿನಋಕ್ಕುಗಳೆಂಬ ಹೆಸರು ಪ್ರಸಿದ್ಧವಾಯಿತು ಎಂಬ ಇತಿಹಾಸದಲ್ಲಿ ಆಶ್ವಿನೀದೇವತೆಗಳ ರಥದ ಶ್ರೇಷ್ಠತೆಯು ಉಕ್ತವಾಗಿದೆ

ಆಶ್ವಿನೌ ಎಂಬ ಶಬ್ದಕ್ಕೆ ಅಶ್ವ (ಕುದುರೆ) ವುಳ್ಳವರು ಎಂದರ್ಥವಾದರೂ ಅವರು ಅಶ್ವಾರೋಹಿಗಳಾದುದರಿಂದ ಆ ಹೆಸರು ಅವರಿಗೆ ಬಂದಿದೆ ಎಂದು ಎಲ್ಲಿಯೂ ಹೇಳಿಲ್ಲ. ಅವರ ರಥವನ್ನುಎಳೆಯುವ ಅಶ್ವಗಳು (ಋ ಸಂ. ೧-೧೮೭-೨) ಪಕ್ಷಿಗಳು (೬-೬೩-೬) ಹಂಸಗಳು (೪-೪೫-೪),ಗರುಡಪಕ್ಷಿಗಳು (೧-೧೧೪-೪) ಶ್ಯೇನರೂಪವಾದ ಅಶ್ವಗಳು (೮.೫.೭) ಎಂದು ಹೇಳಿದೆ ಆದರೆ ಅವರ ಮುಖ್ಯವಾಹನವು ಯಾಸ್ಕರು ಹೇಳಿರುವಂತೆ ರಾಸಭಾವಶ್ವಿನೋಃ-ಅಶ್ವಿನೀದೇವತೆಗಳಿಗೆ ಕತ್ತೆಗಳೇ ವಾಹನಗಳ (ನಿ. ೨-೨೮).

ಕದಾ ಯೋಗೋ ವಾಜಿನೋ ರಾಸಭಸ್ಯ ಯೇನ ಯಜ್ಞಂ ನಾಸತ್ಯೋಪಯಾಥಃ ।

(ಋ. ಸಂ. ೧-೩೪-೯)

ತದ್ರಾಸಭೋ ನಾಸತ್ಯಾ ಸಹಸ್ರಮಾಜಾ ಯಮಸ್ಯ ಪ್ರಧನೇ ಜಿಗಾಯ ।

(ಋ. ಸಂ. ೧-೧೧೬-೨)

ಇತ್ಯಾದಿ ಋಕ್ಕುಗಳಲ್ಲಿ ರಾಸಭವೇ (ಕತ್ತೆ) ಅಶ್ವಿನೀದೇವತೆಗಳ ವಾಹನವೆಂದು ಸ್ಪಷ್ಟವಾಗಿ ಹೇಳಿದೆ.

ಅವರನ್ನು ಯಾವಾಗಲೂ ಯಜ್ಞ ಮಾಡುವವರು ಪ್ರಾತಃಕಾಲಗಳಲ್ಲಿಯೇ ಆಹ್ವಾನ ಮಾಡುತ್ತಾರೆ. ಸೂರ್ಯ ಪುತ್ರಿಯೊಡನೆ ಇವರಿಗೆ ಸಂಬಂಧವಿದೆ, ಸೂರ್ಯೆಯೇ ಅವರನ್ನು ವರಿಸಿದಳು (ಋ. ಸಂ. ೭-೬೯-೪) ಅವರಿಬ್ಬರೂ ಅವಳ ಪತಿಯರು (೪-೪೩-೬) ಸೂರ್ಯೆಯು ಅವರ ರಥವನ್ನು ಏರಿದಳು (೫-೭೩-೫, ೮ ೮-೧೦) ಸೂರ್ಯನ ಪುತ್ರಿಯು ಅವರ ರಥವನ್ನು ಏರುತ್ತಾಳೆ (ಋ ಸಂ. ೧-೩೪-೫, ೧-೧೧೬-೧೭, ೧-೧೮೪-೫; ೬-೬೩-೫) ಅವರು ಸೂರ್ಯೆಯನ್ನು ತಮ್ಮವಳೆಂದು ಭಾವಿಸುತ್ತಾರೆ (೭ ೬೪-೩) ಮತ್ತು ಅವಳು ರಥದಲ್ಲಿ ಅವರ ಜೊತೆಯಲ್ಲಿ ಹೋಗುತ್ತಾಳೆ (೪-೨೯-೪) ಇತ್ಯಾದಿ ವರ್ಣನೆಗಳಿವೆ

ಅವರು ಜನರಿಗೆ ಕಷ್ಟದಲ್ಲಿ ನೆರವಾಗುತ್ತಾರೆ ಎಂಬುದಕ್ಕೆ ಅನೇಕ ಆಖ್ಯಾಯಿಕೆಗಳಿವೆ. ಇವುಗಳನ್ನು ಆಯಾ ಸಂದರ್ಭಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ಆದರೆ ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ವಿವರಿಸಿದ್ದೇವೆ

ಜುಜುರುಷೋ ನಾಸತ್ಯೋತ ವವ್ರಿಂ ಪ್ರಾಮುಂಚತಂ ದ್ರಾಪಿಮಿವ ಚ್ಯವಾನಾತ್ ।
ಪ್ರಾತಿರತಂ ಜಹಿತಸ್ಯಾಯುರ್ದಸ್ರಾದಿತ್ಪತಿಮಕೃಣುತಂ ಕನೀನಾಂ ॥

(ಋ. ಸಂ ೧-೧೧೬-೧೦)

ಚ್ಯವನನೆಂಬ ಋಷಿಯು ಬಹಳ ವೃದ್ಧನಾಗಿ ದೇಹವು ಶಿಥಿಲವಾಗಿ ಶಕ್ತಿಯಿಲ್ಲದಿರುವಾಗ ಅವನ ಜನರು ಅವನನ್ನು ತ್ಯಜಿಸಿದರು. ಈ ಋಷಿಯು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಬಂದು ಇವನ ಶಿಥಿಲವಾದ ದೇಹವನ್ನು ಕಳೆದು ಯುವಕನನ್ನಾಗಿ ಮಾಡಿ ಇವನ ಪತ್ನಿಗೆ ಪ್ರಿಯನನ್ನಾಗಿ ಮಾಡಿದರು ಮತ್ತು ಅವನ ಆಯುಸ್ಸನ್ನು ಹೆಚ್ಚಿಸಿದರು ಎಂದಿದೆ. ಇದೇ ವಿಷಯವು—

ಯುವಂ ಚ್ಯವಾನಮಶ್ವಿನಾ ಜರಂತಂ ಪುನರ್ಯುವಾನಂ ಚಕ್ರಥುಃ ಶಚೀಭಿಃ ।

(ಋ. ಸಂ. ೧-೧೧೭-೧೩)

ನಿಷ್ಟೌಗ್ರ್ಯಂ ಪಾರಯಥಃ ಸಮುದ್ರಾತ್ಪುನಶ್ಚ್ಯವಾನಂ ಚಕ್ರಥುರ್ಯುವಾನಂ ।

(ಋ. ಸಂ. ೧-೧೧೮-೬)

ಪ್ರ ಚ್ಯವಾನಾಜ್ಜುಜುರುಷೋ ವವ್ರಿಮಿಚ್ಛಂ ನ ಮುಂಚಥಃ ।
ಯುವಾ ಯದೀ ಕೃಥಃ ಪುನರಾ ಕಾಮಮೃಣ್ವೇ ವಧ್ವಃ ॥

(ಋ ಸಂ. ೫-೭೪-೫)

ಉತ ತ್ಯದ್ವಾಂ ಜುರತೇ ಅಶ್ವಿನಾ ಭೂಚ್ಯವಾನಾಯ ಪ್ರತೀತ್ಯಂ ಹವಿರ್ದೇ ।

(ಋ. ಸಂ. ೭-೬೮-೬)

ಯುವಂ ಚ್ಯವಾನಂ ಜರಸೋಽಮುಮುಕ್ತಂ ನಿ ಪೇದವ ಊಹಥುರಾಶುಮಶ್ವಂ ।

(ಋ ಸಂ. ೭-೭೧-೫)

ಯುವಂ ಚ್ಯವಾನಂ ಸನಯಂ ಯಥಾ ರಥಂ ಪುನರ್ಯುವಾನಂ ಚರಥಾಯ ತಕ್ಷಥುಃ ।

(ಋ. ಸಂ. ೧೦-೩೯-೪)

ಈ ಋಕ್ಕುಗಳಲ್ಲಿಯೂ ವೃದ್ಧನಾದ ಚ್ಯವನಋಷಿಯನ್ನು ಯುವಕನನ್ನಾಗಿ ಮಾಡಿದ ವಿಷಯದ ವರ್ಣನೆಯಿದೆ. ಶತ ಪಥ ಬ್ರಾಹ್ಮಣದಲ್ಲಿಯೂ ಈ ವಿಷಯಕವಾದ ವಿಸ್ತಾರವಾದ ಇತಿಹಾಸವಿದೆ. ಅದರಂತೆಯೇ—

ಯುವಂ ವಿಪ್ರಸ್ಯ ಜರಣಾಮುಪೇಯುಷಃ ಪುನಃ ಕಲೇರಕೃಣುತಂ ಯುವದ್ವಯಃ ।

(ಋ. ಸಂ. ೧೦-೩೯-೮)

ಎಂಬ ಋಕ್ಕಿನಲ್ಲಿ ಕಲಿ ಎಂಬುವನ ಮುಪ್ಪನ್ನು ಹೋಗಲಾಡಿಸಿ ಅವನನ್ನು ಯುವಕನನ್ನಾಗಿ ಮಾಡಿದ ವಿಷಯದ ಪ್ರಸ್ತಾಪವಿದೆ.

ಯಾಭಿರ್ವನ್ವಂ ವಿಪಿಪಾನಮುಪಸ್ತುತಂ ಕಲಿಂ ಯಾಭಿರ್ನಿರೃತ್ತಜಾನಿಂ ದುವಸ್ಯಥಃ ।

(ಋ. ಸಂ. ೧ ೧೧೭ ೫)

ಎಂಬ ಮೇಲೆ ಹೇಳಿದ ಕಲಿ ಎಂಬುವನು ಪತ್ನಿಯನ್ನು ಪರಿಗ್ರಹಿಸಿ ಮದುವೆಯಾದಾಗ ಅವನಿಗೆ ತಮ್ಮ ನೆರವನ್ನು ನೀಡಿ ಅನೇಕ ಸಹಾಯಗಳನ್ನು ಮಾಡಿದರೆಂದು ಹೇಳಿದೆ.

ಅವರು **ವಿಮದನ** ಪತ್ನಿಯರಾದ ಯುವತಿಯರಿಗೋಸ್ಕರ ಒಂದು ರಥವನ್ನೂ (೧-೧೧೭-೧೯) ಅಥವಾ ಅವನಿಗೆ ಒರ್ವ ಪತ್ನಿಯನ್ನೂ (೧-೧೧೭-೧) ಅನುಗ್ರಹಿಸಿದರು. ಅವಳು **ಪುರಮಿತ್ರನ** ಪತ್ನಿಯಾಗಿದ್ದಳೆಂದು ತೋರುತ್ತದೆ. (ಋ. ಸಂ. ೧-೧೧೭-೨೦ ; ೧೦-೩೯-೭) ಮತ್ತು ಅವಳ ಹೆಸರು ಕಮದ್ಯು (೧೦-೬೫-೧೨)

ಕೃಷ್ಣ ಎಂಬುವನ ಮಗನಾದ **ವಿಶ್ವಕನಿಗೆ** ಕಳೆದುಹೋಗಿದ್ದ ಅವನ ಮಗನನ್ನು ತಂದು ಒಪ್ಪಿಸಿದರು (ಋ. ಸಂ. ೧ ೧೧೬-೨೩ , ೧-೧೧೭-೭ , ೧೦-೬೫-೧೨) ಋ. ಸಂ. ೮-೭೫-೧ ರಿಂದ ೩ನೆಯ ಋಕ್ಕುಗಳಲ್ಲಿ **ವಿಶ್ವಕ** ಮತ್ತು ವಿಷ್ಣಾಪುಗಳ ಹೆಸರುಗಳು ಸೂಚಿತವಾಗಿವೆ.

ಭುಜ್ಯುವಿನ ಕಥೆಯು ಪದೇ ಪದೆ ಹೇಳಲ್ಪಟ್ಟಿದೆ. ಭುಜ್ಯುವು ತುಗ್ರ ಎಂಬ ರಾಜನ ಪುತ್ರನು ಇವನೆ ಸಮುದ್ರಯಾನವಾಡುತ್ತಿರುವಾಗ ಮುಳುಗಿಹೋಗುತ್ತಿರಲು, ಅಲೆಗಳ ಮಧ್ಯದಲ್ಲಿ ಭುಜ್ಯುವು ಒಂದು ಮರದ ತುಂಡನ್ನು ಹಿಡಿದುಕೊಂಡು ತೇಲಾಡುತ್ತಿದ್ದನು. ಆಗ ಅವನು ಅಶ್ವಿನೀದೇವತೆಗಳನ್ನು ಮರೆಹೊಕ್ಕನು. ಆಳವೇ ತಿಳಿಯದ ಮಹಾಸಾಗರದಲ್ಲಿ ನೂರುಹುಟ್ಟುಗಳಿಂದ ಕೂಡಿದ ನೌಕೆಯಲ್ಲಿ ಅವನನ್ನು ಕೂಡಿಸಿಕೊಂಡು ಅಶ್ವಿನೀದೇವತೆಗಳು ಮನೆಗೆ ಕರೆದುಕೊಂಡು ಹೋದರು. ಆಕಾಶದಲ್ಲಿ ಹಾರುವಂತೆ ತೋರುತ್ತಿದ್ದ, ಒಡಕುಗಳಿಲ್ಲದ ಹಡಗಿನಲ್ಲಿ ಅಥವ

ರೆಕ್ಕೆಗಳುಳ್ಳ ನಾಲ್ಕು ದೋಣಿಗಳಲ್ಲಿ, ಅಥವಾ ನೂರು ಪಾದಗಳು ಮತ್ತು ಆರು ಕುದುರೆಗಳುಳ್ಳ, ಹಾರುವ ಮೂರು ರಥಗಳಲ್ಲಿ ಅಥವಾ ಮನೋವೇಗವುಳ್ಳ ತಮ್ಮ ರಥದಲ್ಲಿ ವೇಗಶಾಲಿಗಳಾಗಿ ಹಾರಿಹೋಗುವ ತಮ್ಮ ಅಶ್ವಗಳ ಸಹಾಯದಿಂದ ಭುಜ್ಯುವನ್ನು ಕುಳ್ಳಿರಿಸಿಕೊಂಡು ಬಂದು ಅವನ ಮನೆಗೆ ಸೇರಿಸಿದರು. ೧-೧೧೬-೩,೪, ೫ ; ೧-೧೧೭-೧೪, ೧೫, ೧-೧೮೨-೫, ೬, ೭; ೭-೬೪-೭; ೧-೧೧೨-೬, ೫೦; ೧-೧೧೪-೬; ೧-೧೧೯-೪; ೧-೧೫೪-೩; ೬-೬೨-೬; ೭-೬೯-೭; ೪ ೫೫-೨೨; ೧೦-೩೯-೪; ೧೦.೪೭-೭; ೧೦-೬೫-೧೨; ೧೦-೧೪೩-೫)

ವಿಶ್ಪಲಾ ಎಂಬ ಸ್ತ್ರೀಯು ಯುದ್ಧದಲ್ಲಿ ಕಾಲು ಕತ್ತರಿಸಿಹೋಗಲು ಅಶ್ವನೀದೇವತೆಗಳನ್ನು ಪ್ರಾರ್ಥಿಸಿದಾಗ ಅವರು ಬಂದು ಅವಳಿಗೆ ಕಬ್ಬಿಣದ ಕಾಲನ್ನು ಒದಗಿಸಿಕೊಟ್ಟು ಕಾಪಾಡಿದರೆಂದು ಋ. ಸಂ. ೧-೧೧೨-೧೦ ; ೧-೧೧೬-೧೫, ೧-೧೧೭-೧೧ ; ೧-೧೧೪-೪ , ೧೦ ೩೯-೪ ಎಂಬ ಋಕ್ಕುಗಳಲ್ಲಿ ಹೇಳಿದೆ.

ಅಶ್ವಿನೀದೇವತೆಗಳ ವಾಹನವಾದ ರಾಸಭವು ತೋಳನ ರೂಪದಲ್ಲಿದ್ದಾಗ **ಋಜ್ರಾಶ್ವ** ನೆಂಬುವನು ತಾನು ಕಾಯುತ್ತಿದ್ದ ಕುರಿಗಳ ಮಂದೆಯಲ್ಲಿ ಒಂದುನೂರು ಕುರಿಗಳನ್ನು ಕತ್ತರಿಸಿ ಆ ತೋಳಕ್ಕೆ ಆಹಾರವಾಗಿ ಕೊಟ್ಟನು. ಅದರಿಂದ ಅವನ ತಂದೆಗೆ ಕೋಪಬಂದು ಋಜ್ರಾಶ್ವನ ಕಣ್ಣನ್ನು ಕೀಳಿಸಿ ಕುರುಡನನ್ನಾಗಿ ಮಾಡಿದನು. ಆಗ ತೋಳವು ಅಶ್ವಿನೀದೇವತೆಗಳನ್ನು ಸ್ತುತಿಸಿತು. ಅವರು ತುಷ್ಟರಾಗಿ ಋಜ್ರಾಶ್ವನಿಗೆ ಕಣ್ಣನ್ನು ಕೊಟ್ಟರು. (ಋ ಸಂ. ೧-೧೧೬-೧೬: ೧-೧೧೭-೧೭, ೧೪) ಋ ಸಂ. ೧-೧೦೦-೧೭ನೆಯ ಋಕ್ಕಿನಲ್ಲಿ ಋಜ್ರಾಶ್ವನೆಂಬುವನು ಇಂದ್ರನನ್ನು ಸ್ತೋತ್ರಮಾಡಿದ ವಿಷಯವಿದೆ.

ಪಾರಾವೃಜನೆಂಬುವನು ಕುರುಡನೂ ಕುಂಟನೂ ಆಗಿದ್ದನು. ಮತ್ತು ಅವನು ಜಾತಿಯಲ್ಲಿ ಸೇರಿಸಲ್ಪಟ್ಟರಲಿಲ್ಲ. ಅವನಿಗೆ ಅಶ್ವಿನೀದೇವತೆಗಳು ನೋಡುವ ದೃಷ್ಟಿಯನ್ನೂ, ನಡೆಯುವ ಶಕ್ತಿಯನ್ನೂ ಕೊಟ್ಟರು. ಎಂದರೆ ಕಣ್ಣುಗಳನ್ನೂ ಕಾಲುಗಳನ್ನೂ ಅನುಗ್ರಹಿಸಿದರು (ಋ ಸಂ ೧-೧೧೭-೮) ಪಾರಾವೃಜನೆಂಬುವನ ಹೆಸರು ಇಂದ್ರನ ವಿಷಯದಲ್ಲಿ ಪ್ರಸ್ತಾಪ ಬಂದಾಗ ಋ. ಸ. ೨-೧೩-೧೨; ೨-೧೫-೭ ಋಕ್ಕುಗಳಲ್ಲಿ ಸೂಚಿತವಾಗಿರುವುದು.

ರೇಭನೆಂಬ ಋಷಿಯನ್ನು ದುಷ್ಟರು ಕೈಕಾಲು ಕಟ್ಟಹಾಕಿ ಒಂದು ಭಾವಿಯಲ್ಲಿ ಹಾಕಿದ್ದರು ಒಂಭತ್ತು ಹಗಲು ಹತ್ತು ರಾತ್ರಿಗಳ ಪರ್ಯಂತರ ಅವನು ಅಲ್ಲಿಯೇ ಬಿದ್ದಿದ್ದು ಸಾಯುವ ಸ್ಥಿತಿಯಲ್ಲಿದ್ದನು. ಅವನನ್ನು ಅಶ್ವಿನೀದೇವತೆಗಳು, ಸೋಮರಸವನ್ನು ಸೌಟಿನಿಂದ ಎತ್ತುವಂತೆ ಭಾವಿಯಿಂದ ಮೇಲಕ್ಕೆತ್ತಿ ಜೀವದಾನಮಾಡಿದರು, (ಋ ಸಂ. ೧-೧೧೭-೫, ೧-೧೧೬-೨೪; ೧-೧೧೭-೧೨; ೧-೧೧೭-೪, ೧-೧೧೪-೬; ೧-೧೧೯-೬, ೧೦-೩೯-೯).

ವಂದನ ಎಂಬುವನೂ ಇದೇರೀತಿ ದುಷ್ಟರಿಂದ ಅಪಹರಿಸಲ್ಪಟ್ಟು ಕತ್ತಲೆಯ ಪ್ರದೇಶದಲ್ಲಿ (ಹಳ್ಳದಲ್ಲ ಹಾಕಿದ್ದಾಗ ಅವನನ್ನು ಅಶ್ವಿನೀದೇವತೆಗಳು ಅಪಾಯದಿಂದ ಪಾರುಮಾಡಿ ಅವನನ್ನು ಬೆಳಕಿಗೆ ತಂದರು. (ಋ ಸಂ ೧-೧೧೭-೫; ೧-೧೧೬-೧೧; ೧-೧೧೭-೫; ೧-೧೧೪-೬; ೧೦-೩೯-೪, ೧-೧೧೯-೬, ೭).

ಪಜ್ರವಂತೀಯನಾದ ಕಕ್ಷೀವತನಿಗೆ ಯಥೇಚ್ಛವಾಗಿ ವರಗಳನ್ನು ಕೊಟ್ಟು ನೂರಾರುಜಾಡಿ ಸುರಾ (ಮದ್ಯ) ಅಥವಾ ಮಧುವನ್ನು ಜರಡಿಯಿಂದ ಸುರಿಯುವಂತೆ ಕುದುರೆಯ ಗೊರಸಿನಿಂದ ಸುರಿಸಿದರು. (ಋ. ಸಂ. ೧-೧೧೬-೭, ೧-೧೧೭-೬).

ಅತ್ರಿ ಎಂಬ ಋಷಿಯು, ದ್ವೇಷಾಸೂಯೆಯಿಂದ ಅಂಧಕಾರಾವೃತವಾದ, ಬೆಂಕಿಯಿಂದ ಉರಿಯುತ್ತಿರುವ ದೊಡ್ಡ ಕಮರಿಯಲ್ಲಿ ಹಾಕಲ್ಪಟ್ಟು ತೊಂದರೆಪಡುತ್ತಿರುವಾಗ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಬಂದು ಬೆಂಕಿಯನ್ನು ಹಿಮುದಿಂದ ಶಮನಸೂಡಿ, ಆಹಾರಾದಿಗಳನ್ನು ಕೊಟ್ಟು ಸಂತೈಸಿ, ಅವನನ್ನು ಆ ಅವಸ್ಥೆಯಿಂದ ಪಾರು ಮಾಡಿದರು. (೧-೧೧೨-೭; ೧-೧೧೬-೮; ೧-೧೧೭-೩; ೧-೧೧೮-೭, ೫-೭೮-೪, ೫, ೬) ೭-೭೧-೫; ೮-೬೭-೩, ೭, ೮, ೯, ೧೦-೩೯-೯) ಋ. ಸಂ. ೧೦-೮೦-೩ ನೆಯ ಋಕ್ಕಿನಲ್ಲಿ ಅತ್ರಿಯನ್ನು ಅಗ್ನಿಯು ರಕ್ಷಿಸಿದನೆಂದು ಸೂಚಿತವಾಗಿದೆ.

ವಧ್ರಿಮತೀ ಎಂಬುವಳು ತನಗೆ ಮಕ್ಕಳಿಲ್ಲದೆ ಬಂಜೆಯಾಗಿದ್ದುದರಿಂದ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವಳಿಗೆ ಹಿರಣ್ಯಹಸ್ತನೆಂಬ ಪುತ್ರನನ್ನು ಅನುಗ್ರಹಿಸಿದರು. (ಋ. ಸಂ. ೧೧೭-೨೩, ೧೧೭-೨೪, ೬-೬೨-೭; ೧೦-೩೯-೭).

ಘೋಷಾ ಎಂಬುವಳು ತನ್ನ ತಂದೆಯ ಮನೆಯಲ್ಲಿಯೇ ಇದ್ದು ವಯಸ್ಸಾದರೂ ಮದುವೆಯಾಗದೆ ಇದ್ದುದರಿಂದ ಅವಳ ಪ್ರಾರ್ಥನೆಯಂತೆ ಅಶ್ವಿನೀದೇವತೆಗಳು ಅವಳಿಗೆ ಯೋಗ್ಯನಾದ ಪತಿಯನ್ನು ಅನುಗ್ರಹಿಸಿದರು. (ಋ. ಸಂ. ೧-೧೧೭-೭; ೧೦-೩೯-೩,೬ ; ೧೦-೪೦-೫) ಋ. ಸಂ. ೧-೧೧೭-೭ನೇ ಋಕ್ಕಿನ ಭಾಷ್ಯದಲ್ಲಿ ಈ ಘೋಷಾ ಎಂಬ ಸ್ತ್ರೀಯು ಕುಷ್ಠರೋಗದಿಂದ ನರಳುತ್ತಿದ್ದಳೆಂದೂ, ಆ ರೋಗವನ್ನು ಅಶ್ವಿನೀದೇವತೆಗಳು ವಾಸಿಮಾಡಿದರೆಂದೂ ಸಾಯಣರು ಹೇಳಿದ್ದಾರೆ. ೧೦ ನೆಯ ಮಂಡಲದಲ್ಲಿ ಈ ಘೋಷಾ ಎಂಬುವಳಿಂದ ದೃಷ್ಟವಾದ ಎರಡು ಸೂಕ್ತಗಳಿವೆ (೧೦-೩೯, ೪೦)

ಶಯು ಎಂಬುವನ ಹೆಸರು ಮುದಿಯಾಗಿ ಕರುವನ್ನು ಹಾಕದಿರುವಾಗ ಅದಕ್ಕೆ ಹಾಲುಕೊಡುವ ಶಕ್ತಿಯನ್ನುಂಟುಮಾಡಿದರು. ಋ. ಸಂ. ೧-೧೧೬-೨೩; ೧-೧೧೭-೨೦; ೧-೧೧೮-೮, ೧-೧೧೯-೬, ೧೦-೩೯-೧೩)

ಪೇದುವೆಂಬ ರಾಜನಿಗೆ ಅಶ್ವಿನೀದೇವತೆಗಳು ಇಂದ್ರನಂತೆ ಅತಿ ಬಲಶಾಲಿಯಾದ ಒಂದು ಬಿಳೀ ಕುದುರೆಯನ್ನು ಕೂಟ್ಟರೆಂದೂ ಅದರಿಂದ ಅವನು ತನ್ನ ಶತ್ರುಗಳನ್ನು ಗೆದ್ದು ಬಹಳವಾದ ವಸ್ತುವಾಹನಾದಿಗಳನ್ನು ಪಡೆದನೆಂದೂ ಹೇಳಿದೆ (ಋ. ಸಂ- ೧-೧೧೬-೬; ೧-೧೧೭-೯; ೧-೧೧೮-೯; ೧-೧೧೯-೯; ೧೧೭-೧೦; ೭- ೭೮-೫ , ೧೦-೩೯-೧೦)

ಇದಲ್ಲದೆ ಒಂದನೇ ಮಂಡಲದ ೩, ೧೧೬, ೧೧೭, ೧೧೮ ನೆಯ ಸೂಕ್ತಗಳಲ್ಲಿ ಹೇಳಿರುವಂತೆ ಅನೇಕ ಮನುಷ್ಯರಿಗೆ ಸಹಾಯವನ್ನು ಮಾಡಿರುವುದಲ್ಲದೆ ಈ ಅಶ್ವಿನೀ ದೇವತೆಗಳು ಪಶುಪಕ್ಷ್ಯಾದಿಗಳಿಗೂ ಉಪಕಾರ ಮಾಡಿರುವರೆಂದು ಹೇಳಿದೆ. ಈ ಸಂದರ್ಭದಲ್ಲಿ—ಒಂದು ತೋಳವು ಒಂದು ಗುಬ್ಬಚ್ಚಿಯನ್ನು ಕಚ್ಚಿಕೊಂಡು ಹೋಗುತ್ತಿರುವಾಗ ಆ ಗುಬ್ಬಚ್ಚಿಯ ಪ್ರಾರ್ಥನೆಯಂತೆ ಅದನ್ನು ತೋಳನ ಬಾಯಿಂದ ಬಿಡಿಸಿಕಾಪಾಡಿದರೆಂದು ಋ.ಸಂ ೧-೧೧೬-೧೪; ೧-೧೧೭-೧೬; ೧-೧೧೮ ೮; ೧೦-೩೯-೧೩ ಎಂಬ ಋಕ್ಕುಗಳಲ್ಲಿ ಹೇಳಿದೆ. ಈ ವಿಷಯಗಳಲ್ಲದೆ ಅಶ್ವಿನೀದೇವತೆಗಳ ಸಂಬಂಧವಾದ ಇನ್ನೂ ಅನೇಕ ವಿಷಯಗಳಿರುವುವು. ಅವುಗಳನ್ನು ಅಯಾ ಸಂದರ್ಭದಲ್ಲಿ ವಿವರಿಸಲಾಗುವುದು.

। ಸಾಯಣಭಾಷ್ಯಂ ।

ಯೋ ವಾಮಿತಿ ಚತುರ್ದಶರ್ಚಂ ದಶಮಂ ಸೂಕ್ತಂ । ಕಕ್ಷೀವತೋ ದುಹಿತಾ ಘೋಷಾ ನಾಮ ಬ್ರಹ್ಮವಾದಿ ಸ್ತ್ರ್ಯೃಷಿಃ । ಅಂತ್ಯಾ ತ್ರಿಷ್ಟುಪ್ । ಶಿಷ್ಟಾ ಜಗತ್ಯಃ । ಅಶ್ವಿನೌ ದೇವತಾ । ತಥಾ ಚಾನುಕ್ರಾಂತಂ । ಯೋ ವಾಂ ಷಳೂನಾ ಕಾಕ್ಷೀವತೀ ಘೋಷಾಶ್ವಿನಂ ಹಿ ತ್ರಿಷ್ಟುಬಂತಮಿತಿ ॥ ಪ್ರಾತರನುವಾಕಾಶ್ವಿನಶಸ್ತ್ರಯೋರ್ಜಾಗತೇ ಛಂದಸೀದಮಾದೀನಿ ತ್ರೀಣಿ ಸೂಕ್ತಾನಿ । ಸೂತ್ರಿತಂ ಚ ಯೋ ವಾಂ ಪರಿಜ್ಮೇತಿ ತ್ರೀಣಿ ತ್ರಿಷ್ಟಿನ್ಮೋ ಅದ್ಯ । ಆ. ೪-೧೫ । ಇತಿ ।

ಅನುವಾದವು–ಯೋ ವಾಂ ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಕ್ಷೀವಾನ್ ಎಂಬ ಋಷಿಯ ಪುತ್ರಿಯಾದ ಘೋಷಾ ಎಂಬ ಬ್ರಹ್ಮವಾದಿನಿಯಾದ ಸ್ತ್ರೀಯು ಋಷಿಯು; ಅಶ್ವಿನೀದೇವತೆಗಳು ದೇವತೆಯು, ಈ ಸೂಕ್ತದ ಕೊನೆಯ ಋಕ್ಕು ತ್ರಿಷ್ಟುಪ್ ಛಂದಸ್ಸವು. ಉಳಿದ ಋಕ್ಕುಗಳು ಜಗತೀಛಂದಸ್ಸವು. ಅನುಕ್ರಮಣಿಕೆಯಲ್ಲಿ **ಯೋ ವಾಂ ಷಳೂನಾ ಕಾಕ್ಷೀವತೀ ಘೋಷಾಶ್ವಿನಂ ಹಿ ತ್ರಿಷ್ಟುಬಂತಂ** ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಆಶ್ವಿನಶಸ್ತ್ರ ಮಂತ್ರಗಳಲ್ಲಿ ಜಗತೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮತ್ತು ಮುಂದಿನ ಎರಡು ಸೂಕ್ತಗಳ ವಿನಿಯೋಗ ವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಯೋ ವಾಂ ಪರಿಜ್ಮೇತಿ ತ್ರೀಣಿ ತ್ರಿಷ್ಟಿನ್ಮೋ ಅದ್ಯ** ಎಂಬ ಸೂತ್ರದಿಂದ (ಆ. ೪-೧೫) ವಿವೃತವಾಗಿರುವುದು.

ಸೂಕ್ತ—೩೯

ಮಂಡಲ—೧೦ ॥ ಅನುವಾಕ—೩ ॥ ಸೂಕ್ತ—೩೯ ॥
ಅಷ್ಟಕ—೭ ॥ ಅಧ್ಯಾಯ—೮ ॥ ವರ್ಗ—೧೫, ೧೬, ೧೭ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ।
ಋಷಿಃ—ಕಾಕ್ಷೀವತಿ ಘೋಷಾ ।
ದೇವತಾ—ಅಶ್ವಿನೌ ।
ಛಂದಃ—೧-೧೩. ಜಗತೀ । ೧೪ ತ್ರಿಷ್ಟುಪ್ ॥

। ಸಂಹಿತಾಪಾಠಃ ।

ಯೋ ವಾಂ ಪರಿಜ್ಮಾ ಸುವೃದಶ್ವಿನಾ ರಥೋ ದೋಷಾಮುಷಾಸೋ ಹವ್ಯೋ ಹವಿಷ್ಮತಾ ।

ಶಶ್ವತ್ತಮಾಸಸ್ತಮು ವಾಮಿದಂ ವಯಂ ಪಿತುರ್ನ ನಾವಂ ಸುಹವಂ ಹವಾಮಹೇ ॥ ೧ ॥

॥ ಪದಪಾಠ ॥

ಯಃ । ವಾಂ । ಪರಿಜ್ಮಾ । ಸುವೃತ್ । ಅಶ್ವಿನಾ । ರಥಃ । ದೋಷಾಂ । ಉಷಸಃ । ಹವ್ಯಃ । ಹವಿಷ್ಮತಾ ।
ಶಶ್ವತ್ತಮಾಸಃ । ತಂ । ಊಂ ಇತಿ । ವಾಂ । ಇದಂ । ವಯಂ । ಪಿತುಃ । ನ । ನಾಮ । ಸುಹವಂ ।
ಹವಾಮಹೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ವಾಂ ಯುವಯೋಃ ಪರಿಜ್ಮಾ ಪರಿತೋ ಗಂತಾ ಸುವೃತ್ಸುಷ್ಠು ವರ್ತಮಾನೋ ಯೋ ರಥೋ ದೋಷಾಂ ರಾತ್ರಿಮುಷಸಶ್ಚ । ಅಹೋರಾತ್ರಯೋರಿತ್ಯರ್ಥಃ । ಹವಿಷ್ಮತಾ ಯಜಮಾನೇನ ಹವ್ಯೋ ಹ್ವಾತವ್ಯೋ ವಾಂ ಯುವಯೋಃ ಸ್ವಭೂತಂ ಸುಹವಂ ಶೋಭನಾಹ್ವಾನಂ ತಮು ತಮೇವ ರಥಂ ಶಶ್ವತ್ತಮಾಸೋಽತಿಶಯೇನ ಚಿರಂತನಾ ವಯಂ ಪಿತುರ್ನ ಯಥಾ ಪಿತುರಿದಂ ನಾಮ ತಥಾ ಹವಾಮಹೇ । ಹ್ವಯಾಮಃ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । **ಪರಿಜ್ಮಾ**—ಸುತ್ತಲೂ ಸಂಚರಿಸತಕ್ಕದ್ದೂ । **ಸುವೃತ್**—ಉತ್ತಮವಾದ ಸ್ಥಿತಿಯುಳ್ಳದ್ದೂ । **ವಾಂ**—ನಿಮಗೆ ಸೇರಿದುದೂ ಆದ। **ಯಃ ರಥಃ**—ಯಾವ ರಥವು। **ದೋಷಾಂ-ಉಷಸಃ**—ರಾತ್ರಿ ಮತ್ತು ಅಹಸ್ಸುಗಳಲ್ಲೆಲ್ಲಾ । **ಹವಿಷ್ಮತಾ**—ಹವಿಸ್ಸನ್ನು ಹೊಂದಿರುವ ಯಜಮಾನನಿಂದ । **ಹವ್ಯಃ**—ಕರೆಯಲ್ಪಡುವುದೋ ಅಂತಹುದೂ । **ವಾಂ**—ನಿಮಗೆ ಸೇರಿದುದೂ । **ಸುಹವಂ**—ಉತ್ತಮವಾದ ಆಹ್ವಾನಕ್ಕೆ ಪಾತ್ರವಾದುದೂ ಆದ । **ತಮು ಇದಂ**—ಅದೇ ರಥವನ್ನು । **ಶಶ್ವತ್ತಮಾಸಃ**—ಪುರಾತನರಾದ ನಾವು । **ಪಿತುಃ ನಾಮ ನ**—ಪೂಜ್ಯವಾದ ಪಿತೃವಿನ ಹೆಸರನ್ನು ಆದರದಿಂದ ಕೂಗುವಂತೆ । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಎಲ್ಲೆಲ್ಲೂ ಸಂಚರಿಸತಕ್ಕದ್ದೂ ಉತ್ತಮವಾದ ಸ್ಥಿತಿಯುಳ್ಳದ್ದೂ, ನಿಮಗೆ ಸೇರಿದುದೂ ಆದ ಯಾವ ರಥವು ಅಹೋರಾತ್ರಗಳಲ್ಲೂ ಯಜಮಾನನಿಂದ ಕರೆಯಲ್ಪಡುವುದೋ ಅಂತಹುದೂ, ನಿಮಗೆ ಸೇರಿದುದೂ ಉತ್ತಮವಾದ ಆಹ್ವಾನಕ್ಕೆ ಪಾತ್ರವಾದುದೂ ಆದ ಅದೇ ರಥವನ್ನು ಪುರಾತನರಾದ ನಾವು ಪೂಜ್ಯವಾದ ಪಿತೃವಿನ ಹೆಸರನ್ನು ಆದರದಿಂದ ಕೂಗುವಂತೆ ಪ್ರಾರ್ಥಿಸಿ ಕರೆಯುತ್ತೇವೆ

English Translation

We from very ancient times invoke, Ashwins, by a name as venerable as that of a father, this your glorious chariot, which travels all around, which turns well, and which is to be invoked morning and evening by the worshipper.

॥ ವಿಶೇಷವಿಷಯಗಳು ॥

ಅಶ್ವಿನೀದೇವತೆಗಳ ರಥದ ವರ್ಣನೆಯನ್ನು ನಾವು ಹಿಂದೆ ಅನೇಕ ಋಕ್ಕುಗಳಲ್ಲಿ ವಿವರಿಸಿದೇವೆ. ಅವರ ರಥವು ಅಲೌಕಿಕವಾದ ರಚನೆಯಿಂದಲೂ, ಸೌಂದರ್ಯದಿಂದಲೂ ಕೂಡಿರುವುದಾಗಿ ಅನೇಕಕಡೆ ವರ್ಣಿತವಾಗಿದೆ.

ಆ ನೋ ಯಾತಂ ದಿವೋ ಅಚ್ಛಾ ಪೃಥಿವ್ಯಾ ಹಿರಣ್ಯಯೇನ ಸುವೃತಾ ರಥೇನ ।

(ಋ. ಸಂ. ೪೪-೪೪-೫)

ಸಹಸ್ರಕೇತುಂ ವನಿನಂ ಶತದ್ವಸುಂ ಶುಷ್ಮೀವಾನಂ ವರಿವೋಧಾಮಭಿ ಪ್ರಯಃ ।

(ಋ. ಸಂ ೧.೧೧೯-೧)

ತ್ರಿವಂಧುರೇಣ ತ್ರಿವೃತಾ ರಥೇನ ತ್ರಿಚಕ್ರೇಣ ಸುವೃತಾ ಯಾತಮರ್ವಾಕ್ ।

(ಋ. ಸಂ. ೧-೧೧೭-೨)

ಇತ್ಯಾದ್ಯನೇಕ ಋಕ್ಕುಗಳಲ್ಲಿ ಅಶ್ವಿನೀದೇವತೆಗಳ ರಥವು ಹಿರಣ್ಮಯನಿರ್ಮಿತವಾದುದೂ, ಸಹಸ್ರ ಧ್ವಜಗಳುಳ್ಳದ್ದೂ ಮೂರು ಮೂಕೀಮರಗಳಿಂದಲೂ ಮತ್ತು ಮೂರು ಚಕ್ರಗಳಿಂದಲೂ ಅಲಂಕೃತವಾದುದೂ, ಇನ್ನೂ ನಾನಾವಿಧವಾದ ವೈಶಿಷ್ಟ್ಯದಿಂದ ಕೂಡಿರುವುದೂ ಆದ ಉತ್ತಮವಾದ ರಥವೆಂದು ಋಷಿಗಳು ಸ್ತೋತ್ರಮಾಡಿದಾರೆ. ಈ ಸೂಕ್ತದ ಪೀಠಿಕೆಯಲ್ಲೆಯೂ ಈ ರಥದ ವರ್ಣನೆ ಇರುವುದನ್ನು 934 ನೇ ಪೇಜಿನಲ್ಲಿ ನೋಡಿ.

। ಸಂಹಿತಾಪಾಠಃ ।

ಚೋದಯತಂ ಸೂನೃತಾಃ ಪಿನ್ವತಂ ಧಿಯ ಉತ್ಪುರಂಧೀರೀರಯತಂ ತದುಶ್ಮಸಿ ।
ಯಶಸಂ ಭಾಗಂ ಕೃಣುತಂ ನೋ ಅಶ್ವಿನಾ ಸೋಮಂ ನ ಚಾರುಂ ಮಘವತ್ಸು ನಸ್ಕೃತಂ ॥ ೨ ॥

। ಪದಪಾಠಃ ।

ಚೋದಯತಂ । ಸೂನೃತಾಃ । ಪಿನ್ವತಂ । ಧಿಯಃ । ಉತ್ । ಪುರಂಧೀಃ । ಈರಯತಂ । ತತ್ । ಉಶ್ಮಸಿ ।
ಯಶಸಂ । ಭಾಗಂ । ಕೃಣುತಂ । ನಃ । ಅಶ್ವಿನಾ । ಸೋಮಂ । ನ । ಚಾರುಂ । ಮಘವತ್ಸು । ನಃ । ಕೃತಂ ॥ ೨ ॥

। सायणभाष्यं ।

हे अश्विनाश्विनौ युवाम् सूनृता वाच उषसो वा चोदयतं । प्रेरयतं अस्माकं धियः कर्माणि च पिन्वतं । पूरयतं । पुरंधीर्बह्वीः प्रज्ञाश्चोदीरयतं । उद्गमयतं । प्रेरयतं । उत्पादयतमित्यर्थः । तदेतत्त्रयमुश्मसि । वयं कामयोमहे । किंच नोऽस्माकं यशसं यशस्विनं भागं भजनीयं धनादिकं कृणुतं । कुरुतं । चारुं कल्याणं सोमं न सोममिव नोऽस्मान्मघवत्सु धनवत्सु कृतं । कुरुतं ॥

। प्रतिपदार्थ ।

अश्विना—ಎಲೈ ಅಶ್ವಿನೀದೇವತೆಗಳೇ । सूनृताः—ನಮ್ಮ ಸತ್ಯಾತ್ಮಕವಾದ ಸ್ತುತಿವಾಕ್ಯಗಳನ್ನು । चोदयतं—ಪ್ರೇರಿಸಿರಿ । धियः—ನಮ್ಮ ಕರ್ಮಗಳನ್ನು । पिन्वतं—ಪೂರ್ಣಗೊಳಿಸಿರಿ । पुरंधीः—ನಮ್ಮ ಅನೇಕವಿಧವಾದ ಪ್ರಜ್ಞೆಗಳನ್ನು । उदीरयतं—ಚೈತನ್ಯಗೊಳಿಸಿರಿ । तत्—ಈ ಮೂರನ್ನೂ । उश्मसि—ನಾವು ಅಪೇಕ್ಷಿಸುತ್ತೇವೆ । नः—ನಮಗೆ । यशसं—ಯಶೋಯುಕ್ತವಾದುದೂ । भागं—ಪೂಜ್ಯವೂ ಆದ ಧನವನ್ನು । कृणुतं—ಒದಗಿಸಿರಿ । चारुं—ಕಲ್ಯಾಣಾತ್ಮಕವಾದ । सोमं न—ಸೋಮದಂತೆ । नः—ನಮ್ಮನ್ನು । मघवत्सु—ಧನವಂತರ ನಡುವೆ । कृतं—ಸ್ಥಾಪಿಸಿರಿ.

। भावार्थ ।

ಎಲೈ ಅಶ್ವಿನೀದೇವತೆಗಳೇ, ನಮ್ಮ ಸತ್ಯಾತ್ಮಕವಾದ ಸ್ತುತಿವಾಕ್ಯಗಳನ್ನು ಪ್ರೇರಿಸಿರಿ. ನಮ್ಮ ಕರ್ಮಗಳನ್ನು ಪೂರ್ಣಗೊಳಿಸಿರಿ. ನಮ್ಮ ಅನೇಕ ವಿಧವಾದ ಪ್ರಜ್ಞೆಗಳನ್ನು ಚೈತನ್ಯಗೊಳಿಸಿರಿ. ಈ ಮೂರನ್ನೂ ನಾವು ಅಪೇಕ್ಷಿಸುತ್ತೇವೆ. ನಮಗೆ ಯಶೋಯುಕ್ತವಾದುದೂ, ಪೂಜ್ಯವೂ ಆದ ಧನವನ್ನು ಒದಗಿಸಿರಿ. ಕಲ್ಯಾಣಾತ್ಮಕವಾದ ಸೋಮದಂತೆ ನಮ್ಮನ್ನು ಧನವಂತರ ನಡುವೆ ಸ್ಥಾಪಿಸಿರಿ.

English Translation

Stimulate, Ashwins, our words of truth, perfect (our) sacred rites, and inspire (our) numerous faculties; this (is what) we wish, grant us a glorious portion (of wealth); put us like prosperous Soma amongst the affluent.

। संहितापाठः ।

अमाजुरश्विद्भवथो युवं भगोऽनाशोश्विदवितारापमस्य चित् ।

ಅಂಧಸ್ಯ ಚಿನ್ನಾಸತ್ಯಾ ಕೃಶಸ್ಯ ಚಿದ್ಯುವಾಮಿದಾಹುರ್ಭಿಷಜಾ ರುತಸ್ಯ ಚಿತ್ ॥

॥ ಪದಪಾಠಃ ॥

ಅಮಾಜುರಃ । ಚಿತ್ । ಭವಥಃ । ಯುವಂ । ಭಗಃ । ಅನಾಶೋಃ । ಚಿತ್ । ಅವಿತಾರಾ । ಅಪಮುಸ್ಯ । ಚಿತ್ ।

ಅಂಧಸ್ಯ । ಚಿತ್ । ನಾಸತ್ಯಾ । ಕೃಶಸ್ಯ ॥ ಚಿತ್ । ಯುವಾಂ । ಇತ್ । ಆಹುಃ । ಭಿಷಜಾ । ರುತಸ್ಯ । ಚಿತ್ ।

॥ ಸಾಯಣಭಾಷ್ಯಂ ॥

ಹೇ ನಾಸತ್ಯಾ ನಾಸತ್ಯೌ ಯುವಂ ಯುವಾಮಮಾಜುರಶ್ಚಿತ್ಪಿತೃಗೃಹೇ ಜೂರ್ಯಂತ್ಯಾ ಅಪಿ ದುರ್ಭಗಾಯಾ ಘೋಷಾಯಾ ಭಗೋ ಭವಥಃ । ಶೋಭನರೂಪೇಣಾತ್ಮಾನಂ ಪರಿಣಮಯ್ಯ ಪತಿಂ ದತ್ತವಂತೌ ಸ್ಥ ಇತ್ಯರ್ಥಃ । ತಥಾ ಚ ನಿಗಮಾಂತರಂ । ಘೋಷಾಯೈ ಚಿತ್ಪಿತೃಷದೇ ದುರೋಣೇ ಪತಿಂ ಜೂರ್ಯಂತ್ಯಾ ಅಶ್ವಿನಾವದತ್ತಂ । ಋ. ೧-೧೧೭-೭ । ಇತಿ । ಅನಾಶೋಶ್ಚಿದನಶನಸ್ಯಾಪ್ಯವಿತಾರಾ ರಕ್ಷಿತಾರೌ ಯುವಾಂ ಭವಥಃ । ಅಪಮುಸ್ಯ ಚಿಜ್ಜಾತ್ಯಾತಿನಿಕೃಷ್ಟಸ್ಯಾಪಿ ರಕ್ಷಿತಾರೌ ಭವಥಃ । ಅಂಧಸ್ಯ ಚಿಚ್ಚಕ್ಷುರ್ವಿಕಲಸ್ಯಾಪಿ ರಕ್ಷಿತಾರೌ ಭವಥಃ । ಕೃಶಸ್ಯ ಚಿದ್ದುರ್ಬಲಸ್ಯಾಪಿ ರಕ್ಷಿತಾರೌ ಭವಥಃ । ಕಿಂಚ ಯುವಾಮಿದ್ಯುವಾಮೇವರ್ತಸ್ಯ ಚಿದ್ಯಜ್ಞಸ್ಯಾಪಿ ಭಿಷಜೌ ವೈದ್ಯಾವಾಹುರ್ವಿದ್ವಾಂಸಃ ॥

॥ ಪ್ರತಿಪದಾರ್ಥ ॥

ನಾಸತ್ಯಾ—ಎಲೈ ಅಶ್ವಿನೀದೇವತೆಗಳೇ । ಯುವಂ—ನೀವು । ಅಮಾಜುರಶ್ಚಿತ್—ವಿವಾಹವಿಲ್ಲದೇ ತಂದೆಯ ಮನೆಯಲ್ಲಿಯೇ ಬೆಳೆಯುತ್ತಿದ್ದ ಸ್ತ್ರೀಗೂ ಸಹ । ಭಗಃ—ಕಲ್ಯಾಣಾತ್ಮಕವಾದ ಪತಿಪ್ರದರಾಗಿ । ಭವಥಃ—ಆದಿರಿ । ಅನಾಶೋಶ್ಚಿತ್—ಅನ್ನವಿಲ್ಲದವನಿಗೂ । ಅವಿತಾರಾ—ರಕ್ಷಕರಾಗಿದ್ದೀರಿ । ಅಪಮುಸ್ಯ ಚಿತ್—ಕೆಳದರ್ಜೆಯ ಪುರುಷನನ್ನು ರಕ್ಷಿಸಿದಿರಿ । ಅಂಧಸ್ಯ ಚಿತ್—ಕುರುಡನನ್ನು ರಕ್ಷಿಸಿದಿರಿ । ಕೃಶಸ್ಯ ಚಿತ್—ದುರ್ಬಲನನ್ನು ರಕ್ಷಿಸಿದಿರಿ । ಯುವಾಂ ಇತ್—ನಿಮ್ಮನ್ನೇ । ಋತಸ್ಯ ಚಿತ್—ಯಜ್ಞಕ್ಕೂ ಸಹ । ಭಿಷಜೌ—ವೈದ್ಯರೆಂಬುದಾಗಿ । ಆಹುಃ—ತಿಳಿದವರು ಹೇಳುತ್ತಾರೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ವಿವಾಹವಿಲ್ಲದೆ ತಂದೆಯ ಮನೆಯಲ್ಲೆಯೇ ವಾರ್ಧಕ್ಯವನ್ನು ಹೊಂದುತ್ತಿದ್ದ ಘೋಷಾ ಎಂಬ ಸ್ತ್ರೀಗೆ ಪತಿಯನ್ನೊದಗಿಸಿದಿರಿ. ಅನ್ನವಿಲ್ಲದವನಿಗೂ, ಕೆಳಜಾತಿಗೆ ಸೇರಿದವನಿಗೂ, ಕುರುಡನಿಗೂ, ದುರ್ಬಲನಿಗೂ ನೀವೇ ರಕ್ಷಕರಾಗಿದ್ದೀರಿ. ಯಜ್ಞಕ್ಕೂ ನೀವೇ ವೈದ್ಯರೆಂದು ತಿಳಿದವರು ಹೇಳುತ್ತಾರೆ

English Translation

You, Nasatyas, are the good fortune of a damsel growing old in (her father's) mansion ; the preservers of the famishing, (the protectors) of the abject, of the blind, of the feeble, they call you the physicians of the sacrifice.

। संहितापाठः ।

युवं ह्यवानं सनयं यथा रथं पुनर्युवानं चरथाय तक्षथुः ।
निष्टौग्र्यमूहथुरद्भ्यस्परि विश्वेत्ता वां सवनेषु प्रवाच्या ॥ ४ ॥

। पदपाठः ।

युवं । ह्यवानं । सनयं । यथा । रथं । पुनः । युवानं । चरथाय । तक्षथुः ।
निः । तौग्र्यं । ऊहथुः । अत्र्यभ्यः । परि । विश्वा । इत् । ता । वां । सवनेषु ।
प्रऽवाच्या ॥ ४ ॥

। सायणभाष्यं ।

हे अश्विनौ युवं युवां सनयं पुराणं ह्यवानमृषिं यथा रथं जीर्णं रथमिव पुनर्युवानं तरुणं चरथाय चरणार्थं तक्षथुः । तक्षथुः । अकुरुतमित्यर्थः । तथा च यास्कः । युवं ह्यवानं सनयं पुराणं यथा रथं पुनर्युवानं चरणाय तक्षथुर्युवा प्रयौति कर्माणि तक्षतिः करोतिकर्मा । नि. ४-८ । इति । किंच युवां तौग्र्यं तुग्रपुत्रं भुज्युमद्भ्यः परि समुद्रस्योपरि निरूहथुः । किंच वां युवयोर्विश्वा विश्वानि ता तानि कर्माणि सवनेषु यज्ञेषु प्रवाच्या प्रवाच्यानि प्रकर्षेण वक्तव्यानि ॥

। प्रतिपदार्थ ।

(ಎಲೈ ಅಶ್ವಿನೀದೇವತೆಗಳೇ) युवं—ನೀವು । यथा रथं—ಜೀರ್ಣವಾದ ರಥವನ್ನು ಹೊಸದಾಗಿ ಮಾಡುವಂತೆ । सनयं—ವೃದ್ಧನಾದ । ह्यवानं—ಹ್ಯವಾನನೆಂಬ ಋಷಿಯನ್ನು । चरथाय—ಅವನಿಗೆ ಸಂಚರಿಸಲು ಅನುಕೂಲವಾಗುವಂತೆ । पुनः—ತಿರುಗಿಯೂ । युवानं—ಯುವಕನಾಗುವಂತೆ । तक्षथुः—

ಮಾಡಿದಿರಿ । ತೌಗ್ರ್ಯಂ—ತುಗ್ರಪುತ್ರನನ್ನು । ಅಪ್ಸ್ವಃ ಪರಿ—ಉದಕದಿಂದ ಹೊರಕ್ಕೆ । ನಿರೂಹಥುಃ—ತೆಗೆದಿರಿ । ನಾಂ—ನಿಮ್ಮ । ತಾ ವಿಶ್ವಾ ಇತ್—ಈ ಎಲ್ಲಾ ಅಸಾಧಾರಣಕಾರ್ಯಗಳೂ । ಸವನೇಷು—ಯಜ್ಞಕಾಲಗಳಲ್ಲಿ । ಪ್ರವಾಚ್ಯಾ—ಉತ್ತಮವಾಗಿ ಪ್ರಶಂಸಿಸಲ್ಪಡಬೇಕಾಗಿವೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಜೀರ್ಣವಾದ ರಥವನ್ನು ಹೊಸದಾಗಿ ಮಾಡುವಂತೆ ನೀವು ವೃದ್ಧನಾದ ಚ್ಯವಾನನೆಂಬ ಋಷಿಯನ್ನು ಅವನಿಗೆ ಸಂಚರಿಸಲು ಅನುಕೂಲವಾಗುವಂತೆ ತಿರುಗಿಯೂ ಅವನನ್ನು ಯುವಕನಾಗುವಂತೆ ಮಾಡಿದಿರಿ. ತುಗ್ರಪುತ್ರನನ್ನು ಉದಕದಿಂದ ಹೊರಕ್ಕೆ ತೆಗೆದಿರಿ. ನಿಮ್ಮ ಈ ಎಲ್ಲ ಅಸಾಧಾರಣಕಾರ್ಯಗಳೂ ಯಜ್ಞಕಾಲಗಳಲ್ಲಿ ಉತ್ತಮವಾಗಿ ಪ್ರಶಂಸಿಸಲ್ಪಡಬೇಕಾಗಿವೆ.

English Translation

You made the aged Chyavana, when like worn-out chariot, again young and able to go: you bore the son of Tugra above the waters, all these your (exploits) are to be celebrated at our sacrifices

॥ ವಿಶೇಷವಿಷಯಗಳು ॥

ಚ್ಯವನನೆಂಬ ಋಷಿಯು ಮುದುಕನಾಗಿದ್ದನು. ಅವನ ಶರೀರವು ನರೆತಕೂದಲು ಮತ್ತು ಸುಕ್ಕುಹಿಡಿದಿರುವ ಶರೀರ ಇವೇ ಮೊದಲಾದ ಮುಪ್ಪಿನ ಲಕ್ಷಣದಿಂದ ತುಂಬಿತ್ತು. ಇದರಿಂದ ಈ ಋಷಿಯ ಪುತ್ರರೇ ಮೊದಲಾದವರು ಇವನನ್ನು ತ್ಯಾಗಮಾಡಿದ್ದರು. ಆಗ ಚ್ಯವನಋಷಿಯು ಅಶ್ವಿನೀದೇವತೆಗಳನ್ನು ಸ್ತೋತ್ರಮಾಡಿ ಅವರನ್ನು ಮೆಚ್ಚಿಸಿ ಅವರಿಂದ ತನ್ನ ಮುಪ್ಪನ್ನು ಕಳೆದುಕೊಂಡು ಯೌವನವನ್ನು ಹೊಂದಿದನು ಎಂದು ಇತಿಹಾಸವು ಇಲ್ಲಿ ಈ ಋಕ್ಕಿನಿಂದ ಹೇಳಲ್ಪಟ್ಟಿರುತ್ತದೆ ಸ್ಕಂದಸ್ವಾಮಿಗಳು ಈ ಇತಿಹಾಸವನ್ನು ಬೇರೆಯ ವಿಧವಾಗಿ ಹೇಳಿರುವರು. ಈ ಇತಿಹಾಸವು ಶತಪಥಬ್ರಾಹ್ಮಣದಲ್ಲಿ ದೃಷ್ಟವಾಗಿರುವುದು.

ಅತ್ರ ಶತಪಥೇ—(ಶ. ಬ್ರಾ ೪-೧-೫) ಅಧೀತಮಿತಿಹಾಸಮಾಚಕ್ಷತೇ । ಶರ್ಯಾತೋ ನಾಮ ರಾಜಾ ಸಂಕ್ರೀಡದ್ಭಿಃ ಕೃತಾಪರಾಧಾಯ ಕುಪಿತಾಯ ಜೀರ್ಣಾಯ ಚ್ಯವನಾಯ ಪ್ರತ್ಯಾಪತ್ಯಾರ್ಥಂ ಸುಕನ್ಯಾಂ ನಾಮ ಕನ್ಯಕಾಂ ದುಹಿತರಂ ದದೌ । ತಾಂ ತತ್ರಾಸೀನಾಂ ದೃಷ್ಟ್ವಾ ಅಶ್ವಿನೌ ಪುನಃ ಪುನರೂಚತುಃ । ಕಂ ಕಂ ಜೀರ್ಣೇಕೃತರೂಪಂ ಕಾಮಯಸೇ । ಆವಾಂ ಸಂಭಜೇತಿ । ಸಾ ತೌ ಪ್ರತ್ಯುವಾಚ । ಯಸ್ಮೈ ಮಾಂ ಪಿತಾ ಅದಾತ್ ನಾಹಂ ತಂ ಜೀವಂತಂ ಹಾಸ್ಯಾಮೀತಿ । ತದೃಷಿರ್ಜ್ಞಾತ್ವಾ ಸುಕನ್ಯಾಮುವಾಚ । ಯದಿ ತ್ವಾಮೇತೌ ಪುನರೇವಂ ಬ್ರೂಯಾತಾಂ ತತಸ್ತ್ವಮೇನೌ ಪ್ರತಿಬ್ರೂಯಾಃ । ಅಸರ್ವೌ ವಸುಸಮ್ಯದ್ಧೌ ಸಂತೌ ಪತಿಂ ಮೇ ನಿಂದಥ ಇತಿ । ತೌ ಯದಿ ತ್ವಾಂ ಪ್ರತಿ ಬ್ರೂಯಾತಾಂ ಕೇನಾಸರ್ವೌ ವಸುಸಮ್ಯದ್ಧೌ ಚೇತಿ ತತ ಏನೌ ಪ್ರತಿಬ್ರೂಯಾಃ ಪತಿಂ ಮೇ ಪುನಃ ಯುವಾನಂ ಕುರುತಂ । ಅಥ ವಾಂ ವಕ್ಷ್ಯಾಮೀತಿ । ಸಾ ತೌ ಶಫೋವಾ ಚ । ತಾಮಶ್ವಿನೌ ಪ್ರತ್ಯೂಚತುಃ । ಏತಂ ಹ್ರದಮವತರತು

ಅತೋ ಯತ್ ಕಾಮಯತೇ ತೇನ ವಯಸಾ ಯುಕ್ತ ಉತ್ತರಿಷ್ಯತೀತಿ । ಸ ಋಷಿಸ್ತಂ ಹ್ರದಮವತೀರ್ಯೋತ್ತತಾರ ಯುವಾಭೂತ್ವೇತಿ । ತದೇತದಿತಿಹಾಸೇನೋಚ್ಯತೇ ಜುಜುರುಷೋ ನಾಸತ್ಯೇತ್ಯಾದಿನಾ । (ಶ. ಬ್ರಾ ೪-೧.೫)

ಶರ್ಯಾತಿ ಎಂಬ ರಾಜನು ತನ್ನ ಪುತ್ರಿಯರು ಆಟವಾಡುತ್ತಿರುವಾಗ ಮುದಕನಾದ ಚ್ಯವನಋಷಿಗೆ ಸುಕನ್ಯಾ ಎಂಬ ತನ್ನ ಪುತ್ರಿಯು ಅಪರಾಧವಮಾಡಿದ್ದರಿಂದ ಅವಳನ್ನು ಅವನಿಗೇ ಕೊಟ್ಟು ವಿವಾಹಮಾಡಿದನು ಆ ಸುಕನ್ಯೆಯು ಚ್ಯವನ ಋಷಿಯ ಆಶ್ರಮದಲ್ಲಿದ್ದಾಗ ಅಲ್ಲಿಗೆ ಅಶ್ವಿನೀದೇವತೆಗಳು ಬಂದು ನೀನು (ಈ ಮದುಕನನ್ನು) ಈ ಮುದಿ ಗಂಡನನ್ನು ತ್ಯಜಿಸಿ ನಮ್ಮನ್ನು ವಿವಾಹಮಾಡಿಕೊ ಎಂದು ಅನೇಕಸಾರಿ ಹೇಳಲು ಅದಕ್ಕೆ ಅವಳು-ನಮ್ಮ ತಂದೆಯು ನನ್ನನ್ನು ಈ ಋಷಿಗೆ ದಾನಮಾಡಿದನು. ನನ್ನನ್ನು ಮದುವೆಯಾದವನು ಜೀವಂತನಾಗಿರುವವರಿಗೂ ಅವನನ್ನು ನಾನು ತ್ಯಾಗಮಾಡುವುದಿಲ್ಲವೆಂದು ಹೇಳಿದಳು. ಅದನ್ನು ಚ್ಯವನಋಷಿಯು ಕೇಳಿ ಇವರು ನಿನ್ನನ್ನು ಪುನಃ ಹೀಗೆ ಪ್ರಶ್ನೆಮಾಡಿದಾಗ ನೀವು ಸರ್ವಸಂಪತ್ಸಮೃದ್ಧರಾಗಿದ್ದರೂ ನನ್ನ ಪತಿಯನ್ನು ನಿಂದಿಸಲು ಕಾರಣವೇನು ಎಂದು ಪ್ರಶ್ನೆಮಾಡು ಅದಕ್ಕೆ ಅವರು ಉತ್ತರವಾಗಿ ನಾವು ಧನಸಮೃದ್ಧರಾಗಿ ಹೇಗೆ ಇದ್ದೇವೆ ಎಂದು ನಿನ್ನನ್ನು ಕೇಳುವರು. ಆಗ ನನ್ನ ಪತಿಗೆ ಯೌವನವನ್ನು ಕೊಡಿರಿ ಅನಂತರ ನಾನು ನಿಮಗೆ ಉತ್ತರವನ್ನು ಹೇಳುವೆನು ಎಂದು ಅವರಿಗೆ ಹೇಳುವಂತೆ ಚ್ಯವನ ಋಷಿಯು ಹೇಳಿಕೊಟ್ಟನು ಸುಕನ್ಯೆಯು ಅಶ್ವಿನೀದೇವತೆಗಳ ಸಂಗಡ ಚ್ಯವನಋಷಿಯು ಹೇಳಿದ ಹಾಗೆ ಮಾತನಾಡಿದಳು. ಅವಳ ಮಾತನ್ನು ಕೇಳಿ ನಿನ್ನ ಪತಿಯು ಈ ಮಡುವಿನಲ್ಲಿ ಇಳಿದು ಸ್ನಾನಮಾಡಿದರೆ ನಿನ್ನ ಇಷ್ಟವು ಸಿದ್ಧಿಸುವುದು. ನಿನ್ನ ಪತಿಯು ಯೌವನವುಳ್ಳವನಾಗುವನು ಎಂದು ಅಶ್ವಿನೀದೇವತೆಗಳು ಹೇಳಿದ ಮಾತನ್ನು ಕೇಳಿ ಅವರು ಹೇಳಿದ ಮಡುವಿನಲ್ಲಿ ಸ್ನಾನಮಾಡಿ ಯುವಕನಾಗಿ ಮೇಲಕ್ಕೆ ಬಂದನು. ಈ ಇತಿಹಾಸವು **ಜುಜುರುಷೋ ನಾಸತ್ಯೇತ್ಯಾದಿನಾ** ಎಂಬ ಋಕ್ಕಿನಿಂದ ಉಕ್ತವಾಗಿರುವುದು. ಮುದುಕನಾಗಿದ್ದ ಚ್ಯವನಋಷಿಯನ್ನು ಅಶ್ವಿನೀದೇವತೆಗಳು ಯೌವನವಂತನನ್ನಾಗಿ ಮಾಡಿದ ವಿಷಯವು ಋಗ್ವೇದದಲ್ಲಿ ಅನೇಕ ಕಡೆ ವಿವರಿಸಲ್ಪಟ್ಟಿರುವುದು—

ಯುವಂ ಚ್ಯವಾನಂ ಜರಸೋಽಮುಮುಕ್ತಂ ನಿ ಪೇದವ ಊಹಥುರಾಶುಮಶ್ವಂ ।

(ಋ. ಸಂ. ೭-೭೧-೫)

ಪ್ರ ಚ್ಯವಾನಾಜ್ಜುಜುರುಷೋ ವವ್ರಿಮಕ್ತಂ ನ ಮುಂಚಥಃ ।

(ಋ. ಸಂ. ೫.೭೪-೫)

ನಿಷ್ಟೌಗ್ರ್ಯಂ ಪಾರಯಥಃ ಸಮುದ್ರಾತ್ಪುನಶ್ಚ್ಯವಾನಂ ಚಕ್ರಥುರ್ಯುವಾನಂ ।

(ಋ. ಸಂ. ೧-೧೧೭-೬)

ಯುವಂ ಚ್ಯವಾನಂ ಸನಯಂ ಯಥಾ ರಥಂ ಪುನರ್ಯುವಾನಂ ಚರಥಾಯ ತಕ್ಷಥುಃ ।

(ಋ. ಸಂ. ೧೦-೩೯-೪)

ಈ ಋಕ್ಕುಗಳಲ್ಲಿಯೂ, ಋ. ಸಂ. ೫-೭೪-೫; ೭-೬೮.೬ ಮೊದಲಾದ ಅನೇಕ ಋಕ್ಕುಗಳಲ್ಲಿಯೂ ಈ ವಿಷಯವು ಪ್ರಸ್ತಾಪಿಸಲ್ಪಟ್ಟಿರುವುದು.

ತೌಗ್ರ್ಯಂ—ತುಗ್ರನೆಂಬ ರಾಜನ ಪುತ್ರನನ್ನು ತೌಗ್ರ್ಯನೆಂದು ಇಲ್ಲಿ ಕರೆಯಲಾಗಿದೆ ಇವನ ಹೆಸರು ಭುಜ್ಯು ವೆಂದು. ಇವನು ಸಮುದ್ರಯಾನಮಾಡುತ್ತಿರುವಾಗ ಸಮುದ್ರ ಮಧ್ಯದಲ್ಲಿ ಅಲೆಗಳ ಹೊಡೆತದಿಂದ ಮುಳುಗಿ ಹೋಗುತ್ತಿರುವಾಗ ಇವನು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಲು ಅವರು ಇವನನ್ನು ಸಂರಕ್ಷಿಸಿದರೆಂದು ಋಗ್ವೇದದ ಅನೇಕ ಋಕ್ಕುಗಳಲ್ಲಿ ವರ್ಣಿತವಾಗಿದೆ.

ತುಗ್ರಪುತ್ರನಾದ ಭುಜ್ಯುವು ಶತ್ರುಗಳಿಂದ ಹಿಂಸಿತನಾಗಿ ಸಮುದ್ರಕ್ಕೆ ಎಸೆಯಲ್ಪಟ್ಟಾಗ ನಿಮ್ಮನ್ನು ಸ್ತುತಿಸಿ ತೃಪ್ತಿಪಡಿಸಿ ತನ್ನ ಸಹಾಯಕ್ಕೆ ಕರೆದುಕೊಂಡಂತೆ ಎಂದು ಋ. ಸಂ. ೧-೧೮೦-೫ ರಲ್ಲಿ ಸೂಚಿಸಿದ್ದಾರೆ

ತೌಗ್ರ್ಯನೆಂಬ ದೊರೆಯನ್ನು ಒಂದುಸಲ ಶತ್ರುಗಳು ಸೋಲಿಸಿ ಅವನ ಕೈಕಾಲುಗಳನ್ನು ಕಟ್ಟಿ ಸಮುದ್ರ ಮಧ್ಯ ದಲ್ಲಿ ಎಸೆದುಬಿಟ್ಟರು. ಅವನು ಸಮುದ್ರವನ್ನು ದಾಟಲಾರದೆ ಸಹಾಯ ಕ್ಕಾಗಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದನು. ಒಡನೆಯೇ ಅವರು ತಮ್ಮ ರಥಕ್ಕೆ ಅಶ್ವಗಳನ್ನು ಕಟ್ಟಿ ಸಮುದ್ರದಲ್ಲಿಳಿಸಿ ಅವನನ್ನು ದಡಕ್ಕೆ ಸೇರಿಸಿದರು ಎಂದು ಸಾಯಣರು ಪೂರ್ವಕಥೆಯನ್ನು ದಾಹರಿಸಿದ್ದಾರೆ ಈ ತುಗ್ರಪುತ್ರನೇ ಭುಜ್ಯು ವೆಂಬ ಹೆಸರಿನಿಂದ ಪ್ರಸಿದ್ದನಾಗಿದ್ದಾನೆ ಮತ್ತು ಅನೇಕ ಕಡೆಗಳಲ್ಲಿ ಇವನ ಕಥೆಯು ವರ್ಣಿತವಾಗಿದೆ

ಸಮುದ್ರದಲ್ಲಿ ಮುಳುಗಿದ್ದ ಇದೇ ತುಗ್ರಪುತ್ರನನ್ನು ಅಶ್ವಿನೀದೇವತೆಗಳು ರಕ್ಷಿಸಿದುದನ್ನು ದೀರ್ಘತಮಸ್ಸಿನ ಪುತ್ರನಾದ ಕಕ್ಷೀವಂತನು ಋ. ಸಂ ೧-೧೧೬- ಮತ್ತು ೧-೧೧೭ನೇ ಸೂಕ್ತಗಳಲ್ಲಿಯೂ, ಅಗಸ್ತ್ಯ ನ ಮೈತ್ರಾವರುಣಿಯು ೧-೧೮೨ ನೇ ಸೂಕ್ತದಲ್ಲಿಯೂ, ಕಣ್ವಗೋತ್ರದ ಬ್ರಹ್ಮಾತಿಥಿಯು ೮-೫ ನೇ ಸೂಕ್ತದಲ್ಲಿಯೂ , ಕಕ್ಷೀವಂತನ ಪುತ್ರಿಯಾದ ಘೋಷೆಯು ೧೦-೩೯ ರಲ್ಲೂ ವರ್ಣಿಸಿದ್ದಾರೆ ೧-೧೮೨ನೇ ಸೂಕ್ತದಲ್ಲಿ ಇವರು ದೋಣಿಗಳನ್ನು ಕಳುಹಿಸಿದುದೂ ತುಗ್ರಪುತ್ರನ ಆಶಾಪೂರಿತನಾಗಿ ಆ ದೋಣಿಗಳನ್ನು ಅಪ್ಪಿಕೊಂಡು ಅವರ ಅನುಗ್ರಹದಿಂದ ರಕ್ಷಿತನಾದುದೂ ಸಹ ಕೆಳಗೆ ಕಂಡಂತೆ ವರ್ಣಿತವಾಗಿದೆ

ಯುವಮೇತಂ ಚಕ್ರಥುಃ ಸಿಂಧುಷು ಪ್ಲವಮಾತ್ಮನ್ವಂತಂ ಪಕ್ಷಿಣಂ ತೌಗ್ರ್ಯಾಯ ಕಂ ।
ಯೇನ ದೇವತ್ರಾ ಮನಸಾ ನಿರೂಹಥುಃ ಸುಪಪ್ತನೀ ಪೇತಥುಃ ಕ್ಷೋದಸೋ ಮಹಃ ॥
ಅವವಿದ್ಧಂ ತೌಗ್ರ್ಯಮಪ್ಸ್ವ೧ನ್ತರನಾರಂಭಣೇ ತಮಸಿ ಪ್ರವಿದ್ಧಂ ।
ಚತಸ್ರೋ ನಾವೋ ಜಠಲಸ್ಯ ಜುಷ್ಟಾ ಉದಶ್ವಿಭ್ಯಾಮಿಷಿತಾಃ ಪಾರಯಂತಿ ।
ಕಃ ಸ್ವಿದ್ವೃಕ್ಷೋ ನಿಷ್ಠಿಕೋ ಮಧ್ಯೇ ಅರ್ಣಸೋ ಯಂ ತೌಗ್ರ್ಯೋ ನಾಧಿತಃ ಪರ್ಯಹಸ್ವಜತ್ ॥
ಪಣಾ ಮೃಗಸ್ಯ ಪತರೋರಿವಾರಭ ಉದಶ್ವಿನಾ ಊಹಥುಃ ಶ್ರೋಮತಾಯ ಕಂ ॥

(ಋ. ಸಂ ೧.೧೮೨-೫ರಿಂದ ೭)

ಎಲೈ ಅಶ್ವಿನೀ ದೇವತೆಗಳೇ, ತುಗ್ರಪುತ್ರನಾದ ಭುಜ್ಯುವಿಗಾಗಿ ನೀವು ಸಚೇತನವಾದುದೂ ರೆಕ್ಕೆಗಳಿಂದ ಕೂಡಿದುದೂ ಆದ ಈ ದೋಣಿಯನ್ನು ನಿರ್ಮಿಸಿದಿರಿ ಅಗಾಧವಾದುದೂ, ಅಂಧಕಾರಾವೃತವಾದುದೂ, ಆದ ಸಮುದ್ರ ದಲ್ಲಿ ಬಿದ್ದು ಮುಳುಗುತ್ತಿದ್ದ ತುಗ್ರಪುತ್ರನಿಗಾಗಿ ನಾಲ್ಕುದೋಣಿಗಳನ್ನು ಕಳುಹಿದಿರಿ. ಹಾರುವ ಪಕ್ಷಿಗಳಿಗೆ ಅಂತರಿಕ್ಷ ದಲ್ಲಿ ಅವಲಂಬನವಾಗಿರುವ ರೆಕ್ಕೆಗಳಂತೆ ಸಮುದ್ರದಲ್ಲಿ ಮುಳುಗುತ್ತಿದ್ದ ಭುಜ್ಯುವಿಗೆ ಅವಲಂಬನವಾದುದೂ ಮತ್ತು ರಕ್ಷಕವಾದುದೂ ಆದ ದೋಣಿಯ ಅವಯವಗಳನ್ನು ಯಾವ ವೃಕ್ಷದಿಂದ ನಿರ್ಮಿಸಿದಿರಿ ಎಂದು ಶ್ಲಾಘಿಸಿದೆ. ಆದೇ ಅಂಶವನ್ನು ಪ್ರಕೃತವಾದ ಋಕ್ಕಿನಲ್ಲಿಯೂ ಸೂಚಿಸಿದೆ.

। संहितापाठः ।

पुराणा वां वीर्या प्र ब्रवा जनेऽथो हासथुर्भिषजा मयोभुवा ।

ता वां नु नव्यावसे करामुहेऽयं नासत्या शृदरिर्यथा दधत् ॥ ५ ॥

। पदपाठः ।

पुराणा । वां । वीर्या । प्र । ब्रव । जने । अथो इति । ह । असथुः । भिषजा । मयःऽभुवा ।

ता । वां । नु । नव्या । अवसे । करामुहे । अयं । नासत्या । शृत् । अरिः । यथा । दधत् ॥ ५ ॥

। सायणभाष्यं ।

हे अश्विनौ वां युवयोः पुराणा पुराणानि वीर्याणि जने लोके प्र ब्रव । प्रब्रवीमि । अथो अपि च हे नासत्यौ नासत्या युवां मयोभुवा सुखस्य भावयितारौ भिषजा भिषजौ वैद्यावासथुः । बभूवथुः । ता तौ युवावसवे रक्षणाय नव्यै स्तुत्यै करामुहे । कुर्मः । अयमुरिर्गन्ता पतिर्यजमानो यथा शृद्दधत् । शृद्दध्यादिति ॥

। प्रतिपदार्थ ।

नासत्या—ಎಲೈ ಅಶ್ವಿನೀದೇವತೆಗಳೇ । (युवां—ನೀವು) । मयोभुवा—ಸುಖಪ್ರದರಾದ । भिषजा-ವೈದ್ಯರಾಗಿ । असथुः—ಆಗಿದ್ದೀರಿ । अथो—ಆದುದರಿಂದ । वां—ನಿಮ್ಮ । पुराणा वीर्या-ಪ್ರಾಚೀನವಾದ ವೀರ್ಯಕರ್ಮಗಳನ್ನು । जने—ಲೋಕದಲ್ಲಿ । प्र ब्रव—ಪ್ರಶಂಸಿಸಿ ಹೊಗಳುತ್ತೇನೆ । यथा—ಯಾವ ರೀತಿ । अयं अरिः—ಈಯಜಮಾನನು । शृद्धधत्—ಶ್ರದ್ಧೆಯನ್ನು ಇಡುವನೋ ಹಾಗೆ । ता वां—ನಿಮ್ಮಿಬ್ಬರನ್ನೂ । अवसे—ನಮ್ಮ ರಕ್ಷಣಾರ್ಥವಾಗಿ । नव्यै—ಪ್ರಶಂಸನೀಯರನ್ನಾಗಿ । करामुहे—ಮಾಡುತ್ತೇನೆ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ನಾವು ಸುಖಪ್ರದರಾದ ವೈದ್ಯರಾಗಿ ಇದ್ದೀರಿ. ಆದುದರಿಂದ ನಿಮ್ಮ ಪ್ರಾಚೀನವಾದ ವೀರ್ಯಕರ್ಮಗಳನ್ನು ಲೋಕದಲ್ಲಿ ಪ್ರಶಂಸಿಸಿ ಹೊಗಳುತ್ತೇನೆ. ಯಾವ ರೀತಿ ಈ ಯಜಮಾನನು ನಿಮ್ಮಲ್ಲಿ ಶ್ರದ್ಧೆಯನ್ನಿಡುವನೋ ಆ ರೀತಿ ನಿಮ್ಮಿಬ್ಬರನ್ನೂ ನಮ್ಮ ರಕ್ಷಣಾರ್ಥವಾಗಿ ಪ್ರಶಂಸಾರ್ಹರನ್ನಾಗಿ ಮಾಡುತ್ತೇವೆ.

English Translation

I proclaim, Ashwins, your ancient exploits among the people, for you were the physicians, the bestowers of felicity : we count you two worthy to be praised for (our) preservation : so that this worshipper, Nasatyas, may believe (in you)

॥ ವಿಶೇಷವಿಷಯಗಳು ॥

ಅಶ್ವಿನೀದೇವತೆಗಳು ದೇವತೆಗಳ ವೈದ್ಯರೆಂದು ಅನೇಕಕಡೆ ವರ್ಣಿತವಾಗಿದೆ. ಇವರು ವೃದ್ಧನಾಗಿದ್ದ ಚ್ಯವನಋಷಿಯನ್ನು ಯುವಕನನ್ನಾಗಿ ಮಾಡಿದ ವಿಷಯವು ಹಿಂದಿನ ಋಕ್ಕಿನಲ್ಲಿ ವಿವರಿಸಲಾಗಿದೆ. ವಿಶ್ಪಲಾ ಎಂಬ ಸ್ತ್ರೀಯ ಮುರಿದುಹೋಗಿದ್ದ ಕಾಲನ್ನು ಸರಿಪಡಿಸಿದ ವಿಚಾರವೂ, ಸತ್ತುಹೋಗಿದ್ದ ಗೋವನ್ನು ಬದುಕಿಸಿದ ವಿಚಾರವೂ ಇನ್ನೂ ಇಂತಹ ಅನೇಕ ವಿಷಯಗಳೂ ಅನೇಕ ಕಡೆ ವಿವರಿಸಲ್ಪಟ್ಟಿವೆ. ಯಜುರ್ವೇದದಲ್ಲಿ **ಅಶ್ವಿನೌ ವೈ ದೇವಾನಾಂ ಭಿಷಜೌ** ಎಂದು ಹೇಳಿದೆ

। ಸಂಹಿತಾಪಾಠಃ ।

ಇ॒ಯಂ᳐ ವಾ॒ಮಹ್ವೇ॑ ಶೃಣು॒ತಂ ಮೇ॑ ಅಶ್ವಿನಾ ಪು॒ತ್ರಾ॒ಯೇ॑ವ ಪಿ॒ತರಾ॒
ಮ॒ಹ್ಯಂ ಶಿ॑ಕ್ಷತಂ ।
ಅ॒ನಾ॒ಪಿ॒ರ॒ಜ್ಞಾ ಅ॑ಸಜಾ॒ತ್ಯಾ॒ಮ॒ತಿಃ ಪು॒ರಾ ತ॑ಸ್ಯಾ॒ ಅ॒ಭಿ॒ಶ॒ಸ್ತೇ॒ರವ॑ ಸ್ಪೃತಂ ॥ ೬ ॥

। ಪದಪಾಠಃ ।

ಇ॒ಯಂ । ವಾ॒ಂ । ಅ॒ಹ್ವೇ॒ । ಶೃ॒ಣು॒ತಂ । ಮೇ॒ । ಅ॒ಶ್ವಿ॒ನಾ॒ । ಪು॒ತ್ರಾ॒ಯ॑ಃಇವ । ಪಿ॒ತರಾ॒ । ಮ॒ಹ್ಯಂ ।
ಶಿ॒ಕ್ಷ॒ತಂ॒ ।
ಅ॒ನಾ॒ಪಿ॒ಃ । ಅ॒ಜ್ಞಾ॒ಃ । ಅ॒ಸ॒ಜಾ॒ತ್ಯಾ॒ । ಅ॒ಮ॒ತಿಃ । ಪು॒ರಾ । ತ॒ಸ್ಯಾ॒ಃ । ಅ॒ಭಿ॒ಶ॒ಸ್ತೇ॒ಃ । ಅ॒ವ॒ । ಸ್ಪೃ॒ತಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ವಾಂ ಯುವಾಮಿಯಂ ಘೋಷಾಹಮಹ್ವೇ । ಆಹ್ವಯಾಮಿ । ಮೇ ಮಮ ಸಂಬಂಧಿನಮಿಮಮಾಹ್ವಾನಂ ಶೃಣುತಂ। ಶ್ರುತ್ವಾ ಚಾಹ್ವಾನಂ ಮಹ್ಯಂ ಪುತ್ರಾಯೇವ ಯಥಾ ಪುತ್ರಾಯ ಪಿತರಾ ಮಾತಾಪಿತರೌ ತದ್ವಚ್ಛಿಕ್ಷತಂ । ಧನಂ ದತ್ತಂ । ಅನಾಪಿರಬಂಧುರಜ್ಞಾ ಅಕೃತಜ್ಞಾಸಜಾತ್ಯಾಮತಿರಶ್ರದ್ಧೇಯಾ ಚಾಭಿಶಸ್ತಿರ್ಮಾಮಾಗಚ್ಛತಿ । ತಸ್ಯಾ ಅಭಿಶಸ್ತೇಃ ಪುರಾ ಪ್ರಾಗೇವಾವ ಸ್ಪೃತಂ । ಮಾಮುವಪಾರಯತಂ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ವಾಂ—ನಿಮ್ಮನ್ನು । ಇಯಂ—ಘೋಷಾಸಂಜ್ಞಕಳಾದ ನಾನು । ಅಹ್ವೇ—ಕರೆಯುತ್ತೇನೆ । ಮೇ—ನನ್ನ ಆಹ್ವಾನವನ್ನು । ಶೃಣುತಂ—ಕೇಳಿರಿ । ಪಿತರಾ—ಮಾತಾಪಿತೃಗಳು । ಪುತ್ರಾಯ ಇವ—ಪುತ್ರನಿಗೆ ಧನಾದಿಗಳನ್ನು ಕೊಡುವಂತೆ । ಮಹ್ಯಂ—ನನಗೆ । ಶಿಕ್ಷತಂ—ಧನವನ್ನು ಕೊಡಿರಿ । ಅನಾಪಿಃ—ಬಂಧುರಹಿತವೂ । ಅಜ್ಞಾ—ಕೃತಜ್ಞತೆಯಿಲ್ಲದುದೂ । ಅಸಜಾತ್ಯಾ—ಶ್ರದ್ಧಾರಹಿತವೂ । ಅಮತಿಃ—ಪ್ರಜ್ಞಾರಹಿತವೂ ಆದ ಶಾಪವು ಸಮೀಪಿಸುತ್ತದೆ । ತಸ್ಯಾಃ ಅಭಿಶಸ್ತೇಃ ಪುರಾ—ಇಂತಹ ಶಾಪಗಳಿಂದ ಹತಳಾಗುವುದಕ್ಕೆ ಮೊದಲೇ । ಅವ ಸ್ಪೃಶಂ—ನನ್ನನ್ನು ದಾಟಿಸಿ ರಕ್ಷಿಸಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನು ಘೋಷಾಸಂಜ್ಞಕಳಾದ ನಾನು ಕರೆಯುತ್ತೇನೆ. ನನ್ನ ಆಹ್ವಾನವನ್ನು ಕೇಳಿರಿ. ಮಾತಾಪಿತೃಗಳು ಪುತ್ರನಿಗೆ ಧನಾದಿಗಳನ್ನು ಕೊಡುವಂತೆ ನನಗೆ ಧನವನ್ನು ಕೊಡಿರಿ. ಬಂಧುರಹಿತವೂ ಕೃತಜ್ಞತೆಯಿಲ್ಲದುದೂ, ಶ್ರದ್ಧಾರಹಿತವೂ, ಪ್ರಜ್ಞಾರಹಿತವೂ ಆದ ಶಾಪವು ನನ್ನನ್ನು ಸಮೀಪಿಸುತ್ತದೆ. ಇಂತಹ ಶಾಪವು ತಟ್ಟುವುದಕ್ಕೆ ಮೊದಲೇ ನನ್ನನ್ನು ರಕ್ಷಿಸಿರಿ

English Translation

I here, (Ghosha), invoke you. Hear my (invocation), Ashwins, give me (wealth) as parents give to a son, before (it come) beyond the reach of (a curse) that has no relatives, ungrateful, without kinsfolk, without belief (pursues me) : save me from that curse before (it reach me)

॥ ವಿಶೇಷವಿಷಯಗಳು ॥

ಈ ಸೂಕ್ತದ ಋಷಿಯಾದ ಘೋಷಾ ಎಂಬ ಸ್ತ್ರೀಯು ತನಗೆ ಪ್ರಾಪ್ತವಾದ ಕುಷ್ಠರೋಗದ ನಿವಾರಣೆಗಾಗಿ ಪ್ರಾರ್ಥಿಸಿರುವುದನ್ನು ಈ ಋಕ್ಕಿನಲ್ಲಿ ವಿವರಿಸಿರಬಹುದು

॥ ಸಂಹಿತಾಪಾಠಃ ॥

ಯುವಂ ರಥೇನ ವಿಮುದಾಯ ಶುಂಧ್ಯುವಂ ನ್ಯೂಹಥುಃ ಪುರುಮಿತ್ರಸ್ಯ ಯೋಷಣಾಂ ।

युवं हवं वध्रिमत्या अगच्छतं युवं सुष्टुतिं चक्रथुः पुरंध्ययेः ॥ ६ ॥

। पदपाठः ।

युवं । रथेन । विऽमदायऽ । शुंध्युवं । नि । ऊहथुः । पुरुऽमित्रस्य । योषणां ।
युवं । हवं । वध्रिऽमत्याः । अगच्छतं । युवं । सुऽसुतिं । चक्रथुः । पुरंऽध्ययेः ॥

। सायणभाष्यं ।

हे अश्विनौ युवं युवां पुरुमित्रस्य पुरुमित्रनामधेयस्य योषणां दुहितरं शुंध्युवं नाम जायां विमुदायै विमुदनामधेयायार्षयेः रथेन स्वसेनापरिवृतेन रथेन न्यूहथुः । प्रापयतं । विमुदस्य गृहं नीतवंतौ स्थ इत्यर्थः । तथा च निगमांतरं । यावर्भगायै विमुदाय जायां सेनाजुवा न्यूहतू रथेन । ऋ. ८-८८-८ । इति । किंच युवं युवां वध्रिमत्याः संगत्यर्थं शत्रुभिश्छिन्नहस्तायाः हवनमाह्वानमगच्छतं । आगत्य च तस्यै हिरण्मयं हस्तं प्रायच्छतं । तथा च निगमांतरं । अजोहवीन्नासत्या करा वां मध्ये यावमुस्रुरुधुषा पुरंधिः श्रुतं तच्छ्यावाश्वेरिव वध्रिमत्या हिरण्यहस्तमश्विनावदत्तं । ऋ. ८-८८-८ । इति ॥ किंच युवं युवां पुरंध्ययेः बहुप्रज्ञायै वध्रिमत्यै सुष्टुतिं सुप्रसवं शोभनमैश्वर्यं वा चक्रथुः । कृतवंतौ स्थः ॥

। प्रतिपदार्थ ।

(एलै अश्विनीदेवतेगळे) युवं—नीवु । पुरुमित्रस्य—पुरुमित्रन । योषणां—मगळाद । शुंध्युवं—शुंध्युवेंबुवळन्नु ।। विमुदायै—अवळ पतियाद विमुदनल्लिगे । रथेन—निम्म रथदल्लि । न्यूहथुः—करेदोय्दिरि । युवं—नीवु । वध्रिमत्याः—वध्रिमतिय । हवं—आह्वानवन्नु केळि । अगच्छतं—अवळल्लिगे होदिरि । युवं—नीवु । पुरंध्ययेः—अनेकविधवाद प्रज्ञेयुळ्ळ वध्रिमतिगे । सुष्टुतिं—उत्तमवाद प्रसववन्नु (पुत्रनन्नु) । चक्रथुः—ओदगिसिदिरि.

। भावार्थ ।

एलै अश्विनीदेवतेगळे, नीवु पुरुमित्रन मगळाद शुंध्युवेंबुवळन्नु अवळ पतियाद विमुदनल्लिगे निम्म रथदल्लि करेदोय्दिरि. नीवु वध्रिमतिय आह्वानवन्नु केळि अवनल्लिगे होदिरि. अनेकविधवाद प्रज्ञेयुळ्ळ वध्रिमतिगे उत्तमवाद प्रसववन्नु (पुत्रसंतानवन्नु) ओदगिसिदिरि.

English Translation

You brought, Shundhyu, the daughter of Purumitra to (her husband) Vimada : you came at Vadhrimati's invocation, and gave excellent offspring to her who was full of wisdom.

॥ ವಿಶೇಷವಿಷಯಗಳು ॥

ಯುವಂ ಪುರುಮಿತ್ರಸ್ಯ ಯೋಷಣಾಂ ಶುಂಧ್ಯುವಂ ವಿಮದಾಯ ರಥೇನ ನ್ಯೂಹಥುಃ— ವಿಮದಋಷಿಃ ಪರಿಣೇಯ ಮಹತ್ಯಾ ವಿಭೂತ್ಯಾ ಭಾರ್ಯಾಂ ಸ್ವಗೃಹಂ ನಿನೀಷನ್ ಅಶ್ವಿನೌ ಶುಷ್ಟಾವ। ತಸ್ಯಾಗತ್ಯಾಶ್ವಿನೌ ಭಾರ್ಯಾಂ ಸ್ವಸೇನಾಪರಿವೃತೇನ ರಥೇನ ನಿನ್ಯತುಃ । ಗಾಶ್ಚಾಸ್ಮೈ ಪ್ರಭೂತಾ ದದತುರಿತಿ । ವಿಮದನೆಂಬ ಋಷಿಯು ಪುರುಮಿತ್ರನ ಮಗಳಾದ ಶುಂಧ್ಯೂ ಎಂಬ ಕನ್ಯೆಯನ್ನು ವಿವಾಹಮಾಡಿ ಕೊಂಡನಂತರ ತನ್ನ ಭಾರ್ಯೆಯನ್ನು ಅತ್ಯಂತ ವೈಭವದಿಂದ ತನ್ನ ಮನೆಗೆ ಕರೆದುಕೊಂಡುಹೋಗಬೇಕೆಂದು ಇಚ್ಛಿಸಿ ಅಶ್ವಿನೀದೇವತೆಗಳನ್ನು ಸ್ತುತಿಸಿದನು. ಅವರು ಬಂದು ತಮ್ಮ ರಥದಲ್ಲಿ ಅವನನ್ನೂ ಅವನ ಭಾರ್ಯೆಯನ್ನೂ ಕುಳ್ಳಿರಿಸಿ ವೈಭವದಿಂದ ಅವನ ಮನೆಗೆ ಕರೆದುಕೊಂಡು ಹೋಗಿಬಿಟ್ಟರು ಮತ್ತು ಅವನಿಗೆ ಅನೇಕ ಗೋವುಗಳನ್ನು ಕೊಟ್ಟರು ಎಂಬ ಕಥೆಯು ಇಲ್ಲಿ ಉಕ್ತವಾಗಿದೆ. ಇದೇ ವಿಷಯವನ್ನು—

ಯಾವರ್ಭಗಾಯ ವಿಮದಾಯ ಜಾಯಾಂ ಸೇನಾಜುವಾ ನ್ಯೂಹತೂ ರಥೇನ ।

(ಋ. ಸಂ. ೧-೧೧೬-೧)

ಎಂಬ ಋಕ್ಕಿನಲ್ಲಿ ಕಕ್ಷೀವಂತನೂ, ಮತ್ತು

ಯಾಭಿಃ ಪತ್ನೀರ್ವಿಮದಾಯ ನ್ಯೂಹಥುರಾ ಷು ವಾ ಯಾಭಿರರುಣೀರಶಿಕ್ಷತಂ ।

(ಋ. ಸಂ. ೧-೧೧೨-೧೯)

ಎಂಬ ಋಕ್ಕಿನಲ್ಲಿ ಕುತ್ಸಋಷಿಯೂ, ಪ್ರಕೃತಋಕ್ಕಿನಲ್ಲಿ ಘೊಷೆಯೂ ಹೇಳಿರುವರು. ವಿಮದನು ೧೦ನೆಯ ಮಂಡಲದ ೨೦ನೆಯ ಸೂಕ್ತದಿಂದ ೨೬ನೆಯ ಸೂಕ್ತದವರೆಗೆ ೭ ಸೂಕ್ತಗಳ ದ್ರಷ್ಟೃವೆಂದು ಅನುಕ್ರಮಣಿಕೆಯಿಂದ ಗೊತ್ತಾಗುತ್ತದೆ.

ಏವಾ ತೇ ಅಗ್ನೇ ವಿಮದೋ ಮನೀಷಾಮೂರ್ಜೋ ನಪಾದಮೃತೇಭಿಃ ಸಜೋಷಾಃ ।

(ಋ. ಸಂ. ೧೦-೨೦-೧೦)

ಮಾಕಿರ್ನ ಏನಾ ಸಖ್ಯಾ ವಿ ಯೌಷುಸ್ತವ ಚೇಂದ್ರ ವಿಮದಸ್ಯ ಚ ಋಷೇಃ ।

(ಋ. ಸಂ. ೧೦-೨೩-೭)

ಎಂಬ ಋಕ್ಕುಗಳಲ್ಲಿ ವಿಮದಸ್ಯ ಋಷೇಃ ಮಮ ಚ ಎಂದು ಸೂಕ್ತದ್ರಷ್ಟೃವು ತನ್ನನ್ನು ತಾನೇ ನಿರ್ದೇಶಿಸಿದ್ದಾನೆ.

ಐತರೇಯಬ್ರಾಹ್ಮಣದಲ್ಲಿ ಕುಹ ಶ್ರುತ ಇಂದ್ರಃ ಕಸ್ಮಿನ್ನದ್ಯೇತಿ ಸೂಕ್ತಂ (ಋ. ಸಂ. ೧೦-೨೨) ವೈಮದಂ । ಕುಹ ಶ್ರುತ ಎಂಬ ಋಕ್ಕಿನಿಂದ ಪ್ರಾರಂಭವಾಗುವ ಸೂಕ್ತವು ವಿಮದಋಷಿಯಿಂದ ದೃಷ್ಟವಾದದ್ದು ಎಂದು ಅದರ ವಿನಿಯೋಗಕ್ರಮವನ್ನು ಹೇಳಿದೆ. (ಐ. ಬ್ರಾ. ೨೧-೫)

ಯುವಂ ವಧ್ರಿಮತ್ಯಾಃ ಹವಂ ಅಗಚ್ಛತಂ । ಪುರಂಧಯೀ ಸುಷುತಿಂ ಚಕ್ರಥುಃ—ಅಶ್ವಿನೀದೇವತೆಗಳ ವಧ್ರೀಮತೀ ಎಂಬ ಸ್ತ್ರೀಯ ಪ್ರಾರ್ಥನೆಯಂತೆ ಅವಳ ಸಮೀಪಕ್ಕೆ ಬಂದು ಅವಳಿಗೆ ಹಿರಣ್ಯಹಸ್ತನೆಂಬ ಪುತ್ರನನ್ನು ಅನುಗ್ರಹಿಸಿದರು ಎಂದು ಇಲ್ಲಿ ಉಕ್ತವಾಗಿದೆ. ಈ ಮಂಡಲದ ೪೧ನೇ ಸೂಕ್ತದ ದ್ರಪ್ಸ್ಯವಾದ **ಸುಹಸ್ತ್ಯಃ ಘೌಷೇಯಃ** । ಘೋಷಾ ಎಂಬ ಸ್ತ್ರೀಯ ಪುತ್ರನಾದ ಸುಹಸ್ತ್ಯನೆಂಬುವನು ಈ ಹಿರಣ್ಯಹಸ್ತನೇ ಇರಬಹುದು. ಪ್ರಥವ ಮಂಡಲದ ೧೧೬ನೇ ಸೂಕ್ತದ ೧೩ನೇ ಋಕ್ಕಿನ ಭಾಷ್ಯದಲ್ಲಿ ಭಾಷ್ಯಕಾರರು—

> **ವಧ್ರಿಮತೀನಾಮ ಕಸ್ಯಚಿದ್ರಾಜರ್ಷೇಃ ಪುತ್ರೀ ನಪುಂಸಕಭರ್ತೃಕಾ । ಸಾ ಪುತ್ರಲಾಭಾರ್ಥಮಶ್ವಿನಾವಾಜುಹಾವ । ತದಾಹ್ವಾನಂ ಶ್ರುತ್ವಾಶ್ವಿನಾವಾಗತ್ಯ ತಸ್ಯೈ ಹಿರಣ್ಯಹಸ್ತಾಖ್ಯಂ ಪುತ್ರಂ ದದತುಃ । ತದೇತದಾಹ ॥**

ಎಂದು ಹೇಳಿದಾರೆ.

ವಧ್ರಿಃ ಪುತ್ರೋತ್ಪಾದನಾಶಕ್ತಃ ಷಣ್ಡಕಃ । ತದ್ವತೀ ರಾಜಪುತ್ರೀ. ಪುತ್ರನನ್ನು ಉತ್ಪಾದನೆಯಾಗಲ ತಕ್ಕ ವೀರ್ಯದ ಶಕ್ತಿಯಿಲ್ಲದ ನಪುಂಸಕನು ವಧ್ರಿ ಎನಿಸುವನು ಎಂದು ಸಾಯಣರು ವ್ಯಾಖ್ಯಾನಮಾಡಿ ಈ ವಿಧವಾದ ನಪುಂಸಕನನ್ನು ಪತಿಯನ್ನಾಗಿ ಹೊಂದಿರುವವಳು ವಧ್ರಿಮತೀ ಎಂದು ಹೆಸರನ್ನು ಹೊಂದಿರುವಳು ಎಂದು ಅರ್ಥ ಮಾಡಿರುವರು. ಸ್ಕಂದಸ್ವಾಮಿಗಳು **ವಧ್ರಿಮತೀ ನಾಮ ಯೋಧ್ರೀ ಶತ್ರುಭಿಃ ಸಂಗ್ರಾಮೇ ಛಿನ್ನಹಸ್ತಾ** ವಧ್ರಿಮತೀ (ಎಂಬ ರಾಜಪುತ್ರಿಯು) ಎಂಬುವಳು ಯುದ್ಧಮಾಡುವ ಸ್ತ್ರೀಯು. ಯುದ್ಧದಲ್ಲಿ (ಶತ್ರುಗಳ ಸಂಗಡ ಯುದ್ಧಮಾಡಿ) ಹಸ್ತವನ್ನು ಕಳೆದುಕೊಂಡಳು ಎಂದು ವಧ್ರಿಮತೀ ಶಬ್ದಕ್ಕೆ ಅರ್ಥವನ್ನು ಹೇಳಿರುವರು. ಸ್ಕಂದ ಸ್ವಾಮಿಗಳು—ಸಾಯಣರೂ ಕೂಡ ಈ ಋಕ್ಕಿಗೆ ಅರ್ಥವನ್ನು ಮಾಡುವುದರಲ್ಲಿ ಬೇರೆ ಬೇರೆ ಅಭಿಪ್ರಾಯಪಟ್ಟಿದ್ದರೂ ಹಿರಣ್ಯಹಸ್ತನೆಂಬ ಪುತ್ರನನ್ನು ಅನುಗ್ರಹಿಸಿದರೆಂಬ ವಿಷಯದಲ್ಲಿ—ಇಬ್ಬರ ಅಭಿಪ್ರಾಯವೂ ಒಂದೇ ವಿಧವಾಗಿರುವುದು ಸಾಯಣರು ವಧ್ರಿಶಬ್ದವು ನಪುಂಸಕನೆಂಬ ಅರ್ಥವುಳ್ಳದ್ದಾದಕಾರಣ ಅವನನ್ನು ಪತಿಯನ್ನಾಗಿ ಹೊಂದಿರುವವಳ ವಧ್ರಿಮತಿಯಾಗಿರುವಳು ಎಂದು ಅರ್ಥವನ್ನು ವಿವರಿಸಿ ನಪುಂಸಕನಾದ ಪತಿಯನ್ನು ಹೊಂದಿದ ರಾಜಪುತ್ರಿಯೊಬ್ಬಳ ಅಶ್ವಿನೀದೇವತೆಗಳನ್ನು ಬಹಳವಾಗಿ ಸ್ತೋತ್ರಮಾಡಿ ಅವರನ್ನು ಮೆಚ್ಚಿಸಿದಳು. ಅವಳ ಸ್ತುತಿಗೆ ಮೆಚ್ಚಿ ಪ್ರತ್ಯಕ್ಷರಾದ ಅಶ್ವಿನೀದೇವತೆಗಳು ಅವಳ ಇಚ್ಛೆಯಂತೆ ಹಿರಣ್ಯಹಸ್ತನೆಂಬ (ಪುತ್ರನನ್ನು) ಹೆಸರುಳ್ಳ ಪುತ್ರನು ಉತ್ಪನ್ನನಾಗುವಂತ ವರವನ್ನು ಕೊಟ್ಟರು ಎಂದು ಇತಿಹಾಸವನ್ನು ಹೇಳಿರುವರು. ಸ್ಕಂದಸ್ವಾಮಿಗಳು :—

> **ವಧ್ರಿಮತೀ ನಾಮ ಯೋಧ್ರೀ ಸಂಗ್ರಾಮೇ ಶತ್ರುಭಿಶ್ಛಿನ್ನಹಸ್ತಾ ಅಶ್ವಿನೌ ತುಷ್ಟಾವ । ತಸ್ಯಾ ಅಶ್ವಿನೌ ಹಿರಣ್ಯಹಸ್ತಂ ದದತುಃ ಇತಿ ॥**

ವಧ್ರಿಮತೀ ಎಂಬ ಹೆಸರುಳ್ಳ ಯುದ್ಧಮಾಡುವ ವೀರಸ್ತ್ರೀಯ ಹಸ್ತವು ಯುದ್ಧದಲ್ಲಿ ಶತ್ರುಗಳಿಂದ ಕತ್ತರಿಸಿಹೋದ ಕಾರಣ ಅಶ್ವಿನೀದೇವತೆಗಳನ್ನು ಸ್ತುತಿಸಿದಳು. ಅವರು ಅವಳ ಇಷ್ಟಾನುಸಾರವಾಗಿ ಹಸ್ತವನ್ನು ಮೊದಲು ಇರುವಂತೆಯೇ ಮಾಡಿದರು. ಆ ಹಸ್ತವೂ ಹಿರಣ್ಯಮಯವಾಗಿದ್ದಿತು ಎಂದು ಹೇಳಿ,

ಹಿರಣ್ಯಹಸ್ತಃ—**ಹಿರಣ್ಮಯೌ ಹಸ್ತೌ ಯಸ್ಮಿನ್ ಸ ಹಿರಣ್ಯಹಸ್ತಃ** । ಬಾಹುಃ । ಹಿರಣ್ಯಶಬ್ದಕ್ಕೆ ಸುವರ್ಣ ಚಿನ್ನ ಎಂದು ಅರ್ಥವು. ಆದುದರಿಂದ ಹಿರಣ್ಮಯವಾದ ಬಾಹುವುಳ್ಳವನೆಂದು ಅರ್ಥಮಾಡಿರುವರು.

ಸಾಯಣರು ಹಿರಣ್ಯಹಸ್ತಶಬ್ದದ ಅರ್ಥವನ್ನು ಹಿತರಮಣೀಯಪಾಣಿಂ (ಹಿತವಾದ) ಸುಖಕರವಾದ ಸುಂದರವಾದ ಹಸ್ತವುಳ್ಳ ಅಥವಾ ಹಿರಣ್ಯಹಸ್ತನೆಂದು ನಾಮವುಳ್ಳ ಎಂದು ಹೇಳಿ ಪುತ್ರನಿಗೆ ವಿಶೇಷಣವನ್ನಾಗಿ ವಿವರಿಸಿರುವರು.

॥ ಸಂಹಿತಾಪಾಠಃ ॥

ಯುವಂ ವಿಪ್ರಸ್ಯ ಜರಣಾಮುಪೇಯುಷಃ ಪುನಃ ಕಲೇರಕೃಣುತಂ ಯುವದ್ವಯುಃ ।
ಯುವಂ ವಂದನಮೃಶ್ಯದಾದುದೂಪಥುರ್ಯುವಂ ಸದ್ಯೋ ವಿಶ್ವಲಾಮೇತವೇ ಕೃಧಃ ॥ ೮ ॥

॥ ಪದಪಾಠಃ ॥

ಯುವಂ । ವಿಪ್ರಸ್ಯ । ಜರಣಾಂ । ಉಪಪ್ರೇಯುಷಃ । ಪುನರಿತಿ । ಕಲೇಃ । ಅಕೃಣುತಂ । ಯುವತ್ । ವಯುಃ ।
ಯುವಂ । ವಂದನಂ । ಋಶ್ಯದಾತ್ । ಉತ್ । ಊಪಥುಃ । ಯುವಂ । ಸದ್ಯಃ । ವಿಶ್ವಲಾಂ । ಏತವೇ । ಕೃಧಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಯುವಂ ಯುವಾಂ ವಿಪ್ರಸ್ಯ ಮೇಧಾವಿನೋ ಜರಣಾಂ ಜರಾಮುಪೇಯುಷ ಉಪಗತವತಃ ಕಲೇಃ ಕಲಿನಾಮಧೇಯಸ್ಯರ್ಷೇರ್ವಯಃ ಪುನರಪಿ ಯವದ್ಯುವತ್ವಯುಕ್ತಮಕೃಣುತಂ । ಅಕುರುತಂ । ತಥಾ ಚ ನಿಗಮಾಂತರಂ । ಕಲಿಂ ಯಾಭಿರ್ವಿತ್ತಜಾನಿಂ ದುವಸ್ಯಥಃ । ಋ. ೧-೧೧೨-೧೫ । ಇತಿ । ಕಿಂಚ ಯುವಂ ಯುವಾಂ ವಂದನಂ ಜಾಯಾವಿಯೋಗಸಂತಾಪೇನ ಕೂಪಪತಿತಂ ವಂದನಾಖ್ಯಮೃಷಿಮೃಶ್ಯದಾತ್ಯೂಪಾದುದೂಪಥುಃ । ಉದ್ಧೈರಯತಂ । ತಥಾ ನಿಗಮಾಂತರಂ । ಉದ್ವಂದನಮೈರಯತಂ ಸ್ವರ್ದೃಶೇ । ಋ. ೧-೧೧೨-೫ । ಇತಿ । ಕಿಂಚ ಯುವಂ ಯುವಾಂ ವಿಶ್ವಲಾಂ । ಖೇಲಸ್ಯ ರಾಜ್ಞಃ ಸೇನಾಯಾಂ ಯೋದ್ಧ್ರೀ ವಿಶ್ವಲಾ ನಾಮ ಕಾಚಿತ್ ಸ್ತ್ರೀ । ತಾಂ ಸಂಗ್ರಾಮೇ ಶತ್ರುಭಿಶ್ಛಿನ್ನಜಂಘಾಂ ಸದ್ಯಸ್ತದೈವೈತವೇ ಗಮನಾಯ ಕೃಧಃ । ಅಕುರುತಂ । ತಥಾ ಚ ನಿಗಮಾಂತರಂ । ಚರಿತ್ರಂ ಹಿ ವೇರಿವಾಚ್ಛೇದಿ ಪರ್ಣಮಾಜಾ ಖೇಲಸ್ಯ ಪರಿತಕ್ಮ್ಯಾಯಾಂ । ಸದ್ಮೋ ಜಂಘಾಮಾಯಸೀಂ ವಿಶ್ವಲಾಯೈ ಧನೇ ಹಿತೇ ಸರ್ತವೇ ಪ್ರತ್ಯಧತ್ತಂ । ಋ. ೧-೧೧೬-೧೫ । ಇತಿ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) ಯುವಂ—ನೀವು । ವಿಪ್ರಸ್ಯ—ಮೇಧಾವಿಯೂ । ಜರಣಾಂ ಉಪೇಯುಷಃ—ಮುಪ್ಪನ್ನು ಸಮೀಪಿಸುತ್ತಿದ್ದವನೂ ಆದ . ಕಲೇಃ—ಕಲಿಯೆಂಬ ಋಷಿಗೆ । ವಯಃ—ಅವನ

ವಯಸ್ಸನ್ನು । ಪುನಃ—ತಿರುಗಿಯೂ । ಯುವತ್—ಯೌವನವನ್ನು ಹೊಂದುವಂತೆ । ಅಕೃಣುತಂ—ಮಾಡಿದಿ
ಯುವಂ—ನೀವು । ವಂದನಂ—ಬಾವಿಯೊಳಗೆ ಬಿದ್ದಿದ್ದ ವಂದನನನ್ನು । ಋಶ್ಯದಾತ್—ಬಾವಿಯಿಂದ
ಉದೂಪಥುಃ—ಹೊರಕ್ಕೆ ಎತ್ತಿದಿರಿ । ಯುವಂ—ನೀವು । ಸದ್ಯಃ—ಒಡನೆಯೇ । ವಿಶ್ಪಲಾಂ—ಕುಂಟಳ
ವಿಶ್ಪಲೆಯನ್ನು । ಏತವೇ—ನಡೆಯಲು ಶಕ್ತಳನ್ನಾಗಿ । ಕೃಥಃ—ಮಾಡಿದಿರಿ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ಮೇಧಾವಿಯೂ, ಮುಪ್ಪನ್ನು ಸಮೀಪಿಸುತ್ತಿದ್ದವನೂ ಆದ ಕಲಿಯೆ
ಋಷಿಗೆ ಅವನು ತಿರುಗಿಯೂ ಯೌವನವನ್ನು ಹೊಂದುವಂತೆ ಅವನ ವಯಸ್ಸನ್ನು ಹಿಂತಿರುಗಿಸಿದಿರಿ. ಬಾವಿಯ
ಬಿದ್ದಿದ್ದ ವಂದನನನ್ನು ಬಾವಿಯಿಂದ ಹೊರಕ್ಕೆ ಎತ್ತಿದಿರಿ. ಯುದ್ಧದಲ್ಲಿ ಕುಂಟಳಾದ ವಿಶ್ಪಲೆಗೆ ಕಾಲನ್ನು ಕೊಟ
ಅವಳನ್ನು ನಡೆಯುವಂತೆ ಮಾಡಿದಿರಿ.

English Translation

You made young again the life of the sage Kali, when approachir
old age, you rescued Vandana from the well; you quickly enabl
Vishpala to walk.

॥ ವಿಶೇಷವಿಷಯಗಳು ॥

ಯುವಂ ವಿಪ್ರಸ್ಯ ಜರಣಾಂ ಉಪೇಯುಷಃ ಕಲೇಃ ವಯಃ ಪುನಃ ಯುವತ್ ಅಕೃಣುತಂ
ಎಲೈ ಅಶ್ವಿನೀದೇವತೆಗಳೇ, ವಯೋವೃದ್ಧನಾಗಿ ಜೀರ್ಣವಾದ ಶರೀರವುಳ್ಳ ಕಲಿ ಎಂಬ ಋಷಿಯನ್ನು ಪುನಃ ಯುವ
ನನ್ನಾಗಿ ಮಾಡಿದಿರಿ ಎಂದು ಇಲ್ಲಿ ಸ್ತುತಿಸಲಾಗಿದೆ. ಈ ವಿಷಯವನ್ನು ಋ. ಸಂ ೧-೧೧೭-೧೫ ನೇ ಋಕ್ಕಿ
ಕುತ್ಸಋಷಿಯೂ ಸಹ,

ಯಾಭಿರ್ವವ್ರಂ ವಿಪಿಪಾನಮುಪಸ್ತುತಂ ಕಲಿಂ ಯಾಭಿರ್ನಿರ್ಹತ್ತಜಾನಿಂ ದುವಸ್ಯಥಃ ।

(ಋ. ಸಂ. ೧-೧೧೭-೧೫)

ವಿವರಿಸಿದಾನೆ. **ಕಲಿರ್ನಾಮ ಋಷಿರ್ಜರಯಾ ತರೀತಸ್ತರುಣೀಂ ಭಾರ್ಯಾಂ ಲೇಭೇ । ಸ ತಸ್ಯೀತೆ
ಪುನರ್ಯೌವನಮಾತ್ಮನ ಇಚ್ಛನ್ ಅಶ್ವಿನೌ ತುಷ್ಟಾವ । ತಮಾಗತ್ಯಾಶ್ವಿನೌ ಪುನರ್ಯೌವನಂ ಜಕ್ರತುರಿ**
ಕಲಿಯೆಂಬ ಋಷಿಯು ವೃದ್ಧನಾದಮೇಲೆ ತರುಣಿಯಾದ ಓರ್ವ ಕನ್ಯೆಯನ್ನು ಮದುವೆಯಾದನು. ಅವಳನ್ನು ಒ
ಕೊಳ್ಳುವುದಕ್ಕಾಗಿ ಪುನಃ ಯೌವನವನ್ನು ಪಡೆಯಬೇಕೆಂದಪೇಕ್ಷಿಸಿ ಅಶ್ವಿನೀದೇವತೆಗಳನ್ನು ಸ್ತುತಿಸಿದಾಗ ಅ
ಇವನಿಗೆ ಪುನಃ ಯೌವನವು ಬರುವಂತೆ ಮಾಡಿದರು ಎಂಬ ಕಥೆಯಿದೆ. ಪ್ರಕೃತ ಋಕ್ಕಿನಲ್ಲಿಯೂ ಈ ವಿಷಯ
ವಿವರವಿದೆ

**ವಂದನಃ—ಅತ್ರೇದಮಾಖ್ಯಾನಂ । ವಂದನೋ ನಾಮ ಕಶ್ಚಿದೃಷಿಃ । ಸ ಚಾಸುರೈಃ ಕೂ
ನಿಷಾತೇ ಉತ್ತರೀತುಮಶಕ್ನುವನ್ನಶ್ವಿನಾವಸ್ತೌತ್ । ತವುಶ್ವಿನೌ ಕೂಪಾದುನ್ನಿನ್ಯತುರಿ
ತದಾಹ ॥**

ವಂದನ ಎಂದು ಹೆಸರುಳ್ಳ ಒಬ್ಬ ಋಷಿಯನ್ನು ಅಸುರರು ಕಾಡಿನ ಮಧ್ಯದ ನಿರ್ಜನಪ್ರದೇಶದಲ್ಲಿ ಇರುವ ಬಾವಿಯಲ್ಲಿ ಹಾಕಿದ್ದರು. ಅಲ್ಲಿಂದ ಅವನು ಏಳಲಾರದೆ ಅಶ್ವಿನೀದೇವತೆಗಳನ್ನು ಸ್ತುತಿಮಾಡಿದನು. ಶಿಷ್ಟರ ರಕ್ಷಣೆಯನ್ನು ಮಾಡುವ ಅಶ್ವಿನೀದೇವತೆಗಳು ಈ ಋಷಿಯ ಸ್ಥಿತಿಯನ್ನು ತಿಳಿದವರಾಗಿ ಬಾವಿಯಲ್ಲಿ ಬಚ್ಚಿಟ್ಟಿದ್ದ ಧನವನ್ನು ಸಂತೋಷದಿಂದ ತೆಗೆಯುವಂತೆ ಈ ಋಷಿಯನ್ನು ಬಾವಿಯಿಂದ ಮೇಲಕ್ಕೆ ತೆಗೆದು ರಕ್ಷಿಸಿದರು ಎಂಬ ಇತಿಹಾಸವು ಇಲ್ಲಿ ಉಕ್ತವಾಗಿರುವುದು. ಈ ಅಶ್ವಿನೀದೇವತೆಗಳು ಮಾಡಿರುವ ಋಷಿಯ ರಕ್ಷಣೆಯು ಅಭ್ಯೇಷಣಯುಕ್ತಂ—ಎದುರಿಗೆ ನೋಡುವವರಿಗೆಲ್ಲರಿಗೂ ಗೋಚರವಾಗತಕ್ಕದ್ದು, ಎಲ್ಲರೂ ಪ್ರಶಂಸೆಮಾಡತಕ್ಕದ್ದು, ಎಲ್ಲರಿಗೂ ಪೂಜ್ಯವಾಗಿರತಕ್ಕದು ಎಂದು ಪ್ರಶಂಸಿತವಾಗಿರುವುದು.

ಯಾಭೀ ರೇಭಂ ನಿವೃತಂ ಸಿತಮುದ್ಧ ಉದ್ವಂದನಮೈರಯತಂ ಸ್ವರ್ದೃಶೇ ।
ಯಾಭಿಃ ಕಣ್ವಂ ಪ್ರಸಿಷಾಸಂತಮಾಪತಂ ತಾಭಿರೂ ಷು ಊತಿಭಿರಶ್ವಿನಾ ಗತಂ ॥

(ಋ. ಸಂ. ೧-೧೧೭-೫)

ಈ ಋಕ್ಕಿನಲ್ಲಿ ಬಾವಿಯಲ್ಲಿ ಬಿದ್ದಿದ್ದ ರೇಭನನ್ನೂ ವಂದನನನ್ನೂ ಕಣ್ವನನ್ನೂ ಸಹ ರಕ್ಷಿಸಿದನೆಂದು ಹೇಳಿದೆ. ಸ್ಕಂದಸ್ವಾಮಿಗಳು ಈ ಋಕ್ಕನ್ನು ಉದಹರಿಸಿ

ರೇಭಮೃಷಿಂ ಸಂಧ್ಯಾಕಾಲೇ ಸ್ನಾತ್ವಾ ಹ್ರದಾದುತ್ತೀರ್ಣಂ ಅಗ್ನಿಹೋತ್ರಂ ಹೋತುಂ ಸ್ವಾಶ್ರಮಂ ಗಚ್ಛಂತಂ ಅಸುರಾ ದದೃಶುಃ । ತೇ ದೇವಾನಾಮಯಂ ಯಷ್ಟಾ ಸ್ತೋತಾ ಚೇತಿ ಜ್ಞಾತ್ವಾ ಸಂಕ್ರುದ್ಧಾಃ ತಂ ತಾಡಯಿತ್ವಾ ಬಧ್ವಾ ಚ ತಸ್ಮಿನ್ ಹ್ರದೇ ಪ್ರಕ್ಷಿಪ್ಯ ದಶರಾತ್ರಂ ಧಾರಯಾಂ ಚಕ್ರುಃ

ರೇಭನೆಂಬ ಋಷಿಯು ಸಂಧ್ಯಾಕಾಲದಲ್ಲಿ ಸ್ನಾನಮಾಡಿ ನದಿಯಿಂದ ಹೊರಟು ಅಗ್ನಿಹೋತ್ರವನ್ನು ಮಾಡುವುದಕ್ಕಾಗಿ ತನ್ನ ಆಶ್ರಮಕ್ಕೆ ಬರುತ್ತಿರುವಾಗ ಇವನನ್ನು ಅಸುರರು ನೋಡಿ ಈ ಋಷಿಯು ದೇವತೆಗಳನ್ನು ಕುರಿತು ಯಜ್ಞಮಾಡಿ ಪೂಜಿಸುವನು ಎಂದು ತಿಳಿದು ಅವನ ಮೇಲೆ ಕೋಪದಿಂದ ಅವನನ್ನು ಹೊಡೆದು ಹಗ್ಗದಿಂದ ಕಟ್ಟಿ ಭಾವಿಯಲ್ಲಿ ಹಾಕಿ ಹತ್ತು ರಾತ್ರಿಗಳವರೆಗೂ ಬಚ್ಚಿಟ್ಟಿದ್ದರು. ಅನಂತರ ಅವನ ಸ್ತುತಿಯಿಂದ ಮೆಚ್ಚಿದ ಅಶ್ವಿನೀದೇವತೆಗಳು ಆ ಋಷಿಯನ್ನು ರಕ್ಷಿಸಿದರೆಂದು ವರ್ಣಿಸಿದೆ. ಕೆಲವು ಋಕ್ಕುಗಳಲ್ಲಿ ರೇಭನನ್ನೂ ವಂದನನನ್ನೂ ಅಸುರರು ಭಾವಿಯಲ್ಲಿ ತಳ್ಳಿದ್ದರು. ಅವರು ಅಶ್ವಿನೀದೇವತೆಗಳನ್ನು ಸ್ತುತಿಸಲು ಅವರ ಸಂರಕ್ಷಣೆಯಾಯಿತೆಂದು ವರ್ಣನೆ ಇರುವುದು. ಕೆಲವುಕಡೆ ವಂದನನ ವಿಷಯವು ಮಾತ್ರ ಉಕ್ತವಾಗಿರುವುದು.

ತುಭ್ಯೇ ರುಕ್ಮಂ ನ ದರ್ಶತಂ ನಿಖಾತಮುದೂಪಥುರಶ್ವಿನಾ ವಂದನಾಯ ।

(ಋ. ಸಂ. ೧-೧೧೭-೫)

ಯುವಂ ವಂದನಮೃಶ್ಯದಾದುದೂಪಥುರ್ಯುವಂ ಸದ್ಯೋ ವಿಶ್ಪಲಾಮೇತವೇ ಕೃಥಃ ।

(ಋ ಸಂ. ೧೦-೩೯-೮)

ಇನ್ನು ಕೆಲವು ಋಕ್ಕುಗಳಲ್ಲಿ,

ಯುವಂ ತಯೋರವಸಂ ಪಿಪೃಥುರ್ಗವಿ ಪ್ರ ದೀರ್ಘೇಣ ವಂದನಸ್ತ್ಯಾರ್ಯಯುಷಾ

(ಋ. ಸಂ. ೧-೧೧೯-೬)

ಉದ್ವಂದನಮೈರಯತಂ ದಂಸನಾಭಿರುದ್ರೇಭಂ ದಸ್ರಾ ವೃಷಣಾ ಶಚೀಭಿಃ ।

(ಋ. ಸಂ. ೧ ೧೧೯-೬)

ಯುವಂ ವಂದನಂ ನಿರ್ಯತಂ ಜರಣ್ಯಯಾ ರಥಂ ನ ದಸ್ರಾ ಕರಣಾ ಸಮಿನ್ವಥಃ ।

(ಋ ಸಂ ೧-೧೧೯-೭)

ವಂದನನ ಜೀರ್ಣವಾದ ಶರೀರವನ್ನು ಯುವಕನ ಶರೀರದಂತೆ ಮಾಡಿ ಅವನು ಬಹಳಕಾಲ ಜೀವಿಸುವಂತೆ ಮಾಡಿದರೆಂಬ ಪ್ರಶಂಸೆ ಇವೆ.

ವಿಶ್ವಲಾಂ—ಖೇಲನೆಂಬ ರಾಜನು ಅಗಸ್ತ್ಯಋಷಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡನು. ಅವನಿಗೆ ವಿಶ್ವಲಾ ಎಂದು ಹೆಸರುಳ್ಳ ಹೆಂಡತಿಯೂ ಇದ್ದಳು. ಶತ್ರುಗಳ ಸಂಗಡ ಯುದ್ಧವು ನಡೆಯುತ್ತಿರುವಾಗ ವಿಶ್ವಲಾ ಎಂಬ ಸ್ತ್ರೀಯ ಪಾದವು ಕತ್ತರಿಸಿ ಹೋಯಿತು. ಆಗ ವಿಶ್ವಲೆಗೆ ಕಾಲು ಬರಬೇಕೆಂದು ಅಗಸ್ತ್ಯಋಷಿಯು ಅಶ್ವಿನೀದೇವತೆಗಳನ್ನು ಸ್ತೋತ್ರಮಾಡಲಾಗಿ ಅಶ್ವಿನೀದೇವತೆಗಳು ರಾತ್ರಿಯಲ್ಲಿ ಬಂದು ಇವಳ ಕತ್ತರಿಸಿಹೋದ ಕಾಲುಗಳಿಗೆ ಬದಲಾಗಿ ಕಬ್ಬಿಣದ ಕಾಲುಗಳನ್ನು ಸೇರಿಸಿ ಆಸ್ತ್ರೀಗೆ ಪಾದಗಳು ಬರುವಂತೆ ಮಾಡಿದರು ಎಂಬ ಇತಿಹಾಸವು ಇಲ್ಲಿ ಉಕ್ತವಾಗಿರುವುದು. ಈ ವಿಷಯವು-

ಯೋಭಿರ್ವಿಶ್ಪಲಾಂ ಧನಸಾಮುಧರ್ಮ್ಯಂ ಸಹಸ್ರಮೀಳ್ಹೇ ಅಜಾವಜಿನ್ವತಂ ।

(ಋ. ಸಂ ೧-೧೧೨-೧೦)

ಅಗಸ್ತ್ಯೇ ಬ್ರಹ್ಮಣಾ ವಾವೃಧಾನಾ ಸಂ ವಿಶ್ಪಲಾ ನಾಸತ್ಯಾ ಪರಿಣೇತಂ ।

(ಋ. ಸಂ. ೧-೧೧೬-೧೧)

ಅಮುಂಚತಂ ವರ್ತಿಕಾಮಂಹಸೋ ನಿಃ ಪ್ರತಿ ಜಂಘಾಂ ವಿಶ್ಪಲಾಯಾ ಅಧತ್ತಂ ।

(ಋ. ಸಂ. ೧-೧೧೭ ೮)

ಯುವಂ ವಂದನಮೃಶ್ಯದಾದುದೂಪಥುರ್ಯುವಂ ಸದ್ಯೋ ವಿಶ್ಪಲಾಮೇತವೇ ಕೃಥಃ ।

(ಋ. ಸಂ. ೧೦-೩೯ ೮)

ಎಂಬ ಋಕ್ಕುಗಳಲ್ಲಿ ವಿವರಿಸಲ್ಪಟ್ಟಿರುವುದು.

॥ ಸಂಹಿತಾಪಾಠಃ ॥

ಯುವಂ ಹ ರೇಭಂ ವೃಷಣಾ ಗುಹಾ ಹಿತಮುದ್ಐರಯತಂ ಮನ್ಮುವಾಂಸ-
ಮುಶ್ಮಿನಾ ।

ಯುವನ್ಮೃಬೀಸವುತೇ ತಪ್ತವುತ್ರ್ಯಯ ಓಮನ್ವಂತಂ ಚಕ್ರಥುಃ ಸಪ್ತ-
ವಧ್ರ್ಯಯೇ ॥ ೯ ॥

॥ ಪದಪಾಠ ॥

ಯುವಂ । ಹ । ರೇಭಂ । ವೃಷಣಾ । ಗುಹಾ । ಹಿತಂ । ಉತ್ । ಐರಯತಂ । ವಮ್ರ್ಯವಾಂಸಂ।
ಅಶ್ವಿನಾ ।

ಯುವಂ । ಋಬೀಸಂ । ಉತ । ತಪ್ತಂ । ಅತ್ರಯೇ । ಓಮನ್ವಂತಂ । ಚಕ್ರಥುಃ । ಸಪ್ತವ-
ಧ್ರಯೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ವೃಷಣಾ ವರ್ಷಿತಾರಾವಶ್ವಿನಾಶ್ವಿನೌ ಯುವಂ ಯುವಾಂ ಗುಹಾ ಗುಹಾಯಾಂ ಹಿತಮುಸು-
ರ್ಯನಿರ್ಹಿತಂ ವಮ್ರ್ಯವಾಂಸಂ ವಿಶ್ರಯಮಾಣಂ ರೇಭಂ ರೇಭಾಖ್ಯಮೃಷಿಮುದ್ಧೈರಯತಂ । ಉತ್ತಾರಿತವಂತೌ
ಸ್ಥಃ । ತಥಾ ಚ ನಿಗಮಾಂತರಂ । ದಶ ರಾತ್ರೀರಶಿವೇನಾ ನವ ದ್ಯೂನವನದ್ಧಂ ಶ್ನಥಿತಮಪ್ಸ್ವಂತಃ ।
ವಿಪ್ರುತಂ ರೇಭಮುದನಿ ಪ್ರವೃಕ್ತಮುನ್ನಿನ್ಯಥುಃ ಸೋಮಮಿವ ಸ್ರುವೇಣ । ಋ. ೧-೧೧೬-೨೪ । ಇತಿ ।
ಉತ ಕಿಂಚ ಯುವಂ ಯುವಾಂ ತಪ್ತವ್ಯಬೀಸಮಗ್ನಿಕುಂಡಮತ್ರಯೇಽತ್ರೀರರ್ಥಾಯೌಮನ್ವಂತಮು-
ವನವಂತಂ ಚಕ್ರಥುಃ । ವ್ಯಾಪ್ಯ ನಿಶಮಯ್ಯ ಶೀತಂ ಕೃತವಂತೌ ಸ್ಥ ಇತ್ಯರ್ಥಃ । ತಥಾ ಚ ನಿಗಮಾಂ-
ತರಂ । ಹಿಮೇನಾಗ್ನಿಂ ಘ್ರಂಸಮವಾರಯೇಥಾಂ ಪಿತುಮತೀಮೂರ್ಜಮಸ್ಮಾ ಅಧತ್ತಂ । ಋಬೀಸೇ
ಅತ್ರಿಮಶ್ವಿನಾವನೀತಮುನ್ನಿನ್ಯಥುಃ ಸರ್ವಗಣಂ ಸ್ವಸ್ತಿ । ಋ. ೧-೧೧೬-೮ । ಇತಿ । ಕಿಂಚ ಯುವಾಂ
ಸಪ್ತವಧ್ರಯೇಽಶ್ವಮೇಧೇನ ರಾಜ್ಞಾ ಕೇನಚಿದಪರಾಧೇನ ಕಾಮ್ಯಮಯಮುಂಜೂಷಾಯಾಂ ನಿಹಿತಸ್ಯ
ಸಪ್ತವಧ್ರಿನಾಮಧೇಯಸ್ಯರ್ಷೇರರ್ಥಾಯ ಚಕ್ರಥುಃ । ಮುಂಜೂಷೋದ್ಘಾಟನಂ ಕೃತವಂತೌ ಸ್ಥ
ಇತ್ಯರ್ಥಃ । ತಥಾ ಚ ನಿಗಮಾಂತರಂ । ವಿ ಜಿಹೀಷ್ವ ವನಸ್ಪತೇ ಯೋನಿಃ ಸೂಷ್ಮ್ಯಾ ಇವ । ಶ್ರುತಂ
ಮೇ ಅಶ್ವಿನಾ ಹವಂ ಸಪ್ತವಧ್ರಿಂ ಚ ಮುಂಚತಂ । ಋ. ೫-೭೮-೫ । ಇತಿ ॥

॥ ಪ್ರತಿಪದಾರ್ಥ ॥

ವೃಷಣಾ—ವೃಷ್ಟಿಯನ್ನು ಸುರಿಸುವ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಯುವಂ**—ನೀವು ।
ಗುಹಾ—ಗುಹೆಯಲ್ಲಿ । **ಹಿತಂ**—ಮುಚ್ಚಲ್ಪಟ್ಟಿದ್ದವನೂ । **ವಮ್ರ್ಯವಾಂಸಂ**—ಸಾಯುವುದರಲ್ಲಿದ್ದವನೂ ಆದ ।
ರೇಭಂ—ರೇಭನೆಂಬ ಋಷಿಯನ್ನು । **ಉದ್ಧೈರಯತಂ**—ಮೇಲಕ್ಕೆತ್ತಿದಿರಿ । **ಉತ**—ಮತ್ತು । **ಯುವಂ**—ನೀವು ।
ತಪ್ತಂ—ದಾಹಾತ್ಮಕವಾದ । **ಋಬೀಸಂ**—ಅಗ್ನಿಕುಂಡವನ್ನು । **ಅತ್ರಯೇ**—ಅತ್ರಿಋಷಿಗೆ ಸಹಾಯಮಾಡಲು ।
ಓಮನ್ವಂತಂ—ತಣ್ಣಗಾಗುವಂತೆ । **ಚಕ್ರಥುಃ**—ಮಾಡಿದಿರಿ । **ಸಪ್ತವಧ್ರಯೇ**—ಸಪ್ತವಧ್ರಿಗೆ ಸ್ವಾತಂತ್ರ್ಯವನ್ನು
ಕೊಟ್ಟಿರಿ.

॥ ಭಾವಾರ್ಥ ॥

ವೃಷ್ಟಿಯನ್ನು ಸುರಿಸುವ ಎಲೈ ಅಶ್ವಿನೀದೇವತೆಗಳೇ, ಗುಹೆಯಲ್ಲಿ ಮುಚ್ಚಲ್ಪಟ್ಟಿದ್ದವನೂ, ಸಾಯುವುದರಲ್ಲಿದ್ದವನೂ ಆದ ರೇಭನೆಂಬ ಋಷಿಯನ್ನು ನೀವು ಮೇಲಕ್ಕೆತ್ತಿದಿರಿ. ಮತ್ತು ನೀವು ದಾಹಾತ್ಮಕವಾದ ಅಗ್ನಿಕುಂಡವನ್ನು ಅತ್ರಿಋಷಿಗೆ ಸಹಾಯಮಾಡಲು ತಣ್ಣಗಾಗುವಂತೆ ಮಾಡಿದಿರಿ. ಸಪ್ತವಧ್ರಿಗೆ ಸ್ವಾತಂತ್ರ್ಯವನ್ನು ಕೊಟ್ಟಿರಿ.

English Translation

Ashwins, shedders of rain, you extricated Rebha when he was placed in a cave and was dying : you made the heated fire-pit cool for Atri : you gave (liberty) to Saptavadhri

॥ ವಿಶೇಷವಿಷಯಗಳು ॥

ರೇಭಂ—ಅಶ್ವಿನೀದೇವತೆಗಳು ರೇಭಋಷಿಯನ್ನು ಅವನಿಗೆ ಒದಗಿದ್ದ ಅಪಾಯದಿಂದ ಅಥವಾ ಬಾವಿಯಲ್ಲಿ ಅಸುರರು ಅವನನ್ನು ಕಟ್ಟಿಹಾಕಿ ಮುಳುಗಿಸಿದ್ದ ತೊಂದರೆಯಿಂದ ರಕ್ಷಿಸಿದರು ಎಂದು ಅರ್ಥ. ಅತ್ರಿಋಷಿಯನ್ನು ಹಿಡಿದು ಅವನನ್ನು ತುಷಾಗ್ನಿಯಲ್ಲಿ ಅಸುರರು ಹಾಕಿದಾಗ ಅಶ್ವಿನೀದೇವತೆಗಳು ಅವನ ಸ್ತುತಿಯನ್ನು ಕೇಳಿ ಹಿತಕರವಾದ ಮತ್ತು ತಂಪಾದ ನೀರಿನಿಂದ ಬೆಂಕಿಯನ್ನು ಆರಿಸಿ ಅವನನ್ನು ರಕ್ಷಿಸಿದರು ಎಂದು ಒಂದು ವಿಧವಾದ ಅರ್ಥವನ್ನು ಸಾಯಣರು ಹೇಳಿರುವುದಲ್ಲದೆ, ಅತ್ರಿ ಶಬ್ದಕ್ಕೆ ಹವಿಸ್ಸುಗಳನ್ನು ಭಕ್ಷಿಸುವ ಅಗ್ನಿ ಎಂದೂ, ಈ ಅಗ್ನಿಗೆ (ಸೂರ್ಯಕಿರಣಗಳ ತಾಪದಿಂದ ವ್ರೀಹ್ಯಾದ್ಯುತ್ಪತ್ತಿಯು ಯಾವುದೂ ಆಗದಿರುವುದರಿಂದ) ಉಂಟಾಗಿರುವ ತಾಪವನ್ನು ವೃಷ್ಟ್ಯುದಕಗಳ ಮೂಲಕವಾಗಿ ಪರಿಹರಿಸಿದರು ಎಂದು ಇನ್ನೊಂದು ಅರ್ಥವನ್ನೂ ವಿವರಿಸಿರುವರು. ಸ್ಕಂದಸ್ವಾಮಿಗಳು ಅತ್ರಿಋಷಿಯನ್ನು ರಕ್ಷಿಸಿದ ವೃತ್ತಾಂತವನ್ನು ಮಾತ್ರ ವಿವರಿಸಿ—

ಹಿಮೇನಾಗ್ನಿಂ ಘ್ರಂಸಮುವಾರಯೇಥಾಂ ಪಿತುಮತೀಮೂರ್ಜಮಸ್ಮಾ ಅಧತ್ತಂ ।
ಋಬೀಸೇ ಅತ್ರಿಮಶ್ವಿನಾವನೀತಮನ್ನಿನ್ಯಥುಃ ಸರ್ವಗಣಾ ಸ್ವಸ್ತಿ ॥

(ಋ. ಸಂ. ೧೦೧೯.೮)

ಈ ಋಕ್ಕನ್ನು ಉದಹರಿಸಿರುವರು.

ಅತ್ರಯೇ—ಅಸುರರು ಅತ್ರಿಯೆಂಬ ಋಷಿಯನ್ನು ಹಿಡಿದುಕೊಂಡು ಹೋಗಿ ತೊಂದರೆಯನ್ನುಂಟುಮಾಡುವುದಕ್ಕಾಗಿ ಬಹಳ ದ್ವಾರಗಳುಳ್ಳ ಅಪಾಯಕರವಾದ ಒಂದು ಮನೆಯಲ್ಲಿ ಕೆಳಮುಖನಾಗಿ ಮಲಗಿಸಿ ಅವನನ್ನು ತುಷಾಗ್ನಿಯಲ್ಲಿ (ಹೊಟ್ಟುಬೆರಸಿರುವ ಬೆಂಕಿಯಲ್ಲಿ) ಹಾಕಿದರು. ಇದರಿಂದ ಅತ್ರಿಋಷಿಯು (ಅವನ ಶರೀರವು ಬೆಂದು) ಬೆಂಕಿಯ ತಾಪವನ್ನು ಸಹಿಸಲಾರದೆ ಅಶ್ವಿನೀದೇವತೆಗಳನ್ನು ಸ್ತುತಿಮಾಡಿದಾಗ ಅವರು ಹಿಮದಂತೆ ತಣ್ಣಗಿರುವ ನೀರನ್ನು ಸುರಿಸಿ ಅತ್ರಿಋಷಿಯನ್ನು ರಕ್ಷಿಸಿದರು.

॥ ಸಂಹಿತಾಪಾಠಃ ॥

ಯುವಂ ಶ್ವೇತಂ ಪೇದವೇಽಶ್ವಿನಾಶ್ವಂ ನವಭಿರ್ವಾಜೈರ್ನವತೀ ಚ ವಾಜಿನಂ।

ಚರ್ಕೃತ್ಯಂ ದದಥುರ್ದ್ರಾವಯತ್ಸಖಂ ಭಗಂ ನ ನೃಭ್ಯೋ ಹವ್ಯಂ ಮಯೋ-
ಭುವಂ ॥ ೧೦ ॥

॥ ಪದಪಾಠಃ ॥

ಯುವಂ । ಶ್ವೇತಂ । ಪೇದವೇ । ಅಶ್ವಿನಾ । ಅಶ್ವಂ । ನವ೪ಭಿಃ । ವಾಜೈಃ । ನವತೀ । ಚ । ವಾಜಿನಂ ।
ಚರ್ಕೃತ್ಯಂ । ದದಥುಃ । ದ್ರವಯತ್೪ಸಖಂ । ಭಗಂ । ನ । ನೃ೪ಭ್ಯಃ । ಹವ್ಯಂ । ಮಯೋ೪ಭುವಂ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಯುವಂ ಯುವಾಂ ಪೇದವೇ ಪೇದುನಾಮಧೇಯಾಯ ರಾಜ್ಞೇ ಶ್ವೇತಂ ಶ್ವೇತವರ್ಣಂ ವಾಜಿನಂ ಬಲಿನಂ ನವಭಿರ್ನವತೀ ನವತ್ಯಾಶ್ವೈಃ ಸಹಿತಂ ಚರ್ಕೃತ್ಯಂ ಸಂಗ್ರಾಮಾಣಾಮುಪಕರ್ತಾರಂ ಶತ್ರೂಣಾಂ ಜೇತಾರಂ ವಾ ದ್ರವಯತ್ಸಖಂ ಶತ್ರುಸಖೀನಾಂ ದ್ರಾವಯಿತಾರಂ ಹವ್ಯಂ ಹ್ವಾತವ್ಯಂ ಮಯೋಭುವಂ ಸುಖಸ್ಯ ಭಾವಯಿತಾರಮಶ್ವಂ ನೃಭ್ಯೋ ಮನುಷ್ಯೇಭ್ಯೋ ಭಗಂ ನ ಭಜನೀಯಂ ಧನಮಿವ ದದಥುಃ । ಪ್ರಾಯಚ್ಛತಂ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಯುವಂ—ನೀವು । ಪೇದವೇ—ಪೇದುವೆಂಬ ರಾಜನಿಗೆ । ಶ್ವೇತಂ—ಶ್ವೇತವರ್ಣವುಳ್ಳದ್ದೂ । ವಾಜಿನೆಂ—ಶಕ್ತಿಯುತವಾದುದೂ । ವಾಜೈಃ—ಶಕ್ತಿಯುತವಾದ । ನವಭಿನವತೀ ಚ—ತೊಂಭತ್ತೊಂಭತ್ತು ಇತರ ಅಶ್ವಗಳೊಂದಿಗೆ ಕೂಡಿದುದೂ । ಚರ್ಕೃತ್ಯಂ—ಸಂಗ್ರಾಮದಲ್ಲಿ ವೀರ್ಯಕರ್ಮವುಳ್ಳದ್ದೂ । ದ್ರವಯತ್ಸಖಂ—ಶತ್ರುವಿನ ಮಿತ್ರರನ್ನು ಓಡಿಸತಕ್ಕದ್ದೂ । ಹವ್ಯಂ—ಆಹ್ವಾನಕ್ಕೆ ಯೋಗ್ಯವಾದುದೂ । ಮಯೋಭುವಂ—ಸುಖಕ್ಕೆ ಸಾಧಕವಾದುದೂ ಆದ । ಅಶ್ವಂ—ಅಶ್ವವನ್ನು । ನೃಭ್ಯಃ—ಮಾನವರಿಗೆ ಹಿತಕರವಾದ । ಭಗಂ ನ—ಧನವನ್ನು ಕೊಡುವಂತೆ । ದದಥುಃ—ಕೊಟ್ಟರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಪೇದುವೆಂಬ ರಾಜನಿಗೆ ಶ್ವೇತವರ್ಣವುಳ್ಳದ್ದೂ, ಶಕ್ತಿಯುತವಾದುದೂ ಶಕ್ತಿಯಿಂದ ಕೂಡಿದ ಬೇರೆ ತೊಂಭತ್ತೊಂಭತ್ತು ಅಶ್ವಯುತವಾದುದೂ, ಯುದ್ಧದಲ್ಲಿ ವೀರ್ಯಕರ್ಮವುಳ್ಳದ್ದೂ, ಶತ್ರುವಿನ ಮಿತ್ರರನ್ನು ಓಡಿಸತಕ್ಕುದೂ, ಆಹ್ವಾನಕ್ಕೆ ಯೋಗ್ಯವಾದುದೂ, ಸುಖಸಾಧಕವಾದುದೂ ಆದ ಅಶ್ವವನ್ನು ಮಾನವರಿಗೆ ಹಿತಕರವಾದ ಧನವನ್ನು ಕೊಡುವಂತೆ ಕೊಟ್ಟರಿ

English Translation

You gavc, Aswins, to Pedu a strong white horse with nine-and-ninety (other) steeds, (a horse) active (in combat), putting to flight the friends (of the foe), worthy to be invoked, a source of delight, like wealth to men·

॥ ವಿಶೇಷವಿಷಯಗಳು ॥

ಪೇದು ಎಂಬ ರಾಜನು ಅಶ್ವಿನೀದೇವತೆಗಳನ್ನು ಸ್ತುತಿಮಾಡಿದನು. ಅವರು ರಾಜನ ಸ್ತುತಿಯನ್ನು ಕೇಳಿ ಸಂತುಷ್ಟರಾಗಿ ಅವನಿಗೆ ಒಂದು ಕುದುರೆಯನ್ನು ಉಚಿತವಾಗಿ ಅನುಗ್ರಹಮಾಡಿ ಕೊಟ್ಟರು. ಅದು ಬಿಳಿಯ ಬಣ್ಣವುಳ್ಳದ್ದಾಗಿ, ಯುದ್ಧಕಾಲದಲ್ಲಿ ಶತ್ರುಗಳನ್ನು ನಾಶಮಾಡುವ ಸಾಮರ್ಥ್ಯವುಳ್ಳದ್ದಾಗಿತ್ತು. ಇಂದ್ರನು ಅಶ್ವಿನೀದೇವತೆಗಳಿಗೆ ಇದನ್ನು ಹಿಂದೆ ಬಹುಮಾನವಾಗಿ ಕೊಟ್ಟಿದ್ದನು. ಅದು ಪ್ರತಿದಿನವೂ ಸಹಸ್ರ ಧನವನ್ನು ನಿಯತವಾಗಿ ಗೆಲ್ಲುವ ಸ್ವಭಾವವುಳ್ಳದ್ದೆಂದು ಕುದುರೆಯ ಉತ್ತಮತ್ವವು ವ್ಯಕ್ತನಾಗುವಂತೆ ವರ್ಣಿತವಾಗಿದೆ. ಸಾಯಣರು ಋ. ಸಂ. ೧-೧೧೬-೬ನೇ ಋಕ್ಕಿನ ಭಾಷ್ಯದಲ್ಲಿ—

ಅತ್ರೇದಮಾಖ್ಯಾಯತೇ । ಪೇದುರ್ನಾಮ ಕಶ್ಚಿತ್ । ಸ ಚಾಶ್ವಿನೌ ತುಷ್ಟಾವ । ತಸ್ಮೈ ಪ್ರೀತೌ ಕಂಜಿಚ್ಛ್ವೇತವರ್ಣಮಶ್ವಂ ದತ್ತವಂತೌ । ಸ ಚಾಶ್ವಸ್ತಸ್ಯ ಜಯಂ ಚಕಾರೇತಿ । ಏತದತ್ರ ಪ್ರತಿಪಾದ್ಯತೇ ।

ಎಂದು ಹೇಳಿದಾರೆ. ಪೇದು ಎಂಬ ಹೆಸರಿನ ಒಬ್ಬನು ಅಶ್ವಿನೀದೇವತೆಗಳನ್ನು ಸ್ತುತಿಸಿದನು ಅವರು ಅವನ ಸ್ತೋತ್ರಕ್ಕೆ ಮೆಚ್ಚಿ ಅವರು ಅವನಿಗೆ ಒಂದು ಕುದುರೆಯನ್ನು ಕೊಟ್ಟರು. ಈ ಋಕ್ಕಿನ ವಿಷಯದಲ್ಲಿ ಸ್ಕಂದಸ್ವಾಮಿಗಳು ಈರೀತಿ ಹೇಳಿದಾರೆ—

ಅಘಾಶ್ವೋ ನಾಮ ರಾಜಾ ಯುಯುಯುತ್ಸುರಾತ್ಮನೋ ಅಶ್ವಂ ಅಶ್ವಿನೌ ಯಯಾಚೇ ಸತತಂ-ಚಾವಿನಾಶಂ । ತಸ್ಮೈ ಅಶ್ವಿನೌ ಬಲವಂತಂ ಅತ್ಯಂತವೇಗಿನಂ ಜಯಕರಂ ಸರ್ವತ್ರಾ-ಪ್ರತಿಹತಗಮನಂ ಅಶ್ವಂ ಸತತಂ ಚಾವಿನಾಶಂ ದದತುರಿತಿ । ತದೇತದಿಹೋಚ್ಯತೇ ॥

ಅಘಾಶ್ವನೆಂಬ ರಾಜನು ಯುದ್ಧಮಾಡಲು ಇಚ್ಛೆಯುಳ್ಳವನಾಗಿ ತನಗೆ ಬಹಳ ಶಕ್ತಿಯುಳ್ಳದ್ದಾಗಿಯೂ ವೇಗಶಾಲಿಯಾಗಿಯೂ ಎಲ್ಲಾ ಕಡೆಯಲ್ಲಿಯೂ ತಡೆಯೇ ಇಲ್ಲದಂತೆ ಸಂಚರಿಸುವುದೂ ಜಯವನ್ನು ಸಂಪಾದಿಸಿ ಕೊಡುವುದೂ ಯಾವಾಗಲೂ ನಾಶವನ್ನು ಹೊಂದದೆ ಇರುವುದೂ ಆದ ಒಂದು ಕುದುರೆಯನ್ನು ಕೊಡಬೇಕೆಂದು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದನು. ಅವರು ಇವನ ಪ್ರಾರ್ಥನೆಗೆ ಅನುಸಾರವಾಗಿ ಇವನ ಇಷ್ಟದಂತೆಯೇ ಇರುವ ಒಂದು ಬಿಳಿಯ ಕುದುರೆಯನ್ನು ಕೊಟ್ಟರು.

ಮತ್ತು ಋ. ಸಂ. ೧-೧೧೭-೯ನೇ ಋಕ್ಕಿನ ಭಾಷ್ಯದಲ್ಲಿ—

ಪೇದುರ್ನಾಮ ರಾಜಾ ತಸ್ಮೈ ಪರಯಾ ಭಕ್ತ್ಯಾ ಪರಿತುಷ್ಟಾವಶ್ವಿನೌ ಮಹಾವೀರ್ಯಂ ಶ್ವೇತಮಶ್ವಂ ದದತುಃ ಇತಿ ತತ್ಪರಸ್ತಾದ್ವಕ್ಷ್ಯತಿ । ಪೇದು ಎಂಬ ರಾಜನ ಉತ್ತಮವಾದ ಭಕ್ತಿಗೆ ಮೆಚ್ಚಿ ಅಶ್ವಿನೀದೇವತೆಗಳು ಉತ್ತಮವಾದ ಮತ್ತು ಒಹಳ ಶಕ್ತಿಯುಳ್ಳ ಒಂದು ಬಿಳಿಯ ಕುದುರೆಯನ್ನು ಕೊಟ್ಟರು ಎಂದು ಅರ್ಥವನ್ನು ಹೇಳಿ—

ಜೋಹೂತ್ರಮರ್ಯೋ ಅಭಿಭೂತಮುಗ್ರಂ ಸಹಸ್ರಸಾಂ ವೃಷಣಂ ವೀಡ್ವಂಗಮ್ ॥
ಯುವಂ ಶ್ವೇತಂ ಪೇದವ ಇಂದ್ರಜೂತಮಹಿಹನಮಶ್ವಿನಾ ದತ್ತಮಶ್ವಮ್ ।

(ಋ. ಸಂ. ೧-೧೧೭-೯)

ಎಂಬ ಈ ಋಕ್ಕನ್ನು ಉದಹರಿಸಿರುವರು. ಇದಲ್ಲದೆ ಇದೇ ಅಭಿಪ್ರಾಯವುಳ್ಳ ಬೇರೆಯ ಋಕ್ಕನ್ನೂ ಇವರು ಉದಾಹರಿಸಿರುತ್ತಾರೆ.

ಯುವಂ ಶ್ವೇತಂ ಪೇದವೇ೭ಶ್ವಿನಾಶ್ವಂ ನವಭಿರ್ವಾಜೈರ್ನವತೀ ಚ ವಾಜಿನಂ ।
ಚಕ್ರ್ಯಂ ದದಥುರ್ದ್ಯಾವಯತ್ಸಖಂ ಭಗಂ ನ ನೃಭ್ಯೋ ಹವ್ಯಂ ಮಯೋಭುವಂ ॥

(ಋ. ಸಂ. ೧೦-೬೯-೧೦)

ಎಂದೂ ಹೇಳಿದಾರೆ.

। ಸಂಹಿತಾಪಾಠಃ ।

ನ ತಂ ರಾಜಾನಾವದಿತೇ ಕುತಶ್ಚನ ನಾಂಹೋ ಅಶ್ನೋತಿ ದುರಿತಂ ನಕಿರ್ಭಯಂ ।
ಯಮಶ್ವಿನಾ ಸುಹವಾ ರುದ್ರವರ್ತನೀ ಪುರೋರಥಂ ಕೃಣುಥಃ ಪತ್ನ್ಯಾ ಸಹ ॥ ೧೭ ॥

। ಪದಪಾಠಃ ।

ನ । ತಂ । ರಾಜಾನೌ । ಅದಿತೇ । ಕುತಃ । ಚನ । ನ । ಅಂಹಃ । ಅಶ್ನೋತಿ । ದುಃ೭ಇತಂ । ನಕಿಃ । ಭಯಂ ।
ಯಂ । ಅಶ್ವಿನಾ । ಸು೭ಹವಾ । ರುದ್ರವರ್ತನೀ ಇತಿ ರುದ್ರ೭ವರ್ತನೀ । ಪುರಃ೭ರಥಂ । ಕೃಣುಥಃ । ಪತ್ನ್ಯಾ । ಸಹ ॥ ೧೭ ॥

। ಸಾಯಣಭಾಷ್ಯಂ ।

ಹೇ ರಾಜಾನಾವೀಶ್ವರಾವದಿತೇ ಅದೀನೌ ಸುಹವೌ ಸ್ವಾಹ್ವಾನೌ ರುದ್ರವರ್ತನೀ ಸ್ತೋತ್ರಯುಕ್ತಮಾರ್ಗೌ ಹೇ ಅಶ್ವಿನಾಶ್ವಿನೌ ಯುವಾಂ ಯಂ ಜನಂ ಪುರೋರಥಮುಗ್ರತೋರಥಂ ಪತ್ನ್ಯಾ ಸಹ ಸ್ವಯಂವರೇ ಕೃಣುಥಃ ಕುರುಥಃ ತಂ ಜನಂ ಕುತಶ್ಚನ ಕುತೋ೭ಪ್ಯಂಹಃ ಪಾಪಂ ನಾಶ್ನೋತಿ । ನ ವ್ಯಾಪ್ನೋತಿ । ದುರಿತಂ ದುರ್ಗತಿರಪಿ ನಾಶ್ನೋತಿ । ನಕಿರ್ನ ಚ ಭಯಂ ಸಂಸಾರಭಯಂ ನ ಪ್ರಾಪ್ನೋತಿ ॥

। ಪ್ರತಿಪದಾರ್ಥ ।

ಅದಿತೇ—ದೈನ್ಯರಹಿತರೂ । ರಾಜಾನೌ—ಪ್ರಭುಗಳೂ । ಸುಹವಾ—ಆಹ್ವಾನಕ್ಕೆ ಯೋಗ್ಯರೂ । ರುದ್ರವರ್ತನೀ—ಸ್ತುತಿಯುಕ್ತವಾದ ಮಾರ್ಗವುಳ್ಳವರೂ ಆದ । ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಯಂ—

ಯಾವ ಪುರುಷನನ್ನು । **ಪತ್ನ್ಯಾ ಸಹ**—ಪತ್ನಿಯಿಂದೊಡಗೂಡಿ । **ಪುರೋರಥಂ**—ರಥದಲ್ಲಿ ಸ್ಥಾಪಿತನನ್ನಾಗಿ । **ಕೃಣುಥಃ**—ನೀವು ಮಾಡುವಿರೋ । **ತಂ**—ಆ ಪುರುಷನನ್ನು । **ಕುತಶ್ಚನ**—ಎಲ್ಲಿಂದಲೂ ಸಹ । **ಅಂಹಃ**—ಪಾಪವು । **ನ ಆಶ್ನೋತಿ**—ವ್ಯಾಪಿಸುವುದಿಲ್ಲ । **ದುರಿತಂ**—ದುಃಖಸಾಧನವೂ । **ನಕಿಃ ಭಯಂ**—ಯಾವ ಇತರ ಭಯವೂ ಆಂಟುವುದಿಲ್ಲ.

। ಭಾವಾರ್ಥ ॥

ದೈನ್ಯರಹಿತರೂ, ಪ್ರಭುಗಳೂ, ಆಹ್ವಾನಕ್ಕೆ ಯೋಗ್ಯರೂ, ಸ್ತುತಿಯುಕ್ತವಾದ ಮಾರ್ಗವುಳ್ಳವರೂ ಆದ ಎಲೈ ಅಶ್ವಿನೀದೇವತೆಗಳೇ, ಯಾವ ಪುರುಷನನ್ನು ನೀವು ಪತ್ನಿಯೊಡನೆ ಕೂಡಿಸಿ ರಥದಲ್ಲಿ ಸ್ಥಾಪಿಸುವಿರೋ, ಆ ಪುರುಷನನ್ನು ಪಾಪವಾಗಲಿ ಯಾವ ಭೀತಿಯಾಗಲಿ ಸಮೀಪಿಸುವುದಿಲ್ಲ.

English Translation

Lofty sovereigns, worthy of invocation, going on roads which are praised in hymus, Aswins, the man whom with his wife you place in front of (your) car, encounters not from any quarter wickedness, difficulty, or danger.

। ಸಂಹಿತಾಪಾಠಃ ।

ಆ ತೇನ॑ ಯಾತ॒ಂ ಮನ॑ಸೋ ಜವೀಯ॒ಸಾ ರ॒ಥಂ ಯಂ ವಾ॒ಮೃಭ॑ವಶ್ಚ॒ಕ್ರುರ॑ಶ್ವಿನಾ ।
ಯ॒ಸ್ಯ ಯೋ॒ಗೇ ದು॒ಹಿತಾ ಜಾ॑ಯ॒ತೇ ದಿ॒ವ ಉ॒ಭೇ ಅಹ॑ನೀ ಸು॒ದಿನೇ॒ ವಿವ॑ಸ್ವತಃ ॥ ೧೨ ॥

। ಪದಪಾಠಃ ।

ಆ । ತೇ॒ನ॑ । ಯಾ॒ತ॒ಂ । ಮನ॑ಸಃ । ಜ॒ವೀ॒ಯ॒ಸಾ । ರ॒ಥಂ । ಯಂ । ವಾ॒ಂ । ಋ॒ಭ॒ವಃ । ಚ॒ಕ್ರುಃ । ಅ॒ಶ್ವಿ॒ನಾ॒ ।
ಯ॒ಸ್ಯ॑ । ಯೋ॒ಗೇ । ದು॒ಹಿತಾ । ಜಾ॒ಯ॒ತೇ । ದಿ॒ವಃ । ಉ॒ಭೇ ಇತಿ॑ । ಅಹ॑ನೀ॒ ಇತಿ॑ । ಸು॒ದಿನೇ॒ ಇತಿ॑ ಸು॒ಽದಿನೇ॑ । ವಿವ॑ಸ್ವತಃ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ವಾಂ ಯುವಯೋರ್ಯಂ ರಥಮೃಭವಶ್ಚಕ್ರುಃ ಅಕಾರ್ಷುಃ ಯಸ್ಯ ರಥಸ್ಯ ಯೋಗೇ ಸಂಬಂಧೇ ಸತಿ ದಿವೋ ದುಹಿತೋಷಾ ಜಾಯತೇ, ಪ್ರಾದುರ್ಭವತಿ ಯಸ್ಯ ಚ ಯೋಗೇ ವಿವಸ್ವತೋ ಭಾಸ್ಕರಸಾದುಭೇ ಅಹನೀ ಅಹೋರಾತ್ರೇ ಸುದಿನೇ ಶೋಭನೇ ಜಾಯೇತೇ ತೇನ ರಥೇನ ಮನಸೋಪಿ ಜವೀಯಸಾ ವೇಗವತ್ತರೇಣಾ ಯಾತಂ । ಯುವಾವಮಾಗಚ್ಛತಂ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮ । **ಯಂ ರಥಂ**—ಯಾವ ರಥವನ್ನು । **ಋಭವಃ**—ಋಭುಗಳು । **ಚಕ್ರುಃ**—ನಿರ್ಮಿಸಿದರೋ । **ಯಸ್ಯ**—ಯಾವ ರಥದ । **ಯೋಗೇ**—ಸಂಬಂಧವುಂಟಾದಾಗ । **ದಿವಃ ದುಹಿತಾ**—ಉಷೋದೇವಿಯು । **ಜಾಯತೇ**—ಉತ್ಪನ್ನವಾಗುವಳೋ (ಯಾವ ಅದೆ ಕಾಲದಲ್ಲಿ) । **ವಿವಸ್ವತಃ**—ಆದಿತ್ಯನಿಂದ । **ಉಭೇ ಅಹನೀ**—ಅಹೋರಾತ್ರಗಳೆರಡೂ । **ಸುದಿನೇ**—ಉತ್ತಮವಾಗಿ ಉತ್ಪನ್ನವಾಗುವುವೋ । **ತೇನ**—ಅಂತಹ । **ಮನಸಃ ಜವೀಯಸಾ**—ಮನೋವೇಗಕ್ಕಿಂತಲೂ ಅಧಿಕವಾದ ವೇಗವುಳ್ಳ ರಥದೊಡನೆ । **ಆ ಯಾತಂ**—ಬನ್ನಿರಿ.

॥ ಭಾವಾರ್ಥ ॥

ಎಲ್ಲೆ ಅಶ್ವಿನೀದೇವತೆಗಳೇ, ನಿಮ್ಮ ಯಾವ ರಥವನ್ನು ಋಭುಗಳು ನಿರ್ಮಿಸಿದರೋ, ಯಾವ ರಥದ ಸಂಬಂಧವುಂಟಾದಾಗ ದಿವಸ್ಪುತ್ರಿಯಾದ ಉಷೋದೇವಿಯು ಉತ್ಪನ್ನಳಾಗುವಳೋ, ಯಾವ ಆದೇಕಾಲದಲ್ಲಿ ಆದಿತ್ಯನಿಂದ ಅಹೋರಾತ್ರಗಳೆರಡೂ ಉತ್ಪನ್ನವಾಗುವುವೋ ಅಂತಹ ಮನೋವೇಗಕ್ಕಿಂತಲೂ ಅಧಿಕವಾದ ವೇಗವುಳ್ಳ ರಥದೊಡನೆ ಬನ್ನಿರಿ.

English Translation

Come, Ashwins, with the chariot that is swifter than thought, which the Ribhus made for yon : in connection with which the daughter of heaven. (the dawn), is born, and both the auspicious day and night from Vivaswat

॥ ಸಂಹಿತಾಪಾಠಃ ॥

ತಾ ವರ್ತಿರ್ಯಾತಂ ಜಯುಷಾ ವಿ ಪರ್ವತಮಪಿನ್ವತಂ ಶಯವೇ ಧೇನು-

ಮಶ್ವಿನಾ ।

ವೃಕಸ್ಯ ಚಿದ್ವರ್ತಿಕಾಮಂತರಾಸ್ಯಾದ್ಯುವಂ ಶಚೀಭಿರ್ಮಮಿತಾಮಮುಂಚತಂ ॥

। ಪದಪಾಠಃ ।

ತಾ । ವರ್ತಿಃ । ಯಾತಂ । ಜಯುಷಾ । ವಿ । ಪರ್ವತಂ । ಅಪಿನ್ವತಂ । ಶಯವೇ । ಧೇನುಂ । ಅಶ್ವಿನಾ । ವೃಕಸ್ಯ । ಚಿತ್ । ವರ್ತಿಕಾಂ । ಅಂತಃ । ಅಸ್ಯಾತ್ । ಯುವಂ । ಶಚೀಭಿಃ । ಗೃಸಿತಾಂ । ಅಮುಂಚತಂ ॥ ೧೩ ॥

। ಸಾಯಣಭಾಷ್ಯಂ ।

ಹೇ ಅಶ್ವಿನಾಶ್ವಿನೌ ತಾ ತೌ ಯುವಾಂ ಜಯುಷಾ ಜಯಶೀಲೇನ ರಥೇನ ಪರ್ವತಮದ್ರಿಂ ಪ್ರತಿ ವರ್ತಿರ್ಮಾರ್ಗಂ ವಿ ಯಾತಂ । ವಿವಿಧಂ ಗಚ್ಛಥಃ । ತಥಾ ಚ ನಿಗಮಾಂತರಂ । ವಿ ಜಯುಷಾ ರಥ್ಯಾ ಯಾತಮದ್ರಿಂ ಶ್ರುತಂ ಹವಂ ವೃಷಣಾ ವಧ್ರಿಮತ್ಯಾಃ । ಋ. ೬ ೬೨.೬ । ಇತಿ । ಕಿಂಚ ಯುವಾಂ ಶಯವೇ ಶಯೋರರ್ಥಾಯ ಧೇನುಮಪಿನ್ವತಂ । ನಿವೃತ್ತಪ್ರಸವಾಂ ವೃದ್ಧಾಂ ಗಾಂ ಪ್ರಭೂತಸ್ಯ ಪಯಸೋ ದೋಗ್ಧ್ರೀಂ ಕೃತವಂತೌ ಸ್ಥ ಇತ್ಯರ್ಥಃ । ತಥಾ ಚ ನಿಗಮಾಂತರಂ । ಯುವಂ ಧೇನುಂ ಶಯವೇ ನಾಧಿತಾಯಾಪಿನ್ವತಮಶ್ವಿನಾ ಪೂರ್ವ್ಯಾಯ । ಋ. ೧-೧೧೭-೪ । ಇತಿ । ಕಿಂಚ ಯುವಂ ಯುವಾಂ ವೃಕಸ್ಯಾಂತರನುಪ್ರವಿಷ್ಟಾಂ ಗೃಸಿತಾಂ ವೃಕೇಣ ಗ್ರಸ್ತಾಂ ವರ್ತಿಕಾಂ । ವರ್ತಿಕಾ ನಾಮ ಚಟಿಕಾ । ತಾಮಾಸ್ಯಾದ್ವೃಕಸ್ಯ ಮುಖಾಚ್ಛಚೀಭಿಃ ಪ್ರಜ್ಞಾಭಿಃ ಕರ್ಮಭಿರ್ವಾಮುಂಚತಂ । ಅಮೋಚಯತಂ । ತಥಾ ಚ ನಿಗಮಾಂತರಂ । ಅಜೋಹವೀದಶ್ವಿನಾ ವರ್ತಿಕಾ ವಾಮಾಸ್ನೋ ಯತ್ಸೀಮಮುಂಚತಂ ವೃಕಸ್ಯ । ಋ. ೧-೧೧೭-೧೬ । ಇತಿ ॥

। ಪ್ರತಿಪದಾರ್ಥ ।

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ತಾ—ನೀವು । ಜಯುಷಾ—ಜಯಶಾಲಿಯಾದ ರಥದೊಡನೆ । ಪರ್ವತಂ ವರ್ತಿಃ—ಪರ್ವತಮಾರ್ಗದಲ್ಲಿ । ವಿ ಯಾತಂ—ಅನೇಕವಿಧವಾಗಿ ಸಂಚರಿಸಿರಿ । ಶಯವೇ—ಶಯುವಿಗಾಗಿ । ಧೇನುಂ ಅಪಿನ್ವತಂ—ಬಂಜೆಯಾದ ಹಸುವನ್ನು ಕರೆಯುವ ಹಸುವಾಗುವಂತೆ ಪುಷ್ಟಿಗೊಳಿಸಿದಿರಿ । ಯುವಂ—ನೀವು । ವೃಕಸ್ಯ ಅಂತಃ—ತೋಳನ ಬಾಯೊಳಗೆ । ಗೃಸಿತಾಂ—ನುಂಗಲ್ಪಟ್ಟ । ವರ್ತಿಕಾಂ—ವರ್ತಿಕಾ ಎಂಬ ಹಕ್ಕಿಯನ್ನು । ಅಸ್ಯಾತ್—ಅದರ ಮುಖದಿಂದ । ಶಚೀಭಿಃ—ನಿಮ್ಮ ಕರ್ಮಗಳಿಂದ । ಅಮುಂಚತಂ—ಬಿಡಿಸಿದಿರಿ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ನೀವು ನಿಮ್ಮ ಜಯಶಾಲಿಯಾದ ರಥದೊಡನೆ ಪರ್ವತಮಾರ್ಗದಲ್ಲಿ ಅನೇಕವಿಧವಾಗಿ ಸಂಚರಿಸಿರಿ. ನೀವು ಶಯುವಿಗಾಗಿ ಬಂಜೆಯಾಗಿದ್ದ ಹಸುವನ್ನು ಕರೆಯುವಂತೆ ಮಾಡಿದಿರಿ. ತೋಳನ ಬಾಯೊಳಗೆ ನುಂಗಲ್ಪಟ್ಟ ಗುಬ್ಬಚ್ಚಿಯನ್ನು ಅದರ ಮುಖದಿಂದ ಬಿಡಿಸಿದಿರಿ.

English Translation

Do you two, Ashwins, climb the path to the mountain with your triumphant chariot; you have renovated for Shayu the (barren) milch cow: you liberated by your acts the quail that had been seized from the jaws of the wolf.

॥ ವಿಶೇಷವಿಷಯಗಳು ॥

ಶಯನೇ ಧೇನುಂ ಅಪಿನ್ವತಂ—ಶಯು ಎಂಬುವನ ಒಂದು ಹಸವು ಬಹಳ ಆಶಕ್ತಿಯುಳ್ಳದ್ದಾಗಿ ಸಣ್ಣ ನಾದ ಕೈಕಾಲುಗಳುಳ್ಳದ್ದಾಗಿತ್ತು. ಅದರ ಶರೀರಸ್ಥಿತಿಯು ಸಾಧಾರಣವಾಗಿ ಇಲ್ಲದ್ದರಿಂದ ಅದು ಬಹಳ ಕೃಶವಾಗಿ ಕರುವನ್ನು ಹಾಕಿ ಹಾಲನ್ನು ಕೊಡುವ ರೀತಿಯಲ್ಲಿರಲಿಲ್ಲ. ಹೀಗೆ ಇರುವ ಹಸುವಿಗೆ ಶಕ್ತಿಯು ಬರುವಂತೆ ಚಿಕಿತ್ಸೆಯನ್ನು ಮಾಡಿ ಅದು ಹಾಲು ಕೊಡುವಂತೆ ಅಶ್ವಿನೀದೇವತೆಗಳು ಮಾಡಿದರು ಎಂದು ಸಾಯಣರು ವಿವರಿಸಿರುವರು ಸ್ಕಂದ ಸ್ವಾಮಿಗಳೂ ಹೀಗೆಯೇ ಅರ್ಥವನ್ನು ವಿವರಿಸಿ—

ಶಯವೇ ಚಿನ್ನಾ ಸತ್ಯಾ ಶಚೀಭಿರ್ಜಸುರಯೇ ಸ್ತರ್ಯಂ ಪಿಪ್ಯಥುಗೋರ್ಯಂ ।

(ಋ. ಸಂ. ೧-೧೧೯-೨೨)

ಎಂಬ ಈ ಋಕ್ಕನ್ನು ಉದಹರಿಸಿರುವರು.

ಯುವಂ ವೃಕಸ್ಯ ಅಂತಃ ಗೃಸಿತಾಂ ವರ್ತಿಕಾಂ ಅಸ್ಯಾತ್ ಶಚೀಭಿಃ ಅಮುಂಚತಂ ವರ್ತಿಕಾ ಜಟಿಕಸದೃಶಸ್ಯ ಪಕ್ಷಿಣಃ ಸ್ತ್ರೀ । ತಾಮರಣ್ಯೇ ವರ್ತಮಾನೇನ ಶುನಾ (ವೃಕೇಣ) ಗೃಸ್ತಾಂ ಪುರಾ ಕಲಾಶ್ಚಿನಾವನೋಚಯತಾಂ । ತದೇತದಾಹ ।

ಒಂದಾನೊಂದು ಸಮಯದಲ್ಲಿ ಒಂದು ಅರಣ್ಯದಲ್ಲಿ ಒಂದು ತೋಳವು ಒಂದು ಗುಬ್ಬಚ್ಚಿಯನ್ನು ಹಿಡಿದು ಅದನ್ನು ತಿನ್ನುವುದಕ್ಕಾಗಿ ಬಾಯಲ್ಲಿ ಕಚ್ಚಿಕೊಂಡು ಹೋಗುತ್ತಿದ್ದಾಗ ಅಶ್ವಿನೀದೇವತೆಗಳು ಆ ಗುಬ್ಬಚ್ಚಿಯನ್ನು ತೋಳನ ಬಾಯಿನಿಂದ ಬಿಡಿಸಿ ಕಾಪಾಡಿದರು.

ವೃಕಸ್ಯ—**ವಿಕರ್ತಕಸ್ಯ** । ಅತಿಶಯವಾಗಿ ಹಿಂಸೆಮಾಡುವ ಎಂದು ಅರ್ಥ. ವೃಕಶಬ್ದವು ಹದಿನೆಂಟು ವಜ್ರನಾಮಗಳಲ್ಲಿಯೂ (ನಿ ೩-೧೧) ಹದಿನಾಲ್ಕು ಸ್ತೇನನಾಮಗಳಲ್ಲಿಯೂ (ನಿ. ೩-೧೯) ಪರಿತವಾಗಿರುವುದು. ಮತ್ತೂ—

ವೃಕಃ-ವೃಕಶ್ಚಂದ್ರಮಾ ಭವತಿ ವಿವೃತಜ್ಯೋತಿಷ್ಕೋ ವಾ ವಿಕೃತಜ್ಯೋತಿಷ್ಕೋ ವಾ ವಿಕ್ರಾಂತ ಜ್ಯೋತಿಷ್ಕೋ ವಾ ॥ (ನಿ. ೫-೨೧)

ಪ್ರಕಾಶಿತವಾದ ಜ್ಯೋತಿಸ್ಸುಳ್ಳವನಾದುದರಿಂದಲೂ, ಅಥವಾ ಶೀತಕರವಾದ (ತಣ್ಣಗಿರುವ) ಪ್ರಕಾಶದ ಅತಿಶಯದಿಂದ ಇತರರನ್ನು ವಿಕೃತಮಾಡುವ ಕಾರಣದಿಂದಲೂ ಅಥವಾ ಗ್ರಹನಕ್ಷತ್ರಾದಿಜ್ಯೋತಿಸ್ಸುಗಳಿಗಿಂತ ಹೆಚ್ಚಾದ ಪ್ರಕಾಶವುಳ್ಳ ಕಾರಣದಿಂದಲೂ ಚಂದ್ರನು ವೃಕಶಬ್ದವಾಚ್ಯನಾಗಿರುವನು ಎಂದು ವೃಕಶಬ್ದದ ಅರ್ಥವನ್ನು ಯಾಸ್ಕರು ವಿವರಿಸಿರುವರು

ಅರುಣೋ ಮಾ ಸಕೃದ್ವೃಕಃ ಪಥಾ ಯಂತಂ ದದರ್ಶ ಹಿ ।
ಉಜ್ಜಿಹೀತೇ ನಿಚಾಯ್ಯಾ ತಷ್ಟೇವ ಪೃಷ್ಟ್ಯಾಮಯಾ ವಿತ್ತಂ ಮೇ ಅಸ್ಯ ರೋದಸೀ ॥

(ಋ. ಸಂ ೧೦೫-೮)

ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟು—

ಅರುಣ ಆರೋಚಮಾನೋ ಮಾಸಕೃನ್ಮಾಸಾನಾಂ ಚಾರ್ಧಮಾಸಾನಾಂ ಚ ಕರ್ತಾ ಭವತಿ ಚಂದ್ರಮಾ ವೃಕಃ ಪಥಾ ಯಂತಂ ದದರ್ಶ ನಕ್ಷತ್ರಗಣಮುಜ್ಜಿಹೀತೇ ನಿಚಾಯ್ಯ ಯೇನ ಯೇನ ಯೋಕ್ಷ್ಯಮಾಣೋ ಭವತಿ ಚಂದ್ರಮಾಸ್ತಷ್ಟೇವನ್ನಿವ ಪೃಷ್ಠರೋಗೀ ಜಾನೀತಂ ನೋಽಸ್ಯ ದ್ಯಾವಾಪೃಥಿವ್ಯಾನಿತಿ ॥ (ನಿ. ೫-೨೧)

ಈ ಋಕ್ಕಿನಲ್ಲಿರುವ ವೃಕಶಬ್ದಕ್ಕೆ ಚಂದ್ರನೆಂದು ಅರ್ಥವನ್ನು ವಿವರಿಸಿರುವರು.

ಆದಿತ್ಯೋಽಪಿ ವೃಕ ಉಚ್ಯತೇ । ಯದಾವೃಂಕ್ತೇ (ನಿ. ೫-೨೧) ಆದಿತ್ಯನಿಗೂ ವೃಕ ಎಂದು ಹೆಸರು. ಏತಕ್ಕೆಂದರೆ ತಮಸ್ಸನ್ನು (ಕತ್ತಲೆಯನ್ನು) ತನ್ನ ಪ್ರಕಾಶದಿಂದ (ಅಥವಾ ಕಿರಣಗಳಿಂದ) ಆವರಿಸುವನು (ಮುಚ್ಚುವನು) ಎಂದು ಹೇಳಿ—

ಅಜೋಹವೀದಶ್ವಿನಾ ವರ್ತಿಕಾ ವಾಮಾಸ್ಕೋ ಯತ್ಸೀಮಮುಂಚತಂ ವೃಕಸ್ಯ ।
ವಿ ಜಯುಷಾ ಯಯಥುಃ ಸಾನ್ವದ್ರೇರ್ಜಾತಂ ವಿಷ್ವಾಚೋ ಅಹತಂ ವಿಷೇಣ ॥

(ಋ ೧-೧೧೭-೧೬)

ಎಂಬ ಋಕ್ಕನ್ನು ಉದಾಹರಣೆಯಾಗಿ ಕೊಟ್ಟು—**ಆಹ್ವಯದುಷಾ ಅಶ್ವಿನಾವಾದಿತ್ಯೇನಾಭಿಗ್ರಸ್ತಾ ತಾಮುಶ್ವಿನೌ ಪ್ರಮುಮುಚತುರಿತ್ಯಾಖ್ಯಾನಂ ।** ಎಂದು ನಿರ್ವಚನವನ್ನು ಹೇಳಿ ವೃಕನೆಂದರೆ ಆದಿತ್ಯನೆಂದು ಹೇಳಿರುವರು.

ಶ್ವಾಪಿ ವೃಕ ಉಚ್ಯತೇ ವಿಕರ್ತನಾತ್ ।

(ನಿ. ೫-೨೧)

ವೃಕ ಎಂದರೆ ನಾಯಿಯೆಂದೂ ಅರ್ಥವಾಗುವುದು. ಉದಾಹರಣೆಗಾಗಿ—

ವೃಕಶ್ಚಿದಸ್ಯ ವಾರಣ ಉರಾಮಥಿರಾ ವಯುನೇಷು ಭೂಷತಿ ।
ಸೇಮಂ ನಃ ಸ್ತೋಮಂ ಜುಜುಷಾಣ ಆ ಗಹೀಂದ್ರ ಪ್ರ ಚಿತ್ರಯಾ ಧಿಯಾ ॥

(ಋ. ಸಂ. ೮-೬೬ ೮)

ಎಂಬ ಋಕ್ಕನ್ನು ಹೇಳಿ—**ವಿವಿಧಮಸೌ ಕೃಂತತಿ ತಸ್ಮಾದ್ವೃಕಃ ।** ಆಹಾರವನ್ನು ತಿನ್ನುವಾಗ ಅದನ್ನು ತುಂಡು ತುಂಡಾಗಿ ಕತ್ತರಿಸಿ ತಿನ್ನುವುದರಿಂದ ನಾಯಿಗೆ ವೃಕ ಎಂದು ಹೆಸರು. ಈ ಋಕ್ಕಿನಲ್ಲಿ ಇರುವ ವೃಕಶಬ್ದಕ್ಕೆ ದೇವತೆಗಳ ನಾಯಿಯಾದ ಸಾರಮೇಯವು ಎಂದು ಅರ್ಥವಿವರಣೆ ಮಾಡಿರುವರು.

ವೃದ್ಧಶ್ವಾಶಿನ್ಯಪಿ ವೃಕ್ಯುಚ್ಯತೇ । (ನಿ. ೫-೨೧) ದೊಡ್ಡದಾದ ಹೆಣ್ಣುನರಿಗಾಗಲಿ, ತೋಳನಿಗಾಗಲಿ ವೃಕೀ ಎಂದು ಹೆಸರು ಎಂದು ಹೇಳಿ ಈ ಅರ್ಥಸಮರ್ಥನೆಗಾಗಿ—

ಶತಂ ಮೇಷಾನ್ ವೃಕ್ಯೇ ಚಕ್ಷದಾನಮೃಜ್ರಾಶ್ವಂ ಶಂ ಪಿತಾಂಧಂ ಚಕಾರ ।
ತಸ್ಮಾ ಅಕ್ಷೀ ನಾಸತ್ಯಾ ವಿಚಕ್ಷ ಆಧತ್ತಂ ದಸ್ರಾ ಭಿಷಜಾವನರ್ವನ್ ॥

(ಋ. ಸಂ. ೧-೧೧೬-೧೬)

ಎಂಬ ಋಕ್ಕನ್ನು ಉದಾಹರಿಸಿ ಇಲ್ಲಿರುವ ವೃಕ್ಯೇ ಎಂಬ ಶಬ್ದಕ್ಕೆ ಹೆಣ್ಣುನರಿಗೆ ಅಥವಾ ತೋಳನಿಗೆ ಎಂಬರ್ಥವನ್ನು ಹೇಳಿರುವರು. ಹೀಗೆ ವೃಕಶಬ್ದಕ್ಕೆ ಅನೇಕಾರ್ಥಗಳಿರುವುದನ್ನು ತೋರಿಸಿ ಆಯಾಯ ಉದಾಹರಣೆಗಳನ್ನೂ ಉದಾಹರಿಸಿರುವರು.

ಸ್ಕಂದಸ್ವಾಮಿಗಳು **ವೃಕೇಣ ಗ್ರಸ್ಯಮಾನಾಂ ಚಟಕಾಂ ವೃಕಸ್ಯ ಅಸ್ಯಾತ್ ಮೋಚಿತವಂತೌ** ಸಾಯಣರು ಅರ್ಥಮಾಡಿರುವಂತೆಯೇ ತೋಳನ ಮುಖದಿಂದ ಗುಬ್ಬಚ್ಚಿಯನ್ನು ಅಶ್ವಿನೀದೇವತೆಗಳು ಬಿಡಿಸಿ ರಕ್ಷಿಸಿದರು ಎಂದು ಅರ್ಥವನ್ನು ವಿವರಿಸಿ.

ಯಾಭಿರ್ಮಧ್ವಃ ಕಾಂ ಗೃಣಿತಾಮಮುಂಚತಂ ತಾಭಿರೂ ಷು ಊತಿಭಿರಶ್ವಿನಾಗತಮ್ ॥

(ಋ. ಸಂ. ೧-೧೧೭-೪)

ಎಂದು ಉದಹರಿಸಿರುವರು.

ಸಂಹಿತಾಪಾಠಃ ॥

ಏತಂ ವಾಂ ಸ್ತೋಮಮಶ್ವಿನಾವಕರ್ಮಾತಕ್ಷಾಮ ಭೃಗವೋ ನ ರಥಂ ।
ನ್ಯಮೃಕ್ಷಾಮ ಯೋಷಣಾಂ ನ ಮರ್ಯೇ ನಿತ್ಯಂ ನ ಸೂನುಂ ತನಯಂ ದಧಾನಾಃ ॥ ೧೪ ॥

॥ ಪದಪಾಠಃ ॥

ಏತಂ । ವಾಂ । ಸ್ತೋಮಂ । ಅಶ್ವಿನೌ । ಅಕರ್ಮ । ಅತಕ್ಷಾಮ । ಭೃಗವಃ । ನ । ರಥಂ ।
ನಿ । ಅಮೃಕ್ಷಾಮ । ಯೋಷಣಾಂ । ನ । ಮರ್ಯೇ । ನಿತ್ಯಂ । ನ । ಸೂನುಂ । ತನಯಂ । ದಧಾನಾಃ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ತತೋ ವಾಂ ಯುವಯೋರೇತಂ ಯಥೋಕ್ತಂ ಸ್ತೋಮಂ ಸ್ತೋತ್ರಮಕರ್ಮ । ಅಕುರ್ಮ । ತದೇವಾಹ । ಭೃಗವೋ ನ ಭೃಗವ ಇವ ರಥಮತಕ್ಷಾಮ । ವಯಂ ಸ್ತೋತ್ರಂ ಸಂಸ್ಕೃತವಂತಃ । ಕರ್ಮಯೋಗಾದೃಭವೋ ಭೃಗವ ಉಚ್ಯಂತೇ । ಅಥವಾ ರಥೇಕಾರಾ ಭೃಗವಃ । ಕಿಂಚ ವಯಂ ನಿತ್ಯಂ ಶಾಶ್ವತಂ ತನಯಂ ಯಾಗಾದೀನಾಂ ಕರ್ಮಣಾಂ ತನಿತಾರಂ ಸೂನುಂ ನೌರಸಂ ಪುತ್ರಮಿವ ಸ್ತೋಮಂ ದಧಾನಾ ಧಾರಯಂತೋ ಮರ್ಯೇ ಮನುಷ್ಯೇ ನ್ಯಮೃಕ್ಷಾಮ । ಯುವಯೋಃ ಸ್ತುತಿಂ ನಿತರಾಂ ಸಂಸ್ಕೃತವಂತಃ । ತತ್ರ ದೃಷ್ಟಾಂತಃ । ಯೋಷಣಾಂ ನ । ಯಥಾ ಜಾಯಾಂ ತನ್ವದಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ವಾಂ—ನಿಮ್ಮನ್ನುದ್ದೇಶಿಸಿ । ಏತಂ ಸ್ತೋಮಂ—ಈ ಸ್ತೋತ್ರವನ್ನು । ಅಕರ್ಮ—ನಿರ್ಮಿಸಿದ್ದೇವೆ । ಭೃಗವಃ—ಋಭುಗಳು । ರಥಂ ನ—ನಿಮ್ಮ ರಥವನ್ನು ಸಂಸ್ಕರಿಸುವಂತೆ । ಅತಕ್ಷಾಮ—ಈ ಸ್ತುತಿಯನ್ನು ಸಂಸ್ಕರಿಸುತ್ತೇವೆ । ಸೂನುಂ ನ—ಪುತ್ರನನ್ನು ಆದರಿಸುವಂತೆ । ನಿತ್ಯಂ—ಶಾಶ್ವತವೂ । ತನಯಂ—ಯಾಗವನ್ನು ವಿಸ್ತಾರಗೊಳಿಸುವುದೂ ಆದ ಸ್ತುತಿಯನ್ನು । ದಧಾನಾಃ—ನಿರ್ಮಿಸಿದವರಾಗಿ । ಯೋಷಣಾಂ ನ—ಪತ್ನಿಯನ್ನು ಅಲಂಕರಿಸುವಂತೆ । ಮರ್ಯೇ—ಮಾನವರ ನಡುವೆ । ನ್ಯಮೃಕ್ಷಾಮ—ಪೂರ್ಣವಾಗಿ ಅಲಂಕರಿಸುತ್ತೇವೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನುದ್ದೇಶಿಸಿ ಈ ಸ್ತೋತ್ರವನ್ನು ನಿರ್ಮಿಸಿದ್ದೇವೆ. ಋಭುಗಳು ನಿಮ್ಮ ರಥವನ್ನು ಸಂಸ್ಕರಿಸುವಂತೆ ಈ ಸ್ತುತಿಯನ್ನು ಸಂಸ್ಕರಿಸುತ್ತೇವೆ. ಪುತ್ರನನ್ನು ಆದರಿಸುವಂತೆ ಶಾಶ್ವತವೂ ಯಾಗವನ್ನು

ವಿಸ್ತಾರಗೊಳಿಸುವುದೂ ಆದ ಸ್ತುತಿಯನ್ನು ನಿರ್ಮಿಸಿದವರಾಗಿ ಪತ್ನಿಯನ್ನು ಅಲಂಕರಿಸುವಂತೆ ಮಾನವರ ನಡುವೆ ಪೂರ್ಣವಾಗಿ ಅಲಂಕರಿಸುತ್ತೇವೆ.

English Translation

For you, Ashwins, we have made, we have built this praise, as the Bhrigus (built) your car : cherishing (this praise) like a son, the eternal performer of rites, we have decked (with ornaments your laudation) amongst men, as if it had been a wife.

ನಲವತ್ತನೆಯ ಸೂಕ್ತವು.

। ಸಾಯಣಭಾಷ್ಯಂ ।

ರಥಂ ಯೋಂತಮಿತಿ ಚತುರ್ದಶರ್ಚಮೇಕಾದಶಂ ಸೂಕ್ತಂ । ಕಾಕ್ಷೀವತ್ಯಾ ಘೋಷಾಯಾ ಆರ್ಷಂ । ಜಾಗತವಮಾಶ್ವಿನಂ । ರಥಂ ಯೋಂತಮಿತ್ಯನುಕ್ರಾಂತಂ ॥ ಪ್ರಾತರನುವಾಕಾಶ್ವಿನಶಸ್ತ್ರಯೋ-ರುಕ್ತೋ ವಿನಿಯೋಗಃ ॥

ಅನುವಾದವು—ರಥಂ ಯೋಂತಂ ಎಂಬ ಈ ಸೂಕ್ತವು ಮೂರನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಕ್ಷೀವಾನ್ ಋಷಿಯ ಪುತ್ರಿಯಾದ ಘೋಷಾ ಎಂಬ ಸ್ತ್ರೀಯು ಋಷಿಯು, ಅಶ್ವಿನೀದೇವತೆಗಳು ದೇವತೆಯು, ಜಗತೀಛಂದಸ್ಸು. ಅನುಕ್ರಮಣಿಕೆಯಲ್ಲಿ ರಥಂ ಯೋಂತಂ ಎಂದು ಹೇಳಿರುವುದು. ಪ್ರಾತರನುವಾಕ ಮತ್ತು ಅಶ್ವಿನಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದು.

ಸೂಕ್ತ—೪೦

ಮಂಡಲ—೧೦ ॥ ಅನುವಾಕ—೩ ॥ ಸೂಕ್ತ—೪೦ ।
ಅಷ್ಟಕ—೭ ॥ ಅಧ್ಯಾಯ—೮ ॥ ವರ್ಗ—೧೮, ೧೯, ೨೦ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ।
ಋಷಿಃ—ಘೋಷಾ ಕಾಕ್ಷೀವತೀ ।
ದೇವತಾ—ಅಶ್ವಿನೌ ।
ಛಂದಃ—ಜಗತೀ ॥

। ಸಂಹಿತಾಪಾಠಃ ।

ರಥಂ॑ ಯೋಂ॒ತಂ ಕು॒ಹ ಕೋ॑ ಹ॒ ವಾಂ ನರಾ॒ ಪ್ರತಿ॒ ದ್ಯುಮಂ॑ತಂ॒ ಸುವಿ॒-

ತಾ॑ಯ॒ ಭೂಷ॑ತಿ ।

प्रातर्यावाणं विभ्वं विशेविशे वसोर्वसोर्वहमानं

धियाशमि ॥ ८ ॥

। पदपारः ।

रथं । यांतं । कुह । कः । ह । वां । नरा । प्रति । द्युमंतं । सुवितायं । भूषति ।

प्रातःयावानं । विऽभ्वं । विशेऽविशे । वसोःऽवसोः । वहमानं । धियाः । शमि ॥ ८ ॥

। सायणभाष्यं ।

हे नरा कर्मणां नेतारावश्विनौ वां युवयोः संबंधिनं द्युमंतं दीप्तिमंतं प्रातर्यावाणं यज्ञं प्रति प्रातःकाले गंतारं विभ्वं विभुं व्यापिनं विशे विशे सर्वेषु मनुष्येषु वसोर्वसोरन्नस्य वहमानं धनं प्रापयंतं यांतं गच्छंतं रथं कुह कस्मिन्देशे कोह कः खलु यजमानः शमि यज्ञरूपे कर्मणि धियास्तुतिरूपेण कर्मणा सुवितायाभ्युदयार्थं प्रति भूषति । अलंकरोति । कस्मिन्देशे यज्ञे कोऽन्यो यजमानो युवां स्तुतिभिर्हविर्भिश्च पूजितवान् यतोनास्मद्यज्ञं प्रति विलंबेनागतवंतौ स्थ इत्यभिप्रायः ॥

। प्रतिपदार्थ ।

नरा—कर्मनेतृगळाद एळै अश्विनीदेवतेगळे । वां—निनगे सेरिद । द्युमंतं—प्रकाशमानवादुदू । प्रातर्यावाणं—प्रातःकालदल्लियें यज्ञक्के होगतक्कद्दू । विभ्वं—सर्वव्यापकवादुदू । विशेविशे—प्रतियोब्ब यजमाननिगू । वसोर्वसोः—प्रतियोंदु दिवसवू । वहमानं—धनवन्नु वहिसिकोडतक्कद्दू । यांतं—संचारशीलवादुदू ऐद । रथं—रथवन्नु । कुह—यावा प्रदेशदल्लि । कोह—यावा यजमाननु तानें । शमि—यज्ञकर्मदल्लि । धियाः—स्तुतिरूपवाद कर्मदिंद । सुवितायं—तन्न श्रेयस्सिगागि । परिभूषति—अलंकरिसुत्तानें.

। भावार्थ ।

कर्मनेतृगळाद एळै अश्विनीदेवतेगळे, निनगे सेरिदुदू, प्रकाशमानवादुदू, प्रातःकालदल्लियें यज्ञक्के होगतक्कद्दू सर्वव्यापकवादुदरिंद प्रतियोब्ब यजमाननिगू प्रतिदिनवू

ಧನವನ್ನು ಒದಗಿಸುವುದೂ, ಸಂಚಾರಶೀಲವೂ ಆದ ರಥವನ್ನು ಯಾವ ಪ್ರದೇಶದಲ್ಲಿ ಯಾವ ಯಜಮಾನನು ತನ ಶ್ರೇಯಸ್ಸಿಗಾಗಿ ತನ್ನ ಸ್ತುತಿಯಿಂದ ಅಲಂಕರಿಸುತ್ತಾನೆ?

English Translation

What (worshipper), O leaders of rites, and where (abiding) glorifies for his good, by his praise at the rite, your radiant moving chariot, going (to the sacrifice) at dawn, all-pervading, and bearing (wealth) day after day to one man after another?

॥ ಸಂಹಿತಾಪಾಠಃ ॥

ಕುಹ ಸ್ವಿದ್ದೋಷಾ ಕುಹ ವಸ್ತೋರಶ್ವಿನಾ ಕುಹಾಭಿಪಿತ್ವಂ ಕರತಃ ಕುಹೋಷತುಃ ।
ಕೋ ವಾಂ ಶಯುತ್ರಾ ವಿಧವೇವ ದೇವರಂ ಮರ್ಯಂ ನ ಯೋಷಾ ಕೃಣುತೇ ಸದಸ್ಥ ಆ ॥ ೨ ॥

॥ ಪದಪಾಠಃ ॥

ಕುಹ । ಸ್ವಿತ್ । ದೋಷಾ । ಕುಹ । ವಸ್ತೋಃ । ಅಶ್ವಿನಾ । ಕುಹ । ಅಭಿಪಿತ್ವಂ । ಕರತಃ । ಕುಹ । ಊಹತುಃ ।
ಕಃ । ವಾಂ । ಶಯುತ್ರಾ । ವಿಧವಾಽಇವ । ದೇವರಂ । ಮರ್ಯಂ । ನ । ಯೋಷಾ । ಕೃಣುತೇ । ಸದಸ್ಥೇ । ಆ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಕುಹ ಸ್ವಿತ್ ಕ್ವ ಚಿದ್ದೋಷಾ ರಾತ್ರೌ ಭವಥ ಇತಿ ಶೇಷಃ । ಕುಹ ವಸ್ತೋಃ ಕ್ವ ವಾ ದಿವಾ ಭವಥಃ। ಕುಹ ಕ್ವ ವಾಭಿಪಿತ್ವಮಭಿಪ್ರಾಪ್ತಿಂ ಕರತಃ। ಕುರುಥಃ। ಕುಹ ಕ್ವ ವೋಷತುಃ । ವಸಥಃ । ಕಂಚ ವಾಂ ಯುವಾಂ ಕೋ ಯಜಮಾನಃ ಸದಸ್ಥೇ ಸಹಸ್ಥಾನೇ ವೇದ್ಯಾಖ್ಯ ಆ ಕೃಣುತೇ । ಅಕುರುತೇ । ಪರಿಚರಣಾರ್ಥಮಾತ್ಮಾಭಿಮುಖೀಕರೋತಿ । ಪತ್ರ ದೃಷ್ಟಾಂತೌ ದರ್ಶಯತಿ । ಶಯುತ್ರಾ ಶಯನೇ ವಿಧವೇವ ಯಥಾ ಮೃತಭರ್ತೃಕಾ ನಾರೀ ದೇವರಂ ಭರ್ತೃಭ್ರಾತರಮಭಿಮುಖೀಕರೋತಿ । ಮರ್ಯಂ ನ ಯಥಾ ಚ ಸರ್ವಂ ಮನುಷ್ಯಂ ಯೋಷಾ ಸರ್ವಾ ನಾರೀ ಸಂಭೋಗಕಾಲೇಽಭಿಮುಖೀ-

ಕರೋತಿ ತದ್ವದಿತ್ಯರ್ಥಃ । ತಥಾ ಚ ಯಾಸ್ಕಃ । ಕ್ವ ಸ್ವಿದ್ರಾತ್ರೌ ಭವಥಃ ಕ್ವ ದಿವಾ ಕ್ವಾಭಿವ್ರಾಪ್ತಿಂ ಕುರುಥಃ ಕ್ವ ವಸಥಃ ಕೋ ವಾಂ ಶಯನೇ ವಿಧವೇವ ದೇವರಂ ದೇವರಃ ಕಸ್ಮಾದ್ದ್ವಿತೀಯೋ ವರ ಉಚ್ಯತೇ ವಿಧವಾ ವಿಧಾತೃಕಾ ಭವತಿ ವಿಧವನಾದ್ವಾ ವಿಧಾವನಾದ್ವೇತಿ ಚರ್ಮಶಿರಾ ಅಪಿ ವಾ ಧವ ಇತಿ ಮನುಷ್ಯನಾಮ ತದ್ವಿಯೋಗಾದ್ವಿಧವಾ ದೇವರೋ ದೀವ್ಯತಿಕರ್ಮಾ ಮರ್ಯೋ ಮನುಷ್ಯೋ ಮರಣಧರ್ಮಾ ಯೋಷಾ ಯೌತೇರಾಕುರುತೇ ಸಧಸ್ಥಾನೇ । ನಿ. ೩-೧೫ । ಇತಿ ॥

॥ ಪ್ರತಿಪದಾರ್ಥ ॥

ಕ್ವಿನಾ—ಎಲೈ ಅಶ್ವಿನೀದೇವತೆಗಳೇ । ನೋಷಾ—ರಾತ್ರಿಯಲ್ಲಿ । ಕುಹ ಸ್ವಿತ್—ಎಲ್ಲಿರುತ್ತೀರಿ । ದಿವೋ—ಹಗಲಿನಲ್ಲಿ । ಕುಹ—ಎಲ್ಲಿರುತ್ತೀರಿ । ಕುಹ—ಎಲ್ಲಿಲ್ಲ । ಅಭಿಪಿತ್ವಂ ಕರತಃ—ಸಂಚಾರವನ್ನು ಮಾಡಿದ್ದೀರಿ । ಕುಹ ಊ ಷಥಃ—ಎಲ್ಲಿ ವಾಸಮಾಡುತ್ತೀರಿ । ಶಯುತ್ರಾ—ತನ್ನ ಮಾವನಿಗೆ । ವಿಧವಾ—ವಿಧವೆಯು । ದೇವರಂ ನ—ತನ್ನ ಭೈದುನನನ್ನು ಬರಮಾಡಿಕೊಳ್ಳುವಂತೆಯೂ । ಯೋಷಾ—ಹೆಂಗಸು । ವರ್ಯಂ ನ—ಪುರುಷನನ್ನು ಎದುರುಗೊಳ್ಳುವಂತೆಯೂ । ಕಃ—ಯಾವ ಯಜಮಾನನು । ವಾಂ—ನಿಮ್ಮನ್ನು । ಸಧಸ್ಥೇ—ಯಜ್ಞಸ್ಥಾನದಲ್ಲಿ । ಆ ಕೃಣುತೇ—ಎದುರಿಗೆ ಬರಮಾಡಿಕೊಳ್ಳುತ್ತಾನೆ ?

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ರಾತ್ರಿಯಲ್ಲಿ ಎಲ್ಲಿರುತ್ತೀರಿ ? ಹಗಲಿನಲ್ಲಿ ಎಲ್ಲಿರುತ್ತೀರಿ ? ಎಲ್ಲೆಲ್ಲಿ ಸಂಚಾರವನ್ನು ಹೊಂದುತ್ತೀರಿ ? ಎಲ್ಲಿ ವಾಸಮಾಡುತ್ತೀರಿ ? ವಿಧವೆಯು ತನ್ನ ಮಾವನಿಗೆ ಭೈದುನನನ್ನು ಬರಮಾಡಿಕೊಳ್ಳುವಂತೆಯೂ, ಹೆಂಗಸು ಪುರುಷನನ್ನು ಎದುರುಗೊಳ್ಳುವಂತೆಯೂ ಯಾವ ಯಾಜಮಾನನು ನಿಮ್ಮನ್ನು ಯಜ್ಞಸ್ಥಾನದಲ್ಲಿ ಎದುರಿಗೆ ಬರಮಾಡಿಕೊಳ್ಳುತ್ತಾನೆ ?

English Translation

Where are you, Ashwins, by night ? where are you by day ? where do you sojourn ? where do you dwell ? who brings you into his presence in the same place (of sacrifice) as on her couch a widow (brings) her husband's brother, as a woman (brings) her husband (to her).

॥ ವಿಶೇಷವಿಷಯಗಳು ॥

ದೇವರಂ ಎಂಬ ಶಬ್ದದ ಅರ್ಥವಿವರಣೆಮಾಡುವುದಕ್ಕಾಗಿ ಯಾಸ್ಕರು ಈ ಋಕ್ಕನ್ನು ಉದಾಹರಣೆಯಾಗಿ ತೆಗೆದುಕೊಂಡು ನಿರುಕ್ತವನ್ನು ಹೇಳಿರುತ್ತಾರೆ—

ಕ್ವ ಸ್ವಿದ್ರಾತ್ರೌ ಭವತಃ, ಕ್ವ ದಿವಾ, ಕ್ವಾಭಿವ್ರಾಪ್ತಿಂ ಕುರುಥಃ, ಕ್ವ ವಸಥಃ, ಕೋ ವಾ ಶಯನೇ ವಿಧವೇವ ದೇವರಂ । ದೇವರಃ ಕಸ್ಮಾತ್ ದ್ವಿತೀಯೋ ವರ ಉಚ್ಯತೇ । ವಿಧವಾ ವಿಧಾತೃಕಾ ಭವತಿ । ವಿಧಾವನಾದ್ವಾ । ವಿಧವನಾದ್ವೇತಿ ಪ್ರಜರ್ಮಶಿರಾಃ । ಅಪಿ ವಾ ಧವ ಇತಿ ಮನುಷ್ಯ-

ನಾಮ ತದ್ವಿಯೋಗಾದ್ವಿಧವಾ । ದೇವರೋ ದೀವ್ಯತಿಕರ್ಮಾ । ಮಯೋ ಮನುಷ್ಯೋ ಮರಣಧರ್ಮಾ । ಯೋಷಾ ಯೌತೇಃ । ಅಕುರುತೇ ಸಹಸ್ಥಾನೇ ॥

(ನಿ. ೩-೧೫)

ಈ ಸೂಕ್ತದ ಋಷಿಯಾದ ಘೋಷಾ ಎಂಬ ಸ್ತ್ರೀಯು ಅಶ್ವಿನೀದೇವತೆಗಳನ್ನು ಸ್ತುತಿಸುವಾಗ ಅವರನ್ನು ಈರೀತಿ ಪ್ರಶ್ನೆಮಾಡುತ್ತಾಳೆ—ಎಲೈ ಅಶ್ವಿನೀದೇವತೆಗಳೇ, ನೀವು ರಾತ್ರಿಕಾಲದಲ್ಲಿ ಎಲ್ಲಿರುತ್ತೀರಿ? ಹಗಲು ಎಲ್ಲಿರುತ್ತೀರಿ? (ಸ್ನಾನಭೋಜನಾದಿ ನಿಮ್ಮ) ಕಾರ್ಯನಿರ್ವಹಣೆಯನ್ನು ಎಲ್ಲಿ ಮಾಡುತ್ತೀರಿ? ಎಲ್ಲಿ ವಾಸಮಾಡುತ್ತೀರಿ? ಗಂಡನಿಲ್ಲದ ವಿಧವೆಯು ತನ್ನ ಮೈದನನ್ನು (ರಾತ್ರಿಕಾಲದಲ್ಲಿ) ತನ್ನ ಹಾಸಿಗೆಯಲ್ಲಿ ಎದುರಾಗಿ ಕೂರಿಸಿಕೊಳ್ಳುವಂತೆಯೂ, ಹೆಂಡತಿಯು ತನ್ನ ಗಂಡನನ್ನು ಏಕಾಂತದಲ್ಲಿ ಎದುರಾಗಿ ಕೂರಿಸಿಕೊಂಡು ವಿಹರಿಸುವಂತೆಯೂ ನೀವು ಯಜ್ಞಮಾಡುವ ಯಾವ ಯಜಮಾನನ ಯಜ್ಞಗೃಹದಲ್ಲಿ ಅವನಿಂದ ಸತ್ಕರಿಸಲ್ಪಡುತ್ತೀರಿ?

ದೇವರ ಶಬ್ದವು ಹೇಗೆ ನಿಷ್ಪನ್ನವಾಗಿದೆ? ದೇವರ ಎಂದರೇನು? ದೇವರ ಎಂದರೆ ಎರಡನೇ ವರ ಸ್ತ್ರೀಗೆ ಮದುವೆಯಾದ ಗಂಡನೇ ಮೊದಲನೆಯ ವರ. ಮಕ್ಕಳಾಗುವುದಕ್ಕೆ ಮುಂಚೆಯೇ ಆ ಗಂಡನು ಮೃತನಾದಲ್ಲಿ (ಆ ಕಾಲದಲ್ಲಿ ರೂಢಿಯಲ್ಲಿದ್ದಂತೆ) ಆ ಗಂಡನ ತಮ್ಮನು ಎಂದರೆ ಮೈದುನನು ಆ ಸ್ತ್ರೀಯಲ್ಲಿ ಪುತ್ರೋತ್ಪತ್ತಿಗಾಗಿ ಸಂಭೋಗಮಾಡಬಹುದಾದ್ದರಿಂದ ಆ ಮೈದನನೇ ಆ ಸ್ತ್ರೀಗೆ ದ್ವಿತೀಯ ವರ (ಎರಡನೆಯ ಗಂಡ) ಎಂದರೆ ದೇವರ ಶಬ್ದಕ್ಕೆ ಮೈದುನ ಎಂದರ್ಥವು.

ವಿಧವಾ ಎಂಬ ಶಬ್ದಕ್ಕೆ (೧) ವಿಧಾತೃಕಾ ಎಂದರ್ಥವು. ಪತಿಯು ಮೃತನಾದನೇಲೆ ಆ ಸ್ತ್ರೀಯನ್ನು ಧರಿಸುವವರು ಎಂದರೆ (ಅನ್ನವಸ್ತ್ರಾದಿಗಳನ್ನು ಕೊಟ್ಟು) ಪೋಷಿಸುವವರು ಯಾರೂ ಇರುವುದಿಲ್ಲವಾದ್ದರಿಂದ ಗಂಡನಿಲ್ಲದ ಸ್ತ್ರೀಯನ್ನು ವಿಧವಾ ಎಂದು ಕರೆಯುವರು. (೨) ಅಥವಾ ವಿಧವನಾದ್ವಾ ಪತಿಯ ಮರಣದಿಂದ ದುಃಖಿತಳಾಗಿ ಶೋಕದಿಂದ ನಡಗುತ್ತಿರುವವಳಾದ್ದರಿಂದ ಪತಿಯಿಲ್ಲದ ಸ್ತ್ರೀಗೆ ವಿಧವಾ ಎಂದು ಹೆಸರು. (೩) ಅಥವಾ ವಿಧಾವನಾದ್ವಾ ಪತಿಯಮರಣದಿಂದ ಶೋಕಸಂತಪ್ತಳಾಗಿ ಇಲ್ಲಿಂದಲ್ಲಿಗೆ ಯಾರ ನಿರ್ಬಂಧವೂ ಇಲ್ಲದೆ ಓಡಾಡುವವಳಾದ್ದರಿಂದ ಪತಿರಹಿತಳಾದ ಸ್ತ್ರೀಗೆ ವಿಧವಾ ಎಂದು ಹೆಸರು ಎಂದು ಚರ್ಮಶಿರಾಃ ಎಂಬ ಆಚಾರ್ಯರ ಅಭಿಪ್ರಾಯವು (೪) ಅಥವಾ ಧವಶಬ್ದಕ್ಕೆ ಮನುಷ್ಯನೆಂದರ್ಥವು. ಆದ್ದರಿಂದ ತನ್ನ ಪತಿಯನ್ನು (ವಿ ಧವ) ಕಳೆದುಕೊಂಡಿರುವ ಸ್ತ್ರೀಗೆ ವಿಧವಾ ಎಂದು ಹೆಸರು.

ದೇವರಃ ದೀವ್ಯತಿಕರ್ಮಾ । ದೇವರ ಶಬ್ದವು ಕ್ರೀಡಿಸು ಎಂಬರ್ಥವುಳ್ಳ ದೀವ್ಯತಿಧಾತುತನಿಂದ ನಿಷ್ಪನ್ನವಾಗಿದೆ. ಇಲ್ಲಿ ತನ್ನ ಸಹೋದರನ ಪತ್ನಿಯೊಡನೆ ರತಿಕ್ರೀಡೆಯಲ್ಲಿ ಆಸಕ್ತನಾಗಿರುವವನೆಂದಭಿಪ್ರಾಯವು.

ಮಯಃ ಮನುಷ್ಯಃ । ಮಯಃ ಎಂದರೆ ಮನುಷ್ಯನು ಮರಣಧರ್ಮಕ್ಕೆ ಈಡಾಗುವವನು, ಎಂದಾದರೊಂದು ದಿವಸ ಮೃತನಾಗುವವನು.

ಯೋಷಾ ಯೌತೇಃ । ಯೋಷಾ ಎಂದರೆ ಸ್ತ್ರೀಯು. ಈ ಶಬ್ದವು ಯು ವಿಶ್ರವಾಡು ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಪುರುಷನೊಡಥ ಮಿಶ್ರವಾಗಿ ಎಂದರೆ ಸಂಪರ್ಕಮಾಡಿ ಸಂಭೋಗಿಸುವವಳಾದ್ದರಿಂದ ಸ್ತ್ರೀಗೆ ಯೋಷಾ ಎಂದು ಹೆಸರು.

ಆಕುರುತೇ ಸಹಸ್ಥಾನೇ-ಸಮಾನಸ್ಥಾನೇ ಅಭಿವಮ್ಯೇನ ಆತ್ಮನಃ ಕುರುತೇ ಪರಿಚರಣಾಯ । ಕೃಣುತೇ ಸಧಸ್ಥ ಆ ಎಂಬ ಶಬ್ದಗಳಿಗೆ ಸಮಾನಸ್ಥಾನದಲ್ಲಿ ಎಂದರೆ ಸ್ತ್ರೀಪುರುಷರು (ಸಂಭೋಗಕ್ಕಾಗಿ ಸೇರವ) ಇಬ್ಬರಿಗೂ ಸಾಮಾನ್ಯವಾದ ಸ್ಥಳದಲ್ಲಿ ಅಥವಾ ಗೃಹದ ರಹಸ್ಯಪ್ರದೇಶದಲ್ಲಿ ಒಬ್ಬರಿಗೊಬ್ಬರು ಎದುರುಬದರಾಗಿ ಕುಳಿತುಕೊಳ್ಳುವುದು ಎಂದರ್ಥ.

। ಸಂಹಿತಾಪಾಠಃ ।

ಪ್ರಾತರ್ಜರೇಥೇ ಜರಣೇವ ಕಾಪಯಾ ವಸ್ತೋರ್ವಸ್ತೋರ್ಯಜತಾ ಗಚ್ಛಥೋ ಗೃಹಂ ।
ಕಸ್ಯ ಧ್ವಸ್ರಾ ಭವಥಃ ಕಸ್ಯ ವಾ ನರಾ ರಾಜಪುತ್ರೇವ ಸವನಾವ ಗಚ್ಛಥಃ ॥

। ಪದಪಾಠಃ ।

ಪ್ರಾತರಿತಿ ಪ್ರಾತಃ । ಜರೇಥೇ ಇತಿ । ಜರಣಾಽಇವ । ಕಾಪಯಾ । ವಸ್ತೋಃ ವಸ್ತೋಃ । ಯಜತಾ । ಗಚ್ಛಥಃ । ಗೃಹಂ ।
ಕಸ್ಯ । ಧ್ವಸ್ರಾ । ಭವಥಃ । ಕಸ್ಯ । ವಾ । ನರಾ । ರಾಜಪುತ್ರಾಽಇವ । ಸವನಾ । ಅವ । ಗಚ್ಛಥಃ ॥ ೩ ॥

। ಸಾಯಣಭಾಷ್ಯಂ ।

ಹೇ ನರಾ ನೇತಾರಾವಶ್ವಿನೌ ಯುವಾಂ ಪ್ರಾತಃ ಪ್ರಾತಃಕಾಲೇ ಜರೇಥೇ । ಸ್ತೋತೃಭಿಃ ಸ್ತೂಯೇಥೇ । ತತ್ರ ದೃಷ್ಟಾಂತಃ । ಜರಣೇವ ಯಥಾ ಜರಣಾವೈಶ್ವರ್ಯೇಣ ವೃದ್ಧೌ ರಾಜಾನೌ ಕಾಪಯಾ । ಪ್ರಾತಃಪ್ರಬೋಧಕಸ್ಯ ವಂದಿನೋ ವಾಣೀ ಕಾಪಾ । ತಯಾ ಸ್ತೂಯೇತೇ । ತದ್ವದಿತ್ಯರ್ಥಃ । ಕಿಂಚ ವಸ್ತೋರ್ವಸ್ತೋರಹ್ನಹಂ ಯಜತಾ ಯಷ್ಟವ್ಯೌ ಯುವಾಂ ಗೃಹಂ ಯಜಮಾನಸ್ಯ ಮಂದಿರಂ ಗಚ್ಛಥಃ । ಪ್ರಾಪ್ನುಥಃ । ತೌ ಯುವಾಂ ಕಸ್ಯ ಯಜಮಾನಸಂಬಂಧಿನೋ ದೋಷಸ್ಯ ಧ್ವಸ್ರಾ ಧ್ವಂಸಕೌ ವಿನಾಶಯಿತಾರೌ ಭವಥಃ । ಕಸ್ಯ ಯಜಮಾನಸ್ಯ ಸವನಾ ಸವನಾನಿ ರಾಜಪುತ್ರೇವ ರಾಜಕುಮಾರಾನಿವ ಯುವಾಮವ ಗಚ್ಛಥಃ । ಪ್ರಾಪ್ನುಥಃ ॥

। ಪ್ರತಿಪದಾರ್ಥಃ ।

ನರಾ—ಕರ್ಮನೇತೃಗಳಾದ ಎಲೈ ಅಶ್ವಿನೀದೇವತೆಗಳೇ । ಕಾಪಯಾ—ಹೊಗಳುಭಟ್ಟನ ಸ್ತುತಿಯಿಂದ । ಜರಣೇವ—ದೊರೆಗಳು ಪ್ರಶಂಸಿಸಲ್ಪಡುವಂತೆ । ಪ್ರಾತಃ—ಪ್ರಾತಃಕಾಲದಲ್ಲಿ । ಜರೇಥೇ—ನೀವು ಸ್ತುತಿಸಲ್ಪಡುತ್ತೀರಿ । ಯಜತಾ—ಪೂಜ್ಯರಾದ ನೀವು । ವಸ್ತೋರ್ವಸ್ತೋಃ—ಪ್ರತಿದಿನವೂ । ಗೃಹಂ—ಯಜಮಾನನ ಮನೆಗೆ । ಗಚ್ಛಥಃ—ಹೋಗುತ್ತೀರಿ । ಕಸ್ಯ—ಯಾವ ದೋಷಕ್ಕೆ । ಧ್ವಸ್ರಾ—ನಾಶಕರಾಗಿ । ಭವಥಃ—ನೀವು ಆಗಿರುತ್ತೀರಿ । ಕಸ್ಯ—ಯಾವ ಯಜಮಾನನ । ಸವನಾ—ಯಜ್ಞಕ್ಕೆ । ರಾಜಪುತ್ರೇವ—ರಾಜಕುಮಾರರಂತೆ । ಅವ ಗಚ್ಛಥಃ—ನೀವು ಹೋಗುತ್ತೀರಿ.

॥ ಭಾವಾರ್ಥ ॥

ಕರ್ಮನೇತೃಗಳಾದ ಎಲೈ ಅಶ್ವಿನೀದೇವತೆಗಳೇ, ಹೊಗಳುಭಟ್ಟನ ಸ್ತುತಿಯಿಂದ ದೊರೆಗಳು ಪ್ರಸಂಸಿಸಲ್ಪಡುವಂತೆ ಪ್ರಾತಃಕಾಲದಲ್ಲಿ ನೀವು ಸ್ತುತಿಸಲ್ಪಡುತ್ತೀರಿ. ಪೂಜ್ಯರಾದ ನೀವು ಪ್ರತಿದಿನವೂ ಯಜಮಾನನ ಮನೆಗೆ ಹೋಗುತ್ತೀರಿ. ನೀವು ಯಜಮಾನನ ಯಾವ ದೋಷವನ್ನು ನಾಶಮಾಡುತ್ತೀರಿ ? ನೀವು ಯಾವ ಯಜಮಾನನ ಯಜ್ಞಕ್ಕೆ ರಾಜಕುಮಾರರಂತೆ ಹೋಗುತ್ತೀರಿ.

English Translation

Leaders (of rites), you are glorified at dawn like two ancient (monarchs) by the voice (of the caller): entitled to worship, you go day by day to the dwelling (of the worshipper): of whose (faults) are you the destroyer ? to whose oblations do you repair like princes ?

॥ ಸಂಹಿತಾಪಾಠಃ ॥

ಯುವಾಂ ಮೃಗೇವ ವಾರಣಾ ಮೃಗಣ್ಯವೋ ದ್ರೋಷಾ ವಸ್ತೋರ್ಹವಿಷಾ
ನಿ ಹ್ವಯಾಮಹೇ ।
ಯುವಂ ಹೋತ್ರಾಮೃತುಥಾ ಜುಹ್ವತೇ ನರೇಷ್ಟಂ ಜನಾಯ ವಹಥಃ
ಶುಭಸ್ಪತೀ ॥ ೪ ॥

॥ ಪದಪಾಠಃ ॥

ಯುವಾಂ । ಮೃಗಾಽಇವ । ವಾರಣಾ । ಮೃಗಣ್ಯವಃ । ದ್ರೋಷಾ । ವಸ್ತೋಃ । ಹವಿಷಾ । ನಿ ।
ಹ್ವಯಾಮಹೇ ।
ಯುವಂ । ಹೋತ್ರಾಂ । ಋತುಽಥಾ । ಜುಹ್ವತೇ । ನರಾ । ಇಷ್ಟಂ । ಜನಾಯ । ವಹಥಃ ।
ಶುಭಃ । ಪತೀ ಇತಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಯುವಾಂ ವಾರಣಾ ವಾರಣೌ ಮೃಗೇವ ಯಥಾ ಶಾರ್ದೂಲೌ ಮೃಗಣ್ಯವೋ ಮೃಗಯವಃ ತದ್ವದ್ವಯಂ ದ್ರೋಷಾ ರಾತ್ರೌ ವಸ್ತೋರಹನಿ ಚ ಹವಿಷಾ ನಿ ಹ್ವಯಾಮಹೇ । ನಿಯಮೇನ ಹ್ವಯಾಮಃ । ಕಿಂಚ ಹೇ ನರಾ ನೇತಾರಾವಶ್ವಿನೌ ಯುವಂ ಯುವಾಮೃತುಥಾ ಕಾಲೇ ಕಾಲೇ ಹೋತ್ರಾಮಾಹುತಿಂ ಜುಹ್ವತೇ । ಜುಹ್ವತಿ । ಯಜಮಾನಾ ಇತಿ ಶೇಷಃ । ಕಿಂಚ ಯುವಾಂ ಶುಭಃ

ತುಭ್ಯಸ್ಯ ವೃಷ್ಟ್ಯುದಕಸ್ಯ ಪತೀ ಸ್ವಾಮಿನೌ ಸಂತೌ ಜನಾಯ ಜನಾರ್ಥಮಿಷಮನ್ನಂ ವಹಥಃ । ಪ್ರಾಪಯಥಃ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) ವೃಗಣ್ಯವಃ—ಬೇಟೆಯಾಡುವವರು । ವಾರಣಾ—ಆನೆಗಳನ್ನೂ । ವೃಗೇವ—ಹುಲಿಗಳನ್ನೂ ಕೂಗಿ ಅವನ್ನು ಸಮೀಪಿಸುವಂತೆ । ಯುವಾಂ—ನಿಮ್ಮಿಬ್ಬರನ್ನೂ । ದೋಷಾ—ರಾತ್ರಿಯಲ್ಲಿಯೂ । ವಸ್ತೋಃ—ಹಗಲಿನಲ್ಲಿಯೂ । ಹವಿಷಾ—ಹವಿಸ್ಸಿನಿಂದ ಕೂಡಿ । ನಿ ಹ್ವಯಾಮಹೇ—ನಾವು ಕರೆಯುತ್ತೇವೆ । ನರಾ—ಎಲೈ ಕರ್ಮನೇತೃಗಳೇ । ಯುವಂ—ನಿಮ್ಮನ್ನುದ್ದೇಶಿಸಿ । ಯತುಥಾ—ಸಕಲ ಯಜ್ಞಕಾಲಗಳಲ್ಲಿಯೂ । ಹೋತ್ರಾಂ—ಆಹುತಿಯನ್ನು । ಜುಹ್ವತೇ—ಯಜಮಾನನು ಅರ್ಪಿಸುತ್ತಾನೆ । ತುಭ್ಯಂ—ವೃಷ್ಟಿಗೆ । ಪತೀ—ಒಡೆಯರಾದ ನೀವು । ಜನಾಯ—ಯಜಮಾನನಿಗೆ । ಇಷಂ—ಅನ್ನವನ್ನು । ವಹಥಃ—ವಹಿಸುತ್ತೀರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಬೇಟೆಯಾಡುವವರು ಆನೆಗಳನ್ನೂ ಹುಲಿಗಳನ್ನೂ ಕೂಗಿ ಅವನ್ನು ಸಮೀಪಿಸುವಂತೆ ನಿಮ್ಮಿಬ್ಬರನ್ನೂ ರಾತ್ರಿಯಲ್ಲಿಯೂ ಹಗಲಿನಲ್ಲಿಯೂ ಹವಿಸ್ಸಿನಿಂದ ಕೂಡಿದ ನಾವು ಕರೆಯುತ್ತೇವೆ. ಎಲೈ ಕರ್ಮನೇತೃಗಳೇ, ನಿಮ್ಮನ್ನುದ್ದೇಶಿಸಿ ಸಕಲ ಯಜ್ಞಕಾಲಗಳಲ್ಲಿಯೂ ಆಹುತಿಯನ್ನು ಯಜಮಾನನು ಅರ್ಪಿಸುತ್ತಾನೆ. ವೃಷ್ಟಿಗೆ ಒಡೆಯರಾದ ನೀವು ಯಜಮಾನನಿಗೆ ಅನ್ನವನ್ನು ವಹಿಸುತ್ತೀರಿ.

English Translation

Like persons hunting two wild elephants, we praise you, Ashwins, with oblations night and day: at all due seasons, leaders (of rites), (the worshipper) offers you the oblation; do you, who are rulers of the shining (rain), bring food to mankind.

॥ ಸಂಹಿತಾಪಾಠಃ ॥

ಯುವಾಂ ಹ ಘೋಷಾ ಪರ್ಯಶ್ವಿನಾ ಯತೀ ರಾಜ್ಞ ಊಚೇ ದುಹಿತಾ ಪೃಚ್ಛೇ ವಾಂ ನರಾ ।

ಭೂತಂ ಮೇ ಅಹ್ನ ಉತ ಭೂತಮುಕ್ತವೇಶ್ವಾವತೇ ರಥಿನೇ ಶಕ್ತಮರ್ವತೇ ॥

॥ ಪದಪಾಠಃ ॥

ಯುವಾಂ । ಹ । ಘೋಷಾ । ಪರಿ । ಅಶ್ವಿನಾ । ಯತೀ । ರಾಜ್ಞಃ । ಊಚೇ । ದುಹಿತಾ । ಪೃಚ್ಛೇ । ವಾಂ । ನರಾ ।

ಭೂತಂ । ಮೇ । ಅಹ್ನೇ । ಉತ । ಭೂತಂ । ಉಕ್ತವೇ । ಅಶ್ವಾವತೇ । ರಥಿನೇ । ಶಕ್ತಂ । ಅರ್ವತೇ ॥

। ಸಾಯಣಭಾಷ್ಯಂ ।

ಹೇ ನರಾ ನೇತಾರಾವಶ್ವಿನೌ ಯುವಾಂ ಖಲು ಪರಿ ಪರಿತೋ ಯತೀ ಗಚ್ಛಂತೀ ರಾಜ್ಞೋ ದೀಪ್ತಸ್ಯ ಕಕ್ಷೀವತೋ ದುಹಿತಾ ಪುತ್ರೀ ಘೋಷಾ ಘೋಷಾಖ್ಯಾಹಮೂಚೇ । ಸಂನಿಹಿತೇಭ್ಯೋ ವೃದ್ಧೇಭ್ಯ ಉಕ್ತವತ್ಯಸ್ಮಿ । ಕಂಚ ವಾಂ ಯುವಾಂ ಪೃಚ್ಛೇ । ವೃದ್ಧಾನ್ಸಂನಿಹಿತಾನ್ ಕೀದೃಶಾವಶ್ವಿನಾವಿತಿ ಪೃಚ್ಛಾಮಿ । ತಥಾ ಸತಿ ಮೇ ಮಮಾಹ್ನೇ ದಿವಸಾಯ ದಿವಸನಿರ್ವರ್ತ್ಯಕರ್ಮಣೇ ಭೂತಂ । ಭವತಂ । ಉತಾಪಿ ಚಾಕ್ತವೇ ರಾತ್ರೈ ಕೃ ರಾತ್ರಿನಿರ್ವರ್ತ್ಯಕರ್ಮಣೇ ಭೂತಂ। ಭವತಂ । ತಥಾಶ್ವವತೇಽಶ್ವಯುಕ್ತಾಯ ರಥಿನೇ ರಥವತೇ ಚಾರ್ವತೇ ಭೃತ್ಯೈವ್ಯಾಯ ಶತ್ರುಂ । ನಿರಸನೇ ಶಕ್ತೌ ಭವತಂ ॥

। ಪ್ರತಿಪದಾರ್ಥ ।

ನರಾ—ನೇತೃಗಳಾದ ಎಲೈ ಅಶ್ವಿನೀದೇವತೆಗಳೇ । ಯುವಾಂ—ನಿಮ್ಮನ್ನು । ಪರೀಯತೀ—ಆಶ್ರಯಿಸುತ್ತ । ರಾಜ್ಞಃ—ದೊರೆಯಾದ ಕಕ್ಷಿವಂತನ । ದುಹಿತಾ—ಪುತ್ರಿಯೂ । ಘೋಷಾ—ಘೋಷಾಸಂಜ್ಞಕಳೂ ಆದ ನಾನು । ಊಚೇ—ನಿಮ್ಮ ವಿಷಯವನ್ನು ಎಲ್ಲರಿಗೂ ತಿಳಿಸಿದ್ದೇನೆ । ವಾಂ—ನಿಮ್ಮ ವಿಷಯದಲ್ಲಿ । ಪೃಚ್ಛೇ—ಪ್ರಶ್ನಿಸಿದ್ದೇನೆ । ಮೇ—ನನ್ನ । ಅಹ್ನೇ—ಅಹಸ್ಸಿನ ಕಾಲದ ಕರ್ಮದಲ್ಲಿ । ಭೂತಂ—ಸನ್ನಿಹಿತರಾಗಿರಿ । ಉತ—ಮತ್ತು । ಅಕ್ತವೇ—ರಾತ್ರಿಯ ಕರ್ಮಕಾಲದಲ್ಲೂ । ಭೂತಂ—ಸನ್ನಿಹಿತರಾಗಿರಿ । ಅಶ್ವವತೇ—ಅಶ್ವಯುಕ್ತನೂ । ರಥಿನೇ—ರಥವನ್ನು ಹೊಂದಿರುವವನೂ ಆದ । ಅರ್ವತೇ—ನನ್ನ ಶತ್ರುವಿಗೆ । ಶತ್ರುಂ—ನಾಶಮಾಡುವ ಶಕ್ತಿಯುಳ್ಳವರಾಗಿರಿ.

। ಭಾವಾರ್ಥ ।

ನೇತೃಗಳಾದ ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನು ನಾನು ಆಶ್ರಯಿಸುತ್ತ ದೊರೆಯಾದ ಕಕ್ಷೀವಂತನ ಪುತ್ರಿಯೂ ಘೋಷಾಸಂಜ್ಞಕಳೂ ಆದ ನಾನು ನಿಮ್ಮ ವಿಷಯವನ್ನು ಎಲ್ಲರಿಗೂ ತಿಳಿಸಿದ್ದೇನೆ ನಿಮ್ಮ ವಿಷಯದಲ್ಲಿ ಪ್ರಶ್ನಿಸಿದ್ದೇನೆ. ನನ್ನ ಕರ್ಮಕಾಲಗಳಲ್ಲಿ ಅಹೋರಾತ್ರಗಳಲ್ಲಿಯೂ ಸನ್ನಿಹಿತರಾಗಿರಿ. ಅಶ್ವಯುಕ್ತನೂ, ರಥವನ್ನು ಹೊಂದಿರುವವನೂ ಆದ ನನ್ನ ಶತ್ರುವನ್ನು ನಾಶಮಾಡುವ ಶಕ್ತಿಯುಳ್ಳವರಾಗಿರಿ

English Translation

Attending upon you, Ashwins, leaders (of rites), I Ghosha, the daughter of king (Kakshivat), speak to you and request you; be (present at) my (sacrifice) by day, and be (present) by night, be able (to grant favour) to the son of my brother, who has horses and a chariot

। ಸಂಹಿತಾಪಾಠಃ ।

ಯುವಂ ಕವೀ ಸ್ತಃ ಪರ್ಯಶ್ವಿನಾ ರಥಂ ವಿಶೋ ನ ಕುತ್ಸೋ ಜರಿತುರ್ನ-
ಶಾಯಥಃ ।

ಯುವೋರ್ಹ ಮುಕ್ಷಾ ಪರ್ಯಶ್ವಿನಾ ಮಧ್ವಾಸಾ ಭರತ ನಿಷ್ಕೃತಂ ನ

ಯೋಷಣಾ ॥ ೬ ॥

। ಪದಪಾಠಃ ।

ಯುವಂ । ಕವೀ ಇತಿ । ಸ್ಥಃ । ಪರಿ । ಅಶ್ವಿನಾ । ರಥಂ । ವಿಶಃ । ನ । ಕುತ್ಸಃ । ಜರಿತುಃ । ನಶಾಯಥಃ ।

ಯುವೋಃ । ಹ । ಮುಕ್ಷಾ । ಪರಿ । ಅಶ್ವಿನಾ । ಮಧು । ಆಸಾ । ಭರತ । ನಿಃಽಕೃತಂ । ನ । ಯೋಷಣಾ ॥

। ಸಾಯಣಭಾಷ್ಯಂ ।

ಹೇ ಅಶ್ವಿನಾಶ್ವಿನೌ ಕವೀ ಮೇಧಾವಿನೌ ಯುವಂ ಯುವಾಂ ರಥಂ ಪರಿ ಷ್ಕಃ । ಪರಿತೋ ಭವಥಃ । ಅಥ ಜರಿತುಃ ಸ್ತೋತುರ್ಯಜ್ಞಂ ಪ್ರತಿ ಗಮನಾಯ ನಶಾಯೇಥಃ । ರಥಂ ಪ್ರಾಪ್ನುಥಃ । ತತ್ರ ದೃಷ್ಟಾಂತಃ । ಕುತ್ಸೋ ನ ಯಥಾ ಕುತ್ಸಶ್ಚೇಂದ್ರಶ್ಚ ಸರಥಮಧಿತಿಷ್ಠತಃ । ತಥಾ ಚ ಮಂತ್ರಾಂತರಂ । ಯಾಸಿ ಕುತ್ಸೇನ ಸರಥಮವಸ್ಯುಸ್ತೋದೋ ವಾತಸ್ಯ ಹರ್ಯೋರೀಶಾನಃ । ಋ. ೪-೧೬-೧೧ । ಇತಿ । ಕಿಂಚ ಹೇ ಅಶ್ವಿನಾಶ್ವಿನೌ ಯುವೋರ್ಹ ಯುವಯೋಃ ಖಲು ಸ್ವಭೂತಂ ಮಧು ಮುಕ್ಷಾ ಮುಕ್ಷಿಕಾಸಾಸ್ಯೇನ ಪರಿ ಭರತ । ಬಿಭರ್ತಿ । ತತ್ರ ದೃಷ್ಟಾಂತಃ । ನಿಷ್ಕೃತಂ ನ ಯಥಾ ನಿಷ್ಕೃತಂ ಸಂಸ್ಕೃತಂ ಮಧು ಯೋಷಣಾ ನಾರೀ । ತದ್ವದಿತ್ಯರ್ಥಃ । ತಥಾ ಚ ಮಂತ್ರಾಂತರಂ। ಉತ ಸ್ಯಾ ವಾಂ ಮಧುಮನ್ಮಕ್ಷಿಕಾರಪ-ನ್ಮದೇ ಸೋಮಸ್ಯಾಶಿಜೋ ಹುವನ್ಯತಿ । ಋ. ೧-೧೧೯-೯ । ಇತಿ ॥

। ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಕವೀ—ಮೇಧಾವಿಗಳಾದ । ಯುವಂ—ನೀವು । ರಥಂ ಪರಿ-ಷ್ಕಃ—ರಥವನ್ನು ಸುತ್ತುವರಿದು ನಿಲ್ಲಿರಿ । ಕುತ್ಸಃ ನ—ಕುತ್ಸನಂತೆ । ವಿಶಃ—ತನ್ನ ಪ್ರಜೆಗಳಲ್ಲಿಗೆ ಹೋಗಲು । ಜರಿತುಃ—ಸ್ತುತಿಕರ್ತನಲ್ಲಿಗೆ ಹೋಗಲು । ನಶಾಯಥಃ—ರಥದಲ್ಲಿ ಕುಳ್ಳಿರಿ । ನಿಷ್ಕೃತಂ—ಪರಿಷ್ಕೃತವಾದ ಮಧುವನ್ನು । ಯೋಷಣಾ ನ—ಸ್ತ್ರೀಯು ಹೊತ್ತುಕೊಂಡು ಬರುವಂತೆ । ಯುವಯೋಃ—ನಿಮ್ಮ । ಮಧು—ಮಧುವನ್ನು । ಮುಕ್ಷಾ—ಜೇನುನೊಣವು । ಆಸಾ—ತನ್ನ ಬಾಯಿನಿಂದ । ಪರಿ ಭರತ—ಹೊರುತ್ತದೆ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ಮೇಧಾವಿಗಳಾದ ನೀವು ರಥವನ್ನು ಸುತ್ತುವರಿದು ನಿಲ್ಲಿರಿ ತನ್ನ ಪ್ರಜೆಗಳಲ್ಲಿಗೆ ಹೋಗಲು ಕುತ್ಸನು ರಥವನ್ನು ಹತ್ತಿದಂತೆ, ನೀವು ನಿಮ್ಮ ರಥವನ್ನು ಹತ್ತಿರಿ. ಪರಿಷ್ಕೃತವಾದ ಮಧುವನ್ನು ಸ್ತ್ರೀಯು ಹೊತ್ತುಕೊಂಡು ಬರುವಂತೆ ನಿನ್ನ್ಮ ಮಧುವನ್ನು ಜೇನುನೊಣವು ತನ್ನ ಬಾಯಿನಿಂದ ಹೊರುತ್ತದೆ.

English Translation

Sage Aswins, stand by your chariot; make it approach (the sacrifice) of the worshipper, as Kutsa (made his chariot approach) men, the fly carries your honey, Aswins, in its mouth as a woman carries purified (honey).

। ಸಂಹಿತಾಪಾಠಃ ।

ಯುವಂ ಹ ಭುಜ್ಯುಂ ಯುವಮಶ್ವಿನಾ ವಶಂ ಯುವಂ ಶಿಂಜಾರಮುಶನಾ
ಮುಪಾರಥುಃ ।
ಯುವೋ ರರಾವಾ ಪರಿ ಸ್ರುಮಾಸತೇ ಯುವೋರಹವನವಸಾ ಸುಮ್ನಮಾ
ಚಕೇ ॥ ೭ ।

। ಪದಪಾಠಃ ।

ಯುವಂ । ಹ । ಭುಜ್ಯುಂ । ಯುವಂ । ಅಶ್ವಿನಾ । ವಶಂ । ಯುವಂ । ಶಿಂಜಾರಂ । ಉಶನಾಂ । ಉಪ ।
ಆರಥುಃ ।
ಯುವೋಃ । ರರಾವಾ । ಪರಿ । ಸ್ರುಂ । ಆಸತೇ । ಯುವೋಃ । ಅಹಂ । ಅವಸಾ । ಸುಮ್ನಂ । ಆ ।
ಚಕೇ ॥ ೭ ॥

। ಸಾಯಣಭಾಷ್ಯಂ ।

ಹೇ ಅಶ್ವಿನಾಶ್ವಿನೌ ಯುವಂ ಹ ಯುವಾಂ ಖಲು ಭುಜ್ಯುಂ ಸಮುದ್ರಮಧ್ಯೇ ವಿಪನ್ನನಾವಂ ತುಗ್ರಪುತ್ರಂ ಭುಜ್ಯುಮುಪಾರಥುಃ । ಉತ್ತಾರಯಿತುಮುಪಗತವಂತೌ ಭವಥಃ । ಕಂಚ ಯುವಂ ಯುವಾಂ ವಶಂ ಹಸ್ತಿಬಲೇನ ಶತ್ರುಭಿಃ ಪರಾಜಯಮಾನಂ ವಶನಾಮಧೇಯಂ ರಾಜಾನಂ ರಕ್ಷಣಾಯೋಪಾರಥುಃ । ಕಂಚ ಯುವಂ ಯುವಾಂ ಶಿಂಜಾರಮತ್ರಿಮುಗ್ನಿಕೂಟಾದುತ್ತಾರಯಿತುಮುಶನಾಂ ಕವಿನೀಯಾಂ ಸ್ತುತಿಂ ಚ ಶ್ರೋತುಮುಪಾರಥುಃ । ತಥಾ ಚ ಮಂತ್ರಾಂತರಂ । ಅತ್ರಿಂ ಶಿಂಜಾರಮಶ್ವಿನಾ । ಋ. ೮-೫-೨೫ । ಇತಿ । ಕಂಚ ಯುವೋಯುರ್ಯುವಯೋಃ ಸಖ್ಯಂ ಮಿತ್ರತ್ವಂ ರರಾವಾ ಹವಿಷಾಂ ಪ್ರದಾತಾ ಯಜಮಾನೋ ಪರ್ಯಾಸತೇ । ಪರ್ಯಾಸ್ತೇ ॥ ವಚನವ್ಯತ್ಯಯಃ ॥ ಕಂಚ ಯುವೋಯುರ್ಯುವಯೋರವಸಾ ರಕ್ಷಣೇನಾಹಂ ಘೋಷಾ ಸುಮ್ನಂ ಸುಖಮಾ ಚಕೇ । ಕಾಮಯೇ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । **ಯುವಂ ಹ**—ನೀವು । **ಭುಜ್ಯುಂ**—ಭುಜ್ಯುವನ್ನು । **ಉಪಾರಥುಃ**—ಸಮುದ್ರಮಧ್ಯದಿಂದ ಮೇಲಕ್ಕೆತ್ತಿದಿರಿ । **ಯುವಂ**—ನೀವು । **ವಶಂ**—ವಶನನ್ನು ಶತ್ರುಗಳಿಂದ ರಕ್ಷಿಸಿದಿರಿ । **ಯುವಂ**—ನೀವು । **ಶಿಂಜಾರಂ**—ಶಿಂಜಾರನಲ್ಲಿಗೆ । **ಉಶನಾಂ**—ಆಕರ್ಷಕವಾದ ಸ್ತುತಿಯನ್ನು ಕೇಳಲು ಬಂದಿರಿ । **ಯುವೋಃ**—ನಿಮ್ಮ । **ಸಖ್ಯಂ**—ಮಿತ್ರತ್ವವನ್ನು । **ರರಾವಾ**—ಹವಿಸ್ಪ್ರದನಾದ ಯಜಮಾನನು । **ಪರಿ ಆಶತೇ**—ಆದರಿಸುತ್ತಾನೆ । **ಯುವೋಃ**—ನಿಮ್ಮ । **ಅವಸಾ**—ರಕ್ಷಣದಿಂದ । **ಅಹಂ**—ನಾನು । **ಸುಮ್ನಂ**—ಸುಖವನ್ನು । **ಆ ಚಕೇ**—ಅಪೇಕ್ಷಿಸುತ್ತೇನೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಭುಜ್ಯುವನ್ನು ಸಮುದ್ರಮಧ್ಯದಿಂದ ಮೇಲಕ್ಕೆತ್ತಿದಿರಿ ನೀವು ವಶನನ್ನು ಶತ್ರುಗಳಿಂದ ರಕ್ಷಿಸಿದಿರಿ ಶಿಂಜಾರನಲ್ಲಿಗೆ ಅವನ ಆಕರ್ಷಕವಾದ ಸ್ತುತಿಯನ್ನು ಕೇಳಲು ಬಂದಿರಿ. ನಿಮ್ಮ ಮಿತ್ರತ್ವವನ್ನು ಹವಿಸ್ಪ್ರದನಾದ ಯಜಮಾನನು ಆದರಿಸುತ್ತಾನೆ· ನಿಮ್ಮ ರಕ್ಷಣದಿಂದ ನಾನು ಸುಖವನ್ನು ಅಪೇಕ್ಷಿಸುತ್ತೇನೆ.

English Translation

You came, Aswins, to the rescue of Bhujyu, you came to the rescue of Vasha, you came to Shinjara to (hear) his desirable (praise) : the offerer of oblations beseiges your friendship ; and I desire happiness through your protection

॥ ವಿಶೇಷವಿಷಯಗಳು ॥

ಭುಜ್ಯುಂ— ಭುಜ್ಯುವಿನ ವಿಷಯವನ್ನು ನಾವು ಹಿಂದೆಯೇ ವಿವರಿಸಿದೇವೆ. (ಪು ನೋಡಿ)

ವಶಂ—**ಅತ್ರಾಪೀತಿಹಾಸಮಾಚಕ್ಷತೇ । ವಶೋನಾಮ ರಾಜಾ ಅಶ್ವಸ್ಯಾಯಬಲಃ । ಸ ಹಸ್ತಿಬಲೈಃ ಶತ್ರುಭಿಃ ಪರಾಜೀಯಮಾನಃ ಸಾಹಾಯ್ಯಂ ಕರ್ತುಮಶ್ವಿನೌ ಸ್ತುತ್ವಾಜುಹಾವ । ತಂ ಪ್ರತಿ ತಸ್ಮಿನ್ನೇವಾಹನಿ ಅಶ್ವಿನಾವಾಜಗ್ಮತುರಿತಿ ।** ಅಶ್ವಶಕ್ತಿಯುಳ್ಳ **ವಶ**ನೆಂಬ ರಾಜನು ಆನೆಯಬಲವುಳ್ಳ ಶತ್ರುಗಳಿಂದ ಪರಾಜಿತನಾದಾಗ ಅಶ್ವಿನೀದೇವತೆಗಳನ್ನು ಸಹಾಯಕ್ಕಾಗಿ ಸ್ತುತಿಸಿ ಕರೆದನು. ಆಗ ಒಡನೆಯೇ ಅಶ್ವಿನೀದೇವತೆಗಳು ಬಂದು ಇವನಿಗೆ ಸಹಾಯಮಾಡಿದರು ಎಂಬ ಕಥೆಯನ್ನು ಹೇಳಿ ಸ್ಕಂದಸ್ವಾಮಿಗಳು ಇದೇ ವಿಷಯವನ್ನು ಹೇಳಿರುವ,

ಏಕಸ್ಯಾ ವಸ್ತೋರಾವತಂ ರಣಾಯ ವಶಮಶ್ವಿನಾ ಸನಯೇ ಸಹಸ್ರಾ ।

(ಋ. ಸಂ. ೧-೧೧೬-೫೧)

ಎಂಬ ಋಕ್ಕನ್ನೂ ಉದಹರಿಸಿದ್ದಾರೆ.

। ಸಂಹಿತಾಪಾಠಃ ।

ಯುವಂ ಹ ಕೃಶಂ ಯುವನಶ್ವಿನಾ ಶಯುಂ ಯುವಂ ವಿಧಂತಂ ವಿಧವಾ-
ಮುರುಷ್ಯಥಃ ।
ಯುವಂ ಸನಿಭ್ಯಃ ಸ್ತನಯಂತಮಶ್ವಿನಾಪ ವ್ರಜಮೂರ್ಣುಥಃ ಸಪ್ತಾಸ್ಯಂ ॥೪॥

। ಪದಪಾಠಃ ।

ಯುವಂ । ಹ । ಕೃಶಂ । ಯುವಂ । ಅಶ್ವಿನಾ । ಶಯುಂ । ಯುವಂ । ವಿಧಂತಂ । ವಿಧವಾಂ ।
ಉರುಷ್ಯಥಃ ।

ಯುವಂ । ಸನಿಭ್ಯಃ । ಸ್ತನಯಂತಂ । ಅಶ್ವಿನಾ । ಅಪ । ವ್ರಜಂ । ಊರ್ಣುಥಃ । ಸಪ್ತಾಸ್ಯಂ ॥ ೪ ॥

। ಸಾಯಣಭಾಷ್ಯಂ ।

ಹೇ ಅಶ್ವಿನಾಶ್ವಿನೌ ಯುವಂ ಹ ಯುವಾಂ ಖಲು ಕೃಶಂ ದುರ್ಬಲಂ ಕೃಶನಾಮಧೇಯಂ ವೋರುಷ್ಯಥಃ । ರಕ್ಷಥಃ । ಕಿಂಚ ಯುವಂ ಯುವಾಂ ಶಯುಂ ಶಯುನಾಮಾನಮೃಷಿಮುರುಷ್ಯಥಃ । ಕಿಂಚ ಯುವಂ ಯುವಾಂ ವಿಧಂತಂ ಪರಿಚರಂತಂ ಮನುಷ್ಯಂ ವಿಧವಾಂ ಚಾಪತಿಕಾಂ ವಧ್ರಿಮತೀಂ ಯೋದ್ಧ್ರೀಂ ಸ್ತ್ರಿಯಂ ಚೋರುಷ್ಯಥಃ । ಕಿಂಚ ಹೇ ಅಶ್ವಿನಾಶ್ವಿನೌ ಯುವಂ ಯುವಾಂ ಸ್ತನಯಂತಂ ಶಬ್ದಂ ಕುರ್ವಂತಂ ಸಪ್ತಾಸ್ಯಂ ಸರ್ಪಣಶೀಲದ್ವಾರಂ ವ್ರಜಂ ಮೇಘಂ । ವ್ರಜಶ್ಚರುರಿತಿ ಮೇಘನಾಮಸು ಪಾಠಾತ್ । ಸನಿಭ್ಯೋ ಹವಿಷಾಂ ದಾತೃಭ್ಯೋಽಪೋರ್ಣುಥಃ । ವಿವೃತದ್ವಾರಂ ಕೃತವಂತೌ ಸ್ಥ ಇತ್ಯರ್ಥಃ॥

। ಪ್ರತಿಪದಾರ್ಥ ।

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಯುವಂ ಹ—ನೀವು । ಕೃಶಂ—ಕೃಶನೆಂಬುವನನ್ನು । ಉರುಷ್ಯಥಃ—ರಕ್ಷಿಸಿದ್ದೀರಿ । ಯುವಂ—ನೀವು । ಶಯುಂ—ಶಯುವನ್ನೂ ರಕ್ಷಿಸಿದ್ದೀರಿ । ಯುವಂ—ನೀವು । ವಿಧಂತಂ—ನಿಮ್ಮನ್ನು ಸೇವಿಸುವವಳೂ । ವಿಧವಾಂ—ಗಂಡನಿಲ್ಲದವಳೂ ಆದ ವಧ್ರಿಮತಿಯನ್ನು ರಕ್ಷಿಸಿದ್ದೀರಿ । ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಯುವಂ—ನೀವು । ಸ್ತನಯಂತಂ—ಶಬ್ದಮಾಡುವುದೂ । ಸಪ್ತಾಸ್ಯಂ—ಏಳು ಮುಖಗಳುಳ್ಳದ್ದೂ ಆದ । ವ್ರಜಂ—ಮೇಘವನ್ನು । ಸನಿಭ್ಯಃ—ಯಜಮಾನರಿಗಾಗಿ । ಅಪ ಊರ್ಣುಥಃ—ಬಿಡಿಸಿ ಮಳೆಯನ್ನು ಸುರಿಸಿದ್ದೀರಿ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ನೀವು ಕೃಶನೆಂಬುವನನ್ನು ರಕ್ಷಿಸಿದ್ದೀರಿ. ನೀವು ಶಯುವನ್ನೂ ರಕ್ಷಿಸಿದ್ದೀರಿ- ನಿಮ್ಮನ್ನು ಸೇವಿಸುವವಳೂ ಗಂಡನಿಲ್ಲದವಳೂ ಆದ ವಧ್ರಿಮತಿಯನ್ನು ರಕ್ಷಿಸಿದ್ದೀರಿ. ಎಲೈ ಅಶ್ವಿನೀದೇವತೆಗಳೇ, ನೀವು ಶಬ್ದಮಾಡುವುದೂ, ಏಳುಮುಖಗಳುಳ್ಳದ್ದೂ ಆದ ಮೇಘವನ್ನು ಯಜಮಾನರಿಗಾಗಿ ಬಿಡಿಸಿ ಮಳೆಯನ್ನು ಸುರಿಸಿದ್ದೀರಿ.

English Translation

Verily, Aswins, you protect the feeble man: you protected Shayu: you protect him who worships according to rule, and the widow, (Vadhrimati); you set open, O Aswins, for the donors of oblations the seven-mouthed thundering cloud

॥ ವಿಶೇಷವಿಷಯಗಳು ॥

ತಯುಂ—ಶಯುವಿನ ವಿಷಯವನ್ನು ನಾವು ಹಿಂದೆಯೆ ಹೇಳಿದ್ದೇವೆ.

। ಸಂಹಿತಾಪಾಠಃ ।

ಜನಿಷ್ಟ ಯೋಷಾ ಪತಯತ್ಕನೀನಕೋ ವಿ ಚಾರುಹನ್ವೀರುಧೋ ದಂಸನಾ ಅನು ।
ಅಸ್ಮೈ ರೀಯಂತೇ ನಿವನೇವ ಸಿಂಧವೋಽಸ್ಮಾ ಅಹ್ನೇ ಭವತಿ ತತ್ಪತಿತ್ವನಂ ॥

। ಪದಪಾಠಃ ॥

ಜನಿಷ್ಟ । ಯೋಷಾ । ಪತಯತ್ । ಕನೀನಕಃ । ವಿ । ಚ । ಆರುಹನ್ । ವೀರುಧಃ । ದಂಸನಾಃ । ಅನು ।
ಅ । ಅಸ್ಮೈ । ರೀಯಂತೇ । ನಿವನಾಽಇವ । ಸಿಂಧವಃ । ಅಸ್ಮೈ । ಅಹ್ನೇ । ಭವತಿ । ತತ್ । ಪತಿಽತ್ವನಂ ॥

। ಸಾಯಣಭಾಷ್ಯಂ ।

ಹೇ ಅಶ್ವಿನೌ ಯುವಯೋಃ ಪ್ರಾಸಾದಾದಿಯಂ ಘೋಷಾ ಯೋಷಾ ಸ್ತ್ರೀಗುಣೋಪೇತಾ ಸುಭಗಾ ಜನಿಷ್ಟ । ಜಾತಾ । ಅಸ್ಯಾಃ ಸಮೀಪೇ ಕನೀನಕಃ ಕನ್ಯಾಕಾಮಃ ಪತಿಃ ಪತಯತ್ । ಪತತು । ಅಸ್ಮೈ ಕನೀನಕಾಯ ಯುವಯೋರ್ದಂಸನಾ ಅನು ವೃಷ್ಟಿಲಕ್ಷಣಾನಿ ಕರ್ಮಾಣಿ ಲಕ್ಷೀಕೃತ್ಯ ವೀರುಧ ಓಷಧಯೋ ವಿ ಚಾರುಹನ್ । ವಿರೋಹಂತು । ಪ್ರಾದುರ್ಭವಂತು । ಅಸ್ಮೈ ಕನೀನಕಾಯ ನಿವನೇವ ಪ್ರವಣೇನೇವ ಸಿಂಧವ ಉದಕಾನ್ಯಾ ರೀಯಂತೇ । ತಾ ವೀರುಧೋಽಭಿಗಚ್ಛಂತು । ಕಂಚಾಹ್ನೇ ಕೇನಾಪ್ಯಹಂತವ್ಯಾಯಾಸ್ಮೈ ಕನೀನಕಾಯ ತತ್ಪಂಭೋಗಸಮರ್ಥಂ ಪತಿತ್ವನಂ ಯೌವನಂ ಭವತಿ । ಭವತು ॥

। ಪ್ರತಿಪದಾರ್ಥ ।

(ಎಲೈ ಅಶ್ವಿನೀದೇವತೆಗಳೇ) ಯೋಷಾ—ಘೋಷಾಸಂಜ್ಞಕಳಾದ ಈ ಸ್ತ್ರೀಯು । ಜನಿಷ್ಟ—ಉತ್ಪನ್ನಳಾಗಿದ್ದಾಳೆ । ಕನೀನಕಃ—ಕನ್ಯಾಪೇಕ್ಷಿಯಾದ ವರನು । ಪತಯತ್—ಒದಗಲಿ । ದಂಸನಾಃ ಅನು—ವೃಷ್ಟಿಪತನ

ವಾದ ನಂತರ । ವೀರುಧಃ—ಓಷಧಿಗಳು । ವಿ ಚಾರುಹನ್—ಪೂರ್ಣವಾಗಿ ಬೆಳೆಯಲಿ । ಅಸ್ಮೈ—ಈ ವರನಿಗಾಗಿ ನಿವನೇವ—ತಗ್ಗುಪ್ರದೇಶದಲ್ಲಿ ಹರಿಯುವಂತೆ । ಸಿಂಧವಃ—ಉದಕಗಳು । ಅ ರೀಯಂತೇ—ಸಸ್ಯಾದಿಗಳ ಮೇಲೆ ಹರಿದುಬರಲಿ । ಅಹ್ನೇ—ಅಹಿಂಸಿತನಾದ । ಅಸ್ಮೈ—ಈ ವರನಿಗಾಗಿ । ತತ್—ಪುರುಷಶಕ್ತಿದ್ಯೋತಕವಾದ । ಪತಿತ್ವನಂ—ಯೌವನವು । ಭವತಿ—ಪ್ರಾಪ್ತವಾಗಲಿ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ಘೋಷಾಸಂಜ್ಞಕಳಾದ ಈ ಸ್ತ್ರೀಯು ಉತ್ಪನ್ನಳಾಗಿದ್ದಾಳೆ. ಇವಳಿಗೆ ಉತ್ತಮನಾದ ವರನು ಒದಗಲಿ. ಇವನಿಗಾಗಿ ವೃಷ್ಟಿಪತನವಾದನಂತರ ಓಷಧಿಗಳು ಪೂರ್ಣವಾಗಿ ಬೆಳೆಯಲಿ. ಉದಕಗಳು ಹರಿದು ಸಸ್ಯಾದಿಗಳು ಬೆಳೆಯಲಿ. ಈ ವರನಿಗೆ ಪುರುಷಶಕ್ತಿದ್ಯೋತಕವಾದ ಯೌವನವು ಪ್ರಾಪ್ತವಾಗಲಿ.

English Translation

The bride, Aswins, has been born, let the husband approach : may the plants spring up (for him) after the rain : for him may the streams flow as if from a declivity ; may he invulnerable have the power of a husband over her.

ಸಂಹಿತಾಪಾಠಃ

ಜೀವಂ ರುದಂತಿ ವಿ ಯಂತೇ ಅಧ್ವರೇ ದೀರ್ಘಾಮನು ಪಸಿತಿಂ ದೀಧಿ-
ಯುರ್ನರಃ ।
ವಾಮಂ ಪಿತೃಭ್ಯೋ ಯ ಇದಂ ಸಮೇರಿರೇ ಮಯಃ ಪತಿಭ್ಯೋ ಜನಯಃ
ಪರಿಷ್ವಜೇ ॥ ೧೦ ॥

। ಪದಪಾಠಃ ।

ಜೀವಂ । ರುದಂತಿ । ವಿ । ಯಂತೇ । ಅಧ್ವರೇ । ದೀರ್ಘಾಂ । ಅನು । ಪ್ರ॒ಸಿತಂ । ದೀಧಿಯುಃ ।
ನರಃ ।
ವಾಮಂ । ಪಿತೃ॒ಭ್ಯಃ । ಯೇ । ಇದಂ । ಸಂ॒ಏರಿರೇ । ಮಯಃ । ಪತಿ॒ಭ್ಯಃ । ಜನಯಃ । ಪರಿ॒ಷ್ವಜೇ ।

। ಸಾಯಣಭಾಷ್ಯಂ ।

ಹೇ ಅಶ್ವಿನೌ ಯುವಯೋರನುಗ್ರಹಾದ್ಯೇ ನರಃ ಪತಯೋ ಜಾಯಾನಾಂ ಜೀವಂ ಜೀವನ-
ಮುದ್ದಿಶ್ಯ ರುದಂತಿ । ರೋದನೇನಾಪಿ ಜಾಯಾನಾಂ ಜೀವನಮೇವಾಶಾಸತ ಇತ್ಯರ್ಥಃ । ತಾ ಜಾಯಾ

ಅಧ್ವರೇ ಯಜ್ಞೇ ವಿ ಮಯಂತೇ ನಿವೇಶಯಂತಿ ಚ ಕಂಚ ತಾಸು ದೀರ್ಘಾಂ ಮಹತೀಂ ಪ್ರಸಿತಿಂ ಭುಜಯೋಃ ಪ್ರಬಂಧನಮನು ದೀಧಿಯುಃ ಅನುದಧತಿ ಇದಂ ವಾಮಂ ವನನೀಯಮಪಶ್ಯಂ ಪಿತೃಭ್ಯಃ ಸಮೇರಿರೇ ಸಂಪ್ರೇರಯಂತಿ ಚ ತೇಭ್ಯಃ ಪತಿಭ್ಯೋ ಜನಯೋ ಜಾಯಾಃ ಪರಿಷ್ವಜೇ ಪರಿಷ್ವಂಗಾರ್ಥಂ ಮಯಃ ಸುಖಂ ಕುರ್ವಂತೀತಿ ಶೇಷಃ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಯೇ ನರಃ**—ಯಾವ ಪತಿಗಳು । **ಜೀವಂ**—ಪತ್ನಿಯರ ಜೀವಕ್ಕಾಗಿ । **ರುದಂತಿ**—ತಪಿಸುವರೋ (ಅಂತಹ ಪತ್ನಿಗಳನ್ನು) (ಅವರು ನಿಮ್ಮ ಅನುಗ್ರಹದಿಂದ) **ಅಧ್ವರೇ**—ಯಜ್ಞದಲ್ಲಿ । **ವಿ ಮಯಂತೇ**—ಕುಳ್ಳಿರಿಸುತ್ತಾರೆ । **ದೀರ್ಘಾಂ**—ದೀರ್ಘವಾದ । **ಪ್ರಸಿತಿಂ**—ಆಲಿಂಗನವನ್ನು । **ಅನು-ದೀಧಿಯುಃ**—ಪಡೆಯುತ್ತಾರೆ । **ಇದಂ ವಾಮಂ**—ಅಪೇಕ್ಷಿತವಾದ ಪುತ್ರನನ್ನು । **ಪಿತೃಭ್ಯಃ**—ಪಿತೃಗಳಿಗೆ (ತಮ್ಮ ಪತಿಗಳಿಗೆ) । **ಸಮೇರಿರೇ**—ಪ್ರೇರಿಸುತ್ತಾರೆ । **ಪತಿಭ್ಯಃ**—ಪತಿಗಳಿಗೆ । **ಜನಯಃ**—ಪತ್ನಿಗಳು । **ಪರಿಷ್ವಜೇ**—ಆಲಿಂಗನರೂಪವಾದ । **ಮಯಃ**—ಸುಖವನ್ನು ಕೊಡುತ್ತಾರೆ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಪತಿಯರು ಪತ್ನಿಯರಿಗಾಗಿ ತಪಿಸುತ್ತಿರುವಾಗ ನಿಮ್ಮ ಅನುಗ್ರಹದಿಂದ ಅವರು ಯಜ್ಞದಲ್ಲಿ ಕುಳಿತುಕೊಳ್ಳುತ್ತಾರೆ. ದೀರ್ಘವಾದ ಆಲಿಂಗನವನ್ನು ಪಡೆದು ಪುತ್ರೋತ್ಪತ್ತಿಗಾಗಿ ಪ್ರೇರಿಸುತ್ತಾರೆ. ಆಲಿಂಗನರೂಪವಾದ ಸುಖವನ್ನು ಕೊಡುತ್ತಾರೆ.

English Translation

The husbands who weep for the life (of their wives), make them sit down at the sacrifice, hold in a long embrace, (and) send the Pitris this desirable offspring, upon these husbands the wives (bestow) happiness in order to be embraced.

॥ ಸಂಹಿತಾಪಾಠಃ ॥

ನ ತಸ್ಯ ವಿದ್ಮ ತದು ಷು ಪ್ರ ವೋಚತ ಯುವಾ ಹ ಯದ್ಯುವತ್ಯಾಃ ಕ್ಷೇತಿ ಯೋನಿಷು ।
ಪ್ರಿಯೋ ಪ್ರಿಯಸ್ಯ ವೃಷಭಸ್ಯ ರೇತಿನೋ ಗೃಹಂ ಗಮೇಮಾಶ್ವಿನಾ ತದು ಶ್ಮಸಿ ॥ ೧೧ ॥

। ಪದಪಾಠಃ ।

ನ । ತಸ್ಯ । ವಿದ್ಮ । ತತ್ । ಊಂ ಇತಿ । ಸು । ಪ್ರ । ವೋಚತ । ಯುವಾ । ಹ । ಯತ್ ।

ಯುವತ್ಯಾಃ । ಕ್ಷೇತಿ । ಯೋನಿಷು ।

ಪ್ರಿಯಸ್ರಿಯಸ್ಯ । ವೃಷಭಸ್ಯ । ರೇತಿನಃ । ಗೃಹಂ । ಗಮೇಮ । ಅಶ್ವಿನಾ । ತತ್ ! ಉಶ್ಮಸಿ ॥ ೧೧ ॥

। ಸಾಯಣಭಾಷ್ಯಂ ।

ಹೇ ಅಶ್ವಿನಾಶ್ವಿನೌ ತಸ್ಯ ತತ್ಸುಖಂ ವಯಂ ನ ವಿದ್ಮ । ನ ಜಾನೀಮಃ । ತತ್ಸುಖಂ ಯೂಯಂ ಸು ಸುಷ್ಠು ಪ್ರ ವೋಚತ । ಬಹುವಚನಂ ಪೂಜಾರ್ಥಂ । ಯುವಾ ಹ ತರುಣಃ ಖಲು ಯುವತ್ಯಾಯುವತ್ಯಾ ಯೌವನಾನ್ವಿತಾಯಾ ಮಮ ಯೋನಿಷು ಗೃಹೇಷು ಯತ್ಕ್ಷೇತಿ ನಿವಸತೀತಿ । ಕಿಂಚ ಪ್ರಿಯೋಸ್ರಿಯಸ್ಯ ಪ್ರಿಯಯುವತೇರ್ವೃಷಭಸ್ಯ ಸೇಕ್ತ್ರೋ ರೇತಿನೋ ರೇತಸ್ವಿನೋ ಮಮ ಪತೇರ್ಗೃಹಂ ಗಮೇಮ । ಗಚ್ಛೇಮ । ವಯಂ ತದ್ಗೃಹಮುಶ್ಮಸಿ । ಕಾಮಯಾಮಹೇ ॥

। ಪ್ರತಿಪದಾರ್ಥ ।

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ತಸ್ಯ ತತ್—ಇಂತಹ ಸುಖವನ್ನು । ನ ವಿದ್ಮ—ನಾವು ಅರಿತಿಲ್ಲ । ಯುವಾ ಹ—ತರುಣನಾದ ಪತಿಯು । ಯುವತ್ಯಾಃ—ಯುವತಿಯಾದ ನನ್ನ । ಯೋನಿಷು—ಗೃಹಗಳಲ್ಲಿ । ಯತ್ ಕ್ಷೇತಿ—ಹೇಗೆ ವಾಸಮಾಡುತ್ತಾನೆ ಎಂಬುದನ್ನು । ಸು ಪ್ರವೋಚತ—ಇದನ್ನು ವಿಶದವಾಗಿ ಹೇಳಿರಿ । ಪ್ರಿಯೋಸ್ರಿಯಸ್ಯ—ಪ್ರಿಯಳಾದ ಯುವತಿಗೆ । ವೃಷಭಸ್ಯ—ಕಾಮವರ್ಷಕನಾದ । ರೇತಿನಃ—ಪತಿಯ । ಗೃಹಂ—ಗೃಹಕ್ಕೆ । ಗಮೇಮ—ನಾವು ಹೋಗುವಂತಾಗಲಿ । ತತ್—ಆ ಗೃಹವನ್ನು । ಉಶ್ಮಸಿ—ನಾವು ಅಪೇಕ್ಷಿಸುತ್ತೇವೆ.

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ಪತಿಸಂಗಮದ ಸುಖವನ್ನು ನಾವು ಅರಿತವರಲ್ಲ. ತರುಣನಾದ ಪತಿಯು ಯುವತಿಯಾದ ನನ್ನ ಗೃಹದಲ್ಲಿ ಹೇಗೆ ವಾಸಮಾಡಬಲ್ಲನೆಂಬುದನ್ನು ವಿಶದವಾಗಿ ಹೇಳಿರಿ. ಪ್ರಿಯಳಾದ ಯುವತಿಗೆ ಕಾಮವರ್ಷಕನಾದ ಪತಿಯು ಗೃಹಕ್ಕೆ ಹೋಗುವ ಅವಕಾಶವು ದೊರೆಯಲಿ ನಾವು ಆ ಗೃಹವನ್ನು ಅಪೇಕ್ಷಿಸುತ್ತೇವೆ.

English Translation

We do not know this (happiness) of his; do you, (Aswins), clearly explain how it is that the young (husbands) dwells in the bride's house; let us, Aswins, repair to the dwelling of (my) dear youthful, vigorous, and manly husband: this is our desire.

। ಸಂಹಿತಾಪಾಠಃ ।

ಆ ವಾಮಗನ್ತ್ಸುಮತಿರ್ವಾಜಿನೀವಸೂ ನ್ಯಶ್ವಿನಾ ಹೃತ್ಸು ಕಾಮೋ ಅಯಂಸತ ।
ಅಭೂತಂ ಗೋಪಾ ಮಿಥುನಾ ಶುಭಸ್ಪತೀ ಪ್ರಿಯಾ ಅರ್ಯಮ್ಣೋ ದುರ್ಯಾ ಅಶೀಮಹಿ ॥ ೧೨ ॥

।। ಪದಪಾಠಃ ।।

ಆ । ವಾಂ । ಅಗನ್ । ಸುಽಮತಿಃ । ವಾಜಿನೀವಸೂ ಇತಿ ವಾಜಿನೀಽವಸೂ । ನಿ । ಅಶ್ವಿನಾ । ಹೃತ್ಽಸು । ಕಾಮಾಃ । ಅಯಂಸತ ।

ಅಭೂತಂ । ಗೋಪಾ । ಮಿಥುನಾ । ಶುಭಃ । ಪತೀ ಇತಿ । ಪ್ರಿಯಾಃ । ಅರ್ಯಮ್ಣಃ । ದುರ್ಯಾನ್ । ಅಶೀಮಹಿ ॥ ೧೨ ॥

। ಸಾಯಣಭಾಷ್ಯಂ ।

ಹೇ ವಾಜಿನೀವಸೂ ಅನ್ನಧನೌ ಶುಭಸ್ಪತೀ ಉದಕಸ್ಯ ಸ್ವಾಮಿನೌ ಹೇ ಅಶ್ವಿನಾಶ್ವಿನೌ ಮಿಥುನಾ ಮಿಥುನೌ ಪರಸ್ಪರಂ ಸಹಿತೌ ವಾಂ ಯುವಾಂ ಸುಮತಿರಾಗನ್ । ಆಗಚ್ಛತು । ಹೃತ್ಸ್ವಸ್ಮದೀಯೇಷು ಹೃದಯೇಷು ಕಾಮಾ ಅಭಿಲಾಷಾ ನ್ಯಯಂಸತ । ನಿಯಚ್ಛಂತಾಂ । ಕಂಚ ಯುವಾಂ ಗೋಪಾ ಮಮ ಗೋಪಾಯಿತಾರಾವಭೂತಂ । ಭವತಂ । ಅಪಿ ಚ ಪ್ರಿಯಾಃ ಸತ್ಯೋ ವಯಮರ್ಯಮ್ಣಃ ಪತ್ಯುರ್ದುರ್ಯಾನ್ಗೃಹಾನಶೀಮಹಿ । ಪ್ರಾಪ್ನುಯಾಮ ॥

। ಪ್ರತಿಪದಾರ್ಥ ।

ವಾಜಿನೀವಸೂ—ಅನ್ನವಂತರೂ । ಶುಭಸ್ಪತೀ—ಉದಕಕ್ಕೆ ಪತಿಗಳೂ ಆದ । ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಮಿಥುನಾ—ಒಟ್ಟಿಗೆ ಕೂಡಿಕೊಂಡಿರುವ । ವಾಂ—ನಿಮ್ಮ । ಸುಮತಿಃ—ಅನುಗ್ರಹ ಬುದ್ಧಿಯು । ಆಗನ್—ನನ್ನಲ್ಲಿಗೆ ಬರಲಿ । ಹೃತ್ಸು—ನನ್ನ ಹೃದಯಾಂತರ್ಗತವಾದ । ಕಾಮಾಃ—ಅಭಿಲಾಷೆಗಳನ್ನು । ನ್ಯಯಂಸತ—ನಿಯಮಿಸಲಿ । ಗೋಪಾ—ನೀವು ನನಗೆ ರಕ್ಷಕರಾಗಿ । ಅಭೂತಂ—ಆಗಿರಿ । ಪ್ರಿಯಾಃ—ಪತಿಗೆ ಪ್ರೀತಿಪಾತ್ರರಾಗಿ । ಅರ್ಯಮ್ಣಃ—ಪತಿಯ । ದುರ್ಯಾನ್—ಗೃಹಕ್ಕೆ । ಅಶೀಮಹಿ—ಹೋಗುವಂತಾಗಲಿ.

। ಭಾವಾರ್ಥ ।

ಅನ್ನವಂತರೂ, ಉದಕಕ್ಕೆ ಒಡೆಯರೂ ಆದ ಎಲೈ ಅಶ್ವಿನೀದೇವತೆಗಳೇ, ಒಟ್ಟಿಗೆ ಕೂಡಿಕೊಂಡಿರುವ ನಿಮ್ಮ ಅನುಗ್ರಹಬುದ್ಧಿಯು ನನ್ನನ್ನು ಸಮೀಪಿಸಲಿ. ನನ್ನ ಹೃದಯಾಂತರ್ಗತವಾದ ಅಭಿಲಾಷೆಗಳನ್ನು ನಿಯಮಿಸಲಿ. ನೀವು ನನಗೆ ರಕ್ಷಕರಾಗಿರಿ. ಪತಿಗೆ ಪ್ರೀತಿಪಾತ್ರರಾಗಿ ನಾವು ಪತಿಯ ಗೃಹಕ್ಕೆ ಹೋಗುವಂತಾಲಿ.

English Translation

Aswins, rich in food, lords of water, twin (associates), may your good will devolve (upon us), may the desires (of our hearts) be attained: you have been my protecors: may we, (being) beloved, attain the habitation of a husband.

॥ ವಿಶೇಷವಿಷಯಗಳು ॥

ಈ ಸೂಕ್ತದ ಹಿಂದಿನ ಮೂರು ಋಕ್ಕುಗಳಲ್ಲಿಯೂ ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ಸಹ (೯-೧೩ ಋಕ್ಕುಗಳಲ್ಲಿ) ಈ ಸೂಕ್ತದ್ರಷ್ಟೃವಾದ ಘೋಷಾ ಎಂಬ ಸ್ತ್ರೀಯು ತನಗೆ ಪತಿಯಿಲ್ಲದಿರುವುದನ್ನು ಅಶ್ವಿನೀ ದೇವತೆಗಳಿಗೆ ತಿಳಿಸಿ, ತನಗೆ ವಯಸ್ಸು ಕಳೆದು ಹೋಗುತ್ತಿರುವುದರಿಂದ ಯೋಗ್ಯನಾದ ಪತಿಯನ್ನು ಒದಗಿಸಿಕೊಟ್ಟು ಪುತ್ರಸಂತಾನವನ್ನೂ ಧನವನ್ನೂ ಕೊಡಬೇಕೆಂದು ಪ್ರಾರ್ಥಿಸಿದಾಳೆ. ಈ ಸ್ತ್ರೀಗೆ ಕುಷ್ಠರೋಗವಿದ್ದುದರಿಂದ ಇವಳನ್ನು ಮದುವೆಯಾಗಲು ಯಾರೂ ಮುಂದೆ ಬರಲಿಲ್ಲವೆಂದೂ ಆದ್ದರಿಂದ ಈ ಸ್ತ್ರೀಯು ತನ್ನ ಯೌವನಕಾಲದ ಬಹುಭಾಗವನ್ನು ತಂದೆಯ ಮನೆಯಲ್ಲಿ ಒಬ್ಬಂಟಿಗಳಾಗಿ ಕಳೆಯಬೇಕಾಯಿತೆಂದೂ ಆದ್ದರಿಂದಲೇ ತನ್ನ ರೋಗವನ್ನು ಪರಿಹಾರ ಮಾಡಿ ಉತ್ತಮನಾದ ಪತಿಯನ್ನೂ ತನ್ಮೂಲಕ ವೀರರಾದ ಪುತ್ರರನ್ನೂ ಧನವನ್ನೂ ಒದಗಿಸಿಕೊಟ್ಟು ತನ್ನನ್ನು ಕಾಪಾಡಬೇಕೆಂದು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿರುವ ವಿಷಯವನ್ನು ನಾವು ಈ ಸೂಕ್ತದ ಪೀಠಿಕೆಯಲ್ಲಿಯೇ ವಿವರಿಸಿದೇವೆ.

ಸುಮತಿಃ—ಸುಮತಿಶಬ್ದಕ್ಕೆ ಯಾಸ್ಕರು **ಕಲ್ಯಾಣೀ ಮತಿಃ** ಉತ್ತಮವಾದ, ಶುಭಪ್ರದವಾದ ಬುದ್ಧಿ ಎಂದರ್ಥಮಾಡಿದಾರೆ (ನಿ. ೨-೧೧; ೭-೨೨, ೧೧-೧೧; ೧೧-೧೯, ೧೨-೩೯) ಎಂದರೆ ದೇವತೆಗಳಿಗೆ ತಮ್ಮನ್ನು ಸ್ತುತಿಸುವ ಜನರ ವಿಷಯದಲ್ಲಿ ಅವರಿಗೆ ಉಪಕಾರಮಾಡಬೇಕೆಂಬ ಅನುಗ್ರಹಾತ್ಮಕವಾದ ಬುದ್ಧಿಯಿರುವುದೆಂದಭಿಪ್ರಾಯವು. ದೇವತೆಗಳು ಮನುಷ್ಯರ ವಿಷಯದಲ್ಲಿ ಕೆಡಕನ್ನುಬೇಕಾದರೂ ಮಾಡಬಹುದು, ಅನುಗ್ರಹವನ್ನುಬೇಕಾದರೂ ಮಾಡಬಹುದು. ಈ ಎರಡುವಿಧವಾದ ಶಕ್ತಿಯೂ ದೇವತೆಗಳಿಗೆ ಇರುವುದು. ಆದ್ದರಿಂದ ಭಕ್ತರು ದೇವತೆಗಳನ್ನು ಸ್ತುತಿಸುವಾಗ ತಮ್ಮ ವಿಷಯದಲ್ಲಿ ದೇವತೆಗಳ ಅನುಗ್ರಹಾತ್ಮಕವಾದ ಬುದ್ಧಿಯೇ ತಮಗೆ ರಕ್ಷಣೆಯನ್ನು ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

ವಾಜಿನೀವಸೂ—**ಅನ್ನಧನೌ** । ಈ ಶಬ್ದವು ಅಶ್ವಿನೀದೇವತೆಗಳಿಗೆ ವಿಶೇಷಣವಾಗಿ ಅನ್ನರೂಪವಾದ ಧನವನ್ನುಳ್ಳವರು ಎಂದರೆ ಆ ವಿಧವಾದ ಧನವನ್ನು ತಮ್ಮನ್ನು ಸ್ತುತಿಸುವವರಿಗೆ ಕೊಡುವವರು ಎಂಬರ್ಥವನ್ನು ಸೂಚಿಸುವುದು. **ವಾಜಃ** ಎಂಬ ಶಬ್ದವು ಇಪ್ಪತ್ತೈದು ಅನ್ನನಾಮಗಳಲ್ಲಿ ಪರಿತವಾಗಿದೆ (ನಿ ೭-೯) ಮತ್ತು ಸಂಗ್ರಾಮ (ಯುದ್ಧ) ನಾಮಗಳಲ್ಲಿಯೂ (ನಿ. ೩-೯) ಪರಿತವಾಗಿರುವುದಲ್ಲದೆ ಸುಧನ್ವನ ಪುತ್ರರಾದ ಋಭು, ವಿಭು, ವಾಜ ಎಂಬ ಮೂವರು ಋಭುದೇವತೆಗಳಲ್ಲಿ ಒಬ್ಬನಾದ ವಾಜ ಎಂಬುವನ ಹೆಸರೂ ಆಗಿದೆ (ನಿ ೧೧-೧೬). ಪ್ರಕೃತ ಋಕ್ಕಿನಲ್ಲಿರುವ **ವಾಜಿನೀವಸೂ** ಎಂಬ ಶಬ್ದದಲ್ಲಿ ವಾಜಃಶಬ್ದಕ್ಕೆ ಅನ್ನ (ಆಹಾರ) ವೆಂದರ್ಥವು. ವಾಜಿನೀ ಎಂದರೆ (ಈ ಶಬ್ದವು ಸ್ತ್ರೀಲಿಂಗವು) ಅನ್ನವನ್ನು ಹೊಂದಿರುವ ಅಥವಾ ಕೊಡುವ ಎಂಬರ್ಥದಲ್ಲಿ ಉಪಯೋಗಿಸಲ್ಪಡುವುದಲ್ಲದೆ ಉಷೋದೇವತೆಯ ವಿಧಾವರೀ, ಸೂನರೀ ಮೊದಲಾದ್ದಹೆದಿನಾರು ನಾಮಗಳಲ್ಲಿ ಈ ವಾಜಿನೀ ಎಂಬ ಶಬ್ದವೂ ಒಂದಾಗಿದೆ ಅನೇಕ ಸಂದರ್ಭಗಳಲ್ಲಿ ವಾಜಿನೀಶಬ್ದವು ಉಷೋದೇವತೆಯ ಗುಣಗಳನ್ನು ವರ್ಣಿಸುವುದಕ್ಕಾಗಿ

ಉಪಯೋಗಿಸಲ್ಪಡುವುದು. ಅಂತಹ ಸಂದರ್ಭದಲ್ಲಿ **ವಾಜನೀ** ಎಂದರೆ ತನ್ನ ಭಕ್ತರಿಗೆ ಕೊಡುವುದಕ್ಕಾಗಿ ಅನ್ನವನ್ನು ಹೊಂದಿರುವವಳು ಎಂದರ್ಥವಾಗುವುದು. ಆದರೆ **ವಾಜನೀವಸೂ** ಎಂಬ ಶಬ್ದದಲ್ಲಿ **ವಾಜನೀ** ಎಂಬ ಶಬ್ದಕ್ಕೆ ವಾಜಃ ಎಂಬ ಶಬ್ದದ ಅರ್ಥವಾದ ಅನ್ನವೆಂದೇ ಅರ್ಥಮಾಡಬೇಕಾಗಿರುವುದು. **ವಾಜನೀ** ಎಂದರೆ ಅನ್ನವು; **ವಸು** ಶಬ್ದಕ್ಕೆ ಅನೇಕ ಅರ್ಥಗಳಿದ್ದರೂ ಇಲ್ಲಿ ಧನವೆಂದೇ ಅರ್ಥವು (ನಿ ೩ ೯) ಆದ್ದರಿಂದ **ವಾಜನೀವಸೂ** ಎಂಬ ದ್ವಿವಚನಾಂತ ಶಬ್ದಕ್ಕೆ ಅನ್ನವೇ ಧನವಾಗಿರುವಳ್ಳ ಈ (ಇಬ್ಬರು) ಅಶ್ವಿನೀದೇವತೆಗಳು ಎಂದರ್ಥವು ಧನವು ಅನೇಕ ರೂಪದಲ್ಲಿರಬಹುದು—ದ್ರವ್ಯ, ಪಶುಸಂಪತ್ತು, ಅನ್ನಾದ್ಯಾಹಾರ, ಗೃಹಾದಿಗಳು ಇತ್ಯಾದಿ ಮನುಷ್ಯರಿಗೆ ಅವಶ್ಯಕವಾದ ಅಥವಾ ಉಪಯುಕ್ತವಾದ ಯಾವ ವಸ್ತುವನ್ನೇ ಆಗಲಿ ಅದನ್ನು ಧನವೆಂಬ ಹೆಸರಿನಿಂದ ಕರೆಯಬಹುದು. ಆದ್ದರಿಂದ ಇಲ್ಲಿ ಅನ್ನವೇ (ಆಹಾರವೇ) ಧನವೆಂದು ಹೇಳಲು ಅವಕಾಶವಿದೆ. ಮನುಷ್ಯರಿಗೆ ಅತ್ಯವಶ್ಯಕವಾಗಿ ಬೇಕಾಗುವ ಆಹಾರವು ಅಶ್ವಿನೀದೇವತೆಗಳ ಬಳಿ ಇರುವುದರಿಂದಲೂ, ಆ ಅನ್ನಾದ್ಯಾಹಾರಗಳನ್ನು ಅವರು ತಮ್ಮನ್ನು ಸ್ತುತಿಸುವ ಜನರಿಗೆ ಕೊಡುವುದರಿಂದಲೂ ಅವರನ್ನು **ವಾಜನೀವಸೂ** ಎಂಬ ಶಬ್ದದಿಂದ ಕರೆಯಲಾಗಿದೆ.

ಮಿಥುನಾ—ಇದು ದ್ವಿವಚನಾಂತಶಬ್ದವು. **ಮಿಥುನೌ** ಎಂಬ ಶಬ್ದಕ್ಕೆ ಬದಲಾಗಿ **ಮಿಥುನಾ** ಎಂಬ ಶಬ್ದದ ಪ್ರಯೋಗವಿದೆ. ಈ ವಿಧವಾದ ದ್ವಿವಚನಾಂತ ಶಬ್ದಪ್ರಯೋಗವು ಋಗ್ವೇದದಲ್ಲಿ ವಿಶೇಷವಾಗಿದೆ—ರಾಜಾನಾ, ಮಿತ್ರಾವರುಣಾ, ನಾಸತ್ಯಾ ಇತ್ಯಾದಿ. ಮಿಥುನಶಬ್ದದ ನಿರ್ವಚನವನ್ನು ಯಾಸ್ಕರು ಈರೀತಿ ಹೇಳಿದಾರೆ—

> **ಮಿಥುನೌ ಕಸ್ಮಾನ್ಮಿನೋತೀಃ ಶ್ರಯತಿಕರ್ಮಾ, ಥು ಇತಿ ನಾಮಕರಣಸ್ಥಕಾರೋ ವಾ ನಯತಿಃ ಪರೋ ವನಿರ್ವಾ, ಸಮಾಶ್ರಿತಾವನ್ಯೋನ್ಯಂ ನಯತೋ ವನುತೋ ವಾ, ಮನುಷ್ಯಮಿಥುನಾವಪ್ಯೇತಸ್ಮಾದೇವ, ಮೇಥಂತಾವನ್ಯೋನ್ಯಂ ವನುತ ಇತಿ ವಾ ॥**
>
> (ನಿ. ೭-೨೯)

ನಿಮಿಥುನೌ ಎಂಬ ಶಬ್ದಕ್ಕೆ ಎರಡುವಿಧವಾದ ನಿಷ್ಪತ್ತಿಯನ್ನು ಹೇಳಿದಾರೆ. ಮಿ ಎಂಬ ಧಾತುವಿಗೆ (ಮಿನೋತಿ ಧಾತುವಿಗೆ) ಆಶ್ರಯಿಸು ಎಂಬರ್ಥವಿರುವುದು **ಥು** ಎಂಬ ಅಕ್ಷರವು ನಾಮಕರಣ ಅಥವಾ ಪ್ರತ್ಯಯವು. ಈ ಪ್ರತ್ಯಯವನ್ನು ಮಿಧಾತುವಿಗೆ ಸೇರಿಸಿದರೆ **ಮಿ+ಥು** ಎಂದಾಗುವುದು. ನಯತಿಃ ಪರಃ ಎಂದರೆ ನಯತಿಧಾತುವಿನ ನಕಾರವು ಮಿಧಾತುವಿನ ಪರದಲ್ಲಿ ಇರಬೇಕು ಆದ್ದರಿಂದ **ಮಿ+ನ+ಥು** ಎಂದಾಯಿತು ಇಲ್ಲಿ ಮಧ್ಯಾಂತವಿಪರ್ಯಯದಿಂದ ಎಂದರೆ ಮಧ್ಯದ ಅಕ್ಷರವಾದ ನ ಕಾರ ಮತ್ತು ಕೊನೆಯ ಅಕ್ಷರವಾದ ಥು ಎಂಬ ಅಕ್ಷರಗಳ ವಿಪರ್ಯಾಸದಿಂದ ಎಂದರೆ ಸ್ಥಳಪಲ್ಲಟಮಾಡುವುದರಿಂದ **ಮಿ+ಥು+ನ** ಎಂದಾಗುವುದು ಎಂದು ಒಂದು ವಿಧವಾದ ರೂಪನಿಷ್ಪತ್ತಿಯು. ಈ ಶಬ್ದಕ್ಕೆ—ಎರಡು ವಸ್ತುಗಳಿದ್ದು ಅವುಗಳಲ್ಲಿ ಒಂದು ಮತ್ತೊಂದನ್ನು ಆಶ್ರಯಿಸಿರುತ್ತಾ ಒಂದನ್ನು ಮತ್ತೊಂದನ್ನು ಒಯ್ಯುವುದು ಎಂದರ್ಥವಾಗುವುದು.

ಹಿಂದೆ ಹೇಳಿದಂತೆ **ಮಿ** ಧಾತುವಿಗೆ **ಥು** ಎಂಬ ಪ್ರತ್ಯಯಕ್ಕೆ ಬದಲಾಗಿ **ಥ** ಎಂಬ ಪ್ರತ್ಯಯವನ್ನು ಸೇರಿಸಬಹುದು ಮತ್ತು ಇದರ ಮುಂದೆ **ವನಿಃ** ಎಂದು ಸಂಪ್ರಸಾರಣ ಬರುವುದು ಎಂದರೆ **ಮಿ+ಥ** ಎಂಬಲ್ಲಿ **ಥ** ಎಂಬ ಅಕ್ಷರದ ಸ್ವರವಾದ ಅಕಾರವು ಲೋಪವಾಗಿ **ಥ್** ಎಂದಾಗಿ ಅದಕ್ಕೆ ಉಕಾರವು ಬರುವುದು **ಮಿ+ಥು** ಎಂದಾಗುವುದು. ಅನಂತರ ಹಿಂದೆ ಹೇಳಿದಂತೆಯೇ ಮಧ್ಯಾಂತವಿಪರ್ಯಾಸದಿಂದ ಎಂದರೆ ಕೊನೆಯ ಎರಡು ಅಕ್ಷರಗಳ ಸ್ಥಾನಗಳನ್ನು ಪರಸ್ಪರ ಬದಲಾಯಿಸುವುದರಿಂದ **ಮಿಥುನ** ಎಂದಾಗುವುದು. ಈರೀತಿ ನಿಷ್ಪನ್ನವಾದ ಮಿಥುನಶಬ್ದಕ್ಕೆ

ಹಿಂದೆ ಹೇಳಿದಂತೆಯೇ ಅರ್ಥವು. ಎಂದರೆ ಒಂದನ್ನು ಮತ್ತೊಂದು ಆಶ್ರಯಿಸಿರುವ ಎರಡು ವಸ್ತುಗಳು ಎಂದು ಮಿಥುನೌ ಎಂಬ ಶಬ್ದದ ಅರ್ಥವು. ಈ ಶಬ್ದವು ಮನುಷ್ಯರ ಪರವಾಗಿ ಉಪಯೋಗಿಸಲ್ಪಟ್ಟಾಗಲೂ ಇದೇ ಅರ್ಥವನ್ನು ಸೂಚಿಸುವುದು ಎಂದರೆ ಗುಣರೂಪಾದಿಗಳಲ್ಲಿ ಸಮಭಾವದಿಂದಿರುವ ಇಬ್ಬರಲ್ಲಿ ಒಬ್ಬರನ್ನು ಮತ್ತೊಬ್ಬರು ಆಶ್ರಯಿಸಿ ಪರಸ್ಪರ ಕಾಲವನ್ನು ಕಳೆಯುತ್ತಿರುವ ಎರಡು ವ್ಯಕ್ತಿಗಳು ಎಂದಭಿಪ್ರಾಯವು. ಈ ಶಬ್ದವು ದಂಪತಿಗಳನ್ನು ಅಥವಾ ಆವಳೀಮಕ್ಕಳನ್ನು ಸೂಚಿಸುವುದಕ್ಕಾಗಿ ಉಪಯೋಗಿಸಬಹುದು.

। ಸಂಹಿತಾಪಾಠಃ ।

ತಾ ಮಂದಸಾನಾ ಮನುಷೋ ದುರೋಣ ಆ ಧತ್ತಂ ರಯಿಂ ಸಹವೀರಂ
ವಚಸ್ಯವೇ ।
ಕೃತಂ ತೀರ್ಥಂ ಸುಪ್ರಪಾಣಂ ಶುಭಸ್ಪತೀ ಸ್ಥಾಣುಂ ಪಥೇಷ್ಠಾಮಪ
ದುರ್ಮತಿಂ ಹತಂ ॥ ೧೩ ॥

। ಪದಪಾಠಃ ।

ತಾ । ಮಂದಸಾನಾ । ಮನುಷಃ । ದುರೋಣೇ । ಆ । ಧತ್ತಂ । ರಯಿಂ । ಸಹವೀರಂ । ವಚಸ್ಯವೇ ।
ಕೃತಂ । ತೀರ್ಥಂ । ಸುಪ್ರಪಾಣಂ । ಶುಭಃ । ಪತೀ ಇತಿ । ಸ್ಥಾಣುಂ । ಪಥೇಷ್ಠಾಂ । ಅಪ ।
ದುಃಮತಿಂ । ಹತಂ ॥ ೧೩ ॥

। ಸಾಯಣಭಾಷ್ಯಂ ।

ಹೇ ಅಶ್ವಿನೌ ಮಂದಸಾನಾ ಮಂದಸಾನೌ ತಾ ತೌ ಯುವಾಂ ಮನುಷೋ ಮನುಷ್ಯಸ್ಯ ಮತ್ಪತೇರ್ದುರೋಣೇ ಗೃಹೇ ವಚಸ್ಯವೇ ಯುಷ್ಮತ್ಸ್ತುತಿಕಾಮಾಯೈ ಮಹ್ಯಂ ಸಹವೀರಂ ಪುತ್ರಾದಿ-ಸಹಿತಂ ರಯಿಂ ಧನಮಾ ಧತ್ತಂ। ಸ್ಥಾಪಯತಂ । ಕಿಂಚ ಹೇ ಅಶ್ವಿನೌ ಶುಭಸ್ಪತೀ ಉದಕಸ್ಯ ಸ್ವಾಮಿನೌ ಯುವಾಂ ಪತಿಗೃಹಂ ಗಚ್ಛಂತ್ಯಾ ಮಮ ತೀರ್ಥಂ ಪಾನಾಯ ಸುಪ್ರಪಾಣಂ ಕೃತಂ । ಕುರುತಂ । ಕಿಂಚ ಯುವಾಂ ಪಥೇಷ್ಠಾಂ ಮಾರ್ಗಸ್ಥಂ ಸ್ಥಾಣುಂ ವೃಕ್ಷಂ ದುರ್ಮತಿಂ ದುರ್ಬುದ್ಧಿಂ ಪರಿಪಂಥಿನಂ ಚಾಪ ಹತಂ । ಅಪಗಮಯತಂ ॥

। ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ), ಮಂದಸಾನಾ—ಹರ್ಷಯುಕ್ತರಾದ । ತಾ—ನೀವು । ಮನುಷಃ—ಮಾನವನಾದ ನನ್ನ ಪತಿಯ । ದುರೋಣೇ—ಗೃಹದಲ್ಲಿ। ವಚಸ್ಯವೇ—ನಿಮ್ಮನ್ನು ಸ್ತುತಿಸುವ ನನಗೆ। ಸಹವೀರಂ—ವೀರಪುತ್ರಾದಿಗಳಿಂದ ಕೂಡಿದ । ರಯಿಂ—ಧನವನ್ನು । ಆ ಧತ್ತಂ—ತಂದೊಡಗಿಸಿರಿ । ಶುಭಸ್ಪತೀ—ಉದಕಕ್ಕೆ

ಒಡೆಯರಾದ ನೀವು । ತೀರ್ಥಂ—ಉದಕವನ್ನು । ಸುಪ್ರಪಾನಂ—ಕುಡಿಯಲು ಯೋಗ್ಯವಾಗುವುದನ್ನಾಗಿ । ಕೃತಂ—ಮಾಡಿರಿ । ಪಥೇಷ್ಠಾಂ—ಮಾರ್ಗಸ್ಥವಾದ । ಸ್ಥಾಣುಂ—ನಿರೋಧಕವಾದ ವೃಕ್ಷವನ್ನೂ । ದುರ್ಮತಿಂ—ದುಷ್ಟ ಶಕ್ತಿಯನ್ನೂ । ಅಪಹತಂ—ನಾಶಪಡಿಸಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಹರ್ಷಯುಕ್ತರಾದ ನೀವು ನಿಮ್ಮನ್ನು ಸ್ತುತಿಸುವ ನನಗೆ ನನ್ನ ಪತಿಯಗೃಹದಲ್ಲಿ ವೀರಪುತ್ರಾದಿಗಳಿಂದ ಕೂಡಿದ ಧನವನ್ನು ಒದಗಿಸಿರಿ. ಉದಕಕ್ಕೆ ಒಡೆಯರಾದ ನೀವು ಉದಕವನ್ನು ನನಗೆ ಕುಡಿಯಲು ಯೋಗ್ಯವಾದುದನ್ನಾಗಿ ಮಾಡಿರಿ. ನನ್ನ ಮಾರ್ಗಕ್ಕೆ ಪ್ರತಿಬಂಧಕವಾದ ಮೋಟುಮರವನ್ನೂ, ದುಷ್ಟಶಕ್ತಿಯನ್ನೂ ನಾಶಪಡಿಸಿರಿ.

English Translation

Exulting, do you bestow riches, comprehending male progeny, in the house of my husband, on me, who desire to praise you; lords of waters make the sacred ford good to drink: remove the tree that stands in the road and the malevolent (enemy).

॥ ಸಂಹಿತಾಪಾಠಃ ॥

ಕ್ವ ಸ್ವಿದ್ದ್ಯ ಕತಮಾಸ್ವಶ್ವಿನಾ ವಿಕ್ಷು ದಸ್ರಾ ಮಾದಯೇತೇ ಶುಭಸ್ಪತೀ ।
ಕ ಈಂ ನಿ ಯೇಮೇ ಕತಮಸ್ಯ ಜಗ್ಮತುರ್ವಿಪ್ರಸ್ಯ ವಾ ಯಜಮಾನಸ್ಯ ವಾ ಗೃಹಂ ॥ ೧೪ ॥

॥ ಪದಪಾಠಃ ।

ಕ್ವ । ಸ್ವಿತ್ । ಅದ್ಯ । ಕತಮಾಸು । ಅಶ್ವಿನಾ । ವಿಕ್ಷು । ದಸ್ರಾ । ಮಾದಯೇತೇ ಇತಿ । ಶುಭಃ । ಪತೀ ಇತಿ ।
ಕಃ । ಈಂ । ನಿ । ಯೇಮೇ । ಕತಮಸ್ಯ । ಜಗ್ಮತುಃ । ವಿಪ್ರಸ್ಯ । ವಾ । ಯಜಮಾನಸ್ಯ । ವಾ । ಗೃಹಂ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ದಸ್ರಾ ದರ್ಶನೀಯೌ ಶುಭಸ್ಪತೀ ಉದಕಸ್ಯ ಪತೀ ಸ್ವಾಮಿನೌ ಭವಂತೌ ಕ್ವ ಸ್ವಿತ್ಕ್ವ ಸ್ಥಿತೌ ಜನಪದೇಽದ್ಯಾಸ್ಮಿನ್ನಹನಿ ಕತಮಾಸು ಕಾಸ್ವಪಿ ವಿಕ್ಷು ಪ್ರಜಾಸು ಮಾದಯೇತೇ । ಆತ್ಮಾನಂ ತರ್ಪಯತಃ । ಕಂಚ ಕೋ ಯಜಮಾನ ಈಮೇತೌ ನಿ ಯೇಮೇ । ನಿಯಚ್ಛತಿ । ಕಂಚ ಭವಂತೌ ಕತಮಸ್ಯ ವಿಪ್ರಸ್ಯ ಮೇಧಾವಿನಃ ಸ್ತೋತುರ್ಯಜಮಾನಸ್ಯ ಗೃಹಂ ವಾ ಜಗ್ಮತುಃ । ಗತವಂತೌ ॥

। ಪ್ರತಿಪದಾರ್ಥ ।

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ದಸ್ರಾ—ಆಕರ್ಷಕವಾದ ರೂಪವುಳ್ಳವರೂ । ಶುಭಸ್ಪತೀ—ಉದಕಕ್ಕೆ ಪಾಲಕರೂ ಆದ ನೀವು । ಕ್ವ ಸ್ವಿತ್—ಯಾವ ಪ್ರದೇಶದಲ್ಲಿದ್ದವರಾಗಿ । ಅದ್ಯ—ಈ ಯಾಗಕಾಲದಲ್ಲಿ । ಕತಮಾಸು ವಿಕ್ಷು—ಯಾವ ದೇಶದ ಪ್ರಜೆಗಳ ನಡುವೆ । ಮಾದಯಿತೇ—ಹರ್ಷವನ್ನನುಭವಿಸುತ್ತಿರುವಿರಿ । ಕಃ—ಯಾವ ಯಜಮಾನನು । ಈಂ—ನಿಮ್ಮನ್ನು । ನಿ ಯೇಮೇ—ತಡೆದಿರುತ್ತಾನೆ? । ಕತಮಸ್ಯ—ಯಾವ । ವಿಪ್ರಸ್ಯ—ಸ್ತುತಿಕರ್ತನ । ವಾ—ಅಥವಾ । ಯಜಮಾನಸ್ಯ—ಯಜ್ಞಕರ್ತನ । ಗೃಹಂ—ಮನೆಗೆ । ಜಗ್ಮತುಃ—ಹೋಗಿದ್ದೀರಿ?

। ಭಾವಾರ್ಥ ।

ಎಲೈ ಅಶ್ವಿನೀದೇವತೆಗಳೇ, ಆಕರ್ಷಕವಾದ ರೂಪವುಳ್ಳವರೂ, ಉದಕಕ್ಕೆ ಪಾಲಕರೂ ಆದ ನೀವು ಈಗ ಯಾವ ಪ್ರದೇಶದಲ್ಲಿ ಇದ್ದುಕೊಂಡು ಈ ಯಾಗಕಾಲದಲ್ಲಿ ಯಾವ ದೇಶದ ಪ್ರಜೆಗಳ ನಡುವೆ ಹರ್ಷವನ್ನನುಭವಿಸುತ್ತಿದ್ದೀರಿ? ಯಾವ ಯಜಮಾನನು ನಿಮ್ಮನ್ನು ತಡೆದಿರುತ್ತಾನೆ? ಯಾವ ಸ್ತುತಿಕರ್ತನ ಅಥವಾ ಯಜಮಾನನ ಮನೆಗೆ ಹೋಗಿದ್ದೀರಿ?

English Translation

Aswins of goodly aspect, lords of water, in what place, among what people, do you to day delight? who now detains you? to the house of what sage, or of what sacrificer, have you repaired?

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ-
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ
ಋಕ್ಸಂಹಿತಾಭಾಷ್ಯೇ ದಶಮೇ ಮಂಡಲೇ ಚತ್ವಾರಿಂಶತ್ಸೂಕ್ತಂ ಸಮಾಪ್ತಂ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯಲ್ಲಿ ಹತ್ತನೆಯ ಮಂಡಲದಲ್ಲಿ ನಲವತ್ತನೆಯ ಸೂಕ್ತವು ಸಮಾಪ್ತವು.
ಏಳನೆಯ ಅಷ್ಟಕದ ಎಂಟನೆಯ ಅಧ್ಯಾಯದಲ್ಲಿ ಇಪ್ಪತ್ತನೆಯ ವರ್ಗವು ಸಮಾಪ್ತವು.

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ।

॥ ಶುಭಂ ಭೂಯಾತ್ ॥

॥ ಮಂಗಳಂ ॥